
ಧೀಮಂತೆ

14174



ಡಿ.ವಿ.ಜಿ. ಜನ್ಮಶತಮಾನೋತ್ಸವ ಸ್ಮೃತಿಮಾಲೆ—೧೨

ಧೀಮಂತ

ಡಿ.ವಿ.ಜಿ. ಜನ್ಮಶತಮಾನೋತ್ಸವ

ಸಂಸ್ಮರಣ ಸಂಪುಟ

ಸಂಪಾದಕ

ಎಂ. ವಿ. ಸೀತಾರಾಮಯ್ಯ

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ನರಸಿಂಹರಾಜ ಕಾಲೊನಿ
ಬೆಂಗಳೂರು–೫೬೦ ೦೧೯

೧೯೮೮

e9 4646 GIVNS

DHEEMANTA : Dr. D. V. Gundappa Birth Centenary Volume, Edited by Prof. M. V. Seetharamaiah and Published by the Gokhale Institute of Public Affairs, Narasimharaja Colony, Bangalore-560 019. pp. Demy Octavo XVI + 745.

First Edition 1988.

Price : Rs. 75-00

ಬೆಲೆ : ರೂ. ಎಪ್ಪತ್ತೈದು

ಹೊದಿಕೆ ಚಿತ್ರ : ಕೃಪೆ : ಶ್ರೀ ಕೆ. ಜಿ. ಸೋಮಶೇಖರ್

ಮುದ್ರಣ : ಬೆಂಗಳೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪೆನಿ ಲಿಮಿಟೆಡ್
ಮೈಸೂರು ರಸ್ತೆ, ಬೆಂಗಳೂರು 560 018

ಮುನ್ನುಡಿ

ಕನ್ನಡ ನಾಡು ನುಡಿಗಳ ಸೇವೆಗೆ ತಮ್ಮ ಇಡಿಯ ಬದುಕನ್ನು ಮುಡುಪಿಟ್ಟ ನಾಡಿನ ದಿಗ್ಗಜಗಳಲ್ಲಿ ಒಬ್ಬರಾದ, ಧೀಮಂತಿಕೆಯಿಂದಲೂ ಆರ್ಜವ ಹೃದಯಸಂಪನ್ನತೆಗಳಿಂದಲೂ ಪಂಡಿತ ಪಾಮರರನ್ನು ಸಮಭಾವದಿಂದ ಕಾಣುತ್ತಿದ್ದ ಡಾ॥ ಡಿ.ವಿ.ಜಿ. ಅವರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಂಸ್ಥಾಪಕರೂ ಆಗಿದ್ದಾರೆನ್ನುವುದು ನಾವೆಲ್ಲ ಹೆಮ್ಮೆಪಡಬೇಕಾದ ವಿಷಯ. ಈ ಮಹನೀಯರ ಜನ್ಮಶತಮಾನೋತ್ಸವದ ಆಚರಣೆಯನ್ನು ಏರ್ಪಡಿಸಬೇಕಾದದ್ದು ತನ್ನ ಕರ್ತವ್ಯ ಎಂದು ತೀರ್ಮಾನಿಸಿ, ಅವರ ಜನ್ಮದಿನವಾದ 1987 ರ ಮಾರ್ಚ್ 17 ರಿಂದ ತೊಡಗಿ ಒಂದು ವರ್ಷ ಪೂರ್ತಿ ಉತ್ಸವವು ನಾಡಿನಾದ್ಯಂತ ನಡೆಯಬೇಕೆಂಬ ನಿರ್ಧಾರವನ್ನು ಸಂಸ್ಥೆ ಕೈಗೊಂಡಿತು. ಉತ್ಸವವನ್ನು ವೈಭವೋಪೇತವಾಗಿ ನೆರವೇರಿಸಲು ಒಂದು ಪ್ರಾತಿನಿಧಿಕವಾದ ಮತ್ತು ಅನೇಕ ಗಣ್ಯ ವ್ಯಕ್ತಿಗಳನ್ನೊಳಗೊಂಡ ಉತ ವ ಸಮಿತಿ ನಿಯೋಜಿತವಾಯಿತು.

ಈ ಉತ್ಸವ ಸಮಿತಿ ಇಡೀ ವರ್ಷ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಡಿ.ವಿ.ಜಿ. ಅವರ ಆಯ್ದ ಕೃತಿಗಳನ್ನು ಪುನರ್ಮುದ್ರಣ ಮಾಡಿ ಕಡಿಮೆ ಬೆಲೆಗೆ ದೊರೆಯುವಂತೆ ನೀಡುವುದು; ರಾಜ್ಯಮಟ್ಟದಲ್ಲಿ ಶಾಲಾಕಾಲೇಜುಗಳ ವಿದ್ಯಾರ್ಥಿಗಳಿಗೆ 'ಮಂಕುತಿಮ್ಮನ ಕಗ್ಗ'ದ ಕಂಠಪಾಠ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಚರ್ಚಾಸ್ಪರ್ಧೆಗಳನ್ನು ನಡಸುವುದು; ಡಿ.ವಿ.ಜಿ. ಅವರಿಗೆ ಪ್ರಿಯವಾಗಿದ್ದ ಸಾರ್ವಜನಿಕ ಕ್ಷೇತ್ರ, ಸಮಾಜ ಸೇವೆ, ಭಾವೈಕ್ಯ, ರಾಷ್ಟ್ರಕನ ಕರ್ತವ್ಯಗಳು ಇತ್ಯಾದಿ ವಿಚಾರಗಳನ್ನು ಯುವಜನರಲ್ಲಿ ತುಂಬಿ ಜಾಗೃತಗೊಳಿಸುವಂತಹ ಯುವಜಾಗೃತಿ ಶಿಬಿರಗಳನ್ನು ನಡಸುವುದು; ನಾಡಿನಾದ್ಯಂತ ಡಿ.ವಿ.ಜಿ. ಅವರ ಜೀವನ–ಸಾಧನೆಗಳನ್ನು ಜನತೆಗೆ ಪರಿಚಯಿಸುವಂತಹ ಉತ್ಸವ ಕಾರ್ಯಕ್ರಮಗಳನ್ನೂ, ವಿಚಾರಗೋಷ್ಠಿಗಳನ್ನೂ ನಡಸುವುದು; ಡಿ.ವಿ.ಜಿ. ಅವರ ವ್ಯಕ್ತಿತ್ವ–ಸಾಧನೆಯನ್ನು ಬಿಂಬಿಸುವಂತಹ 'ಧೀಮಂತ' ಎಂಬ ಸಂಸ್ಮರಣ ಸಂಪುಟ, 'ವನಸುಮ' ಎಂಬ ಸ್ಮರಣ ಸಂಚಿಕೆಗಳನು ಪ್ರಕಟಿಸುವುದು, ಮುಂತಾದವುಗಳು ಆ ಯೋಜನೆಯಲ್ಲಿ ಕೆಲವು. ಅವುಗಳಲ್ಲಿ 'ವನಸುಮ' ಸ್ಮರಣ ಸಂಚಿಕೆ ಮುಳಬಾಗಲಿನಲ್ಲಿ ಉತ್ಸವದ ಉದ್ಘಾಟನ ಸಮಾರಂಭದಲ್ಲಿ ಬಿಡುಗಡೆಯಾಯಿತು. ಇದೀಗ 'ಧೀಮಂತ' ಸಂಪುಟ ಸಿದ್ಧವಾಗಿದ್ದು ಜನತೆಯ ಕೈಗೊಪ್ಪಿಸುತ್ತಿದ್ದೇವೆ. ಈ ಸಂಪುಟದಲ್ಲಿ ಡಿ.ವಿ.ಜಿ. ಅವರೊಂದಿಗೆ ತಮಗಿದ್ದ ಸೌಹಾರ್ದಸಂಬಂಧವನ್ನು ಆತ್ಮೀಯವಾಗಿ ವ್ಯಕ್ತಪಡಿಸಿರುವ ಹಲವಾರು ಗಣ್ಯರ ನೆನಪಿನ ಲೇಖನಗಳು ಡಿ.ವಿ.ಜಿ. ಅವರ ವ್ಯಕ್ತಿತ್ವವನ್ನು ಪರಿಚಯಿಸಿದರೆ ಅವರ ಕೃತಿಗಳನ್ನು ಕುರಿತ ವಿಮರ್ಶಲೇಖನಗಳು ಅವರ ಸಾಹಿತ್ಯ ಸಾಧನೆ ಸಿದ್ಧಿಗಳನ್ನು ಪರಿಚಯಿಸುತ್ತವೆ. ಈ ವರೆಗೆ ಪುಸ್ತಕ ರೂಪದಲ್ಲಿ ಪ್ರಕಟವಾಗದೆ ಇಲ್ಲವೆ ಹಸ್ತಪ್ರತಿ ರೂಪದಲ್ಲೇ ಉಳಿದಿರುವ ಡಿ.ವಿ.ಜಿ. ಅವರ ಬಿಡಿ ಬರಹಗಳನ್ನು ಉಳ್ಳ ಈ ಸಂಪುಟದ ಮೊದಲಭಾಗ ಸಂಪುಟದ ಮೌಲ್ಯವನ್ನು ಹೆಚ್ಚಿಸಿದೆ.

'ಧೀಮಂತ' ಸಂಸ್ಮರಣ ಸಂಪುಟವನ್ನು ಸಿದ್ಧಪಡಿಸಲು ಸಂಪಾದಕ ಮಂಡಲಿಯನ್ನು ರಚಿಸಲಾಗಿದ್ದು, ಸಂಪಾದಕರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಅತ್ಯಂತ ಶ್ರದ್ಧೆಯಿಂದ ಬಹಳ ಶ್ರಮಪಟ್ಟು ಸಂಪಾದನ ಕಾರ್ಯವನ್ನು ತುಂಬ ಅಚ್ಚುಕಟ್ಟಾಗಿ ಪೂರೈಸಿದ್ದಾರೆ. ಅವರಿಗೂ, ಅವರೊಂದಿಗೆ ಸಹಕರಿಸಿದ ಸಹಾಯಕ ಸಂಪಾದಕರಾದ ಶ್ರೀ ಎಂ. ವಿ. ಸತ್ಯನಾರಾಯಣ ಮತ್ತು ಶ್ರೀ ಕೆ. ಎಸ್ ಮಧುಸೂದನ ಅವರಿಗೂ, ಸಂಪಾದಕ ಮಂಡಲಿಯ ಮಾನ್ಯ ಮಿತ್ರರಿಗೂ ಉತ್ಸವ ಸಮಿತಿ ಮತ್ತು ಗೋಖಲೆ ಸಂಸ್ಥೆ ಕೃತಜ್ಞವಾಗಿವೆ.

ನಿಟ್ಟೂರು ಶ್ರೀನಿವಾಸ ರಾವ್
ಅಧ್ಯಕ್ಷ
ಡಿ.ವಿ.ಜಿ. ಜನ್ಮಶತಮಾನೋತ್ಸವ ಉತ್ಸವ ಸಮಿತಿ

ಪ್ರಸ್ತಾವನೆ

ಕನ್ನಡ ಸಾಹಿತ್ಯದ ನವೋದಯ ಯುಗದ ದಿಗ್ಗಜಗಳು ಎನ್ನಿಸಿದ ಬಿ.ಎಂ.ಶ್ರೀ, ಪಂಜೆ ಮಂಗೇಶರಾವ್, ಆಲೂರು ವೆಂಕಟರಾವ್, ಬೆಳ್ಳಾವೆ ವೆಂಕಟನಾರಾಯಣಪ್ಪ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರೀ, ಎಂ.ಆರ್.ಶ್ರೀ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗೋವಿಂದ ಪೈ, ಪಿ. ಜಿ. ಹಳಕಟ್ಟಿ, ವಿ. ಸೀತಾರಾಮಯ್ಯ ಮುಂತಾದವರ ಉನ್ನತ ಶ್ರೇಣಿಗೆ ಡಾ॥ ಡಿ. ವಿ. ಗುಂಡಪ್ಪನವರು ನಿಸ್ಸಂದೇಹವಾಗಿ ಸೇರುತ್ತಾರೆ. ಡಿ.ವಿ.ಜಿ. ಒಬ್ಬ **ಧೀಮಂತ ಸಾಹಿತಿ** ಎಂದು ವಿಶೇಷಿಸಿ, ಒತ್ತುಕೊಟ್ಟು ಹೇಳುವುದಕ್ಕೆ ಯಾವ ಅಡ್ಡಿಯೂ ಇರದು. 'ಧೀಃ' ಎಂದರೆ ಬುದ್ಧಿಮತ್ತೆ, ಬುದ್ಧಿಶಕ್ತಿ. ಜ್ಞಾನಾರ್ಜನೆಗೆ, ಚಿಂತನ-ಮಂಥನಕ್ಕೆ, ವಿಚಾರಪರತೆಗೆ, ವಿಚಾರ ಪ್ರಚೋದನೆಗೆ ಬುದ್ಧಿಯೇ ಏಕೈಕ ಉಪಕರಣ. ಅದು ಜ್ಞಾನೇಂದ್ರಿಯ. ತಮ್ಮ ಎಲ್ಲ ವಾಗ್ವ್ಯವಹಾರಕ್ಕೆ ಬುದ್ಧಿಶಕ್ತಿಯನ್ನು ಅವರು ಪರಿಣಾಮಕಾರಿಯಾಗಿ ಹೂಡಿದರು ಎಂಬ ಕಾರಣದಿಂದ ಅನೇಕರು ಅವರನ್ನು ಧೀಮಂತ ವ್ಯಕ್ತಿ ಎಂದು ಕಂಡುಕೊಂಡಿದ್ದಾರೆ.

ಅವರು ಧೀಮಾನ್ ಆದದ್ದರಿಂದಲೇ ಜ್ಞಾನಪೂರ್ಣ ಜ್ಞಾನದಾಯಕ ವಿಚಾರ-ಪರ ಸಾಹಿತ್ಯಕ್ಕೆ ಒಲವು ತೋರಿ, ಅದರ ರಚನೆಗೆ—ಸೃಷ್ಟಿಗೆ—ತಮ್ಮನ್ನು ತಾವು ಅರ್ಪಿಸಿಕೊಂಡದ್ದು; ಧೀಮಂತರಾದದ್ದರಿಂದಲೇ ಅವರು ಜ್ಞಾನಸಂಪನ್ನರಾದದ್ದು. ಬಹುತೇಕ ಅವರ ಕೃತಿಗಳೆಲ್ಲವೂ ಕನ್ನಡ ಶಾರದೆಯ ಗುಡಿಯಲ್ಲಿ ಜೀವನತೈಲಧಾರೆಯನ್ನು ಎರೆದು ಹೊತ್ತಿಸಿಟ್ಟ ಜ್ಞಾನದೀಪಿಕಾಮಾಲೆ ಆದವು.

ಹೀಗೆಂದದ್ದರಿಂದ ಅವರು ಸೃಜನಶೀಲ ಸಾಹಿತ್ಯಕಾರರಾಗಿರಲಿಲ್ಲ ಎಂದು ಅರ್ಥವಲ್ಲ. ಅವರ ಕವಿಹೃದಯ ಪ್ರಕೃತಿಸೌಂದರ್ಯಕ್ಕೆ, ಜೀವನ ಸೌಂದರ್ಯಕ್ಕೆ ಸ್ಪಂದಿಸಿದಾಗ, ಅವರು ಭಾವುಕರಾದಾಗ ಕವಿತಾರಚನೆಗೆ ಒಲಿಯುತ್ತಿದ್ದರು. ಆದರೆ ಅವರ ಕಾವ್ಯಪ್ರತಿಭೆ ಚಿಂತನಶೀಲ ಮೂಸೆಯಲ್ಲಿ ಪುಟಗೊಂಡದ್ದು. ಅವರ ಚಿಂತನಪರ ಕಾವ್ಯಾನುಶೀಲನಕ್ಕೆ 'ಮಂಕುತಿಮ್ಮನ ಕಗ್ಗ' ಶ್ರೇಷ್ಠವಾದ ಉದಾಹರಣೆ. ಅವರು ಎಷ್ಟರಮಟ್ಟಿಗೆ ಹೃದಯಸಂಪನ್ನರೋ ಅಷ್ಟರಮಟ್ಟಿಗೆ ಜ್ಞಾನಸಂಪನ್ನರೂ ಆಗಿದ್ದರು.

ಇಂಗ್ಲಿಷಿನಲ್ಲಿ **Self-made man** ಎನ್ನುತ್ತಾರೆ. ಹಾಗೆ, ಕನ್ನಡದ ದಿಗ್ಗಜ, ಧೀಮಂತ ಸಾಹಿತಿ ಎಂದು ಹೆಸರಾದ ದೇವನಹಳ್ಳಿ ವೆಂಕಟರಾಮಯ್ಯ ಗುಂಡಪ್ಪನವರು ಸ್ವಂತ ಪರಿಶ್ರಮದಿಂದ, ಸ್ವತಂತ್ರ ಅಧ್ಯಯನದಿಂದ, ಸ್ವಾವಲಂಬನೆಯಿಂದ ಕರ್ನಾಟಕದ ಸೀಮಾಪುರುಷರಲ್ಲಿ ಒಬ್ಬರೆನಿಸಿದರು. ಅವರಿಗೆ ಹೇಳಿಕೊಳ್ಳುವಂತಹ ವಂಶಮಹಿಮೆ, ವಂಶಾಧಿಕಾರ ಯಾವುದೂ ಇರಲಿಲ್ಲ. ತಮ್ಮ ವಂಶವನ್ನು ಕುರಿತು ಅವರೇ ಹೀಗೆ ಹೇಳಿಕೊಂಡಿದ್ದಾರೆ:

"ನನ್ನ ಪೂರ್ವಿಕರಲ್ಲಿ ಮಹತ್ವಕ್ಕೇರಿದವರು ಯಾರೂ ಕಾಣುವುದಿಲ್ಲ. ಪಂಡಿತರು ಯಾರೂ ಇದ್ದಂತೆ ತೋರುವುದಿಲ್ಲ; ಅಧಿಕಾರಸ್ಥರಿರಲಿಲ್ಲ; ಮಂತ್ರಿತ್ವ ಸೇನಾಪತಿತ್ವ ಮೊದಲಾದ ಭಾರಿ ಹುದ್ದೆಗಳಿಗೆ ಹತ್ತಿದವರಿರಲಿಲ್ಲ.......ಐಶ್ವರ್ಯವಂತೂ ಅವರಲ್ಲಿ ಯಾರಿಗೂ ತಿಳಿದದ್ದಲ್ಲ. ಅವರಲ್ಲಿ ದಾನ, ಧರ್ಮಗಳನ್ನು ಮಾಡಿದವರೂ ಲೋಕೋಪಕಾರಿಗಳೂ, ತಪಸ್ವಿಗಳೂ ಯಾರೂ ಇರಲಿಲ್ಲ. ನನ್ನ ಪೂರ್ವಿಕರೆಲ್ಲ ಸಾಮಾನ್ಯ ಜನರಲ್ಲಿ ಅತಿ ಸಾಮಾನ್ಯರು. ಅವರಿಗೆ ಅಂದಂದಿನ ಜೀವನ ನಡಸು

ತ್ತಿದ್ದುದೇ ಮಹಾಸಾಧನೆಯಾಗಿದ್ದಿರಬೇಕು...ದೇಹಧಾರಣೆ ಮಾಡಿದರು; ಅಷ್ಟರಲ್ಲಿ ಅವರಿಗೆ ತೃಪ್ತಿ. ವಂಶ ಬೆಳಸಿದರು. ಆ ಕಾಲದಲ್ಲಿ ರೂಢಿಯಾಗಿದ್ದ ಮದುವೆ ಮುಂಜಿಗಳನ್ನೂ, ಹಬ್ಬ-ಹರಿದಿನಗಳನ್ನೂ ಆಯಾ ಸಂದರ್ಭದಲ್ಲಿ ಅನುಕೂಲಿಸಿದಂತೆ ನಡಸಿದರು. ಕಾಲಬಂದಾಗ ಕಣ್ಣುಮುಚ್ಚಿದರು. ಇದೇ ಅವರ ಬಾಳು. ನನ್ನ ವಂಶವನ್ನು ಕುರಿತು ನಾನು ಹೆಮ್ಮೆಯಾದದ್ದೇನೂ ಹೇಳಿಕೊಳ್ಳುವಂತಿಲ್ಲ."

ಕೆಲವಂಶಗಳಲ್ಲಿ ಡಿ. ವಿ. ಗುಂಡಪ್ಪನವರು ವಂಶಪರಂಪರೆಯ ಪದ್ಧತಿಯನ್ನೆ ಅನುಸರಿಸಿದರು. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ನಾಪಾಸಾದರೂ ಅವರು ಇಷ್ಟಪಟ್ಟಿದ್ದರೆ ಒಂದು ಸರ್ಕಾರದ ನೌಕರಿ ಪಡೆಯುವುದು ಆಗಿನ ಕಾಲದಲ್ಲಿ ಕಷ್ಟವಾಗುತ್ತಿರಲಿಲ್ಲ. ಸ್ವತಂತ್ರ ಮನೋವೃತ್ತಿಯ ಅವರು ಪತ್ರಿಕೋದ್ಯಮಿ ಆದರು. ಅವರು ಅನೇಕ ಪತ್ರಿಕೆಗಳನ್ನು ಕನ್ನಡದಲ್ಲೂ, ಇಂಗ್ಲಿಷಿನಲ್ಲೂ ಪ್ರಾರಂಭಿಸಿ ಹಲಕೆಲವು ವರ್ಷ ನಡಸಿದರು. 1906 ರಲ್ಲಿ—ತಮ್ಮ 19 ನೆಯ ವಯಸ್ಸಿನಲ್ಲಿ (ಜನನ ಮಾರ್ಚ್ 17, 1887)—ಉದ್ಯೋಗಾರ್ಥಿಯಾಗಿ ಹುಟ್ಟೂರಾದ ಮುಳಬಾಗಿಲಿನಿಂದ ಬೆಂಗಳೂರಿಗೆ ಬಂದು ಸೋಡಾ ಫ್ಯಾಕ್ಟರಿ, ಜಟಕಾ ಗಾಡಿಗೆ ಬಣ್ಣಹಾಕುವ ಕಾರ್ಖಾನೆ, ಮುಂತಾದ ಅನಾಮಧೇಯ ಸ್ಥಳಗಳಲ್ಲಿ ಗುಮಾಸ್ತೆಯಾಗಿ ಕೆಲಸ ಮಾಡಿದರು. ಈ ವಯಸ್ಸಿಗಾಗಲೇ ಅವರು ಇಂಗ್ಲಿಷ್, ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು. ಐದನೆಯ ಫಾರಂನಲ್ಲಿ ಇದ್ದಾಗಲೇ ಕನ್ನಡ ಪಂಡಿತರ ಉತ್ತೇಜನದಿಂದ ಕಂದಪದ್ಯಗಳನ್ನು ರಚಿಸಿ, ಮುಂದೆ ಕವಿಯಾಗಲಿರುವರೆಂಬುದನ್ನು ಪ್ರಕಟಪಡಿಸಿದರು. ಒಂದು ಉದಾಹರಣೆ:

> ಶ್ರೀ ಗೌರೀಪ್ರಿಯತನಯಂ
> ವಾಗೀಶಾದ್ಯಮರವಿನುತ ಪಾದಂ ವರದಂ
> ಭೋಗೀಶ ಭೂಷಿತಾಂಗಂ
> ರಾಗದಿ ಪೊರೆಯೆಮ್ಮ ಗುರುಗಳಂ ಬಾಲಕರಂ

ಆ ಕಾಲದಲ್ಲಿ ಇನ್ನೂ ಕನ್ನಡ ನವೋದಯದ ಮುಂಗಿರಣಗಳು ಕಾಣಿಸಿಕೊಂಡಿರಲಿಲ್ಲ. ಅನಂತರ ಬಿ.ಎಂ.ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಇವರ ಸಹವಾಸ ದೊರೆತು ಕನ್ನಡ ನವೋದಯ ವಾತಾವರಣದಲ್ಲಿ ಬೆಳೆದರೂ ಡಿ.ವಿ.ಜಿ. ಅವರ ಒಲವು ಕಂದ ವೃತ್ತಗಳ ರಚನೆಗಳ ಕಡೆಗೇ ಹೆಚ್ಚು. ಅದು ಹಾಗಿರಲಿ. ಇದೇ ಬಗೆಯ ಭಾಷಾಪ್ರೌಢಿಮೆ ಇಂಗ್ಲಿಷಿನಲ್ಲೂ ಸ್ವಯಂಸಾಧನೆಯಿಂದ ಅವರಿಗೆ ಲಭಿಸಿತ್ತಾದ ಕಾರಣ, ಅವರು ಈ ಶತಕದ ಆರಂಭದ ದಶಕದಲ್ಲಿ The Evening Mail, Mysore Standard, The Mysore Herald ಮುಂತಾದ ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯತೊಡಗಿದರು. ಈ ಸನ್ನಿವೇಶದಲ್ಲಿ, ಪತ್ರಿಕೋದ್ಯಮದ ಮೂಲಕ, ಅವರು ಮೈಸೂರಿನ ರಾಜಕೀಯ ವ್ಯವಹಾರಗಳಿಗೆ ಪ್ರವೇಶಿಸುವಂತಾಯಿತು. ಆಗಿನ ಮೈಸೂರು ಪತ್ರಿಕೋದ್ಯಮದ ಪಿತಾಮಹರೆನಿಸಿದ ಎಂ. ವೆಂಕಟಕೃಷ್ಣಯ್ಯ ('ತಾತಯ್ಯ') ನವರ ಸಂಪರ್ಕ ಸ್ನೇಹಗಳು ಲಭಿಸಿದವು. 1908 ರಲ್ಲಿ ಮೈಸೂರು ಸರ್ಕಾರ ಪತ್ರಿಕೆಗಳ ಮೇಲೆ ನಿರ್ಬಂಧಗಳನ್ನು ಹಾಕಿದ್ದರಿಂದ ಸಂಸ್ಥಾನ ಪತ್ರಿಕೆಗಳು (ಅವು ಇದ್ದವೇ ಕೆಲವು) ಮದ್ರಾಸಿನಿಂದ ಹೊರಡುವಂತಾಯಿತು. ಆಗ ಗುಂಡಪ್ಪನವರು ಮದರಾಸಿನ The Hindu ಮತ್ತು The Indian Patriot ಎಂಬ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. The Press Gag in Mysore ಎಂಬ ಪ್ರಕಟನೆಯಲ್ಲಿ ಸಹಲೇಖಕರಾಗಿದ್ದರು. ಈ ಕಾಲದಲ್ಲಿ ಅವರಿಗೆ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳ ಪರಿಚಯವಾಗಿ, ಅವರು ಬದುಕಿರುವವರೆಗೂ ಅವರೊಂದಿಗೆ ನಿಕಟವಾದ ಸ್ನೇಹ ಸಂಪರ್ಕವನ್ನು ಇಟ್ಟುಕೊಂಡಿದ್ದರು. 1907 ರಲ್ಲಿಯೇ ಅವರು 'ಭಾರತಿ' ಎಂಬ ಮೈಸೂರಿನ ಮೊತ್ತಮೊದಲ ಕನ್ನಡ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಇದು ಹೆಚ್ಚು ದಿನ ಬದುಕಿತಲಿಲ್ಲವಷ್ಟೆ. 1909 ರಲ್ಲಿ 'ಸುಮತಿ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿ, ಒಂದೆರಡು ವರ್ಷ ಮಾತ್ರ ನಡಸಿದರು.

1910ರಲ್ಲಿ ಎನ್. ಎಸ್. ಸುಬ್ಬರಾಯರು (ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಆಗಿ ನಿವೃತ್ತರಾದವರು) ಅವರ ಅಣ್ಣ ಎನ್. ನರಸಿಂಹಮೂರ್ತಿಗಳ ಪರಿಚಯವಾಯಿತು. (ಇವರು ಮುಂದಿನ ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಧಿಕಾರಿ ಆಗಿ ನಿವೃತ್ತರಾದರು). ನರಸಿಂಹಮೂರ್ತಿಗಳ ಸಾಹಚರ್ಯದಿಂದಾಗಿ ಗುಂಡಪ್ಪನವರಿಗೆ ಪಾಶ್ಚಾತ್ಯ ಪೌರ್ವಾತ್ಯ ತತ್ತ್ವಶಾಸ್ತ್ರಗಳ ವ್ಯಾಸಂಗಕ್ಕೆ ಪ್ರೇರಣೆ ದೊರೆಯಿತು; ಈ ಕಾಲದಲ್ಲಿಯೇ The Karnataka ಎಂಬ ಪಕ್ಷಪತ್ರಿಕೆಯನ್ನು ಪ್ರಾರಂಭಿಸಿ (1913) ಹತ್ತು ಹನ್ನೆರಡು ವರ್ಷ ನಡೆಸಿದರು (1926ರವರೆಗೆ). ಈ ಅವಧಿಯಲ್ಲಿ, ಮುಂಬಯಿಯಲ್ಲಿ ನಡೆದ Indian National Congress ಅಧಿವೇಶನದಲ್ಲಿ ಭಾಗವಹಿಸಿ, ಭಾರತದ ದೇಶೀಯ ಸಂಸ್ಥಾನಗಳ ಬಗೆಗೆ ಒಂದು ನಿರ್ಣಯವನ್ನು ಮಂಡಿಸಿ, ಆ ಬಗೆಗೆ ಪರ್ಯಾಲೋಚನೆ ನಡೆಯುವಂತೆ ಮಾಡಿದರು. 1922ರಲ್ಲಿ ಡಿ.ವಿ.ಜಿ. ಪ್ರಕಟಿಸಿದ 'ವಸಂತ ಕುಸುಮಾಂಜಲಿ'ಯಲ್ಲಿ, ಉತ್ತಮ ಜೀವನ, ಲೋಕಸೇವಾ ಧರ್ಮಾನುಷ್ಠಾನಗಳಿಗೆ ಹೆಸರಾಗಿ ಲೋಕವಂದ್ಯರಾದ ರಾಮಕೃಷ್ಣಪರಮಹಂಸ, ರಾಜಾರಾಮ ಮೋಹನರಾಯ್, ದಾದಾಭಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಸ್ವಾಮಿ ವಿವೇಕಾನಂದ, ಬಾಲಗಂಗಾಧರ ತಿಲಕ್, ಮೋಕ್ಷಗುಂಡಂ ವಿಶ್ವೇಶ್ವರಯ್ಯ, ರವೀಂದ್ರನಾಥ ಠಾಕೂರ್, ಮೋಹನದಾಸ್ ಕರಮಚಂದ್ ಗಾಂಧಿ ಮತ್ತು ಶ್ರೀ ಕೃಷ್ಣರಾಜೇಂದ್ರ ಒಡೆಯರ್—ಈ ಪುರುಷೋತ್ತಮರನ್ನು ಕುರಿತು ಅವರು ಕವಿತೆ ರಚಿಸಿದರು; ಇವರೆಲ್ಲರ ಜೀವಿತ ಮತ್ತು ಬರಹಗಳಿಂದ ಪ್ರಭಾವಿತರಾದರು. ಡಿ.ವಿ.ಜಿ. ಕಾಂಗ್ರೆಸ್ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳ ಬಗೆಗೆ ನಿರ್ಣಯ ಮಂಡಿಸಿದ್ದು, ಕೃಷ್ಣರಾಜ ಒಡೆಯರ್ ಅವರ ಮೇಲಿನ ಕವಿತೆ, 1929ರಲ್ಲಿ ದಕ್ಷಿಣ ಭಾರತ ಸಂಸ್ಥಾನ ಪ್ರಜೆಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದು, ಮೈಸೂರು ಸಂಸ್ಥಾನದ ದಿವಾನರುಗಳೊಡನೆ (ಮುಖ್ಯವಾಗಿ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಇವರೊಡನೆ) ಇಟ್ಟುಕೊಂಡಿದ್ದ ನಿಕಟಸಂಪರ್ಕ—ಇವುಗಳನ್ನು ಗಮನಿಸಿದರೆ, ದೀರ್ಘಕಾಲದ ಐತಿಹಾಸಿಕ ಮಹತ್ತ್ವವನ್ನು ಹೊಂದಿದ್ದು, ವಂಶಪಾರಂಪರ್ಯವಾಗಿ ಸಾಹಿತ್ಯ ಸಂಸ್ಕೃತಿ ಕಲೆಗಳಿಗೆ ಪ್ರೋತ್ಸಾಹ ನೀಡುತ್ತ ಬಂದಿದ್ದ ರಾಜಮನೆತನವನ್ನು ಪಡೆದಿದ್ದು, ಭರತಖಂಡದಲ್ಲಿ ಆಧುನಿಕವೂ ಮಾದರಿಯದೂ ಪ್ರಗತಿಪರವೂ ಆದ ಸಂಸ್ಥಾನ ಎಂದು ದೇಶ ವಿದೇಶಗಳಲ್ಲಿ ಖ್ಯಾತಿ ಹೊಂದಿದ್ದ ಮೈಸೂರು ಸಂಸ್ಥಾನವು ಭಾರತದ ಯಾವುದೇ ರಾಜ್ಯಾಂಗ ವ್ಯವಸ್ಥೆಯಲ್ಲಿ ಒಂದು ವಿಶಿಷ್ಟ ಘಟಕವಾಗಿ ಉಳಿದಿರಬೇಕೆಂಬ ಭಾವನೆ ಡಿ.ವಿ.ಜಿ. ಅವರ ಅಂತರ್ಯದಲ್ಲಿ ಬಲವಾಗಿ ನೆಲಸಿತ್ತೆಂದು ಹೇಳಬಹುದು. ಆದ್ದರಿಂದಲೇ ಭಾಷಾವಾರು ಪ್ರಾಂತರಚನೆಗೂ ಕರ್ನಾಟಕ ಏಕೀಕರಣಕ್ಕೂ ಅವರು ವಿರೋಧವಾಗಿದ್ದುದು. ಅವರು ಖಂಡಿತ ಕನ್ನಡದ ವಿರೋಧಿಯಾಗಿರಲಿಲ್ಲ. ಅವರು ಏಕೀಕರಣಕ್ಕೆ ಬೆಂಬಲಿಗರಾಗಿಲ್ಲದಿದ್ದುದು. ಇಂಗ್ಲಿಷ್ ಮತ್ತು ಸಂಸ್ಕೃತ ಪ್ರೇಮಿಗಳಾಗಿರುತ್ತ ಆ ಭಾಷೆಗಳಲ್ಲಿ ನಿರ್ದುಷ್ಟ ಪ್ರಭುತ್ವ ಹೊಂದಿದ್ದುದು ಇವುಗಳಿಂದಾಗಿ ಅವರು ಕನ್ನಡದ ನಿಜವಾದ ಹಿತೈಷಿಗಳಾಗಿರಲಿಲ್ಲ ಎಂಬ ಭಾವನೆ ಕೆಲವರು ವೀರ ಕನ್ನಡಾಭಿಮಾನಿಗಳಲ್ಲಿ ಉಂಟಾಗಿದ್ದರೆ ಅದಕ್ಕೆ ಆಶ್ಚರ್ಯಪಡಬೇಕಾಗಿರಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ವಿಜ್ಞಾನ ಮತ್ತು ಶಾಸ್ತ್ರ ವಿಷಯಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸವನ್ನು ಮೊತ್ತಮೊದಲಿಗೆ ವ್ಯವಸ್ಥೆ ಮಾಡಿದವರೂ (1934), ಸಾಹಿತ್ಯ ಸೇವೆಯ ನಿಮಿತ್ತದಿಂದ 1932ರಲ್ಲಿ ಮಡಿಕೇರಿ (ಕೊಡಗು ಜಿಲ್ಲೆ) ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರೂ ಆದ ಡಿ.ವಿ.ಜಿ. ಅವರ ಕನ್ನಡದ ಅಭಿಮಾನ ಪ್ರಶ್ನಾತೀತವಾದದ್ದು. ಕನ್ನಡ ತಮಿಳಿನಿಂದ ಹುಟ್ಟಿದ್ದು ಎಂಬ ರಾಜಗೋಪಾಲಾಚಾರಿಯವರ ಅಭಿಪ್ರಾಯವನ್ನು ಡಿ.ವಿ.ಜಿ. ಒಮ್ಮೆ ಬೆಂಬಲಿಸಿದ್ದುಂಟು. ಅದಕ್ಕೆ ಆಧುನಿಕ ದ್ರಾವಿಡಭಾಷಾ ವಿಜ್ಞಾನದ ಅರಿವಿಲ್ಲದಿದ್ದುದು ಕಾರಣವೇ ಹೊರತು ತಮಿಳಿನ ಪ್ರೀತಿಯಾಗಲಿ ಕನ್ನಡದ ಪ್ರಾಮುಖ್ಯದ ಬಗೆಗೆ ತಾತ್ಸಾರ ಭಾವನೆಯಾಗಲಿ ಅಲ್ಲ.

ಡಿ.ವಿ.ಜಿ. ಅವರು ಸಾಹಿತ್ಯ ಪ್ರಪಂಚವನ್ನು ಒಬ್ಬ ಪತ್ರಿಕೋದ್ಯಮಿಯಾಗಿ, ರಾಜಕೀಯಸ್ಥನಾಗಿ, ಭಾರತೀಯ ಧಾರ್ಮಿಕ ಸಾಹಿತ್ಯಕ ಸಾಂಸ್ಕೃತಿಕ ಪುನರುಜ್ಜೀವನಯುಗದ ರಾಷ್ಟ್ರಾಭಿಮಾನಿಯಾಗಿ

ಪ್ರವೇಶಿಸಿದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದ ಮೇಲೆಯೂ (1945) ಸಾಹಿತ್ಯ ಕಾರ್ಯವನ್ನೂ ಪತ್ರಿಕೋದ್ಯಮವನ್ನೂ ಜೊತೆ ಜೊತೆಯಲ್ಲಿಯೇ ಸಾಗಿಸಿ-ಕೊಂಡು ಹೋದರು. ತಾವು ಬದುಕಿರುವವರೆಗೂ ಸಂಸ್ಥೆಯ ಪರವಾಗಿ Public Affairs ಎಂಬ ಪತ್ರಿಕೆಯನ್ನು ಇಂಗ್ಲಿಷಿನಲ್ಲೂ, **ಸಾರ್ವಜನಿಕ** ಎಂಬ ಪತ್ರಿಕೆಯನ್ನು ಕನ್ನಡದಲ್ಲೂ ಸಂಪಾದಿಸಿ ಪ್ರಕಟಿಸುತ್ತಿದ್ದರು. ಮುಳಬಾಗಿಲಿನಲ್ಲಿ ಕಳೆದ ಬಾಲ್ಯದ ಮತ್ತು ಪೂರ್ವ ಯೌವನದ ದಿನಗಳಲ್ಲಿ ಅಲ್ಲಿನ ಧಾರ್ಮಿಕ. ಸಾಂಸ್ಕೃತಿಕ ಚಟುವಟಿಕೆಗಳಿಂದಾಗಿ ವೇದ, ಪುರಾಣ. ರಾಮಾಯಣ. ಭಾರತ. ಭಾಗವತಗಳಲ್ಲಿ ತೀವ್ರಾಸಕ್ತಿ ಹೊಂದಿದ್ದರು. ಸ್ವಂತ ವ್ಯಾಸಂಗದಿಂದ ಪಂಪ, ರನ್ನ. ಕುಮಾರವ್ಯಾಸಾದಿ ಕನ್ನಡ ಮಹಾಕವಿಗಳ. ಕಾಳಿದಾಸಾದಿ ಸಂಸ್ಕೃತ ಮಹಾಕವಿಗಳ ಗ್ರಂಥರತ್ನಗಳನ್ನು ಅಧ್ಯಯನ ಮಾಡತೊಡಗಿದರು. ಬೆಂಗಳೂರಿಗೆ ಬಂದ ಮೇಲೆ. ರಾಜಕೀಯವೂ ಸಾರ್ವಜನಿಕ ಜೀವನವೂ ಧರ್ಮದ ನೆಲೆಗಟ್ಟಿನ ಮೇಲೆ ರೂಪಗೊಳ್ಳಬೇಕು ಎಂಬ ಗೋಖಲೆಯವರ ಆದರ್ಶದಿಂದ ಪ್ರಭಾವಿತರಾಗಿ ವೇದಾಂತ ಶಾಸ್ತ್ರದ ಕ್ರಮಬದ್ಧವಾದ ಅಧ್ಯಯನ ಮಾಡಲು ಮನಸ್ಸುಮಾಡಿ. ದಾಸಗಲ್ಲು ವಿರೂಪಾಕ್ಷಶಾಸ್ತ್ರಿಗಳ ಸನ್ನಿಧಿಯಲ್ಲಿ ಅಧ್ಯಯನ ಮಾಡಿದರು. ಗೋಖಲೆಯವರನ್ನು ಗಾಂಧಿಯವರು ತಮ್ಮ ಇಷ್ಟಗುರುವಾಗಿ ಸ್ವೀಕರಿಸಿದ್ದಂತೆ. ಡಿ.ವಿ.ಜಿ.ಯವರು ಗೋಖಲೆಯವರನ್ನು ತಮ್ಮ ಇಷ್ಟಗುರುವಾಗಿ ಸ್ವೀಕರಿಸಿದರು. ವಿಜಯನಗರ ಸ್ಥಾಪನೆಗೆ ಪ್ರೇರಕಶಕ್ತಿಯಾಗಿದ್ದ ವಿದ್ಯಾರಣ್ಯಸ್ವಾಮಿಗಳು ಅವರ ಆದರ್ಶಪುರುಷರಾಗಿದ್ದರು. ಈ ಪ್ರಭಾವಗಳ ಪರಿಣಾಮವಾಗಿ ಡಿ.ವಿ.ಜಿ.ಯವರು ಗೋಪಾಲಕೃಷ್ಣ ಗೋಖಲೆಯವರ ಜೀವನ ಚರಿತ್ರೆಯನ್ನು ರಚಿಸಿದ್ದಲ್ಲದೆ (1915) ವಿದ್ಯಾರಣ್ಯರನ್ನು ಕುರಿತು ಅನೇಕ ಗ್ರಂಥಗಳನ್ನು ರಚಿಸಿದರು. 1922 ರಲ್ಲಿ ಪ್ರಕಟವಾದ 'ವಸಂತಕುಸುಮಾಂಜಲಿ'ಯ ಕಡೆಯ ಪದ್ಯಾವಳಿ ("ದೇಶಸೇವಕನ ಪ್ರತಿಜ್ಞೆ") ಪೂಣೆಯ 'ಭಾರತದೇಶ ಸೇವಕ ಸಂಘ' (Servants of India Society) ಸ್ವೀಕರಿಸಿದ್ದ ಸೇವಾದೀಕ್ಷೆಯ ನಿಯಮಗಳನ್ನು ನಿರೂಪಿಸುತ್ತದೆ. ಒಂದು ರೀತಿಯಲ್ಲಿ ಡಿ.ವಿ.ಜಿ.ಯವರು ದೇಶಸೇವೆ, ಜನಸೇವೆಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡ 'ಆತ್ಮಸಮರ್ಪಣಾ ಪದ್ಯಗುಚ್ಛ' ಎಂದು ಅದನ್ನು ಭಾವಿಸಿದರೂ ತಪ್ಪಾಗದು.

ಜ್ಞಾನಿನಾ ಚರಿತುಂ ಶಕ್ಯಂ
ಸಮ್ಯಕ್ ರಾಜ್ಯಾದಿ ಲೌಕಿಕಂ

—ಎಂಬ ವಿದ್ಯಾರಣ್ಯರ ಮಹತ್ವದ ಮಾತು ಡಿ.ವಿ.ಜಿ. ಅವರ ಜೀವನದ ದಾರಿದೀಪವಾಯಿತು; 1945 ರಲ್ಲಿ ಅವರು ಸ್ಥಾಪಿಸಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಧ್ಯೇಯವಾಕ್ಯವಾಯಿತು. ವಾಸ್ತವವಾಗಿ, 1915 ರಲ್ಲಿಯೇ ಗೋಖಲೆ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಪಟ್ಟು ಪೂರ್ವಭಾವಿ ಕಾರ್ಯವನ್ನೂ ನಡೆಸಿದ್ದರು. 'ಕರ್ನಾಟಕ ಪತ್ರಿಕಾಲಯ'ವೇ ಗೋಖಲೆ ಸಂಘದ ಕಾರ್ಯಾಲಯವೂ ಆಗಿದ್ದಿತು. 1915–16 ರ ಸುಮಾರಿನಲ್ಲಿ ಪ್ರಕಟಿಸಿದ 'ದಾದಾಭಾಯಿ ನವರೋಜಿ' ಎಂಬ ಸಂಕ್ಷಿಪ್ತ ಜೀವನ ಚರಿತ್ರೆಯ ಕೊನೆಯ ಹಾಳೆಯ ಹಿಂಬದಿಯಲ್ಲಿ ಸಂಘದ ಉದ್ದೇಶವನ್ನು ಹೀಗೆ ನಿರೂಪಿಸಿದ್ದಾರೆ:

"ನಮ್ಮ ಸಾಮಾಜಿಕ ವ್ಯವಸ್ಥೆ, ರಾಜಕೀಯೋನ್ನತಿ, ಇವೇ ಮೊದಲಾಗಿ ದೇಶದ ಯೋಗಕ್ಷೇಮಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಕುರಿತು ಸದಭಿಪ್ರಾಯಗಳನ್ನು ಜನರಲ್ಲಿ ಪ್ರಚಾರಪಡಿಸುವುದು."

ಈ ಉದ್ದೇಶವನ್ನು ಕಾರ್ಯಗತ ಮಾಡಲು ಕಾರ್ಯವಿಧಾನಗಳನ್ನೂ ಸೂಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು: 1. ಪುಸ್ತಕಗಳನ್ನೂ ಹಸ್ತಪತ್ರಿಕೆಗಳನ್ನೂ ಪ್ರಕಟಗೊಳಿಸಿ ಹರಡುವುದು. 2. ಉಪನ್ಯಾಸಗಳನ್ನೂ ವಾಚಕ ಮಂಡಲಿಗಳನ್ನೂ ಸ್ಥಾಪಿಸುವುದು. 3. ಮಹನೀಯರ

ಜನ್ಮದಿನ ಪುಣ್ಯದಿನಗಳನ್ನಾಚರಿಸುವುದು. 4. **ಬಡವರಿಗೂ ಕಷ್ಟದಲ್ಲಿರುವವರಿಗೂ ಸಹಾಯವಾಗುವಂಥ ಕಾರ್ಯಗಳನ್ನು ಸಹೋದರಭಾವದಿಂದ ಮಾಡುವುದು.** (ಅವಧಾರಣದ ಕಪ್ಪಕ್ಷರ ನಮ್ಮದು).

ಒಟ್ಟಿನಲ್ಲಿ, ಡಿ.ವಿ.ಜಿ. ತಮ್ಮ ಎಲ್ಲ ಕಾರ್ಯಚಟುವಟಿಕೆಗಳಿಗೂ—ವ್ಯಕ್ತಿಗತವಾಗಿ ಗ್ರಂಥರಚನೆ ಸಾಂಘಿಕವಾಗಿ ಸಾರ್ವಜನಿಕ ಕಾರ್ಯ—ದೇಶದ, ಜನದ, ಯೋಗಕ್ಷೇಮ ಸಾಧನೆಯನ್ನು ಗುರಿಯಾಗಿ ಇಟ್ಟುಕೊಂಡರು. ಜನಕ್ಕೆ ಜ್ಞಾನದಾನ ಮಾಡತಕ್ಕಂಥ, ವಿಚಾರಶಕ್ತಿಯನ್ನು ಬೆಳೆಸತಕ್ಕಂಥ, ಆಲಸ್ಯವನ್ನು ತೊಡೆದು ಪೌರುಷವನ್ನು ಬೆಳೆಸುವಂಥ, ಧರ್ಮಶ್ರದ್ಧೆಯನ್ನು ಮೂಡಿಸುವಂಥ, ಹೃದಯ ಸಂಸ್ಕಾರವನ್ನೂ ಆತ್ಮಸಂಸ್ಕಾರವನ್ನೂ ಉಂಟುಮಾಡತಕ್ಕಂಥ ಸಾಹಿತ್ಯ ರಚನೆಯಾಗಬೇಕು ಎಂದು ಬೋಧಿಸಿದರು. ಅಂಥ ಗ್ರಂಥಗಳನ್ನು ತಾವೇ ರಚಿಸಿದರು. ಭಗವದ್ಗೀತೆಯ ಬೋಧೆ ಇಂದಿಗೂ ಹೇಗೆ ಪ್ರಸ್ತುತವಾಗಬಲ್ಲದು ಎಂದು ತೋರಿಸಲು ಅದನ್ನು ವ್ಯಾಖ್ಯಾನಿಸಿ 'ಜೀವನ ಧರ್ಮಯೋಗ' ಎಂದು ಕರೆದರು. ಮಾದರಿಯಾದ ಗಂಭೀರ ಗದ್ಯ ಶೈಲಿಯಲ್ಲಿ ಧಾರ್ಮಿಕ ನೈತಿಕ ಮೌಲ್ಯಗಳನ್ನು ಸರ್ವಜನಾದರಣೀಯವಾಗುವಂತೆ ನಿರೂಪಿಸುವ ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆಯಿತು. ದೈವ–ಜೀವ–ಜಗತ್ತು ಇವುಗಳ ಬಗೆಗೆ ಪೂರ್ವದಾರ್ಶನಿಕರ ದರ್ಶನಸಾರವನ್ನೂ, ಸಂಗ್ರಹಬುದ್ಧಿಯನ್ನು ತೊರೆದು ಸರಳಜೀವನವನ್ನು ನಡೆಸುತ್ತ ಸದಾ ಚಿಂತನಶೀಲರಾಗಿ ತಾವು ಪಡೆದ ಲೋಕಾನುಭವವನ್ನೂ ಡಿ.ವಿ.ಜಿ. 'ಮುಕ್ತಕ ಕಾವ್ಯ' ರೂಪದಲ್ಲಿ ನಿರ್ಮಿಸಿದರು—'ಮಂಕುತಿಮ್ಮನ ಕಗ್ಗ' ಎಂಬ ನಮ್ರತಾಗುಣದ್ಯೋತಕ ಶೀರ್ಷಿಕೆಯಲ್ಲಿ. ಡಿ.ವಿ.ಜಿ. ಅವರ ಗ್ರಂಥ ರಾಶಿಯಲ್ಲಿ ಶ್ರೇಷ್ಠವಾದ ಒಂದು ಗ್ರಂಥವನ್ನು ಹೆಸರಿಸಿ ಎಂದು ಕೇಳಿದರೆ: 'ಮಂಕುತಿಮ್ಮನ ಕಗ್ಗ' ಎಂದೇ ಹೆಸರಿಸಬೇಕಾಗುತ್ತದೆ. ಈ ಉಚ್ಚ ಕೃತಿಯಲ್ಲಿ ಡಿ.ವಿ.ಜಿ.ಯವರ ಜೀವನಸಾರ–ಜೀವನ ದರ್ಶನ ಇವು ಕಾವ್ಯರೂಪದಲ್ಲಿ ಮೈತಳೆದು ಇದನ್ನು 'ವಿಶ್ವಮಾನ್ಯಕೃತಿ' ಎಂದು ಪರಿಗಣಿಸಲು ಅಭ್ಯಂತರವಿಲ್ಲ.

ಈಚಿನ ಎಂಬತ್ತರ ದಶಕವು ಸಾಹಿತ್ಯಾಭಿಮಾನಿಗಳಿಗೆ ಚಿರಸ್ಮರಣೀಯವಾದದ್ದು. ಏಕೆಂದರೆ ಕನ್ನಡ ಸಾಹಿತ್ಯ ನವೋದಯ ಯುಗದ ದಿಗ್ಗಜಗಳೆನಿಸಿದ್ದ ಹಲವಾರು ಹಿರಿಯರ ಜನ್ಮಶತಮಾನೋತ್ಸವಗಳು ನಡೆದದ್ದು ಈ ದಶಕದಲ್ಲೇ. ಡಿ.ವಿ.ಜಿ. ಅವರಿಗೆ ಅತ್ಯಂತ ಆಪ್ತರಾಗಿದ್ದ ಬಿ.ಎಂ.ಶ್ರೀ. ಮತ್ತು ವೆಂಕಣ್ಣಯ್ಯನವರ ಜನ್ಮಶತಮಾನೋತ್ಸವಗಳನ್ನು 1984, 1985ನೇ ಇಸವಿಗಳಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ನಡೆಸಿತು. ಇದೀಗ ಡಿ.ವಿ.ಜಿ. ಜನ್ಮಶತಮಾನೋತ್ಸವವನ್ನು ಡಿ.ವಿ.ಜಿ. ಅವರೇ ಸ್ಥಾಪಿಸಿ ಬೆಳೆಸಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅವರ ಜನ್ಮದಿನ 1987 ಮಾರ್ಚ್ 17ರಿಂದ ತೊಡಗಿ ಆಚರಿಸುವ ವ್ಯವಸ್ಥೆ ಮಾಡಿತು. ಉತ್ಸವದ ಅಂಗವಾಗಿ ಡಿ.ವಿ.ಜಿ. ಅವರ ಹಲವು ಕೃತಿಗಳನ್ನು ಪುನರ್ಮುದ್ರಣ ಮಾಡಿಸುವುದರ ಜೊತೆಗೆ, ಉತ್ಸವದ ಆರಂಭ ದಿನ ಒಂದು ಸ್ಮರಣ ಸಂಚಿಕೆಯನ್ನು ಪ್ರಕಟಿಸತಕ್ಕದ್ದೆಂದೂ ಆ ತರುವಾಯ ಡಿ.ವಿ.ಜಿ. ಅವರ ವ್ಯಕ್ತಿತ್ವ ಮತ್ತು ಕೃತಿರಾಶಿಯನ್ನು ಸಮಗ್ರವಾಗಿ ಪರಿಚಯಿಸಿಕೊಡುವಂಥ ಒಂದು ಸಂಸ್ಮರಣ ಸಂಪುಟವನ್ನು ಹೊರತರತಕ್ಕದ್ದೆಂದೂ ಉತ್ಸವ ಸಮಿತಿ ತೀರ್ಮಾನಿಸಿ, ಈ ಸಂಪುಟದ ನಿರ್ವಹಣೆಗಾಗಿ ಒಂದು ಸಂಪಾದಕ ಮಂಡಲಿಯನ್ನು ನಿಯೋಜಿಸಿತು. (ಈ ಸಂಪಾದಕ ಮಂಡಲಿಯ ಸದಸ್ಯರ ಹೆಸರುಗಳನ್ನು ಸಂಪುಟದ ಹೊದಿಕೆ ಹಾಳೆಯ ಒಳಮಡಿಕೆಯಲ್ಲಿ ಕಾಣಬಹುದು.) ಸಂಪಾದಕ ಮಂಡಲಿ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ 24-1-1987ರಂದು ಮತ್ತು 11-2-1987ರಂದು ಸಭೆ ಸೇರಿ ಸಂಪುಟದ ಹೆಸರು, ಪುಟಸಂಖ್ಯೆ, ಸ್ವರೂಪ—ಇವುಗಳ ಬಗೆಗೆ ಪರ್ಯಾಲೋಚಿಸಿ ತೀರ್ಮಾನಗಳನ್ನು ಅಂಗೀಕರಿಸಿತು. ಸದಸ್ಯರು ಸೂಚಿಸಿದ ಅನೇಕ ಹೆಸರುಗಳ ಪೈಕಿ ಮಂಡಲಿ ಒಪ್ಪಿದ ಹೆಸರು '**ಧೀಮಂತ**'. ಮಂಡಲಿ 500 ಪುಟಗಳ ಕನಿಷ್ಠ ಮಿತಿಯನ್ನು ನಿಗದಿಮಾಡಿದ್ದರೂ "ಗರಿಷ್ಠ ಪುಟಸಂಖ್ಯೆಯನ್ನು ಲೇಖನಗಳ ಪುಟಸಂಖ್ಯೆಯನ್ನು

ಅವಲಂಬಿಸಿ ನಿರ್ಧರಿಸಬಹುದು" ಎಂಬ ಅವಕಾಶವನ್ನೂ ಕಲ್ಪಿಸಿತ್ತು. ಮಂಡಲಿ ಸುಮಾರು 45 ಲೇಖನ ಶೀರ್ಷಿಕೆಗಳನ್ನೂ ಅವುಗಳ ಲೇಖಕರನ್ನೂ ನಿಷ್ಕರ್ಷೆ ಮಾಡಿದ್ದಲ್ಲದೆ, ಸಂಪುಟದ ಸ್ವರೂಪದ ಬಗೆಗೆ ಈ ರೀತಿ ನಿರ್ದೇಶನ ನೀಡಿತು : "ಸಂಸ್ಮರಣ ಸಂಪುಟವು ಡಿ.ವಿ.ಜಿ. ಅವರ ವ್ಯಕ್ತಿತ್ವ, ಜೀವನದರ್ಶನ ಮತ್ತು ಅವರ ಕೃತಿಗಳ ಬಗೆಗೆ ಈಗಾಗಲೇ ನಡೆದಿರುವ ಸಮೀಕ್ಷೆ ಹಾಗೂ ವಿಮರ್ಶೆಗಳನ್ನು ಗಮನಿಸಿ, ಮರುವಿಮರ್ಶೆಯನ್ನು ಹೊಂದಿರಬೇಕೆಂದೂ ಈ ಹಿನ್ನೆಲೆಯಲ್ಲಿ ಸಂಪುಟವನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದೆಂದೂ ಅಭಿಪ್ರಾಯಪಟ್ಟು ಮೊದಲನೆಯ ಭಾಗದಲ್ಲಿ ಡಿ.ವಿ.ಜಿ. ಅವರನ್ನು ಕುರಿತ ನೆನಪುಗಳೂ, ಎರಡನೆಯ ಭಾಗದಲ್ಲಿ ಅವರ ಸೃಜನಶೀಲ ಕೃತಿಗಳು ಹಾಗೂ ವಿಮರ್ಶೆಗಳ ಮೇಲೆ ಮತ್ತು ಅವರ ಇತರ ಕಾರ್ಯಕ್ಷೇತ್ರಗಳ ಬಗೆಗೆ ಲೇಖನಗಳು ಇರಬಹುದೆಂದೂ, ಮೂರನೆಯ ಭಾಗದಲ್ಲಿ ಅವರ ಆಯ್ದ ಪತ್ರಗಳನ್ನು ಹಾಕಬಹುದೆಂದೂ ತೀರ್ಮಾನವಾಯಿತು."

ಡಿ.ವಿ.ಜಿ. ಪತ್ರಗಳ ಬಗೆಗೆ, ತಮ್ಮಲ್ಲಿರುವ ಪತ್ರಗಳನ್ನು ಕಳಿಸಿಕೊಡಬೇಕೆಂದು ಪತ್ರಿಕೆಗಳಲ್ಲಿ ಸಾರ್ವಜನಿಕವಾಗಿ ವಿನಂತಿ ಮಾಡಿಕೊಂಡೆವು. ಸಾಹಿತ್ಯಕ ಮೌಲ್ಯವುಳ್ಳ ಪತ್ರಗಳು ಯಾವುವೂ ಬಾರದ ಕಾರಣ ಪತ್ರಸಂಚಯ ವಿಭಾಗವನ್ನು ಕೈಬಿಡಲಾಯಿತು. ಈ ಮಧ್ಯೆ, ಡಿ.ವಿ.ಜಿ. ಅವರ ಅಪ್ರಕಟಿತ ಲೇಖನಗಳು ಹಲವು ಶ್ರೀ ಡಿ. ಆರ್. ವೆಂಕಟರಮಣನ್ ಅವರ ಕೃಪೆಯಿಂದ ದೊರೆತವು. ಪತ್ರಗಳ ಬದಲಿಗೆ ಅವುಗಳನ್ನೇ ಮೊದಲ ಭಾಗವಾಗಿ ಪ್ರಕಟಿಸುವ ತೀರ್ಮಾನ ಮಾಡಲಾಯಿತು.

ಲೇಖನವನ್ನು ಬೇಡಿ ಲೇಖಕರಿಗೆ ಪತ್ರ ಬರೆಯುವಾಗ ಸೂಚಿತ ಲೇಖನದ ಶೀರ್ಷಿಕೆಯ ಆಶಯವನ್ನು ಲೇಖಕರಿಗೆ ತಿಳಿಯಪಡಿಸುವ ಸಲುವಾಗಿ, ಸ್ವಯಂ ಸ್ಪಷ್ಟವಾದ ಶೀರ್ಷಿಕೆಗಳ ವಿಚಾರ ಹೊರತಾಗಿ ಉಳಿದೆಲ್ಲ ಶೀರ್ಷಿಕೆಗಳ ಸಂಬಂಧದಲ್ಲಿ ಲೇಖನದ ವಿಷಯ ಸ್ವರೂಪವನ್ನು ಕುರಿತ ವಿವರಗಳನ್ನು ತಿಳಿಸುವ ವಿಷಯಸೂಚೀ ಪತ್ರಗಳನ್ನು ಸಂಬಂಧಪಟ್ಟ ಲೇಖಕರಿಗೆ ಕಳಿಸಲಾಯಿತು.

ಪ್ರತಿಯೊಂದು ಲೇಖನದಲ್ಲಿಯೂ ಡಿ.ವಿ.ಜಿ. ಕೃತಿಗಳ ಬಗೆಗೆ ಮರುಚಿಂತನೆ, ವಸ್ತುನಿಷ್ಠ ವಿಮರ್ಶೆ, ಮೌಲ್ಯಮಾಪನ ಇರಬೇಕು ಎಂಬುದು ಸಂಪಾದಕ ಮಂಡಲಿಯ ಆಶಯವಾಗಿತ್ತು. ಸರ್ವಸಾಧಾರಣವಾಗಿ ಮಂಡಲಿಯ ಅಪೇಕ್ಷೆ ಪೂರೈಸಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಡಿ.ವಿ.ಜಿ. ಬಗೆಗೆ ಗೌರವಭಾವ ಹೊಂದಿಯೂ ಅವರ ಕೃತಿಗಳನ್ನು ನಿಷ್ಠುರವಿಮರ್ಶೆಗೆ ಒಳಪಡಿಸಿರುವ ಸಂದರ್ಭಗಳೂ ಇಲ್ಲದಿಲ್ಲ. "ಡಿ.ವಿ.ಜಿ. ಅವರ ಕಾವ್ಯಮೀಮಾಂಸೆ", "ನವೋದಯ ಕಾವ್ಯ ಸಂದರ್ಭದಲ್ಲಿ ಡಿ.ವಿ.ಜಿ.", "ಜ್ಞಾಪಕಚಿತ್ರಶಾಲೆಯ ಕೆಲವು ಸಂಪುಟಗಳು", "ಇಂಡಿಯಾದ ಭಾಷಾ ಪ್ರಶ್ನೆ". "ಡಿ.ವಿ.ಜಿ. ಮತ್ತು ಕನ್ನಡ ಸಾಹಿತ್ಯ ಪರಿಷತ್ತು". "ಡಿ.ವಿ.ಜಿ. ಮತ್ತು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ"—ಮುಂತಾಗಿ ಹಲವು ವಿಷಯಗಳ ಬಗೆಗೆ ನಿರೀಕ್ಷಿಸಿದ್ದ ಲೇಖನಗಳು ಲೇಖಕಮಿತ್ರರಿಂದ ಕೊನೆಯ ಘಳಿಗೆಯವರೆಗೂ ಬರಲಿಲ್ಲ. (ಡಿ.ವಿ.ಜಿ. ಅವರ ಪರಿಷತ್ಸೇವೆ ಕುರಿತು ಸಂಪುಟದ ಸಂಪಾದಕನೇ ಬರೆಯಬೇಕಾಗಿತ್ತು. ಬರೆಯದೆ ತಪ್ಪಿತಸ್ಥನಾಗಿದ್ದಾನೆ!) ಈ ಎಲ್ಲ ಲೇಖನಗಳೂ ಬಂದಿದ್ದರೆ ಸಂಪುಟದ ಗಾತ್ರ ಒಂದು ಸಾವಿರ ಪುಟವಷ್ಟಾಗುತ್ತಿತ್ತು! ಆದದ್ದೆಲ್ಲ ಒಳಿತೇ ಆಯಿತು!

ನಾಡಿನ ಶ್ರೇಷ್ಠ ವಿದ್ವಾಂಸರು, ವಿಮರ್ಶಕರು, ಕವಿವರ್ಯರು—ಇವರೆಲ್ಲರೂ ಡಿ.ವಿ.ಜಿ. ಅವರ ಬಗೆಗೆ ಅಪಾರ ಗೌರವವುಳ್ಳವರು; ಕೆಲವರಂತೂ ಅವರ ಆಪ್ತವರ್ಗಕ್ಕೆ ಸೇರಿದವರು. ಈ ಮಹನೀಯರು ಬರೆದ ಬರಹಗಳು ಸಹಜವಾಗಿಯೇ ಮೇಲುಮಟ್ಟದವು. ಪ್ರತಿಯೊಂದು ಲೇಖನದ ಮೊದಲಲ್ಲಿ ಪರಿಚಯಾತ್ಮಕ ಟಿಪ್ಪಣಿಯನ್ನು ಸಂಪಾದಕನೇ ಬರೆದಿರುವುದಾಗಿದೆ. ಅದರಲ್ಲಿ ವ್ಯಕ್ತಪಟ್ಟಿರಬಹುದಾದ ಅಭಿಪ್ರಾಯದ ಮಾತುಗಳಿಗೆ ಆತನೇ ಹೊಣೆ. ನೆನಪಿನ ಪತ್ರಗಳಿಂದ

ಬೇಸರಗೊಳ್ಳದೆ ಲೇಖನಗಳನ್ನು ಕಳಿಸಿಕೊಟ್ಟು ಸಂಪಾದಕರೊಂದಿಗೆ ಸಹಕರಿಸಿದ ಎಲ್ಲ ಮಾನ್ಯ ಲೇಖಕರಿಗೂ ಸಂಪಾದಕ ಮಂಡಲಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಯ ವಂದನೆಗಳು ಸಲ್ಲುತ್ತವೆ.

ಸಹಾಯಕ ಸಂಪಾದಕರು ಶ್ರೀ ಎಂ. ವಿ. ಸತ್ಯನಾರಾಯಣ ಮತ್ತು ಶ್ರೀ ಕೆ. ಎಸ್. ಮಧುಸೂದನ ನನ್ನೊಂದಿಗೆ ಅನೇಕ ಬಗೆಯಲ್ಲಿ ದುಡಿದು ಅದರ ಅಚ್ಚುಕಟ್ಟಿಗಾಗಿ ಶ್ರಮಿಸಿದ್ದಾರೆ; ನನಗೆ ನೆರವಾಗಿದ್ದಾರೆ. ಇವರಿಗೆ ನಾನು ಚಿರಋಣಿ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಕಾರ್ಯಾಲಯದ ಶ್ರೀ ನಾ. ಗೀತಾಚಾರ್ಯ. ಕುಮಾರಿ ಜೆ. ವಸಂತ, ಇವರ ಸಹಾಯ ಸಹಕಾರಗಳೂ ಕೃತಜ್ಞತೆಗೆ ಪಾತ್ರವಾದವು.

'ಧೀಮಂತ' ತಡ ಎಂದರೆ 1987ರ ಡಿಸೆಂಬರ್‌ನಲ್ಲಿಯೇ ಪ್ರಕಟವಾಗಬೇಕಾಗಿದ್ದಿತು. ಮುದ್ರಣಾಲಯ ಬೇರೆಯ ತುರ್ತು ಅಚ್ಚಿನ ಕೆಲಸಗಳನ್ನು ಕೈಗೊಂಡಿದ್ದರಿಂದ. ಮೂರನೆಯ ಭಾಗದ ಮುದ್ರಣ ಈಚಿನ ತಿಂಗಳುಗಳಲ್ಲಿ ನಡೆಯಿತು. ನಾವು ಕೊಟ್ಟ ತೊಂದರೆಯನ್ನೆಲ್ಲ ಸಹಿಸಿಕೊಂಡು ಸಹಕರಿಸಿರುವ ಬೆಂಗಳೂರು ಮುದ್ರಣಾಲಯಕ್ಕೆ ನಾವು ಕೃತಜ್ಞರು.

ಉತ್ಸವ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಸಿಟ್ಟೂರು ಶ್ರೀನಿವಾಸರಾಯರೂ, ಕಾರ್ಯಾಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರೂ ನನ್ನಲ್ಲಿ ವಿಶ್ವಾಸವಿಟ್ಟು **'ಧೀಮಂತ'**ದ ಸಂಪಾದನ ಕಾರ್ಯದ ಗುರುತರವಾದ ಹೊಣೆ ಹೊರಿಸಿದ್ದಾರೆ. ಸಂಪುಟದಲ್ಲಿರಬಹುದಾದ ಲೋಪದೋಷಗಳನ್ನು ಗಣಿಸದೆ ಅವರೂ ಡಿ.ವಿ.ಜಿ. ಅಭಿಮಾನಿಗಳಾದ ಮಹಾಜನರೂ ಈ ಸಂಪುಟವನ್ನು ಕ್ಷಮಾಶೀಲರಾಗಿ ಒಪ್ಪಿಗೊಳ್ಳಬೇಕೆಂದು ಸಂಪಾದಕ ಮಂಡಲಿಯ ಪರವಾಗಿ ಬೇಡಿಕೊಳ್ಳುತ್ತೇನೆ.

ಬೆಂಗಳೂರು–19
20-5-1988

ಎಂ. ವಿ. ಸೀತಾರಾಮಯ್ಯ
ಸಂಪಾದಕ

ವಿಷಯಾನುಕ್ರಮಣಿಕೆ

ಭಾಗ ೧

ಡಿ.ವಿ.ಜಿ. ಅವರ ಬಿಡಿಬರಹಗಳು

	ಪುಟ
1. ಗಾಂಧಿಯವರ ಗುರು ಗೋಪಾಲ ಕೃಷ್ಣ ಗೋಖಲೆ	1
2. ಗೋಖಲೆ ಸ್ಮರಣೆ	15
3. ಶ್ರೀನಿವಾಸ ಶಾಸ್ತ್ರಿಗಳು	21
4. ದಾದಾಭಾಯಿ ನವರೋಜಿ	32
5. ಜಾನ್ ಸ್ಟೂಅರ್ಟ್ ಮಿಲ್	38
6. ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರು	46
7. ರಾಷ್ಟ್ರಸ್ವಾತಂತ್ರ್ಯ ಮತ್ತು ಕಾವ್ಯಸ್ಫೂರ್ತಿ	58
8. ಕವಿಚಕ್ರವರ್ತಿ ರನ್ನ	63
9. 'ಕಲೆ' ಎಂದರೆ ಏನು ?	68
10. ಸಂಸ್ಕೃತಿ	73
11. ನಮ್ಮ ಸಂಗೀತ : ಶ್ರೀ ಪುರಂದರದಾಸರ ಸೇವೆ—ನಮ್ಮ ಕರ್ತವ್ಯ	79
12. ಕ್ಷೇತ್ರಜ್ಞ	94
13. ಪ್ರಗತಿ—ಸ್ವಾತಂತ್ರ್ಯ	109
14. ಶಾಸನ ರಚನೆ ಮತ್ತು ಪ್ರಜಾಭಿಪ್ರಾಯ	114
15. ಕಾಂಗ್ರೆಸ್ ಸರಕಾರಗಳು	123
16. ಮುಖ್ಯಮಂತ್ರಿತ್ವಕ್ಕಿರಬೇಕಾದ ಶಾಸಕಸದಸ್ಯತ್ವದ ಅರ್ಹತೆ	131
17. ನಮ್ಮ ಸಾಹಿತ್ಯದ ಬೆಳವಣಿಗೆ	137

ಭಾಗ ೨

ನೆನಪುಗಳು

ಪುಟ

18. ಮೈಸೂರಿನ ರಾಜಾಜಿ 161
—ಪಿ. ಕೋದಂಡರಾವ್

19. ಕನ್ನಡದ ಡಾ॥ ಜಾನ್‌ಸನ್ 164
—ವಿ. ಸೀತಾರಾಮಯ್ಯ

20. ಕನ್ನಡ ನುಡಿ ಭಕ್ತ 174
—ದ. ಕೃ. ಭಾರದ್ವಾಜ

21. ಸಾಹಿತ್ಯ ತಪೋಧನ 180
—ಕೃಷ್ಣಮೂರ್ತಿ ಪುರಾಣಿಕ

22. ಡಿ.ವಿ.ಜಿ.—ಒಂದು ಭೇಟಿಯ ನೆನಪು 183
—ಸೇವ ನಮಿರಾಜಮಲ್ಲ

23. ಯಜಮಾನರು 187
—ಎಸ್ಸಾರ್ಕೆ

24. ಅಭಿಜಾತ ಪತ್ರಿಕೋದ್ಯಮಿ 190
—ಪ. ಕ. ರಾಜಪುರೋಹಿತ

25. ಗೌರವಾನ್ವಿತ ವಿದ್ವಾಂಸರು 195
— ಶಿವರಾಮ ಕಾರಂತ

26. ಹೋದ ಬಾಳ ಬೆಳಕು 197
— ಬಿ. ಪಿ. ರಾಧಾಕೃಷ್ಣ

27. ಮಹಾನ್ ವಿದ್ವಾಂಸರು 202
—ಶಂ. ಬಾ. ಜೋಶಿ

28. ನೆನಪಿನ ಸುರಳಿಯಿಂದ 203
—ಸ. ಸ. ಮಾಳವಾಡ

29. ನಾನು ಕಂಡಿದ್ದ ಡಿ.ವಿ.ಜಿ. 206
—ಪಿ. ವಿ. ಜೋಶಿ

30. ಒಂದು ನೆನಪು 209
—ಕೆ. ವೆಂಕಟರಾಮಪ್ಪ

ಪುಟ

31. ಪೂಜ್ಯ ಡಿ.ವಿ.ಜಿ. 212
—ಎಚ್. ಎಂ. ಶಂಕರನಾರಾಯಣರಾವ್

32. ಡಿ.ವಿ.ಜಿ.—ಒಂದು ಸ್ಮರಣೆ 217
—ಎಸ್. ವಿ. ಪರಮೇಶ್ವರಭಟ್ಟ

33. ರಸಋಷಿ—ಡಿ.ವಿ.ಜಿ. 220
—ನಿರಂಜನ

34. ಡಿ.ವಿ.ಜಿ. ನೆನಪು 223
—ಎಲ್. ಎಸ್. ಶೇಷಗಿರಿರಾವ್

35. ನೆನಹಿನ ದೀವಿಗೆ 228
—ಚೆನ್ನವೀರ ಕಣವಿ

36. ನೆನಪಿನ ಬತ್ತಳಿಕೆಯಲ್ಲಿಯ ಒಂದು ಬಾಣ 232
—ವೆಂ. ಮು. ಜೋಶಿ

37. ಡಿ.ವಿ.ಜಿ. ಅವರ ಪತ್ರಸ್ಪಂದನ 236
—ಜಿ. ವರದರಾಜರಾವ್

38. ಡಿ.ವಿ.ಜಿ. ಪರಿಸರದಲ್ಲಿ 243
—ವಸಂತ ಕುಷ್ಟಗಿ

39. ನಾನು ಕಾಣದೇ ಹೋದ ಡಿ.ವಿ.ಜಿ. 248
—ಶಂಕರ ಮೊಕಾಶಿ ಪುಣೇಕರ

40. ಡಿ.ವಿ.ಜಿ. : ವಿದ್ವತ್ತು ಮತ್ತು ರಸಿಕತೆಗಳ ಸಂಗಮ 251
—ಕೆ. ಟಿ. ಪಾಂಡುರಂಗಿ

41. ಡಿ.ವಿ.ಜಿ.ಯವರೊಡನೆಯ ಕೆಲವು ಕ್ಷಣಗಳು 253
—ಸುಮನಾ

42. ನನ್ನನ್ನು ಕಂಡರಿಸಿದ ರೂವಾರಿ : ಡಿ.ವಿ.ಜಿ. 261
—ಎಂ. ವಿ. ಸೀತಾರಾಮಯ್ಯ

43. A Great Patriot and a Thinker 267
—N. Lakshmana Rao

ಭಾಗ ೩

ಡಿ.ವಿ.ಜಿ. ಅವರ ವ್ಯಕ್ತಿತ್ವ ಮತ್ತು ಕೃತಿಸಮೀಕ್ಷೆ

ಪುಟ

44. ಪದ್ಯ ಪ್ರಸೂನಾಂಜಲಿ 273
—ರಾ. ಗಣೇಶ್

45. ಮಂಕುತಿಮ್ಮನ ಕಗ್ಗ (ಸಂಸ್ಕೃತಾನುವಾದ) 275
—ವೆಂಕಟರಾಮ ಭಟ್ಟ

46. ಮಂಕುತಿಮ್ಮನ ಕಗ್ಗ (ತಮಿಳು ಭಾಷಾಂತರ) 277
—ನ. ಮುನಿಸ್ವಾಮಿ

47. ಡಿ.ವಿ.ಜಿ. ಅವರ ಸಮೃದ್ಧ ವ್ಯಕ್ತಿತ್ವ 285
—ಸ. ವೆಂಕಟಾಚಲಪತಿ

48. ಡಿ.ವಿ.ಜಿ.—ಪಾಂಡಿತ್ಯ, ವೈಚಾರಿಕತೆ ಮತ್ತು ವ್ಯಕ್ತಿತ್ವ 299
—ಎ. ಎಸ್. ಮೂರ್ತಿರಾವ್

49. ಡಿ.ವಿ.ಜಿ. ಅವರ ವೈದಿಕಚಿಂತನ 318
—ಆರ್. ಎಸ್. ಶಿವಗಣೇಶಮೂರ್ತಿ

50. ಡಿ.ವಿ.ಜಿ. ಅವರ ಭಗವದ್ಗೀತಾ ತಾತ್ಪರ್ಯ 325
—ಕೆ. ಟಿ. ಪಾಂಡುರಂಗಿ

51. 'ಮಂಕುತಿಮ್ಮನ ಕಗ್ಗ'ದಲ್ಲಿ ತಾತ್ತ್ವಿಕ ನಿಲುವು 332
—ಎನ್. ರಂಗನಾಥ ಶರ್ಮ

52. 'ಮಂಕುತಿಮ್ಮನ ಕಗ್ಗ'ದಲ್ಲಿ ಜೀವನದೃಷ್ಟಿ 345
—ಎಸ್. ಆರ್. ರಾಮಸ್ವಾಮಿ

53. 'ಮಂಕುತಿಮ್ಮನ ಕಗ್ಗ' ಮತ್ತು 'ಮರುಳ ಮುನಿಯನ ಕಗ್ಗ'
—ಒಂದು ತೌಲನಿಕ ವಿವೇಚನೆ 358
—ಗುಂಡ್ಮಿ ಚಂದ್ರಶೇಖರ ಐತಾಳ

54. 'ಶ್ರೀರಾಮಪರೀಕ್ಷಣಂ'—ಒಂದು ಸೀಳುನೋಟ 374
—ಎಂ. ರಾಜಗೋಪಾಲಾಚಾರ್ಯ

55. 'ಶ್ರೀಕೃಷ್ಣಪರೀಕ್ಷಣಂ' 386
—ಟಿ. ಎನ್. ಪದ್ಮನಾಭನ್

56. 'ವಸಂತ ಕುಸುಮಾಂಜಲಿ'—ಒಂದು ಸಮೀಕ್ಷೆ 396
—ಜಿ. ಎಸ್. ಶಾಮಣ್ಣ

		ಪುಟ
57.	'ನಿವೇದನ' —ಎಂ. ವಿ. ಸೀತಾರಾಮಯ್ಯ	407
58.	'ನಿವೇದನ'ದ ಗೋಮಟೇಶ್ವರ —ಕಮಲಾ ಹಂಪನಾ	432
59.	'ಉಮರನ ಒಸಗೆ' : ಒಂದು ಪುನರವಲೋಕನ —ಸಿದ್ಧಯ್ಯ ಪುರಾಣಿಕ	446
60.	ಡಿ.ವಿ.ಜಿ. ಅವರ ಕಾವ್ಯಶೈಲಿ —ನರಹಳ್ಳಿ ಬಾಲಸುಬ್ರಹ್ಮಣ್ಯ	452
61.	ಡಿ.ವಿ.ಜಿ. ಅವರ ಶೃಂಗಾರ ಮೀಮಾಂಸೆ —ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ	463
62.	'ಗೀತ ಶಾಕುಂತಲ' —ಜಿ. ವರದರಾಜರಾವ್	472
63.	ಡಿ.ವಿ.ಜಿ. ಅವರ ಕೃತಿಗಳಲ್ಲಿ ಸಮನ್ವಯ ದೃಷ್ಟಿ —ಆರ್. ಜಿ. ಕುಲಕರ್ಣಿ	494
64.	ಡಿ.ವಿ.ಜಿ. ಅವರ 'ಸಂಸ್ಕೃತಿ'ಯಲ್ಲಿ ಸಮನ್ವಯ ದೃಷ್ಟಿ —ಎಸ್. ರಾಮಸ್ವಾಮಿ	503
65.	ಡಿ.ವಿ.ಜಿ. ಅವರ ಛಂದಃಪ್ರಯೋಗಗಳು —ಆರ್. ಗಣೇಶ್	513
66.	ಡಿ.ವಿ.ಜಿ. ಅವರ ಕಾವ್ಯದಲ್ಲಿ ಕಂಡುಬರುವ ನಾಡೊಲವು —ಪು. ತಿ. ನರಸಿಂಹಾಚಾರ್	533
67.	'ಬಾಳಿಗೊಂದು ನಂಬಿಕೆ' —ಕೆ. ಎಸ್. ನಾರಾಯಣಸ್ವಾಮಿ	544
68.	ಜ್ಞಾಪಕ ಚಿತ್ರಶಾಲೆ : ಡಿ.ವಿ.ಜಿ. ಅವರ ಅರಿಕೆಗಳು —ಡಿ.ವಿ.ಜಿ.	555
69.	ಜ್ಞಾಪಕ ಚಿತ್ರಶಾಲೆ—ಸಮಗ್ರ ಸಮೀಕ್ಷೆ —ಎಲ್. ಎಸ್. ಶೇಷಗಿರಿರಾವ್	595
70.	'ಸಾಹಿತ್ಯೋಪಾಸಕರು' —ಕೆ. ನರಸಿಂಹಮೂರ್ತಿ	605
71.	'ಹೃದಯ ಸಂಪನ್ನರು' —ಜಿ. ವೆಂಕಟಸುಬ್ಬಯ್ಯ	613

ಪುಟ

72. ಜೀವನಚರಿತ್ರಕಾರರಾಗಿ ಡಿ.ವಿ.ಜಿ. 619
—ಎಂ. ಎಚ್. ಕೃಷ್ಣಯ್ಯ

73. ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ವಿದ್ಯಾರಣ್ಯರು 633
—ಜಿ. ಎಸ್. ದೀಕ್ಷಿತ್

74. 'ಶ್ರೀ ವಿದ್ಯಾರಣ್ಯ ವಿಜಯ' 643
—ಟಿ. ವಿ. ವೆಂಕಟಾಚಲಶಾಸ್ತ್ರಿ

75. 'ಪರಶುರಾಮ' 650
—ಪು. ತಿ. ನರಸಿಂಹಾಚಾರ್

76. ಡಿ.ವಿ.ಜಿ. ಅವರ 'ಕನ್ನಡ ಪ್ರ್ಯಾಕ್‌ಬೆತ್': ಕೆಲವು ಸಮಸ್ಯೆಗಳು 661
—ಜಿ. ಎಸ್. ಆಮೂರ

77. ಡಿ.ವಿ.ಜಿ. ಅವರ ಭಾಷಾಂತರ ಗ್ರಂಥಗಳು 675
—ಟಿ. ಎಸ್. ಶ್ಯಾಮರಾವ್

78. ಡಿ.ವಿ.ಜಿ. ಅವರ 'ವೃತ್ತಪತ್ರಿಕೆ' 684
—ಜಿ. ಆರ್. ಶಂಕರರಾವ್

79. ಡಿ.ವಿ.ಜಿ. ಮತ್ತು ಕನ್ನಡ 693
—ಎ. ವಿ. ನಾವಡ

80. 'ರಾಜ್ಯಶಾಸ್ತ್ರ': ಒಂದು ವಿವೇಚನೆ 703
—ಎಚ್. ಆರ್. ದಾಸೇಗೌಡ

81. ಶಾಸನಸಭೆಯಲ್ಲಿ ಡಿ.ವಿ.ಜಿ. 713
—ತೆ. ಹನುಮಂತಪ್ಪ

[**ವಿಜ್ಞಾಪನೆ:** ಭಾಗ 3 ರಲ್ಲಿ. ಲೇಖನ ಶೀರ್ಷಿಕೆಗಳ ಅಡಿಯಲ್ಲಿ ಲೇಖಕರ ಹೆಸರುಗಳನ್ನು ಮುದ್ರಿಸುವಾಗ ಶ್ರೀ. ಪ್ರೊ.. ಡಾ.. ಎಂಬೀ ಗೌರವ ವಿಶೇಷಣಗಳನ್ನು ಸೇರಿಸುವಲ್ಲಿ ಏಕರೂಪತೆಯನ್ನು ಪಾಲಿಸಿಕೊಂಡು ಬರುವುದಾಗಿಲ್ಲ. ಈ ನ್ಯೂನಾತಿರಿಕ್ತ ಲೋಪ ದೋಷಕ್ಕಾಗಿ ವಿಷಾದಿಸುತ್ತೇವೆ.

—ಸಂ.]

ಅನುಬಂಧಗಳು

1. ಡಿ.ವಿ.ಜಿ. ಅವರ ಜೀವನ, ಕೃತಿ, ಲೇಖನ ಸೂಚಿ
2. ಡಿ.ವಿ.ಜಿ. ಅವರು ಬರೆದಿರುವ ಪುಸ್ತಕಗಳು
3. ಡಿ.ವಿ.ಜಿ. ಅವರನ್ನು ಕುರಿತ ಪುಸ್ತಕಗಳು
4. ಡಿ.ವಿ.ಜಿ. ಜೀವನ ವಿವರ
5. ಡಿ.ವಿ.ಜಿ. ಜನ್ಮಶತಮಾನೋತ್ಸವ ಸ್ಮೃತಿಮಾಲೆ
—ಡಿ. ವಿ. ಪರಮಶಿವಮೂರ್ತಿ, ನಾ. ಗೀತಾಚಾರ್ಯ
6. ಧೀಮಂತ ಲೇಖಕರ ಬಳಗ

ಧೀಮಂತ

ಭಾಗ ೧

ಡಿ.ವಿ.ಜಿ. ಅವರ ಬಿಡಿ ಬರಹಗಳು

ಗಾಂಧಿಯವರ ಗುರು

ಗೋಪಾಲ ಕೃಷ್ಣ ಗೋಖಲೆ

ನಮ್ಮ ದೇಶದ ಚರಿತ್ರೆಯಲ್ಲಿ ದೇಶಭಕ್ತರ ಹೆಸರುಗಳು ಪ್ರಸಿದ್ಧವಾದುವು ಹತ್ತಾರಿವೆಯಲ್ಲವೆ ? ರಾಜಕೀಯ ಪ್ರಾಜ್ಞತೆಗಾಗಿಯೂ ಸಮಾಜಸೇವೆಯ ಉತ್ಸಾಹಕ್ಕಾಗಿಯೂ ಸ್ವಾರ್ಥತ್ಯಾಗಕ್ಕಾಗಿಯೂ ವೀರಶ್ರದ್ಧೆಗಾಗಿಯೂ ಹೆಸರಾದವರು ಬಹುಮಂದಿ ಇರುವಲ್ಲಿ ಗೋಖಲೆಯವರನ್ನು ವಿಶೇಷವಾಗಿ ಸ್ಮರಣೆಗೆ ತಂದುಕೊಳ್ಳಲು ಕಾರಣವೇನು ? ಅಂಥ ಅನನ್ಯವಾದ ಗುಣಾತಿಶಯವೇನು ಅವರ ಜೀವಿತಕಥೆಯಲ್ಲಿ ಕಾಣಬರುತ್ತಿದೆ ? ಇದು ನ್ಯಾಯವಾದ ಪ್ರಶ್ನೆ.

ಅವರ ವೈಶಿಷ್ಟ್ಯ

ಒಂದು ದೃಷ್ಟಿಯಿಂದ ನೋಡಿದರೆ ಗೋಖಲೆಯವರ ಕಥೆ ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಸ್ವಾರಸ್ಯ ಮಾಸಿದಂತೆ ತೋರುವಂಥಾದ್ದು. ಈ ಹೊತ್ತು ಭಾರತ ದೇಶವು ಸರ್ವಸ್ವತಂತ್ರವಾಗಿದೆ,—ತಾನು ಇಷ್ಟಪಟ್ಟರೆ ಬ್ರಿಟನ್ನಿನ ಸಂಪರ್ಕವನ್ನು ಸಂಪೂರ್ಣವಾಗಿ ತ್ಯಜಿಸಬಹುದಾಗಿದೆ. ಗೋಖಲೆಯವರಾದರೋ ಬ್ರಿಟನ್ನಿಗೂ ಭಾರತಕ್ಕೂ ಸಂಬಂಧವು ದೈವಸಿದ್ಧವಾದದ್ದೆಂದು ನಂಬಿದ್ದ ಗುಂಪಿಗೆ ಸೇರಿದವರು. ಭಾರತದ ಸ್ವಾತಂತ್ರ್ಯಪ್ರಯತ್ನದಲ್ಲಿ ಅವರು ಮಿತವೇಗಿಗಳಾಗಿದ್ದವರು. ತಮ್ಮ ಹೋರಾಟವನ್ನು ಶಾಸನವಿಹಿತ ಕ್ರಮದಲ್ಲಿ ನಡಸಬೇಕೆಂದಿದ್ದವರು. ಅವರಂತೆ ಶೂರ ಪರಾಕ್ರಮ ಲಕ್ಷಣಗಳಿಲ್ಲದ,—ವೀರಾವೇಶ ತಾಳದ,—ಸಾರ್ವಜನಿಕ ಪುರುಷರನ್ನು ನಮ್ಮ ಇಂದಿನ ಉಗ್ರಪಂಥಗಳ ಕಾಲದಲ್ಲಿ ಜನ ಮೆಚ್ಚಿಕೊಳ್ಳದೆ ಇರುವುದು ಯಾರಿಗೂ ಆಶ್ಚರ್ಯವಾಗಲಾರದು. ಈಗಣ ಮೆಚ್ಚಿಕೆ ಭೀಮಸೇನನ ವಿಷಯದಲ್ಲಿ; ಧರ್ಮರಾಯನ ಬಗ್ಗೆ ಅಷ್ಟು ಹೆಚ್ಚಾಗಿಲ್ಲ.

ಆದರೆ ಈ ದೃಷ್ಟಿಯು ವಿಷಯದ ಆಳವನ್ನು ಅಳೆದು ತತ್ತ್ವವನ್ನು ಕಾಣಬಲ್ಲದ್ದಲ್ಲ. ಗೋಖಲೆಯವರಂಥ ಮಹನೀಯರ ಜೀವಿತವನ್ನು ಎರಡು ಬೇರೆ ಬೇರೆ ಪಕ್ಕಗಳಿಂದ ಪರೀಕ್ಷಿಸಿ ನೋಡಬಹುದು. ಒಂದು, ಅವರು ಮಾಡಿದ ತಾತ್ಕಾಲಿಕ

ಕಾರ್ಯಗಳ ಪಕ್ಕದ ನೋಟ ; ಇನ್ನೊಂದು, ಅವರ ಸಾರ್ವಕಾಲಿಕ ಮನೋಧರ್ಮದ ನೋಟ. ಅವರು ಬದುಕಿದ್ದ ದಿವಸಕ್ಕೆ ಮಾತ್ರ ಉಪಯುಕ್ತವಾದದ್ದು ಮೊದಲನೆಯದು ; ಈ ಹೊತ್ತಿಗೂ ನಾಳೆಗೂ ಉಪಯುಕ್ತವಾಗಬಲ್ಲದ್ದು ಎರಡನೆಯದು. ಈ ಎರಡನೆಯದರ ಕಾರಣದಿಂದಲೇ ಮಹಾತ್ಮಾ ಗಾಂಧಿಯವರು ಗೋಖಲೆಯವರನ್ನು ತಮ್ಮ ಇಷ್ಟ ಗುರುವೆಂದು ಅಂಗೀಕರಿಸಿದ್ದದ್ದು.

ರಾಜಕೀಯ ಸ್ವಭಾವ

ರಾಜಕೀಯ ರಂಗದ ಸ್ವಭಾವ ದಿನೇ ದಿನೇ ಬದಲಾಯಿಸುತ್ತಿರುವಂಥಾದ್ದು. ಯಾವೊಬ್ಬ ವ್ಯಕ್ತಿಯ ಆಹಾರ ವಸ್ತ್ರಗಳ ಬಗೆಯೂ. ವಿದ್ಯೆ ಸಂಸ್ಕಾರಗಳ ಕ್ರಮವೂ, ವಯೋವ್ಯತ್ಯಾಸವಾದಂತೆ, ಋತು ಪರಿವರ್ತನೆಯನ್ನನುಸರಿಸಿ, ಬದಲಾಯಿಸುತ್ತವಷ್ಟೇ ! ಒಂದು ಜನಾಂಗದ ರಾಜ್ಯಾಶಯಗಳೂ ಸಾಮಾಜಿಕ ಆವಶ್ಯಕತೆಗಳೂ ಆ ಜನದ ಮನೋಬುದ್ಧಿಗಳ ವಿಕಾಸವಾದಂತೆಲ್ಲ ಆಗಿಂದಾಗ್ಗೆ ಬೆಳೆದು ಬೇರ್ಪಡುತ್ತಿರುತ್ತವೆ. ಐದು ವರ್ಷದ ಕೂಸಿಗೆ ಸರಿಹೊಂದುವ ಅಂಗಿ ಹದಿನೈದು ವರ್ಷದ ಹುಡುಗನಿಗೆ ಆಗಲಾರದು ; ಹಾಗೆಯೇ ಹದಿನೈದು ವರ್ಷದವನದು ಐದು ವರ್ಷದವನಿಗೆ ಹೊಂದಲಾರದು. ಅದರಂತೆಯೇ ರಾಜ್ಯವ್ಯವಸ್ಥೆಯು ನಮ್ಮ ಹೊರಮೈಗೆ ಅಂಗಿಯಾಗಿ ಹೊಸ ಹೊಸದಾಗುತ್ತಿರತಕ್ಕದ್ದು. ಪದೇ ಪದೇ ಪುನಃಪರಿಷ್ಕಾರವನ್ನು ಅಪೇಕ್ಷಿಸುತ್ತಿರುವುದೇ ರಾಜ್ಯಸಂಸ್ಥೆಗಳ ಲಕ್ಷಣ. ಆದಕಾರಣದಿಂದ ಗೋಖಲೆಯವರ ಕಾಲಕ್ಕೆ ಸರಿಯೆನಿಸಿದ್ದ ಕಾರ್ಯವಿಧಾನಗಳೂ ಅವರ ಸಮಸಮಯಿಗಳಿಗೆ ಸಾಕೆನಿಸಿದ್ದ ಧ್ಯೇಯಗಳೂ ನಮ್ಮ ದಿವಸಕ್ಕೆ ಸಾಲದೆನಿಸಿರುವುದು ಕಾಲಪ್ರವಾಹ ಧೋರಣೆಯಿಂದ ಆಗಿರುವ ಸಂಗತಿ. ನಿನ್ನೆಯ ಗೋಖಲೆಯವರನ್ನು ಇಂದು ಹಿಂದೆ ಬಿಟ್ಟು ಮುಂದಕ್ಕೆ ಹರಿದು ಬಂದಿರುವ ರಾಜಕೀಯ ವಿಕಾಸದ ಪ್ರವಾಹವು ಇಂದಿನ ನಾಯಕರನ್ನೂ ನಾಳೆ ಹಿಂದಕ್ಕುಳಿಸಿ ತಾನು ಇನ್ನೂ ಮುಂದಕ್ಕೆ ಹರಿಯಬಹುದು. ಬರಿಯ ರಾಜಕೀಯಸ್ಥರು ಮಾತ್ರವೇ ಆದ ದೇಶಸೇವಕರು ಇಂಥ ಹಳಸಿಕೆಗೆ—ಮುದಿಗುದುರೆಯ ಪಾಲಿನ ಮರೆವಿಗೆ—ತುತ್ತಾಗಲು ಸಿದ್ಧರಾಗಿರಲೇಬೇಕು.

ಗೋಖಲೆಯವರು ಅಂಥ ಕಿಂಚಿತ್ಕಾಲಮಾತ್ರದ ರಾಜಕೀಯಸ್ಥರಾಗಿದ್ದವರಲ್ಲ. ಅವರ ರಾಜಕೀಯ ಬರಿಯ ರಾಜಕೀಯವಲ್ಲ ; ಅದು ಒಂದು ಶಾಶ್ವತ ಧರ್ಮದ ರೂಪಾಂತರ. ಅವರು ಒಂದು ಹೊಸ ಪಂಥಕ್ಕೆ ಮೂಲಪುರುಷರಾದವರು. ಆ ಪಂಥ ಎಲ್ಲ ಕಾಲಕ್ಕೂ ಎಲ್ಲ ಕಡೆಗೂ ಅಪೇಕ್ಷಣೀಯವಾದದ್ದು. ಅವರು ಚಿರಸ್ಮರಣೀಯರಾಗಿರುವುದು ಈ ಕಾರಣದಿಂದ. ಅವರ ಸ್ವರೂಪವೆಂಥದೆಂಬುದನ್ನು ವಿಚಾರ ಮಾಡ ಹೊರಡುವ ಮುನ್ನ, ಅವರ ಜೀವನಚರಿತ್ರೆಯ ಮುಖ್ಯಾಂಶಗಳನ್ನು ಸಂಗ್ರಹವಾಗಿ ಜ್ಞಾಪಕಕ್ಕೆ ತಂದುಕೊಳ್ಳೋಣ.

ಜೀವಿತ ಸಂಗತಿಗಳು

ಗೋಪಾಲ ಕೃಷ್ಣ ಗೋಖಲೆಯವರು 1866ನೆಯ ಇಸವಿ ಮೇ 9ರಲ್ಲಿ ರತ್ನಗಿರಿ ಜಿಲ್ಲೆಯ ಚಿಪ್ಲೂನ್ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಹುಟ್ಟಿದರು. ಅವರ ಮನೆತನ ಚಿತ್ಪಾವನ ಎಂಬ ಮಹಾರಾಷ್ಟ್ರ ಬ್ರಾಹ್ಮಣ ಪಂಗಡದ್ದು. ಗೋಖಲೆಯವರಿಗೆ ಹದಿಮೂರು ವರ್ಷವಾಗಿದ್ದಾಗ ಅವರ ತಂದೆ ಕಾಲಾಧೀನರಾದರು. ಆಮೇಲೆ ಗೋಖಲೆಯವರು ಅಣ್ಣಂದಿರ ಪೋಷಣೆಯಲ್ಲಿ ಬೆಳೆದರು. ಅದು ಬಡತನದ ಜೀವನ; ಆದರೆ ಮಾನ ಮರ್ಯಾದೆಗಳ ವಾತಾವರಣದ ಜೀವನ. ಗೋಖಲೆಯವರು ಅಕ್ಷರಜ್ಞಾನ ಪಡೆದ ಕೆಲವು ಕಾಲದ ಮೇಲೆ ಕೊಲ್ಹಾಪೂರದಲ್ಲಿಯೂ ಬಳಿಕ ಬೊಂಬಾಯಿಯಲ್ಲಿಯೂ ಪ್ರೌಢ ಶಿಕ್ಷಣ ಪಡೆದು, 1884ರಲ್ಲಿ ಬಿ.ಎ. ಪಟ್ಟವನ್ನು ಸಂಪಾದಿಸಿದರು. ಆ ವೇಳೆಗೆ ಪುಣೆ ಪಟ್ಟಣದಲ್ಲಿ ಲೋಕಮಾನ್ಯರಾದ ಶ್ರೀ ಬಾಲ ಗಂಗಾಧರ ತಿಲಕರವರು ಪ್ರಸಿದ್ಧಿಗೆ ಬಂದು ಸಾರ್ವಜನಿಕ ಸಮಾರಂಭಗಳಿಗೆ ಪೀಠಿಕೆ ಹಾಕಿದ್ದರು. ಆ ಸಮಾರಂಭಗಳಲ್ಲಿ ಒಂದು, 'ಡೆಕ್ಕನ್ ಎಜುಕೇಶನ್ ಸೊಸೈಟಿ' ಎಂಬ ವಿದ್ಯಾಪ್ರಚಾರ ಸಂಘದ್ದು. ಗೋಖಲೆಯವರು ಆ ಸಂಘಕ್ಕೆ ಸೇರಿ ಉಪಾಧ್ಯಾಯ ವೃತ್ತಿಯನ್ನು ಸ್ವೀಕರಿಸಿದರು. ಕಾಲಕ್ರಮದಲ್ಲಿ ಅವರು ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಮತ್ತು ಚರಿತ್ರೆ, ಇಂಗ್ಲಿಷ್ ಸಾಹಿತ್ಯಗಳ ಪ್ರೊಫೆಸರ್ ಆಗಿ, ವಿದ್ಯಾರ್ಥಿಗಳ ಪ್ರೀತಿ ಗೌರವಗಳಿಗೆ ಪಾತ್ರರಾದರು. ಆ ವೃತ್ತಿಯ ಜೊತೆಗೆ ರಾಜಕೀಯದ ಅಭ್ಯಾಸವನ್ನೂ ಕೈಕೊಂಡರು. ಆ ಅಭ್ಯಾಸಕ್ಕೆ ತಕ್ಕ ಸನ್ನಿವೇಶವನ್ನು ಶ್ರೀ ಮಹಾದೇವ ಗೋವಿಂದ ರಾನಡೆ ಮೊದಲಾದ ಸಾರ್ವಜನಿಕರು ಸಿದ್ಧಪಡಿಸಿದ್ದರು. ರಾನಡೆಯವರನ್ನು ಗೋಖಲೆಯವರು ಗುರುವಾಗಿ ಅಂಗೀಕರಿಸಿ ತಾವು ಪುಣೆಯ "ಸಾರ್ವಜನಿಕ ಸಭಾ" ಎಂಬ ಸಂಸ್ಥೆಯ ಸದಸ್ಯರಾಗಿಯೂ ಸ್ವಲ್ಪ ಕಾಲಾನಂತರ ಅದರ ಕಾರ್ಯದರ್ಶಿಯಾಗಿಯೂ ಕೆಲವು ದಿನ ಆ ಸಭೆಯ ಪತ್ರಿಕೆಗೆ ಸಂಪಾದಕರಾಗಿಯೂ ಸಹ ಕೆಲಸ ಮಾಡಿದರು. ಹೀಗೆ ಹತ್ತು ವರ್ಷಗಳ ಅಭ್ಯಾಸ ನಡೆದ ತರುವಾಯ 1895ರಲ್ಲಿ, ಕಾಂಗ್ರೆಸ್ ಮಹಾ ಸಭೆಯು ಪುಣೆಯಲ್ಲಿ ಸೇರಿದಾಗ ಆ ಸಭೆಯ ಸ್ವಾಗತ ಮಂಡಲಿಯ ಕಾರ್ಯದರ್ಶಿಯಾಗುವ ಅವಕಾಶ ಗೋಖಲೆಯವರಿಗೆ ದೊರೆಯಿತು. ಈ ಕಾರ್ಯಗಳ ಜೊತೆಗೆ ಪುಣೆಯ ಪೌರಸಭೆಯ ಸದಸ್ಯತ್ವವನ್ನೂ ಗೋಖಲೆಯವರು ವಹಿಸಿಕೊಂಡಿದ್ದರು. ಹೀಗೆ ಒಂದು ಕಡೆ ವಿದ್ಯಾಬೋಧನೆ, ಇನ್ನೊಂದು ಕಡೆ ದೇಶವಿಚಾರ ವ್ಯಾಸಂಗ, ಮತ್ತೊಂದು ಕಡೆ ಲೇಖನಾಭ್ಯಾಸ, ಇನ್ನೊಂದು ಕಡೆ ಸಂಘ ಸಂಸ್ಥೆಗಳಲ್ಲಿ ಕಾರ್ಯಾನುಭವ, ಜನಾನುಭವ—ಈ ರೀತಿ ಬಹುಮುಖವಾಗಿ ಬೆಳೆಯಿತು ಗೋಖಲೆಯವರ ದೇಶಸೇವಾಯೋಗ್ಯತೆ.

1897ರಲ್ಲಿ ಇಂಡಿಯಾ ಸರಕಾರದ ಹಣಕಾಸಿನ ಆಡಳಿತವನ್ನು ಪರಿಶೀಲನೆ ಮಾಡುವ ಬಗ್ಗೆ ಇಂಗ್ಲೆಂಡಿನ ಪಾರ್ಲಿಮೆಂಟು ಲಾರ್ಡ್ ವೆಲ್ಬಿ ಮಹಾಶಯನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಿಸಿತು. ಆ ಸಮಿತಿಯ ಆಹ್ವಾನದ ಮೇರೆಗೆ ಸಾಕ್ಷ್ಯ ಕೊಡಲು ಗೋಖಲೆಯವರನ್ನು ಪುಣೆಯ ಸಾರ್ವಜನಿಕ ಸಭೆ ಆರಿಸಿ ಕಳುಹಿಸಿತು.

ಅವರು ಇಂಗ್ಲೆಂಡಿಗೆ ಪ್ರಯಾಣಮಾಡಿ ಸಮಿತಿಯ ಮುಂದೆ ವಿಷಯ ವಿಮರ್ಶನೆಯಲ್ಲಿ ತೋರಿಸಿದ ಪ್ರಜ್ಞೆ ಚತುರತೆಗಳು ಗೋಖಲೆಯವರನ್ನು ಭಾರತದ ಸಾರ್ವಜನಿಕರಲ್ಲಿ ಅಗ್ರಶ್ರೇಣಿಗೆ ಏರಿಸಿದವು. ಅವರಿಗೆ ಆಗ ಬಂದ ಖ್ಯಾತಿಗೆ ಮೂಲಕಾರಣ ತಮ್ಮ ಗುರುಗಳಾದ ರಾನಡೆಯವರು ಕೊಟ್ಟಿದ್ದ ಮಾರ್ಗದರ್ಶನವೇ ಎಂದೂ ಮತ್ತು ಹಿರಿಯರಾದ ಜೋಶಿಯವರು ಸಂಗ್ರಹಿಸಿ ಶೋಧಿಸಿ ಕೊಟ್ಟಿದ್ದ ಅಂಕಿ ಅಂಶಗಳ ಸಾಮಗ್ರಿಯೇ ಎಂದೂ ಗೋಖಲೆಯವರು ಪದೇ ಪದೇ ಹೇಳುತ್ತಿದ್ದರು. ಆದರೂ ವಾಸ್ತವವಾಗಿ ಗೋಖಲೆಯವರ ಪ್ರತಿಪಾದನೆ ಅಷ್ಟು ಪರಿಣಾಮಕಾರಿಯಾದದ್ದು ಅವರ ಸ್ವಂತ ಪ್ರತಿಭೆ ಸಾಮರ್ಥ್ಯದಿಂದಲೇ ಎಂಬುದರಲ್ಲಿ ಯಾರಿಗೂ ಸಂದೇಹವಿರಲಿಲ್ಲ.

ಸೌಜನ್ಯ ಘನತೆ

ಗೋಖಲೆಯವರು ಇಂಗ್ಲೆಂಡಿನಲ್ಲಿದ್ದಾಗ ಭಾರತದಲ್ಲಿ ಒಂದು ವಿಶೇಷ ಘಟನೆ ನಡೆಯಿತು. 1898ರಲ್ಲಿ ಬೊಂಬಾಯಿ ಪ್ರಾಂತದಲ್ಲಿ ಪ್ಲೇಗ್ ಉಪದ್ರವ ತಲೆದೋರಿ ಉಲ್ಬಣಿಸಿದ್ದದ್ದು ಇಂದಿನ ಹಳಬರಿಗೆ ಜ್ಞಾಪಕದಲ್ಲಿರಬಹುದು. ಆ ಸಾಂಕ್ರಾಮಿಕದ ವ್ಯಾಪನೆಯನ್ನು ತಡೆಗಟ್ಟಬೇಕೆಂದು ಸರಕಾರದವರು ನಾನಾ ಪ್ರಯತ್ನಗಳನ್ನು ಮಾಡಿದರು. ಇಲಿ ಬಿದ್ದ ಮನೆಗಳನ್ನು ಖಾಲಿ ಮಾಡಿಸುವುದು. ಸೋಂಕಿರುವ ಪ್ರದೇಶಗಳಲ್ಲಿ ಜನಗಳಿಗೆ (ಇನಾಕ್ಯುಲೇಶನ್) ಚುಚ್ಚುಮದ್ದನ್ನು ಹಾಕಿಸುವುದು. ಇವೇ ಮೊದಲಾದ ಏರ್ಪಾಟುಗಳನ್ನು ಸರಕಾರವು ಬಲವಂತದಿಂದ ನಡಸಬೇಕಾಯಿತು. ಅದು ಜನಕ್ಕೆ ಹೊಸ ಅನುಭವವಾದ್ದರಿಂದ ಅನೇಕರು ಅದಕ್ಕೆ ಒಪ್ಪದವರಾದರು. ಅಂಥವರನ್ನು ನಿರ್ಬಂಧಪಡಿಸಲು ಸರಕಾರದವರು ಪೋಲೀಸ್ ಮಿಲಿಟರಿ ಸಿಬ್ಬಂದಿಗಳನ್ನು ಉಪಯೋಗಿಸಬೇಕಾಯಿತು. ಇದರಿಂದ ಜನಕ್ಕೆ ಮತ್ತಷ್ಟು ಉದ್ರೇಕವಾಗಿ, ದೊಂಬಿ ದಂಗೆಗಳಿಗೆ ದಾರಿಯಾಯಿತು. ಆ ಸಂದರ್ಭದಲ್ಲಿ ಐರೋಪ್ಯ ಜಾತಿಯ ಸೋಲ್ಜರುಗಳು ಅತ್ಯಾಚಾರ ನಡಸಿದರೆಂದು ಜನರಲ್ಲಿ ದೂರು ಹೊರಟಿತು. ಈ ದೂರನ್ನು ಉತ್ಪ್ರೇಕ್ಷೆಮಾಡಿ ಒಬ್ಬಾನೊಬ್ಬ ಮಿತ್ರರು ಗೋಖಲೆಯವರಿಗೆ ಇಂಗ್ಲೆಂಡಿಗೆ ಕಾಗದ ಬರೆದರು. ಗೋಖಲೆಯವರು ಅದನ್ನು ನಂಬಿ ಪುಣೆಯ ಸೋಲ್ಜರುಗಳ ವರ್ತನೆಯನ್ನು ಕುರಿತು ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಉಗ್ರವಾದ ಖಂಡನೆಯನ್ನು ಪ್ರಕಟಿಸಿದರು. ಲಂಡನ್ನಿನಲ್ಲಿ ಸಾರ್ವಭೌಮ ಸರಕಾರವು ಆ ಟೀಕೆಯನ್ನು ನೋಡಿ, ಅದು ವಿಚಾರಾರ್ಹವಾದದ್ದೆಂದು ನಿಶ್ಚಯಿಸಿ, ತಕ್ಕ ಪರೀಕ್ಷೆ ನಡಸುವಂತೆ ಭಾರತ ಸರಕಾರಕ್ಕೆ ಆಜ್ಞೆ ಮಾಡಿತು. ಆಗ ಗೋಖಲೆಯವರು ತಾವು ಮಾಡಿದ್ದ ಟೀಕೆಗಳಿಗೆ ಆಧಾರವನ್ನು ತೋರಿಸಿಕೊಟ್ಟು, ತಮ್ಮ ಖಂಡನೆಯನ್ನು ಸಮರ್ಥನೆ ಮಾಡಿಕೊಳ್ಳಬೇಕಾಯಿತು. ಆದರೆ ಅವರು ಇಂಗ್ಲೆಂಡಿನಿಂದ ಹಿಂದಿರುಗಿ ಬಂದು ಪುಣೆಯಲ್ಲಿ ತಮ್ಮ ಮಿತ್ರರಲ್ಲಿಯೂ ಸಹೋದ್ಯೋಗಿಗಳಲ್ಲಿಯೂ ವಿಚಾರ ಮಾಡ ಹೊರಟಾಗ ಹಿಂದೆ ತಮಗೆ ಪತ್ರ ಬರೆದಿದ್ದು ಆ ಉಗ್ರ ಟೀಕೆಯನ್ನು ಪ್ರೇರಿಸಿದ್ದವರು ಬರಿಯ ಬೀದಿ ಮಾತನ್ನು ನಂಬಿಕೊಂಡು ಹಾಗೆ ಮಾಡಿದ್ದರೆಂದೂ ಸೋಲ್ಜರುಗಳ ಮೇಲಣ ದೋಷಾ

ರೋಪಣೆಗೆ ತಕ್ಕ ರುಜುವಾತುಗಳು ದೊರೆಯುವಂತಿರಲಿಲ್ಲವೆಂದೂ ವ್ಯಕ್ತವಾಯಿತು. ಹೀಗೆ ತಮ್ಮ ಬಾಯಿಂದ ಹೊರಟಿದ್ದ ಮಾತು ಬುಡವಿಲ್ಲದ್ದೆಂದು ಒಪ್ಪಿಕೊಳ್ಳಬೇಕಾದ ಪ್ರಸಂಗ ಬಂತು ಗೋಖಲೆಯವರಿಗೆ. ಆ ವಿಷಮ ಪ್ರಸಂಗದಲ್ಲಿ ಅವರು ತಮ್ಮ ಪಶ್ಚಾತ್ತಾಪವನ್ನು ಸೂಚಿಸಿ ಸೈನ್ಯಾಧಿಕಾರಿಗಳ ಕ್ಷಮೆಯನ್ನು ಬೇಡಿದರು. ಪ್ರಾಮಾಣಿಕತೆಯೂ ಘನತೆಯೂ ಉಳ್ಳ ಸಜ್ಜನರು ನಡೆಯಬೇಕಾಗಿದ್ದ ಇಂಥ ನಡವಳಿಕೆಯನ್ನು ಗೋಖಲೆಯವರು ನಡೆದುಕೊಂಡದ್ದಕ್ಕಾಗಿ ಕೆಲ ಮಂದಿ ಭ್ರಾಂತಿವೀರರು ಗೋಖಲೆಯವರನ್ನು "ಕಚ್ಚಾ ಮನುಷ್ಯ" ಎಂದು ಕರೆದು ಅಪಹಾಸ್ಯ ಮಾಡಿದರು. ಗೋಖಲೆಯವರು ಅದರಿಂದ ನೋವು ತಿಂದರು. ಸ್ವಲ್ಪ ಕಾಲ ಅವರ ಜೀವ ಕುಗ್ಗಿತ್ತು. ಆದರೆ ಅದು ಸ್ವಲ್ಪ ಕಾಲ ಮಾತ್ರ.

1899ರಲ್ಲಿ ಅವರನ್ನು ಮುಂಬಯಿ ಪ್ರಾಂತದ ಪೌರಸಭೆಗಳವರು ಆ ಆಧಿಪತ್ಯದ ಶಾಸನ ಸಭೆಗೆ (ಲಿಜಿಸ್ಲೆಟಿವ್ ಕೌನ್ಸಿಲ್) ಸದಸ್ಯರನ್ನಾಗಿ ಚುನಾಯಿಸಿದರು. ಅಲ್ಲಿಂದ ಮುಂದೆ ಗೋಖಲೆಯವರ ಉನ್ನತಿ ಬೇಗ ಬೇಗ ಬೆಳೆಯತಕ್ಕದ್ದಾಯಿತು. ಮುಂಬಯಿ ಲೆಜಿಸ್ಲೆಟಿವ್ ಸಭೆಯಲ್ಲಿ ಸಾರ್ವಜನಿಕ ವಿಚಾರ ವಿಮರ್ಶೆಯಲ್ಲಿ ಗೋಖಲೆಯವರು ತೋರಿಸಿದ ಉತ್ಸಾಹ ಸಾಮರ್ಥ್ಯಗಳಿಂದ ಅವರಿಗೆ ಲೋಕದ ಶ್ಲಾಘನೆ ಪ್ರೋತ್ಸಾಹಗಳು ದೊರೆತು ಅವರ ಕೀರ್ತಿ ದೃಢಪಟ್ಟದ್ದಲ್ಲದೆ. ಅವರ ಅಂತರಂಗದಲ್ಲಿಯೇ ಒಂದು ಹೊಸ ಧೈರ್ಯವೂ ಒಂದು ಹೊಸ ಕರ್ತವ್ಯದರ್ಶನವೂ ಉಂಟಾದುವು. ದೇಶದ ರಾಜಕೀಯವನ್ನು ಮುಂದಕ್ಕೊಯ್ಯಲು ತಮಗೆ ಕೊಂಚವಾದರೂ ಶಕ್ತಿಯುಂಟೆಂಬ ಭರವಸೆಯೇ ಆ ಧೈರ್ಯ: ದೇಶ ವಿಚಾರಗಳನ್ನು ಒಳಹೊಕ್ಕು ಪರೀಕ್ಷಿಸಿದಂತೆಲ್ಲಾ ತಮ್ಮಿಂದ ದೇಶಕ್ಕೆ ಆಗಬೇಕಾದ ಸೇವೆಯ ಆವಶ್ಯಕತೆ ಅಪಾರವಾಗಿದೆಯೆಂಬುದೇ ಆ ಕರ್ತವ್ಯದರ್ಶನ. ಈ ಎರಡು ಸಿದ್ಧಾಂತಗಳ ಫಲವಾಗಿ ಗೋಖಲೆಯವರು ತಾವು ಅಲ್ಲಿಂದ ಮುಂದಕ್ಕೆ ತಮ್ಮ ಜೀವಿತವನ್ನೆಲ್ಲ ದೇಶಕ್ಕಾಗಿಯೇ—ವಿಶೇಷವಾಗಿ ರಾಜಕೀಯಕ್ಕಾಗಿಯೇ—ವಿನಿಯೋಗಿಸತಕ್ಕದೆಂದು ಸಂಕಲ್ಪಿಸುವಂತಾಯಿತು.

ಸೇವಾದೀಕ್ಷೆ

ಆ ಸಂಕಲ್ಪದಂತೆ 1902ರಲ್ಲಿ ಆವರು ಉಪಾಧ್ಯಾಯ ವೃತ್ತಿಯಿಂದ ವಿಶ್ರಾಂತಿ ಪಡೆದರು. ಮತ್ತು ಮುಂಬಯಿ ಶಾಸನಸಭೆಯಿಂದ ಭಾರತ ಸಾಮ್ರಾಜ್ಯ ಶಾಸನ ಸಭೆಗೆ ಚುನಾಯಿಸಲ್ಪಟ್ಟರು. ಅದು ಲಾರ್ಡ್ ಕರ್ಜನ್ ಎಂಬ ಮಹಾ ಪ್ರಸಿದ್ಧನಾದ ವೈಸ್ರಾಯ್ ಇದ್ದ ಕಾಲ. ಆಗ ಕಲ್ಕತ್ತೆ ಭಾರತದ ರಾಜಧಾನಿ. ಗೋಖಲೆಯವರು ವರ್ಷದ ಬಹುಭಾಗವನ್ನು ಅಲ್ಲಿ ಕಳೆಯಬೇಕಾಗಿತ್ತು. ಆ ಸಭೆಯಲ್ಲಿ ಅವರು ತೋರಿಸಿದ ವಿಷಯವಿಮರ್ಶನಕ್ರಮ. ಅರ್ಥವಿಚಾರನೈಪುಣ್ಯ. ವಾಕ್ಪಟುತೆ. ನ್ಯಾಯತತ್ಪರತೆ. ಪ್ರಮಾಣಬದ್ಧತೆ—ಇವುಗಳನ್ನು ಕಂಡು ಕರ್ಜನ್ ಮಹಾಶಯನು ಮೆಚ್ಚಿ ತಲೆದೂಗುವವನಾದನು.

ಜನನಾಯಕತ್ವ

1905ರಲ್ಲಿ ಗೋಖಲೆಯವರು ಪುಣೆಯ ಪೌರಸಂಸ್ಥೆಯ ಅಧ್ಯಕ್ಷರಾದರು. ಇಂದು ಸಕಲ ಸನ್ಮಾನ್ಯರಾಗಿರುವ ನಮ್ಮ ಶ್ರೀಮಾನ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಆಗ ಪುಣೆಯಲ್ಲಿ ಇಂಜಿನಿಯರಾಗಿ, ಗೋಖಲೆಯವರಿಗೆ ಮಿತ್ರರಾಗಿಯೂ ಸಹೋದ್ಯೋಗಿಗಳಾಗಿಯೂ ಇದ್ದರು. ಈ ಎರಡು ಹೆಸರುಗಳನ್ನು ಹೇಳಿದ ಮೇಲೆ ಆಗ ಪುಣೆಯ ಪೌರಕಾರ್ಯಗಳು ಬಹು ವಿಚಕ್ಷಣೆಯಿಂದ ನಡೆದುವೆಂದು ಬೇರೆಯಾಗಿ ಹೇಳಬೇಕಾದದ್ದಿಲ್ಲ.

ಅದೇ ವರ್ಷ ಗೋಖಲೆಯವರು ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರಾದರು. ಕಾಶಿಯಲ್ಲಿ ನಡೆದ ಆ ಮಹಾಸಭೆಯಲ್ಲಿ ಅವರು ಆಗ—ಈಗ್ಗೆ ನಲವತ್ತನಾಲ್ಕು ವರ್ಷಗಳ ಹಿಂದೆ—ಮಾಡಿದ ಅಧ್ಯಕ್ಷೋಪನ್ಯಾಸವು ಈಗಲೂ ನಮಗೆ ಓದಲರ್ಹವಾದದ್ದಾಗಿದೆ. ಅಲ್ಲಿಂದ ಮುಂದಕ್ಕೆ ಅವರ ಜನನಾಯಕತ್ವವು ಲೋಕಸಿದ್ಧವಾಯಿತು.

ಅದೇ 1905ರಲ್ಲಿ (ಜೂನ್ 12ರಲ್ಲಿ) ಅವರು ಪುಣೆಯಲ್ಲಿ **ಭಾರತ ಸೇವಕ ಸಂಘ** (Servants of India Society) ವನ್ನು ಸ್ಥಾಪಿಸಿದರು. ಈ ಸಂಘದ ಉದ್ದೇಶವು ನಾನಾ ಮುಖದ ದೇಶಸೇವೆಗೆ ಸಾರ್ವಜನಿಕರನ್ನು ತಯಾರು ಮಾಡಿ ಒದಗಿಸುವುದು. ಸಾರ್ವಜನಿಕ ಕಾರ್ಯಗಳು ಸಮರ್ಪಕವಾಗಿ ನಡೆಯಬೇಕಾದರೆ ಅವುಗಳನ್ನು ನಡಸುವವರು ತದೇಕನಿಷ್ಠರಾದವರಾಗಿರಬೇಕು. ಬರಿಯ ವಿರಾಮಕಾಲದಲ್ಲಿ—ವಿನೋದ ಕಾಲಕ್ಷೇಪದ ರೀತಿಯಲ್ಲಿ—ಬರಿಯ ರಜೆಯ ಹೊತ್ತಿನ ಹವ್ಯಾಸವಾಗಿ—ದೇಶಕಾರ್ಯಗಳನ್ನು ಮಾಡುತ್ತೇವೆನ್ನುವವರು ಹರುಕುಮುರುಕಾಗಿ, ಅರ್ಧಮರ್ಧವಾಗಿ, ಒಂದು ಕ್ರಮ, ಒಂದು ಶಿಸ್ತು ಇಲ್ಲದೆ, ಹಾರಾಟ ನಡಸುವವರಾಗಬಹುದೇ ಹೊರತು ನಿಜವಾಗಿ ಕೃತಕಾರ್ಯರಾಗಲಾರರು. ದೇಶಕಾರ್ಯಕ್ಕೆ ಒಂದು ಪೂರ್ವಸಿದ್ಧತೆ ಬೇಕು, ಒಂದು ಶಿಕ್ಷಣ ಪರಿಷ್ಕಾರ ಬೇಕು, ಒಂದು ವ್ರತದೀಕ್ಷೆ ಬೇಕು. ದೇಶಕಾರ್ಯವೊಂದರ ವಿನಾ ಮತ್ತಾವ ಚಿಂತೆಯೂ ಸಾರ್ವಜನಿಕನಿಗೆ ಇರಬಾರದು. ಇಂಥ ದೀಕ್ಷಾನಿಯಮವುಳ್ಳ ಜನರನ್ನು ಆಕರ್ಷಿಸಿ, ಅವರಿಗೆ ತಕ್ಕ ತಯಾರಿಯನ್ನು ಒದಗಿಸುವುದು ಭಾರತ ಸೇವಕ ಸಂಘದ ಮುಖ್ಯೋದ್ದೇಶ.

1908ರಲ್ಲಿ ಗೋಖಲೆಯವರು ಮತ್ತೆ ಇಂಗ್ಲೆಂಡಿಗೆ ಹೋಗಿ ಮೋರ್ಲೆ ಮಂತ್ರಿ ಮೊದಲಾದ ರಾಜಕೀಯ ಪ್ರಮುಖರೊಡನೆ ಭಾರತ ರಾಜ್ಯ ಸುಧಾರಣೆಗಾಗಿ ಸಂಧಾನ ನಡಸಿದರು. ಅದರ ಫಲಿತಾಂಶವೇ 1909ರಲ್ಲಿ ಆದ ಶಾಸನ ಸಭಾ ಸಂಸ್ಕಾರಗಳು, ಮತ್ತು ಭಾರತೀಯರಿಗೆ ಸರಕಾರದ ಅಂಗರಚನೆಯಲ್ಲಿ ದೊರೆತ ಸ್ಥಾನೋನ್ನತಿಗಳು.

1912ರಲ್ಲಿ ಗೋಖಲೆಯವರು ಗಾಂಧಿಯವರಿಂದ ಬಂದಿದ್ದ ಕರೆಯನ್ನು ಮನ್ನಿಸಿ ದಕ್ಷಿಣ ಆಫ್ರಿಕಕ್ಕೆ ಪ್ರಯಾಣ ಮಾಡಿ, ಅಲ್ಲಿಯ ಸರಕಾರದ ಮುಖಂಡರೊಡನೆ ಆ ಭೂಭಾಗದಲ್ಲಿ ಭಾರತೀಯರಿಗೆ ಸಲ್ಲಬೇಕಾಗಿದ್ದ ಸ್ಥಾನಮಾನಗಳನ್ನು ಕುರಿತು ಮಾತುಕಥೆ ನಡೆಸಿದರು.

ಅಲ್ಲಿಂದ ಹಿಂದಿರುಗಿ ಬಂದಮೇಲೆ ದೇಶದ ರಾಜಕೀಯ ಪ್ರಗತಿಯಲ್ಲಿ ಇನ್ನೊಂದು ಹೆಜ್ಜೆ ಮುಂದೆ ಸಾಧಿಸುವ ಪ್ರಯತ್ನಕ್ಕಾಗಿಯೂ ಭಾರತ ಸೇವಕ ಸಂಘವನ್ನು ಸುವ್ಯವಸ್ಥೆಗೆ ತರುವ ಉದ್ದೇಶಕ್ಕಾಗಿಯೂ ತಮ್ಮ ಜೀವಿತವನ್ನು ವಿನಿಯೋಗಿಸಬೇಕೆಂದು ಸಂಕಲ್ಪಿಸಿದ್ದರು. 1909 ರಿಂದ ಈಚೆಗೆ ನಡೆದಿದ್ದ ಜನಜಾಗೃತಿಯ ಮತ್ತು ರಾಜಕೀಯಾನುಭವದ ಪರಿಣಾಮವಾಗಿ ದೇಶಕ್ಕೆ ಅವಶ್ಯವಾಗಿದ್ದ ರಾಜಕೀಯ ಸುಧಾರಣೆಗಳೇನೇನೆಂಬುದನ್ನು ಸೂಚಿಸಿ ಅವರು ಒಂದು ರೂಪರೇಖೆಯನ್ನು ಗುರುತು ಮಾಡಿಟ್ಟರು. ಆದರೆ ಅವರು ಬಹು ವರ್ಷಗಳಿಂದ ಪಟ್ಟಿದ್ದ ಪ್ರಯಾಸದ ಪರಿಣಾಮವಾಗಿ ಅವರ ದೇಹಶಕ್ತಿ ಕುಗ್ಗಿತ್ತು. ಮನಸ್ಸತ್ತ್ವಕ್ಕೆ ತಕ್ಕಾದಷ್ಟು ಶರೀರ ದಾರ್ಢ್ಯವಿರಲಿಲ್ಲ. ಸ್ವಲ್ಪಕಾಲ ವ್ಯಾಧಿಗ್ರಸ್ತರಾಗಿದ್ದು 1915ನೆಯ ಇಸವಿ ಫೆಬ್ರುವರಿ 19ರಲ್ಲಿ—

"ಇಷ್ಟು ಕಾಲ ಇಲ್ಲಿಯ ಸಂತೋಷವನ್ನು ನೋಡಿದ್ದಾಯಿತು ;
ಇನ್ನು ಅಲ್ಲಿಯುದನ್ನು ನೋಡಹೋಗುತ್ತೇನೆ"

—ಎಂದು ಹೇಳುತ್ತಾ ತಮ್ಮ ಜೀರ್ಣ ಕಳೇಬರವನ್ನು ವಿಸರ್ಜಿಸಿದರು. ಆಗ್ಗೆ ಅವರ ವಯಸ್ಸು 49 ಮಾತ್ರ. ಬುದ್ಧಿ ಬಂದ ದಿನದಿಂದ ಮೃತ್ಯು ಬರುವವರೆಗೂ ದೇಶಕ್ಕಾಗಿ ಚಿಂತಿಸಿ ದುಡಿದದ್ದು ಆ ಜನ್ಮ.

ತತ್ತ್ವಧ್ಯೇಯಗಳು

ಈ ಮೇಲಣ ಲಘು ಬಾಹ್ಯರೇಖೆಯಲ್ಲಿ ಎಷ್ಟೋ ಮುಖ್ಯಾಂಶಗಳು ಬಿಟ್ಟು ಹೋಗಿವೆ. ಅವುಗಳಲ್ಲಿ ಅತಿ ಮುಖ್ಯವಾದುವುಗಳೆಂದರೆ ಇವು :—

(1) ಪ್ರಾಥಮಿಕ ವಿದ್ಯಾಭ್ಯಾಸವನ್ನು ಜನದಲ್ಲಿ ವಿನಾಶುಲ್ಕವಾಗಿ ನಿರ್ಬಂಧದಿಂದ ಪ್ರಚಾರ ಮಾಡಿಸುವ ಶಾಸನ.

(2) ಪಂಚಮರು (ಹರಿಜನರು) ಮೊದಲಾದ ಅವನತ ಜನಾಂಗಗಳ ಉದ್ಧಾರ ಪ್ರಯತ್ನ.

(3) ಸರಕಾರದಲ್ಲಿ ವ್ಯಯವನ್ನು ಮಿತಮಾಡಿಸುವುದು—ಮುಖ್ಯವಾಗಿ ಭಾರಿ ಸಂಬಳಗಳನ್ನು ಇಳಿಸುವುದು.

(4) ಸ್ವದೇಶೀ ಸಮಾರಂಭ.

(5) ಸ್ಥಳೀಯ ಸಂಸ್ಥೆಗಳನ್ನು—ಎಂದರೆ ಪೌರಸಭೆ ಪಂಚಾಯತಿಗಳನ್ನು—ಕಟ್ಟಿ ನಿಲ್ಲಿಸುವುದು.

(6) ಸಾಮಾಜಿಕ ಪರಿಷ್ಕಾರಗಳನ್ನು—ಎಂದರೆ, ಸ್ತ್ರೀ ವಿದ್ಯಾಭ್ಯಾಸ, ಪ್ರೌಢ ವಿವಾಹ ಮೊದಲಾದ ಪ್ರಕೃತ ಕಾಲೋಚಿತವಾದ ಸಂಪ್ರದಾಯ ಶೋಧನೆಗಳು.

ಈ ಮತ್ತು ಇತರ ಕಾರ್ಯಭಾಗಗಳ ವಿವರಣೆಗಳನ್ನೂ ಹಾಗೆಯೇ ಗೋಖಲೆಯವರು ಸೇರಿದ್ದ ಇತರ ನಾನಾ ಸಮಿತಿ ಸಂಸ್ಥೆಗಳ ವಿವರಗಳನ್ನೂ ಬೇರೆ* ಗ್ರಂಥದಲ್ಲಿ ತಕ್ಕಮಟ್ಟಿಗೆ ಕಾಣಬಹುದು.

ಗೋಖಲೆಯವರು ನೆರವೇರಿಸಿದ ಕಾರ್ಯವಿಸ್ತಾರದಲ್ಲಿ ತಾತ್ಕಾಲಿಕಮಾತ್ರದುವಾದ ಭಾಗದ ಬಹ್ವಂಶಗಳು ಅಂದಿನಿಂದೀಚೆಗೆ ದೇಶದಲ್ಲಿ ನಡೆದಿರುವ ಕಾರ್ಯಗಳ ರಾಶಿಯ ಕೆಳಗಡೆ ಸೇರಿಹೋಗಿವೆ. ಭಾರತವು ಕಳೆದ ಮೂವತ್ತನಾಲ್ಕು ವರ್ಷಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ನೂರು ಮೈಲಿಗಳಷ್ಟು ದೂರ ಮುಂಬರಿದಿದೆ. ಆದಕಾರಣ ಗೋಖಲೆಯವರ ಕಾರ್ಯಕರ್ತೃತ್ವದ ಒಂದು ಭಾಗದ ಬೆಲೆ ಈಗ ವಿಶೇಷವಾಗಿರುವುದು ಚರಿತ್ರ ವಿಮರ್ಶಕನಿಗೆ: ಅದರ ಬೆಲೆ ಸಾಮಾನ್ಯರಿಗೆ ಅಷ್ಟು ಹೆಚ್ಚಿನದಲ್ಲ. ಸಮಸ್ತ ಜನರಿಗೂ ಕುತೂಹಲಕಾರಿಯಾದ ಭಾಗವೆಂದರೆ ಗೋಖಲೆಯವರ ತತ್ತ್ವದೃಷ್ಟಿಯದು. ಅದನ್ನು ಕುರಿತು ಈಗ ಸಂಗ್ರಹವಾಗಿ ವಿಚಾರ ಮಾಡೋಣ.

ಸಾರ್ವಕಾಲಿಕವಾಗಿ. ಸರ್ವರಿಗೂ ಅನುಸರಣೀಯವಾಗಿರುವ ನಾಲ್ಕು ಸೂತ್ರಗಳನ್ನು ಗೋಖಲೆಯವರು ತೋರಿಸಿಕೊಟ್ಟಿದ್ದಾರೆ. ಅವುಗಳನ್ನು ಒಂದೊಂದು ಮಾತಿನಲ್ಲಿ ಹೀಗೆ ಸೂಚಿಸಬಹುದು :—

(1) ದೀಕ್ಷಾಶ್ರದ್ಧೆ. (2) ಆತ್ಮಶಿಕ್ಷಣ, (3) ಸಮಷ್ಟಿದೃಷ್ಟಿ. (4) ವೈಜ್ಞಾನಿಕ ಬುದ್ಧಿವೃತ್ತಿ.

ದೀಕ್ಷಾನಿಯಮ

(1) ದೀಕ್ಷಾಶ್ರದ್ಧೆಯೆಂದರೇನೆಂಬುವನ್ನು ಮೇಲೆ ಕೊಂಚ ಸೂಚಿಸಿದೆ. ದೇಶಕಾರ್ಯವೆಂಬುದು ನಮಗೆ. ಕೇವಲ ಐಚ್ಛಿಕವಾದ—ಎಂದರೆ, ಮಾಡಿದರೆ ಮಾಡಬಹುದಾದ, ಬಿಟ್ಟರೆ ಬಿಡಬಹುದಾದ—ಧರ್ಮಾಂಶವಲ್ಲ. ಅದು ರಾಷ್ಟ್ರೀಕನಾದ ಪ್ರತಿಯೊಬ್ಬನಿಗೂ ಅವಶ್ಯ ಕರ್ತವ್ಯವಾದದ್ದು. ಅದನ್ನು ಮಾಡದಿರುವುದು ಎಂಥವನಲ್ಲಿಯೂ ದೋಷ. ನಾವು ನಮ್ಮ ಮತಾಚಾರ ಕುಲಾಚಾರಗಳನ್ನು ನಿರ್ವಹಿಸುವುದರಲ್ಲಿ ಯಾವ ಭಕ್ತಿ ವಿಶ್ವಾಸಗಳನ್ನು ತೋರಿಸಬೇಕೆಂದು ಗುರುಹಿರಿಯರು ಹೇಳುತ್ತಾರೆಯೋ, ಯಾವ ತೆರದ ಆಸಕ್ತಿಯನ್ನೂ ಉತ್ಸಾಹವನ್ನೂ ಶಿಷ್ಟರಾದವರು ಪೂಜೆ, ವ್ರತ. ಭಜನೆ ಮೊದಲಾದ ದೇವತಾಕಾರ್ಯಗಳಲ್ಲಿ ತೋರಿಸುತ್ತಾರೆಯೋ ಅಂಥಾ ನಿಯಮನಿಷ್ಠೆಯೂ ವ್ರತಶ್ರದ್ಧೆಯೂ ಸಾರ್ವಜನಿಕ ಜೀವನಕ್ಕೂ ಸಲ್ಲತಕ್ಕದ್ದೆಂಬುದು ಗೋಖಲೆಯವರ ಭಾವನೆ. ಆತ್ಮಪರಿಶುದ್ಧತೆ. ಕಾಮ ಕ್ರೋಧ ವರ್ಜನೆ, ಉನ್ನತ ಧ್ಯೇಯ ಚಿಂತನೆ, ಸರ್ವಸ್ವ ಸಮರ್ಪಣೆ—ಇವು ವ್ರತಭಕ್ತನಿಗೆ

---

* **ಗೋಪಾಲ ಕೃಷ್ಣ ಗೋಖಲೆ** (ಜೀವನಚರಿತ್ರೆ–ಉಪನ್ಯಾಸಗಳು) : ಡಿ. ವಿ. ಗುಂಡಪ್ಪ; ಪುಟ ೧೯೨; ರೂ. ೨—೦—೦.

ಪ್ರಕಾಶಕರು : ಕರ್ಣಾಟಕ ಪ್ರಕಟನಾಲಯ, ಬಸವನಗುಡಿ, ಬೆಂಗಳೂರು–೪.

ಹೇಗೋ ದೇಶಭಕ್ತನಿಗೂ ಹಾಗೆಯೇ ಇರಬೇಕಾದ ಗುಣಗಳು. ದೇಶ ಪ್ರಮುಖರಲ್ಲಿ ಹಲಕೆಲವರಾದರೂ ಇಂಥವರಾಗದೆ ಹೋದಲ್ಲಿ ಆ ದೇಶಕ್ಕೆ ಸುವ್ಯವಸ್ಥೆ ದುರ್ಲಭ ವಾಗುತ್ತದೆ. ಅಂಥ ದೀಕ್ಷಾಬದ್ಧರಾದ ದೇಶಸೇವಕರು ಮಹಾಜನರಲ್ಲಿ ಎಷ್ಟೆಷ್ಟು ಹೆಚ್ಚಾಗಿದ್ದರೆ ದೇಶದ ಕ್ಷೇಮಾಭ್ಯುದಯಗಳು ಅಷ್ಟಷ್ಟು ಚೆನ್ನಾಗಿ ಸಾಧನೆಯಾಗುತ್ತವೆ.

ನಿತ್ಯ ವಿದ್ಯಾರ್ಥಿತ್ವ

(2) ಆತ್ಮಶಿಕ್ಷಣ—ದೀಕ್ಷೋತ್ಸಾಹಗಳು ಅವಶ್ಯವಾಗಿರುವಂತೆಯೇ ಬುದ್ಧಿ ಶಿಕ್ಷಣವೂ ಅವಶ್ಯವಾದದ್ದು. ಅಡಿಗೆಯ ಕೆಲಸಕ್ಕೂ ಬಡಗಿಯ ಕೆಲಸಕ್ಕೂ ಒಂದು ತಯಾರಿ ಬೇಕೆಂಬುದನ್ನು ಎಲ್ಲರೂ ಕಂಡುಕೊಂಡಿದ್ದಾರೆ. ಆದರೆ ರಾಜಕೀಯಕ್ಕೆ ಮಾತ್ರ ಶುಶ್ರೂಷೆ ಸಂಸ್ಕಾರಗಳ ಪೂರ್ವಸಿದ್ಧತೆ ಬೇಡವೆ ? ರಾಜಕೀಯದಲ್ಲಿ ಸಾಮಾನ್ಯ ಜನಕ್ಕೆ ಸ್ವಾಭಾವಿಕವಾಗಿ ಒಂದು ಆಕರ್ಷಣೆಯಿರುತ್ತದೆ. ಪ್ರಸಿದ್ಧಿಯ ಆಶೆ. ಅಧಿಕಾರದ ಆಶೆ. ಸ್ಥಾನಮಾನಗಳ ಆಶೆ. ನಾಯಕತ್ವದ ಆಶೆ. ಹಣ ಸಂಪಾದನೆಯ ಅವಕಾಶದ ಆಶೆ—ಈ ನಾನಾ ಆಶೆಗಳಿಂದ ಜನರು ರಾಜಕೀಯ ರಂಗಕ್ಕೆ "ನಾನು ಮುಂದೆ". "ತಾನು ಮುಂದೆ" ಎಂದು ನುಗ್ಗುತ್ತಿರುವುದನ್ನು ಈಗ ನಾವು ಕಣ್ಣಾರೆ ಕಾಣುತ್ತಿದ್ದೇವೆ. ಉತ್ಸಾಹಿಗಳಾದ ತರುಣರು ಬಗೆಬಗೆಯ "ಇಸಮ್" (Ism) ಮತ-ವಾದಗಳಿಗೆ ಮನಸೋತು ಹಾರಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಂಥಾ ಯುವಕರು ಅವರವರ "ಇಸಮ್"(ಮತ)ಗಳನ್ನು ತಲಸ್ಪರ್ಶಿಯಾಗಿ ವಿಚಾರಿಸಿ ಶೋಧಿಸಿದ್ದಾರೆಯೆ ? ಎಂದು ಕೇಳಿದರೆ—"ಹೌದು. ಅವರು ಹಾಗೆ ಅರ್ಥವನ್ನು ಪೂರ್ತಿ ವಿಚಾರಮಾಡಿ ರುಜುವಾತು ಕೊಡಬಲ್ಲವರಾಗಿದ್ದಾರೆ"—ಎಂದು ನಮಗೆ ಭರವಸೆ ಕೊಡಬಲ್ಲವರು ಕಣ್ಣಿಗೆ ಕಾಣಬರುತ್ತಿಲ್ಲ. ಹೀಗೆ ಅಪಕ್ವಮತಿಗಳೂ ಅವಿಚಾರೋತ್ಸಾಹಿಗಳೂ ಸಾರ್ವಜನಿಕರಲ್ಲಿ ತುಂಬಿದರೆ ಆಗುವುದು ಅಪಭ್ರಮ. ಅಂತಃಕಲಹಗಳೇ ಹೊರತು ದೇಶಾಭ್ಯುದಯವಲ್ಲವೆಂಬುದು ಎಲ್ಲರ ಮನಸ್ಸಿಗೂ ಸ್ವತಃ ವೇದ್ಯವಾಗುವ ವಿಚಾರ. ದೇಶಕಾರ್ಯವು ಜವಾಬ್ದಾರಿಯುಳ್ಳದ್ದು. ಹತ್ತು ಮಂದಿಗಾಗುವ ಲಾಭನಷ್ಟಗಳ ಹೊಣೆಯನ್ನು ತಾನು ಹೊತ್ತುಕೊಳ್ಳುವೆನೆಂದು ಮುಂದೆ ಬರುವವನು ಮೊದಲು ತಾನು ಕೃತಪರಿಶ್ರಮನಾಗಿರಬೇಕು. ದೇಶದ ಸೇವೆಯು ಬುದ್ಧಿಯ ಶ್ರಮವನ್ನೂ ಅಪೇಕ್ಷಿಸುತ್ತದೆ. ಸೈನಿಕನೂ, ಶಿಲ್ಪಕಾರ್ಮಿಕನೂ, ಗೃಹ ಭೃತ್ಯನೂ ಸಲ್ಲಿಸುವ ಸೇವೆಯಲ್ಲಿ ಮುಖ್ಯವಾದದ್ದು ದೇಹಶ್ರಮ. ರಾಜಕೀಯಸ್ಥನು ಸಲ್ಲಿಸಬೇಕಾದ ಸೇವೆಯ ಮುಖ್ಯಾಂಶ ವಿಚಾರಶ್ರಮ. ಸಂತತವಾದ ಗ್ರಂಥವ್ಯಾಸಂಗ. ಅಭ್ಯಾಸ. ವಿಮರ್ಶೆ. ಜ್ಞಾನಾರ್ಜನೆ. ಸಮಾಲೋಚನೆ—ಇವು ರಾಜಕೀಯಸ್ಥನಿಗೆ ಬೇಕಾದ ಬಂಡವಾಳ. ಇಂಥಾ ಶಿಕ್ಷಣಕ್ಕೆ ಸ್ವತಃ ವಶವಾಗದವನು ಯೋಗ್ಯನಾದ ಸಾರ್ವಜನಿಕನಾಗಲಾರ. ರಾಜ್ಯಸೇವಕನು ನಿಜವಾಗಿ ನಿತ್ಯ ವಿದ್ಯಾರ್ಥಿಯಾಗಿರತಕ್ಕದ್ದೆಂಬುದು ಗೋಖಲೆಯವರು ಕಲಿಸಿರುವ ಎರಡನೆಯ ನೀತಿ.

ಸಾಕಲ್ಯ ದೃಷ್ಟಿ

(3) ಸಮಷ್ಟಿ ದೃಷ್ಟಿಯೆಂದರೆ ನಾಡೊಟ್ಟಿನ ನೆನಪು. ದೇಶಭಕ್ತಿಯೆಂಬುದು ದೇಶದ ಎಲ್ಲ ಭಾಗಗಳಿಗೂ ಎಲ್ಲ ಮೂಲೆಮೊಡಕುಗಳಿಗೂ ಅದರಲ್ಲಿ ಇರತಕ್ಕ ಎಲ್ಲ ಮತ ಕುಲಗಳಿಗೂ ವ್ಯಾಪಿಸಿರತಕ್ಕ ಪ್ರೀತಿಭಾವ. ದೇಶ ಸಮಗ್ರಕ್ಕಿಂತ ಕಡಮೆಯಾಗಿ—ಎಂದರೆ ಯಾವುದೋ ಒಂದಿಷ್ಟು ಪ್ರದೇಶ ಮಾತ್ರಕ್ಕಾಗಿ ಅಥವಾ ಯಾವುದೋ ಒಂದು ಗುಂಪಿನ ಮಟ್ಟಿಗಾಗಿ ಅನ್ವಯಿಸುವ ಪ್ರೀತಿ ದೇಶಪ್ರೀತಿಯಾಗಲಾರದು. ದೇಶೀಯರಲ್ಲಿ "ಇವರು ನನ್ನವರು, ಇವರು ನನ್ನವರಲ್ಲ" ಎಂಬ ಭೇದಗಣನೆಯ ಸ್ಮರಣೆಯೇ ಇಲ್ಲದೆ, ದೇಶೀಯರೆಲ್ಲ ಸೇರಿ ಏಕೈಕ ವ್ಯಕ್ತಿ ಎಂಬಂತೆ ನಡೆದುಕೊಳ್ಳುವುದು ನಿಜವಾದ ದೇಶಭಕ್ತ ಲಕ್ಷಣ. ಇದನ್ನೇ ನಾವು ಐಕಮತ್ಯವೆಂದು ಕರೆಯುತ್ತೇವೆ. ಗೋಖಲೆಯವರು ಬಹು ಮುಖ್ಯವಾಗಿ ಹಿಡಿದಿದ್ದ ತತ್ತ್ವ ಅದು. ಹಿಂದುಳಿದವರನ್ನು ಮುಂದಕ್ಕೆ ತರುವ ಪ್ರಯತ್ನಕ್ಕೆ ಅವರು ತೋರಿಸಿದ ಉತ್ಸಾಹವನ್ನು ಮೇಲೆ ಪ್ರಸ್ತಾವಿಸಿದ್ದಾಗಿದೆ. ಹಿಂದೂ ಮುಸಲ್ಮಾನ್ ಒಗ್ಗಟ್ಟಿಗೂ ಅವರು ಅದೇ ತೆರದ ಬೆಲೆಯನ್ನು ಕೊಟ್ಟಿದ್ದರು. ಅವರು ಸಾಮ್ರಾಜ್ಯ ಶಾಸನ ಸಭೆಯಲ್ಲಿದ್ದಾಗ ಒಂದು ವಿಶೇಷ ಸಂಗತಿ ನಡೆಯಿತು. ಒಬ್ಬಾನೊಬ್ಬ ಮುಸಲ್ಮಾನ್ ಸದಸ್ಯರು ಅಲ್ಲಿ ಇಂಗ್ಲಿಷಿನಲ್ಲಿ ಭಾಷಣ ಮಾಡಿದಾಗ ಅದರಲ್ಲಿಯ ವ್ಯಾಕರಣ ದೋಷಗಳನ್ನೂ ಶಬ್ದೋಚ್ಚಾರಣೆಯ ತಪ್ಪುಗಳನ್ನೂ ಕೇಳಿದ ಆಂಗ್ಲೇಯ ಸದಸ್ಯರು ಕೊಂಚ ಕೊಂಚ ನಗುತುಟಿಮಾಡಿದ್ದನ್ನು ಕಂಡು, ಅವರ ಸಹಸದಸ್ಯರ ಪೈಕಿ ಇಂಗ್ಲಿಷ್ ಬಲ್ಲ ಹಿಂದೂ ಮಹಾಶಯರು ಗಟ್ಟಿಯಾಗಿ ನಕ್ಕು. ಆ ಮಹಮ್ಮದೀಯ ಸೋದರನಿಗೆ ಮುಖ ಕೆಡುವಂತೆ ನಡೆದರು. ಗೋಖಲೆಯವರು ಇಂಗ್ಲಿಷಿನಲ್ಲಿ ಸೊಗಸಾಗಿ ಭಾಷಣ ಮಾಡಬಲ್ಲವರು. ಅವರ ಇಂಗ್ಲಿಷ್ ವಾಕ್ಪ್ರವಾಹದ ಸೊಬಗನ್ನು ನೋಡಲಿಕ್ಕಾಗಿ ಅನೇಕ ಮಂದಿ ಆಂಗ್ಲೇಯರು ಸಭೆಗೆ ಬಂದಿರುತ್ತಿದ್ದರು. ಹಾಗಿದ್ದರೂ ಗೋಖಲೆಯವರು ಆ ದಿನ ತಮ್ಮ ಹಿಂದೂ ಸಹೋದರರು ನಡೆದುಕೊಂಡ ರೀತಿಯಿಂದ ಅಸಮಾಧಾನ ಪಟ್ಟವರಾಗಿ, ಸಭೆಯಿಂದ ಹೊರಕ್ಕೆ ಬಂದ ಬಳಿಕ ಆ ಹಿಂದೂ ಸದಸ್ಯರಿಗೆ ಛೀಮಾರಿ ಹಾಕಿದರು :— "ಇಷ್ಟೇನೇ ನಿಮ್ಮ ರಾಷ್ಟ್ರೀಯತೆ ! ಇಂಗ್ಲಿಷೇನು ನಿಮಗೆ ಮನೆಯ ಮಾತೆ ? ನಿಮ್ಮ ನಮ್ಮ ಇಂಗ್ಲಿಷಿನಲ್ಲಿ ತಪ್ಪಿಲ್ಲವೆ ? ನಮ್ಮ ಮಹಮ್ಮದೀಯ ಸಹೋದರನೊಬ್ಬನನ್ನು ಹೀಗೆ ನೀವು ಅಪಹಾಸ್ಯಕ್ಕೆ ಗುರಿಪಡಿಸಿದರೆ ಅದರ ಪರಿಣಾಮ ಹಿಂದೂ-ಮುಸಲ್ಮಾನ್ ಮೈತ್ರಿಯ ಮೇಲೆ ಹೇಗಾದೀತು ಎಂಬುದನ್ನು ನೀವು ಯೋಚಿಸಬೇಡವೆ ?" ಎಂದು ಮುಂತಾಗಿ ಗೋಖಲೆಯವರು ಟೀಕೆ ಮಾಡಿದರು. ನಮ್ಮ ಭಾರತ ದೇಶವು ಜಾತಿ ಮತ ಕೋಮು ಪಣಗಳ ಕಾರಣದಿಂದ ಒಂದು ದೇಶದಂತಿರದೆ ನೂರಾರು ದೇಶಗಳಂತೆ ಆಗಿದೆ. ಯಾವ ದೇಶ ವಿಷಯವೂ ಈ ಭೇದ ಕಲಹಗಳಿಂದ ತಪ್ಪಿಸಿಕೊಂಡದ್ದಲ್ಲ. ಯಾವ ಕಾರ್ಯವೂ ತಕರಾರಿಲ್ಲದೆ ನಡೆಯುವಂತಿಲ್ಲ. ಹೀಗಿರಲಾಗಿ ಈಗ ನಮಗೆ ಮೊದಲು ಬೇಕಾಗಿರುವುದು ದೇಶದೊಟ್ಟಿನ ದೃಷ್ಟಿ. ಬ್ರಾಹ್ಮಣರಿಗೆಂದು ಹೋರಾಡುವವರೂ, ಬ್ರಾಹ್ಮಣೇ

ತರರಿಗೆಂದು ಕಚ್ಚಾಡುವವರೂ, ಕ್ರಿಸ್ತರಿಗೋಸ್ಕರವೆಂದೂ ಮುಸಲ್ಮಾನರಿಗೋಸ್ಕರ ವೆಂದೂ ಕೂಗಾಡುವವರೂ, ಕರ್ಣಾಟಕದ ಹೆಸರಿನಲ್ಲಿಯೂ ಆಂಧ್ರದ ಹೆಸರಿನಲ್ಲಿಯೂ ಮಹಾರಾಷ್ಟ್ರದ ಹೆಸರಿನಲ್ಲಿಯೂ ಕುಣಿದಾಡುವವರೂ, ಹಾಗೆಯೇ ನಾವು ಕಾರ್ಮಿಕರು, ನಾವು ಕೃಷಿಕರು, ನಾವು ವರ್ತಕರು, ನಾವು ಜಮೀನ್ದಾರರು ಎಂದು ಬೇರೆ ಬೇರೆ ವರ್ಗಗಳ ಹೆಸರಿನಲ್ಲಿ ಬೊಬ್ಬೆ ಹಾಕುವವರೂ ಎಲ್ಲೆಲ್ಲೂ ಇದ್ದಾರೆ. ಆದರೆ, ಭಾರತ ರಾಷ್ಟ್ರಕ್ಕಾಗಿ—ಸಮಸ್ತ ಭಾರತ ಜನಪದಕ್ಕಾಗಿ—ನಿಂತಿರುವವರು ಯಾರು ? ಅವರೆಲ್ಲಿ ? ಎಲ್ಲರೂ ಎಲ್ಲೆಲ್ಲಿಯವರೂ ಅಂಥವರಾಗಬೇಕೆಂಬುದು ಗೋಖಲೆಯವರ ಉಪದೇಶ. ಈ ಸಮಷ್ಟಿಭಾವವು ಸಮಸ್ತ ಭರತಭೂಮಿಗೂ ಮಾತ್ರವಲ್ಲದೆ ಸಮಸ್ತ ವಿಶ್ವಕ್ಕೂ ವ್ಯಾಪಿಸಿ, ನಾನಾ ಜನಾಂಗ ನಾನಾ ರಾಷ್ಟ್ರಗಳ ಅನ್ಯೋನ್ಯ ಮೈತ್ರಿ ವಿಶ್ವಾಸಗಳಲ್ಲಿ ರೂಪುಗೊಳ್ಳಬೇಕಾದದ್ದು.

ವೈಜ್ಞಾನಿಕ ದೃಷ್ಟಿ

(4) ವೈಜ್ಞಾನಿಕ ದೃಷ್ಟಿ—ಮನುಷ್ಯ ಸ್ವಭಾವದಲ್ಲಿ ಮುಖ್ಯವಾಗಿ ಎರಡು ತೆರದ ಶಕ್ತಿಗಳು ಮಿಶ್ರಿತವಾಗಿರುತ್ತವೆ. ಒಂದು, ಹೃದಯೋದ್ವೇಗದ್ದು ; ಇನ್ನೊಂದು ಕಾರ್ಯಕಾರಣ ವಿಚಾರದ್ದು. ಈ ಎರಡರ ಪೈಕಿ ಸಾಮಾನ್ಯ ಜನರಲ್ಲಿ ಸಾಮಾನ್ಯ ವಾಗಿ ಪ್ರಬಲಿಸಿರುವ ಗುಣ ಹೃದಯಾವೇಶದ್ದು. ಆಶೆ, ಕೋಪ, ಅಭಿಮಾನ, ಅತಿ ವಿಶ್ವಾಸ—ಇವುಗಳದೇ ಲೋಕದ ಜೀವನದಲ್ಲಿ ಬಹಳ ಹೆಚ್ಚಾಗಿ ಕಾಣುತ್ತಿರುವ ಭಾಗ. ಈ ಮೂಲಶಕ್ತಿಗಳ ಉದ್ರೇಕವು ಉರವಣಿಸಿ, ಯುಕ್ತಾಯುಕ್ತ ವಿವೇಚನೆಗೆ ಕಾದಿರದೆ ಹುಚ್ಚುಕುರುಡನಂತೆ ನುಗ್ಗುವುದರಿಂದಲೇ ಲೋಕದಲ್ಲಿ ಇಷ್ಟೊಂದು ಅನರ್ಥಪರಂಪರೆ. ಇದು ತಪ್ಪಬೇಕಾದರೆ ನಮ್ಮ ಅಂತರಂಗದಲ್ಲಿರುವ ಇನ್ನೊಂದು ಶಕ್ತಿಯ ಪ್ರಭಾವವನ್ನು ನಾವು ಬೆಳೆಸಬೇಕು. ಅದು ಬುದ್ಧಿಶಕ್ತಿ. ಯಾವ ಒಂದು ಸಂದರ್ಭದಲ್ಲಿಯೂ ಅದರಲ್ಲಿ ಪ್ರಸಕ್ತವಾಗಿರುವ ವಸ್ತುಗಳು ಎಂಥವು. ಬಲಾಬಲಗಳು ಎಷ್ಟರವು, ಅದರಲ್ಲಿಯ ನ್ಯಾಯ ಔಚಿತ್ಯಗಳು ಯಾವ ತೆರನಾಗಿವೆ—ಎಂಬಿವೇ ಮೊದಲಾದ ಪ್ರಶ್ನೆ ಉಪಪ್ರಶ್ನೆಗಳನ್ನು ಹಾಕಿಕೊಂಡು ಆಲೋಚಿಸಿ, ಕಾರಣಪೂರ್ವಕ ವಾಗಿ ನಿಶ್ಚಯಕ್ಕೆ ಬರುವುದು ಬುದ್ಧಿಯ ಗುಣ. ಇದೇ ವಿವೇಕ. ಹೃದಯ ವೇಗವನ್ನು ಕುದುರೆಗೆ ಹೋಲಿಸಬಹುದಾದರೆ, ಬುದ್ಧಿಯ ವಿವೇಕವನ್ನು ಸವಾರನೆನ್ನಬಹುದು. ಈ ಸವಾರನು ಜಾಗರೂಕನೂ ಸಮರ್ಥನೂ ಆಗಿದ್ದಲ್ಲಿ ಆ ಕುದುರೆಯಿಂದ ಅಪಾಯ ವಾಗದೆ ಅನುಕೂಲವೇ ಆದೀತು. ಆದರೆ ನಮ್ಮಲ್ಲಿ ಸುಲಭವಾಗಿ ಮೇಲೆದ್ದು ನಿಲ್ಲುವ ಶಕ್ತಿ ಹೃದಯೋದ್ವೇಗ. ಹಂಬಲಿಸುವುದು, ಅಂಗಲಾಚುವುದು, ಆಗ್ರಹಿಸುವುದು, ಆಕ್ರೋಶಿಸುವುದು—ಇಂಥ ಭಾವವಿಕಾರಗಳಿಗೆ ಪ್ರಕೃತಿಯೇ ಪೋಷಕವಾಗಿರುತ್ತದೆ. ಇವನ್ನು ಹದ್ದಿನಲ್ಲಿರಿಸುವ ವಿವೇಕವಾದರೋ ನಮ್ಮಲ್ಲಿ ಅಷ್ಟು ಬೇಗ ಮೇಲಕ್ಕೆ ಬರತಕ್ಕದ್ದಲ್ಲ. ಪ್ರಕೃತಿ ಅದಕ್ಕೆ ಅಷ್ಟಾಗಿ ಸಹಾಯ ಮಾಡುವುದಿಲ್ಲ. ವಿವೇಕವೇನಿದ್ದರೂ ನಮ್ಮ ವಿಶೇಷ ಪ್ರಯತ್ನದಿಂದ ಫಲಿಸತಕ್ಕದ್ದು. ಮಗುವಿಗೆ ರೋಗ ಬಂದಾಗ ಅದರ ತಾಯಿ ಅಳುತ್ತ ನಿಲ್ಲುವುದರಿಂದಲೂ ಅದರ ತಂದೆ ನಿಟ್ಟುಸಿರು ಕರೆಯುವುದರಿಂದಲೂ

ಗುಣವಾದೀತೆ? ವೈದ್ಯನು ಬಂದು ಪರೀಕ್ಷಿಸಿ ಶಾಸ್ತ್ರಾಧಾರದಿಂದ ಚಿಕಿತ್ಸೆ ಮಾಡಿದಾಗಲೇ ಆ ರೋಗದ ನಿವಾರಣೆ. ನಮ್ಮ ರಾಜಕೀಯದ ಮತ್ತು ಸಾಮಾಜಿಕದ ರೋಗಗಳ ಪಾಡೂ ಅಷ್ಟೆ. "ಭಾರತಾಂಬೆ! ಕನ್ನಡಮ್ಮ!" ಎಂಬ ಕಕ್ಕುಲಿತೆಯ ಒಕ್ಕಣೆಗಳಿಂದಲೂ ಜಯ ಜಯಕಾರಗಳಿಂದಲೂ ಜಿಂದಾಬಾದ್ ಘೋಷಣೆಗಳಿಂದಲೂ ರಾಷ್ಟ್ರರೋಗಗಳು ಶಮನವಾಗಲಾರವು. ಅವಿಚಾರದ ಚಿಕಿತ್ಸೆಗಳ ಫಲವಾಗಿ ವ್ಯಾಧಿಯು ಒಂದು ಅಂಗದಿಂದ ಇನ್ನೊಂದು ಅಂಗಕ್ಕೆ ಹೋಗಬಹುದು; ಒಂದಿದ್ದುದು ಎರಡಾಗಬಹುದು. ದೇಶದ ಕಷ್ಟಗಳನ್ನು ಪರಿಹರಿಸಬೇಕೆನ್ನುವವನು ವೈದ್ಯನಂತೆ ತತ್ತ್ವಶೋಧಕನಾಗಿ. ವೈಜ್ಞಾನಿಕನಂತೆ ಪ್ರಯೋಗ ಪರೀಕ್ಷೆಗಳನ್ನು ನಡಸುವವನಾಗಿರಬೇಕು. ವೈದ್ಯನು ರೋಗಿಯ ನಾಡಿಯನ್ನೂ ಶ್ವಾಸಕೋಶವನ್ನೂ ರಕ್ತಶ್ಲೇಷ್ಮಗಳನ್ನೂ ಪರೀಕ್ಷಿಸಿ ನೋಡುವ ಕಾಲದಲ್ಲಿ. ಆ ವೈದ್ಯನ ಮನಸ್ಸಿನಲ್ಲಿ ಯಾವ ಪಕ್ಷಪಾತವೂ ಇರಲಾರದು, ಯಾವ ಪೂರ್ವವಿಶ್ವಾಸವೂ ನಿಲ್ಲಲಾರದು. ಟೈಫಾಯಿಡ್ ಎಂಬುದು ಅವನಿಗೇನೂ ಹೆಚ್ಚು ಇಷ್ಟವಲ್ಲ; ಅಜೀರ್ಣ ಎಂದು ಹೇಳುವುದು ಕಡಮೆ ಇಷ್ಟವಲ್ಲ. ಅವನಿಗೆ ಸ್ವಂತ ಇಷ್ಟಾನಿಷ್ಟಗಳಾವುವೂ ಇಲ್ಲ. ಯಥಾರ್ಥದರ್ಶನವೇ ಅವನ ಇಷ್ಟ. ಬಂಧುಮಿತ್ರರಿಗೆ ಸಿಹಿಮದ್ದು; ಪರಕೀಯರಿಗೆ ಕಹಿಮದ್ದು —ಎಂಬುದೇನೂ ಇಲ್ಲ. ತನ್ನ ಕಣ್ಣಿಗೆ. ತನ್ನ ಕಿವಿಗೆ. ತನ್ನ ಸೂಕ್ಷ್ಮ ವಿಚಾರಶಕ್ತಿಗೆ ಯಾವುದು ಯಥಾರ್ಥವೆಂದು ತೋರುತ್ತದೆಯೋ ಅದನ್ನು ಮಾತ್ರವೇ ವೈದ್ಯನು ಗ್ರಹಿಸಿ ಔಷಧೋಪಚಾರಗಳನ್ನು ವಿಧಿಸುತ್ತಾನೆ. ರಾಜಕೀಯ ವಿಚಾರಿಯೂ ಹಾಗೆಯೇ ತನ್ನ ಪ್ರಶ್ನೆಗೆ ಸಂಬಂಧಪಟ್ಟ ಸಂಗತಿಗಳನ್ನು ಪ್ರಮಾಣಭೂತವಾದ ರೀತಿಯಲ್ಲಿ ಶೇಖರಿಸಿ. ಯಥಾಕ್ರಮವಾಗಿ ವಿಶ್ಲೇಷಿಸಿ. ಕಾರ್ಯಕಾರಣ ಭಾವವರಿತು. ನಾನಾ ಅಂಶಗಳ ಪರಸ್ಪರ ಸಂಬಂಧಗಳನ್ನು ಗೊತ್ತುಮಾಡಿಕೊಳ್ಳುತ್ತಾನೆ. ಈ ತೆರದ ಅಂಕಿ ಅಂಶಗಳ ಶೇಖರಣೆ. ಅವುಗಳ ಅರ್ಥಶೋಧನ. ಅವುಗಳಲ್ಲಿ ಅಡಗಿರುವ ತತ್ತ್ವದ ಸಮಾಲೋಚನ— ಇವು ರಾಜಕೀಯಸ್ಥನ ಧರ್ಮಕ್ಕೆ ಆಗಬೇಕಾದ ಸಿದ್ಧತೆಗಳು. ಯಾವ ಒಂದು ವಿಚಾರದಲ್ಲಿಯೂ ಅವನು ಜಾತ್ಯಭಿಮಾನ ಕುಲಾಭಿಮಾನಗಳಿಂದಾಗಲಿ ಅಥವಾ ಪ್ರಬಲರೋ ಅಧಿಕಾರಸ್ಥರೋ ಹೇಳಿದ ಮಾತೆಂಬ ಕಾರಣದಿಂದಾಗಲಿ. ಅಥವಾ ಸ್ವಪಕ್ಷಕ್ಕೆ ಅನುಕೂಲವೆಂಬ ಕಾರಣದಿಂದಾಗಲಿ. ಅಥವಾ ಬಹುಕಾಲದಿಂದ ತನ್ನ ಮನಸ್ಸಿನಲ್ಲಿ ನಿಂತು ಬಂದಿರುವ ಅಭಿಪ್ರಾಯವೆಂಬ ಕಾರಣದಿಂದಾಗಲಿ ಸಂಪ್ರದಾಯ ಮರ್ಯಾದೆಗಾಗಲಿ. ಲೋಕರೂಢಿಗಾಗಲಿ ಅವನು ಗುಲಾಮನಾಗತಕ್ಕವನಲ್ಲ. ಯಾವ ಅಭಿಪ್ರಾಯವನ್ನೇ ಆಗಲಿ. ಯಾವ ಭಾವನೆಯನ್ನೇ ಆಗಲಿ. ಯಾವ ಮತವನ್ನೇ ಆಗಲಿ ಅವನು ತನ್ನ ಸ್ವಂತ ವಿಮರ್ಶೆಗೆ ಒಳಪಡಿಸುವುದಕ್ಕೆ ಹಿಂಜರಿಯಲಾರ. ಈ ಸ್ವತಂತ್ರ ವಿಮರ್ಶನೆಯೇ— ಈ ಪುನರ್ವಿಮರ್ಶನ ಸ್ವಾತಂತ್ರ್ಯವೇ— ವೈಜ್ಞಾನಿಕನ ಮುಖ್ಯ ಲಕ್ಷಣ. ಈ ಬಗೆಯ ವಿಜ್ಞಾನ ದೃಷ್ಟಿಯಿಂದ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ವಿಚಾರಗಳನ್ನು ಶೋಧನೆ ಮಾಡಲಿಕ್ಕೆ ಹೊರಟವರಲ್ಲಿ ಅತಿ ಮುಖ್ಯರು ಗೋಖಲೆಯವರು. ಆ ಕಾಲದ ಸಾರ್ವಜನಿಕರಲ್ಲಿ ಅಂಥ ವಿಚಾರನಿಷ್ಠೆ ದೊಡ್ಡ ಲಕ್ಷಣವಾಗಿತ್ತು. ಗೋಖಲೆಯವರ ಗುರುಗಳಾದ ರಾನಡೆಯವರೂ. ಗುರುಪ್ರಾಯರಾದ ದಾದಾಭಾಯಿ

ನವರೋಜಿಯವರೂ, ಜೋಶಿಯವರೂ, ಗೋಖಲೆಯವರ ಮಿತ್ರರಾದ ಡಿ. ಇ. ವಾಚ್ಛಾ, ಗಣಪತಿ ಸುಬ್ರಹ್ಮಣ್ಯ ಅಯ್ಯರ್ ಮೊದಲಾದವರೂ ಆ ವೈಜ್ಞಾನಿಕ ಮಾರ್ಗವನ್ನೇ ಅವಲಂಬಿಸಿದ್ದರು. ಗೋಖಲೆಯವರು ಆ ಮಾರ್ಗವನ್ನು ಹಿಡಿದು ಕೆಲಸ ಮಾಡಿದ್ದರಿಂದಲೇ ಅವರ ಪ್ರತಿಪಕ್ಷದವರೂ ಸಹ ಅವರ ನ್ಯಾಯವನ್ನು ಒಪ್ಪಿ ಕೊಳ್ಳುವಂತೆ ಆದದ್ದು. ಆ ಪ್ರಮಾಣಪೂರ್ವಕವಾದ ನ್ಯಾಯಾನ್ವೇಷಣೆಯ ದಾರಿ—ಆ ವೈಜ್ಞಾನಿಕ ಮನೋಭಾವದ ದಾರಿ—ಆ ಸ್ವತಂತ್ರ ವಿಮರ್ಶೆಯ ದಾರಿ—ನಮಗೆ ಈಗ—ನಮ್ಮ ವೀರಾವೇಶಗಳ, ಆತುರ ಘೋಷಣೆಗಳ ಗದ್ದಲದ ನಡುವೆ—ಬಹು ಅವಶ್ಯವಾಗಿ ಬೇಕಾಗಿರುವ ಆತ್ಮಪರಿಷ್ಕಾರ.

ಉಪಸಂಹಾರ

ವಿದೇಶೀಯರನ್ನು ತೊಲಗಿಸುವ ಪ್ರಯತ್ನಕ್ಕೆ ಗೋಖಲೆಯವರಿಂದ ಆದ ಪ್ರತ್ಯಕ್ಷ ಸಹಾಯ ಬಹು ದೊಡ್ಡದಲ್ಲದಿರಬಹುದು. ಆದರೆ ಸ್ವದೇಶೀಯರನ್ನು ಕಟ್ಟಿ ಸಿದ್ಧ ಪಡಿಸುವುದರಲ್ಲಿ ಅವರಿಂದಾಗಿರುವ ಸೇವೆ ಮತ್ತಾರ ಸೇವೆಗಿಂತಲೂ ಕಡಮೆಯಾದದ್ದಲ್ಲ. ಮತ್ತು 1947ನೆಯ ಇಸವಿಯ ಹಿಂದೆ ಅವರ ಮಾರ್ಗದರ್ಶಿತ್ವ ಎಷ್ಟು ಉಪ ಯುಕ್ತವಾಗಿತ್ತೋ ಅದರ ನೂರ್ಮಡಿಯಷ್ಟರ ಬೆಲೆ ಈಗ—ದೇಶಸ್ವಾತಂತ್ರ್ಯ ಬಂದ ಮೇಲೆ—ಅವರ ಆದರ್ಶತ್ವಕ್ಕೆ ಸಲ್ಲತಕ್ಕದ್ದಾಗಿದೆ. ಈಗ ಹೋರಾಟದ ಕಾಲ ಮುಗಿದಿದೆ. ಕುದುರುಪಾಟಿನ ಕಾಲ ಮೊದಲಾಗಿದೆ. ಈಗ ನಮಗೆ ಬೇಕಾದದ್ದು ಗೋಖಲೆ ಯವರು ತೋರಿಸಿದ ರಾಷ್ಟ್ರ ಪುನರುಜ್ಜೀವನದ ನೀತಿ. ದೇಶ ಸ್ವಾತಂತ್ರ್ಯವೆಂದರೆ—ಪ್ರಜಾಪ್ರಭುತ್ವವೆಂದರೆ—ಸ್ವರಾಜ್ಯವೆಂದರೆ—ಪ್ರಜೆಗಳ ಸ್ವಂತ ಜವಾಬ್ದಾರಿ ಎಂಬು ದಷ್ಟೆ ! ಪ್ರತಿಯೊಬ್ಬ ಭಾರತೀಯನೂ ತನ್ನ ರಾಷ್ಟ್ರಿಕ ಜೀವನದಲ್ಲಿ ಗೋಖಲೆಯವರ ಚತುಸ್ಸೂತ್ರವನ್ನು—ಸಾರ್ವಜನಿಕ ನಿಷ್ಠೆ. ಆತ್ಮಶಿಕ್ಷಣ. ಐಕಮತ್ಯ ಪ್ರತಿಜ್ಞೆ ಮತ್ತು ವೈಜ್ಞಾನಿಕ ದೃಷ್ಟಿ. ಈ ನಾಲ್ಕು ನೀತಿಗಳನ್ನು ಅವಲಂಬಿಸಿ ಬಾಳಿದಂತೆಲ್ಲ ನಮ್ಮ ದೇಶದ ಜೀವನವು ದೇಶೀಯರಿಗೂ—ವಿದೇಶೀಯರಿಗೂ ಸಹ—ಮಂಗಳದಾಯಕ ವಾಗುತ್ತದೆ.

ಗೋಖಲೆಯವರ ಉಪದೇಶವನ್ನೆಲ್ಲ ಒಂದೇ ವಾಕ್ಯದಲ್ಲಿ ಅಡಗಿಸಿ ಹೇಳಬೇಕೆಂದರೆ, ಅಂಥಾ ವಾಕ್ಯವು ಅವರು ತಮ್ಮ "ಭಾರತ ಸೇವಕ ಸಂಘ"ಕ್ಕಾಗಿ ಬರೆದ ನಿಬಂಧನೆ ಯಲ್ಲಿಯೇ ಸಿಕ್ಕುತ್ತದೆ. ಅದು ಹೀಗೆ :—

"Public life must be spiritualised."

(ಸಾರ್ವಜನಿಕ ಜೀವನವನ್ನು ಧರ್ಮಕಾರ್ಯವನ್ನಾಗಿ ಮಾರ್ಪಡಿಸಬೇಕು.)

ರಾಷ್ಟ್ರಸೇವೆಯೆಂಬುದು ನಾವು ದೇಶದ ವಿಷಯದಲ್ಲಿ ತೋರಿಸುವ ಅನುಗ್ರಹ ವಲ್ಲ ; ಇತರರಿಗೆ ಯಾರಿಗೋ ಮಾಡುವ ಉಪಕಾರವಲ್ಲ ; ಅದು ನಾವು ನಮಗೋಸ್ಕರ ವಾಗಿಯೇ ಮಾಡಿಕೊಳ್ಳುವ ಹಿತಾರ್ಥಸಂಪಾದನೆ. ಅದು ಒಂದು ಕಡೆ ಜೀವಿತ

ಸೌಕರ್ಯ ; ಇನ್ನೊಂದು ಕಡೆ ಆತ್ಮಸಂಸ್ಕಾರ. ನಮ್ಮ ಸೇವೆಯ ಫಲವಾಗಿ ದೇಶಕ್ಕೆ ಲಭಿಸುವ ಪ್ರಯೋಜನದಲ್ಲಿ ನಾವೂ ಭಾಗಿಗಳಾಗುತ್ತೇವೆ. ಹಾಗೆಯೇ ಆ ಸೇವಾ ಕಾರಣದಿಂದ ನಮ್ಮ ಅಂತಶ್ಶಕ್ತಿಗಳೇ ಬೆಳೆದು, ನಮ್ಮ ಆತ್ಮವೇ ವಿಸ್ತಾರ ವಿಕಾಸ ವನ್ನು ಪಡೆದುಕೊಳ್ಳುತ್ತದೆ.

ಈ ಎರಡನೆಯ ಪ್ರಯೋಜನವನ್ನು ದೃಷ್ಟಿಯಲ್ಲಿರಿಸಿಕೊಂಡೇ ಶ್ರೀ ವಿದ್ಯಾರಣ್ಯ ಸ್ವಾಮಿಗಳವರು :—

"ಜ್ಞಾನಿನಾ ಚರಿತುಂ ಶಕ್ಯಂ
ಸಮ್ಯಗ್ರಾಜ್ಯಾದಿ ಲೌಕಿಕಂ."

(ಬ್ರಹ್ಮಜ್ಞಾನಿಯಾದವನು ರಾಜಕೀಯ ಮೊದಲಾದ ಎಲ್ಲ ಲೌಕಿಕ ವ್ಯವಹಾರ ಗಳನ್ನೂ ಚೆನ್ನಾಗಿ ನಡಸಲು ಶಕ್ತನಾಗುತ್ತಾನೆ.)
—ಎಂದು ಉಪದೇಶಿಸಿದ್ದಾರೆ.

ಅದೇ ಗಾಂಧಿಯವರು ಅನುಷ್ಠಾನಕ್ಕಿಟ್ಟುಕೊಂಡ ತತ್ತ್ವ. ಅದೇ ಗೋಖಲೆ ಯವರು ನಿದರ್ಶನಮಾಡಿಕೊಟ್ಟ ತತ್ತ್ವ. ಈ ಮಹಾ ಕಾರಣದಿಂದ ಗೋಖಲೆ ಯವರು ನಮಗೆ ಸಂತತ ಸ್ಮರಣೀಯರಾಗಿದ್ದಾರೆ.

ಗೋಖಲೆ ಸ್ಮರಣೆ

(91ನೆಯ ಜನ್ಮದಿನದ ನೆನಪು)

ಗೋಖಲೆಯವರು ಬದುಕಿದ್ದಿದ್ದರೆ ಈ ಹೊತ್ತು ಅವರ 91ನೆಯ ಹುಟ್ಟುಹಬ್ಬ. ಅವರು ಕಣ್ಮರೆಯಾಗಿ 41 ವರ್ಷವಾಗಿದೆ. ಈ ಅಂತರದಲ್ಲಿ—ಮುಖ್ಯವಾಗಿ ಈಚೀಚಿನ ವರ್ಷಗಳಲ್ಲಿ,—ದೇಶದ ಪರಿಸ್ಥಿತಿ ಈಗ ಬೇರೊಂದು ಯುಗವೆನಿಸುವಷ್ಟರ ಮಟ್ಟಿಗೆ ಬದಲಾಯಿಸಿದೆ. ಹಿಂದಿನ ಚರಿತ್ರೆಯ ಗುರುತುಗಳು ಜನರ ನೆನಪಿನಿಂದ ಅಳಿಸಿಹೋಗಿವೆ. ಆದರೆ ಗೋಖಲೆಯವರ ಹೆಸರು ಮಾಸದೆ, ಇನ್ನೂ ಜೀವಂತ ವಾಗಿ ನಿಂತಿದೆ. ಅದು ಹಾಗಿರಲು ತಕ್ಕದ್ದು. ಅದು ಹಾಗಿರುವುದು ನಮ್ಮ ಪುಣ್ಯ. ಅದು ಹಾಗಿರುವುದು ನಮ್ಮ ಭವಿಷ್ಯದ ಆಶೆಗೆ ಪ್ರೋತ್ಸಾಹ.

ರಾಜಕೀಯದಲ್ಲಿ ಹೆಸರು ಪಡೆದವನ ಕಾರ್ಯಚರಿತ್ರೆಯನ್ನು ಎರಡು ದೃಷ್ಟಿ ಗಳಿಂದ ನೋಡಬಹುದು. ಒಂದು ತಾತ್ಕಾಲಿಕ ಫಲದ್ದು, ಇನ್ನೊಂದು ಚಿರಕಾಲಿಕ ಪ್ರಭಾವದ್ದು. ಈ ಎರಡು ದೃಷ್ಟಿಗಳಿಂದಲೂ ಗೋಖಲೆಯವರ ಹಿರಿಮೆ ಅತಿಶಯ ವಾದದ್ದು.

ತಮ್ಮ ದಿವಸದ ವಿದ್ಯಮಾನಗಳನ್ನು ಉತ್ತಮಗೊಳಿಸಲು ಅವರು ನಾನಾ ಕ್ಷೇತ್ರ ಗಳಲ್ಲಿ ದುಡಿದರು. ಆ ಕಥೆ ದೊಡ್ಡದು. ವಿದ್ಯಾಪ್ರಚಾರಕರಾಗಿ, ಪತ್ರಿಕಾಲೇಖಕ ರಾಗಿ, ಶಾಸನಸಂಸ್ಥೆಗಳ ಸಭಿಕರಾಗಿ, ಪೌರಸಂಸ್ಥಾಚಾಲಕರಾಗಿ, ಕಾಂಗ್ರೆಸ್ ಪ್ರಮುಖ ರಾಗಿ, ಸಮಾಜ ಸಂಸ್ಕಾರಕರಾಗಿ, ಆರ್ಥಿಕ ವ್ಯವಹಾರ ವಿಮರ್ಶಕರಾಗಿ, ಸರಕಾರಕ್ಕೆ ಶೋಧಕರಾಗಿ, ಜನಕ್ಕೆ ಬೋಧಕರಾಗಿ ಅವರು ಮಾಡಿದ ಸೇವೆ ಎಂಥಾದ್ದೆಂಬುದನ್ನು ಅವರ ಭಾಷಣಗಳೂ, ಲೇಖನಗಳೂ, ಜೀವನಚರಿತ್ರೆಯೂ ತಿಳಿಸುತ್ತವೆ. ಆ ಮಹಾ ಸೇವೆ ಸಾರ್ಥಕಪಟ್ಟಿತು. ಅದರಿಂದ ಜನಕ್ಕೆ ಹಿತಲಾಭವಾಯಿತು, ನಮ್ಮ ಸ್ವರಾಜ್ಯ ವಾದದ ತಳಹದಿ ಗಟ್ಟಿಯಾಯಿತು.

ತನ್ನ ಕಾಲದ ಸ್ಥಿತಿಗಳನ್ನು ನೋಡಿ ಸರಕಾರದ ಕ್ರಮಗಳನ್ನು ತಿದ್ದಿಸುವುದೂ ಪ್ರಗತಿಕಾರ್ಯಗಳಿಗೆ ಪ್ರೇರಣೆ ಕೊಡುವುದೂ ರಾಜಕೀಯಸ್ಥನ ಪ್ರಥಮ ಕರ್ತವ್ಯ. ಅದರಿಂದ ದೇಶಕ್ಕೆ ಸದ್ಯಃಪ್ರಯೋಜನವಾಗುವುದರ ಜೊತೆಗೆ, ಅವನಿಗೆ ಜನಜೀವನದ

ಮರ್ಮಸ್ಥಾನಗಳ ಅರಿವು ಉಂಟಾಗುತ್ತದೆ. ರಾಜಕೀಯದಂಥ ತೊಡಕಿನ ಕಾರ್ಯಕ್ಷೇತ್ರದಲ್ಲಿ ನಮಗೆ ಯಥಾವಸ್ತುವೂ ವಿಶದವೂ ಆದ ಅಂತರ್ಜ್ಞಾನ ದೊರೆಯಬೇಕಾದರೆ ಅದು ಪ್ರಯೋಗ ವಿಮರ್ಶನೆಯಿಂದ. ತಾತ್ಕಾಲಿಕ ಕಾರ್ಯಾನುಭವವೇ ಚಿರಕಾಲಿಕ ತತ್ತ್ವದರ್ಶನಕ್ಕೆ ದಾರಿ. ಗೋಖಲೆಯವರ ರಾಜಕೀಯ ಪ್ರಜ್ಞೆ ಬೆಳೆದದ್ದು ಆ ರೀತಿ.

ಗಾಂಧಿಯವರು ಗೋಖಲೆಯವರನ್ನು ರಾಜಕೀಯದಲ್ಲಿ ತಮ್ಮ ಇಷ್ಟಗುರುವೆಂದು ಹೇಳುತ್ತಿದ್ದದ್ದು ಎಲ್ಲರಿಗೂ ತಿಳಿದಿದೆ. ಗಾಂಧಿಯವರು ಮೊದಲ ಸಲ ಬೆಂಗಳೂರಿಗೆ ಬಂದಿದ್ದಾಗ ಇಂದಿಗೆ ಸರಿಯಾಗಿ 41 ವರ್ಷಗಳ ಹಿಂದೆ—8ನೆಯ ಮೇ 1915—ಆ ಮಾತನ್ನು ಸ್ಪಷ್ಟವಾಗಿ ಹೇಳಿದರು. ಆಮೇಲೆ ಅದನ್ನು ಬರೆದೂ ಸ್ಥಿರಪಡಿಸಿದರು. ಅದೇನು ಉಪಚಾರದ ಮಾತೆ? ಅದಕ್ಕಿಂತ ಹೆಚ್ಚಿನದೆ? ಕೊಂಚ ವಿಚಾರ ಮಾಡೋಣ.

ಗಾಂಧಿಯವರು ತಮ್ಮ ಜೀವಿತದಲ್ಲಿ ಸತ್ಯಕ್ಕೂ ಅಹಿಂಸೆಗೂ ಯಾವ ಜಾಗ ಕೊಟ್ಟಿದ್ದಾರೆಂಬುದನ್ನು ಎಲ್ಲರೂ ಬಲ್ಲರು. ಗೋಖಲೆಯವರು ಆ ಎರಡು ತತ್ತ್ವಗಳಿಗೂ ಅದೇ ಉನ್ನತ ಪದವಿಯನ್ನು ಕೊಟ್ಟಿದ್ದರು. ಅವರು ಬ್ರಿಟಿಷ್ ಆಡಳಿತದ ಮೇಲೆ ಹೊರಿಸಿದ ಎಲ್ಲ ಆಕ್ಷೇಪಣೆಗಳನ್ನೂ ಹೂಡಿದ್ದದ್ದು ಸತ್ಯದ ಆಧಾರದ ಮೇಲೆ: ಮತ್ತು ಬ್ರಿಟಿಷರನ್ನು ತೊಲಗಿಸಲು ದೊಂಬಿ ದಂಗೆಗಳ ದಾರಿ ತಕ್ಕದ್ದಲ್ಲವೆಂದು ಅವರು ವಾದಿಸಿದ್ದೂ ಅಹಿಂಸೆ ಎಲ್ಲಿಯಾದರೂ ತಪ್ಪೀತೇನೋ ಎಂಬ ಶಂಕೆಯಿಂದ.

ಸತ್ಯದ ಲಕ್ಷಣಗಳನ್ನು ಮುಖ್ಯವಾಗಿ ಮೂರೆಂದು ಹೇಳಬಹುದು: (1) ವಸ್ತುಸ್ವರೂಪ ಶೋಧನೆ. (2) ಪರಪಕ್ಷ ಸಮಾಲೋಚನೆ. (3) ಸಮನ್ವಯ ನ್ಯಾಯ. ನಮ್ಮ ಮುಂದಿರುವ ಪ್ರಶ್ನೆಯ ಎಲ್ಲ ಸಂಗತಿಗಳನ್ನು ಶೇಖರಿಸಿ ಪರೀಕ್ಷಿಸಿ ಗಟ್ಟಿಯಾದ ಅಂಶಗಳನ್ನು ಕಂಡುಕೊಳ್ಳಬೇಕು. ಅದರಿಂದ ನಮ್ಮ ಮನಸ್ಸಿನಲ್ಲಿ ಉತ್ಪನ್ನವಾದ ಅಭಿಪ್ರಾಯಗಳನ್ನು ಇತರ ಮಂದಿಯ ಅಭಿಪ್ರಾಯಗಳೊಡನೆ ಹೋಲಿಸಿ ನೋಡಿ. ಹಾಗೆ ಹೊಸದಾಗಿ ದೊರೆತ ತಿಳಿವಳಿಕೆಯಿಂದ ನಮ್ಮ ಭಾವನೆಗಳನ್ನು ಪರಿಷ್ಕಾರ ಪಡಿಸಬೇಕು. ಅನಂತರ ಕಾರ್ಯರಂಗದಲ್ಲಿ ನಮಗೆ ನ್ಯಾಯವೆಂದು ತೋರಿದ್ದಕ್ಕೂ ಇತರರು ಹೇಳುವ ನ್ಯಾಯಕ್ಕೂ ಇರುವ ವ್ಯತ್ಯಾಸಗಳನ್ನು ಪರಸ್ಪರ ಇಷ್ಟ ಸಮ್ಮತಿಯ ನಯದಿಂದ—ಕೊಟ್ಟು ತೆಗೆದುಕೊಳ್ಳುವ ಮರ್ಯಾದೆಯಿಂದ compromise ರೀತಿಯಲ್ಲಿ ಪರಿಹರಿಸಿಕೊಂಡು. ಕೂಡಿದ ಮಟ್ಟಿಗೂ ಸರ್ವ ಸಮಾಧಾನದ ಮಾರ್ಗದಿಂದ ಮುಂದೆ ನಡೆಯಬೇಕು. ಒಂದು ಹೆಜ್ಜೆಯೂರಿ ಅದು ಗಟ್ಟಿ ನೆಲವೆಂದು ತಿಳಿದ ಮೇಲೆ ಇನ್ನೊಂದು ಹೆಜ್ಜೆಯೂರಬೇಕು.

ಇಂಥಾ ಮನೋಭಾವವುಳ್ಳವನು ದುಡುಕಲಾರ. ಆತನ ಮಾತಿನಲ್ಲಿ ಉಗ್ರತೆಯೂ ಆತುರವೂ ಇರವು. ಆತನ ನಡತೆಯಲ್ಲಿ ಸೌಮ್ಯವೂ ಸ್ನೇಹವೂ ತುಂಬಿರುತ್ತವೆ. ತನ್ನ ವಾಗ್ವೇಗದಲ್ಲಿ ಸತ್ಯಕ್ಕೆ ಎಲ್ಲಿ ಪೆಟ್ಟಾದೀತೋ. ತನ್ನ ವಾದರಭಸದಲ್ಲಿ ಯಾರಿಗೆ

ನ್ಯಾಯ ತಪ್ಪಿಹೋದೀತೋ ಎಂದು ಅವನು ಸರ್ವದಾ ಸೂಕ್ಷ್ಮಸ್ಪರ್ಶಿ (Sensitive) ಯಾಗಿರುತ್ತಾನೆ. ಮತ್ತು ಎಲ್ಲರನ್ನೂ ಒಪ್ಪಿಸಿ ಐಕಮತ್ಯದಿಂದ ಮುಂಬರಿಯ ಬೇಕೆಂಬುದು ಅವನ ಆಶಯವಾದದ್ದರಿಂದ, ಅವನು ಎಲ್ಲರೊಡನೆಯೂ ಸಮ ವಿನಯಗಳಿಂದ ನಡೆದುಕೊಳ್ಳುತ್ತಾನೆ. ಒರಟಾಟಕ್ಕೆ ಅವನಲ್ಲಿ ಆಸ್ಪದವಿರದು.

ಗೋಖಲೆಯವರ ಸ್ವಭಾವ ಈ ತೆರದ್ದಾದ ಕಾರಣದಿಂದಲೇ ಪ್ರಥಮ ಸಂದರ್ಶನ ದಲ್ಲಿಯೇ ಅವರು ಗಾಂಧಿಯವರಿಗೆ ಪ್ರಿಯರಾದರು.

ವಿಜ್ಞಾನಿಯ ಸತ್ಯಶೋಧನ ಕ್ರಮ, ನ್ಯಾಯದರ್ಶಿಯ ಉಭಯಪಕ್ಷ ಸಮಾ ಲೋಚನೆ, ರಾಯಭಾರಿಯ ಸಂಧಾನಕುಶಲತೆ—ಈ ಮೂರು ಜಾತಿಯ ಗುಣ ಗಳೂ ಗೋಖಲೆಯವರಲ್ಲಿ ಕಲೆತಿದ್ದವು. ಈ ಲೋಕದಲ್ಲಿ ಒಳ್ಳೆಯದ್ಯಾವುದು— ಎಂಬುದೇ ಮನುಷ್ಯನಿಗಿರುವ ದೊಡ್ಡ ಪ್ರಶ್ನೆ. ನೂರಾರು ವಸ್ತುವಿಷಯಗಳು ಅವನಿಗೆ ಬೇಕೆನ್ನಿಸುತ್ತವೆ. ಅವುಗಳಲ್ಲಿ ನಿಜವಾದ ಒಳ್ಳೆಯದ್ಯಾವುದು ? ಮೊದಲಂತಸ್ತಿನದು ಯಾವುದು ? ಅದಾದ ಮೇಲೆ ಯಾವುದು ? ಇದನ್ನು ಗೊತ್ತುಮಾಡಿಕೊಡಲು ನಮಗಿರುವ ಸಾಧನಗಳು ಎರಡು : ಒಂದು ಸ್ವಾನುಭವ ವಿಮರ್ಶೆ, ಇನ್ನೊಂದು ನಮ್ಮೊಡನಿರುವ ಇತರರ ಆಲೋಚನೆಗಳು. ಅವೆರಡೂ ಎರಡು ಕಣ್ಣುಗಳಂತೆ ಒಟ್ಟುಗೂಡಿದಾಗ ನಮಗೆ ನಿಜವಾದ ಹಿತಸ್ವರೂಪದ ದರ್ಶನ. ವ್ಯಕ್ತಿಯ ಸ್ವತಂತ್ರವಿಚಾರ ಸಾರ್ವಜನಿಕ ಚರ್ಚೆ—ಈ ಎರಡೂ ಎಲ್ಲಿ ಸೇರಿಕೊಂಡಿರುತ್ತವೆಯೋ ಅಲ್ಲಿ ಪ್ರಮಾದದೋಷಗಳ ಸಂಭವ ಕಡಮೆ. ಆ ಎರಡು ಬಗೆಯ ಶೋಧನೆಗಳಿಗೂ ಅವಕಾಶ ಕಲ್ಪಿಸುತ್ತದೆಯೆಂಬುದೇ ಪ್ರಜಾಪ್ರಭುತ್ವ ಪದ್ಧತಿಯ ವಿಶೇಷ ಗುಣ. ರಾಷ್ಟ್ರಕ ವ್ಯಕ್ತಿಯು—"ಯಾವ ರಾಜ್ಯಕಾರ್ಯವೂ ತನ್ನನ್ನು ಬಿಟ್ಟು ಆದದ್ದಲ್ಲ, ತನ್ನೊಬ್ಬನಿಂದಲೇ ಆದದ್ದೂ ಅಲ್ಲ. ತಾನೂ ತನ್ನ ಸಮಾಜವೂ ಕೂಡಿಕೊಂಡು ಮಾಡಿದ್ದು ರಾಜ್ಯಕಾರ್ಯ. ಅದು ಮನುಷ್ಯಸಾಧ್ಯ ವಾದ ಸರ್ವಹಿತದ ಬಿಂಬ" ಎಂದು ಸಮಾಧಾನ ಪಟ್ಟುಕೊಳ್ಳಬಹುದಾದದ್ದು ಪ್ರಜಾರಾಜ್ಯದಲ್ಲಿ.

ಗೋಖಲೆಯವರ ರಾಜಕೀಯ ತತ್ತ್ವಗಳನ್ನು ಸಂಗ್ರಹವಾಗಿ ಹೀಗೆ ಹೇಳಬಹುದು ;

(1) ದೇಶ ವಿಚಾರವನ್ನು ಪ್ರತಿಯೊಬ್ಬನೂ ತನ್ನ ಸತ್ಯಧರ್ಮದ ಒಂದಂಗ ವೆಂದು ಭಾವಿಸಿ ತನ್ನ ರಾಷ್ಟ್ರಕ ಕರ್ತವ್ಯವನ್ನು—ಅಷ್ಟು ಶ್ರದ್ಧೆಯಿಂದ, ಅಷ್ಟೇ ನಿಷ್ಠೆಯಿಂದ—ನಡಸಬೇಕಾದದ್ದು.

(2) ಸರಕಾರವು ಜನಕ್ಕೆ ಸೌಕರ್ಯ ಮಾಡಿಕೊಡುವುದರ ಜೊತೆಗೆ ಅವರ ಶೀಲ ಸ್ವಭಾವಗಳನ್ನೂ ಅಷ್ಟಿಷ್ಟು ರೂಪಾಂತರಗೊಳಿಸುತ್ತದೆ. ಆದದ್ದರಿಂದ ಸರಕಾರದಲ್ಲಿ ಜನಾನುಕೂಲ ದೃಷ್ಟಿ, ಕಾರ್ಯವಿಚಕ್ಷಣೆ, ಜಾಗರೂಕತೆ,

ಮಿತವ್ಯಯ ಬುದ್ಧಿ, ನಿಯಮ ನಿಷ್ಠೆ ಮೊದಲಾದ ಗುಣಗಳಿದ್ದಲ್ಲಿ ಅದು ಜನದ ನೀತಿ ಯೋಗ್ಯತೆಗೂ ಸಹಾಯವಾಗುತ್ತದೆ.

(3) ರಾಜ್ಯನೀತಿಯು ಸತ್ಯದ ಆಧಾರದ ಮೇಲೆ ನ್ಯಾಯಸಾಧಕವಾಗಿ ಇರಬೇಕು. ಆದದ್ದರಿಂದ ರಾಜಕೀಯಸ್ಥನು ಸತ್ಯಾಂಶವನ್ನು ವಿಷಯ ಪರಿಶೋಧನೆಯಿಂದ ಕಂಡುಕೊಂಡು, ಅದನ್ನು ಇತರರಿಗೆ ವಿಶ್ವಾಸ ಸಂಪಾದಕವಾದ ಸೌಮ್ಯ ರೀತಿಯಲ್ಲಿ ತಿಳಿಸಬೇಕು.

(4) ರಾಷ್ಟ್ರಕನು ತನ್ನ ವಿಚಾರ ಸ್ವಾತಂತ್ರ್ಯವನ್ನು ಪಕ್ಷಕ್ಕಾಗಲಿ ಕೋಮಿಗಾಗಲಿ ಕಸಬಿಗಾಗಲಿ ಒತ್ತೆ ಹಾಕದೆ ಉಪಯೋಗಿಸಬೇಕು. ಅವನಿಗೆ ತನ್ನ ಅಂತಸ್ಸಾಕ್ಷಿಗಿಂತ ಯಾವುದೂ ದೊಡ್ಡದಾಗಬಾರದು.

(5) ರಾಜ್ಯವು ಸರ್ವಜನಹಿತಕ್ಕಾಗಿ ಇರತಕ್ಕದ್ದು. ಆದದ್ದರಿಂದ ರಾಷ್ಟ್ರಕನು ಸಾರ್ವಜನಿಕ ವಿಚಾರಗಳನ್ನು ನಿರ್ಣಯ ಮಾಡುವುದರಲ್ಲಿ ಸಕಲ ಪಕ್ಷ ಸಕಲ ವರ್ಗಗಳ ಇಷ್ಟ ಹಿತಗಳನ್ನೂ ಮನೋಭಾವಗಳನ್ನೂ ಅವರಿಗಿರುವ ಅಪನಂಬಿಕೆ ಅಭಿಮಾನಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕು.

(6) ಕಾರ್ಯ ಪ್ರಸಕ್ತಿಯಲ್ಲಿ ಇತರ ಪಕ್ಷಗಳ ಬಲಾಬಲಗಳನ್ನು ನೋಡಿ ತನ್ನ ಮುಖ್ಯತತ್ತ್ವಗಳಿಗೆ ಭಂಗ ತಂದುಕೊಳ್ಳದ ರೀತಿಯಲ್ಲಿ ಆ ಅನ್ಯ ಪಕ್ಷಗಳೊಡನೆ ಇಷ್ಟಸಮ್ಮತಿ (compromise) ಮಾಡಿಕೊಂಡು ನಿರ್ವೈರ ಮಾರ್ಗದಲ್ಲಿ ಉದ್ದೇಶ ನಿರ್ವಾಹ ಮಾಡತಕ್ಕದ್ದು. ಇತರ ಸಂಪತ್ತನ್ನು ಗಳಿಸುವುದರಲ್ಲಿ ಜನೈಕಮತ್ಯದ ಸಂಪತ್ತನ್ನು ಕಳೆದುಕೊಳ್ಳಬಾರದು.

(7) ಹಿಂದಿನಿಂದ ಬಂದಿರುವ ವ್ಯವಸ್ಥೆ ಪದ್ಧತಿಗಳನ್ನು ಬದಲಾಯಿಸಬೇಕಾದಾಗ ಜನದ ಸ್ವಭಾವಕ್ಕನುಸಾರವೂ ಅವರ ಅನುಭವಕ್ಕೆ ಯುಕ್ತವೂ ಆದ ಮಾರ್ಪಾಟುಗಳನ್ನು, ಎಷ್ಟು ಅವಶ್ಯವೋ ಅಷ್ಟೇ ಮಟ್ಟಿಗೆ, ಕ್ರಮಿಕ ಪರ್ಯಾಯದಲ್ಲಿ ನಡಸತಕ್ಕದ್ದು.

(8) ಎಲ್ಲ ವಿಚಾರಗಳಲ್ಲೂ ಪಕ್ಷಪಾತವನ್ನೂ ಸ್ವಾರ್ಥಚಿಂತನೆಯನ್ನೂ ದೂರ ಇಟ್ಟು ದೇಶದೊಟ್ಟಿನ ಹಿತವನ್ನೇ ಲಕ್ಷ್ಯದಲ್ಲಿಡಬೇಕಾದದ್ದು.

(9) ಎಲ್ಲ ಪ್ರಯತ್ನಗಳಲ್ಲೂ ಜನದ ಸಹಜ ವಿವೇಕವೂ ಸ್ವ-ಪ್ರಯತ್ನವೂ ಆತ್ಮಾವಲಂಬನೆಯ ಪ್ರವೃತ್ತಿಯೂ ಬೆಳೆಯುವಂತೆ ನೋಡಬೇಕಾದದ್ದು. ಅವರು ತಾವಾಗಿ ಸಂಪಾದಿಸಿಕೊಂಡದ್ದು ಸರಕಾರ ಅವರಿಗೆ ಮಾಡಿಸಿ ಕೊಟ್ಟದ್ದಕ್ಕಿಂತ ಬೆಲೆಯಲ್ಲೂ ಬಾಳಿಕೆಯಲ್ಲೂ ಹೆಚ್ಚಿನದು.

(10) ಸ್ವತಂತ್ರದಲ್ಲಿ ಸಾಧಿಸಿದ ಪ್ರಗತಿ ನಿರ್ಬಂಧದಿಂದ ಕೊಡಿಸಿದ ಪ್ರಗತಿಗಿಂತ ಮೇಲು. ಜನದ ಅಂತಸ್ಸತ್ತ್ವ ಬೆಳೆಯಲು ಅವರು ಸ್ವಾತಂತ್ರ್ಯದ ಗಾಳಿಯನ್ನುಸಿರುತ್ತಿರಬೇಕು. ವಾಕ್‌ಸ್ವಾತಂತ್ರ್ಯ, ಪ್ರಕಟನ ಸ್ವಾತಂತ್ರ್ಯ, ಸಂಘಸಭಾ ಸ್ವಾತಂತ್ರ್ಯಗಳು ಜನಪದದ ಆರೋಗ್ಯಕ್ಕೆ ಇರಬೇಕಾದ ಪೂರ್ವ ಸೌಕರ್ಯಗಳು. ರಾಷ್ಟ್ರಕ ವ್ಯಕ್ತಿಯ ಸ್ವತಂತ್ರ ಶಕ್ತಿಯೇ ಮತ್ತು ಸ್ವ-ಪ್ರಯತ್ನ ಸ್ವಗುಣ ವಿಕಾಸಗಳೇ ದೇಶದ ಸಂಪತ್ತಿನಲ್ಲಿ ಪ್ರಥಮಾಂಶ.

ಈ ಹತ್ತು ತತ್ತ್ವಗಳಲ್ಲಿ ಗಾಂಧಿಯವರು ಒಪ್ಪಲಾಗದಿದ್ದದ್ದು ಒಂದೂ ಕಾಣಬರದು. ಆದರೆ ಕ್ರಮಿಕ ಪರ್ಯಾಯದ ನೀತಿಯನ್ನು ಇಂಡಿಯದ ಸ್ವಾತಂತ್ರ್ಯ ಪ್ರಕರಣಕ್ಕೆ ಗಾಂಧಿಯವರು ಅಂಗೀಕರಿಸುತ್ತಿದ್ದರೆ ? ಎಂದು ಸಂದೇಹ ಬರಬಹುದು. ಆ ಪ್ರಕರಣದಲ್ಲಿ ತಕರಾರಿದ್ದದ್ದು ವಾಸ್ತವವಾಗಿ ಗೋಖಲೆ ಗಾಂಧಿಯವರಿಗಲ್ಲ,—ಗೋಖಲೆ ತಿಲಕರಿಗೆ. ಜನವನ್ನು ಕಟ್ಟಿ ನಿಲ್ಲಿಸಿ ಸರಕಾರಕ್ಕೆ ಅಡಚಣೆಯೊಡ್ಡಬೇಕೆಂಬುದು ತಿಲಕರ ಉಪಾಯ. ಆ ಉಪಾಯದಿಂದ ದೇಶಕ್ಕೆ ಅಪಾಯವೇ ಆದೀತು, ಜನದ ಉದ್ರೇಕದಲ್ಲಿ ದೊಂಬಿ ದಂಗೆಗಳೆದ್ದು ಬ್ರಿಟಿಷ್ ಸರಕಾರ ಮತ್ತಷ್ಟು ದಬ್ಬಾಳಿಕೆ ನಡಸಲು ನೆವ ದೊರೆತೀತು—ಎಂಬುದು ಗೋಖಲೆಯವರ ಭಯ. ಈ ಭಯಕ್ಕಿದ್ದ ಕಾರಣವನ್ನು ನೀಗಿ. ತಿಲಕರ ಜನಕ್ಷೋಭೆಯ ಕಾರ್ಯವಿಧಾನದಲ್ಲಿ ಗೋಖಲೆಯವರ ಸತ್ಯ ಅಹಿಂಸೆಗಳ ನೀತಿಯನ್ನು ಸೇರಿಸಿದ್ದೂ ಗಾಂಧಿಯವರ ಧೈರ್ಯ ಪ್ರಭಾವ.

ಕ್ರಮಿಕ ಪರ್ಯಾಯದಿಂದ ಜನಕ್ಕೆ ಅವಶ್ಯವಾದ ಅನುಭವ ಶಿಕ್ಷಣ ದೊರೆತೀತೆಂಬುದು ಗೋಖಲೆಯವರ ಇನ್ನೊಂದು ತತ್ತ್ವಾಂಶ. ಪ್ರಜಾರಾಜ್ಯ ಪದ್ಧತಿ ನಮ್ಮ ಜನಕ್ಕೆ ಹೊಸದು. ಅದು ಕಷ್ಟ ತೊಡಕುಗಳುಳ್ಳದ್ದು. ಅದಕ್ಕೆ ಬೇಕಾದ ತಯಾರಿ ಇಲ್ಲದಿದ್ದರೆ ಅದು ಸತ್ಫಲಕಾರಿಯಾಗದು. ಅದು ಪೂರ್ವಸಿದ್ಧತೆಯಿಲ್ಲದೆ ಥಟ್ಟನೆ ಒಂದೇ ಬಾರಿ ಸಮಗ್ರವಾಗಿ ಬಂದರೆ ಅನೇಕ ಅನರ್ಥಗಳು ಒದಗಿಯಾವು. ಕ್ರಮಿಕ ಮಾರ್ಗದಿಂದ ಜನಕ್ಕೆ ಅಭ್ಯಾಸ ಸಿದ್ಧತೆ ದೊರೆತು ಎಲ್ಲವೂ ಸುಗಮವಾದೀತು. ನಮ್ಮ ಇಂದಿನ ಅನುಭವದಲ್ಲಿ ಈ ವಾದ ನಿಷ್ಕಾರಣವಾದದ್ದೆಂದು ಪಕ್ಷಾತೀತರು ಯಾರೂ ಹೇಳರು. ಒದಗಿಬಂದ ಸಮಯದಲ್ಲಿ ಸ್ವಾತಂತ್ರ್ಯವನ್ನು ಕೈವಶಮಾಡಿಕೊಳ್ಳದೆ ಇದ್ದಿದ್ದರೆ ಅದು ನಮಗೆ ಎಂದಿಗೂ ಸಿಕ್ಕುತ್ತಿರಲಿಲ್ಲವೆಂಬುದು ಪ್ರತ್ಯೇಕ ವಿಚಾರ.

ಸತ್ಯಾಗ್ರಹವನ್ನು ಗೋಖಲೆಯವರು ಒಪ್ಪಿಕೊಳ್ಳುತ್ತಿದ್ದರೆ ? ದಕ್ಷಿಣ ಆಫ್ರಿಕದ ಬಗೆಗೆ ಅವರು ಒಪ್ಪಿದ್ದರು. ಇಂಡಿಯದಲ್ಲಿ ಆ ಪ್ರಶ್ನೆ ರೂಪಗೊಂಡಾಗಿಗೆ ಅವರು ತೀರಿಕೊಂಡಿದ್ದರು. ಇಷ್ಟನ್ನು ಮಾತ್ರ ನಾವು ಹೇಳಬಹುದು : ಗೋಖಲೆಯವರ ಮಾತಿಗೆ ಗಾಂಧಿಯವರು ಮನ್ನಣೆ ಕೊಡುತ್ತಿದ್ದಂತೆ ಗಾಂಧಿಯವರ ಮಾತಿಗೆ ಗೋಖಲೆಯವರು ಬೆಲೆ ಕೊಡುತ್ತಿದ್ದರು. ಅವರಿಬ್ಬರ ಸ್ನೇಹದಲ್ಲಿ ಯಾರನ್ನು ಯಾರು ಎಷ್ಟು

ಮಾತ್ರ ಮಾರ್ಪಡಿಸುತ್ತಿದ್ದರೋ ಊಹಿಸಲಾಗದು: ಇಬ್ಬರೂ ವಿರೋಧವಿಲ್ಲದೆ ಏಕೀಭವಿಸಿ ಕೆಲಸ ಮಾಡುತ್ತಿದ್ದರೆಂಬುದು ಖಂಡಿತ.

ಸ್ವಾತಂತ್ರ್ಯ ಸಂಪಾದನೆಯ ಪ್ರಶ್ನೆ ಈಗಿಲ್ಲ. ಈಗ ಉಳಿದಿರುವುದು ಒಳ್ಳೆಯ ಸರಕಾರವನ್ನು ಸಂಪಾದಿಸಿಕೊಳ್ಳುವ ಪ್ರಶ್ನೆ. ಇದನ್ನು ಬಗೆಹರಿಸಲು ಬೇಕಾದದ್ದು ವೀರಾವೇಶವಲ್ಲ, ಸಮಾಧಾನ ವಿವೇಕ. ವಿವೇಕ ಎರಡು ಕೆಲಸಗಳನ್ನು ಮಾಡುತ್ತದೆ. ಮೊದಲನೆಯದಾಗಿ. ದೇಶದಲ್ಲಿ ಎಂಥಾ ಏರ್ಪಾಟುಗಳು ನಡೆದರೆ ನಾನಾ ಜನವರ್ಗಗಳಿಗೂ ವೃತ್ತಿಗಳಿಗೂ ಪ್ರತ್ಯೇಕವಾಗಿ ಸಲ್ಲಬೇಕಾದ ನ್ಯಾಯಾಂಶಗಳಿಗೆ ಬಾಧೆ ಕಡಮೆಯಾಗುತ್ತದೆ—ಎಂಬ ವಿವೇಚನೆ. ಎರಡನೆಯದಾಗಿ, ನಮ್ಮ ಯೋಜನೆಗಳು ಜನದ ಸ್ವಭಾವಕ್ಕೆ ಎಷ್ಟುಮಟ್ಟಿಗೆ ಹೊಂದುತ್ತವೆ ಮತ್ತು ಜನಸ್ವಭಾವವನ್ನು ಹೇಗೆ ಹೇಗೆ ಮಾರ್ಪಡಿಸೀತು—ಎಂಬ ವಿವೇಚನೆ. ರಾಜ್ಯದ ನ್ಯಾಯ ವಿತರಣೆಯಲ್ಲಿ ಯಾರಿಗೂ ಹೆಚ್ಚು ದೊರೆಯಬೇಕಾದದ್ದಿಲ್ಲ. ಯಾರಿಗೂ ಕಡಮೆ ಬೀಳಬಾರದು. ನಮ್ಮ ಪ್ರಕೃತ ಯೋಜನೆ ಪೂರ್ವಾಪರ ಸಂದರ್ಭಗಳೆರಡಕ್ಕೂ ಸೇತುವೆಯಾಗಿರಬೇಕು. ಈ ಎರಡು ತೆರದ ವಿವೇಕವನ್ನು ಒಂದುಗೂಡಿರಬೇಕಾದದ್ದು ಉತ್ಸಾಹ. ವಿವೇಕವನ್ನು ಮೀರಿದ ಉತ್ಸಾಹ ಕುರುಡು ಕುದುರೆಯ ಓಟ. ಉತ್ಸಾಹವು ಸಹಜ ಪ್ರವೃತ್ತಿ. ವಿವೇಕವಾದರೋ ಪ್ರಯತ್ನಲಭ್ಯವಾದದ್ದು. ಅದರ ದಾರಿಯನ್ನು ಗೋಖಲೆಯವರು ತೋರಿಸಿದ್ದಾರೆ.

ಇಂಡಿಯಾದ ರಾಜಕೀಯ ಈ ಹೊತ್ತು ತೊಡಕುಕರಾರುಗಳ ಕಾಡಾಗಿದೆ. ನಾನಾ ಪಕ್ಷ ನಾನಾ ಕಕ್ಷಿಗಳು ಜನದ ಮನಸ್ಸನ್ನು ಹರಿದು ಹತ್ತೂ ಕಡೆ ಚದರಿಸಿವೆ. ಈ ಒಂದು ದಿನದ ವಾದವಿವಾದಗಳ ಗದ್ದಲದಲ್ಲಿ ನಾವು ಶಾಶ್ವತವಾದ ದೇಶವನ್ನು ಮರೆಯಲಾಗದು. ರಾಜ್ಯದ ರೂಪರಚನೆ ಹೇಗಾದರಿರಲಿ. ಜನ ಬದುಕಬೇಕೆಂಬುದು ಖಂಡಿತ. ಜನವನ್ನು ಕಾಪಾಡುವುದು ಸತ್ಯ. ವಿಧೇಯತೆ ಮತ್ತು ನ್ಯಾಯ ವಿಚಕ್ಷಣೆ. ಸತ್ಯದರ್ಶನದ ಮಾರ್ಗ ಹೇಗೆ, ನ್ಯಾಯಸಾಧನೆಯ ಮಾರ್ಗ ಹೇಗೆ ಎಂದು ಕೇಳುವಷ್ಟು ಧರ್ಮಶ್ರದ್ಧೆ ನಮ್ಮಲ್ಲಿ ಯಾರಿಗಾದರೂ ಇದ್ದರೆ ಅವರಿಗೆ ಗೋಖಲೆಯವರ ಸ್ಮರಣೆ ಕೈದೀವಿಗೆಯಾಗುತ್ತದೆ. (1951)

ಶ್ರೀನಿವಾಸಶಾಸ್ತ್ರಿಗಳು*

ಗಾಂಧಿಯುಗದ ಚರಿತ್ರಕಾರನು ಶ್ರೀನಿವಾಸಶಾಸ್ತ್ರಿಗಳನ್ನು ಮರೆಯಲಾರ. ಅವರಿಬ್ಬರೂ ಅಷ್ಟುಮಟ್ಟಿನ ಆಪ್ತಸ್ನೇಹಿತರು. ಇಬ್ಬರೂ ಸಮವಯಸ್ಕರು; ಬಹುಮಟ್ಟಿಗೆ ಸಮಾನ ಧರ್ಮಿಗಳು; ಒಬ್ಬರ ಬೆಲೆಯನ್ನು ಇನ್ನೊಬ್ಬರು ಅರಿತುಕೊಂಡಿದ್ದವರು; ಕಿಂಚಿತ್ತಾದ ಗುಣಭೇದದಿಂದ ಪರಸ್ಪರ ಪರಿಪೂರಕರಾಗಿದ್ದವರು. ಪ್ರಸಕ್ತವಾದ ಅಭಿಪ್ರಾಯವನ್ನು ನಾನಾ ದೃಷ್ಟಿಕೋನಗಳಿಂದ ಹಿಡಿದು ನೋಡಿ ಪರೀಕ್ಷಿಸುವುದರಲ್ಲಿಯೂ, ತಮ್ಮ ಬುದ್ಧಿ ಕಂಡದ್ದನ್ನು ಇತರರಿಗೆ ಸ್ಪಷ್ಟಪಡಿಸುವುದರಲ್ಲಿಯೂ ಶಾಸ್ತ್ರಿಗಳು ನಿಪುಣರು. ಈ ವಿಚಾರನಿಪುಣತೆಯ ಪ್ರಯೋಜನವನ್ನು ಬಹುಮತಿಸಿದ್ದವರು ಗಾಂಧಿಯವರು.

ಶಾಸ್ತ್ರಿಗಳವರ ಜೀವಿತ ಕಾಲ 1869 ರಿಂದ 1946ರವರೆಗೆ. ಆ ಎಪ್ಪತ್ತೇಳು ವರ್ಷಗಳ ಜೀವಿತವನ್ನು ನಾಲ್ಕು ಪಕ್ಕಗಳಿಂದ ನೋಡಬಹುದು. ಉಪಾಧ್ಯಾಯತನ, ರಾಜಕೀಯ, ಸಾಹಿತ್ಯ ಸರಸತೆ, ಸ್ನೇಹ ಸೌಜನ್ಯ—ಇವು ಆ ನಾಲ್ಕು ಪಕ್ಕಗಳು.

ಶಾಸ್ತ್ರಿಗಳು ತಮ್ಮ 18ನೆಯ ವರ್ಷದಲ್ಲಿ ಬಿ.ಎ. ಪಟ್ಟ ಪಡೆದರು—ಮೊದಲನೆಯ ತರಗತಿಯಲ್ಲಿ. ಇಂಗ್ಲಿಷು ಸಂಸ್ಕೃತ ಭಾಷೆಗಳಲ್ಲಿ ಪ್ರಥಮ ಸ್ಥಾನಕ್ಕೆ ಹತ್ತಿ, ಸಂಸ್ಕೃತ ಪಾಂಡಿತ್ಯಕ್ಕಾಗಿ ಗೊತ್ತಾದ ಚಿನ್ನದ ಪದಕವನ್ನು ಗದ್ದರು.

ಶಾಸ್ತ್ರಿಗಳ ತಂದೆ ಶಂಕರನಾರಾಯಣ ಶಾಸ್ತ್ರಿಗಳು ತಮ್ಮ ಮಗ ಸಂಸ್ಕೃತದಲ್ಲಿ ಗಣ್ಯತೆ ಸಂಪಾದಿಸಿದ ಸಂತೋಷಕ್ಕಾಗಿ ಒಂದು ಮಿತ್ರ ಸಂತರ್ಪಣೆಯನ್ನು ಏರ್ಪಡಿಸಿದರು. ಅದಕ್ಕೆ ಬಂದಿದ್ದ ಅತಿಥಿಗಳು ವಿದ್ವಾಂಸರು. ಅವರಲ್ಲೊಬ್ಬರು ಭೋಜನ ಕಾಲದಲ್ಲಿ ಒಂದು ಶ್ಲೋಕ ಹೇಳಿದರು :

---

* 22–9–1956 ರಂದು ಬೆಂಗಳೂರು 'ಆಕಾಶವಾಣಿ'ಯಿಂದ ಪ್ರಸಾರವಾದ ಭಾಷಣ. (ಪ್ರಸಾರ ಭಾಷಣದ ಕಾಲಾವಧಿಯ ನಿಬಂಧನೆಗೆ ಒಳಪಟ್ಟು ಮೂಲಲಿಖಿತದಲ್ಲಿ ಬಿಟ್ಟುಬಿಟ್ಟಿದ್ದ ಭಾಗಗಳನ್ನು ಇಲ್ಲಿ ಉಳಿಸಿಕೊಂಡಿದೆ.)

ಯದ್ದ್ವ್ಯಕ್ಷರಂ ನಾಮ ಗಿರೇರಿತಂ ನೃಣಾಮ್ ।
ಸಕೃತ್ಪ್ರಸಂಗಾದಘಮಾಶು ಹಂತಿ ತತ್ ॥
ಜಗತ್ಪ್ರಭುಂ ದೇವಮಲಂಘ್ಯ ಶಾಸನಂ ।
ಭವಾನಹೋ ದ್ವೇಷ್ಟಿ ಶಿವಂ ಶಿವೇತರಃ ॥

ಇದು ಒಂದು ಪುರಾಣ ಶ್ಲೋಕ, ದಕ್ಷನನ್ನು ಕುರಿತು ದಾಕ್ಷಾಯಿಣಿ ಆಡಿದ ಮಾತಂತೆ !

ಶ್ರೀನಿವಾಸಶಾಸ್ತ್ರಿಗಳು ಆ ಶ್ಲೋಕವನ್ನು ಕೇಳಿ, ಅದನ್ನು ಮತ್ತೊಮ್ಮೆ ಹೇಳಬೇಕೆಂದರು. ಹಾಗೆ ಹೇಳಿದ್ದಾದಮೇಲೆ ಅದರಲ್ಲಿ 'ನಾಮ' ಎಂಬುದಕ್ಕೂ 'ಶಿವಂ' ಎಂಬುದಕ್ಕೂ ಅನ್ವಯ ಹೇಗೆ ಎಂದು ಪ್ರಶ್ನೆ ಮಾಡಿದರು. ಶ್ಲೋಕ ಹೇಳಿದವರು ಹೇಳಿದ ಸಮಾಧಾನವನ್ನು ಹುಡುಗ ಶಾಸ್ತ್ರಿಗಳು ಒಪ್ಪಲಿಲ್ಲ. ವಾದ ಕೊಂಚ ಬೆಳೆಯಿತು. ಅದು ಹಿರಿಯ ಶಾಸ್ತ್ರಿಗಳಿಗೆ ತಪ್ಪಾಯಿತು. ಅವರು ಮಗನನ್ನು ಕುರಿತು— "ಬ್ರಾಹ್ಮಣರಿಗೆ ತೇಜೋವಧೆ ಮಾಡುವುದೆಂಥಾ ಪಾಂಡಿತ್ಯ?" ಎಂದು ಕೋಪದಿಂದ ನುಡಿದರು. ಶ್ರೀನಿವಾಸಶಾಸ್ತ್ರಿಗಳು ಈ ಕಥೆಯನ್ನು ನನಗೆ ಹೇಳಿ,—"ಅಂದಿನಿಂದ ನಾನು ಇನ್ನೊಬ್ಬರ ವ್ಯಾಕರಣದ ಗೋಜಿಗೆ ಹೋಗುವುದಿಲ್ಲ" ಎಂದು ಪಶ್ಚಾತ್ತಾಪದ ಮಾತನ್ನಾಡಿದರು. ನಾನು—"ಹಾಗಾದರೆ ನೀವು ಮೊನ್ನೆತಾನೆ ಗಾಂಧಿಯವರ ಬರವಣಿಗೆಯನ್ನು ತಿದ್ದಿದ್ದೇನು?" ಎಂದೆ. ಅವರು—"ನನ್ನ ಕಸಬು ಉಪಾಧ್ಯಾಯತನವಲ್ಲವೆ?" ಎಂದರು. ಹೌದು. ಅವರು ಹುಟ್ಟಿನಿಂದ ಉಪಾಧ್ಯಾಯರು; ಎಲ್ಲರ ವ್ಯಾಕರಣಗಳನ್ನೂ ತಿದ್ದುತ್ತಿದ್ದವರು. ವ್ಯಾಕರಣವೆಂದರೆ ಮೊದಲು ಮನಸ್ಸು ಬುದ್ಧಿಗಳ ಕಾರ್ಯವನ್ನು ಪರಿಷ್ಕಾರಪಡಿಸುವ ಕ್ರಮ. ಎರಡನೆಯದಾಗಿ ಆ ಮನೋಬುದ್ಧಿ ಕಾರ್ಯಗಳಿಗೆ ತಕ್ಕಂತೆ ಮಾತನ್ನೂ ನಡವಳಿಕೆಯನ್ನೂ ಜೋಡಿಸುವ ಕ್ರಮ. ಮನೋವಾಕ್ಕರ್ಮಗಳ ಶೋಧನೆ ಯೋಜನೆಗಳೇ ವ್ಯಾಕರಣ. ಅದು ಶಾಸ್ತ್ರಿಗಳಿಗೆ ದೇವರು ಕೊಟ್ಟಿದ್ದ ವರ.

ಶ್ರೀನಿವಾಸಶಾಸ್ತ್ರಿಗಳು ಇಪ್ಪತ್ತು ವರ್ಷ ಉಪಾಧ್ಯಾಯವೃತ್ತಿಯಲ್ಲಿದ್ದರು. ಆ ಕಾಲದಲ್ಲಿ ದಕ್ಷಿಣ ದೇಶದಲ್ಲಿ ಸರಕಾರದ ವಿದ್ಯಾಶಾಲೆಗಳು ಅಪರೂಪ. ಇದ್ದ ಶಾಲೆಗಳು ಬಹುಮಟ್ಟಿಗೆ ಖಾಸಗಿಯವು. ಅವು ಪ್ರಾಯಶಃ ಟೀಚರ್-ಮ್ಯಾನೇಜರ್ ಪದ್ಧತಿಯವು—ಎಂದರೆ, ಉಪಾಧ್ಯಾಯನೇ ಪಾಠಶಾಲೆಯ ಮಾಲೀಕನೂ ಆಗಿದ್ದುಕೊಂಡು ವಿದ್ಯಾರ್ಥಿಗಳಿಂದ ಬಂದ ವರಮಾನವನ್ನು ತನ್ನ ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು. ಸಹಾಯೋಪಾಧ್ಯಾಯರಿಗೆ ಸರಿಯಾದ ಸಂಬಳ ಸಲ್ಲಿಸದೆ ಕಾಟವಿಟ್ಟು, ಅವರು ಬಿಟ್ಟು ಹೋಗದಿರುವಂತೆ ಚೌಕಾಶಿಮಾಡಿ ಒಂದಿಷ್ಟು ಕೂಲಿ ಕೊಡುವುದು. ಈ ಪದ್ಧತಿಯನ್ನು ಶ್ರೀನಿವಾಸಶಾಸ್ತ್ರಿಗಳು ರಂಗುರಂಗಾಗಿ ವರ್ಣಿಸುತ್ತಿದ್ದರು. ಒಂದಾನೊಂದೂರಿನಲ್ಲಿಯ ಬಡ ಉಪಾಧ್ಯಾಯರು ಶಾಲಾ ಮಾಲೀಕನ ಅನ್ಯಾಯಗಳನ್ನು ಸಹಿಸಲಾರದೆ ಕೊತ್ತುಕಾರ ಪಂಜು ಎಂಬ ಪುಂಡನಾಯಕನನ್ನು ಮರೆಹೊಕ್ಕರಂತೆ. ಕೊತ್ತುಕಾರ ಎಂದರೆ ಹೆಣ ಹೊರುವವ. ಆ ಪಂಜುವೆಂಬಾತನು ಪುಂಡುಪಡೆ ಕಟ್ಟಿಕೊಂಡು

ಶಾಲೆಯ ಮಾಲೀಕನ ಬಳಿಗೆ ಹೋಗಿ ಹೆದರಿಸುವವರೆಗೂ ಆ ದೊಡ್ಡಮನುಷ್ಯ ನ್ಯಾಯದ ದಾರಿಗೆ ಬಾರದೆ ಹೋದನಂತೆ! ಅಂಥಾ ಕಾಲದಲ್ಲಿ ಉದ್ಯೋಗ ಪ್ರಾರಂಭ ಮಾಡಿದವರು ಶ್ರೀನಿವಾಸಶಾಸ್ತ್ರಿಗಳು. ಹನ್ನೆರಡು ವರ್ಷ ಅವರು ತಮ್ಮ ಜನ್ಮಸ್ಥಳ ವಾದ ಕುಂಭಕೋಣದಲ್ಲಿಯೂ, ಮಾಯವರ, ಶಾಲ್ಯ ಮುಂತಾದ ಕಡೆಗಳಲ್ಲಿಯೂ ಬೋಧಕರಾಗಿ ಕೆಲಸಮಾಡಿ ಸಮರ್ಥರೆಂದು ಹೆಸರಾದರು. ಅವರು ಪಾಠ ಹೇಳು ತ್ತಿದ್ದ ಭಾಗ ವಿಶೇಷವಾಗಿ ಇಂಗ್ಲಿಷ್ ಭಾಷೆ ಸಾಹಿತ್ಯಗಳು.

ಅವರ ಕೀರ್ತಿ ಚಿರಸ್ಥಾಯಿಯಾದದ್ದು ಮದ್ರಾಸಿನ ತಿರುವಳ್ಳಿಕೇಣಿಯಲ್ಲಿರುವ ಹಿಂದೂ ಹೈಸ್ಕೂಲಿನಲ್ಲಿ. ಅಲ್ಲಿ ಅವರು ಮುಖ್ಯೋಪಾಧ್ಯಾಯರಾಗಿದ್ದದ್ದು ಎಂಟು ವರ್ಷ. ಆಗ ಅವರ ಶಿಷ್ಯರಾಗಿದ್ದವರಲ್ಲಿ ಬಹುಮಂದಿ ಆ ತರುವಾಯ ಅವರವರ ಜೀವನಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿ, ಶಾಸ್ತ್ರಿಗಳ ಯಶೋಮಂಟಪಕ್ಕೆ ಸ್ತಂಭದಂತಿದ್ದಾರೆ. ಪಾಠಪ್ರವಚನ ಮತ್ತು ಸಂಸ್ಥಾನಿರ್ವಾಹ—ಈ ಎರಡು ಭಾಗಗಳಲ್ಲಿಯೂ ಶಾಸ್ತ್ರಿಗಳು ಸಮಾನವಾದ ದಕ್ಷತೆಯುಳ್ಳವರು.

ಅವರು ತಮ್ಮ ಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದರಲ್ಲಿ ವಿಚಕ್ಷಣೆ ತೋರುತ್ತಿದ್ದರು. ಬಂದ ಹುಡುಗನನ್ನು ಮೊದಲು ಪರೀಕ್ಷಿಸಿ ಯೋಗ್ಯತೆ ಕಂಡು ಹಿಡಿಯದೆ ಅವನಿಗೆ ಪ್ರವೇಶ ಕೊಡುತ್ತಿರಲಿಲ್ಲ. ಒಂದು ಸಾರಿ ಆಂಧ್ರದಿಂದ ಒಬ್ಬ ಹುಡುಗ— "ಫೋರ್ತ್ ಫಾರಂ" ಎಂಬ ನಾಲ್ಕನೆಯ ಇಯತ್ತೆಗೆ ಸೇರಲು ಬಂದನಂತೆ. ಶಾಸ್ತ್ರಿಗಳು ಅವನನ್ನು ಕುರಿತು ಇಂಗ್ಲಿಷಿನಲ್ಲಿ—"ನೀವು ದಯಮಾಡಿ 'Had it not been' ಎಂಬ ಪದಸಂಧಿಯನ್ನು ಒಂದು ವಾಕ್ಯದಲ್ಲಿ ಜೋಡಿಸಿ ಹೇಳುವಿರಾ?" ಎಂದು ಕೇಳಿದರು. ಅವನು ಒಡನೆಯೆ—"Had it not been that you are the Headmaster here, I would not have come to this school"—"ತಾವು ಇಲ್ಲಿ ಮುಖ್ಯೋಪಾಧ್ಯಾಯರೆಂಬುದಿಲ್ಲದೆ ಹೋಗಿದ್ದಿದ್ದರೆ ನಾನು ಈ ಶಾಲೆಗೆ ಬರುತ್ತಿರಲಿಲ್ಲ" ಎಂದು ಉತ್ತರ ಕೊಟ್ಟನಂತೆ. ಶಾಸ್ತ್ರಿಗಳು ನಸುನಕ್ಕು ತಮ್ಮ ಸಹಾಯೋಪಾಧ್ಯಾಯರನ್ನು ಕರೆದು— "ಅಯ್ಯಾ, ಇವನಿಗೆ ಮೊದಲು ಜಾಗ ಕೊಡಿ. ಇಂಥವನನ್ನು ನಾವು ಬಿಡಬಾರದು" ಎಂದರಂತೆ.

ಬೆಂಗಳೂರಿನಲ್ಲಿ ಒಬ್ಬ ದೊಡ್ಡ ವಕೀಲರು ಶಾಸ್ತ್ರಿಗಳ ಬಳಿ ಬಂದು—"ಸ್ವಾಮಿ, ನನ್ನ ಅಳಿಯ ತಮ್ಮ ಶಿಷ್ಯ. ಆತನ ಮಗಳಿಗೆ ನಾಳೆ ಮದುವೆ. ತಾವು ಬಂದು ಆಶೀರ್ವದಿಸಬೇಕು" ಎಂದು ಬೇಡಿದರು. ಅದರಂತೆ ಶಾಸ್ತ್ರಿಗಳು ಮದುವೆಯ ಮನೆಗೆ ಹೋದರು. ಅಲ್ಲಿ ಮದುಮಗಳ ತಂದೆ—ಆತನೂ ವಕೀಲ—ಶಾಸ್ತ್ರಿಗಳನ್ನು ಮರ್ಯಾದೆಯಿಂದ ಬರಮಾಡಿಕೊಂಡು ಮಾತನಾಡಿಸಿದ. ಶಾಸ್ತ್ರಿಗಳು—"ನೀವು ಹಿಂದೂ ಹೈಸ್ಕೂಲಿನಲ್ಲಿದ್ದಿರಾ?" ಎಂದರು. ಆತ—"ಹೌದು. ಇಪ್ಪತ್ತೈದು ವರ್ಷಗಳ ಹಿಂದೆ ನಾನು ತಮ್ಮ ಕ್ಲಾಸಿನಲ್ಲಿದ್ದೆ. ಇಂಗ್ಲಿಷ್ ಉಚ್ಚಾರಣೆ ತಪ್ಪಿದ್ದಕ್ಕಾಗಿ ಕಿವಿ ಹಿಂಡಿಸಿಕೊಂಡದ್ದು ಇನ್ನೂ ಜ್ಞಾಪಕವಿದೆ" ಎಂದ. ಶಾಸ್ತ್ರಿಗಳು— "ಹೌದು

ಸಾರ್, ಆಗ ನನಗೆ ಈಗಿನಷ್ಟು ತಾಳ್ಮೆಯಿರಲಿಲ್ಲ. ಅಂಥಾ ಅಪರಾಧಗಳನ್ನು ಎಷ್ಟು ಮಾಡಿದ್ದೇನೋ ! ಅದರ ಪರಿಹಾರಕ್ಕೆ ಈಗ ಏನು ಮಾಡಿದರಾದೀತು ? ನಿಮ್ಮ ಮಗಳಮದುವೆಯಲ್ಲಿ ನಿಮ್ಮ ಕ್ಷಮೆಯನ್ನು ನನಗೆ ಗುರುದಕ್ಷಿಣೆಯಾಗಿ ಕೊಡ ಲಾರಿರಾ ? " ಎಂದು ಲಘುಹಾಸ್ಯದಲ್ಲಿ ಬೇಳಾಡಿದರು.

ಶಾಸ್ತ್ರಿಗಳು ಶಿಷ್ಯರಿಗೆ ಬೆತ್ತ ತೋರಿಸುತ್ತಿದ್ದದ್ದೂ ಉಂಟಂತೆ— ಆದರೆ ಅಪರೂಪವಾಗಿ. ಹಾಗೆಯೇ ಅವರೊಡನೆ ಆಟವಾಡುತ್ತಿದ್ದದ್ದೂ ಉಂಟು. ಕಾವ್ಯ ಪಾಠದಿಂದ ಶಿಷ್ಯರನ್ನು ಕುಣಿಸುತ್ತಿದ್ದರು. ಅವರೂ ಮೈಸೂರಿನಲ್ಲಿ ವಿದ್ಯಾಇಲಾಖೆ ಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರಾಗಿದ್ದು ಕೀರ್ತಿಪಡೆದ ಡಿ. ವೆಂಕಟರಾಮಯ್ಯನವರೂ ಎಲ್. ಟಿ. ಎಂಬ ಶಿಕ್ಷಣ ವಿದ್ಯಾವ್ಯಾಸಂಗದಲ್ಲಿ ಸಹಾಧ್ಯಾಯಿಗಳಾಗಿದ್ದರು. ಆಗ ಇಬ್ಬರಿಗೂ ಸ್ನೇಹ ಮೊಳೆತು. ಕಡೆಯುವರೆಗೂ ಬೆಳೆದು ಬಂತು.

ಆ ದಿನಗಳಲ್ಲಿ ಒಬ್ಬ ಪ್ರಸಿದ್ಧ ಇಂಗ್ಲಿಷ್ ನಟನು ಮದ್ರಾಸಿಗೆ ಬಂದು ಷೇಕ್ಸ್‌ಪಿಯರ್‌ನ ನಾಟಕಗಳನ್ನಾಡಿ‧ ತೋರಿಸುತ್ತಿದ್ದ. ಶ್ರೀನಿವಾಸಶಾಸ್ತ್ರಿಗಳು ಆತನ ವಾಗಭಿನಯಗಳ ರೀತಿಯನ್ನು ಕುತೂಹಲದಿಂದ ವ್ಯಾಸಂಗಮಾಡಿ. ಬಳಿಕ ತಮ್ಮ ಶಿಷ್ಯ ರಿಂದ ಒಂದೆರಡು ಷೇಕ್ಸ್‌ಪಿಯರ್ ನಾಟಕಗಳನ್ನಾಡಿಸಿದರು. ಹೀಗೆ ಪರೀಕ್ಷೆ ಶಿಕ್ಷೆ ಗಳಲ್ಲಿ ಚುರುಕಾಗಿದ್ದರೂ ವಾತ್ಸಲ್ಯ ವಿನೋದಗಳಲ್ಲಿ ಶಿಷ್ಯರಿಗೆ ಒಡನಾಡಿಯಾಗಿದ್ದವರು ಶ್ರೀನಿವಾಸಶಾಸ್ತ್ರಿಗಳು.

1900ರ ಸುಮಾರಿನಲ್ಲಿ ಶಾಸ್ತ್ರಿಗಳು "ಎಜ್ಯುಕೇಷನಲ್ ರೆವ್ಯೂ" ಎಂಬ ವಿದ್ಯಾವಿಷಯಕ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಆಗ ನೆಸ್‌ಫೀಲ್ಡ್ ಎಂಬ ಇಂಗ್ಲಿಷ್ ವೈಯಾಕರಣ ಬರೆದ ಇಂಗ್ಲಿಷ್ ವ್ಯಾಕರಣ ಗ್ರಂಥವನ್ನು ಮ್ಯಾಕ್‌ಮಿಲನ್ ಕಂಪನಿಯವರು ಪ್ರಕಟಿಸಿದ್ದರು. ಆ ಗ್ರಂಥ ಪಾಠಾನುಕ್ರಮವಾದ ನಾಲ್ಕು ಸಂಪುಟ ಗಳುಳ್ಳದ್ದು. ಅದನ್ನು ಶಾಸ್ತ್ರಿಗಳ ಪತ್ರಿಕೆ ವಿಮರ್ಶೆಮಾಡಿ, ಅದರಲ್ಲಿಯ ಅಸಂಬದ್ಧ ಗಳನ್ನು ತೋರಿಸಿತು. ಮುಖ್ಯವಾಗಿ " ಷಲ್ " " ವಿಲ್ " ಎಂಬ ಆಖ್ಯಾತ ಪ್ರತ್ಯಯಗಳ ರೂಪಾಂತರಗಳ ಪ್ರಯೋಗದಲ್ಲಿ ನೆಸ್‌ಫೀಲ್ಡ್‌ನು ಎಡವಿದ್ದು ಹೊರಕ್ಕೆ ಬಂತು. ಅದರ ಮೇಲೆ ಚರ್ಚೆ ಎದ್ದಿತು. ನೆಸ್‌ಫೀಲ್ಡ್‌ನ ಪರವಾಗಿ ಒಬ್ಬರಿಬ್ಬರು ಇಂಗ್ಲಿಷ್ ಪ್ರೊಫೆಸರುಗಳು ನಿಂತರು. ಶಾಸ್ತ್ರಿಗಳು, ಪಚ್ಚೆಯಪ್ಪ ಕಾಲೇಜಿನ ಕೆ. ಬಿ. ರಾಮ ನಾಥಯ್ಯರವರು. ಪ್ರಮಕೋಟೆಯ ಬಿ. ವಿ. ಕಾಮೇಶ್ವರಯ್ಯರವರು. ಕಾಮಾಕ್ಷಿ ನಟರಾಜನ್ ಅವರು ಎದುರುಸಾಲಿನಲ್ಲಿ ನಿಂತರು. ಇಂಗ್ಲಿಷ್ ವ್ಯಾಕರಣ ಪ್ರಕ್ರಿಯಾ ಪ್ರಯೋಗದ ವಿಚಾರದಲ್ಲಿ ಇಂಗ್ಲೆಂಡಿನ ಇಂಗ್ಲಿಷ್ ಪಂಡಿತರೊಡನೆ ಮದ್ರಾಸಿನ ಇಂಗ್ಲಿಷ್ ಅಯ್ಯರ್ ಪಂಡಿತರು ಕುಸ್ತಿಯಾಡಿದ್ದು ಜನಕ್ಕೆ ಒಳ್ಳೆಯ ವಿಸ್ಮಯ ಪ್ರಕರಣವಾಯಿತು.

ಶಾಸ್ತ್ರಿಗಳ ರಾಜಕೀಯವನ್ನು ಕುರಿತು ಇಲ್ಲಿ ಈಗ ಹೆಚ್ಚಾಗಿ ಹೇಳಬೇಕಾಗಿಲ್ಲ. ಅವರು ಮದ್ರಾಸಿನಲ್ಲಿ ನೆಲಸುವ ವೇಳೆಗೆ ಕಾಂಗ್ರೆಸ್ ಸಂಸ್ಥೆ ದೇಶದಲ್ಲಿ ಬೇರೂರಿತ್ತು.

ಅವರ ವಾರ್ಷಿಕ ಪರಿಷತ್ತುಗಳಲ್ಲಿಯೂ ಸ್ಥಳೀಯ ಶಾಖೆಗಳಲ್ಲಿಯೂ ಶಾಸ್ತ್ರಿಗಳು ಭಾಗವಹಿಸುತ್ತಿದ್ದರು. ಕಾಂಗ್ರೆಸ್ ಸ್ವಯಂಸೇವಕ ದಳಕ್ಕೆ ನಾಯಕರಾಗಿರುತ್ತಿದ್ದರು. ಅವರು 1907ರಲ್ಲಿ ಉಪಾಧ್ಯಾಯತ್ವದಿಂದ ನಿವೃತ್ತರಾಗಿ ಗೋಖಲೆಯವರ ದೇಶ ಸೇವಕ ಸಂಘವನ್ನು ಸೇರಿದರು. ದೇಶದಾದ್ಯಂತ ಸಂಚಾರಮಾಡಿ, ಸ್ವರಾಜ್ಯತತ್ತ್ವಕ್ಕಾಗಿ ಪ್ರಚಾರ ನಡಸಿದರು. 1915ರಲ್ಲಿ ಗಾಂಧಿಯವರು ಇಂಡಿಯಕ್ಕೆ ಬಂದಾಗ ಗೋಖಲೆಯವರು ಶಾಸ್ತ್ರಿಗಳನ್ನು ಗಾಂಧಿಯವರಿಗೆ ಕಾರ್ಯದರ್ಶಿಯಂತೆ ಇರಲು ನಿಯಮಿಸಿದರು. ಆಗ ಶಾಸ್ತ್ರಿ ಗಾಂಧಿಗಳಿಗೆ ಪರಸ್ಪರ ಪರಿಜ್ಞಾನವೂ ಬಳಕೆಯೂ ಬೆಳೆದವು. 1918ರಲ್ಲಿ ಮಾಂಟೆಗು ಸುಧಾರಣೆಗಳ ವಿಚಾರದಲ್ಲಿ ಅಭಿಪ್ರಾಯ ಭೇದದ ಕಾರಣದಿಂದ ಶಾಸ್ತ್ರಿಗಳು ಕಾಂಗ್ರೆಸನ್ನು ಬಿಟ್ಟರು. ಆದರೆ ಶಾಸ್ತ್ರಿ ಗಾಂಧಿಗಳು ಒಬ್ಬರನ್ನೊಬ್ಬರು ಎಂದೂ ಬಿಡಲಿಲ್ಲ.

ಶಾಸ್ತ್ರಿಗಳಿಗೂ ಗಾಂಧಿಯವರಿಗೂ ದೇಶ ಸ್ವಾತಂತ್ರ್ಯದ ಆವಶ್ಯಕತೆಯನ್ನು ಕುರಿತು ಅಭಿಪ್ರಾಯ ಬೇರೆಯಾಗಿರಲಿಲ್ಲ. ಅವರಿಗೆ ತಕರಾರಿದ್ದದ್ದು ಸತ್ಯಾಗ್ರಹ ಮಾರ್ಗದ ಉಪಯುಕ್ತತೆಯ ವಿಷಯದಲ್ಲಿ. ಶಾಸ್ತ್ರಿಗಳ ಪ್ರತಿವಾದದ ಮುಖ್ಯಾಂಶಗಳು ಮೂರು.

(1) ಹಟದ ಪ್ರಯತ್ನ ಜನತೆಯನ್ನು ಉದ್ರೇಕಪಡಿಸುತ್ತದೆ. ಅದು ದೊಂಬಿ ದಂಗೆಗೆ ದಾರಿಮಾಡುತ್ತದೆ. ಹಾಗೆ ಅದು ಸರಕಾರದ ಆಗ್ರಹಕ್ಕೆ ನವವಾಗುತ್ತದೆ. ಸರಕಾರದ ತಂತ್ರ ಜನವನ್ನು ಇಬ್ಭಾಗವಾಗಿ ಒಡೆಯುತ್ತದೆ. ಈ ರೀತಿಯಲ್ಲಿ ಉದ್ದೇಶಭಂಗವಾಗಿ ಅನಿಷ್ಟ ಒದಗುತ್ತದೆ.

(2) ಕಾನೂನು ಮುರಿಯುವ ಯೋಚನೆಯಿಂದ ಜನಕ್ಕೆ ಶಾಸನ ವಿಧೇಯತೆಯ ಅಭ್ಯಾಸ ತಪ್ಪಿಹೋಗುತ್ತದೆ. ಶಾಸನ ವಿಧೇಯತೆಯೇ ರಾಜ್ಯಕ್ಕೂ ಸಮಾಜಕ್ಕೂ ಇರುವ ಮೊದಲನೆಯ ಬಲ. ಅದನ್ನು ದೇಶ ಕಳೆದುಕೊಂಡರೆ ಮತ್ತೆ ಅದನ್ನು ಸ್ಥಾಪಿಸುವುದು ಕಷ್ಟ. ಎಲ್ಲ ಪ್ರಸಂಗಗಳಿಗೂ ಜನ ಮುಷ್ಕರದ ಶಪಥವನ್ನೇ ಹೂಡಿ ರಗಳೆ ಮಾಡಿಯಾರು. ಅದರಿಂದ ಪ್ರಜಾಜೀವನದ ನೆಮ್ಮದಿಗೆ ಭಂಗ ಬರುತ್ತದೆ.

(3) ಸ್ವಾತಂತ್ರ್ಯಕ್ಕೆ ಒಂದು ತಯಾರಿ ಅವಶ್ಯ. ನಮ್ಮ ಜನತೆ ಅಂಥಾ ಸಿದ್ಧತೆಯನ್ನು ಮಾಡಿಕೊಂಡಿಲ್ಲ. ರಾಜಕೀಯಕ್ಕೆ ಬೇಕಾಗಿರುವ ಶಿಕ್ಷಣವು ಕ್ರಮ ಕ್ರಮವಾದ ಅಭ್ಯಾಸದಿಂದಲೇ ಬರತಕ್ಕದ್ದು, ಆತುರದಿಂದ ನೆನಸಿಕೊಂಡಾಗ ಹುಟ್ಟತಕ್ಕದ್ದಲ್ಲ. ಪ್ರಜಾಸಂಸ್ಥೆಗಳು ನಮಗೆ ರೂಢಿಯಾಗುವುದಕ್ಕೂ ಪ್ರಜಾರಾಜ್ಯ ಪದ್ಧತಿಯ ಮರ್ಯಾದೆಗಳನ್ನು ನಾವು ಕಲಿತುಕೊಳ್ಳುವುದಕ್ಕೂ ಕಾಲಾವಕಾಶ ಬೇಕು. ನಾವು ಅಂತಸ್ಸ್ವಂತಸ್ವಾಗಿ ಬೆಳೆಯಬೇಕು. ಆ ಆತ್ಮಶಿಕ್ಷಣದಿಂದ ನಮ್ಮ ಒಳ ಸತ್ತ್ವ ಬೆಳೆಯಿತೆಂದರೆ. ಆಗ ಸ್ವಾತಂತ್ರ್ಯ ತಾನಾಗಿ ನಮ್ಮದಾಗುತ್ತದೆ. ಹಾಗಲ್ಲದೆ ಹಠಾತ್ತಾಗಿ ಬಂದ ಸ್ವಾತಂತ್ರ್ಯ ನೆಲಸಿ ನಿಲ್ಲುವುದೂ ಫಲಕ್ಕೆ ಬರುವುದೂ ಕಷ್ಟ.

ಈ ಬಗೆಯದು ಶಾಸ್ತ್ರಿಗಳ ಆಲೋಚನೆ. ಅದರಲ್ಲಿ ತಥ್ಯಾಂಶವಿಲ್ಲದಿಲ್ಲವೆಂಬುದು ನಮ್ಮ ಈಚೀಚಿನ ಅನುಭವದಿಂದ ಸ್ಪಷ್ಟಪಡುತ್ತಿದೆ.

ಶಾಸ್ತ್ರಿಗಳು ಬೀದಿಕೂಗನ್ನು ಭಗವದ್ವಾಣಿಯೆಂದಿದ್ದವರಲ್ಲ. ಜನ ಭ್ರಾಂತಿ ಹೋಗುವುದುಂಟು, ಆವೇಶಾಂಧರಾಗುವುದುಂಟು, ಪ್ರಮಾದವಶರಾಗುವುದುಂಟು. ಆದದ್ದರಿಂದ ಪ್ರಜಾಸಂಖ್ಯೆಯೇ ಪ್ರಮಾಣಶಾಸ್ತ್ರವಾಗಲಾರದು. ನಮಗೆ ಒಂದು ಮೂಲೆಯಿಂದ ಕಾಣಬಂದದ್ದನ್ನು ನಾವು ಇನ್ನೊಂದು ಮೂಲೆಯಿಂದ, ಮತ್ತೊಂದು ಮೂಲೆಯಿಂದ ನೋಡಿ ಪರಿಶೀಲಿಸಬೇಕು. ವಿಮರ್ಶನೆ ಪುನರ್ವಿಮರ್ಶನೆಗಳಿಂದಲೇ ಸತ್ಯಪ್ರಾಪ್ತಿ—ಹೀಗೆಂಬುದು ಶಾಸ್ತ್ರಿಗಳ ಮತ. ಆದಕಾರಣ ಅವರು ಎಲ್ಲವನ್ನೂ ತಳಮುಟ್ಟಿ ಶೋಧಿಸುತ್ತಿದ್ದರು. ಸ್ವಪಕ್ಷ ಪ್ರತಿಪಾದನೆಗೆ ಮುಂಚೆ ಅನ್ಯಪಕ್ಷ ಪರ್ಯಾಲೋಚನೆ ಕರ್ತವ್ಯ ; ಪ್ರತಿಕಕ್ಷಿಯ ವಾದದಲ್ಲಿ ಗುಣವೆಷ್ಟಿದೆ, ಬಲವೆಷ್ಟಿದೆ ಎಂದು ವಿಚಾರ ಮಾಡದೆ ಇರುವ ಕಕ್ಷಿ ಅಪಾಯಕರವೆಂದು ಅವರ ನಂಬಿಕೆ. ಶಾಸ್ತ್ರಿಗಳ ವಿಚಾರಶ್ರದ್ಧೆ ಹೀಗಿದ್ದದ್ದರಿಂದ ಅವರ ಅಭಿಪ್ರಾಯಕ್ಕೆ ಗಾಂಧಿಯವರು ತುಂಬ ಬೆಲೆ ಕೊಡುತ್ತಿದ್ದರು. ಅವರನ್ನು ಕೇಳದೆ ಮಹಾತ್ಮರು 'ಯಾವ ದೊಡ್ಡ ಪ್ರಯತ್ನಕ್ಕೂ ಮನಸ್ಸು ಮಾಡುತ್ತಿರಲಿಲ್ಲ. ಅವರು ಹೇಳಿದ್ದನ್ನೆಲ್ಲ ಒಪ್ಪಿಕೊಂಡರೋ ?—ಎಂಬ ಪ್ರಶ್ನೆ ತಕ್ಕದ್ದಲ್ಲ. ಇತರರ ಅಭಿಪ್ರಾಯವನ್ನು ಆಲೋಚಿಸಬೇಕೆಂಬುದು ಸಂಗತವೇ ಹೊರತು ಅಂಗೀಕರಿಸಬೇಕೆಂಬುದಲ್ಲ. ಅಂಗೀಕಾರ ಅಂತಸ್ಸಾಕ್ಷಿಯ ತೀರ್ಮಾನದಂತೆ. ಆದರೆ ಆಲೋಚನೆಯಿಲ್ಲದ ತೀರ್ಮಾನ ಕುರುಡು ಹೆಜ್ಜೆಯೇ ಸರಿ. ಗಾಂಧಿಯವರ ಸತ್ಯಪ್ರೀತಿ ಅಂಥಾ ವಿಚಾರಶೂನ್ಯತೆಯನ್ನು ಸಹಿಸುತ್ತಿರಲಿಲ್ಲ.

ಸ್ವತಂತ್ರ ವಿಚಾರದ ಜೊತೆಗೆ ವಾಗ್ವಿಶದತೆ ಶಾಸ್ತ್ರಿಗಳಲ್ಲಿ ಸೇರಿತ್ತು. ಪ್ರಶ್ನೆ ಎಷ್ಟು ತೊಡಕಿನದಾಗಿದ್ದರೂ ಅದರ ಗಂಟುಗಳನ್ನು ಸಡಲಿಸಿ ನೂಲಿನ ಎಳೆಗಳನ್ನು ಬಿಡಿಸಿ ತೋರಿಸುವ ಸಾಮರ್ಥ್ಯ ಅವರ ಟೀಕೆಯದು. ನೂಲಿನ ಹೊಕ್ಕು ಕೊಂಕುಗಳನ್ನು ತೋರಿಸಿದರೆ ಗಂಟನ್ನು ಬಿಡಿಸುವ ದಾರಿಯನ್ನು ತೋರಿಸಿದಂತೆಯೇ ಅಲ್ಲವೆ ? ಹಾಗೆ ಒಂದು ವಿಷಯದ ಅಂತಸ್ಸ್ವರೂಪವನ್ನು ತೋರಿಸಿಕೊಡಲು ಸೂಕ್ಷ್ಮವಾದ ಬುದ್ಧಿದೃಷ್ಟಿಯ ಜೊತೆಗೆ ವಿವರಣಪಟುವಾದ ವಾಕ್ಸಂಪತ್ತೂ ಸೇರಿರಬೇಕು. ಈ ಸ್ಫುಟೀಕರಣಶಕ್ತಿ ಶಾಸ್ತ್ರಿಗಳ ಪಾಲಿಗೆ ಯಥೇಷ್ಟವಾಗಿ ಬಂದಿತ್ತು. ವಿವಿಧ ಪದಪ್ರಯೋಗದಿಂದಲೂ ವಾಕ್ಯರಚನೆಯ ಕುಶಲತೆಯಿಂದಲೂ ಅವರು ಒಳಗೆ ಗೂಢವಾಗಿ ಅಡಗಿಕೊಂಡಿದ್ದ ಅರ್ಥ ಭಾವಗಳನ್ನು ಹೊರಕ್ಕೆ ತರುತ್ತಿದ್ದರು. ರಾತ್ರಿ ಮಲಗುವ ಕೋಣೆಯಲ್ಲಿ ಮಂಚದ ಕೆಳಗಡೆ ಹಾವಿದೆಯೆಂದು ಭೀತಿ ತೋರಿದಾಗ ನಮಗೆ ಬೇಕಾದ ಉಪಕಾರಿ ದೊಣ್ಣೆ ಹಿಡಿದವನು ಮಾತ್ರವಲ್ಲ. ದೀಪ ಹಿಡಿದವನು ಕೂಡ. ಹಾಗೆ ಬೆಳಕು ಬೀರುತ್ತಿದ್ದವರು ಶಾಸ್ತ್ರಿಗಳು. ಮನುಷ್ಯವ್ಯವಹಾರಗಳಲ್ಲಿ ಪ್ರತಿಯೊಂದು ವಾದಕ್ಕೂ ಇನ್ನೊಂದು ಪಕ್ಕವುಂಟೆಂದು ಹೇಳಿ ಆ ಉಪೇಕ್ಷಿತಾಂಶವನ್ನು ಎತ್ತಿಹಿಡಿಯುತ್ತಿದ್ದದ್ದು ಶಾಸ್ತ್ರಿಗಳ ವಿಶೇಷ ಗುಣ. ಅಂಥಾ ಮನೋಭಾವವನ್ನು "ಕ್ರಾಸ್–ಬೆಂಚ್ ಮೈಂಡ್",—ಅಡ್ಡ ಪಂಕ್ತಿಯ ಮನಸ್ಸು,—ಎಂದು ಇಂಗ್ಲಿಷಿನಲ್ಲಿ ಕರೆಯುವುದುಂಟು. ಅದು ಪಕ್ಷಾಭಿಮಾನವಿಲ್ಲದ ಮನಸ್ಸು, ನ್ಯಾಯೈಕ ನಿಷ್ಠವಾದ ಮನಸ್ಸು, ಸಕಲ ಪಕ್ಷದರ್ಶಿಯಾದ ಮನಸ್ಸು.

ಶಾಸ್ತ್ರಿಗಳು ಮಂದಗಾಮಿ, ಭೀರು, ಬ್ರಿಟಿಷ್ ಪಕ್ಷಪಾತಿ ಎಂದು ಸ್ವಜನ ಅಪ ಭಾವನೆ ಮಾಡಿಕೊಂಡು ಉದಾಸೀನರಾದರೆ, ಬ್ರಿಟಿಷರು ಅವರನ್ನು ಕ್ರಿಯದುರ್ಲಭ, ಸ್ವತಂತ್ರಪಂಥಿ, ಭೇತಾಳೋತ್ಥಾಪಕ—ಎಂದು ಕೈಬಿಟ್ಟರು. ರೌಂಡ್ ಟೇಬಲ್ ಕಾನ್ಫರೆನ್ಸ್ ಎಂಬ ಸರ್ವಪಕ್ಷ ಸಮ್ಮೇಲನದ ಎರಡನೆಯ ಮೂರನೆಯ ಅಧಿವೇಶನ ಗಳಿಗೆ ಶಾಸ್ತ್ರಿಗಳನ್ನು ಬ್ರಿಟಿಷ್ ಸರಕಾರ ಕರೆಯಲಿಲ್ಲ; ಅವರಿಗೆ ಆರೋಗ್ಯವಿಲ್ಲದ್ದ ರಿಂದ ಅವರಿಗೆ ತೊಂದರೆ ಕೊಡತಕ್ಕದ್ದಲ್ಲವೆಂದು ಕುಂಟು ನೆವ ಹೇಳಿತು. ಜನಬಲ ವಿಲ್ಲದ ರಾಜಕೀಯಸ್ಥನನ್ನು ಸರಕಾರ ಏಕೆ ಒಲಿಸಿಕೊಳ್ಳಬೇಕು? ಅಂಥವನಿಂದ ಏನು ಪ್ರಯೋಜನವಾದೀತು? ಶಾಸ್ತ್ರಿಗಳು ಕುಟಿಲವನ್ನು ಭೇದಿಸಿ ತೋರಿಸುವುದ ರಲ್ಲಿ ಚತುರರು. ಅವರೂ ಗಾಂಧಿಯವರೂ ಒಂದಾಗಿ ಕೈಗೂಡಿಸಿದರೆ ಗತಿಯೇನು? ಹೀಗೆ ನಡೆಯಿತು ಬ್ರಿಟಿಷರ ಆಲೋಚನೆ.

ಶ್ರೀನಿವಾಸಶಾಸ್ತ್ರಿಗಳು ಸಾಹಿತ್ಯದಲ್ಲಿರಬೇಕಾಗಿದ್ದವರು, ಮರೆವಿನಲ್ಲಿ ರಾಜಕೀಯಕ್ಕೆ ಕಾಲಿಟ್ಟರು—ಎಂದು ಅವರ ಸ್ನೇಹಿತರನೇಕರು ಹೇಳುತ್ತಿದ್ದದ್ದುಂಟು. ಎಂದರೆ, ಶಾಸ್ತ್ರಿಗಳ ಸ್ವಭಾವದಲ್ಲಿ ಪ್ರಧಾನಾಂಶ ಕಾವ್ಯದ್ದು ಎಂದು ತಾತ್ಪರ್ಯ. ಅವರ ಮನಸ್ಸಿನ ನೈಜವಾದ ಅಭಿರುಚಿ ರಾಮಾಯಣದಲ್ಲಿ, ಭಾರತದಲ್ಲಿ, ವಿಶ್ವಸಾಹಿತ್ಯದಲ್ಲಿ. ಅವರು ಒಂದು ಸಾರಿ ಕಾಯಿಲೆ ಬಿದ್ದು ಬೆಂಗಳೂರಿಗೆ ಬಂದಾಗ ಹೊತ್ತುಕಳೆಯಲು ಓದು ವುದಕ್ಕೆ ಯಾವುದಾದರೂ ಪುಸ್ತಕ ಬೇಕೆಂದರು. ನಾನು ಆಗ ಓದುತ್ತಿದ್ದ ನಾಟಕ ಕಥೆ ಚರಿತ್ರೆಗಳನ್ನು ಅವರ ಮುಂದಿರಿಸಿದೆ. ಅವರು "ಇದೆಲ್ಲಾ ನನಗೆ ಬೇಡ ಸಾರ್, ಒಂದು ಷೇಕ್ಸ್ಪಿಯರ್ ಸಂಪುಟ, ಒಂದು ಕಾಳಿದಾಸ ಸಂಪುಟ—ಇವೆರಡಿದ್ದರೆ ಸಾಕು" ಎಂದರು. ಶ್ರೀಮದ್ರಾಮಾಯಣ ಅವರು ಪದೇ ಪದೇ ಓದುತ್ತಿದ್ದ ಗ್ರಂಥ. ಅವರ ತಂದೆಗಳು ರಾಮಾಯಣ ಪುರಾಣ ಹೇಳಿ ಪ್ರಸಿದ್ಧರಾಗಿದ್ದವರು. ರಾಮಾಯಣದ ಬಹುಭಾಗ ಶ್ರೀನಿವಾಸಶಾಸ್ತ್ರಿಗಳಿಗೆ ಮುಖಸ್ಥವಾಗಿತ್ತು. ರಾಜಕೀಯದಲ್ಲಿ ಅವರ ಕೀರ್ತಿ ಹೇಗಾದರಿರಲಿ, ಅವರು 1944ರಲ್ಲಿ—ಸಾವಿಗೆ ಎರಡು ವರ್ಷ ಮುಂಚೆ— ರಾಮಾಯಣದ ವ್ಯಕ್ತಿವಿಭೂತಿಗಳನ್ನು ಕುರಿತು ಕೊಟ್ಟ (ಇಂಗ್ಲಿಷ್) ಉಪನ್ಯಾಸಗಳು ಅವರ ಹೆಸರಿಗೆ ಸಾಹಿತ್ಯ ಸೀಮೆಯಲ್ಲಿ ಉನ್ನತವೂ ಸ್ಥಿರವೂ ಆದ ಸ್ಥಾನವನ್ನು ಸಂಪಾದಿಸಿವೆ. ಅಷ್ಟು ಹೃದಯರಂಜಕವಾಗಿ, ಮರ್ಮದ್ಯೋತಕವಾಗಿ, ಸ್ಫೂರ್ತಿ ಪ್ರದವಾಗಿ ಇದೆ ಅವರ ವ್ಯಾಖ್ಯಾನ ಸರಣಿ.

ಅವರ ಸಂಸ್ಕೃತ ಕಾವ್ಯಪರಿಚಯ ವಿಸ್ತಾರವಾದದ್ದು. ವಿದ್ವದೌಷಧವೆನಿಸಿದ ನೈಷಧದಿಂದ ರಸಿಕ ರಸಾಯನವಾದ ಕೃಷ್ಣಕರ್ಣಾಮೃತದವರೆಗೆ ನಾನಾ ಅಂತಸ್ತುಗಳ ಕಾವ್ಯರಸವನ್ನೂ ಅವರು ಸವಿದಿದ್ದರು. ಬೆಳಗಿನ ವ್ಯಾಯಾಮ ಸಂಚಾರದಲ್ಲಿ, ಸಂಜೆಯ ಹಸುರದ ಹರಟೆಯಲ್ಲಿ, ಬೆಳ್ದಿಂಗಳಿನ ಭೋಜನ ವಿಹಾರದಲ್ಲಿ ಇಷ್ಟಮಿತ್ರರಿಗೆ ಕಾವ್ಯ ರಸಪಾನ ಮಾಡಿಸುತ್ತಿದ್ದರು. ಲಾಲ್‌ಬಾಗ್ ಉದ್ಯಾನವನದಲ್ಲಿ ತಿರುಗಾಡುವಾಗ ಜಿಂಕೆಗಳ ರೋಮಂಥ, ಅಶೋಕಮರದಿಂದಾಗುವ ಸಶೋಕತ್ವ, ಮಾಧ್ವೀಲತೆಯ ಲಲಿತಗರ್ವ—ಇವುಗಳನ್ನು ವರ್ಣಿಸುವ ಪದ್ಯಗಳನ್ನು ಜ್ಞಾಪಕಕ್ಕೆ ತಂದುಕೊಡುತ್ತಿದ್ದರು.

ಒಂದು ದಿನ (30–1–1930) ಸಾರ್ವಜನಿಕ ಜೀವನದ ಮರ್ಯಾದೆಗಳನ್ನು ಕುರಿತು ಪ್ರಸ್ತಾವ ಬಂತು. ಸಾಮಾನ್ಯವಾಗಿ ಬಹು ಮಂದಿ ಸ್ವಾನುಕೂಲಕ್ಕಾಗಿ ಆಗಾಗ ಬದಲಾಯಿಸುವವರೇ. ಒಂದು ವ್ರತದಲ್ಲಿ ನಿಶ್ಚಲವಾಗಿ ನಿಲ್ಲುವವರು ಅಲ್ಲೊಬ್ಬರು ಇಲ್ಲೊಬ್ಬರು. ಈ ದೃಢವ್ರತರೇ ಆದರ್ಶಪುರುಷರು. ಈ ರೀತಿ ಮಾತು ಬಂದಾಗ ಶಾಸ್ತ್ರಿಗಳು ಭವಭೂತಿಯ—

ಪುರಾ ಯತ್ರ ಸ್ರೋತಃ ಪುಲಿನಮಧುನಾ ತತ್ರ ಸರಿತಾಂ।
ವಿಪರ್ಯಾಸಂ ಯಾತೇ ಘನವಿರಲಭಾವಃ ಕ್ಷಿತಿರುಹಾಮ್॥
ಬಹೋರ್ದೃಷ್ಟಂ ಕಾಲಾದಪರಮಿವ ಮನ್ಯೇ ವನಮಿದಂ।
ನಿವೇಶಶ್ಶೈಲಾನಾಂ ತದಿದಮಿತಿ ಬುದ್ಧಿಂ ದ್ರಢಯತಿ॥

ಮಣಲೀಗಳ್ ಪರಪಿರ್ಪುದೆಂದು ನದಿಸಾಗಿರ್ದತ್ತ ಮತ್ತಾ ತರಂ-।
ಗಿಣಿ ಪೋಯ್ತಿತ್ತಲೊ ತೆಳ್ವುದಟ್ಟ ಬನದೊಳ್ ಮಾರಿರ್ಪುವಿಂತೀ ವಿಪ॥
ರ್ಯನೆಯಿಂದೀಯೆಡೆ ದೀರ್ಘಕಾಲಗತಿಯಿಂ ಕಣ್ಗೀಸೊ ಬೇರೆನ್ನಿಸಲ್।
ಮನಕೀ ದೇಶಮದೆಂಬುದಂ ಸ್ಥಿರಗೊಳಿಕ್ಕುಂ ಶೈಲಪಂಕ್ತಿ ಧ್ರುವಂ॥

ಪದ್ಯವನ್ನುದಾಹರಿಸಿ, ಪಂಡಿತಧೋರಣೆಯಲ್ಲಿ ವ್ಯಾಖ್ಯಾನಕ್ಕಿಳಿದರು.

ಸಂಸ್ಕೃತದಲ್ಲಿ ಹತ್ತುನಿಮಿಷ ವಾಕ್ಯಾರ್ಥವಾಯಿತು. ಸಮಾಸೋಕ್ತಿಯೇ ಕಾವ್ಯದಲ್ಲಿ ಧ್ವನಿಯ ಉತ್ತಮ ಪ್ರಕಾರವೆಂದು ಸಿದ್ಧಾಂತ ಮಾಡಿದರು.

ಭವಭೂತಿ ಸಾಮಾನ್ಯವಾಗಿ ಬರಿಯ ಪಂಡಿತ; ನಿಘಂಟು ವ್ಯಾಕರಣಗಳಲ್ಲಿ ನಿಸ್ಸೀಮ. ಆದರೆ ಒಂದೊಂದು ಸಲ—ಪ್ರಕೃತ ಪದ್ಯದಲ್ಲಿ ತೋರುವಂತೆ—ಆತ ತನ್ನ ಸಣ್ಣ ಸೀಮೆಯನ್ನು ದಾಟಿ ಉನ್ನತವಾದ ಕಾವ್ಯರಾಜ್ಯದ ಸೀಮೆಯೊಳಕ್ಕೆ ಕಾಲಿಡುತ್ತಾನೆ. ಅದರ ಸೊಗಸೇ ಸೊಗಸು. ಹೀಗೆ ಅರ್ಧಘಂಟೆ ಕಾವ್ಯತತ್ತ್ವ ನಿರೂಪಣೆಯಾದ ಮೇಲೆ, ವ್ರತನಿಷ್ಠರಾದ ಧೀರರೇ ಸಮಾಜದ ಸತ್ತ್ವನಿಧಿ; ಅವರ ಪ್ರಭಾವದಿಂದ ಜನತೆಗೆ ಸಂಪತ್ತು ಸಮಾಧಾನಗಳು; ರ್‍ಯಾನಡೆಯವರು ಅಂಥಾ ಮಹಾಪುರುಷರು—ಎಂದು ಸಿದ್ಧಾಂತವಾಯಿತು.

ಇನ್ನೊಂದು ದಿವಸ ವಿರೋಧಾಭಾಸವೆಂಬ ಅಲಂಕಾರದ ಸ್ವರೂಪ. ಅದರ ಪ್ರಭೇದಗಳಿಗೆ ಉದಾಹರಣೆಗಳು; ಮತ್ತೊಂದು ದಿನ ಅಪ್ರಸ್ತುತ ಪ್ರಶಂಸೆಗೂ ಅಪಹ್ನುತಿಗೂ ಇರುವ ವ್ಯತ್ಯಾಸಗಳು; ಮಗುದೊಂದು ದಿನ ಅಪ್ಪಯ್ಯ ದೀಕ್ಷಿತರಿಗೂ ಜಗನ್ನಾಥ ಪಂಡಿತರಿಗೂ ಇದ್ದ ಮತಭೇದ; ಬಳಿಕೊಂದು ದಿನ ಆರ್ಯಾಶತಕ ದಲ್ಲಿಯ ಅಪೂರ್ವ ವ್ಯಾಕರಣ ಪ್ರಯೋಗಗಳು—ಹೀಗೆ ಸಾಗುತ್ತಿತ್ತು ಆ ಉಪನ್ಯಾಸ ಧಾರೆ. ಶಾಸ್ತ್ರಿಗಳಿಗೆ ಕಾಳಿದಾಸನ ಅರ್ಥಾಂತರನ್ಯಾಸದಲ್ಲಿ ಹೆಚ್ಚು ಸಂತೋಷ. ಸಂದರ್ಭ ಬಂದಾಗಲೆಲ್ಲ ಕಾಳಿದಾಸೋಕ್ತಿಯನ್ನೋ ರಾಮಾಯಣ ಭಾರತಗಳ ಪ್ರಸಂಗಗಳನ್ನೋ ನೆನಪಿಗೆ ತರುತ್ತಿದ್ದರು. ಮತ್ತು ಸಂಸ್ಕೃತ ಕಾವ್ಯದಲ್ಲಿ ಹೇಗೋ

ಇಂಗ್ಲಿಷ್ ಕಾವ್ಯದಲ್ಲಿಯೂ ಹಾಗೆಯೇ ಉತ್ಸಾಹ. ಈಚೀಚಿನ ಕವಿಗಳಾದ ಮೆರೆಡಿತ್, ಹಾರ್ಡಿಗಳ ಪದ್ಯ ಕಥಾಕೃತಿಗಳ ರುಚಿಯನ್ನು ಸಹ ಅವರು ಸವಿದು ಸಂತೋಷಿಸಿದ್ದರು. ಒಂದು ದಿನ ಒಬ್ಬ ಸ್ನೇಹಿತರ ಮನೆಯಲ್ಲಿ ಔತಣ ; ಊಟಕ್ಕಾಗಿ ಕೊಂಚ ಹೊತ್ತು ಕಾಯಬೇಕಾಯಿತು. ಅಲ್ಲಿದ್ದ ಪುಸ್ತಕದ ಕಪಾಟಿನಿಂದ ಒಂದನ್ನು ನಾನು ಈಚೆಗೆ ಸೆಳೆದೆ. ಅದು ವರ್ಡ್ಸ್‌ವರ್ತ್ ಕವಿಯ ಕಾವ್ಯಸಂಗ್ರಹ. ಶಾಸ್ತ್ರಿಗಳು ಆ ಸಂಗ್ರಹದಲ್ಲಿ Happy Warrior ಇದೆಯೆ? ಎಂದು ವಿಚಾರಿಸಿದರು. ನಾನು "ನೋಡಿ ಹೇಳುತ್ತೇನೆ" ಎಂದೆ. ಅವರು "Happy Warrior ಇಲ್ಲದ್ದು ಎಂಥ ಸಂಗ್ರಹ?" ಎಂದರು. ಒಬ್ಬ ಮಿತ್ರರು—"ಅದು ಅಷ್ಟು ಸ್ವಾರಸ್ಯವೆ ?" ಎಂದು ಕೇಳಿದರು. ಶಾಸ್ತ್ರಿಗಳು ಜ್ಞಾಪಕದಿಂದಲೇ ಪದ್ಯವನ್ನು ನುಡಿಯಲಾರಂಭಿಸಿದರು. ಪುಸ್ತಕ ನನ್ನ ಕೈಯಲ್ಲೇ ಇತ್ತು. ಅವರ ಅಕ್ಷರೋಚ್ಚಾರಣೆ, ಅವರ ಸ್ವರಗೌರವದ ಹಂಚಿಕೆ, ಅವರ ಧ್ವನಿಯ ಏರಿಳಿತ. ಆ ವಾಕ್ಯಧಾರೆಯ ಧೋರಣೆ—ಇವುಗಳಿಂದ ಕಾವ್ಯಭಾವ ನಮ್ಮ ಮನಸ್ಸಿಗೆ ತಾನಾಗಿ ಸ್ಫುರಿಸಿ. ಎಲ್ಲರೂ ಒಂದು ಘಳಿಗೆ ಮೂಕರಾಗಿದ್ದೆವು.

ಶಾಸ್ತ್ರಿಗಳ ಕಥನ ವಿಧಾನ, ಅವರ ವರ್ಣನ ಕುಶಲತೆ, ಅವರ ಶಬ್ದೌಚಿತ್ಯ ಮತ್ತು ಅವರ ವಾಕ್ಯಬಂಧ—ಇವು ಮೋಹಕವಾದವು. ಭಾಷಣಕಾಲದಲ್ಲಿ ಅವರು ಅಂಗವಿಕಾರ ಮಾಡುತ್ತಿದ್ದವರಲ್ಲ. ಒಂದು ಸಂಗತಿಯನ್ನು ಒತ್ತಿ ಹೇಳಬೇಕೆನಿಸಿದಾಗ ಅಪರೂಪವಾಗಿ ತರ್ಜನೀ ಬೆರಳನ್ನು ಎತ್ತಿಹಿಡಿಯುತ್ತಿದ್ದರು, ಅಷ್ಟೆ. ಅವರ ಮನಸ್ಸಿನ ವೇಗವನ್ನು ಕಣ್ಣಿನ ಹೊಳಪು, ಹುಬ್ಬಿನ ಗಂಟು, ಒಂದೊಂದು ಸಲ ತಲೆ-ಕೊಂಕು—ಇವು ತೋರಿಸುತ್ತಿದ್ದವು. ವಾಕ್ಯಪ್ರವಾಹದಲ್ಲಿ ವಿಷಯದ ಗಾಂಭೀರ್ಯವೇ ದೊಡ್ಡದಾಗಿ ಚಿತ್ತವನ್ನು ಸ್ವಾಧೀನಪಡಿಸಿಕೊಳ್ಳುತ್ತಿತ್ತು. ನಡುನಡುವೆ ಧ್ವನಿತ ಮಾತ್ರವಾದ ಮೃದು ಹಾಸ್ಯ ಇಣಿಕಿ ಕಾಣಿಸಿಕೊಳ್ಳುತ್ತಿದ್ದದ್ದು ಚಿತ್ತದ ಪ್ರಯಾಸವನ್ನು ಮರೆಯಿಸಿ ಉತ್ಸಾಹವನ್ನು ಬೆಳಸಲು ಸಾಧಕವಾಗುತ್ತಿತ್ತು.

ಇಂಗ್ಲಿಷಿನಲ್ಲಿ ಹೇಗೋ ತಮಿಳಿನಲ್ಲಿಯೂ ಹಾಗೆಯೇ ಶಾಸ್ತ್ರಿಗಳ ಭಾಷಣ ಲೇಖನಗಳು ಆಕರ್ಷಕವಾಗಿದ್ದವೆಂದು ಕೇಳಿದ್ದೇನೆ. ಅವರು ತಮಿಳಿನಲ್ಲಿ ಉಪನ್ಯಾಸ ಕೊಡಲು ಮೊದಲು ಮಾಡಿದ್ದು ಕಡೆಯ 8–10 ವರ್ಷಗಳಿಂದೀಚೆಗೆ. ಅದೂ ಆಗ ಒಂದು ಸಲ ಈಗ ಒಂದು ಸಲ. ಅವರು ತಮಿಳಿನಲ್ಲಿ ಕೆಲವು ಸಣ್ಣ ಕಥೆಗಳನ್ನೂ ಪ್ರವಾಸ ದೃಶ್ಯಗಳನ್ನೂ ಬರೆದಿದ್ದಾರೆ. ಬಂಗಾಳದಲ್ಲಿ ದೇಶಪರ್ಯಟನ ಮಾಡಿದಾಗ ತಮಗಾದ ಅನುಭವಗಳನ್ನೂ ತಾವು ಅಲ್ಲಿ ನೋಡಿದ ಮಹನೀಯರ ರೂಪರೇಖೆಗಳನ್ನೂ ಓದುಗರಿಗೆ ಪ್ರತ್ಯಕ್ಷವೆನಿಸುವಂತೆ ಚಿತ್ರಿಸಿದ್ದಾರೆ.

ಶಾಸ್ತ್ರಿಗಳು ಸಂಗೀತದಲ್ಲಿ ಭಾವಪಕ್ಷಪಾತಿ. ತಾಳಗತಿ ಸ್ವರಸಂಗತಿಗಳಿಗಿಂತ ರಾಗದ ವಿನ್ಯಾಸ ಅವರಿಗೆ ಹೆಚ್ಚು ಇಷ್ಟವಾದದ್ದು. ಸಾವೇರಿ, ಧನ್ಯಾಸಿ, ದರ್ಬಾರು, ಮೋಹನ, ಯದುಕುಲ ಕಾಂಭೋಜಿ—ಇವು ಅವರಿಗೆ ಪ್ರಿಯವಾದ ಕೆಲವು. ಅವರು ಅಣ್ಣಾಮಲೆ ನಗರದಲ್ಲಿ ವೈಸ್‌ಚಾನ್ಸೆಲರಾಗಿದ್ದಾಗ ಒಂದು ಸಾರಿ ಹೃದಯ ಶೂಲೆ ಜೋರಾಗಿ

ಬಂತು. ವೈದ್ಯರು ಅಲ್ಲಿಗೆ 4–5 ಮೈಲಿ ದೂರದಲ್ಲಿದ್ದರು. ಅವರನ್ನು ಕರೆತರಲು ಮೋಟಾರು ಕಾರನ್ನು ಕಳುಹಿಸಿ ನಾನು ಶಾಸ್ತ್ರಿಗಳ ಬಳಿ ನಿಂತು, ಬೇರೇನು ಮಾಡಲೂ ತಿಳಿಯದೆ, ಕೈಕಾಲು ಸವರುತ್ತಿದ್ದೆ. ಅವರಿಗೆ ಪ್ರಜ್ಞೆಯಿದ್ದಂತೆಯೇ ತೋರಲಿಲ್ಲ. ಕಡೆಯ ಘಳಿಗೆ ಬಂತೇನೋ ಎಂದು ನನ್ನ ಮನಸ್ಸಿನಲ್ಲಿ ಭೀತಿಯಾಗಿತ್ತು. ಶಾಸ್ತ್ರಿಗಳು ಗಾನಪ್ರಿಯರು ; ಅದರಿಂದಲಾದರೂ ಅವರನ್ನು ಬದುಕಿಸಲಾದೀತೇನೋ ಎಂದು ಕೊಂಡು, ನಾನು ಅಲ್ಲಿದ್ದ ಅನಸೂಯಮ್ಮನವರನ್ನು ಕರೆದು—"ಒಂದೆರಡು ಗ್ರಾಮಾಫೋನ್ ರಿಕಾರ್ಡ್ ಹಾಕಿ, ನೋಡೋಣ" ಎಂದೆ. ಆಕೆ ಹಾಗೆ ಮಾಡಿದರು. ಎರಡು ಪ್ಲೇಟು ಮುಗಿದ ಮೇಲೆ ಮೂರನೆಯದು—

"ಪಾಹಿ ರಾಮಚಂದ್ರ ರಾಘವಾ"

ಅದು ಮುಸುರಿ ಸುಬ್ರಹ್ಮಣ್ಯಯ್ಯರು ಹಾಡಿದ್ದದ್ದು. ತ್ಯಾಗರಾಜ ಕೀರ್ತನೆ, ಯದುಕುಲ ಕಾಂಭೋಜಿ ರಾಗ. ಯಂತ್ರದಿಂದ ಹಾಡಿಕೆ ಸಾಗುತ್ತಿದ್ದಾಗ ನಾನು ಶಾಸ್ತ್ರಿಗಳ ಮುಖದ ಮೇಲೆಯೇ ದೃಷ್ಟಿ ನಿಲ್ಲಿಸಿದ್ದೆ. ಹಾಡಿನ ಕಡೆಯ ಚರಣ—

"ರಾಜರಾಜ ಪೂಜಿತ ಪ್ರಭೋ—ಹರೇ ತ್ಯಾಗ-
ರಾಜ ರಾಜ ರಾಘವಪ್ರಭೋ"

ಇದು ಮುಗಿಯುವ ವೇಳೆಗೆ ಶಾಸ್ತ್ರಿಗಳ ತುಟಿಯಿಂದ ಏನೋ ಮಾತು ಹೊರಟಂತೆ ತೋರಿತು. ಕಿವಿಗೊಟ್ಟು ಆಲಿಸಿದೆ. "ಅದೇ ಇನ್ನೊಂದು ಸಲ ಬೇಕು". —ಎಂದುಸಿರಿದರು. ಅದೇ ಹಾಡನ್ನೇ ಮತ್ತೊಮ್ಮೆ ಹಾಕಿದರು ಅನಸೂಯಮ್ಮ. ಮತ್ತೆ ಕಡೆಯ ಚರಣ ಬರುವ ವೇಳೆಗೆ ಕಣ್ಣಲ್ಲಿ ಹನಿಗೂಡಿದ್ದದ್ದು ನಮಗೆ ಮಾತ್ರವಲ್ಲ, ಅವರಿಗೂ. ಮೂರನೆಯ ಸಾರಿ ಕಡೆಯ ನುಡಿ ಬಂದಾಗ ಶಾಸ್ತ್ರಿಗಳು—"ಸಾರ್, ನನ್ನ ಕೊನೆಯ ಘಳಿಗೆ ಬಂದಾಗ ಇದೇ ನನ್ನ ಕಿವಿಯಲ್ಲಿರಬೇಕು" ಎಂದರು. ಆ ವೇಳೆಗೆ ಡಾಕ್ಟರು ಬಂದರು. ಶಾಸ್ತ್ರಿಗಳು ಚೇತರಿಸಿಕೊಂಡರು.

ಒಂದು ಸಾರಿ—ಬಹುಶಃ 1929ರಲ್ಲಿ—ಶಾಸ್ತ್ರಿಗಳು ಬೆಂಗಳೂರಿನಲ್ಲಿ ಎರಡು ಮೂರು ತಿಂಗಳು ವಾಸಮಾಡುವ ಉದ್ದೇಶದಿಂದ ಮನೆಯೊಂದನ್ನು ಗೊತ್ತು ಮಾಡಬೇಕೆಂದು ನನಗೆ ಕಾಗದ ಬರೆದರು. ನಾನು 4–5 ಮನೆಗಳ ಬೀದಿಯ ಹೆಗ್ಗುರುತು ಗಳನ್ನೂ, ಬಾಡಿಗೆ ಮೊದಲಾದ ವಿವರ ಸಂಗತಿಗಳನ್ನೂ ತಿಳಿಸಿ, ಅವರ ತೀರ್ಮಾನ ವನ್ನು ಕೇಳಿ ಕಾಗದ ಬರೆದೆ. ಅವರ ಪ್ರತ್ಯುತ್ತರದ ಸರಣಿ ಇದು :—

"ನಿನ್ನ ಪಟ್ಟಿಯಲ್ಲಿ ನಾಲ್ಕನೆಯ ಮನೆ ಲಾಲ್‌ಬಾಗಿಗೆ ಹತ್ತಿರವಿದೆ ಎನ್ನುತ್ತಿ. ಇನ್ನು ಬೇಕಾದದ್ದೇನು ? ಆ ಮನೆಗೆ ಕೆಟ್ಟ ಹೆಸರು ಬಂದಿದೆ ಎನ್ನುತ್ತಿ. (ಅದನ್ನು ಕಟ್ಟಿಸಿದಾತ ಅದು ಹೊಸದಾಗಿದ್ದಾಗಲೇ ಅದರ ಬಾವಿಯಿಂದ ನೀರು ಸೇದ ಹೊರಟು ಕಾಲೆಡವಿಯೋ ತಲೆತಿರುಗಿಯೋ ಒಳಕ್ಕೆ ಉರುಳಿ ಮುಳುಗಿಹೋದ.) ನಾನು ರೋಗಿಯೆಂಬುದು ಲೋಕಕ್ಕೇ ಗೊತ್ತಿದೆ. ನಾನು ಅದರಲ್ಲಿ ಸತ್ತರೆ ನನ್ನ ರೋಗಕ್ಕೆ

ಇನ್ನಷ್ಟು ಅಪಕೀರ್ತಿ. ನಾನು ಅಲ್ಲಿ ಬದುಕಿದರೆ ಆ ಮನೆಯ ಅಪಕೀರ್ತಿ ತೊಲಗಿ ಅದಕ್ಕೆ ಒಳ್ಳೆಯ ಕೀರ್ತಿ ಬರುತ್ತದೆ. ಇದಕ್ಕಿಂತ ಯುಕ್ತವಾದ ಯೋಚನೆಯೊಂದಿದೆ. ಆ ಮನೆಯ ಸೊತ್ತುಗಾತಿ ತೀರಾ ಕಷ್ಟದಲ್ಲಿದ್ದಾರೆಂದು ಹೇಳುತ್ತಿ. (ಆ ಮನೆ ಕಟ್ಟಿದಾತ ದೊಡ್ಡ ಸರಕಾರೀ ಚಾಕರಿಯಲ್ಲಿದ್ದವ. ಅದು ಚೆನ್ನಾಗಿ ಬಾಳಿದ ಕುಟುಂಬ. ಆತ ಸತ್ತ ಮೇಲೆ ಆತನ ಹೆಂಡತಿ ಮೂವರು ಚಿಕ್ಕ ಹುಡುಗರು ಉಳಿದಿದ್ದರು.) ಮನೆಯ ಬಾಡಿಗೆಯೊಂದೇ ಅವರಿಗೆ ಇರುವ ಜೀವಿಕೆ ಎನ್ನುತ್ತಿ. ಅದೇ ಧ್ವನಿಯಲ್ಲಿಯೇ ಆ ಮನೆ ಯಾವುದೋ ಬ್ಯಾಂಕಿಗೆ ಅಡಮಾನವಾಗಿದೆಯೆಂದೂ ಬ್ಯಾಂಕಿನ ಅಧಿಕಾರಿಗೆ ಶಿಫಾರಸು ಹೇಳಿಸಿದರೆ ಬಾಡಿಗೆ ಇಳಿಸಲಾದೀತೆಂದೂ ಸಲಹೆ ಕೊಡುತ್ತಿ. ಅಂಥಾ ಕುಟುಂಬಕ್ಕೆ ನಮ್ಮಿಂದಾದಷ್ಟು ಸಹಾಯ ಮಾಡಬೇಕಲ್ಲವೆ ? ಬಾಡಿಗೆ ಇಳಿಸುವ ಮಾತು ಬೇಡ. ಬಾಡಿಗೆಯ ಒಂದು ಭಾಗ ಮನೆಯ ಮಾಲೀಕಳಿಗೆ ಸೇರುತ್ತದೆ ಯಲ್ಲವೆ ? ಆ ಭಾಗ ಹೆಚ್ಚಾಗಿರಲಿ. ಆ ಕುಟುಂಬಕ್ಕೆ ಊಟ ಸಿಕ್ಕಲಿ. ಅದೇ ಮನೆಯನ್ನು ಗೊತ್ತುಮಾಡು."

ಇದು ಶಾಸ್ತ್ರಿಗಳ ಹೃದಯ. ಅದರ ಮೂಲಗುಣ ಮಾನವ ಸಹಾನುಭೂತಿ—ಪುಣ್ಯಕರ್ಮಿಗೆ ಮೆಚ್ಚಿಕೆ, ಪಾಪಿಗೆ ಮರುಕ. ಶಾಸ್ತ್ರಿಗಳ ಶಿಷ್ಯಾಭಿಮಾನ, ಮಿತ್ರಪ್ರೀತಿ, ಕುಟುಂಬ ವಾತ್ಸಲ್ಯ, ಕಾವ್ಯೋತ್ಸಾಹ, ದೇಶಭಕ್ತಿ, ನೀತಿನಿಷ್ಠೆ, ಧರ್ಮಚಿಂತನೆ—ಇವೆಲ್ಲ ಆ ಮಾನವ ಸಹಾನುಭೂತಿಯ ನಾನಾ ರೂಪಗಳು. ಅವರಿಗೆ ಅತ್ಯಂತ ಪ್ರಿಯವಾಗಿದ್ದ ಶ್ಲೋಕ ಇದು :

ಯಂ ಪಾಲಯಸಿ ಧರ್ಮಂ ತ್ವಂ ।
ಧೃತ್ಯಾ ಚ ನಿಯಮೇನ ಚ ॥
ಸ ವೈ ರಾಘವಶಾರ್ದೂಲ ।
ಧರ್ಮಸ್ತ್ವಾಮಭಿರಕ್ಷತು ॥

ದಾದಾಭಾಯಿ ನವರೋಜಿ*

ನಿಮ್ಮಲ್ಲಿ ಗಾಂಧಿಯವರ ಹೆಸರನ್ನರಿಯದವರು ಯಾರೂ ಇರಲಾರರಲ್ಲವೆ ? ನಮ್ಮ ದೇಶವನ್ನು ಪರದೇಶದ ಹಿಡಿತದಿಂದ ಬಿಡಿಸಿ ಸ್ವತಂತ್ರ ಮಾಡಿದವರು ಮಹಾತ್ಮ ಗಾಂಧಿಯವರು. ಗಾಂಧಿಯವರ ಗುರು ಗೋಖಲೆ. ಆ ಗೋಖಲೆಗೆ ಗುರುವೆನಿಸಿಕೊಂಡಿದ್ದವರು ದಾದಾಭಾಯಿ ನವರೋಜಿ. ಹೀಗೆ ನಮಗೆಲ್ಲ ದಾದಾಭಾಯಿ ಮಹಾಗುರುವು.

ದಾದಾಭಾಯಿ ಪಾರಸೀ ಕುಲದವರು. ಅವರ ಮೂಲ ಪುರುಷರು ಪರ್ಷಿಯಾ ದೇಶದಲ್ಲಿದ್ದವರು. ಅವರು ಜರೋಷ್ಟ್ರ ಎಂಬ ಭಗವದ್ವಾದಿಯ ಪಂಥಕ್ಕೆ ಸೇರಿದವರು. ಅವರ ಪರಮ ದೈವ ಅಗ್ನಿ. ಈ ಅಗ್ನಿಪೂಜಕರ ಪೂರ್ವಿಕರೂ ಇಂಡಿಯಾದ ಹಿಂದೂ ಆರ್ಯರ ಪೂರ್ವಿಕರೂ ಅನೇಕ ಸಹಸ್ರ ವರ್ಷಗಳ ಹಿಂದೆ ಒಂದೇ ಬುಡಕಟ್ಟಿನವ ರಾಗಿದ್ದಿರಬೇಕೆಂದು ಹಲಮಂದಿ ವಿದ್ವಾಂಸರು ಹೇಳುತ್ತಾರೆ. ಅದು ಹೇಗಾದರಿರಲಿ. ಈಗಿಗೆ ಹಲವು ನೂರು ವರ್ಷಗಳ ಹಿಂದೆ ಆ ಪಾರಸೀ ಕುಲಸ್ಥರು ಕೆಲವು ರಾಜಕೀಯ ಕಾರಣಗಳಿಂದ ಇಂಡಿಯಕ್ಕೆ ವಲಸೆ ಬಂದು ಪಶ್ಚಿಮ ಸಮುದ್ರ ತೀರದಲ್ಲಿ ನೆಲಸಿದರು. ಅಂದಿನಿಂದ ಅವರು ಈ ದೇಶವನ್ನು ಮಾತೃಭೂಮಿಯೆಂದಂಗೀಕರಿಸಿ, ಇಲ್ಲಿಯ ಇತರ ಜನದೊಡನೆ ಒಂದು ಕುಟುಂಬವಾಗಿ ಏಕೀಭವಿಸಿ ಬಾಳಿಕೊಂಡಿದ್ದಾರೆ. ಈ ಪಾರಸಿಕರ ಮುಖ್ಯವೃತ್ತಿ ವ್ಯಾಪಾರ. ಅವರು ಹಣವಂತರೆಂದೂ ದಾನಧರ್ಮ ಶೀಲರೆಂದೂ ಹೆಸರುವಾಸಿಯಾದವರು. ಬೆಂಗಳೂರಿನಲ್ಲಿರುವ ಪ್ರಸಿದ್ಧವಾದ ವಿಜ್ಞಾನ ಸಂಸ್ಥೆಯನ್ನು ಸ್ಥಾಪನೆ ಮಾಡಿಸಿದವರು ಆ ಕುಲದವರೇ ಆದ ತಾತಾ ಅವರು.

ದಾದಾಭಾಯಿ ಆ ಕುಲದ ವೈದಿಕ ಪಂಗಡಕ್ಕೆ ಸೇರಿದ್ದವರು. ಅವರು ಹುಟ್ಟಿದ ಊರು ಬೊಂಬಾಯಿ ಪ್ರಾಂತದ ಬರೋಡ ಬಳಿಯ ನವಸಾರಿ. ಅವರು ಹುಟ್ಟಿದ್ದು ಇಂದಿಗೆ 132 ವರ್ಷಗಳ ಹಿಂದೆ. ಗತಿಸಿದ್ದು 40 ವರ್ಷಗಳ ಹಿಂದೆ. ಅವರ ಬಾಲ್ಯದಲ್ಲಿ ಯೂನಿವರ್ಸಿಟಿಗಳು ಇರಲಿಲ್ಲ. ಆಗ ಇಂಗ್ಲಿಷ್ ವಿದ್ಯಾಪ್ರಚಾರ ಇನ್ನೂ ಪ್ರಾರಂಭ ವಾಗುವುದರಲ್ಲಿತ್ತು. ಆ ಹೊಸ ವಿದ್ಯೆಯನ್ನು ಕಲಿತ ಭಾರತೀಯರ ಪ್ರಥಮ

---

* 4–9–1957 ರಂದು ಬೆಂಗಳೂರು 'ಆಕಾಶವಾಣಿ'ಯಿಂದ ಪ್ರಸಾರವಾದ ಭಾಷಣ.

ಪಂಕ್ತಿಗೆ ಸೇರಿದವರು ದಾದಾಭಾಯಿ. ಆತನ ಚಿಕ್ಕಂದಿನಲ್ಲಿಯೇ ತಂದೆ ತೀರಿಕೊಂಡರು. ತಾಯಿ ಸೋದರಮಾವಂದಿರ ಪೋಷಣೆಯಲ್ಲಿ ಆತ ಬೆಳೆದು, ಬಾಲ ವಿದ್ಯಾಭ್ಯಾಸವನ್ನು ನವಸಾರಿಯಲ್ಲಿ ಮುಗಿಸಿ, ಮುಂದಿನ ವಿದ್ಯೆಗಾಗಿ ಬೊಂಬಾಯಿಗೆ ಬಂದ. ಆಗ ಆತನಿಗೆ 14–15 ವರ್ಷ. ಅಲ್ಲಿ ಆತ ಓದಿದ ಶಾಲೆ ಈಗ ಎಲ್‌ಫಿನ್‌ಸ್ಟನ್ ಕಾಲೇಜ್ ಎಂದು ಹೆಸರಾಗಿದೆ. ಅಲ್ಲಿ ಆತ ವಿದ್ಯಾರ್ಥಿವೇತನ ಸಂಪಾದಿಸಿಕೊಂಡಿದ್ದ. ಅಲ್ಲಿಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ ಆತನನ್ನು ಇಂಗ್ಲೆಂಡಿಗೆ ಕಳುಹಿಸಬೇಕೆಂಬ ಸೂಚನೆಯೂ ಆ ಬಗ್ಗೆ ದ್ರವ್ಯಸಹಾಯದ ವಾಗ್ದಾನವೂ ಒಬ್ಬ ಇಂಗ್ಲಿಷ್ ದೊಡ್ಡ ಮನುಷ್ಯನಿಂದ ಬಂತು. ಆದರೆ ಆ ಕಾಲದಲ್ಲಿ ಕ್ರಿಶ್ಚಿಯನ್ ಪಾದರಿಗಳು ಉಪಾಯ ಮಾಡಿ ಇತರ ಮತಸ್ಥರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳತಕ್ಕವರೆಂಬ ಭೀತಿ ಸಾಮಾನ್ಯವಾಗಿತ್ತು. ಪಾರಸೀ ಜನಕ್ಕೂ ಆ ಹೆದರಿಕೆ ಇತ್ತು. ದಾದಾಭಾಯಿ ಇನ್ನೂ ಬಾಲಕನಾಗಿದ್ದದ್ದರಿಂದ ಎಲ್ಲಿ ಪಾದರಿಗಳ ಬಲೆಗೆ ಬಿದ್ದಾನೋ ಎಂದು ಪಾರಸೀ ಸಮಾಜ ಹೆದರಿ ಆತನ ವಿಲಾಯಿತಿ ಪ್ರಯಾಣಕ್ಕೆ ಸಮ್ಮತಿ ಕೊಡಲಿಲ್ಲ. ದಾದಾಭಾಯಿಯ ಬುದ್ಧಿಯೋಗ್ಯತೆಯನ್ನು ಮೆಚ್ಚಿದ್ದ ಅಧಿಕಾರಿಗಳು ಆತನನ್ನು ಆತನು ಓದಿದ ಶಾಲೆಯಲ್ಲಿಯೇ ಪ್ರೊಫೆಸರ್ ಪದವಿಗೆ ನಿಯಮಿಸಿಕೊಂಡರು.

ಹೀಗೆ ಒಂದು ಕಡೆ ಸಮಾಜದಲ್ಲಿ ಮನ್ನಣೆ ದೊರೆತು ಜೀವನವೃತ್ತಿ ಕುದುರಿಕೊಳ್ಳುತ್ತಿದ್ದಾಗ ಇನ್ನೊಂದು ಕಡೆ ದೇಶವಿಚಾರದ ಚಿಂತೆ ದಾದಾಭಾಯಿಯ ಮನಸ್ಸನ್ನು ಕೊರೆಯುತ್ತಿತ್ತು. ಆತನಿಗಾಗಿದ್ದ ಅನುಭವದಲ್ಲಿಯೇ ಅದಕ್ಕೆ ಕಾರಣವಿತ್ತು. ಆಗಿನ ಪ್ರಶ್ನೆಗಳು ಮುಖ್ಯವಾಗಿ ನಾಲ್ಕು : (1) ಜನದಲ್ಲಿ ನೂತನ ವಿದ್ಯೆ ಹರಡಲು ಸೌಕರ್ಯವಿಲ್ಲದೆ ಇದ್ದದ್ದು. (2) ಮಾಮೂಲು ಪದ್ಧತಿಗಳಲ್ಲಿಯೂ ಭಾವನೆಗಳಲ್ಲಿಯೂ ಜನಕ್ಕಿದ್ದ ಮೂಢ ವಿಶ್ವಾಸ. (3) ದೇಶದಲ್ಲಿ ಯಂತ್ರ ಕಾರ್ಖಾನೆಗಳೂ ಹೊಸ ಹೊಸ ಉದ್ಯೋಗಗಳೂ ಹುಟ್ಟಿಕೊಳ್ಳದೆ, ಇದ್ದ ಕೊಂಚ ಸಂಪತ್ತು ವ್ಯಾಪಾರದ ಮೂಲಕ ಅನ್ಯದೇಶಗಳಿಗೆ ಸಾಗಿಹೋಗುತ್ತಿದ್ದದ್ದು. (4) ಇವೆಲ್ಲಕ್ಕೂ ಮೂಲವಾಗಿ ದೇಶದ ರಾಜಕೀಯ ಪರದೇಶಕ್ಕೆ ಕೈವಶವಾಗಿದ್ದದ್ದು. ಈ ಕಷ್ಟ ಕೊರತೆಗಳ ನಿವಾರಣೆಗಾಗಿ ಮಾರ್ಗಗಳನ್ನು ಯೋಚಿಸಿ ಕಾರ್ಯ ನಡೆಸಲು ದಾದಾ ಅವರು ಹಲವು ರೀತಿಗಳಲ್ಲಿ ಪ್ರಯತ್ನಪಟ್ಟರು. ಜನಸಾಮಾನ್ಯಕ್ಕಾಗಿ ಪಾಠಶಾಲೆಗಳು. ಸ್ತ್ರೀವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹ. ಸಾಹಿತ್ಯ ವಿಜ್ಞಾನಗಳ ವ್ಯಾಸಂಗಕ್ಕಾಗಿ ಸಂಘಗಳು. ಸಮಾಜ ಪರಿಷ್ಕಾರ ಪ್ರಚಾರಕ್ಕಾಗಿ ಪತ್ರಿಕೆಗಳು—ಈ ನಾನಾ ತರದ ಸಾರ್ವಜನಿಕ ಕಾರ್ಯಗಳಿಗೆ ಅವಶ್ಯವಾದ ಜನಸಹಾಯವನ್ನೂ ಧನಸಹಾಯವನ್ನೂ ದಾದಾ ಅವರು ಸಂಪಾದಿಸಿ ಅನೇಕ ಸಂಸ್ಥೆಗಳನ್ನು ಕಟ್ಟಿ ಸ್ವಂತ ಶ್ರಮದಿಂದಲೂ ಆಸಕ್ತಿಯಿಂದಲೂ ನಡೆಸಿದರು.

1855ರಲ್ಲಿ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ನಿಲ್ಲುವ ಅವಕಾಶ ಉಂಟಾಯಿತು. ಇಂಗ್ಲೆಂಡಿನ ವಿಜ್ಞಾನಪ್ರಭಾವವನ್ನೂ ವಾಣಿಜ್ಯ ಮಹತ್ತ್ವವನ್ನೂ ಜೀವನ ವಿತರಣೆಯನ್ನೂ ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳಬೇಕೆಂಬ ಆಲೋಚನೆ ದಾದಾರವರಿಗೆ

ಸ್ವಾಭಾವಿಕವಾಗಿತ್ತು. ಹಾಗೆಯೇ ತಮ್ಮ ದೇಶದ ಸ್ಥಿತಿಗತಿಗಳನ್ನು ಕುರಿತು ಅಲ್ಲಿ ಪ್ರಚಾರ ನಡೆಸಬೇಕೆಂದೂ ಯೋಚನೆಯಿತ್ತು. ಇದಕ್ಕೆ ಅನುಕೂಲವಾಗುವಂತೆ **"ಕಾವಸಾ"** ಎಂಬ ಪಾರಸೀ ಮನೆತನದ ವ್ಯಾಪಾರದ ಮಳಿಗೆ ಇಂಗ್ಲೆಂಡಿನಲ್ಲಿ ಪ್ರಾರಂಭವಾಯಿತು, ಅದರಲ್ಲಿ ದಾದಾ ಅವರು ಉದ್ಯೋಗ ಪಡೆದು ಲಂಡನ್ನಿನಲ್ಲಿ ನೆಲಸಿದರು. ಆದರೆ ಕೊಂಚ ಕಾಲದ ತರುವಾಯ ಆ ಸಂಸ್ಥೆಯಲ್ಲಿ ಕೆಲವು ವರ್ತಕ ನೀತಿಯ ಪ್ರಶ್ನೆಗಳೆದ್ದು, ಭಿನ್ನಾಭಿಪ್ರಾಯದ ಕಾರಣದಿಂದ ದಾದಾ ಆ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟದ್ದಾಯಿತು. ಕೆಲವು ದಿವಸ ಕಳೆದ ಮೇಲೆ ಅವರು ಸ್ವಂತ ವಾಗಿಯೇ ವ್ಯಾಪಾರವನ್ನಾರಂಭಿಸಿದರು. ಅದು ಯೂರೋಪಿನಲ್ಲೂ ಅಮೆರಿಕ ದಲ್ಲೂ ಯುದ್ಧಗಳ ಕಾಲ. ಆದದ್ದರಿಂದ ವ್ಯಾಪಾರ ಚೆನ್ನಾಗಿ ನಡೆಯಿತು. ಬಂದ ಲಾಭದಲ್ಲಿ ಬಹ್ವಂಶವನ್ನು ದಾದಾಭಾಯಿ ಧರ್ಮಕಾರ್ಯಗಳಿಗಾಗಿ ಮುಡುಪು ಮಾಡಿ ದರು. ಆದರೆ ಕೆಲವು ಕಾಲದ ಮೇಲೆ ಯುದ್ಧ ನಿಂತಾಗ ವ್ಯಾಪಾರ ತಗ್ಗಿ ನಷ್ಟ ಒದಗಿತು. ಸುಮಾರು 1891ರಲ್ಲಿ ದಾದಾ ಮಳಿಗೆ ಮುಚ್ಚಿದ್ದಾಯಿತು.

ಏತನ್ಮಧ್ಯೆ, 1856ರಲ್ಲಿ, ದಾದಾರವರಿಗೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಗುಜರಾತೀ ಪ್ರೊಫೆಸರ್ ಪದವಿ ದೊರೆಯಿತು. ಹತ್ತು ವರ್ಷ ಅವರು ಆ ಕೆಲಸ ದಲ್ಲಿದ್ದರು.

ಇದೆಲ್ಲ ಆದದ್ದು ಈಗ್ಗೆ ಒಂದು ನೂರು ವರ್ಷಗಳ ಹಿಂದೆ. ಎಂಬುದನ್ನು ನಾವು ನೆನಪಿನಲ್ಲಿರಿಸಿಕೊಳ್ಳಬೇಕು. ಅದು ಇಂಡಿಯದಲ್ಲಿ ಸಿಪಾಯಿದಂಗೆ ಎದ್ದ ಕಾಲ. ಆ ದಂಗೆಯ ಫಲಿತಾಂಶವಾಗಿ ಇಂಡಿಯದ ರಾಜ್ಯಭಾರವನ್ನು ಬ್ರಿಟಿಷ್ ಚಕ್ರವರ್ತಿನಿ ವಿಕ್ಟೋರಿಯಾ ರಾಣಿ ವಹಿಸಿಕೊಂಡು. ಇಂಡಿಯದ ಜನತೆಗೆ ಒಂದು ಭರವಸೆಯ ಉದ್ಘೋಷಣೆಯನ್ನು ಮಾಡಿಸಿದಳಷ್ಟೆ ? ಆ ಘೋಷಣೆಯನ್ನು ಆಧಾರವಾಗಿರಿಸಿ ಕೊಂಡು ನಮ್ಮ ರಾಜಕೀಯದಲ್ಲಿ ಪ್ರಗತಿ ಸಾಧಿಸಬೇಕಾದದ್ದೆಂದು ದಾದಾಭಾಯಿ ನಿರ್ಧರಿಸಿದರು.

ಇಂಡಿಯ ಸರ್ಕಾರದ ಆಡಳಿತಗಳು ಹೇಗೆ ರಾಣಿಯ ಉದ್ಘೋಷಣೆಗೆ ತಕ್ಕಂತಿಲ್ಲ, ಜನಕ್ಕೆ ಏನೇನು ಅಸಮಾಧಾನಗಳಿವೆ, ಅವರ ಯೋಗಕ್ಷೇಮಗಳಿಗೋಸ್ಕರ ಸರಕಾರ ಏನೇನು ಮಾಡಬೇಕಾಗಿದೆ—ಈ ವಿಚಾರಗಳನ್ನು ಕುರಿತು ದಾದಾ ಅವರು ಆಗಾಗ ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಮಾಡಿಸಿದರು. ಅಲ್ಲಿಯ ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡಿದರು. ಇದರಿಂದ ಬ್ರಿಟಿಷ್ ಜನಕ್ಕೆ ಇಂಡಿಯದ ನಿಜವಾದ ವಿದ್ಯಮಾನಗಳು ತಿಳಿಯುವಂತಾಯಿತು. ದಾದಾ ಅವರ ಹೆಸರೂ ಯೋಗ್ಯತೆಯೂ ಪ್ರಕಾಶಕ್ಕೆ ಬಂದವು.

1870ರಲ್ಲಿ ದಾದಾಭಾಯಿ ಸ್ವದೇಶಕ್ಕೆ ಬಂದಿದ್ದರು. ಆಗ್ಗೆ ಇಲ್ಲಿಯ ಬರೋಡ ಸಂಸ್ಥಾನದ ಸಂದರ್ಭಗಳು ವಿಷಮಿಸಿಕೊಂಡಿದ್ದವು. ರಾಜ ಮೂರ್ಖನಾಗಿದ್ದ ; ಸರಕಾರ ಎಷ್ಟೆಷ್ಟು ಕೊಳೆಯಬಹುದೋ ಅಷ್ಟು ಕೊಳೆತಿತ್ತು : ಬ್ರಿಟಿಷ್ ಸರಕಾರ

ರಾಜನಲ್ಲಿ ಆಗ್ರಹಪಟ್ಟಿತ್ತು. ಅಂಥ ಸಂದರ್ಭದಲ್ಲಿ ರಾಜನು ದಾದಾಭಾಯಿಯಿಂದ ತನ್ನ ಕಷ್ಟ ಪರಿಹಾರವಾದೀತೆಂದು ನಿರೀಕ್ಷಿಸಿ ದಾದಾ ಅವರನ್ನು ದಿವಾನ್ ಪದವಿಗೆ ಕರೆದು ನಿಯಮಿಸಿದ. ಆದರದು ಹೆಚ್ಚು ದಿವಸ ನಡೆಯಲಿಲ್ಲ. ದಾದಾ ಅವರಂಥ ನ್ಯಾಯನಿಷ್ಠರಿಗೂ ಆ ಮೂರ್ಖರಾಜನಿಗೂ ಸರಿಹೊಂದಿಕೆ ಹೇಗೆ ಸಾಧ್ಯ ? ಬರೋಡದಿಂದ ಹಿಂತಿರುಗಿದ ಮೇಲೆ 1875ರಲ್ಲಿ ದಾದಾ ಅವರು ಬೊಂಬಾಯಿ Corporation ಎಂಬ ಪೌರಸಂಸ್ಥೆಯ ಸದಸ್ಯರಾಗಿ ಚುನಾಯಿಸಲ್ಪಟ್ಟು ಕೆಲವು ಕಾಲ ಆ ಮಹಾಪಟ್ಟಣದ ಸಾರ್ವಜನಿಕ ಜೀವನವನ್ನು ಕಟ್ಟಲು ಶ್ರಮಿಸಿದರು. ಉಪನ್ಯಾಸ ಕೊಟ್ಟರು. ಪತ್ರಿಕೆಗಳಲ್ಲಿ ಟೀಕಿಸಿದರು, ಜನದಲ್ಲಿ ಜಾಗೃತಿಯುಂಟಾಯಿತು.

ಇಂಡಿಯದಲ್ಲಿ ಎಷ್ಟು ಶ್ರಮಪಟ್ಟರೂ ಅದು ಸಾರ್ಥಕವಾಗಬೇಕಾದರೆ. ಇಂಗ್ಲೆಂಡಿನಲ್ಲಿ ಕೆಲಸ ನಡೆಯಬೇಕು. ಇಂಡಿಯಾ ರಾಜಕೀಯಕ್ಕೆ ಬೀಗದ ಕೈ ಇರುವುದು ಇಂಗ್ಲೆಂಡಿನಲ್ಲಿ. ಇಂಗ್ಲೆಂಡಿನ ಸರಕಾರದ ಕೀಲು ಇರುವುದು ಪಾರ್ಲಿಮೆಂಟಿನಲ್ಲಿ. ಆದದ್ದರಿಂದ ಯಾರು ಇಂಗ್ಲೆಂಡಿನ ಪಾರ್ಲಿಮೆಂಟ್ ಸಭೆಯಲ್ಲಿ ನಿಂತು ಇಂಡಿಯದ ಪರವಾಗಿ ಮಾತನಾಡುತ್ತಾನೋ ಅವನು ಇಂಡಿಯಾ ಸರಕಾರವನ್ನು ಸರಿಪಡಿಸಲು ಸಮರ್ಥನಾಗುತ್ತಾನೆ. ಹೀಗೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಜಾಗ ಸಂಪಾದಿಸಿಕೊಳ್ಳುವುದು ತನಗೆ ದೇಶದೃಷ್ಟಿಯಿಂದ ಮುಖ್ಯಕರ್ತವ್ಯ ಎಂದು ದಾದಾ ನಿರ್ಣಯ ಮಾಡಿಕೊಂಡನು. ಅದರಂತೆ ಆತನು 1886ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ತಕ್ಕ ಸನ್ನಾಹ ನಡೆಸಿದನು. ಮೊದಲು ಹಾಲ್‌ಬರ್ನ್ ಎಂಬ ಚುನಾವಣೆಯ ಕ್ಷೇತ್ರದಲ್ಲಿ ಉಮೇದು ಮಾಡಿದನು. ಅದು ಫಲಕ್ಕೆ ಬರಲಿಲ್ಲ. ಬಳಿಕ ಫಿನ್ಸ್‌ಬರಿ ಕ್ಷೇತ್ರದಿಂದ ನಿಂತು ಜಯಶೀಲನಾದನು. ಅದು 1886ರ ಜುಲೈ 6ರಂದು. ಇಂಡಿಯಾ ದೇಶ ಹೊರಪ್ರಪಂಚದಲ್ಲಿ ಗೆದ್ದ ಗೆಲುವುಗಳಲ್ಲಿ ಅದು ಮೊದಲನೆಯದು. ಸ್ವಾಮಿ ವಿವೇಕಾನಂದರು ಅಮೆರಿಕದ ಚಿಕಾಗೋವಿನಲ್ಲಿ ಪಡೆದ ಜಯ ಎರಡನೆಯದು. ಅಲ್ಲಿಂದೀಚೆಗಿನವು ಉಳಿದ ಜಯಗಳು. ಯಾವ ಜನ ಇಂಡಿಯಕ್ಕೆ ರಾಜನಾಗಿತ್ತೋ, ಯಾರು ಭಾರತೀಯರನ್ನು ಅಸಭ್ಯರೆಂದೂ ಅಸಮರ್ಥರೆಂದೂ ಭಾವಿಸಿದ್ದರೋ ಅಂಥ ಬ್ರಿಟಿಷ್ ಮಹಾಜನರು ತಮ್ಮ ಪ್ರತಿನಿಧಿಯಾಗಿರಲು ಈ ಭಾರತೀಯನು ತಕ್ಕವನು—ಅಂಥ ಪ್ರಾಮಾಣಿಕ. ಅಂಥ ಬುದ್ಧಿವಂತ. ಅಂಥ ನ್ಯಾಯಶೀಲ, ಅಂಥ ದೊಡ್ಡಮನುಷ್ಯ—ಎಂದು ಹೇಳುವಂತೆ ಮಾಡಿದ್ದು ದಾದಾಭಾಯಿಯ ಯೋಗ್ಯತೆಗೆ ದೃಷ್ಟಾಂತ. ಅದು ಆತನ ದೇಶಕ್ಕೇ ಗೌರವ.

ಈ ವೇಳೆಗೆ ನಮ್ಮ ನ್ಯಾಷನಲ್ ಕಾಂಗ್ರೆಸ್ ಹುಟ್ಟಿ ತಲೆಯೆತ್ತಿತ್ತು. ದಾದಾಭಾಯಿಯವರು ಆ ಸಮಾರಂಭದಲ್ಲಿ ಮೊದಲಿನಿಂದ ಸೇರಿದ್ದರು. ಅವರು ಕಾಂಗ್ರೆಸ್ಸಿಗೆ ಮೂರು ಸಲ ಅಧ್ಯಕ್ಷರಾಗಿದ್ದರು. "ಸ್ವರಾಜ್ಯ" ಎಂಬ ಪದ ಮೊದಲು ಪ್ರಚುರವಾದದ್ದು ಅವರ 1906ರ ಅಧ್ಯಕ್ಷ ಭಾಷಣದಿಂದ. ಭಾರತೀಯರ ಸಮಸ್ತ ರಾಜಕೀಯ ಮನೋಗತಗಳೂ ನ್ಯಾಯನೀತಿಗಳೂ "ಸ್ವರಾಜ್ಯ" ಶಬ್ದದಲ್ಲಿ ಅಡಕವಾಗಿವೆಯೆಂದು ದಾದಾ ಅವರು ಸಾರಿದರು. ಬಾಲಗಂಗಾಧರ ತಿಲಕ್ ಮೊದಲಾಗಿ ಎಲ್ಲ ಜನನಾಯಕರೂ ಅದನ್ನಂಗೀಕರಿಸಿದರು.

ದಾದಾಭಾಯಿಯವರು ತಮ್ಮ 92 ವರ್ಷಗಳ ಜೀವಿತಕಾಲದಲ್ಲಿ ಅರ್ಧ ಶತಮಾನಕ್ಕಿಂತ ಹೆಚ್ಚಿನ ಭಾಗವನ್ನು ಸ್ವರಾಜ್ಯ ಪ್ರಯತ್ನಕ್ಕೆ ಧಾರೆಯೆರೆದರು. ಆ ಪ್ರಯತ್ನದ ಫಲಿತಾಂಶವಾಗಿ ಬಂದದ್ದು ಬ್ರಿಟಿಷರ ಜವಾಬ್ದಾರಿ ಸರಕಾರದ ಪದ್ಧತಿಯ ವಾಗ್ದಾನ. 1917ರಲ್ಲಿ ಬ್ರಿಟಿಷ್ ಮಂತ್ರಿ ಮಾಂಟೆಗೊ ಎಂಬಾತನು ಪಾರ್ಲಿಮೆಂಟಿನಲ್ಲಿ ಸರಕಾರದ ಪರವಾಗಿ ಒಪ್ಪಿಸಿದ ನಿರೂಪದಲ್ಲಿ—"ಇಂಡಿಯದ ಬಗ್ಗೆ ಬ್ರಿಟಿಷ್ ಸರಕಾರದ ರಾಜ್ಯನೀತಿಯ ಗುರಿ ಆ ದೇಶದಲ್ಲಿ ಕ್ರಮಾಕ್ರಮವಾಗಿ ಉತ್ತರಬಾಧ್ಯ ಸರಕಾರವನ್ನು ಸ್ಥಾಪಿಸುವುದು. ಮತ್ತು ಅದಕ್ಕನುಗುಣವಾಗಿ ಸರಕಾರದ ಯಂತ್ರವನ್ನು ಪರಿಷ್ಕಾರಪಡಿಸುವುದು"—ಎಂದು ಸ್ಪಷ್ಟವಾಗಿ ನುಡಿದನು. ಅದೇ ನಮ್ಮ ದೇಶದಲ್ಲಿ ಪಾರ್ಲಿಮೆಂಟರಿ ಪದ್ಧತಿಗೆ ಅಂಕುರಾರ್ಪಣೆ. ಹೀಗೆ ದಾದಾಭಾಯಿಯನ್ನು ಭಾರತಸ್ವರಾಜ್ಯದ ಮೂಲಪುರುಷನೆಂದೂ ಸ್ವತಂತ್ರ ಭಾರತದ ಪಿತಾಮಹನೆಂದೂ ಕರೆಯುವುದು ಉತ್ಪ್ರೇಕ್ಷೆಯಲ್ಲ.

ದಾದಾಭಾಯಿಯವರ ನೀತಿಗುಣರಾಶಿಯಲ್ಲಿ ಶಿಖರವಾದವು ಮೂರು : ಸತ್ಯನಿಷ್ಠೆ, ವಿನಯ, ಆತ್ಮಶುದ್ಧಿ. ಅವರು ಯಾವ ವಿಷಯವನ್ನು ಮನಸ್ಸಿಗೆ ತೆಗೆದುಕೊಂಡರೂ ಅದಕ್ಕೆ ಸಂಬಂಧಪಟ್ಟ ಎಲ್ಲ ಸಂಗತಿಗಳನ್ನೂ ಸಂಗ್ರಹಿಸಿ ಪರೀಕ್ಷಿಸಿದ ಹೊರತು. ಮತ್ತು ಅದರ ನಾನಾ ಪಕ್ಷಗಳನ್ನು ತಿಳಿದುಕೊಂಡು ವಿಮರ್ಶೆ ಮಾಡಿದ ಹೊರತು ಅದನ್ನು ಕುರಿತು ಮಾತನಾಡುತ್ತಿರಲಿಲ್ಲ. ಅವರಾಡಿದ ಪ್ರತಿಯೊಂದು ಮಾತಿಗೂ ಆಧಾರಸಾಮಗ್ರಿ ಬಲವಾಗಿರುತ್ತಿತ್ತು. ಆದ್ದರಿಂದ ಅವರ ವಾದವನ್ನು ತಳ್ಳಿಹಾಕುವುದು ಯಾರಿಗೂ ಸಾಧ್ಯವಿರಲಿಲ್ಲ.

ಅವರ ಮಾತಿನಲ್ಲಿ ಅತಿವಾದಗಳು ಕಾಣುತ್ತಿರಲಿಲ್ಲ. ಮಾತು ಸರಳವಾಗಿ. ಆಡಂಬರವಿಲ್ಲದೆ. ಮರ್ಯಾದೆಯಿಂದ ಬರುತ್ತಿತ್ತು. ಅದು ಬಲವಿಲ್ಲದ್ದೆಂದಲ್ಲ ; ಕಾರ್ಯಕಾರಿಯಾಗುವ ಶಕ್ತಿ ಅದರಲ್ಲಿರುತ್ತಿತ್ತು ; ಆದರೆ ರೋಷ ಹುಟ್ಟಿಸುವ ಉಗ್ರತೆ ಅದರಲ್ಲಿ ಇರಲಿಲ್ಲ. ಉಗ್ರತೆ ದಾದಾ ಅವರ ಸ್ವಭಾವದಲ್ಲಿರಲಿಲ್ಲ.

ಅವರು ಜೀವನದ ಕಷ್ಟನಿಷ್ಠುರಗಳನ್ನು ಅನುಭವಿಸಿದ್ದವರು. ಬಡತನವನ್ನು ಸ್ವಯಂ ಆಗಿ ಕಂಡಿದ್ದರು. ರೋಗ–ವಿಯೋಗಗಳನ್ನು ಪಟ್ಟಿದ್ದರು. ಅಪಜಯವನ್ನೂ ನಷ್ಟವನ್ನೂ ಹೊತ್ತಿದ್ದರು. ಹೀಗೆ ಅವರ ಹೃದಯ ಮೃದುವಾಗಿತ್ತು. ಕಷ್ಟಕಾರ್ಪಣ್ಯಗಳಿಂದ ಮನಸ್ಸು ರೋಸಿ ರಟ್ಟುಕಟ್ಟುವುದೂ ಲೋಭಕ್ರೋಧಗಳು ಹೆಚ್ಚುವುದೂ ಲೋಕದಲ್ಲುಂಟು. ಆದರೆ ದಾದಾ ಅವರಲ್ಲಿ ಅದು ಹಾಗಾಗದೆ ಪ್ರೀತಿಕಾರಕವಾಯಿತು. ಇದು ಅವರ ಸ್ವಭಾವದಲ್ಲಿದ್ದ ವಿಶೇಷ ಲಕ್ಷಣ.

ಅವರು ಸರ್ವಸುಲಭರು. ಲಂಡನ್ನಿನಲ್ಲಿ ಅವರ ಮನೆ ಎಲ್ಲ ಭಾರತೀಯರಿಗೂ ಸ್ವಂತ ಮನೆಯಂತೆ ಇತ್ತು. ಗಾಂಧಿಯವರು ಹೀಗೆ ಹೇಳಿದ್ದಾರೆ—"Indian students had free access to the G.O.M. at all hours of the day.

Indeed he was in the place of father to everyone of them, no matter to which province or religion they belonged. He was there to advise and guide them in their difficulties. I have always been a hero-worshipper. And so Dadabhai became real Dada to me."

ದಾದಾ ಅವರು ನಿರ್ಮಲರು. ಒಳಗಾಗಲಿ ಹೊರಗಾಗಲಿ ಯಾವ ಕೊಳಕಿಗೂ ಅವರಲ್ಲಿ ಅವಕಾಶವಿರಲಿಲ್ಲ. ಆಹಾರ–ವಿಹಾರಗಳಲ್ಲಿ ಅವರು ನೇಮಿಷ್ಠರು. ಮಾದಕ ಪದಾರ್ಥಗಳೂ ಹೊಗೆಯ ಸೊಪ್ಪಿನ ದಶಾವತಾರಗಳೂ ಅವರ ಬಳಿ ಎಂದೂ ಸುಳಿದಾಡಿರಲಿಲ್ಲ. ಅವರು ಹುಟ್ಟಿನಲ್ಲಿ ವೈದಿಕರೆಂದು ಹೇಳಿದೆನಷ್ಟೆ ? ಆ ಸಂಪ್ರದಾಯವನ್ನು ಅವರು ಕಡೆಯವರೆಗೂ ಕಾಪಾಡಿಕೊಂಡಿದ್ದರು. ಮಹನೀಯರಾದ ರಾನಡೆಯವರು ದಾದಾಭಾಯಿಯನ್ನು ಋಷಿಕಲ್ಪರೆಂದು ಕರೆದರು. ಗೋಖಲೆಯವರು ಅದೇ ಭಕ್ತಿಯನ್ನಿರಿಸಿಕೊಂಡಿದ್ದರು. ಅವರು ದಾದಾಭಾಯಿ ಜೀವಿತ ಚರಿತ್ರೆಯನ್ನು ಬರೆಯುವ ಉದ್ದೇಶ ಉಳ್ಳವರಾಗಿದ್ದರು. ಅದು ನೆರವೇರಿದ್ದಿದ್ದರೆ ನಮ್ಮ ಸಾಹಿತ್ಯ ಭಂಡಾರವಲ್ಲಿ ಒಂದು ಅಮೂಲ್ಯ ರತ್ನ ಸೇರಿರುತ್ತಿತ್ತು.

ಜಾನ್ ಸ್ಟೂಅರ್ಟ್ ಮಿಲ್*

ಇಂಡಿಯದ ಕಾಂಗ್ರೆಸ್ ಸಭೆ 1905ರಲ್ಲಿ ಕಾಶಿಯಲ್ಲಿ ಸೇರಿತ್ತು. ಅಧ್ಯಕ್ಷರು ಗೋಖಲೆಯವರು. ನಮ್ಮ ದೇಶ ಆ ಕಾಲದಲ್ಲಿ ಬ್ರಿಟನ್ ರಾಜ್ಯದ ವಶವಲ್ಲಿತ್ತಷ್ಟೆ ? ಬ್ರಿಟಿಷ್ ಸರಕಾರದಲ್ಲಿ ಮಾರ್ಲೆ ಎಂಬವರು ಆಗತಾನೆ ಇಂಡಿಯಾ ವಿಚಾರದ ಮಂತ್ರಿ ಪದವಿಗೆ ಬಂದಿದ್ದರು. ಆ ಮಾರ್ಲೇಯವರಿಂದ ಇಂಡಿಯಕ್ಕೆ ಉಪಕಾರವಾಗುವ ಭರವಸೆ ತಮಗುಂಟೆಂದು ಗೋಖಲೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು. ಅವರ ಆ ಶುಭನಿರೀಕ್ಷೆಗೆ ಕಾರಣವೇನೆಂದರೆ ಆ ಮಾರ್ಲೇಯವರು ಮಿಲ್ ಎಂಬ ಪ್ರಸಿದ್ಧ ತತ್ತ್ವವಿಚಾರಿಯ ಶಿಷ್ಯರಾಗಿದ್ದ ಸಂಗತಿ. ಆ ಮಿಲ್ ಎಂಬಾತನು ರಾಜಕೀಯ ಸಾಮಾಜಿಕ ವ್ಯವಸ್ಥೆಗಳಲ್ಲಿ ಪ್ರಗತಿಯ ಭಾವನೆ ಉಳ್ಳವನು ; ಆತನದು ವಿಶಾಲದೃಷ್ಟಿ, ಉದಾರ ನೀತಿ ; ಅಂಥ ಮಹನೀಯನ ತತ್ತ್ವೋಪದೇಶ ವ್ಯರ್ಥವಾಗಲಾರದ್ದು ; ಹಾಗೆಂಬುದು ಗೋಖಲೆಯವರ ಮಾತಿನಲ್ಲಡಗಿದ್ದ ಭಾವನೆ. ಅಷ್ಟು ಹೆಚ್ಚಿನ ಪ್ರಭಾವಶಾಲಿ ಮಿಲ್. ಆತನ ತತ್ತ್ವಗಳು ನಮ್ಮ ಕಾಲಕ್ಕೂ ಉಳಿದು ನಿಂತಿವೆ. ಆದದ್ದರಿಂದ ಆತನ ಸಂಗತಿಯನ್ನು ಈಗ ನಾವು ನೆನಪಿಗೆ ತಂದುಕೊಳ್ಳುವುದು ಯುಕ್ತವಾಗಿದೆ.

ಮಿಲ್ ಎಂಬ ಹೆಸರು **ಜಾನ್ ಸ್ಟೂಅರ್ಟ್ ಮಿಲ್** ಎಂಬುದರ ಸಂಕ್ಷೇಪ ರೂಪ. ಜಾನ್ ಮಿಲ್ ಬದುಕಿದ್ದದ್ದು 1806 ರಿಂದ 1877ರವರೆಗೆ. ಅದು ಫ್ರಾನ್ಸ್ ದೇಶದ ಮಹಾಕ್ರಾಂತಿಯಿಂದ ಈಚಿನ ಕಾಲ ; ನಮ್ಮ ದೇಶದಲ್ಲಿ ಸಿಪಾಯಿದಂಗೆ ನಡೆದ ಕಾಲ ; ರಾಜಾ ರಾಮಮೋಹನ ರಾಯರ ತರುವಾಯದ ಕಾಲ ; ಎಂದರೆ ಇಲ್ಲಿ ನೂತನ ವಿಚಾರಯುಗ ಪ್ರಾರಂಭವಾಗುತ್ತಿದ್ದ ಕಾಲ.

ಜಾನ್ ಮಿಲ್ಲನ ತಂದೆ ಜೇಮ್ಸ್ ಮಿಲ್. ಜೇಮ್ಸನಿಗೆ ಆಗ ನಮ್ಮ ದೇಶವನ್ನಾಳುತ್ತಿದ್ದ "ಕುಂಪಣಿ"ಯ—ಎಂದರೆ ಈಸ್ಟ್ ಇಂಡಿಯಾ ಕಂಪೆನಿಯ ಲಂಡನ್ ಕಛೇರಿಯಲ್ಲಿ

---

* 28-10-1957 ರಂದು ಬೆಂಗಳೂರು ಆಕಾಶವಾಣಿಯಿಂದ ಪ್ರಸಾರಮಾಡಿದ ಭಾಷಣ.

ಉದ್ಯೋಗವಿತ್ತು. ಅದಕ್ಕಿಂತ ಹೆಚ್ಚಾಗಿ ಆತನು ಅಂದಿನ ಇಂಗ್ಲಿಷ್ ತತ್ತ್ವ ವಿಚಾರಿಗಳಲ್ಲಿ ಗಣ್ಯನಾಗಿದ್ದ. ಆ ತತ್ತ್ವವಿಚಾರಿಗಳ ಗುಂಪಿಗೆ ಬೆಂಥಮ್ ಎಂಬಾತನು ನಾಯಕನಾಗಿದ್ದನು. ಬೆಂಥಮ್ಮಿನ ವಿಚಾರ ಕೂಡ ನಮಗೆ ಬೇಕಾದದ್ದೇ. ಆದರೆ ಈಗ ಅದಕ್ಕೆ ಹೊತ್ತಿಲ್ಲ. ಆ ಬೆಂಥಮ್ ಪಂಥದ ಮುಖ್ಯತತ್ತ್ವವೇನೆಂದರೆ, ಯಾವ ನಡವಳಿಕೆಯಿಂದ ಜನದಲ್ಲಿ ಬಹುಮಂದಿಗೆ ಬಹು ಹೆಚ್ಚಿನ ಸುಖ ಉಂಟಾದೀತೋ ಅದೇ ನೀತಿಮೂಲವೆಂಬುದು. ಈ ಪಂಥಕ್ಕೆ "**ಯುಟಿಲಿಟೇರಿಯನಿಸಂ**" (ಪ್ರಯೋಜನ ಮುಖ್ಯತಾ ವಾದ) ಎಂದು ಹೆಸರು. ಸುಖವೇ ಪರಮ ಪ್ರಯೋಜನ. ಈ ವಾದವನ್ನು ಸಿದ್ಧಪಡಿಸುವುದರಲ್ಲಿ ಆ ಪ್ರಯೋಜನ ಪಂಥಿಗಳು ಮನಶ್ಶಾಸ್ತ್ರ, ಪ್ರಕೃತಿವಿಜ್ಞಾನ, ತರ್ಕಶಾಸ್ತ್ರಗಳನ್ನು ವಿಶೇಷವಾಗಿ ಕೃಷಿಮಾಡಿಕೊಂಡಿದ್ದರು.

ಈ ಬಗೆಯ ಬುದ್ಧಿವೃತ್ತಿ ಜೇಮ್ಸ್ ಮಿಲ್ಲಿನದು. ತನ್ನ ಮಗನನ್ನು ಆ ಪಂಥಕ್ಕೆ ಅನುಸಾರವಾಗಿ ಬೆಳಸಬೇಕೆಂಬುದು ಆತನ ಸಂಕಲ್ಪ. ಅದರಂತೆ ಮಗನಾದ ಜಾನ್ ಮಿಲ್ಲಿಗೆ ತಂದೆ ತಾನೇ ಖುದ್ದು ಮೇಲ್ವಿಚಾರಣೆಯಲ್ಲಿ ವಿದ್ಯಾಭ್ಯಾಸ ಮಾಡಿಸಿದನು. ಜಾನ್ ಮಿಲ್ ಒಳ್ಳೆಯ ಮೇಧಾವಿ; ಬಲವಾದ ಜ್ಞಾಪಕಶಕ್ತಿ ಪಡೆದಿದ್ದವನು. 12ನೆಯ ವರ್ಷ ವಯಸ್ಸಿಗೆ ಮೊದಲೇ ಅವನು ಗ್ರೀಕ್. ಲ್ಯಾಟಿನ್ ಭಾಷೆಗಳ ಪ್ರೌಢ ಗ್ರಂಥ ಗಳನ್ನು ಕಂಠಪಾಠ ಮಾಡಿಕೊಂಡಿದ್ದನು. ಅವುಗಳಿಂದ ಅವನ ಬುದ್ಧಿಗೆ ಶಾಸ್ತ್ರ ವ್ಯಾಯಾಮವಾಗಿ. ಅದು ತರ್ಕಸಮರ್ಥವಾಯಿತು. ಆದರೆ ಆತನ ತಂದೆ ಮಿಲ್ಲನ ಮನಸ್ಸನ್ನು ಕಾವ್ಯ, ಕಾದಂಬರಿಗಳ ಕಡೆಗೆ ತಿರುಗಬಿಡಲಿಲ್ಲ. ತನ್ನ ವಿದ್ಯಾಭ್ಯಾಸದಲ್ಲಿ ಇದರಿಂದ ದೊಡ್ಡ ನ್ಯೂನತೆಯಾಯಿತೆಂದು ಜಾನ್ ಮಿಲ್ ತನ್ನ ಆತ್ಮಕಥೆಯಲ್ಲಿ ಬರೆದಿದ್ದಾನೆ. ಮನುಷ್ಯನ ಅಂತರಂಗಶಕ್ತಿಗಳಲ್ಲಿ ಮುಖ್ಯವಾದವು ಎರಡು : ಒಂದು ಹೃದಯ, ಇನ್ನೊಂದು ಬುದ್ಧಿ. ಹೃದಯವು ಕರುಣೆ, ಪ್ರೀತಿ, ಉತ್ಸಾಹ ಮೊದಲಾದ ಭಾವ ವಿಶೇಷಗಳನ್ನು ಹೊರಹೊಮ್ಮಿಸುವ ಅಂಗ. ಬುದ್ಧಿಯಾದರೋ ಪ್ರಶ್ನೆ, ಚರ್ಚೆ, ಸಂದೇಹ—ಇಂಥಾ ವೈಜ್ಞಾನಿಕ ಪ್ರಸಂಗಗಳನ್ನು ಕೆರಳಿಸುವ ಅಂಗ. ಈ ಎರಡು ಅಂಗಗಳೂ ಸಮಸಮವಾಗಿ ಬೆರೆತು ಒಂದುಗೂಡಿ ತತ್ತ್ವವನ್ನು ಕಾಣಬೇಕು. ಹಾಗಾಗದೆ ಒಂದೇ ಅಂಗ ಮಾಡಿದ ಕೆಲಸ—ಒಂದೇ ಕಣ್ಣಿನ ನೋಟದಂತೆ—ನಮ್ಮ ಮುಂದಿರುವ ಪದಾರ್ಥದ ಒಂದು ಭಾಗವನ್ನು ಮಾತ್ರ ಕಾಣುತ್ತದೆ. ಅದು ಪೂರ್ಣ ದೃಷ್ಟಿಯಾಗದು. ಇದನ್ನು ಮಿಲ್ ತತ್ತ್ವಜ್ಞನು ಕಂಡುಕೊಂಡು. ತಾನು ಸ್ವತಂತ್ರ ನಾದಾಗ ಕಾವ್ಯ, ಕಲೆಗಳ ಕಡೆಗೆ ಮನಸ್ಸನ್ನು ತಿರುಗಿಸಿದನು. ಕವಿಗಳಲ್ಲಿ ವರ್ಡ್ಸ್‌ವರ್ತ್ ಎಂಬ ಪ್ರಕೃತಿರಹಸ್ಯದರ್ಶಿಯೂ ಕಾದಂಬರಿಕಾರರಲ್ಲಿ ಡಿಕನ್ಸ್ ಎಂಬ ಸಮಾಜ ಜೀವನ ಚಿತ್ರಕನೂ ಆತನಿಗೆ ಪ್ರಿಯರಾದವರು.

ಜಾನ್ ಮಿಲ್ ತನ್ನ ತಂದೆ ಕೆಲಸಮಾಡಿದ್ದ ಕಛೇರಿಯಲ್ಲಿಯೇ ಉದ್ಯೋಗ ಪಡೆದುಕೊಂಡ. ಅದು ಕುಂಪಣಿಯದೆಂದು ಆಗಲೇ ಹೇಳಿದೆನಷ್ಟೆ ? ಅದರ ಕೈಯಿಂದ ಇಂಡಿಯದ ಆಡಳಿತವನ್ನು ಬ್ರಿಟಿಷ್ ರಾಣಿ ವಿಕ್ಟೋರಿಯಾ ವಹಿಸಿಕೊಂಡಾಗ. ಮಿಲ್ ಮಹಾಶಯನು ಪಿಂಚನ್ ಪಡೆದು ವಿಶ್ರಾಂತನಾದ. ಆ ಬಳಿಕ ಆತನು ತನ್ನ ಕಾಲವನ್ನು

ತತ್ತ್ವವ್ಯಾಸಂಗ, ಗ್ರಂಥಲೇಖನ, ಪತ್ರಿಕಾ ಸಂಪಾದನ ಮೊದಲಾದ ಸಾರ್ವಜನಿಕ ಬೋಧನಕಾರ್ಯಕ್ಕೆ ವಿನಿಯೋಗಿಸಿದನು. ಕೊಂಚ ಕಾಲ ಆತ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯನಾಗಿದ್ದದ್ದೂ ಉಂಟು.

ಆತ ವ್ಯಾಸಂಗ ಮಾಡಿದ ವಿಷಯಗಳು ತರ್ಕ (Logic). ಸಂಪದ್ವ್ಯವಸ್ಥೆ (Political Economy). ರಾಜ್ಯವಿಧಾನಗಳು. ಸ್ತ್ರೀಯರ ಸ್ಥಾನಮಾನಗಳು. ಸಮಾಜವ್ಯವಸ್ಥೆ—ಇವು. ತನ್ನ ತಂದೆಯೂ ಬೆಂಥಮನೂ ಪ್ರತಿಪಾದಿಸಿದ್ದ ಪ್ರಯೋಜನ ಮುಖ್ಯತಾವಾದವನ್ನು ಜಾನ್ ಮಿಲ್ಲನು ಪರಿಶೋಧಿಸಿ. ತಿದ್ದಿ. ಪ್ರಚಾರಕ್ಕೆ ತಂದನು.

ಪ್ರಯೋಜನ ಮುಖ್ಯತಾವಾದಕ್ಕೆ ನೂರು ವರ್ಷದ ಹಿಂದೆ ಇದ್ದ ಪುರಸ್ಕಾರ ಐವತ್ತು ವರ್ಷದಿಂದೀಚೆಗೆ ಇಲ್ಲ. ಅದನ್ನು ಕುರಿತು ನಾಲ್ಕಾರು ಆಕ್ಷೇಪಣೆಗಳುಂಟು. ಪ್ರಯೋಜನವೆಂದರೆ ಸುಖವೆಂದು ಅರ್ಥವಷ್ಟೆ? ಯಾವುದು ಸುಖ? ಮತ್ತು ಎಂಥ ಸುಖ? ದೇಹದ ಸುಖವೆ, ಮನಸ್ಸಿನದೆ? ಒಬ್ಬನೇ ಮನುಷ್ಯನಿಗೆ ಒಂದು ಘಳಿಗೆ ಸುಖವೆನಿಸಿದ್ದು ಮತ್ತೊಂದು ಘಳಿಗೆ ದುಃಖವೆನಿಸುವುದುಂಟಲ್ಲವೆ? ಒಂದು ಅಂಗಕ್ಕೆ ಸುಖವೆನಿಸಿದ್ದು ಮತ್ತೊಂದು ಅಂಗಕ್ಕೆ ಅಸುಖವಾಗುತ್ತದೆ. ನಾಲಗೆಗೆ ಸವಿಯಾದದ್ದು ಹೊಟ್ಟೆಗೆ ನೋವು. ಹಾಗೆಯೇ ಒಬ್ಬನಿಗೆ ಸುಖವೆನಿಸಿದ್ದು ಮತ್ತೊಬ್ಬನಿಗೆ ಅಸುಖವಾದೀತು. ರಾಜ್ಯದಲ್ಲಿ ಬಹುಮಂದಿಯ ಇಷ್ಟದಂತೆ ನಡೆಯತಕ್ಕದ್ದೆಂದರೆ. ಆಗ ಉಳಿದ ಸ್ವಲ್ಪ ಮಂದಿಯ ಪಾಡೇನು? ಕುಟುಂಬದ ಹತ್ತು ಮಂದಿಯಲ್ಲಿ ಆರು ಮಂದಿಗೆ ಖಾರ ಇಷ್ಟವಾದರೆ ಮಿಕ್ಕ ನಾಲ್ವರೂ ಹೊಟ್ಟೆಯುರಿಯಿಂದ ನರಳಬೇಕಾದದ್ದಷ್ಟೇನೆ? ಅವರು ಗೋಳಾಡುತ್ತಿರುವಲ್ಲಿ ಮಿಕ್ಕವರಿಗೆ ಊಟ ರುಚಿಸೀತೆ? ಎಲ್ಲಕ್ಕಿಂತ ಮೇಲಾಗಿ. ಸುಖವಾದದ್ದೆಲ್ಲ ಹಿತವೆ? ಸುಖಕ್ಕೂ ಹಿತಕ್ಕೂ ಭೇದ ಇಲ್ಲವೆ? ಸುಖವೇ ಕರ್ತವ್ಯಸೂಚಕವೆಂದಮೇಲೆ ನೀತಿಯೆಂಬುದು ವ್ಯಕ್ತಿಯ ಕ್ಷಣಿಕಾನುಭವದ ಆಲೋಚನೆ ತಾನೆ? ನೀತಿಯು ದೃಢವಾಗಿ ನೆಲಸಿರಬೇಕಾದರೆ ಅದಕ್ಕೆ ತಾತ್ಕಾಲಿಕ ಪ್ರಯೋಜನದ ಚಿಂತೆಗಿಂತ ಬಲವೂ ಭದ್ರವೂ ಆದ ಆಧಾರ ಬೇಕಲ್ಲವೆ? ಹೀಗೆ ನಾನಾ ಆಕ್ಷೇಪಣೆಗಳು ಹೊರಡುತ್ತವೆ. ಅದನ್ನೆಲ್ಲ ಜಾನ್ ಸ್ಟೂಅರ್ಟ್ ಮಿಲ್ ಕಾಣದವನಲ್ಲ: ನಿರಾಕರಿಸಿದವನೂ ಅಲ್ಲ. ಆ ಕಾಲದ ಪಾಶ್ಚಾತ್ಯ ತಾತ್ತ್ವಿಕರಿಗಿದ್ದ ಕಷ್ಟವೇನೆಂದರೆ—ಅವರಿಗೆ ಜಗತ್ತಂತ್ರದ ವಿಷಯದಲ್ಲಿ ಒಂದು ಶಾಶ್ವತ ಮೂಲಸತ್ಯ ಕಾಣಬಾರದೆ ಇದ್ದದ್ದು. ಅದಕ್ಕೆ ಹಿಂದೆ ಇದ್ದ ಭಗವನ್ಮತವಿಶ್ವಾಸವನ್ನು ಹೊಸ ವಿಜ್ಞಾನ ಸಡಲಿಸಿತ್ತು. ಕ್ರಿಶ್ಚಿಯನ್ ಮತವು ಭಗವಂತನ ಅಸ್ತಿತ್ವವನ್ನು ಸಾರಿತು. ಆದರೆ ಬೈಬಲ್ಲಿನ ಜಗತ್ಸೃಷ್ಟಿಪುರಾಣವೂ ಅದ್ಭುತ ಕಥೆಗಳೂ ವೈಜ್ಞಾನಿಕ ದೃಷ್ಟಿಯಲ್ಲಿ ಪ್ರಮಾಣಗಳಾಗಲಿಲ್ಲ. ಭಗವದಸ್ತಿತ್ವದ ವಿಷಯದಲ್ಲಿ ಅವರಿಗೆ. ಭೌತಪ್ರಪಂಚ ವಿಷಯದಲ್ಲಿ ದೊರೆತಂತೆ. ಬಾಹ್ಯಪ್ರಮಾಣಗಳು ದೊರೆಯಲಿಲ್ಲ. ಆದದ್ದರಿಂದ ಅವರು ಭಗವದ್ವಿಷಯವನ್ನು ಅಮಾನತ್ತಿನಲ್ಲಿಟ್ಟರು. ಅವರು ಆಸ್ತಿಕರಲ್ಲ; ನಾಸ್ತಿಕರೂ ಅಲ್ಲ: ಭಗವದ್ವಿಷಯ ಅವಿಜ್ಞಾತವೆಂಬ ತಟಸ್ಥವಾದ (Agnostic). ಅವಿಜ್ಞಪಂಥಕ್ಕೆ ಸೇರಿದವರು. ಹೀಗೆ

ಭಗವತ್ತತ್ತ್ವವನ್ನು ಕಳಚಿಹಾಕಿಬಿಟ್ಟ ಮೇಲೆ ಧರ್ಮಯೋಜನೆಗೆ ಆಧಾರವೆಲ್ಲುಂಟು ? ಧರ್ಮಕ್ಕೆ ಲಕ್ಷಣವೇನು ? ನೀತಿ ಎಂಬುದಕ್ಕೆ ಪ್ರಮಾಣವೇನು ? ಲೋಕದಲ್ಲಿ ಜನರ ನಡತೆಗೆ ಒಂದು ನಿಯಮ ಬೇಡವೆ ? ಬೇಕೆಂಬುದಾದರೆ ಆ ನಿಯಮವನ್ನು ಭಗವನ್ನಿಯಾಮಕದ ಹೊರತು ಯಾವ ಕಲ್ಪನೆಯ ಮೇಲೆ ಕಟ್ಟಲಾದೀತು?

ಜಾನ್ ಮಿಲ್ ಭಗವದ್ವಿಶ್ವಾಸಕ್ಕೆ ಕಾರಣ ಕಾಣದ "ಅವಿಜ್ಞ"ನಾಗಿದ್ದರಿಂದ ಆತನ ನೀತಿವಿಶ್ವಾಸವು ಕೇವಲ ಲೌಕಿಕಮಾತ್ರದ್ದಾಯಿತು. ನೀತಿಮೂಲಪ್ರೇರಣೆಯನ್ನು ಮಿಲ್ ತನ್ನ ಹೃದಯದ ಮನುಷ್ಯಸಹಾನುಭೂತಿಯಿಂದಲೂ ಲೋಕದ ಸಭ್ಯಾಚಾರಗಳಲ್ಲಿಯೂ ಕಾಣಬೇಕಾಯಿತು. ಸತ್ಯಶ್ರದ್ಧೆ. ಕರ್ತವ್ಯನಿಷ್ಠೆ. ನ್ಯಾಯವರ್ತನೆ, ಜೀವಸಹಾನುಭೂತಿ. ಪರೋಪಕಾರ, ಲೋಕಮರ್ಯಾದೆ— ಇವೇ ಮೊದಲಾದ ನೀತಿಗಳನ್ನೆಲ್ಲ ಯುಕ್ತವೆಂದು ಮಿಲ್ ಅಂಗೀಕರಿಸಿದ್ದ ; ಆತನ ಪೂರ್ವಿಕರಾದ ಬೆಂಥಮ್, ಜೇಮ್ಸ್ ಮಿಲ್ ಮೊದಲಾದವರೂ ಅಂಗೀಕರಿಸಿದ್ದರು. ಆದರೆ ಅವರ ಆ ಅಂಗೀಕಾರವು ಸಂಪ್ರದಾಯ ರೂಢಿಯ ಫಲ. ಅದು ಮತಧರ್ಮದ ಫಲಿತಾಂಶವಲ್ಲ. ಜಾನ್ ಸ್ಟೂಅರ್ಟ್ ಮಿಲ್‌ಗೆ ಆ ನೀತಿಪ್ರಕ್ರಿಯೆ ಸಾಕೆನ್ನಿಸಲಿಲ್ಲ. ಆತನು ಮತಧರ್ಮವನ್ನು ಪ್ರತ್ಯಕ್ಷವಾಗಿ ಗ್ರಹಿಸದಿದ್ದರೂ ಜನರ ಅಂತರಂಗ ಪ್ರೇರಣೆಗಳೂ ಬಹುಕಾಲದ ವಿಶ್ವಾಸಪದ್ಧತಿಗಳೂ ನೀತಿಕಾರಣಗಳೆಂದು ಕಂಡುಕೊಂಡಿದ್ದನು. ಅವಕ್ಕಿಂತ ಆಳವಾಗಿ ಈ ವಿಷಯದಲ್ಲಿ ವಿಚಾರ ನಡೆಯುವುದು ಸಾಧ್ಯವಿದೆ. ಅದು ಅವಶ್ಯವೂ ಹೌದು. ಆದರೆ ಮಿಲ್ಲಿನ ಕಾಲದಲ್ಲಿ ಅಷ್ಟು ಆಳದ ತರ್ಕಕ್ಕೆ ಸಾಮಗ್ರಿ ಇರಲಿಲ್ಲ. ಆಗ ಹೊಸ ವಿಜ್ಞಾನತರ್ಕವು ಯೌವನದ ಜೋರಿನಲ್ಲಿತ್ತು. ತನ್ನ ಮಿತಿಗಳನ್ನು ಅದು ಆಗ ಕಂಡುಕೊಂಡಿರಲಿಲ್ಲ. ಅದರ ಹೊಡೆತದಲ್ಲಿ ಮತಧರ್ಮ ಕೊಂಚಕಾಲ ಭ್ರಾಂತವಾಗಿತ್ತು. ಆದರೆ ಜಾನ್ ಮಿಲ್ಲಿನ ವಾದ ಹೇಗಾದರಿರಲಿ. ಆತನ ಆಚರಣೆಯಲ್ಲಿ ನೀತಿನಿಷ್ಠೆ ಪ್ರಕಾಶಮಾನವಾಗಿದ್ದದ್ದರಿಂದ ಆತನ ತರ್ಕದ ಕಡೆಗೆ ಯಾರೂ ಬೆರಳುತೋರಿಸಬೇಕಾಗಲಿಲ್ಲ. ಜನಕ್ಕೆ ವಾದಕ್ಕಿಂತ ಅನುಷ್ಠಾನ ಮುಖ್ಯ. ಮಾತಿಗಿಂತ ನಡತೆ ಮೆಚ್ಚಾಗಿದ್ದ ಕಡೆ ವಾದವನ್ನು ಏಕೆ ಕೆಣಕಬೇಕು ?

ಮಿಲ್ ದೇವರ ಹೆಸರನ್ನೆತ್ತದಿದ್ದರೂ ಅಂತರಂಗಸಾಕ್ಷಿಯನ್ನು ಕೈಬಿಟ್ಟವನಲ್ಲ. ಆತನು ಮನೋವಾಕ್ಕಾಯಕರ್ಮಗಳಲ್ಲಿ ಪರಮ ಪ್ರಾಮಾಣಿಕ. ನ್ಯಾಯಶೀಲ. ಉದಾರಿ. ಹಿಂದೂಜನ ಅಂಥವನನ್ನು ನೋಡಿದ್ದಿದ್ದರೆ ಅವನು ಪೂರ್ವಜನ್ಮದಲ್ಲಿ ಸತ್ಕರ್ಮ ಮಾಡಿ ಉತ್ತಮ ಸಂಸ್ಕಾರ ಪಡೆದಿದ್ದಾತನೆಂದು ಹೇಳಿದ್ದಾರು.

ಪ್ರಕೃತ ಆತನ ಲೇಖನಗಳಲ್ಲಿ ನಾವು ಮುಖ್ಯವಾಗಿ ವ್ಯಾಸಂಗ ಮಾಡಬೇಕಾದವು ಎರಡು ಜಾತಿಯವು : ಒಂದು ಸ್ವಾತಂತ್ರ್ಯ ವಿಚಾರಕ್ಕೆ ಸಂಬಂಧಪಟ್ಟವು : ಇನ್ನೊಂದು ಪ್ರತಿನಿಧಿಸರಕಾರ ಪದ್ಧತಿಗೆ ಸಂಬಂಧಪಟ್ಟವು.

ಆತನ ಸ್ವಾತಂತ್ರ್ಯತತ್ತ್ವವನ್ನು ಎರಡುಮೂರು ವಾಕ್ಯಗಳಲ್ಲಿ ಸಂಗ್ರಹಿಸಿ ಹೇಳಬಹುದು : (1) ಮನುಷ್ಯ ಬುದ್ಧಿ ಪರಿಪೂರ್ಣವಾದದ್ದಲ್ಲ. ಎಷ್ಟೋ ತಪ್ಪುಗಳು

ಅವಕ್ಕೆ ಸಹಜವಾಗಿರುತ್ತವೆ. ಆಲಸ್ಯವೂ ಭ್ರಾಂತಿಯೂ ಪ್ರಮಾದವೂ ಎಲ್ಲ ಮನುಷ್ಯರಿಗೂ ಉಂಟಾದುವೇ. ಆದದ್ದರಿಂದ ಯಾವ ಒಬ್ಬನ ಅಭಿಪ್ರಾಯವನ್ನೂ ನಾವು ಪೂರ್ತಿ ನಿರ್ದೋಷವೆಂದು ಗ್ರಹಿಸಲಾಗದು. ಅದನ್ನು ಪರೀಕ್ಷಿಸಿ ನೋಡಿದ ಮೇಲೆಯೇ ಅದನ್ನು ಅಂಗೀಕರಿಸುವುದೋ ತಳ್ಳಿಹಾಕುವುದೋ ನಿಶ್ಚಯಿಸ ಬೇಕಾಗುತ್ತದೆ. ಪರೀಕ್ಷೆಯೆಂದರೆ ನಾಲ್ಕಾರು ಬುದ್ಧಿಗಳ ಘರ್ಷಣೆ, ಅದೇ ಚರ್ಚೆ. ಚರ್ಚೆಯು, ಅಥವಾ ವಾದವಿವಾದದ ಮಾರ್ಗವೊಂದೇ ಮನುಷ್ಯನಿಗೆ ತಪ್ಪಿನಿಂದ ತಪ್ಪಿಸಿಕೊಳ್ಳಲು ಇರುವ ಉಪಾಯ. ಆದದ್ದರಿಂದ ಚರ್ಚೆಗೆ ಅಂಗಗಳಾದ ವಿಚಾರ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ—ಇವು ಎಲ್ಲರಿಗೂ ಅವಶ್ಯಗಳಾಗುತ್ತವೆ. ಅವು ನಮ್ಮ ಸೌಕರ್ಯಗಳಿಗೆ ಮಾತ್ರವೇ ಅಲ್ಲ, ನಮ್ಮ ಕರ್ತವ್ಯಗಳಿಗೂ ಬೇಕು. ಅದಿಲ್ಲದೆ ಧರ್ಮಾಧರ್ಮವಿವೇಕವಿಲ್ಲ, ಇದು ಒಂದಂಶ.

(2) ಇನ್ನೊಂದಂಶ ಮನುಷ್ಯನ ವ್ಯಕ್ತಿವಿಶೇಷವನ್ನು ಕುರಿತದ್ದು. ಸೃಷ್ಟಿಯಲ್ಲಿ ಒಬ್ಬನಿದ್ದಂತೆ ಇನ್ನೊಬ್ಬನಿಲ್ಲ. ಒಬ್ಬೊಬ್ಬನದು ಒಂದೊಂದು ತೀರಿನ ವ್ಯಕ್ತಿಲಕ್ಷಣ, ಹುಟ್ಟುಗುಣಗಳು. ಶಕ್ತಿಸಾಮರ್ಥ್ಯಗಳು. ಸ್ವಭಾವವಾಸನೆಗಳು. ಸಹವಾಸಸಂಸ್ಕಾರಗಳು, ಆಶೆಅಭಿರುಚಿಗಳು—ಇವು ಒಬ್ಬನಿಗಿರುವಂತೆ ಇನ್ನೊಬ್ಬನಿಗಿರುವುದಿಲ್ಲ. ಮತ್ತು ಪ್ರತಿಯೊಬ್ಬನಿಗೂ ಅವನವನ ಗುಣಶಕ್ತಿವಿಕಾಸದಿಂದಲೇ ಪೂರ್ತಿ ಸಮಾಧಾನ. ತನ್ನೊಳಗಿನ ಗುಣವನ್ನೂ ಬಲವನ್ನೂ ಅಪೇಕ್ಷೆಯನ್ನೂ ಅದುಮಿಟ್ಟುಕೊಳ್ಳುವುದು ಎಂಥವನಿಗಾದರೂ ಶ್ರಮವೇ ಹೊರತು ಸುಖವಲ್ಲ. ಆನಕಾರಣ ಪ್ರತಿಯೊಬ್ಬನಿಗೂ ತನ್ನೊಳಗಿನ ಗುಣಬಲಸಂಪತ್ತನ್ನು ಅಭಿವೃದ್ಧಿಪಡಿಸಿ ಸಾರ್ಥಕಮಾಡಿಕೊಳ್ಳಲು ಅವಕಾಶವಿರಬೇಕು. ಅದೇ ವ್ಯಕ್ತಿಸ್ವಾತಂತ್ರ್ಯ. ಅದೇ ಜೀವವಿಕಾಸ. ಜೀವದ ಆತ್ಮಗುಣಶಕ್ತಿವಿಕಾಸದಿಂದ ಸಮಾಜಕ್ಕೆ ಸೇವೆ. ಜೀವಕ್ಕೆ ತೃಪ್ತಿ. ಹೀಗೆ ವ್ಯಕ್ತಿ ಸ್ವಾತಂತ್ರ್ಯ ಮನುಷ್ಯಹಿತದಲ್ಲಿ ಒಂದು ಮುಖ್ಯಾಂಶ, ಆ ಸ್ವಾತಂತ್ರ್ಯಕ್ಕೆ ರಾಜ್ಯ ದಿಂದಲಾಗಲಿ ಸಮಾಜದಿಂದಲಾಗಲಿ ಗುರುಪೀಠದಿಂದಲಾಗಲಿ ಭಂಗ ಬರಬಾರದು.

(3) ಇನ್ನು ಮೂರನೆಯ ಅಂಶ: ವಿಚಾರಸ್ವಾತಂತ್ರ್ಯವೂ ವ್ಯಕ್ತಿವಿಕಾಸ ಸ್ವಾತಂತ್ರ್ಯವೂ ಹೀಗೆ ಜೀವಿಗೂ ಸಮಾಜಕ್ಕೂ ಅತ್ಯಂತ ಮುಖ್ಯವಾಗಿದ್ದರೂ ಅವು ಮಿತಿಯಿಲ್ಲದ, ಕಟ್ಟುಪಾಡಿಲ್ಲದ ಸ್ವಾತಂತ್ರ್ಯಗಳಲ್ಲ. ಆ ಸ್ವಾತಂತ್ರ್ಯಗಳೆರಡೂ ಎಲ್ಲ ಜನರಿಗೂ ಸಲ್ಲಬೇಕಾದವು. ಆದದ್ದರಿಂದ ಅವುಗಳನ್ನು ಉಪಯೋಗಪಡಿಸಿಕೊಳ್ಳು ವುದರಲ್ಲಿ ಪ್ರತಿಯೊಬ್ಬನೂ ಇತರರ ಸ್ವಾತಂತ್ರ್ಯಗಳಿಗೆ ಹಾನಿ ತಾರದಂತೆ ಒಂದು ನಿಯಮದಿಂದ ನಡೆದುಕೊಳ್ಳಬೇಕು. ಇದೇ ನ್ಯಾಯಸೂತ್ರ. ಸಾರ್ವಜನಿಕ ವ್ಯವಸ್ಥೆಗೂ ರಾಜ್ಯದ ಕ್ಷೇಮಕ್ಕೂ ಸಮಾಜಶಾಂತಿಗೂ ಭಂಗ ತಗಲದಷ್ಟು ಮಟ್ಟಿಗೆ ಪೂರ್ತಿಯಾಗಿ ಪ್ರತಿಯೊಬ್ಬನೂ ತನ್ನ ತನ್ನ ಬುದ್ಧಿಸ್ವಾತಂತ್ರ್ಯವನ್ನು ಎಲ್ಲ ವಿಚಾರಗಳಲ್ಲಿಯೂ ಪ್ರಯೋಗಮಾಡಿಕೊಳ್ಳಬೇಕು, ಮತ್ತು ತನ್ನ ವ್ಯಕ್ತಿಸ್ವಾತಂತ್ರ್ಯವನ್ನು ಆತ್ಮವಿಕಾಸಕ್ಕಾಗಿ ಉಪಯೋಗಿಸಿಕೊಳ್ಳಬೇಕು—ಎಂಬುದು ಜಾನ್ ಮಿಲ್ಲಿನ ತಾತ್ಪರ್ಯ. ಸ್ವಾತಂತ್ರ್ಯ ದಲ್ಲಿ ಅಪಾಯಗಳೂ ಉಂಟು. ಅದು ಪ್ರಯೋಗ ಸಮಯದಲ್ಲಿ ವಿಹಿತವಾದ

ಮೇರೆಗಳನ್ನು ಮನುಷ್ಯನು ಅತಿಕ್ರಮಿಸುವಂತೆ ಅವನಿಗೆ ಆಶಾಪೋಷವನ್ನು ಉಂಟು ಮಾಡುತ್ತದೆ. ಈ ಚೇಷ್ಟೆಯನ್ನು ಮಿಲ್ ಮರೆತಿದ್ದವನಲ್ಲ. ಮನುಷ್ಯನು ತನ್ನ ಅನನುಭವದ ಕಾರಣದಿಂದ ಭ್ರಾಂತಿಪರವಶನಾಗಿ ನಡೆಯಬಹುದು. ಆದರೆ ಮಗು ವನ್ನು ನೆಲದ ಮೇಲೆ ನಡೆಯಬಿಟ್ಟರೆ ಅದು ಎಡವಿ ಮುಗ್ಗರಿಸೀತೇದು ಹೆದರಿ ನಾವು ಅದನ್ನು ಓಡಾಡಬೇಡವೆಂದು ತಡೆದರೆ ಅದರ ಕಾಲಿಗೆ ಬಲ ಬರುವುದು ಹೇಗೆ? ಎಡವು, ಏಳು; ತಪ್ಪುಹೆಜ್ಜೆ ಇಡು, ಬಿದ್ದೂ ಎದ್ದೂ ತಿದ್ದಿಕೊ—ಇದು ಮನುಷ್ಯ-ನಿಗಿರುವ ಪ್ರಗತಿಕ್ರಮ. ತಪ್ಪುಮಾಡಿ ತಿದ್ದಿಕೆ ಪಡೆಯುವುದು ಸ್ವಾತಂತ್ರ್ಯದ ಉಪ ಯೋಗಗಳಲ್ಲಿ ಒಂದಂಶ. ಇದನ್ನು ಕಂಡು ಸಾರಿದಾತ ಮಿಲ್.

ಹೀಗೆ ಸಿದ್ಧವಾದ ಸ್ವಾತಂತ್ರ್ಯತತ್ತ್ವಕ್ಕೆ ತಕ್ಕಂತೆ ರೂಪುಕೊಡುವ ಸರಕಾರದ ಪದ್ಧತಿ ಪ್ರಜಾರಾಜ್ಯದ್ದು. ಆ ರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಗೂ ಒಂದು ಬೆಲೆ ಯುಂಟು. ಎಲ್ಲ ಪ್ರಜೆಗಳೂ ಶಾಸನದೃಷ್ಟಿಯಲ್ಲಿ ಸಮಾನರು. ಸ್ವಾತಂತ್ರ್ಯ ಅವರಿಗೆಲ್ಲ ಸಮಾನವಾಗಿ ಬೆಲೆಯುಳ್ಳ ಹಿತಾರ್ಥ. ಅದನ್ನುಳಿಸಿಕೊಂಡು ಬಳಸಿಕೊಳ್ಳು ವುದರಲ್ಲಿ ಅವರಿಗೆಲ್ಲ ಸಮಾನವಾದ ಆಸಕ್ತಿಯಿರುತ್ತದೆ, ಮತ್ತು ಹಕ್ಕಿರುತ್ತದೆ. ಆದಕಾರಣ ಅವರೆಲ್ಲ ಒಟ್ಟುಗೂಡಿ ಸಮ್ಮತಿಯಿಂದ ರಾಜ್ಯಕಾರ್ಯ ನಡಸುವುದು ಯುಕ್ತವಾಗುತ್ತದೆ. ಆದರೆ ಕಾರ್ಯವು ದಕ್ಷತೆಯಿಂದ ನಡೆಯಲು ಕಾರ್ಯಕರ್ತರು ಒಂದು ಮಿತಸಂಖ್ಯೆಯುಳ್ಳವರಾಗಬೇಕು. ಕಾರ್ಯಕರ್ತರಿಗೆ ಮಿತಿಗೊತ್ತು ಇಲ್ಲ ವಾದರೆ ಕಾರ್ಯ ಅನಾಯಕವಾಗುತ್ತದೆ. ಹಾಗಾದರೆ ಲಕ್ಷಾಂತರ ಪ್ರಜೆಯ ಕಾರ್ಯ ವನ್ನು ಲಕ್ಷಾಂತರಕ್ಕಿಂತ ಕಡಮೆಯಾದ ಜನ ನಡಸಬೇಕೋ ? ಅದು ಹೇಗಾದೀತು ? ಈ ಪ್ರಶ್ನೆಗೆ ಉತ್ತರ ಪ್ರತಿನಿಧಿಪದ್ಧತಿ. ಪ್ರಜಾಜನರು ಮೊದಲು ತಮ್ಮ ಪೈಕಿ ಯಾರು ಯಾರು ತಮ್ಮ ಮನೋಗತಗಳನ್ನು ತಿಳಿದುಕೊಂಡು ತಮ್ಮ ಹಿತಕ್ಕೆ ತಕ್ಕಂತೆ ರಾಜ್ಯಕಾರ್ಯವನ್ನು ನಡಸಬಲ್ಲವರು ಎಂಬುದನ್ನು ಕಂಡುಕೊಳ್ಳಬೇಕು ; ಆಮೇಲೆ ಹಾಗೆ ಗೊತ್ತಾದ ಕೆಲಮಂದಿ ಗೊತ್ತಾದ ಸಂಖ್ಯೆಯಲ್ಲಿ ನಿಂತು ತಮ್ಮ ಪರವಾಗಿ ಕೆಲಸಮಾಡಲು ಅವರಿಗೆ ಅಧಿಕಾರ ವಹಿಸಿಕೊಡಬೇಕು. ಇದೇ ಪ್ರತಿನಿಧಿಪದ್ಧತಿ. ಹಾಗೆ ಅಧಿಕೃತರಾದ ಪ್ರತಿನಿಧಿಗಳ ಸಂಖ್ಯೆ ಮಿತವಾಗಿರುತ್ತದೆ. ಆ ಮಿತಸಂಖ್ಯೆಯ ಪ್ರತಿನಿಧಿಗಳು ಸಭೆಯಲ್ಲಿ ಆಲೋಚನೆ ನಡಸಿ ರಾಜ್ಯದ ರೀತಿನೀತಿಗಳನ್ನು ನಿಶ್ಚಯ ಗೊಳಿಸುವುದು ಕಷ್ಟವಾಗದು. ಈ ರೀತಿಯ ಕಾರ್ಯಕಾರಣ ವಿಚಾರದಿಂದ ಉಂಟಾದದ್ದು ಪ್ರತಿನಿಧಿಸರಕಾರದ ಪದ್ಧತಿ. ಆ ಪದ್ಧತಿಯ ಲಕ್ಷಣಗಳನ್ನೂ ಕಾರ್ಯಾಂಗಗಳನ್ನೂ ಮಿಲ್ ಲೇಖಕನು " Representative Government "—" ಪ್ರತಿನಿಧಿ ಸರಕಾರ " ಎಂಬ ಪ್ರಬಂಧದಲ್ಲಿ ವಿವರಿಸಿದ್ದಾನೆ. ಮೈಸೂರಿನ ಮೊದಲನೆಯ ದಿವಾನರಾಗಿದ್ದ ರಂಗಾಚಾರ್ಯರು ಮಿಲ್ ಪ್ರಕಟಿಸಿದ್ದ ಆ ಪ್ರಬಂಧವನ್ನು ಓದಿದ್ದರು. ಅವರು 1881ರಲ್ಲಿ ಮೈಸೂರಿನಲ್ಲಿ ಸ್ಥಾಪನೆಮಾಡಿಸಿದ ಪ್ರಜಾಪ್ರತಿನಿಧಿಸಭೆಯ ಭಾವನೆ ಅವರಿಗೆ ಬಹುಶಃ ಮಿಲ್ ತಾತ್ತ್ವಿಕನ ಪ್ರಬಂಧದಿಂದ ಹೊಳೆದದ್ದಿದ್ದರೂ ಇರ

ಬಹುದೆಂದು ನನಗನ್ನಿಸುತ್ತದೆ. ಮಿಲ್ಲಿನ ಆ ಪ್ರಬಂಧ ರಾಜ್ಯಶಾಸ್ತ್ರದಲ್ಲಿ ಪ್ರಮಾಣ ಗ್ರಂಥವೆಂದು ಗೌರವ ಪಡೆದಿದೆ.

ಮಿಲ್ ಪ್ರಾರಂಭಮಾಡಿದ ತತ್ತ್ವವಿಮರ್ಶೆಯ ಪ್ರವಾಹ ಹರಡಿ ಮುಂಬರಿದಿದೆ. ಅದು ಒಂದು ಕಡೆ ಯಾವ ಬದಲಾವಣೆಯೂ ಬೇಡ ಎನ್ನುವ ಯಥಾಸ್ಥಿತಿವಾದದಿಂದ ದೂರವಾದದ್ದು; ಇನ್ನೊಂದು ಕಡೆ ಎಲ್ಲವನ್ನೂ ಬೇಗಬೇಗ ಬದಲಾಯಿಸೋಣ ಎಂಬ ಉತ್ಕ್ರಾಂತಿವಾದದಿಂದ ದೂರವಾದದ್ದು. ಆ ಎರಡು ಅಂತಿಮರೇಖೆಗಳನ್ನೂ ಸೋಕದೆ ಮಧ್ಯವರ್ತಿಯಾಗಿ ನಡೆಯತಕ್ಕದ್ದು ಮಿಲ್ಲಿನ ಮಾರ್ಗ. ದಿನದಿನವೂ ಬದಲಾಯಿಸುತ್ತಿರುವುದು ಜಗತ್ತಿನ ಸ್ವಭಾವ. ಆದ್ದರಿಂದ ನಾವು ಆಗಾಗ ನಮ್ಮ ಜೀವನ ರೀತಿಗಳನ್ನೂ ಸಮಾಜ ಸಂಸ್ಥೆಗಳನ್ನೂ ಬದಲಾಯಿಸಿಕೊಳ್ಳುವುದು ಅನಿವಾರ್ಯ. ಆದರೆ ಯಾವ ಬದಲಾವಣೆಯನ್ನೂ ಪೂರ್ವಾಪರ ವಿವೇಚನೆಯಿಲ್ಲದೆ—ಯಾರೋ ಹೇಳಿದರೆಂಬ ಕಾರಣದಿಂದ—ಅಂಗೀಕರಿಸತಕ್ಕದ್ದಲ್ಲ. ಮತ್ತು ಯಾವ ಬದಲಾವಣೆಯನ್ನೂ ಹಟದಿಂದ ಏಕ್‌ದಂ ತಂದುಕೊಳ್ಳತಕ್ಕದ್ದಲ್ಲ. ಒಂದು ಬದಲಾವಣೆ ನಮಗೆ ನಿಜವಾಗಿ ಹಿತಕರವಾಗಬೇಕಾದರೆ ಅದು ವಿಮರ್ಶನೆಯ ಫಲಿತಾಂಶವಾಗಿ ಬರಬೇಕು. ಮತ್ತು ಕ್ರಮಕ್ರಮವಾಗಿ ಬರಬೇಕು. ಒಂದಾನೊಂದು ಅಭಿಪ್ರಾಯ ಅಥವಾ ಸುಧಾರಣೆ ಎಷ್ಟೇ ಒಳ್ಳೆಯದಾಗಲಿ. ಅದನ್ನು ಜನ ಅಂಗೀಕರಿಸಿದ ಮಾತ್ರದಿಂದ ಅದರಲ್ಲಿಯ ಒಳ್ಳೆಯ ಅಂಶ ಅವರ ಅನುಭವಕ್ಕೆ ದೊರಕಲಾರದು. ಅಂಗೀಕಾರದ ಹಿಂದೆ ವಿವೇಚನೆ ಇರಬೇಕು. ಅದು ಹೇಗೆ ಒಳ್ಳೆಯದು? ಯಾವ ಕಾರಣದಿಂದ ಒಳ್ಳೆಯದು? ಎಂಬ ವಿಮರ್ಶನೆ ಅವರ ಮನಸ್ಸಿನಲ್ಲಿ ನಡೆದು, ಎಷ್ಟು ಮಾತ್ರ ಆ ಅಭಿಪ್ರಾಯದಲ್ಲಿ ಯುಕ್ತವೆಂದು ಅವರಿಗೆ ತೋರಿಬಂದೀತೋ ಅಷ್ಟು ಮಾತ್ರವನ್ನು ಅವರು ಜೀವನಕ್ಕೆ ಅನ್ವಯಿಸಿಕೊಂಡರೆ ಅದು ನಿಜವಾಗಿ ಒಂದು ಒಳ್ಳೆಯ ಪರಿಣಾಮವನ್ನುಂಟುಮಾಡಿ. ಅವರ ಜೀವನದ ಶಾಶ್ವತಭಾಗವಾಗಿ ನಿಂತೀತು. ಆದ್ದರಿಂದ ಎಲ್ಲ ವಿಚಾರಗಳಲ್ಲಿಯೂ ಜನರ ಬುದ್ಧಿ ಸ್ವತಂತ್ರವಾಗಿ ಕೆಲಸ ಮಾಡಲಿ. ಅವರಲ್ಲಿ ಸ್ವಂತ ವಿವೇಕ ಪ್ರಬಲಿಸಲಿ—ಎಂಬುದು ಮಿಲ್ ತಾತ್ತ್ವಿಕನ ಹಾರೈಕೆ.

ಮಿಲ್ಲಿನ ಬರವಣಿಗೆಯ ರೀತಿ ಆತನ ಸ್ವಭಾವಕ್ಕೆ ನಿದರ್ಶನ. ಅದು ಶಬ್ದಾಡಂಬರವಿಲ್ಲದ್ದು. ಗುಂಫನ ಚಮತ್ಕಾರ ತೋರದ್ದು: ಆದರೆ ವಿಷಯವನ್ನು ಅಸ್ಫುಟವಾಗಿ ಬಿಡತಕ್ಕದ್ದಲ್ಲ. ಪದಗಳಲ್ಲಿ ಯಾವ ಭಾವವಿಕಾರದ ಸೂಚನೆಯೂ ಇರದು. ಆದರೆ ವಿಷಯವಿಶದೀಕರಣಕ್ಕೆ ಅವಶ್ಯವಾದ ಪದಸಾಮಗ್ರಿ ಉಂಟು. ಉತ್ಪ್ರೇಕ್ಷೆಯ ಅಕ್ಷರ ಒಂದಿರದು; ಒಂದು ಅತ್ಯುಕ್ತಿ ಇರದು: ಒಂದು ಅಲಂಕಾರವೈಖರಿಯಿರದು. ಆದರೆ ವಿಚಾರದ ತೀಕ್ಷ್ಣತೆ. ಸತ್ಯಕುತೂಹಲದ ಕಾವು. ಅಕ್ಷರಕ್ಷರದಲ್ಲೂ ತುಂಬಿ ತುಳುಕಾಡುತ್ತದೆ. ಸ್ವಪಕ್ಷ ನಿರೂಪಣೆಯಲ್ಲಿ ಹೆಚ್ಚಾಗಲಿ ಕಡಮೆಯಾಗಲಿ ಆಗದಂತೆ. ಪ್ರತಿಪಕ್ಷದ ಅನುವಾದದಲ್ಲಿ ಪ್ರತಿಪಕ್ಷಿಯ ಮನೋಗತವು ಯಥಾವತ್ತಾಗಿ ಹೊರಪಟ್ಟು ಆತನಿಗೆ ಅನ್ಯಾಯವಾಗದಂತೆ, ಅಷ್ಟು ಜಾಗರೂಕತೆಯಿಂದ, ಅಷ್ಟು ಪ್ರಮಾಣ

ವತ್ತಾಗಿ ವಿಷಯಪ್ರತಿಪಾದನೆ ಮಾಡಿರುವುದು ಜಾನ್ ಮಿಲ್ಲಿನ ಸಾಹಿತ್ಯ ವೈಶಿಷ್ಟ್ಯ. ಬುದ್ಧಿ ಹೇಗೆ ಹೇಗೆ ಹೊಸ ಹೊಸ ಅಂಶಗಳನ್ನು ಕಂಡುಕೊಳ್ಳುತ್ತ, ಅವುಗಳನ್ನು ಪರೀಕ್ಷಿಸುತ್ತ. ಆಲೋಚನಾವಸರದ ಪ್ರಯಾಣದಲ್ಲಿ ಒಮ್ಮೊಮ್ಮೆ ಹಿಂದಕ್ಕೆ ಸರಿಯುತ್ತ. ಮತ್ತೆ ಮುಂದಕ್ಕೆ ನುಗ್ಗುತ್ತ. ಸಾವಧಾನವಾಗಿ ಸಂತತವಾಗಿ ಹೇಗೆ ಸಾಗುತ್ತವೆಯೋ ಮಿಲ್ಲಿನ ವಾಕ್ಯರಚನೆಯೂ ಹಾಗೆ ಹಾಗೆ ಬುದ್ಧಿಗತಿಯ ವೇಗವಂಕುಗಳ ವಿವರಗಳನ್ನೆಲ್ಲ ಯಥಾವತ್ತಾಗಿ ಪ್ರತಿಬಿಂಬಿಸಿಕೊಂಡು ಗಂಭೀರವಾಗಿರುತ್ತದೆ. ಪ್ರಾಮಾಣಿಕವಾದ ಲೇಖನಶೈಲಿಯೆಂದರೆ ಮಿಲ್ಲಿನದು. ಅದು ಸತ್ಯಾನ್ವೇಷಿಯ ಅಂತಃಕರಣಕ್ಕೆ ಕನ್ನಡಿ. (23–10–1957)

ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರು

ಯಾವ ಸದ್ಗುರುಗಳವರ ಅವತಾರ ದಿವಸದ ಉತ್ಸವಕ್ಕಾಗಿ ನಾವು ಇಲ್ಲಿ ಸಭೆ ಸೇರಿರುವೆವೊ ಆ ಮಹನೀಯರ ಜೀವನಕಥೆಯ ಮುಖ್ಯಾಂಶಗಳನ್ನು ತಮ್ಮಗಳ ಜ್ಞಾಪಕಕ್ಕೆ ತರಬೇಕೆಂದು ನಮ್ಮ ಮಿತ್ರರಾದ ಬ್ರಹ್ಮಶ್ರೀ ಸೀತಾರಾಮಶಾಸ್ತ್ರಿಗಳವರು ನನಗೆ ಅಪ್ಪಣೆ ಕೊಡಿಸಿರುವರು. ಆದರೆ ಇದು ಪಂಡಿತರಿಗೆ ಮಾತ್ರ ಸಾಧ್ಯವಾದ ಕಾರ್ಯವೆಂಬುದು ಸ್ಪಷ್ಟವಾಗಿಯೇ ಇದೆ. ನಾನು ಪಂಡಿತನಲ್ಲವೆಂಬುದೂ ತಮಗೆಲ್ಲ ತಿಳಿದಿರಬಹುದು. ಗುರುಗಳವರ ಸನ್ನಿಧಿಯಲ್ಲಿಯೇ ಇದ್ದು ಅವರ ಶೀಲಸ್ವಭಾವಗಳನ್ನು ಕಣ್ಣಾರ ಕಂಡು ಅವರ ವಾಣಿಯನ್ನು ಕಿವಿಯಾರ ಕೇಳಿದ ಪುಣ್ಯಶಾಲಿಗಳು ಇಲ್ಲಿ ಅನೇಕರಿರುವರು. ಆ ರೀತಿ ನಾನು ಅವರೊಡನೆ ಬಳಕೆಯುಳ್ಳವನಲ್ಲ. ಅವರ ಜೀವನಚರಿತ್ರೆಯನ್ನು ಹೇಳಹೊರಡಲು ನನಗೆ ಯಾವ ವಿಧದಲ್ಲಿಯೂ ಯೋಗ್ಯತೆ ಇರುವಂತೆ ಕಾಣುವುದಿಲ್ಲ. ಅವರ ವಿಷಯದಲ್ಲಿ ಭಕ್ತಿ ಮಾತ್ರ ಇರುವುದು. ಅದನ್ನು ಬ್ರಹ್ಮಶ್ರೀ ಸೀತಾರಾಮ ಶಾಸ್ತ್ರಿಗಳವರು ಹೇಗೋ ತಿಳಿದವರಾಗಿ ನನ್ನಲ್ಲಿ ವಿಶ್ವಾಸ ತೋರಿರುವರು. ಆ ವಿಶ್ವಾಸದ ಮಾತನ್ನು ಮೀರಲಾರದವನಾಗಿ ಈ ಸಾಹಸಕೃತ್ಯಕ್ಕೆ ನಾನು ಕೈಹಾಕಬೇಕಾಗಿದೆ. ನನ್ನ ಲೋಪಗಳನ್ನು ತಾವುಗಳು ಮನ್ನಿಸಬೇಕೆಂದು ಪ್ರಾರ್ಥಿಸುವವನಾಗಿದ್ದೇನೆ.

ಈಚೆಗೆ ನಮ್ಮ ದೇಶದಲ್ಲಿ "ನೇಷನ್", "ನ್ಯಾಷನಲ್", "ನ್ಯಾಷನಲಿಸಂ"—ಎಂಬ ಪದಗಳು ಬಹುವಾಗಿ ರೂಢಿಗೆ ಬಂದಿವೆ. "ಸ್ವದೇಶಿ", "ಸ್ವರಾಜ್ಯ", "ಸ್ವಧರ್ಮ"—ಎಂಬ ಪದಗಳು ಆ ಇಂಗ್ಲಿಷ್ ಪದಗಳಲ್ಲಿಯ ಭಾವನೆಯನ್ನೇ ಸೂಚಿಸತಕ್ಕವಾಗಿವೆ. ಜನರ ಸಾಮುದಾಯಿಕವಾದ ಆತ್ಮೀಯತೆ, ಅವರ ಐಕಮತ್ಯ, ಅವರ ದೇಶೀಯವಾದ ಮಮತೆ—ಇದೇ "ನ್ಯಾಷನಲಿಸಂ" ಎಂಬ ಮಾತಿನ ಮುಖ್ಯಭಾವ. ಈ ಭಾವವು ಈಚೀಚೆಗೆ ನಮ್ಮಲ್ಲಿ ಪ್ರಬಲಿಸುತ್ತಿರುವುದಾದರೂ, ಅದು ಈ ದೇಶದಲ್ಲಿ ಮೊಟ್ಟಮೊದಲು ತಲೆದೋರಿದುದು ಅನೇಕ ಸಹಸ್ರ ವರ್ಷಗಳ ಹಿಂದೆ ಎಂದು ಇತಿಹಾಸಮರ್ಮವನ್ನು ತಿಳಿದವರು ಹೇಳುತ್ತಾರೆ. ಯಾವ ಮಹಾಪುರುಷರು

ಕೇರಳದೇಶದಲ್ಲವತರಿಸಿ ಹಿಮವತ್ಪರ್ವತದಲ್ಲಿ ವಿದ್ಯಾರ್ಜನೆ ಮಾಡಿ, ಅದ್ವೈತ ಸಿದ್ಧಾಂತವನ್ನು ಭರತಭೂಮಿಯಲ್ಲಿ ಪ್ರಚಾರಮಾಡಿ, ಷಣ್ಮತಗಳನ್ನು ಸಮನ್ವಯಗೊಳಿಸಿ. ವೇದಧರ್ಮಪರಿಪಾಲನೆಗೋಸ್ಕರ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಗಳನ್ನು ಸ್ಥಾಪಿಸಿದರೋ ಆ ಶ್ರೀಮಚ್ಛಂಕರಾಚಾರ್ಯರೇ ನಮ್ಮ ನೇಷನ್–ಬಿಲ್ಡರ್ಸ್—ಎಂದರೆ ಜನಪದ ಪ್ರತಿಷ್ಠಾಪಕರಲ್ಲಿ ಅಗ್ರಗಣ್ಯರೆಂದು ಐತಿಹಾಸಿಕರ ಅಭಿಪ್ರಾಯ. ನಾನಾ ಪ್ರಾಂತಗಳಲ್ಲಿಯ ಭಾರತೀಯರನ್ನು ಧಾರ್ಮಿಕ ವ್ಯವಸ್ಥೆಯಿಂದ ಏಕೀಕರಣ ಮಾಡಲು ಮೊದಲು ಶ್ರಮಿಸಿದವರು ಆದಿ ಶಂಕರರು. ದೇಶದ ರಾಜಕೀಯ ವಿಭಾಗಗಳು ಬೇರೆಬೇರೆಯಾಗಿ. ದೇಶೀಯರ ಭಾಷೆ ಸಂಪ್ರದಾಯ ರೀತಿಗಳು ಬೇರೆಬೇರೆಯಾಗಿ ಅವರು ಒಂದುಗೂಡುವ ಭರವಸೆಯಿಲ್ಲದ್ದಿದ್ದ ಆ ಕಾಲದಲ್ಲಿ ದೇಶದ ಮತಭೇದಗಳನ್ನು ಸಾಧ್ಯವಾದಮಟ್ಟಿಗೆ ಹೋಗಲಾಡಿಸಿ, ಮತದ ಕಟ್ಟುಪಾಡಿನಿಂದ ಭಾರತೀಯರೆಲ್ಲರನ್ನೂ ಒಟ್ಟುಗೂಡಿಸಿದವರು ಶ್ರೀ ಶಂಕರರು. ಹಿಂದೂಗಳ ಈಗಿನ ಜನಪದಭಾವಕ್ಕೆ ಅವರ ಯಾವ ಪುರಾತನವಾದ ಏಕಧರ್ಮೀಯತೆಯು ಮುಖ್ಯ ಲಕ್ಷಣವಾಗಿಯೂ ಮುಖ್ಯ ಪ್ರೋತ್ಸಾಹಕಾರಕವಾಗಿಯೂ ಇರುವುದೋ, ಮತ್ತು ಹಿಂದೂ ಜನರಿಗೆ ಲೋಕದ ಮನ್ನಣೆಯನ್ನು ಸಂಪಾದಿಸಿಕೊಡಲು ಯಾವ ವೇದಾಂತ ತತ್ತ್ವವು ಮುಖ್ಯ ಕಾರಣವಾಗಿರುವುದೋ, ಆ ಧರ್ಮಸಂಸ್ಥಾಪನೆಯನ್ನು, ಆ ತತ್ತ್ವಪ್ರತಿಪಾದನೆಯನ್ನು ಮಾಡಿದವರು ಆದಿ ಶಂಕರಾಚಾರ್ಯರು. ತಾವು ಮಾಡಿದ ಕಾರ್ಯವನ್ನು ಯಥೋಚಿತವಾಗಿ ಮುಂದಕ್ಕೆ ನಡಸಿ ಶಾಶ್ವತಗೊಳಿಸಲು ಅವರು ಏರ್ಪಡಿಸಿದ ನಾಲ್ಕು ಧರ್ಮಪೀಠಗಳಲ್ಲಿ ಮುಖ್ಯವಾದ ಶೃಂಗಗಿರಿಯ ಸಂಸ್ಥೆಗೆ ನಮ್ಮ ಇಂದಿನ ಕಥಾನಾಯಕರು ಅಧಿಕಾರಿಗಳಾಗಿದ್ದವರಾದುದರಿಂದಲೂ. ಲಕ್ಷೋಪಲಕ್ಷ ಮಂದಿ ಜನರು ಅವರ ಶಿಷ್ಯರೆಂದು ಭಾವಿಸಿ ಅವರ ಉಪದೇಶ ಆಶೀರ್ವಾದಗಳನ್ನಪೇಕ್ಷಿಸುತ್ತಿದ್ದರಾದುದರಿಂದಲೂ ಅವರನ್ನು ನಮ್ಮ ದೇಶದ ಚರಿತ್ರೆಗೆ ಸಂಬಂಧಪಟ್ಟ ಒಬ್ಬ ಮಹಾಪುರುಷರೆಂದು ಪರಿಗಣಿಸುವುದು ನ್ಯಾಯವಾಗಿದೆ.

ಅವರಂತೆ ಅಂತರ್ಮುಖಿಗಳಾಗಿದ್ದವರ ಚರಿತ್ರೆಯನ್ನು ಮಾತುಗಳಿಂದ ವಿವರಿಸುವುದು ಸುಲಭವಲ್ಲ. ಬಹಿರ್ಮುಖಿಗಳ ವ್ಯಾಪಾರಗಳನ್ನು ವಿಸ್ತಾರವಾಗಿ ವರ್ಣಿಸಬಹುದು; ಏಕೆಂದರೆ ಆ ವ್ಯಾಪಾರಗಳನ್ನು ಎಲ್ಲರೂ ಬಾಹ್ಯಚಕ್ಷುಸ್ಸಿನಿಂದ ನೋಡಿ ತಿಳಿಯಬಹುದು. ಅಂತರ್ಮುಖಿಗಳ ವ್ಯಾಪಾರಗಳು ಬಹುಮಟ್ಟಿಗೆ ಒಳಗಿನವು; ಚರ್ಮಚಕ್ಷುಗಳಿಗೆ ಕಾಣತಕ್ಕವಲ್ಲ. ಆ ವ್ಯಾಪಾರಗಳನ್ನು ಜ್ಞಾನಿಗಳು ಮಾತ್ರವೇ ತಿಳಿಯಬಲ್ಲರು. ರಾಜರು, ಮಂತ್ರಿಗಳು, ಶೂರರು. ವರ್ತಕರು—ಇತ್ಯಾದಿಗಳ ಕಾರ್ಯಗಳು ಬಾಹ್ಯಪ್ರಪಂಚಕ್ಕೆ ಸೇರಿದವು. ಅವು ಪಂಚಭೂತ ಸಂಬಂಧವಾದವು. ನಾವು ಅವುಗಳ ಸ್ವರೂಪವನ್ನೂ ಫಲಾಫಲಗಳನ್ನೂ ಓದಿ ಅಥವಾ ಕೇಳಿ ತಿಳಿಯಬಹುದು. ಕವಿಗಳು. ಯೋಗಿಗಳು ತತ್ತ್ವವಿಮರ್ಶಕರು—ಇವರ ಕಾರ್ಯಗಳು ಅಂತರಂಗ ಪ್ರಪಂಚಕ್ಕೆ ಸೇರಿದವು. ಅವು ಆತ್ಮಸಂಬಂಧವಾದವು. ಈ ವಿಧವಾದ ವೃತ್ತಿಯನ್ನೂ ಅವರ ಫಲವನ್ನೂ ಅನುಭವಿಗಳು ಮಾತ್ರವೇ ತಿಳಿಯಬಲ್ಲರು. ಸಾಧುಗಳ ಜೀವನದಲ್ಲಿ ಇಂದ್ರಿಯನಿಗ್ರಹವೆಂಬುದೇ ದೊಡ್ಡ ಯುದ್ಧ : ಆತ್ಮಧ್ಯಾನವೆಂಬುದೇ

ದೊಡ್ಡ ಚಮತ್ಕಾರ; ತಾರುಣ್ಯಭಾವವೆಂಬುದೇ ದೊಡ್ಡ ಸಾಹಸ; ಮಂಗಳಾ-ಶಾಸನವೆಂಬುದೇ ದೊಡ್ಡ ಜಯ. ಬ್ರಹ್ಮವಸ್ತುವಿನ ವಿನಾ ಅವರ ಚಿಂತೆಗೆ ವಿಷಯವಿಲ್ಲ. ಭಗವತ್ಪ್ರಾರ್ಥನೆಯ ವಿನಾ ಅವರ ಬಾಯಿಗೆ ಕೆಲಸವಿಲ್ಲ. ಶಿಷ್ಯಹಿತದ ವಿನಾ ಅವರ ಮನಸ್ಸಿಗೆ ಕೋರಿಕೆಯಿಲ್ಲ. ಇಂತಹವರ ಕಥೆಯು ಶಾಂತಿರಸಪ್ರಧಾನವಾದುದು. ಶಾಂತಿರಸಕ್ಕೂ ಅತಿಭಾಷಣಕ್ಕೂ ಸರಿಹೋಗುವುದಿಲ್ಲ. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹಾ" ಎಂಬ ವಾಕ್ಯದಿಂದ ಯಾವ ವಸ್ತುವು ಬಾಯಿಮಾತಿಗೆ ಮಾತ್ರವೇ ಅಲ್ಲ, ಮನಸ್ಸಿಗೂ ಕೂಡ ದೂರವೆಂದು ಋಷಿಗಳು ಹೇಳಿರುವರೋ ಆ ವಸ್ತುವಿನಲ್ಲಿ ಲೀನರಾಗಿದ್ದವರ ಸ್ಥಿತಿಯನ್ನು ನಾವು ವರ್ಣಿಸುವುದು ಹೇಗೆ? ಆದಕಾರಣ ಮಿತಪದಗಳಿಂದ ನಾವು ತೃಪ್ತರಾಗಿ, ಸಾಲದುದನ್ನು ಮನಸ್ಸಿನಿಂದ ಅರಿತುಕೊಳ್ಳಬೇಕು.

ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಶಿವಸ್ವಾಮಿಯೆಂಬ ವ್ಯವಹಾರ ನಾಮವುಳ್ಳವರಾಗಿದ್ದರು. ಅವರ ತಂದೆಗಳು ಪ್ರಖ್ಯಾತ ಪಂಡಿತರಾದ ಕುಣಿಗಲು ರಾಮಶಾಸ್ತ್ರಿಗಳೆಂಬುವರು. ಈ ಶಾಸ್ತ್ರಿಗಳ ಚರಿತ್ರೆಯನ್ನು ರಿಟೈರ್ಡ್ ಅಮಲ್ದಾರರಾದ ಮ॥ ರಾ॥ ಎಂ. ಎಸ್. ಪುಟ್ಟಣ್ಣನವರು ಕನ್ನಡದಲ್ಲಿ ಬರೆದಿರುವರು. ರಾಮಶಾಸ್ತ್ರಿಗಳವರು ಮುಲಕನಾಡು ಪಂಗಡದ ಪಂಡಿತವಂಶದಲ್ಲಿ ಹುಟ್ಟಿ, ಬಾಲ್ಯದಲ್ಲಿ ಎಡತೊರೆಯಲ್ಲಿ ಬೆಳೆದು, ಬಳಿಕ ಮೈಸೂರಲ್ಲಿ ವಿದ್ಯಾಭ್ಯಾಸಮಾಡಿ, ಅನಂತರ ತ್ರ್ಯಂಬಕ ಶಾಸ್ತ್ರಿಗಳೆಂಬ ಘನವಿದ್ವಾಂಸರಲ್ಲಿ ಶಾಸ್ತ್ರವ್ಯಾಸಂಗ ಮಾಡಿ ಆಮೇಲೆ ಆಳಿದ ಮಹಾರಾಜರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಆಸ್ಥಾನದಲ್ಲಿ ವಿದ್ವನ್ಮಣಿಯೆನಿಸಿ ಪ್ರಸಿದ್ಧರಾಗಿದ್ದರು. ಆ ಕಾಲದಲ್ಲಿ ಪಂಡಿತನೆನ್ನಿಸಿಕೊಳ್ಳುವುದು ಸುಲಭವಾಗಿರಲಿಲ್ಲ: ಏಕೆಂದರೆ ಆಗ ಗೀರ್ವಾಣ ವಿದ್ಯಾಪ್ರಾಚುರ್ಯವು ಈಗಿಗಿಂತ ಹೆಚ್ಚಾಗಿತ್ತು, ಸಾಂಗವಾಗಿ ಶಾಸ್ತ್ರಾಧ್ಯಯನ ಮಾಡಿದವರು ಈಗಿನಷ್ಟು ವಿರಳರಾಗಿರಲಿಲ್ಲ. ಅಂತಹ ಕಾಲದಲ್ಲಿ ಬಹುದೇಶ ಸಂಚಾರ ಮಾಡಿ ವಿಶಾಲವಾದ ಕೀರ್ತಿಯನ್ನು ಸಂಪಾದಿಸಿದ್ದ ರಾಮಶಾಸ್ತ್ರಿಗಳವರಲ್ಲಿ ವಿಶೇಷವಾದ ಮಹಿಮೆಯಿದ್ದಿರಬೇಕೆಂಬುದನ್ನು ನಾವು ಸುಲಭವಾಗಿ ಊಹಿಸಬಹುದು. ಶಿವಸ್ವಾಮಿಯು ಅವರ ಮೂರನೆಯ ಮಗ. ಆತನ ಜನ್ಮದಿನವು ಕ್ರಿ.ಶ. 1858ನೆಯ ವರ್ಷಕ್ಕೆ ಸರಿಯಾದ ಶಾ॥ಶ॥ ೧೭೮೦ನೆಯ ಪಿಂಗಳ ಸಂ॥ ಫಾಲ್ಗುಣ ಬಹುಳ ಏಕಾದಶಿ ಗುರುವಾರ. ಎರಡು ವರ್ಷದ ಮಗುವಾಗಿದ್ದಾಗಲೇ ಆತನಿಗೆ ಪಿತೃವಿಯೋಗ ದುಃಖವು ಸಂಭವಿಸಿತಾದರೂ, ತಾಯಿಯ ಮತ್ತು ಅಣ್ಣಂದಿರ ಪೋಷಣೆಯಲ್ಲಿ ಆತನು ಆ ದುಃಖವನ್ನು ಮರೆತು ಪ್ರವರ್ಧಮಾನನಾಗಿದ್ದನು. ಅಷ್ಟಮ ವರ್ಷದಲ್ಲಿ ಉಪನೀತನಾಗಿ ಅಧ್ಯಯನಾಗ್ನಿಕಾರ್ಯಗಳನ್ನು ವಿಧಿವತ್ತಾಗಿ ನಡೆಸುತ್ತಿದ್ದನು. ಶೈಶವದಿಂದಲೂ ಆತನಲ್ಲಿ ಅದ್ಭುತವಾದ ಭಗವದ್ಭಕ್ತಿಯೂ ಶಾಸ್ತ್ರೋತ್ಸಾಹವೂ ತೋರಿ ಬರುತ್ತಿದ್ದವೆಂದು ತಿಳಿಸುವ ಕಥೆಗಳು ಅನೇಕವಾಗಿ ಇವೆ. ಸತ್ಕುಲಪ್ರಸೂತನಾಗಿ ವೈದಿಕ ವಿದ್ವಾಂಸರ ಮನೆಯಲ್ಲಿ ಬೆಳೆಯುವ ಬಾಲಕನಿಗೆ ಈ ಗುಣಗಳು ಸಹಜವಾಗಿ ಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಶಿವಸ್ವಾಮಿಯು ಸುಮಾರು 9 ವರ್ಷದ ಬಾಲಕನಾಗಿದ್ದಾಗ ಶೃಂಗಗಿರಿಯ ಶ್ರೀ ನರಸಿಂಹ ಭಾರತೀ ಸ್ವಾಮಿಗಳವರು ಮೈಸೂರಿಗೆ ದಯಮಾಡಿಸಿದ್ದರು. ಅವರು ಮಹಾ ತಪಸ್ವಿಗಳು, ಉದ್ದಾಮ ಪಂಡಿತರು, ವಿಶೇಷ ಪ್ರಭಾವವುಳ್ಳವರು. ಅವರು ಒಂದು ದಿನ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರವರೊಡನೆ ಮಾತನಾಡುತ್ತಿದ್ದಾಗ, ಮೇಧಾವಿಯೂ, ತೇಜಸ್ವಿಯೂ ಆದ ವಟು ದೊರೆತರೆ ಆತನಿಗೆ ಸನ್ಯಾಸ ದೀಕ್ಷೆಯನ್ನನುಗ್ರಹಿಸಿ ಕ್ರಮೇಣ ತಮ್ಮ ಅನಂತರ ತಮ್ಮ ಪೀಠವನ್ನಡರಲು ಆತನು ಅರ್ಹನಾಗುವಂತೆ ಮಾಡಬೇಕೆಂಬ ತಮ್ಮ ಸಂಕಲ್ಪವನ್ನು ತಿಳಿಸಿದರು. ಒಡನೆಯೆ ಮಹಾರಾಜರವರಿಗೆ ತಮ್ಮ ಆಸ್ಥಾನಕ್ಕೆ ಭೂಷಣರಾಗಿದ್ದ ರಾಮಶಾಸ್ತ್ರಿಗಳ ಕುವರರ ವಿಷಯವು ಮನಸ್ಸಿಗೆ ಬಂದು ಅದನ್ನು ಅವರು ಗುರುಗಳವರಿಗೆ ಸೂಚಿಸಿದರು. ತಮ್ಮ ಅನುಗ್ರಹಕ್ಕೆ ಅಂತಹ ಸತ್ಪಾತ್ರವು ಬೇರೆಲ್ಲಿಯೂ ದೊರೆಯದೆಂಬುದನ್ನು ಸ್ವಾಮಿಗಳವರು ತತ್‌ಕ್ಷಣವೇ ಕಂಡುಕೊಂಡರು. ಅದರ ಮೇಲೆ ಶಿವಸ್ವಾಮಿಯ ಅಣ್ಣಂದಿರೂ ವಿದ್ವಾಂಸರೂ ಆದ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರಲ್ಲಿ ಈ ಪ್ರಸ್ತಾಪ ನಡೆಯಲು, ಅವರು ಗುರ್ವನುಗ್ರಹದಿಂದ ಸಂತೋಷಪಟ್ಟವರಾಗಿ ತಮ್ಮ ತಮ್ಮನನ್ನು ಗುರುಚರಣದಲ್ಲರ್ಪಿಸಲು ಒಪ್ಪಿಕೊಂಡರು. ಶಿವಸ್ವಾಮಿಯು ಸಂನ್ಯಾಸಿಯಾಗದಿದ್ದಿದ್ದರೆ ತನ್ನ ಮನೆತನಕ್ಕೆ ಎಂತಹ ಪ್ರಾಪಂಚಿಕ ಸಂಪತ್ತನ್ನೂ ಪ್ರಾಶಸ್ತ್ಯವನ್ನೂ ಸಂಪಾದಿಸಿಕೊಡುತ್ತಿದ್ದನೆಂಬುದನ್ನು ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಲೆಕ್ಕಿಸದೆ ಇದ್ದುದರಿಂದ ಹಿಂದೂಲೋಕಕ್ಕೂ ಧರ್ಮಕ್ಕೂ ಮಹದುಪಕಾರವಾಯಿತು. ಅವರ ಸಂಸಾರವು ಅಂಗೀಕರಿಸಿದ ನಷ್ಟವು ಜಗತ್ತಿಗೆ ಪರಮ ಲಾಭವಾಗಿ ಪರಿಣಮಿಸಿತು.

ಕ್ರಿ.ಶ. 1867ಕ್ಕೆ ಸರಿಯಾದ ಶಾ॥ ಶ॥ ೧೭೮೯ನೆಯ ಅಕ್ಷಯ ಸಂ॥ ಆಷಾಢ ಬ॥ ಷಷ್ಠಿ ದಿವಸ ಶಿವಸ್ವಾಮಿ ಎಂಬ ಒಂಬತ್ತು ವರ್ಷದ ವಟುವು ಶ್ರೀ ನೃಸಿಂಹ ಭಾರತೀ ಗುರುಕರಕಮಲದಿಂದ ಸಂನ್ಯಾಸವನ್ನು ಸ್ವೀಕರಿಸಿ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಎಂಬ ನಾಮಧೇಯವನ್ನು ಪಡೆದನು. ಆ ಬಾಲ ಯತಿಗಳಿಗೆ ತರ್ಕ ವ್ಯಾಕರಣಾದಿ ಶಾಸ್ತ್ರಗಳನ್ನು ಬೋಧಿಸುವುದಕ್ಕೆ ಬಹುಶಾಸ್ತ್ರ ಪಾರಂಗತರಾದ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರೇ ನಿಯಮಿತರಾದರು. ಅದ್ವೈತ ತತ್ತ್ವಗಳನ್ನೂ, ಯೋಗರಹಸ್ಯಗಳನ್ನೂ, ಮಠ ಸಂಪ್ರದಾಯಗಳನ್ನೂ ಉಪದೇಶಿಸುವ ಕಾರ್ಯವನ್ನು ಶ್ರೀ ಸ್ವಾಮಿಗಳವರೇ ಕೈಗೊಂಡರು. ಈ ರೀತಿ ಭಾವಿ ಜಗದ್ಗುರುಗಳವರ ಪ್ರಜ್ಞೆಯೂ, ತಪಶ್ಶಕ್ತಿಯೂ, ವಾಗ್ಮಿತೆಯೂ, ವರ್ಚಸ್ವಿತೆಯೂ ದಿನೇ ದಿನೇ ಅಭಿವರ್ಧಿಸುತ್ತಿದ್ದವು. ಕ್ರಿ.ಶ. 1868ರಲ್ಲಿ ವೃದ್ಧ ಗುರುಗಳವರು ಬಾಲ ಗುರುಗಳವರೊಡನೆ ಬೆಂಗಳೂರು ಮುಂತಾದ ಸ್ಥಳಗಳಿಗೆ ಚಿತ್ತೈಸಿ, ಬಾಲ ಗುರುಗಳವರಿಗೆ ಶಿಷ್ಯ ಮಂಡಲಿಯ ಪರಿಚಯವನ್ನು ಮಾಡಿಸಿದರು. ಅಂದಿನಿಂದ 12 ವರ್ಷಗಳ ತರುವಾಯ, ಎಂದರೆ ಕ್ರಿ.ಶ. 1880ಕ್ಕೆ ಸರಿಯಾದ ಶಾ॥ಶ॥ ೧೮೦೨ನೆಯ ಪ್ರಮಾಥಿ ಸಂ॥ ಜ್ಯೇಷ್ಠ ಶು॥ ದ್ವಿತೀಯಾ ದಿವಸ ಶ್ರೀ ನೃಸಿಂಹ ಭಾರತೀಗಳವರು ಪಾರ್ಥಿವ ಕಳೇಬರವನ್ನು ವಿಸರ್ಜಿಸಲು ಸಚ್ಚಿದಾನಂದ ಶಿವಾಭಿನವರು ತಮ್ಮ 21ನೆಯ ವರ್ಷದಲ್ಲಿ–ಜಗದ್ಗುರು ಪೀಠಾರೋಹಣವನ್ನು ಮಾಡಿದರು. ಇನ್ನು ಆಳಿದ ಪ್ರಭುಗಳಾದ ಶ್ರೀ ಚಾಮರಾಜ

ಒಡೆಯುರವರು ರಾಜ್ಯಭಾರವನ್ನು ವಹಿಸಿದುದಕ್ಕೆ ಕೆಲವು ತಿಂಗಳುಗಳ ಹಿಂದೆ. ರಾಜ್ಯಾಧಿಪತ್ಯದ ಭಾರಕ್ಕಿಂತಲೂ ಮಠಾಧಿಪತ್ಯದ ಭಾರವು ಹಗುರವಾದುದಲ್ಲವೆಂಬುದನ್ನು ವಿಚಾರಪರರೆಲ್ಲರೂ ಒಪ್ಪುವರು. ಅದರಲ್ಲಿಯೂ ಶ್ರೀಮಚ್ಛಂಕರ ಭಗವತ್ಪಾದರಿಂದ ಸ್ಥಾಪಿತವಾಗಿ. ವಿದ್ಯಾರಣ್ಯಾದಿ ಮಹಾಮುನಿಗಳಿಂದ ಅಲಂಕೃತವಾದ ಶೃಂಗಗಿರಿಯ ಪೀಠದ ಗೌರವವು ಅಸಾಧ್ಯವಾದುದು. ಅದಕ್ಕೆ ಬೇಕಾದ ವಿದ್ಯಾವೈದುಷ್ಯಗಳನ್ನೂ ಶಮದಮಾದಿ ಸದ್ಗುಣಗಳನ್ನೂ, ತಪಶ್ಶಕ್ತಿಯನ್ನೂ ಸಚ್ಚಿದಾನಂದ ಶಿವಾಭಿನವ ಸ್ವಾಮಿಗಳವರು ನೈಜವಾದ ಪ್ರತಿಭೆಯಿಂದಲೂ ಆತ್ಮನಿಷ್ಠೆಯಿಂದಲೂ ಗುರು ಪ್ರಸಾದದಿಂದಲೂ ಸಂಪೂರ್ಣವಾಗಿ ಪಡೆದುಕೊಂಡಿದ್ದರು. ನರಸಿಂಹ ಭಾರತಿಗಳವರು ಇವರಲ್ಲಿ ಎಷ್ಟು ಗಾಢವಾದ ಪ್ರೇಮವನ್ನಿಟ್ಟು ಎಷ್ಟು ಮಮತೆಯಿಂದ ಅವರನ್ನು ಸಲಹಿ, ಎಷ್ಟು ಜಾಗರೂಕತೆಯಿಂದ ಅವರನ್ನು ತಯಾರು ಮಾಡಿದ್ದರೆಂಬುದು ಅವರ ಅನೇಕವಾದ ಗುರುಸ್ತೋತ್ರ ವಚನಗಳಿಂದ ವ್ಯಕ್ತವಾಗುತ್ತದೆ. ನರಸಿಂಹ ಭಾರತಿಗಳವರು ಮಠಕ್ಕೆ ಸಂಪಾದಿಸಿದ್ದ ಗೌರವವೂ ಐಶ್ವರ್ಯವೂ ತಚ್ಛಿಷ್ಯರ ಕಾಲದಲ್ಲಿ ಹೆಚ್ಚಾಗಿ ಬೆಳೆದವು. ಇವರ ಕಾಲದಲ್ಲಿ ಮಠದಲ್ಲಿ ಪಾಠ ಪುರಾಣಗಳು ಎಂದಿನಂತೆ ನಡೆಯುತ್ತಿದ್ದವು.

ಸಚ್ಚಿದಾನಂದ ಶಿವಾಭಿನವ ಶ್ರೀಚರಣರ ಕಾಲದಲ್ಲಿ ನಡೆದ ಚರಿತ್ರಾರ್ಹವಾದ ಸಂಗತಿಗಳಲ್ಲಿ ಅತಿಮುಖ್ಯವಾದುದು ಅವರ ಕಾಲಟೀ ಯಾತ್ರೆ. ಆದಿಶಂಕರರ ಜನ್ಮಸ್ಥಾನವಾದ ಕಾಲಟ್ಯಗ್ರಹಾರದ ಪ್ರದೇಶವು ಅನ್ಯಮತೀಯರಿಂದ ಆಕ್ರಾಂತವಾಗಿದ್ದುದನ್ನು ಮಾ॥ ರಾ॥ ವಿ. ಪಿ. ಮಾಧವರಾಯರು ತಿರುವಾಂಕೂರಿನಲ್ಲಿ ದಿವಾನರಾಗಿದ್ದಾಗ ಕಂಡು, ವಿಷಾದಪಟ್ಟು, ಆ ಪ್ರದೇಶವನ್ನು ಶೃಂಗಗಿರಿಮಠಕ್ಕೆ ಬಿಡಿಸಿಕೊಟ್ಟು, ಅಲ್ಲಿ ಗುರು ಮಂದಿರವನ್ನು ನಿರ್ಮಾಣ ಮಾಡಿಸಿ, ಅದರಲ್ಲಿ ಗುರುಬಿಂಬವನ್ನು ನಿಲ್ಲಿಸಲು ಸಹಾಯ ಮಾಡಬೇಕೆಂದು ಯೋಚಿಸಿದರು. ಈ ಪ್ರಯತ್ನದಲ್ಲಿ ದಿವಾನ್ ಬಹದ್ದೂರ್ ರಾಮ ಚಂದ್ರಯ್ಯನವರೂ ಭಾಗಿಗಳಾಗಿದ್ದರು. ಶ್ರೀಸ್ವಾಮಿಗಳವರು ಈ ಸಮಾರಂಭಕ್ಕೆ ಮುಖ್ಯಪ್ರೇರಕರಾಗಿಯೂ ಪ್ರೋತ್ಸಾಹಕರಾಗಿಯೂ ಇದ್ದರು. ಅದಕ್ಕಾಗಿ ಅವರು ಕ್ರಿ.ಶ. 1907ರಲ್ಲಿ–ಎಂದರೆ ಕಳೆದ ಸೌಮ್ಯಸಂವತ್ಸರದಲ್ಲಿ ಕಾಲಟಿಗೆ ಯಾತ್ರೆ ಬೆಳಸಿ ಅಲ್ಲಿ ಪೂರ್ಣಾನದೀತಟದಲ್ಲಿ ಶಂಕರರ ಜನನಸ್ಥಾನದಲ್ಲಿ ಗುರುಭವನವನ್ನು ಕಟ್ಟಿಸಿ ಅದರಲ್ಲಿ ಅಮೃತಶಿಲಾಮಯವಾದ ಶಂಕರವಿಗ್ರಹವನ್ನು ಪ್ರತಿಷ್ಠೆಗೊಳಿಸಿ ಆ ಬಳಿಕ ಶಾರದಾದೇವೀ ಭವನವನ್ನು ನಿರ್ಮಾಣಗೊಳಿಸಿ ಆ ಬಳಿಕ ಶೃಂಗಗಿರಿಗೆ ಹಿಂದಿರುಗಿದರು. ಈ ದೇಶಪರ್ಯಟನ ಮಹೋತ್ಸವವು ನಾಲ್ಕು ವರ್ಷಗಳ ಕಾಲ ನಡೆಯಿತು. ಶ್ರೀಯವರು ಚಿತ್ತೈಸಿದ ಸ್ಥಳಗಳಲ್ಲೆಲ್ಲಾ ಜನರು ತೋರಿದ ಸಂಭ್ರಮವೂ. ಭಕ್ತಿಯೂ ಹರ್ಷಜನಕಗಳಾಗಿದ್ದವು. ರಾಜಾಧಿರಾಜರಲ್ಲಿ ತೋರುವ ಗೌರವಕ್ಕಿಂತ ಹತ್ತರಷ್ಟು ಮಿಗಿಲಾದ ಸನ್ಮಾನವನ್ನು ಜನರು ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಜಗದ್ಗುರುಗಳ ವಿಷಯದಲ್ಲಿ ತೋರಿಸುತ್ತಿದ್ದರು. ಹಿಂದೂಗಳ ಮತೋತ್ಸಾಹವು ಇನ್ನೂ ಉಳಿದಿದೆಯೆಂಬುದಕ್ಕೂ, ವೇದಧರ್ಮೋಜ್ಜೀವನದ ಆಸೆಗೆ ಇನ್ನೂ ಆಸ್ಪದವಿದೆ ಯೆಂಬುದಕ್ಕೂ, ಸದ್ಗುರುಸೇವಾಸಕ್ತಿಯು ಈ ದೇಶದವರಲ್ಲಿ ಇನ್ನೂ ಸಂಪೂರ್ಣವಾಗಿ

ನಷ್ಟವಾಗಿಲ್ಲವೆಂಬುದಕ್ಕೂ ಆಗ ಶಿಷ್ಯಕೋಟಿಯು ತೋರಿದ ಔತ್ಸುಕ್ಯವು ದೃಷ್ಟಾಂತವಾಗಿದೆ. ಹಿಂದೂಗಳು ಮಾತ್ರವೇ ಅಲ್ಲ. ಮಹಮ್ಮದೀಯರು ಮೊದಲಾದ ಇತರ ಮತಗಳವರೂ ಶ್ರೀಗಳವರನ್ನು ಪೂಜಿಸಿ ಅವರ ಆಶೀರ್ವಾದವನ್ನು ಪಡೆಯಲು ನಾವು ಮುಂದೆ ತಾವು ಮುಂದೆ ಎಂದು ಬರುತ್ತಿದ್ದರು. ಈ ವಿಜಯಯಾತ್ರೆಯ ಪ್ರಾರಂಭದಲ್ಲಿಯೇ ಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿ ಇಲ್ಲಿ ನಮ್ಮೆಲ್ಲರಿಗೂ ದರ್ಶನವನ್ನಿತ್ತರಲ್ಲದೆ, ಪ್ರತಿದಿನವೂ ನಮ್ಮ ಸ್ಮರಣೆಗೆ ವಿಷಯರಾಗಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡುವುದಕ್ಕೋಸ್ಕರವೋ ಎಂಬಂತೆ ಇಲ್ಲಿ ಶಂಕರಾಲಯವನ್ನು ನಿರ್ಮಿಸಿ ಈ ದಿವ್ಯ ಭವನಕ್ಕೆ ಶಂಕುಸ್ಥಾಪನೆ ಮಾಡಿಸಿದರು. ಹಿಂದಿರುಗುವಾಗಲೂ ಈ ಪಟ್ಟಣಕ್ಕೆ ಬಂದು ಇದೇ ಕಟ್ಟಡದಲ್ಲಿದ್ದು ಶಿಷ್ಯರನ್ನನುಗ್ರಹಿಸಿದರಲ್ಲದೆ, ಇಲ್ಲಿ ಗೀರ್ವಾಣ ಪ್ರೌಢ ಕಲಾಶಾಲೆಯನ್ನೂ ಏರ್ಪಡಿಸಿದರು.

ಈ ರೀತಿ ಬಹು ವಿಧದಲ್ಲಿ ಸದ್ಧರ್ಮ ಪ್ರಚಾರಕ್ಕಾಗಿ ಶ್ರಮಿಸಿ ಮೂರು ನಾಲ್ಕು ಬಾರಿ ದೂರದೇಶಕ್ಕೆ ಸಂಚಾರ ಮಾಡಿ, ನಾನಾ ಜನರ ಗೌರವಕ್ಕೆ ಪಾತ್ರರಾಗಿ ಅವರ ಭಗವದ್ಭಕ್ತಿ ಸದ್ವರ್ತನೆಗಳಿಗೆ ಪ್ರೇರೇಪಕರಾಗಿದ್ದ ಮಹನೀಯರು—ನಮ್ಮ ದುರದೃಷ್ಟದಿಂದ—ವೃದ್ಧರಾಗುವವರೆಗೂ ದೇಹಧಾರಣೆ ಮಾಡದೆ ಹೋದರು. ಈಗಿನ ನಮ್ಮ ಆಪತ್ಕಾಲದಲ್ಲಿ ಅಂತಹವರ ಅನುಗ್ರಹವು ಅತ್ಯಂತಾವಶ್ಯಕವಾಗಿದೆ. ಬಹುಶಃ ಅವರು ಇನ್ನೂ ಕೆಲವು ಕಾಲ ಸಶರೀರರಾಗಿ ಇದ್ದಿದ್ದರೆ ನಮ್ಮ ಸಮಾಜದಲ್ಲಿ ಈಚೆಗೆ ತಲೆದೋರಿರುವ ಅನೇಕ ವ್ಯಾಧಿಗಳು ಪ್ರಬಲಿಸುವಂತೆ ಆಗುತ್ತಿರಲಿಲ್ಲವೆಂದು ನಾವು ಧಾರಾಳವಾಗಿ ನಂಬಬಹುದು. ಬಹುಶಃ ನಮ್ಮ ಧರ್ಮೋಪೇಕ್ಷೆಗಾಗಿ ನಮ್ಮನ್ನು ಶಿಕ್ಷಿಸಿ ನಾವು ತಕ್ಕ ಬುದ್ಧಿ ಕಲಿಯುವಂತೆ ಮಾಡುವುದಕ್ಕೋಸ್ಕರವೋ ಎಂಬಂತೆ ಅವರು ನಮ್ಮ ಸಾಮಾಜಿಕ ರೋಗಗಳು ಉತ್ಕಟಾವಸ್ಥೆಗೆ ಬರುವುದಕ್ಕೆ ಮುಂಚೆಯೇ ನಮ್ಮನ್ನು ಬಿಟ್ಟು ತೆರಳಿದರು. ಕಾಲಟಿಗೆ ಪ್ರಯಾಣಬೆಳಸುವುದಕ್ಕೆ ಮುಂಚೆಯೇ ಅವರು ದೇಹದಾರ್ಢ್ಯವಿಲ್ಲದವರಾಗಿದ್ದರು. ಯತ್ಯಾಶ್ರಮಿಗಳು ವಿಶ್ರಾಂತರು. ವೈಭವಪಟ್ಟು ಸುಖಿಸುವುದಕ್ಕೆ ಅವರಿಗಿರುವಷ್ಟು ಅನುಕೂಲಗಳು ಮತ್ತಾರಿಗೂ ಇಲ್ಲವೆಂದು ಸಾಮಾನ್ಯರಲ್ಲಿ ಬಹುಮಂದಿ ತಿಳಿದುಕೊಂಡಿರುವರು. ಕೆಲಮಂದಿ ಮಠಾಧಿಪತಿಗಳ ಚರ್ಯೆಯನ್ನು ನೋಡಿದರೆ ಅದು ನ್ಯಾಯವೆಂದೂ ಕಾಣಬಹುದು. ಆದರೆ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿಗಳವರನ್ನು ನೋಡಿ, ಅಥವಾ ಅವರ ವೃತ್ತಾಂತವನ್ನು ಕೇಳಿರುವವರು ಅವರ ವ್ರತನಿಯಮಗಳು ಅತಿಗಹನವಾದವೆಂಬುದನ್ನು ಬಲ್ಲರು. ನಿಜವಾದ ಬ್ರಹ್ಮಜ್ಞಾನವನ್ನು ಪಡೆದವರು ಎಲ್ಲಿಯೂ ದೇಹಾಭಿಮಾನವನ್ನು ತೋರುವುದಿಲ್ಲ. ದೇಹವು ಬರಿಯ ಕಟ್ಟಿಗೆ. ಸುಡಲು ಯೋಗ್ಯವಾದುದು—ಎಂಬ ಭಾವನೆಯಿಂದ ದೇಹವನ್ನು ದಂಡಿಸಿ, ಪಾಶವಾಂಶಗಳನ್ನು ಕಳೆದುಕೊಳ್ಳುವುದು ಅವರ ಪದ್ಧತಿ. ಇಟಲೀ ದೇಶದಲ್ಲಿ ಕ್ರಿ.ಶ. 12ನೆಯ ಶತಮಾನದಲ್ಲಿ ಲೋಕೋಪಕಾರಿಯಾಗಿ ಬಾಳಿದ ಸೇಂಟ್ ಫ್ರಾನ್ಸಿಸ್ ಎಂಬ ಸಾಧುವು ದೇಹವನ್ನು ತಕ್ಕಂತೆ ಪೋಷಿಸದೆ ನಿರಾಕರಿಸಿದ್ದನಾದಕಾರಣ ಅವನು ಅವಸಾನ ಕಾಲದಲ್ಲಿ ದೇಹವನ್ನು "ಎಲೈ ಪ್ರಿಯ ಸಹೋದರನಾದ ಗಾರ್ದಭನೆ" ಎಂದು

ಅನುತಾಪದಿಂದ ಸಂಬೋಧಿಸಿ ಅದರ ಕ್ಷಮಾಪಣೆಯನ್ನು ಬೇಡಿಕೊಂಡನಂತೆ. (ಆ ದೇಶದಲ್ಲಿ ಗಾರ್ದಭವು ಕುದುರೆಯಂತೆ ಒಂದು ವಾಹನ ; ಆತನು ದೇಹವನ್ನು ಜೀವನ ವಾಹನವೆಂದು ಭಾವಿಸಿದ್ದನು. ಸಕಲ ಜೀವರಾಶಿಗಳನ್ನೂ ಅಣ್ಣ, ತಮ್ಮ, ಅಕ್ಕ, ತಂಗಿ ಎಂದು ಸಂಬೋಧಿಸಿ ಪ್ರೀತಿಸುವುದು ಆತನಿಗೆ ವಾಡಿಕೆಯಾಗಿತ್ತು.) ನಮ್ಮ ದೇಶದ ಯತಿ ಸಾಧುಗಳಂತೂ ಕಾಯಕ್ಲೇಶಗಳನ್ನು ಸಹಿಸುವುದರಲ್ಲಿ ನಿಸ್ಸೀಮರು. ನಮ್ಮ ಸ್ವಾಮಿಗಳವರು ಸ್ವತಃ ಬಾಹ್ಯಾಚಾರಗಳಲ್ಲಿ ದೃಷ್ಟಿಯಿಡಬೇಕಾದವರಲ್ಲದೇ ಇದ್ದರೂ, ಶಿಷ್ಯಮಂಡಲಿಗೆ ಮಾರ್ಗದರ್ಶಕರಾಗಿರುವುದಕ್ಕೋಸ್ಕರ ಆರ್ಷೇಯವಾಗಿ ಬಂದ ಸಂಪ್ರದಾಯಗಳನ್ನು ಸ್ವಲ್ಪವೂ ತಪ್ಪದೆ ನೆರವೇರಿಸುತ್ತಿದ್ದರು. ಅವರ ಕಾಲದಲ್ಲಿ ಸೋಮಾರಿತನದಿಂದಲಾಗಲಿ, ಬೇಸರದಿಂದಲಾಗಲಿ, ಪೊಳ್ಳು ಹರಟೆಯಿಂದಲಾಗಲಿ ವ್ಯರ್ಥವಾಗಿ ಕಳೆಯಲು ಅರೆನಿಮಿಷವೂ ಇರಲಿಲ್ಲ. ಮೂರು ಹೊತ್ತೂ ಸ್ನಾನ, ಧ್ಯಾನ, ಜಪ, ಪೂಜೆ, ಪಾಠ, ವ್ಯಾಖ್ಯಾನ ಇವು ಎಡೆಬಿಡದೆ ನಡೆಯುತ್ತಿದ್ದವು. ನಿದ್ರಾಹಾರಗಳಲ್ಲಿ ಅವರು ಮಿತವುಳ್ಳವರಾಗಿ, ಉಪವಾಸಕ್ಕೆ ಹೆದರದವರಾಗಿದ್ದರು. ಇಂತಹವರ ಶರೀರವು ಬೇಗನೆ ಗಳಿತವಾದುದು ಸ್ವಾಭಾವಿಕವಾದುದೆಂದೇ ಹೇಳಬೇಕು. ಶ್ರೀ ಆದಿಶಂಕರರ ಚರಿತ್ರೆಯಿಂದ ಅವರಿಗೂ ಹೀಗೆಯೇ ಆಯಿತೆಂದು ತಿಳಿಯಬರುವುದು. ನಮ್ಮ ಸ್ವಾಮಿಗಳವರು ಶೃಂಗಗಿರಿಗೆ ಹಿಂದಿರುಗುವಾಗ ವ್ಯಾಧಿಗ್ರಸ್ತರಾಗಿದ್ದು, ಅಲ್ಲಿ ಸೇರಿದ ಮೇಲೆ ಹಾಸಿಗೆ ಹಿಡಿಯಬೇಕಾಯಿತು. ಆದರೂ ಆ ಯಾತನೆಯನ್ನನುಭವಿಸುತ್ತಿದ್ದಾಗಲೂ ಅವರು ಯಾವ ನಿಯಮವನ್ನೂ ಬಿಟ್ಟವರಲ್ಲ ; ಅವರ ಪ್ರಸನ್ನತೆಯೂ ಪ್ರಶಾಂತತೆಯೂ ಅರೆಕ್ಷಣವೂ ಅವರಿಂದ ಅಗಲಲಿಲ್ಲ. ಅವರು ಎಂದಿನಂತೆಯೇ ನಗುಮೋರೆಯುಳ್ಳವರಾಗಿ ದೇಹದ ನೋವನ್ನು ಗಮನಿಸದೆ, ಶ್ರೀಮನ್ಮಹಾರಾಜರವರು ಕಳುಹಿದ ಘನವೈದ್ಯರ ಪ್ರಯತ್ನಗಳೆಲ್ಲವೂ ನಿರರ್ಥಕವಾಗುತ್ತಿರಲು, ಕಡೆಗೆ 1912ನೇ ಇಸ್ವಿ ಮಾರ್ಚಿ 20ಕ್ಕೆ ಸರಿಯಾದ ಪರಿಧಾವಿ ಸಂ॥ ಚೈತ್ರ ಶುದ್ಧ ದ್ವಿತೀಯಾ ದಿವಸ ಜೀರ್ಣಕಳೇಬರವನ್ನು ತ್ಯಜಿಸಿ ಬ್ರಹ್ಮೈಕ್ಯವನ್ನು ಹೊಂದಿದರು. ಆದರೆ ಅವರ ಯಶಃಕಾಯವು ಎಂದಿಗೂ ನಷ್ಟವಾಗತಕ್ಕುದಲ್ಲ.

ಅವರು ಸಶರೀರರಾಗಿಯೇ ಮುಕ್ತಾವಸ್ಥೆಯನ್ನಡರಿದ್ದರೆಂಬುದು ಬಹುಮಂದಿಗೆ ತಿಳಿದಿರುವ ವಿಷಯ. ಅವರು ಜೀವನ್ಮುಕ್ತರಾಗಿದ್ದ ಶ್ರೀ ಸದಾಶಿವ ಬ್ರಹ್ಮೇಂದ್ರರನ್ನೇ ಆದರ್ಶವಾಗಿಟ್ಟುಕೊಂಡು, ಆಗಾಗ ಆ ಯೋಗಿವರ್ಯರ 'ಆತ್ಮವಿದ್ಯಾವಿಲಾಸ' ವೆಂಬ ಗ್ರಂಥದ ಶ್ಲೋಕಗಳನ್ನು ಕೇಳುವ ಮತ್ತು ಹೇಳುವ ಆನಂದದಲ್ಲಿ ಮಗ್ನರಾಗಿರುತ್ತಿದ್ದರು. ಸ್ವಾಮಿಗಳವರ ಅದ್ವೈತ ತತ್ತ್ವಪ್ರತಿಪಾದಕಗಳಾದ ವಾಕ್ಯಗಳಿಂದಲೂ, ಅವರ ಕಡೆಯ ದಿನಗಳ ವರ್ತನೆಯಿಂದಲೂ ಅವರು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿದ್ದವರೆಂಬುದು ವಿಶದವಾಗಿ ತೋರಿಬರುವುದು. ಅವರು ಸರ್ವದಾ ಪ್ರಶಾಂತರಾಗಿ, ಪ್ರಸನ್ನವದನರಾಗಿ, ಮೃದುವಚನರಾಗಿ, ಸಕಲರ ವಿಷಯದಲ್ಲಿಯೂ ಏಕರೀತಿಯಾದ ಕರುಣೆಯನ್ನು ತೋರುವವರಾಗಿದ್ದರು. ಪಂಡಿತರಿಗೆ ಹೇಗೆಯೋ ಪಾಮರರಿಗೂ ಹಾಗೆಯೇ, ಧನಿಕರಿಗೆ ಹೇಗೆಯೋ ಧನಹೀನರಿಗೂ ಹಾಗೆಯೇ,

ಪ್ರಬಲರಿಗೆ ಹೇಗೆಯೋ ಸಾಮಾನ್ಯರಿಗೂ ಹಾಗೆಯೇ, ವೃದ್ಧರಿಗೆ ಹೇಗೆಯೋ ಬಾಲಕರಿಗೂ ಹಾಗೆಯೇ ಸುಲಭರಾಗಿ, ಪ್ರಿಯರಾಗಿ ಇರುತ್ತಿದ್ದರು.

ಈ ದಿನ ಬೆಳಿಗ್ಗೆ ವೇದಮೂರ್ತಿ ಸೀತಾರಾಮ ಶಾಸ್ತ್ರಿಗಳವರು ಭಾವಗರ್ಭಿತವಾದ ಕಥೆಯೊಂದನ್ನು ಹೇಳಿದರು. ಶೃಂಗಗಿರಿಯಲ್ಲಿ ಸ್ವಾಮಿಗಳನ್ನು ಶರಣು ಹೊಂದಿ ಅವರ ವಿಶ್ವಾಸಕ್ಕೆ ಪಾತ್ರವಾಗಿದ್ದ ಪ್ರಾಣಿಗಳಲ್ಲಿ ನಾಯಿಯೊಂದಿತ್ತಂತೆ. ಅದಕ್ಕೆ ಅವರು "ಗುಂಡ"ನೆಂದು ಹೆಸರಿಟ್ಟಿದ್ದರಂತೆ. ಅದು ಅವರು ಹಾಕಿಸಿದ ಅನ್ನದ ವಿನಾ ಏನನ್ನೂ ತಿನ್ನದೆ ಸ್ವಾಮಿಗಳು ಹೊರಗೆ ಹೊರಟಾಗ ಅವರ ಹಿಂದೆಯೇ ತಿರುಗಾಡುತ್ತಾ, ಉಳಿದ ಕಾಲದಲ್ಲಿ ಮಠದ ಬಾಗಿಲ ಬಳಿ ಮಲಗಿರುತ್ತಿತ್ತಂತೆ. ತುಂಗಾನದಿಯ ಮತ್ತೊಂದು ದಡದಲ್ಲಿರುವ ನೃಸಿಂಹವನದಲ್ಲಿ ಬಹುಕಾಲದಿಂದಿದ್ದ ಘಟಸರ್ಪವೊಂದನ್ನು ಸ್ವಾಮಿಗಳವರು ಗುರುತಿಟ್ಟುಕೊಂಡಿದ್ದರಂತೆ. ಅದು ಅವರ ಗುರುಗಳ ದಿನದಿಂದಲೂ ಆ ಕಾಡಿನಲ್ಲಿ ಸಂಚರಿಸುತ್ತಿತ್ತಂತೆ. ಒಂದಾನೊಂದು ದಿನ ಬೆಳಿಗ್ಗೆ ಯಾರೋ ಆ ಹಾವನ್ನು ಬಂದೂಕಿನಿಂದ ಹೊಡೆದು ಕೊಂದುಬಿಟ್ಟರಂತೆ. ಅದನ್ನು ಮೇಲೆ ಹೇಳಿದ ನಾಯಿಯು ಹೇಗೆಯೋ ತಿಳಿದುಕೊಂಡು, ಸ್ವಾಮಿಗಳವರು ಮಧ್ಯಾಹ್ನ ಸ್ನಾನಕ್ಕಾಗಿ ಹೊರಗೆ ಹೊರಟ ಕೂಡಲೆ ಅವರ ದಾರಿಗೆ ಅಡ್ಡಗಟ್ಟಿ, ನಿರ್ಬಂಧದಿಂದ ಅವರನ್ನು ಆ ಸರ್ಪಹತ್ಯೆಯ ಸ್ಥಳಕ್ಕೆ ಕರೆದುಕೊಂಡು ಹೋಯಿತಂತೆ. ಸ್ವಾಮಿಗಳವರು ಅದನ್ನು ಕಂಡಕೂಡಲೆ ಕನಿಕರಗೊಂಡವರಾಗಿ, "ಈ ಸ್ಥಳವು ಹಾವಿನದು; ಅವರ ಸ್ಥಳವನ್ನು ನಾವು ಆಕ್ರಮಿಸಿರುವುದೂ ಅಲ್ಲದೆ ಅವಕ್ಕೆ ಹಿಂಸೆ ಮಾಡಿ ಅದನ್ನು ಕೊಲ್ಲಬಹುದೇ" ಎಂದು ಮುಂತಾಗಿ ಹೇಳಿ ಬಹು ವ್ಯಸನವನ್ನು ಸೂಚಿಸಿದರಂತೆ. ಈ ಬಗೆಯ ವಿಶ್ವಮೈತ್ರಿಯು ಬ್ರಹ್ಮವೇತ್ತರ ಲಕ್ಷಣ. ಈಶಾವಾಸ್ಯಾದ್ಯುಪನಿಷತ್ತುಗಳಲ್ಲಿಯೂ ಭಗವದ್ಗೀತಾದಿ ಸಚ್ಛಾಸ್ತ್ರಗಳಲ್ಲಿಯೂ ಯಾವ ಸರ್ವಭೂತಹಿತನಿರತತೆಯನ್ನು ಪರಮೋತ್ತಮ ಗುಣವೆಂದು ಸೂಚಿಸಿರುವರೋ ಅದನ್ನು ಶ್ರೀ ಸ್ವಾಮಿಗಳವರು ತಮ್ಮ ದಿನಂಪ್ರತಿಯ ನಡವಳಿಕೆಯಲ್ಲಿ ತೋರಿಸುತ್ತಿದ್ದರು.

ಅವರು ಮಹಾ ಪಂಡಿತರಾಗಿದ್ದಂತೆಯೇ ಮಹಾ ಕವಿಯೂ ಆಗಿದ್ದರೆಂದು ತೋರುತ್ತದೆ. ಅವರು ಯಾವ ದೀರ್ಘವಾದ ಕಾವ್ಯವನ್ನೂ ಬರೆಯದೇ ಇದ್ದರೂ, 'ಭಕ್ತಿಸುಧಾತರಂಗಿಣಿ'ಯೆಂಬ ಗ್ರಂಥದಲ್ಲಿ ಸಂಕಲಿತವಾಗಿರುವ ಅವರ ಸ್ತೋತ್ರ ಪ್ರಕರಣಗಳಿಂದ ಅವರ ಹೃದಯದ ಸರಸತೆಯನ್ನೂ ಅವರ ಶೈಲಿಯ ಸರಳತೆಯನ್ನೂ ತಿಳಿಯಬಹುದು. ಮಾತುಕಥೆಯಲ್ಲಿಯೂ ಅವರು ಸರಸಿಗಳಾಗಿ ಭಾವಗರ್ಭಿತವಾದ ರೀತಿಯುಳ್ಳವರಾಗಿದ್ದರು. ಅವರು ಶಾಸ್ತ್ರ ಜಿಜ್ಞಾಸದಲ್ಲಿ ಹೇಗೆಯೋ ವಿನೋದ ಪ್ರಸಂಗದಲ್ಲಿಯೂ ಹಾಗೆಯೇ ಅಸಮಾನರಾಗಿದ್ದರು

ಅವರು ಹಾಸ್ಯರಸವನ್ನರಿಯದವರೇನೂ ಆಗಿರಲಿಲ್ಲ. ಒಂದು ಸಮಯದಲ್ಲಿ ಒಂದು ಶ್ರೀಗಂಧದ ಮರದ ತುಂಡಿನಲ್ಲಿ ಒಂದು ಮರವನ್ನು ಕೆತ್ತಿ ಅದರಲ್ಲಿ ಬಳ್ಳಿ, ಎಲೆ, ಹೂವು, ಹಣ್ಣುಗಳನ್ನೂ ಕಪಿ–ಪಕ್ಷಿಗಳನ್ನೂ ತೋರಿಸಿದ ಚಿತ್ರವೊಂದನ್ನು

ತಂದು ಯಾರೋ ಸ್ವಾಮಿಗಳವರಿಗೆ ಒಪ್ಪಿಸಲು ಆಗ ಅವರು ಆ ಶಿಲ್ಪಿಕೌಶಲ್ಯವನ್ನು ಕುರಿತು ಹೇಳಿದ 'ಶ್ರೀಖಂಡಖಂಡಷಟ್ಪದೀ' ಎಂಬ ಪದ್ಯಗಳು ಅವರ ಕವಿತಾ ಚಾತುರ್ಯವನ್ನು ತೋರಿಸುತ್ತವೆ.

ನ್ಯಾಯ ಮೀಮಾಂಸಾದಿ ಶಾಸ್ತ್ರಗಳಲ್ಲಿ ಸ್ವಾಮಿಗಳವರು ಭರತಖಂಡದಲ್ಲೆಲ್ಲಾ ಅದ್ವಿತೀಯರಾದ ಪಂಡಿತರಾಗಿದ್ದರೆಂಬುದೂ, ಅದ್ವೈತ ವಿದ್ಯೆಯಲ್ಲಿ ಅವರು ಪರಾಕಾಷ್ಠ ದಶೆಯನ್ನು ಹೊಂದಿದ್ದರೆಂಬುದೂ ಎಲ್ಲರಿಗೂ ತಿಳಿದ ವಿಷಯಗಳಾಗಿವೆ. ಪ್ರಖ್ಯಾತರಾದ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ಶ್ರೀ ಸ್ವಾಮಿಗಳವರಲ್ಲಿ ಅನನ್ಯವಾದ ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡು ಅವರ ಪಾದಸೇವೆಯೇ ತಮಗೆ ಸದ್ಗತಿದಾಯಕವೆಂದು ನಂಬಿಕೊಂಡಿದ್ದರು.

ನಮ್ಮ ಹಿಂದಿನ ಮಹಾರಾಜರವರು ಸ್ವಾಮಿಗಳನ್ನು ಪರದೇವತಾ ಸ್ವರೂಪವೆಂದು ಭಾವಿಸಿ ಅವರಿಂದ ಮಂತ್ರೋಪದೇಶವನ್ನು ಪಡೆದುಕೊಂಡಿದ್ದರು. ಅದರಂತೆಯೇ ನಮ್ಮ ಈಗಿನ ಮಹಾರಾಜರವರು ಶ್ರೀ ಗುರುಗಳವರಲ್ಲಿ ಅನನ್ಯವಾದ ಭಕ್ತಿಯನ್ನು. ಅದನ್ನು ಅನೇಕ ರೀತಿ ಪ್ರಕಾಶಗೊಳಿಸಿರುವುದು ನಮಗೆಲ್ಲರಿಗೂ ಗೊತ್ತೇ ಇದೆ. ಈ ಸಭಾಮಂದಿರದಲ್ಲಿ ಸ್ವಾಮಿಗಳವರು ಭಾರತೀಯ ಗೀರ್ವಾಣ ಪ್ರೌಢ ವಿದ್ಯಾಶಾಲೆಯನ್ನು ಪ್ರತಿಷ್ಠಾಪಿಸಿದ ಕಾಲದಲ್ಲಿ ಶ್ರೀಮನ್ಮಹಾರಾಜರವರು ಇಲ್ಲಿ ಭಕ್ತಿಶ್ರದ್ಧೆಗಳಿಂದ ಕುಳಿತು ಸಭಾಸಂತೃಪ್ತಿಯನ್ನುಂಟುಮಾಡಿದುದು ತಮಗೆಲ್ಲರಿಗೂ ಜ್ಞಾಪಕವಿರಬಹುದು.

ಸ್ವಾಮಿಗಳವರು ವಿಶ್ವಪ್ರಿಯರಾಗಿ. ಸಕಲ ಜಗತ್ತಿಗೂ ಮಂಗಳಾಕಾಂಕ್ಷಿಗಳಾಗಿ ಇದ್ದರೂ, ಅವರಿಗೆ ದೇಶಾಭಿಮಾನವೇನೂ ಕಡಮೆಯಾಗಿರಲಿಲ್ಲ. ಶ್ರೀಮನ್ಮಹಾರಾಜರನ್ನಾಶೀರ್ವದಿಸಿ ಅವರು ಹೇಳಿದ

ಶ್ರೀರಾಮಲಕ್ಷ್ಮಣಾವಿವ ಸೌಹಾರ್ದಂ ಪ್ರಾಪ್ಯ ಸುಸ್ಥಿರಂ ಸುಚಿರಂ ॥
ಶ್ರೀ ಚಾಮರಾಜ ಪುತ್ರೌ ಜೀಯಾಸ್ತಾಂ ಶಾರದಾಂಬ ತವ ಕೃಪಯಾ ॥

ಇತ್ಯಾದಿ ಪದ್ಯಗಳು ಮುಖಸ್ತೋತ್ರವಲ್ಲ. ರಾಷ್ಟ್ರಾಭಿಮಾನದ ಉದ್ರೇಕದ ಸೂಚನೆಗಳು. ಸ್ವಾಮಿಗಳವರು ತಮ್ಮ ಗುರುಗಳನ್ನು—

"ಭಾರತ ಜನ ಪುಣ್ಯನಿಧೀನ್"

—ಎಂದು ಕರೆದು ತಮ್ಮ ದೇಶೀಯ ಮಮತೆಯನ್ನು ಆ ಮೂಲಕ ವ್ಯಕ್ತಪಡಿಸಿರುವರು. ಮತ್ತೊಂದೆಡೆಯಲ್ಲಿ ಶಾರದಾಂಬೆಯನ್ನು ಕುರಿತು—

ಪ್ರವರ್ತಯಾ ಸೇತು ತುಷಾರಶೈಲಂ
ಸದ್ಧರ್ಮಮೇನಂ ಜಗತಾಂ ಹಿತಾಯ ॥

—ಎಂದು ಪ್ರಾರ್ಥಿಸಿ. ತಮ್ಮ ದೇಶಾಭಿಮಾನ. ಲೋಕಹಿತಬುದ್ಧಿ ಇವೆರಡನ್ನೂ ವ್ಯಕ್ತಗೊಳಿಸಿದ್ದಾರೆ. ಇದೇ ಅರ್ಥವನ್ನೇ ಕೊಡುವ ವಾಕ್ಯಗಳು ಇನ್ನೂ ಅನೇಕವಾಗಿ ದೊರೆಯುವವು.

ಹಾಗಾದರೆ ಮಠಗಳ ಕರ್ತವ್ಯಗಳ ವಿಷಯದಲ್ಲಿ ಸ್ವಾಮಿಗಳವರು ಯಾವ ಅಭಿಪ್ರಾಯವನ್ನಿಟ್ಟುಕೊಂಡಿದ್ದರು ಎಂದು ಯಾರಾದರೂ ಕೇಳಬಹುದು. ಮಠಾಧಿಪತಿಯಾಗಿ ಗುರುಪದವಿಯನ್ನಂಗೀಕರಿಸಿದ್ದವರ ಕರ್ತವ್ಯಗಳು ಅತ್ಯಂತ ಗೌರವವುಳ್ಳವುಗಳೆಂಬುದನ್ನು ಅವರು ತಿಳಿಯದೆ ಇರಲಿಲ್ಲ–"ನಾನು ದಂಡ ಕಮಂಡಲ ಜಪಮಾಲೆಗಳಿಂದ ಗೃಹಸ್ಥರನ್ನು ಮರುಳುಮಾಡುತ್ತಿದ್ದೇನೆ. ಈ ಸಂನ್ಯಾಸಿಗೆ ಹಣವೇಕೆ. ಅಲಂಕಾರವೇಕೆ. ಈ ಪಟಾಟೋಪವೇಕೆ? ಎಂದು ನನ್ನನ್ನು ಲೋಕವು ನಿಂದಿಸುತ್ತಿದೆ. ಇಂತಹ ನನ್ನನ್ನು ಕಾಪಾಡು"—ಎಂದು ಮುಂತಾಗಿ ಅವರು ಆಗಾಗ ಶಾರದಾಂಬೆಯಲ್ಲಿಯೂ, ತಮ್ಮ ಗುರುಗಳಲ್ಲಿಯೂ ಮೊರೆಯಿಡುತ್ತಿದ್ದರು. ಒಂದು ಸಲ ಶಂಕರಾಚಾರ್ಯ ಸ್ತುತಿಯಲ್ಲಿ—

ತಸ್ಮಾತ್ ಸ್ಥಾನಮಿದಂ ಗುರೂತ್ತಮ ಕೃಪಾವಾರ್ಧೇ ತ್ವಮೇವಾಶ್ರಯ

"ಗುರೂತ್ತಮರೇ, ತಾವು ಸ್ಥಾಪಿಸಿದ ಈ ಪೀಠವನ್ನು ತಾವೇ ಪುನಃ ಅಲಂಕರಿಸುವವರಾಗಿರಿ" ಎಂದು ಪರಿಪರಿಯಾಗಿ ಪ್ರಾರ್ಥಿಸಿದರು. ಇದರಿಂದ ಆ ಸ್ಥಾನದ ಧರ್ಮಗಳನ್ನು ನೆರವೇರಿಸಲು ಬೇಕಾದ ಸಂಪತ್ಸಾಧನಗಳು ತಮಗೆ ಇರಲಿಲ್ಲವೆಂಬುದೇ ಅವರ ಕೊರತೆಯಾಗಿತ್ತೆಂದು ನಾವು ಅನುಮಾನಿಸಬಹುದು. ಸದ್ಗುರುಲಕ್ಷಣವೆಂತಹುದೆಂಬುದನ್ನು ಅವರೇ ವಿವರಿಸುವರು :

ನಿರ್ಹೇತುಕ ಕರುಣಾಜನಿಭೂಮಿಃ ಸಂತ್ಯಕ್ತ ವಿಷಯೇಚ್ಛಃ ।
ಲುಪ್ತ ಸ್ವಪರತ್ವಮತಿಃ ಸ್ಮಿತಲಸದಾಸ್ಯಾಂಬುಜಃ ಸತತಂ ॥

ಶಿಲಿತನಿಗಮಾನ್ತತತಿಃ ಪಾಲಿತಮೈತ್ರೀಪ್ರಮುಖ್ಯ ಗುಣಜಾಲಃ ।
ತತ್ಶಿಷ್ಯೋಪದೇಶನಿರತಃ ಸತ್ವರಮೇವಾಂಘ್ರಿನಮ್ರ ಲೋಕಾನಾಂ ॥

ಸಕ್ರೋಧಾನಕ್ರೋಧಾನ್ವ್ಯಾಗಾಢ್ಯಾನ್ಯಾಗನಿರ್ಮುಕ್ತಾನ್ ।
ಕುರ್ವಾಣೋ ವಿಷಯೇಷ್ವತಿ ವೈರಸ್ಯಂ ಬೋಧಯಂಸ್ತರಸಾ ॥

ಲೋಕಾರ್ಥಮಾಶ್ರಮೋಚಿತಚರ್ಯಾನಿರತಃ ಸಮಾಧಿರಹಿತೇಷು
ಕಾಲೇಷು ಕಿಂಚ ಕೃಷ್ಣದ್ವೈಪಾಯನಸೂತ್ರಜಾಲಬೋಧಯಿತಾ ॥

[ಸದ್ಗುರುವು ಅವ್ಯಾಜಕೃಪೆಗೆ ಜನ್ಮಭೂಮಿಯಂತಿರುವವನು; ಭೋಗಗಳಲ್ಲಿ ಆಶೆಯಿಲ್ಲದವನು ; ತನ್ನದು ಇನ್ನೊಬ್ಬರದು ಎಂಬ ಭೇದವಿಲ್ಲದವನು ; ಯಾವಾಗಲೂ ಮಂದಹಾಸದಿಂದ ಕೂಡಿದವನು ; ವೇದಾಂತವನ್ನು ತಿಳಿದವನು ; ಸ್ನೇಹಕ್ಷಮಾದಿ ಗುಣಗಳುಳ್ಳವನು ; ಶಿಷ್ಯಮಂಡಲಿಗೆ ಸದುಪದೇಶ ಮಾಡುವುದರಲ್ಲಿಯೇ ನಿರತನಾಗಿರುವವನು : ಕೋಪಿಷ್ಠರನ್ನು ಕೋಪವಿಲ್ಲದವರನ್ನಾಗಿಯೂ, ವ್ಯಾಮೋಹಗ್ರಸ್ತರಾದವರನ್ನು ಮೋಹರಹಿತರನ್ನಾಗಿಯೂ ಮಾಡಬಲ್ಲವನು : ವಿಷಯಸುಖಗಳಲ್ಲಿ ಬೇಸರವನ್ನುಂಟುಮಾಡುವವನು ; ಲೋಕದವರು ಅನುಸರಣೆ ಮಾಡುವುದಕ್ಕೋಸ್ಕರ ತನ್ನ ಆಶ್ರಮದ ವ್ರತನಿಯಮಗಳನ್ನು ಆಚರಣೆಮಾಡತಕ್ಕವನು : ತಾನು ಯೋಗಾಭ್ಯಾಸಮಾಡುವ ಕಾಲ ವಿನಾ ಮಿಕ್ಕ ಕಾಲದಲ್ಲಿ ಬ್ರಹ್ಮಸೂತ್ರಾರ್ಥಗಳನ್ನು ವಿವರಣೆ ಮಾಡತಕ್ಕವನು ; ಇಂತಹವನೇ ಸದ್ಗುರುವು.]

ಈ ವರ್ಣನೆಯು ಅದನ್ನು ಬರೆದವರ ವಿಷಯದಲ್ಲಿಯೇ ಸಂಪೂರ್ಣವಾಗಿ ಅನ್ವಯಿಸತಕ್ಕುದೆಂದು ಅವರನ್ನು ಬಲ್ಲವರೆಲ್ಲರೂ ಐಕಕಂಠ್ಯದಿಂದ ಹೇಳುತ್ತಿರುವರು. ನಮ್ಮ ಈಗಿನ ಮಠಾಧಿಪತಿಗಳೆಲ್ಲರೂ ಇಂತಹವರೇ ಆಗಲೆಂಬುದು ಆಸ್ತಿಕಮಂಡಲಿಯ ಹಾರೈಕೆಯಾಗಿರುವ ವಿಷಯದಲ್ಲಿ ಸಂದೇಹವೇನೂ ಇರದು.

ಈಚೆಗೆ ನಮ್ಮ ಮಠಗಳಿಗೂ ಶಿಷ್ಯಮಂಡಲಿಗೂ ಇರಬೇಕಾದ ಬಾಂಧವ್ಯವು ಸಡಿಲವಾಗಿ ಹೋಗಿದೆಯೆಂಬುದು ನಿಜ. ಇದಕ್ಕೆ ಕಾರಣಗಳು ಒಂದೆರಡಲ್ಲ. ಆದುದರಿಂದ ದೋಷವು ಇವರದೇ ಸರಿ. ಇವರದಲ್ಲ ಎಂದು ನಾವು ಈಗ ನಿರ್ಧರಿಸುವುದು ಸುಲಭವಲ್ಲ. ನವನಾಗರಿಕರು ಧರ್ಮಗಳನ್ನು ಹಾಳುಮಾಡಿದರೆಂದು ವೈದಿಕರು ಬಯ್ಯುವುದೂ. ಗೊಡ್ಡು ವೈದಿಕರು ದೇಶಕ್ಕೆ ಭಾರವಾಗಿರುವರೆಂದು ನವನಾಗರಿಕರು ಬಯ್ಯುವುದೂ ಈಚೆಗೆ ವಾಡಿಕೆಯಾಗಿದೆ. ಆದರೆ ಈ ಪರಸ್ಪರ ದೋಷೋದ್ಘಾಟನೆಯು ಪ್ರಯೋಜನಕಾರಿಯಲ್ಲವೆಂದೂ. ಅದು ನ್ಯಾಯವೂ ಅಲ್ಲವೆಂದೂ ವಿಚಾರಶೀಲರೆಲ್ಲರೂ ಒಪ್ಪುವರು. ದೇಶದ ಪ್ರಜಾಮಂಡಲಕ್ಕೆ ಒಂದು ರಾಜಾಸ್ಥಾನವು ಹೇಗೋ. ಸಮಾಜಮಂಡಲಕ್ಕೆ ಒಂದು ಗುರುಪೀಠವು ಹಾಗೆ ಕೇಂದ್ರಪ್ರಾಯವಾಗಿರುವುದು. ರಾಜದಂಡವಿಲ್ಲದಿದ್ದರೆ ನಮ್ಮ ಲೌಕಿಕಕ್ಷೇಮವು ನ್ಯೂನತೆ ಹೊಂದುವುದು. ಹಾಗೆಯೇ ಗುರುನಿಯಮವಿಲ್ಲದಿದ್ದರೆ ನಮ್ಮ ಸಾಮಾಜಿಕ ವ್ಯವಸ್ಥೆಯು ಜಗ ತಪ್ಪಿ. ಮೇರೆ ತಪ್ಪಿ. ಒಡೆದುಹೋಗುವುದು. ರಾಜಭೀತಿಯಿಲ್ಲದಿದ್ದರೂ ಸನ್ಮಾರ್ಗವನ್ನು ಹಿಡಿದವರು ನೂರರಲ್ಲಿ ಒಬ್ಬಿಬ್ಬರಿರಬಹುದು. ಹಾಗೆಯೇ ಗುರುವಿಧಿಯಿಲ್ಲದಿದ್ದರೂ ಧರ್ಮಮಾರ್ಗದಿಂದ ತಪ್ಪದವರು ವಿರಳರಾಗಿರಬಹುದು. ಆದರೆ ಜನಸಾಮಾನ್ಯದ ಲೌಕಿಕ ನೀತಿರಕ್ಷಣೆಗೆ ರಾಜ್ಯಸಂಸ್ಥೆಯು ಆವಶ್ಯಕ. ಅದರಂತೆಯೇ ಅವರ ಸಮಾಜ-ಧರ್ಮರಕ್ಷಣೆಗೆ ಗುರು ಸಂಸ್ಥೆಯು ಆವಶ್ಯಕ. ಅಜನ್ಮಜ್ಞಾನಿಗಳೂ ಆಶ್ರಮಾತೀತರೂ ಧರ್ಮಮೂಲವನ್ನರಿತವರೂ ಆದವರಿಗೆ ಮಠಗಳು ಅನಾವಶ್ಯಕ. ಹುಟ್ಟುಕವಿಗಳಿಗೆ ಪಾಠಶಾಲೆಗಳೂ ಉಪಾಧ್ಯಾಯರೂ ಅನಾವಶ್ಯಕ. ಶುಕರಂತೆಯೂ ವ್ಯಾಸರಂತೆಯೂ ಇರುವವರು ಹೊರಗಣ ನಿರ್ಬಂಧಗಳಿಗೆ ತಕ್ಕವರಲ್ಲ. ಅವರು ಅವುಗಳನ್ನು ಸಹಿಸಬೇಕಾದುದೂ ಇಲ್ಲ. ಆದರೆ ಆ ಸ್ವಾತಂತ್ರ್ಯವು ಸಾಮಾನ್ಯರಿಗೆ ಸಲ್ಲದು. ಇವರಿಗಾಗಿ ರಾಜರೂ ಇರಬೇಕು ಪಾಠಶಾಲೆಗಳೂ ಇರಬೇಕು ; ಮಠಗಳೂ ಇರಬೇಕು. ಆದರೆ ಸದ್ಯಃ ನಮ್ಮ ಮಠಗಳು ತೃಪ್ತಿಕರವಾದ ಸ್ಥಿತಿಯಲ್ಲಿಲ್ಲ : ಅವುಗಳ ಶಿಷ್ಯರೂ ತೃಪ್ತಿಕರವಾದ ಸ್ಥಿತಿಯಲ್ಲಿಲ್ಲ. ಅವರು ಬಹುದಿನಗಳಿಂದ ಪರಸ್ಪರ ಉದಾಸೀನ ಭಾವವನ್ನವಲಂಬಿಸಿದ್ದಾರೆ. ಅವರಿಬ್ಬರೂ ಈಗ ಎಚ್ಚೆತ್ತು ಪರಸ್ಪರ ವಿಶ್ವಾಸ ಗೌರವಗಳನ್ನು ತೋರಿದಲ್ಲದೆ ನಮ್ಮ ಸಮಾಜವು ಉದ್ಧಾರವಾಗಲಾರದು. ನಮ್ಮ ಸಮಾಜವೂ ನಮ್ಮ ಧರ್ಮವೂ ಉಜ್ಜೀವಿಸಲಾರದು. ಈ ಪ್ರಸ್ತಾವದಲ್ಲಿ ನಮ್ಮ ಸ್ವಾಮಿಗಳವರ ಬಾಯಿಂದ ಬಂದ ಒಂದು ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಅವರು ಬೆಂಗಳೂರಿಗೆ ಬಂದಿದ್ದಾಗ ಒಂದು ದಿನ ಬೆಳಿಗ್ಗೆ ಅವರ ಸವಾರಿಯು ಚಾಮರಾಜಪೇಟೆಯ ಕಡೆ ದಯಮಾಡಿಸುತ್ತಿದ್ದಾಗ ಪಾಲಕಿಯ ಬಳಿ ಬರುತ್ತಿದ್ದ ಅನ್ಯಮತೀಯರಾದ ಒಬ್ಬ ದೊಡ್ಡಮನುಷ್ಯರು ಸ್ವಾಮಿಗಳೊಡನೆ ಸಂಭಾಷಣೆ

ಬೆಳಸುತ್ತಾ ತಮ್ಮ ಮಠದವಿಷಯದಲ್ಲಿ ಅಸಮಾಧಾನದ ಧ್ವನಿಯಿಂದ ಮಾತನಾಡಿದರು. ಆಗ ಶ್ರೀ ಸ್ವಾಮಿಗಳವರು ಅವರನ್ನು ನಿಲ್ಲಿಸಿ—"ರಾಯರೆ. ಶಿಷ್ಯರು ಹೇಗೆ ನಡಸಿ ಕೊಳ್ಳುವರೋ ಮಠವು ಹಾಗೆ ನಡೆದುಕೊಳ್ಳುವುದು "ಎಂಬ ಉತ್ತರವನ್ನು ಕೊಟ್ಟರು. ಅದನ್ನು ನನ್ನ ಕಿವಿಯಿಂದಲೇ ಕೇಳಿದೆ. ಆ ಮರ್ಮವನ್ನು ಹಿಂದೂ ಮಠಾಭಿ ಮಾನಿಗಳಾದವರೆಲ್ಲರೂ ಜ್ಞಾಪಕದಲ್ಲಿರಿಸಿ ನಡೆಯಬೇಕು. ಮಠಗಳು ತಮ್ಮ ಕಾರ್ಯ ಗಳನ್ನು ಸರಿಪಡಿಸಲು ಶಿಷ್ಯರಿಗೆ ಅವಕಾಶಗಳನ್ನು ಕಲ್ಪಿಸಬೇಕು. ಶಿಷ್ಯರಾದವರು ಮಠದ ಗೋಜು ತಮಗೆ ಬೇಡವೆಂಬ ಔದಾಸೀನ್ಯವನ್ನೂ, ಮಠವನ್ನು ಕಟ್ಟಿಕೊಂಡು ಪ್ರಯೋಜನವಿಲ್ಲವೆಂಬ ಜಗಳದ ಮಾತನ್ನೂ, ಮಠವು ತಮ್ಮ ಇಚ್ಛೆಯನ್ನೇ ಅನುಸರಿಸ ಬೇಕೆಂಬ ವಿಪರೀತ ಭಾವನೆಯನ್ನೂ ಬಿಟ್ಟು, ಸಮಾಜವ್ಯವಸ್ಥೆಯ ವಿಷಯದಲ್ಲಿ ದೂರಾಲೋಚನೆಯುಳ್ಳವರಾಗಿರಬೇಕು. ಈಗ ನಮ್ಮ ಧರ್ಮದ ಪುನಸ್ಸಂಸ್ಥಾಪನೆ ಗಾಗಿಯೂ. ನಮ್ಮ ಸಮಾಜದ ಜೀರ್ಣೋದ್ಧಾರಕ್ಕಾಗಿಯೂ ನಡೆಯಬೇಕಾದ ಕಾರ್ಯ ಗಳು ಅನೇಕವಿವೆ. ನವನಾಗರಿಕತೆಯ ಕ್ರಮಗಳೆಲ್ಲವೂ ಸರಿಯೆಂದು ಯಾರೂ ಹೇಳುವುದಿಲ್ಲ. ಹಾಗೆಯೇ ನಮ್ಮ ಹಳೆಯ ಪದ್ಧತಿಗಳೆಲ್ಲವೂ ಈ ಕಾಲಕ್ಕೆ ಆವಶ್ಯಕ ವೆಂದೂ ಉಚಿತವೆಂದೂ ಯಾರೂ ಹೇಳಲಾರರು. ಮಾನುಷ ಸಮಾಜದ ಪ್ರತಿಯೊಂದು ಕಟ್ಟುಪಾಡಿನಲ್ಲಿ ಮಾನುಷ ದೇಹದಲ್ಲಿ ನಡೆಯುವಂತೆ– ಆಗಾಗ ತಿದ್ದುಪಾಟು ಗಳಾಗುತ್ತಲೇ ಇರಬೇಕು. ಅದಕ್ಕೆ ವೈದಿಕರೂ ಲೌಕಿಕರೂ ಇಬ್ಬರೂ ಕಲೆತು ಕೆಲಸ ಮಾಡಬೇಕು. ಅವರಲ್ಲಿ ಅನ್ಯೋನ್ಯವಿಶ್ವಾಸವಿಲ್ಲದೆ ಅಸೂಯಾಸಹನೆಗಳು ಹುಟ್ಟಿರುವುದೇ ನಮ್ಮ ಈಗಿನ ಸ್ಥಿತಿಗೆ ಪ್ರಬಲವಾದ ಒಂದು ಕಾರಣ. ಇಂತಹ ದುಷ್ಟ ಭಾವನೆಗಳು ತೊಲಗಿ. ನಮ್ಮ ಸಮಾಜವು ಪುನಃ ಪಾರಿಶುದ್ಧ್ಯವನ್ನೂ ಸುಸ್ಥಿತಿಯನ್ನೂ ಪಡೆದು, ನಮ್ಮ ಧರ್ಮವು ಪ್ರಕಾಶಗೊಂಡು ಜಗತ್ತನ್ನು ಬೆಳಗುವಂತಾಗಬೇಕೆಂಬುದು ನಮ್ಮ ಆಶೆಯಾಗಿರುವ ಪಕ್ಷದಲ್ಲಿ ನಾವು ನಮ್ಮ ಸ್ವಾಮಿಗಳವರು ತೋರಿದ ಮಾರ್ಗದಲ್ಲಿ ಭಕ್ತಿಶ್ರದ್ಧೆಗಳಿಂದ ನಡೆಯಬೇಕು. ಈಗ ಲೋಕವೆಲ್ಲವೂ ಸಂಕ್ಷೋಭೆ ಹೊಂದಿ, ಶಾಂತಿಗೆ ದಾರಿ ಯಾವುದೆಂಬುದನ್ನರಿಯಲಾರದೆ. ವಿವಿಧ ಮತಗಳು ವ್ಯರ್ಥ ಗಳಾಗುತ್ತಿರುವುದನ್ನು ಕಂಡು ಸತ್ಯಧರ್ಮವನ್ನು ತಿಳಿಯಬೇಕೆಂದು ಹಂಬಲಿಸುತ್ತಿದೆ. ಇಂತಹ ಕಾಲದಲ್ಲಿ ವೈದಿಕವಿಭೂತಿಯನ್ನು. ವೇದಾಂತವಿದ್ಯೆಯನ್ನೂ ತತ್ತ್ವಾರ್ಥಗಳಾದ ಸದಾಚಾರ ಸತ್ಸಂಪ್ರದಾಯಗಳನ್ನೂ ಕಾಪಾಡಿ. ಅವುಗಳ ಫಲಿತಾಂಶಗಳನ್ನು ಲೋಕಕ್ಕೆ ತೋರಿಸುವುದು ಋಷಿವಂಶಜರಾದ ನಮ್ಮಗಳ ಮೇಲಿರುವ ಭಾರ. ಈ ಮಹತ್ತಾದ ಕರ್ತವ್ಯವನ್ನು ನೆರವೇರಿಸುವುದಕ್ಕೆ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರಂತಹ ಮಹಾತ್ಮರ ಧ್ಯಾನವೂ ಪೂಜೆಯೂ ಪ್ರಬಲ ಸಾಧಕಗಳಾಗಿರುತ್ತವೆ. ಅವರ ಅನುಗ್ರಹವು ಆರ್ಯಸಮಾಜದವರಲ್ಲಿ ಶಾಶ್ವತ ವಾಗಿರಲಿ!

ರಾಷ್ಟ್ರಸ್ವಾತಂತ್ರ್ಯ ಮತ್ತು ಕಾವ್ಯಸ್ಫೂರ್ತಿ*

ರಾಷ್ಟ್ರಸ್ವಾತಂತ್ರ್ಯಕ್ಕೂ ಕಾವ್ಯಸ್ಫೂರ್ತಿಗೂ ಸಂಬಂಧವೇನು ? – ಎಂದು ಯಾರಾದರೂ ಕೇಳಿಯಾರೆ ? ಸ್ವಾತಂತ್ರ್ಯವು ನಮ್ಮ ಜೀವನಕ್ಕೆ ಸಂಬಂಧಪಟ್ಟದ್ದೆಂದು ನಂಬಿರುವವರೆಲ್ಲ ಅದು ಕಾವ್ಯಕ್ಕೂ ಸಂಬಂಧಪಟ್ಟದ್ದೆಂದು ಒಪ್ಪಲೇಬೇಕು ; ಏಕೆಂದರೆ, ಮನುಷ್ಯನ ಜೀವನರಂಗದಲ್ಲಿ ಕವಿಯನ್ನು ಬರಮಾಡಿಕೊಳ್ಳದ ಸ್ಥಳ ಒಂದಂಗುಲವೂ ಇಲ್ಲ. ಎಲ್ಲೆಲ್ಲಿ ನಮ್ಮ ಮನಸ್ಸು ಹೋಗಬಹುದೋ ಅಲ್ಲೆಲ್ಲ ಕವಿಗೆ ಪ್ರವೇಶವುಂಟು. ನಮ್ಮ ಹೃದಯಜೀವನದ ಏರಿಳಿತಗಳೇ ಕಾವ್ಯ. ಸ್ವಾತಂತ್ರ್ಯದಿಂದ ಜನಜೀವನವು ಒಂದು ನವೀನತೆಯನ್ನು ಪಡೆಯುವುದಾದರೆ, ಆ ನವ್ಯಚೈತನ್ಯವು ಕಾವ್ಯಕ್ಕೆ ಒಂದು ನವ್ಯಸ್ಫೂರ್ತಿಯನ್ನು ಕೊಡಬಲ್ಲದಾಗುತ್ತದೆ. ಹಾಗೆಯೇ ಕವಿಯು ಜನಸ್ವಾತಂತ್ರ್ಯದ ಸಾಧ್ಯಫಲವಾಗಿ ಒಂದು ನವೀನ ಜೀವನಸೌಂದರ್ಯವನ್ನು ಕಂಡವನಾದರೆ. ಆ ಅಂತರ್ದರ್ಶನ ಅವನ ಕಾವ್ಯದಲ್ಲಿ ರೂಪಗೊಂಡು ಜನಕ್ಕೆ ನವೀನ ಸ್ಫೂರ್ತಿಯಾಗುತ್ತದೆ. ನಮ್ಮ ಜೀವಿತಮುಕುಲದ ವಿಕಾಸಕ್ಕೆ ಸ್ವಾತಂತ್ರ್ಯದ ಸೂರ್ಯರಶ್ಮಿ ಪ್ರೇರಕವಾದರೆ, ಅದರ ಸಾಫಲ್ಯಕ್ಕೆ ಕಾವ್ಯದ ಪೃಥ್ವೀರಸ ಸಾರಪ್ರದವಾಗುತ್ತದೆ. ಹೀಗೆ ಸ್ವಾತಂತ್ರ್ಯದ ಪರಮ ಸಾರ್ಥಕ್ಯವು ಸತ್ಕಾವ್ಯೋದಯದಲ್ಲಿ – ಮತ್ತು ಸತ್ಕಾವ್ಯ ಪ್ರಭಾವದಿಂದ.

ಸ್ವಾತಂತ್ರ್ಯದ ಫಲವಾಗಿ ಈಗ ನಾವು ಬಯಸಬೇಕಾದದ್ದು ಎಂಥ ನವಜೀವನವನ್ನ ? ಇಂಡಿಯವು ಎರಡನೆಯ ಇಂಗ್ಲೆಂಡ್ ಆಗಬೇಕೆಂದೆ ? ರಷ್ಯದ ಛಾಯೆಯಾಗಬೇಕೆಂದೆ ? ಅಮೆರಿಕದ ಪ್ರತಿಬಿಂಬವಾಗಬೇಕೆಂದೆ ? ಬಾಂಬಿನ ತಯಾರಿಯಲ್ಲಿ ಎಲ್ಲಕ್ಕಿಂತ ದೊಡ್ಡದೆನಿಸಬೇಕೆಂದೆ ? ಅಥವಾ ಬಾಂಬನ್ನು ಅನವಶ್ಯ ಮಾಡಬಲ್ಲ ಸಾತ್ವಿಕ ಚಿಕಿತ್ಸೆಯನ್ನು ತೋರಿಸಬೇಕೆಂದೆ ? ಪಾಶ್ಚಾತ್ಯ ದೇಶಗಳ ಅನುಕರಣವೇ ಇಂಡಿಯದ ಸ್ವಾತಂತ್ರ್ಯಕ್ಕೆ ಪೂರ್ಣಫಲವೆನ್ನುವುದಾದರೆ ಅದರ ವಿಷಯದಲ್ಲಿ ಯಾರೂ ಉತ್ಸಾಹಪಡರು.

---

* 15–8–1954 ರಂದು ಮೈಸೂರು ಆಕಾಶವಾಣಿಯಿಂದ ಪ್ರಸಾರವಾದ ಭಾಷಣ.

ಹಾಗಲ್ಲದೆ ಇಂಡಿಯವು ಇಂಡಿಯವಾಗಿ ಬಾಳುವುದೇ, – ಹಿಂದಿಗಿಂತ ಪ್ರಶಸ್ಯವಾದ ಇಂಡಿಯವಾಗುವುದೇ, – ಸ್ವಾತಂತ್ರ್ಯದ ಪರಮ ಪ್ರಯೋಜನವೆನ್ನುವುದಾದರೆ ಆಗ ನಮಗೊಂದು ಸ್ವಧರ್ಮಕುತೂಹಲವುಂಟಾದೀತು, ಲೋಕಕ್ಕೊಂದು ಹೊಸ ಶುಭನಿರೀಕ್ಷೆ ಹುಟ್ಟೀತು. ಆ ಇತೋಪ್ಯಧಿಕವಾದ ಇಂಡಿಯದ ರೂಪರೇಖೆ ಎಂಥಾದ್ದು ? ಆ ನೂತನ ಇಂಡಿಯದ ಜೀವನಪೂರ್ಣತೆ ಎಂಥಾದ್ದು ? ಈ ಪ್ರಶ್ನೆಗಳಿಗೆ ಉತ್ತರ ದೊರಕಿಸಬೇಕಾದವರು ನಮ್ಮ ನವ್ಯ ಕವಿಗಳು.

ಕವಿಯೆಂಬಾತನಲ್ಲಿ ಇತರ ಮನುಷ್ಯರಲ್ಲಿ ಸ್ಫುಟವಾಗಿ ಕಾಣಬಾರದ ಮೂರು ಅಂತರಂಗ ಶಕ್ತಿಗಳು ವಿಶೇಷವಾಗಿರುತ್ತವೆ : ಮೊದಲನೆಯದು, ಲೋಕಜೀವನದ ಸೂಕ್ಷ್ಮ ರಹಸ್ಯವೇದಿಕೆ. ಇದೇ ಅಂತರನುಭವ. ಇದೇ ಪ್ರತಿಭೆ. ಎರಡನೆಯದು ಆ ರಹಸ್ಯಾನುಭವದಿಂದ ಒದಗಿದ ಸಾಮಗ್ರಿಯ ಮೇಲೆ ಸ್ವೋಪಜ್ಞತೆಯ ಪ್ರಯೋಗದಿಂದ, – ಅವನ ರಮ್ಯಾರಮ್ಯ ವಿವೇಕದಂತೆ, – ಅವನ ಹಿತಾಹಿತ ನಿಷ್ಕರ್ಷೆಯಂತೆ, – ಅವನ ಮನೋರಂಗದಲ್ಲಿ ಆದ ನೂತನ ಕಥಾವಿರ್ಭಾವ. ಇದೇ ಕಲ್ಪನ ಸ್ಫೂರ್ತಿ. ಕವಿಯ ಮೂರನೆಯ ಶಕ್ತಿ, ಹಾಗೆ ಸಿದ್ಧವಾದ ಅಂತಸ್ಸೃಷ್ಟಿಯ ಬಹಿರ್ನಿರೂಪಣೆ. ಇದೇ ಕಾವ್ಯರಚನೆ. ಇದೇ ವಾಕ್ಸಿದ್ಧಿ.

ಕವಿಯ ಹೃದಯಗುಹೆಯಲ್ಲಿ ನಿದ್ರಿಸುತ್ತಿರುವ ಸ್ಫೂರ್ತಿಯನ್ನು ಚುಚ್ಚಿ ಎಬ್ಬಿಸಬಲ್ಲ ಸಲಾಕಿ ಅವನ ಸುತ್ತಮುತ್ತಣ ಪ್ರಪಂಚದ್ದು. ಹೊರಗೆ ಮಹಾನುಭವವಾದಾಗ ಅವನ ಒಳಗೆ ಮಹಾಸ್ಫೂರ್ತಿ. ಎಷ್ಟೋ ಸಹಸ್ರ ವರ್ಷಗಳ ಹಿಂದೆ ಈ ದೇಶದಲ್ಲಿ ಜನಪದ ಜೀವನಕ್ಕೆ ಕೇಂದ್ರವಾಗಿದ್ದ ಒಂದು ಕುಟುಂಬದ ಹಾಲಿನ ಪಾತ್ರೆಯಲ್ಲಿ ಯಾರೋ ಹುಳಿ ಹಿಂಡಿದರು ; ತ್ಯಾಗ ವೀರಗಳು ಉಕ್ಕಿದವು ; ವಾಲ್ಮೀಕಿಯ ಕಂಠ ಕರುಣಗದ್ಗದಿತವಾಯಿತು. ಇನ್ನೊಮ್ಮೆ ರಾಷ್ಟ್ರದ ನಡುವಣ ಮನೆಯೊಲೆಯಲ್ಲಿ ಯಾರೋ ಹಸಿ ಸೌದೆಯಿಂದ ಹೊಗೆ ಹಾಕಿದರು. ಧರ್ಮ ಶೌರ್ಯಗಳು ಮೈತುಂಬಿ ನಿಂತವು ; ವ್ಯಾಸನ ಕಣ್ಣು ಕರುಣಗಂಭೀರವಾಯಿತು. ಒಮ್ಮೆ ಇಟಲಿಯಲ್ಲಿ ಸಮಾಜವನ್ನು ಧಾರ್ಮಿಕ ಸಂದೇಹಗಳೂ ನೀತಿಚಾಂಚಲ್ಯಗಳೂ ಕುಲುಕಿಸುತ್ತಿದ್ದುವು ; ಡಾಂಟೆಯ ಮನಸ್ಸು ಚಿಂತೆಯಿಂದ ಅಂತರ್ಮುಖಿಯಾಯಿತು. ಮತ್ತೊಮ್ಮೆ ಇಂಗ್ಲೆಂಡಿನಲ್ಲಿ ಜನತೆಯನ್ನು ಮಹಾಸಾಹಸಗಳೂ ಮಹೋತ್ಸಾಹಗಳೂ ಸಂಭ್ರಮಪಡಿಸಿದ್ದವು ; ಷೇಕ್ಸ್‌ಪಿಯರರ ದೃಷ್ಟಿ ಮಾನುಷ ಸೂಕ್ಷ್ಮದರ್ಶಿನಿಯಲ್ಲಿ ಏಕಾಗ್ರವಾಯಿತು. ಹೀಗೆ ಲೋಕಜೀವನದಲ್ಲಿ ಪ್ರಶ್ನೆ ತೋರಿದರೆ ಕವಿಯ ಅಂತಃಕರಣದಲ್ಲಿ ಪ್ರತ್ಯುತ್ತರ ಹೊರಡುತ್ತದೆ.

ಇಂದಿನ ಜಗಜ್ಜೀವನದಲ್ಲಿ ಪ್ರಶ್ನೆಯಿಲ್ಲವೆಂದು ಯಾರಾದರೂ ಹೇಳಿಯಾರೆ ? ನಮಗೆ ಪ್ರಗತಿಗುರುವೆನಿಸಿದ್ದ ಪಾಶ್ಚಾತ್ಯಲೋಕವು ಆ ಪ್ರಗತಿಯಿಂದ ಪಡುತ್ತಿರುವ ಪಾಡನ್ನು ಈಹೊತ್ತು ನಾವು ಕಾಣುತ್ತಿದ್ದೇವೆ. ಅಲ್ಲಿಯ ಪ್ರಕೃತಿ ವಿಜ್ಞಾನದಿಂದ ಹಿತಸಿದ್ಧಿ ಅಹಿತಸಮೃದ್ಧಿಗಳೆರಡೂ ಆಗಿವೆ. ಹಳೆಯ ಮತಧರ್ಮಗಳು ಪ್ರಪಂಚ

ವಸ್ತುಗಳಿಗೆ ಕಟ್ಟಿದ್ದ ಬೆಲೆಗಳನ್ನು ವಿಜ್ಞಾನದ ಅತಿರೇಕವೂ ಆತುರವೂ ಬದಲಾಯಿಸಿವೆ. ವಿಜ್ಞಾನ ಸಂಧಾನದ ಭೋಗೋಪಕರಣ ಮಹಿಮೆಯಿಂದ ಲೋಭ ಮೋಹಗಳಿಗೆ ನಮ್ಮ ಜೀವಿತದ ಮೇಲೆ ಪೂರ್ಣಾಧಿಕಾರ ದೊರೆತಿದೆ. ಇಹ ಜೀವನದ ಅಂತಸ್ತನ್ನು (Standard of Living) ಹೆಚ್ಚಿಸಿಕೊಳ್ಳಬೇಕೆಂಬುದೊಂದೇ ಈಗ ಜನ ಜನಾಂಗಗಳ ಪರಮ ಧ್ಯೇಯವಾಗಿದೆ. ಇದಕ್ಕಾಗಿ. – ಭೂಸ್ವಾಮ್ಯಕ್ಕಾಗಿ. ಲೋಹಕ್ಕಾಗಿ. ಕಲ್ಲಿದ್ದಿಲಿಗಾಗಿ. ಕಲ್ಲೆಣ್ಣೆಗಾಗಿ. ಕಾಡಿಗಾಗಿ. ಕಾರ್ಖಾನೆಯ ಸರಕಿಗಾಗಿ. ವ್ಯಾಪಾರದ ಗಿರಾಕಿಗಾಗಿ. – ದೇಶದೇಶಕ್ಕೆ, ಜಾತಿಜಾತಿಗೆ, ಮನುಷ್ಯ ಮನುಷ್ಯನಿಗೆ ಸ್ಪರ್ಧೆ, ಅಸೂಯೆ, ಯುದ್ಧ, ಯುದ್ಧಭಯ. ಯುದ್ಧಸಿದ್ಧತೆ, – ಇವು ಸಂಭವಿಸಿವೆ. ಭೂಮಂಡಲದೊಳಗೆ ನೆಮ್ಮದಿಯ ನೆಲೆ ಎಲ್ಲಿಯೂ ಕಾಣಬಾರದು. ಬಾಳಿನಲ್ಲಿ ಹಳೆಯ ಚೆಂದ ಹೋಗಿದೆ ; ಹೊಸ ಚೆಂದದ ಸೂಚನೆ ಬಾರದಿದೆ. ಈ ವಿಷಮ ಸಂಧಿಯಲ್ಲಿ ನಮ್ಮ ಕವಿಗಳ ಕಣ್ಣಿಗೆ ಏನಾದರೂ ಒಂದು ನವ್ಯ ಕಲ್ಯಾಣದ ದರ್ಶನ ದೊರೆತೀತೆ—ಎಂಬುದು ನಮ್ಮ ಆಶೆ.

ಈ ಭ್ರಾಂತಿ ಸಂಕ್ಷೋಭೆಯ ಶತಚಕ್ರಕೋಟೆಯನ್ನು ಲೋಕವು ಧರ್ಮಪ್ರಭೆಯಿಂದ ದಾಟಲಾದೀತೆಂದು ಹೇಳುವುದಾದರೆ ಅದು ಸದ್ಯಕ್ಕೆ ಬರಿಯ ಮಾಮೂಲಿನ ಹರಕೆ ಮಾತಿಗಿಂತ ಹೆಚ್ಚಿನದೆನಿಸಲಾರದು. ಧರ್ಮವೆಂದರೆ ಏನು ? ಅದರ ಮೂಲತತ್ತ್ವಗಳು ನಮ್ಮ ವೇದಶಾಸ್ತ್ರಗಳಲ್ಲಿವೆ ಎನ್ನೋಣವೆ ? ಪುಸ್ತಕಮಾತ್ರದಲ್ಲಿದ್ದು ಪ್ರಯೋಗದಲ್ಲಿ ಕಾಣಬಾರದ ತತ್ತ್ವವು ಗಾಜಿನ ಪೆಟ್ಟಿಗೆಯೊಳಗಿರುವ ನಿರ್ಜೀವ ದೇಹದಂತೆ ತಾನೆ ? ಒಂದು ತತ್ತ್ವವು ಜೀವವಂತವೆನಿಸಬೇಕಾದರೆ ಅದು ಲೋಕಪ್ರಸಂಗಗಳಿಗೆ ಅನ್ವಯಿಸಿಕೊಂಡಿರಬೇಕು. ಅನುಷ್ಠಾನ ಸಾಧ್ಯವಲ್ಲದ ತತ್ತ್ವ ಎಷ್ಟು ಉದಾತ್ತವಾಗಿದ್ದರೆ ಏನು ? ಮಹರ್ಷಿಗಳು ಸಾರಿರುವ ತತ್ತ್ವಗಳನ್ನು ಇಂದಿನ ಪ್ರಶ್ನೆಗಳಿಗೆ ಅನ್ವಯ ಮಾಡುವುದು ಹೇಗೆ ? ನಮ್ಮ ಸಮಾಜದ ತಳಹದಿ ಕದಲಿ ಹೋಗಿದೆ. ಹಿಂದಿನಿಂದ ಬಂದ ಆಚಾರ ಸಂಪ್ರದಾಯಗಳು ಅಳಿಸಿಹೋಗುತ್ತಿವೆ. ಹಳೆಯ ನಂಬಿಕೆಗಳು ಮಾಸಿವೆ. ಮನು ಪರಾಶರರ ಕಟ್ಟುಪಾಡುಗಳನ್ನು ಇಂದಿನ ಪರಿಸ್ಥಿತಿಯಲ್ಲಿ ಅಕ್ಷರಶಃ ಪಾಲಿಸಲಾದೀತೆ ? ಇಂದಿನ ಪ್ರಪಂಚದಿಂದ ನಾವು ಬೇರೆಯಾಗಿ ಬಾಳುವುದು ಸಾಧ್ಯವೆ ? ಅದು ಅವಶ್ಯವೆ ? ಅದು ಯುಕ್ತವೆ ? ಅಥವಾ ಈ ಪುರಾತನ ಸಮಾಜವನ್ನು ನೂತನ ಭಾವನೆಗಳಿಗೆ ಒಪ್ಪುವಂತೆ.— ವ್ಯಕ್ತಿಯ ಸ್ವಾತಂತ್ರ್ಯವೂ ಸಮಷ್ಟಿಯ ನಿಯಮವೂ ಹೊಂದಿಕೊಂಡಿರುವಂತೆ.— ಪುನರ್ವ್ಯವಸ್ಥೆ ಮಾಡುವುದು ಸಾಧ್ಯವೆ ? ಇದು ಪ್ರಶ್ನೆ. ಇಂದಿನ ನವನಾಗರಿಕತೆಯೆಲ್ಲವೂ ತುಚ್ಛವೆನ್ನುವುದು ನ್ಯಾಯವಾಗದು. ಈ ನಾಗರಿಕತೆ ಮನುಷ್ಯನ ಸ್ವಭಾವಸಿದ್ಧವಾದ ಪ್ರಗತಿಯಲ್ಲಿ ಒಂದು ಘಟ್ಟ. ಅದನ್ನು ದೂಷಿಸಲು ಕಾರಣವಿಲ್ಲ. ಅದನ್ನು ಅರ್ಥಮಾಡಿಕೊಳ್ಳುವುದು ಪ್ರಯೋಜನದ ದಾರಿ. ದೋಷವಿರುವುದು ಭೌತವಿಜ್ಞಾನದಲ್ಲಲ್ಲ.–ಭೌಮ ಸಂಪತ್ತಿನಲ್ಲೂ ಅಲ್ಲ : ಆ ವಿಜ್ಞಾನವನ್ನೂ ಆ ಸಂಪತ್ತನ್ನೂ ನಾವು ಉಪಯೋಗಿಸಿಕೊಳ್ಳುತ್ತಿರುವ ರೀತಿಯಲ್ಲಿ. ನಮ್ಮ ಉದ್ದೇಶ ವಿಧಾನಗಳಲ್ಲಿ ನಾವು ದೋಷವನ್ನು ಹುಡುಕಿಕೊಳ್ಳುವುದು ಯುಕ್ತವಾಗಿದೆ. ಹೀಗೆ ನಮಗೆ ಈಗ

ಆಗಬೇಕಾಗಿರುವುದು ನೀತಿ ಪರಿಶೋಧನೆ ಮತ್ತು ಒಂದು ನವನೀತಿ ಶಾಸನ. ನೀತಿಯಾದರೋ ಹೃದಯ ಬುದ್ಧಿಗಳ ಶಿಶು. ಆ ಅಂತರಂಗ ದಂಪತಿಗಳಲ್ಲಿ ಹೃದಯವನ್ನು ಸೊಗಸುಗೊಳಿಸಿ ಅದರ ಪ್ರಭಾವದಿಂದ ಬುದ್ಧಿಯನ್ನು ತಿದ್ದಿಸುವ ಕೆಲಸ ಕಾವ್ಯದ್ದು.

ಈಗ ಲೋಕ ಕಾದಿರುವುದು ಅಂಥ ಮಹಾಕಾವ್ಯಕ್ಕಾಗಿ. ಕಾವ್ಯದಿಂದ ನಮಗೆ ಈಗ ಆಗಬೇಕಾದದ್ದು ಮನೋರಂಜನೆ ಮಾತ್ರವಲ್ಲ, ಮಹತ್ತ್ವದರ್ಶನ. ಅಷ್ಟಿಷ್ಟು ಸ್ವಾರಸ್ಯವುಳ್ಳ ಕಾವ್ಯ ಎಲ್ಲ ದೇಶಗಳಲ್ಲೂ ಯಾವಾಗಲೂ ಇರುತ್ತದೆ. ವಿರಳವಾದದ್ದು ಉದ್ಧಾರಕವಾದ ಕಾವ್ಯ. ಒಂದು ಹೊಸ ವಿಶ್ವಧರ್ಮದರ್ಶನ, ಒಂದು ಹೊಸ ಜೀವಿತಾರ್ಥವೃತ್ತಾಂತ. ಒಂದು ಹೊಸ ಇಹಪರ ಸಮನ್ವಯಾದರ್ಶ – ಇದನ್ನು ದೊರಕಿಸಬಲ್ಲ ಕಾವ್ಯ ಇಂದು ನಮಗೆ ಬೇಕಾದದ್ದು. ಅದು ಮಹಾಭಾರತದ 19 ನೆಯ ಪರ್ವವೆನಿಸಬೇಕು : ಡಿವೈನ್ ಕಾಮೆಡಿಯ (Divine Comedy) 4 ನೆಯ ಉಲ್ಲಾಸವೆನಿಸಬೇಕು. ಅದು ಪದ್ಯವೋ. ಗದ್ಯವೋ. ನಾಟಕವೋ, ಕಾದಂಬರಿಯೋ. ಚರಿತ್ರೆಯೋ. ಮನನ ಮಾಲೆಯೋ. ಯಾವ ಶೈಲಿಯೋ. ಯಾವ ಪಾಕವೋ— ನಮಗೆ ಅದರಿಂದ ಆಗಬೇಕಾದ ಉಪಕಾರ ಜೀವ ನವೀಕರಣ. ಅದು ಕೇವಲ ಭಾವಾವೇಶವಾಗಿದ್ದರೆ ಸಾಲದು : ಅದರಲ್ಲಿ ತತ್ತ್ವಚಿಂತನೆಯ ಸಾರದ್ರವ್ಯವೂ ಇರಬೇಕು. ಹೃದಯ ರಸ ಪ್ರವಾಹವು ಪ್ರಾಶ್ನಿಕ ಬುದ್ಧಿಯನ್ನು ಸಮಾಧಾನಗೊಳಿಸುವಂತೆ ಹರಿಯಬೇಕು. ವಿಶ್ವಜೀವನದ ನಾನಾ ಶಕ್ತಿವೈಭವಗಳೂ ನಾನಾ ವಿಚಾರವಾಹಿನಿಗಳೂ ನಾನಾ ರಾಗವಿಲಾಸಗಳೂ ಅದರಲ್ಲಿ ಕೂಡಿಕೊಂಡು ನಮಗೊಂದು ಹೊಸ ಆಶೆಯನ್ನೂ ಹೊಸ ಬೆಳಕನ್ನೂ ಸೂಸಬೇಕು.

ಇಂಥ ಜೀವತಾರಕ ಕಾವ್ಯದ ಉತ್ಪತ್ತಿಗೆ ಬೇಕಾದ ಸ್ಫೂರ್ತಿಯು ತಪಸ್ಸಿಲ್ಲದೆ ಲಭ್ಯವಾದೀತೆ ? ತಪಸ್ಸು ಮಾಡಬೇಕಾದವರು ಕವಿತಾ ಸಾಮರ್ಥ್ಯವುಳ್ಳವರು ಮಾತ್ರವೇ ಅಲ್ಲ : ದೇಶದ ಎಲ್ಲ ವಿದ್ಯಾವಂತರೂ ಎಲ್ಲ ವಿಚಾರಶೀಲರೂ ತಮ್ಮ ತಮ್ಮ ಜೀವನ ಕ್ಷೇತ್ರಗಳಲ್ಲಿ ತಪಸ್ಸು ಮಾಡಬೇಕು. ರಾಮಾವತಾರಕ್ಕಾಗಿ ಋಷಿಗಳು ತಪಸ್ಸು ಮಾಡಿದರು, ದಶರಥನು ಯಾಗ ಮಾಡಿದನು. ಮಹಾಕಾವ್ಯೋದಯಕ್ಕಾಗಿ ದೇಶದ ಮಹಾಜನರು ಮಡಿಯುಡಬೇಕು. ಕವಿಯು ದೀಕ್ಷೆ ತೊಡಬೇಕು. ಇಂದಿರುವ ರಾಷ್ಟ್ರಕರು ಗತಾನುಗತಿಕತೆಯಿಂದ ತೃಪ್ತರಾಗದೆ ದೇಶದ ಸ್ವಭಾವವನ್ನು, ಅದರ ಸನ್ನಿವೇಶಗಳನ್ನು, ಅದರ ಇತಿಹಾಸವನ್ನು, ಅದರ ಆತ್ಮದೊಳಗೆ ಅಡಗಿರುವ ಗುಣರುಚಿ ಪ್ರವೃತ್ತಿಗಳನ್ನು ಪರೀಕ್ಷಿಸಿ ಸ್ವಧರ್ಮದ ಪುನರ್ದರ್ಶನವನ್ನು ಸಂಪಾದಿಸಬೇಕು. ಕವಿಯು ಲೋಕದ ಹೃದಯಾಂತರಾಳದಲ್ಲಿ ಕುದಿಯುತ್ತಿರುವ ಕೊರಗು ಕೋರಿಕೆಗಳ ಕಾವನ್ನು ತಾನು ಅನುಭವಿಸಿ ಉದಾತ್ತ ಜೀವನ ಚಿತ್ರವನ್ನು ಕನಸು ಕಾಣಬೇಕು. ಈ ವಿಧವಾದ ಧರ್ಮಪರಾಮರ್ಶೆಗಾಗಿ ಸ್ವಾತಂತ್ರ್ಯವು ಉಪಯುಕ್ತವಾದರೆ ಆ ಪರಾಮರ್ಶೆಯಿಂದ ಆಗುವ ನೂತನ ಮನೋಬುದ್ಧಿವಿಕಾಸವು ನವ್ಯ ಕಾವ್ಯಕ್ಕೆ ಸ್ಫೂರ್ತಿಪ್ರದವಾದೀತು.

ಜಗತ್ತಿನಲ್ಲಿ ಎಷ್ಟೋ ದೇಶಗಳು ಎಷ್ಟೋ ಕಾಲದಿಂದ ಸ್ವತಂತ್ರವಾಗಿಯೇ ಇವೆ. ಅಲ್ಲೆಲ್ಲ ಮಹಾಕಾವ್ಯಗಳು ಎಷ್ಟೆಷ್ಟು ಉದಿಸಿವೆಯೆಂದು ನೋಡಿದರೆ. ಕಾವ್ಯಕ್ಕೆ ನಿಜವಾದ ಉತ್ಪತ್ತಿಸ್ಥಾನ ಸ್ವಾತಂತ್ರ್ಯವಲ್ಲ. ಸ್ವಾತಂತ್ರ್ಯದ ವಿನಿಯೋಗವು ಎಂದು ತೋರಿಬರುತ್ತದೆ. ಕಾವ್ಯಶ್ರೀ ಸಮುದಯವಾಗುವುದು ಜನತಾ ಹೃದಯ ಸಮುದ್ರದಿಂದ.—ಕವಿಕೃತಮಂಥನದಿಂದ. ಈ ಸಮುದ್ರಮಥನಕ್ಕೆ ಅವಕಾಶ ವನ್ನೂ, ಪ್ರೇರಣೆಯನ್ನೂ ಒದಗಿಸುವುದು ರಾಷ್ಟ್ರಸ್ವಾತಂತ್ರ್ಯ.

ಕವಿಚಕ್ರವರ್ತಿ ರನ್ನ*

ಈ ಸಭೆಗೆ ನಾನು ಬಹು ಭಯ ಭಕ್ತಿಗಳಿಂದ ಬಂದಿದ್ದೇನೆ. ಕಾರಣ—ಇದು ಸಾಮಾನ್ಯ ಸಭೆಯಲ್ಲ, ಇದು ಒಡ್ಡೋಲಗ. ಕವಿರಾಜನ,—ಕವಿ ಚಕ್ರವರ್ತಿ ರನ್ನನ,—ಒಡ್ಡೋಲಗ. ರಾಜಾಧಿರಾಜ ತೈಲಪ ಚಕ್ರವರ್ತಿಯೇ ರನ್ನನು ಚಕ್ರವರ್ತಿಯೆಂದು ಅಂಗೀಕರಿಸಿದ್ದಾನೆ. ಅಂಥವನ ದರ್ಬಾರು ಈ ದಿವಸದ ಈ ನಮ್ಮ ಸಭೆ.

ಇದುವರೆಗೂ ಈ ದೇಶದಲ್ಲಿ ಎಷ್ಟೋ ಮಂದಿ ರಾಜರೂ ಚಕ್ರವರ್ತಿಗಳೂ ಆಗಿಹೋಗಿದ್ದಾರೆ. ಅವರಲ್ಲಿ ಅನೇಕರನ್ನು ಜನ ಮರೆತೂ ಹೋಗಿದ್ದಾರೆ. ಆದರೆ ನಮ್ಮ ಇಂದಿನ ಚಕ್ರವರ್ತಿ ಮಾತ್ರ ಸರ್ವೋನ್ನತ ಸ್ಥಾನದಲ್ಲಿದ್ದಾನೆ: ಕವಿ ಕಾವ್ಯಗಳ ದೆಸೆಯಿಂದ ಹೆಮ್ಮೆಪಡುವ ಎಲ್ಲ ಕನ್ನಡಿಗರ ಹೃದಯದಲ್ಲಿಯೂ ಅವನು ಸಿಂಹಾಸನಸ್ಥನಾಗಿದ್ದಾನೆ. ಅವನ ಪದವಿಗೆ ಎಂದೆಂದಿಗೂ ಚ್ಯುತಿ ಬಾರದು. ಅವನ ರಾಜ್ಯ ಕನ್ನಡಿಗರಲ್ಲಿ ಮನುಷ್ಯ ಸ್ವಭಾವವಿರುವಷ್ಟು ಕಾಲವೂ ಶಾಶ್ವತವಾಗಿ ಸಲ್ಲತಕ್ಕದ್ದು. ಈ ಹೊತ್ತು ಇಲ್ಲಿ ನಡೆಯುತ್ತಿರುವುದು ಆತನ ದರ್ಬಾರು.

ಯಾವ ದೈವ ಕನ್ನಡ ದೇಶವನ್ನು ಇಂದಿನವರೆಗೂ ಕಾಪಾಡಿಕೊಂಡು ಬಂದಿದೆಯೋ,—ಯಾವ ದೈವ ಸಾವಿರ ವರ್ಷಗಳ ಹಿಂದೆ ನಮ್ಮ ಜನಕ್ಕೆ ರನ್ನ ಕವಿಯನ್ನು ಅನುಗ್ರಹಮಾಡಿತೋ,—ಯಾವ ದೈವ ಈ ಹೊತ್ತಿನವರೆಗೂ ಅಂಥ ಕವಿಯ ಮಹಿಮೆಯನ್ನರಿತು ಹೆಮ್ಮೆಪಡುವ ಹೃದಯವನ್ನು ಕನ್ನಡಿಗರಿಗೆ ಕೊಟ್ಟಿದೆಯೋ, ಆ ದೈವಕ್ಕೆ ಕೃತಜ್ಞತೆಯ ನಮಸ್ಕಾರಗಳನ್ನು ಸಮರ್ಪಿಸುವ ಹಬ್ಬ ಈ ದಿವಸದ್ದು.

ರನ್ನಕವಿ ಎಂಥ ಕಾವ್ಯ ಬರೆದಿದ್ದಾನೆ. ಎಂಥ ವಿಷಯವನ್ನು ವಸ್ತುವಾಗಿ ಆರಿಸಿಕೊಂಡಿದ್ದಾನೆ. ಎಂಥ ಉದಾತ್ತವಾದ ಧ್ಯೇಯವನ್ನು ಅದರಲ್ಲಿ ಪ್ರತಿಪಾದಿಸ ಹೊರಟಿದ್ದಾನೆ.—ಈ ವಿಚಾರಗಳನ್ನು ಆಲೋಚಿಸುತ್ತ ಹೋದರೆ ಆತನು ಇಂದಿಗೂ

---

* ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ರನ್ನನ ಸಹಸ್ರ ವಾರ್ಷಿಕೋತ್ಸವ ಪ್ರಾರಂಭದಲ್ಲಿ ತಾ॥ 16-12-1949 ನೆಯ ದಿನ ಶ್ರೀ ಡಿ. ವಿ. ಜಿ. ಅವರು ಅಧ್ಯಕ್ಷರಾಗಿ ಮಾಡಿದ ಭಾಷಣದ ಸಾರಾಂಶ.

ನಮ್ಮ ಹೃದಯ ಸಾಮ್ರಾಜ್ಯಗಳಿಗೆ ಚಕ್ರವರ್ತಿಯಾಗಿರಲು ತಕ್ಕವನೆಂಬುದು ಎಲ್ಲರಿಗೂ ತಾನಾಗಿಯೇ ತೋರುವುದೆಂದು ನಾನು ನಂಬಿದ್ದೇನೆ. ಕೇವಲ ಪುರಾತನತೆಯ ದೃಷ್ಟಿಯಿಂದ ನೋಡುವುದಾದರೆ, ಇಂಗ್ಲೆಂಡಿನ ಚಾಸರನೂ ಇಂಗ್ಲಿಷ್ ಸಾಹಿತ್ಯ ಸಾರ್ವಭೌಮ ಷೇಕ್ಸ್‌ಪಿಯರನೂ ನಮ್ಮ ರನ್ನನ ಮುಂದೆ ನಿನ್ನೆ ಮೊನ್ನೆಯ ಹುಡುಗರು. ಇಟಲಿಯ ಡ್ಯಾಂಟೆ ಕೂಡ ಹುಡುಗನೇ. ಜರ್ಮನಿಯ ಗಯಟೆ ಅಂಬೆಗಾಲು ಮಗು.

ಕೆಲವು ವಾರಗಳ ಹಿಂದೆ ಗಯಟೆ ಕವಿಯ 200 ನೆಯ ವರ್ಷದ ಹುಟ್ಟು ಹಬ್ಬವನ್ನು ಪ್ರಪಂಚದ ನಾನಾ ಭಾಗಗಳಲ್ಲಿ ಆಚರಿಸಿದರು. ನಮ್ಮ ಬೆಂಗಳೂರಿನಲ್ಲಿಯೂ ಒಂದೆರಡು ಕಡೆ ಆ ಉತ್ಸವ ನಡೆಯಿತು. ಪ್ರಪಂಚ ರಾಷ್ಟ್ರಸಂಸ್ಥೆಯವರು (Unesco) ಅದನ್ನು ವಿಶೇಷವಾಗಿ ಮಾಡಿದರು. ಅಂಥಾದ್ದು ಯುರೋಪಿಯನ್ನರು ತಮ್ಮ ಕವಿಗಳ ವಿಷಯದಲ್ಲಿ ತೋರುವ ಸಂಭ್ರಮ. ಷೇಕ್ಸ್‌ಪಿಯರನ ಅವತಾರ ದಿವಸದಲ್ಲಿ ಆತನ ಜನ್ಮಸ್ಥಳವಾದ ಸ್ಟ್ರ್ಯಾಟ್‌ಫರ್ಡ್-ಆನ್-ಆ್ಯವನ್ ಎಂಬ ಕಡೆ ವರ್ಷವರ್ಷವೂ ಪರಿಷೆ ಸೇರುತ್ತದೆ. ನಾಲ್ಕೆಂಟು ದಿವಸ ಅಲ್ಲಿ ನಾಟಕ, ಸಂಗೀತ, ವಿನೋದ ಸಂಭ್ರಮಗಳು ನಡೆಯುತ್ತವೆ. ಆ ಉತ್ಸವಗಳಲ್ಲಿ ದೇಶನಾಯಕರು ಉತ್ಸಾಹದಿಂದ ಭಾಗವಹಿಸುತ್ತಾರೆ. ಆದರೆ ನಮ್ಮಲ್ಲಿ ಸಾವಿರ ವರ್ಷಗಳ ಕೆಳಗೆ ಹುಟ್ಟಿ ಉತ್ತಮ ಕಾವ್ಯ ರಚಿಸಿ ಕವಿಚಕ್ರವರ್ತಿಯೆನ್ನಿಸಿಕೊಂಡ ರನ್ನನ ಸಹಸ್ರ ವಾರ್ಷಿಕೋತ್ಸವದಲ್ಲಿ ನಮ್ಮ ಮಂತ್ರಿಗಳೆಲ್ಲಿ ? ಶಾಸನ ಸಭಾಧ್ಯಕ್ಷರೆಲ್ಲಿ ? ಪ್ರಮುಖ ನಾಯಕರೆಲ್ಲಿ ? ಹೀಗಿದೆ ನಮ್ಮ ದೇಶದ ಸ್ಥಿತಿ.

ಒಂದೆರಡು ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಡಿಕನ್ಸ್ ಕಾದಂಬರೀಕಾರನ ಜ್ಞಾಪಕೋತ್ಸವವನ್ನು ಮಾಡಿದರು. ಅಂದು ಲಂಡನ್ನಿನಲ್ಲಿ ಏನು ಉತ್ಸಾಹ ! ಆತನು ವಾಸವಾಗಿದ್ದ ಜಾಗಕ್ಕೆ ಮೆರವಣಿಗೆ. ಆತನ ಕಥೆಗಳಲ್ಲಿರುವ ಪ್ರಸಿದ್ಧ ಪಾತ್ರಗಳ ವೇಷಗಳು, ಆ ಕಥೆಗಳ ರಂಗಸ್ಥಳಗಳಿಗೆ ಯಾತ್ರೆಗಳು—ಇವನ್ನೆಲ್ಲ ಏರ್ಪಡಿಸಿದ್ದರು.

ಇಲ್ಲಿ ನಾವು ರನ್ನನ ಜನ್ಮಸ್ಥಳಕ್ಕೆ— ಮುಧೋಳಿಗೆ— ಯಾತ್ರೆ ಏರ್ಪಡಿಸಬಹುದಾಗಿತ್ತು ; ಅಲ್ಲಿ ಪರಿಷೆ ಸೇರಬಹುದಾಗಿತ್ತು. ಶ್ರವಣಬೆಳಗೊಳಕ್ಕಾದರೂ ಯಾತ್ರೆ ಹೋಗಿ, ಅಲ್ಲಿ ರನ್ನನ ಕೈಬರಹವನ್ನಿಸಿಕೊಂಡಿರುವ ಶಿಲಾಲಿಪಿಗಾದರೂ ಕೈಮುಗಿದು ಸಂತೋಷಪಡಬಹುದಾಗಿತ್ತು. ಯಾವ ಒಂದು ಪೌರುಷಗುಣವನ್ನು— ಯಾವ ಒಂದು ಮನೋದಾರ್ಢ್ಯವನ್ನು—ರನ್ನನು ತನ್ನ ಕಾವ್ಯದಲ್ಲಿ ಎಲ್ಲ ಗುಣಗಳಿಗಿಂತ ಮೇಲಾಗಿ ಎತ್ತಿಹಿಡಿದಿದ್ದಾನೆಯೋ ಆ ಗುಣ—ಆ ಸಾಹಸಪ್ರೀತಿ, ಆ ಗೌರವನಿಷ್ಠೆ, ಆ ವೀರಮನೋವೃತ್ತಿ—ಇಂದಿನ ಕನ್ನಡಿಗರಲ್ಲಿ ತಕ್ಕಷ್ಟು ಸಾಲದೆ ಇರುವುದರಿಂದ ನಾವು ಇಂಥ ಸಣ್ಣ ಸಮಾರಂಭಗಳಿಂದಲೇ ಈ ಹೊತ್ತು ಸಮಾಧಾನ ತಂದುಕೊಳ್ಳಬೇಕಾಗಿದೆ.

ರನ್ನಕವಿ ಹುಟ್ಟಿದ್ದು ಮುಧೋಳಿನಲ್ಲಿ ಎಂದು ಹೇಳಿದೆನಲ್ಲವೆ ? ಅಲ್ಲಿ ಹೆಸರೊಂದನ್ನು ಬಿಟ್ಟರೆ ಆತನ ಕಾಲದ ಗುರುತಿನ್ನೊಂದೂ ಇಲ್ಲ. ಶ್ರವಣಬೆಳಗೊಳ

ವಲ್ಲಿ ರನ್ನನ ಕೈಬರಹವೆಂದು ಹೇಳುವ ಲಿಪಿ ರನ್ನನದೆಂಬುದೂ ಊಹೆಯ ಮಾತು. ಆತನ ನಾಲ್ಕು ಕಾವ್ಯಗಳಲ್ಲಿ ಸದ್ಯಕ್ಕೆ ದೊರೆತಿರುವ ಎರಡರ ಹೊರತು ಆತನ ಜ್ಞಾಪಕವಸ್ತು ನಮಗೆ ಯಾವುದೂ ಇಲ್ಲ. ನಮಗೆ ದೊರೆಯದೆ ನಷ್ಟವಾಗಿ ಹೋಗಿರುವ ಎರಡು ರನ್ನಕಾವ್ಯಗಳು 'ಚಕ್ರೇಶ್ವರ ಚರಿತೆ' ಮತ್ತು 'ಪರಶುರಾಮ ಚರಿತೆ.' ನಮಗೆ ದೊರೆತಿರುವ ಎರಡು 'ಅಜಿತ ಪುರಾಣ' ಮತ್ತು 'ಸಾಹಸ ಭೀಮ ವಿಜಯ' ಅಥವಾ 'ಗದಾಯುದ್ಧ.' ಈ ಎರಡರ ಶೈಲಿಯ ಧೋರಣೆಯನ್ನೂ ರಸಪಾಕವನ್ನೂ ನೋಡಿದರೆ, ನಮಗೆ ಸಿಕ್ಕದೆಹೋಗಿರುವ ಆ ಎರಡೂ ಇನ್ನೆರಡು ರತ್ನಗಳಾಗಿಯೇ ಇದ್ದಿರಬೇಕೆಂದೆನಿಸುತ್ತದೆ. ರನ್ನನ ಕೈವಾಡ ಅಂಥಾದ್ದು; ಮುಟ್ಟಿದ್ದಕ್ಕೆ ಕಳೆಕೊಟ್ಟು ಜೀವರಸ ತುಂಬುವ ಶಕ್ತಿ ಅವನದು. ನಮಗೆ ಲಭ್ಯವಾಗದೆ ಹೋಗಿರುವ 'ಚಕ್ರೇಶ್ವರ ಚರಿತೆ.' ಬಹುಶಃ 'ಅಜಿತ ಪುರಾಣ' ದಂತೆ ಧಾರ್ಮಿಕ ಗ್ರಂಥವೋ ಏನೋ ! 'ಪರಶುರಾಮ ಚರಿತೆ' ಮಾತ್ರ 'ಸಾಹಸಭೀಮ ವಿಜಯ'ದಂತೆ ಶುದ್ಧ ಕಾವ್ಯವಾಗಿಯೇ ಇದ್ದಿರಬೇಕೆಂದು ನನ್ನ ಮನಸ್ಸಿಗನ್ನಿಸುತ್ತದೆ. ಭೀಮಕಥೆಯಂತೆಯೇ ಪರಶುರಾಮ ಕಥೆ ವೀರರಸಕ್ಕೆ ಆಸ್ಪದವುಳ್ಳದ್ದು.

ರನ್ನನು ಗಂಡುಕವಿ ; ಆತನಿಗೆ ಓಜಸ್ತೇಜಃಪ್ರಧಾನಗಳಾದ ಪಾತ್ರಗಳು ಬಹು ಪ್ರಿಯವಾದವುಗಳಾಗಿರಬೇಕು. ತನ್ನ ಎದೆಯೊಲವನ್ನು ಮನಸಾರ ಹೊರಹರಿಸಲು ಪರಶುರಾಮನ ಕ್ಷಾತ್ರ ಸಾಹಸಗಳಲ್ಲಿ ರನ್ನನಿಗೆ ಯಥೇಷ್ಟ ಅವಕಾಶ ದೊರೆತಿದ್ದಿರಬೇಕು. ಅಂಥಾ ವೀರಾವೇಶದ ಚಿತ್ರಗಳನ್ನು ನೋಡುವ ಭಾಗ್ಯ ನಮ್ಮ ಪಾಲಿಗೆ ಇಲ್ಲವಾಯಿತಲ್ಲಾ ಎಂಬುದು ರನ್ನನನ್ನು ಸ್ಮರಿಸಿದಾಗ ನನ್ನ ಮನಸ್ಸಿಗಾಗುವ ಕೊರತೆ.

ಅಂಥಾ ವೀರಕವಿಯ ಪ್ರತ್ಯಕ್ಷ ಜ್ಞಾಪಕವೊಂದು ನಮ್ಮ ಜನಕ್ಕೆ ಬೇಡವೆ ? ರನ್ನನಿಗೆ ಏನೂ ಬೇಕಾಗಿಲ್ಲ. ನಮ್ಮ ಪೂಜೆಪುರಸ್ಕಾರಗಳು ಆತನನ್ನು ಮುಟ್ಟುವ ಹಾಗಿಲ್ಲ. ಆತನ ಕಾವ್ಯಗಳಿಂದ ನಿಲ್ಲಲಾರದ ಕೀರ್ತಿ ನಾವು ನೆಡಬಹುದಾದ ಕಂಬ ಕಟ್ಟಡಗಳಾಗಿ ನಿಲ್ಲಬಲ್ಲುದೆಂದು ಯಾರೂ ತಿಳಿದುಕೊಂಡಿಲ್ಲ. ಹಾಗಾದರೆ ನಾವು ಸ್ಮಾರಕಚಿಹ್ನೆಯನ್ನು ನಿಲ್ಲಿಸಬೇಕೆನ್ನುವುದು ಯಾರಿಗೋಸ್ಕರ ? ಇನ್ನು ಮುಂದೆ ಬರಲಿರುವ ಕನ್ನಡ ಜನಾಂಗಕ್ಕೋಸ್ಕರ. ಅವರು,—ಇನ್ನು ಐವತ್ತು ವರ್ಷ ನೂರು ವರ್ಷಗಳ ತರುವಾಯ ಈ ನಾಡಿನಲ್ಲಿ ಬಾಳುವ ಜನರು.—ರನ್ನನ ಕಾವ್ಯವನ್ನೋದಿದ ಬಳಿಕ—"ಒಳ್ಳೆಯದು ; ಇಂಥಾ ಮಹಾಕವಿಯ ಸಹಸ್ರವಾರ್ಷಿಕ ಸಮಯದಲ್ಲಿ ಬದುಕಿದ್ದ ನಮ್ಮ ಪೂರ್ವಿಕರು ಆ ಕವಿಯ ಮಹಿಮೆಯನ್ನು ಕಂಡಿದ್ದರೆ ? ಕಂಡಿದ್ದಿದ್ದರೆ ಅವರು ಆ ಕವಿಯ ಹೆಸರಿಗೆ ಯಾವ ಕಾಣಿಕೆಯನ್ನೂ ಅರ್ಪಿಸುತ್ತಿರಲಿಲ್ಲವೆ ?" ಎಂದು ಕೇಳಿಕೊಳ್ಳಲಾರರೆ ? ಆ ಭಾವೀ ಲೋಕದ ಮೂದಲಿಕೆಗೆ ಹೆದರಿಯಾದರೂ ನಾವು ನಮ್ಮ ಕೃತಜ್ಞತೆಯನ್ನು ಒಂದು ಶಾಶ್ವತಾಕಾರದಲ್ಲಿ ಪ್ರತ್ಯಕ್ಷಗೊಳಿಸಬೇಡವೆ ? ಪರಿಷತ್ತು ಈ ವಿಚಾರವನ್ನು ಕುರಿತು ಆಲೋಚನೆ ನಡಸೀತೆಂದು ನನಗೆ ನಂಬಿಕೆಯಿದೆ. ಮುಧೋಳಿನಲ್ಲಿ ಒಂದು ರನ್ನ ವಿಜಯಸ್ತಂಭವನ್ನು ನೆಡುವುದು ಯುಕ್ತವೆಂದು ನನಗೆ ತೋರುತ್ತದೆ. ನಮ್ಮ ಕಾಲದ ತಮಿಳು ಕವಿ ಭಾರತಿಯವರ ಜ್ಞಾಪಕಾರ್ಥ

ವಾಗಿ ತಮಿಳರು ಆಗಲೇ ಆತನ ಊರು ಎಟ್ಟಿಯಾಪುರದಲ್ಲಿ ಮಂಟಪ ಕಟ್ಟಿದ್ದಾರೆ. ಗವರ್ನರ್-ಜನರಲ್ ಶ್ರೀಮಾನ್ ರಾಜಗೋಪಾಲಾಚಾರ್ಯರವರೇ ಅದರ ಪ್ರವೇಶೋತ್ಸವವನ್ನು ನೆರವೇರಿಸಿದ್ದು ನಿಮಗೆ ಜ್ಞಾಪಕವಿರಬಹುದು. ತಮಿಳು ವಾಲ್ಮೀಕಿಯೆನಿಸಿರುವ ಕಂಬರ್ ಕವಿಯ ಜನ್ಮಸ್ಥಳದಲ್ಲಿ ಸ್ಮಾರಕ ಪ್ರತಿಷ್ಠೆ ಮಾಡುವ ಯತ್ನವೂ ನಡೆಯುತ್ತಿದೆ. ಆಂಧ್ರರು ತಮ್ಮ ಪೋತನ ಕವಿಯ ಪುಣ್ಯಸ್ಮೃತಿಯನ್ನು ಪ್ರತ್ಯಕ್ಷರೂಪದಲ್ಲಿ ನಿಲ್ಲಿಸಿಕೊಂಡಿದ್ದಾರೆ. ಕನ್ನಡಿಗರು ಕೃತಜ್ಞತೆಯಿಲ್ಲದವರೇನು?

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತಾರು ಮಂದಿ ಪ್ರಸಿದ್ಧ ಕವಿಗಳಿದ್ದಾರೆ. ಅವರಲ್ಲಿ ರನ್ನನಿಂದೀಚಿನವರನೇಕರು ಕವಿಶ್ರೇಷ್ಠರು ಆತನನ್ನು ಕವಿ ಚಕ್ರವರ್ತಿಯೆಂದು ಹೊಗಳಿದ್ದಾರೆ. ಏತಕ್ಕಾಗಿ ? ರನ್ನನ ಕವಿತಾಧೋರಣೆಗಾಗಿ. ರನ್ನನ ಶೈಲಿ ಪಂಪ ಕವಿಯ ಶೈಲಿಯಷ್ಟು ಕ್ಲಿಷ್ಟವಲ್ಲ; ನಾರಣಪ್ಪನ ಶೈಲಿಯಷ್ಟು ಸಾಧಾರಣವಲ್ಲ. ಪಂಡಿತರಂಜಕವಾಗಿಯೂ ಹಾಗೆಯೇ ಅಷ್ಟು ಪಂಡಿತರಲ್ಲದ ಸಾಮಾನ್ಯರಿಗೂ ರಸಾನುಭವವನ್ನುಂಟುಮಾಡಬಲ್ಲದ್ದಾಗಿಯೂ ಇರುವ ಶೈಲಿ ರನ್ನನದು. ಅದರಲ್ಲಿ ಪ್ರತ್ಯಕ್ಷ ವಸ್ತುವರ್ಣನೆಯೂ ಅಪ್ರತ್ಯಕ್ಷ ಭಾವಸೂಚನೆಯೂ—ಎಂದರೆ ವಾಚ್ಯವೂ ಧ್ವನಿಯೂ—ಇಂಪಾಗಿ ಸೇರಿ ಹೊಂದಿಕೊಂಡಿವೆ. ಇಂಥಾ ನಿರೂಪಣೆ ಧ್ವನಿಗಳೆರಡೂ ಕೂಡಿಕೊಂಡಿರುವ ಕಾವ್ಯಲಕ್ಷಣವನ್ನು "ಗುಣೀಭೂತವ್ಯಂಗ್ಯ"ವೆಂದು ಕರೆಯುವುದುಂಟು. ರನ್ನನ ಕಾವ್ಯ ಆ ಜಾತಿಯದು.

ರನ್ನ ಗಂಡುಕವಿ. ಇಲ್ಲಿ ಗಂಡೆಂಬ ಮಾತು ದೇಹಲಕ್ಷಣಕ್ಕೆ ಸೇರಿದ್ದಲ್ಲ. ಮನಃಪ್ರವೃತ್ತಿಗೆ ಸೇರಿದ್ದು. ಗಂಡು ಹುಡುಗರು ಬೈತಲೆ ಬಾಚಿಕೊಂಡೂ ಹೆಣ್ಣುಮಕ್ಕಳು ಪಾಯಿಜಾಮಾ ತೊಟ್ಟುಕೊಂಡೂ ನಲಿದಾಡುತ್ತಿರುವ ಈ ಕಾಲದಲ್ಲಿ ರನ್ನನನ್ನು ನಾನು ಗಂಡುಕವಿಯೆಂದದ್ದಕ್ಕಾಗಿ ಯಾರೂ ಕೋಪಮಾಡಲಾರರೆಂದು ನಂಬಿದ್ದೇನೆ. ಹೊರ ವೇಷ ಚೇಷ್ಟೆಗಳ ಪರಿಣಾಮ ಅಂತರಂಗದ ಮೇಲೆ ಉಂಟೋ ಇಲ್ಲವೋ ನಾನು ಹೇಳಲಾರೆ. ಒಟ್ಟಿನಲ್ಲಿ ಗಂಡುತನಕ್ಕೂ ಲೋಕದಲ್ಲಿ ಒಂದು ಸ್ಥಾನ ಉಂಟೆಂದು ತಿಳಿದುಕೊಂಡಿದ್ದೇನೆ. ಆ ಕಾರಣದಿಂದ ರನ್ನನ ಕಾವ್ಯಗುಣಕ್ಕೆ ಹೆಚ್ಚಿನ ಬೆಲೆ ಕೊಟ್ಟಿದ್ದೇನೆ.

ಸಾಮಾನ್ಯವಾಗಿ ನಮ್ಮ ಕಾವ್ಯದ ವಿಷಯಗಳು ಮೂರು ಜಾತಿಯವು: (1) ಶೃಂಗಾರ. (2) ಮತಧರ್ಮ. (3) ವೀರ. ಈ ಮೂರರಲ್ಲಿ ಬಹು ವಿರಳವಾದದ್ದು ವೀರ. ಬಹುಮಂದಿ ಕವಿಗಳು ಕೈಹಚ್ಚದಿರುವ ವೀರ ಕಥೆಯನ್ನು ರನ್ನನು ತೆಗೆದುಕೊಂಡು ಕೃತಕಾರ್ಯನಾಗಿದ್ದಾನೆ. ರಾಮಾಯಣ ಮಹಾಭಾರತ ಗ್ರಂಥಗಳನ್ನು ಬಿಟ್ಟರೆ ವೀರರಸವನ್ನು ಇಷ್ಟು ಪುಷ್ಟಿಯಿಂದ ಪ್ರತಿಪಾದಿಸಿ ಬರೆದ ಗ್ರಂಥಗಳು ಸಂಸ್ಕೃತದಲ್ಲಿಯೂ ವಿರಳ. ಕಾಳಿದಾಸನು ವೀರರಸದಲ್ಲಿ ಕೀರ್ತಿ ಪಡೆದವನಲ್ಲ. ಕನ್ನಡದಲ್ಲಿ ವೀರರಸಕ್ಕಾಗಿ ಪರಿಶ್ರಮಿಸಿದ ಕವಿಗಳು ಬಹುಶಃ ಯಾರೂ ಇಲ್ಲ; ಇದ್ದರೆ ಅವರ ಹೆಸರು ಪ್ರಸಿದ್ಧವಾಗಿಲ್ಲ. ಸಂಸ್ಕೃತದ "ವೇಣೀಸಂಹಾರ" ನಾಟಕಕರ್ತನ ತರುವಾಯ ರನ್ನನಷ್ಟು ಸೊಗಸಾಗಿ ಈ ರಸವನ್ನು ನಿರ್ವಹಿಸಿರುವವರು ಇಲ್ಲವೆಂದೇ ಹೇಳಬಹುದು.

ವೀರರಸಪ್ರಧಾನವಾದ ಕಾವ್ಯದಲ್ಲಿ "ಓಜಸ್ಸು" ಎದ್ದು ಕಾಣುತ್ತಿರಬೇಕು. ಆ ಗುಣವನ್ನು ತೇಜಸ್ಸು ಎಂದೂ ಕರೆಯಬಹುದು. ಇಲ್ಲಿ ಓಜಸ್ಸು ಎಂಬುದು ಬರಿಯ ವಾಕ್ಯಶೈಲಿಯ ಅಥವಾ ಪ್ರಬಂಧರೀತಿಯ ಮಾತಲ್ಲ. ವೇದಗಳು ಉಪಯೋಗಿಸಿರುವ ಅರ್ಥದಲ್ಲಿ "ಓಜಸ್ಸು" ಎಂಬ ಪದವನ್ನು ನಾನು ಇಲ್ಲಿ ಉಪಯೋಗಿಸುತ್ತಿದ್ದೇನೆ. ನಮ್ಮ ಆತ್ಮದಲ್ಲಿ ವೀರ್ಯವನ್ನು ತುಂಬತಕ್ಕ ಶಕ್ತಿ ಯಾವುದೋ—ಮನಸ್ಸಿಗೆ ಉತ್ಕರ್ಷ ಸ್ಥಿತಿಯನ್ನು ತರತಕ್ಕದ್ದು ಯಾವುದೋ—ಜನವನ್ನು ಜಡತೆಯಿಂದ ಮೇಲಕ್ಕೆತ್ತತಕ್ಕದ್ದು ಯಾವುದೋ ಅಂಥ ತೇಜಸ್ಸು ಅಥವಾ ಓಜಸ್ಸು ಜೀವಿಕೆಗೆ ಸಾರ್ಥಕ್ಯ ತರಬಲ್ಲದ್ದು. ಅಂಥ ಓಜೋಗುಣ ನಮ್ಮಲ್ಲಿ ಹಿಂದೆ ಎಂದೋ ಇತ್ತೆಂದು ರನ್ನನ 'ಗದಾಯುದ್ಧ' ಜ್ಞಾಪಕ ಕೊಡುತ್ತದೆ. ರನ್ನಕವಿ ಅಂಥ ಪೌರುಷ ಸಾಹಸದ ಕಾವ್ಯವನ್ನು ರಚಿಸಿ ನಮ್ಮ ದೇಶಕ್ಕೆ ಪ್ರಕೃತೋಚಿತವಾದ ಸಂದೇಶವನ್ನು ಕೊಟ್ಟಿದ್ದಾನೆ. ಈ ಕಾರಣಗಳಿಂದಲೇ ನಾನು ರನ್ನನನ್ನು ಗಂಡು ಕವಿ ಎಂದು ಕರೆದದ್ದು.

ಈ ಉತ್ಸವದಲ್ಲಿ ರನ್ನನ ಕೃತಿರತ್ನಗಳನ್ನು ಕುರಿತು ಐದಾರು ಮಂದಿ ರಸಿಕ ವಿದ್ವಾಂಸರುಗಳು ಉಪನ್ಯಾಸ ಮಾಡುವವರಾಗಿದ್ದಾರೆ. ಅವರೆಲ್ಲ ವಿಮರ್ಶನ ಚತುರರು, ವಿಶದವಾದ ವಾಕ್ಸಂಪತ್ತುಳ್ಳವರು. ಅವರ ಭಾಷಣಗಳನ್ನು ಕೇಳಲು ನಿಮಗೆ ಹೇಗೋ ನನಗೂ ಹಾಗೇ ತುಂಬ ಕುತೂಹಲವಾಗಿದೆ. ನಾಲ್ವರೈವರು ಗಮಕಿಗಳು ಕಾವ್ಯವಾಚನ ಮಾಡತಕ್ಕವರಾಗಿದ್ದಾರೆ. ಅದು ಕಿವಿಗಳಿಗೂ ಮನಸ್ಸುಗಳಿಗೂ ಔತಣವಾಗುತ್ತದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ. ಸಮಾಪ್ತಿಮಂಗಳವಾಗಿ "ಯುನೈಟಡ್ ಆರ್ಟಿ-ಸ್ಟ್ಸ್" ಎಂಬ ಕಲೆಗಾರ ಸಂಘದ ಸಹಾಯದಿಂದ ನಾಟಕವನ್ನೇರ್ಪಡಿಸಿದ್ದಾರೆ. ಅದಂತೂ ನನಗೆ ಅತ್ಯಂತ ಪ್ರಿಯವಾದ ಏರ್ಪಾಟು. ಆದರಿಂದ ನಮ್ಮ ದಿವಂಗತ ಮಿತ್ರರೂ ಪರಮಪ್ರಿಯರೂ ಪೂಜ್ಯರೂ ಆದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಸ್ಮರಣೆ ಒತ್ತೊತ್ತಿಕೊಂಡು ಬರುತ್ತದೆ. ವಾಸ್ತವವಾಗಿ ಈ ಉತ್ಸವದಲ್ಲಿ ಅಧ್ಯಕ್ಷರಾಗಿದ್ದಿರಬೇಕಾದವರು ಅವರು. 'ಗದಾಯುದ್ಧ ನಾಟಕ' ಅವರದು. ಅದರಲ್ಲಿ ರನ್ನನ ಭಾಗ ಎಷ್ಟೋ ಶ್ರೀಕಂಠಯ್ಯನವರದೂ ಸುಮಾರು ಅಷ್ಟಿದೆ. ರನ್ನನು ಶ್ರೀಕಂಠಯ್ಯನವರಿಗೆ ಒಪ್ಪಿಕೆಯಾದ ಕವಿ ಎಂದ ಮಾತ್ರದಿಂದಲೇ ಅವನು ಲೋಕದ ಆದರಣೆಗೆ ಅರ್ಹನಾದ ಕವಿಯೆಂಬುದೂ ಸಿದ್ಧವಾಗುತ್ತದೆ. ಕನ್ನಡ ಸಾಹಿತ್ಯ ಭಂಡಾರದ ನವರತ್ನಗಳಲ್ಲಿ 'ಗದಾಯುದ್ಧ' ಒಂದೆಂದು ಧಾರಾಳವಾಗಿ ಹೇಳಬಹುದು. ಇಂಥ ಕೃತಿರಚನೆ ಮಾಡಿದ ಕವಿ ರನ್ನ ಚಕ್ರವರ್ತಿಯನ್ನು ನಾವು ಇಂದು ನೆನೆದು ಆತನ ಉತ್ಸವವನ್ನು ಆಚರಿಸುವುದು ಕರ್ತವ್ಯವಾಗಿದೆ ; ಕರ್ತವ್ಯ ಮಾತ್ರವಲ್ಲ. ನಮಗೆ ಅದು ಶ್ರೇಯಸ್ಸಾಧನೆಯ ಮಾರ್ಗವಾಗಿದೆ. ರನ್ನನ ವೀರವಾಣಿ ನಮ್ಮ ಯುವಜನರ ಅಂತರಂಗದಲ್ಲಿ ಸರ್ವದಾ ಪ್ರತಿಧ್ವನಿಯೇಳಿಸುತ್ತಿರಲಿ. ಕನ್ನಡಿಗರು ರನ್ನನಿಗೆ ತಕ್ಕ ಜನವಾಗಲಿ.

‘ ಕಲೆ ’ ಎಂದರೆ ಏನು ?

1

‘ ಕಲೆ ’ ಎಂಬುದು ಒಂದು ಹೃದಯಪರಿಪಾಕ ಸಂವಿಧಾನ—ಎಂದರೆ ಮನುಷ್ಯನ ಹೃದಯವೆಂಬ ಅಂಗವನ್ನು ವಿಕಸನಗೊಳಿಸಿ ಶೋಧಿಸಿ ಉನ್ನತಿಗೆ ತರುವ ಉಪಾಯ ಸಮೂಹ.

ಹೃದಯವೆಂಬುದು ನಮ್ಮ ಅಂತರಂಗದೊಳಗಿನ ಒಂದು ಅಂಶ. ಮನುಷ್ಯನ ಅಂಗಾಂಗ ಸಮೂಹವನ್ನು ಅಂತರಂಗವೆಂದೂ ಬಹಿರಂಗವೆಂದೂ ಎರಡು ದೃಶ್ಯ ಭಾಗಗಳಾಗಿ ಸಮಾಲೋಚಿಸುವುದು ಒಂದು ಪ್ರಾಚೀನ ಪದ್ಧತಿ. ಇದರಲ್ಲಿ ಬಹಿರಂಗವು ಕರಚರಣಾದಿ ದೃಶ್ಯವಾದ ಅವಯವಗಳನ್ನೊಳಗೊಂಡದ್ದು.

ಅಂತರಂಗವು ಹೊರಕ್ಕೆ ಕಾಣದೆ ನಮ್ಮ ಒಳಗಡೆ ಇರುವ ಅವಯವ ಸಾಮಗ್ರಿ. ಇದು ನಾಲ್ಕು ಅಂಶಗಳುಳ್ಳದ್ದೆಂದು ಒಂದು ಶಾಸ್ತ್ರ ಸಂಕೇತ : (1) ಮನಸ್ಸು ; (2) ಬುದ್ಧಿ : (3) ಚಿತ್ತ ; (4) ಅಹಂಕಾರ.

ಇದು ಸರ್ವಸಂಪೂರ್ಣವಾದ ಅಂತಃಕರಣಪಟ್ಟಿಕೆ ಎಂದು ಹೇಳಲಾಗುವುದಿಲ್ಲ. ಸ್ಮೃತಿ ಅಥವಾ ನೆನಪು ಇವರಲ್ಲಿ ಸೇರಿಲ್ಲ. ಅವೂ ಒಂದು ಮಹಾಶಕ್ತಿ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗೆಯೇ ಪ್ರತಿಭೆ ಮೊದಲಾದ ಅಂತಶ್ಶಕ್ತಿಗಳು ಇರುತ್ತವೆ. ಆದರೆ ಇದು ಸದ್ಯಕ್ಕೆ ಬೇರೆ ವಿಷಯ.

ಮೇಲೆ ಹೇಳಿದ ಅಂತಶ್ಶಕ್ತಿಗಳಲ್ಲಿ ನಾಲ್ಕು—ಅಂತಃಕರಣ ಚತುಷ್ಟಯ ಮುಖ್ಯವೆಂದು ಹೇಳಿದೆ.

ಅವುಗಳಲ್ಲಿ —

(1) **ಮನಸ್ಸು :** ಪ್ರಪಂಚದಿಂದ ವಿಷಯಗಳನ್ನು ಸಂಗ್ರಹಿಸುತ್ತದೆ. ವಿಷಯಗ್ರಹಣ ಇದರ ಕಾರ್ಯ.

(2) **ಬುದ್ಧಿ**: ಇದು ಮನಸ್ಸು ಗ್ರಹಿಸಿದ ವಿಷಯಗಳ ಯೋಗ್ಯತಾಯೋಗ್ಯತೆಗಳನ್ನು ಪರೀಕ್ಷಿಸಿ ಗೊತ್ತುಮಾಡುತ್ತದೆ. ಹೀಗೆ ವಿವೇಚನೆ ಅಥವಾ ವಿವೇಕ ಬುದ್ಧಿಯ ಕಾರ್ಯ.

(3) **ಚಿತ್ತ**: ಬುದ್ಧಿಯು ನಿಶ್ಚಯ ಮಾಡಿದ ಮೇಲೆ ಆ ನಿಶ್ಚಯವನ್ನು ಆಚರಣೆಗೆ ತರುವೆನೆಂಬ ದೃಢಸಂಕಲ್ಪ ಚಿತ್ತದ ಕಾರ್ಯ.

(4) **ಅಹಂಕಾರ**: ಅಹಂಕಾರವು ಒಂದು ಕಾರ್ಯದ ಫಲಾಫಲಗಳು ತನಗೆ ಸೇರತಕ್ಕವು, ತನ್ನನ್ನು ಹೊಂದಿದವು ಎಂಬ ಜವಾಬ್ದಾರಿಯ ಹೊರೆ. ಅಹಂಕಾರದ ಕಾರ್ಯವು ಜವಾಬ್ದಾರಿ.

ಈ ನಾಲ್ಕರಲ್ಲಿ ಇಲ್ಲಿ ನಮಗೆ ಅತಿ ಮುಖ್ಯವಾದವು ಮನಸ್ಸು ಬುದ್ಧಿಗಳು.

ಮನಸ್ಸು ಎಂಬುದು ಗ್ರಹಣ ಶಕ್ತಿ ಎಂದು ಹೇಳಿದ್ದಾಯಿತು. ಅದು ವಿಷಯ ಸಂಗ್ರಹ ಮಾಡಿದಾಗ ಹೃದಯವಾಗುತ್ತದೆ. ಸಾಮಾನ್ಯವಾಗಿ ನೀರು ತಿಳಿಯಾಗಿರುತ್ತದೆ. ರುಚಿ ಇರುವುದಿಲ್ಲ. ಆದರೆ ಅವರಲ್ಲಿ ಉಪ್ಪನ್ನೋ ಸಕ್ಕರೆಯನ್ನೋ ಮಣ್ಣನ್ನೋ ಒಂದು ಗಡ್ಡೆ ಹಾಕಿವರೆ ಆ ಪದಾರ್ಥದ ರೂಪ ಬದಲಾಯಿಸುವುದಲ್ಲದೆ ಆ ನೀರೂ ಮಾರ್ಪಡುತ್ತದೆ. ಅದು ತಿಳಿಯಾಗಿರುವುದು ಹೋಗಿ ಕೊಂಚ ಮಂದವಾಗುತ್ತದೆ. ಅದಕ್ಕೆ ರುಚಿ ಬರುತ್ತದೆ. ಹಾಗೆಯೇ ಮನಸ್ಸು ಪ್ರಪಂಚ ವಿಷಯ ಸಂಗ್ರಹ ಮಾಡಿದ ಮೇಲೆ ಅದು ಕೊಂಚ ಭಾರವಾಗುತ್ತದೆ, ಮಂದವಾಗುತ್ತದೆ, ರುಚಿಯುಳ್ಳದ್ದಾಗುತ್ತದೆ. ಆಗ ಹಾಗೆ ಮಾರ್ಪಟ್ಟ ಮನಸ್ಸು ಹೃದಯವೆನ್ನಿಸಿಕೊಳ್ಳುತ್ತದೆ. ಈ ಹೃದಯವೇ ಜೀವದ ಸತ್ಪ್ರವೃತ್ತಿ ದುಷ್ಪ್ರವೃತ್ತಿಗಳ ಮೂಲಸ್ಥಾನ. ಒಟ್ಟಿನಲ್ಲಿ ಮನುಷ್ಯನೆಂದರೆ ಹೃದಯ, ಹೃದಯವೆಂದರೆ ಮನುಷ್ಯ, ಎಂದು ಸೂತ್ರಪ್ರಾಯವಾಗಿ ಹೇಳಬಹುದು. ಹೃದಯದ ಮೂಲಕವೇ ನಮಗೆ ಒಂದು ಕಡೆ ಜಗತ್ತಿಗೂ ಇನ್ನೊಂದು ಕಡೆ ಜಗನ್ಮೂಲವಾದ ಪರಬ್ರಹ್ಮ ವಸ್ತುವಿಗೂ ಸಂಬಂಧ :

> ಅಗ್ನಿರ್ಮೇ ವಾಚಿ ಶ್ರಿತಃ । ವಾಗ್ ಹೃದಯೇ
> ಹೃದಯಂ ಮಯಿ । ಅಹಂ ಅಮೃತೇ । ಅಮೃತಂ ಬ್ರಹ್ಮಣಿ ॥
> ಸೂರ್ಯೋ ಮೇ ಚಕ್ಷುಷಿ ಶ್ರಿತಃ
> ಚಕ್ಷುರ್ಹೃದಯೇ ಹೃದಯಂ ಮಯಿ
> ಅಹಂ ಅಮೃತೇ ಅಮೃತಂ ಬ್ರಹ್ಮಣಿ ॥

ಇಂಥಾದ್ದು ಹೃದಯದ ಮಹತ್ತ್ವ. ಹೃದಯಕ್ಕೆ ವಿಧವಿಧವಾದ ಅನುಭವಗಳನ್ನು ತಂದುಕೊಡಬಲ್ಲ ಮಾನುಷ ಕೃತಿಯೇ ಕಲೆ.

ಈ ಕಲೆಯು ಎಷ್ಟೋ ಮಾರ್ಗಗಳಲ್ಲಿ ಸಾಗಬಹುದು. ಅವುಗಳಲ್ಲಿ ಮುಖ್ಯವಾದವು ಮೂರು :— ಮೂರು ಇಂದ್ರಿಯಗಳಿಗೆ ಸಂಬಂಧಪಟ್ಟವು : ಕಣ್ಣು, ಕಿವಿ, ನಾಲಿಗೆ—ಇವು ಮುಖ್ಯವಾದ ಇಂದ್ರಿಯಗಳು. (1) ಇವುಗಳಲ್ಲಿ ಕಣ್ಣು ಅತ್ಯಂತ

ಮುಖ್ಯವಾದದ್ದು. ಕಣ್ಣಿನ ಮೂಲಕ ಹೃದಯವನ್ನು ಸ್ಪರ್ಶಿಸುವ ಮಾನುಷಕೃತಿಗೆ ಶಿಲ್ಪ, ವರ್ಣಚಿತ್ರ, ನರ್ತನ—ಇವು ಉದಾಹರಣೆಗಳು. (2) ಸಂಗೀತ, ಗಮಕ—ಇವು ಕಿವಿಯ ಮೂಲಕ ಹೃದಯವನ್ನು ಸ್ಪರ್ಶಮಾಡುವ ಮಾನುಷ ಕೃತಿಗೆ ಉದಾಹರಣೆಗಳು. (3) ಘ್ರಾಣೇಂದ್ರಿಯ ರಸನೇಂದ್ರಿಯಗಳ ಮೂಲಕ ಹೃದಯವನ್ನು ಸ್ಪರ್ಶಮಾಡುವ ಕಲೆಗೆ ಪಾಕಶಾಸ್ತ್ರ, ಪರಿಮಳ ಶಾಸ್ತ್ರಗಳು ಉದಾಹರಣೆ.

ಏಕಕಾಲದಲ್ಲಿ ಮೂರು ನಾಲ್ಕು ಐದು ಇಂದ್ರಿಯಗಳನ್ನು ವಶಪಡಿಸಿಕೊಂಡು ತದ್ದ್ವಾರಾ ಹೃದಯವನ್ನು ಸ್ಪರ್ಶಿಸುವ ಮಾನುಷ ಕೃತಿಯೇ ಸಾಹಿತ್ಯ. ಈ ಅಭಿಪ್ರಾಯವನ್ನೇ ವೈಯಾಕರಣಶಿರೋಮಣಿ ಕೇಶಿರಾಜನು ಹೀಗೆ ಹೇಳಿದ್ದಾನೆ :

> ...ಅವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
> ದ್ಭಾವಿಪ...

ಈ ಕಾರಣದಿಂದಲೇ ಪದ್ಯ ಗದ್ಯ ರೂಪದ ಕಾವ್ಯಕ್ಕೆ ಸಾಹಿತ್ಯವೆಂಬ ಹೆಸರು ಸಾರ್ಥಕವಾಗುತ್ತದೆ. ಅದರಲ್ಲಿ ಸಮಸ್ತ ಇಂದ್ರಿಯಗಳ ಸಹಿತತ್ವವಿರುತ್ತದೆ : ಸಮಸ್ತ ಅನುಭವಗಳೂ ಒಟ್ಟುಗೂಡಿರುತ್ತವೆ. ಶಬ್ದಗಳ ಅರ್ಥಪುಷ್ಟಿ, ಭಾವಪುಷ್ಟಿ, ಅವುಗಳ ಯೋಜನೆಯಲ್ಲಿ ಛಂದಸ್ಸೆಂಬ ಒಂದು ಕ್ರಮ, ಗುರುಲಘುವಿನ್ಯಾಸ, ಪ್ರಾಸಾನುಪ್ರಾಸಗಳು, ಪದವೈವಿಧ್ಯ—ಇವೆಲ್ಲವೂ ಸಹಿತವಾಗಿ ಸೇರಿ ಹೃದಯದ ಮೇಲೆ ಕೆಲಸಮಾಡುತ್ತವೆ. ಅದರಿಂದ ಮನಸ್ಸು ವಿಕಸಿತವಾಗಿ ಅಲ್ಲಿ ಹೊಸ ಭಾವನೆಗಳು, ಹೊಸ ರಾಗರಂಜನೆಗಳು ಉಂಟಾಗುತ್ತವೆ. ಇದೇ ಸಾಹಿತ್ಯಕಾರ್ಯ.

ಒಂದಾನೊಂದು ಮಹೋದ್ದೇಶದಿಂದ ಒಂದಾನೊಂದು ನಿರ್ಮಲವಾದ ತಾತ್ಪರ್ಯದಿಂದ ಮನಸ್ಸಿನ ಮೇಲೆ ಹೃದಯರಂಗದಲ್ಲಿ ಕಾರ್ಯಮಾಡಿ ಪರಿಣಾಮ ಮಾಡಬಲ್ಲ ವಾಕ್ಪ್ರಯತ್ನವೇ, ಶಬ್ದಪ್ರಬಂಧವೇ ಸಾಹಿತ್ಯ.

2

ಕಲೆ ಎಂದರೆ ಹೃದಯಪರಿಪಾಕ.

ಕಲಾಕೃತಿಯು ಹೃದಯವನ್ನು ಹಿಗ್ಗಿಸುತ್ತದೆ, ಕುಗ್ಗಿಸುತ್ತದೆ, ಮತ್ತು ಕರಗಿಸುತ್ತದೆ, ಹರಳುಗಟ್ಟಿಸುತ್ತದೆ—ಹೀಗೆ ನಾನಾ ವಿಧವಾಗಿ ಸಂಸ್ಕಾರಪಡಿಸಿ ಒಂದು ಹದಕ್ಕೆ ತರುತ್ತದೆ, ಈ ಹದವೇ ಪರಿಪಾಕವೆಂಬುದು.

ಕಲೆಯು ಹೃದಯವನ್ನು ಮುಟ್ಟಿ ಸಂಸ್ಕಾರಮಾಡುವುದು ಮುಖ್ಯವಿಷಯ. ಆದರೆ ಅದು ಹೃದಯವನ್ನು ಮುಟ್ಟುವುದು ನಮ್ಮ ಪಂಚೇಂದ್ರಿಯಗಳ ಮೂಲಕ. ಅದು ಒಂದು ಇಂದ್ರಿಯವನ್ನಾದರೂ ಉಪಯೋಗಿಸಿಕೊಳ್ಳಬಹುದು. ಎರಡು ಮೂರನ್ನಾದರೂ ಉಪಯೋಗಿಸಿಕೊಳ್ಳಬಹುದು. ಏವಂಚ ಕಲೆಯ ಪ್ರವೇಶ ಇಂದ್ರಿಯಗಳ ಮೂಲಕ.

ಹೀಗಿರುವುದರಿಂದ ಕಲೆಯನ್ನು ಲಲಿತಕಲೆಯೆಂದು ಕರೆಯುವುದು ವಾಡಿಕೆ.

ಇಂದ್ರಿಯಗಳು ಐದು : ಶಬ್ದ, ಸ್ಪರ್ಶ, ರೂಪ, ರಸ, ಗಂಧ—ಇವುಗಳಿಗೆ ಸಂಬಂಧಪಟ್ಟ ಕಲೆಗಳನ್ನು ನೋಡೋಣ.

(1) **ಶಬ್ದ ಅಥವಾ ಕಿವಿ :** ಸಂಗೀತ, ಛಂದೋಬದ್ಧವಾದ ವಾಕ್ಯ, ಒಳ್ಳೆಯ ಸಂಭಾಷಣೆ, ಕಲಕಲಧ್ವನಿ ಇತ್ಯಾದಿ. ಇವು ಕಲೆಯ ಒಂದು ರೂಪ : ಇವುಗಳಲ್ಲಿ ಮುಖ್ಯವಾದದ್ದು ಸಂಗೀತ ಕಲೆ : ಶ್ರೋತ್ರದ ಮೂಲಕ ಹೃದಯವನ್ನು ಹಿಡಿಯತಕ್ಕದ್ದು.

(2) **ಸ್ಪರ್ಶ :** ಮೈಗೆ ಸೋಕತಕ್ಕದ್ದು. ಕಲೆಯಲ್ಲಿ ಇದು ಅಷ್ಟು ಪ್ರಶಸ್ತವಾಗಿಲ್ಲ. ಸ್ಯಾಟಿನ್ ಎಂಬ ರೇಷ್ಮೆಯ ಬಟ್ಟೆ, ಮಗುಟ, ಪೀತಾಂಬರ—ಇವು ಸ್ಪರ್ಶೇಂದ್ರಿಯ ಸಂಬಂಧಿಯಾದ ಕಲೆ.

(3) **ರೂಪ :** ಇದೇ ಕಲೆಯಲ್ಲಿ ಮುಖ್ಯವಾದ ಭಾಗ. ಇದು ಎರಡು ಮೂರು ಬಗೆಗಳಲ್ಲಿರುತ್ತದೆನ್ನಬಹುದು : ಅಭಿನಯ, ವರ್ಣಚಿತ್ರಣ, ಶಿಲ್ಪ, ಶಿಲಾಶಿಲ್ಪ, ದಾರುಶಿಲ್ಪ ಇತ್ಯಾದಿ.

(4) **ರಸ :** ರಸನೇಂದ್ರಿಯ ನಾಲಗೆ : ಇದೂ ಕಲೆಗಳಲ್ಲಿ ಅಷ್ಟು ಪ್ರಶಸ್ತವಲ್ಲ. ಆದರೆ ಇದೂ ಒಂದು ಕಲೆಯೇ. ಬಗೆಬಗೆಯ ಭಕ್ಷ್ಯಭೋಜ್ಯಗಳನ್ನು ಮಾಡುವುದು ಒಂದು ಕಲಾಶಕ್ತಿಯೇ. ಅದರಲ್ಲಿ ಹದ ತಿಳಿಯುವುದು ಬಹುಮುಖ್ಯ.

(5) **ಗಂಧ :** ಇದು ಘ್ರಾಣೇಂದ್ರಿಯವಾದ ಮೂಗಿಗೆ. ಇದಕ್ಕೂ ಕಲೆಯೆಂಬ ಗಣನೆ ಬಂದಿಲ್ಲ. ಆದರೂ ಬಗೆಬಗೆಯ ಪರಿಮಳ ದ್ರವ್ಯಗಳನ್ನೂ ಭೋಜ್ಯದ್ರವ್ಯಗಳನ್ನೂ ಕಲಸುವುದರಲ್ಲಿ ಒಂದು ನೈಪುಣಿ ಇರುತ್ತದೆ.

ಹೀಗೆ ನಮ್ಮ ಇಂದ್ರಿಯ ಇಂದ್ರಿಯಕ್ಕೂ ಸಂಬಂಧಪಟ್ಟಂತೆ ಕಲೆಗಳಿರುತ್ತವೆ. ಆದರೆ ವಾಡಿಕೆಯಲ್ಲಿ ಕಣ್ಣು ಕಿವಿಗಳಿಗೆ ಸಂಬಂಧಪಟ್ಟ ಹೃದಯಪಾಕವಿಧಾನಗಳಿಗೆ ಮಾತ್ರ ಕಲೆಯೆಂಬ ಹೆಸರು ಪ್ರಚಾರದಲ್ಲಿದೆ.

ಕಣ್ಣು ಕಿವಿಗಳ ಮೂಲಕ ಆಗುವ ಪರಿಣಾಮವು ಮಿಕ್ಕವುಗಳಿಗಿಂತ ಹೆಚ್ಚು ಕಾಲ ನಿಲ್ಲತಕ್ಕವು. ಒಂದು ಹಾಡನ್ನು ಕೇಳಿದಾಗಲೋ ಒಂದು ರೂಪವನ್ನು ನೋಡಿದಾಗಲೋ ಮನಸ್ಸು ಕೆರಳಿ ಸಂತೋಷ, ವಿಷಾದ, ಆಶೆ, ನಿರಾಶೆ ಮೊದಲಾದ ಭಾವಗಳನ್ನು ತಾಳುತ್ತದೆ. ಹೃದಯವಾದರೋ ಮನಸ್ಸಿನ ಕೇಂದ್ರಭಾಗ. ಭಾವವಿಭಾವೋತ್ಪಾದಕವಾದ ಮನಃಕಾರ್ಯ ನಡೆಯುವುದು ಹೃದಯದಲ್ಲಿ : ಹೃದಯವು ಮನಸ್ಸಿನ ಕಾರ್ಯರಂಗ. ಹೀಗೆ ಹೃದಯದ ಮೂಲಕ ಹೊರಜಗತ್ತಿಗೂ ಒಳಗಿನ

ಅಂತರಾತ್ಮಕ್ಕೂ ಸಂಬಂಧ. ಹೃದಯವೇ ಎರಡು ಪ್ರಪಂಚಗಳಿಗೂ ನಡುವಣ ಸೇತು. ಅಂತರಾತ್ಮವೂ ಬಹಿಷ್ಪ್ರಪಂಚದ ಸಾರಭಾಗವೂ ಹೃದಯ ಕ್ಷೇತ್ರದಲ್ಲಿ ಸಂಯೋಗಗೊಂಡಾಗ ಉತ್ಪನ್ನವಾಗುವ ಸುಖಾನುಭವವೇ ರಸ. ಆದದ್ದರಿಂದಲೇ ಉತ್ತಮ ಕಲೆಯನ್ನು ಲಲಿತ ಕಲೆ ಎನ್ನುವುದು. ಪ್ರಪಂಚವಸ್ತುವಿನ ಸಾರವೂ ಅಂತರಾತ್ಮದ ಚಿದಂಶವೂ ಸಂಧಿಯಾದಾಗ ಹುಟ್ಟುವುದೇ ರಸ.

> ರಸೋ ವೈ ಸಃ।
> ರಸಗ್ಂ ಹ್ಯೇವಾಯಂ ಲಬ್ಧ್ವಾಽನಂದೀ ಭವತಿ॥

ಅರಿಶಿನದ ಗಂಧವೂ ಸುಣ್ಣದ ತಿಳಿಯೂ ಬೆರೆತಾಗ ಅಕ್ಷತೆ.

ಸಂಸ್ಕೃತಿ *

ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು.—ಸ್ವಗುಣ ಪರಗುಣಗಳ ಸಂಮಿಶ್ರಿತ ಕಾಂತಿ. ಈ ಸಂಸ್ಕೃತಿ ಮೂಲದಲ್ಲಿ ನಮ್ಮ ಅಂತರಂಗ ಜೀವನಕ್ಕೆ ಸಂಬಂಧಪಟ್ಟದ್ದು. ಅದು ನಮ್ಮ ಒಳಸಂಪತ್ತು. ಅದರ ಜಾಗ ಮನಸ್ಸು ಮತ್ತು ಹೃದಯ. ಅದರಿಂದ ಬೇರೆಯಾದದ್ದು ನಮ್ಮ ಬಹಿರಂಗ ಜೀವನ. ಇದರವು ಮನೆ, ವಾಹನ, ಒಡವೆ, ಹಣ ಮೊದಲಾದ ಘನ ವಸ್ತುಗಳು. ಕಳೆದ ಐವತ್ತು ವರ್ಷಗಳಲ್ಲಿ ಈ ಹೊರ ಸೌಕರ್ಯಗಳ ವಿಚಾರದಲ್ಲಿ ನಮ್ಮ ದೇಶ ಬಹುಮಟ್ಟಿಗೆ ಮುಂದುವರಿದಿದೆ. ಹಿಂದೆ ಮೋಟಾರುಗಳೂ ವಾಯು ವಿಮಾನಗಳೂ ಈಗಿನಂತೆ ಇರಲಿಲ್ಲ. ಈಗಿನಷ್ಟು ವಿದ್ಯಾಶಾಲೆಗಳೂ ವೈದ್ಯಶಾಲೆಗಳೂ ರೈಲುಗಳೂ ಬ್ಯಾಂಕುಗಳೂ ಕಾರ್ಖಾನೆಗಳೂ ವ್ಯಾಪಾರ ವಿಸ್ತಾರವೂ ಆಗ ಇರಲಿಲ್ಲ ಈ ಬಾಹ್ಯ ಸಂಪತ್ತಿನಲ್ಲಿ ನಾವು ಅಭಿವೃದ್ಧಿ ಕಂಡಿದ್ದೇವೆ. ಆದರೆ ಅಂತರಂಗ ಸಂಪತ್ತಿನಲ್ಲಿ ಹಾಗೆ ಬೆಳೆದಿಲ್ಲ, ಇನ್ನೂ ಬಡವಾಗಿದ್ದೇವೆ ಎಂದೇ ನನ್ನ ಎಣಿಕೆ. ಈ ಬಡತನ ವನ್ನು ಐದಾರು ಪ್ರಸ್ತಾವಗಳ ಮೂಲಕ ನಿದರ್ಶನಪಡಿಸಬೇಕೆಂಬುದು ನನ್ನ ಈಗಿನ ಉದ್ದೇಶ.

ಮೊದಲು. ಮನುಷ್ಯಸ್ಥಾನಕ್ಕೆ ಯಂತ್ರ ಬರುತ್ತಿದೆ. ಹೃದಯದ ಕಾರ್ಯ ಗಳನ್ನು ಯಂತ್ರಗಳ ಮೂಲಕ ನಿರ್ವಾಹ ಮಾಡುವ ಅಭ್ಯಾಸವನ್ನು ಬೆಳಸಿಕೊಳ್ಳು ತ್ತಿದ್ದೇವೆ. ಐವತ್ತು ವರ್ಷಗಳ ಹಿಂದೆ ಮದುವೆಗೆ ಕರೆಯೋಲೆ ಕೈಬರಹದಲ್ಲಿರು ತ್ತಿತ್ತು, ಈಗ ಅಚ್ಚಿನಲ್ಲಿದೆ. ಕೈಯಿಂದ ಬರೆಯುವಾಗ ಮನಸ್ಸು ಉದ್ದೇಶದಲ್ಲಿರು ವಾತನ ಯೋಗ್ಯತೆಯನ್ನು, ಆತನಿಗೆ ಸಲ್ಲಬೇಕಾದ ಪ್ರೀತಿ ಗೌರವಗಳನ್ನು, ನೆನೆದು ಕೊಳ್ಳುತ್ತಿತ್ತು. ಅದು ಹೃದಯಸ್ಪರ್ಶ, ಇಂಗ್ಲಿಷಿನಲ್ಲಿ ಹೇಳುವಂತೆ personal touch, ಸಾಕ್ಷಾತ್ತಿನ ಕಲ್ಪನೆ. ಈಗ ಅದು ಅಷ್ಟಾಗಿರದು ; ಅಚ್ಚಿನ ಆಹ್ವಾನ ನ್ಯೂಸ್ ಪೇಪರಿನಂತೆ, ಸಾವಿರ ಮಂದಿಗೆ ಹೋಗುತ್ತದೆ. ಅದಕ್ಕೆ ತಾರತಮ್ಯ ವಿಚಾರಬೇಕಿಲ್ಲ.

---

* 10-5-1957 ರಂದು ಬೆಂಗಳೂರು ಆಕಾಶವಾಣಿಯಿಂದ ಪ್ರಸಾರವಾದ ಭಾಷಣ.

ಹಿಂದೆ ಮನೆಗೆ ಇಷ್ಟರು ಬಂದರೆ ಅವರಿಗೆ ಫಲಾಹಾರಕ್ಕಾಗಿ ಮನೆಯಲ್ಲಿ ಮಾಡಿದ್ದ ತಿಂಡಿಯನ್ನು ಮುಂದಿರಿಸುತ್ತಿದ್ದರು. ಈಗ ಹೋಟಲ್ಲಿನ ಸಾಮಾನನ್ನು ತರಿಸುತ್ತೇವೆ, ಅಥವಾ ಹೋಟಲಿಗೇ ಅವರನ್ನು ಸಾಗಿಸಿಕೊಂಡು ಹೋಗುತ್ತೇವೆ. ಹೋಟಲು ತಿಂಡಿ ಹೆಚ್ಚು ರುಚಿಯಿರಬಹುದು. ಆದರೆ ಮನೆಯ ಜನದ ಪ್ರೀತಿ ವಿಶ್ವಾಸ ಅದರಲ್ಲಿರುತ್ತದೆಯೆ ?

ಹಿಂದೆ ಮನೆಯಲ್ಲಿ ಒಬ್ಬ ಬಸುರಿ ಹೆಂಗಸಿದ್ದಾಗ ಆಕೆಗೆಂದು, ಕೈಯಿಂದ ಚಕ್ಕುಲಿ ಸುತ್ತಿ, ಕರಿಯುತ್ತಿದ್ದರು. ಈಗ ಅಂಥ ತಿರುತಿರುಪಣೆಯ ಚಕ್ಕುಲಿ ಕಣ್ಣಿಗೆ ಅಪರೂಪವಾಗಿದೆ. ಆಗ ಬೆರಳು ಮಾಡುತ್ತಿದ್ದ ಕೆಲಸವನ್ನು ಈಗ ಒರಳು ಮಾಡುತ್ತದೆ. ಬೆರಳಿನ ಹಿಂದೆ ಕರುಳಿರುತ್ತಿತ್ತು. ಕರುಳಿಗೂ ಒರಳಿಗೂ ಅಷ್ಟು ಹತ್ತಿರದ ಸಂಬಂಧವಿಲ್ಲ.

ಆಗ ಮದುವಣಿಗರು ಹಸೆಯ ಮೇಲೆ ಕುಳಿತರೆ ಹೆಣ್ಣುಮಕ್ಕಳು ಕೊರಳ ಜಂಬದಿಂದಲೂ ಮುದುಕಿಯರು ಮಮತೆಯ ಉತ್ಸಾಹದಿಂದಲೂ ಹಾಡು ಹೇಳುತ್ತಿದ್ದರು. ಈಗಿನದು ಗ್ರಾಮಾಫೋನ್ ಸಂಗೀತ.

ಆಗ ಶ್ರೀಗಂಧ ತೆಯ್ದು ಕೇಸರಿ ಪಚ್ಚಕರ್ಪೂರ ಬೆರಸಿದ ಪರಿಮಳ; ಈಗ "ಸೆಂಟ್". ಸ್ವಾಭಾವಿಕದ ಸ್ಥಾನಕ್ಕೆ ಕೃತಕ ಬರುತ್ತಿದೆ.

ಇನ್ನೊಂದು ವಿಷಯಕ್ಕೆ ಹೋಗೋಣ. ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಜನದಲ್ಲಿ ಕೆಲಸಗಾರತನದ ಹೆಮ್ಮೆ ಕಳೆದುಹೋಗಿದೆ. ಹಿಂದೆ ಪ್ರತಿಯೊಬ್ಬರಿಗೂ ತಮ್ಮ ತಮ್ಮ ದಿನದಿನದ ಕೆಲಸದ ವಿಷಯದಲ್ಲಿ ಗೌರವವಿರುತ್ತಿತ್ತು—ಗಂಡಸಿಗೆ ತನ್ನ ಕಸುಬಿನ ವಿಷಯದಲ್ಲಿ, ಹೆಂಗಸಿಗೆ ತನ್ನ ಅಡಿಗೆ ಗೃಹಕೃತ್ಯದಲ್ಲಿ. ರೈತ ತನ್ನ ನೇಗಿಲುವನ ಉಳುಮೆಗಳನ್ನು ಕುರಿತು ಜಂಬವಿಟ್ಟುಕೊಂಡಿದ್ದ. ಬಡಗಿಯೂ ಗಾರೆಕಾರನೂ ತಮ್ಮ ಕೈಚಳಕಕ್ಕಾಗಿ ಹೆಮ್ಮೆಪಡುತ್ತಿದ್ದರು. ಕರಣೀಕನು ತನ್ನ ಅಕ್ಷರದ ಸೊಗಸಿಗಾಗಿ, ಪುರೋಹಿತನು ತನ್ನ ಮಂತ್ರೋಚ್ಚಾರಣೆಗಾಗಿ, ಉಪಾಧ್ಯಾಯನು ತನ್ನ ಪಾಠಶೀಲತೆಗಾಗಿ, ಕುಂಬಾರನು ತನ್ನ ಕೈಯ ನವುರಿಗಾಗಿ ಹಿಗ್ಗುತ್ತಿದ್ದ. ಕೆಲಸ ಕೂಲಿಗಾಗಿ ಎಂಬ ಭಾವನೆ ಆಗ ಅತಿಯಾಗಿರಲಿಲ್ಲ. ಸಂಪಾದನೆ ಅವರಿಗೆ ಬೇಕಾಗಿರಲಿಲ್ಲವೆಂದಲ್ಲ. ಅವರೂ ಬಡವರೇ. ಆದರೆ ತಾಟಾಪೋಟಿಯ ಕೆಲಸವನ್ನು ಅವರು ಅಭ್ಯಾಸ ಮಾಡಿಕೊಂಡಿರಲಿಲ್ಲ. ಅಡಕಸಬಿ ಬದುಕಿಗೆ ಅವರ ಮನಸ್ಸೊಪ್ಪದು. ದುಡಿಮೆಯಿಲ್ಲದ ಅನ್ನ ಮೈಹತ್ತದೆಂದು ಅಂದಿನವರ ನಂಬಿಕೆ. ಪ್ರಕೃತಿ ಹೇಗೆ ಕೆಲಸ ಮಾಡುತ್ತದೆಯೋ ಹಾಗೆ ತಾವೂ ಕೈಗೆ ಬಂದ ಕೆಲಸವನ್ನು ಸಾಧ್ಯವಾದಷ್ಟು ಸೊಗಸಾಗಿ ಮಾಡಬೇಕೆಂಬುದು ಅವರ ನಿಯಮ. ಅವಸರವಸರವಾಗಿ, ಹೇಗಂದರೆ ಹಾಗೆ, ಕೆಲಸದ ನಟನೆ ಮಾಡಿ, ಆದಷ್ಟು ಕಡಮೆ ದುಡಿತಕ್ಕೆ ಆದಷ್ಟು ಹೆಚ್ಚು ಕೂಲಿ ಗಿಟ್ಟಿಸಿಕೊಳ್ಳುವ ಯೋಚನೆ ಆಗ ಬಂದಿರಲಿಲ್ಲ. ಈಚೆಗೆ ಹೊಸ ಹೊಸ ವ್ಯಾಪಾರಗಳೂ

ಹೊಸ ಹೊಸ ಕಸುಬುಗಳೂ ಬಂದು ಉಪಾಯ ಜೀವನದ ಆಸೆ ಹರಡುತ್ತಿದೆ. ಪಟ್ಟಣದ ರೀತಿಗಳೂ ಡಾಂಭಿಕತೆಯೂ ಪ್ರಕಟನ ಸೌಲಭ್ಯವೂ ಪ್ರಾಮಾಣಿಕತೆಗೆ ಬಲ ತಪ್ಪಿಸಿ ಚಮತ್ಕಾರ ಚತುರೋಪಾಯಗಳಿಗೆ ಪ್ರೋತ್ಸಾಹ ಕೊಡುತ್ತಿವೆ. ಹೀಗೆ ಜನರ ಕಾರ್ಯಾರ್ಹತೆ ತಗ್ಗುತ್ತಿದೆ. ಸಮಾಜಕ್ಕೆ ಕೆಲಸಗಾರತನದ ಹೆಮ್ಮೆ ನಷ್ಟವಾಗುವುದಕ್ಕಿಂತ ದೊಡ್ಡ ನಷ್ಟ ಇರಲಾರದು.

ಈಗ ಮತ್ತೊಂದು ವಿಚಾರಕ್ಕೆ ಹೋಗೋಣ. ಇದು ಗೃಹಕೃತ್ಯದ್ದು. ಐವತ್ತು ವರ್ಷಗಳ ಹಿಂದೆ ಮೂವರು ನಾಲ್ವರು ಅಣ್ಣತಮ್ಮಂದಿರುಗಳೂ, ಅವರ ಮಕ್ಕಳು ಮೊಮ್ಮಕ್ಕಳೂ, ಅವರ ಅಕ್ಕತಂಗಿಯರಲ್ಲಿಯೂ ಅತ್ತಿಗೆ ನಾದಿನಿಯರಲ್ಲಿಯೂ ಮನೆತಪ್ಪಿದ್ದವರೂ. ಅವರ ಮಕ್ಕಳೂ ಸೇರಿ ಇಪ್ಪತ್ತು—ಇಪ್ಪತ್ತೈದು ಮಂದಿ ಒಟ್ಟಿಗಿದ್ದ ಕುಟುಂಬಗಳು ಅಪರೂಪವಾಗಿರಲಿಲ್ಲ. ನೂರಕ್ಕಿಂತ ಹೆಚ್ಚು ಮಂದಿ ಇದ್ದ ಕುಟುಂಬಗಳನ್ನು ನಾನು ನೋಡಿದ್ದೇನೆ. ಆ ಸಂಯುಕ್ತಸಂಸಾರಗಳು ಒಬ್ಬ ಯಜಮಾನನ ಆಳಿಕೆಯಲ್ಲಿ ಬದುಕುತ್ತಿದ್ದವು. ಆಗ ಕಷ್ಟಗಳಿರಲಿಲ್ಲವೆಂದಲ್ಲ. ಈಗ ಅವೇನೂ ತಪ್ಪಿಲ್ಲ. ಆದರೆ ಈಗಿನ ಕಷ್ಟದ ರೀತಿ ಬೇರೆ, ಆಗಿನದರ ರೀತಿ ಬೇರೆ. ತಂಟೆ ತಕರಾರುಗಳ ಬೇರುಗಳು ಮನುಷ್ಯಸ್ವಭಾವದಲ್ಲಿ ಯಾವಾಗಲೂ ಇದ್ದೇ ಇರುತ್ತವೆ. ಒಟ್ಟು ಕುಟುಂಬದಲ್ಲಿ ಅವುಗಳನ್ನು ಸರಿಪಡಿಸುವ ಕ್ರಮವೂ ಒಂದಿತ್ತು. ಒಟ್ಟಿನಲ್ಲಿ ಅದು ಏಕಮತ್ಯಸಾಧನೆಯ ಕ್ರಮ. ಅದು ಒಂದು ತೆರನ ಡೆಮಾಕ್ರಸಿ—ಜನರಾಜ್ಯ, ಒಟ್ಟು ಬದುಕು. ಈಗ ಆ ಸಂಸ್ಕೃತಿಭಾವನೆ ಕರಗಿಹೋಗಿ, ಪ್ರತ್ಯೇಕತಾ ಭಾವನೆ ಬಲಪಡುತ್ತಿದೆ. ಅವನವನ ಪಾಡು ಅವನವನದು. ಗಟ್ಟಿಗ ಅಟ್ಟಕ್ಕೆ, ಹಿಂದಿನವ ಹಳ್ಳಕ್ಕೆ. ಹೀಗೆ ಒಂದಾಗಿದ್ದ ಮನೆ ಎರಡಾಗಿ, ನಾಲ್ಕಾಗಿ ಒಡೆಯುತ್ತಿದೆ.

ಒಂದು ಕುಟುಂಬದಲ್ಲಿಯೇ ದ್ವಿಮುಖ ಸರಕಾರ. ಈಚೀಚೆಗೆ ಬರುತ್ತಿರುವ ಮದುವೆಯ ಆಹ್ವಾನಪತ್ರಿಕೆಗಳಲ್ಲಿ ಇದು ಚೆನ್ನಾಗಿ ಕಾಣಬರುತ್ತದೆ. ಇಪ್ಪತ್ತೈದು ವರ್ಷಗಳ ಹಿಂದೆ ನಮ್ಮ ಮನೆಯ ಒಂದು ಶುಭ ಸಂದರ್ಭದಲ್ಲಿ ಆಹ್ವಾನ ಪತ್ರಿಕೆಯನ್ನು ನಮ್ಮ ತಂದೆಯ ಹೆಸರಿನಲ್ಲಿ ಕಳಿಸಿದ್ದಾಗಿತ್ತು. ಅದರಲ್ಲಿ ನನ್ನ ಹೆಸರೂ ಇರಬೇಕಾಗಿದ್ದ ಕಾರಣ, ನಮ್ಮ ತಂದೆಯ ಪರಿಚಯವಿಲ್ಲದಿದ್ದ ನನ್ನ ಸ್ನೇಹಿತರೂ ಬಂದರು. ಅವರಲ್ಲೊಬ್ಬರು ನಿಜವಾಗಿ ದೊಡ್ಡವರು. ವಯಸ್ಸಾದವರು. ಮೋಟಾರಿನಲ್ಲಿ ಬಂದು ಇಳಿದರು. ನಾನು ಅವರನ್ನು ಸ್ವಾಗತಿಸಿದೆ. ಅವರು "ಕಾರಿನಲ್ಲಿ ನೋಡಿ. ಅಲ್ಲೊಬ್ಬರಿದ್ದಾರೆ." ಎಂದರು. ಕಾರಿನಲ್ಲಿದ್ದವರು ಅವರ ಭಾರ್ಯೆ. ಆಕೆಗೂ ನನ್ನ ಪರಿಚಯವಿತ್ತು. ನಾನು ಆಕೆಯನ್ನು "ದಯಮಾಡಬೇಕು" ಎಂದು ಕರೆದೆ. ಆಕೆ ನಕ್ಕು, "ಹೆಂಗಸರು ಕರೆದಿಲ್ಲವಲ್ಲ!" ಎಂದರು. ನಾನು ಹೇಳಿದೆ: "ನಮ್ಮ ತಂದೆಯಿರುವ ಕಡೆ ನಮ್ಮ ತಾಯಿ, ಅವರಿರುವ ಕಡೆ ನಾವೆಲ್ಲ ಇರತಕ್ಕವರು. ನಮ್ಮ ತಂದೆ ನಮ್ಮ ಒಟ್ಟು ಕುಟುಂಬದ ಪರವಾಗಿ ನಿಮ್ಮ ಒಟ್ಟು ಕುಟುಂಬವನ್ನು ಕರೆದಿದ್ದಾರೆ." ಹೀಗೆ ನಾನು ಹೇಳಿದ್ದನ್ನು ಕೇಳಿ, ಆಕೆ—"ನೀವು ಪೂರ್ವಕಾಲದವರು" ಎನ್ನುತ್ತ ಬಂದು ಆಶೀರ್ವದಿಸಿ ತೆರಳಿದರು. ಈಗ ಗಂಡನ ಆಹ್ವಾನವೇ ಬೇರೆ. ಹೆಂಡತಿಯದೇ ಬೇರೆ.

ಈ ಹೊಸ ಮರ್ಯಾದೆ ಯೂರೋಪಿಯನ್ನರ ಅನುಕರಣ. ಅದರಲ್ಲಿ ಗಂಡಹೆಂಡಿರ ಏಕೀಭಾವದ ಸೂಚನೆಯಿಲ್ಲ. ಭಿನ್ನವ್ಯಕ್ತಿತ್ವದ ಸೂಚನೆಯುಂಟು. ಅದು ಸ್ತ್ರೀ ಪುರುಷರ ಸಮಾನತ್ವವಂತೆ ! ಹಾಗಾದರೆ ಗಂಡನ ಕುಲಗೋತ್ರಗಳನ್ನು ಹೆಂಡತಿಯೇಕೆ ಸ್ವೀಕರಿಸಬೇಕು ? ಅವನ ಹೆಸರಿನಲ್ಲಿ ಆಕೆಯೇಕೆ ಅಡಗಿಕೊಳ್ಳಬೇಕು ? ಶ್ರೀಮತಿ ಮತ್ತು ಶ್ರೀ ರಾಮಣ್ಣ (Mrs. & Mr. Ramanna) ಎಂಬುದಕ್ಕೆ ಬದಲಾಗಿ ಶ್ರೀಮತಿ ಮತ್ತು ಶ್ರೀ ಸೀತಮ್ಮ (Mr. & Mrs. Sitamma) ಎಂದೇ ಇಬ್ಬರೂ ಕರೆದುಕೊಳ್ಳಬಹುದಲ್ಲ ! ದಂಪತಿ ಎಂಬುದು ಒಂದು. — ಗಂಡನಲ್ಲಿ ಹೆಂಡತಿ ಒಂದಾಗಿದ್ದಾಳೆ— ಎಂಬುದು ಹಿಂದಿನ ಭಾವನೆ.

ಇನ್ನೊಂದು ವಿಚಾರ ನೋಡೋಣ. ಒಳ್ಳೆಯ ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿಸಂಯಮ, ವ್ಯಕ್ತಿವಿಕಾಸ— ಈ ಎರಡು ಬಗೆಯ ಸಂಸ್ಕಾರಗಳಿಗೂ ಅವಕಾಶ ವಿರುತ್ತದೆ. ದಂಪತಿಗಳ ಜೀವನದಲ್ಲಿ ಗಂಡನು ದ್ರವ್ಯಾರ್ಜನೆಯ ವ್ಯವಹಾರದಲ್ಲಿ ತನ್ನ ವ್ಯಕ್ತಿತ್ವವನ್ನು ಬೆಳಸಿಕೊಳ್ಳುತ್ತಾನೆ ; ಹೆಂಡತಿ ಪಾಕ ಪರಿಣತವಣೆಗಳಲ್ಲಿ, ಒಪ್ಪ ಓರಣಗಳಲ್ಲಿ ತನ್ನ ವ್ಯಕ್ತಿತ್ವವನ್ನು ಬೆಳಗುತ್ತಾಳೆ ; ಮಕ್ಕಳ ಲಾಲನೆ ಪಾಲನೆಗಳಲ್ಲಿಯೂ, ಬಂಧುಗಳ ಉಪಚಾರದಲ್ಲಿಯೂ ಇಬ್ಬರೂ ತಂತಮ್ಮ ಪ್ರತ್ಯೇಕ ವ್ಯಕ್ತಿತ್ವವನ್ನು ವಿಲೀನ ವಾಗಿಸಿ ಏಕೀಭವಿಸುತ್ತಾರೆ. ಹೀಗೆ ಸಂಸ್ಕೃತಿಯ ಶಿಕ್ಷಣದ ಜೊತೆಗೆ ವೈಶಿಷ್ಟ್ಯದ ಶಿಕ್ಷಣ ಸೇರಿಕೊಂಡಿರಬೇಕು. ಎಲ್ಲ ದೈವಭಕ್ತರಿಗೂ ಗುಡಿ ಒಂದು : ನಮಸ್ಕಾರ ಗಳು ಒಬ್ಬೊಬ್ಬರದೂ ಬೇರೆ ಬೇರೆ. ಈ ಪ್ರತ್ಯೇಕ ಧರ್ಮಾಭ್ಯಾಸಕ್ಕೆ ಹಿಂದೆ ಇದ್ದಷ್ಟು ಅವಕಾಶ ಈಗ ಇಲ್ಲ. ಈಗಣ ಸಂದರ್ಭ ಸರ್ವಸಾಂಕರ್ಯದ್ದು ; "ಸಬ್ ಏಕ್ ಲಂಡ." ಸಮುದಾಯವೆಂಬ ಸಮುದ್ರದ ನೀರಿನಲ್ಲಿ ಈ ಹೊತ್ತು ಎಲ್ಲ ವ್ಯಕ್ತಿ ರಸಗಳೂ ಕರಗಿ ನೀರುಚಿಗಳಾಗುತ್ತಿವೆ. ಬಹು ಮಂದಿಯ ಮಾತು ಅದಕ್ಕೆ ಸಲ್ಲದ ಕಡೆಗಳಲ್ಲಿಯೂ ಅಧಿಕಾರ ಮಾಡುತ್ತದೆ. ಏನು ಭಕ್ಷ್ಯ ಮಾಡಿಸೋಣ ? ವೋಟಿಗೆ ಹಾಕಿ. ಯಾವ ರಾಗ ಹಾಡಿಸೋಣ ? ವೋಟಿಗೆ ಹಾಕಿ. ಯಾವ ವಿಷಯದ ಮೇಲೆ ಉಪನ್ಯಾಸವಿಡಿಸೋಣ ? ವೋಟಿಗೆ ಹಾಕಿ— ಇದು ಇಂದಿನ ರೀತಿ. ಹಿಂದೆ ಸಂಖ್ಯಾ ಬಲದ ಅತಿರೇಕ ಇರಲಿಲ್ಲ. ಈಚೀಚಿನ ರಾಜಕೀಯದಿಂದ ಬಂದಿರುವ ಈ ದೊಂಬಿಯ ದರ್ಬಾರಿನ ಜೊತೆಗೆ ಯಂತ್ರದಿಂದಾಗುವ ದೊಂಬಿಸೇವೆ ಸೇರಿಕೊಂಡಿದೆ. ಹಿಂದೆ ಊಟ ಮಾಡುವವರ ರುಚಿಯನ್ನು ನೋಡಿ ಅಡಿಗೆ, ಈ ಹೊತ್ತು ಹೋಟಲ್ಲಿನ ಅಡಿಗೆ. ಹಿಂದೆ ನಾಲಿಗೆ ಬೇಕೆಂದಂತೆ ಭಕ್ಷ್ಯ. ಈ ದಿನ ಕಾರ್ಖಾನೆಯ ವ್ಯಾಪಾರ ದೃಷ್ಟಿ ಯಿಂದ ಆದ ಹುರಿಗಾಳು ಬಿಸ್ಕತ್ತುಗಳು.

ಹಿಂದೆ ಪುರೋಹಿತರು ಸ್ವಂತ ತಕಲಿಯಿಂದ ನೂಲು ತೆಗೆದು ಮಾಡಿದ ಜನಿವಾರ ; ಈಗ ಮಿಲ್ಲು ದಾರದ ಹಾರ. ಹಿಂದೆ ಗೃಹಸ್ಥನು ತೋಟದಿಂದ ಬಿಡಿಸಿಕೊಂಡು ಬಂದ ಹೂ, ಮನೆಯಾಕೆ ಕಟ್ಟಿದ ಮಾಲೆ ; ಈಗ ಅಂಗಡಿಯಿಂದ ಬಂದ ಹೂವು—ಸೊಪ್ಪುಗಳ ಕಂತೆ. ಹಿಂದೆ ಮನೆಯ ಜನ ಕುಳಿತು ಹಚ್ಚಿದ ಊಟದೆಲೆ, ಈ ಹೊತ್ತು ಯಂತ್ರ ನಿರ್ಮಿತವಾದ ಲೋಹದ ತಟ್ಟೆ. ಪೂರ್ವಿಕರಲ್ಲಿ ತಮ್ಮ ಬಟ್ಟೆಯನ್ನು ತಮ್ಮ

ಕೈಯಿಂದ ತಾವೇ ಒಗೆದುಕೊಳ್ಳಬೇಕು, ತಮ್ಮ ಅಡಿಗೆಯನ್ನು ತಾವೇ ಮಾಡಿಕೊಳ್ಳಬೇಕು ಎಂಬ ನಿಯಮ ಸಾಮಾನ್ಯವಾಗಿತ್ತು. ಈಗ ಗಾಂಧಿಯವರ ಶಿಷ್ಯರು ತಮ್ಮ ಉಡಿಗೆಗೆ ಬೇಕಾದ ಬಟ್ಟೆಯ ನೂಲನ್ನು ತಾವೇ ಸ್ವಹಸ್ತದಿಂದ ನೂತುಕೊಳ್ಳಬೇಕೆಂದು ವ್ರತವಿಟ್ಟುಕೊಂಡಿದ್ದಾರಷ್ಟೇ ! ಈ ಸ್ವಯಂಪಾಕದಂಥ ನಿಯಮದಲ್ಲಿ ಒಂದು ಆತ್ಮಸಂಸ್ಕಾರದ ತತ್ತ್ವ ಅಂತರ್ಗತವಾಗಿದೆ. ಸ್ವತಶ್ಶ್ರಮವೂ ಸ್ವತಸ್ಸೇವೆಯೂ ಅಹಂಕಾರ ವರ್ಜನೆಯ ಪ್ರಯತ್ನಗಳು—ವಿನಯ ನಮ್ರಭಾವದ ಸೂಚನೆಗಳು. ಕೂಲಿ ಕೊಟ್ಟು ದೇವರ ಪೂಜೆ ಮಾಡಿಸಿ, ತಾನು ಕುಳಿತ ಕಡೆಗೆ ತೀರ್ಥ ಪ್ರಸಾದಗಳನ್ನು ತರಿಸಿಕೊಳ್ಳುವುದಕ್ಕಿಂತ, ತಾನೇ ಮೈಬಗ್ಗಿಸಿ ಮಾಡಿದ ನಮಸ್ಕಾರದಲ್ಲಿ ನಮ್ರತೆ ಹೆಚ್ಚು—ಎಂಬುದು ಹಿಂದಿನ ಭಾವನೆ. ತಂದೆ ಕಾಯಿಲೆಯಾದರೆ ತಾನೇ ಹತ್ತಿರವಿದ್ದು ಉಪಚರಿಸುವುದು ಹಿಂದಿನ ಸಂಪ್ರದಾಯ. ಕೂಲಿಯ 'ನರ್ಸು'ಗಳನು ನಿಯಮಿಸುವುದು ಇಂದಿನ ಪಿತೃಭಕ್ತಿ. ಮಗುವಿನ ಹೊಟ್ಟೆಗೆ ಹೇಗೋ ಹಾಲ ಸೇರಿದ್ದು ಮುಖ್ಯ ಇಂದಿನವರಿಗೆ ; ಆ ಹಾಲು ತಾಯ ಸ್ತನದಿಂದ ಬಂದದ್ದು ಮುಖ್ಯ ಹಿಂದಿನವರಿಗೆ. ತನ್ನ ಶ್ರಮದ ಫಲ ತನ್ನ ಶ್ರದ್ಧೆಯ ಕಾಣಿಕೆ—ಎಂಬ ಸಂತೋಷದ ಕಲ್ಪನೆ ಈಗಿನವರಿಗೆ ಇಲ್ಲವಾಗುತ್ತಿದೆ. ಈ ಆತ್ಮಗುಣ ಸಂಕೋಚಕ್ಕೆ ಸಂಸ್ಕೃತಿ ಪದ್ಧತಿಯಲ್ಲ ಕಾರಣ ; ಇಂದಿನ ಉದ್ದೇಶ ಸಾಂಕರ್ಯ ಸಹವಾಸ ಸಾಂಕರ್ಯಗಳು ಅದಕ್ಕೆ ಕಾರಣ.

ಕಡೆಯದಾಗಿ ಇನ್ನೊಂದು ವಿಷಯಕ್ಕೆ ಹೋಗೋಣ. ಅದು ಜೀವನದ ಮುಖ್ಯ ಗುರಿಯದು. ಪೂರ್ವಿಕರು ದೇವರ ಪ್ರೀತಿಗೆಂದು,—ಜನ್ಮ ಸಾರ್ಥಕವಾಗಲೆಂದು,—ಯಾವುದಾದರೊಂದು ದೊಡ್ಡ ಸಂಕಲ್ಪವನ್ನು ಮನಸ್ಸಿನಲ್ಲಿರಿಸಿಕೊಂಡು, ಅದು ಕೂಡಿಬರುವ ಕಾಲದ ನಿರೀಕ್ಷಣೆಯಲ್ಲಿ ಬಾಳ್ವೆ ನಡಸುತ್ತಿದ್ದರು. ಒಂದು ತೀರ್ಥಯಾತ್ರೆ, ಒಂದು ದೇವರ ಸೇವೆ, ಒಂದು ವ್ರತ, ಒಂದು ಸತ್ರ ಸ್ಥಾಪನೆ, ಒಂದು ರಾಮೋತ್ಸವ, ಒಂದು ದಾನ, ಒಂದು ಅನ್ನಸಂತರ್ಪಣೆ, ಒಂದು ಪುರಾಣ ಶ್ರವಣ—ಇಂಥ ಯಾವುದೋ ಒಂದು ದೊಡ್ಡ ಉದ್ದೇಶಕ್ಕಾಗಿ—ಸದ್ಯದ ಭೋಗ ಲಾಭಗಳಿಗೆ ಸಂಬಂಧಪಡದ ಸಂಕಲ್ಪಕ್ಕಾಗಿ ಅವರು ಯಾವಜ್ಜೀವವೂ ಹಂಬಲಿಸಿ, ಹಣವುಳಿಸಿ, ಅದು ನೆರವೇರಿದಾಗ ತಾವು ಬದುಕಿದ್ದು ಸಾರ್ಥಕವಾಯಿತೆಂದು ನಲಿಯುತ್ತಿದ್ದರು. ಅಂಥಾ ಪಾರಮಾರ್ಥಿಕತೆ ಈಗ ವಿರಳವಾಗುತ್ತಿದೆ. ಗಾಂಧಿಯವರು ಬದುಕಿದ್ದಾಗ ಹಲಮಂದಿ ಒಂದೆರಡು ಸಾರಿ ಅಂಥಾ ಪಾರಮಾರ್ಥಿಕತೆಯನ್ನು ತೋರಿದ್ದು ನಿಜ. ಆದರೆ ನಮ್ಮ ಅನುದಿನದ ಸಾಮಾನ್ಯ ಜೀವನದಲ್ಲಿ ಆ ಗುಣ ತೋರಿಬರುವುದು ಈಗ ತೀರ ಕಡಮೆಯಾಗಿದೆ. ಹಳೆಯ ಭಕ್ತಿಶ್ರದ್ಧೆಗಳು ಹೋಗಿವೆ ; ಹೊಸ ಆತ್ಮೋದ್ಧಾರಭಾವನೆ ಯಾವುದೂ ಬಂದಿಲ್ಲ. ಈ ಘಳಿಗೆ ತಿಂದ ತಿಂಡಿ. ಈ ಘಳಿಗೆ ನೋಡಿದ ನೋಟ,—ಅದಿಷ್ಟೇ ಇಂದಿನವರ ಬಾಳು. ಮರುಘಳಿಗೆಯೊಂದಿದೆ—ಎಂಬ ಸಂಗತಿ ಕೂಡ ಅವರಿಗೆ ಬೇಕಿಲ್ಲ. ಇಂದಿನ ಜೀವಿಕೆಯ ಕಷ್ಟವೂ ಹಾಗಿದೆ. ಬೆಳಗಿನಿಂದ ಸಂಜೆಯವರೆಗೂ ದುಡಿತ, ಅಲೆತ, ಚಿಂತೆ, ಧಾವಂತ, ಬಹುಜನಕ್ಕೆ ಜೀವನದಲ್ಲಿ ಬೇಸರ,—ಅದರಲ್ಲಿ ಅವರಿಗೆ ಅರ್ಥ ಕಾಣುತ್ತಿಲ್ಲ. ಇದು ನಮ್ಮ ಹೊಸ

ಆರ್ಥಿಕ ಯುಗದ ಪ್ರಭಾವ. ಕಾರ್ಯಾಸನೆಗೆ ಬಲಿ ಮನುಷ್ಯನ ಸಮೃದ್ಧಿ. "ಗಾಣದೆತ್ತಿನಂತೆ ಸುತ್ತು; ಸಿಕ್ಕಿದ್ದನ್ನು ಬಾಚಿಕೊ; ದಣಿದು ನೆಲತಬ್ಬು"—ಬಾಳು ಇಷ್ಟೇ ಆದಾಗ ಅಂದಂದಿನ ಪಾಡು ಅಂದಂದಿನದು. ಅದು ಬರಿಯ ಅನ್ನ ವಸ್ತ್ರಗಳ ಪರದಾಟ. ಅದಕ್ಕಿಂತ ಮೇಲ್ಪಟ್ಟದ್ದು ಮನಸ್ಸಿಗಟುಕದು.

ಈಗಿನ ಜನ ಸುಖಪಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ಸುಖ ಸಂತೋಷಗಳ ತೋರಿಕೆಯೂ ಆಸೆಯೂ ಅಷ್ಟಿಷ್ಟಾದರೂ ಇಲ್ಲದೆ ಜೀವನ ಒಂದು ದಿವಸದ ಮಟ್ಟಿಗೂ ಸಾಧ್ಯವಾಗದು. ಆದರೆ ಆ ಸುಖಾನುಭವದಲ್ಲಿ ಒಂದು ವಿಚಕ್ಷಣೆಯುಂಟೆ? ನಿಜವಾದ ರಸಿಕತೆಯುಂಟೆ, ಉನ್ನತ ದೃಷ್ಟಿಯುಂಟೆ? ಇದು ಸಂಸ್ಕೃತಿಯ ಪ್ರಶ್ನೆ. ರಸಿಕತೆ ಪ್ರತಿಯೊಬ್ಬನಲ್ಲಿಯೂ ಅಂತರಂಗದಿಂದ ಉಕ್ಕಿಬರಬೇಕಾದ ಗುಣ. ಅದು ಇತರರ ಅನುಕರಣವಲ್ಲ. ಅದು "ಫ್ಯಾಷನ್" ಅಲ್ಲ. ರೇಡಿಯೋ ಇದ್ದ ಮಾತ್ರದಿಂದ ರಸಿಕತೆಯಿದೆ ಎನ್ನಲಾಗದು. ರೇಡಿಯೋ ಒಂದು ಯಂತ್ರ: ರಸಿಕತೆ ಹೃದಯ ಪರಿಪಾಕ. ರೇಡಿಯೋ ಹಣವನ್ನಪೇಕ್ಷಿಸುತ್ತದೆ. ರಸಿಕತೆ ಅಂತರಂಗ ಶಿಕ್ಷಣವನ್ನಪೇಕ್ಷಿಸುತ್ತದೆ. ಯಂತ್ರವೇ ದೊಡ್ಡದೆಂಬ ಭಾವನೆ ದೇಶನಾಯಕರಲ್ಲಿ ಪ್ರಬಲಿಸಿದಾಗ, ನಮ್ಮ ವ್ಯವಹಾರ ವಿಹಾರಕ್ರಮಗಳಲ್ಲಿ—human touch—ಮನುಷ್ಯ ಹೃದಯ ಸ್ಪರ್ಶವಿಲ್ಲದೆ ಅವು ಕೂಲಿಯ ಪಾಡೂ ಯಂತ್ರ ವರ್ತನೆಯೂ ಆದಾಗ, ಜನತೆಯ ಅಂತರಂಗ ಸಂಸ್ಕೃತಿಯ ಮಟ್ಟ ಇಳಿದುಹೋಗುವುದು ಸ್ವತಃಸಿದ್ಧ ಪರಿಣಾಮ.

ಈ ಮಾತನ್ನು ನಾನು ಆಡುತ್ತಿರುವುದು ಎಚ್ಚರಿಕೆಗಾಗಿ. ಸಂಸ್ಕೃತಿಯ ಸಂದರ್ಭ ನಾನು ವರ್ಣಿಸಿರುವಷ್ಟು ಕೆಟ್ಟಿಲ್ಲವೆಂದು ಹಾಗೆ ತಿಳಿದವರು ಯಾರಾದರೂ ಆ ಭರವಸೆ ಹೇಳಿದರೆ ನಾನು ಅದನ್ನು ಸಂತೋಷದಿಂದ ಕೇಳಿ ಅವರನ್ನು ಕೃತಜ್ಞತೆಯಿಂದ ವಂದಿಸಿಯೇನು. (6-5-1957)

ನಮ್ಮ ಸಂಗೀತ

ಶ್ರೀ ಪುರಂದರದಾಸರ ಸೇವೆ: ನಮ್ಮ ಕರ್ತವ್ಯ

1

ಈ ನಮ್ಮ ವಿಜಯ ಸಂಗೀತ ಕಲಾಶಾಲೆಯಲ್ಲಿ ಸಮರ್ಥರಾದ ಸಂಗೀತ ವಿದ್ವಾಂಸರಿದ್ದಾರೆ.* ಇಂಥ ವಿದ್ವಾಂಸರ ಸ್ನೇಹ ಕಟಾಕ್ಷಕ್ಕಾಗಿ ಕನ್ನಡದಲ್ಲಿ ಗೇಯ ಸಾಹಿತ್ಯ ಕಾದುಕೊಂಡು ಕುಳಿತಿದೆ. ಈ ಎರಡಕ್ಕೂ ಸಮಾಗಮವಾಗಬೇಕೆಂದು ಸೂಚಿಸಲು ಪುರಂದರದಾಸರ ಪುಣ್ಯದಿನ ಸರಿಯಾದ ಅವಕಾಶವಾಗಿರುತ್ತದೆ. ಈ ಆಲೋಚನೆಯಿಂದ ನಾನು ಇಲ್ಲಿ ಈಹೊತ್ತು ಮಾತನಾಡಲು ಒಪ್ಪಿಕೊಂಡಿದ್ದೇನೆ.

ಕಳೆದ ವಾರ ನಾಲ್ಕೈದು ದಿನ ಇಲ್ಲಿ ತ್ಯಾಗರಾಜ ಜ್ಞಾಪಕೋತ್ಸವ ನಡೆಯಿತಷ್ಟೆ ? ಆಗ ಬಹುಮಂದಿ ವಿದ್ವದ್ರಸಿಕರೂ ಗಾನಾಭಿಮಾನಿಗಳೂ ಇಲ್ಲಿ ಸಭೆ ಸೇರಿ ಈ ವಿಜಯ ಕಲಾಶಾಲೆಯ ಉಪಾಧ್ಯಾಯರುಗಳ ವಿಚಕ್ಷಣೆಯನ್ನೂ ವಿದ್ಯಾರ್ಥಿಗಳ ಪಾಠ ಪಟುತ್ವವನ್ನೂ ಕಂಡು ಸಂತೋಷಿಸಿದರು. ಬಾಯ ಹಾಡಿಕೆಯಲ್ಲಿಯೂ ಪಿಟೀಲು ವೀಣೆಗಳ ವಾದನದಲ್ಲಿಯೂ ವಿದ್ಯಾರ್ಥಿನಿಯರೂ ವಿದ್ಯಾರ್ಥಿಗಳೂ ಸ್ವರಶುದ್ಧಿಯನ್ನೂ ಶ್ರುತಿ ಮೇಲನವನ್ನೂ ತಾಳಗತಿಯನ್ನೂ ಗಮನದಲ್ಲಿರಿಸಿಕೊಂಡು ಭಾವಭರಿತವಾಗಿ ರಾಗ ನಿರೂಪಣೆ ಮಾಡಿದರು. ಅದು ಎಲ್ಲರ ಮೆಚ್ಚಿಕೆಯನ್ನೂ ಪಡೆಯಿತು. ಅಭ್ಯಾಸಿಗಳ ಯೋಗ್ಯತೆಯೇ ಬೋಧಕರ ಪಾಂಡಿತ್ಯ ಶ್ರದ್ಧೆಗಳಿಗೆ ಸಾಕ್ಷಿ. ಇಲ್ಲಿಯ ವಿದ್ವಾಂಸರು ಶಾಸ್ತ್ರ ಸಂಪನ್ನರೆಂದೂ ಬೋಧನ ಚತುರರೆಂದೂ ಈಗ ಚೆನ್ನಾಗಿ ವ್ಯಕ್ತಪಟ್ಟಿದೆ. ಇಲ್ಲಿಯ ಮುಖ್ಯೋಪಾಧ್ಯಾಯರಾದ ಶ್ರೀಮಾನ್ ಎಲ್. ಎಸ್. ನಾರಾಯಣಸ್ವಾಮಿ ಭಾಗವತರವರು ದಕ್ಷಿಣ ದೇಶದಲ್ಲಿ ಬಹುಕಾಲ ಪ್ರವಾಸಮಾಡಿ ಪ್ರಖ್ಯಾತ ಗಾಯಕರಲ್ಲಿ ಶಾಸ್ತ್ರಜ್ಞಾನ ಸಂಪಾದಿಸಿ, ಕಲಾ ಸಂಪ್ರದಾಯಗಳನ್ನು ಸಂಗ್ರಹಿಸಿ. ಸಾಧನನಿಷ್ಠೆಯಿಂದಲೂ, ಹೊಸ ಹೊಸದಾಗಿ ಚಿಗುರುವ ಮನೋಧರ್ಮದಿಂದಲೂ. ಶಾರೀರಸಂಗೀತ

---

* ಬೆಂಗಳೂರು ಬಸವನಗುಡಿಯಲ್ಲಿರುವ ವಿಜಯ ಸಂಗೀತ ವಿದ್ಯಾಶಾಲೆಯಲ್ಲಿ 3-2-1954 ಬುಧವಾರ ಸಂಜೆ ಶ್ರೀ ಪುರಂದರದಾಸರ ಜ್ಞಾಪಕೋತ್ಸವ ಕಾಲದಲ್ಲಿ ಮಾಡಿದ ಅಧ್ಯಕ್ಷ ಭಾಷಣ

ಪಿಟೀಲು ವಾದನಗಳೆರಡರಲ್ಲೂ ಪ್ರವೀಣರೆನಿಸಿ, ವಿದ್ವನ್ಮಂಡಲಿಗಳಲ್ಲಿ ಮನ್ನಣೆ ಸಂಪಾದಿಸಿದ್ದಾರೆ. ಇಂಥಾ ಪ್ರತಿಭಾವಂತರ ಉಪಕಾರ ಕನ್ನಡ ಗೀತಪ್ರಬಂಧಗಳಿಗೆ ಹೆಚ್ಚಾಗಿ ದೊರೆಯಬೇಕೆಂಬುದು ನನ್ನ ಪ್ರಾರ್ಥನೆ.

ಶ್ರೀಮಾನ್ ನಾರಾಯಣಸ್ವಾಮಿ ಭಾಗವತರು ಹೆಸರಿನಲ್ಲಿ ತಮಿಳರಂತೆ ಕಂಡರೂ ವಾಸ್ತವವಲ್ಲಿ ಹುಟ್ಟು ಕನ್ನಡಿಗರು. ಕನ್ನಡ ದೇಶದ ಮಧ್ಯರಾಷ್ಟ್ರದಲ್ಲಿರುವ ಚಿಕ್ಕ ಮಗಳೂರು ಇವರ ಜನ್ಮಸ್ಥಲ. ಇವರ ಸಹೋದ್ಯೋಗಿಗಳು ಎಲ್ಲರೂ ಕನ್ನಡಿಗರೇ. ಹೀಗಿದ್ದರೂ ಇವರ ಹಾಡಿಕೆಯಲ್ಲಿ ನಾವು ಕೇಳುವುದು ಹೆಚ್ಚಾಗಿ ತೆಲುಗು ಕೃತಿಗಳನ್ನು, ಮತ್ತು ಆಗಾಗ ಸಂಸ್ಕೃತ ಕೃತಿಗಳನ್ನು. ಇದು ಅವರಿಗೂ ಕನ್ನಡ ಜನಕ್ಕೂ ಹೆಮ್ಮೆ ಪಡಲು ವಿಷಯವೇ ಸರಿ. ತೆಲುಗು ಭಾಷೆ ಕನ್ನಡಕ್ಕೆ ಸೋದರೀಪ್ರಾಯವಾದದ್ದು. ತಮಿಳು ಕೂಡ ಹಾಗೆಯೇ. ಸಂಸ್ಕೃತವಂತೂ ಜನನೀಪ್ರಾಯವಾದದ್ದು. ತೆಲುಗು ತಮಿಳು ಸಂಸ್ಕೃತ ಪ್ರಬಂಧಗಳನ್ನು ಕನ್ನಡ ಗಾಯಕರು ಹಾಡುವುದರಲ್ಲಿ ಯಾರಿಗೂ ಅಸಮಾಧಾನವಿರದು. ಸಂಗೀತದಲ್ಲಿ ಮುಖ್ಯವಾದದ್ದು ರಾಗಭಾವ. ಅದಕ್ಕೆ ಉಪಕರಣ ಮಾತ್ರವಾದದ್ದು ಭಾಷೆ. ಒಳ್ಳೊಳ್ಳೆಯ ರಾಗಭಾವಗಳು ಯಾವ ಭಾಷೆಯಲ್ಲಿಯೇ ವ್ಯಕ್ತವಾಗಿರಲಿ ನಾವು ಆ ರಾಗವಿಲಾಸಗಳನ್ನು ಆದರಿಸತಕ್ಕವರು. ಆದಕಾರಣ ಈ ವಿದ್ವಾಂಸರುಗಳ ಅನ್ಯಭಾಷಾ ಗಾಯನವನ್ನು ನಾವು ಆಕ್ಷೇಪಿಸ ತಕ್ಕವರಲ್ಲ. ಆದರೆ ಅವರು ಆ ಭಾಷೆಗಳ ಜೊತೆಗೆ ಕನ್ನಡವನ್ನೂ ಸರಿಸಮವಾಗಿ ಕಾಣಬೇಕೆಂಬುದಷ್ಟೇ ನಮ್ಮ ಬೇಡಿಕೆ. ಈಗ ಇಲ್ಲಿ ಕನ್ನಡ ಹಾಡು ಇಲ್ಲವೇ ಇಲ್ಲವೆಂದು ನಾನು ಸೂಚಿಸುತ್ತಿಲ್ಲ. ಅದು ಕೊಂಚವಾಗೇನೋ ಇದೆ ; ಅಷ್ಟು ಸಾಲದು, ಇನ್ನೂ ಹೆಚ್ಚಬೇಕೆಂಬುದು ನನ್ನ ಸೂಚನೆ.

2

ಕರ್ನಾಟಕ ಸಂಗೀತದ ಪರಂಪರೆ

ಸಂಗೀತಕ್ಕೆ ತೆಲುಗು ಹೊಂದಿಕೊಳ್ಳುವಂತೆ ಕನ್ನಡ ಹೊಂದಿಕೊಳ್ಳಲಾರದೆಂಬುದು ಕೇವಲ ಭ್ರಾಂತಿಯ ಮಾತು. ಈ ಭ್ರಾಂತಿಗೆ ಕಾರಣ ಒಂದು ಅವಿಚಾರ ರೂಢಿ (Fashion) "ಫ್ಯಾಷನ್". ಸ್ವತಂತ್ರವಾದ ಗಾಯನ ಪ್ರತಿಭೆಯುಳ್ಳ ತ್ಯಾಗ ರಾಜರು ತೆಲುಗಿನಲ್ಲಿ ಹಾಡಿದರು. ನೂತನ ರಾಗವಿಕಾಸ ಕ್ರಮಗಳನ್ನು ಅವರು ಕಂಡು ಹಿಡಿದರು. ಆ ನೂತನ ಮಾರ್ಗವು ಮನೋರಂಜಕವಾಗಿದ್ದದ್ದರಿಂದ, ಅವರ ಭಾಷೆಯೇ ಅದಕ್ಕೆ ಕಾರಣವೋ ಏನೋ ಎಂದು ಜನ ಭ್ರಮಿಸಿದರು ; ಮತ್ತು ಅವರ ವಿಧಾನ ಅಷ್ಟು ಮೋಹಕವಾಗಿದ್ದದ್ದರಿಂದ ವಿದ್ವಾಂಸರು ಅವರ ಕೃತಿಗಳಿಗೆ ಸ್ವರಪ್ರಸ್ತಾರವನ್ನು ಸಿದ್ಧಪಡಿಸಿಟ್ಟರು. ಹೀಗೆ ಅವುಗಳನ್ನು ಕಲಿಯುವುದೂ ಕಲಿಸುವುದೂ ಸುಲಭ ವಾಯಿತು. ಅನುಕರಣ ಇಷ್ಟೊಂದು ಸುಲಭವಾಗಿರುವಾಗ ಸ್ವಪ್ರಯಾಸಕ್ಕೆ ನಮ್ಮ ಮನಸ್ಸು ಒಡಂಬಡುವುದು ಅಪರೂಪ ತಾನೆ ? ಹೀಗೆ "ಫ್ಯಾಷನ್" ಬೆಳೆಯಿತು. ತೆಲುಗು ಮುಂದಕ್ಕೆ ಬಂತು. ಕನ್ನಡ ಹಿಂದಕ್ಕೆ ನಿಂತಿತು.

ಈ ಸಂದರ್ಭದಲ್ಲಿ ಕನ್ನಡಕ್ಕೆ ಸಂಗೀತ ಪ್ರಪಂಚದಲ್ಲಿ ನ್ಯಾಯವಾಗಿ ಸಲ್ಲಬೇಕಾದ ಸ್ಥಾನ ಯಾವುದು ?—ಎಂಬುದನ್ನು ನಾವು ಜ್ಞಾಪಕಕ್ಕೆ ತಂದುಕೊಳ್ಳಬೇಕು. ನಾಲ್ಕೈದು ವಾರಗಳ ಕೆಳಗೆ ಮದರಾಸಿನಲ್ಲಿ ನಡೆದ ಒಂದಾನೊಂದು ಸಂಗೀತ ಗೋಷ್ಠಿಯಲ್ಲಿ ಅಲ್ಲಿಯ ಮುಖ್ಯಮಂತ್ರಿ ಶ್ರೀಮಾನ್ ಸಿ. ರಾಜಗೋಪಾಲಾಚಾರ್ಯರವರು ಅಲ್ಲಿಯ ಸಂಗೀತಕ್ಕೆ "ಕರ್ಣಾಟಕ ಸಂಗೀತ"ವೆಂಬ ಹೆಸರು ಯುಕ್ತವಲ್ಲವೆಂದೂ, ಇನ್ನು ಮುಂದೆ ಅದನ್ನು "ತೆನ್ನಾಟ್ಟು ಸಂಗೀತಮ್" ಎಂದು ಕರೆಯಬಹುದೆಂದೂ ಸೂಚಿಸಿದಂತೆ ವೃತ್ತಪತ್ರಿಕೆಗಳಲ್ಲಿ * ಪ್ರಕಟವಾಗಿದೆ. ಶ್ರೀಮಾನ್ ರಾಜಗೋಪಾಲಾಚಾರ್ಯರು ಭಾಷಾಭೇದಗಳನ್ನು ಹೆಚ್ಚು ಮಾಡಬಾರದೆಂದು ಉಪದೇಶಿಸುತ್ತಿದ್ದವರು,—ಭಾಷಾನುಸಾರವಾಗಿ ಸಂಸ್ಥಾನ ರಚನೆಯಾಗಬೇಕೆಂಬುದನ್ನು ಪ್ರತಿಷೇಧಿಸಿರುವವರು,—ಭಾಷಾಭಿಮಾನದ ಅತಿರೇಕವು ಇಂಡಿಯದ ಜನಪದ ಭಾವನೆಗೆ ವಿರೋಧವೆಂದು ವಾದಿಸುವವರು. ಇಂಥವರು ಬಹುಕಾಲದಿಂದ ಬಹುಜನ ಒಪ್ಪಿ ಬಂದಿರುವ "ಕರ್ಣಾಟಕ ಸಂಗೀತ"ವೆಂಬ ಹೆಸರಿನ ವಿಷಯದಲ್ಲಿ ಈಗ ಹೀಗೆ ಅಸಹನೆ ತೋರಲು ಕಾರಣವೇನಿರಬಹುದು ? ಮದರಾಸು ಸಂಸ್ಥಾನ ಈಗ ಮುಖ್ಯವಾಗಿ ತಮಿಳು ರಾಜ್ಯವಾಗಿದೆ. ಅಲ್ಲಿ ದ್ರಾವಿಡ ಕಳಗಂ ಮೊದಲಾದ ಚಳವಳಿಗಳು ಎದ್ದಿವೆ. ಇಂಥ ವಿಷಮ ವಾತಾವರಣದಲ್ಲಿ ತಮಿಳರ ಮುಖೋಲ್ಲಾಸಕ್ಕಾಗಿ ಶ್ರೀಮದಾಚಾರ್ಯರು ತಮ್ಮ ತತ್ತ್ವಗಳನ್ನು ಒಂದು ಕ್ಷಣ ಬದಿಗಿಟ್ಟರೆಂದು ಹೇಳೋಣವೆ ? ಅವರ ಮಾತನ್ನೊಪ್ಪಿದರೆ ಜನಪದೌದಾರ್ಯದ ತತ್ತ್ವಕ್ಕೂ ದೇಶಚರಿತ್ರೆಯ ಸತ್ಯದ ತತ್ತ್ವಕ್ಕೂ ಲೋಪ ತಂದಂತಾದೀತು.

ಚರಿತ್ರೆಯ ಸಂಗತಿಯನ್ನು ಸ್ವಲ್ಪ ನೋಡೋಣ : ನಮ್ಮ ದೇಶದಲ್ಲಿ ಭಾಷೆ ಎಷ್ಟು ಹಳೆಯದೋ ಹಾಡೂ ಅಷ್ಟು ಹಳೆಯದು. ವೇದ ಕವಿಗಳೇ ಗಾನವಿಧಿಗೆ ವಿಧೇಯರಾಗಿದ್ದರು. ಅದೇ "ಶಿಕ್ಷಾ" ಎಂಬ ವೇದಾಂಗ. ಮತ್ತು ವೈದಿಕ ಕ್ರಿಯೆಗಳಲ್ಲಿ ಅವರು ಗಾನಕ್ಕೆ ಒಂದು ಸ್ಥಲವನ್ನು ಮುಡುಪು ಮಾಡಿಟ್ಟಿದ್ದರು. ನಮ್ಮ ದೇಶದಲ್ಲಿ ಹಾಗೆ ಪ್ರಾರಂಭವಾದ ಸಂಗೀತ ನೂರಾರು ವರ್ಷ ಕರ್ಣಾಕರ್ಣಿಕೆಯಾಗಿ, ಮುಖಾಮುಖಿಯಾಗಿ, ಗುರುಶಿಷ್ಯ ಪರಂಪರೆಯಿಂದ ಬೆಳೆದು ಬಂತೆಂದು ತೋರುತ್ತದೆ. ಮೊದಮೊದಲು ಅದು ಲಿಖಿತ ಗ್ರಂಥವಾಗಿರಲಿಲ್ಲ. ಎಲ್ಲೆಲ್ಲಿಯೂ ಅದೇ ಕಲೆಯ ವಿಕಾಸಕ್ರಮ. ಮೊದಲು ಪ್ರಯೋಗ. ಆಮೇಲೆ ಶಾಸ್ತ್ರ. ಹಾಗೆ ಸ್ವಯಂಭೂತವಾಗಿ ಬೆಳೆದು ಬಂದ ಗಾನ ಕಲೆ ಮೊದಲು ಗ್ರಂಥಗತವಾದದ್ದು ಬಹುಶಃ ಭರತಮುನಿಯ ಕಾಲದಲ್ಲಿ. ಆ ಗ್ರಂಥ ನಾಟ್ಯಶಾಸ್ತ್ರ. ಅದು ಬಹುಶಃ ಕ್ರಿಸ್ತಪೂರ್ವ 300ರ ಸುಮಾರಿನದೆಂದು ಕೆಲವರ ಊಹೆ. ಬಹುಕಾಲ ಅದು ಸಮಸ್ತ ಭರತಖಂಡಕ್ಕೂ ಪ್ರಮಾಣ ಗ್ರಂಥವಾಗಿತ್ತು. ಮತಂಗ, ಕಹೋಳ ಮುಂತಾದ ಪ್ರಾಚೀನರೂ ಸಂಗೀತಶಾಸ್ತ್ರ ಕರ್ತರೆಂದು ಪ್ರತೀತಿಯಿದೆ. ಅವರ ಗ್ರಂಥಗಳು ದೊರೆತಿಲ್ಲ.** ಅಲ್ಲಿಂದೀಚೆಗೆ ಹೊಸ ಹೊಸ ಗಾಯಕರು ತಮ್ಮ ತಮ್ಮ ಪ್ರತಿಭೆಯನ್ನು ಸ್ವತಂತ್ರವಾಗಿ ವಿಕಾಸಗೊಳಿಸುತ್ತಾ

* The *Hindu*, 26-12-1953. ** ಮತಂಗನ 'ಬೃಹದ್ದೇಶಿ' ದೊರೆತು ಪ್ರಕಟವಾಗಿದೆ.

ಹೋದಹಾಗೆಲ್ಲ ಹೊಸ ಹೊಸ ಪದ್ಧತಿಗಳು ಹುಟ್ಟಿಕೊಂಡವು. ಇಂಡಿಯಾ ದೇಶ ಬಹು ದೊಡ್ಡದು. ಒಂದೊಂದು ದೇಶ ವಿಭಾಗವೂ ತನ್ನ ತನ್ನದೇ ಆದ ಒಂದೊಂದು ಭಾಷೆಯನ್ನೂ ಒಂದೊಂದು ಕಲಾವಿಧಾನವನ್ನೂ ಬೆಳೆಸಿತು. ಈ ಪ್ರಾದೇಶಿಕ ವೈಶಿಷ್ಟ್ಯಗಳು ನಮ್ಮ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಕಾಣಬರುತ್ತವೆ. ಔತ್ತರೇಯ ಪಾಕ ಪದ್ಧತಿಯೂ ದಾಕ್ಷಿಣಾತ್ಯರ ಪಾಕ ಪದ್ಧತಿಯೂ ಬೇರೆ ಬೇರೆ ಇರುವಂತೆ ಸಂಗೀತದಲ್ಲಿಯೂ ಇಬ್ಬರ ಪದ್ಧತಿಗಳೂ ಬೇರೆ ಬೇರೆಯಾದುವು. ಈ ಪ್ರತ್ಯೇಕತೆಯ ಕಾಲ ಯಾವುದೆಂದು ನಿಷ್ಕರ್ಷೆಯಾಗಿ ಹೇಳುವುದು ಸುಲಭವಲ್ಲ. ಬಹುಶಃ ಕ್ರಿ.ಶ. 1200ನೆಯ ಇಸ್ವಿಯ ಸುಮಾರಿನಲ್ಲಿ. ಎಂದರೆ ಈಗ್ಗೆ 750 ವರ್ಷಗಳ ಹಿಂದೆ. ಶಾರ್ಙ್ಗದೇವನೆಂಬ ಪ್ರತಿಭಾವಂತನು ಬರೆದ "ಸಂಗೀತ ರತ್ನಾಕರ"ವೇ ದಾಕ್ಷಿಣಾತ್ಯ ಸಂಗೀತದ ಮೊದಲನೆಯ ಗ್ರಂಥವೆಂದು ತೋರುತ್ತದೆ.* ಆತನು (ಹೈದರಾಬಾದು ಸಂಸ್ಥಾನದಲ್ಲಿರುವ) ದೇವಗಿರಿ ಅಥವಾ ದೌಲತಾಬಾದ್ ಎಂಬಲ್ಲಿ ವಾಸವಾಗಿದ್ದವನು. ಅದು ಆಗ ಕರ್ಣಾಟಕ ದೇಶ. ಅಲ್ಲಿಂದೀಚೆಗೆ ದಾಕ್ಷಿಣಾತ್ಯ ಸಂಗೀತಕ್ಕೆ ಒಂದು ನಿರ್ದಿಷ್ಟವಾದ ರೂಪವನ್ನು ಕೊಟ್ಟವರು ಮಾಧವ-ವಿದ್ಯಾರಣ್ಯರು. ಇವರು ಸುಮಾರು 1350ರಲ್ಲಿದ್ದವರು. ಅವರು ವಿಜಯನಗರ ಸಾಮ್ರಾಜ್ಯದ ಮುಖ್ಯಮಂತ್ರಿ ಪದವಿಯ ಕರ್ತವ್ಯಭಾರದ ಜೊತೆಗೆ ಶೃಂಗೇರಿಯ ಮಠಾಧಿಪತ್ಯದ ಭಾರವನ್ನೂ ಅದರ ಜೊತೆಗೆ ವೇದಭಾಷ್ಯಾದಿ ಗ್ರಂಥ ಸಂಪಾದನೆಯ ಕಾರ್ಯಭಾರವನ್ನೂ ಹೊತ್ತದ್ದು ಸಾಲದೆಂಬಂತೆ, ಸಂಗೀತ ಶಾಸ್ತ್ರ ಪ್ರವರ್ತನೆಯ ಕಾರ್ಯವನ್ನೂ ಸೇರಿಸಿಕೊಂಡು "ಸಂಗೀತ ಸಾರ"ವೆಂಬ ಗ್ರಂಥವನ್ನು ರಚಿಸಿದರು. ಆ ಗ್ರಂಥ ನಮಗೆ ದೊರೆತಿಲ್ಲ. ವಿದ್ಯಾರಣ್ಯರ ಪೂರ್ವಾಶ್ರಮದ ತಮ್ಮಂದಿರಾದ ವೇದಭಾಷ್ಯಕರ್ತ ಸಾಯಣಾಚಾರ್ಯರು ಸಂಗೀತಾಭಿಜ್ಞರೆಂಬುದಕ್ಕೆ ಗ್ರಂಥಪ್ರಮಾಣವುಂಟು. ವಿದ್ಯಾರಣ್ಯರ ತರುವಾಯ ಗ್ರಂಥ ಬರೆದ ಗೋವಿಂದ ದೀಕ್ಷಿತರೇ ಮೊದಲಾದವರು ವಿದ್ಯಾರಣ್ಯರನ್ನು ಪದೇ ಪದೇ ಸ್ಮರಿಸಿ "ಸಂಗೀತಸಾರ"ದ ವಾಕ್ಯಗಳನ್ನು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಆ ಮಾಧವ-ವಿದ್ಯಾರಣ್ಯರು ಹುಟ್ಟುಕನ್ನಡಿಗರೆಂಬುದು ನಿರ್ವಿವಾದವಾದ ಸಂಗತಿ.

ಆನಂತರ ಬಂದವರು ನಿಜಗುಣ ಶಿವಯೋಗಿಗಳು (1500), ಪುರಂದರ ದಾಸರು (1550) ಮತ್ತು ಇತರ ದಾಸರುಗಳು. ಇವರೆಲ್ಲರೂ ಕರ್ಣಾಟಕರೇ. ಇವರು ತಮ್ಮ ಕಾಲಕ್ಕಿದ್ದ ಸಂಗೀತಶಾಸ್ತ್ರವನ್ನವಲಂಬಿಸಿ ಲಕ್ಷ್ಯ ಪ್ರಬಂಧಗಳನ್ನು ನಿರ್ಮಿಸಿದರು. ನಾನಾ ರಾಗಗಳ ಸಂಚಾರ ಕ್ರಮಗಳು, ವಿಚಿತ್ರವಾದ ತಾಳಗತಿಗಳು, ಇವಕ್ಕನುಕೂಲವಾದ ಛಂದೋಬಂಧನಗಳು—ಈ ನಾನಾ ಸಂಧಾನಗಳ ಮೂಲಕ ಶಾಸ್ತ್ರವನ್ನು ಪ್ರಯೋಗದಿಂದ ತೋರಿಸಿಕೊಟ್ಟವರು ಕರ್ಣಾಟಕದ ಶೈವ ವೈಷ್ಣವ ದಾಸರುಗಳು. ಅವರಾದಮೇಲೆ ಕ್ರಿ.ಶ. 1650ರ ಸುಮಾರಿನಲ್ಲಿ ದಾಕ್ಷಿಣಾತ್ಯ ಸಂಗೀತವನ್ನು

* ಇದಕ್ಕಿಂತ ಪೂರ್ವದಲ್ಲಿ ೧೦ನೆಯ ಶತಕದಲ್ಲಿ ಮತಂಗ "ಬೃಹದ್ದೇಶಿ" ಎಂಬ ಸಂಗೀತ ಶಾಸ್ತ್ರಗ್ರಂಥವನ್ನು ರಚಿಸಿದ್ದಾನೆ. ಆತನೂ ದಕ್ಷಿಣ ದೇಶದವನೇ.—ಸಂ.

ಮತ್ತೊಮ್ಮೆ ಪರಿಷ್ಕಾರ ಪಡಿಸಿದವರು ಗೋವಿಂದದೀಕ್ಷಿತರು. ಇವರೂ ಕರ್ಣಾಟಕರು. ಇವರು ತಂಜಾವೂರಿನ ರಾಜ ಅಚ್ಯುತ ನಾಯಕನ ಮಂತ್ರಿಯಾಗಿದ್ದವರು. ಇವರು "ಸಂಗೀತಸುಧಾ" ಎಂಬ ಗ್ರಂಥವನ್ನು ಬರೆದರು. ಇವರ ಮಕ್ಕಳೇ ಪ್ರಖ್ಯಾತರಾದ ವೆಂಕಟಮಖಿಗಳು. ಅವರು ರಚಿಸಿದ "ಚತುರ್ದಂಡೀ ಪ್ರಕಾಶಿಕೆ" ಈವೊತ್ತಿಗೂ ಪ್ರಮಾಣಗ್ರಂಥವಾಗಿದೆ. ಸಂಸ್ಕೃತ ವ್ಯಾಕರಣಕ್ಕೆ "ಪಾಣಿನಿ" ಹೇಗೋ ಸಂಗೀತ ವ್ಯಾಕರಣಕ್ಕೆ "ಚತುರ್ದಂಡೀ ಪ್ರಕಾಶಿಕೆ" ಹಾಗೆ ಶಾಸನಪ್ರಾಯವಾಗಿದೆ.

ತೆಲುಗಿನಲ್ಲಿ ಮುವ್ವ ಗೋಪಾಲ ನಾಮಾಂಕಿತದಿಂದ ಶೃಂಗಾರ ಪದಗಳನ್ನು ರಚಿಸಿ ಪ್ರಸಿದ್ಧನಾಗಿರುವ ಕ್ಷೇತ್ರಜ್ಞನು ಸರಿಸುಮಾರು ಇದೇ ಕಾಲದವನು (1650). ಮೈಸೂರಿನಲ್ಲಿ ಮಹಾರಾಜ ಚಿಕ್ಕದೇವರಾಜ ಒಡೆಯರ ಹೆಸರಿನಲ್ಲಿ ರಚಿತವಾಗಿರುವ "ಗೀತ ಗೋಪಾಲ"ವೆಂಬ ಕನ್ನಡ ಗೇಯ ಕಾವ್ಯವು ಸುಮಾರು 50 ವರ್ಷಗಳ ತರುವಾಯದ್ದು (ಕ್ರಿ.ಶ. 1700). ಈ "ಗೀತ ಗೋಪಾಲ"ವು ವಿಷಯದಲ್ಲಿಯೂ ಮಾದರಿಯಲ್ಲಿಯೂ ಜಯದೇವ ಕವಿಯ "ಗೀತ ಗೋವಿಂದ"ವನ್ನನುಸರಿಸಿದ್ದರೂ ಇದು ಸಪ್ತಪದೀಗೀತಗಳುಳ್ಳದ್ದು. ಇದು ಲಲಿತವೂ ಸರಸವೂ ಆದ ಪದಗಳಿಂದ ಸುಂದರ ಕೋಮಲ ಭಾವಗಳನ್ನು ಬಣ್ಣಿಸಿರುವ ಸೊಗಸಾದ ಕನ್ನಡ ಗೀತಾವಳಿ.

ಚತುರ್ದಂಡೀ ಪ್ರಕಾಶಿಕಾಕಾರರ ಕಾಲದಿಂದ ಸುಮಾರು 150 ವರ್ಷಗಳಾದ ಮೇಲೆ ಬಂದವರು ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು. ಇವರಿಬ್ಬರೂ ಕರ್ಣಾಟಕರಾದ ವೆಂಕಟಮಖಿಗಳ ಶಾಸ್ತ್ರಪದ್ಧತಿಯನ್ನು ಅನುಸರಿಸಿಯೇ ಗೀತ ರಚನೆ ಮಾಡಿದವರು. ವಿದ್ಯಾರಣ್ಯರ ಕಾಲಕ್ಕೆ ಇದ್ದ ಹದಿನೈದು ಮೇಳಕರ್ತ ರಾಗಗಳು ವೆಂಕಟ ಮಖಿಗಳ ಕಾಲಕ್ಕೆ ಎಪ್ಪತ್ತೆರಡಾಗಿದ್ದವು. ಇಂದಿನ ರಾಗವರ್ಗ ವ್ಯವಸ್ಥೆಗೆ ಆ ಎಪ್ಪತ್ತೆರಡೇ ಆಧಾರವಾಗಿದೆ. ಇಲ್ಲಿ ನಾನು ಹೇಳಿರುವ ಶಾಸ್ತ್ರಕಾರರಲ್ಲದೆ ಅವರುಗಳ ನಡುನಡುವೆ ಕಲ್ಲಿನಾಥ, ಸೋಮನಾಥ, ರಾಮಾಮಾತ್ಯ ಮೊದಲಾದವರನೇಕರು ದಾಕ್ಷಿಣಾತ್ಯ ಸಂಗೀತದಲ್ಲಿ ಶಾಸ್ತ್ರಪೋಷಣೆ ಮಾಡಿದರು. ಅವರೆಲ್ಲರೂ, ಅಥವಾ ಅವರಲ್ಲಿ ಬಹುಮಂದಿಯಂತೂ, ಕನ್ನಡಿಗರು. ಹೀಗೆ ಶಾರ್ಙ್ಗದೇವನಿಂದ ವೆಂಕಟ ಮಖಿಗಳವರೆಗೂ, ಎಂದರೆ ಸುಮಾರು 650 ವರ್ಷಗಳ ಕಾಲ, ದಾಕ್ಷಿಣಾತ್ಯ ಸಂಗೀತ ಶಾಸ್ತ್ರವನ್ನು ವಿಸ್ತರಿಸಿ ಸ್ಥಾಪಿಸಿದವರು ವಿಶೇಷವಾಗಿ ಕರ್ಣಾಟಕರು. ಆದ್ದರಿಂದ ಅವರು ಹಾಕಿದ ಪದ್ಧತಿಗೆ "ಕರ್ಣಾಟಕ ಸಂಗೀತ"ವೆಂದು ಹೆಸರು ಬಂದದ್ದು ಸ್ವಾಭಾವಿಕವಾಗಿಯೇ ಇದೆ. ಈ ಸಂಗೀತದ ವಿಷಯಕ ಪಾರಿಭಾಷಿಕ ಶಬ್ದಗಳು— ಮಾತು ಧಾತು ಪಲ್ಲವಿ ಕೈವಾಡ ಮುಂತಾದುವು—ಕರ್ಣಾಟಕ ಸಂಗೀತಕ್ಕೂ ಕನ್ನಡ ಭಾಷೆಗೂ ಇರುವ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ. ಶಾಸ್ತ್ರಕರ್ತರು ಕರ್ಣಾಟಕರು : ಲಕ್ಷ್ಯಕರ್ತರು ಆಂಧ್ರರು : ಪ್ರಯೋಗಕರ್ತರು ತಮಿಳರು— ಹೀಗಾಗಿದೆ ಕರ್ಣಾಟಕ ಸಂಗೀತದ ಇಂದಿನ ಪರಿಶ್ರಮ ವಿಭಾಗ. ಇವರಲ್ಲಿ ಪ್ರಯೋಗಕರ್ತರು ತಾನೆ ಮಹಾಜನ ಸಂಮುಖಕ್ಕೆ ಬರತಕ್ಕವರು ! ಹೀಗೆ ಮಾನ ಲಾಭಗಳು ತಮಿಳರ ಪಾಲಿಗೆ ಹೆಚ್ಚಾಗಿ ಬಂದಿವೆ. ಕನ್ನಡ ಸಂಗೀತಗಾರರು ತಮ್ಮ ಸಾಧನೆಯನ್ನು ಬಲಪಡಿಸಿಕೊಂಡು ತಮಿಳರಂತೆ ಏಕೆ ಪ್ರಸಿದ್ಧರಾಗಬಾರದು ?—ಎಂಬುದು ನನ್ನ ಪ್ರಶ್ನೆ.

3

ಪುರಂದರ ದಾಸರು

ಪುರಂದರ ದಾಸರ ಮಹಿಮೆಯನ್ನು ಈ ದಿವಸ ವಿಶದವಾಗಿ ನೆನಪಿಗೆ ತಂದು ಕೊಳ್ಳುವುದು ನಮಗೆ ಕರ್ತವ್ಯವೇ ಆಗಿದೆ. ಅವರು ನಮ್ಮ ದೇಶದ ಧಾರ್ಮಿಕ ಚರಿತ್ರೆಯಲ್ಲಿಯೂ ಸಾಹಿತ್ಯ ಚರಿತ್ರೆಯಲ್ಲಿಯೂ ಸಂಗೀತ ಚರಿತ್ರೆಯಲ್ಲಿಯೂ ಶಾಶ್ವತವಾದ ಉನ್ನತ ಸ್ಥಾನವನ್ನು ಪಡೆದಿದ್ದಾರೆ. ಅವರ ಹೆಸರನ್ನರಿಯದವನು ಕನ್ನಡ ದೇಶದಲ್ಲಿ ಯಾರೂ ಇಲ್ಲ. ಅವರು ಈಗ್ಗೆ ಸುಮಾರು 400 ವರ್ಷಗಳ ಹಿಂದೆ (1550) ಬಾಳಿದವರು. ಪೂನಾ ಪಟ್ಟಣದ ಸಮೀಪದಲ್ಲಿರುವ ಪುರಂದರ ಗಢವೆಂಬ ಸ್ಥಳದಲ್ಲಿ ವರದಪ್ಪನಾಯಕನೆಂಬ ಐಶ್ವರ್ಯವಂತನ ಮಗನಾಗಿ ಹುಟ್ಟಿ, ಶ್ರೀನಿವಾಸ ನಾಯಕನೆಂಬ ಹೆಸರಿನಿಂದ ಸಂಸಾರವಂತನಾಗಿ ಬಾಳಿ, ನಾಲ್ವರು ಮಕ್ಕಳನ್ನು ಬೆಳಸಿ, ಎಂದೋ ಒಂದು ದಿನ ವಿರಕ್ತಿ ತನ್ನಲ್ಲಿ ತಲೆದೋರಿದಾಗ ತನ್ನ ಐಶ್ವರ್ಯವನ್ನು ತೊರೆದು ಪಾಂಡುರಂಗವಿಠಲ ಮೂರ್ತಿಯನ್ನು ಆಶ್ರಯಿಸಿ, ಭಗವಂತನ ಕೊಂಡಾಟದಲ್ಲಿಯೂ ವೇದಾಂತ ತತ್ತ್ವ ಪ್ರಚಾರದಲ್ಲಿಯೂ ನೀತಿ ಬೋಧನೆಯಲ್ಲಿಯೂ ತನ್ನ ಕವನಗಾನವನ್ನು ವಿನಿಯೋಗಿಸಿ, ದೇಶಯಾತ್ರಿಕನಾಗಿ ತನ್ನ ಜೀವಮಾನವನ್ನು ಕಳೆದನು. ಆತನು ಅಂತರಂಗದ ಪರಮಾತ್ಮ ದರ್ಶನ ಪಡೆದಿದ್ದ ಪರಮಾನುಭವಿಯೆಂದು ಹತ್ತಾರು ಕೃತಿಗಳಿಂದ ತೋರುತ್ತದೆ. ಆ ಭಗವದ್ಭಕ್ತಿಯು ಆ ದಿವ್ಯಾನುಭವಾನಂದದ ಮತ್ತು ಆ ಧರ್ಮೋತ್ಸಾಹದ ಆವೇಶದಲ್ಲಿ ಹುಟ್ಟಿಬಂದವು ಅವರ ಹಾಡುಗಳು. ಆ ಹಾಡುಗಳು ಒಂದು ಲಕ್ಷ ಇಪ್ಪತ್ತೈದು ಸಾವಿರವೆಂದೂ ಇನ್ನೂ ಹೆಚ್ಚೆಂದೂ ಪ್ರವಾದವಿದೆ. ಪುರಂದರ ದಾಸರ ವೈರಾಗ್ಯವನ್ನೂ ಅವರ ಅದ್ಭುತ ಶಕ್ತಿಗಳನ್ನೂ ಕುರಿತು ಅನೇಕ ಕಥೆಗಳಿವೆ. ಈ ಕಥೆಗಳನ್ನು ನಂಬುವವರು ನಂಬಬಹುದು. ಅದನ್ನು ನಂಬದಿದ್ದರೂ ಪುರಂದರ ದಾಸರ ಮಹತ್ತ್ವಕ್ಕೆ ಕುಂದಾಗಲಾರದು. ಅವರ ಕೃತಿಗಳ ಸಂಖ್ಯೆ ಲಕ್ಷೋಪಲಕ್ಷವೆಂದು ಹೇಳುವುದು ಅವರ ಮಹತ್ತ್ವಕ್ಕೆ ಅವಶ್ಯವಲ್ಲ. ಅಂಥ ಮಹಾನುಭಾವರ ಮಹತ್ತ್ವವು ಸಂಖ್ಯೆಯನ್ನೂ ಗಾತ್ರವನ್ನೂ ಅವಲಂಬಿಸಿದ್ದಲ್ಲ; ಅದ್ಭುತ ಕ್ರಿಯೆಗಳಿಂದಲೂ ಉಂಟಾದದ್ದಲ್ಲ; ಅವರ ಮಹತ್ವ ತೋರಿಬರತಕ್ಕದ್ದು ಅವರ ಕೃತಿಗಳ ಗುಣದಿಂದ, ಮತ್ತು ಅವರ ಜೀವನದ ವಿಧಾನದಿಂದ. ಅವರ ಕೃತಿಗಳಲ್ಲಿ ತೋರಿಬರುವುದು ನಿಶ್ಚಲವಾದ ದೈವಭಕ್ತಿ ಮತ್ತು ಧರ್ಮಾಸಕ್ತಿ: ಲೋಕಕಾರುಣ್ಯ ಮತ್ತು ರಾಗದ್ವೇಷ ವಿಮುಖತೆ. ಹೀಗೆ ಅವರು ನಮ್ಮ ದೇಶದ ಮಹರ್ಷಿಪಂಕ್ತಿಯಲ್ಲಿ, ಮಹಾ ಸಾಧು ತಪಸ್ವಿಗಳ ಪಂಕ್ತಿಯಲ್ಲಿ ಸೇರಿದ್ದಾರೆ. ಈ ಹೊತ್ತು ಇಲ್ಲಿ ನಾವು ವಿಶೇಷವಾಗಿ ಸ್ಮರಿಸಬೇಕಾದದ್ದು ಅವರಿಂದ ಗಾನಕಲೆಗೆ ಆಗಿರುವ ಉಪಕಾರವನ್ನು. ಪುರಂದರ ದಾಸರು ನಮ್ಮ ವಾಗ್ಗೇಯಕಾರ ಶ್ರೇಣಿಯಲ್ಲಿ ಪ್ರಮುಖರಾಗಿದ್ದಾರೆ. ವಾಗ್ಗೇಯಕಾರರೆಂದರೆ ಮಾತು ಧಾತುಗಳೆರಡನ್ನೂ ನಾದಸೌಂದರ್ಯ ಸೃಷ್ಟಿಯಲ್ಲಿ ಸಮ್ಮೇಳನ ಮಾಡಿಸಿರುವವರು,—ಗಾಯನ ಪ್ರಬಂಧಕರ್ತರು. ಈ ಕ್ಷೇತ್ರದಲ್ಲಿ ಪುರಂದರದಾಸರು ಗುರುಸ್ಥಾನದಲ್ಲಿದ್ದಾರೆ. ಬಾಲಬೋಧೆಗಾಗಿ ಅವರು "ಲಂಬೋದರ ಲಕುಮಿಕರ"

ಮೊದಲಾದ ಪಿಳ್ಳಾರಿ ಗೀತಗಳನ್ನು ಸುಲಭವಾದ ರಾಗಗಳಲ್ಲಿ ರಚಿಸಿದ್ದಾರೆ. ಇದನ್ನು ಇಲ್ಲಿಯ ಬಾಲಕಿಯರು ಹಾಡಿದ್ದನ್ನು ಈಗತಾನೆ ಕೇಳಿ ಸಂತೋಷಿಸಿದ್ದೇವೆ. ಈ ಜಾತಿಯ ಸಾಹಿತ್ಯ ಅಪರೂಪ. ಇನ್ನೂ ಎಷ್ಟಿತ್ತೋ; ಅದನ್ನು ತಿಳಿಯುವುದು ಈಗ ಸಾಧ್ಯವಿಲ್ಲ.

ಅವರ ರಚನೆಗಳಲ್ಲಿ ಸಂಗೀತ ಶಾಸ್ತ್ರಾಭ್ಯಾಸಕ್ಕೆ ಉಪಯುಕ್ತವಾದ ಇನ್ನೊಂದು ಜಾತಿ 'ಸುಳಾದಿ' ಎಂಬ ಪ್ರಬಂಧದ್ದು. ಇದು ಬಹುಶಃ "ಚತುರ್ದಂಡೀ ಪ್ರಕಾಶಿಕೆ"ಯ "ಸೂಡು" ಎಂದು ಕರೆಯುವ ಪ್ರಬಂಧ ಜಾತಿಯಿದ್ದೀತೋ ಏನೋ! ಕೆಲವರು ಅದಕ್ಕೆ "ಸುಳು ಹಾದಿ", ಸುಲಭವಾದ ದಾರಿ ಎಂದು ಅರ್ಥ ಹೇಳುತ್ತಾರೆ. ಇದು ವಿಚಾರಮಾಡಬೇಕಾದ ವಿಷಯ. ದಿವಂಗತ ಮುತ್ತಯ್ಯ ಭಾಗವತರು ಒಂದು ಸುಳಾದಿ ಹಾಡಿದ್ದನ್ನು ನಾನು ಕೇಳಿದ್ದೇನೆ. ಆ ಪಾಠಕ್ರಮ ಈಗ ರೂಢಿ ತಪ್ಪಿ ಹೋಗಿದೆಯೆಂದು ಅವರು ವಿಷಾದಪಟ್ಟದ್ದೂ ನನಗೆ ನೆನಪಿದೆ.

ಪುರಂದರ ದಾಸರ ಮತ್ತೊಂದು ಕೃತಿಜಾತಿ "ಉಗಾಭೋಗಗಳು." "ಚತುರ್ದಂಡೀ ಪ್ರಕಾಶಿಕೆ"ಯಲ್ಲಿ "ಉದ್ಗ್ರಾಹಕ", "ಆಭೋಗ" ಎಂಬ ಗಾನ ಪ್ರಕಾರಗಳ ಪ್ರಸ್ತಾಪವಿದೆ. ನಮ್ಮ ದಾಸರ "ಉಗಾಭೋಗ" ಆ ಪಾರಿಭಾಷಿಕ ಶಬ್ದಗಳ ರೂಪಾಂತರವೇ ?—ಎಂಬುದನ್ನು ಶಾಸ್ತ್ರಜ್ಞರು ವಿಚಾರಿಸಬೇಕಾಗಿದೆ. ಇಂಥ ವಿಚಾರಗಳು ಪ್ರಯೋಗಜ್ಞರಿಗೆ ಸಾಧ್ಯವೇ ಹೊರತು ಕೇವಲ ಪುಸ್ತಕವ್ಯಾಸಂಗಿಗಳಿಗೆ ಸಾಧ್ಯವಾಗತಕ್ಕುದಲ್ಲ. ಉಗಾಭೋಗದ ಗಾಯನ ಕ್ರಮವನ್ನು ಯಥಾವಿಧಿಯಾಗಿ ಕಲಿತವರು ಎಲ್ಲಿದ್ದಾರೆಂದು ಹುಡುಕುತ್ತಿರುವವರಲ್ಲಿ ನಾನೂ ಒಬ್ಬ.

ಕೇವಲ ಸಂಗೀತ ಕಲೆಯ ದೃಷ್ಟಿಯಿಂದ ಪುರಂದರರ ಪ್ರಶಸ್ತಿ ಅವರು ನಮ್ಮ ಸಂಪ್ರದಾಯದ ಮೂಲಕರ್ತರೆಂದು,— ವಿಸ್ತರಣಕರ್ತರೆಂದಲ್ಲ. ಅವರ ರಚನೆ ಸರಳವಾದದ್ದು, ಚಿತ್ರ ವಿಚಿತ್ರ ಸಂಚಾರಗಳುಳ್ಳದ್ದಲ್ಲ. ಹರಿದಾಸ ವರ್ಗದಲ್ಲಿ ಸಂಚಾರ ವಿಶೇಷಗಳನ್ನು ನೋಡಬಯಸುವವರು ಜಗನ್ನಾಥ ದಾಸರಲ್ಲಿಗೇ ಹೋಗಬೇಕು. ಇವರು ತಾಳ ಪ್ರಾಸ ಗತಿಗಳನ್ನು ಜಟಿಲವಾಗಿ ಬೆಳಸಿದರು. ಪುರಂದರ ದಾಸರು ಗೀತ ರಚನೆಯ ಮೂಲದಶೆಯಲ್ಲಿ ಕೆಲಸ ಮಾಡಿದವರು. ಮತ್ತು ಸಾಮಾನ್ಯ ಜನಕ್ಕಾಗಿ ಕೆಲಸ ಮಾಡಿದವರು. ಪ್ರೌಢತೆಯೂ ಕ್ಲಿಷ್ಟತೆಯೂ ಅವರಿಗೆ ದೂರವಾಗಿದ್ದ ಲಕ್ಷಣಗಳು. ಮುಖ್ಯ ಲಕ್ಷ್ಯ ಕಲಾಪ್ರೌಢಿಮೆ ಚಮತ್ಕಾರವಲ್ಲ. ಅದು ಭಕ್ತಿ, ವೈರಾಗ್ಯ, ಧ್ಯಾನ. ಆದದ್ದರಿಂದ ಅವರ ಮಾತಿನ ಸರಣಿ ಜನಸಹಜವಾದದ್ದು ; ಅವರ ವರ್ಣನೆ ಅಲಂಕಾರಗಳು ಜನಕ್ಕೆ ಹಿಡಿಸುವಂತೆ ಸುಲಭವಾದವು ; ಅವರ ರಾಗಯೋಜನೆಯೂ ಹಾಗೆಯೇ ಜನರೂಢಿಯದು. ಅವರ ನೂರಾರು ದೇವರ ನಾಮಗಳು ಒಂದೊಂದೂ ನಾಲ್ಕೂ ಐದೂ ಚರಣಗಳುಳ್ಳವು. ಕೃತಿ ಅಷ್ಟು ದೀರ್ಘವಾಗಿದ್ದರೂ ಗಾಯಕನಿಗೆ ಆ ಚರಣಗಳ ಬಂಧನದಲ್ಲಿ ವಿವಿಧತೆಯಿಲ್ಲ ; ಒಂದರಂತೆ ಇನ್ನೊಂದಿದೆ. ಆದದ್ದರಿಂದ ಅವನಿಗೆ ಪಲ್ಲವಿ, ಅನುಪಲ್ಲವಿ, ಒಂದೇ ಒಂದು ಚರಣ—ಇಷ್ಟು ಮಾತ್ರವೇ ಸಾಕಾಗುತ್ತವೆ. ಆದರೆ ಅವನು ಪ್ರತಿಭಾಸಂಪನ್ನನಾದ ಪಕ್ಷದಲ್ಲಿ, ಈ ಸರಳ ಕೃತಿಗಳ ಆಧಾರದ

ಮೇಲೆ ಮಹಾ ರಾಗಸೌಧಗಳನ್ನು ಕಟ್ಟಿ ಬೆರಗುಪಡಿಸಲು ಅವನಿಗೆ ಅವಕಾಶ ಯಥೇಷ್ಟವಾಗಿರುತ್ತದೆ.

ಪುರಂದರ ದಾಸರ ಅಂಕಿತದಿಂದ ಈಗ ಪ್ರಚಾರದಲ್ಲಿರುವ ಕೃತಿಗಳ ಸಂಖ್ಯೆ ಸಾವಿರಕ್ಕಿಂತ ಕಡಮೆ. ಈ ಐನೂರು ಆರ್‍ನೂರರಲ್ಲಿಯೂ ಸ್ವಾರಸ್ಯ ಒಂದೇ ಮಟ್ಟದಲ್ಲಿಲ್ಲ. ಅವುಗಳಲ್ಲಿ ಇತರರ ಕೈವಾಡವುಳ್ಳವು ಎಷ್ಟೋ ಹೇಳುವುದು ಕಷ್ಟ. ಮೊನ್ನೆ ತಾನೆ ಸ್ನೇಹಿತರೊಬ್ಬರು ಪೇಟೆಯಿಂದ ಒಂದು ಪ್ರತಿ ತರಿಸಿದರಂತೆ. ಅದನ್ನು ಅವರು ತೆರೆದು ನೋಡಿದಾಗ ಭಂಡ ಪದ ಒಂದು ಕಣ್ಣಿಗೆ ಕಾಣಿಸಿತಂತೆ. ಯಾವ ಮಹಾರಾಯ ಅದನ್ನು ಪುರಂದರರ ತಲೆಗೆ ಕಟ್ಟಿದನೋ ! ಇಂಥಾ ಅಸಹ್ಯ ಪ್ರಕ್ಷೇಪಗಳು ಸರ್ವಜ್ಞ ವಚನಗಳಲ್ಲಿಯೂ ಇವೆ. ಕೆಲವು ದೇವರ ನಾಮಗಳಲ್ಲಿ ಮತಪ್ರಕ್ರಿಯೆ ತುಂಬಿದೆ. ಇನ್ನು ಕೆಲವು ಕೀರ್ತನೆಗಳು ಪೌರಾಣಿಕ ನಾಮಗಳ ಪಟ್ಟಿಗಳಾಗಿವೆ. ಇಂಥವು ಆಯಾ ಮತಸ್ಥರಿಗೆ ಮಾತ್ರ ಪ್ರಿಯವಾಗಬಹುದೇ ಹೊರತು ಸಕಲ ಜನಾದರಣೆಯನ್ನು ಪಡೆಯಲಾರವು. ಇಂಥವನ್ನು ಬಿಟ್ಟು ಕೇವಲ ಮಾನವ ಹೃದಯ ದೃಷ್ಟಿಯಿಂದ,—ಮತಜಿಜ್ಞಾಸುವಾಗದೆ ಜೀವನಕ್ಕೆ ಬಲವನ್ನೂ ಬೆಳಕನ್ನೂ ಹುಡುಕುವವನ ದೃಷ್ಟಿಯಿಂದ,—ವಿಮರ್ಶೆಮಾಡಿ ನೋಡಿದರೆ, ಬೆಲೆಬಾಳುವ ಕೃತಿಗಳು ಹಲವು ನೂರರಷ್ಟು ಉಳಿದಾವು. ಪುರಂದರರು ಮಹಾನುಭಾವರೆನ್ನಲು ಅಷ್ಟುಮಾತ್ರವೇ ಸಾಕಾಗುತ್ತವೆ. ಅವುಗಳ ಸರಳತೆ ವಿಶದತೆ ಸೂಚ್ಯಗ್ರತೆಗಳು ಹೃದಯಸ್ಪರ್ಶಿಯಾಗಿವೆ. ಪುರಂದರರು ಮನುಷ್ಯ ಜೀವನದ ಆಳವನ್ನು ಕಂಡ ಕವಿಗಳೆಂಬುದೂ,—ಪರಮಾನುಭವ ಪಡೆದ ಜ್ಞಾನಿಗಳೆಂಬುದೂ,—ಅವುಗಳಿಂದ ಋಜುವಾತಾಗುತ್ತದೆ.

ಕರ್ಣಾಟಕ ಸಂಗೀತದಲ್ಲಿ ಲಕ್ಷಣ ಭಾಗ ಹೇಗೋ ಲಕ್ಷ್ಯಭಾಗವೂ ಹಾಗೆಯೇ ಬಹು ಪುರಾತನವಾದದ್ದೇ. ನಮ್ಮ ಕನ್ನಡ ಕವಿಗಳಲ್ಲಿ ಬಹು ಪುರಾತನರಾದ ಪಂಪ ರನ್ನರ ಕಾವ್ಯಗಳಲ್ಲಿ ಸಂಗೀತದ ಪ್ರಸಂಗಗಳು ಎಷ್ಟೋ ಇವೆ. ಪುರಂದರ ದಾಸರ ಸಮಕಾಲಿಕನೇ ಆದ ರತ್ನಾಕರವರ್ಣಿ ತನ್ನ "ಭರತೇಶ ವೈಭವ"ದಲ್ಲಿ ಶ್ರೀರಾಗ, ಮಾಳವಶ್ರೀ, ಭೂಪಾಳಿ, ಧನ್ಯಾಸಿ, ಮಲಹರಿ, ದೇಶಾಕ್ಷಿ, ಮಂಗಳಕೈಶಿಕಿ—ಮೊದಲಾದ ರಾಗಗಳನ್ನೂ ಅನೇಕ ವಾದ್ಯಗಳನ್ನೂ ಪ್ರಶಂಸೆ ಮಾಡಿದ್ದಾನೆ. "ವೀಣಾ ಸಂಧಿ" ಯೆಂಬುದೇ ಅಲ್ಲಿ ಒಂದು ಅಧ್ಯಾಯ. ಅಷ್ಟೇಕೆ ; ಕನ್ನಡ ಕಾವ್ಯಗಳು ಮೊದಲಿನಿಂದಲೂ ಗೇಯಪ್ರಬಂಧಗಳಾಗಿಯೇ ಬಂದಿವೆ. ಅವುಗಳಿಗೆ ಹಾಡುಗಬ್ಬಗಳೆಂದೇ ಹೆಸರು. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ—ಈ ನಾನಾ ಛಂದಸ್ಸುಗಳು ಹಾಡಿಗಾಗಿಯೇ ಹುಟ್ಟಿದವು. ದಾಸ ಸಾಹಿತ್ಯವನ್ನು ಪರೀಕ್ಷಿಸಿ ನೋಡಿದರೆ ಅದರಲ್ಲಿ ನಾನಾ ತೆರದ ರಾಗಸಂಚಾರಗಳೂ ಚಿತ್ರವಿಚಿತ್ರವಾದ ತಾಳಗತಿಗಳೂ ಕಾಣಬರುತ್ತವೆ. ಈ ವಿಸ್ತಾರವಾದ ನಮ್ಮ ಗೇಯ ಸಾಹಿತ್ಯವನ್ನು ಶಾಸ್ತ್ರಪ್ರಯೋಗಗಳೆರಡನ್ನೂ ಬಲ್ಲ ಗಾಯಕರು ಶೋಧಿಸಿ ನೋಡಬೇಕಾಗಿದೆ. ಈ ವಿಷಯವನ್ನು ಒತ್ತಿಹೇಳುವುದೇ ನನ್ನ ಇಂದಿನ ಮುಖ್ಯೋದ್ದೇಶ.

4

ಸಂಗೀತ ಸಾಹಿತ್ಯಗಳ ಸಂಬಂಧ

ನಾನು ಕೊಂಚ ಮಟ್ಟಿಗೆ ಸಾಹಿತ್ಯದ ಸಂಬಂಧವುಳ್ಳವನು—ಎಂಬುದು ತಮಗೆಲ್ಲ ಗೊತ್ತಿದೆ. ಕನ್ನಡ ಸಾಹಿತ್ಯದ ಪ್ರಚಾರಕ್ಕೆ ಸಂಗೀತದ ಸಹಾಯ ತುಂಬ ಬೇಕಾಗಿದೆ. ರಾಗದ ವಾತಾವರಣವಿಲ್ಲದಿದ್ದಲ್ಲಿ ಕಾವ್ಯದಿಂದ ಸುಲಭವಾಗಿ ರಸಾನುಭವ ವಾಗದು. ಮನುಷ್ಯನ ಅಂತರಂಗದಲ್ಲಿ ಪ್ರಕಟನೆಯನ್ನು ಬೇಡುತ್ತಿರುವ ಧ್ವನಿ ಒಂದಲ್ಲ, ಎರಡು. ಒಂದು ಬುದ್ಧಿಯದು :—ಇದು ಪ್ರಶ್ನೆ, ಉತ್ತರ, ಚರ್ಚೆ, ನಿಶ್ಚಯ—ಈ ತೆರದ ಜ್ಞಾನ ಭಾವನೆಗಳ ರೂಪದಲ್ಲಿರುತ್ತದೆ. ಇದಕ್ಕೆ ಸಾಧಾರಣವಾಗಿ ವಾಕ್ಕಿನ ಭಾಷೆ ಸಾಕು. ಎಲ್ಲಿ ವಾಕ್ಕು ಸಾಕಾಗಲಾರದೋ ಅಲ್ಲಿ ಬುದ್ಧಿವ್ಯಾಪಾರವು ಬಾಹ್ಯರೂಪಕ್ಕೆ ಬಾರದೆಯೇ ಉಳಿದುಕೊಳ್ಳಬೇಕಾಗುತ್ತದೆ. ನಮ್ಮ ಅಂತರಂಗದ ಇನ್ನೊಂದು ಧ್ವನಿ ಹೃದಯದ್ದು :—ಇದು ಸಂತೋಷ, ವ್ಯಸನ, ಆಶೆ, ಕೋಪ ಮೊದಲಾದ ಮನೋಭಾವಗಳ ರೂಪದಲ್ಲಿರುತ್ತದೆ. ಇದಕ್ಕೆ ಬರಿಯ ವಾಕ್ಕಿನ ಭಾಷೆ ಸಾಲದು. ಅದು ನಾದದ ಭಾಷೆಯ ಜೊತೆಗಾರಿಕೆಯನ್ನು ಬೇಡುತ್ತದೆ. ಈ ಹೃದಯದ ವ್ಯಾಪಾರವಿಶೇಷವೇ ಸಾಹಿತ್ಯ. ಅದು ಸಂಗೀತವಿಲ್ಲದೆ ಸಾಂಗವಾಗದು. ಆದದ್ದರಿಂದಲೇ ಸಂಗೀತ ಸಾಹಿತ್ಯಗಳನ್ನು ಸರಸ್ವತಿಯು ತನ್ನ ಮಕ್ಕಳಿಗಾಗಿ ತಳೆದಿರುವ ಜೋಡಿ ಹಾಲುಬುಗ್ಗೆಗಳೆಂದು ಪೂರ್ವಿಕರು ವರ್ಣಿಸಿರುವುದು. ಶಾಸ್ತ್ರಗ್ರಂಥಕ್ಕೆ ವಚನಭಾಷೆ ಸಾಕಾದೀತು. ಕಾವ್ಯಕ್ಕೆ ಅದು ಸಾಕಾಗದು ; ಕಾವ್ಯವು ಛಂದಸ್ಸಿನ ತರಂಗ ಧೋರಣೆಯನ್ನೂ ಭಾವಾನುಗುಣವಾದ ರಾಗವನ್ನೂ ಭಾವಸಂಜ್ಞೆಯಾದ ಆಂಗಾಭಿನಯವನ್ನೂ ಅಪೇಕ್ಷಿಸುತ್ತದೆ. ನಾಟಕವು ಹಾಗೆ ಅಂಶತ್ರಯಾತ್ಮಕವಾದದ್ದ ರಿಂದಲೇ ಅದು ಸಾಹಿತ್ಯದಲ್ಲಿ ರತ್ನಪ್ರಾಯವೆನಿಸಿದೆ. ಹೀಗೆ ಸಾಹಿತ್ಯದ ಸವಿಯ ಪೂರ್ಣಾನುಭವಕ್ಕೆ ಸಂಗೀತದ ವಾತಾವರಣವಿಲ್ಲದಿದ್ದರೆ ಆಗದು. ನಮ್ಮ ಜನಕ್ಕೆ ಕಾವ್ಯ ರುಚಿಸಿ, ಅವರಲ್ಲಿ ಸಾಹಿತ್ಯಪ್ರೀತಿ ಬೆಳೆಯಬೇಕಾದರೆ ಸಂಗೀತವು ಸಾಹಿತ್ಯದ ಸಹಾಯಕ್ಕೆ ಒದಗಿ ಬರಬೇಕು. ಕನ್ನಡ ದೇಶದಲ್ಲಿ ಹಿಂದೆ ಒಂದಾನೊಂದು ಕಾಲದಲ್ಲಿ ಗಮಕಕಲೆ ಪ್ರಚುರವಾಗಿತ್ತು. ಗಮಕವೆಂದರೆ ಕಾವ್ಯವಾಚನದಲ್ಲಿ ಸಂಗೀತವನ್ನು ಸಮ್ಮೇಳನಮಾಡುವ ಕಲೆ. ಈ ಕಲೆ ತೆಲುಗರಲ್ಲಿ ಈ ಹೊತ್ತಿಗೂ ಜೀವಂತವಾಗಿದೆ. ಆಂಧ್ರ ಕಾವ್ಯಪಠನದಲ್ಲಿ ಗಾನಸಮ್ಮೇಳನವಿರುವುದರಿಂದ ಆಂಧ್ರರಲ್ಲಿ ಕಾವ್ಯಾಭಿರುಚಿ ಚೆನ್ನಾಗಿ ಹರಡಿಕೊಂಡಿದೆ. ಕನ್ನಡಿಗರಲ್ಲಿ ಹಾಗೆ ಕಾವ್ಯ ಪ್ರಚಾರವಾಗಬೇಕಾದರೆ ಕನ್ನಡ ಸಾಹಿತ್ಯಕ್ಕೆ ಸಂಗೀತ ನೆರವಾಗಿ ಬರಬೇಕು.

ಸಂಗೀತಕ್ಕೆ ಸಾಹಿತ್ಯದ ಸಹಾಯವೂ ಅವಶ್ಯವೆಂಬ ಮಾತನ್ನು ನಾನು ಹೇಳ ಬೇಕಾಗಿಲ್ಲ. ಸಂಗೀತಗಾರರು ಅದನ್ನು ತಕರಾರಿಲ್ಲದೆ ಒಪ್ಪಿಕೊಂಡಾರೆಂದು ನನಗೆ

ಭರವಸೆಯಿದೆ. ಇಂಥ ಕಲಾಶಾಲೆಯಲ್ಲಿ ಸಾಹಿತ್ಯ ಪಾಠಕ್ಕಾಗಿ ತಕ್ಕಮಟ್ಟಿಗೆ ವ್ಯವಸ್ಥೆ ಮಾಡುವುದು ಅವಶ್ಯವೆಂದು ತೋರುತ್ತದೆ.

ಸಂಗೀತವೆಂದರೆ ಹೃದಯ ಸ್ಪಂದನ. ಕಾವ್ಯವೆಂದರೂ ಹಾಗೆಯೇ. ನಿಮ್ಮ ರಾಗ ನಮ್ಮ ಮನಸ್ಸಿನಲ್ಲಿ ಒಂದು ಭಾವವನ್ನೆಬ್ಬಿಸಬೇಕು. ಅಥವಾ ನಮ್ಮ ಮನಸ್ಸಿನಲ್ಲಿರುವ ಒಂದು ಭಾವಕ್ಕೆ ಅದು ಪ್ರತಿಧ್ವನಿ ಕೊಡಬೇಕು. ಈ ಎರಡು ಕೆಲಸಗಳಲ್ಲಿ ಒಂದಾದರೂ ನಿಮ್ಮ ಗಾನದಿಂದ ಆಗದಿದ್ದರೆ ನೀವು ಪಟ್ಟ ಪ್ರಯಾಸ ನಿರರ್ಥಕವೇ ಆಗುತ್ತದೆ. ಎದೆ ಮಿಡಿಸಲಾರದ ನಾದವ ಗದ್ದಲದಲ್ಲಿ ಎಂಥ ಸ್ವರಸಂಯೋಜನೆಗಳಿದ್ದರೆ ಏನು ? ಸ್ವರ ಕಲ್ಪನೆ ಎಂಥದಿದ್ದರೂ ಭಾವ ಪ್ರಚೋದನೆಗೆ ಸಾಧಕ ಮಾತ್ರವೇ ಹೊರತು ಅದೇ ಪರಮಾರ್ಥವಲ್ಲ. ಗಾಯಕನ ಸ್ವರ ವಾದ. ಪಿಟೀಲುಗಾರನ ಸಂವಾದ. ಮೃದಂಗಕಾರನ ಅನುವಾದ—ಇವು ಅಲೆಯಲೆಯಾಗಿ ಕಿವಿಯ ಮೇಲೆ ಬೀಳುತ್ತಿದ್ದರೆ ಒಂದು ಸುಖದ ಅನುಭವವಾಗುವುದು ನಿಜ. ಅದು ಕರ್ಣಾನಂದ. ಅದಕ್ಕಿಂತ ಮೇಲಿನದು ಜೀವಾನಂದ. ಹೊರಗಣ ನಾದತರಂಗದಿಂದ ಒಳಗೆ ಭಾವ ತರಂಗವೇಳಬೇಕು. ತ್ಯಾಗರಾಜರ "ಎಂದುರೋ ಮಹಾನುಭಾವುಲು". ದೀಕ್ಷಿತರ "ಮಾಮವ ಪಟ್ಟಾಭಿರಾಮ". ಪುರಂದರ ದಾಸರ "ನಾ ನಿನ್ನ ಧ್ಯಾನದೊಳಿರಲು". ಕನಕದಾಸರ "ತನು ನಿನ್ನದು ಜೀವನ ನಿನ್ನದು"—ಇಂಥ ಕೃತಿಗಳನ್ನು ನೆಮ್ಮದಿ ಕೆಡದಂತೆ ಮಿತವಾದ ಸ್ವರಪ್ರಸ್ತಾರವಿಟ್ಟು ಹಾಡಿದಾಗ ಕೇಳಿದವನಿಗೆ ಆಗುವುದು ಕರ್ಣಾನಂದ ಮಾತ್ರವಲ್ಲ, ಆತ್ಮಾನಂದ. ಆ ನಾದ ಕಿವಿಯನ್ನು ಮುಟ್ಟಿ ತೇಲಿ ಹೋಗುವುದಿಲ್ಲ ; ಅದು ಜೀವದೊಳಕ್ಕಿಳಿದು ಅಲ್ಲಿಂದ ಕಣ್ಣಿನಲ್ಲಿ ಧಾರೆಯಾಗಿ ಹೊರ ಹರಿಯುತ್ತದೆ. ಅಂಥಾದ್ದು ಸಂಗೀತ.

ಒಂದೊಂದು ರಾಗದಲ್ಲೂ ನೂರು ಬಗೆಯ ಸ್ವರಯೋಜನೆ ಸಾಧ್ಯವಿರಬಹುದು. ಆದರೆ ಆ ನೂರೂ ಮೇಲ್ಮಟ್ಟದ ಸೊಗಸಲ್ಲ : ಸೊಗಸು ಕೆಲವು ಸ್ವರ ಕಲ್ಪನೆಗಳಲ್ಲಿ ಹೆಚ್ಚು, ಕೆಲವದರಲ್ಲಿ ಕಡಮೆ ; ಕೆಲವದರಲ್ಲಿ ಇರಲೇ ಇರದು. ಭಾಷಾ ನಿಘಂಟುವಿನಲ್ಲಿ ಒಂದು ವಸ್ತುವಿಗೆ ಹತ್ತು ಹೆಸರುಗಳು ಸಿಕ್ಕುತ್ತವೆ. ಅವೆಲ್ಲ ಒಂದೇ ಮೇಲಂತಸ್ತಿನ ಸೊಗಸಲ್ಲ ; ಒಂದಾನೊಂದು ಸಂದರ್ಭಕ್ಕೆ ಒಂದು ಹೆಸರು ಹೊಂದಿದಂತೆ ಅದೇ ಅರ್ಥವುಳ್ಳ ಇನ್ನೊಂದು ಹೆಸರು ಹೊಂದಲಾರದು. ಆ ಹತ್ತು ಮಾತುಗಳಲ್ಲಿ ವಾಕ್ಚತುರನಾದವನು ತನಗೆ ಬೇಕಾದ ಮಾತನ್ನು ವಿವೇಚನೆಯಿಂದ ಆರಿಸಿಕೊಳ್ಳುತ್ತಾನೆ. ಒಳ್ಳೆಯ ಸಂಗೀತಗಾರನೂ ಹಾಗೆಯೇ ಸಾಧ್ಯವಿರುವ ಹತ್ತಾರು ಸ್ವರ ಸಂಗತಿಗಳಲ್ಲಿ ಸೊಗಸಾದ ನಾಲ್ಕನ್ನು ಆರಿಸಿಕೊಳ್ಳುತ್ತಾನೆ. ರಾಗಗಳ ವಿಷಯದಲ್ಲಿಯೂ ಹಾಗೆಯೇ. ರಾಗವು ರಂಜಕವಾಗಿರಬೇಕು. ಈ ರಂಜನಶಕ್ತಿ ಎಲ್ಲ ರಾಗಗಳಲ್ಲಿಯೂ ಒಂದೇ ಪರಿಮಾಣದಲ್ಲಿಲ್ಲ. ಎಷ್ಟೋ ರಾಗಗಳು ರಚನೆಯಲ್ಲಿ ರಾಗಗಳಾಗಿ, ಪರಿಣಾಮದಲ್ಲಿ ರಾಗಶಕ್ತಿ ವಿಹೀನವಾಗಿರುತ್ತವೆ. ರಂಜಕ ಗುಣವನ್ನು ನೋಡಿ ರಾಗವನ್ನು ಚುನಾಯಿಸಬೇಕು.

5

ನಮ್ಮ ಇಂದಿನ ಕರ್ತವ್ಯ

ಪುರಂದರ ದಾಸರು ಪ್ರಾರಂಭಿಸಿದ ಕಾರ್ಯ ಈಗ 150–200 ವರ್ಷಗಳಿಂದ ಹಿಂದಕ್ಕೆ ಬಿದ್ದಿದೆ. ಅದನ್ನು ಪುನರುಜ್ಜೀವನಪಡಿಸಿ ಮುಂದಕ್ಕೊಯ್ಯುವುದು ನಮ್ಮ ಇಂದಿನ ಕರ್ತವ್ಯವಾಗಿದೆ. ಹರಿದಾಸರುಗಳು ಮಾತ್ರವೇ ಅಲ್ಲ; ನಿಜಗುಣರು, ಸರ್ಪಭೂಷಣರು ಮೊದಲಾದ ಶಿವಶರಣರೂ ರತ್ನಾಕರ ಮೊದಲಾದ ಜೈನರೂ ಸಹ ಗೇಯಸಾಹಿತ್ಯದ ಮೂಲಕ ಧರ್ಮಕ್ಕೂ ಸಂಸ್ಕೃತಿಗೂ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಆ ಸಾಹಿತ್ಯವೆಲ್ಲ ಈಗ ತಿರುಪೆಗೆ ಬರುವ ಬೀದಿ ದಾಸಯ್ಯಗಳ ಪಾಲಾಗಿದೆ. ನಮ್ಮ ಸಂಗೀತ ವಿದ್ವಾಂಸರ ದೃಷ್ಟಿ ಆ ಕಡೆ ಹೋಗಿಲ್ಲ. ಏನಿದ್ದರೂ ತ್ಯಾಗರಾಜ—ದೀಕ್ಷಿತ, ದೀಕ್ಷಿತ—ತ್ಯಾಗರಾಜ : ಇಷ್ಟರಲ್ಲಿ ನಿಂತಿದೆ ಅವರ ಕಲಾವಂತಿಕೆ. ತ್ಯಾಗರಾಜರಿಗೆ ಹಿಂದೆ ಸಂಗೀತವಿರಲಿಲ್ಲವೆ ? ಆ ಗಾನ ಪದ್ಧತಿ ಅಂದಿನ ಜನಕ್ಕೆ ಸಂತೋಷಜನಕವಾಗಿರಲಿಲ್ಲವೆ ? ಇಂದಿಗೂ ನಮಗೆ ಅತ್ಯಂತ ಮೋಹಕವಾಗಿರುವ ಕ್ಷೇತ್ರಯ್ಯನ ರಾಗಸೂಕ್ಷ್ಮ ವಿಲಾಸಗಳು ತ್ಯಾಗಯ್ಯನವರಿಗಿಂತ ಹಿಂದಿನವು. ತ್ಯಾಗರಾಜ ದೀಕ್ಷಿತರುಗಳ ಕೀರ್ತಿ ಹೊಸ ರಾಗಗಳನ್ನು ನಿರ್ಮಿಸಿದ್ದಲ್ಲ, ಹಳೆಯ ರಾಗಗಳಿಗೆ ಹೊಸ ಮೆರಗುಗಳನ್ನು ಕಟ್ಟಿದ್ದು. ಶ್ರೀರಾಗ, ಶಂಕರಾಭರಣಗಳೂ ಕಾಂಬೋದಿ ಕಲ್ಯಾಣಿಗಳೂ ಅವರ ಕಾಲಕ್ಕೆ ಎಷ್ಟೋ ಹಿಂದಿನಿಂದ ಇದ್ದವು. ಆ ಪುರಾತನ ರಾಗಗಳಿಂದ ಅವರು ನೂತನ ರುಚಿಗಳನ್ನು ಹೊರಡಿಸಿದರು. ಸಂಗೀತವೆಂಬುದು ನಾದ ಸೌಂದರ್ಯವಷ್ಟೆ ? ಎಲ್ಲ ಸೌಂದರ್ಯದಲ್ಲಿಯೂ ಆಕರ್ಷಣ ಶಕ್ತಿಯ ಒಂದಂಶ ನವೀನತೆ. ನಮ್ಮ ಕಿವಿ ಮನಸ್ಸುಗಳಿಗೆ ನೀವು ಹೇಗಾದರೂ ಮಾಡಿ ನವನವೀನವಾದ ನಾದ ವಿಲಾಸವನ್ನು ದೊರಕಿಸುತ್ತಿರಬೇಕು. ಅದು ಹಳೆಯ ರಾಗದ ಹೊಸ ಶೈಲಿಯಿಂದಾದರೂ ಸರಿ, ಹೊಸದೊಂದು ರಾಗದಿಂದಲೇ ಆದರೂ ಸರಿ. ಅದರ ವಿಧಾನ ನಿಮ್ಮ ಅಧಿಕಾರಕ್ಕೆ ಸೇರಿದ್ದು ; ಅನುಭವದ ಹಕ್ಕು ನಮ್ಮದು. ನಿಮ್ಮ ಸ್ವಾನುಭವ ಚೆನ್ನಾದಷ್ಟು ನಮ್ಮ ಭಾಗ್ಯ.

ಹಳೆಯದು ಹೊಸತನದಿಂದ ನಲಿಯುವುದೇ ರಮಣೀಯತೆ.

> ಕ್ಷಣ ಕ್ಷಣಂ ನವ್ಯತೆಯಾಂತು ರಂಜಿಪಾ ।
> ಗುಣಪ್ರಕಾರಂ ರಮಣೀಯತಾಕರಂ ॥
>
> —ಮಾಘ

ನಮಗೆ ಶಾಸ್ತ್ರ ಬೇಕು. ಸಂಪ್ರದಾಯ ಬೇಕು. ಅವುಗಳ ಜೊತೆಗೆ ನೂತನ ಕೌತುಕವೂ ಬೇಕು. ಆ ಮೂರರ ಸಮರಸ ಸಂಮೇಳನವೇ ಸೌಂದರ್ಯ ಸಂಪತ್ತು. ಕವಿತ್ವದ ಶೈಲಿಗಳು ನೂರಾರಿರಬಹುದು ; ಗಾಯನದ ಶೈಲಿಗಳೂ ಹಾಗೆ ನೂರಾರಾಗಬಹುದು. ಸೌಂದರ್ಯದ ರೂಪಗಳಿಗೂ ಮಾಧುರ್ಯದ ರೀತಿಗಳಿಗೂ ಸಂಖ್ಯಾ ಮಿತಿಯನ್ನು ಗೊತ್ತುಮಾಡುವವರಾರು ? ಪ್ರತಿಭೆ ಹೊಸಹೊಸದಾದಂತೆ ಶೈಲಿ

ಹೊಸಹೊಸದಾಗುತ್ತದೆ. ನಮ್ಮ ಸಾಮಾನ್ಯ ಸಂಗೀತಗಾರರು ಎಲ್ಲ ಕೃತಿಗಳಿಗೂ ಒಂದೇ ಶೈಲಿಯೇ ಯುಕ್ತವೆಂದು ತಿಳಿದಿರುವಂತೆ ತೋರುತ್ತದೆ. ಎಲ್ಲದರಲ್ಲಿಯೂ ಅವರು ಸ್ವರ ಸಂಗತಿಗಳ ಜಡೆಯನ್ನು ಹೆಣೆಯಬೇಕು ; ಎಲ್ಲ ಕಡೆಯೂ ಸರಿಗಮಗಳ ಸುರಿಮಳೆಯಾಗಬೇಕು ; ಅದೇ ಸಂಗೀತ—ಎಂದು ಅವರ ಭಾವನೆಯಿರುವಂತೆ ತೋರುತ್ತದೆ. ತ್ಯಾಗರಾಜರು ಹೇಗೆ ಹೊಸ ಸಂಪ್ರದಾಯವನ್ನು ಸೃಷ್ಟಿಮಾಡಿದರೋ ಹಾಗೆ ಹೊಸಹೊಸ ಸಂಪ್ರದಾಯಗಳನ್ನು ಸೃಷ್ಟಿಸಬಲ್ಲ ಪ್ರತಿಭೆ ನಮಗೆ ಈಗ ಅವಶ್ಯವಾಗಿದೆ. ಇಂಥಾ ಪ್ರತಿಭೆಯ ಉತ್ಪತ್ತಿಗೆ ಇರುವುದೊಂದೇ ಮಾರ್ಗ. ಅದು ಸಾಧನೆ—ಅಭ್ಯಾಸ—ಪ್ರಯೋಗ. ಕನ್ನಡ ಸಾಹಿತ್ಯದ ನಾನಾ ಪ್ರಬಂಧಗಳಲ್ಲಿ ಗಾಯಕರು ಹೊಸಹೊಸ ಪ್ರಯೋಗಗಳನ್ನು ಮಾಡಿ. ಹೊಸಹೊಸ ಸೊಗಸುಗಳನ್ನು ಹೊರಕ್ಕೆ ತರಬೇಕಾಗಿದೆ. ಈ ಮಹಾ ಕಾರ್ಯವನ್ನು ಕೈಕೊಳ್ಳಲು ನಮ್ಮ ವಿಜಯ ಸಂಗೀತ ಕಲಾ ಶಾಲೆ ತಕ್ಕ ಸ್ಥಳವೆಂದು ನನಗೆ ನಂಬಿಕೆಯಿದೆ.

ಕನ್ನಡ ಕೀರ್ತನೆ ದೇವರ ನಾಮಗಳಿಗೆ ವಿದ್ವತ್ಸಂಗೀತದಲ್ಲಿ ಮೊದಲು ಮನ್ನಣೆ ಸಂಪಾದಿಸಿಕೊಟ್ಟವರು ಬಿಡಾರಂ ಕೃಷ್ಣಪ್ಪನವರು. ಅವರ ದೇವರ ನಾಮದ ಹಾಡಿಕೆಯಿಂದ ಅವರು ಮದರಾಸನ್ನು ಗೆದ್ದರು. ನನ್ನ ಮಿತ್ರರಾದ ವೈಣಿಕ ವಿದ್ವಾನ್ ಎಲ್. ರಾಜಾರಾಯರವರು ಕನ್ನಡ ಕೃತಿಗಳಿಗಾಗಿ ಮಾಡಿರುವ ಪರಿಶ್ರಮವನ್ನು ಈ ಸಂದರ್ಭದಲ್ಲಿ ಪ್ರಸ್ತಾವಿಸುವುದು ಉಚಿತವಾಗಿದೆ. ಅವರು ಸುಮಾರು 40 ಹರಿದಾಸ ಕೃತಿಗಳಿಗೂ 50 ಶಿವಶರಣ ಕೃತಿಗಳಿಗೂ ಸ್ವರ ಸಂಯೋಜನೆ ಮಾಡಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಪಡಿಸಿದ್ದಾರೆ ; ಮತ್ತು ಹತ್ತಾರು ಸಭೆಗಳಲ್ಲಿ ಕನ್ನಡ ಕೃತಿಗಳನ್ನು ಹೃದಯಂಗಮವಾಗಿ ಹಾಡಿ ತೋರಿಸಿದ್ದಾರೆ.

ಈ ವಿಜಯ ಕಲಾ ಶಾಲೆಯಲ್ಲಿಯೂ ಕನ್ನಡ ಕೃತಿಗಳ ಪಾಠ ನಡೆಯುತ್ತಿದೆ. ಶ್ರೀ ನಾರಾಯಣ ಸ್ವಾಮಿ ಭಾಗವತರು ದೇವರ ನಾಮಗಳ ಹಾಡಿಕೆಗೆ ಸುಂದರವಾದ ಶೈಲಿಯನ್ನು ಅಳವಡಿಸಿದ್ದಾರೆ. ಅವರಲ್ಲಿ ನನ್ನ ಪ್ರಿಯ ಮಿತ್ರರಾದ ಶ್ರೀಮಾನ್ ಸಿ. ಕೃಷ್ಣರಾಯರವರೂ ಇನ್ನು ಕೆಲವರು ಸ್ನೇಹಿತರೂ ದೇವರ ನಾಮಗಳ ಹಾಡಿಕೆಯನ್ನು ಕಲಿಯುತ್ತಿದ್ದಾರೆ. ಶ್ರೀ ಕೃಷ್ಣರಾಯರವರು ನಮ್ಮ ಸಮಾಜದಲ್ಲಿ ಗಣ್ಯರು. ಅನೇಕ ಸಾರ್ವಜನಿಕ ಸಂಸ್ಥೆಗಳಿಗಾಗಿ ಕೆಲಸ ಮಾಡಿರುವವರು. ಇಂಥವರು ಕನ್ನಡ ಗಾನ ವ್ಯಾಸಂಗಿಗಳಾಗಿರುವುದು ನಮಗೆಲ್ಲ ತುಂಬ ಪ್ರೋತ್ಸಾಹಕರವಾಗಿದೆ. ವಿಜಯ ಕಲಾ ಶಾಲೆಯವರು ಈ ತಮ್ಮ ಕಾರ್ಯಶಾಖೆಯನ್ನು ಬೆಳಸಿ ಮುಂದುವರಿಸಬೇಕೆಂದು ನನ್ನ ಕೋರಿಕೆ.

ಸಂಗೀತಗಾರನಲ್ಲಿರಬೇಕಾದ ಸಿದ್ಧತೆಗಳು ಮುಖ್ಯವಾಗಿ ಎರಡು: (1) ಸಾಧನೆ, (2) ಕಲ್ಪನ ಮನೋಧರ್ಮ. ಬರಿಯ ಚಿಟ್ಟೆ ಸ್ವರಗಳನ್ನು ಉರುಹಚ್ಚಿದ ಮಾತ್ರದಿಂದ ಸಂಗೀತ ಸಿದ್ಧಿಸಲಾರದು. ಮನೋಧರ್ಮವೆಂಬುದೇ ಪ್ರತಿಭೆ: ಅದೇ ಕಲ್ಪನ ಶಕ್ತಿ. ಅದು ಸಹಜವಾಗಿ. ವರಪ್ರಸಾದವಾಗಿ ಬರತಕ್ಕದ್ದು. ಸಾಧನೆಯಾದರೋ

ಸ್ವಪ್ರಯಾಸದಿಂದ ಸಾಧ್ಯವಾಗತಕ್ಕದ್ದು. ಸಾಧನೆಯೆಂದರೆ ಅಭ್ಯಾಸ. ಕನ್ನಡ ಸಂಗೀತಗಾರರಲ್ಲಿ ಈಗ ಕಡಮೆಬಂದಿರುವುದು ಸಾಧನೆಯ ಭಾಗದಲ್ಲಿ ಎಂದು ನನ್ನ ಭಾವನೆ. ನಮ್ಮವರು ತಮಿಳು ಸಾಧಕರಂತೆ ಶ್ರಮಪಡಲಾರರು. ಅಕಾರ ಸಾಧನೆ ಉಂಕಾರ ಸಾಧನೆಗಳಿಂದ ಕಂಠ ಶೋಧನೆಯಾಗಿ "ಪಲುಕುಬಡಿ" ಅಥವಾ ನುಡಿತ ನವುರಾಗುತ್ತದೆ. ಅದೇ ಗಮಕದ ಸೊಗಸು. ಈ ಅಭ್ಯಾಸ ಸಾಗಿದಂತೆ ಪ್ರತಿಭೆಯೂ ವಿಕಾಸಹೊಂದುತ್ತದೆ. ಸಾಧನೆ ಬೆಳೆದಂತೆ ಮನೋಧರ್ಮ ; ಮನೋಧರ್ಮ ಬೆಳೆದಂತೆ ಸಾಧನೆ ;—ಹೀಗೆ ಅವೆರಡೂ ಅವಿನಾ ಸಂಬಂಧಿಗಳು. ನಮ್ಮ ಸಂಗೀತ ಗಾರರು ಈ ತತ್ತ್ವವನ್ನು ಲಕ್ಷ್ಯಕ್ಕೆ ತಂದುಕೊಂಡರೆ ಕರ್ಣಾಟಕದ ಪೂರ್ವದ ಸಂಗೀತದ ಯಶಸ್ಸು ಮರಳಿ ಕಳೆಗೂಡಿ ಬಂದೀತು.

6

ಲಲಿತ ಶೈಲಿ

ಇನ್ನೊಂದು ಸಲಹೆಯನ್ನು ಅರಿಕೆಮಾಡಬೇಕೆಂದು ನನಗನ್ನಿಸುತ್ತದೆ. ಇಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಬಹು ಮಂದಿ ಸಂಗೀತ ಕಲಿಯುತ್ತಿರುವುದು ಆತ್ಮ ಸಂತೋಷಕ್ಕಾಗಿಯೇ ಹೊರತು ಜೀವನ ವೃತ್ತಿಗಾಗಿ ಅಲ್ಲ. ಇಂಥವರಿಗೆ ಉಪಯೋಗ ವಾಗತಕ್ಕದ್ದು ಕಸಬುದಾರಿ ರೀತಿಯ ಸಂಗೀತವಲ್ಲ. ಇವರು ಏನಿದ್ದರೂ ದೈವಪೂಜಾ ಕೈಂಕರ್ಯಗಳಿಗೂ ಕಾವ್ಯಪಾರಾಯಣಕ್ಕೂ ತತ್ತ್ವಧ್ಯಾನಕ್ಕೂ ಮದುವೆ ಮುಂಜಿ ಮೊದಲಾದ ಶುಭ ಸಮಯಗಳ ಪ್ರಸಂಗಕ್ಕೂ ಮನಶ್ಶಾಂತಿಗೂ ಸಂಗೀತವನ್ನು ಉಪಯೋಗಿಸಿಕೊಳ್ಳುವವರು. ಅದು ಹಾಗಿರುವುದೇ ಸರಿ ತಾನೆ ! ಸಂಗೀತ ಸಾಹಿತ್ಯಗಳು ಬಡವರ ಐಶ್ವರ್ಯ. ಎಂಥವನಿಗೂ ಸಾಹುಕಾರರ ಸಹಾಯವಿಲ್ಲದೆ ಸುಖ ತಂದುಕೊಡಬಲ್ಲ ಶಕ್ತಿ ಸಂಗೀತ ಸಾಹಿತ್ಯಗಳಿಗಿರುತ್ತದೆ. ಜೀವನದಲ್ಲಿ ಒಂದು ಮಧುರ ಕಾಂತಿಯನ್ನು ಹರಡಬಲ್ಲ ಸಂಗೀತ ಸಾಹಿತ್ಯಗಳು ಪ್ರತಿಯೊಂದು ಮನೆಗೂ ಬೇಕಾದ ಸಾಮಗ್ರಿ. ನಮ್ಮ ಸಂಗೀತ ಬೋಧಕರು ಈ ಸಂದರ್ಭವನ್ನು ಮನಸ್ಸಿನಲ್ಲಿರಿಸಿ ಕೊಂಡು ಇಂಥಾ ಅಭ್ಯಾಸಿಗಳಿಗೆ ತಕ್ಕಂಥ ಸರಳ ಶೈಲಿಯನ್ನು,—ಆಡಂಬರ ಮಾಡದೆ ನೆಮ್ಮದಿ ಕೊಡುವ ಲಲಿತ ಶೈಲಿಯನ್ನು—ಅವರಿಗೆ ಕಲಿಸಬೇಕು. ಹೇಗೆ ಎಲ್ಲ ತೆರದ ಪ್ರಬಂಧಗಳಿಗೂ ಒಂದೇ ಗಾನ ಶೈಲಿ ಸರಿಹೊಂದಲಾರದೋ ಹಾಗೆಯೇ ಎಲ್ಲ ವ್ಯಾಸಂಗಿಗಳಿಗೂ ಒಂದೇ ಶೈಲಿಯು ತೃಪ್ತಿಕರವಾಗಿ ಅನ್ವಯಿಸಲಾರದು. ಈ ದೃಷ್ಟಿ ಯಿಂದಲೂ ನಮಗೆ ಹೊಸ ಲಲಿತ ಗಾಯನ ಶೈಲಿ ಬೇಕಾಗಿದೆ. ನಮ್ಮ ವಿಜಯ ಕಲಾ ಶಾಲೆಯ ವಿದ್ವಾಂಸರುಗಳು ಇದನ್ನು ಪರ್ಯಾಲೋಚಿಸಬೇಕೆಂದು ಬೇಡುತ್ತೇನೆ.

7

ರೇಡಿಯೋ ಸೇವೆ

ಕನ್ನಡ ಸಂಗೀತದ ಇಂದಿನ ಪರಿಸ್ಥಿತಿ ಉಲ್ಲಾಸಕರವಾಗಿಲ್ಲ. ಹುಟ್ಟುಕನ್ನಡಿಗರಾದ ಸಂಗೀತಗಾರರೂ ಸಹ ಕನ್ನಡ ಹಾಡು ಹಾಡಬೇಕೆಂದರೆ ಮೂರು–ನಾಲ್ಕು ಘಂಟೆಗಳ

ಕಛೇರಿಯಲ್ಲಿ ಅದನ್ನು ಕೊನೆಯ ಮೂರು ನಿಮಿಷಗಳ ಚುಟುಕೆಯಲ್ಲಿ ಓಡಿಸಿ ಮುಗಿಸು ತ್ತಾರೆ. ಏಳೇ ಅಕ್ಷರದ ಪಲ್ಲವಿ ಬೇಕಾದರೂ "ಇನ್ನಮ್–ದಯ–ವಿಲ್ಲೆಯೋ" ಎಂಬ ತಮಿಳೇ ಅವರಿಗೆ ಪ್ರಿಯವಾಗುತ್ತದೆ. ಇದು ನಮ್ಮ ಹಾಡುವವರ ಅಭಿಮಾನ.

ಇನ್ನು ಕೇಳುವವರದೋ ಎಂದರೆ, ಕನ್ನಡ ನಾಡಿನಲ್ಲಿ ಅರ್ಧ ಪಾಲಿಗೆ ಕರ್ಣಾಟಕ ಸಂಗೀತವೆಂಬುದರ ನಿಜಸ್ವರೂಪವೇ ತಿಳಿಯದು. ಮೈಸೂರಿನಿಂದಾಚೆ—ಧಾರವಾಡ ಉತ್ತರ ಕನ್ನಡ ಪ್ರಾಂತಗಳಲ್ಲೆಲ್ಲಾ ಮಹಾರಾಷ್ಟ್ರ ಗವಾಯಿಗಳದೇ ಸಂಗೀತ. ಪುರಂದರ ದಾಸರ ಹಾಡುಗಳನ್ನು ಅವರು ಹಿಂದುಸ್ತಾನಿ ಧಾಟಿಯಲ್ಲೇ ಹಾಡಬೇಕು. ನಮ್ಮ ಶಂಕರಾಭರಣ ಕೇದಾರ ಗೌಳಗಳು ಅವರ ಕಿವಿಗೆ ರೂಢಿಯಿಲ್ಲ.

ಇಂಡಿಯ ಸರಕಾರದ ರೇಡಿಯೋ ಇಲಾಖೆಯಲ್ಲಿಯೇ ಕರ್ಣಾಟಕ ಸಂಗೀತದ ವಿಚಾರದಲ್ಲಿ ವಿಚಕ್ಷಣೆ ತಕ್ಕಷ್ಟಿರುವಂತೆ ತೋರುವುದಿಲ್ಲ. ಆ ಇಲಾಖೆಗೆ ಕನ್ನಡ ಸಂಗೀತ ಒಬ್ಬ ಬಡ ನೆಂಟ. ಅಗ್ರಭೋಜನ ತಮಿಳು ತೆಲುಗುಗಳಿಗೆ. ಮಿಕ್ಕ ತಂಗಳು ಕನ್ನಡಕ್ಕೆ. ಗ್ರಾಮೊಫೋನ್ ಕಂಪನಿಗಳಿಗಂತೂ ಕನ್ನಡ ಲೆಕ್ಕಕ್ಕಿಲ್ಲ. ಮೈಸೂರು ಧಾರವಾಡಗಳಿಂದ ಕೇಳಬರುವ ರೆಕಾರ್ಡ್ ಸಂಗೀತ ಹತ್ತರಲ್ಲೊಂಬತ್ತು ಹಿಂದಿ ತಮಿಳು ತೆಲುಗುಗಳದು. ಕನ್ನಡದಲ್ಲಿ ಘನವಿದ್ವಾಂಸರ "ರೆಕಾರ್ಡು" ಕೂಡ ಇಲ್ಲ. ರೇಡಿಯೋ ಹಾಡಿಕೆಗೂ ಗ್ರಾಮೊಫೋನ್ ರೆಕಾರ್ಡಿಗೂ ಭಾರಿ ಕನ್ನಡ ಗಾಯಕ ವಿದ್ವಾಂಸರನ್ನು ಪ್ರೋತ್ಸಾಹಿಸಿ ಒಡಂಬಡಿಸಲು ಬೇಕಾಗುವ ದ್ರವ್ಯಾನುಕೂಲ ನಮ್ಮ ಎರಡು ಕನ್ನಡ ರೇಡಿಯೋ ಕೇಂದ್ರಗಳಿಗೂ ಇಲ್ಲವೆಂದು ತೋರುತ್ತದೆ. ಕನ್ನಡ ಕೃತಿಗಳನ್ನು ಹಾಡು ವುದರಲ್ಲಿ ನಿಪುಣತೆ ತೋರಿಸುವವರಿಗೆ ವಿಶೇಷ ಬಹುಮಾನಗಳನ್ನು ನೀಡಬೇಕು. ಕನ್ನಡ ಕೇಂದ್ರಗಳಲ್ಲಿ ಹಾಡುಗಾರರು ಹತ್ತರಲ್ಲಿ ಐದಕ್ಕೆ ಕಡಮೆಯಿಲ್ಲದಷ್ಟಾದರೂ ಕನ್ನಡದಲ್ಲಿಯೇ ಹಾಡಬೇಕೆಂದು ವಿಧಾಯಕವಾಗಬೇಕು. ಈ ರೀತಿಗಳಲ್ಲಿ ರೇಡಿಯೋ ಇಲಾಖೆ ವಿಶೇಷ ಪ್ರಯತ್ನ ನಡಸಿದಲ್ಲದೆ ಅದರ ಕನ್ನಡ ಸಂಗೀತ ಸೇವೆ ಯಶಸ್ಕರ ವಾಗಲಾರದು.

8

ಉಪಸಂಹಾರ

ಎಲ್ಲಿ ಶಕ್ತಿಯೂ ಸಂಪತ್ತೂ ಉಂಟೋ ಅಲ್ಲಿ ಜವಾಬ್ದಾರಿಯೂ ಉಂಟು. ಈ ವಿಜಯ ಕಲಾಶಾಲೆ ಇದುವರೆಗೆ ಮಾಡಿರುವ ಕೆಲಸದ ವಿಚಕ್ಷಣೆಯಿಂದ ಇನ್ನೂ ಹೆಚ್ಚಿನದನ್ನು ಅದರಿಂದ ನಿರೀಕ್ಷಿಸುವ ಹಕ್ಕು ಜನಕ್ಕುಂಟಾಗಿದೆ. ಕರ್ಣಾಟಕ ಸಂಗೀತದ ಪುನರುಜ್ಜೀವನಕ್ಕಾಗಿ ನಡೆಯಬೇಕಾಗಿರುವ ಪ್ರಯತ್ನಗಳನ್ನು ಕೈಕೊಳ್ಳಲು ಇರಬೇಕಾದ ವಿದ್ವತ್ತಿನ ಬಲವೂ ಪ್ರತಿಭೆಯ ಬಲವೂ ಉತ್ಸಾಹದ ಬಲವೂ ಈ ಕಲಾ ಶಾಲೆಯಲ್ಲಿ ತೋರಿಬರುತ್ತಿವೆ. ಅದಕ್ಕೆ ಧನದ ಬಲವೂ ಸೇರಬೇಕೆಂಬುದು ಎಲ್ಲರಿಗೂ ತಾನಾಗಿ ತೋರುವ ವಿಷಯ. ಈ ಸಂಸ್ಥೆಯ ಚಾಲಕರು ಪ್ರಯತ್ನಪಟ್ಟಲ್ಲಿ ನಮ್ಮ ಮಹಾ

ಜನರಿಂದಲೂ ಸರಕಾರಗಳಿಂದಲೂ ಮ್ಯುನಿಸಿಪಲ್ ಕಾರ್ಪೊರೇಷನ್ನಿನಿಂದಲೂ ಸಹಾಯ ದೊರೆತೀತೆಂದು ನನಗೆ ಭರವಸೆಯಿದೆ. ಅಂಥಾ ಸಹಾಯವನ್ನು ಕೇಳುವುದಕ್ಕೆ ಇರ ಬೇಕಾದ ಅಧಿಕಾರ ಯೋಗ್ಯತೆಯನ್ನು ಅದು ಈಗಾಗಲೇ ಸಂಪಾದಿಸಿಕೊಂಡಿದೆ ಯೆಂಬುದು ದೊಡ್ಡ ಸಂಗತಿ. ಇದಕ್ಕಾಗಿ ನಮ್ಮ ಭಾಗವತರ ಸ್ನೇಹಿತರೂ ಶಿಷ್ಯರೂ ಸಂತೋಷ ತುಂಬಿದವರಾಗಿದ್ದಾರೆ. ಈ ಸಂಸ್ಥೆ ಇಷ್ಟು ಯಶಸ್ವಿಯಾಗಿ ಬೆಳೆದಿರು ವುದಕ್ಕಾಗಿ ನಾನು ಭಾಗವತರವರನ್ನೂ ಅವರ ಸಹೋದ್ಯೋಗಿಗಳನ್ನೂ ಮನಃ ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಶಾಲೆಯವರು ತ್ಯಾಗರಾಜೋತ್ಸವ, ದೀಕ್ಷಿತರ ಉತ್ಸವ, ಪುರಂದರ ದಾಸರ ಉತ್ಸವಗಳನ್ನು ನಡಸಿದಂತೆ, ಕ್ಷೇತ್ರಜ್ಞ ಮೊದಲಾದ ಇತರ ವಾಗ್ಗೇಯಕಾರರ ಉತ್ಸವಗಳನ್ನೂ ನಡೆಸಿ, ಆ ಮೂಲಕ ಮಹಾಜನರಿಗೆ ಸಂಗೀತ ಸುಧೆಯ ಸಮಾರಾಧನೆ ನಡಸಬೇಕೆಂದು ನನ್ನ ಆಶೆ. ಭಗವಂತನು ಈ ಸಂಸ್ಥೆಯ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿನಿ ವಿದ್ಯಾರ್ಥಿಗಳಿಗೂ ಸಮಸ್ತ ಶುಭ ಗಳನ್ನೂ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

[ಜನಪ್ರಗತಿ : ಫೆಬ್ರವರಿ 21, 1954]

ಕ್ಷೇತ್ರಜ್ಞ*

ಕ್ಷೇತ್ರಜ್ಞನು ಕವಿ,—ಗಾನಕವಿ,—ಶೃಂಗಾರ ಗಾನಕವಿ. ಸಂದರ್ಭದ ಸೊಗಸು, ನಾದದ ಸೊಗಸು, ಭಾವದ ಸೊಗಸು—ಈ ಮೂರು ಸೊಗಸುಗಳು ಆತನ ರಚನೆಯಲ್ಲಿ ಏಕೀಭವಿಸಿವೆ. ಅವರ ಮಹಿಮೆಯಿಂದ ಆತನ ಕೀರ್ತಿ ಆತನ ಭಾಷೆಯಾದ ತೆಲುಗಿನ ಗಡಿಸೀಮೆಗಳನ್ನು ದಾಟಿ ಹೊರಗೆ ಬಹುದೂರ ವ್ಯಾಪಿಸಿದೆ. ತಮಿಳು ಸೀಮೆಯವರು ತಮ್ಮ ಪ್ರಾಂತದವರಾದ ತ್ಯಾಗರಾಜರು, ದೀಕ್ಷಿತರು, ಶಾಮಶಾಸ್ತ್ರಿಗಳು—ಈ ಮೂವರನ್ನು ಕರ್ಣಾಟಕ ಸಂಗೀತದ ತ್ರಿಮೂರ್ತಿಗಳೆಂದು ವರ್ಣಿಸುವುದುಂಟು. ಕ್ಷೇತ್ರಜ್ಞನು ಅವರಿಗಿಂತ ಯಾವ ಭಾಗದಲ್ಲಿಯೂ ಕೊಂಚವೂ ಕಡಮೆಯಾದವನಲ್ಲವೆಂದು ನನ್ನ ಅಭಿಪ್ರಾಯ. ಒಂದು ಭಾಗದಲ್ಲಿ ಅವನು ಅವರಿಗಿಂತ ವಿಶೇಷ: ಆ ಮೂವರೂ ಭಗವದ್ಭಕ್ತಿಪ್ರಧಾನರು; ಕ್ಷೇತ್ರಜ್ಞನು ಶೃಂಗಾರ ರಕ್ತಿಪ್ರಧಾನನಾದವನು. ರಕ್ತಿಯು ಭಕ್ತಿಗೆ ಸಮಾನವಾದೀತೆ? ಈ ಪ್ರಶ್ನೆಯನ್ನು ಸ್ಥಳಾವಕಾಶ ದೊರೆತರೆ ಮುಂದೆ ನೋಡೋಣ. ರಕ್ತಿಯೂ ಭಕ್ತಿಯ ಒಂದು ಮೆಟ್ಟಿಲೆಂದು,—ಒಂದು ಸಾಧನವೆಂದು—ನನ್ನ ಅಭಿಪ್ರಾಯ. ಕೇವಲ ಗಾನಕಲೆಯ ದೃಷ್ಟಿಯಿಂದ ನೋಡಿದರೆ ಕ್ಷೇತ್ರಜ್ಞನು ಅವರಂತೆ ಅಗ್ರಪಂಕ್ತಿಯವನು,—ಅವರಿಗಿಂತ ಮೊದಲನೆಯವನು.

ಕ್ಷೇತ್ರಜ್ಞನ ಜೀವಿತ ವೃತ್ತಾಂತಕ್ಕೆ ಆಧಾರಸಾಮಗ್ರಿ ಗಟ್ಟಿಯಾದದ್ದು ಏನೂ ದೊರೆಯುವಂತಿಲ್ಲ. ಆತನ ನಿಜವಾದ ಹೆಸರು ಕೂಡ ಗೊತ್ತಿಲ್ಲ. ಅಂಥಾ ಮನುಷ್ಯನೊಬ್ಬನಿದ್ದನೆಂಬುದನ್ನು ಮಾತ್ರ ಎಲ್ಲರೂ ಅಂಗೀಕರಿಸಿದ್ದಾರೆ. ಹಾಗೆಯೇ ಇನ್ನೆರಡು ಸಂಗತಿಗಳು ನಿರ್ವಿವಾದವಾಗಿವೆ: (1) ಆತನು ಆಂಧ್ರನೆಂಬುದು. (2) ಆತನ ಕಾಲ ಸುಮಾರು ಕ್ರಿಸ್ತಶಕ ಹದಿನೇಳನೆಯ ಶತಾಬ್ದವೆಂಬುದು. ಇನ್ನು ಕೆಲವಂಶಗಳನ್ನು ನೋಡೋಣ.

ಸ್ಥಳ

ಕ್ಷೇತ್ರಜ್ಞನ ವಾಸಸ್ಥಳ ಆಂಧ್ರದೇಶದ ಕೃಷ್ಣಾ ಜಿಲ್ಲೆಯ ಮುವ್ವ ಎಂಬ ಗ್ರಾಮ. ಅಲ್ಲಿಗೆ ಸುಮಾರು ಒಂದೆರಡು ಮೈಲಿ ದೂರದಲ್ಲಿರುವ ಕೂಚಿಪೂಡಿ ಎಂಬ ಹಳ್ಳಿ,

---

* ಪ್ರಜಾಮತ, ದೀಪಾವಳಿ ವಿಶೇಷಾಂಕ, 1963.

ನಾಟ್ಯಾಭಿನಯಕ್ಕೆ ಹೆಸರಾದದ್ದು. ಅಲ್ಲಿಯ ಭಾಗವತದ ಆಟ ಈಗಲೂ ಪ್ರಸಿದ್ಧವಾಗಿದೆ. ಆ ಪ್ರದೇಶ ವಿದ್ವದ್ರಸಿಕರಿಗೆ ಬಹುಕಾಲದಿಂದ ಪ್ರಸಿದ್ಧವಾಗಿದ್ದದ್ದೆಂದು ತೋರುತ್ತದೆ. ಕ್ಷೇತ್ರಯ್ಯನ ವಾತಾವರಣವೇ ಹೀಗೆ ಗಾನಸಾಹಿತ್ಯ ಕಲ್ಪನೆಗೆ ಅನುಕೂಲವಾಗಿದ್ದದ್ದು. ಆ ರಸಿಕ ಸನ್ನಿವೇಶಕ್ಕೆ ಕೇಂದ್ರಪ್ರಾಯವಾಗಿದ್ದದ್ದು ಮುವ್ವ ಗ್ರಾಮದ ಗೋಪಾಲಕೃಷ್ಣ ದೇವಾಲಯ. ಆ ಗುಡಿ ವಿನಾಯಕನದೋ ವೀರಭದ್ರನದೋ ಮಾರುತಿಯದೋ ಮಾರಮ್ಮನದೋ ಆಗದೆ ಶೃಂಗಾರಮೂರ್ತಿಯಾದ ಗೋಪಾಲನದಾಗಿದ್ದದ್ದು ರಸಿಕಪ್ರಪಂಚದ ಭಾಗ್ಯ. ಕ್ಷೇತ್ರಜ್ಞನ ಪದಗಳಲ್ಲಿ ಮಾತನಾಡುವ ನಾಯಿಕಾಮಣಿಯರು ಮುವ್ವ ಗೋಪಾಲನು ತಮ್ಮ ನಾಯಕನೆಂದು ಹೇಳಿಕೊಂಡಿದ್ದಾರೆ. ಹೀಗೆ ಕ್ಷೇತ್ರಯ್ಯನಿಗೆ ಸ್ಫೂರ್ತಿಸ್ಥಾನ ಮುವ್ವ ಗೋಪಾಲಸನ್ನಿಧಿ.

ಮುವ್ವಪುರಿಯ ಗುಡಿ ಈಗಲೂ ಇದೆ. ಕಟ್ಟಡ ಶಿಥಿಲವಾಗುತ್ತಿರುವಂತೆ ತೋರುತ್ತದೆ. ಅದನ್ನು ಭದ್ರಪಡಿಸಿ,—ಆದರೆ ನವನಾಗರಿಕತೆಯ ಅಲಂಕಾರ ಚೇಷ್ಟೆಗಳನ್ನು ತಾರದೆ,—ಅದರ ಹಿಂದಿನ ಕಾಲದ ಒಳ್ಳೆಯ ಸ್ಥಿತಿಯಲ್ಲಿ ಅದನ್ನು ಉಳಿಸಿಕೊಟ್ಟರೆ ಸಂಗೀತ ಸಾಹಿತ್ಯ ಭಕ್ತರಿಗೂ ಚರಿತ್ರಕಾರರಿಗೂ ದೊಡ್ಡ ಉಪಕಾರವಾಗುತ್ತದೆ.

ಕಾಲ

ಕ್ಷೇತ್ರಜ್ಞನ ಕೃತಿಯೆಂದು ಅಂಗೀಕೃತವಾದ "ವೇಡುಕತೋ ನಡಚುಕೊನ್ನ ವಿಟರಾಯುಡೇ" ಎಂಬ ಪದದಲ್ಲಿ ತಾನು ಮಧುರೆಯ ತಿರುಮಲ ನಾಯಕನಿಂದಲೂ ತಂಜಾವೂರಿನ ರಘುನಾಥ ನಾಯಕ ವಿಜಯರಾಘವ ನಾಯಕರುಗಳಿಂದಲೂ ಬಹುಮಾನಿತನಾದವನೆಂದು ಆತ ಹೇಳಿಕೊಂಡಂತೆ ಇದೆ. ಆ ಇಬ್ಬರು ತಂಜಾವೂರು ನಾಯಕರುಗಳ ಕಾಲ ಕ್ರಿಸ್ತಶಕ ಸುಮಾರು 1623–33, 1633–73 ಎಂದು ಗೊತ್ತಾಗಿದೆ. ಹೀಗೆ ಕ್ಷೇತ್ರಜ್ಞನು ಪುರಂದರ ದಾಸರಿಗಿಂತ (1550–64) ಈಚಿನವನು: ತ್ಯಾಗರಾಜರಿಗಿಂತ (1759–1847) ಹಿಂದಿನವನು.

ಕ್ಷೇತ್ರಜ್ಞನು ಬ್ರಾಹ್ಮಣನಂತೆ. ಆತನ ತಂದೆ–ತಾಯಿ ಮೊದಲಾದ ಬಂಧುಬಳಗಗಳ ಹೆಸರು ಯಾವುದೂ ಗೊತ್ತಿಲ್ಲ. ಆತನಿಗೆ ಮಡದಿ ಮಕ್ಕಳಿದ್ದರೋ ಇಲ್ಲವೋ ಗೊತ್ತಿಲ್ಲ. ಆತನ ವಂಶಿಕರೆಂದು ಹೇಳಿಕೊಳ್ಳುವ ಕುಟುಂಬಗಳು ಒಂದೆರಡು ಮುವ್ವ ಪ್ರಾಂತದಲ್ಲಿವೆಯಂತೆ. "ವೇಡುಕತೋ ನಡಚುಕೊನ್ನ" ಎಂಬ ಕಾಂಭೋಜಿ ರಾಗದ ಪದದಲ್ಲಿಯ,—

ಪಡುಮೂಡು ತಲರಾನುಂಚಿ । ಇಂದುನ್ನ ಕಾಣಾಚಿಟ ।
ಗೂಡುಕೊನಿ ಮಾ ಮುವ್ವ । ಗೋಪಾಲುಡಾ ವಿಭುಡು ॥

—ಎಂಬ ವಾಕ್ಯದಿಂದ ಮುವ್ವ ಗೋಪಾಲಸ್ವಾಮಿ ಹತ್ತು (ಅಥವಾ ಇಪ್ಪತ್ತೊಂದು) ತಲತಲಾಂತರಗಳಿಂದ ಕ್ಷೇತ್ರಜ್ಞನಲ್ಲಿ ಬಚ್ಚಿಟ್ಟುಕೊಂಡಿದ್ದವನೆಂದು ಅರ್ಥ ಬರುತ್ತದೆ. ಗೋಪಾಲ ಭಕ್ತಿಯೂ ಗಾನಪ್ರಾವೀಣ್ಯವೂ ಕ್ಷೇತ್ರಜ್ಞನಿಗೆ ವಂಶಪರಂಪರೆಯಿಂದ ಲಭ್ಯವಾಗಿತ್ತೆಂದು ಇದರ ಸೂಚನೆಯಾಗಿದ್ದರೂ ಇರಬಹುದು.

ಕ್ಷೇತ್ರಜ್ಞನಿಗೆ ಆತನ ತಂದೆ-ತಾಯಿ ಇಟ್ಟ ಹೆಸರು ವರದಯ್ಯನೆಂದು ಒಂದು ಕಥೆ. ಕ್ಷೇತ್ರಜ್ಞನ ಕೃತಿಗಳಲ್ಲಿ ಕೆಲವು ಕಂಚಿ ವರದನನ್ನು ಸ್ಮರಿಸುತ್ತವೆ. ಕಂಚಿಯೆಂಬ ಪೂರ್ವಪದವಿಲ್ಲದೆ "ವರದ" ಎಂದೂ ಸ್ಮರಣೆಯಿದೆ. "ವರದ" ಎಂಬುದು ಭಗವಂತನ ಹೆಸರು,—ಸಾಮಾನ್ಯವಾಗಿ ಬಳಕೆಯಲ್ಲಿರುವ ಹೆಸರು. ನಮ್ಮ ದಾಸರು—

ವರದಾ, ನೀ ಪೊರೆಯೆಂದು ।
ಕರೆಯಲಾಕ್ಷಣ ಬಂದು ಪೊರೆದೇ ॥

ಎಂದು ಹಾಡಿದ್ದಾರೆ. ಇಷ್ಟರಿಂದ ಆ ದಾಸರ ಹೆಸರು "ವರದ" ಎಂದು ಸಿದ್ಧವಾಗುವುದಿಲ್ಲ. ಹಾಗೆಯೇ ಕ್ಷೇತ್ರಜ್ಞನ ಮೊದಲ ಹೆಸರು "ವರದ" ಎಂಬುದು ಖಂಡಿತವೆನಿಸಲಾರದು. ಆದರೆ ಅದು ಅಲ್ಲವೇ ಅಲ್ಲ ಎಂಬ ಹಟವಾದಕ್ಕೂ ಕಾರಣವಿಲ್ಲ. ಸದ್ಯಃ ನಾವು ಅವನನ್ನು ಕ್ಷೇತ್ರಜ್ಞ. ಕ್ಷೇತ್ರಯ್ಯ. ಕ್ಷೇತ್ರಿಯ ಎಂದೇ ಕರೆಯೋಣ.

ಹೆಸರು

"ಕ್ಷೇತ್ರಜ್ಞ" ಎಂಬ ಮಾತು ಜನದ ರೂಢಿಯಲ್ಲಿರುವ ನಾಮಕರಣ ಶಬ್ದಗಳ ಪೈಕಿ ಸೇರಿದ್ದಲ್ಲ. ಆ ಹೆಸರಿರುವವರನ್ನು ಆಂಧ್ರಪ್ರದೇಶವಲ್ಲಿಯಾಗಲಿ ಮತ್ತೆಲ್ಲಿಯಾಗಲಿ ಕಂಡದ್ದಿಲ್ಲ. ಅದು ಅಪೂರ್ವವಾದ ಹೆಸರು. ಹುಟ್ಟಿನಿಂದ ವರದಯ್ಯನೆನ್ನಿಸಿಕೊಂಡಿದ್ದ ಮನುಷ್ಯನು ಮಹಾಭಕ್ತನಾಗಿ ನೂರಾರು ಕ್ಷೇತ್ರ ತೀರ್ಥಗಳಿಗೆ ಯಾತ್ರೆ ಹೋಗಿ ಸರ್ವದಾ ಕ್ಷೇತ್ರವಾಸಿಯಾಗಿದ್ದನಾದದ್ದರಿಂದ ಅವನಿಗೆ ಕ್ಷೇತ್ರಯ್ಯ. ಕ್ಷೇತ್ರಜ್ಞ ಎಂದು ಮೊದಲಾಗಿ ಹೆಸರು ಬಂತೆಂದು ಒಂದು ಐತಿಹ್ಯ.

ಯಾವ ಗೇಯಕವಿತೆಗಳನ್ನು ನಾವು ಇಂದು ಕ್ಷೇತ್ರಜ್ಞಪದಗಳೆಂದು ಅಂಗೀಕರಿಸಿದ್ದೇವೋ ಆ ಕವಿತೆಗಳ ಸಂದರ್ಭ ಭಾವಗಳನ್ನು ನೋಡಿದರೆ ಅವುಗಳ ಕರ್ತೃವಿಗೆ "ಕ್ಷೇತ್ರಜ್ಞ" ಎಂಬ ಹೆಸರು ಅನ್ವರ್ಥವಾಗಿ ಸಲ್ಲುತ್ತದೆ ಎಂದು ಸಿದ್ಧವಾಗುತ್ತದೆ.

ಭಗವದ್ಗೀತೆಯ ಹದಿಮೂರನೆಯ ಅಧ್ಯಾಯವು ಕ್ಷೇತ್ರ ಕ್ಷೇತ್ರಜ್ಞರನ್ನು ಕುರಿತದ್ದು. ಅಲ್ಲಿ—

ಇದಂ ಶರೀರಂ ಕೌನ್ತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥

"ಈ ಶರೀರವೇ ಕ್ಷೇತ್ರ; ಇದರ ಸ್ವಭಾವವನ್ನು ಅರಿತವನೇ ಕ್ಷೇತ್ರಜ್ಞ."

ಕ್ಷೇತ್ರವೆಂದರೆ ಸಾಮಾನ್ಯವಾಗಿ ಬೇಸಾಯದ ಭೂಮಿ,—ಜಮೀನು. ಮನುಷ್ಯ ದೇಹವು ಸಂಸಾರ ಸತ್ಯದಭೂಮಿ. ಅದರ ಸ್ವಭಾವವೆಂದರೆ ಅಂಗಾಂಗಗಳು, ಇಂದ್ರಿಯಗಳು, ಮನಸ್ಸು. ಇವೆಲ್ಲ ಸೇರಿ ಮಾಡುವ ರಂಪು ರಗಳೆಗಳು, ರಾಗದ್ವೇಷಗಳು, ಮೋಹಮತ್ಸರಗಳು,—ಈ ನಾನಾ ಪ್ರಕಾರದ ಜೀವಾವಸ್ಥೆಗಳೂ ಜೀವಚೇಷ್ಟಿತಗಳೂ ಜೀವಪರಿಣಾಮಗಳೂ ಕ್ಷೇತ್ರಾಂಶ. ಯಾರು ಈ ಕ್ಷೇತ್ರಗತಗಳಾದ ದೇಹ ಜೀವ ಸಂಬಂಧಗಳನ್ನು ಚೆನ್ನಾಗಿ ಬಲ್ಲನೋ ಅವನು ಕ್ಷೇತ್ರಜ್ಞ. ನಮ್ಮ ಕವಿ ಅಂಥವನು —ಪ್ರಣಯವ್ಯಾಪಾರಮರ್ಮಸರ್ವಜ್ಞ.

ಕೃತಿ

ಕ್ಷೇತ್ರಜ್ಞ ಎಲ್ಲಿ ವಿದ್ಯಾಭ್ಯಾಸಮಾಡಿದನೋ, ಗುರುವು ಯಾರೋ ತಿಳಿಯುವಂತಿಲ್ಲ. ಆತನ ಕಸಬು ಯಾವುದೋ, ಹೇಗೆ ಜೀವಿಕೆ ಸಂಪಾದಿಸಿಕೊಂಡನೋ ತಿಳಿಯುವಂತಿಲ್ಲ. ಮೇಲೆ ಉದಾಹರಿಸಿದ "ವೇಡುಕತೋ...ವಿಟರಾಯುಡೇ" ಎಂಬ ಪದದಿಂದ ಆತನಿಗೆ ರಾಜಾಶ್ರಯ ದೊರೆಯಿತೆಂದು ಗೊತ್ತಾಗುತ್ತದೆ. ಆದರೆ ಅದು ಅವನು ಪ್ರಸಿದ್ಧಿಗೆ ಬಂದ ಮೇಲೆ ದೊರೆತದ್ದು. ಅದು ಬರುವವರೆಗೂ ಆತ ಬದುಕಿದ್ದು ಹೇಗೆ? ನನ್ನ ಊಹೆ ಹೀಗೆ: ಆ ಕಾಲದಲ್ಲಿ ನಮ್ಮ ದೇಶದಲ್ಲಿ ಜನಕ್ಕೆ ಜೀವನದ ಚಿಂತೆ ಈಗಿನಷ್ಟು ಕಠಿನವಾಗಲು ಕಾರಣವಿರಲಿಲ್ಲ. ಅದು ನೆಮ್ಮದಿಯ ಯುಗ. ಭೂವ್ಯವಸಾಯ ಆಗ ವಿಸ್ತಾರವಾಗಿತ್ತು. ಮಳೆಬೆಳೆ ಕಾಲಕಾಲಕ್ಕೆ ನಡೆದರೆ ದೇಶವೆಲ್ಲ ಸುಭಿಕ್ಷವಾಗಿರುತ್ತಿತ್ತು. ಮತ್ತು ಆ ಕಾಲದಲ್ಲಿ ವಿದ್ವಜ್ಜನರಿಗೆ ಸಾಮಾನ್ಯ ಜನರಿಂದ ಮನ್ನಣೆ ಸಂಭಾವನೆಗಳು ಸುಲಭವಾಗಿ ಸಿಕ್ಕುತ್ತಿದ್ದುವು. ಎಲ್ಲರೂ ಸ್ವಲ್ಪದರಿಂದ ಸಂತುಷ್ಟರಾಗುವ ಮನಸ್ಸುಳ್ಳವರಾಗಿದ್ದರು. ಒಟ್ಟಿನಲ್ಲಿ ಅದು ಐಶ್ವರ್ಯದ ಕಾಲವಾಗದೆ, ಸಾಹಸದ ಕಾಲವೂ ಆಗದೆ, ನೆಮ್ಮದಿಯ ಕಾಲವಾಗಿತ್ತು: ಮನಸ್ತೃಪ್ತಿಯ ಕಾಲವಾಗಿತ್ತು. ಕ್ಷೇತ್ರಜ್ಞನಿಗೆ ಪಿತ್ರಾರ್ಜಿತವಾಗಿ ಬಂದ ಭೂಸ್ವತ್ತು ಅಷ್ಟಿಷ್ಟು ಇದ್ದಿರಬಹುದು. ಅದರ ಜೊತೆಗೆ ಸಂಗೀತಗಾರನಾಗಿಯೋ ಬೋಧಕನಾಗಿಯೋ ಒಂದಿಷ್ಟು ಸಂಪಾದಿಸಿಕೊಂಡಿರಬಹುದು. ಅವನ ಕವಿತೆಯ ವಿಷಯ ಲಕ್ಷಣವನ್ನು ನೋಡಿದರೆ ಅವನು ಸುಖ ವಸತಿಯಲ್ಲಿದ್ದವನೆಂದು ತೋರುತ್ತದೆ. ಅವನ ಕೃತಿಗಳಲ್ಲೆಲ್ಲಿಯೂ ಅನ್ನ ವಸ್ತ್ರ ಚಿಂತೆಯ ಸೂಚನೆಯಿಲ್ಲ. ಧನಪ್ರಪಂಚದ ಕಷ್ಟ ಕಾರ್ಪಣ್ಯಗಳ ಸ್ಮರಣೆಯಿಲ್ಲ. ಅವನಿಗಿದ್ದ ಕಷ್ಟಕಾರ್ಪಣ್ಯಗಳೆಂದರೆ ಪ್ರಣಯ ಪ್ರಪಂಚದವು.

ಅವನು ಚೆನ್ನಾಗಿಯೇ ವಿದ್ಯಾವ್ಯಾಸಂಗ ಮಾಡಿದವನಾಗಿರಬೇಕು. ಅವನ ಭಾಷಾ ಶೈಲಿ ಅಧಿಕಾರಧೋರಣೆಯನ್ನು ತೋರಿಸುತ್ತದೆ. ಮಾತುಗಳು ಸಲಿಗೆಯ ಬಳಕೆಯ ಮಾತುಗಳೇ ಆದರೂ ಅವನ ಸಂಸ್ಕೃತಾಂಧ್ರ ಪ್ರಯೋಗಗಳು ಸಾಮಾನ್ಯ ಜನದೊಡನೆ ಮಾತನಾಡುವ ವಿದ್ವಾಂಸನ ಪ್ರಯೋಗಗಳು. ಅವನು ಪಾಂಡಿತ್ಯವನ್ನು ಪ್ರದರ್ಶಿಸಿಲ್ಲ. ಆದರೆ ಪಾಂಡಿತ್ಯವಿಲ್ಲದವನಲ್ಲ. ಅದನ್ನು ಲೋಕಾರ್ಥವಾಗಿ ಹೇಗೆ ಉಪಯೋಗಿಸ

ಬೇಕೋ ಹಾಗೆ ಮಿತವಾಗಿ ಹಿತವಾಗಿ ಉಪಯೋಗಿಸಿದ್ದಾನೆ. ಆ ಕಾಲದಲ್ಲಿ—ಯುರೋಪಿನ ನಾಗರಿಕತೆ ನಮ್ಮಲ್ಲಿ ಕಾಲೂರುವ ಮುನ್ನ—ಸಾಮಾನ್ಯವಾಗಿ ಬ್ರಾಹ್ಮಣ ಜನಾಂಗದವರೆಲ್ಲ ಒಂದಷ್ಟು ವಿದ್ವಾಂಸರಾಗಿಯೇ ಇರುತ್ತಿದ್ದರು. ಕ್ಷೇತ್ರಜ್ಞನು ಕಾವ್ಯ ನಾಟಕಾಲಂಕಾರ ಛಂದಸ್ಸುಗಳಲ್ಲಿ ಕೃತಪರಿಶ್ರಮನಾಗಿದ್ದವನೆನ್ನಲು ಸಂದೇಹವಿಲ್ಲ.

ಸಂಗೀತವನ್ನು ಆತ ಎಲ್ಲಿ— ಯಾರಲ್ಲಿ—ಕಲಿತನೋ ತಿಳಿಸುವ ಸೂಚನೆಯಿಲ್ಲ. ಯಾರೋ ಒಬ್ಬ ಯೋಗಿ ಆತನಿಗೆ ಗೋಪಾಲಮಂತ್ರವನ್ನು ಉಪದೇಶಿಸಿದನೆಂದೂ ಆ ಮಂತ್ರಪುರಶ್ಚರಣೆಯ ಪ್ರಭಾವದಿಂದ ಕ್ಷೇತ್ರಜ್ಞನಿಗೆ ಕವಿತ್ವದ ಸ್ಫೂರ್ತಿ ಬಂತೆಂದೂ ಒಂದು ಕಥೆಯುಂಟು. ಕವಿತ್ವದಲ್ಲಿ ಅಂತಃಸ್ಫೂರ್ತಿಗೆ ಸ್ಥಾನವುಂಟು ; ಅದು ಪ್ರಥಮ ಸ್ಥಾನವೆಂದೂ ಎಲ್ಲರೂ ಒಪ್ಪಬಹುದು. ಆ ಸ್ಫೂರ್ತಿ ತಾನೇತಾನಾಗಿ ಬರುತ್ತದೆ,—ಭಗವದ್ವರವಾಗಿ ಬರುತ್ತದೆ ; ಪೂರ್ವಜನ್ಮದ ಸುಕೃತಫಲವಾಗಿ ಬರುತ್ತದೆ. ತಿಣಿಕಿ. ಬೆವರಿ, ಗ್ರಂಥಪ್ರಯಾಸ ಮಾಡಿಕೊಂಡರೆ ಅದು ಬರುತ್ತದೆಂಬ ಖಾತರಿಯಿಲ್ಲ—ಹೀಗೆಂಬುದನ್ನು ಒಪ್ಪಬಹುದು. ಆದರೆ ಸ್ಫೂರ್ತಿಯಷ್ಟೇ ಸಾಕೆ ? ಸ್ಫೂರ್ತಿಯ ಕೆಲಸಕ್ಕೆ ಒಂದು ಮನೋಬುದ್ಧಿಗಳ ಸಿದ್ಧತೆಯಿರಬೇಡವೆ ? ಕಾವ್ಯಾಭ್ಯಾಸಂಗ, ಶಾಸ್ತ್ರ ಶಿಕ್ಷಣ, ಲೋಕಾನುಭವ—ಇವು ಕವಿಗಿರಬೇಕಾದ ಪೂರ್ವಸಿದ್ಧತೆಗಳು. ಕ್ಷೇತ್ರಜ್ಞನ ಕೃತಿಯಲ್ಲಿ ಈ ಮೂರು ಬಗೆಯ ಲಕ್ಷಣಗಳೂ ಚೆನ್ನಾಗಿ ಕಾಣಬರುತ್ತವೆ. ಸಂಗೀತದ ಜೊತೆಗೆ ಕ್ಷೇತ್ರಜ್ಞನು ನಾಟ್ಯಾಭಿನಯಸಂಪ್ರದಾಯಗಳನ್ನೂ ಚೆನ್ನಾಗಿ ಸ್ವಾಧೀನಪಡಿಸಿಕೊಂಡಿದ್ದವನೆಂದೂ ತೋರಿಬರುತ್ತದೆ. ಆ ಶಿಕ್ಷಣವಾದದ್ದೆಲ್ಲಿ ? ಹೇಗೆ ? ನಮ್ಮ ಪೂರ್ವಕವಿಗಳ ಸಮಾಚಾರವೇ ಹೀಗೆ. ಕಾಳಿದಾಸನ ಕಾವ್ಯ ನಾಟಕಗಳಲ್ಲಿ ಗಾಯನ ನರ್ತನಾಭಿನಯ ಪ್ರಸಕ್ತಿಗಳು ಅನೇಕವಾಗಿವೆ. ಕಾಳಿದಾಸನ ಸಾಹಿತ್ಯ ಗುರುವ್ಯಾರು ? ಸಂಗೀತ ಗುರುವ್ಯಾರು ? ನಾಟ್ಯಗುರುವ್ಯಾರು ? ಕ್ಷೇತ್ರಜ್ಞನ ವಿಚಾರವೂ ಅಷ್ಟೇ.

ಕ್ಷೇತ್ರಜ್ಞನು ಪದಗಳೆಂಬ ಕವಿತೆಗಳ ಹೊರತು ಬೇರೆ ಯಾವ ಗ್ರಂಥವನ್ನೂ ಬರೆದಂತಿಲ್ಲ. ಆತನ ಹೆಸರಿನ ಕಾವ್ಯನಾಟಕಾದಿ ಪ್ರಬಂಧಗಳಾಗಲಿ. ಶಾಸ್ತ್ರಗ್ರಂಥಗಳಾಗಲಿ ಯಾವುವೂ ದೊರೆತಿಲ್ಲ. ಆತನದೆಂದು ಹೇಳುವ ಒಂದು ಕಂದಪದ್ಯವನ್ನು ಶ್ರೀ ಬಿ. ಗೋಪಾಲರೆಡ್ಡಿಯವರು ಉದಾಹರಿಸಿದ್ದಾರೆ. ಕ್ಷೇತ್ರಜ್ಞನು ತಂಜಾವೂರಿನ ದೊರೆ ರಘುನಾಯಕನ (1623–33) ಆಸ್ಥಾನಕ್ಕೆ ಹೋದನಂತೆ—ಆಶ್ರಯಕ್ಕಾಗಿ. ಆ ದೊರೆ ಆತನನ್ನು "ನಿನ್ನನ್ನಿಲ್ಲಿಗೆ ಬಾರೆಂದವರ್ಯಾರು ?"—ಎಂದು ಕೇಳಿದನಂತೆ. ಅದಕ್ಕುತ್ತರವಾಗಿ ಕ್ಷೇತ್ರಜ್ಞನು ಹೀಗೆಂದ :

> ತಮು ತಾಮೆ ವಸ್ತುರರ್ಥುಲು ।
> ಕ್ರಮಮೆರಗಿನ ದಾತಕಡಕು ರಮ್ಮನ್ನಾರಾ ॥
> ಕಮಲಂಬುಲುನ್ನ ಚೋಟಿಕಿ ।
> ಭ್ರಮರಂಬುಲು ಯಚ್ಯುತೇಂದ್ರ ರಘುನಾಥನೃಪಾ ॥

"ಯೋಗ್ಯತೆ ಕಾಣಬಲ್ಲ ದಾತನ ಬಳಿಗೆ ಯಾಚಕರು ತಾವುತಾವೇ ಬರುತ್ತಾರೆ. ಕಮಲಗಳಿರುವೆಡೆಗೆ ದುಂಬಿಗಳನ್ನು ಬನ್ನಿರೆಂದು ಕರೆಯಬೇಕೆ ?"

ಕ್ಷೇತ್ರಜ್ಞನ ಪದನಿರ್ಮಾಣ ಇದಕ್ಕೆ ಹಿಂದೆಯೇ ಆರಂಭವಾಗಿದ್ದಿರಬೇಕು. ಆತನ ಮೊಟ್ಟಮೊದಲನೆಯ ಕೃತಿ ಇದು : ರಾಗ, ಆನಂದಭೈರವಿ ; ತಾಳ, ಆದಿ.

ಶ್ರೀಪತಿಸುತು ಬಾರಿಕಿ ನೇ ।
ನೋಪಲೇಕ ನಿನು ವೇಡಿತೇ ।
ಕೋಪಾಲಾ ಮುವ್ವಗೋಪಾಲಾ ॥

(ಕನ್ನಡ) ಶ್ರೀಪತಿಸುತ ತಾಪದಿ ನಾಂ ।
ಸೈಪರಿಯದೆ ನಿನ್ನ ಬೇಡಲು ।
ಕೋಪವಲಾ ಮುವ್ವಗೋಪಾಲಾ ॥

(ಶ್ರೀಪತಿಸುತ=ಮನ್ಮಥ)

ಈ ಪದದ ಪ್ರತಿಪಂಕ್ತಿಯ ಕೊನೆಯಲ್ಲೂ ಕೋಪಾಲಾ ? ಸಲ್ಲಾಪಾಲಾ ? ಕಲಾಪಾಲಾ ? ನಾ ಪಾಲಾ ? ಎಂದು ಗೋಪಾಲ ಶಬ್ದದೊಡನೆ ಪ್ರಾಸ ಸೇರುವುದು ಪದಮೈತ್ರಿಯನ್ನೂ ಸಂದರ್ಭಚಮತ್ಕಾರವನ್ನೂ ತೋರುತ್ತದೆ. ಈ ಪದವು ಶ್ರೀಕಾರದಿಂದ ಪ್ರಾರಂಭವಾಗಿರುವ ಕಾರಣದಿಂದ ಇದು ಪ್ರಥಮ ಕೃತಿಯೆಂಬ ಎಣಿಕೆ ಬಂದಿರಬಹುದು. ಅದಕ್ಕಿನ್ನ್ಯಾವ ಆಧಾರವೂ ಕಾಣದು.

ಒಟ್ಟಿನಲ್ಲಿ ಕ್ಷೇತ್ರಜ್ಞನ ರಚನೆಗಳು ಅನೇಕ ಸಾವಿರವೆಂದು ವದಂತಿ. ಮೇಲೆ ಉದಾಹರಿಸಿದ " ವೇಡುಕತೋ ನಡಚುಕೊನ್ನ " ಎಂಬ ಪದದಲ್ಲಿ ಹೀಗೆ ಹೇಳಿದೆ :

(1)	ಮಧುರೆಯ ತಿರುಮಲೇಂದ್ರ ಪ್ರಭುವು ಬಹುಮಾನಮಾಡಿ ಎದುರಿಗೆ ಕೂಡಿಸಿಕೊಂಡು ಕೇಳಿದಾಗ " ಇದೋ ತೆಗೆದುಕೋ " ಎಂದು ಕೊಟ್ಟ ಪದಗಳು......	2,000
(2)	ತಂಜಾವೂರಿನ ವಿಜಯರಾಘವ ಪ್ರಭುವು ವಿಜಯೋತ್ಸವ ದಲ್ಲಿದ್ದಾಗ ನುಡಿದು ಸನ್ಮಾನ ಪಡೆದ ಪದಗಳು......	1,000
(3)	ಗೋಲ್ಕೊಂಡ ಪಾದುಷಾ ಪ್ರಭುವು ತುಲಸಿಮೂರ್ತಿಯೆಂಬ ಗಾಯಕನೊಡನೆ ಪೋಟಿ ಮಾಡಿದಾಗ ಮುವ್ವಗೋಪಾಲನು ಆತನ ಕೇಳ್ವಿಗಾಗಿ, ನಲವತ್ತು ದಿವಸಗಳೊಳಗಾಗಿ, ಕೇಳ್ವಿ ಮಾಡಿಸಿದ ಪದಗಳು......	1,700
	ಒಟ್ಟು ಪದಗಳು......	4,700

ಕ್ಷೇತ್ರಜ್ಞನು ಸ್ಪರ್ಧೆಮಾಡಿ ಗೆದ್ದದ್ದು ಗಾಯಕ ತುಲಸಿಮೂರ್ತಿಯೊಬ್ಬನ ಮೇಲೆಯೇ ಅಲ್ಲ. ವಿಜಯರಾಘವನ ಆಸ್ಥಾನದ ವಿದ್ವಾಂಸರು ಅವನ ಕವಿತ್ವವನ್ನು ಹಾಸ್ಯಮಾಡಿದರು. " ಪರಾ. ರಾರಾ. ಪೋರಾ, ರಮ್ಮನವೇ, ಪೊಮ್ಮನವೇ— ಇಂಥಾದ್ದೇ ತಾನೆ ಕ್ಷೇತ್ರಜ್ಞನ ಪ್ರೌಢಿಮೆ !" ಎಂದು ದೊರೆಯ ಮುಂದೆ ಅಲ್ಲ ಗಳೆದರು. ಅದಕ್ಕೆ ಪ್ರತ್ಯುತ್ತರವಾಗಿ ಕ್ಷೇತ್ರಜ್ಞನು ಕಾಂಭೋಜಿರಾಗದಲ್ಲಿ ಒಂದು

ಹೊಸ ಪದವನ್ನು ರಚಿಸಿ, ಅದರ ಕಡೆಯ ಪಾದದ ಕಡೆಯ ಪಂಕ್ತಿಯೊಂದನ್ನು ಮಾತ್ರ ಬಿಡುವುಬಿಟ್ಟು ಅವನ್ನು ರಾಜನಿಗೆ ತೋರಿಸಿ "ಪ್ರಭುವೆ, ನಾನು ಇಷ್ಟು ಮಾಡಿ, ಬಿಟ್ಟಿದ್ದೇನೆ. ಈಗ ರಾಮೇಶ್ವರಕ್ಕೆ ಹೋಗಿ ಯಾತ್ರೆ ಮುಗಿಸಿ ಮರಳಿ ಇಲ್ಲಿಗೆ ಬರುತ್ತೇನೆ. ಅಷ್ಟರೊಳಗಾಗಿ ಇಲ್ಲಿಯ ಸಂಗೀತ ವಿದ್ವಾಂಸರು ನಾನು ಬಿಡುವುಬಿಟ್ಟಿರುವ ಪಂಕ್ತಿಯನ್ನು ಭರ್ತಿಮಾಡಲಿ"—ಎಂದು ಬಿನ್ನಯಿಸಿ ಅಪ್ಪಣೆ ಪಡೆದು ತೆರಳಿದ. ಆ ಪದ ಹೀಗೆ :

ರಾಗ : ಕಾಂಭೋಜಿ [ತಾಳ : ತಿಶ್ರತ್ರಿಪುಟ]

ವದರಂಕ ಪೋಪೋವೇ | ವಾಡೇಲ ವಚ್ಚೀನಿ ।
ವದ್ದು ರಾವದ್ದನವೇ ॥
ಭಾಮರೋ ಶಕುನಮು।ಲಡಿಗಿತಿ ಮುವ್ವ ಗೋ-
ಪಾಲುಡು ವಚ್ಚುನನುಚು ॥
....

ವಿದ್ವಾಂಸರು ಅದೇನು ಮಹಾ ! ಎಂದರು. ಸಮಸ್ಯಾಪೂರಣಕ್ಕಾಗಿ ಹೊಸೆಯಲು ಕುಳಿತರು, ಕೈಸಾಗಲಿಲ್ಲ. ತಿಣಕಿದರು, ಸಾಗಲಿಲ್ಲ. ಮುಕ್ಕಿದರು, ಸಾಗಲಿಲ್ಲ. ಮತ್ತೆ ಮತ್ತೆ ಹೆಣಗಿದರು, ಇದ್ದಲ್ಲೇ ಇದ್ದರು. ಅವರು ಹಾಗಿರುವಾಗ ಕ್ಷೇತ್ರಜ್ಞನು ಯಾತ್ರೆ ಮುಗಿಸಿಕೊಂಡು ಬಂದ. ದೊರೆ ಸಭೆ ಸೇರಿಸಿ ನಡೆದಿದ್ದ ಸಂಗತಿಯನ್ನು ತಿಳಿಸಿದ. ಕ್ಷೇತ್ರಜ್ಞನು ಒಳ್ಳೆಯದಾಯಿತೆಂದು ಹೇಳಿ ಮಿಕ್ಕಿದ್ದ ಪಂಕ್ತಿಯನ್ನು ತಾನೇ ಭರ್ತಿಮಾಡಿದ. ಈಗ ಒಟ್ಟು ಪದದ ಭಾವಾನುವಾದವನ್ನು ನೋಡೋಣ.

ಒದರದೆ ಪೋಪೋಗೇ—ಅವನೇಕೆ ಬಂದಾನು ।
ಬೇಡ ಬರಬೇಡವನ್ನೇ ॥ ಪಲ್ಲವಿ ॥
ಅದು ಬೇರೆ ಯುಗವಾಯಿ-ತಿದು ಬೇರೆ ಜನ್ಮವೇ ।
ಅವನ್ಯಾರೊ ನಾನ್ಯಾವಳೋ, ಕೆಳದೀ ॥ ಅನುಪಲ್ಲವಿ ॥

* * * *

ಭಾಮೇ, ನಾಂ ಶಕುನವ ಕೇಳಿದೆ ಮುವ್ವ ಗೋ- ।
ಪಾಲನು ಬಹನೇನೆಂದು ॥
ಕಾಮಿಸಿ ನಾಥರ ಸೇರ್ವ ಚೆಲ್ವೆಯರ ನಾಂ ।
ಕಂಡು ಕೊರಗಿ ನೊಂದೆನೇ ॥
ರಾಮ ! ರಾಮ ! ನಾನೀ ಮುಖದಿನಾತನ ಮುಖ ।
ಮರಳಿ ನೋಳ್ಪೆನೆ ? ಆಗಳಾದದ್ದೆ ಸಾಲದೆ ? ॥

ಈ ಮಾತನ್ನಾಡುವವಳು ಸ್ವೀಯೆ. ಎಂದರೆ ನಾಯಕನ ಸ್ವಭಾರ್ಯೆ. ಅವನಾದರೋ ಶಠ. ಎಂದರೆ ಅವಳಿಗೆ ವಂಚಕ. ಅವಳು ವಿರಹೋದ್ವೇಗದಲ್ಲಿ ಈರ್ಷ್ಯಾಮರ್ಷಗಳಿಂದಲೂ ದೈನ್ಯರೋಷಗಳಿಂದಲೂ ನುಡಿಯುತ್ತಾಳೆ. ಹೀಗೆ ವಿಜಯರಾಘವ ರಾಜಾಸ್ಥಾನದಲ್ಲಿ ತನ್ನ ಪ್ರತಿಸ್ಪರ್ಧಿಗಳಿಗೆ ಮಂಗಳಾರತಿ ಎತ್ತಿಸಿದ್ದ ಕ್ಷೇತ್ರಜ್ಞ.

ಆತನ ರಚನೆಗಳೆಲ್ಲ ಈಗ ನಮಗೆ ದೊರೆಯುವಂತಿಲ್ಲ. ಕ್ಷೇತ್ರಜ್ಞ ಪದಸಂಕಲನ ಗಳಲ್ಲಿ ನನಗೆ ತಿಳಿದಿರುವ ಮಟ್ಟಿಗೆ ದೊಡ್ಡದು ಶ್ರೀಪಿಠಾಪುರ ಮಹಾರಾಜಾಶ್ರಯವಲ್ಲಿ ಡಾ॥ ಗಿಡುಗು ವೆಂಕಟ ಸೀತಾಪತಿಯವರು 1952ರಲ್ಲಿ ಸಂಪಾದಿಸಿದ್ದು. ಅದರಲ್ಲಿರುವ ಪದ ಸಂಖ್ಯೆ ಹೀಗೆ :

ಸ್ವೀಯ ನಾಯಿಕಾ ಪದಗಳು	...	162
ಪರಕೀಯ ನಾಯಿಕಾ ಪದಗಳು	...	110
ಸಾಮಾನ್ಯ ನಾಯಿಕಾ ಪದಗಳು	...	109
		381
ಇತರ (ಕ್ಷೇತ್ರಯ್ಯನದೋ ಎನ್ನಿಸುವಂಥಾದ್ದು)	...	25
		406

ಪ್ರತಿಯೊಂದು ಪದದಲ್ಲಿಯೂ ಮುವ್ವ ಗೋಪಾಲ ಮುದ್ರಿಕೆ ಇದೆ.

ಈ 406ರಲ್ಲಿ ಈಗ ಹಾಡುಗಾರರ ಬಳಕೆಯಲ್ಲಿರುವ ಪದಗಳು 20–30 ; ಹೆಚ್ಚೆಂದರೆ 50. ಉಳಿದವು ಗ್ರಂಥಸ್ಥ ಮಾತ್ರಗಳು ; ಅವುಗಳನ್ನು ಹಾಡಬಲ್ಲವರು ಯಾರಾದರೂ ವಿಶೇಷ ಪರಿಶ್ರಮಿಗಳು ಅಲ್ಲೊಬ್ಬರು ಇಲ್ಲೊಬ್ಬರಿದ್ದಾರೋ ಹೇಗೋ !

ಗುಣಕ್ಕೆ ಸಲ್ಲಬೇಕಾದ ಗೌರವವನ್ನು ಗಾತ್ರಕ್ಕೆ ಸಲ್ಲಿಸುವ ಮೂಢಾಚಾರ ನಮ್ಮಲ್ಲಿ ಹೇಗೋ ಬೆಳೆದುಬಂದಿದೆ. ಪುರಂದರ ದಾಸರು ಲಕ್ಷ ದೇವರ ನಾಮ ಹಾಡಿದರು ; ತಾಳ್ಳಪಾಕದವರು ಎರಡು ಲಕ್ಷ ಹಾಡಿದರು ; ತ್ಯಾಗರಾಜರು ಇಪ್ಪತ್ತನಾಲ್ಕು ಸಾವಿರ ಹಾಡಿದರು—ಹೀಗೆ. ಆ ಸಂಖ್ಯಾ ಮಹತ್ತ್ವ ಯಾರಿಗೋಸ್ಕರ ? ಈಗ ಅಚ್ಚು ಪುಸ್ತಕದಿಂದ ದೊರೆಯುವಷ್ಟು ಕೀರ್ತನೆ ಕೃತಿಗಳಲ್ಲಿ ಹತ್ತರಲ್ಲೊಂದು ಪಾಲಿ ನಷ್ಟನ್ನಾದರೂ ಹಾಡುವ ಪುಣ್ಯಾತ್ಮರು ಎಷ್ಟು ಮಂದಿ ಇದ್ದಾರೆ ? ಅಷ್ಟನ್ನು ಕೇಳುವವರಂತೂ ಮೊದಲೇ ಇಲ್ಲ. ಇಲ್ಲಿ ನಾನು ಹೇಳುತ್ತಿರುವುದು ಕಲಾದೃಷ್ಟಿಯ ಮಾತು. ಭಕ್ತಿಯ ಮಾತು ಬೇರೆ. ಕಲಾದೃಷ್ಟಿಯಿಂದ ನೋಡಿದರೆ ಒಬ್ಬ ವಾಗ್ಗೇಯ-ಕಾರನ ಯೋಗ್ಯತೆಯನ್ನರಿಯಲು ಒಂದು ನೂರು ಕೃತಿಯಿದ್ದರೆ ಬೇಕಾದಷ್ಟಾಗಿ, ಇನ್ನೂ ಹೆಚ್ಚೆನಿಸೀತು. ಕ್ಷೇತ್ರಯ್ಯನ ನಾಲ್ಕು ನೂರು ಪದಗಳಲ್ಲಿ ಯಾವ ನಲವತ್ತನ್ನು ತೆಗೆದುಕೊಂಡು ನೋಡಿದರೂ ಆತನ ಕವಿತಾಕ್ಷೇತ್ರದಲ್ಲಿ ಅವನು ಮಹಾ ಪ್ರತಿಭಾ ವಂತನೆಂಬುದು ಸ್ಫುಟವಾಗುತ್ತದೆ.

ಕ್ಷೇತ್ರಯ್ಯನ ವಾಕ್ಯದ ರೀತಿ ಶೈಲಿಗಳು ಆತನಿಗೆ ಭಾಷೆಯ ಮೇಲಿದ್ದ ಪ್ರಭುತ್ವ ವನ್ನು ತೋರಿಸುತ್ತವೆ. ಸಂದರ್ಭೋಚಿತವಾದ ಸಲುಗೆ, ಆಪ್ತತೆ, ಗಂಭೀರ, ಹಾಸ್ಯ ಇವೆಲ್ಲಕ್ಕೆ ತಕ್ಕ ಪದಗಳು ಅವನಿಗೆ ನಿರಾಯಾಸವಾಗಿ ಒದಗಿಬರುತ್ತವೆ. ಆತ ಪದಕ್ಕಾಗಿ

ಶ್ರಮಪಟ್ಟಂತೆ ತೋರುವುದಿಲ್ಲ. ಒಬ್ಬಾನೊಬ್ಬ ನಾಯಕನು ಮುನಿಸಿಕೊಂಡು ಹೋಗಿದ್ದಾನೆ. ಆದರೆ ಅವನಿಗೆ ಆ ಪ್ರಿಯೆ ಬೇಕು. ಅವಳನ್ನು ಒಲಿಸಿಕೊಳ್ಳಬೇಕೆಂದು ಸಂಧಾನ ನಡಸುತ್ತಾನೆ. ಇದು ಆಕೆಗೆ ತಿಳಿದಾಗ ಅವಳು ಸಖಿಗೆ ಹೇಳುತ್ತಾಳೆ :

ರಮ್ಮನವೇ ಸಮುಖಾನ।
ರಾಯಭಾರಮುಲೇಲೀ॥

"ಸಮ್ಮುಖಕ್ಕೆ ಬಾರೆನ್ನೇ ಆತನನ್ನ. ಇದಕ್ಕೆ ರಾಯಭಾರಗಳೇಕೆ ?"

"ಸಮ್ಮುಖ" ಎಂಬುದರಲ್ಲಿ ತಾನು ಮಹಾರಾಣಿಯೆಂಬ ಸ್ವಾಭಿಮಾನದ ಧ್ವನಿಯಡಗಿಸಿರುವುದೂ "ರಾಯಭಾರ" ಎಂಬುದರಲ್ಲಿ ಅವನು ಪ್ರಣಯಕಲಹವನ್ನು ದೊಡ್ಡ ರಾಜಕೀಯ ಮಾಡಿದ್ದಾನೆಂಬ ಅವಹೇಳನದ ಧ್ವನಿಯನ್ನಡಗಿಸಿರುವುದೂ ರಮ್ಯವಾಗಿದೆ.

ಕ್ಷೇತ್ರಯ್ಯ ಭಾಷಾಧಿಕಾರಿಯಾಗಿದ್ದಂತೆ ಗಾಯನಾಧಿಕಾರಿಯೂ ಆಗಿದ್ದ. ಆತ ಸುಮಾರು ಐವತ್ತು ರಾಗಗಳನ್ನುಪಯೋಗಿಸಿದ್ದಾನೆ. ಅವುಗಳಲ್ಲಿ ಹೆಚ್ಚು ರಕ್ತಿ ರಾಗಗಳು. ರಕ್ತಿಯೆಂದರೆ ಅನುರಕ್ತಿ. "ರಕ್ತಿ", "ರಾಗ"—ಈ ಎರಡು ಶಬ್ದಗಳಿಗೂ ರಂಜನೆಯೆಂದೇ ಅರ್ಥ. ಅದರಲ್ಲಿ ರಕ್ತಿಯೆಂಬುದು ಪಾರಿಭಾಷಿಕ ರೂಢಿಯಲ್ಲಿ ದೈವಭಕ್ತಿಯಿಂದ ಪ್ರತ್ಯೇಕವಾದ ಮಾನವ ಅನುರಾಗ, ಪ್ರೀತಿ-ಶೃಂಗಾರ ರಕ್ತಿ—ಎಂಬ ವಿಶೇಷಾರ್ಥದಲ್ಲಿ ಉಪಯೋಗವಾಗಿದೆ. ರಕ್ತಿ ರಾಗಗಳಿಂದ ವಿಜಾತೀಯವಾದವು ಘನರಾಗಗಳು. ಕ್ಷೇತ್ರಜ್ಞನು ಹೆಚ್ಚಾಗಿ ಬಳಸಿಕೊಂಡಿರುವ ರಾಗಗಳು ಇವು :

ಕಾಂಭೋಜಿ	...	42 ಪದಗಳು
ಭೈರವಿ	...	29 ಪದಗಳು
ಮುಖಾರಿ	...	26 ಪದಗಳು
ಕಲ್ಯಾಣಿ	...	26 ಪದಗಳು
ಸಾವೇರಿ	...	18 ಪದಗಳು
ತೋಡಿ	...	16 ಪದಗಳು
ಯದುಕುಲಕಾಂಭೋಜಿ	...	15 ಪದಗಳು
ಆನಂದಭೈರವಿ	...	13 ಪದಗಳು
ಬಿಲಹರಿ, ಶಂಕರಾಭರಣ ಘಂಟಾರವ, ಆಹಿರಿ	...	10 ಪದಗಳು ಪ್ರತಿಯೊಂದರಲ್ಲೂ

ಕೆಲವು ರಾಗಗಳಲ್ಲಿ ಒಂದೊಂದೇ ಪದ ಇದೆ. ಸಂಖ್ಯೆ ಸಣ್ಣದಾದರೆ ರಾಗಸ್ವಾರಸ್ಯ ಸಣ್ಣದೆಂದಾಗಲಿ ಕೃತಿಸ್ವಾರಸ್ಯ ಸಣ್ಣದೆಂದಾಗಲಿ ಭಾವಿಸತಕ್ಕದ್ದಲ್ಲ. ಒಂದು ದಿವಸ ವಿದ್ವಾನ್ ಶ್ರೀರಾಳ್ಳಪಲ್ಲಿ ಅನಂತಕೃಷ್ಣ ಶರ್ಮ ಅವರೊಡನೆ ರಾಗ ಸ್ವಭಾವವನ್ನು ಕುರಿತು ಮಾತನಾಡುತ್ತಿದ್ದಾಗ ನಾನು ಕೇದಾರ ರಾಗವು ಉದಾತ್ತವೂ

ನಿರ್ಮಲವೂ ಆದದ್ದೆಂದೂ ಅದು ಶೃಂಗಾರಕ್ಕೆ ಹೊಂದಲಾರದೆಂದೂ ಹೇಳುವ ಸಾಹಸ ಮಾಡಿದೆ. ಅವರು ಕೇದಾರದ—

ರಮ್ಮನವೇ ಸಮುಖಾನ

ಎಂಬ ಪದವನ್ನು ಹಾಡಿ, ನನ್ನ ವಾದವನ್ನು ಮುರಿದರು. ಆಗಲೇ ನಾನು ಆ ಪದ ವನ್ನು ಮೊದಲ ಸಾರಿ ಕೇಳಿದ್ದು.

ಮೇಲಣ ರಾಗಗಳು ರಕ್ತಿರಸಪ್ರಧಾನಗಳೇನೋ ಹೌದು. ಅದಷ್ಟರಿಂದಲೇ ರಸದ ಆವಿರ್ಭಾವವೆಂದು ಹೇಳಲಾಗದು. ಆ ರಾಗದ ಮೇಲೆ ಗಾಯಕನಿಗಿರುವ ಹಿಡಿತ, ಅವನ ಮನಸ್ಸಿನ ಧೋರಣೆ, ಅವನ ಭಾವಾಭಿಜ್ಞತೆ, ಆತನ ಕಂಠದ ಪಲುಕುಬಡಿ ಅಥವಾ ನುಡಿನುಡಿತ—ಇವೆಲ್ಲ ಸಮಗೂಡಿದಲ್ಲದೆ ಗೇಯ ಪದದ ಸ್ವಾರಸ್ಯ ಹೊರಕ್ಕೆ ಬಾರದು.

ಕ್ಷೇತ್ರಜ್ಞನಿಗೆ ದೊಡ್ಡ ಆನುಪೂರ್ವಿ ಉಂಟು. ವೇದದಲ್ಲಿಯೇ ಇಂದ್ರ–ಅಹಲ್ಯೆ, ಊರ್ವಶಿ–ಪುರೂರವ ಮೊದಲಾದವರ ಐತಿಹ್ಯಗಳ ಮೂಲಕ ನಮಗೆ ಕಾಮಪ್ರಣಯದ ತೀವ್ರಭಾವ ಕೋಮಲಭಾವಗಳು ತಿಳಿದುಬರುತ್ತವೆ. ಋಷಿ ಪಂಕ್ತಿಗೆ ಸೇರದಿರುವ ಕವಿಗಳಲ್ಲಿ ಕಾಳಿದಾಸನೂ ಅಮರುಕನೂ ಜಯದೇವನೂ ಕ್ಷೇತ್ರಜ್ಞಸಂಪ್ರದಾಯಕ್ಕೆ ಮೂಲಪುರುಷರು.

ಕ್ಷೇತ್ರಜ್ಞನು ಅಮರುಕನ ಭಾವಸಂಪತ್ತನ್ನು ಜಯದೇವನ ಗಾನಸಂಪತ್ತಿನೊಡನೆ ಸಮ್ಮೇಳನ ಮಾಡಿದ್ದಾನೆ. ಕ್ಷೇತ್ರಯ್ಯನ ಕವಿತೆಯಲ್ಲಿ ಮಾತು ಕತ್ತಿಯ ಕೈಹಿಡಿ ; ಧಾತು ಅದರ ಅಲುಗು. ಮಾತು ದೀಪದ ಬತ್ತಿ : ಧಾತು ಅದರ ಬೆಳಕು. ಚಿನ್ನದ ಮೆರುಗುಮಾತುಗಳಿಗೆ ಸೂಜಿಮೊನೆಯಂಥ ರಾಗತೀವ್ರತೆಯನ್ನು ಕೊಟ್ಟಿದ್ದಾನೆ. ಅವನ ಪದವಲ್ಲಿ ಅಂಥ ಶಕ್ತಿಯಿರುವುದರಿಂದ ಅದು ನಮ್ಮ ಹೃದಯ ಗುಹೆಯನ್ನೊಳಹೊಕ್ಕು ಮೂಲೆಮೂಲೆಯಲ್ಲಿಯೂ ಪಂಜಿಕ್ಕಿ ಅಲ್ಲಿ ಬಿದ್ದು ನಿದ್ರಿಸು ತ್ತಿರುವ ಭಾವಗಳನ್ನು ಕೆರಳಿಸಿ ಕುಣಿಸುತ್ತದೆ.

ಕ್ಷೇತ್ರಜ್ಞನ ಕೃತಿಗೆ "ಪದ" ಎಂದು ಪಾರಿಭಾಷಿಕವಾದ ಹೆಸರು. ಈ ಬಗೆಯ ವಾಕ್ಯಬಂಧವು ಶೃಂಗಾರಕ್ಕೆ ಚೆನ್ನಾಗಿ ಹೊಂದತಕ್ಕದ್ದು. ಹಾಡಿನಲ್ಲಿ ಅಥವಾ ಗೇಯ ಕಾವ್ಯದಲ್ಲಿ ಎರಡಂಶಗಳು ಮಿಳಿತವಾಗಿರುತ್ತವೆ : ಒಂದು ಮಾತು, ಇನ್ನೊಂದು ಧಾತು.

> ವಾಕ್ ಶಬ್ದ ಪರ್ಯಾಯತ ಯ್ಯೈವ ಮಾತು ಶಬ್ದಃ...... ।
> ಗೇಯಸ್ಯ ಪರ್ಯಾಯತಯಾ ತು ಧಾತು ಶಬ್ದಃ... ॥
>
> —ಸಂಗೀತಸುಧಾ (3–10, 11)

> ಧಾತುರ್ನಾಮ ಸ್ವರಃ ಪ್ರೋಕ್ತೋ ಮಾತುರಕ್ಷರಮುಚ್ಯತೇ ॥
>
> —ಚತುರ್ದಂಡೀ (9–320)

"ಮಾತು" ಎಂಬುದು ಕನ್ನಡದಲ್ಲಿ ಯಾವುದೋ ಸಂಗೀತ ಪರಿಭಾಷೆಯಲ್ಲಿಯೂ ಇದೆ. ಒಂದಾನೊಂದು ವಸ್ತುವನ್ನಾಗಲಿ ಅದರ ಗುಣಕಾರ್ಯಗಳನ್ನಾಗಲಿ ತಿಳಿಸುವ ಪದ ಮಾತು. ಧಾತು ಎಂಬುದು ಸ್ವರರೂಪವಾದ ರಾಗಬೀಜ. ಹೀಗೆ ಮಾತು–ಧಾತುಗಳನ್ನು ಉದ್ದೇಶಭೇದದಂತೆ ಅನೇಕ ರೀತಿಗಳಲ್ಲಿ ಜೋಡಿಸಬಹುದು. ಗೀತೆ ಎಂಬುದು ಅವರಲ್ಲೊಂದು ಬಗೆ, ವರ್ಣವೆಂಬುದಿನ್ನೊಂದು ಬಗೆ. ಕೀರ್ತನೆ ಮತ್ತೊಂದು ಬಗೆ. ಪದ ಮಗದೊಂದು ಬಗೆ. ಕೀರ್ತನೆಗಳಲ್ಲಿ ಪ್ರಸಿದ್ಧವಾದವು ಕನ್ನಡದಲ್ಲಿ ಪುರಂದರಾದಿ ದಾಸರುಗಳ ರಚನೆಗಳು. ತೆಲುಗಿನಲ್ಲಿ ಅನ್ನಮಾಚಾರ್ಯರು, ಭದ್ರಾಚಲ ರಾಮದಾಸರು ಮೊದಲಾದವರ ಕೃತಿಗಳು ಕೀರ್ತನೆಗಳಲ್ಲಿ ಮಾತು–ಧಾತುಗಳೆರಡಕ್ಕೂ ಸಮಸಮ ಪ್ರಾಶಸ್ತ್ಯವಾದರೂ ಬೋಧ್ಯ ವಿಷಯ ಮುಖ್ಯ; ಸಂಗೀತ ಅದಕ್ಕೆ ಸಾಧಕ ಮಾತ್ರ. ಪದವಲ್ಲಿಯಾದರೋ ಗಾನಾಂಶವು ಸಾಹಿತ್ಯಾಂಶಕ್ಕಿಂತ ಹೆಚ್ಚು. ರಾಗಧಾತು ಇಲ್ಲಿ ಪೂರ್ಣರೂಪಕ್ಕೆ ಬರುತ್ತದೆ.

ಈ ಭೇದವನ್ನು ಇನ್ನೊಂದು ದೃಷ್ಟಿಯಿಂದ ನೋಡುವುದು ಅವಶ್ಯ. ಕೀರ್ತನೆಯ ಸಂಬೋಧನೆ ಮನುಷ್ಯ ಬುದ್ಧಿಗೆ: ಪದದ ಸಂಬೋಧನೆ ಮನುಷ್ಯ ಹೃದಯಕ್ಕೆ. ಬುದ್ಧಿಯು ಗ್ರಹಿಸುವ ಪದಾರ್ಥಗಳು ಬಾಹ್ಯ ಜಗತ್ತಿನವು; ಹೃದಯದ ವಿಷಯ ಅಂತರಂಗದ್ದು. ಬುದ್ಧಿಯು ಗ್ರಹಿಸುವ ವಸ್ತುಗಳಿಗಿಂತ ಹೃದಯವು ಗ್ರಹಿಸುವ ವಸ್ತುಗಳು ಸೂಕ್ಷ್ಮವಾದವು. ಆದ್ದರಿಂದ ಬುದ್ಧಿಕಾರ್ಯಕ್ಕೆ ಸಾಕಾಗುವ ಭಾಷೆ ಹೃದಯಕಾರ್ಯಕ್ಕೆ ಸಾಕಾಗಲಾರದು. ಹೃದಯೋದ್ದಿಷ್ಟವಾದ ಭಾಷೆಯು ಸಾಮಾನ್ಯ ಭಾಷೆಯ ಜೊತೆಗೆ ಮತ್ತೊಂದು ಅನುಪಾನವನ್ನು ಬೇಡುತ್ತದೆ. ಆ ಅನುಪಾನವೇ ಸಂಗೀತ. ಅನುಪಾನ ಎಂಬುದು ವೈದ್ಯರ ಮಾತು. ಅವರು ಕೊಟ್ಟ ಗುಳಿಗೆ ಅದರ ಕಾರ್ಯವನ್ನು ಚೆನ್ನಾಗಿ ಮಾಡಬೇಕಾದರೆ ಅವರು ಹೇಳಿದ ಅನುಪಾನ—ಹಾಲು. ತುಪ್ಪ. ಜೇನು. ವೀಳ್ಯದ ರಸ ಇತ್ಯಾದಿ—ಇರಬೇಕು. ಅನುಪಾನ ಯಾವಾಗಲೂ ಔಷಧಕ್ಕಿಂತ ಸವಿಯಾದದ್ದು. ಇಂಥಾದ್ದು ಗೇಯ ಪದದಲ್ಲಿರುವ ಸಂಗೀತ. ಕೀರ್ತನೆಯಲ್ಲಿರುವುದಕ್ಕಿಂತಲೂ "ಪದ"ದಲ್ಲಿ ರಾಗವಿನ್ಯಾಸಕ್ಕೂ ಸ್ವರ ವಿಸ್ತಾರಕ್ಕೂ ಹೆಚ್ಚು ಅವಕಾಶವುಂಟು. ಅಷ್ಟು ಮಾತ್ರವೇ ಅಲ್ಲ. ರಾಗವಿನ್ಯಾಸ ಸಾವಕಾಶವಾಗಿ ನಡೆದರೆಯೇ ಪದಗಾನದ ಸೊಗಸು ಪೂರ್ತಿಯಾಗಿ ಅನುಭವಕ್ಕೆ ದೊರಕುವುದು. ಪದಪ್ರಬಂಧದಿಂದ ಮುಂದಿನ ಗೇಯಜಾತಿ ತ್ಯಾಗರಾಜಾದಿಗಳ ಕೃತಿಗಳದು. ಇದರಲ್ಲಿ ರಾಗಪೋಷಣೆಯುಂಟು. ಅದಕ್ಕಿಂತ ಹೆಚ್ಚಾಗಿ ಸ್ವರಸಂಗತಿಗಳುಂಟು. ಸ್ವರಗಳ ಎರಕದಚ್ಚಿನ ತುಂಡುಗಳ ಭಾರದಲ್ಲಿ ಕವಿತ್ವದ ಭಾವ ಕುಗ್ಗಿ ದುರ್ಬಲವಾಗುವುದುಂಟು. ಹೀಗೆ ಪದಗಾಯನಕ್ಕೆ ಪುರಂದರಾದಿಗಳ ಗಾಯನ ಶೈಲಿಯೂ ಸಲ್ಲದು: ತ್ಯಾಗರಾಜಾದಿಗಳ ಗಾಯನಶೈಲಿಯೂ ಸಲ್ಲದು. ಪಲ್ಲವಿ ಹಾಡಿಕೆಯ ಸ್ವರಾಡಂಬರಕ್ಕಂತೂ ಇಲ್ಲಿ ಸ್ಥಳವಿಲ್ಲ. ಪದಗಾಯನದಲ್ಲಿ ಮುಖ್ಯವಾಗಿ ಬೇಕಾದದ್ದು ಹೃದಯಭಾವವನ್ನು ಆದಷ್ಟು ಪೂರ್ಣವಾಗಿ ಹೊರಕ್ಕೆ ತರುವ ರಾಗ ಪ್ರವಾಹ, ಅದರ ಏರುಜಾರುಗಳು, ಸುಳಿವುಗಳು, ಕಂಠಧ್ವನಿಯ ತೀವ್ರತೆ ಕೋಮಲತೆಗಳು— ಒಂದೇ ಮಾತಿನಲ್ಲಿ, ರಾಗವಿಲಾಸ. ಇದಕ್ಕೆ ಅವಶ್ಯವಾದದ್ದು ವಿಳಂಬಗತಿ.

ಅವಸರವಸರದ ಹಾಡಿಕೆ ಇಲ್ಲಿ ಪ್ರಯೋಜನಕ್ಕೆ ಬಾರದು. ಪದವನ್ನು ಚೌಕಕಾಲದಲ್ಲಿ ಅಕ್ಷರಕ್ಷರಕ್ಕೂ ಅದರ ಬೆಲೆಯನ್ನು ಕೊಟ್ಟುಕೊಂಡು, ನೆಮ್ಮದಿಯಿಂದ ಹಾಡ ಬೇಕಾದದ್ದು. ಇದು ಪ್ರಯಾಸ ಸಾಧ್ಯವಾದದ್ದು. ಎರಕಹುಯ್ದ ಸ್ವರದ ಅಚ್ಚು ತುಂಡುಗಳನ್ನು ಶ್ರೋತನ ಮುಖಕ್ಕೆ ಕಾಣಲಾರದಂತೆ ಒಂದರ ಹಿಂದೆ ಮತ್ತೊಂದನ್ನು ಪುಂಖಾನುಪುಂಖವಾಗಿ ಎಸೆದು ಬಿಸಾಡುವ ಗಾಯನ ಪಾಂಡಿತ್ಯವು ಪದಗಾಯನದಲ್ಲಿ ರಸಾಭಾಸವನ್ನು ಮಾಡೀತು. ಮಂದಗತಿಯಿಂದ, ಅಲ್ಲಲ್ಲಿ ರಾಗದ ಒಲವು ಒಯ್ಯಾರ ಗಳನ್ನು ತೋರಿಸಿ, ಬಳುಕು ಕುಲುಕುಗಳಿಂದ ಹೃದಯವನ್ನು ಚುಚ್ಚಿ ಮೂರ್ಛನೆ ಯನ್ನೂ ಸಾಂತ್ವನೆಯನ್ನೂ ಉಂಟುಮಾಡಬಲ್ಲ ಭಾವಾನುಭವಿಗಳು ಹಾಡಬೇಕಾದದ್ದು ಪದ.

ಶೃಂಗಾರ ಗೇಯಗಳಲ್ಲಿ ಪದಕ್ಕಿಂತ ಈಚಿನದು ಜಾವಡಿ (ಜಾವಳಿ). ಇದು ಉತ್ತರ ಹಿಂದೂಸ್ತಾನದಿಂದ ಬಂದದ್ದೆಂದು ತೋರುತ್ತದೆ. ಇದರದು ತೀವ್ರ ವೇಗ. "ಜಾವ್" ಎಂಬ ಪದವೇ ಸೂಚಿಸುವಂತೆ ಇದರಲ್ಲಿ ಚಲನೆ ಸಂಭ್ರಮ ಮುಖ್ಯ. ಶೃಂಗಾರದಲ್ಲಿ ಮನೋಭಾವ ಆಳದ್ದಾಗಿ ಚಿರಕಾಲದ್ದಾಗಿದ್ದರೆ ಅದಕ್ಕೆ ಪದದ ಮಟ್ಟು. ಅದು ಆತುರದ್ದಾಗಿದ್ದರೆ ಅದಕ್ಕೆ ಜಾವಡಿಯ ಮಟ್ಟು. ಏವಂಚ, ಸಂಗೀತದ ಗತಿ ಯನ್ನೂ ಕ್ರಮವನ್ನೂ ಗೊತ್ತುಮಾಡಬೇಕಾದದ್ದು ಕವಿತೆಯಲ್ಲಿಯ ಭಾವ. ಗಾಯಕ ವಿದ್ವಚ್ಛಿರೋಮಣಿಗಳಾದ ಶ್ರೀ ಸುಬ್ಬರಾಮದೀಕ್ಷಿತರ ಮಾತು ಲಕ್ಷ್ಯದಲ್ಲಿರಬೇಕಾದದ್ದು :

"ಕ್ಷೇತ್ರಯ್ಯನ ಪದಗಳು ಶಬ್ದಾರ್ಥಗಳನ್ನು ಚೆನ್ನಾಗಿ ಅರಿತು, ರಸವನ್ನು ತಾನು ಅನುಭವಿಸುತ್ತ, ಚೌಕವಾಗಿ (ವಿಳಂಬವಾಗಿ) ಯಾರು ಹಾಡುತ್ತಾನೋ ಅವನಿಗೆ ಮಾತ್ರ ರುಚಿಸುತ್ತವೆ. ಧಾತುವನ್ನು ಬರೆದು ನೋಡಿದರೆ ಬಂದದ್ದೇ ಬಂದಂತೆ ತೋರುತ್ತದೆ. ಹೀಗಿರುವುದೇ ಪದ ಸಾಹಿತ್ಯದ ಶಯ್ಯೆ."

ಬುದ್ಧಿಯನ್ನುದ್ದೇಶಿಸಿದ ಭಾಷೆಗಿಂತ ಹೃದಯವನ್ನುದ್ದೇಶಿಸಿದ ಭಾಷೆ ಸೂಕ್ಷ್ಮ ತರದ್ದಾಗಿ ಧ್ವನಿಪ್ರಧಾನವಾದದ್ದಾಗಿರಬೇಕೆಂದು ಮೇಲೆ ಹೇಳಿದೆ. ಆ ಅಂತರಂಗ ಧ್ವನಿಗಾಗಿ ಸಂಗೀತ. ಹಾಗೇ ಸಾಹಿತ್ಯಭಾಷೆಯ ಜೊತೆಗೆ ಸಂಗೀತ ಸೇರಿದಾಗಲೂ ಸಹ ಅಂತರಂಗದ ಅಭಿವ್ಯಕ್ತಿ ಸಂಪೂರ್ಣವಾಗುತ್ತದೆಂದು ಖಂಡಿತವಿಲ್ಲ. ಎಷ್ಟೋ ಭಾವ ಸೂಕ್ಷ್ಮಗಳು ಇನ್ನೂ ರೂಪಗೊಳ್ಳದೆ ಉಳಿದು ಅವಿತುಕೊಂಡಿರುತ್ತವೆ. ಅವುಗಳನ್ನು ಹೊರಕ್ಕೆ ತರುವುದು ಹೇಗೆ ? ಅದಕ್ಕಾಗಿ ಮೂರನೆಯ ಯಾನಸಾಧನ ವೊಂದು ಬೇಕಾಗುತ್ತದೆ. ಅದೇ ಅಭಿನಯ. ಬಾಯಿಂದಾಡಿದ ಮಾತಿನ ಆಶಯ ವನ್ನು ರಾಗಧ್ವನಿ ಕೊಂಚಮಟ್ಟಿಗೆ ವಿಸ್ತರಿಸಿ ಪ್ರಕಾಶಪಡಿಸುತ್ತದೆ. ಅದನ್ನು ಅಭಿನಯವು ಮತ್ತಷ್ಟು ವಿಸ್ತರಿಸಿ ಪೂರ್ತಿಮಾಡುತ್ತದೆ. ಉದಾಹರಣೆಗಾಗಿ ಜಯದೇವನ 'ಯಾಹಿ ಮಾಧವ ಯಾಹಿ ಕೇಶವ' ... ('ಹೋಗು ಕೃಷ್ಣ') ಎಂಬೆರಡು ಚರಣಗಳನ್ನು ಹಾಡುವಾಗ ರಾಗಧ್ವನಿ ವ್ಯತ್ಯಾಸದಿಂದಲೂ ಮುಖಭಾವ

ವ್ಯತ್ಯಾಸದಿಂದಲೂ ಆಜ್ಞೆ ಸೂಚಿಸಲಾಗುತ್ತದೆ. ಬೇಸರ ಸೂಚಿಸಲಾಗುತ್ತದೆ, ಆಗ್ರಹ ಸೂಚಿಸಲಾಗುತ್ತದೆ, ಹೋಗಬೇಡವೆಂಬ ಪ್ರತಿಷೇಧವನ್ನೂ ಸೂಚಿಸಲಾಗುತ್ತದೆ, ಇದು ಅಭಿನಯದ ಕೌಶಲ. ಮಹಾ ವಿದುಷಿ ಬೆಂಗಳೂರು ನಾಗರತ್ನಾಸಾನಿ ಹಾಗೆ ಅಭಿನಯಿಸಿದ್ದನ್ನು ನಾನು ನೋಡಿದ್ದೇನೆ. ನಾನು ಬಾಲ್ಯದಲ್ಲಿ ನೋಡಿದ್ದ ಬೈರಕೂರು ವೆಂಕಟಲಕ್ಷ್ಮಾಸಾನಿ ಕ್ಷೇತ್ರಯ್ಯನ—

ಮೇರಗಾದು ರಮ್ಮನವೇ ನಾ ಸಾಮಿನಿ

ಎಂಬ ಪದವನ್ನು ಹಾಡುವುದರಲ್ಲಿ ದೈನ್ಯವನ್ನೂ ದರ್ಪವನ್ನೂ ಬಗೆಬಗೆಯಾಗಿ ಅಭಿನಯಿಸುತ್ತಿದ್ದಳು.

ಐವತ್ತರವತ್ತು ವರ್ಷಗಳ ಹಿಂದಿನ ನೆಮ್ಮದಿಯ ಕಾಲದಲ್ಲಿ, ದೇವೋತ್ಸವಗಳಲ್ಲಿಯೂ ವಿವಾಹಾದಿ ಶುಭಸದಸ್ಸುಗಳಲ್ಲಿಯೂ ಸಾಮಾಜಿಕ ಸಂತೋಷ ಸಂದರ್ಭಗಳಲ್ಲಿಯೂ ಕ್ಷೇತ್ರಜ್ಞ ಪದ ಗಾಯನಾಭಿನಯಗಳಿಂದ ಸೊಗಯಿಸುವ ನಟುವಾಂಗದವರ ತಾಘಾಕಥೇರಿ ಸಾಮಾನ್ಯವಾಗಿತ್ತು.

ಕ್ಷೇತ್ರಜ್ಞನ ಆಶಯ ನಮಗೆ ಸಂಪೂರ್ಣವಾಗಿ ದೊರಕಬೇಕಾದರೆ ಸಾವಕಾಶವಾದ ಹಾಡಿಕೆಯೂ ಮರ್ಮಚಿತ್ರಣಪಟುವಾದ ಅಭಿನಯವೂ ಸಾಹಿತ್ಯದೊಡನೆ ಒಂದುಗೂಡಿರಬೇಕು. ಮಾತು, ಧಾತು. ಅನುಕೃತಿ— ಈ ಮೂರೂ ಏಕೀಭವಿಸಿದಾಗ ಹೃದಯದ ಸಂಪೂರ್ಣ ಭಾಷೆ.

ಈ ಲೇಖನದೊಡನೆ ಕೆಲವು ಪದಗಳನ್ನು ಕನ್ನಡದ ಭಾವಾನುವಾದದಲ್ಲಿ ಮಾದರಿಗಾಗಿ ಕೊಟ್ಟಿದೆ.

1. ಚೇ ಪಟ್ಲು ಕಾವಚ್ಚುನಾ?

(ಪ್ರಿಯನೊಡನೆ ಜಗಳವಾಡಿದ್ದ ಒಬ್ಬಳಿಗೆ ಸಖಿ ಬುದ್ಧಿ ಹೇಳುತ್ತಾಳೆ. ಚೇ ಪಟ್ಟು = ಕೈಪಟ್ಟು, ಹಿಡಿಗುದ್ದಾಟ, ಮುಷ್ಟಾಮುಷ್ಟಿ)

ರಾಗ: ಬಿಲಹರಿ) **(ತಾಳ: ಚಾಪು**

ಕೈಪಟ್ಟು ಹೊಡೆ ತರವೇ–ನಿಮ್ಮೊಳ್ ನಿಮಗೆ
ಕೈಪಟ್ಟು ಹೊಡೆ ತರವೇ ॥ ಪಲ್ಲವಿ ॥
ಪಟ್ಟಾವುದಾದರು–ಸರಿಯದಕಹರು ನೀಂ
ಈ ಪಟ್ಟನಲಿ ನಿಮಗಿನಿತು ತಾಳುಮೆಯಿರದೆ ॥ ಅನುಪಲ್ಲವಿ ॥

ಕೋಪವಾರಿಗು ಬಾರದಿಹುದೇ ?—ಮತ್ತೆ
    ಕೂಡಿಬಾಳುವ ಜನವರಿದೇ ? ।
ನಾಳೆ ಬರುವೆನೆನಲೊಳಿತೆನ್ನಲಾಗದೆ
    ಬಂದಂದವನು ನಿನ್ನ ಪಾಡ ಕೇಳಿದರೇನು ? ॥ ॥ ೧ ॥
ಕಾಮನ ಮಾಳ್ಕೆಯು ಪರಿಯೋ–ಇಲ್ಲ
    ಕಮಲಜ ಬರೆದಿಟ್ಟ ಗೆರೆಯೋ ।
ಪ್ರೇಮ ಕೂಡಿದವನ ಕೈ ಮೀರ್ವುದೇಂ ಪೆರ್ಮೆ
    ಭಾಮೆ ಮುವ್ವ ಗೋಪಾಲನೊಡನೆ ಇಂತು ॥ ॥ ೨ ॥

2. ಅಯ್ಯಯ್ಯೋ ವೆಗಟಾಯೆನೇ

(ತನ್ನ ಪ್ರಿಯನು ಬಾರದಿರಲು ಕಾರಣವೇನು? ಸುಖಾತಿರೇಕವಿರಬಹುದೇ? ಎಂದು ಒಬ್ಬಾಕೆ ಚಿಂತಿಸುತ್ತಾಳೆ. ''ವೆಗಟು'' ಎಂದರೆ ಅತಿರೇಕ, ರುಚಿ ಅತಿಯಾದದ್ದರಿಂದ ಬಂದ ಬೇಸರಿಕೆ)

ರಾಗ: ನಾದನಾಮಕ್ರಿಯೆ) (ತಾಳ: ತ್ರಿಪುಟ

ಅಯ್ಯಯ್ಯೋ ವೆಗಟಾಯಿತೇ–ಆ ಸ್ವಾಮಿಗೆ ಇಂದು ॥ ಪಲ್ಲವಿ ॥
ಮೈಯೆದೆಗಳನೇರಿ–ಪವ್ವಳಿಸಿದ ಆತಂಗೆ ॥ ಅನುಪಲ್ಲವಿ ॥

* * * *

ಮದಿರಾಕ್ಷಿ ಕೇಳಮ್ಮ–ಮುವ್ವ ಗೋಪಾಲನು ನಾಂ ।
ನಿದುರಿಸೆ ತಬ್ಬಿಂದೆ–ಕದಲಿಪೋಪನೆನೆ ।
ಹೆದರದೆ ಶಯ್ಯೆಯ–ನಾಲ್ಮೂಲೆಗಳೊಳು ನೀಂ ।
ಹೊದಕೆಗೆ ಗಂಟಿಕ್ಕಿ–ಬಿಗಿಯೆಂದಾ ಸ್ವಾಮಿಗೆ ॥

3. ಮೋರಗಾದು ರಮ್ಮನವೇ

(ಪ್ರಿಯನು ಯಾವುದೋ ಸಣ್ಣ ಸಂಗತಿಯನ್ನು ದೊಡ್ಡದು ಮಾಡಿಕೊಂಡು ಆ ನೆವದಿಂದ ಬಾರದಿರುವುದು ಸರಿಯಲ್ಲ. ಆತನನ್ನು ಬರಹೇಳು—ಎಂದು ಸಖಿಗೆ ಹೇಳುತ್ತಾಳೆ.)

ರಾಗ: ಶಾಹನ) (ತಾಳ: ತ್ರಿಪುಟ

ತರವಲ್ಲ ಬರಹೇಳೆ ನೀಂ—ಆ ಸ್ವಾಮಿಯ ॥ ಪಲ್ಲವಿ ॥
ಮೊರೆಯು ತಳ್ಳದ ಮುವ್ವ ಗೋಪಾಲ ಸ್ವಾಮಿಯ ॥ ॥ ಅನುಪಲ್ಲವಿ ॥
ಮುಳಿಯುವ ಜನವಿಲ್ಲವೇ–ಅನಿತರೋಳ್ ಒಪ್ಪಿ ।
ಕಲೆಯುವ ಜನವಿಲ್ಲವೇ–ಕೆಳದೀ ಆತಂ ॥
ಛಲವಿಟ್ಟು ಬಾರನಿಲ್ಲಿ–ಬಲು ಬೇಡಿದರೂ ಕೇಳನ್ ।
ಅಲರಂಬಿನುಬ್ಬೆಗ ತಾಳಲಾಗದೇ ಅಮ್ಮ ॥ ॥೧॥

ಮಮತೆಯಿಂ ಚಿಕ್ಕಂದು–ಮೆಚ್ಚು ಮಾತುಗಳಾಡಿ ।
ಸಮರತಿಗಳ ಮಾಡಿ–ಮೋಹದಿಂದೆನ್ನ ॥

ಅಮುಕಿ ತುಟಿಗೆ ಗಾಯ-ಮಮರಿಸಿದವಳೆಂದು ।
ರಮಣೀ ಮುವ್ವ ಗೋಪಾಲನು ರಂಪಗೈದನೆ ॥ ॥೨॥

4. ಎವ್ವಡೇ—ಓ ಭಾವು, ವೀಡೆವಡೇ

(ಒಬ್ಬಳು ಪರಕೀಯಳು ತನ್ನನ್ನು ಆಕರ್ಷಿಸಿದ ವರ್ತಮಾನವನ್ನು ಸಖಿಗೆ ಹೇಳಿಕೊಳ್ಳುತ್ತಾಳೆ.)

ರಾಗ: ಶಂಕರಾಭರಣ) (ತಾಳ: ಚಾಪು

ಯಾವನೇ-ಓ ಭಾಮೇ-ಅದ್ಯಾವನೇ ॥ ಪಲ್ಲವಿ ॥
ಯಾವನೇ ಭಾಮೆ ನಾಂ-ಪವ್ವಳಿಸಿದ್ದಂದು ।
ಹೂವಂಬನೆಸೆದು ಈ...ಸೋವನಿರಿಸಿಹೋದ ॥ ಅನುಪಲ್ಲವಿ ॥

ಸರಿಹಗಲೊಳವನು ಬಂದು-ತಾನೆ
ನೆರೆ ದಿಟ್ಟನಾಗಿ ಮನೆಹೊಕ್ಕು ।
ಕರೆದೆನ್ನ ಸೆಳೆದು ತಬ್ಬುತಲೆನ್ನ ತುಟಿಯನು
ಕೊರೆದಿಂತು ಗಾಯವ ಮಾಡಿ ತೆರಳಿದನಲ್ಲೇ ॥ ೧ ॥

ಒಡಬಗ್ಗರಿಗೆ ಇದು ಊರೇ ಇಲ್ಲಿ
ಹಿರಿಯರಾರೂ ಇಲ್ಲದವರೇ ।
ನಡುಬೀದಿಯೊಳಗೆ ಈ-ಕಡುಚೋದ್ಯ ಕಂಡು
ನಡಸರೆ ದಾದುಷ್ಫಿಯರ್ಮಾದುಗಳನದಾರುಂ ॥ ೨ ॥

ನೀಲಮೇಘಶ್ಯಾಮಲಾಂಗಂ-ಒಳ್ಳೆ
ಮೇಲುಪೀತಾಂಬರಧಾರಂ-ಅವನ್ ।
ಲೀಲೆಯಿಂ ಪದಿನಾರು ಸಾಸಿರ ಗೋವಳ-
ಬಾಲೆಯರನಾಳ ಮುವ್ವ ಗೋಪಾಲನೇಂ ॥ ೩ ॥

ಪ್ರಗತಿ-ಸ್ವಾತಂತ್ರ್ಯ

[9–2–1940 ರಲ್ಲಿ ಶ್ರೀ ಡಿ. ವಿ. ಗುಂಡಪ್ಪನವರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದಲ್ಲಿ ಉಪಸಂಹಾರ ಭಾಷಣ ಮಾಡಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ಕೆ. ವಿ. ಪುಟ್ಟಪ್ಪನವರು ಅವರ ಪರಿಚಯ ಮಾಡಿಕೊಡುತ್ತ "ಈಗತಾನೆ ಹಾಡಿದ 'ವನಸುಮ' ಇವರ ಜೀವನವನ್ನು ಚೆನ್ನಾಗಿ ಚಿತ್ರಿಸುತ್ತದೆ. ಸಾಧಕರ ಮನಸ್ಸಿನ ಹೊಮ್ಮುಗೆ ಈ ಕವನ. ಇವರ ಸಾಹಿತ್ಯ ಸೇವೆ ಮರದ ಬೇರಿನಂತೆ ಹೊರಗಡೆಗೆ ತೋರಿಸಿಕೊಳ್ಳದೆ ಆಳವಾಗಿ ಇಳಿದು ತುದಿಗೊಂಬೆಯ ಹೂಗಳಂತಿರುವ ನಮಗೆ ಚೈತನ್ಯ ಕೊಡುತ್ತಿದೆ. ನಮ್ಮ ನಾಡು ನುಡಿಗಳು ಜೀವಂತವಾಗಿರುವ ತನಕ ಇವರ ಕೃತಿಗಳು ಉಳಿದಿರುತ್ತವೆ" ಎಂದರು.]

ಸಾಹಿತ್ಯಕ್ಕೆ ನಾನು ಆಗಂತುಕ. ಈ ಕರ್ನಾಟಕ ಸಂಘವನ್ನು ಸ್ಥಾಪಿಸಿದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳೂ ಇದನ್ನು ಪೋಷಿಸಿಕೊಂಡು ಬಂದ ಶ್ರೀ ಟಿ. ಎಸ್. ವೆಂಕಣ್ಣಯ್ಯನವರೂ ನನ್ನನ್ನು ಈ ಕಡೆ ಎಳೆದರು.

ನಾನು ರಾಜಕೀಯದಲ್ಲಿ ಹೆಚ್ಚು ಭಾಗವಹಿಸಿದವನು. ಅಲ್ಲಿ ಮಾತು ಬಹು ಅಗ್ಗವಾಗಿಬಿಟ್ಟಿದೆ. ಆಡಿ ಕೇಳಿ ಆತ್ಮಕ್ಕೆ ಬೇಸರವಾಗಿದೆ : ಮಾತಾಡುವುದೇ ಬೇಡವೆನ್ನಿಸಿದೆ. ಬಹಳ ದಿನಗಳಿಂದ ನನ್ನ ಮನಸ್ಸಿನಲ್ಲಿ ಏಳುತ್ತಿರುವ ಕೆಲವು ಪ್ರಶ್ನೆಗಳನ್ನು ಕುರಿತು ತಮ್ಮೆದುರಿಗೆ ಗಟ್ಟಿಯಾಗಿ ಆಲೋಚನೆ ಮಾಡುವವನಂತೆ ಭಾಷಣ ಮಾಡುತ್ತೇನೆ.

ಸಾಹಿತ್ಯದ ಈಗಿನ ಸ್ಥಿತಿ : ಕನ್ನಡ ಸಾಹಿತ್ಯ ಬಹಳ ದಿನಗಳಿಂದ ಬೆಳೆಯುತ್ತಿದೆ. ಮುಖ್ಯಭಾಗ ಶುಷ್ಕ ಸಾಹಿತ್ಯ—ಕವಿತ್ವ, ಕಥೆ, ನಾಟಕ. ವಿಜ್ಞಾನಗ್ರಂಥ ಬಹಳ ಸ್ವಲ್ಪ : 10–15 ಇದ್ದರೆ ಹೆಚ್ಚು. ಪುಸ್ತಕದ ಮೂಲಕ ಜ್ಞಾನಪ್ರಚಾರ ನಡೆಯಬೇಕು ; ಹೊಸ ಚೈತನ್ಯ, ಕಾಂತಿ, ಬೆಳಗಬೇಕು ; ಜನ ಉದ್ಧಾರವಾಗಬೇಕು. ಇದಕ್ಕೆ ಸಾಹಿತ್ಯದಲ್ಲಿ ಹೊಸ ಗುಣ ಕಾಣಬೇಕು. ಈಗ ಕಥೆ, ಕವಿತ್ವ ಮೊದಲಾದ ಭಾವಾವೇಶ ಪ್ರಧಾನವಾದ ಕೃತಿಗಳೇ ಹೆಚ್ಚಾಗಿವೆ. ಇನ್ನು ಮುಂದೆ ಬುದ್ಧಿಕಾರ್ಯ ಪ್ರಧಾನವಾದ ಗ್ರಂಥಗಳು ಹೆಚ್ಚಬೇಕು. ಭಾವಾವೇಶದಿಂದ ಬುದ್ಧಿಗೆ ಪ್ರೇರಣೆಯಾಗುವಂತಿರಬೇಕು ; ಬುದ್ಧಿಪ್ರೇರಣೆಯಿಂದ ಭಾವಾವೇಶವುಂಟಾಗಬೇಕು. ಹೀಗಾದರೆ ಮಾತ್ರ ಪ್ರಗತಿ ಸಾಧ್ಯವಾದೀತು.

ಪ್ರಗತಿ ತತ್ತ್ವ : ಪ್ರಗತಿ ತತ್ತ್ವವನ್ನು (Progress ಪ್ರರೋಗತಿ. ಎಂದರೆ ಮುಂದಕ್ಕೆ ಹೋಗುವುದು) ಕುರಿತ ಮಾತು ಈಗ ರೂಢಿಯಾಗಿದೆ. 'ನಮ್ಮ ಸ್ಥಿತಿ ದಿನದಿನಕ್ಕೆ ಉತ್ತಮವಾಗುತ್ತದೆ, ದುಃಖ ಕಡಮೆಯಾಗುತ್ತದೆ. ಮನುಷ್ಯಪ್ರಯತ್ನ ದಿಂದ, ಧೈರ್ಯ ಸಾಹಸಗಳಿಂದ ಕವಿಗಳು ಕನಸುಕಾಣುವ ಸ್ವರ್ಗವನ್ನು ಇಲ್ಲಿಯೇ ಸಾಧ್ಯಮಾಡಿಕೊಳ್ಳಬಹುದು. ಪರಲೋಕಕ್ಕಾಗಿ ಕಾಯಬೇಕಾಗಿಲ್ಲ'— ಎಂಬುದೇ ಈ ಪ್ರಗತಿ ತತ್ತ್ವದ ತಿರುಳು. ಪ್ರಾಚೀನರಿಗೆ ಈ ಭಾವನೆ ಗೋಚರವಾಗಲಿಲ್ಲ. 'ಒಳ್ಳೆಯ ಕಾಲ ಹಿಂದೆ ಆಗಿಹೋಯಿತು. ಮುಂದೆ ಕ್ಷೀಣಗತಿ. ಇದು ಪ್ರಪಂಚದ ಸ್ವಭಾವ. ಆ ಗತಿಯನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ' ಎಂಬುದು ಅವರ ದೃಢ ನಂಬಿಕೆ. ಇದೇ ದೈವವಾದ. ಪುರಾತನ ಗ್ರೀಕರಲ್ಲಿ ಕೂಡ ಈ ದೈವವಾದವೇ ಕಂಡುಬರುತ್ತದೆ. ಈ ಭಾವನೆ ಬದಲಾಗಿ ಪ್ರಗತಿವಾದ.—ಮಾನವನ ಉತ್ತಮತೆಯ ವಾದ. ಉತ್ಕರ್ಷ ವಾದ—ಪ್ರಾರಂಭವಾದ್ದು 17–18ನೆಯ ಶತಮಾನಗಳಲ್ಲಿ.

ಪ್ರಗತಿಯ ಚರಿತ್ರೆ : ಹಿಂದೂಗಳಿಗೆ ಉತ್ಕರ್ಷಮತವಿಲ್ಲ. ಅವರದು ಅವನತಿ ಮತ. ಕ್ರಿಸ್ತನ ಪ್ರಕಾರವೂ ಪರಿಪೂರ್ಣತೆ. ಪರಮಪದವಿ. ಉತ್ತಮತೆ. ಪರಲೋಕ ದಲ್ಲಿಯೇ. ಇದು ದೊರಕುವುದೂ ದೇವರ ಅನುಗ್ರಹದಿಂದ. ಮನುಷ್ಯಪ್ರಯತ್ನ ದಲ್ಲಿ ಆತ ಹೆಚ್ಚು ನಂಬಿಕೆ ಇಟ್ಟಿರಲಿಲ್ಲ. ಪ್ರಗತಿ ಮನುಷ್ಯಪ್ರಯತ್ನ ಮೂಲವಾದದ್ದು.

14–16ನೆಯ ಶತಮಾನಗಳು ಯೂರೋಪಿನಲ್ಲಿ ಹೊಸ ಬೆಳಕು ಹರಡಿದ ಕಾಲ. ಅಗ ಚಿತ್ರ, ಶಿಲ್ಪ ಮತ್ತು ಉಳಿದ ಕಲೆಗಳ ಪುನರುಜ್ಜೀವನ (ರೆನೇಸಾನ್ಸ್) ಆಯಿತು. ಆದರೂ ಸ್ವಪ್ರಯತ್ನದಿಂದ ಮನುಷ್ಯ ಇಲ್ಲಿಯೇ ಸ್ವರ್ಗ ಕಟ್ಟುತ್ತಾನೆ. ದೇವ ಸಮಾನನಾಗುತ್ತಾನೆ ಎಂದು ಆಗಿನವರು ನಂಬಲಿಲ್ಲ. ಉತ್ಕರ್ಷವಾದ ಅವರಿಗೆ ತಿಳಿದಿರಲಿಲ್ಲ.

17–18ನೆಯ ಶತಮಾನಗಳಲ್ಲಿ ಫ್ರೆಂಚರು ಈ ಪ್ರಗತಿವಾದವನ್ನು ಹೂಡಿದರು. ಇದಕ್ಕೆ ವೈಜ್ಞಾನಿಕರ ನೆರವು ಬಹಳ. ವೈಜ್ಞಾನಿಕರು ಪ್ರಯೋಗಪರೀಕ್ಷೆಗಳಿಂದ ಹೊಸ ಹೊಸ ವಿಷಯಗಳನ್ನು ಕಂಡು ತಿಳಿವನ್ನು ಹೆಚ್ಚಿಸಿದರು : ಮಾನವನ ಸುಖ ಸೌಕರ್ಯ ಗಳನ್ನು ಹೆಚ್ಚು ಮಾಡಿದರು. ವಾಲ್ಟೇರ್, ರೂಸೋ, ಡಿಡೆರೊ ಮೊದಲಾದವರು 'ಮನುಷ್ಯಪ್ರಯತ್ನಕ್ಕೆ ಮಿತಿಯಿಲ್ಲ : ಮಾನವನ ಶಕ್ತಿಗೆ ಮೀರಿದ ದೈವ ಇರ ಲಾರದು' ಎಂಬ ತತ್ತ್ವವನ್ನು ಬೆಳಗಿಸಿದರು. ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಇದು ಇನ್ನೂ ಪ್ರಬಲಿಸಿತು.

ಅಲ್ಲಿಂದೀಚೆಗೆ ಇಂಗ್ಲೆಂಡಿನಲ್ಲಿ ಈ ವಾದ ಅಭಿವೃದ್ಧಿಗೆ ಬಂತು. ಷೆಲ್ಲಿ, ಅವನ ಮಾವ ಗಾಡ್ವಿನ್ ಇಬ್ಬರೂ ಬಹಳ ಪ್ರಚಾರಮಾಡಿದರು. ಷೆಲ್ಲಿ " ಪ್ರೊಮಿಥಿಯಸನ ಬಂಧವಿಮೋಚನ " (Prometheus Unbound) ಎಂಬ ಗ್ರಂಥದಲ್ಲಿ ಮಾನವನ ಪ್ರಗತಿಯ ಚಿತ್ರ ಕೊಟ್ಟಿದ್ದಾನೆ. ಅವನಿಗೆ " ಪರಿಪೂರ್ಣತೆಯ ಕವಿ ",

(The Poet of Perfectibility) ಎಂಬ ಹೆಸರು ಬಂತು. ಇಂಗ್ಲೆಂಡಿನಿಂದ ಈ ವಾದ ಜರ್ಮನಿಗೆ ಹರಡಿತು. ಅಲ್ಲಿ ಈ ವಾದದ ಮೇಲೆ ಕೊಂಚ ಶಂಕೆ ಆರಂಭ ವಾಯಿತು. 'ಪ್ರಪಂಚದ ಗತಿ ಚಕ್ರಗತಿಯಂತೆ ; ಏರಿಳಿತಗಳು ಸಹಜ ; ಮಿತಿಯಿಲ್ಲದ ಉತ್ತಮತೆ ಸುಳ್ಳು' ಎಂಬ ಭಾವನೆ ತೋರಲು ಮೊದಲಾಯಿತು. ಗಯಟೆ ಕವಿ 'ಮನುಷ್ಯರು ಹೆಚ್ಚು ಬುದ್ಧಿವಂತರಾಗುತ್ತಾರೆ, ಚತುರರಾಗುತ್ತಾರೆ. ಆದರೆ ಉತ್ತಮರಾಗುವುದಿಲ್ಲ. ಮನುಷ್ಯರ ವಿಷಯದಲ್ಲಿ ದೇವರಿಗೆ ಹರ್ಷವಿಲ್ಲದಾಗುವ ಒಂದು ಕಾಲ ಬಂದೀತು' ಎಂದರು.

19ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಗತಿವಾದಕ್ಕೆ ಮತ್ತೆ ಪ್ರಾಬಲ್ಯ ಬಂತು. ಇಂಗ್ಲೆಂಡು ಆಗ ಹಲವು ದೇಶಗಳನ್ನು ಜಯಿಸಿತ್ತು, ವಲಸೆ ನಾಡುಗಳನ್ನು ಕಟ್ಟಿತ್ತು. ವ್ಯಾಪಾರ ಮೊದಲಾದ್ದು ಬೆಳೆಯುತ್ತಿತ್ತು. ಡಾರ್ವಿನ್ ಮೊದಲಾದ ವೈಜ್ಞಾನಿಕರು ಹಲವು ಕ್ಷೇತ್ರಗಳಲ್ಲಿ ಪರಿಶ್ರಮಿಸುತ್ತಿದ್ದರು. ವಿಜ್ಞಾನದ ಹೊಸ ತಿಳಿವಳಿಕೆಯಿಂದ ಕೈಗಾರಿಕೆ ಮೊದಲಾದ ಜನಜೀವನದ ನಾನಾ ಕ್ಷೇತ್ರಗಳಲ್ಲಿ ವಿಶೇಷ ಅಭಿವೃದ್ಧಿಯುಂಟಾಯಿತು. ಇದರ ಫಲವಾಗಿ ಮನುಷ್ಯಪ್ರಯತ್ನದಲ್ಲಿ ನಂಬಿಕೆ ಸಹಜವಾಗಿಯೇ ಹೆಚ್ಚಿತು. ಮತ್ತೆ ಪ್ರಗತಿವಾದ ಬಲಿಷ್ಠವಾಯಿತು. 19ನೆಯ ಶತಮಾನ ಈ ಪ್ರಗತಿ ತತ್ತ್ವದ ಪ್ರಭುತ್ವಕಾಲ ಎನ್ನಬಹುದು.

ಆ ಕಾಲದಲ್ಲಿ ಇಟಲಿಯಲ್ಲಿ ಮಟ್ಸೀನಿ (Mazzini) ಎಂಬ ಪ್ರಖ್ಯಾತ ಪುರುಷರೊಬ್ಬರಿದ್ದರು. ರಾಜಕೀಯ ರಂಗಕ್ಕೆ ಬಂದಿದ್ದ ಪರಮ ಸಾಧುಗಳಲ್ಲಿ ಅವ ರೊಬ್ಬರು. ಅವರು 'ದೈವಸಹಾಯದಿಂದ ಮನುಷ್ಯಪ್ರಯತ್ನ ಫಲಿಸಬೇಕು. ದೈವ ಸಹಾಯವಿದ್ದರೆ ಈಡೇರದ ಕಾರ್ಯವಿಲ್ಲ' ಎಂದರು. ಆದರೂ ಇಂಗ್ಲೆಂಡಿನಲ್ಲಿ ದೇವರನ್ನು ಬಿಟ್ಟು ಮನುಷ್ಯಪ್ರಯತ್ನಕ್ಕೇ ಸಾರ್ಥಕತೆಯುಂಟು ಎಂದು ನಂಬಿದ್ದರು.

ವೈಜ್ಞಾನಿಕರ ಕಾರ್ಯಕಲಾಪಗಳಿಂದ ಪ್ರಗತಿವಾದಕ್ಕೆ ಪುಷ್ಟಿ ದೊರೆತಂತೆಯೇ ಬ್ರೌನಿಂಗ್, ಟೆನಿಸನ್ ಮೊದಲಾದ ಕವಿಗಳಿಂದಲೂ ಬೆಂಬಲ ದೊರೆಯಿತು. ಅವರು ಪ್ರಗತಿವಾದವನ್ನು ಪೂರ್ತಿಯಾಗಿ ಒಪ್ಪದಿದ್ದರೂ ದಿನದಿನಕ್ಕೆ ಅಭಿವೃದ್ಧಿಯುಂಟಾ ಗುವುದು ನಿಜವೆಂದೂ ಅದಕ್ಕಾಗಿ ದುಡಿಯುವುದು ನಮ್ಮ ಧರ್ಮವೆಂದೂ ಸಾರಿದರು.

ವಿಜ್ಞಾನ ಮತ : ಪ್ರಗತಿವಾದವನ್ನು ನಂಬಿದ್ದ ವಿಜ್ಞಾನಕ್ಕೂ ಮತಕ್ಕೂ ಮೊದ ಮೊದಲು ವಿರೋಧ ಹುಟ್ಟಿ ಕೊನೆಕೊನೆಗೆ ವೈಜ್ಞಾನಿಕರಿಗೂ ತತ್ತ್ವ ದೂರವಾಯಿತು. ವೈಜ್ಞಾನಿಕರು ಸತ್ಯಾನ್ವೇಷಿಗಳು ; ವೇದಾಂತಿಗಳಂತೆಯೇ ಅವರೂ ಅವರ ದಾರಿಯಲ್ಲಿ ಸ್ವಾನುಭವಿಗಳು. ಮತದಲ್ಲಿ ಶ್ರದ್ಧೆಗೆ, ನಂಬಿಕೆಗೆ ಹೆಚ್ಚು ಪ್ರಾಧಾನ್ಯ. ವಿಜ್ಞಾನದಲ್ಲಿ ಬರಿಯ ನಂಬಿಕೆಗೆ ಎಡೆಯಿಲ್ಲ. ಪ್ರಯೋಗ ಪರೀಕ್ಷೆ ಪ್ರತ್ಯಕ್ಷ ದರ್ಶನಗಳಿಗೆ ಪ್ರಾಧಾನ್ಯ.

ಪ್ರಗತಿಗೊಂದು ಮಿತಿ : ಪ್ರಗತಿವಾದವನ್ನು ಕಟ್ಟಿದ ವೈಜ್ಞಾನಿಕರಿಂದಲೇ ಅದು ಕದಲಲು ಪ್ರಾರಂಭವಾಯಿತು. ಕೊನೆಯಿಲ್ಲದ ಪ್ರಗತಿ ಸಾಧ್ಯವಿಲ್ಲವೆಂಬ ಸಂಗತಿ

ಗೋಚರವಾಗುತ್ತ ಬಂತು. ಬಾಲ್ಫರ್ ಎಂಬ ತತ್ತ್ವಚಿಂತಕರು 'ಒಬ್ಬನ ಜೀವನದಲ್ಲಿ ಹೇಗೆ ಪ್ರಬಲ ಅಬಲ ಸ್ಥಿತಿಗಳುಂಟೋ ಜನಾಂಗದ ಸ್ಥಿತಿಯಲ್ಲಿಯೂ ಚರಿತ್ರೆಯಲ್ಲಿಯೂ ಹಾಗೆಯೇ ಉನ್ನತಿ ಅವನತಿ ಉಂಟು. ಇದಕ್ಕೆ ಕಾರಣ ಗೊತ್ತಿಲ್ಲ. ಈ ಪರಿಛಿತ ಸ್ವಾಭಾವಿಕ' ಎಂದಿದ್ದಾರೆ. ಡೀನ್ ಇಂಗ್ ಎಂಬವರು 'ಪ್ರತ್ಯೇಕ ವ್ಯಕ್ತಿಗಳಿಗೆ ಪ್ರಗತಿಮಾರ್ಗ ಯಾವಾಗಲೂ ತೆರೆದೇ ಇದೆ. ಆದರೆ ಅದು ಬಹು ಕಡಿದು; ಇಕ್ಕಟ್ಟು. ಕೆಲವರಿಗೆ ಮಾತ್ರ ಅದು ಸಾಧ್ಯವಾದೀತು' ಎಂದಿದ್ದಾರೆ. ಒಂದೊಂದು ಕಾಲದಲ್ಲಿ ಒಂದೊಂದು ವಿಷಯದಲ್ಲಿ ಒಂದೊಂದು ಜನ, ದೇಶ. ಉನ್ನತಿ ಪೊಂದುತ್ತದೆ. ಏಕದೇಶವಾದ ಪ್ರಗತಿ ಮಾತ್ರ ಸಾಧ್ಯ: ಸಾರ್ವತ್ರಿಕ ಪ್ರಗತಿಯಿಲ್ಲ.

ಬ್ಯೂರಿ ಎಂಬ ಚರಿತ್ರಕಾರನೊಬ್ಬನು 'ಪ್ರಪಂಚ ಅಪೇಕ್ಷಣೀಯವಾದ ಕಡೆಗೆ ಮುಂದುವರಿದಿದೆ. ಮುಂದುವರಿಯುತ್ತಿದೆ. ಇನ್ನುಮೇಲೂ ಮುಂದುವರಿಯುತ್ತದೆ, ಎಂಬುದು ಪ್ರಗತಿವಾದದ ಅಭಿಪ್ರಾಯ. ಆದರೆ ಈ ಮುಂಬರಿವು ಅಪೇಕ್ಷಣೀಯವಾದ ಕಡೆಗೇ ಇರಬಹುದು. ಅಪೇಕ್ಷಣೀಯವಲ್ಲದ ಕಡೆಗೆ ಇದ್ದರೂ ಇರಬಹುದು' ಎಂದು ಪ್ರಗತಿಯ ಪರಿಣಾಮ ಒಳ್ಳೆಯದೇ ಆಗುವುದೆಂಬುದರಲ್ಲಿ ಸಂದೇಹವನ್ನು ವ್ಯಕ್ತಪಡಿಸಿದ್ದಾನೆ. ಮತ್ತೊಬ್ಬರು 'ಪ್ರಗತಿಯು ಕತೆ ವಿಾನಿನ ಗಾಳವಿದ್ದ ಹಾಗೆ; ಒಳ್ಳೆಯದರ ರುಚಿ ತೋರಿಸಿ ಕಷ್ಟಕ್ಕೆ ಸಿಕ್ಕಿಸುತ್ತದೆ' ಎಂದಿದ್ದಾರೆ. ಈಗ ಪರಸ್ಪರ ವಿರುದ್ಧವಾದ ಭಾವನೆಗಳಿಗೆಲ್ಲ ಪ್ರಗತಿಯನ್ನು ಅನ್ವಯಿಸುತ್ತಿದ್ದೇವೆ. ಮನಸ್ಸಿಗೆ ಪ್ರಮಾದ ಉಂಟುಮಾಡುವ ಮಾತಾಗಿದೆ ಈ ಪ್ರಗತಿ. ಪ್ರಕೃತಿರಹಸ್ಯ ದುರ್ಭೇದ್ಯವಾದ್ದು. ಹಾಗೇ ವಿಜ್ಞಾನದ ಪ್ರಗತಿ ಕೂಡ ಒಂದು ದಿನ ತಟಕ್ಕನೆ ನಿಂತುಬಿಡಬಹುದೇನೊ!

ಹಾಗಾದರೆ ಹಿಂದಿಗಿಂತ ಈಗ ಸ್ಥಿತಿ ಉತ್ತಮವಾಗಿಲ್ಲವೆ ಎಂದು ಕೇಳಬಹುದು. ಬೇರೆಬೇರೆ ಸಂಗತಿಗಳ ತಿಳಿವಳಿಕೆ ಹೆಚ್ಚಿದೆ. ಅವುಗಳ ಉಪಯೋಗಕ್ಕೆ ಬೇಕಾದ ಆತ್ಮವಿವೇಚನೆ ಹೆಚ್ಚಿಲ್ಲ. ನಿತ್ಯಜೀವನಕ್ಕೆ ಬೇಕಾದ ಪ್ರಜ್ಞೆ ಹೆಚ್ಚಿಲ್ಲ. ಈ ಸದಸದ್ವಿವೇಚನೆಯ ವಿಷಯದಲ್ಲಿ ನಾವು ಉಪನಿಷತ್ಕಾಲಕ್ಕಿಂತ. ರಾಮಾಯಣ ಮಹಾಭಾರತಗಳ ಕಾಲಕ್ಕಿಂತ ಮುಂದೆ ಹೋಗಿಲ್ಲ. ವಿಷಯಜ್ಞಾನ ಹೆಚ್ಚಿ ವಿವೇಕ ಇದ್ದಂತೆಯೇ ಇದೆ. ಟೆನಿಸನ್ ಹೇಳುವಂತೆ. 'ತಿಳಿವು ಬರುತ್ತದೆ: ಆದರೆ ವಿವೇಕ ತಡವಾಡುತ್ತದೆ.' (Knowledge comes: but wisdom lingers.)

ಮನುಷ್ಯಪ್ರಯತ್ನ–ಸ್ವಾತಂತ್ರ್ಯ: ಹಾಗಾದರೆ ಪ್ರಗತಿ ಇಲ್ಲವೇ ಇಲ್ಲವೆ? ಮನುಷ್ಯಪ್ರಯತ್ನಕ್ಕೆ ಅವಕಾಶವಿಲ್ಲವೆ? ಫಲವಿಲ್ಲವೆ?— ಎಂಬ ಪ್ರಶ್ನೆಗಳು ಏಳುತ್ತವೆ. ಡೀನ್ ಇಂಗ್ ಹೇಳುವಂತೆ ಸ್ವಲ್ಪಮಾತ್ರ ಪ್ರಗತಿ ಉಂಟು. ಉತ್ಕರ್ಷಕ್ಕಾಗಿ, ಅಭಿವೃದ್ಧಿಗಾಗಿ ದುಡಿಯುವುದು ಮನುಷ್ಯನ ಅಧಿಕಾರ. ಮನುಷ್ಯಪ್ರಯತ್ನಕ್ಕೆ ಸ್ಥಾನವಿಲ್ಲದಿದ್ದರೆ ಪಾಪಪುಣ್ಯಗಳು ಕರ್ಮದ ಫಲ ಎಂಬ ಮಾತಿಗೆ ಅರ್ಥವಿಲ್ಲ. ಜೀವಕ್ಕೆ ಸ್ವಾತಂತ್ರ್ಯ ಉಂಟು. ಸ್ವಾತಂತ್ರ್ಯದ ಜೊತೆಗೆ ಜವಾಬ್ದಾರಿಯೂ ಉಂಟು.

ಹಿಂದುಗಳಲ್ಲಿ ದೈವವಾದ—ಎಂದರೆ ‘ಅದೃಷ್ಟವಿದ್ದಂತೆ ಆಗುತ್ತದೆ; ನಮ್ಮ ಪ್ರಯತ್ನವೇನೂ ಇಲ್ಲ’ ಎಂಬ ವಾದ—ಪ್ರಬಲವಾಗಿದೆ. ‘ಈಸಬೇಕು. ಇದ್ದು ಜೈಸಬೇಕು’ ಎಂಬ ಪ್ರಚಾರ ಕಡಮೆಯಾಗಿದೆ. ಬುದ್ಧಿಯ ಮಾರ್ಗದಲ್ಲಿ ನಡೆಯುವವರು, ಚೆನ್ನಾಗಿ ವಿವೇಚನೆ ಮಾಡಿ ಕೆಲಸ ಮಾಡುವವರು. ದೈವವಾದವನ್ನೇ ಪಟ್ಟುಹಿಡಿಯದೆ ತಮ್ಮ ಸ್ವಾತಂತ್ರ್ಯದ ಅಳವನ್ನರಿತು ಪಾಪದೂರರಾಗಿ ಬಾಳುತ್ತಾರೆ.

ಭಾವಾವೇಶ ಬುದ್ಧಿಕಾರ್ಯವಾಗಿ ನಡೆಯಬೇಕು: ಬುದ್ಧಿ ಬೆಳೆಯಬೇಕು. ‘ನಮ್ಮ ಬುದ್ಧಿಯನ್ನು ಪ್ರಚೋದಿಸು’ (ಧಿಯೋ ಯೋ ನಃ ಪ್ರಚೋದಯಾತ್) ಎಂಬುದು ನಮ್ಮ ಪ್ರಾರ್ಥನೆ. ವಿಮರ್ಶನ ವಿವೇಚನಗಳು ಬುದ್ಧಿಯ ಕಾರ್ಯ, ಅವರ ಲಕ್ಷಣ. ಈಗ ಸುಮ್ಮನೆ ಮಂತ್ರೋಚ್ಚಾರ ಮಾಡುವುದು ರೂಢಿಯಾಗಿ, ಸ್ವತಂತ್ರ ವಿವೇಚನೆ ಇಲ್ಲವಾಗಿದೆ. ಸ್ವತಂತ್ರವಾಗಿ ವಿಚಾರಮಾಡಿ ಸರಿತೋರಿದರೆ ಒಪ್ಪಿಕೊಳ್ಳಬೇಕು. ಈಗ ಸ್ವಬುದ್ಧಿ ಜವಾಬ್ದಾರಿ ಹೊರುವ ಅಭ್ಯಾಸ ಕಡಮೆಯಾಗಿದೆ. ದೇವರ ಮೇಲೆ ಜವಾಬ್ದಾರಿ ಹಾಕುವ ಅಭ್ಯಾಸ ಹೆಚ್ಚಾಗಿಬಿಟ್ಟಿದೆ.

ನಮ್ಮ ಉಪದೇಶ. ತತ್ತ್ವ ಎಲ್ಲಿಂದಲೇ ಬರಲಿ ನಾವು ಸ್ವಂತವಾಗಿ ವಿಚಾರ ಮಾಡಿ ತೀರ್ಮಾನಕ್ಕೆ ಬರಬೇಕು. ಇದು ನಮ್ಮ ದೊಡ್ಡ ಜವಾಬ್ದಾರಿ. ಧರ್ಮದ ಮಾತೇ ಆಗಲಿ. ರಾಜಕೀಯ ಸಾಮಾಜಿಕಾದಿಗಳಿಗೆ ಸಂಬಂಧಿಸಲಿ. ಮಾತು ಎಲ್ಲಿಯೋ ಹುಟ್ಟಿದ್ದಿರಲಿ, ಎಂಥ ನಾಡ ಹಿರಿಯರ ಬಾಯಿಂದಲೇ ಬಂದಿರಲಿ. ಅದನ್ನು ಪರ್ಯಾಲೋಚಿಸಿ ತೂಗಿ, ಆಮೇಲೆ ನಿರ್ಧಾರಕ್ಕೆ ಬರುವ ಹೊಣೆ ಎಲ್ಲರ ಮೇಲೂ ಹೊತ್ತಿರುತ್ತದೆ. ಸ್ವಾತಂತ್ರ್ಯ ಪರಿಮಿತವೇನೋ ಹೌದು. ಇರುವ ಸ್ವಾತಂತ್ರ್ಯವನ್ನು ಪೂರ್ಣವಾಗಿ ಉಪಯೋಗಿಸಬೇಕಾದ್ದು ಮನುಷ್ಯನ ಧರ್ಮ, ಕರ್ತವ್ಯ.

ಪ್ರಪಂಚವೊಂದು ಅಶ್ವತ್ಥವೃಕ್ಷದಂತೆ (ಊರ್ಧ್ವಮೂಲಮಧಶ್ಶಾಖಮಶ್ವತ್ಥಂ ಪ್ರಾಹುರವ್ಯಯಂ). ಇದರ ಬೇರು ಮೇಲೆ. ದೇವರಲ್ಲಿ. ಕೊಂಬೆಗಳು ಕೆಳಗೆ; ಸಮಸ್ತ ಜೀವರಾಶಿಗಳೂ ಕೊಂಬೆಗಳು. ಈ ಮರ ಒಂದು ದಿನ ಇದ್ದಂತೆ ಮರುದಿನ ಇರುವುದಿಲ್ಲ. ಒಂದು ಕಡೆ ಬಾಡುತ್ತಿದ್ದರೆ ಇನ್ನೊಂದು ಕಡೆ ಚಿಗುರುತ್ತಿರುತ್ತದೆ. ಬಾಡುವುದು ಕಡಮೆಯಾಗಿ ಚಿಗುರುವುದು ಹೆಚ್ಚಾಗುವಂತೆ ಮನುಷ್ಯ ಪ್ರಯತ್ನಿಸಬೇಕು.

ಲೋಕೋದ್ಧಾರಕ್ಕಾಗಿ ಕೆಲಸ ಮಾಡುತ್ತಿದ್ದೇವೆಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಪ್ರಯತ್ನ ನಮ್ಮ ಏಳ್ಗೆಗಾಗಿ. ನಮ್ಮ ಬಾಳಿನ ಸಫಲತೆಗಾಗಿ, ನಮ್ಮ ಜೀವಸಂಸ್ಕಾರಕ್ಕಾಗಿ.

[ಕನ್ನಡ ನುಡಿ: ಫೆಬ್ರವರಿ 19, 1940]

ಶಾಸನ ರಚನೆ ಮತ್ತು ಪ್ರಜಾಭಿಪ್ರಾಯ

1

ನಮ್ಮ ದೇಶದಲ್ಲಿ ಈಚೆಗೆ ಹೊಸಹೊಸ ಕಾನೂನುಗಳು ಮಳೆಗಾಲದ ಝರಿ ತೊರೆಗಳಂತೆ ಉಬ್ಬುಬ್ಬಿ ಬರುತ್ತಿವೆ. ಅವು ಗಾತ್ರದಲ್ಲಿ ವಿಪರೀತವಾಗಿರುವುದು ಮಾತ್ರವೇ ಅಲ್ಲ ; ಅವುಗಳ ವಿಷಯ ವಿವಿಧತೆ ಭ್ರಾಂತಿಕಾರಕವಾಗಿದೆ ಮತ್ತು ಅವುಗಳ ವಿವರಾಂಶಗಳನ್ನು ಗ್ರಹಿಸಿ ಮನಸ್ಸಿನಲ್ಲಿ ರೂಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಈ ಶಾಸನಪ್ರವಾಹವನ್ನು ಯಾರಾದರೂ ಪರೀಕ್ಷಿಸಿ ನೋಡುತ್ತಿದ್ದಾರೆಯೆ ? ಶಾಸನದ ಮಂತ್ರಿಗಳಾದರೂ ತಾವು ಮಾಡುತ್ತಿರುವ ಕೆಲಸದ ಆಧಾರವೇನು, ಪರಿಣಾಮವೇನು ಎಂಬುದನ್ನು ತಳಮುಟ್ಟ ಶೋಧನೆ ಮಾಡಿದ್ದಾರೆಯೇ ?

ರಾಜ್ಯಶಾಸನವು ಪ್ರಜಾಭಿಪ್ರಾಯದ ಪ್ರತಿಬಿಂಬವೆಂಬುದು ಪ್ರಜಾರಾಜ್ಯ ಪದ್ಧತಿಯ ಮೂಲ ತತ್ತ್ವ. ರಾಜ್ಯದ ಸಮಸ್ತ ಆಡಳಿತಗಳೂ ಶಾಸನದಂತೆ ನಡೆಯ ಬೇಕಾದವು ; ಶಾಸನವಾದರೋ ಜನದ ಇಷ್ಟಕ್ಕನುಸಾರವಾಗಿ ನಡೆಯಬೇಕಾದದ್ದು. ಈಗ ಬಂಡಿಬಂಡಿಯಾಗಿ ನಡೆಯುತ್ತಿರುವ ಶಾಸನಕಲಾಪವು ಜನದ ಅಭಿಪ್ರಾಯದ ಮೇರೆಗೇ ಆಗುತ್ತಿದೆಯೆ? ಜನಕ್ಕೆ ಅವರ ನಿಜಸ್ವರೂಪದ ಅರಿವಾದರೂ ಇದೆಯೆ ?

ರಾಜಕೀಯದಲ್ಲಿ ಅಧಿಕಾರಕ್ಕಾಗಿ ಪಕ್ಷ ಕಕ್ಷಿಗಳು ಹಾರಾಡಿ ಹೋರಾಡುವುದು ಸ್ವಾಭಾವಿಕ. ಅವು ತಮ್ಮ ತಮ್ಮ ಮೇಲ್ಮೆಯನ್ನು ತೋರ್ಪಡಿಸಿಕೊಳ್ಳುವುದಕ್ಕೋಸ್ಕರ ಹೊಸಹೊಸ ಕಾನೂನುಗಳನ್ನು ಹೊಸಹೊಸ ಕಾರ್ಯ ಯೋಜನೆಗಳನ್ನು ದೇಶದ ಮುಂದಿರಿಸುತ್ತವೆ. ಪ್ರತಿಯೊಂದು ಪಕ್ಷವೂ ಭೂಮಿಗೆ ಸ್ವರ್ಗವನ್ನು ತಂದಿರಿಸಲು ತನ್ನದೇ ಮೆಹನತ್ತೆಂದೂ ಮೆಚ್ಚಿಕೆ ಪಡೆಯುವ ಮೇಲ್ಪೋಟಿಯಲ್ಲಿ ಶಾಸನ ಪುಸ್ತಕದ ಗಾತ್ರವನ್ನು ಮತ್ತಷ್ಟು ಬೆಳಸುತ್ತದೆ. ಶಾಸನಸಭೆಗಳಲ್ಲಿರುವವರು ತಾವೇನೂ ಸುಮ್ಮನೆ ಕುಳಿತಿಲ್ಲವೆಂದು ತೋರಿಸಿಕೊಳ್ಳುವುದಕ್ಕೂ ಕಾನೂನು ಕಡತದ ಹೊರೆಯನ್ನು ದೊಡ್ಡದು ಮಾಡಬೇಕಾಗುತ್ತದೆ. ಪಕ್ಷದಲ್ಲಿ ಸಂಖ್ಯಾಬಲವಿದ್ದರೆ ಶಾಸನ ರಚನೆ ಕಷ್ಟವಲ್ಲ. ಕಷ್ಟವಾದದ್ದು ಆಡಳಿತ. ಶಾಸನಕ್ಕೆ ಬೇಕಾದದ್ದು ಕಾಗದ, ಮಸಿ. ಈ ಕೆಲಸ ಹೀಗೆ ಅಗ್ಗವಾದದ್ದಾದ ಕಾರಣ ಹಾಗೂ ಹೀಗೂ ಕಾನೂನು ಬೆಳೆಯುತ್ತದೆ.

ಅವಕ್ಕೆ ತಕ್ಕಂತೆ ಜನದ ಸುಖಸಂಪತ್ತು ಬೆಳೆಯುತ್ತಿದೆಯೆಂಬುದು ಮಾತ್ರ ಖಾತರಿಯು ಮಾತಲ್ಲ.

ನಮ್ಮಲ್ಲಿ ಈಗ ಶಾಸನರಚನೆ ಆಗುತ್ತಿರುವ ರೀತಿಯನ್ನು ನೋಡೋಣ: ಪ್ರಜೆ ಚುನಾವಣೆ ಮಾಡಿದ ಪ್ರತಿನಿಧಿಗಳು ನಮ್ಮ ಶಾಸನಸಭೆಗಳಲ್ಲಿ ಇರುತ್ತಾರೆಂಬುದು ನಿಜ. ಆದರೆ ಅವರು ಕೆಲಸಮಾಡುವ ಕ್ರಮ ಹೇಗೆ ? ಶಾಸನಸಭೆಯ ಒಳಗಡೆ ಎರಡು ಮೂರು ರಾಜಕೀಯ ಪಕ್ಷಗಳಿವೆ. ಆ ಪಕ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಸಂಖ್ಯೆ ಮಿಕ್ಕವು ಗಳಿದಕ್ಕಿಂತ ದೊಡ್ಡದು. ಆದಕಾರಣ ಕಾಂಗ್ರೆಸ್ ನಾಯಕರು ಮಂತ್ರಿಪದವಿಗಳಲ್ಲಿ ಇರುತ್ತಾರೆ. ಇದು ನ್ಯಾಯವಾದದ್ದೇ. ಕಾಂಗ್ರೆಸ್ ಪಕ್ಷದ ಶಾಸನಸಭಾಸದಸ್ಯರಾದರೋ ತಮ್ಮ ಪಕ್ಷದ ನಾಯಕರ ಹಿಡಿತಕ್ಕೆ ಒಳಪಟ್ಟವರಾಗಿರುತ್ತಾರೆ. ಹೀಗೆ ಈ ಪ್ರಬಲ ಪಕ್ಷದ ಶಾಸನ ಸದಸ್ಯರು ತಮ್ಮ ನಾಯಕರ ಅಧೀನದಲ್ಲಿ ಒಂದು ಪಂಗಡವಾಗಿ ಯಾವ ಯಾವ ಕಾನೂನು. ಯಾವಯಾವ ಕಾರುಬಾರು ಆಗಬೇಕೆಂಬುದನ್ನು ತಮ್ಮ ಪಕ್ಷ ಸಭೆಯಲ್ಲಿ ನಿರ್ಣಯಿಸಿ ಕೊಳ್ಳುತಾರೆ. ಈ ಏಪಕಕ್ಷದ ನಿರ್ಣಯವೇ ಕೆಲವು ದಿನವಾದ ಬಳಿಕ ಶಾಸನ ಸಭೆಯ ಮುಂದೆ ಕಾನೂನಿನ ಮುಸೂದೆಯಾಗಿ. ಅಥವಾ ಕರಡು ಠರಾವಾಗಿ ಅವತರಿಸುತ್ತದೆ. ಶಾಸನಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಖ್ಯೆ ದೊಡ್ಡದಾದ ಕಾರಣ ಆ ಪಕ್ಷದ ಒಳಗಣ ತೀರ್ಮಾನವೇ ಶಾಸನ ಸಂಸ್ಥೆಯಲ್ಲಿ ಆ ಸಂಸ್ಥೆಯ ಹೊರಗಣ ತೀರ್ಮಾನವಾಗುತ್ತದೆ. ಎಂದರೆ ಈಗಣ ಶಾಸನ ರಚನೆಯೆಲ್ಲಾ ಏಕಪಕ್ಷದ ಕೈವಾಡವೆಂಬುದು ಸ್ಪಷ್ಟವಾಗಿದೆ.

ಕಾಂಗ್ರೆಸ್ ಪಕ್ಷವೇ ಸಮಸ್ತದೇಶದ ಏಕೈಕ ಪ್ರತಿನಿಧಿಯೆನ್ನುವ ಪಕ್ಷದಲ್ಲಿ ಇನ್ನು ಬೇರೆಯಾಗಿ ಶಾಸನಸಭೆ ಇರುವುದೇತಕ್ಕೆ ? ಹಾಗಲ್ಲದೆ. ಕಾಂಗ್ರೆಸ್ ಪಕ್ಷವು ದೇಶವೆಲ್ಲ ಅಲ್ಲ. ದೇಶದ ಒಂದು ಭಾಗ ಮಾತ್ರ ; ದೇಶದ ಮಿಕ್ಕ ಭಾಗ ಇತರ ಪಕ್ಷಗಳಲ್ಲಿಯೂ. ನಿಷ್ಪಾಕ್ಷಿಕ ಜನದಲ್ಲಿಯೂ ನಿಂತಿದೆ—ಎಂದು ಹೇಳುವುದಾದರೆ ಆ ಇತರ ಪಕ್ಷಗಳ ಮತ್ತು ನಿಷ್ಪಾಕ್ಷಕರ ಪ್ರತಿನಿಧಿಗಳು ಶಾಸನಸಭೆಯಲ್ಲಿ ಅಲ್ಪಸಂಖ್ಯಾತರಾಗಿ ಅಶಕ್ತರಾಗಿದ್ದಾರೆಂಬುದನ್ನು ನಾವು ಆಲೋಚಿಸಬೇಕಾಗಿದೆ. ಅವರಿಗೆ ದೇಶದ ಮಹಾಜನ ಬೆಂಬಲ ಕೊಟ್ಟಲ್ಲದೆ ಪ್ರತಿಪಕ್ಷ ಸ್ತರ ಕೆಲಸ ಸಾರ್ಥಕವಾಗದು.

2

ತತ್ತ್ವವನ್ನು ನೋಡುವುದಾದರೆ ಶಾಸನ ಸಭೆಯೊಳಗಣ ಪಕ್ಷಕಕ್ಷಿಗಳ ಬಲಾಬಲಗಳು ಹೇಗೇ ಇರಲಿ ಆ ಸಭೆಯ ಕಾರ್ಯಕಲಾಪಗಳನ್ನು ಸರ್ವಪಕ್ಷಾತೀತರಾದ ರಾಷ್ಟ್ರಕ ಜನರು ಸ್ವತಂತ್ರ ಬುದ್ಧಿಯಿಂದ ಪರೀಕ್ಷಿಸಿ ವಿಮರ್ಶನೆ ಮಾಡಬೇಕಾದದ್ದು ಕರ್ತವ್ಯವಾಗಿದೆ. ರಾಷ್ಟ್ರಕಧರ್ಮವನ್ನು ಎರಡೇ ಮಾತುಗಳಲ್ಲಿ ಹೇಳಬೇಕಾದರೆ ಅದು ಹೀಗೆ: (1) ಶಾಸನ ವಿಧೇಯತೆ—ಎಂದರೆ ಕಾನೂನು ಕಾಯಿದೆಗಳನ್ನು ತಿಳುವಳಿಕೆಯಿಂದಲೂ, ಪ್ರಾಮಾಣಿಕತೆಯಿಂದಲೂ ಪರಿಪಾಲಿಸುವುದು. (2) ಶಾಸನ ವಿಮರ್ಶನೆ—ಎಂದರೆ ಕಾನೂನುಕಟ್ಟಳೆಗಳಲ್ಲಿಯೂ ಅವುಗಳ ಆಡಳಿತದಲ್ಲಿಯೂ ಇರಬಹುದಾದ ದೋಷ

ಗಳನ್ನೂ ಲೋಪಗಳನ್ನೂ ನಿರ್ಭಯವಾಗಿ ಎತ್ತಿತೋರಿಸಿ ಪರಿಷ್ಕಾರಗಳನ್ನು ಮಾಡಿಸುವುದು. ಈ ಎರಡು ಕರ್ತವ್ಯಗಳಲ್ಲಿ ಮೊದಲನೆಯದನ್ನು ನಮ್ಮ ಜನ ಒಂದು ರೀತಿಯಲ್ಲಿ ನಡೆಸುತ್ತಾರೆ. ವಿಧೇಯತೆ ನಮಗೆ ಬಹುಕಾಲದಿಂದ ಅಭ್ಯಾಸವಾಗಿ ಬಂದಿರುವ ಗುಣ. ನಾವು ಸರ್ಕಾರಕ್ಕೆ ಎದುರುಬೀಳುವ ಜನವಲ್ಲ. ಶಾಸನವು ನಮಗೆ ಇಷ್ಟವೋ, ಅನಿಷ್ಟವೋ ; ಅದರ ಅರ್ಥವೇನೋ, ಸ್ವರೂಪವೇನೋ—ಅದನ್ನು ಹೇಗಿದ್ದರೂ ನಡೆಸಿಕೊಡುತ್ತೇವೆ. ಆದರೆ ಅರ್ಥಜ್ಞಾನದಿಂದಲೂ ಯುಕ್ತಾಯುಕ್ತ ವಿವೇಚನೆಯಿಂದಲೂ ಸಲ್ಲಿಸುವ ವಿಧೇಯತೆಯೇ ನ್ಯಾಯವಾದದ್ದು, ಮತ್ತು ಹಿತಕರವಾದದ್ದು. ಅಂಥ ವಿವೇಕಪೂರ್ವಕ ವಿಧೇಯತೆ ಈಗ ನಮ್ಮಿಂದ ರಾಜ್ಯಕ್ಕೆ ದೊರೆಯುತ್ತಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾದೀತು.

ಶಾಸನಕ್ಕೆ ನಾವು ಸಲ್ಲಿಸುವ ವಿಧೇಯತೆಯು ಬುದ್ಧಿಪೂರ್ವಕವಾಗಿರಬೇಕು ಎಂದು ಹೇಳಿದ್ದರಿಂದಲೇ ಶಾಸನವನ್ನು ನಾವು ಅರ್ಥಮಾಡಿಕೊಂಡು ಒಪ್ಪಿರಬೇಕೆಂಬುದು ಸಿದ್ಧವಾಗುತ್ತದೆ. ಅಂಥ ಸ್ವಬುದ್ಧಿಪೂರ್ವಕವಾದ ಸಮ್ಮತಿಯೆಂಬುವದರಲ್ಲಿಯೇ ರಾಷ್ಟ್ರಕನ ಎರಡನೆಯ ಕರ್ತವ್ಯವಾದ ಸ್ವತಂತ್ರ ವಿಮರ್ಶನೆಯೆಂಬುದು ಅಡಗಿದೆ. ಈ ವಿಮರ್ಶನೆಯ ಕರ್ತವ್ಯ ನಮ್ಮ ಮಹಾಜನರಿಂದ ಈಗ ತಕ್ಕಷ್ಟು ಚೆನ್ನಾಗಿ ನಡೆಯುತ್ತಿಲ್ಲವೆಂಬುದನ್ನು ಎಲ್ಲರೂ ಒಪ್ಪಲೇಬೇಕು. ಸರ್ಕಾರದ ಮಂತ್ರಿಗಳೂ ಇತರ ಶಾಸನ ಸದಸ್ಯರೂ ಆಗಿಂದಾಗ್ಗೆ ತರುವ ಶಾಸನ ಸೂಚನೆಗಳನ್ನೂ, ಕಾರ್ಯಯುಕ್ತ ಸೂಚನೆಗಳನ್ನೂ ಸ್ವತಂತ್ರ ದೃಷ್ಟಿಯಿಂದ ಯಾರೂ ಪರೀಕ್ಷೆಮಾಡುತ್ತಿಲ್ಲ. ಈ ಕೆಲಸವನ್ನು ನಡೆಸಲು ತಕ್ಕ ಸಾಮರ್ಥ್ಯವುಳ್ಳ ಜನರು ನಮ್ಮ ದೇಶದಲ್ಲಿ ಇಲ್ಲವೆಂದಲ್ಲ. ಸರ್ಕಾರದ ಹುದ್ದೆಗಳಲ್ಲಿದ್ದು ವಿಶ್ರಾಂತರಾಗಿರುವವರೂ, ಜಡ್ಜಿಪದವಿಯಿಂದ ನಿವೃತ್ತರಾಗಿರುವವರೂ, ಲಾಯರುಗಳೂ, ಭಾರೀ ವ್ಯವಹಾರಗಾರರೂ, ಮೊದಲಾದವರೂ ನಮ್ಮ ದೇಶದಲ್ಲಿ ಬೇಕಾದಷ್ಟು ಮಂದಿ ಇದ್ದಾರೆ. ಅವರಲ್ಲಿ ಯಾರೂ ಶಾಸನರಚನೆಯ ಪರೀಕ್ಷೆಯ ಕೆಲಸಕ್ಕೆ ಕೈಹಚ್ಚುತ್ತಿಲ್ಲ. ನಮ್ಮ ವೃತ್ತಪತ್ರಿಕೆಗಳೂ ಈ ಅವಶ್ಯ ಕಾರ್ಯಕ್ಕೆ ಗಮನ ಕೊಡುತ್ತಿಲ್ಲ. ಹೀಗಾಗಿ ಕಾಂಗ್ರೆಸ್ ನಾಯಕರ ಬುದ್ಧಿಗೆ ಯಾವ ಕ್ಷಣಕ್ಕೆ ಯಾವುದು ಸರಿಯೆಂದು ತೋರುತ್ತದೆಯೋ ಅದೇ ಅವರ ಮಂತ್ರಿಗಳ ಮೂಲಕ ಶಾಸನ ಸಭೆಯಿಂದ ದೇಶದ ಮೇಲೆ ಹೇರಲ್ಪಡುತ್ತಿದೆ. ಇದು ವಾಸ್ತವವಾದ ಪ್ರಜಾಪ್ರಭುತ್ವವಲ್ಲ. ಇದು ಏಕಪಕ್ಷಪ್ರಭುತ್ವ. ಆದರೆ ಈ ಪರಿಸ್ಥಿತಿಗಾಗಿ ನಿಂದಿಸಬೇಕಾದದ್ದು ಕಾಂಗ್ರೆಸ್ ಸಂಸ್ಥೆಯನ್ನಲ್ಲ. ಎಲ್ಲ ದೇಶಗಳಲ್ಲಿಯೂ ಸಾಮಾನ್ಯವಾಗಿ ರಾಜಕೀಯ ಕಕ್ಷಿಗಳು ಹಿಡಿಯುವಂಥ ಮಾರ್ಗವನ್ನೇ ನಮ್ಮ ದೇಶದಲ್ಲಿ ಕಾಂಗ್ರೆಸ್ ಅನುಸರಿಸುತ್ತಿದೆ. ಒಂದಾನೊಂದು ರಾಜಕೀಯ ಪಕ್ಷವು ಇತರ ಪಕ್ಷಗಳ ಭಯವಿಲ್ಲದಿರುವಷ್ಟು ಪ್ರಬಲವಾಗಿ ಬೆಳೆದಾಗ ಅದು ನಡೆಯುವುದು ಹೀಗೆಯೇ. ಈಗ ಕರ್ತವ್ಯಲೋಪವಿರುವುದು ನಮ್ಮ ಮಹಾಜನವರ್ಗದಲ್ಲಿ. ಶಾಸನ, ಕಾರ್ಯಪರೀಕ್ಷೆಗೆ ಬೇಕಾದ ವಿದ್ಯೆ, ಬುದ್ಧಿ, ಅನುಭವಗಳುಳ್ಳ ಸ್ವತಂತ್ರ ರಾಷ್ಟ್ರಕರು ತಮ್ಮ ಕರ್ತವ್ಯವನ್ನು ಗ್ರಹಿಸಿ ಮುಂದೆಬಾರದ ಹೊರತು ನಮ್ಮ ಶಾಸನಗಳು ಸಮರ್ಪಕವಾಗುವ ಭರವಸೆ ಇರದು.

ಶಾಸನವೆಂದರೆ ಪ್ರಜಾವ್ಯಕ್ತಿಗಳ ಮತ್ತು ಪ್ರಜಾಸಮೂಹಗಳ ನಡವಳಿಕೆಯ ತಿದ್ದುಪಾಟು. ಯಾವುದೋ ಒಂದು ವಿಷಯದಲ್ಲಿ ಈಗಿರುವ ಏರ್ಪಾಟುಗಳು ಸರಿಯಾಗಿಲ್ಲವೆಂದು ಅವನ್ನು ಬದಲಾಯಿಸಹೊರಡತಕ್ಕದ್ದು ಕಾನೂನು. ಆ ಬದಲಾವಣೆಯಿಂದ ಕೆಲವು ಜನಕ್ಕೆ ಅನುಕೂಲವೂ, ಹಾಗೆಯೇ ಕೆಲವು ಜನಕ್ಕೆ ಪ್ರತಿಕೂಲವೂ ಆಗುವುದು ಖಂಡಿತ. ಈ ಅನುಕೂಲತೆ ಅನನುಕೂಲತೆಗಳ ಕಾರಣದಿಂದ ಜನರು ತಮ್ಮ ತಮ್ಮ ಪರಸ್ಪರ ವ್ಯವಹಾರಗಳನ್ನೂ ವ್ಯವಸ್ಥೆಗಳನ್ನೂ ಅಷ್ಟೋ ಇಷ್ಟೋ ಬದಲಾಯಿಸಿಕೊಳ್ಳಲೇಬೇಕಾಗುತ್ತದೆ. ಹೀಗೆ ಜನಜೀವನಕ್ಕೆ ಬಿಕ್ಕಟ್ಟು ಸಡಿಲುಗಳ ಕೀಲು ಚೌಕಟ್ಟನ್ನೊತ್ತಿರುವುದು ಶಾಸನದ ಸ್ವರೂಪ. ಅದು ಎಂಥಾದ್ದಾದರೂ ಆದರಿಂದ ಸಮಾಜವು ಯಾವುದೋ ಅಂತಸ್ತಿನಲ್ಲಿ ಕೊಂಚಮಟ್ಟಿಗಾದರೂ ಕದಲಲೇಬೇಕಾಗುತ್ತದೆ. ಹಾಗೆ ಸಮಾಜವನ್ನೂ ಜನದ ನೆಮ್ಮದಿಯನ್ನೂ ಅಲುಗಿಸಿ ಕುಲುಗಿಸುವಂಥಾ ಕಾರ್ಯವನ್ನು ಮಹಾಜನರು ಪರೀಕ್ಷಿಸಿ ನೋಡದೆ ಬಿಟ್ಟರೆ ತಮ್ಮ ಯೋಗಕ್ಷೇಮವನ್ನು ತಾವೇ ಕೆಡಿಸಿಕೊಂಡಂತಾದೀತು.

ಶಾಸನ ಪರೀಕ್ಷೆಗೆ ಎಷ್ಟೋ ದೃಷ್ಟಿಸ್ಥಾನಗಳಿರುತ್ತವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಸೂಚಿಸಬಹುದು :—

3

ಹೊಸ ಕಾನೂನಿಗೆ ವಾಸ್ತವವಾಗಿ ಅವಶ್ಯಕತೆಯುಂಟೆ ? ಅದು ಅವಶ್ಯವೆಂಬುದು ಜನದ ನಿಜವಾದ ಅನುಭವದಿಂದ ಗೊತ್ತಾಗಿರಬೇಕು, ಬರಿಯ ಶಂಕೆ ಊಹೆಗಳ ಮೇಲೆ ಕಟ್ಟಿದ್ದಾಗಿರಬಾರದು. ಆ ಅನುಭವವಾದರೊ ಬಹುಮಂದಿಯದಾಗಿರಬೇಕು. ಅಲ್ಲೊಬ್ಬರು ಇಲ್ಲೊಬ್ಬರು ಮಾತ್ರ ಪಟ್ಟ ಅನುಭವವಾದರೆ ಸಾಲದು. ಮತ್ತು ಅದು ದೀರ್ಘಕಾಲದ ಅನುಭವವಾಗಿರಬೇಕು. ಯಾವುದೋ ಒಂದೆರಡು ವಿಶೇಷಸಂದರ್ಭಗಳ ಅನುಭವದ ಆಧಾರದಿಂದ ಒಂದು ಶಾಸನವನ್ನು ರಚಿಸಹೊರಡುವುದು ಅತಿಪ್ರಯತ್ನವಾದೀತು. ನಾಲ್ಕನೆಯದಾಗಿ ಈ ಅನುಭವವು ಜನಜೀವನದ ಒಂದು ಮೂಲ ವಿಷಯಕ್ಕೆ ಅಥವಾ ಒಂದು ಮಹಾಪ್ರಸಂಗಕ್ಕೆ ಸಂಬಂಧಪಟ್ಟದ್ದಾಗಿರಬೇಕು. ಸಣ್ಣಪುಟ್ಟ ವಿಚಾರಗಳಿಗೂ ಹಂಗಾಮಿ ಪ್ರಶ್ನೆಗಳಿಗೂ ಶಾಸನಯುಕ್ತವಾಗದು.

ಶಾಸನವಿಲ್ಲದೆ ಆಗದೆ?

ಎಷ್ಟೋ ಸಮಾಜಕಾರ್ಯಗಳನ್ನು ಶಾಸನನಿರ್ಬಂಧವಿಲ್ಲದೆ ಕೇವಲ ಶಿಷ್ಟಾಭಿಪ್ರಾಯಬಲದಿಂದ ನಡೆಸುವುದು ಸಾಧ್ಯವಾಗುತ್ತದೆ. ಜನರಲ್ಲಿ ಮದ್ಯ, ಭಂಗಿ ಮೊದಲಾದ ಎಷ್ಟೋ ದುರಭ್ಯಾಸಗಳನ್ನು ಲೋಕಾಪವಾದದ ಭಯ ತಡೆದಿದೆ. ಸಭ್ಯರ ಆಕ್ಷೇಪಣೆಗೆ ಹೆದರಿ ಎಷ್ಟೋ ಜನ ದುಷ್ಕಾರ್ಯದಿಂದ ವಿಮುಖರಾಗಿರುತ್ತಾರೆ. ನಮ್ಮ ದೇಶದಲ್ಲಿ ಎಷ್ಟೋ ಒಳ್ಳೆಯ ಕೆಲಸಗಳು ಪೂರ್ವಕಾಲದಲ್ಲಿ ಜನದ ಸ್ವಂತ ಸಮ್ಮತಿಯಿಂದಲೇ

ನಡೆಯುತ್ತಿದ್ದವು. ನಮ್ಮ ಹಳ್ಳಿಗಳ ಕೆರೆಕಂಟೆಗಳು, ನಮ್ಮ ಗುಡಿ ಗೋಪುರಗಳು, ಸತ್ರಗಳು, ಮಂಟಪಗಳು ಇವೆಲ್ಲಾ ದೇಶಕ್ಕೆ ಅಪಾರವಾದ ಸಂಪತ್ತಾಗಿವೆ. ಈ ಹೇರಳವಾದ ಲೋಕೋಪಕಾರಗಳು ಶಾಸನದ ನಿರ್ಬಂಧದಿಂದ ಆದುವಲ್ಲ. ಜನದ ಸಹಜೋತ್ಸಾಹವೇ ಆ ಸತ್ಕಾರ್ಯಗಳನ್ನು ಆಗ ಮಾಡಿಸಿದ್ದು. ಮೈಸೂರಿನ ದಿವಾನ್ ರಂಗಾಚಾರ್ಯರೂ, ಸರ್ ಎಂ. ವಿಶ್ವೇಶ್ವರಯ್ಯನವರೂ ಜನದ ಸಮಾಜಾಭಿಮಾನ ದಿಂದಲೇ ದೇಶಕಾರ್ಯಗಳು ನಡೆಯಬೇಕೆಂದು ವಾದಿಸುತ್ತಿದ್ದರು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಹಳ್ಳಿಯ ಜನರು ವಾರಕ್ಕೊಂದು ದಿನ—ಸಾಮಾನ್ಯವಾಗಿ ಸೋಮವಾರ—ಊರೊಟ್ಟಿನ ಕೆಲಸಕ್ಕಾಗಿ ಮನೆಗೊಬ್ಬಾಳಿನಂತೆ ಬರಬೇಕೆಂದು ಒಂದು ಕಾರ್ಯ ಯೋಜನೆ ಮಾಡಿದ್ದರು. ಅದರಲ್ಲಿ ನಿರ್ಬಂಧವಿರಲಿಲ್ಲ. ಆದರೂ ಅದು ಕೆಲವು ಕಡೆ ಕೆಲವು ದಿನ ಚೆನ್ನಾಗಿಯೇ ನಡೆಯಿತು. ಆ ಏರ್ಪಾಟನ್ನು ಕಾನೂನು ಮೂಲಕ ಶಾಶ್ವತ ಪಡಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವಂದಿ ಸರ್ಕಾರಕ್ಕೆ ಸಲಹೆ ಕೊಟ್ಟರು. ವಿಶ್ವೇಶ್ವರಯ್ಯನವರು ಅದಕ್ಕೊಪ್ಪಲಿಲ್ಲ. ಸರ್ಕಾರದ ಮತ್ತು ಕಾನೂನಿನ ನಿರ್ಬಂಧ ವಿಲ್ಲದೆ ಖುದ್ದುರಾಜಿಯಿಂದಲೇ ಜನ ಒಳ್ಳೆಯ ಕೆಲಸ ನಡೆಸಬೇಕೆಂಬುದು ಅವರ ಮನೋಗತ. ಅದೇ ನಿಜವಾದ ಸ್ವಾತಂತ್ರ್ಯಪ್ರಿಯರ ಮತ. ಯಾವುದು ನಿರ್ಬಂಧವಾಗಿ ಬರುತ್ತದೆಯೋ ಅದು ಜನದ ಉತ್ಸಾಹವನ್ನು ಮೊಟಕುಮಾಡಿ ಅವರ ಸ್ವಶಕ್ತಿಯನ್ನು ಬೆಳೆಯಬಿಡದೆ ಕುಗ್ಗಿಸುತ್ತದೆ. ಅದು ಸಮಾಜಕ್ಕೆ ಹಾನಿ. ಸದ್ಯಕ್ಕೆ ಲಾಭಕರವೆಂದು ತೋರುವ ಶಾಸನವು ದೂರ ಪರಿಣಾಮದಲ್ಲಿ ನಷ್ಟಕರವಾದೀತು. ಆಗಬೇಕಾದ ಒಳ್ಳೆಯದು ಕಾನೂನಿನ ಮತ್ತು ಸರ್ಕಾರದ ಬಲಾತ್ಕಾರದಿಂದಲ್ಲದೆ, ಕೂಡಿಮಾಟ್ಟಿಗೂ ಜನದ ನೈಜಹಿತೋತ್ಸಾಹದಿಂದಲೇ ನಡೆಯುವಂತಾದರೆ ಅದು ಮತ್ತಷ್ಟು ಒಳ್ಳೆಯ ದಾಗುತ್ತದೆ.

ಒಂದು ಹೊಸ ಕಾನೂನಿಗೆ ಜನರ ಮನಸ್ಸನ್ನು ಮುಂದಾಗಿ ಸಿದ್ಧಪಡಿಸಬೇಕಾ ದದ್ದು ದೊಡ್ಡ ಸಂಗತಿ. ಕಾನೂನು ಜನದ ಮೇಲೆ ಸಿಡಿಲು ಗುಡುಗಿನಂತೆ ಹಠಾತ್ತಾಗಿ ಇಳಿಯಬಾರದು. ಅದರ ಅರ್ಥವನ್ನೂ ಸ್ವಭಾವವನ್ನೂ ಮುಂಚಿತವಾಗಿ ಅರಿತು ಕೊಳ್ಳಲು ಜನಕ್ಕೆ ಕಾಲಾವಕಾಶವೂ, ವಿಚಾರ ಸಾಮಗ್ರಿಯೂ ದೊರೆಯಬೇಕು. ಈ ಪೂರ್ವಸಿದ್ಧತೆ ನಮ್ಮ ದೇಶದಲ್ಲಿ ನಡೆಯುತ್ತಲೇ ಇಲ್ಲ. ಇಂಗ್ಲೆಂಡಿನಲ್ಲಿ ಮದುವೆಯಂಥ ಒಂದು ದೊಡ್ಡ ಜೀವನ ವಿಷಯವನ್ನು ಕುರಿತು ಕಾನೂನಾಗಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ನಾಲ್ಕಾರು ವರ್ಷ ಅದು ಮಹಾಜನ ಸಭೆಗಳಲ್ಲಿಯೂ, ವಿದ್ವತ್ಸಂಸ್ಥೆ ಗಳಲ್ಲಿಯೂ, ವೃತ್ತಪತ್ರಿಕೆಗಳಲ್ಲಿಯೂ ಚರ್ಚೆಯಾಗಿರುತ್ತದೆ. ಆ ವಿಷಯದಲ್ಲಿ ಕಾನೂನು ಅವಶ್ಯವೆ ? ಅದು ಹೇಗಿರಬೇಕು ? ಎಂಬ ಪ್ರಶ್ನೆಗಳನ್ನು ಸಕಾರಣವಾಗಿ ಪರ್ಯಾಲೋಚಿಸಿ ವರದಿ ಮಾಡಲು "ರಾಯಲ್ ಕಮಿಷನ್" ಎಂಬಂಥ ಒಂದು ವಿಶೇಷ ಸಮಿತಿ ಏರ್ಪಾಟಾಗುತ್ತದೆ. ಆ ಸಮಿತಿ ದೇಶದ ಎಲ್ಲ ಭಾಗಗಳಿಂದಲೂ ಅಭಿಪ್ರಾಯಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಸಂಖ್ಯೆ ಸಂಗತಿಗಳನ್ನು ಪರಿಶೀಲನೆ ಮಾಡಿ ವರದಿ ಬರೆಯುತ್ತದೆ. ಆ ವರದಿಯ ಆಧಾರದ ಮೇಲೆ ಪಾರ್ಲಿಮೆಂಟಿನ ಮಸೂದೆ ತಯಾರಾಗುತ್ತದೆ. ಅದು ಪ್ರಕಟವಾಗಿ ಮಹಾಜನದ ಮುಂದೆ ಅಭಿ

ನ್ಯಾಯದ ಬಗ್ಗೆ ಬರುತ್ತದೆ. ಹೀಗೆ ಸಾವಕಾಶವಾಗಿ ನಡೆಯುವ ಕಾರ್ಯವಿಧಾನದ ಪ್ರತಿಯೊಂದು ಘಟ್ಟದಲ್ಲಿಯೂ ಯಥೇಷ್ಟವಾಗಿ ತಕರಾರುಗಳೂ ವಾದ ಪ್ರತಿವಾದಗಳೂ ನಡೆದು ಅದರಿಂದ ಜನಕ್ಕೆ ಒಂದು ವಿದ್ಯಾಭ್ಯಾಸವಾಗಿ ಅವರ ಮನಸ್ಸು ಹೊಸ ಬದಲಾವಣೆಗೆ ಸಿದ್ಧವಾಗುತ್ತದೆ.

ಹೊಸ ಶಾಸನದ ಸ್ವಭಾವವೂ ಉದ್ದೇಶವೂ ಈ ರೀತಿ ಜನಕ್ಕೆ ಮೊದಲೇ ಮನದಟ್ಟಾಗಿರುವುದರಿಂದ ಆ ಶಾಸನ ಕೊಂಚಮಟ್ಟಿಗಾದರೂ ಸಾರ್ಥಕವಾಗುತ್ತದೆ. ನಮ್ಮಲ್ಲಾದರೋ ಶಾಸನದ ಮಸೂದೆ ದೇಶದಲ್ಲೆಲ್ಲಾ ನಾನಾ ಜನಭಾಷೆಗಳಲ್ಲಿ ಚೆನ್ನಾಗಿ ಪ್ರಕಟವಾಗಿರುವುದು ಕೂಡ ಇಲ್ಲ. ಅದರ ಕರಡು ಪ್ರತಿ ಸಿಕ್ಕುವುದೂ ಕೂಡ ಎಷ್ಟೋ ವೇಳೆ ಕಷ್ಟವೇ. ನೆನಸಿದಾಗ ಕಾನೂನಾಗುತ್ತದೆ ನಮ್ಮ ದೇಶದಲ್ಲಿ.

4

ಈಗಣ ಎಷ್ಟೋ ಕಾನೂನುಗಳು ವಿಜ್ಞಾನಶಾಸ್ತ್ರದ ಸಂಗತಿಗಳನ್ನು ಒಳಗೊಂಡಿರುತ್ತವೆ. ಉದಾಹರಣೆಗಾಗಿ, ವಿವಾಹ ಸಂಬಂಧದ ಶಾಸನವು ಮನಶ್ಶಾಸ್ತ್ರಜ್ಞಾನವನ್ನು ವಂಶಾನುಕ್ರಮ (ಹೆರೆಡಿಟಿ) ವಿಜ್ಞಾನವನ್ನೂ ದಾಯಾವಿಭಾಗ ಶಾಸನವು ಲೋಕಾಂತರ ಶ್ರದ್ಧೆಯ ವಿಚಾರವನ್ನೂ ದೇವಾಲಯ ಶಾಸನವು ಆಗಮ ತಂತ್ರ ವಿಶ್ವಾಸವನ್ನೂ ಅವಲಂಬಿಸಿಕೊಂಡಿರುತ್ತವೆ. ಹಾಗೆಯೇ ಆಹಾರ ವಸ್ತು ನಿಯಂತ್ರಣ ಶಾಸನಗಳು ಸಸ್ಯವಿಜ್ಞಾನ. ಜೀವವಿಜ್ಞಾನ ಮೊದಲಾದ ವಿಜ್ಞಾನಶಾಸ್ತ್ರಗಳನ್ನು ಆಶ್ರಯಿಸಿಕೊಂಡಿರುತ್ತವೆ. ದೇಶ ವಿದೇಶ ವ್ಯಾಪಾರಗಳಿಗೆ ಸಂಬಂಧಪಟ್ಟ ಕಾನೂನು ಅರ್ಥಶಾಸ್ತ್ರ ಸೂತ್ರಗಳಿಗೆ ಸಂಬಂಧಪಟ್ಟಿರುತ್ತದೆ. ನಮ್ಮ ಶಾಸನಕರ್ತರುಗಳು ಈ ನಾನಾ ಬಗೆಯ ಶಾಸ್ತ್ರಗಳ ಪರಿಚಯವನ್ನು ಸಂಪಾದಿಸಿಕೊಂಡಿರುತ್ತಾರೆಯೆ? ಅವರು ಮಾಡಬೇಕೆಂದಿರುವ ಶಾಸನಕ್ಕೆ ಇರುವ ವಿಜ್ಞಾನಶಾಸ್ತ್ರದ ಆಧಾರ ಸರಿಯಾಗಿದೆಯೆ ? ಅವರಲ್ಲಿರುವ ಕರ್ಮತಂತ್ರ ವಿಚಾರ (ಟೆಕ್ನಿಕಲ್) ಸರಿಯಾಗಿದೆಯೇ ? ಯಾವ ಶಾಸನಕ್ಕೆ ವಿಜ್ಞಾನತಂತ್ರ ಸಂವಿಧಾನಗಳ ತಳಹದಿ ಭದ್ರವಿಲ್ಲವೋ ಆ ಶಾಸನ ಇಂದಲ್ಲದಿದ್ದರೆ ನಾಳೆ ಮುರಿದುಬೀಳುವುದು ಖಂಡಿತ.

ಕಾನೂನಿನ ಉದ್ದೇಶವು ಸಂಪೂರ್ಣವಾಗಿ ಒಪ್ಪತಕ್ಕದ್ದಾಗಿರಬಹುದು. ಉದಾತ್ತವಾಗಿರಬಹುದು. ಆದರೆ ಅದನ್ನು ಜಾರಿಗೆ ತರುವುದು ಸಾಧ್ಯವೇ ? ಮನುಷ್ಯ ಸ್ವಭಾವದ ಈಗಿನ ಸ್ಥಿತಿಯಲ್ಲಿ ಮತ್ತು ನಮ್ಮ ಸಮಾಜದ ಈಗಿನ ಸಂದರ್ಭಗಳಲ್ಲಿ ಆ ಶಾಸನವನ್ನು ಪ್ರಯೋಗಕ್ಕೆ ತರಲು ನಮಗೆ ಬೇಕಾದ ಉಪಕರಣ ಸಿದ್ಧತೆ ಇದೆಯೇ ? —ಎಂಬುದನ್ನು ನೋಡಬೇಕು. ಮೈಸೂರು ಸಂಸ್ಥಾನದಲ್ಲಿ ಸಣ್ಣ ವಯಸ್ಸಿನವರು ಬೀಡಿ ಸಿಗರೇಟ್ ಸೇದುವುದನ್ನು ತಪ್ಪಿಸುವುದಕ್ಕೆಂದು ಎಷ್ಟೋ ವರ್ಷಗಳ ಹಿಂದೆ ಕಾನೂನು ಮಾಡಿದರು. ಅದರ ಫಲವೇನಾಗಿದೆ ? ಮೊದಲು ಒಂದೆರಡು ದಿನ ಪೊಲೀಸ್ ಇಲಾಖೆಯ ಚಿಲ್ಲರೆ ನೌಕರರು ಸಣ್ಣಪುಟ್ಟ ಹುಡುಗರಿಂದ ಒಂದೆರಡು ಕಾಸು ಸುಲಿಗೆ ಮಾಡಿಕೊಳ್ಳುವ ಹಾಗಿತ್ತು. ಆಮೇಲೆ ಅದೂ ನಡೆಯದೇ ಹೋಯಿತು.

ಈಗ ಆ ವಿಚಾರವೇ ಎಲ್ಲರಿಗೂ ಮರೆತುಹೋಗಿದೆ. ಅಂಥಾ ಕಾನೂನಿನಿಂದ ಯಾರಿಗೇನು ಪ್ರಯೋಜನ ? ಸಾಧನ ಸೌಕರ್ಯವಿಲ್ಲದ ಶಾಸನ ದೇಶಕ್ಕೆ ಬರಿಯ ಹೊರೆ.

ಉದ್ದಿಷ್ಟವಾಗಿರುವ ಶಾಸನವು ನಮ್ಮ ಸಮಾಜದ ಆರ್ಥಿಕ ಸ್ಥಿತಿಗೂ ಸಾಮಾಜಿಕ ಸ್ಥಿತಿಗೂ ಹೊಂದಿಕೊಳ್ಳುವಂಥಾದ್ದೆ ? ಹಳ್ಳಿಯ ಪಾಠಶಾಲೆಗಳಲ್ಲಿ "ಹುಡುಗರು ಬೆಳಿಗ್ಗೆ ಏಳು ಗಂಟೆಗೆ ಸರಿಯಾಗಿ ಹಾಜರಿರಬೇಕು ; ಮೂರು ದಿನ ಲೇಟಾಗಿ ಬಂದ ಹುಡುಗನು ಎರಡಾಣೆಯೋ ನಾಲ್ಕಾಣೆಯೋ ದಂಡ ತೆರಬೇಕು ?" ಎಂದು ವಿಧಾಯಕ ಮಾಡುವುದು ಸುಲಭ. ಅದು ಒಂದು ದೃಷ್ಟಿಯಿಂದ ಯುಕ್ತವೂ ಇರಬಹುದು. ಆದರೆ ನಮ್ಮ ಹಳ್ಳಿಯಲ್ಲಿ ಮನೆಮನೆಗೂ ಗಡಿಯಾರ ಒದಗಿಸುವವರು ಯಾರು ? ಆ ಗಡಿಯಾರಗಳಲ್ಲಿ ಹೆಚ್ಚು ಕಡಮೆಯಾಗದಂತೆ ನೋಡಿಕೊಳ್ಳುವವರು ಯಾರು ? ಕಾಲ ಪರಿಪಾಲನೆಯ ನಿಯಮವೇನೋ ನಮ್ಮ ಜನ ಕಲಿಯಬೇಕಾದದ್ದೇ. ಆದರೆ ಹಳ್ಳಿಹಳ್ಳಿಗೂ ಗಡಿಯಾರ ಬರುವುದು ಹೇಗೆ ? ಈ ಯೋಜನೆ ಮರೆತು ಮಾಡಿದ ಕಾನೂನು ಕಿರುಕುಳವೇ.

5

ಹೊಸ ಕಾನೂನು ಹಿಂದಿನ ಕಾನೂನುಗಳಿಗೆ ಎಷ್ಟು ಮಾತ್ರ ಹೊಂದಿಕೊಳ್ಳುತ್ತವೆ ? ಎಂಬುವನ್ನು ನೋಡಬೇಕು. ಇದು ವಿಶೇಷವಾಗಿ ವಕೀಲರಿಗೆ ಸಾಧ್ಯವಾದ ಕೆಲಸ. "ವ್ಯವಸಾಯ". "ವಕ್ಕುದಾರಿ". "ಬಾಡಿಗೆ". "ಗೇಣಿ" ಇಂಥ ಮಾತುಗಳು ಭೂಸಂಬಂಧವಾದ ಶಾಸನಗಳಲ್ಲಿ ಪದೇ ಪದೇ ಪ್ರಯೋಗವಾಗುತ್ತವೆ. ಆದರೆ ಒಂದೇ ಪಾರಿಭಾಷಿಕ ಶಬ್ದಕ್ಕೆ ಒಂದೊಂದು ಕಾನೂನಿನಲ್ಲಿ ಒಂದೊಂದು ಬಗೆ ಅರ್ಥವಾಗುವಂತಿದ್ದರೆ ಆಗ ಭ್ರಾಂತಿಗೂ ಸಂದಿಗ್ಧತೆಗೂ ಕಾರಣವಾಗುತ್ತದೆ. ಮಾತುಗಳ ವಿಚಾರ ಹೇಗೋ ವಿಷಯ ಪ್ರಸಂಗಗಳ ವಿಚಾರವೂ ಹಾಗೆಯೇ. ಶಾಸನವೆಂಬುದು ಜಟೆಜಟೆಯಾದ ಪ್ರಬಂಧ. ಅದರ ಎಳೆಗಳ ವ್ಯಾಪನೆ ಎಲ್ಲೆಲ್ಲಿಗೋ ಹೋಗುತ್ತದೆ. ಅವನ್ನೆಲ್ಲಾ ಪರೀಕ್ಷಿಸದೆ ಮಾಡಿದ ಕಾನೂನು ಅನುದ್ದಿಷ್ಟವಾದ ಆಪತ್ತುಗಳಿಗೆ ದಾರಿ ಮಾಡುತ್ತದೆ.

ಪ್ರತಿಯೊಂದು ಕಾನೂನೂ ಯಾವುದಾದರೊಂದು ರೀತಿಯಲ್ಲಿ ಜನದ ನಡವಳಿಕೆಯನ್ನು ಸೋಕಿ ಬದಲಾಯಿಸಬಲ್ಲದ್ದಾಗುತ್ತದೆ ಎಂಬುದನ್ನು ಮೊದಲೇ ಹೇಳಿದೆ. ಆಹಾರ ವಸ್ತುಗಳ ಶೇಖರಣೆಯ ಕಾನೂನಿನಿಂದ ಧಾನ್ಯಗಳನ್ನು ಬಚ್ಚಿಡುವುದು ಜನಕ್ಕೆ ಅಭ್ಯಾಸವಾಯಿತು. ಕಂಟ್ರೋಲ್ ಕಾನೂನಿನಿಂದ ಕಳ್ಳಸಂತೆ ವ್ಯಾಪಾರ ರೂಢಿಗೆ ಬಂತು. ಹೀಗೆ ಬಂದ ಕೆಟ್ಟಚಾಳಿಯ ವ್ಯಾಪನೆ ಇತರ ಜೀವನ ಕ್ಷೇತ್ರಗಳಿಗೂ ತಗಲಿದರೆ ಆಶ್ಚರ್ಯವಲ್ಲ. ದುರದೃಷ್ಟ ದಾಂಪತ್ಯದ ಕಷ್ಟನಿವಾರಣೆಗೆಂದು ಮಾಡಿದ ಕಾನೂನು ವಿವಾಹ ಗೌರವದ ತುಚ್ಛೀಕಾರಕ್ಕೆ ಪ್ರೋತ್ಸಾಹಕಾರಕವಾಗಬಹುದು. ಪ್ರತಿಯೊಂದು ಕಾನೂನಿನಿಂದಲೂ ಜನದ ಸ್ವಭಾವ ಹಾಗೋ ಹೀಗೋ ಮಾರ್ಪಡಬಹುದು. ಅದನ್ನು ಸಮಾಜ ಹಿತಚಿಂತಕರು ಯೋಚಿಸಬೇಕು.

ಪ್ರತಿಯೊಂದು ಕಾನೂನಿನಿಂದಲೂ ಸಮಾಜದ ಜೀವನ ಯಾವುದೋ ಒಂದು ಭಾಗವಲ್ಲಿ ಅಷ್ಟೋ ಇಷ್ಟೋ ಬದಲಾವಣೆ ಹೊಂದಲೇ ಹೊಂದುತ್ತದೆ ಎಂದು ಹೇಳಿದೆವಷ್ಟೆ. ಈ ಬದಲಾವಣೆಯಲ್ಲಿ ಕೆಲವರಿಗೆ ಬಾಧೆಯೋ ನಷ್ಟವೋ ತಟ್ಟುತ್ತದೆ. ಹಾಗೆ ಕಷ್ಟನಷ್ಟಗಳಿಗೆ ಗುರಿಯಾದವರಿಗೆ (ಕಾಂಪೆನ್ಸೇಷನ್) ಅಸೌಕರ್ಯ ಪರಿಹಾರ ರೂಪವಾಗಿ ಯಾವ ಸೌಕರ್ಯವನ್ನಾದರೂ ಕಾನೂನು ಒದಗಿಸುತ್ತದೆಯೆ ? ಇನಾಂ ದಾರಿಗಳನ್ನು ರದ್ದುಪಡಿಸುವುದರಲ್ಲಿ ಜಮೀನು ಕಳೆದುಕೊಳ್ಳುವವರಿಗೆ ನಷ್ಟಪರಿಹಾರದ ವಿಷಾಟಿದೆಯೇ ? ಪ್ರಯಾಣ ಸಾಧನಗಳ ರಾಷ್ಟ್ರೀಕರಣದ ಏರ್ಪಾಟಿನಲ್ಲಿ ಬಸ್ ಮಾಲೀಕರಿಗೆ ಪರಿಹಾರ ದ್ರವ್ಯ ದೊರೆಯುತ್ತದೆಯೇ ? ಇದು ನ್ಯಾಯ ವ್ಯವಸ್ಥೆಯ ಮೂಲ ಪ್ರಶ್ನೆ. ನ್ಯಾಯವಿವೇಚನೆಯಿಲ್ಲದ ಶಾಸನ ಎಂಥಾದ್ದು ?

ಹೊಸ ಕಾನೂನು ಮಾಡುವ ವಿಧಿಯು ಜನವನ್ನು ಒತ್ತಾಯಪಡಿಸತಕ್ಕದ್ದೆ ? ಅಥವಾ ಅವರವರ ಇಷ್ಟಕ್ಕೆ ಸ್ವಾತಂತ್ರ್ಯ ಕೊಡತಕ್ಕದ್ದೆ ? ಈಗ ವಿಧವಾ ವಿವಾಹದ ಕಾನೂನಿದೆ. ಅದು ಯಾರನ್ನೂ ನಿರ್ಬಂಧಪಡಿಸುವುದಿಲ್ಲ. ಆದರೆ ವಿವಾಹವಾಗ ಬೇಕೆಂಬ ವಿಧವೆಗೆ ಅದು ಶಾಸನ ಸಮ್ಮತಿಯ ಬಲವನ್ನು ದೊರಕಿಸುತ್ತದೆ. ಈ ವ್ಯತ್ಯಾಸ ಬಹಳ ಮುಖ್ಯವಾದದ್ದು. ಐಚ್ಛಿಕವಾದ ವಿಧಿಯಿಂದ ಯಾರ ಸ್ವಾತಂತ್ರ್ಯಕ್ಕೂ ಹಾನಿಯಿಲ್ಲ. ಆದರೆ ನಿರ್ಬಂಧಕಾರಿಯಾದುದು ಕಿರುಕುಳಕ್ಕೆ ದಾರಿ ಮಾಡುತ್ತದೆ.

ಪ್ರತಿಯೊಂದು ಕಾನೂನಿನಲ್ಲಿಯೂ ಒಂದು ವಿಧಾಯಕ ವಾಕ್ಯವೂ ಒಂದು ದಂಡನ ವಾಕ್ಯವೂ ಇರಲೇಬೇಕು. ವಿಧಾಯಕ ಮುರಿದವರಿಗೆ ದಂಡನೆ. ದಂಡನೆಯ ಭಯ ತೋರದ ವಿಧಿಗೆ ಯಾರೂ ವಿಧೇಯರಾಗುವುದಿಲ್ಲ. ಹೀಗೆ ಶಾಸನದ ಬಲ ಇರುವುದು ದಂಡನ ವಾಕ್ಯದಲ್ಲಿ. ಹಾಗಾದರೆ ಆ ದಂಡನೆಯನ್ನು ನಿಷ್ಕರ್ಷೆ ಮಾಡ ಬೇಕಾದವರು ಯಾರು ? ನಷ್ಟಭಾಗಿಗಳಿಗೆ ನಷ್ಟಪರಿಹಾರವನ್ನು ನಿರ್ಣಯ ಮಾಡ ಬೇಕಾದವರು ಯಾರು ? ಹೀಗೆ ಶಾಸನವನ್ನು ಅನ್ವಯಿಸುವ ಪ್ರಸಂಗಗಳಲ್ಲಿ ಕೋರ್ಟುಗಳ ಆವಶ್ಯಕತೆ ಅನಿವಾರ್ಯವಾಗುತ್ತದೆ. ಈಚೀಚೆಗೆ ಆಗುತ್ತಿರುವ ಕಾನೂನು ಗಳಲ್ಲಾದರೋ ಸರ್ಕಾರದ ಕಾರ್ಯಕರ್ತ ಶಾಖೆಯವರು ತಮ್ಮ ಕಾರುಬಾರು ಸಲೀಸಾಗಿ ನಡೆಯಬೇಕೆಂದು ಕೋರ್ಟುಗಳ ಅಧಿಕಾರವನ್ನು ಮೊಟಕು ಮಾಡಿರುವುದುಂಟು. ಇದು ಜನಕ್ಕೆ ಪ್ರತಿಕೂಲ. ಒಂದಾನೊಂದು ಶಾಸನದ ಆಡಳಿತದಲ್ಲಿ ಕೋರ್ಟಿನ ಪ್ರವೇಶಕ್ಕೆ ಅವಕಾಶವಿದ್ದಷ್ಟೂ ಜನಕ್ಕೆ ಅನ್ಯಾಯದ ಸಂಭವ ಕಡಮೆ ಆದದ್ದರಿಂದ ಹೊಸ ಕಾನೂನಿನಲ್ಲಿ ಕೋರ್ಟಿಗೆ ಎಂಥ ಸ್ಥಾನವಿದೆ ಎಂಬುದನ್ನು ಪರೀಕ್ಷಿಸಿ ನೋಡ ಬೇಕು.

ಸಮಾಜದ ಜೀವನದಲ್ಲಿ ಯಾವುದೋ ಒಂದು ಕೊರತೆ ಇರುವುದು ಅನುಭವ ದಿಂದ ಗೊತ್ತಾದರೆ ಆಗ ಅದರ ನಿವಾರಣೆಗಾಗಿ ಕಾನೂನು ಬೇಕಾಗುತ್ತದೆ. ಆದರೆ ಕಾನೂನು ಮಾಡುವವರು ಆ ಕೊರತೆಯ ನಿವಾರಣೆಗಾಗಿ ಎಷ್ಟು ಅಧಿಕಾರ ಅವಶ್ಯವೋ ಅಷ್ಟನ್ನು ಮಾತ್ರವೇ ಸರಕಾರಕ್ಕೆ ವಹಿಸಿಕೊಡದೆ ಅದರ ಜೊತೆಗೆ ಇನ್ನೂ ಕೆಲವು

ಹೆಚ್ಚಿನ ಅಧಿಕಾರವನ್ನು ವಹಿಸಿಕೊಡಬಹುದು. ಹಾಗೆಯೇ ಹಳೆಯ ಅನನುಕೂಲತೆಯ ನಿವಾರಣೆಗಾಗಿ ಎಷ್ಟು ನಿಯಂತ್ರಣವನ್ನು ಕಲ್ಪಿಸುವುದು ಅವಶ್ಯವೋ ಅದಕ್ಕಿಂತ ಹೆಚ್ಚಿನ ನಿರ್ಬಂಧವನ್ನು ಜನದ ಮೇಲೆ ಹೊರಿಸಬಹುದು. ಹೀಗೆ ಶಾಸನದಿಂದ ಆಗ ಬಹುದಾದ ಅತಿರೇಕ ಅಧಿಕಪ್ರಸಂಗಗಳ ವಿಷಯದಲ್ಲಿಯೂ ಎಚ್ಚರಿಕೆಯಿಂದ ಇರ ಬೇಕಾದದ್ದು ಶಾಸನಕರ್ತರ ಕರ್ತವ್ಯ. ಅನಾವಶ್ಯಕವಾಗಿ ನಿರ್ಬಂಧಗಳನ್ನು ಸಮಾಜದ ಮೇಲೆ ಹೇರಬಾರದು. ಜನದ ಸ್ವಾತಂತ್ರ್ಯಕ್ಕೆ ಅಕಾರಣವಾಗಿ ಭಂಗ ಉಂಟುಮಾಡ ಬಾರದು.

ಈ ಮೇಲೆ ಹೇಳಿರುವುವು ಮೂಲಸೂತ್ರಗಳು. ಈ ಸೂತ್ರಗಳಂತೆ ಪ್ರತಿ ಯೊಂದು ಕಾನೂನು ಮಸೂದೆಯನ್ನೂ ಅದರಿಂದ ಆಗಬಹುದಾದ ಏರ್ಪಾಟು ಗಳನ್ನೂ ಪರಿಶೀಲನೆ ಮಾಡುವುದು ರಾಷ್ಟ್ರಕಧರ್ಮದ ಮುಖ್ಯ ಕರ್ತವ್ಯವಾಗಿರು ತ್ತದೆ. ಆ ಕರ್ತವ್ಯ ಎಷ್ಟು ಉತ್ತಮವಾಗಿ ನಡೆಯುತ್ತದೆಯೋ ರಾಜ್ಯಶಾಸನ ಅಷ್ಟು ಸಮರ್ಪಕವಾಗಿರುತ್ತದೆ ; ಅದರಿಂದ ಜನಕ್ಷೇಮವೂ ಅಷ್ಟು ಹೆಚ್ಚಾಗಿ ಸಾಧನೆ ಯಾಗುತ್ತದೆ.

[ಪ್ರಜಾಮತ : ದೀಪಾವಳಿ ವಿಶೇಷಾಂಕ, 1954]

ಕಾಂಗ್ರೆಸ್ ಸರಕಾರಗಳು

ದ್ವಿಪಕ್ಷ ಘಟನೆಯ ಆವಶ್ಯಕತೆ

ಮೈಸೂರಿನ ರಾಜಕೀಯದಲ್ಲಿ ಈ ಹೊತ್ತು ಮೇಲಕ್ಕೆ ಕಾಣಿಸಿಕೊಂಡಿರುವ ಅಪಸ್ವರವು ಅದಕ್ಕೆ ಸಂಬಂಧಪಟ್ಟ ಕಕ್ಷಿ ವ್ಯಕ್ತಿಗಳಿಗೆ ಕೀರ್ತಿ ತರುವಂಥಾದ್ದಲ್ಲದಿದ್ದರೂ, ಜನತೆಗೆ ಅವಶ್ಯವಾದ ಪಾಠವನ್ನು ಕಲಿಸಬಲ್ಲದ್ದಾಗಿದೆ. ಆ ಪಾಠವನ್ನು ಗ್ರಹಿಸಲು ಜನಕ್ಕೆ ಮನಸ್ಸಿದ್ಧತೆ ಉಂಟಾಗಿದೆಯೋ ಇಲ್ಲವೋ ಅದು ಬೇರೆ ಮಾತು. ಇಂದೊದಗಿರುವ ಅಸಂದರ್ಭದಲ್ಲಿ ಮಹತ್ತ್ವದ ಪಾಠವಂತೂ ಅಡಗಿಕೊಂಡಿದೆ.

ಪ್ರಜಾರಾಜ್ಯದ ಮರ್ಯಸ್ಥಾನಗಳಲ್ಲಿ ಮಂತ್ರಿಗಳ ಯೋಗ್ಯತೆ ಒಂದು ಅತಿ ಮುಖ್ಯವಾದದ್ದು. ಸರಕಾರವು ಯಶಸ್ವಿಯಾಗಬೇಕಾದರೆ ಮಂತ್ರಿ ಸಂಪುಟದಲ್ಲಿರಬೇಕಾದ ಗುಣಗಳು ಎರಡು : (1) ನೀತಿ ವಿವೇಕ, (2) ಕಾರ್ಯದಕ್ಷತೆ. ಈ ಎರಡೂ ಮಂತ್ರಿಗಳಲ್ಲಿ ಸೇರಿದ್ದರೆ ಸರಕಾರ ತಕ್ಕಮಟ್ಟಿಗೆ ತೃಪ್ತಿಕರವಾದೀತು. ಆ ಎರಡರಲ್ಲಿ ಒಂದು ಗುಣವಾದರೂ ಚೆನ್ನಾಗಿದ್ದಲ್ಲಿ ಆ ಸರಕಾರವನ್ನು ಅಷ್ಟಿಷ್ಟು ಸಹಿಸಲಾದರೂ ಆದೀತು. ಎರಡು ಗುಣಗಳಲ್ಲಿ ಒಂದನ್ನು ಕೂಡ ಸ್ಥಾಪಿಸಲಾರದ ಸರಕಾರಕ್ಕಾಗಿ ಯಾರು ಅಳಬೇಕು ?

ಮಂತ್ರಿತ್ವಕ್ಕೆ ಬೇಕಾದ ಗುಣಯೋಗ್ಯತೆಯುಳ್ಳ ಜನರು ಈ ದೇಶದಲ್ಲಿಲ್ಲವೆ ?—ಎಂಬುದಲ್ಲ ಈಗಿನ ಪ್ರಶ್ನೆ. ಅಂಥವರು ಅಧಿಕಸಂಖ್ಯಾಪಕ್ಷದಲ್ಲಿ ಇದ್ದಾರೆಯೆ ? ಎಂಬುದು ಪ್ರಶ್ನೆ. ಏಕೆಂದರೆ ಮಂತ್ರಿ ಸಂಪುಟದ ರಚನೆಯಾಗುವುದು ಅಧಿಕ್ಯ ಪಕ್ಷದ ಕೈಯಿಂದ. ಕಾಂಗ್ರೆಸ್ಸಿನ ನಾಯಕರಲ್ಲಿ ನೀತಿನಿಷ್ಠೆಗೂ ಕಾರ್ಯಸಾಮರ್ಥ್ಯಕ್ಕೂ ಹೆಸರು ಪಡೆದವರು ತಕ್ಕಷ್ಟು ಮಂದಿಯಾದರೂ ಇದ್ದಿದ್ದರೆ ನಮ್ಮ ರಾಜಕೀಯದಲ್ಲಿ ಈ ಹೊತ್ತಿನ ದುಸ್ಸಂಧಿಗೆ ಕಾರಣವಿರುತ್ತಿರಲಿಲ್ಲ.

ನೀತಿನಿಷ್ಠೆ ಎಂದರೆ ಪವಿತ್ರ ಶಬ್ದಗಳ ಶುಕಪಾಠವಲ್ಲ. ಸತ್ಯ. ಅಹಿಂಸೆ, ತ್ಯಾಗ, ಸಮಾಜಸೇವೆ, ನಿಸ್ಸ್ವಾರ್ಥ, ದೀನೋದ್ಧಾರ—ಇಂಥಾ ಮಾತುಗಳು ಈಗ ಅಗ್ಗವಾಗಿಬಿಟ್ಟಿವೆ. ಅವುಗಳನ್ನು ತಿರುಗಿಸಿ ತಿರುಗಿಸಿ ಭಾಷಣ ಮಾಡುವವರೆಲ್ಲ ನೀತಿನಿಷ್ಠ

ರೆಂದು ಹೇಗೆ ನಂಬಲಾದೀತು ? ಮನುಷ್ಯನ ನೀತಿಯನ್ನು ಅವನ ಮಾತಿನಿಂದಲ್ಲದೆ ನಡವಳಿಕೆಯಿಂದ ನಿಶ್ಚಯಿಸಿಕೊಳ್ಳುವಷ್ಟು ತಿಳಿವಳಿಕೆ ಸಾಮಾನ್ಯವಾಗಿ ಎಲ್ಲರಿಗೂ ಇರುತ್ತದೆ. ಇಂಡಿಯಾ ದೇಶದ ನಾನಾ ಪ್ರಾಂತಗಳಲ್ಲಿ—ಮೈಸೂರಿನಲ್ಲಿ ಮಾತ್ರವಲ್ಲ, ಮದರಾಸಿನಲ್ಲಿ, ಬಂಗಾಳದಲ್ಲಿ, ಉತ್ತರಪ್ರದೇಶದಲ್ಲಿ,—ಯಾವ ಪ್ರದೇಶದಲ್ಲಿ ನೋಡಿದರೂ ಕಾಂಗ್ರೆಸ್ ನಾಯಕರ ತುಟಿಯ ಮೇಲಣ ನೀತಿ ಸೂತ್ರಗಳು ಸರಕಾರದ ಆಡಳಿತಗಳಲ್ಲಿ ರೂಪಗೊಂಡಿರುವಂತೆ ತೋರುತ್ತಿಲ್ಲ.

ಇನ್ನು ಕಾರ್ಯಸಾಮರ್ಥ್ಯವನ್ನು ನೋಡೋಣವೆಂದರೆ, ಆ ಭಾಗದಲ್ಲಿಯೂ ಸಮಾಧಾನ ದೊರೆಯುವಂತಿಲ್ಲ. ಮೊನ್ನೆ ಮದರಾಸಿನಲ್ಲಿ ಶ್ರೀ ಪ್ರಕಾಶಂ ಅವರೂ ಶ್ರೀ ಕಾರಂತರವರೂ ಅಲ್ಲಿಯ ಕೆಲ ಮಂತ್ರಿಗಳ ಮೇಲೆ ಹೊರಿಸಿದ ಆಕ್ಷೇಪಣೆಗಳನ್ನೂ ಅವುಗಳಿಗೆ ಆ ಮಂತ್ರಿಗಳು ಕೊಟ್ಟ ಉತ್ತರಗಳನ್ನೂ ನೋಡಿದರೆ ರಾಜ್ಯಕಾರ್ಯಗಳಲ್ಲಿ ವಿಚಕ್ಷಣೆ ಎಷ್ಟು ಶೂನ್ಯವಾಗಿದೆಯೆಂಬುದು ಸ್ಪಷ್ಟಪಡುತ್ತದೆ. ಅನೇಕ ಮಂದಿ ಮಂತ್ರಿಗಳಿಗೆ "ಜವಾಬ್ದಾರೀ ಸರಕಾರ" ಎಂಬ ಪದದ ಒಳತತ್ತ್ವವೇ ಮನ ಹೊಕ್ಕಂತೆ ಇಲ್ಲ. "ಕೈಕೆಳಗಿನ ಅಧಿಕಾರಿ ತಪ್ಪು ಮಾಡಿದ್ದರೆ ಅದಕ್ಕೆ ಮಂತ್ರಿ ಹೇಗೆ ಜವಾಬ್ದಾರ ?"—ಎಂದು ಒಬ್ಬ ಕೇಳಿದ್ದಾರೆ. ಆದ ತಪ್ಪಿಗೆ ಆ ಭಾಗದ ಮಂತ್ರಿ ಜವಾಬ್ದಾರನಾಗದೆ ಹೋದರೆ ಜವಾಬ್ದಾರಿ ಸರಕಾರವೆಂಬುದೆಲ್ಲಿ ? ಹಿಂದೆ ಬೇಜವಾಬ್ದಾರೀ ಸರಕಾರವೆನಿಸಿಕೊಂಡಿದ್ದ (ಬ್ಯೂರಾಕ್ರಸಿ) ಭೃತ್ಯಾಧಿಕಾರಿಗಳ ಕಾಲದಲ್ಲಿ ಶಾಸನ ಸಭೆಗೆ ಇಂಥ ಪ್ರತ್ಯುತ್ತರ ಬರುತ್ತಿರಲಿಲ್ಲ. ನಮ್ಮ ಪ್ರಜಾಮಂತ್ರಿಗಳ ರಾಜಕೀಯ ಪ್ರಜ್ಞೆ ಇಷ್ಟುಮಟ್ಟಿನದಾಗಿದೆ.

ಈ ಮೇಲಣ ಚರ್ಚೆಯಿಂದ ಹೊರಪಡುವ ಅಂಶ ಇಷ್ಟು :—ದೇಶದ ರಾಜಕೀಯಸ್ಥರಲ್ಲಿ ಕಾಂಗ್ರೆಸ್ಸಿಗರ ಸಂಖ್ಯೆ ಹೆಚ್ಚು. ಆದದ್ದರಿಂದ ಸರಕಾರವನ್ನು ರಚಿಸುವ ಜವಾಬ್ದಾರಿ ಕಾಂಗ್ರೆಸ್ಸಿಗೆ ಸೇರಿದ್ದಾಗಿದೆ. ಆ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಕಾಂಗ್ರೆಸ್ಸು ತನ್ನ ನಾಯಕತ್ವದ ವಿಷಯದಲ್ಲಿ ವ್ಯಕ್ತಿಯೋಗ್ಯತೆಯನ್ನು ನೋಡದೆ ಹೋದಲ್ಲಿ ಅದರ ಸರಕಾರ ಯಶಸ್ವಿಯಾಗಲಾರದು.

ಒಂದು ರಾಜಕೀಯ ಪಕ್ಷದ ಅತ್ಯಂತ ಮಹತ್ತ್ವದ ಕರ್ತವ್ಯವೆಂದರೆ—ತನ್ನ ನಾಯಕನನ್ನು ಆರಿಸಿಕೊಳ್ಳುವುದು. ಪಕ್ಷದ ಕೀರ್ತಿ ಅಪಕೀರ್ತಿಗಳು ಆ ನಾಯಕನ ಯೋಗ್ಯತೆ ಅಯೋಗ್ಯತೆಗಳನ್ನು ಅವಲಂಬಿಸಿಕೊಂಡಿರುತ್ತವೆ. ಆದದ್ದರಿಂದ ಆ ಪಕ್ಷದ ಜಾಗರೂಕತೆ ವಿವೇಕಗಳೆಲ್ಲವೂ ಮೊದಲು ನಾಯಕನನ್ನು ಗೊತ್ತುಮಾಡುವುದರಲ್ಲಿರಬೇಕು. ಎರಡನೆಯದಾಗಿ, ಒಬ್ಬ ನಾಯಕನನ್ನು ನಿಯಾಮಕ ಮಾಡಿದ ಬಳಿಕ, ಆನು ಆತನಿಗೆ ತನ್ನ ಸಹಮಂತ್ರಿಗಳನ್ನು ಆರಿಸಿಕೊಳ್ಳುವ ಬಗ್ಗೂ ಕಾರ್ಯನೀತಿಗಳನ್ನು ಗೊತ್ತುಮಾಡಿಕೊಳ್ಳುವ ಬಗ್ಗೂ ವಿಸ್ತಾರವಾಗಿ ಅವಕಾಶ ಕೊಡಬೇಕು. ಅಂಥಾ ಸ್ವಾತಂತ್ರ್ಯವಿಲ್ಲದೆ ಇರುವ ಪಕ್ಷನಾಯಕನು ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಅಶಕ್ತನಾಗುತ್ತಾನೆ. ಆರಿಸಿದ ನಾಯಕನನ್ನು ಪಕ್ಷವು ನಂಬಬೇಕು ; ಅವನಿಗೆ ತೀರ

ಅವಶ್ಯವೆನಿಸಿದಾಗ ಸಲಹೆ ಕೊಡಬಹುದು. ಆದರೆ ಅವನ ಕೈಗಳನ್ನು ಬಿಗಿಯಬಾರದು. ನಮ್ಮ ಇಂದಿನ ಪಕ್ಷಯೋಜನೆಯಲ್ಲಿ ಕಾಂಗ್ರೆಸ್ ನಾಯಕರಿಗೆ ಅಂಥ ನಂಬಿಕೆಯೂ ಸ್ವಾತಂತ್ರ್ಯವೂ ದೊರೆಯುತ್ತಿಲ್ಲವೆಂಬುದು ವಾಸ್ತವದ ಮಾತು. ಪಕ್ಷದ ಒಳಗಡೆ ನಾಲ್ಕಾರು ತೆರದ ವರ್ತಕ ಕೂಟಗಳೂ, ಜಾತಿಮತ ಕೂಟಗಳೂ, ದುಂಡಾವರ್ತಿಯ ಕೂಟಗಳೂ ಸೇರಿಕೊಂಡು. ತಾವುತಾವು ಪೋಟಾಪೋಟಿ ಮಾಡಿಕೊಂಡು, ಮಂತ್ರಿ ಸಂಪುಟದ ಮೇಲೆ ಬಲಾತ್ಕಾರ ಹಾಕುತ್ತಿರುತ್ತವೆ. ಇಂಥಾ ಒತ್ತಾಯದ ಕೂಟಗಳು —"ಪ್ರೆಷರ್ ಗ್ರೂಪ್ಸ್"—ಸಾಮಾನ್ಯವಾಗಿ ಎಲ್ಲಾ ಪ್ರಜಾಪ್ರಭುತ್ವದ ದೇಶಗಳಲ್ಲಿಯೂ ಇರುತ್ತವೆ. ಅವು ಅಧಿಕಾರ-ರಾಜಕೀಯದ— "ಪವರ್ ಪಾಲಿಟಿಕ್ಸ್"— ಸಹಜ ಲಕ್ಷಣಗಳು. ಇಂಥ ದುರ್ಲಕ್ಷಣಗಳು ಇಲ್ಲವೆಂದೇ ಹೇಳಬಹುದಾದ, ಅಥವಾ ತೀರ ಕಡಮೆಯೆಂವಂತೂ ಖಂಡಿತವಾಗಿ ಹೇಳಬಹುದಾದ ರಾಜ್ಯ ಈಗ ಇಂಗ್ಲೆಂಡು ಒಂದು ಮಾತ್ರ. ಅದಕ್ಕೆ ಕಾರಣವನ್ನು ಸುಲಭವಾಗಿ ಊಹಿಸಬಹುದು. ಇಂಗ್ಲೆಂಡಿನಲ್ಲಿ ಪ್ರಜಾರಾಜ್ಯ ಆರೇಳು ಶತಮಾನಗಳಿಂದ ಸಂತತವಾಗಿ, ಅನೂಚಾನವಾಗಿ ಬೆಳೆದು ಕೊಂಡು ಬಂದಿದೆ. ಸಂಪ್ರದಾಯದ ಮಹಿಮೆಯಿಂದ ಇಂಗ್ಲೆಂಡಿನ ವ್ಯವಸ್ಥೆ ಕೂಡಿಪ ಮಟ್ಟಿಗೂ ಚೊಕ್ಕಟವಾಗಿ ಭದ್ರವಾಗಿ ಬೆಳೆದುಕೊಂಡು ಬಂದಿದೆ. ಇತರ ದೇಶಗಳಿಗೆ ಪ್ರಜಾರಾಜ್ಯ ಪದ್ಧತಿ ಹೊಸದು. ನಮಗಂತೂ ತೀರಾ ಹೊಸದು. ನಾವು ಈಗಲೇ ಜಾಗರೂಕರಾಗಿ ಪ್ರಜಾರಾಜ್ಯದ ತಳಹದಿಯನ್ನು ಭದ್ರವಾಗಿ ಕಟ್ಟದೆ ಹೋದಲ್ಲಿ ಅನಾಯಕತ್ವದ ಭೀತಿ ನಮಗೆ ತಪ್ಪಿದ್ದಲ್ಲ.

ಇಂಗ್ಲೆಂಡಿನ ರಾಜಕೀಯ ಚರಿತ್ರೆಯಿಂದ ಹೊರಪಡುವ ಪಾಠಗಳಲ್ಲಿ ಅತ್ಯಂತ ಮುಖ್ಯವಾದದ್ದು ರಾಜಕೀಯ ಪಕ್ಷಗಳ ಗುಣಾವಗುಣಗಳನ್ನು ಕುರಿತದ್ದು. ಪಕ್ಷ ಘಟನೆಯಿಂದ ದೇಶಕಾರ್ಯಗಳು ಕೆಡದೆ ಚೆನ್ನಾಗಿ ಆಗಬೇಕಾದರೆ ದೇಶದಲ್ಲಿ ಪಕ್ಷಗಳು ಎರಡಾದರೂ ಇರಬೇಕು. ಒಂದು ಅಧಿಕೃತ ಪಕ್ಷ ; ಇನ್ನೊಂದು ಪ್ರತಿಪಕ್ಷ. ಹಾಗೆ ಎರಡಿರದೆ ಪಕ್ಷವು ಒಂದೇ ಒಂದು ಆಗಿದ್ದರೆ ಅದು ತಾನೂ ಕೆಡುತ್ತದೆ, ದೇಶವನ್ನೂ ಕೆಡಿಸುತ್ತದೆ. ಒಂದು ಪಕ್ಷದ ದುಷ್ಪ್ರವೃತ್ತಿಗಳನ್ನು ಹದ್ದಿನಲ್ಲಿಟ್ಟು ಅದಕ್ಕೆ ಎಚ್ಚರ ಕೊಡುತ್ತ ಅದು ತನ್ನ ಗುಣಗಳನ್ನು ಹೆಚ್ಚಿಸಿಕೊಳ್ಳುವಂತೆ ಪ್ರೇರಿಸುತ್ತಿರುವುದು ಪ್ರತಿಪಕ್ಷ. ಎಂದರೆ ಒಂದು ಪಕ್ಷದ ಯೋಗ್ಯತೆ ಅದರ ಪ್ರತಿಪಕ್ಷದ ಯೋಗ್ಯತೆಗೆ ಅನುಸಾರವಾಗಿ ಇರುತ್ತದೆ. ಪಕ್ಷ ಪ್ರತಿಪಕ್ಷಗಳೆರಡೂ ಬಹುಮಟ್ಟಿಗೆ ಸಮಾನ ಸ್ಕಂಧಗಳಾಗಿದ್ದ ಪಕ್ಷದಲ್ಲಿ ಅವುಗಳ ಅನ್ಯೋನ್ಯ ಭಯವೇ ಅವುಗಳ ಅಂತರ್ಬಲಕ್ಕೆ ಕಾರಣವಾಗುತ್ತದೆ.

ಈಗ ನಮ್ಮ ದೇಶದ ರಾಜಕೀಯದಲ್ಲಿ ಕಾಂಗ್ರೆಸ್ಸು ಪ್ರತಿಪಕ್ಷ ಭಯವಿಲ್ಲದಿರುವ ಏಕೈಕ ಪಕ್ಷ. ಅದರ ಪ್ರಭುತ್ವ ಒಬ್ಬ ವ್ಯಕ್ತಿಯ ನಿರಂಕುಶತೆಗೆ ಬದಲಾಗಿ ಒಂದು ಗುಂಪಿನ ನಿರಂಕುಶತೆ. ಸರಕಾರದ ಭೀತಿಯಿಲ್ಲದ ಮನುಷ್ಯ ವ್ಯಕ್ತಿಯ ಚರ್ಯೆ ಹೇಗೋ ಪ್ರತಿಪಕ್ಷ ಭೀತಿಯಿಲ್ಲದ ರಾಜಕೀಯ ತಂಡದ ಚರ್ಯೆಯೂ ಹಾಗೆಯೇ— ಮೊದಲು ಇತರರಿಗೆ ಅಸಹ್ಯವಾಗಿ ಆಮೇಲೆ ತನಗೇ ಅಪಾಯ ತಂದುಕೊಳ್ಳು

ವಂಥಾದ್ದು. ಹಾಗೆ ಆಯ ತಪ್ಪಿದ ಸ್ಥಿತಿ ಇಂದು ಕಾಂಗ್ರೆಸ್ಸಿನದು. ಅದರ ದೇಹದ ಒಳಗಣ ರೋಗಾಣುಗಳು ಈಗ ಕೆರಳಿ ಮೇಲಕ್ಕೆ ಕಾಣಿಸಿಕೊಳ್ಳುತ್ತಿವೆ. ಒಂದು ದೃಷ್ಟಿಯಿಂದ ಅದು ಒಳ್ಳೆಯದೇ. ಜ್ವರ ಮೂಲ ದೇಹದೊಳಗೆ ಸೇರಬಾರದು ; ಸೇರಿದ ಮೇಲೆ ಅದು ಹೊರಕ್ಕೆ ಬಂದುಬಿಟ್ಟರೆ ತಾನೆ ಆರೋಗ್ಯ ?

ಕಾಂಗ್ರೆಸ್ಸಿಗೆ ಸರಿಸಮವಾಗಿ ನಿಲ್ಲುವ ಪ್ರತಿಪಕ್ಷ ಹುಟ್ಟುವುದರ ಸೂಚನೆ ಈಗ ದೇಶದಲ್ಲಿ ಕಾಣಬರುತ್ತಿಲ್ಲ. ಕಾಂಗ್ರೆಸ್ಸಿಗೆ ಅದರ ಅರುವತ್ತೈದು ವರ್ಷಗಳ ಚರಿತ್ರೆಯಿಂದಲೂ ಗಾಂಧಿ ಮಹನೀಯರ ಸಂಪರ್ಕದಿಂದಲೂ ಬಂದಿರುವ ಪ್ರಭಾವವು ಪ್ರತಿಕಕ್ಷಿಯೆಬ್ಬಿಸಬೇಕೆನ್ನುವವರಿಗೆ ಹೆದರಿಕೆಯುಂಟುಮಾಡುವಷ್ಟರದಾಗಿದೆ. ರಾಜಕೀಯಕ್ಕೆ ಬರಬೇಕೆನ್ನುವವನಿಗೆ—" ಕಾಂಗ್ರೆಸ್ಸು ಸೇರಿದರೆ ಅವಕಾಶ. ಕಾಂಗ್ರೆಸ್ಸು ಬಿಟ್ಟರೆ ಇಲ್ಲ " ಎಂದು ಅನುಭವದಿಂದ ಗೊತ್ತಾಗಿದೆ. ಇಂಥಾದ್ದರಲ್ಲಿ ಪ್ರತಿಪಕ್ಷ ಕಟ್ಟಲು ಎಂಥವರು ಮುಂದೆ ಬಂದಾರು ?

ದ್ವಿಪಕ್ಷ ಘಟನೆಗೆ ಸದ್ಯ ತೋರುವುದು ಒಂದೇ ದಾರಿ ; ಕಾಂಗ್ರೆಸ್ಸು ತಾನೇ ಬಿರಿದು ಎರಡು ಹೋಳಾಗಬೇಕು. ಒಂದು ಹೋಳು ಅಧಿಕಾರ ವಹಿಸುವರಾಗಬೇಕು, ಇನ್ನೊಂದು ಪ್ರತ್ಯರ್ಥಿ (ಅಪೊಸಿಷನ್) ಆಗಿ ನಿಲ್ಲಬೇಕು.

ಹಾಗೆ ಕಾಂಗ್ರೆಸ್ಸು ಒಡೆದ ಮಾತ್ರದಿಂದಲೇ ನಮ್ಮ ರಾಜಕೀಯ ನೆಟ್ಟಗಾಗುತ್ತದೆಂದು ಭಾವಿಸತಕ್ಕದ್ದಲ್ಲ. ಒಂದು ಬೆರಣಿಯನ್ನು ಎರಡು ತುಂಡು ಮಾಡಿದ್ದರಿಂದ ಯಾವ ಒಂದು ಭಾಗವಾದರೂ ಸುಗಂಧವಾದೀತೆ ?

ಒಂದು ರಾಜಕೀಯ ಪಕ್ಷಕ್ಕಿರುವ ಬಲಸ್ಥಾನಗಳು ಮುಖ್ಯವಾಗಿ ಎರಡು :

(1) ಅದರ ಕಾರ್ಯಯೋಜನೆಯ ಜನಾನುಕೂಲತೆ :

(2) ಅದರ ಪ್ರಮುಖ ವ್ಯಕ್ತಿಗಳ ಕಾರ್ಯಸಾಮರ್ಥ್ಯ.

ಕಾರ್ಯಯೋಜನೆ ಕಾಗದದ ಮೇಲೆ ಆಕರ್ಷಕವಾಗಿ ಕಂಡರೆ ಸಾಲದು. ಅದರಲ್ಲಿ ಕಾಣಿಸಿರುವ ಕಾರ್ಯಗಳನ್ನು ನೆರವೇರಿಸಿಕೊಡಲು ಬೇಕಾದ ಸಾಮರ್ಥ್ಯ ವಿಚಕ್ಷಣೆಗಳು ಪಕ್ಷ ನಾಯಕರಲ್ಲಿರಬೇಕು. ಸರಕಾರವೆಂದರೆ ಭಾಷಣಗಳಲ್ಲ.

ಈ ಎರಡು ಭಾಗಗಳಲ್ಲಿಯೂ ಒಂದು ಪಕ್ಷದ ಬಲ ಹೆಚ್ಚುವುದು ಎದುರು ಪಕ್ಷದ ಸ್ಪೈಪೋಟಿಯ ಕಾರಣದಿಂದ. ಪೇಟೆಯಲ್ಲಿ ಪದಾರ್ಥಗಳ ಗುಣ ಹೆಚ್ಚುವುದೂ ಬೆಲೆ ಇಳಿಯುವುದೂ ಸ್ಪೈಪೋಟಿಯಿಂದ. ರಾಜಕೀಯದಲ್ಲಿ ಪಕ್ಷಗಳ ಯೋಗ್ಯತೆ ಬೆಳೆಯುವುದೂ ಹಾಗೆಯೇ.

ದ್ವಿಪಕ್ಷ ಘಟನೆ ಇರಬೇಕಾದದ್ದು ಪಕ್ಷಗಳ ಪರಸ್ಪರ ಬಲಪರೀಕ್ಷೆ ಬಲಪ್ರೇರಣೆಗಳಿಗೋಸ್ಕರ ಮಾತ್ರವೇ ಅಲ್ಲ ; ಪಕ್ಷಗಳ ಧ್ಯೇಯಗಳ ಮತ್ತು ಕಾರ್ಯಯೋಜನೆಗಳ

ಪರಿಷ್ಕರಣೆಗಾಗಿಯೂ ಪಕ್ಷಗಳು ಎರಡಾಗಿದ್ದು, ಅವುಗಳಲ್ಲಿ ಸ್ಪರ್ಧೆಯಿರುವುದು ಆವಶ್ಯಕ. ಯಾವ ರಾಜಕೀಯ ಪಕ್ಷಕ್ಕೇ ಆಗಲಿ, ಅದರ ಪ್ರಾರಂಭ ಕಾಲದಲ್ಲಿ ಗೊತ್ತಾದ ಕಾರ್ಯಸೂತ್ರಗಳೇ ಎಲ್ಲ ಕಾಲಕ್ಕೂ ಸಾಕಾಗಲಾರವು. ಲೋಕಸ್ಥಿತಿ ಸ್ವಾಭಾವಿಕವಾಗಿ ಬದಲಾಯಿಸುತ್ತಿರುತ್ತದೆ. ಸಮಾಜ ಸಂದರ್ಭಗಳು ಮಾರ್ಪಡುತ್ತವೆ. ಜನಾನುಭವಗಳಲ್ಲಿ ವ್ಯತ್ಯಾಸ ಬರುತ್ತದೆ. ಹಾಗೆಯೇ ಅಭಿಪ್ರಾಯಗಳೂ ಬೆಳೆದು ಬದಲಾಯಿಸುತ್ತವೆ. ಇದನ್ನನುಸರಿಸಿ ರಾಜಕೀಯ ಪಕ್ಷದ ಧ್ಯೇಯಗಳೂ ಕಾರ್ಯವಿಧಾನಗಳೂ ಆಗಿಂದಾಗ್ಗೆ ತಿದ್ದಾವಣೆ ಹೊಂದಬೇಕಾಗುತ್ತದೆ. ಈಗ ಕಾಂಗ್ರೆಸ್ ಎರಡು ಪಕ್ಷವಾಗಿ ಒಡೆದರೂ ಆ ಎರಡು ಪಂಗಡಗಳ ಧ್ಯೇಯಗಳೂ, ವಿಧಾನಗಳೂ ಸದ್ಯದಲ್ಲಿಯೇ ಬೇರೆ ಬೇರೆಯಾಗಲಾರವು. ಮಹಾತ್ಮರ ಶಿಷ್ಯತ್ವದ ಪ್ರಯೋಜನವನ್ನು ಉಭಯ ಪಕ್ಷಗಳೂ ಈಗ ಒಂದೇ ರೀತಿ ಬಯಸುತ್ತವೆ. ಸತ್ಯ, ಅಹಿಂಸೆ. ಚರಕ, ಖಾದಿ, ಹಿಂದಿ, ಹರಿಜನೋದ್ಧಾರ, ಮದ್ಯನಿರೋಧ, ಗ್ರಾಮೋದ್ಧಾರ— ಇವೇ ಮೊದಲಾದ ಗಾಂಧೀ ಕಾರ್ಯಕ್ರಮಗಳನ್ನು "ನಾವು ಹೆಚ್ಚಾಗಿ ನಡೆಸುತ್ತೇವೆ." "ನಾವು ಹೆಚ್ಚಾಗಿ ನಡೆಸುತ್ತೇವೆ" ಎಂದು ಉಭಯ ಪಕ್ಷಗಳವರೂ ಘೋಷಣೆ ಮಾಡಿಕೊಂಡು ಹೊರಟಾರು. ಆದರೆ ಈ ಉಪಾಯ ಬಹುಕಾಲ ಸಾಗಲಾರದು. ಎರಡು ಪಕ್ಷಗಳಿಂದಲೂ ಹೊರಗಡೆ ಇರುವ ದೇಶಪ್ರಜೆ ಈ ಹಳೆಯ ಕಾರ್ಯಕ್ರಮಗಳಲ್ಲಿ ಕಾಣಬಾರದ ಹೊಸ ಅನುಕೂಲತೆಗಳನ್ನು ಅಪೇಕ್ಷಿಸುತ್ತದೆ. ಅನ್ನ, ಬಟ್ಟೆ. ಮನೆ. ಉದ್ಯೋಗ, ಕೈಗಾರಿಕೆ, ವಿಜ್ಞಾನ ವಿದ್ಯೆ, ವೈದ್ಯಸಹಾಯ, ಯಂತ್ರೋಪಕರಣ, ರೈಲು. ಮೋಟಾರು— ಇಂಥವುಗಳನ್ನೆಲ್ಲ ಜನ ಬಯಸುತ್ತಾರೆ. ಆ ನಾನಾ ಅಪೇಕ್ಷೆಗಳಿಗೆ ತಕ್ಕಂತೆ ಎರಡು ಪಕ್ಷಗಳೂ ತಮ್ಮ ತಮ್ಮ ಕಾರ್ಯಸೂತ್ರಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಹಾಗೆ ಆದಾಗಲೇ ನಿಜವಾದ ಪ್ರಜಾ ರಾಜಕೀಯ. ದೇಶದಲ್ಲಿ ಎರಡು ಪಕ್ಷಗಳಿದ್ದಲ್ಲದೆ ಸರಕಾರದ ಕಾರ್ಯಯೋಜನೆಗಳು ಪ್ರಜಾಪೇಕ್ಷೆಯಂತೆ ತಿದ್ದುಪಾಟು ಪಡೆಯುವುದು ದುರ್ಲಭ. ಹೀಗೆ ನೋಡಿದರೂ ದ್ವಿಪಕ್ಷ ಘಟನೆ ಪ್ರಜಾಸೌಕರ್ಯಕ್ಕೆ ಅತ್ಯವಶ್ಯವಾದ ಏರ್ಪಾಟು.

ಕಾಂಗ್ರೆಸ್ ಸಂಸ್ಥೆಯಲ್ಲಿ ಈಗ ವ್ಯಕ್ತಿಯೋಗ್ಯತಾ ಸಂಪತ್ತು ಹೇರಳವಾಗೇನೂ ಇಲ್ಲ. ಮಂತ್ರಿ ಪದವಿಗೆ ಬೇಕಾದ ನೀತಿಶುದ್ಧತೆಯನ್ನೂ ವಿದ್ಯಾಬಲವನ್ನೂ ಕಾರ್ಯದಕ್ಷತೆಯನ್ನೂ ಸಂಪಾದಿಸಿಕೊಂಡಿರುವವರು ಕಾಂಗ್ರೆಸ್ಸಿನಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಕಾಣಬರುತ್ತಾರೆಯೇ ಹೊರತು ಅಂಥವರ ಸಂಖ್ಯೆ ಯಥೇಷ್ಟವಾಗಿದೆಯೆಂದು ಹೇಳುವಂತಿಲ್ಲ. ಸಂಸ್ಥಾನಗಳ ಮಂತ್ರಿ ಸಂಪುಟಗಳನ್ನು ನೋಡಿದರೂ. ದೆಹಲಿಯದನ್ನೇ ನೋಡಿದರೂ ಈ ವ್ಯಕ್ತಿಯೋಗ್ಯತಾ ದಾರಿದ್ರ್ಯವು ಚೆನ್ನಾಗಿ ಕಾಣಬರುತ್ತದೆ. ಹೀಗಿರುವಲ್ಲಿ ಅಣ್ಣಯ್ಯನು ಪದವಿಯಿಂದುರುಳಿ ತಮ್ಮಯ್ಯನು ಅಲ್ಲಿಗೆ ಹತ್ತಿದರೆ ದೇಶಕ್ಕಾಗುವ ಲಾಭವೇನು ?

ರಾಜಕೀಯ ಪಕ್ಷದ ದೃಷ್ಟಿಯಿರಬೇಕಾದದ್ದು ತನ್ನ ತತ್ತ್ವಗಳ ಮೇಲೆ ಮತ್ತು ತಾನು ದೇಶಕ್ಕೆ ವಾಗ್ದಾನ ಮಾಡಿರುವ ಕಾರ್ಯಯೋಜನೆಗಳ ಮೇಲೆ: ಅಧಿಕಾರ

ಸ್ಥಾನಗಳ ಮೇಲೆ ಅಲ್ಲ. ಪಕ್ಷವು ಕೈಗೊಂಡಿರುವ ಪ್ರತಿಜ್ಞೆಗಳನ್ನು ನಡೆಸಿಕೊಡಲೊಪ್ಪಿಕೊಂಡವನು ಪಕ್ಷನಾಯಕ. ಆತನೇ ಮುಖ್ಯಮಂತ್ರಿ. ಆತನನ್ನು ಗೊತ್ತುಮಾಡಿದ ಮೇಲೆ ಅವನೊಪ್ಪಿಕೊಂಡಂತೆ ಕಾರ್ಯಸಾಧನೆ ಮಾಡಲು ಎಂಥೆಂಥವರು ಸಹಾಯಕ್ಕೆ ಬೇಕೋ ಅದನ್ನು ಆಲೋಚಿಸಿ ನಿಷ್ಕರ್ಷೆ ಮಾಡಿಕೊಳ್ಳುವ ಸ್ವಾತಂತ್ರ್ಯ ಅವನದು. ಅವನಿಗೆ ಬೇಕಾದ ಸಹಾಯಕ ಜನ ಪಕ್ಷದ ಒಳಗಡೆ ಇಲ್ಲವೆಂದು ಅವನಿಗೆ ತೋರಿದಾಗ ಪಕ್ಷದ ಹೊರಗಡೆಯಿಂದ ಅಂಥವರನ್ನು ತಂದುಕೊಳ್ಳಲು ಅವನಿಗೆ ಅವಕಾಶವಿರಬೇಕು. ಅವನು ಯಾರನ್ನಾದರೂ ನಿಯಮಿಸಿಕೊಳ್ಳಲಿ : ಪಕ್ಷಕ್ಕೆ ಕೀರ್ತಿ ಬರುವಂತೆ. ಪಕ್ಷದ ಧ್ಯೇಯಗಳನ್ನು ಅನುಸರಿಸಿ. ಅವನು ದೇಶಕಾರ್ಯಗಳನ್ನು ನಿರ್ವಹಿಸುತ್ತಿದ್ದಾನೆಯೆ ? ಇದಿಷ್ಟನ್ನೇ ಪಕ್ಷವು ನೋಡಬೇಕಾದದ್ದು. ಅಧಿಕಾರ ಸ್ಥಾನಗಳ ಹಂಚಿಕೆಯ ಪ್ರಶ್ನೆ ಪಕ್ಷಕ್ಕೆ ಅಷ್ಟು ಮುಖ್ಯವಾಗಬಾರದು.

ಪ್ರಜಾರಾಜ್ಯದ ದೇಶಗಳಲ್ಲಿ ರಾಜಕೀಯ ಪಕ್ಷದ ಬೆಳವಣಿಗೆ ಆಗುವುದು ಒಂದು ಬಗೆಯಲ್ಲಲ್ಲ. ಕೆಲವು ತತ್ತ್ವಗಳನ್ನು ಹಿಡಿದು ಒಂದು ಪಕ್ಷ ಹುಟ್ಟಿಕೊಳ್ಳಬಹುದು ; ಕೆಲಕೆಲವು ಗುಂಪುಗಳ ಲಾಭಸಾಧನೆಗಾಗಿ ಒಂದು ಪಕ್ಷ ಏರ್ಪಡಬಹುದು : ಒಬ್ಬ ಪ್ರಮುಖ ವ್ಯಕ್ತಿಯ ವಾಗ್ಧೋರಣೆಗೋ ಐಶ್ವರ್ಯಕ್ಕೋ ಸಮಾಜಗಣ್ಯತೆಗೋ ಕುಟಿಲ ಚಮತ್ಕಾರಕ್ಕೋ ಇತರ ಪ್ರಭಾವಕ್ಕೋ ಒಳಗಾಗಿ ಕೆಲವು ಮಂದಿ ಒಂದು ಪಕ್ಷವನ್ನು ಸ್ಥಾಪಿಸಬಹುದು : ಯಾವುದೋ ಒಂದು ಉದ್ವೇಗದಿಂದ ಅಥವಾ ಭೀತಿಯಿಂದ ಕೆಲವರು ಒಂದು ಪಕ್ಷವಾಗಿ ಸೇರಿಕೊಳ್ಳಬಹುದು :—ಹೀಗೆ ರಾಜಕೀಯ ಪಕ್ಷದ ಉತ್ಪತ್ತಿಯ ವಿಧಾನಗಳು ನಾಲ್ಕಾರಿರುತ್ತವೆ. ಮತ್ತು ಒಂದು ಪಕ್ಷವು ಕೆಲವು ಕಾಲ ಬಾಳಿ ಕೆಲಸ ಮಾಡಿ. ಆಮೇಲೆ ಎರಡಾಗಿಯೋ ಮೂರಾಗಿಯೋ ಒಡೆಯುವುದೂ ಉಂಟು. ಇಂಥ ಎಲ್ಲ ಸಂಗತಿಗಳಿಗೂ ಇಂಗ್ಲೆಂಡ್. ಅಮೆರಿಕಾ. ಫ್ರಾನ್ಸುಗಳ ಚರಿತ್ರೆಗಳಲ್ಲಿ ನಿದರ್ಶನಗಳು ದೊರೆಯುತ್ತವೆ. ನಮ್ಮ ಕಾಂಗ್ರೆಸ್ ಸಂಸ್ಥೆ ಮನುಷ್ಯಸ್ವಭಾವವನ್ನು ಮೀರಬಲ್ಲದ್ದೇನೂ ಅಲ್ಲ. ಇತರ ಕಡೆಗಳಲ್ಲಿ ಆಗಿರುವಂತೆ ನಮ್ಮಲ್ಲಿಯೂ ಒಂದು ಸಂಸ್ಥೆ ಎರಡಾಗಿ ಒಡೆದರೆ ಅದಕ್ಕಾಗಿ ಯಾರೂ ಎದೆ ಬಡಿದುಕೊಳ್ಳಬೇಕಾದದ್ದಿಲ್ಲ. ಸದ್ಯಕ್ಕೆ ಮೈಸೂರಿನ ಕಾಂಗ್ರೆಸ್ಸಿನಲ್ಲಿ ತೋರಿರುವ ಬಿರುಕಿನಲ್ಲಿ ಮೂಲ ತತ್ತ್ವಗಳ ಮತ್ತು ಸಾರ್ವಜನಿಕ ಧ್ಯೇಯಗಳ ಪ್ರಸಕ್ತಿಯೇನೂ ತೋರಿಬರುತ್ತಿಲ್ಲ. ವ್ಯಕ್ತಿಪ್ರತಿಷ್ಠೆ ವ್ಯಕ್ತಿ ಸ್ಪರ್ಧೆಗಳೇ ಇಲ್ಲಿ ಎದ್ದು ಕಾಣುತ್ತಿರುವುದು. ದೆಹಲಿಯ ಕಾಂಗ್ರೆಸ್ ಮಹಾ ಸೌಧದಲ್ಲಿಯ ಬಿರುಕಿನಲ್ಲಿ ವ್ಯಕ್ತಿಕಾರಣಗಳ ಜೊತೆಗೆ ಆಪ್ತಾತ ನೀತಿ ವಿಧಾನ ಪ್ರಶ್ನೆಯೂ ಸೇರಿಕೊಂಡಿದೆ.

ಒಟ್ಟಿನಲ್ಲಿ—

(1) ಪ್ರತಿಪಕ್ಷ ಭೀತಿ.

(2) ಸ್ವಪಕ್ಷದ ಕಾರ್ಯನೀತಿಯೋಜನೆಗಳ ಸಮಯೋಚಿತವಾದ ಪುನಃ ಪರಿಷ್ಕರಣೆ,

(3) ಸ್ವಪಕ್ಷದೊಳಗಣ ವ್ಯಕ್ತಿಶಕ್ತಿ ನ್ಯೂನತೆಯ ಸಂದರ್ಭದಲ್ಲಿ ಉಚಿತವರಿತುಹೊರಗಣಿಂದ ಸಹಾಯ ತೆಗೆದುಕೊಳ್ಳಲು ಪಕ್ಷ ನಾಯಕನಿಗೆ ಸ್ವಾತಂತ್ರ್ಯ—

ಈ ಮೂರು ಅಂಶಗಳೂ ಪಕ್ಷಘಟನಾವಲಂಬಿಯಾದ ಪ್ರಜಾರಾಜ್ಯ ಪದ್ಧತಿಯಲ್ಲಿ ಅವಶ್ಯವಾಗಿರಬೇಕಾದ ಲಕ್ಷಣಗಳು.

ಜವಾಬ್ದಾರೀ ಸರಕಾರವೆಂಬುದು ಒಂದು ಅಂಧಾಚಾರವಲ್ಲ; ಲೋಕದಲ್ಲಿ ದೊಡ್ಡ ದೊಡ್ಡವರೆಲ್ಲಾ ಆ ಮಾತನಾಡುತ್ತಾರೆ. ಆದದ್ದರಿಂದ ಹಾಗೆ ನಾವೂ ಆಡೋಣ—ಎಂಬ "ಫ್ಯಾಷನ್"ವಿಷಯವಲ್ಲ. ಅದು ಒಂದು ಕಾರ್ಯಕಾರಣ ವಿವೇಚನೆಯಿಂದ ತೋರಿಬಂದಿರುವ ಕಾರ್ಯವ್ಯವಸ್ಥೆ. ಅದರಿಂದ ಕೆಲವು ಗೊತ್ತಾದ ಉದ್ದೇಶಗಳು ನೆರವೇರಬೇಕು. ಆ ಉದ್ದೇಶಗಳನ್ನು ಜವಾಬ್ದಾರೀ ಸರಕಾರವು ಸಾಂಗ ಪಡಿಸಲಾರದೆ ಹೋದಲ್ಲಿ, ಆ ಜವಾಬ್ದಾರೀ ಸರಕಾರವೆಂಬುದು ದೇಶಕ್ಕೆ ಒಂದು ಹೊಸ ಶವಭಾರದಂತೆಯೇ ಸರಿ.

ಈ ಹೊಸ ರಾಜ್ಯಕ್ರಮದ ಮೂಲತತ್ತ್ವಗಳನ್ನೂ ಅಂತರ್ಭಾವಗಳನ್ನೂ ನಮ್ಮ ಜನತೆ ಚೆನ್ನಾಗಿ ಗ್ರಹಿಸಬೇಕಾದ ಕಾಲ ಈಗ ಬಂದಿದೆ. ಇನ್ನು ಕೆಲವು ತಿಂಗಳುಗಳೊಳಗಾಗಿ, ಮುಂದೆ ರಾಜ್ಯವಾಳತಕ್ಕವರನ್ನು ಪ್ರಜಾಜನರು ಚುನಾಯಿಸುವ ದಿವಸ ಬರುತ್ತದೆ. ಆ ಚುನಾವಣೆಗಳು ನಿಜವಾಗಿ ಪ್ರಯೋಜನಕರವಾಗಬೇಕಾದರೆ ಮಹಾಜನರು ಬರಿಯ ಬೀದಿಯ ಕೂಗುಗಳಿಗೆ ಮನಸೋತು ನಡೆಯುವವರಾಗದೆ, ತತ್ತ್ವಗಳನ್ನು ಆಲೋಚಿಸುವವರಾಗಬೇಕು.

ಸದ್ಯಕ್ಕೆ ಮೈಸೂರಿನಲ್ಲಿ ಕಾಂಗ್ರೆಸ್ಸಿನಿಂದ ಹೊರಗಡೆ ಪ್ರಜಾಭಿಪ್ರಾಯವೆಂಬುದು ಮೌನವಾಗಿದೆ. ಇಂಡಿಯದ ಎಲ್ಲ ಭಾಗಗಳಲ್ಲೂ ಸಾರ್ವಜನಿಕ ಪರಿಸ್ಥಿತಿಯು ಈಗ ಹೀಗೆಯೇ ಇದೆಯೆಂದು ಹೇಳಬಹುದು. ದೇಶದ ದುರದೃಷ್ಟದಲ್ಲಿ ಇದು ಮೊದಲನೆಯ ಅಂಶ. ಕಾಂಗ್ರೆಸ್ ಸರಕಾರಗಳ ಅವ್ಯವಸ್ಥೆ ಎಲ್ಲರ ಬಾಯಲ್ಲೂ ಇದ್ದರೂ ಆ ಅಸಮಾಧಾನವನ್ನು ಸಂಸ್ಥಾಮುಖೇನ ಗಟ್ಟಿಯಾಗಿ ವ್ಯಕ್ತಪಡಿಸಲು ಯಾರೂ ಧೈರ್ಯ ಮಾಡುತ್ತಿಲ್ಲ. ಕಾಂಗ್ರೆಸ್ಸಿಗರನ್ನು ಎದುರುಹಾಕಿಕೊಂಡರೆ ತಾತ್ಕಾಲಿಕವಾಗಿ ಅನೇಕ ತೊಂದರೆಗಳು ಸಂಭವಿಸುತ್ತವೆ. ಒಂದಾನೊಂದು ಸಂಸ್ಥಾನದಲ್ಲಿ ಒಬ್ಬ ಕಾಂಗ್ರೆಸ್ ಪಕ್ಷದ ಪ್ರಜಾಪ್ರತಿನಿಧಿಯು ಅಲ್ಲಿಯ ಶಾಸನ ಸಭೆಯಲ್ಲಿ ಕಾಂಗ್ರೆಸ್ ಸರಕಾರಕ್ಕೆ ಪ್ರತಿಕೂಲವಾದ ಪ್ರಶ್ನೆಗಳನ್ನೂ ನಿರ್ಣಯಗಳನ್ನೂ ಹಾಕಿದ ಕಾರಣದಿಂದ, ಗ್ರಾಮಾಂತರದಲ್ಲಿ ವಾಸವಾಗಿದ್ದ ಆತನಿಗೆ ಆಹಾರ ಸಾಮಗ್ರಿಯ ಸರಬರಾಯಿ ವಿಷಯದಲ್ಲಿಯೂ ಸಣ್ಣಪುಟ್ಟ ಜೀವನ ಸೌಕರ್ಯಗಳ ವಿಷಯದಲ್ಲಿಯೂ ಕಿರುಕುಳವಾದದ್ದು ವಾಸ್ತವದ ಸಂಗತಿ. ಆದರೆ ಇಂಥಾ ಕಿರುಕುಳದ ಅಂಜಿಕೆಯಿಂದ ನಮಗೆ ಬಿಡುಗಡೆ ಎಂದಿಗೆ? ದೇಶದಲ್ಲಿ ಪಕ್ಷದಾಕ್ಷಿಣ್ಯವಿಲ್ಲದ ಮತ್ತು ಪ್ರಾಮಾಣಿಕತೆಯ

ಧೈರ್ಯವುಳ್ಳ ಸಾರ್ವಜನಿಕರು ಹತ್ತಾರು ಮಂದಿಯಾದರೂ ಇದ್ದು, ಸರಕಾರದ ನಡವಳಿಕೆಗಳನ್ನು ಬಹಿರಂಗವಾಗಿ ಟೀಕೆ ವಿಮರ್ಶನೆಗಳಿಗೆ ಗುರಿಪಡಿಸುತ್ತಿದ್ದಿದ್ದರೆ, ಮೈಸೂರಿನ ಕಳೆದ ಮೂರು ವರ್ಷಗಳ ಚರಿತ್ರೆ ಸ್ವಲ್ಪಮಟ್ಟಿಗಾದರೂ ಬೇರೆ ತೆರದ್ದಾಗಿ ಪ್ರೋತ್ಸಾಹಕರವಾಗಿರುತ್ತಿತ್ತೆಂದು ತೋರುತ್ತದೆ. ನಮ್ಮಲ್ಲಿ ಸರಕಾರದ ಅನುಭವವುಳ್ಳ ಭಾರೀ ಪೆನ್‌ಷನ್‌ದಾರರೂ, ರಾಜಕೀಯ ಪ್ರಜ್ಞೆಯುಳ್ಳ ವಕೀಲರೂ, ಇತರ ಮಹನೀಯರೂ ಬಹುಮಂದಿ ಇದ್ದಾರೆ. ಅವರು ಯಾವ ರಾಜಕೀಯ ಕಕ್ಷಿಯ ಹಂಗಿಗೂ ಒಳಪಡಬೇಕಾದವರಲ್ಲ. ಅಂಥವರು ದೇಶಕಾರ್ಯ ವಿಚಾರಗಳಲ್ಲಿ ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ಹೇಳಲು ಮೊದಲು ಮಾಡಿದರೆ ಕಾಂಗ್ರೆಸ್ ಸರಕಾರ ಸಹ—ಅದು ಅಣ್ಣಯ್ಯನ ಪಕ್ಷದ್ದೇ ಆಗಲಿ, ತಮ್ಮಯ್ಯನ ಪಕ್ಷದ್ದೇ ಆಗಲಿ—ಕೊಂಚಮಟ್ಟಿಗಾದರೂ ತನ್ನ ದಾರಿಯನ್ನು ತಿದ್ದಿಕೊಳ್ಳಬೇಕಾದೀತು.

ಸಿದ್ಧಾಂತ ವಾಕ್ಯ ಇಷ್ಟು: ಪ್ರಜಾರಾಜ್ಯದ ಶ್ರೇಯಸ್ಸು ಪ್ರಜಾವ್ಯಕ್ತಿಯ ರಾಷ್ಟ್ರಕರ್ತವ್ಯನಿಷ್ಠೆಗೆ ತಕ್ಕಂತೆ ಇರುತ್ತದೆ. ರಾಜಕೀಯಪಕ್ಷದ ಸಾರ್ಥಕತೆ ವ್ಯಕ್ತಿಸಾಕ್ಷಿಕನ ಯೋಗ್ಯತೆಗೆ ತಕ್ಕಂತೆ ಇರುತ್ತದೆ.

[ಡಿಸೆಂಬರ್ 13, 1950]

[ಈ ಲೇಖನದಲ್ಲಿ ಹೇಳಿರುವ ಸಾರಭೂತವಾದ ವಿಚಾರಧಾರೆ 36 ವರ್ಷಗಳಷ್ಟು ಹಿಂದಿನ ಮೈಸೂರು ಸಂಸ್ಥಾನದ ಆಳುವ ಪಕ್ಷವಾಗಿದ್ದ ಕಾಂಗ್ರೆಸ್ ಸರ್ಕಾರದ ಬಗೆಗೂ ಅಂದಿನ ರಾಜಕೀಯ ವಿದ್ಯಮಾನಕ್ಕೂ ಸಂಬಂಧಪಟ್ಟದ್ದಾದರೂ, ಇಂದಿನ ಭಾರತ ರಾಷ್ಟ್ರದ ಹಾಗೂ ಕರ್ನಾಟಕ ರಾಜ್ಯದ ರಾಜಕೀಯ ವಿದ್ಯಮಾನಗಳಿಗೂ ಸಂಬಂಧಪಟ್ಟಂತೆ ಎಷ್ಟು ಪ್ರಸ್ತುತವಾಗಿದೆ ಎಂಬುದನ್ನು ಪರಿಭಾವಿಸಿದರೆ ಡಿ.ವಿ.ಜಿ. ಅವರ ರಾಜಕೀಯ ದೂರದರ್ಶಿತ್ವ ಎಂಥದು ಎಂಬುದು ಅರಿವಾಗುತ್ತದೆ.—ಸಂ.]

ಮುಖ್ಯಮಂತ್ರಿತ್ವಕ್ಕಿರಬೇಕಾದ ಶಾಸಕ ಸದಸ್ಯತ್ವದ ಅರ್ಹತೆ

ಮೈಸೂರಿನ ಸದ್ಯದ ಮುಖ್ಯಮಂತ್ರಿಗಳು ಸ್ವತಃ ರಾಜೀನಾಮೆ ಕೊಡುವುದರಿಂದಲಾಗಲಿ. ತಮ್ಮ ರಾಜಕೀಯ ಪಕ್ಷದ ಅವಿಶ್ವಾಸ ಸೂಚನೆಯ ಮೂಲಕ ಪಕ್ಷನಾಯಕತ್ವವನ್ನು ಕಳೆದುಕೊಂಡದ್ದರಿಂದಲಾಗಲಿ, ಮುಖ್ಯಮಂತ್ರಿ ಪದವಿ ಬಿಡುವಾದರೆ ಆಗ ಆ ಸ್ಥಾನಕ್ಕೆ ಬೇರೊಬ್ಬರನ್ನು ರಾಜಪ್ರಮುಖರು ನಿಯಮಿಸುವಲ್ಲಿ ಆ ಬೇರೊಬ್ಬರು ಈಗ ಶಾಸನ ಸಂಸ್ಥೆಯಲ್ಲಿರುವ ಕಾಂಗ್ರೆಸ್ ಪಕ್ಷ ಪ್ರಮುಖರಾಗಿರಬೇಕೆ, ಅಥವಾ ಶಾಸನ ಸಂಸ್ಥೆಯ ಹೊರಗಣ ಕಾಂಗ್ರೆಸ್ ಪ್ರಮುಖರು ಬೇಕಾದರೂ ಆಗಬಹುದೆ?

ಇದೊಂದು ತತ್ತ್ವಾತ್ಮಕವಾದ ಪ್ರಶ್ನೆ. ಇಂಡಿಯಾದ ಈ ಗಣರಾಜ್ಯ ನಿಬಂಧನೆಯಲ್ಲಿ ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರವಿಲ್ಲ. ಮಂತ್ರಿನಿಯೋಜನೆಯನ್ನು ಕುರಿತ ವಿಧಿಯು ನಿಬಂಧನ ಶಾಸನದ 164ನೆಯ ವಿಧಿವಾಕ್ಯದಲ್ಲಿದೆ. ಅದರಂತೆ ಮುಖ್ಯಮಂತ್ರಿಯನ್ನು ನಿಯಮಿಸತಕ್ಕವರು ರಾಜಪ್ರಮುಖರು. ಇತರ ಮಂತ್ರಿಗಳನ್ನು ನಿಯಮಿಸುವವರೂ ರಾಜಪ್ರಮುಖರೇ ಆದರೂ ಅದು ಮುಖ್ಯಮಂತ್ರಿಯ ಸಲಹೆಯ ಮೇಲೆ. ಹೀಗೆ ಮುಖ್ಯೇತರ ಮಂತ್ರಿಗಳ ನಿಯಾಮಕವಾಗುವುದು ವಸ್ತುತಃ ಮುಖ್ಯಮಂತ್ರಿಯಿಂದಲೇ. ಮುಖ್ಯಮಂತ್ರಿಯೂ ಒಬ್ಬ ಮಂತ್ರಿಯೇ ಆದರೂ ಆತನ ಅಧಿಕಾರದಲ್ಲಿ ಸಾಮಾನ್ಯ ಮಂತ್ರಿತ್ವದೊಂದಿಗೆ ಇನ್ನೊಂದು ವಿಶೇಷಾಂಶ ಕೂಡಿಕೊಂಡಿರುತ್ತದೆ. ಈ ರೀತಿ ಮುಖ್ಯಮಂತ್ರಿ ಸ್ಥಾನವು ಸಾಮಾನ್ಯ ಮಂತ್ರಿಸ್ಥಾನದಿಂದ ಬೇರೆ ಮಾಡಲ್ಪಟ್ಟಿದೆ.

ಮೇಲೆ ಉದಾಹರಿಸಿರುವ (164ನೆಯ) ವಿಧಿವಾಕ್ಯದ (4)ನೆಯ ಅಂತರ್ವಾಕ್ಯವು—ಯಾವ ಮಂತ್ರಿಯಾದರೂ ಎಂದಿನ ಆರುತಿಂಗಳ ಅವಿಚ್ಛಿನ್ನ ಕಾಲ ಪರ್ಯಂತವಾದರೂ ಶಾಸನ ಸಂಸ್ಥೆಯಲ್ಲಿಲ್ಲದೆ ಹೋದರೆ ಆ ಕಾಲಾವಧಿ ಮುಗಿದಾಗ ಆತನ ಮಂತ್ರಿತ್ವವು ನಿಲ್ಲತಕ್ಕದ್ದೆಂದು ಸ್ಪಷ್ಟಪಡಿಸುತ್ತದೆ. ಎಂದರೆ, ಆರು ತಿಂಗಳಿಗಿಂತ ಕಡಮೆಯಷ್ಟು ಕಾಲ—ಬೇಕಾದರೆ ಐದು ತಿಂಗಳು ಇಪ್ಪತ್ತೊಂಬತ್ತು ದಿನದ

ಮಟ್ಟಿಗೆ—ಒಬ್ಬಾನೊಬ್ಬ ಮಂತ್ರಿಯು ಶಾಸನಸಂಸ್ಥೆಯ ಸದಸ್ಯನಲ್ಲದೆ ಇದ್ದರೂ ಆಗಬಹುದು. 5 ತಿಂಗಳು 30 ದಿವಸ ಕಳೆಯುವಷ್ಟರೊಳಗಾಗಿ ಆತನು ಆ ಸದಸ್ಯತ್ವ ವನ್ನು ಸಂಪಾದಿಸಿಕೊಂಡರೆ ಸಾಕು ; ಆಗ ಆತನು ಅಲ್ಲಿಂದ ಮುಂದಕ್ಕೂ ಮಂತ್ರಿ ಯಾಗಿರಲರ್ಹನಾಗುತ್ತಾನೆ. ಈ ಆರು ತಿಂಗಳ ವಿನಾಯಿತಿಯನ್ನು ನೋಡಿದರೆ. ಮಂತ್ರಿತ್ವಕ್ಕೆ ನಿಯಮಿಸಲ್ಪಟ್ಟವನು ಆ ದಿವಸ ಶಾಸಕ ಸದಸ್ಯನಾಗಿಯೇ ಇರಬೇಕೆಂಬ ಕಟ್ಟುಪಾಡು ರಾಜ್ಯನಿಬಂಧನ ಗ್ರಂಥದಲ್ಲಿ ಕಾಣುವುದಿಲ್ಲ.

ಆದರೆ, ಈ ವಿನಾಯತಿಯ ಅಂತರ್ವಾಕ್ಯವು ಸಾಮಾನ್ಯ ಮಂತ್ರಿಗಳಿಗೆ ಅನ್ವಯಿಸುವಂತೆ ಮುಖ್ಯಮಂತ್ರಿಗೂ ಅನ್ವಯಿಸುತ್ತದೆಯೆ? ಶಾಸನ ಸಂಸ್ಥೆಯಲ್ಲಿಲ್ಲ ದಾತನು ಮುಖ್ಯಮಂತ್ರಿಯೂ ಆಗಬಹುದೇ ?

ಈ ಪ್ರಶ್ನೆಗೆ ನಮ್ಮ ರಾಜ್ಯನಿಬಂಧನೆಯಲ್ಲಿ ಕಂಠೋಕ್ತವಾದ ಉತ್ತರವಿಲ್ಲ ದಿರುವುದರಿಂದ ನಾವು ಇಂಗ್ಲೆಂಡಿನ ದೃಷ್ಟಾಂತವನ್ನು ನೋಡುವುದು ಯುಕ್ತವಾಗಿದೆ. ಇಂಗ್ಲೆಂಡಿನ ರಾಜ್ಯನಿಬಂಧನೆ ಲಿಖಿತ ಶಾಸನ ರೂಪವಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಅಲ್ಲಿಯ ರಾಜ್ಯವ್ಯವಸ್ಥೆ ಬಹುಭಾಗದಲ್ಲಿ ಬಹುಕಾಲದ ಸಂಪ್ರದಾಯ ಸಂಕೇತಗಳ ರೂಪದಲ್ಲಿ ಬಂದಿರತಕ್ಕದ್ದು. ಆದದ್ದರಿಂದ ನಮಗೆ ಅಲ್ಲಿಯ ಪದ್ಧತಿ ಲಿಖಿತ ವಾಕ್ಯದಂತೆ ಪ್ರಮಾಣವಾದದ್ದು. ಅವರ ಪ್ರಕಾರ ಮಂತ್ರಿಯಾದವನು ಸಾಮಾನ್ಯನಾಗಲಿ ಮುಖ್ಯನಾಗಲಿ ಶಾಸಕ ಸಂಸ್ಥೆಯ. ಎಂದರೆ ಪಾರ್ಲಿಮೆಂಟಿನ. ಸದಸ್ಯ ನಾಗಿರಬೇಕೆಂಬುದೇ ನಿತ್ಯನಿಯಮ. ಆ ನಿಯಮವು ವಿನಾಯತಿ ಇಲ್ಲದ್ದಲ್ಲವಾದರೂ ಅಂಥ ವಿನಾಯತಿಗಳು ತೀರಾ ವಿರಳ.

ಆ್ಯನ್ಸನ್ (W. R. Anson) ಎಂಬ ಪ್ರಮಾಣ ಗ್ರಂಥಕಾರನು ಹೀಗೆ ಬರೆದಿದ್ದಾನೆ :

There is no statutory necessity that any one of the ministers should be in Parliament, but in pracitce a Minister who could not obtain a seat in the House of Commons, and who was not, and did not wish to be, a member of the House of Lords, could not continue to hold office for many weeks. (*Law & Custom of the Constitution, Parliament*, p. 5.)

(ಮಂತ್ರಿಯಾದವನು ಪಾರ್ಲಿಮೆಂಟಿನಲ್ಲಿ ಇರಲೇಬೇಕೆಂಬ ಶಾಸನ ನಿರ್ಬಂಧ ವೇನೂ ಇಲ್ಲ. ಆದರೆ ಆಚರಣೆಯಲ್ಲಿ, ಯಾವ ಮಂತ್ರಿಯು ಪ್ರಜಾಸಾಮಾನ್ಯ ಸಭೆಯಲ್ಲಿ ಜಾಗ ಸಂಪಾದಿಸಿಕೊಳ್ಳಲಾರದೆ ಹೋಗಿದ್ದಾನೋ ಮತ್ತು ಶ್ರೀಮಂತ ಸಭೆಯಲ್ಲಿ ಸದಸ್ಯನಲ್ಲವೋ ಅವನು ಬಹುವಾರಗಳ ಕಾಲ ಮಂತ್ರಿ ಪದವಿಯನ್ನುಳಿಸಿ ಕೊಂಡಿರಲಾರ.)

ಕೀತ್ (A. B. Keith) ಹೀಗೆ ಬರೆದಿದ್ದಾನೆ :

It is essential that the Prime Minister shall be able to form a Government which can secure a Vote of Confidence if need be, from the Commons, and the Sovereign must fix finally upon a politician thus qualified .... The essential principles of Parliamentary Government demand that all officers of Cabinet rank shall be members of one or other House of Parliament. Exceptions are due only to special and temporary circumstances. (*The British Cabinet System*, pp. 30, 50)

(ಮುಖ್ಯಮಂತ್ರಿಯು, ಪ್ರಜಾ ಸಾಮಾನ್ಯಸಭೆಯ ವಿಶ್ವಾಸನಿರ್ಣಯವನ್ನು ಅವಶ್ಯವಾದಾಗ ಸಂಪಾದಿಸಿಕೊಳ್ಳಬಲ್ಲಂಥ ಸರಕಾರವನ್ನು ರಚಿಸುವುದು ಅವಶ್ಯ ವಿಷಯ. ಪ್ರಭುಗಳು ಅದಕ್ಕೆ ತಕ್ಕ ರಾಜಕೀಯಸ್ಥನನ್ನು (ಮುಖ್ಯಮಂತ್ರಿಯಾಗಿ) ಗೊತ್ತುಮಾಡಿಕೊಳ್ಳಬೇಕು...ಮಂತ್ರಿಸಂಪುಟದ ದರ್ಜೆಯ ರಾಜ್ಯಾಧಿಕಾರಿಗಳು ಪಾರ್ಲಿಮೆಂಟಿನ ಎರಡು ಸಭೆಗಳ ಪೈಕಿ ಯಾವುದಾದರೊಂದರ ಸದಸ್ಯರಾಗಿರಲೇ ಬೇಕೆಂದು ಪಾರ್ಲಿಮೆಂಟರಿ ಸರಕಾರ ಪದ್ಧತಿಯ ತತ್ತ್ವಗಳು ವಿಧಾಯಕ ಮಾಡುತ್ತವೆ. ಈ ವಿಧಿಯಿಂದ ವಿನಾಯತಿಗಳೇನಾದರೂ ನಡೆದಲ್ಲಿ ಅವು ಕಿಂಚಿತ್ಕಾಲದ ಮತ್ತು ವಿಶೇಷವಾದ ಸಂದರ್ಭಗಳಿಗೆ ಮಾತ್ರ ಸಂಬಂಧಪಟ್ಟವು.)

ಜೆನ್ನಿಂಗ್ಸ್ (W. I. Jennings) ಎಂಬಾತನು ಹೀಗೆ ಬರೆದಿದ್ದಾನೆ :

It is a settled rule that the Prime Minister must be either a Peer or a member of the House of Commons. Parliamentary Government demands not merely that the Prime Minister shall, with his colleagues, be responsible to the House of Commons, but also that he shall be able to justify his policy in Parliament. Every Prime Minister since Sir Robert Walpole (1727) has been in one of the Houses (*Cabinet Government*, P. 21).

[ಮುಖ್ಯಮಂತ್ರಿಯು ಅವನು ನಿಯಮಿತನಾಗುವ ಕಾಲದಲ್ಲಿ ಶ್ರೀಮಂತ ಸಭೆಯ ಅಥವಾ ಪ್ರಜಾ ಸಾಮಾನ್ಯಸಭೆಯ ಸದಸ್ಯನಾಗಿರಬೇಕೆಂಬುದು ನಿಷ್ಕರ್ಷೆಯಾಗಿರುವ ನಿಯಮ. ಮುಖ್ಯಮಂತ್ರಿಯು ತನ್ನ ಸಹೋದ್ಯೋಗಿಗಳೊಡಗೂಡಿ ಪ್ರಜಾ ಸಾಮಾನ್ಯ ಸಭೆಗೆ ಜವಾಬುದಾರನಾಗಿರಬೇಕಾದದ್ದು ಮಾತ್ರವೇ ಅಲ್ಲದೆ ತನ್ನ ಕಾರ್ಯ ನೀತಿಯನ್ನು ಪಾರ್ಲಿಮೆಂಟಿನಲ್ಲಿ ಸಮರ್ಥನ ಮಾಡಬಲ್ಲವನಾಗಿರಬೇಕು—ಎಂಬುದು ಪಾರ್ಲಿಮೆಂಟರಿ ಸರಕಾರದ ಪದ್ಧತಿಗೆ ಅವಶ್ಯವಾಗಿರುತ್ತದೆ. ಸರ್ ರಾಬರ್ಟ್ ವಾಲ್-ಪೋಲ್ ಕಾಲದಿಂದ, ಎಂದರೆ ಸನ್ 1727 ರಿಂದ, ಪ್ರತಿಯೊಬ್ಬ ಮುಖ್ಯಮಂತ್ರಿಯೂ (ನೇಮಕವಾದ ದಿವಸ) ಪಾರ್ಲಿಮೆಂಟಿನ ಎರಡು ಸಭೆಗಳ ಪೈಕಿ ಯಾವುದಾದರೊಂದರ ಸದಸ್ಯನಾಗಿದ್ದುಕೊಂಡಿದ್ದಾನೆ.]

ಹೀಗೆ ಶಾಸನ ಸಂಸ್ಥೆಯ ಸದಸ್ಯತ್ವದಿಂದ—ಆರು ತಿಂಗಳ ಮಟ್ಟಿಗೋ ಆರು ವಾರದ ಮಟ್ಟಿಗೋ—ವಿನಾಯತಿ ಕೊಡುವ ಏರ್ಪಾಟು ಇಂಗ್ಲೆಂಡಿನಲ್ಲಿ ಮಾಮೂಲ

ಮಂತ್ರಿಗೆ ಆಗಬಹುದೇ ಹೊರತು ಮುಖ್ಯಮಂತ್ರಿಗೆ ಸಲ್ಲದೆಂಬುದು ಸಿದ್ಧವಾಗಿದೆ. ಸಾಮಾನ್ಯ ಮಂತ್ರಿಸ್ಥಾನಕ್ಕೆ ಕೊಟ್ಟಿರುವ ವಿನಾಯತಿ ಕೂಡ ಅಲ್ಲಿ ವಾಸ್ತವವಾಗಿ ಪ್ರಯೋಗಕ್ಕೆ ಬಂದಿರುವುದು ಬಹು ಅಪರೂಪವಾಗಿ.—ಕಳೆದ 220 ವರ್ಷಗಳಲ್ಲಿ ಆರೇಳು ಸಾರಿ ಮಾತ್ರ. ಇಂಗ್ಲೆಂಡಿನಲ್ಲಿ ಶಾಸಕ ಸಭಾ ಸದಸ್ಯತ್ವವೂ ಮುಖ್ಯಮಂತ್ರಿಗೆ ಇರಲೇ ಬೇಕಾದ ಪೂರ್ವಸಿದ್ಧತೆ. ಅವನು ಅದನ್ನು ಉತ್ತರೋತ್ತರ ಸಂಪಾದಿಸಿ ಕೊಳ್ಳತಕ್ಕದ್ದಲ್ಲ.

ಆ ವಿನಾಯತಿಯನ್ನು ಮುಖ್ಯಮಂತ್ರಿಗೆ ಕಲ್ಪಿಸಿಕೊಟ್ಟರೆ ಆಗಬಹುದಾದ ಅನರ್ಥಗಳೇನೆಂಬುದನ್ನು ನೋಡೋಣ :

(1) ಶಾಸನ ಸಂಸ್ಥೆಯಲ್ಲಿ ಮಂತ್ರಿಸಂಪುಟಕ್ಕೆ ಸತ್ತ್ವಪರೀಕ್ಷೆ ಎಂದಾದರೂ ಯಾವ ವೇಳೆಯಲ್ಲಾದರೂ ಒದಗಿಕೊಳ್ಳಬಹುದು. ಅದು ಒದಗಿದಾಗ ಮಂತ್ರಿ ಸಂಪುಟವು ತೇರ್ಗಡೆ ಹೊಂದಬೇಕಾದರೆ ಮುಖ್ಯಮಂತ್ರಿಯಾಗಿರುವಾತನು ಆ ಸಂಸ್ಥೆಯಲ್ಲಿ ತನಗಿರುವ ಬಲಾಬಲಗಳನ್ನು ಚೆನ್ನಾಗಿ ಅರಿತಿರುವವನಾಗಿರಬೇಕು. ಹಾಗೆ ಅದನ್ನರಿತುಕೊಳ್ಳುವುದು ಶಾಸನ ಸಭೆಯ ಪುನರ್ನಿರ್ಮಾಣ ಕಾಲದಲ್ಲಿ ಅಲ್ಲಿಗೆ ಬಂದವನಿಗೆ ಮಾತ್ರವೇ ಸಾಧ್ಯ. ಯಾರು ಚುನಾವಣೆಯ ಕಾಲದಲ್ಲಿಯೇ ಚುನಾವಣೆ ಪಡೆದು ಮೊದಲಿನಿಂದ ಶಾಸನಸಭೆಯಲ್ಲಿದ್ದುಕೊಂಡು ಹಳಬನಾಗಿರುತ್ತಾನೋ ಅವನಿಗೆ ಬಲಾಬಲಗೊತ್ತಾಗುವಂತೆ ಚುನಾವಣೆ ಪಡೆಯದೆ ಹೊಸದಾಗಿ ಅಲ್ಲಿಗೆ ಬಂದವನಿಗೆ ಗೊತ್ತಾಗಲಾರದು. ಇಂಥಾ ಆಗಂತುಕನು ಪ್ರಬಲ ರಾಜಕೀಯ ಪಕ್ಷಕ್ಕೆ ಪ್ರಮುಖನಾಗಿರಬಹುದು: ಆ ಹೊರಗಣ ಪ್ರಮುಖತೆಯು ಶಾಸನ ಸಭೆಯ ಒಳಗಡೆ ಪ್ರಯೋಜನಕ್ಕೆ ಬಂದೀತೆಂಬುದು ಖಾತರಿಯ ಮಾತಲ್ಲ. ಮಸಲಾ ಎಪ್ಪತ್ತು ಮಂದಿ ಸದಸ್ಯರುಳ್ಳ ಶಾಸನ ಸಂಸ್ಥೆಯಲ್ಲಿ 50 ಮಂದಿ ಕಾಂಗ್ರೆಸ್ಸಿಗರೆಂದಿಟ್ಟುಕೊಳ್ಳೋಣ. ಈ 50 ಮಂದಿಯೂ ಪಕ್ಷನಾಯಕ ದೇವಪ್ಪನ ವಿಷಯದಲ್ಲಿ ತಮ್ಮ ಅಂತರಂಗದೊಳಗೆ ಏಕಪ್ರಕಾರವಾದ ಭಾವನೆಯನ್ನಿಟ್ಟುಕೊಂಡಿರುತ್ತಾರೆಂಬ ನಿರೀಕ್ಷಣೆಗೆ ಕಾರಣವಿರಲಾರದು. ಪಕ್ಷದ ಒಳಗಡೆಯೇ ಪಂಗಡಗಳಾಗಿ. ಆ ಕಿತ್ತಾಟಗಳಿಂದ ಪಕ್ಷ ಬಿರಿಯುತ್ತಿರುವುದು ಇಂದಿನ ಅನುಭವದ ಮಾತಾಗಿದೆ.

(i) ಹೀಗಿರುವಲ್ಲಿ ಪಕ್ಷ ನಾಯಕನು ಪಕ್ಷಿಗರ ಪೈಕಿ ಅಧಿಕ ಸಂಖ್ಯೆಗೆ ಸಮ್ಮತನಾದವನೆಂದು ಹೇಳಬಹುದೇ ಹೊರತು ಸಮಸ್ತರ ಸಮ್ಮತಿಯನ್ನೂ ಪಡೆದವನೆಂದು ಹೇಳಲಾಗುವುದಿಲ್ಲ. ಹೀಗೆ ಶಾಸನ ಸಭೆಯ 50 ಮಂದಿ ಕಾಂಗ್ರೆಸ್ಸಿಗರಲ್ಲಿ ಮೂವತ್ತು ಮಂದಿ ಪಕ್ಷನಾಯಕರಲ್ಲಿ ನಿಜವಾದ ವಿಶ್ವಾಸವುಳ್ಳವರೆಂದೂ ಉಳಿದ ಇಪ್ಪತ್ತು ಮಂದಿ ಮೇಲೆ ಅವಿಶ್ವಾಸವನ್ನು ತೋರಿಸದಿದ್ದರೂ ಅಂತರ್ಯದಲ್ಲಿ ಅವಿಶ್ವಾಸಿಗಳೆಂದೂ ಇಟ್ಟುಕೊಳ್ಳೋಣ. ಶಾಸನ ಸಂಸ್ಥೆಯಲ್ಲಿ ವರ ಪರೀಕ್ಷೆಗೆ ಸಮಯ ಬಂದಾಗ ಈ ಇಪ್ಪತ್ತು ಮಂದಿ ಅವಿಶ್ವಾಸಿ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗರೇ ಅಲ್ಲದ ಇಪ್ಪತ್ತು ಮಂದಿಯೊಡನೆ ಸೇರಿಕೊಂಡು (ವೋಟ್) ಇಷ್ಟಮುದ್ರೆ ಕೊಟ್ಟರೆ ಆಗ ಮಂತ್ರಿಸಂಪುಟ ಎದ್ದು

ಹೋಗಬೇಕಾಗುತ್ತದೆ. ಇಂಥಾ ವಿಷಮ ಸಂಭವವು ಆಗಂತುಕನಾಗದೆ ಹಿಂದಿನ ಚುನಾವಣೆಯ ಜಯದಿಂದ ಶಾಸನ ಸಂಸ್ಥೆಗೆ ಬಂದಿರುವ ಮುಖ್ಯಮಂತ್ರಿಯ ಕಾಲದಲ್ಲಿ ಬಹು ಕಡಮೆಯಾಗಿರುತ್ತದೆ. ಅಂಥಾ ಸಂಭವದ ಅಪಾಯವನ್ನು ಸರಕಾರಕ್ಕೆ ಕಡಮೆ ಮಾಡುವುದು ಎಲ್ಲ ದೃಷ್ಟಿಗಳಿಂದಲೂ ಕರ್ತವ್ಯವಾಗಿರುತ್ತದೆ. (ii) ಪ್ರಜಾ ಪ್ರಾತಿನಿಧ್ಯವನ್ನು ಸಂಪಾದಿಸದೆ ಇರುವ ಯಾರೋ ಒಬ್ಬನು ಬಲಾತ್ಕಾರದಿಂದ ತಮ್ಮೊಳಕ್ಕೆ ನುಗ್ಗಿಸಲ್ಪಟ್ಟಿದ್ದಾನೆಂಬ ಅಸಮಾಧಾನವು ವಿಹಿತ ಕ್ರಮದಲ್ಲಿ ಪ್ರತಿನಿಧಿಗಳಾಗಿರುವ ಶಾಸಕರಲ್ಲಿ ಹುಟ್ಟುವುದು ಅಸ್ವಾಭಾವಿಕವಲ್ಲ. ಇಂಥಾ ಅಸಮಾಧಾನಕ್ಕೆ ಅವಕಾಶವುಂಟುಮಾಡಿದರೆ ಮಂತ್ರಿಸಂಪುಟಕ್ಕೆ ಹಾನಿ ; ಮಂತ್ರಿಸಂಪುಟ ಭದ್ರವಾಗಿಲ್ಲದಿದ್ದರೆ ಸರಕಾರದ ಆಡಳಿತಗಳು ವ್ಯವಸ್ಥೆ ತಪ್ಪಿಯಾವು. ಇಂಥಾ ಅಪಾಯವನ್ನು ಸಾಧ್ಯವಿರುವ ಮಟ್ಟಿಗೂ ಕಡಮೆ ಮಾಡಬೇಕಾದರೆ ಸಾಮಾನ್ಯ ಮಂತ್ರಿಗಳಿಗಿರುವ ವಿನಾಯತಿಯನ್ನು ಮುಖ್ಯಮಂತ್ರಿಗೆ ಅನ್ವಯಿಸಬಾರದು.

(2) ಆಗಂತುಕ ಮಂತ್ರಿಯು ಶಾಸಕ ಸದಸ್ಯತ್ವವನ್ನು ಆರು ತಿಂಗಳೊಳಗಾಗಿ ಸಂಪಾದಿಸಿಕೊಂಡರೆ ಸಾಕೆಂಬುದಲ್ಲವೆ ವಿನಾಯತಿ ? ಮುಖ್ಯಮಂತ್ರಿಯೂ ಆ ವಿನಾಯತಿಗೊಳಪಟ್ಟು ನೇಮಕವಾಗಿದ್ದಾನೆಂದಿಟ್ಟುಕೊಳ್ಳೋಣ. ಅವನು ನೇಮಕವಾದ ಬಳಿಕ ಎರಡು ತಿಂಗಳಿಗೋ ಮೂರು ತಿಂಗಳಿಗೋ ಶಾಸನ ಸಭೆಯಲ್ಲಿ ಒಂದು ಸ್ಥಾನ ಹೇಗೋ ಖಾಲಿಯಾಗುತ್ತದೆ. ಅಥವಾ ಖಾಲಿ ಮಾಡಲ್ಪಡುತ್ತದೆ ಎಂದೂ. ಆ ಸ್ಥಾನಕ್ಕೆ ಈ ಆಗಂತುಕ ಮುಖ್ಯಮಂತ್ರಿಯು ಅಭ್ಯರ್ಥಿಯಾಗಿ ನಿಂತುಕೊಳ್ಳುತ್ತಾನೆ ಎಂದೂ ಇಟ್ಟುಕೊಳ್ಳೋಣ. ಈ ಚುನಾವಣೆಯಲ್ಲಿ ಅವನು ಜಯಶಾಲಿಯಾದರೆ ಎಲ್ಲ ಸರಿಹೋಗುತ್ತದೆ. ಆದರೆ ಅವನಿಗೆ ಜಯವುಂಟೇ ಉಂಟೆಂದು ಭರವಸೆ ಕೊಡಬಲ್ಲವರು ಯಾರು ? ಅವನಿಗ ಅಪಜಯವಾದರೆ ಆ ಕೂಡಲೇ ಮಂತ್ರಿಸಂಪುಟ ಮತ್ತೆ ಅತಂತ್ರವಾಗುತ್ತದೆ : ಅದು ಪುನರ್ನಿರ್ಮಿತವಾಗಬೇಕಾಗುತ್ತದೆ. ರಾಜಪ್ರಮುಖರು ಇನ್ನೊಂದು ಸಲ ಮುಖ್ಯಮಂತ್ರಿಗಾಗಿ ಹುಡುಕಾಡಬೇಕಾಗುತ್ತದೆ. ಇದು ಪ್ರಗತಿಸಾಧಕವಾದ ಸರಕಾರಕ್ಕೆ ದಾರಿಯಲ್ಲ.

ಮಂತ್ರಿಸಂಪುಟ ಪದೇ ಪದೇ ಬದಲಾವಣೆಯಾಗುವುದು ದೇಶಜನದ ದೃಷ್ಟಿಯಿಂದ ಹಿತಕರವೇನೂ ಅಲ್ಲ. ಬದಲಾವಣೆಗೆ ಅವಕಾಶವಿರುವುದು ಸುಲಕ್ಷಣವೇ ಹೊರತು ಆ ಅವಕಾಶವು ತಿಂಗಳು ತಿಂಗಳೂ ಪ್ರಯೋಗಕ್ಕೆ ಬರುವುದು ಸುಲಕ್ಷಣವಲ್ಲ. ಬದಲಾವಣೆಯೆಂಬುದು ದಂಡನೆ. ದಂಡನೆಯೆಂದರೆ ದೋಷದರ್ಶನ. ಸರಕಾರವು ತಪ್ಪು ಮಾಡುವುದು. ಪೆಟ್ಟು ತಿನ್ನುವುದು—ಇದಿಷ್ಟನ್ನೇ ಮಾಡುತ್ತಿದ್ದರೆ ಒಳ್ಳೆಯದನ್ನು ಮಾಡುವುದಕ್ಕೆ ಅದಕ್ಕೆ ಹೊತ್ತೆಲ್ಲಿ ? ಭೇದಿಯ ಔಷಧ ಸಿದ್ಧವಾಗಿದೆಯೆಂದು ದಿನ ಬಿಟ್ಟು ದಿನ ಅಜೀರ್ಣ ಮಾಡಿಕೊಳ್ಳಬಹುದೇ ?

ಸಾಮಾನ್ಯವಾಗಿ ನಾಲ್ಕು ವರ್ಷಕ್ಕೋ ಐದು ವರ್ಷಕ್ಕೋ ಒಂದುಸಲ ಶಾಸನ ಸಂಸ್ಥೆ ಬದಲಾಯಿಸತಕ್ಕದ್ದೆಂದು ರಾಜ್ಯನಿಬಂಧನೆ ಗೊತ್ತುಮಾಡಿರುತ್ತದೆ. ಶಾಸನ

ಸಂಸ್ಥೆ ಬದಲಾಯಿಸಿದಾಗ ಮಂತ್ರಿಸಂಪುಟ ಬದಲಾಯಿಸತಕ್ಕದ್ದು ಸಹಜ. , ಸಂಸ್ಥೆ ಸಂಪುಟಗಳೆರಡೂ ದೇಶಾಭಿಪ್ರಾಯದಲ್ಲಿ ಆಗುವ ಬದಲಾವಣೆಗಳಿಗೆ ಅನುಗುಣವಾಗಿ ಬದಲಾಗುವುದು ನ್ಯಾಯ. ಅದರ ಹೊರತು ಮಧ್ಯೇ ಮಧ್ಯೇ ಶಾಸಕ ಸಂಸ್ಥೆಯ ಅಪನಂಬಿಕೆ ಅಸಮಾಧಾನಗಳ ಕಾರಣದಿಂದ ಮಂತ್ರಿಸಂಪುಟವು ಅಧಿಕಾರ ಭ್ರಷ್ಟ ವಾಗುವುದು ರಾಜಕೀಯದಲ್ಲಿಯ ಪ್ರತಿಪಕ್ಷಿವರ್ಗಕ್ಕೆ ತೃಪ್ತಿಕೊಟ್ಟೀತೇ ಹೊರತು ಜನಾಂಗಕ್ಕೆ ಲಾಭವಾಗಲಾರದು.

ಹೇಗೆ ನೋಡಿದರೂ ಮುಖ್ಯಮಂತ್ರಿ ಸ್ಥಾನಕ್ಕೆ ಆ ಸ್ಥಾನವನ್ನು ಭರ್ತಿಮಾಡುವ ದಿವಸ ಶಾಸಕ ಸಂಸ್ಥೆಯಲ್ಲಿಲ್ಲದಂಥ ಆಗಂತುಕನನ್ನು ನಿಯಮಿಸುವುದು ಸುಸಂಗತ ವಾಗಲಾರದು.

ಇದು ತತ್ತ್ವದೃಷ್ಟಿಯ ವಾದ. ಆದರೆ ನಮ್ಮ ಪ್ರಪಂಚದಲ್ಲಿ ಒಂದು ಕಡೆ ವ್ಯವಹಾರ ಶಕ್ತಿಗಳ ಒತ್ತಾಯಕ್ಕೂ ಇನ್ನೊಂದು ಕಡೆ ತತ್ತ್ವ ಸಿದ್ಧಾಂತಕ್ಕೂ ತಕರಾರು ಹುಟ್ಟಿಕೊಂಡರೆ. ಆಗ ತತ್ತ್ವ ಮೂಲೆಗೆ ಸರಿದು ಹಟದ ಹೊಡೆತ ಮುನ್ನುಗ್ಗುವುದು ಎಲ್ಲರಿಗೂ ಅನುಭವವಾಗಿರುವ ಸಂಗತಿ. ಆದರೂ ತತ್ತ್ವ ವೆಂಬುದೊಂದುಂಟೆಂಬುದನ್ನೂ ಅದರ ಸ್ವರೂಪವೆಂಥದೆಂಬುದನ್ನೂ ಜನ ತಿಳಿದು ಕೊಂಡಿದ್ದಾರೆ. ಅದು ಕಾಲಕ್ರಮದಲ್ಲಿಯಾದರೂ ಫಲಕ್ಕೆ ಬಂದೀತು.

(ಜನವರಿ 3, 1951)

ನಮ್ಮ ಸಾಹಿತ್ಯದ ಬೆಳವಣಿಗೆ*

ಜನಸತ್ತ್ವ

ಇಂದಿಗೆ 28 ವರ್ಷಗಳ ಹಿಂದೆ ರಾಯಚೂರಿನಲ್ಲಿ ಕರ್ಣಾಟಕ ಸಾಹಿತ್ಯ ಸಮ್ಮೇಳನ ನಡೆಯಿತಷ್ಟೆ? ಈ ಪ್ರದೇಶದ ಜನಕ್ಕೆ ಸಾಹಿತ್ಯ ವಿಷಯದಲ್ಲಿರುವ ಅಭಿಮಾನೋತ್ಸಾಹಗಳನ್ನು ಆಗ ನಾನು ಕಣ್ಣಾರ ಕಂಡೆ. ರಾಯಚೂರು ಆಗ ಬೆಂಗಳೂರಿಗೆ ಈಗಿಗಿಂತ ದೂರವಾಗಿತ್ತು,–ಬೇರೊಂದು ರಾಜ್ಯವೇ ಆಗಿತ್ತು. ನನ್ನ ಪಾಲಿಗೆ ಪ್ರಪಂಚಕೇಂದ್ರವೆನಿಸಿದ್ದ ಬೆಂಗಳೂರಿನಿಂದ ಇಷ್ಟೊಂದು ದೂರವಾದ ಕಡೆ,—ವಿದ್ಯಾವೈದುಷ್ಯದ ಹೆಗ್ಗುರುತುಗಳು ಅಷ್ಟು ಹೆಚ್ಚಾಗಿ ಕಾಣಿಸದಿದ್ದ ಕಡೆ.—ಜನಕ್ಕೆ ಅಷ್ಟೊಂದು ಭಾಷಾಭಿಮಾನವೂ ಸಾಹಿತ್ಯೋತ್ಸಾಹವೂ ಸೈಜವಾಗಿದ್ದದ್ದನ್ನು ಕಂಡು ನನ್ನೆದೆ ಹಿಗ್ಗಿತು. ಕನ್ನಡದ ಸೇವಕರಿಗೆ ನಮ್ಮ ಇಲ್ಲಿಯ ಅನುಭವದಿಂದ ಧೈರ್ಯಬಂತು. ಈ ಇಪ್ಪತ್ತೆಂಟು ವರ್ಷಗಳಲ್ಲಿ ರಾಯಚೂರಿನ ಸಾಹಿತ್ಯೋತ್ಸಾಹ ಸಂತತವಾಗಿ ಬೆಳೆದು ಇಂದಿನ ಘನರೂಪವನ್ನು ತಾಳಿರುವುದು ಇಲ್ಲಿಯ ಜನಕ್ಕೆ ಕೀರ್ತಿಕರವಾಗಿರುವುದು ಮಾತ್ರವಲ್ಲ. ಅದು ಸಮಸ್ತ ಕನ್ನಡದ ಅಭಿಮಾನಿಗಳಿಗೂ ಪ್ರೋತ್ಸಾಹಕರವಾದ ಸಂಗತಿ.

ನಿಮ್ಮೂರಿನ ಕರ್ಣಾಟಕ ಸಂಘದ ಬೆಳವಣಿಗೆಯಲ್ಲಿ ನನ್ನ ಕಣ್ಣಿಗೆ ಒಂದು ವಿಶೇಷಾಂಶ ಕಾಣಬರುತ್ತಿದೆ. ಈ ಸಂಘ ಬಹುಮಟ್ಟಿಗೆ ಮಹಾಜನ ಪ್ರಯತ್ನದ ಫಲ. ಅದರಲ್ಲಿ ಸರಕಾರದ ಭಾಗ ತೀರ ಕೊಂಚದ್ದು. ಎಲ್ಲಿ ಜನ ತಮಗೆ ಬೇಕಾದ ಸಂಸ್ಥೆ ಸೌಕರ್ಯಗಳನ್ನು ಸ್ವಪ್ರಯತ್ನದಿಂದ ಸಂಪಾದಿಸಿಕೊಳ್ಳುತ್ತಾರೋ,—ಎಲ್ಲಿ ಅವರು ಸರಕಾರದ, ಅಥವಾ ಶಾಸನಾಂಗದ. ಅಥವಾ ಪೌರಸಭೆಯ ಕೈತುತ್ತಿಗೆ ಬಾಯಿಬಿಟ್ಟುಕೊಂಡು ಕುಳಿತಿರದೆ,—ತಮ್ಮ ಸಂಘಟನ ಶಕ್ತಿಯಿಂದ ತಮಗೆ ಬೇಕಾಗಿರುವ ಸಂಸ್ಕೃತಿ ಸಾಧನಗಳನ್ನೂ ಸಾಮಾಜಿಕ ಸೌಕರ್ಯಗಳನ್ನೂ ನಿರ್ಮಿಸಿಕೊಳ್ಳುತ್ತಾರೋ ಅಲ್ಲಿಯವರು ದೇಶಕ್ಕೆ ಜೀವಚೈತನ್ಯದ ಭರವಸೆಯನ್ನು ಕೊಡುತ್ತಾರೆ.

---

* ಪ್ರಾಸ್ತಾವಿಕ ಭಾಷಣ; ಕರ್ಣಾಟಕ ಸಂಘ, ರಾಯಚೂರು. ಇವರು 1962, ಏಪ್ರಿಲ್ 29 ರಂದು ನಡಸಿದ ರಜತಮಹೋತ್ಸವ ಸಂದರ್ಭದಲ್ಲಿ.

ಲೋಕದ ಹೋರಾಟದಲ್ಲಿ ನಿಂತು ಬಾಳುವ ಸಾಮರ್ಥ್ಯ ಈ ಜನಪದಕ್ಕೆ ಉಂಟೆಂಬುದು ಅವರು ಸಾಧಿಸಿದ ಜಯದಿಂದ ಸ್ಪಷ್ಟಪಡುತ್ತದೆ. ಜನಸತ್ತ್ವವೇ ದೇಶಕ್ಕಿರುವ ಮೂಲಧನ. ಜನಸತ್ತ್ವವೇ ಸಾಹಿತ್ಯಕ್ಕೆ ಸ್ಫೂರ್ತಿಸ್ಥಾನ. ಸಾಹಿತ್ಯ ಬೆಳೆದು ಶೋಭಿಸಬೇಕೆಂಬ ಮನೋಗತವುಳ್ಳವರು ಮೊದಲು ಜನಸತ್ತ್ವದ ಅಭಿವೃದ್ಧಿಗೆ ಗಮನ ಕೊಡಬೇಕು.

ಇದೇ ಈ ದಿವಸ ನಾನು ತಮ್ಮಲ್ಲಿ ವಿಶೇಷವಾಗಿ ಅರಿಕೆಮಾಡಬೇಕೆಂದಿರುವ ಮಾತು. ನಮ್ಮ ದೇಶದ ಇಂದಿನ ಜೀವನಕ್ಕೆ ಯಾವ ಒಂದು ತತ್ತ್ವ ಅತ್ಯಂತ ಮುಖ್ಯವಾದದ್ದೆಂದು ನನ್ನ ಮನಸ್ಸಿಗೆ ನಂಬಿಕೆ ಬಂದಿದೆಯೋ ಆ ತತ್ತ್ವವನ್ನು ವಿಸ್ತರಿಸಲು ಈ ಹೊತ್ತಿನ ಸಂದರ್ಭ ಯುಕ್ತವಾದದ್ದೆಂದು ನನಗೆ ತೋರುತ್ತದೆ. ಈ ಅವಕಾಶವನ್ನೊದಗಿಸಿದ್ದಕ್ಕಾಗಿ ರಾಯಚೂರಿನ ಕರ್ಣಾಟಕ ಸಂಘಕ್ಕೆ ನನ್ನ ವಂದನೆಗಳು ಸಲ್ಲುತ್ತವೆ.

ಪುನರುಜ್ಜೀವನದ ಆದಿ

ಈಗ್ಗೆ 60 ವರ್ಷಗಳ ಹಿಂದೆ ಕನ್ನಡದಲ್ಲಿ ಸಾಹಿತ್ಯ ರಚನೆ ಎಂಥಾ ಸ್ಥಿತಿಯಲ್ಲಿತ್ತು. ಅದಕ್ಕೆ ಜನದ ಪುರಸ್ಕಾರ ಎಷ್ಟುಮಾತ್ರ ಇತ್ತು—ಎಂಬುದು ನನಗೆ ಜ್ಞಾಪಕದಲ್ಲಿ ವಿಶದವಾಗಿದೆ. ಎಲ್ಲ ಭಾಷೆಗಳ ಚರಿತ್ರೆಯಲ್ಲಿರುವಂತೆ ಕನ್ನಡದ ಚರಿತ್ರೆಯಲ್ಲಿಯೂ ಸಾಹಿತ್ಯ ನದಿ ಕೆಲವು ಕಾಲ ತುಂಬಿ ಹರಿದಿದೆ. ಕೆಲವು ಕಾಲ ಬಡಬಡಕಲಾಗಿ ಹರಿದಿದೆ. 1880ರಲ್ಲಿ ಮೈಸೂರು ರಾಜ್ಯ ಪುನರುಜ್ಜೀವಿತವಾಗಿ ಶ್ರೀ ಚಾಮರಾಜೇಂದ್ರ ಒಡೆಯರವರು ಪಟ್ಟಕ್ಕೆ ಬಂದಾಗ, ನಮ್ಮ ಸಾಹಿತ್ಯಕ್ಕೂ ಇನ್ನೊಂದು ಪುನರುಜ್ಜೀವನ ಯೋಗ ಬಂತು. ಅವರ ಮುಖ್ಯಮಂತ್ರಿ ರಂಗಾಚಾರ್ಯರು. ಬಸವಪ್ಪ ಶಾಸ್ತ್ರಿಗಳೇ ಮೊದಲಾದ ವಿದ್ವತ್ಕವಿಗಳಿಂದ ಶಾಕುಂತಲ ಮೊದಲಾದ ಪ್ರಸಿದ್ಧ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡಿಸಿದರು. ವಿದ್ವದ್ಗಾಯಕರಿಂದ ಗೇಯ ಕೃತಿಗಳನ್ನು ರಚನೆಮಾಡಿಸಿದರು. ಹಾಗೆಯೇ ಆಗ್ಗೆತಾನೆ ಯೂನಿವರ್ಸಿಟಿಗಳಿಂದ ತಯಾರಾಗಿ ಬಂದ ಇಂಗ್ಲಿಷ್ ವಿದ್ಯಾವಂತರಲ್ಲಿ ಮೊದಮೊದಲಿನವರು ಷೇಕ್ಸ್‌ಪಿಯರ್ ಮೊದಲಾದ ಆಂಗ್ಲ ಮಹಾಕವಿಗಳ ಕೃತಿಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿಕೊಟ್ಟರು ; ನಾನಾ ವಿಜ್ಞಾನ ಶಾಸ್ತ್ರಗಳನ್ನೂ ಇಂಗ್ಲಿಷಿನಿಂದ ಕನ್ನಡಿಗರಿಗೆ ಗ್ರಂಥ ರೂಪದಲ್ಲಿ ದೊರಕಿಸಿದರು. ಹೀಗೆ ಮತ್ತೊಂದು ನವಯುಗ ಪ್ರಾರಂಭವಾಯಿತು.

ಆದರೆ ಜನಸಾಮಾನ್ಯದ ದೃಷ್ಟಿ ಆ ಕಾಲದಲ್ಲಿ ಇಂಗ್ಲಿಷಿನ ಕಡೆಗೆ ಹೆಚ್ಚಾಗಿತ್ತು. ಇಂಗ್ಲಿಷು ಸರಕಾರಕ್ಕೆ ಬೇಕಾಗಿದ್ದ ಭಾಷೆ : ಚಾಕರಿ ದೊರಕಿಸುವ ಭಾಷೆ : ಹೊಸ ಹೊಸ ಕಸಬುಗಳಿಗೆ ದಾರಿತೋರಿಸುವ ಭಾಷೆ : ನೂತನ ಚಮತ್ಕಾರಗಳನ್ನು ಕಲಿಸುವ ಭಾಷೆ ; ಹಣ ಕೊಡುವ ಭಾಷೆ. ಹೀಗೆ ವಿದ್ಯಾಭ್ಯಾಸದಲ್ಲಿ ಮುಖ್ಯಸ್ಥಾನ ಸಂದದ್ದು ಇಂಗ್ಲಿಷಿಗೆ. ಅದು ಆಗಿನ ಜನದ ಮನೋವೃತ್ತಿ. ಅದನ್ನು ನಾವು ಆಕ್ಷೇಪಣೆ ಮಾಡತಕ್ಕದ್ದಲ್ಲ. ಅಂದಿನ ಸಂದರ್ಭದಲ್ಲಿ ಅದು ಸ್ವಾಭಾವಿಕವಾಗಿದ್ದದ್ದೂ ಹೌದು.

ಯುಕ್ತವಾಗಿದ್ದದ್ದೂ ಹೌದು. ನಮ್ಮ ಜನವನ್ನು ಇಂದಿನ ಜಗಜ್ಜೀವನಕ್ಕೆ ಸಿದ್ಧ ಪಡಿಸಲು ಅವರ ಬುದ್ಧಿಗೂ ಮನಸ್ಸಿಗೂ ಆಗ ಬೇಕಾಗಿದ್ದ ನವೀಕರಣ ಕಾರ್ಯ ಒಂದಿತ್ತು. ಆ ಕಾರ್ಯವನ್ನು ಅಗವಾಡಿಸುವ ಸಾಮರ್ಥ್ಯ ಇದ್ದದ್ದು ಇಂಗ್ಲಿಷಿಗೆ. ಅದರಿಂದ ನಮಗೆ ಆಗಿರುವ ಉಪಕಾರಗಳನ್ನು ಮುಖ್ಯವಾಗಿ ಮೂರು ಅಧಿಕರಣ ಗಳಲ್ಲಿ ಸಂಗ್ರಹಿಸಬಹುದು : ಮೊದಲನೆಯದಾಗಿ, ಇಂಗ್ಲಿಷು ನಮಗೆ ಮಿಕ್ಕ ಪ್ರಪಂಚದ ಜ್ಞಾನವಿಜ್ಞಾನಗಳನ್ನೂ, ಕಾರ್ಯಸಂಧಾನಗಳನ್ನೂ ತಿಳಿಸಿಕೊಟ್ಟಿದೆ ; ಎರಡನೆಯದಾಗಿ, ಅದು ನಮ್ಮ ಸಾಮಾಜಿಕ ಭಾವನೆಗಳನ್ನು ವಿಸ್ತಾರಪಡಿಸಿದೆ ; ಮೂರನೆಯದಾಗಿ, ಅದು ನಮ್ಮ ಬುದ್ಧಿಕಾರ್ಯಕ್ಕೆ ಹೊಸ ಸಾಮಗ್ರಿಯನ್ನೂ ಹೊಸ ಪ್ರೇರಣೆಗಳನ್ನೂ ತಂದುಕೊಟ್ಟಿದೆ. ಈ ತೆರನಾದ ಅಂತರಂಗ ನವೀಕರಣ ಮತ್ತು ವಿಕಾಸನ ನಮಗೆ ಅತ್ಯವಶ್ಯವಿತ್ತು. ಅದನ್ನು ಇಂಗ್ಲಿಷು ಮಾಡಿಸಿತು. ಆದದ್ದರಿಂದ ಇಂಗ್ಲಿಷಿಗಾಗಿ ನಾವು ವಿನಿಯೋಗಿಸಿದ ಕಾಲಕ್ಕಾಗಿಯೂ ಶ್ರದ್ಧೆಗಾಗಿಯೂ ಈಗ ವಿಷಾದಪಡಬೇಕಾದ ಕಾರಣವೇನಿಷ್ಟೂ ಇಲ್ಲ.

"ಇಂಗ್ಲಿಷಿನಿಂದ ನಾವು ಸಂಪಾದಿಸಿಕೊಳ್ಳಬೇಕಾಗಿದ್ದದ್ದು ಈಗ ತಕ್ಕಮಟ್ಟಿಗೆ ನಮಗೆ ಕೈವಶವಾಗಿದೆ ; ಇನ್ನು ಅದರ ಪ್ರಯೋಜನವನ್ನು ಜನಸಾಮಾನ್ಯಕ್ಕೆ ದೊರಕಿಸಬೇಕಾದ ಕಾಲ ಬಂದಿದೆ "—ಎಂದು ದೇಶ ನಾಯಕರಿಗೆ ತೋರಿದಾಗ ಹುಟ್ಟಿತು ಕರ್ಣಾಟಕ ಸಾಹಿತ್ಯ ಪರಿಷತ್ತು. ಅದು ವಿಶ್ವೇಶ್ವರಯ್ಯನವರು ದಿವಾನರಾದ ಬಳಿಕ.—ರಂಗಾಚಾರ್ಯರ ದಿನದಿಂದ ಮುವ್ವತ್ತೈದು ವರ್ಷವಾದ ಮೇಲೆ. ಪರಿಷತ್ತಿಗೆ ಮುಂಚೆ ಅಂಥಾ ಪ್ರಯತ್ನ ನಡೆದಿರಲಿಲ್ಲವೆಂದಲ್ಲ. ಮೈಸೂರಿನ ಭಾಷೋಜ್ಜೀವಿನೀ ಸಭೆ, ಧಾರವಾಡದ ವಿದ್ಯಾವರ್ಧಕ ಸಂಘ ಮೊದಲಾದ ಸಂಸ್ಥೆಗಳು ಅಲ್ಲಲ್ಲಿ ನಡೆಸುತ್ತಿದ್ದ ಪ್ರಯತ್ನಗಳನ್ನು ಶೇಖರಮಾಡಿ, ಏಕಾಕಾರದಲ್ಲಿ ಉಪಯೋಗ ಪಡಿಸಬೇಕೆಂಬುದು ಪರಿಷತ್ತಿನ ಸ್ಥಾಪಕರಲ್ಲಿದ್ದ ಯೋಚನೆ. ಪರಿಷತ್ತಿನ ಉದ್ದೇಶಗಳು ವಿಶ್ವವಿಸ್ತಾರವಾಗಿ, ಬಹುಮುಖವಾಗಿದ್ದವು. ಆ ಸಂಸ್ಥೆ ತನ್ನ ಮಿಕ್ಕೆಲ್ಲ ಧ್ಯೇಯಗಳಿಗಿಂತ ಜನಪ್ರಬೋಧನೆಗೆ ಹೆಚ್ಚು ಗಮನ ಕೊಟ್ಟದ್ದು ಯುಕ್ತವಾಗಿಯೇ ಇದೆ. ಸಮರ್ಥ ರಾದ ಲೇಖಕರು ಸಿದ್ಧರಾಗುತ್ತಿದ್ದರೆಂಬುದು ಕಾಣಬರುತ್ತಿತ್ತು ; ಅವರ ಲೇಖನಗಳನ್ನು ಆದರಿಸಲು ಜನವನ್ನು ಸಿದ್ಧಪಡಿಸುವ ಕಾರ್ಯ ಉಳಿದಿತ್ತು. ಪರಿಷತ್ತು ಈ ಕರ್ತವ್ಯವನ್ನು ವಹಿಸಿಕೊಂಡಿತು. ಅದರೊಡನೆ ಸಹಕರಿಸಲು ದೇಶದ ನಾನಾ ಭಾಗಗಳಲ್ಲಿ ಕರ್ಣಾಟಕ ಸಂಘಗಳೂ ಇತರ ವಿಧದ ಸಾಹಿತ್ಯ ಸಂಸ್ಥೆಗಳೂ ಹುಟ್ಟಿ ಕೊಂಡವು. ಕಳೆದ 30–40 ವರ್ಷಗಳನ್ನು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಉತ್ಸಾಹ ಯುಗವೆಂದು ಕರೆಯಬಹುದು.

ಈಗ ಜನಕ್ಕೆ ತಮ್ಮ ಭಾಷೆಯ ವಿಷಯದಲ್ಲಿ ಅಕ್ಕರೆ ಉಕ್ಕಿ ಬಂದಿದೆ. ಸರಕಾರವು ಜನಭಾಷೆಗೆ ಪ್ರಥಮಸ್ಥಾನ ಕೊಡಬೇಕಾದದ್ದು ಅನಿವಾರ್ಯವಾಗಿದೆ. ವಿದ್ಯಾಪ್ರಾಚುರ್ಯವೂ ಬೆಳೆಯುತ್ತಿದೆ. ಓದುವವರ ಸಂಖ್ಯೆ ಹೆಚ್ಚುತ್ತಿದೆ. ಗ್ರಂಥ ಗಳೂ ಹೊಸ ಹೊಸದಾಗಿ ಬಗೆಬಗೆಯಾಗಿ ಹುಟ್ಟುತ್ತಿವೆ. ಎತ್ತ ತಿರುಗಿದರೂ

ಅಭಿವೃದ್ಧಿಯ ಲಕ್ಷಣಗಳು ಕಾಣಬರುತ್ತಿವೆ. ಹಾಗಾದರೆ ಸಾಹಿತ್ಯ ಸೇವಕರು ಕೃತಕೃತ್ಯರಾದಂತೆ ತಾನೆ ? ಅವರು ಈಗ ನಿಶ್ಚಿಂತರಾಗಬಹುದಲ್ಲ ?

ಹಾಗಲ್ಲವೆಂದು ನನ್ನ ವಿನಂತಿ. ಅವರ ಚಿಂತೆ ಈಗ ಕೊನೆಗಾಣುವುದಕ್ಕೆ ಬದಲಾಗಿ ಈಗತಾನೆ ಮೊದಲಾಗಬೇಕಾಗಿದೆ ಎಂದು ನನ್ನ ಅಭಿಪ್ರಾಯ. ಕೈಕೂಸಿನ ಊಟಕ್ಕೆ ಹೆಚ್ಚು ಪಾಕ-ಪರಿಶವಣೆ ಬೇಕಿಲ್ಲ. ಅದು ತಾಯಿ ತಿನ್ನಿಸಿದ್ದನ್ನು ಸೇರಿದಷ್ಟು ತಿನ್ನುತ್ತದೆ, ಸಾಕೆನ್ನಿಸಿದರೆ ಉಗಿದುಬಿಡುತ್ತದೆ. ಸಿಹಿಯನ್ನು ಬಿಟ್ಟರೆ ಉಳಿದ ರುಚಿ ಅದಕ್ಕೆ ಹಿಡಿಸಲಾರದು. ಬೆಳೆದ ಮಗುವಿಗಾದರೋ ರುಚಿ ಘಮಲುಗಳ ಪಾಂಡಿತ್ಯ ದಿನೇ ದಿನೇ ಬೆಳೆಯುತ್ತಿರುತ್ತದೆ ; ಇದು ಬೇಕು, ಅದು ಬೇಡ :—ಅದು ಬೇಕು. ಇದು ಬೇಡ—ಎಂಬ ಹಟ ಪ್ರಬಲಿಸುತ್ತದೆ. ಅದು ಈ ಭಕ್ಷ್ಯವೋ ಆ ಭೋಜ್ಯವೋ ಬೇಕೆಂದಾಗ ತಿಳಿಯಬರುತ್ತದೆ ನಮ್ಮ ಉಗ್ರಾಣದ ಬಡತನ. ಮತ್ತು ನಮ್ಮ ಪಾಕಶಾಲೆಯ ಅರೆಕೊರೆ. ಸಾಹಿತ್ಯಕರ್ತರಿಗೆ ಈಗ ಅಂಥಾ ಪರೀಕ್ಷಾ ಸಮಯ ಬರುತ್ತಿದೆ. ನಾವು ಏನು ಬರೆದಿಟ್ಟರೂ ಅದನ್ನು ಜನ ಓದಿ ತೃಪ್ತಿಪಡುತ್ತಿದ್ದ ಕಾಲ ಮುಗಿಯಿತು. "ಇನ್ನೂ ಏನೇನಿದೆ ನಿಮ್ಮ ಭಂಡಾರದಲ್ಲಿ ?"—ಎಂದು ಅವರು ಕೇಳುವ ಕಾಲ ಸಮೀಪಿಸುತ್ತಿದೆ. ಜಾಣೆಯಾದ ತಾಯಿ ಅಡಿಗೆಯಲ್ಲಿ ಯೋಚಿಸುವುದು ಮಗುವಿನ ರುಚಿಯನ್ನಾದರೂ, ರುಚಿ ಮಾತ್ರವನ್ನೇ ಅಲ್ಲ : ಮಗುವಿಗೆ ಪುಷ್ಟಿ ಯಾವುದರಿಂದ ? ಆರೋಗ್ಯ ಯಾವುದರಿಂದ ? —ಇದನ್ನೂ ಆಕೆ ಆಲೋಚಿಸುತ್ತಾಳೆ. ಸಾಹಿತ್ಯ ಕರ್ತನು ಆಕೆಯಂತೆ ವಿಚಾರ ಮಾಡಬೇಕು. ಜನಕ್ಕೆ ರುಚಿಸುವುದು ಯಾವುದು ? ಹಿತಕರ ಯಾವುದು ? ಹಿತಕರವಾದದ್ದನ್ನು ರುಚಿಕರವನ್ನಾಗಿ ಮಾಡುವುದು ಹೇಗೆ ? ಇವು ಸಾಹಿತ್ಯಕರ್ತನು ಎದುರಿಸಬೇಕಾಗಿರುವ ಪ್ರಶ್ನೆಗಳು. ಅವುಗಳನ್ನು ಕೊಂಚ ಬಿಚ್ಚಿ ನೋಡೋಣ.

ಸಾಹಿತ್ಯ ಜನದ ಮನಸ್ಸು

ಒಂದು ದೇಶದ ಜನತೆಯನ್ನೂ ಅದರ ಸಾಹಿತ್ಯವನ್ನೂ ಕುರಿತು ನಾವು ಎಂದಿಗೂ ಮರೆಯಬಾರದಾದ ತತ್ತ್ವ ಒಂದಿದೆ. ಜನತೆಯ ಮನಸ್ಸೇ ಸಾಹಿತ್ಯ ; ಸಾಹಿತ್ಯವೆಂದರೆ ಜನತೆಯ ಮನಸ್ಸು.

ಮನಸ್ಸು ಸಾಮಾನ್ಯವಾಗಿ ಎರಡು ಅಂತಸ್ತುಗಳಲ್ಲಿ ಕೆಲಸ ಮಾಡುತ್ತದೆ : ಒಂದು ದಿನಚರಿಯದು ; ಇನ್ನೊಂದು ವಿಶೇಷ ಸಮಯದ್ದು. ಭಾಷೆಯೂ ಹಾಗೆಯೇ. "ತರೋಣ ತೆರೋಣ ತಿಂಬೋಣ, ಮಲಗೋಣ, ಮತ್ತೇಳೋಣ"—ಇದು ಒಂದಂತಸ್ತು. "ನನ್ನಿಂದ ನಾನೇ ಜನಿಸಿ ಬಂದೆನೇ ದೇವ ?"—ಇದು ಇನ್ನೊಂದಂತಸ್ತು. ಈ ಎರಡನೆಯ ಅಂತಸ್ತಿನ ಮನಃಕಾರ್ಯವೇ ಸಾಹಿತ್ಯ. ಮೊದಲನೆಯ ವರ್ಗದ್ದು ಮನೆಮಾತು—ಬೀದಿಮಾತು.

ನಮ್ಮ ಅಂತರಂಗಗಳ ಆಳದ ಮಟ್ಟಗಳ ಪ್ರತಿಧ್ವನಿಯೇ ಹಾಡು. ಪದ್ಯ. ಕಥೆ. ನಾಟಕ. ಅವೇ ಇತಿಹಾಸ ಚರಿತ್ರೆ. ವಿಚಾರೋಪನ್ಯಾಸ. ವಿಮರ್ಶನ ಪ್ರಬಂಧ.

ಈ ನಾನಾ ರಚನೆಗಳಲ್ಲಿ ಜನದ ಜೀವಗತಿಯು ಪ್ರತಿಬಿಂಬಿಸಿರುತ್ತದೆ. ಅವರಿಗಿರುವ ಸಂತತವಾದ ಚಿಂತೆಗಳು, ಅವರಿಗೆ ಪದೇ ಪದೇ ಆಗುತ್ತಿರುವ ಮನೋವಿಕಾರಗಳು, —ಆಶೆಗಳು, ಕೊರಗುಗಳು, ರೋಷಗಳು, ಪ್ರೀತಿಗಳು, ಉತ್ಸಾಹಗಳು, ನಿರಾಶೆಗಳು, ಜುಗುಪ್ಸೆಗಳು, ಪುನರುದ್ಯಮಗಳು, ಪುನರ್ನಿರೀಕ್ಷೆಗಳು, ಸಂಬಿಕೆಗಳು, ಧ್ಯೇಯಗಳು— ಹೀಗೆ ಮನಸ್ಸು ಬುದ್ಧಿಗಳ ಅಂತರಾಳದಲ್ಲಿ ಹುದುಗಿಕೊಂಡಿರುವ ಎಲ್ಲ ಭಾವ ವಿಭಾವಗಳೂ ಅವರಿಗಾಗಿ ಹುಟ್ಟಿದ ಸಾಹಿತ್ಯದಲ್ಲಿ,—ಅವರು ಮೆಚ್ಚಿ ಓದುವ ಗ್ರಂಥಗಳಲ್ಲಿ—ರೂಪುಗೊಂಡಿರುತ್ತವೆ. ಒಂದು ಪುಸ್ತಕ ಒಬ್ಬ ಮನುಷ್ಯನಿಗೆ ಪ್ರಿಯವಾಯಿತೆಂದರೆ ಆ ಮನುಷ್ಯನಿಗೆ ಬೇಕಾಗಿದ್ದ ಯಾವುದೋ ಒಂದು ತಿಳಿವಳಿಕೆ, ಅಥವಾ ಅವನಿಗೆ ಇಷ್ಟವಾದ ಒಂದಾನೊಂದು ಅನುಭವ, ಆ ಪುಸ್ತಕದಲ್ಲಿ ಅವನಿಗೆ ದೊರೆಯಿತು ಎಂದರ್ಥ. ಗ್ರಂಥದ ಯಾವುದೋ ಗುಣ, ಯಾವುದೋ ದೃಷ್ಟಿ, ಯಾವುದೋ ಸಂಗತಿ, ಅವನ ಮನಸ್ಸನ್ನು ಹಿಡಿದಿರಬೇಕು. ಅದರಿಂದಲೇ ಅವನು ಆ ಗ್ರಂಥಕ್ಕೆ ಅಷ್ಟು ಬೆಲೆ ಕೊಡುತ್ತಾನೆ. ಈ ಸರ್ವಾನುಭವದಿಂದ ಹೊರಡುವ ಸಿದ್ಧಾಂತ ಇಷ್ಟು: ಸಾಹಿತ್ಯವು ಜನತೆಯು ಜೀವಿತಾಶಯಕ್ಕೆ ಕೈಗನ್ನಡಿ: ಜನತೆಯು ಜೀವಿತಾಶಯಗಳು ಸಾಹಿತ್ಯಕ್ಕೆ ಮೂಲ ಸಾಮಗ್ರಿ. ಅವೆರಡೂ ಅನ್ಯೋನ್ಯ ಕಾರ್ಯಕಾರಣಗಳು.

ಈ ತತ್ತ್ವದ ಬೆಳಕಿನಲ್ಲಿ ನಮ್ಮ ಕಳೆದ ಐವತ್ತು ವರ್ಷಗಳ ಚರಿತ್ರ ಹೇಗ ಕಾಣುತ್ತದೆ ? ಸಂಗ್ರಹವಾಗಿ ನೋಡೋಣ.

ಗ್ರಂಥಾಭಿವೃದ್ಧಿ

ಕನ್ನಡದಲ್ಲಿ ಈಗ ಗ್ರಂಥಾಭಿವೃದ್ಧಿಯಾಗುತ್ತಿರುವುದರ ಸಂಖ್ಯಾಪರಿಮಾಣ ವನ್ನು ನೋಡಿದರೆ, ನಾವು ಅತೃಪ್ತಿಪಡುವಂತಿಲ್ಲ. 1934ರ ಸುಮಾರಿನಲ್ಲಿ ಸರಾಸರಿ ತಿಂಗಳೊಂದಕ್ಕೆ 10–11 ಪುಸ್ತಕಗಳು ಪ್ರಕಟವಾಗುತ್ತಿದ್ದವು. ಈಚಿನ ಲೆಕ್ಕಗಳು ನನಗೆ ದೊರೆತಿಲ್ಲ. ಈಗ ತಿಂಗಳು ತಿಂಗಳೂ ಬಹುಶಃ 15–20 ಪುಸ್ತಕ ಗಳು ಹೊರಬೀಳುತ್ತಿರಬಹುದೆಂದು ನನ್ನ ಅಂದಾಜು.—ಎರಡು ದಿನಕ್ಕೊಂದರಂತೆ, ಅಥವಾ ಮೂರು ದಿನಕ್ಕೆರಡರಂತೆ. ಇದು ಹೆಚ್ಚೆಂದು ನಾನು ವಾದಿಸುವವನಲ್ಲ. ಸಂಖ್ಯಾಭಿವೃದ್ಧಿ ಬೇಕಾದದ್ದೇ. ಆದರೆ ಅದಕ್ಕಿಂತ ಮುಖ್ಯವಾಗಿ ಬೇಕಾದದ್ದು ವಿಷಯ ವೈವಿಧ್ಯ; ಅದಕ್ಕಿಂತ ಮುಖ್ಯವಾದದ್ದು ಗ್ರಂಥಗುಣ.

ಸಾಹಿತ್ಯವೆಂದೊಡನೆ ಸಾಮಾನ್ಯಜನದ ಮನಸ್ಸಿಗೆ ತೋರುವುದು ಕಥೆ. ನಾಟಕ. ಪದ್ಯ—ಇಂಥಾ ಮನೋರಂಜನೆಯ ಪ್ರಸಂಗಗಳು. ಅದು ಸ್ವಾಭಾವಿಕ. ಸಾಮಾನ್ಯರಿಗೆ ಮೊದಲು ಬೇಕಾದದ್ದು ವಿನೋದ; ಅದಾದಮೇಲೆ ಬೋಧೆ. ನಾವು ವಿಚಾರಮಾಡಿ ನೋಡಿದ್ದಾದರೆ, ಸಾಹಿತ್ಯ ಶಬ್ದದ ಅರ್ಥ ಇನ್ನೂ ವಿಶಾಲವಾದದ್ದೆಂದು ತೋರುತ್ತದೆ. ನಾನು ತಿಳಿದುಕೊಂಡಿರುವ ಮಟ್ಟಿಗೆ—ಯಾವ ವಾಕ್ಯಸರಣಿಯಿಂದ ಕೇಳಿದವನ ಅಥವಾ ಓದಿದವನ ಹೃದಯಕ್ಕೆ ಒಂದು ಹಿತಾನುಭವವೋ. ಅವನ ಬುದ್ಧಿಗೆ

ಒಂದು ಬೆಳಕೋ, ಅವನ ಜೀವಕ್ಕೆ ಒಂದು ಸತ್ಪ್ರಚೋದನೆಯೋ ಉಂಟಾಗುತ್ತದೆಯೋ ಅದು ಸಾಹಿತ್ಯ. ಆ ಲಾಭವು ಪುರಾಣದಿಂದ ಆಗಬಹುದು ; ಕಾದಂಬರಿಯಿಂದ ಆಗಬಹುದು : ಹಾಡಿನಿಂದ ಆಗಬಹುದು ; ಸಂವಾದದಿಂದ ಆಗಬಹುದು ; ಚರಿತ್ರೆಯಿಂದ ಆಗಬಹುದು : ಸಮಾಜ ವರ್ಣನೆಯಿಂದ ಆಗಬಹುದು : ವಸ್ತುವಿಜ್ಞಾನದಿಂದ ಆಗಬಹುದು ; ತತ್ತ್ವಾನ್ವೇಷಣೆಯಿಂದ ಆಗಬಹುದು : ವಿಷಯಸಾಮಗ್ರಿಯಾವುದಾದರೇನು ? ನಮಗೆ ಮುಖ್ಯವಾದದ್ದು ಹೃದಯರಸ ಪರಿಪಾಕ,—ಬುದ್ಧಿ ಪರಿಶುದ್ಧಿ,—ಜೀವಸಂಸ್ಕಾರ.

ಲೋಕದಲ್ಲಿ ಜೀವಿಗಳ ಅಂತರಂಗ ರಚನೆಗಳು ಸಾವಿರಾರು ವಿಧವಲ್ಲವೆ ? ಒಂದೊಂದು ಜೀವದ ಅಭಿರುಚಿ ಒಂದೊಂದು ಬಗೆ : ಒಂದೊಂದು ಜೀವದ ಜೀರ್ಣಶಕ್ತಿ ಒಂದೊಂದು ಬಗೆ. ಆದದ್ದರಿಂದ ಸಾಹಿತ್ಯವು ಒದಗಿಸತಕ್ಕ ಭೋಜನ ಪಾನಕಗಳು ನೂರಾರು ಬಗೆಯುವಾಗಿರಬೇಕು. ಹೀಗೆ ಸಾಹಿತ್ಯವು ನಾನಾ ವಿಷಯಗಳನ್ನಾಶ್ರಯಿಸಿ, ನಾನಾ ಪ್ರಕಾರಗಳಲ್ಲಿ ರೂಪುಗೊಳ್ಳುತ್ತದೆ. ಅವುಗಳಲ್ಲಿ ಮುಖ್ಯವಾದ ಕೆಲವು ಜಾತಿಗಳಲ್ಲಿ ಕನ್ನಡದ ಸೊಂಪುವೆಂಪುಗಳು ನಮ್ಮ ಕಾಲದಲ್ಲಿ ಎಷ್ಟೆಷ್ಟು ಮಾತ್ರ ನಡೆದಿವೆ ? ನೋಡೋಣ. ಕಾವ್ಯಾದಿ ಜಾತಿಯನ್ನು ಪ್ರತ್ಯೇಕ ಪರಿಶೀಲನೆಗಾಗಿ ಕಡೆಗಿರಿಸಿಕೊಂಡು. ಈಗ ಇತರ ಸಾಹಿತ್ಯ ಜಾತಿಗಳನ್ನು ನೋಡೋಣ.

ಚರಿತ್ರೆ : ಪ್ರಪಂಚದ ನಾನಾ ಜನಾಂಗಗಳ ಚರಿತ್ರೆಯೂ ಅವುಗಳ ಮಹಾ ಪುರುಷರ ಜೀವನ ಚರಿತ್ರೆಗಳೂ ಮಾನವ ಜೀವನದ ಪ್ರತ್ಯಕ್ಷ ಕಾವ್ಯ. ಅದರಲ್ಲಿ ಮನೋವೇಧಕ ಸನ್ನಿವೇಶಗಳೂ ಬುದ್ಧಿಶೋಧಕ ಸನ್ನಿವೇಶಗಳೂ ಅಡಿಗಡಿಗೂ ಸಿಕ್ಕುತ್ತವೆ. ಹೀಗಿದ್ದರೂ ಕನ್ನಡದಲ್ಲಿ ಚರಿತ್ರೆಯ ಸಾಹಿತ್ಯ ಇಲ್ಲವೇ ಇಲ್ಲವೆನ್ನಬಹುದು. ಗ್ರೀಸಿನ ಚರಿತ್ರೆಯಿಲ್ಲ ; ರೋಮಿನ ಚರಿತ್ರೆಯಿಲ್ಲ. ಸಮಗ್ರವಾದ ಬ್ರಿಟನ್ನಿನ ಚರಿತ್ರೆಯಿಲ್ಲ : ಇಂಡಿಯದ ಚರಿತ್ರೆಯೇ ಪಠ್ಯಪುಸ್ತಕಕ್ಕಿಂತ ಮೇಲಣ ದರ್ಜೆಯದಿಲ್ಲ.

ಸಮಾಜ ವರ್ಣನೆ : ನಾನಾ ದೇಶಗಳ ನಾನಾ ಮನುಷ್ಯ ಸಮಾಜಗಳ ಆಚಾರ ವ್ಯವಹಾರಕ್ರಮಗಳು. ಹಬ್ಬಗಳು. ವ್ರತಗಳು. ಮತವಿಶ್ವಾಸಗಳು. ಜನನ ಮರಣಕಾಲಗಳ ಸಂಪ್ರದಾಯಗಳು. ಪಾತಕ ಪ್ರಾಯಶ್ಚಿತ್ತವಿಧಿಗಳು. ಕುಲವ್ಯವಸ್ಥೆಗಳು —ಇವೆಲ್ಲ "ಸೋಷಿಯಾಲಜಿ" ಎಂಬ ಸಮಾಜ ಪದ್ಧತಿಯ ವಿಜ್ಞಾನದ ಅಂಶಗಳು. ಆ ವಿಜ್ಞಾನವು ಕುತುಕಕಾರಿಯಾದದ್ದು ಮತ್ತು ವಿಚಾರಪ್ರೇರಕವಾದದ್ದು. ಈ ದೊಡ್ಡ ಸಾಹಿತ್ಯಜಾತಿ ಕನ್ನಡದಲ್ಲಿ ಸದ್ಯಃ ಇಲ್ಲವೇ ಇಲ್ಲವೆನ್ನಬಹುದು.

ನ್ಯಾಯ ತತ್ತ್ವ : ಇದು ಜೂರಿಸ್‌ಪ್ರೂಡೆನ್ಸ್ ಎಂಬ ವ್ಯವಹಾರ ನಿರ್ಣಯದ ಮೂಲಾಧಾರ ಶಾಸ್ತ್ರ. ಇದೇ ಎಲ್ಲ ಕಾನೂನು ಕಟ್ಟಳೆಗಳಿಗೂ ತಳಹದಿಯಾದದ್ದರಿಂದ ಲಾಯರುಗಳಿಗೆ ಅತ್ಯಂತ ಉಪಯುಕ್ತವಾದದ್ದು. ರಾಜ್ಯವೆಂಬುದು ಶಾಸನವಶವರ್ತಿಯಾಗಿರತಕ್ಕದ್ದಾದ ಕಾರ್ಯ, ಎಲ್ಲ ರಾಜಕೀಯಸ್ಥರಿಗೂ ಇದು ಪ್ರಥಮ ಪಾಠವಾಗಬೇಕಾದದ್ದು. ಹೀಗಿದ್ದರೂ ಕನ್ನಡದಲ್ಲಿ ಈ ಶಾಸ್ತ್ರವನ್ನು ಕುರಿತು ಗ್ರಂಥ ಹುಟ್ಟಿಲ್ಲ.

ರಾಜ್ಯಶಾಸ್ತ್ರ : ಗ್ರಂಥ ಸಾಲದೆಂಬುದು ಈ ಶಾಸ್ತ್ರಕ್ಕೂ ಅನ್ವಯಿಸುತ್ತದೆ.

ಅರ್ಥಶಾಸ್ತ್ರ : ನಮ್ಮ ಕಾಲಕ್ಕೆ ಇದು ಅತ್ಯಂತ ಮಹತ್ತ್ವವುಳ್ಳದ್ದಾದರೂ ಕನ್ನಡದಲ್ಲಿ ಇದನ್ನು ಕುರಿತ ಗ್ರಂಥಗಳು ಇನ್ನೂ ಅವಶ್ಯವಾದಷ್ಟು ಬಹುವಾಗಿಲ್ಲ.

ಇತರ ಸಮಾಜ ವಿಜ್ಞಾನಗಳು: ಇಲ್ಲೊಂದು ಅಲ್ಲೊಂದು ಲಘು ಗ್ರಂಥವನ್ನು ಬಿಟ್ಟರೆ ಯಾವ ಸಮಾಜ ವಿಜ್ಞಾನಶಾಸ್ತ್ರವನ್ನೂ ಸಮಗ್ರವಾಗಿ ನಿರೂಪಿಸುವ ಗ್ರಂಥ ಕನ್ನಡದಲ್ಲಿಲ್ಲ.

ಪ್ರಕೃತಿ ವಿಜ್ಞಾನ: ಜಗದ್ವಸ್ತುಗಳ ರೂಪರಚನೆಗಳನ್ನು ವಿವರಣೆ ಮಾಡುವ, ಮತ್ತು ಇಂದಿನ ಜಗತ್ತಿನಲ್ಲಿ ಅತಿ ಪ್ರಶಸ್ತವಾಗಿರುವ. ಭೌತಶಾಸ್ತ್ರ, ರಸಾಯನ ಶಾಸ್ತ್ರಗಳಲ್ಲಿಯಾಗಲಿ ಜೈವಶಾಸ್ತ್ರ ದೈಹಿಕಶಾಸ್ತ್ರಗಳಲ್ಲಿಯಾಗಲಿ ಸ್ಕೂಲು ಮಟ್ಟಕ್ಕೆ ಮೀರಿದ ವಿಸ್ತಾರ ಗ್ರಂಥಗಳು ಕನ್ನಡದಲ್ಲಿ ಇನ್ನೂ ತಕ್ಕಷ್ಟು ಹುಟ್ಟಿಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಉತ್ಸಾಹಿಗಳು ಒಂದೆರಡು ಪುಸ್ತಕಗಳನ್ನು ಬರೆದಿದ್ದಾರೆ. ಅದು ಎಷ್ಟು ಮಾತ್ರವೂ ಸಾಲದು.

ಜೀವ ಜೀವನ ಮೀಮಾಂಸೆ : "ಇದು ಇಂಗ್ಲಿಷಿನ ಫಿಲಾಸಫಿ ಎಂಬುದು. —ಭೌತಾತೀತ ವಸ್ತುವನ್ನು ಕುರಿತದ್ದು— ಮೆಟಫಿಸಿಕ್ಸ್." ಜೀವ ಎಂದರೆ ಏನು ? ಜೀವಕ್ಕೂ ಜಗತ್ತಿಗೂ ಸಂಬಂಧ ಹೇಗಿರುತ್ತದೆ ? ಜೀವನದ ಆಶಯವೇನು ? ಇವೇ ಮೊದಲಾದ ಮೂಲತತ್ತ್ವ ಪ್ರಶ್ನೆಗಳನ್ನು ಸ್ವತಂತ್ರ ದೃಷ್ಟಿಯಿಂದ ವಿವೇಚಿಸುವ ಗ್ರಂಥಗಳೂ ಕನ್ನಡದಲ್ಲಿಲ್ಲ. ವೇದವೇದಾಂತಾದಿ ಮತಗಳನ್ನೂ, ಜೈನಬೌದ್ಧಾದಿ ಮತಗಳನ್ನೂ. ಶೈವ-ವೈಷ್ಣವಾದಿಗಳನ್ನೂ ಅವಲಂಬಿಸಿದ ತತ್ತ್ವ ಗ್ರಂಥಗಳು ಕನ್ನಡ ದಲ್ಲಿ ಹೇರಳವಾಗಿವೆ. ಅವೇ ನಮ್ಮ ಪೂರ್ವಸಾಹಿತ್ಯದ ಅಧಿಕ ಭಾಗ. ಆದರೆ ನಾವು ಕೋರುತ್ತಿರುವುದು ಸ್ವತಂತ್ರ ಮೀಮಾಂಸೆಯನ್ನು—ಆಧುನಿಕ ವಿಜ್ಞಾನಾದಿ ಶಾಸ್ತ್ರಗಳ ದೃಷ್ಟಿಯಿಂದ ನಡೆದ ಮೀಮಾಂಸೆಯನ್ನು. ಇದು ಸದ್ಯಕ್ಕೆ ಇಲ್ಲದ್ದು.

ಪ್ರಕೃತಿ ವಿಜ್ಞಾನವೂ ಸಮಾಜ ವಿಜ್ಞಾನ ಪ್ರಪಂಚದಲ್ಲಿ ಈಗ ಶಾಖೋಪ ಶಾಖೆಗಳಾಗಿ ಒಡೆದು, ಅಸಂಖ್ಯೇಯ ಮುಖಗಳಿಂದ ಅನಂತವಾಗಿ ಮುಂದೆ ಸಾಗುತ್ತಿವೆ. ಅವು ಸಾಹಿತ್ಯಕ್ಷೇತ್ರದೊಳಕ್ಕೆ ಬರಬೇಕಾದವಲ್ಲವೆ ? ವಿಜ್ಞಾನಾದಿ ವಾಸ್ತವ ಪ್ರಪಂಚಕ್ಕೂ ಕಾವ್ಯಾದಿ ಕಾಲ್ಪನಿಕ ಪ್ರಪಂಚಕ್ಕೂ ಸಂಬಂಧವೇನೆಂದು ಯಾರಾದರೂ ಕೇಳುವುದಾದರೆ, ಅವರು ಮೊದಲೇ ನಾನು ಅರಿಕೆಮಾಡಿದ ತತ್ತ್ವವನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು : ಜನಸತ್ತ್ವವೇ ಸಾಹಿತ್ಯದ ಜೀವಾಳ. ಜನತೆಯ ಜೀವನದಲ್ಲಿ ಒಂದು ಪುಷ್ಟಿಯೂ ಒಂದು ಚೈತನ್ಯವೂ ತುಂಬಿ ತುಳುಕಾಡುತ್ತಿದ್ದರೆ ಆಗ ಅದು ಕಾವ್ಯಕಥಾನಿರ್ಮಿತಿಗೆ ಸ್ಫೂರ್ತಿ ಕೊಡಬಲ್ಲದ್ದಾಗುತ್ತದೆ. ಜನತೆಯ ಜೀವನ ಕಳೆ ಕಳಿಸಿದರೆ ಅದರ ಸಾಹಿತ್ಯದಲ್ಲಿ ಕಾಂತಿ ತುಂಬುತ್ತದೆ. ಜನಜೀವನದ ಪುಷ್ಟಿ ವಿಕಾಸ ಗಳಿಗೆ ಸಾಧಕವಾದುವು ಚರಿತ್ರೇತಿಹಾಸಗಳು ಮತ್ತು ವಿಜ್ಞಾನ ಶಾಸ್ತ್ರಗಳು. ಬುದ್ಧಿ

ಸಾಹಸ, ಮನೋವಿಸ್ತಾರ,—ಹೊಸ ಅನ್ವೇಷಣೆ, ಹೊಸ ಆಲೋಚನೆ—ಇವು ಜೀವಿತ ಪ್ರಗತಿಯ ಲಕ್ಷಣಗಳು. ಜನಸಾಮಾನ್ಯದಲ್ಲಿ ಅವು ಹರಡಿದ್ದಷ್ಟೂ ಕಾವ್ಯಾದಿ ಕಲ್ಪನಸಾಹಿತ್ಯಕ್ಕೆ ಪ್ರಚೋದನೆ ಹೆಚ್ಚಾಗಿರುತ್ತದೆ. ಆದದ್ದರಿಂದ ಒಳ್ಳೆಯ ಕಾವ್ಯ ಸಾಹಿತ್ಯ ಬೇಕೆನ್ನುವವರು ಮೊದಲು ಆ ತೋಟದ ನೆಲಹರಪಿನಲ್ಲಿ ಕೃಷಿ ಮಾಡಬೇಕು. ಜನಸಾಮಾನ್ಯದ ಬುದ್ಧಿ ಮನಸ್ಸುಗಳು ಆ ನೆಲಹರವು.

ಕಲ್ಪನ ಸಾಹಿತ್ಯ

ಈಗ ಕಲ್ಪನ ಸಾಹಿತ್ಯಕ್ಕೆ ಹೋಗೋಣ. ಆ ಸಾಹಿತ್ಯವನ್ನು ಪ್ರಯೋಜನಕ್ಕೆ ಅನುಸಾರವಾಗಿ ಮೂರು ಮೆಟ್ಟಲುಗಳಲ್ಲಿ ಭಾವಿಸಬಹುದು :

(1) ಮನೋರಂಜಕ ;
(2) ವಿಚಾರಪ್ರೇರಕ ;
(3) ಜೀವೋದ್ಧಾರಕ.

ಈ ಸೋಪಾನದೃಷ್ಟಿಯು ಸಂಗೀತ, ಮೂರ್ತಿಚಿತ್ರಣ ಮೊದಲಾದ ಎಲ್ಲ ಕಲಾನಿರ್ಮಿತಿಗಳಿಗೂ ಅನ್ವಯಿಸುತ್ತದೆ.

ಮನೋರಂಜನೆಯ ಕೃತಿ ಒಂದು ಘಳಿಗೆಯ ವಿನೋದದ್ದು : ಒಂದು ದಿವಸದ ಉಲ್ಲಾಸದ್ದು. ಅದು ನಮ್ಮ ದಿನಂಪ್ರತಿಯ ಊಟದ ಹಾಗೆ. ದಿನದಿನವೂ ಅಂದಂದಿನ ರುಚಿ ಘಮಲುಗಳು ನಾಲಗೆಯ ಮೇಲಿರುವಾಗ—ಏನು ಸೊಗಸು !—ಎನ್ನಿಸುತ್ತವೆ. ಮಾರನೆಯ ದಿನ ಅದೇ ಶಾಕಪಾಕವೆಂದರೆ ಅಷ್ಟು ಸೊಗಸೆನಿಸುವುದಿಲ್ಲ. ನಾಳೆಯ ಭೋಜನವಾದ ಮೇಲೆ ಇಂದಿನ ಸವಿಗಳು ನೆನಪಿನಲ್ಲಿ ಉಳಿದಿರುವುದಿಲ್ಲ. ಹೀಗೆ ರುಚಿ ತಾತ್ಕಾಲಿಕ ಮಾತ್ರದ್ದಾದರೂ ಊಟ ಬೇಡವೆನ್ನುವಂತಿಲ್ಲ. ನಿತ್ಯದ ಊಟ ದಿಂದಲೇ ಜೀವ ; ನಿತ್ಯದ ಮನೋರಂಜನೆಯಿಂದಲೇ ಅಂತರಂಗಕ್ಕೆ ಜೀವನ ಸಹನೆ.

ವಿಚಾರಪ್ರೇರಕ ಸಾಹಿತ್ಯದಲ್ಲಿ ಮನೋರಂಜನೆಯ ಜೊತೆಗೆ ಇನ್ನೊಂದು ಗುಣ ಸೇರಿಕೊಂಡಿರುತ್ತದೆ. ಅದು ವಿವೇಚನ ಶಕ್ತಿಯನ್ನು ಎಚ್ಚರಗೊಳಿಸುವ ಗುಣ. ಸಂತಸದಿಂದ ಚಿಂತೆಯ ಕಡೆಗೆ ಅದರ ಪ್ರಯಾಣ. ಕಥೆಯ ಯಾವುದೋ ಘಟನೆ,—ಮಾತಿನ ಯಾವುದೋ ಮರ್ಮ,—ನಮ್ಮ ಮನಸ್ಸಿನಲ್ಲಿ ಚಿಂತೆಯ ಅಲೆಯನ್ನೆಬ್ಬಿಸುತ್ತದೆ. ಬಸವಪ್ಪ ಶಾಸ್ತ್ರಿಗಳ ಶಾಕುಂತಲದಲ್ಲಿ ಬೆಸ್ತರವನು ಹಾಡಿ ಕೊಂಡು ಬರುತ್ತಾನಲ್ಲವೆ ಹೀಗೆ :

ಪೋಗಿ ನಾಂ ಮೀನ್ಗಳನೆಲ್ಲ ಮಾರೆ
ಹಾಗವನಲ್ಲದೆ ಕಾಣಲಾರೆ
ಈಗಲೀ ಮುದ್ರಿಕೆ ಕೈಯ ಸೇರೆ
ಭೋಗ ದೇವೇಂದ್ರನು ನಾನು ಬೇರೆ ॥

ಈ ಸಂತಸದ ಹಾಡಿನ ಹೊಟ್ಟೆಯಲ್ಲಿದೆ ಒಂದು ಚಿಂತೆ. ಕಾಳಿದಾಸನ ಮೇಘ ಸಂದೇಶ ಈ ಜಾತಿಯ ಸಾಹಿತ್ಯ. ಷೇಕ್ಸ್‌ಪಿಯರನ ಸಾನೆಟ್ ಪದ್ಯಗಳು ಇಂಥವು. ಶುಂಠಿಯ ಚೂರು ಬೆರೆತ ಸೂಪಾನ್ನ ಈ ಪಾಕ.

ಇನ್ನೂ ಮೇಲಣ ಜಾತಿಗೆ ಸೇರಿದ ಜೀವನೋದ್ಧಾರಕ ಸಾಹಿತ್ಯದಲ್ಲಿಯೂ ಮನೋರಂಜನೆ ಇದ್ದೇ ಇರುತ್ತದೆ. ಚಿಂತಾ ಪ್ರೇರಣೆಯೂ ಇರುತ್ತದೆ. ಅವೆರಡರ ಜೊತೆಗೆ ಒಂದು ಜೀವೋನ್ನತಿಯ ದರ್ಶನವೂ ಸೇರಿಕೊಂಡಿರುತ್ತದೆ. ರಾಮಾಯಣ ಭಾರತಗಳು ಇಂಥವು ; ಮ್ಯಾಕ್‌ಬೆತ್ ಹ್ಯಾಮ್ಲೆಟ್‌ಗಳು ಇಂಥವು. ಇದು ಔತಣದ ಮೃಷ್ಟಾನ್ನವೇನೋ ಹೌದು ; ಆದರೆ ಅದರೊಳಗೆ ಮೆಣಸು, ಜೀರಿಗೆ, ಶುಂಠಿ ಮೊದಲಾದ ಔಷಧ ಸಾಮಗ್ರಿಯೂ ಕಣ್ಣಿಗೆ ಕಾಣಬಾರದಂತೆ ಬೆರೆತುಕೊಂಡಿರುತ್ತದೆ; ಮತ್ತು ಕೇಸರಿ, ಪಚ್ಚಕರ್ಪೂರ, ಚಿನ್ನ, ಮುತ್ತು ಮೊದಲಾದ ಪುಷ್ಟಿವರ್ಧಕ ವಸ್ತುಗಳೂ ಇರುತ್ತವೆ.

ಕೇವಲ ಮನೋರಂಜಕ ಸಾಹಿತ್ಯವು ಜೀವವನ್ನು ಬಹಿರ್ಮುಖವನ್ನಾಗಿ ಮಾಡುತ್ತದೆ. ಜೀವನೋದ್ಧಾರಕ ಸಾಹಿತ್ಯವು ಜೀವವನ್ನು ಅಂತರ್ಮುಖ ಮಾಡುತ್ತದೆ. ಅದರಿಂದ ಜೀವೋತ್ಕರ್ಷ,—ಜೀವನ ಪರಿಪೂರ್ಣತೆ. ಇಂಥಾ ಕಾವ್ಯವೇ ಸಾಹಿತ್ಯದ ಶಿಖರಾಗ್ರ.

ರಷ್ಯಾ ದೇಶದ ಬೋಲ್ಷೆವಿಕ್ ರಾಜಕೀಯಸ್ಥರು ದೈವಮತದಲ್ಲಿ ಸಹನೆ ಯಿಲ್ಲದವರು. ಮತವೆಂಬುದು ಜನತೆಗೆ (Dope) ಅಮಲು ಕುಡಿತ : ಅದು ಅವರಿಗೆ ಭಕ್ತಿಯ ಮತ್ತನ್ನೇರಿಸಿ, ಅವರನ್ನು ನಿಷ್ಕ್ರಿಯರನ್ನಾಗಿ ಮಾಡುತ್ತದೆ— ಎಂದು ಅವರು ವಾದಿಸುತ್ತಿದ್ದರಂತೆ. ನಮ್ಮಲ್ಲಿ ಈಚೀಚೆಗೆ ಕಾವ್ಯವೆಂಬುದು ಅಮಲು ಕುಡಿತವೆಂಬಂಥ ಭಾವನೆ ಹರಡುತ್ತಿದೆ. ಬುದ್ಧಿಗೆ ಪ್ರಯಾಸ ಕೊಡುವ ವಿಚಾರಗಳನ್ನು ದೂರಬಿಟ್ಟು. ಪದ ಪದ್ಯ ಹಾಡಿಕೊಂಡು ಹಾ—ಹೋ—ಗುಟ್ಟುವುದೇ ಸಾಹಿತ್ಯ ವ್ಯಾಸಂಗವೆಂದೆಣಿಸುವುದು ಸಾಮಾನ್ಯವಾಗುತ್ತದೆ. ನಾನು ಆ ಪಂಥವನ್ನನು ಸರಿಸಿದವನಲ್ಲ. ನನ್ನ ಪಾಲಿಗೆ ಕಾವ್ಯ ಹೂವಿನ ಹಾರ ಮಾತ್ರವಲ್ಲ. ಅದು ಉರಿಯುವ ಪಂಜೂ ಹೌದು. ಕಾವ್ಯ ತರುವ ಆಪ್ಯಾಯನಕ್ಕೆ ನಿದ್ರೆಯಲ್ಲಲ್ಲ ಪರ್ಯವಸಾನ. ಅದು ಪೌರುಷದಲ್ಲಿ. ಕಾವ್ಯ ಸೌಖ್ಯವು ಸಾತ್ತ್ವಿಕವಾದ ಪಕ್ಷಕ್ಕೆ ಅದು—ಗೀತೆಯಲ್ಲಿ ಹೇಳಿರುವಂತೆ—

"ಆತ್ಮಬುದ್ಧಿಪ್ರಸಾದಜಮ್"

ಆಗಿರಬೇಕು. ಅದರಿಂದ ಆತ್ಮವಿವೇಕವೂ ಕರ್ತವ್ಯಾಕರ್ತವ್ಯ ವಿವೇಕವೂ ಮನಸ್ಸಿನಲ್ಲಿ ಹೊಳೆದು, ಅದರಿಂದ ಜೀವಿತ ಕರ್ಮ ಚೋದನೆ ಬರಬೇಕು. ಶ್ರೇಷ್ಠವರ್ಗದ ಕಾವ್ಯವು ಮಾದನದ್ರವ್ಯವಲ್ಲ, ಅದು ಶೋಧನದ್ರವ್ಯ ಮತ್ತು ಚೋದನದ್ರವ್ಯ.

ನಮ್ಮ ಕಾಲದ ಕಾವ್ಯಸಾಹಿತ್ಯವನ್ನು ಕುರಿತು ಪ್ರಸ್ತಾವಿಸುವುದು ನನ್ನಂಥವನಿಗೆ ಸಾಹಸದ ಕಾರ್ಯವೆಂಬುದು ಸ್ಪಷ್ಟವಾಗಿದೆ. ಮೊದಲು, ಗಾಜಿನ ಮನೆಯಲ್ಲಿರು

ವವನು ಇತರರ ಮೇಲೆ ಕಲ್ಲೆಸೆಯಬಾರದೆಂಬ ಉಪದೇಶವಿದೆ. ಎರಡನೆಯದಾಗಿ, ಕಾವ್ಯ ಕಲಾಕೃತಿಗಳ ಯೋಗ್ಯತಾವಿಚಾರದಲ್ಲಿ ಪ್ರತಿಯೊಬ್ಬನಿಗೂ ಅವನವನ ಅಂತಸ್ಸಾಕ್ಷ್ಯವೇ ಮುಖ್ಯ ; ಬಹಿಸ್ಸಾಕ್ಷ್ಯ ಅಷ್ಟು ಮುಖ್ಯವಲ್ಲ. ಮೂರನೆಯದಾಗಿ, ಸಮಾನಕಾಲದ ಮೌಲ್ಯನಿರ್ಣಯಕ್ಕಿಂತ ದೂರಕಾಲದ್ದು ಬಲವತ್ತರವಾದದ್ದು. ಕಾಳಿದಾಸನನ್ನು ಕುರಿತು ಸಮಕಾಲೀನರು ಯಾವ ಅಭಿಪ್ರಾಯವಿಟ್ಟುಕೊಂಡಿದ್ದರೋ ನಮಗೆ ಗೊತ್ತಿಲ್ಲ. ಕ್ರಿಸ್ತ ವರ್ಷ 962 ರವರು ಮೆಚ್ಚಿಕೊಂಡಿದ್ದರೆ ಅದು ಸ್ಥಿರಪಡುತ್ತಿರುವುದು 1962 ರವರ ಮೆಚ್ಚಿಕೆಯಿಂದ : ಸಾವಿರ ವರ್ಷದ ಪ್ರಮಾಣದ ಮುಂದೆ ಹತ್ತಿಪ್ಪತ್ತು ವರ್ಷದ ಮಾತಿಗೆ ಬೆಲೆಯಿರದು : ವಿಷಯದ ಸ್ವಭಾವವೇ ಹೀಗಿರುವುದರಿಂದ ನನ್ನ ಪ್ರಯತ್ನದಲ್ಲಿ ಯಾರ ಕಾಲ್ಬೆರಳ ಮೇಲಾದರೂ ನನ್ನ ಹೆಜ್ಜೆಯಿಳಿದರೆ, ಅದು ನನ್ನಿಂದ ಉದ್ದೇಶಪೂರ್ವಕವಾಗಿ ಆದದ್ದಲ್ಲವೆಂಬುದನ್ನು ಕೃಪೆ ಮಾಡಿ ಗ್ರಹಿಸಬೇಕು.

ಪೂರ್ವಸಿದ್ಧತೆ

ಸಾಹಿತ್ಯದ ಗುಣ ಜನದ ಅಂತರಂಗಸಿದ್ಧತೆಗೆ ಅನುಗುಣವಾಗಿರತಕ್ಕದ್ದು. ಮಹಾ ಸಾಹಿತ್ಯ ಬೇಕಾದರೆ ಜನತೆ ಮಹಾ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಭಗವಂತನ ಪ್ರಸಾದ ಭಕ್ತನ ನಿಷ್ಠೆಗೆ ಪ್ರತ್ಯುತ್ತರ. ಸಾಹಿತ್ಯದ ಪ್ರಸಾದ ಜನದ ತಪಸ್ಸಿಗೆ ಪ್ರತ್ಯುತ್ತರ. ಹಾಗಾದರೆ ಜನತೆಯಲ್ಲಿರಬೇಕಾದ ತಪೋನಿಷ್ಠೆ ಎಂಥಾದ್ದು ? ಅದರಲ್ಲಿ ಮೂರಂಶ ಬೆರೆತುಕೊಂಡಿರುತ್ತದೆ :

(1) ಲೋಕವಸ್ತು ಪರಿಜ್ಞಾನ ;
(2) ವಿಮರ್ಶನ ಜಾಗರೂಕತೆ ;
(3) ಪರಮಾರ್ಥದೃಷ್ಟಿ (ಐಡಿಯಲಿಸ್ಮ್).

ಲೋಕವಸ್ತು ಪರಿಜ್ಞಾನವೆಂದರೆ ಮನುಷ್ಯನ ಐಹಿಕ ಜೀವನಕ್ಕೆ ಸಂಬಂಧಪಟ್ಟ ನಾನಾ ವಸ್ತುಸಾಮಗ್ರಿಯನ್ನು ಕುರಿತ ತಿಳಿವಳಿಕೆ. ಇದರಲ್ಲಿ ಪ್ರಕೃತಿ ವಿಜ್ಞಾನ ಸಮಾಜ ವಿಜ್ಞಾನ ಮೊದಲಾದ ನಾನಾ ಶಾಸ್ತ್ರಗಳೂ ಕಲೆಗಳೂ ಸೇರಿರುತ್ತವೆ. ಯಾವುದನ್ನು ಇಂಗ್ಲಿಷಿನಲ್ಲಿ Knowledge ಎಂದೂ Information ಎಂದೂ ಕರೆಯುತ್ತಾರೆಯೋ ಆ ಲೋಕಬೋಧೆಯೇ ಎಲ್ಲ ಬುದ್ಧಿವ್ಯಾಪಾರಗಳಿಗೂ ಅವಶ್ಯವಾದ ಮೂಲಸಾಮಗ್ರಿ. ಇದನ್ನು ಜನ ಎಷ್ಟೆಷ್ಟು ಹೆಚ್ಚಾಗಿ ಸಂಪಾದಿಸಿಕೊಂಡಿದ್ದರೆ ಅಷ್ಟಷ್ಟು ಹೆಚ್ಚಾಗುತ್ತದೆ ಅವರ ಜೀವನ ಯೋಗ್ಯತೆ. ಅವರ ಸಾಹಿತ್ಯ ಕುತೂಹಲ ಅಷ್ಟಷ್ಟು ಬಲಿಯುತ್ತದೆ.

ಆದರೆ ಬರಿಯ ವಸ್ತುಬೋಧೆ ಸಾಲದು. ಅದರ ಜೊತೆಗೆ ಯುಕ್ತಾಯುಕ್ತ ವಿವೇಕ ಸೇರಬೇಕು. ಅದು ಲೋಕಸಂಗತಿಗಳ ಕಾರ್ಯಕಾರಣ ಸಂಬಂಧಗಳ ಪರೀಕ್ಷೆಯಿಂದ ಉಂಟಾಗುತ್ತದೆ. ಅದು ವಸ್ತುಸ್ವಭಾವ ಶೋಧನೆ ಮತ್ತು ಅನ್ಯೋನ್ಯ

ಪರಿಣಾಮ ವಿವೇಚನೆ. ಜನದಲ್ಲಿ ಈ ವಿಮರ್ಶನ ಬುದ್ಧಿ. ಬೆಳೆದಷ್ಟೂ ಅವರ ಲೋಕವ್ಯಾಪಾರಗಳಲ್ಲಿ ಔಚಿತ್ಯ ಸಹಜವಾಗುತ್ತದೆ ; ಅವರ ಸಾಹಿತ್ಯದೃಷ್ಟಿ ಸೂಕ್ಷ್ಮವಾಗುತ್ತದೆ.

ಇನ್ನು, ಪರಮಾರ್ಥದೃಷ್ಟಿಯೆಂದರೆ ಒಂದು ಗೊತ್ತಾದ ಹೆಗ್ಗುರಿಯ ನೆನಪು,—ಎಡೆಬಿಡದ ಒಂದು ದೊಡ್ಡ ಯೋಚನೆ. ಆ ಗುರಿ ಒಬ್ಬೊಬ್ಬ ಮನುಷ್ಯನಿಗೆ ಒಂದೊಂದು ಬಗೆಯದಾಗಿರುತ್ತದೆ. ವಂಶಗುಣಕ್ಕನುಸಾರವಾಗಿ, ಗೃಹ ಸಮಾಜಗಳ ವಾತಾವರಣಕ್ಕನುಸಾರವಾಗಿ, ವಿದ್ಯಾಸಂಸ್ಕಾರಕ್ಕನುಸಾರವಾಗಿ, ಆರ್ಥಿಕ ಪರಿಸ್ಥಿತಿಗನುಸಾರವಾಗಿ, ಪ್ರತಿಯೊಬ್ಬನೂ ತನಗುಚಿತವಾದ ಗುರಿಯೊಂದನ್ನು ಮನಸ್ಸಿನಲ್ಲಿ ಗೊತ್ತುಮಾಡಿಕೊಂಡಿರುವುದು ಆವಶ್ಯಕ. ಆ ಗುರಿ ಸ್ವಪ್ರಯೋಜನದ ಸಂಬಂಧವಿಲ್ಲದ್ದಾಗಬೇಕು. ನನ್ನ ಅನುಭವದ ಒಂದು ಸಂಗತಿಯನ್ನು ದೃಷ್ಟಾಂತವಾಗಿ ಹೇಳಬಹುದೆಂದು ತೋರುತ್ತದೆ. ನನಗೆ ಪರಿಚಿತನಾದ ಮುತ್ತ ಎಂಬಾತನಿದ್ದ. ಆತ ನಾವು ಈಗ ಹರಿಜನವೆಂದು ಗೌರವಿಸುವ ಜನಾಂಗಕ್ಕೆ ಸೇರಿದವ. ಆತ ಅಕ್ಷರಗಂಧ ಕಾಣದವನು. ಅವನಿಗಿದ್ದ ಹುದ್ದೆ ಒಂದು ಸಣ್ಣಹಳ್ಳಿಯ ತಳವಾರಿಕೆ. ಆದರೆ ಅವನು ಗ್ರಾಮಕ್ಕೆಲ್ಲ ಇಷ್ಟನಾಗಿದ್ದವನು. ಅವನದು ಯಾವಾಗಲೂ ನಗುತ್ತ ನಗಿಸುತ್ತಿರುವ ಸ್ವಭಾವ. ಮಧುಸೇವನೆಯಿಂದ ಅವನ ಮಾತಿನಲ್ಲಿ ಮತ್ತಷ್ಟು ಹಾಸ್ಯ ತೋರುತ್ತಿತ್ತು. ಒಂದು ದಿನ ಆತ ನನ್ನಲ್ಲಿಗೆ ಬಂದು ನಾಲ್ಕು ರೂಪಾಯಿ ಬೇಡಿದ. ನಾನು ಅವನನ್ನು "ಏನು, ನಾಲ್ಕಾಣೆಯಿಂದ ನಾಲ್ಕು ರೂಪಾಯಿಗೆ ಬಡ್ತಿ ಮಾಡಿಕೊಂಡಿದ್ದಿ ? ಇನ್ನು ಮೇಲೆ ವಿಲಾಯತಿ ಪಾನಕವೋ ?" ಎಂದು ಕೇಳಿದೆ. ಅವನು—"ಇಲ್ಲ ಬುದ್ಧಿ. ಒಂದು ಧರ್ಮ ಮಾಡೋದಕ್ಕೆ ಹಣ ಬೇಕು. ಆ ಪುಣ್ಯ ನಿಮಗೆ ಬರ್‍ತೈತೆ" ಎಂದು ಹೇಳಿದ. ನಾನು—"ಹಿಡಿ ಇದನ್ನ : ಆ ಪುಣ್ಯ ನಿನಗೇ ಇರಲಿ" ಎಂದು ಹೇಳಿ ಕಳಿಸಿದೆ. ಒಂದು ವಾರ ಕಳೆದಮೇಲೆ ಮುತ್ತ ತಿರುಗಿ ಬಂದು—"ಜಮೀನ್‌ತಾವಿಗೆ ನೀವು ಬರಬೇಕು ಬುದ್ಧಿ" ಎಂದು ಕರೆದ. ಒಂದು ದಿವಸ ನಾನು ಅಲ್ಲಿಗೆ ಹೋದಾಗ ಕಂಡದ್ದೇನು ? ಒಂದು ಅನುಗಲ್ಲು ಕಟ್ಟಿಡ. ಆಳೆತ್ತರದ ಮೂರು ನಿಲುಗಲ್ಲುಗಳನ್ನು ನೆಲದಲ್ಲಿ ನೆಟ್ಟು ನಿಲ್ಲಿಸಿದ್ದಾನೆ. ಅವುಗಳ ಮೇಲೆ ಒಂದು ಉದ್ದವಾದ ಕಲ್ಲಿನ ಅಡ್ಡ ದೂಲವನ್ನು ಹಾಸಿದ್ದಾನೆ ! ಅದೇನೆಂದು ನಾನು ಕೇಳಲು—"ಇದೇ ಬುದ್ಧಿ ನಿಮ್ಮ ಧರ್ಮ. ಈ ಜಾಗ ತಿಟ್ಟು. ಈ ಕಡೆಯಿಂದ ಹಳ್ಳಿಗಳೋರು ಸೌದೆ ಹೊರೆ ಹೊತ್ತುಕೊಂಡು ಹತ್ತಿಬರ್‍ತಾರೆ. ಇಲ್ಲಿಗೆ ಬರೋವೇಳೆ ತಟ್ಟುಬಿದ್ದು ಹೋಗ್ತಾರೆ. ಇನ್ನು ಮೇಲೆ ಈ ಅನುಗಲ್ಲಿಗೆ ಸೌದೆಹೊರೆ ಒರಗಿಸಿ ದಣಿವಾರಿಸಿಕೊಂಡು, ಒಂದು ಕ್ಷಣ ಇಲ್ಲಿ ಕೂತುಕೊಂಡು ಈ ಬಾವಿಯಿಂದ ಒಂದು ಗುಟುಕು ನೀರು ಕುಡಿದು, ತಿರುಗಿ ಹೊರೆ ಹೊತ್ತುಕೊಂಡು ಪೇಟೆಗೆ ಹೋಗುತ್ತಾರೆ." ಅದು ಮುತ್ತನ ಪಾರಮಾರ್ಥಿಕತೆ. ಅವನು ನಿರಕ್ಷರಕುಕ್ಷಿ. ಹೆಂಡಕುಡುಕ. ಹೊಟ್ಟೆಗಿಲ್ಲದ ಬಡವ. ಮುದುಕ. ಆದರೆ ಅವನ ಹೃದಯಸಂಪತ್ತು ! ಮೈಮುರಿದುಕೊಂಡು ಹಳ್ಳಗಳನ್ನಗೆದ ; ಕಲ್ಲುಗಳನ್ನೆತ್ತಿ ನೆಟ್ಟ ; ಆ ಕಲ್ಲು ಸಾಗಿಸುವುದು ತನ್ನ ಕೈಯಿಂದಾಗದ ಕೆಲಸವಾದ ಕಾರಣ ಬಂಡಿ ಬಾಡಿಗೆಗಾಗಿ ಹಣ ಬೇಡಿದ. ಅವನ ಶ್ರದ್ಧೆ ಪರಿಶ್ರಮಗಳ

ಪಕ್ಕದಲ್ಲಿ ಆ ಹಣ ತರಗೆಲೆ. ಆವನಿಗೆ ಬಂದ ಲಾಭವೇನು ? ಹಳ್ಳಿಯ ಜನ ಅಲ್ಲಿ ಹೊರೆಯನ್ನೊರಗಿಸಿ ಕುಳಿತು ಉಸ್ಸಪ್ಪ ! ಎಂದು ಆಯಾಸ ಕಳೆದಾಗ ಮುತ್ತನ ಮುಖ ಆತ್ಮತೃಪ್ತಿಯ ಪ್ರತಿಬಿಂಬವಾಗುತ್ತದೆ. ಮುತ್ತನು ಈ ತೃಪ್ತಿಗಾಗಿ ಬಹು ವರ್ಷಗಳ ಕಾಲ ಚಿಂತಿಸಿ ತಾಳ್ಮೆಯಿಂದ ದುಡಿದ. ಅಂಥ ನಿಸ್ಸ್ವಾರ್ಥ ಧರ್ಮ ಚಿಂತನೆಯೇ ಪಾರಮಾರ್ಥಿಕತೆ. ಅದನ್ನೇ ಇಂಗ್ಲಿಷಿನಲ್ಲಿ "ಐಡಿಯಲಿಸ್ಮ್" Idealism ಎಂದು ಕರೆಯುವುದು. ಇಂಥಾ ನಿಸ್ಸ್ವಾರ್ಥ ಧರ್ಮ ನಮ್ಮ ದೇಶದಲ್ಲಿ ಸಾರ್ವಜನಿಕವಾಗಿದ್ದ ಕಾಲ ಒಂದಿತ್ತು. ಅದರ ಗುರುತುಗಳು ಹಳ್ಳಿ ಹಳ್ಳಿಯಲ್ಲೂ ಈಗಲೂ ಕಾಣಬರುತ್ತಿವೆ—ಆನುಗಲ್ಲುಗಳಲ್ಲಿ, ಅರವಟ್ಟಿಗೆ ತೊಟ್ಟಿಗಳಲ್ಲಿ, ಗುಡಿಗಳಲ್ಲಿ, ಮಂಟಪಗಳಲ್ಲಿ, ಗುಂಡುತೋಪುಗಳಲ್ಲಿ, ಹಸುವಿನ ಮಂದೆಗಳ ಉಜ್ಜುಗಂಬಗಳಲ್ಲಿ, ಅರಳೀ ಕಟ್ಟೆಗಳಲ್ಲಿ. ಇವುಗಳನ್ನು ಕಟ್ಟಿದವರು ಯಾರು ? ಯಾರು ಬಲ್ಲರು ? ಅದಕ್ಕೆ ಹಣ ಕೊಟ್ಟವರು ಯಾರು ? ಕೊಡುವವರಿದ್ದಿದ್ದರೆ ಕೈಚಾಚುತ್ತಿದ್ದವರ್ಯಾರು ? ಆಗಿನ ಜನಕ್ಕೆ ಒಂದು ದೊಡ್ಡ ನಂಬಿಕೆ ಇತ್ತು. ಮನುಷ್ಯನ ಜೀವನ ಅವನಿಗೆ ದೇವರಿಂದ ಬಂದ ವರ. ಅದನ್ನು ಸಾರ್ಥಕಪಡಿಸುವುದು ಹೇಗೆ ?—ಎಂಬುದೊಂದೇ ಅವರಿಗಿದ್ದ ಚಿಂತೆ. ಅದೇ ಪಾರಮಾರ್ಥಿಕೆಯ ಪ್ರಥಮ ಚಿಹ್ನೆ. ಯಾವ ಜನದಲ್ಲಿ ಪರಮಾರ್ಥ ಶ್ರದ್ಧೆಯಿಲ್ಲವೋ ಅವರ ಪಾಲಿಗೆ ಕಾವ್ಯವೆಂಬುದು ಒಂದು ಬಗೆಯ ದೊಂಬರಾಟ. ನಸ್ಯಾಭ್ಯಾಸಿಯ ಮೂಗಿಗೆ ನಸ್ಯ ಹೇಗೋ, ಮೈ ನವೆತದವನಿಗೆ ತುರಸಿಕೆ ಹೇಗೋ—ಪಾರಮಾರ್ಥಿಕವಿಲ್ಲದವನಿಗೆ ಕಾವ್ಯ ಹಾಗೆ—ಒಂದು ಕ್ಷಣದ ತೀಟೆ ತೀರಿಕೆ, ಒಂದು ಕಚಗುಳಿ, ಅಷ್ಟೇ.

ಕನ್ನಡದಲ್ಲಿ ಮಹಾ ಸಾಹಿತ್ಯವಾಗಬೇಕೆನ್ನುವವರು ಮೊದಲು ಜನತೆಯಲ್ಲಿ ಅದಕ್ಕಾಗಿ ಸಿದ್ಧತೆಯನ್ನುಂಟುಮಾಡಲು ಶ್ರಮಿಸಲಿ. ಆ ಸಿದ್ಧತೆಯು, (1) ಲೋಕ ವಸ್ತು ಪರಿಜ್ಞಾನ, (2) ವಿಮರ್ಶನ ಪ್ರವೃತ್ತಿ, (3) ಪರಮಾರ್ಥ ದೃಷ್ಟಿ—ಎಂಬ ಮೂರು ಆಂತರಂಗ ಸಾಧನಗಳನ್ನು ಜನಸಾಮಾನ್ಯದಲ್ಲಿ ಪ್ರಚಾರಪಡಿಸುವುದರಿಂದ ಉಂಟಾಗತಕ್ಕದ್ದು. ನಮ್ಮ ದೇಶದಲ್ಲಿ ಈಗ ಭಾಷೋತ್ಸಾಹ ಕೆರಳಿ ತವಕಪಡುತ್ತಿದೆ. ಇಂಥಾ ಸಮಯದಲ್ಲಿ ಉತ್ಸಾಹವನ್ನು ಕಾರ್ಯರೂಪಕ್ಕೆ ತಿರುಗಿಸುವ ಯೋಜನೆ ಸಾಧುವೆಂದು ಭಾವಿಸಿ ನಾನು ಇಷ್ಟು ಹೇಳಿದ್ದೇನೆ.

ಪದ್ಯ ಹೆಣೆಯುವವರೂ ಕಥೆ ಕಟ್ಟುವವರೂ ತಾವು ಮಾಡಿದ್ದೇ ಸಾಹಿತ್ಯ, ತಾವು ಆಡಿದ್ದೇ ಲೋಕವಿಧಾಯಕ, ತಮ್ಮ ಉಸಿರೇ ಜನಕ್ಕೆ ಗಾಳಿ ಬೀಸು—ಎಂಬಂತೆ ಸ್ವಪ್ರಶಂಸೆ ಮಾಡಿಕೊಳ್ಳುವುದುಂಟು. ಇಂಥಾ ಸ್ವಾಭಿಮಾನ ಎಲ್ಲ ಕಸಬುಗಳವರಿಗೂ ಸಹಜವೇ. ಆದರೆ ಕವಿಕಥಕರ ಉತ್ಪ್ರೇಕ್ಷೆಯಲ್ಲಿ ಒಂದು ಅಪಾಯ ಹುಟ್ಟುಂಟು. ಅವರ ಕಂಠಧ್ವನಿಯಲ್ಲಿ ರಾಗವೂ ವಾಕ್ಸರಣಿಯಲ್ಲಿ ಚಮತ್ಕಾರವೂ ಇರುತ್ತವೆ. ಅವು ನಮ್ಮನ್ನು ಮರುಳುಮಾಡುತ್ತವೆ. ನಾವು ಎಚ್ಚರದಿಂದ ಒಂದಂಶವನ್ನು ಜ್ಞಾಪಕದಲ್ಲಿರಿಸಿಕೊಳ್ಳಬೇಕು : ಮನುಷ್ಯನ ಯೋಗ್ಯ ಜೀವನಕ್ಕೆ ಬೇಕಾದ ವಸ್ತುಗಳು ನೂರುಂಟು. ಕಾವ್ಯ ಕಥೆ ನಾಟಕಗಳು ಆ ನೂರರಲ್ಲೊಂದಂಶ. ಮತ್ತು ಆ ಒಂದು

ಚೆನ್ನಾಗಿರಬೇಕಾದರೆ ಮಿಕ್ಕ ತೊಂಬತ್ತೊಂಬತ್ತೂ ಚೆನ್ನಾಗಿರಬೇಕು. ಕಾವ್ಯ ಕಥೆಗಳಿಗೆ ನಾವು ಮನಸೋತು ಮಿಕ್ಕ ಸಾಹಿತ್ಯವನ್ನೂ ಮಿಕ್ಕ ಜೀವಿತ ವ್ಯಾಪಾರಗಳನ್ನೂ ಮರೆತಲ್ಲಿ, ಅಥವಾ ಕಡೆಗಣಿಸಿದಲ್ಲಿ, ಮಿಕ್ಕೆಲ್ಲವೂ ನಷ್ಟವಾಗುವುದಲ್ಲದೆ ಕಥಾ ಕಾವ್ಯ ಸಾಹಿತ್ಯದ ಪರಮ ಪ್ರಯೋಜನವೂ ನಮಗೆ ದಕ್ಕದೆ ಹೋದೀತು. "ಸರಸಕವಿತಾ ಯದ್ಯಸ್ತಿ ರಾಜ್ಯೇನ ಕಿಮ್"—ಎಂಬುದು ಖಾಲಿ ಉತ್ಪ್ರೇಕ್ಷೆ. ರಾಜ್ಯ ಸರಿಯಾಗಿದ್ದರಲ್ಲವೆ ಪ್ರಾಣ ; ಪ್ರಾಣವಿದ್ದರಲ್ಲವೆ ಕವಿತೆ ?

ಜನಸತ್ತ್ವದಿಂದ ಜೀವಂತ ಸಾಹಿತ್ಯ–ಎಂದಲ್ಲವೆ ನನ್ನ ಮೂಲ ಸೂತ್ರ ? ಜನಸತ್ತ್ವವು ಸಾವಿರ ರೂಪಗಳಲ್ಲಿ ಪ್ರಕಾಶವಾಗತಕ್ಕದ್ದು. ವಿದ್ಯಾಪ್ರಾಚುರ್ಯದಲ್ಲಿ, ರಾಜ್ಯ ದಕ್ಷತೆಯಲ್ಲಿ, ರಾಷ್ಟ್ರಕನಿಷ್ಠೆಯಲ್ಲಿ, ಸಾರ್ವಜನಿಕ ಯೋಜನೆಗಳಲ್ಲಿ, ಸಮಾಜ ಸೌಹಾರ್ದದಲ್ಲಿ, ವಿಜ್ಞಾನ ಸಂಧಾನಗಳಲ್ಲಿ, ವ್ಯವಸಾಯ ವಾಣಿಜ್ಯಗಳಲ್ಲಿ, ಶಿಲ್ಪ ಚಾತುರಿಯಲ್ಲಿ, ಸಂಪದುತ್ಪತ್ತಿಯಲ್ಲಿ, ವಿದೇಶ ವ್ಯವಹಾರಗಳಲ್ಲಿ, ಸಂಸ್ಕೃತಿ ವಿಸ್ತಾರದಲ್ಲಿ, ವಿವಿಧ ಪೌರುಷ ಸಾಹಸಗಳಲ್ಲಿ—ಈ ನೂರಾರು ಕಾಲುವೆಗಳಲ್ಲಿ ಹರಿಯಬೇಕಾದದ್ದು ಜನಪದ ಚೈತನ್ಯ. ಅದು ಅನ್ಯಾನುಕರಣ ಮಾತ್ರವಲ್ಲ ; ಅದು ಸ್ವತಂತ್ರ ನಿರ್ಮಾಣ. ಅದು ಎಲ್ಲ ಜೀವನಕ್ಷೇತ್ರಗಳಲ್ಲಿಯೂ ಸ್ವತಂತ್ರವಾಗಿ ಉಕ್ಕಿ ಹೊರಹೊಮ್ಮುತ್ತಿದ್ದರೆ ಆಗ ಸಾಹಿತ್ಯವೂ ಸ್ವತಂತ್ರವಾಗಿ ಉಕ್ಕಿ ಹೊರಹೊಮ್ಮೀತು. ಆದದ್ದರಿಂದ ಸಾಹಿತ್ಯ ಕುಶಲಕ್ಕಾಗಿ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಕುಶಲವನ್ನು ಸಾಧಿಸೋಣ, ಸಾಮಾನ್ಯಜೀವನ ಬೆಳಗಿದಂತೆ ಸಾಹಿತ್ಯ ಬೆಳಗುತ್ತದೆ.

ಇಂದಿನ ಬೆಳೆ

ಸಂಖ್ಯಾಧಿಕ್ಯದ ದೃಷ್ಟಿಯಿಂದ ನಮ್ಮಲ್ಲಿ ಗಮನಕ್ಕೆ ಬರತಕ್ಕ ಆಧುನಿಕ ಕಾವ್ಯ ಜಾತಿಗಳು ಮುಖ್ಯವಾಗಿ ನಾಲ್ಕೈದು :

(1) ಸಣ್ಣ ಕಥೆಗಳು,
(2) ಸಾಮಾನ್ಯ ದೊಡ್ಡ ಕಥೆ (ನಾವೆಲೆಟ್),
(3) ದೊಡ್ಡ ದೊಡ್ಡ ಕಥೆ (ನಾವೆಲ್),
(4) ಪದ್ಯ,
(5) ನಾಟಕ.

ಕಥೆ, ಬೃಹತ್ಕಥೆ

ಸಣ್ಣ ಕಥೆಗಳು ಮಳೆಗಾಲದ ಹಳ್ಳತೊರೆಗಳಂತೆ ಮೇಲೆ ಮೇಲೆ ಬರುತ್ತಿವೆ—ಮಾಸಪತ್ರಿಕೆಗಳಲ್ಲಿ, ವಾರಪತ್ರಿಕೆಗಳಲ್ಲಿ, ದಿನಪತ್ರಿಕೆಗಳಲ್ಲಿ. ಅವುಗಳಲ್ಲಿ ಸ್ವಾರಸ್ಯಾಂಶ ಅಷ್ಟಿಷ್ಟು ಉಂಟು ; ಆದರೆ ಒಂದು ಮಟ್ಟವಿಲ್ಲ. ಇಂಥಾ ಕೃತಿಗಳಲ್ಲಿ ಏರುತಗ್ಗುಗಳಿರುವುದು ಅನಿವಾರ್ಯವೇ ಆದರೂ, ಸಂಪಾದಕರು ಒಂದು (ಮಿನಿಮಮ್)

ತಳಮಟ್ಟವನ್ನಾದರೂ ಗೊತ್ತುಮಾಡಿ ಕಾಪಾಡದೆ ಹೋದರೆ ಈ ಜಾತಿಯ ಸಾಹಿತ್ಯದ ಒಟ್ಟು ಹೆಸರಿಗೇ ಇನ್ನು ಕೊಂಚ ಕಾಲದಲ್ಲಿ ಗೌರವ ತಗ್ಗೀತು. ಇಂಗ್ಲಿಷಿನಲ್ಲಿ ಹಾಗಾಗಲು ಮೊದಲಾಗಿದೆಯೆನ್ನುತ್ತಾರೆ.

ಪುಟ 100ಕ್ಕೆ ಮೇಲ್ಪಟ್ಟು 300ರ ವರೆಗಿನ ಗಾತ್ರದ ಕಥೆಯನ್ನು ಸಾಮಾನ್ಯ ದೊಡ್ಡ ಕಥೆ—ನಾವೆಲೆಟ್—ಎಂದಿಟ್ಟುಕೊಳ್ಳಬಹುದು. ಇಂಥಾದ್ದು ಕನ್ನಡದಲ್ಲಿ ವರ್ಷಕ್ಕೆ ಸರಾಸರಿ 4–5 ಬರುತ್ತಿವೆಯೆಂದು ನನ್ನ ಅಂದಾಜು.

ಎರಡು–ಮೂರು ಸಂಪುಟ (ವಾಲ್ಯೂಮ್)ಗಳಷ್ಟು ವಿಸ್ತಾರವಾದ ಕಥೆಯನ್ನು ದೊಡ್ಡ ದೊಡ್ಡ ಕಥೆ ಎನ್ನಬಹುದು. ಇಂಥಾ ಬೃಹತ್ಕಥೆ ಅಥವಾ ನಾವೆಲ್ ವರ್ಷಕ್ಕೆ ಒಂದೋ. ಎರಡು ವರ್ಷಕ್ಕೆ ಒಂದೋ ಬರುತ್ತಿದೆ.

ಈ ಬಗೆಬಗೆಯ ಕಥೆಗಳ ವಸ್ತುವು ನಮ್ಮ ಜೀವನದಲ್ಲಿಯ ನಾನಾ ವಿಕಾರಗಳು. ಒಂದು ಕುಟುಂಬದಲ್ಲಿಯ ಯಾವುದೋ ವಿಶೇಷ ಘಟನೆ. ಒಬ್ಬರಿಬ್ಬರ ಅವಿಚಾರ ಚರ್ಯೆ, ಒಂದಾನೊಂದು ಸಂದರ್ಭದಿಂದ ಬಾಂಧವ್ಯದಲ್ಲಾದ ಅಸ್ತವ್ಯಸ್ತಗಳು—ಹೀಗೆ ಸಹಸ್ರಮುಖ ಸಮಾಜದ ಒಂದಾನೊಂದು ಮುಖದ ಚಿತ್ರಣವೇ ಕಥೆ. ಕಥಾವಸ್ತುವಿನ ಬೀಜವು ಸಾಮಾನ್ಯವಾಗಿ ಯೌವನದ ಪ್ರಣಯಕ್ಕೂ ಪೂರ್ವಾ-ಚಾರಕ್ಕೂ ಆಗುವ ಘರ್ಷಣೆ : ಸಂಸಾರದೊಳಗಣ ಮತ್ಸರ ನಿಷ್ಠುರಗಳು ; ಸ್ತ್ರೀಯರ ಪುಂ-ಸಮಾನ ಸ್ವಾತಂತ್ರ್ಯವಾದ : ಬಲಿಷ್ಠರಿಂದ ದುರ್ಬಲರಿಗೆ— ಮುಖ್ಯವಾಗಿ ವಿತಂತುಗಳಿಗೆ. ಕೂಲಿಕಾರರಿಗೆ. ವರ್ಣಬಾಹ್ಯರಿಗೆ—ಆಗುತ್ತಿರುವ. ಅಥವಾ ಆಗುತ್ತಿವೆಯೆಂಬಂತೆ ತೋರುವ. ಪೀಡೆ ಸಂಕಟಗಳು. ಇಂಥ ವಿಷಮ ಸಂದರ್ಭ ವಿಸ್ತರಣೆಗಳೇ ಕಥೆ. ದೊಡ್ಡ ಕಥೆ. ದೊಡ್ಡ ದೊಡ್ಡ ಕಥೆ. ಮೊದಮೊದಲಿನ ಹತ್ತಿಪ್ಪತ್ತು ಗ್ರಂಥಗಳಲ್ಲಿ ಇಂಥ ಕಲ್ಪನೆಗಳು ನವೀನವೆಂದು ತೋರಿ ರುಚಿಸುತ್ತವೆ. ಆದರೆ ಇಂಥ ಕಲ್ಪನೆಗಳ ವೈವಿಧ್ಯಕ್ಕೂ ಒಂದು ಮಿತಿಯುಂಟು. ಕಥೆಯ ಪಾತ್ರಗಳನ್ನೂ ಸನ್ನಿವೇಶಗಳನ್ನೂ ಅಷ್ಟಿಷ್ಟು ತಿರುಗುಮುರುಗು ನೋಡಿ. ಹೊಸ ರಂಗು ಕಟ್ಟುವ ಉಪಾಯಕ್ಕೂ ಮಿತಿಯುಂಟು. ಕೊಂಚ ಕಾಲದ ತರುವಾಯ ಬರುವ ಕಥಾ ಸಂವಿಧಾನಗಳು ಚರ್ವಿತಚರ್ವಣವೆನಿಸುತ್ತವೆ. ಹಳಸಲು ಕಥೆ ಯಾರಿಗೆ ಬೇಕು ? ಹೊಸ ಹೊಸ ಕಥಾವಸ್ತು ಬರುವುದು ಜನಜೀವನದಿಂದ. ಜೀವನ ಹೊಸ ಹೊಸದಾಗುತ್ತಿದ್ದರೆ ಕಥಾಕಲ್ಪನೆಯೂ ಹೊಸ ಹೊಸದಾದೀತು.

ಈ ಸಂದರ್ಭದಲ್ಲಿ ತರುಣ ಉಮೇದುವಾರರಿಗಾಗಿ ಒಂದು ಎಚ್ಚರಿಕೆ ಸರಿಯೆಂದೆನಿಸುತ್ತದೆ. ಕಥಾಲೇಖನ ಸುಲಭವೆಂದು ಕೆಲವರು ತಿಳಿದುಕೊಂಡಿರುವ ಹಾಗೆ ಕಾಣುತ್ತದೆ. ಅದು ಕಷ್ಟದ ಕಾರ್ಯವೆಂದು ನನಗೆ ಬಂದಿರುವ ತಿಳಿವಳಿಕೆ. ಅದಕ್ಕೆ ಮೊದಲು ಬೇಕಾದದ್ದು ಲೋಕ ಜೀವನದ ಮನನಗ್ರಹಣ. ಜೀವನದೊಳಕ್ಕೆ ಆಳವಾಗಿ ಹೋದ ಹೊರತು ಮರ್ಮ ಕಾಣಬಾರದು. ಕಥೆಗೆ ವಸ್ತುವನ್ನು ಆರಿಸಿ

ಕೊಳ್ಳುವುದರಲ್ಲಿ ಈ ಮರ್ಮದೃಷ್ಟಿಯು ಕೆಲಸ ಮುಖ್ಯವಾದದ್ದು. ಬೀದಿಯಲ್ಲಿ ಕಂಡ ಯಾವುದೋ ಘಟನೆಯನ್ನು, ರೈಲಿನಲ್ಲಿ ಕೇಳಿದ ಯಾವುದೋ ಹರಟೆಯನ್ನು, ನೆರೆಹೊರೆಯಲ್ಲಿ ನಡೆದ ಯಾವುದೋ ವಿಕಾರವನ್ನು ವರದಿಮಾಡಿದರೆ ಅದು ಸಾಹಿತ್ಯದ ಮಟ್ಟಕ್ಕೇರುವ ಕಥೆಯಾಗದು. ಕಥಾವಸ್ತುವನ್ನು ಹುಡುಕಿ ಆರಿಸಿಕೊಳ್ಳುವುದೇ ಮೊದಲನೆಯ ಕಷ್ಟ. ಎರಡನೆಯದು, ಅದನ್ನು ಮಿತಪದಗಳಿಂದ ಚಿತ್ರಿಸುವ ನಿಪುಣತೆ. ಜಳ್ಳು ಪದಗಳೂ ಭರ್ತಿ ವಾಕ್ಯಗಳೂ ಆ ಬರವಣಿಗೆಯಿಂದ ದೂರವಾಗಬೇಕು. ಮತ್ತು ನಾನಾ ಪಾತ್ರಗಳೂ ಸನ್ನಿವೇಶಗಳೂ ಪರಸ್ಪರ ಸಂಬದ್ಧವಾಗಿ, ಒಂದೇ ಮೈಕಟ್ಟೆಂದೆನಿಸಬೇಕು. ಸಣ್ಣಕಥೆ ಒಂದು ಕುಶಲಕಲೆ. ಅದು "ಮಿನಿಯೇಚರ್" ಎಂಬ ಸಂಗ್ರಹ ಚಿತ್ರದಂತೆ—ಸೂಕ್ಷ್ಮದಲ್ಲಿ ಸರ್ವಾಂಗ ಪ್ರತಿಬಿಂಬ. ರಿಸ್ಟ್‌ವಾಚ್ ಎಂಬ ಮುಂಗೈ ಗಡಿಯಾರ ನೋಟಕ್ಕೆ ಸಣ್ಣದು. ಅದರೊಳಗಿನ ಯಂತ್ರಯೋಜನೆ ಸುಲಭವೆ ? ಸಣ್ಣ ಕಥೆಯ ಕೆಲಸ ಅಂಥಾದ್ದು.

ಒಟ್ಟಿನಲ್ಲಿ. ಕಥಾ ಸಾಹಿತ್ಯದ ಬೆಳೆ ನಮ್ಮಲ್ಲಿ ಹುಲುಸಾಗಿದೆ. ಆ ರಾಶಿಯಲ್ಲಿ ಬಹುಭಾಗ ಜನ ಮೆಚ್ಚಿಕೊಂಡದ್ದಾಗಿರಬೇಕು. ಓದುವ ಕುತೂಹಲವುಳ್ಳವರು ಇರುವುದನ್ನು ತಾನೆ ಓದಬೇಕು ? ಪರೀಕ್ಷೆಯನ್ನು ಅತಿಯಾಗಿ ಮಾಡಿದರೆ ಅವರ ಕೈಗೆ ಯಾವುದೂ ಇಲ್ಲದೆ ಹೋದೀತು. ಆದ್ದರಿಂದ ನಮ್ಮ ಜನದ ಕೃತಜ್ಞತೆ ಕಥಕರಿಗೆ ಸುಲಭವಾಗಿಯೇ ದೊರೆಯುವಂತಿದೆ. ಈ ಮಾತು ಹೇಳಿದ್ದರಿಂದ ನಾನು ಇರುವ ಗುಣವನ್ನು ಗಣಿಸುತ್ತಿಲ್ಲವೆಂದು ಯಾರೂ ಭಾವಿಸಬಾರದು. ನಿಜವಾಗಿ ರುಚಿವಂತವಾದ ಕಥಾಕೃತಿ ನಮ್ಮಲ್ಲಿ ಹುಟ್ಟುತ್ತಿದೆ. ವಿಚಾರಕಾರಕವಾದ ಕಥಾ ಕಲ್ಪನೆಗಳೂ ಆಗಾಗ ಬರುತ್ತಿವೆ. ಜೀವನೋನ್ನತಿಯ ದರ್ಶನವೂ ಕೆಲವು ಕಾದಂಬರಿಗಳಲ್ಲಿ ದೊರೆಯುತ್ತದೆ. ಇಂಗ್ಲಿಷ್ ಕಾದಂಬರಿಗಳ ಕೆಲವು ವ್ಯಕ್ತಿಗಳು—ಬಾರ್ಕಿಸ್, ಪಿಕ್‌ವಿಕ್. ಪೆಕ್‌ಸ್ನಿಫ್. ಜೂಡ್—ಜನದ ನಿತ್ಯೋದಾಹರಣೆಗಳಾಗಿರುವಂತೆ, ನಮ್ಮಲ್ಲಿಯ ಕಥಾವ್ಯಕ್ತಿಗಳು ನಮ್ಮ ಬಳಕೆಯ ಮಾತಿನಲ್ಲಿ ಇನ್ನೂ ಸ್ಥಾನ ಪಡೆದುಕೊಂಡಿಲ್ಲ. ಜನ ಓದಿದರೆ ತಾನೆ ಕಥಾವ್ಯಕ್ತಿಗೆ ಪ್ರಸಿದ್ಧಿಯೋ ಅಪಪ್ರಸಿದ್ಧಿಯೋ ಬರುವುದು ? ಹೀಗೆ ನಮ್ಮ ಕಲಾಕೃತಿಗಳ ಯೋಗ್ಯತೆಯನ್ನು ಜನಾದರಣೆಯ ದೃಷ್ಟಿಯಿಂದ ನಿಶ್ಚಯಮಾಡಲು ಇನ್ನೂ ಕಾಲ ಬಂದಿಲ್ಲ.

ಒಂದು ಮಹೋಪಕಾರವಂತೂ ನಮ್ಮ ಸಾಹಿತ್ಯಕ್ಕೆ ಕಥಾಪ್ರಾಚುರ್ಯದಿಂದ ಆಗುತ್ತಿದೆ. ಅದು ಜನತೆಯಲ್ಲಿ ವಾಚನಾಭಿರುಚಿಯ ಉತ್ಪಾದನೆ. ಹಿಂದೆ ಯಾರು "ನಮಗ್ಯಾಕೆ ಪುಸ್ತಕ ?" ಎಂದು ಕೇಳುತ್ತಿದ್ದರೋ ಅಂಥವರು ಈ ಹೊತ್ತು ಕಥಾ ಕುತೂಹಲದಿಂದಲಾದರೂ ಪುಸ್ತಕ ನೋಡೋಣವೆನ್ನುತ್ತಾರೆ ; ಸಾಲವಾಗಿಯಾದರೂ ಪುಸ್ತಕವನ್ನು ಬಯಸುತ್ತಾರೆ. ಇಂದು ಬೇಸರ ನೀಗುವುದಕ್ಕೆಂದು ಪ್ರಾರಂಭವಾದ ಅವರ ಅಭ್ಯಾಸ ನಾಳೆಯೋ ನಾಳಿದ್ದೋ ಅವರನ್ನು "ಟುಷ್ ಥಾಷ್" ಜಾತಿಯ ಸಾಹಿತ್ಯದಿಂದ ಗಂಭೀರ ಜಾತಿಯ ಸಾಹಿತ್ಯಕ್ಕೆ ಕರೆತಂದೀತೆಂದು ಭರವಸೆ ತೋರುತ್ತದೆ.

ಪದ್ಯ—ನಾಟಕ

ಪದ್ಯಸಾಹಿತ್ಯ ನಾಟಕಸಾಹಿತ್ಯಗಳನ್ನು ಕುರಿತು ಟೀಕಿಸುವ ಅಧಿಕಾರ ನನಗಿಲ್ಲ. ನನಗೆ ಹಳೆಯ ಸಂಪ್ರದಾಯದಿಂದ ಬಿಡುಗಡೆಯಾಗಿಲ್ಲ. ಕ್ಲಾಸಿಕಲ್ ಎಂಬ ಪೂರ್ವ ಸಂಪ್ರದಾಯದ ವಿಶೇಷಲಕ್ಷಣಗಳು ಎರಡು : ಮೊದಲನೆಯದು ರೂಪಬಂಧ : ಎರಡನೆಯದು ಭಾವಪ್ರಸನ್ನತೆ. ಮೊದಲಿನಲ್ಲಿ ಮಾತಿನ ಸೊಗಸೂ ಧಾಟಿಯೂ, ಅದರ ನಾದಸುಖವೂ ಗತಿನಿಯತಿಯೂ, ಕಿವಿಯನ್ನು ಒಡಿದು ಒಲಿಸಿಕೊಳ್ಳ ಬಲ್ಲದ್ದಾಗಿರಬೇಕು. ಬಾಯಿತುಂಬಿ ಬರುವ ನುಡಿಗಟ್ಟಿನಲ್ಲಿ ಭಾವ ತುಂಬಿಬರುತ್ತ ದೆಂಬ ಭರವಸೆಯೇನೂ ಇಲ್ಲ. ನಮ್ಮ ಹಳೆಯ ಕಾವ್ಯಗಳಲ್ಲಿ ಈ ನ್ಯೂನತೆ ವಿರಳವಲ್ಲ. ಆದರೂ ಪದಬಂಧದಲ್ಲಿ ಗಾಂಭೀರ್ಯ ಸೌಂದರ್ಯಗಳೆಂಬ ಗುಣಗಳುಂಟೆಂಬುದನ್ನು ಸಾಂಪ್ರದಾಯಿಕರು ನಂಬಿರುತ್ತಾರೆ.

ಎರಡನೆಯದಾಗಿ. ಪದ್ಯಾವಳಿಯನ್ನು ಎರಡು ಸಾರಿ ಓದಿದ ಮೇಲಾದರೂ ಅದು ಅಳುವೋ ನಗುವೋ, ಕಿರಿಚೋ, ಗರ್ಜನೆಯೋ, ರಾಗವೋ, ತೇಗೋ ಮನಸ್ಸಿಗೆ ತೋರಬೇಕು. ಕವಿತಾರ್ಥದ ಸ್ಪಷ್ಟತೆ ಅಂಗಡಿಯ ಸರಕಿನ ಪಟ್ಟಿಯಷ್ಟು ಸ್ಪಷ್ಟ ವಾಗಿರಲಾರದು : ಏಕೆಂದರೆ ಕವಿತೆಯ ಸರಕು ಸೂಕ್ಷ್ಮತರವಾದದ್ದು. ಆದರೂ ಕವಿತೆಯಲ್ಲಿ ಕಾಣುವ ಚಿತ್ರದಲ್ಲಿ ಎಮ್ಮೆಯ ಕೊಂಬೂ ಆನೆಯ ಸೊಂಡಿಲೂ ಮೋಡದ ಅಂಚೂ ಬೆಟ್ಟದ ದಟ್ಟವೂ ಸೇರಿಕೊಂಡಿದ್ದರೆ ಭಾವಗ್ರಹಣ ಕಷ್ಟವಾಗು ತ್ತದೆ. ಇದು ಸಾಂಪ್ರದಾಯಿಕರ ಮಾತು. ಆದರೆ ನಮ್ಮ ನವ್ಯಕಾವ್ಯದಲ್ಲಿ ರಸವಿಲ್ಲವೆಂದಾಗಲಿ ಭಾವವಿಲ್ಲವೆಂದಾಗಲಿ ನಾನು ಸೂಚಿಸುತ್ತಿಲ್ಲ. ಎಷ್ಟೋ ನೂತನ ಕವನಗಳೂ ಗೀತೆಗಳೂ ಜನಪ್ರಿಯವಾಗಿರುವುದನ್ನು ನಾನು ನೋಡಿ ಸಂತೋಷ ಪಟ್ಟಿದ್ದೇನೆ. ಅವು ನನಗೂ ಕೂಡ ಕೊಂಚ ಕೊಂಚ ಅರ್ಥವಾದಂತೆ ಭಾಸವಾಗಿದೆ.

ನಾಟಕ ರಚನೆಯ ವಿಚಾರವೂ ಹೀಗೆಯೇ. ಈಚೆಗೆ ಏಕಾಂಕ ನಾಟಕಗಳು ಹೆಚ್ಚುತ್ತಿವೆ. ಸಣ್ಣ ಕಥೆಯಂತೆಯೇ ಏಕಾಂಕ ನಾಟಕ. ಆಕಾರದಲ್ಲಿ ಚಿಕ್ಕದು : ಮೇಲ್ನೋಟಕ್ಕೆ ಸರಳ : ಯಶಸ್ವಿಯಾಗಲು ಮಾತ್ರ ಬಹುಪ್ರಯಾಸವನ್ನು ಅಪೇಕ್ಷಿಸುತ್ತದೆ.

ನಾಟಕವಾಗಲಿ, ಪದ್ಯವಾಗಲಿ. ಕಥೆಯಾಗಲಿ. ಬೃಹತ್ಕಥೆಯಾಗಲಿ—ಅದರ ವಸ್ತು ಏನೇ ಇರಲಿ. ಭಾವವೆಂಥದೇ ಇರಲಿ,—ಒಂದು ಮೂರ್ತಿ ಅಲ್ಲಿ ಎದ್ದು ಕಾಣುತ್ತಿದೆಯೆ ? ಅದು ವಾಸ್ತವಿಕವೆನ್ನಿಸುವಂತಿದೆಯೆ ? ಇವೆರಡೇ ನಿರ್ಣಾಯಕ ಪ್ರಶ್ನೆಗಳು. ಒಂದು ಗೊತ್ತಾದ ಆಕಾರ ಮುಂದೆ ನಿಲ್ಲಬೇಕು. ಮತ್ತು ಅದರ ಅಂಗಾಂಗಗಳಲ್ಲಿ ಹೊಂದಾಣಿಕೆ ಇರಬೇಕು. ಇವೆರಡು ಗುಣಗಳೂ ಕಲ್ಪನೆಯಲ್ಲಿ ತೋರಿಬರಬೇಕಾದರೆ ಲೇಖಕನು ಪ್ರಯಾಸಪಡಬೇಕು. ತನ್ನ ಕೈಕೆಲಸವನ್ನು ತಾನೇ ನಿರಭಿಮಾನಿಯಾದ ಕಣ್ಣಿಂದ ನೋಡಬೇಕು. ಬೇಸರಪಡದ ತಾಳ್ಮೆಯಿಂದ ತಿದ್ದಬೇಕು : ಮತ್ತೆ ನೋಡಬೇಕು : ಮತ್ತೆ ತಿದ್ದಬೇಕು. ಇದೇ ಕಲಾಕೃತದಲ್ಲಿ ಅಂತಸ್ಸಾಕ್ಷಿ ವಿಧೇಯತೆ (Conscience).

ರುಚ್ಯ ಸಾಹಿತ್ಯ—ಮಹಾ ಸಾಹಿತ್ಯ

ಸಮಗ್ರವೃತ್ತಿಯಿಂದ ನಾನು ಬಿನ್ನಯಿಸುವ ಮಾತು ಇಷ್ಟು : ಯಾವುದನ್ನು ಇಂಗ್ಲಿಷಿನಲ್ಲಿ "ಇಂಟೆರೆಸ್ಟಿಂಗ್" (Interesting) ಎಂದು ಕರೆಯುತ್ತಾರೋ ಆ ಮನೋರಂಜನೆಯ ಮಟ್ಟದ ತಾತ್ಕಾಲಿಕ ಸಾಹಿತ್ಯ ನಮ್ಮಲ್ಲಿ ಅಷ್ಟಿಷ್ಟು ಹುಟ್ಟಿದೆ, ಹುಟ್ಟುವ ಸೂಚನೆ ಇದೆ. ಅದು ಓದಿ ನೋಡೋಣವೆನ್ನಿಸುವಷ್ಟು ಕುತೂಹಲ ವೆಬ್ಬಿಸುವ ಸಾಹಿತ್ಯ, ಸಾಮಾನ್ಯರಿಗೆ ರುಚಿಸುವ ಲಘು ಸಾಹಿತ್ಯ,—ರುಚ್ಯ ಸಾಹಿತ್ಯ. ಒಂದು ಸಾರಿ ಓದಿದ್ದಾದ ಮೇಲೆ ಗ್ರಂಥವನ್ನು ಮತ್ತೆ ಓದೋಣ, ಇನ್ನೊಂದು ಸಾರಿ, ಮತ್ತೊಂದು ಸಾರಿ ಓದೋಣ ಎಂದೆನ್ನಿಸುವಷ್ಟರ ಸ್ವಾರಸ್ಯ ಅದರಲ್ಲಿದ್ದರೆ ಅವನ್ನು ಚಿರಕಾಲಿಕ ಸಾಹಿತ್ಯ, ಘನಸಾಹಿತ್ಯ. ಎನ್ನಬಹುದು. ಅದೇ ಮಹಾ (Great) ಸಾಹಿತ್ಯ. ಪದೇ ಪದೇ ನೋಡಬೇಕೆಂದೆನ್ನಿಸಿಕೊಳ್ಳುವಂಥ ಘನಸಾಹಿತ್ಯ ನಮ್ಮಲ್ಲಿ ಎಲ್ಲಿಯೋ ಕೊಂಚ ಕಾಣುತ್ತದೆ. ಅದು ಇನ್ನುಮೇಲೆ ಬರಬೇಕಾಗಿದೆ.

ಘನಸಾಹಿತ್ಯವೆಂಬುದನ್ನು ಮತ್ತೆ ಎರಡು ಮೆಟ್ಟಲಾಗಿ ನೋಡಬಹುದು : (1) ಮೂಲಭೂತ ಸಾಹಿತ್ಯ, (2) ಪ್ರತಿಬುದ್ಧ ಸಾಹಿತ್ಯ.

ಮೌಲ ಸಾಹಿತ್ಯವು ಮನುಷ್ಯ ಜೀವನದ ಮಹಾ ಮೇರುಗಳನ್ನು ತೋರಿಸ ಬಲ್ಲದ್ದು : ನಮ್ಮ ವಾಲ್ಮೀಕಿಯ ರಾಮಾಯಣ ವ್ಯಾಸರ ಮಹಾಭಾರತಗಳಂತೆ. ಹೋಮರನ ಇಲಿಯಡ್ (Homer's Iliad) ಕಾವ್ಯವನ್ನೂ ವರ್ಜಿಲನ ಏಯನೆಯಿಡ್ (Virgil's Aeneid) ಕಾವ್ಯವನ್ನೂ ಈ ಜಾತಿಗೆ ಸೇರಿಸ ಬಹುದು. ಅವರೆಲ್ಲ ತಮ್ಮ ತಮ್ಮ ಜನತೆಯ ಕವಿಪರಂಪರೆಗೆ ಮೂಲಪುರುಷರು. ಅವರು ತಮ್ಮ ತಮ್ಮ ಕಾಲದ, ತಮ್ಮ ತಮ್ಮ ದೇಶದ, ಜನಹೃದಯವನ್ನರಿತು, ಅಲ್ಲಲ್ಲಿಯ ಪೂರ್ವ ಚರಿತ್ರೆ ಪುರಾಣಕಥೆಗಳನ್ನು ತಮ್ಮ ಅಂತರಂಗದಲ್ಲಿ ಜೀರ್ಣಿಸಿ ಕೊಂಡು. ಮಾನವ ಜೀವನದ ಪರ್ವತಶಿಖರಗಳನ್ನು ತಮ್ಮ ಜನತೆಗೆ ತೋರಿಸಿದವರು. ಅದು ಮಹದ್ದರ್ಶನ ಸಾಹಿತ್ಯ. ಅವರಿಗಾದ ಮಹತ್ತ್ವದ ದರ್ಶನವೇ ವರಪ್ರಸಾದ. ಅದು ತಪಃಫಲ.

ಪ್ರತಿಬುದ್ಧ ಸಾಹಿತ್ಯವೆಂಬುದು ಮೌಲ ಸಾಹಿತ್ಯದ ಸಂತಾನ : ಕಾಳಿದಾಸ ಭವಭೂತಿಗಳದು ; ಷೇಕ್ಸ್‌ಪಿಯರ್ ಗೆಯ್ಟೆ (Goethe) ಗಳದು. ಮೌಲ ಮಹಾ ಕಾವ್ಯಗಳ ಸ್ಫೂರ್ತಿಯಿಂದ, ಮೌಲಿಕಾಂಶಗಳನ್ನು ವಿಸ್ತರಿಸಿ, ಮಹತ್ತ್ವಾಂಗೀಕಾರ ಮಾಡಿರುವ ಸಾಹಿತ್ಯ ಇದು. ಎಲ್ಲ ದೇಶಗಳಲ್ಲಿಯೂ ಘನಸಾಹಿತ್ಯವೆಂಬುದರಲ್ಲಿ ಅಧಿಕಾಂಶ ಮಹನ್ನಿರ್ಮಿತಿಯದಲ್ಲ, ಮಹದಂಗೀಕಾರದ್ದು. ಈ ಜಾತಿಯ ಕವಿಗಳೂ ಕಥಕರೂ ಜೀವಿತದ ಮಹಾಧ್ಯೇಯಗಳನ್ನು,—ಮಹಾ ಆದರ್ಶಗಳನ್ನು,—ಮೌಲಿಕ ರಿಂದ—ಪೂರ್ವದ ಮಹಾಕವಿಗಳಿಂದ, ಮಹರ್ಷಿಗಳಿಂದ, ದಿವ್ಯಜ್ಞಾನಿಗಳಿಂದ, ತತ್ತ್ವ ದರ್ಶಿಗಳಿಂದ—ಅಂಗೀಕರಿಸಿ, ಆ ಮಹತ್ತನ್ನು ಮನೋಹರಾಕಾರಗಳಲ್ಲಿ ನವನವೀನ

ವಾಗಿ ಚಿತ್ರಿಸಿ, ಆ ಮಹತ್ತ್ವಾಂಶಕ್ಕೆ ಜನಾಂಗೀಕಾರವನ್ನು ಸಂಪಾದಿಸಿ ಕೊಡುತ್ತಾರೆ. ಮಹದ್ದರ್ಶನ ಇವರದಲ್ಲದಿದ್ದರೂ ಮಹತ್ತ್ವದರ್ಶನ ಇವರಿಂದಾಗುವ ಉಪಕಾರ. ಕನ್ನಡದ ಮಹಾಕವಿಗಳು ಈ ಅಂತಸ್ತಿನವರು. ಅವರು ಪ್ರತಿಭಾವಂತರೇ. ಆದರೆ ಆ ಪ್ರತಿಭೆ ಸ್ವತಂತ್ರವಾದದ್ದಕ್ಕಿಂತ ಹೆಚ್ಚಾಗಿ ಮೌಲಾವಲಂಬಿಯಾದದ್ದು.

ಮೂಲ ಸೃಷ್ಟಿ ಪುನಃಪುನಃ ಆಗದು

ವಾಲ್ಮೀಕಿಯೂ ವ್ಯಾಸರೂ ಇದ್ದು ಬಹು ಸಹಸ್ರ ವರ್ಷಗಳಾಗಿವೆಯಲ್ಲ ! ಇಷ್ಟು ದೀರ್ಘಕಾಲದಲ್ಲಿ ಇನ್ನೊಬ್ಬ ವಾಲ್ಮೀಕಿ. ಇನ್ನೊಬ್ಬ ವ್ಯಾಸ ಯಾಕೆ ಹುಟ್ಟಿಲ್ಲ ? ಇದು ಸೋಜಿಗದ ಪ್ರಶ್ನೆಯೇ ಸರಿ. ಅದಕ್ಕೆ ಸಮಾಧಾನ ಬೇಕಾದರೆ ಇನ್ನೊಂದು ಪ್ರಶ್ನೆಯನ್ನು ಹಾಕಿಕೊಳ್ಳಬೇಕು : ಹಿಮವತ್ಪರ್ವತ ಹುಟ್ಟಿ ಎಷ್ಟೋ ಲಕ್ಷ ವರ್ಷಗಳಾಗಿವೆಯಲ್ಲ. ಇನ್ನೊಂದು ಹಿಮಾಲಯ ಏಕೆ ಇನ್ನೂ ಸೃಷ್ಟಿಯಾಗಿಲ್ಲ ? ಗಂಗಾ ನದಿ ಉದ್ಭವಿಸಿ ಎಷ್ಟೋ ಯುಗಗಳಾಗಿವೆಯಲ್ಲ : ಇನ್ನೊಂದು ಗಂಗೆಯಾಗಲಿ ಇನ್ನೊಂದು ಸಿಂಧುವಾಗಲಿ ಏಕೆ ಇನ್ನೂ ತಲೆದೋರಿಲ್ಲ ? ಉತ್ತರವಿಷ್ಟೆ :— ಜಗತ್ಸೃಷ್ಟಿಯ ಆದಿ ನಿರ್ಮಾಣಗಳು ಪುನಃಪುನಃ ಆಗುವುದಿಲ್ಲ. ಹಾಗೆಯೆ ವಾಙ್ಮಯ ಸೃಷ್ಟಿಯಲ್ಲಿ ಕೆಲವು ಮೌಲಿಕ ರಚನೆಗಳು ಪುನಃಪುನಃ ಆಗುವುದಿಲ್ಲ. ಮನುಷ್ಯ ಭಾಷೆಯ ವಿಷಯವನ್ನೇ ನೋಡೋಣ : ನೂರು ನೂರು ವರ್ಷಕ್ಕೋ ಸಾವಿರ ಸಾವಿರ ವರ್ಷಕ್ಕೋ ಒಂದೊಂದು ಹೊಸ ಭಾಷೆ ಹುಟ್ಟಿಕೊಂಡು ಬಂದಿದೆಯೆ ? ಮನುಷ್ಯ ಸೃಷ್ಟಿಯಾದಾಗ ಹುಟ್ಟಿದ ಭಾಷೆಗಳೇ ಬೆಳೆದು ಅಂಗಾಂಗ ಪುಷ್ಟಿಮಾಡಿ ಕೊಂಡು ನಮ್ಮ ಕಾಲಕ್ಕೂ ಬಂದಿವೆ. ಹಳೆಯ ಭಾಷಾ ಸಾಮಗ್ರಿಯೇ ಹೊಸ ಹೊಸ ಪ್ರಯೋಗರೂಪಗಳನ್ನು ತಾಳುತ್ತಿದೆ. ಕಾವ್ಯ ಕಥಾ ವಿಷಯವೂ ಅಷ್ಟೇ. ಮೌಲಿಕ ರಚನೆ ಸಾರ್ವಕಾಲಿಕವಾದದ್ದು. ಅದರ ಪುನರವತರಣ ಹೇಗೆ ಅಸಾಧ್ಯವೋ ಹಾಗೆ ಅನಾವಶ್ಯಕ.

ಎಂದೋ ಹುಟ್ಟಿದ ಮೌಲಿಕ ಕಾವ್ಯವೇ ನಮಗಿರುವ ಮೂಲದ್ರವ್ಯ. ಅದರಲ್ಲಿರುವ ಮಹದ್ದರ್ಶನವೇ ನಮಗಿರುವ ಮೂಲ ಸ್ಫೂರ್ತಿ. ನಾವು ಆ ಮೂಲ ಸಾಮಗ್ರಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದೇವೆ ? ಹೇಗೆ ಬೆಳೆಸುತ್ತಿದ್ದೇವೆ ? ಅದೇ ನಮ್ಮನ್ನೆದುರಿಸುವ ಪ್ರಶ್ನೆ. ಈ ಪ್ರಶ್ನೆಗೆ ಜನದ ಪ್ರತಿಯೊಂದು ತಲೆಮಾರಿ ನವರೂ ಉತ್ತರ ಒದಗಿಸಬೇಕಾಗುತ್ತದೆ. 1962ನೆಯ ಇಸ್ವಿಯವರ ಉತ್ತರವೇನು ?

ಭಾಷಾ ಪರಿಶ್ರಮ

ನನ್ನಲ್ಲಿಗೆ ವರ್ಷಕ್ಕೊಬ್ಬರೋ ಇಬ್ಬರೋ ತರುಣ ಲೇಖಕರು ಬರುವುದುಂಟು. ತಮ್ಮ ಕವನಗಳನ್ನು ತೋರಿಸಿ ಅಭಿಪ್ರಾಯ ಕೇಳುವುದುಂಟು. ನಾನು ಅವರನ್ನು “ ಈ ಪದ್ಯ ಓದುವ ಧಾಟಿ ಹೇಗೆ ? ” ಎಂದು ಕೇಳಿದರೆ ಅವರು “ ನಾನು ಛಂದಸ್ಸು ಕಲಿತಿಲ್ಲ ” ಎನ್ನುತ್ತಾರೆ. “ ಈ ಪದಪ್ರಯೋಗ ಎಲ್ಲಿದೆ ? ” ಎಂದರೆ “ ನಾನ

ಹಳಗನ್ನಡ ಓದಿಲ್ಲ" ಎನ್ನುತ್ತಾರೆ. ನಾನು "ಈ ವಾಕ್ಯದ ಅನ್ವಯ ಹೇಗೆ" ಎಂದರೆ "ನಾನು ವ್ಯಾಕರಣಕ್ಕೆ ಗಮನ ಕೊಟ್ಟಿಲ್ಲ" ಎನ್ನುತ್ತಾರೆ. ಹಾಗಾದರೆ ಅವರ ಕವನದ ಸೊಗಸು ಎಂಥಾದ್ದು ? ಅದು ಯಾವುದೋ ಒಂದು ಮನೋಭಾವದ್ದಂತೆ ! ಇರಲಿ. ಆ ಭಾವ ಅತಿ ಸೂಕ್ಷ್ಮವಾದದ್ದಾದ ಕಾರಣ ನನ್ನ ಗ್ರಹಿಕೆಗೆ ದೊರೆಯಲಾರದ್ದಾಗಿರಬಹುದು. ಆದರೆ ಆ ಒಳ್ಳೆಯ ಭಾವರಸವನ್ನು ನಮ್ಮ ಹಿಡಿತಕ್ಕೆ ತಕ್ಕ ಒಳ್ಳೆಯ ವಾಕ್ಯಪಾತ್ರೆಯಲ್ಲಿ ನಮಗೆ ಕೊಡಬಾರದೆ ? ಕಾವ್ಯರಚನೆ ಒಂದು ಯೋಗ್ಯಕಾರ್ಯವಾದ ಪಕ್ಷಕ್ಕೆ ಅದಕ್ಕಾಗಿ ವ್ಯಾಕರಣ ಛಂದಸ್ಸುಗಳನ್ನು ಕೃಷಿಮಾಡುವುದೂ ಯೋಗ್ಯಕಾರ್ಯವಾಗದೆ ? ಕನ್ನಡ ಕವಿಗಳ ಗುರು ಗದುಗಿನ ನಾರಣಪ್ಪ—

ಪಲಗೆ ಬಳಪವ ಪಿಡಿಯದೊಂದಗ್ಗಳಿಕೆ
ಪದವಿಟ್ಟಳುಪದೊಂದಗ್ಗಳಿಕೆ

ಎಂದು ಸಾಲುಸಾಲಾಗಿ ಜಂಬ ಕೊಚ್ಚಿದ್ದಾನಷ್ಟೆ ? ಆ ಅಗ್ಗಳಿಕೆಗಳ ಸಾಲನ್ನು ನಮ್ಮ ತರುಣರು ಮೇಲ್ಪಂಕ್ತಿ ಮಾಡಿಕೊಂಡಂತೆ ತೋರುತ್ತದೆ. ನಾರಣಪ್ಪನ ಪ್ರತಿಭಾಸಂಪತ್ತಿನಲ್ಲಿ ನೂರರಲ್ಲೊಂದಂಶ ಇವರಿಗಿರುವುದು ಖಂಡಿತವಾದರೆ ನಾವು ಅವರ ಪದ್ಯದ ಕೊಂಕು ಕುಂಟುಗಳನ್ನು ಎಣಿಸಬೇಕಾದದ್ದಿಲ್ಲ. ವಾಸ್ತವವಾಗಿ ನಾರಣಪ್ಪನ ಭಾಷಾ ಪ್ರಭುತ್ವ ಪ್ರಚಂಡವಾದದ್ದು. ಛಂದಸ್ಸು ವ್ಯಾಕರಣಗಳನ್ನು ಆತ ಅರಿಯದವನಲ್ಲ. ಅಗೌರವಿಸಿದವನೂ ಅಲ್ಲ. "ಪದವಿಟ್ಟಳುಪೆ"ನೆಂಬ ಹಟವನ್ನು ಬದಿಗಿಟ್ಟು ಅಲ್ಲಲ್ಲಿ ಒಂದು ಸಲ (ರಿವೈಸ್) ಪುನಃ ಪರಿಷ್ಕಾರ ಮಾಡಿದ್ದಿದ್ದರೆ ಗದುಗಿನ ಭಾರತ ಇನ್ನೂ ಸೊಗಸಾಗುತ್ತಿತ್ತೆನಿಸುತ್ತದೆ.

ಕನ್ನಡದ ಅಭ್ಯುದಯಕ್ಕಾಗಿ ಸಂಘಗಳೂ ಸೌಕರ್ಯಗಳೂ ಹೆಚ್ಚುತ್ತಿವೆ. ಆದರೆ ಕನ್ನಡದಲ್ಲಿ ಪಾಂಡಿತ್ಯ ಕುಗ್ಗುತ್ತಿದೆ. ಹಿಂದಿನ ಕಾಲದ ಪಂಡಿತರಿಗೆ ಪೂರ್ವಕವಿ ಪ್ರಯೋಗಗಳೂ ವ್ಯಾಕರಣ ಛಂದಸ್ಸೂತ್ರಗಳೂ ಹೃದ್ಗತವಾಗಿದ್ದವು. ಅವರೊಡನೆ ಮಾಡಿದ ಒಂದು ಕಾಲುಘಂಟೆಯ ಸಂಭಾಷಣೆಯಿಂದ ಒಂದು ಗ್ರಂಥವನ್ನೋದಿದಷ್ಟು ಪ್ರಯೋಜನ ದೊರೆಯುತ್ತಿತ್ತು. ಅಂಥಾ ಸಾಂಪ್ರದಾಯಿಕ ಪಾಂಡಿತ್ಯವನ್ನು ಅಧಿಕಾರಪ್ರತಿಷ್ಠಿತರು ಉದ್ದೇಶಪೂರ್ವಕವಾಗಿ ಕೊಂದರು. ಈಗ ಹಳಗನ್ನಡ ಸಂಸ್ಕೃತಗಳೆರಡರಲ್ಲೂ ಪ್ರೌಢರಾದ ಅಂಥಾ ಪಂಡಿತರು—ಒಬ್ಬರಿಬ್ಬರು ವೃದ್ಧರನ್ನು ಬಿಟ್ಟರೆ—ಇಲ್ಲವೆಂದೇ ಹೇಳಬಹುದು. ನಮ್ಮ ಸ್ಕೂಲು ಕಾಲೇಜುಗಳ ಪಠ್ಯ ಪುಸ್ತಕದ ವಿಚಕ್ಷಣೆಯೂ ಇದೇ ರೀತಿಯದೇ. ಅಲ್ಲಿ ಪೂರ್ವಕಾವ್ಯಗಳಿಗೆ ಕೊಟ್ಟಿರುವ ಸ್ಥಾನ ತೀರಾ ಸ್ವಲ್ಪದ್ದು. ಗಿಡಕ್ಕೆ ಬೇರು ಹೇಗೋ ಭಾಷೆಗೆ ಪೂರ್ವಕಾವ್ಯ ಹಾಗೆ. ವಿದ್ಯಾಧಿಕಾರಿಗಳಾದವರಿಗೆ ಕನ್ನಡ ಸಾಹಿತ್ಯ ಸೊನ್ನೆಯಾಗಿರುವುದು ಹಾಗಿರಲಿ, ಇಂಗ್ಲಿಷ್ ಭಾಷೆಯ ಗಂಧವಿರುವುದೂ ಕಛೇರಿಯ ಮಾತ್ರದ್ದೇ. ಯಾವ ಒಂದು ಭಾಷೆಯ ಸಾಹಿತ್ಯವನ್ನಾಗಲಿ ಆಳವಾಗಿ ಕಂಡಿರುವವನಿಗೆ ಪ್ರಾಚೀನ ಕಾವ್ಯಗಳ ಬೆಲೆಯೆಷ್ಟರದೆಂಬುದು ಗೊತ್ತಾದೀತು.

ಇದು ಪ್ರಜಾಯುಗ. ಈಗಣ ಮಂತ್ರಿ ಮಹಾಶಯರ ಅಧಿಕಾರ ಯೋಗ್ಯತಾ ಸಂಪತ್ತನ್ನು ಕುರಿತು ಚರ್ಚಿಸುವುದಕ್ಕಿಂತ ಅದನ್ನು ದೇಶದ ಹಣೆಯಬರಹವೆಂದು ಭಾವಿಸುವುದು ಕ್ಷೇಮ. ಈಗ ಭಾಷಾ ಸಾಹಿತ್ಯಗಳಿಗಾಗಿ ಆಗಬೇಕಾಗಿರುವ ಶುಶ್ರೂಷೆ ಯನ್ನು ಜನ ಸ್ವಪ್ರಯತ್ನದಿಂದ ಮಾಡಿಕೊಳ್ಳುವುದು ಕರ್ತವ್ಯವಾಗಿದೆ. ನಮ್ಮಲ್ಲಿ ನೃಪತುಂಗ ಪಂಪ ರನ್ನರ, ಹರಿಹರ ಷಡಕ್ಷರಿ ಲಕ್ಷ್ಮೀಶ ಕುಮಾರವ್ಯಾಸರ, ವಿಶೇಷ ವ್ಯಾಸಂಗಕ್ಕಾಗಿ ಹೆಚ್ಚಿನ ಪ್ರಯತ್ನ ಅವಶ್ಯವಾಗಿದೆ. ನಮ್ಮ ಸಾಹಿತ್ಯದ ಪುನರುಜ್ಜೀ-ವನಕ್ಕಾಗಿ ಬೇಕಾದ ಇನ್ನೊಂದು ಉಪಕರಣ ಒಂದು ಪ್ರಕೃತೋಚಿತ ವ್ಯಾಕರಣ. —ಇಂದಿನ ಮಹಾಜನ ಪ್ರಯೋಗಗಳನ್ನು ಪರೀಕ್ಷಿಸಿ ಅರಿಸಿಕೊಂಡ ಸುಲಭ ವ್ಯಾಕರಣ. ಪ್ರಾಚೀನ ಕಾವ್ಯ ವ್ಯಾಸಂಗ, ಅದ್ಯತನೀಯ ವ್ಯಾಕರಣ—ಇವೆರಡೂ ಇಂದಿನ ನಮ್ಮ ಲೇಖಕರಿಗೆ ಅನಿವಾರ್ಯವಾದ ಪ್ರಥಮ ಸಾಧನಗಳು.

ಯೂರೋಪಿನಲ್ಲಿ ಹೇಗಿದೆ ?

ನಮ್ಮ ದೇಶದಲ್ಲಿ ಪ್ರಗತಿಯನ್ನಳೆಯುವ ಅಡಿಗೋಲು ಯೂರೋಪಿನಲ್ಲಿ ತಯಾರಾದದ್ದಲ್ಲವೆ ? ಹಾಗಾದಮೇಲೆ, ಅಲ್ಲಿಯ ಸಾಹಿತ್ಯ ಪ್ರಗತಿ ಹೇಗಿದೆ ? ಕಳೆದ ಅರುವತ್ತು ವರ್ಷಗಳಲ್ಲಿ ಅಲ್ಲಿಯೂ ಕಾವ್ಯಕ್ಷೇತ್ರದಲ್ಲಿ ಮಹಾಸಾಹಿತ್ಯೋತ್ಪತ್ತಿ ಅತಿ ಪುಷ್ಟವಾಗೇನೂ ಇಲ್ಲ. ಗ್ರಂಥ ಸಂಖ್ಯೆಯೇನೋ ಹೆಚ್ಚುತ್ತಿರುವಂತಿದೆ. ಜಾತಿ ವಿವಿಧತೆಯೂ ಇದೆ. ಆದರೆ ಗುಣ ಇಳಿಮುಖವಾಗಿದೆ. ಕಥೆ ನಾವೆಲ್ಲುಗಳು ಅಷ್ಟಿಷ್ಟು ರುಚಿವತ್ತಾಗಿದ್ದರೂ—ಹಿಂದಿನ ಡಿಕೆನ್ಸ್, ಥ್ಯಾಕರೇ, ಹಾರ್ಡಿಗಳ— ಅಗಾಧ ಪರಾಮರ್ಶೆಯಿಲ್ಲ. ಮೇಲುಮೇಲಿನ ನೋಟ, ಒಂದೆರಡು ಕ್ಷಣದ ಉದ್ರೇಕ, ಅಂದಂದಿನ ವಿರಾಮಕ್ಕೆ ಬೇಕಾದಷ್ಟು ವಿನೋದ ಹವ್ಯಾಸ—ಇವು ಈ ಹೊತ್ತಿನ ಇಂಗ್ಲಿಷ್ ಕಥಾಲೇಖಕರ ಮುಖ್ಯಾಶಯ. ಯೂರೋಪಿನ ಈಗಿನ ಬಾಳು ಹಾಗಿದೆ. ಜೀವನ ಕಾರ್ಯದ ಬಹುಭಾಗವನ್ನು ಯಂತ್ರಗಳು ಸಾಗಿಸುತ್ತವೆ. ದಿನದ ಮುಖ್ಯ ಭಾಗವನ್ನು ಕಛೇರಿ ಕಾರ್ಖಾನೆಗಳು ತೆಗೆದುಕೊಳ್ಳುತ್ತವೆ. ಜನ ಯಾವಾಗಲೂ ದಣಿದು ಬೇಸತ್ತಿರುತ್ತಾರೆ. ಅವರಿಗೆ ಬಿಡುವು ದೊರೆತಾಗ ಬೇಕೆನಿಸುವುದು ವಿನೋದ : ಬೋಧೆಯಲ್ಲ, ಬುದ್ಧಿಕ್ಲೇಶವಲ್ಲ : ಮನಸ್ಸಿನ ತೀಟೆಯನ್ನು ಕಳೆಯುವಂಥಾದ್ದು ಬೇಕು. ಅವರ ಸಾಹಿತ್ಯ ಬಿಡುವುಹೊತ್ತಿನ ಸಾಹಿತ್ಯ. ಅವರ ಬಾಯಿಗೆ ಬೀರ್ ಹೇಗೋ ಅವರ ಮನಸ್ಸಿಗೆ ಸಾಹಿತ್ಯ ಹಾಗೆ—ಅದು ಒಂದು ಕ್ಷಣ ವೈಮರೆಯಿಸುವ ಅಫೀಮು ಗುಳಿಗೆ. ಇಂಗ್ಲಿಷ್ ಪದ್ಯರಚನೆಯ ಮಾತೂ ಅಷ್ಟೇ. ಅದು ಬಡ ಬಡಕಲಾಗಿ ಮೂಕನ ಕೈಬಾಯಿ ಸನ್ನೆಗಳಂತೆ ಇದೆ. ಅಮೆರಿಕದ ಕವಿತ್ವವೆಂಬುದಂತೂ ಅಕಾಂಡತಾಂಡವಕ್ಕೆ ನಿದರ್ಶನ. ನಮ್ಮ ಈಚೀಚಿನ ಕನ್ನಡ ಕವಿತ್ವ ಬಹುಮಟ್ಟಿಗೆ ಈ ಇಂಗ್ಲಿಷ್–ಅಮೆರಿಕನ್ ಕವಿತ್ವಗಳ ಅನುಕರಣವೆಂದು ತೋರುತ್ತದೆ. ನಮ್ಮ ತರುಣರ ಮುಂದೆ ಯಾವ ಅಪಸವ್ಯಪಸ್ಥಿತಿ ತೋರಿಸಿದರೂ ಅವರು " ಇಂಗ್ಲಿಷಿನಲ್ಲಿ ಹಾಗೆಯೇ ಇಲ್ಲವೇ ? ನೋಡಿ " ಎನ್ನುತ್ತಾರೆ. ಸಾಂಪ್ರದಾಯಿಕರು ಹಾಗೆ ಸ್ವಾನುಭವ ಪ್ರಮಾಣವನ್ನು ಮರೆತು, ಪರಾನುಕರಣಪ್ರಮಾಣವನ್ನು ಅಂಗೀಕರಿಸಲಾರರು.

ಪ್ರಕೃತ, ಕ್ರಿಸ್ತಶಕ ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಸಾಹಿತ್ಯವು ನಮಗೇನೂ ಮಾರ್ಗದರ್ಶಕವಾಗುವಂತಿಲ್ಲ. ಅವರಲ್ಲೇ ಅದು ಹೆಚ್ಚು ಪ್ರಭಾವ ಕಾರಿಯಾಗಿಲ್ಲ. ಮಹದ್ದರ್ಶನದ ಪ್ರಭೆಯನ್ನು ಸಾಹಿತ್ಯ ಬೀರಿದ್ದಿದ್ದರೆ ಯುರೋಪಿನ ಮನಸ್ಸು ಈಗಿನಷ್ಟು ಯುದ್ಧ ಸ್ಪರ್ಧೆಗಳಿಂದ ಹದಗೆಡುತ್ತಿರಲಿಲ್ಲ. ಮೊದಲನೆಯ ಮಹಾಯುದ್ಧದ ಪ್ರಾರಂಭದಿಂದ ಇಂದಿನವರೆಗೂ ಪಾಶ್ಚಾತ್ಯ ಪ್ರಪಂಚದ ಬಾಳು ಎಡೆಬಿಡದ ತಲ್ಲಣ,—ಸಂತತವಾದ ಸಂಕ್ಷೋಭೆ. ಅದು ಇದ್ದ ಗುರಿ ತಪ್ಪಿ, ಬೇರೆ ಗುರಿ ಕಾಣದ ಪರದಾಟದ ಬಾಳು. ಯುರೋಪಿಗೂ ಕೂಡ ಈಗ ಜೀವಹಿತ ಕಾರಿಯಾದ ಮಹಾ ಸಾಹಿತ್ಯ ಬೇಕಾಗಿದೆ. ಅದು ಬರುವುದಾವಾಗ ? ವರ್ಷೇ ವರ್ಷೇ ನೋಬಲ್ ಬಹುಮಾನವೇನೋ ಹಂಚಿಕೆಯಾಗುತ್ತಿದೆ. ಇನ್ನೂ ಎಷ್ಟೆಷ್ಟೋ ಇನಾಮುಗಳು ಕವಿಕಥಕರಿಗೆ ದೊರೆಯುತ್ತಿವೆ. ಅವರ ಗ್ರಂಥಗಳಲ್ಲಿ ಸ್ವಾರಸ್ಯವಿಲ್ಲ ವೆಂದು ಯಾರೂ ಹೇಳರು. ಆದರೆ ಸ್ವಾರಸ್ಯಕ್ಕಿಂತ ಮೇಲಿನದು ದರ್ಶನ ಮಹತ್ತ್ವ. ಹಣದ ಗಂಟನ್ನು ಲೇಖಕನ ಕಣ್ಣ ಮುಂದೆ ಕುಣಿಸಿದರೆ ಮಹಾಸಾಹಿತ್ಯೋದಯ ವಾದೀತೆಂದು ನಿರೀಕ್ಷಿಸುವವರು ನಮ್ಮಲ್ಲೂ ಇದ್ದಾರೆ. ಅವರು ಭ್ರಾಂತರೆನ್ನಲು ನನಗೆ ಸಂದೇಹವಿಲ್ಲ.

ಮಹಾ ಸಾಹಿತ್ಯಕ್ಕೆ ಅವಶ್ಯವಾದ ಪೂರ್ವಸಿದ್ಧತೆ ಎಂಥಾದ್ದೆಂಬುದನ್ನು ಆಗಲೇ ಸೂಚನೆ ಮಾಡಿದೆ.

ಜನತೆಯಲ್ಲಿ (1) ಲೋಕ ಪರಿಜ್ಞಾನ, (2) ವಿಮರ್ಶನ ಜಾಗರೂಕತೆ, (3) ಪರಮಾರ್ಥ ದೃಷ್ಟಿ ಇವು ಎಷ್ಟೆಷ್ಟು ಚೆನ್ನಾಗಿ ಪರಡಿದ್ದರೆ ಅವರಲ್ಲಿ ಉತ್ತಮ ಸಾಹಿತ್ಯೋದಯ ಅಷ್ಟು ನಿಶ್ಚಯವೆಂದು ಹೇಳಿದೆ. ಯುರೋಪಿನಲ್ಲಿ ಸಾಮಾನ್ಯ ಜನದ ಲೋಕವಸ್ತು ಪರಿಜ್ಞಾನ ನಮ್ಮಲ್ಲಿರುವುದರ ಹತ್ತಿಪ್ಪತ್ತರಷ್ಟಿದೆ. ಅವರಲ್ಲಿ ಕಾರ್ಯಕಾರಣ ವಿಚಾರ ಪ್ರವೃತ್ತಿಯೂ ನಮ್ಮಲ್ಲಿರುವುದಕ್ಕಿಂತ ಎಷ್ಟೋ ಹೆಚ್ಚಾಗಿದೆ. ಆದರೂ ಅಲ್ಲಿ ಮಹಾಕಾವ್ಯ ಏಕೆ ಹುಟ್ಟಲಿಲ್ಲ ? ಅವರಲ್ಲಿ ಪಾರಮಾರ್ಥಿಕತೆ ನಮ್ಮಲ್ಲಿ ಇರುವಷ್ಟು ಮಟ್ಟಿಗೂ ಇಲ್ಲ. ಪಾರಮಾರ್ಥಿಕತೆ ಎಂದರೆ ಜನ್ಮಸಾಫಲ್ಯದ ಚಿಂತೆ,— ಜೀವನ ಸಾರ್ಥಕ್ಯದ ಚಿಂತೆ,—ಬಾಳಿಗೆ ಗುರಿಯೇನು ? ಎಂಬ ಚಿಂತೆ.

ನಮ್ಮಲ್ಲಿ ಪಾರಮಾರ್ಥಿಕತೆ ಇದೆ, ಅಥವಾ ಪಾರಮಾರ್ಥಿಕದ ಚಪಲತೆ ಯಂತೂ ಇದೆ ; ಆದರೆ ಅದು ಪೌರುಷವಿಹೀನ ಪಾರಮಾರ್ಥಿಕ. ಅವರಲ್ಲಿ ಪೌರುಷವಿದೆ, ಆದರೆ ಅದು ಪರಮಾರ್ಥವಿಹೀನ ಪೌರುಷ.

ಪೌರುಷ—ಪರಮಾರ್ಥಗಳ ಸಮನ್ವಯ

ಭರತಖಂಡದ ನಾವು ಅಮೆರಿಕ ರಷ್ಯಗಳಂತೆ ಆಗಬೇಕೆಂದು ಹೊರಟಿದ್ದೇವೆ. ಯುರೋಪು ಅಮೆರಿಕಗಳವರು—ತಮ್ಮ ಬಾಳ್ವೆಯಲ್ಲಿ ಹುರುಳಿಲ್ಲ, ಬೇರೆಲ್ಲಿಯಾದರೂ ಹುರುಳು ಉಂಟೆ ? ಇಂಡಿಯದಲ್ಲಿ ಉಂಟೆ ? ಎಂದು ಕೇಳುತ್ತಿದ್ದಾರೆ. ಮಾಘ

ಕವಿಯು ಶಿಶುಪಾಲವಧೆಯ ಕಥೆಯಲ್ಲಿ ರೈವತಕ ಪರ್ವತದ ವರ್ಣನೆಯಿರುವುದು ತಮಗೆ ಜ್ಞಾಪಕದಲ್ಲಿರಬಹುದು ಆ ಪರ್ವತವು ರಮ್ಯವಾದ ವಿಹಾರಸ್ಥಾನ— ದೇವತೆಗಳಿಗೆ ಕೂಡ. ಅಲ್ಲಿ ಹೀಗೆ ನಡೆಯಿತಂತೆ :—

ಬಿಂಬೋಷ್ಠಂ ಬಹುಮನುತೇ ತುರಂಗ ವಕ್ತ್ರ-
ಶ್ಚುಂಬಂತಂ ಮುಖಮಿಹ ಕಿನ್ನರಂ ಪ್ರಿಯಾಯಾಃ ।
ಶ್ಲಿಷ್ಯಂತಂ ಮುಹುರಿತರೋಪಿ ತಂ ನಿಜಸ್ತ್ರೀ-
ಮುತ್ತುಂಗಸ್ತನಭರಭಂಗ ಭೀರುಮಧ್ಯಾಂ ॥ 4–39

ಬಿಂಬಾಧರ ಕಿನ್ನರ ಯುಗ ।
ಚುಂಬನ ಸಂಭ್ರಮಕೆ ಕರುಬುವರ್ ಕಿಂಪುರುಷರ್ ॥
ಕಿಂಪುರುಷ ದಂಪತಿ ಪರೀ ।
ರಂಭವೆ ಪಿರಿದೆಂದು ಕಿನ್ನರರ್ ಮತ್ಸರಿಪರ್ ॥

ದೇವತೆಗಳ ಪರಿವಾರದಲ್ಲಿ ಕಿನ್ನರರು ಕಿಂಪುರುಷರು ಎಂದೆರಡು ಜಾತಿ ಕಿನ್ನರರು ಮನುಷ್ಯ ಮುಖವೂ ಕುದುರೆಯ ಮೈಯೂ ಉಳ್ಳವರು. ಮನುಷ್ಯ ಮುಖಿಗಳಾದ ಕಿನ್ನರ ದಂಪತಿಗಳ ಚುಂಬನೋತ್ಸವವನ್ನು ನೋಡಿ ಅಶ್ವಮುಖಿಗಳಾದ ಕಿಂಪುರುಷರು ಕರುಬುತ್ತಿದ್ದಾರೆ; ಮನುಷ್ಯದೇಹಿಗಳಾದ ಕಿಂಪುರುಷ ದಂಪತಿಗಳ ಗಾಢಾ ಲಿಂಗನವನ್ನು ನೋಡಿ ಅಶ್ವದೇಹಿಗಳಾದ ಕಿನ್ನರರು ಕೊರಗುತ್ತಿದ್ದಾರೆ.

ಅವರಂತೆ ಇದೆ ಈ ಹೊತ್ತು ಪ್ರಪಂಚದ ಪೂರ್ವ ಪಶ್ಚಿಮ ದಿಗ್ದೇಶಗಳವರ ಪಾಡು. ಇಲ್ಲಿಯವರ ದೃಷ್ಟಿಯಲ್ಲೊಂದು ಲೋಪ. ಅಲ್ಲಿಯವರ ದೃಷ್ಟಿಯಲ್ಲಿನ್ನೊಂದು ಲೋಪ. ಒಂದು ಸಮಗ್ರ ಜೀವನದ ಮಹದ್ದರ್ಶನ ಈ ಹೊತ್ತು ಇಬ್ಬರಿಗೂ ಬೇಕಾಗಿದೆ. ಪೌರುಷ ಪಾರಮಾರ್ಥಿಕೋಭಯಾತ್ಮಕವಾದ ಆ ಮಹತ್ತ್ವದ ದಿವ್ಯದರ್ಶನ ಮನುಷ್ಯ ಲೋಕಕ್ಕೆ ಎಂದು ಬಂದೀತೋ.—ಯಾವ ಭಾಷೆಯಲ್ಲಿ ಬಂದೀತೋ—ಒಂದು ಮುಖದಿಂದ ಬಂದೀತೋ ನಾಲ್ಕು ಮುಖಗಳಿಂದ ಬಂದೀತೊ—ಯಾವ ಆಕಾರದಲ್ಲಿ ಬಂದೀತೋ—ಪದ್ಯವಲ್ಲಿಯೋ. ಕಥೆಯಲ್ಲಿಯೋ. ನಾಟಕದಲ್ಲಿಯೋ. ಅಥವಾ ಸಂವಾದಸರಣಿಯಲ್ಲಿಯೋ. ತರ್ಕಪ್ರಬಂಧದಲ್ಲಿಯೋ, ಉಪನ್ಯಾಸ ವಚನದಲ್ಲಿಯೋ. ಗೀತೆಯಲ್ಲಿಯೋ. ಸೂತ್ರದಲ್ಲಿಯೋ—ತಿಳಿದು ಹೇಳ ಬಲ್ಲ ಕಾಲಜ್ಞಾನಿ ಎಲ್ಲಿಯೂ ಕಾಣಬಂದಿಲ್ಲ. ಅಥವಾ ಇಂದಿಗೆ ಬೇಕಾದ ಸಂದೇಶ ಹಿಂದಿನ ಸಾಹಿತ್ಯದಲ್ಲಿಯೇ ಇದ್ದು. ನಮ್ಮ ಮರೆವಿನ ಮುಸುಕಿನೊಳಗಡೆ ಸಿಕ್ಕಿ ಕೊಂಡಿದೆಯೋ ! ತೆರೆದ ಕಣ್ಣಿನಿಂದ ನೋಡುವವರಿಗೆ ರಾಮಾಯಣ ಮಹಾ ಭಾರತಗಳಲ್ಲಿಯೇ ಪ್ರಕೃತ ಪ್ರಪಂಚಕ್ಕೆ ಬೇಕಾದ ಉಪದೇಶ ದೊರತೀತೋ ? ಹಾಗಿದ್ದರೂ ಇದ್ದೀತಲ್ಲವೆ ? ಎಂತಾದರಾಗಲಿ. ದೇವರ ಅವತಾರಕ್ಕಾಗಿ ಮಹರ್ಷಿ ಗಳೂ ತಪಸ್ವಿಗಳೂ ಸಾಧುಸಜ್ಜನರೂ ಭಕ್ತಿಶ್ರದ್ಧೆಗಳಿಂದ ಕಾದುಕೊಂಡಿದ್ದಂತೆ. ನಾವು

ತಪೋನಿಷ್ಠೆಯಿಂದ ಮಹದ್ದರ್ಶನ ಸಾಹಿತ್ಯಕ್ಕಾಗಿ ತಾಳ್ಮೆ ತಾಳಿ ಎದುರುನೋಡಿ ಕೊಂಡಿರುವುದು ಕರ್ತವ್ಯವಾಗಿದೆ.

ತ್ರಿವಿಧ ಸಿದ್ಧತೆ

ನಾವು ಈಗ ಮಾಡಬೇಕಾದ ತಪಸ್ಸೆಂಥಾದ್ದು ? ಮೊದಲು, ಜನತೆಯಲ್ಲಿ ಲೋಕಪರಿಜ್ಞಾನವನ್ನು ಹರಡಬೇಕಾದದ್ದು. ಸಾಹಿತ್ಯ ಸೇವೆಯೆಂದರೆ ಪದ್ಯ ಕಟ್ಟಿ, ಕಟ್ಟಿದ ಪದ್ಯವನ್ನು ಹಾಡಿ, ಅಥವಾ ಹಾಡಿಸಿ ಕೇಳಿ, ಲೋಕವನ್ನು ಮರೆಯುವುದು ಎಂದು ಬಹುಮಂದಿ ಅರ್ಥಮಾಡಿಕೊಂಡಂತಿದೆ. ಅದು ಕೇವಲ ಭ್ರಮೆಯೆಂದು ನನ್ನ ತಿಳಿವಳಿಕೆ. ದೇಶ ವಿದೇಶ ಚರಿತ್ರೆಯೂ ನಾನಾ ಪ್ರಕೃತಿವಿಜ್ಞಾನ ಸಮಾಜ ವಿಜ್ಞಾನಗಳೂ ಕಾವ್ಯ ಕಥಾ ಸಾಹಿತ್ಯಕ್ಕೆ ಪೋಷಣಸ್ಥಾನಗಳು. ನಮ್ಮ ಜನಕ್ಕೆ ಈಗ ಮೊದಲು ಅವಶ್ಯವಾದದ್ದು ಲೋಕಪರಿಸ್ಥಿತಿಯ ಅಂತರಂಗ ಬಹಿರಂಗಗಳ ವಿವರಣೆ.

ಎರಡನೆಯದು, ಜನತೆಯಲ್ಲಿ ವಿಮರ್ಶನಾಭ್ಯಾಸವನ್ನು ಹರಡಬೇಕಾದದ್ದು. ಅವರು ಒಂದು ಹೊಸ ಭಾವನೆಯನ್ನೋ ಹೊಸ ಸಂಪ್ರದಾಯವನ್ನೋ ಸ್ವೀಕರಿಸು ವುದಕ್ಕೆ ಮುಂಚಿತವಾಗಿಯೂ, ಹಾಗೆಯೇ ಒಂದು ಹಳೆಯ ಭಾವನೆಯನ್ನೋ ಹಳೆಯ ಸಂಪ್ರದಾಯವನ್ನೋ ವರ್ಜಿಸುವುದಕ್ಕೆ ಮುಂಚಿತವಾಗಿಯೂ ಅವರು ಆ ಸಂಗತಿಯ ಕಾರ್ಯಕಾರಣ ಭಾವಗಳನ್ನು ಪರೀಕ್ಷಿಸಿ ನಿರ್ಣಯಮಾಡುವ ಬುದ್ಧಿ ವೃತ್ತಿಯನ್ನು—ಪ್ರೋತ್ಸಾಹ ಪಡಿಸುವುದು ಸಾಹಿತ್ಯಕ್ಕೆ ದೊಡ್ಡ ಉಪಕಾರವಾಗುತ್ತದೆ. ಅಂಥಾ ಸ್ವತಂತ್ರ ಬುದ್ಧಿವೃತ್ತಿ ಈಗ ನಮಗೆ ಅನೇಕದೃಷ್ಟಿಗಳಿಂದ ಅವಶ್ಯವಾಗಿದೆ.

ಮೂರನೆಯದಾಗಿ, ಜನತೆಯಲ್ಲಿ ಧರ್ಮಕುತೂಹಲವನ್ನೂ ಸೌಜನ್ಯವನ್ನೂ ಹರಡುವುದು. ಇದಕ್ಕೆ ಉಪದೇಶ ಭಾಷಣವೂ ಪುರಾಣಶ್ರವಣವೂ ಸಾಧನಗಳೆಂದು ಸಾಮಾನ್ಯವಾದ ನಂಬಿಕೆ. ಅದರೆ ಇನ್ನೂ ದೊಡ್ಡಸಾಧನೆ ಕಾರ್ಯಾನುಷ್ಠಾನ. ಪ್ರತಿಯೊಬ್ಬನೂ ತನ್ನ ವ್ಯಷ್ಟಿಜೀವನದಲ್ಲಿ ಆದಷ್ಟು ಹೆಚ್ಚು ಭಾಗವನ್ನು ಸಮಷ್ಟಿ ಜೀವನದಲ್ಲಿ ಬೆರೆಸುವುದನ್ನು ಕಲಿಯಬೇಕು. ಒಟ್ಟುಗೂಡಿ ಬಾಳುವ ನೀತಿಯೇ ರಾಷ್ಟ್ರಕಧರ್ಮ ಅಥವಾ "ಸಿಟಿಸನ್‌ಶಿಪ್". ನೆರೆಹೊರೆಯಲ್ಲಿ ಬೆರೆತು ಬಾಳುವ ಅಭ್ಯಾಸ ಜನಕ್ಕಿಲ್ಲದಿದ್ದಲ್ಲಿ ಪ್ರಜಾರಾಷ್ಟ್ರವೆಂಬುದು ಬುಡವಿಲ್ಲದ ಕೊಡವಾಗುತ್ತದೆ. ಸಾಹಿತ್ಯವಾಗಲಿ, ತತ್ತ್ವಸಿದ್ಧಾಂತವಾಗಲಿ. ರಾಜಕೀಯವಾಗಲಿ, ವಿಜ್ಞಾನವಾಗಲಿ. ಯಾವುದೇ ಶಾಸ್ತ್ರವಾಗಲಿ, ಯಾವುದೇ ಕಲೆಯಾಗಲಿ, ಅದು ಜನಜೀವನರಂಗದಲ್ಲಿ ಕೆಲಸ ಮಾಡಲಾರದ್ದಾದರೆ ಆ ವಿದ್ಯೆಗೆ ಜಾಗ "ಮ್ಯೂಸಿಯಮ್" ಎಂಬ ವಿಚಿತ್ರ ವಿಲಕ್ಷಣ ವಸ್ತುಗಳ ಪ್ರದರ್ಶನ ಶಾಲೆಯೇ ಹೊರತು ಜನದ ನಡುವೆ ಅಲ್ಲ. ಅದು ಒಂದು ಜೀವಂತ ವಿದ್ಯೆಯಲ್ಲ. ಹೀಗೆ ಲೋಕಜೀವನಕ್ಷೇತ್ರವೇ ಎಲ್ಲರಿಗೂ ಗೊತ್ತಾಗಿ ರುವ ಕುರುಕ್ಷೇತ್ರ.

ಹೀಗೆ ಲೋಕಬೋಧೆ. ವಿವೇಚನಾಭ್ಯಾಸ, ಸಮಾಜ ಜೀವನಾಸಕ್ತಿ—ಇವು ಮೂರೂ ಸಾಹಿತ್ಯಕ್ಕೆ ಬೀದಿಯ ಪರದೇಶಿಗಳಲ್ಲ. ಆಪ್ತ ಬಂಧುಗಳು. ಆ ಮೂರು

ಕರ್ತವ್ಯಗಳೂ ಎಲ್ಲ ಕರ್ಣಾಟಕ ಸಂಘಗಳಿಗೂ ಉದ್ದೇಶದಲ್ಲಿರಬೇಕಾದವು. ರಾಯಚೂರು ಕರ್ಣಾಟಕ ಸಂಘ ಆ ಮೂರು ಕರ್ತವ್ಯಗಳನ್ನೂ ಅಂಗೀಕರಿಸಿಕೊಂಡು ನೆರವೇರಿಸಿಕೊಂಡು ಬಂದಿರುವುದು ಅದರ ಬಹುವರ್ಷಗಳ ಚರಿತ್ರೆಯಿಂದ ಕಂಡುಬರುತ್ತದೆ. ಈ ಸಂಘದ ಕಾರ್ಯಕರ್ತರಲ್ಲಿ ಉತ್ಸಾಹದ ಜೊತೆಗೆ ಸಾಮರ್ಥ್ಯ ಸೇರಿದೆ. ಇದರ ಅಧ್ಯಕ್ಷ ಮಹನೀಯರಾದ ಡಾಕ್ಟರ್ ಶ್ರೀ ಬಿ. ಜಿ. ದೇಶಪಾಂಡೆಯವರಲ್ಲಿ ಔದಾರ್ಯವೂ ಪ್ರಾಜ್ಞತೆಯೂ ವಿನಯವೂ ಧ್ಯೇಯನಿಷ್ಠೆಯೂ ಒಂದಾಗೂಡಿವೆ. ಇದರ ಪ್ರಮುಖ ಸದಸ್ಯರು ಧನಸಹಾಯದ ಕೂಡ ಗೌರವವನ್ನೂ ತಂದುಕೊಟ್ಟಿದ್ದಾರೆ. ಈ ಸಂಸ್ಥೆ ಇನ್ನೂ ಬೆಳೆದು, ಮತ್ತೂ ಬೆಳೆದು. ನಾನಾಮುಖವಾದ ಜನಬೋಧನೆಗಾಗಿ ದುಡಿದು. ಯಶೋವಂತವಾಗುವುದೆನ್ನಲು ಬೇಕಾದಷ್ಟು ಶುಭಸೂಚನೆಗಳು ಕಾಣಬರುತ್ತಿವೆ.

ನನಗೆ ಸಂಘ ಸಂಸ್ಥೆಗಳ ಅನುಭವ ಕೊಂಚ ಉಂಟು. ಒಬ್ಬ ವ್ಯಕ್ತಿಮನುಷ್ಯನ ಜೀವನಮಾರ್ಗದಲ್ಲಿ ಹೇಗೋ ಒಂದು ಸಂಘದ ಜೀವನಮಾರ್ಗದಲ್ಲಿಯೂ ಹಾಗೆಯೇ ಏರಿಳಿತಗಳುಂಟು. ಕಾಲಗತಿ ಒಂದೇ ಸಮನೆ ಇರಲಾರದು. ಸಂದರ್ಭ ಪ್ರತಿಕೂಲವಾದಾಗ ನಾವು ಅಧೈರ್ಯಪಡಬಾರದು. ನಿಮ್ಮ ಪ್ರಯತ್ನಕ್ಕೆ ಕೊಂಚ ಜಯದ ಚಿಹ್ನೆ ತೋರಿದರೆ ಊರಲ್ಲಿ ಯಾರೋ "ಅವರದೇನು ಮಹಾ!" ಎಂದಾರು. ಅಂಥ ಮಾತು ಕಿವಿಗೆ ಬಿದ್ದಾಗ ರೇಗಬಾರದು, ಕುಗ್ಗಲೂಬಾರದು. ನೀವು ಚಂದಾ ಕೇಳಹೋದ ಕಡೆ ಹಣಕ್ಕಿಂತ ಉಪದೇಶ ಹೆಚ್ಚಾಗಿ ಬಂದೀತು. ಅದರಿಂದ ಬೇಸರಪಡಬಾರದು. ಮೀಟಿಂಗ್ ಕರೆದರೆ ಐವತ್ತು ಮಂದಿಯನ್ನು ನಿರೀಕ್ಷಿಸಿದ್ದಾಗ ಐವರು ಬಂದಿರಬಹುದು; ಐವರಿಗೆ ನೀವು ಸಿದ್ಧರಾಗಿದ್ದಾಗ ಐವತ್ತು ಮಂದಿ ಬಂದು ಪುರಸ್ಕಾರಕ್ಕಾಗಿ ನಿಮ್ಮನ್ನು ಕಾಡಿಸಬಹುದು. ನಮ್ಮ ಜನರು ಸಂಘ ಸಂಸ್ಥೆಗಳ ಮರ್ಯಾದೆಯನ್ನು ಇನ್ನೂ ಕಲಿಯಬೇಕಾಗಿದೆ. ಇಷ್ಟು ವರ್ಷ ಈ ರಾಯಚೂರಿನ ಕರ್ಣಾಟಕ ಸಂಘವನ್ನು ಕಾಪಾಡಿ ಬೆಳಸಿದ ದೈವ ಇನ್ನು ಮುಂದೆಯೂ ಅದರ ವಿಷಯದಲ್ಲಿ ಕೃಪೆತೋರೀತೆಂದು ನನಗೆ ನಂಬಿಕೆ ಸಂಪೂರ್ಣವಾಗಿದೆ. ನಿಮಗೆ ಜಯವಾಗಲಿ.

ವಂದೇ ಮಾತರಂ

ಭಾಗ ೨

ಡಿ.ವಿ.ಜಿ.: ನೆನಪುಗಳು

ಮೈಸೂರಿನ 'ರಾಜಾಜಿ'*

ರಾಜಾಜಿ ಅವರ 92ನೇ ವರ್ಧಂತ್ಯುತ್ಸವ ಸಮಾರಂಭದಲ್ಲಿ ಇತ್ತೀಚೆಗೆ ನಾನು ಗೋಖಲೆ ವಿಚಾರ ಸಂಸ್ಥೆಯಲ್ಲಿ ಮಾತನಾಡಿದಾಗ ಡಾ॥ ಡಿ. ವಿ. ಗುಂಡಪ್ಪನವರನ್ನು ಮೈಸೂರಿನ ರಾಜಾಜಿ ಎಂದು ಪ್ರಶಸ್ತಿ ಮಾಡಿದ್ದೆ. ಅವರು ರಾಜಾಜಿಯಂತೆಯೇ ಉತ್ಕೃಷ್ಟರು. ಅಸದೃಶರು. ಇಷ್ಟೇ ವ್ಯತ್ಯಾಸ. ರಾಜಾಜಿಯ ಸೇವೆ ಇಡೀ ಇಂಡಿಯಾ ವನ್ನು ಆವರಿಸಿ ಆಚೆಗೂ ಪಸರಿಸಿದೆ. ಗುಂಡಪ್ಪನವರ ಸೇವೆ ಮೈಸೂರಿನಲ್ಲಿಯೇ ಕೇಂದ್ರೀಕೃತವಾಗಿದೆ. ಸಮಗ್ರ ಋಜುತ್ವ, ಸ್ವತಂತ್ರ ಪ್ರವೃತ್ತಿ, ನಿರ್ಣಯಾತ್ಮಕ ವಿಮರ್ಶನ, ಇವುಗಳ ಅಪೇಕ್ಷದಲ್ಲಿ ಅವರಿಗೆ ಸಮಾನರಾದವರು ವಿರಳ. ಅವರು ಲಾಭದಾಯಕ ರಾಜಕೀಯವನ್ನು ಮೀರಿದ ಪರಮ ತತ್ವಗಳನ್ನು ಎತ್ತಿ ಹಿಡಿದಿದ್ದಾರೆ. ತಮ್ಮ ಅಭಿಪ್ರಾಯಗಳ ಸಲುವಾಗಿ ಅವರು ಏಕಾಕಿಯಾಗಿ ನಿಲ್ಲಲೂ ಹೆದರಿಲ್ಲ. ಜನ ಮೆಚ್ಚಿಸುವುದಕ್ಕಾಗಲಿ ಬಹುತೇಕ ಸರಿಯಾದ ತಿಳಿವಳಿಕೆ ಇಲ್ಲದಂಥ ಸಾರ್ವಜನಿಕಾಭಿ-ಪ್ರಾಯವನ್ನು ಒಲಿಸಿಕೊಳ್ಳುವುದಕ್ಕಾಗಲಿ ಅವರು ತಮ್ಮ ಅಭಿಪ್ರಾಯಗಳನ್ನು ತಿದ್ದಿ ಕೊಂಡಿಲ್ಲ.

ಡಿ.ವಿ.ಜಿ. ಅವರ ಸರ್ವತೋಮುಖವಾದ ಸಾಮರ್ಥ್ಯ ವಿಸ್ಮಯಕರವಾದುದು, ಅವರು ಸಂಸ್ಕೃತದಲ್ಲಿ, ಕನ್ನಡದಲ್ಲಿ, ಇಂಗ್ಲಿಷಿನಲ್ಲಿ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳಲ್ಲಿ ಖ್ಯಾತ ಪಂಡಿತರು. ಅವರ ಇಂಗ್ಲಿಷ್ ಭಾಷಣಗಳೂ, ಲೇಖನಗಳೂ ಅಸೂಯೆ ಹುಟ್ಟಿಸುವಂಥ ವಿಶಿಷ್ಟ ಲಕ್ಷಣಗಳಾದ ಪ್ರೌಢಿಮೆ ಸ್ಮಿತಗಳಿಂದ ಕೂಡಿವೆ. ಅವರು ಗೋಪಾಲಕೃಷ್ಣ ಗೋಖಲೆ ಮತ್ತು ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಪರಂಪರೆಗೆ ಸೇರಿದವರು. ಅವರು ಗೋಖಲೆ ಸಾರ್ವಜನಿಕ ಸಂಸ್ಥೆಯ ಜೀವಾಳ. ಹೆತ್ತವರಂತೆ ಆ ಸಂಸ್ಥೆಯ ಬಗ್ಗೆ ಅವರು ಅಕ್ಕರೆ, ತಾಳ್ಮೆ ಪಡೆದಿದ್ದಾರೆ. ದಶಕಗಳ ಕಾಲದಿಂದ ಅವರು ಸಾರ್ವಜನಿಕ ವ್ಯವಹಾರಗಳನ್ನು ಕುರಿತು ಪ್ರಬುದ್ಧ ಅಭಿಪ್ರಾಯ ಪಡೆದವರಲ್ಲಿ ಅಗ್ರಗಣ್ಯರಾಗಿದ್ದಾರೆ. ಈ ಅಭಿಪ್ರಾಯಗಳು ಅವರ ತ್ರೈಮಾಸಿಕ ಸಾರ್ವಜನಿಕ ಪತ್ರಿಕೆಯಲ್ಲಿ ಪ್ರತಿಬಿಂಬಿತವಾಗಿವೆ. ಹತ್ತಾರು ವರ್ಷಗಳಿಂದ ಅವರು ಬೆಳೆಸಿರುವ ಪುಸ್ತಕ ಭಂಡಾರ ಬಹುಶಃ ಖಾಸಗೀ ಪುಸ್ತಕ ಭಂಡಾರಗಳ ಪೈಕಿ ಸರ್ವೋತ್ಕೃಷ್ಟವಾಗಿದೆ.

---

* ಕೃಪೆ; ಕನ್ನಡ ಪ್ರಭ, 11-1-1970

ಉದಾತ್ತ ಸೇವೆ

ನಿಸ್ವಾರ್ಥ ಸಾರ್ವಜನಿಕ ಕಾರ್ಯಕ್ಕಾಗಿ ಅವರು ಯುವಜನದ ಒಂದು ತಂಡವನ್ನೇ ಪ್ರೇರೇಪಿಸಿ ಪ್ರೋತ್ಸಾಹಿಸಿದ್ದಾರೆ. ವಯಸ್ಸಾಗಲಿ, ಅನಾರೋಗ್ಯವಾಗಲಿ ಹಲವು ಬಗೆಯ ಯೋಗ್ಯ ಗುರಿಗಳ ಸಾಧನೆಯಲ್ಲಿ ಅವರಿಗಿರುವ ಶ್ರದ್ಧೆಯನ್ನೂ ದೀಕ್ಷೆಯನ್ನೂ ಕುಗ್ಗಿಸಿಲ್ಲ.

ನಾನು 1915ರಲ್ಲಿ ಬೆಂಗಳೂರಿಗೆ ಸೆಂಟ್ರಲ್ ಕಾಲೇಜಿನಲ್ಲಿ ಸಸ್ಯಶಾಸ್ತ್ರಾಧ್ಯಾಪಕನಾಗಿ ಬಂದ ತರುಣದಲ್ಲೆ ನನಗೆ ಡಾ॥ ಗುಂಡಪ್ಪನವರ ಪರಿಚಯವಾಯಿತು. ಅವರು ಸಂಪಾದಿಸುತ್ತಿದ್ದ 'ಕರ್ನಾಟಕ' ಇಂಗ್ಲಿಷ್ ವಾರಪತ್ರಿಕೆಯನ್ನು ನಾನು ಒಮ್ಮೆ ಅಕಸ್ಮಾತ್ತಾಗಿ ಕಂಡೆ. ಅಷ್ಟು ಹೊತ್ತಿಗೆ ಸಾರ್ವಜನಿಕ ಪ್ರಶ್ನೆಗಳಲ್ಲಿ ನಾನು ಆಸಕ್ತಿ ತಾಳಿದ್ದೆ. ಇದಕ್ಕೆ ಮುಂಚೆಯೇ ನಾನು ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಸದಸ್ಯನಾಗಿ ಸೇರಲು ನಿಶ್ಚಯಿಸಿದ್ದು. ಸಂಸ್ಥೆಯ ಅಧ್ಯಕ್ಷ ಶ್ರೀ ಶ್ರೀನಿವಾಸ ಶಾಸ್ತ್ರಿಗಳು ನನ್ನನ್ನು ಸಂಸ್ಥೆಗೆ ಸೇರಿಸಿಕೊಳ್ಳುವುದನ್ನೇ ಕಾಯುದ್ದುಕೊಂಡಿದ್ದೆ. ಮತ್ತು ನಾನು ಸರಕಾರದ ನೌಕರನಾಗಿದ್ದುದರಿಂದ ನನ್ನ ನಿಜ ನಾಮಧೇಯದಲ್ಲಿ ಬರೆಯಲು ಸ್ವತಂತ್ರನಾಗಿರಲಿಲ್ಲವಾದ ಕಾರಣ "ಭೀಷ್ಮ" ಎಂಬ ಅಂಕಿತದಲ್ಲಿ ಪತ್ರಿಕೆಗಳಿಗೆ ಬರೆಯುತ್ತಿದ್ದೆ.

ಶ್ರೀ ಗುಂಡಪ್ಪನವರು ನನ್ನ ಕೆಲವು ಬರಹಗಳನ್ನು ಸೌಜನ್ಯದಿಂದ ಪ್ರಕಟಿಸಿದ್ದರು. ಈಗ ನೆನಪಿಗೆ ಬರುತ್ತಿರುವಂತೆ ಅಂಥ ಒಂದು ಲೇಖನ ಮಹಾಭಾರತದ ಮತ್ತು ಭಗವದ್ಗೀತೆಯ ಶ್ರೀಕೃಷ್ಣನನ್ನು ಕುರಿತದ್ದು. ಕೃಷ್ಣ ಅವತಾರವಲ್ಲ ; ಮನುಷ್ಯ ಎಂದು ತೋರಲು ನಾನು ಹವಣಿಸಿದ್ದೆ. ನನ್ನ ಭಾವನೆ ಸಂಪ್ರದಾಯವಿರೋಧವಾಗಿತ್ತು. ಕೆಲವರು ಸಂಪ್ರದಾಯವಾದಿಗಳು ಅದನ್ನು ದೈವನಿಂದಕವೆಂದೂ, ಅಪಚಾರಕವೆಂದೂ. ಪರಿಗಣಿಸಿದ್ದರು. ಡಾ॥ ಗುಂಡಪ್ಪನವರು ಅದನ್ನು ಪ್ರಕಟಿಸುವ ಧೈರ್ಯ ಮಾಡಿದ್ದು ನನಗೆ ಆಚ್ಚರಿಯ ಸಂತಸವನ್ನೇ ಉಂಟುಮಾಡಿತು. ಅತಿಶಯವಾದ ಸಂಗತಿ ಅಂದರೆ ಶ್ರೀ ಗುಂಡಪ್ಪನವರು ಸಾಂಪ್ರದಾಯಿಕ ಭಾವನೆಯ ಪ್ರಕಾರ ಕೃಷ್ಣನನ್ನು ಅವತಾರವೆಂದೇ ಬಗೆದಿದ್ದರೆಂದು ನನಗೆ ತರುವಾಯ ತಿಳಿಯಿತು. ತಮ್ಮ ಭಾವನೆಗಳಿಗಿಂತ ಬೇರೆಯಾದ ಭಾವನೆಗಳ ಬಗ್ಗೆ ಅವರು ಸಹನೆಯುಳ್ಳವರಾಗಿರುವ ಕಾರಣ ಅವರನ್ನು ನಾನು ಇನ್ನಷ್ಟು ಗೌರವಿಸುತ್ತೇನೆ.

ಪ್ರತಿಷ್ಠಿತರ ಕೂಟ

ನನಗೂ ಡಾ॥ ಡಿ. ವಿ. ಗುಂಡಪ್ಪನವರಿಗೂ ಸಂಪರ್ಕವುಂಟಾದುದು ಅವರೂ, ಕೀಟಶಾಸ್ತ್ರಜ್ಞ ಡಾ॥ ಕೆ. ಕುನ್ನಿಕಣ್ಣನ್, ಅಂತರರಾಷ್ಟ್ರೀಯ ನ್ಯಾಯವಿದ ಶ್ರೀ ಎನ್. ನರಸಿಂಹಮೂರ್ತಿ. ರಾಸಾಯನಿಕ ಶ್ರೀ ಕೆ. ಭೀಮರಾವ್ ಮುಂತಾದ ವಿವಿಧ ಶಾಸ್ತ್ರಜ್ಞರೆಲ್ಲ ಭಾನುವಾರ ಪ್ರಾತಃಕಾಲ ಲಾಲ್‌ಬಾಗಿನಲ್ಲಿ ಕಾಫಿ ಕುಡಿಯುತ್ತ ಅಂದಿನ ಪ್ರಚಲಿತ ರಾಜಕೀಯ, ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಲು ಸೇರುತ್ತಿದ್ದಾಗ. ನರಸಿಂಹಮೂರ್ತಿಯವರು ಅಂತರರಾಷ್ಟ್ರೀಯ ನ್ಯಾಯದಲ್ಲಿ ಪ್ರಮಾಣವಚನರೆಂದು

ಖ್ಯಾತರಾದ ಗ್ರೋಷಿಯಸ್ ವಾಕ್ಯಗಳನ್ನು ಉರುಳಿಸುತ್ತಿದ್ದರು. ಗುಂಡಪ್ಪನವರು ಗ್ಲಾಡ್‌ಸ್ಟನ್ ಮಾರ್ಲಿ ತತ್ವಗಳ ಪ್ರತಿಪಾದನೆ ಮಾಡುತ್ತಿದ್ದರು. ಕುನ್ನಿಕಣ್ಣನ್ ಅವರು ಪಾಶ್ಚಿಮಾತ್ಯ ನಾಗರಿಕತೆಯ ಖಂಡನೆಯನ್ನು, ಭಾರತೀಯ ನಾಗರಿಕತೆಯ ಶ್ಲಾಘನೆಯನ್ನು ಮಾಡುತ್ತಿದ್ದರು. ಬಡಪಾಯಿ ನಾನಾದರೋ ಸಸ್ಯಶಾಸ್ತ್ರಜ್ಞ ; ಇವರ ಉದಾತ್ತ ವಾದಗಳನ್ನು ಬೆರಗಾಗಿ ಕೇಳುತ್ತಿದ್ದೆ. ಅವರ ಮಾತುಗಳೆಲ್ಲ ನನ್ನ ಪಾಲಿಗೆ ಕವಿ ಹೇಳುವಂತೆ ಗುಡುಗಿನಬ್ಬರದ ಮಹಾವಾಕ್ಯಗಳು. ಸುತ್ತ ನೆರೆದ ಗ್ರಾಮೀಣ್ಯರಿಗೆ ಡಂಗುಬಡಿಸುತ್ತಿದ್ದವು. ಅವರ ಬಿಸಿಲಿನಲ್ಲಿ ನಾನು ಹಾಯಾಗಿ ಮೈ ಬೆಚ್ಚಗೆ ಮಾಡಿಕೊಂಡು ಗಿಟ್ಟಿದಷ್ಟಕ್ಕಾಗಿ ಕೃತಜ್ಞನಾಗಿದ್ದೆ.

ನಾನು 1921ರಲ್ಲಿ ನನ್ನ ಸೆಂಟ್ರಲ್ ಕಾಲೇಜ್ ಪ್ರಾಧ್ಯಾಪನಕ್ಕೆ ರಾಜೀನಾಮೆ ಕೊಟ್ಟು ಸರ್ವೆಂಟ್ಸ್ ಆಫ್ ಇಂಡಿಯಾ ಸೇರಲು ಪುಣೆಗೆ ಹೋದಾಗ ಗುಂಡಪ್ಪನವರು ನನ್ನನ್ನು ಕುರಿತೊಂದು ಪ್ರಶಂಸೆ ಬರೆದಿದ್ದರು. ಅದಕ್ಕೆ ಅರ್ಹನಾಗುವಂತಾಗಬಾರದೇ ಎಂದು ನಾನು ಆಶಿಸಿದ್ದೆ. ತರುವಾಯ ನಾನು ರೈಟ್ ಆನರಬಲ್ ಶಾಸ್ತ್ರಿಗಳ ಸಂಗಡ ಬೆಂಗಳೂರಿಗೆ ಬಂದಾಗೆಲ್ಲಾ ಡಾ॥ ಡಿ. ವಿ. ಗುಂಡಪ್ಪನವರು ನಮಗೆ ಸದಾ ಆದರದ ಸಂಗಾತಿಗಳಾಗಿರುತ್ತಿದ್ದರು. ಸಂಸ್ಕೃತ, ಇಂಗ್ಲಿಷ್ ಕಾವ್ಯಗಳಲ್ಲಿ ಅವರಿಗಿರುವ ನಿಕಟ ವೈದುಷ್ಯ ಅವರನ್ನು ಶ್ರೀ ಶಾಸ್ತ್ರಿಗಳೆಡೆಗೆ ಆಕರ್ಷಿಸಿತು. ಅವರಿಬ್ಬರಿಗೂ ಇದ್ದ ಸಮಾನ ಆಸಕ್ತಿ ಅದೇ.

ಆದರ್ಶ ಸ್ನೇಹಿತ

ನಾನು 1948ರಲ್ಲಿ ಬೆಂಗಳೂರಿಗೆ ಬಂದು ನೆಲಸಿದೆ. ಅಂದಿನಿಂದ ಗುಂಡಪ್ಪನವರ ಸಂಗಡ ಅಮೂಲ್ಯವಾದ ಸ್ನೇಹ ಸಂಪರ್ಕಗಳನ್ನು ಮತ್ತೆ ಬೆಳಸಿಕೊಂಡಿದ್ದೇನೆ. ಯುಕ್ತ ಸಂದರ್ಭಗಳಲ್ಲೆಲ್ಲ, ತತ್ರಾಪಿ 1958ರಲ್ಲಿ ನಾನು ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಗೆ ರಾಜೀನಾಮೆ ಕೊಡಬೇಕಾಗಿ ಬಂದ ಸಂದರ್ಭದಲ್ಲಿ ಅವರ ವಿವೇಚನೆಯ ಹಿತೋಕ್ತಿಯನ್ನು ಕೇಳಿ ಪಡೆದಿದ್ದೇನೆ. ಇಂಡಿಯಾದಲ್ಲಿ ಇಂಗ್ಲಿಷಿನ ಸ್ಥಾನ ಯಾವುದಾಗಿರಬೇಕು ಎಂಬ ವಿಷಯವಾಗಿ ಅವರೂ ನಾನೂ ಏಕಾಭಿಪ್ರಾಯವುಳ್ಳವರಾಗಿರುವುದು ನನಗೆ ಬಹಳ ನೆಮ್ಮದಿಯ ಉತ್ತೇಜನದ ಸಂಗತಿಯಾಗಿದೆ. ಅವರಾದರೆ ತಮ್ಮ ದೀರ್ಘ ಕಾಲದ ಸಾಹಿತ್ಯಕ ಸಂಗಡಿಗರಿಂದ ಈ ವಿಚಾರದಲ್ಲಿ ಭಿನ್ನಾಭಿಪ್ರಾಯ ತಾಳಿದವರಾಗಿದ್ದಾರೆ. ಆದರೂ ಅಂಥವರ ಜತೆಯಲ್ಲಿ ಅವರು ತಮ್ಮ ವೈಯಕ್ತಿಕ ಬಾಂಧವ್ಯಕ್ಕೆ ಅಪೋಹ ತಂದುಕೊಂಡಿಲ್ಲ—ಇದು ಕೊಂಚ ಅಸಾಧಾರಣವಾದ ಸಿದ್ಧಿಯೆ. ಮಹಾತ್ಮ ಗಾಂಧಿಯವರೂ ಶ್ರೀ ಶಾಸ್ತ್ರಿಗಳೂ ರಾಜಕೀಯದಲ್ಲಿ ಉತ್ತರ ಧ್ರುವ ದಕ್ಷಿಣ ಧ್ರುವವಾಗಿದ್ದರೂ ವೈಯಕ್ತಿಕವಾಗಿ ಪರಮೋತ್ತಮ ಸ್ನೇಹಿತರಾಗಿದ್ದ ಸಂಗತಿಯನ್ನು ಇದು ನೆನಪಿಗೆ ತರುತ್ತದೆ. ಮೈಸೂರಿನ ರಾಜಾಜಿಯವರಿಗೆ ಅವರ ವೈಯಕ್ತಿಕ ಉತ್ಕರ್ಷಗಳ ಸಲುವಾಗಿಯೂ ಅವರ ಸಾರ್ವಜನಿಕ ಸೇವಾ ಪರಂಪರೆಯ ಸಲುವಾಗಿಯೂ ನನ್ನ ಪ್ರಶಸ್ತಿ ಕಾಣಿಕೆಯನ್ನು ಸಲ್ಲಿಸುತ್ತೇನೆ.

—ಪಿ. ಕೋದಂಡರಾವ್

ಕನ್ನಡದ ಡಾ॥ ಜಾನ್‌ಸನ್*

ವಿಶ್ವವಿದ್ಯಾನಿಲಯಗಳು ಸಮೆದ ಹಾದಿಯನ್ನೇ ತುಳಿದು ನುಣುಪಾಗಿ ನಡೆಯುವುದು ವಾಡಿಕೆ. ಅದರಲ್ಲಿ ಸೌಲಭ್ಯವುಂಟು ; ನೆಮ್ಮದಿ ಉಂಟು. ಸಾಹಸಕ್ಕೆ ಎಡೆಗೊಡಬೇಕೆಂಬ ಆಸ್ಥೆ ಸಹಜವಲ್ಲ. ಏಕೆಂದರೆ ಬಹುಮಟ್ಟಿಗೆ ಅವು ಸಂಪ್ರದಾಯಬದ್ಧವಾದವು. ಭಾರತದಲ್ಲಿ ಮೊದಮೊದಲು ಸ್ಥಾಪಿತವಾದ ವಿಶ್ವವಿದ್ಯಾಲಯಗಳು ಬ್ರಿಟಿಷ್ ವಿಶ್ವವಿದ್ಯಾನಿಲಯಗಳನ್ನು—ಮುಖ್ಯವಾಗಿ ಆಕ್ಸ್‌ಫರ್ಡ್, ಕೇಂಬ್ರಿಜ್‌ಗಳನ್ನು ಅನುಸರಿಸಿದವು. ಪಾಠಪ್ರವಚನ, ಪರೀಕ್ಷೆಯ ವಿಧಾನ, ಪಠ್ಯ ನಿರ್ದೇಶನ, ಪದವೀದಾನ, ಕ್ರಿಯಾವಿಧಾನ ಎಲ್ಲವೂ ಅಲ್ಲಿನಂತೆಯೇ ಆದ್ದರಿಂದ ಇವುಗಳಿಗೆ ಮುಖ್ಯ ಸ್ಫೂರ್ತಿಸ್ಥಾನ ಹೊರಗಿನದು. ವಿಶ್ವವಿದ್ಯಾನಿಲಯಗಳಿರುವುದು ವಿದ್ಯಾಸಾಧನೆಯಲ್ಲಿ ಅಂತರಗಳ ನಿರ್ದೇಶಕ್ಕೆ ; ನಿರ್ಣಯಕ್ಕೆ. ಒಂದು ಬಿ. ಎ. ಡಿಗ್ರಿ, ಇನ್ನೊಂದು ಎಂ.ಎ. ಡಿಗ್ರಿ, ಹೀಗೆ ಕೆಟ್ಟುದೊ, ಹುಚ್ಚೊ—ಎಂದು ಅಳೆದು ಗೊತ್ತುಮಾಡುವುದು ಅವರ ಕಾರ್ಯಗಳಲ್ಲಿ ಒಂದು. ನಮ್ಮಲ್ಲಿಯೂ ಹಾಗೆಯೇ ನಡೆಯಿತು. ಈಚೆಗೆ ಇಲ್ಲಿ ಪಿಎಚ್.ಡಿ. ಡಿ.ಲಿಟ್., ಡಿ.ಎಸ್‌ಸಿ. ಮುಂತಾದ ಪರಮ ಪದವಿಗಳನ್ನು ನೀಡುವ ರೂಢಿ ಬಂದಿದೆ. ಅವಕ್ಕೆಲ್ಲ ಯಾವುದಾದರೂ ಕ್ರಮಬದ್ಧವಾದ ಶಿಕ್ಷಣ ಕ್ರಮ ಗೊತ್ತಾಗಿರುತ್ತದೆ : ಇಷ್ಟು ವರ್ಷ ಪ್ರವಚನ ನಡೆದಿರಬೇಕೆಂದೋ. ಇಂಥ ನ್ಯಾಸವನ್ನೊ ವಿದ್ವತ್ತೆಯ ಪ್ರಕಾಶನ ಮಾಡುವಂಥ ಲೇಖನವನ್ನೊ ರಚಿಸಿ, ಪರೀಕ್ಷಕರಿಂದ ಸ್ವೀಕೃತವಾಗಬೇಕೆಂದೊ ಗೊತ್ತಾಗಿರುತ್ತದೆ.

ಗೌರವ ಪದವೀದಾನ

ಈಚೆಗೆ ಆ ಪದವಿಗಳನ್ನು ಗೌರವಾರ್ಥವಾಗಿ (Honoris Causa) ಕೊಡುವ ಪದ್ಧತಿಯೂ ಬಂದಿದೆ. ಈ ಸಂಸ್ಥೆಯಲ್ಲಿ ಯಾವ ಪರೀಕ್ಷೆ ಕೊಡದಿದ್ದರೂ ಯಾರೊ ಮಾನ್ಯರ ಮಾನ್ಯತೆಯನ್ನು ಪುರಸ್ಕರಿಸುವ ರೀತಿ ಇದು. ಅವರು ಸ್ವದೇಶದವರಾಗಿರಬಹುದು ; ವಿದೇಶದವರಾಗಿರಬಹುದು. ಅಂಥಲ್ಲಿಯೂ ವ್ಯವಹಾರ ಪ್ರಪಂಚದಲ್ಲಿಯೊ, ಪದವಿ ಅಧಿಕಾರಗಳಲ್ಲಿಯೊ, ಮೇಲೆ ತೋರಿದವರಿಗೇ ಅಂಥ ಪ್ರಶಸ್ತಿ ದೊರೆಯುವುದು. ಈ ಸಲ ಒಂದು ವಿಶೇಷ ಪದವೀದಾನ ಮಹೋತ್ಸವದಲ್ಲಿ ಇಬ್ಬರು ವಿಶಿಷ್ಟ ವ್ಯಕ್ತಿಗಳಿಗೆ ನಮ್ಮ ವಿಶ್ವವಿದ್ಯಾನಿಲಯ ಡಾಕ್ಟರ್ ಆಫ್

---

* (ಕೃಪೆ: 'ಪ್ರಜಾಮತ', 11–2–1962)

ಲೆಟರ್ಸ್ ಪದವಿಯನ್ನು ಕೊಟ್ಟು ಗೌರವಿಸಿತು. ಒಬ್ಬರು ವಿಖ್ಯಾತ ಅರ್ಥಶಾಸ್ತ್ರಜ್ಞರೂ ಭಾರತದಲ್ಲಿ ಅಮೇರಿಕನ್ ರಾಯಭಾರಿಗಳೂ ಆದ ಡಾ॥ ಕೆನ್ನೆತ್ ಗಾಲ್‌ಬ್ರೇತ್ ಅವರು. ಅವರು ತಮ್ಮ ನಾಡಿನ ವಿಶ್ವವಿದ್ಯಾನಿಲಯಗಳಲ್ಲಿ ಪದವೀಧರರೇ. ಒಂದು ಹಿರಿಯ ವಿಶ್ವವಿದ್ಯಾನಿಲಯದ ಸ್ಥಾನಪತಿಗಳೂ ಬಹುಶಃ. ಇನ್ನೊಬ್ಬರು ನಮ್ಮ ನಾಡಿನ ವಿದ್ವಾಂಸರೂ ಹಿರಿಯರೂ ಆದ ಶ್ರೀ ಡಿ. ವಿ. ಗುಂಡಪ್ಪನವರು. ಅವರ ಎಪ್ಪತ್ತು ಎಪ್ಪತ್ತೆರಡನೆಯ ವಯಸ್ಸಿನಲ್ಲಿಯಾದರೂ ಅವರಿಗೆ ಈ ಪ್ರಶಸ್ತಿ ದೊರೆತದ್ದು ನಮ್ಮಲ್ಲಿ ಎಲ್ಲರಿಗೂ ಸಂತೋಷದ ವಿಷಯ. ಅವರಿಗೆ ಬೇಕಿತ್ತೆಂದಲ್ಲ ; ನಮಗೆ ಒಂದು ಮಾನವೆಂದು. ಅವರು ವಿಶ್ವವಿದ್ಯಾನಿಲಯದ ಯಾವ ಗ್ರಾಜು-ಯೇಷನ್ನಿಗೂ ಓದಿದವರಲ್ಲವಾದರೂ ಅವರ ವಿದ್ವತ್ತೆ, ಶಾಸ್ತ್ರಜ್ಞಾನ, ಲೋಕಾನುಭವ, ಕಾರ್ಯಶೀಲತೆ, ಸಲಹಾ ನಿಪುಣತೆ, ಶೀಲ, ಧೈರ್ಯ ಅನನ್ಯಸಾಧಾರಣವಾದವು. ಈ ಸಂಗತಿಗಳೆಲ್ಲವೂ ಸರ್ವವಿದಿತ. ಆದರೆ ನಿಯಮಬದ್ಧವಾದ ವಿಶ್ವವಿದ್ಯಾನಿಲಯ ಅವನ್ನು ಪದವೀದಾನ ಮೂಲಕ ಮಾನ್ಯಮಾಡಿದ್ದು ಆತಿಶಯದ ಸಂಗತಿ. ಈ ಎಷ್ಟೋ ಮುಂಚೆ ಇದು ನಡೆಯಬಹುದಿತ್ತು. ಇಷ್ಟು ತಡವಾಗಿಯಾದರೂ ಆದದ್ದು ತೃಪ್ತಿಯ ವಿಷಯ. ನಮ್ಮ ವಿಶ್ವವಿದ್ಯಾನಿಲಯ ಈ ಕಾರ್ಯದಿಂದ ತಾನೇ ಒಂದು 'ಉಪಾಧಿ'ಯನ್ನು ಸಂಪಾದಿಸಿಕೊಂಡಿತು, ಒಂದು ಹೊಸ ಸಂಪ್ರದಾಯವನ್ನು ಪ್ರತಿಷ್ಠಾಪಿಸಿತು ಎನ್ನಬಹುದು.

ನೆನಪು

ಡಿ.ವಿ.ಜಿ. ಎಂಬುದು ಶ್ರೀಮಾನ್ ಗುಂಡಪ್ಪನವರ ಹ್ರಸ್ವನಾಮ. ಅವರ ಯೋಗ್ಯತೆ, ಕೀರ್ತಿ ಎಂದು ತೊಡಗಿತೋ ನಾನರಿಯೆ. ವಯಸ್ಸಿನಲ್ಲಿ ನಾನು ಅವರಿಗಿಂತ 8–9 ವರ್ಷ ಮಾತ್ರ ಚಿಕ್ಕವನು. ಆದರೆ ಅವರು ಯಾವುದೋ ಬೇರೆ ಕಾಲದ ಹಿರಿಯರೆಂಬಂಥ ವಯೋಮಾನ ನನ್ನ ಮನಸ್ಸಿನಲ್ಲಿದೆ. ಏಕೆಂದರೆ ನಾನು ಲೋಯರ್ ಸೆಕೆಂಡರಿಗೆ ಓದುತ್ತಿರುವಾಗಲೇ ಅವರು ಹೆಸರಾಗಿದ್ದರು. ಅವರ 'ಕರ್ಣಾಟಕ' ಪತ್ರಿಕೆ ಪ್ರಭಾವಶಾಲಿಯಾಗಿತ್ತು. ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಅವರೇ 'ಕರ್ಣಾಟಕದ' ಅಭಿಪ್ರಾಯಗಳಿಗೂ ಸಂಪಾದಕರಿಗೂ ಮಾನ್ಯತೆ ಕೊಡುತ್ತಿದ್ದರು. ಇದು 50 ವರ್ಷಗಳ ಹಿಂದಿನ ಮಾತು. ನಾನು IV–V ಫಾರಮುಗಳಲ್ಲಿದ್ದಾಗ ಕ್ವಿಂಟಂ ಆ್ಯಂಡರ್ಸನ್ ಎಂಬವರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೆಂಟ್ರಲ್ ಕಾಲೇಜಿಗೆ ಬಂದು ಗೊಂದಲವೂ ಗೊಂದಲ ನಡೆಯಿತು. ಪದವೀಧರ ರಲ್ಲದ ಅವರು ಪಡೆದ ಪ್ರತಿಷ್ಠೆಗಾಗಿ 'ಕರ್ಣಾಟಕ'ದಲ್ಲಿ ವ್ಯಾಖ್ಯೆ ನಡೆಯಿತು. ಕೆ. ಎಚ್. ರಾಮಯ್ಯನವರು ಇಂಗ್ಲೆಂಡಿಂದ ಹಿಂದಕ್ಕೆ ಬಂದ ಕಾಲ ಮುಂದೆ. Mrs. Grundy's Kiss ಎಂಬ ಲೋಕಾಭಿಪ್ರಾಯದ ಪ್ರತಿನಿಧಿ ಮುದುಕಿಯ ಜನಜನಿತ ಮಾತು ತೊಡಗಿ ಆ ಪ್ರಸಂಗ ಬಹು ರಮ್ಯವಾಗಿತ್ತು. ಗುಂಡಪ್ಪನವರ ಬರವಣಿಗೆಯ ಬಹು ಭಾಗ ನಮಗೆ ಪ್ರೌಢ ; ಬಿಗಿ. ಲ್ಯಾಟಿನ್ ಫ್ರೆಂಚ್ ಪದಗಳಿಂದ ಕೂಡ ಕೂಡಿ ಆ ಪ್ರಬಂಧ ಗಳು—ಆಗ ಅವಕ್ಕೆ ಪ್ರಾಶಸ್ತ್ಯವಿತ್ತು—ಅದ್ಭುತ ಗೌರವವನ್ನು ಉಂಟುಮಾಡು

ತ್ತಿದ್ದವು. ಆ ಕಾಲದ ಎಲ್ಲ ಮೇಧಾವಿಗಳೂ ಅವರ ಸ್ನೇಹಿತರು : ಎಂ. ಜಿ. ವರದಾಚಾರ್, ಎಲ್. ಎಸ್. ದೊರೆಸ್ವಾಮಿ ಅಯ್ಯರ್, ಶ್ರೀ ಕೆ. ಎಸ್. ಚಂದ್ರಶೇಖರ ಅಯ್ಯರ್, ಜಿ. ಶ್ರೀನಿವಾಸ ಅಯ್ಯರ್ ಮುಂತಾದ ಘಟಾನುಘಟಿಗಳು ಅವರೊಡನೆ ಮಾತಿಗೆ, ಜೊತೆಗೆ ಒದಗುತ್ತಿದ್ದರು. ಒಂದು ಗೋಖಲೆ ಉತ್ಸವವೊ ಒಂದು ಫ್ರೆಂಡ್ಸ್ ಯೂನಿಯನ್ ಭಾಷಣವೊ. ಚರ್ಚೆಯೊ ನಡೆಯಬೇಕಾದರೆ. ಸಾರ್ವಜನಿಕವಾದ ಒಂದು ಸಭೆ. ಅಭಿಪ್ರಾಯಸಂಚಯನ, ಪೌರಾಧಿಕಾರ ಸ್ಥಾಪಕವಾದ ಒಂದು ಸಮ್ಮೇಳನ ನಡೆಯಬೇಕಾದರೆ ಅಲ್ಲಿ ಗುಂಡಪ್ಪನವರ ಕೈ. ಬಾಯಿ. ಕೆಲಸ. ಸಹಕಾರ. ಓಡಾಟ ಇರುತ್ತಿದ್ದವು. ಆದುದರಿಂದ ನಾನು ಅವರನ್ನು ನೇರವಾಗಿ ಕಾಣುವಾಗ್ಗೆ ಅವರ ಮೂರ್ತಿತ್ವವೂ ಕೀರ್ತಿಯೂ ಪೂರ್ಣವಾಗಿ ಸಂಘಟಿಸಿದ್ದವು. ನಿರ್ವಿವಾದವಾಗಿ ಅವರ ಯೋಗ್ಯತೆ. ಪ್ರಭಾವ, ನಮ್ಮ ಮ್ಯುನಿಸಿಪಾಲಿಟಿಯಲ್ಲಿ, ಶಾಸನಸಭೆಗಳಲ್ಲಿ. ಸಾರ್ವಜನಿಕ ಕ್ಷೇತ್ರಗಳಲ್ಲಿ, ವೃತ್ತಪತ್ರಿಕಾ ಪ್ರಪಂಚದಲ್ಲಿ. ವಿದ್ವಾಂಸರ ಕೂಟಗಳಲ್ಲಿ ಸ್ಥಾಪಿತವಾಗಿತ್ತು. ಅವರ ಸಂಸ್ಕೃತ. ಕನ್ನಡ. ಇಂಗ್ಲಿಷ್ ಪಾಂಡಿತ್ಯ ಎಲ್ಲರಿಗೂ ಅರಿವಾಗಿತ್ತು.

ನೇರ ಪರಿಚಯ

ನಾನು ಅವರನ್ನು ಹತ್ತಿರದಲ್ಲಿ. ನೇರ ಕಂಡದ್ದು ಸುಮಾರು 1923ರಲ್ಲಿ : ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ವಾರ್ಷಿಕೋತ್ಸವ ಸಮಯದಲ್ಲಿ. ನನ್ನ ಪೂಜ್ಯ ಮಿತ್ರರಾದ ವೆಂಕಣ್ಣಯ್ಯನವರ ಮನೆಗೆ ನಾನು ಹೋಗಿದ್ದಾಗ ಅವರು ಅಲ್ಲಿಗೆ ಬಂದರು. ಆವರೆಗೆ ನನ್ನ 2–3 ಪುಸ್ತಕ ವಿಮರ್ಶೆಗಳು, ಬಹುಶಃ ಎರಡು ಪದ್ಯಗಳು ಪ್ರಬುದ್ಧ ಕರ್ಣಾಟಕದಲ್ಲಿ ಅಚ್ಚಾಗಿದ್ದವು. ಪದ್ಯಗಳಲ್ಲಿ 'ಒಲವು' ಎಂಬುದೊಂದು ಅಲ್ಲಿ ಬಳಸಿದ ಮಾತುಗಳಿಂದ ಬಹುಶಃ ಹೊಸ ಕನ್ನಡ ರೂಪಕ್ಕಿಂತಲೂ ನಡುಗನ್ನಡದ—ಹಳಗನ್ನಡದ—ರೀತಿಯ ರಚನೆ ಅದು. ಅದರ ಮಾತು ಅವರಿಗೆ ಮೆಚ್ಚಿತ್ತೆಂದು ಕಾಣುತ್ತದೆ. ಅದನ್ನು ಬರೆದವನು ನಾನೇ ಎಂದು ಮಿತ್ರರು ಪರಿಚಯ ಮಾಡಿಕೊಟ್ಟರು. ನನ್ನ ಭಯ ಗೌರವಗಳ ಭಾರದಿಂದ ಅಂದು ನನಗೆ ನಿಂತ ನೆಲ ಕುಸಿವಂತೆ ಇತ್ತು. ಆದರೆ ಗುಂಡಪ್ಪನವರ ಪ್ರೀತಿ. ಧಾರಾಳ ಅಂದು ನನ್ನನ್ನು ಸ್ವೀಕರಿಸಿ ಈವರೆಗೂ ನಡೆಸಿಕೊಂಡು ಬಂದಿವೆ.

ಅವರ ವಿದ್ವತ್ತು

ಅವರ ಅಭ್ಯಾಸ ಅದ್ಭುತವಾದದ್ದು : ಯಾವುದನ್ನು ಕುರಿತು ಬರೆದರೂ ನುಡಿದರೂ ಅದರ ಹಿಂದೆ ವಿಷಯದ ಕೂಲಂಕಷ ಪರ್ಯಾಲೋಚನೆ ಇರುತ್ತದೆ. ಅವರ ವಾದದಲ್ಲಿ ನಿಶಿತತೆ. ಖಚಿತತೆ. ವಿಷಯಸಂಪತ್ತಿ. ಪ್ರಮಾಣಸಮೃದ್ಧಿ ಇರುತ್ತವೆ. ಆ ಸನ್ನಿವೇಶಕ್ಕೆ ಸಂಬಂಧಿಸಿದ ಪೂರ್ವಕಥೆ ಅನುಭವಗಳೆಲ್ಲ ಸಜ್ಜಾಗಿರುತ್ತವೆ. ಆದ್ದರಿಂದ ಅವರನ್ನು ಎದುರಿಸುವುದು ಕಷ್ಟ. ಹೊರಗಣ್ಣಿಗೆ. ಎಣಿಕೆಗೆ ಅತಿಧಾರಾಳದ ಉಕ್ತಿ ಎಂಬಂತೆ ಕಾಣುವ ಉಕ್ತಿಯನ್ನು ತಿಳಿದೊ. ತಿಳಿಯದೆಯೊ

ಅವರೊಡನೆ ಚರ್ಚೆಮಾಡಿ ನೋಡಿ. ಆ ಮನಸ್ಸಿನ ಬಿಸಿ, ಮೊನೆ, ನೆಲಸು, ಆಳ ಗೊತ್ತಾಗುತ್ತವೆ. ಆದರೆ ಅವರು ಆಗ ಆ ಮನಸ್ಸಿನಲ್ಲಿರಬೇಕು ; ನಿಮಗೆ ಒಲಿಯು ಬೇಕು ; ನೀವು ಶ್ರದ್ಧಾವಂತರೆಂದೊ ಅನುಗ್ರಹಕ್ಕೆ ಪಾತ್ರರೆಂದೊ ವಾದಕ್ಕೆ ಅರ್ಹರು, ಸಮಾನಸತ್ವರು—ಅಂಥವರು ಎಷ್ಟು ಮಂದಿ ಇದ್ದಾರು ?—ಎಂದೊ ಪ್ರತಿ ಯೋಗಿಗಳೆಂದೊ ಅರಿಯಬೇಕು. ಅಂಥ ಸಂದರ್ಭಗಳಲ್ಲಿ ಆ ಜ್ಞಾನಶಾಲೆಯ ತೆರವನ್ನೂ ಪ್ರಕಾಶದ ವಿಲಾಸವನ್ನೂ ಕಾಣಬಹುದು. ವಿಷಯದ ಬೇರು, ತಾಳು, ಕಾಂಡ, ಎಲೆ, ಹೂ ಹಣ್ಣು ಎಲ್ಲ ಹಬ್ಬಿನಿಂತು ಗೋಚರವಾಗುತ್ತದೆ. ಅಂಥ ಅನು ಭವ ಒಂದು ಶಿಕ್ಷಣ ವಿಶೇಷ. ಇದಕ್ಕೆ ಅವರು ಎಷ್ಟು ಕೃಷಿ ಮಾಡಿರಬೇಕು ಎನ್ನಿಸುತ್ತದೆ. ಇದೆಲ್ಲ ಸ್ವಂತ ವ್ಯಾಸಂಗದಿಂದ ಅವರು ಪಡೆದುಕೊಂಡ ಲಾಭಸಿದ್ಧಿ. ಓದುವುದು ಮುಖ್ಯವಲ್ಲ ; ಓದಿದ್ದು ಜೀರ್ಣವಾಗಿ, ರಕ್ತವಾಗಿ, ಮಾಂಸವಾಗಿ, ಎಲುಬಾಗಿ ಆಗಬೇಕು. ಅಗತ್ಯಕ್ಕೆ ಒದಗುವಂತೆ ಉಳಿಯಬೇಕು. ಸಜ್ಜಾಗಿ, ಸಂಸ್ಕಾರ ವಾಗಿ, ವಿದ್ಯೆಯ ಅಬ್ಬರಕ್ಕಿಂತ ಅದರ ಉಸಿರು, ಜೀವ, ಪ್ರಭಾವ ಕಾಣಬೇಕು. ನಿಜರೂಪ, ಪ್ರಶ್ನೆಯ ಲಕ್ಷಣ, ಕ್ರಿಯಾವಿಲಾಸ ಅಲ್ಲಿರುತ್ತವೆ. ಅವರ ವಾದದ ಹಿಂದೆ ಅವರು ಹೇಳದೆ ಬಿಟ್ಟ ಇನ್ನೂ ಹತ್ತು ಆಧಾರಗಳನ್ನೂ ವಾದಗಳನ್ನೂ ಅವರು ಅಸ್ತ್ರವಾಗಿಟ್ಟುಕೊಂಡಿರುತ್ತಾರೆ. ಅವೆಲ್ಲವನ್ನೂ ಸಂಗ್ರಹಿಸಿ ನಾಳೆ ನಾಡಿದ್ದು ಇನ್ನೊಂದು ಹೊಸ ಹೆಚ್ಚು ಪರಿಣಾಮಕಾರಿ ವಾದವನ್ನೊ ಅದರ ಬೇರೆ ಬಗೆಯ ಹೃತ್ಪ್ರಕಾಶನವನ್ನೊ ಅವರು ಮಾಡಬಲ್ಲವರಾಗಿರುತ್ತಾರೆ. ವೇದಿಕೆಗಳ ಮೇಲೆ, ಶಾಸನಸಭೆಗಳಲ್ಲಿ ರಾಜಕೀಯ ಸುಧಾರಣಾ ಸಮಿತಿಗಳಲ್ಲಿ, ವಿಶ್ವವಿದ್ಯಾನಿಲಯದ ಕೌನ್ಸಿಲಿನಲ್ಲಿ ಅವರ ವಾದಗಳ ಹಿಂದೆ ಚಿಂತನ, ವಿಷಯಸಂಪತ್ತಿ, ಶ್ರದ್ಧೆ, ಸತ್ಯ ಧರ್ಮಗಳ ನಿಷ್ಠೆ, ಸಮಾಜಹಿತಕ್ಕೆ ಸಂಬಂಧಿಸಿದ ಆಸ್ಥೆ ಎಂಥವಾಗಿರುತ್ತಿದ್ದವೆಂಬು ದನ್ನು ಅರಿತವರು ಬಲ್ಲರು.

ಚಿಂತನ

ಓದಿನ ಜೊತೆಗೆ ಸ್ವತಂತ್ರವಾಗಿ ನಿರಂತರ ಚಿಂತನದಲ್ಲಿ ಅವರು ಆಸಕ್ತರು. ತಾವು ಅರಿತುದನ್ನು ಅವರಿಗೆ ಖಚಿತಮಾಡಿಕೊಳ್ಳಲು ಅವರು ಪಡುವ ಪಾಡು ಅಸಾಧಾರಣ. ಅವರಿಗೆ ಪ್ರಿಯವಾದ ಒಂದು ಮಾತು ಕುಮಾರಿಲಭಟ್ಟರ "ಸ್ವಬೋಧ ಪರಿಶುದ್ಧ್ಯರ್ಥಂ" ಎಂಬುದು. ಅವರೇ ಉದ್ಧರಿಸುವುದು. ಇಂದಿಗೂ ಹಾಗೇ. ನಿಘಂಟು ಸಾಲದು ; ವಿಶ್ವಕೋಶವೊ. ಕಲ್ಪದ್ರುಮವೊ, ಆಚಾರ್ಯರ ಅಧಿಕಾರ ವಾಕ್ಯವೊ, ಮಿಲ್, ಮಾರ್ಲೆ, ಡೈಸಿ, ಬ್ರೈಸ್, ಆನ್ಸನ್ ಅವರ ಆಧಾರವಾಕ್ಯವೊ ಅವರಿಗೆ ಪ್ರಿಯ. ಒಂದು ಮಾತನ್ನು ಪ್ರಯೋಗಿಸುವಾಗ ತಾವು ಮೊದಲು ಅದರ ನೆಲಸನ್ನು ಗೊತ್ತು ಮಾಡಿಕೊಂಡು, ತಿಳಿದವರೆನ್ನುವವರೊಡನೆ ಪ್ರಸ್ತಾಪಮಾಡಿ, ತಮ್ಮ ಪ್ರಯೋಗ ವನ್ನು ಕೆಲವೇಳೆ ಚಿಂತಿಸಿ, ಎರಕಹುಯ್ದು, ಆಮೇಲೆ ಹಾಯಬಿಡುತ್ತಾರೆ. ಒಂದು 'ಕಾಂಪ್ರೊಮೈಸ್' ಎಂಬ ಮಾತಿಗೆ ಪ್ರತಿಶಬ್ದದ ಪರ್ಯಾಲೋಚನೆಗಾಗಿ ಎಷ್ಟು ವಿವೇಚನೆ ನಡೆಯಿತೆಂಬುದನ್ನು ನಾನು ಬಲ್ಲೆ. Justice ಎಂಬ ಮಾತಿನಲ್ಲಿ ಅಂಗವಾದ

Just ಎಂಬ ಮಾತಿಗೆ 1935–36ರಲ್ಲಿ ಸರ್ ಅರ್ನೆಸ್ಟ್ ಬಾರ್ಕರವರೊಡನೆ ಅವರು ವಿಸ್ತಾರವಾಗಿ ಪರ್ಯಾಲೋಚನೆ ಮಾಡಿದ್ದರಂತೆ. ಮದರಾಸಿನಿಂದ ಇಲ್ಲಿಗೆ ತಂಪಿಗೆ ಬರುತ್ತಿದ್ದ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು, ಟಿ. ಆರ್. ವೆಂಕಟರಾಮಶಾಸ್ತ್ರಿಗಳು, ಪಿ. ಶಿವಸ್ವಾಮಿ ಅಯ್ಯರು ಮುಂತಾದ ಹಿರಿಯರ ಗುಂಪಿನಲ್ಲಿ ಸಮಸತ್ವರಾಗಿ ಅವರು ವ್ಯವಹರಿಸುತ್ತಿದ್ದ ಸಂಗತಿ ಯಾರ ಕೀರ್ತಿಗೂ ದ್ಯೋತಕವೇ ಸರಿ. ಆ ವಿದ್ವಾಂಸರ ಸಾರಗ್ರಹಣ, ವಿಚಕ್ಷಣೆ, ಸತ್ಯಸಾಧನಾಪ್ರಿಯತೆ, ಪ್ರಸಂಗಗಳನ್ನು ಕುರಿತು ಸರ್ವ ಮುಖಗಳ ಪರಿಶೀಲನನಿರತತೆ ಇವು ಇವರ ಸ್ವಭಾವವೂ ಆದ್ದರಿಂದಲೇ ಇದು ಶಕ್ಯವಾಯಿತು. ನಾನು ಶಾಸ್ತ್ರಿಗಳವರ ದರ್ಶನಮಾಡಲು ಹೋದ ಒಂದೇ ಒಂದು ಸಲ ಅವರು ಹೀಗೆಂದರು : " ನಿಮಗೆ ಅಲ್ಲಿ ಇನ್ನಾವ ಮಟ್ಟದ ವಿದ್ವಾಂಸರ ಸಂಗತಿ ದೊರೆತೀತು ? ಉದಾಹರಣೆಗೆ 'ಹಿಂದೂ' ಪತ್ರಿಕೆಯ ಸಂಪಾದಕೀಯವೊಂದನ್ನು ಇಟ್ಟುಕೊಂಡು ಚರ್ಚೆಮಾಡಲು ಗುಂಡಪ್ಪನವರಿಗಿಂತ ದಕ್ಷರೂ, ಕ್ಷಮರೂ ಅಲ್ಲಿ ಸಿಕ್ಕಿಯಾರೆಂದಿದ್ದೀರ ? " ಎಂದುದುಂಟು. ಇತಿಹಾಸಸಂಶೋಧನೆಗೆ ಅವರ 'ವಿದ್ಯಾರಣ್ಯರ ಸಮಕಾಲೀನರ' ಪ್ರಬಂಧ. ವಿಮರ್ಶೆಗೆ 'ಜೀವನ ಸೌಂದರ್ಯ ಮತ್ತು ಸಾಹಿತ್ಯ', 'ಸಾಹಿತ್ಯಶಕ್ತಿ.' ಒಂದು ದೃಷ್ಟಿಯ ಸಾಹಿತ್ಯಪ್ರೀತಿಗೆ 'ಉಮರ್ ಖಯ್ಯಾಂ'. ಲೋಕಾನುಭವ, ಜೀವನ ವಿವೇಕಗಳಿಗೆ 'ಮಂಕುತಿಮ್ಮನ ಕಗ್ಗ' —ಇವು ಅವರ ಅಭಿರುಚಿಗೂ, ಸಾರನಿಷ್ಠೆಗೂ ಕೃತಿನಿರ್ಮಾಣಕ್ಕೂ ನಿದರ್ಶನವಾಗುವ ಕೃತಿಗಳು. ಅವರ ಆಸ್ತಿಕತೆಗೆ 'ಬಾಳಿಗೊಂದು ನಂಬಿಕೆ' ಒದಗೀತು. ಉಳಿದುವು ಎಷ್ಟೋ : ನಾಟಕ, ಕವನ, ಜೀವನ ಚರಿತ್ರೆ, ವಿಮರ್ಶೆಯ ಗ್ರಂಥಗಳು.

ಸಾರ್ವಜನಿಕ ಕಾರ್ಯ

ಸಾರ್ವಜನಿಕ ಕಾರ್ಯಗಳನ್ನು ಅವರು ಎಷ್ಟು ನಿರ್ಮಮರಾಗಿ ನಡೆಸುವರೆಂಬುದಕ್ಕೆ ಅವರ ಜೊತೆಯಲ್ಲಿ ಕೆಲಸ ಮಾಡಿದವರೆಲ್ಲರೂ ಸಾಕ್ಷಿಯೇ. ಅವರು ಗೋಖಲೆ ಸಂಸ್ಥೆಯನ್ನು ಕಟ್ಟಿ, ಅದರ ಆಧಾರ, ಜೀವನಾಡಿಯಾಗಿರುವುದು ಈಚಿನ ವಿಷಯ. ಅವರ ಕಾರ್ಯಕಲಾಪಗಳ ಹಿಂದೆ, ಒಳಗೆ, ಅಡಿಯಲ್ಲಿ ಅಲ್ಲಿನ ವಿದ್ಯಾದಾನದಲ್ಲಿ ಅವರ ಶಕ್ತಿ, ವ್ಯಕ್ತಿಗುಣ, ಸರಸತೆಗಳೇ ಇರುವುವು : ಅವರ ಸುತ್ತ ಸುತ್ತಿಕೊಂಡು ನೆರವಾಗುವ, ದುಡಿಯುವ ಮಿತ್ರರ, ಯುವಕರ ಭಕ್ತಿ ಶ್ರದ್ಧೆಗಳೇನು ! ಅವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ನನಗೆ ಅವರ ಕ್ರಿಯಾವಿಶೇಷದ ಪರಿಚಯವಾಯಿತು. ಅದು ನಿತ್ಯ ಪರೀಕ್ಷೆ, ನಿತ್ಯ ತೇರ್ಗಡೆಯಾಗಬೇಕಾದ ಲೋಕ. ತಾವು ದಿನಾ ಎಷ್ಟು ದೀರ್ಘಕಾಲ ಗಾಸಿಪಟ್ಟು ದುಡಿಯುವರೋ ಅಷ್ಟಾದರೂ ಜೊತೆಯವರು ದುಡಿಯಬೇಕಾಗುತ್ತದೆ. ಉಳಿದವರು ಮಾಡದಿದ್ದರೆ ಅವರೇ ಮಾಡುತ್ತಾರೆ. ಯುವಕರಾದ, ಅನನುಭವಿಗಳಾದ ನಮಗೆ ಕ್ರಿಯಾವಿಧಾನ ಗೊತ್ತಿಲ್ಲ : ಅವರು ಹೇಳಿಕೊಡುತ್ತಾರೆ, ಮಾಡಿ ತೋರಿಸುತ್ತಾರೆ. ದಿನಕ್ಕೆ ಗೊತ್ತಾದ ಉಪನ್ಯಾಸಕರು ಬರಲಿಲ್ಲ : ತಾವು ಉಪನ್ಯಾಸ ಮಾಡುತ್ತಾರೆ ; ಇಲ್ಲವೇ ಇನ್ನೊಬ್ಬರನ್ನು ಸಿದ್ಧರಾಗಿರಿಸಿಕೊಂಡಿರುತ್ತಾರೆ. ಅವರ ವಯಸ್ಸಿನವರು ಕೆಲವರ ನೆನಪು ಅಸ್ಪಷ್ಟಕರ.

ಇವರನ್ನು ದೇವರು ಇಷ್ಟೇಕೆ ಶಕ್ತರನ್ನಾಗಿ ದಕ್ಷರನ್ನಾಗಿ ಮಾಡಿದ್ದಾನೋ—ನಮ್ಮನ್ನು ಗೋಳುಹೊಯ್ದುಕೊಳ್ಳುವುದಕ್ಕೆ ಎನ್ನಿಸಿಬಿಡುತ್ತದೆ ! ತಂದೆತಾಯಿಯರ ಮತ್ತು ವಂಶದ ಎಲ್ಲ ಶಕ್ತಿಯನ್ನೂ ಕೆಲವು ಮೊದಲ ಮಕ್ಕಳು ಹೀರಿಕೊಂಡು ಹುಟ್ಟುತ್ತಾರಂತೆ. ಅವರ ಬೆನ್ನಲ್ಲಿ ಬರುವವರಿಗೆ ಆ ಧೃತಿ, ಸ್ಮೃತಿ, ಆ ಮೇಧಾವಿತನ, ಚುರುಕು, ಸರ್ವಸಾಧಕ ಶಕ್ತಿ ಸುಮಾರು ಇಲ್ಲವಾಗುತ್ತವೆ. ಇದ್ದುದು ಇಂಥವರ ಹೋಲಿಕೆಯಲ್ಲಿ ಮಂಕಾಗುತ್ತದೆ. ಅಂಥ ಅಗ್ರಜ ಪಂಕ್ತಿಗೆ ಸೇರಿದವರು ಡಿ.ವಿ.ಜಿ. ಯಾವುದೋ ತಾಲ್ಲೂಕು ಜನ, ಅವರು ಧರಿಸಿದ್ದ ಬಟ್ಟೆ, ಆಡಿದ ಮಾತು, ನಡೆದ ಸಂಗತಿ, ಅವರ ಮಾತಾಮಹ ಪಿತಾಮಹರು ಎಲ್ಲರ ಎಲ್ಲವೂ ಅವರ ನೆನಪಿನಲ್ಲಿ ಅಚ್ಚಳಿಯದೆ ನಿಲ್ಲುತ್ತವಾಗಿ, ಬೇರೆಯವರು ಅಪೂರ್ಣವಾಗಿ ನುಡಿದು ಬದುಕುವ ಹಾಗಿಲ್ಲ. ಯಾವ ಸಣ್ಣ ಸಂಗತಿಯನ್ನು ವರ್ಣಿಸಿದರೂ ಪೊಗದಸ್ತಾಗಿ, ಆವರಣ ಕಟ್ಟಿ, ರಂಗು ರಚನೆ ವೈಭವಯುತವಾಗುವಂತೆ. ಎಂದಿಗೂ ಮನಸ್ಸಿನಲ್ಲಿ ಉಳಿಯುವಂತೆ ವರ್ಣಿಸ ಬಲ್ಲವರು. ಆ ವರ್ಣರಂಜನೆ ಒಂದು ಹಬ್ಬ. ಮುಳಬಾಗಿಲು ಕತೆಗಳೂ, ಮೈಸೂರಿನ ಇತರ ದೊಡ್ಡವರ. ಚಿಕ್ಕವರ. ಸಾಹಿತಿಗಳ. ಕಲಾಸಿಪಾಳ್ಯ ಗುಂಡೋಪಂತರ ಬೀದಿ ಗಳವರ, ಪರಿಷತ್ತಿನ ದಿಗ್ದಂತಿಗಳ, ವೃತ್ತಪತ್ರಿಕೆಗಳವರ. ಜಾಡಮಾಲಿ ನಾರಿಗ, ನರಸಪ್ಪ,—ಏಕೆ, ಆಳಿದ ಅರಸರ ವರೆಗೂ. ಮದ್ರಾಸಿನ ಪ್ರಸಿದ್ಧ ದೆಹಲಿಯ ಎಲ್ಲ ಪ್ರಖ್ಯಾತರ ವರೆಗೂ ಅವರಿಗೆ ತಿಳಿದ ಸಂಗತಿ.

ಅವರ ವ್ಯಕ್ತಿವಿಶೇಷ ಎಂಥದೆಂದರೆ ಎಲ್ಲರೂ ಎದೆ ತೆರೆದು ಬಾಯಿ ತೆರೆದು ಮಾತನಾಡುತ್ತಾರೆ ; ಎಲ್ಲ ಬಗೆಯ ವಿಕಾರಗಳೂ ವಿಶೇಷಗಳೂ ಅಲ್ಲಿ ಶೇಖರ ವಾಗುತ್ತವೆ. ನೆಳಲು ಬೆಳಕು, ನೀರು ಕೆಸರು, ಮುಳ್ಳು ಹೂ—ಎಲ್ಲವೂ ಅಲ್ಲಿ ಸೇರುತ್ತವೆ. ಅವರ ಕಿವಿಗೆ ಬೀಳದ ಸಾರ್ವಜನಿಕ ಜೀವನದ ಗುಟ್ಟೇ ಇಲ್ಲವೇನೊ ಎಂಬಷ್ಟು ತುಂಬುಸಂಪತ್ತಿ ಅವರಲ್ಲಿರುವುದು. ಧಾರಾಳದಲ್ಲಿ ಅವರು ಮಾತನಾಡುವಾಗಲೂ ಹಾಗೆಯೇ. ಯಾವುದೂ ಮುಚ್ಚಿಲ್ಲ ; ಮರೆಯಿಲ್ಲ ; ಆಚಾರ್ಯಮುಷ್ಟಿಯಿಲ್ಲ ; ತೆರೆದದ್ದೇ. ಅದೊಂದು ಜನಾರ್ದನ ಕಚೇರಿ. ಅಲ್ಲಿ ಯಾವ ಹಿಡಿತ, ಪಟ್ಟು ಹೊರತಲ್ಲ. ಯಾರು ಎಷ್ಟು ತೆರೆದು ನುಡಿದರೂ ಸೈ. ಅಲ್ಲಿ ತೃಪ್ತಿಯಿಲ್ಲ ; ಸಾಕು, ಇನ್ನು ಬೇಡ ಎನ್ನುವ ಹಾಗಿರುವುದಿಲ್ಲ. ಯಾರಾದರೂ ಅವರಿಗೆ ತಿಳಿಯದೆ ಅವರು ಹೇಳುವ ಚಿಟ್ಟೆಕಥೆಗಳನ್ನು ಬರೆದುಕೊಂಡರೆ ಅಥವಾ ಧ್ವನಿಮುದ್ರಿಸಿಕೊಂಡರೆ ಆ ಸಾಹಿತ್ಯ ಈ ಅರುವತ್ತು ವರ್ಷಗಳ ನಮ್ಮ ಕಡೆಯ ಜೀವನದ ಸಮಗ್ರ ಪ್ರಕಾಶನದ ಗಟ್ಟಿ ಯಂತೆ ಒಂದೆಡೆ ಸಿಕ್ಕುತ್ತದೆ.

ಒಂದೆರಡು ಸಂದರ್ಭಗಳು

ಅವರ ರೀತಿ. ನಿಯಮ ನಿಷ್ಠೆಗಳನ್ನು ತಿಳಿಸಲು ಒಂದೆರಡು ಸಂದರ್ಭಗಳನ್ನು ತಿಳಿಸುತ್ತೇನೆ. ಗೌರವಕ್ಕೆ ಎಂದರೆ. ಹಣ ತೆಗೆದುಕೊಳ್ಳದೆ ಸಂಸ್ಥೆಗಳಲ್ಲಿ ಕೆಲಸ ಮಾಡು ವವರನ್ನು ಕುರಿತು ಒಂದು ಮಾತು ಹೇಳುತ್ತಿದ್ದರು. ಪರಿಷತ್ತಿನಲ್ಲಿ ತಮ್ಮೊಡನೆ

ಕೆಲಸ ಮಾಡುವವರಿಗೆ ನಾವು ಸಂಬಳ ತೆಗೆದುಕೊಳ್ಳುವವರಿಗಿಂತ ಕಡಮೆ ಮಾಡಬಾರದು. ಆ ಸಬೂಬು ಹೇಳಿ ದೌಲತ್ ಮಾಡಬಾರದು ಎಂದು. ಸಾರ್ವಜನಿಕ ಸಂಸ್ಥೆ ಮನೆ ಇದ್ದಂತೆ. ಅಲ್ಲಿಗೆ ಯಾರೂ ಬರಬಹುದು. ಖುಷಿಯಿಂದ ಅವರೆಲ್ಲರಿಗೂ ಒಂದೇ ಸಮನಾದ ಮರ್ಯಾದೆ ಸಲ್ಲಬೇಕು. ಅಲ್ಲಿ ವೃತ್ತಿ ಹಾಗೆ; ಇಲ್ಲಿ ಸಂಸ್ಥೆ ಹಾಗೆ. ನಿಮ್ಮ ಖಾಸಗಿ ವಿಶ್ವಾಸ, ಪೂರ್ವಾಗ್ರಹ, ರಾಗ ದ್ವೇಷ ದೂರವಿಡಿ. ನಿಮಗೆ ಆಗದವರು ಬಂದರೆ ಮುಂದೆ ಹೋಗಿ ಒಂದು ಮಟ್ಟು ಹೆಚ್ಚು ವಿಶ್ವಾಸ ತೋರಿಸತಕ್ಕದ್ದು.—ಎಂದು ನುಡಿಯುತ್ತಿದ್ದರು. ಉತ್ಸವಾದಿಗಳಿಗೆ ಸ್ವಯಂಸೇವಕರು ಮಡಿದರೆ, ದಿನದ ಕಾರ್ಯವೆಲ್ಲ ಮುಗಿದು ಅವರು ಮನೆಗಳಿಗೆ ಹಿಂತಿರುಗುವವರೆಗೂ ಅವರ ಒಡನೆ ಇದ್ದು, ಅವರಿಗೆ ತಿನ್ನಲೊ ಕುಡಿಯಲೊ ಕೊಟ್ಟು, ಆಮೇಲೆ ತಾವು ಮನೆಗೆ ಹೋಗುವುದು ರೂಢಿ. 1934ರಲ್ಲಿ ರಾಯಚೂರಲ್ಲಿ ಸಮ್ಮೇಳನ ನಡೆಯಿತು. ಏನೋ ಅನಿಷ್ಟ, ರೇಜಿಗೆ ಪ್ರಸಂಗ. ಹಿರಿಯರೊಬ್ಬರು—ಅವರಿಗೂ ಮಾನ್ಯರು—ತಮ್ಮ ಪಾಲಿನ ಭಾಷಣ ಮಾಡಿ ಮುಗಿಸಿದ್ದರು. ಇನ್ನೊಬ್ಬರು ಎದ್ದು ಆಕ್ರೋಶದ, ಕುಚೋದ್ಯದ ಮಾತುಗಳನ್ನಾಡುತ್ತಿದ್ದರು. ಈ ಹಿರಿಯರು ಉತ್ತರ ಕೊಡಲೆಂಬಂತೆ ಎರಡು ಸಲ ಎದ್ದು ಉತ್ತರದ ಅವಕಾಶ ಬೇಡಿದರು. ಮಾತಿನ ಸರದಿ. ಪಕ್ಕ ಇನ್ನೊಬ್ಬರದಾಗಿ ಅವರು ನಿಂತಿರುವಾಗ ಅವರು ಮುಗಿಸುವ ತನಕ ಇವರಿಗೆ ಅವಕಾಶ ಕೊಡಲಾಗುವುದಿಲ್ಲವೆಂದು ಗುಂಡಪ್ಪನವರು ನಿಷ್ಠುರವಾಗಿ ತಿಳಿಸಿ ಅವರಿಗೆ ಅಸಮಾಧಾನವುಂಟುಮಾಡಿದ್ದುಂಟು. ತರುವಾಯ ಜಮಖಂಡಿಯಲ್ಲಿ ಯಾವುದೊ ಒಂದು ಧೋರಣೆಯನ್ನು ಕುರಿತು ಸಕಲ ಸದಸ್ಯರ ಅಭಿಮತವನ್ನು ಕೇಳಿದರು. ಆ ಸಂಬಂಧದಲ್ಲಿ ವೃತ್ತಪತ್ರಿಕೆಗಳಲ್ಲಿ ಕಸರೆಯಾಗಿತ್ತು. ಮೂರು ಗಂಟೆ ಮಾತುಕತೆ, ವಾದ ವಿವಾದ ನಡೆದ ಮೇಲೆ ವೋಟಿಗೆ ಹಾಕಿದರು. ಅಭಿಮತ ಸಮಸಮವಾಗಿ ಒಡೆಯಿತು. ಇವರೆಂದರು: ಇದು ನನಗೆ ಒಪ್ಪಿತವಿಲ್ಲ: ಪರಿಷತ್ತು ತನ್ನ ಹಿತದೃಷ್ಟಿಯಿಂದ ಒಂದು ರೀತಿಯನ್ನು ಅನುಸರಿಸುತ್ತಿದೆ. ಅದಕ್ಕೆ ಆಕ್ಷೇಪವಿದೆ. ಈ ಸಕಲ ಸದಸ್ಯ ಮಂಡಲಿ. ನಾವು ಸರಿಯೆ ? ವಿರೋಧ ಮತ ಸರಿಯೆ ? ಎಂಬುದನ್ನು ಖಚಿತಪಡಿಸಿ ಮಾರ್ಗದರ್ಶನ ನೀಡಬೇಕು. ಇನ್ನು ಹದಿನೈದು ನಿಮಿಷ ಸಭೆ ಬರಖಾಸ್ತಾಗುತ್ತದೆ. ಪುನಃ ಸಭೆ ಸೇರಿದಾಗ ಇನ್ನೊಂದು ಸಲ ವಿಷಯವನ್ನು ಸಭೆಯ ವೋಟಿಗೆ ಹಾಕುತ್ತೇನೆ. ನಿರ್ಣಾಯಕವಾಗಿ ಅಭಿಪ್ರಾಯ ಸೂಚಿಸದಿದ್ದರೆ ಕೆಲಸ ಮಾಡಿದವರಿಗೆ ಅನ್ಯಾಯವಾಗುತ್ತದೆ ಎಂದು ಬರಖಾಸ್ತು ಮಾಡಿದರು. ಪುನಃ ಸಭೆ ಕೂಡಿದಾಗ ಅವರೆಗೆ ನಡೆದಿದ್ದುದನ್ನೆಲ್ಲ 5 ನಿಮಿಷ ಸಂಗ್ರಹಿಸಿ, ವಾದ ಪ್ರತಿವಾದಗಳನ್ನು ಕ್ರೋಢೀಕರಿಸಿ ವೋಟಿಗೆ ಹಾಕಿದರು. ಸಭೆಯು ಅಭಿಮತ ಪರಿಷತ್ತಿನ ಪರವಾಗಿ ಮುಕ್ಕಾಲು ಭಾಗ ಬಂದಿತ್ತು. ಇದು ವಿಧಾಯಕವಾದ ನಡತೆ. ಸಭೆ ಸಂಸ್ಥೆಗಳನ್ನು ನಡಸುವವರಿಗೆ ಯಾವುದು ಗುಣ. ಯಾವುದು ದುರ್ಬಲ ಎಂಬುದನ್ನು ಎಲ್ಲರಿಗೂ ತೋರಿಸಿಕೊಡುವ ಮಾರ್ಗ ಎಂಬುದಾಗಿ ಇದನ್ನು ಹೇಳಿದ್ದೇನೆ.

ಅಖಂಡ ಮನಸ್ಸು

ಏನು ಮಾಡಿದರೂ ಅದರಲ್ಲಿ ಮನಸ್ಸು, ರೂಪಾಯಿಗೆ 100 ಪೈಸೆ ಲಗ್ನವಾಗಿರುತ್ತದೆ. ಒಂದು ಗಂಡು ಧೈರ್ಯ, ವಿಲಾಸ ಅದನ್ನು ನಡಸುತ್ತದೆ. ಅವರನ್ನು ಡಾಕ್ಟರ್ ಜಾನ್‌ಸನ್ನಿಗೆ ಹೋಲಿಸಿದ್ದುಂಟು. ಅಂಥದೇ ಅವರ ಸದಸ್ಸು. ಅದೇ ಲೋಕ ವಾಸ್ತವ ನಿಲವು, ಮಾತು, ಅರಿವು; ವೇದ, ಧರ್ಮಶಾಸ್ತ್ರ, ಸಾಹಿತ್ಯ, ಉಪನಿಷತ್ತು, ಗೀತೆ, ಎಲ್ಲವೂ ಇದಕ್ಕೆ ಒದಗುತ್ತದೆ. ಅದೇ ಸರಸವೊ ಕಟುವೊ ಹಾಸ್ಯ. ಅದೇ 'No nonsense'. ಅವರ ಪ್ರೀತಿ, ಒಲವು ಫಲಿಸಿದ್ದಾಗ ಆ ಪ್ರೀತಿ ಒಂದು ಸುಗ್ಗಿ; ಅದರ ಬೆಳಕು ಕಾರ್ತಿಕದ ಬೆಳ್ದಿಂಗಳು. ನಿರಾಬಾಧ. ಅವರ ಅವಿಶ್ವಾಸ ಬಲಿತಾಗಲೂ ಅಷ್ಟೇ. ದಟ್ಟವಾದ ಕಾರ್ಮೋಡ, ಗುಡುಗು, ಸಿಡಿಲು. ಅವರ ಪ್ರೀತಿ ಬೇಕೆಂಬುದು ಹಲವರ ಹಂಬಲ; ಅದು ದೊರೆಯದಾಗ ನೋವು; ಅದನ್ನು ಕಳೆದುಕೊಂಡಿದ್ದೇನೆಂಬವರ ನೋವಂತೂ ದುರ್ಭರ. 'ವನಜನಯನುಡನಿ ವಲಚಿತಿನೇ. ವಾನಿ ಮನಸುನ ದಯಲೇದೇ' ಎಂಬ ತ್ಯಾಗರಾಜರ ಕೃತಿಯನ್ನು ನೆನಪಿಗೆ ತರುತ್ತದೆ. ನಮ್ಮ ಸಂಗೀತದ ರಸಿಕತೆ ಇರುವ ಅವರಿಗೆ ಇದರ ಆಳ, ವಿವರ ಅರಿಯದುದಲ್ಲ. ವಿಶ್ವಾಸ ತೋರಿಸಿದಾಗಲೆಲ್ಲ ಅವರ ಮನಸ್ಸು ಹದಿನಾರಾಣೆ ಯೆಂಬುತಿರಬೇಕಿಲ್ಲ. ನಡವಳಿಕೆ ಚೊಕ್ಕಾಗಿರಬೇಕಲ್ಲವೆ ? ತಮ್ಮ ಕಡೆಯಿಂದ ಅವರು ಸಾಮಾನ್ಯವಾಗಿ ವ್ಯವಹಾರ ನಯವನ್ನು ಮೀರರು. ಅವರು ಜನವನ್ನೂ ಕೆಲಸವನ್ನೂ ಮುಗಿಸಿಬಿಡುವ ರೀತಿಯೂ ನೋಡಬೇಕಾದ್ದೇ, ಅನುಭವಿಸಿ ತಿಳಿಯಬೇಕಾದ್ದೇ. ರಾಮ ರಾಮ. ಆದರೆ ಯಾವುದನ್ನೇ ಆಗಲಿ ವಿಚಾರಮಾಡದೆ ಮಾಡುವರೆಂಬುದು ಮಾತ್ರ ಅಚಿಂತ್ಯ.

ಎಂಥ ಪ್ರಸಂಗದಲ್ಲಿಯೂ ಸಾಮಾನ್ಯವಾಗಿ ಶಿಸ್ತಿಗೆ ಮರ್ಯಾದೆ. ಒಪ್ಪ ಓರಣಗಳಿಗೇ ಅವರ ಪಕ್ಷಪಾತ. ಎರಡಾದರೂ ಫೌಂಟನ್‌ಪೆನ್. ಮೂರು ನಾಲ್ಕು ಬಗೆಯ ಸೀಸದಕಡ್ಡಿಗಳು. ಕತ್ತರಿ, ಉಗುರುಕತ್ತರಿ. ಕಾಗದ ಕತ್ತರಿಸುವ ಅಲಗು, ಕ್ಲಿಪ್, ಪಿನ್. ಎಲ್ಲೆಲ್ಲಿಯದು ಹೇಗೆ ಹೇಗೆ ಇರಬೇಕು. ಓರಣ ಮಾಡಿಡಬೇಕು. ಗೋಂದು ಹೇಗೆ ಮಾತ್ರ ಹಚ್ಚಬೇಕು ಎಂಬಷ್ಟು ಕಡ್ಡಾಯ ಅವರಿಗೆ. ಅವರಲ್ಲಿ ಕೆಲಸಮಾಡಿ ತೇರ್ಗಡೆ ಹೊಂದಿದರೆ ಎಂಥ ಕಠಿಣವಾದ, ಕರ್ಕಶವಾದ ಆವರಣದಲ್ಲಿಯೂ ಬದುಕಿಕೊಳ್ಳಬಹುದಾಗುತ್ತದೆ. ಅವರ ನಡೆ ಸ್ಥಿರ. ಒಂದೊಂದು ಹೆಜ್ಜೆ ಇಟ್ಟು ಗಟ್ಟಿಮಾಡಬೇಕೆಂಬುದು ಮನಸ್ಸಿನ ಪಕ್ಷಪಾತ. ಎಲ್ಲಿಯೂ ಧಾವತಿಗೆ ಒಲವಿಲ್ಲದ್ದು. ರಾಜಕೀಯ ದೃಷ್ಟಿಯೂ ಅದೇ. ಜನತೆಯ ಮುನ್ನಡೆ ಕ್ರಮಶಃ ಆಗಬೇಕು. ಎಲ್ಲಿಯೂ ಆತುರ ಸರಿಯಲ್ಲ. ಪ್ರತಿ ಮಜಲಲ್ಲಿಯೂ ಶಕ್ಯವಾದ್ದನ್ನು ಸಾಧಿಸಬೇಕು. ಅದರ ಕುಶಲತೆಯೇ ರಾಜಕಾರ್ಯನಿರ್ವಹಣ ಎನ್ನುತ್ತಾರೆ. ಅವರ ಹಿಂದೆ ವೇದಾಂತ ವಿಜ್ಞಾನದ ನೆಲಗಟ್ಟು ಅವರಿಗುಂಟು. ಲೋಕಸ್ವರೂಪವನ್ನೂ ವಿಧಿವಾದ ವನ್ನೂ ಆಧ್ಯಾತ್ಮಿಕತೆಯನ್ನೂ ಅವರು ವಿವರಿಸುವ ರೀತಿ ವಿಶಿಷ್ಟವಾದ್ದು. ಆ ಜೀವನದ ದರ್ಶನ ಅವರ ತಿಳಿವಳಿಕೆಯನ್ನೂ ವ್ಯವಹಾರ ನೀತಿಯನ್ನೂ ತಿದ್ದಿದೆ. ನಡಸುತ್ತಿರುತ್ತದೆ.

ಗೋಷ್ಠಿ ; ನಿಜ ಹಠ

ಊಟ, ಉಪಚಾರ, ಸ್ನೇಹಗೋಷ್ಠಿ—ಇವಕ್ಕೆ ಅವರ ಮನಸ್ಸು ಸುಮುಖವಾಗಿರುವಂತೆ ಒಗ್ಗುವಂತೆ ಇನ್ನೊಬ್ಬರ ಮನಸ್ಸು, ರೀತಿಗಳನ್ನು ನಾನು ಕಂಡಿಲ್ಲ. ಇಂಥಲ್ಲಿ ಮಾತ್ರ ಮೈಮರೆಯಬಲ್ಲರು. ಸ್ವಂತ ಅವರ ಕಷ್ಟವೇನೊ ನಿಷ್ಠುರವೇನೊ ಯಾರು ಬಲ್ಲರು ? ಅವರಿಗೆ. ಅವರ ಭಾಗದ ದೇವರಿಗೆ ಮಾತ್ರ ಅವು ಗೊತ್ತು. ಅಷ್ಟು ರಹಸ್ಯ ಕೇವಲ ಸ್ವಂತಜೀವನದ ವಿಷಯಗಳಲ್ಲಿ. ಸರ್ವಕಾವಲು—ಅವರ ಮನಸ್ಸು ಆ ಬಗ್ಗೆ. ಅವನ್ನು ಕುರಿತು ಅವರು ನುಡಿಯುವುದೂ, ಅಂಥದಕ್ಕೆ ಅವಕಾಶ ಕೊಡುವುದೂ ಅತ್ಯಪೂರ್ವ ; ಇಲ್ಲವೇ ಇಲ್ಲವೆನ್ನಬೇಕು. ಮಾತೆಲ್ಲ ಲೋಕದ್ದು. ಎಲ್ಲ ತಮ್ಮ ಹೊರಗಿನದಕ್ಕೆ, ಲೋಕಕ್ಕೆ ಮೀಸಲು.

ಮಿರ್ಜಾರವರು ಅವರಿಗೇನೇನೊ ಅದು ಇದು ಮಾಡಿದರು ಎನ್ನುವುದುಂಟು. ಅವರು ಮಾಡಿಯಾರು ! ಇವರು ಮಾಡಿಸಿಕೊಳ್ಳಬೇಕಲ್ಲ ? ಅವರ ಉಪಕಾರ ಪಡೆದರೆ ಸಾರ್ವಜನಿಕವಾಗಿ ಅವರನ್ನು ಟೀಕೆ ಮಾಡುವ ಅಧಿಕಾರ ತಮಗೆ ಇಲ್ಲವಾಗುವುದು ಎಂದರು. ಕಾಂತರಾಜ ಅರಸಿನವರ ಕಾಲದಲ್ಲಿ ಅವರ ಪತ್ರಿಕೆಗೆ ಸರ್ಕಾರದ ಸಹಾಯದ್ರವ್ಯ ಬಂತು. ಸರ್ಕಾರಕ್ಕೆ ಅನುಕೂಲವಾಗಿ ಬರೆಯುವುದು ಹೆಚ್ಚು ನೆರವಾಗುತ್ತಿತ್ತು ಎಂಬುದು ದಿವಾನರ ಅಭಿಮತವೆಂದು ತಿಳಿದುಬಂದಿತಂತೆ. ಕೂಡಲೆ ಸಹಾಯದ್ರವ್ಯವನ್ನು ನಿರಾಕರಿಸಿದರು. ಒಮ್ಮೆ ದೊಡ್ಡ ಶ್ರೀಮಂತ ವರ್ತಕರೊಬ್ಬರ ಮನೆಗೆ ಚಂದಾ ವಸೂಲಿಗೆ ನಾಲ್ಕು ಮಂದಿ ಹೋದೆವು ; ಜೊತೆಗೆ ಅಂದು ಶ್ರೀ ವೆಂಕಟಪ್ಪನವರಿದ್ದರು. ವರ್ತಕರು ಇವರಿಗೆ ಬಹಳ ಬೇಕಾದವರು. ತಮಾಷೆಗಾಗಿ—ಏನು ಸ್ವಾಮಿ, ಎಲ್ಲಕ್ಕೂ ವರ್ತಕರನ್ನು ಹಿಡಿದರೆ ಹೇಗೆ—ಎಂದು ಸುಮಾರು ಅಂದರು. ಇವರಿಗೆ ಸಹಿಸಲಿಲ್ಲ ; ವರ್ತಕರು ಏನು ಮಾಡಿದ್ದೀರಿ. ಸಾಹಿತ್ಯಕ್ಕೆ. ಕಲೆಗೆ ಹೇಳಿ. ನಮ್ಮ ಮೂರು ವರ್ಷದ ಪಟ್ಟಿ ಇದೊ. ಸರ್ಕಾರದ ಅಧಿಕಾರಿಗಳು ಎಷ್ಟು ಕೊಟ್ಟಿದ್ದಾರೆ. ಬಡ ಮಾಸ್ತರುಗಳು ಎಷ್ಟು ? ವರ್ತಕರು ಎಷ್ಟು ಸಲ್ಲಿಸಿದ್ದಾರೆ ನೋಡಿ—ಅಂದರು. "ಕೋಪ ಬೇಡ. ...ರನ್ನು ಕೇಳಿ. ನಾವೆಲ್ಲ ನಮ್ಮ ಕೈಯಲ್ಲಾದ್ದನ್ನು ಕಳಿಸುತ್ತೇವೆ" ಎಂದರು ವರ್ತಕರು. ಈಚೆಗೆ ಬಂದಾಗ ನಾವು ಇವರನ್ನು ಜೊತೆಯಲ್ಲಿ ಕರೆತಂದುದು ತಪ್ಪಾಯಿತೆಂದೆವು. ಇವರೆಂದರು. "ಬಿಡಿ. ನಾನು ಹೇಗೊ ತರುತ್ತೇನೆ. 'ನಿಸ್ಪೃಹಸ್ಯ ತೃಣಂ ಜಗತ್.' ಹಣವಿಲ್ಲದೆ ಯಾವ ಒಳ್ಳೆಯ ಕೆಲಸವೂ ನಿಲ್ಲದು. ನೀವು ರೂ. 2,000ಕ್ಕೆ ಬಜೆಟ್ ಹಾಕಿ ನಡಸಿಬಿಡಿ. ಹಣ ಬರುತ್ತದೆ" ಎಂದರು. ಆ ಧೈರ್ಯ ಅಸಾಧಾರಣವಾದ್ದು.

ಇಂಥವರು ವ್ಯಕ್ತಿಗಳಲ್ಲ ; ಒಂದೊಂದು ಸಂಸ್ಥೆ ಎನ್ನುವುದುಂಟು. ಉಳಿದವರ ವಿಷಯದಲ್ಲಿ ಅದು ಉಪಚಾರದ ಮಾತಾದೀತು. ಇವರ ವಿಷಯದಲ್ಲಿ ಅದು ಅಕ್ಷರಶಃ ನಿಜ. ಸರ್ವಾತ್ಮನಾ ಸಾರ್ವಜನಿಕ ಜೀವನಕ್ಕೆ ಮೀಸಲಾದ ಜೀವನ ಅವರದು. ಅವರು ಒಪ್ಪಿದ್ದರೆ ಅವರಿಗೆ ದೊರಕದಿದ್ದ ಪ್ರಯೋಜನವಿರಲಿಲ್ಲ. ಆದರೆ

ಅದನ್ನು ಬಯಸದೆ ನಿರ್ಧನರಾಗಿಯೇ ಲೋಕಕಾರ್ಯದಲ್ಲಿ ನಿರತರಾಗಿದ್ದಾರೆ. ಅವರ ಬಳಿಗೆ ಜನ ಹೋಗಬೇಕೇ ಹೊರತು ಸ್ವಂತಕ್ಕಾಗಿ ಅವರು ಹುಡುಕಿಕೊಂಡು ಹೋಗರು. ಇದು ದಂಭವಲ್ಲ. ಚಾರಿತ್ರ್ಯದ ಒಂದು ಪ್ರತಿಷ್ಠೆ. ಬಡವನ ಹುರುಡೆನ್ನಿ. ಅದು ಭೂಷಣ.

ಮಾನವನಾಗಿ

ಎಲ್ಲಕ್ಕಿಂತ ಹೆಚ್ಚಾಗಿ ಅವರು ಎಲ್ಲರಿಗೂ ಮಿತ್ರರು ; ಹಿರಿಯರು ; ಕಷ್ಟದಲ್ಲಿ ನಷ್ಟದಲ್ಲಿ, ಅಪಮಾನದಲ್ಲಿ ಸೊರಗಿನಲ್ಲಿ ಅವರ ಸಾಂತ್ವನ ಎಲ್ಲರೂ ಬಯಸುವ ಭಾಗ್ಯವೇ. ಅವರದು ನಿಜವಾಗಿ ಹೆಣ್ಕರುಳೆಂಬಂತಿದ್ದರೂ ಹಾಗೆ ಕಾಣಿಸಿಕೊಳ್ಳಲು ಅವರಿಗೆ ಸುತರಾಂ ಒಪ್ಪದು. ಸಾಹಿತ್ಯದ ಪ್ರಸಂಗದಲ್ಲಿ ಗದ್ಗದವೊ ಕಣ್ಣೀರೊ ಬಂದೀತೇ ಹೊರತು ಖಾಸಗಿಯಾಗಲ್ಲ. ಅತಿ ಮೃದುವಾಗಿ ಅವರು ಬರೆದ ಗೀತವೆಂದರೆ ಒಂದು 'ಅರೆಮೂಕನಾಗಿಹೆನು' ಎಂಬುದು ; ಅಲ್ಲಿಗಿಂತ ಮೃದುವಾಗಿ ನುಡಿದದ್ದು 'ನಿವೇದನ' ಕವನದ ಕಡೆಯ ಭಾಗ. ಕರುಣೆ ಶೋಕಕ್ಕೆ ತಿರುಗಬಲ್ಲ ಯಾವ ಸನ್ನಿವೇಶ ದಲ್ಲಿಯೂ ಏನೊ ವಿರಸವನ್ನೊ ಕಠಿನವನ್ನೊ ಹಾಸ್ಯವನ್ನೊ ನುಡಿದು ಪ್ರಸಂಗವನ್ನು ಬದಲಾಯಿಸುವುದು ರೂಢಿ.

ವ್ಯಕ್ತಿಯಾಗಿ. ಸಾರ್ವಜನಿಕ ಸೇವಕರಾಗಿ, ವಿದ್ವಾಂಸರಾಗಿ. ಲೇಖಕರಾಗಿ. ವಿಮರ್ಶಕರಾಗಿ. ಮಿತ್ರರಾಗಿ, ಹಿತಪರಾಗಿ, ಎಷ್ಟು ಜನಕ್ಕೆ ಎಷ್ಟೊ ಬಗೆಯ ನೆರವಾಗಿ ಇರುವ ಇಂಥ ಸನ್ಮಾನ್ಯರಿಗೆ ಡಿ.ಲಿಟ್ ಪ್ರಶಸ್ತಿಯನ್ನು ಕೊಟ್ಟು ಕನ್ನಡಿಗ ರೊಬ್ಬರಿಗೆ ನಮ್ಮ ವಿಶ್ವವಿದ್ಯಾನಿಲಯ ನಮ್ಮ ನಾಡಿನ ಕೃತಜ್ಞತೆಯನ್ನು ಮಾತ್ರ ತೋರಿಸಿದೆ. ನಿಮ್ಮಂಥವರ ಬದುಕು ಲೋಕಕ್ಕೆ ಉಪಕಾರಕವಾಗಿದೆ, ಎಲ್ಲರ ಮೆಚ್ಚಾಗಿದೆ ಎಂಬುದನ್ನು ತಿಳಿಸುವ ಒಂದು ಸೂಚಿಕೆ ಅದು. ಅವರ ನಗೆ, ಅವರ ವಿವೇಕ. ಅವರ ನಿಷ್ಪಾಕ್ಷಿಕ ಸಲಹೆ ಸಹಾಯ ನಿರಂತರವಾಗಿರುವಂಥದು. ತಮ್ಮ ಬದುಕಿನಲ್ಲಿ ಹೀಗೆ ಧನ್ಯತೆಯನ್ನು ಸಾಧಿಸಿರುವವರು ಅವರು.

— ವಿ. ಸೀತಾರಾಮಯ್ಯ

ಕನ್ನಡ ನುಡಿ ಭಕ್ತ*

ಕಾಲಚಕ್ರದಲ್ಲಿ ಕ್ರಿ.ಶ. ಹತ್ತೊಂಬತ್ತು ಶತಮಾನಗಳು ಉರುಳಿ, ಇಪ್ಪತ್ತನೆಯ ಶತಮಾನವು ಶೈಶವಾವಸ್ಥೆಯಿಂದ ಕೌಮಾರಾವಸ್ಥೆಯಲ್ಲಿ ಅಡಿ ಇಡಲಾರಂಭಿಸಿತ್ತು. ಕರ್ನಾಟಕದಲ್ಲಿ ಕನ್ನಡ ಸಂಪತ್ತನ್ನು ಸೂರೆಗೊಳಿಸಬೇಕೆಂದು ದಿವಂಗತ ಶ್ರೀಗಳಾದ ಎಸ್. ಜಿ. ನರಸಿಂಹಾಚಾರ್, ಮ. ಅ. ರಾಮಾನುಜೈಂಗಾರ್‌ರವರುಗಳು 'ಕರ್ಣಾಟಕ ಕಾವ್ಯಮಂಜರಿ'ಯ ಮೂಲಕ ಅನೇಕ ಹಳಗನ್ನಡ ಕಾವ್ಯಗ್ರಂಥಗಳನ್ನು ಪ್ರಕಟಿಸಲಾರಂಭಿಸಿದ್ದರು. 'ನಡೆಗನ್ನಡಿ', 'ವೃತ್ತಾಂತ ಚಿಂತಾಮಣಿ', 'ಸೂರ್ಯೋದಯ ಪ್ರಕಾಶಿಕೆ'. 'ವೃತ್ತಾಂತ ಪತ್ರಿಕೆ' ಎಂಬ ವಾರ್ತಾಪತ್ರಿಕೆಗಳು ವಾರಕ್ಕೊಂದು ಬಾರಿ ಪ್ರಕಟವಾಗುತ್ತಿದ್ದವು. ಮದ್ರಾಸಿನಿಂದ 'ನುಡಿಗನ್ನಡಿ' ಎಂಬ ಕನ್ನಡ ಮಾಸಪತ್ರಿಕೆಯು ಶ್ರೀ ಎಚ್. ಚೆನ್ನಕೇಶವ ಅಯ್ಯಂಗಾರ್ರವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. 1908ನೆಯ ಸಾಲಿನಲ್ಲಿ ಬಂಗಾಳ ಪ್ರಾಂತವನ್ನು ಎರಡು ಭಾಗವಾಗಿ ಮಾಡಿ, ಬಂಗಾಳಿಗಳಲ್ಲಿಯೆ ಪ್ರಾಂತೀಯ ಭೇದ ಹುಟ್ಟಿಸಲೇಬೇಕೆಂದು ಪ್ರಭುತ್ವವು ಹವಣಿಸಿತು. ಆಗಲೇ ಮಹಾರಾಷ್ಟ್ರದಲ್ಲಿ ಲೋಕಮಾನ್ಯ ತಿಲಕರು ಸ್ವದೇಶಿ ಚಳವಳಿಯನ್ನು ಹಬ್ಬಿಸಿದ್ದರು. ವಂಗವಿಭಜನೆಯಿಂದಲೂ ಸ್ವದೇಶಿ ಚಳವಳಿಯಿಂದಲೂ ಇಡೀ ಹಿಂದೂಸ್ಥಾನದಲ್ಲಿ ದೊಡ್ಡ ಜನಜಾಗೃತಿಯುಂಟಾಯಿತು. ಪರಕೀಯ ಪ್ರಭುತ್ವವನ್ನು 'ಹಿಂಸೆಯ ನೀತಿ'ಯಿಂದ ಸುಲಭವಾಗಿ ಓಡಿಸಬಹುದೆಂದು ಕೆಲವು ಜನ ಬಂಗಾಳಿ ಯುವಕರು 'ಅಧಿಕಾರಿ'ಗಳನ್ನು ಬಾಂಬುಗಳಿಂದ ಹೆದರಿಸುವ ಚಳವಳಿಯನ್ನಾರಂಭಿಸಿದರು. ಈಗ ಯೋಗಿಗಳಾಗಿ ಪಾಂಡಿಚೇರಿಯಲ್ಲಿ ವಾಸಿಸುತ್ತಿರುವ ಶ್ರೀ ಅರವಿಂದ ಘೋಷರು. ಆಗ ಬರೋಡಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರು ತಮ್ಮ ಪ್ರಾಂತ್ಯದ ಯುವಕರಿಗೆ ಸರಿಯಾದ ಮಾರ್ಗವನ್ನು ಬೋಧಿಸಬೇಕೆಂದು ತಮ್ಮ ಮಾತೃಭೂಮಿಯ ಕರೆಯನ್ನು ಕೇಳಿ, ಕೆಲಸಕ್ಕೆ ರಾಜೀನಾಮೆ ಕೊಟ್ಟು. ಕಲಕತ್ತೆಗೆ ಹೋಗಿ 'ಕರ್ಮಯೋಗಿನ್' ಎಂಬ ಇಂಗ್ಲಿಷ್ ಮತ್ತು 'ಧರ್ಮ' ಎಂಬ ಬಂಗಾಳಿ ವಾರಪತ್ರಿಕೆಯನ್ನು ಪ್ರಕಟಿಸಲಾರಂಭಿಸಿದರು. ಆಗಲೆ ಬೆಂಗಳೂರು ನಗರದಲ್ಲಿ 'ಭಾರತಿ' ಎಂಬ 'ಫುಲ್ಸ್‌ಕೇಪ್' ಆಕಾರದ ದೈನಿಕ ಪತ್ರಿಕೆಯೊಂದು ಹೊರಟಿತು. ಆರ್ಕಾಟ್

---

* ಕನ್ನಡನುಡಿ, ನವೆಂಬರ್ 10. 1944.

ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ಷಾಂಪೂರ್ ಕಂಪೆನಿಯ ಮಗ್ಗುಲಲ್ಲಿರುವ ಶ್ರೀ ವೆಂಕಟೇಶ ಪ್ರೆಸ್ ಇರುವೆಡೆಯಲ್ಲಿಯೆ ಆಗ ಇದ್ದ ನವರತ್ನ ಅಂಡ್ ಸನ್ಸ್‌ರವರೇ ಅದರ ಪ್ರಕಾಶಕರಾಗಿದ್ದರು. ಸೆಂಟ್ರಲ್ ಕಾಲೇಜಿನಲ್ಲಿ ಆಗ ಮಧ್ಯದಲ್ಲಿರುವ 'ಕ್ಲಾಕ್ ಟವರ್' ಒಳಗೊಂಡಿರುವ ಭಾಗ ಮಾತ್ರವೇ ಸೆಂಟ್ರಲ್ ಕಾಲೇಜಾಗಿತ್ತು. ಅಲ್ಲಿ ನಮ್ಮ ತರಗತಿಯು ಬಿಟ್ಟಕೂಡಲೆ, ನಾನು ಓಡಿ ಬಂದು, ನವರತ್ನ ಅಂಡ್ ಸನ್ಸ್ ಅವರ ಮುದ್ರಣಾಲಯದಿಂದ 'ಭಾರತಿ' ಸಂಚಿಕೆಯು ಹೊರಬೀಳುವುದನ್ನೇ ಕಾಯುತ್ತಿದ್ದೆನು. ಅದು ಹೊರಗೆ ಬಂದ ಕೂಡಲೆ ಮೂರು ಕಾಸು ಕೊಟ್ಟು ಒಂದು ಸಂಚಿಕೆಯನ್ನು ಕೊಂಡು ಓದುತ್ತ ಮನೆಯ ಕಡೆ ಹೊರಡುತ್ತಿದ್ದೆನು. "ಹದ್ದಿನ ಹಾಗೆ ಸಾವಿರ ವರುಷ ಬಾಳುವುದಕ್ಕಿಂತ ಕೀರ್ತಿ ಪಡೆದು ಒಂದು ದಿನ ಬಾಳುವುದು ಮೇಲು" ಎಂಬ ನಾಣ್ಣುಡಿಯಿದೆ. ಅದನ್ನನುಸರಿಸಿ, 'ಭಾರತಿ' ದೈನಂದಿನ ಪತ್ರಿಕೆಯು ಹುಟ್ಟಿದ ಮೂರು ನಾಲ್ಕು ತಿಂಗಳೊಳಗಾಗಿ ಸೂರ್ಯನಂತೆ ಪ್ರಕಾಶಿಸಿ, ಅಸ್ತವಾಯಿತು. ನಾನು ನನ್ನ 14 ವಯಸ್ಸಿನೊಳಗಾಗಿ ದಿವಂಗತ ಶ್ರೀ ವೆಂಕಟಾಚಾರ್ಯರ ನಾವೆಲು ಗಳನ್ನೆಲ್ಲ (ಆವರೆಗೆ ಪ್ರಕಟವಾಗಿದ್ದುದನ್ನೆಲ್ಲ) ಹಲವು ಬಾರಿ ಓದಿದ್ದೆನು. ಅದರಿಂದ ನನ್ನ ಮುಂದಿನ ಕನಸು ಕಟ್ಟಲಾರಂಭಿಸಿದ್ದೆ. ಭಾರತಿ ಪತ್ರಿಕೆಯ ವಾಚಕನಾದ ನನಗೆ 16 ವಯಸ್ಸು. ಅದರಿಂದಲೂ ನನ್ನ ಮುಂದಣ ಜೀವನದ ಆದರ್ಶವು ಬಗೆ ಗೊಳ್ಳಲು ಒಂದು ಕಾರಣವು ದೊರೆಯಿತು. ನನ್ನ ಧಮನಿಗಳಲ್ಲಿ ಹರಿಯುತ್ತಿರುವ ರಕ್ತಕ್ಕೆ, ಹೃದಯಕ್ಕೆ, ಆ ಬಗೆಯ ಗತಿಯನ್ನೂ ಸ್ಫುರಣವನ್ನೂ ಮತ್ತಾವ ಪತ್ರಿಕೆಯ ಬರೆಹವೂ (ಗಾಂಧಿಯವರನ್ನುಳಿದು) ಕನ್ನಡವಲ್ಲಿ ಕೊಟ್ಟಿಲ್ಲ. ಈಚೆಗೆ ಶ್ರೀ ಸಿದ್ದವ್ವನ ಹಳ್ಳಿ ಕೃಷ್ಣಶರ್ಮರು ಒಂದೆರಡು ಸಂದರ್ಭಗಳಲ್ಲಿ 'ವಿಶ್ವಕರ್ಣಾಟಕ'ದಲ್ಲಿ ಆ ಶೈಲಿಯ ಲೇಖನಗಳನ್ನು ಬರೆದುದು ಜ್ಞಾಪಕವಿದೆ. ಆದರೆ ಆಗ ನಿತ್ಯವೂ ಹೊರಡುತ್ತಿದ್ದ 'ಭಾರತಿ' ಪತ್ರಿಕೆಯ ತುಂಬ ಮೊದಲಿನಿಂದ ಕೊನೆಯವರೆಗೆ ಅಂತಹದೇ ವಿಚಾರ, ಶೈಲಿ, ಭಾಷೆ, ಸ್ಪಷ್ಟೋಕ್ತಿ. 'ಭಾರತಿ'ಯು ಹುಟ್ಟಿದ ಎರಡು ಮೂರು ತಿಂಗಳಲ್ಲಿ ಲೋಕಮಾನ್ಯ ತಿಲಕರು, ಬಂಗಾಳದ ಬಿಪಿನ ಚಂದ್ರಪಾಲ್, ಅಶ್ವಿನಿ ಕುಮಾರ ದತ್ತರು, ಪಂಜಾಬ್ ಕೇಸರಿ ಲಾಲ ಲಜಪತ ರಾಯ್ ಅವರನ್ನು ಪ್ರಭುತ್ವದವರು ಗಡೀಪಾರು ಮಾಡಿದರು. ಹೊಸ ಪ್ರೆಸ್ ಕಾನೂನು ಉಂಟಾಯಿತು. ಮೈಸೂರಿನಲ್ಲಿಯೂ ಅದು ಆಚರಣೆಗೆ ಬಂದಿತು. ಆಗ ಮೇಲೆ ಹೇಳಿದ ವಾರಪತ್ರಿಕೆಗಳು ಆ ಅವಮಾನಕರವಾದ ಕಾನೂನಿನ ನಿರ್ಬಂಧನೆಗೊಳಗಾಗಿ ತಮ್ಮ ಬಾಳನ್ನು ಮುಂದುವರಿಸುವುದಿಲ್ಲವೆಂದು ಅಜ್ಞಾತವಾಸಕ್ಕೆ ತೆರಳಿದವು. 'ಭಾರತಿ'ಯೂ ಭರತ ವಾಕ್ಯವನ್ನು ನುಡಿದಳು. ಆಗ ಶ್ರೀಮಾನ್ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರೇ 'ಭಾರತಿ'ಯ ಗುಪ್ತ ಸಂಪಾದಕರಾಗಿದ್ದವರು. ಆಗ ಅವರಿಗೆ 20–21 ವಯಸ್ಸಿದ್ದಿರಬಹುದು.

ಈಗ ಶ್ರೀಮಾನ್ ಡಿ. ವಿ. ಗುಂಡಪ್ಪನವರ ಪರಿಚಯವನ್ನು ವಾಚಕರಿಗೆ ಮಾಡಿಕೊಡಲೆಳಸುವವರು ಮೊದಲು ತಮ್ಮ ಪರಿಚಯವನ್ನು ಮಾಡಿಕೊಡ ಬೇಕಾಗಿದೆ. ಚಿಕ್ಕ ವಯಸ್ಸಿನಲ್ಲಿಯೇ ಸಾರ್ವಜನಿಕರಂಗಕ್ಕಿಳಿದು, ಡಿ.ವಿ.ಜಿ. ಅವರು ಜೀವನದ ಅನೇಕ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯಿಂದ ಮುಂದೆ ಬಂದಿರುವವರು.

ವಿಲಾಯಿತಿ, ಅಮೆರಿಕಾ ಮೊದಲಾದ ದೇಶಗಳಲ್ಲಿ ಅವರು ಜನಿಸಿದ್ದರೆ, ಪ್ರಧಾನ ಮಂತ್ರಿಗಳ ಸ್ಥಾನವನ್ನಲಂಕರಿಸಿ ಅವರ 'ಜೀವನ ಚರಿತ್ರೆ'ಯ ಸಾವಿರಾರು ಪ್ರತಿಗಳು ದೇಶಾಂತರಗಳಲ್ಲಿ ಗುಡುಗಾಡಬಹುದಾಗಿತ್ತು. ಹಾಗಾಗದಿದ್ದುದು ಅವರ ದೌರ್ಭಾಗ್ಯ; ನಮ್ಮ ನಾಡಿನ ಸೌಭಾಗ್ಯ. ಶ್ರೀಯುತರು ಒಬ್ಬ ಪ್ರತಿಭಾಶಾಲಿ ವ್ಯಕ್ತಿಯೂ ಹೌದು. ಆದರೆ ಅವರ ಜೀವನವೇ ಒಂದು ಸಂಸ್ಥಾರೂಪವಾಗಿರುವುದೆಂದರೆ ಅತ್ಯುಕ್ತಿಯಾಗದು. 'ಭಾರತಿ' ಪತ್ರಿಕೆಯು ನಿಂತ ಐದು ವರುಷಗಳ ಬಳಿಕ 1913ನೆಯ ಸಾಲಿನಲ್ಲಿ ವಿಶ್ವವಿಖ್ಯಾತರಾದ ಶ್ರೀಮಾನ್ ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದ 'The Karnataka' ಎಂಬ ವಾರಕ್ಕೆರಡು ಸಲ ಹೊರಡುವ ಇಂಗ್ಲಿಷ್ ಪತ್ರಿಕೆಯನ್ನು ಹೊರಡಿಸಿದರು. ಇದು ಸುಮಾರು 12 ವರುಷ ಕಾಲ ನಡೆದು, ಕೀರ್ತಿಯನ್ನು ಗಳಿಸಿತು. ಮೊದಮೊದಲು ಇದರ ಹಿನ್ನೆಲೆಯಲ್ಲಿ ಆಗ ಸುಪ್ರಸಿದ್ಧ ಲಾಯರೆನಿಸಿದ್ದ ದಿವಂಗತ ಶ್ರೀ ಎಂ. ಜಿ. ವರದಾಚಾರ್ಯರೂ ಇದ್ದರು. ಅವರೂ ಪತ್ರಿಕೆಗೆ ಹೆಚ್ಚು ಪ್ರೋತ್ಸಾಹಕರಾಗಿದ್ದರು. ನಾನೊಂದು ಬಾರಿ ಅವರ ಭಾಷಣವನ್ನು ಕೇಳಿದ್ದಾಗ ಸರ್ ಸಿ. ಪಿ. ರಾಮಸ್ವಾಮಿಅಯ್ಯರವರ ಭಾಷಣಶೈಲಿಯನ್ನು ಜ್ಞಾಪಿಸಿಕೊಂಡಿದ್ದೆ. ಸರಕಾರವು ಪ್ರಜಾಸಮ್ಮತಿಯಿಂದ ನಡೆಯಬೇಕಾದರೆ ಪ್ರಜೆಗಳ ಮುಖವೆನಿಸಿದ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವುದೆ ಮುಖ್ಯವೆಂದು ಶ್ರೀಮಾನ್ ವಿಶ್ವೇಶ್ವರಯ್ಯನವರು ಭಾವಿಸಿದ್ದರು. ಶ್ರೀ ಡಿ. ವಿ. ಜಿ. ಅವರೂ ಪ್ರಜಾ ಅಭಿಪ್ರಾಯವನ್ನು ಅಷ್ಟೇ ಸರಿಯಾದ, ತೂಕವಾದ, ನಿಷ್ಪಕ್ಷಪಾತದ, ನಿರ್ಭೀತ ಶೈಲಿಯಲ್ಲಿ ತಮ್ಮ ಪತ್ರಿಕೆಯ ಮೂಲಕ ತಿಳಿಸುತ್ತಿದ್ದರು. ಆದರೆ ಪ್ರಭುತ್ವದ ಮುಖ್ಯಾಧಿಕಾರಿಗಳು ಬೇರೆಯವರಾದ ಮೇಲೆ, ಅಷ್ಟು ಪ್ರೋತ್ಸಾಹವು ದೊರೆಯದೆ ವಾರಕ್ಕೆರಡು ಬಾರಿ ಹೊರಡುತ್ತಿದ್ದ 'ಕರ್ಣಾಟಕ' ತಿಂಗಳಿಗೊಂದು ಬಾರಿ 'Indian Review of Reviews' ಎಂಬ ಮಾಸಪತ್ರಿಕೆಯ ರೂಪವನ್ನು ತಳೆದು. ಕೆಲಕಾಲವಿದ್ದು ಕಣ್ಮರೆಯಾಯಿತು. 1928ನೆಯ ಸಾಲಿನ ಜುಲೈ ತಿಂಗಳು ಬಾಗಲಕೋಟೆಯಲ್ಲಿ ನಡೆದ ಅಖಿಲ ಕರ್ಣಾಟಕ ವೃತ್ತಪತ್ರಿಕಾಕರ್ತರ ಪ್ರಥಮ ಪರಿಷತ್ತಿನವರು ಇವರನ್ನು ಅಧ್ಯಕ್ಷರಾಗಿ ಆರಿಸಿದರು. ಆ ಸಂದರ್ಭದಲ್ಲಿ ಅಧ್ಯಕ್ಷರಾಗಿ ಇವರು ಮಾಡಿದ 'ವೃತ್ತಪತ್ರಿಕೆ'ಗಳು ಎಂಬ ಭಾಷಣವು ಬಹು ಮನನೀಯವಾಗಿದೆ. ಅದನ್ನು ವೃತ್ತಪತ್ರಿಕಾ ವೃತ್ತಿಯನ್ನು ಅವಲಂಬಿಸಬೇಕೆನ್ನುವ ಪ್ರತಿಯೊಬ್ಬ ಯುವಕನೂ ಅತ್ಯಗತ್ಯವಾಗಿ ಓದಬೇಕು. ಅವರ ವಾಕ್ಯಗಳು ಎಷ್ಟು ಯಥಾರ್ಥವಾಗಿವೆ ಎಂಬುವಕ್ಕೆ—"ಅರಾಜಕತ್ವವನ್ನು ಬಿಟ್ಟು ಸರಕಾರದ ಅಧಿಕಾರಸ್ಥ ಜನರನ್ನು ಆಕ್ಷೇಪಿಸುವುದು ಮಾತ್ರವೇ ಒಂದು ಪತ್ರಿಕೆಯ ವಿಶೇಷ ಗುಣವಾಗಿರುವ ಪಕ್ಷಕ್ಕೆ. ಅದನ್ನು ಏಕೆ ನಿರ್ಬಂಧಿಸಬೇಕು ? ಯಾರು ಪತ್ರಿಕೆಗಳ ಆಕ್ಷೇಪಣೆಗಳನ್ನು ತಡೆಯಬಲ್ಲಷ್ಟು ಸಾಹಸ, ಸಾಮರ್ಥ್ಯಗಳನ್ನು ಪಡೆದಿರುವರೊ ಅಂಥವರು ಮಾತ್ರವೇ ಸರಕಾರವನ್ನು ನಡೆಸಲು ಅರ್ಹರಾಗಿರುತ್ತಾರೆ. ಯಾರು ಪತ್ರಿಕೆಗಳಿಗೆ ಅಂಜುವಷ್ಟು ದುರ್ಬಲರೂ, ಪತ್ರಿಕೆಯ ಚಳವಳಿಯಿಂದಲೇ ಪ್ರಜೆಗಳ ಅಪನಂಬಿಕೆಗೆ ಪಾತ್ರರಾಗಿ ಅಧಿಕಾರವನ್ನು ಕಳೆದುಕೊಳ್ಳುವಷ್ಟು ಅವಿಚಕ್ಷಣರೂ ಅಪ್ರಶಸ್ತರೂ ಆಗಿರುವರೊ, ಅಂಥವರು ಸರಕಾರವನ್ನು ಬಿಡುವುದೇ

ಲೇಸು. ಪತ್ರಿಕೆಗಳ ಆಕ್ಷೇಪಣೆಯಲ್ಲಿ ಸತ್ಯಧರ್ಮಗಳಿದ್ದರಲ್ಲವೇ ಆ ಆಕ್ಷೇಪಣೆಯನ್ನು ಪ್ರಜೆಗಳು ನಂಬಿ ಅಂಗೀಕರಿಸುವುದು ? ಇಂಥಾ ಆಕ್ಷೇಪಣೆಗೆ ಅವಕಾಶ ಸರಕಾರದ ಅಕ್ರಮ ಅತ್ಯಾಚಾರಗಳಿಂದಲ್ಲವೇ ಉಂಟಾಗುವುದು ? ಹೀಗೆ ವಿಚಾರ ಮಾಡಿ ನೋಡಿದರೆ ಪತ್ರಿಕೆಗಳಿಂದ ಯಾವ ಕೆಡಕು ಉಂಟಾಗುವುದೆಂದು ಅಧಿಕಾರ ಪಕ್ಷದವರು ಹೇಳುತ್ತಾರೆಯೋ, ಆ ಕೆಡಕಿನ ಬೇರು ನಿಜವಾಗಿ ಸರಕಾರದ ನಡೆವಳಿಕೆಗಳಲ್ಲಿಯೇ ಇರುತ್ತದೆಂದು ಗೊತ್ತಾಗುತ್ತದೆ. ಅಧಿಕಾರಸ್ಥರನ್ನು ಚುಚ್ಚುವ ಮುಳ್ಳುವೊನೆಯು ಪತ್ರಿಕಾಕರ್ತನ ಲೇಖಣಿಯಲ್ಲಿಲ್ಲ ; ಅವರನ್ನು ನೋಯಿಸುವ ವಿಷಬಿಂದುವು ಅವನ ಮಶೀ ಪಾತ್ರೆಯಲ್ಲಿಲ್ಲ. ಆ ಮುಳ್ಳೂ ಆ ವಿಷವೂ ಸರಕಾರವು ಅವನಿಗೆ ಒದಗಿಸಿಕೊಡುವ ಸಂಗತಿಗಳಲ್ಲೆ ಅಡಗಿರುತ್ತದೆ. ಸರಕಾರವು ಆಕ್ಷೇಪಣಾರ್ಹವಾದ ಸಂಗತಿಗಳನ್ನು ಅವನಿಗೆ ಒದಗಿಸದೇ ಹೋದರೆ, ಅವನ ಲೇಖನಿಯು ಮುಳ್ಳು ಮೃದುವಾಗಿಯೆ ಇರುತ್ತದೆ. ಅವನ ಮಶಿ ಸಪ್ಪೆಯಾಗಿಯೆ ಇರುವುದು" ಎಂಬು ದೊಂದು ಉದಾಹರಣೆ. ಈ ಭಾಷಣದಲ್ಲಿ ವೃತ್ತಪತ್ರಿಕೆಗಳ ಹುಟ್ಟು, ಲಕ್ಷಣ, ಉಪಯೋಗಗಳ ವಿಚಾರವೆಲ್ಲ ಅಡಕವಾಗಿವೆ. ಇನ್ನು ಶ್ರೀ ಗುಂಡಪ್ಪನವರು ನಮ್ಮ ಸಾಹಿತ್ಯದಲ್ಲಿರುವ ಜೀವನ ಚರಿತ್ರ ಭಾಗದ ಕೊರತೆಯನ್ನು ನಿವಾರಿಸಲು 'ದಿವಾನ್ ಸಿ. ರಂಗಾಚಾರ್ಲು' ಮತ್ತು 'ಗೋಪಾಲಕೃಷ್ಣ ಗೋಖಲೆ' ಎಂಬಿಬ್ಬರು ಮಹಾ ಪುರುಷರ ಜೀವನ ಚರಿತ್ರೆಗಳನ್ನು ಬಹು ಸುಬೋಧವಾದ ಶೈಲಿಯಲ್ಲಿ ಬರೆದು ಪ್ರಕಟಿಸಿದರು ; ಅವುಗಳ ಹಲವು ಆವೃತ್ತಿಗಳೂ ಹೊರಬಿದ್ದಿವೆ. ವಿಚಾರಶೀಲರಾದವರ ಮಿದುಳಿಗೆ ಸವಿಯಾದ ಭಕ್ಷ್ಯವನ್ನೊದಗಿಸುವ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಗ್ರಂಥವೂ ಇವರ ಲೇಖನಿಯಿಂದಲೆ ಹೊರಬಿದ್ದಿರುವುದು. 'ನಿವೇದನ' ಎಂಬ ಮೈಸೂರಿನ ದೃಶ್ಯ ವಿಶೇಷಗಳನ್ನು ಕುರಿತ ಸರಸ ಕವನ ಸಂಗ್ರಹವೂ, 'ವಸಂತ ಕುಸುಮಾಂಜಲಿ' ಎಂಬ ಪದ್ಯ ಮತ್ತು ಮೂರು ಆಂಗ್ಲ ಕವಿತೆಗಳ ಭಾವಾನುವಾದ ಗ್ರಂಥವೂ ನೂತನ ಕವಿಯಾಗಬಯಸುವವನಿಗೆ ಮಾರ್ಗದರ್ಶಕವಾಗಿದೆ. ಫಿಟ್ಸ್-ಜೆರಲ್ಡ್ ಎಂಬ ಕವಿಯು ಸುಪ್ರಸಿದ್ಧ ಉಮರ ಖಯ್ಯಾಮಿನ ಇವರ ಕನ್ನಡ ಅನುವಾದವು ಇದೊಂದು ಸ್ವತಂತ್ರ ತಾತ್ತ್ವಿಕ ಕವನ ಗ್ರಂಥವೋ ಎಂಬಷ್ಟು ಸುಬೋಧವಾಗಿಯೂ ಸರಳವಾಗಿಯೂ ಇದೆ. ಡಿ.ವಿ.ಜಿ. ನಾಟಕಕರ್ತರೂ ಹೌದು. 'ಶ್ರೀ ವಿದ್ಯಾರಣ್ಯ ವಿಜಯ,' 'ತಿಲೋತ್ತಮೆ,' 'ಕನಕಾಲುಕಾ' ಎಂಬ ಮೂರು ನಾಟಕ ಗ್ರಂಥಗಳನ್ನು ಬರೆದು ಪ್ರಕಟಿಸಿರುವರು. 'ವಿದ್ಯಾರಣ್ಯರ ಸಮಕಾಲೀನರು' ಎಂಬ ಇವರ ಸಂಶೋಧಕ ಲೇಖನಗಳು ಐತಿಹಾಸಿಕ ಸಂಶೋಧಕರಿಗೆ ಮಾರ್ಗದರ್ಶಕವಾಗಿರುವವು. ಷೇಕ್ಸ್ ಪಿಯರ್ ಕವಿಯ ರುದ್ರನಾಟಕವಾದ 'ಮ್ಯಾಕ್‌ಬೆತ್' ಎಂಬ ನಾಟಕದ ಇವರ ಕನ್ನಡ ಅನುವಾದವೂ ಅದಕ್ಕಿಂತ ಮುನ್ನುಡಿಯೂ ಎಲ್ಲರ ಮೆಚ್ಚಿಗೆಯನ್ನು ಪಡೆದಿವೆ.

ಸಾಹಿತ್ಯ ಕ್ಷೇತ್ರದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಡಿ.ವಿ.ಜಿ.ಯವರು ವಹಿಸಿರುವ ಪಾತ್ರಗಳು ಅನೇಕವಾಗಿವೆ. ಈ ಸಣ್ಣ ಪರಿಚಯ ಲೇಖನದಲ್ಲಿ ಅವುಗಳನ್ನು ಸಂಕ್ಷೇಪವಾಗಿ ವರ್ಣಿಸುವುದು ಯಾರಿಗೂ ಸಾಧ್ಯವಾಗದು. ಕಳೆದ 'ರೌಂಡ್ ಟೇಬಲ್

ಕಾನ್ಫರೆನ್ಸಿನ' ಸಮಯದಲ್ಲಿ ಸಂಸ್ಥಾನಿಕ ಪ್ರಜೆಗಳ ಪರವಾಗಿ ಇವರು 'The States and Their People in the Indian Constitution' ಎಂಬ ರಾಯಲ್ ಸೈಜಿನ 180 ಪುಟಗಳ ಪುಸ್ತಕವೊಂದನ್ನು ಇಂಗ್ಲಿಷಿನಲ್ಲಿ ರಚಿಸಿ ಪ್ರಕಟಿಸಿದರು. ಅದನ್ನು ಸುಪ್ರಸಿದ್ಧ ದೇಶ ವಿದೇಶಗಳ ಪತ್ರಿಕೆಗಳೂ, ರಾಜನೀತಿಜ್ಞರೂ ಮುಕ್ತಕಂಠದಿಂದ ಹೊಗಳಿದರು. ಇವರು ಆರಿಸಿದ ವಿಷಯದ ಗಹನತೆ, ಅದನ್ನು ನಿರ್ಭೀತಿಯಿಂದ ನಿರ್ದಾಕ್ಷಿಣ್ಯದಿಂದ ಇವರು ಮಂಡಿಸಿರುವ ರೀತಿ ಇವುಗಳನ್ನು ಕುರಿತು ದಿವಂಗತ ದೀನಬಂಧು ಸಿ. ಎಫ್. ಆಂಡ್ರೂಸ್ ಅವರು ಹೀಗೆ ಹೇಳಿರುವರು :— "Mr. Gundappa's pamphlet deserves the highest praise. It is a well-arranged and documented review of one of the most difficult subjects........." 1941ನೆಯ ಸಾಲಿನ Current Science' ಎಂಬ ಆಂಗ್ಲ ಮಾಸಪತ್ರಿಕೆಯಲ್ಲಿ ಪ್ರಕಟವಾದ ಇವರ "Science and Ethics : A Hindu View" ಎಂಬ ಇವರ ಇಂಗ್ಲಿಷ್ ಲೇಖನವನ್ನು ವಿಮರ್ಶಿಸುತ್ತ ಲಂಡನ್ನಿನ 'Nature' (18–4–1942) ಎಂಬ ವಾರಪತ್ರಿಕೆಯು ..." Mr. Gundappa's account, which is short and admirably clear, should serve as a most useful introduction to this important phase of human thought on Science and Ethics)" ಎಂದು ಹೇಳಿದೆ. ಡಿ.ವಿ.ಜಿ.ಯವರು ಸಾರ್ವಜನಿಕ ಕ್ಷೇತ್ರಗಳಾದ ಮೈಸೂರು ವಿಶ್ವವಿದ್ಯಾಲಯ, ಪೌರಸಭೆ, ಶಿಕ್ಷಕ ವೃತ್ತಿಯವರ ಕೂಟ, ವೃತ್ತಪತ್ರಕಾರರ ಸಂಘ,ನ್ಯಾಯವಿಧಾಯಕ ಸಭೆ ಮೊದಲಾದ ಎಲ್ಲ ಕ್ಷೇತ್ರಗಳಲ್ಲಿ ಉತ್ಸಾಹದಿಂದ ಕೆಲಸ ಮಾಡಿ. ತಮ್ಮ ರಾಷ್ಟ್ರಪ್ರೇಮವನ್ನು ಕಾರ್ಯಗಳ ಮೂಲಕ ತೋರಿರುವರು. ಮಹಾತ್ಮ ಗಾಂಧಿಯವರು ಕಳೆದ ಬಾರಿ ಉಪವಾಸವನ್ನು ಕೈಕೊಂಡು ಅದರಿಂದ ಪಾರಾದ ದಿನವೇ ಇವರ ಕವಿಹೃದಯದಿಂದ ಹೊರಬಿದ್ದು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾದ ಇವರ ಕವನವು. ಮಹಾತ್ಮಾಜಿಯವರಲ್ಲಿ ಇವರಿಗಿರುವ ನಿಶ್ಚಲ ಪ್ರೀತಿ ವಿಶ್ವಾಸಗಳನ್ನು ತೋರಿವೆ. ನುಡಿಭಕ್ತರು ಇವರನ್ನು ಕೊಡಗಿನಲ್ಲಿ ಸೇರಿದ ಸಾಹಿತ್ಯ ಸಮ್ಮೇಲನಾಧ್ಯಕ್ಷರಾಗಿ ಆರಿಸಿ ಗೌರವಿಸಿದ್ದಾರೆ. ಅನಂತರ ಇವರು ಪರಿಷತ್ತಿನ ಉಪಾಧ್ಯಕ್ಷರಾಗಿ ಪರಿಷತ್ತಿನ ಪ್ರಗತಿಗೆ ನೆಲಗಟ್ಟನ್ನು ಹಾಕಿದ್ದಾರೆ. ಹೀಗಾಗಿ ಜೀವನದ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಅನುಭವಗಳನ್ನು ಹೊಂದಿ. ಸಂಸಾರ ತಾಪತ್ರಯಾದಿಗಳಾವುದಕ್ಕೂ ಕುಗ್ಗದ ಇವರು. ತಮ್ಮ ಕೆಳೆಯರಿಬ್ಬರನ್ನು (T.S.V. & M.K.M.) 'ಬಿದಿಯು' ಸೆಳೆದುಕೊಂಡು ಹೋದುದಕ್ಕಾಗಿ. ಆ ಸಂತಾಪದ ಕಾವಿನಲ್ಲಿ ಮಂಕುತಿಮ್ಮನಾಗಿ 'ಕಗ್ಗ'ವೊಂದನ್ನು ಹೊಸೆದಿರುವರು. ಇದು ಆಧುನಿಕ ವಿಜ್ಞಾನಶಿಕ್ಷಣ ಮೊದಲ್ಗೊಂಡು ವೇದ. ಉಪನಿಷತ್ತು. ಭಗವದ್ಗೀತೆ ಮೊದಲಾದ ಎಲ್ಲವುಗಳ ವಿಚಾರಗಳನ್ನು ಮಥಿಸಿ, ಸಾರವನ್ನು ಹೀರಿ, ಅಮರತ್ವವೀಯುವ ಅಮೃತಸಾಗರದಲ್ಲಿ ನಿಂತು, ಶ್ರೀ ಶಂಕರಾಚಾರ್ಯರ "ಪ್ರಾಪ್ತೇ ಸನ್ನಿಹಿತೇ ಮರಣೇ ನಹಿ ನಹಿ ರಕ್ಷತಿ ಡುಕೃಂ ಕರಣೇ" ಎಂಬ ಚರ್ಪಟ ಮಂಜರಿಯಂತೆ ಕ್ಷಣಿಕ ವೈಭವವನ್ನು ಮೆಚ್ಚಿರುವ 'ಮಂಕುತಿಮ್ಮ'ಗಳ ಮುಂದೆ ಹಲವಾರು ಜೀವನ ಸಮಸ್ಯೆಗಳನ್ನು ಬೋಧಿಸಿರುವರು. ಕಳೆದೊಂದು ಶತಮಾನದಲ್ಲಿ ಮುದ್ದಣನ 'ರಾಮಾಶ್ವಮೇಧ'ದ ರಸಗಬ್ಬ. 'ಮಂಕು

ತಿಮ್ಮನ ಕಗ್ಗ'ದ ಬಾಳುಗಬ್ಬದಿಂದ ಒಂದು ಬಗೆಯ ಕ್ರಾಂತಿಯೇ ಆಗಿರುವುದೆಂದರೆ ಅತ್ಯುಕ್ತಿಯಾಗದು. ಈ ಕಗ್ಗದಲ್ಲಿ ಯಾವುದನ್ನು ಆರಿಸಬೇಕು, ಯಾವುದನ್ನು ಬಿಡಬೇಕು, ಉದಾಹರಣೆಗೆ? ಅದಕ್ಕೆ ಇಡೀ ಗ್ರಂಥವನ್ನು ಓದಬೇಕು. ನಮ್ಮ ಬಾಳಿನ ಬಗೆಯನ್ನು ಮಂಕುತಿಮ್ಮನ ಬಾಯಿಂದಲೇ ಕೇಳಿ:—

ತೋಯಿಸುತ ಬೇಯಿಸುತ ಹೆಚ್ಚುತ್ತ ಕೊಚ್ಚುತ್ತ।
ಕಾಯಿಸುತ ಕರಿಯುತ್ತ ಹುರಿಯುತ್ತ ಸುಡುತ
ಈ ಯವನಿಯೊಳೆಮ್ಮಯ ಬಾಳನಟ್ಟು ವಿಧಿ
ಬಾಯ ಚಪ ರಿಸುವನು—**ಮಂಕುತಿಮ್ಮ**।

—**ದ. ಕೃ. ಭಾರದ್ವಾಜ**

ಸಾಹಿತ್ಯ ತಪೋಧನ*

'ಉಮರನ ಒಸಗೆ'ಯ ರಸಬುಗ್ಗೆಯನ್ನು ಚಿಮ್ಮಿಸಿದ. ಆಧುನಿಕ ಯುಗದಲ್ಲಿ ಮಹಾಕಾವ್ಯವಾದ 'ಮಂಕುತಿಮ್ಮನ ಕಗ್ಗ'ವನ್ನು ನೀಡಿದ ಮಹಾಕವಿ. ದಾರ್ಶನಿಕ, ವ್ಯವಹಾರ, ರಾಜಕೀಯ, ವೇದಾಂತ ನಿಪುಣ ಆಚಾರ್ಯರಾದ ಡಿ.ವಿ.ಜಿ.ಯವರನ್ನು ಅಂದು ಸಾಯಂಕಾಲ ಗೋಖಲೆ ವಿಚಾರ ಸಂಸ್ಥೆಯಲ್ಲಿ ಕಂಡಾಗ ನನ್ನ ಮೈ-ಮನ ಪುಳಕಿತವಾದವು. ದೀರ್ಘ ದಂಡ ನಮಸ್ಕಾರ ಮಾಡಿ ಎದ್ದು ಕುಳಿತಾಗ ಮೈ ಕಂಪನವಿನ್ನೂ ಇತ್ತು.

"ಯಾರು ಈತ?" ನನ್ನನ್ನು ಕರೆದೊಯ್ದ ಸಾಹಿತಿ ಶ್ರೀ ಶ್ರೀನಿವಾಸರಾವ್ ಕೊರಟಿಯವರನ್ನು ಕೇಳಿದರು.

"ಕೃಷ್ಣಮೂರ್ತಿ ಪುರಾಣಿಕ."

"ಕಾದಂಬರಿಕಾರ ?"

"ಹೌದು."

ನನ್ನಲ್ಲಿ ಉಂಟಾದ ಭಾವೋದ್ವೇಗವನ್ನು ಈ ಮಹಾವ್ಯಕ್ತಿ ಕಂಡಿರಬೇಕು. ನನ್ನನ್ನೊಮ್ಮೆ ಕೃಪಾದೃಷ್ಟಿಯಿಂದ ನೋಡಿ ಮತ್ತೆ ನೆರೆದವರೊಡನೆ ವಿಚಾರ ಚರ್ಚೆಯಲ್ಲಿ ತೊಡಗಿದರು. ಅವರ ವಿಚಾರಮಂಥನ ಶಕ್ತಿ. ಅದಕ್ಕೆ ಅನುಗುಣವಾದ ಉದಾಹರಣೆಗಳ ಸರಮಿಣುಕುಗಳು. ಹಾಸ್ಯದ ಹೊನಲಿನಲ್ಲಿ ಜೀವನದ ಸೌಂದರ್ಯ ಹರಿಸುವ ತೆರೆ. ಆಳವಾದ ಅಭ್ಯಾಸದ ಪ್ರತಿನಿಧಿಯಾಗಿ ಬರುವ ಪ್ರತಿಭಾವಂತ ಮಾತುಗಳು.

ನಾನು ಅಂದೇ ಡಿ.ವಿ.ಜಿ.ಯವರನ್ನು ಗುರುವೆಂದು ಸ್ವೀಕರಿಸಿದೆ. 'ಮಂಕುತಿಮ್ಮನ ಕಗ್ಗ' ನನ್ನ ಪಾರಾಯಣಗ್ರಂಥವಾಯಿತು.

ಮತ್ತೊಮ್ಮೆ

ಬೆಂಗಳೂರಿನ 'ಭಾರತ್' ಚಿತ್ರಮಂದಿರ ಸಾಹಿತಿಗಳಿಂದ ಕಿಕ್ಕಿರಿದು ತುಂಬಿತ್ತು. ಅದೊಂದು ಪುಟ್ಟ ಸಾಹಿತ್ಯ ಸಮ್ಮೇಳನವೇ ಆಗಿತ್ತು. ಕನ್ನಡದ ಕಾದಂಬರಿ 'ಧರ್ಮ

* ಕೃಪೆ: ಕರ್ಮವೀರ, 8-2-1970

ದೇವತೆ' ಚಿತ್ರೀಕರಣವಾಗಿ 'ಕರುಣೆಯೇ ಕುಟುಂಬದ ಕಣ್ಣು' ನಾಮಧಾನದಿಂದ ಬಿಡುಗಡೆಯಾಗುವುದಿತ್ತು. ಕನ್ನಡದ ಕಾದಂಬರಿಯೊಂದು ಮೊದಲಬಾರಿಗೆ ರಜತಪರದೆಯನ್ನೇರಿತು. ಕನ್ನಡಾಭಿಮಾನಿಗಳಿಗೆಲ್ಲ ಹೆಮ್ಮೆಯ ವಿಷಯ. ಇದರ ಉದ್ಘಾಟನೆಗೆ ಕನ್ನಡದ ರಸಗಟ್ಟಿ, ದಾರ್ಶನಿಕ, ಮಹಾಕವಿ ಡಿ.ವಿ.ಜಿ. ಬಂದದ್ದು ಅಂದಿನ ಮಹಾವಿಶೇಷವಾಗಿತ್ತು. ಅವರ ಕನ್ನಡದ ಅಭಿಮಾನದ ರಸದೊರತೆ ಅಂದು ಸಮುಜ್ವಲವಾಗಿ ತರಂಗಗಳನ್ನು ಎಬ್ಬಿಸಿತು. ಈ ಕಾದಂಬರಿಯ ಕರ್ತೃವಾದ ನನ್ನನ್ನು ಅವರು ಆ ದಿನ ಸತ್ಕರಿಸಿ, ಜರದ ಬಂಗಾರ ಎಳೆಯ. ಬಿಳಿಯುಳ್ಳ ಶಾಲನ್ನು ಹೊದಿಸಿ, ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಈ ಅಮೃತಸ್ಪರ್ಶದ ಸುಖಾನುಭವದ ಅನುಗ್ರಹವನ್ನು ನಾನು ಎಂದಿಗೂ ಮರೆಯಲಾರೆ. ಅವರ ಆಶೀರ್ವಾದ ನನಗೊಂದು ಪರಮಾನುಗ್ರಹ. ಆ ಬುದ್ಧಿಯ ಮೇರುಗಿರಿಯ ವ್ಯಕ್ತಿತ್ವದ ಅಂತರಂಗದಲ್ಲಿ ಹರಿಯುವ ಸವಿಜಲದ ಸಂಪ್ರೋಕ್ಷಣೆಯಿಂದ ಬರುವ ಧನ್ಯತೆ ಅನುಪಮವಾದುದು.

ಮರುದಿನ ಅವರು ನನ್ನ ಪತ್ನಿ ಗಂಗಾ, ಮಗಳು ವಿದ್ಯಾ ಅವರನ್ನು ನನ್ನೊಡನೆ ಅಂತಃಕರಣದಿಂದ ಬರಮಾಡಿಕೊಂಡು ತೋರಿಸಿದ ಆತ್ಮೀಯತೆ ಈ ವ್ಯಕ್ತಿಯ ಇನ್ನೊಂದು ಮುಖವನ್ನು ತೋರಿಸಿತು. ಈ ಹೃದಯವಂತಿಕೆ, ಮಮತೆ, ಅಸಾಧಾರಣ ಪ್ರೀತಿಯ ಹೊನಲಾಗಿ ಹರಿಯುವ ರಸತೀರ್ಥ ಡಿ.ವಿ.ಜಿ.

ಇನ್ನೊಮ್ಮೆ

ಪ್ರಜಾಮತ ಸಂಪಾದಕರಾದ ಶ್ರೀ ಹ. ವೆಂ. ನಾಗರಾಜರಾವ್ ಅವರು ನನ್ನನ್ನು ಅವರ ಮನೆಗೆ ಕರೆದೊಯ್ದಾಗ ಒಂಬತ್ತು ಗಂಟೆಯ ಸಮಯವಾಗಿತ್ತು. ಅವರ ಗೀತೆಯ ತಿರುಳು ಪ್ರಜಾಮತದಲ್ಲಿ ಧಾರಾವಾಹಿಯಾಗಿ ಪ್ರಕಟವಾಗತೊಡಗಿತ್ತು. ಅದೇ ಸಂಚಿಕೆಗಳಲ್ಲಿ ನನ್ನ ಕಾದಂಬರಿಯೊಂದು ಧಾರಾವಾಹಿಯಾಗುತ್ತಲಿತ್ತು. ಈ ಆತ್ಮೀಯತೆಯ ಮಹಾಯೋಗವನ್ನು ಮೆಲುಕು ಹಾಕುತ್ತ ನಾವು ಅವರ ಮನೆಗೆ ಹೋದಾಗ ನಮಗೆ ರಸಗವಳ ಸಿದ್ಧವಾಗಿತ್ತು. ಮೈಸೂರಿನ ಅಂದಿನ–ಇಂದಿನ ರಾಜಕೀಯ ವ್ಯಕ್ತಿಗಳು. ಸಾಹಿತ್ಯಪರಿಷತ್ತಿನ ಜನ್ಮ–ಬೆಳವಣಿಗೆ. ಉತ್ತರ ಕರ್ನಾಟಕದ ವಿದ್ಯಾವರ್ಧಕಸಂಘ. ದಿ. ಆಲೂರ ವೆಂಕಟರಾಯರೊಡನೆ ಮಾಡಿದ ಕೆಲಸ. ದಿ. ಮುದವೀಡು ಕೃಷ್ಣರಾಯರ ಸ್ಮರಣೆ. ಕಲಾವಿದರ ಯೋಗ್ಯತಾ ನಿರ್ಣಯ. ಶಿಲ್ಪಿಗಳ ಚಾತುರ್ಯಾನ್ವೇಷಣೆ. ಗಾಯಕರ ದನಿಯ ಏಳತೆರೆಯ ರಾಗ ವಿಲಾಸಗಳ ಚರ್ಚೆ. ರಂಗಭೂಮಿಯ ಪರಿಚಿತ—ಒಂದೇ ಎರಡೇ. ಸಾವಿರ ವಿಷಯಗಳ ನಿವೇದನೆ. ಈ ಅದ್ಭುತ ವ್ಯಕ್ತಿಯ ಮುಂದೆ ನಾವು ಕರಗಿಹೋದೆವು. ಕಣ್ಣುರೆಪ್ಪೆ ಬಡಿದಾಗ ಮಧ್ಯರಾತ್ರಿ ಮೀರಿಹೋಗಿತ್ತು. ಇದು ಜೀವನದ ತಲ್ಲೀನತೆಯ. ನಿಷ್ಠೆಯ ಜೀವನದ ಬಗ್ಗೆ ಗೌರವವೃತ್ತಿಯುಳ್ಳ ಮಹಾಮಾನವನ ಮಾನವತೆಯ ಪ್ರತೀಕವಾಗಿತ್ತು.

ಮಾನವತೆಯು ಸಾಕಾರ ಪ್ರತಿಮೆಯೇ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ವು ಮಾನವತೆಯು ಬೆಳುದಿಂಗಳಲ್ಲಿ ಹಾಲುಗಲ್ಲಿನಿಂದ ನಿರ್ಮಿಸಿದ ಮಹಾಸೌಧ. ಮಹಾಕಾವ್ಯದ ರಸದೃಷ್ಟಿ, ಅನುಭವೈಕ ಜೀವನದ ಒಳದೃಷ್ಟಿ, ನಿತ್ಯನೂತನ ಅರ್ಥ ಪೂರ್ಣ ಭಾವವಿಚಾರ ಪರಿಪೂರ್ಣ ರಸಸಿದ್ಧಿ. ಈ ಸಿದ್ಧಿಯನ್ನು ಪಡೆದ ಡಿ.ವಿ.ಜಿ. ಕನ್ನಡದ ಮಹಾ ಆಸ್ತಿ. ಅವರ ಕಾವ್ಯರಸ ಮಾಧುರ್ಯದ ಕಾರಂಜಿ ಚಿರನೂತನ ಚೈತನ್ಯದ ಮಹಾಸಂಪ್ರೋಕ್ಷಣೆ.

ಈ ಕಾವ್ಯದಿಂದ ಪ್ರಭಾವಿತನಾದ ನಾನು ಒಂದು ವ್ಯಕ್ತಿನಿಷ್ಠವಾದ ಕಾದಂಬರಿ 'ತಂಪುನೆಳಲು' ಬರೆದೆ. ಅದನ್ನು ಡಿ.ವಿ.ಜಿ.ಗೆ ಅರ್ಪಿಸಿದೆ. ಅಂದು ನನ್ನ ಗೆಳೆಯ ರಾದ ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳರೊಂದಿಗೆ ಹೋಗಿ ಅವರ ಪಾದಪದ್ಮಗಳ ಮೇಲೆ ತಲೆಯಿಟ್ಟು ಪುಸ್ತಕವನ್ನು ಅರ್ಪಿಸಿದಾಗ ಡಿ.ವಿ.ಜಿ. ಅವರ ಕೈ ನನ್ನ ಬೆನ್ನ ಮೇಲೆ ಆಡುತ್ತಿತ್ತು. ನಾನು ಗೋಕಾಕದವರೆಗೂ ಆ ಅಮೃತವೃಷ್ಟಿಯನ್ನೇ ನೆನೆಯುತ್ತ ಬರುವ ಹೊತ್ತಿಗೆ ನನ್ನಲ್ಲಿ ಇನ್ನೊಂದು ಅನುಗ್ರಹ ಕಾದುನಿಂತಿತ್ತು. ಡಿ.ವಿ.ಜಿ.ಯವರ ದೀರ್ಘವಾದ ಕಾಗದ ಬಂದಿತ್ತು. ಅವರು 'ತಂಪುನೆಳಲ'ನ್ನು ಓದಿಸಿ ನಾಲ್ಕು ಮಾತು ಬರೆದಿದ್ದರು. ಬಹು ಎತ್ತರದ ವ್ಯಕ್ತಿಯಲ್ಲಿಯ ನಯ ಸೌಜನ್ಯಗಳನ್ನು ಕಂಡು ನನ್ನ ಕಣ್ಣು ತೇವಗೊಂಡವು. ಆ ಕಾಗದದಲ್ಲಿಯ ಒಂದೆರಡು ಮಾತುಗಳನ್ನು ಮಾತ್ರ ಉದ್ಧರಿಸುತ್ತಿದ್ದೇನೆ :

"...ನೀವು ಕರುಣೆಯನ್ನೇ ಧರ್ಮದ ಮೂಲವನ್ನಾಗಿ ಅಂಗೀಕರಿಸಿರುವವರು. ನಿಮ್ಮ ಕರುಣೆ ನನಗೆ ಅಮೃತಪ್ರಾಯವಾದದ್ದು. ಪ್ರೀತಿಯು ಬೆಲೆ ಬಹಳ ದೊಡ್ಡದು...... ನೀವ ಮಿತ್ರ ರೊಡನೆ ನನ್ನ ಮನೆಗೆ ಬಂದು ಅತಿಶಯವಾದ ಪ್ರೀತ್ಯಭಿಮಾನಗಳನ್ನು ಮಳೆಗರೆದು. ನನ್ನನ್ನು ಆನಂಬಭರಿತನನ್ನಾಗಿ ಮಾಡಿದ್ದೀರಿ. ಅದಕ್ಕಾಗಿ ಈ ನನ್ನ ವಂದನೆಗಳನ್ನು ಸ್ವೀಕರಿಸಬೇಕು......

ಡಿ.ವಿ.ಜಿ."

ಈ ಯೋಗಿಮನಸ್ಸು ಆಶೀರ್ವಾದವನ್ನು ಮಾಡುವದೇ ಅಪೇಕ್ಷಣೀಯ, ಈ ವಂದನೆಯ ಭಾವದಲ್ಲಿ ಅನುಭಾವಿಯ ಪರಿಪಕ್ವತೆ ಎದ್ದು ಕಾಣುತ್ತದೆ.

ಡಿ.ವಿ.ಜಿ. ಅಂದು ಹೇಳಿದ ಮಾತುಗಳ ಸಾರಸಂಗ್ರಹವು ಅವರ 'ಮಂಕು ತಿಮ್ಮನ ಕಗ್ಗ'ದ ಒಂದು ಚರಣದಲ್ಲಿ ಚಿತ್ರಿತವಾಗಿದೆ :

'ಸಾತ್ವಿಕದಿ ಬಾಳ್ವವಂಗೆತ್ತಲೇಂ ಭಯವಿಹುದು ?'

ಈ ಉಕ್ತಿ ನನ್ನ ಕಾದಂಬರಿಯ ಬರಹಕ್ಕೆ ಸ್ಫೂರ್ತಿ.

—**ಕೃಷ್ಣಮೂರ್ತಿ ಪುರಾಣಿಕ**

ಡಿ.ವಿ.ಜಿ. — ಒಂದು ಭೇಟಿಯ ನೆನಪು*

"ನೋಡಿ ಈ ಬೆರಳುಗಳನ್ನು. ಒಂದು ಗಿಡ್ಡ, ಇನ್ನೊಂದು ದಪ್ಪ, ಇನ್ನೊಂದು ಸೊಟ್ಟ, ಮತ್ತೊಂದು ಉದ್ದ. ಇವುಗಳನ್ನೆಲ್ಲ ಏಕರೂಪದವುಗಳನ್ನಾಗಿ ಮಾಡುತ್ತೇನೆ ಎಂದು ಯಾರಾದರೂ ಪಣತೊಟ್ಟರೆ ಅವನನ್ನು ನೀವು ಏನೆಂದು ಕರೆಯುತ್ತೀರಿ ?"

ಕನ್ನಡ ನಾಡಿನಲ್ಲಿ ಆಗ ನಡೆಯುತ್ತಿದ್ದ ಏಕೀಕರಣ ಚಳವಳಿಯ ಬಗ್ಗೆ ನನ್ನ ಪ್ರಶ್ನೆಗೆ ಉತ್ತರವಾಗಿಯೋ, ಸಂಭಾಷಣೆಯ ಗತಾನುಗತಿಕ ಸುಳಿಯೊಂದರಲ್ಲೊ ಇದು ಡಿ.ವಿ.ಜಿ. ನನಗೆ ಹಾಕಿದ ಸವಾಲು. ಇದರ ತಥ್ಯ–ಮಿಥ್ಯ ಭವಿತವ್ಯಗಳು ಏನೇ ಇದ್ದರೂ ಅವರ ಈ ಅದ್ಭುತವಾದ ಅಭಿವ್ಯಕ್ತಿಯ ವಿಧಾನ ನನ್ನನ್ನು ಮೂಕನನ್ನಾಗಿ ಮಾಡಿತು. ವಿದ್ಯಾರ್ಥಿಯಾಗಿದ್ದಾಗ ಹಲವು ದೇಶೀಯ ಮತ್ತು ವಿದೇಶೀಯ ಸಮರ್ಥ ಬುದ್ಧಿಜೀವಿಗಳಿಂದ ಪಾಠ ಹೇಳಿಸಿಕೊಂಡವ ನಾನು. ತಾಸುಗಟ್ಟಲೆ ಅವರೊಡನೆ ಗಹನವಾದ ವಿಷಯಗಳ ಮೇಲೆ ಚರ್ಚಿಸಿದವ. ಇದರ ಹೊರಗೆ ಎಷ್ಟೋ ಮಂದಿ ಪ್ರಸಿದ್ಧ ರಾಜಕಾರಣಿಗಳ ತತ್ತ್ವಶಾಸ್ತ್ರಿಗಳ ಮುತ್ಸದ್ದಿಗಳ ಉಪನ್ಯಾಸಗಳನ್ನು ಆಸಕ್ತಿ ಯಿಂದ ಕೇಳಿದವ. ಆದರೆ ಡಿ.ವಿ.ಜಿ. ಹದಿನೇಳು ವರ್ಷಗಳ ಹಿಂದಿನ ಒಂದು ದಿನ ನನಗೆ ಕೇಳಿದ ಮೇಲಿನ ಉತ್ತರರೂಪದ ಸವಾಲು, ಅದರೊಡನೆ ಮಿಳಿತವಾಗಿದ್ದ ಅವರ ಭಾವಾಭಿನಯ ನಾನು ಕಲಿತಿರುವ ಕೆಲವೇ ಕೆಲವು ಚಿರಸ್ಮರಣೀಯ ಪಾಠ ಗಳಲ್ಲೊಂದು ಎಂದು ನೆನೆಯುತ್ತೇನೆ.

ಆಗ ನಾನು ಮದ್ರಾಸ್ ನಿವಾಸಿ. ಅಲ್ಲಿನ ಬುದ್ಧಿಜೀವಿಗಳ ದೈನಂದಿನ ಆಹಾರ ವಾಗಿದ್ದ 'ಹಿಂದೂ' ಪತ್ರಿಕೆಯ ಬರಹಗಳನ್ನು ನಾನೂ ಯಥಾಶಕ್ತಿ ಮೆಲುಕಾಡು ತ್ತಿದ್ದೆ. ನಿತ್ಯದ ಸಂಚಿಕೆಗಳಲ್ಲಿ ಸಾಮಾನ್ಯವಾಗಿ ಲೇಖಕನ ಹೆಸರನ್ನು ಕಾಣಿಸಿ ಲೇಖನ ಗಳನ್ನು ಪ್ರಕಟಿಸುವ ಪದ್ಧತಿ ಆ ಪತ್ರಿಕೆಗೆ ಇರಲಿಲ್ಲ. ಎಲ್ಲೋ ಆಗೊಮ್ಮೆ ಈಗೊಮ್ಮೆ ಎಂಬಂತೆ ಇಂಗ್ಲೆಂಡಿನ 'ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್'ನ ಸಂಪಾದಕ ಕಿಂಗ್‌ಸ್ಲೀ ಮಾರ್ಟಿನ್ ಅಥವಾ ಹೆರಾಲ್ಡ್ ಲಾಸ್ಕಿ ಮುಂತಾದ ಪ್ರಭೃತಿಗಳ ಲೇಖನ ಗಳು ಬರೆದವರ ಹೆಸರಿನೊಡನೆ ಪ್ರಕಟವಾಗುತ್ತಿದ್ದವು. ಇಂಥವರನ್ನು ಹೊರತು ಪಡಿಸಿ, ಅದೇ ರೀತಿ ಹೆಸರಿನೊಡನೆ ಅದು ಪ್ರಕಟಪಡಿಸುತ್ತಿದ್ದ ಲೇಖನಗಳೆಂದರೆ

---

* ಕೃಪೆ: ಕರ್ಮವೀರ 8–2–1970

ಡಿ.ವಿ.ಜಿ.ಯವರದ್ದು ಎಂದು ನನ್ನ ನೆನಪು. ರಾಜ್ಯಾಂಗ ಘಟನೆಯ ಸಭೆಗಳು ಕ್ಲಿಷ್ಟ ವಾದ ವಿಷಯಗಳನ್ನು ಚರ್ಚಿಸುತ್ತಿದ್ದಾಗ, ದೇಶೀಯ ರಾಜ್ಯಗಳು ಭಾರತದ ಒಕ್ಕೂಟಕ್ಕೆ ಸೇರುವಾಗ ಡಿ.ವಿ.ಜಿ.ಯವರ ಲೇಖನಗಳನ್ನು 'ಹಿಂದೂ' ಪ್ರಕಟಿಸು ತ್ತಿತ್ತಲ್ಲದೆ, ಭಾಷಾ ಪ್ರಾಂತರಚನೆ, ಅದರಲ್ಲೂ ಮೈಸೂರಿನ ವಿಲೀನೀಕರಣದ ವಿಷಯ ದಲ್ಲೂ ಆಗಾಗ ಅವರ ಸಹಿಯುಕ್ತ ಬರಹಗಳು ಅದರಲ್ಲಿ ಕಾಣಿಸಿಕೊಳ್ಳುತ್ತಿದ್ದವು. ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಮುಂತಾದ ವಿಷಯಗಳಲ್ಲಿ ಆಸಕ್ತಿಪೂರ್ಣವಾದ ಉತ್ತಮ ಶಿಕ್ಷಣವನ್ನು ಪಡೆದ ನನ್ನಂಥವರಿಗೆ ಡಿ.ವಿ.ಜಿ.ಯ ಲೇಖನಗಳು ಪಾಂಡಿತ್ಯಪೂರ್ಣವಾಗಿ ತೋರುತ್ತಿದ್ದವು. ಇದಕ್ಕಿಂತಲೂ ಹೆಚ್ಚಿನ ವಿಸ್ಮಯವೆಂದರೆ ಅತ್ಯಂತ ಪ್ರತಿಭಾವಂತ ಲೇಖಕವರ್ಗವನ್ನು ಹೊಂದಿದ್ದ 'ಹಿಂದೂ' ಪತ್ರಿಕೆಯು ಡಿ.ವಿ.ಜಿ.ಯವರ ಬರಹಗಳಿಗೆ ತೋರಿಸುತ್ತಿದ್ದ ಅದ್ವಿತೀಯ ಗೌರವ. ಇಂಥ ವಿಚಾರಶೀಲ, ಕನ್ನಡದಂತೆ ಆಂಗ್ಲ ಭಾಷೆಯಲ್ಲಿಯೂ ಅಪೂರ್ವ ಪ್ರಭುತ್ವವನ್ನು ಸಿದ್ಧಿಸಿದ್ದ ಮಹಾಲೇಖಕ ನಮ್ಮ ಉಚ್ಚಶಿಕ್ಷಣದ ನೆವನದಿಂದ ಕಾಲೇಜುಗಳಲ್ಲಿ ಅಲೆದಾಡಿದವರು ಅಲ್ಲವೆಂದು ಮತ್ತೆ ತಿಳಿದಾಗ ನನಗದನ್ನು ನಂಬಲಾರದಂತಾಯಿತು.

ಡಿ.ವಿ.ಜಿ.ಯವರನ್ನು ಕಾಣಲು ನಾನೇನೂ ಮುಂದಾಗಿ ಸಮಯ ಗೊತ್ತು ಮಾಡಿಕೊಂಡಿರಲಿಲ್ಲ. ನನ್ನ ಸ್ನೇಹಿತರು ಆಗತಾನೇ ಒಂದು ನೌಕರಿಯಿಂದ ಇನ್ನೊಂದು ನೌಕರಿಗೆ ಬದಲಾಯಿಸಿಕೊಳ್ಳಲಿದ್ದರು. ಅವರು ಹಿಡಿಯಲಿದ್ದ ಹೊಸ ನೌಕರಿಯ ವಿಷಯ ಡಿ.ವಿ.ಜಿ.ಗೆ ಪ್ರಿಯವಾದುದು. ಹಾಗೆಂದು ಡಿ.ವಿ.ಜಿ.ಯವರಿಂದ ಅವರು ಆಶೀರ್ವಾದವನ್ನೂ ಬಯಸಿದ್ದರು.

"ಏನಪ್ಪಾ ಈ ನೌಕರಿ ನಿನಗೆ ದೊರಕಿದುದು ಬಹಳ ಸಂತೋಷ. ಆದರೆ ನಿನ್ನನ್ನು ಇಂದು ಈ ವಿಷಯಕ್ಕೆಂದು ನೇಮಿಸಿ, ನಾಳೆ ಕನ್ನಡ ಪಾಠ ಕಲಿಸುವ ಉಪ ಪ್ರಾಧ್ಯಾಪಕನೆಂದು ಬದಲಿಸುವುದೂ ಅಲ್ಲಿ ಅಸಾಧ್ಯವಲ್ಲ. ಹೀಗೆ ದೊಡ್ಡ ದೊಡ್ಡ ಆಸೆಯಿಟ್ಟುಕೊಂಡು ನಿನ್ನಂತೆ ಅಲ್ಲಿಗೆ ಹೋದವರು ಕ್ರಮೇಣ ಕಾಲುಕಸದಂತಾಗಿ ತಮ್ಮ ನೌಕರಿ ನಡೆಸಿದರು."

ಇದನ್ನು ಆಶೀರ್ವಾದದ ಮಾತೆಂದು ನನಗೆ ನಂಬಲಾಗಲಿಲ್ಲ. ಆದರೆ ಮುಂದೆ ಅವರದೇ ಮಗನ ಪ್ರಸ್ತಾಪ ಬಂದಾಗ ಅವರ ಇಂಗಿತ ನಮಗಿಬ್ಬರಿಗೂ ಸ್ಪಷ್ಟ ವಾಯಿತು. ಅವರ ಮಗ ಎರಡೂ ಮೂರೂ ಡಾಕ್ಟರೇಟ್‌ಗಳನ್ನು ಸಂಪಾದಿಸಿ ವಿದೇಶಗಳಲ್ಲೂ ಹೆಸರು ಗಳಿಸಿದ ಮೇಧಾವಿ. ಅವರು ಆಗತಾನೆ ಮದ್ರಾಸಿನಲ್ಲಿ ಪ್ರಶಸ್ತವಾದ ಹುದ್ದೆಗೆ ಸೇರಿದ್ದರು. ಡಿ.ವಿ.ಜಿ.ಯವರನ್ನು ನಾವು ಕಂಡ ಹಿಂದಿನ ವಾರ ಅವರು ನಮ್ಮಲ್ಲಿ ಊಟಕ್ಕೂ ಬಂದಿದ್ದರು. ನನ್ನೊಡನಿದ್ದವರು ಅವರಿಗೆ ಸಿಕ್ಕಿದ ಮಹತ್ವದ ಪ್ರಶಸ್ತಿಯನ್ನು ಡಿ.ವಿ.ಜಿ.ಯವರ ಮುಂದೆ ಪ್ರಶಂಸಿಸಿದರು. ಆದರೆ ಡಿ.ವಿ.ಜಿ.—

"ಏನಯ್ಯ. ನಾಯಿಯ ಒಟ್ಟಿಗೆ ಹೋಗುವವ ಅದರ ಮೇಲೆ ಕುಳಿತು ಸವಾರಿ ಮಾಡಿದರೆ ಅವನ ಯೋಗ್ಯತೆ ಎಷ್ಟು ಹೆಚ್ಚುತ್ತದೆ?"

—ಎಂದು ಗೊಳ್ಳನೆ ನಕ್ಕುದು ನಮಗೆ ಆಶ್ಚರ್ಯಕರವಾಗಿ ತೋರದಿರಲಿಲ್ಲ. ತನ್ನ ಮಗನ ಉತ್ತುಂಗ ಸಾಧನೆಯನ್ನು ಇಷ್ಟು ಹಗುರಾಗಿ ಕಾಣಬಲ್ಲ ತಂದೆಯರು ಬೇರೆ ಯಾರಾದರೂ ಇರಬಹುದೆ ? ಎಂದು ನನಗೆ ಸಂದೇಹವಿದೆ. ಮುಂದೆ ಅವರ ಆತ್ಮವೃತ್ತಾಂತವನ್ನೊಳಗೊಂಡ ಬರಹಗಳನ್ನು ಓದುವಾಗ ನೌಕರಿ ಹಿಡಿಯುವುದು ಡಿ.ವಿ.ಜಿ.ಯವರ ಮನೋಧರ್ಮಕ್ಕೆ ವಿರೋಧವಾದುದು ಎಂಬುದು ನನಗೆ ಸ್ಪಷ್ಟ ವಾಯಿತು. ಮೈಸೂರಿನ ದಿವಾನರುಗಳಾದ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್‌ರ ವಿಶ್ವಾಸವನ್ನು ಗಳಿಸಿ ಅವರ ಆಪ್ತಾಲೋಚನೆಗಳಲ್ಲಿ ಸಕ್ರಿಯ ಭಾಗಿಗಳಾಗಿ ಅವರ ಆಪ್ತವರ್ಗದಲ್ಲಿ ಸೇರಿಕೊಂಡಿದ್ದ ಡಿ.ವಿ.ಜಿ.ಯವರಿಗೆ ಮಹತ್ವದ ಹುದ್ದೆಯನ್ನು ಗಳಿಸುವುದು ಅಸಾಧ್ಯವಾಗಿರಲಿಲ್ಲ. ಆದರೆ ಅವರು ನೌಕರಿ ಯಿಂದ ದೂರವಾಗಿಯೇ ಉಳಿದಿದ್ದಾರೆ.

ಹಾಗಾಗಿಯೇ ಅವರು ನಿರ್ಬಾಧಿತವಾದ ನಿರ್ದಾಕ್ಷಿಣ್ಯದ ವಿಚಾರಶಕ್ತಿಯನ್ನು ಪಡೆದಿದ್ದಾರೆನ್ನಬಹುದು. ಕಟುವಾಗಿ ಹೇಳಬೇಕಾದ್ದನ್ನು ಕಟುವಾಗಿಯೇ ಹೇಳುವ ಪರಿಪಾಠ ಅವರಲ್ಲಿ ರಕ್ತಗತವಾಗಿದೆಯೆಂಬುದನ್ನು ಕೆಲವು ವರ್ಷಗಳ ಹಿಂದೆ ನನ್ನ ಒಬ್ಬ ಬರಹಗಾರ ಸ್ನೇಹಿತರೂ ಮನಗಂಡರು. ಅವರೊಂದು ತಮ್ಮ ಕೃತಿಯನ್ನು ಡಿ.ವಿ.ಜಿ.ಗೆ ಅರ್ಪಿಸುತ್ತ ಅದು ಇಂಥವನ ಕೃತಿಯ 'ಅನುವಾದ'ವಾಗಿದೆಯೆಂದರಂತೆ. ಡಿ.ವಿ.ಜಿ. ಅವರನ್ನು ತಡೆದು "ಅನುವಾದ ಎನ್ನಬೇಡಿ ಸ್ವಾಮಿ. ಅನುವಾದ ಎನ್ನೋದು ದೊಡ್ಡ ಶಬ್ದ. ಬೇಕಾದರೆ ಭಾಷಾಂತರವೆನ್ನಿ, ರೂಪಾಂತರವೆನ್ನಿ, ಅನುವಾದ ವೆನ್ನುವುದು ಮೂಲಕೃತಿಯ ಯೋಗ್ಯತೆಗೆ ಕುಂದು" ಎಂದು ಉದ್ಗರಿಸಿದರಂತೆ.

ನಮ್ಮ ಸಂದರ್ಶನದಲ್ಲಿ ಮೈಸೂರಿನ ವಿಲೀನೀಕರಣದ ಬಗ್ಗೆ ತಮಗಿದ್ದ ತಾತ್ತ್ವಿಕ ವಿರೋಧವನ್ನು ಸಕಾರಣವಾಗಿಯೇ ನಮ್ಮೊಡನೆ ವ್ಯಕ್ತಪಡಿಸಿದರು. ಬೆರಳು ಗಳನ್ನು ತೋರಿಸಿದ ಮೇಲಿನ ಪ್ರಸ್ತಾಪದ ಬಳಿಕ "ನೋಡಿ, ಮೈಸೂರಿನ ಜನರಲ್ಲೂ ಅನೇಕ ಕೊರತೆಗಳಿವೆ. ಉತ್ತರ ಕರ್ನಾಟಕದವರ ಸಂಸ್ಕೃತಿಯೂ ನನಗೆ ಹಿಡಿಸದು. ಬಳ್ಳಾರಿಯವರ ಮಾರ್ಗ ಬೇರೆಯೇ. ಮಂಗಳೂರವರು ಮುಂಬಯಿ ಮತ್ತು ಮದ್ರಾಸಿನವರಿಂದ ಸ್ಫೂರ್ತಿ ಪಡೆದವರು. ಇಂಥವರನ್ನೆಲ್ಲ ಒಟ್ಟಾಗಿ ಮಾಡಿದರೆ ಯಾರಿಗೆ ಪ್ರಯೋಜನ ?"

ಹದಿನೇಳು ವರ್ಷಗಳ ಹಿಂದೆ ಡಿ.ವಿ.ಜಿ. ವ್ಯಕ್ತಪಡಿಸಿದ ಈ ವಿಚಾರಸರಣಿ ಆ ಬಳಿಕ ಬೇರೆ ಬೇರೆ ರೂಪದಲ್ಲಿ ಗುಡಿಗುಡಿಸುತ್ತಲೇ ಇದೆ ಎಂಬುದನ್ನು ಅಲ್ಲಗಳೆ ಯುವುದು ಅಸಾಧ್ಯ. ಹಾಗೆಂದು ಡಿ.ವಿ.ಜಿ. ಬರೇ ಭಾವುಕರು ಅಥವಾ ಸಂಪ್ರ ದಾಯಸ್ಥರು, ಹೊಸ ರಾಜಕೀಯ ಪರಂಪರೆಗಳನ್ನು ತಿಳಿಯದವರು ಅಥವಾ ಅರಸೊತ್ತಿಗೆಯ ಅಪೇಕ್ಷಕರು ಎಂದು ನಾವು ಹೇಳುವಂತೆಯೂ ಇರಲಿಲ್ಲ. ಏಕೆಂದರೆ ನಾವು ಅವರ ಮುಂದೆ ಹೋದಾಗ ಅವರು ಅತಿ ಶ್ರದ್ಧೆಯಿಂದ ಅಭ್ಯಸಿಸುತ್ತಿದ್ದ ಗ್ರಂಥ ಅರಿಸ್ಟಾಟಲನ 'Politics'!

ನನ್ನ ಶಿಕ್ಷಣದ ಕಾಲದಲ್ಲಿ ಪ್ಲೇಟೋವಿನ 'ರಿಪಬ್ಲಿಕ್', ಅರಿಸ್ಟಾಟಲನ 'ಪಾಲಿಟಿಕ್ಸ್'ಗಳನ್ನು ಅಭ್ಯಸಿಸಿದ್ದೆ. ಅವುಗಳನ್ನು ಮೆಚ್ಚಿದ್ದೆ. ನಮ್ಮ ನಾಯಕರಲ್ಲಿ ಎಷ್ಟು ಮಂದಿ ಅವುಗಳನ್ನು ಓದಿದ್ದರು ಮತ್ತು ಅವುಗಳಲ್ಲಡಕವಾದ ಮಾನವ ಗುಣದ ಮೂಲ ತತ್ವಗಳನ್ನು ಮಥಿಸಿದ್ದರು ಎಂದು ತಿಳಿಯುವ ಅವಕಾಶವೆ ಸಿಗುತ್ತಿದ್ದಿಲ್ಲ. ಆದರೆ ಸುಮಾರು ಅರುವತ್ತೈದು ವರ್ಷ ಪ್ರಾಯದ, ವೃತ್ತಿ-ರಾಜಕೀಯ ವರ್ಗಕ್ಕೆ ಸೇರದ ಈ ಕನ್ನಡದ ನಾಮಾಂಕಿತ ಕವಿ, ಗದ್ಯ ಲೇಖಕರು ಎರಡು ಸಾವಿರ ವರ್ಷಗಳ ಹಿಂದಿನ ಗ್ರೀಕ್ ಮೇಧಾವಿಯ ಮಹಾಕೃತಿಯನ್ನೋದು ವುದರಲ್ಲಿ ತಲ್ಲೀನರಾಗಿದ್ದುದು ನನ್ನನ್ನು ಚಕಿತನನ್ನಾಗಿ ಮಾಡಿತ್ತು. ಅವರ ಅಂಥ ಜ್ಞಾನಪಿಪಾಸೆ ಮತ್ತು ಜ್ಞಾನಗಳಿಕೆಯೇ ಅವರ ಅದ್ಭುತ ವಿಚಾರಶಕ್ತಿಯ ಅಡಿಗಟ್ಟು ಎಂಬುದು ನನಗೆ ಆಗ ಸ್ಪಷ್ಟವಾಯಿತು.

—ಸೇವ ನಮಿರಾಜ ಮಲ್ಲ

ಯಜಮಾನರು*

ನಾವು ಕೆಲವರು ಹುಡುಗರಿಗೆ ಶ್ರೀಮಾನ್ ಡಿ. ವಿ. ಗುಂಡಪ್ಪನವರು "ಯಜಮಾನರು". ನಮ್ಮ ಹಿರಿಯರು ಮೂರು ತಲೆಮಾರಿನ ಜನರನ್ನು, ಅವರ ವ್ಯಕ್ತಿತ್ವ–ಗುಣವಿಶೇಷಗಳನ್ನು ಡಿ.ವಿ.ಜಿ. ಚೆನ್ನಾಗಿ ಬಲ್ಲರು. ನಮ್ಮೆಲ್ಲರ ಬಗೆಗೆ ಅವರದು ಒಂದೇ ಬಗೆಯ ನಿರ್ವ್ಯಾಜ ಅಂತಃಕರಣ.

ಹಿಂದಿನ ಕಾಲದಲ್ಲಿ ಕುಲಗುರುಗಳು ಇದ್ದರೆಂದು ಕೇಳಿದ್ದೇವಲ್ಲ. ಒಂದು ಮನೆಯಲ್ಲಿ, ಒಂದು ಕೇರಿಯಲ್ಲಿ, ಒಂದು ಊರಿನಲ್ಲಿ ಮತ್ತು ನಾಡಿನಲ್ಲಿ ಎಲ್ಲಕ್ಕೂ ಅವರ ಸಲಹೆ–ಪರಾಮರ್ಶೆ ಮತ್ತು ಮಾರ್ಗದರ್ಶನ ಇರಬೇಕು. ಡಿ.ವಿ.ಜಿ. ಅವರ ಸಮೀಪ ಸಂಪರ್ಕದ ಲಾಭವುಳ್ಳ ಆತ್ಮೀಯ ಹಿರಿಯ–ಕಿರಿಯರಿಗೆ ವೈಯಕ್ತಿಕವಾಗಿಯೂ, ಕನ್ನಡ ಸಾಹಿತ್ಯ–ಸಾರಸ್ವತ–ಸಾರ್ವಜನಿಕ ಲೋಕದಲ್ಲಿ ಧೀಮಂತ ಮೂರ್ತಿಯಾಗಿಯೂ ಅವರು ಹೀಗೆ ಕುಲಗುರುಗಳಾಗಿದ್ದಾರೆ.

ಅಚ್ಚ ಭಾರತೀಯ

ವೇದಾಧ್ಯಯನ, ಪಾಂಡಿತ್ಯ–ವಿದ್ವತ್ತುಗಳ ಘನಸಂಪ್ರದಾಯದಲ್ಲಿ ಬೆಳೆದು ಬಂದ ಚೇತನ ಇವರು. ಅಚ್ಚ ಭಾರತೀಯ ಸಂಸ್ಕೃತಿ, ಸನಾತನ ಧರ್ಮ ಇವರಲ್ಲಿ ಮೂರ್ತೀಭವಿಸಿವೆ. ಸಂಸ್ಕೃತ ಸಾಹಿತ್ಯ, ವೇದ–ವೇದಾಂತ–ಶಾಸ್ತ್ರ ಸಂಪ್ರದಾಯಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳ ಹಿರಿಮೆಯಲ್ಲಿ ಈ ವಿಶಿಷ್ಟ ಭಾರತೀಯತ್ವವನ್ನು ಡಿ.ವಿ.ಜಿ. ಗುರುತಿಸಿದ್ದಾರೆ.

ಹಾಗೆಂದು ಡಿ.ವಿ.ಜಿ. ಕಂದಾಚಾರದ ಅಂಧಶ್ರದ್ಧೆಯವರಲ್ಲ. ಭಾರತೀಯ ಸಂಸ್ಕೃತಿಯ ಹಿರಿಮೆ ಅರಿತುಕೊಳ್ಳಲು ವೇದೋಪನಿಷತ್ತುಗಳ, ವ್ಯಾಸ–ವಾಲ್ಮೀಕಿಗಳ ಬಗ್ಗೆ ಅರಿವು ಎಷ್ಟು ಅಗತ್ಯವೋ ಆಧುನಿಕ ರಾಜಕಾರಣದಲ್ಲಿ ಸಮರ್ಪಕ ಪರಿಜ್ಞಾನಕ್ಕೆ ಮಿಲ್, ಡಿ ಟಾಕೆವಿಲ್, ಗೋಖಲೆ ಅವರುಗಳ ಬಗ್ಗೆ ತಿಳಿವಳಿಕೆ ಅಗತ್ಯವೆಂದು ಅವರು ಪ್ರತಿಪಾದಿಸುವರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಭಗವದ್ಗೀತೆ ಬಗ್ಗೆ ನಡೆಯುವ ಅಧ್ಯಯನದಷ್ಟೇ ಆಸಕ್ತಿಯಿಂದ ಮಿಲ್‌ನ ರಾಜ್ಯ

---

* ಕೃಪೆ: ಕನ್ನಡಪ್ರಭ, 11–1–1970

ಶಾಸ್ತ್ರ ಸಿದ್ಧಾಂತಗಳ ಬಗೆಗೂ ವಿಚಾರ ಮಾಡಲಾಗುತ್ತದೆ. ಭಗವದ್ಗೀತೆಯಲ್ಲಿ ಸಮಕಾಲೀನ ಜೀವನಕ್ಕೆ ಅಗತ್ಯವಾದ ಮೌಲ್ಯಗಳು ಎಷ್ಟೊಂದಿವೆಯೆಂಬುದನ್ನು ಅವರು ತಮ್ಮ ಅಮೋಘ ಗ್ರಂಥ–ಭಗವದ್ಗೀತಾರ್ಥಸಾರದಲ್ಲಿ (ಅದನ್ನು ಜೀವನ ಧರ್ಮಯೋಗ ಎಂದೇ ಬಣ್ಣಿಸಿದ್ದಾರೆ) ಬಹು ಸಾರವತ್ತಾಗಿ ನಿರೂಪಿಸಿದ್ದಾರೆ.

ಶಿಸ್ತು–ವ್ಯವಸ್ಥೆ

ಅಧ್ಯಯನಗಳಿಂದ ಎಂತಹ ಸುಸಂಸ್ಕೃತ ವ್ಯಕ್ತಿತ್ವ ಬೆಳಸಿಕೊಳ್ಳಬಹುದೆಂಬುದಕ್ಕೆ ಡಿ.ವಿ.ಜಿ. ಒಂದು ಪ್ರತಿಭಾವಂತ ನಿದರ್ಶನ. ಅವರ ಬರವಣಿಗೆ. ವಿಚಾರಗಳಲ್ಲಿ ನಾವು ಕಾಣುವ ಸಪ್ರಮಾಣ ನಿಖರತೆ, ಭಾಷಾ ಮರ್ಯಾದೆ ಅವರ ವ್ಯಕ್ತಿತ್ವವನ್ನು ಚೆನ್ನಾಗಿ ಹೊರಸೂಸುತ್ತದೆ.

ಕಾಗದದ ಮೇಲೆ ಒಂದು ಅಭಿಪ್ರಾಯವನ್ನು ಮೂಡಿಸುವುದಕ್ಕೆ ಮೊದಲು ಆ ಬಗ್ಗೆ ಅತ್ಯಂತ ಕೂಲಂಕಷವಾಗಿ ವಿಚಾರ ಮಾಡಿ ಪೂರ್ವಾಪರಗಳನ್ನು ಪರಾಮರ್ಶಿಸಿ. ತಮಗೆ ಸರಿಯೆನಿಸಿದುದನ್ನು ಖಚಿತವಾದ ಕರಾರುವಾಕ್ಕಾದ ಮಾತುಗಳಲ್ಲಿ ತಿಳಿಸು ತ್ತಾರೆ ಡಿ.ವಿ.ಜಿ. ಇದರಲ್ಲಿ ನಾವು ಯಾವ ಬಗೆಯ ಪೂರ್ವಾಗ್ರಹ ಪ್ರವೃತ್ತಿಗಳ ನ್ನಾಗಲೀ ಸಂಕುಚಿತ ಅಥವಾ ಸ್ವಾರ್ಥಾಸಕ್ತಿಯ ಭಾವನೆಗಳನ್ನಾಗಲೀ ಕಾಣುವುದಿಲ್ಲ. ಅವರದು ಶುದ್ಧ ವಿಚಾರವಂತಿಕೆ.

ದೀರ್ಘಕಾಲದ ಜೀವನಾನುಭವವುಳ್ಳ ಡಿ.ವಿ.ಜಿ. ಎಷ್ಟೋ ಏರುಪೇರು ಗಳನ್ನು ಕಂಡಿದ್ದಾರೆ. ಸಿಹಿ–ಕಹಿಗಳನ್ನು ಅನುಭವಿಸಿದ್ದಾರೆ. ಸುತ್ತ–ಮುತ್ತ ಎಷ್ಟೋ ರೀತಿಯ ಒಳಿತು–ಕೆಡಕುಗಳನ್ನು ನೋಡಿದ್ದಾರೆ. ಸ್ವಂತ ಆರೋಗ್ಯ ಸಮಸ್ಯೆಗಳೂ ಅವರನ್ನು ಬಾಧಿಸಿವೆ. ಇಷ್ಟಾದರೂ ಯಾವುದೇ ಮನಃಕ್ಲೇಶದಿಂದ ಔದಾಸೀನ್ಯ ಅಥವಾ ನಿರಾಶಾವಾದಿ ಪ್ರವೃತ್ತಿಯನ್ನು ಬೆಳಸಿಕೊಳ್ಳದೆ, ಸಕ್ರಿಯ. ಆರೋಗ್ಯಕರ ಜೀವನೋತ್ಸಾಹ ಉಳಿಸಿಕೊಂಡು ಬಂದಿರುವುದು ಅವರ ಇನ್ನೊಂದು ಗುಣವಿಶೇಷ.

ಸರಸ–ಸಜ್ಜನಿಕೆ

ಇದಕ್ಕೆ ಅವರಲ್ಲಿ ಸಹಜವಾಗಿ ನೆಲೆಗೊಂಡಿರುವ ಸರಸತೆ–ಸಜ್ಜನಿಕೆಗಳೂ ಒಂದು ಕಾರಣವೆನ್ನಬಹುದು. ಜೀವನದಲ್ಲಿ ಕಷ್ಟಕ್ಲೇಶಾದಿಗಳು ಬೇಕಾದಷ್ಟಿರುತ್ತವೆ. ಆದರ ಬಗ್ಗೆ ವೃಥಾ ರಾಗದ್ವೇಷಾದಿಗಳಿಂದ ತಲೆಕೆಡಿಸಿಕೊಂಡು ಕೂಡುವುದೇಕೆ ? ಜೀವನ ದಲ್ಲಿ ಸೊಗಸನ್ನೂ. ಕಹಿಯಲ್ಲಿ ಸವಿಯನ್ನೂ ಹುಡುಕೋಣ–ಎಂಬ ಪ್ರವೃತ್ತಿ ಅವರದು. ವ್ಯಕ್ತಿ–ಸಂಗತಿಗಳನ್ನು ಅವಲೋಕಿಸುವಾಗ ಅವರ ಈ ಸರಸ ಪ್ರವೃತ್ತಿಯ ಹಾರ್ದಿಕ ನಿದರ್ಶನಗಳು ನಮ್ಮ ಮನದಲ್ಲಿ ಸ್ಮರಣೀಯವಾಗಿವೆ.

ಸ್ವಂತ ಕೆಲಸವಾಗಲಿ, ಸಾರ್ವಜನಿಕ ಕೆಲಸವಾಗಲಿ, ಸಣ್ಣ ಕೆಲಸವಾಗಲಿ, ದೊಡ್ಡ ಕೆಲಸವಾಗಲಿ ಒಳ್ಳೇ ತಿಳಿವಳಿಕೆಯಿಂದ. ಚಚ್ಚರದಿಂದ ನಡಸುವುದು ಡಿ.ವಿ.ಜಿ. ಅವರ

ಪ್ರಮುಖ ಲಕ್ಷಣಗಳಲ್ಲೊಂದು. ಬರವಣಿಗೆ ಕೆಲಸದಲ್ಲಿ ಕಾಗದ ಎಷ್ಟು ಪ್ರಮಾಣದ್ದಿರಬೇಕು, ಬರೆಯಲು ಕುಳಿತಾಗ ಬೆಳಕು ಹೇಗಿರಬೇಕು ಎಂಬ ಬಗ್ಗೆ ಎಷ್ಟು ಕಟ್ಟುನಿಟ್ಟಿನ ವ್ಯಕ್ತಿಯೋ ಸಾರ್ವಜನಿಕ ಕೆಲಸದಲ್ಲೂ ಅವರು ತಮ್ಮ ಸಹಕಾರ್ಯಕರ್ತರಿಗೆ ಅದೇ ಶಿಸ್ತಿನ ರೀತಿ–ನೀತಿ ಕಲಿಸಿದ್ದಾರೆ. ಅವರ ಆಚಾರ್ಯತ್ವದಲ್ಲಿ ಗೋಖಲೆ ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ನಾವು ಕಾಣುವ ದಕ್ಷತೆ, ವ್ಯವಸ್ಥೆಗಳು ಆದರ್ಶಪ್ರಾಯವಾದವು.

ಡಿ.ವಿ.ಜಿ. ಅವರ "ಅಂತರಂಗ ಭಕ್ತ"ರೆಂದು ಹೇಳಬಹುದಾದ ಒಂದು ವರ್ಗವಿದೆ, ವರ್ಗ ಅನ್ನುವುದಕ್ಕಿಂತ ಸ್ಥೂಲವಾಗಿ ಒಂದು ಸಣ್ಣ ಸಮೂಹ ಎಂದರೆ ಹೆಚ್ಚು ಸಮಂಜಸವಾದೀತೇನೋ. ಇವರಲ್ಲಿ ಅರುವತ್ತರ ಹಿರಿಯರಿಂದ ಹಿಡಿದು ಇಪ್ಪತ್ತರ ತರುಣರವರೆಗೆ ದೊಡ್ಡ ದೊಡ್ಡ ಉದ್ಯಮಿಗಳು, ಅಧಿಕಾರಿಗಳು, ಅಧ್ಯಾಪಕರು, ಸಾಮಾನ್ಯರು, ಉತ್ಸಾಹೀ ತರುಣ ಕಾರ್ಯಕರ್ತರು—ಹೀಗೆ ಬಗೆ ಬಗೆಯ ವ್ಯಕ್ತಿಗಳಿದ್ದಾರೆ. ಎಲ್ಲರ ಬಗೆಗೂ ಡಿ.ವಿ.ಜಿ. ಒಂದೇ ರೀತಿಯ ವಿಶ್ವಾಸ, ಆಸ್ಥೆ ತೋರುತ್ತಾರೆ. ಜೀವನದ ಗಹನ ಸಮಸ್ಯೆಗಳ ಬಗ್ಗೆ ತಮ್ಮ ಸಲಹೆ ಕೇಳಲು ಬಂದವರಿಗೆ ತಮ್ಮ ವ್ಯಾಪಕವಾದ ಜ್ಞಾನ–ಜೀವನಾನುಭವಗಳ ಆಧಾರದ ಮೇಲೆ ಆತ್ಮೀಯ ಹಿತವಚನ ಹೇಳುವಾಗ ಮನೆ ಮಕ್ಕಳು ಹೇಗಿದ್ದಾರೆ, ಅವರ ಓದು ಬರಹ ಹೇಗೆ ನಡೆದಿದೆ ಎಂಬುದನ್ನು ಕೇಳಲೂ ಮರೆಯುವುದಿಲ್ಲ.

ಈಗ್ಗೆ ಹದಿನೇಳು ವರ್ಷಗಳ ಹಿಂದೆ ಪ್ರಕಟವಾದ ತಮ್ಮ ಒಂದು ಅಮೂಲ್ಯ ಪ್ರಬಂಧ 'ಸಂಸ್ಕೃತಿ'ಯಲ್ಲಿ ಡಿ.ವಿ.ಜಿ. ಮನು ಮಹರ್ಷಿಯ ಒಂದು ವಾಕ್ಯವನ್ನು ಸ್ಮರಿಸುತ್ತ ಬರೆದಿದ್ದಾರೆ ;

> "ಯತ್ಸರ್ವೇಣೇಚ್ಛತಿ ಜ್ಞಾತುಂ
> ಯನ್ನಲಜ್ಜತಿ ಚಾಚರನ್ ॥
> ಯೇನ ತುಷ್ಯತಿ ಚಾತಾಸ್ಯ
> ತತ್ಸತ್ತ್ವಗುಣಲಕ್ಷಣಂ ॥

"ಜ್ಞಾನ ನಿಷ್ಠೆ, ಲೋಕ ಗೌರವ, ಆತ್ಮಶಾಂತಿ– ಈ ಮೂರು ಶಿರನಾಮೆಗಳಲ್ಲಿ ನೂತನ ಜ್ಞಾನಾಪೇಕ್ಷೆ, ಅಭ್ಯುದಯ ಮಾರ್ಗಾನ್ವೇಷಣೆ, ನಿರಹಂಕಾರ, ವಿನಯ, ಸೌಜನ್ಯ, ಪರೇಂಗಿತ ಚಿಂತನೆ, ಲೋಕಹಿತದೃಷ್ಟಿ, ತತ್ತ್ವವಿವೇಕ, ಆಧ್ಯಾತ್ಮ ನಿಷ್ಠೆ—ಇವೇ ಮೊದಲಾದ ಗುಣಶೀಲ ಸೌಂದರ್ಯಗಳೆಲ್ಲವೂ ಅಡಕವಾಗಿವೆ. ಸಂಸ್ಕೃತಿಯೆಂಬುದು ಇದೇ ಅಲ್ಲವೇ ?"

ಇದಕ್ಕೆ ಒಂದು ಘನತೆವೆತ್ತ ನಿದರ್ಶನ ಡಿ.ವಿ.ಜಿ. ಅವರೇ

—ಎಸ್ಸಾರ್ಕೆ

ಅಭಿಜಾತ ಪತ್ರಿಕೋದ್ಯಮಿ*

ನಲ್ವತ್ತು-ನಲ್ವತ್ತೆರಡು ವರ್ಷಗಳ ಹಿಂದಿನ ಘಟನೆ. 1928ರಲ್ಲಿ ಬಾಗಲಕೋಟೆಯಲ್ಲಿ ಹಿಂದುಸ್ತಾನೀ ಸೇವಾದಲದ ಆಶ್ರಯದಲ್ಲಿ ಅದರ ಸಂಸ್ಥಾಪಕರಾದ ಡಾ॥ ಎನ್. ಎಸ್. ಹರ್ಡೀಕರ ಅವರು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಅಲ್ಲಿ ಹೊಸದಾಗಿ ಕಟ್ಟಿಸಿದ್ದ ವ್ಯಾಯಾಮ ವಿದ್ಯಾಪೀಠ ಕಟ್ಟಡದ ಉದ್ಘಾಟನಾ ಸಮಾರಂಭದೊಂದಿಗೆ ಹಲವಾರು ಪರಿಷತ್ತುಗಳನ್ನು ಸೇರಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ಪತ್ರಿಕೋದ್ಯಮಿಗಳ ಪ್ರಥಮ ಸಮ್ಮೇಲನವನ್ನೂ ಸೇರಿಸಬೇಕೆಂದು ಪತ್ರಿಕಾಕರ್ತರು ನಿರ್ಧರಿಸಿದರು. ಬಾಗಲಕೋಟೆಯಲ್ಲಿನ ನವೀನ ಭಾರತ್ ಸಾಪ್ತಾಹಿಕದ ಸಂಪಾದಕ ಶ್ರೀ ಧಾರವಾಡಕರ ಯಲಗುರ್ದರಾಯರು. ವಿಜಾಪುರ 'ಕರ್ನಾಟಕ ವೈಭವ'ದ ಸಂಪಾದಕ ಶ್ರೀ ಮೊಹರೆ ಹನುಮಂತರಾಯರು ಉಳಿದ ಪತ್ರಿಕೋದ್ಯಮಿಗಳ ಸಹಕಾರದಿಂದ ಈ ಸಮ್ಮೇಲನದ ಸಿದ್ಧತೆಯನ್ನು ಮಾಡಿದರು. ಮೈಸೂರಿನ ಹೆಸರಾಂತ ಪತ್ರಿಕಾಕರ್ತರಾದ 'ಸಾಧ್ವೀ-ಸಂಪದಭ್ಯುದಯ' ಪತ್ರಿಕೆಯ ಸಂಪಾದಕ ಶ್ರೀ ಎಂ. ವೆಂಕಟಕೃಷ್ಣಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ತಾತಯ್ಯನವರೆಂದು ಪ್ರಸಿದ್ಧರಾಗಿದ್ದ ಶ್ರೀ ಎಂ. ವಿ. ಅವರಿಗೆ ವೃದ್ಧಾಪ್ಯದ ಮೂಲಕ ಸಮ್ಮೇಲನಕ್ಕೆ ಬರಲಾಗದ್ದರಿಂದ ಆಗಲೆ ಪ್ರಖ್ಯಾತ ಪತ್ರಿಕೋದ್ಯಮಿಗಳೆಂದು ಖ್ಯಾತರಾಗಹತ್ತಿದ್ದ ಶ್ರೀ ಡಿ. ವಿ. ಗುಂಡಪ್ಪ ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ತಾತಯ್ಯನವರು ಸಂದೇಶರೂಪವಾಗಿ ವಿಚಾರಪರಿಪ್ಲುತವಾದ ಲೇಖನವೊಂದನ್ನು ಕಳಿಸಿದ್ದರು. ಶ್ರೀ ಗುಂಡಪ್ಪ ಅವರು ಸಮ್ಮೇಲನದ ಅಧ್ಯಕ್ಷರಾಗಿ ಬಂದಾಗಲೆ ನನಗೆ ಅವರ ಪ್ರಥಮ ಪರಿಚಯ. ಅವರನ್ನು ನಾನು ನೋಡಿದ್ದೂ ಆಗಲೆ. ಅವರು ಅಧ್ಯಕ್ಷ ಸ್ಥಾನದಿಂದ ಮಾಡಿದ ಭಾಷಣವು ಅಮೋಘವಾಗಿತ್ತು. ಪತ್ರಿಕೋದ್ಯಮಿಗಳಿಗೆ ಅದೊಂದು ಕೈಪಿಡಿಯೇ ಆಗಿತ್ತು. ಈಗಲೂ ಆಗಿದೆಯೆಂದು ಹೇಳಬಹುದು. ಪತ್ರಿಕಾವೃತ್ತಿಯ ಅಂಗೋಪಾಂಗಗಳನ್ನು ಅವರು ಚೆನ್ನಾಗಿ ವಿವೇಚಿಸಿದ್ದಾರೆ. ಗುಂಡಪ್ಪನವರ ವಿದ್ವತ್ಪತೆ, ವಾಕ್ಪಟುತ್ವ, ಭಾಷಾ ಶೈಲಿ, ವಿಮರ್ಶಾತ್ಮಕ ವಿವೇಚನ ಪದ್ಧತಿ ಇವೆಲ್ಲವುಗಳಿಗೆ ತಕ್ಕಂತಹ ಶಾರೀರ, ಸೌಜನ್ಯ, ನಯ ವಿನಯ ಮುಂತಾ

---

* **ಕೃಪೆ: ಕರ್ಮವೀರ, ಫೆಬ್ರುವರಿ 8, 1970**

ದವುಗಳಿಂದ ಅದೇ ತಾನೆ ಪತ್ರಿಕಾವೃತ್ತಿಗಿಳಿದಿದ್ದ ನಾನು ಆಕರ್ಷಿತನಾದೆ. ಅಂದು ನಾನು ಅವರಲ್ಲಿಟ್ಟುಕೊಂಡಿದ್ದ ಗೌರವಾದರಗಳು ಇಂದಿಗೂ ದೃಢವಾಗಿದ್ದು, ಬೆಂಗಳೂರಿಗೆ ಹೋದಾಗಲೆಲ್ಲ ಅವರನ್ನು ಸಂದರ್ಶಿಸುವ ಅವಕಾಶವನ್ನು ನಾನು ಸಹಸಾ ಕಳೆದು ಕೊಳ್ಳುವುದಿಲ್ಲ. ಅವರೊಡನೆ ಮಾತಾಡುವುದೆಂದರೆ ಅದೊಂದು ರಸದೂಟವಿದ್ದಂತೆ. ಯಾವುದೆ ವಿಚಾರ ಹೊರಡಲಿ ಅದನ್ನು ಅಧಿಕಾರವಾಣಿಯಿಂದ ವಿಮರ್ಶಿಸಿ ಒಂದು ಇತ್ಯರ್ಥಕ್ಕೆ ಮುಟ್ಟಿಸುವುದು ಅವರ ಪದ್ಧತಿ. ಅವರ ಸ್ಮರಣಶಕ್ತಿಯು ಅಗಾಧವಾಗಿದೆ. ಚಿಕ್ಕಂದಿನಲ್ಲಿಯ ಘಟನೆಗಳನ್ನು ಕೂಡ ಚಾಚೂ ತಪ್ಪದೆ ವಿವರಿಸುವರು. ಕನ್ನಡ, ಸಂಸ್ಕೃತ, ತೆಲುಗು ಮತ್ತು ಆಂಗ್ಲ ಭಾಷೆಗಳ ಮೇಲೆ ಅವರಿಗೆ ಒಳ್ಳೇ ಪ್ರಭುತ್ವ, ಈ ಭಾಷೆಗಳಲ್ಲಿ ವಿದ್ವತ್ಪೂರ್ಣವಾದ ಲೇಖನಗಳನ್ನು ಬರೆಯಬಲ್ಲರು ; ಸಭ್ಯರು ಮಂತ್ರಮುಗ್ಧರಾಗುವಂತೆ ಉಪನ್ಯಾಸ ಮಾಡಬಲ್ಲರು, ಇಷ್ಟೊಂದು ವಿದ್ವತ್ತಿದ್ದರೂ ದುರಭಿಮಾನ ಸ್ವಲ್ಪವೂ ಇಲ್ಲ. ಅವರು ನನ್ನಂತಹ ಕಿರಿಯ ಪತ್ರಿಕೋದ್ಯಮಿಯನ್ನು ಕೂಡ ಒಳ್ಳೇ ಪ್ರೇಮ, ಅಭಿಮಾನಗಳಿಂದ ಕಾಣುವುದುಂಟು : ಅವಶ್ಯವೆನಿಸಿದಾಗ ಮಾರ್ಗದರ್ಶನ ಮಾಡುವುದೂ ಉಂಟು.

ಕಷ್ಟನಷ್ಟದ ಪತ್ರಿಕಾವೃತ್ತಿ

"ಈಗ ಐವತ್ತೈದು–ಐವತ್ತಾರು ವರುಷಗಳ ಹಿಂದೆ ನಾನು ಬೇರೆ ಜೀವನೋಪಾಯ ಕಾಣದೆ ಪತ್ರಿಕಾವೃತ್ತಿಯನ್ನು ಹಿಡಿಯಬೇಕಾಯಿತು. ಅದಕ್ಕೆ ಅಂಟಿ ಕೊಂಡು ಸಾರ್ವಜನಿಕ ಜೀವನದ ಸಂಪರ್ಕ ನನಗೆ ಉಂಟಾಯಿತು. ಅಲ್ಲಿ ಅನುಭವ ಬೆಳೆದಂತೆ ರಾಜಕೀಯಕ್ಕೂ ಧರ್ಮಪ್ರಶ್ನೆಗೂ ಇರುವ ಸಂಬಂಧ ನನ್ನ ಮನಸ್ಸಿಗೆ ವಿಶದಪಡುತ್ತ ಬಂತು. ಗೋಖಲೆ ಸಂಸ್ಥೆಯ ಜವಾಬ್ದಾರಿಯು ಒದಗಿದ ಮೇಲಂತೂ ದೇಶಹಿತಕ್ಕೆ ಧಾರ್ಮಿಕ ಸಾಹಿತ್ಯದ ಅನಿವಾರ್ಯತೆ ಎಷ್ಟೆಂಬುದು ಮತ್ತಷ್ಟು ಸ್ಪಷ್ಟವಾಯಿತು" ಎಂದು ಶ್ರೀ ಗುಂಡಪ್ಪ ಅವರು 1966ರಲ್ಲಿ ಬರೆದ ಶ್ರೀಮದ್ಭಗವದ್ಗೀತಾತಾತ್ಪರ್ಯವೆಂಬ ಉದ್ಗ್ರಂಥದ ತಮ್ಮ ಮುನ್ನುಡಿಯಲ್ಲಿ ಹೇಳಿರುವರು. ಆಗಿನ ಕಾಲದಲ್ಲಿ ಪತ್ರಿಕಾವೃತ್ತಿಯನ್ನು ಕೈಕೊಳ್ಳುವವರೆಂದರೆ ಕೆಲವು ನಿವೃತ್ತ ಅಧಿಕಾರಿಗಳು. ಸರಕಾರಿ ಇಲ್ಲವೆ ಖಾಸಗಿ ನೌಕರಿಗೆ ತಿಲಾಂಜಲಿ ಕೊಡಬೇಕಾಗಿ ಬಂದವರು. ಸಮಾಜದಲ್ಲಿ ವಿಶೇಷ ಸ್ಥಾನಮಾನಗಳಿಲ್ಲದವರು ಇವರೇ ಮೊದಲಾದವ ರೆಂದು ಶ್ರೀ ಗುಂಡಪ್ಪ ಅವರು ಹೇಳಿದ್ದುಂಟು. ಪತ್ರಿಕಾವೃತ್ತಿಯನ್ನು ಅಂದು ಕೈಕೊಂಡ ಅಂಥ ಹಿರಿಯರ ದುಡಿಮೆ, ಸಾಹಸ, ಕಷ್ಟ-ನಷ್ಟಗಳನ್ನು ಸಹಿಸುವಿಕೆ ಮೊದಲಾದವುಗಳಿಂದಲೆ ಇಂದು ಕನ್ನಡ ಪತ್ರಿಕೋದ್ಯಮ ಬೆಳೆದು ಬಂದಿದೆಯೆಂದು ಹೇಳಬಹುದು. ಪತ್ರಿಕೋದ್ಯಮವೊಂದರಿಂದಲೇ ಜೀವನವನ್ನು ಗೌರವದಿಂದ ನಡೆಸುವ ಕಾಲ ಆದಾಗಿರಲಿಲ್ಲ. ಈಗಲೂ ಎಲ್ಲ ಸಂದರ್ಭಗಳಲ್ಲಿಯೂ ಅಂಥ ಅವಕಾಶವಿದೆಯೆಂದು ಹೇಳಲಿಕ್ಕೆ ಬರಲಾರದು. ಪತ್ರಿಕಾವೃತ್ತಿಯನ್ನು ಕೈಕೊಳ್ಳುವವರು ಬಗೆಬಗೆಯ ಕಷ್ಟಗಳನ್ನು ಎದುರಿಸಬೇಕಾಗಿ ಬರುವುದು. ಅದೇನೇ ಇದ್ದರೂ ಗುಂಡಪ್ಪ ಅವರಂಥ ಮಹನೀಯರು ಬೇರೆ ಉದ್ಯೋಗವಿಲ್ಲದೆ ಪತ್ರಿಕೋದ್ಯಮವನ್ನು ಕೈಕೊಂಡದ್ದು ಈಗಿನ

ತಲೆಮಾರಿನವರಿಗೆ ವರಪ್ರಸಾದವಾಗಿ ಪರಿಣಮಿಸಿದೆಯೆಂದು ಒಪ್ಪಬಹುದಾಗಿದೆ. ಪತ್ರಿಕೋದ್ಯಮಿಗಳಿಗೆ ಅವರಿಂದ ಒಳ್ಳೇ ಮಾರ್ಗದರ್ಶನ ದೊರೆತಿದೆ. ಪತ್ರಿಕೋದ್ಯಮ ದಿಂದ ಜೀವನವನ್ನು ಪ್ರಾರಂಭಿಸಿದ ಗುಂಡಪ್ಪ ಅವರು ಈಗಲೂ ಪತ್ರಿಕೋದ್ಯಮಿ ಗಳಾಗಿದ್ದು 'ಸಾರ್ವಜನಿಕ' (ಪಬ್ಲಿಕ್ ಅಫೇರ್ಸ್) ಪತ್ರಿಕೆಯನ್ನು ಸಂಪಾದಿಸುತ್ತಿರು ವುದು ಈ ಉದ್ಯಮವನ್ನು ನಡೆಸುತ್ತಿರುವವರಿಗೆಲ್ಲ ಅಭಿಮಾನದ ಸಂಗತಿಯಾಗಿದೆ.

ಪತ್ರಿಕೋದ್ಯಮದಲ್ಲಿ ಶ್ರೀ ಗುಂಡಪ್ಪ ಅವರು ಬಗೆ ಬಗೆಯ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಆಗಿನ ಕಾಲಕ್ಕೆ ಪತ್ರಿಕೋದ್ಯಮ ಅಷ್ಟೊಂದು ಪಕ್ವ ವಾಗಿರಲಿಲ್ಲ. ಅದರಲ್ಲಿಯೂ ಕನ್ನಡ ಪತ್ರಿಕೋದ್ಯಮ! ಮೇಲಾಗಿ ದೇಶೀ ಸಂಸ್ಥಾನದಲ್ಲಿ!! ಕೇಳಬೇಕೇನು? ಅಡೆತಡೆಗಳು. ಅಂಥದರಲ್ಲಿಯೂ ತಾತಯ್ಯನವರು ಪತ್ರಿಕೆಗಳನ್ನು ನಡೆಸುತ್ತಲೆ ಬಂದಿದ್ದರು. ಶ್ರೀ ಗುಂಡಪ್ಪ ಅವರು ಮೊದಲ ಸಲ ಹೊರಡಿಸಿದ್ದು 'ಭಾರತಿ' ಎಂಬ ದಿನಪತ್ರಿಕೆ. 1907ರಲ್ಲಿ ಪ್ರಾರಂಭವಾದ ಭಾರತಿ ಮರುವರ್ಷವೇ ನಿಂತುಹೋಗಬೇಕಾದ ದುರ್ಧರ ಪ್ರಸಂಗ ಬಂತು. 1908ರಲ್ಲಿ ಮೈಸೂರು ವೃತ್ತಪತ್ರಿಕಾ ಕಾನೂನು ಜಾರಿಯಲ್ಲಿ ಬಂದದ್ದರಿಂದ ಆ ಕಾನೂನಿನ ನಿರ್ಬಂಧಗಳಿಗೊಳಗಾಗಿ ಪತ್ರಿಕೆಯನ್ನು ನಡೆಸುವುದಕ್ಕಿಂತ ಅದನ್ನು ನಿಲ್ಲಿಸಿಬಿಡುವುದೇ ವಿಹಿತವೆಂದು ಅವರು ಬಗೆದರು. ಆದರೆ ಅದರ ಬದಲು ಕೇವಲ ಸುದ್ದಿಗಳನ್ನು ಪ್ರಕಟಿಸುವ 'ಸಮಾಚಾರ ಸಂಗ್ರಹ'ವೆಂಬ ಮತ್ತೊಂದು ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಅನಂತರ 1913ರಲ್ಲಿ ಅವರು 'ಕರ್ನಾಟಕ' ಎಂಬ ಇಂಗ್ಲಿಷ್ ದ್ವಿಸಾಪ್ತಾಹಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಕನ್ನಡದಲ್ಲಿಯಂತೆ ಆಂಗ್ಲ ಭಾಷೆ ಯಲ್ಲಿಯೂ ಗುಂಡಪ್ಪ ಅವರಿಗೆ ಒಳ್ಳೇ ಪ್ರಭುತ್ವವಿದ್ದುದರಿಂದ ಈ ಪತ್ರಿಕೆ ಲೋಕಪ್ರಿಯವಾಯಿತೆಂದು ಹೇಳಬಹುದು. ಕನ್ನಡ–ಆಂಗ್ಲ ಕವಿಗಳು, ಕಾದಂಬರಿ ಕಾರರು, ರಾಜಕಾರಣಿಗಳು, ತತ್ತ್ವವೇತ್ತರು ಮೊದಲಾದವರ ಬಗ್ಗೆ ಮತ್ತು ಅವರ ಗ್ರಂಥಗಳ ಬಗ್ಗೆ ಮತ್ತು ಆಗಿನ ರಾಜಕೀಯದ ಬಗ್ಗೆ ಈ ಪತ್ರಿಕೆಯಲ್ಲಿ ವಿಮರ್ಶಾತ್ಮಕ ಲೇಖನಗಳು ಬರುತ್ತಿದ್ದುದರಿಂದ ವಿದ್ಯಾರ್ಥಿವೃಂದದಲ್ಲಿಯೂ ಇದು ಪ್ರಸಾರ ಗೊಂಡಿತು. ಹಿರಿಯರೂ ಓದುತ್ತಿದ್ದರು. ಇಷ್ಟೆಲ್ಲ ಉಪಯುಕ್ತ ಲೇಖನಗಳು ಪ್ರಕಟವಾಗಿ ಪ್ರಸಾರವೂ ಚೆನ್ನಾಗಿದ್ದರೂ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಲ್ಲ. 1926 ರಷ್ಟರಹೊತ್ತಿಗೆ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕಾಯಿತು. ಇದರಿಂದ ಅನೇಕ ಮಹನೀಯರು ನೊಂದರಲ್ಲದೆ, ಯಾರೊಬ್ಬರೂ ಪತ್ರಿಕೆ ಊರ್ಜಿತವಲ್ಲಿ ಉಳಿಯುವುದಕ್ಕಾಗಿ ಧನಸಹಾಯ ಮಾಡಲು ಮುಂದೆ ಬರಲಿಲ್ಲ!

ಗೋಖಲೆ ಸಾರ್ವಜನಿಕ ಸಂಸ್ಥೆ

ಶ್ರೀ ಗುಂಡಪ್ಪ ಅವರ ರಾಜಕೀಯ ಮತ್ತು ಪತ್ರಿಕಾ ಧ್ಯೇಯ ಧೋರಣೆ ಆಗಲೂ ಶ್ರೀ ಗೋಪಾಲ ಕೃಷ್ಣ ಗೋಖಲೆಯವರ ಪರಂಪರೆಗೆ ಸೇರಿತ್ತು. ಈಗಲೂ ಅವರು ಅದೇ ಧೋರಣೆಯನ್ನು ಇಟ್ಟುಕೊಂಡಿರುವರು. ಗುಂಡಪ್ಪ ಅವರು ಗೋಖಲೆ

ಯವರನ್ನು ತಮ್ಮ ರಾಜಕೀಯ ಗುರುಗಳನ್ನಾಗಿ ಇಟ್ಟುಕೊಂಡಿರುವರು. ಅಂತಲೆ ಅವರು ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮುಖಾಂತರ ಮಹತ್ವದ ಕಾರ್ಯಗಳನ್ನು ಮಾಡುತ್ತಿರುವರು. ವಿದ್ವಜ್ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುತ್ತಿರುವರು.

1916ರಲ್ಲಿ ಹೊರಡಿಸಿದ 'ಕರ್ನಾಟಕ ಜೀವನ ಮತ್ತು ಅರ್ಥಸಾಧಕ ಪತ್ರಿಕೆ' ಎಂಬ ಅರ್ಥಶಾಸ್ತ್ರ ವಿಷಯಗಳಿಗಾಗಿ ಮೀಸಲಾಗಿಟ್ಟ ಪತ್ರಿಕೆಯನ್ನೂ ಆರ್ಥಿಕ ಮುಗ್ಗಟ್ಟಿಗಾಗಿ ಶ್ರೀ ಗುಂಡಪ್ಪ ಅವರು ನಿಲ್ಲಿಸಬೇಕಾಯಿತು. ಈ ರೀತಿಯಾಗಿ ಅವರು ಪತ್ರಿಕೆಗಳನ್ನು ಪ್ರಾರಂಭಿಸಿ. ಬಹಳ ವರುಷಗಳವರೆಗೆ ನಡೆಸಲಾರದೆ ಆರ್ಥಿಕ ಪರಿಸ್ಥಿತಿಯಿಂದಾಗಿ ನಿಲ್ಲಿಸಬೇಕಾಗಿ ಬಂದರೂ ಅವರು ಈ ವ್ಯವಸಾಯಕ್ಕೆ ಸಲ್ಲಿಸಿದ ಕಾಣಿಕೆ ಅಮೂಲ್ಯವಾಗಿದೆ. ಲೇಖನಕಲೆಯಲ್ಲಿ ಪಳಗಿದವರಾದ ಅವರು ಅನಂತರ ಗ್ರಂಥಗಳನ್ನು ಬರೆಯಲು ಪ್ರಾರಂಭಿಸಿದರು. ಅವರು ಬರೆದ ಗ್ರಂಥಗಳ ಸಂಖ್ಯೆ ಹೆಚ್ಚಿಲ್ಲವಾದರೂ ಗುಣಮಟ್ಟದಲ್ಲಿ ಅವನ್ನು ಹೋಲುವ ಗ್ರಂಥಗಳು ಕನ್ನಡದಲ್ಲಿ ಇಲ್ಲವೆಂದೇ ಹೇಳಬೇಕಾಗುವುದು. ಗುಂಡಪ್ಪ ಅವರು ಪತ್ರಿಕಾವೃತ್ತಿಗೆ ಸಲ್ಲಿಸಿದ ಕಾಣಿಕೆಯನ್ನು ಮನಗಂಡ ಮೈಸೂರಿನ ಪತ್ರಿಕೋದ್ಯಮಿಗಳು ಸ್ಥಾಪಿಸಿಕೊಂಡ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಪ್ರಥಮ ಅಧ್ಯಕ್ಷರೆಂದು 1932 ರಲ್ಲಿ ಅವರನ್ನು ಆರಿಸಲಾಯಿತು. 1932–34ರ ವರೆಗೆ ಅವರು ಈ ಸ್ಥಾನದಲ್ಲಿದ್ದು ಸಂಘಕ್ಕೆ ಆವಶ್ಯಕ ಮಾರ್ಗದರ್ಶನವನ್ನು ಮಾಡಿದರು. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೆಂದು ಅವರು ಕನ್ನಡ ನಾಡು ನುಡಿಗಳಿಗೆ ಸಲ್ಲಿಸಿದ ಸೇವೆ ಮಹತ್ವದ್ದಾಗಿದೆ. ಕನ್ನಡಿಗರಲ್ಲಿ ಸಾಹಿತ್ಯಾಭಿರುಚಿಯನ್ನು ಹುಟ್ಟಿಸಿ ಅವರಲ್ಲಿ ಹೆಚ್ಚಿನ ಜಾಗೃತಿಯನ್ನುಂಟು ಮಾಡಿದ ಶ್ರೇಯಸ್ಸು ಗುಂಡಪ್ಪ ಅವರಿಗೆ ಸಲ್ಲುವುದು.

ಪತ್ರಿಕೋದ್ಯಮದ ಬಗ್ಗೆ ನಿಲುವು

ಶ್ರೀ ಗುಂಡಪ್ಪ ಅವರು ಪತ್ರಿಕೋದ್ಯಮಿಗಳಿಗೆ ಹೇಳಿದ ಮಹತ್ವದ ಮಾತುಗಳನ್ನು ಅಲಕ್ಷಿಸುವಂತಿಲ್ಲ. ಜೀವನೋಪಾಯವೆಂದು ಪತ್ರಿಕೋದ್ಯಮವನ್ನು ಕೈಕೊಳ್ಳುವವನು ಇತರ ಕಸಬುಗಳಲ್ಲಿಯಂತೆ ಇದರಲ್ಲಿಯೂ ತರಬೇತಿಯನ್ನು ಪಡೆಯಬೇಕಾದುದು ಅಗತ್ಯವಿದೆ. ಬರಿ ಉತ್ಸಾಹವಿದ್ದರೆ ಸಾಲದು. ಜೊತೆಗೆ ವಾಕ್ಯರಚನೆಯ ಸೌಲಭ್ಯ ಇದ್ದರೂ ಸಾಲದು. ಇವುಗಳೊಡನೆ ರಾಜ್ಯಶಾಸ್ತ್ರ. ಕಾಯದೆ ಕಾನೂನುಗಳ ಪರಿಚಯ, ಅರ್ಥಶಾಸ್ತ್ರ ಮೊದಲಾದವುಗಳ ಪರಿಚಯವೂ ಇರಬೇಕು. ಪುಸ್ತಕ ವ್ಯಾಸಂಗವಂತೂ ಹೆಚ್ಚಿಗೆ ಬೇಕು. ಪ್ರಕಟವಾಗುವ ಹೊಸ ಹೊಸ ಪುಸ್ತಕಗಳನ್ನು ಪತ್ರಿಕಾಕರ್ತನು ಓದಲೇಬೇಕು. ಆದರೆ ಬರಿ ಓದಿದರೆ ಸಾಲದು. ಅದನ್ನು ಅರಗಿಸಿಕೊಳ್ಳಬೇಕು. ಆಯಾ ವಿಷಯಗಳ ನ್ಯಾಯ ನಿರ್ಣಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ನಿಷ್ಪಕ್ಷಪಾತ ನಾಗಿರಬೇಕು. "ಪತ್ರಿಕಾಕರ್ತನಿಗಿರಬೇಕಾದ ಗ್ರಂಥಪರಿಚಯವೂ ಅನುಭವವಿಶೇಷವೂ ಸೂಕ್ಷ್ಮದರ್ಶಿತೆಯೂ ವಾಙ್ಮನಸುಗಳ ನಿಯಮವೂ ಅಪಾರವಾಗಿವೆ; ಅದೊಂದು ತಪಸ್ಸಿದ್ಧಿಯೆಂದೇ ಹೇಳಬೇಕು" ಎಂದು ಗುಂಡಪ್ಪ ಅವರು ಅಭಿಪ್ರಾಯಪಟ್ಟಿರುವರು.

ಪತ್ರಿಕೋದ್ಯಮವನ್ನು ಕೈಕೊಳ್ಳಬಯಸುವವರು ಅವರ ಅನುಭವಪೂರ್ಣವಾದ ಮಾತುಗಳತ್ತ ಗಮನಿಸಬೇಕಾದುದು ಅಗತ್ಯ. "ಪತ್ರಿಕಾ ಚಾಲಕರು ಹಣಕ್ಕಾಗಲಿ ಹೆಸರಿಗೇ ಆಗಲಿ ತಮ್ಮ ಆತ್ಮವನ್ನು ಮಾರಿಕೊಳ್ಳತಕ್ಕವರಾಗಬಾರದು" ಎಂದು ಅವರು ಹೇಳಿದ್ದು ಅಮೂಲ್ಯ ಸಲಹೆಯಾಗಿದೆ. ಯಾವ ರಾಜಕೀಯ ಪಕ್ಷಗಳ ವಶವರ್ತಿಯಾಗದಂತೆ ಎಚ್ಚರದಿಂದ ಇರಬೇಕಾದುದು ಅಗತ್ಯ.

ಶ್ರೀ ಗುಂಡಪ್ಪ ಅವರು ಪಾರಿಭಾಷಿಕ ಶಬ್ದಗಳ ಬಳಕೆಯಲ್ಲಿ ಏಕರೂಪತೆಯನ್ನು ಸಾಧಿಸಬೇಕೆಂದು ಒತ್ತಿ ಹೇಳಿರುವರು. ಈ ಬಗ್ಗೆ ಸಾಕಷ್ಟು ಗಮನವನ್ನು ಈಗಲೂ ಕೊಡಲಾಗಿಲ್ಲ. ಪಾರಿಭಾಷಿಕ ಶಬ್ದಕೋಶವೊಂದು ಸಿದ್ಧವಾಗಿದ್ದರೂ ಅದರ ಉಪಯೋಗ ಸಾಕಷ್ಟು ಆಗುತ್ತಿರುವುದಿಲ್ಲೆಂದು ಹೇಳಬೇಕಾಗಿದೆ. ಈ ಬಗ್ಗೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ. ಅದೇ ರೀತಿ ಭಾಷಾಶುದ್ಧಿಯ ಬಗ್ಗೆಯೂ ಪತ್ರಿಕಾಕರ್ತರು ಹೆಚ್ಚು ದಕ್ಷತೆ ವಹಿಸಬೇಕು. ಪತ್ರಿಕೆಗಳ ಭಾಷೆ ಮನಸ್ಸಿಗೆ ಆಕರ್ಷಕವಾಗಿಯೂ ವಿಶದವಾಗಿಯೂ ಶುದ್ಧವಾಗಿಯೂ ಇರಬೇಕು. ನೂತನ ಪದಸಂಯೋಜನೆ ಮಾಡುವುದರಲ್ಲಿ ಅದು ವಿಕಾರವಿಲ್ಲದೆ ಶ್ರಾವ್ಯವಾಗಿರುವಂತೆ ನೋಡಬೇಕು. ಗ್ರಂಥ ಭಾಷೆ ಮತ್ತು ಸಾಮಾನ್ಯ ಭಾಷೆಗೆ ಮಧ್ಯಸ್ಥಗಾರನಂತೆ ಇದ್ದು ಪತ್ರಿಕಾ ಲೇಖಕರು ಸಾಹಿತ್ಯಸೇವೆಯ ಕಡೆಗೂ ಲಕ್ಷ್ಯಕೊಡುವುದು ಅವಶ್ಯವಾಗಿದೆ—ಎಂದು ಶ್ರೀ ಗುಂಡಪ್ಪ ಅವರು ಅಭಿಪ್ರಾಯಪಟ್ಟಿರುವರು. ಮುದ್ರಣದೋಷಗಳು ಉಳಿಯದಂತೆ ಪತ್ರಿಕಾಕರ್ತರು ನೋಡಿಕೊಳ್ಳುವುದು ಅತ್ಯಗತ್ಯ. ವಾರ್ತೆಗಳನ್ನು ಪ್ರಸಿದ್ಧಿಸುವಾಗ ಎಂಥವುಗಳಿಗೆ ಮಹತ್ವ ಕೊಡಬೇಕು. ಎಂಥವುಗಳಿಗೆ ಕೊಡಬಾರದು ಎಂಬ ಸಾರಾಸಾರ ವಿವೇಚನ ಶಕ್ತಿಯನ್ನು ಪತ್ರಿಕಾಕರ್ತ ಬೆಳೆಸಿಕೊಳ್ಳಬೇಕು. ಒಮ್ಮೊಮ್ಮೆ ಸತ್ಯ ಸಂಗತಿಯನ್ನೂ ಅಲಕ್ಷಿಸಬೇಕಾಗುವುದು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಯುವುದಕ್ಕಾಗಿ ಅದು ಅನಿವಾರ್ಯವೆನಿಸುವುದು. ಈ ದೃಷ್ಟಿಯಿಂದ ಪತ್ರಿಕಾ ಕರ್ತರ ಹೊಣೆ ಹೆಚ್ಚಿದೆ. ಯಾವುದೇ ಬಗೆಯ ಆಶೆ ಆಮಿಷಗಳಿಗೊಳಗಾಗದೆ, ಹೊರಗಿನ ಇಲ್ಲವೆ ಒಳಗಿನ ಒತ್ತಾಯಕ್ಕೆ ಬಲಿಬೀಳದೆ ಪತ್ರಿಕಾಕರ್ತನು ತನ್ನ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದುದು ಅಗತ್ಯ.

—ಹ. ಕ. ರಾಜಪುರೋಹಿತ

ಗೌರವಾನ್ವಿತ ವಿದ್ವಾಂಸರು

ನನ್ನ ಮತ್ತು ಶ್ರೀ ಡಿ.ವಿ.ಜಿ.ಯವರ ಪರಿಚಯ ನಿಡುಗಾಲದ್ದು; ಅದು ಈ ಶತಮಾನದ ನಾಲ್ಕನೆಯ ದಶಕದ ಆರಂಭದಲ್ಲಿ ತೊಡಗಿದ್ದು. ವಯಸ್ಸಿನಲ್ಲಿ. ಅನುಭವದಲ್ಲಿ ನಾನು ಅವರಿಗಿಂತ 15 ವರ್ಷಗಳಷ್ಟು ಕಿರಿಯ. ಮಡಿಕೇರಿಯ ಸಾಹಿತ್ಯ ಸಮ್ಮೇಳನದ ಅವಧಿಯಲ್ಲಿ ಅಲ್ಲಿನ ಸರಕಾರಿ ಹೈಸ್ಕೂಲಿನ ಕಟ್ಟಡದಲ್ಲಿ ನಾನು ಬೆಳಗಿನ ಜಾವಕ್ಕೆ ಮಾಯಾಲಾಂದ್ರ ಭಾಷಣವೊಂದಕ್ಕೆ ಚಿತ್ರ ಬರೆಯುತ್ತಿದ್ದ ಕಾಲದಲ್ಲಿ, ಅವರು ಅಷ್ಟು ಹೊತ್ತಿಗೇ ಎದ್ದು ಅತಿಥಿ ಗೃಹವನ್ನು ಸುತ್ತುತ್ತಿದ್ದಾಗ 'ನಾನು ಯಾರು. ಏನು' ಎಂಬ ಪರಿಚಯ ಅವರಿಗಾಯ್ತು; ಅವರನ್ನು ಕುರಿತು ನಾನು ಮೊದಲೇ ಕೇಳಿ ತಿಳಿದಿದ್ದೆ.

ಅದು ಬೆಳೆಯಲು ಅವಕಾಶ ದೊರೆತದ್ದು ನಾನು ಪುತ್ತೂರಿನ ದಸರಾ ಉತ್ಸವಕ್ಕೆ ಅವರನ್ನು ಭಾಷಣ ಮಾಡಲು ಕರೆದ ತರುವಾಯ. ಅವರಿಗೆ ನಮ್ಮ ಪುತ್ತೂರಿನ ಹಿರಿಯರಾದ ಮೊಳಹಳ್ಳಿ ಶಿವರಾಯರು. ವಕೀಲ ಶ್ಯಾಮಶಾಸ್ತ್ರಿಗಳು. ಬೆಳ್ಳಿ ರಾಮಚಂದ್ರರಾಯರುಗಳ ಪರಿಚಯ ಉಂಟಾದ ಬಳಿಕ. ನಮ್ಮ ಊರಿನ ವಿಚಾರದಲ್ಲೇ ಹೆಚ್ಚಿನ ಆದರ ಬೆಳೆಯಿತು. ಬೆಂಗಳೂರಿಗೆ ನಾನು ಹೋದ ಸಂದರ್ಭಗಳಲ್ಲೆಲ್ಲ ಮಿತ್ರ ದಿ॥ ಸೀತಾರಾಮಯ್ಯನವರೊಡನೆಯೋ. ಒಂಟಿಯಾಗಿಯೋ ನಾನು ಅವರನ್ನು ಭೇಟಿಯಾಗ ತೊಡಗಿದೆ. ಅವರಲ್ಲಿಗೆ ಹೋದ ಪ್ರತಿ ಬಾರಿಯೂ 'ಶಿವರಾಯರು ಹೇಗಿದ್ದಾರೆ? ಶಾಸ್ತ್ರಿಗಳು ಹೇಗಿದ್ದಾರೆ? ಗೋವಿಂದ ಪೈಗಳು ಹೇಗಿದ್ದಾರೆ?' ಎಂದು ವಿಚಾರಿಸಲು ಮರೆತವರಲ್ಲ. ನನ್ನ ಮಡದಿ ಅವರೊಡನೆ ಆಗಾಗ ಪತ್ರ ವ್ಯವಹಾರ ನಡೆಯಿಸುತ್ತಿದ್ದಳು.

ಅವರ ನಿರ್ಭೀತ ವ್ಯಕ್ತಿತ್ವ. ವಿದ್ವತ್ತು, ಸಾರ್ವಜನಿಕ ಸಮಸ್ಯೆಗಳನ್ನು ಕುರಿತ ಆಸಕ್ತಿಗಳಿಂದಾಗಿ, ಸಂಭಾಷಣೆಗೆ ಕೊರತೆ ಇಲ್ಲದಷ್ಟು ವಿಷಯಗಳು ಇದ್ದೇ ಇರುತ್ತಿದ್ದುವು. ಅಂಥ ಸಂದರ್ಭಗಳಲ್ಲಿ–ನಮ್ಮ ಉಭಯತ್ರರ ಪರಿಚಯದ ವ್ಯಕ್ತಿಗಳನ್ನು ಕುರಿತು ನಾನು ಏನಾದರೂ ಅಭಿಪ್ರಾಯ ತಿಳಿಸುವ ಪ್ರಸಂಗ ಬಂದರೆ, ನನ್ನ ಸೂಚನೆಯನ್ನೋ, ದೂರನ್ನೋ ಆಲಿಸುವ ಪ್ರಸಂಗ ಅವರಿಗೆ ಬಂದರೆ ಎಂದೂ ಅವರು ಥಟ್ಟನೆ ಉತ್ತರಿಸಿದವರಲ್ಲ. ಆ ವ್ಯಕ್ತಿಯನ್ನು ಕುರಿತ ವಿಷಯವನ್ನು ಖಾತ್ರಿ

ಪಡಿಸಿಕೊಂಡ ಬಳಿಕವೇ ಮುಂದೊಂದು ದಿನ "ನೀವು ಇಂಥವರ ಮಾತನ್ನು ಅಂದು ತಿಳಿಸಿದ್ದಿರಷ್ಟೇ. ನಾನು ಅವರನ್ನೇ ಕೇಳಿದೆ. ಆ ವಿಷಯಕ್ಕೆ ಅವರು ನಿರುತ್ತರರಾದರು" ಎಂದು ಬೆರಗು ಬರಿಸಿದ್ದುಂಟು.

ಒಮ್ಮೆ ಅವರ ಹಿರಿತನದಲ್ಲಿ ನನ್ನ ಇತರ ಸಾಹಸಿ ಮಿತ್ರರನ್ನು ಬರಮಾಡಿಕೊಂಡು 'ಕನ್ನಡ ವಿಶ್ವಕೋಶ' ವನ್ನು ಕುರಿತು ಯೋಚಿಸಿದ ಒಂದು ಸಂದರ್ಭ ಇದ್ದಿತ್ತು. ಅವರು ಆಗ "ಸರಿಯೇ ! ಅದು ಆಗಬೇಕಾದ ಕೆಲಸವೇ : ಮಹತ್ವದ್ದು. ಸದ್ಯಕ್ಕೆ ಪರೀಕ್ಷೆಗಾಗಿ ಒಂದು ವರ್ಷದ ಅವಧಿಯಲ್ಲಿ ಇಲ್ಲಿ ಸೇರಿದ ಒಬ್ಬೊಬ್ಬರೂ ಒಂದೊಂದು ವಿಷಯದಲ್ಲಿ ಸಣ್ಣ ಬರಹ ಬರೆಯಲಿ" ಎಂದರು. ಅದಕ್ಕೆ ಅಲ್ಲಿ ಇದ್ದವರೆಲ್ಲರೂ ಸಮ್ಮತಿಸಿದರು. ನಾನು ಆ ಅವಧಿಯಲ್ಲಿ ಪಶುಪಾಲನೆಯನ್ನು ಕುರಿತು ಒಂದು ಪುಸ್ತಕ ಬರೆದೆ. ಮಿಕ್ಕವರು ವರ್ಷವನ್ನು ಏನನ್ನೂ ಬರೆಯದೆ ಕಳೆದರು ! ಆಗ ಗುಂಡಪ್ಪನವರು ನನ್ನೊಡನೆ "ನೋಡಿದಿರಾ ? ಯಾರನ್ನು ನಂಬಿ ವಿಶ್ವಕೋಶ ಮಾಡಲು ಹೊರಟಿದ್ದೀರಾ ?" ಎಂದು ಕೇಳಿದರು.

ಅವರಿಗೆ ತಮ್ಮ ಅಸಹನೆ, ಕೋಪ, ತಾಪ, ಗೊತ್ತು. ಅದನ್ನು ಕಂಡ ಮಾನ್ಯರೊಬ್ಬರು "ಸ್ವಾಮಿ, ನೀವು ಇದಕ್ಕೆ ಒಂದು ಚಿಕಿತ್ಸೆ ಮಾಡಿಕೊಳ್ಳಬೇಕು : ನಿತ್ಯವೂ ಲಲಿತಾ ಸಹಸ್ರನಾಮವನ್ನು ಜಪಿಸಿದರೆ ಸಂಯಮ ಸಿದ್ಧಿಸುತ್ತದೆ" ಎಂದರಂತೆ. ಗುಂಡಪ್ಪನವರು ಅವರಿಗೆ "ಅಯ್ಯೋ, ಇವರೇ, ನಾನು ಎಷ್ಟೆಷ್ಟೋ ಶಾಸ್ತ್ರ, ಪುರಾಣ, ದರ್ಶನ ಓದಿಕೊಂಡವನು ! ಅದಕ್ಕೆಲ್ಲ ಇಂಥ ಪಾರಾಯಣ ಪಾಠಕಲಿಸಲಾರದು" ಎಂದರಂತೆ !

ಹೀಗೆ ಮಾನವನ ಸ್ವಭಾವವನ್ನು ಕುರಿತು ನಿಸ್ಪೃಹ ಮಾತುಕತೆ ಅವರದ್ದು. ನಮ್ಮ ನಾಡಿನ ರಾಜಕೀಯವನ್ನು ಕಂಡು, ಅಸಭ್ಯ ಸಂಸ್ಕಾರವನ್ನು ಕಂಡು ಸದಾ ಜಿಗುಪ್ಸೆ ಪ್ರಕಟಿಸಿದವರು ಅವರು. ತಮ್ಮ ಮಿತ್ರವೃಂದದೊಡನೆ ಗಂಭೀರ ಭಾವದಿಂದಲೇ ವರ್ತಿಸಿದವರು ಅವರು. ಆದರೆ 'ಯಾರ ತೂಕ ಎಷ್ಟು' ಎಂಬುದನ್ನು ಮಾತ್ರ ಮರೆತವರಲ್ಲ !

ನಾನೊಮ್ಮೆ ಅವರು ಬರೆದ ರಾಮಾಯಣವನ್ನು ಕುರಿತ ಒಂದು ಪುಸ್ತಕವನ್ನು ಕುರಿತು ಮಿತ್ರರು ನನ್ನ ಅಭಿಪ್ರಾಯವನ್ನು ಕೇಳಿದಾಗ "ಸರಿಯೇ ! ಚೆನ್ನಾಗಿದೆ ; ಅದರಲ್ಲಿ ವಿಷಯ ಸಮರ್ಥನೆಗಾಗಿ ಹಲವು ಉಕ್ತಿಗಳನ್ನು ಉದಾಹರಿಸಿದ್ದಾರೆ ; ಆದರೆ ಗುಂಡಪ್ಪನವರ ಸ್ವಂತ ಅಭಿಪ್ರಾಯ ಏನೆಂದು ಹೇಳಿದಂತಿಲ್ಲ" ಎಂದಿದ್ದೆ.

ಮುಂದೊಂದು ದಿನ ಬದುಕನ್ನು ಕುರಿತು ಅವರ ಅಭಿಪ್ರಾಯಗಳನ್ನು 'ಮಂಕುತಿಮ್ಮನ ಕಗ್ಗ 'ದಲ್ಲಿ ಓದಿದಾಗ, ವಿದ್ವತ್ತಿಗೂ ಪ್ರಾಮಾಣಿಕ ಚಿಂತನೆಗೂ ಇರುವ ದೂರವನ್ನು ಅವರು ತೋರಿಸಿಕೊಟ್ಟರು ಎಂದರೆ ಆಶ್ಚರ್ಯಪಡಬೇಕಿಲ್ಲ.

ಡಿ.ವಿ.ಜಿ.ಯವರು, ಅವರ ಮಗ ಸ್ವಾಮಿ ಇವರ ನಡುವಣ ಸಂಭಾಷಣೆಗಳಿಂದ ಆ ಹಿರಿಯರ ಘನತೆ, ಸಜ್ಜನಿಕೆ ಎಷ್ಟೊಂದು ಹೆಚ್ಚು ಎಂಬುದು ತಿಳಿದೀತು.

—ಶಿವರಾಮ ಕಾರಂತ

ಹೋದ ಬಾಳ ಬೆಳಕು

ಈಗ ಕೆಲವು ವರ್ಷಗಳ ಹಿಂದೆ, ಡಿ.ವಿ.ಜಿ.ಯವರ ವಾರ್ಷಿಕ ಸ್ಮರಣೆಯ ದಿನದಂದು, ಆತ್ಮೀಯರಾದ ಕೆಲವು ಪ್ರಿಯಮಿತ್ರರ ಬಲವಂತಕ್ಕೆ ಮಣಿದು, ಗೋಖಲೆ ಸಂಸ್ಥೆಯ ಆಶ್ರಯದಲ್ಲಿ ಡಿ.ವಿ.ಜಿ.ಯವರನ್ನು ಕುರಿತು ಮಾತನಾಡುವ ಸಾಹಸ ಮಾಡಿದ್ದೆ. ಡಿ.ವಿ.ಜಿ.ಯವರ ಲೋಕಸಂಗ್ರಹ ಕಾರ್ಯದ ಹಿಂದಿನ ಪ್ರೇರಕಶಕ್ತಿ ಯಾವುದಿರಬಹುದು ಎನ್ನುವ ಸಂದೇಹಕ್ಕೆ ಒಂದು ರೂಪು ಕೊಟ್ಟು ಅದಕ್ಕೆ ವಿವರಣೆ ನೀಡಲು ಪ್ರಯತ್ನಿಸಿದ್ದೆ. ಡಿ.ವಿ.ಜಿ. ಇನ್ನೂ ಕಿರಿಯವರಾಗಿದ್ದಾಗಲೆ ಭಾಗೀರಥಮ್ಮ ಎಂಬುವರೊಡನೆ ಮದುವೆಯಾಗಿತ್ತೆನ್ನುವ ವಿಷಯವನ್ನು, ಆ ತರುಣ ದಂಪತಿಗಳ ಸಹಜೀವನ ಅದೆಷ್ಟು ಮಧುರವಾಗಿದ್ದಿರಬಹುದು ಎನ್ನುವುದನ್ನು, ಕ್ರೂರವಾದ ವಿಧಿ ಆ ಸರಸ ಬಾಳ್ವೆಗೆ ಯಾವ ರೀತಿ ಅಡ್ಡಿ ತಂದೊಡ್ಡಿತೆನ್ನುವುದನ್ನು, ಅಕಸ್ಮಾತ್ತಾಗಿ ಒದಗಿದ ವಿಪತ್ತಿನಿಂದ ಡಿ.ವಿ.ಜಿ. ಹೇಗೆ ತಲ್ಲಣಿಸಿಹೋದರೆನ್ನುವುದನ್ನು— ಇವೆಲ್ಲವನ್ನೂ ನೆನಪಿಗೆ ತಂದುಕೊಂಡು ಗರಿಕಟ್ಟಿ ಹಾರಿಸಿದ್ದೆ.

ತಮ್ಮ ಎಳೆಯ ಬಾಳಿನ ದಿನಗಳ ಅನೇಕ ಸುಂದರ ಚಿತ್ರಗಳನ್ನು ಡಿ.ವಿ.ಜಿ. ತಮ್ಮ ಜ್ಞಾಪಕ ಚಿತ್ರಶಾಲೆಯಲ್ಲಿ ಕೊಟ್ಟಿದ್ದಾರೆ. ಆದರೆ ತಮ್ಮ ಜೀವನದ ಸಂಗಾತಿಯಾಗಿ, ತಮ್ಮ ಮನೆಯ ಬೆಳಕಾಗಿ, ತಮ್ಮ ಮಕ್ಕಳ ತಾಯಿಯಾಗಿ, ಜೀವನವನ್ನು ಬೆಳಗಿಸಿದ ತಮ್ಮ ಪ್ರಿಯಪತ್ನಿ ಭಾಗೀರಥಮ್ಮನ ಚಿತ್ರವನ್ನು ಅವರು ಚಿತ್ರಿಸದೆ ಹೋದರು. ಇದು ಏಕೆ ಎನ್ನುವುದು ನನಗೆ ಸಮಸ್ಯೆಯಾಗಿಯೇ ಉಳಿದಿತ್ತು. ಅವರ ದುಃಖದ ಆಳ ಅವರನ್ನು ಮೂಕವಾಗಿಸಿತ್ತೊ ಏನೊ ?

ದುಃಖದಿಂದ ಕಂಗಾಲಾಗಿ, ಹೃದಯವನ್ನು ಸ್ಮಶಾನವಾಗಿ ಮಾಡಿಕೊಂಡು ತಿರುಗುತ್ತಿದ್ದ ಗುಂಡಪ್ಪನವರಿಗೆ ಸಮಾಧಾನ ಹೇಳಿದ್ದ, ಅವರನ್ನು ವಿಶ್ವಪ್ರೀತಿಯ ವಿಶಾಲಭಾವದ ಕಡೆ ತಿರುಗಿಸಿದ ಕೀರ್ತಿ ಡಿ.ವಿ.ಜಿ.ಯವರ ಪರಮ ಮಿತ್ರರೂ ಹಿತೈಷಿಗಳೂ ಆದ ರೈಟ್ ಆನರ್‌ಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳಿಗೆ ಸಲ್ಲಬೇಕು. ಆ ದಾರುಣವಾದ ದುಃಖದ ದಿನಗಳಲ್ಲಿ ಅವರು ಡಿ.ವಿ.ಜಿ.ಗೆ ಬರೆದ ಕಾಗದ ಪ್ರಪಂಚದ ಪತ್ರಸಾಹಿತ್ಯದಲ್ಲಿ ವಿಶೇಷ ಸ್ಥಾನ ಪಡೆಯುವ ಅರ್ಹತೆಯುಳ್ಳದ್ದು. ಡಿ.ವಿ.ಜಿ.ಯವರನ್ನು ಬಲ್ಲ ಬಹುಜನಕ್ಕೆ ಈ ಕಾಗದದ ಇರವು ತಿಳಿದಿರಲಾರದುದರಿಂದ ಅದನ್ನು ಇಲ್ಲಿ ಉಲ್ಲೇಖಿಸುವುದು ಯುಕ್ತ ಎಂದು ನನಗನ್ನಿಸುತ್ತದೆ :

My Dear Gundappa,

Some griefs never lose their edge. Widowhood at your age with duties requiring mortgage of your whole future must be a heavy burden to carry. Rather given to brooding myself, I have no right to warn you against the habit. Perhaps if you request some friends not to mind thoughtless repulses but keep coming and engaging your interest on matters of more or less public concern, you will be protected from chronic melancholy. Work and even duty are apt to look like treason to the departed, but in truth refusal to be comforted is a form of self-indulgence not the less to be guarded against because it is directed towards a beloved memory. Remember me always with love and be same of mine.

ದುಃಖದಿಂದ ಬೆಂದ ಮನಸ್ಸಿನ ಮೇಲೆ ಅಮೃತವರ್ಷ ಕರೆದಂತಿರುವ ಮೇಲಿನ ಮಾತುಗಳು ಗುಂಡಪ್ಪನವರನ್ನು ಸಮಾಧಾನ ಪಡಿಸಿರಬೇಕು. ಅವರು ತಮ್ಮ ದುಃಖವನ್ನು ತಾಳಿಕೊಂಡರು. ಭಾಗೀರಥಮ್ಮ ಅಂದಿನಿಂದ Beloved Memory ಆಗಿ ಉಳಿದರು.

ಯಾವುದೋ ಕಾಕತಾಳೀಯ ನ್ಯಾಯದ ಫಲವಾಗಿ. ಗುಂಡಪ್ಪನವರ ಪುತ್ರ. ಪ್ರತಿಭಾವಂತ ವಿಜ್ಞಾನಿ. ಬಿ. ಜಿ. ಎಲ್. ಸ್ವಾಮಿಯ ಜೀವನವನ್ನು ಚಿತ್ರಿಸುವ ಜವಾಬುದಾರಿ ನನ್ನ ಹೆಗಲ ಮೇಲೆ ಬಿತ್ತು. ಆ ಸಂದರ್ಭದಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸುವ ಸಾಹಸದಲ್ಲಿ ನಾನು ತೊಡಗಿದ್ದೆ. ದೂರದ ಪರಿಚಯವಿದ್ದ ಗುಂಡಪ್ಪನವರ ಕಿರಿಯ ತಮ್ಮ ರಾಮರಾಯರನ್ನು ಹತ್ತಿರದವರನ್ನಾಗಿ ಮಾಡಿಕೊಂಡೆ. ಅವರ ಮನೆಗೆ ಮೇಲಿಂದ ಮೇಲೆ ಹೋಗಿ ಗುಂಡಪ್ಪನವರ ಬಾಲ್ಯ ಜೀವನದ ಬಗ್ಗೆ ಹೆಚ್ಚಿನ ವಿವರ ಪಡೆಯಲು ಪ್ರಯತ್ನಿಸಿದ್ದೆ. ಭಾಗೀರಥಮ್ಮನವರ ಮಂಗಳಮೂರ್ತಿಯ ಚಿತ್ರವನ್ನು ಕಂಡು ಪುಳಕಿತನಾದದ್ದು ನಾನು ರಾಮರಾಯರ ಮನೆಗೆ ಮೊದಲು ಭೇಟಿಯಿತ್ತಾಗ. ಅದೇ ಸುಮಾರಿಗೆ ಗುಂಡಪ್ಪನವರ ಹಿರಿಯ ಅಳಿಯಂದಿರು ಕೃಷ್ಣಸ್ವಾಮಿಯವರ ಪರಿಚಯವಾಯಿತು. ನನ್ನ ಅದೃಷ್ಟಕ್ಕೆ ಸರಿಯಾಗಿ ಅವರು ತಮ್ಮ ಪೆಟ್ಟಿಗೆಯೊಂದರಲ್ಲಿ ಮೂಲೆಪಾಲಾಗಿದ್ದ ಹಳೆಯ ಕಾಗದಗಳ ಕಟ್ಟೊಂದನ್ನು ನನ್ನ ಕೈಯಲ್ಲಿಟ್ಟರು. ಈ ಕಾಗದಗಳು ಗುಂಡಪ್ಪನವರು ತಮ್ಮ ಪ್ರೀತಿಯ ಮಗಳು 'ತಂಗ'ಮ್ಮನಿಗೆ ಬರೆದವು. ಇವುಗಳಲ್ಲಿ ಬಹುಮಟ್ಟಿನವು ಗೃಹಕೃತ್ಯಕ್ಕೆ ಸಂಬಂಧಪಟ್ಟವು. ಒಂದು ಮಾತ್ರ ನನ್ನ ಇಂದಿನ ಉದ್ದೇಶಕ್ಕೆ ಅಮೂಲ್ಯವಾದದ್ದು. ಈ ಪತ್ರದಲ್ಲಿ ಗುಂಡಪ್ಪನವರು ತಮ್ಮ ಮಕ್ಕಳಿಗೆ ಎಳೆಯ ವಯಸ್ಸಿನಲ್ಲೇ ತೀರಿಕೊಂಡ ತಾಯಿಯ ಪರಿಚಯ ಮಾಡಿಕೊಡಲು ಪ್ರಯತ್ನಪಟ್ಟಿರುವುದು ಕಾಣುತ್ತದೆ. ಪತ್ರ ಇಂಗ್ಲಿಷಿನಲ್ಲಿದೆ. ಅದರ ಭಾವಾನುವಾದವನ್ನು ಇಲ್ಲಿ ಕೊಟ್ಟಿದ್ದೇನೆ :

ನನ್ನ ಪ್ರಿಯ ಮಕ್ಕಳಿರಾ, **8–3–1954**

ಈ ದಿನವೆಲ್ಲ ನಿಮ್ಮ ತಾಯಿಯನ್ನು ಕುರಿತು ಚಿಂತಿಸುತ್ತಿದ್ದೇನೆ. ಆಕೆಯ ಸ್ಮರಣೆಯ ದಿನವಾದ ಇಂದು, ಪ್ರಾಯಶಃ ಇದೇ ಮೊದಲನೆಯ ಸಲ ನನ್ನ ಮಕ್ಕಳಲ್ಲಿ ಯಾರೊಬ್ಬರೂ ನನ್ನ ಹತ್ತಿರವಿಲ್ಲ. ಸ್ವಾಮಿ, ತಂಗ ಇಬ್ಬರೂ ಊರು ಬಿಟ್ಟು ಹೊರಗೆ ಎಲ್ಲೋ ಹೋಗಿದ್ದಾರೆ. 'ತಾಯಿ'(ಗುಂಡಪ್ಪನವರ ಎರಡನೆಯ ಮಗಳು ಇಂದಿರಾ. 'ತಾಯಿ' ಎಂದು ಪ್ರೀತಿಯ ಸಂಬೋಧನೆ)ಯಾದರೂ ಇದ್ದೇ ಇರುತ್ತಿದ್ದಳು. ಅವಳೂ ಈ ದಿನ ಇಲ್ಲ. ನೀವೆಲ್ಲ ಇರುತ್ತಿದ್ದರಿಂದ ನನ್ನ ಜೀವನದ ಭಾಗವಾಗಿದ್ದ ನಿಮ್ಮ ತಾಯಿಯ ನೆನಪು ಮರುಕಳಿಸಲು ಕಾರಣವಿರುತ್ತಿತ್ತು. ನನ್ನ ದುಃಖವನ್ನು ನಿಮ್ಮೆದುರಿಗೆ ತೋಡಿಕೊಳ್ಳಬೇಕೆನ್ನುವ ಇಚ್ಛೆ ನನಗೇನಿಲ್ಲ. ನನ್ನ ಮನಸ್ಸು ಇಂದು ಯಾವ ರೀತಿ ಓಡುತ್ತಿದೆ ಅನ್ನುವುದನ್ನು ಮಾತ್ರ ನಿಮಗೆ ತಿಳಿಸಬೇಕೆಂದಿದ್ದೇನೆ.

.ಬಹುಕಾಲದ ತೀರ್ಥಯಾತ್ರೆ ಮುಗಿಸಿಕೊಂಡು ಬಂದವಳಂತೆ ಈ ದಿನ ಆಕೆ ನಮ್ಮೊಂದಿಗೆ ಇರಲು ಬಂದದ್ದೇ ಆದರೆ ಆಕೆಗೆ ಹೇಗೆನಿಸಬಹುದು ? ಅವಳು ಸಂತೋಷ ಪಟ್ಟುಕೊಳ್ಳುತ್ತಿದ್ದಳು ಎಂದೇ ನನಗನಿಸುತ್ತದೆ. ತಾಯಿಯಾದವಳಿಗೆ ತನ್ನ ಮಗಳು ಸುಖ ಸಂತೋಷದಿಂದಿರಬೇಕೆನ್ನುವುದೇ ಮುಖ್ಯವಲ್ಲವೆ ? ಹೆಣ್ಣುಮಕ್ಕಳಿಗೆ ಒಳ್ಳೆಯ ಗಂಡಂದಿರು ಸಿಕ್ಕಿದ್ದಾರೆ. ಮಗನೂ ತಕ್ಕಮಟ್ಟಿಗೆ ಮುಂದೆ ಬಂದಿದ್ದಾನೆ. ಮೂವರು ಮಕ್ಕಳೂ ತಮ್ಮ ಶೀಲದಿಂದ, ನಡತೆಯಿಂದ ಹೆತ್ತವರಿಗೆ ಗೌರವ ತಂದಿದ್ದಾರೆ.

ನಿಮ್ಮ ತಾಯಿ ಎಳೆತನದಲ್ಲಿ ಬಹಳ ಕಷ್ಟ ಕಂಡವಳು. ಮದುವೆಯಾದ್ದರಿಂದ ಅಂಥ ಹೆಚ್ಚಿನ ಸುಖವನ್ನೇನೂ ಕಾಣಲಿಲ್ಲ. ಆಕೆ ಹಣಕ್ಕಾಗಿ ಬಾಯಿಬಿಟ್ಟವಳಲ್ಲ. ತನ್ನ ಮಕ್ಕಳು ತನ್ನಂತೆ ಕಷ್ಟಪಡದೆ ಮುಂದೆ ಬಂದಿದ್ದಾರೆಂದು ತಿಳಿದರೆ ಆಕೆಗೆ ಹೆಚ್ಚಿನ ಸಂತೋಷವಾದೀತು. ವಿದ್ಯೆ, ಬುದ್ಧಿ ಗೌರವಗಳಿಗೆ ಆಕೆ ಹೆಚ್ಚಿನ ಬೆಲೆ ಕಟ್ಟಿದ್ದಳು. ಇದನ್ನು ನೀವು ಜ್ಞಾಪಕದಲ್ಲಿಟ್ಟುಕೊಂಡಿರಬೇಕು.

ಆಕೆಗೆ ತನ್ನ ಗಂಡ ಬಾಳುತ್ತಿರುವ ರೀತಿಯನ್ನು ಕಂಡು ಅಂಥ ಹೆಚ್ಚಿನ ಆಶ್ಚರ್ಯವಾಗುತ್ತಿರಲಿಲ್ಲವೆಂದು ನನಗನಿಸುತ್ತದೆ. ಆಕೆ ಪ್ರಾಯಶಃ ಹೀಗೆನ್ನುತ್ತಿದ್ದಳೇನೋ—"ಅವರ ವಿಷಯ ನಾನು ಕಾಣೆನೆ ? ಅವರಲ್ಲಿ ಬದಲಾವಣೆ ಹೇಗಾದೀತು ? ಆ ಮಹಾರಾಯರನ್ನು ತಿಳಿಯಬಲ್ಲವರಾರು ? ಗಳಿಗೆಗೆ ಒಂದು ತರದ ಮಾತು, ಈಗ ತಣ್ಣಗೆ, ಮರುಕ್ಷಣ ಕಾವೇರುತ್ತಾರೆ. ಬೆಳಿಗ್ಗೆ ಕಲ್ಲಿನಂಥ ಮಾತು, ಸಾಯಂಕಾಲದ ಹೊತ್ತಿಗೆ ಬೆಣ್ಣೆಯಂತೆ ಕರಗುವಂಥದ್ದು. ಅತಿಬುದ್ಧಿ. ದುಷ್ಟತನ, ತಿಳಿಗೇಡಿತನ. ಜೊತೆಗೆ ತತ್ತ್ವಚಿಂತನ. ಈಗಲೂ ಅವರು ಹಾಗೆಯೇ ಇರಬೇಕು. ವರ್ಷಗಳು ಉರುಳಿಹೋದರೇನಂತೆ ? ನಾನು ಅವರಲ್ಲಿ ಯಾವ ಬದಲಾವಣೆಯನ್ನೂ ಕಾಣೆ."

ನನ್ನನ್ನು ಕಂಡರೆ ಆಕೆಗೆ ಬಹಳ ಅಭಿಮಾನ. ಅಷ್ಟೇ ಕನಿಕರ ಕೂಡ. ಆಕೆಯೊಡನೆ ನಾನು ಬಹು ಹೊತ್ತು ಕಳೆಯಲಾಗುತ್ತಿರಲಿಲ್ಲ. ಸುಖವನ್ನಾಗಲಿ. ಹೆಚ್ಚಿನ ಸಂಪತ್ತನ್ನಾಗಲಿ ಆಕೆಗೆ ನಾನು ತಂದುಕೊಟ್ಟವನಲ್ಲ. ಸದಾಕಾಲವೂ ನಾನು ಒದ್ದಾಡುತ್ತಲೇ ಇರಬೇಕಾಗಿತ್ತು. ನಮ್ಮ ಸಂಸಾರ ದೊಡ್ಡದು. ನನ್ನೊಬ್ಬನ ಸಂಪಾದನೆಯಿಂದಲೇ ಎಲ್ಲವೂ ನಡೆಯಬೇಕಾಗಿತ್ತು. ನನ್ನ ತಾಯಿ ತಂದೆಗಳು ಎಷ್ಟು ಕೋಪಿಷ್ಠರೆನ್ನುವುದು ನಿಮಗೆ ಗೊತ್ತು. ಹಾಗಿದ್ದರೂ ನಾನು ಕೊಟ್ಟಷ್ಟು ಅಲ್ಪ ಸಹವಾಸದಿಂದಲೇ ನಿಮ್ಮ ತಾಯಿ ತೃಪ್ತಿ ಪಟ್ಟುಕೊಳ್ಳುತ್ತಿದ್ದಳು. ಅವಳು ನನ್ನನ್ನು ಹೆಚ್ಚು ಪ್ರೀತಿಸುತ್ತಿದ್ದಳೋ. ನಾನೇ ಅವಳನ್ನು ಹೆಚ್ಚು ಪ್ರೀತಿಸುತ್ತಿದ್ದೆನೋ ಹೇಳಲು ನನಗೆ ಕಷ್ಟ. ನಾವಿಬ್ಬರೂ ಒಟ್ಟಿಗಿರುತ್ತಿದ್ದಾಗ ಈ ಪ್ರಪಂಚವನ್ನು ಮರೆತುಬಿಡುತ್ತಿದ್ದೆವು.

ಅಕ್ಕ ನಮ್ಮೊಡನೆ ಇಲ್ಲದೆ ಇರುವುದನ್ನು ಕಂಡರೆ ಆಕೆಗೆ ಬಹಳ ವ್ಯಥೆಯಾಗಬಹುದು. ಲಕ್ಷ್ಮೀದೇವಮ್ಮನನ್ನು ಆಕೆ ಪರಲೋಕದಲ್ಲಿ ಕಂಡದ್ದೇ ಆದರೆ—"ಏಕೆ ನನ್ನ ಗಂಡನನ್ನು, ನಿನ್ನ ಅಣ್ಣನನ್ನು ಬಿಟ್ಟು, ಇಲ್ಲಿಗೆ ಓಡಿ ಬಂದೆ ? ಅವನಿಗೆ ನಿನ್ನ ಅಗತ್ಯವಿಲ್ಲವೆ ? ಮಕ್ಕಳನ್ನು ನೋಡಿಕೊಳ್ಳುವವರು ಯಾರು ? ಈ ಹೊತ್ತು ನಿನ್ನ ಸಹಾಯ ಅವನಿಗೆ ಬೇಕಿತ್ತಲ್ಲವೆ ?"—ಎಂದೆಲ್ಲ

ಕೇಳಿಯಾಳು. ನಿಮ್ಮ ತಾಯಿಯೂ, ಸೋದರತ್ತೆಯೂ (ಲಕ್ಷ್ಮೀದೇವಮ್ಮ) ಆಪ್ತ ಗೆಳತಿಯರು. ಒಂದು ದಿವಸವಾಗಲಿ, ಕೊನೆಗೆ ಒಂದೇ ನಿಮಿಷವಾಗಲಿ ಅವರಲ್ಲಿ ಮನಸ್ತಾಪ ಬಂದದ್ದನ್ನೇ ನಾನು ಕಾಣೆ. ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಎರಡು ದೇಹ, ಒಂದೇ ಜೀವ ಎನ್ನುವಂತಿದ್ದರು.

ರಾಮು (ಗುಂಡಪ್ಪನವರ ತಮ್ಮ ಡಿ. ವಿ. ರಾಮರಾವ್) ವನ್ನು ಕಂಡರೆ ನಿಮ್ಮ ತಾಯಿಗೆ ಬಹಳ ಅಕ್ಕರೆ. ರಾಮು ನಮ್ಮೊಡನಿರಲು ಬಂದಾಗ ಅವನಿನ್ನೂ ಚಿಕ್ಕ ಹುಡುಗ. ನನಗೆ ಮದುವೆಯಾದಾಗ ಅವನಿನ್ನೂ ಹುಟ್ಟಿಯೇ ಇರಲಿಲ್ಲ. ಆದಕಾರಣವೇ ಆತನ ವಿಷಯವಾಗಿ ಒಂದು ದಿವಸವಾದರೂ ಕಠಿಣವಾಗಿ ನಡೆದುಕೊಂಡದ್ದನ್ನೇ ಕಾಣೆ. ಅವನ ತಪ್ಪುಗಳೇನಿದ್ದರೂ ಅವನ್ನು ಕ್ಷಮಿಸಿಬಿಟ್ಟಿದ್ದಳು. ನಾನು ರೇಗುವುದನ್ನು ಕಂಡರೆ ಸಹಿಸುತ್ತಿರಲಿಲ್ಲ.

ಸಾವಿತ್ರಿ (ಗುಂಡಪ್ಪನವರ ಇನ್ನೊಬ್ಬ ತಂಗಿ) ಯನ್ನು ಕಂಡರೂ ರಾಮುವಿನ ಮೇಲಿನಷ್ಟೇ ವಾತ್ಸಲ್ಯ. ಆನೆಕಲ್ ಕೃಷ್ಣಮೂರ್ತಿಯನ್ನು ತಂದು ಮದುವೆ ಮಾಡಿಕೊಡಬೇಕೆಂದು ಪಟ್ಟು ಹಿಡಿದಿದ್ದಳು. ಕೃಷ್ಣಮೂರ್ತಿ ನಮ್ಮೊಡನೆಯೇ ಹಲವು ವರ್ಷಗಳು ಇದ್ದ. ಆತ ಯಾವ ಸಂಕೋಚವೂ ಇಲ್ಲದೆ ನಮ್ಮ ಮನೆಯಲ್ಲಿ ಬಾಳುವಂತೆ ಆಕೆ ವಿಶೇಷ ಎಚ್ಚರ ವಹಿಸುತ್ತಿದ್ದಳು.

ಅನಾಹುತಕ್ಕೀಡಾಗಿ ನಿಮ್ಮ ತಾಯಿ ತೀರಿಕೊಳ್ಳುವುದಕ್ಕೆ ಮುನ್ನ ನನ್ನ ಹಣಕಾಸಿನ ಸ್ಥಿತಿ ಎಂದಿಗಿಂತ ತೀರ ಹದಗೆಟ್ಟಿತ್ತು. ಆ ಎಲ್ಲ ಕಷ್ಟಗಳ ಹೊರೆಯನ್ನು ಆಕೆ ಹೊತ್ತಿದ್ದಳು. ಆಸ್ಪತ್ರೆಯಲ್ಲಿ ಆಕೆ ನರಳುತ್ತಿದ್ದಾಗಲೂ ನನ್ನ ತಂದೆ ತಾಯಿಗಳ ಸಿಡುಕನ್ನು ನೆನೆಸಿಕೊಂಡರೆ ತಲೆತಗ್ಗಿಸುವಂತಾಗುತ್ತದೆ. ಆಕೆ ಸತ್ತಾಗಲೂ ಅವಳನ್ನು ದೂರಿದರು. ಅವರ ದುಃಖವೂ ತೀವ್ರವಾಗಿತ್ತೆನ್ನುವುದು ನಿಜ. ಅವರೂ ಒಳ್ಳೆಯ ಸ್ವಭಾವದವರೆ. ಆದರೆ ಆಕೆಯಲ್ಲಿನ ಸದ್ಗುಣಗಳನ್ನು ಅರ್ಥಮಾಡಿಕೊಳ್ಳಲು ಸ್ವಲ್ಪವೂ ಪ್ರಯತ್ನಪಟ್ಟವರಲ್ಲ. ಹೀಗೆನ್ನುವಾಗ ನಾನು ಅವರಲ್ಲಿ ತಪ್ಪೆಣಿಸುತ್ತಿಲ್ಲವೆಂದು ಅಂದುಕೊಂಡಿದ್ದೇನೆ.

ನನಗೆ ಸಹಾಯ ಮಾಡಿದ ನಾಲ್ವರು ಮಿತ್ರರನ್ನು ಈ ದಿನ ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಅವರು ಬೆಳ್ಳಾವೆ ವೆಂಕಟನಾರಣಪ್ಪ, ಟಿ. ಎಸ್. ವೆಂಕಣ್ಣಯ್ಯ, ರಾಮಶಾಸ್ತ್ರಿ, ಅಂಗಡಿ ಕೃಷ್ಣಪ್ಪ ಇವರೇ. ದೇಹವನ್ನು ಶ್ಮಶಾನಕ್ಕೆ ಸಾಗಿಸಿ, ಮಾಡಬೇಕಾದ ಕರ್ಮಗಳನ್ನು ಮಾಡಿ ಮುಗಿಸಿದವರು. ನನ್ನ ತಂದೆಯಾಗಲಿ ಇತರ ನೆಂಟರಾಗಲಿ ಆ ಕಡೆ ಸುಳಿಯಲಿಲ್ಲ.

ಈ ಕಾಗದವನ್ನು ಓದಿ ನೀವು ಯಾರೂ ಧೃತಿಗೆಟ್ಟು ಅಳಲು ತೊಡಗುವುದಿಲ್ಲವೆಂದು ಅಂದುಕೊಂಡಿದ್ದೇನೆ. ಅತ್ತು ಪ್ರಯೋಜನವಿಲ್ಲ. ಅದು ತಿಳಿಗೇಡಿತನ. ಏಕೆಂದರೆ ನೋವಾಗಲಿ, ತಬ್ಬಲಿತನವಾಗಲಿ ಇಡೀ ಜೀವಮಾನವನ್ನೆ ಆವರಿಸತಕ್ಕದ್ದಲ್ಲ. ಸುಡುವ ಬಿಸಿಲಾಗಲಿ, ಕೊರೆಯುವ ಚಳಿಯಾಗಲಿ, ಎಲ್ಲಾ ಕಾಲವೂ ಇರುವುದಿಲ್ಲ. ಒಣಗಿ ಬಾಡಿ ನಮ್ಮ ದೃಷ್ಟಿಯಿಂದ ಮಾಯವಾದ ಹುಲ್ಲು ಮತ್ತೆ ಎಂದೋ ಚಿಗುರೊಡೆದು ನೋಡುವವರ ಕಣ್ಣಿಗೆ ತಂಪನ್ನುಂಟುಮಾಡುತ್ತದೆ. ಅದನ್ನು ಅದುಮುವುದಕ್ಕಾಗಲಿ, ಅಡಗಿಸುವುದಕ್ಕಾಗಲಿ ಆಗದು. ಬಾಳೂ ಈ ರೀತಿಯದು. ಅದರ ವೈವಿಧ್ಯ, ಏಳು ಬೀಳುಗಳು ಅನಂತ. ಪ್ರಪಂಚವನ್ನು ತಿಳಿಯಬೇಕೆಂಬ ಆಸೆಯಿದ್ದರೆ ಕಿಟಕಿಯ ಬಳಿ ಕುಳಿತು ಎದುರು ಮನೆ ಕಡೆ ನೋಡಿದರೆ ಸಾಲದು; ಜಗತ್ತಿನ ಬೀದಿಗಳಲ್ಲಿ ಅಲೆಯಬೇಕು.

ದುಃಖ ಒದಗಿದಾಗ ನಮ್ಮ ಪಾಡೇ ನಮಗೆ ದೊಡ್ಡದಾಗಿ ಕಾಣುತ್ತದೆ. ಹೊರಗೆ ದುಃಖ ಪ್ರಸಂಗಗಳು ಎಷ್ಟೊಂದು ನಡೆಯುತ್ತಿವೆ ಎನ್ನುವುದರ ಕಡೆ ನಮ್ಮ ಗಮನ ಹರಿಯುವುದಿಲ್ಲ. ನಮ್ಮ ಕಷ್ಟಕಾರ್ಪಣ್ಯಗಳು, ಸೋಲು ಗೆಲುವುಗಳು—ಇವೇ ನಮ್ಮ ಪ್ರಪಂಚವಾಗಿಬಿಡುತ್ತವೆ ಅವುಗಳನ್ನು ಬಿಟ್ಟು ಬೇರೆ ಯಾವುದೂ ಇಲ್ಲವೇನೋ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತೇವೆ. ಅಂಥ ಹೊತ್ತಿನಲ್ಲಿ ಸತ್ಯ ಯಾವುದು ಎನ್ನುವುದರ ಕಡೆ ಗಮನ ಹರಿಸಬೇಕು. ಜೀವನದ ಸತ್ಯ

ವನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು. ಸತ್ಯಕ್ಕೆ ನಾವು ಗೌರವ ಕೊಡುವುದಾದರೆ, ಜೀವನದ ಸತ್ಯ ನಮ್ಮ ಮುಂದೆ ಕಾಣಿಸಿಕೊಂಡು ಹರಡುತ್ತ ಹೋಗುತ್ತದೆ. ಅಲ್ಲಿ ನಾವು ಕಾಣುವುದೇನು ? —ಬೆಟ್ಟಗಳು ಕಣಿವೆಗಳು, ನದಿಗಳು ಸರೋವರಗಳು, ಸಮುದ್ರಗಳು. ಇವಷ್ಟೇ ಅಲ್ಲದೆ ಹೊಲಗಳು, ಪಟ್ಟಣಗಳು, ಯುದ್ಧಭೂಮಿಗಳು, ರಮಣೀಯ ಪ್ರದೇಶಗಳು. ಎಲ್ಲಿ ಕತ್ತಲು ಕವಿದಿರುತ್ತದೆಯೋ ಅಂಥ ಕಡೆ ಮಾತ್ರವೇ ನಮ್ಮ ಗಮನವನ್ನು ಬಹುಕಾಲ ಹರಿಸದಿರೋಣ. ಸದ್ಗುಣಗಳ ಹಿರಿಮೆಯನ್ನು ನಾವು ಯೋಚಿಸುತ್ತ ಹೋದರೆ ಆಗ ನಮ್ಮ ನೆನಪುಗಳು ಸಂತೋಷವನ್ನು ಕೊಡುತ್ತಾ ಹೋಗುತ್ತವೆ. ನಮ್ಮ ದಿನದಿನದ ಜೀವನದ ಮೇಲೆ ಅವುಗಳ ಪ್ರಭಾವ ಕಾಣುತ್ತದೆ. ಜೀವನ ಎನ್ನುವುದು ಎಲ್ಲಕ್ಕಿಂತ ಹೆಚ್ಚಿನ ಸತ್ಯ. ಅದನ್ನು ಜೀವಿಸಬೇಕು. ಒಳ್ಳೆಯ ಬಾಳು ಬಾಳಬೇಕು. ಕಳೆದುಹೋದವರ ಮೇಲಿನ ಪ್ರೀತಿಯಿಂದ ನಾವು ಶಕ್ತಿ ಪಡೆದುಕೊಳ್ಳೋಣ. ಕುಗ್ಗದಿರೋಣ. ನಾವು ನಮ್ಮ ಬಾಳನ್ನು ಶುಚಿಯಾಗಿ, ಸತ್ತ್ವಯುತವಾಗಿ ಬಾಳಿದಲ್ಲಿ ನಿಮ್ಮ ತಾಯಿ ನಿಜಕ್ಕೂ ಸಂತೋಷಪಟ್ಟಾಳು. ಸರಿಯಾಗಿ ಬಾಳಿದ ಬಾಳೂ ಕೂಡ ಒಂದು ಬಗೆಯ ದೇವರ ಸೇವೆಯೇ. ಅದಕ್ಕೆ ಅವಶ್ಯವಾದದ್ದು ನಮ್ಮ ಆಸೆಗಳಿಗೆ ಒಂದು ಮಿತಿ, ಎಲ್ಲರಲ್ಲಿಯೂ ಒಂದು ಬಗೆಯ ಸಮತಾಭಾವ, ಪರಿಹಾರ ಒದಗಿದಾಗ ಕೃತಜ್ಞತೆ, ನೈತಿಕ ವಿಷಯಗಳಲ್ಲಿ ಶ್ರದ್ಧೆ, ಚಿತ್ತಶಾಂತಿ, ತಾಳ್ಮೆ, ಸೌಮ್ಯತೆ. ಮ್ಯಾಥ್ಯೂ ಆರ್ನಾಲ್ಡಿನ ಈ ಪದ್ಯವನ್ನು ಕುರಿತು ಚಿಂತನೆ ಮಾಡಿ.

Moderate tastes and Moderate leisure/Quiet living, strict kept measure/Both in suffering and pleasure'/Tis for this my nature yearns.

ಅಂತೂ ಒಟ್ಟಿನಲ್ಲಿ ದೇವರು ನಮ್ಮನ್ನು ಕೃಪಾದೃಷ್ಟಿಯಿಂದ ಕಂಡಿದ್ದಾನಲ್ಲವೆ ?

ನಿಮ್ಮ ಪ್ರೀತಿಯ...

ಇದು ಗುಂಡಪ್ಪನವರು ತಮ್ಮ ಮಕ್ಕಳಿಗಾಗಿ ಬರೆದ ಪತ್ರ. ತನ್ನದೇ ಆದ ಸೊಗಸನ್ನು ಪಡೆದುಕೊಂಡಿದೆ. ಗುಂಡಪ್ಪನವರ ಪ್ರಿಯಪತ್ನಿ ಭಾಗೀರಥಮ್ಮನವರ ಸರಳ ಸುಂದರ ಚಿತ್ರ ಇಲ್ಲಿ ಕಾಣುತ್ತದೆ. ಇದನ್ನು ಓದಿದ ಮೇಲೆ 'ಬೇಲೂರು ಶಿಲಾಬಾಲಿಕೆಯರು,' 'ಮಂಕುತಿಮ್ಮನ ಕಗ್ಗ,' 'ಉಮರನ ಒಸಗೆ,' 'ಗೀತ ಶಾಕುನ್ತಲ.' 'ಶೃಂಗಾರ ಮಂಗಳ,' 'ಅನ್ತಃಪುರ ಗೀತೆ,' ಈ ಕಾವ್ಯಗಳಲ್ಲಿ ಕಾಣಬರುವ ಮಾಧುರ್ಯದ ಹಿಂದಿನ ಪ್ರೇರಕಶಕ್ತಿ ಯಾವುದು ಎನ್ನುವುದನ್ನು ಗ್ರಹಿಸುವುದು ಸುಲಭವಾಗುತ್ತದೆ.

ಶತಮಾನೋತ್ಸವದ ಅಂಗವಾಗಿ ಅನೇಕ ಸಭೆಗಳು ಅಲ್ಲಲ್ಲಿ ನಡೆಯುತ್ತಿವೆ. ಅಗಣಿತ ಜನ ಗುಂಡಪ್ಪನವರ ಗುಣಗಾನ ಮಾಡುವುದರಲ್ಲಿ ತೊಡಗಿದ್ದಾರೆ. ಗುಂಡಪ್ಪನವರ ಬಾಳನ್ನು ಬೆಳಗಿಸಿ, ಅವರ ಎಲ್ಲ ಲೋಕಸಂಗ್ರಹ ಕಾರ್ಯಕ್ಕೂ ಪ್ರೇರಕಶಕ್ತಿಯಾಗಿದ್ದ ಭಾಗೀರಥಮ್ಮನವರನ್ನು ಈ ದಿನ ಅರೆಕ್ಷಣವಾದರೂ ನೆನಪಿಗೆ ತಂದುಕೊಳ್ಳುವುದು ನಮ್ಮ ಕರ್ತವ್ಯವಲ್ಲವೆ ?

ಈಶ್ವರ ಪದದಿಂ ಬಂದಾ
ಭಾಸ್ವರ ಕಲೆ ಮರಳಿ ಸೇರ್ದುದಾ ಸನ್ನಿಧಿಯಂ
ಶಾಶ್ವತವೆಮ್ಮೊಳ್ ನಿಲುಗೆ ಆ
ವಿಶ್ವಪ್ರೀತಿಯ ವಿಶಾಲ ನೀತಿಯ ವಿಭವಂ.

—ರಾಧಾಕೃಷ್ಣ

ಮಹಾನ್ ವಿದ್ವಾಂಸರು

ಅತ್ಯಂತ ಮೇಧಾವಿಗಳೂ, ಮಹಾನ್ ವಿದ್ವಾಂಸರೂ ಆದ ಡಾ॥ ಡಿ.ವಿ.ಜಿ. ಅವರಲ್ಲಿ. ಒಬ್ಬನೇ ಬರಲು ಸಂಕೋಚ. ಆದಕಾರಣ. ಘನ ವಿದ್ವಾಂಸರೂ. ಸೌಂದರ್ಯೋಪಾಸಕರೂ ಆದ ಪ್ರೊ. ವಿ. ಸೀತಾರಾಮಯ್ಯ ಅವರ ಸಂಗಡ ಬಂದು, ಡಾ॥ ಡಿ.ವಿ.ಜಿ. ಅವರ ದರ್ಶನ ಪಡೆವ ವಾಡಿಕೆಯಿತ್ತು.

ಡಾ॥ ಡಿ.ವಿ.ಜಿ. ಅವರು ನಮ್ಮ ಪ್ರಾಚೀನ ಪರಂಪರೆಯ ಮಂಡನಕ್ಕಾಗಿ ಸಂಶೋಧನಾತ್ಮಕ ಲೇಖನ ಮಾಡಿದ್ದಾರೆ. ಆದರೆ ನನಗೆ, ನಮ್ಮ ಶ್ರದ್ಧಾಸ್ಥಾನಗಳ ಪುನರ್ವಿಮರ್ಶೆಯು ಅವಶ್ಯವೆನಿಸಿತ್ತು.

ಈ ದಾರಿ, ತೀರ ಸಾಹಸದ್ದು ! ಆದರೆ ನನಗೊ, ಇವರ ಆವಶ್ಯಕತೆ, ಅಡಿಗಡಿಗೂ ಎನಿಸುತ್ತಿತ್ತು ! ಅದರಿಂದಾಗಿ ವಿಚಾರವಂತರು ಅಳುಕುವಲ್ಲಿ, ಅಲ್ಪ ವಿಚಾರಿ ಮುಡುಕುವ ಹುಚ್ಚು ಮಾಡುತ್ತಾನೆ. ಎಂಬ ಗಾದೆಗೆ ನಾನು ಉದಾಹರಣವಾದೆ.

ನಮ್ಮ ಇಂದಿನ ಋಗ್ವೇದದಲ್ಲಿ 'ಮೃತಾತ್ ಅಂಡಾತ್ ಜಾತ. ಮಾರ್ತಾಂಡ ನಾಮಾನಂ ಸೂರ್ಯಂ' ಉಪಾಸನೆಯು ಇದೆ. ಇದು ಚಾಂದ್ರ ಸಂಕೇತವೇ ಹೊರತು, ಪ್ರಕಾಶತತ್ತ್ವದ ಪ್ರತೀಕವಲ್ಲ !

ವ್ಯಾಸ ಸಂಕೇತನಾಮದ ಹಿಂದಿನ ವ್ಯಕ್ತಿಗಳ ಕೈವಾಡವು ಇಲ್ಲಿ ಕಾಣುತ್ತದೆ ! ಚಂದ್ರೋಪಾಸನೆಯ ವೇದವು. ವೈವಸ್ವತ ಹಾಗೂ ಸವಿತೃ ತತ್ತ್ವದ ಮೂಲ ಸಂಹಿತೆಯಾಗಲಾರದು. ಎಂಬ ನನ್ನ ನಿಷ್ಪನ್ನವು ಪೂಜ್ಯ ಡಿ.ವಿ.ಜಿ. ಅವರಿಗೆ ಹಿಡಿಸ ದಿರುವುದು ಸಹಜ.

ನನ್ನ ಸಾಂಸ್ಕೃತಿಕ ಸತ್ಯಾನ್ವೇಷಣೆಯ ದಾರಿಯು ಅಮಾನ್ಯವಿದ್ದರೂ. ಪೂಜ್ಯ ಡಾ॥ ಡಿ.ವಿ.ಜಿ. ಅವರು. ನನ್ನ ದಾರಿಯಲ್ಲಿ ಮುಂದುವರಿಯಬಹುದು. ಎಂದು ಆಶೀರ್ವ-ದಿಸಿದ್ದು. ಈ ಸಂದರ್ಭದಲ್ಲಿ ನೆನಪಿಗೆ ಬರುತ್ತಿದೆ.

—ಶಂ. ಬಾ. ಜೋಶಿ

ನೆನಪಿನ ಸುರಳಿಯಿಂದ

1933ನೆಯ ವರುಷದ ಬೇಸಿಗೆಯ ಬಿಡುವಿನಲ್ಲಿ ನನ್ನ ಬಿ.ಎ. ಪರೀಕ್ಷೆ ಕೊನೆಗೊಂಡಿತ್ತು. ಆಗ ಬೆಂಗಳೂರು ಪಯಣ ಕೈಕೊಂಡು ಅಲ್ಲಿ ಕೆಲವು ದಿನ ವಾಸಿಸಿದ್ದೆ. ನವೋದಯ ಕನ್ನಡ ಸಾಹಿತ್ಯದಿಂದ ಈ ಮೊದಲೇ ನಾನು ಆಕರ್ಷಿತನಾಗಿದ್ದೆ. ಬೆಂಗಳೂರಿನ ಆಗಿನ ವಾಸ್ತವ್ಯದಲ್ಲಿ ಅಲ್ಲಿಯ ಸಾಹಿತ್ಯಿಕ ಪರಿಸರವು ನನಗೆ ಹಿತಕರವೆನಿಸಿತು. ಅಂದಿನ ಕುತೂಹಲದಿಂದಾಗಿ ನಾನು ಬೆಂಗಳೂರಿನ ಸಾಹಿತಿಗಳಲ್ಲಿ ಕೆಲವರ ಸಂಪರ್ಕ ಪಡೆದು ಸಂಭಾಷಣೆ ನಡೆಸಿದ್ದು ಪ್ರಯೋಜನಕಾರಿಯಾಯಿತು. ಆಗಲೆ ಡಿ.ವಿ.ಜಿ. ತಮ್ಮ ಪಾಂಡಿತ್ಯ ಪ್ರತಿಭೆಗಳಿಂದ ಆಧುನಿಕ ಕನ್ನಡ ಸಾಹಿತ್ಯರಂಗದಲ್ಲಿ ಎತ್ತರದ ವ್ಯಕ್ತಿಯೆಂದು ಹೆಸರು ಪಡೆದಿದ್ದರು. ಅವರ 'ನಿವೇದನ' ಎಂಬ ಕವನದ

"ಮೇಲೆ ನೋಡೆ ಕಣ್ಣ ತಣಿಪ
ನೀಲ ಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ
ಚಿತ್ರ ಚತುರನಾರ್
ಕಾಲದಿಂದ ಮಾಸದಾ ವಿ-
ಚಿತ್ರವೆಸಪನಾರ್

ಎಂಬ ನುಡಿಗಳನ್ನು ನಾನು ಮೆಲುಕುಹಾಕುತ್ತಿದ್ದೆ.

ರವಿಗೆ ಬೆಳಕ ಭುವಿಗೆ ಬಲವ
ಜವವ ವಾಯುಗೀವ ತೆರದಿ
ಕವಿಯು ವಚನಕವನೆ ಸರಸ
ಭಾವವೀವನು

—ಎಂಬ ಬಗೆಯ ನವೋದಯ ಕಾವ್ಯದ ನುಡಿಗಳನ್ನು ನಾನು ಮೆಚ್ಚಿಕೊಂಡಿದ್ದೆ. ಇಂತಹ ನುಡಿಗಳನ್ನು ಗಡೀಪಾರು ಮಾಡುವ ಪ್ರಯತ್ನ ನವ್ಯದ ಹಾವಳಿಯಲ್ಲಿ ನಡೆದುದೂ ಉಂಟು. ಅಂದಿನ ಕನ್ನಡ ಸಾಹಿತ್ಯ ವಲಯದಲ್ಲಿ ಡಿ.ವಿ.ಜಿ. ಅವರು ಒಂದು ಹೊಸ ಬಗೆಯೆಂದು ತಿಳಿದುಕೊಂಡಿದ್ದೆ. ಅಂದಿನ ನನ್ನ ಬೆಂಗಳೂರಿನ ವಾಸ್ತವ್ಯದಲ್ಲಿ ಡಿ.ವಿ.ಜಿ. ಅವರ ಸಂಪರ್ಕ. ಅವರೊಂದಿಗೆ ಸಂಭಾಷಣೆ ಸುಲಭ ಸಾಧ್ಯವಲ್ಲವೆಂದೂ ಆಗ ನನಗೆ ತಿಳಿದುಬಂದಿತ್ತು.

1936ರಲ್ಲಿ ನಾನು ಕನ್ನಡ ಪ್ರಾಧ್ಯಾಪಕ ಸ್ಥಾನ ವಹಿಸಿಕೊಂಡ ಕೆಲವು ದಿನಗಳ ನಂತರ ಡಿ.ವಿ.ಜಿ. ಅವರ ಸ್ಥಾನದಲ್ಲಿ ಬಿ. ಎಂ. ಶ್ರೀ ಕನ್ನಡ ಸಾಹಿತ್ಯ ಪರಿಷತ್ತಿನ ವರಿಷ್ಠ (ಉಪಾಧ್ಯಕ್ಷ) ಸ್ಥಾನವನ್ನು ವಹಿಸಿಕೊಂಡರು. ಆಗ ನಾನು ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಭ್ಯಾಸ ನಿಯಾಮಕ ಮಂಡಲಗಳ ಸದಸ್ಯನಾದೆ. ಆ ಸಂದರ್ಭದಲ್ಲಿ ನಾನು ಆಗಾಗ ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು. ಬಿ. ಎಂ. ಶ್ರೀ ಅವರೊಂದಿಗೆ ಈ ಮೊದಲೇ ನನಗೆ ಸಲಿಗೆಯ ಸಂಪರ್ಕವುಂಟಾಗಿತ್ತು. ಅವರ ಮೂಲಕ ಬೆಂಗಳೂರಿನ ಹಿರಿಯ ಸಾಹಿತಿಗಳ ಸಂಪರ್ಕ ಸುಲಭವೂ ಆಯಿತು. ಅಂತಹ ಒಂದು ಸಂದರ್ಭದಲ್ಲಿ ನಾನು ಡಿ.ವಿ.ಜಿ. ಅವರ ಮನೆಗೆ ಹೋಗಿ ಅವರನ್ನು ಕಂಡೆ.

ನಾನು ಯೋಜಿಸಿದ್ದ "ಕನ್ನಡ ಗದ್ಯಮಾಲೆ"ಗಾಗಿ ಡಿ.ವಿ.ಜಿ. ಅವರ ಒಂದು ಲೇಖನವನ್ನು ಆಯ್ದುಕೊಂಡಿದ್ದೆ. ಅವರು ಶಕ್ತಿಪೂರ್ಣ ಗದ್ಯದಲ್ಲಿ ಪ್ರಗಲ್ಭ ವಿಚಾರಗಳನ್ನು ಸಮರ್ಪಕವಾಗಿ ನಿರೂಪಿಸಬಲ್ಲ ಲೇಖಕರೆಂಬುದನ್ನು ನಾನು ಕಂಡುಕೊಂಡಿದ್ದೆ. ಅವರ 'ಜೀವನ ಸೌಂದರ್ಯ' ಮತ್ತು ಸಾಹಿತ್ಯ ಎಂಬ ಕೃತಿಯನ್ನು ಕನ್ನಡ ವಿದ್ಯಾರ್ಥಿಗಳಿಗೆ ಮತ್ತು ಗದ್ಯ ಲೇಖಕರಿಗೆ ನಾನು ಶಿಫಾರಸು ಮಾಡುತ್ತಿದ್ದೆ. ಈ ಹಿನ್ನೆಲೆಯಲ್ಲಿ ನಾನು ಅವರೊಂದಿಗೆ ಸಂಭಾಷಣೆಗೆ ತೊಡಗಿದೆ. ಅವರು ನನ್ನನ್ನು ಸದ್ಭಾವನೆಯಿಂದಲೇ ಕಂಡು ಸರಸ ಸಲ್ಲಾಪ ನಡೆಸಿದರು. ವಿಚಾರ ಪ್ರಗಲ್ಭತೆ. ತರ್ಕಬುದ್ಧಿಗಳು ಅವರಲ್ಲಿ ಹೆಚ್ಚಾಗಿದ್ದವು. ಭಾವನಾತ್ಮಕತೆ ಅವರಿಗೆ ಅಷ್ಟೊಂದು ಒಪ್ಪಿಗೆಯಾಗುತ್ತಿರಲಿಲ್ಲ. ಬಿ.ಎಂ.ಶ್ರೀ ಅವರೊಂದಿಗೆ ನನಗಿದ್ದ ಒಡನಾಟವನ್ನು ಅವರು ಗಮನಿಸಿದ್ದರು. ಅವರು ನನ್ನನ್ನು ಕೇಳಿದರು: "ಕನ್ನಡ ಕಾರ್ಯಕರ್ತರಾದ ನೀವು (ಇದರಲ್ಲಿ ಬಿ.ಎಂ.ಶ್ರೀ ಹೆಸರೂ ಸೇರ್ಪಡೆಯಾದಂತೆ ನನಗೆ ಅನಿಸಿತು) ಕನ್ನಡ ನುಡಿ ನಾಡುಗಳ ಬಗೆಗೆ ಭಾಷಣ ಮಾಡುವಾಗ, ಲೇಖನ ಬರೆಯುವಾಗ 'ಕನ್ನಡಮ್ಮ' ಎಂಬ ಕಲ್ಪನೆಯನ್ನು ಏಕೆ ಪ್ರಚುರಪಡಿಸುತ್ತೀರಿ? ಜರ್ಮನ್‌ದಂತಹ ದೇಶಗಳು 'ಪಿತೃದೇಶ' ಎಂಬ ಕಲ್ಪನೆಯೊಂದಿಗೆ ವೀರ ಭಾವವನ್ನು ಪ್ರಚೋದಿಸುವಂತೆ ನೀವೇಕೆ ಮಾಡಬಾರದು?"

—ಹೀಗೆ ಕೇಳಿದ ಡಿ.ವಿ.ಜಿ. ನನ್ನೊಂದಿಗೆ ಸವಿಯಾಗಿಯೇ ವರ್ತಿಸಿದರು. ಬೇರೆ ಕೆಲವು ಸನ್ನಿವೇಶಗಳಲ್ಲಿ ನಾವು ಸೇರಿದ್ದೆವು. ಆದರೆ ಅವರೊಂದಿಗೆ ಸಲಿಗೆ ಬೆಳೆಸುವ ಸಂದರ್ಭಗಳು ನನಗೆ ಒದಗಿಬರಲಿಲ್ಲ. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೊಂಡ ಹೊಸತರಲ್ಲಿ ಅವರು ಧಾರವಾಡಕ್ಕೆ ಬಂದಿದ್ದರು. ಆಗ ನಮ್ಮಿಬ್ಬರ ಸಮಾಗಮ ಸೌಹಾರ್ದಪೂರ್ಣವಾಗಿತ್ತು.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಡಿ.ವಿ.ಜಿ. ನಿಲುವು ನನಗೆ ಮೆಚ್ಚುಗೆಯಾಗಲಿಲ್ಲ. "ಹಳೆಯ ಮೈಸೂರು ಪ್ರದೇಶ ಪ್ರತ್ಯೇಕವಾಗಿ ಉಳಿಯಬೇಕು" ಎಂಬುದು ರಾಜಕೀಯ ಪ್ರೇರಿತವಾದುದು. ಸಾಹಿತಿಗಳು ಇದನ್ನು ಪ್ರತಿಪಾದಿಸು

ವುದು ನನಗೆ ಸಮಂಜಸವೆನಿಸಲಿಲ್ಲ. ಆದರೆ ಡಿ.ವಿ.ಜಿ.ಯವರ ವಿಶಾಲ ಆಸಕ್ತ ವಲಯ, ವಿಚಾರ ವೈಭವ, ಸಾಹಿತ್ಯ ಕೃತಿಗಳ ಬಗೆಗೆ ನನಗೆ ಎಂದಿನಿಂದಲೂ ಗೌರವ ಭಾವ. ಜೀವನ ಚರಿತ್ರೆಗಳಲ್ಲಿ ಚರಿತ್ರನಾಯಕರ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಅವರು ಸ್ಫುಟವಾಗಿ ನಿರೂಪಿಸಿದ್ದಾರೆ. "ಸಂಸ್ಕೃತಿ" ಪದದ ಅಮೂರ್ತ ಕಲ್ಪನೆಯನ್ನು ಮೂರ್ತಗೊಳಿಸಿದ, ಸುಲಭಗೊಳಿಸಿದ ಅವರ ಕೃತಿಯನ್ನು ಮೆಚ್ಚಿಕೊಂಡಿದ್ದ ನಾನು ಆ ದಿಸೆಯಲ್ಲಿ ಒಂದು ಚಿಕ್ಕ ಕೃತಿಯನ್ನು ರಚಿಸಿದುದೂ ಉಂಟು. ಮಾನವೀಯ ಬಾಳಿಗೆ ಒಳ್ಳೆಯ ಮಾರ್ಗದರ್ಶನ ಒದಗಿಸಬಲ್ಲ ಸಂದರ್ಭ ಗ್ರಂಥವೆಂದು ನಾನು ಈಗಲೂ 'ಮಂಕುತಿಮ್ಮನ ಕಗ್ಗ' ಗ್ರಂಥವನ್ನು ಬಳಸುತ್ತೇನೆ.

ಡಿ.ವಿ.ಜಿ. ಆಸಕ್ತಿಗಳ ವಲಯ ಮತ್ತು ಗಂಭೀರ ಸ್ವಭಾವಗಳಿಂದಾಗಿ ಮತ್ತು ಉತ್ತರ ಕರ್ನಾಟಕದಲ್ಲಿ ಅವರ ಸಂಚಾರ ಅಷ್ಟೊಂದು ಇರಲಿಲ್ಲವಾಗಿ ಅಂದಿನ ಇತರ ಹಿರಿಯ ಸಾಹಿತಿಗಳೊಂದಿಗೆ ನಾನು ಪಡೆದ ನಿಕಟ ಸಂಬಂಧ ಅವರೊಂದಿಗೆ ಸಾಧ್ಯವಾಗಲಿಲ್ಲ. ಅವರು ನಮ್ಮ ಆಧುನಿಕ ಸಾಹಿತ್ಯದ ದಿಗ್ಗಜಗಳಲ್ಲಿ ಒಬ್ಬರು ಎಂಬುದನ್ನು ಮಾತ್ರ ನಾನು ಗುರುತಿಸಿದ್ದೆ.

ಡಿ.ವಿ.ಜಿ. ಶತಮಾನೋತ್ಸವದ ಶುಭ ಸಂದರ್ಭದಲ್ಲಿ ಅವರನ್ನು ಕುರಿತು ನನ್ನ ನೆನಪಿನ ಸುರಳಿಯನ್ನು ಬಿಚ್ಚುವಲ್ಲಿ ನನಗೆ ಸಂತಸವಿದೆ.

—ಸ. ಸ. ಮಾಳವಾಡ

ನಾನು ಕಂಡಿದ್ದ ಡಿ.ವಿ.ಜಿ.

ನಾನು ಡಿ.ವಿ.ಜಿ.ಯವರನ್ನು ಮುಖತಃ ಕಾಣುವುದಕ್ಕಿಂತ ಎಷ್ಟೋ ವರ್ಷ ಮೊದಲು ಸುಮಾರು 1930ರ ಸುಮಾರಿಗೆ ಅವರದೊಂದು ಕವನ "ಶಿವನ ಸಮುದ್ರ" ಎಂಬದನ್ನು ನೋಡಿ ಹೊಸ ಕಾಲದ ಕನ್ನಡ ಕವಿತೆಗೆ ಮಾರುಹೋಗಿದ್ದೆ. ಅಂದಿನ ವರೆಗೆ ನಾನು ಪಠ್ಯಪುಸ್ತಕಗಳಲ್ಲಿ ಓದಿದ ಕವಿತೆಗಳೆಲ್ಲ ಹಳಗನ್ನಡ ನಡುಗನ್ನಡದ ಕವಿತೆಗಳು. ವೃತ್ತ ಕಂದ ಪದ್ಯಗಳ ರೂಪದಲ್ಲಿ, ಷಟ್ಪದಿಯ ರೂಪದಲ್ಲಿ ಇರುತ್ತಿದ್ದವು. ಈ ರಗಳೆ ಎಂಬ ಪ್ರಕಾರವೂ ಹಿಂದಿನ ಕಾಲದ್ದೇ ಎಂದು ತಿಳಿಯುವುದಕ್ಕೆ ಮುಂದೆ ಅನೇಕ ವರ್ಷಗಳೇ ಕಳೆದವು. ಅದಾವುದೂ ತಿಳಿಯದೆಯೇ ಇದ್ದಾಗಲೂ ಗುಂಡಪ್ಪನವರ ಕವಿತೆಯ ಸಾಲುಗಳು :

"ನುಗ್ಗಿ ಬೀಳುತೇಳುತುಮ್
ನೆಗೆದು ಪಾರುತೋಡುತುಮ್
ಭುವನ ರಚನೆ ಎನಿತು ಕುತುಕಮೆನುತ
ಜನಕೆ ಸಾರುತುಮ್
ಭುವನ ಜನನಿ ಎನಿತು ಚತುರಳೆನುತ
ಕಣ್ಗೆ ತೋರುತುಮ್
ಪುರುಷ ಬಲವ ಬೆಳಗಿರೆನುತ......
ಜಡರ ಪಳಿದು ಮೊಳಗುತುಂ
ಪರಿಪಳೀ ಕವೇರತನಯೆ
ಧೀರ ರಮಣಿ ಎನಿಸುತುಮ್

ಕನ್ನಡ ನಾಡಿನ ಕುತುಕಂ
ಕನ್ನಡಿಗರ ಸಾಹಸಕ್ಕೆ ಕನ್ನಡಿ ಮೇಣ್
ಈ ಕನ್ನಡಿಗರ ಭಾಗ್ಯದ ನಿಧಿ
ಉನ್ನತಿಯಿಂ ಪಡೆದು ಬಾಳ್ಗೆ
ಶಿವನ ಸಮುದ್ರಮ್"

—ಕವಿತಾ ಪ್ರಪಂಚವನ್ನು ನಾನು ಹೊಸ ದೃಷ್ಟಿಯಿಂದ ಕಾಣುವಂತೆ ಮಾಡಿದವು. ಸಾಲುಗಳನ್ನು ಉದಾಹರಿಸುವಲ್ಲಿ ಒಂದೊಂದು ಶಬ್ದಗಳು ವ್ಯತ್ಯಸ್ತವಾಗಿರ

ಬಹುದೆನಿಸಿದರೂ ಪುಸ್ತಕ ನೋಡಿ ತಿದ್ದುವ ಪ್ರಯತ್ನ ಮಾಡಿಲ್ಲ. ಉದ್ದೇಶವೇನೆಂದ: ಕಲ್ಲುಗಳ ಮೇಲೆ ಹರಿಯುವ ನೀರಿನ ಶಬ್ದವನ್ನು ಅನುಕರಿಸುವ ಆ ಪದ್ಯಗಳ ಗತಿ ಎಷ್ಟು ಸುಲಭವಾಗಿ ಐವತ್ತೇಳು ವರ್ಷ ಕಳೆದರೂ ಕಿವಿಗಳಲ್ಲಿ ಮೊರೆಯುತ್ತಲೇ ಇರುತ್ತದೆಂದು ತೋರಿಸುವುದಕ್ಕೆ. ಇದನ್ನು ನೋಡಿದರೆ ಶಬ್ದ ಅನಾದಿ, ಶ್ರುತಿ ಅನಾದಿ, ಸದಾಸಿದ್ಧ, ಎಂದು ನಮ್ಮ ಪೂರ್ವಿಕರು ಏಕೆ ನಂಬಿದರೆನ್ನುವದು ತಿಳಿಯುತ್ತದೆ.

ಹೀಗೆಯೇ ನನ್ನ ನೆನಪಿನಲ್ಲಿ ನಿಂತ ಅವರ ಇನ್ನೊಂದು ಕವನ "ವನಸುಮ" ಎಂಬ ಪ್ರಾರ್ಥನೆ.

ಅದು ಹಳೆಯ ಮಾತು. ತರುವಾಯದಲ್ಲಿ ಅವರು ಪ್ರಕಟಿಸಿದ ಅಂತಃಪುರ ಗೀತಗಳಂತಹ ರಸಸ್ಯಂದಿಯಾದ ಗೀತೆಗಳೂ ತಿಮ್ಮನ ಮತ್ತು ಮುನಿಯನ ಕಗ್ಗಗಳಂತಹ ಮಂತ್ರ ಸದೃಶವಾದ ವಚನಗಳೂ ಅನೇಕವಿರುವಾಗ, ಈ ಎರಡೇ ಕವಿತೆಗಳು ನನ್ನ ತಲೆಗೆ ಏಕೆ ಅಂಟಿಕೊಂಡಿವೆ ಎಂದು ನೆನೆದರೆ ಅವೆರಡರ ನಡುವೆ ಗುಂಡಪ್ಪನವರ ವ್ಯಕ್ತಿತ್ವದ ವೈಶಿಷ್ಟ್ಯವೊಂದು ನನಗೆ ಕಂಡಿರುವದೇ ಕಾರಣವಿರಬಹುದು. ಆ ವೈಶಿಷ್ಟ್ಯವನ್ನು ಹೇಳುವುದಕ್ಕೆ ಎಲಿಯಟ್ ಕವಿಯ ಒಂದು ಮಾತು "ನಿರಂತರ ಗತಿಶೀಲವಾದ ವಿಶ್ವದ ನಿಷ್ಪಂದವಾದ ಕೇಂದ್ರ" ಎಂಬದು. ಆ ಮಾತು "ಗುಂಡಪ್ಪ" ಎಂಬ ನಾಮಧೇಯದಲ್ಲಿ ಸಾರ್ಥಕವಾಗಿ ನನಗೆ ಕಂಡಿದೆ.

ಅದಕ್ಕೆ ಕಾರಣ ಗುಂಡಪ್ಪನವರನ್ನು ಕಾಣುವುದಕ್ಕೆ ಶ್ರೀ ಎ.ಸೀ. ಅವರೊಡನೆ ನಾನೊಮ್ಮೆ ಹೋಗಿದ್ದ ಸಂದರ್ಭ. ಅಂದು ಅವರದೊಂದು ಹುಟ್ಟುಹಬ್ಬವೊ ಇನ್ನಾವುದೋ ವಿಶೇಷದ ದಿನವಾಗಿತ್ತು. ಎ.ಸೀ. ಯವರು ತಮ್ಮ ವಾಡಿಕೆಯಂತೆ ಫಲಪುಷ್ಪ ವಸ್ತ್ರಗಳನ್ನು ಸಮರ್ಪಿಸಿಯಾದ ಮೇಲೆ ಗತಕಾಲದ ಸ್ಮೃತಿ ಚಿತ್ರಗಳ ಸುರುಳಿ ಬಿಚ್ಚುವುದಕ್ಕೆ ಆರಂಭವಾಯಿತು. ಅಂದಿನ ವಿಷಯ ಗುಂಡಪ್ಪನವರು ತಮ್ಮ ಗುರುಗಳೆಂದು ಸ್ಮರಿಸುತ್ತಿದ್ದ ಪಿ. ಎಸ್. ಶಿವಸ್ವಾಮಿ ಅಯ್ಯರ್ ಅವರ ಕೊನೆಯ ದಿನಗಳು. ಅಯ್ಯರ್ ಅವರು ಕೊನೆಯವರೆಗೂ ಒರಗಿದಲ್ಲಿಯೇ ಸಂಪೂರ್ಣ ಎಚ್ಚರವಾಗಿದ್ದು ಶಾಂತ ಚಿತ್ತರಾಗಿದ್ದು ತಮ್ಮ ಸುತ್ತಲೂ ಕುಳಿತವರೊಡನೆ ಮಾತಾಡುತ್ತ ತಮ್ಮ ಪ್ರಿಯ ಪಂಡಿತರು ರಾಮಚಂದ್ರ ಶಾಸ್ತ್ರಿಗಳನ್ನು ಹತ್ತಿರ ಕರೆದು ಭಾಗವತದ ದಶಮಸ್ಕಂಧವನ್ನು ತಾ, ಕೃಷ್ಣನಿಗೆ ರುಕ್ಮಿಣಿ ಕಳಿಸಿದ ಸಂದೇಶವನ್ನು ಓದು ಎಂದರು. ಓದುತ್ತಿದ್ದಂತೆಯೇ ಕಣ್ಣು ಮುಚ್ಚಿದರು—ಎನ್ನುತ್ತ ಗುಂಡಪ್ಪನವರು "ಶ್ರುತ್ವಾ ಗುಣಾನ್ ಭುವನ ಸುಂದರ ಶೃಣ್ವತಾಂತೇ" ಎಂದು ತಡೆದರು. ನಾನು "ನಿರ್ವಿಶ್ಯ ಕರ್ಣವಿವರೈರ್ಹರತೋಂಗತಾಪಂ" ಎಂದು ಮುಂದಿನ ಸಾಲು ಹೇಳಿದ್ದೇ ತಡ ಅವರು ತಮ್ಮ ಅಂತಹ ಭೀಮಕಾಯವನ್ನೆತ್ತಿಕೊಂಡು ಎದ್ದು ನನ್ನನ್ನು ಅಪ್ಪಿಕೊಂಡು "ಹೇಳು, ಹೇಳು, ಬಂದಷ್ಟು ಹೇಳುತ್ತಿರು" ಎಂದು ಗದ್ಗದಿತರಾದದ್ದನ್ನು ನೋಡಿ ನನಗೆ ಕಕ್ಕಾಬಿಕ್ಕಿಯಾಯಿತು. ಅಂತಹ ಭಾವಾವೇಶವನ್ನು ನಾನು ಜೀವಮಾನದಲ್ಲಿಯೇ ಕಂಡಿಲ್ಲ. "ಪೂದೆದಮರ್ದಪ್ಪಿದಂ ಗುಹಗಜಾಸ್ಯರ-

ನಪ್ಪುವ ತೋಳ್ಗಳಿಂದೆ ಮಾಣದೆ ನರನಂ ಮೃಡಂ ಪರಸಿದಂ ನಿಗಮಂಗಳ ಪೆತ್ತಬಾಯ್ಗಳಿಂ ಮುದಮುಲರ್ವಂತೆ ಪ್ಪೃದಡಪಿದಂ ವರವೀವ ಕರಾಗ್ರದಿಂದೆ" ಎಂದು ಮುಂತಾಗಿ ಕಿರಾತರೂಪಿ ಮಹಾದೇವನು ಅರ್ಜುನನನ್ನು ಅಪ್ಪಿದ ವರ್ಣನೆಯನ್ನು ನೆನೆದರೆ ಆ ಸನ್ನಿವೇಶಕ್ಕೆ ತುಸು ಹತ್ತಿರವಾದೀತು.

ಆಮೇಲೆ ಚರ್ಚೆ. "ನಿಮ್ಮಪ್ಪ ನಿನಗೆ ಪ್ರಹ್ಲಾದನೆಂಬ ಹೆಸರಿಟ್ಟದ್ದರಿಂದ ನಿನ್ನಲ್ಲಿ ಈ ಆಸಕ್ತಿ (ಭಾಗವತದಲ್ಲಿ) ಮೂಡಿತೋ ಅಥವಾ ಇಂತಹ ಆಸಕ್ತಿ ಮೂಡುವದೆಂದು ತಿಳಿದೇ ಆ ಹೆಸರಿಟ್ಟರೋ" ಎಂಬತ್ತ ತಿರುಗಿತು. ಶಬ್ದಕ್ಕೂ ಅದು ನಿರ್ದೇಶಿಸುವ ವಸ್ತುವಿಗೂ ಇರುವ ಸಂಬಂಧ ಸಂಕೇತ ಮಾತ್ರವೋ ಅದಕ್ಕಿಂತ ಆಳವಾದದ್ದೋ. "ಯಾವದ್ ಬ್ರಹ್ಮ ವಿಷ್ಠಿತಂ ತಾವತೀ ವಾಕ್" ಇತ್ಯಾದಿಯಾಗಿ ಬೆಳೆಯಿತು. ಗುಂಡಪ್ಪನವರ ಅಗಾಧವಾದ ವಿದ್ವತ್ತು ಯಾವ ಮಟ್ಟಿಗೆ ಅವರಿಗೆ ವಾಚೋವಿಧೇಯ ವಾಗಿತ್ತೆಂಬುದನ್ನು ಅವರೊಡನೆ ಮುಖಾಮುಖಿಯಾಗಿ ಮಾತಾಡದೇ ಇದ್ದವರಿಗೆ ತಿಳಿಯುವಂತೆ ಹೇಳುವುದು ಸಾಧ್ಯವೇ ಇಲ್ಲ. ಒಂದು ಸಾಮಾನ್ಯ ಜೀವಮಾನಕ್ಕೆ ನಿಲುಕದಷ್ಟು ವಿದ್ವತ್ತು ಅವರು ಬರೆದು ಪ್ರಕಟಿಸಿದ ಗ್ರಂಥಗಳಲ್ಲೇ ಅಡಕವಾಗಿದೆ. ಅದು ಅವರ ಒಟ್ಟು ಸಂಪತ್ತಿನಲ್ಲಿ ಶತಾಂಶವೂ ಅಲ್ಲ, ಸಹಸ್ರಾಂಶವೂ ಅಲ್ಲ.

ಅವರ ಪಾಂಡಿತ್ಯದಷ್ಟೇ ವಿಶಾಲವಾದದ್ದು ಅವರ ಲೋಕಚರಿತ ಪರಿಜ್ಞಾನ : ಲೋಕದ ಆಗುಹೋಗುಗಳಲ್ಲಿ ಆಸಕ್ತಿ. ಅವರು ತುಂಬಾ ಮಾತಿನ ರಂಗಿನಲ್ಲಿದ್ದಾಗ ಅವರನ್ನು ತಿಳಿಯದೇ ಇದ್ದವರು ಕೇಳಿದರೆ "ಇದೇನು ಇವರಿಗೆ ಲಾಘವ ಗೌರವಗಳ ತಾರತಮ್ಯವೇ ಇಲ್ಲವೆ?" ಎನ್ನಬಹುದಿತ್ತು. ತೆಲುಗು ಮಾತಿನಲ್ಲಿ ನನ್ನ ಗತಿ ಸೀಮಿತವಾಗಿದ್ದ ಕಾರಣ ಅವರ ಹಾಸ್ಯದ ಬುಗ್ಗೆ ಉಕ್ಕಿ ಪುಟಿಯುತ್ತಿದ್ದಾಗ ಅವರ ಕೆಲವು ತುಂತುರು ಹನಿಗಳಿಂದಲೇ ನಾನು ತೃಪ್ತನಾಗಬೇಕಾಗುತ್ತಿತ್ತು. ಪೂರ್ತಿಯಾಗಿ ಅವರಲ್ಲಿ ಮುಳುಗಿ ಏಳಬಲ್ಲವರು ಧನ್ಯರೆಂದು ಹೇಳಬೇಕಾಗಿಲ್ಲ. ನನ್ನ ಜೀವಮಾನ ದಲ್ಲಿ ಅವರ ಸಾಮೀಪ್ಯ ಬಹಳ ತಡವಾಗಿ ಬಂದಿತಲ್ಲ ಎಂಬುದೇ ನನ್ನ ಅತೃಪ್ತಿ. ಅಷ್ಟಾದರೂ ಬಂದಿತಲ್ಲ ಎನ್ನುವುದೇ ಧನ್ಯಭಾವ. ನಮ್ಮ ಭಕ್ತ ಕವಿಗಳೊಬ್ಬರು ಮಹಾದೇವನನ್ನು—"ವಿಷಂ ವಿಷಧರಾನ್ ದಧತ್ಪಿಬಸಿ ತೇನಚಾನಂದವಾನ್ ವಿರುದ್ಧ ಚರಿತೋಚಿತಾ ಜಗದಧೀಶ ತೇಭಿಕ್ಷುತಾ" ಎಂದು ಬಣ್ಣಿಸುತ್ತಾರೆ. ಹಾಗಿದ್ದರು ಗುಂಡಪ್ಪನವರು.

—ಪಿ.ವಿ. ಜೋಶಿ

ಒಂದು ನೆನಪು

ಡಿ. ವಿ. ಗುಂಡಪ್ಪನವರು ಯಾವ ಕಾಲೇಜಿನಲ್ಲಿಯೂ ವಿದ್ಯಾರ್ಥಿಯಾಗಲಿಲ್ಲ ; ಯಾವ ವಿಶ್ವವಿದ್ಯಾನಿಲಯದ ಪದವಿಯನ್ನೂ ಪಡೆಯಲಿಲ್ಲ. ಆದರೆ ಅವರು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಸೂತ್ರಗಳನ್ನು ಹಿಡಿದಿದ್ದ ಸಮಿತಿಯ ಸದಸ್ಯರಾಗಿದ್ದರು. ಮೈಸೂರು ಶಾಸನ ವಿಧಾಯಕ ಸಭೆಯ (Legislative Council) ಸದಸ್ಯರಾಗಿದ್ದುಕೊಂಡು ರಾಜ್ಯದ ಆಡಳಿತಗಾರರಿಗೆ ಸೂಕ್ತ ಸಲಹೆ ನೀಡಬಲ್ಲವ ರಾಗಿದ್ದರು. ಶ್ರೀ ಗುಂಡಪ್ಪನವರು ಪತ್ರಿಕೋದ್ಯಮಿಯಾಗಿ 'ಅರ್ಥಸಾಧಕ ಪತ್ರಿಕೆ' ಮೊದಲಾದ ಕೆಲವು ನಿಯತಕಾಲಿಕಗಳ ಸಂಪಾದಕರಾಗಿ ದುಡಿದು ಸಾರ್ವಜನಿಕರಿಗೆ ಆರ್ಥಿಕ. ರಾಜಕೀಯ ಮತ್ತು ಸಾಮಾಜಿಕ ವಿಚಾರಗಳಲ್ಲಿ ತಿಳಿವಳಿಕೆ ನೀಡಬಲ್ಲವರಾದರು. ಅವರು ಗೋಖಲೆ ಸಾರ್ವಜನಿಕ ಸಂಸ್ಥೆಯ ಸಂಸ್ಥಾಪಕರಾಗಿ ಅದರಲ್ಲಿ ಅನೇಕ ವಿದ್ವಾಂಸರಿಂದ ಜ್ಞಾನ ಪ್ರಚಾರ ಮಾಡಿಸಿದರು !

ಹೀಗೆ ಬಹುಮುಖವಾದ ಆಸಕ್ತಿ, ಕಾರ್ಯಕ್ಷಮತೆಗಳಿದ್ದ ಗುಂಡಪ್ಪನವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದಲ್ಲಿ ಆಸಕ್ತಿ ವಹಿಸಿದುದು ಕನ್ನಡದ ಪುಣ್ಯ ವೆಂದೇ ಹೇಳಬೇಕು. ಬೆಂಗಳೂರು ಶಂಕರಪುರದ ಒಂದು ಮನೆಯಲ್ಲಿ ಸಣ್ಣ ಕಾರ್ಯಾಲಯವನ್ನಿಟ್ಟುಕೊಂಡು ಗ್ರಂಥಶೋಧನ. ಪ್ರಕಾಶನಗಳಲ್ಲಿ ಮಗ್ನವಾಗಿ ಎಲೆ ಮರೆಯ ಕಾಯಿಯಂತೆ ಜನರ ಕಣ್ಣಿಗೆ ಅಗೋಚರವಾಗಿತ್ತೆಂದೇ ತಿಳಿಯಬಹುದಾಗಿದ್ದ ಸಂಸ್ಥೆಯನ್ನು ಬಯಲಿಗೆಳೆದು ಅದರ ಕಾರ್ಯ ಚಟುವಟಿಕೆಗಳಲ್ಲಿ ಸಾರ್ವಜನಿಕರಿಗೆ ಆಸಕ್ತಿ ಹುಟ್ಟಿಸಿದವರು ಡಿ. ವಿ. ಗುಂಡಪ್ಪನವರು. ಅವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಪರಿಷತ್ತಿನಲ್ಲಿ ವಸಂತ ಸಾಹಿತ್ಯೋತ್ಸವ ಆರಂಭವಾಯಿತು. ಶಾಲಾ ಉಪಾಧ್ಯಾಯರಿಗೆ ಆಧುನಿಕ ವಿಚಾರೋಪನ್ಯಾಸ ಮಾಲೆಯನ್ನು ಆರಂಭಿಸಿದರು. ಅದಲ್ಲದೆ ಕಾವ್ಯ ಪ್ರಚಾರಕ್ಕೆ ಅಗತ್ಯವಾದ ಗಮಕಕಲೆಯ ಪ್ರಚಾರ ಮಾಡಲು ಉದ್ದೇಶಿಸಿ ಶ್ರೀ ಬಿಂದೂರಾಯರಿಂದ ಒಂದು ಗಮಕ ತರಗತಿಯನ್ನೇ ನಡೆಸಿದರು. ಈ ಹಲವು ಕಾರ್ಯಕ್ರಮಗಳನ್ನು ಪರಿಷತ್ತಿನ ಕಾರ್ಯಕಾರಿ ಸಂಸ್ಥೆಯ ಮುಂದಿಟ್ಟು ಅದರ ಒಪ್ಪಿಗೆಯಿಂದಲೇ ನಡೆಸಿದ ಗುಂಡಪ್ಪನವರು ಪ್ರಜಾಪ್ರಭುತ್ವದಲ್ಲಿ ಅಚಲವಾದ ನಂಬಿಕೆಯುಳ್ಳವರಾಗಿದ್ದರು. ಆಡಳಿತ ನಡೆಸುವವರಿಗೇ ಅಲ್ಲದೆ ಪ್ರತಿಪಕ್ಷ ಅಥವಾ

ವಿರೋಧ ಪಕ್ಷ ಎಂಬುದೊಂದಿದ್ದರೆ ಆ ಪಕ್ಷದವರ ಸಮ್ಮತಿಯನ್ನು ಪಡೆಯಬೇಕೆಂಬುದು ಅವರ ಕಾರ್ಯನೀತಿ. ಅಂದು ಸಾಹಿತ್ಯ ಪರಿಷತ್ತಿನಲ್ಲಿ ಪಕ್ಷರಾಜಕೀಯವಿದ್ದಂತೆ ಕಾಣೆ. ಅಲ್ಲದೆ ಗುಂಡಪ್ಪನವರು ಕೈಕೊಂಡ ಸಾಂಸ್ಕೃತಿಕ ಕಾರ್ಯಗಳಿಗೆ ವಿರೋಧವೆಲ್ಲಿಂದ ಬರಬೇಕು ? ಅವೆಲ್ಲ ಸುಸೂತ್ರವಾಗಿ ಸರ್ವರ ಅಭಿಮತದಿಂದಲೇ ನಡೆದುವು.

ಆದರೆ ಶ್ರೀ ಗುಂಡಪ್ಪನವರು ಪ್ರಜಾಪ್ರಭುತ್ವ ತತ್ತ್ವದ ಪರೀಕ್ಷೆ ನಡೆದ ಒಂದು ಪ್ರಸಂಗವನ್ನು ನೆನಸಿಕೊಳ್ಳುತ್ತಿದ್ದೇನೆ. ರಾಯಚೂರಿನಲ್ಲಿ ನಡೆದ ಸಾಹಿತ್ಯ ಪರಿಷತ್ ಸಮ್ಮೇಳನ. 1935ನೆಯ ಇಸವಿಯೆಂದು ನನ್ನ ನೆನಪು. ಇಂದಿಗೆ ಐವತ್ತು ವರ್ಷಗಳೇ ದಾಟಿಹೋಗಿವೆ.

ಆ ಸಲ ಭಾರತದ ರೈಲು ಕಂಪೆನಿಗಳೆಲ್ಲ (Travel as you please) ಮನಬಂದಂತೆ ಪಯಣಿಸುವ ಒಂದು ಟಿಕೆಟ್ ಜಾರಿಗೆ ತಂದರು ! ಕೇವಲ ಹತ್ತು ರೂಪಾಯಿಗಳನ್ನು ಕೊಟ್ಟರೆ ಇಪ್ಪತ್ತೇಳು ದಿನಗಳ ಕಾಲ ಯಾವ ರೈಲಿನಲ್ಲಾದರೂ ಹತ್ತಿ ಎಲ್ಲಾದರೂ ಇಳಿಯಬಹುದಾಗಿತ್ತು. ಮದರಾಸಿನಿಂದ ರಾಯಚೂರು–ಬೆಂಗಳೂರು–ತಿರುಪತಿ– ಈ ಪಟ್ಟಣಗಳ ನಡುವೆ ಸ್ವೇಚ್ಛೆಯಾಗಿ ಪಯಣಿಸುವ ಹಕ್ಕು ಆ ಟಿಕೆಟ್ಟುದಾರರಿಗೆ ಬಂದಿತ್ತು. ಈ ಸೌಲಭ್ಯದಿಂದ ರಾಯಚೂರು ಸಮ್ಮೇಳನಕ್ಕೆ ಆ ಸಲ ಬಹು ಜನ ಬಂದರು. ಅಲ್ಲದೆ ಆ ಸಮ್ಮೇಳನದ ಅಧ್ಯಕ್ಷರು ಜನಮಾನ್ಯರಾದ ಪಂಜೆ ಮಂಗೇಶರಾಯರು ! ಆ ಸಮ್ಮೇಳನಕ್ಕೆ ಬಂದ ಕನ್ನಡಿಗರು ಧನ್ಯರು ! ಆದರೆ ಈಗ ನಮಗೆ ಮುಖ್ಯವಾದ ಸಂಗತಿ ಆ ಸಮ್ಮೇಳನದ ದಿನ ಬೆಳಿಗ್ಗೆ ನಡೆದ 'ಕಾರ್ಯಕಾರೀ ಮಂಡಲಿ'ಯ ಸಭೆ. ಅದನ್ನು ಪರಿಷದುಪಾಧ್ಯಕ್ಷರಾದ ಡಿ.ವಿ. ಗುಂಡಪ್ಪನವರು ನಡೆಸಿದ ವೈಖರಿ.

ಅಂದು ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಚೇರಿ ಬೆಂಗಳೂರಿನಲ್ಲಿದ್ದದ್ದು ಅನೇಕ ಉತ್ತರ ಕರ್ನಾಟಕದ ಕನ್ನಡ ಧುರೀಣರಿಗೆ ಪ್ರಿಯವಾಗಿರಲಿಲ್ಲ. ಬೆಂಗಳೂರು ಒಂದು ಮೂಲೆ ; ದೇಶೀಯ ಸಂಸ್ಥಾನದ ಒಂದು ಪಟ್ಟಣ. ಬೊಂಬಾಯಿ, ಮದರಾಸು ಪ್ರಾಂತ್ಯಗಳ ಜನರಿಗೆ ದೂರವಾಗಿದೆ. ಆದ್ದರಿಂದ ಪರಿಷತ್ತಿನ ಒಂದು ಶಾಖಾಕಛೇರಿಯನ್ನು ಉತ್ತರ ಕರ್ನಾಟಕದಲ್ಲಿ–ಧಾರವಾಡದಲ್ಲಿ–ಸ್ಥಾಪಿಸಬೇಕೆಂಬ ಒಂದು ವಾದವನ್ನು ಕೆಲವರು ಸದಸ್ಯರು ಮಂಡಿಸಿ ತೀವ್ರವಾಗಿ ವಾದಿಸಿದರು. ಬೆಂಗಳೂರಿನವರೇ ಆದ ಗುಂಡಪ್ಪನವರಿಗೆ ಇದು ಇಷ್ಟವಿರಲಿಲ್ಲ. ಉತ್ತರ ಕರ್ನಾಟಕದ ಸದಸ್ಯ ಸಂಪತ್ತು ಒಂದು ಶಾಖಾಕಚೇರಿಯನ್ನು ನಡೆಸಲು ಸಾಲದೆಂದು ಅವರ ಅಭಿಪ್ರಾಯವಾಗಿತ್ತು. ಆದರೆ ಅವರು ತಮ್ಮ ನಿಶ್ಚಯವನ್ನು ಬೇರೆಯವರ ಮೇಲೆ ಹೇರಲು ಇಷ್ಟಪಡಲಿಲ್ಲ ! ಬಹುಜನಮತ ಪ್ರಧಾನವಷ್ಟೆ ! ಅಂದು ಸಭೆಯಲ್ಲಿ ಉಳಿದ ಎಲ್ಲ ವಿಚಾರಗಳಿಗಿಂತ ಈ ಶಾಖೆಯ ಚರ್ಚೆಯೇ ತೀವ್ರವಾಗಿ. ಸಾಕಷ್ಟು ಶಾಖವನ್ನುಂಟುಮಾಡಿತು. ಆದರೆ ಇದಾವುದರಿಂದ ವಿಚಲಿತಚಿತ್ತರಾಗದೆ. ಸಹನೆ ಕಳೆದುಕೊಳ್ಳದೆ. ಇದಿರು

ಪಕ್ಷದವರು ಮಾಡಿದ ವಾದಗಳನ್ನೆಲ್ಲ ಶಾಂತಿಯಿಂದ ಕೇಳಿದರು. ಆದರೆ ಮೈಸೂರು ಸರ್ಕಾರ ಪರಿಷತ್ತಿಗೆ ನೀಡಿದ, ನೀಡುತ್ತಿದ್ದ ನೆರವು, ಬೇರೆ ಭಾಗಗಳಲ್ಲಿ ಎಲ್ಲಿಯೂ ಲಭಿಸದೆ ಇದ್ದದ್ದು, ಆ ಪ್ರಾಂತದಲ್ಲಿ ಸಾಕಷ್ಟು ಮಂದಿ ಸದಸ್ಯರಿಲ್ಲದಿದ್ದುದು ಮೊದಲಾದ ಅನೇಕ ಸಂಗತಿಗಳು ಆ ಚರ್ಚೆಯ ಕಾಲದಲ್ಲಿ ವೇದ್ಯವಾಗಿ ಶಾಖಾ ಕಛೇರಿಯ ಸ್ಥಾಪನೆಯ ಸೂಚನೆ ತಾನಾಗಿ ಬಿದ್ದುಹೋಯಿತು ! ವಾದವಿವಾದಗಳ ಬಿಸಿ ತಗ್ಗಿತು. ಆಗ ಆ ಸಭೆಯ ಅಧ್ಯಕ್ಷರಾಗಿದ್ದ ಗುಂಡಪ್ಪನವರು ಒಂದು ವೇಳೆ ಶಾಖೆಯ ಸ್ಥಾಪನೆಯ ಸೂಚನೆ ಗೆದ್ದಿದ್ದರೆ ಇರಲಿ, ಎಂದು (ತಾವು ಮೊದಲೇ ಸಿದ್ಧಪಡಿಸಿ ಕೊಂಡಿದ್ದ ಒಂದು ನಿಯಮಾವಳಿ)ಯನ್ನು ಓದಿ ಹೇಳಿದರು. ಪ್ರಜಾರಾಜ್ಯ ತತ್ವ ದಲ್ಲಿ ನಂಬಿಕೆಯುಳ್ಳವರು ತಮ್ಮ ಮತವೇ ಗೆಲ್ಲಬೇಕೆಂದು ಹಟತೊಡಬಾರ ದೆಂಬುದನ್ನೂ. ಒಂದು ವೇಳೆ ಪ್ರತಿಪಕ್ಷದ ವಾದವೇ ಗೆದ್ದರೆ ಅದಕ್ಕೆ ಹೊಂದಿಕೊಂಡು ನಡೆಯಬೇಕಾದದ್ದು ಧರ್ಮವೆಂಬುದನ್ನೂ ತಮ್ಮ ಆಚರಣೆಯಿಂದ ಸದಸ್ಯರಿಗೆಲ್ಲ ಮಾಡಿ ತೋರಿಸಿದರು. ಪ್ರಜಾಪ್ರಭುತ್ವ ತತ್ವ (Principle of Democracy) ಬರಿಯ ಮಾತಿನ ಮಾಲೆಯಾಗಬಾರದು : ಚುನಾವಣೆಯ ಘೋಷಣೆ ಮಾತ್ರ ವಾದರೆ ಸಾಲದು. ಅದು ನಮ್ಮ ನಿಶ್ಚಿತವಾದ ನಂಬಿಕೆಯಾಗಿ ಕಾರ್ಯದಲ್ಲಿ ರೂಪು ಗೊಳ್ಳಬೇಕೆಂಬುದನ್ನು ಅಂದು ಗುಂಡಪ್ಪನವರು ಬಹಳ ಚೆನ್ನಾಗಿ ನಿದರ್ಶನ ಮಾಡಿ ಕೊಟ್ಟರು. ಪ್ರತಿಪಕ್ಷದವರೂ ಜನತೆಯ ಪ್ರತಿನಿಧಿಗಳೇ ಅಲ್ಲವೆ ? ಪ್ರತಿಪಕ್ಷವನ್ನು 'ಶತ್ರು' ಪಕ್ಷವೆಂಬಂತೆ ಭಾವಿಸಬಾರದು !

ಸಂಸ್ಥೆಯ ಧ್ಯೇಯ. ಆದರ್ಶಗಳಿಗೆ ಕುಂದು ಬರದಂತೆ, ಸಂಸ್ಥೆಯ ಸಂವಿಧಾನದ ಚೌಕಟ್ಟಿನಲ್ಲಿಯೇ ಇದ್ದು ಅಭ್ಯುದಯ ಸಾಧಕವಾಗಿ, ಬಹು ಜನಾಭಿಪ್ರಾಯದಿಂದ ಸಮರ್ಥಿತವಾದರೆ ಅಂಥ ಸೂಚನೆಯನ್ನು ಆಡಳಿತ ಸೂತ್ರಗಳನ್ನು ಹಿಡಿದಿರುವವರು ಒಪ್ಪಿ ಅನುಸರಿಸಬೇಕು. ಅದೇ ಪ್ರಜಾರಾಜ್ಯ ತಂತ್ರದ ಮೂಲ. ಅದನ್ನು ಬಲ್ಲವ ರಾದ ಗುಂಡಪ್ಪನವರು ಪ್ರತಿಪಕ್ಷದವರ ಆಕಾಂಕ್ಷೆಗೆ ಅನುಗುಣವಾಗಿ ಪರಿಷತ್ತಿನ ಒಂದು ಶಾಖೆಯನ್ನು ಸ್ಥಾಪಿಸಲು ತಕ್ಕ ಸಿದ್ಧತೆಯನ್ನೂ ಮಾಡಿಕೊಂಡಿದ್ದುದು ಶ್ಲಾಘಾರ್ಹವಾದ ವಿಚಾರ.

—ಕೆ. ವೆಂಕಟರಾಮಪ್ಪ

ಪೂಜ್ಯ ಡಿ.ವಿ.ಜಿ.

ಸ್ಪರ್ಶಶಿಲೆ ತನ್ನನ್ನು ಮುಟ್ಟಿದ ಲೋಹವನ್ನು ಚಿನ್ನವಾಗಿಸುವುದೆಂದು ಕಾವ್ಯಗಳಲ್ಲಿ ಉಕ್ತವಾಗಿದೆ. ವ್ಯವಹಾರ ಪ್ರಪಂಚದಲ್ಲಿ ಈ ರೀತಿಯ ಸ್ಪರ್ಶಶಿಲೆ ಉಂಟೋ ಇಲ್ಲವೋ ತಿಳಿಯದು. ಆದರೆ ಪೂಜ್ಯ ಡಿ.ವಿ.ಜಿ. ಅವರು ತಮ್ಮ ಸಚ್ಚಾರಿತ್ರದಿಂದ, ವಿದ್ವತ್ತಿನಿಂದ ಲೋಕಾನುಭವದಿಂದ ತಮ್ಮ ಬಳಿಗೆ ಬಂದ ವ್ಯಕ್ತಿಗಳನ್ನು ಸ್ಪರ್ಶಶಿಲೆಯಂತೆ ಉದಾತ್ತ ವ್ಯಕ್ತಿಗಳನ್ನಾಗಿ ಮಾಡಿದರು. ನನ್ನ ಜೀವಿತದಲ್ಲಿ ನಾನು ನೋಡಿದ ಮಹಾವ್ಯಕ್ತಿಗಳಲ್ಲಿ ಡಿ.ವಿ.ಜಿ. ಒಬ್ಬರೆಂದು ಹೇಳಿದರೆ ಅದೇನೂ ಅತ್ಯುಕ್ತಿಯಲ್ಲ.

ನನಗೆ ಡಿ.ವಿ.ಜಿ. ಅವರ ಮೊದಲ ಪರಿಚಯವಾದದ್ದು ಅವರ ಪುಸ್ತಕದ ಹಾಗೂ ಒಂದು ಪದ್ಯದ ಮೂಲಕ. ನಾನು ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಓದುತ್ತಿದ್ದಾಗ ಅವರ 'ದಿವಾನ್ ರಂಗಾಚಾರ್ಲು' ನಮಗೆ ಪಠ್ಯಪುಸ್ತಕವಾಗಿತ್ತು. ಅದರ ವಿಷಯ. ಬರವಣಿಗೆಯ ರೀತಿ ಈಗ ನನಗೆ ಮರೆತುಹೋಗಿದೆ. ನಮ್ಮ ತರಗತಿಯವರಿಗೆ ಆ ಪುಸ್ತಕ ಹಿಡಿಸದೇಹೋಗಿದ್ದರೆ ಅದು ಲೇಖಕರ ತಪ್ಪಲ್ಲ. ಕೆಟ್ಟದಾಗಿ ಪಾಠ ಹೇಳಿದ ಕನ್ನಡ ಪಂಡಿತರ ತಪ್ಪು. ಆ ತರಗತಿಯನ್ನು ದಾಟಿ ಬೆಂಗಳೂರು ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಬಂದಾಗ ಪ್ರತಿದಿನ ಮೊದಲ ಗಂಟೆಯಲ್ಲಿ ಪ್ರಾರ್ಥನಾ ರೂಪವಾಗಿ ಡಿ.ವಿ.ಜಿ. ಅವರ ('ವನಸುಮ' ಎನ್ನುವ) ಪದ್ಯವನ್ನು ನನ್ನ ಸ್ನೇಹಿತನಾದ ಸುಂದರರಾಯ ಎನ್ನುವ ವಿದ್ಯಾರ್ಥಿ ಹಾಡುತ್ತಿದ್ದನು. ಅದರ ಅರ್ಥವನ್ನು ಈಗ ಪರಿಭಾವಿಸಿದಾಗ ಡಿ.ವಿ.ಜಿ. ಅವರು ವನಸುಮದಂತೆ ತಮ್ಮ ವಿದ್ವತ್ತಿನ ಅನುಭವದ ಸಾರವನ್ನೆಲ್ಲಾ ನಾಡಿನಲ್ಲಿ ಹರಡಿ ಯಾವ ಆಮಿಷಕ್ಕೂ ವಶರಾಗದೆ ಧನ್ಯತೆಯ ಬಾಳನ್ನು ಬದುಕಿದರು ಎಂಬುದು ಸ್ಪಷ್ಟವಾಗುತ್ತದೆ.

ಡಿ.ವಿ.ಜಿ. ಅವರು ಮಡಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದು, ಅಧ್ಯಕ್ಷ ಭಾಷಣವಲ್ಲಿ ಸಂಸ್ಕೃತ ಭಾಷೆಯ ಮೇಲೆ ತಮ್ಮ ವಾಗ್ದಂಡವನ್ನು ಪ್ರಯೋಗಿಸಿದರೆಂದು ಪತ್ರಿಕೆಗಳಲ್ಲಿ ಆಕ್ಷೇಪಣೆಗಳು ಪ್ರಕಟವಾಗಿದ್ದವು. ಆದರೆ ಅವು ಬೇಗ ತಣ್ಣಗಾದವು. ಇದಾದಮೇಲೆ ಇವರು ಪರಿಷತ್ತಿನ ಉಪಾಧ್ಯಕ್ಷರಾಗಿ ಬಡಮುತ್ತೈದೆಯಂತೆ ಹೊರಗೆ ಬರಲು ನಾಚುತ್ತಿದ್ದ ಪರಿಷತ್ತನ್ನು ನಾಲ್ಕು ಜನರ ಕಣ್ಣಿಗೆ

ಬೀಳುವಂತೆ ಮಾಡಿದರು. ತಮ್ಮ ಅಧಿಕಾರಾವಧಿಯಲ್ಲಿ ಪ್ರತಿವರ್ಷವೂ ವಿದ್ವಾಂಸರಿಂದ ವಸಂತ ಸಾಹಿತ್ಯೋತ್ಸವವನ್ನು ಏರ್ಪಡಿಸಿದ್ದರು. ಆ ಬಳಿಕ ಕೆಲವು ವರ್ಷಗಳ ಮೇಲೆ ರಾಜಕೀಯದಿಂದ ನಿವೃತ್ತರಾದ ಮೇಲೆ ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿದರು. ತಮ್ಮ ಜೀವಿತಾವಧಿ ಪೂರ್ತಿ ಅದರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ಅನೇಕರಿಗೆ ರಾಜಕೀಯದಲ್ಲಿ ಶಿಕ್ಷಣಕೊಟ್ಟರು. ಸಮ್ಮೇಳನಾಧ್ಯಕ್ಷ ಭಾಷಣ ವಿವಾದ. ವಸಂತ ಸಾಹಿತ್ಯೋತ್ಸವದ ಏರ್ಪಾಟು ಇವು ನಾನು ವಿದ್ಯಾರ್ಥಿಯಾದಾಗ ನಡೆದ ಘಟನೆಗಳು.

ಒಂದು ಸಾರಿ ಶ್ರೀಯುತರ 'ನಿವೇದನ', 'ಸಂಸ್ಕೃತಿ' ಇವು ಮೈಸೂರು ವಿಶ್ವವಿದ್ಯಾನಿಲಯದ ತರಗತಿಗೆ ಪಠ್ಯ ಗ್ರಂಥಗಳಾಗಿದ್ದವು. ಆಗ ನಾನು ಜೀವನಾಧಾರಕ್ಕಾಗಿ ಪಠ್ಯ ಪುಸ್ತಕಗಳಾಗಿದ್ದ ಪದ್ಯ ಗ್ರಂಥಗಳಿಗೆ ಪ್ರಾಮಾಣಿಕವಾಗಿ ಟಿಪ್ಪಣಿಗಳನ್ನು ಬರೆಯಲು ತೊಡಗಿದ್ದೆ. ಪ್ರಾಮಾಣಿಕವಾದ ಟೀಕೆ ಟಿಪ್ಪಣಿಗಳನ್ನು ಬರೆಯುವುದು ತಪ್ಪಲ್ಲವೆಂದು ನನ್ನ ಗುರುಗಳಾದ ತೀ.ನಂ.ಶ್ರೀ.ಯವರು ನನಗೆ ಧೈರ್ಯ ಹೇಳಿದ್ದರು. ಈ ಧೈರ್ಯದ ಮೇಲೆ 'ನಿವೇದನ'ದ ಮೇಲೆ ಟಿಪ್ಪಣಿಯನ್ನು ಬರೆಯಬೇಕೆಂದು ಉದ್ದೇಶಿಸಿ ನಮ್ಮ ಕಾಲೇಜಿಗೆ ಬಂದಿದ್ದ ಡಿ.ವಿ.ಜಿ.ಯವರಿಗೆ ನನ್ನ ಸಂಕಲ್ಪವನ್ನು ತಿಳಿಸಿದೆ. ಆದರೆ ನನ್ನ ಕಾರ್ಯಕ್ಕೆ ಅವರಿಂದ ಒಪ್ಪಿಗೆ ಸಿಗಲಿಲ್ಲ. ನನಗೆ ಸ್ವಲ್ಪ ಆಶಾಭಂಗವಾಯಿತೆಂದೇ ಹೇಳಬೇಕು. ಆದರೆ ಆ ದಿನ ಸಂಜೆ ಅವರು ಶಾರದಾವಿಲಾಸ ಕಾನೂನು ಕಾಲೇಜಿನಲ್ಲಿ, 'ಲಿಖಿತ ಕಾನೂನು ಯಾವಾಗ ಪ್ರಯೋಗಕ್ಕೆ ಬರುತ್ತದೆ' ಎಂಬ ವಿಷಯದ ಮೇಲೆ ಹತ್ತಾರು ಉದಾಹರಣೆಗಳನ್ನು ಕೊಟ್ಟು ಇಂಗ್ಲಿಷಿನಲ್ಲಿ ಅದ್ಭುತವಾದ ಭಾಷಣವನ್ನು ಮಾಡಿದರು. ಅವರೊಡನೆ ಮಾತನಾಡಿದ್ದು, ಅವರ ವಿದ್ವತ್ಪೂರ್ಣವಾದ ಭಾಷಣವನ್ನು ನಾನು ಕೇಳಿದ್ದು ಅದೇ ಮೊದಲು.

ಡಾಕ್ಟರ್ ಎ. ಆರ್. ಕೃಷ್ಣಶಾಸ್ತ್ರಿಗಳಿಗೂ, ಡಿ.ವಿ.ಜಿ.ಯವರಿಗೂ ತುಂಬಾ ಸ್ನೇಹ; ಪರಸ್ಪರ ಗೌರವ. ಎ.ಆರ್.ಕೃ. ಆಗರ್ಭ ವಿದ್ವಾಂಸರು; ಅನಾವಿದ್ಧಂ ರತ್ನಂ —ಇದು ಡಿ.ವಿ.ಜಿ. ಅವರು ನಮ್ಮ ಗುರುಗಳಿಗೆ ಕೊಟ್ಟ ಬಿರುದು. ಒಮ್ಮೆ ನಾನೂ, ಡಾ. ಕೃಷ್ಣಮೂರ್ತಿಗಳೂ ಎ.ಆರ್.ಕೃ. ಮನೆಗೆ ಹೋದಾಗ ಅವರು ನಮ್ಮನ್ನು ಡಿ.ವಿ.ಜಿ. ಅವರ ಮನೆಗೆ ಕರೆದುಕೊಂಡು ಹೋದರು. ಆಗ ಡಿ.ವಿ.ಜಿ. ಅವರು ಅಸ್ವಸ್ಥರಾಗಿದ್ದರು; ಮೂಲವ್ಯಾಧಿಯಿಂದ ನರಳುತ್ತಿದ್ದರು. ಆದರೂ ನಮ್ಮನ್ನು ಪ್ರೀತಿ, ವಿಶ್ವಾಸಗಳಿಂದ ಮಾತನಾಡಿಸಿ ಕೃಷ್ಣಮೂರ್ತಿಗಳ ಭಾಮಹನ ಕಾವ್ಯಾಲಂಕಾರ ಭಾಷಾಂತರವನ್ನು ಪ್ರಶಂಸಿಸಿ, ಅದಕ್ಕಿಂತ ಮುಂಚೆ ಪ್ರಕಟವಾದ ಧ್ವನ್ಯಾಲೋಕದ ಅನುವಾದವನ್ನು ಹೊಗಳಿ, ಮುಂದೆಯೂ ಅಂಥ ಕೆಲಸ ಮಾಡಬೇಕೆಂದು ಅವರನ್ನು ಪ್ರೋತ್ಸಾಹಿಸಿದರು. ಇದೊಂದು ಮರೆಯಲಾಗದ, ಡಿ.ವಿ.ಜಿ. ಅವರ ನಮ್ಮ ಸಂದರ್ಶನ.

ಇಲ್ಲಿ ಒಂದೆರಡು ಸಂದರ್ಭಗಳಲ್ಲಿ ನಾನು ಡಿ.ವಿ.ಜಿ. ಅವರನ್ನು ಸಂದರ್ಶಿಸಿದ್ದನ್ನು ಉಲ್ಲೇಖಿಸಬಹುದು. 1970ರಲ್ಲಿ ಅವರಿಗೆ 80 ವರ್ಷಗಳು ತುಂಬಿದಾಗ ಬೆಂಗಳೂರಿನ

ಮತ್ತು ಇತರ ಕಡೆಯ ಅವರ ಹಿತೈಷಿಗಳು ಪುರಭವನದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ನಾನು ಅವರಿಗೆ ಪುಷ್ಪಹಾರವನ್ನು ಅರ್ಪಿಸಿದಾಗ ಆ ಜನಸಂದಣಿಯ ನಡುವೆಯೂ ಅವರು ನನ್ನ ಯೋಗಕ್ಷೇಮವನ್ನು ವಿಚಾರಿಸಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು. ಎಲ್ಲರಿಗೂ ಆಶ್ಚರ್ಯಕರವಾದ ವಿಷಯವೇನೆಂದರೆ ಅವರಿಗೆ ಅರ್ಪಿಸಿದ 80 ಸಹಸ್ರ ರೂಪಾಯಿಗಳನ್ನು ಗೋಖಲೆ ಸಾರ್ವಜನಿಕ ಸಂಸ್ಥೆಗೇ ಕೊಟ್ಟುಬಿಟ್ಟರು. ಎಷ್ಟು ಜನರಲ್ಲಿ ಈ ತ್ಯಾಗಬುದ್ಧಿ ಇರುತ್ತದೆಯೊ ನಾನರಿಯೆ !

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಪಾಲ್ಗೊಂಡಿದ್ದವರು ಅವರು. ಆದ್ದರಿಂದ ಅದರ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಅದರ ಸ್ಥಾಪನೆಯ ವಿಷಯ, ಕನ್ನಡದಲ್ಲಿ ಪಾಂಡಿತ್ಯ ಇವುಗಳನ್ನು ಕುರಿತು ಅದ್ಭುತವಾಗಿ ಮಾತನಾಡಿದರು. ಈ ಭಾಷಣ ಕೆಲವರಿಗೆ ರುಚಿಸಲಿಲ್ಲ. ಅದರ ವಿಷಯವಾಗಿ ವ್ಯಂಗ್ಯವಾಗಿ ಬರೆದವರೂ ಉಂಟು. ಆ ಭಾಷಣವಲ್ಲಿ ಕನ್ನಡದಲ್ಲಿ ಹಳೆಯ ಪಾಂಡಿತ್ಯ ನಶಿಸಿ ಹೋಗುತ್ತಿದೆ ಯೆಂದು ಹೇಳಿದರೇ ಹೊರತು ಹೊಸ ಪಾಂಡಿತ್ಯವನ್ನು ತಿರಸ್ಕರಿಸಲಿಲ್ಲ. ಈ ಅಭಿಪ್ರಾಯ ಅವರ ಸಮ್ಮೇಳನಾಧ್ಯಕ್ಷ ಭಾಷಣವಲ್ಲಿ ವ್ಯಕ್ತವಾಗಿದೆ. ಅಲ್ಲದೆ ಅವರು ಎಲ್ಲ ಪಂಡಿತರನ್ನೂ ಹೊಗಳುತ್ತಿದ್ದರೆಂದು ಅರ್ಥವಲ್ಲ. 'ಶಾಲೂ ಮಾತ್ರೇಣ ಪಂಡಿತಃ' ಆಗಬೇಡಿರೆಂದು ಪಂಡಿತರನ್ನು ಎಚ್ಚರಿಸಿದುದುಂಟು. ಕಾನಕಾನಹಳ್ಳಿ ವರದಾಚಾರ್ಯರು, ಹಾನಗಲ್ ವಿರೂಪಾಕ್ಷಶಾಸ್ತ್ರಿಗಳು ಇವರ ಪಾಂಡಿತ್ಯವನ್ನು ಹೊಗಳಿ ಇಂಥವರಲ್ಲಿದ್ದ ಪಾಂಡಿತ್ಯ ನಶಿಸಿಹೋಗುತ್ತಿದೆ ಎಂದು ಹೇಳಿದ್ದುಂಟು. ಅವರು ನೋಡಿದ ಪಂಡಿತರು ಅಂತಹವರು. ಅಂತಹವರಲ್ಲಿ ಕೆಲವರನ್ನು ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಚಿತ್ರಿಸಿದ್ದಾರೆ.

ಈ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಂತೆ ಅವರ ಒಂದೆರಡು ಖಚಿತವಾದ ಅಭಿಪ್ರಾಯಗಳನ್ನು ತಿಳಿಸ ಬಯಸುತ್ತೇನೆ. ಡಾ॥ ಡಿ. ಎಲ್. ಎನ್. ಅವರಿಂದ ಸಂಪಾದಿತವಾದ ಶಬ್ದಮಣಿದರ್ಪಣವನ್ನು ನನ್ನ ಎರಡನೆಯ ಮಗನೊಡನೆ ಕಳುಹಿಸಿದಾಗ ಗ್ರಂಥದ ಸಂಪಾದಕರನ್ನೂ ನನ್ನ ಮಗನನ್ನೂ ಬಾಯಿ ತುಂಬಾ ಹೊಗಳಿ ಪತ್ರ ಬರೆದಿದ್ದರಲ್ಲದೆ ಒಂದು ಸೂಚನೆಯನ್ನೂ ಕೊಟ್ಟಿದ್ದರು. ಆ ಸೂಚನೆ ಇದು. ಶಬ್ದಮಣಿದರ್ಪಣಕ್ಕೆ ಇರುವ ನಿಟ್ಟೂರು ನಂಜಯ್ಯನ ವ್ಯಾಖ್ಯಾನ ಅಷ್ಟೇನು ಉಪಯುಕ್ತ ಅಲ್ಲವೆಂದು. ತೀ.ನಂ.ಶ್ರೀ. ಹೇಳಿದ್ದರಿಂದ ಅದನ್ನು ಮುದ್ರಿಸದೆ ಕೈಬಿಡಲಾಗಿತ್ತು. ಇದು ಡಿ.ವಿ.ಜಿ. ಅವರಿಗೆ ಒಪ್ಪಿಗೆಯಾಗಲಿಲ್ಲ. ಹಳೆಯ ವ್ಯಾಖ್ಯಾನಗಳು ಎಷ್ಟೇ ಕಡಿಮೆ ದರ್ಜೆಯ ವ್ಯಾಖ್ಯಾನಗಳಾದರೂ ಅವುಗಳನ್ನು ಕೈಬಿಡಬಾರದೆಂದು ಅವರ ಅಭಿಪ್ರಾಯವಾಗಿತ್ತು. ಅವರ ಅಭಿಪ್ರಾಯ ದಂತೆ ಮುಂದಿನ ಮುದ್ರಣಗಳಲ್ಲಿ ಆ ವ್ಯಾಖ್ಯಾನವನ್ನು ಮುದ್ರಿಸಲಾಯಿತು.

ನನ್ನ ಪ್ರಕಟನೆಯ ಬೆಳ್ಳಿಯ ಹಬ್ಬವನ್ನು ಆಚರಿಸಿದಾಗ ಅವರು ನನಗೆ ಹೀಗೆ ಆಶೀರ್ವಾದ ಪೂರ್ವಕವಾಗಿ ಪತ್ರ ಬರೆದಿದ್ದರು "ಬಹು ಒಳ್ಳೆಯ ಗ್ರಂಥಗಳನ್ನು ಪ್ರಕಟಿಸೋಣವಾಗಿದೆ. ಒಳ್ಳೆಯ ಕಾಗದ. ಅಚ್ಚುಕಟ್ಟಾದ ಮುದ್ರಣ, ಸೊಗಸಾದ

ಅಕ್ಷರ, ತಪ್ಪಿಲ್ಲದಂತೆ ಶೋಧನವಾದದ್ದು—ಇಂಥ ಕಾವ್ಯ ಸರಸ್ವತಿದೇವಿಗೆ ಸೇವಾ ರೂಪವಾದದ್ದು—ಇದನ್ನು ಸಂತತವಾಗಿ ನಡೆಸಿದ್ದೀರಿ. ನನ್ನ ಮನಃಪೂರ್ವಕವಾದ ಅಭಿನಂದನೆಗಳನ್ನು ಸ್ವೀಕರಿಸಬೇಕು.

"ನೀವು ಸಾಹಿತ್ಯಕ್ಕೆ ಮಾಡಿರುವ ಉಪಕಾರ ಕೊಂಚದ್ದಲ್ಲ. 'ಕಾವ್ಯಪ್ರಕಾಶ'ದಂಥ ಸಂಸ್ಕೃತದ ಪ್ರಮಾಣ ಗ್ರಂಥಗಳನ್ನು ಡಾ॥ ಕೃಷ್ಣಮೂರ್ತಿ ಅವರಂಥ ಪ್ರಾಮಾಣಿಕರಾದ ವಿದ್ವಾಂಸರಿಂದ ಕನ್ನಡಕ್ಕೆ ಮಾಡಿಸಿ ಇಷ್ಟು ಅಂದವಾಗಿ ಪ್ರಕಟಿಸಿರುವುದು ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಒಂದು ಭಾಗ್ಯ."

ಪುಸ್ತಕದ ಪ್ರಕಟಣೆಯ ವಿಷಯದಲ್ಲಿ ಅವರು ತೋರಿಸಿರುವ ನಿಲುವು ಅವರ ಗ್ರಂಥಗಳಿಗೂ ಅನ್ವಯಿಸುತ್ತೆ. ಒಳ್ಳೆಯ ಅಚ್ಚುಕೂಟದಲ್ಲಿ ಪ್ರಕಟವಾಗಿರುವ ಅವರ ಗ್ರಂಥಗಳು ಡಿ.ವಿ.ಜಿ. ಅವರ ಸೌಂದರ್ಯಾಭಿರುಚಿಯನ್ನು ವ್ಯಕ್ತಪಡಿಸುತ್ತವೆ. ಅದರಲ್ಲಿಯೂ 'ಅಂತಃಪುರ ಗೀತೆ'ಯಂಥ ಪ್ರಕಟನೆಗೆ ಮಾರುಹೋಗದವರಾರು? ಚಕ್ರವರ್ತಿ ರಾಜಗೋಪಾಲಾಚಾರ್ಯರು ಅದನ್ನು **A beautiful book** ಎಂದು ಬಾಯಿತುಂಬಾ ಹೊಗಳಿದರು.

ಡಿ.ವಿ.ಜಿ. ಅವರು ಸಂಪ್ರದಾಯವಾದಿಗಳೆಂದು ಹೇಳುವುದುಂಟು. ಇದು ಅರ್ಧ ಸತ್ಯ. ಏಕೆಂದರೆ ನಾವು ಹುಟ್ಟಿಬೆಳೆದ ಪಡೆದ ಸಂಸ್ಕಾರದ ಪ್ರಭಾವ ನಮ್ಮ ಮೇಲೆ ಇದ್ದೇ ಇರುತ್ತದೆ. ಎಂದ ಮೇಲೆ ಹಳೆಯ ರೀತಿಯ ಸಂಸ್ಕಾರ ಅವರ ಮೇಲೆ ಪ್ರಭಾವವನ್ನು ಬೀರಿದೆ. ಆದರೆ ಬದುಕು ನಿರಂತರವಾಗಿ ವ್ಯತ್ಯಾಸ ಹೊಂದತಕ್ಕದ್ದು; ಬದಲಾಯಿಸತಕ್ಕದ್ದು ಎಂದು ಅವರು ಅರಿತಿದ್ದರು. ಹಳೆಯ ಸಂಪ್ರದಾಯದಲ್ಲಿ ಇರುವ ಮೌಲ್ಯಗಳನ್ನು ಕಡಿದುಕೊಳ್ಳದೆ ಅದರ ಮೇಲೆ ಹೊಸ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು.

ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು
ಹೊಸ ಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳೈಸೆ
ಜಸವು ಜನಜೀವನಕೆ—ಮಂಕುತಿಮ್ಮ.

—ಇದು ಅವರ ಗಾಢವಾದ ಅಭಿಪ್ರಾಯವಾಗಿತ್ತು. ಅವರು ಹಳೆಯ ಮೌಲ್ಯಗಳನ್ನು ತಮ್ಮ ಗ್ರಂಥಗಳಲ್ಲಿ ಎತ್ತಿಹಿಡಿದಿದ್ದರು. ಹೊಸ ವಿಚಾರ ಧಾರೆಯನ್ನು ಒದಗಿಸಿಕೊಟ್ಟಿದ್ದಾರೆ. ಆದರೆ ಆ ವಿಚಾರಗಳನ್ನು ಒಪ್ಪುವುದು ಬಿಡುವುದು ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯ.

ಡಿ.ವಿ.ಜಿ. ಅವರಲ್ಲಿ ನಾನು ಕಂಡ ಇನ್ನೊಂದು ದೊಡ್ಡ ಗುಣವೆಂದರೆ ಇತರರಲ್ಲಿ ಕಂಡ ಪ್ರತಿಭೆಗೆ ಬೆಲೆಕೊಡುತ್ತಿದ್ದುದು. ಗುಣವನ್ನು ಕಂಡಲ್ಲಿ ಅವರ ಮೆಚ್ಚಿಗೆ ಸಿದ್ಧವಾಗಿರುತ್ತಿತ್ತು. ಕುವೆಂಪು ಅವರ 'ಸ್ವಾಮಿ ವಿವೇಕಾನಂದ' ಗ್ರಂಥಕ್ಕೆ ಅವರು

ಬರೆದಿರುವ ಮುನ್ನುಡಿ, ಗೊರೂರು ಅವರ 'ನಮ್ಮೂರಿನ ರಸಿಕರು' ಪುಸ್ತಕಕ್ಕೆ ಬರೆದಿರುವ ಪ್ರಶಂಸೆ ಇವು ಮೇಲಿನ ಮಾತನ್ನು ದೃಢಪಡಿಸುತ್ತವೆ. ಒಮ್ಮೆ ದಿವಂಗತ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಆಕಾಶವಾಣಿಯಲ್ಲಿ ಒಂದು ಅಪೂರ್ವವಾದ ರಾಗವನ್ನು ಆಲಾಪನೆ ಮಾಡಿದರು. ಅದನ್ನು ಕೇಳಿದ ಡಿ.ವಿ.ಜಿ. ತಕ್ಷಣವೇ ಅವರಿಗೆ ಪ್ರಶಂಸಾತ್ಮಕವಾದ ಪತ್ರ ಒಂದನ್ನು ಬರೆದರು. ಇದನ್ನು ಶರ್ಮರೇ ಒಮ್ಮೆ ನನಗೆ ಹೇಳಿದ್ದರು. ಹೀಗೆ ಗುಣ ಕಂಡಲ್ಲಿ ಅವರ ಮೆಚ್ಚುನುಡಿ ಸಿದ್ಧವಾಗಿರುತ್ತಿತ್ತು.

ಡಿ.ವಿ.ಜಿ. ಅವರು ನನಗೆ ತಿಳಿದಂತೆ ಶ್ರೀಮಂತರೇನಲ್ಲ. ಸರ್ಕಾರದ ಉನ್ನತಾಧಿಕಾರಿಗಳ ದಿವಾನರುಗಳ ಸ್ನೇಹ ಅವರಿಗಿದ್ದರೂ ಅದನ್ನು ಅವರು ತಮ್ಮ ಸ್ವಂತ ಉತ್ಕರ್ಷಕ್ಕೆ ಉಪಯೋಗಿಸಿಕೊಳ್ಳಲಿಲ್ಲ. ಅವರ ಮನೆಗೆ ಹೋದಾಗ ನನ್ನ ಕಣ್ಣಿಗೆ ಬೀಳುತ್ತಿದ್ದುದು ಹಳೆಯ ಕಾಲದ ಮೇಜು ಕುರ್ಚಿಗಳು, ಪೀಠೋಪಕರಣಗಳು. ಆದರೆ ಅವರಿಗೆ ವಿದ್ವಾಂಸರ, ಅಧಿಕಾರಿಗಳ, ಸ್ನೇಹಿತರ ಸಂಪತ್ತು ಎಂಥಾದ್ದು ! ಅವರ ಜ್ಞಾಪಕ ಚಿತ್ರಶಾಲೆಯ ಸಂಪುಟಗಳನ್ನು ಓದಿಯೇ ಅದನ್ನು ತಿಳಿಯಬೇಕು. ಇಂಥ ಮಿತ್ರಸಂಪತ್ತನ್ನು ಪಡೆದ ಅವರು ಧನ್ಯರು.

—ಎಚ್. ಎಂ. ಶಂಕರನಾರಾಯಣರಾವ್

ಡಿ.ವಿ.ಜಿ.—ಒಂದು ಸ್ಮರಣೆ

ಪರಮಪೂಜ್ಯರಾದ ಶ್ರೀ ಡಿ. ವಿ. ಗುಂಡಪ್ಪನವರ ಮಗ ಶ್ರೀ ಬಿ.ಜಿ.ಎಲ್. ಸ್ವಾಮಿ ಅವರು 1932–33ರಲ್ಲಿ ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ 'ಸೈನ್ಸ್' ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡುತ್ತಿದ್ದರು. ಅದೇ ಕಾಲಕ್ಕೆ ಅದೇ ಕಾಲೇಜಿನಲ್ಲಿ ನಾನು 'Arts' ವಿದ್ಯಾರ್ಥಿಯಾಗಿ ಓದುತ್ತಿದ್ದೆನು. ನಮ್ಮಿಬ್ಬರಲ್ಲಿಯೂ ಇದ್ದ ಸೃಜನಶೀಲ ಸಾಹಿತ್ಯ ರಚನೆಯಲ್ಲಿನ ಆಸಕ್ತಿಯಿಂದಾಗಿ ನಾವು ಬಹುಬೇಗ ಸ್ನೇಹಿತರಾದೆವು. ಈ ಸ್ನೇಹ ದಿನ ಕಳೆದಂತೆ ಗಾಢವಾಗಿಯೂ ಬೆಳೆಯಿತು. ಒಮ್ಮೆ ನಾನು ನಮ್ಮ ಕಾಲೇಜಿನ ವಾರ್ಷಿಕ ಪತ್ರಿಕೆಗಾಗಿ 'Baber: The Woman, Wine and Song' ಎಂಬ ಇಂಗ್ಲಿಷ್ ಲೇಖನವೊಂದನ್ನು ಆಧರಿಸಿ ಬರೆದಿದ್ದ 'ಬಾಬರನ ಮಧು ಗೀತೆ' ಎಂಬ ಕನ್ನಡ ಲೇಖನವೊಂದನ್ನು ಕಳುಹಿಸಿಕೊಟ್ಟೆ. ಸಂಪಾದಕರು ಅದನ್ನು ಮೆಚ್ಚಿ ಪ್ರಕಟಿಸಿದರು. ಶ್ರೀ ಸ್ವಾಮಿ ಅವರು ಆ ಪತ್ರಿಕೆಯನ್ನು ಮನೆಗೆ ತೆಗೆದುಕೊಂಡು ಹೋಗಿ ತಮ್ಮ ತಂದೆಗೆ ತೋರಿಸಿದರು. ಶ್ರೀ ಡಿ.ವಿ.ಜಿ. ಅವರು ನನ್ನ ಲೇಖನದ ಮೇಲೆ ಕಣ್ಣಾಡಿಸಿ "ಲೇಖನ ಚೆನ್ನಾಗಿದೆ. ಇದನ್ನು ಬರೆದ ಹುಡುಗನನ್ನು ಮನೆಗೆ ಕರೆದುಕೊಂಡು ಬಾ" ಎಂದು ಮಗನಿಗೆ ಹೇಳಿದರಂತೆ. ಶ್ರೀ ಸ್ವಾಮಿ ಈ ಸಂಗತಿ ನನಗೆ ತಿಳಿಸಿದರು. ನನಗೆ ಹಿಗ್ಗೂ ಆಯಿತು, ಅಳುಕೂ ಆಯಿತು. ಶ್ರೀ ಡಿ.ವಿ.ಜಿ. ಎಂತಹ ಪ್ರತಿಷ್ಠಿತ ವ್ಯಕ್ತಿ ಎಂಬುದನ್ನು ಆ ವೇಳೆಗಾಗಲೇ ನಾನು ತಿಳಿದಿದ್ದೆ. ಇವರನ್ನು ಪ್ರತ್ಯಕ್ಷವಾಗಿ ಕಂಡು ಮಾತನಾಡುವ ಪ್ರಸಂಗ ಅಷ್ಟು ಬೇಗ ಬರುತ್ತದೆ ಎಂದು ನಾನು ಎಣಿಸಿರಲಿಲ್ಲ.

ಒಂದು ಗೊತ್ತಾದ ದಿನ ಶ್ರೀ ಸ್ವಾಮಿ ನನ್ನನ್ನು ತಮ್ಮ ಮನೆಗೆ ಕರೆದು ಕೊಂಡು ಹೋದರು. ಶ್ರೀ ಡಿ.ವಿ.ಜಿ. ಅವರು ತಮ್ಮ ಕೋಣೆಗೆ ಕರೆಯಿಸಿಕೊಂಡು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ನನ್ನನ್ನು ಪ್ರೀತಿಯಿಂದ ಮಾತನಾಡಿಸಿ ನನ್ನ ವಿದ್ಯಾರ್ಥಿ ಜೀವನದ ಕಷ್ಟ ಸುಖಗಳನ್ನು ವಿಚಾರಿಸಿಕೊಂಡರು. ನನ್ನ ಆ ಲೇಖನ ಕುರಿತು ಪ್ರಶಂಸಿಸಿ ಮಾತನಾಡಿದರು. "ಚೆನ್ನಾಗಿ ಬರೆಯುತ್ತೀರಪ್ಪ, ಮುಂದಕ್ಕೆ ಓದಿ ದೊಡ್ಡ ವ್ಯಕ್ತಿಯಾಗಿ ಬಾಳಪ್ಪ" ಎಂದೆಲ್ಲ ಹೇಳಿ ಹರಸಿ ಕಳುಹಿಸಿದರು. ಜೊತೆಗೆ ಕಾಫಿ ತಿಂಡಿಯ ಆತಿಥ್ಯ ಬೇರೆ ಅಂದು ನಡೆಯಿತು ಎಂಬುದನ್ನು ಹೇಳಬೇಕಾಗಿಲ್ಲ. ಈ

ಪ್ರಥಮ ಸಂದರ್ಶನದಿಂದ ನಾನು ಪುಳಕಿತನಾದೆ. ನನ್ನ ಸಾಹಿತ್ಯ ರಚನಾಶಕ್ತಿ ಮತ್ತಷ್ಟು ತೀವ್ರವಾಯಿತು.

ಇಂಟರಿನ ಅನಂತರ ಶ್ರೀ ಸ್ವಾಮಿ ಬೆಂಗಳೂರಿನಲ್ಲಿಯೇ ಸೆಂಟ್ರಲ್ ಕಾಲೇಜು ಸೇರಿದರು. ನಾನು ಮೈಸೂರಿಗೆ ಬಂದು ಮಹಾರಾಜ ಕಾಲೇಜಿಗೆ ಸೇರಿದೆ. ಆ ವರ್ಷ ಬಿ.ಎ. ಪರೀಕ್ಷೆಗೆ ಶ್ರೀ ಡಿ.ವಿ.ಜಿ. ಬರೆದಿದ್ದ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಪುಸ್ತಕ ನಮಗೆ ಪಠ್ಯವಾಗಿತ್ತು. ಕನ್ನಡವನ್ನು ಐಚ್ಛಿಕ ವಿಷಯವಾಗಿ ಓದುತ್ತಿದ್ದ ನನಗೆ ಪುಣ್ಯವಶದಿಂದ ಈ ಒಂದು ಒಳ್ಳೆಯ ಪುಸ್ತಕವನ್ನು ಪಠ್ಯವಾಗಿ ಓದುವ ಅವಕಾಶ ದೊರೆಯಿತು. ಜೊತೆಗೆ ಪ್ರಾಚಾರ್ಯ ತೀ.ನಂ.ಶ್ರೀಕಂಠಯ್ಯನವರು ಈ ಗ್ರಂಥವನ್ನು ಪಠ್ಯವಾಗಿ ಬೋಧಿಸಿದರು. ವಿಷಯದ ಮಹತ್ವ, ಬೋಧನೆಯ ಸ್ವಾರಸ್ಯ–ಇವುಗಳಿಂದಾಗಿ ನನ್ನ ಸಾಹಿತ್ಯಜ್ಞಾನ ವೃದ್ಧಿಯಾಯಿತು. ಶ್ರೀ ಡಿ.ವಿ.ಜಿ. ಅವರ ವಿಷಯದಲ್ಲಿ ನನ್ನ ಗೌರವ ಶತಾಧಿಕವಾಗಿ ಬೆಳೆಯಿತು.

ಮುಂದೆ ನಾನು 1939ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದೆ. ಮಾರು ವರ್ಷ ನನಗೆ ತುಮಕೂರಿನ ಕಾಲೇಜಿಗೆ ವರ್ಗವಾಯಿತು. ಅಲ್ಲಿದ್ದ ದಿನಗಳಲ್ಲಿ ಶ್ರೀ ಡಿ.ವಿ.ಜಿ. ಅವರು ರಚಿಸಿದ್ದ 'ವಿದ್ಯಾರಣ್ಯ ವಿಜಯ' ನಾಟಕವನ್ನು ಇಂಟರ್ ತರಗತಿಗೆ ಪಠ್ಯವಾಗಿ ಪಾಠ ಹೇಳುವ ಅವಕಾಶ ನನಗೇ ಒದಗಿ ಬಂದಿತು. ಇದರಿಂದಾಗಿ ನನ್ನ ಕನ್ನಡ ಸಂಸ್ಕೃತಿ, ಇತಿಹಾಸ, ಧರ್ಮ, ಕಲೆ, ಸಾಹಿತ್ಯಾದಿಗಳ ಜ್ಞಾನ ದಿನ ದಿನಕ್ಕೆ ಆಳವಾಗುತ್ತ ಬಂದಿತು.

ಮುಂದೆ 1943ರಲ್ಲಿ ನನಗೆ ಶಿವಮೊಗ್ಗೆಗೆ ವರ್ಗವಾಯಿತು. ಆ ಕಾಲೇಜಿನ ವಿದ್ಯಾರ್ಥಿ ಸಂಘದ ವಾರ್ಷಿಕ ದಿನಾಚರಣೆಯಲ್ಲಿ ಸಮಾರೋಪ ಭಾಷಣಕ್ಕಾಗಿ ಶ್ರೀ ಡಿ.ವಿ.ಜಿ. ಅವರನ್ನು ಆಹ್ವಾನಿಸಿದ್ದೆವು. ಅವರು ನಮ್ಮ ಕರೆಗೆ ಓಗೊಟ್ಟು ಶಿವಮೊಗ್ಗೆಗೆ ದಯಮಾಡಿಸಿ ವಿದ್ಯಾರ್ಥಿಗಳನ್ನು ಕುರಿತು ವಿಚಾರ ಪರಿಪ್ಲುತವಾದ ಭಾಷಣ ಮಾಡಿದರು. ಅಂದು ನಡೆದ ಭೋಜನ ಕೂಟದಲ್ಲಿ ಶ್ರೀ ಡಿ.ವಿ.ಜಿ. ನನ್ನನ್ನು ಜೊತೆಯಲ್ಲಿಯೇ ಕುಳ್ಳಿರಿಸಿಕೊಂಡಿದ್ದರು. ಸ್ವಾರಸ್ಯವಾದ ಮಾತು ಕಥೆಗಳ ನಡುವೆ ಊಟ ಸಾಗಿತು. ಊಟ ಮುಗಿಯುತ್ತಿದ್ದಂತೆ ಡಿ.ವಿ.ಜಿ. ನನ್ನ ಎಲೆಯ ಮೇಲೆ ಕಣ್ಣಾಡಿಸಿದರು. ಬಡಿಸಿದ ಪದಾರ್ಥಗಳನ್ನೆಲ್ಲ ಎಲೆ ತುಂಬ ಚೆಲ್ಲಿ ಬಹಳಷ್ಟನ್ನು ಹಾಗೆಯೆ ಬಿಟ್ಟಿದ್ದ ನನ್ನನ್ನು ಕುರಿತು "ಏನು ಭಟ್ಟರೇ ನೀವು ಭಟ್ಟ ಎಂದು ಹೆಸರಿಟ್ಟು ಕೊಂಡೂ ಹೀಗೆ ಊಟ ಮಾಡುವುದೆ ? ನನ್ನ ಎಲೆ ನೋಡಿ" ಎಂದರು. ಊಟ ಮುಗಿಸಿದ ಅವರ ಎಲೆ ಆಗತಾನೆ ಊಟಕ್ಕಾಗಿ ತೊಳೆದು ಹಾಕಿದ ಎಲೆಯ ಹಾಗೆ ಕಾಣಿಸುತ್ತಿತ್ತು. ಅಷ್ಟು ಪರಿಷ್ಕಾರವಾಗಿ ಚಾಚೂ ಉಳಿಸದೆ ಹಾಗೆ ಅವರು ಊಟ ಮುಗಿಸಿದ್ದರು. ನಾನು ನೋಡಿ ತಲೆ ತಗ್ಗಿಸಿದೆ. ಭೋಜನವೊಂದರಲ್ಲಿಯೆ ಅವರಿಂದ ಕಲಿಯಬಹುದಾದ ಪಾಠ ಬಹಳಷ್ಟಿತ್ತು.

ಶಿವಮೊಗ್ಗೆಯಿಂದ ಮರಳಿ ಮೈಸೂರಿಗೆ ವರ್ಗವಾಗಿ ಬಂದ ಮೇಲೆ ಬಿ.ಎ. ತರಗತಿಗೆ ಶ್ರೀ ಡಿ.ವಿ.ಜಿ. ಅವರ 'ನಿವೇದನ' ಮತ್ತು 'ಸಂಸ್ಕೃತಿ' ಎಂಬ ಎರಡು ಪಠ್ಯ ಪುಸ್ತಕಗಳನ್ನು ಪಾಠ ಹೇಳುವ ಅವಕಾಶ ನನಗೆ ಲಭ್ಯವಾಯಿತು. ಒಳ್ಳೆಯ ಪಠ್ಯ ಗಳನ್ನು ಪಾಠ ಹೇಳುವ ಆನಂದಕ್ಕಿಂತ ಮಿಗಿಲಾದ ಭಾಗ್ಯ ಅಧ್ಯಾಪಕನಿಗೆ ಯಾವುದಿದೆ ? ಇಂತಹ ಪುಸ್ತಕವನ್ನು ವರ್ಷದ ಉದ್ದಕ್ಕೂ ವಿವರವಾಗಿ ಓದುವುದರಿಂದ ವಿದ್ಯಾರ್ಥಿಗಳ ಜ್ಞಾನವೂ ಬೆಳೆಯುತ್ತದೆ, ಅಧ್ಯಾಪಕರ ಜ್ಞಾನವೂ ಬೆಳೆಯುತ್ತದೆ.

ನಾನು ಮಂಗಳೂರಿಗೆ ಸ್ನಾತಕೋತ್ತರ ಕೇಂದ್ರದ ನಿರ್ದೇಶಕನೂ ಕನ್ನಡದ ಪ್ರಾಧ್ಯಾಪಕನೂ ಆಗಿ ಹೋದಾಗ ಅಲ್ಲಿಯ ಘನವಿದ್ವಾಂಸರೂ ಯಕ್ಷಗಾನದ ಸುಪ್ರಸಿದ್ಧ ಅರ್ಥದಾರಿಗಳೂ ಆದ ಶ್ರೀ ದೇರಾಜೆ ಸೀತಾರಾಮಯ್ಯನವರ ವಿಷಯ ದಲ್ಲಿ ಒಂದು ಗೌರವ ಗ್ರಂಥವನ್ನು ಸನ್ಮಾನ ಸಮಿತಿಯವರು ಪ್ರಕಟಿಸಿ ಶ್ರೀಯುತರಿಗೆ ಅರ್ಪಿಸಿದರು. ಆ ಗೌರವ ಗ್ರಂಥದ ಸಂಪಾದಕನಾಗಿ ನಾನು ಒಂದು ಪುಟ ಮುನ್ನುಡಿ ಬರೆದೆ. ಶ್ರೀ ಡಿ.ವಿ.ಜಿ. ಅವರಿಗೆ ಪ್ರತಿ ಕಳುಹಿಸಲಾಯಿತು. ಆ ಗ್ರಂಥ ನೋಡಿ ಅವರಲ್ಲಿ ಸಂಪಾದಕನೆಂದು ನನ್ನ ಹೆಸರು ಅಚ್ಚಾಗಿದ್ದುದನ್ನು ನೋಡಿ (ಸಂಪಾದಕನಾಗಿ ನಾನು ಕೆಲಸ ಮಾಡಿದ್ದು ಅಷ್ಟರಲ್ಲೇ ಇದೆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನು ನಡೆಸುತ್ತಿದ್ದ ಕಾರ್ಯಕಲಾಪಗಳನ್ನೆಲ್ಲ ಹೊಗಳಿ ಹಾಡಿ ದೊಡ್ಡ ಕಾಗದ ಬರೆದು ಕಳುಹಿಸಿದರು.

ನಾನು ಕನ್ನಡ ಕಾಳಿದಾಸ ಮಹಾ ಸಂಪುಟವನ್ನು ಡಿ.ವಿ.ಜಿ. ಅವರಿಗೆ ಕಳುಹಿಸಿ ದಾಗ ನನ್ನನ್ನು ಶ್ಲಾಘಿಸಿ ಪತ್ರ ಬರೆದರು. ನನ್ನ 'ಇಂದ್ರಚಾಪ'ವನ್ನು ಅವರಿಗೆ ಕಳುಹಿಸಿ ದಾಗ ಅವರು ನೇತ್ರಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿದ್ದರು. ತಮ್ಮ ಮಿತ್ರರಿಂದ 'ಇಂದ್ರ ಚಾಪ' ಓದಿಸಿ ಆ ಕುರಿತು ತಮ್ಮ ಹೃತ್ಪೂರ್ವಕವಾದ ಮೆಚ್ಚಿಕೆಯನ್ನು ತಿಳಿಸಿ ಕಾಗದ ಬರೆಯಿಸಿದ್ದರು.

ನನ್ನ ಮಕ್ಕಳ ಯೋಗಕ್ಷೇಮ ಕುರಿತು ತಮಗೆ ತಿಳಿಸಬೇಕೆಂದು ಒಮ್ಮೆ ಅವರು ಕೇಳಿಕೊಂಡರು. ಒಡನೆಯೇ ಆ ಕುರಿತು ವಿವರಗಳನ್ನು ಒದಗಿಸಿ ನಾನು ಪತ್ರ ಬರೆದೆ. ನನ್ನ ದೊಡ್ಡ ಮಗಳು ತನ್ನ ಗಂಡನ ಜೊತೆಯಲ್ಲಿ ಅಮೇರಿಕೆಯಲ್ಲಿದ್ದಾಳೆ ಎಂಬುದನ್ನು ತಿಳಿದು ಅವರು ಹರ್ಷದಿಂದ ಪುಳಕಿತರಾಗಿ ಪತ್ರ ಬರೆಯಿಸಿದರು.

ನಾನು ಹಾದು ಬಂದ ನನ್ನ ಮುಳ್ಳು-ಮಲ್ಲಿಗೆಯ ಹಾದಿಯನ್ನು ಅವರು ಗಮನಿಸುತ್ತಿದ್ದರು. ನನ್ನ ಏಳಿಗೆಯನ್ನು ಕಂಡು ಸಂತೋಷಪಡುತ್ತಿದ್ದ ಹಿರಿಯರಲ್ಲಿ ಡಿ.ವಿ.ಜಿ. ಒಬ್ಬರು. ಅವರ ಭಾಷಣಗಳನ್ನು ಕೇಳಿ ಗ್ರಂಥಗಳನ್ನು ಓದಿ ನಾನು ಸುಸಂಸ್ಕೃತನಾಗಿದ್ದೇನೆ. ಅವರ 'ಬಾಳಿಗೊಂದು ನಂಬಿಕೆ', 'ಮಂಕುತಿಮ್ಮನ ಕಗ್ಗ' ಇವು ನನಗೆ ಊರೆಗೋಲು ಹೇಗೋ ಹಾಗೆ, ದಾರಿದೀಪ ಹೇಗೋ ಹಾಗೆ, ಕೈಗಂಬ ಹೇಗೋ ಹಾಗೆ.

—**ಎಸ್. ವಿ. ಪರಮೇಶ್ವರ ಭಟ್ಟ**

ರಸಋಷಿ—ಡಿ.ವಿ.ಜಿ.*

ಪತ್ರಿಕಾ ಸಂಪಾದಕರು, ಅದೆಲ್ಲಿಯೋ ಲೆಕ್ಕ ತಪ್ಪಿ, ತೊಂಬತ್ತು ವರ್ಷ ಎಂದು ಬರೆದರು. ಸನ್ಮಾನ ಸಮಿತಿಯವರು, ಹುಟ್ಟುಹಬ್ಬ ಎಂಬತ್ತನೆಯದು ಎಂದರು. ಬಿಡಿ, ಬಿಡಿ. ನೂರೇ ಎನ್ನಬಹುದು ಬೇಕಾದರೆ. ಒಂದು ಶತಮಾನದ ಅವಧಿಯಾದರೂ ಬೇಡವೆ ಅಷ್ಟೊಂದು ಸಾಧನೆಗಳಿಗೆ ? ಅಲ್ಲದೆ. ಹೆಚ್ಚು ಹೇಳಿದೊಡನೆ ಕ್ಷಯಿಸುವ ಆಯುಸ್ಸೆ ಅದು ? ಅದು ಗುಂಡು—ಕಲ್ಲು ಗುಂಡು; ನೂರಿಪ್ಪತ್ತು ವರ್ಷಗಳಾದರೂ ಬಾಳುವ ಹಿರಿಯ, ಡಿ.ವಿ.ಜಿ....

ಹತ್ತು ವರ್ಷಗಳಿಗೆ ಹಿಂದೆ. ಗುಂಡಪ್ಪನವರಿಗೆ ಗೌರವ ಡಾಕ್ಟರೇಟ್ ದೊರೆತ ಸಂದರ್ಭ. ಅಭಿನಂದನೆ ಸಲ್ಲಿಸಿ ಅವರಿಗೆ ಈ ಲೇಖಕ ಕಾಗದ ಬರೆದ.

ಅಂಥವು ನೂರಾರು ಬಂದಿರಬೇಕು. ಪ್ರತಿಯೊಬ್ಬರಿಗೂ ಮಾರೋಲೆ ಬರೆಯುವುದು ಕಷ್ಟಸಾಧ್ಯ.

ಆದರೂ ಡಿ.ವಿ.ಜಿ.ಯವರಿಂದ ಸುದೀರ್ಘ ಪತ್ರ ಬಂತು. ಅದು ಪದವಿ ಮೀಮಾಂಸೆ: ವಯಸ್ಸು ಎಪ್ಪತ್ತಾಯ್ತು. ಇಂಥ ಪದವಿ ಬಂದರೆಷ್ಟು ? ಬರ ದಿದ್ದರೆಷ್ಟು ? ಬಂಡೆಯ ಮೇಲೆ ನೀರು ಸುರಿದ ಹಾಗೆ ಅಲ್ಲವೆ ?... ತಲೆದೂಗು ವಂತಿತ್ತು ಆ ವಾದಸರಣಿ.

* * * *

ರಾಜ್ಯದ ಮುಖ್ಯಮಂತ್ರಿಯೇ ಮೊನ್ನೆ ಒಂದು ವಿಷಯವನ್ನು ಬಹಿರಂಗ ಪಡಿಸಿದರು. ಕೇಂದ್ರ ಸರಕಾರ ನೀಡಲು ಬಂದ 'ಪದ್ಮಭೂಷಣ' ತಮಗೆ ಬೇಡ, ಕ್ಷಮಿಸಿ. ಎಂದರಂತೆ ಡಿ.ವಿ.ಜಿ. ಒಂದು 'ಪದ್ಮಶ್ರೀ'ಯಾದರೂ ದೊರೆತರೆ ಸಾಕು ಎಂದು ಸ್ವತಂತ್ರ ಭಾರತದ ಪ್ರತಿಷ್ಠಿತರು ಬಾಯಿಬಿಡುವ ಈ ಕಾಲದಲ್ಲಿ ಇಂಥ ವೈರಾಗ್ಯ ? ಡಿ.ವಿ.ಜಿ.ಗೇ ಭೂಷಣ ಈ ನಿಲುವು.

ಆದರೆ ಸಾಹಿತ್ಯ ಅಕಾಡಮಿ. ಗೀತೆಯನ್ನು ಕುರಿತ ಅವರ ಕೃತಿಯನ್ನು ಹೆಸರಿಸಿ ಪಾರಿತೋಷಕ ನೀಡಿದಾಗ. 'ಒಲ್ಲೆ' ಎನ್ನಲಿಲ್ಲ ಅವರು. ಮನೆಬಾಗಿಲಿಗೇ ಅದನ್ನು ತರಿಸಿಕೊಂಡರು.

---

* ಕೃಪೆ: ಕರ್ಮವೀರ, ಫೆಬ್ರುವರಿ 8–1970

ಒತ್ತಟ್ಟಿಗೆ ಶಿಕ್ಷಣ–ಸಾಹಿತ್ಯ. ಇನ್ನೊತ್ತಟ್ಟಿಗೆ ಪ್ರಭುತ್ವ ಮರ್ಯಾದೆ. ಇವೆರಡನ್ನೂ ಒಂದೇ ಬಗೆಯಾಗಿ ನೋಡುವುದಿಲ್ಲ ಡಿ.ವಿ.ಜಿ. ಆ ಗೌರವಕ್ಕೆ 'ಸೈ', ಇದಕ್ಕೆ 'ಊಹೂಂ'.

ಪರಸ್ಪರ ಹೆಣೆದುಕೊಂಡಿದ್ದರೂ ಬೇರೆ ಬೇರೆಯಾಗಿಯೇ ಕಾಣುವ, ವಿಶಿಷ್ಟ ಬದುಕಿಗೆ ಇದು ಒಪ್ಪತಕ್ಕ ಅಂಶವೇ.

* * * *

ಕೆಲವು ತಲೆಮಾರುಗಳ ಹಿಂದೆ ಡಿ.ವಿ.ಜಿ. ಮನೆತನ ತಮಿಳು ಮೂಲದಿಂದ ಹೊರಟು ಘಟ್ಟ ಹತ್ತಿ ಬಂತು. ತೆಲುಗು ಪ್ರಧಾನವಾಗಿದ್ದ ಕನ್ನಡದ ಮೂಲೆಯಲ್ಲಿ ನೆಲೆಸಿತು. ಅನುಕೂಲವಂತರೆನಿಸಿಕೊಂಡು ಬಾಳಿದ ಕುಟುಂಬ.

ಕಳೆದ ಶತಮಾನದ ಕೊನೆ. ಆಗಿನ್ನೂ ಗುಂಡಪ್ಪ ಚಿಕ್ಕ ಹುಡುಗ. ದೊಡ್ಡ ಮನೆಯ ಕಿರಿಯನಿಗೆ ಯಾವ ಆತಂಕ? ಅವ್ಯಾಹತವಾಗಿ ಸಾಗಬಹುದಾದ ವ್ಯಾಸಂಗ. ಬೇಕಿದ್ದರೆ ಕಡಲಿನಾಚೆಗೂ ಪಯಣ. ಭಾರತವೇ ಕ್ಷೇತ್ರವಾಗಿ ಭಾರೀ ಪದವಿ ದೊರೆಯುವ ಸಂಭವ.

ಆದರೆ ಅನಿರೀಕ್ಷಿತವಾಗಿ ಅವರ ಮನೆತನ ದರೋಡೆಗೆ ಬಲಿಯಾಗಿ, ಮಹಾ ಪೂರವು ಬಂದು, ಸರ್ವಸ್ವವನ್ನೂ ಕಳೆದುಕೊಂಡಿತು.

ಒಂಟಿ ದೋಣಿ, ಮಾಂಸಖಂಡಗಳು ಬಲಿಯುವುವಕ್ಕೆ ಮೊದಲೇ ಕಿರಿಯನ ಕೈಯಲ್ಲಿ ಚುಕ್ಕಾಣಿ.

"ಬದುಕು ಜಟಕಾ ಬಂಡಿ. ವಿಧಿಯದರ ಸಾಹೇಬ...".

ಗ್ರಂಥಗಳೇ ಗುರುಗಳಾಗಿ, ಬಾಳುವೆಯೇ ವಿಶ್ವವಿದ್ಯಾಲಯವಾಗಿ, ಗುಂಡಪ್ಪ ಡಿ.ವಿ.ಜಿ.ಯಾಗಿ ಮಾರ್ಪಟ್ಟುದೊಂದು ಅದ್ಭುತ.

* * * *

ಇಪ್ಪತ್ತೈದು–ಇಪ್ಪತ್ತೇಳು ವರ್ಷಗಳಾದುವಲ್ಲ 'ಮಂಕುತಿಮ್ಮನ ಕಗ್ಗ' ಪ್ರಕಟವಾಗಿ? ಇಂದಿಗೂ ಮಂಕುತಿಮ್ಮನ ಮಾನದಂಡದಿಂದಲೇ ಅದೆಷ್ಟೊ ಸಹಸ್ರ ಕನ್ನಡಿಗರು ತಮ್ಮ ಲೋಕಾನುಭವವನ್ನು ಅಳೆಯುವರಲ್ಲ! ಆ ಸಾಹಿತ್ಯಕೃತಿಯ ಹಿರಿಮೆಯನ್ನು ಸಾರಲು ಈ ಒಂದು ಅಂಶ ಸಾಲದೆ?

ಕಾವ್ಯ, ನಾಟಕ, ಸಾಹಿತ್ಯವಿಮರ್ಶೆ—ಈ ಸೌಂದರ್ಯೋಪಾಸನೆ ಬಂಡಿಯ ಒಂದು ಗಾಲಿ. ಇನ್ನೊಂದು, ಸಾರ್ವಜನಿಕ ಕ್ಷೇತ್ರದಲ್ಲಿ ಶುಚಿ ರುಚಿಗಳನ್ನು ರೂಪಿಸುವ ನಿರಂತರ ಹೋರಾಟ.

ಒಂದೆಡೆ ಮೂವತ್ತೆಂಟನೆಯ ವಯಸ್ಸಿನಲ್ಲೇ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ. ಇನ್ನೊಂದೆಡೆ, ರಾಜಕೀಯ ಹಕ್ಕುಗಳನ್ನು ಜನತೆಗೆ ದೊರಕಿಸಿಕೊಡಲು ಪರಿಶ್ರಮದ ದುಡಿಮೆ.

ಇವೆರಡರಲ್ಲಿ ಯಾವುದು ಹೆಚ್ಚು ? ಅವಿನಾಶಿಯಾದ ಸಾಹಿತ್ಯವೊ? ಅನಿವಾರ್ಯ ವೆನಿಸಿದ ರಾಜಕಾರಣವೊ ?

ಒಂದು ವಿಷಯ ಮಾತ್ರ ಸ್ಪಷ್ಟ : ಮುಂದಾಳು ಎನಿಸಿಕೊಳ್ಳದೆ, ಅಧಿಕಾರಾ-ರೂಢನಾಗದೆ, ಗ್ರೀಕ್ ತತ್ತ್ವಜ್ಞಾನಿಗಳ ನೆಲೆಯಲ್ಲಿ ಡಿ.ವಿ.ಜಿ. ನಿಂತುದಕ್ಕೆ ಕಾರಣ. ಅವರು ರೂಢಿಸಿಕೊಂಡ ಸಂಸ್ಕಾರ. ಬೆಳೆಸಿದ ಸಾಹಿತ್ಯದ ಒಲವು. ಅವರ ಸೌಂದರ್ಯೋಪಾಸನೆ.

*   *   *   *

ಮಿತಭಾಷಿಯಲ್ಲ ಡಿ.ವಿ.ಜಿ. ದಾರಿ ಹೋಗುವವರನ್ನೂ ಕರೆದು ಮಾತನಾಡಿಸು ವಂಥ ವಾಚಾಳಿ. ಇತರರ ಭಾವವಿಚಾರಗಳೊಡನೆ ಸಂಗಮನ ಸಾಧಿಸುವುದೇ ಅವರ ಬಯಕೆ.

ಜನಪ್ರಿಯತೆ ? ಈ ಮಾದಕದ್ರವ್ಯವನ್ನು ಗಳಿಸಲು ಯತ್ನಿಸಿದ ಜೀವ ಅದಲ್ಲ... ಇತರರಿಗೆ ಅಪಥ್ಯ ಎನ್ನುವ ಕಾರಣದಿಂದ ತಮ್ಮ ಅಭಿಪ್ರಾಯಗಳ ಮಂಡನೆಗೆ ಹಿಂಜರಿದವರಲ್ಲ. ಯೌವನದಲ್ಲೂ ಅಷ್ಟೆ : ಇಳಿವಯಸ್ಸಿನಲ್ಲೂ ಅಷ್ಟೆ. 'ಕರ್ನಾಟಕ' ಎಂಬ ದ್ವೈಸಾಪ್ತಾಹಿಕವನ್ನು ನಡೆಸಿದ ವ್ಯಕ್ತಿ, ಮುಂದೆ ಕರ್ನಾಟಕ ಪ್ರಾಂತ ರಚನೆ ಯನ್ನು ವಿರೋಧಿಸಿದ್ದು, ಅಭಿವ್ಯಕ್ತಿಗೆ ವಿಚಾರಗಳ ಪ್ರತಿಪಾದನೆಗೆ ಕನ್ನಡ ಅತ್ಯಂತ ಸಮರ್ಥ ಭಾಷೆ ಎಂದು ಸ್ವತಃ ತೋರಿಸಿಕೊಟ್ಟೂ, ಕನ್ನಡದ ಕಸುವಿನ ಬಗೆಗೆ ಅಳುಕು ತೋರಿದ್ದು__ವಿಪರ್ಯಾಸವೆನಿಸಬಹುದು. ಆದರೆ ಡಿ.ವಿ.ಜಿ. ಪಾಲಿಗೆ ಅದು ಅವರು ಕಂಡ ಸತ್ಯ.

ಈ ಗೋಖಲೆ ಭಕ್ತನ ಶಿಷ್ಯರ ಸಂಖ್ಯೆ ದೊಡ್ಡದು. ಪ್ರಾಧ್ಯಾಪಕರು. ಪತ್ರಿಕಾ ಕರ್ತರು. ರಾಜಕಾರಣಿಗಳು. ಬರಹಗಾರರು, ಸಂಗೀತಜ್ಞರು__ಬೆರಗುಗೊಳಿಸುವಂಥ ವೈವಿಧ್ಯ ಇದು.

ಸಮರ್ಪಿತ ಬದುಕು. 80,000 ರೂಪಾಯಿಗಳನ್ನು ಸಂಗ್ರಹಿಸಿ ಕೊಟ್ಟರೂ ಅದು ವಿನಾಸಲು ಅವರು ಕಟ್ಟಿದ ಗೋಖಲೆ ಸಾರ್ವಜನಿಕ ಸಂಸ್ಥೆಗೆ. (ಇನ್ನು ಗೋಖಲೆ –ಡಿ.ವಿ.ಜಿ. ಸಾರ್ವಜನಿಕ ಸಂಸ್ಥೆ ಎನ್ನುವುದೇ ಮೇಲು.)

*   *   *   *

ಮಿತ್ರರೊಬ್ಬರು ಮೊನ್ನೆ ತಮ್ಮ ಹೊಸ ಪುಸ್ತಕವನ್ನು ಡಿ.ವಿ.ಜಿ.ಗೆ ಕೊಟ್ಟರು. ಕೃತಿಯ ಆರಂಭದಲ್ಲಿ ವಸ್ತುವಿನ ಬಗೆಗೆ ಹಲವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಮಂಥನವಿತ್ತು.

ಡಿ.ವಿ.ಜಿ. ಅಂದರು : "ಇದು ಸರಿಯಪ್ಪ. ಅವರು ಹೇಳಿದ್ದಾಯ್ತು. ನೀವೇನು ಹೇಳ್ತೀರಿ ?"

ನೀವೇನು ಹೇಳುತ್ತೀರಿ ?–ಇದು ಡಿ.ವಿ.ಜಿ. ಸೂತ್ರ ಪ್ರಶ್ನೆ.

ಕೃಪೆ : ಕರ್ಮವೀರ, ಫೆಬ್ರುವರಿ 8, 1970

—ನಿರಂಜನ

ಡಿ.ವಿ.ಜಿ. ನೆನಪು

ಡಿ.ವಿ.ಜಿ. ಅವರು ನನ್ನ ತಂದೆ ಎಲ್. ಸ್ವಾಮಿರಾಯರನ್ನೂ ನನ್ನ ಚಿಕ್ಕಪ್ಪ ಎಲ್. ರಾಮರಾಯರನ್ನೂ ಚೆನ್ನಾಗಿ ಬಲ್ಲವರು. ('ಹಲವರು ಸಾರ್ವಜನಿಕರು' ಸಂಪುಟದಲ್ಲಿ ಇಬ್ಬರನ್ನೂ ಹೆಸರಿಸಿದ್ದಾರೆ.) ಇದರಿಂದ ನನ್ನನ್ನು ಅಭಿಮಾನದಿಂದ ಕಾಣುತ್ತಿದ್ದರು. ಹಲವು ವರ್ಷಗಳ ಕಾಲ ಅವರೊಡನೆ ಸಂಪರ್ಕವೇ ಇಲ್ಲದಿದ್ದು ಅನಂತರ ಪತ್ರ ಬರೆಯುವಾಗ ಅವರು ನನ್ನನ್ನು ಮರೆತಿರಬಹುದೆಂದು ಅನುಮಾನಿಸಿ ಪತ್ರದ ಪ್ರಾರಂಭದಲ್ಲಿ 'ನಾನು ಎಲ್. ಸ್ವಾಮಿರಾಯರ ಮಗ' ಎಂದು ಬರೆದೆ. ಮಾರನೇ ದಿನ ಬಂದ ಉತ್ತರದಲ್ಲಿ, 'ನೀನು ಯಾರು ಎಂದು ಹೇಳಿಕೊಳ್ಳಬೇಕೆ ? ನಾನು ರಾಮರಾಯರ ಹಾಗೆಯೇ ನಿಮ್ಮ ಒಬ್ಬ ಚಿಕ್ಕಪ್ಪ ಎಂದು ಭಾವಿಸಿ' ಎಂದು ಬರೆದರು. ನನ್ನನ್ನು ಎಂದೂ ಪ್ರೀತಿ ಅಭಿಮಾನಗಳಿಂದ ನಡೆಸಿಕೊಂಡರು.

* * *

1948ರಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾದೆ. ತಿರುಮಲೆ ತಾತಾಚಾರ್ಯ ಶರ್ಮರು ಅಧ್ಯಕ್ಷರು. ಡಿ.ವಿ.ಜಿ. ಅವರನ್ನು ಒಂದು ಕಾರ್ಯಕ್ರಮಕ್ಕೆ ಆಹ್ವಾನಿಸುವಂತೆ ಹೇಳಿ ಶರ್ಮರು ಒಂದು ಕಾಗದ ಕೊಟ್ಟರು. ಡಿ.ವಿ.ಜಿ. ಅವರನ್ನು ಕಾಣಲು ಹೋದೆ. ಸ್ವಲ್ಪ ಮಾತುಕತೆ ಆದನಂತರ ನಾನು ಶರ್ಮರ ಕಾಗದವನ್ನು ಹೊರಕ್ಕೆ ತೆಗೆದೆ. ಮುಂದಿನ ಸಂಭಾಷಣೆಯನ್ನು ಸಂಗ್ರಹವಾಗಿ ಕೊಡುತ್ತೇನೆ :

ಡಿ.ವಿ.ಜಿ. : ಏನು ನಿಮ್ಮ ಮದುವೆಯ ಆಹ್ವಾನ...

ನಾನು : ಇಲ್ಲ ಸಾರ್...

ಡಿ.ವಿ.ಜಿ. : ಅದಿರಲಿ, ನಿಮಗೆ ವಯಸ್ಸೆಷ್ಟು ?

ನಾನು : ಇಪ್ಪತ್ತಮೂರು.

ಡಿ.ವಿ.ಜಿ. : ಸ್ವಾಮಿರಾಯರು ಇನ್ನೂ ನಿಮಗೆ ಮದುವೆ ಯಾಕೆ ಮಾಡಿಲ್ಲ?

ನಾನು : ಆಗತ್ತೆ ಸಾರ್, ನೀವು ಸಾಹಿತ್ಯ ಪರಿಷತ್ತಿಗೆ—

ಡಿ.ವಿ.ಜಿ. : ನಿಮ್ಮ ಲಗ್ನ ಪತ್ರಿಕೆ ಮೊದಲು ತೆಗೆದುಕೊಂಡು ಬನ್ನಿ. ಮದುವೆಯಾಗಿ ನಿಮ್ಮ ಹೆಂಡತಿಯನ್ನು ಕರೆದುಕೊಂಡು ಬನ್ನಿ. ಆಶೀರ್ವಾದ ಮಾಡುತ್ತೇನೆ. ಅಲ್ಲಿಯವರೆಗೆ ಪರಿಷತ್ತು ಗಿರಿಷತ್ತು ಅಂತ ಕರೆಯೋದಕ್ಕೆ ಬರಬೇಡಿ. ಜೀವನದ ಅನುಭವ, ಸಂತೋಷ ಮೊದಲು. ಉಳಿದದ್ದೆಲ್ಲ ಆಮೇಲೆ.

ನಾನು ಎಷ್ಟೇ ಪ್ರಯತ್ನಪಟ್ಟರೂ ಅವರು ನಾನು ಹೋದ ಕೆಲಸದ ವಿಷಯ ಮಾತನಾಡುವುದಕ್ಕೆ ಬಿಡಲಿಲ್ಲ. ನನ್ನ ಮದುವೆಯಾದಾಗ ಬೆಂಗಳೂರಿನಲ್ಲಿ ಆರತಕ್ಷತೆಗೆ ಬಂದು ಹರಸಿದರು. ಅನಂತರ ಪರಿಷತ್ತಿಗೂ ಬಂದರು.

* * *

ನಾನು ಕೋಲಾರದಲ್ಲಿದ್ದಾಗ ಗೋಖಲೆ ಸಂಸ್ಥೆಯಲ್ಲಿ ವಿಲಿಯಂ ಥ್ಯಾಕರೆ ಎಂಬ ಇಂಗ್ಲಿಷ್ ಕಾದಂಬರಿಕಾರನನ್ನು ಕುರಿತು ಮಾತನಾಡಬೇಕೆಂದು ಕಾಗದ ಬರೆದರು. ನಾನು ಮಾತನಾಡಿದ ದಿನ. ಅವರೇ (ಮೊದಲು ಮಾತನಾಡಿ ಅಥವಾ) ವಂದನಾರ್ಪಣೆ ಮಾಡಿ ಬಹಳ ಉದಾರವಾದ ಮಾತುಗಳನ್ನಾಡಿ ನನ್ನನ್ನು ನಾಚಿಸಿದರು. ಮನೆಗೆ ಬನ್ನಿ ಎಂದು ಕರೆದರು. ಮರುದಿನ ಮನೆಗೆ ಹೋದೆ. ಹಿಂದಿನ ದಿನದ ನನ್ನ ಭಾಷಣದ ಒಳ್ಳೆಯ ಅಂಶಗಳನ್ನೂ ಓರೆಕೋರೆಗಳನ್ನೂ ತಿಳಿಸಿಕೊಟ್ಟರು. ಅನಂತರ ಹೇಳಿದರು: "ನೀವು ನಿನ್ನೆ ಕೈಯಲ್ಲಿ ಟಿಪ್ಪಣಿ ಹಿಡಿದುಕೊಂಡು ಮಾತನಾಡುತ್ತಿದ್ದಿರಿ. ನನಗೆ ಬಹಳ ಸಂತೋಷವಾಯಿತು. ಎಷ್ಟೋ ಜನ ಭಾಷಣಕ್ಕೆ ಬರುತ್ತಾರೆ. ಸರಿಯಾಗಿ ಯೋಚನೆ ಮಾಡಿಕೊಂಡು ಬರುವುದಿಲ್ಲ. ಈ ವಿಷಯ ಅದಮೇಲೆ ಈ ವಿಷಯ ಅಂತ ತೀರ್ಮಾನ ಮಾಡಿರುವುದಿಲ್ಲ. ಎ. ಎನ್. ಮೂರ್ತಿರಾಯರು, ಜಿ. ಪಿ. ರಾಜರತ್ನಂ ಹೀಗೆ ಕೆಲವರನ್ನು ಧೈರ್ಯವಾಗಿ ಭಾಷಣಕ್ಕೆ ಕರೆಯಬಹುದು. ಭಾಷಣ ಮಾಡುವ ಮನುಷ್ಯನು ಕೇಳುವವರ ಕಾಲವನ್ನು ತಾನು ತೆಗೆದುಕೊಳ್ತಾ ಇದ್ದೇನೆ, ಅವರು ತನ್ನಲ್ಲಿ ಗೌರವ ಇಟ್ಟುಕೊಂಡು ಬಂದಿದ್ದಾರೆ ಅನ್ನೋದನ್ನ ನೆನಪಿಟ್ಟು ಕೊಳ್ಳಬೇಕು" ಎಂದರು.

* * *

1963ರಿಂದ ಐದಾರು ವರ್ಷ ನನಗೆ ತುಂಬಾ ಆತಂಕವಿದ್ದ ದಿನಗಳು. ಸರ್ಕಾರಿ ಕೆಲಸವನ್ನು ಬಿಟ್ಟುಬಿಡಬೇಕು, ಹೇಗಾದರೂ ಜೀವನ ನಡೆಸಬಹುದು ಎಂದು ಯೋಚಿಸುತ್ತಿದ್ದೆ. ಸಾರ್ವಜನಿಕ ಜೀವನವೂ ಆಕರ್ಷಿಸುತ್ತಿತ್ತು. ಸಾರ್ವಜನಿಕ ಜೀವನ ದಲ್ಲಿ ಕೆಲಸ ಮಾಡಬೇಕು ಎಂದೂ ಹಂಬಲ. ರಾಜಕೀಯ ಪಕ್ಷವೊಂದು ನನ್ನ ವಿಷಯದಲ್ಲಿ ಆಸಕ್ತಿ ತೋರಿಸುತ್ತಿತ್ತು. ನನ್ನ ಹಿತೈಷಿಗಳೊಬ್ಬರು ಈ ವಿಷಯವನ್ನು ಡಿ.ವಿ.ಜಿ. ಅವರಿಗೆ ಹೇಳಿದರಂತೆ. 'ಇದೆಲ್ಲ ನಿಜವೇ ?' ಎಂದು ಕಾಗದ ಬರೆದರು. ಬೇಸರದಿಂದ ಮುಖ್ಯ ತೀರ್ಮಾನಗಳನ್ನು ಕೈಗೊಳ್ಳುವ ಸಾಧ್ಯತೆ ಯಾರ ಬಾಳಿ ನಲ್ಲಾದರೂ ಬರಬಹುದಾದುದರಿಂದ ಅವರು ನನಗೆ ಕೊಟ್ಟ ಬುದ್ಧಿವಾದವನ್ನು ಇಲ್ಲಿ ಅವರ ಮಾತುಗಳಲ್ಲೇ ತಿಳಿಸುತ್ತಿದ್ದೇನೆ.

"I think I can understand your mind. I have your assurance that you will not act in a hurry. You must think several times before taking a decision. But you should not decide without the consent of Mrs. Seshagiri......You should not take any risks to which she is not a consenting party—a cheerfully consulting

party. So please tell her all. You have no right to compel her to share your ideals." ದೇಶದ ವಿಷಯ ಬರೆಯುತ್ತಾ ಹೀಗೆಂದರು. The country's future is to my eye dark already. God help us. For yourself keep sober and take thought. (8–12–1967 ರ ಪತ್ರ)

ಅವರನ್ನು ನೋಡದೆ ನಾನು ಯಾವ ನಿರ್ಧಾರವನ್ನೂ ಕೈಗೊಳ್ಳಬಾರದೆಂದೂ ಹೇಳಿಕಳುಹಿಸಿದರು. ಹಾಗೇ ಆಗಲಿ ಎಂದು ನಾನು ಬರೆದೆ. ಆ ಕಾಗದ ತಲುಪಿದ ಒಂದೆರಡು ದಿನಕ್ಕೆ ಪ್ರೊ॥ ಎ. ಆರ್. ಕೃಷ್ಣಶಾಸ್ತ್ರಿಗಳು ತೀರಿಕೊಂಡರು. ಡಿ.ವಿ.ಜಿ. ಆಗಾಗ ನನ್ನೊಡನೆ ಒಂದು ಮಾತನ್ನು ಹೇಳುತ್ತಿದ್ದರು—ಗೋಖಲೆ ಸಾರ್ವಜನಿಕ ಸಂಸ್ಥೆ ಹೆಚ್ಚು ಜನ ಯುವಕರನ್ನು ಆಕರ್ಷಿಸುತ್ತಿಲ್ಲ. ಅವರನ್ನು ಆಕರ್ಷಿಸಿ ಕೆಲಸದಲ್ಲಿ ತೊಡಗಿಸುವಂತಹ ಕ್ರಮಗಳನ್ನು ಯೋಚಿಸಬೇಕು. 3–2–1968 ರಂದು ಬರೆದ ಕಾಗದದಲ್ಲಿ ಮೊದಲು ನನ್ನ ಆಶ್ವಾಸನೆಯನ್ನು ಪ್ರಸ್ತಾಪಿಸಿ ಹೀಗೆ ಬರೆದರು :

I have your kind letter. The Report is very satisfactory... You would by now have heard of Prof. A. R. Krishna Shastri's passing. It is a very great personal loss to me. But the lesson is more for young people like you than for me. I must see that there are young people to take up the burden of my generation and pass it on to them cheerfully ; and they for their part must prepare and be ready to take up the burden at a moment's notice.

ಮುಂದೆ ಅವರನ್ನು ಭೇಟಿ ಮಾಡಿದಾಗ ಒಂದು ಮಾತನ್ನು ಒತ್ತಿ ಹೇಳಿದರು. "ಈ ಕಾಲದಲ್ಲಿ ಸಾರ್ವಜನಿಕ ಜೀವನಕ್ಕೆ ಕಾಲಿಡುವವರಿಗೆ ಸಾಕಷ್ಟು ಆದಾಯ ಇರಬೇಕು. ಉದರಪೋಷಣೆಗಾಗುವಷ್ಟು ಮಾತ್ರವೇ ಅಲ್ಲ. ನಿರಾತಂಕವಾಗಿ ನೆಮ್ಮದಿಯಾಗಿ ಇರುವಷ್ಟು ಸ್ವತಂತ್ರ ಆದಾಯ ಇರಬೇಕು. ಇಲ್ಲವಾದರೆ ತಿಳಿದೋ ತಿಳಿಯದೆಯೋ. ಒಪ್ಪಿಯೋ ಬೇಡದೆಯೋ ಭ್ರಷ್ಟರಾಗುತ್ತೀರಿ. ಹಣಕ್ಕೆ ಕೈ ಒಡ್ಡುತ್ತೀರಿ. ಯೋಚನೆ ಮಾಡಿ."

* * *

1968ರಲ್ಲಿ ಬೆಂಗಳೂರಿಗೆ ಬಂದ ಮೇಲೆ ಅವರನ್ನು ನೋಡಲು ಆಗಾಗ ಹೋಗುತ್ತಿದ್ದೆ. ಒಂದು ದಿನವಂತೂ ಅವರು ಸುಮಾರು ಎರಡು ಗಂಟೆಗಳ ಕಾಲ ಹಿಂದಿನ ದಿನಗಳನ್ನು ಸ್ಮರಿಸಿಕೊಂಡರು. ಜಸ್ಟಿಸ್ ವೀರರಾಘವಾಚಾರ್, ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ ಮೊದಲಾದವರೊಡನೆ ತಾವು ಕಳೆದ ಸಮಯದ, ಆಡಿದ ಮಾತುಗಳ ವಿವರಗಳನ್ನು ನೆನಸಿಕೊಂಡರು. (ಅವತ್ತು ಮನೆಗೆ ಹಿಂದಿರುಗಿದವನೇ ಎಲ್ಲವನ್ನೂ ಬರೆದಿಡುತ್ತೇನೆ ಎಂದುಕೊಂಡೆ. ಬರೆದಿಡಲಿಲ್ಲ. ಈಗ ಪಶ್ಚಾತ್ತಾಪವಾಗುತ್ತದೆ.) ಒಂದು ಘಟ್ಟದಲ್ಲಿ 'ದೇವರು ನಿಮ್ಮನ್ನು ಚೆನ್ನಾಗಿಡಲಿ' ಎಂದರು. 'ನೀವು ದೇವರಿದ್ದಾನೆ ಎಂದು ನಂಬುತ್ತೀರಾ ?' ಎಂದು ಕೇಳಿದೆ.

'ನೀವು ನಂಬುವುದಿಲ್ಲವೆ ?' ಎಂದು ಕೇಳಿದರು. 'ದೃಢವಾದ ನಂಬಿಕೆ ಇದೆ ಎಂದು ಹೇಳಲಾರೆ' ಎಂದೆ. 'ದೇವರು ಎಂದರೆ ಏನು ಎಂದುಕೊಂಡಿದ್ದೀರಿ? ನೋಡಿ, ನನ್ನಿಂದ ನಿಮಗೇನೂ ಲಾಭವಿಲ್ಲ. ನಿಮಗೆ ಹಣ ಕೊಡಲಾರೆ, ಅಧಿಕಾರ ಕೊಡಲಾರೆ. ಆದರೂ ಇಷ್ಟು ದೂರ ಬಂದಿರಿ. ಕೋಲಾರದಿಂದ ಬೆಂಗಳೂರಿಗೆ ಬಂದಾಗ ನನ್ನ ಮನೆಗೆ ಬರುತ್ತಿದ್ದಿರಿ, ಏಕೆ? ಶುದ್ಧವಾದ ವಿಶ್ವಾಸ, ಒಳ್ಳೆಯತನ. ಈ ಒಳ್ಳೆಯ ತನದ ಮೂಲವನ್ನೇ ನಾನು ದೇವರು ಎನ್ನುವುದು. ಪ್ರಪಂಚವೆಲ್ಲ ಗ್ರೇ (ಬೂದು) ಬಣ್ಣವಾಗಿದ್ದರೆ ಬೇಡ ಎನ್ನುತ್ತಿತ್ತೇನು? ಇಷ್ಟು ಬಣ್ಣ, ರುಚಿ, ಸೊಗಸು ಇಲ್ಲದೆ ಹೋಗಿದ್ದರೆ? ಯಾವುದೋ ಶಕ್ತಿ ಇಷ್ಟೊಂದು ವೈವಿಧ್ಯ, ಚೆಲುವು, ರುಚಿ ಎಲ್ಲವನ್ನೂ ಕೊಟ್ಟಿತು. ಅದಕ್ಕೆ ಸೌಂದರ್ಯದಲ್ಲಿ ಒಲವಿರಬೇಕು, ಒಳ್ಳೆಯತನದಲ್ಲಿ ಒಲವಿರ ಬೇಕು. ಅವರಲ್ಲಿ ಒಳ್ಳೆಯತನ ಇಲ್ಲದಿದ್ದರೆ ಮನುಷ್ಯರಿಗೆ ಒಳ್ಳೆಯತನ ಎಲ್ಲಿ ಬರುತ್ತಿತ್ತು?' ಎಂದರು. 'ನ್ಯಾಯ ಇಲ್ಲವಲ್ಲ? ಒಳ್ಳೆಯವರಿಗೆ ನೋವಾಗುತ್ತದೆ, ದುಷ್ಟರು ಮೆರೆಯುತ್ತಾರೆ, ಅಲ್ಲವೆ?" ಎಂದೆ. ಹೀಗೆಯೇ ಅರ್ಧ ಗಂಟೆ ನಮ್ಮ ಮಾತು ನಡೆಯಿತು.

* * *

ಡಿ.ವಿ.ಜಿ. ಅವರನ್ನು ಕುರಿತ ನನ್ನ ನೆನಪುಗಳನ್ನು ಹೇಳುತ್ತ ಹೋದರೆ ದೀರ್ಘ ಲೇಖನವೇ ಆದೀತು. ತಮಗೆ ಪ್ರಚಾರ ಬೇಡ ಎಂದು ಅವರು ನಡೆದು ಕೊಂಡದ್ದನ್ನು ನಾನೇ ಕಂಡೆ, ಆ ಮಾತು ಹೇಳಿ ಮುಗಿಸುತ್ತೇನೆ.

ನಾನು ಅವರೊಡನೆ ಮಾತನಾಡುತ್ತಿದ್ದಾಗ ಒಂದು ದಿನ ಮಾಸ್ತಿಯವರು ಅವರ ಮನೆಗೆ ಬಂದರು. ಅವರ ಮಾತುಕತೆ ನನಗೆ ಬಹಳ ಆಸಕ್ತಿಯನ್ನುಂಟು ಮಾಡಿತು. ಮುಖ್ಯವಾಗಿ ಮಾಸ್ತಿಯವರು ಬಂದದ್ದು, 'ಜೀವನ' ಪತ್ರಿಕೆಯ ಒಂದು ಸಂಚಿಕೆಯನ್ನು ಗುಂಡಪ್ಪನವರ ಸಂಚಿಕೆ ಮಾಡಬೇಕು ಎಂದು ಉದ್ದೇಶಿಸಿ, ಡಿ.ವಿ.ಜಿ. ಅವರ ಒಪ್ಪಿಗೆ ಪಡೆಯಲು. ಡಿ.ವಿ.ಜಿ. ಒಪ್ಪಲಿಲ್ಲ. ಮಾಸ್ತಿಯವರು ಒತ್ತಾಯ ಮಾಡಿದರು. ಕಡೆಗೆ ಡಿ.ವಿ.ಜಿ. ಎಂದರು: "ಈಗ ಬೇಡ. ವೆಂಕಟೇಶ ಅಯ್ಯಂಗಾರ್. ನನ್ನನ್ನು ಕೇಳದೆಯೇ ನೀವು ಬೇಕಾದ್ದು ಮಾಡಬಹುದಾದ ದಿನ ಬರುತ್ತೆ, ತಾಳಿ." ಮಾಸ್ತಿಯವರು ಸುಮ್ಮನಾದರು.

ಈ ಸರಿಸುಮಾರಿನಲ್ಲಿ ನಾನು ಅವರನ್ನು ಸಂದರ್ಶಿಸಬೇಕೆಂದು 'ಕರ್ಮವೀರ' ಪತ್ರಿಕೆಯವರು ನನ್ನನ್ನು ಒಪ್ಪಿಸಿ, ಡಿ.ವಿ.ಜಿ. ಅವರಿಗೂ ಬರೆದರು. ನಾನೂ ಬರೆದೆ. ಅವರ ಉತ್ತರ: (23.12.1969ರಂದು) Your kind letter of the 22nd. You know you are always welcome in my place. But the *Karma Veera* proposal, whatever it be, frightens me. I am averse to giving myself publicity. I am an old man now, and would like to be left to myself, to do what I like, or not to do anything at all.

ನಾನು ಅವರ ಮನೆಗೆ ಹೋದಾಗ "ಸಂದರ್ಶನದ ಸುದ್ದಿ ಬೇಡ" ಎಂದು ಬಿಟ್ಟರು. ಒಂದು ಗಂಟೆ ಕಾಲ ಆತ್ಮೀಯವಾಗಿ ಮಾತನಾಡಿದರು.

* * *

ಬದುಕು ನನಗೆ ಅನುಗ್ರಹಿಸಿದ ಭಾಗ್ಯಗಳಲ್ಲಿ ಒಂದು. ಪರಿಪಕ್ವತೆಯನ್ನು ಸಾಧಿಸಿದ್ದ ಹಲವರು ಹಿರಿಯರೊಡನೆ ಒಂದಿಷ್ಟು ಕಾಲವನ್ನು ಕಳೆಯುವ ಅವಕಾಶ ವನ್ನು ಒದಗಿಸಿದ್ದು. ಅಂತಹ ಹಿರಿಯರಲ್ಲಿ ಒಬ್ಬರು ಡಿ.ವಿ.ಗುಂಡಪ್ಪನವರು.

—ಎಲ್. ಎಸ್. ಶೇಷಗಿರಿರಾವ್

ನೆನಹಿನ ದೀವಿಗೆ

ನಾನು ವಿದ್ಯಾರ್ಥಿಯಾಗಿದ್ದಾಗ ಧಾರವಾಡದ ಒಂದು ಸಮಾರಂಭದಲ್ಲಿ ಡಿ.ವಿ.ಜಿ. ಯವರನ್ನು ಮೊದಲ ಸಲ ಕಂಡು ಅವರ ಭಾಷಣ ಕೇಳಿದ ನೆನಪು ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ತುಂಬಿದ ಭದ್ರಾಕೃತಿ. ಅದಕ್ಕೊಪ್ಪುವ ಕೋಟು. ಸುಳುವಿನ ಟೊಪ್ಪಿಗೆ. ಕೊರಳಿಗೆ ಉತ್ತರೀಯ. ಗಂಭೀರ ಪ್ರಕೃತಿಯಾದರೂ ಮುಖದಲ್ಲಿ ತುಂಬು ವಿದ್ವತ್ತಿನ ಪ್ರಸನ್ನತೆ. ಅಂದಿನ ಅವರ ಭಾಷಣದಲ್ಲಿ ಮಾತ್ರ ಪಾಂಡಿತ್ಯಕ್ಕಿಂತ ರಸಿಕತೆಯೇ ಒಡೆದು ಕಂಡದ್ದು. ಅ.ನ.ಕೃ., ಮಾಸ್ತಿ, ವಿ.ಸೀ. ಮೊದಲಾದವರಂತೆ ಅವರು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರವಾಸ ಮಾಡುತ್ತಿರಲಿಲ್ಲವೆಂದು ತೋರುತ್ತದೆ. ಹೀಗಾಗಿ ಅವರ ಭಾಷಣ ಕೇಳುವ ಸುಯೋಗ ಮತ್ತೆ ನನಗೆ ಒದಗಿ ಬರಲಿಲ್ಲ. ಆದರೆ ಅವರ ಸಾಹಿತ್ಯ ಕೃತಿಗಳ ಮೂಲಕ ನಮಗೆಲ್ಲ ಅವರು ಹಿರಿಯ ಗೌರವಾನ್ವಿತ ವ್ಯಕ್ತಿಯಾಗಿದ್ದರು (ಅವರ ವ್ಯಕ್ತಿತ್ವದ ಇತರ ಮುಖಗಳ ಪರಿಚಯ ಆಗ ನಮಗೆ ಅಷ್ಟಿರಲಿಲ್ಲ).

'ವನಸುಮ' ಭಕ್ತಿಗೀತ ಮನಸ್ಸಿಗೆ ಕೆಲಮಟ್ಟಿಗೆ ಹಿಡಿಸಿತ್ತು. 'ಕನ್ನಡ ಬಾವುಟ'ದಲ್ಲಿ ಮೊದಲು ಅದನ್ನೋದಿದ್ದೆ. 'ಬೇಲೂರಿನ ಶಿಲಾಬಾಲಿಕೆಯರು' ಮಾತ್ರ ಆಗ ಹಳಗನ್ನಡವಾಗಿಯೇ ಕಂಡಿತು. 'ಉಮರನ ಒಸಗೆ'. 'ಮಂಕುತಿಮ್ಮನ ಕಗ್ಗ'. 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಈ ಮೂರು ಅವರ ಬಗ್ಗೆ ಹೆಚ್ಚಿನ ಆದರ ಅಭಿಮಾನಗಳನ್ನು ಹುಟ್ಟಿಸಿದ ಕೃತಿಗಳಾಗಿ ಪರಿಣಮಿಸಿದವು. ವಿದ್ಯಾರ್ಥಿದೆಸೆಯಲ್ಲಿ ಅವುಗಳನ್ನು ಓದಿದ್ದೇ ಓದಿದ್ದು. ನಮ್ಮ ಕಾವ್ಯಾಸಕ್ತಿಯನ್ನು ಪುಟಗೊಳಿಸಿದ ಕೃತಿಗಳಲ್ಲಿ ಅವುಗಳಿಗೂ ಒಂದು ಸ್ಥಾನವಿದೆ. ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಸಾರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ'ದಿಂದ ಒಂದೆಡೆಗೆ ದೊರಕಿದಂತಾಗಿತ್ತು. ರಸಾನುಭವದಿಂದ ಮನಸ್ಸು ಹದಗೊಂಡು, ಸಂಸ್ಕಾರಗೊಳ್ಳುವ ಪರಿಯನ್ನು ತಾತ್ತ್ವಿಕವಾಗಿ ಅದು ಬಿಂಬಿಸಿತು. ವಿಚಾರಗಳನ್ನು ತಿಳಿಯಾಗಿ ಮನಸ್ಸಿಗೆ ಮುಟ್ಟಿಸುವ ಆ ಗದ್ಯಶೈಲಿಯೂ ಅಷ್ಟೇ ಆಕರ್ಷಣೀಯವಾಗಿತ್ತು.

ಆ ಪ್ರಾಯದಲ್ಲಿ 'ಉಮರನ ಒಸಗೆ' ಒಂದು ಅನುವಾದಿತ ಕೃತಿಯೆಂಬುದನ್ನು ಮರೆಸಿ ಮನಸ್ಸನ್ನು ಸೆಳೆದುಕೊಂಡಿತ್ತು. 'ಅಲ್ಲಿ ಮರದಡಿಯಲ್ಲಿ'. 'ಜೀವನದ

ಸೊದೆಯ ಸವಿಯಲ್ಕಿರುವುದೀ ನಿಮಿಷ', 'ಏಳು ಸಖಿ. ನಿನ್ನುಗುರು ಮೀಟಲಿ ಸಿತಾರೆಯನು' ಮೊದಲಾದ ಪದ್ಯಗಳು, 'ನಾವೇನು ಚಿನ್ನವೇ, ಮರುಳೆ, ನಮ್ಮನದಾರು ಮಣ್ಣಿಕೆಳಗಿಂದ ಮೇಲೆತ್ತುವರು ಮರಳಿ' ಇವೇ ಮೊದಲಾದ ಸಾಲುಗಳು ಈಗಲೂ ನೆನಪಿನ ತೋಟದಲ್ಲಿ ನಳನಳಿಸುತ್ತಿವೆ. ಆದರೆ ಡಿ.ವಿ.ಜಿ. ಒಂದು ರೀತಿ ಮನೆಮಾತಾಗಿ ಉಳಿದಿದ್ದು 'ಮಂಕುತಿಮ್ಮನ ಕಗ್ಗ'ದಿಂದ. ಇಂಥ ಒಳ್ಳೆಯ ಕೃತಿಗೆ ಅನಾಕರ್ಷಕವಾದ ಇಂಥ ವಿಚಿತ್ರ ಹೆಸರನ್ನೇಕಿಟ್ಟರೋ ಎಂದು ನಾನಾಗ ಅಚ್ಚರಿಗೊಂಡಿದ್ದೆ. 'ಈ ವಿಚಿತ್ರಕೆ ನಮಿಸು ಮಂಕುತಿಮ್ಮ' ಎಂದು ಗೆಳೆಯರೊಡನೆ ಹಾಸ್ಯ ಮಾಡಿದ್ದೂ ಉಂಟು. ಆಗ ಸಾಮಾನ್ಯವಾಗಿ ಭಾಷಣದಲ್ಲಿ. ಸಂಭಾಷಣೆಯಲ್ಲಿ. ಬರಹದಲ್ಲಿ ಮಂಕುತಿಮ್ಮನ ಪದ್ಯಗಳನ್ನು ಉದಾಹರಿಸದಿರುವುದೇ ಅಪರೂಪವಾಗಿತ್ತು. ಜೀವನದ ಅನುಭವ, ಬದುಕಿನ ಬಗೆ. ನಿಸರ್ಗದ ಸೊಗಸು, ತಿಳಿಯಾದ ತಾತ್ವಿಕ ವಿಚಾರ ಸರಣಿ, ಸರಳವಾದ ಭಾಷೆ. ಮಾತಿನ ಓಘ, ಸಮಯೋಚಿತ ಉಪಮೆ ದೃಷ್ಟಾಂತಗಳು— ಎಲ್ಲ ಎರಕಗೊಂಡಂತಿರುವ 'ಕಗ್ಗ' ಇಂದಿಗೂ ತನ್ನ ಪ್ರಭಾವವನ್ನು ಅಚ್ಚಳಿಯದೆ ಉಳಿಸಿಕೊಂಡಿದೆ. ಆಧುನಿಕ ಜೀವನದ ಸಂದರ್ಭದಲ್ಲಿ ಈ 'ಸರ್ವಜ್ಞ', ತ್ರಿಪದಿಯ ಬದಲು ಚೌಪದಿಯನ್ನು ಆರಿಸಿಕೊಂಡು ತನ್ನ ಅನುಭವವನ್ನು ಅಭಿವ್ಯಕ್ತಿಗೊಳಿಸಿರ ಬಹುದೆ ಎಂದು ಈಗಲೂ ಅನ್ನಿಸುತ್ತದೆ.

1953ರಲ್ಲಿ ನನ್ನ 'ಆಕಾಶಬುಟ್ಟಿ' ಕವನಸಂಗ್ರಹ ಪ್ರಕಟವಾದಾಗ ಅದರ ಪ್ರತಿಯನ್ನು ಪತ್ರದೊಂದಿಗೆ ಡಿ.ವಿ.ಜಿ.ಯವರ ಅವಲೋಕನೆಯ ಕೃಪೆಗಾಗಿ ಕಳಿಸಿ ಕೊಟ್ಟಿದ್ದೆ. ಅವರು ಉತ್ತರ ಬರೆಯ ಬಹುದೆಂದೇನೂ ನಾನು ನಿರೀಕ್ಷಿಸಿರಲಿಲ್ಲ. ಆದರೆ ಅವರಿಂದ ಪತ್ರ ಬಂದಾಗ ನನಗಾದ ಸಂತೋಷ ಹೇಳತೀರದು. ಆ ಪತ್ರ ಹೀಗಿತ್ತು :

ಜೂನ್ 25, 1953

ಮಿತ್ರರಲ್ಲಿ ವಿಜ್ಞಾಪನೆ,

ನನ್ನ ಅನಾರೋಗ್ಯದ ಕಾರಣದಿಂದ ಇದುವರೆಗೂ ತಮ್ಮ 6ನೆಯ ತಾರೀಖಿನ ಪತ್ರಕ್ಕಾಗಿಯೂ ಪುಸ್ತಕಕ್ಕಾಗಿಯೂ ವಂದನೆ ಸಲ್ಲಿಸುವುದು ತಡವಾಗಿದೆ. ಕ್ಷಮಿಸಬೇಕೆಂದು ಬೇಡುತ್ತೇನೆ. "ಆಕಾಶ ಬುಟ್ಟಿ"ಯಲ್ಲಿಯ ಕವಿತೆಗಳನ್ನು ಓದಿ ಸಂತೋಷಪಟ್ಟಿದ್ದೇನೆ. ಶೈಲಿ ಸರಳವಾಗಿಯೂ ಭಾವಗಳು ಲಲಿತವಾಗಿಯೂ ಇರುವುದರಿಂದ ಬಹುಮಂದಿ ಈ ಗ್ರಂಥವನ್ನು ಪ್ರೀತಿಯಿಂದ ಆದರಿಸಿಯಾರು ಎಂದು ನಂಬಿದ್ದೇನೆ. ತಮ್ಮ ಕೃಪೆಗಾಗಿ ತುಂಬ ಕೃತಜ್ಞನಾಗಿದ್ದೇನೆ.

ಇಂತೀ ವಿಜ್ಞಾಪನೆ
ವಿಧೇಯ
ಡಿ.ವಿ. ಗುಂಡಪ್ಪ

ಕವಿತೆಗಳ ಬಗ್ಗೆ ಅವರ ಮೆಚ್ಚಿಕೆಯ ಒಂದು ಮಾತು ನನ್ನಲ್ಲಿ ಉತ್ಸಾಹವನ್ನೂ ಸಂತೋಷವನ್ನೂ ಹೆಚ್ಚಿಸಿದ್ದು ನಿಜವೇ. ಆದರೆ ಅವರ ಬರವಣಿಗೆಯ ರೀತಿ ನನ್ನನ್ನು

ಮೂಕವಿಸ್ಮಿತನನ್ನಾಗಿಸಿತು. ಇಂಥ ಒಬ್ಬ ಮೇಧಾವಿ ಹಿರಿಯ ಸಾಹಿತಿ, ಅಪರಿಚಿತ ತರುಣನೊಬ್ಬ ಪುಸ್ತಕ ಕಳಿಸಿದ್ದಕ್ಕೆ 'ತಮ್ಮ ಕೃಪೆಗಾಗಿ ತುಂಬ ಕೃತಜ್ಞತೆಗಳು' ಎಂಬ ಭಾವವನ್ನು ವ್ಯಕ್ತಪಡಿಸುವುದಾಗಲಿ, 'ವಿಧೇಯ' ಎಂದು ಸಹಿ ಮಾಡುವುದಾಗಲಿ. ನನ್ನಂಥವನ ಊಹೆಗೂ ಮೀರಿದ್ದಾಗಿತ್ತು. ಅವರನ್ನೊಮ್ಮೆ ಪ್ರತ್ಯಕ್ಷ ಕಂಡು. ಅವರು ಹೊರಿಸಿದ ಕೃತಜ್ಞತೆಯ ಭಾರವನ್ನು ಇಳುಹಿಕೊಳ್ಳಲೇಬೇಕೆಂದು ನಿಶ್ಚಯಿಸಿದೆ.

ಮುಂದೆ ಎರಡು ವರ್ಷಗಳಲ್ಲಿ ಆ ಸುಯೋಗ ಒದಗಿ ಬಂದಿತು. 1955ರಲ್ಲಿ ಮೈಸೂರಿನಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಹಾಗೂ ವಿಮರ್ಶಾಗೋಷ್ಠಿಗಳಲ್ಲಿ ಭಾಗವಹಿಸಿ ಬೆಂಗಳೂರಿಗೆ ಬಂದೆ. ನಾನು ಬೆಂಗಳೂರಿಗೆ ಹೋದದ್ದು ಅದೇ ಮೊದಲು. ಜೊತೆಗೆ ಮಾರ್ಗದರ್ಶನಕ್ಕಾಗಿ ಮಿತ್ರರಾದ ಶ್ರೀ ಬಸವರಾಜ ಕಟ್ಟೀಮನಿಯವರೂ ಇದ್ದರು. ಬಸವನ ಗುಡಿಯ ನಾಗಸಂದ್ರ ರೋಡಿನಲ್ಲಿಯ ಡಿ.ವಿ.ಜಿ.ಯವರ ಮನೆಯನ್ನರಸಿಕೊಂಡು ಹೋದೆವು. ಮಧ್ಯಾಹ್ನ ಮೀರಿ ಹೋಗಿತ್ತು. ಅದೇ ಊಟ ಮುಗಿಸಿ ಹೊರ ಬಂದಿದ್ದರೆಂದು ತೋರಿತು ನಾನು ಹಿಂದೆ ಧಾರವಾಡದಲ್ಲಿ ನೋಡಿದಾಗಿಗಿಂತ ಈಗ ಹೆಚ್ಚು ಸ್ಥೂಲವಾಗಿ ಕಂಡರು. ನಮ್ಮ ಪರಿಚಯದಿಂದ ಸಂತೋಷ ವ್ಯಕ್ತಪಡಿಸಿ. ಕುಡಿಯಲು ಪಾನಕ ಕೊಟ್ಟರು. ಮೈಸೂರು ಸಾಹಿತ್ಯ ಸಮ್ಮೇಳನದ ಬಗ್ಗೆ ವಿಚಾರಿಸಿದರು. ಅವರ ಆರೋಗ್ಯ ಚೆನ್ನಾಗಿಲ್ಲದ್ದನ್ನು ತಿಳಿದು, ತೊಂದರೆ ಕೊಡಬಾರದೆಂದು ನಾವೇ ಹೆಚ್ಚು ಹೊತ್ತು ಕುಳಿತುಕೊಳ್ಳದೆ ಗೌರವ ಪೂರ್ವಕ ನಮಸ್ಕಾರ ಸಲ್ಲಿಸಿ ಹೊರಬಂದೆವು. ಅವರನ್ನು ಮತ್ತೆ ಕಾಣುವ ಸುಯೋಗ ಬರಲಿಲ್ಲ.

ಇಪ್ಪತ್ತು–ಇಪ್ಪತ್ತೈದರ ಪ್ರಾಯದಲ್ಲಿ ಓದಿದ 'ಕಗ್ಗ'ವನ್ನು ಅರುವತ್ತರ ಅಂಚಿನಲ್ಲಿ ಈಗ ಮತ್ತೆ ಓದಿದಾಗ ಇನ್ನೂ ಅರ್ಥಪೂರ್ಣವಾಗಿ ಅದರ ಮಹತ್ವ ಹೆಚ್ಚು ಮನದಟ್ಟಾಗುತ್ತಿದೆ. ಕಾವ್ಯದ ಭಾಗವಾಗಿ ಬರಲಿಲ್ಲವೆಂದೋ. ತಾತ್ವಿಕ ಜಿಜ್ಞಾಸೆಗೆ ನಾನೇ ಆತುರಪಡಲಿಲ್ಲವೆಂದೋ ಆಗ ಅಲಕ್ಷಿಸಿದ್ದ ಕೆಲವು ಪದ್ಯಗಳು ಈಗ ಮನಸ್ಸನ್ನು ಸಂಪೂರ್ಣ ಆವರಿಸಿಕೊಳ್ಳುತ್ತ ತಮ್ಮ ಜೀವನ ವಿವೇಕದಿಂದ. ಪಕ್ವವಾದ ವಿಚಾರ ಪ್ರಣಾಲಿಯಿಂದ ನಮ್ಮ ಅನುಭವದ ಒಂದು ಭಾಗವಾಗಿ ನಿಲ್ಲುತ್ತ, ಅಂತರಂಗವನ್ನು ಬೆಳಗುತ್ತದೆ. ಗುಣಕೆ ಕಾರಣ ಹಲವಾರು ; ತತ್ವ ತರ್ಕಕ್ಕೆ ಸಿಲುಕುವುದಲ್ಲ ; 'ಸುಳಿವು-ದಾಗೀಗಳದು ಸೂಕ್ಷ್ಮಾನುಭವಗಳಲಿ. ತಿಳಿಮನದಿ ನೋಳ್ಪರ್ಗೆ'. ಪರಸತ್ತ್ವ ಮಹಿಮೆ ಮನಸಿನನುಭವದಲ್ಲಿ ಕಾಣುವಂಥದು : 'ಮನುಜರೊಳಗಾಗಾಗ ತೋರ್ಪ ಮಹನೀಯ ಗುಣ' ದೈವದದ್ಭುತವನ್ನು ಮನಗಾಣಿಸುತ್ತದೆ. ಯಾವುದರಲ್ಲಿಯೋ ಹೇಗೋ ಸಮಾಧಾನಗಳನ್ನರಸುತ್ತಿರುವ ಮಾನವನಿಗೆ' 'ಆನಂದವಾತ್ಮಗುಣ'ವೆಂಬುದರ ಅರಿವಿಲ್ಲ. 'ನಿತ್ಯ ಪರಿವರ್ತನೆಯು ಚೈತನ್ಯ ನರ್ತನೆಯ ಜಗವಲಿ ಸತ್ಯ'. 'ಇರವಿದೇ-ನೊಣರಗಳೆ ?' ಎಂಬ ನಿರಾಶೆಯ ನಿಲವಿನಲ್ಲೇ ನಿಲ್ಲದೆ 'ಪೌರುಷವು ನವಸತ್ತ್ವ'ವೆಂಬುದನ್ನು ಸೂಚಿಸಲಾಗಿದೆ. ವಿಧಿಯನ್ನು ನೇಮಿಸಿದ್ದು ಬೇರಾವುದಕ್ಕೂ ಅಲ್ಲ. 'ಪರಜಾತಿ ಸಾನುಭೂತಿಯ ಕಲಿಯಲೆಂದು'. ಸೃಷ್ಟಿ ರಸಿಕತೆಗೆ ಗುರು. 'ಮೆಸನ

ಮಯ ಸಂಸಾರದಲಿ ವಿನೋದವ ಕಾಣ್ಬ ರಸಿಕತೆಯೆ ಯೋಗ'. 'ನಲುಮೆಯನು ಹೊರ ಹೊಮ್ಮಿಸುವುದು ನರನುನ್ನತಿಗೆ, ಒಲವಾತ್ಮ ವಿಸ್ತರಣ'. ಪ್ರತ್ಯೇಕ ಸುಖ ಅಲ್ಪದ್ದು, ಗಳಿಗೆತೋರ್ಕೆಯದು ; 'ವ್ಯಕ್ತಿ ಜೀವನದ ಸೊಂಪು ಸಮಷ್ಟಿ ಜೀವನದಿ'. 'ಜೀವ ದೈವಂಗಳ ಪರಸ್ಪರಾನ್ವೇಷಣೆಯೆ ಲಾವಣ್ಯ ಸೃಷ್ಟಿಯಲಿ'. ಬಾಳಿನಲ್ಲಿ 'ಹೋರಿ ಸತ್ತ್ವವ ನಿಲಿಸು'. 'ತಾಳುಮೆಯೆ ಪರಿಪಾಕ'. —ಹೀಗೆಯೇ ಜೀವನದ ನೂರೊಂದು ಸಂದರ್ಭಗಳಲ್ಲಿ, ನೂರೊಂದು ಬಗೆಯಲ್ಲಿ ವಿವೇಕದ ಬತ್ತಿಗೆ ಎಣ್ಣೆಯೆರೆದು ದೀಪ ಹೊತ್ತಿಸಿ, ಬೆಳಕು ಬೀರಿ ಮನಸ್ಸಿಗೆ ಸಮಾಧಾನವನ್ನೂ, ನೆಮ್ಮದಿಯನ್ನೂ ನೀಡುತ್ತವೆ ಕಗ್ಗದ ಪದ್ಯಗಳು. 'ಕಲೆಗಳಲಿ ಪರಮಕಲೆ ಜೀವನದ ಲಲಿತ ಕಲೆ' ಎಂಬುದನ್ನು ತೋರಿಸಿಕೊಟ್ಟು ಒಲಿದು ಒಲಿಸಿಕೊಳ್ಳುವ ಲೌಕಿಕ ನಯದ ಸೊಗಸನ್ನು ಒಳಹದದಿಂದ ತಿಳಿಯಲು ಪ್ರಚೋದಿಸುತ್ತ 'ವಿಶದವಾದೊಂದು ಜೀವನಧರ್ಮ ದರ್ಶನ'ವನ್ನು ಒದಗಿಸುವುದರಲ್ಲಿಯೇ ಈ ಕಾವ್ಯದ ಶ್ರೇಷ್ಠತೆಯಿರುವುದೆಂದು ನನಗನಿಸುತ್ತದೆ.

ಬಹುಮುಖವಾದ ಸಾಮಾಜಿಕ ಸೇವೆಗೈಯುತ್ತಲೇ, ಜೀವನಪನ್ನು, ಚೇತನ ವನ್ನು ಗೌರವಿಸುತ್ತ ಹಿರಿಯ ಬಾಳನ್ನು ಬಾಳಿ, ಆತ್ಮೋನ್ನತಿಗಾಗಿ ಸಾಹಿತ್ಯಕೃಷಿ ಗೈದು, ಚಿರಕಾಲ ಬಾಳುವ ಸತ್ವಪೂರ್ಣವಾದ ಕೃತಿಗಳಿಂದ ಕನ್ನಡದ ಹಿರಿಮೆಯನ್ನೂ ಹೆಚ್ಚಿಸಿದ 'ಡಿವಿಜ'ರ ಪುಣ್ಯಸ್ಮರಣೆಗೆ ಈ ನೆನಹಿನ ದೀವಿಗೆ.

—ಚೆನ್ನವೀರ ಕಣವಿ

ನೆನಪಿನ ಬತ್ತಳಿಕೆಯಲ್ಲಿಯ ಒಂದು ಬಾಣ*

ಡಿ.ವಿ.ಜಿ.ಯವರದೊಂದು ಒಳ್ಳೆಯ ಇತ್ತೀಚಿನ ಫೋಟೋ ಬೇಕಾಗಿದ್ದಿತು. ಫೋಟೋಕ್ಕೆ ಹಾಗೂ ಸಂದರ್ಶನಕ್ಕೆ ಡಿ.ವಿ.ಜಿ.ಯನ್ನು ಒಪ್ಪಿಸುವುದು ತುಂಬಾ ಕಷ್ಟಕರ ವಾದ ಮಾತು. ಮೊದಲ ದಿನ ನಾನು. ಹಾಗೂ 'ಕರ್ಮವೀರ'ದ ಸಹಾಯಕ ಸಂಪಾದಕರೂ ಕೂಡಿಕೊಂಡೇ ಅವರನ್ನು ಕಂಡೆವು.

ಯಥಾಪ್ರಕಾರ ಆದರದ ಸ್ವಾಗತ. ಆದರೆ ಮುಖ್ಯ ವಿಷಯದ ಬಗೆಗೆ ಮಾತೆತ್ತಿದಾಗ ಮಾತ್ರ ಡಿ.ವಿ.ಜಿ. ಖಡಾಖಂಡಿತವಾಗಿ "ಅದೊಂದೂ ಬೇಡ" ಎಂದುಬಿಟ್ಟರು.

"ನಿಮಗೆ ಬೇಕಿರಲಿಕ್ಕಿಲ್ಲ. ಆದರೆ ಕನ್ನಡಿಗರಿಗೆ—'ಕರ್ಮವೀರ'ದ ವಾಚಕರಿಗೆ—ಅದು ಬೇಕು. ಸಾರ್ವಜನಿಕ ಹಾಗೂ ಸಾಹಿತ್ಯಕ ಜೀವನದಲ್ಲಿ ಧುಮುಕಿ ಸೇವೆ ಸಲ್ಲಿಸಿದ ನೀವು ಕನ್ನಡಿಗರ ಆಸ್ತಿ. ನಿಮ್ಮಿಂದ ಇಂತಿಂತಹದು ಬೇಕು ಎಂದು ಕೇಳುವ ಹಕ್ಕು ಕನ್ನಡಿಗರಿಗೆ ಇದೆಯಲ್ಲವೆ ?" ಎಂದೆ.

"ಓಹೋಹೋ" ಎಂದು ಮುಕ್ತ ಹೃದಯದಿಂದ ಡಿ.ವಿ.ಜಿ. ನಕ್ಕುಬಿಟ್ಟರು. ಡಿ.ವಿ.ಗುಂಡಪ್ಪನವರದು ಆಕಾರ ಭೀಮನದು. ನಗುವೂ ಭೀಮಾಕಾರವೇ.

ಗುಂಡಪ್ಪನವರು ಸಂಪಾದಕರತ್ತ ಹೊರಳಿ ನನ್ನನ್ನುದ್ದೇಶಿಸಿ ಹೇಳಿದರು :.

"He is the man who is incapable of hating anything"

ಅವರ ಈ ಹಾಸ್ಯದಲ್ಲಿಯೇ ಅವರ ಒಪ್ಪಿಗೆ ಸಿಕ್ಕಿತು ಎಂದು ನಾನು ಮುಂದು ವರಿದು ಕೇಳಿದೆ :

"ಹಾಗಾದರೆ ನಾಳೆ ಮಧ್ಯಾಹ್ನ ಫೋಟೋಗ್ರಾಫರ್ ಕೇಸರಸಿಂಗರನ್ನು ಕರೆದು ಕೊಂಡು ಬರುತ್ತೇನೆ."

"ಏನೇನು ಮಾಡ್ತಿರೋ ಮಾಡಿ" ಎಂದರು ಗುಂಡಪ್ಪ.

---

* ಕೃಪೆ: ಕರ್ಮವೀರ, ಫೆಬ್ರುವರಿ 8, 1970

ಅವರ 'ಅಸ್ತು' ದೊರಕಿಸಿಕೊಂಡ ನಾನು ಕೇಸರಸಿಂಗ್‌ರನ್ನು ಕರೆದುಕೊಂಡು ಮರುದಿನ ಗುಂಡಪ್ಪನವರ ಮನೆಗೆ ಹೋದೆ. ಮಧ್ಯಾಹ್ನದ ನಿದ್ರೆ ಮುಗಿಸಿಕೊಂಡು ಅಂದಿನ ಟಪಾಲನ್ನು ಒಡೆದು ಓದುವದರಲ್ಲಿ ಮಗ್ನರಾಗಿದ್ದರು ಡಿ.ವಿ.ಜಿ.

ನಾವು ಬಂದ ಸುದ್ದಿ ತಿಳಿದಾಕ್ಷಣ "ಒಂದು ಹದಿನೈದು ನಿಮಿಷ ಕುಳಿತುಕೊಳ್ಳಿ" ಎಂದು ಗುಂಡಪ್ಪನವರು ವಿನಂತಿಸಿಕೊಂಡರು. ಕೇಸರಸಿಂಗ್ ಯಥಾಪ್ರಕಾರ ಭಾವ ಚಿತ್ರಗಳಿಗೆ ಸರಿಯಾದ ಜಾಗ, ಹಿನ್ನೆಲೆ, ಬೆಳಕು ಹುಡುಕಾಡತೊಡಗಿದರು. ಅವರ ಸಹಾಯಕನಾಗಿ ನಾನು ಕೂಡ ದಿವಾಣಖಾನೆಯಲ್ಲಿಯ ಕುರ್ಚಿಯನ್ನು ಅತ್ತಿತ್ತ ತೆಗೆದಿಡತೊಡಗಿದೆ.

ಒಂದು ಕುರ್ಚಿಯನ್ನು ಎತ್ತಲು ಹೋದಾಗ ಅಮೃತಶಿಲೆಯಲ್ಲಿ ಕಟೆದ ಶ್ರೀ ಗಣೇಶನ ವಿಗ್ರಹ ನನ್ನ ಗಮನವನ್ನು ಸೆಳೆದುಕೊಂಡಿತು. ಆ ಮೂರ್ತಿಯನ್ನು ನೋಡುತ್ತಿದ್ದಂತೆ ಒಂದರೆಕ್ಷಣ ನಾನು ಬೆಪ್ಪನಾಗಿ ನಿಂತುಕೊಂಡೆನು. ಶಿಲ್ಪಿಯ ಜಾಣ್ಮೆ ಒಡೆದು ಕಾಣುತ್ತಿತ್ತು. ಇಂತಹ ಮೂರ್ತಿಗಳನ್ನು ಇಲ್ಲಿ ತಯಾರಿಸುವ ಶಿಲ್ಪಿಗಳು ಇದ್ದರೂ ಇರಬಹುದು. ಆದರೆ, ಅದನ್ನೇ ಒಂದು ಉದ್ಯೋಗವೆಂದು ಭಾವಿಸಿ ದುಡಿಯುವ ಶಿಲ್ಪಿಗಳಿಲ್ಲವೆಂಬುದು ನನಗೆ ಗೊತ್ತಿದ್ದಿತು.

ಈ ಮೂರ್ತಿಯ ಬಗೆಗೆ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಬೇಕೆಂದು ನಿರ್ಧರಿಸಿದೆ.

ಭಾವಚಿತ್ರಕ್ಕಾಗಿ ಗುಂಡಪ್ಪನವರಿಗೆ ಹಲವು ಭಂಗಿಗಳನ್ನು ಕೊಟ್ಟೆವು. ಕ್ಯಾಮರಾ ಬರಿದಾದಾಗಲೇ ಕೇಸರಸಿಂಗ್ ತಮ್ಮ ಕೆಲಸವನ್ನು ನಿಲ್ಲಿಸಿದರು.

"ಆಯಿತೋ ಒಂದು ಸಲ ?" ಎಂದು ಗುಂಡಪ್ಪನವರು ಕೇಳಿದರು.

"ಆಯಿತು" ಎಂದೆವು.

ಅಷ್ಟೊತ್ತಿಗೆ ಕಾಫಿ ಬಂದಿತು. ಕಾಫಿಯನ್ನು ಕುಡಿಯುತ್ತಿದ್ದಂತೆ, ನಾನು ಗುಂಡಪ್ಪನವರನ್ನು ಕೇಳಿದೆ : "ನೀವು ಗಣೇಶನ ಮೃತ್ತಿಕಾಮೂರ್ತಿಯನ್ನು ಪೂಜಿಸುವದಿಲ್ಲವೇ ? ಈ ಅಮೃತಶಿಲೆಯಲ್ಲಿ ಕಟೆದಿರುವ ಶ್ರೀ ಗಣೇಶನ ಮೂರ್ತಿಯನ್ನು ಕಂಡೆ. ಅದಕ್ಕಾಗಿ ಇಂತಹ ಪ್ರಶ್ನೆಯನ್ನು ಕೇಳಿದೆ."

"ಓಹ್,......ಅದಕ್ಕೂ ಒಂದು ಇತಿಹಾಸವಿದೆ ಜೋಶಿ" ಎಂದರು ಡಿ.ವಿ.ಜಿ

ಇತಿಹಾಸವೆಂದಾಕ್ಷಣ ನಾನು ನನ್ನ ಪೆನ್ನನ್ನು ಕೈಗಿರಿಸಿಕೊಂಡು ಕಾಗದವನ್ನು ಮುಂದೆ ಸರಿಸಿಕೊಂಡೆ.

ನನ್ನ ಸಿದ್ಧತೆಯನ್ನು ಕಂಡ ಡಿ.ವಿ.ಜಿ. "ಅದೆಲ್ಲ ಬರೆಯುವುದು ಬೇಡಪ್ಪ. ಸುಮ್ಮನೇ ಕೇಳಿ" ಎಂದು ಹೇಳಲು ಪ್ರಾರಂಭಿಸಿದರು.

"ಈ ಗಣೇಶನ ವಿಗ್ರಹವನ್ನು ನನಗೆ ಉಡುಗೊರೆ ಕೊಟ್ಟಿದ್ದು ಯಾರು ಗೊತ್ತೆ ?"

ನಾವಿಬ್ಬರೂ ತಲೆಯಲ್ಲಾಡಿಸಿ 'ಇಲ್ಲ'ವೆನ್ನುವುದನ್ನು ಸೂಚಿಸಿದೆವು.

ಆಗ ಡಿ.ವಿ.ಜಿ. ಹೇಳಿದರು :

"ಸರ್ ಮಿರ್ಝಾ ಇಸ್ಮಾಯಿಲ್ ನನಗೆ ಈ ಗಣೇಶನ ವಿಗ್ರಹವನ್ನು ಕೊಟ್ಟಿದ್ದಾರೆ." ಒಂದು ಬಗೆಯ ಆಶ್ಚರ್ಯ ನನ್ನನ್ನಾವರಿಸಿತು. ಡಿ.ವಿ.ಜಿ. ವಿವರಣೆ ಮುಂದುವರಿಯಿತು.

"ಮಿರ್ಝಾ, ನಾನು ಅನ್ಯೋನ್ಯವಾಗಿ ಸ್ನೇಹದಿಂದಲೇ ಇದ್ದವರು. ರಾಜಕೀಯ ಕಾರಣಗಳಿಗಾಗಿ ನಾವು ಅನೇಕ ಸಲ ಜಗಳವಾಡಿದ್ದೇವೆ, ಮಾತು ನಿಲ್ಲಿಸಿದ್ದೇವೆ, ಮತ ಭೇದಗಳು ಪರಿಹಾರವಾದಾಗ ಪುನಃ ಸ್ನೇಹಿತರಾಗಿದ್ದೇವೆ."

"ರಾಜಕಾರಣಕ್ಕೂ ಗಣೇಶನಿಗೂ ?"—ನನ್ನ ಮಧ್ಯಪ್ರವೇಶ.

"ಇರಿ......ಹೇಳ್ತೀನೆ" ಎಂದು ಪ್ರಾರಂಭಿಸಿದರು. "ಮಿರ್ಝಾ ಸಾಹೇಬರು ಜಯಪೂರಿನ ದಿವಾಣರಾಗಿದ್ದಾಗ ಅಲ್ಲಿಯ ಶಿಲ್ಪಿಯೊಬ್ಬ ಮಿರ್ಝಾರನ್ನು ಅವರಿಗೆ ಪ್ರಿಯವಾದ ಮೂರ್ತಿಯನ್ನು ಮಾಡಿಕೊಡುವುದಾಗಿ ದುಂಬಾಲು ಬಿದ್ದನು. ಮಿರ್ಝಾರಿಗೆ ಹಿಂದೂ ದೇವರಲ್ಲಿ ಗಣಪತಿಯ ಜ್ಞಾಪಕ ಬಂದಿತು. ಸುಲ್ತಾನಪೇಟೆ ಗಣೇಶಮಂದಿರದ ಪ್ರಸಂಗದಿಂದ ಗಣೇಶ ಅವರ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದುಕೊಂಡಿರಬೇಕು. ಗಣೇಶನ ವಿಗ್ರಹ ಮಾಡಿಕೊಡುವಂತೆ ಶಿಲ್ಪಿಗೆ ಹೇಳಿದರು ಮಿರ್ಝಾ. ಶಿಲ್ಪಿ ಈ ಮೂರ್ತಿಯನ್ನು ಮಾಡಿಕೊಟ್ಟ. ಅದನ್ನು ಮಿರ್ಝಾ ಸಾಹೇಬರು ಜೋಪಾನವಾಗಿರಿಸಿಕೊಂಡಿದ್ದರು. ಜಯಪೂರ ಸಂಸ್ಥಾನದ ಸರಕಾರದ ಸೇವೆಯಲ್ಲಿ ಮೈಸೂರಿನ ಇಂಜಿನೀಯರರೊಬ್ಬರು ಕೆಲಸಕ್ಕಿದ್ದರು. ಅವರು ರಜೆಯ ಮೇಲೆ ಬೆಂಗಳೂರಿಗೆ ಹೊರಟು ನಿಂತಾಗ ಮಿರ್ಝಾ ಸಾಹೇಬರು ಆತನನ್ನು ಕರೆದು ಈ ಗಣೇಶ ವಿಗ್ರಹವನ್ನು ಆತನ ಕೈಗಿರಿಸಿ ಇದನ್ನು ಜೋಪಾನವಾಗಿ ಬೆಂಗಳೂರಿಗೆ ಒಯ್ದು—ರೈಲುನಿಲ್ದಾಣದಿಂದ ಡಿ. ವಿ. ಗುಂಡಪ್ಪನವರ ಮನೆಗೆ ಹೋಗಿ ಅವರಿಗೆ ನನ್ನ ಪರವಾಗಿ ಕೊಡಿ' ಎಂದು ಹೇಳಿದ್ದರು.

"ಆ ಇಂಜಿನೀಯರು ಮಿರ್ಝಾ ಸಾಹೇಬರ ಆಜ್ಞೆಯನ್ನು ಪಾಲಿಸಿದರು. ಶ್ರೀ ಗಣೇಶನ ವಿಗ್ರಹ ಈ ರೀತಿಯಾಗಿ ನನ್ನ ಮನೆಗೆ ಬಂದಿತು.

"ಈ ಅಮೃತಶಿಲೆಯ ಗಣೇಶನ ವಿಗ್ರಹಕ್ಕೆ ತಕ್ಕಂತೆ ಒಂದು ಭವ್ಯವಾದ ಮಂಟಪ ಮಾಡಿಸಬೇಕೆಂದು ನಿರ್ಧಾರಮಾಡಿದೆ. ವೆಂಕಟರಮಣಪ್ಪ ಎನ್ನುವ ಹಣ್ಣಣ್ಣು ಮುದುಕ, ಹಳೆಯ ಬಡಗಿ—ಪರಿಚಯಸ್ಥ—ಆತನಿಗೆ ಮಂಟಪದ ಕೆಲಸ ವಹಿಸಿದೆ. ಆತ ಶ್ರಮ ವಹಿಸಿ ದಿನವೂ ದುಡಿಯುತ್ತಿದ್ದ. ಆತನ ಶ್ರಮ ನೋಡಲಾಗದೆ. 'ಅಯ್ಯಾ, ಅಷ್ಟೊಂದು ಏಕೆ ಶ್ರಮಪಡುತ್ತೀಯ ?' ಎಂದೆ. ಆಗ ಆತ ಹೇಳಿದ ಉತ್ತರ ಇಂದಿನವರೆಗೆ ತಮಾಷೆಯಾಗಿ ಕಂಡೀತು. ಆತ ಏನು ಹೇಳಿದ ಗೊತ್ತೇ ?"

—ಎಂದು ಪ್ರಶ್ನೆ ಹಾಕಿದರು ಗುಂಡಪ್ಪ. ಇಲ್ಲವೆನ್ನುವ ನಮ್ಮ ಉತ್ತರ ನಿಶ್ಚಿತ ವೆಂಬುದು ಅವರಿಗೆ ಗೊತ್ತಿದ್ದದ್ದರಿಂದ ನಮ್ಮ ಉತ್ತರಕ್ಕೆ ಕಾಯದೆ ಅವರೇ ಮುಂದುವರಿಸಿದರು.

"ಆ ಹಳೇ ಹಣ್ಣಣ್ಣು ಮುದುಕ-ಬಡಗಿ ಹೇಳಿದ: 'ಬುದ್ಧಿ, ಹೇಗೋ ಕೆಲಸ ಮಾಡಿ ಬೀಸಾಕಿ ಬಿಡಬಹುದು. ಆದರೆ ಆ ಹಾಳು ಆತ್ಮ ಅನ್ನೋದಿದೆಯಲ್ಲ. ಅದು ಕೇಳುತ್ತೆ ಬುದ್ಧಿ : 'ದುಡ್ಡು ತೊಗೊಳ್ತೀಯಾ, ಅದಕ್ಕೆ ತಕ್ಕಂತೆ ಕೆಲ್ಸ ಮಾಡಿದೆಯಾ ?' ಎಂದು. ಅದಕ್ಕೇ ಬುದ್ಧಿ ನಾನು ಶ್ರಮಪಡಲೇಬೇಕು." "ಇಂದಿನ ಕಿರಿಯರಿಗೆ ಇಂತಹ ಪ್ರಜ್ಞೆ ಬಂದರೆ ಸಾಕು. ಭಾರತ ಉದ್ಧಾರವಾದಂತೆ" ಎಂದರು **ಡಿ.ವಿ.ಜಿ.**

ಡಿ.ವಿ.ಜಿ. ನೆನಪಿನ ಬತ್ತಳಿಕೆಯಲ್ಲಿ ಇಂತಹ ಬಾಣಗಳು ಹಲವಾರು ಇವೆ. ಅವನ್ನೆಲ್ಲ ಅವರು ಹೊರತೆಗೆದು ಬಳಸಬೇಕು, ತಮಗಾಗಿ ಅಲ್ಲ—ನಮಗಾಗಿ.

ಈ ಸ್ಮರಣೆಯ ಬಾಣದೊಂದಿಗೆ. ಅವರ ಆಶೀರ್ವಾದದೊಂದಿಗೆ ಹೊರಬಂದೆವು.

—ನೇಂ. ಮು. ಜೋಶಿ

ಡಿ.ವಿ.ಜಿ. ಅವರ ಪತ್ರಸ್ಪಂದನ

ಪರಗುಣ ಪರಮಾಣೂನ್ ಪರ್ವತೀಕೃತ್ಯ ನಿತ್ಯಂ ।
ನಿಜಹೃದಿ ವಿಕಸಂತಃ ಸಂತಿ ಸಂತಃ ಕಿಮಂತಃ ॥

ಧೀಮಂತ ಡಿ.ವಿ.ಜಿ. ಅವರನ್ನು ನೆನೆದಾಗಲೆಲ್ಲ ನನಗೆ 'ನೀತಿಶತಕ'ದ ಮೇಲಿನ ಅಮೂಲ್ಯ ಪಂಕ್ತಿಗಳು ಜ್ಞಾಪಕಕ್ಕೆ ಬರುತ್ತವೆ. ಅವರು ನನಗೆ ಪ್ರಾಸಂಗಿಕವಾಗಿ ಬರೆದಿರುವ ಪತ್ರಗಳನ್ನು ಓದಿದಾಗ ಅವರ ಹೃದಯವೈಶಾಲ್ಯವೇ ತೆರೆದು ತೋರಿ ದಂತಾಗುತ್ತದೆ.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಡಿ.ವಿ.ಜಿ. ಅವರನ್ನು ನಾನು ದೂರದಿಂದ ಮಾತ್ರ ನೋಡಿ ಬಲ್ಲೆ. ಆಗ ಅವರು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಅವರು ನಿಯಮಿತವಾದ ವೇಳೆಯಲ್ಲಿ ಆಗಿಂದಾಗ್ಗೆ ಅಲ್ಲಿಗೆ ಬಂದು ವ್ಯವಹಾರ ನಡೆಸುತ್ತಿದ್ದರು. ಅವರ ಗಡಸು ದನಿಯನ್ನು ಕೇಳಿ ಸ್ವಲ್ಪ ಭಯವಾಗುತ್ತಲೇ ಇತ್ತು. ಅವರು ಬರೆದಿದ್ದ ಕವನ ಸಂಕಲನಗಳನ್ನು. ಗದ್ಯಕೃತಿಗಳನ್ನು ಓದಿದ್ದ ನನಗೆ ಅವರು ತುಂಬ ಸಂಪ್ರದಾಯವಾದಿಗಳೆಂಬ ಕಲ್ಪನೆ ಬಲವಾಗಿ ಬೇರೂರಿತ್ತು. ಇಂಥ ಪರಿಸ್ಥಿತಿಯಲ್ಲಿ. ಅಷ್ಟೋ ಇಷ್ಟೋ ಸಣ್ಣ ಪುಟ್ಟ ಕವಿತೆಗಳನ್ನು ಬರೆಯಲು ಆರಂಭಿಸಿದ್ದ ನಾನು ಅವರ ಹತ್ತಿರ ಸುಳಿಯುವ ಧೈರ್ಯವನ್ನು ಮಾಡಿರಲಿಲ್ಲ. ಆದರೆ ಅವರ ಪುಸ್ತಕಗಳಲ್ಲಿ ಯಾವುದನ್ನೂ ಆಸಕ್ತಿಯಿಂದ ಓದದೆ ಬಿಡುತ್ತಿರಲಿಲ್ಲ.

ಡಿ.ವಿ.ಜಿ. ಅವರ 'ಸಾಹಿತ್ಯ ಶಕ್ತಿ' ಎಂಬ ಪ್ರಬಂಧ ಸಂಕಲನ ಪ್ರಕಟವಾದ (1950) ಹೊಸತರಲ್ಲಿ, ಅದನ್ನು ಕುರಿತು ಸವಿಸ್ತರವಾದ ಒಂದು ಅವಲೋಕನ ವನ್ನು ಬರೆದು 'ಕನ್ನಡ ನುಡಿ'ಗೆ ಕೊಟ್ಟಿದ್ದೆ. ಆಗ ಅದರ ಸಂಪಾದಕರಾಗಿದ್ದ ಮೋಟ ಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು ಅದನ್ನು 'ಕನ್ನಡ ನುಡಿ'ಯಲ್ಲಿ ಪ್ರಕಟಿಸಿದರು. ಆ ಪ್ರಬಂಧವನ್ನು ಓದಿದ ಡಿ.ವಿ.ಜಿ. ಅವರು ಅದನ್ನು ಮೆಚ್ಚಿಕೊಂಡು ನನಗೆ ಒಂದು ಕಾಗದವನ್ನು ಬರೆದರು. (ಆ ಪತ್ರ ಈಗ ಕೂಡಲೆ ಕೈಗೆ ಸಿಕ್ಕಲಿಲ್ಲ.) ದೊಡ್ಡವರ ಪುಸ್ತಕವನ್ನು ಕುರಿತು ಲೇಖನ ಬರೆದಿದ್ದುದರಿಂದ ಏನು ಅಸಮಾಧಾನ ಉಂಟಾಗು ವುದೋ ಎಂದು ಹೆದರಿದ್ದ ನನಗೆ ಆ ಪ್ರಶಸ್ತಿಪತ್ರವನ್ನು ಓದಿ ನನಗೆ-ಆತ್ಮವಿಶ್ವಾಸ ಉಂಟಾಯಿತು.

ಈ ಪ್ರಕರಣವಾದ ಬಳಿಕ ನಾನು ಡಿ.ವಿ.ಜಿ. ಅವರನ್ನು ನಮ್ಮ ಬಂಧುಗಳೊಬ್ಬರ ಮನೆಯಲ್ಲಿ ಮೊದಲನೆಯ ಸಲ ಸಂಧಿಸಿದಾಗ ಅವರು ವ್ಯಕ್ತಪಡಿಸಿದ ಅಭಿಮಾನ ಅಷ್ಟಿಷ್ಟಲ್ಲ. ಅವರ ಸ್ವಭಾವಕ್ಕೆ ತಕ್ಕಂತೆ ನನ್ನ ಗುರುಹಿರಿಯರ ಮೂಲಕ ಎಷ್ಟೋ ವಿಷಯಗಳನ್ನು ಕೇಳಿ ತಿಳಿದಿದ್ದರೂ ಅಂದು ಅವರ ಸಹೃದಯತ್ವವನ್ನು ತಿಳಿದು ಡಿ.ವಿ.ಜಿ. ಅವರು ಅಕ್ಷರಶಃ ದೊಡ್ಡವರು ಎಂಬ ಅರಿವಾಯಿತು. ಇಲ್ಲಿಂದ ಮುಂದೆ ಒಂದಲ್ಲ ಒಂದು ಸಂದರ್ಭದಲ್ಲಿ ಡಿ.ವಿ.ಜಿ. ಅವರೊಂದಿಗೆ ಪತ್ರವ್ಯವಹಾರದ ಪ್ರಸಂಗಗಳು ಕೂಡಿಬಂದಿವೆ. ಅವುಗಳನ್ನು ಜೋಪಾನವಾಗಿ ಇಟ್ಟಿದ್ದುದರಿಂದ. ಅವುಗಳಿಂದ ಕೆಲವು ಭಾಗಗಳನ್ನು ಮಾತ್ರ ಇಲ್ಲಿ ಉದ್ಧರಿಸಿದ್ದೇನೆ.

ಡಿ.ವಿ.ಜಿ. ಅವರ 'ಶೃಂಗಾರ ಮಂಗಳಂ' ಎಂಬ ಪುಸ್ತಕ ಅಂಗೈ ಅಗಲದಷ್ಟಿದ್ದರೂ ಅದರಲ್ಲಿ ಅವರು ಅಡಗಿಸಿಟ್ಟಿರುವ ಪ್ರಣಯದ ಚಿಂತನೆ ಬಹಳ ಭೂಮವಾದುದೆಂದು ನನ್ನ ಅಭಿಪ್ರಾಯ. ಅದನ್ನು ಮೇಲಿಂದ ಮೇಲೆ ಓದಿ, ಆನಂದಿಸಿ, "ಡಿ.ವಿ.ಜಿ. ಅವರ ಶೃಂಗಾರ ಸಂಹಿತೆ' ಎಂಬ ಒಂದು ಲೇಖನವನ್ನು ಸಿದ್ಧಪಡಿಸಿದೆ. ಅದು ಸಾಕಷ್ಟು ವಿಸ್ತಾರವಾಗಿದ್ದುದರಿಂದ ಯಾವ ಪತ್ರಿಕೆಗೂ ಕಳುಹಿಸುವ ಆಲೋಚನೆ ಮಾಡಿರಲಿಲ್ಲ. ಆ ವೇಳೆಗೆ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದವರು ತಾವು ಹೊಸದಾಗಿ ಪ್ರಾರಂಭಿಸಲಿರುವ 'ಸಾಧನೆ' ತ್ರೈಮಾಸಿಕ ಪತ್ರಿಕೆಗೆ ಒಂದು ಲೇಖನವನ್ನು ಕಳುಹಿಸಿ ಕೊಡಬೇಕೆಂದು ಕಾಗದ ಬರೆದಿದ್ದರು. ನನ್ನ ಬಳಿ ಸಿದ್ಧವಾಗಿದ್ದ ಲೇಖನವನ್ನು ಕಳುಹಿಸಿಕೊಟ್ಟೆ. ಸಂಪಾದಕರು ಉದಾರ ಚಿತ್ತದಿಂದ ಆ ದೊಡ್ಡ ಲೇಖನವನ್ನು 'ಸಾಧನೆ' ತ್ರೈಮಾಸಿಕದ ಪ್ರಥಮ ಸಂಪುಟದ ಪ್ರಪ್ರಥಮ ಸಂಚಿಕೆಯಲ್ಲೇ ಪ್ರಕಟಿಸಿದರು (ನೋಡಿ : ಸಾಧನೆ, ಸಂ.1, ಪು.11–35). ನನ್ನ ಪ್ರಬಂಧವನ್ನು ಓದಿದ ಎಷ್ಟೋ ಜನ ಮಿತ್ರರು 'ಶೃಂಗಾರ ಮಂಗಳಂ' ಪುಸ್ತಕವನ್ನು ಕೊಂಡುತಂದು ಓದಿದರೆಂದು ಕೇಳಿ ನನ್ನ ಕೆಲಸ ಸಾರ್ಥಕವಾಯಿತೆಂದು ಸಂತೋಷಪಟ್ಟುಕೊಂಡೆ. ಕಾವ್ಯಾಲಯದ ಕೂಡಲಿ ಚಿದಂಬರಂ ಅವರು, "ಶೃಂಗಾರ ಮಂಗಳಂ" ಪುಸ್ತಕದ ಎರಡನೆಯ ಮುದ್ರಣದಲ್ಲಿ ಅದನ್ನು ಪ್ರಕಟಿಸುವುದಾಗಿ ಹೇಳಿದರು. ಈ ಪ್ರಸಂಗ ಇಷ್ಟಕ್ಕೇ ಮುಗಿಯಲಿಲ್ಲ. ಅನಿರೀಕ್ಷಿತವಾಗಿ ಒಂದು ದಿನ ಡಿ.ವಿ.ಜಿ. ಅವರಿಂದ ಒಂದು ಪತ್ರವೇ ಬಂದಿತು. ಆ ಕಾಗದವನ್ನು ಓದುತ್ತಿದ್ದಂತೆ ನನ್ನ ಮನಸ್ಸಿಗೆ ಒಂದು ಕಡೆ ಸಂತೋಷವಾದರೆ, ಇನ್ನೊಂದು ಕಡೆ ತುಂಬ ಸಂಕೋಚವೂ ಆಯಿತು. ಪತ್ರ ಓದಿ ಮುಗಿಸಿದ ಬಳಿಕ, ಎಲ್ಲವೂ ಡಿ.ವಿ.ಜಿ. ಅವರ ಆಶೀರ್ವಾದ ವೆಂದುಕೊಂಡು ಸಮಾಧಾನ ಮಾಡಿಕೊಂಡೆ. ಅವರ ಪತ್ರದ ಕೆಲವು ಭಾಗವನ್ನು ಇಲ್ಲಿ ಉದಾಹರಿಸ ಬಯಸುತ್ತೇನೆ :

GIPA No. 2347/72 Date : 14-2-1972

You have put me on a pinnacle.

After the passing of Venkannaiya and Krishna Shastri, there is no one on whose judgement I could test myself. It is therefore something of a tonic to me to find a scholar like you speak, as you have done, [about] my piece "Shringara Mangalam."

ಅನಂತರ ಡಿ.ವಿ.ಜಿ. ಅವರು ತಮ್ಮ ಸ್ವಭಾವಜನ್ಯವಾದ ಸಮಾಲೋಚನೆಯನ್ನು ಮಾಡಿರುವರು. ಪ್ರಾಸಂಗಿಕವಾಗಿ ಅವರಿಗೆ ಗೊತ್ತಿದ್ದ ನನ್ನ ಬಂಧು ಬಳಗದವರನ್ನೆಲ್ಲ ಸ್ಮರಿಸಿಕೊಂಡಿರುವರು. ಪತ್ರವನ್ನು ಮುಗಿಸುವ ಮೊದಲು, ನನ್ನ ಲೇಖನದಲ್ಲಿ ಪುಸ್ತಕದ ಬಗ್ಗೆ ನನ್ನ ಮೆಚ್ಚುಗೆಯೆಷ್ಟು, ನನ್ನ ಪೂಜ್ಯ ಭಾವನೆಯಿಂದ ಪ್ರೇರಿತವಾಗಿರುವ ಭಾಗವೆಷ್ಟು ಎನ್ನುವುದನ್ನು ಬಹಳ ಸ್ವಾರಸ್ಯವಾಗಿ ವಿಶ್ಲೇಷಿಸಿರುವರು. ಅವರ ಚಿಂತನ ಕ್ರಮವನ್ನು ತಿಳಿಸುವ ಸಲುವಾಗಿ ಅವರ ಮಾತುಗಳನ್ನೇ ಪುನಃ ಉದಾಹರಿಸಿರುತ್ತೇನೆ :

"On the other side stands your loyalty to literature. Your concern for literature is of the authentic, serious type. Some of your elders have told me that ; and I have also observed your way of handling literature. Hence my belief that you are deeply and loyally concerned for the values in literature.

I am thus unable to decide which is greater. But why should I decide ? Frankly I needed encouragement and strength. You have given me both.

Let me ask you to accept my most sincere thanks. With warm regards and all good wishes.

Yours Sincerely,
D. V. Gundappa"

ಡಿ.ವಿ.ಜಿ. ಅವರ ಮಾತುಗಳಲ್ಲಿ ಉತ್ಪ್ರೇಕ್ಷೆಯಿರುವುದನ್ನು ನಾನು ಮನಗಾಣಬಲ್ಲೆ. ಆದರೆ ಅವರ ಔದಾರ್ಯ ಗುಣವನ್ನು ವ್ಯಕ್ತಪಡಿಸುವ ಈ ಕಾಗದ ನನ್ನ ಪಾಲಿಗೆ ಒಂದು ಪ್ರಶಸ್ತಿಪತ್ರದಷ್ಟು ಪವಿತ್ರವಾದುದೇ ಸರಿ.

ಈ ವೇಳೆಗಾಗಲೇ ಡಿ.ವಿ.ಜಿ. ಅವರು ದಿನದಿನಕ್ಕೂ ನಿಶ್ಶಕ್ತರಾಗುತ್ತಿದ್ದರು. ಅವರ ಮನೋಧರ್ಮವನ್ನು ಗ್ರಹಿಸಿದ ಬಳಿಕ, ನಾನು ಬೆಂಗಳೂರಿಗೆ ಹೋದಾಗಲೆಲ್ಲ ಅವರನ್ನು ಕಾಣದೆ ಬರುತ್ತಿರಲಿಲ್ಲ.

ಕಾವ್ಯಾಲಯದ ಕೂಡಲಿ ಚಿದಂಬರಂ ಅವರ ಮೂಲಕ ಆ ಹಿರಿಯರ ಸಂಪರ್ಕ ಮತ್ತಷ್ಟು ಕುದುರಿತು. ಡಿ.ವಿ.ಜಿ. ಅವರ 'ಕೇತಕೀವನ' ಎಂಬ ಕವನ ಸಂಕಲನದ ಮುದ್ರಣ ಕಾರ್ಯದ ನೆಪದಲ್ಲಿ ಆ ಕವಿತೆಗಳನ್ನು ಮೊದಲ ಬಾರಿಗೆ ಓದುವ ಸವಕಾಶ ನನಗೆ ದೊರೆತುವಲ್ಲದೆ, ಅವುಗಳಿಗೆ ಟಿಪ್ಪಣಿ ಬರೆಯುವ ಸುಯೋಗವೂ ಒದಗಿ ಬಂದಿತು. ವಿದ್ಯಾರ್ಥಿ ದೆಸೆಯಿಂದ ಅವರ ಇತರ ಕವನ ಸಂಕಲನಗಳನ್ನು ಓದಿದ್ದ ನನಗೆ, ಅವರು ಆಧುನಿಕ ಛಂದೋರಚನೆಗಳಲ್ಲಿ ಏಕೆ ಕವಿತೆಗಳನ್ನು ರಚಿಸಲಿಲ್ಲ

ಎಂಬ ಪ್ರಶ್ನೆ ಬಹಳ ಕಾಡಿತ್ತು. ಈ ಕವಿತೆಗಳನ್ನು ಓದಿದ ಬಳಿಕ ನನ್ನ ತಪ್ಪು ಕಲ್ಪನೆ ನಿವಾರಣೆಯಾಯಿತು. ಸಾಂಪ್ರದಾಯಿಕ ಛಂದೋವಿಧಾನದಲ್ಲಿ ಕೈ ಪಳಗಿದವರಿಗೆ ಆಧುನಿಕ ಛಂದಃಪ್ರಕಾರಗಳು ಇನ್ನೂ ಸರಳವೇ ಸರಿ. ಈ ಕೆಲಸದಲ್ಲಿ ತೊಡಗಿರುವಾಗ 'ಮೊಡಕು' ಎಂಬ ಶಬ್ದಕ್ಕೆ ನನಗೆ ಸೂಕ್ತವಾದ ಅರ್ಥ ತಿಳಿಯಲಿಲ್ಲ. ಅದಕ್ಕಾಗಿ ನನ್ನ ಸಂಶಯಗಳನ್ನೆಲ್ಲ ಸೂಚಿಸಿ ಡಿ.ವಿ.ಜಿ. ಅವರಿಗೆ ಒಂದು ಕಾಗದ ಬರೆದೆ. ಅದಕ್ಕೆ ಅವರು ಬರೆದಿರುವ ಪ್ರತ್ಯುತ್ತರ ಪರಿಶೀಲನಾರ್ಹವಾದುದು.

Ref. GIPA No. 11483/73 Date : 29-9-1973

ಚಿ॥ ಶ್ರೀಮಾನ್ ವರದರಾಜರಾಯರವರ ಸಮಕ್ಷಮಕ್ಕೆ ನಮಸ್ಕಾರ-ಆಶೀರ್ವಾದ.

ನಿಮ್ಮ ಪ್ರೀತಿಪೂರ್ವಕವಾದ ತಾ॥ 27-9-73ರ ಕಾಗದ ಬಂದಿದೆ, ಬಹು ಸಂತೋಷವಾಗಿದೆ.

ನನಗೆ ಈ ವಯಸ್ಸಿನಲ್ಲಿ ಬೇಕಾದದ್ದು ಪ್ರೀತಿ—ತಮ್ಮಂಥ ಯುವಕ ವಿದ್ವಜ್ಜನರ ಪ್ರೀತಿ. ತಾವು ಅನೇಕ ವಿಷಯಗಳನ್ನು ನನಗೆ ತಿಳಿಯಪಡಿಸಿದ್ದೀರಿ. ಎಲ್ಲ ಸಂಗತಿಗಳೂ ನಾನಾಗಿ ಕೇಳ ಬೇಕಾದದ್ದು. ಇದನ್ನು ತಾವು ಊಹಿಸಿ, ನನಗೆ ತಿಳಿಯಪಡಿಸಿ, ಉಪಕಾರ ಮಾಡಿದ್ದೀರಿ.

ಈಗ 'ಮೊಡಕು': ಇದು ಬಹುಶಃ ತೆಲುಗಿನಿಂದ ಬಂದ ಮಾತೆಂದು ನಾನು ಅಂದುಕೊಂಡಿದ್ದೇನೆ. ಮುಳಬಾಗಿಲು ಸೀಮೆಯಲ್ಲಿ ಮೂಲೆ, ಮೊಡಕು, ಎಂಬುದು ರೂಢಿಯಲ್ಲಿಯ ಮಾತು ಇದಕ್ಕೆ ಇಂಗ್ಲಿಷಿನಲ್ಲಿ a dark obscure corner ಎಂದು ಹೇಳಬಹುದು. ನಾನು ತೆಲುಗು ಸೀಮೆಯವನಾದ್ದರಿಂದ ಇಂಥ ಪ್ರಯೋಗವು ನನ್ನ ಬರವಣಿಗೆಯಲ್ಲಿ ಬರುವುದುಂಟು.

ಬಹುಶಃ 'ಮಡಕು—ಎಂದು ಕನ್ನಡದ 'ಮಡಗು' ಎಂಬುದರಿಂದ ಬಂದಿರಬಹುದು. ಅದು 'ಮೊಡಕು' ಆಗಿರಬಹುದು. ಕನ್ನಡದ 'ಮಡಜು' ಗ್ರಂಥದಲ್ಲಿ ಉಪಯೋಗವಾಗಿದೆಯೋ ಇಲ್ಲವೋ! ಅದು ಗ್ರಾಮ್ಯ ಜನರ ರೂಢಿಯಲ್ಲಿದೆ. ಸಂಸ್ಕೃತ ಪಂಡಿತರು, ಕೆಲವರು, ಅದನ್ನು ಅಶ್ಲೀಲವೆಂದು ಭಾವಿಸಿದ್ದಾರೆ. ನನಗೆ ಹಾಗೆನ್ನಿಸುವುದಿಲ್ಲ. ಮಡಗು, ಇಡು, ಇರಿಸು ಇವೆಲ್ಲ ಏಕಾರ್ಥ ಪದಗಳು.

ಎಲ್ಲಿಯೋ ಒಂದು ಕಡೆ ಪ್ರಕಾಶಕ್ಕೆ ಬಾರದಂತೆ ಇರುವ ಮೂಲೆ ಜಾಗ 'ಮೊಡಕು' ತಾವು ದಯವಿಟ್ಟು: 'ಮೊಡಕು' ಶಬ್ದಕ್ಕೆ ಒಂದು ಅಡಿಟಿಪ್ಪಣಿ (foot-note) ಬರೆದು ಆ ಜಾಗದಲ್ಲಿ ಸೇರಿಸಬೇಕೆಂದು ಬೇಡುತ್ತೇನೆ. ಇದು ಅವಶ್ಯವೆಂದು ಮೊದಲು ನನಗೆ ತೋರಿರಲಿಲ್ಲ. ಅದು ಕನ್ನಡದಲ್ಲಿ ಬಳಕೆಯ ಮಾತೆಂದು ತಿಳಿದುಕೊಂಡಿದ್ದೆ. ಈಗ ಒಂದು (foot-note) ಅವಶ್ಯ ವೆಂದು ತೋರುತ್ತದೆ.

ನೀವು Proof ಗಳನ್ನು ಶೋಧಿಸಿಕೊಡುವುದು ನನಗೆ ದೊಡ್ಡ ಧೈರ್ಯ. ನಿಮ್ಮ ಕಣ್ಣು ಆ ಪದ್ಯಗಳ ಮೇಲೆ ಹರಿಯುವುದು ಲೇಖಕನಿಗೆ ನೀವು ಮಾಡುವ ಮಹೋಪಕಾರ.

ಮಮತೆ ಬೆಳೆಯಲಿ; ಶುಭವಾಗಲಿ; ಭಗವಂತನು ತಮಗೂ ಕುಟುಂಬಕ್ಕೂ ಮಂಗಳವನ್ನು ಕೊಡಲಿ.

ಇಂತೀ ಆಶೀರ್ವಾದಗಳು
ಡಿ. ವಿ. ಗುಂಡಪ್ಪ

ಈ ಪತ್ರವನ್ನು ಹಿಂಬಾಲಿಸಿ 30–9–1973 ರಂದು ಡಿ.ವಿ.ಜಿ. ಅವರಿಂದ ಮತ್ತೊಂದು ಕಾಗದ ಬಂದಿತು. ಅದರಲ್ಲಿ, ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯವರು ಪ್ರಕಟಿಸಿರುವ 'ಶ್ರೀಪಾದರಾಜರ ಕೃತಿಗಳು' ಎಂಬ ಪುಸ್ತಕದ ಪ್ರತಿಯನ್ನು ಕಳುಹಿಸಿಕೊಡುವಂತೆ ಕೋರಿದ್ದರು. ಪ್ರಾಸಂಗಿಕವಾಗಿ ಮುಳಬಾಗಿಲಿನಲ್ಲಿ ತಾವು ಕಳೆದ ದಿನಗಳ ಸ್ಮರಣೆಯನ್ನು ಪ್ರಸ್ತಾಪಿಸಿದ್ದರು. ಅವರ ತಲೆಯಲ್ಲಿ ನಾನು ಕೇಳಿದ್ದ 'ಮೊಡಕು' ಶಬ್ದದ ಅರ್ಥ ಕಾಡುತ್ತಿತ್ತೆಂದು ತೋರುತ್ತದೆ. ಪತ್ರವನ್ನು ಮುಗಿಸುವುದಕ್ಕೆ ಮುಂಚೆ ಅದರ ಅಡಿ ಟಿಪ್ಪಣಿಯನ್ನು ತಾವೇ ಸೂಚಿಸಿದ್ದರು.

'ಮೊಡಕು = ಮಡಕು. ಮೂಲೆ. ಬೆಳಕು ಬೀಳದ ಮೂಲೆ, ಕತ್ತಲು ಕೋಣೆ. ಸಂದುಗೊಂದಿ.*

ವಿದ್ವಾಂಸರನ್ನು ಸ್ವಲ್ಪ ಕೆಣಕಿದರೆ. ಎಷ್ಟು ಫಲವುಂಟು ಎನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ.

ಈ ಪ್ರಸಂಗದಿಂದ ಯಾರಿಂದ ಯಾರಿಗೆ ಉಪಕಾರವಾಯಿತು ಎನ್ನುವುದನ್ನು ಸಹೃದಯರೇ ನಿರ್ಧರಿಸಬೇಕು !

'ಶ್ರೀಪಾದರಾಜರ ಕೃತಿಗಳು' ಎಂಬ ಪುಸ್ತಕ ಅವರ ಕೈಗೆತಲಪಿದ ಸ್ವಲ್ಪ ದಿವಸಗಳಲ್ಲಿಯೇ ಅವರಿಂದ ಮತ್ತೊಂದು ದೀರ್ಘ ಪತ್ರ ಬಂದಿತು. ಆ ಪತ್ರವನ್ನು ಕಂಡು ನನ್ನ ಭುಜವನ್ನು ನಾನೇ ತಟ್ಟಿಕೊಳ್ಳುವಂತಾಯಿತು. ಅದು ನನ್ನಂಥವನಿಗೆ ಒಂದು ಆಶೀರ್ವಾದ ಪತ್ರವೇ ಸರಿ. ಪುಸ್ತಕದ ಬಗ್ಗೆ ಅವರು ವ್ಯಕ್ತ ಪಡಿಸಿರುವ ಅಭಿಪ್ರಾಯಗಳನ್ನು ಮಾತ್ರ ಇಲ್ಲಿ ಉದಾಹರಿಸಿದ್ದೇನೆ.

GIPA No. 12636–38/73 Date : 18–10–1973

My dear Prof. Varadaraja Rao,

I may now allow myself the privilege of saying a word or two about *Sripadarayara Kritigalu*.

I am very happy about it ; partly because I am a man of Mulbagal, a fellow citizen with Sripadarajaru ; chiefly because it is worth-while literature. I did not myself know about the quantity of the compositions of Sripadarajaru. I am glad you have given it such an impressive and beautiful form.

....

* Kui (ಕುಇ) ಭಾಷೆಯಲ್ಲಿ 'ಮೂಲೆ' ಎನ್ನುವ ಅರ್ಥದಲ್ಲಿ 'ಮುಜು' 'ಮುದ್ಗು'(ನೋಡಿ. D E D. 1984 ; 5044) ಎಂಬ ಪದಗಳಿವೆ, ಕನ್ನಡ ಮೊಡಕು ಶಬ್ದವೆ (< ಮುಡಕು > ಮುಡಗು : : ಮುದಗು) ಕುಇ ಭಾಷೆಯ ಮುದ್ಗು (<ಮುದಗು) ಇರಬಹುದು. ಮೊಡಕು ಎಂದರೂ ಮೂಲೆ ಎಂದೆ ಅರ್ಥ. —ಸಂ.

Now to your work : Your work is not so easy because, it takes much critical reference and balancing. Let me deal with it part by part :

(1) *Chronology* : First comes chronology. I accept your finding : Sripadarajaru is of the 15–16th centuries. You have marshalled the evidence convincingly.

(2) *Hagiology* : This is the most difficult part of the business.........A great many of the stories regarding saints are mere concoctions of enthusiasts. But you cannot openly say so.........you have got to be tolerant and in good cheer, behaving as though you believed. In other words, you have to maintain neutrality inwardly and assent outwardly. You have, I think succeeded in this. I see you are very careful in the choice of words and phrases throughout this part. Your writing is very careful.........

One thing more. About the book as literature : I value it inpspite of its lack of grammar as we have come to recognise it. It is spoken language and I accept it in toto.

....

You have done the collecting etc, magnificiently and the entire work is superb. Let me congratulate you on this excellent gift to the Kannada people.

Yours sincerely,
D. V. Gundappa.

ಈ ಪತ್ರದ ನಕಲುಗಳನ್ನು ಆಗ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ. ಪ್ರಧಾನ ಸಂಪಾದಕರೂ ಆಗಿದ್ದ ಡಾ॥ ಹಾ. ಮಾ. ನಾಯಕರಿಗೂ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ॥ ದೇ. ಜವರೇಗೌಡರಿಗೂ ಕಳುಹಿಸಿದ್ದರು. ಡಿ.ವಿ.ಜಿ. ಅವರ ಕಾರ್ಯನಿರ್ವಾಹಕ ಕ್ರಮಕ್ಕೆ ಇದೊಂದು ಉತ್ತಮ ಕುರುಹು.

ಈ ಸಂದರ್ಭದಲ್ಲಿಯೇ ಇನ್ನೂ ಒಂದು ಪ್ರಮುಖಾಂಶವನ್ನು ಇಲ್ಲಿಯೇ ಹೇಳಬೇಕೆನ್ನಿಸುತ್ತದೆ. ಶ್ರೀಯುತರು ಪ್ರಕೃತ ಪುಸ್ತಕದ ಪ್ರತಿಯೊಂದನ್ನು ಕೋರಿ ಪತ್ರ ಬರೆದ ಕೂಡಲೇ, ನಾನು ಭಕ್ತಿಪೂರ್ವಕವಾಗಿ ಅವರಿಗೆ ಒಂದು ಪ್ರತಿಯನ್ನು ಕಳುಹಿಸಿಕೊಟ್ಟೆ. ಅವರ ಆದರ್ಶ ಗುಣವೆಂದರೆ ಮರುಟಪ್ಪಾಲಿನಲ್ಲಿಯೇ ನನಗೆ ಪುಸ್ತಕದ ಬೆಲೆಯನ್ನು ರವಾನಿಸಿದ್ದರು. ನನಗೆ ಕ್ಷಣಕಾಲ ದಿಕ್ಕೇ ತೋಚಲಿಲ್ಲ. ಅನಂತರ ಅವರನ್ನು ಕಂಡಾಗ ಈ ವಿಷಯವನ್ನು ಪ್ರಸ್ತಾವಿಸಿದಾಗ, ಅವರು ಅದನ್ನು ತಾವಾಗಿ ಕೇಳಿ ಪಡೆದಿದ್ದರಿಂದ ಅದರ ಬೆಲೆಯನ್ನು ಕೊಡುವುದು ತಮ್ಮ ಧರ್ಮವೆಂದು ಹೇಳಿ ಮಾತನ್ನೇ ಬದಲಾಯಿಸಿಬಿಟ್ಟರು.

'ಶ್ರೀಪಾದರಾಜರ ಕೃತಿಗಳು' ಎಂಬ ಸಂಪುಟ ಪ್ರಕಟವಾದ ಕೂಡಲೇ ಎಷ್ಟೋ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ಸೂಚಿಸಿ ಪತ್ರಗಳನ್ನು ಬರೆದಿದ್ದರೂ ಡಿ.ವಿ.ಜಿ. ಅವರ ಪತ್ರದ ಪ್ರಮುಖ ಲಕ್ಷಣವೆಂದರೆ, ಪಂಕ್ತಿ ಪಂಕ್ತಿಗಳಲ್ಲಿಯೂ ಎದ್ದು ತೋರುವ ಅವರ ಆತ್ಮೀಯತೆ ಮತ್ತು ಶ್ರೀಪಾದರಾಜರ ಬಗ್ಗೆ ಅವರಿಗಿದ್ದ ಪೂಜ್ಯಭಾವ.

ಡಿ.ವಿ.ಜಿ. ಅವರ ಕೃತಿಗಳ ಮೂಲಕ ಕುಡಿಯಿಟ್ಟ ಅವರ ಪರಿಚಯ ಮತ್ತು ಸಂಪರ್ಕಗಳು ಇನ್ನೂ ಬಲವಾಗಿ ವರ್ಧಿಸುವ ಮೊದಲೇ ಅವರನ್ನು ಕಳೆದುಕೊಂಡದ್ದು ನನ್ನ ದೌರ್ಭಾಗ್ಯವೇ ಸರಿ. ಅವರು ನನಗೆ ಬರೆದಿರುವ ಪತ್ರಗಳ ಸಂಖ್ಯೆ ಅತ್ಯಲ್ಪವಾದರೂ, ಅವುಗಳಲ್ಲಿ ಅಚ್ಚಳಿಯದೆ ಉಳಿದಿರುವ ಅವರ ಅಭಿಮಾನ, ವಾತ್ಸಲ್ಯಗಳು ನನ್ನ ನೆನಪಿನ ನಿಧಿಗಳೇ ಸರಿ.

ಜಿ. ವರದರಾಜರಾವ್

ಡಿ.ವಿ.ಜಿ. ಪರಿಸರದಲ್ಲಿ

'ಡಿ.ವಿ.ಜಿ.' ಕರ್ನಾಟಕಕಷ್ಟೇ ಸೀಮಿತವಾದ ಸಂಪತ್ತಲ್ಲ. ಆ ಪ್ರತಿಭೆ, ಆ ಕಾರ್ಯಪಟುತ್ವ, ಆ ಹೃದಯ ಸಂಸ್ಕೃತಿ ಪ್ರಪಂಚದ ತವನಿಧಿಗಳಲ್ಲಿ ಅತ್ಯುತ್ತಮವಾದುದು, ಚೇತೋಹಾರಿಯಾದುದು. ಬದುಕಿನಲ್ಲಿ ನಂಬಿಕೆಯನ್ನು ಹುಟ್ಟಿಸುವ ಕಾವೇರಿ ಗಂಗೆ ನೀಲ ಧವಳಶ್ರೀ. ನಿಚ್ಚಳ ವಿಚಾರದ ವಿರಳ ವಿರಳ ಮಾತಿನ ಮುತ್ತುಗಳ ಅಖಂಡ ಕಲ್ಪ. ಸಾಹಿತ್ಯ ವಿಜ್ಞಾನಗಳ ಗಂಡಭೇರುಂಡ. ಗದ್ಯಪದ್ಯಗಳ ಹೃದ್ಯ ಸ್ವರೂಪ. ಗದ್ಯಕ್ಕೂ ಒಂದು ಲಯವಿರುವುದೆಂದು ತಿಳಿಯುವುದಾದರೆ ಅದು ಡಿ.ವಿ.ಜಿ.ಯಿಂದ ಸುಸ್ಪಷ್ಟ.

ಇಂಥ ಡಿ.ವಿ.ಜಿ. ನನ್ನ ಎದೆಯಂತರಾಳದಲ್ಲಿ ಹಂತ ಹಂತವಾಗಿ ಬೆಳೆದು ಅಣುವಿನಿಂದ ಮಹತ್ತಾಗಿ ನನಗೆ ಋಷಿಸದೃಶ ಸಂಪತ್ತಾಗಿದ್ದಾರೆ.

ಮೊತ್ತಮೊದಲು ಡಿ.ವಿ.ಜಿ. ಹೆಸರು ನನ್ನ ಕಣ್ಣಿಗೆ ಬಿದ್ದದ್ದು 'ಕನ್ನಡ ನುಡಿ' ಪತ್ರಿಕೆಯಿಂದ. ಬಹುಶಃ ಆಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಸಮಯ.* ನಾನಾಗ ಮೂರನೆಯ ತರಗತಿ. ನನ್ನ ತಂದೆ ಚಿಮಣಿ ಎಣ್ಣೆ ದೀಪದ ಬೆಳಕಿನಲ್ಲಿ ಡಿ.ವಿ.ಜಿ. ಅವರ ಒಂದು ಕವಿತೆಯನ್ನೋ ಒಂದು ಬರಹವನ್ನೋ 'ಕನ್ನಡ ನುಡಿ'ಯಿಂದ ಓದಿ ತೋರಿಸಿದ ನೆನಪು. "ನೀನು ಹೀಗೆ ಬರೆಯಬೇಕು. ನೀನು ಹೀಗಾಗಬೇಕು" ಎಂದರು. ಆಗ ನಾನೇನೋ "ಹಾಂ" ಎಂದೆ. ಆದರೆ ಆ ಎತ್ತರಕ್ಕೆ ನಾನೇಸೇರೇನೆ ? ಅಷ್ಟು ಎತ್ತರಕ್ಕೆ ನನ್ನ ದೃಷ್ಟಿಯೇ ಮುಟ್ಟದು. ಹೀಗೆಂದು ಈಗ ಯೋಚಿಸುತ್ತೇನೆ. ಆದರೂ ಡಿ.ವಿ.ಜಿ. ಪ್ರತಿಭೆಯ ಆಳ ನನ್ನ ಅಂಚಿಗೆ ಬಾರದಿದ್ದರೂ ಡಿ.ವಿ.ಜಿ. ಹೆಸರು, ಡಿ.ವಿ.ಜಿ. ಬರಹ, ಡಿ.ವಿ.ಜಿ. ಪ್ರಭಾವ ನನ್ನಲ್ಲಿ ಆಳವಾದ ಹೆಜ್ಜೆಗಳನ್ನು ಮೂಡಿಸಲು 'ಕನ್ನಡ ನುಡಿ' ತನ್ನ ಡಿಂಡಿಮವನ್ನು ಬಾರಿಸಿದೆ. ಆ ಅಮೃತ ಸೊಲ್ಲು ನನ್ನ ಬಂಡವಾಳದ ಮೂಲಧನದಲ್ಲಿಯ ಒಂದು ಗಟ್ಟಿ ಅಂಶವಾಗಿದೆ.

---

* 'ಕನ್ನಡ ನುಡಿ'ಯನ್ನು ಪ್ರಾರಂಭಿಸಿದವರು ಬಿ.ಎಂ.ಶ್ರೀ., ಅವರು ಉಪಾಧ್ಯಕ್ಷರಾಗಿದ್ದಾಗ—ಸಂ.

ಎರಡನೆಯ ಹಂತದಲ್ಲಿ, ಬಹುಶಃ ಕನ್ನಡ ಎಳನೆಯ ಇಯತ್ತೆಯಲ್ಲಿದ್ದಾಗ, ಕಲಬುರಗಿಯ ಕನ್ನಡದ ಬಂಟ ದಿವಂಗತ ದತ್ತಾತ್ರೇಯ ಹೇರೂರ ಅವರು ಸಾಂಕೇತಿಕ ಅಭಿನಯದೊಡನೆ ಡಿ.ವಿ.ಜಿ.ಯವರ,—

"ಮೇಲೆ ನೋಡೆ ಕಣ್ಣ ತಣಿಪ
ನೀಲಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ
    ಚಿತ್ರ ಚತುರನಾರ್
ಕಾಲದಿಂದೆ ಮಾಸದಾ ಪಿ
    ಚಿತ್ರವೆಸಪನಾರ್ ॥"

ಎಂಬ ಪದ್ಯವನ್ನು ಹಾಡಿ ಹಾಡಿಸಿ, ಕುಣಿದು ಕುಣಿಸಿದ್ದು ಇಂದಿಗೂ ಹಸಿರಾಗಿದೆ. ಆ ತನ್ಮಯತೆಯಲ್ಲಿ ನನ್ನನ್ನು ಈಗಲೂ ಕೊಂಡೊಯ್ದು, " ಅವನ ಕೃತಿಯ ನೋಡಿ ಮಣಿವೆ...ಅವನ ಲೀಲೆಗಳನು ಕಾಣ್ಬೆವವನ ಕಾಣೆವು" ಎಂದು ಅಧ್ಯಾತ್ಮದ ಸೊತ್ತಿನತ್ತ ಡಿ.ವಿ.ಜಿ. ಮುಟ್ಟಿಸುತ್ತಿರುತ್ತಾರೆ. ಆಗಾಗ ಈ ಪಾದಗಳನ್ನು ನನ್ನಷ್ಟಕ್ಕೇ ನಾನು ಗುನಗುನಿಸುತ್ತಿರುತ್ತೇನೆ.

ಮೂರನೆಯ ಹಂತದಲ್ಲಿ, ನಮ್ಮ ತಂದೆಯ ಪುಸ್ತಕ ಸಂಗ್ರಹದಲ್ಲಿದ್ದ. 'ಉಮರನ ಒಸಗೆ'. ಆಗ ಅದರಲ್ಲಿಯ ಚಿತ್ರಗಳನ್ನು ನೋಡಿದ್ದೆ. ರಕ್ಷಾಕವಚ ಗಟ್ಟಿಯಾಗಿತ್ತು. ಅದನ್ನು ಜೋಡಿಸಿ ಜೋಡಿಸಿ ಇಡುತ್ತಿದ್ದೆ. ಆದರೆ ಅದನ್ನು ಓದಿದರೆ ಅರ್ಥವಾಗುತ್ತಿರಲಿಲ್ಲ. ಒಳಗಡೆ ಏನೋ ಸವಿಯುವ ಜೇನಿದೆಯೆಂಬುದು ಮಾತ್ರ ಗೊತ್ತಾಗುತ್ತಿತ್ತು. ಅದರಲ್ಲಿಯ "ನಮ್ಮಾಯುಸಿನ ಪಕ್ಕಿ ಪಾರ್ವ ದೂರವೆ ಕಿರಿದು ; ಅದು ರೆಕ್ಕೆಯೆತ್ತಿಹುದು ನೋಡು" ಎಂಬುದು ಎಚ್ಚರಿಕೆಯೆಂದು ತಿಳಿದಿತ್ತು.

ನಾಲ್ಕನೆಯ ಹಂತದಲ್ಲಿ, 'ಶ್ರೀರಾಮ ಪರೀಕ್ಷಣಂ' ಇಂಟರದ ಅಭ್ಯಾಸಕ್ಕೆ ಪಠ್ಯವಾದಾಗ ನಮ್ಮ ಗುರುಗಳಾದ ಶ್ರೀ ತವಗ ಭೀಮಸೇನರಾಯರು. ಆ ಪುಸ್ತಕ ವನ್ನು ಕಲಿಸುವಾಗ ಮಾನವ ಮೌಲ್ಯಗಳಿಗೆ ಒರೆಗೆ ಹಚ್ಚಿ ಹೇಳುತ್ತಿದ್ದ ರೀತಿ 'ಡಿ.ವಿ.ಜಿ. ಮಹಾಶಕ್ತಿಯನ್ನು ಪ್ರತ್ಯಕ್ಷ ನಾ ಕಂಡೇನೇ ?' ಎಂಬ ತೀವ್ರ ಹಂಬಲಕ್ಕೆ ಗುರಿಮಾಡಿತು.

ಐದನೆಯ ಹಂತದಲ್ಲಿ 'ಡಿ.ವಿ.ಜಿ.' ತೀರ ಹತ್ತಿರವಾದರು. ಅವರ ಪ್ರತಿಭೆಯ ಮೂಸೆಯಲ್ಲಿ 'ಸಾಹಿತ್ಯ ಶಕ್ತಿ' ನಮಗೆಲ್ಲ ಮಹಾಕೃತಿಯಾದಾಗ. ಏಕೆಂದರೆ ಅದನ್ನೋದಿ ಮನನ ಮಾಡಿದಂತೆಲ್ಲ. ಅಂತಶ್ಚೇತನದ ಶ್ರೀಮಂತಿಕೆಯನ್ನು. ಅದಕ್ಕೆ ತಕ್ಕ ಸೂತ್ರಬದ್ಧ ಅಭಿವ್ಯಕ್ತಿಯನ್ನೂ ಆ ಮಹಾಕೃತಿ ನಮಗೆ ಒದಗಿಸುತ್ತ ಬಂದಿತು. ಜೊತೆಗೆ ಅವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ'. ನಮ್ಮ ಜೀವನ ಸೌಂದರ್ಯ ಸಾಹಿತ್ಯವಾಗಿ ಅನೇಕ ಬಹುಮಾನಗಳನ್ನು ವ್ಯಕ್ತಿತ್ವ ನಿರ್ಮಾಣದಲ್ಲಿ ಒದಗಿಸಿ ಕೊಟ್ಟಿತು.

ಈ ಹಿನ್ನೆಲೆಯಲ್ಲಿ 'ಡಿ.ವಿ.ಜಿ.' ಮಹಾಶಕ್ತಿಯ ಪ್ರತ್ಯಕ್ಷ ದರ್ಶನಕ್ಕಾಗಿ ಜೀವದ ಹಂಬಲ ಬಹಳ ತೀವ್ರವಾಯಿತು. 'ಡಿ.ವಿ.ಜಿ.' ಎಂಬುದು ನಾಲಗೆಗೆ ಜೇನಾಗಿ ಹೃದಯ ಪರಿಪಾಕಕ್ಕೆ ವೇದಾಂತವಾಯಿತು.

ಆಗ ಹೈದರಾಬಾದಿನಲ್ಲಿದ್ದ ನಮಗೆ ಬೆಂಗಳೂರು ಲಂಡನ್ ಆಗಿತ್ತು. ಶ್ರೀಗಂಧದ ಗುಡಿಯ ಮೈಸೂರಿನ ಭಾಗ. ಬಿ.ಎಂ.ಶ್ರೀ., ಟಿ.ಎಸ್.ವಿ., ತೀ.ನಂ.ಶ್ರೀ., ಡಿ.ವಿ.ಜಿ., ಕುವೆಂಪು, ಮಾಸ್ತಿ—ಇವೆಲ್ಲ ಕನಸಿನ ಆಸ್ತಿ ಎಂದೇ ಭಾವಿಸಿದ್ದೆವು.

ಆದರೂ ಹೃದಯದ ತುಡಿತ ಹೆಚ್ಚಾದಾಗ, ಮನಸ್ಸಿದ್ದಲ್ಲಿ ಮಾರ್ಗವಿದೆ ಯೆಂದಾಗ, ಆ ಮಂಗಲ ಮುಹೂರ್ತ ಬಹುಶಃ ನನಗೆ 1955–56ರಲ್ಲಿ ಬಂತು. ಡಿ.ವಿ.ಜಿ. ರಾಯಚೂರಿನ ಕರ್ನಾಟಕ ಸಂಘಕ್ಕೆ ಬಂದಿದ್ದರು. ಆಕಸ್ಮಾತ್ತಾಗಿ ರಾಯ ಚೂರಿಗೆ ಹೋದ ನನಗೆ ಸುಸಂಧಿ ದೊರೆಯಿತು. ತುಂಗಭದ್ರೆ ಕೃಷ್ಣೆಯರ ಮಧ್ಯದ ನೆಲದಲ್ಲಿ ಸಾಹಿತ್ಯ ವಿರಾಟ ಸ್ವರೂಪದರ್ಶನಕ್ಕೆ ಅವಕಾಶ. ಆಜಾನುಬಾಹು, ಸಾಹಿತ್ಯ ಸಾಮ್ರಾಟ್. ಕಂಚಿನ ಕಂಠದ ಜ್ಞಾನ ಗೌರೀಶಂಕರದ ದರ್ಶನಕ್ಕಾಗಿ ಹಂಬಲಿಸಿದ ಚಾತಕಕ್ಕೆ ಸ್ವಾತಿ. ಆ ಶಿಸ್ತಿನ ಓದಿನ ಮಹಾಚೈತನ್ಯವನ್ನು ಕಂಡೆ. "ವನಸುಮ ದೊಲೆನ್ನ ಜೀವನವು ವಿಕಸಿಸುವಂತೆ" ಎಂದು ನೆನಪಿಸಿಕೊಂಡು ಮಹಾಗುರುವಿನ ಪಾದಗಳನ್ನು ಸ್ಪರ್ಶಿಸಿದೆ. 'ಅಂತಃಪುರ ಗೀತ'ಗಳ ಕನ್ನಡದ ಕನ್ನಡಿಯಲ್ಲಿ ಕಲಾನವಿಲಿನ ಶ್ರೀ ಮಂಗಲ ವೈಭವವನ್ನು ಕಂಡೆ. ಆ ಡಿ.ವಿ.ಜಿ. ದರ್ಶನದಲ್ಲಿ ಚೆನ್ನಕೇಶವನನ್ನೇ ಕಣ್ತುಂಬ ನೋಡಿದ ತೃಪ್ತಿಯನ್ನು ಅನುಭವಿಸಿದೆ.

ಇದಾದ ಕೆಲವು ವರ್ಷಗಳ ನಂತರ ನಾನು ಬೀದರಿನಲ್ಲಿ ಕನ್ನಡ ಪ್ರಾಧ್ಯಾಪಕನಾಗಿ ಕೆಲಸಕ್ಕೆ ಸೇರಿ, ನನ್ನ ಅಧ್ಯಯನ ಅಧ್ಯಾಪನದಲ್ಲಿ ಡಿ.ವಿ.ಜಿ.ಯನ್ನು ಅಳವಡಿಸಿಕೊಂಡೆ. ಆ ಸಂದರ್ಭದಲ್ಲಿ ಕನ್ನಡವಕ್ಕಿ (ಪೂಜ್ಯ ತಿ.ತಾ.ಶರ್ಮಾ) ಬೀದರ ಕೋಟೆಯಲ್ಲಿ ಸ್ಫೂರ್ತಿಯ ಹಾಡುಗಳನ್ನು ಹೇಳಿತು. ಆ ಕಾಲದಲ್ಲಿ, 'ಬದುಕು ಜಟಕಾ ಬಂಡಿ' ನಮ್ಮ ನಿತ್ಯ ಗಾಯತ್ರಿಯಾಯಿತು. ಬಹುಮುಖ ಪ್ರತಿಭೆಯ ಡಿ.ವಿ.ಜಿ.ಯವರನ್ನು ಅರಿತುಕೊಳ್ಳುವಲ್ಲಿ ನಮ್ಮ ತಪಸ್ಸು ಸಾರ್ಥಕವಾಗತೊಡಗಿತು.

ಅನಂತರ ಕೆಲವು ದಿವಸಗಳು ಹೀಗೇ ಹೋದುವು.

ಆದರೆ ನನ್ನ ಜೀವನದಲ್ಲಿ ಅತಿ ಮಹತ್ವದ ದಿವಸಗಳಲ್ಲಿ ಒಂದು ಡಿ.ವಿ.ಜಿ ಅವರನ್ನು ಬೆಂಗಳೂರಿನ ಅವರ ಮನೆಯಲ್ಲಿಯೇ ಕಾಣುವ ಭಾಗ್ಯ ಒದಗಿ ಬಂದಾಗಿನದು.

ನನ್ನ ಜಟಕಾಬಂಡಿಯು ಕನ್ನಡವಕ್ಕಿಯ ಸಂಗಡ ಕಾಲುನಡಿಗೆಯಲ್ಲಿಯೇ ಬೆಂಗಳೂರಿನ ಬಹುಭಾಗದಲ್ಲೆಲ್ಲ ತಿರುಗಾಡಿತು. ವಯಸ್ಸಾಗಿದ್ದ ಶ್ರೀ ತಿ.ತಾ.ಶರ್ಮಾ ನಡೆಯುತ್ತ ಹೋಗುವುದಕ್ಕೆ ಬೇಸರಿಯಲಿಲ್ಲ. ಅಂತಹ ಸಂದರ್ಭದಲ್ಲಿ ನನಗೆ ಶ್ರಮವೆನಿಸಿದರೂ, ನಗುತ್ತಲೇ ನಡೆದೆ. ಆಗ ಅವರು ಹೇಳುತ್ತಿದ್ದರು ಮಾಸ್ತಿ,

ಡಿವಿಜಿ, ಸಿದ್ಧವನಹಳ್ಳಿ, ವಿ.ಸೀ. ಇತ್ಯಾದಿ ಎಲ್ಲ ಜಂಗಮ ವಿಶ್ವಕೋಶ. ಋಷಿ ಸಂಪದ. ಆದ್ದರಿಂದ ಅಂತಹರ ಮನೆಗೆ, ಅವರ ದರ್ಶನಕ್ಕೆ ಹೋಗುವಾಗ ಕಾಲ್ನಡಿಗೆಯಲ್ಲಿಯೇ ಹೋಗುವುದು ಪುಣ್ಯದ ಕೆಲಸವೆಂದು ನನ್ನನ್ನು ಹುರಿದುಂಬಿಸಿದರು. ಆ ದಿವಸ ಮೇಲೆ ಹೆಸರಿಸಿದ ಎಲ್ಲರ ಮನೆಗಳಿಗೂ ಕರೆದುಕೊಂಡು ಹೋಗಿ ದರ್ಶನ ಮಾಡಿಸಿ ಅನಂತರ ಕೊನೆಗೆ 'ಡಿ.ವಿ.ಜಿ.' ಮನೆಗೆ (ದೇವಾಲಯಕ್ಕೆ) ಕರೆದುಕೊಂಡು ಬಂದರು. ಈ ಹೊತ್ತಿಗಾಗಲೇ ಒಂದೊಂದು ಕಡೆಗೆ ಒಂದೊಂದು ಮಿಂಚು ನನ್ನನ್ನು ಪರಿಶುದ್ಧಗೊಳಿಸಿತ್ತು. ಈಗ 'ಡಿ.ವಿ.ಜಿ.' ಹಿಮಾಲಯದೆದುರು ನಾನು ನಿಂತಾಗ "ಈ ಹುಡುಗ ಬೀದರಿನಲ್ಲಿ ಕನ್ನಡ ಉಪನ್ಯಾಸಕ" ಎಂದು ಕನ್ನಡವಕ್ಕ ನನ್ನ ಪರಿಚಯ ಮಾಡಿಸಿದರು. ಹಿಂದೊಮ್ಮೆ ರಾಯಚೂರಿನಲ್ಲಿ ಕೇವಲ ಕೆಲವು ಕ್ಷಣ ಡಿ.ವಿ.ಜಿ.ಯನ್ನು ಕಂಡಿದ್ದ ನನಗೆ ಅವರೊಡನೆ ಮಾತನಾಡುವ ಸೌಭಾಗ್ಯ ನನಗೆ ಬಂದುದಕ್ಕಾಗಿ ನನಗೆ ಮುಗಿಲು ಮೂರು ಬೆರಳು ಮಾತ್ರ ಎಂದುಕೊಂಡೆ. ಒಮ್ಮೆಗೆ ಅವರು ನನ್ನನ್ನು ಮಾತನಾಡಿಸಿದಾಗ ಧ್ರುವನನ್ನು ನಾರಾಯಣನು ಮಾತನಾಡಿಸಿದ ದೃಶ್ಯ ನನ್ನ ಸ್ಮೃತಿಯಲ್ಲಿ ಬೆಳಕು ನೀಡಿತು.

ಆಗ ನನ್ನೆದುರು ಹಿಮಾಲಯದೆತ್ತರದ ಗಂಭೀರ ವಿಚಾರದ ವ್ಯಕ್ತಿಯಾಗಿ ಕಂಡ ಅವರು ಒಮ್ಮೆಗೆ ಮಕ್ಕಳನ್ನು ನಕ್ಕು ನಗಿಸುವ ತಂದೆಯಾಗಿ ಕಂಡರು. ಅಕಳಂಕ ನಗೆಯ ಶ್ರೀಮಂತರಾಗಿ ಕಂಡರು. ಅಂತೆಯೇ ಅವರು ಬದುಕನ್ನು ಸಂಪೂರ್ಣ ಅರ್ಥಮಾಡಿಕೊಂಡವರು. ಅಂತೆಯೇ ಎಂತಹ ಗಹನವಾದದ್ದನ್ನೂ ಹಗುರವಾಗಿ ನಗೆಯ ಸೆಲೆಯಾಗಿಸಿ, ಬಾಳಿನಲ್ಲಿ ನಂಬಿಗೆಯನ್ನೇ ಮೂಡಿಸಿ ನಸುನಗೆಯ ಮುಗುಳನ್ನಲ್ಲಿ ಮುಡಿಸುತ್ತಿದ್ದರು. ಈ ಮಾತಿಗೆ ಅಂದು ನಡೆದ ಒಂದು ಸಂದರ್ಭ ಹೀಗಿದೆ :

ನಾವು ಡಿ.ವಿ.ಜಿ.ಯಲ್ಲಿಗೆ ಹೋದಾಗ ಡಿ.ವಿ.ಜಿ.ಯವರಿಗೆ ಪತ್ಯ. [ಅಂದರೆ, ಪಥ್ಯ] ದೋಸೆ ಒಡೆ ಇತ್ಯಾದಿಗಳ ನಿಷೇಧ. ಕಾಫಿ ಚಹಾಗಳ ನಿಷೇಧ. ಇವೆಲ್ಲ ಡಾಕ್ಟರರ ನಿರ್ದೇಶನ. ಹೀಗಿದ್ದರೂ ಅವರ ದರ್ಶನಕ್ಕೆ ಹೋದ ನಮಗೆ ಡಬಲ್ ದೋಸೆ ಬಂದುವು. ಆಗ ಅವರು ಶರ್ಮಾ ಅವರಿಗೆ, "ನೀನು ಇನ್ನೊಂದು ಪ್ಲೇಟು ತರಿಸು. ತಂದಾದ ಮೇಲೆ ಮನೆಯ ಜನರಿಗೆ ಮರೆಯಾಗಿ ನಿಲ್ಲು. ನಾನು ಆ ದೋಸೆ ತಿನ್ನುತ್ತೇನೆ" ಎಂದು ನಗೆಯಾಡಿ, ಅದೇ ರೀತಿ ಮಾಡಿ ಒಂದು ಪ್ಲೇಟಲ್ಲ, ಎರಡು ಪ್ಲೇಟು ದೋಸೆ ಬೆಣ್ಣೆ ತಿಂದು ಗಟಗಟ ಕಾಫಿ ಕುಡಿದರು. ಆಗ ಗಾಬರಿಯಾದ ನಾನು, "ಇದೇನು ಸಾರ್" ಎಂದು ಅವಕ್ಕಾದೆ. ಅದಕ್ಕೆ, "ತಮ್ಮಾ ಈ ದೇಹರಚನೆಯಲ್ಲಿ ಅವವುಗಳಿಗೆ ಬೇರೆ ಬೇರೆ ಕಂಪಾರ್ಟುಮೆಂಟುಗಳಿರುತ್ತವೆ. ತಿಂಡಿ ತೀರ್ಥಗಳಿಗೆ, ರೋಗರುಜಿನಗಳಿಗೆ ಎಂದು ನನ್ನ ಅರ್ಥ. ಅದಕ್ಕಾಗಿ ಇವೆಲ್ಲ ಆಯಾ ಕಂಪಾರ್ಟುಮೆಂಟುಗಳಿಗೆ ಹೋಗುತ್ತವೆ. ಅದರಿಂದ ನನಗೂ ನನ್ನ ಆತ್ಮಕ್ಕೂ ನಮ್ಮ ವೈದ್ಯರಿಗೂ ಏನೂ ತೊಂದರೆಯಿಲ್ಲ. ಏಕೆಂದರೆ,

"ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್. ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು—ಮಂಕುತಿಮ್ಮ"

ಎಂದು ಸಂದೇಶ ನೀಡಿ. "ಅಪ್ಪಾ ಬೀದರಿನ ಕೋಟೆಗೆ ಹೋಗಿ ನೀನು 'ಎಲ್ಲರೊಳಗೊಂದಾಗು'" ಎಂದು ಹೇಳುತ್ತಿರುವಂತೆ ನನ್ನ ಕೈಗಳು ಅವರ ಪಾದಗಳನ್ನು ಮುಟ್ಟಿದ್ದವು. ಉತ್ತಮಾಂಗ ಪೊಡಮಟ್ಟಿತ್ತು. ಆ ಪಾದಸ್ಪರ್ಶದಲ್ಲಿ ನನ್ನ ಮೈ ಮನಗಳಲ್ಲೆಲ್ಲ ಸಾಹಿತ್ಯ ಸಂಸ್ಕೃತಿ ಧರ್ಮಗಳು ಸುಳಿಸುಳಿಯಾಗಿ ಸಂಸ್ಕಾರವನ್ನು ನೀಡಿದ್ದವು. ಆ ಸಂಸ್ಕಾರದಲ್ಲಿ ನಾನು ತಿಳಿವಳಿಕೆಯ ಕಣ್ಣನ್ನು ಪಡೆದ ಕಣ್ಣಪ್ಪನಾಗಿದ್ದೆ.

ನಾನು ಮತ್ತು ಶ್ರೀ ತಿ.ತಾ.ಶರ್ಮಾ, ಡಿ.ವಿ.ಜಿ.ಯವರ ಮನೆಯ ಗೇಟು ದಾಟಿದಾಗ ಮತ್ತೊಮ್ಮೆ ಆ ಕಡೆ ತಿರುಗಿ ಆ ಮನೆಯ ಚೈತನ್ಯದಿಂದ ನನ್ನ ಮನಸ್ಸಿನೊಳಗೆ ಇದ್ದ ಚೈತನ್ಯವನ್ನು ಮೂಡಿಸಿಕೊಂಡು ಮುಂದಕ್ಕೆ ಸಾಗಿದೆ.

ಇಂತಹ ನೆನಪುಗಳಲ್ಲಿ ನನ್ನ ಬಾಳು ಸುಳಿಸುಳಿಯಾಗಿ ಬೆಳೆದಿದೆ. ಬಿಳಿಲುಗಳನ್ನು ಬಿಟ್ಟಿದೆ. ಅಳುನುಂಗಿ ನಗೆಯನ್ನೇ ಹಂಚಬೇಕೆಂದಿದೆ.

—ವಸಂತ ಕುಷ್ಟಗಿ

ನಾನು ಕಾಣದೇ ಹೋದ ಡಿ.ವಿ.ಜಿ.

ನಾನು ಡಿ.ವಿ.ಜಿ.ಯವರನ್ನು ಕಂಡದ್ದು ಒಂದೇ ಸಲ. 1946ರ ಸುಮಾರಿಗೆ ಧಾರವಾಡಕ್ಕೆ ಡಿ.ವಿ.ಜಿ. ಆಗಮಿಸಿದ್ದರು. ಪ್ರೊ. ಎಸ್. ಎಸ್. ಮಾಳವಾಡರು ಕರ್ನಾಟಕ ಕಾಲೇಜಿನ ಕನ್ನಡ ಸಂಘದ ಪರವಾಗಿ ಆಮಂತ್ರಿಸಿದ್ದರೋ ಏನೋ. ಬಂದವರು ದಿ. ಮೊಹರೆ ಹಣಮಂತರಾಯರ ಮನೆಯಲ್ಲಿ ಇಳಕೊಂಡಿದ್ದರು. ಶ್ರೀ ಎನ್.ಎಚ್ ಮೊಹರೆ ನಮ್ಮ ಸಹಪಾಠಿಗಳು. ಹಣಮಂತರಾಯರು ನಮ್ಮ ಕಾಲೇಜ ಸಾಹಿತ್ಯ ಪ್ರೋಕರಿಗಳ ಚಿಕ್ಕ ಗುಂಪಿಗೆ ಖಾಯಂ ಹಾಸ್ಯದ ವಿಷಯ—ತಮ್ಮ ಸ್ಥೂಲ ಕಾಯದ ಮೂಲಕ. ನಾವೆಲ್ಲ ಗುಂಡಪ್ಪನವರನ್ನು ಕೇಳಿ ಬಲ್ಲೆವೇ ಹೊರತು ಪ್ರತ್ಯಕ್ಷ ನೋಡಿದವರಲ್ಲ. ಅವರೂ ಸ್ಥೂಲಕಾಯರೇ. ಇಬ್ಬರೂ ಒಂದೇ ಮನೆಯಲ್ಲಿ ಇದ್ದ ಮೂಲಕ ನಮ್ಮ ನಗೆಯ–ಅತಿಶಯೋಕ್ತಿಗಳಿಗೆ ಹೊಸ ಪೂರ ಬಂದಂತಾಗಿತ್ತು. ಅವರ ಸಮೀಪದರ್ಶನ ಪಡೆದ ಎನ್.ಎಚ್. ಮೊಹರೆ ಅವರ 'ಅಜ್ಜಯ್ಯನ ಅಭ್ಯಂಜನ'ದ ಅತಿಶಯೋಕ್ತಿರಂಜಿತ ಕತೆಗಳನ್ನು ಹೇಳುತ್ತಿದ್ದರು—ಎರಡು ಹಂಡೆ ಬಿಸಿಬಿಸಿ ನೀರು, ಎಣ್ಣೆ, ಲಂಗೋಟಿ. ಮುಂತಾಗಿ. "ಡಿ.ವಿ.ಜಿ. 'ಮಂಕುತಿಮ್ಮನ ಕಗ್ಗ' ಪ್ರಕಟಿಸಿದ ಮೇಲೆ ಅವರೊಮ್ಮೆ ಧಾರವಾಡಕ್ಕೆ ಬರಲೇಬೇಕೆಂದು ಬಯಸಿದ್ದೆವು." ಎಂದು ಮಾಳವಾಡರು ತಮ್ಮ ಸಂಕಲ್ಪಪೂರ್ತಿಯ ಸಂತೋಷವನ್ನು ಪರಿಚಯ ಭಾಷಣದಲ್ಲಿ ಹೇಳಿದ ಮೇಲೇ ಈ ಸ್ಥೂಲಕಾಯರು ಕವಿಗಳೆಂದು ನಮಗೆ ತಿಳಿದದ್ದು. ಡಿ.ವಿ.ಜಿ. ಯವರು ಮಾಡಿದ ಕನ್ನಡ ಭಾಷಣ ನಮಗೆ ಎಳ್ಳಷ್ಟೂ ಹಿಡಿಸಲಿಲ್ಲ. ಹೆಸರು–ಆಕಾರ–ಧ್ವನಿ ಎಲ್ಲವೂ ನಮ್ಮ ನಗೆಯ ವಿಷಯವೇ ಆಗಿ ಇಡೀ ದಿನ ಉಳಿದುಕೊಂಡವು.

ಮರುದಿನ ಇತಿಹಾಸ–ಭೂಗೋಳ–ಅರ್ಥಶಾಸ್ತ್ರದ ವಿಭಾಗದ ಮುಖ್ಯಸ್ಥ ಪ್ರೊ. ಸಿ. ಡಿ. ದೇಶಪಾಂಡೆ ತಮ್ಮ ಸಂಘದ ವತಿಯಿಂದ ಇಂಗ್ಲಿಷ್ ಭಾಷಣ ಇಟ್ಟಿದ್ದರು. ಪ್ರೊ. ಸಿ. ಡಿ. ದೇಶಪಾಂಡೆ ಭೂಗೋಳ ಪ್ರಾಧ್ಯಾಪಕರು. ಧಾರವಾಡದ ಪ್ರೋಕರಿಗಳಿಗೆ ಮೊಹರೆ ಹಣಮಂತರಾಯರ ದೇಹ ಹೇಗೆ ದಿನಬಳಕೆಯ ನಗೆಕಂತೆಯಾಗಿತ್ತೋ ಹಾಗೆ ಸಿ. ಡಿ. ದೇಶಪಾಂಡೆ ಪ್ರೊಫೇಸರರ Morris Minor ಕಾರು (ಧಾರವಾಡಕ್ಕೆ ಇದೊಂದೇ. ಇದಕ್ಕೆ 'ಕಡ್ಡಿಪೆಟ್ಟಿಗೆ ಕಾರ್' ಎನ್ನುತ್ತಿದ್ದರು. ಅದು ರಸ್ತೆಯಲ್ಲಿ ಹಾದು ಹೋದರೆ ನಗೆಯ ಲಹರಿಗಳು ಏಳುತ್ತಿದ್ದವು. ದೇಶಪಾಂಡೆ ಕೈಮಾಡಿ ನಗೆಗೆ

ಅನುಮೋದನೆ ನೀಡುತ್ತಿದ್ದರು.) ನಗೆಕಂತೆಯಾಗಿತ್ತು. ಸಭೆ ಅರ್ಧಗಂಟೆ ತಡವಾಗಿ ಶುರುವಾಯಿತು. ಏಕೆ ತಡವಾಗಿರಬೇಕೆಂದು ಊಹಾಪೋಹ ಶುರುವಾಗಿ, ಪ್ರೊಫೆಸರರು ತಮ್ಮ ಕಾರಿನಲ್ಲಿ ಡಿ.ವಿ.ಜಿ. ಮತ್ತು ಮೊಹರೆ ಹಣಮಂತರಾಯರನ್ನು ಕರಕೊಂಡು ಬರುತ್ತಿರಬೇಕೆಂದೂ ಭಾರಕ್ಕೆ ಗಾಲಿ ಚಪ್ಪಟೆ ಆಗಿರಬೇಕೆಂದೂ ಯಾರೋ ಹುಟ್ಟಿಸಿದ ನಗೆ ಕಂತೆ ಕೂಡಿದ ವಿದ್ಯಾರ್ಥಿವೃಂದದಲ್ಲಿ ಬಾಯಿಯಿಂದ ಬಾಯಿಗೆ ಹರಡಿತು. ಸಾಲದ್ದಕ್ಕೆ, ಮೂವರೂ ಜೊತೆಯಾಗಿಯೇ ಹಾಲು ಪ್ರವೇಶಿಸಿದರು. ದೊಡ್ಡ ನಗೆಯ ಲಹರಿ ಎದ್ದಿತಾದರೂ, ಚಪ್ಪಾಳೆಯ ಧ್ವನಿಯಲ್ಲಿ ಕೂಡಿಕೊಂಡು ಉತ್ಸಾಹವಾಗಿ ತೋರ್ಪಟ್ಟಿತ್ತು. ಹಿಸ್ಟರಿ–ಇಕಾನಾಮಿಕ್ಸ್ ವಿದ್ಯಾರ್ಥಿಗಳಿಗೆ ಡಿ.ವಿ.ಜಿ. ಹೆಚ್ಚು ಪರಿಚಿತರು. ತಡವಾದುದಕ್ಕೆ ಕಾರಣ ಸಿ. ಡಿ. ದೇಶಪಾಂಡೆಯವರ ಪ್ರಾಸ್ತಾವಿಕ ಭಾಷಣದಲ್ಲೇ ತಿಳಿಯಿತು. ಹಳೆಯ ಮುಂಬೈ ಕರ್ನಾಟಕದಲ್ಲಿ ಪ್ರಚಲಿತ ಪದ್ಧತಿ ಇತಿಹಾಸ–ಭೂಗೋಳ–ಅರ್ಥಶಾಸ್ತ್ರಗಳನ್ನು ಒಂದೇ ಚಪ್ಪರದ ಅಡಿಯಲ್ಲಿ ಕೂಡಿಸುವದು : ಅದಕ್ಕೆ ಒಬ್ಬರೇ ಮುಖ್ಯಸ್ಥರು. ಇದರ ತಾರ್ಕಿಕತೆಯ ಬಗ್ಗೆ ಡಿ.ವಿ.ಜಿ. ಸಂಶಯ ವ್ಯಕ್ತಪಡಿಸಿದ್ದರೆಂದೂ, ಅದರಿಂದ ತುಸು ಬಿಸಿ ಚರ್ಚೆಯಾಗಿತ್ತೆಂದೂ ತೋರುತ್ತದೆ. ಮೂರೂ ಸಮಾಜಶಾಸ್ತ್ರದ ಅಂಗವಾದ್ದರಿಂದ 'ಒಂದೆ ಸೂರಡಿಯಲ್ಲಿ' ಸೇರುವದು ಕ್ರಮ ಪ್ರಾಪ್ತವೆಂದು ಪ್ರೊ. ದೇಶಪಾಂಡೆ ಪ್ರಾಸ್ತಾವಿಕ ಭಾಷಣದಲ್ಲಿ ಪ್ರತಿಪಾದಿಸಿದರು. ಹೀಗೆ ಹೇಳುವಾಗ, ಅವರು ಬಳಸಿದ 'Human Geography' ಶಬ್ದ ವೇದಿಕೆಯ ಮೇಲೆ ಕುಳಿತ ಎರಡು ಪರ್ವತಗಳ ಬಗ್ಗೆ ಎಂಬ ಭಾವನೆಯಿಂದ ದೀರ್ಘ ನಗೆಯ ಲಹರಿ ಎದ್ದಿತು. "ಡಿ.ವಿ.ಜಿ. ಡಿವೋರ್ಸ್ ಬೇಡುತ್ತಾರೆ" ಎಂದು ದೇಶಪಾಂಡೆ ನಗೆಯಾಡಿದರು. "Not divorce but separate harems" ಎಂದು ಕುಳಿತಲ್ಲಿಯೇ ಡಿ.ವಿ.ಜಿ. ಹೇಳಿದೊಡನೆ ಸಭೆಯಲ್ಲಿ ಅದಕ್ಕೂ ದೊಡ್ಡ ನಗೆಯು ಎದ್ದಿತು. ಆಗ ಅವರ ಬುದ್ಧಿಮತ್ತೆಯ ಆಳ ಅರ್ಥವಾಯಿತು. ತಮ್ಮ ಭಾಷಣದಲ್ಲಿ ಡಿ.ವಿ.ಜಿ. Marriage, Club, Association, Contract, ಇದೇ ಜೋಕುಗಳ ಸುರಿಮಳೆ ತೂರಿ ಒಂದು ತರ್ಕಬದ್ಧ ವಾದದ ಕಟ್ಟಡ ಕಟ್ಟಿದರು. ವಿವಿಧ ಜ್ಞಾನ ಕೋಶಗಳು Autonomy ಮತ್ತು Interdependence ಸಮನ್ವಯಿಸಿ ಮುಂದುವರಿಯಬೇಕೆಂದು ಬಹಳ ಸೊಗಸಾಗಿ ಭಾಷಣ ಮಾಡಿದರು. ಎಲ್ಲರೂ ತಲೆದೂಗುವಂತೆ ಮಾಡಿದರು. ಪ್ರೊ. ದೇಶಪಾಂಡೆ (ತಮ್ಮ ಹಿತಸಂಬಂಧವನ್ನೂ ಮರೆತು) ಡಿ.ವಿ.ಜಿ.ಯವರ ವಿಸ್ತಾರ–ಆಳ ಮುಂಧೋರಣೆಗಳನ್ನು ಮೆಚ್ಚಿ ಮಾತನಾಡಿದರು.

ಆಗ ನಾವು ಹೊಸಬರು ಡಿ.ವಿ.ಜಿ. ಕೃತಿಗಳನ್ನು ಆಸ್ಥೆಯಿಂದ ಓದತೊಡಗಿದೆವು.

1968ರಲ್ಲಿ ಮನೋಹರ ಗ್ರಂಥಮಾಲಾ ಪ್ರಕಾಶಕ ಜಿ.ಬಿ. ಜೋಶಿಯವರು ತಮ್ಮ ವಿಳಾಸಕ್ಕೆ ಡಿ.ವಿ.ಜಿ. ನನಗೆ ಬರೆದ ಪತ್ರವನ್ನು ತಲುಪಿಸಿದರು. 'ಗಂಗವ್ವ–ಗಂಗಾಮಾಯಿ' ಓದಿ ಮೆಚ್ಚಿಕೊಂಡು ಬರೆದ ಪತ್ರವದು. ಡಿ.ವಿ.ಜಿ. ತಾವೇ ಬರೆದ ಪತ್ರವೆಂದ ಮೇಲೆ ಅವರು ನಿಜವಾಗಿಯೂ ಕಾದಂಬರಿ ಮೆಚ್ಚಿಕೊಂಡಿದ್ದಾರೆ. ವೃಥಾ ಹೊಗಳುವವರಲ್ಲ

ಎಂದು ನಮ್ಮ ಧಾರವಾಡ ಮಿತ್ರ ಎಸ್. ಎಂ. ಅಂಗಡಿ, ಕೆ. ಪಿ. ರಾವ್ ಹೇಳಿದರು. ಹಾಗೆ ಮೌಖಿಕವಾಗಿ ಹಲವಾರು ಹಿರಿಯ ಸಾಹಿತಿಗಳು ಮೆಚ್ಚುಗೆ ಸೂಚಿಸಿದ್ದರು. ಬೇಂದ್ರೆಯವರಂತೂ "ನನಗೆ ಮೂರು ದಿನ ನಿದ್ದೆ ಹತ್ತಲಿಲ್ಲ. ರಾತ್ರಿ–ಹಗಲು ಶ್ರೀಮತಿಯವರಿಗೆ ಅದರ ಕತೆ ಹೇಳುತ್ತಿದ್ದೆ" ಎಂದು ಅಂದಿದ್ದರು. ಡಿ.ವಿ.ಜಿ. ಅಪರಿಚಿತ ಲೇಖಕನಿಗೆ ಬರೆದು ಕಳಿಸಿದ ಪತ್ರದ ಭಾಗಗಳನ್ನು 'ಸುರುಚಿ' ಪ್ರಕಟಿಸಿದ 2ನೇ ಆವೃತ್ತಿಯ ಕವರಿನ ಮೇಲೆ ಮುದ್ರಿಸಿದೆ. ಉತ್ತರದಲ್ಲಿ ನನ್ನ ಕೃತಜ್ಞತೆಯನ್ನು ಅರ್ಪಿಸಿದೆನು. ಡಿ.ವಿ.ಜಿ.ಯವರ ರಸಜ್ಞತೆಗೆ ಇದು ಉದಾಹರಣೆ. ನಾನು ಮುಂಬೈಯಲ್ಲಿದ್ದರೂ ಪ್ರತ್ಯಕ್ಷ ಭೇಟಿ ಎಂದೂ ಆಗಲಿಲ್ಲ.

ಇದು ಡಿ.ವಿ.ಜಿ.ಯವರ ನೆನಪಿನ ನೆಪದಲ್ಲಿ ಆತ್ಮಪ್ರಶಂಸೆ ಮಾಡಿಕೊಂಡಂತೆ ಆಯ್ತು. 1980ರ ನಂತರ ಮೈಸೂರಿಗೆ ಬಂದಮೇಲೆ ಅವರ ಮೊಮ್ಮಗ ಶ್ರೀ ದಿವಾಕರರಿಂದ ಅವರ ಬಗ್ಗೆ ಹೆಚ್ಚಿನ ವಿವರ ತಿಳಿದವು. ಅವರ ಸಾದಾ ಜೀವನ, ಕಟ್ಟಿದ ಸಂಸ್ಥೆಗಳು, ಎತ್ತರದ ವಿಚಾರಗಳು, ರಾಷ್ಟ್ರ ಮತ್ತು ಕನ್ನಡದ ಪ್ರೇಮ, ವಿಭೂತಿಮತ್ತೆ, ಇವು ತಿಳಿಯತೊಡಗಿದಮೇಲೆ ಸಂಧಿ ಇದ್ದಾಗಲೇ ಹೆಚ್ಚು ಪರಿಚಯ ಮಾಡಿಕೊಳ್ಳಲಿಲ್ಲವಲ್ಲಾ, ಎಂದು ವಿಲವಿಲವಾಗುತ್ತಿದೆ. ನನಗೆ ಸ್ವಲ್ಪವಾದರೂ ಬುದ್ಧಿ ಇದ್ದಿದ್ದರೆ, ಮೈಸೂರು ಕರ್ನಾಟಕದ ಮೂರು ವಿಭೂತಿಗಳನ್ನು ಸಮೀಪ ದರ್ಶನವಿಲ್ಲದೆ ಬಿಡುತ್ತಿದ್ದಿಲ್ಲ—ಮಾಸ್ತಿ. ಡಿ.ವಿ.ಜಿ. ಪುಟ್ಟಸ್ವಾಮಯ್ಯ. ಮೂವರೂ ಮೂದಲಿಸಿ ಕಣ್ಮರೆಯಾದರು. ಮಾಸ್ತಿಯವರಿಗೆ ಬರೆದ ಒಂದು ಪತ್ರ–ಅದಕ್ಕೆ ಮಾಸ್ತಿ ಉತ್ತರ ; ಪುಟ್ಟಸ್ವಾಮಯ್ಯನವರ ನಾಲ್ಕಾರು ಪತ್ರ : ಡಿ.ವಿ.ಜಿ. 1968 ರಲ್ಲಿ ಬರೆದ ಪತ್ರ : ಇವಿಷ್ಟೆ ನಾನು ಈ ಭಾಗದಲ್ಲಿ ಗಳಿಸಿದ ಆಸ್ತಿ. ಡಿ.ವಿ.ಜಿ.ಯವರ ಪತ್ರವಂತೂ Windfall ಎಂದೇ ಹೇಳಬೇಕು. ಅದು ಡಿ.ವಿ.ಜಿ.ಯವರ ಹಿರಿಮೆ ; ಔದಾರ್ಯ. ಹಾಗೆ ನನಗೆ ಇಡೀ ಆಯುಷ್ಯದಲ್ಲೆ ಇನ್ನೊಂದು ಪತ್ರ ಬಂದಿಲ್ಲ. ಶ್ರೀ ರಾಮಚಂದ್ರ ಅಳಿಲಿನ ಬೆನ್ನುತಟ್ಟಿದಂತೆ.

—**ಶಂಕರ ಮೊಕಾಶಿ ಪುಣೇಕರ**

ಡಿ.ವಿ.ಜಿ.: ವಿದ್ವತ್ತು ಮತ್ತು ರಸಿಕತೆಗಳ ಸಂಗಮ

ನಾನು ಮೈಸೂರಿನಲ್ಲಿಯ ಮಹಾರಾಜಾ ಸಂಸ್ಕೃತ ಕಾಲೇಜಲ್ಲಿ ಇನ್ನೂ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿಯೇ—ಅಂದರೆ 1935ರಿಂದ 1940ರ ಅವಧಿಯಲ್ಲಿಯೇ—ಶ್ರೀ ಡಿ.ವಿ.ಜಿ.ಯವರಿಂದ ಪ್ರಭಾವಿತನಾಗಿದ್ದೆನು. ಅವರ ಕೃತಿ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ನನ್ನ ಮೇಲೆ ಬಹಳ ಪ್ರಭಾವವನ್ನು ಬೀರಿತ್ತು. ಆಗಿನ ಕಾಲದಲ್ಲಿ ನಾನು ಡಿ.ವಿ.ಜಿ.ಯವರನ್ನು ದೂರದಿಂದಲೇ ಕಂಡು ಅವರ ವಿಷಯದಲ್ಲಿ ಗೌರವ ಭಾವನೆಯುಳ್ಳವನಾಗಿದ್ದೆನು. ಸಮಕ್ಷಮ ಭೆಟ್ಟಿಯಾಗುವ ಯೋಗ ಬರಲಿಲ್ಲ.

ಅದೇ ಸಮಯದಲ್ಲಿ ದೇವುಡು ನರಸಿಂಹಶಾಸ್ತ್ರಿಗಳು, ಡಿ. ಕೆ. ಭಾರದ್ವಾಜರು, ಸಿ. ಕೆ. ವೆಂಕಟರಾಮಯ್ಯನವರು ಮೊದಲಾದ ಹಿರಿಯರನ್ನು ಭೆಟ್ಟಿಯಾಗುತ್ತಿದ್ದೆನು. ಆದರೆ ಡಿ.ವಿ.ಜಿ.ಯವರ ಭೆಟ್ಟಿಯಾಗುವ ಯೋಗ ಬರಲಿಲ್ಲ. ಎ. ಎನ್. ಮೂರ್ತಿರಾಯರ 'ಸಾಕ್ರಟೀಸನ ಕೊನೆಯ ದಿನಗಳು', ಸಿ. ಕೆ. ವೆಂಕಟರಾಮಯ್ಯನವರ 'ನಚಿಕೇತ', 'ಮಂಡೋದರಿ' ಗ್ರಂಥಗಳೂ ನನ್ನ ಮೇಲೆ ಪ್ರಭಾವವನ್ನು ಬೀರಿದ್ದವು. ಆದರೆ ಡಿ.ವಿ.ಜಿ.ಯವರ ಗ್ರಂಥದ ಪ್ರಭಾವದ ರೀತಿಯೇ ಬೇರೆಯಾಗಿತ್ತು.

ಡಿ.ವಿ.ಜಿ.ಯವರ ಸಮಕ್ಷಮ ಭೆಟ್ಟಿಯ ಯೋಗ ಬಂದುದು 1958ರಲ್ಲಿ. ಆಗ ನಾನು ಮೈಸೂರು ಸರಕಾರದ ಸಂಸ್ಕೃತ ಬೋರ್ಡಿನ ಸದಸ್ಯನಾಗಿದ್ದರಿಂದ ವಿದ್ವತ್ಪರೀಕ್ಷೆಗಳ ಪದವೀದಾನ ಸಮಾರಂಭಕ್ಕೆ ಬಂದಿದ್ದೆನು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದ ಡಾ॥ ವಿ. ರಾಘವನ್ನರು ಡಿ.ವಿ.ಜಿ.ಯವರ ಅಭಿಮಾನಿಗಳಲ್ಲಿ ಒಬ್ಬರು. ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ಗಳ ಸಂಸ್ಕೃತ ಅನುವಾದವನ್ನು 'ಸಂಸ್ಕೃತಪ್ರತಿಭಾ' ಎಂಬ ಸಾಹಿತ್ಯ ಅಕಾಡಮಿಯ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಅವರು ಡಿ.ವಿ.ಜಿ.ಯವರ ಭೆಟ್ಟಿಗೆ ಹೋಗೋಣ ಎಂದರು. ಇಬ್ಬರೂ ಕೂಡಿ ಗೋಖಲೆ ಸಾರ್ವಜನಿಕ ಸಂಸ್ಥೆಗೆ ಬಂದು ಸುಮಾರು ಒಂದು ಗಂಟೆ ಕಾಲ ಅನೇಕ ವಿಷಯಗಳ ಮೇಲೆ ಹರಟೆ ಹೊಡೆದೆವು. ಅದೊಂದು ಅವಿಸ್ಮೃತವಾದ

ಘಂಟೆಯಾಗಿತ್ತು. ಸಂಸ್ಕೃತ ವಿದ್ವತ್ಪ್ರಪಂಚದಲ್ಲಿ ಬಹಳ ಖ್ಯಾತಿಯನ್ನು ಪಡೆದ ಡಾ॥ ರಾಘವನ್ನರು ಡಿ.ವಿ.ಜಿ.ಯವರ ಎದುರಿಗೆ ಅವರ ಶಿಷ್ಯರಂತೆ ಗೌರವ ವಿಶ್ವಾಸಗಳಿಂದ ನಡೆದುಕೊಂಡದ್ದು ನನ್ನ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿತು.

1963ರಲ್ಲಿ ನಾನು ಬೆಂಗಳೂರಿಗೇ ಬಂದು ನೆಲಸಿದಮೇಲೆ ಡಿ.ವಿ.ಜಿ.ಯವರ ಸಂಪರ್ಕ ಬಹಳವಾಯಿತು. ಬಸವನಗುಡಿಯ ಮಾಡೆಲ್ ಹೌಸ್ ಬೀದಿಯಲ್ಲಿಯೇ ಮೊದಲು ಮನೆ ಮಾಡಿದ ನನಗೆ ಅವರ ಮನೆಯೂ ಹತ್ತಿರವಿತ್ತು. ತಿಂಗಳಿಗೆ ಒಮ್ಮೆಯಾದರೂ ಅವರ ಮನೆಗೆ ಭೆಟ್ಟಿಗೆ ಹೋಗುತ್ತಿದ್ದೆನು. ಗೀತೆ. ರಾಮಾಯಣ. ಕಾಲಿದಾಸ. ಭವಭೂತಿ. ಹೀಗೆ ಸಂಸ್ಕೃತದ ಅಪೂರ್ವಗ್ರಂಥಗಳಲ್ಲಿ ಯಾವುದಾದರೊಂದರ ವಿಷಯದ ಕಡೆಗೆ ನಮ್ಮ ಹರಟೆ ಹೊರಳುತ್ತಿತ್ತು. ಡಿ.ವಿ.ಜಿ.ಯವರ ವಿವೇಚನೆ ನನಗೆ ಹೊಸ ದೃಷ್ಟಿಯನ್ನು ಕೊಡುತ್ತಿತ್ತು. ಹೊಸ ಆಯಾಮವನ್ನು ತೋರಿಸುತ್ತಿತ್ತು. ಜೊತೆಗೆ ವಿನೋದದ ಚಟಾಕಿಗಳನ್ನು ಹಾರಿಸುತ್ತಿದ್ದರು. ಮುಳಬಾಗಿಲದವರಾದ ಅವರಿಗೆ ಮಾಧ್ವರ ಜೀವನ ಕ್ರಮದ. ಊಟ ಉಪಚಾರಗಳ ಅನೇಕ ವಿನೋದಗಳು ಗೊತ್ತಿದ್ದವು. ಅವನ್ನೆಲ್ಲ ಹೇಳಿ ಗಟ್ಟಿಯಾಗಿ ನಕ್ಕು ನಗಿಸುತ್ತಿದ್ದರು. ಒಮ್ಮೆ ಸಂಸ್ಕೃತ ಸ್ತೋತ್ರ ಕಾವ್ಯಗಳ ಕಡೆಗೆ ನಮ್ಮ ಹರಟೆ ತಿರುಗಿತು. ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಸ್ತೋತ್ರ ಕಾವ್ಯಗಳ ಮೇಲೆ ಒಂದು ಉಪನ್ಯಾಸ ಮಾಡಲು ಹೇಳಿದರು. ಆ ಉಪನ್ಯಾಸಕ್ಕೆ ಸ್ವತಃ ಬಂದು ಬಹಳ ಸಂತೋಷಪಟ್ಟು ಬೆನ್ನು ಚಪ್ಪರಿಸಿದರು.

ನಾನು ಬೆಂಗಳೂರು ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥನಾದ ಮೇಲೆ ನಮ್ಮ ವಿಭಾಗದಲ್ಲಿ ಪ್ರೊ. ಹಿರಿಯಣ್ಣನವರ ಭಾವಚಿತ್ರವನ್ನು ಹಾಕಬೇಕೆಂದು ಯೋಚಿಸಿದೆನು. ಅದನ್ನು ಸಿದ್ಧಪಡಿಸಿದ ಮೇಲೆ ಅದರ ಉದ್ಘಾಟನೆಗೆ ಶ್ರೀ ಡಿ.ವಿ.ಜಿ.ಯವರನ್ನು ಪ್ರಾರ್ಥಿಸಿದೆನು. ಅವರು ಬಹಳ ಸಂತೋಷದಿಂದ ಪ್ರೊ. ಹಿರಿಯಣ್ಣನವರ ಭಾವಚಿತ್ರದ ಅನಾವರಣವನ್ನು ಮಾಡಿ ಹಿರಿಯಣ್ಣನವರ ಜೀವನದ ಕೆಲವು ಮಹತ್ವದ ಘಟನೆಗಳನ್ನು ತಿಳಿಸಿದರು. ಸಂಸ್ಕೃತ ವಿಭಾಗವು ಮುಂದೆ ಬರುವಂತೆ ಆಶೀರ್ವಾದ ಮಾಡಿದರು.

ಅವರ 'ಭಗವದ್ಗೀತಾ ತಾತ್ಪರ್ಯ' ಗ್ರಂಥವನ್ನು ನಾನು ಹುಬ್ಬಳ್ಳಿಯ 'ಕರ್ಮವೀರ' ಪತ್ರಿಕೆಯಲ್ಲಿ ವಿಮರ್ಶೆ ಮಾಡಿದೆನು. ಅದನ್ನು ಡಿ.ವಿ.ಜಿ.ಯವರು ಓದಿ "ಗ್ರಂಥವನ್ನು ಓದಿ, ತಿಳಿದುಕೊಂಡು ವಿಮರ್ಶೆಯನ್ನು ಬರೆದಿರುವಿ. ತುಂಬ ಸಂತೋಷ. ಈ ಅಭ್ಯಾಸಪ್ರವೃತ್ತಿಯನ್ನು ಕಳೆದುಕೊಳ್ಳಬೇಡ" ಎಂದು ನಕ್ಕರು.

ಡಿ.ವಿ.ಜಿ.ಯವರು ವಿದ್ವತ್ತು ಮತ್ತು ರಸಿಕತೆಗಳ ಸಂಗಮವಾಗಿದ್ದರು. ತರುಣರಿಗೆ ತುಂಬ ಉತ್ತೇಜನ ಕೊಡುತ್ತಿದ್ದರು. ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಆಧುನಿಕ ವಿಚಾರಶೀಲರ ಮನಸ್ಸಿಗೆ ಒಪ್ಪಿಗೆಯಾಗುವಂತೆ ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿದರು. ನನಗೆ ಅವರು ಗುರುಸಮಾನರಾಗಿದ್ದರು. ಪರಮ ಆತ್ಮೀಯರಾಗಿದ್ದರು.

—**ಕೆ. ಟಿ. ಪಾಂಡುರಂಗಿ**

ಡಿ.ವಿ.ಜಿ. ಯವರೊಡನೆಯ ಕೆಲವು ಕ್ಷಣಗಳು

ಮಾರ್ಚ್ 1969 : ಡಿ.ವಿ.ಜಿ. ಅವರ 'ಸಹಸ್ರಚಂದ್ರ ದರ್ಶನ'ದ ನೆನಪಿನಲ್ಲಿ ಹತ್ತಿರದ ಕೆಲವು ಸ್ನೇಹಿತರನ್ನು ಸೇರಿಸಿ ವಿ.ಸೀ. ಡಿ.ವಿ.ಜಿ. ಅವರನ್ನು ಅವರ ಮನೆಯಲ್ಲಿಯೇ ಖಾಸಗಿಯಾಗಿ ಸತ್ಕರಿಸುವುದೆಂದು ನಿಯೋಜಿಸಿದ್ದರು. ನಿಗದಿಯಾದ ದಿನಕ್ಕೆ ಮುಂಚಿತವಾಗಿ ಪತ್ರ ಬರೆದು ತಮ್ಮ ಉದ್ದೇಶವನ್ನು ವಿವರಿಸಿ ವಿ.ಸೀ. ಡಿ.ವಿ.ಜಿ. ಅವರ ಅನುಮತಿ ಕೋರಿದ್ದರು. ಹಾಗೆ ಅನುಮತಿ ನೀಡದೆ, ತಮ್ಮ ಗೌರವಾದರಗಳನ್ನು ಸಲ್ಲಿಸಲು ಒಂದು ವೇಳೆ ಅವಕಾಶ ಕೊಡದಿದ್ದರೆ ತಾವೆಲ್ಲ ಅದನ್ನು ಲಕ್ಷ್ಯಕ್ಕೇ ತಂದುಕೊಳ್ಳುವುದಿಲ್ಲ, ಬಂದೇ ತೀರುತ್ತೇವೆ, 'You are not a private man and must pay some price for being a Public Person' ಎಂಬ ತಮಾಷೆಯ ಹಗುರ ಬೆದರಿಕೆಯನ್ನೂ ಹಾಕಿದ್ದರು. ಅದಕ್ಕೆ ಡಿ.ವಿ.ಜಿ. ಅವರಿಂದ ಅವರ ಮನೋಧರ್ಮದ ವಿಶಿಷ್ಟ ಪ್ರತೀಕವೆನ್ನಬಹುದಾದ, ಬಹು ಸ್ವಾರಸ್ಯಕರವಾದ ಉತ್ತರವೂ ಬಂದಿತ್ತು. ತಮ್ಮ ಸನ್ಮಿತ್ರರನ್ನು ತಾವು ನಿರಾಸೆಗೊಳಿಸುವುದಿಲ್ಲ, ಆದರೆ ನಿಯೋಜಿತ ಸತ್ಕಾರ ಯೋಜನೆಗೆ ಬದಲು ನಾನು ಸೂಚಿಸುವ ಕೆಲವು ಬೇರೆ ಕಾರ್ಯಕ್ರಮಗಳನ್ನು ನಡಸೋಣ ಎಂದು, ತಾವು ಬದುಕಿನಲ್ಲಿ ಸವೆಸಿದ ಒಂದೊಂದು ದಶಕಕ್ಕೆ ಒಂದರಂತೆ ಎಂಟು ಅಂಶಗಳ ಕಾರ್ಯಕ್ರಮವನ್ನು ಸೂಚಿಸಿದ್ದರು. ಸ್ಥೂಲವಾಗಿ ಒಂದೆರಡು ಹೀಗಿದ್ದವೆಂದು ನೆನಪು. ಒಂದು : ಒಬ್ಬರು ಗರುಡಗಂಬ ಹಿಡಿದು ಮುಂದೆ ಹೊರಡುವುದು, ಇತರ ಸ್ನೇಹಿತರು ಹಿಂಬಾಲಿಸುವುದು. ಎಲ್ಲರೂ ಭಜನೆಯ ಕಾರ್ಯಕ್ರಮ ನಡೆಸುವುದು. ತಾವು (ಡಿ.ವಿ.ಜಿ.) ಪಲ್ಲವಿ ಹಾಡುವುದು, ಮಿಕ್ಕವರು ಅದನ್ನು ಪುನರುಚ್ಚರಿಸುವುದು. ಹೀಗೆ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ಸಿಟಿ ಮಾರ್ಕೆಟ್ಟಿನವರೆಗೆ ಹೋಗಿ ಹಿಂದಿರುಗುವುದು ! ಇನ್ನೊಂದು : ಗಾಲಿಗಳುಳ್ಳ ಸಣ್ಣ ಮರದ ಮಂಚ ಒಂದರ ಮೇಲೆ ತಾವು (ಡಿ.ವಿ.ಜಿ.) ಮಲಗಿಕೊಳ್ಳುವುದು, ಮಿಕ್ಕವರು ಅದನ್ನು ಎಳೆಯುತ್ತ 'ಕುರುಡಾ. ಕಿವುಡಾ, ಕಾಲಿಲ್ಲಾ, ಹೆಳವಾ... ಆ...ಆ' ಇತ್ಯಾದಿ ರಾಗವಾಗಿ ಹಾಡಿಕೊಂಡು ಮುಂದುವರಿಯುವುದು ! ಮತ್ತೊಂದು : ಪ್ರಸ್ತುತ ಸಂದರ್ಭಕ್ಕೆಂದೇ ವಿಶೇಷವಾಗಿ ತಯಾರಿಸಿದ ಬಾವುಟ ಒಂದನ್ನು ಎಲ್ಲರೂ ಹಿಡಿದು 'Down with Age', 'Up with Youth' ಎಂದು ಘೋಷಣೆ ಕೂಗುತ್ತ ಮೆರವಣಿಗೆ ಸಾಗುವುದು ಇತ್ಯಾದಿ ಇತ್ಯಾದಿ. ಹೀಗೇ ಒಂದು ಇನ್ನೊಂದನ್ನು

ಮೀರಿಸುವಂಥ ಅದ್ಭುತ ಸ್ವಾರಸ್ಯಗರ್ಭವುಳ್ಳ ಕಾರ್ಯಕ್ರಮಗಳೇ ! ಡಿ.ವಿ.ಜಿ. ಅವರ ವಿಶಿಷ್ಟ ಲಘು-ಹಾಸ್ಯ ಮನೋಧರ್ಮದ ಪ್ರತೀಕವೆನ್ನಿಸುವಂಥದು. ಅವರ ಇಂಥ ಸಲಹೆಗಳನ್ನು ಒಪ್ಪದೆ ವಿ.ಸೀ ತಾವೂ ಸ್ನೇಹಿತರೂ ಇಂಥ ದಿನ ಅವರ ಮನೆಗೆ ದಾಳಿ ನಡಸುತ್ತೇವೆಂದು ತಿಳಿಸಿದ್ದರು.

ಗೊತ್ತಾಗಿದ್ದ ದಿನ ಬೆಳಗ್ಗೆ ವಿ.ಸೀ ನನ್ನನ್ನೂ ತಮ್ಮೊಡನೆ ಕರೆದೊಯ್ದು ಘಮ ಘಮಿಸುತ್ತಿದ್ದ ಅಚ್ಚಮಲ್ಲಿಗೆಯ ಹೂಹಾರ. ನಾಲ್ಕಾರು ಬಗೆಯ ಹಣ್ಣುಗಳು, ಬುತ್ತಿಚಿಗುರು ವೀಳೆಯದೆಲೆ. ಉತ್ತಮ ರೇಶಿಮೆಯ ಶಲ್ಯ, ಜೋಡಿಪಂಚೆ, ಜೊತೆಗೆ 'ಗುಂಡಪ್ಪನ ಹೊಟೇಲಿ'ನ ಚಿರೋಟಿ, ಜಿಲೇಬಿ, ಕರಿದ ಅವಲಕ್ಕಿ, ಪಕೋಡ- ಇವೆಲ್ಲ ಡಿ.ವಿ.ಜಿ. ಅವರಿಗೆ ಪ್ರಿಯವಾಗಿದ್ದ ತರತೀಪುಗಳು !—ಇತ್ಯಾದಿಯನ್ನು ಖರೀದಿಸಿದ್ದರು. ಸಂಜೆ ಆರು ಗಂಟೆಗೆ ಎಲ್ಲರೂ ಡಿ.ವಿ.ಜಿ. ಅವರ ಮನೆಯಲ್ಲಿ ಸೇರಿದ್ದೆವು. ಪ್ರೊ. ಕೆ. ವಿ. ಅಯ್ಯರ್, ಡಾ॥ ರಾಶಿ.. ಪ್ರೊ. ಇನಾಂದಾರ್, ಶ್ರೀ ಪಿ. ವಿ. ಜೋಶಿ, ವಿ.ಸೀ., ಎಲ್ಲರಿಗೂ ಚಿರಂಜೀವಿಯಾಗಿದ್ದ ನಾನು-ಬಹುಶಃ ಇನ್ನು ಯಾರೊ ಒಬ್ಬರಿಬ್ಬರಿದ್ದರೇನೋ—ಒಂದೆರಡು ಗಂಟೆಯ ಕಾಲ ಡಿ.ವಿ.ಜಿ. ಅವರ ಸನಿಹ ದಲ್ಲಿ ಸಂತೋಷವಾಗಿ ಕಳೆದೆವು. ಆರೋಗ್ಯ ಅಷ್ಟು ಸಮರ್ಪಕವಾಗಿರದಿದ್ದರೂ ಡಿ.ವಿ.ಜಿ. ನಮ್ಮೊಡನೆ ಕುಳಿತು ಹೃದಯ ಬಿಚ್ಚಿ ಲೋಕಾಭಿರಾಮವಾಗಿ ಮಾತನಾಡಿ ನಮ್ಮಲ್ಲಿ ಅಚ್ಚರಿ ಮೂಡಿಸಿದರು : ಅಂಥ ಧೀಮಂತರು. ಹಿರಿಯ ಸಾಧಕರು ತಮ್ಮ ಎಂಬತ್ತನೆಯ ವಯಸ್ಸಿನಲ್ಲಿಯೂ ಎಳೆಯ ಮಕ್ಕಳಂತೆ ಹೇಗೆ ನಿಷ್ಕಪಟ ಮನಸ್ಸಿನಿಂದ ಹಗುರ ಚಿತ್ತದಿಂದ ಇರಬಲ್ಲರು, ಧಾರಾಳವಾಗಿ ಮಾತನಾಡಿ ತಮ್ಮ ಹೃದಯಸಂಪನ್ನತೆಯನ್ನು. ಜೀವನೋತ್ಸಾಹವನ್ನು ಕಾಣಿಸಬಲ್ಲರು ಎಂಬುದನ್ನು ತೋರಿಸಿದರು. ಸಾಹಿತ್ಯ. ಸಾಹಿತಿಗಳು. ಪ್ರಚಲಿತ ರಾಜಕೀಯ, ರಾಜಕಾರಣಿಗಳು. ಜನಜೀವನ. ಸಂದ ದಿನಗಳ ಸವಿನೆನಪು. ಸ್ನೇಹಿತರ ಗುಣಗರಿಮೆ, ದೊಡ್ಡತನ ಇತ್ಯಾದಿ ಕುರಿತು ಮಾತು ಬೆಳೆಯಿತು. ಪ್ರೊ. ಹಿರಿಯಣ್ಣನವರು. ಸಿ. ರಾಜಗೋಪಾಲಾಚಾರಿ ಯವರು, ಸಿ. ಪಿ. ರಾಮಸ್ವಾಮಿ ಅಯ್ಯರವರು. ಸರ್ ಎಂ. ವಿ. ಮುಂತಾದ ಸುಪ್ರಸಿದ್ಧರು, ಹಲವಾರು ಮಂದಿ ಅಪ್ರಸಿದ್ಧರು-ಎಲ್ಲರೂ ಅವರ ಮಾತಿನಲ್ಲಿ ಸಂದರು. ಸಂಗೀತ. ಊಟ ತಿಂಡಿ. ತರತೀಪುಗಳ ಮಾತೂ ಬಂತು. ಸಾಂದರ್ಭಿಕವಾಗಿ ತಾವು ಕಂಡಿದ್ದ ಪ್ರಸಂಗವೊಂದನ್ನು ವರ್ಣಿಸಿದರು. ಕಂಠಪೂರ್ತಿ ಲಾಡು ತಿಂದಿದ್ದ ಒಬ್ಬಾತ ಸಾಲದೆಂಬಂತೆ ಬೊಗಸೆಗೆ ತುಪ್ಪ ಹಾಕಿಸಿಕೊಂಡು ಕುಡಿದನಂತೆ. ಹಾಗೆ ಕುಡಿಯುತ್ತಿದ್ದಾಗ ಹೆಪ್ಪುಗಟ್ಟಿ ಅದು ಗಂಟಲಲ್ಲಿಯೇ ನಿಂತುಬಿಟ್ಟು ಅವನ ಕಣ್ಣು ಗುಡ್ಡೆ ಸಿಕ್ಕಿಕೊಂಡು ಪರಿಸ್ಥಿತಿ ಬಿಗಡಾಯಿಸಿತಂತೆ. ತಕ್ಷಣ ಲಾಡು ಕರಿದಿದ್ದ ಎಣ್ಣೆ ಬಾಣಲೆಯ ಮೇಲೆ ಕೆಂಡ ಹಾಕಿಸಿಕೊಂಡು ಬಂದು. ದಪ್ಪನಾಗಿ ಮಡಿಸಿಟ್ಟ ಒದ್ದೆ ಬಟ್ಟೆಯನ್ನು ಆತನ ಕುತ್ತಿಗೆಯ ಮೇಲ್ಭಾಗದಲ್ಲಿ ಹರಡಿ. ಬಾಣಲೆಯನ್ನು ಅತ್ತಿಂದಿತ್ತ ಸರಿಸಿದರಂತೆ. ಸ್ವಲ್ಪ ಹೊತ್ತಿನಲ್ಲಿ ತುಪ್ಪ ಕರಗಿ ಅವನು ಮೊದಲಿನ ಸ್ಥಿತಿಗೆ ಬಂದು ಮುಟ್ಟಿದನಂತೆ !

ದೇಶದ ಪ್ರಚಲಿತ ರಾಜಕೀಯವನ್ನು, ಸ್ವಾತಂತ್ರ್ಯಾನಂತರದ ದಿನಗಳ ಮಸ್ಥಿತಿಯನ್ನು ನೆನೆಯುತ್ತ ಅವರು ನುಡಿದ ಮಾತು ಮರ್ಮಸ್ಪರ್ಶಿಯಾದ್ದು : "ಮಾನಸ ಸರೋವರದಿಂದ ಇಳಿದು ಬಂದವೆಲ್ಲ ಹಂಸಗಳೇ ಎಂದುಕೊಂಡಿದ್ದೆವು. ಆದರೆ ಅವು ಶುದ್ಧ ಕಾಗೆಗಳು" ಎಂದರು. ಆ ಮಾತಿನ ಹಿಂದಿದ್ದ ಭ್ರಮನಿರಸನ, ನೋವು, ನಿರಾಶೆ ಯಾರಿಗೂ ತಟ್ಟುವಂಥದು. ಜನಗಳ ನಡವಳಿಕೆಯನ್ನು ಕುರಿತೂ ಹಾಗೇ ನುಡಿದರು ; "ಈಗಿನ ಜನಗಳೂ ಹಾಗೇ : ಬಹಳ ಚಾಲಾಕು. ಅವರ ಮರ್ಜಿ ನೋಡಿ ಏನನ್ನೂ ಹೇಳಬೇಕು. ಕೇಳಬೇಕು. ಒಂದು ಮಾತು ಆಡಿದರೆ ಹೆಚ್ಚು, ಇಲ್ಲದಿದ್ದರೆ ಕಡಮೆ". ತಮಗೆ ಬಹುವಾಗಿ ಆಪ್ತರಾಗಿದ್ದ ಪ್ರೊ. ವೆಂಕಣ್ಣಯ್ಯ, ಪ್ರೊ. ಬೆಳ್ಳಾವೆಯವರನ್ನು ಸ್ಮರಿಸಿ, ತಮ್ಮ ತಂದೆಯವರಿಗೆ ಸಂಬಂಧಿಸಿದ ಒಂದು ಹಾಸ್ಯಪ್ರಸಂಗವನ್ನು ಹೇಳಿದರು. ಸರ್ ಎಂ. ವಿ.ಯವರು ಅಧ್ಯಕ್ಷರಾಗಿದ್ದ ಆಗಿನ ಸಂತಾನ ನಿಯಂತ್ರಣ ಪ್ರಚಾರ ಸಮಿತಿಯ ಸಭೆಯ ವೈಖರಿಯನ್ನು—ಆ ಸಭೆಗೆ ಬಂದಿದ್ದ ಸಮಿತಿಯ ಸದಸ್ಯರಲ್ಲಿ ಒಬ್ಬರಿಗೆ ಹನ್ನೆರಡು ಮಂದಿ ಮಕ್ಕಳು, ಇನ್ನೊಬ್ಬರಿಗೆ ಹದಿನಾಲ್ಕು !—ಉಲ್ಲೇಖಿಸಿದರು. ಹೀಗೇ–ಮಾತಿನುದ್ದಕ್ಕೂ ಸರಸವನ್ನೂ ಸಂತೋಷವನ್ನೂ ಉದ್ವೇಗವನ್ನೂ ನೋವನ್ನೂ ತೀವ್ರವಾಗಿ ಹಂಚಿಕೊಂಡರು. ತಮ್ಮ ಅಂತರಂಗವನ್ನು ತೆರೆದು ಕಾಣಿಸಿದರು.

ಹಾಕಿಸಿಕೊಂಡಿದ್ದ ಮಲ್ಲಿಗೆಯ ಹಾರವನ್ನು ಎರಡು ಮೂರು ಸಲ ಕಣ್ಣಿಗೆ ಮುಖಕ್ಕೆ ಮೃದುವಾಗಿ ಒತ್ತಿ ಹಿಡಿದು ಆಘ್ರಾಣಿಸಿದರು. ಆಗ ಅವರ ಕಣ್ಣುಗಳಲ್ಲಿ ಕಂಡ ಕಾಂತಿ. ಮೆಚ್ಚುಗೆ, ಸ್ನಿಗ್ಧತೆ ಅನಿರ್ವಚನೀಯ. "ನನಗೆ ತುಂಬಾ ಆನಂದ. ಇಂಥ ಸ್ನೇಹಿತರು ದಿನಾ ಬಂದರೂ ತೊಂದರೆ ಇಲ್ಲ" ಎಂದವರೇ ನನ್ನತ್ತ ತಿರುಗಿ, "ನಮ್ಮ ವೆಂಕಟೇಶಮೂರ್ತಿಯ ಕಾಲಕ್ಕೆ ಇದೇ ಉಳಿದಿರುತ್ತದೆಯೆ ಎಂದು ನನಗೆ ಸಂದೇಹ" ಎಂದರು. ಆ ಮಾತುಗಳಲ್ಲಿ ನಿಸ್ಸಂದೇಹವಾಗಿ ಸಂದೇಹವಿತ್ತು. 'ರಾಶಿ' ಯವರು ತಮ್ಮ ಎಂದಿನ Characteristic style ನಲ್ಲಿ. "ಇರುತ್ತೆ ಸಾರ್. ಸ್ವಲ್ಪ ಹೆಚ್ಚಾಗಿಯೇ ಇರುತ್ತೆ !" ಎಂದು ಅಣಕವಾಡಿದರು. ಇದನ್ನು ನೆನೆಯುತ್ತಿರುವ ಇಂದು ಡಿ.ವಿ.ಜಿ. ಅವರು ಅಂದು ಸಂದೇಹಿಸಿದ್ದಂತೆ ಗುರುಹಿರಿಯರಲ್ಲಿ ಆ ಬಗೆಯ ಗೌರವಾದರಗಳನ್ನು ನನ್ನ ಪೀಳಿಗೆಯವರು ಇಂದೂ ಇಟ್ಟುಕೊಂಡಿದ್ದಾರೆಯೆ. ಅದು ಉಳಿದಿದೆಯೆ ಎಂಬ ಪ್ರಶ್ನೆ ನನ್ನನ್ನು ನಿಜಕ್ಕೂ ಕಾಡುತ್ತಿದೆಯೆಂದರೆ ತಪ್ಪಾಗದು.

ಅವರಿಂದ ಬೀಳ್ಕೊಂಡು ಬಂದ ಮೂರನೆಯ ದಿನ ಅನಿರೀಕ್ಷಿತವೊಂದು ಕಾದಿತ್ತು : ತಮಗೆ ಕಾಣಿಸಿದ ವಿಶ್ವಾಸಕ್ಕೆ ಕೃತಜ್ಞತೆ, ವಂದನೆ ಸೂಚಿಸಿ ಎಲ್ಲರಿಗೂ ಸುತ್ತೋಲೆ ಕಳಿಸಿದ್ದರು : ಹೂವಿನೊಡನೆ ನಾರೂ ಸ್ವರ್ಗಕ್ಕೆ ಸಂದಂತೆ ನನಗೂ ಅವರ ಸಹಿಯುಳ್ಳ ಪತ್ರ ಬಂದದ್ದು ನನ್ನ ಭಾಗ್ಯ ವಿಶೇಷಗಳಲ್ಲೊಂದೆನಿಸಿದೆ.

* * * *

ಮರುವರ್ಷ (1970) ಪುರಭವನದಲ್ಲಿ ಅವರಿಗೆ ಸಾರ್ವಜನಿಕ ಸನ್ಮಾನ ನೆರವೇರಿತು. ಅತಿಶಯ ವಿಜೃಂಭಣೆಯಿಂದ ನಡೆದ ಉತ್ಸವ ಅದು. ಸಮಾರಂಭದ

ಅಂಗವಾಗಿ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರ ಸಂಗೀತ ಕಚೇರಿ ಏರ್ಪಟ್ಟಿತ್ತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಕುಳಿತು ಡಿ.ವಿ.ಜಿ. ತಾವೂ ಆ ಗಂಧರ್ವ ಗಾನವನ್ನು ಆಲಿಸಿ ಆನಂದಿಸಿದರು. ಅವರ ಸಂತೋಷ, ಮೆಚ್ಚುಗೆ ಮುಖದಲ್ಲಿ, ಕೈಬೆರಳ ವಿನ್ಯಾಸದಲ್ಲಿ, ತಲೆದೂಗುವಿಕೆಯಲ್ಲಿ ಗೋಚರಿಸುತ್ತಿತ್ತು. ಸುಮಾರು ಲಕ್ಷ ರೂಪಾಯಿನ ನಿಧಿ ಸಮರ್ಪಣೆ ಆಯಿತು. ಅಷ್ಟೂ ಹಣವನ್ನು ಡಿ.ವಿ.ಜಿ. ತಾವು ಹುಟ್ಟು ಹಾಕಿ ಬೆಳಸಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಪುರೋಭಿವೃದ್ಧಿಗಾಗಿ ಕೊಡುಗೆಯಾಗಿತ್ತರು. ಸನ್ಮಾನಕ್ಕೆ ಉತ್ತರವಾಗಿ ನಾಲ್ಕು ಮಾತನಾಡುತ್ತ ತಮ್ಮ ಬದುಕಿನ ನಂಬಿಕೆಯನ್ನೇ ಪುನಃ ಘೋಷಿಸಿದರು–"ದೇವರಿದ್ದಾನೆ. ಅದರಲ್ಲಿ ಸಂಶಯ ಬೇಡ. ಇಲ್ಲ ಎನ್ನುವವರು ಎನ್ನಲಿ; ಇದ್ದಾನೆ ಎನ್ನುವವರು ಎನ್ನಲಿ. ಇದ್ದಾನೆ ಎಂವರೆ ಮಾತೇ ಇಲ್ಲ. 'ಇಲ್ಲ' ಎನ್ನುವವರಿಗೆ ಒಂದು ಮಾತು: ನೀನಿದ್ದೀಯೋ ಇಲ್ಲವೊ ?–ಎಂದು ನಾನು ಕೇಳ್ತೀನಿ. ನೀನಿದ್ದು. ನಿನಗೆ ಯೋಚನೆ ಮಾಡೋ ಶಕ್ತಿ ಕೊಟ್ಟಿದ್ದಕ್ಕೆ ತಾನೆ ಆ ಯೋಚನೆ ? ನಿಮ್ಮ ನಿಮ್ಮ ಅಂತರಂಗದಲ್ಲಿಯೇ ದೇವರು ಇದ್ದಾನೆ ಎಂದು ನಾನು ಹೇಳ್ತೀನಿ..." ಮುಂದುವರಿದು. "ನೀವೆಲ್ಲರೂ ಪರಮೇಶ್ವರನ ಕರುಣೆಯ ಸ್ವರೂಪರು. ತಿಪ್ಪಗೊಂಡನಹಳ್ಳಿಯ ಕೆರೆಯಲ್ಲಿ ಬೇಕಾದಷ್ಟು ನೀರಿದೆ; ಕಾಲುವೆ, ಕೆರೆ, ನಲ್ಲಿ ಮೂಲಕ ಹರಿದು ನಮಗೆ ಇಲ್ಲಿ ಕುಡಿಯೋದಕ್ಕೆ ಸಿಗುತ್ತೆ. ಹಾಗೇ ಈಶ್ವರನ ಕರುಣೆ ನಿಮ್ಮೆಲ್ಲರ ಪ್ರೀತಿವಾತ್ಸಲ್ಯಗಳ ಮೂಲಕ ನನಗೆ ದೊರೆಯುತ್ತಿದೆ" ಎಂದು ಕೃತಜ್ಞತೆ ಸಲ್ಲಿಸಿದರು.

* * * *

1972ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ವಿ.ಸೀ ಡಿ.ವಿ.ಜಿ. ಅವರನ್ನು ಕುರಿತು ಕಿರುಹೊತ್ತಿಗೆಯೊಂದನ್ನು ಇಂಗ್ಲಿಷಿನಲ್ಲಿ ಬರೆದು ಮುಗಿಸಿದ್ದರು. ಅನಾರೋಗ್ಯದಿಂದ ಆಗಷ್ಟೇ ಸೆಂಟ್ ಮಾರ್ಥ ಆಸ್ಪತ್ರೆಯಲ್ಲಿ ಡಿ.ವಿ.ಜಿ. ಶುಶ್ರೂಷೆ ಪಡೆಯುತ್ತಿದ್ದರು. ಅವರನ್ನು ಕಂಡುಬರಲು ನಾವಿಬ್ಬರೂ ಆಸ್ಪತ್ರೆಗೆ ಹೋದೆವು. "ತುಂಬಾ emotional state ನಲ್ಲಿದ್ದಾರೆ; ಒಳಗೆ ಹೋಗದಿರುವುದೇ ಮೇಲು" ಎಂದರು, ಅವರ ಸುಪುತ್ರರಾದ ಡಾ|| ಸ್ವಾಮಿ. ಡಿ.ವಿ.ಜಿ. ಅವರನ್ನು ಮಲಗಿಸಿದ್ದ ಮಂಚಕ್ಕೆ ಎಡಪಕ್ಕದಲ್ಲಿದ್ದ ದೊಡ್ಡ ನಿಲುಗನ್ನಡಿಯಲ್ಲಿ ಕಣ್ಣುಮುಚ್ಚಿ ಮಲಗಿದ್ದ ಅವರ ಆಕೃತಿಯ ಪ್ರತಿಬಿಂಬ ಕಾಣುತ್ತಿತ್ತು. ಸ್ವಲ್ಪ ಗುಣಮುಖರಾಗುತ್ತಿದ್ದಾರೆಂದು ತಿಳಿಯಿತು. ಸಂಗೀತ ಕೇಳುತ್ತಿರಲಿ ಎಂದು ಹಿಂದಿನ ರಾತ್ರಿ ರೆಕಾರ್ಡ್‌ಪ್ಲೇಯರ್ ತಂದಿಟ್ಟು ಅವರಿಗೆ ಇಷ್ಟವಾದ 'ಭಾವಯಾಮಿ' ಹಾಡಿನ ರೆಕಾರ್ಡ್ ಹಾಕಿದ್ದರಂತೆ. ಕೇಳುತ್ತ ಕೇಳುತ್ತ ಡಿ.ವಿ.ಜಿ. ತೀವ್ರ ಭಾವೋದ್ವೇಗದಿಂದ ಕಣ್ಣೀರು ಸುರಿಸಲಾರಂಭಿಸಿದ್ದರಂತೆ. ಅವರ ತಮ್ಮ ಶ್ರೀ ರಾಮರಾಯರು ತಿಳಿಸಿದರು. ಒಳಗೆ ಹೋಗಿ ಅವರಿಗೆ ತೊಂದರೆಯುಂಟುಮಾಡುವುದು ಬೇಡವೆಂದು ಹಾಗೇ ಹಿಂದಿರುಗಿದೆವು.

ಎರಡು ಮೂರು ದಿನ ಕಳೆದು ಇನ್ನೊಮ್ಮೆ ವಿ.ಸೀಯವರೊಂದಿಗೆ ಆಸ್ಪತ್ರೆಗೆ ಹೋಗಿದ್ದಾಗ ಆಗಷ್ಟೇ ಆಹಾರ ಸೇವಿಸುತ್ತಿದ್ದರಾಗಿ ಸ್ವಲ್ಪ ಹೊತ್ತು ಹೊರಗೇ

ಉಳಿದಿದ್ದವು. ಒಳಹೊಕ್ಕೊಡನೆಯೇ ವಿ.ಸೀ ಅವರನ್ನು ಉದ್ದೇಶಿಸಿ "ಬಾಪ್ಪ, ಸೀತಾರಾಮಪ್ಪ, ಬಾ ; ಸಂಜೆ ತಾನೇ ರಾಮಸ್ವಾಮೀನ ಕೇಳ್ದೆ ; ಎಲ್ಲಿ ಸೀತಾರಾಮಪ್ಪ, ಚೆನ್ನಾಗಿದಾನಾಂತ" ಎಂದು ಸ್ವಾಗತಿಸಿ, ಹತ್ತಿರ ಬಂದು ನಿಂತಾಗ ಅವರನ್ನು ತಬ್ಬಿ ಹಿಡಿದು ಬೆನ್ನು ನೇವರಿಸಿದರು. ಕಣ್ಣುಗಳಲ್ಲಿ ಪ್ರೀತಿವಾತ್ಸಲ್ಯ ಹೊಮ್ಮುತ್ತಿತ್ತು. "ಎರಡು ಮೂರು ದಿನ ಹಿಂದೆ ಬಂದಿದ್ದೆ. ಪುನಃ ನಿನ್ನೆ ಬರಬೇಕೂಂತಿದ್ದೆ ; ಆದರೆ ಹೆಂಡತೀನ ಆಸ್ಪತ್ರೆಯಿಂದ ಮನೆಗೆ ಕರಕೊಂಡು ಬಂದೆ ; ತಡವಾಗಿ ಹೋಯ್ತು" ಎಂದು ವಿ.ಸೀ ವಿವರಣೆ ಕೊಟ್ಟರು. ಶ್ರೀಮತಿ ವಿ.ಸೀ ಅವರ ಕಾಯಿಲೆ ಡಿ.ವಿ.ಜಿ ಅವರಿಗೆ ತಿಳಿದಿದ್ದುದೇ. "ಏನು ಮಾಡೋದು, ನಾವು ನೀವು ಪಡೆದು ಬಂದದ್ದು ಅಷ್ಟೆ..." ಎಂದು ಡಿ.ವಿ.ಜಿ. ಗಂಭೀರವದನರಾಗಿ ದೀರ್ಘ ನಿಟ್ಟುಸಿರು ಬಿಟ್ಟರು. ಮರುಕ್ಷಣ–"ಸೀತೋಷ್ಣಗಳು, ಸುಖದುಃಖಗಳು ಸಹಜವಾಗಿ ಬರುತ್ತವೆ ನಮಗೆ. ಅದನ್ನು ಅನುಭವಿಸಿ ಎದುರಿಸಿ ನಿಲ್ಲಬೇಕು. ಅದೇ ಗೆಲುವು ಮನುಷ್ಯನಿಗೆ, ಅಲ್ಲವೆ ಸೀತಾರಾಮಪ್ಪ?" ಎಂದರು. ಹಿಂದೆ ತಾವು ಮುದ್ರಿಸಿದ್ದ ಬನವಾಸಿ–ಅನವಟ್ಟಿ ಮಲ್ಲಪ್ಪನವರ ಕವಿತೆಯ ಸಾಲೊಂದನ್ನು ನೆನಪಿಸಿಕೊಂಡು ಉದಾಹರಿಸಿದರು. ಏನೊ ಮಾತು ಬಂದು ವಿ.ಸೀ ಟಿ.ಎಸ್. ಎಲಿಯಟ್ ಹೆಸರು ಹೇಳಿದಾಗ "ಆ ಎಲಿಯಟ್ ಹೆಸರೆತ್ತಬೇಡಪ್ಪ ನನ್ನ ಮುಂದೆ!" ಎಂದು ಪ್ರತಿಕ್ರಿಯಿಸಿದರು. ಆ ಮಾತಿನಲ್ಲಿ ಅಸಮಾಧಾನವಿತ್ತು. ವಿ.ಸೀ. "ಯಾವುದೋ ಭಾಷಣ ಕೊಡಲೊಪ್ಪಿದ್ದೇನೆ, ನಾಳೆ ಮೈಸೂರಿಗೆ ಹೊರಟಿದ್ದೇನೆ" ಎಂದಾಗ ವಿವರ ವಿಚಾರಿಸಿ, "ಹೋಗ್ಬಿಟ್ಟು ಬನ್ನಿ ; ಹೋಗಬೇಕು, ನಮಗೆ ತೋಚಿದ್ದು ಹೇಳಲೇಬೇಕು ; ಕೇಳುವವರ ಕಿವಿಗೆ ಬೀಳಲಿ, ಬಿಡಲಿ" ಎಂದರು. ಇಬ್ಬರೂ ನಮಸ್ಕರಿಸಿದಾಗ "ಶತಾಯುಷ್ಮಾನ್ ಭವ" ಎಂದು ಹರಸಿದರು. ತಲೆಯನ್ನು ನೇವರಿಸಿದಾಗ ಅವರ ಕೈಬೆರಳು ನಡುಗುತ್ತಿದ್ದವು : ಕಣ್ಣು ತುಂಬಿತ್ತು.

* * * *

ಜನವರಿ 1975ರಲ್ಲಿ ಪುನಃ ವಿ.ಸೀ.ಯವರೊಂದಿಗೆ ಡಿ.ವಿ.ಜಿ. ಅವರ ಮನೆಗೆ ಹೋಗಿ ತುಂಬ ಸನಿಹದಲ್ಲಿ ಮತ್ತೊಮ್ಮೆ ಕುಳಿತು ಅವರ ದರ್ಶನಭಾಗ್ಯ ಪಡೆವ ಅವಕಾಶ ಒದಗಿತ್ತು. ಡಿ.ವಿ.ಜಿ. ಅಂದು ತುಂಬ ಗೆಲುವಾಗಿದ್ದರು, ಪ್ರಸನ್ನಚಿತ್ತರಾಗಿದ್ದರು. ಆರೋಗ್ಯ ಸ್ವಲ್ಪ ಸುಧಾರಿಸಿದಂತಿತ್ತು. ಬೆಳಗ್ಗೆ ಡಾಕ್ಟರು ಬಂದು 'ಚೆಕ್ಆಪ್' ಮಾಡಿ ತೆರಳಿದ್ದರೆಂದು ತಿಳಿಯಿತು. ಹೋದೊಡನೆ "ಜೀವನ ಭಾರವೇನೂ ಆಗಿಲ್ಲ ; ಆದರೆ ಬೇಕು ಅಂತಾನೂ ಅನಿಸುವುದಿಲ್ಲ... ಇರಬೇಕು, ಇದ್ದೇನೆ..." ಎಂದರು. ಪ್ರಚಲಿತ ಪರಿಸ್ಥಿತಿಯನ್ನು ಕುರಿತು ವ್ಯಗ್ರರಾಗಿ "ದೇಶದಲ್ಲಿ ಇಂದು ಯಾವುದನ್ನು ಕಂಡು ಸಂತೋಷ ಪಡಬೇಕೊ ಕಾಣೆ—" ಎಂದರು. "Corrupt ಎಂದರೆ ಸಾಲದು, Evidence ಎಲ್ಲಿ ಎಂದು ಕೇಳುವ ಜನ! ಏನು ಜನ, ಎಂಥ ಜನ!" ಎಂದು ಮರುಗಿದರು. ಸುಮಾರು ಅರ್ಧ–ಮುಕ್ಕಾಲು ಗಂಟೆ ಕಾಲ ತಮಗೆ ಆಪ್ತರಾಗಿದ್ದ ಬಿ.ಎಂ.ಶ್ರೀ., ವೆಂಕಣ್ಣಯ್ಯ, ಎನ್.ಎಸ್. ಸುಬ್ಬರಾಯರು. ಎ.ಆರ್.ಕೃ.,

ಮಾಸ್ತಿ, ಪಿ. ಶ್ರೀನಿವಾಸರಾವ್, ಬೆಳ್ಳಾವೆ ಇವರನ್ನೆಲ್ಲ ಸ್ಮರಿಸಿ ಅವರ ಬಗೆಗೆ ಮಾತನಾಡಿದರು. ವೆಂಕಣ್ಣಯ್ಯನವರನ್ನು ಕುರಿತು "ಒಬ್ಬನೇ ಒಬ್ಬ, ದೇವರು ಹಾಗೆ ಒಬ್ಬನನ್ನೇ ಸೃಷ್ಟಿ ಮಾಡಿದ್ದು" ಎಂದರು. ವೆಂಕಣ್ಣಯ್ಯನವರನ್ನು ಕುರಿತ ತಮ್ಮ ಜ್ಞಾಪಕಚಿತ್ರ ಶಾಲೆಯಲ್ಲಿಯ ವ್ಯಕ್ತಿಚಿತ್ರದಲ್ಲಿ ಅವರಿಗೆ ಎಷ್ಟು ಎತ್ತರದ ಸ್ಥಾನವನ್ನು ಡಿ.ವಿ.ಜಿ. ಕೊಟ್ಟಿದ್ದಾರೆಂಬುದು ವೇದ್ಯವಾಗುತ್ತದೆ. ಈ ಒಂದೇ ವಾಕ್ಯದಲ್ಲಿ ಅದು ಸ್ಪಷ್ಟಗೊಂಡಿತ್ತು. ವೆಂಕಣ್ಣಯ್ಯ-ಕೃಷ್ಣಶಾಸ್ತ್ರಿ ಇಬ್ಬರ ವ್ಯಕ್ತಿಸ್ವಭಾವ, ಮನೋಧರ್ಮಗಳನ್ನು ನೆನೆದು "What a contrast, What a contrast" ಎಂದರು ಎರಡು ಸಲ. ಇನ್ನೊಬ್ಬ ಖ್ಯಾತ ವಿಮರ್ಶಕರ ಬಗೆಗೆ "Over-praised. Over-placed man" ಎಂದು ನಿರ್ದೇಶಿಸಿದರು. ಗೋಖಲೆ ಸಂಸ್ಥೆಯಲ್ಲಿ ಕಾರ್ಲೈಲನ "ಸಾರ್ಟರ್ ರಿಸಾರ್ಟಸ್" ಬಗೆಗೆ ಮಾತನಾಡಲು ಒಪ್ಪಿ ಅವರು ಅದನ್ನು ನಡಸಿಕೊಡದೆ ಸತಾಯಿಸಿ ಕೊನೆಗೊಮ್ಮೆ ಆಗುವುದಿಲ್ಲವೆಂದ ಕತೆ. ನಡೆ ತಿಳಿಸಿದರು. ಮತ್ತೊಬ್ಬ ಕವಿವರ್ಯರು ಸರ್ವದಾ ಮುಖ, ಅಂಗಭಂಗಿ. ಕತ್ತು ಕುಣಿಸುವುದು ಇತ್ಯಾದಿಯನ್ನು ಅನುಕರಿಸಿ ತೋರಿಸಿ, "ಅದೇ ಆಗಿಹೋಯ್ತು ಇನ್ನೂ"– ಎಂದರು. ರುಮಾಲು ಹಾಕಿಕೊಂಡು ಬಂದಿದ್ದ ವಿ.ಸೀ ಅವರನ್ನು ಕುರಿತು "ನೀನಿನ್ನೂ ರುಮಾಲು ಬಿಟ್ಟಿಲ್ಲ, ಸಂತೋಷ ; ಮುಖ ಗೆಲುವಾಗಿದೆ. ಸಂತೋಷ. ಇನ್ನೂ ಹುಡುಗ ನೀನು ನನ್ನ ಕಣ್ಣಿಗೆ" ಎಂದು ತುಂಬ ಅಪ್ಯಾಯಮಾನ ದನಿಯಲ್ಲಿ ನುಡಿದರು. "ಮಗ ಇದ್ದ ಹಾಗೆ ನೀನು ಸೀತಾರಾಮಯ್ಯ" ಎಂದು ನನ್ನತ್ತ ತಿರುಗಿ. "ನೀವು ಇಲ್ಲದಿದ್ದರೆ ಇಲ್ಲಿ ಕೂರಿಸಿಕೊಳ್ಳುತ್ತಿದ್ದೆ" ಎಂದು ತಮ್ಮ ತೊಡೆ ತಟ್ಟಿ ತೋರಿಸಿದರು. ಈ ಪಿತೃ ವಾತ್ಸಲ್ಯ ಅಸದೃಶವಾದ್ದು. ಸೀತಾರಾಮಯ್ಯನವರ ಅಲ್ಪಕಾಲದ ಲಂಡನ್‌ಯಾತ್ರೆಯ ಬಗೆಗೆ ಪ್ರಸ್ತಾಪಿಸಿ "ಅಂತೂ ಕೇಂಬ್ರಿಜ್ ನೋಡಿಕೊಂಡು. ಪಿಗ್‌ಮೇಲಿಯನ್ ನಾಟಕ ನೋಡಿಕೊಂಡು ಬಂದೆ : You are excused" ಎಂದರು. ಲಂಡನ್ನಲ್ಲಿ ಅವರಿಗಾದ ಪಾರ್ಶ್ವವಾಯು ತೊಂದರೆಗೆ ಮರುಗಿ "ಏನೊ, ಮಿತ್ರ ನಮ್ಮನ್ನು ನಡಸುತ್ತಾನೆ. ನಡಸಬೇಕು, ಅವನು ನಡಸಿದರೆ ಮಾತ್ರ ನಾವು. ನಡಸಲಿ ಎಂದು ಹಾರೈಸುತ್ತೇನೆ"– ಎಂದು ಮಿತ್ರನಿಗೆ ಸಂಬಂಧಿಸಿದ ಚತುಷ್ಪದಿಯೊಂದನ್ನು ಹೇಳಿದರು, ಆಶೀರ್ವಾದ ವೆಂಬಂತೆ. ಉದ್ದಕ್ಕೂ ಮಾತಿನಲ್ಲಿ ಕಾಣಿಸಿದ್ದು ತುಂಬುನಗೆ, ಸರಸತೆ, ಮಾರ್ದವತೆ. ಎಂಬತ್ತೈದರಲ್ಲಿಯೂ ಅವರ ನೆನಪಿನ ಭಂಡಾರ ಅಕ್ಷಯಪಾತ್ರೆಯಂತೆ ಅದ್ಭುತ ವಾಗಿತ್ತು : ಆ ವಯಸ್ಸಿನಲ್ಲಿಯೂ ಅವರು ಘನವಾದ್ದಾಗಲಿ, ಕ್ಷುಲ್ಲಕವಾದ್ದಾಗಲಿ. ಕುಚೋದ್ಯದ್ದಾಗಲಿ–ಎಲ್ಲಕ್ಕೂ ಸ್ಪಂದಿಸಿದ ರೀತಿಯೂ ಹಾಗೇ ಅದ್ಭುತವಾದ್ದೆನಿಸಿತು. ಉದ್ದಕ್ಕೂ "ಮುಗಿದು ಹೋಯ್ತು–ಆ ಕಾಲ. ಆ ಜನ. ಆ ಘನತೆ. ಹಿರಿಮೆ. ಔನ್ನತ್ಯ" ಎನ್ನುತ್ತ ಕೈಬೆರಳುಗಳಿಂದ "ಆಗಿಹೋಯ್ತು" ಎಂಬುದನ್ನು ಪದೇಪದೇ ಸೂಚಿಸುತ್ತಿದ್ದ ರೀತಿ. ದೃಶ್ಯ ಮರೆಯಲಾಗದ್ದು. ಹಾಗೆ ಸೂಚಿಸುವಾಗೆಲ್ಲ ಇನ್ನೊಂದು ಕೈಯಿಂದ ಹಣೆಯ ಮುಂಭಾಗವನ್ನು ಉಜ್ಜಿಕೊಳ್ಳುತ್ತಿದ್ದರು. ಕತ್ತು ಬಗ್ಗಿಸಿ ಕಣ್ಣು ಮುಚ್ಚಿಕೊಳ್ಳುತ್ತಿದ್ದರು. ಅದನ್ನು ಕೇವಲ ಗತಕಾಲವನ್ನು ಕುರಿತ ಅವರ ಹಳಹಳಿಕೆ, Nostalgia ಎಂದು ಹೇಳಿ ಮುಗಿಸಿಬಿಟ್ಟರೆ ಆಗುವುದಿಲ್ಲ. ಒಂದು ತಲೆಮಾರು

ಪ್ರತಿನಿಧಿಸುತ್ತಿದ್ದ ಸಾಂಸ್ಕೃತಿಕ ಪ್ರಪಂಚದ ರೀತಿ ನೀತಿ ಗುಣ ಗರಿಮೆ ಶ್ರೀಮಂತಿಕೆ ಗಳೆಲ್ಲವೂ ಕಣ್ಮರೆಯಾಗುತ್ತಿದೆಯೆಂಬ ದುಗುಡ, ವಿಷಾದ, ಅದರ ಹಿಂದಿತ್ತೆನ್ನಿಸುತ್ತದೆ. ಸ್ವಲ್ಪವೂ ಅತ್ತಿತ್ತ ಕದಲದೆ ಹತ್ತಿರ ಹತ್ತಿರ ಗಂಟೆ ಕಾಲ ಕುಳಿತಿದ್ದ ಭಂಗಿಯಲ್ಲಿಯೇ ಅವರು ಕುಳಿತಿದ್ದರು. ಸ್ಥೂಲಕಾಯ, ಗುಂಡುಮುಖ, ನುಣುಪಾಗಿ ಕ್ಷೌರಮಾಡಿದ್ದ ಕೆನ್ನೆ ಪೂರ್ತಿ ಬೋಳಾಗಿ ಮಿಂಚುತ್ತಿದ್ದ ತಲೆ, ಬೆರಳಲ್ಲೊಂದು ಪವಿತ್ರದುಂಗುರ, ಕಣ್ಣಿಗೆ ದಪ್ಪಗಾಜಿನ ಕನ್ನಡಕ. ಫ್ಲಾನಲ್‌ಷರ್ಟ್ ಧರಿಸಿ ಸ್ಟೂಲ್‌ಗೊರಗಿ ಬೆನ್ನಿಗೊಂದು ದಿಂಬಿಟ್ಟುಕೊಂಡು ಹಾಸಿನ ಮೇಲೆ ಕುಳಿತಿದ್ದರು. ಆಗಷ್ಟೇ ಮಲಗಿದ್ದು ಏಳು ತ್ತಿದ್ದರಂತೆ, ನಾವು ಹೋಗಿದ್ದಾಗ. ಎದ್ದ ಮೇಲೆ ಅವರನ್ನು ಒರಗಿಸಿ ಕೂರಿಸಲಾಗಿತ್ತು. "ದೀರ್ಘಾಯುಸ್ಸನ್ನು ನಾವಿಬ್ಬರೂ ಕೇಳಿಕೊಳ್ಳಬೇಕಿಲ್ಲ : ಆರೋಗ್ಯವಾಗಿ ಇಟ್ಟಿರು, ಇಟ್ಟಿರುವತನಕ ಎಂದು ಕೇಳಿಕೊಳ್ಳಬೇಕು, ಅಷ್ಟೆ" ಎಂದು ನಕ್ಕರು. ಬೊಚ್ಚು ಬಾಯಿನ ಆ ನಿರ್ಮಲ ನಗೆ ಅವರ ಮುಖವನ್ನು ಬೆಳಗಿಸಿತು. ಹೌದೆನ್ನುವಂತೆ ಆ ಮಾತನ್ನು ವಿ.ಸೀ ಅನುಮೋದಿಸಿದರು. ಪರಿವ್ರಾಜಕ ಮನೋಧರ್ಮವನ್ನು ಬಿಂಬಿಸುವ ಡಿ.ವಿ.ಜಿ. ಅವರ 'ದಾರಿಗರ ಹಾಡು'ವಿನ ಕೊನೆಯ ಮೂರು ಪದ್ಯಗಳನ್ನು—

ಇಂತೆಸಗಬೇಕೆಂಬ ಹಟದ ಬಂಧನವಿಲ್ಲ
ಪಂಥವಿದು ಕಡಿದೆಂಬ ಭೀತಿಯಿಲ್ಲ
ಅಂತರಂಗದೊಳು ನಾವಾಂತು ಗುರುಗಳ ಪದವ
ಸಂತಸಿಪೆವವರ ನುಡಿಯಿಂ—ಸಖರೇ

ಬದಿಯುಣಿಪುದ ಕಂಡು ಹೆದರುವರು ನಾವಲ್ಲ
ಎದುರುಗೊಳ್ಳುವೆವದನು ವಿನಯದಿಂದೆ
ಎದೆಯೊಳಿಹುದೆಮಗೊಂದು ಸುಧೆಯ ಸಾರದ ಬಿಂದು
ಅದ ಸವಿಯುತಳುಕದಿಹೆವೈ—ಸಖರೇ

ಕಂಡು ಕಂಡುದನೆಲ್ಲ ಬೇಡುವರು ನಾವಲ್ಲ
ಉಂಡು ಸುಖಿಪೆವು ಕೈಗೆ ಬಂದ ಫಲವ
ಎಮ್ಮ ಸುಖವೆಮಗಿಹುದು ನಿಮ್ಮ ದುಗುಡವು ನಿಮಗೆ
ನಿಮ್ಮೂರು ನಮಗೆ ಸಾಕೈ—ಸಖರೇ

ವಿ.ಸೀ ತಮ್ಮ ನೆನಪಿನಿಂದ ಹೇಳಿ, "This has been part of my life" ಎಂದಾಗ, ಡಿ.ವಿ.ಜಿ. ತಮ್ಮ ಮುಖದಲ್ಲಿ ಕಾಣಿಸಿದ ಮಂದಹಾಸ, ತೃಪ್ತಿ, ಸಂತೋಷ ನುಡಿಗೆ ನಿಲುಕದ್ದು ಎನ್ನಿಸಿದೆ. ಆ ವೈಭವ, ಸ್ನಿಗ್ಧತೆಗಳನ್ನು ವರ್ಣಿಸುವುದು ಹೇಗೆ?

* * * *

ತಲೆಯ ಮೇಲ್ಭಾಗಕ್ಕೆ ಎತ್ತರದಲ್ಲಿ ಹಾದುಹೋಗಿದ್ದ ಕಂಬಿಯ ಮೇಲೊಂದು ಕೆಂಪು ಅಂಚಿನ ಪಂಚೆ, ಶಾಲು, ಟವೆಲ್ : ಎದುರಿಗೆ ಪುಸ್ತಕದ ಬೀರುಗಳು. ಎರಡು ಕುರ್ಚಿ—ಬಂದವರಿಗೆ ಕುಳಿತುಕೊಳ್ಳಲು. ಅದಕ್ಕೆ ಸೇರಿದ್ದಂತೆ ಮುಂದೊಂದು ಕೋಣೆ. ಅಲ್ಲಿಯೂ ಬೀರುಗಳು. ತುಂಬೆಲ್ಲ ಪುಸ್ತಕ. ಹಿಂದೊಂದು ಕೋಣೆ.

ಬಾಗಿಲಿಗೆ ಕರ್ಟನ್ ಹಾಕಿತ್ತು. ಎಡಕ್ಕೆ ಗೂಡು ; ಅಲ್ಲಿ ಔಷಧಿಯ ಬಾಟಲಿಗಳು. ಮೇಲೆ ದೊಡ್ಡ ಆಕಾರದ ಶಂಕರ ಭಗವತ್ಪಾದರ ಸುಂದರ ಚಿತ್ರ. ಅದಕ್ಕೆ ಉತ್ತಮ ಕಲಾಕೃತಿಯ ಚೌಕಟ್ಟು ; ಗಂಧದ ಹಾರ. ಬಲಗಡೆಗೆ ಮುಚ್ಚಿದ್ದ ಕಿಟಕಿ. ಹತ್ತಿರ, ಇವರ ತಲೆಗೆ ನೇರ ಮೇಲಕ್ಕೆ ಎಂಬಂತೆ, ಹಾಲುಬಣ್ಣದ ವಿದ್ಯುದ್ದೀಪ. ಅದರ ಬೆಳಕು ಇವರ ತಲೆಯ ಮೇಲೆ ಬಿದ್ದು ಬೋಳಾಗಿ ಮಿಂಚುತ್ತಿದ್ದ ತಲೆಯ ಮೇಲ್ಭಾಗ ವನ್ನು ಮತ್ತಷ್ಟು ಹೊಳೆಯಿಸುತ್ತಿತ್ತು. ಅವರು ಹಾಕಿಕೊಂಡಿದ್ದ ಕನ್ನಡಕದ ದಪ್ಪಗಾಜಿನ ಮೇಲೂ ಬಿದ್ದು ಪ್ರತಿಫಲಿಸುತ್ತಿತ್ತು. ಎದುರಿಗಿದ್ದ ಒಂದು ಬೀರುವಿನ ಹಲಗೆಯ ಮೇಲೆ ಬರವಣಿಗೆಯ ಸಾಮಗ್ರಿಯನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿತ್ತು. ಹೆಚ್ಚುಕಾಲ ಮಾತನಾಡಿಸುತ್ತ ಕುಳಿತು ಅವರನ್ನು ಆಯಾಸಗೊಳಿಸಬಾರದೆಂದು ಆ ಋಷಿಸದೃಶರಿಗೆ ನಮಸ್ಕರಿಸಿ ಹೊರಬಿದ್ದೆವು. ಋಷಿಸದೃಶರೇನು. ಋಷಿ ಚೇತನರೇ ಹೌದು

*　　　*　　　*　　　*

ಡಿ.ವಿ.ಜಿ.–ಮಾಸ್ತಿ ಇಬ್ಬರ ವ್ಯಕ್ತಿತ್ವ ಸಾಧನೆಗಳನ್ನು ಕುರಿತು ಒಮ್ಮೆ ವಿ.ಸೀ. ಡಿ.ವಿ.ಜಿ. 'A Peak', ಮಾಸ್ತಿ 'A Range' ಎಂದಿದ್ದರು. ಒಂದು ಔನ್ನತ್ಯ ; ಇನ್ನೊಂದು ವೈಶಾಲ್ಯ ; ಎರಡೂ ದೊಡ್ಡವೇ. ಇನ್ನೊಮ್ಮೆ, ಡಿ.ವಿ.ಜಿ. ಅವರ ವ್ಯಕ್ತಿತ್ವ ಸಾಧನೆ ಪುರುಷಸೂಕ್ತದಲ್ಲಿ ವರ್ಣಿತವಾಗಿರುವಂತೆ "ಅತ್ಯತಿಷ್ಠ-ದ್ದಶಾಂಗುಲಂ" ಎಂಬಂಥದು ಎಂದಿದ್ದರು. ಬಹು ಸಾರ್ಥಕವಾದ ಉಪಮೆ : ತ್ರಿವಿಕ್ರಮ ನಂತೆ ಭೂವ್ಯೋಮಾಕಾಶಗಳನ್ನು ಅಳೆದು ನಿಂತ ಉನ್ನತಿಯದು ಅದು. ಅಂಥವರೊಡನೆ ಕಳೆದ ಕೆಲವು ಕ್ಷಣಗಳನ್ನು ನೆನೆದಾಗ 'ಜ್ಞಾಪಕ ಚಿತ್ರಶಾಲೆ' ಯಲ್ಲಿ ಡಿ.ವಿ.ಜಿ. ಅವರೇ ಉಲ್ಲೇಖಿಸಿರುವ ಒಂದು ಶ್ಲೋಕದ ತಾತ್ಪರ್ಯ ನೆನಪಾಗುತ್ತದೆ : "ಸತ್ಪುರುಷರಲ್ಲಿಗೆ ಯಾವಾಗಲೂ ಹೋಗುತ್ತಿರಬೇಕಾದದ್ದು. ಅವರು (ಉಪದೇಶವೆಂದು ಹೇಳಿ) ಉಪದೇಶ ಮಾಡದೆ ಇದ್ದರೂ ಪರವಾಯಿಲ್ಲ. ಅವರು ತಮ್ಮ ಮನಸ್ಸು ಬಂದಂತೆ ಏನು ಮಾತುಕತೆ ನಡಸಿದರೂ ಅದೇ ನಮಗೆ ಉಪದೇಶ ವಾಗುತ್ತದೆ." ಡಿ.ವಿ.ಜಿ. ಸ್ವಯಂ ಅಂಥ ಸತ್ಪುರುಷರಾಗಿದ್ದವರು ; ಅವರಲ್ಲಿಗೆ, ಅಂಥವರಲ್ಲಿಗೆ ಹೋಗುತ್ತಿರ ಬೇಕಾದದ್ದು ನಮ್ಮ ಆದ್ಯ ಕರ್ತವ್ಯ. ಮಾತ್ರವಲ್ಲ, ಅಂಥ ಅವಕಾಶವೂ ನಮ್ಮ ಪಾಲಿನ ಪುಣ್ಯವಿಶೇಷದಿಂದಷ್ಟೇ ದೊರೆಯುವಂಥದು.

—ಸುಮನಾ

ನನ್ನನ್ನು ಕಂಡರಿಸಿದ ರೂವಾರಿ: ಡಿ.ವಿ.ಜಿ.*

—ಅಲ್ಪಿಯಂತುಳಿಪೆಟ್ಟು ಕೊಟ್ಟು
ಬುದ್ಧಿಯ ತಿರಿಚು
ಮುರಿಚುಗಳ ನುಣ್ಣಿಸಿದ
ರೂವಾರಿ—ಗುರುವೊಬ್ಬ...

'ಗುರುಪರಂಪರೆಗೆ'–
'ಮುಗಿಯದ ಮಾಯೆ'

ತಾ. 31–3–1958ರ ಬೆಳಗ್ಗೆ ಕಾಲೇಜಿಗೆ ಹೋಗುವ ಮುನ್ನ ಸುಮಾರು ಒಂಬತ್ತು ಗಂಟೆಯ ಹೊತ್ತಿನಲ್ಲಿ ಅಂಚೆಯ ಮೂಲಕ ನೀಲಿಯ ಕವರೊಂದು ಬಂದು ಮುಟ್ಟಿತು. ಎಡಮೂಲೆಯಲ್ಲಿ ಕೆಂಪು ಶಾಯಿಯಲ್ಲಿ ಲೋಕಲ್ ಎಂದು ಬರೆದಿದ್ದ ಮಾತು ಇದು ಸ್ಥಳೀಯ ಕಾಗದ ಎಂದು ಸೂಚನೆಯಿತ್ತಿತು ; ಕಾಗದ ಯಾರಿಂದ ಬಂದಿರಬಹುದು ಎಂದು ಊಹೆ ಕೆಲಸ ಮಾಡುವುದಕ್ಕೆ ಮೊದಲೆ ಇಂಗ್ಲಿಷಿನಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದಿದ್ದ ನನ್ನ ವಿಳಾಸ, ಕಾಗದ ಡಿ. ವಿ. ಗುಂಡಪ್ಪ ನವರದ್ದು ಎಂದು ಘೋಷಿಸಿತು. ಕಾಗದದ ವಿಷಯ ಏನೆಂಬುದೂ ನನಗೆ ತಕ್ಕಮಟ್ಟಿಗೆ ಹೊಳೆಯದೆ ಹೋಗಲಿಲ್ಲ. ಮಾರನೆಯ ದಿನವೇ ಏಪ್ರಿಲ್ ಒಂದು, April Fools' Day All Fools' Day. ಆ ಹೊತ್ತೇ ಇವರ ಕಾಗದ ಬಂದಿದ್ದರೂ, ಕಾಗದದ ವಿಷಯ ವನ್ನು ಊಹಿಸುವುದಕ್ಕೆ ನೆನಪಿರುವ ಕಾರಣ ಯಾವುದೂ ಇರದಿದ್ದರೂ, ನನ್ನನ್ನು April Fool ಮಾಡುವಂತಹ ಕಾಗದ ಕಿರಿಯನಾದ ನನಗೆ ಈ ಹಿರಿಯರಿಂದ ಬಂದೀತು ಎಂದು ಭಾವಿಸುವಷ್ಟು Fool ಆಗಿರಲಿಲ್ಲ ನಾನು! ಹಿರಿಯರಾದವರು ಈ ಏಪ್ರಿಲ್ ಒಂದರ ಪರಕೀಯ ಸಂಪ್ರದಾಯದ ವಿನೋದ ವ್ಯವಹಾರದಲ್ಲಿ ತೊಡಗಬಾರದೆಂದಲ್ಲ. ಆದರೆ, ಗುಂಡಪ್ಪನವರು ಹಾಸ್ಯ ಪ್ರವೃತ್ತಿಗೆ ಹೊರಗಾದ ವರಲ್ಲ ಎಂಬುದನ್ನು ನಾನು ಚೆನ್ನಾಗಿ ಬಲ್ಲವನಾದರೂ, ಇಂಥ ಒಂದು ಕುಚೋದ್ಯದ ವಿನೋದದಲ್ಲಿ ಭಾಗಿಯಾಗತಕ್ಕವರಲ್ಲ ಎಂಬುದನ್ನೂ ತಿಳಿದವನಾಗಿದ್ದೆ. ಏಕೆಂದರೆ

*ಕೃಪೆ: ಕರ್ಮವೀರ, ಫೆಬ್ರವರಿ 8, 1970.

ಹಿಂದಿನ ದಿನ ತಾನೇ 'ಪ್ರಜಾವಾಣಿ' ಪತ್ರಿಕೆಯಲ್ಲಿ ಡಿ.ವಿ.ಜಿ.ಯವರ 'ನಿವೇದನ' (ಕವಿತಾ ಸಂಕಲನ)ವನ್ನು ಕುರಿತು ನಾನು ಬರೆದಿದ್ದ ಲೇಖನಮಾಲೆಯ ಎರಡನೆಯ ಲೇಖನ ಪ್ರಕಟವಾಗಿತ್ತು. (ಮೊದಲನೆಯದು 29ರಂದು ಪ್ರಕಟವಾಗಿತ್ತು.) ಅದು ಗ್ರಂಥದ ಪ್ರಶಂಸೆಯೂ ಅಲ್ಲ, ವಿಮರ್ಶೆಯೂ ಅಲ್ಲ : 'ನಿವೇದನ' ಆ ವರ್ಷದ ಇಂಟರ್‌ಮೀಡಿಯಟ್ ಆರ್ಟ್ಸ್ ತರಗತಿಯ ಪಬ್ಲಿಕ್ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಪಠ್ಯಗ್ರಂಥವಾಗಿದ್ದದ್ದರಿಂದ ಪತ್ರಿಕೆಯ ಸಂಪಾದಕರ ಕೋರಿಕೆಯಂತೆ, ವಿದ್ಯಾರ್ಥಿಗಳಿಗೆ ಉಪಯುಕ್ತವಾಗಬೇಕೆಂಬ ಉದ್ದೇಶದಿಂದ ಕಾವ್ಯದ ಪರಿಚಯಾತ್ಮಕ ಲೇಖನವನ್ನು ಬರೆದಿದ್ದೆ. ಕವಿಯ ಆಶಯವೇನೆಂಬುದನ್ನು ತಿಳಿಸಿಕೊಡುವುದಷ್ಟೇ ಲೇಖನದ ಉದ್ದೇಶ : ಇದೂ ವಿಮರ್ಶೆಯ ಒಂದು ಅಂಗವೆ. ಇಂಥ ಲೇಖನಗಳಲ್ಲಿ ಕೂಡ, ಕೃತಿಯ ಗುಣವನ್ನು ಕುರಿತು ಒಂದು ಹೊಗಳಿಕೆಯ ಮಾತೋ, ಇಲ್ಲವೆ ದೋಷವನ್ನು ತೋರಿಸಿಕೊಡುವ ಮಾತೋ ಅನಿವಾರ್ಯವಾಗಿ–ಅನಾಹೂತ ಅತಿಥಿಗಳಂತೆ–ಪ್ರವೇಶಿಸುವ ಸಂಭವವುಂಟು. ಡಿ.ವಿ.ಜಿ.ಯವರ ಕೃತಿಯಲ್ಲಿ ದೋಷವಿವೇಚನೆಯನ್ನೇನಾದರೂ ಮಾಡಿರುವೆನೆ ? ಇದರಿಂದ ಅವರು ಅಸಮಾಧಾನಗೊಂಡು ನನ್ನನ್ನು ತರಾಟೆಗೆ ತೆಗೆದುಕೊಳ್ಳಲು ಪತ್ರ ಬರೆದಿರಬಹುದೆ ? ಎಂದು ಶಂಕಿಸಿದೆ. ಪತ್ರವನ್ನು ಬಿಚ್ಚುವ ಮೊದಲು ಡಿ.ವಿ.ಜಿ. ಅವರ ಕೃತಿಯಲ್ಲಿ ದೋಷವನ್ನು ಹುಡುಕಬೇಕೆನ್ನುವವನಿಗೆ 'ಎಂಟೆರ್ದೆ' ಬೇಕು ಎಂಬ ನಂಬಿಕೆಯನ್ನು ಹೊಂದಿದ್ದ ನಾನು ಅಂಥ ಎಗ್ಗತನಕ್ಕೆ ಕೈಹಾಕಿರಲಾರೆ ಎನಿಸಿತು. ಅದಿಲ್ಲವೋ, ನಾನು ಅವರ ಕೃತಿಯನ್ನು ಅತಿಯಾಗಿ ಪ್ರಶಂಸಿಸಿದ್ದು, ಅದರಿಂದ ಅವರಿಗೆ ಬೇಸರವಾಗಿ ನನ್ನ ಬಗ್ಗೆ ಆಕ್ಷೇಪವೆತ್ತಿರಬಹುದೆ ಪತ್ರದಲ್ಲಿ ? ಎಂಬ ಪ್ರಶ್ನೆ ಆಮೇಲೆ ಬಾಧಿಸತೊಡಗಿತು. ಏಕೆಂದರೆ ಅವರು ಇತರರನ್ನು ಸ್ತೋತ್ರ ಮಾಡುವ ಸ್ವಭಾವದವರಲ್ಲ : ಸ್ತೋತ್ರಮಾತ್ರಕ್ಕೆ ಮರುಳಾಗ ತಕ್ಕವರೂ ಅಲ್ಲ–ಎಂಬ ಸಂಗತಿಯನ್ನು ನಾನು ಬಲ್ಲವನಾಗಿದ್ದೆ : 'ಗುದ್ದಲಿಯನ್ನು ಗುದ್ದಲಿ ಎಂದು ಕರೆಯುವುದು' (Call a spade a spade) ಎಂದರೆ 'ಇದ್ದದ್ದನ್ನು ಇದ್ದ ಹಾಗೆ ಹೇಳುವುದು' ಅವರ ಸ್ವಭಾವ. ಕೆಲವು ವರ್ಷಗಳಾದ ಮೇಲೆ, ಈಚೆಗೆ ನಡೆದ ಒಂದು ಸಂಗತಿಯನ್ನು ಇಲ್ಲಿ ಸೇರಿಸಿ ಹೇಳಬಹುದು. ನಮ್ಮ ಕಾಲೇಜಿನ (Govt. Arts and Science College) ಕರ್ಣಾಟಕ ಸಂಘದ ಉಪಸಂಹಾರ ಭಾಷಣ ಮಾಡಬೇಕೆಂದು ಕೇಳಿಕೊಳ್ಳಲು ನನ್ನ ಅಧ್ಯಾಪಕ ಮಿತ್ರರೊಂದಿಗೆ ಅವರ ಮನೆಗೆ ಹೋಗಿದ್ದೆ. ಅವರನ್ನು ಭಾಷಣ ಮಾಡಲು ಒಪ್ಪಿಸುವುದು ಕಷ್ಟ ಎಂದು ನನಗೆ ಗೊತ್ತಿತ್ತು. ನಮ್ಮ ಸಂಘದ ಅದೃಷ್ಟ. ಅವರು ಒಪ್ಪಿಕೊಂಡರು–ಒಂದು ಷರತ್ತಿನ ಮೇಲೆ : "ನನ್ನ ಪರಿಚಯ ಮಾಡಿಕೊಡುವ ಭಾಷಣ ಮಾಡಕೂಡದು" ಎನ್ನುವುದೇ ಆ ಷರತ್ತು. ಪರಿಚಯ ಭಾಷಣದಲ್ಲಿ ಮುಖ್ಯ ಅತಿಥಿಗಳನ್ನು 'ಇಂದ್ರ–ಚಂದ್ರ' ಎಂದು ಹೊಗಳುವುದು ರೂಢಿಯಾದ್ದರಿಂದ. ಹೊಗಳಿಕೆಯನ್ನು ಸಹಿಸದ ಅವರು ಈ ಷರತ್ತನ್ನು ಹಾಕಿದ್ದರು. ನಾನು ಆ ಷರತ್ತನ್ನು ಪಾಲಿಸಿ, ನನ್ನ ಸ್ವಾಗತ ಭಾಷಣದಲ್ಲಿ ಅವರು ಕನ್ನಡಕ್ಕೆ ಸಲ್ಲಿಸಿರುವ ಸೇವೆಯನ್ನೂ, ಬೆಂಗಳೂರು ಮೈಸೂರು ಕಾಲೇಜುಗಳ ಕರ್ಣಾಟಕ ಸಂಘಗಳ ಬೆಳವಣಿಗೆಯಲ್ಲಿ ಅವರು ತೋರುತ್ತಿದ್ದ ಕ್ರಿಯಾ

ಶೀಲ ಆಸಕ್ತಿಯನ್ನೂ ಉಲ್ಲೇಖ ಮಾಡಿ ನಮ್ಮ ಸಂಘಕ್ಕೆ ಬರುವುದಕ್ಕೂ ಈ ಸಂಘ ಪ್ರೇಮವೇ ಕಾರಣವೆಂದು ತಿಳಿಸಿ, ಅವರ ಮುಖವನ್ನು ಓರೆಗಣ್ಣಿನಿಂದ ನೋಡಿದೆ. ಹುಬ್ಬುಗಂಟು ಕಾಣದೆ. ಅವರ ಬಿಗಿದ ತುಟಿಯ ಬಳಿ ಮುಗುಳುನಗೆ ಮೂಡಿದ್ದು ಕಂಡುಬಂದು, ಸಮಾಧಾನದ ನಿಟ್ಟುಸಿರು ಬಿಟ್ಟೆ. ಸ್ವಾಗತ ಭಾಷಣದ ವ್ಯಾಜದಲ್ಲಿ ನಾನು ಪರಿಚಯ ಭಾಷಣವನ್ನೇ ಮಾಡಿದ್ದರೂ 'ಮುಖಸ್ತುತಿ' ಮಾಡುವ ಸಾಹಸಕ್ಕೆ ನಾನು ತೊಡಗಿರಲಿಲ್ಲವಾದ್ದರಿಂದ ಅವರಿಗೂ ಸಮಾಧಾನವಾಗಿದ್ದಿರಬೇಕು. ಈ ಅಪ್ರಸ್ತುತ ಮಾತನ್ನು ಬಿಟ್ಟು, ಪತ್ರದ ವಿಷಯಕ್ಕೆ ಹಿಂದಿರುಗುತ್ತೇನೆ.

ನನ್ನ ಲೇಖನದ ಪ್ರಶಂಸೆಯ ಮಾತುಗಳ ಬಗೆಗೇ ಪೂಜ್ಯರು ಆಕ್ಷೇಪವೆತ್ತಿರ ಬಹುದು ಎಂಬ ಸಂದೇಹವೇ ಬಲವಾಗಿ, ಸಂದೇಹದ ಸುಳಿಯಲ್ಲಿ ನೆಲೆ ತಪ್ಪಿದ್ದ ಮನಸ್ಸನ್ನು ಹಿಡಿತಕ್ಕೆ ತಂದುಕೊಂಡು, ಪತ್ರದ ಮೇಲ್ಮುದಿಯ ಮೇಲೆ ಕಣ್ಣು ಹಾಯಿಸಿದೆ. ಪತ್ರದ ಮೊದಲ ವಾಕ್ಯವನ್ನು ಓದಿದ ಕೂಡಲೆ, ಹಣೆ ಬೆವರಿಟ್ಟಿತು. ಆ ವಾಕ್ಯ ಹೀಗಿತ್ತು :

"Do you remember the English phrase : 'Heap coals of fire on somebody's head'? That is what you have done to me in this morning's ಪ್ರಜಾವಾಣಿ."

ನಾನು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷು–ಕನ್ನಡ ನಿಘಂಟು ಕಾರ್ಯಾಲಯದಲ್ಲಿ ಸಂಪಾದಕೀಯ ಸಹಾಯಕನಾಗಿ ಕೆಲಸ ಮಾಡುತ್ತಿದ್ದಾಗ, ಡಿ.ವಿ.ಜಿ. ಸಂಪಾದಕ ಸಮಿತಿಯ ಸದಸ್ಯರಾಗಿದ್ದುಕೊಂಡು, ಸಮಿತಿಯ ಕಾರ್ಯಕಲಾಪಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಚರ್ಚೆಗಳಲ್ಲಿ ಅವರದ್ದೆ ಮೇಲುದನಿ : ಹೆಚ್ಚು ಕಡಮೆ ರಾಜರತ್ನಂ ಅವರ ಕಂಠದ ಹಾಗೆ, ಕಂಚಿನ ಕಂಠ. ಅದೇ ಕಂಠದಲ್ಲಿ ಅವರು ನನ್ನನ್ನು ಝುಂಕಿಸುತ್ತಿರುವಂತೆ ಆ ವಾಕ್ಯದ ಮಾತುಗಳು ನನ್ನ ಕಿವಿಯಲ್ಲಿ ಮೊರೆಯ ತೊಡಗಿದವು. ನಾನು ನಿಘಂಟುವಿಗಾಗಿ ದುಡಿದದ್ದರಿಂದ, 'ಈ ವಾಕ್ಯ ನಿಮಗೆ ನೆನಪಿದೆಯೆ ?' ಎಂಬ ಅವರ ಪ್ರಶ್ನೆ ; ಇಲ್ಲದಿದ್ದರೆ 'ನೀವು ಬಲ್ಲಿರಷ್ಟೆ' ಎಂದೊ ಇಲ್ಲವೆ ಬೇರೆಯ ತೆರದಲ್ಲೋ ಆ ವಾಕ್ಯವನ್ನು ಉಲ್ಲೇಖಿಸಿರುತ್ತಿದ್ದರು. ಅಷ್ಟು ಮಾತ್ರವಲ್ಲ ; ನನ್ನ ಮರವಿನ ಸ್ವಭಾವವೂ ಅವರಿಗೆ ಗೊತ್ತಿದ್ದ ಸಂಗತಿಯೆ : ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಷ್ಟು ಕಾಲವೂ (1934–1938) ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ಅದು ಹಾಗಿರಲಿ. ಆ ವಾಕ್ಯದ ಅರ್ಥ-ವಿಶೇಷವನ್ನು ನಾನು ಮರೆತೇ ಇದ್ದೆ ; ಅದರ ವಾಚ್ಯಾರ್ಥವನ್ನು ಮಾತ್ರ ಹಿಡಿದು–'ಕಂಡವರ ತಲೆಯ ಮೇಲೆ ಕೆಂಡ ಸುರಿ'–ನನ್ನ ಲೇಖನದಲ್ಲಿ ಅಪ್ಪಿತಪ್ಪಿ ಹೇಳಬಾರದ ಮಾತನ್ನು ಏನಾದರೂ ಉಪಯೋಗಿಸಿ, ಅವರ ಮನಸ್ಸಿಗೆ ನೋವನ್ನೂ ಕೋಪವನ್ನೂ ಉಂಟುಮಾಡಿರುವೆನೆ ಎನ್ನಿಸಿತು. ಹಾಗೆನ್ನಿಸಿದ ಕೂಡಲೇ, ಮೇಜಿನ ಬಳಿಗೆ ಸರಿದು ಸಿ.ಓ.ಡಿ.ಯನ್ನು (Concise Oxford Dictionary) ಕೈಗೆತ್ತಿಕೊಂಡೆ. ಆ ದಿವ್ಯವಾದ

ನಿಘಂಟನ್ನು ಯಾವಾಗಲೂ ವ್ಯಾಸಂಗಸ್ಥಳದ ಬಳಿಯೇ ಇಟ್ಟುಕೊಂಡಿದ್ದು ಸಂದೇಹ ಬಂದಾಗಲೇ–ಬಂದ ಕೂಡಲೆ–ತೆರೆದು ನೋಡುವ ಪರಿಪಾಟಿಯನ್ನು ಅವರನ್ನು ನೋಡಿಯೇ ನಾನು ಕಲಿತದ್ದು. ಸಿ.ಓ.ಡಿ. ತಿಳಿಸಿದ್ದೇನು ? 'Return good for evil !' 'ಕೆಟ್ಟದ್ದನ್ನು ಮಾಡಿದ್ದಕ್ಕೆ ಪ್ರತಿಯಾಗಿ ಒಳ್ಳೆಯದನ್ನು ಮಾಡು !' ನನ್ನ ಆತಂಕವೇನೊ ಬಗೆಹರಿಯಿತು ; ಆದರೆ ಆಶ್ಚರ್ಯವಾಯಿತು. ಅವರು ನನಗೆ ಎಸಗಿರುವ ಅಂತಹ ಕೆಟ್ಟದ್ದೇನು ? ಅವರಿಗೆ ಅದಕ್ಕೆ ಪ್ರತಿಯಾಗಿ ನಾನು ಮಾಡಿರುವ ಒಳ್ಳೆಯದೇನು ? ಅವರು ನನಗೆ ಉಪಕಾರಿ ! ನಾನೆಂತೂ ಒಪ್ಪಲಾಗದಿದ್ದ ನಂಬಲಾಗದಿದ್ದ ಮಾತು. ಪತ್ರದಲ್ಲಿ 'ಪ್ರಜಾವಾಣಿ'ಯ ಉಲ್ಲೇಖವಿದ್ದಿತಾಗಿ, ನಾನು ಮಾಡಿದ ಒಳ್ಳೆಯದು ಎಂದರೆ ಅವರ 'ನಿವೇದನ'ವನ್ನು ಕುರಿತು ಪರಿಚಯಾತ್ಮಕ ಲೇಖನಗಳನ್ನು ಬರೆದದ್ದು ! ಈ ಕೆಲಸ ಉಪಕಾರವೇನೊ ಹೌದು. ಆದರೆ, ಅವರಿಗಲ್ಲ ; ವಿದ್ಯಾರ್ಥಿಗಳಿಗೆ ! ಇದು ಒತ್ತಟ್ಟಿಗಿರಲಿ. ನಾನು ಮಾಡಿದ ಉಪಾಧ್ಯಾಯಕರ್ತವ್ಯವನ್ನು ಅವರು ಒಳ್ಳೆಯ ಕೆಲಸ ಎಂದು ಭಾವಿಸಿ, ಮೆಚ್ಚಿಕೊಂಡು ಅನುಮೋದಿಸಿದ್ದು ಅವರ ಹೃದಯದ ಔದಾರ್ಯ. ಹೊಗಳುವ ಸ್ವಭಾವದವರಲ್ಲದ ಅವರಿಂದ ಹೊಗಳಿಕೆಯಲ್ಲ ಎಂದು-ಕೊಂಡರೂ ತೃಪ್ತಿಯನ್ನು ಸೂಚಿಸುವ ಮೇಲಿನ ಉಕ್ತಿ ವ್ಯಕ್ತಗೊಂಡದ್ದು ನನ್ನ ಪರಮ ಭಾಗ್ಯ ಎಂಬ ಸಾರ್ಥಕ್ಯಭಾವ ನನಗೆ ಸಂತೋಷವನ್ನುಂಟುಮಾಡಿತು ಎಂದು ಹೇಳದಿದ್ದರೆ ಆತ್ಮವಂಚನೆಯಾಗುತ್ತದೆ ; ಹಿರಿಯರ ಆಶೀರ್ವಚನವನ್ನು ಶಿರಸಾವಹಿಸದ ದೋಷಕ್ಕೆ ಗುರಿಯಾಗಬೇಕಾಗುತ್ತದೆ. ಇದು ಸರಿಯೆ, ಆದರೆ, ಅವರು ನನಗೆ ಮಾಡಿದ್ದ ಕೆಡುಕೇನು ? ಅಪಕಾರವೇನು ? ಏನೂ ಇಲ್ಲ ಎನ್ನೋಣ ವೆಂದರೆ ಪತ್ರದ ಅವರ ಮುಂದಿನ ವಾಕ್ಯಗಳಿಗೆ ಏನರ್ಥ ? ಅವು ಹೀಗಿವೆ :

"I remember occasions when I was not exactly soft or sweet to you. I also remember how gently you bore with me. On the other hand, I cannot recall a single instance of my having displayed any excess of kindness for you. But you don't seem to remember it at all. Pray accept my assurances of sincere thankfulness."

(" ನಿಮ್ಮ ವಿಚಾರದಲ್ಲಿ ನಾನು ಅಷ್ಟೇನೂ ಮೃದುವಾಗಿ ಅಥವಾ ಮಧುರವಾಗಿ ನಡೆದುಕೊಳ್ಳದೆ ಹೋದ ಸಂದರ್ಭಗಳು ನನ್ನ ಜ್ಞಾಪಕದಲ್ಲಿವೆ. ನೀವು ಎಷ್ಟು ಸೌಮ್ಯವಾಗಿ ನನ್ನ ವರ್ತನೆಯನ್ನು ಸಹಿಸಿಕೊಳ್ಳುತ್ತಿದ್ದಿರಿ ಎಂಬುದೂ ನನ್ನ ನೆನಪಿನಲ್ಲಿದೆ. ಇದು ಹೋಗಲೆಂದರೆ, ನಿಮ್ಮ ವಿಚಾರದಲ್ಲಿ ನಾನು ಅತಿಶಯವಾದ ದಯೆ ತೋರಿದ ಒಂದು ಸಂದರ್ಭವೂ ನನ್ನ ನೆನಪಿಗೆ ಬಾರದು. ನಾನು ಸದಾ ನಿಮಗೆ ಕೃತಜ್ಞ ಎಂದು ನಂಬಿಕೆ ಕೊಡುತ್ತಿದ್ದೇನೆ. ಸ್ವೀಕರಿಸಿ ")

ಈ ವಾಕ್ಯಗಳನ್ನು ಅರ್ಥಮಾಡಿಕೊಳ್ಳಬೇಕಾದರೆ 'Heap coals of fire on one's head' ಎಂಬ ಈ ಬೈಬಲ್ಲಿನ ವಾಕ್ಯವನ್ನು ಮತ್ತೆ ನೆನೆಯಬೇಕು. ಕೆಡುಕು ಮಾಡಿದ

ವರಿಗೆ ಒಳ್ಳೆಯದು ಮಾಡು ಎಂಬುದೇನೊ ಈ ವಾಕ್ಯದ ವ್ಯಂಗ್ಯಾರ್ಥ. ಇಲ್ಲಿ ವ್ಯಂಗ್ಯಾರ್ಥದಷ್ಟೆ ವಾಚ್ಯಾರ್ಥವೂ ಮುಖ್ಯ. ತಲೆಯ ಮೇಲೆ ಕೆಂಡ ಸುರಿದರೆ ಅದು ತಲೆಯನ್ನು ಸುಡುತ್ತದೆ. ಹಾಗೆಯೇ ಕೆಡುಕು ಮಾಡಿದವರಿಗೆ ಒಳ್ಳೆಯದನ್ನು ಎಸಗಿದರೆ–ಬೈಬಲ್ಲಿನಲ್ಲಿ ಬೋಧಿಸಿರುವಂತೆ : If thine enemy hunger, feed him; if he thirst, give him drink; for in so doing thou shalt heap coals of fire on his head (Romans 12 : 20)–ಒಳ್ಳೆಯತನ ಅವನ ಮನಸ್ಸನ್ನು ಚುಚ್ಚಿ, ಆತನ ಹೃದಯ ಪರಿವರ್ತನೆ ಆಗುತ್ತದೆ : ಆತನಲ್ಲಿ ಪಶ್ಚಾತ್ತಾಪವುಂಟಾಗುತ್ತದೆ.

ಡಿ.ವಿ.ಜಿ. ಅವರ ಮಾತಿನಲ್ಲಿ ಪಶ್ಚಾತ್ತಾಪದ ಧ್ವನಿ ಸ್ಪಷ್ಟವಾಗಿ ಕೇಳಿಸುತ್ತದೆ, ನನ್ನ ಬಗ್ಗೆ ಕಠಿನವಾಗಿ ನಡೆದುಕೊಂಡದ್ದಕ್ಕೆ ಮರುಗಿದ್ದಾರೆ. ಡಿ.ವಿ.ಜಿ. ಎಂದೂ ಸತ್ತ್ವಸಂಪನ್ನರು. ಒಂದು ಕಾಲದಲ್ಲಿ, ಕೆಲವು ಸಂದರ್ಭಗಳಲ್ಲಿ ಮಾತ್ರ, ಕಾಠಿನ್ಯದ ಮುಸುಕು ಇದ್ದದ್ದುಂಟು ; ಈಗ ಅದೂ ಇಲ್ಲ. ಹಲಸಿನ ಹಣ್ಣಿನ ಮೈಮೇಲೆ ಮುಳ್ಳು ಉಂಟು ; ಮುಟ್ಟಲು ಒರಟು, ಆದರೆ ಅದು ಗೊಬ್ಬಳಿ ಮುಳ್ಳಲ್ಲ ; ಒಳಗಿನ ತೊಳೆ ಎಷ್ಟು ಮಧುರ ! 'ಉತ್ತರರಾಮ ಚರಿತೆ'ಯ ಶ್ರೀರಾಮಚಂದ್ರನ ಬಗೆಗೆ ಪ್ರಸಿದ್ಧವಾಗಿರುವ–'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಮಾತಿಗಿಂತ, ರಾಘವಾಂಕನು ವಿಶ್ವಾಮಿತ್ರನ ಬಗೆಗೆ ಆಡಿರುವ–'ಕುಡಿದೌಷಧಂ ಬಾಯ್ಗೆ ನಿಗ್ರಹಂ ಮಾಡಿ, ತಾಳ್ದೊಡಲಿಂಗೆ ಸುಖವನೀವಂತೆ ಲೋಕದ ಕಣ್ಗೆ ಕಡು ಮುಳಿದರಂತೆ' ತೋರಿಸಿಕೊಳ್ಳುವ ಒಂದು ಸ್ವಭಾವವನ್ನು—ಮಕ್ಕಳನ್ನು ಶಿಕ್ಷಿಸುವ ತಂದೆಯ ಸ್ವಭಾವವನ್ನು—ತಿಳಿಸುವ ಮಾತು, ಡಿ.ವಿ.ಜಿ. ತಮಗೆ ಆರೋಪಿಸಿಕೊಂಡಿರುವ ಕಾಠಿನ್ಯದ ಬಗೆಗೆ ಸರಿಹೋಗುತ್ತದೆ. ಈ ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕಾದರೆ, ಹಿನ್ನೆಲೆಯನ್ನು ಸ್ವಲ್ಪ ವಿವರಿಸಬೇಕು:

ನಾನು ವಿದ್ಯಾರ್ಥಿಯಾಗಿದ್ದಾಗ, 'ವನಸುಮದೊಲೆನ್ನ ಜೀವನವು ವಿಕಸಿಸುವಂತೆ' ಎಂಬ ಚೆಲುವಾದ ಗೀತದ ಕವಿ ಎಂದು ಮಾತ್ರ ನಾನು ಅವರನ್ನು ಬಲ್ಲವನು. ರಾಮಣ್ಣ ಎಂಬ ಹಿರಿಯ ವಿದ್ಯಾರ್ಥಿ ಮೈಸೂರು ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದ ಸಭೆಗಳಲ್ಲಿ (1930–33) ಪ್ರಾರ್ಥನ ಗೀತೆಯಾಗಿ ಆ ಹಾಡನ್ನು ಅಠಾಣ ರಾಗದಲ್ಲಿ ಬಹು ಸೊಗಸಾಗಿ ಹಾಡುತ್ತಿದ್ದರು. ಅವರಿಗೆ 'ಅಠಾಣ ರಾಮಣ್ಣ' ಎಂಬ ಹೆಸರೇ ನಿಂತುಹೋಯಿತು ವಿದ್ಯಾರ್ಥಿವೃಂದದಲ್ಲಿ. ನನ್ನ ಗುರುಗಳಾದ ದಿ॥ ಟಿ. ಎಸ್. ವೆಂಕಣ್ಣಯ್ಯನವರ ಸಲಹೆ ಮತ್ತು ಶಿಫಾರಸುಗಳ ಪರಿಣಾಮವಾಗಿ ನಾನು (ಈ ಹಿಂದೆಯೆ ಸೂಚಿಸಿರುವಂತೆ) ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡೆ 1934ರ ಜನವರಿಯಲ್ಲಿ. ಹೊಸದರಲ್ಲಿ ಡಿ.ವಿ.ಜಿ. ಅವರ ದರ್ಪ, ಮುಂಗೋಪ ಇವನ್ನು ಸಹಿಸುವುದು ನನಗೆ ಕಷ್ಟವೇ ಆಗಿತ್ತು ; ನನ್ನ ಬರವಣಿಗೆಯ ದೋಷ, ಮರವಿನ ಸ್ವಭಾವ, ನಿಧಾನದ ಕೆಲಸ, ತರುಣ ಬರಹಗಾರ ಎಂಬ ಗರ್ವ, ಇತ್ಯಾದಿ ಇತ್ಯಾದಿ ನನ್ನ ಓರೆಕೋರೆಗಳನ್ನು ತಿದ್ದುವುದರಲ್ಲಿ ಸ್ವಲ್ಪ

ಕಾಠಿನ್ಯವನ್ನೇನೋ ತೋರುತ್ತಿದ್ದರು. ಅವರ ನಿಜವಾದ ವ್ಯಕ್ತಿತ್ವದ ಅರಿವು ನನಗಾಗಿರಲಿಲ್ಲ. ಪರಿಸ್ಥಿತಿಗೆ ಹೊಂದದೆ ಸ್ವತಂತ್ರ ಮನೋವೃತ್ತಿಯನ್ನು ಆರೋಪಿಸಿಕೊಂಡಿದ್ದ ನಾನು ನನ್ನ ಕೆಲಸಕ್ಕೆ ರಾಜೀನಾಮೆಯ ಕಾಗದವನ್ನೂ ಕೊಟ್ಟುಬಿಟ್ಟೆ ! (ಇದನ್ನು ಡಿ.ವಿ.ಜಿ. ಮರೆತಿರುವರೋ ಹೇಗೋ ಕಾಣೆ.) ರಾಜೀನಾಮೆಯನ್ನು ಅವರು ಒಪ್ಪಿಕೊಂಡಿದ್ದಂತೆ ಕಂಡುಬರಲಿಲ್ಲ : ನಾನೂ 'ಆ ಬಗ್ಗೆ ಮಾತೆತ್ತದೆ, ಕೆಲಸ ಮಾಡಿಕೊಂಡು ಹೋಗುತ್ತಿದ್ದೆ. ಅವರೂ ತಮ್ಮ ಮುನಿಸಿನ ಮೊಗವಾಡ ಕಳಚಿ, ಮುಗುಳುನಗೆ ನಗುತ್ತ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಕೆಲ ದಿನಗಳಾದ ಮೇಲೆ ಕಾರ್ಯನಿರ್ವಾಹಕ ಮಂಡಲಿಯ ಸಭೆಗೆ ಬಂದಿದ್ದ ವೆಂಕಣ್ಣಯ್ಯನವರು ನನ್ನನ್ನು ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ, 'ರಾಜೀನಾಮೆ ಪತ್ರ'ವನ್ನು ಕೈಗಿತ್ತು, "ಹೀಗೆಲ್ಲಾ ಮಾಡಬೇಡ ಅವರಿಗೆ ನಿನ್ನ ವಿಚಾರ ಎಲ್ಲ ತಿಳಿಯಹೇಳಿದ್ದೇನೆ. ಅವರು ಮೇಲೆ ನೋಡುವುದಕ್ಕೆ ಬೆಣಚುಕಲ್ಲು, ಒಳಗೆ ಬೆಣ್ಣೆ" ಎಂದು ನನ್ನನ್ನು ಸಮಾಧಾನಪಡಿಸಿದರು.

ಡಿ.ವಿ.ಜಿ.ಯವರ ಪ್ರಕೃತಿ ಬದಲಾವಣೆಯಾಗಲಿಲ್ಲ ! ಆದರೆ, ನನ್ನ ಗುರುವಿನ ಮಾತು ಸುಳ್ಳಾಗಲಿಲ್ಲ. ಡಿ.ವಿ.ಜಿ.ಯವರ ಬೆಣ್ಣೆಯ ಹೃದಯವನ್ನು ಗುರುತಿಸುವ ಕಾಲ ಬೇಗನೆ ಬಂತು. ಮೊದಲ (ಅಥವಾ ಎರಡನೆಯ) ವಿಶೇಷ ಸಾಹಿತ್ಯೋತ್ಸವದ ಉಪಸಂಹಾರ ಭಾಷಣದ ವಂದನಾರ್ಪಣೆಯ ಸಂದರ್ಭ ; ಸಂಬಂಧಪಟ್ಟವರಿಗೆಲ್ಲ ವಂದನೆ ಸಲ್ಲಿಸಿಯಾದ ಮೇಲೆ—"ನಮ್ಮ ಕಚೇರಿಯ ಸಿಬ್ಬಂದಿ ನಾನು ಕೊಟ್ಟ ಕಿರುಕುಳವನ್ನೆಲ್ಲಾ ಸಹಿಸಿಕೊಂಡು ಮೈಮುರಿಯ ದುಡಿದಿದ್ದಾರೆ. ಅವರನ್ನು ನಾನು ಗೋಳುಹುಯ್ದುಕೊಂಡಿದ್ದೇನೆ. ಆ ಚಿರಂಜೀವಿಗಳು ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬಾರದು. ಹಚ್ಚಿಕೊಂಡಿಲ್ಲ ಎಂದು ನಂಬಿದ್ದೇನೆ. ದೇವರು ಅವರಿಗೆ ಒಳ್ಳೆಯದು ಮಾಡಲಿ" ಎಂಬ ಅರ್ಥ ಬರುವಂತೆ ಮಾತನಾಡಿದರು. ಅವರ ಕಂಠ ಗದ್ಗದಿತವಾಗಿತ್ತು ; ಕಣ್ಣು ಒದ್ದೆಯಾಗಿತ್ತು. ಇದನ್ನು ನಾನು ಹೇಗೆ ಮರೆಯಲಿ ?

ಡಿ.ವಿ.ಜಿ.ಯವರ ಉಳಿಪೆಟ್ಟು ಮಾತ್ರ ತನ್ನ ಪಾಡಿಗೆ ತಾನು ಮುಂದುವರಿಯಿತು. ನಾನು ಸಂತೋಷದಿಂದ ಅದಕ್ಕೆ ಮೈಯೊಡ್ಡಿದೆ. ಒಂದು ವಿಗ್ರಹ ಮೂಡಿ ನಿಂತಿತು.

—**ಎಂ. ವಿ. ಸೀತಾರಾಮಯ್ಯ**

A Great Patriot and a Thinker *

I am thankful to the Dr. D.V.G. Birth Centenary Celebration Committee for giving me an opportunity to associate myself with this evening's function.

The previous speakers have referred to D.V.G.'s contribution to literature in general and Kannada literature in particular. Years ago, when we were students, his books had been prescribed as text books for the Intermediate and the Degree Courses. By then he had already attained great heights.

But my acquaintance with him was for an altogether different reason. He was a good friend of my father and he was one of those who was firmly of the view that without agitation of the type we often associate with political changes, the State of Mysore could give a lead to the rest of India, especially the British India, in the matter of constitutional reforms. As most of you are aware, the Mysore Representative Assembly which came into existence in 1881 was the oldest Political Institution of elected representatives in India. This institution was followed in the year 1907 by the establishment of the Legislative Council. Dr. D.V.G. was a member of the Legislative Council.

---

* Speech by Shri N. Lakshman Rau on April 4, 1987, in a Symposium organized by the Gokhale Institute of Public Affairs as a part of the year-long celebration of D.V.G. Birth Centenary.

The tremendous interest that he evinced in the constitutional reforms could be appreciated from the following resolution that he moved in the Budget Session of the Legislative Council in the year 1934. The resolution reads—" 1. This Council recommends to the Government of His Highness the Maharaja of Mysore that they may be pleased to appoint a committee at an early date to frame and submit, after consulting public opinion, a comprehensive scheme of constitutional reforms with a view to expediting progress in the direction of responsible Government.

2. This Council recommends to the Government of His Highness the Maharaja of Mysore that they may be pleased to appoint a Standing Committee to consider all questions pertaining to the entry of Mysore into an All India Federation and to make suggestions thereupon to Government from time to time." This was disallowed but Dr. D.V.G. continued to pursue his views by writing articles on the subject in various dailies and by other means. I have quoted the resolution tabled by him *in extenso* just to show that he was able to realise the shape of things to come so early.

However, at that point of time, the view of thinkers like Dr. D.V.G. was that Mysore could have responsible Government under the aegis of His Highness the Maharaja of Mysore from the year 1942. With the Congress launching the "Quit India Movement" things hotted up to such an extent that policy action was intensified both in British India and the Indian States. Naturally, persons like Dr. D.V.G. felt that something should be done to stem the rot. It is at this stage, he and my father used to meet quite frequently. Following one such

meeting he wrote a letter to father on 8th April 1943, a portion of which makes interesting reading. He observes, *inter alia*—

> " Is it not possible for Mysore to take some helpful action in these matters? If the Congress or the League started trouble in British India, Mysore has to share in the consequences and the Mysore Government is expected to act following in the wake of British Indian Government. Conversely, why shouldn't Mysore have the right of demanding that the British Government do something for the restoration of peace and order within its borders ?"

He was a great patriot, a thinker and one of the many who felt that India could not move forward unless it attained Independence. But somehow his later writings go to show that he was not entirely satisfied with the way things happened. In an article entitled " Political scene—Inflictions " in the year 1960 in the 13th year of Independence he questioned the very priorities that the Government had set for themselves. He felt that though we toiled for 12 years, the harvest was however not one of expected wheat (green revolution was a later development) but of tare and thorn. According to him the seeds sown were (1) an unreasonable socialism, (2) a misordered plan programme, (3) an uncalculating liberality of the treasury and (4) an impressive concession to linguism. Though he was a well known writer in Kannada and was equally proficient in English views on linguism seemed to differ very much from ours. In the article that I have referred to, he observed: " Language is certainly a binding force. But we may easily overestimate its capacity. Do we not want to eat besides talking? So food is also a binding force. And there are many other binding forces, some even more powerful, why do we forget them?"

I have referred to his writing and the views expressed therein just to show that Dr. D.V.G. was a man of many parts. He was not only a voracious reader and prolific writer, but a person who otok active and intelligent interest in all matters concerning het well-being of the general public. I mentioned that he was getting disappointed with many things. The fall in standards disturbed him quite a lot. In a letter written to me on 5-11-1958, after giving expression to his feelings on the subject, he ended up the letter with the words—" And to find that there is genuine public appreciation for such (*i.e.*, conscience and sense of honour) is, to people like me, a silver lining to the cloud."

He was known for his simple living and high thinking. We do not find too many such people in the century. It is only right that we should be honouring his memory by celebrations of the type you have arranged.

—N. LAKSHMAN RAU

ಭಾಗ ೩

ಡಿ.ವಿ.ಜಿ. ಅವರ ವ್ಯಕ್ತಿತ್ವ

ಮತ್ತು

ಕೃತಿಸಮೀಕ್ಷೆ

ಪದ್ಯ ಪ್ರಸೂನಾಂಜಲಿ

ಕಂ॥ ದಿವಿಜಂ ಗಡ ಡಿ.ಽ ವಿ.ಽ ಜಿ.ಽ
ಭವಲೋಕಾತಪ್ತ ಜೀವಿಗಳ್ಗೆ ಜಲಧರಂ ।
ಶಿವಸತ್ಯಂಗಳ ಸಂಗಮ
ನವ ಸೌಂದರ್ಯಾತ್ಮದಿಂದಲೊದವಿತ್ತಿವರೊಳ್ ॥೧॥

ಅಪರಿಗ್ರಹ ಸುವ್ರತ ಪಾ-
ದಪ ತಾಳ್ದತ್ತೆನೆ ಸುನೀತಿ ಕುಸುಮಪ್ರಚಯಂ ।
ವಿಪುಲ ಸ್ವಾದು ಫಲೋಪಮ
ಸುಪುಷ್ಟ ಕೃತಿರಾಜಿ ರಂಜನಂ ಗಡ ಸಾಜಂ ॥೨॥

ವಿದ್ಯಾರಣ್ಯ ಮುನೀಂದ್ರರ
ವಿದ್ಯಾ–ಸಾಮ್ರಾಜ್ಯತಂತ್ರ–ರಸಸಂಗ್ರಹಣಂ ।
ಸದ್ಯೋಽನವದ್ಯಮಾದ್ಯಂ
ಹೃದ್ಯಂ ತಾಂ ಸಾಧ್ಯಮಾಯ್ತು ಗಡ ನಿಮ್ಮಿಂದಂ ॥೩॥

'ವನಸುಮ'ವಾದಿರಿ ನೂನಂ
ಜನಜೀವನಕಾರ್ಪ ಸತ್ತ್ವ ಸೌರಭ ವೀಯು-।
ತ್ತನುವಾಗಿಸಿ ಬಾಳ್ವಾಗಿಸಿ
ತನಿವಣ್ಣೆನಲಾತ್ಮದರ್ಶನವನುಪಹರಿಸಿ ॥೪॥

ಉ॥ ಕಗ್ಗಮೊ ಸಗ್ಗವೋ ಸಕಲ ಜೀವನಸಾರ ರಸಾನುರಾಗವೋ.
ಮುಗ್ಗಮೊ ಜೀವ ಬೊಮ್ಮಗಳ ನೆಯ್ಗೆ, ಸಮನ್ವಯ-ಸಾಂದ್ರ ಭಾವನಾ ।
ಮುಗ್ಗಮೊ, ಮೇಣಲೌಕಿಕಕೆ ಲೌಕಿಕಕಂ ನವ ಹೇಮ ಸೇತುವಂ
ವೆಗ್ಗಳದಿಂದೊಡರ್ಚುವ ವಿಶೇಷಮೊ ಭಾಷ್ಯಮೊ ವಾಣಿಗೋಣ್ಗೆನಲ್ ॥೫॥

ಕಂ॥ ಶ್ರೀರಾಮನ ಮೇಣ್ ಕೃಷ್ಣನ
ಪರೀಕ್ಷೆಗೆಯ್ದು ಸಮನ್ವೈತಿಕ ಬಲಂ ಧರ್ಮೋ–।
ದಾರ ಮನೋವಾಕ್ಕರಣಗ-
ಳಾರೊಳಗಿರ್ಪುದು ವಿನಾ ಡಿ.ವಿ.ಜಿ.ಯುಂ ಬುಧರೊಳ್ ॥ ॥೬॥

ಉ॥ 'ಜೀವನ ಧರ್ಮಯೋಗ' ನವ ಜೀವನದೀ ವಿಮಲಾನುಕೂಲಮಾ
ಜೀವನದಿಂದಲೀ ಜನರ ಜೀವನಕಾರ್ದ್ರತೆಯೀಯುತಾತ್ಮ ರಾ-।
ಜೀವನ ಸದ್ವಿಚಾರ ವಿಹಿರಾರ್ಯಕರಂಗಳಿನೋದಿಸುತ್ತ ಸಂ-
ಜೀವನವಾದಿರಲ್ತೆ, ಕಡು ನೊಂದಿಹ ಬೆಂದಿಹ ಲೋಗರಿಂಗೆ ನೀವ್ ॥ ೭ ॥

ಇಂದ್ರವಂಶ ॥ ಶ್ರೀಕೇಶವಾಂತಃಪುರ ಬಾಲೆಯುರ್ಗಳಾ
ಲೋಕೋತ್ಸವಾ ಡೋಲನ ಖೇಲನಂಗಳಂ ।
ಸಾಕೂತಮಾಲೋಕಿಸುತಂತರಾರ್ಥಮಂ
ಸಾಕಲ್ಯಮಂ ವಿಶ್ವದಿ ತೋರ್ದಿರಲ್ತೆ ನೀವ್ ॥ ೮ ॥

ಅನುಷ್ಟುಪ್ ॥ - ರಾಜರನ್ನೆಂತೊ ಮೇಣಂತೆ ಗಂಜಿ ಕೂಳಿನ ಕಿಂಚೆರಂ ।
ಸಾಜದಿಂ ಕಂಡು ಸಸ್ನೇಹಂ ವರ್ತಿಪಗ್ಗಣಿ ನಿಮ್ಮದಯ್ ॥ ೯ ॥

ವಸಂತತಿಲಕ ॥ ಶೃಂಗಾರಮೇಸುಪನಿಷದ್ಗಹನಾರ್ಥಮೇಂ ಮೇಣ್
ಸಂಗೀತಮೇಂ ವಿವಿಧಲೋಗರ ಕಾಣ್ಕೆಯೇಂ ಮೇಣ್ ।
ಮಾಂಗಲ್ಯಮಾಯ್ತು ಬದುಕಂ ಬರಹಂಗಳನ್ನುಂ
ಸಾಂಗಾದ್ವಯಕ್ಕಿರಿಸಿದೀ ಭವದೀಯ ತತ್ತ್ವಂ ॥ ೧೦ ॥

ಕಂ ॥ ಬಾಳೊಳ್ ನಂಬಿಕೆ, ಸಂಸ್ಕೃತಿ
ಮಾಲಾ ಕುಸುಮತ್ವ, ಸತ್ಯ-ಸುಂದರ ಕಾವ್ಯ-।
ಪ್ರಾಲೇಯ ನಿಲಯ ಶಿವಕೃತ
ಲೀಲಾ ನಾಟಕದಿ ರಕ್ತಿ ಗಡ! ನಿಮ್ಮ ಗುಣಂ ॥ ೧೧ ॥

ಬಾಡಿದೊಡೇಂ ಕೇದಗೆ ಪೂ
ತೀಡುವುದಲ ನಾಲ್ದೆಸೆಂಗಳಿಗಮುತ್ಕೃಷ್ಟಂ ।
ಗಾಢಂ ಸುರಭಿಯನಂತೆಯೆ
ರೂಢಿತ ಭವದೀಯ ಸತ್ತ್ವ ಮಾಗುತ ನಿಲ್ಗುಂ ॥ ೧೨ ॥

ಶಾ.ವಿ. ॥ ವಿಶ್ವಪ್ರೇಮ ಚಿದಗ್ನಿಕುಂಡ ಸವನನ್ಯಸ್ತಂ ಸಮಿತ್ಸನ್ನಿಭಂ
ಶಶ್ವದ್ಧೀರಗಭೀರ ಕರ್ಮ-ವಚನೋದಾರೈಕ್ಯ ಸಾಕ್ಷೀನಿಭಂ ।
ಅಶ್ವಂ ಸಾರಥಿಚೋದಿತಂಬೊಲಮಲೋರ್ವೀ ನಾಟಕಾಖೇಲನಂ
ವಿಶ್ವೇಶಾಂಘ್ರಿನಿವೇದಿತಂಬೆನುವ ದಿವ್ಯಾದರ್ಶಕಾದರ್ಶ ನೀವ್ ॥ ೧೩ ॥

ಕಂ ॥ ಸಾಹಿತ್ಯಪಟಂ, ಸಂಸ್ಕೃತಿ
ಸಾಹಾಯ್ಯಕ ಸಾಂದ್ರ ಧೀರ ಮಾಕಂದಂ ಮೇಣ್ ।
ಸ್ನೇಹಾಪಾರ್ಶ್ವತ್ಥಂ, ಋತ
ಮಾಹೇಂದ್ರೋಪವನಕಲ್ಪತರುವಾದಿರಿ ನೀವ್. ॥ ೧೪ ॥

ಮಾಲಿನೀ ॥ ಜಯಿಸುಗೆ ಕವಿವರ್ಯಂ ಲೋಕಸಾಹಾಯ್ಯಕಾರ್ಯಂ
ಜಯಿಸುಗೆ ಜಿತಮಾಯಂ ಸತ್ಯಸದ್ಭಾಗುಪಾಯಂ ।
ಜಯಿಸುಗೆ ನಿರಪೇಕ್ಷಂ ಜೀವನಾದರ್ಶದಕ್ಷಂ
ಜಯಿಸುಗೆ ಶಿವಮಾತ್ರಂ ಬ್ರಹ್ಮನಾಟ್ಯಾಗ್ರ ಪಾತ್ರಂ ॥ ೧೫ ॥

—ರಾ. ಗಣೇಶ್

ಮಂಕುತಿಮ್ಮನ ಕಗ್ಗ

(ಸಂಸ್ಕೃತಾನುವಾದ)

ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನೆಂದು ಜನಂ।
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ
ಆ ವಿಚಿತ್ರಕೆ ನಮಿಸೊ—ಮಂಕುತಿಮ್ಮ ॥

एकैकमूलमखिलेश्वरमेव विष्णु
मायारथं च निगदन्ति जनायमेकम् ।
ब्रम्हेत्यदृश्यमपियं सततं भजन्ति
विश्वस्य तं प्रणम चित्रतमं च तिम्म ॥ ॥ ೧ ॥

ಮುತ್ತಿರುವುದಿಂದು ಭೂಮಿಯನೊಂದು ದುರ್ದೈವ
ಮೃತ್ಯು ಕುಣಿಯುತಲಿಹನು ಕೇಕೆ ಹಾಕುತಲಿ।
ಸುತ್ತಿಪುದು ತಲೆಯನನುದಿನದ ಲೋಕದ ವಾರ್ತೆ
ಎತ್ತಲಿದಕೆಲ್ಲ ಕಡೆ—ಮಂಕುತಿಮ್ಮ ॥

आक्रामति क्षितिमिमां ननु दुष्टदैवं
मृत्युस्तु नृत्यति मदेन च साट्टहासम् ।
चित्तभ्रमं जनयतीह तु लोकवार्ता
कोन्तः कदास्यतु भवेत् सुखता च मूढ ॥ ॥ ೧೧ ॥

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು-
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು।
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು
ಬಂದುದೀ ವೈಷಮ್ಯ?—ಮಂಕುತಿಮ್ಮ ॥

पश्यन्त एकमिह खं धरणिं स्पृशन्तो
भुक्त्वान्नमम्बु पवनं च समत्व बुध्या ।
मर्त्याः समा इति सुखे शुचिवा किमेते
वैषम्य भाज इति वेम्दिन चैव तिम्म ॥ ॥ ೧೪ ॥

ಆಹ! ಈ ಮೋಹಗಳೊ ನೇಹಗಳೊ ದಾಹಗಳೊ
ಊಹಿಪೆಯ ಸೃಷ್ಟಿಯಲಿ ಹೃದಯವಿಹುದೆಂದು?।
ಹೋ ಹೋ ಹಾಹಾಯೆಂದು ನಮ್ಮ ಬಾಯ್ಬಿಡಿಸುವುದೆ
ಈ ಹರಿಬದೊಳಗುಟ್ಟೋ—ಮಂಕುತಿಮ್ಮ ॥

सम्भावये: किमिह मोह सुहृत्वदाहा :
सन्तीति हृच्च कृततच्चर भावमेवम्।
हाहोत यन्मुखरताकरणं शुचास्मन्
अस्मान् प्रपद्य विधिरस्य विधेहि तिम्म ॥ ॥ ೪೨ ॥

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರುತಳೆದ ಪುಷ್ಪ।
ವಸ್ತುಸಾಕ್ಷಾತ್ಕಾರವಂತರೀಕ್ಷಣೆಯಿಂದ
ಶಾಸ್ತ್ರಿತನದಿಂದಲ್ಲ—ಮಂಕುತಿಮ್ಮ ॥

ज्ञानं च पुस्तककृतं मणिरुत्तमाङ्गे
चित्त प्ररूढ मतिरुत्तम पुष्पवल्ली।
अन्तविलोकनतया परवस्तु लोक:
शास्त्रित्वतो न खलु सिध्यति पश्य तिम्म ॥ ॥ ೬೫ ॥

—ವೆಂಕಟರಾಮಭಟ್ಟ

ಮಂಕುತಿಮ್ಮನ ಕಗ್ಗ

(ತಮಿಳು ಭಾಷಾಂತರ)

ಮಂಕ್ಕುತಿಮ್ಮನಿನ್ ಪಿದಱ್ರಲ್ಗಳ್

ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ ।
ದೇವ ಸರ್ವೇಶ ಪರಬೊಮ್ಮನೆಂದು ಜನಂ ॥
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ ।
ಆ ವಿಚಿತ್ರಕೆ ನಮಿಸೊ—ಮಂಕುತಿಮ್ಮ ॥ ೧

ತಿರುಶೇರ್ ಮಾಲನ್ ಉಲಗಾದಿಮೂಲನ್ ಮಾಯಾಲೋಲನ್
ಇಱೈವನ್ ಯಾವರ್ಕ್ಕುಂ ತಲೈವನ್ ಪರಮನ್ ಎನ ಮಕ್ಕಳ್.
ಎದನ್ನೈ ಕಂಡಿಲರಾಯಿನುಂ ಅನ್ಬಿನಾಲ್ ನಂಬಿಯುಳರೊ.
ಅವ್ವಿಸ್ದ್ಯಯಿನ್ನೈ ಕುಂಬಿಡಡಾ—ಮಂಕ್ಕುತಿಮ್ಮಾ । 1

ಏನು ಜೀವನದರ್ಥ?

ಏನು ಜೀವನದರ್ಥ ? ಏನು ಪ್ರಪಂಚಾರ್ಥ ? ।
ಏನು ಜೀವ ಪ್ರಪಂಚಗಳ ಸಂಬಂಧ ? ॥
ಕಾಣದಿಲ್ಲಿರ್ಪುದೇನಾನುಮುಂಟೆ ? ಅದೇನು ? ।
ಜ್ಞಾನ ಪ್ರಮಾಣವೇಂ ?—ಮಂಕುತಿಮ್ಮ ॥ ೨

ವಾೞ್ಕ್ಕೈಯಿನ್ ಪೊರುಳೆನ್ನ?

ವಾೞ್ಕ್ಕೈಯಿನ್ ಪೊರುಳೆನ್ನ ? ಉಲಗಾನ್ ಪೊರುಳೆನ್ನ ?
ಉಯಿರ್ ಉಲಗುಗಳಿನ್ ಉಱವುದಾನ್ ಎನ್ನ ?
ಕಾಣಾದಿರುಪ್ಪದು ಇಂಗು ಏದೇನುಮುಂಡೋ ? ಅಃದೆನ್ನ ?
ನಮ್ ಅಱಿವೇ ಶಾನ್ರಾಯಿಡುಮೋ ?—ಮಂಕ್ಕುತಿಮ್ಮಾ 4

ಮಾನವರೊ? ದಾನವರೋ ?

ಏನು ಭೈರವಲೀಲೆಯಿೀ ವಿಶ್ವವಿಭ್ರಣೆ ।
ಏನು ಭೂತಗ್ರಾಮ ನರ್ತನೋನ್ಮಾದ !॥
ಏನಗ್ನಿಗೋಳಗಳು ! ಏನಂತರಾಳಗಳು ! ।
ಏನು ವಿಸ್ಮಯ ಸೃಷ್ಟಿ ।—ಮಂಕುತಿಮ್ಮ ॥ ೯

ಮನಿದರೋ ? ಅಲ್ಲದು ಅರಕ್ಕರೋ ?

ಎನ್ನೇ ಬೈರವ ಲೀಲೈಯಾಮ್ ಇವ್ವುಲಗಾನ್ ಒಡುಂಗಾ ಮಲೈಪ್ಪು ।
ಎನ್ನೇ ಐಂಬೂದ ಕೂಟ್ಟತ್ತಿನ್ ನಡನಕ್ಕಳಿಪ್ಪು !
ಎನ್ನೇ ತೀಕೋಳಂಗಳ್ ! ಎನ್ನೇ ಇಡೈವೆಳಿಗಳ್ !
ಎನ್ನೇ ವಿಯಪ್ಪಡಾ ಪಡೈಪ್ಪು !—ಮಂಕ್ಕುತಿಮ್ಮಾ 9

ಲೋಕ ಜೀವನ ಮಥನ

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು- ।
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ॥
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು ।
ಬಂದುದೀ ವೈಷಮ್ಯ ?—ಮಂಕುತಿಮ್ಮ ॥ ೧೪

ಉಲಗ ವಾೞ್ವಿನುಮ್ ತಿರುಪ್ಪಾೞ್ಕಡಲೈ ಕಡೈದಲ್

ಒರೇ ವಿಶುಂಬಿನ್ನೈ ಪ್ಪಾರ್ತ್ತು, ಒರೇ ಮಣ್ಣಿನ್ನೈ ಮಿದಿತ್ತು,
ಒರೇ ಉಣವಿನ್ನೈ ಚ್ಚುವೈತ್ತು, ಒರೇ ನೀರಿನ್ನೈ ಕುಡಿತ್ತು,
ಒರೇ ಕಾಱ್ರಿನ್ನೈ ಉಯಿರ್ತ್ತು ವಾೞುಂ ಮನಿದ ಕುಲತ್ತಿಲ್.
ಎವ್ವಾಱು ವಂದದಿ ವ್ವೇಱ್ರುಮೈ ?—ಮಂಕ್ಕುತಿಮ್ಮಾ 1

ಜೀವ ತಾಂಡವ

ಗಗನ ತಲೆನವಿರಾಗೆ ಪೆರೆತಾರೆ ಹೂವಾಗೆ ।
ಜಗವೆಲ್ಲ ವಪುವಾಗೆ ಮಾಯೆ ಸತಿಯಾಗೆ ॥
ನಗು ನಗುವ ಬೊಬ್ಬಿಡುವ ಜೀವತಾಂಡವ ರಸಿಕ
ಭಗವಂತ ಶಿವರುದ್ರ—ಮಂಕುತಿಮ್ಮ

ಜೀವ ತಾಂಡವಮ್

ವಿಶುಂಬೇ ತಲೈಮುಡಿಯಾಗ, ಮದಿಮಿನ್ ಮಲರಾಗ,
ಉಲಗೆಲಾಮ್ ಉಡಲಾಗ, ಮಾಯವಳ್ ಮನೈವಿಯಾಗ,
ನಗೈನಗೈತ್ತು ಕೂತ್ತಲಿಡುಮ್ ಜೀವ ತಾಂಡವ ಇರಸಿಗನಡಾ
ಬಗವನ್ ಶಿವರುದ್ದಿರನ್—ಮಂಕ್ಕುತಿಮ್ಮಾ 86

ಅನಂತ ಚೌಕಟ್ಟು—ಸಾಂತ ಚಿತ್ರ

ಅಜ್ಞಾತವಾದುದನಭಾವವೆನೆ ನಾಸ್ತಿಕನು।
ಅಜ್ಞೇಯವೆಂದದಕೆ, ಕೈ ಮುಗಿಯೆ ಭಕ್ತ॥
ಜಿಜ್ಞಾಸ್ಯವೆಂದು ಪರಿಕಿಸತೊಡಗೆ ವಿಜ್ಞಾನಿ।
ಸ್ವಜಪ್ತಿ ಶೋಧಿ ಮುನಿ—ಮಂಕುತಿಮ್ಮ॥ ॥೧೦೭॥

ವರಂಬಿಲ್ ಸೆಟ್ಟ್ರವನ್—ವರಂಬುಳ ಓವಿಯಮ್

ಅಱಿಯಪ್ಪಡಾದದೈ ಇಲ್ಲೆನಿನ್ ನಾತ್ತಿಗನ್.
ಅಱಿಯಪ್ಪಡಾದೆನ ವಣಂಗಿಡಿನ್ ಬಕ್ತನ್.
ಅಱಿಯತಕ್ಕದೆನ ಆಯತ್ತೊಡಂಗಿನ್ ಅಱಿವಿಯಲಱಿಞನ್.
ತಾನಱಿನ್ದುಕೊಂಡದೈ ಅಱಿಪವನ್ ಮುನಿವನ್—ಮಂಕ್ಕುತಿಮ್ಮಾ

ಋಣಾನುಬಂಧ

ಅರಿ ಮಿತ್ರ ಸತಿ ಪುತ್ರ ಬಂಧು ಬಳಗವದೆಲ್ಲ।
ಕರುಮದವತಾರಗಳೊ, ಋಣಲತೆಯ ಚಿಗುರೋ॥
ಕುರಿಯನಾಗಿಸಿ ನಿನ್ನ ಕಾಪಿಡುವ ಸಂಸಾರ।
ಪುರಿಮಾರಿಯಾದೀತೋ—ಮಂಕುತಿಮ್ಮ ॥೧೭೨॥

ಮುನ್ಮೈಯುಱವು

ಪಗೈನಟ್ಪು ಮನೈವಿ ಮಕ್ಕಳ್ ಉಱವೋರ್ ಶುಱ್ಱಮ್ಇವೈಯೆಲಾಮ್
ಮುನ್ವಿನೈಯಿನ್ ತೋಱ್ಱಮಡಾ. ಕಡನೆನುಂ ಕೊಡಿಯಿನ್ ತುಳಿರಡಾ
ಉನ್ನೈ ಕಿಡಾವಾಕ್ಕಿ ಕಾಕ್ಕುಂ ಉನ್ ಕುಡುಂಬಂ ಉನಕ್ಕೊರು
ಕೊಳ್ಳೈನೋಯಾಗಕ್ಕೂಡುಮಡಾ—ಮಂಕ್ಕುತಿಮ್ಮಾ ॥172॥

ಕ್ಷಣ ಕ್ಷಣವು ಹೊಸ ಹಸಿವು

ಕಲ್ಲಾಗಿ ನಿಲ್ಲುವನು, ಬಳ್ಳಿವೊಲು ಬಳುಕುವನು ।
ಮುಳ್ಳಾಗಿ ಚುಚ್ಚುವನು, ಪುಲ್ಲಸುಮವಹನು ॥
ಕಲ್ಲೋಲ ವಾರಿಧಿವೊಲುರವಣಿಸಿ ಮೊರೆಯುವನು ।
ಕ್ಷುಲ್ಲ ಮಾನಿಸನಿವನು—ಮಂಕುತಿಮ್ಮ ॥ ॥ ೨೦೫ ॥

ಕಣಂದೋಱುಂ ಪುದುಪ್ಪಸಿ

ಕಲ್ಲಾಯ್ ನಿನ್ರಿಡುವಾನ್, ಕೊಡಿವೋಲ್ ವಳೈಂದಿಡುವಾನ್.
ಮುಳ್ಳಾಯ್ ಕುತ್ತಿಡುವಾನ್, ಮಲರ್ನ್ದ ಪೂವಾಯ್ ಮಾಱಿಡುವಾನ್
ಅಲೈಗಡಲ್ ಪೋಲ ಮೇಲ್ವಿಟಿುನ್ದು ಕೂಚ್ಚಲಿಡುವಾನ್
ಪುಲ್ಲನ್ ಇಮ್ಮನಿದನ್—ಮಂಕ್ಕುತಿಮ್ಮಾ ॥ 205 ॥

ಬೃಹತ್ ಸಂಸಾರಿ

ಕೋಟಿ ದೆಸೆಯುಸಿರುಗಳು, ಕೋಟಿ ರಸದಾವಿಗಳು ।
ಕೋಟಿ ಹೃದಯುದ ಹೋ ಹೊ ಹಾಹಕಾರಗಳು ॥
ಕೂಟ ಕೂಡಿಹುವಂತರಿಕ್ಷದಲಿ ನೀನದರಿನ್ ।
ಓಟವೋಡುವುದೆತ್ತ ?—ಮಂಕುತಿಮ್ಮ ॥ ॥ ೨೭೩ ॥

ಪರಮನ್ ಒರು ಕುಡುಂಬನ್

ಕೋಡಿ ದಿಶೈ ಉಯಿರ್ಪ್ಪುಗಳುಂ, ಕೋಡಿ ತುವೈ ಆವಿಗಳುಂ,
ಕೋಡಿ ಉಳ್ಳಂಗಳಿನ್ ಕೂಕ್ಕುರಲುಂ, ಓಲಮುಂ.
ಕೊಟ್ಟಮಾಯ್ ಕೂಡಿಯುಳ್ಳನ ವಳಿ ಮಂಡಲತ್ತಿಲ್.
ಅದನಾಲ್ ನೀ ಓಟ್ಟಂ ಪಿಡಿಪ್ಪದೆಂಗೇ—ಮಂಕ್ಕುತಿಮ್ಮಾ ॥ 273 ॥

ಕುಲುಕದಿರು ಬಾಲವನು

ಜನಕಜೆಯು ದರುಶನದಿನಾಯ್ತು, ರಾವಣಚಪಲ ।
ಕನಕಮೃಗ ದರುಶದನದೆ ಜಾನಕಿಯು ಚಪಲ ॥
ಜನವವನ ನಿಂದಿಪುದು, ಕನಿಕರಿಪುದಾಕೆಯುಲಿ ।
ಮನದ ಬಗೆಯರಿಯದದು—ಮಂಕುತಿಮ್ಮ ॥ ॥ ೩೦೩ ॥

ಅಸ್ಸೈಕ್ಕಾದೇ ವಾಲಿನ್ನೈ

ಸೀದೈಯ್ಯೈ ಕ್ಕಂಡದುಂ ಇರಾವಣನಿನ್ ಅವಾ ಕಿಳರ್ನ್ದದು.
ಪೊನ್ನಾನ್ನೈ ಕ್ಕಂಡದುಂ ಸೀದೈಯಿನ್ ಅವಾ ಕಿಳರ್ನ್ದದು.
ಮನಿದರ್ ಅವನ್ನೈ ಪಪಿಪ್ಪರ್; ಅವಳಿಡಂ ಇರಕ್ಕಂಗೊಳ್ವರ್.
ಮನತ್ತಿನ್ ವೇಟ್ಕೈಯ್ಯೈ ಅವರ್ ಅಱಿಯಾರ್—ಮಂಕ್ಕುತಿಮ್ಮಾ ॥ 383 ॥

ಬ್ರಹ್ಮ ನಾಯಕ

ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।
ಪದ ಕುಸಿಯೆ ನೆಲವಿಹುದು—ಮಂಕುತಿಮ್ಮ ॥ ॥ ೬೦೦ ॥

ಪರಮನ್ ತಲೈವನ್

ವಾೞ್ಕ್ಕೈಯೊರು ಕುದಿರೈವಂಡಿ, ಊೞ್ ಅವ್ವಂಡಿಯೋಟ್ಟಿ.
ಕುದಿರೈ ನೀ, ಅದು ಏವಿಯ ವಣ್ಣಂ ಪಿರಯಾಣಿಗಳ್
ಮಣವೀಟ್ಟಿಱ್ಕೋ ಶುಡುಗಾಟ್ಟಿಱ್ಕೋ 'ಪೊ' ಎನ್ರ ಪಕ್ಕಂ ಓಡುಗ
ಕಾಲ್ವಲಿಪ್ಪಿನ್ ನಿಲಮುಳದಾಮ್—ಮಂಕ್ಕುತಿಮ್ಮಾ ॥ 600 ॥

ಆತ್ಮಋಣ—ಮನೆಯ ಮಠ

ಹತ್ಯೆಯೋ ಹನ್ಯತೆಯೊ ವಿಜಯವೋ ಪರಿಭವವೊ ।
ಕ್ಷತ್ರಿಯಂ ಸ್ವಾರ್ಥಮಂ ಗಣಿಸುವನೆ ರಣದೊಳ್ ? ॥
ಕೃತ್ಯನಿರ್ಣಯ ಬಾಹ್ಯ ಲಾಭ ನಷ್ಟದಿನಲ್ಲ ।
ಆತ್ಮಋಣವದು ಜಗಕೆ—ಮಂಕುತಿಮ್ಮ ॥ ॥ ೬೨೪ ॥

ಆದನಿನ್ ಕಡನ್—ವೀಡೇ ಮಡಮ್

ಕೊಲ್ಲೈಯೋ ಕೊಲ್ಲೈಯುಣ್ಬದೋ, ವೆಱ್ರಿಯೋ ತೋಲ್ವಿಯೋ,
ಮಱವನ್ ತನ್ನಲನ್ನೈ ಕ್ಕರುದುವನೋ ಪೋರ್ಕಳತ್ತಿಲ್ ?
ಪುಱವಾಟ್ಟಿನ್ ಊದಿಯಮೋ ಇೞಪ್ಪೋಶೆಯಲ್ ಮುಡಿಬಾಗಾದು.
ಅದು ಉಲಗಿಱ್ಕು ಆದನಿನ್ ಕಡನಾಮ್—ಮಂಕ್ಕುತಿಮ್ಮಾ ॥ 624 ॥

—ನ. ಮುನಿಸ್ವಾಮಿ

ಹೆಸರಿನ ಹಂಬಲು

ಅಕ್ಕಿಯೊಳಗನ್ನವನು ಮೊದಲಾರು ಕಂಡವನು ?
ಅಕ್ಕರದ ಬರಹಕ್ಕೆ ಮೊದಲಿಗನದಾರು ?
ಲೆಕ್ಕವಿರಿಸಿಲ್ಲ ಜಗ ತನ್ನಾದಿ ಬಂಧುಗಳ !
ದಕ್ಕುವುದೇ ನಿನಗೆ ಜಸ ?—ಮಂಕುತಿಮ್ಮ ॥ ೬೫೫ ॥

ಪುಗೞ್ ಪೆಱುಂ ಅಡಂಗಾ ಆಶೈ

ಅರಿಶಿಕ್ಕುಳ್ ಅಮುದಿನ್ನೈ ಮುದಲ್ ಯಾರ್ ಕಂಡವನ್ ?
ನೆಡುಂಗಣಕ್ಕು ಎೞುದಿಯ ಮುದಲ್ವನ್ ಎವನಾಮ್ ?
ಕಣಕ್ಕು ವೈತ್ತದಿಲ್ಲೈ ಉಲಗು ತನ್ ಮೂಲ ಇನತ್ತೈ.
ಕಿಟ್ಟುವೋ ಉನಕ್ಕು ಪುಗೞ್ ?—ಮಂಕ್ಕುತಿಮ್ಮಾ ॥ 655 ॥

ಮುಗಿವೇ ಭಾಗ್ಯ

ಯಾತ್ರಿಕರು ನಾವು, ದಿವ್ಯಕ್ಷೇತ್ರವೀ ಲೋಕ ।
ಸತ್ರದಲಿ ನೇಮದಿಂದಿರಲಿಕೆಡೆಯುಂಟು ॥
ರಾತ್ರಿ ಮೂರಾಯ್ತು, ಹೊರಡೆನೆ ತೆರಳಿದೊಡೆ, ಪಾರು ।
ಪತ್ಯದವ ಮೆಚ್ಚುವನು—ಮಂಕುತಿಮ್ಮ ॥ ॥ ೬೭೨ ॥

ಮುಡಿವೇ ನಱ್ಪೇಱು

ತಿರು ಉಲಾವಾಣರಾಮ್ ನಾಮೆಲ್ಲಾಮ್ ; ತಿರುನಿಲೈಯುಮಾಮ್ ಇವ್ವುಲಗು.
ಉಂಡಿಚ್ಚಾಲೈಯಿಲ್ ಮುಱೈಯುಡನಿರುಕ್ಕ ಇಡಮುಂಡಾಮ್.
ಇರವು ಮೂನ್ರಾನದು. ಪುಱಪ್ಪಡುಗ' ಎನ್ರದುಂ ಶೆನ್ರಾಲ್.
ಅದನ್ ಮೇಲಾಳನ್ ಮಗಿೞ್ವಾನಡಾ—ಮಂಕ್ಕುತಿಮ್ಮಾ ॥ 672 ॥

ತೃತೀಯ ನೇತ್ರ

ಶರಧಿಯನೀಜುವನು, ಸಮರದಲಿ ಕಾದುವನು ।
ಗುರಿಯೊಂದನುಳಿದು ಮೆರತೊಂದ ನೋಡುವನೆ ? ॥
ಮರೆಯುವನು ತಾನೆಂಬುದನೆ ಮಹಾವೇಶದಲಿ
ನಿರಹಂತೆಯುದು ಮೋಕ್ಷ—ಮಂಕುತಿಮ್ಮ ॥ ೬೯

ಮೂನ್ರಾವತ್ ಕಣ್

ಕಡಲಿಲ್ ನೀನ್ದುವೋನುಂ, ಕಳತ್ತಿಲ್ ಪೋರಿಡುವೋನುಂ.
ಇಲಕ್ಕೈತ್ತವಿರ ಪಿೞೈದೊನ್ರೈ ಪಾರ್‌ಪ್ಪನೋ ?
ಅಪ್ಪೇರುಣರ್ವಿಲ್ ತಾನೆನ್ಬದನ್ನೈ ಮಱಪ್ಪಾನ್.
ಮುನ್ನೈಪ್ಪೞಿಪ್ಪದೇ ಮುತ್ತಿಯಡಾ—ಮಂಕ್ಕುತಿಮ್ಮಾ ॥ 696 ॥

ಜಗತ್ತು ಗುಡಿ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯು ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ।
ಎಲ್ಲರೊಳಗೊಂದಾಗು—ಮಂಕುತಿಮ್ಮ ॥ ॥ ೭೮೯ ॥

ಉಲಗು ಒರು ಕೋಯಿಲ್

ಮಲೈಯಡಿವಾರತ್ತು ಪುಲ್ಲಾಯಿರುಕ್ಕ; ವೀಟ್ಟಿಲ್ ಮಲ್ಲಿಗೈಯಾಯಿರುಕ್ಕ.
ತುಯರ್ ಮೞೈಯ್ಯೈ ಊೞ್ ಪೊೞಿಯುಂಗಾಲ್ ಕಲ್ಲಾಯಿರುಕ್ಕ.
ಏೞೈ ಎಳಿಯೋರ್‌ಕ್ಕು ವೆಲ್ಲಮ್ ಸರ್‌ಕ್ಕರೈಯಾಯಿರುಕ್ಕ.
ಅನೈವರಿಡಮುಂ ಒನ್ರಿಯಿರುಕ್ಕ—ಮಂಕ್ಕುತಿಮ್ಮಾ ॥ 789 ॥

ಗುರುಪದವಿ ಬೇಡ

ಮರಣದಿಂ ಮುಂದೇನು ? ಪ್ರೇತವೋ ? ಭೂತವೊ ? ।
ಪರಲೋಕವೋ ? ಪುನರ್ಜನ್ಮವೋ ? ಅದೇನೋ ? ॥
ತಿರುಗಿ ಬಂದವರಿಲ್ಲ, ವರದಿ ತಂದವರಿಲ್ಲ
ಧರೆಯು ಬಾಳ್ಗದರಿನೇಂ ?—ಮಂಕುತಿಮ್ಮ ॥ ॥ ೮೪೬ ॥

ಆಶಾನ್ ಪದವಿ ವೇಂಡಾಮ್

ಸೆತ್ತಪಿಱಗೆನ್ನ ? ಪೇಯೋ ? ಬೂದಮೋ ?
ಮೇಲುಲಗಮೋ ? ಮಱುಪಿಱಪ್ಪಿಯೋ ? ಅಃದೇನೋ ?
ತಿರುಂಬಿ ವನ್ದವರಿಲ್ಲೈ; ಶೆಯ್ದಿ ತನ್ದವರಿಲ್ಲೈ.
ಉಲಗವಾೞ್ವಿಕ್ಕು ಅದನಾಲೆನ್ನ ?—ಮಂಕುತಿಮ್ಮಾ ॥ 846 ॥

ಜಗತ್ತಿಗೆ ಶ್ರೇಯಸ್ಸೆಂದು

ಮೃಗಶೇಷವಿರುವನಕ ಜಗಳ ತಪ್ಪದು ಜಗದಿ ।
ಹಗೆಗೆ ಕೊಲದವರು ಹಸಿವಿಂದೆ ಕೊಂದಾರು ॥
ಟಗರು ಜೂಜೋ ಸಭೆಯು ರಗಳೆಯೋ ಕುಸ್ತಿಯೋ ।
ಸೊಗ ಜನಕೆ ರಣರಂಗ—ಮಂಕುತಿಮ್ಮ ॥ ೮೭೯ ॥

ಉಲಗಿಱ್ಕು ನಲಮೆನ್ನು ?

ವಿಲಂಗೆಚ್ಚವ್ ಉಳ್ಳವರ್ಕ್ಕೆ ಚಂಡ್ಯೆತಪ್ಪಾದುಲಗಿಲ್.
ಪಗೈವೈಯಾಲ್ ಕೊಲ್ಲಾದಾರ್ ಪಶಿಯಿನಾಲ್ ಕೊಲ್ವಾರಡಾ.
ಕಿಡಾಚ್ಚಂಡೈಯೋ ಅವೈಯಿನ್ ಕಲಕ್ಕಮೋ ಮಱ್ಱೋರೋ
ಮನಿದರುಕ್ಕಿನ್ಬಮಡಾ ಪೋರ್‌ಕ್ಕಳಮ್—ಮಂಕ್ಕುತಿಮ್ಮಾ ॥ 879 ॥

ಮೋಕ್ಷಾತುರ

ನಾನು ನಾನೇ ನಾನುತ್ತೇ ಕಿರಿಕೊಡದ ನೀರ್ ।
ಗಾನಗೆಯ್ವುದು ಹೆಮ್ಮೆಯಿಂ ಕಡಲ ಮರೆತು ॥
ನೂನದಿಂದೆಲ್ಲವೆನುವಬ್ಧಿಯೊಳಗದನಿರಿಸೆ ।
ಮೌನವದು ಮಣ್ಕರಗಿ—ಮಂಕುತಿಮ್ಮ ॥ ೯೦೧ ॥

ವೀಡು ಪೇಱ್ಱಿನ್ ಆವಲ್

ನಾನ್ ನಾನೇ ನಾನೆನ್ನು ಶಿಱುಗುಡತ್ತು ನೀರ್
ಪಣ್ಣಿಶೈಕ್ಕುಂ ಪೆರುಮೈಯುಡನ್ ಕಡಲೈ ಮಱನ್ದು.
ಮೆಯ್ಯುಣರ್ವ್ವಡು ಅಂಶಿದನ್ನೈತ್ತೈಯುಂ ಆಱುಕ್ಕುಳ್ ವೈಕ್ಕ.
ಮೊನಮಾಗುಮಡಾ ಮಣ್ಕರೈನ್ದು—ಮಂಕ್ಕುತಿಮ್ಮಾ ॥ 901 ॥

ಶರಣು

ಶರಣುವೊಗು ಜೀವನರಹಸ್ಯದಲಿ ಸತ್ವದಲಿ ।
ಶರಣು ಜೀವನವ ಸುಮುವೆನಿಪ ಯತ್ನದಲಿ ॥
ಶರಣಂತರಾತ್ಮ ಗಂಭೀರ ಪ್ರಶಾಂತಿಯಲಿ ।
ಶರಣು ವಿಶ್ವಾತ್ಮದಲಿ—ಮಂಕುತಿಮ್ಮ ॥ ॥ ೯೪೫ ॥

ಅಡೈಕ್ಕಲಮ್ ಪುಗುಗ

ಅಡೈಕ್ಕಲಮ್ ಪುಗುಗ ವಾಟ್ಟ್ವಿನ್ ಮಱೈಪ್ಪೊರುಳಿಲ್.
ಅಡೈಕ್ಕಲಮ್ ಪುಗುಗ ವಾೞ್ವೈ ಮಲರಾಕ್ಕುಂ ಮುಯಱ್ಚಿಯಿಲ್.
ಅಡೈಕ್ಕಲಮ್ ಪುಗುಗ ಉಳ್ಳುಯಿರಿನ್ ಆೞಮಿಯ ಅಮೈದಿಯಿಲ್.
ಅಡೈಕ್ಕಲಮ್ ಪುಗುಗ ಮುೞುಮುದಲಿಲ್—ಮಂಕ್ಕುತಿಮ್ಮಾ ॥ 945 ॥

—ನ. ಮುನಿಸ್ವಾಮಿ

ಡಿ.ವಿ.ಜಿ. ಅವರ ಸಮೃದ್ಧ ವ್ಯಕ್ತಿತ್ವ

—ಸ. ವೆಂಕಟಾಚಲಪತಿ

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಸ್ಥಾಪನೆಯಾದಂದಿನಿಂದಲೂ ಡಿ.ವಿ.ಜಿ. ಅವರ ಸಮೀಪವರ್ತಿಯಾಗಿದ್ದುಕೊಂಡು ಅವರ ವ್ಯಕ್ತಿತ್ವದ ಹಲವು ಮುಖಗಳನ್ನು—ಅವರ ಸ್ನೇಹಪರತೆ ; ವ್ಯಾಸಂಗಗೋಷ್ಠಿಯಲ್ಲಿ ತರುಣ ಮಿತ್ರರನ್ನು ಅವರು ನಡಸಿಕೊಳ್ಳುತ್ತಿದ್ದ ಬಗೆ; "ಜಗದ ಪೊಗಳಿಕೆಗೆ ಬಾಯ್‌ಬಿಡದ" ಡಿ.ವಿ.ಜಿ. ಮೈಸೂರು ವಿಶ್ವವಿದ್ಯಾನಿಲಯ ನೀಡಿದ ಗೌರವ ಡಾಕ್ಟರೇಟ್ ಪದವಿಯನ್ನು ಒಲ್ಲದೆ ಆಪ್ತಮಿತ್ರರ ವಿಶ್ವಾಸದ ಒತ್ತಾಯಕ್ಕೆ ಕಟ್ಟುಬಿದ್ದು ಅದನ್ನು ಒಪ್ಪಿಕೊಂಡ ಸಂದರ್ಭ; ಗೋಖಲೆ ಸಂಸ್ಥೆಗೆ ತಮ್ಮನ್ನು ಬರಮಾಡಿಕೊಂಡು ಕಚೇರಿ ಸಹಾಯಕರನ್ನಾಗಿ ನೇಮಿಸಿಕೊಂಡ ಸಂದರ್ಭ; ಸಂಸ್ಥೆಯ ಆರಂಭದ ದಿನಗಳು; ಡಿ.ವಿ.ಜಿ.ಯವರ ದೃಷ್ಟಿಯಲ್ಲಿ ರಾಷ್ಟ್ರಕ ಧರ್ಮ; ಅವರ ಶೀಲಶುಚಿತ್ವ; ಅವರ ಸೌಂದರ್ಯಪ್ರಜ್ಞೆ—ಈ ಹಲವು ಮುಖಗಳನ್ನು ಆತ್ಮೀಯವಾಗಿ, ಹೃದಯಂಗಮವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ ಶ್ರೀ. ಸ. ವೆಂಕಟಾಚಲಪತಿಯವರು.

ಡಿ.ವಿ.ಜಿ. ಸರ್ವಜನಪ್ರಿಯರು. ಯಾವುದೋ ಉಪಾಧಿಸಂದರ್ಭವೊಂದು ಎದ್ದುಕೊಂಡ ಕಾರಣದಿಂದ ಸ್ನೇಹಕ್ಕೆ ತಾತ್ಕಾಲಿಕವಾಗಿ ಕೊಂಚ ಬಾಧೆಯುಂಟಾದಾಗ ಕೂಡ, ಕ್ಷಿಪ್ರವಾಗಿಯೇ —ಇತರ ಮಿತ್ರರ ಸ್ವಾಭಾವಿಕ ಮಧ್ಯಸ್ಥಿಕೆಯನ್ನು ತಡೆದು ತಿರಸ್ಕರಿಸದೆ, ತಮ್ಮ ಪ್ರತಿಕ್ರಿಯೆಗೇ ಅಂಟಿಕೊಳ್ಳದೆ, ಸ್ನಿಗ್ಧ ಮಧುರ ಸ್ನೇಹಭಾವನೆಯಿಂದಲೇ ನಡೆದುಕೊಳ್ಳುತ್ತ ಬಂದ ಉದಾರಚರಿತರು ಡಿ.ವಿ.ಜಿ. ಅವರು ಯಾವಾಗಲೂ ಸ್ನೇಹ ಪ್ರೀತಿಗಳನ್ನು ಕಟ್ಟುವವರಾಗಿದ್ದರೇ ಹೊರತು ಮುರಿದು ಮುದುಡಿಕೊಳ್ಳುತ್ತಿರಲಿಲ್ಲ.

ಡಿ.ವಿ.ಜಿ. ಬಹುವೇಳೆ ನಿಷ್ಠುರರಾಗಿ ನಡೆದುಕೊಂಡದ್ದುಂಟು. ಆದರೆ ಈ ನಿಷ್ಠುರಭಾವ ಎಂದಿಗೂ ಸ್ಥಿರವಾಗಿರುತ್ತಿರಲಿಲ್ಲ. ತಮಗೆ ಒಪ್ಪಿಗೆಯಾಗದ ಮನೋಧೋರಣೆಯುಳ್ಳವರ ಬಗ್ಗೆ ಕೆಲವು ಸಾರಿ ಕೊಂಚ ಕಟುವಾಗಿಯೇ ನುಡಿದು ಟೀಕಿಸುತ್ತಿದ್ದರಾದರೂ, ಆ ಕಟುತೆಯ ಹಿಂದೆ, ಅದನ್ನು ಹಿಂಬಾಲಿಸುತ್ತ ಮೃದುತೆಯೂ

ಕೆಲಸ ಮಾಡುತ್ತಿತ್ತು. ತಮ್ಮ ಮಾತಿನಿಂದ ನೊಂದವರನ್ನು ಅದೇ ನೋವಿನಲ್ಲೇ ಇರಗೊಡದೆ ಸಂತೈಸುತ್ತಿದ್ದರು. ನೊಂದವರನ್ನು ನೇರವಾಗಿ ಹತ್ತಿರಕ್ಕೆ ಬರ ಮಾಡಿಕೊಳ್ಳುವರು, ಇಲ್ಲವೆ ಸ್ನೇಹಿತರೊಬ್ಬರನ್ನಟ್ಟಿ ನೊಂದವರನ್ನು ಆದರದಿಂದ ಬರಮಾಡಿಕೊಂಡು ನೆಮ್ಮದಿಸುವುದು ಅವರಿಗೆ ವಾಡಿಕೆಯಾದ ನಡತೆಯಾಗಿತ್ತು. ಈ ಸಂಗತಿಯನ್ನು ನಾನು ಸ್ವಾನುಭವದಿಂದಲೂ ಬಲ್ಲೆ; ಇತರರ ಅನುಭವಗಳನ್ನು ಕೇಳಿಯೂ ಬಲ್ಲೆ.

ಡಿ.ವಿ.ಜಿ.ಯವರದು ವಿಚಿತ್ರವಾದ ವ್ಯಕ್ತಿತ್ವ. ಅದನ್ನವರು ತಮ್ಮ ಬರವಣಿಗೆ ಯಲ್ಲಿ ಬಿಟ್ಟು ತೆರಳಿದ್ದಾರೆ. ಬರವಣಿಗೆಗೆ ಇಳಿಯದ ಮಾತುಕತೆಗಳಲ್ಲಿ ಅವರ ವ್ಯಕ್ತಿತ್ವವನ್ನು ಗ್ರಹಿಸಿ, ಕಂಡು, ನಲಿದವರು ನೂರಾರು ಮಂದಿ. ಹತ್ತಿರದಿಂದ ತಿಳಿದು ನಲಿದವರ ಜೊತೆಗೆ ಪತ್ರವ್ಯವಹಾರವಷ್ಟರಿಂದಲೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿ ಕೊಂಡು ಅವರ ವ್ಯಕ್ತಿತ್ವಕ್ಕೆ ಮೆಚ್ಚಿಕೆ ಸಲ್ಲಿಸಿದವರು ನಾಡಿನ ಮೂಲೆಮೂಲೆಗಳಲ್ಲಿ ಇನ್ನೂ ಇದ್ದಾರೆ. ಇವರೆಲ್ಲ ಡಿ.ವಿ.ಜಿ.ಯವರನ್ನು ಅವರ ಜನ್ಮಶತಮಾನೋತ್ಸವ ಕಾಲದಲ್ಲಿ ನೆನೆದು ಎದೆಕಾಣಿಕೆಯೊಪ್ಪಿಸಲು ಸಡಗರಿಸುತ್ತಾರೆ.

ಸದ್ಗ್ರಂಥ ಸಹವಾಸ ಎಷ್ಟು ಸ್ವಾದುವೋ ಸಜ್ಜನ ಸಹವಾಸವೂ ಅಷ್ಟೇ ಸ್ವಾದು. ಡಿ.ವಿ.ಜಿ. ಸದ್ಗ್ರಂಥಗಳ ಸಹವಾಸದಲ್ಲಿ ಬೆಳೆದವರು, ಸಜ್ಜನರ ಸಹವಾಸದಲ್ಲಿ ಬೆಳೆದರಳಿದವರು. ಅವರ ಜ್ಞಾಪಕಚಿತ್ರಶಾಲೆಯ ಎಂಟು ಸಂಪುಟಗಳಲ್ಲಿ ಇಂಥ ಸಜ್ಜನರನ್ನೂ ಸದ್ಗ್ರಂಥಗಳನ್ನೂ ನೆನಪಿಗೆ ತಂದುಕೊಡುತ್ತಾರೆ. ಈ ಸವಿನೆನಪುಗಳಿಗೆ ತಕ್ಕಂತೆ ಅವರ ವ್ಯಕ್ತಿತ್ವವೂ ಸಾಂದರ್ಭಿಕವಾಗಿ ಹೊರಪಡುವಂತೆ ಬರವಣಿಗೆಗೆ ಸಹಜ ಶೈಲಿಯ ರೂಪವನ್ನು ಕೊಟ್ಟು ತಮ್ಮ ಗ್ರಂಥಗಳ ಪ್ರಕಾಶಕರಾದ ಕಾವ್ಯಾಲಯದ ಕೂಡಲಿ ಚಿದಂಬರಂ ಅವರ ಗಾಢ ಸ್ನೇಹಕ್ಕೆ ಮರುಸ್ನೇಹವನ್ನು ಸಲ್ಲಿಸಿದವರು ಡಿ.ವಿ.ಜಿ. ಲೇಖಕ–ಪ್ರಕಾಶಕ ಬಾಂಧವ್ಯವನ್ನು ಚಿದಂಬರಂ ಅವರಂತೆ ಮಧುರವಾಗಿ ನಡಸುತ್ತ ಬರುವವರು ಅಪುರೂಪವೆಂದು ಡಿ.ವಿ.ಜಿ. ನನಗೆ ಆಗಾಗ ಹೇಳುತ್ತಿದ್ದರು. ಏಕೆಂದರೆ ಲೇಖಕ–ಪ್ರಕಾಶಕರ ನಡುವೆ ಎದ್ದುಕೊಳ್ಳುತ್ತಿದ್ದ ವಿರಸ ಗಳನ್ನವರು ಬಲ್ಲರು.

ಜ್ಞಾಪಕ ಚಿತ್ರಗಳು ಡಿ.ವಿ.ಜಿ.ಯವರ ಸ್ಮರಣಾಂಗಣದಲ್ಲಿ 60–70 ವರ್ಷಗಳ ಕಾಲ ನೆಲಸಿ, ಆಗಾಗ ಆಪ್ತರ ಕಿವಿಗಳಿಗೆ ಶ್ರುತಪಡುತ್ತ ಬಂದುವು. ಹೀಗೆ ಡಿ.ವಿ.ಜಿ. ಯವರ ಬಾಯಿಂದ ಹಲವನ್ನು ಕೇಳಿದ ಆಪ್ತರು ಯಾರೆಂದರೆ—ಲಾಯರು ಮೋಕ್ಷಗುಂಡಂ ಕೃಷ್ಣಮೂರ್ತಿ, ನೇತ್ರವೈದ್ಯ ಬಿ. ಕೆ. ನಾರಾಯಣರಾವ್, ಇಂಜಿನಿಯರು ಎನ್. ಎನ್. ಅಯ್ಯಂಗಾರ್. ಸಾಬೂನು ತಜ್ಞ ಸೋಸಲೆ ಗರಳಪುರಿ ಶಾಸ್ತ್ರಿ, ಲಾಯರುಗಳಾದ ಎಂ. ಪಿ. ಸೋಮಶೇಖರರಾವ್ ಮತ್ತು ನಿಟ್ಟೂರು ಶ್ರೀನಿವಾಸ ರಾವ್, ಕನ್ನಡದ ಅಶ್ವಿನೀದೇವತೆಗಳೆಂದು ಯಾರನ್ನು ಮಾಸ್ತಿ ಅಕ್ಕರೆಯಿಂದ ಕರೆದರೋ ಆ ಮೆಕಣ್ಣಯ್ಯ ಕೃಷ್ಣಶಾಸ್ತ್ರಿಗಳು, ರೈಟ್ ಆನರಬಲ್ ಶ್ರೀನಿವಾಸ

ಶಾಸ್ತ್ರಿಗಳಿಂದ ಅಗೋಚರ ಕಿರೀಟವನ್ನು ತೊಡಿಸಿಕೊಂಡ ಹೆಡ್ಮಾಸ್ಟರ್ ಸಂಪದ್ಗಿರಿ ರಾವ್*, ಭೌತಶಾಸ್ತ್ರ ಪಂಡಿತ ಪಾಣ್ಯಂ ಶ್ರೀನಿವಾಸರಾವ್, ಕವಿ–ವಿಮರ್ಶಕ ವಿ. ಸೀತಾರಾಮಯ್ಯ, ಪ್ರಸಿದ್ಧ ಪತ್ರಿಕೋದ್ಯಮಿಗಳಾದ ತಿರುಮಲೆ ತಾತಾಚಾರ್ಯ ಶರ್ಮ, ಪಿ. ಆರ್. ರಾಮಯ್ಯ, ಇಂಗ್ಲಿಷ್ ಪ್ರಾಧ್ಯಾಪಕರುಗಳಾದ ಕೆ. ಅನಂತ ರಾಮಯ್ಯ, ಮೂರ್ತಿರಾಯರುಗಳು, ಸಂಗೀತ ಸಾಹಿತ್ಯ ಸರಸಿಗಳಾದ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ಐರಿಷ್ ಪ್ರೆಸ್ಸಿನ ಕೃಷ್ಣಯ್ಯರ್—ಮೊದಲಾದವರು. ಹೃದಯಸ್ಥವೂ ಕಂಠಸ್ಥವೂ ಆಗಿದ್ದ ನೂರಾರು ವ್ಯಕ್ತಿಚಿತ್ರಗಳೂ ಅವರವರ ಜೀವಿತ ಸಂದರ್ಭ ಚಿತ್ರಗಳೂ ಬರವಣಿಗೆಯ ರೂಪವನ್ನು ಪಡೆದು ಅಚ್ಚಾದದ್ದು ಕನ್ನಡ ವಾಙ್ಮಯ ಚರಿತ್ರೆಯಲ್ಲಿ ಸ್ಮರಣೀಯವಾದ ಕಾಲಘಟ್ಟವೆಂದು ಧಾರಾಳವಾಗಿ ಹೇಳ ಬಹುದು.

ಎಸ್. ಜಿ. ಶಾಸ್ತ್ರಿಗಳೂ ವಿ.ಸೀ.ಯವರೂ ಈ ಹಳೆಯ ಕತೆಗಳ ಸ್ವಾರಸ ಸಂಗತಿಯನ್ನು ಗೋಖಲೆ ಸಂಸ್ಥೆಯ ವ್ಯಾಸಂಗ ಗೋಷ್ಠಿಯ ತರುಣ ಮಿತ್ರರಿಗೂ ನನಗೂ ಆಗಾಗ್ಗೆ ಹೇಳಿ, ತರುಣರಿಗೆ ಇರುವ ಹೊಣೆಯನ್ನು ಜ್ಞಾಪಿಸುತ್ತಿದ್ದರು. "ಏನಯ್ಯಾ ನೀವು ಡಿ.ವಿ.ಜಿ. ಸನ್ನಿಧಿಯಲ್ಲಿ ಕುಳಿತು ಓದೋದು? ಓದಿಗೆತ್ತಿ ಕೊಂಡ ಪುಸ್ತಕದ ಸ್ವಾರಸ್ಯವನ್ನು ಹೇಳುವ ರೀತಿಯಲ್ಲಿ ಮುಳುಗಿ ಹೋಗುತ್ತೀರಾ? ಆಗಾಗ ಅವರು ಪಾಠದ ವೇಳೆ ಆಡುವ, ಪಾಠ ಸಂದರ್ಭಕ್ಕೆ ಹೊಂದುವ, ಹಳೆಯ ಕತೆಗಳನ್ನು ಚಾಟು ಪದ್ಯಗಳನ್ನು ಹೇಳುತ್ತಾರಲ್ಲ ಅವುಗಳಲ್ಲಿ ನಿಮಗೆ ಕುತೂಹಲ ವಿರಬೇಡವೆ? ಇವನ್ನೆಲ್ಲ ಅವರು ಬರೆಯುತ್ತಾರೋ ಇಲ್ಲವೋ? ನೀವಾದರೂ ಗುರುತು ಮಾಡಿಕೊಳ್ಳಿ. ನೆನಪಿನಲ್ಲಿರಿಸಿಕೊಂಡು ಕಾಪಾಡಿಕೊಳ್ಳಿ. ಅವರು ಬರೆಯದಿದ್ದರೆ, ಮುಂದೆ ನಿಮ್ಮಲ್ಲೇ ಒಬ್ಬರು ಬರೆದರೆ ಓದುಗಜನಕ್ಕೆ ಉಪಕಾರ ವಾಗುವುದಿಲ್ಲವೆ?" ಎಂದು ತಾಕೀತು ಮಾಡುತ್ತಿದ್ದರು.

ವ್ಯಾಸಂಗ ಗೋಷ್ಠಿಯಲ್ಲಿ ಕುಳಿತ ನಮಗೆ 'ಜ್ಞಾಪಕಚಿತ್ರಶಾಲೆ'ಯಲ್ಲಿ ಹೊರ ಹೊಮ್ಮಿದ ಅನೇಕ ವ್ಯಕ್ತಿಚಿತ್ರಗಳೂ ಎದೆಕಲಕುವ ಘಟನೆಗಳೂ ವಿನೋದ ಪ್ರಸಂಗ ಗಳೂ ಪರಿಚಿತಗಳೇ. ಹಳತನ್ನು ಹೊಸತು ಮಾಡುವುದರಲ್ಲಿ ಡಿ.ವಿ.ಜಿ. ನುರಿತವರು. ಈ ಚಿತ್ರ ಸಂದರ್ಭಗಳನ್ನು ಅವರೇ ಒಕ್ಕಣಿಸಲು ಶಾರದೆಯ ಪ್ರೇರಣೆಯಂತೂ ಆಯಿತು. ಹಣ್ಣುವಯಸ್ಸಿನಲ್ಲಿದ್ದ ಅವರು ಅವನ್ನು ಹೇಳಿ ಬರೆಯಿಸಿದರು. ಅವರು ಬರೆಯದೆ ನಾವು ಯಾರಾದರೂ ಕಿವಿಗೆ ಬಿದ್ದಷ್ಟನ್ನು ಅರಗಿಸಿಕೊಂಡದ್ದಾದ ಮೇಲೂ ಬರೆದಿದ್ದರೆ, ಡಿ.ವಿ.ಜಿ.ಯವರ ಬರಹದಲ್ಲಿ ಕಾಣಬರುವ ನೇರ್ಮೆ (ಆರ್ಜವ), ನಿತ್ಯ ಸ್ವಾರಸ್ಯ, ಸಾಹಿತ್ಯದ ಗುಣಮಟ್ಟ—ಇವನ್ನು ಸಾಧಿಸುತ್ತಿದ್ದೆವೆ?—'ಇಲ್ಲ' ಎಂದು ವ್ಯಾಸಂಗ ಗೋಷ್ಠಿಯ ನೂರಾರು ಮಿತ್ರರ ಪರವಾಗಿ,—ನಿಸ್ಸಂಕೋಚವಾಗಿಯೇ,— ಹೇಳಬಲ್ಲೆ. ಡಿ.ವಿ.ಜಿ. ಚಿತ್ರಿಸಿದವರೆಲ್ಲ ಸಮಕಾಲೀನರು. ಹಿರಿಯರು, ಸಮವಯಸ್ಸಿ ನವರು. ಆದದ್ದರಿಂದ ಅಪ್ಪಟವಾಲು ಅವರದು; ಅವರ ಬಾಯಿಂದ ಕೇಳಿದವರು

* ಶ್ರೀನಿವಾಸಶಾಸ್ತ್ರಿಗಳು ತಮ್ಮ ಒಂದು ಭಾಷಣದಲ್ಲಿ ಸಂಪದ್ಗಿರಿರಾಯರನ್ನು ಕುರಿತು Prince among head masters ಎಂದು ಪ್ರಶಂಸಿಸಿದರು —ಸಂ.

ಬರೆದಿದ್ದರೆ ಅದು ಗುಜರಿಮಾಲಾಗುತ್ತಿತ್ತು ! ಹೀಗೆ ನಮ್ಮಿಂದ ಅವರಿಗೆ ಆಗ ಬಹುದಾಗಿದ್ದ ಅಪಚಾರವನ್ನು, ನಮ್ಮಲ್ಲೇ ಕೆಲವರಿಗೆ ಹೇಳಿ ಬರೆಯಿಸಿ, ಶಿಷ್ಯರನ್ನು ಗುರುವೇ ಪಾರುಮಾಡಿದರು. ಆದದ್ದರಿಂದ ಶಿಷ್ಯರು ಅವರಿಗೆ ಅಡ್ಡಬೀಳುತ್ತಾರೆ.

2. ಕೀರ್ತಿಕನ್ನಿಯೊಡನೆ ಘರ್ಷಣೆ

ಡಿ.ವಿ.ಜಿ. ತೇರ್ಗಡೆ ಹೊಂದಿದ್ದು ಎರಡು ಪರೀಕ್ಷೆಗಳಲ್ಲಿ ಮಾತ್ರ—ಒಂದು ಕನ್ನಡ ಲೋಅರ್ ಸೆಕಂಡರಿ (1901) ಅದಾದ ಬಳಿಕ ಇನ್ನೊಂದು ಇಂಗ್ಲಿಷ್ ಲೋಅರ್ ಸೆಕಂಡರಿ. ಆಮೇಲೆ ಹೈಸ್ಕೂಲಿನಲ್ಲಿ ಸುಮಾರು ಎರಡು ವರ್ಷಗಳ ಓದು. ಇಷ್ಟೇ ಅವರು ಗಳಿಸಿದ ಲೌಕಿಕ ವಿದ್ಯೆಯ ಬಂಡವಾಳ. ಆದರೆ ಮನೆಯ ಹಿರಿಯರ, ಊರ ಹಿರಿಯರ ನಡೆನುಡಿಗಳ ಮಾದರಿ ಅವರ ವಿದ್ಯೆಗೆ ಗಟ್ಟಿ ತಳಪಾಯವನ್ನು ಕಟ್ಟಿತ್ತು. ಬಲ್ಲವರಿಂದ ಕಲಿತರು, ಸ್ವಂತ ಕೃಷಿಯಿಂದ ಇನ್ನಷ್ಟು ಕಲಿತರು. ಸಮ್ಯಗ್ ಜೀವನಕ್ಕೆ ಬೇಕಾದ ಸಮ್ಯಗ್‌ಜ್ಞಾನವನ್ನು ಸಂಪಾದಿಸಿದರು. ಸಮ್ಯಗ್‌ಚಾರಿತ್ರ್ಯದಿಂದ ಬೆಳಗುತ್ತ ಶಾರದೆಯನ್ನು ಒಲೈಸುವ ಅರ್ಹತೆಯನ್ನು, ಅಧಿಕಾರವನ್ನು ಪಡೆದರು. ಅವರ ಚಟುವಟಿಕೆ ಹಲವು ಕ್ಷೇತ್ರಗಳಲ್ಲಿ ಜನಹಿತಾಕಾಂಕ್ಷೆಯಿಂದ ನೆರವೇರುತ್ತ ಬೆಳೆಯಿತು.

25–11–1961 ರಂದು ಡಿ.ವಿ.ಜಿ. ಮೈಸೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್. ಗೌರವವನ್ನು ಪಡೆದ ಕತೆ ಈಗ ನೆನಪಿಗೆ ಬರುತ್ತದೆ. ಆಗ ವೈಸ್-ಛಾನ್ಸೆಲರ್ ಆಗಿದ್ದವರು ನಾರಾಯಣರಾವ್ ಎ. ನಿಕಂ. ವಿಶ್ವವಿದ್ಯಾನಿಲಯದ ಸೆನೆಟ್ ಸಮಿತಿಯೂ ಅಕಡೆಮಿಕ್ ಕೌನ್ಸಿಲೂ ಡಿ.ವಿ.ಜಿ.ಯವರನ್ನು ಗಾಲ್ಬ್ರೈತ್ ಅವರೊಡನೆ ಗೌರವಿಸಬೇಕೆಂದು ಠರಾವು ಮಾಡಿತು. ಡಿ.ವಿ,ಜಿ. ಸಂಗತಿಯನ್ನು ತಿಳಿದು ಒಲ್ಲೆನೆಂದು ಬಿಟ್ಟರು. ವಿಶ್ವವಿದ್ಯಾನಿಲಯ ಪಟ್ಟುಹಿಡಿಯಿತು. ಡಿ.ವಿ.ಜಿ.ಯೂ ಪಟ್ಟುಹಿಡಿದರು. ಆಗ ನಿಕಂ ಅವರು ನಾನೇ ಡಿ.ವಿ.ಜಿ.ಯವರನ್ನು ಒಪ್ಪಿಸಲು ಬೆಂಗಳೂರಿಗೆ ಹೋಗಿ ಬರುತ್ತೇನೆಂದು ಸಮಿತಿಗಳಿಗೆ ಹೇಳಿ, ಒಮ್ಮೆ ಪ್ರಯತ್ನಿಸಿ ವಿಫಲಮನೋರಥರಾದರು. ಎರಡನೆಯ ಸಾರಿ ಡಿ.ವಿ.ಜಿ.ಯವರನ್ನು ಭೇಟಿ ಮಾಡಲು ನಿಕಂ ಬಂದರು. ಡಿ.ವಿ.ಜಿ. ಜಗ್ಗಲಿಲ್ಲ. "ನನ್ನ ಮನಸ್ಸೇನೆಂದು ಹಿಂದೆಯೇ ತಿಳಿಸಿಬಿಟ್ಟಿದ್ದೇನಲ್ಲ. ಇನ್ನು ಒತ್ತಾಯ ಮಾಡಬೇಡಿ ನಿಕಂ. ನನಗೆ ಕೊಂಚವೂ ಇಷ್ಟವಾಗದ ವಿಷಯ ಇದು. ನಿಮ್ಮ ಕೌನ್ಸಿಲಿಗೂ, ಸೆನೆಟ್ಟಿಗೂ ನನ್ನ ಕೃತಜ್ಞತೆ ಹೇಳಿ" ಎಂದು ಎಷ್ಟು ನಿರ್ಣಾಯಕವಾಗಿ ಡಿ.ವಿ.ಜಿ. ತಡೆಯುತ್ತಿದ್ದರೂ ನಿಕಂ ಅವರು ಸೋಲನ್ನೊಪ್ಪಿಕೊಳ್ಳದೆ, "ಸ್ವಾಮಿ, ವಿಶ್ವವಿದ್ಯಾನಿಲಯದಲ್ಲಿ ನನಗೆ ಅವಮಾನವಾಗುವುದನ್ನು ತಾವು ಮನಸ್ಸಿಗೆ ತಂದು ಕೊಳ್ಳಬೇಡವೆ ?" ಎಂದರು. "ಇಂಥ ದೊಡ್ಡ ಗೌರವಕ್ಕೆ ನಾನು ಅರ್ಹನಲ್ಲ ವಾದರೂ ವಿಶ್ವವಿದ್ಯಾನಿಲಯ ಏಕೆ ಹಠ ಮಾಡುತ್ತಿದೆ ? ನಾನೇಕೆ ನನ್ನ ನಿಲುವನ್ನು ಬದಲಾಯಿಸಬೇಕು ?" ಎಂದು ಡಿ.ವಿ.ಜಿ. ತಕರಾರು ಮಾಡುತ್ತಿದ್ದಾಗ ನ್ಯಾಯಮೂರ್ತಿ ಎ. ಆರ್. ನಾಗೇಶ್ವರ ಅಯ್ಯರ್‌ರವರು ಕೊಠಡಿಯೊಳಕ್ಕೆ ಬಂದುಬಿಟ್ಟರು. "ಓಹೋ !

ಏನ್ರಿ ಮಿ॥ ನಿಕಂ ! ಬಂದಿದ್ದೀರಿ ?" ಎಂದರು. ನಿಕಂ ನಿಟ್ಟುಸಿರು ಬಿಟ್ಟು, ಒಳ್ಳೆಯ ಹೊತ್ತಿಗೆ ತಾವು ಬಂದಿರಿ ಮಿ॥ ನಾಗೇಶ್ವರ ಅಯ್ಯರ್ ! ದಯವಿಟ್ಟು ತಾವು ಡಿ.ವಿ.ಜಿ.ಯವರಿಗೆ ಸಲಹೆ ಕೊಟ್ಟು ನನ್ನ ಮಾತನ್ನವರು ನಡಸಿ ಕೃಪೆ ಮಾಡುವಂತೆ ಸಹಾಯ ಮಾಡಬೇಕಾಗಿದೆ" ಎಂದರು. "ಏನು ಗುಂಡಪ್ಪ, ಏನು ತಕರಾರು ?" ಎಂದು ಡಿ.ವಿ.ಜಿ.ಯನ್ನು ಪ್ರಶ್ನಿಸಿದರು. ಡಿ.ವಿ.ಜಿ.ಯವರು ಬಾಯಿಹಾಕಿ, "ಇವರು ನನಗೆ ಡಿ.ಲಿಟ್. ಡಿಗ್ರೀ ಕೊಡಿಸಿ ಗೌರವ ಮಾಡುತ್ತಾರಂತೆ. ನಾನು ಬೇಡ ಎನ್ನುತ್ತಿದ್ದೇನೆ. ಅವರು ಒತ್ತಾಯಿಸುತ್ತ ಕುಳಿತುಬಿಟ್ಟಿದ್ದಾರೆ" ಎಂದು ಹುಬ್ಬು ಗಂಟಿಕ್ಕಿಕೊಂಡೇ ಹೇಳಿದರು.

ನಾಗೇಶ್ವರ ಅಯ್ಯರ್ ಡಿ.ವಿ.ಜಿ.ಯವರಿಗಿಂತ ನಾಲ್ಕೈದು ವರ್ಷ ದೊಡ್ಡವರು. ಡಿ.ವಿ.ಜಿ. 1915 ರಲ್ಲಿ ಗಾಂಧೀಜಿಯನ್ನು ಬೆಂಗಳೂರಿಗೆ ಕರೆಸಿ ಅವರಿಂದ ಗೋಖಲೆಯವರ ದೊಡ್ಡ ಭಾವಚಿತ್ರವನ್ನು ಅನಾವರಣ ಮಾಡಿಸಿದ ಸಂದರ್ಭದಲ್ಲಿ ಡಿ.ವಿ.ಜಿ.ಯವರೊಡನೆ ಕೆಲಸ ಮಾಡಿದವರು. ಆಗಲೇ ಗೋಖಲೆ ಸಂಸ್ಥೆಯ ಸ್ಥಾಪನೆಗೆ ಮೊದಲ ಸಿದ್ಧತೆ ನಡೆದುದು. ಅದಕ್ಕೆ ಹಿಂದಿನಿಂದಲೂ ನಾಗೇಶ್ವರ ಅಯ್ಯರ್ ಡಿ.ವಿ.ಜಿ.ಗೆ ಆಪ್ತ ಸ್ನೇಹಿತರೇ. ಐರಿಷ್ ಪ್ರೆಸ್ಸಿನ ಕೆ. ಎಸ್. ಕೃಷ್ಣಯ್ಯರ್, ವೇದಾಂತ ವಿದ್ಯಾಸಾಧಕ ಹೆಡ್ಮಾಸ್ಟರ್ ಕೆ. ಎ. ಕೃಷ್ಣಸ್ವಾಮಿ ಅಯ್ಯರ್, ಹೊಳೆನರಸೀಪುರದಲ್ಲೂ ಅದಕ್ಕೆ ಮುಂಚೆ ಬೆಂಗಳೂರಿನಲ್ಲೂ ನೆಲಸಿದ್ದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯ ಸ್ಥಾಪಕ ಹೆಡ್ಮಾಸ್ಟರ್ ವೈ. ಸುಬ್ಬರಾವ್ (ಮುಂದೆ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳು)—ಇವರೆಲ್ಲ ನಾಗೇಶ್ವರ ಐಯ್ಯರಂತೆ ಆಪ್ತ ಸ್ನೇಹಿತರಾಗಿ ತತ್ತ್ವಜಿಜ್ಞಾಸೆ ಮಾಡುತ್ತಿದ್ದವರು. ಅದರಲ್ಲೂ ನಾಗೇಶ್ವರ ಅಯ್ಯರಿಗೆ ಡಿ.ವಿ.ಜಿ.ಯವರಲ್ಲಿ ಸಲಿಗೆ. ಈಗ ಅವರು ತಕರಾರನ್ನು ಬಿಡಿಸಲು ಸಜ್ಜಾದರು. "ಗುಂಡಪ್ಪ. ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಳ್ಳಿ" ಎಂದು ಡಿ.ವಿ.ಜಿ.ಯವರ ಬಾಯಿ ಮುಚ್ಚಿಸಿ, "ಮಿ॥ ನಿಕಂ, ನಿಮ್ಮ ಏರ್ಪಾಟಿಗೆ ಡಿ.ವಿ.ಜಿ. ಒಪ್ಪಿದ್ದಾರೆ. ನೀವಿನ್ನು ಮೈಸೂರಿಗೆ ಹೊರಡಬಹುದು. ಮುಂದಿನ ಕೆಲಸ ಹೇಗೆ ನಡೆಯಬೇಕೋ ಹಾಗೆ ನಡೆಯಲಿ" ಎಂದು ತಕರಾರನ್ನು ಫೈಸಲ್ಮಾಡಿಬಿಟ್ಟರು ! ಡಿ.ವಿ.ಜಿ. ಮರುಮಾತನ್ನಾಡಲಿಲ್ಲ. ಇದೆಲ್ಲ ಪರೇಚ್ಛಾಪ್ರಾರಬ್ಧವೆಂದು ಹಣೆಯಮೇಲೆ ಕೈಯಾಡಿಸಿ, ತಲೆಯಮೇಲೆ ಕೈಯಿಟ್ಟುಕೊಂಡರು. ಹಿಂದೆ ಮೈಸೂರರಸರು ನೀಡಲು ತೀರ್ಮಾನಿಸಿದ ಬಿರುದನ್ನು ಒಲ್ಲೆನೆಂದು ತಪ್ಪಿಸಿಕೊಂಡರು. ಆಮೇಲೆ ಕರ್ನಾಟಕ ಸರಕಾರವು ಐನೂರು ರೂಪಾಯಿಗಳ ವಿಶ್ರಾಂತಿ ವೇತನ ಕೊಡಲು ಪ್ರಭುತ್ವ ತೀರ್ಮಾನಿಸಿದಾಗಲೂ ಬೇಡವೆಂದರು. ರಾಜಾಜಿಯವರಿಗೆ ಭಾರತರತ್ನ ಪ್ರಶಸ್ತಿ ಲಾಭವಾದಾಗ—"ಬಕ್ಕತಲೆಯವನಿಗೆ ನೀಡಿದ ದಂತದ ಬಾಚಣಿಗೆ ಇದು" ಎಂದು ಟೀಕಿಸಿ ಸರಸೋಕ್ತಿಯನ್ನಾಡಿದರು. ಆಮೇಲೆ ತಮಗೆ ಪದ್ಮಭೂಷಣ ಪ್ರಶಸ್ತಿ ಬಂದಾಗ, ಒಲ್ಲದ ಮನಸ್ಸಿನಿಂದಲೇ ಇಂಥ ಬಿರುದುಗಳನ್ನು ನಿರ್ವಿಕಾರಚಿತ್ತದಿಂದ ನೋಡುವ ನೆಲೆಯಲ್ಲಿದ್ದರು ಡಿ.ವಿ.ಜಿ.

1970 ರಲ್ಲಿ ಡಿ.ವಿ.ಜಿ.ಯವರ ಸಾರಸ್ವತಸಿದ್ಧಿಯನ್ನೂ ಸಾರ್ವಜನಿಕ ಸೇವೆಯನ್ನೂ ಮೆಚ್ಚಿಕೊಂಡ ಅಭಿಮಾನಿಗಳು ವೈಯಕ್ತಿಕವಾಗಿ ಅವರನ್ನು ಅಭಿನಂದಿಸಿ ನಿಧಿ ಸಮರ್ಪಣೆ ಮಾಡಬೇಕೆಂದು ಸನ್ಮಾನ ಸಮಿತಿಯೊಂದನ್ನು ರಚಿಸಿದಾಗ ಕೂಡ ಡಿ.ವಿ.ಜಿ. ಅಡ್ಡಮಾತನ್ನಾಡಿ ಬೇಡವೆಂದು ತಡೆದರಾದರೂ ಆಪ್ತ ಮಿತ್ರರಾದ ವಿ. ಎಸ್. ನಟರಾಜನ್, ಎಂ. ವಿ. ಕೃಷ್ಣಮೂರ್ತಿ ಮೊದಲಾದ ಮಿತ್ರರು ಸಮಿತಿಯಲ್ಲಿದ್ದು ಒಪ್ಪಿಸಿದರು. "ನೀವು ನನಗೆಂದು ಕೊಡುವ ನಿಧಿಯನ್ನು ಗೋಖಲೆ ಸಂಸ್ಥೆಗೆ ಕೊಡುವುದಾದರೆ ಒಪ್ಪಿಕೊಳ್ಳುತ್ತೇನೆ" ಎಂದು ಡಿ.ವಿ.ಜಿ. ಷರತ್ತು ಹಾಕಿ ಒಪ್ಪಿಕೊಂಡರು. ಸುಮಾರು ಒಂದು ಲಕ್ಷ ರೂಪಾಯಿ ಸಾರ್ವಜನಿಕರಿಂದ ಸಂಗ್ರಹವಾದ ನಿಧಿ ಗೋಖಲೆ ಸಂಸ್ಥೆಗೆ ಲಭ್ಯವಾಯಿತು.

ಡಿ.ವಿ.ಜಿ.ಯವರ 'ನಿವೇದನ'ದಲ್ಲಿ ಸೇರಿರುವ 'ವನಸುಮ' ಎಂಬ ಕವಿತೆ ಡಿ.ವಿ.ಜಿ.ಯವರ ವ್ಯಕ್ತಿತ್ವದ ವಿನಯಮುಖವನ್ನು. ಅಡಕವಾಗಿ, ಅನುಗಾಗಿ ಕೆಲಸ ಮಾಡುವ ಕರ್ಮಯೋಗಿಯ ಮುಖವನ್ನು ಎತ್ತಿ ತೋರಿಸುತ್ತದೆ. ಅಹಂತೆ ಮಮತೆಗಳು ಅವರ ಎದೆಯಲ್ಲೆದ್ದುಕೊಂಡ ಸಂದರ್ಭ ಇಲ್ಲವೇ ಇಲ್ಲ ಎನ್ನಬಹುದು. 'ವನಸುಮ'ದಂತೆ, 'ವಿಪುಲಾಶ್ರಯವನ್ನು ನೀಡುವ ಸುಫಲ ಸುಮಭರಿತ ಪಾದಪ'ದಂತೆ, 'ವಿಪರೀತ ಮತಿಯನ್ನುಳಿದು ನೈಜವಾದ ಒಳ್ಪಿನಿಂದ' ಬಾಳಿದವರು ಡಿ.ವಿ.ಜಿ. ತಾವೇ ಕಟ್ಟಿಕೊಂಡ ಆದರ್ಶವನ್ನು ಪೂರ್ತಿಯಾಗಿ ಪಾಲಿಸಲು ಸಾಧ್ಯವಾಗದೆ ಹೋದಾಗ ಆಗುಹೋಗುಗಳನ್ನು ಅವರ ಮನಸ್ಸು ನಿರ್ವಿಕಾರವಾಗಿ ನೋಡುವ ನೆಲೆಗೆ ಏರಿತು.

3. ಗೋಖಲೆ ಸಂಸ್ಥೆಯಲ್ಲಿ ಅವರೊಡನೆ ನಾನು

ಡಿ.ವಿ.ಜಿ. ಸ್ಥಾಪಿಸಿ ಕಟ್ಟಿ ಬೆಳಸಿದ ಗೋಖಲೆ ಸಂಸ್ಥೆಯನ್ನು ಕಾನೂನುವಿಧಿಗಳ ಪ್ರಕಾರ ರಿಜಿಸ್ಟರು ಮಾಡಿಸುವ ಸಂದರ್ಭದಲ್ಲಿ ನಾನು ಅವರಿಗೆ ಸಹಾಯಕನಾಗಿ ಊಳಿಗ ಸಲ್ಲಿಸುವ ಭಾಗ್ಯವನ್ನು ಪಡೆದೆ. ದೂರ ಎಲ್ಲೆಲ್ಲೋ ಅಲೆಯುತ್ತ ಒಂದು ನೆಲೆಯಲ್ಲಿ ನೆಲಸಲಾಗದ ನನ್ನನ್ನು ಅವರು ವಿಚಾರಿಸುತ್ತಲೇ ಇದ್ದರು. 1937 ರಿಂದ 1939 ರವರೆಗೆ ನಾನು ಹುಬ್ಬಳ್ಳಿಯಲ್ಲಿರಬೇಕಾಯಿತು. ಅದು ಅವನಿಗೆ ತಕ್ಕ ಸ್ಥಳವಲ್ಲ, ಕರಸಿಕೊಂಡುಬಿಡು ಎಂದು ನನ್ನ ಅಣ್ಣಂದಿರಿಗೆ ಅವರು ಪದೇ ಪದೇ ಹೇಳುತ್ತಿದ್ದರು. (ನನ್ನ ಹುಬ್ಬಳ್ಳಿಯ ವಾಸ ಬೇರೆ ಪ್ರಬಂಧಕ್ಕೆ ತಕ್ಕ ವಿಷಯ.) ನನ್ನ ವಿದ್ಯಾಗುರುಗಳಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ನಾನು ಹುಬ್ಬಳ್ಳಿಯಿಂದ ಹಿಂತಿರುಗಿ ಬಂದಿರುವ ಸಂಗತಿಯನ್ನು ತಿಳಿದು ನನಗೆ ಹೇಳಿ ಕಳಿಸಿದರು. ಅವರು ಅಷ್ಟುಹೊತ್ತಿಗೆ ಕನ್ನಡ ಸಾಹಿತ್ಯ ಪರಿಷತ್ತಿಗೊಂದು ಅಚ್ಚು ಕೂಟವನ್ನು ದಾನ ಮಾಡಿದ್ದರು. ಶ್ರೀಗಳು ನನ್ನನ್ನು ಅಚ್ಚುಕೂಟದ ವ್ಯವಸ್ಥಾಪಕನನ್ನಾಗಿ ನೇಮಿಸಿಕೊಂಡರು. 1939 ರಿಂದ 1944 ರವರೆಗೆ ನಾನು ಅಚ್ಚುಕೂಟದ ವ್ಯವಸ್ಥೆಯನ್ನು ನೋಡಿಕೊಂಡೆ. ಮಾಸ್ತಿಯವರು ಉಪಾಧ್ಯಕ್ಷರಾಗಿ ಬಂದಾಗ

ಹುಬ್ಬಳ್ಳಿಯಲ್ಲಿ ಅಂಟಿಕೊಂಡ ಉಬ್ಬಸ ಬೆಂಗಳೂರಿನಲ್ಲಿ ಉಲ್ಬಣಿಸಿ, ನಾನು ಈ ಅನಾರೋಗ್ಯ ಕಾರಣದಿಂದ ಪರಿಷತ್ತಿನ ಸೇವೆಯಿಂದ ವಿರಾಮ ಪಡೆಯ ಬೇಕಾಯಿತು.

ಡಿ.ವಿ.ಜಿ. ಪರಿಷತ್ತಿನ ಕಟ್ಟಡದಲ್ಲೇ ಇದ್ದ ಇಂಗ್ಲಿಷ್-ಕನ್ನಡ ನಿಘಂಟಿನ ಕಚೇರಿಯಲ್ಲಿ ನಡೆಯುತ್ತಿದ್ದ ಸಂಪಾದಕ ಮಂಡಳಿಯ ಸಭೆಗಳಿಗೆ ಬಂದಾಗಲೆಲ್ಲ ನನ್ನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತ ಇದ್ದವರು, ನಾನು ನಿರುದ್ಯೋಗಿಯಾದೆನೆಂಬ ಸಂಗತಿಯನ್ನು ತಿಳಿದು, ನನ್ನನ್ನು ಮನೆಗೆ ಬರಮಾಡಿಕೊಂಡು, ಗೋಖಲೆ ಸಂಸ್ಥೆಯ ಕಾರ್ಯದಲ್ಲಿ ಜೊತೆಗಿದ್ದು, ಹಗುರವಾದ ಕೆಲಸವನ್ನು ಮಾಡಿಕೊಂಡು, ನನ್ನ ಜೊತೆಗೆ ಇರು ಎಂದು ಅಪ್ಪಣೆ ಮಾಡಿದರು. ವಿಧಿ ನನ್ನನ್ನು ಒಂದು ನೆಲೆಯಲ್ಲಿ ನಿಲ್ಲಿಸಬೇಕೆಂದು ಸಂಕಲ್ಪಿಸಿತೆಂದುಕೊಂಡು ಒಪ್ಪಿಕೊಂಡೆ. ಡಿ.ವಿ.ಜಿ. ನನ್ನನ್ನು ಬಂಧುವೆಂದು ಆದರಿಸಿ ದವರಲ್ಲ. ಅವರಲ್ಲಿ ನಾನು ಗುರುಭಾವನೆಯನ್ನು ತಳೆದು ಅವರು ಹೇಳಿದ ಕೆಲಸವನ್ನು ಮಾಡುತ್ತ ಬಂದೆ.

ಒಂದು ದಿನ ಬೆಳಗ್ಗೆ ಅವರೊಡನೆ ಕುಳಿತಿದ್ದಾಗ, "ಈ ಶ್ಲೋಕವನ್ನು ಬರೆದುಕೊ" ಎಂದು ಹೇಳಿದರು. ಬರೆದುಕೊಂಡೆ. ಮನುಸ್ಮೃತಿಯ ಶ್ಲೋಕ ಅದು (4-137) :—

ನಾತ್ಮಾನ ಮೃತಮನ್ಯೇತ ಪೂರ್ವಾಭಿರಸಮೃದ್ಧಿಭಿಃ ।
ಆಮೃತ್ಯೋಃ ಶ್ರಿಯಾ ಮನ್ವಿಚ್ಛೇನ್ನೈನಾಂ ಮನ್ಯೇತ ದುರ್ಲಭಾಮ್ ॥

ಬರೆದುಕೊಂಡದ್ದಾದ ಮೇಲೆ "ಅರ್ಥವಾಯಿತೆ ?" ಎಂದು ಕೇಳಿದರು. ಆ ಕ್ಷಣದಲ್ಲಿ ನನಗೆ ಹೊಳೆದ ತಾತ್ಪರ್ಯವನ್ನವರಿಗೆ ಅರಿಕೆ ಮಾಡಿದೆ. ನನಗೆ ವಿತ್ತ ಸಂಪತ್ತಿನ ಮೋಹವಿಲ್ಲವೆಂಬುದನ್ನೂ ಬಡತನದಲ್ಲೂ ನೆಮ್ಮದಿಯಾಗಿಯೇ ಬಾಳ ಬಹುದೆಂಬುದನ್ನೂ ನನ್ನ ಬಾಯಿಂದಲೇ ಹೇಳಿಸಿ ದೃಢಪಡಿಸಿಕೊಂಡರು ಡಿ.ವಿ.ಜಿ. ಆದುವರೆಗಿನ ನನ್ನ ಮಾಸಿಕ ವರಮಾನ ಕಡಿಮೆಯೆಂದರೆ 15 ರೂ. ಹೆಚ್ಚೆಂದರೆ 35 ರೂ. ಮೊದಮೊದಲು ಸಂಸ್ಥೆಯ ಚಟುವಟಿಕೆಯೆಲ್ಲ ಕೃಷ್ಣರಾಜೇಂದ್ರ ರಸ್ತೆ ಸುಬ್ಬರಾಮ ಶೆಟ್ಟಿ ರಸ್ತೆಗಳು ಕೂಡುವ ವೃತ್ತದ ದಕ್ಷಿಣ ಪಾರ್ಶ್ವಕ್ಕಿದ್ದ ಎರಡು ಕೊಠಡಿಗಳಿದ್ದ ಒಂದು ಮನೆಯಲ್ಲಿ ನಡೆಯುತ್ತಿದ್ದುವು. ಬಾಡಿಗೆ ತಿಂಗಳಿಗೆ 15 ರೂ. ಮಾಲಿಕರು ಶ್ರೀ ಪಾಮಿಡಿ ಸುಬ್ಬರಾಮಶೆಟ್ಟರು. 1949 ರಲ್ಲಿ ಬೆಂಗಳೂರು ಪೌರ ಸಭೆಯವರು ಸಂಸ್ಥೆಗೆ ಒಂದು ನಿವೇಶನವನ್ನು ನೀಡಿದರು. ಇನ್ನು ಕಟ್ಟಡ ಕಟ್ಟಿಸುವ ಸನ್ನಾಹ. ಶ್ರೀ ಗುಬ್ಬಿ ವೀರಣ್ಣನವರ 'ದಶಾವತಾರ' ನಾಟಕ ಪ್ರದರ್ಶನದಿಂದ ಸುಮಾರು ಮೂರು ಸಾವಿರ ರೂ.ಗಳಷ್ಟು ನಿಧಿ ಸೇರಿತು. ಅನಂತರ ಕೋಕಿಲಗಾನ ಎಂ. ಎಸ್. ಸುಬ್ಬುಲಕ್ಷ್ಮಿಯವರ ಗಾನಸೇವೆಯಿಂದ ಸುಮಾರು 35-40 ಸಾವಿರ ರೂ.ಗಳಷ್ಟು ನಿಧಿ ಬೆಳೆಯಿತು. ನರಸಿಂಹರಾಜ ಕಾಲೊನಿಯಲ್ಲಿ ಸ್ವಂತ ಕಟ್ಟಡವು ಹಂತಗಳಲ್ಲಿ ಸಿದ್ಧವಾಗಿ 1956 ರ ಜುಲೈ ತಿಂಗಳಲ್ಲಿ ಪ್ರವೇಶೋತ್ಸವ ನೆರವೇರಿತು.

ಕಟ್ಟಡವೆದ್ದದ್ದು ಎಚ್. ಸಿ. ಕೆ. ಭಟ್ಟ, ಸಿ. ಜೆ. ವೆಂಕಟೇಶ ದಾಸ್, ಡಿ. ಸಿ. ಅನಂತ ರಾಮಯ್ಯ ಇವರ ಮೇಲ್ವಿಚಾರಣೆಯಲ್ಲಿ. ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಸುಮಾರು 100 ರೂ. ವೆಚ್ಚದಲ್ಲಿ ಕೊಬ್ಬರಿ ಸಕ್ಕರೆಯನ್ನು ಹಂಚಿಸಿದರು. ಪುರಸ್ಥಿತಿ-ವರದಿಗಳೂ ಉಪನ್ಯಾಸಾದಿ ಕಾರ್ಯಕ್ರಮಗಳೂ ಜನಾನುರಾಗವನ್ನು ಸಂಪಾದಿಸಿ ಕೊಟ್ಟುವು. ಗೋಖಲೆ ಸಂಸ್ಥೆ ಬಾಡಿಗೆಯ ಮನೆಯಲ್ಲಿದ್ದಾಗ ವ್ಯಾಸಂಗ ಗೋಷ್ಠಿಯು ತುಂಬು ಹಾಜರಿ ನೆರವುಗಳನ್ನು ಪಡೆದು ನಡಸಿದ ಚಟುವಟಿಕೆಯನ್ನು ಯಾರೂ ಮರೆಯುವಂಥದ್ದಲ್ಲ. ಸಂಜೆಯ ಹೊತ್ತು ತರುಣ ಮಿತ್ರರು ಒಳಮನೆಯಾಟ ವಾಡುತ್ತಿದ್ದರು. ಹಿರಿಯರೊಡನೆ ಸರಸಸಲ್ಲಾಪ ನಡಸುತ್ತಿದ್ದರು. ಇಪ್ಪತ್ತು ಮೂವತ್ತು ಜನ ಚೆಸ್, ಫಿಂಗರ್ ಬಿಲಿಯರ್ಡ್ಸ್, ಡ್ರಾಫ್ಟ್ಸ್ ಆಟವಾಡುತ್ತಿದ್ದರೆ ಹಿರಿಯರಾದ ನಿಟ್ಟೂರು ಶ್ರೀನಿವಾಸರಾಯರೂ ಆಟದಲ್ಲಿ ಸೇರುತ್ತಿದ್ದರು. 'ಸಾರ್ವಜನಿಕ' ('ಪಬ್ಲಿಕ್ ಅಫೇರ್ಸ್') ಮಾಸಪತ್ರಿಕೆ ಸ್ವದೇಶ ವಿದೇಶಗಳಲ್ಲಿ ಪ್ರಸಾರಗೊಂಡು, ಸಂಸ್ಥೆಯ ವಾಚನಾಲಯಕ್ಕೆ ನೂರಾರು ವಿನಿಮಯ ಪತ್ರಿಕೆಗಳು ಬರಲು ಮೊದಲಾದುವು. ಖಾಸಗಿ ಪುಸ್ತಕ ಭಂಡಾರಗಳಿಂದ ಗ್ರಂಥಗಳನ್ನು ಎತ್ತಿನ ಹಾಗೂ ಕುದುರೆ ಬಂಡಿಗಳು ಹೊತ್ತು ಗೋಖಲೆ ಸಂಸ್ಥೆಯ ಭಂಡಾರಕ್ಕೆ ಸಾಗಿಸಿ ಅದನ್ನು ಸಿರಿಗೊಳಿಸಿದುವು. ಡಿ.ವಿ.ಜಿ.ಯವರಿಗೂ ಅವರೊಡನೆ ದುಡಿಯುತ್ತಿದ್ದ ಯುವಕರಿಗೂ ನಿತ್ಯ ಸಂಭ್ರಮ, ನಿತ್ಯಸಂತೋಷ. ಡಿ.ವಿ.ಜಿ.ಯವರೇ ವ್ಯಾಸಂಗ ಗೋಷ್ಠಿಯ ತರಗತಿಗಳನ್ನು ನಡಸುತ್ತಿದ್ದರು. ಇಂಗ್ಲಿಷ್, ಸಂಸ್ಕೃತ, ಕನ್ನಡ ಗ್ರಂಥಗಳ ಅಧ್ಯಯನ, ವ್ಯಾಸಂಗಾಭಿರುಚಿಗಳನ್ನು ಡಿ.ವಿ.ಜಿ. ಯುವಕರಲ್ಲಿ ಕೆರಳಿಸಿ ಬೆಳಸಿದರು. ದಿವಾನ್ ವಿಶ್ವೇಶ್ವರಯ್ಯ, ದಿವಾನ್ ಮಿರ್ಜಾ ಎಂ. ಇಸ್ಮಾಯಿಲ್, ಅರ್ಥಶಾಸ್ತ್ರಜ್ಞ-ಇತಿಹಾಸ ಸಂಶೋಧಕ ಸಿ. ಹಯವದನರಾವ್, ತುಮಕೂರು ಅಡ್ವೊಕೇಟ್ ಕೆ. ರಂಗಯ್ಯಂಗಾರ್ ಮೊದಲಾದವರ ಮನೆಗಳಿಂದ ಬಂದ ಇತಿಹಾಸ. ಸಾಹಿತ್ಯ. ಆರ್ಥಿಕ ರಾಜಕೀಯ ಗ್ರಂಥಗಳು ವಿದ್ಯಾರ್ಥಿಗಳಿಗೂ, ಸಂಶೋಧಕರಿಗೂ ಉಪಯುಕ್ತವಾಗುತ್ತ ಬಂದುವು. ಬೆಂಗಳೂರಿನಲ್ಲಿರುವ ಗ್ರಂಥಭಂಡಾರಗಳಲ್ಲಿ ಗೋಖಲೆ ಸಂಸ್ಥೆಯ ಭಂಡಾರಕ್ಕೆ ಮನ್ನಣೆ ದೊರೆಯಿತು—ಅಪೂರ್ವ ಪ್ರಾಚೀನ ಗ್ರಂಥಗಳನ್ನು ಒಳಗೊಂಡ, ಹಾಗೆಯೇ ದಿವಾನ್ ರಂಗಾಚಾರ್ಲು ಅವರ ಕಾಲದ ಪತ್ರಿಕೆಗಳನ್ನು ಒಳಗೊಂಡ ಭಂಡಾರವೆಂದು. ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು 'ಶ್ರೀಗಂಧಕುಟಿ' ಎಂಬ ರೆಫರೆನ್ಸ್ ವಿಭಾಗವನ್ನು ಗ್ರಂಥಭಂಡಾರಕ್ಕಳವಡಿಸಿ ಅದರ ಉಪಯುಕ್ತತೆಯನ್ನು ಹೆಚ್ಚಿಸಿದರು. ಈ ಎಲ್ಲ ಚಟುವಟಿಕೆಗಳ ಹಿಂದೆ ಡಿ.ವಿ.ಜಿ.ಯವರ ಕಾಂತ ಶಕ್ತಿಯ ವ್ಯಕ್ತಿತ್ವವು ಸದ್ದುಗದ್ದಲಗಳಿಲ್ಲದೆ ಕಾರ್ಯ ಮಾಡಿತು. ಕಾರ್ಯಸಮಿತಿಯ ಸದಸ್ಯರೂ ಕಾರ್ಯಕರ್ತರೂ ಡಿ.ವಿ.ಜಿ.ಯವರ ಆಲೋಚನೆಗಳೆಲ್ಲ ಕಾರ್ಯರೂಪಕ್ಕೆ ತಿರುಗಲು ಕಂಕಣಬದ್ಧರಾಗಿ ದುಡಿದರು. ಗೋಖಲೆ ಸಂಸ್ಥೆ ಹೀಗೆ ಗ್ರಂಥವಾನ, ಧನದಾನ, ಪರಿಶ್ರಮದಾನಗಳಿಂದ ಬೆಳೆದು ಬಂದ ಸಂಸ್ಥೆ. ಸಂಸ್ಥೆಗೆ ಒದಗಿದ ಉಪಕಾರಿಗಳ ಸಂಖ್ಯೆ, ಉಪಕಾರ ವೈವಿಧ್ಯ, ಮಹಾಜನರು ತೋರಿಸುತ್ತ ಬಂದ ಅಭಿಮಾನ ಎಲ್ಲವೂ ಪ್ರತ್ಯೇಕ ಪ್ರಬಂಧವೊಂದಕ್ಕೆ ತಕ್ಕ ಸಂಗತಿಗಳು.

4. ಡಿ.ವಿ.ಜಿ.ಯವರ ವ್ಯಕ್ತಿತ್ವ ಪ್ರಶಂಸೆ

ಡಿ.ವಿ.ಜಿ.ಯವರ ವ್ಯಕ್ತಿತ್ವವನ್ನು ಸ್ವನಾಮಖ್ಯಾತರೇ ಆದ ಸ್ನೇಹಿತರು ಒಬ್ಬೊಬ್ಬರೂ ಒಂದೊಂದು ಬಗೆಯಲ್ಲಿ ಮೆಚ್ಚಿಕೊಂಡಿದ್ದಾರೆ. ಸಹೋದ್ಯೋಗಿಯಾಗಿ ಡಿ.ವಿ.ಜಿ.ಯವರೊಡನೆ ದುಡಿದ ಕೆ. ಸಂಪದ್ಗಿರಿರಾಯರು ಅವರನ್ನು ಕೇವಲ ಮಾನವ ಸ್ತರದಲ್ಲಿ ಕಂಡು, ಬಲದೌರ್ಬಲ್ಯಗಳಲ್ಲೂ ಹೇಗೆ ಅವರ ವ್ಯಕ್ತಿತ್ವ ಕಂಗೊಳಿಸುತ್ತದೆ ಎಂಬುದನ್ನು ಗುರುತಿಸಿದ್ದಾರೆ. ಭಾಗವತ ರಾಮಾಯಣಗಳ ಮಹಾ ಆಂಗ್ಲಾನು-ವಾದಕರೂ ಪ್ರಸಿದ್ಧ ಪತ್ರಿಕೋದ್ಯಮಿಯೂ ಆಗಿದ್ದ ರಘುನಾಥಯ್ಯರ್ ಡಿ.ವಿ.ಜಿ. ಯವರಲ್ಲಿ ಸ್ವಪ್ರಯತ್ನ ಎಂದರೆ ಪುರುಷಕಾರಪೂರ್ವಕವಾದ ಪಾಂಡಿತ್ಯವನ್ನು ಗುರುತಿಸಿದ್ದಾರೆ. ಪಾಂಡುರಂಗಿ ಕೋದಂಡರಾಯರು ಡಿ.ವಿ.ಜಿ.ಯವರನ್ನು 'ಮೈಸೂರಿನ ರಾಜಾಜಿ' ಎಂದು ಮೆಚ್ಚಿಕೊಂಡರೆ, ಅವರನ್ನು ರಾಜಾಜಿ 'ಅಪೂರ್ವ ಮನುಷ್ಯ' ಎಂದು ವರ್ಣಿಸಿದ್ದಾರೆ. ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರು ಡಿ.ವಿ.ಜಿ. ಅವರಲ್ಲಿ ಪ್ರಕಟವಾದ ಸಹೃದಯರಸಿಕರನ್ನು ಕೊಂಡಾಡಿದ್ದಾರೆ. ಮಾಸ್ತಿಯವರು ಡಿ.ವಿ.ಜಿ.ಯವರ ಅಪರಿಗ್ರಹ ವ್ರತವನ್ನು ಮೆಚ್ಚಿಕೊಂಡರೆ ವಿದ್ವಾನ್ ರಂಗನಾಥ ಶರ್ಮರು ಅವರ ಅಸಾಧಾರಣ ಸ್ಮರಣಶಕ್ತಿಯನ್ನೂ ವಿದ್ವದ್ರಸಿಕತೆಯನ್ನೂ ಮೆಚ್ಚಿ ಕೊಂಡಿದ್ದಾರೆ. ಲಾಯರ್ ವಿ. ಕೃಷ್ಣಮೂರ್ತಿ ಡಿ.ವಿ.ಜಿ.ಯವರು ಓಡಾಡುವ ಒಂದು ವಿಶ್ವವಿದ್ಯಾನಿಲಯವೆನ್ನುತ್ತಾರೆ. ಜಿ. ಪಿ. ರಾಜರತ್ನಂ ಅವರನ್ನು ದೈವಸಂಪನ್ಮಾರ್ಗ ದರ್ಶಕರೆಂದು ಹೊಗಳಿದರೆ ಪಿ. ಸೀತಾರಾಮಯ್ಯನವರು ಡಿ.ವಿ.ಜಿ.ಯವರ ಕರ್ಮ ಕಾಲದ ಶಿಸ್ತು ಕ್ರಮಗಳನ್ನು ಹೊಗಳಿದ್ದಾರೆ. ಹೀಗೆ ಹಲವರು ಡಿ.ವಿ.ಜಿ.ಯವರ ವ್ಯಕ್ತಿತ್ವವೆಂಬ ವಜ್ರ ಒಂದೊಂದು ಪಕ್ಕದಿಂದಲೂ ತನ್ನ ಹೊಗರಸೆಯುವುದನ್ನು ಕಂಡವರು. ಅಂಥ ಸರಳತೆ ಜಟಿಲತೆಗಳಿಂದ ಕೂಡಿದ ಅನನ್ಯವಿಶಿಷ್ಟವಾದ ವ್ಯಕ್ತಿತ್ವ ಡಿ.ವಿ.ಜಿ.ಯವರದು.

ಆದರೆ ನನ್ನ ದೃಷ್ಟಿಯಲ್ಲಿ ಡಿ.ವಿ.ಜಿ. ತಮಗೆ ತಾವೇ ಶಿಲ್ಪಿಯಾಗಿ, ತಮಗೆ ತಾವೇ ಕೊಟ್ಟುಕೊಂಡ ಉಳಿಪೆಟ್ಟುಗಳನ್ನು ತಿಂದು ತಿಂದು ಇತರರು ಕೊಟ್ಟ ಪೆಟ್ಟು ಗಳನ್ನೂ ಹಾಗೆಯೇ ತಿಂದು ತಿಂದು ಬೆಸ್ಸುಗೆಗಳನ್ನು ಪಡೆದು ಪಡೆದು (ಜ್ಞಾಪಕ ಚಿತ್ರಶಾಲೆ, ಸಂಪುಟ 4, ಪುಟಗಳು 88–91) ತಮ್ಮ ವ್ಯಕ್ತಿತ್ವವನ್ನು ರೂಪಿಸಿ ಕೊಂಡವರು. ಜನದ ಬದುಕನ್ನೇ ಗುರುವಾಗಿ ಆಶ್ರಯಿಸಿ, ಜನದ ನಡುವೆ ಬಾಳುತ್ತ ಬೆಳೆದವರು. ಇನ್ನೊಬ್ಬರ ಮೆಚ್ಚಿಕೆಯಿಂದ ಹಿಗ್ಗಿದವರಲ್ಲ. ಉಬ್ಬಿದವರಲ್ಲ. ಇನ್ನೊಬ್ಬರ ತೆಗಳಿಕೆಯಿಂದ ಕುಗ್ಗಿದವರಲ್ಲ, ಮುದುಡಿಕೊಂಡವರಲ್ಲ. ತಮ್ಮ ಅಸ್ತಿತ್ವವೆಂಥಾದ್ದೋ ಅದನ್ನು ಕಾಲದೇಶಗಳಲ್ಲಿ ಅರಳಿಸಿಕೊಂಡು ಬಾಳುತ್ತ ನಲಿದವರು ; ಮತ್ತು ಇತರರು ಇಳೆಗೆ ಕೊಡುವ ಚಿತ್ರವಿಚಿತ್ರ ಸಂಪತ್ತುಗಳಲ್ಲಿ ಈಶ್ವರನ ಲೀಲೆಯನ್ನು ಗುರುತಿಸಿ ದವರು. ಜನಜೀವನವನ್ನು ಸರಿಯಾಗಿ, ದಿಟವಾಗಿ. ನೋಡುವವನೇ ಸಕಲ ಜೀವಗಳನ್ನಾಳುವ ಮೂಲತತ್ತ್ವವನ್ನರಿತವನೆನಿಸುತ್ತಾನೆ. ಸುಖದುಃಖಗಳನ್ನು ಮೀರಿ ಆಡುವುದೇ ಆಟದ ತಿರುಳು. ಈ ಆಟದ ಹದವೆಂಥಾದ್ದೆಂಬುದನ್ನು ತೋರಿಸುವ

ಕೃತಿಗಳನ್ನು ಡಿ.ವಿ.ಜಿ. ಬರೆದರು. ಬರಹಕ್ಕಿಳಿಯದ, ಇಳಿಸುವುದು ಸಾಧ್ಯವಾಗದ ಮಾತುಗಳನ್ನಾಡಿದರು. ಶೃಂಗಾರಾದಿ ರಸಗಳ ಮೆಟ್ಟಿಲುಗಳನ್ನೇರಿ ಕಟ್ಟಕಡೆಗೆ ಶಾಂತರಸಾಂಬುಧಿಯಲ್ಲಿ ತನ್ಮಯತೆಯನ್ನು ಅನುಭವಿಸಿದವರು ಅವರು. ನಿಮ್ಮ ಲ ಬುದ್ಧಿಗೆಟುಕಿಸಿಕೊಂಡ ಪರತತ್ತ್ವವನ್ನೊರೆದರು. ತತ್ತ್ವಾವಬೋಧೆಯಷ್ಟೇ ಸಾಕಾಗುವುದಿಲ್ಲ. ತತ್ತ್ವಾಚರಣೆಯ ಸೊಗಸನ್ನೂ ಹೆಚ್ಚುಗಾರಿಕೆಯನ್ನೂ ಜನಕ್ಕೆ ತಿಳಿಸಿ ಕೊಟ್ಟರು.

ಮಾನುಷದ ಚರಿತೆ ಪರಸತ್ತ್ವ ಸಾಕ್ಷಾತ್ಕವಿತೆ ।
ಕಾಣ್ಪುದಾತ್ಮ ಸ್ವಭಾವದುದ್ಗಮವ ॥
ಏನಾಶೆಯೇನು ಸಾಹಸವೇನು ಭಂಗಗಳು ! ।
ಅನುಭವದ ವೇದವದು—ಮಂಕುತಿಮ್ಮ ।

ಜೀವನವೆ ಪರಮಗುರು, ಮಿಕ್ಕ ಗುರುಗಳಿನೇನು ? ।
ಭಾವಸಂಸ್ಕಾರ ಜೀವಾನುಭವಗಳಿಗೆ ॥
ನೋವು ನಲಿವುಗಳೊಲೆಯು ಸೆಕೆಯೆ ನಿನ್ನಾತ್ಮಕ್ಕೆ ।
ಪಾಪಕವಿಧಾನವೆಲೊ—ಮರುಳು ಮುನಿಯ ॥

5. ರಾಷ್ಟ್ರಕ ಧರ್ಮ

ರಾಷ್ಟ್ರಕಧರ್ಮಾಚರಣೆಯೆಂಬುದು ಡಿ.ವಿ.ಜಿ.ಯವರ ದೃಷ್ಟಿಯಲ್ಲಿ ಮಮತಾ ವಿಸ್ತಾರಕವಾದ ಒಂದು ಯೋಗಸಾಧನ. ಪ್ರದೇಶನಿಷ್ಠೆ ಮೆಟ್ಟಲೇ ಹೊರತು ಗುರಿಯಲ್ಲ ; ಅಖಂಡ ಭಾರತ ನಿಷ್ಠೆಯೇ ಪ್ರಾದೇಶಿಕ ನಿಷ್ಠೆಗೆ ಬೆಲೆಯನ್ನು ಕೃಪೆ ಮಾಡತಕ್ಕದ್ದು. ಅಷ್ಟೇ ಅಲ್ಲ, ರಾಷ್ಟ್ರಭಕ್ತಿ ವಿಶ್ವಜಗದ್ಧಿತಕ್ಕೆ ಬಾಧಕವಾಗಬಾರದು. ಹೀಗೆ ನಿಷ್ಠೆಯ ಉತ್ತರೋತ್ತಮಸ್ತರಗಳನ್ನು ಪ್ರದೇಶಜನವೂ ರಾಷ್ಟ್ರಜನವೂ ಮನಸ್ಸಿನಲ್ಲಿ ಸರಿಯಾಗಿ ಅಳವಡಿಸಿಕೊಂಡು ಕೃತಾರ್ಥರಾಗಬೇಕು. ರವೀಂದ್ರನಾಥ ಠಾಕೂರರು ವಿದೇಶಪ್ರವಾಸವನ್ನು ಕೈಕೊಂಡಾಗಲೆಲ್ಲ ಈ ಎಚ್ಚರಿಕೆಯ ಮಾತನ್ನು ಹೇಳುತ್ತ ಸಂಕುಚಿತ ರಾಷ್ಟ್ರೀಯತಾ ಭಾವನೆಗಳನ್ನು ಖಂಡಿಸುತ್ತಿದ್ದರು—ಆರ್ಯ ಋಷಿ ಸಂಪ್ರದಾಯವನ್ನನುಸರಿಸಿ ಮಹಾನಾರಾಯಣೋಪನಿಷತ್ತಿನ ಒಂದು ಮಂತ್ರದಲ್ಲಿ (1-14) ರಾಷ್ಟ್ರಕಧರ್ಮಾವಲಂಬಿಯ ಮನಸ್ಸಿನ ಸವಿನೆಲೆಯನ್ನು ಸೂಚಿಸಿದೆ — "ಯತ್ರವಿಶ್ವಂ ಭವತ್ಯೇಕ ನೀಡವಮ್". (ಎಲ್ಲಿ ವಿಶ್ವಜಗತ್ತೆಲ್ಲವೂ ಜನರ ನಿವಾಸಕ್ಕಾಗಿ ಒಂದು ಗೂಡೋ...) ಇದನ್ನೇ ಒಬ್ಬ ಸುಭಾಷಿತಕಾರ ಹೇಳಿರುವುದು :

ಅಯಂ ನಿಜ ಪರೋ ವೇತ್ತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥

ಇದು ಡಿ.ವಿ.ಜಿ.ಯವರ ದೃಷ್ಟಿ. ರಾಷ್ಟ್ರಕ ಪ್ರಜೆಗೆ ಈ ಬಗ್ಗೆ ತಿಳಿವಳಿಕೆ ಕೊಡುವುದು ಗೋಖಲೆ ಸಂಸ್ಥೆಯ ಮುಖ್ಯಧ್ಯೇಯ. ಭರತ ಖಂಡಕ್ಕೆ ಸ್ವಾತಂತ್ರ್ಯ ಬಂದಾಗ ಡಿ.ವಿ.ಜಿ. ಬರೆದ ಭಾರತ ಅಭಿನಂದನ ಸ್ತವದ ಒಂದು ಪದ್ಯ ಹೀಗಿದೆ :

ಪೂರ್ಣಂ ಪೆರ್ಚುಗೆ ಲೋಕದೊಳ್ ತವ ಕಲಾ ಸಂಸಿದ್ಧಿಗಳ್ ಭಾರತೀ
ತೂರ್ಣಂ ವರ್ಧಿಕೆ ನವಪಲ್ಲವಂಗಳಿಂ ತ್ವದ್ವಾಙ್ಮಯೋದ್ಯಾನಗಳ್ ।
ವರ್ಣಚ್ಛಾಯೆ ಸಹಸ್ರಮಿರ್ಕೆ ತವ ಭೂಹಾ ದೀಪ್ತಿಯೊಳ್ ನಿನ್ನ ಯಾ
ಕರ್ಣಾಟಂ ಕಮನೀಯ ರತ್ನಪದಕಂ ರಾಜಿಕ್ಕೆ ಹಾರಂಗಳೊಳ್ ॥

(ಸ್ತವ 18)

ಸ್ವಾತಂತ್ರ್ಯ ಬಂದಮೇಲೆ ರಾಷ್ಟ್ರಕಪ್ರಜ್ಞೆ ನಾಡಿನಲ್ಲಿ ಕಡಮೆಯಾಗಿ ಒಡಕು 'ರಾಜಕೀಯ' ಹೆಚ್ಚಾಗಿಹೋಯಿತು. ಸಾರ್ವಜನಿಕರಲ್ಲಿ ನಾವು ಸಾತ್ತ್ವಿಕನನ್ನು ಕಾಣುವುದಕ್ಕೆ ಬದಲಾಗಿ ಪುಂಡನನ್ನು ನೋಡುತ್ತಿದ್ದೇವೆ. ಅರ್ಥವ್ಯವಸ್ಥೆ ಕಲುಷಿತವಾಗಿ ನಮ್ಮ ನಾಣ್ಯದ ಬೆಲೆ ಕುಸಿಯುತ್ತಿದೆ. ವ್ಯಕ್ತ್ಯಹಂತೆ ಬಲಿಯುತ್ತಿದೆ. ಡಿ,ವಿ.ಜಿ. ಯವರು ಸಾರ್ವಜನಿಕ ಮಾಸಪತ್ರಿಕೆಯಲ್ಲಿ ಎಚ್ಚರಿಸುತ್ತಲೇ ಇದ್ದರು. ಸದ್ಯಃ ಪ್ರಯೋಜನದಲ್ಲಿ ಆಸಕ್ತಿಯುಳ್ಳವರಿಗೆ ಪ್ರದೇಶಭಕ್ತಿಯೂ ಇಲ್ಲ, ರಾಷ್ಟ್ರಭಕ್ತಿಯೂ ಇಲ್ಲ. ವಿಶ್ವಭಕ್ತಿಯೂ ಇಲ್ಲ. ಹೀಗೆ ರಾಷ್ಟ್ರಕಧರ್ಮಾವಲಂಬನೆಯ ಕೊರತೆಯಿಂದಲೇ ಎರಡು ಮಹಾಯುದ್ಧವನ್ನು ಕಂಡೆವು. ಮೂರನೆಯ ಪ್ರಳಯೋಪಮವಾದ ಅಣ್ವಾಯುಧಗಳ ಪ್ರಯೋಗ ಭೀತಿಯಲ್ಲಿ ಜಗತ್ತಿನ ಸಾಮಾನ್ಯ ಪ್ರಜೆ ಬಾಳಬೇಕಾಗಿದೆ.

6. ಸಾರ್ಥಕ ಪಡದ ಒಂದು ಪ್ರಯೋಗ

ಶ್ರೀಮಾನ್ ವೈಕುಂಠ ಬಾಳಿಗಾ ಅವರು ಕರ್ನಾಟಕದ ವಿಧಾನ ಸಭಾಧ್ಯಕ್ಷ ರಾಗಿದ್ದಾಗ, ಡಿ.ವಿ.ಜಿ. ಶಾಸಕ ಭವನದಲ್ಲಿ ಒಂದು ಶಿಕ್ಷಣ ಶಿಬಿರವನ್ನು ಏರ್ಪಡಿಸಿದರು. ವಿಧಾನಸಭೆ ಪರಿಷತ್ತುಗಳ ಸದಸ್ಯರಿಗೆ ಇರುವ ಹೊಣೆ, ಅವರು ತಮ್ಮ ಕಾರ್ಯ ನಿರ್ವಾಹಕ್ಕೆ ಪಡೆದಿರಬೇಕಾದ ತಿಳಿವಳಿಕೆ ಮೊದಲಾದ ವಿಷಯಗಳನ್ನು ಕುರಿತು ತಜ್ಞರಿಂದ ಉಪನ್ಯಾಸಗಳನ್ನು ಕೊಡಿಸುವುದು ಶಿಕ್ಷಣ ಶಿಬಿರದ ಉದ್ದೇಶ. ವೈಕುಂಠ ಬಾಳಿಗಾ ಅವರೂ ಶಾಸಕ ಸಚಿವಾಲಯವೂ ಈ ಶಿಬಿರದ ಏರ್ಪಾಟನ್ನು ಸ್ವಾಗತಿಸಿ ಭರಿಸಬೇಕಾದ ವೆಚ್ಚಕ್ಕೆ ಹೊಣೆಯಾದರು. ಆದರೆ ಶಾಸಕರು ಕುತೂಹಲ ತೋರಿಸಲಿಲ್ಲ. ಇಂಥ ಶಿಬಿರಗಳಿಂದ ತಾವು ಹೆಚ್ಚಿಗೆ ಏನನ್ನೂ ಕಲಿತುಕೊಳ್ಳಬೇಕಾದದ್ದಿಲ್ಲ ಎಂಬ ಮನೋಧೋರಣೆಯಲ್ಲಿದ್ದು. ಆಹ್ವಾನ ಪತ್ರಕ್ಕೆ ಮನ್ನಣೆ ಕೊಡದೆ. ನಿಪುಣರ ಪ್ರವಚನಗಳನ್ನು ಅಸಡ್ಡೆಮಾಡಿ ತಮ್ಮ 'ಮಾನ್ಯಮಾನತೆ'ಯನ್ನು ಪ್ರದರ್ಶಿಸಿದರು. ಶಿಬಿರಕ್ಕೆ ಹಾಜರಾದ ಸದಸ್ಯರ ಸಂಖ್ಯೆಯನ್ನು ಎಣಿಸಲು ಎರಡು ಕೈಬೆರಳುಗಳೇ ಸಾಕಾಗಿದ್ದುವು. ಸದಸ್ಯ ಮಹಾಶಯರು ಪಕ್ಷಬಲವನ್ನಾಶ್ರಯಿಸಿ. ಬುದ್ಧಿಬಲವನ್ನು ಅನಾದರಿಸಿ ಆಡಂಬರ ಮಾಡುವಾಗ ಅಂಥವರಿಂದ ಅದೆಂಥ ಸಾರ್ವಜನಿಕ ಸೇವೆ

ಸಲ್ಲಬಹುದು? ಸಭೆಯನ್ನು ಮುಂದೂಡುವ ಪ್ರಸಂಗಗಳೂ ಬರುವುದುಂಟು. ಸಭೆಗೆ ಹಾಜರಾಗುವುದಕ್ಕಿಂತ ಗೈರುಹಾಜರಾಗುವುದೇ ಇವರಿಗೆ ವಾಡಿಕೆ. ಕೋರಂ ಇಲ್ಲದೆ ರಾಜ್ಯ ಶಾಸನ ಸಂಸ್ಥೆಗಳಿಗೆ ಅನ್ವಯಿಸುವ ಮಾತು ಕೇಂದ್ರ ಶಾಸನ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಪಕ್ಷ ರಾಜಕೀಯದ ದುಷ್ಪ್ರಭಾವಕ್ಕೆ ಸಿಕ್ಕಿ ದೇಶವು ಬಡವಾಗುತ್ತಿದೆ.

ಆದದ್ದರಿಂದಲೇ ಡಿ.ವಿ.ಜಿ.ಯವರು ವಿದ್ಯಾರಣ್ಯ ಮುನಿಗಳ **ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ** ಎಂಬ ಘನಾಶಯವನ್ನು ಗೋಖಲೆ ಸಂಸ್ಥೆಯ ಧ್ಯೇಯವಾಕ್ಯವಾಗಿ ಇರಿಸಿಕೊಂಡರು.

7. ವ್ಯಕ್ತಿತ್ವಕ್ಕೆ ಶೀಲಕವಚ

ಹೀಗೆ ಡಿ.ವಿ.ಜಿ. ಕವಿಯಾಗಿ, ರಸಿಕನಾಗಿ, ಸಹೃದಯ ವಿಮರ್ಶಕನಾಗಿ, ದೇಶ ಭಕ್ತನಾಗಿ, ಲೌಕಿಕರಾಜ್ಯ (ಸೆಕ್ಯುಲರ್) ಸಂಸ್ಥೆಯ ಕಾರ್ಯನಿರ್ವಾಹಕ್ಕೆ ಅವಶ್ಯವಾದ ಧಾರ್ಮಿಕ ಶಿಕ್ಷಣದಲ್ಲಿ ಆಸಕ್ತನಾಗಿ, ವೇದಾಭಿಮಾನಿಯಾಗಿ, ವಿದ್ವಜ್ಜನರ ಸಂಗದಲ್ಲಿದ್ದರೂ ಶ್ರೀಸಾಮಾನ್ಯ ಜನ ಹಿತೈಷಿಯಾಗಿ, ರಾಷ್ಟ್ರಕಧರ್ಮೋಪದೇಶಕನಾಗಿ ತಮ್ಮ ವ್ಯಕ್ತಿತ್ವವನ್ನು ಬೆಳಸಿಕೊಂಡವರು. ಅವರು ಎಂದಿಗೂ ತಮ್ಮ ವ್ಯಕ್ತಿತ್ವವನ್ನು ಬೆಲೆಯೇರಿಸಿಕೊಂಡು ಮಾರಾಟದ ಸರಕಾಗಿ ಮಾಡಿಕೊಂಡವರಲ್ಲ. ಶೀಲಶೌಚದ ವಜ್ರಕವಚವನ್ನು ತೊಟ್ಟ ವ್ಯಕ್ತಿತ್ವ ಅವರದು. ಅವರನ್ನು ನೋಡಿದಾಗಲೆಲ್ಲ ನನ್ನ ಸ್ಮರಣೆಗೆ ಬರತಕ್ಕದ್ದು ಈ ವೇದಮಂತ್ರ :—

ಮಹೇ ಚನ ತ್ವಾಂ ಪರಾ ಶುಲ್ಕಾಯ ದೇಯಾಮ್।
ನ ಸಹಸ್ರಾಯ, ನಾಯುತಾಯ, ವಜ್ರಿವೋ ನ ಶತಾಯ ಶತಾಮಘ॥
—ಋಗ್ವೇದ 8.1.5, ಸಾಮವೇದ 291

"ಓ ಪರಮೇಶ್ವರನೆ, ನಿನ್ನನ್ನು ನಾನು ಪರಮಶುಲ್ಕಕ್ಕೆ ಆಸೆಪಟ್ಟು ಮಾರುವು ದಿಲ್ಲ; ನೂರಕ್ಕಲ್ಲ, ಸಾವಿರಕಲ್ಲ, ಹತ್ತು ಸಾವಿರಕ್ಕಲ್ಲ, ಓ ಮಹಾಬಲನೆ. ಅನಂತ ವಿತ್ತರಾಶಿಗಲ್ಲ, ಅನಂತಸಂಪತ್ತಿಗೆ ಆಗರನೆ!"

ಇಲ್ಲಿ ವೇದರ್ಷಿ ವ್ಯಕ್ತಿತ್ವವನ್ನು ಭಗವದ್ವಿಭೂತಿಯ ಒಂದಂಶವೆಂದೇ ಪರಿಗಣಿಸಿ ದ್ದಾನೆಂಬುದನ್ನು ನಾವು ಗಮನಿಸಬೇಕು.

ಭಗವದ್ಗೀತೆಯ ಆಶಯವೂ ಇದೇ: ಯದ್ಯದ್ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ। ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಮ್॥ (10-41)

8. ಜ್ಞಾಪಕ ಚಿತ್ರಶಾಲೆಯ ಸೊಗಸು

ಡಿ.ವಿ.ಜಿ. ತಮ್ಮ ಸಂಪರ್ಕಕ್ಕೆ ಬಂದ ವ್ಯಕ್ತಿಗಳನ್ನು ಅವರವರ ಮಟ್ಟದಲ್ಲೇ ಮೆಚ್ಚಿಕೊಂಡವರು. ಸ್ತರತಾರತಮ್ಯವೇನೂ ಮುಖ್ಯವಲ್ಲ; **ಆಯಾ ಸ್ತರದಲ್ಲಿ ಎದ್ದು**

ಕಾಣುವ ನಿರ್ಮಲ ಸತ್ತ್ವ ಮುಖ್ಯ ಅವರ ದೃಷ್ಟಿಯಲ್ಲಿ. ಅವರು ಜ್ಞಾಪಕ ಚಿತ್ರಶಾಲೆಯಲ್ಲಿ ನೆನೆಯುತ್ತ ಹೋಗುವ ವ್ಯಕ್ತಿಗಳೆಲ್ಲರಲ್ಲೂ ಸಾಮಾನ್ಯವಾಗಿ ಭಗವದ್ವಿಭೂತಿಯ ಒಂದೊಂದು ಭಾವಮುಖವನ್ನು, ರಸಮುಖವನ್ನು, ಗುರುತಿಸಿ ತೋರಿಸತಕ್ಕವರು. ಸಂಸಾರಕ್ಕೆ ಅಂಟಿಕೊಂಡವರು, ಸಂಸಾರಾನುಭವದಲ್ಲಿ ಬಳಲಿದವರು, ಬಳಲಿ ಬಳಲಿ ಆರಳಿದವರು, ಬದುಕಿರುವಾಗಲೇ ಬಿಡುಗಡೆಯ ಸವಿಪಾಡನ್ನು ಬಾಳಿದವರು, ಇಂದ್ರಿಯದಾಸರು, ವಿಪರೀತಚರಿತರು, ಇಂದ್ರಿಯ ಸ್ವಾಮಿಗಳು —ನೀತಿ ಜೀವನದಲ್ಲಿ ಜಾಣತನ ತೋರುತ್ತ ಪರೀಕ್ಷಕರಿಗೆ ಬೆರಗುಗೊಡುವವರು, ನೀತಿಧರ್ಮದ ಮೆಟ್ಟಿಲುಗಳನ್ನೇರಿ ಗೌರೀಶಂಕರ ಶಿಖರದಲ್ಲಿರುವವರು, ಗ್ರಾಮಜನ, ಪಟ್ಟಣದ ಜನ, ಕೃಪಣರು, ಉದಾರಚರಿತರು. ರಸಿಕತೆಯ ವಿವಿಧ ಸ್ತರಗಳಲ್ಲಿ ವಿಹರಿಸುವವರು—ಇಂಥ ಎಲ್ಲರ ಬಗ್ಗೆ ವಿವರಗಳನ್ನು ಕೊಡುವಾಗ ಡಿ.ವಿ.ಜಿ. ನಲಿದರು, ಆಲಿಸಿದವರನ್ನು ನಲಿಯಿಸಿದರು ; ಇಂದೂ ಮುಂದೆಯೂ ಓದುವವರನ್ನು ನಲಿಯುವಂತೆ ಮಾಡುವ ನಿತ್ಯಸ್ವಾರಸ್ಯ ಜ್ಞಾಪಕ ಚಿತ್ರಶಾಲೆಯ ಎಂಟು ಸಂಪುಟಗಳಲ್ಲಿ ಹರಡಿಕೊಂಡಿದೆ. ಅವರ ಜ್ಞಾಪಕ ಚಿತ್ರಶಾಲೆ ಕಾಲೋಪಾಧಿಯನ್ನು ಮೀರಿ ಚಿರಕಾಲ ಕನ್ನಡ ಜನಕ್ಕೆ ಸಂತೋಷ ಕೊಡತಕ್ಕ ಸಾರಸ್ವತ ಸಂಪತ್ತು. ಇದು ಡಿ.ವಿ.ಜಿ.ಯವರ ಸ್ಮರಣಶಕ್ತಿ ಸೂಚಕ ಮಾತ್ರವಲ್ಲ, ವ್ಯಕ್ತಿತ್ವ ದ್ಯೋತಕವೂ ಹೌದು.

9. ಡಿ.ವಿ.ಜಿ ಯವರ ಸೌಂದರ್ಯಪ್ರಜ್ಞೆ

ಡಿ.ವಿ.ಜಿ. ಸತ್ಯಾರಾಧಕರಾಗಿದ್ದಂತೆ ಸೌಂದರ್ಯಾರಾಧಕರೂ ಆಗಿದ್ದರು. ಬದುಕಿನಲ್ಲಿ ಸೊಗಸು ಯಾರು ಯಾರಿಂದ ಹೊರಸೂಸುತ್ತವೆಯೆಂಬುದನ್ನು ಕನ್ನಡ. ಸಂಸ್ಕೃತ. ಆಂಗ್ಲ ಮಹಾಕಾವ್ಯಗಳನ್ನೋದಿ ಕಂಡುಕೊಂಡವರು. ತಮ್ಮ ಬದುಕನ್ನು ಸಿರಿಗೊಳಿಸಿಕೊಂಡು, ಸಂಪರ್ಕಕ್ಕೆ ಬಂದ ಸಮಕಾಲೀನ ಜನದಲ್ಲೂ ಚೆಲುವಿನ ಸವಿಯಿರುವುದನ್ನು ಕಂಡು ಒಕ್ಕಣಿಸಿದರು. ಜಗದ್ವಸ್ತುಗಳೆಲ್ಲ ಸುಂದರಗಳೆಂದು ಸಾರಿದರು. ಅವರ 'ವಸಂತ ಕುಸುಮಾಂಜಲಿ', 'ನಿವೇದನ'—ಎರಡೂ ಸೊಗಸಾದ ಬದುಕನ್ನು ಬಾಳಿದವರ ವ್ಯಕ್ತಿತ್ವಚಿತ್ರಗಳನ್ನು. ಹೃದಯ ಸೌಂದರ್ಯವನ್ನು, ಸಮೃದ್ಧವಾಗಿ ಒಳಗೊಂಡಿವೆ.

ಸೌಂದರ್ಯವು ಸತ್ಯದ ಸಖಿ. ಅನಿರ್ವಚನೀಯ, ನಿರ್ವಿಷಯ, ನಿರ್ವಿಶೇಷ ಎಂಬ ಕೊಂಡಾಟಕ್ಕೆ ಪಾತ್ರವಾದ ಪರಮ ಸತ್ಯದ ಹೊರಚಾಚಿಕೆಯೇ ಪರಮ ಸೌಂದರ್ಯ. ಪ್ರಕೃತಿಯಲ್ಲಿ ಭೂತತನ್ಮಾತ್ರಗಳಾಗಿ, ಮನುಷ್ಯನಲ್ಲಿ ಸತ್ತ್ವಾದಿ ತ್ರಿಗುಣಗಳೂ ಇಂದ್ರಿಯಗಳೂ ಇಂದ್ರಿಯಾರ್ಥಗಳೂ ಆಗಿ. ವಿಷಯಿಯ ಮುಂದೆ ಪ್ರಕಟವಾಗಿರತಕ್ಕದ್ದು ಸತ್ಯವೇ. ಹೀಗೆ ಅನಿರ್ವಚನೀಯ ಸತ್ಯವು ನಾಮರೂಪಗಳನ್ನು ತಳೆದಾಗ ಸುಂದರವೂ ಮಂಗಳವೂ ಆಗಿ, ನಿರ್ವಚನೀಯವೂ ಆಗುತ್ತದೆ. ಒಳಿತು ಕೇಡುಗಳೇ ಮೊದಲಾದ ಎಲ್ಲ ದ್ವಂದ್ವಗಳಲ್ಲಿಯೂ ಸೌಂದರ್ಯವನ್ನು ನೆಲೆಗೊಳಿಸಿ ವಿನೋದಪಡತಕ್ಕದ್ದೆ ಸತ್ಯ, ತಾನು ವಿಷಯಿಸ್ಥಾನದಲ್ಲಿ ನಿಂತು ಬದುಕನ್ನು ಒಂದು

ವ್ರತವಾಗಿ, ಪೂಜೆಯಾಗಿ (ಯಜ್ಞವಾಗಿ), ಜಗತ್ತನ್ನು ಸಾಧನಭೂಮಿಯಾಗಿ ತಿಳಿದು ಬಾಳಹೊರಟವನ ಕಣ್ಣಿಗೆ ಜಗದ್ವಸ್ತುಗಳಲ್ಲಿ ಸತ್ಯದ ಜೊತೆಗೆ ಸೌಂದರ್ಯವೂ ಏಕ ತತ್ತ್ವವಾಗಿ ಅರಿವಿಗೆ ಬರುತ್ತದೆ.

ಆದದ್ದರಿಂದಲೇ ಡಿ.ವಿ.ಜಿ.ಯವರು ಭಗವದ್ಗೀತೆಯನ್ನು ಜೀವನಧರ್ಮಯೋಗ ವೆಂದು ಕರೆದರು. ಜೀವನ ಸೌಂದರ್ಯವನ್ನು ಕಟ್ಟತಕ್ಕದ್ದು ಗೀತೆ. ಬೇಲೂರಿನ ಶಿಲಾಬಾಲಿಕೆಯರಲ್ಲಿ ಸೌಂದರ್ಯದ ಜೊತೆಗೆ ಭಕ್ತಿಯೋಗವನ್ನೂ ಕಂಡರು ಡಿ.ವಿ.ಜಿ. 'ನಿವೇದನ'ದ ಸೀಸಪದ್ಯಗಳಲ್ಲಿ ಶಿಲಾಬಾಲಿಕೆಯರ ಬಗ್ಗೆ ಮೆಚ್ಚಿಕೆಯನ್ನು ತಳೆದವರು. ಸೌಂದರ್ಯ ತತ್ತ್ವವನ್ನು ಸತ್ಯತತ್ತ್ವಕ್ಕೆ ಗಟ್ಟಿಕೊಂಡಿಯಿಕ್ಕಿ 'ಅಂತಃಪುರ ಗೀತ' ಮಾಲಿಕೆಯನ್ನು ಬೆಳಸಿದರು; 'ಶೃಂಗಾರ ಮಂಗಳ'ದಲ್ಲಿ ವಿಶ್ವಸನೀಯಗಳಾದ ಸಾಕ್ಷ್ಯಮಣಿಗಳನ್ನು ಕೋದು ಸತ್ಯಸೌಂದರ್ಯಗಳಿಗಿರುವ ಏಕಾನನ್ಯಭಾವವನ್ನು ಪ್ರತಿಪಾದಿಸಿದರು. ಅವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಪ್ರಬಂಧಮಾಲೆಯಲ್ಲಿ ಕಿರೀಟಪ್ರಾಯವಾಗಿ ತೋರುವ 'ಸೌಂದರ್ಯ ಸಂಹಿತೆ' ಯಿಂದ ಒಂದು ವಾಕ್ಯವೃಂದವನ್ನಿಲ್ಲಿ ಎತ್ತಿಕೊಡಬಹುದು :—" ಸೌಂದರ್ಯವೆಂಬುದು ಮಾಯೆ ; ಸೃಷ್ಟಿಮೂಲ ಶಕ್ತಿಯ ಒಂದು ವಿಶೇಷ ವಿಜೃಂಭಣೆ, ವೇದಾಂತದ ಭಾಷೆ ಬೇಕಾದರೆ, ಅದು ಪರಬ್ರಹ್ಮವೆಂಬ ಅನಂತಮುಖ ವಜ್ರದ ಒಂದಾನೊಂದು ಮುಖದ ಒಂದಾನೊಂದು ಹೊಳಪು. ಆದಕಾರಣದಿಂದ ಸೌಂದರ್ಯದ ಶಕ್ತಿಗೆ ಅಧೀನ ರಾಗದವರು ಯಾರೂ ಇರರು...ನಾನಾ ಸೌಂದರ್ಯಗಳ (ಪ್ರಿಯಹಿತಗಳೆಂಬ) ಯೋಗ್ಯತಾ ತಾರತಮ್ಯಗಳನ್ನು ತಿಳಿದು ಅವನ್ನು ನಮ್ಮ ಜೀವನಕ್ಕೆ ಅನ್ವಯಿಸಿ ಕೊಳ್ಳುವುದೇ ಧರ್ಮರಹಸ್ಯ ; ಸೌಂದರ್ಯವನ್ನು ಅಲ್ಲಗಳೆಯುವುದಲ್ಲ. ಈ ರಹಸ್ಯ ವನ್ನು ಬಿಚ್ಚಿತೋರಿಸಲು ಉತ್ತಮ ಕಾವ್ಯವೊಂದೇ ಸಾಧಾರಣ ಮಾನವರಿಗಿರುವ ಸಾಧನ."

ಹೀಗೆ ಡಿ.ವಿ.ಜಿ.ಯವರದು ಸಮೃದ್ಧವಾದ ವ್ಯಕ್ತಿತ್ವ. ಅವರ ಒಳಹೊರ ಬದುಕುಗಳೆರಡೂ ಚೆಲುವಾದವು. ಮನೀಷಿಗಳಿಗೆ ಮಾತ್ರ ಸಾಧ್ಯವಾಗುವ ಸಾರಸ್ವತ ತಪಸ್ಸನ್ನು ಅವರು ನೆರವೇರಿಸಿದರು. ಇಂಥ ಜನಹಿತೈಷಿಗಳಾದ ಮನೀಷಿಗಳಿಗೆ ಪಕ್ಷಪಾತ ತೋರಿಸತಕ್ಕದ್ದು ವೇದವಾಕ್ಕು. ವಿಶಾರದ ಪ್ರಜ್ಞೆಯ ಬಾಹ್ಯರೂಪವೇ ಆದ ದಿವ್ಯವಾಕ್‌ಶಕ್ತಿ ಹೇಳುತ್ತದೆ :—" ಅಹಮೇವ ಸ್ವಯಮಿದಂ ವದಾಮಿ। ಜುಷ್ಟಂ ದೇವೇಭಿರುತ ಮಾನುಷೇಭಿಃ॥ ಯಂ ಕಾಮಯೇ ತಂ ತಮುಗ್ರಂ ಕೃಣೋಮಿ। ತಂ ಬ್ರಾಹ್ಮಣಂ ತಮೃಷಿಂ ತಂ ಸುಮೇಧಾಮ್॥ (ಋಗ್ವೇದ 10·125·5) (ನಾನೇ ಸ್ವಯಂ ಇದನ್ನು ಹೇಳುತ್ತಿದ್ದೇನೆ. ಇದು ದೇವತೆಗಳಿಗೂ ಮನುಷ್ಯರಿಗೂ ಪ್ರಿಯವಾಗುವಂಥ ಮಾತು. ಯಾವನು ನನಗೆ ಇಷ್ಟನೋ ಅವನನ್ನು ಉಗ್ರನನ್ನಾಗಿ (ಬಲಿಷ್ಠನನ್ನಾಗಿ) ಮಾಡುತ್ತೇನೆ. ಅವನನ್ನು ಬ್ರಹ್ಮಜ್ಞನನ್ನಾಗಿ. ಋಷಿಯನ್ನಾಗಿ. ಮೇಧಾವಿಯನ್ನಾಗಿ ಮಾಡುತ್ತೇನೆ).

ಡಿ.ವಿ.ಜಿ. – ಪಾಂಡಿತ್ಯ, ವೈಚಾರಿಕತೆ ಮತ್ತು ವ್ಯಕ್ತಿತ್ವ

ಎ. ಎನ್. ಮೂರ್ತಿರಾವ್

ಡಿ.ವಿ.ಜಿ. ಅವರ ವ್ಯಕ್ತಿತ್ವದಲ್ಲಿ—ಅವರ ಮಾತಿನಲ್ಲಿಯೇ ಆಗಲಿ, ಬರಹದಲ್ಲಿಯೆ ಆಗಲಿ—ಪ್ರಮುಖವಾಗಿ ಕಂಡುಬರುತ್ತಿದ್ದ ಪಾಂಡಿತ್ಯವನ್ನೂ, ವೈಚಾರಿಕತೆಯನ್ನೂ ಪ್ರೊ॥ ಎ. ಎನ್. ಮೂರ್ತಿರಾವ್ ಅವರು ಉದಾಹರಣ ಪೂರ್ವಕವಾಗಿ ಹೂವಿನಂತೆ ಹಗುರವಾದ ಚೆಲುವಾದ ಶೈಲಿಯಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಸೃಜನಶೀಲ ಸಾಹಿತ್ಯ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಪ್ಲೇಟೋ, ಪಾಶ್ಚಾತ್ಯ ತತ್ತ್ವಶಾಸ್ತ್ರ, ಸಂಸ್ಕೃತ ಸಾಹಿತ್ಯ, ವೇದಾಂತ, ಇತರ ಶಾಸ್ತ್ರ ಗ್ರಂಥಗಳು—ಇವುಗಳಲ್ಲಿ ಡಿ.ವಿ.ಜಿ. ಪಡೆದುಕೊಂಡಿದ್ದ ನಿಸ್ಸೀಮ ಪಾಂಡಿತ್ಯವನ್ನು ಪರಿಚಯ ಮಾಡಿಕೊಟ್ಟು, ಅವರ ಸ್ನೇಹ ಪ್ರಪಂಚದ ಸ್ವರೂಪವನ್ನು ಮೂರ್ತಿರಾಯರು ತಿಳಿಯಪಡಿಸಿದ್ದಾರೆ. ಡಿ.ವಿ.ಜಿ. ಯವರಲ್ಲಿ ಮೂರ್ತಿರಾಯರಿಗೆ ಅಪಾರ ಗೌರವ. ಆದರೂ ಡಿ.ವಿ.ಜಿ. ಅವರು ವಿನೋದಾರ್ಥವಾಗಿ ಎಗ್ಗಿಲ್ಲದೆ ಕೆಲವು ಸಭ್ಯವಲ್ಲದ ಪದಗಳನ್ನು ಹೇಗೆ ಬಳಸುತ್ತಿದ್ದರು ಎನ್ನುವುದನ್ನು ತಿಳಿಸಲು ಹಿಂದೆಗೆದಿಲ್ಲ. ಡಿ.ವಿ.ಜಿ. ಅವರ ವ್ಯಕ್ತಿತ್ವದಲ್ಲಿ. ಒಂದು ಕಡೆ ಭಾರತದ ಸನಾತನ ಧಾರ್ಮಿಕ ಮೌಲ್ಯಗಳಲ್ಲಿ ಶ್ರದ್ಧಾಭಕ್ತಿ ; ಇನ್ನೊಂದು ಕಡೆ ಪಾಶ್ಚಾತ್ಯ ಸಾಹಿತ್ಯ ಗ್ರಂಥಗಳು, ಶಾಸ್ತ್ರ ಗ್ರಂಥಗಳು. ವೈಜ್ಞಾನಿಕ ಸಾಧನೆಗಳು ಇವುಗಳ ಪ್ರಭಾವದಿಂದ ಬೆಳಸಿಕೊಂಡ ವೈಚಾರಿಕತೆ ; ಅವರ ವ್ಯಕ್ತಿತ್ವದಲ್ಲಿ ಇವೆರಡಕ್ಕೂ ಇದ್ದ ಸಂಘರ್ಷವನ್ನು ವಸ್ತುನಿಷ್ಠವಾಗಿ ವ್ಯಕ್ತಿಗೌರವವನ್ನು ಬದಿಗಿಟ್ಟು ವಿಮರ್ಶೆ ಮಾಡಿದ್ದಾರೆ, ಶ್ರೀಯುತರು.

ಒಂದಿನ ಮೈಸೂರು ಸಂಸ್ಥಾನದ ಸಾಹಿತ್ಯ ಕ್ಷೇತ್ರದಲ್ಲಿ ಈ ಶತಮಾನದ ಮೂರನೆಯ ದಶಕದ ವೇಳೆಗಾಗಲೆ ಹಿರಿಯರು. ದಿಗ್ದಂತಿಗಳು ಎನ್ನಿಸಿಕೊಂಡಿದ್ದವರೆಂದರೆ : ಬಿ. ಎಂ. ಶ್ರೀಕಂಠಯ್ಯನವರು. ಡಿ. ವಿ. ಗುಂಡಪ್ಪನವರು. ಮಾಸ್ತಿ ವೆಂಕಟೇಶಯ್ಯಂಗಾರ್ಯರು. ಟಿ. ಎಸ್. ವೆಂಕಣ್ಣಯ್ಯನವರು. ಎ. ಆರ್. ಕೃಷ್ಣಶಾಸ್ತ್ರಿಗಳು ಮತ್ತು ಎಂ. ಆರ್. ಶ್ರೀನಿವಾಸಮೂರ್ತಿಗಳು. ಇವರೆಲ್ಲರ ಪರಿಚಯ ಭಾಗ್ಯ—ಹತ್ತಿರದ ಪರಿಚಯ ಭಾಗ್ಯ—ನನಗಿತ್ತು. ಬಿ.ಎಂ.ಶ್ರೀ.ಯವರೊಡನೆ ಆಗಾಗ ಸ್ವಾತಂತ್ರ್ಯ ವಹಿಸಿ ಮಾತಾಡಿದ್ದುಂಟಾದರೂ ಸಲಿಗೆಯಿತ್ತೆಂದು ಹೇಳಲಾರೆ—ಅವರು

ನನಗೆ ಪಾಠ ಹೇಳಿದ ಗುರುಗಳು. ಯಾವ ಮಾತಾಡಿದರೆ ಹೆಚ್ಚೊ ಯಾವುದು ಕಡಮೆಯೊ ಎಂಬ ಶಂಕೆಯಿರುತ್ತಿತ್ತು. ಉಳಿದವರೆಲ್ಲರೊಡನೆಯೂ—ಅವರು ನನಗಿಂತ ಬಹಳ ಹಿರಿಯರಾದರೂ— ಹಿಂಜರಿಕೆಯೇನೂ ಇಲ್ಲದೆ ವಿನಯ ಬೆರೆತ ಸಲಿಗೆಯಿಂದ ವ್ಯವಹರಿಸುವುದು ಸಾಧ್ಯವಾಗಿತ್ತು. ಅವರೊಡನೆ ಎಷ್ಟೋ ಸಮಸ್ಯೆಗಳನ್ನು ಬಿಚ್ಚು ಮನಸ್ಸಿನಿಂದ ಚರ್ಚಿಸಿದ್ದುಂಟು. ಆದ್ದರಿಂದ ಅವರನ್ನು ಚೆನ್ನಾಗಿ ಬಲ್ಲೆ ಎಂದು ಹೇಳುವುದು ಸಾಧ್ಯ. ಎಲ್ಲರೂ ಉನ್ನತ ವ್ಯಕ್ತಿಗಳು : ಕನ್ನಡಿಗರ ಗೌರವ ಕೃತಜ್ಞತೆ ಗಳು ಅವರೆಲ್ಲರಿಗೂ ಸಲ್ಲಬೇಕು.

ಅವರಲ್ಲಿ ಗುಂಡಪ್ಪನವರೊಬ್ಬರು ಹೊರತು ಉಳಿದವರೆಲ್ಲ ಸರ್ಕಾರಿ ಕೆಲಸ ದಲ್ಲಿದ್ದವರು. ಜೀವಿಕೆಗಾಗಿ ಅವರು ಹೆಣಗಬೇಕಾಗಿರಲಿಲ್ಲ. ಎಲ್ಲರೂ ಕಾಲೇಜು ಶಿಕ್ಷಣ ಪಡೆದು ಡಿಗ್ರಿಗಳನ್ನು ತೆಗೆದುಕೊಂಡವರು. ಮಾಸ್ತಿಯವರು ವಿನಾ ಉಳಿದ ವರು ಹೈಸ್ಕೂಲಿನಲ್ಲೋ ಕಾಲೇಜಿನಲ್ಲೋ ಅಧ್ಯಾಪಕರಾಗಿದ್ದವರು. ಅವರೆಲ್ಲರಿಗೂ ಗ್ರಂಥ ವ್ಯಾಸಂಗ ಪ್ರಿಯವಾದದ್ದು ; ಪ್ರಿಯವಲ್ಲದಿದ್ದರೂ ಅವರು ವ್ಯಾಸಂಗವಿಲ್ಲದೆ ಬದುಕುವಂತಿರಲಿಲ್ಲ—ಪಾಠ ಹೇಳಲು ವೇದಿಕೆಯನ್ನು ಹತ್ತಿದಾಗಲೆಲ್ಲ ಅವರೊಂದು ಪರೀಕ್ಷೆಯನ್ನು ಎದುರಿಸಬೇಕಷ್ಟೆ ! ಅಂದಮೇಲೆ ಪಾಂಡಿತ್ಯ ಅವರಲ್ಲಿ ಸಹಜ, ನಿರೀಕ್ಷಿಸಬಹುದಾದದ್ದು. ಅವರಿದ್ದ ವಾತಾವರಣವೇ ಪಾಂಡಿತ್ಯದ. ಬುದ್ಧಿಜೀವಿಗಳ ವಾತಾವರಣ.

ಡಿ.ವಿ.ಜಿ.ಯವರ ಬದುಕು ಇವರೆಲ್ಲರದ್ದಕ್ಕಿಂತ ಭಿನ್ನರೀತಿಯದು. ಅವರು ವಿದ್ಯಾರ್ಥಿಯಾಗಿ ಕಾಲೇಜಿನ ನೆಲವನ್ನು ತುಳಿದವರಲ್ಲ. ಅವರು ಪಾಸು ಮಾಡಿದ್ದು 'ಐದು ರೂಪಾಯಿನ ಪರೀಕ್ಷೆ' (ಲೋವರ್ ಸೆಕೆಂಡರಿ) ಯೊಂದೇ. ಅಂದಮೇಲೆ ಅವರಿಗೆ ಕೈತುಂಬ ಸಂಬಳ ಬರುವ ಕೆಲಸ ಸಿಕ್ಕುವುದು ಅಸಾಧ್ಯ. ಡಿಗ್ರಿಗಳು. ದೊಡ್ಡ ಕೆಲಸ—ಇವುಗಳಿಂದಾಗಿ ಬರುವ ಬುದ್ಧಿಜೀವಿಗಳ ಸಹವಾಸ. ವಾತಾವರಣ—ಇವು ಸಾಮಾನ್ಯವಾಗಿ ಗುಂಡಪ್ಪನವರಂಥವರಿಗೆ ದೊರೆಯುವುದು ಕಷ್ಟ. ಅವರ ಪಾಂಡಿತ್ಯ ನೆರವಿಲ್ಲದ ಸ್ವಪ್ರಯತ್ನದಿಂದ ಸಂಪಾದಿಸಿದ್ದು. ಅದರಿಂದಾಗಿ ಮೇಲೆ ಹೇಳಿದ ವಾತಾವರಣ ತಾನಾಗಿ ಅವರನ್ನು ಹುಡುಕಿಕೊಂಡು ಬರುವಂತಾಯಿತು !

ಅವರ ವೃತ್ತಿ—ಯಾವುದರಿಂದ ಅವರು ತಮ್ಮ ಜೀವಿಕೆಯನ್ನು ಸಂಪಾದಿಸಿ ದರೋ ಅದು—ಯಾವುದು ? 'ಪತ್ರಿಕೋದ್ಯೋಗ' ಎನ್ನಬೇಕೇನೊ. "ನಾನು 'ಸೂರ್ಯೋದಯ' ಪತ್ರಿಕೆಯನ್ನು ನಂಬಿಕೊಂಡು ಸಂಸಾರ ಹೂಡಿದೆ. ಪತ್ರಿಕೆ ನಿಂತುಹೋಯಿತು. ಈಗ ಉದ್ಯೋಗಕ್ಕಾಗಿ ಪರದಾಡುತ್ತಿದ್ದೇನೆ" ಎಂದು ಅವರು ಎನ್. ನರಸಿಂಹಮೂರ್ತಿಗಳಿಗೆ ಹೇಳಿದರಂತೆ. ಯಾವ ಪತ್ರಿಕೆಯನ್ನೂ ಅವರು ಹತ್ತಾರು ವರ್ಷ ಸಂತತವಾಗಿ ನಡೆಸಿದರೆಂದು ಹೇಳುವಂತಿಲ್ಲ. ಜನರ ಮನಸ್ಸನ್ನು ಸುಲಭವಾಗಿ ತಾಗುವ. ಕಲಕುವ. Sensational ಪತ್ರಿಕೆಗಳನ್ನು ಪ್ರಕಟಿಸಿದ್ದರೆ ಸಂಪಾದನೆ ತಕ್ಕಮಟ್ಟಿಗಾದರೂ ಆಗುತ್ತಿತ್ತೇನೊ—ಅದೂ ಸಂದೇಹವೇ,

ಓದುಗರೇ ಕಡಮೆಯಿದ್ದ ಆ ಕಾಲದಲ್ಲಿ. ಡಿ.ವಿ.ಜಿ.ಗೆ ಪ್ರಿಯವಾದದ್ದು Sensational ಅಲ್ಲ. ಅವರ ದೃಷ್ಟಿಯೇನೆಂಬುದನ್ನು ಅವರೇ ನಿರೂಪಿಸಿರುವ ಪ್ರಸಂಗವೊಂದು ಸ್ಪಷ್ಟಪಡಿಸುತ್ತದೆ : 'ಯುನೈಟೆಡ್ ನೇಷನ್ಸ್' ಅಸ್ತಿತ್ವಕ್ಕೆ ಬಂದ ಕಾಲದಲ್ಲಿ ಅವರಿಗೆ ತೋರಿತಂತೆ : "ವಿಶ್ವಶಾಂತಿಗಾಗಿ ನಾವು ಏನೂ ಮಾಡಬೇಡವೆ?...... ಒಳ್ಳೆಯ ಪ್ರಪಂಚದ ರೂಪುರೇಖೆಗಳನ್ನು ಪ್ರತ್ಯಕ್ಷವಾಗಿ ನಕಾಶೆ ಮಾಡಿ ತೋರಿಸ ಬೇಡವೆ? ಈ ಮಹಾ ಪ್ರಯತ್ನಕ್ಕೆ ಮೀಸಲಾಗಿ ಒಂದು ಪತ್ರಿಕೆ ಆವಶ್ಯಕ." ತಮ್ಮ ಉದ್ದೇಶವನ್ನು ವಿವರಿಸಿ, ರಾಜಗೋಪಾಲಾಚಾರಿಯವರ ಸಲಹೆ ಬೇಡಿದರು. ಸಿ. ಆರ್. ಎರಡೇ ಪಂಕ್ತಿ ಉತ್ತರ ಬರೆದರು : "ಬೇಡ. ಈಗಾಗಲೇ ಬೇಕಾದಷ್ಟು ಕೈಸುಟ್ಟುಕೊಂಡಿದ್ದೀ." ಡಿ.ವಿ.ಜಿ. ಹೇಳುತ್ತಾರೆ : "ಈ ಉಪದೇಶವನ್ನು ಅಂಗೀಕರಿಸಿದೆ. ಆದದ್ದರಿಂದ ಈಗ ಈ ಲೇಖನ ಬರೆಯುವುದು ಸಾಧ್ಯವಾಗಿದೆ." ಪತ್ರಿಕೋದ್ಯಮದಿಂದ—ವಾಸ್ತವವಾಗಿ ಯಾವ ಉದ್ಯಮದಿಂದಲೂ—ಅವರು ಶ್ರೀಮಂತರಾಗಲಿಲ್ಲ. ಅವರ ಶ್ರೀಮಂತಿಕೆ ಏನಿದ್ದರೂ ಪಾಂಡಿತ್ಯದಲ್ಲಿ, ಜೀವನೋ-ತ್ಸಾಹದಲ್ಲಿ, ಸಹಮಾನವರಿಗೆ ಕೊಟ್ಟ ಮತ್ತು ಅವರಿಂದ ಪಡೆದ ವಿಶ್ವಾಸದಲ್ಲಿ.

ಡಿ.ವಿ.ಜಿ. ವೇದಿಕೆಯ ಮೇಲೆ ನಿಂತು ಭಾಷಣ ಮಾಡಿದಾಗ ಪಾಂಡಿತ್ಯ ಪ್ರದರ್ಶನವೇನೂ ಇರುತ್ತಿರಲಿಲ್ಲ. ಅತ್ಯವಶ್ಯಕವೆಂದು ತೋರಿದಾಗ, ಬಹಳ ಪರಿಣಾಮಕಾರಿಯಾಗುತ್ತದೆ ಎಂದು ತೋರಿದಾಗ ಮಾತ್ರ, ಉದಾಹೃತ ವಾಕ್ಯಗಳು ಬರುತ್ತಿದ್ದವು. ಉಳಿದಂತೆ ಅವರ ಗಮನವೆಲ್ಲ ವಾದದ ಸುಸಂಬದ್ಧತೆಯ ಮೇಲೆಯೇ ನೆಟ್ಟಿರುತ್ತಿತ್ತು. ಹಾಸ್ಯಕ್ಕಾಗಿ ಹಾಸ್ಯ, ಪ್ರದರ್ಶನಕ್ಕಾಗಿ ಉದ್ಧರಣ—ಇವು ಅವರಿಗೆ ಹಿಡಿಸವು. ಆದ್ದರಿಂದ ಅವರ ಗ್ರಂಥಗಳನ್ನು ಓದಿದವರಿಗೆ ಹೊರತು ಇತರರಿಗೆ ಅವರ ಪಾಂಡಿತ್ಯವೆಷ್ಟೆಂದು ತಿಳಿಯುತ್ತಿರಲಿಲ್ಲ. ಒಂದು ಸಂದರ್ಭದಲ್ಲಿ ಮಂತ್ರಿಗಳೊಬ್ಬರು ಡಿ.ವಿ.ಜಿ.ಯನ್ನು ಕುರಿತು ಮಾತಾಡಬೇಕಾಯಿತು. ಭಾಷಣವನ್ನು ಬರೆದುಕೊಡುವ ಕೆಲಸ ನನ್ನ ಪಾಲಿಗೆ ಬಂತು. ಆ ಭಾಷಣವಾದ ಮಾರನೆಯ ದಿನ ಡಿ.ವಿ.ಜಿ. ನಗುತ್ತ ನನ್ನನ್ನು ಕೇಳಿದರು : "ನಿಜ ಹೇಳಿ, ಆ ಭಾಷಣ ಬರೆದವರು ನೀವು ತಾನೆ?" ಗುಟ್ಟು ರಟ್ಟಾಯಿತೆಂದು ತಿಳಿದ ನಾನು ಒಪ್ಪಿಕೊಂಡೆ. "ತಮಗೆ ಹೇಗೆ ತಿಳಿಯಿತು, ಸಾರ್?" ಎಂದು ಕೇಳಿದೆ. ಅವರ ಉತ್ತರ : "ಒಂದು ನಿಮ್ಮ ಶೈಲಿ ; ಅದಕ್ಕಿಂತ ಹೆಚ್ಚಾಗಿ ನೀವು 'ಡಿ.ವಿ.ಜಿ.ಯವರಿಗೆ ಅತ್ಯಂತ ಪ್ರಿಯವಾದ ತೈತ್ತಿರೀಯೋಪನಿಷತ್ತು' ಎನ್ನುತ್ತ ಅದರಿಂದ ಉದಾಹರಿಸಿದ್ದಿರಿ. ಅದು ನನಗೆ ಅಷ್ಟು ಪ್ರಿಯವೆಂದು ಯಾರಿಗೂ ತಿಳಿಯದು. ತಿಳಿದಿದ್ದರೆ ನಿಮಗೆ ಮತ್ತು ನಮ್ಮ ರಾಯರಿಗೆ." ('ನಮ್ಮ ರಾಯರು' ಎಂದರೆ ಶ್ರೀ ನಿಟ್ಟೂರು ಶ್ರೀನಿವಾಸರಾಯರು). ಅವರು ಹೇಳಿದ್ದು ನಿಜ. ಅವರು ಮಾತು ಮಾತಿಗೆ ಉಪನಿಷತ್ತನ್ನಾಗಲಿ ಕವಿಪಂಕ್ತಿಗಳನ್ನಾಗಲಿ ಕಿವಿ ಹಿಡಿದು ಎಳೆ ತರುತ್ತಿರಲಿಲ್ಲ.

ಆದರೆ ಸಂಭಾಷಣೆ ಕವಿಯೊಬ್ಬನನ್ನು ಕುರಿತದ್ದೇ ಆದರೆ ಉದ್ಧರಣ ಅನಿವಾರ್ಯವಾಗುತ್ತದೆ. ಒಂದು ದಿನ ಮಾತು ವಿಕ್ಟೋರಿಯನ್ ಕವಿಗಳ ಕಡೆಗೆ

ತಿರುಗಿತ್ತು. ಆವತ್ತು ಅವರು ಸ್ವಿನ್‌ಬರ್ನ್‌ನ "When the hounds of spring are on winter's traces" ಎಂದು ಮೊದಲಾಗುವ ಪದ್ಯವನ್ನು ಉದಾಹರಿಸಿ ತಾವು ಆ ಕವಿಯ 'ಆ್ಯನಪೀಸ್ಟ್' (anapaest) ಲಯಕ್ಕೂ ವಾಗ್ವಿಜೃಂಭಣೆಗೂ ಮರುಳಾಗಿ ಅವನನ್ನು ಅಟ್ಟಕ್ಕೆ ಏರಿಸಿದ್ದನ್ನೂ, ಕೆಲವು ವರ್ಷಗಳು ಕಳೆದ ಮೇಲೆ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡದ್ದನ್ನೂ ಪ್ರಸ್ತಾಪಿಸಿದರು. ಅವರು ಇಂಗ್ಲಿಷ್ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದರೆಂಬುದು ಆ ದಿನಕ್ಕೆ ಮುಂಚೆ ನನಗೆ ತಿಳಿದಿರಲಿಲ್ಲ. ತಿಳಿದು ಆಶ್ಚರ್ಯವಾಯಿತು.

ಅವರಿಗಿದ್ದ ಇಂಗ್ಲಿಷ್ ಸಾಹಿತ್ಯದ ಪರಿಚಯ ವಿಸ್ತಾರವಾದದ್ದೆಂದು ಧೈರ್ಯವಾಗಿ ಹೇಳಬಹುದು. ಜಾರ್ಜ್ ಎಲಿಯಟ್, ಡಿಕನ್ಸ್. ಥ್ಯಾಕರೆ. ಹಾರ್ಡಿ ಮೊದಲಾದ ಕಾದಂಬರಿಕಾರರು ; ಬೇಕನ್, ಆ್ಯಡಿಸನ್, ಸ್ಟೀಲ್, ರಸ್ಕಿನ್, ಕಾರ್ಲೈಲ್, ಆರ್ನಲ್ಡ್, ಹ್ಯಾಸ್‌ಲಿಟ್—ಇವರೆಲ್ಲರ ಮಾತೂ ಒಂದಲ್ಲ ಒಂದು ದಿನ ಬಂದದ್ದು ನೆನಪಿದೆ. ಇಂಗ್ಲಿಷ್ ಕವಿಗಳಲ್ಲಿ ಮುಖ್ಯರಾದವರನ್ನು ಅವರು ಬಹಳ ಆಸಕ್ತಿಯಿಂದ ಓದಿದ್ದರು, ಷೇಕ್‌ಸ್ಪಿಯರಂತೂ ಸರಿಯೇ ಸರಿ. ಬೈರನ್, ಬರ್ನಾರ್ಡ್ ಷಾ, ಬರ್ಟ್ರಂಡ್ ರಸಲ್—ಇವರ ವಿಷಯದಲ್ಲಿ ಅವರಿಗೆ ಅಷ್ಟೇನೂ ಆದರವಿದ್ದಂತೆ ಕಾಣಲಿಲ್ಲ. ಮತಧರ್ಮ, ದೇವರು, ಮುಂತಾದ ವಿಷಯಗಳಲ್ಲಿ ಅವರ ಅಭಿಪ್ರಾಯಕ್ಕೂ ರಸಲ್‌ನದಕ್ಕೂ ಉತ್ತರ-ದಕ್ಷಿಣ ಧ್ರುವಗಳಿಗಿರುವಷ್ಟು ಅಂತರ ! ಇಂಥ ಸಂದರ್ಭಗಳಲ್ಲಿ ಅವರ ದೃಷ್ಟಿ ಸಂಕುಚಿತ ಎನ್ನಿಸುತ್ತಿತ್ತು.

ಸೃಜನಶೀಲ ಸಾಹಿತ್ಯ ಮಾತ್ರವಲ್ಲದೆ ಅವರು ವಿಚಾರಸಾಹಿತ್ಯವನ್ನೂ ಬಹಳ ಉತ್ಸಾಹದಿಂದ ಓದಿದ್ದರು. ಹಿರಿಯರೊಬ್ಬರ ಸಲಹೆಯಂತೆ ಅವರು ಗಿಬನ್‌ನ "Decline and Fall of the Roman Empire" ಅನ್ನು ಓದಿದರಂತೆ. ಅವರ ಗಮನ ರಾಜ್ಯಶಾಸ್ತ್ರದ ಕಡೆಗೆ ಸ್ವಲ್ಪ ಹೆಚ್ಚಾಗಿ ಹರಿದಿತ್ತು. ಎಡ್ಮಂಡ್ ಬರ್ಕ್, ಜೆ. ಎ. ಫ್ರೂಡ್ (Froude), ಬೇಜಟ್ (Bagehot), ಲಾರ್ಡ್ ಬ್ರೈಸ್—ಇವರೆಲ್ಲರ ಕೃತಿಗಳ ಪರಿಚಯವೂ ಅವರಿಗಿತ್ತು. ನಾನು ಯಾವುದೋ ಸಂದರ್ಭದಲ್ಲಿ ಮಿಲ್‌ನ (John Stuart Mill) "Subjection of Women" ನಲ್ಲಿ ಬರುವ ಅಭಿಪ್ರಾಯವೊಂದರ ಮಾತೆತ್ತಿದೆ. ಅವರಿಗೆ ಬಹಳ ಖುಷಿಯಾಯಿತು. "ನಾನು ವಿಮೆನ್ಸ್ ಲಿಬ್ ವಿಷಯದಲ್ಲಿ ಉತ್ಸಾಹಿಯಲ್ಲ. ಆದರೆ ನೀವು ಮಿಲ್ ಓದಿದ್ದೀರಿ ಎನ್ನುವುದು ಸಂತೋಷದ ವಿಷಯ" ಎಂದರು. ಹರ್ಬರ್ಟ್ ಸ್ಪೆನ್ಸರ್, ಮಿಲ್ ಮೊದಲಾದವರ (ಒಟ್ಟಿನಲ್ಲಿ ಇಂಗ್ಲಿಷ್ Utilitarian ಗುಂಪಿನವರ) ವಿಷಯದಲ್ಲಿ ಅವರಿಗೆ ಬಹಳ ಆದರ ಎಂದು ತೋರಿತು.

ಡಿ.ವಿ.ಜಿ. ತಮ್ಮ 'ಆತ್ಮಗುರುಗಳು' ಎಂದು ಕರೆದು ಗೌರವಿಸಿರುವ ಎನ್. ನರಸಿಂಹಮೂರ್ತಿಗಳ ಸಲಹೆಯಂತೆ ಮಾರ್ಷಲ್, ಸೆಲಿಗ್ಮನ್ ಮೊದಲಾದವರ ಅರ್ಥಶಾಸ್ತ್ರ ಗ್ರಂಥಗಳನ್ನು ಓದಿದ್ದರಂತೆ. ನರಸಿಂಹಮೂರ್ತಿಗಳು (ಅವರು ಬಹು

ಕಾಲ ಮೈಸೂರು ಯೂನಿವರ್ಸಿಟಿ ಲೈಬ್ರೆರಿಯ ಮುಖ್ಯಾಧಿಕಾರಿಗಳಾಗಿದ್ದರು) ನನಗೂ ತುಂಬ ಪರಿಚಿತರು. ತಮ್ಮ ಕೊನೆಗಾಲದಲ್ಲಿ ಕೆಲವು ದಿನ ಅವರು ತಮ್ಮ ಬಂಧು (ಮತ್ತು ನನ್ನ ಆಪ್ತ ಸ್ನೇಹಿತ) ಎಂ. ವಿ. ಕೃಷ್ಣರಾಯರ ಮನೆಯಲ್ಲಿದ್ದರು. ಅಲ್ಲಿ ಒಂದು ದಿನ ಅವರು ಮತ್ತು ಡಿ.ವಿ.ಜಿ. ಟಿ. ಎಚ್. ಗ್ರೀನ್‌ನ 'Political Obligations' ಶೈಲಿಯನ್ನು ಚರ್ಚಿಸಿದ್ದೂ ಚರ್ಚೆಯಲ್ಲಿ ನಾನೂ ಭಾಗವಹಿಸಿದ್ದೂ (ಆ ಪುಸ್ತಕ ನನಗೆ 'Political Philosophy' ಭಾಗದಲ್ಲಿ ಪಠ್ಯಪುಸ್ತಕವಾಗಿತ್ತು) ನೆನಪಿದೆ. 'ಸೋಷಲ್ ಕಾಂಟ್ರಾಕ್ಟ್' (Social Contract) ಥಿಯರಿಯನ್ನು ಕುರಿತಂತೆ ಹಾಬ್ಸ್, ಲಾಕ್, ರೂಸೊ—ಇವರೆಲ್ಲರ ವಾದವೂ ಅವರಿಗೆ ಪರಿಚಯವಾಗಿತ್ತು.

ಅವರು ಪ್ಲೇಟೋವನ್ನು ಚೆನ್ನಾಗಿಯೇ ಓದಿದ್ದರು—ಅವನ ಕೃತಿಗಳಲ್ಲಿ ವೇದಾಂತ ತತ್ತ್ವ ಎಲ್ಲೆಲ್ಲಿ ಪ್ರತಿಧ್ವನಿತವಾಗುತ್ತದೆ ಎಂಬುದನ್ನು ಕುರಿತು ಪ್ರೊ॥ ಹಿರಿಯಣ್ಣನವರೊಡನೆ ಪುಸ್ತಕ ಬರೆಯುವ ಯೋಜನೆ ಹಾಕಿಕೊಳ್ಳುವಷ್ಟು ಚೆನ್ನಾಗಿ ಓದಿದ್ದರು. "ನಾವು ಒಟ್ಟಿಗೆ ಆ ಕೆಲಸ ಮಾಡೋಣ" ಎಂದು ಹಿರಿಯಣ್ಣನವರೇ ಸೂಚಿಸಿದ್ದರಂತೆ. ಇತ್ತೀಚಿನ ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು ಅವರು ಓದಿದ್ದರೋ ಇಲ್ಲವೊ ಎಂದು ನಾನು ಸಂದೇಹ ವ್ಯಕ್ತಪಡಿಸಿದಾಗ ಶ್ರೀ ನಿಟ್ಟೂರು ಶ್ರೀನಿವಾಸರಾಯರು "ಡೆಕಾರ್ಟ್. ಸ್ಪಿನೋಸ, ಲೈಬ್ನಿಟ್ಸ್, ಕ್ಯಾಂಟ್, ಹೆಗಲ್—ಇವರೆಲ್ಲರ 'ಸಿಸ್ಟಮ್'ಗಳನ್ನೂ ಅವರು ತಿಳಿದುಕೊಂಡಿದ್ದರು" ಎಂದು ಹೇಳಿದರು.

ಸಂಸ್ಕೃತ ಸಾಹಿತ್ಯದಲ್ಲಿ ಅವರ ಪಾಂಡಿತ್ಯ ಇನ್ನೂ ಆಳವಾದದ್ದು. ಅವರ ಕೃತಿಗಳಲ್ಲಿ ಸಂಸ್ಕೃತ ಶ್ಲೋಕಗಳನ್ನೂ ಬಿಡಿಪಂಕ್ತಿಗಳನ್ನೂ ಮತ್ತೆ ಮತ್ತೆ ಉದಾಹರಿಸುತ್ತಲೇ ಇರುತ್ತಾರೆ. ಇದು ಪ್ರದರ್ಶನವಲ್ಲ, ಅವರಿಗೆ ಸ್ವಾಭಾವಿಕವಾಗಿ ಬಂದದ್ದು. ಅಜ್ಞಾತ ಕವಿಗಳ ಮುಕ್ತಕಗಳಿಂದ, ಚಾಟುಶ್ಲೋಕಗಳಿಂದ ಹಿಡಿದು ಕಾಳಿದಾಸ ಭವಭೂತಿ ಭರ್ತೃಹರಿ ಮುಂತಾದ ಕವಿಗಳ ವಿಚಾರಪೂರ್ಣವಾದ, ರಸವತ್ತಾದ ಶ್ಲೋಕಗಳವರೆಗೆ ; ಇನ್ನೂ ಎತ್ತರಕ್ಕೆ ಏರಿ ಉಪನಿಷನ್ಮಂತ್ರಗಳವರೆಗೆ—ಅದೆಷ್ಟು ಸಾರೋಕ್ತಿಗಳೂ ಶ್ಲೋಕಗಳೂ ಅವರ ನೆನಪಿನಲ್ಲಿ ಸಿದ್ಧವಾಗಿದ್ದವೋ, ಕರೆದೊಡನೆ ಮುಂದೆ ಬರಲು ! ಅವರಿಗೆ ಸಾಹಿತ್ಯ ಕೇವಲ ವಿರಾಮಕಾಲದ ಹವ್ಯಾಸವಲ್ಲ. ರಸಾಸ್ವಾದನೆಯ ಉದ್ದೇಶದ ಜೊತೆಗೆ ವ್ಯಾಕರಣಶುದ್ಧಿಯೂ ಸೇರಿತ್ತು. "ಬಹುದಿನಗಳಿಂದ 'ಧಾತುರೂಪ ಮುಕ್ತಾವಳಿ' (?) ಎಲ್ಲಾದರೂ ಸಿಕ್ಕೀತೆ ಅಂತ ಹುಡುಕುತ್ತಾ ಇದ್ದೇನೆ." ಎಂದು ಹೇಳಿದ್ದು ನೆನಪಿದೆ. ರಾಮಾಯಣವೋ, ಭಾರತವೋ ಯಾವುದಾದರೂ ಆಗಲಿ, ಅದನ್ನು ಆಳವಾಗಿ ಪರಿಶೀಲಿಸಿ ಅದರಿಂದ ಉದ್ಭವಿಸಿದ ಸಮಸ್ಯೆಗಳಿಗೆ ಪರಿಹಾರ ಹುಡುಕುವಷ್ಟು ತೀವ್ರವಾದದ್ದು. ಅವರ ಆಸಕ್ತಿ. ಅವರ 'ಶ್ರೀರಾಮ ಪರೀಕ್ಷಣಂ', 'ಶ್ರೀಕೃಷ್ಣ ಪರೀಕ್ಷಣಂ' ಎಂಬ ಕೃತಿಗಳು ಈ ಬಗೆಯ ಪರಿಶೀಲನದ ಫಲ. ಅವೆರಡು ಕೃತಿಗಳಲ್ಲೂ ಕಾಣಬರುವ ಅಭಿಪ್ರಾಯಗಳೆಲ್ಲವನ್ನೂ ನಾನು

ಒಪ್ಪುತ್ತೇನೆಂದು ಹೇಳಲಾರೆ. ಆದರೆ ಸಮಸ್ಯೆಗಳನ್ನು ಕಡೆಗಣಿಸದೆ ದಿಟ್ಟಿಸಿ ನೋಡಿ ಪರಿಶೀಲಿಸುವ ಅವರ ಮನೋವೃತ್ತಿಗೆ ಮೆಚ್ಚಿಕೆ ಸಲ್ಲಬೇಕು. ರಾಮಾಯಣ ಅವರಿಗೆ ಅತ್ಯಂತ ಪ್ರಿಯವಾದ ಕಾವ್ಯ ; ಅದನ್ನು ಯಾವಾಗಲೂ ಅವರು 'ಶ್ರೀಮದ್ರಾಮಾ-ಯಣ' ಎಂದೇ ಕರೆಯುತ್ತಿದ್ದರು. ಅದು ಅವರಿಗೆ ಪವಿತ್ರಗ್ರಂಥ ಎನ್ನುವುದರಲ್ಲಿದ್ದೆ— ಆದರೆ ಅವರು "ರಾಮಾಯಣವಾಗಲಿ ಮಹಾಭಾರತವಾಗಲಿ ನನಗೆ ಮತಗ್ರಂಥ ಗಳಲ್ಲ" ಎಂದು ಹೇಳಿದ್ದು ನೆನಪಿಗೆ ಬರುತ್ತಿದೆ.

ಡಿ.ವಿ.ಜಿ. ಸಾಹಿತ್ಯಭಕ್ತರು. ಸಂದೇಹವಿಲ್ಲ. ಆದರೆ ಅವರ ಶ್ರದ್ಧಾಭಕ್ತಿಗಳು ಸಾಹಿತ್ಯಕ್ಕಿಂತ ಹೆಚ್ಚಾಗಿಯೇ ವೇದಾಂತಕ್ಕೂ ಶಾಸ್ತ್ರಕ್ಕೂ ಸಂದವೆಂದರೆ ತಪ್ಪಾಗುವುದಿಲ್ಲ. ಅವರ ಮಾತಿನಲ್ಲಿ ಹೇಗೋ ಹಾಗೆ ಅವರ ಬರವಣಿಗೆಯಲ್ಲೂ ಅದು ಸ್ಪಷ್ಟವಾಗಿ ಕಾಣುತ್ತದೆ. ವೇದಶಾಸ್ತ್ರಗಳಿಂದ ಉದಾಹೃತವಾದ ವಾಕ್ಯಗಳು ಅವರ ಬರವಣಿಗೆ ಯಲ್ಲಿ ಎಲ್ಲೆಲ್ಲೂ —ಮುಖ್ಯವಾಗಿ 'ಗೀತಾತಾತ್ಪರ್ಯ'ದಲ್ಲಿ—ಬರುತ್ತಿರುತ್ತವೆ. 'ವೈದಿಕ ಧರ್ಮ ಸಂಪ್ರದಾಯಸ್ಥರು' ಎಂಬ ಪುಸ್ತಕ ಅವರ ಹೃದಯಕ್ಕೆ ತೀರ ಹತ್ತಿರವಾದದ್ದು. ಅದರ ಪ್ರತಿಯೊಂದು ಪುಟವೂ ಒಲವಿನಿಂದ ಬರೆದದ್ದು. ಅದರಲ್ಲಿ ಬರುವ ಜನಕ್ಕೆ ವೇದಶಾಸ್ತ್ರಗಳಲ್ಲಿದ್ದ ಭಕ್ತಿ ಮತ್ತು ಪ್ರೀತಿ, ಅವರ ಸರಳ ಜೀವನ, ತಾವು ನಂಬಿದ್ದ ಜೀವನಕ್ರಮದಲ್ಲಿ ಅವರಿಗಿದ್ದ ಶ್ರದ್ಧೆ. ಅದಕ್ಕಾಗಿ ಏನನ್ನಾದರೂ ತ್ಯಾಗ ಮಾಡುವ ಪ್ರವೃತ್ತಿ—ಇದನ್ನೆಲ್ಲ ತುಂಬುಪ್ರೇಮದಿಂದ ಚಿತ್ರಿಸಿದ್ದಾರೆ.

ನಾನು ವೈದಿಕನಲ್ಲ ; ವೈದಿಕರ ಜೀವನ ಒಂದು ದೃಷ್ಟಿಯಿಂದ ನೋಡಿದರೆ ಸಂಕುಚಿತವಾದದ್ದು, ಅವರು ತಮ್ಮ ಬುದ್ಧಿಶಕ್ತಿಗೆ ಗರಿಗೆದರಿ ಹಾರುವ ಸ್ವಾತಂತ್ರ್ಯ ವನ್ನು ಕೊಡಲಿಲ್ಲ, ಎಂದುಕೊಂಡಿದ್ದೇನೆ. ಆದರೆ ಅವರಲ್ಲಿ ಬಹುಪಾಲು ಜನ ಪರಮ ಸಾತ್ವಿಕರಾಗಿ ಬಾಳಿದರೆಂಬುದನ್ನು ಬಲ್ಲೆ. ಆದ್ದರಿಂದ ಪ್ರಸ್ತುತ ಕೃತಿಯನ್ನು ಮತ್ತೆ ಮತ್ತೆ ಓದಿದ್ದೇನೆ ; ಅದರಲ್ಲಿ ಬರುವ ವ್ಯಕ್ತಿಗಳ ಆಕರ್ಷಣೆಗೆ ಸ್ವ-ಇಚ್ಛೆಯಿಂದ ಒಳಗಾಗಿದ್ದೇನೆ. ಡಿ.ವಿ.ಜಿ.ಗೆ ಮುಂಜಿಯಾದ ಸಂದರ್ಭದಲ್ಲಿ ಅವರನ್ನು ಕುದುರೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಲು ಏರ್ಪಾಟಾಗಿತ್ತು. ಪುರೋಹಿತ ವೆಂಕಟರಾಮ ಭಟ್ಟರು "ಗುರುವಿನ ಮನೆಗೆ ಹೋಗುವವರು ನಮ್ರರಾಗಿರಬೇಕು. ಅಟ್ಟಹಾಸ ಕೂಡದು" ಎಂದು ಖಂಡಿತವಾಗಿ ನಿಷೇಧಿಸಿದರಂತೆ. ಅದೇ ವೆಂಕಟರಾಮಭಟ್ಟರು ತಾವು ಕಲಿಸಿದ ವೇದಪಾಠ ಶಿಷ್ಯರಲ್ಲಿ ಫಲಕ್ಕೆ ಬಂದದ್ದನ್ನು ನೋಡಿ "ಅಲೆಕ್ಸಾಂಡರನು ಜಯ ಗಳಿಸಿದ ದಿನ, ಕೊಲಂಬಸನು ಅಮೇರಿಕವನ್ನು ಕಂಡ ದಿವಸ, ಎಂಥ ಆನಂದ ಪಟ್ಟಿರಬಹುದೋ" ಅಂಥ ಆನಂದಪಟ್ಟರಂತೆ. ಹಾಗೆ ಆನಂದಪಡಬಲ್ಲ ಉಪಾಧ್ಯಾಯರು ಧನ್ಯರು.

ಆ ಕೃತಿ ('ವೈದಿಕ ಧರ್ಮ ಸಂಪ್ರದಾಯಸ್ಥರು') ಯಲ್ಲಿ ಬಹು ಸೊಗಸಾಗಿ ಮೂಡಿ ಬಂದಿರುವ ಇನ್ನೊಂದು ಚಿತ್ರವೆಂದರೆ— ಮಹಾಮಹೋಪಾಧ್ಯಾಯ ವಿದ್ಯಾನಿಧಿ ವಿರೂಪಾಕ್ಷ ಶಾಸ್ತ್ರಿಗಳದ್ದು. ಅವರು ಗುಂಡಪ್ಪನವರ ವೇದವಿದ್ಯಾಗುರು

ಗಳಾಗಿದ್ದರಿಂದ ಅವರನ್ನು ಕುರಿತು ಎರಡು ಮಾತು ಹೆಚ್ಚಾಗಿ ಬರೆದರೆ ತಪ್ಪಾಗುವುದಿಲ್ಲ. ಶಾಸ್ತ್ರಿಗಳು "ಕಾಲಾಗೆ ಅದು (ಜೋಡು) ಇರುವ ಕಾಲಕ್ಕೆ ಬಾಯಾಗೆ ವೇದಾಕ್ಷರ ಬರತಕ್ಕದ್ದಲ್ಲ" ಎಂದು ಒಬ್ಬ ಪ್ರತಿಷ್ಠಿತ ಅಧಿಕಾರಿಗಳಿಗೆ ನಿರ್ದಾಕ್ಷಿಣ್ಯವಾಗಿ ಎಚ್ಚರಿಕೆ ಕೊಟ್ಟರಂತೆ. ಮಾಲವೀಯರು "ಬ್ರಾಹ್ಮಣೇತರ ಜನರು......ರಾಮಾಯಣ ವನ್ನೋ ಮಹಾಭಾರತವನ್ನೋ ಓದಬೇಕು. ಅಥವಾ ಓದಿಸಿ ಕೇಳಬೇಕು" ಎಂದಾಗ ಶಾಸ್ತ್ರಿಗಳು "ಶ್ರೋತವ್ಯಂ, ಬ್ರಾಹ್ಮಣಮುಖೇನ ಶ್ರೋತವ್ಯಂ" ಎಂದರಂತೆ. "ಪಶುವಿಗೆ (ಯಜ್ಞಪಶುವಿಗೆ) ಪ್ರಾಣಹಿಂಸೆ ಆಗ್ತದೆ ಅನ್ನುವ ಶಂಕಾ ಉಂಟಲ್ಲ—... ಅವೂ ಅಸಂಗತಭಾವನಾ. ಪಶುವಿಗೆ ಸ್ವರ್ಗಾದಿ ಲೋಕ ಪ್ರಾಪ್ತವಾಗ್ತದೆ. ಅದಕ್ಕೆ ಹಿರಣ್ಯಶೃಂಗ ಬರುತ್ತದೆ" ಎಂದು ಯಜ್ಞವನ್ನು ಸಮರ್ಥಿಸಿದರಂತೆ. ಇದೆಲ್ಲ ಅವರ ನಂಬಿಕೆಗೆ ಅನುಗುಣವಾದ ಮಾತು. ನನ್ನ ನಂಬಿಕೆ ಅವರದ್ದಕ್ಕೆ ಸಂಪೂರ್ಣವಾಗಿ ವಿರುದ್ಧವಾದದ್ದು. ಜೋಡು ಹಾಕಿಕೊಂಡಿರುವಾಗ ವೇದಾಕ್ಷರವನ್ನು ಉಚ್ಚರಿಸುವುದು ವೇದಕ್ಕೆ ಅಗೌರವ ತೋರಿಸಿದಂತೆ ಎಂದು ನಾನು ಭಾವಿಸಲಾರೆ. ಹಾಗೆ ಉಚ್ಚರಿಸ ದಿರುವುದು ಎಷ್ಟೋ ಜನರಿಗೆ ಎಷ್ಟೋ ವೇಳೆ ಸಾಧ್ಯವಾಗುವುದಿಲ್ಲ. ರಾಮಾಯಣ ಮಹಾಭಾರತಗಳನ್ನು ಅಬ್ರಾಹ್ಮಣರು ಓದಿದ ಮಾತ್ರಕ್ಕೆ ಅವು ಅಪವಿತ್ರವಾಗುವುದಿಲ್ಲ, ಓದಿದವರು ಪವಿತ್ರರಾಗುವ ಸಾಧ್ಯತೆಯುಂಟು ! ಆದ್ದರಿಂದ ಅಂಥ ಓದನ್ನು ನಿಷೇಧಿಸುವುದಕ್ಕೆ ಬದಲಾಗಿ ಪ್ರೋತ್ಸಾಹಿಸಬೇಕು. ಯಜ್ಞ—ಮಾಡತಕ್ಕದ್ದಲ್ಲ. ಪಶುವಿಗೆ ಹಿರಣ್ಯಶೃಂಗ ಬರುವುದಿಲ್ಲ ; ಬಂದರೂ ಆ ಪಶು ನನಗೆ ಹಿರಣ್ಯಶೃಂಗ ಬೇಡ, ಪ್ರಾಣ ಉಳಿಸಿಕೊಟ್ಟರೆ ಸಾಕು" ಎಂದು ಬೇಡೀತು ! ಸಮಾಜಹಿತದ ದೃಷ್ಟಿಯಿಂದ ಶಾಸ್ತ್ರಿಗಳ ಪೂರ್ವೋಕ್ತ ನಂಬಿಕೆಗಳ ಮತ್ತು ನಿಷೇಧಗಳ ವಿರುದ್ಧವಾಗಿ ಪ್ರಚಾರ ಮಾಡುವುದೂ ಅವಶ್ಯಕವಾಗಬಹುದು. ಆದರೆ ಸಾವಿರಾರು ವರ್ಷಗಳಿಂದ ಬಂದ ನಂಬಿಕೆಗಾಗಿ ಅವರನ್ನು ತಿರಸ್ಕರಿಸಲಾರೆ. ಅವರು ಹುಟ್ಟಿದ, ಬೆಳೆದ, ಕಾರ್ಯತತ್ಪರರಾಗಿದ್ದ ವಾತಾವರಣದಲ್ಲಿ ಅದು ತೀರ ಸಹಜ, ನಿರೀಕ್ಷಿಸಬೇಕಾದದ್ದು. ಆ ನಂಬಿಕೆಯಲ್ಲಿ ನಿಷ್ಕಪಟ ಸರಳತೆಯಿದೆ. ಇಂಗ್ಲಿಷಿನಲ್ಲಿ ಅದನ್ನು 'Naive' ಎಂದು ಕರೆಯುತ್ತಾರೆ. ಈ ಮಾತನ್ನು ಮುಂದೆ ಹೇಳಲಿರುವ ಪ್ರಸಂಗ ಸಮರ್ಥಿಸೀತು : ಒಂದು ದಿನ ಅವರು ಪಾಠ ಹೇಳುತ್ತಿದ್ದಾಗ ಡಿ.ವಿ.ಜಿ. ಕೈಯಲ್ಲಿದ್ದ ಪುಸ್ತಕವನ್ನು ನೆಲದ ಮೇಲಿಟ್ಟರು. ಕೂಡಲೆ ಶಾಸ್ತ್ರಿಗಳು ಪಾಠವನ್ನು ನಿಲ್ಲಿಸಿ "ಆ ಗ್ರಂಥವನ್ನು ಕೈಯಲ್ಲಿ ತಗೊಂಬೋಣವಾಗಲಿ. ಅಥವಾ ಮಣೆಯ ಮೇಲೆ ಇಡೋಣವಾಗಲಿ. ಗ್ರಂಥ ನೆಲದ ಮೇಲಿಟ್ಟರೆ ಪಾಠ ನಿಂತುಹೋಗ್ತದೆ" ಎಂದು ಹೇಳಿದರು. ಶುಭ್ರತೆಯ ದೃಷ್ಟಿಯಿಂದ ಯಾವ ವಸ್ತುವನ್ನಾಗಲಿ ನೆಲದ ಮೇಲೆ ಇಡಬಾರದು. ಆದರೆ ಶಾಸ್ತ್ರಿಗಳ ಮನಸ್ಸಿನಲ್ಲಿದ್ದದ್ದು ಶುಭ್ರತೆಯ ವಿಚಾರವಲ್ಲ, ಪವಿತ್ರತೆಯ ವಿಚಾರ. ಪುಸ್ತಕ ಎಂದರೆ ಸರಸ್ವತಿ ! ಅವರಿಗೆ ಪ್ರೆಂಟ್ (ಪ್ರಿಂಟ್, ಅಚ್ಚಾದ ಪುಸ್ತಕ) ವಿಷಯದಲ್ಲಿ ಆದರವಿಲ್ಲ. ಆದರೆ ಅದನ್ನು ನೆಲದ ಮೇಲಿಟ್ಟು ಅಪಚಾರ ಮಾಡಬಾರದು !

ಶಾಸ್ತ್ರಿಗಳಿಗೆ ಮಹಾಮಹೋಪಾಧ್ಯಾಯ, ವಿದ್ಯಾನಿಧಿ ಎಂಬ ಪ್ರಶಸ್ತಿಗಳು ಬಂದಾಗ ಶಿಷ್ಯರು ಅವರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಿದರು. ಆಗ ಶಾಸ್ತ್ರಿಗಳು ತಮಗಾಗಿ ಹಾಕಿದ್ದ ಗೌರವಪೀಠದಲ್ಲಿ ತಮ್ಮ ಗುರುಗಳನ್ನು ಬಲಾತ್ಕಾರವಾಗಿ ಕೂಡಿಸಿ ಅವರಿಗೆ ಶಾಸ್ತ್ರೋಕ್ತವಾದ ಗುರುವಂದನೆ ಮಾಡಲಾರಂಭಿಸಿದರಂತೆ. ತಾವು ಯಾವುದನ್ನು ಉನ್ನತ, ಶ್ರೇಷ್ಠತಮ ಮೌಲ್ಯ ಎಂದು ಭಾವಿಸಿದ್ದರೋ ಅದಕ್ಕೆ ಅನುಗುಣವಾಗಿ—ಯಾವ ದಾಕ್ಷಿಣ್ಯಕ್ಕೂ ಮಣಿಯದೆ—ಅವರು ನಡೆದುಕೊಳ್ಳುತ್ತಿದ್ದರು. ನಿಷ್ಕಪಟ ನಿಃಸ್ವಾರ್ಥ ಸರಳಜೀವನವನ್ನು ನಡೆಸಿದರು. ಅವರ ಮನಸ್ಸು ಮೃದುವಾದದ್ದು, ಕೋಮಲವಾದದ್ದು. ಅವರು ಮಾಡಬಹುದಾಗಿದ್ದ ದಾನ ಒಂದೇ : ವಿದ್ಯಾದಾನ. ಅದನ್ನು ನಿರ್ವಂಚನೆಯಾಗಿ ಮಾಡಿದರು.

ಇಂಥ ವಿರೂಪಾಕ್ಷಶಾಸ್ತ್ರಿಗಳಲ್ಲಿ ಶಿಷ್ಯವೃತ್ತಿ ನಡೆಸಿ ಗುಂಡಪ್ಪನವರು ಬ್ರಹ್ಮಸೂತ್ರಭಾಷ್ಯ ಉಪನಿಷದ್ಭಾಷ್ಯಗಳನ್ನು ವಿಧ್ಯುಕ್ತವಾಗಿ ಸಾಂಪ್ರದಾಯಿಕ ಕ್ರಮದಲ್ಲಿ ಅಧ್ಯಯನ ಮಾಡಿದರು. ಅವರು “ ಈ ಶಾಸ್ತ್ರವನ್ನು ನಾನು ಅದಕ್ಕೆ ಅಧಿಕಾರಿಯಾಗಬೇಕೆಂದು ವ್ಯಾಸಂಗ ಮಾಡುವವನಲ್ಲ...ಶಾಸ್ತ್ರಪ್ರಕ್ರಿಯೆಯ ಸ್ಥೂಲ ಪರಿಚಯ ನನಗಾದರೆ ಅದೇ ಭಾಗ್ಯ ” ಎಂದು ಗುರುಗಳಿಗೆ ಹೇಳಿದರಂತೆ. ಗುರುಗಳಾದರೋ—“ ಅವರ ಪದ್ಧತಿಯಂತೆಯೇ ಅವರು ನಡೆದರು ” ; ಪ್ರತಿಷ್ಠಿತ ವ್ಯಕ್ತಿಯಾದ ಶಿಷ್ಯನ ಅನುಕೂಲಕ್ಕೆ ತಕ್ಕಂತೆ ತಮ್ಮ ಪಾಠಕ್ರಮವನ್ನು ಬದಲಾಯಿಸಲಿಲ್ಲ. ಕಾಲೇಜಿನ ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತಿದ್ದೂ ಏನನ್ನೂ ಕಲಿಯದಿರುವುದು ಸಾಧ್ಯ. ವಿರೂಪಾಕ್ಷ ಶಾಸ್ತ್ರಿಗಳಂಥವರ ಶಿಷ್ಯರಿಗೆ ಅದು ಸಾಧ್ಯವಿಲ್ಲ ! ಶಾಸ್ತ್ರ ಅವರಿಗೆ ಸ್ವಾಧೀನವಾಗಲೇಬೇಕು. ಅದು ಗುಂಡಪ್ಪನವರಿಗೆ ಸ್ವಾಧೀನವಾಗಿತ್ತೆಂಬುದಕ್ಕೆ ಅವರ ಭಗವದ್ಗೀತಾ ತಾತ್ಪರ್ಯ’, ‘ ಈಶೋಪನಿಷತ್ತು ’ ಮೊದಲಾದ ಗ್ರಂಥಗಳು ಸಾಕ್ಷಿ. ಅವರ ಅಭಿಪ್ರಾಯಗಳಲ್ಲಿ ಕೆಲವನ್ನು ನಾವು ಒಪ್ಪದಿರಬಹುದು. ಆದರೆ ಅವರ ಪಾಂಡಿತ್ಯವನ್ನು ಪ್ರಶ್ನಿಸುವಂತಿಲ್ಲ.

ಗುಂಡಪ್ಪನವರ ಮಾತಿನಲ್ಲಿ ಪಾಂಡಿತ್ಯ ಪ್ರದರ್ಶನವಿರಲಿಲ್ಲ ಎಂದೇನಷ್ಟೆ. ಅವರ ಗ್ರಂಥಗಳಲ್ಲಿ ಪಾಂಡಿತ್ಯ ಕಾಣದಿರುವುದು ಅಸಾಧ್ಯ—ಪ್ರದರ್ಶನದ ಉದ್ದೇಶವಿಲ್ಲದಿದ್ದರೂ. ಅವರಿಗೆ ಪ್ರದರ್ಶನದ ಚಟ ಎಂದೂ ಇರಲಿಲ್ಲ. ಮಾತ್ರವಲ್ಲ, ತಾವು ಹೇಳಿದ್ದು ತಪ್ಪು ಎಂದು ತೋರಿದರೆ ತಾವಾಗಿಯೇ ಮುಂದುವರಿದು ಅದನ್ನು ಒಪ್ಪಿಕೊಳ್ಳುತ್ತಿದ್ದರು. ಒಂದು ದಿನ ಬಸವನಗುಡಿಯ ಬಳಿಯ ಬಂಡೆಯ ಮೇಲೆ ಕುಳಿತು ಮಾತಾಡುತ್ತಿದ್ದಾಗ ನಾನು ಕಾಳಿದಾಸನ ‘ರಘುವಂಶ’ದ ಶ್ಲೋಕವೊಂದರ ಮಾತೆತ್ತಿದೆ. ಅದರಲ್ಲಿದ್ದ ಕಾವ್ಯಪ್ರತಿಮೆ (Poetic Image) ನನಗೆ ಸ್ಪಷ್ಟವಾಗಿರಲಿಲ್ಲ. ಶ್ಲೋಕ ಯಾವುದು, ಸಮಸ್ಯೆಯೇನು ಎಂಬುದು ಮರೆತು ಹೋಗಿದೆ—ಮೂವತ್ತು ವರ್ಷಗಳ ಹಿಂದಿನ ಮಾತು ! ಗುಂಡಪ್ಪನವರು ಏನೋ ವಿವರಣೆ ಕೊಟ್ಟರು. ಅದು ನನಗೆ ಸಮರ್ಪಕವಾಗಿ ಕಾಣಲಿಲ್ಲವಾದರೂ ನಾನು ಏನೂ ಹೇಳದೆ ಸುಮ್ಮನಿದ್ದೆ. ಮಾರನೆಯ ದಿನ ಬೆಳಗ್ಗೆ 9 ಘಂಟೆಯ ಹೊತ್ತಿಗೆ

ಡಿ.ವಿ.ಜಿ. ಗೋಖಲೆ ಸಂಸ್ಥೆಯ ಜವಾನನೊಡನೆ ಒಂದು ಕಾಗದ ಕಳಿಸಿದರು. ಅದರಲ್ಲಿದ್ದ ಮೊದಲನೆಯ ವಾಕ್ಯ: "The explanation I gave you yesterday is wr ng." ಆ ವಿವರಣೆ ಅವರಿಗೂ ತೃಪ್ತಿ ಕೊಟ್ಟಿರಲಿಲ್ಲ. ಮನೆಗೆ ಹೋದ ಮೇಲೆ ಯೋಚಿಸಿ ಕೂಡಲೆ ಆ ಕಾಗದ ಬರೆದರು. ಈ ಪ್ರಾಮಾಣಿಕತೆ ನಾವೆಲ್ಲ ಭಾವಿಸ ಬಹುದಾದಷ್ಟು ಸಾಮಾನ್ಯವಲ್ಲ.

ಇದುವರೆಗೆ ಅವರು ಸಾಹಿತ್ಯದ ಮತ್ತು ಶಾಸ್ತ್ರಗಳ ವ್ಯಾಸಂಗದಿಂದ ಪಡೆದ ಪಾಂಡಿತ್ಯವನ್ನು ಗಮನಿಸಿದ್ದಾಯಿತು. ಅವರು ಬೇರೊಂದು ಕ್ಷೇತ್ರದಲ್ಲಿ ಪಡೆದ ಅನುಭವವನ್ನು ಸಾಧಾರಣವಾಗಿ ಜನ 'ಪಾಂಡಿತ್ಯ' ಎಂದು ಕರೆಯುವುದಿಲ್ಲ, 'ಲೋಕ ವ್ಯವಹಾರ ಜ್ಞಾನ' ಎನ್ನುತ್ತಾರೆ. ನಾನು ಅದನ್ನೂ ಪಾಂಡಿತ್ಯದ ಜೊತೆಗೇ ಸೇರಿಸಿಕೊಳ್ಳುತ್ತೇನೆ. ವ್ಯಕ್ತಿಯೊಬ್ಬನ ಬೆಳವಣಿಗೆಗೆ ಅದು ಪಾಂಡಿತ್ಯದಷ್ಟೇ ಮುಖ್ಯ; ಅದಕ್ಕಿಂತ ಹೆಚ್ಚು ಮುಖ್ಯ ಎಂದರೂ ತಡೆಯುತ್ತದೆ. ಲೋಕವ್ಯವಹಾರ ಎರಡು ರೀತಿಯದಾಗಬಹುದು: ವೈಯಕ್ತಿಕವಾಗಿ ಜನರೊಡನೆ ವ್ಯವಹರಿಸುವುದು; ಮತ್ತು ಜನರು (ಖಾಸಗಿ ಮತ್ತು ಸರ್ಕಾರಿ) ಕಟ್ಟಿದ ಸಂಸ್ಥೆಗಳ ಕೆಲಸಕಾರ್ಯಗಳಲ್ಲಿ ಭಾಗವಹಿಸುವುದು.

ವೈಯಕ್ತಿಕ ಸ್ನೇಹ:—ಹಳೆಯ ಮೈಸೂರು ರಾಜ್ಯದ ದಿವಾನರುಗಳಾಗಿದ್ದ ಸಿ. ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ವಿ. ಪಿ. ಮಾಧವರಾಯರು—ಇವರೆಲ್ಲರ ಪರಿಚಯವಿಲ್ಲದಿದ್ದರೂ ಅವರ ಆಡಳಿತದ ವೈಖರಿಯನ್ನು ಗುಂಡಪ್ಪನವರು ಚೆನ್ನಾಗಿ ತಿಳಿದಿದ್ದರು. ರಂಗಾಚಾರ್ಲುರವರನ್ನು ಕುರಿತು ಒಂದು ಪುಸ್ತಕವನ್ನೇ ಬರೆದಿದ್ದರು. ಅವರಿಗೆ ಆನಂದರಾಯರ ಸ್ನೇಹವಿಲ್ಲದಿದ್ದರೂ ವೈಯಕ್ತಿಕ ಪರಿಚಯವಾದರೂ ಇತ್ತು. ವಿಶ್ವೇಶ್ವರಯ್ಯ, ಮಿರ್ಜಾ—ಇವರಿಬ್ಬರನ್ನೂ ಅವರು ತೀರ ಹತ್ತಿರದಿಂದ ಬಲ್ಲವರು; ಅವರಿಬ್ಬರ ಮೆಚ್ಚಿಕೆಯನ್ನೂ ಸ್ನೇಹವನ್ನೂ ಪಡೆದಿದ್ದರು. ಡಿ.ವಿ.ಜಿ. ಟೈಫಾಯಿಡ್ ನಿಂದ ನರಳುತ್ತಿದ್ದಾಗ ಮಿರ್ಜಾರವರು ಪ್ರತಿದಿನವೂ ಬಂದು ಅವರನ್ನು ನೋಡಿ ಕೊಂಡು ಹೋಗುತ್ತಿದ್ದರಂತೆ. ಮಿರ್ಜಾರವರ ಆಡಳಿತದಲ್ಲಿ ಲೋಪದೋಷಗಳು ಕಂಡುಬಂದಾಗ ಡಿ.ವಿ.ಜಿ. ಅದನ್ನು ಸ್ಪಷ್ಟವಾಗಿ ಹೇಳಲು ಹಿಂಜರಿಯಲಿಲ್ಲ. ಇಂಥ ಪ್ರಸಂಗವಾದ ಮೇಲೂ ಮಿರ್ಜಾ ಅವರ ಸ್ನೇಹವನ್ನು ಬಯಸಿದರು. ಡಿ.ವಿ.ಜಿ. ತಮ್ಮ ಬರವಣಿಗೆಯಲ್ಲಿ ಆ ದೋಷಗಳನ್ನು ಮರೆಸಿಲ್ಲ. ಆದರೂ ಮಿರ್ಜಾರವರ ಹಿರಿಮೆ, ಗುಂಡಪ್ಪನವರಿಗೆ ಅವರಲ್ಲಿದ್ದ ಗೌರವಾದರಗಳು ಸೊಗಸಾಗಿ ಮೂಡಿಬಂದಿವೆ. ಅವರು ವಿಶ್ವೇಶ್ವರಯ್ಯನವರ ನೆಚ್ಚಿನ ಸ್ನೇಹಿತರಾಗಿದ್ದರು; ಋಷಿಕಲ್ಪರಾದ ಆ ಮಹನೀಯರ ಕಾರ್ಯದರ್ಶಿಯಾಗಿ—ಸಂಬಳಕ್ಕಲ್ಲ, ಅದೊಂದು ಪುಣ್ಯ ಕೆಲಸ, ಗೌರವ ಎಂಬ ಬುದ್ಧಿಯಿಂದ, ಭಕ್ತಿಯಿಂದ—ಸ್ವಲ್ಪಕಾಲ ಕೆಲಸ ಮಾಡಿದರು. ವಿಶ್ವೇಶ್ವರಯ್ಯನವರು ಯಾರಿಂದಲೂ ಬಿಟ್ಟಿ ಸೇವೆಯನ್ನು ಸ್ವೀಕರಿಸುತ್ತಿರಲಿಲ್ಲ. ಅವರು ಕೊಟ್ಟ ಚೆಕ್ಕನ್ನು ಡಿ.ವಿ.ಜಿ. ಸ್ವೀಕರಿಸಲೇಬೇಕಾಯಿತು; ಆದರೆ ಆ ಚೆಕ್ಕನ್ನು 'ಕ್ಯಾಷ್' ಮಾಡದೆ ಇಟ್ಟುಕೊಂಡರು.

ಮೇಲೆ ಹೆಸರಿಸಿದ ಮಹನೀಯರಂತೆಯೇ ಖ್ಯಾತರಾದವರು—ಮದರಾಸು ಪ್ರಾಂತದ ಹಂಗಾಮಿ ಗವರ್ನರಾಗಿದ್ದ ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರು, ಬ್ರಿಟಿಷರ ಕಾಲದಲ್ಲಿ ಪ್ರಿವಿ ಕೌನ್ಸಿಲ್ ಸದಸ್ಯರಾಗಿದ್ದ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು, ಆತ್ಮಗೌರವಕ್ಕಾಗಿ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟ ಟಿ. ಆರ್. ವೆಂಕಟರಾಮ ಶಾಸ್ತ್ರಿಗಳು, ಭಾರತದ ಕೊನೆಯ ಗವರ್ನರ್ ಜನರಲ್ ಆಗಿದ್ದ ಸಿ. ರಾಜಗೋಪಾಲಾ ಚಾರಿ— ಡಿ.ವಿ.ಜಿ. ಇವರೆಲ್ಲರ ಪ್ರೀತಿಯನ್ನೂ ಗಳಿಸಿದ್ದರು ; ಅವರೆಲ್ಲರೊಡನೆಯೂ ಅವರಿಗೆ ಸ್ನೇಹ, ಸಲಿಗೆ, ಆಪ್ತತೆ, ಇದ್ದವು ; ಅವರೆಲ್ಲರೊಡನೆಯೂ ಸಾಹಿತ್ಯವನ್ನು ಮಾತ್ರವಲ್ಲ, ದಾರ್ಶನಿಕ ಮತ್ತು ರಾಜ್ಯಶಾಸ್ತ್ರ ತತ್ತ್ವಗಳನ್ನೂ ಭಾರತದ ರಾಜಕೀಯ ಸಮಸ್ಯೆಗಳನ್ನೂ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಂಡಿದ್ದರು. ಇಂಥ ಮಹನೀಯರ ಸ್ನೇಹವೆಂದರೆ ಅದೇ ಒಂದು ಉದ್ಧಾರಕ ಶಿಕ್ಷಣ—Liberal Education—ಎನ್ನಬಹುದು. ಈ ಜನರೆಲ್ಲರೂ ಪ್ರಭಾವಶಾಲಿಗಳು ; ಬ್ರಿಟಿಷರು ನೇರವಾಗಿ ಆಳುತ್ತಿದ್ದ ಪ್ರಾಂತಗಳಲ್ಲೂ ಮೈಸೂರಿನಂಥ ರಾಜ್ಯಗಳಲ್ಲೂ ಅವರ ಮಾತಿಗೆ ಬೆಲೆಯಿತ್ತು. ವಿಶ್ವೇಶ್ವರಯ್ಯನವರೂ ಮಿರ್ಜಾರವರೂ ಸ್ವತಃ ದಿವಾನರೇ ಆಗಿದ್ದವರು. ಇಂಥವರ ಪ್ರೀತಿಯನ್ನು ಗಳಿಸಿದ ಜನ ಅದನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ಸರ್ವಸಾಮಾನ್ಯ. ವಂದಿಮಾಗಧರಾಗದೆ, ಆತ್ಮಗೌರವಕ್ಕೆ ಚ್ಯುತಿಯಿಲ್ಲದೆ, ಉಪ-ಸರ್ಪಣೆಯ ಮಟ್ಟಕ್ಕೆ ಇಳಿಯದೆ, ಅನ್ಯಾಯದ ಕಳಂಕವಿಲ್ಲದೆ ಸ್ವಾರ್ಥವನ್ನು ಸಾಧಿಸಿ ಕೊಳ್ಳಬಹುದಾಗಿತ್ತು ಅಂಥ ಸಂಬಂಧ. ಡಿ.ವಿ.ಜಿ.ಯವರದ್ದು ಮತ್ತು ಮೇಲೆ ಹೆಸರಿಸಿದ ಮಹನೀಯರದ್ದು. ವಿಶ್ವೇಶ್ವರಯ್ಯನವರು ಕೊಟ್ಟ ಚೆಕ್ಕನ್ನು ಡಿ.ವಿ.ಜಿ. 'ಕ್ಯಾಷ್' ಮಾಡಲಿಲ್ಲ ಎಂದು ಮೇಲೆ ಹೇಳಿದೆನಷ್ಟೆ. ಹಾಗೆಯೇ ಅವರು ಯಾರೊಬ್ಬರ ಸ್ನೇಹವನ್ನೂ ಪ್ರೀತಿಯನ್ನೂ 'ಕ್ಯಾಷ್' ಮಾಡಲಿಲ್ಲ—ಸಂಪಾದನೆಗಾಗಿ ಬಳಸಿ ಕೊಳ್ಳಲಿಲ್ಲ. ಡಿ.ವಿ.ಜಿ. ಹಣವಂತರಾಗಲಿಲ್ಲ. ಕೊನೆಗಾಲದಲ್ಲೂ ಅವರು ಬಡತನಕ್ಕಿಂತ ಎರಡು ಮೂರು ಗೆರೆ ಮಾತ್ರ ಮೇಲುಮಟ್ಟದಲ್ಲಿದ್ದರೇನೋ. ಐವತ್ತರ ದಶಕದ ಉತ್ತರಾರ್ಧದಲ್ಲೋ ಏನೊ—ಒಂದು ದಿನ ಬಹಳ ಆತ್ಮೀಯವಾಗಿ ಮಾತಾಡು ತ್ತಿದ್ದಾಗ ತಮ್ಮ ಆರ್ಥಿಕ ತೊಂದರೆಯ ವಿಷಯ ಪ್ರಾಸಂಗಿಕವಾಗಿ, ಲಘುವಾಗಿ ಪ್ರಸ್ತಾಪ ಮಾಡಿದರು. ಅದೊಂದೇ ದಿನ, ಅಂಥ ಮಾತು ಬಂದದ್ದು. ಹಾಗಿದ್ದಾಗಲೂ ಅವರು ಯಾರ ಸ್ನೇಹದಿಂದಲೂ ಆರ್ಥಿಕ ಪ್ರಯೋಜನ ಪಡೆಯಲಿಲ್ಲ. ಕೊನೆಗೆ ತಾವು ಕಟ್ಟಿ ಬೆಳೆಸಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗೆ ಸಹ ಅವರು ಸರ್ಕಾರದ ಗ್ರಾಂಟನ್ನು ಬೇಡಲಿಲ್ಲ, ಪಡೆಯಲಿಲ್ಲ.

ತಾನಾಗಿಯೇ ಹುಡುಕಿಕೊಂಡು ಬಂದ ಸನ್ಮಾನವನ್ನು ಸ್ವೀಕರಿಸಲೂ ಅವರು ಹಿಂಜರಿಯುತ್ತಿದ್ದರು. ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟನ್ನು ಅವರು ಒಪ್ಪಬೇಕಾದರೆ, ಸ್ನೇಹಿತರೆಲ್ಲ "ಇದು ವಿದ್ವತ್ಸಂಸ್ಥೆಯಿಂದ ಬಂದ ಗೌರವ, ಸ್ವೀಕರಿಸುವುದು ಅವಶ್ಯಕ" ಎಂದು ಹೇಳಬೇಕಾಯಿತು. "ನಿಮ್ಮ ಹುಟ್ಟಿನ ದಿನ ಯಾವುದು ?" ಎಂದು ಯಾರು ಕೇಳಿದರೂ ಅವರು ಹೇಳುತ್ತಿರಲಿಲ್ಲ. ಅವರ

ವರ್ಷವರ್ಧಂತಿಯನ್ನು ಯಾರೂ ಆಚರಿಸಿದಂತೆ ಕಾಣೆ. ಅವರು ವಾಸವಾಗಿದ್ದ ನಾಗಸುಂದ್ರ ರಸ್ತೆಗೆ 'ಡಿ.ವಿ. ಗುಂಡಪ್ಪ ರೋಡ್' ಎಂದು ನಾಮಕರಣ ಮಾಡಿದಾಗ ಅವರು 'ಡೆಕ್ಕನ್ ಹೆರಲ್ಡ್'ಗೆ (?) ಪ್ರಕಟನೆಗಾಗಿ ಒಂದು ಕಾಗದ ಬರೆದರು. ಅವರ ಒಕ್ಕಣೆ : "ನನಗೆ ಈ ಗೌರವ ಕೊಟ್ಟದ್ದಕ್ಕಾಗಿ ನಾನು ಕೃತಜ್ಞ. ಆದರೆ ಹೀಗೆ ಹಿಂದಿನಿಂದ ಬಂದ ಹೆಸರನ್ನು ತೆಗೆದು ವ್ಯಕ್ತಿಯೊಬ್ಬನ ಹೆಸರನ್ನು ಇಡುವುದು ತಪ್ಪು. ಇದು ಮಾಡತಕ್ಕದ್ದಲ್ಲ."

ಪ್ರಸಿದ್ಧ ವ್ಯಕ್ತಿಗಳ ಪರಿಚಯವಿದ್ದು (ಕೆಲವು ವೇಳೆ ಇಲ್ಲದೆಯೆ !) ಅವರ ವಿಷಯವನ್ನೇ ಕುರಿತು ಮತ್ತೆ ಮತ್ತೆ ಮಾತಾಡುವ ಜನರನ್ನು 'Snobs, name-droppers' (ಪ್ರತಿಷ್ಠಾಪೂಜಕರು, ದೊಡ್ಡ ಹೆಸರುಗಳನ್ನು ಹೇಳಿ ತಮ್ಮ ಹೆಚ್ಚಳವನ್ನು ಮೆರೆಸುವವರು) ಎಂದು ಹಾಸ್ಯ ಮಾಡುವುದುಂಟು. ಡಿ.ವಿ.ಜಿ.ಯವರ ವಿಷಯದಲ್ಲಿ ಇಂಥ ದೋಷಾರೋಪಣೆ ಸಾಧ್ಯವೇ ಅಲ್ಲ. ಅವರು ವಿಶ್ವೇಶ್ವರಯ್ಯನವರಿಗೂ ವಿರೂಪಾಕ್ಷ ಶಾಸ್ತ್ರಿಗಳಿಗೂ ಗೌರವ ಸಲ್ಲಿಸಿದಂತೆ (ಬೇರೊಬ್ಬರಿಗೆ ಸಲ್ಲಬೇಕಾಗಿದ್ದ ಅಪವಾದವನ್ನು ಹೆಣ್ಣೊಬ್ಬಳ ಮೇಲಿನ ಕನಿಕರದಿಂದಾಗಿ ತಾವೇ ಹೊತ್ತುಕೊಂಡ) ದಯಾರಾಮ್ ಗಿಡೂಮಲ್‌ರಿಗೂ ಸಲ್ಲಿಸುತ್ತಾರೆ. ಮುಂಡಿ ಹರಿಯಣ್ಣ, ಸಂಗೀತ ವಿದುಷಿ ನಾಗರತ್ನಮ್ಮ. ಡಾ॥ ಗುಂಡಣ್ಣ ಇಂಥ ಪ್ರಸಿದ್ಧರಲ್ಲದ ಮಧ್ಯಮ ವರ್ಗದವರು ಮಾತ್ರವಲ್ಲ—ಕಾಷ್ಮಿ ಹೈದರ್, ಬಾಡಿ ರಸೂಲ್ ಖಾನ್, ಗಾರೆ ಕೆಲಸದ ಶಿವಪಿಳ್ಳೈ ಮೊದಲಿಯಾರ್, ಇವರೆಲ್ಲ ಗುಂಡಪ್ಪನವರ ದೃಷ್ಟಿಯಲ್ಲಿ 'ಹೃದಯ ಸಂಪನ್ನ'ರ ಗುಂಪಿಗೆ ಸೇರುತ್ತಾರೆ. ಅವರೆಲ್ಲರ ವಿಷಯದಲ್ಲೂ ಡಿ.ವಿ.ಜಿ.ಗೆ ಆಸಕ್ತಿಯುಂಟು. ಕೊನೆಗೆ ಬೈರಾಗಿಗಳು ಕೂಡ ಅವರ ಕುತೂಹಲಕ್ಕೆ ಪಾತ್ರರಾಗಿದ್ದಾರೆ. ಒಂದು ದಿನವೆಲ್ಲ ಅವರು ಬೈರಾಗಿಗಳ ಹಿಂದೆ ತಿರುಗಿ ಅವರ ದಿನಚರಿಯನ್ನು ಪರಿಶೀಲಿಸಿದರಂತೆ.

ಚಳಿ ಹೆಚ್ಚಾಗಿದ್ದ ಒಂದು ಸಂಜೆ. ಡಿ.ವಿ.ಜಿ. ಕೆಂಪು ಶಾಲನ್ನು ಹೊದ್ದು, ತಲೆಗೆ ಕೆಂಪು ರೇಷ್ಮೆ ವಸ್ತ್ರವನ್ನು ಬಿಗಿದು ಸಂಚಾರಕ್ಕಾಗಿ ಹೊರಟರು. ಕೆಂಪು ಬಟ್ಟೆಗಳನ್ನು ಅವರು ಉದ್ದೇಶಪೂರ್ವಕವಾಗಿ ಆಯ್ದುಕೊಳ್ಳಲಿಲ್ಲ. ಅಂದು ಕೈಗೆ ಸಿಕ್ಕಿದ್ದು ಆ ಬಟ್ಟೆ. ಅದನ್ನು ಧರಿಸಿದರು. ಅಷ್ಟೆ. ಹಣೆಯಲ್ಲಿ ವಿಭೂತಿ ಇತ್ತು. ಗಾಂಧಿಬಜಾರಿನ ಪೂರ್ವದ ಕೊನೆಯ ಹತ್ತಿರ, ಕಾವಿಬಟ್ಟೆ ಧರಿಸಿ ಹಣೆಯ ಮೇಲೂ ಕಣ್ಣುರೆಪ್ಪೆಗಳ ಮೇಲೂ ವಿಭೂತಿ ಇಟ್ಟುಕೊಂಡಿದ್ದ ಶಿವಶರಣರೊಬ್ಬರು ಎದುರಿಗೆ ಬಂದರು. ಡಿ.ವಿ.ಜಿ. 'ಶರಣು' ಎಂದು ಕೈಮುಗಿದರು. ಸಂಭಾಷಣೆ ಹೀಗೆ ಮುಂದುವರಿಯಿತು :

ಶಿವಶರಣರು—ಯಾವ ಮಟ(ಠ)ವೊ ?

ಡಿ.ವಿ.ಜಿ.—ತಿಮ್ಮಲಿಂಗದೇವರ ಮಟ. ನಿಮ್ಮದು ಯಾವ ಮಟವೊ ?

ಶಿ.ಶ.—ನಿಜಗುಣರ ಮಟ...ಒಂದು ತತ್ತ್ವ ಅಪ್ಪಣೆಯಾಗಬೇಕು.

ಡಿ.ವಿ.ಜಿ.—ಎಲ್ಲಾದರೂ ಕುಳಿತು ಮಾತಾಡೋಣ. ಬನ್ನಿ ಗುರುವೆ.

ಅಲ್ಲೇ ಟ್ಯಾಕ್ಸಿ ಸ್ಟ್ಯಾಂಡಿನ ಬಳಿ ಇರುವ—ಪಾರ್ಕ್ ಎನ್ನಿಸಿಕೊಳ್ಳುವ ಸ್ಥಳದಲ್ಲಿ ಇಬ್ಬರೂ ಕುಳಿತರು. ಆಗ ನವರತ್ನ ರಾಮರಾಯರೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರೂ ಕ್ಲಬ್ಬಿಗೆ ಹೋಗುವ ಹೊತ್ತು. ಅವರಿಗೆ ಕಾಣಿಸದಿರಲೆಂದು ಡಿ.ವಿ.ಜಿ. ರಸ್ತೆಯ ಕಡೆಗೆ ಬೆನ್ನು ತಿರುಗಿಸಿ, ಮುಖ ಚೆನ್ನಾಗಿ ಕಾಣದಂತೆ ವಸ್ತ್ರ ಬಿಗಿದು ತತ್ವ ಹೇಳಿದರು :

ನವಕೋಟಿ ಹಣವೇನು ಶಿವಭಕ್ತಿಯಿಲ್ಲದೆ ಜಂಗಮಯ್ಯಾ ।
ಶಿವಭಕ್ತಿಯಿರಲಾಗಿ ನವಕೋಟಿ ಹಣವೇಕೆ ಜಂಗಮಯ್ಯಾ ॥

ಈ ಛಂದಸ್ಸಿನ ನಾಲ್ಕು ತತ್ತ್ವಗಳು. ಆಮೇಲೆ :

ಏನೇನೊ ಗತ್ತು ಮಾಡಿದಾ ನಮ್ಮ ಶಿವನೇನೊ ಗಮ್ಮತ್ತು ಮಾಡಿದಾ
ಪಟ್ಟೆಬೂದಿ ಹಚ್ಚಿಕೊಂಡು, ಬೆಟ್ಟದೋಳ್ನ ಕಟ್ಟಿಕೊಂಡು
ಹುಚ್ಚು ಹುಚ್ಚು ಲೀಲೆಯಾಡಿದಾ । ಏನೇನೊ ॥

ಇಂಥಾದ್ದು ಏಳು ತತ್ತ್ವಗಳು. ಇವನ್ನು ಅವರು (ತಾವೇ ಹೇಳುವಂತೆ) "ಧ್ವನಿಯನ್ನೆತ್ತಿ ತಲೆ ಅಲ್ಲಾಡಿಸುತ್ತ, ಮೈ ಕುಲುಕಿಸುತ್ತ, ತಾಳ ಕುಟ್ಟಿಕೊಂಡು" ಹಾಡಿದರಂತೆ. ತಮ್ಮ ಏಕನಾದವೂ ಕೈಚಿಟಿಕೆಯೂ ಹತ್ತಿರ ಇರಲಿಲ್ಲವಲ್ಲ ಎಂದು ಕೊಂಚ ಕೊರತೆಯಾಯಿತಂತೆ !* ಅವರು ಏಕನಾದ ಇಟ್ಟುಕೊಂಡಿದ್ದರೆಂಬುದು ನನಗೆ ಗೊತ್ತಿರಲಿಲ್ಲ.

ಈ ನಾಟಕ ಆಡಿದಾಗ ಅವರಿಗೆ ಸುಮಾರು 72 ವರ್ಷ ! ಆ ವಯಸ್ಸಿನ ಸ್ಥೂಲ ದೇಹದ ವೃದ್ಧರು ಶಿವಶರಣರ ಪಾತ್ರವಹಿಸಿ ತತ್ತ್ವ ಕಟ್ಟಿ ಖುಷಿಯಿಂದ ತಾಳ ಕುಟ್ಟಿಕೊಂಡು ಹಾಡಬೇಕಾದರೆ ಅವರಲ್ಲಿ ಎಷ್ಟು ಹುಮ್ಮಸ್ಸು ಇದ್ದಿರಬೇಕು ! ಯೌವನದಲ್ಲಿ ಇಂಥ ಆಟಗಳನ್ನು ಅನೇಕರು ಆಡಿರುತ್ತಾರೆ. ಆದರೆ 70 ದಾಟಿದ ಮೇಲೆ ? ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳ ಆಪ್ತ ಮಿತ್ರರು, ಸರ್ ಎಂ. ವಿಶ್ವೇಶ್ವರಯ್ಯನವರ ಆಪ್ತ ಕಾರ್ಯದರ್ಶಿ, ಸರ್ ಮಿರ್ಜಾರವರ ಮಿತ್ರರು—ಇದೆ ಶಿವಶರಣರ ಪಾತ್ರಧಾರಿ ಗುಂಡಪ್ಪನವರೆ ? ಹೌದು. ಇವರೇ : ಈಗ ಉದಾಹರಿಸಲಿರುವ ಪದ್ಯವನ್ನೂ ಬರೆದವರೂ ಅವರೇ ;

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆ (ಡಿ.ವಿ.ಜಿ. ಅದರ ಸದಸ್ಯರು) ನಡೆಯುತ್ತಿರುವಾಗ, ಎಲ್ಲರೂ ಗಂಭೀರ ಮುದ್ರೆಯಿಂದಿರುವಾಗ, ಯಾರೋ ಕಟುವಾಗಿ ಮಾತಾಡಿದ್ದು ನ್ಯಾಯವಲ್ಲವೆಂದು ತೋರಿ ಡಿ.ವಿ.ಜಿ. ಈ ಪದ್ಯವನ್ನು ಅಲ್ಲೇ ಬರೆದರು :

ಗೋಳಂ ಪೊಯ್ಕೊಳ್ಳುವನೀ
...ಯ ಮಗನೇತಕಿಂತು ಸುಜನರನಕಟಾ ।
ಕೋಳಿಯ ಕೂಗೇಂ ಗ್ರಂಥಂ
...ಯ ತಲೆಯೊಂದು ರಾತ್ರಿಯೊಳ್ ತುರುಬಪುದೇಂ ! ॥

* 'ಹೃದಯ ಸಂಪನ್ನರು' (ಜ್ಞಾಪಕ ಚಿತ್ರಶಾಲೆ–7) ಪುಟ : 209 ff.

"ತೋಡಿ ರಾಗದಲ್ಲಿ ಹಾಡತಕ್ಕದ್ದು" ಎಂದು ಸೂಚಿಸಿ ಇದನ್ನು ರಿಜಿಸ್ಟ್ರಾರ್ (ಗಾಂಭೀರದ ಗೌರಮ್ಮ !) ಬಿ.ಎಂ.ಶ್ರೀ ಯವರಿಗೆ ಕಳಿಸಿದರು ! ಅವರು ನಗುವನ್ನು ತಡೆಯಲಾರದೆ ಗುಂಡಪ್ಪನವರಿಗೆ ಸನ್ನೆ ಮಾಡಿ ಹೊರಗೆ ಬಂದು "ನನಗೆ ತೋಡಿ ರಾಗ ತಿಳಿಯದು, ಹೇಳಿಕೊಡಿ" ಎಂದರಂತೆ. * (ಪದ್ಯದ 4 ನೆಯ ಪಂಕ್ತಿಯ ಮೊದಲ ಪದವನ್ನು ಡಿ.ವಿ.ಜಿ. ಬಳಸಿದರಲ್ಲ, ಎಂದು ನನಗೆ ವ್ಯಥೆ !)

ಬನ್ನೂರಿನ (?) ಯಾವುದೋ ಸಮಾರಂಭಕ್ಕೆ ಅಧ್ಯಕ್ಷರಾಗಬೇಕೆಂದು ಗುಂಡಪ್ಪ ನವರಿಗೆ ಆಹ್ವಾನ ಬಂದಿತ್ತು. ಹೋಗುವುದು ಅವರಿಗೆ ಇಷ್ಟವಿಲ್ಲ. ಆಗ ಅವರಿಗೆ ಕೂತುಕೊಳ್ಳುವ ದೇಹಭಾಗದ ಮೇಲೆ ಹುಣ್ಣು ಎದ್ದಿತ್ತು. ಬನ್ನೂರಿನವರ ಪರವಾಗಿ ವಿ. ಸೀತಾರಾಮಯ್ಯನವರು "ಬರಲಾಗದ್ದಕ್ಕೆ ಕಾರಣವನ್ನು ತಿಳಿಸಿ ; ಅವರಿಗೆ ಒಂದು ಸಂದೇಶ ಕಳಿಸಿ" ಎಂದು ಬೇಡಿದರು. ಡಿ.ವಿ.ಜಿ.ಯವರಿಗೆ ಸಂದೇಶಗಿಂದೇಶ ಹಿಡಿಸದು —ಏನು ಸಂದೇಶ ! 'ಸಮಾರಂಭ ಯಶಸ್ವಿಯಾಗಲಿ' ಇಷ್ಟೇ ತಾನೆ ! ವಿ. ಸೀ. ಬಲವಂತ ಮಾಡಿದಾಗ ಗುಂಡಪ್ಪನವರಲ್ಲಿದ್ದ 'imp' ಎಚ್ಚರಗೊಂಡಿತು : "ಸಂದೇಶ ಬೇಕಂತೊ ? ನಾನು ಕಳಿಸುವ ಸಂದೇಶಾನ ಅವರ ಸಭೆಯಲ್ಲಿ ಓದುತ್ತಾರಂತೊ ? ಬರಕೊಳ್ಳಿ !"—ಅವರು ಕೊಟ್ಟ ಸಂದೇಶ ಛಂದೋಬದ್ಧವಾದದ್ದು. ನನಗೆ ನೆನಪಿರುವುದು ಇಷ್ಟೇ : "ಗುಂಡಪ್ಪನಾದೊಡೇಂ...ಡೆಯದು ನೋಯದೆ !" ಈ ಕಥೆಯನ್ನು ನನಗೆ ಹೇಳಿದವರು ಸ್ವಯಂ ವಿ. ಸೀತಾರಾಮಯ್ಯನವರೇ. †

ಮೇಲಿನ ಮೂರು ಪ್ರಸಂಗಗಳನ್ನೂ ನೆನೆದರೆ "ಡಿ.ವಿ.ಜಿ. Snob, uppish ಎಂದು ಯಾರಾದರೂ ಹೇಳಿಯಾರೆ ? ವಿ. ಎಸ್. ಶ್ರೀನಿವಾಸಶಾಸ್ತ್ರಿಗಳಂಥ ಪ್ರಸಿದ್ಧ ಸಾರ್ವಜನಿಕರು ; ವಿಶ್ವೇಶ್ವರಯ್ಯ. ಮಿರ್ಜಾರವರಂಥ ರಾಷ್ಟ್ರಕರು (Stateman); ಹಿರಿಯಣ್ಣ, ಬಿ. ಎಂ. ಶ್ರೀಯವರಂಥ ಪಾಶ್ಚಾತ್ಯ ರೀತಿಯ ಶಿಕ್ಷಣ ಪಡೆದ ವಿದ್ವಾಂಸರು ; ವಿರೂಪಾಕ್ಷ ಶಾಸ್ತ್ರಿಗಳಂಥ ವೇದವಿದ್ಯಾಪಾರಂಗತರು ; ವೆಂಕಟರಾಮ ಭಟ್ಟರಂಥ ಪುರೋಹಿತರು ; ವಾಸುದೇವಾಚಾರ್ಯರಂಥ ಸಂಗೀತ ವಿದ್ವಾಂಸರು ; ಬಳ್ಳಾರಿ ರಾಘವಾಚಾರ್ಯರಂಥ ನಟರು ; ಮಂಡಿ ಹರಿಯಣ್ಣನವರಂಥ ಸಾಹುಕಾರರು ; ಅಪ್ಪಣ್ಣನವರಂಥ ಹೋಟಲು ಮಾಲೀಕರು ; ಅವಧೂತರು, ಬೈರಾಗಿಗಳು, ಶಿವಶರಣರು, ಗಾರೆ ಕೆಲಸದವರು, ಗಾಡಿ ಹೊಡೆಯುವವರು—ಡಿ.ವಿ.ಜಿ.ಯವರ ಸಹಮಾನವಾಸಕ್ತಿ, ಮಾನವಪ್ರೀತಿ, ಜೀವನವೈವಿಧ್ಯವನ್ನು ಕುರಿತ ಕುತೂಹಲ. ಒಟ್ಟಿನಲ್ಲಿ ಅವರ ಜೀವನೋತ್ಸಾಹ—ಅದೆಷ್ಟು ದೇಶೋವಿಶಾಲವಾಗಿ ಹಬ್ಬಿದೆ ! ಅದರ ವ್ಯಾಪ್ತಿ ಬೆರಗುಗೊಳಿಸುವಂಥಾದ್ದು.

---

* 'ಸಾಹಿತ್ಯೋಪಾಸಕರು' (ಜ್ಞಾಪಕ ಚಿತ್ರಶಾಲೆ—3) ಪುಟ : 227—8 [ಪ್ರಸಕ್ತ ಪದವನ್ನು ಪೂರ್ತಿಯಾಗಿ ಮುದ್ರಿಸಿಲ್ಲ. ಪ್ರಾಸಸ್ಥಾನದಲ್ಲಿರುವ ಆ ಪದವನ್ನು ಊಹಿಸಿಕೊಳ್ಳಬಹುದು ಎಂದು ತೋರುತ್ತದೆ.—ಸಂ.]

† ಡಿ.ವಿ.ಜಿ. ಕೆಲವು ಪದಗಳನ್ನು ಎಗ್ಗಿಲ್ಲದೆ ಬಳಸುತ್ತಿದ್ದುದುಂಟು. ಅವರಿಗೆ ಗಾಂಭೀರ್ಯದ ಗುಳ್ಳೆಯನ್ನು ಒಡೆಯುವುದೆಂದರೆ ಆನಂದ. ಅದಕ್ಕೆ ಅಂಥ ಪದಗಳು ಸಾಧನವಾಗುತ್ತಿದ್ದವು.

ಸಾರ್ವಜನಿಕ ಸಂಸ್ಥೆಗಳಲ್ಲಿ ಅವರು ಮಾಡಿದ ಕೆಲಸಕ್ಕಾಗಿಯೂ ನಾಡಿನ ಕೃತಜ್ಞತೆ ಅವರಿಗೆ ಸಲ್ಲಬೇಕು. ರಾನಡೆ ಸೊಸೈಟಿ, ಮಿತ್ರಸಂಘ, ಅನಾಮಧೇಯ ಗೋಷ್ಠಿ, ಇಂಥ ಸಣ್ಣಪುಟ್ಟ ಸಂಸ್ಥೆಗಳು ; ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಕೌನ್ಸಿಲ್ ; ಬೆಂಗಳೂರಿನ ಮ್ಯುನಿಸಿಪಲ್ ಕೌನ್ಸಿಲ್ ; ಲೆಜಿಸ್ಲೆಟಿವ್ ಕೌನ್ಸಿಲ್— ಅವರು ಇಂಥ ಎಷ್ಟೋ ಸಂಸ್ಥೆಗಳ ಸದಸ್ಯರಾಗಿದ್ದರು, ಅವೆಲ್ಲದರಲ್ಲೂ ಶ್ರದ್ಧೆಯಿಂದ ಕೆಲಸ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟುವುದರಲ್ಲೂ ಅದರ ಆರಂಭದ ದಿನಗಳಿಂದಲೂ ಶ್ರಮಿಸಿದರು. ಅದರ (ಉಪ) ಅಧ್ಯಕ್ಷರಾಗಿ ಶಿಸ್ತಿನಿಂದ ನಡೆಸಿದರು. ಸ್ವತಃ ಒಬ್ಬರೇ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಕಟ್ಟಿದರು. ಯಾವುದೊಂದು ಸಂಸ್ಥೆಯಲ್ಲೂ ಅವರು ಬೇಕಾಬಿಟ್ಟಿ 'ಆಯಿತು ಅನ್ನಿಸಿದರೆ ಸರಿ' ಎನ್ನುವ ಮನೋಭಾವದಿಂದ ಕೆಲಸ ಮಾಡಿದವರಲ್ಲ. ಯಾವ ಕೆಲಸವೇ ಆಗಲಿ ಅದನ್ನು ಶ್ರದ್ಧೆಯಿಂದ ಮಾಡಬೇಕು.

ಅವರಿಗಿಂತ ಶ್ರೇಷ್ಠರಾದ ಬರಹಗಾರರಿದ್ದಾರೆ. ರಾಷ್ಟ್ರಕರಿದ್ದಾರೆ. ಪಂಡಿತರಿದ್ದಾರೆ. ಆದರೆ ಅಂಥ ಬಹುಮುಖದ ಪ್ರತಿಭೆ, ಅಷ್ಟೊಂದು ಕ್ಷೇತ್ರಗಳಲ್ಲಿ ಉನ್ನತಮಟ್ಟದ ಸಾಧನೆ ; ಅಷ್ಟೊಂದು ಮಾನವಾನುಭವ. ಜೀವನೋತ್ಸಾಹ ; ಸ್ವಾರ್ಥದ ಕಳಂಕ ವಿಲ್ಲದ ಸೇವೆ—ಇವೆಲ್ಲ ಒಟ್ಟಿಗೆ ಒಬ್ಬ ವ್ಯಕ್ತಿಯಲ್ಲಿರುವುದು ಅಪರೂಪ. ಹತ್ತಿರ ಹತ್ತಿರ ಒಂಬತ್ತು ದಶಕಗಳ ನನ್ನ ಬದುಕಿನಲ್ಲಿ, ನನ್ನ ಪರಿಚಯದ ಮಿತಿಯಲ್ಲಿ ಇಂಥ ಮತ್ತೊಬ್ಬರನ್ನು ಕಾಣೆ.

ವ್ಯಾಸಂಗದಿಂದಲೂ ಲೋಕವ್ಯವಹಾರದಿಂದಲೂ ನಾವು ಪಡೆಯುವ ಅನುಭವ ವನ್ನು 'ಜ್ಞಾನ' ಎನ್ನುವುದಕ್ಕಿಂತ 'ಜ್ಞಾನ ಸಾಮಗ್ರಿ' ಎನ್ನುವುದು ಉಚಿತ. ಆ ಸಾಮಗ್ರಿಯ ಮೇಲೆ ವಿಚಾರಶಕ್ತಿ ಆಡಿ ಅದನ್ನು ಜ್ಞಾನವಾಗಿ ಪರಿವರ್ತಿಸಬೇಕು. ಸಾಮಗ್ರಿ–ವಿಚಾರಶಕ್ತಿಗಳ ಕ್ರಿಯೆಪ್ರತಿಕ್ರಿಯೆಗಳಿಂದಾಗಿ ಇತ್ತ ವಿಚಾರಶಕ್ತಿ ಹರಿತ ವಾಗುತ್ತದೆ, ಅತ್ತ ಪರಿಪಕ್ವವಾದ ಜ್ಞಾನ ಲಭಿಸುತ್ತದೆ. ಗುಂಡಪ್ಪನವರಿಗೆ ದೊರೆತ ವಿಪುಲವಾದ ಜ್ಞಾನಸಾಮಗ್ರಿಯನ್ನು ಅವರ ವಿಚಾರಶಕ್ತಿ ಹೇಗೆ ಸಮನ್ವಯ ಮಾಡಿಕೊಂಡಿತು ?

ಒಂದು ಕಡೆ ಭಾರತೀಯ ಸಾಹಿತ್ಯ. ತತ್ತ್ವಶಾಸ್ತ್ರ, ಮತಧರ್ಮ. ಸಮಾಜ ವ್ಯವಸ್ಥೆ. ಇವುಗಳನ್ನು ಕುರಿತ ಶ್ರದ್ಧಾಭಕ್ತಿ ; ಇನ್ನೊಂದು ಕಡೆ ಪಾಶ್ಚಾತ್ಯ ಸಾಹಿತ್ಯ. ಇತಿಹಾಸ. ತತ್ತ್ವಶಾಸ್ತ್ರಗಳನ್ನು ಓದಿದ್ದರಿಂದಾಗಿ ಮತ್ತೆ ಎಚ್ಚರಗೊಂಡ ಪ್ರಶ್ನಕ ಮತ್ತು ವೈಚಾರಿಕ ಮನೋವೃತ್ತಿ. ಜೀವನೋತ್ಸಾಹ—ಇವೆರಡೂ ಅವರಲ್ಲಿ ಪುಷ್ಟವಾಗಿಯೇ ಇದ್ದವು ; ಎರಡಕ್ಕೂ ಅವರಲ್ಲಿ ಸಂಘರ್ಷ ನಡೆಯುತ್ತಲೇ ಇತ್ತು. ಅವರು ಅವೆರಡರ ಸಮನ್ವಯವನ್ನು ಸಾಧಿಸಿದವರೆಂದು ಹೇಳಲಾರೆ. ಸಾಮಾನ್ಯವಾಗಿ ಅವರ ವಿಚಾರಶಕ್ತಿ ಚುರುಕಾಗಿಯೇ ಇತ್ತಾದರೂ ಮತಧರ್ಮ ಸಂಪ್ರದಾಯಗಳ ಮಾತು ಬಂದಾಗ ವಿಚಾರಶಕ್ತಿ ಹಿಂದಾಗಿ ಸಂಪ್ರದಾಯದ ಕೈ ಮೇಲಾಗುತ್ತಿತ್ತು.

1950-51 ರ ಸುಮಾರಿನಲ್ಲಿ ಒಂದು ದಿನ ಅವರು 'ಗುರುಬ್ರಹ್ಮಾ, ಗುರುರ್ವಿಷ್ಣು' ಎಂಬ ಶ್ಲೋಕವನ್ನು ಹೇಳಿ "ಇದೇನು ಹುಚ್ಚು, ನಮ್ಮ ಜನದ್ದು ! ಗುರು ಎಷ್ಟೇ ಮೇಧಾವಿಯಾಗಲಿ, ಅವನು ಮನುಷ್ಯನೇ. ಯಾಜ್ಞವಲ್ಕ್ಯರ ಬುದ್ಧಿ ಶಕ್ತಿಗೂ ಮಾನವಸಹಜವಾದ ಮಿತಿಗಳಿದ್ದೇ ಇದ್ದವು. ಮಾನವಮಾತ್ರನಾದ ಗುರುವಿಗೆ ತ್ರಿಮೂರ್ತಿಗಳ ಪಟ್ಟ ಕಟ್ಟುವುದುಂಟೆ !" ಎಂದದ್ದು ನೆನಪಿದೆ. ಇದು ಸಂಪ್ರದಾಯಸ್ಥರಿಂದ ನಿರೀಕ್ಷಿಸಬಹುದಾದ ಮಾತಲ್ಲ !

ಅವರ ಗ್ರಂಥಗಳಿಂದ ತೆರೆದ ಕೆಲವು ವಾಕ್ಯಗಳನ್ನು ಪರಿಶೀಲಿಸೋಣ :

1. "ನಮ್ಮ ದೇಶದಲ್ಲಿ ಸ್ವತಂತ್ರವಾದ ಬುದ್ಧಿಕಾರ್ಯವೂ ಅನ್ಯಾನುವಾದ ವಲ್ಲದ ಶಾಸ್ತ್ರರಚನೆಯೂ ನಿಂತುಹೋಗಿ ನೂರಾರು ವರ್ಷಗಳಾದವು. ಈಚಿನ ಪಾಂಡಿತ್ಯವೇನಿದ್ದರೂ ಸ್ಮೃತಿಮಹಿಮಾ ಮಾತ್ರದ್ದು. ಹೊಸ ಗ್ರಂಥಗಳೇನಾದರೂ ಇದ್ದರೆ ಅವು ಚರ್ವಿತಚರ್ವಣ, ಅಥವಾ ಛಾಯಾನುಕರಣ. ಈಚಿನ......... ವಾಕ್ಯಾರ್ಥಗಳಲ್ಲಿಯ ಕೋಟಿಪ್ರತಿಕೋಟಿಗಳು ಹಿಂದಿನ ವಾದಸರಣಿಯ ಪಡಿಯಚ್ಚುಗಳು." *

2. "ಭಸ್ಮರುದ್ರಾಕ್ಷಿಗಳ ಮಾಹಾತ್ಮ್ಯವನ್ನೂ ಗೋಪೀಚಂದನ ತುಳಸೀ ಮಣಿಗಳ ಮಾಹಾತ್ಮ್ಯವನ್ನೂ ತೋರಿಸಿಕೊಡುವ ಗ್ರಂಥಗಳಿಗಿಂತ ಶಾಸ್ತ್ರೀಯವಾಗಿ ಕಲ್ಲೊಡೆಯುವ ರೀತಿಯನ್ನೂ, ಶಾಸ್ತ್ರೀಯವಾಗಿ ಗಾರೆ ಅರೆಯುವ ರೀತಿಯನ್ನೂ... ಹೇಳಿಕೊಡುವ ಪುಸ್ತಕಗಳು ನಮಗೆ ಹೆಚ್ಚು ಅವಶ್ಯಕ..."

3. "ಅಸಾಧ್ಯವಾದ ವೈರಾಗ್ಯದ ಸೋಗಿಗಿಂತ ಸಾಧ್ಯವಾದ ಭೋಗಸಾಧನೆ ಮೇಲೆಂದು ನಾವೆಲ್ಲ ಸ್ಪಷ್ಟವಾಗಿ ಅಂಗೀಕರಿಸಬೇಕು."

4. "ಮೋಕ್ಷದ ಬಗೆಗೆ ನಮಗಿರುವ ಆತುರವು ಅನರ್ಥಕಾರಿಯಾಗಿದೆ."

5. "ಬ್ರಾಹ್ಮಣರು ತಾವೂ ಮನುಷ್ಯಮಾತ್ರದವರು ; ಆದಕಾರಣ ಮನುಷ್ಯ ಸಾಮಾನ್ಯವಾದ ದೋಷಗಳು ತಮಗೂ ತಪ್ಪಿದುವಲ್ಲ ಎಂಬುದನ್ನು ಮರೆಯಬಾರದು. ಎಂದು ಅವರು 'ಭೂಸುರ' ಎಂಬ ವಿಶೇಷಣ ಪದವನ್ನು ತಮ್ಮ ವಿಷಯದಲ್ಲಿ ಯಥಾರ್ಥವಾಚಕವೆಂದು ತಿಳಿದುಕೊಳ್ಳಲಾರಂಭಿಸಿದರೋ ಅಂದು ಅವರು ಜಾರಿದರು."

ಮೇಲೆ ಉದಾಹರಿಸಿರುವ ವಾಕ್ಯಗಳಲ್ಲಿ ಯಾವುದೊಂದನ್ನೂ ಸಂಪ್ರದಾಯಸ್ಥ ರಿಂದ ನಿರೀಕ್ಷಿಸಲಾಗುವುದಿಲ್ಲ ; ಅವನ್ನು ಒಪ್ಪಿದವರೂ ಸ್ಪಷ್ಟವಾಗಿ ಹೇಳಲು ಹಿಂಜರಿಯುತ್ತಾರೆ. ಅವುಗಳಲ್ಲಿ ವೈಚಾರಿಕತೆ ಎದ್ದುಕಾಣುತ್ತದೆ. ಆದರೆ ಜಾತಿಯ

* ಸಾಹಿತ್ಯಶಕ್ತಿ (1950), ಪು. 89-90.

ಮಾತು ಬಂದಾಗ ಡಿ.ವಿ.ಜಿ. ಆಧುನಿಕರ ದೃಷ್ಟಿಯನ್ನು ಅನುಮೋದಿಸಲಾರರು. (ಆದರೂ 'ಭೂಸುರ' ಎಂಬ ಪದದ ವಿಷಯದಲ್ಲಿ ಅವರು ಹೇಳಿರುವುದನ್ನು ನೋಡಿ !). ಮೂಲತಃ ಜಾತಿ ವ್ಯವಸ್ಥೆಯಲ್ಲಿ ದೋಷವಿಲ್ಲ ಎಂಬ ವಾದವನ್ನು ಅವರು ಒತ್ತಿ ಹೇಳುತ್ತಾರೆ. ಆ ವ್ಯವಸ್ಥೆ ಎಂದೋ ಒಂದು ಕಾಲದಲ್ಲಿ (ನ್ಯಾಯ ವಲ್ಲದಿದ್ದರೂ) ಸ್ವಾಭಾವಿಕವಾಗಿತ್ತು, ಇತರ ದೇಶಗಳಲ್ಲೂ ಅಂಥ ವ್ಯವಸ್ಥೆಗಳಿದ್ದವು ಎಂದು ಒಪ್ಪಿದರೂ ಆ ವಾದ ಇಂದು ಪ್ರಸಕ್ತವಲ್ಲ. "ಎಲ್ಲಿ ನಮ್ಮ ಜಾತ್ಯಭಿಮಾನವು ಸಮಸ್ತ ಸಮಾಜಹಿತಕ್ಕೆ ಅಡ್ಡಿಯಾದೀತೋ ಅಲ್ಲಿ ನಾವು ಆ ಸಣ್ಣ ಅಭಿಮಾನವನ್ನು ಸಂತೋಷದಿಂದ ತ್ಯಜಿಸಬೇಕು" ಎಂದು ಡಿ.ವಿ.ಜಿ.ಯೇ ಹೇಳುತ್ತಾರೆ. ಇಂದು ಜಾತ್ಯಭಿಮಾನ ಸಮಾಜಹಿತಕ್ಕೆ ಅಡ್ಡಿಯಾಗಿದೆ. ದ್ವೇಷ ಬೆಳೆಯುವುದಕ್ಕೆ ಕಾರಣ ವಾಗಿದೆ. ಡಿ.ವಿ.ಜಿ. ಇದನ್ನು ಒಪ್ಪಲು ಹಿಂಜರಿಯುತ್ತಾರೆ : "ಜಾತಿಗಳೂ ಅವುಗಳಲ್ಲಿ ಪಂಗಡಗಳೂ ಇರುವುದು ದೋಷವೆಂದೂ ಸಮಾಜಕ್ಕೆ ಆದರಿಂದ ಹಾನಿಯೆಂದೂ ಕೆಲವರು ವಾದಿಸುತ್ತಾರೆ. ಅದು ಭ್ರಾಂತಿಯ ವಾದ ಎಂಬುದರಲ್ಲಿ ನನಗೆ ಸಂದೇಹ ವಿಲ್ಲ" (ಗೀತಾ ತಾತ್ಪರ್ಯ, ಪು. 618) ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಇಲ್ಲಿ ಸಂಪ್ರದಾಯ ಮುಂದಾಯಿತು.

ಜಾತಿವ್ಯವಸ್ಥೆಯ ಪರವಾಗಿ ಅವರು ಎರಡು ಬಗೆಯ ವಾದವನ್ನು ಮಂಡಿಸು ತ್ತಾರೆ :

1. "ಕಸುಬಿನ ಕುಶಲತೆ ನಿಪುಣತೆಗಳೂ ಕುಲಪರಂಪರೆಯಿಂದ ಬೆಳೆದು ತೀಕ್ಷ್ಣತೆಯನ್ನೂ ಸೂಕ್ಷ್ಮತೆಯನ್ನೂ ಪಡೆಯುತ್ತವೆ." ನನಗೆ ತಿಳಿದಮಟ್ಟಿಗೆ ವಿಜ್ಞಾನ ಈ ವಿಷಯದಲ್ಲಿ ಖಚಿತವಾದ ತೀರ್ಮಾನಕ್ಕೆ ಬಂದಂತಿಲ್ಲ. ನಾವು ಹೇಳ ಬಹುದಾದ್ದು ಇಷ್ಟು : ನಮ್ಮ ಕಣ್ಣೆದುರಿಗೇ ರೈತರ ಮಕ್ಕಳು ಪ್ರಸಿದ್ಧ ಸಾಹಿತಿ ಗಳಾಗಿದ್ದಾರೆ ; ಸಾಹಿತಿಗಳ ಮಕ್ಕಳು ವ್ಯಾಪಾರಿಗಳಾಗಿದ್ದಾರೆ. ವಿಜ್ಞಾನಿಗಳಾಗಿದ್ದಾರೆ. ವ್ಯಕ್ತಿಯೊಬ್ಬ ನಾಲ್ಕಾರು ಕ್ಷೇತ್ರಗಳಲ್ಲಿ ನಿಪುಣತೆ ಪಡೆಯುವುದೂ ಸಾಧ್ಯ. ನನ್ನ ಸ್ನೇಹಿತ ಜಿ. ಹನುಮಂತರಾಯರು ವೃತ್ತಿಯಿಂದ ತತ್ವಶಾಸ್ತ್ರಾಧ್ಯಾಪಕರು. ಇವರು ಜೊತೆಗೆ ಪ್ರಸಾರಾಂಗ ಕಟ್ಟಿ ಬೆಳಸಿದರು ; ತೋಟಗಾರಿಕೆಯಲ್ಲಿ ಯಶಸ್ಸು ಪಡೆದರು : ಮನೆ ಕಟ್ಟಿಸುವುದರಲ್ಲಿ ಯಾವ ಇಂಜಿನಿಯರಿಗಿಂತಲೂ ಹೆಚ್ಚು ದಕ್ಷರೆನಿಸಿಕೊಂಡರು. ಒಬ್ಬ ಎಷ್ಟುಕ್ಷೇತ್ರಗಳಲ್ಲಿನಿಪುಣತೆಪಡೆಯಬಹುದೆನ್ನುವುದಕ್ಕೆಸಾಹಿತಿ–ತತ್ತ್ವಶಾಸ್ತ್ರಜ್ಞ— ರಾಜಕಾರಣಿ–ಸಂಸ್ಥಾವ್ಯವಸ್ಥಾಪಕ ಡಿ.ವಿ.ಜಿ.ಯೇ ಸಾಕ್ಷಿ ! ವೃತ್ತಿಯನ್ನು ಆಯ್ದು- ಕೊಳ್ಳುವ ವಿಷಯದಲ್ಲಿ ಎಲ್ಲರಿಗೂ ಸಮಾನಾವಕಾಶವಿರಬೇಕು ಅನ್ನುವುದೇ ಸರಿ ಎಂದು ತೋರುತ್ತದೆ. ಜಾತಿಗೂ ಕಸಬಿಗೂ ಹಿಂದಿದ್ದ ಸಂಬಂಧ ಎಂದೋ ಕಡಿದು ಹೋಯಿತು.

2. ಜಾತಿಕ್ರಮ ಒಳ್ಳೆಯದು ಎನ್ನುವುದಕ್ಕೆ ಡಿ.ವಿ.ಜಿ. ಕೊಡುವ ಎರಡನೆಯ ಕಾರಣ : "ಜಾತಿಪಂಗಡಗಳಿರುವುದರಿಂದ ಅವುಗಳಲ್ಲಿರುವ ವ್ಯಕ್ತಿಗಳಿಗೆ ಒಂದು

ಸುರಕ್ಷಿತತೆಯ, ಆಪ್ತತೆಯ ಭಾವನೆ ಬರುತ್ತದೆ." ಇದು ಭಾಗಶಃ ಸತ್ಯ. ಆದರೆ ಆ ಭಾವನೆಯ ಜೊತೆಗೆ—ಸುರಕ್ಷಿತತೆಯ ಬಯಕೆಯೇ ಕಾರಣವಾಗಿ—ಇತರ ಜಾತಿ ಪಂಗಡಗಳನ್ನು ಕುರಿತ ವೈಷಮ್ಯವೂ ಹೆಚ್ಚುತ್ತದೆಂಬುದನ್ನು ನಾವು ಈಗ ಕಣ್ಣಾರೆ ನೋಡುತ್ತಿದ್ದೇವೆ ! ಈ ಮಾತು ಎಲ್ಲ ಜಾತಿಯವರ ವಿಷಯದಲ್ಲೂ ಸತ್ಯ.

ಕೆಲವು ವೇಳೆ ಡಿ.ವಿ.ಜಿ.ಯವರಲ್ಲಿ ಸಾಂಪ್ರದಾಯಿಕ ನಂಬಿಕೆ ಮುಂದಾಗಿ ವೈಚಾರಿಕತೆ ಹಿಂದಾಗುತ್ತದೆ ಎಂಬುದಕ್ಕೆ ಅವರು ವೇದಾಧಿಕಾರದ ಮತ್ತು ದೇವರ ವಿಷಯದಲ್ಲಿ ತಾಳಿರುವ ನಿಲುವು ಕೂಡ ನಿದರ್ಶನಗಳನ್ನು ಒದಗಿಸುತ್ತದೆ.

ವೇದಾಧಿಕಾರ :— "ವೇದಪಾಠವನ್ನು ಕೆಲವೇ ಕೆಲವುಂದಿಗೆ ಮಿತಪಡಿಸಿರುವುದು ನ್ಯಾಯವೆ? ವೇದ ಒಳ್ಳೆಯದಾದರೆ ಅದನ್ನು ಎಲ್ಲ ಜನರೂ ಕಲಿಯಬೇಡವೆ? "—ಈ ಪ್ರಶ್ನೆಯನ್ನು ಅವರೇ ಹಾಕಿಕೊಂಡಿದ್ದಾರೆ (ಪುರುಷಸೂಕ್ತ—ಪುಟ 16–17). ಅವರ ಉತ್ತರ : "ಯಾರಿಗೆ ವೇದಾಧ್ಯಯನವಿಲ್ಲವೋ ಅವರಿಗೆ ವೇದಾಂತಾರ್ಥ ವ್ಯಾಸಂಗವಿಲ್ಲವೆಂದು ಎಲ್ಲಿಯೂ ವಿಧಿಸಿಲ್ಲ... ವೇದಾರ್ಹತೆ ಬೇರೆ, ವೇದಾಂತದ ಅರ್ಹತೆ ಬೇರೆ." ಈ ವಾದ ಕೆಲವು ಆಕ್ಷೇಪಣೆಗಳಿಗೆ ಎಡೆಗೊಡುತ್ತದೆ. 1. ವೇದೋಪನಿಷತ್ತುಗಳನ್ನು ಓದದೆ ವೇದಾಂತ ತತ್ವಗಳನ್ನು ತಿಳಿದುಕೊಳ್ಳುವುದು ಹೇಗೆ? ವ್ಯಾಖ್ಯಾನದ ಮೂಲಕ, ಎನ್ನಬಹುದು. ಹಾಗಾದರೆ ಅಭ್ಯಾಸಿಗೆ ನಿಜವಾಗಿ ಸಿಕ್ಕುವುದು ವೇದೋಪನಿಷತ್ತುಗಳಲ್ಲ; ಅವನ್ನು ಕುರಿತು ವ್ಯಾಖ್ಯಾನಕಾರ ಏನು ಹೇಳುತ್ತಾನೋ ಅದು. ಅವನು ಹೇಳುವುದು ಸಾಧು ಎಂದು ನಂಬುವುದು ಹೇಗೆ ! ವೇದದ ಆಧಾರದ ಮೇಲೆ ಮೂರು ಮತಗಳು ಹುಟ್ಟಿವೆ ! 2. ವೇದಾಂತ ತತ್ವಕ್ಕೆ ಅರ್ಹನಾದವನು ವೇದಕ್ಕೇಕೆ ಅನರ್ಹ? ಡಿ.ವಿ.ಜಿ. ಹೇಳುತ್ತಾರೆ : ಯಾರು ತಾತ್ವಿಕ ದೃಷ್ಟಿಯನ್ನು ಸಂತತಾಭ್ಯಾಸದಿಂದ ಸೂಕ್ಷ್ಮಪಡಿಸಿಕೊಂಡಿಲ್ಲವೋ ಅಂಥವರಿಗೆ ಇಂಥ ಗ್ರಂಥ ನಿಷ್ಪ್ರಯೋಜನ (ಪುರುಷಸೂಕ್ತ. ಪುಟ 14). ಇದಕ್ಕೆ ನಾವು ಎತ್ತಬಹುದಾದ ಆಕ್ಷೇಪಣೆ : (ಅ) ಅಂಥ ಗ್ರಂಥಗಳನ್ನು ಓದದೆ ತಾತ್ವಿಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಹೇಗೆ? ಬೇರೆ ಗ್ರಂಥಗಳಿದ್ದು, ಅವನ್ನು ಓದಿ ದೃಷ್ಟಿಯನ್ನು ಬೆಳೆಸಿಕೊಂಡವರಿಗೆ—ಜಾತಿಯ ಪ್ರಶ್ನೆ ಎತ್ತದೆ—ವೇದಾಧಿಕಾರ ಕೊಡುತ್ತೀರೊ? ತಾತ್ವಿಕ ದೃಷ್ಟಿ ಇದೆಯೆ ಇಲ್ಲವೆ ಎಂಬುದನ್ನು ನಿರ್ಣಯಿಸುವವರು ಯಾರು? ಅದೇನು ಸುಲಭದ ಕೆಲಸವಲ್ಲ. ಐನ್‌ಸ್ಟೈನ್‌ನ ಮೇಷ್ಟರೊಬ್ಬರು ಅವನಿಗೆ ಶತಮಡ್ಡಿ ಪಟ್ಟ ಕಟ್ಟಿದ್ದರಂತೆ !

ದೇವರು :— 1. ಶ್ವೇತಾಶ್ವತರೋಪನಿಷತ್ತಿನಲ್ಲಿ ದೇವರನ್ನು 'ಸಾಕ್ಷೀ' ಎಂದು ಕರೆದಿರುವುದನ್ನು ಡಿ.ವಿ.ಜಿ. (ಒಪ್ಪಿಕೊಂಡಂತೆ) ಕಾಣಿಸಿ ಅದನ್ನು ಹೀಗೆ ವಿವರಿಸಿದ್ದಾರೆ : "ಇದು ತಟಸ್ಥ ಚೈತನ್ಯ. ನದಿಯಲ್ಲಿ ಇತರರು ಮುಳುಗುತ್ತಿದ್ದರೂ, ಬಿದ್ದು ಒದ್ದಾಡುತ್ತಿದ್ದರೂ, ದಡದ ಮೇಲೆ ನಿಂತು ಅದನ್ನು ನೋಡುವವನು ತಟಸ್ಥ, ಸಾಕ್ಷೀ" (ದೇವರು—ಪುಟ 16). ಇನ್ನೊಂದು ಕಡೆ" ಆತನು (ದೇವರು) ಎಲ್ಲ

ಜಗತ್ತನ್ನೂ ಆಳುತ್ತಾನೆ. ಈ ಜಗತ್ತು ಮತ್ತು ಅದರ ಆಳ್ವಿಕೆ ಆತನ ಲೀಲೆ" (ದೇವರು—ಪುಟ 30). ಇದಕ್ಕೆ ಎತ್ತಬಹುದಾದ ಆಕ್ಷೇಪಣೆ : 'ತಟಸ್ಥ'ನಾಗಿರುವ ದೇವರು ಆಳುವುದು ಹೇಗೆ ಸಾಧ್ಯ ? ಅವನು ಸುಮ್ಮನೆ ನೋಡುತ್ತಿರಬೇಕಷ್ಟೆ ?

2. ದೇವರು ಜಗತ್ತನ್ನು ಏಕೆ ನಿರ್ಮಿಸಿದ ? "ತನ್ನ ಈಶ್ವರತ್ವದ ಅಭಿವ್ಯಕ್ತಿಗಾಗಿ... ಭಗವಂತನು ತಾನು ಆಳಬೇಕೆಂದುಕೊಂಡ, ಅದಕ್ಕಾಗಿ ಈ ಲೋಕವನ್ನು ಸೃಷ್ಟಿಸಿದ" (ದೇವರು- ಪುಟ 20-21).—ಮರ್ತ್ಯಲೋಕದ ಶಕ್ತಿ ಮತ್ತು (Power-mad) ರಾಜರಂತೆ ದೇವರಿಗೂ ಆಳುವ ಚಟ ಬಂತೆ !

3. "ಈಶ್ವರನನ್ನು 'ಇದೇನು ಲೀಲೆ'—ಎಂದು ಪ್ರಶ್ನೆ ಮಾಡುವವರು ಯಾರೂ ಇಲ್ಲ. (ಏಕಿಲ್ಲ ? ಇದ್ದಾರೆ !). ಯಾರಾದರೂ ಕೇಳಿದರೆ ಈಶ್ವರನು ಪ್ರತ್ಯುತ್ತರ ಹೇಳಬೇಕಾದದ್ದೂ ಇಲ್ಲ" (ದೇವರು—ಪುಟ 21). ಹೀಗೆಂದಮೇಲೆ ವೈಚಾರಿಕತೆಗೆ ಕೆಲಸವೇ ಇಲ್ಲ.

4. ಲೋಕದಲ್ಲಿ ನಡೆಯುವ ಅಸಂಗತಗಳು :—"ಲೋಕದಲ್ಲಿ ಎಷ್ಟೋ ಅಸಂಗತಗಳು, ಎಷ್ಟೋ ಅಸಾಮಂಜಸ್ಯಗಳು, ಎಷ್ಟೋ ಅವಿವೇಕಗಳು ನಡೆಯುತ್ತವೆಯಲ್ಲ ?"—ಎಂದರೆ, "ಈಶ್ವರನ ಜಗನ್ನಿರ್ವಾಹದಲ್ಲಿ ಒಟ್ಟಿಗೆ ನೋಡಿದಾಗ ಎಲ್ಲವೂ ಲೀಲೆಯಾಗಿ ಸರಿಯಾಗುತ್ತದೆ" (ದೇವರು— ಪುಟ 21). ಆದರೆ ಮರ್ತ್ಯಲೋಕದಲ್ಲಿ ಈ 'ಅವಿವೇಕಗಳ' ಫಲವಾಗಿ ಎಷ್ಟೋ ಜನ ಸಂಕಟಪಡುತ್ತಾರಲ್ಲ ? ಆ ಸಂಕಟವೇಕೆ ? ಒಂದು ಜ್ವಾಲಾಮುಖಿ ಭುಗಿಲೆದ್ದು ಲಾವಾರಸವನ್ನು ಕಾರಿತೆಂದರೆ ಸಾವಿರಗಟ್ಟಲೆ ಜನ ಸಾಯುತ್ತಾರೆ, ಸಹಿಸಲಾರದ ನೋವನ್ನು ಅನುಭವಿಸುತ್ತಾರೆ. "ದೇವರ ಬೃಹದ್ಯೋಜನೆಗೆ ನಿಮ್ಮ ಸಂಕಟ ಹೊಂದಿಕೊಳ್ಳುತ್ತದೆ" ಎಂದರೆ ಆ ಜನಕ್ಕೆ ಸಮಾಧಾನ ಬಂದೀತೆ ? ದೇವರು ಜೀವಿಗಳಿಗೆ ಸಂಕಟ ಕೊಡದಂಥ ಯೋಜನೆ ಹಾಕಿಕೊಳ್ಳಬಹುದಾಗಿತ್ತಲ್ಲ— ಅವನು ಸರ್ವಶಕ್ತನಲ್ಲವೆ !

"ಅದೆಲ್ಲ ಸತ್ತವರ, ನೊಂದವರ. ಕರ್ಮಫಲ" ಎಂದರೂ ಸಂಕಟದ ಸಮಸ್ಯೆ ಉಳಿದೇ ಉಳಿಯುತ್ತದೆ. ಮಗು ಬೇಡ ಬೇಡ ಎಂದರೂ ಓಡಿಹೋಗಿ ಬಿದ್ದು ಕಾಲು ಮುರಿದುಕೊಂಡರೆ ಮರ್ತ್ಯಲೋಕದ ತಂದೆ "ನಿನ್ನ ಕರ್ಮಫಲ" ಎಂದು ಸುಮ್ಮನಿರುವುದಿಲ್ಲ. ಮಗುವಿನ ಸಂಕಟವನ್ನು ನಿವಾರಿಸುವ ಪ್ರಯತ್ನ ಮಾಡುತ್ತಾನೆ. 'ಕರುಣಾನಿಧಿ' ಎನ್ನಿಸಿಕೊಳ್ಳುವ ದೇವರು ಮರ್ತ್ಯಲೋಕದ ತಂದೆಗಿಂತ ಕಠಿನ ಮನಸ್ಕನಾಗಬಹುದೆ !

ವಾಸ್ತವವಾಗಿ ಈ ಪ್ರಶ್ನೆಗಳಿಗೆ ಯಾರೂ ಸಮರ್ಪಕವಾದ ಉತ್ತರ ಕೊಟ್ಟಿಲ್ಲ. ಆದ್ದರಿಂದ ಮೇಲಿನ ಮಾತೆಲ್ಲ ಗುಂಡಪ್ಪನವರ ಅವಹೇಳನ ಎಂದು ಭಾವಿಸಲಾಗದು. ಅವರ ಸಮರ್ಥನೆಗಳಲ್ಲಿ ಅವರು ಸಂಪ್ರದಾಯದ ಪುನರಾವರ್ತನೆ ಮಾಡುತ್ತಿ

ದ್ವಾರೆಯೇ ಹೊರತು ವಿಚಾರಶಕ್ತಿಯನ್ನು ಬಳಸುತ್ತಿಲ್ಲ ಎಂದು ತೋರಿಸುವುದಷ್ಟೇ ನನ್ನ ಉದ್ದೇಶ. ದೇವರ, ಮತಧರ್ಮಗಳ ಮಾತು ಬಂದಾಗ ನ್ಯೂಟನ್ (Newton) ನಂಥ ಉನ್ನತೋನ್ನತ ವಿಜ್ಞಾನಿಗಳಲ್ಲಿ ಕೂಡ ವಿಚಾರಶಕ್ತಿ ಹಿಂದಾಗುವುದುಂಟು !

ಡಿ.ವಿ.ಜಿ.ಯವರಲ್ಲಿ ವೈಚಾರಿಕತೆಯೇ ಮುಂದಾಗಿರುವ, ಬದುಕಿಗೆ ಉತ್ಸಾಹ ಕೊಡುವ, ಕೆಲವು ವಾಕ್ಯಗಳನ್ನು ಉದ್ಧರಿಸಿ ಈ ಲೇಖನವನ್ನು ಮುಗಿಸುತ್ತೇನೆ. 'ಜೀವನ ಸೌಂದರ್ಯ ಮತ್ತು ಸಾಹಿತ್ಯ'ದಲ್ಲಿ ಬರುವ ಈ ವಾಕ್ಯಗಳು 'ಜೀವ ಸಾರ್ಥಕ್ಯ ದೀಪಿಕೆ'ಯಲ್ಲಿ (ಪುಟ 25) ಉದಾಹೃತವಾಗಿವೆ :

"ಜಗತ್ತು ಸುಳ್ಳಲ್ಲ... ಜೀವದ ಪಾಲಿಗೆ ಜಗತ್ತು ಸತ್ಯ. ಮನುಷ್ಯನ ಧರ್ಮಾಧರ್ಮಗಳಿಗೂ ಪುಣ್ಯಪಾಪಗಳಿಗೂ ಅವಕಾಶಗಳನ್ನೂ ಕಾರಣಗಳನ್ನೂ ಸಾಧನಗಳನ್ನೂ ಒದಗಿಸುವುದು ಜಗತ್ತು. ನಮ್ಮ ಜೀವನವನ್ನು ಕೆಣಕಿ, ಕಲಕಿ, ಏರ್ಪಡಿಸಿ, ಮಾರ್ಪಡಿಸಿ ನಮಗೆ ಶಾಂತಿಯನ್ನೋ ಅಶಾಂತಿಯನ್ನೋ ತರುತ್ತಿರುವುದು ಈ ಲೋಕದ ಸೌಂದರ್ಯ ಸೌಭಾಗ್ಯಗಳು... ನಾವೆಲ್ಲ ಪ್ರಕೃತಿದೇವಿಯ ರಾಜ್ಯದ ಪ್ರಜೆಗಳು... ಪ್ರಕೃತಿಯು ಸತ್ಯ ; ದೇಹ ಸತ್ಯ ; ಇಂದ್ರಿಯಗಳು ಸತ್ಯ ; ಜಗತ್ತು ಸತ್ಯ ; ಅವುಗಳ ಬೆಡಗುಗಳೂ ಸತ್ಯ...ಸೌಂದರ್ಯಗಳೂ ಮೇಲ್ಮೇಲಿನ ತೋರಿಕೆ ಮಾತ್ರವೇ ಆದರೂ ಅವುಗಳಿಂದ ಜೀವಕ್ಕಾಗುವ ಫಲಾಫಲಗಳು ನಿಜ... ಧರ್ಮವೂ ನೀತಿಯೂ ಲೋಕಾನುಭವವನ್ನು ಬಿಟ್ಟಿರುವುದು ... ಇದೇ ಜೀವನ ತತ್ವ ದರ್ಶನ."

'ನಂಬದಿರು ಈ ದೇಹ ನಿತ್ಯವಲ್ಲ'; 'ಹೇಸಿಗೆ ಸಂಸಾರ'; 'ಹಿಗ್ಗುವೆ ಯಾಕೊ ಈ ದೇಹಕ್ಕೆ'; 'ಮನುಜ ಶರೀರವಿದೇನು ಸುಖ'; 'ಸಂಸಾರ ಸಾಗರ ವಿಶಾಲ ಕರಾಲ ಕಾಲಚಕ್ರ', 'ಸಂಸಾರ ಭೀಕರ ಕರೀಂದ್ರ'—ಇತ್ಯಾದಿ ಮಾತು ಗಳನ್ನಾಡುವ ಜೀವಶತ್ರುಗಳ ಬೇಗೆಯಲ್ಲಿ ಬಳಲಿದವರಿಗೆ ಮೇಲಿನ ಮಾತುಗಳು ಪರಿಮಳಯುಕ್ತವಾದ ತಂಗಾಳಿ.

ಡಿ.ವಿ.ಜಿ. ಅವರ ವೈದಿಕಚಿಂತನ

ಆರ್. ಎಸ್. ಶಿವಗಣೇಶಮೂರ್ತಿ

ಡಿ.ವಿ.ಜಿ. ಅವರ ವೈದಿಕಚಿಂತನೆಗಳು ಕಡಮೆಯಾಗಿಯೋ ಹೆಚ್ಚಾಗಿಯೋ ಬಲುಮಟ್ಟಿಗೆ ಅವರ ಎಲ್ಲ ಕೃತಿಗಳಲ್ಲಿಯೂ ಹಾಸುಹೊಕ್ಕಾಗಿ ಹರಡಿಕೊಂಡಿವೆ: ಮುಖ್ಯವಾಗಿ, ಅವರ 'ಪುರುಷಸೂಕ್ತ', 'ಈಶೋಪನಿಷತ್ತು', 'ವಿದ್ಯಾರಣ್ಯರ ಸಮಕಾಲೀನರು', 'ನಿವೇದನ', 'ಜ್ಞಾಪಕಚಿತ್ರಶಾಲೆ' ('ವೈದಿಕ ಸಂಪ್ರದಾಯಸ್ಥರು' ಸಂಪುಟ) ಇವುಗಳಲ್ಲಿ ಅಖಂಡವಾಗಿ. ವೈದಿಕಮನೆತನದಲ್ಲಿ ಹುಟ್ಟಿ, ವೇದಾಧ್ಯಯನದ ಶಿಕ್ಷಣವನ್ನು ಪಡೆದು, ವೇದದ ಅಮೃತಧಾರೆಯಲ್ಲಿ ಮಿಂದು, ಅದರ ಪಾವಿತ್ರ್ಯ ಪ್ರಾಶಸ್ತ್ಯಗಳನ್ನು ಕುರುಡುಕುರುಡಾಗಿ ಒಪ್ಪಿಕೊಳ್ಳದೆ ಆಧುನಿಕ ಶಿಕ್ಷಣದ ವಿಮರ್ಶನ ಬುದ್ಧಿಯಿಂದ ಪರಿಶೀಲಿಸಿರುವುದನ್ನು ಡಾ॥ ಆರ್. ಎಸ್. ಶಿವಗಣೇಶಮೂರ್ತಿಯವರು ಮನಮುಟ್ಟುವಂತೆ ಸಮೀಕ್ಷಿಸಿದ್ದಾರೆ. ಇಡಿಯ ಸಮಾಜಕ್ಕೆ ಸೇರಿದ ವೈದಿಕಸಂಪತ್ತನ್ನು ಬ್ರಾಹ್ಮಣವರ್ಗ ತನ್ನ ದೈನ್ಯತೆಯನ್ನು ಬಿಟ್ಟು ಅದರ ನ್ಯಾಸಪಾಲಕರಾಗಿ ಕರ್ತವ್ಯ ನಿರ್ವಹಿಸಬೇಕೆಂಬ ಡಿ.ವಿ.ಜಿ. ಅವರ ಅಭಿಪ್ರಾಯದ ಕಡೆಗೆ ಗಮನ ಸೆಳೆದಿದ್ದಾರೆ ಲೇಖಕರು. ಪುರುಷಸೂಕ್ತದಲ್ಲಿ ಹೇಳಿರುವ ವರ್ಣವ್ಯವಸ್ಥೆಯ ಬಗ್ಗೆ ಡಿ.ವಿ.ಜಿ.— "ಅದು ಸ್ವತಸ್ಸಿದ್ಧವಾದುದು, ಪ್ರಕೃತಿಸಿದ್ಧವಾದುದು, ಕೃತಕವಲ್ಲ" ಎಂದು ಅಭಿಪ್ರಾಯಿಸಿರುವುದನ್ನು ಎತ್ತಿ ಕಾಣಿಸಿದ್ದಾರೆ. ವೈದಿಕಚಿಂತನ ಡಿ.ವಿ.ಜಿ. ಅವರ ಬದುಕಿನ ಉಸಿರಾಗಿತ್ತು ಎನ್ನುವುದು ಈ ಲೇಖನದಿಂದ ಸ್ಪಷ್ಟಪಡುತ್ತದೆ.

ಡಿ.ವಿ.ಜಿ. ಅವರ ವಿದ್ಯಾಭ್ಯಾಸ ಸಾಮಾನ್ಯ ನಿರೀಕ್ಷೆಯಂತೆ ಕ್ರಮಬದ್ಧವಾಗಿರಲಿಲ್ಲ ಎಂಬುದು ಎಲ್ಲರಿಗೂ ತಿಳಿದದ್ದೆ. ಆದರೂ ಅವರ ಪಾಂಡಿತ್ಯ, ವಿದ್ವತ್, ಪಿಎಚ್.ಡಿ. ಮೊದಲಾದ ಪದವಿಗಳನ್ನು ಪಡೆದ ಯಾವುದೇ ವಿದ್ವಾಂಸನ ತಿಳಿವಳಿಕೆಗಿಂತ ಯಾವ ರೀತಿಯಲ್ಲಿಯೂ ಕಡಿಮೆಯಲ್ಲವೆಂಬುದು ಶತಸ್ಸಿದ್ಧ. ಬಾಲ್ಯದಲ್ಲಿ ಅವರಿಗೆ ದೊರೆತ ಅಧ್ಯಾಪಕರು ಉತ್ತಮಪಂಡಿತರಾಗಿದ್ದರು. ಅನಂತರ ಅವರಿಗೆ ಉದ್ದಾಮ ವಿದ್ವಾಂಸರ ಒಡನಾಟ ಉಂಟಾಯಿತು. ಅವರುಗಳಿಂದ ಕಲಿತದ್ದನ್ನು ಗ್ರಹಿಸಿ ತಮ್ಮ ಪ್ರತಿಭೆಯ ಮೂಸೆಯಲ್ಲಿ ಪುಟಹಾಕಿ ಬೆಳಗಿದರು.

ಎಳೆವಯಸ್ಸಿನಲ್ಲಿಯೇ ಡಿ.ವಿ.ಜಿ. ಅವರಿಗೆ ಸಂಸ್ಕೃತ ಭಾಷೆಯ ಪರಿಚಯ ವಾಯಿತಲ್ಲದೆ, ಕೊಂಚಮಟ್ಟಿಗೆ ವೇದಾಧ್ಯಯನವೂ ಆಗಿತ್ತು. ಪುರೋಹಿತ ವೃತ್ತಿಯನ್ನು ಅವಲಂಬಿಸುವ ಆಲೋಚನೆಯೂ ಅವರಿಗೆ ಒಮ್ಮೆ ಬಂದಿತ್ತಂತೆ.[1] ಎಂದರೆ ಅದಕ್ಕೆ ಬೇಕಾಗಿದ್ದ ತಳಹದಿ ಅವರಲ್ಲಿತ್ತು ಎಂದಂತಾಯಿತು. ಬೆಂಗಳೂರಿನಲ್ಲಿದ್ದಾಗ ವೇ॥ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳಲ್ಲಿ ಬ್ರಹ್ಮಸೂತ್ರ–ಶಾಂಕರಭಾಷ್ಯದ ಅಧ್ಯಯನ ಮಾಡಿದರು. ಬಾಲ್ಯದಲ್ಲಿಯೇ ವೇದದ ಪ್ರಭಾವಕ್ಕೆ ಒಳಗಾದ ಇವರು ಬೆಳೆದ ವಾತಾವರಣದಿಂದಲೂ ಅಧ್ಯಯನ ಮಾಡಿದ ಗ್ರಂಥಗಳ ಕಾರಣದಿಂದಲೂ ವೇದದ ಅದರಲ್ಲಿಯೂ ಉಪನಿಷದ್ ಭಾಗದ ತತ್ವಗಳು ಅವರ ಮನಸ್ಸಿನಲ್ಲಿ ಬೇರೂರಿ ನಿಂತವು. ಕ್ರಮೇಣ ಇವನ್ನು ತಮ್ಮ ವಿಮರ್ಶನ ಬುದ್ಧಿಗೆ ಒಳಪಡಿಸಿ ತಮ್ಮದೇ ಆದ ದರ್ಶನವನ್ನು ಪಡೆದುಕೊಂಡರು.

ಡಿ.ವಿ.ಜಿ. ಅವರ ಚಿಂತನಗಳಲ್ಲಿ ವೇದೋಕ್ತ ಅಂಶಗಳು ಹಾಸುಹೊಕ್ಕಾಗಿ ಹರಡಿವೆ. ವೇದಸಾಹಿತ್ಯ ಪ್ರಾಚೀನತಮ ಉಪಲಬ್ಧ ಸಾಹಿತ್ಯ ರಾಶಿಯಾದರೂ ಇಂದಿಗೂ ಅವುಗಳಿಗೆ ಮೌಲ್ಯವಿದೆ ಎಂಬುದು ಡಿ.ವಿ.ಜಿ. ಅವರ ದೃಢವಿಶ್ವಾಸ. ವೇದೋಕ್ತ ತತ್ವಗಳನ್ನು ಮೈಗೂಡಿಸಿಕೊಂಡರೆ ಜೀವನದಲ್ಲಿ ಸೌಂದರ್ಯ ಕಾಣ ಬಹುದೆಂದು ಅವರ ವಿಚಾರಧಾರೆಯಿಂದ ತಿಳಿದುಬರುತ್ತದೆ. ಅವರ ಕೃತಿಗಳಲ್ಲಿ ವೇದಭಾಗವನ್ನೇ ನೇರವಾಗಿ ಕುರಿತು ಇರುವುವು ಎರಡು ಮಾತ್ರ—'ಪುರುಷಸೂಕ್ತ' ಮತ್ತು 'ಈಶೋಪನಿಷತ್ತು'. ಭಗವದ್ಗೀತೆಯನ್ನು ಕುರಿತು ವಿಸ್ತಾರವಾದ ಟಿಪ್ಪಣಿ ಬರೆದಿದ್ದಾರೆ. 'ವಿದ್ಯಾರಣ್ಯರ ಸಮಕಾಲೀನರು' ಕೃತಿಯಲ್ಲಿಯೂ ವೇದದ ಬಗೆಗೆ ಕೊಂಚ ವಿವರವಾದ ಪ್ರಸ್ತಾವವಿದೆ. ಮಿಕ್ಕೆಲ್ಲ ಕಥಾ–ಪ್ರಬಂಧ–ಕವನ ರೂಪದಲ್ಲಿವೆ. ಜ್ಞಾಪಕ ಚಿತ್ರಶಾಲೆ ಸಂಪುಟಗಳಲ್ಲಿನ ಜೀವನ ಚಿತ್ರಣಗಳಲ್ಲಿ, ಅಂದಿನ ಸಮಾಜದ ಜನಸಾಮಾನ್ಯರ—ಉನ್ನತ ಶ್ರೇಣಿಯವರಾಗಲೀ, ಸಾಮಾನ್ಯರಾಗಲೀ—ಜೀವನದಲ್ಲಿ ವೇದೋಕ್ತ ಸಾಂಪ್ರದಾಯಿಕ ತತ್ವಗಳು ಹೊರಹೊಮ್ಮಿದ್ದವು. ಆದಕಾರಣದಿಂದಲೇ ಅವರು ಸ್ಮರಣೀಯರಾಗಿದ್ದಾರೆ—ಎಂಬ ಅಭಿಪ್ರಾಯ ಎದ್ದುಕಾಣುತ್ತದೆ.

ಈ ಬಗೆಯ ಮನೋಭಾವಕ್ಕೆ ಅವರ ಬಾಲ್ಯದ ವಾತಾವರಣವೇ ಕಾರಣ ಎಂದು ಹೇಳಲಾಗದು. ಅಂಥದೇ ವಾತಾವರಣದಲ್ಲಿ ಬೆಳೆದಿರಬಹುದಾದ ಇತರರಿಗಿಂತಲೂ ಅತಿಶಯವಾದ ದೃಢತೆ ಇವರಲ್ಲಿ ಕಾಣುತ್ತದೆ. ಯಾವುದನ್ನೂ ಪರಂಪರಾಗತವಾಗಿ ಬಂದಿದೆ ಎಂಬಷ್ಟೇ ಕಾರಣದಿಂದ ಮಾನ್ಯಮಾಡದೆ, ಭಗವದ್‌ದತ್ತವಾದ ಭಾವುಕತನದಿಂದ ವಿಮರ್ಶಿಸಿ ತಮ್ಮ ಜೀವನದಲ್ಲಿ ತಂದುಕೊಂಡರು. ಯಾವುದೇ ಒಂದು ತಿಳಿದ ವಿಚಾರ ನಮ್ಮ ಆಚಾರದಲ್ಲಿ ಅಭಿವ್ಯಕ್ತವಾಗಬೇಕಾದರೆ ಅದಕ್ಕೆ ನಿದಿಧ್ಯಾಸನ ಅವಶ್ಯಕವಷ್ಟೆ. ಕೇವಲ ಶ್ರವಣ-ಮನನಗಳ ಮಟ್ಟದಲ್ಲಿಯೇ ಇದ್ದರೆ, ಅದು ಬೌದ್ಧಿಕವಾಗಿಯೇ ಉಳಿದು ಆಚಾರಕ್ಕೂ ವಿಚಾರಕ್ಕೂ ಅಂತರವಿರುತ್ತದೆ.

---

[1] ಕನ್ನಡ ಪತ್ರಿಕೋದ್ಯಮ ಮತ್ತು ಕನ್ನಡ ಗದ್ಯ ಬರವಣಿಗೆ—ಈ ಕ್ಷೇತ್ರಗಳಲ್ಲಿ ಅವರು ಪುರೋಹಿತರೇ ಆಗಿದ್ದಾರೆ.

ವೇದದ ನಿಟ್ಟಿನಿಂದ ಡಿ.ವಿ.ಜಿ. ಅವರ ಚಿಂತನಗಳನ್ನು ವೀಕ್ಷಿಸಿದರೆ, ಮೊಟ್ಟ ಮೊದಲು ತೋರುವುದು ಅವರ ಭಗವದ್‌ಭಕ್ತಿ. ಈ ಲೋಕವನ್ನು ಮೀರಿ, ಈ ಲೋಕದ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ಒಂದು ಅದ್ಭುತ ಅಪರಿಮಿತ ಶಕ್ತಿಯಿದೆ, ಆದರೆ ಅದು ನಮ್ಮ ಇಂದ್ರಿಯಗಳಿಗೆ ಗೋಚರವಾಗದುದು ; "ಅದರ ಕಾರ್ಯಗಳು ಮಾತ್ರ ನಮ್ಮ ಜೀವನದೊಳಗೆ...ವ್ಯಾಪಿಸಿ, ನಮ್ಮ ಬುದ್ಧಿಗೆ ಭಾಸವಾಗುತ್ತಿರುತ್ತವೆ."[2] 'ನಿವೇದನ' ಎಂಬ ಕವನದಲ್ಲಿ[3] ಭಗವತ್‌ತತ್ವವನ್ನು ಕವಿತಿಲಕ ಎಂದು ಕರೆದು, 'ಆ ಚಿತ್ರ ಚತುರನಾರ್', 'ಶಿಲ್ಪಿವರ್ಯನಾರ್' ಎಂದು ಮುಂತಾಗಿ ಪ್ರಶ್ನಿಸಿ "ಅವನ ಲೀಲೆಗಳನು ಕಾಣ್ಬೆವವನ ಕಾಣೆವು" ಎಂದು ಹೇಳುತ್ತಾರೆ. ಇಲ್ಲಿ ವೇದೋಕ್ತಿಯೊಂದರ ಭಾವ ಕಾಣುತ್ತೇವೆ. ಈ ಲೋಕದ ಸೃಷ್ಟಿಕರ್ತ ಯಾರು, ('ಕಃ') ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೊಡಲಾಗದುದರಿಂದ 'ಕಃ' ಎಂಬುದೇ ಪರತತ್ವದ ಹೆಸರಾಗಿ ನಿಂತಿರುವುದು ಕಾಣುತ್ತದೆ ('ಕೋ ಹಿ ಪ್ರಜಾಪತಿಃ'– ತೈತ್ತಿರೀಯ ಬ್ರಾಹ್ಮಣ). ಹಾಗೆಯೇ 'ಅವನ ಕಾಣೆವು' ಎಂಬ ಮಾತು, ಅವಾಙ್ ಮಾನಸಗೋಚರವಾದುದು ಬ್ರಹ್ಮ ಎಂಬ ಉಪನಿಷದಭಿಪ್ರಾಯವನ್ನು ಅನುವಾದಿಸುತ್ತದೆ. ಅದೇ ರೀತಿ ಉಪನಿಷತ್ತುಗಳ ಸಾರುವ ಅದ್ವೈತ ತತ್ವವನ್ನು ಡಿ.ವಿ.ಜಿ. ಅವರು ಬಹು ರಮ್ಯವಾಗಿ 'ಎನ್ನದು ಯಾವುದು' ಕವನದಲ್ಲಿ ಬಿಡಿಸಿರುತ್ತಾರೆ. ಜಲನಿಧಿಯನು ಪೊಕ್ಕಮೇಲೆ ಗಂಗೆ ಮೊದಲಾದ ನದಿಗಳ ನೀರನ್ನೂ ಗಾಳಿಯಲ್ಲಿ ತೇಲಿ ಬರುವ ಚಂಪಕ ಮೊದಲಾದ ಹೂಗಳ ಧೂಳನ್ನೂ 'ಪರಿಕಿಸಿ ಪೇಳ್ವರಾರ್' ಎಂದು ಹೇಳುತ್ತಾ ಅದರಿಂದ ಸಾರ್ವಕಾಲಿಕವಾಗಿ ಆದರಾರ್ಹವಾದ ಆಸೆಯನ್ನು ವ್ಯಕ್ತಪಡಿಸುತ್ತಾರೆ.[4]

ಭಿನ್ನ ಭಾವವ ಬಿಟ್ಟು ನಿನ್ನ ಪೂರ್ಣತೆಯನು
ಚೆನ್ನಾಗಿ ನೋಳ್ಪ ಕಣ್ ಎನ್ನದಾಗಿರಲಿ;
ನಿನ್ನ ಮೈಮೆಯನೆನ್ನ ಕಣ್ಣಿಗೆ ತೋರಿಪ
ಪುಣ್ಯವೆ ಅನ್ಯರದಾಗಿರಲೆಂದಿಗು.

ವೇದಗಳನ್ನು ಮಹರ್ಷಿಗಳ ಜೀವನ ಧ್ವನಿ ಎಂದು ಭಾವಿಸುತ್ತಾರೆ ಡಿ.ವಿ.ಜಿ. ಈ ಸಾಹಿತ್ಯದಲ್ಲಿ ಬೋಧಿತವಾದ ಅಂಶಗಳನ್ನು ನಮ್ಮ ಬಾಳಿಗೊಂದು ನಂಬಿಕೆಯಾಗಿ ಮಾಡಿಕೊಂಡರೆ ನಮ್ಮ ಜೀವನ ಸುವ್ಯವಸ್ಥಿತವಾಗುತ್ತದೆ ಎಂದು ತಿಳಿಯಪಡಿಸುತ್ತಾರೆ. ವೇದಗಳಲ್ಲಿ 'ಗೆಲು ಮನಸ್ಸಿನ ಧ್ವನಿ ಸ್ಪಷ್ಟ', 'ಸೋಲು ಮನಸ್ಸಿನ ಸೂಚನೆ'ಯೇ ಇಲ್ಲ. ಅದಕ್ಕೆ ಉದಾಹರಣೆ : 'ಭದ್ರಂ ಕರ್ಣೇಭಿಃ ಶೃಣುಯಾಮ' ಇತ್ಯಾದಿ. 'ಪಶ್ಯೇಮ ಶರದಶ್ಶತಂ' ಇತ್ಯಾದಿ. ಜಯಶ್ರದ್ಧೆ, ಆತ್ಮವಿಶ್ವಾಸದ ಮನೋವೃತ್ತಿಯಿಂದ ಅಪಜಯದ ದೈನ್ಯವಿಲ್ಲ, ಬೇಸರವಿಲ್ಲ ಜೀವನದಲ್ಲಿ. ಅಂಥ

---

2 'ವಿದ್ಯಾರಣ್ಯರ ಸಮಕಾಲೀನರು' (1933) ಪು. 178

3 'ನಿವೇದನ' (1956), ಪು. 132.

4 ಅಲ್ಲಿಯೇ, ಪು. 50.

ಧೀರಬುದ್ಧಿ ನಮ್ಮ ಜನಕ್ಕೆ ಮೊದಲು ಬೇಕು ಎಂದು ಉಪದೇಶಿಸುತ್ತಾರೆ. 'ಜೀವನಾಕಾಂಕ್ಷೆಯಲ್ಲಿಯೂ ದಿಗ್ವಿಜಯ ನಿರೀಕ್ಷೆಯಲ್ಲಿಯೂ ಆರಂಭವಾದ ವೇದ ಬೋಧನೆಯ ಹೊಳೆ ಕ್ರಮೇಣ ದೊಡ್ಡದಾಗಿ ಪರತತ್ವ ವಿಚಾರದ ಮಹಾನದಿ' ಯಾಗಿ ಅಮೃತಧಾರೆಯಾದ ಪವಿತ್ರ ನದಿಯಾಗಿ ಹರಿಯಿತು ಎಂದು ಆ ಪ್ರಾಚೀನ ಸಾಹಿತ್ಯದ ವೈಶಿಷ್ಟ್ಯವನ್ನು ಸೂತ್ರಪ್ರಾಯವಾಗಿ ಹೇಳುತ್ತಾರೆ.

'ಮಾರಿಗರ ಹಾಡು' ಕವನದಲ್ಲಿ[5] ಪದ್ಯವೊಂದು ಹೀಗಿದೆ :

ಕಂಡು ಕಂಡುದನೆಲ್ಲ ಬೇಡುವವರು ನಾವಲ್ಲ
ಉಂಡು ಸುಖಿಪೆವು ಕೈಗೆ ಬಂದ ಫಲವ.

ಇದರಲ್ಲಿ ಪ್ರಾರಬ್ಧ ಕರ್ಮ ಫಲವನ್ನು ಗೊಣಗದೆ ಅನುಭವಿಸುವುದೂ ಚಪಲತೆ ಇಲ್ಲದ ಸಂತೃಪ್ತ ಮನೋಭಾವವೂ ಸುವ್ಯಕ್ತವಾಗಿದೆ. ಈ ಕವನದಲ್ಲಿ ಡಿ.ವಿ.ಜಿ. ತಮ್ಮ ಜೀವನ ದರ್ಶನವನ್ನು ಸಾರ ಸಂಗ್ರಹವಾಗಿ ಮುಂದಿಟ್ಟಿದ್ದಾರೆಂದು ಧಾರಾಳ ವಾಗಿ ಹೇಳಬಹುದು. ಅಂಥ ಸರಳ ಹಾಗೂ ತೃಪ್ತಿಯ ಜೀವನ ಮಾರ್ಗವನ್ನು ತಮ್ಮ ಹಿರಿಯ ಸಮಕಾಲೀನ ವೈದಿಕವರೇಣ್ಯರಿಂದ ಕಂಡುಕೊಂಡರೆಂಬುದನ್ನು ಸೂಚಿಸುತ್ತಾರೆ.

ಜ್ಞಾಪಕ ಚಿತ್ರಶಾಲೆಯ ಐದನೆಯ ಸಂಪುಟದಲ್ಲಿ ಕೆಲವು ವೈದಿಕ ಧರ್ಮ ಸಂಪ್ರದಾಯಸ್ಥರ ವರ್ಣನೆಯಿದೆ. ಅದರಲ್ಲಿ ಬಣ್ಣಿಸಿರುವ ಎಲ್ಲರ ಜೀವನದಲ್ಲಿನ ವೈಶಿಷ್ಟ್ಯವನ್ನು ಎತ್ತಿ ತೋರಿಸಿ ವೈದಿಕರ ಜೀವನದ ರೀತಿಯನ್ನು ವಿಶದಗೊಳಿಸಲಾಗಿದೆ. ಡಿ.ವಿ.ಜಿ. ಅವರ ವಿಶ್ಲೇಷಣೆಯಲ್ಲಿ ವೈದಿಕರ ಜೀವನದ ಲಕ್ಷಣಗಳೆಂದರೆ—ಪಾರ ಮಾರ್ಥಿಕತೆ. ಮನಶ್ಶಾಂತಿಯ ಬಯಕೆ, ಪರಿಶುದ್ಧಿ, ಅಂತರಾತ್ಮಹಿತದೃಷ್ಟಿ, ನಿರು-ಪಾಧಿಕತೆ. ಶುಚಿತ್ವ, ಸರಳತೆ ಮತ್ತು ಸಂತೃಪ್ತಿ. ವೆಂಕಟರಾಮ ಭಟ್ಟರ ವೃತ್ತಾಂತ ಹೇಳುತ್ತಾ ವೈದಿಕರ ನಂಬಿಕೆ, ನೆಮ್ಮದಿ, ವಾತ್ಸಲ್ಯಗಳನ್ನು ಎತ್ತಿ ತೋರಿಸಿದ್ದಾರೆ. ಕುಣಿಗಲ್ ರಾಮಶಾಸ್ತ್ರಿ–ರಾಜುಶಾಸ್ತ್ರಿಗಳ ಕಥಾನಕದಿಂದ ವೈದಿಕರ ಸಹೃದಯತೆ ವೇದ್ಯವಾಗುತ್ತದೆ. ಈ ವ್ಯಕ್ತಿಗಳ ಜೀವನದ ಔನ್ನತ್ಯಕ್ಕೆ ಅವರು ಅಭ್ಯಾಸ ಮಾಡಿದ ವೇದಶಾಸ್ತ್ರಗಳೇ ಕಾರಣ ಎಂದು ಅವರ ಅಭಿಪ್ರಾಯ. ಇದೇ ಸಂಪುಟದ ಕೊನೆ ಯಲ್ಲಿ ಉಪಸಂಹರಿಸುತ್ತಾ ಇಂಥ ವೈದಿಕರ ಸಮುದಾಯ ಹಾಗೂ ಆ ಸಾಹಿತ್ಯದ ಅಭ್ಯಾಸ ಲುಪ್ತವಾಗುತ್ತಿರುವುದಕ್ಕೆ ದುಃಖಿಸುತ್ತಾರೆ. ವೈದಿಕರ ವೃಂದ ನಮ್ಮ ದೇಶದ ಸಂಪತ್ತಿನಲ್ಲಿ ಒಂದು ಬಹು ಮುಖ್ಯ ಭಾಗ. ದೇಶದ ಸಂಪತ್ತು ವೇದ ಶಾಸ್ತ್ರಗಳಲ್ಲಿಯೇ ಹೊರತು ಬೇರೆಡೆಯಿಲ್ಲ. ಸ್ಪರ್ಧಾ ಜಯಗಳಿಗೆ ಎಡೆಗೊಡದೆ

[5] 'ನಿವೇದನ' ಪು. 55.

ಸಂಸ್ಕೃತಿ, ಆಧ್ಯಾತ್ಮಿಕತೆ ಇತ್ಯಾದಿಗಳನ್ನು ಬೆಳೆಸುವ ಇದು ಸಂಪತ್ತಿನ ಪರಮ ಶ್ರೇಷ್ಠಭಾಗ. ಆಧ್ಯಾತ್ಮಿಕ ಸಂಸ್ಕೃತಿಯ ತತ್ತ್ವಗಳನ್ನು ಪ್ರಯೋಗ ರೂಪದಲ್ಲಿ ಪ್ರಕಾಶಪಡಿಸುವ ವಿದ್ಯೆಯಾದ ವೇದಶಾಸ್ತ್ರಗಳು, ಅದನ್ನೇ ಅನುಸರಿಸಿದ ರಾಮಾಯಣ, ಮಹಾಭಾರತ, ಪುರಾಣಗಳು ಹಾಗೂ ರಘುವಂಶಾದಿ ಕಾವ್ಯಗಳು, ಭರತಖಂಡಕ್ಕೆ ಯಾವ ಈ ವಿದ್ಯಾ ಸಂಪತ್ತು ಪ್ರಾಣ ಸ್ವರೂಪ, ಆತ್ಮಸ್ವರೂಪ ಆದದ್ದು ಆಗಿದೆಯೋ, ಅದು ಲುಪ್ತವಾಗುತ್ತಿದೆ. ಅದಕ್ಕೆ ಪರಿಹಾರವಾಗಿ ಏನು ಮಾಡಬೇಕೆಂಬುದನ್ನು ಸೂಚಿಸುತ್ತಾರೆ. ಸಂಪ್ರದಾಯವನ್ನು, ಸಂಪ್ರದಾಯಸ್ಥರನ್ನು ಜರಿಯಬಾರದು. 'ಬ್ರಾಹ್ಮಣ ವರ್ಗ' ತನ್ನ ಹೊಣೆಗಾರಿಕೆಯನ್ನು ಅರಿತುಕೊಳ್ಳ ಬೇಕು. ವೇದಶಾಸ್ತ್ರಗಳನ್ನು ಪೋಷಿಸಲು ಸರಕಾರವನ್ನು ಕಾಯಲಾಗದು ; ಸ್ವತಂತ್ರವಾಗಿರಬೇಕು. ವೈದಿಕ ಮಾರ್ಗದಲ್ಲಿರುವವರಿಗೆ ದೈನ್ಯ ತೀರ ಅಯುಕ್ತ. ಲೌಕಿಕರು ಈ ದಿಕ್ಕಿನಲ್ಲಿ ಶ್ರದ್ಧೆ ಬೆಳೆಸಿಕೊಂಡು ಅದನ್ನು ಪೋಷಿಸಬೇಕು. ವೇದ ಶಾಸ್ತ್ರಗಳು ಯಾವ ಒಂದು ವರ್ಗದ ಸ್ವತ್ತಲ್ಲ ; ಇಡೀ ಸಮಾಜಕ್ಕೆ ಸೇರಿದ ಸ್ವತ್ತು. ಆ ಸ್ವತ್ತಿನ ನ್ಯಾಸಪಾಲಕನಾಗಿದ್ದಾನೆ ಬ್ರಾಹ್ಮಣ. ಆತ ವಿಧಿ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುವುದರ ಮೂಲಕ ವೇದಶಾಸ್ತ್ರಗಳನ್ನು ಕಾಯ್ದುಕೊಳ್ಳಬೇಕು. ಇತರ ವರ್ಗದವರು ಆತನಿಗೆ ಒತ್ತಾಸೆ ನೀಡಬೇಕು—ಎಂದು ಕಳಕಳಿಯಿಂದ ಹೇಳುತ್ತಾರೆ.

'ಪುರುಷಸೂಕ್ತ'ದ ಪದ್ಯರೂಪ ಭಾಷಾಂತರ ಟಿಪ್ಪಣಿಗಳೊಡನೆ 1953 ರಲ್ಲಿ ಪ್ರಕಟವಾಯಿತು. ಈ ಸೂಕ್ತದಲ್ಲಿ ವಿರಾಟ್ ಪುರುಷನ ಸ್ವರೂಪವನ್ನೂ, ಅವನಿಂದ ಉಂಟಾದ ಸೃಷ್ಟಿಕ್ರಮವನ್ನೂ, ಲೋಕದ ಸ್ಥಿತಿಯನ್ನೂ ವರ್ಣಿಸಲಾಗಿದೆ. ಋಗ್ವೇದದ 10ನೇ ಮಂಡಲದ 91ನೇ ಸೂಕ್ತವಾದ ಇದರಲ್ಲಿ 16 ಮಂತ್ರಗಳಿವೆ. ಇತರ ವೇದಗಳಲ್ಲಿಯೂ ಸಹ ಈ ಸೂಕ್ತ ಕಂಡುಬರುತ್ತದೆ. ಮಂತ್ರಾನು-ಪೂರ್ವಿಯಲ್ಲಿಯೂ ಮಂತ್ರ ಸಂಖ್ಯೆಯಲ್ಲಿಯೂ ವ್ಯತ್ಯಾಸಗಳಿವೆ. ಯಜುರ್ವೇದದ ತೈತ್ತಿರೀಯ ಆರಣ್ಯಕದಲ್ಲಿ ಈ 16 ಮಂತ್ರಗಳ ಜೊತೆಗೆ ಇನ್ನೂ 8 ಮಂತ್ರಗಳಿವೆ. ಡಿ.ವಿ.ಜಿ. ಇವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅಲ್ಲದೆ, ಋಗ್ವೇದದ ಮೊದಲನೆಯ ಮಂಡಲದ 22ನೇ ಸೂಕ್ತದ ಕೊನೆಯ ಆರು ಮಂತ್ರಗಳನ್ನೂ (16–21, ವೈಷ್ಣವ ಅನುವಾದ) ಸಹ ಸೇರಿಸಿಕೊಂಡಿರುತ್ತಾರೆ.

'ಪುರುಷಸೂಕ್ತದ' ಪೀಠಿಕೆಯಲ್ಲಿ ವೇದ ಮತ್ತು ವೇದವ್ಯಾಖ್ಯಾನದ ಬಗ್ಗೆ ಅತ್ಯಂತ ಉಪಾದೇಯವಾದ ಮಾತುಗಳನ್ನು ಬರೆದಿದ್ದಾರೆ. ಪಾಶ್ಚಾತ್ಯ ವಿದ್ವಾಂಸರುಗಳು ಅನೇಕರು ವೇದವನ್ನು ಕುರಿತು ಬಹಳಷ್ಟು ಕೆಲಸ ಮಾಡಿದ್ದಾರೆ. ಗ್ರಂಥ ಪರಿಷ್ಕರಣ, ಭಾಷಾಂತರ, ವ್ಯಾಖ್ಯೆ ಮೊದಲಾದ ಹಲವು ಬಗೆಯ ಅಧ್ಯಯನೋಪಕಾರಿ ಕೆಲಸಗಳು ನಡೆದಿವೆ. ಅವುಗಳನ್ನು ಉಪಯೋಗಿಸಿಕೊಳ್ಳಬಹುದು. ಆದರೆ, ಅವು ಅಧ್ಯಯನಕ್ಕೆ ಸಹಕಾರಿಗಳಾಗಿ ಮಾತ್ರವಿರಬೇಕೇ ಹೊರತು, ಉಪಜೀವ್ಯಗಳಾಗ ಬಾರದು. ಅದಕ್ಕೆ ಕಾರಣ, ವ್ಯಾಖ್ಯಾನಿಸಲು ಪಾಶ್ಚಾತ್ಯ ವಿದ್ವಾಂಸರಿಗೆ ಇರುವ

ಸೀಮಿತ ಹಿನ್ನೆಲೆ. ಅವರು ಭಾಷೆಯನ್ನಲ್ಲದೆ ಬೇರೇನನ್ನೂ ಗ್ರಹಿಸಲು ಸಾಧ್ಯವಿಲ್ಲ. ಸಾಯಣಾಚಾರ್ಯರನ್ನು ಅವರು ಮಾನ್ಯ ಮಾಡಿದರೂ, ಒಂದು ಘಟ್ಟದವರೆಗೆ ಮಾತ್ರ. ಅನಂತರ ತಮ್ಮ ತೌಲನಿಕ ಪ್ರಕ್ರಿಯೆಯ ಮೇಲೆಯೇ ಮುನ್ನಡೆಯುತ್ತಾರೆ. ವೇದ ವ್ಯಾಖ್ಯಾನ ಮಾಡುವಾಗ ಕೇವಲ ವಾಚ್ಯಾರ್ಥ ಗ್ರಹಿಸಿದರೆ ಸಾಲದು. ಶ್ರದ್ಧೆ ತಪಸ್ಸುಗಳಿಂದ ಅಂತರಾರ್ಥವನ್ನು ಮನನ ಮಾಡಿಕೊಂಡು ತಿಳಿಯಬೇಕು. ವೇದದ ಭಾಷಾಶೈಲಿ ಕಾವ್ಯಾರ್ಥವುಳ್ಳದ್ದು. ಪ್ರತಿಭೆಯಿಂದ ಪರಿಶೀಲಿಸಿದ ಹೊರತು ವೇದ ವ್ಯಾಖ್ಯಾನ ಸರಿಯಾದ ದಾರಿಯಲ್ಲಿರುವುದಿಲ್ಲ. ಇದಕ್ಕೆ ಸಾಯಣಾದಿ ಆಚಾರ್ಯರುಗಳು ತೋರಿಸಿದ ಸಾಂಪ್ರದಾಯಿಕ ಮಾರ್ಗವನ್ನೇ ಪ್ರಧಾನವಾಗಿ ಅವಲಂಬಿಸಬೇಕು.

"ವಿರಾಟ್ ಪುರುಷನೇ ಎಲ್ಲ ವಿದ್ಯೆಗಳಿಗೂ ಶಾಸ್ತ್ರ–ಕಲೆಗಳಿಗೂ ಮೂಲ. ಆ ಪುರುಷನೇ ಅಥವಾ ಈಶ್ವರನೇ ಸಮಾಜ ವ್ಯವಸ್ಥೆಗೆ ಮೂಲಕರ್ತ. ಸಮಾಜದ ವ್ಯಕ್ತಿಗಳ ವರ್ಗೀಕರಣ ಅಥವಾ ವಿಭಜನೆಯು ಸ್ವತಸ್ಸಿದ್ಧವಾದುದು, ಪ್ರಕೃತಿ ಸಿದ್ಧವಾದುದು. ಕೃತಕವಲ್ಲ. ಸಮಾಜವೆಲ್ಲ ಈಶ್ವರ ಶರೀರವೇ ಆದದ್ದರಿಂದ ಸಮಾಜವೂ ಅದರ ಸಂಸ್ಥಿತಿಯೂ ಅದಕ್ಕೆ ತಕ್ಕ ಧರ್ಮಗಳೂ ಪೂಜ್ಯಗಳೆಂದು ಭಾವ" ಎಂದು ಒಂದು ಮಂತ್ರಕ್ಕೆ ಟಿಪ್ಪಣಿ ಬರೆದಿದ್ದಾರೆ.[6] ಹೀಗೆ ಪುರುಷಸೂಕ್ತದ ಅರ್ಥವನ್ನು ಬಿಡಿಸಿ ಮನಮುಟ್ಟುವಂತೆ ಮುಂದಿಟ್ಟು ತನ್ಮೂಲಕ ಸಮಾಜದ ಬಗ್ಗೆ ಜೀವನದ ಬಗ್ಗೆ ನಮ್ಮ ದೃಷ್ಟಿ ಹೇಗಿರಬೇಕೆಂದು ವೇದ ತಿಳಿಸುತ್ತದೆ ಎಂದು ತೋರಿಸಿಕೊಟ್ಟಿದ್ದಾರೆ. ಭಿನ್ನಾಭಿಪ್ರಾಯಗಳಿಗೆ ಎಡೆಗೊಟ್ಟಿರುವ ಆ ಸೂಕ್ತದಲ್ಲಿ ಕಂಡು ಬರುವ ಬ್ರಾಹ್ಮಣ ಮೊದಲಾದ ಶಬ್ದಗಳನ್ನು ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ ; ಮೇಲು ಕೀಳೆಂಬ ಭಾವಕ್ಕೆ ವೇದದಲ್ಲಿ ಎಡೆಯಿಲ್ಲವೆಂಬುದನ್ನು ಸ್ಫುಟಗೊಳಿಸಿದ್ದಾರೆ.

ವೇದದ ಪ್ರಾಮುಖ್ಯದ ಬಗ್ಗೆ ಅವರ ಚಿಂತನ 1933ರಲ್ಲಿಯೇ ಪ್ರಕಟ ವಾಯಿತೆನ್ನಬೇಕು. 'ವಿದ್ಯಾರಣ್ಯರ ಸಮಕಾಲೀನರು' ಕೃತಿಯಲ್ಲಿ ಸಾಯಣಾಚಾರ್ಯರ ಬಗೆಗೆ ಬರೆಯುತ್ತಾ, ಸಾಯಣರ ಋಗ್‌ಭಾಷ್ಯ ಭೂಮಿಕೆಯಿಂದ ದೀರ್ಘವಾದ ಉದ್ಧೃತಿಯನ್ನು ಕನ್ನಡ ಭಾಷಾಂತರದೊಡನೆ ಕೊಟ್ಟಿದ್ದಾರೆ (ಪು. 148–174) ಅದರಲ್ಲಿ ವೇದವೆಂದರೇನು, ವೇದಪ್ರಮಾಣ, ವೇದನಿತ್ಯತ್ವ, ಅರ್ಥಜ್ಞಾನದ ಆವಶ್ಯಕತೆ, ವೇದ ವಿಭಾಗಗಳು, ಕರ್ಮ–ಮೋಕ್ಷ ಸಂಬಂಧ, ಯಜುರ್ವೇದ–ಋಗ್ವೇದಗಳ ಸಂಬಂಧ, ಋಗ್ಯಜುಸ್ಸುಗಳ ಸಂಬಂಧ, ವೇದ ಲಕ್ಷಣ, ವೇದದಲ್ಲಿ ಉಚ್ಚಾರಣೆ ಮುಖ್ಯವೋ ಅರ್ಥ ಮುಖ್ಯವೋ, ವೇದದಲ್ಲಿ ಅನಿತ್ಯ ವಸ್ತು ಪ್ರಸಕ್ತಿ ವಿಚಾರ, ವೇದ ಕರ್ತೃತ್ವ ವಿಚಾರ, ವೇದವು ಉನ್ಮತ್ತ ವಾಕ್ಯವೋ, ಅಧ್ಯಯನದ ಕರ್ತವ್ಯತೆ, ಅರ್ಥಜ್ಞಾನವಿಲ್ಲದಿದ್ದರೆ ವ್ಯರ್ಥ, ವೇದದಲ್ಲಿರುವ ವಿಷಯಗಳು, ಅಪರಾ ವಿದ್ಯೆ–ಪರಾವಿದ್ಯೆ, ಉಪದೇಶಯೋಗ್ಯತೆ—ಈ ಶೀರ್ಷಿಕೆಗಳಲ್ಲಿ ಭಾಷ್ಯ ಭೂಮಿಕೆ ಯನ್ನು ವಿಂಗಡಿಸಿ ಆ ಅಂಶಗಳ ಬಗ್ಗೆ ಸಾಯಣರ ಅಭಿಪ್ರಾಯ ಮೂಡುವಂತೆ

6 'ಪುರುಷಸೂಕ್ತ' ಪು. 31.

ಮಾಡಿದ್ದಾರೆ. ಈ ಮೂಲಕ ಡಿ.ವಿ.ಜಿ. ಅವರೂ ಸಹ ವೇದವನ್ನು ಕುರಿತ ಯಾವ ಸಮಸ್ಯೆಗಳನ್ನು ಪ್ರಧಾನವಾಗಿ ಭಾವಿಸಿದ್ದಾರೆ ಎಂದು ತಿಳಿದುಬರುತ್ತದೆ. ಸಾಯಣರ ಸಿದ್ಧಾಂತಗಳನ್ನು ಮುಂದಿಟ್ಟು, ಅದನ್ನು ಅನಂತರ ವಿಮರ್ಶಿಸಿದ್ದಾರೆ. ವೇದ ವಿಷಯದಲ್ಲಿ ಮೂರು ದೃಷ್ಟಿಯಿರುವುದು ಸಾಧ್ಯ. ಸಾಯಣರು ಭಾವಿಸುವಂತೆ ಮಾನುಷ ಪ್ರಪಂಚಕ್ಕೆ ಅತೀತವಾದದ್ದು ವೇದ. ಎರಡನೆಯ ದೃಷ್ಟಿ—ಮಾನವ ಕುಲದ ಮೂಲಪುರುಷರಲ್ಲಿ ಕೆಲವರು ಕವಿಪ್ರತಿಭೆ ಪಡೆದಿದ್ದರು, ಅವರ ನುಡಿಗಳು ವೇದ. ಮೂರನೆಯದಾಗಿ—ವೇದ ಪ್ರಾಚೀನ ಜನ ಚರಿತ್ರೆಗೆ ಗಣೆಯಂತಿದೆ ಎಂಬುದು. ಈ ದೃಷ್ಟಿಗಳಲ್ಲಿ ಪರಸ್ಪರ ವಿರೋಧವೇನೂ ಇಲ್ಲ. ಅವೆಲ್ಲಕ್ಕೂ ಸಮರ್ಥನೆ ವೇದ ದಲ್ಲಿ ದೊರೆಯುತ್ತದೆ. ಆದರೆ ಸಾಯಣರ ದೃಷ್ಟಿಕೋಣಕ್ಕೆ ಎರಡನೆಯದು ಆನುಷಂಗಿಕವಾಗಿವೆ. ಮೂರನೆಯದು ಆ ಕಾಲದ ಜನರ ಮನಸ್ಸಿಗೆ ಬಂದೇ ಇರಲಿಲ್ಲ. ಈ ಅಭಿಪ್ರಾಯ ತಳೆದಿರುವ ಆಧುನಿಕರಿಗೆ ಸಾಯಣರ ವಾದವು ಒಪ್ಪಿತ ವಾಗುವುದಿಲ್ಲ. ವೇದ 'ನಿತ್ಯ ಹಾಗು ಅಪೌರುಷೇಯ' ಎಂದು ಹೇಗೆ ಹೇಳುವುದು ಎನಿಸುತ್ತದೆ. ಅದಕ್ಕೆ ಆ ಶಬ್ದಗಳ ಭಾವಾರ್ಥ ಗ್ರಹಿಸಬೇಕೆಂದು ಹೇಳಿ ಹಾಗೆ ಮಾಡಿದಾಗ ಹೇಗೆ ಸಮನ್ವಯವಾಗುತ್ತದೆ ಎಂಬುದನ್ನು ಬಹಳ ರಮ್ಯವಾಗಿ ಪ್ರತಿಪಾದಿಸಿದ್ದಾರೆ. ಸಾಯಣಾಚಾರ್ಯರು ನಿರ್ವಹಿಸಿ ಪೂರ್ಣಗೊಳಿಸಿದ 'ವೇದಾರ್ಥ ಪ್ರಕಾಶ' ಯೋಜನೆಯ ಮಹತ್ವವನ್ನು ಎಷ್ಟು ಹೇಳಿದರೂ ಸಾಲದು. ವೇದಾರ್ಥ ಜ್ಞಾನಕ್ಕೆ ಅನರ್ಘ್ಯ ಮಾಣಿಕ್ಯದೀಪವಾಗಿದೆ ಅವರ ಈ ಕೃತಿ ಎಂಬುದನ್ನು ಸಮರ್ಥಿ ಸಿದ್ದಾರೆ. ಈ ಬಗ್ಗೆ ಮ್ಯಾಕ್‌ಡೊನೆಲ್ ಮತ್ತು ಮ್ಯಾಕ್ಸ್‌ಮುಲ್ಲರ್ ಅವರ ಉಕ್ತಿ ಗಳನ್ನೂ ಸಹ ಅನುವಾದ ಮಾಡಿದ್ದಾರೆ. ಡಿ.ವಿ.ಜಿ. ಅವರ ಲೇಖನಗಳಲ್ಲಿ ಮೊದ ಮೊದಲು ಕಂಡುಬರುವ ಈ ಚಿಂತನ ಮುಂದುವರಿದು ಮತ್ತಷ್ಟು ಗಾಢವಾಯಿತು. ಅದನ್ನು ಈ ಹಿಂದೆ ಪರಿಶೀಲಿಸಿದ್ದೇವೆ.

ಒಟ್ಟಾರೆಯಾಗಿ ಹೇಳುವುದಾದರೆ, ವೈದಿಕ ಮನೆತನದಲ್ಲಿ ಹುಟ್ಟಿದ ಡಿ.ವಿ.ಜಿ. ಅವರಿಗೆ ವೇದಾಧ್ಯಯನದಿಂದ ಶಿಕ್ಷಣ ಪ್ರಾರಂಭವಾಯಿತು. ವೇದದ ಅಮೃತ ಧಾರೆಯಲ್ಲಿ ಮಿಂದರು. ಆದರೆ ಅವರ ಪಾವಿತ್ರ್ಯಪ್ರಾಶಸ್ತ್ಯಗಳನ್ನು ಕುರುಡು ಕುರುಡಾಗಿ ಒಪ್ಪಿಕೊಳ್ಳದೆ ಆಧುನಿಕ ಶಿಕ್ಷಣದ ವಿಮರ್ಶನ ಬುದ್ಧಿಯಿಂದಲೂ ಪರಿಶೀಲಿಸಿದ್ದಾರೆ. ವೇದ ಬೋಧಿತ ತತ್ತ್ವಗಳನ್ನು ಮೈಗೂಡಿಸಿಕೊಂಡು ಬದುಕಿ ಬಾಳಿದ ಮಹನೀಯರ ಜೀವನವನ್ನು ವಿಶ್ಲೇಷಿಸಿದರು. ವೇದದ ಸನಾತನತ್ವ-ಮಾಹಾತ್ಮ್ಯಗಳನ್ನು ಸ್ಥಿರೀಕರಿಸಿಕೊಂಡರು. ಹಾಗೆ ಸರಿಕಂಡದ್ದನ್ನು ಮನೋಜ್ಞ ವಾಗಿ ತಮ್ಮೆಲ್ಲ ಕೃತಿಗಳಲ್ಲಿಯೂ ಪ್ರತಿಪಾದಿಸಿದ್ದಾರೆ. ಎಲ್ಲ ಭಾರತೀಯರ ಸ್ವತ್ತು ವೇದಶಾಸ್ತ್ರಗಳು. ಅವುಗಳನ್ನು ಮನಃಪೂರ್ವಕ. ಶ್ರದ್ಧಾಪೂರ್ವಕ ಪೋಷಿಸಿ ಬೆಳೆಸಬೇಕು. ವೇದೋಕ್ತ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಸಂಸ್ಕೃತಿ ಎಂಬ ತಮ್ಮ ನಿಲುವನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಸಿ[7] ವೇದದ ಬಗ್ಗೆ ನಮ್ಮ ಕಣ್ತೆರೆಸಿದ್ದಾರೆ.

---

[7] 'ಸಂಸ್ಕೃತಿ' (1953) ಪ್ರಬಂಧದ ತಿರುಳೀ ಇದು.

ಡಿ.ವಿ.ಜಿ. ಅವರ ಭಗವದ್ಗೀತಾ ತಾತ್ಪರ್ಯ

ಪ್ರೊ|| ಕೆ. ಟಿ. ಪಾಂಡುರಂಗಿ

"ಡಿ.ವಿ.ಜಿ. ಅವರು ತಮ್ಮ 'ಭಗವದ್ಗೀತಾ ತಾತ್ಪರ್ಯ' ಕೃತಿಯ, ಎಲ್ಲ ನಿರೂಪಣೆಯಲ್ಲಿಯೂ ಗೀತೆಯಲ್ಲಿ ಅಡಕವಾದ ತತ್ತ್ವಗಳು ಜೀವನಕ್ಕೆ ಹೇಗೆ ಮಾರ್ಗದರ್ಶಕ ಎಂಬಲ್ಲಿಗೆ ತಂದು ನಿಲ್ಲಿಸುವುದನ್ನು ಎಲ್ಲಿಯೂ ಮರೆತಿಲ್ಲ. ಸುಲಭವಾದ ದೃಷ್ಟಾಂತಗಳನ್ನು ಕೊಟ್ಟು, ಚಿಕ್ಕ ಚಿಕ್ಕ ಕಥೆಗಳನ್ನು ಹೇಳಿ ಜೀವನದಲ್ಲಿ ನಡೆಯಬಹುದಾದ ಘಟನೆಗಳನ್ನೂ ಎದುರಿಸಬೇಕಾಗಿ ಬರುವ ನೈತಿಕ ಅಥವಾ ಮಾನಸಿಕ ಸಮಸ್ಯೆಗಳನ್ನೂ ಚಿತ್ರಿಸಿ ಗೀತೆಯಿಂದ ಪಡೆಯಬಹುದಾದ ಮಾರ್ಗದರ್ಶನವನ್ನು ತೋರಿಸುವರು..." ಡಿ.ವಿ.ಜಿ. ಅವರಿಗೆ, "ನಮ್ಮ ಮತಾಚಾರ್ಯರುಗಳಲ್ಲಿ ಯಾರಿಗೂ ವಿರೋಧವಾಗದಂತೆ ಅರ್ಥಾವಲೋಕನ ಕೊಡಬೇಕೆಂಬುದು ಉದ್ದೇಶ" ವಾಗಿದ್ದರೂ, "ಸಾಮಾನ್ಯವಾಗಿ ತತ್ತ್ವವಿವೇಚನಾ ಭಾಗವನ್ನೆಲ್ಲಾ ಅದ್ವೈತ ಮತಪ್ರಕ್ರಿಯೆಯನ್ನನುಸರಿಸಿಯೇ ಅವರು ಮಾಡಿರುವರು... ಪ್ರಾಮಾಣಿಕವಾದ ಮತಭೇದವಿರುವುದು ಅನಿವಾರ್ಯವೆನ್ನಿಸುತ್ತದೆ... ತತ್ತ್ವಚಿಂತನೆಯಲ್ಲಿ ವ್ಯಾವಹಾರಿಕ ಒಪ್ಪಂದಕ್ಕಿಂತ ಪ್ರಾಮಾಣಿಕ ಮತಭೇದವು ಹೆಚ್ಚು ಸಹಕಾರಿ... ಈ ದೃಷ್ಟಿಯಿಂದ 'ಪರಿಶಿಷ್ಟ'ದಲ್ಲಿ ಶ್ರೀ ಡಿ.ವಿ.ಜಿ. ಅವರ ಮತತ್ರಯ ಸಾಮರಸ್ಯದ ವಿಚಾರಗಳು ಪುನರ್ವಿಚಾರಕ್ಕೆ ಯೋಗ್ಯವಾಗಿವೆ."—ಇದಿಷ್ಟು ಮಾನ್ಯ ಲೇಖಕರು ಮಾಡಿರುವ ಗ್ರಂಥಾವಲೋಕನದ ಒಟ್ಟಭಿಪ್ರಾಯ. ಸಾವಿರಾರು ವರ್ಷಗಳ ಹಿಂದೆ ವರ್ಣಾಶ್ರಮಗಳ ನೆಲೆಗಟ್ಟಿನ ಸಮಾಜ ಪರಿಸರದ ಜೀವನನಿಷ್ಠೆಗಳ ಹಿನ್ನೆಲೆಯಲ್ಲಿ, ಗೀತೆಯಲ್ಲಿ ಪ್ರತಿಪಾದಿಸಿರುವ ತತ್ತ್ವ ಪ್ರಮೇಯಗಳು ಇಂದಿನ ಜೀವನವ್ಯವಹಾರಗಳಿಗೂ ಪ್ರಮಾಣಗಳಾಗಬಲ್ಲವು ಎಂದು ಸಾಧಿಸಿರುವುದೇ ಡಿ.ವಿ.ಜಿ. ಅವರ ಈ ಉದ್ಧೃಕೃತಿಯ ಮಹತ್ವ. ಮತಧರ್ಮಭಿನ್ನವಾದ ಜೀವನಧರ್ಮದರ್ಪಣ ಡಿ.ವಿ.ಜಿ. ಅವರ 'ಭಗವದ್ಗೀತಾ ತಾತ್ಪರ್ಯ.' ಡಿ.ವಿ.ಜಿ.ಯವರ ಧಾರ್ಮಿಕ ಮತ್ತು ತಾತ್ತ್ವಿಕ ಪ್ರಮಾಣ ಚಿಂತನ 'ಗೀತಾತಾತ್ಪರ್ಯ'ದಲ್ಲಿ ಶಾಸ್ತ್ರಮರ್ಯಾದೆಯನ್ನು ಮೀರದ ಸರಳವಾದರೂ ಬಿಗಿಯಾದ ಗದ್ಯಶೈಲಿಯಲ್ಲಿ ಶಾಂತಗಂಭೀರ ಗತಿಯಲ್ಲಿ ಪ್ರವಹಿಸಿದೆ; ಅದೇ ಚಿಂತನ ವರ್ಣವೈವಿಧ್ಯಮಯವಾಗಿ, ಮನೋಜ್ಞ ಪದ್ಯಶೈಲಿಯಲ್ಲಿ, ಉದಯ-ಸಂಧ್ಯಾರಾಗಗಳನ್ನೂ ನಿಶಿಯ ನಭೋಮಂಡಲವನ್ನೂ ಮಾರ್ಪೊಳಿಯಿಸುತ್ತಾ ಶೋಭಿಸುವ ಸಾವಿರಾರು ಕಮಲಾಕರಗಳಂತೆ ಕಂಗೊಳಿಸುತ್ತಿದೆ 'ಮಂಕುತಿಮ್ಮನ ಕಗ್ಗ'ದಲ್ಲಿ. ಈ ಎರಡೂ ಕೃತಿಗಳು ಪರಸ್ಪರ ಪೂರಕವಾದ ಕೃತಿಯುಗ್ಮ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಭೀಷ್ಮ ಪಿತಾಮಹರೆನಿಸಿದ ಶ್ರೀ ಡಿ.ವಿ.ಜಿ. ಯವರ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ' ಗ್ರಂಥವು ಕನ್ನಡ ಸರಸ್ವತಿಯ ಭಂಡಾರಕ್ಕೆ ಅವರು ಒವಗಿಸಿದ ಒಂದು ಅಮೂಲ್ಯವಾದ ರತ್ನ. ಲೋಕಮಾನ್ಯ ತಿಲಕರ 'ಗೀತಾ ರಹಸ್ಯ'ದ ತರುವಾಯ ಈ ಶತಮಾನದಲ್ಲಿ ಭಾರತೀಯ ಭಾಷೆಗಳಲ್ಲಿ ಬರೆಯಲ್ಪಟ್ಟ ಗೀತೆಯ ಬೋಧೆಯನ್ನು ವಿವರಿಸುವ ಗ್ರಂಥಗಳಲ್ಲಿ ಇದು ಶ್ರೇಷ್ಠವಾದ ಗ್ರಂಥ ವೆಂದು ನಿಸ್ಸಂಶಯವಾಗಿ ಹೇಳಬಹುದು. ಗೀತೆಯಂಥ ಬಹ್ವರ್ಥಗರ್ಭಿತವಾದ ಗ್ರಂಥದ ತಾತ್ಪರ್ಯವನ್ನು ಡಿ.ವಿ.ಜಿ.ಯವರಂಥ ಪರಿಣತಮತಿಗಳೂ, ಲೇಖನ ಕಲೆಯಲ್ಲಿ ಅತಿ ವಿಚಕ್ಷಣರೂ ವಿವರಿಸಿರುವುದು ಒಂದು ಅಪೂರ್ವ ಯೋಗವೇ ಸರಿ. ಉನ್ನತ ಮಟ್ಟದ ಗ್ರಂಥಗಳು ವಿರಳವಾಗಿರುವ ಈ ಕಾಲದಲ್ಲಿ ಇಂಥ ಗ್ರಂಥಗಳ ರಚನೆ ಜ್ಞಾನಪಿಪಾಸುಗಳಿಗೆ ತುಂಬ ಸಂತೋಷವನ್ನುಂಟುಮಾಡುವದು. ಪಾಂಡಿತ್ಯದ ಅಂತಸ್ತನ್ನು ಕಾಯ್ದುಕೊಳ್ಳುವದು ಮತ್ತು ಪಾಮರರಿಗೂ ಜ್ಞಾನವನ್ನು ಹಂಚು ವದು ಇವೆರಡರ ವಿಷಯದಲ್ಲಿಯೂ ಸಮನಾದ ಕಳಕಳಿಯಿರುವ ಶ್ರೀ ಡಿ.ವಿ.ಜಿ. ಯವರ ಈ ಕೃತಿಯಲ್ಲಿ ಪಂಡಿತರೂ ತಿಳಿದುಕೊಳ್ಳಬೇಕಾದ ವಿಷಯಗಳು ಪಾಮರ ರಿಗೂ ಅರ್ಥವಾಗಬಹುದಾದ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಜ್ಞಾನವು ಕೇವಲ ಗ್ರಂಥಸ್ಥವಾಗಿ ಇರಬೇಕಾದ ವಿಷಯವಲ್ಲ. ಜೀವನದಲ್ಲಿ ಕಾರ್ಯಗತವಾಗಬೇಕಾದುದು. ಆದರೆ ಹೇಗೆ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ನಿರೂಪಿಸುವ ಗ್ರಂಥಗಳು ದುರ್ಲಭ. ಭಗವದ್ಗೀತೆಯು ಇಂಥ ಅಪೂರ್ವ ಗ್ರಂಥಗಳಲ್ಲಿ ಒಂದು. ಆದುದರಿಂದ ಈ ಗ್ರಂಥವನ್ನು ಬ್ರಹ್ಮವಿದ್ಯೆ ಮತ್ತು ಯೋಗಶಾಸ್ತ್ರ ಎಂದು ಕರೆಯಲಾಗಿದೆ. ಇದು ಜ್ಞಾನವನ್ನು ಕೊಡುವ ಗ್ರಂಥ ಮತ್ತು ಆ ಜ್ಞಾನವನ್ನು ಜೀವನದಲ್ಲಿ ಕಾರ್ಯಗತಗೊಳಿಸುವ ಕ್ರಮವನ್ನು ತಿಳಿಸಿಕೊಡುವ ಗ್ರಂಥ. ಗೀತೆಯ ಈ ದ್ವಿವಿಧ ಪ್ರಯೋಜನವೂ ಆಗುವಂತೆ ಶ್ರೀ ಡಿ.ವಿ.ಜಿ.ಯವರು ಅದರ ತಾತ್ಪರ್ಯ ವನ್ನು ವಿವರಿಸಿದ್ದಾರೆ.

"ಮತತತ್ತ್ವ, ಧರ್ಮ, ದೈವ, ಮೊದಲಾದ ಸೂಕ್ಷ್ಮ ಪವಿತ್ರ ವಿಚಾರಗಳಿಗೆ ನಾನು ಬಾಯಿಹಾಕತಕ್ಕದ್ದಲ್ಲವೆಂದು ಮೊದಲಿನಿಂದಲೂ ನಿಯಮ ಮಾಡಿಕೊಂಡಿದ್ದೆ... ಅನುಭವ ಬೆಳೆದಂತೆ ದೇಶಹಿತಕ್ಕೆ ಧಾರ್ಮಿಕ ಸಾಹಿತ್ಯದ ಅನಿವಾರ್ಯತೆ ಎಷ್ಟೆಂಬುದು ಸ್ಪಷ್ಟವಾಯಿತು. ಮನುಷ್ಯಸಮಾಜದ ನಾನಾ ಉದ್ದೇಶ ಪ್ರವೃತ್ತಿಗಳಲ್ಲಿ ಧರ್ಮಾ-ಧರ್ಮ ವಿವೇಕವಿಲ್ಲದೆಹೋದಾಗ ಗುಣಾವಗುಣ ವಿಮರ್ಶೆ ಮಾಡದ ಸಾರ್ವಜನಿಕ ಕಾರ್ಯದಿಂದ ಎಂಥ ಪ್ರಜಾಕ್ಷೇಮವಾದೀತು ? ಎಂಬ ಚಿಂತೆ ನನ್ನನ್ನು ಧರ್ಮ ಜಿಜ್ಞಾಸೆಯ ಕಡೆಗೆ ಎಳೆಯಿತು" ಎಂದು ಡಿ.ವಿ.ಜಿ.ಯವರು ಈ ಗ್ರಂಥವನ್ನು ಬರೆಯಲು ಪ್ರವರ್ತಿಸಿದ ತಮ್ಮ ಮನೋಭೂಮಿಕೆಯನ್ನು ಮುನ್ನುಡಿಯಲ್ಲಿ ವ್ಯಕ್ತಪಡಿಸಿರು ವರು. ಆದುದರಿಂದಲೇ ಅವರು ಗೀತೆಯಲ್ಲಿಯ 'ಜೀವನಧರ್ಮಯೋಗ' ವನ್ನು ಮಥಿಸಿ ತೆಗೆದಿದ್ದಾರೆ. "ಗೀತೆ ಮೋಕ್ಷಶಾಸ್ತ್ರವೂ ಹೌದು. ಗೀತೆಯು ಅದರ ಜೊತೆಗೆ ಜೀವನಶಾಸ್ತ್ರವೂ ಹೌದು. ಗೀತೆಯ ಮೋಕ್ಷೋಪದೇಶದಿಂದ ಪ್ರಯೋಜನ

ಪಡೆಯಬಲ್ಲವರು ಒಬ್ಬರಿದ್ದರೆ ಅವರ ಸಾಮಾನ್ಯ ಧರ್ಮೋಪದೇಶದಿಂದ ಪ್ರಯೋಜನ ಪಡೆಯಬಲ್ಲವರು ಒಂಬೈನೂರಾತೊಂಬತ್ತೊಂಬತ್ತು ಜನರು. ತಮ್ಮ ತಮ್ಮ ಜೀವನವನ್ನು ಕ್ರಮ ಕ್ರಮವಾಗಿ ಉತ್ತಮಪಡಿಸಿಕೊಳ್ಳಲು ಅವಶ್ಯವಾದ ತಿಳಿವಳಿಕೆ ಭಗವದ್ಗೀತೆಯಲ್ಲಿ ದೊರೆಯುತ್ತದೆ. ಜೀವನದಲ್ಲಿ ಒಂದು ಗೌರವ, ಕರ್ತವ್ಯದ ವಿಷಯದಲ್ಲಿ ಒಂದು ಉತ್ಸಾಹ, ಆಪತ್ಕಾಲದಲ್ಲಿ ಧೈರ್ಯ, ಸಂಶಯ ಹುಟ್ಟಿದಾಗ ನೆಮ್ಮದಿಯನ್ನುಂಟುಮಾಡುವ ನಂಬಿಕೆ, ಇವು ಗೀತೆಯಿಂದ ನಾವು ಸಂಪಾದಿಸಿಕೊಳ್ಳಬಹುದಾದ ಸಂಪತ್ತು" ಎಂದು ತಾವು ನಿರೂಪಿಸಬೇಕೆಂದಿರುವ ಜೀವನಧರ್ಮಯೋಗದ ಪ್ರಯೋಜನವನ್ನು ಭೂಮಿಕೆಯಲ್ಲಿ ವಿವರಿಸಿದ್ದಾರೆ.

ಅಧ್ಯಾಯಗಳಲ್ಲಿ ಹೊಸತನ

ಶ್ರೀ ಡಿ.ವಿ.ಜಿ.ಯವರು ಅಧ್ಯಾಯದ ಹೆಸರುಗಳನ್ನು ತಮ್ಮದೇ ಆದ ವಿಶಿಷ್ಟವಾದ ರೀತಿಯಲ್ಲಿ ಕೊಟ್ಟಿದ್ದಾರೆ. ಪರಂಪರಾಗತವಾಗಿ ಬಂದ ಆಯಾ ಅಧ್ಯಾಯಗಳ ಹೆಸರುಗಳ ಜೊತೆಗೆ, ತಾವು ವಿವರಿಸಿದ ಆಯಾ ಅಧ್ಯಾಯದ ತಾತ್ಪರ್ಯದ ಮುಖ್ಯಾಂಶವು ಅಥವಾ ಹೊಸ ದೃಷ್ಟಿಕೋನವು ಸ್ಪಷ್ಟವಾಗುವಂತೆ ಮತ್ತೊಂದು ಹೆಸರನ್ನು ಕೊಟ್ಟಿದ್ದಾರೆ. ಉದಾಹರಣೆಗೆ 'ಅರ್ಜುನ ವಿಷಾದ ಯೋಗ' ವೆಂಬ ಮೊದಲನೆಯ ಅಧ್ಯಾಯವನ್ನು 'ಸ್ವಧರ್ಮಯೋಗ' ವೆಂದೂ, ನಾಲ್ಕನೆಯ ಅಧ್ಯಾಯವನ್ನು 'ನಿರ್ಲೇಪ ಕರ್ಮಯೋಗ' ವೆಂದೂ, 'ಮೋಕ್ಷ ಸಂನ್ಯಾಸ ಯೋಗ'ವೆಂಬ ಹದಿನೆಂಟನೆಯ ಅಧ್ಯಾಯವನ್ನು 'ತದೇಕ ಶರಣತಾಯೋಗ' ವೆಂದೂ ಕರೆದುದನ್ನು ನೋಡಬಹುದು. ಪ್ರಾಚೀನ ಭಾಷ್ಯಕಾರರೂ ತಮ್ಮ ತಮ್ಮ ವ್ಯಾಖ್ಯಾನಕ್ಕನುಸರಿಸಿ ಅಧ್ಯಾಯಗಳ ಹೆಸರುಗಳನ್ನು ಕೊಟ್ಟಿರುವರು. ಶ್ರೀ ಡಿ.ವಿ.ಜಿ. ಯವರು ಕೊಟ್ಟ ಹೆಸರುಗಳಲ್ಲಿ ಆಯಾ ಅಧ್ಯಾಯದ ಬೋಧೆಯನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ಅನುಕೂಲತೆಯ ದೃಷ್ಟಿ ಮುಖ್ಯವಾಗಿದೆ.

ಪ್ರತಿಯೊಂದು ಅಧ್ಯಾಯದ ಆರಂಭದಲ್ಲಿಯೂ ಸಾರಾಂಶ ಮತ್ತು ಸೂಚನೆ ಗಳನ್ನು ಕೊಟ್ಟು ಆಯಾ ಅಧ್ಯಾಯದ ಕೇಂದ್ರ ವಿಚಾರವನ್ನು ಸ್ಪಷ್ಟಪಡಿಸಿರುತ್ತಾರೆ. ತಾವು ತೋರಿಸಿದ ಆ ಪಟ್ಟದ ತಾತ್ಪರ್ಯದ ಸಾರವನ್ನು ಸುಂದರವಾಗಿ ಸಂಗ್ರಹಿಸಿ ದ್ದಾರೆ.

ಪುರುಷಾರ್ಥ ಸಿದ್ಧಿಗೆಂದೋ
ದುರಿತಕ್ಷಯಕೆಂದೋ ಲೋಕಸಂಸ್ಥಿತಿಗೆಂದೊ
ಚರಿತಸ್ವಧರ್ಮಕರ್ಮವೆ
ಪರಮೇಶ್ವರ ಭಕ್ತಿಯೆಂಬುದಾದಿಮ ಪಟ್ಟಂ

ತಮ್ಮ ತಮ್ಮ ಕರ್ತವ್ಯಗಳನ್ನು ಅನುಷ್ಠಾನ ಮಾಡುವದೇ ಪರಮೇಶ್ವರ ಭಕ್ತಿ. ಇದರಿಂದ ಪುರುಷಾರ್ಥ ಅಂದರೆ ಧರ್ಮ ಅರ್ಥ, ಕಾಮ, ಮೋಕ್ಷವೆಂಬ

ಜೀವನದ ಪರಮ ಮೌಲ್ಯಗಳು ಸಿದ್ಧಿಸುವವು. ಮನಸ್ಸಿನ ಕಿಲ್ಬಿಷವು ದೂರಾಗುವದು. ಲೋಕ ಕಲ್ಯಾಣವಾಗುವದು. ಇದು ಮೊದಲನೆಯ ಆರು ಅಧ್ಯಾಯಗಳ ಸಾರವು.

ಪ್ರಾಣಾಯಾಮಾದ್ಯನುಸಂ-
ಧಾನಗಳಿಂದೇಕಲಕ್ಷ್ಯದೊಳ್ ಮನವಿರಿಪಾ
ಧ್ಯಾನಸ್ಥಿತ ಭಕ್ತಿಗೆ ತ-
ತ್ತ್ವಾನುಭವಂ ಸುಲಭಮೆಂದು ಮಧ್ಯಮ ಷಟ್ಕಂ

ಪ್ರಾಣಾಯಾಮಗಳಿಂದ ಪರಮಾತ್ಮ ತತ್ತ್ವಾನುಭವವು ಸುಲಭವೆಂಬುದು ಎರಡನೆಯ ಷಟ್ಕದ ಸಾರವು.

ಆತ್ಮಾನಾತ್ಮ ವಿವೇಕಂ
ಸತ್ತ್ವಮಯಶ್ರದ್ಧೆ ಭಗವದರ್ಪಿತಜೀವಂ
ತತ್ತ್ವಾಪ್ತಿಗೆ ಸಾಧನಮಿವು
ಮುಕ್ತಿಪದಂ ಜ್ಞಾನಮೆಂಬುದಂತಿಮ ಷಟ್ಕಂ

ಆತ್ಮ–ಅನಾತ್ಮವಿವೇಕ, ಸಾತ್ವಿಕ ಶ್ರದ್ಧೆ, ಸಾತ್ವಿಕ ಜ್ಞಾನ ಇತ್ಯಾದಿಗಳು, ಭಗವದರ್ಪಣ ಬುದ್ಧಿ ಇವು ಮುಕ್ತಸಾಧನಗಳು. ಮುಕ್ತಿ ಜ್ಞಾನಸ್ವರೂಪ. ಇದು ಮೂರನೆಯ ಷಟ್ಕದ ಸಾರವು.

ಆಯಾ ಷಟ್ಕದ ಈ ಸಾರವನ್ನು ಮಥನಮಾಡಿ ತೆಗೆಯಲು ಆಯಾ ಅಧ್ಯಾಯಗಳಲ್ಲಿ ಬಂದ ಅಂಶಗಳನ್ನು ದೀರ್ಘವಾಗಿ ಪರಿಶೀಲಿಸಿರುವರು. ಮುಖ್ಯ ಶ್ಲೋಕಗಳ ಅರ್ಥವನ್ನು ವಿವೇಚಿಸಿರುವರು. ಪಾರಿಭಾಷಿಕ ಪದಗಳ ಅರ್ಥವ್ಯಾಪ್ತಿಯನ್ನು ವಿವರಿಸಿರುವರು. ಗೀತೆಯಲ್ಲಿ ಅನೇಕ ಕಡೆಗೆ ಮೊದಲು ಹೇಳಿದ್ದಕ್ಕೂ ಮುಂದೆ ಹೇಳುವದಕ್ಕೂ ವಿರೋಧಾಭಾಸವಿದ್ದಂತೆ ಕಾಣುವದು : ಅವುಗಳನ್ನು ಪರಿಹರಿಸಿರುವರು.

ಪುನರುಕ್ತಿಗೆ ಪರಿಹಾರ

ಕೆಲವು ಕಡೆ ಪುನರುಕ್ತಿಯಿದ್ದಂತೆ ಕಾಣುವದು. ಅದನ್ನೂ ಪರಿಹರಿಸಿರುವರು. ಗೀತೆಯಲ್ಲಿ ಬರುವ ಅನೇಕ ವಿಷಯಗಳಿಗೆ ಪರಸ್ಪರ ಸಂಗತಿಯೇ ಸಾಮಾನ್ಯಬುದ್ಧಿಯವರಿಗೆ ತೋರುವುದಿಲ್ಲ. ಆದುದರಿಂದ ಪೂರ್ವಾಪರ ಅಧ್ಯಾಯ ಸಂಗತಿಯನ್ನೂ ಪ್ರತಿಯೊಂದು ಅಧ್ಯಾಯದಲ್ಲಿಯೂ ಒಂದಾದ ಮೇಲೆ ಇನ್ನೊಂದು ವಿಷಯವು ಏಕೆ ಬಂದಿತು ಎಂಬುದನ್ನೂ ಸಯುಕ್ತಿಕವಾಗಿ ವಿವರಿಸಿರುವರು. ಅರ್ಜುನನ ಮೂಲ ಪ್ರಶ್ನೆಗೆ ಅವೆಲ್ಲವುಗಳ ಸಂಬಂಧವನ್ನು ತೋರಿಸಿರುವರು. ಈ ಎಲ್ಲ ನಿರೂಪಣೆಯಲ್ಲಿಯೂ ಗೀತೆಯಲ್ಲಿ ಅಡಕವಾದ ತತ್ತ್ವಗಳು ಜೀವನಕ್ಕೆ ಹೇಗೆ ಮಾರ್ಗ-ದರ್ಶಕ ಎಂಬಲ್ಲಿಗೆ ತಂದು ನಿಲ್ಲಿಸುವದನ್ನು ಎಲ್ಲಿಯೂ ಮರೆತಿಲ್ಲ, ಸುಲಭವಾದ

ದೃಷ್ಟಾಂತಗಳನ್ನು ಕೊಟ್ಟು. ಚಿಕ್ಕ ಚಿಕ್ಕ ಕಥೆಗಳನ್ನು ಹೇಳಿ. ಜೀವನದಲ್ಲಿ ನಡೆಯು ಬಹುದಾದ ಘಟನೆಗಳನ್ನು ಎದುರಿಸಬೇಕಾಗಿಬರುವ ನೈತಿಕ ಅಥವಾ ಮಾನಸಿಕ ಸಮಸ್ಯೆಗಳನ್ನೂ ಚಿತ್ರಿಸಿ ಗೀತೆಯಿಂದ ಪಡೆಯಬಹುದಾದ ಮಾರ್ಗದರ್ಶನವನ್ನು ತೋರಿಸಿರುವರು. ಗೀತೆಯ ಆರಂಭವು ಒಂದು ವಿಶಿಷ್ಟ ಹಿನ್ನೆಲೆಯಲ್ಲಿ ಒಂದು ವಿಶಿಷ್ಟ ಕರ್ತವ್ಯವನ್ನು ನಿರ್ವಹಿಸಬೇಕೋ ಇಲ್ಲವೋ ಎಂದಾಗಿದ್ದರೂ ಸಮಸ್ತ ಜೀವನದ ದೃಷ್ಟಿಕೋನವೇ ಹೇಗಿರಬೇಕು ಎಂದು ಹೇಳಿ ಕರ್ತವ್ಯಾಕರ್ತವ್ಯಗಳ ನಿರ್ಣಯವನ್ನು ಮಾಡಹೊರಟಿರುವದರಿಂದ ಈ ಗ್ರಂಥವು ಜೀವನಧರ್ಮವೇ ಆಗಿದೆ. ಅಂದಿನ ಸಾಮಾಜಿಕ ಸ್ಥಿತಿಯಾದ ವರ್ಣಾಶ್ರಮದ ಹಿನ್ನೆಲೆಯಲ್ಲಿ ಮತ್ತು ಆತ್ಮೋದ್ಧಾರವೇ ಜೀವನದ ಗುರಿಯಾಗಿರುವ ಹಿನ್ನೆಲೆಯಲ್ಲಿ ಈ ವಿವೇಚನೆಯನ್ನು ಮಾಡಿದ್ದರೂ ಜೀವನದ ಶಾಶ್ವತ ಮೌಲ್ಯಗಳೂ ಉಚಿತ ಮತ್ತು ಸಾತ್ತ್ವಿಕ ಜೀವನಕ್ರಮವೂ ಇವರಲ್ಲಿ ವಿವರಿಸಲ್ಪಟ್ಟಿರುವದರಿಂದ ಇಂದಿಗೂ ಅನ್ವಯಿಸಬಹುದಾದ ಜೀವನಧರ್ಮ ಯೋಗವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ ಎಂದು ಡಿ.ವಿ.ಜಿ.ಯವರು ತೋರಿಸಿ ಕೊಟ್ಟಿದ್ದಾರೆ. ಉಪನಿಷತ್ತು, ಭಾಗವತ ಇತ್ಯಾದಿಗಳಿಂದ ಗೀತೆಯಲ್ಲಿ ಹೇಳಿದ ಸಿದ್ಧಾಂತಗಳಿಗೆ ಸಂವಾದವನ್ನು ತೋರಿಸಿ ಗೀತೆಯ ಬೋಧೆಯು ಒಂದು ಗ್ರಂಥದ ಅಥವಾ ಒಬ್ಬ ಗ್ರಂಥಕರ್ತನ ಬೋಧೆಯಲ್ಲ, ಆದರೆ ಒಂದು ಸಂಸ್ಕೃತಿಯ ಆವಿಷ್ಕಾರ ಎಂಬುದು ಮನದಟ್ಟಾಗುವಂತೆ ಮಾಡಿದ್ದಾರೆ. ಋಷಿಗಳ ಸಾಕ್ಷಾತ್ಕಾರ, ನೂರಾರು ಪ್ರತಿಭಾವಂತರ ಯುಕ್ತವಾದ ಮತ್ತು ಸದ್‌ಬುದ್ಧಿ ಸದಾಚಾರಗಳನ್ನು ಪಡೆದ ಸಹಸ್ರಾರು ಸಾಮಾನ್ಯರ ರೂಢಾಚಾರ ಇವುಗಳ ತ್ರಿವೇಣೀ ಸಂಗಮವನ್ನು ಪಡೆದು ಶತಮಾನಗಳಿಂದ ನಡೆದುಕೊಂಡು ಬಂದ ಸಂಸ್ಕೃತಿಯೇ ಸನಾತನ ಸಂಸ್ಕೃತಿ. ಈ ಸಂಸ್ಕೃತಿಯ ಸಾಗರ ಮಹಾಭಾರತ. ಅದರಲ್ಲಿ ಅಡಗಿದ್ದ ಅಮೃತ ಭಗವದ್ಗೀತೆ. ಆದುದರಿಂದ ಭಗವದ್ಗೀತೆ ಶಾಶ್ವತ ಜೀವನಧರ್ಮಯೋಗದ ಆವಿಷ್ಕಾರವನ್ನು ಮಾಡುವದರಲ್ಲಿ ಸಂದೇಹವಿಲ್ಲ. ಇದನ್ನು ಆಬಾಲಗೋಪಾಲರಿಗೆ ಅರ್ಥವಾಗು ವಂತೆ, ಆಧುನಿಕ ಬುದ್ಧಿಗೂ ಒಪ್ಪಿತವಾಗುವಂತೆ, ಮತ್ತೊಮ್ಮೆ ವಿವರಿಸಿದ ಶ್ರೇಯಸ್ಸು ಶ್ರೀ ಡಿ.ವಿ.ಜಿ.ಯವರದು.

ಜೀವನಧರ್ಮಯೋಗ

ಶ್ರೀ ಡಿ.ವಿ.ಜಿ.ಯವರು ಗ್ರಂಥದ ಭೂಮಿಕೆಯಲ್ಲಿಯೂ ಉಪಸಂಹಾರ ದಲ್ಲಿಯೂ ಕೆಲವು ಮನನೀಯವಾದ ಮಾತುಗಳನ್ನು ಹೇಳಿರುವರು. "ಇಲ್ಲಿಯ ಗೀತಾ ಪ್ರವಚನದಲ್ಲಿ ನಮ್ಮ ಮತಾಚಾರ್ಯರುಗಳಲ್ಲಿ ಯಾರಿಗೂ ವಿರೋಧವಾಗ ದಂತೆ ಅರ್ಥಾವಲೋಕನೆ ಕೊಡಬೇಕೆಂಬುದು ಉದ್ದೇಶ. ತಕರಾರಿರುವ ಕಡೆ ಅವರವರ ಸ್ವಾತಂತ್ರ್ಯ ಅವರವರಿಗೆ ಉಂಟೇ ಉಂಟು" ಎಂದು ಭೂಮಿಕೆಯಲ್ಲಿ ಹೇಳಿರುವರು. ಗೀತೆಯಂಥ ತತ್ತ್ವಶಾಸ್ತ್ರದ ಗ್ರಂಥವನ್ನು ಯಾವದಾದರೊಂದು ಮತತತ್ತ್ವದ ಹಿನ್ನೆಲೆಯಿಲ್ಲದೆ ನಿರೂಪಿಸುವದು ಸಾಧ್ಯವಾಗುವುದಿಲ್ಲ. ಹೊಸ ತತ್ತ್ವವನ್ನು ರೂಪಿಸುವದಂತೂ ಅಸಾಧ್ಯವಾದ ಮಾತು. ಆದುದರಿಂದ ಮತ

ತತ್ತ್ವಗಳ ಖಂಡನ ಮಂಡನ ಕ್ರಮವನ್ನು ಇಲ್ಲಿ ಅನುಸರಿಸುವದಿಲ್ಲವೆಂಬುದೇ ಶ್ರೀ ಡಿ.ವಿ.ಜಿ.ಯವರ ಅಭಿಪ್ರಾಯವು. ಸಾಮಾನ್ಯವಾಗಿ ತತ್ತ್ವವಿವೇಚನಾ ಭಾಗವನ್ನೆಲ್ಲ ಅದ್ವೈತ ಮತ ಪ್ರಕ್ರಿಯೆಯನ್ನನುಸರಿಸಿಯೇ ಅವರು ಮಾಡಿರುವರು. ಪಾರ ಮಾರ್ಥಿಕ ನೆಲೆ ಮತ್ತು ವ್ಯಾವಹಾರಿಕ ನೆಲೆಗಳನ್ನನುಸರಿಸಿ ವಿಷಯಗಳನ್ನು ವಿವೇಚಿಸಿರುವರು. ಆತ್ಮೈಕ್ಯದ ತಳಹದಿಯ ಮೇಲೆ ಅಂತಿಮ ಗುರಿಯನ್ನು ರೂಪಿಸಿರುವರು. ತತ್ತ್ವಭಾಗವು ಹೀಗೆ ಒಂದು ಮತಪ್ರಕ್ರಿಯೆಯನ್ನು ಅವಲಂಬಿಸಿದ್ದರೂ ಜೀವನ ಧರ್ಮಯೋಗವನ್ನು ವಿಶಾಲವಾದ ತಳಹದಿಯ ಮೇಲೆ ವಿವರಿಸಿರುವರು. ತತ್ತ್ವ ಶಾಸ್ತ್ರದ ಗ್ರಂಥಗಳ ಸಾರವನ್ನು ವಿವರಿಸುವಾಗ ಹೀಗೆ ಒಂದು ಮತ ಪ್ರಕ್ರಿಯೆಯನ್ನು ಅನುಸರಿಸುವದರಲ್ಲಿ ತಪ್ಪೇನೂ ಇಲ್ಲ. ಉದ್ವೇಗಕರವಾದ ಖಂಡನ ಮಂಡನ ಕ್ರಮಗಳನ್ನು ತೆಗೆದುಹಾಕಿ ಆಯಾ ಮತಪ್ರಕ್ರಿಯೆಗಳಂತೆ ಜೀವನಧರ್ಮಯೋಗ ವನ್ನು ವಿವರಿಸಿದರೆ ಸಾಮಾನ್ಯರಿಗೆ ಮಾರ್ಗದರ್ಶನವಾಗುವದು. ಮತಪ್ರಕ್ರಿಯೆ ಯನ್ನು ಅನುಸರಿಸುವದೇ ಸಂಕುಚಿತಭಾವನೆಯೆಂದು ತಿಳಿಯುವದು ಅಥವಾ ಅದರಿಂದ ಸುಹೃದ್‌ಭಾವವು ಕೆಡುವದೆಂದು ತಿಳಿಯುವದು ಉಚಿತವಲ್ಲ. ಅದರಂತೆಯೇ ಖಂಡನ-ಮಂಡನ ಕ್ರಮವೇ ಸಾಧನಮಾರ್ಗವೆಂದು ತಿಳಿಯುವದೂ ಉಚಿತವಲ್ಲ.

ಆಯಾ ಮತಗಳ ವಿಸ್ತಾರವಾದ ವಾಙ್ಮಯವನ್ನು ಆಳವಾಗಿ ಮತ್ತು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದರೆ ಶಾಸ್ತ್ರಾಧಾರದಿಂದಲೂ ಯುಕ್ತಿಯಿಂದಲೂ ತತ್ತ್ವಸ್ವರೂಪದ ವಿಷಯದಲ್ಲಿ ಪ್ರಾಮಾಣಿಕವಾದ ಮತಭೇದವಿರುವದು ಅನಿವಾರ್ಯ ವೆನಿಸುತ್ತದೆ. ತತ್ತ್ವಚಿಂತನೆಯಲ್ಲಿ ವ್ಯಾವಹಾರಿಕ ಒಪ್ಪಂದಕ್ಕಿಂತ ಪ್ರಾಮಾಣಿಕ ಮತಭೇದವು ಹೆಚ್ಚು ಸಹಕಾರಿಯೆಂದು ತೋರುತ್ತದೆ. ಇಂಥ ಮತಭೇದದ ಉದ್ದೇಶ ಮತ್ತು ಅರ್ಥವನ್ನು ಗ್ರಹಿಸಿದವರಿಗೆ ಲೌಕಿಕ ಸುಹೃದ್ಭಾವಕ್ಕೆ ಯಾವ ಆತಂಕವೂ ಉಂಟಾಗುವದಿಲ್ಲ. ಈ ದೃಷ್ಟಿಯಿಂದ 'ಪರಿಶಿಷ್ಟ'ದಲ್ಲಿ ಶ್ರೀ ಡಿ.ವಿ.ಜಿ. ಯವರ ಮತತ್ರಯಸಾಮರಸ್ಯದ ವಿಚಾರಗಳು ಪುನರ್ವಿಚಾರಕ್ಕೆ ಯೋಗ್ಯವಾಗಿವೆ. ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತಗಳು ಸ್ವತಾ ಸಮರ್ಪಣೆ, ಸ್ವತಾ ಸಹಭಾಗ ಮತ್ತು ಸ್ವತಾ ವಿಲಯನದ ಮೂರು ಪ್ರಕಾರಗಳನ್ನೇ ತೋರಿಸುತ್ತವೆನ್ನುವದು ಹೆಚ್ಚು ಯೋಗ್ಯವಾಗುವದು. ಭಾವನಾತ್ಮಕ ಹಂತಗಳೆಂದು ತೋರಿಸಲಾದ ಅಂಶ ಗಳನ್ನು ವೈಚಾರಿಕವಾಗಿ ವಿಶ್ಲೇಷಿಸಿ ನೋಡಲಾಗಿ ಪ್ರಕಾರಗಳೆಂಬುದು ಮನ ದಟ್ಟಾಗುವದು. ಇದರ ಮಥಿತಾರ್ಥವು ಏನೇ ಇದ್ದರೂ ಡಿ.ವಿ.ಜಿ.ಯವರು ಇಲ್ಲಿ ಮಾಡಿದ ವಿಶ್ಲೇಷಣೆಯು ಮನನೀಯವಾಗಿರುವದು.

ಜೀವಸಂಸ್ಕಾರ

'ಜೀವನಧರ್ಮಯೋಗ'ದ ಸಾರವನ್ನು ಡಿ.ವಿ.ಜಿ.ಯವರು ಹೀಗೆ ಸಂಗ್ರಹಿಸಿ ದ್ದಾರೆ: ಗೀತೋಪದೇಶದ ಸಾರವನ್ನು ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ, ಆ ಮಾತು ಜೀವಸಂಸ್ಕಾರ. ಜೀವವನ್ನು ಪರಿಶೋಧಿಸುವದು ಮತ್ತು ಉತ್ತಮ

ಭವಿಷ್ಯವು ಸಾಧ್ಯ ಎಂಬುದು ನಮಗೆ ಇಲ್ಲಿ ಮೂಲ ಪ್ರತಿಜ್ಞೆ (ಪೋಸ್ಟುಲೇಟ್). ಉತ್ತಮ ಗತಿ ಉಂಟಾಗಬೇಕಾದರೆ ಅದಕ್ಕೆ ಕೆಲವು ಸಂಸ್ಕಾರಗಳ ಸಮೂಹವೇ ಧರ್ಮ. ಧರ್ಮಗಳು ಎರಡು ವಿಧವಾಗಿರುತ್ತವೆ. ಒಂದು ಸರ್ವಸಾಮಾನ್ಯ ಪ್ರಕಾರ. ಇನ್ನೊಂದು ಜೀವ ಪ್ರತ್ಯೇಕ ಪ್ರಕಾರ, ಸತ್ಯ, ಶೌಚ, ಅಹಿಂಸೆ ಇವು ಎಲ್ಲರಿಗೂ ಅನ್ವಯಿಸತಕ್ಕ ಧರ್ಮಗಳು. ಇದರ ಜೊತೆಗೆ ಸ್ವಧರ್ಮಗಳು. ಗೀತಾಶಾಸ್ತ್ರದ ಮೇರೆಗೆ ಧರ್ಮಗಳು ಹತ್ತು ಅಂಶಗಳುಳ್ಳವು : 1) ಆತ್ಮಪಾರಮ್ಯದ ಅಂಗೀಕಾರ. 2) ಈಶ್ವರಾಧಿಕಾರದ ಅಂಗೀಕಾರ. 3) ಧರ್ಮಾಂಗೀಕಾರ. 4) ಭೋಗೇಚ್ಛಾ ಪರಿಮಿತಿ. 5) ಲೋಕಸಂಸ್ಥಿತಿ ಕರ್ತವ್ಯತೆ. 6) ಆತ್ಮೌಪಮ್ಯ ನೀತಿ. 7) ನಿತ್ಯ ಜೀವನ ಸಂಸ್ಕಾರ. 8) ತತ್ತ್ವಚಿಂತನಾಭ್ಯಾಸ. 9) ಶರಣಾಗತಿ. 10) ಭೋಗಕ್ಕಿಂತ ಶಾಂತಿಯು ಉತ್ಕೃಷ್ಟತೆ. ಈ ದಶನಿಷ್ಠೆಗಳೇ ಜೀವಸಂಸ್ಕಾರ ಮತ್ತು ಜೀವೋನ್ನತಿ. ಪರಮಾತ್ಮ ಸಂದರ್ಶನಕ್ಕೆ ಬೇಕಾದ ಪೂರ್ವಸಿದ್ಧತೆ. ಆದುದರಿಂದ ಈ ದಶನಿಷ್ಠೆಗಳನ್ನೊಳಗೊಂಡ ಜೀವನಧರ್ಮಯೋಗವೇ ಗ್ರಾಹ್ಯವೆಂದು ಡಿ.ವಿ.ಜಿ. ತಮ್ಮ ಗ್ರಂಥವನ್ನು ಉಪಸಂಹರಿಸಿದ್ದಾರೆ.

ಮಂಕುತಿಮ್ಮನ ಕಗ್ಗದಲ್ಲಿ ತಾತ್ತ್ವಿಕ ನಿಲುವು

ಎಸ್. ರಂಗನಾಥ ಶರ್ಮ

"ಜಗತ್ತಿನಲ್ಲಿ ಪ್ರತಿಯೊಂದು ಪದಾರ್ಥಕ್ಕೂ ಎರಡು ರೂಪಗಳಿರುತ್ತವೆ. ಒಂದು ಇರುವ ರೂಪ, ಇನ್ನೊಂದು ತೋರುವ ರೂಪ. ಇರುವ ರೂಪವು ತತ್ತ್ವ; ತೋರುವ ರೂಪವು ಪ್ರತೀತಿ." "ಇರುವ ರೂಪ ಸತ್ಯ; ತೋರುವ ರೂಪ ಅಸತ್ಯ. ಸತ್ಯಾಸತ್ಯ ವಿವೇಚನೆಯೇ ದರ್ಶನ. ಈ ದೃಷ್ಟಿಯಿಂದ ಮಂಕುತಿಮ್ಮನ ಕಗ್ಗ ಪೂರ್ತಿಯಾಗಿ ಒಂದು ತತ್ತ್ವಗ್ರಂಥ. ಇದೊಂದು ಸತ್ಯಶೋಧನೆ. ಆರಂಭದಲ್ಲಿ ಹಾಕಿಕೊಂಡಿರುವ ಪ್ರಶ್ನೆಗಳು ಗ್ರಂಥದ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ"

"ಏನು ಜೀವನದರ್ಥ ? ಏನು ಪ್ರಪಂಚಾರ್ಥ ?
ಏನು ಜೀವ ಪ್ರಪಂಚಗಳ ಸಂಬಂಧ ?
ದೇವರೆಂಬುವದೇನು ಕಗ್ಗತ್ತಲೆಯು ಗವಿಯೆ ?
ಬದುಕಿಗಾರ್ ನಾಯಕರು ? ಏಕನೊ ಅನೇಕರೋ ?
ವಿಧಿಯೊ ಪೌರುಷವೋ ಧರುಮವೊ ಅಂಧಬಲವೋ ?"

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು, "ಭಾರತದ ಪುರಾತನ ಋಷಿಗಳು ಸಾಕಷ್ಟು ಚಿಂತನೆಗಳನ್ನು ನಡೆಸಿದ್ದಾರೆ. ಪಾಶ್ಚಾತ್ಯ ದಾರ್ಶನಿಕರೂ ಪ್ರಯತ್ನಪಟ್ಟಿದ್ದಾರೆ. ಉಭಯರ ಚಿಂತನಪ್ರಕಾರಗಳನ್ನೂ ಮಂಥನ ಮಾಡಿ, ಸ್ವಾನುಭವಗಳಿಂದಲೂ ಲೋಕವೀಕ್ಷಣೆಗಳಿಂದಲೂ ವಿಚಾರಮಾಡಿ" ಡಿ.ವಿ.ಜಿ.ಯವರು ತಮ್ಮ ತಾತ್ತ್ವಿಕ ನಿಲುವನ್ನು ಪದ್ಯಕಾವ್ಯವಾಗಿ ಪ್ರಕಾಶಪಡಿಸಿದ್ದಾರೆ. "ಮಂಕುತಿಮ್ಮನ ಕಗ್ಗ ಅನುಭವಾಮೃತಸಿಂಧು: ಅದರ ಒಂದೊಂದು ಪದ್ಯವೂ ಆ ಸಿಂಧುವಿನ ಒಂದೊಂದು ಬಿಂದು."

ತತ್ತ್ವಗ್ರಂಥ, ದರ್ಶನಗ್ರಂಥ, ಇವೆರಡು ಶಬ್ದಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಪ್ರಯೋಗಿಸುತ್ತಾರೆ. ಆದರೆ ತತ್ತ್ವ, ದರ್ಶನ—ಈ ಶಬ್ದಗಳಿಗೆ ಅರ್ಥಭೇದ ಉಂಟು. ತತ್ತ್ವವು ತಿಳಿಯಲರ್ಹವಾದ ಅಥವಾ ತಿಳಿಯಬೇಕಾದ ಪ್ರಮೇಯ ವಸ್ತು. ಆ ವಸ್ತುವಿನ ಜ್ಞಾನ ಮತ್ತು ಜ್ಞಾನೋಪಾಯ ದರ್ಶನವೆನಿಸುತ್ತದೆ. ಷಡ್ದರ್ಶನಗಳು ಪ್ರಖ್ಯಾತವಾಗಿದ್ದರೂ ಅವುಗಳಲ್ಲಿ ವೇದಾಂತವೇ ಆದರಣೀಯವಾದ ಮುಖ್ಯ ದರ್ಶನವೆನಿಸಿದೆ. ಇದು ಸಾಂಖ್ಯಾದಿ ದರ್ಶನಗಳಲ್ಲಿ ಪ್ರತಿ

ಪಾದಿತವಾದ ತತ್ತ್ವಗಳನ್ನು ವಿಚಾರಮಾಡಿ ಕೆಲವನ್ನು ಸ್ವೀಕರಿಸಿದೆ. ವಿಚಾರ ಮಾರ್ಗದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಬಹುಶಃ ಪುರಾತನರ ತತ್ತ್ವವಿಚಾರವೆಲ್ಲವೂ ವೇದಾಂತದಲ್ಲಿ ಮುಕ್ತಾಯಗೊಳ್ಳುತ್ತದೆ.

ತತ್ತ್ವವೆಂದರೆ ಏನು? ಡಿ.ವಿ.ಜಿ.ಯವರು ತಮ್ಮ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ'ದಲ್ಲಿ ಈ ಪದವನ್ನು ಹೀಗೆ ವಿಶ್ಲೇಷಿಸಿದ್ದಾರೆ: "ತತ್ತ್ವವೆಂದರೆ (ತತ್ತ್ವ) ಒಂದಾನೊಂದು ಪದಾರ್ಥವು 'ಅದಾಗಿರುವ ಸ್ಥಿತಿ.' ಯಾವ ಒಂದು ಗುಣಾತಿಶಯದಿಂದ ಅಥವಾ ಲಕ್ಷಣದಿಂದ ಒಂದು ಪದಾರ್ಥವು ಬೇರೊಂದು ಪದಾರ್ಥವೆನಿಸದೆ ಆ ಪದಾರ್ಥವೇ ಆಗಿರುತ್ತದೆಯೋ ಆ ಗುಣವಿಶೇಷವು ಅಥವಾ ಆ ಲಕ್ಷಣವು ಆ ಪದಾರ್ಥದ ತತ್ತ್ವ. ವಸ್ತುವಿನ ಯಥಾರ್ಥ ರೂಪವೇ, ಅದರ ನೈಜ ಸ್ವರೂಪವೇ ಅದರ ತತ್ತ್ವ. ಜಗತ್ತಿನಲ್ಲಿ ಪ್ರತಿಯೊಂದು ಪದಾರ್ಥಕ್ಕೂ ಎರಡು ರೂಪಗಳಿರುತ್ತವೆ. ಒಂದು ಇರುವ ರೂಪ, ಇನ್ನೊಂದು ತೋರುವ ರೂಪ. ಇರುವ ರೂಪವು ತತ್ತ್ವ; ತೋರುವ ರೂಪವು ಪ್ರತೀತಿ." (ಪುಟ 141.)

ಇರುವ ರೂಪ ಸತ್ಯ. ತೋರುವ ರೂಪ ಅಸತ್ಯ. ಸತ್ಯಾಸತ್ಯ ವಿವೇಚನೆಯೇ ದರ್ಶನ. ಈ ದೃಷ್ಟಿಯಿಂದ ಮಂಕುತಿಮ್ಮನ ಕಗ್ಗ ಪೂರ್ತಿಯಾಗಿ ಒಂದು ತತ್ತ್ವ ಗ್ರಂಥ. ಇದೊಂದು ಸತ್ಯಶೋಧನೆ. ಆರಂಭದಲ್ಲಿ ಹಾಕಿಕೊಂಡಿರುವ ಪ್ರಶ್ನೆಗಳು ಗ್ರಂಥದ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ.

ಏನು ಜೀವನದರ್ಥ? ಏನು ಪ್ರಪಂಚಾರ್ಥ?
ಏನು ಜೀವ ಪ್ರಪಂಚಗಳ ಸಂಬಂಧ?
ದೇವರೆಂಬುವದೇನು ಕಗ್ಗತ್ತಲೆಯ ಗವಿಯೆ?
ಬದುಕಿಗಾರ್ ನಾಯಕರು? ಏಕನೊ ಅನೇಕರೋ?
ವಿಧಿಯೊ ಪೌರುಷವೊ ಧರುಮವೊ ಅಂಧಬಲವೋ?॥

ಇವು ವಿಚಾರಶೀಲರ ಅಂತರಂಗದಲ್ಲಿ ಹುಟ್ಟುವ ಪ್ರಶ್ನೆಗಳು. ಇವು ಸರ್ವ ಕಾಲದಲ್ಲಿಯೂ ಜಗತ್ತಿನ ಮೇಧಾವಿಗಳನ್ನು ಕಾಡಿಸುತ್ತಾ ಬಂದಿವೆ. ಇವುಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಭಾರತದ ಪುರಾತನ ಋಷಿಗಳು ಸಾಕಷ್ಟು ಚಿಂತನಗಳನ್ನು ನಡೆಸಿದ್ದಾರೆ. ಪಾಶ್ಚಾತ್ಯ ದಾರ್ಶನಿಕರೂ ಪ್ರಯತ್ನಿಸಿದ್ದಾರೆ. ಉಭಯರ ಚಿಂತನ ಪ್ರಕಾರಗಳನ್ನೂ ಮಂಥನ ಮಾಡಿ, ಸ್ವಾನುಭವಗಳಿಂದಲೂ ಲೋಕವೀಕ್ಷಣೆಗಳಿಂದಲೂ ವಿಚಾರ ಮಾಡಿ, ಡಿ.ವಿ.ಜಿ.ಯವರು ತಮ್ಮ ತೀರ್ಮಾನಗಳನ್ನು ಪದ್ಯಗಳೆಂಬ ಕಲ್ಲುಸಕ್ಕರೆಯ ಹೊಳುಕುಗಳಲ್ಲಿ ನೀಡಿದ್ದಾರೆ. ಮಂಕುತಿಮ್ಮನ ತಮ್ಮ ಮರುಳ ಮುನಿಯನು—

"ನೆನೆನೆನೆಯುತೊಂದೊಂದು ಪದ್ಯವನದೊಮ್ಮೊಮ್ಮೆ
ಅನುಭವಿಸಿ ಚಪ್ಪರಿಸೊ—"

ಎಂದು ಹೇಳಿಯೇ ಇದ್ದಾನೆ.

'ನಾನು–ನಾನು' ಎಂದುಕೊಳ್ಳುತಕ್ಕವನೊಬ್ಬ ಪ್ರತಿಯೊಬ್ಬ ಮಾನವನಲ್ಲಿಯೂ ಮಾನವೇತರ ಪ್ರಾಣಿಯಲ್ಲಿಯೂ ಸೇರಿಕೊಂಡಿದ್ದಾನೆ. ಈತನು ಕಣ್ಣಿಗೆ ಕಾಣದಿದ್ದರೂ ಕೈಗೆ ಸಿಗದಿದ್ದರೂ 'ಅವನು ಇಲ್ಲ' ಎನ್ನುವಂತಿಲ್ಲ. ಈತನ ಸುತ್ತಮುತ್ತಲೂ ಅದ್ಭುತವಾದ ಜಗತ್ತು ಕಾಣುತ್ತಿದೆ. ಅವನ್ನೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ಈ 'ನಾನು' ಮತ್ತು 'ಜಗತ್ತು'—ಇವುಗಳಿಗೆ ಹಿಂದೆ ಹೇಳಿದ ರೀತಿಯಲ್ಲಿ ತತ್ತ್ವ ಯಾವುದು ? ಪ್ರತೀತಿ ಯಾವುದು ? ಇವುಗಳ ಸಂಬಂಧ, ಹೊಂದಾಣಿಕೆಗಳೆಂತು ? ಇವೆಲ್ಲವುಗಳಿಗೂ ನಿಯಾಮಕನಾದ ಒಬ್ಬ ಪ್ರಭು (ಈಶ್ವರ) ಇದ್ದಾನೆಯೆ ? ಇದ್ದರೆ ಆತನ ತತ್ತ್ವ ಪ್ರತೀತಿಗಳು ಯಾವುವು ? ಇವು ಎಲ್ಲ ದಾರ್ಶನಿಕರಿಗೂ ಚಿಂತನೀಯ ವಿಷಯಗಳು. ಈ ವಿಚಾರಸೌಧಗಳನ್ನು ಯಾವ ತಳಹದಿಯ ಮೇಲೆ ಮಂಕುತಿಮ್ಮನು ನಿರ್ಮಿಸಿದ್ದಾನೆಂದು ಪರಿಶೀಲಿಸಿದರೆ, ನಮಗೆ ಆತನ ತಾತ್ತ್ವಿಕ ನಿಲುವು ಗೊತ್ತಾಗುತ್ತದೆ.

ಈಶ್ವರ

ವಿಶ್ವವನ್ನು ನಿಯಮಿಸತಕ್ಕ ಈಶ್ವರನಿದ್ದಾನೆ. ದೇವರು ಎಂಬುದು ಸಾಮಾನ್ಯವಾದ ಶಬ್ದ. ಅದೊಂದು ಮಹತ್ತರವಾದ ಚೈತನ್ಯ. ಅದೇನೂ ಕಣ್ಣಿಗೆ ಕಾಣಿಸತಕ್ಕದ್ದಲ್ಲ. ಸತ್–ಚಿತ್–ಆನಂದ ರೂಪವಾದದ್ದು ಅದು. 'ನಮಗೆ ತೋರ್ಪ ಒಲವು ಚೆಲವುಗಳೆಲ್ಲ ಪರಿಪೂರ್ಣ ಸುಖ ಸತ್ತ್ವಸಾಗರದ ತೆರೆಗಳ್'—ಯುಕ್ತಿವಾದಕ್ಕೆ ಈಶ್ವರನು ನಿಲುಕತಕ್ಕವನಲ್ಲ. 'ಸುಳಿವುದಾಗೀಗಳದು ಸೂಕ್ಷ್ಮಾನುಭವಗಳಲಿ'. 'ಮನಸಿನನುಭವದಿ ಕಾಣುವನು'. 'ವಸ್ತುಸಾಕ್ಷಾತ್ಕಾರವಂತರೀಕ್ಷಣೆಯಿಂದ ಶಾಸ್ತ್ರಿತನದಿಂದಲ್ಲ.' ಈಶ್ವರನನ್ನು ಸತ್ ಅಥವಾ ಬ್ರಹ್ಮ ಎಂಬ ಶಬ್ದಗಳಿಂದ ವ್ಯವಹರಿಸಬಹುದು. ಅವೆರಡು ಇದ್ದುದರಲ್ಲಿ ಉತ್ತಮ ಶಬ್ದಗಳು. 'ಅದು ಅನಂತ, ಶುದ್ಧಸತ್ತಾಮಾತ್ರ'. ಸೂರ್ಯನಿರುವುದರಿಂದ ದಿಕ್ಕಾಲಗಳ ಗಣನೆ ಸಾಧ್ಯ. ಹಾಗೆಯೇ ಬ್ರಹ್ಮವಸ್ತು ಇರುವುದರಿಂದಲೇ ಜೀವ–ಜಗತ್ತು ಎಂಬ ವ್ಯವಹಾರ ಸಾಧ್ಯವಾಗಿದೆ. ಈ ಬ್ರಹ್ಮವಸ್ತುವೇ ನಿಯಾಮಕನಾದ ಅವಸ್ಥೆಯಲ್ಲಿ ಈಶ್ವರನೆಂದೂ, ಸರ್ವವ್ಯಾಪಿಯಾದ ಸ್ಥಿತಿಯಲ್ಲಿ ಪರಮಾತ್ಮನೆಂದೂ ಸೃಷ್ಟಿ. ಸ್ಥಿತಿ. ಸಂಹಾರಗಳ ಕಾರ್ಯ ನಡೆಸುವಾಗ ಕ್ರಮವಾಗಿ ಬ್ರಹ್ಮ. ವಿಷ್ಣು. ರುದ್ರ—ಎಂದೂ ಹೇಳಿಸಿಕೊಳ್ಳುತ್ತಿದೆ. ಭೌತವಿಜ್ಞಾನಗಳು ಈಶ್ವರನ ನೆಲೆಯನ್ನು ಮುಟ್ಟಲಾರವು. ಜಾತಿಭೇದಗಳೂ ಆತನಿಗಿಲ್ಲ.

> ಭೌತವಿಜ್ಞಾನ ವಿವರಗಳಿನೇಸಾತ್ಮಂಗೆ
> ಪ್ರೇತಪ್ರಯಾಣ ಕಥೆಯೆಂತಿರ್ದೊಡೇನು ?
> ಜಾತಿ ನೀತಿ ಸಮಾಜವರ್ಗಭೇದದಿನೇನು ?
> ಘಾತಿಯಿಲ್ಲಾತ್ಮಂಗೆ—ಮಂಕುತಿಮ್ಮ ॥ ೮೯೭

ಮಾನವನು 'ನಾನು' ಎಂಬುದನ್ನೆಂದಿಗೂ ಮರೆಯಲಾರ. ಈ ಭಾವಕ್ಕೆ ಮೂಲವಾದುದೇ ಬ್ರಹ್ಮವಸ್ತು. ಮಾನವನು ಯುಕ್ತಿವಾದಗಳಿಂದ ಈಶ್ವರನನ್ನು

ಎಷ್ಟು ಅಲ್ಲಗಳೆದರೂ ಅವನ ಹೃದಯಾಂತರಾಳದಲ್ಲಿ 'ನಾನು' ಎಂಬುದರ ಮೂಲ ಇದ್ದೇ ಇರುತ್ತದೆ. ಮರದ ಕೊಂಬೆಗಳು ಗಾಳಿಯು ಹೊಡೆತಕ್ಕೆ ಎಷ್ಟೇ ಅಲ್ಲಾಡಿದರೂ ಅದರ ಮೂಲವು ನೆಲದಲ್ಲಿ ಸ್ಥಿರವಾಗಿ ನೆಟ್ಟಿರುತ್ತದೆ. ಆದ್ದರಿಂದಲೇ ವಿಶ್ವದ ಜನತೆ ಒಂದಲ್ಲ ಒಂದು ಹೆಸರಿನಿಂದ ಈಶ್ವರನನ್ನು ನಂಬಿದೆಯೆನ್ನುತ್ತಾನೆ ಮಂಕುತಿಮ್ಮ.

> ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ
> ದೇವ ಸರ್ವೇಶ ಪರಬೊಮ್ಮನೆಂದು ಜನಂ।
> ಆವನಂ ಕಾಣದೊಡಮಳ್ತಿಯಿಂ ನಂಬಿಹುದೊ
> ಆ ವಿಚಿತ್ರಕೆ ನಮಿಸೊ—ಮಂಕುತಿಮ್ಮ ॥ ೧

ಜೀವ

ಬ್ರಹ್ಮಚೈತನ್ಯದ ಒಂದಂಶ ಜೀವವೆನಿಸುತ್ತದೆ. ಡಿ.ವಿ.ಜಿ.ಯವರು ಭಗವದ್ಗೀತಾ ತಾತ್ಪರ್ಯದಲ್ಲಿ ಹೇಳಿರುವ ಮುಂದಿನ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ : "ಆತ್ಮವೆಂಬುದು ಸ್ವರೂಪ ಸ್ಥಿತಿಯಲ್ಲಿ ಚೈತನ್ಯ. ಆ ಚೈತನ್ಯವು ದೇಹಾದಿ ಕರ್ಮಸಾಧನೆಗಳನ್ನು ಧರಿಸಿಕೊಂಡ ಅವಸ್ಥೆಯಲ್ಲಿ 'ಜೀವ'—'ಜೀವಾತ್ಮ'—ಎನ್ನಿಸಿಕೊಳ್ಳುತ್ತದೆ.... ..ಆತ್ಮಕ್ಕೆ ಉಪಾಧಿಯೊಂದು ಸೇರಿದಾಗ ಜೀವವಾಗುತ್ತದೆ...... ನಾನಾ ಕಾರ್ಯಗಳನ್ನು ಮಾಡಲು ಆತ್ಮ ನಾನಾ ವೇಷಗಳನ್ನು ತಾಳುತ್ತದೆ. ಈ ವೇಷಗಳೇ ಉಪಾಧಿಗಳು." (ಪುಟ 283–284). ಇರುವುದು ಬ್ರಹ್ಮವಸ್ತು ಒಂದೇ. ಅದು ತನ್ನ ಶಕ್ತಿ ಮಹಿಮೆಯಿಂದ ದೃಶ್ಯವಾದ ಜಗತ್ತನ್ನು ಸೃಜಿಸಿ. ಮಾಯೆಯಿಂದ ಜೀವನಾಗಿ ವಿಹರಿಸುತ್ತಿದೆ. ಪರಮಾರ್ಥದಲ್ಲಾದರೂ ಬ್ರಹ್ಮವು ಲೋಕದ ಯಾವ ಸಂಬಂಧವೂ ಇಲ್ಲದೆ ನಿರಂಜನವಾಗಿಯೇ ಇರುತ್ತದೆ.

> ಬಹುವಾಗಲೆಳಸಿ ತಾನೊಬ್ಬಂಟಿ ಬೊಮ್ಮ ನಿಜ-
> ಮಹಿಮೆಯಿಂ ಸೃಜಿಸಿ ವಿಶ್ವವನಲ್ಲಿ ನೆಲೆಸಿ।
> ವಹಿಸಿ ಜೀವತೆಯ ಮಾಯೆಯ ಸರಸ ವಿರಸದಲ್ಲಿ
> ವಿಹರಿಪನು ನಿರ್ಲಿಪ್ತ—ಮಂಕುತಿಮ್ಮ ॥ ೭೬

ಜೀವವು ದೇಹದ ಯಾವುದೋ ಒಂದು ಅಂಗದಲ್ಲಿ ಅಡಗಿ ಕುಳಿತಿಲ್ಲ. ಆಪಾದಮಸ್ತಕವಾಗಿ ವ್ಯಾಪಿಸಿಕೊಂಡಿರುವ ಚೈತನ್ಯ ಅದು (೧೧೭).

ಜಗತ್ತು

ಬ್ರಹ್ಮವಸ್ತುವಿನ ದೃಶ್ಯ ಅವಸ್ಥೆ ಜಗತ್ತು. ಇದೇ ಪ್ರಕೃತಿ. ನಮ್ಮ ಇಂದ್ರಿಯಗಳಿಂದ ಯಾವುದನ್ನು ಅನುಭವಿಸುವುದಕ್ಕಾಗುತ್ತದೆಯೋ ಯಾವುದನ್ನು ಬುದ್ಧಿಯಿಂದ ಊಹಿಸುವುದಕ್ಕೆ ಆಗುತ್ತದೆಯೋ ಅದೆಲ್ಲವೂ ಪ್ರಕೃತಿಯ ಪ್ರಪಂಚಕ್ಕೆ ಸೇರುತ್ತದೆ. ಇದು ಪರಮೇಶ್ವರನ ವ್ಯಕ್ತರೂಪ. ಈ ಪ್ರಕೃತಿಯಲ್ಲಿ ಅಗಾಧವಾದ ಸಾಮರ್ಥ್ಯ ಅಡಗಿದೆ. ಅದರ ಒಂದಂಶವನ್ನು ಮಾತ್ರ ಮಾನವನು ತಿಳಿದಾನು ;

ಅನುಭವಿಸಿಯಾನು. ಅದನ್ನು ಪೂರ್ತಿಯಾಗಿ ತಿಳಿದೆ—ಎನ್ನುವುದು ಅಸಂಭವ. ಅಚಿಂತ್ಯರಚನಾ ರೂಪವಾದದ್ದು ಜಗತ್ತು, ಪರಮೇಶ್ವರನ ಕೃತಿಕೌಶಲ ಅದು ಮರ್ತ್ಯನಾದ ಮಾನವ ಅವನ್ನರಿಯುವುದು ಅಶಕ್ಯ. 'ಮರ್ತ್ಯನರನು, ಅರಿತೆ ನಾನೆನ್ನುವಂತಾಗೆ ಕೃತಿಕೌಶಲದ ಹಿರಿಮೆಗದು ಕುಂದಲ್ತೆ ?' (೩೫). ಜಗತ್ತನ್ನು ಬ್ರಹ್ಮನೇಕೆ ಸೃಷ್ಟಿಸಿದ ?—ಎಂಬ ಪ್ರಶ್ನೆಗೆ 'ಲೋಕವತ್ತು ಲೀಲಾಕೈವಲ್ಯಂ' ಎಂದು ಬ್ರಹ್ಮಸೂತ್ರಕಾರರು ಉತ್ತರವನ್ನು ಹೇಳಿದ್ದಾರೆ. ಲೀಲೆಗಾಗಿ—ಎಂಬುದಿಷ್ಟೆ ಉತ್ತರ. ಮಂಕುತಿಮ್ಮನು ಹೇಳುವುದೂ ಅದನ್ನೇ: 'ನೃತ್ಯವೋ ಬ್ರಹ್ಮನಟರಾಜನದು ಜಗವೆಲ್ಲ'. ತಿಮ್ಮನ ತಮ್ಮ ಮರುಳನು ಹೇಳುವುದೂ ಅದನ್ನೇ :

ಜಗವೆಲ್ಲ ಶಿವಲೀಲೆ ಭಗವದರ್ಥದ ಲೀಲೆ
ಖಗಲೀಲೆ ಮೃಗಲೀಲೆ ಕ್ರಿಮಿಕೀಟಲೀಲೆ ।
ನಗನದೀನದಲೀಲೆ ಮೇಲೆ ಮನುಜರ ಲೀಲೆ
ಅಗಣಿತದ ಲೀಲೆಯದು—ಮರುಳಮುನಿಯ ॥ ೯೮

ಅದ್ವಿತೀಯನಾದ ಪರಮೇಶ್ವರ ತನ್ನ ಮಾಯಾಶಕ್ತಿಯಿಂದ ಜಗತ್ತನ್ನು ನಿರ್ಮಿಸಿದ. ಏಕಾಕಿಯಾಗಿದ್ದ ಅವನು ಬಹುವಾಗಬೇಕೆಂದು ಬಯಸಿದ. ಆ ಬಯಕೆಯೇ ಮಾಯೆ (೭೪).

ಇವಿಷ್ಟು ಸೃಷ್ಟಿಯಂತ್ರದ ಹಿನ್ನೆಲೆ. ಇವೆಲ್ಲ ಉಪನಿಷತ್ತುಗಳಲ್ಲಿ ಭಗವದ್ಗೀತೆಯಲ್ಲಿ ಪ್ರತಿಪಾದಿತವಾದದ್ದು. ಈಶ್ವರ, ಜೀವ, ಜಗತ್ತು—ಇವುಗಳನ್ನು ಕುರಿತು ನಮ್ಮ ಪುರಾತನ ಋಷಿಗಳು ನೀಡಿದ ಬೆಳಕಿಗಿಂತ ಹೆಚ್ಚಿನದನ್ನೇನೂ ಆಧುನಿಕ ದಾರ್ಶನಿಕರು ತೋರಿಸಿಲ್ಲ. ಪಾಶ್ಚಾತ್ಯ ದಾರ್ಶನಿಕರ ವಿಚಾರಸರಣಿ ಇದಕ್ಕೆ ಮುಂದೆ ಹೋಗಿಲ್ಲ. ಇಂದ್ರಿಯಗಳ ಶಕ್ತಿ ಮತ್ತು ಮನಸ್ಸಿನ ಶಕ್ತಿ ಪರಿಮಿತ. ಇಂದ್ರಿಯಾತೀತವೂ ಮನಸ್ಸಿಗೆ ಅಗಮ್ಯವೂ ಆದ ವಸ್ತುವನ್ನು ಶೋಧಿಸಲು ಹೊರಟಾಗ ಎಂತಹ ಧೀಮಂತನ ವಿಚಾರಶಕ್ತಿಯೂ ಕುಂಠಿತವಾಗುತ್ತದೆ. ಆದ್ದರಿಂದ ಪ್ರಾಚೀನ ಋಷಿಗಳ ವಚನಗಳನ್ನು ಅನನ್ಯಶರಣಾಗಿ ನಂಬಬೇಕೆಂದು ಮಂಕುತಿಮ್ಮನು ತಿಳಿದಿದ್ದಾನೆ. ಈ ನಿಲುವುಗಳೇ ಜೀವನಸಮುದ್ರದಲ್ಲಿ ಧುಮುಕಿದ ಈಜುಗಾರನಿಗೆ ಅವಲಂಬನ. ಹಸಿವಾದರೆ ಆಹಾರವನ್ನೂ, ಬಾಯಾರಿದರೆ ನೀರನ್ನೂ ಅವನು ಮೇಲ್ಕಂಡ ಮೂರು ಪಾತ್ರೆಗಳಿಂದ ತೆಗೆದುಕೊಳ್ಳಬೇಕು. ತಿಮ್ಮನು ಈ ಮೂರು ನಿಲುವುಗಳಲ್ಲಿ ನೆಲೆನಿಂತು ಮುಂದಿನ ಕೆಲವು ನಿಲುವುಗಳನ್ನು ತೋರಿಸುತ್ತಾನೆ. ಅವು ದೂರದಾರಿಯ ಈಜುಗಾರನಿಗೆ ವಿಶ್ರಾಂತಿಸ್ಥಾನಗಳು.

ಈ ಜಗತ್ತು ಈಶ್ವರನ ಒಂದು ರಂಗಸ್ಥಳ. ಮಾನವರೂ ಎಲ್ಲ ಜೀವಿಗಳೂ ಪಾತ್ರಧಾರಿಗಳು. ಈಶ್ವರನು ಸೂತ್ರಧಾರ. ಅವನ ಇಚ್ಛೆಯಂತೆ, ಅವನಿಗೆ ಮೆಚ್ಚುಗೆಯಾಗುವಂತೆ ಅಭಿನಯಿಸುವುದು ಮಾನವರ ಕರ್ತವ್ಯ. ಗಿಡಮರಗಳೂ ಪಶುಪಕ್ಷಿ ಕ್ರಿಮಿಗಳೂ ತಮಗೆ ವಹಿಸಿದ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತವೆ.

ಸೂತ್ರಧಾರನ ನಿರ್ದೇಶನವನ್ನು ಅವು ಅತಿಕ್ರಮಿಸುವುದೇ ಇಲ್ಲ. ಮೊಂಡತನವನ್ನೂ ಪುಂಡತನವನ್ನೂ ಮೆರೆಸತಕ್ಕವನು ಮನುಷ್ಯನೊಬ್ಬನೇ. ಸ್ವಾಮಿಯ ಅಪೇಕ್ಷೆಯಂತೆ ನಡೆದರೆ ಸೇವಕನಿಗೆ ಶ್ರೇಯಸ್ಸು. ವಿಚಿತ್ರವೇನೆಂದರೆ, ಈ ನಾಟಕಕ್ಕೆ ಕೊನೆ ಮೊದಲಿಲ್ಲ, ನಿರಂತರವಾಗಿ ಜೀವನ ನಾಟಕ ನಡೆಯುತ್ತಲೇ ಇರುತ್ತದೆ. ಈ ನಾಟಕವನ್ನು ಕುಳಿತು ಸುಮ್ಮನೆ ನೋಡುತ್ತಿರುವ ಪ್ರೇಕ್ಷಕರು ಯಾರೂ ಇಲ್ಲ. ಪ್ರೇಕ್ಷಕರೂ ಪಾತ್ರಧಾರಿಗಳೇ ಆಗಿದ್ದಾರೆ !

ನಾಟಕವ ನೋಡು ಬ್ರಹ್ಮಾಂಡರಂಗಸ್ಥಲದಿ
ಕೋಟಿ ನಟರಾಂತಿಹರು ಚಿತ್ರಪಾತ್ರಗಳ ।
ಆಟಕ್ಕೆ ಕಡೆಯಿಲ್ಲ ಮೊದಲಿಲ್ಲ ಕಡೆಯಿಲ್ಲ
ನೋಟಕರು ಮಾಟಕರೆ—ಮಂಕುತಿಮ್ಮ ॥ ೨೫೪

ಸಂಸಾರವು ನಾಟಕವೆಂಬ ನಂಬಿಕೆ ದೃಢವಾದಷ್ಟು ನಮ್ಮ ಮನಸ್ಸು ಹಗುರವಾಗುತ್ತದೆ. ಸಂಸಾರದ ಎಲ್ಲ ಕಷ್ಟನಷ್ಟಗಳನ್ನೂ ಎಡರುತೊಡರುಗಳನ್ನೂ ಲೀಲೆಯಿಂದ (Sportive) ಸ್ವೀಕರಿಸಿ ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಶೋಕಸಂದರ್ಭಗಳನ್ನು ಸಂತೃಪ್ತಿಯಿಂದಲೇ ಅಂಗೀಕರಿಸುವ ಮನೋಭಾವ ಬಲಿಯುತ್ತದೆ. ನಾಟಕದಲ್ಲಿ ಪಾತ್ರಧಾರಿಯು ಯಾವ ಪಾತ್ರಗಳನ್ನಿತ್ತರೂ ಅಭಿನಯಿಸಬಲ್ಲ. ಹರಿಶ್ಚಂದ್ರನಾದರೂ ಸರಿಯೆ, ಚಂದ್ರಮತಿಯಾದರೂ ಸರಿಯೆ, ಧರ್ಮರಾಯನಾದರೂ ಸರಿಯೆ, ದ್ರೌಪದಿಯಾದರೂ ಸರಿಯೆ—ನಟ ನಟಿಯರು ಅವರಂತೆ ಅಭಿನಯಿಸಲು ಒಪ್ಪದಿರುವುದಿಲ್ಲ. ಒಪ್ಪುವುದೇ ಉತ್ತಮ ನಟ ನಟಿಯರ ಲಕ್ಷಣ.

ಆದರೆ ಕೆಲವರಿಗೆ ಸುಖಾನುಭವದ ಪಾತ್ರಗಳನ್ನೂ ಕೆಲವರಿಗೆ ದುಃಖಾನುಭವದ ಪಾತ್ರಗಳನ್ನೂ ಈಶ್ವರನು ಏಕೆ ಕೊಡುತ್ತಾನೆ ? ಆತನು ಪಕ್ಷಪಾತಿಯಾಗುವುದಿಲ್ಲವೆ ? ನಮ್ಮ ಇಚ್ಛೆಯಂತೆ ಪಾತ್ರವನ್ನು ಬದಲಿಸುವುದಕ್ಕೆ ಆಗುವುದಿಲ್ಲವೆ ? ಎಂಬ ಪ್ರಶ್ನೆಗಳು ಹುಟ್ಟಬಹುದು. ಈ ಪ್ರಶ್ನೆಗಳಿಗೂ ನಾಟಕದೃಷ್ಟಾಂತದಿಂದಲೇ ಉತ್ತರವನ್ನೂ ಕೊಡಬಹುದು. ನಾಟಕ ಕಂಪನಿಯ ಸ್ವಾಮಿ ಯಾವ ಆಧಾರದ ಮೇಲೆ ನಟ ನಟಿಯರಿಗೆ ಪಾತ್ರಗಳನ್ನು ಹಂಚುತ್ತಾನೆ ? ಅವನು ರಾಮನ ಪಾತ್ರವನ್ನು ರಾವಣನ ಪಾತ್ರಧಾರಿಗೆ ಕೊಡುವುದಿಲ್ಲ. ಭೀಮನ ಪಾತ್ರಕ್ಕೆ ಒಬ್ಬ, ಧರ್ಮರಾಯನ ಪಾತ್ರಕ್ಕೆ ಒಬ್ಬ ಎಂದು ಗೊತ್ತುಮಾಡಿರುತ್ತಾನೆ. ಪುರುಷಪಾತ್ರವನ್ನು ಸ್ತ್ರೀಗೆ ವಹಿಸುವುದಿಲ್ಲ ; ಸ್ತ್ರೀಪಾತ್ರವನ್ನು ಪುರುಷನಿಗೆ ವಹಿಸುವುದಿಲ್ಲ. ಆಯಾ ಪಾತ್ರಧಾರಿಗಳ ಅರ್ಹತೆಯೇ ಹಾಗೆ ನಿರ್ಧರಿಸುವುದಕ್ಕೆ ಕಾರಣ. ಅಂತೆಯೇ ಈಶ್ವರನ ನಾಟಕದಲ್ಲಿಯೂ ಅರ್ಹತೆಯೇ ವ್ಯವಸ್ಥಾಪಕವಾಗುತ್ತದೆ. ಆದ್ದರಿಂದ ಕರ್ಮಸಿದ್ಧಾಂತಕ್ಕೆ ಬರುತ್ತಾನೆ ತಿಮ್ಮ. ಪುಣ್ಯಕರ್ಮಕ್ಕೆ ಫಲವಾಗಿ ಸುಖ, ಪಾಪಕರ್ಮಕ್ಕೆ ಫಲವಾಗಿ ದುಃಖ—ಹೀಗೆ ಕರ್ಮಸಿದ್ಧಾಂತವನ್ನೊಪ್ಪಿದೊಡನೆ, ಪೂರ್ವಜನ್ಮ—ಪ್ರಾರಬ್ಧಕರ್ಮ ಮುಂತಾದವನ್ನು ಅವಶ್ಯ ಒಪ್ಪಲೇಬೇಕಾಗಿಬರುತ್ತದೆ. ಕಾರ್ಯಕಾರಣವಾದದಲ್ಲಿ ಇದು ಅನಿವಾರ್ಯವಾದ ಸಂಗತಿ. ಸುಖ, ಸಂಪತ್ತು, ಅಧಿಕಾರ,

ಕೀರ್ತಿ, ಆರೋಗ್ಯಗಳಿಗೂ ದುಃಖ, ದಾರಿದ್ರ್ಯ, ದಾಸ್ಯ, ಅಪಕೀರ್ತಿ, ಅನಾರೋಗ್ಯ ಗಳಿಗೂ ಕಾರಣವೇನು ? ನಿಷ್ಕಾರಣವಾಗಿ ಯಾವುದೂ ಸಂಭವಿಸುವುದಿಲ್ಲವೆನ್ನು ವುದು ವಿಜ್ಞಾನಿಗೂ ಯುಕ್ತಿವಾದಿಗೂ ಸಂಮತವೇ. ಕಾರಣವಿಮರ್ಶೆ ಮಾಡುತ್ತ ಹೊರಟಾಗ ಕರ್ಮಸಿದ್ಧಾಂತದ ನೆಲೆಯನ್ನಾಶ್ರಯಿಸದೆ ಬೇರೆ ಗತಿಯೇ ಉಳಿಯು- ವುದಿಲ್ಲ.

ಮನುಷ್ಯನಿಗೆ ಕಷ್ಟ ಬರುತ್ತದೆ, ನಿಜ. ಅದು ಪ್ರಾರಬ್ಧದ ಫಲವೆಂದು ಮಾತ್ರ ಹೇಳಲಾಗದು. ಅದು ಬೇರೊಬ್ಬರ ಹಿತಕ್ಕೆ ಕಾರಣವಾಗಿಯೂ ಇರಬಹುದು, ಶ್ರೀರಾಮನ ವನವಾಸ ಸುಗ್ರೀವನ ಹಿತಕ್ಕೆ ಕಾರಣವಾಯಿತು. ಸೀತೆಯ ಕಷ್ಟ ರಾವಣನ ವಧೆಯಲ್ಲಿ ಪರ್ಯವಸಾನವಾಯಿತು. ಹನುಮಂತನಿಗೆ ಶ್ರೀರಾಮನ ಸಖ್ಯವು ಲಭಿಸಿ ಅವನ ಜೀವೋತ್ಕರ್ಷಕ್ಕೆ ನಿಮಿತ್ತವಾದುದು ಶ್ರೀರಾಮ ಸೀತೆಯ ರಿಬ್ಬರ ಕಷ್ಟ. ಸುರುಚಿಯಿಂದ ಧ್ರುವನಿಗಾದ ಅವಮಾನ ಆತನಿಗೆ ಭಗವತ್ ಸಾಕ್ಷಾತ್ಕಾರದ ನಿಮಿತ್ತವಾಯಿತು. ಜಗತ್ತಿನಲ್ಲಿ ನಡೆಯುವ ಒಂದೊಂದು ಘಟನೆಯೂ ಮತ್ತೊಂದು ಘಟನೆಗೆ ನಿಮಿತ್ತವೋ ಪೂರಕವೋ ಆಗಿರುತ್ತದೆ. ಅದೇ ರೀತಿಯಲ್ಲಿ, ಪ್ರತಿಯೊಬ್ಬ ವ್ಯಕ್ತಿಯೂ ಅನುಭವಿಸುವ ಒಂದು ಪ್ರಸಂಗ ಇನ್ನೊಂದು ಪ್ರಸಂಗಕ್ಕೆ ನಿಮಿತ್ತವಾಗಿರುತ್ತದೆ. ಯಾವುದೂ ಕಾಕತಾಳೀಯವಲ್ಲ. ಒಂದಾನೊಂದು ಮುಂದಿನ ಯೋಜನೆಯನಿಟ್ಟುಕೊಂಡೇ ದೈವವು ಕೆಲಸ ಮಾಡು ತ್ತದೆ. ಅದು ದೈವಿಕ ರಹಸ್ಯ (೫೧೨, ೫೧೩).

ಹಾಗಾದರೆ ಪುರುಷ ಪ್ರಯತ್ನವು ವ್ಯರ್ಥವೆ ? ಎಂದರೆ, ಹಾಗಲ್ಲ. ಪುರುಷ ಪ್ರಯತ್ನ ಅವಶ್ಯ ಬೇಕು. ಮಾನವನು ಸ್ವಪ್ರಯತ್ನದಿಂದ ಮುಂದುವರಿಯಲೆಂದೇ ಆತನಿಗೆ ಬುದ್ಧಿಯನ್ನೂ, ವಿಚಾರಶಕ್ತಿಯನ್ನೂ, ಜ್ಞಾನೇಂದ್ರಿಯಗಳನ್ನೂ, ಕೈಕಾಲು ಗಳನ್ನೂ ದೈವ ಒದಗಿಸಿದೆ. ಸ್ವಪ್ರಯತ್ನವಿಲ್ಲದೆ ತಾನಾಗಿ ಯಾವುದೂ ಸಿದ್ಧಿಸದು. ಮನುಷ್ಯನು ಪ್ರಯತ್ನಿಸಲಿ, ಕೆಲಸ ಮಾಡಲಿ, ಹೋರಾಡಲಿ, ಗಳಿಸಲಿ, ತಿನ್ನಲಿ— ಎನ್ನುವುದೂ ದೈವಸಂಕಲ್ಪವೇ. ಯತ್ನಶೀಲನಲ್ಲದ ಅಲಸನಿಗೆ ದೈವವೂ ಸಹಾಯ ಮಾಡದು. ಆದರೆ ಸರ್ವವೂ ತನ್ನಿಂದ ಸಾಧ್ಯ ಎಂಬ ಅಹಂಕಾರ ಮಾತ್ರ ಮಾನವನಿಗೆ ಸಲ್ಲದು ಎನ್ನುತ್ತಾನೆ ಮಂಕುತಿಮ್ಮ. ಕಾರ್ಯಸಿದ್ಧಿಗೆ ದೈವ–ಪೌರುಷಗಳೆರಡೂ ಬೇಕು.

ನಿನ್ನ ಹೆಗಲಿನ ಹೊರೆಯ ದೈವಭುಜಕೇರಿಸುವ
ಸನ್ನಾಹ ಸಾಗೀತೆ? ದೈವವೊಪ್ಪೀತೆ?।
ಮನ್ನಿಸಲಿ ವಿಧಿ ನಿನ್ನ ಬೇಡಿಕೆಯ, ಭನ್ನಿಸಲಿ
ನಿನ್ನ ಬಲವನು ಮರೆಸೊ—ಮಂಕುತಿಮ್ಮ ॥ ೫೫೧

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬುದು ವೇದಾಂತಿಗಳ ಡಿಂಡಿಮ. ಸ್ವಪ್ನ ದಂತೆ ಜಗತ್ತು ಮಿಥ್ಯೆಯೆಂದು ಅವರು ಸಾರುತ್ತಾರೆ. 'ಒಬ್ಬಂಟಿ ದೈವವದು', 'ಜಗವೆಲ್ಲ ಶಿವಲೀಲೆ' ಎನ್ನುವ ಡಿ.ವಿ.ಜಿ.ಯವರಿಗೆ ಅದು ಸಂಮತವೇ ಸರಿ. ಆದರೆ 'ಜಗನ್ಮಿಥ್ಯಾ' ಎಂದು ತಳ್ಳಿಹಾಕಿ ಉಪೇಕ್ಷಿಸುವುದು ಸರಿಯಲ್ಲ. ಸರ್ವರ

ಅನುಭವಕ್ಕೆ ನಿತ್ಯಗೋಚರವಾಗಿರುವ ಜಗದ್ವ್ಯವಹಾರ ಪರಮೇಶ್ವರನ ಲೀಲಾ ವಿಭೂತಿಯೇ ಹೌದು. ಇದು ಉಪೇಕ್ಷಣೀಯವಾಗಿದ್ದರೆ ಇದರ ಸೃಷ್ಟಿಯೇ ಆಗುತ್ತಿರಲಿಲ್ಲ. ನಮ್ಮ ಇಂದ್ರಿಯಗಳನ್ನೇ ನಾವು ನಂಬುವುದಿಲ್ಲವಾದರೆ ಇನ್ನು ಯಾರನ್ನು ನಂಬೋಣ ? ವೇದಾಂತಿಗಳು ಜಗತ್ತನ್ನು ವ್ಯಾವಹಾರಿಕ ಸತ್ಯವೆಂದು ಹೇಳಿದ್ದುಂಟು. ಆದರೆ ಈ ಸಂಗತಿಗೆ ಅವರು ಸಾಕಷ್ಟು ಒತ್ತುಗೊಡಲಿಲ್ಲ—ಎಂಬುದು ಡಿ.ವಿ.ಜಿ.ಯವರ ಆಕ್ಷೇಪವೆಂದು ತೋರುತ್ತದೆ. ಜಗನ್ನಾಟಕವನ್ನು ನಿರ್ಮಿಸಿದ ಸೂತ್ರಧಾರನಿಗೆ ಪಾತ್ರಧಾರಿಗಳು ಚೆನ್ನಾಗಿ ತಮ್ಮ ಪಾತ್ರಗಳನ್ನು ಅಭಿನಯಿಸಲೆಂಬ ಉದ್ದೇಶವಿರುತ್ತದೆಯಲ್ಲವೆ ? ಆದ್ದರಿಂದ ಲೋಕವ್ಯವಹಾರವೆಲ್ಲವೂ ಪರಮೇಶ್ವರನ ಆಜ್ಞೆಯೇ. ಅವನ ಆಜ್ಞೆಯನ್ನು ಸಮೀಚೀನವಾಗಿ ನಡೆಸುವುದು ಮಾನವರ ಅವಶ್ಯ ಕರ್ತವ್ಯ. ಜಗನ್ಮಿಥ್ಯೆಯೆಂಬ ವಚನಮಾತ್ರದಿಂದ ಜೀವನವನ್ನು ಅಲಕ್ಷಿಸಲಾಗದು. ಬಾಯಿಮಾತಿನಿಂದ ಅಲಕ್ಷಿಸಿದರೆ ಅದು ನಮ್ಮನ್ನು ಬಿಡತಕ್ಕುದು ಅಲ್ಲ.

ಪಂಡಿತರೆ ಶಾಸ್ತ್ರಗಳೆ ಮಿಥ್ಯೆಯಿಂ ತಥ್ಯಕ್ಕೆ
ಖಂಡಿತದಿ ಸೇತುವೆಯ ಕಟ್ಟುವೊಡೆ ನೀವು ।
ಕಂಡಿಹಿರ ನರಹೃದಯದಾಳ ಸುಳಿ ಬಿರುಬುಗಳ
ದುಂಡವದನುಳಿದ ನುಡಿ—ಮಂಕುತಿಮ್ಮ ॥ ೪೯

ಮನೆಯೆಲ್ಲಿ ಸತ್ಯಕ್ಕೆ ? ಶ್ರುತಿತರ್ಕಮಾತ್ರದೊಳೆ ?
ಅನುಭವಮುಮದರೊಂದು ನೆಲೆಯಾಗದಿಹುದೇಂ ? ॥ (೫೦)
ಬಾಳು ಬಾಳದೆ ಬಿಡದು. (೨೪೯)
ಜೀವನವದೊಂದು ಪರಮೈಶ್ವರ್ಯ ಬೊಮ್ಮನದು. (೨೫೦)

ಜೀವನವನ್ನು ಗೌರವಿಸು. ಆಟವನ್ನು ಸರಿಯಾಗಿ ಆಡು. ಜೊತೆಗಾರರಾದ ಎಲ್ಲ ಜೀವರನ್ನೂ ಆದರಿಸು. ಆಟ ಬೇಡವೆನ್ನಬೇಡ. 'ಖೇಲನವ ಬೇಡವೆನುವರನು ವಿಧಿರಾಯನವಹೇಳಿಪನು ಸೆರೆವಿಡಿದು.' (೨೬೭)

ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು ।
ಹೋರುವುದೆ ಜೀವನಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ ॥ ೪೭೫

'ಆನಂದಸಾಗರವಾದದ್ದು ಬ್ರಹ್ಮವಸ್ತು. ಅದರ ಆನಂದಕಣಗಳನ್ನು ಜೀವಾತ್ಮರು ಉಪಭೋಗಿಸುತ್ತಿದ್ದಾರೆ' ಎನ್ನುತ್ತದೆ ಉಪನಿಷತ್ತು. ಅಂತಹ ಆನಂದವನ್ನನುಭವಿಸುವುದಕ್ಕೆ ಸಂಕೋಚವೇಕೆ ? ದುಡಿ, ಸಂಪಾದಿಸು, ಸುಖಪಡು. ಅದು ತಪ್ಪಲ್ಲ.

ನಾಚಿಕೆಯದೇಕೆ ನೀಂ ಬದುಕಿನಲಿ ಸೊಗವಡಲು ?
ಚಾಚುತಿಹುದಾತ್ಮ ನಾಲಗೆಯ ದೆಸೆದೆಸೆಗೆ ।
ಬಾಚಿಕೊಳಲಮೃತಕಣಗಳನೆಲ್ಲ ತನ್ನೆಡೆಗೆ
ಸಾಜ ಸೊಗವಾತ್ಮಂಗೆ—ಮಂಕುತಿಮ್ಮ ॥ ೨೬೮

ಆದರೆ ಎಚ್ಚರಿರಲಿ. ಹೇಯವಾದ ಸಂಕುಚಿತ ಸ್ವಾರ್ಥವನ್ನು ದೂರವಿಡು. 'ಎಲ್ಲರಿಗವನಾಗಿ ತಾನ್, ಎಲ್ಲರುಂ ತನಗಾಗಿ' ಎಂಬ ಏಕಾತ್ಮಭಾವನೆ ಸದಾ ನೆನಪಿನಲ್ಲಿರಲಿ. ಈ ಭಾವನೆಯನ್ನು ದೃಢಪಡಿಸಿ ಜೀವೋತ್ಕರ್ಷವನ್ನು ಸಾಧಿಸುವುದಕ್ಕಾಗಿಯೇ ಮನೆ, ಸಂಸಾರ, ರಾಜ್ಯ—ಮೊದಲಾದ ಉಪಕರಣಗಳನ್ನು ದೈವ ಕಲ್ಪಿಸಿದೆ. ಅವನ್ನು ಅಲ್ಲಗಳೆಯಬೇಡ(೨೭೦). ಸಕಲ ಜೀವರನ್ನೂ ಆದರಿಸು, ಪ್ರೀತಿಸು. ಎಲ್ಲ ಜೀವಗಳೂ ನಿನ್ನ ಆತ್ಮವೇ ಆಗಿರುವುದರಿಂದ ಆತ್ಮಕ್ಕಿಂತ ಪ್ರಿಯವಾದದ್ದು ಇನ್ನು ಯಾವುದಿದೆ ?

ನಯದಿಂದೆ ಸೋಕು, ನೀಂ ದಯೆಯಿಂದ ನೋಡದನು
ಭಯದಿನೋಲಗಿಸು, ನೀಂ ಪೂಜಿಸೈಯದನು ।
ಸ್ವಯಮಂಕುರಿತ ಸಕಲ ವಿಶ್ವಸತ್ತ್ವವೊ; ಜೀವ
ಪ್ರಿಯತಮವೊ ಸೃಷ್ಟಿಯಲಿ—ಮಂಕುತಿಮ್ಮ ॥ ೨೭೪

ತತ್ತ್ವಶಾಸ್ತ್ರಗಳಲ್ಲಿ ಪ್ರವೃತ್ತಿಮಾರ್ಗ, ನಿವೃತ್ತಿಮಾರ್ಗ—ಎಂದು ಮಾರ್ಗದ್ವಯವನ್ನು ಹೇಳಿದ್ದಾರೆ. ಪ್ರವೃತ್ತಿಮಾರ್ಗವನ್ನು ಕರ್ಮನಿಷ್ಠೆಯೆಂದೂ ನಿವೃತ್ತಿಮಾರ್ಗವನ್ನು ಸಂನ್ಯಾಸನಿಷ್ಠೆಯೆಂದೂ ಹೇಳುವುದುಂಟು. ಲೋಕಮಾನ್ಯ ತಿಲಕರು ತಮ್ಮ ಗೀತಾರಹಸ್ಯದಲ್ಲಿ ಶ್ರೀಕೃಷ್ಣನು ಬೋಧಿಸಿದ್ದು ಕರ್ಮನಿಷ್ಠೆಯೆಂದೂ ಸಂನ್ಯಾಸವಲ್ಲವೆಂದೂ ಸಾಧಿಸುತ್ತಾರೆ. ಕರ್ಮನಿಷ್ಠೆಯೆಂದರೆ ನಿಷ್ಕಾಮಕರ್ಮಯೋಗ. ಕರ್ಮವೆಂದರೆ ಶಾಸ್ತ್ರೀಯಕರ್ಮವೆ, ಲೌಕಿಕವ್ಯವಹಾರವೆ, ಅಥವಾ ಉಭಯವೂ ಆಗುತ್ತದೆಯೆ ?—ಎಂಬುದನ್ನು ಲೋಕಮಾನ್ಯ ತಿಲಕರು ಸ್ಪಷ್ಟವಾಗಿ ಬಿಡಿಸಿಲ್ಲ. ಪ್ರವೃತ್ತಿ ನಿವೃತ್ತಿ ಮಾರ್ಗಗಳೆರಡೂ ಮೋಕ್ಷಕ್ಕೆ ಸಾಧಕಗಳೆಂದೂ ಆದರೆ ಭಗವದ್ಗೀತೆಯಲ್ಲಿ ಹೇಳಿದ್ದು ಪ್ರವೃತ್ತಿಮಾರ್ಗವೆಂದೂ ಅವರ ಸಿದ್ಧಾಂತವಿದೆ. ಡಿ.ವಿ.ಜಿ.ಯವರು ಈ ವಿವಾದದ ಸುಳಿಗೆ ಸಿಕ್ಕುವುದಿಲ್ಲ. ಅವರಿಗೆ ಸಂನ್ಯಾಸವೆಂಬುದು ವರ್ಣಾಶ್ರಮ ಧರ್ಮದ ಒಂದು ಆತುರ ವ್ಯವಸ್ಥೆಯೆಂಬ ಅಭಿಪ್ರಾಯವಿದ್ದಂತೆ ತೋರುತ್ತದೆ. ಸಂನ್ಯಾಸದ ಕಡೆಗೆ ಅವರ ಒಲವು ಇದ್ದಂತೆ ಕಾಣುವುದಿಲ್ಲ. ಸಂನ್ಯಾಸಿಗೂ ಜೀವನಯಾತ್ರೆ ತಪ್ಪಿದ್ದಲ್ಲ. ಅವನು ಎಷ್ಟರಮಟ್ಟಿಗೆ ಲೋಕವ್ಯವಹಾರವನ್ನು ಬಿಡಬಲ್ಲ ? ಕೆಲವನ್ನು ಬಿಟ್ಟರೂ ಅದರಿಂದ ಫಲವೇನು ? ಎಂಬುದು ಚಿಂತನೀಯ. 'ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಮ್—ರಾಜ್ಯ ವ್ಯವಹಾರಾದಿ ಲೌಕಿಕ ಕರ್ಮಗಳನ್ನು ಆಚರಿಸಲು ಜ್ಞಾನಿಗೆ ಸಾಧ್ಯ ಉಂಟು' ಎಂದು ವಿದ್ಯಾರಣ್ಯ ಸ್ವಾಮಿಗಳು ಅಪ್ಪಣೆ ಕೊಡಿಸಿದ್ದಾರೆ. ಮನಸ್ಸು ನಿಷ್ಕಾಮವಾಗಿರುವುದೇ ನಿವೃತ್ತಿಮಾರ್ಗ. ಮನಸ್ಸು ನಿಷ್ಕಾಮವಾದಾಗ ಸಂನ್ಯಾಸ ಬೇಕಿಲ್ಲ. ನಿಷ್ಕಾಮವಾಗದಿದ್ದರೆ ಸಂನ್ಯಾಸದಿಂದ ಉಪಯೋಗವೂ ಇಲ್ಲ—ಇದು ಡಿ.ವಿ.ಜಿ.ಯವರ ಚಿಂತನವೆಂದು ತೋರುತ್ತದೆ.

ಶಾಸ್ತ್ರೀಯ ಕರ್ಮ, ಲೌಕಿಕ ಕರ್ಮ—ಎಂಬ ವಿಭಾಗಕ್ಕಾಗಲಿ ವರ್ಣಾಶ್ರಮ ಧರ್ಮದ ವಿಚಾರಕ್ಕಾಗಲಿ ಮಂಕುತಿಮ್ಮನು ಪ್ರವೇಶಿಸುವುದಿಲ್ಲ. ಅವನಿಗೆ ಸ್ತ್ರೀಯರು–ಪುರುಷರು ಎಂಬ ವಿಭಜನೆಯೂ ಇಲ್ಲ. ಮನುಷ್ಯ ಸಾಮಾನ್ಯನಿಗೆ—

ವಿಶ್ವದ ಪ್ರಜೆಗೆ ಮುಟ್ಟಿಸುವ ಸಂದೇಶ ಅವನದು. ಮನುಷ್ಯತ್ವ ಯಾರು ಯಾರಲ್ಲಿ ಇದೆಯೋ ಅವರೆಲ್ಲರೂ ಪಾಲಿಸಬಹುದಾದ ಮತ್ತು ಪಾಲಿಸಬೇಕಾದ ಧರ್ಮವನ್ನವನು ಹೇಳುತ್ತಾನೆ.

ಮನುಷ್ಯನಿಗೆ ಸುಖಾಪೇಕ್ಷೆ ಸಹಜ. ಸುಖವನ್ನರಸುವುದು ತಪ್ಪಲ್ಲ—ಎಂದು ಹೇಳಿದ ತಿಮ್ಮ ಒಡನೆಯೇ ಒಂದು ಎಚ್ಚರಿಕೆಯನ್ನೂ ಕೊಡುತ್ತಾನೆ. ಭಗವಂತನ ಸಾಕ್ಷಾತ್ಕಾರವೇ ಜೀವಗಳ ಪರಮಧ್ಯೇಯ. ಅಂತಹ ಧ್ಯೇಯವನ್ನು ಸಾಧಿಸುವುದಕ್ಕೆ ಹೊರಟವನಿಗೆ, ಆನುಷಂಗಿಕವಾಗಿ ದೊರಕುವ ಸುಖ ತ್ಯಾಜ್ಯವಲ್ಲ. ಹಾಗೆ ದೊರಕುವ ಇಂದ್ರಿಯಸುಖ ಕ್ಷುದ್ರವಾದದ್ದು. ಅದೇ ಧ್ಯೇಯವಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ದಿನನಿತ್ಯದ ಈ ಸುಖವೇ ಮನುಷ್ಯನ ಗುರಿಯಾದರೆ ಮನುಷ್ಯನಿಗೂ ಪಶುಗಳಿಗೂ ಭೇದವಿಲ್ಲದೆ ಹೋದೀತು. ತನ್ನ ಮನೆ, ತನ್ನ ಮಡದಿ, ತನ್ನ ಮಕ್ಕಳು—ಎಂಬ ಸ್ವಾರ್ಥಪರವೂ ಸಂಕುಚಿತವೂ ಆದ ಲೋಕದಲ್ಲಿ ಮುಳುಗಿದವನು ಕಾಪುರುಷ. ಮಾಯೆಯ ಬಲೆಗೆ ಬಿದ್ದವನು. ಜೀವೋತ್ಕರ್ಷವನ್ನು ತಡೆಗಟ್ಟುವ ಸಂಕೋಲೆಯಾಗುತ್ತದೆ ಅಂಥವನಿಗೆ ಸಂಸಾರ.

ಅರಿ ಮಿತ್ರ ಸತಿ ಪುತ್ರ ಬಂಧು ಬಳಗವದೆಲ್ಲ
ಕರುಮದವತಾರಗಳೊ, ಋಣಲತೆಯ ಚಿಗುರೋ ।
ಕುರಿಯನಾಗಿಸಿ ನಿನ್ನ ಕಾಪಿಡುವ ಸಂಸಾರ
ಉರಿಮಾರಿಯಾದೀತೊ—ಮಂಕುತಿಮ್ಮ ॥ ೧೮

ಧನಸಂಪಾದನೆ ತನ್ನ ಭೋಗಕ್ಕಾಗಿ ಮತ್ತು ತನ್ನ ಆತ್ಮಗಳೇ ಆದ ದೀನ ದುರ್ಬಲರ ಸುಖವೃಷ್ಟಿಯಿಂದ ತ್ಯಾಗಕ್ಕಾಗಿ. 'ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ.' ಹಣವು ಮರಣಾನಂತರ ನಿನ್ನ ಜೊತೆಗೇನೂ ಬರದು. ನೆನಪಿರಲಿ, 'ಬತ್ತಲೆಯೆ ನೀಂ ಬಂದೆ ಬತ್ತಲೆಯೆ ನೀಂ ಪೋಪೆ'. ಧನಾರ್ಜನೆ ಯುಕ್ತವಾದರೂ ಧನಸಂಚಯವು ಮಾತ್ರ ಇಹಪರವಿಪತ್ತುಗಳಿಗೆ ನಾಂದಿಯಾಗುತ್ತದೆ. ಧನಸಂಚಯವನ್ನೇ ಸುಖವೆಂದು ತಿಳಿಯುತ್ತಾರೆ ಅವಿವೇಕಿಗಳು.

ಬಂಗಾರದೆಸಿ ಚುಚ್ಚಿ ಸಿಂಗರದ ಬೊಟ್ಟೆನುವ
ಮಂಗಬುದ್ಧಿಯ ಜನರು—ಮಂಕುತಿಮ್ಮ ॥ ೧೯

ಜಗತ್ತು ಪರಮಾರ್ಥದಲ್ಲಿ ಮಿಥ್ಯೆಯಿರಬಹುದು. ಅದನ್ನು ವಿವರವಾಗಿ ಪರೀಕ್ಷಿಸುವುದರಿಂದ ಪ್ರಯೋಜನವೇನೂ ಇಲ್ಲ. ನಾವು ಇರುವವರೆಗೆ ಈ ಜಗತ್ತು ಇದ್ದೇ ಇರುತ್ತದೆ. ಇದರ ಎಲ್ಲ ಆಗುಹೋಗುಗಳೂ ಸತ್ಯವಾಗಿಯೇ ಪರಿಣಮಿಸುತ್ತವೆ. ಇವನ್ನು ಶ್ರೀಮಂತಗೊಳಿಸಿ ಬಾಳ್ವೆಯನ್ನು ನಡೆಸೆಂಬುದು ಸೂತ್ರಧಾರನಾದ ಈಶ್ವರನ ಸಂಕಲ್ಪ. ಇಲ್ಲದಿದ್ದರೆ ಇಷ್ಟು ವಿಶಾಲವೂ ವಿಸ್ಮಯಕಾರಿಯೂ ಆದ ವಿಶ್ವವನ್ನು ನಿರ್ಮಿಸುವ ಆವಶ್ಯಕತೆ ಇರುತ್ತಿರಲಿಲ್ಲ. ಈ ವಿಶ್ವ ಒಂದು ದಿನ ನಾಶವಾಗುತ್ತದೆಯೆಂಬುದೂ ಸರಿಯಲ್ಲ. ಅಶ್ವತ್ಥವೃಕ್ಷವಿದ್ದಂತೆ ಈ ಜಗತ್ತು. ಅದು

ಬ್ರಹ್ಮವಸ್ತುವಿನ ಸ್ಪಂದನ. ನಾವು ಆ ವೃಕ್ಷದ ಕಡ್ಡಿ, ಎಲೆ ಇದ್ದಂತೆ. ಚಿಗುರಿ ಬಾಡಿ ಉದುರಿ ಹೋಗತಕ್ಕವು ಕಡ್ಡಿ ಎಲೆಗಳೇ ಹೊರತು ವೃಕ್ಷವಲ್ಲ.

ಒಟ್ಟಿನಲ್ಲಿ ಜೀವದ ಉದಯ, ಜೀವದ ವಿಲಯ, ಜೀವಿಗಳ ಜೀವನ—ಇವು ಅತ್ಯಂತ ರಹಸ್ಯಮಯವಾದವು. ಇವು ಯಾರಿಗೂ ತಿಳಿದಿಲ್ಲ. ತಿಳಿದಿದ್ದೇವೆಂದು ಯಾರಾದರೂ ಹೇಳಿದರೆ ಅಹಂಕಾರವಾಗುತ್ತದೆ. ಅದು ವಿಶ್ವಾಸಾರ್ಹವಾದ ನುಡಿಯಲ್ಲ. 'ಮನವ ಬಳಲಿಸಿ ಸೋಲಿಸಿರುವ ತತ್ತ್ವ' ಅದು. 'ಮಾನಸದೇಕಾಂತದಲಿ ಮೌನದ ಧ್ಯಾನದಲಿ ಮಣಿ ಮಣಿದು ಕೈಮುಗಿಯೊ' ಎಂದಿಷ್ಟೇ ಹೇಳಬಹುದಾದದ್ದು. 'ಬ್ರಹ್ಮಮಾಯೆಯೆ ವಿಶ್ವ, ಕೇವಲಾತ್ಮ ಬ್ರಹ್ಮ' ಎಂಬುದು ಮಾತ್ರ ಮಂಕುತಿಮ್ಮನು ಅಂಗೀಕರಿಸಿರುವ ಸಿದ್ಧಾಂತ. ಮನುಷ್ಯನ ಪರಮಲಕ್ಷ್ಯ ಯಾವುದಾಗಿರಬೇಕು ? ಎಂಬ ಪ್ರಶ್ನೆಗೆ ಶಾಶ್ವತವೂ ಅಬಾಧಿತವೂ ದುಃಖಲೇಶದ ಮಿಶ್ರವಿಲ್ಲದ್ದೂ ಆದ ಸುಖವೇ ಲಕ್ಷ್ಯವೆಂಬುದು ಸ್ವತಃಸಿದ್ಧವಾದುದು, ಅದು ಲಕ್ಷ್ಯವೆಂದು ಯಾರೂ ವಿಧಿಸಬೇಕಾಗಿಲ್ಲ. ಸರ್ವರು ಬಯಸುವುದೂ ಸುಖವನ್ನೇ ಅಲ್ಲವೆ ? ಅದು ಶಾಶ್ವತವಾಗಿರಲೆಂಬುದೂ ಸಹಜವಾದ ಆಕಾಂಕ್ಷೆ. ನಮಗೆ ಲೋಕದಲ್ಲಿ ಇಂದ್ರಿಯ ಸಂತೃಪ್ತಿಯಿಂದ ದೊರೆಯುವ ಸೌಖ್ಯ ಅಲ್ಪ. ಅದಕ್ಕೆ ಅಂತ ಉಂಟು. ಅದು ಸಂಪೂರ್ಣವಲ್ಲ. ಖಂಡಖಂಡವಾದದ್ದು. 'ಭ್ರಾಂತಿಯೋ ಸಂಪೂರ್ಣ ಸುಖದಾಶೆ ಬಾಹ್ಯದಲಿ !' ಪರಿಪೂರ್ಣ ಸುಖವನ್ನು ಬಯಸತಕ್ಕವನು ಹೊರಗಡೆ ನೋಡಬಾರದು, ಒಳಗಡೆ ನೋಡಬೇಕು. ನಿರ್ಮಲ ದೃಷ್ಟಿಯಿಂದ ಆತ್ಮಾನುಸಂಧಾನ ಮಾಡತಕ್ಕವನಿಗೆ ಅದು ದೊರೆಯುತ್ತದೆ.

ಪರಿಪೂರ್ಣಸುಖವನೆಳಸುವನು ತನ್ನೊಳಗಡೆಗೆ
ತಿರುಗಿಸಲಿ ತನ್ನ ದೃಷ್ಟಿಯನು ನಿರ್ಮಲದಿಂ ।
ನಿರತಿಶಯ ಸುಖವಲ್ಲಿ, ವಿಶ್ವಾತ್ಮವೀಕ್ಷೆಯಲಿ
ಪರಸತ್ತ್ವ ಶಾಂತಿಯಲಿ—ಮಂಕುತಿಮ್ಮ ॥ ೮೮೭

'ಹೊರಗೆ ವಿಶ್ವದಿನಾಚೆ ದೂರದಲಿ ನೀಲದಲಿ' ಯಾವ ತತ್ತ್ವವು ನೆಲೆಸಿದೆಯೋ ಅದೇ 'ಒಳಗೆ ಹೃತ್ಕೂಪದಾಳದಲಿ ಮಸಕಿನಲಿ' ನೆಲೆಸಿದೆಯೆಂದು ಮೂಲ ರಹಸ್ಯವನ್ನು ಯಾವನು ಅರಿಯುತ್ತಾನೋ ಅವನು ಜ್ಞಾನಿ (೮೯೨). 'ತತ್ತ್ವಮಸಿ' ಎಂಬ ಉಪನಿಷದ್ವಾಕ್ಯದ ಅರ್ಥವನ್ನು ಈ ಪರಿಯಲ್ಲಿ ತನ್ನದೇ ಆದ ಶೈಲಿಯಲ್ಲಿ ವಿವರಿಸುತ್ತಾನೆ ಮಂಕುತಿಮ್ಮ. ಈ ಸ್ಥಿತಿಯೇ ಮೋಕ್ಷ. 'ವಾಸನಾಕ್ಷಯ ಮೋಕ್ಷ'.

ಉಪನಿಷತ್ತು, ಭಗವದ್ಗೀತೆ, ವಿದ್ಯಾರಣ್ಯ ಸ್ವಾಮಿಗಳ ಪಂಚದಶಿ ಇವು ಡಿ.ವಿ.ಜಿ.ಯವರ ತತ್ತ್ವಚಿಂತನೆಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿವೆ. ಅಲ್ಲಿರುವ ಹಲವಾರು ವಾಕ್ಯಗಳ ಅರ್ಥವಿವರಣೆ ಮಂಕುತಿಮ್ಮನ ಕಗ್ಗದ ಚೌಪದಿಗಳಲ್ಲಿವೆ. ಶಾಸ್ತ್ರೀಯ ಕ್ರಮದಲ್ಲಿ ಮಾಡಿರುವ ತತ್ತ್ವ ವಿವೇಚನೆಯನ್ನು ಡಿ.ವಿ.ಜಿ.ಯವರ 'ಶ್ರೀಮದ್ಭಗವದ್ಗೀತಾತಾತ್ಪರ್ಯ'ದಲ್ಲಿ ಕಾಣಬಹುದು. ಅಲ್ಲಿ ಸೋಪಾನ ಕ್ರಮದಿಂದ ಕಾಣಿಸಿಕೊಳ್ಳುವ ತತ್ತ್ವವಿವೇಚನೆ ಕಗ್ಗದಲ್ಲಿ, ಬಿಡಿ ಬಿಡಿಯಾಗಿ ಅಲ್ಲಲ್ಲಿ ಹರಡಿಕೊಂಡಿದೆ. ನಿಲುವು ಒಂದೇ.

ತತ್ತ್ವ ಸಾಕ್ಷಾತ್ಕಾರವಾದಾಗಲೇ ಜೀವನಿಗೆ ಪರಮಶಾಂತಿ ದೊರೆಯುತ್ತದೆ. ಭಕ್ತಿ. ಕರ್ಮಗಳಿಂದ ಚಿತ್ತಶುದ್ಧಿ. 'ಭಕ್ತಿ ನಂಬುಗೆ ಸುಲಭ; ಭಜನೆ ವಂದನೆ ಸುಲಭ.' ತತ್ತ್ವಶೋಧನೆಯಾದರೋ ಮತಿಕಾರ್ಯವಾದ್ದರಿಂದ ಕಷ್ಟ. ತರ್ಕಯುಕ್ತಿಗಳಿಗೆ ನಿಲುಕತಕ್ಕುದೂ ಅಲ್ಲ ಪರಮಾರ್ಥ ತತ್ತ್ವ. ಚಿತ್ತಶುದ್ಧಿಯಾದಾಗ ತಾನಾಗಿ ಅಂತರಂಗಕ್ಕೆ ಹೊಳೆಯತಕ್ಕದ್ದು ಅದು. ಚಿತ್ತಶುದ್ಧಿಗಾಗಿಯೇ ವಿಸ್ತಾರವ ಕರ್ಮ ಕರ್ಮವೆಂದರೇನು ? ಅದು ಶಾಸ್ತ್ರೀಯವೂ ಆಗಬಹುದು, ಲೌಕಿಕದ ವ್ಯವಹಾರ ರೂಪವೂ ಆಗಬಹುದು. ಭಗವದ್ಭಕ್ತಿಯು ಕರ್ಮದ ಶುದ್ಧತೆಗೆ ದಾರಿದೀಪವಾಗುತ್ತದೆ. ಈ ಚಿತ್ತಶುದ್ಧಿ ಬೇಗ ಲಭಿಸತಕ್ಕದ್ದಲ್ಲ.

ಮೋಕ್ಷದಾಶೆಯೊಳಮತ್ಯಾತುರತೆಯೊಳಿತಲ್ಲ
ಶಿಕ್ಷೆ ಬಹುಕಾಲ ನಡೆಯದೆ ಮೋಕ್ಷವಿಲ್ಲ।
ಲಕ್ಷ್ಯ ತಪ್ಪದೆ ಚರಿಸು ಸಾಮಾನ್ಯಧರ್ಮಗಳ
ಮೋಕ್ಷ ಸ್ವತಃಸಿದ್ಧ—ಮಂಕುತಿಮ್ಮ ॥ ೯೦೩

ನಾವೇನೂ ಜಗತ್ತಿಗೆ ಹೊಸಬರಲ್ಲ. ತುಂಬ ಹಳಬರು ನಾವು. ಎಷ್ಟು ಕೋಟಿ ಜನ್ಮಮರಣಗಳನ್ನು ಅನುಭವಿಸಿದ್ದೇವೊ! ಈಗೇಕೆ ಅಷ್ಟು ಅವಸರ? ಹೃದಯದಲ್ಲಿ ಭಗವಂತನನ್ನು ಸ್ಥಾಪಿಸಿ ಜಗನ್ನಾಟಕದಲ್ಲಿ ಅಭಿನಯಿಸತಕ್ಕವನಿಗೆ ಸಂಸಾರವೇನೂ ಕಷ್ಟವೆನಿಸದು.

ಜನ್ಮ ಸಾವಿರ ಬರಲಿ, ನಷ್ಟವದರಿಂದೇನು ?
ಕರ್ಮ ಸಾವಿರವಿರಲಿ, ಕಷ್ಟ ನಿನಗೇನು ?।
ಬ್ರಹ್ಮ ಹೃದಯದಿ ನಿಲ್ಲೆ ಮಾಯೆ-ಯೆಂಗೈದೊಡೇಂ ?
ಇಮ್ಮಿದಳ ಸರಸವದು—ಮಂಕುತಿಮ್ಮ ॥ ೯೧೬
(ಇಮ್ಮಿದಳ್—ಇನಿಯಳು, ಸುಂದರಿ)

ಮನುಷ್ಯನಿಗೆ ಬರುವ ನಾನಾ ಕಷ್ಟಗಳು ಅವನ ಚಿತ್ತಶೋಧನೆಗಾಗಿ, ಅವನ ಉತ್ಕರ್ಷಕ್ಕಾಗಿ ಭಗವಂತನು ಅನುಗ್ರಹಿಸಿದ ವರಗಳೆಂದೇ ತಿಳಿಯಬೇಕು. ನಮಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು—ಎಂದು ಸರ್ವಜ್ಞನಾದ ಆತನೇ ನಿರ್ಣಯಿಸತಕ್ಕದ್ದು. ಅಲ್ಪಜ್ಞರಾದ ನಾವು ಅದನ್ನು ನಿರ್ಣಯಿಸಲಾರೆವು. ಭಕ್ಷಣವನ್ನು ಕೊಡುವ ತಂದೆ ಶಿಕ್ಷಣಕ್ಕಾಗಿ ಕೋಲನ್ನೂ ಹಿಡಿಯುತ್ತಾನೆ. ಈ ರಹಸ್ಯವನ್ನರಿಯದೆ, ಸಂಸಾರದ ಕಷ್ಟನಷ್ಟಗಳನ್ನು ಸಹಿಸಲಾರದೆ, ಯಾವನು ಗೊಣಗುತ್ತಾನೋ ಅವನಿಗೆ ಮಂಕುತಿಮ್ಮನ ನಿಷ್ಠುರವಾದ ನುಡಿ ಇದು—

ತೊಲಗೆಲವೊ ಮನೆಯಿಂದ ಮನವು ಬರಡಾದಂದೆ
ಹೊಲಸ ತೊಳೆಯಲು ತೋಳ್ಗೆ ಬಲ ಕುಗ್ಗಿದಂದೆ।
ತೊಲಗು ಜಗದಿಂ ದೂರ, ಇಳೆಗಾಗದಿರು ಭಾರ
ತೊಲಗಿ ನೀಂ ಮರೆಯಾಗು—ಮಂಕುತಿಮ್ಮ ॥ ೯೨೬

ಸಂಕ್ಷೇಪವಾಗಿ ಹೇಳುವುದಾದರೆ, ಇದಿಷ್ಟು ಮಂಕುತಿಮ್ಮನ ಕಗ್ಗದಲ್ಲಿ ಡಿ.ವಿ.ಜಿ. ಯವರು ತಳೆದಿರುವ ತಾತ್ತ್ವಿಕ ನಿಲುವು. ಒಂದು ಮಹಾ ಚೈತನ್ಯ ಈ ಜಗತ್ತನ್ನು ನಡೆಸುತ್ತಿದೆ. ಜಗತ್ತು, ಜಗದ್ ವ್ಯವಹಾರ--ಎಲ್ಲವೂ ಅದರ ಲೀಲಾಸೃಷ್ಟಿ. ಇದು ಅನಾದಿ, ಅನಂತ. ಸಮಸ್ತ ಜೀವಾತ್ಮರಲ್ಲಿಯೂ ಚಿಚ್ಛಕ್ತಿಯ ಒಂದಂಶವಿದೆ. ಸಮುದ್ರಜಲದ ಗುಳ್ಳೆಗಳಂತೆ ಜೀವರು. ನಿಯಾಮಕವಾದ ಆ ಮಹಾಚೇತನವನ್ನೇ ದೇವರೆಂದು ಹೇಳಬಹುದು. ಜೀವರ ಉತ್ಕರ್ಷಕ್ಕಾಗಿಯೇ ಈ ಜಗನ್ನಾಟಕ ನಡೆಯುತ್ತಿದೆ. ಸಮ್ಯಗ್ ಜ್ಞಾನ, ಸಮ್ಯಕ್ ಚಾರಿತ್ರ, ಸಮ್ಯಗ್ ಜೀವನ—ಈ ರತ್ನತ್ರಯ ಜೀವವನ್ನು ಈಶ್ವರನ ಬಳಿಗೆ ಒಯ್ಯುವ ಸಾಧನ. ಜ್ಞಾನದಿಂದ ಚಾರಿತ್ರ. ಚಾರಿತ್ರದಿಂದ ಲೋಕಜೀವನ. ಲೋಕಜೀವನದಿಂದ ದೂರವಾಗಿರುತ್ತೇನೆನ್ನುವುದು ಅಪಚಾರ. ಈಶ್ವರನಲ್ಲಿ ತೋರುವ ಅವಿಧೇಯತೆ. ಈ ಪಲಾಯನವಾದದಿಂದ ಯಾವ ಪ್ರಯೋಜನವೂ ಇಲ್ಲ. ಕುಟುಂಬ, ಸಮಾಜ, ರಾಜ್ಯ, ಜಗತ್ತು—ಇವು ಜೀವಸಂಸ್ಕಾರಕಗಳು. ಕಷ್ಟಗಳು ಚಿತ್ತಶೋಧಕಗಳು. ಕಹಿಯಾದ ಔಷಧದಂತೆ ಹಿತಕಾರಿಗಳು. ದೇಹಕ್ಕೆ ಅತಿರಿಕ್ತನಾದ ಆತ್ಮನಿದ್ದಾನೆ. ಜಾಗ್ರತ್, ಸ್ವಪ್ನ, ಸುಷುಪ್ತಿಗಳನ್ನು ಪರೀಕ್ಷಿಸಿದರೆ ಇದು ಅನುಭವಕ್ಕೇ ಬರುತ್ತದೆ. ದೇಹವನ್ನು ಘಾತಿಸಬಹುದು. ಆತ್ಮವನ್ನು ಘಾತಿಸಲಾಗದು. ಆತ್ಮ ಅವಿನಾಶಿ. ಆತ್ಮೋತ್ಕರ್ಷಕ್ಕೆ ಸಾಧನವಾದದ್ದು ದೇಹ. ಅದರ ನಿಂದೆ ಬೇಡ. ಆತ್ಮಸಾಕ್ಷಾತ್ಕಾರವೇ ಎಲ್ಲ ಜೀವರ ಪರಮಧ್ಯೇಯ. ಇದಕ್ಕೆ ಬೇಕಾದದ್ದು ಚಿತ್ತಸಮತೋಲನ, ಚಿತ್ತಸಮುನ್ನತಿ, ಚಿತ್ತಶಾಂತಿ ಮತ್ತು ಇವುಗಳಿಂದ ಉಪಬೃಂಹಿತವಾದ ಸಮಸ್ತ ಲೋಕವ್ಯವಹಾರ. ಕಗ್ಗದಲ್ಲಿ ಮತಧರ್ಮಗಳ ವಿವಾದವಿಲ್ಲ. ಇದೊಂದು ಸರ್ವಧರ್ಮ ಸಮನ್ವಯ; ಸರ್ವಧರ್ಮ ಸಂಮೇಳನ. ಇದು ತತ್ತ್ವಪ್ರಧಾನವಾದ ಕಾವ್ಯ.

ಮಂಕುತಿಮ್ಮನ ಕಗ್ಗ ಒಂದು ಸಿಹಿ ಮಾವಿನಮರ. ಆರಂಭದಲ್ಲಿ ಹೇಳಿದ ಈಶ್ವರ, ಜೀವ, ಜಗತ್ತು--ಇವು ಮೂರು ಮರಕ್ಕೆ ಸಾರವನ್ನೊದಗಿಸುವ, ಮರವನ್ನು ಸ್ಥಿರವಾಗಿ ನಿಲ್ಲಿಸಿರುವ ಬೇರುಗಳು. ಉಳಿದ ವಿಸ್ತರಗಳೆಲ್ಲ ತಳಿರು, ನನೆ, ಹೂ, ಮಿಡಿ, ಹಣ್ಣುಗಳು.

> ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀರನೈ ಪುಷ್ಪಸಂ-
> ಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತ ಪ-।
> ಣ್ಣಳಿನೋವೋ ಪೆರತೇನೊ ನೀನೆ ಭುವನಕ್ಕಾರಾಧ್ಯನೈ ಭೃಂಗ ಕೋ-
> ಕಿಳ ಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ ॥
>
> (ಆದಿಪಂಪ)

———

' ಮಂಕುತಿಮ್ಮನ ಕಗ್ಗ ' ದಲ್ಲಿ ಜೀವನದೃಷ್ಟಿ

ಎಸ್. ಆರ್. ರಾಮಸ್ವಾಮಿ

ಡಿ.ವಿ.ಜಿ. ಅವರಿಗೆ ಅತ್ಯಂತ ನಿಕಟವರ್ತಿಗಳಾಗಿ, ಆತ್ಮೀಯರಾಗಿ ಇದ್ದವರು ಶ್ರೀ ಎಸ್. ಆರ್. ರಾಮಸ್ವಾಮಿಯವರು. 'ಮಂಕುತಿಮ್ಮನ ಕಗ್ಗ'ದಲ್ಲಿ ಕಂಡುಬರುವ ಡಿ.ವಿ.ಜಿ. ಅವರ ಜೀವನದೃಷ್ಟಿಯನ್ನು ಸೋದಾಹರಣವಾಗಿ ಬಿಡಿಸಿ ತೋರಿಸಿದ್ದಾರೆ ಇವರು. ಹೆಚ್ಚಿನ ಸಂಖ್ಯೆಯಲ್ಲಿ (ಸು. 25 ಇಡಿಯ ಪದ್ಯಗಳು, ಮತ್ತು ಹಲವು ಸಾಲುಗಳು) 'ಕಗ್ಗ'ದ ಪದ್ಯಗಳನ್ನು ಉದ್ಧರಿಸಿಕೊಟ್ಟು, ಅವರ ಜೀವನದೃಷ್ಟಿಯನ್ನು ವಿಶದಪಡಿಸಿದ್ದಾರೆ. "ಮನುಷ್ಯಜೀವನವನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡುವುದರಿಂದ ಕವಿಯ ಅಂತರಂಗದಲ್ಲಿ ಉಂಟಾದ ಭಾವನಾವೈಚಿತ್ರ್ಯಗಳು 'ಕಗ್ಗ'ದಲ್ಲಿ ಕಾವ್ಯರೂಪ ಪಡೆದಿವೆ. ಈ ವಿವಿಧ ನಿಲುವುಗಳಲ್ಲಿ, ಭಾವಸ್ಫುರಣೆಗಳಲ್ಲಿ ವೈವಿಧ್ಯವಿದೆಯೇ ಹೊರತು ಅಂತರ್ವಿರೋಧವಿಲ್ಲ. ಜೀವನದ ಸಾರ್ಥಕತೆಗೂ ಸೊಬಗಿಗೂ ಆಧಾರಗಳಾದ ಜೀವನೋತ್ಸಾಹ, ಪುರುಷಪ್ರಯತ್ನ, ಲೋಕಸ್ನೇಹ ಮೊದಲಾದ ಮೌಲ್ಯಗಳ ಸ್ಥಿರೀಕರಣ ಈ ಪದ್ಯರಾಶಿಯಲ್ಲಿ ಬಗೆಬಗೆಯಾಗಿ ಮಿಂಚಿದೆ." ಜೀವನ ಆದರಣೀಯವಾದದ್ದು. ಬದುಕಬೇಕಾದದ್ದು ಅನಿವಾರ್ಯ. ಬದುಕಬೇಕು ಮಾತ್ರವಲ್ಲ, ಚೆನ್ನಾಗಿ ಬದುಕು. ಇದೇ ಕಗ್ಗದ ಒಟ್ಟಿನ ಆಶಯ.

ಡಿ.ವಿ.ಜಿ.ಯವರ ಕೃತಿಗಳಲ್ಲಿ ಕವನಗಳಿವೆ, ಹಾಡುಗಳಿವೆ, ಶಾಸ್ತ್ರವ್ಯಾಖ್ಯೆಗಳಿವೆ, ರಾಜಕೀಯಾದಿ ವಿವೇಚನೆಗಳಿವೆ. ಅವರು ಸಾಹಿತ್ಯಕೃಷಿಯನ್ನು ಆರಂಭಿಸಿದ ಕಾಲದಲ್ಲಿ ಕನ್ನಡದಲ್ಲಿ ಎಲ್ಲ ಸಾಹಿತ್ಯಪ್ರಕಾರಗಳ ಕೊರತೆಯಿತ್ತು. ಹೀಗಾಗಿ, ಆ ನವೋದಯ ಯುಗದ ಇತರ ಅಧ್ವರ್ಯುಗಳಂತೆ ಡಿ.ವಿ.ಜಿ.ಯವರೂ ಹಲವಾರು ಪ್ರಕಾರಗಳಿಗೆ ಮನಸ್ಸು ಕೊಡಬೇಕಾಯಿತು. ಹೀಗೆ ನಾಟಕ, ಮಕ್ಕಳ ಕಥೆಗಳೊಂದೆರಡನ್ನೂ ಅವರು ಬರೆದರು. ಅವರ ಬರಹಗಳಲ್ಲಿ ಹೆಚ್ಚಿನವು ಸಮಕಾಲೀನ ಸಾಮಾಜಿಕ ಪರಿಸ್ಥಿತಿಯಿಂದ ಪ್ರೇರಣೆ ಪಡೆದವು. ಜನಸಾಮಾನ್ಯರ ಮನಸ್ಸು ಬಗೆಬಗೆಯ

ಗೊಂದಲಗಳಿಗೆ ಈಡಾಗಿರುವ ಕಾರಣ ಕೆಲವು ದಿಕ್ಸೂಚಿ ಸೂತ್ರಗಳನ್ನು ಸೂಚಿಸುವುದು ಆಗತ್ಯವೆನಿಸಿತು ಅವರಿಗೆ. ಅರ್ಧಶತಮಾನದ ಅವಧಿಯಲ್ಲಿ ಈ ಉದ್ದೇಶದಿಂದ ಅವರು ಹಲವಾರು ದಿಕ್ಕುಗಳಲ್ಲಿ ಪ್ರಯತ್ನ ಮಾಡಿದರು : 'ಶ್ರೀರಾಮ ಪರೀಕ್ಷಣಂ', 'ಬಾಳಿಗೊಂದು ನಂಬಿಕೆ', 'ಸಂಸ್ಕೃತಿ' ಮುಂತಾದ ಬರಹಗಳು ಒಂದು ಕಡೆ; ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಚಟುವಟಿಕೆಗಳಲ್ಲಿ ಇನ್ನೊಂದು ರೀತಿಯಲ್ಲಿ. ಪ್ರತಿ ವಾರ ನಡೆಯುತ್ತಿದ್ದ ವ್ಯಾಸಂಗಗೋಷ್ಠಿಯೂ ಇದಕ್ಕೊಂದು ಮಾಧ್ಯಮವಾಗಿತ್ತು.

ಕೃತಿಯ ಆವಿಷ್ಕಾರ

ಆದರೆ ವ್ಯಾಪಕ ರೀತಿಯಲ್ಲಿ ಜನಸಾಮಾನ್ಯರಿಗೆ ತಮ್ಮ ಚಿಂತನೆಯನ್ನು ನಿವೇದಿಸಬೇಕೆಂಬ ಹಂಬಲ ಡಿ.ವಿ.ಜಿ.ಯವರ ಮನಸ್ಸಿನಲ್ಲಿ ಮೊದಲ ಬಾರಿಗೆ ಉದಿಸಿದ್ದು ಬಹುಶಃ ಈ ಶತಮಾನದ ಎರಡು–ಮೂರನೇ ದಶಕಗಳಷ್ಟು ಹಿಂದೆಯೇ. ಆಗ ಅವರ ಮನಸ್ಸಿನಲ್ಲಿದ್ದ ಯೋಚನೆಯನ್ನು ಅವರು ಒಮ್ಮೆ ಹೀಗೆ ವಿವರಿಸಿದ್ದರು: ನಾನು ಬಾಲ್ಯದಲ್ಲಿ ಕೋಲಾರ ಮುಂತಾದ ಬಸ್‌ಸ್ಟ್ಯಾಂಡುಗಳಲ್ಲಿ ಪುಸ್ತಕ ಮಾರುವವರನ್ನು ನೋಡಿದ್ದೆ. ಅಲ್ಲಿ ಮಾರಾಟವಾಗುತ್ತಿದ್ದ ಪುಸ್ತಕಗಳಲ್ಲಿ ಹೆಚ್ಚಿನವು 'ಕಾಲಜ್ಞಾನ ತತ್ತ್ವಗಳು', 'ಬ್ರಹ್ಮಾನಂದ ಪದ್ಯಾವಲಿ' ಇಂಥವು. ಅದೇ ಬಗೆಯ ಒಂದಷ್ಟು ಹೊಸ ನೀತಿಬೋಧಕ ಪದ್ಯಗಳನ್ನು ಬರೆದು. ಅವುಗಳನ್ನು ಹೆಸರಿಲ್ಲದೆ (ಅನಾನಿಮಸ್) ಪ್ರಚಾರ ಮಾಡಿ ಜನಗಳ ಪ್ರತಿಕ್ರಿಯೆ ನೋಡುವುದು : ಜನಕ್ಕೆ ಹಿಡಿಸಿದರೆ ಇನ್ನಷ್ಟು ಬರೆಯುವುದು—ಎಂದು ಯೋಚಿಸಿದೆ."

ಈ ಯೋಚನೆ ಕಾರ್ಯಗತವಾಗಿ 'ಮಂಕುತಿಮ್ಮನ ಕಗ್ಗ'ವಾಗಿ ಬೆಳಕು ಕಂಡದ್ದು ನಲವತ್ತರ ದಶಕದ ಆರಂಭದಲ್ಲಿ. ಕೆಲವೇ ವರ್ಷಗಳಲ್ಲಿ ಈ ಕೃತಿ ಪಡೆದ ಅಸಾಧಾರಣ ಜನಪ್ರಿಯತೆ, ಇಂಥ ಬರಹ ಜನದ ಒಂದು ದೊಡ್ಡ ಕೊರತೆಯನ್ನು ಪೂರೈಸಿತೆಂಬುದನ್ನು ಸಾಕ್ಷ್ಯಪಡಿಸಿತು. ಮೊದಲ ಇಪ್ಪತ್ತು ವರ್ಷಗಳಲ್ಲಿ ಹತ್ತು ಸಾವಿರ ಪ್ರತಿಗಳು ಮಾರಾಟವಾದವು. (ಮುದ್ರಣಾದಿ ಸೌಕರ್ಯ ಹೆಚ್ಚು ಇದ್ದಿದ್ದಲ್ಲಿ ಇನ್ನೂ ಹೆಚ್ಚು ಆವೃತ್ತಿಗಳು ಬಂದಿರಬಹುದಾಗಿತ್ತೇನೋ.) ಇದು ಆ ಕಾಲಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ಒಂದು ದಾಖಲೆ.

ಈ ಹಿನ್ನೆಲೆಯನ್ನು ಡಿ.ವಿ.ಜಿ. 'ಕಗ್ಗ'ದ ನಾಲ್ಕನೆಯ ಆವೃತ್ತಿಯ ಮುನ್ನುಡಿಯಲ್ಲಿ ಉಲ್ಲೇಖಿಸಿದ್ದಾರೆ : "ನಮ್ಮ ಪೂರ್ವಿಕರು ಮಕ್ಕಳಿಗೆ ಹೆಸರಿಡುವುದರಲ್ಲಿ ಒಂದು ವಿಶೇಷ ಪದ್ಧತಿಯನ್ನಿಟ್ಟುಕೊಂಡಿದ್ದರು. ಮೊದಲ ಎರಡು ಮೂರು ಮಕ್ಕಳು ಕಳೆದುಹೋಗಿದ್ದರೆ ಮೂರನೆಯದಕ್ಕೋ ನಾಲ್ಕನೆಯದಕ್ಕೋ ಗುಂಡಪ್ಪ, ಕಲ್ಲಪ್ಪ, ತಿಪ್ಪಯ್ಯ, ಹುಚ್ಚಯ್ಯ–ಎಂದು ಹೆಸರು ಕೊಡುತ್ತಿದ್ದರು. ಅದರ ಭಾವ ಆ ಮಗುವಾದರೂ ಎಲ್ಲಾದರೂ ಗುಂಡುಕಲ್ಲಿನಂತೆ. ತಿಪ್ಪೆಯ ರಾಶಿಯಂತೆ

ಆಯುಸ್ಸುಂಟಾಗಿ ಬಾಳಿಕೊಳ್ಳಲಿ—ಎಂದು. ಈ ಗ್ರಂಥ ಮೊದಲು ಪ್ರಕಟವಾದಾಗ ಇದ್ದ ಮನೋಭಾವ ಅಂಥಾದ್ದು. ಇದು ಪಂಡಿತರನ್ನೂ ಪ್ರಸಿದ್ಧರನ್ನೂ ಪುಷ್ಟರನ್ನೂ ಉದ್ದೇಶಿಸಿದ್ದಲ್ಲ. ಬಹುಸಾಮಾನ್ಯರಾದವರ ಮನೆಯ ಬೆಳಕಿಗೆ ಇದು ಒಂದು ತೊಟ್ಟು ನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ."

ಇದಿಷ್ಟು 'ಕಗ್ಗ'ವನ್ನು ಕುರಿತಾಯಿತು. ಇನ್ನು 'ಮಂಕುತಿಮ್ಮ'ನ ಆವಿಷ್ಕಾರ ಕುರಿತು ಹೇಳುವುದಾದರೆ—ಇದೂ ಸಾಕಷ್ಟು ಚಿಂತನೆಯಿಂದ ನಿರ್ಧಾರವಾದ ಹೆಸರೇ.

'ಕಗ್ಗ'ದ ಆರಂಭದಲ್ಲಿ ಒಂದು ಚಿತ್ರ ಇದೆ: ಒಂದು ಪಾಳುಗವಿಯಲ್ಲಿ ಧ್ಯಾನಮಗ್ನನಾದ ಒಬ್ಬನ ಚಿತ್ರ. ಗವಿಯಲ್ಲಿ ಬೆಳಕಿಲ್ಲದ ಕಾರಣ ಎಲ್ಲವೂ ಮಬ್ಬಾಗಿದೆ. ದಿಟ್ಟಿಸಿ ನೋಡಿದರೆ ಮಾತ್ರ ಆಕೃತಿ ಕಾಣುತ್ತದೆ. ಪುಸ್ತಕವನ್ನು ನೋಡಿದ ಒಬ್ಬ ಮಹನೀಯರು 'ಚಿತ್ರ ಸರಿಯಾಗಿ ಮುದ್ರಣವಾಗಿಲ್ಲ' ಎಂದು ಡಿ.ವಿ.ಜಿ. ಯವರಿಗೆ ದೂರಿದ್ದರು ! ವಾಸ್ತವವಾಗಿ ಚಿತ್ರ ಹಾಗೆ ಇರುವುದು ಉದ್ದೇಶಪೂರ್ವಕವೇ. ಜಗತ್ತಿನಲ್ಲಿ ಅನೇಕ ಮುಖ್ಯ ತತ್ತ್ವಗಳು ಸ್ಥೂಲವಾಗಿ ಜನರಿಗೆ ಗೋಚರಿಸುತ್ತವೆ —ಅವ್ಯುತ್ಪನ್ನರಿಗೆ ಕೂಡ. ಆಳಕ್ಕೆ ಹೊಕ್ಕು ವಿಚಾರಿಸಿದಾಗ ಅನೇಕ ಸಂಗತಿಗಳು ಅಸ್ಪಷ್ಟವಾಗಿಯೇ ಉಳಿಯುತ್ತವೆ—ಶಾಸ್ತ್ರಜ್ಞರಿಗೆ ಕೂಡ. ಜಗತ್ತಿನ ಬಗ್ಗೆ ಇರುವ, ಸಾಧ್ಯವಿರುವ ಅರಿವು ಪರಿಮಿತ—ಎಂಬುದನ್ನು ಸೂಚಿಸುವುದು ಆ ಚಿತ್ರದ ಇಂಗಿತ. "ಎಲ್ಲ ಅರೆಬೆಳಕು ಅರೆಸುಳಿವು ಅರೆತಿಳಿವಿಲ್ಲಿ." (68)

ಬಚ್ಚಿಟ್ಟುಕೊಂಡಿಹುದೆ ಸತ್ಯ ಮಿಥ್ಯೆಯ ಹಿಂದೆ ?
ನಚ್ಚುವುದೆ ಮರೆಯೊಳಿಹುದನೆ ಸತ್ಯವೆಂದು ?
ಅಚ್ಚರಿಯ ತಂತ್ರವಿದು ; ಬ್ರಹ್ಮ ಸೃಷ್ಟಿಗಳೇಕೊ
ಮುಚ್ಚಿಹವು ಸಾಜತೆಯ—ಮಂಕುತಿಮ್ಮ (31)

ಅರೆಬೆಳಕು

ಮನುಷ್ಯನ ಭಾಷೆ ಪರತತ್ತ್ವವನ್ನು ಸಂಪೂರ್ಣವಾಗಿ ನಿವೇದಿಸಲು ಸಮರ್ಥ ವಲ್ಲ. 'ಒರಟುಯಾನವೊ ಭಾಷೆ' (63).

ಮಂದಾಕ್ಷಿ ನಮಗಿಹುದು, ಬಲುದೂರ ಸಾಗದದು
ಸಂದೆಮುಸಕಿನೊಳಿಹುದು ಜೀವನದ ಪಥವು
ಒಂದುಮೆಟಕದು ಕೈಗೆ ; ಏನೊ ಕಣ್ಕಿಣಕುವುದು
ಸಂದಿಯುವೆ ನಮ್ಮ ಗತಿ !—ಮಂಕುತಿಮ್ಮ (44)

'ಮಂಕು' ಎಂದರೆ ಅರೆಸ್ಪಷ್ಟ. ಪ್ರಖರ ಬೆಳಕು ಇಲ್ಲದ ಕಾರಣ ಅರ್ಧರ್ಧ ಕಾಣುತ್ತಿದೆ. ಏನೂ ತಿಳಿದಿಲ್ಲವೆಂಬ ಅಜ್ಞಾನ ಇದಲ್ಲ. ಎಲ್ಲ ಅರಿತವೆಂಬ ಸಮಗ್ರ

ಪ್ರಶ್ನೆ ಇಲ್ಲಿ ಇಲ್ಲ. ಆದರೂ ಜೀವನ ನಿರ್ವಹಣೆಗೆ ಬೇಕಾದಷ್ಟು ವಿವೇಕ ಲಭ್ಯವಿದೆ —ಎಂಬುದು 'ಕಗ್ಗ'ದ ಧ್ವನಿ.

ಅರೆಗಣ್ಣು ಸಮದೆಂದು ಕೊರಕೊರಗಿ ಫಲವೇನು?
ಅರೆಬೆಳಕು ಧರೆಯೊಳೆಂದೊರಲಿ ಸುಖವೇನು?
ಇರುವ ಕಣ್ಣಿರುವ ಬೆಳಕಿನೊಳಾದನಿತ ನೋಡಿ
ಪರಿಕಿಸಿದೊಡದು ಲಾಭ—ಮಂಕುತಿಮ್ಮ (47)

ಮನುಷ್ಯಜೀವನವನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡುವುದರಿಂದ ಕವಿಯ ಅಂತರಂಗದಲ್ಲಿ ಉಂಟಾದ ಭಾವನಾವೈಚಿತ್ರ್ಯಗಳು 'ಕಗ್ಗ'ದಲ್ಲಿ ಕಾವ್ಯರೂಪ ಪಡೆದಿವೆ. ಈ ವಿವಿಧ ನಿಲುವುಗಳಲ್ಲಿ, ಭಾವಸ್ಫುರಣೆಗಳಲ್ಲಿ ವೈವಿಧ್ಯವಿದೆಯೇ ಹೊರತು ಅಂತರ್ವಿರೋಧವಿಲ್ಲ. ಜೀವನದ ಸಾರ್ಥಕತೆಗೂ ಸೊಬಗಿಗೂ ಆಧಾರಗಳಾದ ಜೀವನೋತ್ಸಾಹ, ಪುರುಷಪ್ರಯತ್ನ, ಲೋಕಸ್ನೇಹ ಮೊದಲಾದ ಮೌಲ್ಯಗಳ ಸ್ಥಿರೀಕರಣ ಈ ಪದ್ಯರಾಶಿಯಲ್ಲಿ ಬಗೆಬಗೆಯಾಗಿ ಮಿಂಚಿದೆ.

ತನ್ನನ್ನು 'ಮಂಕುತಿಮ್ಮ' ಎಂದು ಕರೆದುಕೊಂಡ 'ಕಗ್ಗ'ದ ಕರ್ತೃ 'ಬಿಂಕ ಕೊಂಕು ಒಂದು ಅರಿಯದಿದ್ದ ಸಾಧು'. ತನ್ನನ್ನು ತಾನೇ ಪ್ರಶ್ನಿಸಿಕೊಂಡು ಒಂದಷ್ಟು ವಿವೇಕ ಗಳಿಸಿಕೊಂಡವನು: 'ನೀಗುತಿದ್ದನಾಯುವನ್ನು ಸರಳಮನದ ತೃಪ್ತಿಯಿನ್.' 'ಆಡನತಿಯ ನುಡಿಗಳಂ. ಎಲ್ಲರಂತೆ ಒಂದಷ್ಟು ವರ್ಷ ಜೀವನ ಯಾತ್ರೆ ನಡಸಿದ ಮೇಲೆ 'ಈಗಳೆನಗಮಂತರಾತ್ಮಸೇವೆಯೊಂದೆ ತಕ್ಕುದು' ಎಂದು ನಿರ್ಧರಿಸುತ್ತಾನೆ. 'ಇದುವೆ ಸಮಯ ಪುಣ್ಯಯಾತ್ರೆಗಿನ್ನು ತಡವು ಸಲ್ಲದು'—ಎಂದು ತೀರ್ಥಯಾತ್ರೆಗೆ ಹೊರಡುವ ಮುಂಚೆ 'ಸೋಮಿ'ಗಾಗಿ ಬಿಟ್ಟುಹೋದ 'ಏನೊ ಬರೆದ ಕಡತ'—ಅದೇ 'ಕಗ್ಗ'.

ತುಂಬ ಬೆದಕಿ ನೋಡಿದರೆ ಸೃಷ್ಟಿಯಿಂದ ಸೌರಭ ಹೊರಡುವುದಕ್ಕೆ ಬದಲಾಗಿ ದುರ್ಗಂಧವೇ ಹೊರಟೀತು. ಮಹಾಕಾವ್ಯದಲ್ಲಿ 'ಜುಡಿಷಸ್ ಅಬ್ಸ್‌ಕ್ಯುರಿಟಿ' ಎಂಬ ಆಲಂಕಾರಿಕ ಗುಣವನ್ನು ಎಡ್ಮಂಡ್ ಬರ್ಕ್ ಮಹತ್ತ್ವದ್ದೆಂದಿದ್ದಾನೆ. ಅಂತೆಯೇ ಜಗದ್ವ್ಯವಹಾರದಲ್ಲಿಯೂ ಕೆಲವು ಸಂಗತಿಗಳ ಅಸ್ಪಷ್ಟತೆಯಿಂದಾಗಿಯೇ ಅವಕ್ಕೆ ವಿಶೇಷ ಸೌಂದರ್ಯ ಪ್ರಾಪ್ತವಾಗಿದೆ. ಈ ಸಂಗತಿಗಳ ಶಸ್ತ್ರವಿಚ್ಛೇದ ವ್ಯರ್ಥ ಪ್ರಯಾಸವಾದೀತು.

ಅರಿತೆನಾನೆನ್ನುವಂತಾಗೆ ಕೃತಿಕೌಶಲದ
ಹಿರಿಮೆಗದು ಕುಂದಲ್ತೆ?—ಮಂಕುತಿಮ್ಮ (35)

ಪ್ರಶ್ನೆಗಳ ಸರಣಿ

‘ಕಗ್ಗ’ದ ಆರಂಭದ ಭಾಗದಲ್ಲಿ—(ಪದ್ಯಗಳಲ್ಲಿ ಕಟ್ಟುನಿಟ್ಟಾದ ವಿಷಯಾನುಕ್ರಮವೇನಿಲ್ಲ ; ಸೌಕರ್ಯಕ್ಕಾಗಿ ಮುದ್ರಿತಾಕಾರದ ಮೊದಲ ಪದ್ಯಗಳನ್ನು ಆರಂಭದ ಭಾಗವೆನ್ನಬೇಕಾಗಿದೆಯಷ್ಟೆ)—ಪ್ರಶ್ನೆಗಳ ಸರಮಾಲೆಯನ್ನು ಕಾಣುತ್ತೇವೆ : ‘ಏನು ಜೀವನದರ್ಥ ?’ ‘ಏನು ಜೀವ–ಪ್ರಪಂಚಗಳ ಸಂಬಂಧ ?’ ‘ಸಾವು–ಹುಟ್ಟುಗಳೇನು ?’ ‘ಜೀವಗಳು ಶ್ರಮಪಡುವುದೇಕಿಂತು ?’ ‘ಮಾನವನ ಗುರಿಯೇನು ? ಬೆಲೆಯೇನು? ಮುಗಿವೇನು ?’ ‘ಆವುದೀ ಜಗಕಾದಿ ?’—ಇತ್ಯಾದಿ.

ಆರಂಭದಲ್ಲಿ ಈ ಪ್ರಶ್ನೆಗಳು ಬಂದಿರುವ ಕಾರಣ ಅನಂತರ ಅವುಗಳಿಗೆ ಉತ್ತರಗಳನ್ನು ಕವಿಯಿಂದ ನಾವು ನಿರೀಕ್ಷಿಸುವುದು ಸಹಜ. ಕೆಲವು ಪ್ರಶ್ನೆಗಳಿಗೆ ಯುಕ್ತಿಸಮ್ಮತ. ಶಾಸ್ತ್ರಸಮ್ಮತ ಉತ್ತರಗಳೂ ಇವೆ. (ಉದಾಹರಣೆಗೆ : ಸೃಷ್ಟಿ ಸಿದ್ಧಾಂತ—ಪದ್ಯಗಳು 74–78 ; ಕರ್ಮ ಸಿದ್ಧಾಂತ–ಪದ್ಯಗಳು 322–314). ಆದರೆ ಹೆಚ್ಚಿನಂಶ ಪದ್ಯಗಳ ಸಾರ, ನಾವು ತಲೆಕೆಡಿಸಿಕೊಳ್ಳಬೇಕಾದ ಪ್ರಶ್ನೆಗಳು ಬೇರೆಯಿವೆ—ಎಂಬುದು.

ತಾರ್ಕಿಕ ಪ್ರಶ್ನೆಗಳಿಗೆ ಪರಿಹಾರ ನೀಡಬೇಕೆಂಬುದಕ್ಕಿಂತ ಜೀವನದ ವಿಷಮ ಪರಿಸ್ಥಿತಿಗಳಲ್ಲಿ ಸಮಾಧಾನ ನೀಡುವ ಅಂಶಗಳತ್ತ ತೋರ್‌ಬೆರಳನ್ನು ಚಾಚುವುದು ಇಲ್ಲಿಯ ಉದ್ದೇಶ. ಈ ಸಂಗತಿಯಿಂದಾಗಿಯೇ ‘ಕಗ್ಗ’ ಇಷ್ಟು ಹೆಚ್ಚಿನ ಜನಾದರಣೆ ಪಡೆದಿರುವುದು.

ಶುಷ್ಕಪಾಂಡಿತ್ಯವು ಮೂಲಭೂತ ಪ್ರಶ್ನೆಗಳಿಗೆ ಸಮರ್ಥ ಉತ್ತರ ನೀಡಲಾರದೆಂದು ಕಂಠೋಕ್ತವಾಗಿಯೇ ಕವಿಯ ಘೋಷಣೆಯಿದೆ :

ಪಂಡಿತರ ಶಾಸ್ತ್ರಗಳೆ ವಿಧ್ಯೆಯಿಂ ತಥ್ಯಕ್ಕೆ
ಖಂಡಿತದ ಸೇತುವೆಯ ಕಟ್ಟುವೊಡೆ ನೀವು
ಕಂಡಿಹಿರ ನರಹೃದಯದಾಳ ಸುಳಿ ಬಿರುಬುಗಳ ?
ದಂಡವದನುಳಿದ ನುಡಿ—ಮಂಕುತಿಮ್ಮ (49)

ಮನೆಯೆಲ್ಲಿ ಸತ್ಯಕ್ಕೆ ? ಶ್ರುತಿತರ್ಕಮಾತ್ರದೊಳೆ ?
ಅನುಭವಮುಖದರಿಂದು ನೆಲೆಯಾಗಬಹುದೇಂ ?
ಮನುಜಹೃದಯಾಂಗಣದೊಳೆನಿತೆನಿತೊ ಮಾಯೆಯದಿ,
ಅಣಕಿಪುವು ತರ್ಕವನು—ಮಂಕುತಿಮ್ಮ (50)

ಶಾಸ್ತ್ರಜಿಜ್ಞಾಸೆಗೆ ಅನೇಕ ಪರಿಮಿತಿಗಳುಂಟು. ಅವನ್ನು ತುಂಬಬಲ್ಲದ್ದು ಅಂತರ್ವೀಕ್ಷೆ :

ಸುಳಿವುದಾಗೀಗಳದು ಸೂಕ್ಷ್ಮಾನುಭವಗಳಲಿ
ತಿಳಿಮನದೆ ನೋಳ್ಪರ್ಗೆ—ಮಂಕುತಿಮ್ಮ (54

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ
ವಸ್ತುಸಾಕ್ಷಾತ್ಕಾರವಂತರೀಕ್ಷಣೆಯಿಂದ
ಶಾಸ್ತ್ರಿತನದಿಂದಲ್ಲ—ಮಂಕುತಿಮ್ಮ (65)

ಎಲ್ಲ ಸಿದ್ಧಾಂತದ ಒರೆಗಲ್ಲಾಗಬೇಕಾದದ್ದು ಸ್ವಾನುಭವ.

ನಕ್ಷತ್ರಮಂಡಲದಿನಾಚೆಯಿಂದೊಂದು ದನಿ
ವಕ್ಷೋಗುಹಾಂತರದಿನೊಂದು ದನಿಯಿಂತೀ
ಸಾಕ್ಷಿದ್ವಯವು ನಿನ್ನೊಳೊಂದುಗೂಡಿದೊಡದೇ
ಪ್ರೇಕ್ಷೆ ಪರಬೊಮ್ಮನದು—ಮಂಕುತಿಮ್ಮ (61)

ಬಾಳ್ವೆಯೇ ಶಾಲೆ

"ಏಕಾತ್ಮತೆಯು ಬಾಳ್ವೆಯಿಂ ಕಲಿಯಲ್" ಸಲ್ಲುವುಪಕರಣಗಳು—ಮನೆ ರಾಜ್ಯ ಸಂಸಾರ. ಆದ್ದರಿಂದ "ವ್ಯರ್ಥವೀ ಜೀವನದ ಬಡಿವಾಟವೆನ್ನದಿರು".

ಒಲ್ಲೆನೆನದಿರು ಬಾಳನ್, ಒಲವದೇನೆನ್ನದಿರು
ಉಲ್ಲಾಸಕೆಡೆಮಾಡು ನಿನ್ನಿನಾದೆನಿತು
ನಿಲ್ಲು ಕೆಚ್ಚೆದೆಯಿಂದಲನ್ಯಾಯುಗಳನ್ನಳಿಸೆ
ಎಲ್ಲಕಂ ಸಿದ್ಧನಿರು—ಮಂಕುತಿಮ್ಮ (258)

ಆಕಾಶ ತಲೆಯ ಮೇಲೆ ಕವಿದಂತೆ ಚಿಂತಿಸಿ ನಿಷ್ಕ್ರಿಯರಾಗಿ ಕೂಡುವುದಕ್ಕಿಂತ ಅನಿವಾರ್ಯವಾದ್ದನ್ನು ದಿಟ್ಟತನದಿಂದ ಸ್ವೀಕರಿಸಿ ಉನ್ಮುಖರಾಗುವುದು ವಿವೇಕಮಾರ್ಗ.

ಊಳಿಗವೊ ಕಾಳಗವೊ ಕೂಳ್ಕರೆಯೊ ಗೋಳ್ಕರೆಯೊ
ಬಾಳು ಬಾಳದೆ ಬಿಡದು—ಮಂಕುತಿಮ್ಮ (249)

ಅಡಿ ಜಾರಿ ಬೀಳುವುದು, ತಡವಿಕೊಂಡೇಳುವುದು (345)

ಜಗತ್ತಿನಲ್ಲಿ ಮೇಲುಮೇಲಕ್ಕೆ ತೋರುವ ಅಸಮಂಜಸತೆಗಳನ್ನು ಸಮನ್ವಯಿಸ ಲಾಗುವುದು ಸಮಗ್ರ ತಾತ್ತ್ವಿಕ ದೃಷ್ಟಿ ತಳೆದಾಗ ಮಾತ್ರ.

ಹುಲ್ಲೆಯನು ತಿನುವ ಹುಲಿಯೊಣಹುಲ್ಲನುಣಲಹುದೆ ?
ಎಲ್ಲಿ ಸೃಷ್ಟಿಯಲಿ ದಯೆ ?—ಮಂಕುತಿಮ್ಮ (244)

ಈವರಾರ್ ಕೊಳುವರಾರೆಲ್ಲರೊಂದಾಗಿರಲು ?
ನೈವೇದ್ಯಭಾಗಿ ನೀಂ—ಮಂಕುತಿಮ್ಮ (250)

ತಾರಕಮಾರ್ಗ

ಜಗತ್ತಿನಲ್ಲಿ ಏರುಪೇರುಗಳಿಲ್ಲವೆಂದಲ್ಲ. ಅವುಗಳಿಂದ ವಿಚಲಿತರಾಗದಂತೆ ತಾತ್ತ್ವಿಕ ದೃಷ್ಟಿ ಬೆಳಸಿಕೊಳ್ಳುವುದೇ ತಾರಕಮಾರ್ಗ.

ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು
ಅಸಮಂಜಸದಿ ಸಮನ್ವಯ ಸೂತ್ರ ನಯವ
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ
ರಸಿಕತೆಯೆ ಯೋಗವೆಲೊ—ಮಂಕುತಿಮ್ಮ (241)

ಯಾವುದೋ ಕೆಲಸ ಎಡವಟ್ಟಾಯಿತೆಂದು ಕೈಕಟ್ಟಿ ಕೂಡುವುದು ಸಲ್ಲದು. ನಿರಂತರ ಯತ್ನಶೀಲತೆಯೇ ಮನುಷ್ಯನ ಇರುವಿಕೆಗೂ ಉನ್ನತಿಗೂ ಆಧಾರ.

ಬೀಳುವುದೆ ನಿಲ್ಲಿಪುದು, ಬಿದ್ದುದನು ಕಟ್ಟುವುದು
ಹಾಲೊಡೆಯೆ ಕಡೆದದನು ತಕ್ರವಾಗಿಪುದು
ಹಾಳ ಹಾಳಾಗಿಪುದು, ಹಳದ ಹೊಸತಾಗಿಪುದು
ಬಾಳಿಗಿದೆ ಚಿರಧರ್ಮ—ಮಂಕುತಿಮ್ಮ (232)

ಸಾಜವಂ ಶಿಕ್ಷಿಸುತೆ ಲೋಕಸಂಸ್ಥಿತಿಗದನು
ಯೋಜಿಪುದೆ ನರಮಹಿಮೆ—ಮಂಕುತಿಮ್ಮ (213)

ಆದರೆ ಗಿಳಿ, ಗೂಗೆ, ಕಾಗೆ. ಕೋಗಿಲೆ, ಹದ್ದು, ನವಿಲು ತಲೆಯೊಳಗೆ ನೆರೆದು ಕಿರಿಚಿ ಕೂಗುತ್ತಿರುವಾಗ ನಿದ್ರೆ ಹೇಗೆ ಬಂದೀತು !

ನಮ್ಮ 'ಬೇಕು'ಗಳನ್ನು ಅಪರಿಮಿತವಾಗಿ ಬೆಳಸಿಕೊಳ್ಳುತ್ತಿರುವುದು ಮಾನಸಿಕ ಅಶಾಂತಿಯ ಮೂಲ. ಬಯಕೆಗಳಿಗೆ ಕೊನೆಯಿಲ್ಲ.

ತಂಗಳುಣಿಸಾದೊಡಂ ಸಾಕೆನುವನುಪವಾಸಿ
ಸಿಂಗಾರ ಸಂಗಾತಿ ಬೇಕುಂಡವನಿಗೆ
ಬಂಗಾರ ಪದವಿ ಪ್ರತಿಷ್ಠೆ ಬೇಕಾ ಬಳಿಕ
ಹಿಂಗದಾಯೆದೆಚಿಲುಮೆ—ಮಂಕುತಿಮ್ಮ (210)

ನೈಸರ್ಗಿಕ ಸಮಸ್ಯೆಗಳೂ ಹಲವಿದ್ದಾವು. ಆದರೆ ಇದಕ್ಕೂ ಹೆಚ್ಚಿನವು ಆಗುತುಕ ರೀತಿಯುವು :

ಹೊಟ್ಟೆಯೊಂದರ ರಗಳೆ ಸಾಲದೆಂದೇನೊ ವಿಧಿ
ಹೊಟ್ಟೆಕಿಚ್ಚಿನ ಕಿಡಿಯು ನೆಟ್ಟಿಹನು ನರನೊಳ್ ! (200)

ನಮ್ರತೆ ಮನುಷ್ಯನಿಗೆ ವಿಹಿತವಾದ ಗುಣ. ಏಕೆಂದರೆ—

ನಭದ ಬಯಲೊಳನಂತ, ಮನದ ಗುಹೆಯೊಳನಂತ
ವುಭಯದಾ ನಡುವೆ ಸಾದ್ಯಂತ ಜೀವಕಥೆ (85)

ನಮಗಿಂತ ದೊಡ್ಡ ಶಕ್ತಿಯೊಂದಿದೆ ಎಂಬ ನಂಬಿಕೆ ಅಗತ್ಯ, ಅನಿವಾರ್ಯ ಮಾತ್ರವಲ್ಲ, ಸಂಸ್ಕಾರಕಾರಿಯೂ ಹೌದು.

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು—ಮಂಕುತಿಮ್ಮ (600)

ಸೃಷ್ಟಿವೈಭವ

ವಿಜ್ಞಾನಾದಿ ಕ್ಷೇತ್ರಗಳ ಪ್ರತಿಭಾವಂತರಿಗೂ ನಮ್ರತೆ ಸಲ್ಲುವ ಗುಣ. ವಿಜ್ಞಾನಿಗಳ ಸಾಧನೆಗಳು ಎಷ್ಟೇ ಆಶ್ಚರ್ಯಕರವಾದರೂ ಅವರ ಮೂಲಸಾಮಗ್ರಿ ದೈವದತ್ತವೇ. ಈಗಾಗಲೇ ಸೃಷ್ಟಿಗೊಂಡಿರುವ ಜಗತ್ತನ್ನು ಹೊರತುಪಡಿಸಿದಲ್ಲಿ ವಿಜ್ಞಾನಿಗೆ ಕಾರ್ಯಕ್ಷೇತ್ರವೇ ಇರದು.

ಗಣಿತಸಾಧ್ಯದ ಹಿಂದಗಣ್ಯದ ಮಹತ್ತತ್ತ್ವ
ವಣಗಿಹುದು ಮೂಲವದು—ಮಂಕುತಿಮ್ಮ (113)

'ದೈವದದ್ಭುತ'ದ ಬಗೆಗೆ ಅಚ್ಚರಿತುಂಬಿದ ಉದ್ಗಾರ ಇಲ್ಲಿದೆ :

ಮೇಲಿಂದ ನಕ್ಷತ್ರಜಯಘೋಷ ಸುತ್ತಣಿ
ಭೂಲೋಕದರಚು ಕೆಳಗಿಂ ಮೂಳೆಯುಳುವು (56)

ಆಗುಂಬೆಯಸ್ತಮಯ ದ್ರೋಣಪರ್ವತದುದಯ
ತ್ಯಾಗರಾಜನ ಗಾನ ವಾಲ್ಮೀಕಿ ಕವನ
ಆಗಿಸವೆ ತಾವಿವೆಮ್ಮಂತರಂಗದಿ ಸತ್ಯ
ಯೋಗಪುಲಕಾಂಕುರವ ?—ಮಂಕುತಿಮ್ಮ (57)

ಲೋಕಾತೀತ ತತ್ತ್ವದ ಸತ್ಯತೆಗೆ ಸೃಷ್ಟಿವೈಭವಕ್ಕಿಂತ ಬೇರೆ ಸಾಕ್ಷ್ಯ ಬೇಕೆ?

ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಲಹುದು ? (105)

ಸ್ವರ್ಗ, ನರಕ ಮೊದಲಾದವೆಲ್ಲ ನಮ್ಮ ಪ್ರಾಪಂಚಿಕ ಜೀವನದಲ್ಲಿಯೇ ಪ್ರತಿದಿನ ಕಾಣುವ ಅವಸ್ಥಾಭೇದಗಳು.

ದೇವದಾನವರ ರಣರಂಗ ಮಾನವಹೃದಯ
ಭಾವ ರಾಗ ಹಠಂಗಳವರ ಸೇನೆಗಳು.
ಭೂವಿಭವಜಯಗಳ ಭ್ರಾಂತಿಯಲಿ ಮರೆಯುವರು
ಜೀವಾಮೃತವನವರು—ಮಂಕುತಿಮ್ಮ (192)

ನದಿಯ ತೆರೆಯವೊಲುರುಳಿ ಹೊರಳುತಿರುವುದು ಜೀವ
ಮೊದಲಿಲ್ಲ ಮುಗಿವಿಲ್ಲ ನಿಲುವಿಲ್ಲವದಕೆ
ಬದುಕೇನು ಸಾವೇನು ಸೊದೆಯೇನು ವಿಷವೇನು ?
ಉದಕಬುದ್ಬುದವೆಲ್ಲ !—ಮಂಕುತಿಮ್ಮ (18)

ಜಗತ್ಸೂತ್ರ

ಮನುಷ್ಯ–ಮನುಷ್ಯರಲ್ಲಿ ಅಷ್ಟೆ ಅಲ್ಲ ; ಪ್ರಕೃತಿ ತತ್ತ್ವಗಳಲ್ಲಿ ಹೊಂದಾಣಿಕೆ ಇರುವುದರಿಂದಲೇ ಜೀವನ ಸಾಧ್ಯವಾಗಿರುವುದು :

ರವಿಮಾತ್ರದಿಂದಲ್ಲ ಭುವಿಮಾತ್ರದಿಂದಲ್ಲ
ಭುವನಪೋಷಣೆಯುಭಯ ಸಹಕಾರದಿಂದ
ವಿವಿಧ ಶಕ್ತಿರಸಂಗಳೇಕೀಭವಿಸೆ ಜೀವ
ಅವಿತರ್ಕ್ಯ ಸೂಕ್ಷ್ಮವದು—ಮಂಕುತಿಮ್ಮ (118)

'ನಂಟು ತಂಟೆಗಳ ಗಂಟೇ ಬ್ರಹ್ಮಭಂಡಾರ.'

ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು
ಬಂದುದೀ ವೈಷಮ್ಯ ?—ಮಂಕುತಿಮ್ಮ (14)

ಜೀವ ಜೀವಕೆ ನಂಟು ಜಡ ಚೇತನಕೆ ನಂಟು
ಆವುದದಕಂಟಿರದು ?—ಮಂಕುತಿಮ್ಮ (72)

ಜಗತ್ತೆಲ್ಲ ಏಕಸೂತ್ರಬದ್ಧವಾಗಿದೆ. ದೂರದ ದೇಶಗಳಲ್ಲಿ ನಡೆಯುವ ವಿದ್ಯಮಾನಗಳು ನಮ್ಮ ದೇಶದ ಮೂಲೆಯ ಹಳ್ಳಿಗಳ ಮೇಲೂ ಪರೋಕ್ಷ ಪ್ರಭಾವ ಬೀರುತ್ತವೆ.

ಸುರಪಸಭೆಯಲಿ ಗಾಧಿಸುತ–ವಸಿಷ್ಠ ಸ್ಪರ್ಧೆ
ಧರೆಯೊಳದರಿಂ ಹರಿಶ್ಚಂದ್ರಂಗೆ ತಪನೆ (307)

ಜೀವನದ ಆಘಾತಗಳನ್ನೂ ರಾಜಕೀಯ ವಿಕೃತಿಗಳನ್ನೂ ಕುರಿತು ಚಿಂತಿಸುವಾಗ ತಲೆ ಭಾರವಾಗುತ್ತದೆ. ಆಗ ನೆನಪಿಡಬೇಕಾದ ಸಂಗತಿ—

ಒಂದು ಕೊಂಬೆಯುಂ ಬಾಡಲಿನ್ನೊಂದು ಚಿಗುರುವುದು
ಸಂದಿಹುದು ಚಿರನವತೆಯಶ್ವತ್ಥಮರಕೆ (252)

ದಿನನಿತ್ಯದ ಧಾವಂತದಿಂದ ಯಾರಿಗೂ ಮುಕ್ತಿಯಿಲ್ಲವಾದರೂ, ಆಧ್ಯಾತ್ಮ ದೃಷ್ಟಿ ರೂಢಿಸಿಕೊಂಡಲ್ಲಿ ಮನಸ್ಸಿನ ವಿಚಲನೆ ಬಹುಮಟ್ಟಿಗೆ ತಪ್ಪುತ್ತದೆ.

ಆತುರತೆಯೇನಿರದು ವಿಧಿಯಂತ್ರಚಲನೆಯಲಿ
ಭೀತತೆಯುಮಿರದು, ವಿಸ್ಮೃತಿಯುಮಿರದೆಂದುಂ
ಸಾಧಿಪುದದೆಲ್ಲವನು ನಿಲದೆ, ತಪ್ಪದೆ, ಬಿಡದೆ
ಕಾತರತೆ ನಿನಗೇಕೆ ?—ಮಂಕುತಿಮ್ಮ (363)

"ಸ್ವಾಭಾವಿಕವ ಮರೆತು ನಭಕೇಣಿ ಹೂಡುವುದು" (310) ನರಕುಲಕ್ಕೆ ಅಭಿಶಾಪ.

ಮುಂದೇನೊ, ಮತ್ತೇನೊ, ಇಂದಿಗಾ ಮಾತೇಕೆ ?
ಸಂದರ್ಭ ಬರಲಿ, ಬಂದಾಗಳಾ ಚಿಂತೆ
ಹೊಂದಿಸುವನಾರೊ, ನಿನ್ನಾಳಲ್ಲ, ಚೇರಿಹನು
ಇಂದಿಗಿಂದಿನ ಬದುಕು—ಮಂಕುತಿಮ್ಮ (68)1

ಜೀವನ ನಯ

ಇಪ್ಪತ್ತನೆ ಶತಮಾನದ ಮಾನವ ಹಿಂದಿಗಿಂತ ಹೆಚ್ಚು ತಳಮಳಕ್ಕೆ ಸಿಲುಕಿದ್ದಾನೆ.

ಹಳೆಯ ಭಕ್ತಿಶ್ರದ್ಧೆಯಳಿಸಿಹೋಗಿವೆ ಮಾಸಿ
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ (15)

ಹಳೆಧರ್ಮ ಸತ್ತಿಹುದು ಹೊಸ ಧರ್ಮ ಹುಟ್ಟಿಲ್ಲ
ತಳಮಳಕೆ ಕಡೆಯೆಂದೊ ?—ಮಂಕುತಿಮ್ಮ (16)

ಜೀವನವನ್ನು ನಯದಿಂದ ನಿರ್ವಹಿಸಿದರೆ ಮಾತ್ರ ಸಹ್ಯವಾಗುತ್ತದೆ. ಒರಟುತನದಿಂದ ಜೀವನ ಹದಗೆಡುತ್ತದೆ.

ತೋಡದಿರು ಬಾಳ್ವೆಯಾಳವನು; ಮೇಲ್ಮೇಲೆ ನೀ
ನೋಡಾಡು ಹಗುರದಿಂ—ಮಂಕುತಿಮ್ಮ (184)

ನಯದಿಂದ ಸೋಕು, ನೀಂ ದಯೆಯಿಂದ ನೋಡದನು (274)

ಜಗತ್ತಿನಿಂದ ನಾವು ಅನುಕಂಪವನ್ನು ಕೋರಬಾರದು, ಕೊರಗಬಾರದು. ದೀನವರ್ತನೆ ಸಲ್ಲದು. ಜಗತ್ತಿನ ಜಂಜಡಗಳ ನಡುವೆ ಒಂದಷ್ಟು ಸುಖ–ಸಂತೃಪ್ತಿಯನ್ನು ಪ್ರಯತ್ನಪೂರ್ವಕ ಗಳಿಸಿಕೊಳ್ಳಬೇಕು.

ಜಗವೆನ್ನ ಮುದ್ದಿಸದದೇಕೆಂದು ಕೊರಗದಿರು
ಮಗುವು ನೀಂ ಪೆತ್ತರ್ಗೆ; ಲೋಕಕೆ ಸ್ಪರ್ಧಿ
ಹೆಗಲ ಹೊರೆ ಹುಟ್ಟಿದರ್ಗೆಲ್ಲಮಿರುತಿರೆ, ನಿನ್ನ
ರಗಳೆಗಾರಿಗೆ ಬಿಡುವೊ ?— ಮಂಕುತಿಮ್ಮ (649)

ಜೀವನ ಆದರಣೀಯವಾದ್ದು. ಅದರ ಬಗೆಗೆ ನಾವು ಎಷ್ಟು ಶ್ರದ್ಧೆ ತಳೆದರೆ ಅದು ನಮಗೆ ಅಷ್ಟು ಉಲ್ಲಾಸ ಕೊಡುತ್ತದೆ. ಬದುಕಬೇಕು ಮಾತ್ರವಲ್ಲ, ಚೆನ್ನಾಗಿ ಬದುಕಬೇಕು. ಅಂದರೆ, 'ಬಾಳು ಅನಿವಾರ್ಯ, ಹೇಗೋ ಕಾಲ ಹಾಕೋಣ' ಎಂಬುದಕ್ಕಿಂತ, 'ಬಾಹ್ಯ—ಆಂತರ ಸಮೃದ್ಧಿಯಿಂದ ಬಾಳೋಣ' ಎಂಬುದು ಉಪಾದೇಯ ಮನೋಭಂಗಿ. ಈ ಶ್ರುತಿಯನ್ನು ಡಿ.ವಿ.ಜಿ.ಯವರ ಗದ್ಯಗ್ರಂಥಗಳಲ್ಲೂ ಶಾಸ್ತ್ರವ್ಯಾಖ್ಯಾನಗಳಲ್ಲೂ ಕಾಣುವುದಕ್ಕಿಂತ ಹೆಚ್ಚು ಗಾಢವಾಗಿ, ನಿಚ್ಚಳವಾಗಿ 'ಕಗ್ಗ'ದ ಸಾಲುಸಾಲಿನಲ್ಲೂ ಕಾಣುತ್ತೇವೆ.

ಬಾಳ ಹಳಿವುದದೇಕೆ ? ಗೋಳ ಕರೆವುದದೇಕೆ ?
ಬಾಳಿದಲ್ಲದೆ ತಪ್ಪದೇನ ಮಾಡಿದೊಡಂ
ಕೇಳಿಯದು ಬೊಮ್ಮನಾಡಿಪನು ನೀನದರೊಳಗೆ
ಪಾಲುಗೊಳಲಳಬೇಡ—ಮಂಕುತಿಮ್ಮ (266)

ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು
ಹೋರುವುದೆ ಜೀವನಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ (475)

ಮನನ ಸಾಧನ

'ಕಗ್ಗ'ವನ್ನು ಮೊದಲಿನಿಂದ ಕಡೆಯವರೆಗೆ ಉಸಿರು ಬಿಗಿಹಿಡಿದು ಓದುವ ಅಗತ್ಯವಿಲ್ಲ. ಯಾವುದಾದರೂ ಪುಟ ತೆರೆದು, ಒಂದು ಅಥವಾ ಹಲವು ಪದ್ಯಗಳನ್ನು ಓದಿ ಪುಸ್ತಕ ಕೆಳಗಿಟ್ಟು ಚಿಂತನೆ ಮಾಡಬಹುದು. ಇಲ್ಲಿಯ ಶಬ್ದಾಕ್ಷರಗಳು ಭಾವಸ್ಫುರಣೆಗೆ ಚೋದನೆ ನೀಡುವ ಸಾಧನಗಳಷ್ಟೆ. ಹೀಗೆ ಮನನ ಮಾಡಲು ಅನುವಾಗಬೇಕೆಂಬುದು ಕವಿಯ ಆಶಯವೇ ಹೊರತು, ಯಾವುದೋ ತನ್ನ ಸಿದ್ಧಾಂತವನ್ನು ಓದುಗರ ತಲೆಗೆ ಹತ್ತಿಸುವುದಲ್ಲ.

'ಕಗ್ಗ'ದ ವ್ಯಾಪ್ತಿ ವಿಶಾಲವಾದ್ದು. ಪ್ರತಿಮೆಗಳು ಅಪರಂಪಾರ. ಖಗೋಲದಿಂದ ಬಾಲಕರ ಕಣ್ಣುಮುಚ್ಚಾಲೆಯಾಟದವರೆಗೆ, ಶಿವತಾಂಡವದಿಂದ ಹೂಬಳ್ಳಿಗಳ

ವರೆಗೆ, ವಿಜ್ಞಾನ–ತತ್ತ್ವಶಾಸ್ತ್ರಗಳಿಂದ ಪುರಾಣ-ಇತಿಹಾಸಗಳವರೆಗೆ; ಈ ಪದ್ಯಗಳ ಪ್ರಸ್ಫೂರ್ತಿಯ ಬೇರುಗಳು ಅಸಂಖ್ಯ, ವಿಸ್ಮಯಕರ. ಈ ದಿಗ್ವ್ಯಾಪಿ ಆವರಣದ ಚಿಂತನೆ–ಮಂಥನವನ್ನು ನಿತ್ಯಜೀವನದ ಸಂದರ್ಭಗಳಿಗೆ ಅನ್ವಯಿಸಿ ನೋಡಲಾಗಿದೆ.

'ಕಗ್ಗ'ದ ಅನೇಕ ಪದ್ಯಗಳು ಇಂದು ಸುಸಂಸ್ಕೃತರ ನಾಲಿಗೆಯ ಮೇಲೆ ನಿರಂತರ ನರ್ತಿಸುವಂತಾಗಿದೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯು ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು—ಮಂಕುತಿಮ್ಮ (789)

ಹೊಸಚಿಗುರು ಹಳೆಬೇರು ಕೂಡಿರಲು ಮರ ಸೊಗಸು
ಹೊಸ ಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ
ಜಸವು ಜನಜೀವನಕೆ—ಮಂಕುತಿಮ್ಮ (522)

ಹೋರು ಧೀರತೆಯಿಂದ, ಮೊಂಡುತನದಿಂ ಬೇಡ
ವೈರ ಹಗೆತನ ಬೇಡ ಹಿರಿ ನಿಯಮವಿರಲಿ
ವೈರಾಗ್ಯ ಕಾರುಣ್ಯ ಮೇಳನವೆ ಧೀರತನ
ಹೋರುದಾತ್ತತೆಯಿಂದೆ—ಮಂಕುತಿಮ್ಮ (574)

'ಮರುಳ ಮುನಿಯನ ಕಗ್ಗ'

ಮಂಕುತಿಮ್ಮನ ಕಗ್ಗ' ಹೊರಬಂದ (1943) ನಾಲ್ಕು ದಶಕಗಳ ನಂತರ (1984) ಬೆಳಕು ಕಂಡದ್ದು 'ಮರುಳ ಮುನಿಯನ ಕಗ್ಗ'.

ಮರುಳ ಮುನಿಯನು ನಾನು ಮಂಕುತಿಮ್ಮನ ತಮ್ಮ
ಸುರಿವೆನೆನ್ನೆದೆಚೀಲದೆಲ್ಲ ಪುರುಳುಗಳ
ಸರಿ ನೋಡಿ ಕೊಡುವ ಸಜ್ಜನರಿಹರೆ ಲೋಕದಲಿ
ಶರಣಪ್ಪೆನವರಿಂಗೆ—ಮರುಳ ಮುನಿಯ (7)

ಮುನಿಯನ ಕಗ್ಗವೂ ಮಂಕುತಿಮ್ಮನ ಕಗ್ಗದಷ್ಟೆ ಹುಲುಸಾದ್ದು. ಇಲ್ಲಿಯೂ 800ಕ್ಕೆ ಮಿಕ್ಕಿ ಪದ್ಯಗಳಿವೆ. ಬಹುತೇಕ ಮೊದಲ ಕಗ್ಗದಲ್ಲಿ ವ್ಯಕ್ತಗೊಂಡ ಭಾವನೆ-ಸಿದ್ಧಾಂತಗಳ ಪುನರವತರಣಗಳೇ ಇವು ಎನ್ನಬಹುದು. ಆದರೆ ಸರಸ ಸಂವಾದದಲ್ಲಿ ಪುನರುಕ್ತಿಯೂ ವಿಶದೀಕರಣವೂ ದೋಷವಾಗದಷ್ಟೆ !

ವಾಸ್ತವವಾಗಿ ಈ ಪದ್ಯಗಳಲ್ಲಿ ಗಣನೀಯ ಸಂಖ್ಯೆಯವು ಎಪ್ಪತ್ತರ ದಶಕದ ಆರಂಭದಲ್ಲಿ ಜನ್ಮತಳೆದವು. ಅವನ್ನು 'ಕಗ್ಗ'ದ ಎರಡನೇ ಸಂಪುಟವಾಗಿ ಹೊರತರುವ

ಯೋಚನೆಯೂ ಡಿ.ವಿ.ಜಿ.ಯವರಿಗೆ ಇತ್ತು. ಆದರೆ 'ಕಗ್ಗ'ದ ಈಗಿರುವ ರೂಪ ಜನಮಾನಸದಲ್ಲಿ ನೆಲೆನಿಂತುಹೋಗಿರುವ ಕಾರಣ, ಅದರ ಬದಲಾವಣೆಯಾಗಲಿ ಸೇರ್ಪಡೆಯಾಗಲಿ ಜನಕ್ಕೆ ಅಷ್ಟೇನು ಹಿಡಿಸಲಾರದೆಂದು ನಿರ್ಣಯಿಸಿ, ಆ ಯೋಚನೆಯನ್ನು ಕೈಬಿಡಲಾಯಿತು. ಇದನ್ನು ಪ್ರತ್ಯೇಕವಾಗಿರಿಸುವುದೆಂದು ತೀರ್ಮಾನವಾದ ಮೇಲೆ 'ಮರ್ಮಜ್ಞ', 'ಹುಚ್ಚು ಮುನಿಯ' ಮೊದಲಾದ ಹಲವು ಅಂಕಿತಗಳನ್ನು ಯೋಚಿಸಿ, ಆಖೈರಾಗಿ 'ಮರುಳ ಮುನಿಯ' ಎಂದು ಉಳಿಸಿಕೊಳ್ಳಲಾಯಿತು.

'ಕಗ್ಗ'ದ ಮೂಲಸ್ವರೂಪ ಬದಲಾಯಿಸುವುದರ ಅನಾನುಕೂಲತೆ ಬಹಳ ಹಿಂದೆಯೇ ಮನವರಿಕೆಯಾಗಿತ್ತು. ಮೊದಲ ಆವೃತ್ತಿ ಮುಗಿದ ಅಲ್ಪಕಾಲದಲ್ಲಿ ಹೊರಬಂದ ಪುನರ್ಮುದ್ರಣದಲ್ಲಿ ಡಿ.ವಿ.ಜಿ. ಒಂದಷ್ಟು ಸಣ್ಣ ಪುಟ್ಟ ಸುಧಾರಣೆ ಮಾಡಿದ್ದರು. ಇದನ್ನು ಗಮನಿಸಿದ ಸಹೃದಯರೊಬ್ಬರು—ಪ್ರಿನ್ಸಿಪಲ್ ಸಬ್‌ಜಡ್ಜ್ ಆಗಿದ್ದ ಸಿ. ಬಿ. ಶ್ರೀನಿವಾಸರಾಯರು—ಒಂದು ದಿನ ಬಂದು ಡಿ.ವಿ.ಜಿ.ಯವರನ್ನು ತರಾಟೆಗೆ ತೆಗೆದುಕೊಂಡರು :

ಸಿ.ಬಿ.ಶ್ರೀ :—"ನೀವು ನಮಗೆ ಯಾಕೆ ಹೀಗೆ ಕಷ್ಟ ಕೊಡುತ್ತಿದ್ದೀರಿ ?"
ಡಿ.ವಿ.ಜಿ. :—"ಯಾಕಪ್ಪ, ನಾನೇನು ಮಾಡಿದ್ದೇನೆ ?"
ಸಿ.ಬಿ.ಶ್ರೀ :—"ನೀವು ಮೊದಲು ಬರೆದಿದ್ದನ್ನು ನಾವೆಲ್ಲ ಎಷ್ಟು ಕಷ್ಟಪಟ್ಟು ಬೈಹಾರ್ಟ್ ಮಾಡಿದ್ದೆವು ! ಈಗ ಮತ್ತೆ ಅಭ್ಯಾಸ ಮಾಡಬೇಕಾಗಿದೆಯಲ್ಲ !"

ನಾಲ್ಕೂವರೆ ದಶಕ ಕಳೆದ ಮೇಲೂ ಇಷ್ಟುಮಟ್ಟಿನ ಜನಾದರಣೆಯನ್ನು ಉಳಿಸಿಕೊಂಡಿರುವ ನವೋದಯಯುಗದ ಕೃತಿಗಳು ಬೆರಳೆಣಿಕೆಯಷ್ಟು ಮಾತ್ರ. ಕನ್ನಡದ ಈ ಶತಮಾನದ ಒಂದು ಸಮುನ್ನತ ಸಾಧನೆ ಎಂದು 'ಕಗ್ಗ'ವನ್ನು ವಿ.ಕೃ. ಗೋಕಾಕರು ವರ್ಣಿಸಿರುವುದರಲ್ಲಿ ಉತ್ಪ್ರೇಕ್ಷೆಯಿಲ್ಲ.

‘ ಮಂಕುತಿಮ್ಮನ ಕಗ್ಗ ’ ಮತ್ತು ‘ ಮರುಳ ಮುನಿಯನ ಕಗ್ಗ ’

(ಒಂದು ತೌಲನಿಕ ವಿವೇಚನೆ)

ಡಾ॥ ಗುಂಡ್ಮಿ ಚಂದ್ರಶೇಖರ ಐತಾಳ

[ಡಾ॥ ಗುಂಡ್ಮಿ ಚಂದ್ರಶೇಖರ ಐತಾಳರು ತಮ್ಮ ವಿಶ್ಲೇಷಣಾತ್ಮಕ ಲೇಖನದಲ್ಲಿ ‘ಮಂಕುತಿಮ್ಮನ ಕಗ್ಗ’ ಮತ್ತು ಮರುಳ ಮುನಿಯನ ಕಗ್ಗ’ ಈ ಎರಡು ಕೃತಿಗಳ ಬಗೆಗೆ ಜಿ. ಪಿ. ರಾಜರತ್ನಂ, ವಿ.ಸೀ, ಕುವೆಂಪು, ಬಿ.ಎಂ.ಶ್ರೀ. ಮತ್ತು ವಿದ್ವಾನ್ ರಂಗನಾಥ ಶರ್ಮ ಇವರ ಮೌಲಿಕ ಅಭಿಪ್ರಾಯಗಳ ಬೆಳಕಿನಲ್ಲಿ ಕೃತಿಗಳ ಮೌಲ್ಯಮಾಪನ ಮಾಡಿದ್ದಾರೆ. ಲೇಖಕರು ಮೊದಲಿಗೆ ‘ಕಗ್ಗ’ಕ್ಕೆ ಪೀಠಿಕಾರೂಪವಾಗಿ ಬರೆದಿರುವ ‘ಕಗ್ಗದ ಕಥೆ’ಯನ್ನು ಸಂಕ್ಷೇಪವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ; ರಾಜರತ್ನಂ ಅವರು ಕಗ್ಗದ 945 ಪದ್ಯಗಳನ್ನು 185 ಪ್ರಕರಣಗಳಾಗಿ ವಿಭಾಗಿಸಿರುವುದನ್ನು ಅನುಸರಿಸಿ ಅವುಗಳನ್ನು ಪಟ್ಟಿಮಾಡಿದ್ದಾರೆ. ಲೇಖಕರ ಅಭಿಪ್ರಾಯದಲ್ಲಿ, “ಇದೊಂದು ಮುಕ್ತಕ ಕಾವ್ಯ ; “ವಾಸ್ತವವಾಗಿ ಮಂಕುತಿಮ್ಮನ ಕಗ್ಗದ ಒಂದೊಂದು ಮುಕ್ತಕಕ್ಕೂ ಒಂದೊಂದು ತಲೆಬರಹವನ್ನು ಕೊಡುವಷ್ಟು ಅವು ಭಿನ್ನಭಿನ್ನವಾಗಿವೆ: ಸ್ವತಂತ್ರವಾಗಿವೆ; ಸ್ವಯಂಪೂರ್ಣವಾಗಿವೆ”. ಕಗ್ಗದಲ್ಲಿ ‘ಜೀವನದರ್ಶನ’ ಇಲ್ಲ ಎನ್ನುವವರ ಆಕ್ಷೇಪವನ್ನು ಅಲ್ಲಗಳೆದು, “ಇದು ರೂಪದಲ್ಲಿ ಮುಕ್ತಕ ಕಾವ್ಯ ; ಅಂತರಂಗದಲ್ಲಿ ಮುಕ್ತಿಯ ಮಹಾಕಾವ್ಯ” ಎಂಬ ಯಾಥಾರ್ಥ್ಯವನ್ನು ನುಡಿದಿದ್ದಾರೆ. ‘ಮಂಕುತಿಮ್ಮನ ಕಗ್ಗ’ವನ್ನು ಪರಿಚಯ ಮಾಡಿಕೊಟ್ಟ ರೀತಿಯಲ್ಲಿಯೇ ‘ಮರುಳ ಮುನಿಯ’ನನ್ನೂ ಪರಿಚಯ ಮಾಡಿಕೊಟ್ಟಿದ್ದಾರೆ. ‘ಮರುಳ ಮುನಿಯ’ ಗ್ರಂಥದ 824 ಪದ್ಯಗಳಲ್ಲಿ ಹರಡಿಕೊಂಡಿರುವ ಸ್ವಾರಸ್ಯವನ್ನೂ ವಿಷಯವೈವಿಧ್ಯವನ್ನೂ ಗ್ರಂಥ ಸಂಪಾದಕರಾದ ಶ್ರೀ ರಂಗನಾಥಶರ್ಮರು ವಿಷಯಾನುಗುಣವಾಗಿ ಕೊಟ್ಟಿರುವ ಶಿರೋನಾಮೆಗಳನ್ನು ಪಟ್ಟಿಮಾಡಿಕೊಡುವ ಮೂಲಕ ತಿಳಿಸಿದ್ದಾರೆ. “ಮರುಳ ಮುನಿಯನು ನಾನು ಮಂಕುತಿಮ್ಮನ ತಮ್ಮ” ಎಂದು ಡಿ.ವಿ.ಜಿ.ಯವರೆ ಮುನಿಯನಿಂದ ಹೇಳಿಸಿದ್ದಾರೆ. ‘ಈ ತಮ್ಮ ಕೆಲವೆಡೆ ಅಣ್ಣನನ್ನು ಮೀರಿಸುತ್ತಾನೆ’ ಎಂಬ ಶ್ರೀ ಶರ್ಮರ

ಅಭಿಪ್ರಾಯವನ್ನು ಶ್ರೀ ಐತಾಳರು ಒಪ್ಪರು. "ಮಂಕುತಿಮ್ಮನ ಕಗ್ಗದ ಕಲ್ಪನಾ ರಮ್ಯತೆಯಾಗಲಿ ದೃಷ್ಟಾಂತನಿಬಿಡತೆಯಾಗಲಿ ಜೀವನಾನುಭವದ ಗಾಂಭೀರ್ಯ ಸೌಂದರ್ಯವಾಗಲಿ ಅಲ್ಲಿ ಬಂದಷ್ಟು ಇಲ್ಲಿ ಬಂದಿಲ್ಲ" ಎಂಬ ಇವರ ತೀರ್ಪು ಸರಿ ಎನ್ನಿಸುತ್ತದೆ. ತೌಲನಿಕ ವಿವೇಚನೆಯ ತರತಮ ನಿಷ್ಕರ್ಷೆ ಹೇಗಾದರೂ ಇರಲಿ, ಈ ಎರಡನ್ನೂ ಕುರಿತು ಒಟ್ಟಿನಲ್ಲಿ 'ಗುಂಡೋಪನಿಷತ್' ಎಂದು ಶ್ರೀಯುತರು ನಿರ್ದೇಶಿಸಿರುವುದು ಅರ್ಥಪೂರ್ಣವಾಗಿದೆ.]

ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ವು 1943ರಲ್ಲಿ ಮೊತ್ತಮೊದಲು ಪ್ರಕಟವಾಯಿತು. ಅಲ್ಲಿಂದೀಚೆಗೆ 1974ರವರೆಗೆ ಅದು ಆರು ಮುದ್ರಣಗಳನ್ನು ಕಂಡು ಸುಮಾರು 33,700 ಪ್ರತಿಗಳು ಅಚ್ಚಾಗಿವೆ. ಬಹುಶಃ ಹೊಸಗನ್ನಡ ಕಾವ್ಯಗಳಲ್ಲಿ ಇಷ್ಟು ಪ್ರತಿಗಳು ಅಚ್ಚಾದ ಕೃತಿ ಇದೊಂದೇ. ಈ ಕೃತಿಯ ನಾಲ್ಕನೆಯ ಮುದ್ರಣಕ್ಕೆ ಮುನ್ನುಡಿ ಬರೆಯುತ್ತ ಕವಿ ಹೀಗೆ ಬರೆದಿದ್ದಾರೆ: "ನಮ್ಮ ಪೂರ್ವಿಕರು ಮಕ್ಕಳಿಗೆ ಹೆಸರಿಡುವುದರಲ್ಲಿ ಒಂದು ವಿಶೇಷ ಪದ್ಧತಿಯನ್ನಿಟ್ಟುಕೊಂಡಿದ್ದರು. ಮೊದಲ ಎರಡು-ಮೂರು ಮಕ್ಕಳು ಕಳೆದುಹೋಗಿದ್ದರೆ, ಮೂರನೆಯದಕ್ಕೋ ನಾಲ್ಕನೆಯದಕ್ಕೋ ಗುಂಡಪ್ಪ, ಕಲ್ಲಪ್ಪ, ತಿಪ್ಪಯ್ಯ, ಹುಚ್ಚಯ್ಯ—ಎಂದು ಹೆಸರು ಕೊಡುತ್ತಿದ್ದರು. ಅದರ ಭಾವ, ಆ ಮಗುವಾದರೂ ಎಲ್ಲಾದರೂ ಗುಂಡುಕಲ್ಲಿನಂತೆ, ತಿಪ್ಪೆಯರಾಶಿಯಂತೆ ಆಯುಸ್ಸಂಟಾಗಿ ಬಾಳಿಕೊಳ್ಳಲಿ ಎಂದು. ಈ ಗ್ರಂಥ ಮೊದಲು ಪ್ರಕಟವಾದಾಗ ಇದ್ದ ಮನೋಭಾವ ಅಂಥಾದ್ದು. ಇದು ಪಂಡಿತರನ್ನೂ, ಪ್ರಸಿದ್ಧರನ್ನೂ, ಪುಷ್ಪರನ್ನೂ ಉದ್ದೇಶಿಸಿದ್ದಲ್ಲ. ಬಹುಸಾಮಾನ್ಯರಾದವರ ಮನೆಯ ಬೆಳಕಿಗೆ ಇದು ಒಂದು ತೊಟ್ಟಿನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ."[1] ಇದರಲ್ಲಿರುವ ಒಂದೊಂದು ಬಿಡಿ ಪದ್ಯವೂ ಒಂದೊಂದು ಮನೆಯ ಬೆಳಕಾಗುವಷ್ಟು ಯೋಗ್ಯತೆಯನ್ನು ಪಡೆದಿದೆ; ಆದರಿಂದಲೇ ಈ ಸಂಕಲನವು ಸಾಮಾನ್ಯ ಜನರಿಂದ ಸಂಭಾವಿತವಾಗಿ ಇಷ್ಟು ಜನಪ್ರಿಯತೆಯನ್ನು ಪಡೆಯುವುದು ಸಾಧ್ಯವಾಯಿತು.

ಕಾವ್ಯ ಪ್ರಾರಂಭವಾಗುವ ಮೊದಲು ಕವಿ 'ಕಗ್ಗದ ಕಥೆ' ಎಂಬ ಹೆಸರಿನ ಪೀಠಿಕೆಯನ್ನು ಪದ್ಯರೂಪದಲ್ಲಿಯೇ ಕೊಟ್ಟು ಅದರಲ್ಲಿ 'ಮಂಕುತಿಮ್ಮನ ಕಗ್ಗ' ಹೇಗೆ ಹುಟ್ಟಿತು ಎಂಬ ಇತಿವೃತ್ತವನ್ನು ನಿರೂಪಿಸಿದ್ದಾರೆ. 'ಮಂಕುತಿಮ್ಮ' ಒಂದು ಹಳ್ಳಿಯ 'ಮೇಸ್ಟ್ರು'. 'ಬಿಂಕ ಕೊಂಕು ಒಂದೂ ಅರಿಯದಿದ್ದ ಸಾಧುಮಾತನು.' ತನ್ನ ಬಾಳನ್ನು ನೋಡಿ 'ಕೂಳುಹೆಣ' ಎಂದು ತನ್ನನ್ನು ತಾನೇ ಟೀಕಿಸಿಕೊಳ್ಳುತ್ತಿದ್ದನು. ಸುತ್ತಮುತ್ತ ಐದು ಮೈಲಿಯ ಪರಿಸರದ ಮಕ್ಕಳೆಲ್ಲ ಅವನ ಹತ್ತಿರ ವಿದ್ಯಾಭ್ಯಾಸಕ್ಕೆ ಬರುತ್ತಿದ್ದರು. ಆಟವೆಂಬಂತೆ ಪಾಠಮಾಡುತ್ತಿದ್ದನು. ಕಥೆ ಹೇಳಿ ಮಕ್ಕಳ ತುಂಟತನವನ್ನು ಕಳೆಯುತ್ತಿದ್ದನು. ತಿಮ್ಮಗುರು ಲೋಕಸೇತು. ಅವನಿಗೆ ಮದುವೆಯಿಲ್ಲ: ಯಾಕೆಂದು ಯಾರಿಗೂ ಗೊತ್ತಿಲ್ಲ. ಅವನಿಗೆ ಐವತ್ತೇ ವರ್ಷ. ಕತ್ತಲಾಗುತ್ತ ಒಂದು ದೇಗುಲದ ಒಂದು ಮಬ್ಬು ಮಂಟಪವನ್ನು ಸೇರುವನು. ಒಂದು ಹಳೆಯ ಹಚ್ಚಡವನ್ನು ತಲೆಯಿಂದ ಕಾಲಿನವರೆಗೆ ಹೊದೆದು ಹೊಳೆವ

ಕಣ್ಣೆರಡನ್ನು ಬಿಟ್ಟು ಕುಳಿತುಕೊಳ್ಳುತ್ತಿದ್ದ. ಹೊಳೆವ ಕಣ್ಣನ್ನು ಕಾಣದವರಿಗೆ ಮುಖವಾಡವೆಂದೇ ಕಾಣಿಸುತ್ತಿದ್ದ. ಯಾರಲ್ಲಿಯೂ ಹೆಚ್ಚಿಗೆ ಮಾತನಾಡನು.

ಅವನ ತಂಗಿಗೊಬ್ಬ ಮಗ; ತಿಮ್ಮಗುರುವಿನ ಜೀವ, ಲೋಕವೆಲ್ಲವೂ ಅವನಾಗಿದ್ದ. ಅವನ ಹೆಸರು ಸೋಮಿ. ಅವನಿಗೆ ಹದಿನಾರು ಹರೆಯವಾದ ಮೇಲೆ ಮುಂದಿನೋದಿಗೆ ಮೈಲಾರಕ್ಕೆ ಹೋಗಲೆಂದು ಮೂಟೆ ಕಟ್ಟಿದ. ಸೋದರಳಿಯನನ್ನು ಬಿಟ್ಟಿರಬೇಕಲ್ಲ ಎಂಬ ಚಿಂತೆಯಿಂದ ತಿಮ್ಮಗುರುವಿನ ಕಂಠ ಗದ್ಗದವಾಯಿತು. ಅಷ್ಟರಲ್ಲಿ ತಿಮ್ಮಗುರುವಿಗೆ ವರ್ಗವಾಯಿತು. ತಿಮ್ಮಗುರು ಅಳಿಯನನ್ನು ನೋಡೋಣ ವೆಂದು ಬಂದ. ರಾತ್ರಿಯೆಲ್ಲ—

ಏನು ಮಾತು, ಏನು ಹರಟೆ, ಏನು ಅಂತರಂಗಗಳ್
ಏನದೇನೋ ಸವಿಯ ನೆನಪು, ಏನೊ ನಗುತರಂಗಗಳ್
ತಿಳಿದನಾಗ ಮಾವ ತನ್ನ ಸೋಮಿಯೆ ಇವನೆನ್ನುತ
ಎಳೆಯನಾಗಿ ತನ್ನ ತೊಡೆಯೊಳಾಡಿಸಿದವನೆ ಎನ್ನುತ.

ಮುಕ್ಕಾಲು ರಾತ್ರಿ ಕಳೆಯಲು ಮಾವ ಹೊರಡಲೆದ್ದನು. ಅಳಿಯ ನಿಲ್ಲು ಮಾವ ಎಂದ; ನಾಳೆ ಸಾಲೆಯಿದೆ; ಪ್ರಯಾಣಕ್ಕೆ ಇದೇ ಒಳ್ಳೆಯ ಸಮಯ ಎಂದ ಮಾವ. ಮೊನ್ನೆ ರಾತ್ರಿ ಕನಸಿನಲ್ಲಿ ನಿನ್ನನ್ನು ಏಕೋ ಕಂಡೆ; ನಿನ್ನನ್ನು ಕಣ್ತುಂಬ ಕಾಣುವಾಶೆ ತಡೆಯಲಾರದಾಯಿತು. ಹಾಗೆಯೇ ನಿನ್ನೆ ರಜೆ ಹಾಕಿ ನಡೆದು ಬಂದೆ ಎಂದ. ಒಂದು ತಿಂಗಳಾದ ಬಳಿಕ ತಿಮ್ಮಗುರು ಸೋಮಿಯ ತಂದೆಗೊಂದು ಕಾಗದ ಬರೆದ. ತಾನು ಕಾಶಿಯಾತ್ರೆಗೆ ಹೊರಟಿರುವೆನೆಂದೂ, ಇದೇ ತನ್ನ ಕೊನೆಯ ಬರಹವೆಂದೂ ಬರೆದನು :

ನಾನು ಮುಂಡುಗೆರೆಯೊಳಿದ್ದ ಮನೆಯೊಳೊಂದು ಗೂಡಿನೊಳ್
ಏನೊ ಬರೆದ ಕಡತವೊಂದನಿರಿಸಿರುವೆನು ಗಂಟಿನೊಳ್
ಸೋಮಿಯದನು ನೋಡಿ ತೆಗೆದುಕೊಳುವೊಡಂತು ಮಾಡಲಿ
ನೀಮದಾರುಮೆನ್ನ ತುಂಬ ನೆನೆಯದಿರಿ—ಮರೆಯಿರಿ
ಪ್ರೇಮವುಕ್ಕಿ ಬೆಸನ ಕುದಿದೊಡಾಗ ದೀಪವೊಂದನು
ಸೋಮಶಿವನ ಗುಡಿಯೊಳಿರಿಸಿ 'ದೇವಗೆ ನಮೊ' ಯೆನ್ನಿರಿ.

ಮುಂಡುಗೆರೆಗೆ ಹೋಗಿ ಸೋಮಿ ಆ ಕಡತವನ್ನು ತಂದನು. ಅದರಲ್ಲಿರುವ ಬಾಳಿನ ತತ್ತ್ವ ಮಂಥನವನ್ನು ಉಂಡನು. ಅವುಗಳಲ್ಲಿ ಹಲವು ಪದ್ಯಗಳನ್ನು ಆರಿಸಿ ಸೋಮಿ ಮಂಕುತಿಮ್ಮನ ಕಗ್ಗವಾಗಿ ಕೊಟ್ಟಿದ್ದಾನೆ. ಇದಿಷ್ಟು ಕಗ್ಗದ ಕಥೆ. ಇದರಲ್ಲಿ 156 ಪಂಕ್ತಿಗಳಿವೆ.

'ಮಂಕುತಿಮ್ಮನ ಕಗ್ಗ'ದಲ್ಲಿ ನಾಲ್ಕು ಪಂಕ್ತಿಗಳ 945 ಪದ್ಯಗಳಿವೆ. ಪ್ರತಿ ಯೊಂದು ಪದ್ಯವೂ ಮಂಕುತಿಮ್ಮನ ಅಂಕಿತದಿಂದ ಅಂತ್ಯವಾಗುತ್ತದೆ. ಇದೊಂದು

ಮುಕ್ತಕ ಕಾವ್ಯ ; ಇಲ್ಲಿಯ ಒಂದೊಂದು ಬಿಡಿಪದ್ಯವೂ ಸ್ವತಂತ್ರ, ಸ್ವಯಂಪೂರ್ಣ. ಸರ್ವಜ್ಞನ ವಚನಗಳಲ್ಲಿ ಮೂರು ಪಾದವಾದರೆ ಇಲ್ಲಿ ನಾಲ್ಕು ಪಾದ. ಅಲ್ಲಿ ಸರ್ವಜ್ಞ ಅಂಕಿತ ; ಇಲ್ಲಿ ಮಂಕುತಿಮ್ಮ ಅಂಕಿತ. ಇಲ್ಲಿ ಕವಿಯ ಉದ್ದೇಶ ಬಾಳಿನ ತತ್ತ್ವ ಮಂಥನ. ಇಲ್ಲಿಯ 945 ಪದ್ಯಗಳನ್ನು ಶ್ರೀ ಜಿ. ಪಿ. ರಾಜರತ್ನಂ ಅವರು '185 ಪ್ರಕರಣ ವಿಭಾಗ'ಗಳನ್ನಾಗಿ ವಿಂಗಡಿಸಿದ್ದಾರೆ. ಆ ಹೆಸರುಗಳನ್ನು ಓದಿದರೆ ಈ ಕಾವ್ಯದ ಆಳ, ಅಗಲ, ಎತ್ತರ, ಬಿತ್ತರಗಳು ಅರಿವಾಗುವುದು. ಈ ಕಾವ್ಯದ ವಸ್ತು ಸಾಕ್ಷಾತ್ಕಾರವಾಗುವುದು.

ಏನು ಜೀವನದರ್ಥ ? ಮಾನವರೊ ದಾನವರೊ ? ಲೋಕಜೀವನ ಮಂಥನ, ಇದೇನು ಒಣರಗಳೆ, ಬಾಳಿಗೆ ನಕಾಸೆ, ಸಮಸ್ಯೆಗೆಲ್ಲಿ ಪೂರಣ ?, ಬ್ರಹ್ಮವಸ್ತು ಊಸರವಳ್ಳಿಯೆ ? ವಿದ್ಯುಲ್ಲಹರಿಯೆ ? ಮೋಂಕುದೀಪವೆ ತಂಟೆ, ಹೃದಯರುಚಿ ಚೋದ್ಯ. ಅಂತರಸು ಭವ, ಸಾಕ್ಷಿದ್ವಯ. ಅಂತರ್ವೀಕ್ಷೆ, ಪ್ರಪಂಚನ—ಆ ಕುಂಚನ, ಬ್ರಹ್ಮವೇ ಜೀವನವೊ. ಮೇಯ ಅಮೇಯ. ಅನಂತ ಚೌಕಟ್ಟು. ಸಾಂತಚಿತ್ರ, ಜಡಜೀವ ಭೌತವಿಜ್ಞಾನಿ, ಭೂವ್ಯೋಮಯಂತ್ರ, ಸಚ್ಚಿದಾನಂದ ತತ್ತ್ವ, ನಿತ್ಯ ಪುರಾತನ–ನಿತ್ಯನೂತನ, ವಿಶ್ವ ಕೇಂದ್ರ ನೀನು, ಮಾಯೆ ಕೇಕಯ ಪುತ್ರಿ, ಸತತ ಕೃಷಿ ಪ್ರಕೃತಿ, ಹೊರೆಮೂವರು, ವಿಧಿವಿಧಾನ. ಅದೃಷ್ಟ ತಂತ್ರ. ಆಳಿವಿಲ್ಲ ವಿಶ್ವಕ್ಕೆ, ಋಣಾನುಬಂಧ, ಮಂದ ಹಸಿತದ ಕೊಲೆ, ಪುಣ್ಯ ಪಾಪ, ಲೋಕ ಸಹವಾಸ, ನರಿ, ವಾನರ–ನರ, ನಾಲ್ಮೊಗ, ವಿಧಿಯ ವೈಚಿತ್ರ, ಕ್ಷಣಕ್ಷಣವು ಹೊಸಹಸಿವು, ಸಾಜದ ಶಿಕ್ಷೆ, ಸಹಜದಿನೆ ಕೃತಕವುಂ, ಸತ್ಯವಿಸ್ಫುರಣ. ಪ್ರಗತಿತತ್ತ್ವ. ಜೀವನದ ಚಿರಧರ್ಮ, ಸೃಷ್ಟಿಯಲಿ ಜನವಾಕ್ಕು. ಸಮತಾ ತತ್ತ್ವ. ಆತ್ಮ ವಿಸ್ತರಣ. ಜೀವನವೆ ಪರಮೈಶ್ವರ್ಯ. ಬ್ರಹ್ಮನಾಟಕ. ಇಹಪರ ಸಮನ್ವಯ, ನಾಚಿಕೆಯದೇಕೆ, ಬ್ರಹ್ಮ ಸಂಸಾರಿ. ಜೀವಪೂಜೆ. ತಿಳಿದು ಹಳಿಯುವೊಡೆ ಹಳಿ, ನೀತಿ ನಿರ್ಣಯ, ವಾಸನೆ ತಾಯಿ—ಸಂದರ್ಭ ತಂದೆ, ಕ್ಷಮೆ, ದೆಪ್ಪನಾರ್ ? ಪ್ರಗತಿ ಕಥೆ, ವಿಕಟರಸಿಕನು ಧಾತ. ಬ್ರಹ್ಮೋದ್ಯಾನ. ಪೂರ್ಣ ದರ್ಶನ, ನಾವೆಲ್ಲರಾಟದೆಲೆ. ನೇತ್ರದಂದದೆ ನೋಟ. ನೂರು ಜಡೆ ಕೋಲಾಟ, ಸಂಸಾರ ಸುಖ, ಸುಖಭ್ರಾಂತಿ. ಘಾತಪ್ರತಿಘಾತಕ. ದೈವಭಾಗ. ವಿಧಿಯಂತ್ರ. ತಟ ಪಟವೊ ಸೃಷ್ಟಿದಯೆ. ಮನವ ತೊರೆದಿರಲಹುದೆ ?. ಮನಸ್ಸಿನ ಹದ, ಕುಲುಕದಿರು ಬಾಲವನು, ಸೃಷ್ಟಿ ಕೀಲು, ಸಾಪೇಕ್ಷ ಸತ್ಯ. ದೇಹಕುದುರೆ—ಆತ್ಮಸವಾರ. ದೃಶ್ಯ ನಶ್ಯ–ದರ್ಶನೀಯ, ನರನಾರೀ ಪ್ರೇಮ. ಮಾನುಷಚರಿತ್ರೆ. ಪ್ರೇಮ ವಿಕಟ. ಭಾವ ರಾಗೋದ್ರೇಕ, ಮಾನುಷ ಪ್ರೀತಿ, ವ್ಯಷ್ಟಿಯಿಂದ ಸಮಷ್ಟಿ. ನಗುವಳುವು ರಸಪಾಕ. ಸೌಂದರ್ಯ ಮಹಿಮೆ, ಬ್ರಹ್ಮಸ್ಪಂದನ, ದ್ವಂದ್ವಸ್ವಾರಸ್ಯ. ಮೋಹ–ಕರುಣಾ–ಶಾಂತಿ, ಜೀವಕಾವ್ಯ, ಕಲೆ–ಬ್ರಹ್ಮಕೃತಿಯ ಟೀಕೆ, ಕವಿ–ರಾಜಕ. ನರನ ಮೃತ್ಯುಂಜಯತೆ. ಸಾರ್ಥಕತೆಯುಂ ಸತ್ಯ, ಭಕ್ತಿ ಸ್ವಾಭಾವಿಕ, ಸಾಧನೋಪಾಯ, ಸಿಷ್ಕಾಮ ಪೂಜೆ. ನರಯಾಚನೆ, ನರುನವ ಸತ್ತ್ವವೃಷ್ಟಿ. ಪ್ರಾಚೀನ ಪ್ರಸಾದ, ಅನುಭವ ಪ್ರಮಾಣ, ಪೂರ್ವಶಾಸ್ತ್ರ–ನವನಾಗರಿಕತೆ. ಶಾಸ್ತ್ರ ಬೆಳೆಯುತ್ತದೆ. ವ್ಯಕ್ತಿ ಮೌಲ್ಯ, ಸ್ವಾತಂತ್ರ್ಯ,

ಭಾರ ಮಾನುಷತರ್ಕ, ಮನಸ್ಸು ಬುದ್ಧಿಗಳ ಮಹಿಮೆ, ಸಮನ್ವಯ ನ್ಯಾಯ. ಅಂತ ರ್ಜ್ಯೋತಿ ಜಗದಶ್ವತ್ಥ, ಗುಣವಿಕಾಸ, ಪ್ರತಿಭಾಂಕುರ, ಪೌರುಷಮಿತಿ, ಬೆನ್ನಿಗೆ ತಕ್ಕ ಭಾರ, ಜೀವನ ಮಾಗಲಿ, ಪುರುಷತನವೇ ವಿಜಯ, ಯತ್ನ–ದೈವಿಕ, ಬ್ರಹ್ಮನಾಯಕ, ಸಂಸಾರಪಾಕ, ಲೌಕಿಕತಪಸ್ಸು, ಹೃದಯ ಮಂಥನ, ಧರ್ಮ ನಿರ್ಣಯ, ಆತ್ಮಋಣ, ಮನೆಯೆ ಮಠ, ಕಷ್ಟವೈವಿಧ್ಯ, ಹಣೆಯಬರಹ, ವಾಯಸವ್ರತ, ಆತ್ಮಚಿಕಿತ್ಸೆ, ಬಾಗಿಸ ದಿರಾತ್ಮವನು, ಹೆಸರಿನ ಹಂಬಲು, ಗರ್ವಭಂಗ, ಎರಡು ಲೆಕ್ಕ, ಮುಗಿವೇ ಭಾಗ್ಯ, ಸ್ವಾರಸ್ಯಮಿತ, ಜಾಣ ಹಿರಿಯ, ಮರೆವು ಶಿವಕೃಪೆ, ಏಕಾಕಿಮನಸ್ಸಾಕ್ಷಿ, ತೃತೀಯ ನೇತ್ರ, ಭರತೋದಾಹರಣೆ, ನಿಷ್ಪ್ರಯತ್ನ ಧಾರ್ಮಿಕತೆ, ನಾಲ್ಕು ತಪಸ್ಸುಗಳು, ಹೊಸತನವೆ ಬಾಳು, ಓಲೆಕಾರನು ನೀನು, ಪಕ್ಷಿಮಾರ್ಗ, ಅದೃಶ್ಯ ಸೇನಾಪತಿ, ಜೀವನ ಕಲೆ, ತೃಣಸಾಧು, ಬಂಡವಾಳ ಬಡ್ಡಿ, ಸಾರ್ವಭೌಮಗುಣ, ಮುನ್‌ನೋಟ— ಮೇರು ಗುರಿ, ನಂದ–ಶಬರಿ–ಹನುಮಂತ–ಶುನಕ, ಮತತ್ರಯ, ಗುರುಲಕ್ಷಣ, ಕಾಲಕ್ಕೆ ಪಾಲುಂಟು, ಇಂದ್ರಿಯಶಾಂತಿ, ಜಗತ್ತು ಗುಡಿ, ಬಂಧನಿವಾರಣೆ, ಅತೀತ ಪದವಿ, ಜಗದಾತ್ಮ ಜೀವನ, ಬಾಹ್ಯಾಂತರ್ಯ ಸಮುಚ್ಚಯ, ಜೀವಮಾರ್ಗ, ಮೂರನೆಯ ಭಾಗಸ್ಥ, ಕೊಳೆ–ಶುಚಿ–ವ್ಯಾಪಕ, ಮೃತ್ಯುಭಯ, ಕರ್ಮಸೂತ್ರ, ಗುಪ್ತಗಾಮಿನಿ, ಗುರುಪದವಿ ಬೇಡ, ವಿಶ್ವನರ್ತನ, ಲೋಕಪ್ರಗತಿ, ಪ್ರಕೃತಿ ಮನುಷ್ಯರನ್ಯೋನ್ಯ, ಕಿಚ್ಚು ಮುಗಿತ ಬೂದಿಯಾಗಿ, ಹಿತವಿವೇಕ, ಸಂಪೂರ್ಣ ಸುಖಿ, ಸಂಕೇತಮಯ ಲೋಕ, ಮೋಕ್ಷಾತುರ, ಚಿತ್ರಶುದ್ಧಿ, 'ತೇನ ತ್ಯಕ್ತೇನ ಭುಂಜೀಥಾಃ', ನಕ್ಕು ನಗಿಸಿರೆ ಸಾರ, ಎಲ್ಲರಿಗಂ ನಮೊ, ಒಣಗಿದೊಡೆ ಸವುದೆ, ನಿದ್ದೆವೊಲು ಸಾವು, ಮತಿಯಂತೆ ಮತ, ಬೇಡಿಕೆ.

ವಾಸ್ತವವಾಗಿ ಮಂಕುತಿಮ್ಮನ ಕಗ್ಗದ ಒಂದೊಂದು ಮುಕ್ತಕಕ್ಕೂ ಒಂದೊಂದು ತಲೆಬರಹವನ್ನು ಕೊಡುವಷ್ಟು ಅವು ಭಿನ್ನಭಿನ್ನವಾಗಿವೆ ; ಸ್ವತಂತ್ರ ವಾಗಿವೆ ; ಸ್ವಯಂಪೂರ್ಣವಾಗಿವೆ. ಮಂಕುತಿಮ್ಮನ ಕಗ್ಗದ ವಸ್ತುವನ್ನು ಅಧ್ಯಯನಕ್ಕೆ ಅನುಕೂಲವಾಗಿ ಒಂಬತ್ತು ಪ್ರಕರಣಗಳನ್ನಾಗಿ ವಿಭಾಗಿಸಬಹುದು : ಅವು ಹೀಗಿವೆ :

೧. ದೈವ, ಆತ್ಮ, ಸತ್ತ್ವ, ಚೈತನ್ಯ.
೨. ಪ್ರಕೃತಿ, ಸೃಷ್ಟಿ.
೩. ವರ್ಣನೆ.
೪. ನೀತಿ, ಉಪದೇಶ.
೫. ಸೌಂದರ್ಯಾನುಭೂತಿ.
೬. ಸಂಸ್ಕೃತಿ.
೭. ವೈರಾಗ್ಯ.
೮. ವಿಧಿ, ಅದೃಷ್ಟ, ಹಣೆಬರಹ.
೯. ಜೀವನದರ್ಶನ.

ಶ್ರೀ ವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನೆಂದು ಜನಂ
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ
ಆ ವಿಚಿತ್ರಕೆ ನಮಿಸೊ—ಮಂಕುತಿಮ್ಮ ॥

ಎಂದು ಆರಂಭವಾಗುವ ಪದ್ಯದಲ್ಲಿ ಕವಿ ಆ ಪರತತ್ತ್ವವನ್ನು ದೈವ, ಪರಮಾತ್ಮ, ಆತ್ಮ, ಪರಬೊಮ್ಮ, ಚೈತನ್ಯ, ಸತ್ತ್ವ—ಎಂಬ ಬಗೆಬಗೆಯ ಹೆಸರಿನಿಂದ ಕರೆದರೂ ವಿಶ್ವದ ಆದಿಮೂಲ, ಸರ್ವೇಶನನ್ನು ಕುರಿತು ಅವರ ಉಸಿರು ಒಂದೇ. ಕಣ್ಣು ಕಾಣದಿದ್ದರೂ ನಮ್ಮ ಹಿರಿಯರು ಅವನನ್ನು ಭಕ್ತಿಯಿಂದ ನಂಬಿದ್ದಾರೆ. ಆ ವಿಚಿತ್ರಕ್ಕೆ ನಾವು ನಮಿಸಬೇಕು ಎಂದು ಡಿ.ವಿ.ಜಿ. ಹೇಳಿದ್ದಾರೆ. ಈ ಪ್ರಜ್ಞೆ ಕಗ್ಗದ ಉದ್ದಕ್ಕೂ ಬರುತ್ತದೆ. ಮಂಕುತಿಮ್ಮನ ಕಗ್ಗದ ಮುಖ್ಯವಾದ ಉದ್ದೇಶ ಯಾವುದು ?

> ವಿಶದಮಾದೊಂದು **ಜೀವನಧರ್ಮ ದರ್ಶನ,**
>
> ನುಸುರಿಕೊಳೆ ತನ್ನ ಮನಸಿಗೆ ತಾನೆ ಬಗೆದು
> ನಿಸದವಂ ಗ್ರಂಥಾನುಭವಗಳಿಂದಾರಿಸುತ
> ಹೊಸೆದನೀ ಕಗ್ಗವನು ಮಂಕುತಿಮ್ಮ [3]

ಇಲ್ಲಿ ಐದು ವಿಚಾರಗಳು ಮುಖ್ಯವಾಗಿವೆ :

೧. ಇಲ್ಲಿ ಪ್ರತಿಪಾದಿತವಾಗಿರುವುದು **ಜೀವನಧರ್ಮ ದರ್ಶನ.**

೨. ಅದು **ವಿಶದ**ವಾಗಿರುವುದು

೩. **ತನ್ನ ಮನಸ್ಸಿಗೆ ತಾನೆ ಹೇಳಿಕೊಳ್ಳುವುದು** ಅವರ ಉದ್ದೇಶ.

೪. ಇವು ಕವಿಯ ಮನಸ್ಸಿಗೆ **ನಿಶ್ಚಯ**ವಾಗಿರುವುವು.

೫. ಇವು **ಗ್ರಂಥಾನುಭವ**ಗಳಿಂದ ಆರಿಸಿದುವು.

ಈ ಕಾವ್ಯವನ್ನು ವಿಮರ್ಶಿಸುವವರು ಈ ಪದ್ಯವನ್ನು ಹೆಚ್ಚಾಗಿ ಗಮನಿಸಬೇಕು. ಇಲ್ಲದಿದ್ದರೆ ಈ ಕೃತಿಗೆ ತುಂಬ ಅನ್ಯಾಯವಾಗುತ್ತದೆ. ಮಂಕುತಿಮ್ಮನ ಕಗ್ಗದಲ್ಲಿ ಒಂದು ಜೀವನದರ್ಶನವಿಲ್ಲ ಎಂಬುದು ಸಾಮಾನ್ಯವಾಗಿ ಇದರ ವಿಮರ್ಶಕಂಮನ್ಯರ ಆಕ್ಷೇಪಣೆ. ಇದರಲ್ಲಿ ಒಂದು ಜೀವನದರ್ಶನವಲ್ಲ: ಒಂದೊಂದೂ ಒಂದೊಂದು ಜೀವನದರ್ಶನವೆಂಬುದು ಆ ಆಕ್ಷೇಪಣೆಗೆ ಉತ್ತರ. 'ಜೀವನಧರ್ಮ ದರ್ಶನ'ವನ್ನು ಹೇಳುವುದೇ ಕವಿಯ ಉದ್ದೇಶವಾಗಿರಲು ಅದಿಲ್ಲ ಎಂದು ಹೇಳುವುದು ಕಣ್ಣಿಲ್ಲದ, ಕಿವಿಯಿಲ್ಲದ, ಹೃದಯವಿಲ್ಲದ ಹೇಳಿಕೆಯಾಗುತ್ತದೆ. ಕಾವ್ಯವನ್ನು ಇಡಿಯಾಗಿ ನೋಡಿದಾಗ ಕಂಡುಬರುವ ದರ್ಶನ ಒಂದು : ಬಿಡಿಬಿಡಿಯಾಗಿ ನೋಡಿದಾಗ ವ್ಯಕ್ತವಾಗುವ ಜೀವನದರ್ಶನ ಒಂದೊಂದಕ್ಕೆ ಒಂದೊಂದು. ಇವು ಗ್ರಂಥಾನುಭವಗಳಿಂದ ಆರಿಸಿದುವು ಎಂಬಲ್ಲಿ ಎರಡು ರೀತಿಯ ಅರ್ಥ ಸಾಧ್ಯ. ಗ್ರಂಥಗಳ ಅನುಭವ ಎಂಬುದು ಒಂದರ್ಥ ; ಗ್ರಂಥ ಹಾಗೂ ಲೋಕಾನುಭವ ಎಂಬುದು ಎರಡನೆಯ ಅರ್ಥ. ಕವಿ ಓದಿದ ಗ್ರಂಥಗಳ ಸಾರರೂಪವಾಗಿ ಇಲ್ಲಿಯ ಮಾತುಗಳಲ್ಲಿ ಅವುಗಳ ತಿರುಳು, ಹುರುಳುಗಳು ಹರಳುಗಟ್ಟಿರಬಹುದು. ಜತೆಗೆ ಕವಿಯ ಲೋಕಾನುಭವದ ಕುಂದಣ ಒಂದಾಗಿರಬಹುದು. ಹೀಗೆ ಕವಿಯ ಲೋಕಾನುಭವದ ಬಂಗಾರದಲ್ಲಿ

ಅವರ ಗ್ರಂಥ ವ್ಯಾಸಂಗದ ಸಂಸ್ಕಾರ ರತ್ನಗಳು ಸೇರಿ ಇದು ಕನ್ನಡ ತಾಯಿಯ ಕಂಠಾಭರಣಗಳಲ್ಲಿ ಒಂದೆನಿಸಿದೆ. ಇಲ್ಲೆಲ್ಲ ಜೀವನವನ್ನು ತೀವ್ರವಾಗಿ ಅನುಭವಿಸಿದ ವೇದನೆ–ಸಂವೇದನೆಗಳು ಎದೆಯಿಂದ ಹೊರಟು ಎದೆಗೆ ಮುಟ್ಟುತ್ತವೆ, ತಟ್ಟುತ್ತವೆ. ಡಾ॥ ಎ. ಸೀತಾರಾಮಯ್ಯ ಅವರು ಈ ಕೃತಿಯನ್ನು ಕುರಿತು ಹೀಗೆಂದಿದ್ದಾರೆ :

"This is the will and testament of a character which presents a picture of life, its tasks, its limitations, its sorrows, and compensations, its hopes and aspirations ; concerned about human destiny, eager to learn and understand what can be ; and to live without grouse, with what can be achieved ; to strive without malice or passion for what it deems desirable ; to enjoy with grace and playfulness of mind whatever can be gained ; to accept whatever comes and yield as person and in faith to the beneficence of the spirit which is the spirit of all ; in trust and confidence that beyond and above there is something that in its time and wisdom can be the only Giver of Peace and Good and Joy. These farragoes are not a regular, sustained, closely argued philosophy or a system of thought ; but a gathering of thoughts and feeling, hope and prayer in full awareness of what constitutes and environs human life as it has to be lived in time and place. The discipline and attitude are born of understanding, hastened by the experiencing of a whole life ;—which willingly surrenders itself to God who in His love and grace will bless it as He wills it." [4]

ಇದೊಂದು ಪರಿಪೂರ್ಣ ಜೀವನದ ದರ್ಶನಕಾವ್ಯ. ಸುಮಾರು ಐವತ್ತು ವರ್ಷಗಳ ಜೀವನಾನುಭವಗಳ ರಸಪಾಕ. ಇಲ್ಲಿ ಲೋಕತಾಪದಿಂದ ಬೆಂದು ತಂಪನ್ನು ಬಯಸುವವನು ನಿಜವಾದ ಸಮಾಧಾನವನ್ನು ಹೊಂದುತ್ತಾನೆ. ಮಂಕುತಿಮ್ಮ ಅಂಥವರನ್ನು ಬಿಡದೆ ಸಂತಯಿಸುತ್ತಾನೆ. ಇದು ಹೊಸಗನ್ನಡ ಕಾವ್ಯದಲ್ಲಿ ಗಾತ್ರದಲ್ಲಿಯೂ ಗುಣದಲ್ಲಿಯೂ ದೊಡ್ಡ ಮುಕ್ತಕ ಕಾವ್ಯ. ಇದು ರೂಪದಲ್ಲಿ ಮುಕ್ತಕ ಕಾವ್ಯ ; ಅಂತರಂಗದಲ್ಲಿ ಮುಕ್ತಿಯ ಮಹಾಕಾವ್ಯ. ಇದರಲ್ಲಿ ಮಹಾಕಾವ್ಯದ ಲಕ್ಷಣವಿಲ್ಲದಿರಬಹುದು ; ಆದರೆ ಮಹಾಕಾವ್ಯದ ಕಾರ್ಯವನ್ನು ಇದು ಮಾಡುತ್ತದೆ. ಇದು ಹೆಸರಿನಲ್ಲಿ 'ಮಂಕುತಿಮ್ಮನ ಕಗ್ಗ'ವಾದರೂ ಉಸಿರಿನಲ್ಲಿ ಮಾನವ ಮುಕ್ತಿ ಮಹಾಕಾವ್ಯ. ಅದರಿಂದಲೇ ಕನ್ನಡದ ಮಹಾಕವಿ ಕುವೆಂಪು ಇದನ್ನು ಮನಸಾರೆ ಮೆಚ್ಚಿರುವುದು :

ಹಸ್ತಕ್ಕೆ ಬರೆ ನಕ್ಕೆ, ಓದುತ್ತ ಓದುತ್ತ
ಮಸ್ತಕಕ್ಕಿಟ್ಟು ಗಂಭೀರನಾದೆ
ವಿಸ್ತರದ ದರ್ಶನಕೆ ತುತ್ತತುದಿಯಲಿ ನಿನ್ನ
ಪುಸ್ತಕಕೆ ಕೈಮುಗಿದೆ—ಮಂಕುತಿಮ್ಮ ! [5]

ಹೀಗೆ ಇದು ಮಹಾಕವಿಗಳೂ ಕೈಮುಗಿದ ಕೃತಿ. ಪ್ರೊ॥ ಬಿ. ಎಂ. ಶ್ರೀಕಂಠಯ್ಯನವರೂ ಇದನ್ನು "... the finest philosophical poem of our time in Kannada" ಎಂದಿದ್ದಾರೆ.[6] ಪ್ರೊ॥ ಎಂ. ಹಿರಿಯಣ್ಣ ಅವರು ಇದನ್ನು ಕುರಿತು ಹೀಗೆಂದಿದ್ದಾರೆ : All the important truths of Vedanta appear to me to be in it. ...But it is not mere philosophy that we have here; the book also contains much genuine poetry, descriptive and lyrical. It is, in brief, a classic of popular Vedanta; and I hope that it will soon come to be regarded so in the whole of the Kannada country." [7] ಪ್ರೊ॥ ಎ. ಆರ್. ಕೃಷ್ಣಶಾಸ್ತ್ರಿಯವರು ಈ ಕೃತಿಯನ್ನು ಕುರಿತು ಹೀಗೆಂದಿದ್ದಾರೆ : "ಆಧುನಿಕ ಕನ್ನಡ ಸಾಹಿತ್ಯದಲ್ಲಿ... ಒಂದು ಮಹಾವಾಕ್ಯಗಳ ರತ್ನಾವಳಿ 'ಮಂಕು ತಿಮ್ಮನ ಕಗ್ಗ', ಅದು ನಿಜವಾಗಿ ಕಗ್ಗವೂ ಅಲ್ಲ ; ಹಗ್ಗವೂ ಅಲ್ಲ,—ಸಗ್ಗ ; ವೇದಾಂತ ಸಂಗ್ರಹ ; ವಿದ್ವತ್‌ಸಾಧಕರೊಬ್ಬರ ಅನುಭವಾಮೃತ." [8]

ಇದರ ಪ್ರಶಸ್ತಿ ಇಷ್ಟೇ ಅಲ್ಲ. ಇದು ಮೊತ್ತಮೊದಲನೆಯ ಭಾರತೀಯ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾಗಿ ನಮ್ಮ ವಿಮರ್ಶಕರ ಹೃದಯದಾರಿದ್ರ್ಯದಿಂದ ಅದರಿಂದ ವಂಚಿತವಾದ ಕೃತಿ. ಇದನ್ನು ಡಾ॥ ಸರೋಜಿನಿ ಮಹಿಷಿಯವರು ಹಿಂದೀ ಭಾಷೆಗೆ ಭಾಷಾಂತರಿಸಿ ಉತ್ತರ ಭಾರತದಲ್ಲೆಲ್ಲ ಜನಪ್ರಿಯವಾಗಿದೆ. ಅಖಿಲ ಭಾರತೀಯ ಕಾವ್ಯವಾಗಿದೆ. ಇದನ್ನು ಶ್ರೀ ಡಿ. ಶೇಷಗಿರಿರಾಯರು ಇಂಗ್ಲಿಷಿಗೂ ಪರಿವರ್ತಿಸಿ ಅಂತಾರಾಷ್ಟ್ರೀಯ ಕಾವ್ಯವಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಇದು ಸಾಮಾನ್ಯ ಸಹೃದಯರ ಹೃದಯ ಹೃದಯಗಳಲ್ಲೂ ಮನೆಮಾಡಿಕೊಂಡಿದೆ. ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ಕವಿಗೂ ಕೃತಿಗೂ ಬೇರೇನೂ ಇಲ್ಲ.

ಕಾವ್ಯಕ್ಷೇತ್ರದಲ್ಲಿ 'ಮಂಕುತಿಮ್ಮನ ಕಗ್ಗ' ಡಿ.ವಿ.ಜಿ. ಅವರ Master piece ಮಹಾಕೃತಿ, ಮೇರುಕೃತಿ, *Magnum Opus* ತ್ರಿಪದಿಗಳಲ್ಲಿ ಸರ್ವಜ್ಞ ಹೇಗೋ ಹೊಸಗನ್ನಡ ಮುಕ್ತಕಗಳಲ್ಲಿ ಡಿ.ವಿ.ಜಿ. ಹಾಗೆ.

'ಮಂಕುತಿಮ್ಮನ ಕಗ್ಗ'ದ ಬಗೆಗೆ ಶ್ರೀ ಎಸ್. ಅನಂತನಾರಾಯಣ ಅವರು ಹೀಗೆ ಬರೆದಿದ್ದಾರೆ : "ಡಿ.ವಿ.ಜಿ.ಯವರ ಕವಿತೆಗಳಲ್ಲಿ ನಾವು ಅಧ್ಯಾತ್ಮದಲ್ಲಿ ಆಸಕ್ತಿ. ಲೌಕಿಕವಾಗಲಿ ಆಧ್ಯಾತ್ಮಿಕವಾಗಲಿ ತಮ್ಮ ಅನುಭವಗಳನ್ನು **ನುಡಿಮುತ್ತು**ಗಳಲ್ಲಿ

ಪೋಣಿಸಿ ಹೇಳುವ ರೀತಿಯನ್ನು ಕಾಣುತ್ತೇವೆ. ಇದರ ಪರಿಣತ ರೂಪವೇ 'ಮಂಕುತಿಮ್ಮನ ಕಗ್ಗ'......945 ಚೌಪದಿಗಳನ್ನುಳ್ಳ 'ಮಂಕುತಿಮ್ಮನ ಕಗ್ಗ'ವು ಹಳೆಯ ಮತ್ತು ಹೊಸ ರೀತಿಗಳೆರಡನ್ನೂ ತನ್ನಲ್ಲಿ ಅಡಕಮಾಡಿಕೊಂಡಿದೆ. ಶರಣರು, ದಾಸರು, ಸರ್ವಜ್ಞ, ವೇಮನ, ಕಬೀರ ಮುಂತಾದವರು ತಮ್ಮ ವಚನಗಳಲ್ಲಿ ಗೀತಗಳಲ್ಲಿ ಅನುಭವಾಮೃತವನ್ನು ಭಟ್ಟಿಯಿಳಿಸಿರುವಂತೆಯೇ, ಇಲ್ಲಿ ಹೊಸ ಜಗತ್ತಿಗೆ ಇಪ್ಪತ್ತನೆಯ ಶತಮಾನದ ಬದುಕಿಗೆ ಬಂದ ಅನುಭವಗಳನ್ನು ಭಟ್ಟಿಯಿಳಿಸಿದೆ... 'What oft was thought, but never so well expressed' ಎಂದು ಪೋಪ್ ಕವಿಯು ಹೇಳಿರುವುದು ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ಕ್ಕೆ ಅನ್ವಯಿಸುತ್ತದೆ."[9] "ಆದರೆ ಇಲ್ಲಿ ಭಾವಗೀತೆಯ ಕಾವಿಲ್ಲ"[10] ಎಂಬ ಅವರ ಮಾತು ಸರಿಯಲ್ಲ. ಇದು ಕಾವ್ಯದಲ್ಲಿ ಮುಕ್ತಕ ಪ್ರಕಾರ ಎಂಬುದನ್ನು ಅವರು ಗಮನಿಸಿದ ಹಾಗಿಲ್ಲ. ಗಮನಿಸಿದ್ದರೆ 'ಭಾವಗೀತೆಯ ಕಾವಿಲ್ಲ' ಎಂದು ಹೇಳುತ್ತಿರಲಿಲ್ಲ. ಆದರೆ ಅವರು 'ನುಡಿಮುತ್ತು' ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇಲ್ಲಿ ಭಾವಗೀತದ ಕಾವು ಮಾತ್ರವಲ್ಲ : ಮುಕ್ತಕದ ಸಂಕ್ಷಿಪ್ತತೆಯೂ, ಮೊನಚೂ, ದೀಪ್ತತೆಯೂ ಎದ್ದುಕಾಣುತ್ತವೆ. ಇವರ 'ನುಡಿಮುತ್ತು'ಗಳನ್ನು ಅವರು ಸರ್ವಜ್ಞ, ಶರಣರು, ದಾಸರು, ವೇಮನ, ಕಬೀರ ಇವರ ಕೃತಿಗಳಿಗೆ ಹೋಲಿಸಿ ಒಪ್ಪಿಕೊಂಡಿರುವುದರಿಂದ ಅವರ ಕೃತಿಗಳಲ್ಲೂ 'ಭಾವಗೀತೆಯ ಕಾವಿಲ್ಲ' ಎಂದು ಹೇಳಿದಂತಾಯಿತು ! ಹೀಗೆ ಈ ವಿಮರ್ಶೆ ಪೂರ್ವಾಪರ ಸಂಬಂಧವಿಲ್ಲದ ಒಂದು ಜಾರುನುಡಿಯಾಗುವುದೇ ವಿನಾ ಕೃತಿಯ ಆಳವಾದ ಅಧ್ಯಯನದಿಂದ ಮೂಡಿದ ನಿರ್ಣಯದ ಮಾತಾಗುವುದಿಲ್ಲ.

ಈ ಮುಕ್ತಕಗಳಲ್ಲಿ ಒಂದು ಭಾವ ಬಲಿತು ಬೆಳೆದು ನಾಲ್ಕನೆಯ ಪಂಕ್ತಿಯಲ್ಲಿ ಅದು ಸೂತ್ರಪ್ರಾಯವಾಗಿ, ಸಾರವತ್ತಾಗಿ, ಹುರುಳಾಗಿ, ತಿರುಳಾಗಿ, ಹರಳುಗಟ್ಟುವುದನ್ನು ಕಾಣಬಹುದು. ವಚನಗಳಲ್ಲಿ ಹೀಗೆಯೇ ಕೊನೆಯ ಸಾಲು ಪ್ರಧಾನವಾಗುತ್ತದೆ. ಹರಿದಾಸರ ಕೀರ್ತನೆಗಳಲ್ಲಿ ಪಲ್ಲವಿಗೆ ಪ್ರಾಧಾನ್ಯ. ಹಾಗೆಯೇ ಇಲ್ಲಿ ನಾಲ್ಕನೆಯ ಪಂಕ್ತಿ ಮುಖ್ಯವಾಗುತ್ತದೆ. ಅಂಥ ಕೆಲವನ್ನು ಇಲ್ಲಿ ಉದಾಹರಿಸಬಹುದು : ಏನು ವಿಸ್ಮಯ ಸೃಷ್ಟಿ !, ಉಪಕಬುದ್ಬುದವೆಲ್ಲ, ಗುಣಕೆ ಕಾರಣವೊಂದೆ ?, ಜಡವೆ ಜೀವದ ವಸತಿ, ಹೊಸತು ಹಳತಾಗದೇ, ಬಗೆಯೆಷ್ಟೊ ಮೊಗವಷ್ಟು, ತೆರೆತಗ್ಗುಗಳಿನೆ ತೊರೆ, ಸಿಕ್ಕುಗಳ ಕಂತೆ ಜಗ, ಸ್ವಾರಸ್ಯವೊ ರಹಸ್ಯ, ಸೃಷ್ಟಿ ಶೈಲದ ಶಿಖರ, ನಾವೆಲ್ಲರಾಟದೆಲೆ, ನೂರು ಜಡೆ ಕೋಲಾಟ, ಅನ್ವಯಚಿರಂಜೀವಿ, ಉದರ ಮಾತ್ರ ನಿವಾಸ, ತಣ್ಣಗಿರಿಸಾತ್ಮವನು, ಸಹನೆ ವಜ್ರದ ಕವಚ, ಉಳಿವಿಗರಿವಿನ ನೆಲೆಯೊ, ಅನುಭವವೇದವದು, ಸರಸತೆಯೆ ಸುಂದರವೊ, ಚೆಂದದರಿವೆ ತಪಸ್ಸೊ, ಸಿಂಬಳದಿ ನೊಣ ನೀನು, ತೆರೆಕೋಟಿ ಕಡಲೊಂದು, ಹಳೆಬೇರು ಹೊಸತಳಿರು, ಗಟ್ಟಿತ್ರನ ಗರಡಿ ಫಲ, ಬಿರಿವನನೆ ಫಲಕೆ ಮನೆ, ಪರಿಶುದ್ಧ ಮನವೆ ವರ, ನೋವೆಲ್ಲ ಪಾವಕವೊ, ಜಗಸೂರ್ಯ ನೀಂ ಕಮಲ, ಮನೆಯೊಳಗೆ ಮಠ ನಿನಗೆ, ಜವರಾಯ ಸಮವರ್ತಿ, ಕಸಬೊರಕೆಯಾಗಿಳೆಗೆ, ಶಿರವ ಬಾಗಿಹುದೆ ಸರಿ, ಮರೆಯಬೇಡೊಳ ಬೆಳೆಯ,

ಹೊಲಿ ನಿನ್ನ ತುಟಿಗಳನು, ಗಣೆಸಾತ್ಮಲಾಭವನು, ಶ್ರಮಿಸಿಳಿಯ ಗಾಣದಲಿ, ಶಿಲೆಯಲ್ಲ ಯೋಗಿಯೆದೆ, ಇಳೆಯುಂಬೆಯಾಳು ನೀಂ, ಕಲೆಯೆ ಜೀವನ ಯೋಗ, ಗುಣಶಾಲಿ ತೃಣಸಾಧು, ತಾಳುವೆಯೆ ಪರಿಪಾಕ, ಎಲ್ಲರೊಳಗೊಂದಾಗು, ವಿವಿಧತೆಯೆ ಜೀವನವೊ, ಮಲಿನದಲಿ ನೆನೆ ಶುಚಿಯ, ತಾಳದಿರು ಗುರುತನವ, ಗುಪ್ತಗಾಮಿನಿಯೊ ಋಣ, ಇಳೆಯೆ ಬಾಗಿಲು ಪರಕೆ, ಸುಧೆ ಬಂತೆ ಸುಲಭದಲಿ ?, ದುಡುಕದಿರು ತಿದ್ದಿಕೆಗೆ, ಮೆರವಣಿಗೆಯೋ ಲೋಕ, ನಿನಗೆ ನೀನೇ ಗುರುವೊ, ನಿದ್ದೆವೊಲು ಸಾವಪಡೆ, ಬೇರೆ ಮತಿ ಬೇರೆ ಮತ, ಕವನ ನೆನಪಿಗೆ ಸುಲಭ—ಇವೆಲ್ಲ ಇಲ್ಲಿಯ ಮುಕ್ತಕಗಳ ಮುತ್ತುಗಳು ; ರಸದ ಹನಿಗಳು, ಗಿಡದ ತುದಿಯ ಹೂವುಗಳು, ಮರದ ತುದಿಯ ಹಣ್ಣುಗಳು.

'ಮಂಕುತಿಮ್ಮನ ಕಗ್ಗ' ಒಬ್ಬ ಕವಿಯ ಜೀವಿತ ಸರ್ವಸ್ವದ ಅನುಭವಮಥನದಿಂದೆದ್ದ ನವನೀತ, ಅನುಭವ ವೇದ. ಇದು ವಿಮರ್ಶಕರ ವಿಮರ್ಶೆಗೆ ಜಗ್ಗದೆ, ಪದವಿ ಪ್ರಶಸ್ತಿಗಳು ಸಿಗಲಿಲ್ಲವೆಂದು ಕುಗ್ಗದೆ, ಜನಮನದಲ್ಲಿ ನಿಂತು, ಸಹೃದಯರ ಹೃದಯದಲ್ಲಿ ನೆಲೆಸಿ ಜನಪ್ರಿಯವಾದ ಡಿ.ವಿ.ಜಿ. ಅವರ ಅನುಭವ–ಅನುಭಾವ,–ಅಧ್ಯಾತ್ಮಗಳ ಕಾವ್ಯವಾಣಿ ತ್ರಿವೇಣಿ. ಜನನ–ಜೀವನ–ಮರಣಗಳಂಥ ಸಮಸ್ಯೆಗಳಿಗೆ ಉತ್ತರವಿತ್ತ ಮೇರುಕೃತಿ ; ಡಿ.ವಿ.ಜಿ. ಕಾವ್ಯಕರ್ಮದಲ್ಲಿ ಏರಿದ ಗೌರೀಶಂಕರ ಶಿಖರ.

ಮರುಳ ಮುನಿಯನು ನಾನು ಮಂಕುತಿಮ್ಮನ ತಮ್ಮ
ಕೊರಗೆನ್ನೆದೆಯ ಭಿತ್ತಿಯೊಳಗೆ ತುಂಬಿಹುದು
ಸುರಿವೆನದನಿಲ್ಲಿ ಸಾಧುಗಳು ಸರಿಪೇಳರೇಂ
ಗುರುವಲಾ ಜಗ ನಮಗೆ—ಮರುಳ ಮುನಿಯ.

ಮರುಳ ಮುನಿಯನು ನಾನು ಮಂಕುತಿಮ್ಮನ ತಮ್ಮ
ಸುರಿವೆನೆನ್ನೆದೆ ಚೀಲದೆಲ್ಲ ಪುರುಳುಗಳ
ಸರಿ ನೋಡಿ ಕೊಡುವ ಸಜ್ಜನರಿಹರೆ ಲೋಕದಲಿ
ಶರಣಪ್ಪೆನವರಿಂಗೆ—ಮರುಳ ಮುನಿಯ. [11]

ಡಾ॥ ಡಿ. ವಿ. ಗುಂಡಪ್ಪನವರು ತಮ್ಮ ಮಹಾಕೃತಿಯಾದ 'ಮಂಕುತಿಮ್ಮನ ಕಗ್ಗ'ವನ್ನು ಬರೆದು ಬಹಳ ಕಾಲದ ಮೇಲೆ, ಅವರು ಕಾಲವಾದ ಮೇಲೆ 'ಮಂಕುತಿಮ್ಮ'ನ ತಮ್ಮನಾಗಿ 'ಮರುಳ ಮುನಿಯ' ಎಂಬ ಹೆಸರಿನಿಂದ ಬಂದ. 41 ವರ್ಷಗಳ ಅನಂತರ 1984ರಲ್ಲಿ ಮರುಳ ಮುನಿಯನ ಅವತಾರವಾಯಿತು. ಮರುಳ ಮುನಿಯ ಎಲ್ಲ ದೃಷ್ಟಿಯಿಂದಲೂ ಮಂಕುತಿಮ್ಮನಿಗೆ ತಮ್ಮನೇ. ಸಂಖ್ಯೆಯಲ್ಲಿ ಅದು 945; ಇದು 824. ಕಾಲದ ದೃಷ್ಟಿಯಿಂದಲೂ ಮಂಕುತಿಮ್ಮ ಅಗ್ರಜ; ಮರುಳ ಮುನಿಯ ಅನುಜ. ಯೋಗ್ಯತೆಯ ದೃಷ್ಟಿಯಿಂದಲೂ ಮಂಕುತಿಮ್ಮನ ಸಾಮರ್ಥ್ಯ ಮರುಳ ಮುನಿಯನಿಗೆ ಬಾರದು. "ವಾಸ್ತವದಲ್ಲಿ ಈ ಗ್ರಂಥವು 'ಮಂಕುತಿಮ್ಮನ ಕಗ್ಗ'ದ ಎರಡನೆಯ ಭಾಗವಾಗಿದೆ. ಅದಕ್ಕೆ ಇದು ಪೂರಕ"[12] ಎಂದು ಇದಕ್ಕೆ ಪ್ರಸ್ತಾವನೆ

ಬರೆದು ಸಂಪಾದಿಸಿದ ಶ್ರೀ ರಂಗನಾಥ ಶರ್ಮರು ಹೇಳಿರುವುದು ಸರಿಯಾಗಿದೆ. ಇದನ್ನು ಓದುವಾಗಲೆಲ್ಲ 'ಮಂಕುತಿಮ್ಮ' ಎಂದು ಅಭ್ಯಾಸವಾದ ಬಾಯಿಗೆ 'ಮರುಳ ಮುನಿಯ' ಏನು ಮಾಡಿದರೂ ಬರುವುದಿಲ್ಲ; ಮಂಕುತಿಮ್ಮನೇ ಬರುತ್ತಾನೆ. "ಹಸ್ತಪ್ರತಿಯಲ್ಲಿ ಮೊದಲ ಕೆಲವು ಪದ್ಯಗಳು 'ಮಂಕುತಿಮ್ಮ' ಎಂಬ ಅಂಕಿತ ಪಡೆದಿದ್ದುವು. ಅನಂತರ, ಅದೇನು ಕಾರಣವೋ ಡಿ.ವಿ.ಜಿ.ಯವರು 'ಮರುಳ ಮುನಿಯ' ಎಂಬ ಅಂಕಿತದಿಂದ ಉಳಿದೆಲ್ಲ ಪದ್ಯಗಳನ್ನೂ ಪೂರೈಸಿದ್ದಾರೆ"[13] ಎಂದು ಸಂಪಾದಕರು ಹೇಳಿದ್ದಾರೆ. ಬಹುಶಃ ಕವಿಗೇ 'ಮಂಕುತಿಮ್ಮ' ಎಂದು ಕರೆಯಲು ತೃಪ್ತಿಯಿರಲಿಲ್ಲ ಎಂದು ತೋರುತ್ತದೆ. 'ಮರುಳ ಮುನಿಯನ ಕಗ್ಗ' ಹಲವು ಅಂಗಾಂಗಗಳಲ್ಲೂ ರೂಪದಲ್ಲೂ ಸ್ವಭಾವದಲ್ಲೂ ಅಣ್ಣನನ್ನೇ ಹೋಲುತ್ತದೆ. ಆದರಿಂದ 'ಮಂಕುತಿಮ್ಮನ ತಮ್ಮ' ಎಂದು ಕವಿ ಕರೆದಿರುವುದು ಸರಿ. ಹಸ್ತಪ್ರತಿಯಲ್ಲಿ ಒಂದೊಂದು ಕಡೆ 'ಮೊಂಡು ಮುನಿಯ' ಎಂದೂ ಬರೆದಿದ್ದಾರೆ.[14] ಇದರಲ್ಲಿ 'ಕಗ್ಗದ ಕಥೆ' ಎಂಬ ಕಾವ್ಯಪೀಠಿಕೆಯಿಲ್ಲ.

ಮೊತ್ತಮೊದಲು 'ಮಂಕುತಿಮ್ಮನ ಕಗ್ಗ'ದಲ್ಲಿಯಂತೆ ಇಲ್ಲಿಯೂ ಪರಬ್ರಹ್ಮನ ಪಾದವನ್ನು ಅರಸು ಎನ್ನುತ್ತಾರೆ. ಎರಡೂ ಕಾವ್ಯ ಶ್ರೀಕಾರದಿಂದ ಆರಂಭವಾಗುತ್ತವೆ.

ಶ್ರೀಮಜ್ಜಗನ್ಮುಕುರ ವಿಸ್ತರದೊಳಾರ್ ತನ್ನ
ಮೈಮೆಯ ಪ್ರತಿಬಿಂಬ ಚಿತ್ರಗಳ ನೋಡು-
ತ್ತಾಮೋದಬಡುತಿಹನು ಆತನಡಿದಾವರೆಯ
ನಾಮರಸುಮಂ ಬಾರೊ—ಮರುಳ ಮುನಿಯ.[15]

ಈ ಕಗ್ಗ ಏಕೆ, ಹೇಗೆ ಹುಟ್ಟಿತು ಎಂಬುದನ್ನು ಕವಿ ಹೀಗೆ ಹೇಳಿದ್ದಾರೆ:

ಕಗ್ಗವಿದು ಬೆಳೆಯುತಿದೆ ಲಂಕೆಯಲಿ ಹನುಮಂತ
ಹಿಗ್ಗಿ ಬೆಳೆಸಿದ ಬಾಲದಂತೆ ಸಿಗ್ಗಳಿದು
ನುಗ್ಗಿ ಬರುತಿರೆ ಲೋಕದ ಪ್ರಶ್ನೆಗಳ ಧಾಳಿ
ಉಗ್ಗು ಬಾಯ್ಬುಪಲವಿದು—ಮರುಳ ಮುನಿಯ.[16]

'ಮಂಕುತಿಮ್ಮನ ಕಗ್ಗ'ದಲ್ಲಿ ಇರುವ ವಿಷಯವ್ಯಾಪ್ತಿಯನ್ನು ಶ್ರೀ ಜಿ. ಪಿ. ರಾಜರತ್ನಂ ಅವರು ವಿಂಗಡಿಸಿ ವಿಷಯ ಶಿರೋನಾಮೆಯನ್ನು ಕೊಟ್ಟಂತೆ ಇಲ್ಲಿ ಸಂಪಾದಕರಾದ ಶ್ರೀ ಶರ್ಮರು ವಿಷಯಗಳನ್ನು ವಿಭಾಗಿಸಿ ಬೇರೆ ಬೇರೆ ಶಿರೋನಾಮೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ತಮ್ಮ ಪ್ರಸ್ತಾವನೆಯಲ್ಲಿ ಇದರ ವಸ್ತುವನ್ನು ಹೀಗೆ ಗೊತ್ತುಹಚ್ಚಿದ್ದಾರೆ: "ಇದರಲ್ಲಿ ವಿಚಾರಕ್ಕೊಳಗಾದ ವಸ್ತು ಮೂರು—ಅಧಿದೈವ, ಅಧಿಲೋಕ ಮತ್ತು ಅಧ್ಯಾತ್ಮ. ಹಾಗೆಂದರೆ ಬ್ರಹ್ಮಾಂಡವೇ ವಿಚಾರಕ್ಕೆ ಒಳಗಾದ ವಸ್ತು."[17] ಇಲ್ಲಿ ವಿಚಾರಕ್ಕೆ ಒಳಗಾದ ವಸ್ತು ಮೂರು ಎಂದು ಸ್ಥೂಲವಾಗಿ

ವಿಭಾಗಿಸಿದರೂ ಸೂಕ್ಷ್ಮವಾಗಿ ನೋಡಿದರೆ ನೂರಾರು ವಿಷಯಗಳನ್ನು ಇಲ್ಲಿ ವಿಚಾರ ಮಾಡಿದ್ದಾರೆ. ಒಂದೊಂದು ಪದ್ಯವೂ ಬ್ರಹ್ಮಾಂಡವನ್ನೇ ತೆರೆಯುವುದು ಇಲ್ಲಿಯ ಸ್ವಾರಸ್ಯ. ಅವರು ಕೊಟ್ಟ ಶಿರೋನಾಮೆಯನ್ನೇ ಪಟ್ಟಿ ಮಾಡಿದರೆ ಅದರ ಸ್ವಾರಸ್ಯವೂ, ವಿಷಯ ವೈವಿಧ್ಯವೂ ವ್ಯಕ್ತವಾಗುತ್ತದೆ.

ಮರುಳ ಮುನಿಯನು ನಾನು, ಪರಬ್ರಹ್ಮ. ವಂದಿಸು ಅದೊಂದಕ್ಕೆ, ಪಾಲಕನ ನೆನೆ ಮಣಿದು, ಸಾಕ್ಷಿ ಮಾತ್ರನು ಶಿವನು, ಈಶ್ವರನಲ್ಲಿ ಎಲ್ಲವೂ ಲೀನ, ಸರ್ವಾತ್ಮ ಭಾವ, ಅನಾದಿ–ಅನಂತ, ಏಕ–ಅನೇಕ, ವ್ಯಕ್ತ–ಅವ್ಯಕ್ತ, ಸತ್ಯ, ಸ್ವಾನು ಭೂತಿಯೆ ಸತ್ಯ, ಭುವನವೇ ಶಿವವಾರ್ತೆ, ಜಗವೆಲ್ಲ ಶಿವಲೀಲೆ, ಹೊರಳಾಟವೂ ಲೀಲೆ, ಶಿವನಿಗೆಲ್ಲವು ಮೆಚ್ಚು. ಜ್ಞಾನ–ವಿಜ್ಞಾನ, ಜ್ಞಾನಿ–ಅಜ್ಞಾನಿ, ಈಶ್ವರನು ನಿನ್ನೊಳಗೆ, ಜೀವಾತ್ಮ–ಪರಮಾತ್ಮ, ಬ್ರಹ್ಮ–ಜಗತ್ತು, ಬೆಲೆ ಯಾವುದಾತ್ಮಕೆ ?, ಬರಿಯ ಮಾತಿನಿಂದೇನು ? ಒಣತರ್ಕದಿಂದೇನು ?, ನೆಡು ಮನವನದರೊಳಗೆ, ಪರಮಾತ್ಮ ಸಾಧನೆ, ಪರವಸ್ತು ಬುದ್ಧಿಗೆ ನಿಲುಕದು, ಶಾಶ್ವತ ರಹಸ್ಯವದು, ಪರಮ ಗತಿಯುದರಿಂದೆ, ದ್ವಂದ್ವಹಾನಿಯೆ ಮುಕ್ತಿ, ಭ್ರಾಂತಿಯಳಿದೊಡೆ ಶಾಂತಿ, ಸೇವೆಯರ್ಪಿಸಿ ಧನ್ಯನಾಗು, ಭಕ್ತಿಗೊಂದು ಅವಲಂಬನ, ಈಶಕೃಪೆ ಬೀಸೀತು, ಸಿದ್ಧಿಯುಂಟು, ಯಾರಿಗೆ ಜಯ ?, ಅದುಮಿಕೊ ಅಹಂತೆಯನು, ಪುರುಷ ಹರುಷಂ ಗಳಿಪ್ಪ, ಕಡಿಯೆಲ್ಲ ಪಾಶಗಳ, ನಿಯಮಪಾಲನೆಯಿಂದ ಜಯ, ಇರು ತಾಳ್ಮೆಯಿಂ ನಿಂತು, ಮಾನವ ಬ್ರಹ್ಮ, ಅಧಿಪುರುಷ ಪದಕೇರು, ಇದು ದೈವಗತಿ, ಮಾನವಶಕ್ತಿ ಪರಿಮಿತ, ಪ್ರಕೃತಿ ವಿಲಾಸ, ಜಗದ್‌ಯಂತ್ರ, ಜಗನ್ನಾಟಕ, ವೇಷವೋ ಜಗವೆಲ್ಲ, ಲಲಿತರೌದ್ರಗಳೆ ಜಗ, ಜಗತ್ತೇ ಗುರು, ಸುಖ–ದುಃಖ, ಸುಖ ವಿವೇಕ, ಪರದಾಡುತಿದೆ ಲೋಕ, ಲೋಕ ವೈವಿಧ್ಯ, ಬದುಕೆಲ್ಲರಂತೆ, ತೋರಿಕೆಗೆ ಕಹಿ, ಸಾವಿಗಂಜುವುದೇಕೆ ?, ಸ್ವಸ್ವಭಾವವೆ ಮರಣ, ಕೋಟಲೆಯೆ ಸರಿ ಬಾಳ್ಗೆ, ವ್ಯಷ್ಟಿಯಿಂದ ಸಮಷ್ಟಿ, ವ್ಯಷ್ಟಿ ಪೌಲ್ಕವ ಮರೆಯದಿರ್. ಮಾಯೆ ಸುಳಿದಾಡುವಳು, ಗೆಲ್ಲು ಮಾಯೆಯನು, ಭ್ರಮೆಯ ನೂಕಲರಿತವನೆ ಕೃತಿ, ನಾಟ್ಯವಿಧಿ ನಟಿಯಿಚ್ಛೆ, ಬಾಹ್ಯದಲ್ಲಿ ತಿರುಳಿಲ್ಲ, ಮಿಥ್ಯೆ ಸತ್ಯದ ಹೊದಿಕೆ, ವಿಧಿವಿಲಾಸ, ಲಭ್ಯವಿದ್ದಷ್ಟು ಪ್ರಾಪ್ತಿ, ತೀರಿಸಲಾಗದ ಹೊಣೆ. ಮಿತಿಯಿರಲಿ, ಲೋಕೋಪಕಾರ, ಹೊಂದಾಣಿಕೆ ಒಳ್ಳೆಯದು, ಸಹ ಬಾಳ್ವೆಯೇ ಸೊಗಸು, ನಿರ್ವೀರ್ಯತನ ಬೇಡ, ವಿಹರಿಸುವ ರೀತಿಯಿದು, ಕಷ್ಟವೂ ಒಳ್ಳೆಯದೆ, ರಾಗ–ದ್ವೇಷ, ಮರೆಯದಿರು ತರತಮವ, ಸಮತೆ–ಅಸಮತೆ, ವ್ಯರ್ಥವಲ್ಲ ಸೃಷ್ಟಿ, ಕರ್ಮಯೋಗ, ಇದು ರಾಜಯೋಗ, ಬಾಳಿಗೊಂದು ನಂಬಿಕೆ, ಆದರ್ಶ ಜೀವನ, ಉದ್ಧರೇದಾತ್ಮನಾತ್ಮಾನಂ, ನಿದ್ರಿಸದೆ ಪಾರಾಗು, ಸುಂದರದ ಮಾಯೆಯದು, ಮೀರು ಪ್ರಾರಬ್ಧವನು, ಕಲಿತಿದನು ಬಾಳ್, ಆಸೆಗೆ ಮಿತಿಯಿಲ್ಲ, ಮಾಡಿದ್ದುಣ್ಣೋ ಮಹಾರಾಯ, ಮನುಷ್ಯಜನ್ಮ ದೊಡ್ಡದು, ಕಷ್ಟವೇಂ ಬಾಳಲಿಕೆ ?, ಇದು ಸ್ವಾತಂತ್ರ್ಯ, ಜೀವ–ಜೀವನ, ಸಮನ್ವಯದಿಂದ ಹಿತ, ವಿಶದನಾಗು-ಲೀನನಾಗು, ಉತ್ತರ ಸುಲಭ ವಲ್ಲ, ಜಗಳವೇತಕೊ ತಮ್ಮ ?, ವಿಶ್ವಕುಟುಂಬ, ಜಗದೊಳಗೊಂದಾಗು, ಚರಿತೆ ನಿನ್ನದು

ಮುಖ್ಯ, ದ್ವಂದ್ವವಿರೆ ಸುಂದರತೆ, ಹೋಲಿಕೆ ಸಲ್ಲದು, ತೃಪ್ತಿ ಇರಲಿ, ಬಿಗಿ ಮನಸಿನಲೆ ತವಂ, ಮನಸ್ಸು–ಸಂದೇಹ, ಕಲಿಸೈಸಲುಭಯುವಸು, ಸಹಿಸುವುದು ಬಂದುದನಂ, ತಡೆಯುಂಟೆ ನರಮನಕೆ ? ಶಾಸ್ತ್ರ–ಕಾವ್ಯ–ಕಲೆ—ಎಂಬಿವು ಇಲ್ಲಿಯ ವಸ್ತು ವಿಭಾಗಗಳಾದರೂ ಇಲ್ಲಿ ಒಂದೊಂದೂ ಸೂಕ್ತಿ ಮೌಕ್ತಿಕ ; ಒಂದೊಂದೂ ಬಾಳಿನ ಆಳವಾದ ಅನುಭವಾಂಬುಧಿಯಿಂದೆತ್ತಿದ ಲಕಲಕಿಸುವ ಮುತ್ತು. ಒಂದೊಂದೂ ಸ್ವತಂತ್ರವಾದುದು.

ಇಲ್ಲಿಯೂ 'ಮಂಕುತಿಮ್ಮನ ಕಗ್ಗ'ದಂತೆ ಪ್ರತಿಯೊಂದು ಪದ್ಯದ ಕೊನೆಯ ಸಾಲು ಸೂಕ್ತಿಯಾಗಿ, ಸೂತ್ರಪ್ರಾಯವಾಗಿ ಮುಕ್ತಾಯಗೊಳ್ಳುವುದು ಇಲ್ಲಿಯ ಮುಕ್ತಕಗಳ ವೈಶಿಷ್ಟ್ಯ. ಇಡಿಯ ಪದ್ಯದಲ್ಲಿ ಕವಿ ಹೇಳಬೇಕೆಂದಿರುವ ಭಾವ ಇಲ್ಲಿ ಹುರುಳಾಗಿ ಹರಳುಗಟ್ಟುತ್ತದೆ. ಅಂಥ ಕೆಲವು ಸೂಕ್ತಿಗಳನ್ನು ಕಾಣಬಹುದು : ಮಾಯೆಯಾಟ ಜಗತ್ತು, ಶಾಪವದು ಮಧುಲೇಪ, ಹಳತು ಹೊಸತೊಂದು ರುಚಿ. ಮಂಗಾಟವೀಶಂಗೆ, ನಿನ್ನೆಚ್ಚರದೆ ಶುದ್ಧಿ, ನರಕಮಾರ್ಗಿಯೊ ಲೋಕ, ವಿಧಿಯು ನಿತ್ಯ ವಿಲಾಸ, ಬಿನದವಿದು ದೇವಂಗೆ, ಬರಿಯ ಕಂದುಕ ನಾವು, ವಿಜಿಗೀಷುತೆಯ ಮೆರೆಸೊ. ಮಿತಿಯಿಂದ ಹಿತಲೋಕ, ವೈರಾಗ್ಯದಿನೆ ಶಾಂತಿ, ಬೇಕು ಪ್ರಜಾಸೃಷ್ಟಿ, ಪಾಳೊಂದು ಮಿಲ್ಲವೆಲೊ, ಮಾನ್ಯನುರ್ವಿಗೆ ಧನ್ಯ, ಕಸಿಕರಿಸು ಲೋಕದಲಿ, ಬಡವಲ್ಲ ಕೂಡಬಾಳ್, ಬದುಕೆಲ್ಲವೆದೆಮಿಡಿತ, ಸಲಿಸವರಿಗವರಿಚ್ಛೆ, ಅದಿರದೆದೆಯೇ ಸಿರಿಯೊ, ಪ್ರಗತಿ ಪೌರುಷ ವಿಜಯ, ಸರಸತೆಯೆ ಸಿರಿತನವೊ, ಬಡಮನಸೆ ಬಡತನವೊ, ಶ್ಯಾಮಸಿತ ದಾಂಪತ್ಯ, ಭಾರವೇನಾತಂಗೆ, ಒಟ್ಟನಿಂ ನೋಡದನು, ಸೊಟ್ಟಗುಂ ಬೆಲೆಯುಂಟು, ತುಳಿ ನಿನ್ನ ಪಥವ ನೀಂ, ಜಾಗರೂಕನೊ ಯೋಗಿ, ಸಾಧನೆಗೆ ದೃಢನಿಲ್ಲೊ, ವೇದನೆಯೊ ಚಿತ್ಸತ್ತ್ವ, ಅದಿರದಿರು ಕದಲದಿರು, ತಡಕಾಟವೇ ಭಕ್ತಿ, ಉಚ್ಚವಿರಿಸಾತ್ಮವನು, ನಿನ್ನ ನೀನೆತ್ತಿಕೊಳೊ, ಏಕಾಕಿ ನೀನಿರೆಲೊ, ನಿನಗೆ ನೀನೇ ಗತಿಯೊ, ಏಕಾಂತ ಶವವಾಹಿ, ಸ್ವಕೃತವೊ ಸ್ವಾತ್ಮಗತಿ, ರಚ್ಚೆ ನೀನೇ ನಿನಗೆ, ಕ್ಷರವೆ ಮುಖವಕ್ಷರಕೆ, ಸಡಲದೆಡೆಯುವ ನಾರು ?, ಮಾನವತೆಯನು ಗಣಿಸು, ವ್ಯಕ್ತಿತೆಯ ನೆಲೆ ಸೂಕ್ಷ್ಮ, ಬಗೆ ನಿನಗೆ ನೀನೆ ದೊರೆ, ಜೀವಿತವೆ ಪರತತ್ತ್ವ, ಜೀವನೋದ್ಧೃತಿಗೊದಗೊ, ಮಿತಗತಿಯೆ ಹಿತ ಯೋಗ, ವಿವಿಧ ಮನ ವಿವಿಧ ಮತ, ಸಾಕಲ್ಯದೃಷ್ಟಿ ಸರಿ, ಸುಗಮಪಥ ಸಮಗತಿಗೆ. ಹೆಸರು ಬೇಡೊಳಿತಿರಲಿ, ಎತ್ತಸತ್ಯದ ನೃತ್ಯ, ನೀತಿಗಾತ್ಮವೆ ಸೇತು, ಬಾಳು ತಾಳುಮೆ ಕಲಿತು, ಒಳಗಹುದು ಹೊರಗಣದು, ಮಾರಕವೊ ಬೇರೆತನ, ಅದಿರದಿರು ಬಿದಿಯೆದುರು, ಸುಧೆಯಿರ್ಪುದಾಳದಲಿ, ಹೊರಗುಂಟೆ ಬೇರ್ ಸಸಿಗೆ, ದ್ವಂದ್ವ ಬಂಧನ ಸೃಷ್ಟಿ, ಭಿನ್ನದೊಳ್ ಅಭಿನ್ನವಿರು, ವಿಷಮುಮಿಂತುಪಯುಕ್ತ, ಸಾಂದ್ರಾತ್ಮ ಜೀವಿಯಿರು, ಕೆಲಸಮೊರ್ವರಿಗೊಂದು, ಮುಕ್ತಿ ವೈಯಕ್ತಿಕವೊ, ದೇವಸಮನೆನಿಸು ನೀಂ, ಜೀವ ಸಾಹ್ಯವೆ ಧರ್ಮ, ಶಾಂತಿ ಸುಸ್ಥಿತನಾಗು, ಜಗಕೆ ನೀನೊಡನಾಡಿ, ಮನದ ಮೂಲ ತರ್ಕ, ಮನಕೊಂಕಿರೆ ಜನಡೊಂಕು, ತೊಳಗು ನಿಃಸ್ವಾರ್ಥದಲಿ, ಸೈಸುತೆದುರಿಸು ವಿಧಿಯ, ಸೊದೆಯುಪ್ಪುದಾತುಮಕೆ, ಭವಿಸೋಕೆ ನೀಂ ಚಿನ್ನ—ನಾಮರಸುವಂ

ಬಾರೊ, ಎಂದುಮರೆಸದನು ನೀ, ಪರಮಾತ್ಮನೇ ಸ್ಥಿರವು, ಅದ್ಭುತಕೆ ನಮಿಸಲವೊ, ನೀನಾಗು ನಾನಿರದೆ, ತಣ್ಣಗಿರುವನು ಶಿವನು, ಅಣು ಮಹತ್ಪರಿನಿಧಿಯೊ, ಸಾರ್ವಾತ್ಮ್ಯವಾನಂದ, ಸರಸತೆಯೆ ಸದ್ಗತಿಯೊ, ಬ್ರಹ್ಮಶಕ್ತಿಯು ಹಾರ, ಏಕದಿನನೇಕ ನೀಂ, ಎರಡುಮಿರೆ ಪುರುಳೊಂದು, ಪರಮ ಸತ್ಯವನಡರೊ, ಮಾರ್ಗವನು ಭವವೇದ್ಯ, ರೂಪುಬಿಡೆ ರವಿಪೂರ್ಣ, ಲೀಲೆ ವೇಷವೊ ವಿಶ್ವ. ಶಿವಲೀಲೆ ನಮ್ಮ ಬಾಳ್, ಭವವೆಲ್ಲ ಶಿವಲೀಲೆ, ಲೀಲೆ ಶಿವ ಸಂತೋಷ, ಶಿವನಿಗೆಲ್ಲವು ಮೆಚ್ಚು, ಬೇರೆತನದಿನೆ ಸೊಗಸು, ಮುಗಿಲಹುದೆ ಧಗೆಯಿರದೆ, ಬೋಧೆಯಿಂ ಭ್ರಾಂತಿಲಯು, ಒಟ್ಟು ವಿಶ್ವವೆ ನೀನು, ಜ್ಞಾನಸೂತ್ರವೆ ಬೊಮ್ಮ, ಇರುವುದು ಸ್ಥಿರವೊಂದು, ಶಿವನೆ ಸಂಸಾರಿಯುಲ, ಜಗವೊಂದೆ ಬಹುರೂಪ, ಶಿಕ್ಷಿಸಿಕೊ ನಿನ್ನ ನೀಂ, ನೀತಿ ಜೀವಿತಕಿರಲಿ, ನೆಡು ಮನವ ನವರೊಳಗೆ. ಮಿನುಗುಗಾತ್ಮವದೊಂದೆ, ಮೌನ ಮನನವೆ ಮಾರ್ಗ, ಧ್ಯಾನದಿಂ ಸಿದ್ಧಿಯೆಲೊ, ಒಪ್ಪದಾತುರ ದುಡುಕು, ಸಾಕಲ್ಯಮತಿಯೆ ಪಥ, ಕೇತುರಾಹುಮಾಪನೆ, ಅಲಿಂಗದಾಮಣಿ ಬೊಮ್ಮ, ಶಿಷ್ಟಮಿಹುದು ಪರಾತ್ಮ, ಸ್ಥಿರಚರವೊ ಸೃಷ್ಟಿನದಿ, ಸತ್ತ್ವೋನ್ನತಿಯೆ ಸಗ್ಗ, ಅಘಮೂಲವ ಕಳೆಯೆ ಹಿತ. ಧರ್ಮ ನಿನ್ನಯ ಪಾಡು, ಭಾವನಾಶವೆ ಮೋಕ್ಷ, ನಿರ್ಮಮತೆ ಮುಕ್ತಿಯೆಲೆ, ಅಲೆಗೆ ಜಲಧಿಯೆ ಮುಕ್ತಿ, ಯೋಗದಿಂ ಶಾಂತಿಸುಖ, ಸ್ವಾಂತ ಸುಸ್ಥಿತಿ ಶಾಂತಿ, ಇರುವೆಡೆಯೆ ಪರ ನಿನಗೆ, ಅಚ್ಯುತ ಹಸಾದರುಚಿ, ದೈವವೇ ಪರಮಗತಿ, ದೈವಕ್ಕೆ ತಲೆಬಾಗು, ತಿಂಗಳಿಲ್ಲದೆ ಶಶಿಯೆ ?, ತೋಟಗಾರನೊ ಬೊಮ್ಮ. ಸ್ವಯಮಲಿಪ್ತನಿಗೆ ಜಯ, ಪಟ್ಟಿತಲೆಗೇ ಹೂವು ?, ಕ್ಷೀಣವಾಗಲಿ ನಾನು, ನಿರ್ಮಮತೆಯೇ ಮೋಕ್ಷ, ನಿರಹಂತೆಯಾನಂದ, ಶಿರವೊ ಸೃಷ್ಟಿಗೆ ನರನು, ಜೀವರೂಪಿಯೊ ದೈವ. ಸಾಧು ನಿಷ್ಕೃತಿ ಮಾರ್ಗ, ವಿಜಯ ವಿಶ್ರಾಂತಿಯದು, ಶಾಶ್ವತಂ ಮಿತಿಗಳವೆ ?, ಛಲಗಾತಿಯೋ ಪ್ರಕೃತಿ, ಮಂತ್ರ ಯೋಗಿನಿಯವಳು, ಆಟಕಾಟವೆ ವಿಹಿತ, ಶಿರವೊ ಸೃಷ್ಟಿಗೆ ವ್ಯಕ್ತಿ, ನೆಲವೊಂದು ಬೆಳೆ ಹಲವು, ಎಲ್ಲ ಪ್ರಕೃತಿಯ ಲೀಲೆ, ನರಸುರಭಿಯಾತ್ಮದಲಿ, ಅಣಕಿಗರ ಸಂತೆ ಜಗ, ನೋಡು ನೀನಾಳದಲಿ, ತಬ್ಬಲಿಯೆ ಶಿವಸೃಷ್ಟಿ, ತುಂಟಾಟವೋ ಲೋಕ, ತಂತುವೊಳು ಪಟದಂತೆ, ಕ್ರೀಡೆ ವಿವಿಧತೆ ನವತೆ, ಮನವಗ್ನಿ ಪರ್ವತವೊ, ಕ್ಷೀರ ಹುಲ್ಲಿಂದಲ್ತೆ, ಫಲವೊಂದೆ ಹತ್ತುರುಚಿ, ಮರಣ ಬರಿ ಮಾರ್ಪಾಟು, ಜವನು ಜಗದುಜ್ಜಿಕೆಯೊ, ದೈವ ಸತ್ತ್ವಪರೀಕ್ಷೆ, ಶಿಷ್ಟವಿರ್ಪುದು ತತ್ತ್ವ, ಪ್ರತ್ಯೇಕಗಳ ಜಡೆಯೊ, ಕಲೆಯು ರಚನೆಯೊ ಜಂತು, ವ್ಯಕ್ತಿಬಲ ಮೂಲವೆಲೊ. ವ್ಯಷ್ಟಿಗುಣದಿನೆಗಣನೆ, ಆಳುಚೆನ್ನಿರೆ ನಾಡು, ವ್ಯಕ್ತಿತೆ ಪವಿತ್ರವೆಲೊ, ಮಾಯೆಯನು ಗೆಲುವುದೆಲೊ, ಶಿವನು ಸುಖ ತನ್ಮಯನೊ—ಕೃತಿಯ ಉದ್ದಕ್ಕೂ ಇಂತಹ ನುಡಿಕಿಡಿಗಳನ್ನು ಹಚ್ಚಿಟ್ಟ ಡಿ.ವಿ.ಜಿ. ಕೃತಿ ಧನ್ಯ.

ನಿಜವಾಗಿ ಎರಡೂ ಕೃತಿಗಳಲ್ಲಿ ಒಂದೊಂದು ಮುಕ್ತಕಕ್ಕೂ ಅದರ ನಾಲ್ಕನೆಯ ಸಾಲನ್ನು ಶಿರೋನಾಮೆಯಾಗಿ ಕೊಡಬೇಕಿತ್ತು. ಮೊದಲಾಗಿ ಅದು ಕವಿಯ ಮಾತು ; ಎರಡನೆಯದಾಗಿ ಅದು ಕವಿಯ ಮುಕ್ತಕದ ಸಾರರೂಪ ಎಂಬುದು

ಮೇಲಿನ ಉಲ್ಲೇಖಗಳಿಂದ ತಿಳಿಯುತ್ತದೆ. ಕಪ್ಪುಕಲ್ಲು ಎಲ್ಲೋ ಬಿದ್ದಿದೆ; ಜಕ್ಕಣ ಎಲ್ಲೋ ಇದ್ದಾನೆ. ಭುವನದ ಭಾಗ್ಯದಿಂದ ಇವರಿಬ್ಬರೂ ಸೇರಿ ಚೆನ್ನಕೇಶವ ಮೂರ್ತಿಯ ಕಲಾಸೃಷ್ಟಿ. ಹಾಗೆಯೇ ಕಾವ್ಯಸೃಷ್ಟಿ ಭುವನದ ಭಾಗ್ಯ ಎನ್ನುತ್ತಾರೆ ಕವಿ. ಎರಡೂ ಕಾವ್ಯಗಳು ದ್ವಿವೇದಿ ಗುಂಡಾವಧಾನಿಗಳು ಸೃಷ್ಟಿಸಿದ **ಕನ್ನಡ ಭಗವದ್ಗೀತೆ; ಗುಂಡೋಪನಿಷತ್** ಎನ್ನಬಹುದು. ಡಿ.ವಿ.ಜಿ. ತಮ್ಮನ್ನು 'ಬ್ರಹ್ಮಪತ್ತನ ಭಿಕ್ಷು' ಎಂದು ಒಂದು ಕಡೆ ಕರೆದುಕೊಂಡಿದ್ದಾರೆ. ಆ ಬ್ರಹ್ಮಪತ್ತನಕ್ಕೆ ಹೋಗಲು ಮಾರ್ಗ ದರ್ಶನ ಈ ಎರಡು ಕಾವ್ಯಗಳು.

"ಡಾ॥ ಡಿ.ವಿ.ಜಿ.ಯವರ ವಿಚಾರದ ಆಳ, ಎತ್ತರ, ಅಗಲ ಸೀಮಾತೀತ ವಾದುದು. ಒಂದೊಂದು ಪದ್ಯವೂ ಒಂದು ದೊಡ್ಡ ಪ್ರಬಂಧಕ್ಕೆ ವಿಷಯವನ್ನೊದಗಿ ಸುತ್ತದೆ. ಈ 'ಮರುಳ ಮುನಿಯನು' ಮಂತ್ರದ್ರಷ್ಟಾರನಾದ ಮುನಿಗಿಂತ ಕಡಮೆಯವನಲ್ಲ. ಮಂಕುತಿಮ್ಮನ ತಮ್ಮನಾದರೂ ಅಣ್ಣನಿಗೆ ಸರಿಹೊರೆಯಾಗಿ ನಿಲ್ಲುತ್ತಾನೆ. ಕೆಲವೆಡೆ ಅವನನ್ನು ಮೀರಿಸುತ್ತಾನೆ.[18] ಎಂದು ಶ್ರೀ ಎನ್. ರಂಗನಾಥ ಶರ್ಮರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಇದರಲ್ಲಿ ಕೊನೆಯ ಮಾತು ಒಪ್ಪತಕ್ಕದ್ದಲ್ಲ. 'ಮಂಕುತಿಮ್ಮನ ಕಗ್ಗ'ದ ಕಲ್ಪನಾರಮ್ಯತೆಯಾಗಲಿ, ದೃಷ್ಟಾಂತ ನಿಬಿಡತೆಯಾಗಲಿ, ಜೀವನಾನುಭವದ ಗಾಂಭೀರ್ಯ ಸೌಂದರ್ಯವಾಗಲಿ ಅಲ್ಲಿ ಬಂದಷ್ಟು ಇಲ್ಲಿ ಬರಲಿಲ್ಲ. ಅಲ್ಲಿಯ ಭಾವಗಳೇ ಅನುಭವಗಳೇ ಇಲ್ಲಿ ಕೆಲವು ಕಡೆ ಪುನರುಕ್ತ ವಾಗಿವೆ. ಬದುಕು ಜಟಕಾಬಂಡಿ, ಬುಗುರಿ. ಗಂಜೀಫಿನೆಲೆ, ವಿಧಿಯುಗಸ ನೀಂ ಕತ್ತೆ. ಗಾಳಿಪಟ, ಹುತ್ತವಾಗುವುದು ವಿಷಸರ್ಪಕ್ಕೆ. ಮಲಗಿಹೋದುಗನ ಕೈ ಹೊತ್ತಗೆ, ಸೃಷ್ಟಿಯೋಜೆಯಲಿ ನೀನೊಂದಿಟಿಗೆ, ಕುಣಿವ ಗರ್ದಭ ನೀನು. ವಿಧಿಬಾಯಿ ಚಪ್ಪರಿ ಸುವನು, ರಸಿಕತೆಯೆ ಯೋಗ, ಬ್ರಹ್ಮಾನುಭವಿಯಾಗೊ, ವರಯೋಗಸೂತ್ರ, ಜಗದ ಬಂದೀಗೃಹ, ಹೋರುದಾತ್ತತೆಯಿಂದ, ಹುಲ್ಲಾಗು ಬೆಟ್ಟದಡಿ, ಇಳೆಯಂಚಿಯಾಳು ನೀಂ, ಹುಯ್ಗುಡುಬು ತಪ್ಪಲೆ, ಪರಬ್ರಹ್ಮ ರಸಭೋಜನ, ಭಗವಂತ ಶಿವರುದ್ರ, ನೊರೆಸೃಷ್ಟಿ ಪಾಲ್‌ಬ್ರಹ್ಮ, ಅಜ್ಜಿಯಾಟದ ಬೊಮ್ಮ. ಹಬೆಗುಳ್ಳೆಯೋ ಸೃಷ್ಟಿ— ಮೊದಲಾದ 'ಜೀವನಧರ್ಮ ದರ್ಶನ'ದ ಭವ್ಯತೆ 'ಮರುಳ ಮುನಿಯ'ನಲ್ಲಿ ಕಡಮೆ. 'ಮಂಕುತಿಮ್ಮ' ಬ್ರಹ್ಮ: 'ಮರುಳ ಮುನಿಯ' ಮುನಿ ಮಾತ್ರ.

ಹಳೆಯ ಮತ್ತು ಹೊಸದರ ಸಂಘರ್ಷದಿಂದ ಹುಟ್ಟಿದುದು ಈ ಎರಡು ಕಾವ್ಯ. ಅವುಗಳ ಹೆಸರುಗಳನ್ನು ಹೇಳುವಾಗ ಹಳೆಯ ವಾಸನೆ ಮೂಗಿಗೆ ಬಡಿಯುವ ಹಾಗಿದೆ. ಆ ಕಾವ್ಯಗಳ ಹೆಸರುಗಳು ಎಂದೂ ಆಕರ್ಷಕವಲ್ಲ. ಆದರೆ 'ಮಂಕು ತಿಮ್ಮನ ಕಗ್ಗ' ಕರ್ನಾಟಕದ ಮೇರೆಯನ್ನು ಮೀರಿ ಭಾರತಾದ್ಯಂತ ಜನಪ್ರಿಯ ವಾಯಿತು. ಇದು ಹಳತು-ಹೊಸತುಗಳ ಅಪೂರ್ವ ರೀತಿಯ ಕಸಿಯಿಂದ ಸಾಧ್ಯ ವಾಯಿತು. ಡಿ.ವಿ.ಜಿ.ಯವರ ಶೈಲಿಯನ್ನೆಲ್ಲ ಒಂದು ಮಾತಿನಿಂದ ಅಳೆಯಬಹುದು ಅದು 'ಹಳೆಬೇರು, ಹೊಸಚಿಗುರು.' ಅವರ ಶೈಲಿಯ ಮೂಲದ್ರವ್ಯ ಹಳೆಯ

ಬಂಗಾರವಿದ್ದ ಹಾಗೆ. ಅದನ್ನು ಮುರಿದು ಡಿ.ವಿ.ಜಿ. ಹೊಸ ಹೊಸ ಒಡವೆಗಳನ್ನು ಮಾಡಿ ಅಲಂಕರಿಸುತ್ತಾರೆ. ನಮ್ಮ ವೇದ, ಉಪನಿಷತ್ತು, ಭಗವದ್ಗೀತೆ, ಪುರಾಣ, ಪುಣ್ಯಕಥೆ, ಇತಿಹಾಸಗಳಲ್ಲಿ ಹೇಳಿದ ಹಳೆಯ ವಸ್ತು ಹೊಸ ಬಟ್ಟೆಯನ್ನುಟ್ಟು, ಹೊಸ ತೊಡುಗೆಗಳನ್ನು ತೊಟ್ಟು ಸಿಂಗರಿಸಿಕೊಂಡು ಇಲ್ಲಿ ಮೆರೆಯುತ್ತವೆ. ಆ ಹಳೆಯ ಬಂಗಾರವನ್ನು ಕಾಸಿ, ಬಡಿದು, ಒಪ್ಪವಿಟ್ಟು ಅಪ್ಪಟ ಚಿನ್ನವೆಂದು ಡಿ.ವಿ.ಜಿ. ಅಕ್ಕಸಾಲಿಯಾಗಿ ತೋರಿಸಿಕೊಡುತ್ತಾರೆ. ಡಿ.ವಿ.ಜಿ. ಪ್ರಾಮಾಣಿಕ ಅಕ್ಕಸಾಲಿ ; ಅಕ್ಕನ ಚಿನ್ನವೂ ಅವರಿಗೆ ಬೇಡ ; ಅವರು ಒಳ್ಳೆಯ ರತ್ನಪರೀಕ್ಷಕರು. ಅದರಿಂದಲೇ ಅವರು ಕನ್ನಡಸಾಹಿತಕ್ಕೆ ಅಪ್ಪಟ ಚಿನ್ನ, ರನ್ನಗಳನ್ನು ನೀಡಿದರು !

ಗ್ರಂಥ ಋಣ

[1] ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ ; ನಾಲ್ಕನೆಯ ಮುದ್ರಣ : ಪು. 9 ; ಆರನೆಯ ಮುದ್ರಣ : 1974 ; ಕಾವ್ಯಾಲಯ, ಮೈಸೂರು.

[2] ಅದೇ. ಪು. 1, ಪದ್ಯ 1.

[3] ಅದೇ. ಪದ್ಯ 936.

[4] V. Sitaramaiah : D. V. Gundappa : p. 52, The Institute of Kannada Studies, Mysore University, 1972.

[5] ಮಂಕುತಿಮ್ಮನ ಕಗ್ಗ : ಆರನೆಯ ಆವೃತ್ತಿಯ ರಕ್ಷಾಕವಚ.

[6] ಅಲ್ಲೇ.

[7] ಅಲ್ಲೇ.

[8] ಅಲ್ಲೇ.

[9] ಎಸ್. ಅನಂತನಾರಾಯಣ : ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ : ಪು. 110–111, 1962.

[10] ಅಲ್ಲೇ.

[11] ಡಿ.ವಿ.ಜಿ. : ಮರುಳ ಮುನಿಯನ ಕಗ್ಗ : ಪದ್ಯ 6, 7 ; ಐಬಿಎಚ್ ಪ್ರಕಾಶನ, ಬೆಂಗಳೂರು–560 009, 1984.

[12] ಅದೇ : ಪು. xx

[13] ಅಲ್ಲೇ.

[14] ಅದೇ. ಪು. 191.

[15] ಅದೇ. ಪದ್ಯ 1.

[16] ಅದೇ. ಪದ್ಯ. 9.

[17] ಅದೇ. ಪು. xii

[18] ಅದೇ. ಪು. xix

ಶ್ರೀರಾಮಪರೀಕ್ಷಣಂ

(ಒಂದು ಸೀಳುನೋಟ)

ಪ್ರೊ॥ ಎಂ. ರಾಜಗೋಪಾಲಾಚಾರ್ಯ

"ಡಿ.ವಿ.ಜಿ.ಯವರು ಈ ಲಘು ಕಾವ್ಯದಲ್ಲಿ ರಾಮಾಯಣದ ಮೂಲವನ್ನೇ ಆಧರಿಸಿ ರಾಮನ ನಡತೆಯಲ್ಲಿ ಧರ್ಮಸೂಕ್ಷ್ಮಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅದರಲ್ಲಿ ಸಫಲರೂ ಆಗಿದ್ದಾರೆ. ರಾಮನ ಲೋಕಹಿತವೃತ್ತಿಯನ್ನು ಕೇಂದ್ರೀಕರಿಸಿ ಅವನ ನಡತೆಯ ನವುರಾದ ಎಳೆಗಳನ್ನು ಬಿಡಿಸಲು ಯತ್ನಿಸಿದ್ದಾರೆ. ಧರ್ಮದ ಜಾಡು ನಾವು ತಿಳಿದುಕೊಂಡಂತೆಯೇ ಇರುವುದಿಲ್ಲ. ಧರ್ಮದ ವ್ಯಾಖ್ಯೆ ವಿಚಿತ್ರ. ಯಾವುದು ದೈವನಿಯತಿಯೋ ಅದು ಮಾತ್ರ ಧರ್ಮವೆನಿಸುತ್ತದೆ. ಎಷ್ಟೋ ವೇಳೆ ಪಕ್ಷಪಾತ ದಿಂದ ಕೂಡಿದ್ದು. ಕಠೋರವಾದದ್ದು ಎಂದು ಕಾಣುವ ರಾಮನ ನಡತೆಯ ಹಿಂದೆ ಗೂಢವಾದ ನ್ಯಾಯವಿದೆಯೆಂಬುದನ್ನು ಡಿ.ವಿ.ಜಿ.ಯವರು ರಾಮಾಯಣದ ಆಧಾರದ ಮೇಲೆಯೇ ಇದರಲ್ಲಿ ಕಂಡುಕೊಂಡಿದ್ದಾರೆ. ಡಿ.ವಿ.ಜಿ.ಯವರ ಹಳಗನ್ನಡ ಶೈಲಿಯೂ ಈ ಧಾರ್ಮಿಕ ವ್ಯಾಖ್ಯಾನಕ್ಕೆ ಒಂದು ಗಟ್ಟಿತನವನ್ನೂ ಪ್ರೌಢಿಮೆಯನ್ನೂ ಕೊಟ್ಟಿದೆ."

ಆದಿಕಾವ್ಯ ರಾಮಾಯಣದ ನಾಯಕ ಶ್ರೀರಾಮಚಂದ್ರ ಮರ್ಯಾದಾ ಪುರುಷೋತ್ತಮ. ಸಂಪ್ರದಾಯವಾದಿಗಳಿಗೆ ಇವನು ದೇವರ ಅವತಾರ, ವಿಚಾರ ವಾದಿಗಳು ಇವನು ದೇವರ ಅವತಾರ ಎನ್ನುವುದಕ್ಕಿಂತಲೂ ತನ್ನ ಆದರ್ಶ ಗುಣ ಗಳಿಂದ ದೇವತ್ವಕ್ಕೆ ಏರಿದ ಪುರುಷೋತ್ತಮ ಎನ್ನುವರು :—

ದೇವೇಷ್ವಪಿ ನನುಪಶ್ಯಾಮಿ ಕಂಚಿದೇಭಿರ್ಗುಣೈರ್ಯುತಂ ।
ಶ್ರೂಯತಾಂ ತು ಗುಣೈರೇಭಿರ್ಯೋಯುಕ್ತೋ ನರಚಂದ್ರಮಾಃ ॥

ದೇವತೆಗಳಲ್ಲೂ ಇಂಥವನು ಸಿಗಲಾರ ಎಂಬರ್ಥದ ಈ ಶ್ಲೋಕ ಔತ್ತರೇಯ ಪಾಠದಲ್ಲಿ ಮಾತ್ರ ಲಭ್ಯವಂತೆ. ವನವಾಸ ಕಾಲದಲ್ಲಿ ವಾಲ್ಮೀಕಿಯ ಆಶ್ರಮಕ್ಕೂ

ರಾಮ ಭೇಟಿಯಿತ್ತ ಸಂದರ್ಭ ರಾಮಾಯಣದಲ್ಲಿದೆ. ಮುಂದೆ ಸೀತೆ ಬಾಣಂತಿಯಾದುದು, ಲವಕುಶರು ಬೆಳೆದುದು ವಾಲ್ಮೀಕಿಯ ಆಶ್ರಮದಲ್ಲೇ ಅಲ್ಲವೆ ? ಹೀಗಿದ್ದರೂ ಕವಿಗೆ ಬ್ರಹ್ಮನ ಅನುಗ್ರಹದಿಂದ ರಾಮಾಯಣದ ಕತೆ ಅಂಗೈಯ ನೆಲ್ಲಿಕಾಯಂತೆ ಕಂಡಿತಂತೆ. ರಾಮಾಯಣ ನಡೆಯುವ ಮೊದಲೇ ಕವಿ ರಾಮಾಯಣ ಬರೆದಿದ್ದನೆಂಬೂ ಒಂದು ಪ್ರತೀತಿಯಿದೆ. ಹೀಗಿರುವುದರಿಂದ ರಾಮಾಯಣದಲ್ಲಿ ಐತಿಹಾಸಿಕಾಂಶ ಎಷ್ಟು ಎನ್ನುವುದೂ ದುರೂಹ್ಯವಾಗಲಾರದೆ ? ಏನೇ ಇರಲಿ, ಇದು ಕಾವ್ಯ. ಇಲ್ಲಿ ಕವಿ ಸ್ವತಂತ್ರ, ಇಲ್ಲಿಯ ನಡೆನುಡಿ ರಾಮನ ಬದುಕಿನಲ್ಲಿ ಯಥಾವತ್ತಾಗಿ ನಡೆದಿದೆಯೆನ್ನುವುದು ಶ್ರದ್ಧೆಯ ಮಾತು. ನಮ್ಮ ಮುಂದಿರುವುದು ಕವಿಯ ಕೃತಿ. ಅದರಲ್ಲಿನ ಪಾತ್ರಗಳನ್ನು ಕವಿ ಕಂಡರಿಸಿ ನಿಲ್ಲಿಸಿದ್ದಾನೆ. ಇವರು ನಮ್ಮ ದೇಶದ ಜನರಿಗೆ ಅಚ್ಚುಮೆಚ್ಚು. ಮನೆಮಂದಿಗಿಂತಲೂ ರಾಮ, ಸೀತೆ, ಹನುಮಂತ ಮುಂತಾದವರು ಸತ್ಯ ಎಂಬಷ್ಟರವರೆಗೆ ಅವರು ಆತ್ಮೀಯರಾಗಿದ್ದಾರೆ. ಅವರ ನಡೆನುಡಿ ಸ್ವಭಾವ ಮುಂತಾದುವನ್ನು ನಾವು ಕಾವ್ಯದಲ್ಲಿ ಮಾತ್ರ ನೋಡಲು ಸಾಧ್ಯ. ಆದರೂ ನಮ್ಮ ಕಣ್ಮುಂದಿರುವವರಿಗಿಂತಲೂ ಇವರು ನಮಗೆ ಆಪ್ತರಾಗುತ್ತಾರೆ. ಗಾಂಧೀಜಿಯವರಿಗೆ ತಾಂಡವ ಮುನಿಯ ಕತೆ ಬಹಳ ಮೆಚ್ಚಿಗೆಯಾದ್ದು. ಭಾರತದಲ್ಲಿ ರಾಮರಾಜ್ಯದ ಕನಸು ಕಂಡವರು ಅವರು. ಹೀಗಾಗಿ ರಾಮಾಯಣವನ್ನು ರಚಿಸಿದ ವಾಲ್ಮೀಕಿಗಿಂತಲೂ ರಾಮಾಯಣ ಹೆಚ್ಚು ಪ್ರಸಿದ್ಧ. ಭಾರತದ ಸಂಸ್ಕೃತಿಯ ಒಟ್ಟಂದದ ಮೂರ್ತರೂಪವೇ ರಾಮಾಯಣ ಎಂದರೂ ಸಲ್ಲುವಂತಹ ಮಾತು.

ಪ್ರಸಿದ್ಧವೂ ಜನಪ್ರಿಯವೂ ಆದ ಈ ಕಾವ್ಯದಲ್ಲಿ ರಾಮ, ಲಕ್ಷ್ಮಣ, ಸೀತೆ, ಹನುಮಂತ, ಭರತ ಮುಂತಾದ ಸಜ್ಜನರಿದ್ದ ಹಾಗೆ ಮಂಥರೆ, ಕೈಕೆ. ವಾಲಿ, ರಾವಣ ಮುಂತಾದ ದುರ್ಜನರೂ ಇದ್ದಾರೆ, ದುರ್ಜನರು ದುಷ್ಟರಂತೆ ವರ್ತಿಸುವುದು ಅಚ್ಚರಿಯೇನಲ್ಲ, ಅವರಲ್ಲಿ ಕೆಲವು ಸದ್ಗುಣಗಳೂ ಇವೆ. ಆದರ್ಶ ಪಾತ್ರಗಳಾದ ರಾಮ, ಸೀತೆ, ವಿಭೀಷಣ ಮುಂತಾದವರೂ ಕೆಲವೊಮ್ಮೆ ತಪ್ಪಿ ನಡೆದಂತೆ ಕಾಣುತ್ತಾರೆ. ತಪ್ಪುವುದು ಮನುಷ್ಯ ಸ್ವಭಾವವೆನ್ನುವಂತಿಲ್ಲ. ಇವರೆಲ್ಲಾ ಜನರಿಗೆ ಆದರ್ಶವಾಗಿರಬೇಕಾದವರು. ಇವರೇ ತಪ್ಪಿ ನಡೆದರೆ ಹೇಗೆ ? ಈ ಪ್ರಶ್ನೆ ಬಹುಶಃ ಕಾವ್ಯ ಹುಟ್ಟಿದಂದಿನಿಂದ ಓದುಗರಲ್ಲಿ ತಲೆದೋರಿರಬಹುದು. ಆದರೂ ಆ ಪಾತ್ರಗಳ ನಡವಳಿಕೆ ಅವರನ್ನು ಸೆರೆಹಿಡಿದಿರಬೇಕು, ಹೀಗಾಗಿ ರಾಮಾಯಣವನ್ನು ಬಿಡಲಾರದೆ, ಆ ಜನರ ನಡವಳಿಕೆಯನ್ನು ಪೂರ್ತಿಯಾಗಿ ಮೆಚ್ಚಿಕೊಳ್ಳಲೂ ಆರದೆ ಇದ್ದಾಗ ಬೇರೆ ರಾಮಾಯಣಗಳು ಹುಟ್ಟಿಕೊಂಡಿರಬಹುದು. ಸಂಸ್ಕೃತದಲ್ಲೇ ಅಧ್ಯಾತ್ಮ ರಾಮಾಯಣ, ಆನಂದ ರಾಮಾಯಣ ಮುಂತಾದುವು, ಕನ್ನಡದಲ್ಲಂತೂ ಅಭಿನವಪಂಪನಿಂದ ತೊಡಗಿ ಕುವೆಂಪುವಿನವರೆಗೂ ರಾಮಾಯಣದ ರೂಪಾಂತರಗಳು ಕಾಣಿಸಿಕೊಂಡಿವೆ. ಹಾಗೆ ಕಂಬ (ತಮಿಳು), ರಾಮಚರಿತಮಾನಸ (ಹಿಂದೀ) ಇತ್ಯಾದಿಗಳಿಂದ ಖಂಡಿತವಾಗಿ ಘಣರಾಯ ತಿಣುಕಿರಬೇಕೆಂದು ಕಾಣುತ್ತದೆ. ಹೀಗೆ ರಾಮಾಯಣದ ರೂಪಾಂತರಗಳು ಕಾಣಿಸಿಕೊಂಡಾಗ ಆಯಾ ಪಾತ್ರಗಳ ಶೀಲ ನಡತೆಗಳಲ್ಲೂ ವ್ಯತ್ಯಾಸವುಂಟಾಗಿ

ಕೆಲವೊಮ್ಮೆ ಆ ಪಾತ್ರಗಳೇ ಅಲ್ಲವೇನೋ ಎಂಬ ಹಾಗೂ ಕಾಣಿಸಿಕೊಂಡಿವೆ. ಕವಿಗಳು, ವ್ಯಾಖ್ಯಾನಕಾರರು ತಮಗೆ ಖುಷಿ ಕಂಡಂತೆ ಪಾತ್ರಗಳ ಸ್ವಭಾವವನ್ನು ಬದಲಾಯಿಸಿ ಸಂತೋಷಗೊಂಡರೇನೋ ನಿಜ. ಇದರಿಂದ ಆದಿಕಾವ್ಯದ ಶೋಭೆಯಾಗಲಿ, ಆಕರ್ಷಣೆಯಾಗಲಿ ತುಸವೂ ಮಾಸಿಲ್ಲ ಎಂಬುದು ಸೋಜಿಗದ ವಿಷಯ.

ವಾಲ್ಮೀಕಿಯ ರಾಮಚಂದ್ರ ಕೆಲವೆಡೆ ತಪ್ಪಿ ನಡೆದಂತೆ ಈಗ ನಮಗೆ ಕಾಣುತ್ತದೆ. ಆ ಕಾಲಕ್ಕೆ ಅದು ಸರಿ ಇರಬಹುದೇನೋ ? ಈಗ ರಾಮನಿದ್ದಿದ್ದರೆ ಹಾಗೆ ನಡೆದುಕೊಳ್ಳುತ್ತಿರಲಿಲ್ಲವೆನ್ನಲೆ ? ಹಾಗಿದ್ದರೆ ಹೊಸ ರಾಮಾಯಣದಿಂದ ನಮಗೊಂದು ನೆಮ್ಮದಿ ಸಿಗಬೇಕು : ಅದೇಕಾಗುವುದಿಲ್ಲ ? ಇದು ಮುಗ್ಧ ಸಹೃದಯನನ್ನು ಕಾಡುವ ಸರಳವಾದರೂ ತೊಡಕಿನ ಪ್ರಶ್ನೆ.

ಪೂಜ್ಯ ಡಿ.ವಿ.ಜಿ.ಯವರು ಹಳೆಯ ಈ ಪ್ರಶ್ನೆಯನ್ನು ಹೊಸ ಮೂಸೆಯಲ್ಲಿ ಹಾಕಿ ತತ್ತ್ವವನ್ನು ಶೋಧಿಸುವ ಸಲುವಾಗಿ 'ಶ್ರೀರಾಮಪರೀಕ್ಷಣಂ' ಎಂಬ ಲಘುಕಾವ್ಯ ಬರೆದರು. ಇದರಲ್ಲಿ ಡಿ.ವಿ.ಜಿ.ಯವರು ರಾಮನನ್ನು ಹಲವಾರು ಪ್ರಶ್ನೆಗಳಿಗೆ ಒಡ್ಡಿ ಅವನ ಅಂತರ್ಯವನ್ನು ಕಲಕಿ ಉತ್ತರವನ್ನು ತೆಗೆಯುವ ಪ್ರಯತ್ನ ನಡೆಸಿದ್ದಾರೆ. ಆದರೂ ಇವರು ಪೂರ್ವಾಗ್ರಹದಿಂದ ಹಳೆಯ ಸಂಪ್ರದಾಯಕ್ಕೆ ಜೋತುಬಿದ್ದು ಆಧುನಿಕವೆಂಬಂತೆ ಉತ್ತರ ಮಂಡಿಸಿರುವರೆನ್ನುವವರೂ ಉಂಟು. ಅದು ಎಷ್ಟರಮಟ್ಟಿಗೆ ಸಾಧು ಎಂಬುದನ್ನು ಗ್ರಂಥದ ನಿಷ್ಪಕ್ಷಪಾತದ ಓದಿನಿಂದ. ಆ ಪಾತ್ರಗಳ ಧರ್ಮಸಂಕಟದ ಸನ್ನಿವೇಶದಿಂದ ತಿಳಿಯಬೇಕಾಗುತ್ತದೆ. ಈ ಗ್ರಂಥದಲ್ಲಿ ರಾಮನ ಕೆಲವು ನಡತೆಗಳನ್ನು ಮಾತ್ರ ಎತ್ತಿಕೊಳ್ಳಲಾಗಿದೆ.

ಮೊದಲಿಗೆ ಅಹಲ್ಯೆಯ ಪ್ರಶ್ನೆ :—ಅಹಲ್ಯೆ ಹುಟ್ಟು ಚೆಲುವೆ. ಅವಳಿಗೆ ತಪಸ್ಸಿನ ಮರುಳು ಹಿಡಿದ ಗೌತಮ ಪತಿಯಾಗಿ ದೊರಕಿದ್ದು ಯೋಗಾಯೋಗ. ಹೀಗಾಗಿ ಗೌತಮರ ವೇಷದಲ್ಲಿ ಒಳಗೆ ಬಂದಾತ ಇಂದ್ರನೆಂದು ತಿಳಿದೂ ಅವನ ವೈಭವಕ್ಕೆ ಸಹಜವಾಗಿ ಈಕೆ ಒಲಿಯುವಂತಾಯಿತು. ಅಹಲ್ಯೆ ಜಾರಿದಳು. ಪತಿಯ ಶಾಪದಿಂದ ವ್ಯಂತರಪಿಶಾಚಿಯಾಗಿ ಕಲ್ಲಿನಂತೆಯೋ ಕಲ್ಲಾಗಿಯೋ ಇರಬೇಕಾಗಿ ಬಂತು. ಇಂದ್ರ ಸಹಸ್ರಾಕ್ಷನಾದ, ಗೌತಮ ಮತಿಗೆಟ್ಟು ಸಂನ್ಯಾಸಿಯೇ ಆಗಿ ಊರು ಬಿಟ್ಟ. ಮೂವರಿಗೂ ಸುಖವಿಲ್ಲ. ಮೂವರೂ ನಿಡುಗಾಲ ಪಶ್ಚಾತ್ತಾಪದ ಮೂಸೆಯಲ್ಲಿ ಕರಗಿ ಕಂಗಾಲಾದರು. ಬಳಿಕ ರಾಮಪಾದಧೂಳಿಯಿಂದ ಅಹಲ್ಯೆಯ ಉದ್ಧಾರವಾದದ್ದಲ್ಲದೆ ಇಂದ್ರನೂ ಗೌತಮನೂ ತಮ್ಮ ತಪ್ಪನ್ನು ಪ್ರಾಂಜಲವಾಗಿ ಒಪ್ಪಿಕೊಂಡು ಮೊದಲಿನಂತಾದರು. ಇದಿಷ್ಟು ನಡೆದ ಕತೆ. ಈ ಕತೆ ವೇದಕಾಲದಿಂದಲೂ ಇದೆ. ಅಹಲ್ಯಾ (ನೇಗಿಲು ತಾಗದ ನೆಲ) ಗೌತಮ (ಗೋವು) ಇಂದ್ರ (ಮಳೆ) ಇವರನ್ನು ಸಾಂಕೇತಿಕ ಪಾತ್ರಗಳೆಂದು ಊಹಿಸಲಾಗಿದೆ. ಆದರೆ, ಕಾವ್ಯ ಹಾಗೆನ್ನುವುದಿಲ್ಲ. ಶಾಪಗ್ರಸ್ತಳಾದ ಅಹಲ್ಯೆ ಕಲ್ಲಿನಹಾಗಿದ್ದು ಕಾಲಕಳೆದಂತೆ ಪಶ್ಚಾತ್ತಾಪದಿಂದ ಪಾವನೆಯಾದಳು. ರಾಮಾಗಮನ ಆಕೆಯ ಉದ್ಧಾರಕ್ಕೆ ನಿಮಿತ್ತ

ಮಾತ್ರ. ರಾಮನನ್ನು ನೋಡಿದ ಮೇಲೆಯೂ ಅಹಲ್ಯೆಯು ಮನಸ್ಸಿನಲ್ಲಿ ತಾನು ಪತಿತೆಯೆಂಬ ಭಾವನೆಯಿನ್ನೂ ಮಾಸಿಲ್ಲ. ರಾಮನನ್ನು ನಾಚುತ್ತಲೇ ಶರಣು ಹೋಗುತ್ತಾಳೆ. ತನ್ನ ತಪ್ಪನ್ನೆಲ್ಲ ಮುಚ್ಚಿಡದೆ ಅವನ ಮುಂದೆ ಬಿಚ್ಚುತ್ತಾಳೆ. ಇಂದ್ರ ಗೌತಮರೂ ಇದೇ ವೇಳೆ ಇಲ್ಲಿಗೆ ಆಗಮಿಸಿ ತಮ್ಮ ತಪ್ಪನ್ನು ಒಪ್ಪಿಕೊಂಡರು, ಇಲ್ಲಿ ಮೂವರ ಅಪರಾಧ ಪ್ರಜ್ಞೆ ಸ್ಫುಟವಾಗಿದೆ. ಕೌಸುಮ ಶರಜಾಲದಲ್ಲಿ ಬಿದ್ದ ಮೂವರೂ ವಿಧಿಯ ಕೈಗೊಂಬೆಗಳಾಗಿ ನಡೆದುಕೊಂಡರೆಂಬುದು ತೃಪ್ತಿಕರವಾದ ಉತ್ತರವಾಗದು. ದೈವನಿಯತಿಯಂತೆ ರಾಮ ಅಹಲ್ಯೆಯನ್ನು ಉದ್ಧರಿಸಿ ಗೌತಮನ ಬಾಳಿಗೆ ಆಕೆ ಆಸರೆಯಾಗಿ ನಿಲ್ಲುವಂತೆ ಮಾಡಿದ. ಕ್ಷಮಾಯಾಚನೆ ಮಾಡಿದ ಇಂದ್ರನೂ ಹಿಂದಿನಂತೆ ದೇವರಾಜನೇ ಆಗಿ ಉಳಿದ. ಇಷ್ಟರಿಂದ ರಾಮ ಪರಮಕಾರುಣಿಕ ಎನ್ನುವಂತಿಲ್ಲ, ಇತರರಲ್ಲಿ ಅವನು ನಡೆದುಕೊಂಡ ರೀತಿ ಬೇರೆ—

ತಾರೆ ತನ್ನ ಅಳಲನ್ನು ರಾಮನಲ್ಲಿ ತೋಡಿಕೊಂಡು—

ಅಂದಿಂದ್ರನಂ ಕ್ಷಮಿಸಿ ದುಷ್ಕೃತವ ನೀ ಮರೆತೆ
ಇಂದೇಕೆ ವಾಲಿಗಾ ಕ್ಷಮೆಯ ನೀಡದೆ ಹೋದೆ ?

ಎಂದು ವಿರಹ ತಾಪದಿಂದ ಚುಚ್ಚಿ ನುಡಿಯುತ್ತಾಳೆ. ಅದಕ್ಕೆ ರಾಮ—

ಅಸುರಗುಹೆಯಿಂ ವಾಲಿ ಮರಳಿ ಬಂದಾಕ್ಷಣದೊಳ್
ಅವನ ರಾಜ್ಯವನವನಿಗಿತ್ತು ತಮ್ಮನ್
ದೊರೆತನವ ತಾಂ ಕೊಳಲ್ ಭ್ರಾಂತಿ ಕಾರಣಮೆಂದು
ಬೇಡಿದೊಡಮಗ್ರಜಂ ಕ್ಷಮಿಸದಿರ್ದಂ
ದೀರ್ಘ ದ್ವೇಷವನೆ ಕಿರಿಯನೊಳು ಸಾಧಿಸುತೆ
ಮೈತ್ರಸೂತ್ರವ ವಾಲಿ ಪರಿದು ಬಿಸುಟಂ ॥

ಎಂದು ವಾಲಿಯ ಧೂರ್ತತನವನ್ನು ಬಹಿರಂಗಗೊಳಿಸಿದ. ವಾಲಿ ಸುಗ್ರೀವರಲ್ಲಿ ಸೋದರ್ಯಭಾವ ಚೆನ್ನಾಗಿದ್ದಿಲ್ಲ. ಸುಗ್ರೀವ ವಾಲಿ ಹೊಕ್ಕ ಗುಹೆಗೆ ಕಲ್ಲು ಮುಚ್ಚಿ ಬಂದುದರಲ್ಲಿ ಒಂದು ದೋಷವಿದೆ. ಆದರೆ ವಾಲಿ ಬಂದಾಗ ತನ್ನ ತಪ್ಪನ್ನು ಮನ್ನಿಸ ಬೇಕೆಂದು ಬೇಡಿಕೊಂಡರೂ ಆತ ಅವನನ್ನು ಕೊಲ್ಲಲು ಹೋಗಿ. ಅವನು ಋಷ್ಯ-ಮೂಕ ಗಿರಿಯಲ್ಲಿ ತಲೆಮರೆಸಿಕೊಂಡಿರಬೇಕಾಯಿತು. ರಾಮ ವಾಲಿಗೆ ಬುದ್ಧಿ ಹೇಳಿದ್ದರೂ ಆತ ರಾಮನನ್ನು ಹೇಡಿಯೆಂದು ಭಾವಿಸಬಹುದಿತ್ತು. ಅಣ್ಣತಮ್ಮಂದಿರಲ್ಲಿ ಸೌಭ್ರಾತ್ರವಿಲ್ಲದಿದ್ದರೆ ಕೇಡು, ಅದು ಇತರರಿಂದ ಆಗಬಾರದು. ವಾಲಿ ದುರಹಂಕಾರಿ. ತಮ್ಮನನ್ನು ಓಡಿಸಿದರೆ ಸಾಕಿತ್ತು, ಅವನ ಹೆಂಡತಿಯನ್ನು ಈತ ಇಟ್ಟುಕೊಂಡುದು ಯಾವ ನ್ಯಾಯ ?

ಇದು ಮೂಲದಲ್ಲಿ ಹೀಗಿದೆ—

ನ ತ್ವಾಪಾದಾವಹಂ ತಸ್ಯ ಮಕುಟೇನಾಸ್ಪೃಶಂ ಪ್ರಭೋ ।
ಅಪಿ ವಾಲೀ ಮಮ ಕ್ರೋಧಾನ್ನಪ್ರಸಾದಂ ಚಕಾರ ಸಃ ॥

ಕಾಲಿಗೆ ಬಿದ್ದರೂ ಕ್ಷಮಿಸದ ಅಣ್ಣ ಎಂಥವನು, ಸೊಸೆಯಂತಿರುವ ರುಮೆಯಲ್ಲಿ ಆಸಕ್ತಿ ತೋರುವಂಥವನು ನಿಜವಾಗಿ ಅಧರ್ಮಿ, ಅವನಿಗೆ ವಧೆಯೇ ಸರಿಯಾದ ಪ್ರಾಯಶ್ಚಿತ್ತ.

ಔರಸೀಂ ಭಗಿನೀಂ ವಾಪಿ ಭಾರ್ಯಾಂ ವಾಪ್ಯನುಜಸ್ಯ ಯಃ ।
ಪ್ರಚರೇತ ನರಃ ಕಾಮಾತ್ ತಸ್ಯ ದಂಡೋ ವಧಃ ಸ್ಮೃತಃ ॥
—ರಾಮಾಯಣ ೪.

ಇಂತಹವನ ಅಹಂಕಾರವನ್ನು ಮುರಿದ ಮೇಲೆಯೇ ಮುಂದಿನ ಮಾತು. ವಾಲಿಯ ಮೂಲಕ ಸೀತೆಯನ್ನು ತರಿಸಿ ಈ ಇಬ್ಬರ ಜಗಳವನ್ನು ತೀರ್ಮಾನ ಮಾಡಿದ್ದರೂ ವಾಲಿ ದುರಹಂಕಾರಿಯಾಗಿಯೇ ಇರುತ್ತಿದ್ದ. ವಾಲಿಗೆ ತನ್ನ ತಪ್ಪು ಅರಿವಾದಾಗ—ವಾಲಿಗೆ ಬದುಕಬೇಕೆಂದಿದ್ದರೆ ರಾಮನೇ ತನ್ನ ಶರವನ್ನು ಹಿಂತೆಗೆದುಕೊಳ್ಳುತ್ತಿದ್ದ. ಆದರೆ ಕೊನೆಯ ಕಾಲದಲ್ಲಿ ವಾಲಿಗೇ ತನ್ನ ತಪ್ಪಿನ ಅರಿವಾಗಿ ತಾನೇ ರಾಮನೆದುರಿನಲ್ಲಿ ಸಾಯಬಯಸಿದ. ಇದು ಉದಾತ್ತಮರಣ. ವಾಲಿ ಸತ್ತ ಮೇಲೆ ಆತ ತನ್ನ ವೈರಿಯೇ ಅಲ್ಲವೆಂಬಂತೆ ಸುಗ್ರೀವನಿಂದ ಆತನ ಉತ್ತರಕ್ರಿಯೆಯನ್ನೂ ಮಾಡಿಸಿದ. 'ಇದು ಪೆಟ್ಟು ಹೊಡೆದು ನೋವಾಯಿತೆ ?' ಎಂದು ಕೇಳಿದಂತಾಗಲಿಲ್ಲವೆ ? ಎನ್ನಲಾಗದು. ಪೆಟ್ಟು ತಾಗದೆ ಪರಿಹಾರವಿಲ್ಲದಿರುವಾಗ ಪೆಟ್ಟು ಹೊಡೆದೂ ಅವನಲ್ಲಿ ದ್ವೇಷ ಸಾಧಿಸಬಾರದು, ಈ ನಿಲುಮೆ ರಾಮನದು. ವಾಲಿಯನ್ನು ಕೊಂದರೂ ಅವನಲ್ಲಿ ದ್ವೇಷವಿರದ ರಾಮನ ಮಾತಿನಿಂದ ತಾರೆಯ ಮನಸ್ಸಿಗೆ ಹಾಯೆನಿಸಿರಬಹುದು. ಪತಿಯನ್ನು ಕಳೆದುಕೊಂಡ ಮಂಡೋದರಿಯೂ ರಾಮನ ಧರ್ಮಪ್ರಜ್ಞೆ ಎಂಥದೆಂದು ಕಟಕಿ ಮಾತಿನಿಂದ ಮೊದಲಿಸಿ ನುಡಿದಳು—

ಅಂದಿಂದ್ರ ಚಾಪಲವ ತೃಣವೆನಿಸಿದೌದಾರ್ಯ
ವಿಂದೆಂತು ದಶಶಿರನಿಗಿಲ್ಲವಾಯ್ತು ?
ದೇಹಪಾತಕಿಯಮರ ರಾಜಭಾಗ್ಯದೊಳುಳಿಯೆ
ಮನದ ಪಾತಕಿಗೇಕೆ ಮೃತ್ಯುವಾಯ್ತು ?
ಅನ್ಯನಪರಾಧಿಯಂ ಕ್ಷಮಿಸಿದಾ ನಿನ್ನ ನಯ
ನಿನ್ನಯುಪರಾಧಿಗೆಂತಿಲ್ಲವಾಯ್ತು ?

ಇಂದ್ರ ಅಹಲ್ಯೆಯನ್ನು ಕೆಡಿಸಿದ. ಆಕೆ ಪತಿತಯಾದವಳು. ಆದರೂ ಅವರಿಬ್ಬರನ್ನೂ ಮನ್ನಿಸಿದೆ. ಆದರೆ ನನ್ನ ಪತಿ ಅಂತಹ ಹೇಯಕೃತ್ಯ ಎಸಗಲಿಲ್ಲ. ಸೀತೆಯನ್ನು ಕದ್ದು ತಂದ. ಆಕೆಯನ್ನು ಬಲಾತ್ಕರಿಸಿ ಕೆಡಿಸಿಲ್ಲ. ಇವನಿಗೇಕೆ ನೀನು ಮರಣಾಂತ

ಶಿಕ್ಷೆ ವಿಧಿಸಿದೆ ? ಇದೇ ನಿನ್ನ ಕ್ಷಾತ್ರ ನೀತಿಯೆ ? ಒಂದು ಕಣ್ಣಿಗೆ ಸುಣ್ಣವರೆಸಿ ಮತ್ತೊಂದು ಕಣ್ಣಿಗೆ ಬೆಣ್ಣೆ ಸವರುವುದೆ ? ಹೆಂಗಸರ ವೈಧವ್ಯದುಃಖದ ಗೋಳನ್ನು ಅರಿಯದ ನೀನೆಂತಹ ನರಾಧಮ ? ಎಂದು ಹಂಗಿಸಿದಳು, ರಾಮನು ತಾಳ್ಮೆಯಿಂದಲೇ—

ಗೌತಮಸತಿಯುಂ ರುಮೆಯುಂ
ಪ್ರೀತಿಯ ದನಿಗಿತ್ತ ಮಾರುದನಿಯೊಂದು ತೆರಂ।
ಸೀತೆಯದಿನ್ನೊಂದು ತೆರಂ
ಚೇತಃ ಪ್ರತಿವಚನ ಮಾತು ಪಲತೆರನಲ್ತೆ !

ಎಂದು ಸಮಾಧಾನ ಹೇಳಿದ. ಮಂಡೋದರಿ ! ನಿನ್ನ ವ್ಯಥೆಯ ಆಳ ನನಗರ್ಥವಾಗುತ್ತದೆ. ತಾರೆಯ ಮತ್ತು ನಿನ್ನ ವೈಧವ್ಯಕ್ಕಾಗಿಯೇ ನಾನು ಬಂದವನಲ್ಲ. ಸೀತೆಗೂ ನನ್ನಿಂದ ಸಲ್ಲಬೇಕಾದ ನ್ಯಾಯವೊಂದಿದೆ. ಅಹಲ್ಯೆಯಾಗಲಿ ರುಮೆಯಾಗಲಿ ಪ್ರೀತಿಗೆ ಪ್ರತಿಸ್ಪಂದಿಸಿದ ರೀತಿಗೂ ಸೀತೆ ಪ್ರತಿಸ್ಪಂದಿಸಿದ ರೀತಿಗೂ ವ್ಯತ್ಯಾಸವಿದೆ. ಅಹಲ್ಯೆ ಗೌತಮ ವೇಷದಲ್ಲಿ ಬಂದವನು ಇಂದ್ರನೆಂದು ಗುರುತಿಸಿಯೂ ಅವನ ಕರೆಗೆ ಓಗೊಟ್ಟಳು. ತಪ್ಪಿನ ಅರಿವಾಗಿ ಇಬ್ಬರೂ ಪಶ್ಚಾತ್ತಾಪ ಪಟ್ಟರು, ಶುದ್ಧರಾದರು. ಅಲ್ಲೂ ನಾನು ನಿಮಿತ್ತ ಮಾತ್ರ. ರುಮೆಯೂ ವಾಲಿಯನ್ನು ಒಪ್ಪಿಕೊಂಡಿದ್ದಳು. ವಾಲಿ ತನ್ನ ದುರ್ವರ್ತನೆಗೆ ಪಶ್ಚಾತ್ತಾಪಪಟ್ಟು ತಾನೇ ಬಯಸಿ ಸತ್ತ. ಅದರ ಪರಿಣಾಮ ತಾರೆಯ ಮೇಲಾಯಿತು. ಆದರೂ ಆಕೆ ಸಾಯಲಿಲ್ಲ. ಇಲ್ಲೂ ನಾನು ಬರೇ ನಿಮಿತ್ತ. ಈಗ ನಿನ್ನ ಪತಿ ಸೀತೆಯನ್ನು ಕದ್ದು ತಂದುದು ಒಂದು ದೊಡ್ಡ ಅಪರಾಧವಲ್ಲ. ಆದರೆ ಸೀತೆ ಅವನಿಗೆ ಒಲಿಯಲಿಲ್ಲ, ಅವನು ಬಲಾತ್ಕಾರ ಮಾಡದೇ ಇದ್ದುದು ಅವನ ಸಂಭಾವಿತತನದಿಂದಲ್ಲ, ಬಲಾತ್ಕರಿಸಿದರೆ ಅವನ ತಲೆ ನೂರು ಹೋಳಾಗುವಂತೆ ಬ್ರಹ್ಮನ ಶಾಪವಿತ್ತು.

ಅದ್ಯ ಪ್ರಭೃತಿಯಾಮನ್ಯಾಂ ಬಲಾನ್ನಾರೀಂ ಗಮಿಷ್ಯಸಿ।
ತದಾ ತೇ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ॥

ಯು.ಕಾಂ. 13–14

ಅಂಗದನೊಡನೆ—

ಅರಾಕ್ಷಸಮಿಮಂ ಲೋಕಂ ಕರ್ತಾಸ್ಮಿ ನಿಶಿತೈಃಶರೈಃ।
ನಚೇಚ್ಛರಣಮಭ್ಯೇಷಿ ತಾಮಾದಾಯ ತು ಮೈಥಿಲೀಂ॥

ಎಂದು ಸಂಧಾನಕ್ಕಾಗಿ ಹೇಳಿಕಳುಹಿಸಿದರೂ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಅಂಗದನನ್ನು ರಾಕ್ಷಸರಿಂದ ಹಿಡಿಸಿದ. ಹಿಡಿದ ರಾಕ್ಷಸರೊಡನೆ ಅಂಗದ ಪ್ರಾಸಾದ ಶಿಖರಕ್ಕೆ ಹಾರಿದ ರಭಸಕ್ಕೆ ಶಿಖರವೇ ಕೆಡೆದುರುಳಿತಲ್ಲವೆ ? ನಿನ್ನ ಅಥವಾ ವಿಭೀಷಣನ ಹಿತೋಕ್ತಿಯೂ ಅವನಲ್ಲಿ ಯಾವ ಪರಿಣಾಮವನ್ನೂ ಮಾಡಲಿಲ್ಲ. ಕೊನೆಗೆ

ಕುಂಭಕರ್ಣ ನೀತಿ ಹೇಳಿದರೂ ಕೇಳದೆ ಛಲವನ್ನೇ ಹಿಡಿದ. ಸೀತೆಯಿರುವವರೆಗೆ ಅವನಿಗೆ ನಿನ್ನಿಂದಲೂ ಸುಖವಿಲ್ಲ. ಇದು ನಿನಗೆ ತಿಳಿಯದೆ ?

ಸೀತಾನುಚಿಂತೆಯಿಂ ಕಾದಹುರಿಬಾನೆಯಲಿ.
ಸಿಡಿದಾಡುತ್ತಿದ್ದ ಕಾಳ್ ಅವನ ಬಾಳು.
ಆಕೆಯಾ ತಪದಿಂದವಂ ಬೆಂದು ಕಂದುತಿರೆ
ನೀನಾಕೆಗೇಂ ಮಾಳ್ಪೆ ? ಕೊಲೆಯೆ ಪೊಲೆಯೆ ?
ಈ ದ್ವೈಧವಿಷಮದಲಿ ವಿಷಘಟವಿಭಂಜನೆಯೆ
ರಾವಣ ಜ್ವರಕಿರ್ದ ಶಮನ ಕರಣಂ.

ರಾವಣ ಯಾರ ಮಾತಿಗಾದರೂ ಬೆಲೆ ಕೊಟ್ಟು ಸ್ವಲ್ಪ ವಿವೇಕ ತಂದುಕೊಂಡಿದ್ದರೆ ನಾನವನನ್ನು ಕ್ಷಮಿಸುತ್ತಿದ್ದೆ.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ ॥

ರಾ.ಯು.

ಇದು ನನ್ನ ಧೋರಣೆ. ಹೀಗಿರುವುದರಿಂದ ರಾವಣ ತಾನಾಗಿ ತನಗೆ ಮೃತ್ಯುವನ್ನು ತಂದುಕೊಂಡ. ನಾನು ಬರೇ ನಿಮಿತ್ತ. ನಿನ್ನ ದುಃಖ ನನಗೆ ಅರ್ಥವಾಗುತ್ತೆ. ರಾವಣನು ನಿಜವಾಗಿ ನನ್ನ ಶತ್ರುವಲ್ಲ. ವಿಭೀಷಣನನ್ನು ಬಲವಂತದಿಂದ ಒಪ್ಪಿಸಿ ರಾವಣನಿಗೆ ಉತ್ತರಕ್ರಿಯೆಗಳನ್ನೂ ಮಾಡಿಸಿದೆ. ರಾವಣನಿಗಿದು ಮುಕ್ತಿಯೆಂದು ಭಾವಿಸು ಎಂದು ತಿಳಿಹೇಳಿದಾಗ ಮಂಡೋದರಿ ಸುಮ್ಮನಾದಳು. ರಾಮಾಶ್ವ ಮೇಧದ ಸಂದರ್ಭ—ವಾಲ್ಮೀಕಿ ಲವಕುಶರೊಡನೆ ಬಂದು ರಾಮನಿಗೆ ಅವರನ್ನು ಒಪ್ಪಿಸಿದಾಗ ರಾಮ ಸೀತೆಯನ್ನು ನೆನೆದು ಅವಳಲ್ಲಿಗೆ ಹೋಗಿ ಆಕೆಯನ್ನು ನೋಡಿದನು. ನಿಡುಗಾಲ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದ ಸೀತೆಯೂ ರಾಮನನ್ನು ಆಕ್ಷೇಪಿಸಿದಳು :

ಏಕೆನ್ನನಂತು ನೀಂ ಬನಕೆ ದೂಡಿದೆ ದೊರೆಯೆ ?
ಪ್ರಾಕೃತ ಕ್ಷುದ್ರತೆಗೆ ರಾಜನದಿರಿಕೆ ಸರಿಯೆ ?

ಮೊದಲು ನಿನ್ನ ಪ್ರೇಮಾಲಾಪಗಳು ಕೇಳಲು ಎಷ್ಟು ಇಂಪಾಗಿತ್ತು ? ನನ್ನ ಸಲುವಾಗಿ ನೀನು ಪಟ್ಟ ಶ್ರಮವೆಷ್ಟು ? ಅಗ್ನಿಪರೀಕ್ಷೆಯಲ್ಲೂ ಉತ್ತೀರ್ಣಳಾದ ನನ್ನನ್ನು ಬಸಿರಿಯಾಗಿರುವಾಗ ಕಾಡಿಗೆ ಅಟ್ಟಿದೆಯಲ್ಲವೆ ? ಯಾರೋ ಒಬ್ಬ ಕ್ಷುಲ್ಲಕ ಮನುಷ್ಯ ನುಡಿದ ಮಾತ್ರಕ್ಕೆ ಆಯಿತೆ ? ರಾಜನಿಗೆ ಯಾವ ಸ್ವಾತಂತ್ರ್ಯವೂ ಇಲ್ಲವೆ ? ಗೌತಮರ ಪತ್ನಿಯಲ್ಲಿ ನೀನು ತೋರಿದ ಉದಾರತೆ ಹತಭಾಗ್ಯೆಯಾದ ನನಗೆ ಇಲ್ಲವಾಯಿತೆ ?

ಹಾ ನಾಥ ಬಾಳು ನೀಂ ಸೊಗದಿ ರಾಘವ ಬಾಳು
ನಾನೇಕೆ ನಿನಗಿನ್ನು ? ಸೊಗದಿ ರಾಜ್ಯವನಾಳು

ಎಂದು ಚುಚ್ಚಿ ನುಡಿದಳು. ಅದನ್ನು ತಾಳ್ಮೆಯಿಂದ ಕೇಳಿದ ರಾಮಚಂದ್ರ ತಾನೆಸಗಿದುದರಲ್ಲಿರುವ ಧರ್ಮಸೂಕ್ಷ್ಮವನ್ನು ವಿವರಿಸಿದ. ಧರ್ಮದ ತಕ್ಕಡಿಯಲ್ಲಿ ಸ್ವಂತ ಸುಖವನ್ನೂ ಲೋಕಹಿತವನ್ನೂ ಇಟ್ಟು ತೂಗಬೇಕು, ಅದರಲ್ಲಿ ಯಾವುದು ಗೌರವಾರ್ಹವೋ ಅದನ್ನು ಅನುಸರಿಸುವುದೇ ವಿವೇಕ, ನಿನ್ನನ್ನು ಕಾಡಿಗೆ ಕಳುಹಿಸುವಾಗ ಪತಿಯಾದ ನಾನು ಅಧರ್ಮವನ್ನೆಸಗುತ್ತಿದ್ದೇನೆ ಎಂದು ತಿಳಿದಿತ್ತು, ದುಃಖವೂ ಆಗಿತ್ತು, ಆದರೆ

ಅನ್ಯಾಯುವ ನಿನಗೆಸಗದೆ
ನಾಣ್ನುಡಿಗಾಂ ಕಿವಿಯ ಕುಡದೆ ನಡೆದಿರಲಾಗಳ್ ।
ಮುನ್ನಿನ ಧರ್ಮಾಚರಣೆಗೆ
ಮನ್ನಣೆಯಂ ನೀಡುತಿರ್ಪ್ಪುವೇಂ ಜಾನಪದಂ ॥

ಚಿರದಿಂ ರಾಜ್ಯವ ಕಾಯ್ದು ಜಾನಪದದಂಗೀಕಾರದಿಂ ನಿಂದು ಸ್ಥಿರಮಾರ್ಗಂಗಳೊಳೆಲ್ಲರಂ ನಡೆಯಿಸುತ್ತಿರ್ಪಾರ್ಷಧರ್ಮಂಗಳೊಳ್ ! ಧರಣೀಸಂಭವೆ ! ನಿನ್ನ ನನ್ನ ಕಥೆಯಿಂ ಲೋಗರ್ಗೆ ಸಂದೇಹಮಂಕುರಿಸಲ್ಕಾಗದವೋಲು ನಾಮಿರುವುದೆಂದಾಂ ಗೈದೆನಾ ಕ್ರೂರವುಂ ॥ ಧರ್ಮಸೂಕ್ಷ್ಮವು ವ್ಯಕ್ತಿಯ ಬೇಕು ಬೇಡಗಳನ್ನು ಹೊಂದಿಕೊಂಡಿರುವುದಿಲ್ಲ. ಧರ್ಮಕ್ಕಾಗಿ ಯಾವ ತ್ಯಾಗವನ್ನೂ ಮಾಡಲು ವ್ಯಕ್ತಿ ಸಿದ್ಧನಿರಬೇಕು, ಅವರಲ್ಲಿ ಕಷ್ಟವೋ ಸುಖವೋ ಚಿಂತಿಸಲಾಗದು. ಯಾರೋ ಒಬ್ಬ ಪ್ರಜೆ ಹೇಳಿದ ಮಾತೆಂದು ನಾನದಕ್ಕೆ ಕಿವಿಗೊಡದೆ ನಿನ್ನನ್ನು—ಶೀಲವತಿಯೆಂದು ತಿಳಿದೂ—ಪರಿಗ್ರಹಿಸಿದ್ದರೆ ಲೋಕದ ನಡವಳಿಕೆಯ ಮೇಲೆ ಎಂತಹ ಪರಿಣಾಮವಾಗುತ್ತಿತ್ತು, ಬಲ್ಲೆಯಾ ? ನಿನ್ನನ್ನು ಪರಿತ್ಯಜಿಸಬೇಕೆಂದೇ ನನ್ನ ಮನೋಭಾವವಿದ್ದಿಲ್ಲ. ಆಗ ನನಗಾದ ಕಷ್ಟ ನಿನಗಾದುದಕ್ಕಿಂತಲೂ ಹೆಚ್ಚು. ರಾಜನ ನಡತೆ ಜನರಿಗೆ ಮೇಲ್ಪಂಕ್ತಿಯಾಗಿರಬೇಕು. ಅವರಲ್ಲಿ ಸಂದೇಹಕ್ಕೆ ಎಳ್ಳಷ್ಟೂ ಅವಕಾಶವಿರಬಾರದು. ಅದಕ್ಕಾಗಿ ನಿನ್ನನ್ನು ಪರಿತ್ಯಜಿಸಿದೆ.

ಊರಿಗೆ ಅರಸಾದರೂ ತಾಯಿಗೆ ಮಗ ಎಂಬ ಗಾದೆಯು ತಾಯಿಯ ಮೇಲ್ಮೆಯನ್ನು ಸಾರುವಲ್ಲಿ ಅರ್ಥವಾದವೆನಿಸುತ್ತದೆ. ಹಾಗೆ ಹೆಂಡತಿಗೆ ಗಂಡನಾದರೂ ಊರಿಗೆ ಅರಸ ಎಂಬುದಿಲ್ಲಿ ಪ್ರಸ್ತುತ. ರಾಮ ಸೀತೆಯೊಡನೆ ವರ್ತಿಸುವುದು ವ್ಯಕ್ತಿಧರ್ಮ, ಪ್ರಜೆಗಳೊಡನೆ ವರ್ತಿಸುವುದು ಸಮಾಜಧರ್ಮ, ವ್ಯಕ್ತಿಗಿಂತ ಸಮಾಜ ಹೆಚ್ಚು. ಹೀಗಾಗಿ ರಾಮ ತಾಯಿಯ ಮಾತನ್ನು ಕೇಳದೆ ತಂದೆಯ ವಚನ ಪಾಲಿಸಲಿಕ್ಕಾಗಿ ಕಾಡಿಗೆ ಹೋದ, ಭರತನನ್ನು ಹಿಂದೆ ಕಳುಹಿಸಿ ತಾನು ಅರಣ್ಯ ವಾಸವನ್ನೇ ಅನುಭವಿಸಿದ, ಅದೇ ರೀತಿ ವಾಲಿವಧೆ, ರಾವಣ ವಧೆಗಳೂ ಆದುವು. ಇವೆಲ್ಲ ತೋರಿಕೆಗೆ ರಾಮನ ಪಕ್ಷಪಾತಬುದ್ಧಿಯೆಂದು ಕಂಡರೂ ಅದರಲ್ಲಿ ಧರ್ಮಸೂಕ್ಷ್ಮಕ್ಕೆ ಸಿಗುವ ಅಭಿಪ್ರಾಯ ಭೇದವಿದೆ, ಒಬ್ಬ ಉದಾರನಾದ ಕೊಡುಗೈಯ ದಾನಿಯನ್ನು ಮುಂದುಗಾರನೆನ್ನಬಹುದು, ಕೀರ್ತಿಕಾಮುಕ ಎನ್ನಲೂಬಹುದು, ಸನ್ನಿವೇಶದಿಂದ

ಮಾತ್ರ ಆತ ಉದಾರನೋ ದುಂದುಗಾರನೋ ಕೀರ್ತಿಕಾಮಿಯೋ ತಿಳಿಯ ಬೇಕಾಗುತ್ತದೆ. ಸೀತೆಯನ್ನು ಗರ್ಭಿಣಿಯೆಂದೂ ಪರಿಗಣಿಸದೆ ಆಕೆಯನ್ನು ಕಠೋರ ಹೃದಯನಾಗಿ ಕಾಡಿಗಟ್ಟಿದ ರಾಮನ ಪ್ರಜಾಹಿತ ದೃಷ್ಟಿ ತುಸು ಅತಿರೇಕವಾಗಿ ಕಾಣಬಹುದು. ಇದಕ್ಕೆ ಭವಭೂತಿ ರಾಮನಿಂದ—

> ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿವಾ ಜಾನಕೀಮಪಿ
> ಆರಾಧನಾಯ ಲೋಕಸ್ಯ ಮುಂಚತೋ ನಾಸ್ತಿ ಮೇವ್ಯಥಾ॥

ಎಂದು ಹೇಳಿಸಿದ, ಇಲ್ಲಿ ನಾಟಕೀಯ ಸೂಚನೆ ಮಾತ್ರವಲ್ಲ, ರಾಮನ ನಿಲುಮೆ ಯೆಂಥದೆಂಬುದನ್ನೂ ಭವಭೂತಿ ಚಿತ್ರಿಸಿದ್ದಾನೆ. ಸೀತೆಗೆ ರಾಮನ ಮಾತಿನಿಂದ ತೃಪ್ತಿಯಾಯಿತೇ ಇಲ್ಲವೆ ಎಂಬ ಮಾತು ಬೇರೆ. ಕೊನೆಗೂ ಭೂಮಿಜಾತೆ ಭೂ ಗರ್ಭದಲ್ಲಿ ಸೇರಿಹೋದಳು.

ವಾಲ್ಮೀಕಿಯಾಶ್ರಮದಿಂದ ಲವಕುಶರು ಮಾತ್ರ ಬಂದು ಸೀತೆ ಬಾರದಿದ್ದುದನ್ನು ನೋಡಿ ಪೌರರೆಲ್ಲಾ ಚಾಡಿಕೋರನಾದ ಭದ್ರನನ್ನು ಹಿಡಿದು ಚಿಚ್ಚಿದ್ರಗೈಯ ತೊಡಗಿದರು. ರಾಮ ಪೌರರಿಗೂ ತನ್ನ ನಿಲುಮೆಯನ್ನೂ ಕರ್ಮವೃಕ್ಷದ ಫಲದ ಸ್ವರೂಪವನ್ನೂ ವಿವರಿಸಿ, ಇದರಲ್ಲಿ ಭದ್ರನ ತಪ್ಪೇನೂ ಇಲ್ಲವೆಂದು ಸಾದರಪಡಿಸಿ ಅವರ ಗದ್ದಲವನ್ನು ಶಮನ ಮಾಡಬೇಕಾಯಿತು.

ಶೂದ್ರ ತಪಸ್ವಿ ಶಂಬೂಕನನ್ನು ಕೊಂದು ಬಂದು ಬ್ರಾಹ್ಮಣ ಬಾಲಕನನ್ನು ಬದುಕಿಸಿದಾಗ ಲಕ್ಷ್ಮಣನೂ ಅಣ್ಣನನ್ನು ಆಕ್ಷೇಪಿಸಿ ನುಡಿದ :

> ಅಪರಾಧ ಮೇಂ ರಾಜ್ಯಾ
> ಧಿಪ ಶಂಬೂಕನದು ? ದಂಡ್ಯನೆಂತವನಾದಂ ?
> ತಪಮೇಂ ಪಾಪಮೆ ? ಅಂತೆನೆ
> ವಿಪರೀತಮದಾಗದಿಹುದೆ ? ತತ್ವಮನರುಪಯ್॥

ನಿರಪರಾಧಿ ಶಂಬೂಕ. ಯಾರ ತಂಟೆಗೂ ಹೋಗದೆ ಅವನಷ್ಟಕ್ಕೆ ಕಾಡಿನಲ್ಲಿ ತಪಸ್ಸಿ ನಲ್ಲಿ ನಿರತನಾಗಿದ್ದ, ಶೂದ್ರನಾದರೇನು ? ಒಂದು ಆತ್ಮೋನ್ನತಿಯ ಕೆಲಸ ಮಾಡು ತ್ತಿದ್ದ, ಅವನ ತಪ್ಪೇನು ? ಕೊಲೆ ಏಕಾಯಿತು ? ಇದರ ಗೂಢವೇನು ಎಂದು ಕೇಳಿದಾಗ ರಾಮಚಂದ್ರ ನುಡಿದ—

ಶಂಬೂಕಂ ಪ್ರಾಕ್ಕರ್ಮದೆ
ಸಂಭವಿಸಿದಕುಲದಿ ಧರ್ಮಮಂ ಕಾಣದುದೇಂ ?
ಸಂಭ್ರಮಿಸೆ ಮನಸು ತಪಸಿಗೆ
ಸಂಭಾವಿತರಿಂ ಹಿತೋಕ್ತಿಯಂ ಬೇಡದುದೇಂ ?

ಉದ್ಧತತನವದು ತನ್ನಯ
ಬುದ್ಧಿಯೆ ಸರ್ವಪ್ರಮಾಣವೆನ್ನುವ ಮೋಹಾ ।
ಬದ್ಧಂಗದೆಂತು ಸತ್ಯದ
ಸಿದ್ಧಾಂತಂ ದೊರೆಗುಮಖಿಲ ವಿಶ್ವೈಕಾಂತಂ ॥

ಶಂಬೂಕ ಶೂದ್ರನಾಗಿ ಜನಿಸಿದ್ದ, ಆ ಧರ್ಮದಿಂದಲೇ ಆತ ನಡೆದುಕೊಂಡು ಆತ್ಮೋನ್ನತಿಯನ್ನು ಸಾಧಿಸಬಹುದಿತ್ತು, ಅವನ ಮಹತ್ವಾಕಾಂಕ್ಷೆಯಿಂದ ಊರಿಗೆ ಹಾನಿಯಾಗುವಂತಾಯಿತು, ಉದ್ಧತನಾದ ಆತ ತನ್ನ ಮೂಗಿನ ನೇರಕ್ಕೆ ನಡೆದು ತನಗೆ ವಿಹಿತವಲ್ಲದುದನ್ನು ಮಾಡಿದ, ಇದರಿಂದ ಬ್ರಾಹ್ಮಣ ಬಾಲಕ ಮೃತ್ಯುವಿಗೀಡಾದ. ಹೊಳೆಯು ದಡದ ಅಂಚಿನೊಳಗೆ ಹರಿದರೆ ನೀರಾವರಿಗೆ ಉಪಯೋಗವಾಗಿ ಊರಿಗೆ ಕ್ಷೇಮವಾಗುತ್ತದೆ. ಅದೇ ದಡ ಮೀರಿ ಹರಿದರೆ ಎಲ್ಲ ಕೊಳೆತು ಊರಿಗೆ ಕ್ಷಾಮ. ಯಾವುದೂ ಮಿತದಲ್ಲಿದ್ದರೆ ಹಿತ, ಇಲ್ಲದಿದ್ದರೆ ಪೀಯೂಷವೂ ವಿಷ. ರಾಜ ಜನಸಮ್ಮತವಾದ ವ್ಯವಸ್ಥೆಯನ್ನು ಪಾಲಿಸಬೇಕು, ಅದಕ್ಕೆ ವಿರೋಧವೆಸಗಿದರೆ ಲೋಕಕ್ಕೆ ತೊಂದರೆ. ಯಾವುದಕ್ಕೂ ಆತುರಪಡಬಾರದು, ಕಾಲಕ್ಕಾಗಿ ಕಾಯಬೇಕು. ನಿಯತಿಯನ್ನು ಮೀರಿದ ಉಪಾಯದಿಂದ ಅಪಾಯ ತಪ್ಪಿದ್ದಲ್ಲ, ಕಾರ್ಯಸಿದ್ಧಿಯಾಗಲಾರದು. ಕಾಯಿಯನ್ನು ಗುದ್ದಿ ಹಣ್ಣು ಮಾಡುವುದಕ್ಕಾಗುವುದಿಲ್ಲ, ಭೂಮಿ, ಗ್ರಹ, ನಕ್ಷತ್ರ ಎಲ್ಲವೂ ನಿಯತಿಗನುಸಾರವಾಗಿ ಚಲಿಸುತ್ತವೆ, ಎಲ್ಲಿಯೂ ಅವಸರವಿಲ್ಲ, ಆಲಸ್ಯವಿಲ್ಲ. ಶಂಬೂಕ ಈ ದೇಹದಿಂದಲೇ ಸ್ವರ್ಗವನ್ನಪೇಕ್ಷಿಸಿದ. ಅದರಿಂದ ಲೋಕಕ್ಕೆ ಹಾನಿಯಾಯಿತು. ಅವನು ಶೂದ್ರನಾದ್ದರಿಂದ ತಪಸ್ಸಿಗೆ ಅನರ್ಹ ಎಂಬುದು ಇಲ್ಲಿ ಮುಖ್ಯವಲ್ಲ, ಅವರವರಿಗೆ ವಿಹಿತ ಕರ್ಮಾಚರಣೆಯಿಂದಲೇ ಎಲ್ಲವನ್ನೂ ಪಡೆಯಲು ಸಾಧ್ಯ. ಇಲ್ಲದಿದ್ದರೆ ಸಮಾಜದಲ್ಲಿ ಸಮತೋಲ ತಪ್ಪುತ್ತದೆ. ನ್ಯಾಯಮಾರ್ಗದಿಂದಲೇ ಆಗಲಿ ಒಬ್ಬನಲ್ಲಿ ಹೇರಳ ಸಂಪತ್ತು ಸೇರಿದರೆ ಅದರಿಂದ ಇನ್ನೊಬ್ಬ ಬಡಪಾಯಿಯಾಗಬಹುದು. ಅದಕ್ಕಾಗಿ ಸರಕಾರ ಅವನಿಗೆ ತೆರಿಗೆ ಹಾಕಿ ಅವನಲ್ಲಿರುವ ಹೆಚ್ಚಿನ ಹಣವನ್ನು ಮುಟ್ಟುಗೋಲು ಹಾಕಬೇಕಾಗುತ್ತದೆ. ವ್ಯಕ್ತಿಯ ಹಿತಕ್ಕಿಂತ ಸಮಾಜದ ಹಿತ ಮುಖ್ಯ. ಆದ್ದರಿಂದ ರಾಜನಾಗಿ ಅವನನ್ನು ವಧಿಸುವುದೇ ಕರ್ತವ್ಯವಾಯಿತು. ಅವನನ್ನು ಕೊಲ್ಲದೆ ಸನ್ಮಾರ್ಗದಿಂದ ಅವನನ್ನು ಉದ್ಧರಿಸಬಹುದಿತ್ತಲ್ಲ ಎಂಬುದು ಇಲ್ಲಿ ಮುಖ್ಯವಲ್ಲ. ರಾಮಚಂದ್ರ ಅವನನ್ನು ಕೊಂದುದರಿಂದ ಅವನಿಗೆ ಮುಕ್ತಿ, ಬಾಲಕನಿಗೆ ಪುನಃ ಬದುಕುವ ಶಕ್ತಿಯುಂಟಾಯಿತು, ದೇವರಿಗೆ 'ಪಥಮಾನ ದ್ವಿಟ್' ಎಂಬ ಮಾತು ಅನ್ವಯಿಸುತ್ತದೆ. ಯಾರು ತನ್ನ

ಅಳತೆ ಮೀರಿ ಪುಣ್ಯ ಸಂಪಾದನೆ ಮಾಡುವರೋ ಅವರ ಪುಣ್ಯವನ್ನು ಹ್ರಾಸಗೊಳಿಸಿ, ಸಮತೋಲವನ್ನು ಕಾಪಾಡುವುದು ದೇವರ ನಿಯತಿ, ಎಂದು ಲಕ್ಷ್ಮಣನಿಗೆ ಧರ್ಮ ಸೂಕ್ಷ್ಮವನ್ನು ಅರುಹಿದ.

ರಾಮನ ನಡವಳಿಕೆಯನ್ನು ಮೊದಲಿನಿಂದ ಸೂಕ್ಷ್ಮವಾಗಿ ಗಮನಿಸುತ್ತಾ ಬಂದ ಹನುಮಂತ ಕೊನೆಯ ಕಾಲದಲ್ಲಿ—'ಪ್ರಭು ? ಧರ್ಮದ ಸ್ವರೂಪವೇನು ? ಕರ್ಮದ ಜಂಜಡದಿಂದ ಜೀವಿಗೆ ಮುಕ್ತಿ ಹೇಗೆ ? ಇದನ್ನು ತಿಳಿದ ಮೇಲೆ ನಾನು ಅರಣ್ಯಕ್ಕೆ ಹೋಗಿ ದೇವರ ಧ್ಯಾನದಿಂದ ಪರಮ ಶಾಂತಿಯನ್ನು ಪಡೆಯಬೇಕೆಂದಿದ್ದೇನೆ, ದಯಮಾಡಿ ತಿಳಿಸು' ಎಂದು ಬೇಡಿಕೊಂಡ. ಆಗ ರಾಮಚಂದ್ರ ಧರ್ಮದ ಸಾರ ಸರ್ವಸ್ವವನ್ನೂ ಒಂದೆರಡು ಮಾತುಗಳಲ್ಲಿ ತಿಳಿಸಿದ. ಡಿ.ವಿ.ಜಿ.ಯವರ ಜಾಣ್ಮೆ ಇಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಧರ್ಮದ ವ್ಯಾಖ್ಯೆ ಸುಲಭವಲ್ಲ. ಕರ್ಮದ ಬೇರು ಎಲ್ಲಿದೆಯೆಂದು ತಿಳಿಯಲಾಗದು, ತತ್ತ್ವಜ್ಞಾನದಿಂದಲೇ ಅದನ್ನು ಕತ್ತರಿಸಬೇಕು:

ನಾನೆನ್ನದೆನಿಪ ಮಾಯಾ
ಹ್ವಾನಕೆ ಕಿವಿಗುಡದೆ ಸರ್ವಮಿಾಶ್ವರ ವಿಭವಂ।
ನಾನೂಳಿಗದಿಂ ಬಾಳುವೆ
ನಾನಂದಿಪೆನವನ ವರದಿನೆನುಮಂ ಪ್ರಾಜ್ಞಂ॥

ಈ ನಂಬುಗೆಯಿಂ ಮಾರುತಿ
ನಾನೆಸಗಿದೆನೆಲ್ಲ ಲೌಕಿಕದ ಕಜ್ಜಗಳಂ।
ಜ್ಞಾನದ ಶಿಖರದಿನೆನ್ನಂ
ಮಾನುಷ್ಯತೆ ಜಾರಿಸಿರ್ದೊಡದನೆಣಿಸದಿರ್ಕೆ॥

ನಾನು ನನ್ನದು (ಅಹಂಕಾರ ಮಮಕಾರಗಳು) ಎಂಬುದು ಮಾಯೆ. ಇದನ್ನು ಹರಿದೊಗೆದು ಸಮಚಿತ್ತದಿಂದಿರುವುದೇ ಗೆಲುವಿನ ಮಾರ್ಗ. ಎಲ್ಲವೂ ಈಶ್ವರ ಚಿತ್ತದಂತೆ ನಡೆಯುತ್ತದೆ ಎಂದು ಭಾವಿಸುವಾತ ಪ್ರಾಜ್ಞ. ಈ ಭಾವನೆಯಿಂದ ನಾನು ನಡೆದುಕೊಂಡೆ. ಲೋಕಹಿತವೇ ನನ್ನ ಧ್ಯೇಯವಾಗಿತ್ತು, ನನ್ನ ಸ್ವಾರ್ಥವಲ್ಲ, ಈ ದೃಷ್ಟಿಯಿಂದ ನಾನು ಮಾಡಿದುದರಲ್ಲಿ ಜನರು ಕುಂದುಕೊರತೆಗಳನ್ನು ಕಂಡರೆ ಅದು ನನ್ನ ತಪ್ಪಲ್ಲ. ಎಂದು ಹನುಮಂತನಿಗೆ ಹೇಳಿದಾಗ ಆತ ನಮಸ್ಕರಿಸಿ ಬೀಳ್ಕೊಂಡ.

ಡಿ.ವಿ.ಜಿ.ಯವರು ಈ ಲಘುಕಾವ್ಯದಲ್ಲಿ ರಾಮಾಯಣದ ಮೂಲವನ್ನೇ ಆಧರಿಸಿ ರಾಮನ ನಡತೆಯಲ್ಲಿ ಧರ್ಮಸೂಕ್ಷ್ಮಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ, ಅದರಲ್ಲಿ ಸಫಲರೂ ಆಗಿದ್ದಾರೆ. ರಾಮನ ಲೋಕಹಿತ ದೃಷ್ಟಿಯನ್ನು ಕೇಂದ್ರೀಕರಿಸಿ ಅವನ ನಡತೆಯ ಸವುರಾದ ಎಳೆಗಳನ್ನು ಬಿಡಿಸಲು ಯತ್ನಿಸಿದ್ದಾರೆ. ಧರ್ಮದ

ಜಾತು ನಾವು ತಿಳಿದುಕೊಂಡಂತೆಯೇ ಇರುವುದಿಲ್ಲ, ಪುರಾಣದಲ್ಲಿ ಈ ಮಾತು ಬರುತ್ತದೆ—

ಧರ್ಮಸ್ವರೂಪ ಚಿತ್ರತ್ವಾತ್ ಯೋ ಯೋ ದೇವಮನೋಗತಃ ।
ಸ ಏವ ಧರ್ಮೋ ವಿಜ್ಞೇಯಃ ನ ಹ್ಯೇತೇ ಲೋಕಸಮ್ಮತಾಃ ॥

ಧರ್ಮದ ವ್ಯಾಖ್ಯೆ ವಿಚಿತ್ರ, ಯಾವುದು ದೈವನಿಯತಿಯೋ ಅದು ಮಾತ್ರ ಧರ್ಮವೆನಿಸುತ್ತದೆ, ಲೋಕಸಮ್ಮತವಾದುದೆಲ್ಲ ಧರ್ಮವಾಗಲಾರದು. 'ರಾಮೋ ವಿಗ್ರಹವಾನ್ ಧರ್ಮಃ' ಎಂದು ವಾಲ್ಮೀಕಿ ಹೇಳಿದ್ದ. ರಾಮನ ನಡತೆ ಮಾತ್ರ ಧರ್ಮಸಮ್ಮತ, ಉಳಿದವರದ್ದೆಲ್ಲ ಅಧರ್ಮ ಎಂಬ ಮಾತು ಸಲ್ಲದು. ಧರ್ಮಸಂಕಟದಲ್ಲಿ ಆತ ನಡೆದುಕೊಂಡ ರೀತಿ ಎಷ್ಟೋ ವೇಳೆ ಪಕ್ಷಪಾತದಿಂದ ಕೂಡಿದ್ದು, ಕಠೋರವಾದದ್ದು ಎಂದು ಕಾಣಬಹುದು, ಆದರೂ ಅದರ ಹಿಂದೆ ಗೂಢವಾದ ನ್ಯಾಯವಿದೆಯೆಂಬುದನ್ನು ಡಿ.ವಿ.ಜಿ.ಯವರು ರಾಮಾಯಣದ ಆಧಾರದ ಮೇಲೆಯೇ ಇದರಲ್ಲಿ ಕಂಡುಕೊಂಡಿದ್ದಾರೆ. ಡಿ.ವಿ.ಜಿ.ಯವರ ಹಳಗನ್ನಡ ಶೈಲಿಯೂ ಈ ಧಾರ್ಮಿಕ ವ್ಯಾಖ್ಯಾನಕ್ಕೆ ಒಂದು ಗಟ್ಟಿತನವನ್ನೂ ಪ್ರೌಢಿಮೆಯನ್ನೂ ಕೊಟ್ಟಿದೆ. ಇದೊಂದು ಖಂಡಕಾವ್ಯವಾದರೂ ಧರ್ಮದ ಅಖಂಡ ಸ್ವರೂಪವನ್ನು ರಾಮನ ಬಾಯಿಯಿಂದಲೇ ಹೊರಡಿಸುವುದರಿಂದ ಹೆಚ್ಚು ಮನೋಹರವಾಗಿದೆ.

———o———

ಶ್ರೀಕೃಷ್ಣಪರೀಕ್ಷಣಂ

ಶ್ರೀ ಟಿ. ಎನ್. ಪದ್ಮನಾಭನ್

ಶ್ರೀವಿಷ್ಣುವಿನ ಅವತಾರಗಳಲ್ಲಿ ಪರಿಪೂರ್ಣಾವತಾರ ಎಂದು ಪರಿಗಣಿಸಲ್ಪಟ್ಟಿರುವ ಶ್ರೀಕೃಷ್ಣನ ಚರಿತೆ, ವ್ಯಕ್ತಿತ್ವ, ತನ್ನ ಕಾಲದವರಿಂದ ಹಿಡಿದು ಇಂದಿನ ವಿಚಾರವಂತರ ವರೆಗೆ ಅನೇಕ ಸಮಸ್ಯೆಗಳನ್ನು ಒಡ್ಡಿವೆ; ಈ ಸಮಸ್ಯೆಗಳನ್ನು ಕುರಿತು ಅನೇಕ ವಿದ್ವಾಂಸರು ಪರಿಶೀಲನೆ ಮಾಡಿರುತ್ತಾರೆ. ಈ ದಿಕ್ಕಿನಲ್ಲಿ ಬಂಕಿಮ್ ಚಂದ್ರರ 'ಶ್ರೀ ಕೃಷ್ಣ ಚರಿತೆ' ಬಹುಶಃ ಮೊತ್ತಮೊದಲ ವೈಚಾರಿಕ ಗ್ರಂಥ ಎನ್ನಬಹುದು. ಇದೊಂದು ಗದ್ಯ ಗ್ರಂಥ. ಆ ಗ್ರಂಥದ ವಿಚಾರಧಾರೆಯನ್ನೂ ಮೀರಿದ ಶ್ರೀಕೃಷ್ಣತತ್ತ್ವ ಮೀಮಾಂಸೆಯನ್ನು 'ಶ್ರೀಕೃಷ್ಣಪರೀಕ್ಷಣಂ'ದಲ್ಲಿ ಡಿ.ವಿ.ಜಿ. ನಡೆಸಿದ್ದಾರೆ. ಈ ಸಂಕೀರ್ಣಸ್ವರೂಪದ ಕೃತಿಯನ್ನು ಅತ್ಯಂತ ಸಮರ್ಥವಾಗಿ, ವಿಶ್ಲೇಷಣಾತ್ಮಕವಾಗಿ ಪರಿಚಯ ಮಾಡಿಕೊಟ್ಟಿರುವ ಶ್ರೀ ಟಿ. ಎನ್. ಪದ್ಮನಾಭನ್ ಅಭಿಪ್ರಾಯಪಟ್ಟಿರುವಂತೆ— ಇಡೀ "'ಶ್ರೀಕೃಷ್ಣಪರೀಕ್ಷಣಂ' ಗ್ರಂಥದಲ್ಲಿ ನಾವು ಕಾಣುವುದು ಡಿ.ವಿ.ಜಿ. ಯವರ ಶ್ರೀಕೃಷ್ಣಭಕ್ತಿ ಪಾರಮ್ಯವನ್ನು. 'ಲೀಲಾಶುಕ'ರ 'ಕೃಷ್ಣಕರ್ಣಾಮೃತ'ದಂತೆ ಇದು ಹೃದಯವಿಸ್ತಾರಕ್ಕೆ ಸಾಧಕವಾದದ್ದು. ಇಲ್ಲಿಯ ಕಾವ್ಯಗುಣ ಪ್ರಸನ್ನವಾದದ್ದು, ಮತ್ತು ಓಜೋವಂತವಾದದ್ದು; ಶೈಲಿ ಹೃದಯಂಗಮವಾದದ್ದು. ಈ ಗ್ರಂಥವು ಕನ್ನಡ ಜನತೆಗೂ ಕನ್ನಡ ಸಾಹಿತ್ಯಕ್ಕೂ ಡಿ.ವಿ.ಜಿ.ಯವರು ನೀಡಿರುವ ಒಂದು ಅಮೋಘವಾದ ಕೊಡುಗೆ."

ವಾಚಕಃ ಪ್ರಣವೋ ಯಸ್ಯ ಕ್ರೀಡಾವಸ್ತ್ವಖಿಲಂ ಜಗತ್
ಶ್ರುತಿರಾಜ್ಞಾವಪುರ್ಜ್ಞಾನಂ ತಂ ವಂದೇ ಪಾರ್ಥಸಾರಥಿಂ

ಲೋಕಕಲ್ಯಾಣ ಸಾಧನೆಗಾಗಿ ಭಗವಂತನು ಧರಿಸಿದ ಅವತಾರಗಳಲ್ಲಿ ಶ್ರೀಕೃಷ್ಣಾವತಾರವು ಅನೇಕಾಂಶಗಳಲ್ಲಿ ಭಿನ್ನವಾದದ್ದು. ಮತ್ಸ್ಯಾದಿ ಇತರ ಅವತಾರಗಳು ಭಗವಂತನ ಅಂಶಾವತಾರಗಳೆಂದೂ ಶ್ರೀಕೃಷ್ಣಾವತಾರವು ಪರಿಪೂರ್ಣಾವತಾರವೆಂದೂ

ಹೇಳುತ್ತಾರೆ. ಕೃಷ್ಣ ಎಂದರೆ ಕಪ್ಪುಬಣ್ಣ ಎಂದು ಒಂದರ್ಥ. ಕಪ್ಪುಬಣ್ಣವು ಹೇಗೆ ನಮ್ಮ ಕಣ್ಣಿಗೆ ಅಂಧಕಾರವನ್ನುಂಟುಮಾಡಿ ನೇತ್ರಪಾಟವವನ್ನು ಮಂದಗೊಳಿಸುವುದೋ ಆದರಂತೆಯೇ ಕೃಷ್ಣತತ್ತ್ವವೂ ಸಹ ನಮ್ಮ ಬುದ್ಧಿಯ ಕಣ್ಣಿಗೆ ಒಂದು ಬಗೆಯಾದ ಅಂಧಕಾರವನ್ನುಂಟುಮಾಡುತ್ತದೆ. ಶ್ರೀಕೃಷ್ಣತತ್ತ್ವವನ್ನು ಕುರಿತು ಚಿಂತನೆ ಮಾಡಿದಷ್ಟೂ ಹೆಚ್ಚು ಹೆಚ್ಚು ರಹಸ್ಯವೂ ಜಟಿಲವೂ ದುರ್ಭೇದ್ಯವೂ ಆಗಿ ಕಾಣುತ್ತದೆ.

ಶ್ರೀಕೃಷ್ಣನೆಂಬುದು ಒಂದು ಅದ್ಭುತವಾದ ಶಕ್ತಿ. ಜನನಕಾಲದಿಂದ ಅರಂಭವಾಗಿ ಅವತಾರಾವಧಿಪರ್ಯಂತ ಅದ್ಭುತ ಘಟನೆಗಳ ಪರಂಪರೆಯನ್ನೇ ಕಾಣುತ್ತೇವೆ. ಶಂಖಚಕ್ರ ಗದಾಪಾಣಿಯಾಗಿ ಪೀತಾಂಬರವನ್ನು ಧರಿಸಿ ಶ್ರೀವತ್ಸಕೌಸ್ತುಭಾಲಂಕೃತನಾಗಿ ಜನಿಸಿ ಅದೇ ದಿವ್ಯರೂಪದಲ್ಲಿ ವಸುದೇವ ದೇವಕಿಯರಿಗೆ ಕಾಣಿಸಿಕೊಂಡ ಶ್ರೀಕೃಷ್ಣನ ಜನನವೇ ಒಂದು ಅದ್ಭುತ. ಪೂತನಾಸಂಹಾರ, ಶಕಟಾಸುರಭಂಜನ, ಧೇನುಕಹನನ, ಕಾಳಿಯಮರ್ದನ, ಯಮಳಾರ್ಜುನ ಭೇದನ, ಗೋವರ್ಧನೋದ್ಧಾರಣ ಮೊದಲಾದ ಬಾಲಕೃಷ್ಣನ ವ್ಯಾಪಾರಗಳಂತೂ ರೋಮಾಂಚಕಾರಕವಾದ ಘಟನೆಗಳು. ಮುಂದೆ ಶ್ರೀಕೃಷ್ಣನು ಮಾಡಿದ ಲೋಕಸಂಗ್ರಹಕಾರ್ಯ ಮತ್ತು ಆ ಕಾರ್ಯ ಸಾಧನೆಗಾಗಿ ಅನುಸರಿಸಬೇಕಾದ ಉಪಾಯಗಳು ಮಾತುಗಳ ವರ್ಣನೆಗೆ ಮೀರಿದ್ದು. ಭಾಗವತಕಾರರೇ ತಿಳಿಸುವಂತೆ ಶ್ರೀಕೃಷ್ಣನ ಒಡನಾಡಿಗಳೇ ಆಗಿ ಆತನನ್ನು ಸದಾ ನೋಡುತ್ತಾ ಸಮಕಾಲೀನರಾಗಿಯೇ ಕಾಲ ಕಳೆದ ಬಹುಮಂದಿಗೆ ಶ್ರೀಕೃಷ್ಣ ವಿಷಯಕವಾದ ಯಥಾರ್ಥ ಜ್ಞಾನವುಂಟಾಗಿರಲಿಲ್ಲ.

> ಮಲ್ಲಾನಾಮಶನಿಃ ನೃಣಾಂ ನರವರಃ ಸ್ತ್ರೀಣಾಂ ಸ್ಮರೋ ಮೂರ್ತಿಮಾನ್
> ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ ಶಾಸ್ತಾ ಸ್ವಪಿತ್ರೋಃ ಶಿಶುಃ
> ಮೃತ್ಯುರ್ಭೋಜಪತೇಃ ವಿರಾಡವಿದುಷಾಂ ತತ್ತ್ವಂ ಪರಂ ಯೋಗಿನಾಂ
> ವೃಷ್ಣೀನಾಂ ಪರದೇವತೇತಿ ವಿದಿತೋ ರಂಗಂ ಗತಃ ಸಾಗ್ರಜಃ

ಚಾಣೂರ ಮುಷ್ಟಿಕಾದಿ ಮಲ್ಲಯುದ್ಧವಿಶಾರದರು ಶ್ರೀಕೃಷ್ಣನನ್ನು ತಮ್ಮ ಪಾಲಿಗೆ ಸಿಡುಗು ಎಂದು ಭಾವಿಸಿದರು. ಸಾಮಾನ್ಯರಿಗೆ ಆತನೊಬ್ಬ ಮನುಷ್ಯ ಶ್ರೇಷ್ಠ. ಸ್ತ್ರೀಯರು ಆತನನ್ನು ಮೂರ್ತಿವೆತ್ತ ಮನ್ಮಥನೆಂದು ಬಗೆದರು. ಗೋಪಜನರಿಗೆ ತಮ್ಮ ಸಹಚರನಾದ ಮತ್ತೊಬ್ಬ ಗೋಪಾಲಕನೆಂದೂ, ಶಿಶುಪಾಲಾದಿ ದುಷ್ಟರಿಗೆ ತಮ್ಮನ್ನು ದಂಡಿಸುವ ಮಹಾಶಕ್ತಿಯೆಂದೂ. ತಂದೆ ವಸುದೇವನಿಗೆ ಕೇವಲ ತನ್ನ ಮುದ್ದು ಮಗನೆಂದೂ ಕಂಡನು. ಕಂಸಾದಿಗಳಿಗೆ ಮೃತ್ಯುಸ್ವರೂಪನೂ, ತಿಳಿಯದವರಿಗೆ ಆಶ್ಚರ್ಯವನ್ನುಂಟುಮಾಡುವ ವಿರಾಟ್‌ಸ್ವರೂಪನೂ, ಯೋಗಿಗಳಿಗೆ ಸಾಕ್ಷಾತ್ ಪರಬ್ರಹ್ಮವೂ, ವೃಷ್ಣಿವಂಶದ ತನ್ನವರಿಗೆ ಪರದೇವತೆಯಾಗಿಯೂ ವಿಜೃಂಭಿಸಿದ ಶ್ರೀಕೃಷ್ಣನು ಬಿಡಿಸಲಾಗದ ಒಂದು ಸಮಸ್ಯೆಯಾಗಿಯೇ ಉಳಿದನು. ಈ ಕೃಷ್ಣ ಸಮಸ್ಯೆಯನ್ನು ಕುರಿತು ಅನೇಕ ಮಹನೀಯರೂ ಮೇಧಾವಿಗಳೂ ಆ ಕಾಲದಿಂದಲೂ

ಚಿಂತಿಸುತ್ತಾ ಬಂದಿದ್ದಾರೆ. ಶ್ರೀಕೃಷ್ಣ ಚರಿತೆಗೆ ಮೂಲ ಸಾಮಗ್ರಿಗಳಾದ ಮಹಾಭಾರತ, ಭಾಗವತ, ಹರಿವಂಶ, ವಿಷ್ಣುಪುರಾಣ, ಶ್ರೀಕೃಷ್ಣಕರ್ಣಾಮೃತ ಇತ್ಯಾದಿ ಗ್ರಂಥಗಳ ಆಧಾರದ ಮೇಲೆ ಶ್ರೀಕೃಷ್ಣನ ಯಥಾರ್ಥವೇನೆಂಬುದನ್ನು ತಿಳಿಯಲು ಪ್ರಯತ್ನಿಸಿದ್ದಾರೆ. ಹೀಗೆ ಚಿಂತಿಸಿ ಶ್ರೀಕೃಷ್ಣತತ್ತ್ವದ ಒಂದು ರೇಖಾಚಿತ್ರವನ್ನು ನೀಡಿರುವವರಲ್ಲಿ ಕನ್ನಡದ ಭೀಷ್ಮಾಚಾರ್ಯರೆನಿಸಿ ನಮ್ಮೆಲ್ಲರ ಗೌರವಾದರಗಳಿಗೆ ಪಾತ್ರರಾಗಿ ಕನ್ನಡ ಜನಾಂಗದ ಏಳಿಗೆಗಾಗಿ ಬಹುಮುಖವಾಗಿ ಶ್ರಮಿಸಿ ಕೀರ್ತಿಶಾಲಿಗಳಾಗಿರುವ ಡಾ॥ ಡಿ. ವಿ. ಗುಂಡಪ್ಪನವರೂ ಒಬ್ಬರು. ಅವರ ಶ್ರೀಕೃಷ್ಣತತ್ತ್ವವನ್ನು ಕುರಿತ ಆಳವಾದ ಅಧ್ಯಯನ ಮತ್ತು ಚಿಂತನೆಗಳ ಪರಿಣಾಮವಾಗಿ ಅವತರಿಸಿದ ವಿದ್ವತ್‌ಪೂರ್ಣವಾದ ಗ್ರಂಥವೇ 'ಶ್ರೀಕೃಷ್ಣಪರೀಕ್ಷಣಂ'. ಇಲ್ಲಿ 'ಶ್ರೀಕೃಷ್ಣ ಪರೀಕ್ಷಣಂ' ಎಂದರೆ ಬೇರೆ ಬೇರೆ ಪ್ರಶ್ನೆಗಳಿಗೆ ಗುರಿ ಮಾಡಿ ಆತನನ್ನು ಪರೀಕ್ಷಿಸಿರುವುದು ಎಂದಲ್ಲ. ಶ್ರೀಕೃಷ್ಣನಿಗೆ ಪರೀಕ್ಷೆಗಳನ್ನೊಡ್ಡುವುದು ಯಾರಿಗೂ ಆಗದ ಕಾರ್ಯ 'ಪರೀಕ್ಷಣಂ' ಎಂದರೆ 'ಪರಿತಃ ಈಕ್ಷಣಂ'— ಎಲ್ಲ ದಿಕ್ಕುಗಳಿಂದ, ನಾನಾ ದೃಷ್ಟಿಕೋನಗಳಿಂದ ನೋಡಿ ವಸ್ತುಸ್ಥಿತಿಯೇನಿರಬಹುದೆಂದು ಊಹಿಸಿ ತಿಳಿಯುವುದು. ಡಿ.ವಿ.ಜಿ.ಯವರು ಮಾಡಿರುವ ಅಂಥ ಪ್ರಯತ್ನವನ್ನು ಈ ಗ್ರಂಥದಲ್ಲಿ ಸಾದ್ಯಂತವಾಗಿ ಕಾಣಬಹುದು. ಡಿ.ವಿ.ಜಿ.ಯವರಿಗೆ ಆರ್ಷ ಸಂಪ್ರದಾಯ, ಆರ್ಷ ಗ್ರಂಥಗಳು, ಆರ್ಷ ಚಿಂತನೆಗಳು ಇವುಗಳಲ್ಲಿ ಅಪಾರವಾದ ಗೌರವ. ಅಷ್ಟೇ ದೃಢವೂ, ಗಾಢವೂ ಆದದ್ದು ಅವರ ಸ್ವತಂತ್ರ ಚಿಂತನೆಯ ಮನೋಭಾವ. "ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ ಜಸವು ಜನಜೀವನಕೆ ಮಂಕುತಿಮ್ಮ" ಎಂದರು. ಇಂಥ ವಿಚಾರ ಮಥನವನ್ನು 'ಶ್ರೀಕೃಷ್ಣಪರೀಕ್ಷಣಂ' ಗ್ರಂಥದಲ್ಲಿ ಹೆಜ್ಜೆ ಹೆಜ್ಜೆಗೂ ಗುರುತಿಸಬಹುದು. ಆದುದರಿಂದಲೇ ಈ ಗ್ರಂಥವು ಸಮಸ್ತ ಚಿಂತನಶೀಲರಿಗೂ ಮಾನ್ಯವಾದದ್ದು.

'ಶ್ರೀಕೃಷ್ಣಪರೀಕ್ಷಣಂ'ದಲ್ಲಿ ಡಿ.ವಿ.ಜಿ.ಯವರು ಶ್ರೀಕೃಷ್ಣತತ್ತ್ವ ವಿಷಯಕವಾದ ತಮ್ಮ ಚಿಂತನೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು ವಾಚಕರ ಮುಂದಿಟ್ಟಿದ್ದಾರೆ. ಈ ನಾಲ್ಕು ಭಾಗಗಳು ಹೀಗಿವೆ :

ಭಾಗ 1 : ಶ್ರೀಕೃಷ್ಣಮೀಮಾಂಸೆ. ಇದರಲ್ಲಿ ಮತ್ತೆ ಐದು ಪ್ರಕರಣಗಳು. (i) ಮೂರ್ತಿಪೂಜೆಯ ರಹಸ್ಯ ಎಂಬ ಅನುಬಂಧವನ್ನೊಳಗೊಂಡ ಶ್ರೀಕೃಷ್ಣ ಚಾರಿತ್ರ, (ii) ಶ್ರೀಕೃಷ್ಣತತ್ತ್ವ, (iii) ಶ್ರೀಕೃಷ್ಣಗೋಪೀ ವಿಲಾಸ, (iv) ರಕ್ತಿ ಭಕ್ತಿಗಳ ಯಮಳ ಸ್ವರೂಪ ಮತ್ತು (v) ಸುಖಾಪೇಕ್ಷೆಯನ್ನು ಕುರಿತ ವಿಮರ್ಶೆ.

ಭಾಗ 2 : ಅವತರಣಿಕೆ. ಇದು ಶ್ರೀಕೃಷ್ಣತತ್ತ್ವದ ವಿವಿಧ ಮುಖಗಳನ್ನು ಪರಿಚಯ ಮಾಡಿಸುವ ಪದ್ಯ ಪ್ರಬಂಧ.

ಭಾಗ 3 : ಲೀಲಾವಿಭೂತಿ—ಒಂಭತ್ತು ದೃಶ್ಯಗಳ ಗೀತನಾಟಕ.

ಭಾಗ 4 : ನಾರದ ಕೃಷ್ಣ ಸಂವಾದ—ನಾರದರ ಶಂಕೆಗಳಿಗೆ ಶ್ರೀಕೃಷ್ಣನ ಉತ್ತರಗಳು. ಇದೂ ಒಂದು ಪದ್ಯ ಪ್ರಬಂಧ.

ಈ ನಾಲ್ಕು ಭಾಗಗಳಿಂದ ಕೂಡಿ ಪ್ರಸನ್ನಗಂಭೀರವಾಗಿ, ಓಜೋವಂತವಾಗಿ, ಲಲಿತಪದವಿನ್ಯಸ್ತವಾಗಿ ಓಡುವ ಡಿ.ವಿ.ಜಿ.ಯವರ ಕಾವ್ಯಪ್ರವಾಹವು ವಾಚಕರ ಹೃನ್ಮನಗಳನ್ನು ತಣಿಸಿ ಒಂದು ಪರಮ ಶಾಂತಿಧಾಮವನ್ನು ಮುಟ್ಟಿಸುತ್ತದೆ. ಈಗ "ಶ್ರೀಕೃಷ್ಣಪರೀಕ್ಷಣ"ದಲ್ಲಿ ಕಂಡುಬರುವ ಡಿ.ವಿ.ಜಿ.ಯವರ ವಿಷಯ ಮಂಥನದ ಸ್ವರೂಪವನ್ನು ತಿಳಿಯೋಣ.

ಗ್ರಂಥದ ಮೊದಲನೆಯ ಭಾಗವಾದ ಶ್ರೀಕೃಷ್ಣಮೀಮಾಂಸೆಯು ಅತಿ ಮುಖ್ಯವಾದದ್ದು. 'ಮೀಮಾಂಸೆ' ಎಂದರೆ 'ಅಳೆದು ತಿಳಿಯುವುದು' ಎಂದರ್ಥ (ಮಂತುಂ ಇಚ್ಛಾ). ಈ ಭಾಗದಲ್ಲಿ ಡಿ.ವಿ.ಜಿ.ಯವರ ಶ್ರೀಕೃಷ್ಣ ವಿಷಯಕವಾದ ಒಂದು ಸಮಗ್ರ ಚಿಂತನೆಯನ್ನು ಕಾಣಬಹುದು. ಗದ್ಯರೂಪದಲ್ಲಿರುವ ಈ ಭಾಗದಲ್ಲಿ ಗ್ರಂಥದ ಅರ್ಧಕ್ಕೂ ಹೆಚ್ಚಿನ ಪುಟಗಳಿದ್ದು ಶ್ರೀಕೃಷ್ಣನ ವ್ಯಕ್ತಿತ್ವದ ವಿವಿಧ ಮುಖಗಳ "ಪರೀಕ್ಷಣ"ವನ್ನೊಳಗೊಂಡಿದೆ. ಇತರ ನಾಲ್ಕು ಭಾಗಗಳು ಈ ಮೊದಲನೆಯ ಭಾಗಕ್ಕೆ ಪೂರಕಗಳಾಗಿವೆ ಎಂದು ಹೇಳಬಹುದು. ಅಚಿಂತ್ಯಾದ್ಭುತ ಶಕ್ತಿಸಂಪನ್ನನಾದ ಶ್ರೀಕೃಷ್ಣನನ್ನು ಪರಿಭಾವಿಸಿದ ಡಿ.ವಿ.ಜಿ.ಯವರ ಮನಸ್ಸು ಈ ಮಹಾಮಹಿಮನಾರಿರಬಹುದೆಂಬ ಆಲೋಚನೆಗೆ ತೊಡಗುತ್ತದೆ.

ಮನುಜನೊ ಕವಿವಾಕ್ಪ್ರತಿಭಾ ।
ಜನಿತನೊ ಜಗದಾತ್ಮಸಂಸ್ಫುರಣಮೋ ಕೃಷ್ಣಂ ॥
ಅನುಮಿತಿಯೆಂತಾದೊಡಮಾ ।
ಘನವಿದ್ಯುದ್ದೀಪ್ತಿ ನಮಗೆ ಸತ್ಯಂ ಶರಣಂ ॥

ಹೀಗೆ ವಿಸ್ಮಯ ಭಕ್ತಿ ನಿರ್ಭರವಾದ ಅವರ ಮನಸ್ಸು ಶ್ರೀಕೃಷ್ಣನು ಚಾರಿತ್ರಿಕ ವ್ಯಕ್ತಿಯಾಗಿ ಕವಿವಾಕ್ ಪ್ರತಿಭೆಯಿಂದ ಉತ್ಪ್ರೇಕ್ಷೆಗೊಂಡಿರುವ ಪರದೈವವೆಂಬ ನಿರ್ಧಾರಕ್ಕೆ ಬರುತ್ತದೆ. ಈ ಮಹಾಪುರುಷನ ಅವತಾರ ಭಾಗವನ್ನು ಡಿ.ವಿ.ಜಿ.ಯವರು ಬಾಲ್ಯ. ಗೋಪೀವಿಲಾಸ, ರಾಜಕೀಯ ಮತ್ತು ಪರತತ್ವಬೋಧೆ ಎಂಬ ನಾಲ್ಕು ಹಂತಗಳಲ್ಲಿ ವಿವೇಚಿಸಿದ್ದಾರೆ. ಈ ನಾಲ್ಕು ವಿಷಯಗಳಲ್ಲಿ ಗೋಪೀವಿಲಾಸ ಪ್ರಕರಣಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಅದನ್ನು ವಿಸ್ತಾರವಾಗಿಯೂ ಸೂಕ್ಷ್ಮದೃಷ್ಟಿಯಿಂದಲೂ ಚರ್ಚಿಸಿದ್ದಾರೆ.

ಗೋಪೀವಿಲಾಸವು ಶ್ರೀಕೃಷ್ಣನನ್ನು ದೋಷದೃಷ್ಟಿಗೆ ಈಡುಮಾಡಿರುವ ವಿಷಯ. ಇದು ಶ್ರೀಕೃಷ್ಣನು ಗೋಪಿಯರಲ್ಲಿ ಆಚರಿಸಿದ ಒಂದು ಅನೈತಿಕ ವ್ಯವಹಾರವೆಂಬುದೇ ಬಹುಜನರ ಗಣನೆ. ಜಗನ್ಮೋಹನಾಕಾರನಾದ ಶ್ರೀಕೃಷ್ಣನಲ್ಲಿ ಗೋಪಿಯರಿಗೆ ಕಾಮದೃಷ್ಟಿ ಇತ್ತೆಂಬುದೇನೋ ಸತ್ಯ ಸಂಗತಿ. ಆದರೆ ಶ್ರೀಕೃಷ್ಣ

ಭಗವಂತನು ಕಾಮುಕನಲ್ಲ. ಆತನು ಕಾಮವ್ಯಾಧಿ ಚಿಕಿತ್ಸಕ. ವ್ರಜಸ್ತ್ರೀಯರ ಕಾಮ ಜ್ವರವನ್ನೂ, ಕಂಸಾದಿ ದುಷ್ಟಜನರ ಮದಜ್ವರವನ್ನೂ, ಭಕ್ತಜನರ ಸಂಸಾರ ದುಃಖ ಜ್ವರವನ್ನೂ ಪರಿಹರಿಸಿ ಸ್ವಾಸ್ಥ್ಯವನ್ನುಂಟುಮಾಡಿದ ವೈದ್ಯಮಹಾಶಯ.

ಕಾಮಜ್ವರಂ ವ್ರಜಸ್ತ್ರೀಣಾಂ ।
ಕಂಸಾದೀನಾಂ ಮದಜ್ವರಂ ॥
ಭವಜ್ವರಂ ಚ ಭಕ್ತಾನಾಂ ।
ಹಂತಾದ್ಯೈವ್ಯೋಭಿಷಗ್ವರಿಃ ॥

ಗೋಪಿಯರು ಏನೂ ಅರಿಯದ ಮುಗ್ಧವನಿತೆಯರು. ಅವರಲ್ಲಿದ್ದ ಏಕಮಾತ್ರ ಸಾಮಗ್ರಿ ಎಂದರೆ ಅವರ ನಿರತಿಶಯವಾದ ಕೃಷ್ಣಪ್ರೇಮ. ಅದನ್ನು ಸಂಪೂರ್ಣವಾಗಿ ಅನನ್ಯಭಕ್ತಿಯಿಂದ ಶ್ರೀಕೃಷ್ಣನಲ್ಲಿ ಸಮರ್ಪಣೆ ಮಾಡಿದರು. ವೈಶ್ವಾನರ ರೂಪಿ ಯಾದ ಶ್ರೀಕೃಷ್ಣನು ಅವರ ಅನುರಾಗವನ್ನು ಸ್ವೀಕರಿಸಿದನು. ಶ್ರೀಕೃಷ್ಣಾಗ್ನಿಯಲ್ಲಿ ಬಿದ್ದ ಗೋಪಿಕಾ ಕಾಮವಿಕಾರವು ತನ್ನ ಮಾಲಿನ್ಯವನ್ನು ಕಳೆದುಕೊಂಡು ತಪ್ತ ಕಾಂಚನದಂತೆ ಶುದ್ಧ ಭಕ್ತಿಯಾಗಿ ಪ್ರಕಾಶಿಸಿತು. ಗೋಪಿಯರು ಚರಿತಾರ್ಥರಾದರು. "ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್" ಎಂದು ಭಗವದ್ಗೀತೆ ಶ್ರೀಕೃಷ್ಣನನ್ನು ವರ್ಣಿಸುತ್ತದೆ. ಪ್ರತಿಯೊಬ್ಬ ಜೀವಿಗೂ ಕುಶಲವನ್ನುಂಟುಮಾಡಿ ಉದ್ಧರಿಸುವುದು ಭಗವಂತನ ಸಂಕಲ್ಪ. ಈ ಸಂಕಲ್ಪವನ್ನು ಜೀವಿಯ ಸಂಸ್ಕಾರಾನು ಗುಣವಾಗಿ ನೆರವೇರಿಸುತ್ತಾನೆ. ಭಿನ್ನಭಿನ್ನ ಸಂಸ್ಕಾರವುಳ್ಳ ಜೀವಿಗಳ ಉದ್ಧಾರ ಮಾರ್ಗಗಳೂ ಭಿನ್ನವಾಗಿರಬೇಕಾದದ್ದು ಸ್ವಾಭಾವಿಕ. ಜರಾಸಂಧನಿಗೆ ಚಕ್ರಾಯುಧ ದಿಂದ ಮುಕ್ತಿ. ಅರ್ಜುನನಿಗೆ ಸ್ನೇಹದಿಂದ ಮುಕ್ತಿ.

ಗತಿ ಸರ್ವಗಂ ಕೃಷ್ಣಂ ।
ಯತಿಗಂ ಕಾಮಿಗಮಸಂಸ್ಕೃತಂಗಂ ವ್ರತಿಗಂ ॥
ಪತಿತಂಗಂ ಕೃತಮತಿಗಂ ।
ಹಿತಪಥಮಂ ತತ್ತದುಚಿತನಯದಿಂ ತೋರ್ಪನ್ ॥

ಹೀಗೆ ಓಡುತ್ತದೆ ಡಿ.ವಿ.ಜಿ.ಯವರ ವಿಶ್ಲೇಷಣೆ. ಅವರು ವಿಶ್ಲೇಷಣೆಯನ್ನು ಭಾಗವತ ದಿಂದಲೂ, ಗೀತೆ ಉಪನಿಷತ್ತುಗಳಿಂದಲೂ ಸೂಕ್ತವಾದ ಸಾಲುಗಳನ್ನು ಉದಾಹರಿಸಿ ಸಮರ್ಥಿಸಿದ್ದಾರೆ. ಅವರು ವಿಸ್ತಾರವೂ ವಿದ್ವತ್ಪೂರ್ಣವೂ ಆದ ಗೋಪಿಕಾವಿಲಾಸದ ಪ್ರಕರಣದ ಸಾರವನ್ನು ಹೀಗೆ ಸಂಗ್ರಹಿಸಿದ್ದಾರೆ :

1. ಶ್ರೀಕೃಷ್ಣನು ಕಾಮುಕನಲ್ಲ ; ಜಾರನಲ್ಲ.
2. ಕಾಮಾರ್ತರಾಗಿ ಬಂದವರಿಗೆ ಆತ ಆಶ್ರಯ ಕೊಟ್ಟ.
3. ಅವರ ರೋಗಕ್ಕೆ ಆತ ಚಿಕಿತ್ಸೆ ನಡಸಿದ.
4. ಅದು ಸಾಮೋಪಾಯದ ಚಿಕಿತ್ಸೆ ; ದಂಡೋಪಾಯದ್ದಲ್ಲ. ಅದು ಮಕ್ಕಳಲ್ಲಿ ವಾತ್ಸಲ್ಯವುಳ್ಳ ಉಪಾಧ್ಯಾಯನ ಶಿಕ್ಷಣ ನೀತಿ.

5. ಆತನ ಉಪಾಯ ಫಲಿಸಿತು. ಆತನನ್ನು ಮೊರೆಹೊಕ್ಕವರು ವಿಹಿತ ಮಾರ್ಗಕ್ಕೆ ಹಿಂತಿರುಗಿದರು.

6. ಗೋಪಿಯರು ವ್ಯಭಿಚಾರಿಣಿಯರಲ್ಲ ; ವೇಶ್ಯೆಯರಲ್ಲ.

7. ಅವರು ತಮ್ಮ ತಮ್ಮ ಪತಿಗಳ ಹೊರತು ಬೇರೆ ಅನುರಕ್ತರಾಗಿದ್ದದ್ದು ಕೃಷ್ಣನೊಬ್ಬನಲ್ಲಿ ಮಾತ್ರ.

8. ಅದು ಆತನು ಪರಮಾತ್ಮ ಸ್ವರೂಪನೆಂದು ; ಪರಮೇಶ್ವರ ಪ್ರತೀಕವೆಂದು.

9. ದ್ರೌಪದಿಗೆ ಪತಿ ಪಂಚಕದಂತೆ ಗೋಪಿಯರಿಗೆ ಪತಿದ್ವಯ. ಕೃಷ್ಣನು ದೈವಾಂಶ ಪತಿ ; ಗೋಪಾಲಕನು ಮಾನುಷ ಪತಿ.

10. ಗೋಪರಿಗೆ ತಮ್ಮ ಸತಿಗಳು ತಮ್ಮಿಂದ ಅಗಲಿದ್ದರೆಂದೆನಿಸಲಿಲ್ಲ.

11. ಲೈಂಗಿಕ ಚಾಪಲ್ಯವು ಮನುಷ್ಯಸಾಮಾನ್ಯ ಲಕ್ಷಣ. ಅದಕ್ಕೆ ಸ್ತ್ರೀಪುರುಷ ಭೇದವಿಲ್ಲ. ಕೆಲವರಲ್ಲಿ ಅದು ಗೂಢವಾಗಿರುತ್ತದೆ ; ಇನ್ನು ಕೆಲವರಲ್ಲಿ ಪ್ರಕಟಗೊಳ್ಳುತ್ತದೆ. ಯಾರು ಅದನ್ನು ಪ್ರಕಟಿಸರೋ ಅವರಿಂದ ಇತರರು ಕೆರಳುವುದಾಗದು. ಅದು ಒಳ್ಳೆಯದು. ಯಾರು ಆ ಚಪಲವನ್ನು ತಡೆಯಲಶಕ್ತರೋ ಅವರಲ್ಲಿ ಅದು ವ್ಯಾಧಿ : ಚಿಕಿತ್ಸೆಯನ್ನು ಬೇಡುತ್ತದೆ.

12. ಆದ್ದರಿಂದ ಕೃಷ್ಣನಿಗೆ ಬಂದಿರುವ "ಜಾರ ಚೋರ ಶಿಖಾಮಣಿ" ಎಂಬ ಬಿರುದು ಕವಿಗಳೂ ಹರಿಕಥಾಕಾರರೂ ಹೊರಿಸಿರುವ ಅಪವಾದ. ಅದು ಹಾಸ್ಯಗರ್ಭಿತವಾದ ಉತ್ಪ್ರೇಕ್ಷೆ ; ಅದು ಸತ್ಯವನ್ನು ಮುಚ್ಚಿಟ್ಟು ಅಸತ್ಯವನ್ನು ತೋರಿಸುವಷ್ಟು ವಿಪರೀತವಾಗಿದೆ.

ಗೋಪೀವಿಲಾಸ ಮತ್ತು ಅದರಲ್ಲಿ ಕೃಷ್ಣನ ಪಾತ್ರ—ಇದನ್ನು ಕುರಿತ ಡಿ.ವಿ.ಜಿ.ಯವರ ಕೆಳಗಿನ ಸಾಲುಗಳು ಸರ್ವದಾ ಮನನಯೋಗ್ಯವಾದ ವಾಕ್ಯಗಳು.

"ಯಾರ ಮೇಲೆ ಪ್ರಭುತ್ವ ನಡಸುವ ಇನ್ನೊಂದು ಶಕ್ತಿ ಇನ್ನೊಂದು ವ್ಯಕ್ತಿ ಇಲ್ಲವೋ ಅವರು ಈಶ್ವರರು. ಇಂದ್ರಿಯಗಳನ್ನು ಜಯಿಸಿದವರು. ಅಹಂಕಾರವನ್ನು ಜಯಿಸಿದವರು. ಯಾವುದರಿಂದಲೂ ಮನೋವಿಕಾರವನ್ನು ಪಡೆಯದವರು, ಯಾವುದಕ್ಕೂ ಅಧೀನರಾಗದವರು ಈಶ್ವರರು.... ಈಶ್ವರರಾದವರಲ್ಲಿ ಧರ್ಮವ್ಯತಿಕ್ರಮವೇನಾದರೂ ಕಂಡುಬಂದಲ್ಲಿ ಯಾವುದೋ ಒಂದು ದೋಷವನ್ನು ಸುಡುವುದಕ್ಕಾಗಿ ಅವರು ಹೀಗೆ ಮಾಡಿದ್ದಾರೆಂದು ತಿಳಿಯತಕ್ಕದ್ದು... ಇತರರು ಅವರಂತೆ ನಡೆಯತಕ್ಕದ್ದಲ್ಲ. ಮಹೇಶ್ವರನು ಮಾಡಿದ ವಿಷಪಾನ ಕಾಮದಹನಾದಿಗಳನ್ನೆಲ್ಲಾ ನಾವು ಮಾಡಬಲ್ಲೆವಾದರೆ ಮಿಕ್ಕ ವಿಷಯಗಳಲ್ಲಿಯೂ ಅವನಂತೆ ನಡೆಯಬಹುದು. ಆದುದರಿಂದಲೇ ಪೂರ್ವಿಕರು 'ನ ದೇವ ಚರಿತಂ ಚರೇತ್' (ದೇವರು ಆಚರಿಸಿದ್ದನ್ನು ಸಾಮಾನ್ಯರು ಆಚರಿಸಬಾರದು) ಎಂದು ಹೇಳಿರುವುದು."

"ಶ್ರೀಕೃಷ್ಣಪರೀಕ್ಷಣ"ದ ಎರಡನೇ ಭಾಗ ಅವತರಣಿಕೆ. ಈ ಅವತರಣಿಕಾ ಭಾಗವು 66 ಚತುಷ್ಪದಿಗಳನ್ನೂ ಎರಡು ವೃತ್ತಗಳನ್ನೂ ಒಳಗೊಂಡಿರುವ ಒಂದು ಮನೋಜ್ಞವಾದ ಪದ್ಯ ಪ್ರಬಂಧ. ಇಲ್ಲಿ ಪ್ರಧಾನವಾಗಿ ನಾವು ಕಾಣುವುದು ಶ್ರೀಕೃಷ್ಣನ ಗುಣಮಹಿಮಾ ವೈಭವಗಳ ಭವ್ಯವಾದ ಒಂದು ವರ್ಣನೆಯನ್ನು. ರಸನಿರ್ಭರವಾದ, ಅರ್ಥದ್ಯೋತಕವಾದ ಮತ್ತು ಶ್ರುತಿಮನೋಹರವಾದ ಪದ ಪುಂಜಗಳ ನಿರ್ಮಾಣದಲ್ಲಿ ಸಿದ್ಧಹಸ್ತರು ಡಿ.ವಿ.ಜಿ.ಯವರು. ಶ್ರೀಕೃಷ್ಣನ ಮಹಿಮೆ ಗಳನ್ನು ವರ್ಣಿಸಲು ಡಿ.ವಿ.ಜಿ.ಯವರು ಬಳಸಿರುವ ವಾಕ್ಯಖಂಡಗಳು ಅವರ ಶಬ್ದಬ್ರಹ್ಮತ್ವವನ್ನು ಎತ್ತಿತೋರಿಸುತ್ತವೆ. ಮನನಯೋಗ್ಯವಾದ ಅಂಥ ಕೆಲವು ಪದಪುಂಜಗಳ ನಮೂನೆ ಹೀಗಿದೆ:

"ವಿಶ್ವಧರ್ಮ ಸಂಸ್ಥಾಪನಾ ಭಾರ ಧುರಂಧರ"
"ಸತ್ಯಧರ್ಮರಕ್ಷಾವ್ರತಿ"
"ವಿಧಿನಿಯತಿ ನಿಷೇಧ ದೂರನ್"
"ಜೀವ ಭ್ರಮಣ ವಿನೋದನ್"
"ಜಗದಖಿಲಚೇತನೋದ್ಧಾರನ್"
"ಆಪನ್ನಿವಾರಕಾಕೃತಿ"
"ಪ್ರಾಣಿವಿಚೇಷ್ಟಿತ ಸರ್ವನಿದಾನಂ"
"ಸ್ತ್ರೀಪುಂಸಾಧಾರಣ ಹೃದ್ವಿಲಾಸಮೂಲಾದರ್ಶನ್"
"ಜೀವಧರ್ಮಪೂರ್ಣಾದರ್ಶನ್"
"ವೇಣುಸ್ವನಮೂಲ ನೀಲತೇಜಮ್"

ಇಂಥ ಪ್ರಶಾಂತಗಂಭೀರವಾದ ಸಾಹಿತ್ಯವನ್ನು ಪರಿಭಾವಿಸುವುದೇ ಒಂದು ಆನಂದಾನುಭವ. ಅವತರಣಿಕಾ ಭಾಗದ ಪ್ರತಿಯೊಂದು ಸಾಲಿನಲ್ಲಿಯೂ ಈ ಆನಂದ ರಸ ಬಿಂದುಗಳನ್ನು ಗುರುತಿಸಬಹುದು.

ಕಾಮ ಅಥವಾ ಶೃಂಗಾರವು ಮನುಷ್ಯ ಜೀವನದ ಅವಿಭಾಜ್ಯವಾದ ಅಂಗ, ಅದು ಪುರುಷಾರ್ಥ ಚತುಷ್ಟಯದಲ್ಲಿ ಒಂದು. "ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ" ಎಂದು ಭಗವಂತನೇ ಹೇಳಿದ್ದಾನೆ. "ಅಪ್ಯರ್ಥಕಾಮೌ ತಸ್ಯಾಸ್ತಾಂ ಧರ್ಮ ಏವ ಮನೀಷಿಣಃ" ಎಂಬುದು ಮಹಾಕವಿ ಕಾಳಿದಾಸನ ವಾಣಿ. ಅಂದರೆ ಧರ್ಮದ ಪರಿಧಿಯೊಳಗೆ ಆಚರಿಸಲಾಗುವ ಕಾಮವು ಸರ್ವಗ್ರಾಹ್ಯ. ಅಲ್ಲದೆ ಕಾಮವೆಂಬುದು ಜೀವನ ವ್ಯವಸ್ಥೆಯಲ್ಲಿ ಒಂದು ಅನಿವಾರ್ಯವಾದ ಅಂಶ. ಅದಿಲ್ಲದೆ ಜೀವನ ದುಸ್ಸಾಧ್ಯ. ವಿವೇಕಜ್ಞಾನದಿಂದ ಆಚರಿಸಲಾಗುವ ಶೃಂಗಾರವು ಜೀವಪೋಷಕವೂ ಆಗುತ್ತದೆ. ಜೀವತಾರಕವೂ ಆಗುತ್ತದೆ. ಈ ಅಂಶವನ್ನು ತಲಸ್ಪರ್ಶಿಯಾಗಿ ನಿರೂಪಿಸಿದ್ದಾರೆ ಡಿ.ವಿ.ಜಿ.ಯವರು. ಉದಾಹರಣೆಗೆ ಈ ಸಾಲು ಗಳನ್ನು ನೋಡಿ.

ಘೃತದಿಂ ಪೆರ್ಚುವ ಪಾವನಲಂ ।
ಹುತವಿಲ್ಲದೆ ಬೆಂಕಿಯಿಂದೊದಗುಗುಮೆ, ಬದುಕೇ ?
ಅತಿಗೇರದೆ ಮಿತಿಯೊಳಿಹಾ ।
ಹುತವಹನಿಂ ಜೀವಿತಂ, ಹಿತಂ ಜಗಕೆಲ್ಲಂ ॥

ಇಂಧನದಿಂದ ಅಗ್ನಿಯು ಪ್ರಜ್ವಲಿಸುತ್ತದೆ. ಅದು ಅತಿಯಾಗಿ ಪ್ರಜ್ವಲಿಸಿದರೆ ಅಪಾಯವೂ ಉಂಟು. ಹಾಗೆಂದು ಬೆಂಕಿಯನ್ನು ಬೇಡವೆನ್ನಲಾದೀತೆ ? ಹಾಗೆಂದರೆ ಅಡುಗೆ ಸಿದ್ಧವಾಗುವುದು ಹೇಗೆ ? ಅಡುಗೆಯಿಲ್ಲದೆ ಬದುಕು ಸಾಧ್ಯವೆ ? ಹದವರಿತ ಬೆಂಕಿ ಅನ್ನ ಪಚನೆಗೆ ಹೇಗೆ ಅವಶ್ಯಕವೋ ಅದರಂತೆಯೇ ಮಿತವರಿತ ಶೃಂಗಾರ ಜೀವೋನ್ನತಿಗೆ ಆಧಾರ. ಇದನ್ನೇ ಮತ್ತೂ ಪರಿಣಾಮಕಾರಿಯಾಗಿ ವಿವರಿಸುವ "ಶೃಂಗಾರ ಮಂಗಳ"ದ ಕೆಳಗಿನ ಮಾತುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಅದರಿಂದೆ ಗೃಹವಹುದು ಗೃಹದೆ ವಾಸನೆ ಮಮತೆ ।
ಬಹುದು ಮಮತೆಯು ತೃಪ್ತಿಗಾಗಿ ಬಂಧುಜನ ।
ಸ್ವಜನ ಪೋಷಣೆಗಾಗಿ ರಾಷ್ಟ್ರಮದರಿಂ ಲೋಕ ।
ಸುಜನತೆಯು ಬೆಳೆಯುವುದು ಹೃದಯವಿಸ್ತಾರ ।
ಹೃದಯವಿಸ್ತಾರದಿಂ ಶಿಥಿಲಿತಂ ವ್ಯಾಮೋಹಂ ।
ಬಿಡಿಸುವುದು ತತ್ತ್ವಚಿಂತನೆ ಮೋಹಪಳಿಯುಲ್ ।
ಇಂತಹುದು ಶೃಂಗಾರ ಜೀವಕೆ ಸದುಪಕಾರ ।
ಜಂತುಮಲಗಳ ತೊಳೆವ ತೀರ್ಥಕಾಸಾರ ।

ಅವತರಣಿಕಾ ಭಾಗದಲ್ಲಿ ಡಿ.ವಿ.ಜಿ.ಯವರು ನಿರೂಪಿಸಿರುವ ಶೃಂಗಾರ ಮೀಮಾಂಸೆಯ ಸ್ವರೂಪ ಇದು. ಇಂಥ ಶೃಂಗಾರೋಪಾಸನೆಯನ್ನು ಉಪದೇಶಿಸಿರುವ ಶ್ರೀಕೃಷ್ಣನನ್ನು—

ಪ್ರಾಕೃತ ಜೀವಿಯು ದೈವಿಕ ।
ಸಂಸ್ಕೃತಿ ಸೋಪಾನಕೇರಿಪುಪಕೃತಿ ಕುಶಲಂ ।

ಎಂದು ವರ್ಣಿಸುತ್ತಾರೆ ಡಿ.ವಿ.ಜಿ.ಯವರು.

ಅವತರಣಿಕೆಯ ಕಡೆಯಲ್ಲಿ ಬರುವ ಶಾರ್ದೂಲ ವಿಕ್ರೀಡಿತವು ಸಮಸ್ತ ಭಕ್ತಜನಸಮೂಹಕ್ಕೆ ನಿಧಿಧ್ಯಾಸನ ಯೋಗ್ಯವಾದದ್ದು :

ವೇಣುಸ್ವಾನವೊ ಪಾಂಚಜನ್ಯರವವೋ ಗೀತೋಕ್ತ್ಯಗಾಧಾರ್ಥವೋ ।
ದಾಕ್ಷಿಣ್ಯವದೊ ಗೋಪಿಕಾಪ್ರಣಯವೋ ಕೌಂತೇಯ ವಾತ್ಸಲ್ಯವೋ ॥
ಸೌಶೀಲ್ಯವದೊ ರಾಷ್ಟ್ರತಂತ್ರ ನಯವೋ ಚಿತ್ತಸ್ವಸಂಧಾನವೋ ।
ನಾನಾ ಜೀವನ ಧರ್ಮರಂಗಸಕಳಾದರ್ಶಂ ಮುಕುಂದಂ ಸುತಂ ॥

ಗ್ರಂಥದ ಮೂರನೆಯ ಭಾಗ "ಲೀಲಾ ವಿಭೂತಿ". ಇದು ಒಂಭತ್ತು ದೃಶ್ಯಗಳ ಒಂದು ಗೀತನಾಟಕ. ಈ ಗೀತನಾಟಕದ ವಸ್ತು ರಾಸಲೀಲೆ. ಗ್ರಂಥದ ಮೊದಲನೆಯ ಭಾಗವಾದ ಶ್ರೀಕೃಷ್ಣಮೀಮಾಂಸೆಯಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿರುವ "ಶ್ರೀಕೃಷ್ಣ ಗೋಪೀವಿಲಾಸ" ಎಂಬ ಪ್ರಕರಣವೇ ಇಲ್ಲಿ ಗೀತನಾಟಕವಾಗಿ ಅಂದರೆ ದೃಶ್ಯಕಾವ್ಯವಾಗಿ ಅವತರಿಸಿದೆ. ಶ್ರೀಕೃಷ್ಣನ ಕ್ಷೀರನವನೀತಾದಿ ಚೌರ್ಯಗಳ ವರ್ಣನೆಯಿಂದ ಪ್ರಾರಂಭವಾಗುತ್ತದೆ ಈ ಗೀತನಾಟಕ. ದೇವಕೀಬಾಲನ ಮೋಹಕವಾದ ಆಕಾರವು ಗೋಪೀಜನ ಸಮುದಾಯದ ಮನಸ್ಸನ್ನು ಸೆರೆ ಹಿಡಿಯುತ್ತವೆ. ಆತನನ್ನು ತಮ್ಮ ವಶಮಾಡಿಕೊಳ್ಳಬೇಕೆಂಬ ಉತ್ಕಟವಾದ ಬಯಕೆ ಅವರಲ್ಲುಂಟಾಗಿ ತಮ್ಮ ಮನೋರಥ ಸಾಧನೆಗಾಗಿ ಹೇಮಂತ ಋತುವಿನಲ್ಲಿ ಉಷಃಕಾಲಕ್ಕೆ ಮೊದಲಿನಲ್ಲಿಯೇ ಕಾಳಿಂದೀ ನದಿಯಲ್ಲಿ ಮಿಂದು ಕಾತ್ಯಾಯನೀ ವ್ರತವೆಂಬ ಗೌರೀಪೂಜೆಯನ್ನು ಮಾಡುತ್ತಾರೆ. ಗೋಪಿಯರ ಜಲಕ್ರೀಡೆ, ಶ್ರೀಕೃಷ್ಣನಿಂದ ಗೋಪೀ ವಸ್ತ್ರಾಪಹರಣ ಮತ್ತು ತನ್ಮೂಲಕ ಅವರ ಗರ್ವಾಪಹರಣದ ಸಂದರ್ಭವೂ ಈ ಪ್ರಕರಣದಲ್ಲಿ ಯಥೋಚಿತವಾಗಿ ಸೇರಿಸಲ್ಪಟ್ಟಿದೆ.

ಈ ಗೀತನಾಟಕದ ಸಾರವಂತ ಭಾಗವೆಂದರೆ ಇಲ್ಲಿ ಬರುವ ರಾಸಲೀಲಾ ವಿಲಾಸ. ಕಾಮಾರ್ತರಾದ ಗೋಪಿಯರು ತಮ್ಮ ತನುಮನಗಳನ್ನು ಶ್ರೀಕೃಷ್ಣನಲ್ಲಿ ಸಮರ್ಪಣೆ ಮಾಡಿ

> ನಿಷ್ಕಾಮನಾದೊಡೇಂ ನೀಂ।
> ನಿಷ್ಕರುಣೆಯು ಕೃಷ್ಣ ಕಾಮಿಗಳೊಳೇಂ ಕ್ರೂರಂ॥
> ಪುಷ್ಕಲ ಭೋಜನಿ ನಗುವುದೆ।
> ನಿಷ್ಕವಲರ ನೋಡಿ ಭುಕ್ತಿಗೀಯನೆ ದಯೆಯಿಂ॥

ಎನ್ನುತ್ತಾ ಕೃಷ್ಣನ ಪ್ರೇಮಭಿಕ್ಷೆಯನ್ನು ಯಾಚಿಸುತ್ತಾರೆ. ಭಗವಂತನು ಸರ್ವಭೂತ ಶರಣ್ಯ. ಎಲ್ಲ ಜೀವಿಗಳ ಉದ್ಧಾರ ಆತನ ವ್ರತ. ಜೀವಿಗಳ ಸಂಸ್ಕಾರಾನುಗುಣವಾದ ಮಾರ್ಗದಿಂದ ಜೀವೋದ್ಧಾರ ಮಾಡುವ ಪರಮ ಕರುಣಾಳು ಶ್ರೀಕೃಷ್ಣ. ಪ್ರೀತಿಯಿಂದ ವಿದುರನನ್ನುದ್ಧರಿಸಿದ. ಐಶ್ವರ್ಯದಿಂದ ಕುಚೇಲನನ್ನು ಸುಧಾಮಪದವಿಗೇರಿಸಿದ. ಚಕ್ರಾಯುಧದಿಂದ ಜರಾಸಂಧನಿಗೆ ಸದ್ಗತಿಯನ್ನು ನೀಡಿದ. ಅದರಂತೆಯೇ ಕಾಮೇಚ್ಛಾಪೂರಣದಿಂದ ಗೋಪವನಿತೆಯರನ್ನು ಉದ್ಧಾರ ಮಾಡಿದ.

> "ಹಿತಪಥಮಂ ತತ್ತದುಚಿತ ನಯದಿಂ ತೋರ್ಪನ್"

ರಾಸಕೇಳಿಯಲ್ಲಿ ಭಾಗವಹಿಸಿದ. ಅಂಗನೆಗೂ ಅಂಗನೆಗೂ ಮಧ್ಯೆ ಮಾಧವನು ಕಾಣಿಸಿಕೊಳ್ಳುತ್ತಾನೆ. ಗೋಪಿಯರು ಮೈಮರೆತು ನಲಿಯುತ್ತಾರೆ. ತಮ್ಮೊಂದಿಗೆ ನಲಿಯುತ್ತಿರುವ ಶ್ರೀಕೃಷ್ಣನ ಸ್ಥಾನದಲ್ಲಿ ಗೋಪಿಯರು ಒಮ್ಮೊಮ್ಮೆ ತಮ್ಮ ಪತಿಗಳನ್ನು ನೋಡುತ್ತಾ ಆಶ್ಚರ್ಯಚಕಿತರಾಗುತ್ತಾರೆ. ಅತ್ತ ಅವರ ಪತಿಗಳೂ ಸಹ ತಂತಮ್ಮ ಸತಿಯರಿಂದ ಅಗಲದೆ ಇರುವ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಹೀಗೆ ಸಾಗುತ್ತದೆ ರಾಸಲೀಲಾ ವಿನೋದ:

ನಾಸೂಯನ್ ಖಲು ಕೃಷ್ಣಾಯ
ಮೋಹಿತಾಸ್ತಸ್ಯ ಮಾಯಯಾ
ಮನ್ಯಮಾನಾಃ ಸ್ವಪಾರ್ಶ್ವಸ್ಥಾನ್
ಸ್ವಾನ್ ಸ್ವಾನ್ ದಾರಾನ್ ವ್ರಜೌಕಸಃ

ಈ ಅದ್ಭುತದ ರಹಸ್ಯವು ನಾರದ ದೌತ್ಯದ ಮುಖೇನ ಪರಿಹಾರವಾಗುತ್ತದೆ. ಶ್ರೀಕೃಷ್ಣನು "ಸರ್ವಮಖಂಡ ಚಿದಾನಂದ ಘನಂ" ಎಂಬ ಸತ್ಯದರ್ಶನ ಉಂಟಾಗುತ್ತದೆ.

ಸರಸ ಪದಪುಂಜಿತವಾದ, ರಮಣೀಯಾರ್ಥ ಪರಿಪೂರ್ಣವಾದ ಮತ್ತು ಮಧುರಗಾನಾಮೃತ ವಿಲಸಿತವಾದ ಈ ಗೀತರೂಪಕವು ರಂಗಭೂಮಿಯಲ್ಲಿ ಕರ್ಣಾಮೃತವೂ ಚಿತ್ತಪ್ರಸಾದನಕಾರಕವೂ ಮತ್ತು ಹೃತ್ತಾಪಹಾರಕವೂ ಆಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

* * * *

ಶ್ರೀಕೃಷ್ಣಪರೀಕ್ಷಣದ ಕೊನೆಯ ಭಾಗ "ನಾರದ ಕೃಷ್ಣ ಸಂವಾದ". ಇದು ಪ್ರಶ್ನೋತ್ತರ ರೂಪವಾದ ಮತ್ತು ಗದ್ಯಪದ್ಯ ಮಿಶ್ರಿತವಾದ ಪ್ರಬಂಧ. ಇಲ್ಲಿ ಡಿ.ವಿ.ಜಿ. ಯವರು ನಾರದರಾಗಿ ಪ್ರಶ್ನೆಗಳನ್ನು ಕೇಳಿದ್ದಾರೆ ಮತ್ತು ಶ್ರೀಕೃಷ್ಣ ಪರಮಾತ್ಮನಾಗಿ ಆ ಪ್ರಶ್ನೆಗಳಿಗೆ ಸಮಾಧಾನಗಳನ್ನು ನೀಡಿದ್ದಾರೆ. ನಾರದರು ಕೇಳುವ ಪ್ರಶ್ನೆಗಳು ಜೀವನ ಮೌಲ್ಯಗಳಿಗೂ ಅಧ್ಯಾತ್ಮ ತತ್ತ್ವಗಳಿಗೂ ಸಂಬಂಧಪಟ್ಟವು. ಧರ್ಮದ ಸ್ವರೂಪವೆಂತಹುದು ? ಪ್ರಣಯದ ಮೂಲವೆಲ್ಲಿದೆ ? ಲೋಕ ಸಂಪರ್ಕವು ಆತ್ಮ ಶಿಕ್ಷಣಕ್ಕೆ ಅನಿವಾರ್ಯವೆ ? ಪ್ರಕೃತಿ ಶಕ್ತಿಯ ಕಾರ್ಯದಲ್ಲಿ ಕಾರ್ಯ ಕಾರಣ ಸಂಬಂಧವುಂಟೆ ? ಪ್ರಣಯ ಬಂಧನದಿಂದ ಜೀವಕ್ಕೆ ಬಿಡುಗಡೆ ಸಾಧ್ಯವೆ ? ಇವೇ ಮೊದಲಾದ ಪ್ರಶ್ನೆಗಳಿಗೆ ಡಿ.ವಿ.ಜಿ.ಯವರು ನೀಡಿರುವ ಸಮಾಧಾನಗಳು ಅವರ ಅಪಾರವಾದ ಶಾಸ್ತ್ರ ಪಾಂಡಿತ್ಯಕ್ಕೂ ವಿಪುಲವಾದ ಲೋಕಾನುಭವಕ್ಕೂ ತೀವ್ರವಾದ ಸಂವೇದನಾಶಕ್ತಿಗೂ ಮತ್ತು ನಿಶಿತವಾದ ಬುದ್ಧಿಶಕ್ತಿಗೂ ನಿದರ್ಶನಗಳು.

ಇಡೀ 'ಶ್ರೀಕೃಷ್ಣಪರೀಕ್ಷಣಂ' ಗ್ರಂಥದಲ್ಲಿ ನಾವು ಕಾಣುವುದು ಡಿ.ವಿ.ಜಿ.ಯವರ ಶ್ರೀಕೃಷ್ಣಭಕ್ತಿ ಪಾರಮ್ಯವನ್ನು. ಲೀಲಾಶುಕರ "ಕೃಷ್ಣಕರ್ಣಾಮೃತ" ದಂತೆ ಇದು ಹೃದಯ ವಿಸ್ತಾರಕ್ಕೆ ಸಾಧಕವಾದದ್ದು. ಇಲ್ಲಿಯ ಕಾವ್ಯಗುಣ ಪ್ರಸನ್ನವಾದದ್ದು ಮತ್ತು ಓಜೋವಂತವಾದದ್ದು ; ಶೈಲಿ ಹೃದಯಂಗಮವಾದದ್ದು. ಈ ಗ್ರಂಥವು ಕನ್ನಡ ಜನತೆಗೂ ಕನ್ನಡ ಸಾಹಿತ್ಯಕ್ಕೂ ಡಿ.ವಿ.ಜಿ.ಯವರು ನೀಡಿರುವ ಒಂದು ಅಮೋಘವಾದ ಕೊಡುಗೆ.

ನಮಿಪೆಂ ಕೃಷ್ಣಮಹಾತ್ಮನೆ।
ಶಮನಿಸಿದೈ ಚಿತ್ತದೊಳಗಿನನುತಾಪಗಳಂ॥
ಭ್ರಮಿಸುವೆವರೆತಿಳಿಪಿಂ ನಾಂ।
ವಿಮಲಂ ಪರಿಪೂರ್ಣದರ್ಶಿ ನಿನ್ನವೊಲಿನ್ನಾರ್॥

ವಸಂತ ಕುಸುಮಾಂಜಲಿ *

ಒಂದು ಸಮೀಕ್ಷೆ

ಜಿ. ಎಸ್. ಶಿವರುದ್ರಪ್ಪ

"ವಸಂತ ಕುಸುಮಾಂಜಲಿ" ಮೊದಲು ಪ್ರಕಟಗೊಂಡುದು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಮುಖಾಂತರ. ಅದರ ಅಧ್ಯಕ್ಷರಾಗಿದ್ದ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರು ತಮ್ಮ ಮುನ್ನುಡಿಯಲ್ಲಿ. "ಈ ಪುಸ್ತಕದಲ್ಲಿ ಎರಡು ಭಾಗ ಗಳಿವೆ. ಮೊದಲನೆಯ ಭಾಗದಲ್ಲಿ ಜೀವನ ತತ್ತ್ವಾಲೋಚನೆಯೂ ಎರಡನೆಯದರಲ್ಲಿ ಆಧುನಿಕ ಭಾರತೀಯ ಮಹಾಪುರುಷ ವಿಷಯಕವಾದ ಕವಿತೆಗಳೂ ಇವೆ" ಎಂದು ತಿಳಿಸಿದ್ದಾರೆ. ಪದ್ಯಗಳನ್ನೂ ಸಹ ಆ ರೀತಿ ವಿಭಾಗ ಮಾಡಿ ಪ್ರಕಟಿಸಲಾಗಿದೆ. ಮೊದಲನೆಯ ಭಾಗದಲ್ಲಿ ಏಳು ಕವಿತೆಗಳಿವೆ; ಅವು "ಉತ್ತಮವಾದ ಜೀವನಕ್ರಮದ ಸ್ವರೂಪವನ್ನು ತೋರಿಸುತ್ತವೆ; ಲೋಕಸೇವೆಯೇ ಮಾನವನ ಪರಮಧರ್ಮವೆಂಬ ನೀತಿಯು ಅವುಗಳಲ್ಲಿ ಪ್ರತಿಪಾದಿತವಾಗಿದೆ". ಎರಡನೆಯ ಭಾಗದಲ್ಲಿ "ಈ ನೀತಿಯನ್ನು ನಡವಳಿಕೆಯಲ್ಲಿ ತೋರಿಸಿರುವ ಆಧುನಿಕ ಭಾರತೀಯ ಮಹಾಪುರುಷರ" ಹನ್ನೊಂದು ನುಡಿಚಿತ್ರಗಳಿವೆ. ಡಿ.ವಿ.ಜಿ. ಅವರ 'ವಸಂತ ಕುಸುಮಾಂಜಲಿ' (1922), 'ನಿವೇದನ' (1924), ಮತ್ತು ಶ್ರೀಯವರ 'ಇಂಗ್ಲಿಷ್ ಗೀತಗಳು' (1926)—ಇವು ಮೂರೂ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಗಳು ಎನ್ನುವುದು ಗಮನಾರ್ಹ ಸಂಗತಿ. ಛಂದಸ್ಸಿನ ದೃಷ್ಟಿಯಿಂದ, ವಸ್ತುನಾವೀನ್ಯದ ದೃಷ್ಟಿಯಿಂದ, ಪ್ರಭಾವಶಾಲಿತ್ವ ದೃಷ್ಟಿಯಿಂದ, ಇವುಗಳ ತೌಲನಿಕ ಅಧ್ಯಯನ ಕುತೂಹಲಕಾರಿ; ಫಲಕಾರಿ.

---

* ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಪ್ರಕಟನೆ 'ಕುಸುಮಾರ್ಪಣೆ'ಯಿಂದ ಆಯ್ದುಕೊಂಡಿದೆ.

ಶ್ರೀ ಡಿ.ವಿ.ಜಿ. ಅವರ ಮೊದಲ ಕವನ ಸಂಗ್ರಹ 'ವಸಂತ ಕುಸುಮಾಂಜಲಿ'. ಇದು ಮೊದಲು ಪ್ರಕಟವಾದುದು 1922ರಲ್ಲಿ. ಒಂದು ಅರ್ಥದಲ್ಲಿ ಅದು ಆಧುನಿಕ ಕನ್ನಡ ಸಾಹಿತ್ಯದ ವಸಂತಕಾಲ ಎನ್ನಬಹುದು. ಇದು ಅವರ ಮುನ್ನುಡಿಯಲ್ಲೇ ಸೂಚಿತ ವಾಗಿದೆ. "ವಿಷಯದಲ್ಲಿಯೂ ಶೈಲಿಯಲ್ಲಿಯೂ ಈ ಕವನಗಳು ಕನ್ನಡ ಪ್ರಪಂಚಕ್ಕೆ ಆಗ ಬರಲಿದ್ದಂತೆ ತೋರಿದ ಹೊಸ ವಸಂತಕಾಲದ ಮೊದಲ ಗುರುತಿನ ಮೊಗ್ಗು ಗಳಂಥವು" ಎಂಬುದು ಇದಕ್ಕೆ ಹೆಸರನ್ನು ಕೊಟ್ಟ ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಭಾವನೆ ಇರಬಹುದೆಂದು ಶ್ರೀ ಡಿ.ವಿ.ಜಿ. ಅವರು ಮುನ್ನುಡಿಯಲ್ಲಿ ಬರೆದಿದ್ದಾರೆ. ಈ ಸಂಕಲನಕ್ಕೆ 'ವಸಂತ ಕುಸುಮಾಂಜಲಿ' (ಆಧುನಿಕ ಕನ್ನಡ ಕವಿಯು ಕನ್ನಡ ಸಾಹಿತ್ಯ ಮಾತೆಗೆ ವಸಂತಕಾಲದಲ್ಲಿ ಅರ್ಪಿಸಿದ ಕುಸುಮಾಂಜಲಿ) ಎನ್ನುವುದು ಬಹು ಚೆನ್ನಾಗಿ ಒಪ್ಪುವ ಹೆಸರು.

ಆಧುನಿಕ ಕನ್ನಡ ಕವಿಗಳಲ್ಲಿ ಶ್ರೀ ಡಿ.ವಿ.ಜಿ. ಅವರು ವಿಶಿಷ್ಟರಾದವರು. ಇತರರ ಕವಿತೆಗಳಲ್ಲಿ ಕೆಲವು ಭಾವಪ್ರಧಾನವಾಗಿಯೂ, ಕೆಲವು ಬುದ್ಧಿಪ್ರಧಾನವಾಗಿಯೂ ಇದ್ದರೆ, ಇವರ ಕವಿತೆಗಳಲ್ಲಿ ಭಾವ–ಬುದ್ಧಿಗಳ ವಿದ್ಯುದಾಲಿಂಗನವಿರುತ್ತದೆ. ಅಲ್ಲದೆ ಅವರು ತಮ್ಮ ಕವಿತೆಗಳಲ್ಲಿ ಉಪಯೋಗಿಸಿರುವ ಛಂದಸ್ಸುಗಳಲ್ಲಿ ಹಿಂದಿನ ಕಂದ, ವೃತ್ತ, ಸೀಸಪದ್ಯಗಳೇ ಹೆಚ್ಚು. ಉಪಯೋಗಿಸಿರುವ ಛಂದಸ್ಸು ಹಿಂದಿನದೇ ಆದರೂ ಭಾವ–ಶೈಲಿಗಳೆರಡೂ ನವೀನವಾಗಿವೆ.

'ವಸಂತ ಕುಸುಮಾಂಜಲಿ' ಮೊದಲು ಪ್ರಕಟಗೊಂಡುದು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಮುಖಾಂತರ. ಅದರ ಅಧ್ಯಕ್ಷರಾಗಿದ್ದ ಶ್ರೀ ಬೆಳ್ಳಾವೆ ವೆಂಕಟ ನಾರಣಪ್ಪನವರು ತಮ್ಮ ಮುನ್ನುಡಿಯಲ್ಲಿ "ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಜೀವನ ತತ್ತ್ವಾಲೋಚನೆಯೂ ಎರಡನೆಯದರಲ್ಲಿ ಆಧುನಿಕ ಭಾರತೀಯ ಮಹಾಪುರುಷ ವಿಷಯಕವಾದ ಕವಿತೆಗಳೂ ಇವೆ."—ಎಂದು ತಿಳಿಸಿದ್ದಾರೆ. ಪದ್ಯಗಳನ್ನೂ ಸಹ ಆ ರೀತಿ ವಿಭಾಗಮಾಡಿ ಪ್ರಕಟಿಸಲಾಗಿದೆ.

ಮೊದಲನೆಯ ಭಾಗದಲ್ಲಿ ಏಳು ಕವಿತೆಗಳಿದ್ದು ಅವು "ಉತ್ತಮವಾದ ಜೀವನ-ಕ್ರಮದ ಸ್ವರೂಪವನ್ನು ತೋರಿಸುತ್ತವೆ ; ಲೋಕಸೇವೆಯೇ ಮಾನವನ ಪರಮಧರ್ಮ ವೆಂಬ ನೀತಿಯು ಅವುಗಳಲ್ಲಿ ಪ್ರತಿಪಾದಿತವಾಗಿದೆ". ಎರಡನೆಯ ಭಾಗದಲ್ಲಿ "ಈ ನೀತಿಯನ್ನು ನಡವಳಿಕೆಯಲ್ಲಿ ತೋರಿಸಿರುವ ಆಧುನಿಕ ಭಾರತೀಯ ಮಹಾ ಪುರುಷರ" ಹನ್ನೊಂದು ನುಡಿಚಿತ್ರಗಳಿವೆ.

1951ರಲ್ಲಿ 'ವಸಂತ ಕುಸುಮಾಂಜಲಿ'ಯ ಎರಡನೆಯ ಆವೃತ್ತಿ ಪ್ರಕಟವಾದಾಗ 'ಸರಳರಿಗೆ'ಎಂಬ ಒಂದು ಕವಿತೆಯನ್ನು ಮೊದಲಭಾಗದ ಮೊದಲಿನಲ್ಲಿ ಅಳವಡಿಸ ಲಾಗಿದೆ. ಈ ಕವಿತೆಯಲ್ಲಿ ಶ್ರೀ ಡಿ.ವಿ.ಜಿ. ಅವರು ಪಾರಿಜಾತದ ಕಿರುಬಾಳನ್ನೂ ತಾಳೆಯಹೂವಿನ ಸ್ವಲ್ಪ ದೀರ್ಘವಾದ ಬಾಳನ್ನೂ ಪ್ರಸ್ತಾಪಿಸಿ ಮುಂದೆ ಹೀಗೆನ್ನು ತ್ತಾರೆ.

ಹೆಸರಿಲ್ಲದಲರುಗಳು
ಬೀಳ್ಬಯಲಿನಲ್ಲಿ
ನಸುನಗುತ ನಲಿಯುವುವು
ಬೀಳ್ಬರಿರದಲ್ಲಿ ;
ಗರುವಗೌರವವಿನಿಸುಮರಿಯದವುಗಳನು
ಗುರಿ ಮರೆತು ನಿರವಿಸಿದನೋ ವಿರಿಂಚಿನನು !

ಮುಂದಿನ ಪದ್ಯದಲ್ಲಿ ಸೃಷ್ಟಿತಾಯುದ್ಯಾನದೊಳಗೆ ಬಡಹೂವು, ಬಡಹಾಡು ಮತ್ತು ಬಡಬಾಳುಗಳಿಗೂ ಎಡೆಯುಂಟು ಎಂಬುದನ್ನು ತಿಳಿಸುತ್ತಾರೆ.

ಬಿರಿದಳಿವ ಹೂವೇಕೆ ?
ಕಿರಿ ಬಾಳದೇಕೆ ?
ಮರೆವಿಗಾಹುತಿಯಪ್ಪ
ಕಿರುಗವಿತೆಯೇಕೆ ?
ಎಡೆಯುಂಟು ಸೃಷ್ಟಿತಾಯುದ್ಯಾನದೊಳಗೆ
ಬಡಹೂವು ಬಡಹಾಡು ಬಡಬಾಳುಗಳಿಗೆ.

ಮೊದಲಭಾಗದಲ್ಲಿ ಬರುವ ಮೊದಲ ಕವಿತೆ "ಜೀವಗೀತೆ". ಇದು ಆಂಗ್ಲ ಕವಿ ವ್ಹಿಟ್ಟಿಯರ್‌ನ "ಮೈ ಸೋಲ್ ಅಂಡ್ ಐ" ಎಂಬ ಕೃತಿಯ ಅನುವಾದ. ಈ ಕವಿತೆ ಪ್ರಶ್ನೋತ್ತರ ರೂಪದಲ್ಲಿದೆ. "ಮನುಷ್ಯನು ತನ್ನ ಬಾಳಿಕೆಯ ರೀತಿಯನ್ನು ತನ್ನ ಮನಸ್ಸಿನಲ್ಲಿ ತಾನೇ ವಿಚಾರ ಮಾಡಿಕೊಂಡು ತನ್ನೊಡನೆ ತಾನೇ ಸಂವಾದ ಬೆಳೆಯಿಸಿದಂತೆ ಇದೆ." ಈ ಕವಿತೆಯಲ್ಲಿ ವ್ಯಕ್ತವಾಗಿರುವ ಭಾವಗಳನ್ನು ನಮ್ಮ ಭಗವದ್ಗೀತೆ, ಪುರಾಣ, ದಾಸರ ಕೀರ್ತನೆ ಮುಂತಾದುವುಗಳಲ್ಲಿ ಕಾಣಬಹುದು. ಇದಕ್ಕೆ ಉದಾಹರಣೆ :

ನಿಲ್ಲು ನಿಲ್ಲೆಲೊ, ಜೀವ, ನಿನ್ನನೇಕಾಂತದಲಿ
ದೇವನಿದಿರಲಿ ಮಾತನೊಂದ ಕೇಳ್ವೆಂ ।

*　　*　　*　　*

ಪುರುಷರೂಪವ ಧರಿಸಿ ಧರೆಯೊಳಾದರದಿ ನೀ-
ನಾವ ಕರ್ತವ್ಯಕಾಗಿರುವೆ ತಿಳಿಯೆ ।
ಜೀವ ನಿನ್ನಯ ಜನ್ಮ ಸಾಫಲ್ಯವೆಂತಹುದು
ನಿನ್ನ ಧರ್ಮವದೇನು ಬಗೆದು ಪೇಳ್ವೈ ॥
ದೇಹಸೌಖ್ಯವನಾಂತು ಮೆರೆಪುದೋ ಬಂಧುಕುಲದೊಳ್ ।
ಮುದವನೊದುಪುದೊ ಪೇಣತಿಶಯದ ಧನವ ಗಳಿಸಿ ।
ಕೀರ್ತಿಯೊಂದುಪುದೊ ಮತ್ತಾಪದ್ಯೆ ನಿನ್ನ ಧರ್ಮಂ ?

ಇದು ಪ್ರಶ್ನೆ. ಅದಕ್ಕೆ ಜೀವ ಕೊಡುವ ಉತ್ತರ : "ತಾನೊಂದುಮಲ್ಲ, ದರೊಳಾವುದುಂ ಧರ್ಮವಲ್ತು".

ಸತ್ಯಮಂ ಧರ್ಮಮಂ ನೀನೆಂತು ಕಾಯುತಿರ್ಪೆ ।
ದೇವನಂ ನೀನೆನಿತು ಭಕ್ತಿಯಿಂ ಭಜಿಸುತಿರ್ಪೆ ।
ಭೂತಕೋಟಿಯೊಳೆನಿತು ಮೈತ್ರಿಯಿಂ ನಡೆಯುತಿರ್ಪೆ ।
ಆಯುಷ್ಯವೆಲ್ಲಮಂ ನೀನೆಂತು ಕಳೆಯುತಿರ್ಪೆ ? ॥

ಇದು ಇನ್ನೊಂದು ಪ್ರಶ್ನೆ. ಇದಕ್ಕೆ ಜೀವದ ಉತ್ತರ—

ಅನ್ಯಾಯಮೆಲ್ಲಿರ್ದೊಡಂ ಧೈರ್ಯದಿಂದೆ ನಾ-
ನದರ ಮೂಲವ ನಾಶಗೊಳಿಸುತಿರ್ಪೆಂ ।
ಧರ್ಮಮದು ತಾನೆನಿತು ಬಲವಿಲ್ಲದಿರ್ದೊಡಂ
ನಾನದರ ಕೈಂಕರ್ಯವೆಸಗುತಿರ್ಪೆಂ ।
ಸ್ವಾತಂತ್ರ್ಯರಿಪು ನಿಹಿತ ಬಂಧನಂಗಳ ಕಳೆವ
ಜನರಿಂಗೆ ನಾಂ ಜಯುವ ಬಯಸುತಿರ್ಪೆಂ ।
ಅನೃತಮದು ತಾನೆನಿತು ಶಕ್ತಿವಡೆದಿರ್ದೊಡಂ
ನಾನದನು ಭರದಿಂದ ತಡೆಯುತಿರ್ಪೆಂ ॥

ಜೀವಕ್ಕೆ ಸಂಬೋಧಿಸುವ ಈ ಪದ್ಯಗಳು ಬಹು ಮನನೀಯವಾಗಿವೆ :

ಹಿಂತಾದುದಂ ಮುಂದೆ ಬರ್ಪುದಂ ಚಿಂತಿಪುದು
ಮರುಳುತನವೆಂಬುದನು ಮರೆಯಬೇಡೈ ।
ವರ್ತಮಾನದಿ ದೈವಭಕ್ತಿಯುಂ ಸ್ಥಿರಗೊಳಿಸಿ
ಧರ್ಮಮಾರ್ಗದಿ ಚರಿಸಿ ಜಾಣನಾಗೈ ।

* * * *

ಆತನೊಲವಿಂ ನಿನ್ನ ದುರ್ಬಲವು ಸುಬಲವಹುದು ।
ಆತನ ಪ್ರಭೆಯಿಂದೆ ತಮಸೆಲ್ಲ ನಾಶವಹುದು ।
ನೀನಾತನಲ್ಲಿ ನಿಲೆ ಭೂತಭವ್ಯಗಳ ಮಾತೇಂ ।
ಆ ಪರಬ್ರಹ್ಮನೊಳೆ ಸಕಲಮುಂ ಲೀನವಲ್ತೆ ॥

ಕರುಣೆಯಿರ್ಪೆಡೆಯೊಳಾತನ ಶಾಂತಿಯಿರ್ಪುದೈ
ಲೋಕೋಪಕಾರಮಾತನ ಪೂಜೆಯೈ ।
ಶೋಕತಪ್ತರನಂಗಹೀನರಂ ದೀನರಂ
ಸಂತೋಷಗೊಳಿಪುದಾತನ ಸೇವೆಯೈ ॥

ಈ ಕವಿತೆಯಲ್ಲಿ ಪಾಶ್ಚಾತ್ಯ ಮಹಾಕವಿಗಳೂ ಪೌರಸ್ತ್ಯ ಮಹಾಕವಿಗಳೂ ಜೀವತತ್ತ್ವವನ್ನು ನಿರೂಪಿಸುವುದರಲ್ಲಿ ಹೇಗೆ ಏಕಮುಖವಾಗಿರುವರೆಂಬುದು ಸ್ಪಷ್ಟವಾಗುತ್ತದೆ. ಈ ಪದ್ಯದ ಕೊನೆಯಲ್ಲಿ ಕೊಟ್ಟಿರುವ "ಸರ್ವಮತ ಸಿದ್ಧಾಂತ" ಎಂಬ ವೃತ್ತವೂ ಬಹು ಮನನೀಯವಾಗಿದೆ.

ಎನಿತೊ ಮತಂಗಳುಂ ನಿಗಮ ಶಾಸ್ತ್ರ ಪುರಾಣಗಳುಂ ಮಗುಳ್ದು ತಾ- ।
ವೆನಿತೊ ಮಠಂಗಳುಂ ಗುರುಗಳುಂ ವ್ರತಹೋಮಜಪಾದಿಕರ್ಮಮುಂ ॥
ಮನುಜರು ಸರ್ವಭೂತಗಳೊಳಂ ಪ್ರಿಯಭಾವವ ತೋರಲಾಗ ಸಂ- ।
ಜನಿಪುದು ಸರ್ವಕರ್ಮಗಳಿನಾಗದ ಸೌಖ್ಯಮದೆಲ್ಲ ಲೋಕಕಂ ॥

ಮೊದಲನೆಯ ಭಾಗದಲ್ಲಿ ಬರುವ ಎರಡನೆಯ ಕವಿತೆ "ಆತ್ಮಗೀತೆ". ಇದು "ಸಾಂಗ್ ಆಫ್ ಮೈ-ಸೆಲ್ಫ್" ಎಂಬ, ವಾಲ್ಟ್ ವ್ಹಿಟ್ಮನ್ ಕವಿಯ, ಕವನದ ಕೆಲವು ಸಾಲುಗಳ ಅನುವಾದ.

ಕವಿತೆಯ ಬಗ್ಗೆ ಡಿ.ವಿ.ಜಿ.ಯವರೇ ಹೇಳಿರುವ ಈ ಕೆಲವು ವಾಕ್ಯಗಳು ಗಮನಾರ್ಹವಾಗಿವೆ: "ಈ ಆತ್ಮಗೀತೆಯ ವಚನಗಳಿಗೆ ಸಮಾನಗಳಾದ ವಚನಗಳನ್ನು ಈಶಾವಾಸ್ಯಾದ್ಯುಪನಿಷತ್ತುಗಳಲ್ಲಿಯೂ ಭಗವದ್ಗೀತಾದಿ ಶಾಸ್ತ್ರಗಳಲ್ಲಿಯೂ ಹೇರಳವಾಗಿ ಕಾಣಬಹುದು. ಇದರ ಮೊದಲನೆಯ ವಿಭಾಗದಲ್ಲಿ ಪರಮಾತ್ಮನ ಸರ್ವವ್ಯಾಪಕತೆಯೂ ಅದರಿಂದ ಬೋಧಿತವಾಗುವ ಸರ್ವಸಮತಾ ನೀತಿಯೂ ಸೂಚಿತವಾಗಿವೆ. ಎರಡನೆಯ ವಿಭಾಗದಲ್ಲಿ ಮಾನವ ವ್ಯಕ್ತಿಯು ಅವನ ಸುತ್ತಲೂ ಇರುವ ಸಮಸ್ತ ಪ್ರಪಂಚಕ್ಕೆ ಎಷ್ಟು ಮಹಾ ಋಣಿಯಾಗಿದ್ದಾನೆ, ಹೇಗೆ ಅದರ ಅಂಶಮಾತ್ರನಾಗಿದ್ದಾನೆ, ಎಂಬುದು ಸೂಚಿತವಾಗಿದೆ. ಮೂರು ಮತ್ತು ನಾಲ್ಕನೆಯ ವಿಭಾಗಗಳಲ್ಲಿ ಕ್ರಮವಾಗಿ ಸ್ಥಲಚರಗಳಾದ ಮತ್ತು ಜಲಚರಗಳಾದ ಜೀವರಾಶಿಗಳೊಡನೆ ಮನುಷ್ಯನು ಐಕ್ಯವನ್ನು ಅನುಸಂಧಾನ ಮಾಡಬೇಕೆಂಬುದು ಸೂಚಿತವಾಗಿದೆ."

ಈ ಕವಿತೆಯ ಮೊದಲ ಭಾಗದಲ್ಲಿ ಬರುವ

"ಆತ್ಮತಾನಮಿತಬಲನಾತ್ಮ ತಾಂ ಪರಮಂ ।
ಆತ್ಮ ತಾಂ ಮೃತಿರಹಿತನಾತ್ಮ ತಾಂ ಪೂರ್ಣಂ ।
ಎನ್ನಾತ್ಮವನೆ ನಿಖಿಲರಲ್ಲಿ ಕಾಣುತಿಹೆಂ ।"

ಎಂಬ ಸಾಲುಗಳು ನಮ್ಮ ತತ್ತ್ವಗಳನ್ನು ಬಹು ಚೆನ್ನಾಗಿ ಪ್ರತಿಬಿಂಬಿಸುತ್ತವೆ.

ಇದರ ಮುಂದಿನ ಕವಿತೆ "ದೇವರೆಲ್ಲಿ?" ಕವಿತೆಯ ಮೂಲವನ್ನು 'ವಿಸ್ಮೃತ' ಎಂದಿದ್ದಾರೆ. ಕುತೂಹಲವಿರುವವರು ಶೋಧಿಸಿ ಉಪಕಾರ ಮಾಡಬಹುದು.

ಈ ಕವಿತೆ ಸಮುದ್ರದಲ್ಲಿರುವ ಮೀನು ತಾನಿರುವುದೇ ಸಮುದ್ರದಲ್ಲಿ ಎಂಬುವನ್ನು ಅರಿಯದೆ, ಆ ವಾರಾಶಿಯನ್ನು ಕಾಣುವುದು ಹೇಗೆ ಎಂದು ಯೋಚಿಸುವಂತೆ ;

ಗಗನದಲ್ಲಿ ಹಾರಾಡುವ ಹಕ್ಕಿ ಗಾಳಿ ಹೇಗಿದೆ ನೋಡಬೇಕು ಎಂದು ಆಶಿಸುವಂತೆ; ಮನುಷ್ಯನು ಪರಬ್ರಹ್ಮನಲ್ಲೇ ಇರುತ್ತಾ ಪರಮಾತ್ಮನನ್ನೇ ತಿಳಿಯದಿದ್ದಾನೆ ಎಂಬ ಭಾವವನ್ನು ಬಹು ಸುಂದರವಾಗಿ ಚಿತ್ರಿಸುತ್ತದೆ:

ನರನುಮಂತೆಯೆ ಸತತ।
ಮಿರುತಲಾ ಪರಮನೊಳೆ।
ಪರಮಾತ್ಮನಿರ್ಪೆಡೆಯ ತಿಳಿಯದಿಹನು॥
ಪರಿಕಿಸಿದೊಡಾ ಪರಾ।
ತ್ಪರನೆತ್ತಲೆತ್ತಲುಂ।
ಮೆರೆಯುತಿಹನೆನಿತೆನಿತೊ ರೂಪಗಳೊಳು॥

ಈ ಭಾಗದ ಕಡೆಯ ಕವಿತೆ "ಬೇಡಿಕೆ". ಇದು ಜೀವನು ಪರಮಾತ್ಮನಿಗೆ ಸಲ್ಲಿಸುವ ಪ್ರಾರ್ಥನೆ. ಈ ಕವಿತೆಯಲ್ಲಿ ಈ ಕೆಳಗೆ ಉದಾಹರಿಸಿರುವ ಸಾಲುಗಳು ಮನನೀಯವಾಗಿವೆ.

ಪ್ರೇಮಸ್ವರೂಪನೇ ನೀನೆನ್ನ ಹೃದಯಮುರುವೊಳ್
ಪ್ರೇಮರಸಮಂ ಪರಿಯಿಸುತ್ತೆ ದೃಢ ಸತ್ತ್ವವಿತ್ತು।
ಪ್ರೇರಿಸೆನ್ನನು ಜೀವಕೋಟಿಗಳ ಹಿತದೊಳನಿಶಂ।
ಸಕಲಜೀವಿಗಳ ಸಂಪ್ರೇರಕನೆ ಪಿತನೆ ಹಿತನೇ॥

* * * *

ಸೃಷ್ಟಿಮೋಹಿನಿಯೆನ್ನ ಕಣ್ಮುಚ್ಚುವಾಟಕೆಳೆದು।
ಅಷ್ಟದಿಕ್ಕೋಣಗಳೊಳಲೆಯಿಸುತ ಗಾಸಿಗೊಳಿಸೆ।
ದೃಷ್ಟಿಯಲಿ ನಿಂತು ನೀಂ ನಿರ್ಭಯದ ಪದವ ತೋರ್ಕೈ।
ನಿತ್ಯಪರಿಪೂರ್ಣ ಶಿವ ಸಚ್ಚಿದಾನಂದ ಗುರುವೇ॥

॥ ೨ ॥

ಎರಡನೆಯ ಭಾಗದಲ್ಲಿನ ಕವಿತೆಗಳಲ್ಲಿ ಮೊದಲನೆಯದಾದ "ವಂದೇ ಮಾತರಂ" ಕವಿತೆಯನ್ನು ಬಿಟ್ಟು ಉಳಿದುವೆಲ್ಲಾ ಖ್ಯಾತ ಭಾರತೀಯ ಪುರುಷಶ್ರೇಷ್ಠರನ್ನು ಕುರಿತವುಗಳು.

"ವಂದೇ ಮಾತರಂ" ಶ್ರೀ ಬಂಕಿಮಚಂದ್ರರ ಅದೇ ಹೆಸರಿನ ಪ್ರಸಿದ್ಧ ಗೀತೆಯನ್ನು ಅನುಸರಿಸಿ ಬರೆದದ್ದು. ಉಳಿದ ಕವನಗಳನ್ನು ಕ್ರಮವಾಗಿ ರಾಮಕೃಷ್ಣ ಪರಮಹಂಸ, ರಾಜಾ ರಾಮಮೋಹನ ರಾಯ್, ದಾದಾಭಾಯಿ ನವರೋಜಿ, ಗೋಪಾಲ ಕೃಷ್ಣ ಗೋಖಲೆ, ಸ್ವಾಮಿ ವಿವೇಕಾನಂದ, ಬಾಲಗಂಗಾಧರ ತಿಲಕ್,

ರವೀಂದ್ರನಾಥ ಠಾಕೂರ್, ಜಗದೀಶಚಂದ್ರ ಬೋಸ್, ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಮೋಹನದಾಸ್ ಕರಮಚಂದ್ ಗಾಂಧಿ ಮತ್ತು ಶ್ರೀ ಕೃಷ್ಣರಾಜೇಂದ್ರ ಒಡೆಯರ್ —ಈ ಮಹಾ ವ್ಯಕ್ತಿಗಳನ್ನು ಕುರಿತವುಗಳು.

ಈ ಪ್ರತಿಯೊಂದು ಕವಿತೆಯಲ್ಲೂ ಆಯಾ ವ್ಯಕ್ತಿಯ ವಿಶಿಷ್ಟಗುಣಗಳನ್ನು ಬಹು ಸಂಕ್ಷಿಪ್ತವಾದ ನುಡಿಚಿತ್ರಗಳಲ್ಲಿ ಅಳವಡಿಸಲಾಗಿದೆ. ಎರಡು–ಮೂರು ಸಂದರ್ಭಗಳನ್ನು ಬಿಟ್ಟರೆ ಉಳಿದ ವ್ಯಕ್ತಿಚಿತ್ರಣಗಳು ಸೀಸಪದ್ಯಗಳಲ್ಲಿವೆ.

ಇವುಗಳಲ್ಲಿ ಕೆಲವು ವ್ಯಕ್ತಿಚಿತ್ರಣಗಳನ್ನು ದೀರ್ಘವಾಗಿಯೂ, ಕೆಲವನ್ನು ಹ್ರಸ್ವವಾಗಿಯೂ ನಾವು ಪರಿಶೀಲಿಸಬಹುದು. "ರಾಮಕೃಷ್ಣ ಪರಮಹಂಸ" ಎಂಬ ಕವಿತೆಯಲ್ಲಿ ಆ ಕಾಳಿಕಾದೇವಿಯ ಪೂಜಾರಿಯ ತತ್ತ್ವಾನುಸಂಧಾನ ಸಿದ್ಧಿಯ ಪರಿಪೂರ್ಣ ಚಿತ್ರವಿದೆ : ಅವರು ಕಾಳಿಕಾದೇವಿಯ ಪೂಜಾರಿಯಾಗಿ, ತತ್ತ್ವಾನುಸಂಧಾನ ನಿರತರಾಗಿ, ನಾಸ್ತಿಕ್ಯತಿಮಿರಕ್ಕೆ ಸೂರ್ಯಸ್ವರೂಪರಾಗಿ, ವೈರಾಗ್ಯರಾಜ್ಯಕ್ಕೆ ರಾಜರಾಗಿ, ವಿವಿಧ ಮತ ಸಿದ್ಧಾಂತಗಳ ಸಾಮ್ಯವನ್ನು ಸಂದರ್ಶಿಸಿದವರಾಗಿ, ವೇದಾಂತ ದೃಷ್ಟಿಯನ್ನು ಹೊಂದಿದವರಾಗಿ, ಕ್ರೈಸ್ತ ಮಹಮದೀಯ ಮುಂತಾದ ಮತಗಳೂ ತಿರುಳುಳ್ಳವು ಎಂಬುದನ್ನು ಸ್ವಾನುಭವದಿಂದ ಸಾರಿದ ಮತ್ತು ಶ್ರೀ ವಿವೇಕಾನಂದರಿಂದ ಸಂಪೂಜ್ಯರಾಗಿ ಮೆರೆದ ಯೋಗಿವರ್ಯರು. ಈ ಸೀಸಪದ್ಯದಲ್ಲಿ ಪರಮಹಂಸರ ಜೀವನದ ಸಾಧನೆಯ ಮುಖ್ಯಾಂಶಗಳನ್ನು ಸಾಂದ್ರೀಕರಿಸಿದ್ದಾರೆ, ಭಟ್ಟಿ ಇಳಿಸಿದ್ದಾರೆ.

"ರಾಜಾ ರಾಮಮೋಹನ ರಾಯ್"—ಕವಿತೆಯ ಈ ನಾಲ್ಕು ಚರಣಗಳು ಎಷ್ಟು ಮನೋಜ್ಞವಾಗಿವೆ !

ಇಂತು ನಿಜಜನಕುಲದ ಮೌಢ್ಯಗಳ ತಿದ್ದಿದಾತಂ ।
ಆರ್ಷವೇದಪ್ರಭೆಯ ಜಗಕೆಲ್ಲ ಬೆಳಗಿದಾತಂ ।
ಭಾರತದ ಯಶವನ್ನೆರೋಪ್ಯರೊಳು ಸಾರಿದಾತಂ ।
ರಾಮಮೋಹನನೆಮ್ಮ ನವಯುಗಕ್ಕರುಣನಾದಂ ॥

"ದಾದಾಭಾಯಿ ನವರೋಜಿ" ಎಂಬ ಕವಿತೆಯ ಈ ಕೆಳಗಿನ ಸಾಲುಗಳು ಆ ಪರಮಪೂಜ್ಯನ ದೇಶಭಕ್ತಿಯನ್ನು ಬಹು ಚೆನ್ನಾಗಿ ಚಿತ್ರಿಸುತ್ತವೆ.

ದೇಶಹಿತವನೆ ತನ್ನ ಗುರಿಯೊಳಿಡುತೆ ।
ಮುದದಿನಾತ್ಮಾರ್ಪಣೆಯನಾಕೆಗೆಸಗಿ ।
ನಿಲುವ ಮಹನೀಯರತಿವಿರಳರವರೊಳಿಂದು ।
ಪೂಜ್ಯನಾ ನವರೋಜಿ ಮೊದಲೆನಿಪನಲ್ತೆ ॥

* * * *

ಪರಮಶುಭಚರಿತ್ರಂ ಭಾರತೀ ವೀರಪುತ್ರಂ ।
ಪರಹಿತಕರವೃತ್ತಂ ಸತ್ಯಮಾರ್ಗಪ್ರವೃತ್ತಂ ॥
ವಿರಚಿತಬಹುಪುಣ್ಯಂ ದೇಶಭಕ್ತಾಗ್ರಗಣ್ಯಂ ।
ಸ್ಫುರಿಕೆ ಮನದಿ ದಾದಾಭಾಯಿಯೆಂಬಾ ವರೇಣ್ಯಂ ॥

"ಗೋಪಾಲ ಕೃಷ್ಣ ಗೋಖಲೆ"—ಈ ಕವಿತೆಯನ್ನು ತಮಗೆ ಪರಮಪೂಜ್ಯರಾದ ಶ್ರೀ ಗೋಖಲೆಯವರು ಮಡಿದ ಸಂದರ್ಭದಲ್ಲಿ ಶ್ರೀ ಡಿ.ವಿ.ಜಿ. ಅವರು ಬರೆದಂತಿದೆ. ಅವರಂಥಾ ಪುತ್ರರತ್ನದ ನಿಧನವನ್ನು ಭರತಮಾತೆ ಹೇಗೆ ಸಹಿಸುವಳೋ ಎನ್ನುತ್ತಾರೆ.

ಧೀರಾಗ್ರಣಿಯಹ ಸುತನಂ ।
ಬೇರೊಂದಂ ಬೇಡದಿರ್ದ ಭಕ್ತಾಗ್ರಣಿಯುಂ ।
ಕ್ರೂರಿ ಯಮಂ ಕರೆದೊಯ್ದಿರೆ ।
ಭಾರತಭೂಮಾತೆಯೆಂತು ಸೈಸುವಳಕಟಾ ॥

ಶ್ರೀ ಗೋಖಲೆಯಂಥ 'ಸುಜನರ್' ನಿಜರೂಪದಿಂದ ಅಲ್ಲದಿದ್ದರೂ ನಿಜ ಯಶಸ್ಸಿನಿಂದ ಬಾಳುವರಲ್ಲವೇ ! ಸೂರ್ಯನು ಅಸ್ತಮಿಸಿದರೂ ಪುನಃ ಉದಿಸಿ ಲೋಕವನ್ನು ಬೆಳಗುವ ರೀತಿಯಲ್ಲಿ ಗೋಖಲೆಯವರು ಪುನಃ ಉದಿಸಿ ನಮ್ಮಲ್ಲಿಗೆ ಬರದಿರುತ್ತಾರೆಯೇ ?—ಈ ಭಾವಗಳನ್ನು ವ್ಯಕ್ತಪಡಿಸುವ ಪದ್ಯಗಳು, ಶ್ರೀ ಡಿ.ವಿ.ಜಿ. ಅವರ ಹೃದಯವು ಗೋಖಲೆ ಅವರ ವಿಷಯದಲ್ಲಿ ಹೇಗೆ ಮಿಡಿಯುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ತ್ಯಜಿಸಿದೊಡಂ ನಿಜತನುವಂ ।
ಸುಜನರ್ ಸತ್ಕೀರ್ತಿಕಾಯರಾಗಿರ್ಪುದರಿಂ ।
ನಿಜರೂಪಮದಿಲ್ಲದೊಡಂ ।
ನಿಜಯಶದಿಂ ಬಾಳ್ವನಲ್ತೆ ಗೋಖಲೆಯೆಂದುಂ ॥

ದಿನಮಣಿಯಸ್ತಮಿಸಿದೊಡಂ ।
ಪುನರುದಯವನೊಂದಿ ಲೋಕಮಂ ಬೆಳಗುವವೊಲ್ ।
ಘನನಹ ಗೋಖಲೆಯುಂ ತಾಂ ।
ಪುನರುದಯವನೊಂದಿ ಬಾರದಿರ್ಪನೆ ನಮ್ಮೊಳ್ ॥

"ವಿವೇಕಾನಂದ ಸ್ವಾಮಿ" ಎಂಬ ಕವಿತೆಯಲ್ಲಿ ಆರ್ಯಧರ್ಮದ ವಿಷಯದಲ್ಲಿ ವಿವೇಕಾನಂದರಿಗಿದ್ದ ಕಳಕಳಿಯನ್ನು ಸೂಚಿಸಿ ಮುಂದುವರಿದು ಹೀಗೆ ಹೇಳುತ್ತಾರೆ :

ಇಂತು ನಿಜಜನಪದವನೆಲ್ಲ ರಂಗೊಳಿಸುತನಿಶಂ ।
ಭರತಮಾತೆಯ ಜೈತ್ರಯಾತ್ರೆಯೊಳ್ ಪ್ರಮುಖನೆನಿಸಿ ।
ವಿಬುಧವಂದಿತನಾಗಿ ಲೋಕಸಂಮಾನ್ಯನಾಗಿ ।
ಶ್ರೀ ವಿವೇಕಾನಂದನೆಸೆದನಂದು ॥

ಮುಂದಿನ ಬಾಲಗಂಗಾಧರ ತಿಲಕರ ಮೇಲಿನ ಕವನವು ಅವರು ಹೇಗೆ 'ದೇಶಕೈಂಕರ್ಯ'ವನ್ನು ಮಾಡಿದರು ಎಂಬುದನ್ನು ಚಿತ್ರಿಸುತ್ತದೆ.

ತಿಲಕನಲ್ಲವೆ ಜಾನಪದಕಾರ್ಯಚತುರತಿಲಕಂ।
ವಿಬುಧಸಂಕುಲತಿಲಕನಾರ್ಯಭೂಭೃತ್ಕತಿಲಕಂ।

ಎಂದು ಅವರನ್ನು ಸ್ತುತಿಸಿದ್ದಾರೆ ಶ್ರೀ ಡಿ.ವಿ.ಜಿ.

"ರವೀಂದ್ರನಾಥ ಠಾಕೂರ್" ಎಂಬ ಕವಿತೆಯಲ್ಲಿ ಶ್ರೀ ಡಿ.ವಿ.ಜಿ. ಅವರು ಕವಿ ಮತ್ತು ಕವಿಕರ್ಮದ ವಿಷಯದಲ್ಲಿ ಹೇಳಿರುವ ಮಾತುಗಳು ಬಹು ಮನೋಜ್ಞವಾಗಿವೆ.

ರವಿಯರಿಯದ ಮಾರ್ಗಗಳಂ।
ಕವಿಯರಿತವನೆಂದು ಲೋಕವೊರೆವುದು ಪುಸಿಯೇಂ।
ರವಿ ಬೆಳಗೆ ಬಾಹ್ಯಲೋಕವ।
ಕವಿ ಬೆಳಗಿಪನಲ್ತೆ ಜನರ ಹೃದಯಾನ್ತರಮಂ॥

ಋಷಿಬಲವಿಲ್ಲದವಂ ಕವಿ।
ವೃಷನೆನಿಪುದಶಕ್ಯಮೆಂದು ಬಗೆವುದು ಸಾಜಂ।
ಋಷಿಹೃದ್ಗತ ಚಿನ್ಮೂರ್ತಿಯು।
ಸುಷಮಾಪ್ರತಿಫಲಮೆ ಕಾವ್ಯವನಿತಾವಿಭವಂ॥

*　　*　　*　　*

ಹೃದಯಾಬ್ಜಂ ರಸಪೂರ್ಣಮಾಗಿ ಕವಿಯೊಳ್ ಪ್ರಜ್ಞಾರುಣೋದ್ದೀಪ್ತಿಯಿಂ।
ಪದಸೌಭಾಗ್ಯಮರಂದಮುಣ್ಮೆ ಕವಿತಾಶ್ರೀರೂಪಮುಜ್ಜೃಂಭಿಕುಂ॥

*　　*　　*　　*

ತಾನೆ ಜಗಂಗಳ ಕಲ್ಪಿಸುತುಂ ಸ್ವಾ।
ಧೀನತೆಯೊಳ್ಮುದಮೊಂದುತಲೆಂದುಂ॥
ಜ್ಞಾನಧನಂ ಕವಿ ಧೀರನುದಾರಂ।
ಮಾನಸರಾಜ್ಯಕೆ ರಾಜನೆನಿಪ್ಪಂ॥

ಈ ಮಾತುಗಳು ರವೀಂದ್ರರಿಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತವೆಯೋ ಹಾಗೆಯೇ ಪ್ರತಿಭಾವಂತ ಕವಿಗಳೆಲ್ಲರಿಗೂ ಅನ್ವಯಿಸುತ್ತವೆ.

ವಿಜ್ಞಾನ ಪ್ರಪಂಚಕ್ಕೆ ಸೇರಿದ ಶ್ರೀ ಜಗದೀಶ ಚಂದ್ರ ಬೋಸರ ಮೇಲಿನ ಕವಿತೆಯಲ್ಲಿ ಬೋಸರು ಭಾರತೀಯ ವಿಜ್ಞಾನಕ್ಕೆ ಹೇಗೆ ಕಾಣಿಕೆ ಸಲ್ಲಿಸಿದ್ದಾರೆ ಎಂಬುದನ್ನು ಸೂಚಿಸಿ, ಅವರನ್ನು ಹೀಗೆ ಪ್ರಶಂಸಿಸಿದ್ದಾರೆ :

ಆ ವಿಜ್ಞಾನಕಲಾರಹಸ್ಯಗಳ ತಾವನ್ವೇಷಿಸುತ್ತಂ ಸುಹೃ-।
ದ್ಭಾವಂದಾಳ್ದು ಜಗಕ್ಕೆ ಬೋಧಿಸುತುಮುಂತೆಂದುಂ ಜಗತ್ಕರ್ತನಾ॥
ಸೇವಾಕಾರ್ಯದಿ ದೀಕ್ಷೆಯೊಂದಿ ನಿಜದೇಶೀಯರ್ ಶುಭಂಬೊಂದಲೆಂ-।
ದಾ ವಿಖ್ಯಾತ ಮಹಾಶಯಂ ರಚಿಸಿಹಂ ಚಿಜ್ಜ್ಯೋತಿಯಾಗಾರಮಂ॥

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಮೇಲಿನ ಕವಿತೆಯಲ್ಲಿ ಶ್ರೀ ಡಿ.ವಿ.ಜಿ. ಅವರು ಆ ರಾಜಕಾರಣಪಟುವನ್ನು,—

ಜನಪದವೆ ದೇವನಿಲಯಂ ।
ಜನಸೇವೆಯೆ ದೇವಪೂಜೆಯೆನುತಂ ಸತತಂ ॥
ಘನಸಚಿವಧರ್ಮಮಾರ್ಗವ- ।
ನನುಸರಿಸಿದನೀತನಲ್ತೆ ಸುಜನಪ್ರೀತಂ ॥

*　*　*　*

ಪ್ರಜೆಯಂತೆಯೆ ರಾಜ್ಯಮೆಸು ।
ತ್ರಜಸ್ರಮುಂ ಸಾರಿ ಪೇಳ್ದನೀತಂ ಖ್ಯಾತಂ ॥

ಈ ರೀತಿಯಲ್ಲಿ ವರ್ಣಿಸಿ, ಅವರು

ತರುಣರ್ಗೆಂದುಮುಮುಂದೆ ಪೌರುಷ ನಯೌದಾರ್ಯಂಗಳಂ ಬೋಧಿಪಾ ।
ಗುರುವಾಗಿರ್ಕೆ ಗುಣಾಕರಂ ಬುಧವರಂ ವಿಶ್ವೇಶ್ವರಾರ್ಯಂ ಚಿರಂ ॥

ಎಂದು ಆಶಿಸಿದ್ದಾರೆ. ಇವುಗಳ ಜೊತೆಗೆ "ನಿವೇದನ"ದಲ್ಲಿ ವಿಶ್ವೇಶ್ವರಯ್ಯನವರಿಗೆ ಸಂಬಂಧಪಟ್ಟಂತೆ ಬರುವ ಎರಡು ಪದ್ಯಗಳನ್ನು ಅವಲೋಕಿಸಬಹುದು. ಅವು ವಿಶ್ವೇಶ್ವರಯ್ಯನವರ ಶಿಲ್ಪಶಾಸ್ತ್ರದ ಪರಿಣತಿಯನ್ನು ಸೂಚಿಸುತ್ತವೆ.

ಪರಿವಾ ಕಾವೇರಿಗೆ ನಾಂ
ಗಿರಿಯುಂಪದೊಳಡ್ಡವಿಟ್ಟು ಸರಸಿಯನತ್ತಲ್
ವಿರಚಿಸುವೆನೆಂದದೋರ್ವಂ
ಪರಮೋತ್ಸಾಹದಿ ನೆಗಳ್ಚಿ ಮುಂದಡಿಯಿಟ್ಟಂ
ಅಪನಿಂದಾದುದು ನಯನೋ
ತ್ಸವಮಿದು ಶ್ರೀ ಕೃಷ್ಣರಾಜ ವಿಮಲಯಶೋ ವೈ
ಭವಮಿದು ಜನಪದ ಸುಕೃತೋ
ದ್ಭವಮಿದು ಮೇಣ್ ಪುರುಷಕಾರ ಮಹಿಮಾನುಭವಂ ॥

ಮಹಾತ್ಮ ಗಾಂಧಿಯವರನ್ನು ಕುರಿತ ಈ ಪದ್ಯದಲ್ಲಿ ಶ್ರೀ ಡಿ.ವಿ.ಜಿ. ಅವರು ಆ ಮಹಾತ್ಮರ ಸಕಲ ಸದ್ಗುಣಗಳ ಛಟ್ಟಿಯನ್ನಿಳಿಸಿ ಸ್ವಯಂಪೂರ್ಣವಾದ ಚಿತ್ರಣ ವನ್ನು ಕೊಟ್ಟಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಅದನ್ನು ವರ್ಣಿಸುವುದಕ್ಕಿಂತ ಅವರ ಮಾತುಗಳಲ್ಲೇ ತಿಳಿಯಲೆಂದು ಇಡೀ ಪದ್ಯವನ್ನು ಕೊಟ್ಟಿದೆ:

ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ
　　ಲೋಭಮಂ ತ್ಯಜಿಸಿ ರೋಷವ ವರ್ಜಿಸಿ ।
ಸರ್ವಸಖ್ಯವ ಭಜಿಸಿ ತೃಪ್ತತೆಯನಭ್ಯಸಿಸಿ
　　ಸತ್ಯಪಾಲನೆಯೊಂದೆ ಮನದೊಳಿರಿಸಿ ॥
ಕಾಯಕಷ್ಟವ ಸಹಿಸಿ ವೈರಿಗಣಮಂ ಕ್ಷಮಿಸಿ
　　ಸರ್ವಸಮತೆಯ ಗಳಿಸಿ ಶಮವನರಸಿ ।
ಸ್ವಾತ್ಮಶಿಕ್ಷಣಮೇ ಸ್ವರಾಜ್ಯಮೆನ್ನುತ ವಚಿಸಿ
　　ದೇಶ ಸೇವೆಯನೀಶಸೇವೆಯೆನಿಸಿ ॥

ಸಾಧುವೃತ್ತಿಯು ಪಥವ ತನ್ನ ಬಾಳಿನೊಳೆ ತೋರಿ।
ಪಾಶವೀ ಬಲದ ದೌರ್ಬಲ್ಯಮಂ ವಿಶದಬಡಿಸಿ।
ಪಾಶ್ಚಾತ್ಯ ಜನಕಮಧ್ಯಾತ್ಮನೀತಿಯನು ಪೇಳ್ದಾ।
ದೈವಸಂಪನ್ಮಾರ್ಗದರ್ಶಕಂ ಗಾಂಧಿಯಲ್ತೆ॥

ವ್ಯಕ್ತಿ ಚಿತ್ರಣದ ಕವಿತೆಗಳಲ್ಲಿ ಕಡೆಯದಾಗಿ ಬರುವ ಶ್ರೀ ಕೃಷ್ಣರಾಜ ಒಡೆಯರವರ ಮೇಲಿನ ಪದ್ಯದಲ್ಲಿ ಶ್ರೀ ಡಿ.ವಿ.ಜಿ. ಆ ರಾಜಋಷಿಯ ಗುಣಕಥನ ಮಾಡಿ ಕಡೆಯಲ್ಲಿ ಈ ರೀತಿ ಮುಕ್ತಾಯಗೊಳಿಸಿದ್ದಾರೆ :

ಪ್ರಜೆಯ ಸೇವೆಯೆ ದೇವಸೇವೆಯೆಂದರಿತು ಸತತಂ।
ಚತುರಸಚಿವರನೊಂದಿ ಜನತೆಯೊಳ್ ಜಸಮನೊಂದಿ।
ಸಕಲ ಸಂಪತ್ಸೌಖ್ಯಯೋಗದಿಂ ಪುಣ್ಯಪಥದೊಳ್।
ರಾಜಿಸಿದ ರಾಜನೀ ಶ್ರೀ ಕೃಷ್ಣ ಭೂಮಿಪಾಲಂ॥

ಎರಡನೆಯ ಭಾಗದ ಕಡೆಯಲ್ಲಿ ಗೋಖಲೆಯವರ ದೇಶಸೇವಕ ಸಂಘದ ನಿಬಂಧನೆಗಳನ್ನು ಹೇಳತಕ್ಕ "ದೇಶಭಕ್ತ ಪ್ರತಿಜ್ಞೆ" ಎಂಬ ಪದ್ಯವಿದೆ. ಇದರ ಒಂದೊಂದು ಕಂದಪದ್ಯವೂ ಒಂದೊಂದು ಪ್ರತಿಜ್ಞೆಯನ್ನು ತಿಳಿಸುತ್ತದೆ. ಅವುಗಳಲ್ಲಿ ಈ ಎರಡನ್ನು ಉದಾಹರಿಸಬಹುದು :

ಎನ್ನಯ ಮಾನಸ ಭವನದೊ-।
ಳುನ್ನತ ವೇದಿಕೆಯಲಿ ದೇಶಮಾತೆಯನಿರಿಸು-।
ತ್ತೆನ್ನಯ ಸರ್ವಸ್ವಮನಾ।
ಪುಣ್ಯೋರ್ವೀದೇವಿಯಂಘ್ರಿಗರ್ಪಿಸಿ ಮಣಿವೆಂ॥

*   *   *

ಜನಪದಸೇವೆಯೆ ದೈವಾ।
ರ್ಚನೆಯದು ನಮಗಾತ್ಮಭಾವವಿಸ್ತಾರನಯಂ।
ಅನುಗೊಳುವೆಂ ರಾಷ್ಟ್ರಿಕ ಜೀ-।
ವನ ಕಾರ್ಯಂಗಳ್ಗೆ ದೀಕ್ಷಿತೋಚಿತ ಮತಿಯಿಂ॥

ಒಟ್ಟಿನಲ್ಲಿ ಶ್ರೀ ಡಿ.ವಿ.ಜಿ. ಅವರ "ವಸಂತ ಕುಸುಮಾಂಜಲಿ" ಹೊಸಗನ್ನಡ ಸಾಹಿತ್ಯದ ನವೋದಯದ ಕಾಲದಲ್ಲಿ ಬಂದ ಕವಿತಾಸಂಕಲನ, ಒಂದು ಉತ್ತಮವಾದ ಸಂಕಲನ. ಮುಂದೆ ಅವರಿಂದ ರಚಿತವಾದ ಪ್ರಖ್ಯಾತ ಕವನಸಂಕಲನಗಳಿಗೆ ಇಲ್ಲಿ ಅಂಕುರಾರ್ಪಣವಾಗಿದೆ ಎಂದು ನಿರ್ವಿವಾದವಾಗಿ ಹೇಳಬಹುದು.

——o——

ನಿವೇದನ

ಎಂ. ವಿ. ಸೀತಾರಾಮಯ್ಯ

'ನಿವೇದನ' ಈ ಶತಮಾನಾರಂಭದ ಸಂಧಿಕಾಲದಲ್ಲಿ ರಚಿತವಾದ ಕೃತಿ. ಹಳತಕ್ಕೂ ಹೊಸತಕ್ಕೂ ಸೇತುವೆಯಂತಿದೆ ಇದು. ಕಾವ್ಯವಿಮರ್ಶೆಯಲ್ಲಿ ಹಳತು ಹೊಸತು ಎಂಬ ಮಾತು ಸಂದರ್ಭಾನುಸಾರ ಔಪಚಾರಿಕವಾಗಿ ಬರುತ್ತದೆಯಷ್ಟೆ. ಈ ಭೇದ ಕಲ್ಪನೆ ಕೃತಕವಾದದ್ದು. ಡಿ.ವಿ.ಜಿ.ಯವರೇ ನಿವೇದನದ 'ಮುನ್ನುಡಿ'ಯಲ್ಲಿ ಹೇಳಿರುವಂತೆ, 'ಇದು ಪಳದದು ಪೊಸತೆನಲೇಂ, ಬದುಕಿನರಲ್ಗಿಟ್ಟ ಸಾರಯಂತ್ರ ಕವನಂ'. ಹಳೆಯ ಮತ್ತು ಹೊಸ ಸತ್ತ್ವಗಳೆರಡರ ಹದವಾದ ಮಿಶ್ರಣವಿರುವುದರಿಂದಲೇ 'ಕಾಲದಿಂದ ಮಾಸದ' ಮೆರಗಿನಿಂದ ಬೆಳಗುತ್ತಿದೆ—ಬೆಳಗುತ್ತಿರುತ್ತದೆ 'ನಿವೇದನ'.

'ದೈವಕೃತಿಯ ಸೊಬಗು' ಮಾತ್ರವಲ್ಲದೆ 'ಸರಸಭಾವತತಿಯ ಸೊಬಗು, ಸುಜನ ಜೀವಕಥೆಯ ಸೊಬಗು' ಕವಿಯ ಹೃದಯವನ್ನು ಹಿಡಿದಿವೆ. 'ಮನಕೆ ತೋರ್ಪ ಸೊಬಗನೆಲ್ಲ ತನಗೆ ತುಷ್ಟಿಯಪ್ಪ ತೆರದಿ ಜನಕೆ ನುಡಿಯಲು' ಸಂಕಲ್ಪಿಸಿದ ಕವಿ, ತನ್ನ ಬರೆದ ಬರಹದಿಂದ ತನ್ನ 'ಮನೆಯೊಳೆಸೆದ ಬೆಳಕ'ನ್ನೂ ಹರ್ಷಗೊಳಿಸಬೇಕೆಂದು ಸಂಕಲ್ಪಿಸಿದರು. ಆದರೆ ವಿಧಿಯ ಸಂಕಲ್ಪ ಬೇರೆಯದಾಗಿತ್ತು. ಆ ಬೆಳಕು ನಂದಿತು. ಆ ಬೆಳಕಿನ ನೆನಪಿಗೆ 'ನಿವೇದನ' ವಾಗಿ ಕವಿಕೃತಿ ಉಳಿಯಿತು. ಅಷ್ಟೇ ಅಲ್ಲ; ಬೆಳಕುಗಳ ಬೆಳಕಾಗಿ ಪರಂಜ್ಯೋತಿಯೆನಿಸಿದ, ಶಿಲ್ಪಿವರ್ಯನೆನಿಸಿ ಎಲ್ಲ ಶಿಲ್ಪಕ್ಕೂ ಪ್ರೇರಕನಾದ, ಸರಸಭಾವಗಳಿಗೆ ಸ್ಫೂರ್ತಿದಾಯಕನಾದ ಆ ಗುರುವಿನ 'ಅಡಿ'ಗಳಿಗೂ ಸಲ್ಲಿಸಿದ ಮುಡುಪಾಗಿದೆ—ನಿವೇದನವಾಗಿದೆ—ಈ ಕವನ ಕುಸುಮಗುಚ್ಛ.

೧. ನಿವೇದನದ ವೈಶಿಷ್ಟ್ಯ

ಈ ಶತಮಾನದ ಆರಂಭದ ಮೊದಲ ಎರಡು ದಶಕಗಳು ಭಾರತೀಯ ಸಾಹಿತ್ಯ ಪ್ರಪಂಚಕ್ಕೆ ಹೊಸತನವನ್ನು ತಂದುಕೊಟ್ಟ ಕಾಲ. ಈ ಹೊಸ ವಸಂತ

ವನ್ನು ಸಾರಿತಂದ ಗಾಳಿ ಮಾತ್ರ ತೆಂಕಣದ್ದಲ್ಲ, ಪಡುವಣದ್ದು. ಈ ನೂತನ ಚೈತ್ರೋತ್ಸವದ ಮೊದಲ ದಿನಗಳಲ್ಲಿ ಅಲ್ಲೊಂದು ಕೋಗಿಲೆ, ಇಲ್ಲೊಂದು ಕೋಗಿಲೆ ಕೊರಲೆತ್ತಿ ಹಾಡತೊಡಗಿದವು. ಇಂದು ಶ್ರೇಷ್ಠ ಸಾಹಿತಿಗಳೂ ರಾಜ್ಯಶಾಸ್ತ್ರ ವಿಶಾರದರೂ ಎನಿಸಿಕೊಂಡಿರುವ ಮಾನ್ಯ ಶ್ರೀ ಡಿ. ವಿ. ಗುಂಡಪ್ಪನವರು ಅಂಥ ಕವಿಕೋಕಿಲಗಳಲ್ಲಿ ಒಬ್ಬರು ; ಮುಖ್ಯರಾದವರಲ್ಲಿ ಒಬ್ಬರು.

ಈ ಸಂದರ್ಭದಲ್ಲಿ 19ನೆಯ ಶತಮಾನದ ಪಾಶ್ಚಾತ್ಯ (ಮುಖ್ಯವಾಗಿ ಆಂಗ್ಲ) ಕವಿಗಳ ಕವಿತಾ ವೈಭವದಿಂದ ಪ್ರಭಾವಿತರಾಗಿ ಹೊಸ ಕವಿತೆಗಳನ್ನು ರಚಿಸಿದ ಇನ್ನೊಬ್ಬ ಪ್ರಮುಖ ಕವಿಯನ್ನು ನೆನೆಯುವುದು ಅನುಚಿತವಾಗಲಾರದು. ಆ ಕವಿ, ದಿವಂಗತ (ಬಿ. ಎಂ.) ಶ್ರೀ. ಒಂದೇ ದಶಕದಲ್ಲಿ, ಒಂದೇ ಸಂಘದ ಆಶ್ರಯದಲ್ಲಿ ಪ್ರಕಟಗೊಂಡ ಎರಡು ಕವಿತಾಸಂಕಲನಗಳೆಂದರೆ ಒಂದು, ಡಿ.ವಿ.ಜಿ. ಅವರ 'ನಿವೇದನ' (1924) ; ಇನ್ನೊಂದು, 'ಶ್ರೀ'ಯವರ 'ಇಂಗ್ಲಿಷ್ ಗೀತಗಳು' (1925).

'ನಿವೇದನ'ದ ಉದ್ದೇಶವೇ ಬೇರೆ, ಸ್ವರೂಪವೇ ಬೇರೆ ; ಇಂಗ್ಲಿಷ್ ಗೀತಗಳ ಗುರಿಯೇ ಬೇರೆ ; ಪರಿಯೇ ಬೇರೆ. ಒಂದು ಸ್ವತಂತ್ರ ಕವನಗಳ ಸಂಕಲನ, ಇನ್ನೊಂದು ಆಯ್ದ ಇಂಗ್ಲಿಷ್ ಕವನಗಳ ಕನ್ನಡ ಅನುವಾದ. ಎರಡೂ ಹೊಸ ವಸಂತದ ಹೊಮ್ಮುಗೆಗಳೇ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಮೇಲ್ಪಂಕ್ತಿಯನ್ನನುಸರಿಸಿ, ಪುರಾಣ ಕವಿಗಳ ಅಂಧಾನುಕರಣಕ್ಕೆ ಜೋತುಬೀಳದೆ ತಮ್ಮ 'ಸ್ವಂತ ಅನುಭವ'ಗಳನ್ನು 'ನಿವೇದನ' ಮಾಡಿಕೊಳ್ಳಬೇಕೆಂಬ ಆಶೋತ್ತರ ಡಿ.ವಿ.ಜಿ. ಅವರದ್ದು : ಸ್ವಂತ ಅನುಭವವಿಲ್ಲದಿದ್ದರೂ ಚಿಂತೆಯಿಲ್ಲ, ಕನ್ನಡ ಕಾವ್ಯಕ್ಕೆ ಹೊಸತನವನ್ನು ಕೊಡುವ ಹೊಸ ಕಾವ್ಯಮಾರ್ಗವನ್ನು ನಿರ್ಮಿಸಬೇಕೆಂಬ ದೀಕ್ಷೆ—'ಶ್ರೀ'ಯವರದ್ದು. ಪಾಶ್ಚಾತ್ಯ ಕೃತಿಗಳ ಪ್ರಭಾವಕ್ಕೆ ಮನಸೋತಿದ್ದರೂ ಪ್ರಾಚೀನ ಕಾವ್ಯಮಾರ್ಗವನ್ನು ತೊರೆಯಲಾರದ ಆಧುನಿಕ ಕವಿಯ ಸ್ತುತ್ಯ ಪಾಂಡಿತ್ಯದ ರಚನೆಗಳನ್ನು 'ನಿವೇದನ'ದಲ್ಲಿ ಕಾಣುತ್ತೇವೆ. ಪ್ರಾಚೀನ ಕಾವ್ಯಮಾರ್ಗಪಂಡಿತರಾಗಿದ್ದೂ ಕನ್ನಡ ಕಾವ್ಯವಾಹಿನಿಯನ್ನು ಹೊಸ ಪಾತ್ರದಲ್ಲಿ ಹರಿಯಿಸಬೇಕೆಂಬ ಹೆಬ್ಬಯಕೆಯಿಂದ ಸಂಪ್ರದಾಯದ ಶೈಲಿಯನ್ನು ತೊರೆದ ಆಧುನಿಕ ಕವಿಯ ನೂತನ ಮಾರ್ಗಕಲ್ಪನೆಯನ್ನು 'ಇಂಗ್ಲಿಷ್ ಗೀತ'ಗಳಲ್ಲಿ ಕಾಣುತ್ತೇವೆ. 'ಶ್ರೀ'ಯವರಂತೆಯೇ ಹೊಸ ಛಂದೋಮಾರ್ಗಗಳನ್ನು ನಿರ್ಮಿಸಿಕೊಳ್ಳಲು ಡಿ.ವಿ.ಜಿ.ಯವರು ಸಮರ್ಥರಾಗಿದ್ದರೆಂಬುದಕ್ಕೆ 'ನಿವೇದನ'ದಲ್ಲಿ ಕುರುಹುಗಳಿದ್ದರೂ, ಅವರು ಪ್ರಾಚೀನ ಕನ್ನಡ ಕಾವ್ಯಮಾರ್ಗಕ್ಕೆ ಸಂಪೂರ್ಣವಾಗಿ ಮನಸೋತವರು : ಆದ್ದರಿಂದ ಅನಿವಾರ್ಯವಾಗಿ ಸಂಸ್ಕೃತ ಮತ್ತು ಹಳಗನ್ನಡಗಳ ವೃತ್ತ, ಕಂದ, ಪದ್ಯರೂಪಗಳಿಗೂ ಶಬ್ದಗಳಿಗೂ ವ್ಯಾಕರಣ ಪ್ರಕ್ರಿಯೆಗಳಿಗೂ ಸಂಲಗ್ನವಾದವರು ಎಂಬ ಅಂಶ ಸ್ವಯಂಸ್ಪಷ್ಟವಾಗಿದೆ. 'ನಿವೇದನ'ದ ಸಂಸ್ಕೃತ ಶಬ್ದಪ್ರಾಚುರ್ಯವುಳ್ಳ ವೃತ್ತ ಕಂದಗಳ ಗತಿ ಗಾಂಭೀರ್ಯಗಳ ವಿಜೃಂಭಣೆಯ ಸೌಂದರ್ಯವೇ ಒಂದು ತೆರ ; ಅಚ್ಚಗನ್ನಡ ಛಂದಸ್ಸಿನ ಆಧಾರದ

ಮೇಲೆ ರೂಪಿಸಿಕೊಂಡ ಹೊಸ ಛಂದಸ್ಸಿನಲ್ಲಿ ಬರೆದ, ಕನ್ನಡ ನುಡಿಗಳ ಮೆಲ್ಲುಲಿಯಿಂದ ಮೊರೆಯುವ ಇಂಗ್ಲಿಷ್ ಗೀತಗಳ ನಡೆಯು ಬೆಡಗಿನ ಬಗೆಯೇ ಬೇರೆ. ತಮ್ಮ ತಮ್ಮ ನಿಟ್ಟಿನಲ್ಲಿ ಈ ಎರಡು ಕೃತಿಗಳೂ ಶ್ರೇಷ್ಠ ಕೃತಿ(ಕ್ಲ್ಯಾಸಿಕ್)ಗಳೇ ಆದರೂ, 'ನಿವೇದನ' ಹೊಸ ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿಯಾಗಲಿಲ್ಲ; 'ಇಂಗ್ಲಿಷ್ ಗೀತ'ಗಳಾದರೋ ತನ್ನ ಹೊಚ್ಚ ಹೊತಸನದಿಂದ ಕನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿತು. ಈ ಹಿನ್ನೆಲೆಯನ್ನು ಅರ್ಥಮಾಡಿಕೊಂಡರೆ, ಸಾಮಾನ್ಯ ಓದುಗನಿಗೆ 'ನಿವೇದನ' ಏಕೆ ಕ್ಲಿಷ್ಟವಾಗಿ ಕಾಣುತ್ತದೆ ಎಂಬ ಅಂಶ ಸ್ವಲ್ಪಮಟ್ಟಿಗೆ ವಿಶದಪಡುತ್ತದೆ; ಅಂತೆಯೇ, ಅದರ ವಿಶಿಷ್ಟ ಸ್ವರೂಪವೂ ಹೊಸ ಕನ್ನಡ ಸಾಹಿತ್ಯದಲ್ಲಿ ಅದರ ಸ್ಥಾನವೂ ವೇದ್ಯವಾಗುತ್ತವೆ.

'ನಿವೇದನ' ಈ ಶತಮಾನಾರಂಭದ ಸಂಧಿಕಾಲದಲ್ಲಿ ರಚಿತವಾದ ಕೃತಿ. ಹಳತಕ್ಕೂ ಹೊಸತಕ್ಕೂ ಸೇತುವೆಯಂತಿದೆ ಇದು. ಕಾವ್ಯವಿಮರ್ಶೆಯಲ್ಲಿ ಹಳತು ಹೊಸತು ಎಂಬ ಮಾತು ಸಂದರ್ಭಾನುಸಾರ ಔಪಚಾರಿಕವಾಗಿ ಬರುತ್ತದೆಯಷ್ಟೆ. ಈ ಭೇದಕಲ್ಪನೆ ಕೃತಕವಾದದ್ದು. ಡಿ.ವಿ.ಜಿ.ಯವರೇ ನಿವೇದನದ 'ಮುನ್ನುಡಿ'ಯಲ್ಲಿ ಹೇಳಿರುವಂತೆ, 'ಇದು ಪಳದದು ಪೊಸತೆನಲೇಂ, ಬದುಕಿನರಲ್ಗಿಟ್ಟ ಸಾರಯಂತ್ರಂ ಕವನಂ'. ಹಳೆಯ ಮತ್ತು ಹೊಸ ಸತ್ತ್ವಗಳೆರಡರ ಹದವಾದ ಮಿಶ್ರಣವಿರುವುದರಿಂದಲೇ 'ಕಾಲದಿಂದೆ ಮಾಸದಾ' ಮೆರಗಿನಿಂದ ಬೆಳಗುತ್ತಿದೆ—ಬೆಳಗುತ್ತಿರುತ್ತದೆ 'ನಿವೇದನ'.

೨. ನಿವೇದನ ಯಾರಿಗೆ? ಹೇಗೆ?

'ನಿವೇದನ' ಎಂಬ ಮೊದಲ ಕವನದಿಂದ ಸಂಕಲನಕ್ಕೂ ಆ ಹೆಸರು ಬಂದಿದೆ. 'ನಿವೇದನ'ದ ಕವಿ ಪರಮ ಆಸ್ತಿಕರು; ದೈವಭಕ್ತರು; ದೈವ ಮಹಿಮೆಯಲ್ಲಿಯೂ ದೈವವಿಲಾಸದಲ್ಲಿಯೂ ಅಪಾರವಾದ ನಂಬಿಕೆಯುಳ್ಳವರು. ಸಕಲ ವಿಶ್ವದ ಸೃಷ್ಟಿಕರ್ತನಾದ ಆ ದೈವ—'ನೀಲಪಟದಿ ವಿವಿಧ ರೂಪಜಾಲಗಳನು ಬಣ್ಣಿಸಿರ್ಪ ಚಿತ್ರಚತುರ', 'ವಸ್ತುಚಯವ ರಚಿಪ ಶಿಲ್ಪಿವರ್ಯ'; 'ಗಿರಿಯ ತೊರೆಯ ಬನದ ಹೊಲದ ಬೆರಗಿ'ನಿಂದಲೂ 'ಮೃಗದ ಖಗದ ಮೆರೆತದಿಂದ'ಲೂ ಈ ಪ್ರಪಂಚವನ್ನು ವಿಹಾರಭವನವನ್ನಾಗಿ ಮಾಡಿರುವವನು; ತಾನು ಮರೆಯಲ್ಲಿದ್ದರೂ ಜಗದಲ್ಲಿ ಸುಖವನ್ನು ತುಂಬುತ್ತಿರುವವನು; ಆಕಾಶದಲ್ಲಿ ಬೆಳಗುವ ಗ್ರಹತಾರೆಗಳನ್ನೂ ಪಕ್ಷಿಗಳ ಮುಖದಲ್ಲಿ ಸಂಗೀತವನ್ನೂ ಜನರ ಮನಸ್ಸಿನಲ್ಲಿ ಪ್ರೇಮವನ್ನೂ ತೋರುತ್ತಿರುವವನು. ಸಕಲ ಸೃಷ್ಟಿಯೂ ಅವನ ಕೃತಿ, ಅವನು ರಚಿಸಿದ 'ಮಾತ'ನುಳಿದ ಕವಿತೆ. ನಾವು ಅವನ ಸೃಷ್ಟಿಯನ್ನು ನೋಡಿ ತಲೆಬಾಗುತ್ತೇವೆ. ಅವನ ದನಿಯನ್ನು ಕೇಳಿ ನಲಿಯುತ್ತೇವೆ, ಅವನಿಟ್ಟ ಭಿಕ್ಷೆಯುಂಡು ಬಾಳುತ್ತೇವೆ. ಸೂರ್ಯನಿಗೆ ಬೆಳಕು ಕೊಡುವಂತೆ, ವಾಯುವಿಗೆ ವೇಗ ಕೊಡುವಂತೆ, ಕವಿಯ ವಚನಕ್ಕೆ ಸರಸಭಾವವನ್ನು ಕೊಡುವವನೂ ಅವನೆ; ಶಿಲ್ಪ, ಚಿತ್ರಕೃತಿಗಳಿಗೆ ಜೀವ ಕೊಡುವವನೂ ಅವನೆ. ಅವನ ಮಹಿಮೆ

ಇಂತಿದ್ದರೂ, ನಾವು 'ಅವನ ಲೀಲೆಗಳನ್ನು ಕಾಣ್ಬೆವು. ಅವನ ಕಾಣೆವು'. ಕಾಣದಿದ್ದರೇನು ? ಅವನನ್ನೆ ಗುರುವೆಂದು ಭಾವಿಸಿ, ಮನಸ್ಸಿನಲ್ಲಿ ಅವನ ಅಡಿಗಳನ್ನು ನೆನೆಯುತ್ತ, ಅವನ ಅನುಗ್ರಹಬಲದಿಂದ ಕಾವ್ಯರಚನೆ ಮಾಡಬಲ್ಲ ಕವಿಯೇ ಪರಮಧನ್ಯನು. ಆದರೆ ಆ ಗುರುವಿನ ಒಲುಮೆ ತನ್ನ ಮೇಲೆ ಇದೆಯೋ ಎಂದು ಇಲ್ಲವೋ ಕವಿಯು ಸಂದೇಹ. ಅದು ಹೇಗಿದ್ದರೂ, ದೈವಭಕ್ತಿ ತನ್ನನ್ನು ನುಡಿಸುತ್ತಿದೆ. ತಾಯ್ನಾಡಿನ ಮಮತೆ ಬಾಯನ್ನು ಬಿಡಿಸುತ್ತಿದೆ ಎಂದು ಕವಿಯ ನಂಬಿಕೆ.

'ದೈವಕೃತಿಯ ಸೊಬಗು' ಮಾತ್ರವಲ್ಲದೆ 'ಸರಸಭಾವತತಿಯ ಸೊಬಗು ಸುಜನ ಜೀವಕಥೆಯ ಸೊಬಗು' ಕವಿಯ ಹೃದಯವನ್ನು ಮಿಡಿದಿವೆ. 'ಮನಕೆ ತೋರ್ಪ ಸೊಬಗನೆಲ್ಲ ತನಗೆ ತುಷ್ಟಿಯಪ್ಪ ತೆರದಿ ಜನಕೆ ನುಡಿಯಲು' ಸಂಕಲ್ಪಿಸಿದ ಕವಿ, ತನ್ನ ಬರೆದ ಬರಹದಿಂದ ತನ್ನ 'ಮನೆಯೊಳೆಸೆದ ಬೆಳಕ'ನ್ನೂ ಹರ್ಷಗೊಳಿಸಬೇಕೆಂದು ಸಂಕಲ್ಪಿಸಿದ್ದರು. ಆದರೆ ವಿಧಿಯ ಸಂಕಲ್ಪ ಬೇರೆಯದಾಗಿತ್ತು. ಆ ಬೆಳಕು ನಂದಿತು. ಆ ಬೆಳಕಿನ ನೆನಪಿಗೆ 'ನಿವೇದನ'ವಾಗಿ ಕವಿಕೃತಿ ಉಳಿಯಿತು ಅಷ್ಟೇ ಅಲ್ಲ; ಬೆಳಕುಗಳ ಬೆಳಕಾಗಿ ಪರಂಜ್ಯೋತಿಯೆನಿಸಿದ, ಶಿಲ್ಪಿವರ್ಯನೆನಿಸಿ ಎಲ್ಲ ಶಿಲ್ಪಕ್ಕೂ ಪ್ರೇರಕನಾದ, ಸರಸಭಾವಗಳಿಗೆ ಸ್ಫೂರ್ತಿದಾಯಕನಾದ ಆ 'ಗುರುವಿನ ಅಡಿ'ಗಳಿಗೂ ಸಲ್ಲಿಸಿದ ಮುಡುಪಾಗಿದೆ—ನಿವೇದನವಾಗಿದೆ— ಈ ಕವನ ಕುಸುಮಗುಚ್ಛ.

೩. 'ನಿವೇದನ'ದ ವಿಷಯ ಪ್ರಣಾಳಿಕೆ

" ತನ್ನ ದೇಶದಲ್ಲಿ ಪ್ರಕೃತಿ ನಿರ್ಮಿತಗಳಾಗಿಯೂ ಮನುಷ್ಯ ನಿರ್ಮಿತಗಳಾಗಿಯೂ ಖ್ಯಾತಿಗೊಂಡಿರುವ ದೃಶ್ಯವಿಶೇಷಗಳನ್ನು ಲೇಖಕನು ಮೊಟ್ಟಮೊದಲು ನೋಡಿದಾಗ ತನಗಾದ ಅನುಭವವು ಮರಳಿ ಆಗಾಗ ತನ್ನ ನೆನಪಿಗೆ ದೊರೆಯಲಾಗುವಂತೆ ಅದನ್ನು ಮಾತುಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕೆಂದು ಮಾಡಿದ ಪ್ರಯತ್ನದ ಫಲವೇ ಈ ಪುಸ್ತಕದ ಪದ್ಯಗಳು" ಎಂದು ಲೇಖಕರೇ ಪುಸ್ತಕದ ಮೊದಲ ಮುದ್ರಣದ ಮುನ್ನುಡಿಯಲ್ಲಿ ಹೇಳಿದ್ದಾರೆ.

(೧) 'ಕೊಡಗಿನ ಬೆಡಗು', 'ಜೋಗದ ಜಲಪಾತ', 'ಶಿವನ ಸಮುದ್ರ'. 'ಬಾಬಾಬುಡನ್ ಬೆಟ್ಟ'—ಈ ಕವನಗಳಲ್ಲಿ 'ಪ್ರಕೃತಿನಿರ್ಮಿತ ದೃಶ್ಯವಿಶೇಷ'ಗಳನ್ನು—ದೈವಕೃತಿಯ ಸೊಬಗನ್ನು—ಕಾಣಬಹುದು. (೨) 'ಕೃಷ್ಣರಾಜ ಸಾಗರ'. 'ಚಾಮುಂಡಿಯ ದೀಪಗಳು', 'ಬೇಲೂರಿನ ಶಿಲಾಬಾಲಿಕೆಯರು', 'ಗೋಮಟೇಶ್ವರ'—ಈ ಕವನಗಳು 'ಮನುಷ್ಯ ನಿರ್ಮಿತ ದೃಶ್ಯವಿಶೇಷ'ಗಳನ್ನು ಬಣ್ಣಿಸುತ್ತವೆ. (೩) 'ಬಲಿಚಕ್ರವರ್ತಿ' ಮತ್ತು 'ಗೋಮಟೇಶ್ವರ'—ಇವು 'ಸುಜನ ಜೀವಕಥೆಯ ಸೊಬಗನ್ನು ಬಿತ್ತರಿಸುತ್ತವೆ. (೪) 'ಸರಸಭಾವತತಿಯ ಸೊಬಗು' ಹಾಡುಗಳಲ್ಲಿ ಹೊರಹೊಮ್ಮಿದೆ.

ಈ ಜಗತ್ತಿನಲ್ಲಿ ಭಗವಂತನ ಮಹಿಮೆ, ಅವನ ಸೃಷ್ಟಿಯ ಸೌಂದರ್ಯ ಎಲ್ಲೆಲ್ಲಿಯೂ ವ್ಯಾಪಿಸಿವೆ. ಅವನ ವಿಲಾಸವನ್ನು ಯಾರೂ ಅರಿಯರು ; ಈ ಜಗತ್ತಿನಲ್ಲಿ ಮನುಷ್ಯನದಾಗಿ ಯಾವುದೂ ಇಲ್ಲ ; ಅವನೇ ಸೂತ್ರಧಾರಿ, ಜಗತ್ತಿನಲ್ಲಿ ನಡೆಯುವ ಎಲ್ಲ ಕಾರ್ಯಕಲಾಪಗಳೂ ಅವನ ನಾಟಕ ; ಮಾನವನು ಸ್ವತಂತ್ರ ನೆಂದುಕೊಂಡರೂ ಸರ್ವಸ್ವತಂತ್ರನಲ್ಲ. ಹಾಡುಗಳಲ್ಲಿ ವ್ಯಕ್ತವಾಗಿರುವ ಈ ಭಾವನೆಗಳೂ ಪ್ರಕೃತಿ ಸೌಂದರ್ಯದ ವರ್ಣನೆಗಳೂ ಕವಿಯ ದೈವಮಹಿಮಾ ಪ್ರಜ್ಞೆಯನ್ನು ನಿಚ್ಚಳವಾಗಿ ಬೆಳಗುತ್ತವೆ. ದೈವ ಮಹಿಮೆಯಲ್ಲಿ ಕವಿಗೆ ಅಚಲವಾದ ನಂಬಿಕೆಯಿದ್ದರೂ ಮಾನವನು ದೈವದ (ಅಥವಾ ಪ್ರಕೃತಿಯ) ಯಾಂತ್ರಿಕವಾದ ಕೀಲುಗೊಂಬೆ ಎನ್ನುವ ಮಟ್ಟಕ್ಕೆ ಹೋಗುವ ಕೇವಲ ದೈವವಾದಿಯಲ್ಲ ಅವರು. ದೈವಮಹಿಮೆಯನ್ನು ಒಪ್ಪಿಕೊಂಡರೂ, ಮಾನವನು ತನ್ನ ಇಹ–ಪರ ಸುಖಸಾಧನೆಗೆ ತಾನೇ ಶ್ರಮಿಸಬೇಕೆಂಬ ಪೌರುಷ (ಪುರುಷ ಪ್ರಯತ್ನ)ವಾದಿಯೂ ಆಗಿದ್ದಾರೆ. ದೈವಬಲ–ಪುರುಷಕಾರಗಳ ಸಮನ್ವಯ ದೃಷ್ಟಿ ನಮ್ಮ ಆರ್ಯಸಂಸ್ಕೃತಿಯ ಮುಖ್ಯ ಲಕ್ಷಣಗಳಲ್ಲಿ ಒಂದು. 'ಕೃಷ್ಣರಾಜಸಾಗರ' ಮತ್ತು 'ಚಾಮುಂಡಿಯ ದೀಪಗಳು' ಈ ಎರಡು ಕವನಗಳಲ್ಲಿ 'ಪುರುಷಕಾರ ಮಹಿಮಾ' ಪ್ರಶಂಸೆಯಿದೆ ; 'ಶಿವನ ಸಮುದ್ರ' ಮತ್ತು 'ಗೋಮಟೇಶ್ವರ'ಗಳಲ್ಲೂ ಆ ಗುಣಪ್ರಶಂಸೆಯ ಸುಳಿವು ಇಲ್ಲದಿಲ್ಲ.

'ನಿವೇದನ' ಪದ್ಯವಿಷಯ ಪ್ರಣಾಲಿಕೆ ಇದು. ಈ ಜಾಡಿನಲ್ಲಿ ಕವನಗಳನ್ನು ಸಮಾಲೋಚನೆ ಮಾಡುವುದರಿಂದ ಅವುಗಳ ಅರ್ಥರಮಣೀಯತೆ, ಭಾವಪುಷ್ಟಿ, ಹೆಚ್ಚು ಹೆಚ್ಚು ಮನದಟ್ಟಾಗುತ್ತವೆ.

ದೈವ ಎನ್ನಿ. ಪರಾತ್ಪರ ಎನ್ನಿ, ಪರಮಾತ್ಮ ಎನ್ನಿ. ಪರಬ್ರಹ್ಮ ಎನ್ನಿ, ಸೃಷ್ಟಿ ಕರ್ತ ಎನ್ನಿ. ವಿಧಿ ಎನ್ನಿ, ಎಲ್ಲ ಒಂದೆ ; ಆ ಪರಮ ಪುರುಷನೇ 'ಜಗದುದಯ ಕಾರಣನು'. ನಮ್ಮ ಕಣ್ಣಿಗೆ ಕಾಣುವ ಚರಾಚರ ಜಗತ್ತೆಲ್ಲವೂ ಅವನ ಕೃತಿ ; ಅದೇ ಪ್ರಕೃತಿ ; ಅದರ ಒಂದೆ ಸರ್ವವ್ಯಾಪಕವಾಗಿ ಅಡಗಿರುವ ದೈವ ಪ್ರತೀಕವಾದ ಮಹಾಶಕ್ತಿಯನ್ನೇ ಮೂಲ ಪ್ರಕೃತಿ, ಆದಿಶಕ್ತಿ, ಆದಿಮಾಯೆ ಎನ್ನುವುದು. ಈ ಪುರುಷ–ಪ್ರಕೃತಿಗಳಿಗೆ ವ್ಯಕ್ತಿತ್ವವನ್ನು ಆರೋಪಿಸಿದಾಗ, ನಮ್ಮ ನಮ್ಮ ಇಷ್ಟದೈವ ಗಳೆನಿಸಿ ಹರಿ–ಹರರಾಗುತ್ತಾರೆ ; ರಮೆ (ಲಕ್ಷ್ಮೀ) ಉಮೆ (ಪಾರ್ವತಿ)ಯರಾಗುತ್ತಾರೆ. ನಾವು ಹರಿಹರರನ್ನೂ ಕಾಣೆವು ; ರಮೆ–ಉಮೆಯರನ್ನೂ ಕಾಣೆವು. ನಮ್ಮ ಪಾಲಿಗೆ ಪ್ರಕೃತಿಮಾತೆಯೆ ರಮೆ–ಉಮೆಯರ ಪ್ರತಿರೂಪ ; ಆಕೆಯ ಮಹಿಮಾದರ್ಶನದ ಮೂಲಕ ದೈವಮಹಿಮೆಯನ್ನು ನಾವು ಅರಿಯಬಹುದು. ಪ್ರಕೃತಿಗೂ ಎರಡು ಮುಖ—ಒಂದು ರುದ್ರಮುಖ, ಇನ್ನೊಂದು ಭದ್ರಮುಖ ; ಆ ಮಹಾತಾಯಿ ನಮಗೆ ಒಲಿದು ಸುಪ್ರಸನ್ನಳಾದಾಗ ತ್ರಿಪುರಸುಂದರಿ, ಭದ್ರಂಕರೀ ; ಕೆರಳಿ ಕುಪಿತೆ ಭೀಕರ ಳಾದಾಗ ಕಾಳಿ, ಕರಾಳಿ. ಪ್ರಕೃತಿಯ ಈ ದ್ವಿಮುಖ ಸ್ವರೂಪವು—ಅವಳ 'ಸರೌದ್ರ

ಸಂಮೋಹನ', 'ಭೀಷ್ಮ-ಸಂಮೋಹನ' ರೂಪವು—'ನಿವೇದನ'ದ ಪ್ರಕೃತಿ ವರ್ಣನೆಯಲ್ಲಿ ಉದ್ದಕ್ಕೂ ಹಾಸುಹೊಕ್ಕಾಗಿ ನೆಯ್ದುಕೊಂಡು ಬಂದಿದೆ. ಅದು ಹೇಗೇ ಕಾಣಲಿ, ಅದರ ಸೊಬಗೆಲ್ಲ 'ದೈವಕೃತಿಯ ಸೊಬಗು'. ದೈವಿಕ ಸಂಬಂಧ ವಾದ ಈ ಪ್ರಜ್ಞೆ ಇಲ್ಲಿನ ಪ್ರಕೃತಿ ವರ್ಣನೆಯ ಅಂತಸ್ಸಾರವೆನ್ನಬಹುದು. ಈ ಬಗೆಯ ಭೀಕರ ಮನೋಹರ ಪ್ರಕೃತಿ ಸೌಂದರ್ಯದ ಚಿತ್ರವನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ಮಾಡುವುದಕ್ಕಾಗಿ ಕವಿ ಉತ್ಪ್ರೇಕ್ಷೆ, ಉಪಮೆ, ರೂಪಕ ಮೊದಲಾದ ಅಲಂಕಾರಗಳನ್ನು ಬಳಸುತ್ತಾರೆ. ವರ್ಡ್ಸ್‌ವರ್ತ್, ಷೆಲ್ಲಿ ಮೊದಲಾದ ಪಾಶ್ಚಾತ್ಯ ಕವಿಗಳೇ ಆಗಲಿ, ವಾಲ್ಮೀಕಿ, ಕಾಳಿದಾಸ, ಪಂಪ, ಲಕ್ಷ್ಮೀಶ ಮೊದಲಾದ ಭಾರತೀಯ ಕವಿಗಳೇ ಆಗಲಿ, ಅವರೆಲ್ಲರ ಪ್ರಕೃತಿ ಪ್ರೇಮವೂ ಒಂದೇ ಬಗೆಯದು. ಆದರೆ, ಆ ಪ್ರೇಮ ಫಲವಾದ ಪ್ರಕೃತಿ ವರ್ಣನೆಯಲ್ಲಿ ಪ್ರಕಾರಗಳು, ಸಂಪ್ರದಾಯಗಳು ಬೇರೆ ಬೇರೆಯಾಗಿರ ಬಹುದು. 'ನಿವೇದನ'ದ ಪ್ರಕೃತಿವರ್ಣನೆಯಲ್ಲಿ ಕಂಡುಬರುವ ವೈಯಕ್ತಿಕ ದೃಷ್ಟಿ ಪಾಶ್ಚಾತ್ಯ ಕವಿಗಳ ಪಂಥಕ್ಕೆ ಸೇರಿದುದಾದರೂ, ವರ್ಣನಾಕ್ರಮ ನಮ್ಮ ಪ್ರಾಚೀನ ಕವಿಗಳ ಸಂಪ್ರದಾಯವನ್ನೇ ಅನುಸರಿಸಿದೆ. ಉಚಿತ ವರ್ಣವಿನ್ಯಾಸ ಕ್ರಮ ಚಿತ್ರಕ್ಕೆ ಹೆಚ್ಚಿನ ಕಳೆ ಕೊಡುವಂತೆ, 'ನಿವೇದನ'ದ ಕವಿಯ ಉಚಿತ ಪದ ಪ್ರಯೋಗ ಕೌಶಲವೂ, ಶಬ್ದ ಶಕ್ತಿಯ ಪರಿಜ್ಞಾನವೂ ಪ್ರಕೃತಿಯ ಬಗೆ ಬಗೆಯ ಭಾವ ವಿಲಾಸಗಳ ವರ್ಣನೆಗೆ ಯಶಸ್ವಿಯಾಗಿ ನೆರವಾಗಿವೆ. 'ನಿವೇದನ'ದಲ್ಲಿನ ಪ್ರಕೃತಿ ವರ್ಣನೆಯ ಈ ವೈಶಿಷ್ಟ್ಯವನ್ನು ಅರಿತುಕೊಂಡರೆ ಅದರ ಸೊಬಗು ಓದುಗರ ಮನಸ್ಸಿಗೆ ಹೆಚ್ಚು ಸೊಗಸುವುದರಲ್ಲಿ ಸಂದೇಹವಿಲ್ಲ.

೪. ಸ್ವಾನುಭವದ ಸಾರ

ಈ ಹಿಂದೆಯೇ ಸೂಚಿಸಿರುವಂತೆ, ಪ್ರಕೃತಿ ವರ್ಣನೆಯಲ್ಲಿ ಕವಿ ತಮ್ಮ 'ಸ್ವಂತ ಅನುಭವ'ಗಳನ್ನು ಮಾತ್ರ ನಿವೇದಿಸಿಕೊಂಡಿರುತ್ತಾರೆ. ತಾವು ಕಂಡ ತಮ್ಮ ತಾಯ್ನಾಡಿನ ಕೆಲವು ಸುಂದರ ದೃಶ್ಯಗಳಲ್ಲಿ ಕಂಡುಬರುವ ವಿಶ್ವಶಿಲ್ಪಿಯ ಶಿಲ್ಪಕೌಶಲವನ್ನೂ, ಚಿತ್ರಚಾತುರಿಯನ್ನೂ ನುಡಿಗಳಲ್ಲಿ ಪಡಿಮೂಡಿಸುವುದೇ ಕವಿಯ ಮುಖ್ಯಾಶಯ. ಅದಕ್ಕನುಗುಣವಾಗಿ ಕಣ್ಣಿಗೆ ಕಟ್ಟುವ ಚಿತ್ರಮಾಲಿಕೆ (ವಿಷ್ಯುಅಲ್ ಇಮೇಜಸ್) ಉದ್ದಕ್ಕೂ ಹಾಯ್ದುಹೋಗುತ್ತದೆ. ಕೊಡಗಿನಲ್ಲಿ ಕಣ್ಣು ಹರಿಯುವ ವರೆಗೆ ಸುತ್ತಲೂ ಕಾಣುವ 'ವನಶೋಭಿ ಪರ್ವತ ಪ್ರವಲಯ ಪಂಕ್ತಿ'ಯನ್ನು ಭುವನಕುಲಾಲನ ಚಕ್ರದ ತಿರಿವಿನಿಂದ ಹುಟ್ಟಿದ ವರ್ತುಲಜಾಲವೆಂದು ಉತ್ಪ್ರೇಕ್ಷಿಸಿರು ವಲ್ಲಿಯೂ, ಸಮುದ್ರವನ್ನು ಅನುಕರಿಸಹೊರಟು ಭೂಮಿಯೇ ಕರಗಿ ಕೊಬ್ಬಿ ದೊಡ್ಡ ದೊಡ್ಡ ಅಲೆಗಳನ್ನು ತಳೆದಿದೆಯೋ ಎಂದು ಬೆಟ್ಟದ ನೀಳ ಸಾಲುಗಳನ್ನು ಕುರಿತು ಉತ್ಪ್ರೇಕ್ಷಿಸಿರುವಲ್ಲಿಯೂ ಕವಿಕಲ್ಪನೆ ಸ್ವೋಪಜ್ಞವಾಗಿರುವುದಲ್ಲದೆ (ಒರಿಜಿನಲ್) ಸುಂದರವೂ ಆಗಿದೆ. ಕೊಡಗಿನ ಬೆಟ್ಟಗಳ ಮೇಲೆ ಸುಳಿದಾಡುವ ಬಿಳಿ ಮೋಡಗಳ ಹರಹು, ದೇವಪದವಿಗೆ ಒಯ್ಯುವ ಪುಣ್ಯದ ಪುಂಜಗಳೆಂಬ ಮೆಟ್ಟಿಲುಗಳಂತೆ ಕವಿಗೆ ಭಾಸವಾಗುತ್ತದೆ. (ಪುಣ್ಯ ಬಿಳಿದು ಎಂಬುದು ಕವಿಸಮಯವಾಗಿರಬಹುದು.

ಆದರೆ, ಇದರಿಂದ ಕಲ್ಪನೆಯ ದಿವ್ಯತೆಗೆ ಪುಷ್ಟಿ ದೊರಕಿದೆಯೆಂಬುದನ್ನು ಗಮನಿಸಬೇಕು.) ಕೊಡಗಿನ 'ಮಹಾರಣ್ಯ ಸರಣಿ ಮಾತ ಮೂದಲಿಸುತಿಹುದು' ಎಂದು ಕವಿ ಮಾತಿನ ಮಿತಿಯನ್ನು ಒಪ್ಪಿಕೊಂಡಿದ್ದರೂ, ಧ್ವನಿಪೂರ್ಣವಾದ ಪದಪುಂಜಗಳಲ್ಲಿ ಅದರ ಭೀಷ್ಮ ಬಂಧುರತೆ ಪ್ರತಿಫಲಿಸುವಂತೆ ಮಾಡಿ, ಮಾತಿನ ಮಹಿಮೆಯನ್ನು ಮೆರೆದಿದ್ದಾರೆ. ಈ ಸಾಲನ್ನು ನೋಡಿ : 'ಮಂದ ಪರಿಮಳಿತ ಶೀತಲ ವಾತ ಸಂಚಲಿತ ಕುಸುಮ ಕಿಸಲಯ ಫಲಪ್ರಕರದಿಂದಂ'—ಸುಗಂಧವಾತದ ಮೆಲುನಡೆ ಹೇಗೆ ಸುವೇದ್ಯವಾಗುತ್ತದೆ ನಮಗೆ ! ಕಾಡಿನ ತುಂಬ ಇಡಿಕಿರಿದಿರುವ 'ಮೃಗ ವಿಹಗ ಕೀಟಕ ಕೋಟಿನಾದ'ವನ್ನು ವಿವರಿಸಿ ತಿಳಿಸುವುದು ಹೇಗೆ? ವಿವರಿಸಲಾಗದ ಅಸಾಧ್ಯ ಕಾರ್ಯವನ್ನು 'ಶಬ್ದಸರ್ವಸ್ವಾವತಾರ' ಎಂಬ ಒಂದು ಸಮಸ್ತ ಪದದಿಂದ ನಿರ್ವಹಿಸಿಬಿಟ್ಟಿದ್ದಾರೆ. ಕೊಡಗಿನ ಪ್ರಕೃತಿ ಸಂಪತ್ತು ಎಷ್ಟು ಅಪಾರವೆಂಬುದು—'ಬಿದಿಯದ್ಭುತ ಕಾರ್ಯಾಂಗಣ'. 'ಸೃಷ್ಟಿಯ ರತ್ನಪೇಟಿ' ಎಂಬ ಮಾತುಗಳಲ್ಲಿ ಸೂಚಿತವಾಗಿದೆ ; ಅದರ ಅನಿರ್ವಚನೀಯವಾದ ಸ್ಫೂರ್ತಿದಾಯಕವಾದ ಸೌಂದರ್ಯವು—ಕೊಡಗು,

> "ಪ್ರಕೃತಿಯ ನರ್ತನರಂಗಂ ।
> ಸುಕೃತಾತ್ಮರಿಗಿದುವೆ ಲೋಚನೋತ್ಸವರಂಗಂ ॥
> ಅಕೃತಕ ಕವಿತಾರಂಗಂ ।
> ವಿಕೃತಮನಸ್ಕರಿಗಿದೊಂದು ಶಾಂತಿಯ ರಂಗಂ" ॥

ಎಂಬ ವರ್ಣನೆಯಲ್ಲಿ ಸೂಚಿತವಾಗಿದೆ. ಈ ಅನಿರ್ವಚನೀಯ ಸೌಂದರ್ಯವನ್ನು ಅರಿಯ ಬೇಕಾದರೆ, 'ನಡೆದು ನೋಡು ಕೊಡಗಿನ ಬೆಡಗಂ' ; ಅದನ್ನು ಸಂಪೂರ್ಣವಾಗಿ ಮನಗಾಣಿಸುವುದು ಕಾವ್ಯಕ್ಕೂ ಅಸಾಧ್ಯ.

೫. ಭೀಷ್ಮ ಸಂಮೋಹನ

'ನವನವಮೆನಿಸುತೆ ತೋರ್ಪ' ಜೋಗದ ಜಲಪಾತದ ಬೆಡಗು, 'ಸರೌದ್ರ ಸಂಮೋಹನ' 'ಗಿರಿ ಕಾನನಂಗಳೊಳ್ ಮುನಿವರರಂ ಪರವಶರ ಗೈದ' ಬೆಡಗು. ಅದರ ಅದ್ಭುತವನ್ನು ಅರಿಯಬೇಕಾದರೂ ಜೋಗಕ್ಕೆ ತೆರಳಿಯೇ ನಿರುಕಿಸಬೇಕು.

ಹಾಗೆ ನಿರುಕಿಸಿದ ಕವಿ ತಮ್ಮ ದಿವ್ಯಾನುಭವದ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಜಲಪಾತದ ದೃಶ್ಯವನ್ನು ನೋಡಿದಾಗ, ಈ ನೀರ್ಬೀಳು ಪ್ರಕೃತಿ ದೇವಿ ಪರದೈವಕ್ಕೆ ಕೊಡುತ್ತಿರುವ ಅರ್ಘ್ಯವೋ ಅಥವಾ ಭೂಮಿಯ ಬೇಗೆಯನ್ನು ಪರಿಹರಿಸಲು ವನದೇವಿ ಮಾಡಿಸುತ್ತಿರುವ ಅಭಿಷೇಕವೋ ಎಂಬ ಸಂದೇಶ ಕವಿಯ ಮನಸ್ಸಿನಲ್ಲಿ ಮೂಡುತ್ತದೆ. ಮರುಕ್ಷಣದಲ್ಲಿಯೇ, ಶರಾವತಿಯ ಭೋರ್ಗರೆವ ಬೀಳು ಈಶ್ವರನ ಜಡೆಮುಡಿಯಿಂದ ಹಾರಿಬಂದ ಗಂಗಾವತರಣದ 'ಕ್ರಮ'ವನ್ನು (ಈ ಪದದ ಔಚಿತ್ಯ ಗಮನಾರ್ಹ) ನೆನಪಿಗೆ ತರುತ್ತದೆ. ಜಲಪಾತದ ಸಮಗ್ರ ಸುಂದರ ಚಿತ್ರವನ್ನು ನಮ್ಮ ಕಣ್ಮುಂದೆ ಇಟ್ಟಮೇಲೆ, ಅದರ ಬೇರೆ ಬೇರೆ ಭಾಗಗಳ

ಪ್ರತ್ಯೇಕ ವರ್ಣನೆಗೆ ತೊಡಗುತ್ತಾರೆ ಕವಿ. ಜಲಪಾತದ ನೀರಿನ ಪ್ರವಾಹಗಳು 'ಕ್ಷೀರಾಸೇಚನ ಧಾರೆ'ಯಂತೆಯೂ, ತುಂತುರು ಹನಿಮಳೆ ಮುತ್ತಿನ ಮಳೆಯಂತೆಯೂ, ಆಡಿ ಸುಳಿಯುವ ನೊರೆಯು ಹರವು ಮೋಡಗಳಂತೆಯೂ ಕಂಡುಬರುತ್ತವೆ. ಕವಿಯ ಕಣ್ಣಿಗೆ ಶರಾವತಿ ಕೇವಲ ನದಿಯಲ್ಲ, ಜೀವಂತ ವ್ಯಕ್ತಿ. ಅವಳು ಊರ್ಜಸ್ವತಿ. ಅವಳ ಬಗೆಬಗೆಯ ಗತಿ ವಿಲಾಸಗಳಲ್ಲಿ ಅವಳ 'ವಿಲೋಲ ಭಾವ'ವೆಲ್ಲ ಪ್ರದರ್ಶಿತ ವಾಗಿರುವುದನ್ನು ಕವಿ ಕಂಡು ವಿಸ್ಮಯಪಡುತ್ತಾರೆ—ನಮ್ಮ ಸಂತೋಷಕ್ಕಾಗಿ. ಅವಳು ಒಮ್ಮೆ ಗಾಂಭೀರ್ಯದಿಂದ ಸಾರುತ್ತಾಳೆ ; ತಟ್ಟನೆ ಔದ್ಧತ್ಯದಿಂದ ಹಾರು ತ್ತಾಳೆ ; ಬಳ್ಳಿಯಂತೆ ಬಳುಕಿ–ವಿಲಾಸದಿಂದ ಸರಿಯುತ್ತಾಳೆ ; ಬೆಟ್ಟದ ತುದಿಯಿಂದ ಬೀಳುತ್ತಾಳೆ ; ಮತ್ತೆ ಮೇಲೆದ್ದು ನಾಟ್ಯದಿಂದ ನಲಿಯುತ್ತಾಳೆ. ಒಡನೆಯೇ ಪಾತಾಳ ವನ್ನು ಸೇರುವಂತೆ ಕೋಪದಿಂದ ಓಡುತ್ತಾಳೆ. "ಶರಾವತಿಯಿದೇಂ ನಿನ್ನಾಯಮಂ ಬಲ್ಲರಾರ್ !" ಎಂದು ಕವಿಯೊಡನೆ ನಾವೂ ವಿಸ್ಮಯಪಡುವಂತಾಗುತ್ತದೆ.

'ಕನ್ನಡ ನಾಡಿನ ಕುತುಕ'ವೂ 'ಕನ್ನಡಿಗರ ಸಾಹಸಕ್ಕೆ ಕನ್ನಡಿ'ಯೂ 'ಕನ್ನಡಿ ಗರ ಭಾಗ್ಯದ ನಿಧಿ'ಯೂ ಆದ 'ಶಿವನ ಸಮುದ್ರ' ಎಂಬ ಕವನವೂ ಇನ್ನೊಂದು ನದೀ ದೃಶ್ಯದ 'ಭೀಷ್ಮ ಸಂಮೋಹನ'ವನ್ನು ಚಿತ್ರಿಸಹೊರಟಿದೆ. ಈ ಅಂಶದಲ್ಲಿ ಮಾತ್ರವಲ್ಲದೆ ಇನ್ನೂ ಒಂದೆರಡು ಅಂಶಗಳಲ್ಲಿ ಎರಡು ಕವನಗಳ ಭಾವಧಾರೆಗಳಿಗೂ ಸಾಮ್ಯವು ಕಂಡುಬರುತ್ತದೆ. ಶರಾವತಿಗೂ ಈಶ್ವರನಿಗೂ ಒಂದು ಸಂಬಂಧವನ್ನು ಕಲ್ಪಿಸಿರುವಂತೆ (ಜೋ. ಜ., ಪದ್ಯ 3), ಕಾವೇರಿಗೂ ಶಿವನಿಗೂ ಸಂತತ ಸಾಹಚರ್ಯ ವನ್ನು ಕಲ್ಪಿಸಲಾಗಿದೆ. 'ಶಿವನ ಸಮುದ್ರ' ಎಂಬ ಹೆಸರಿನಿಂದಲೇ ಸ್ಫೂರ್ತಿಗೊಂಡು ಕವಿ ಅತ್ಯಂತ ಸುಂದರವೂ ದಿವ್ಯ ಭವ್ಯವೂ ಆದ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ :

ತರುಗುಲ್ಮಾವೃತ ಶೈಲಮು ।
ಮರಕತ ಶಿವಲಿಂಗಮೆನುತೆ ಕಾವೇರಿಯುದಂ ॥
ಪರಿಚರಿಸಿ ಲೋಕಕೆಲ್ಲಂ ।
ದೊರೆಯಿಪ ತೀರ್ಥಾಂಬುವಲ್ತೆ ಶಿವನ ಸಮುದ್ರಂ ॥

ಹಸುರು ತುಂಬಿದ ಬೆಟ್ಟವೇ ಪಚ್ಚೆಯ ಲಿಂಗ ; ಆಯೆಡೆಯಲ್ಲಿ ಕಾವೇರಿ ಅದನ್ನು ಸುತ್ತುಬಳಸಿ, ಸೇವಿಸಿ ಲೋಕಕ್ಕೆಲ್ಲ ತೀರ್ಥವನ್ನು ದೊರಕಿಸುವುದರಿಂದ ಅದು ಶಿವನ ಸಮುದ್ರ. ಹೊರಗಣ್ಣಿಗೂ ಒಳಗಣ್ಣಿಗೂ ಏಕಕಾಲದಲ್ಲಿ ಹಿತಕಾರಕ ಗಳಾದ ಇಂಥ ಚಿತ್ರಗಳು ಸಾಹಿತ್ಯಲೋಕದಲ್ಲಿ ತುಂಬ ವಿರಳ.

೬. ಶಾವ್ಯಾಶ್ರಯೆ

ಕಾವೇರಿಯ 'ಧವಳತರ ಧಾರೆ' ಶಿವನೊಡಲ ಹಾರ. ಎಂಥ ದಿವ್ಯ ಸುಂದರ ಕಲ್ಪನೆ ! ಈ ಉಕ್ತಿ ಶಿವಸಾಹಚರ್ಯವನ್ನು ಇನ್ನಷ್ಟು ಪೋಷಿಸಿದೆ. ಅದೇ ಧಾರೆ

ಕವಲು ಕವಲಾದಾಗ, 'ನಿಜಭವನಕೆ ಸರಿವ ಆದಿಶೇಷ ಸಂತತಿ'. ವಕ್ರವಾಗಿ ಹರಿಯುವ ಹೊಳೆಯನ್ನು ಹಾವಿಗೆ ಹೋಲಿಸುವುದು ಸಾಧಾರಣವಾದರೂ, ಇಲ್ಲಿನ ಉಕ್ತಿವೈಚಿತ್ರ್ಯದಲ್ಲಿ ವಿಶೇಷತೆಯಿದೆ.

ಶರಾವತಿಯ ಗತಿಯನ್ನೆಂತೋ ಅಂತೆ ಕಾವೇರಿಯ ಗತಿಯನ್ನೂ ಎಷ್ಟು ವಿಧದಲ್ಲಿ ವರ್ಣಿಸಿದರೂ ಕವಿಗೆ ತೃಪ್ತಿಯಿಲ್ಲ. ಅವಳ ಗಂಭೀರಗತಿಯನ್ನು 'ಮತ್ತೇಭ ವಿಕ್ರೀಡಿತ' ವೃತ್ತವೊಂದರಿಂದ ವರ್ಣಿಸಿರುವುದು ಎಷ್ಟು ಉಚಿತವಾಗಿದೆಯೊ ಅವಳ ದ್ರುತಗತಿ (ವೇಗದ ನಡೆ)ಯನ್ನು ಮೂರು ಮಾತ್ರೆಗಳ ಗಣಗಳ ಛಂದಸ್ಸಿನಲ್ಲಿ ಓಡಿಸಿರುವುದು ಅಷ್ಟೇ ಉಚಿತವಾಗಿದೆ. ಈ ಎರಡು ಪದ್ಯಭಾಗಗಳಲ್ಲಿ 'ಕವೇರ ತನಯೆ'ಯ ಒಲವು, ಸಂಭ್ರಮ, ಪ್ರಿಯಾಭಿಸಾರ, ಲಾವಣ್ಯಲೀಲೆ, ಮುಳಿಸು, ಸಾಹಸ, ಮಹಾಗರ್ವ, ಯಾತ್ರಾವ್ರತೋತ್ಸಾಹ, ಬಲವನ್ನು ತೋರುವ ಠೀವಿ, ಚಾಪಲ್ಯ, ಅಲಸರನ್ನು ಹೀಯಾಳಿಸುವ ಚಲ—ಈ ಭಾವತುಮುಲವೆಲ್ಲ ವ್ಯವೆತ್ತಿದೆ; ಕಾವೇರಿಯ ಧಾರೆಯ ವರ್ಣನೆಯಲ್ಲಿ ಕವಿತಾಧಾರೆಯೂ ಭಾವತರಂಗಿತವಾಗಿ, ಕಾವೇರಿಯು 'ಸರಸೆ, ಕಾವ್ಯಾಶ್ರಯೆ' ಎಂದೆನಿಸುತ್ತದೆ. ಅವಳು ತನ್ನ ಗತಿವೈವಿಧ್ಯ ದಿಂದ ಸ್ವಭಾವ ವೈವಿಧ್ಯದಿಂದ ನಾನಾ ರಸಭಾವ ಗುಣಗಳನ್ನು ಬೋಧಿಸುವ ಕಾರಣದಿಂದಾಗಿ ಅವಳು ನಿಜವಾಗಿಯೂ ಕಾವ್ಯಾಶ್ರಯೆಯೆಂದು ಕವಿಯ ಭಾವ.

ಎಲ್ಲಕ್ಕಿಂತ ಹಿರಿದಾಗಿ, ಕಾವೇರಿ 'ಭೀಮಾಕಾರವ ತಾಳ್ದೊಡೇಂ ಸದೆಯೆಂ, ಭಮ್ರಂಕರೀ'. ಜನೋಪಕೃತಿಯ ಔದಾರ್ಯವನ್ನು ಮೆರೆಯುತ್ತಿದ್ದಾಳೆ ಅವಳು. ಕಾವ್ಯ ಪಾಠವಿರಲಿ, 'ಪುರುಷಬಲವ ಬೆಳಗಿರಿ' ಎಂಬ ಅವಳ ನೀತಿಪಾಠ ನಮಗೆ ಬಹು ಅಮೂಲ್ಯವಾದುದು.

೭. ಭೈರವ ತಾಂಡವ ಭುವಿ

'ಬಾಬಾಬುಡನ್ ಬೆಟ್ಟದ' ಭವ್ಯತೆ ಭೀಕರತೆಗಳನ್ನು ವ್ಯಕ್ತಪಡಿಸಲು ಕಂದ ಪದ್ಯಗಳು ಕವಿಗೆ ನೆರವಾಗಿಲ್ಲವಾದರೂ, ಕವಿ ನಮ್ಮ ಮುಂದೆ ಇಟ್ಟಿರುವ ಚಿತ್ರಗಳು ಕೆಲವು ಮನೋಜ್ಞವಾಗಿವೆ. 'ಕುಲಪರ್ವತ ಹೃದಯಾಂಶ' ಎನ್ನುವುದರಿಂದ ಚಂದ್ರ ದ್ರೋಣ ಪರ್ವತದ ಸತ್ತ್ವವೂ, 'ಪಸುರ ಕಡಲ್ ಕಣ್ಗೆಳೋಡುವನ್ನೆಗಂ' ಎಂಬಲ್ಲಿ ಪರ್ವತ ಪ್ರಾಂತದ ಬಿತ್ತರವೂ, 'ಸರಸತೆಯಿಂ ಸುಳಿಯುತಿರ್ಪ ಗೌರಾಂಗ ಮನೋಹರೆ ಕಾದಂಬಿನಿಯ ತಿರಸ್ಕರಿಪೀ ಶೈಲಾಧಿರಾಜ' (ಈ ಶೃಂಗಾರ ಚಿತ್ರದ ಸೊಬಗನ್ನು ಸಾವಧಾನವಾಗಿ ಸವಿಯಬೇಕು) ಎಂಬ ಅಭಿವರ್ಣನೆಯಲ್ಲಿ ಪರ್ವತದ ಎತ್ತರವೂ ವ್ಯಂಜಿತವಾಗಿ ನಮ್ಮ ಕಲ್ಪನೆಗೆ ಬರುತ್ತವೆ. ಬೆಟ್ಟದ ಸುತ್ತಣ ನೂರಾರು ಶಿಖರಗಳನ್ನು, ಈ ಶೈಲಾಧಿರಾಜನ ಸಭೆಯಲ್ಲಿ, 'ಮರಕತಮಯ ಸಿಂಗರಗಳ ತೊಟ್ಟು ಮೆರೆವ ಸಾಮಂತ'ರೆಂದು ಹೇಳಿ ರೂಪಕವನ್ನು ವಿಸ್ತರಿಸಿರುವುದು ತುಂಬ ಉಚಿತವಾಗಿದೆ. ಬೆಟ್ಟದ ವಕ್ರವಾದ ಕಣಿವೆದಾರಿಯಲ್ಲಿ ಉದ್ದಕ್ಕೂ ಹಬ್ಬಿರುವ ಮಹಾರಣ್ಯವನ್ನು

'ಮಲಗಿ ಸುಯ್ಯುವ ಅಜಗರಪತಿ'ಗೆ ಹೋಲಿಸಿರುವುದು ಸ್ಥಾವರಾರಣ್ಯದ ಅಲು ಗಾಟವನ್ನು ಚೆನ್ನಾಗಿ ಚಿತ್ರಿಸುತ್ತದೆ. ಪರ್ವತದ ಗುಹೆ ಇರುಳಿನ ಓಲಗಕ್ಕೆ ಗುಪ್ತ ಭವನವೆನಿಸಿದೆ. ಬೆಟ್ಟದ ಸಾಲುಗಳನ್ನು ನೋಡಿದರೆ ಭೂಮಿ ತನ್ನ ಭೂರಿ ಸ್ನಾಯು ಗಳನ್ನು ಉಬ್ಬಿಸಿದಂತೆ ಕಾಣುತ್ತದೆ. ಚಿತ್ರ ಚೆನ್ನಾಗಿದ್ದರೂ, ಯುಗಯುಗದಿಂದ ಹೆಣ್ಣೆಂದು ಎಣಿಸಿರುವ ಭೂಮಿಗೆ ಸ್ನಾಯುಗಳನ್ನು ಉಬ್ಬಿಸಿರುವುದು ಉಚಿತವಾಗಿ ಕಾಣುವುದಿಲ್ಲ—ಅವಳು ಎಷ್ಟೇ ಕರಾಳತೆಯನ್ನೇ ಹೊಂದಿರಲಿ. ಆ ಕರಾಳತೆಯನ್ನು ಕಂಡಾಗ, ಆ ಪರ್ವತ ಪ್ರಾಂತವು 'ಭೈರವ ತಾಂಡವ ಭೂಮಿ'ಯಾಗಿರಬೇಕು, ಇಲ್ಲವೆ 'ಮಾರುತಿ ಲೀಲಾ ಪ್ರದೇಶ'ವಾಗಿರಬೇಕು. ಅದೂ ಇಲ್ಲವೆ 'ಭೀಮಗದಾ ಧೋರಣೆಯಂಗಣ'ವಾಗಿರಬೇಕು— ಎನ್ನಿಸುವುದು ಸಹಜವಾಗಿದೆ.

ಒಟ್ಟಿನಲ್ಲಿ, 'ನಿವೇದನ'ದ ಪ್ರಕೃತಿ ವರ್ಣನೆ, ಪ್ರಕೃತಿಯ 'ಸರ್ವರಿದ್ರ ಸಂಮೋಹನ'ವನ್ನು ಪರಿಣಾಮಕಾರಿಯಾಗಿ, ಅನ್ಯಾದೃಶವಾಗಿ, ಪರಿಚಯ ಮಾಡಿ ಕೊಡುತ್ತದೆ. ಅದಕ್ಕಿಂತ ಮಿಗಿಲಾಗಿ, ಪ್ರಕೃತಿ ದೈವಕೃತಿ, ಪ್ರಕೃತಿಯ ಸೌಂದರ್ಯ ಪರತತ್ತ್ವದ ಭಾಸ ಎಂಬ ಸತ್ಯವನ್ನು ಅರಿವುಮಾಡಿಕೊಡುತ್ತದೆ. ಪ್ರಕೃತಿ ಪರ ದೈವದ ಪೂಜಾರಿಣಿ. ತಾನು ಅವನಿಂದ ಪಡೆದ ವರಪ್ರಸಾದವನ್ನು ನಮಗೆ ನೀಡು ತ್ತಾಳೆ. ಕಾವೇರಿ 'ದೈವಪ್ರಸಾದದ ಲಹರಿ' ಎಂಬ ಉಕ್ತಿಯಲ್ಲಿ ಈ ಭಾವನೆ ದ್ಯೋತಕವಾಗಿದೆ. ಇಷ್ಟಾದರೂ, ಪ್ರಕೃತಿ ಮಾಯೆ : ಕವಿ ಹೇಳುವಂತೆ, 'ದಿಟ ಮಲ್ಲಂ ತೋರ್ಕೆ' : ಈ ನೀತಿಯನ್ನು ಕಲಿಸುವವಳೂ ಅವಳೆ. ಆದ್ದರಿಂದ, ಪ್ರಕೃತಿಯ ಆರಾಧನೆ ದೈವಸಾಕ್ಷಾತ್ಕಾರಕ್ಕೆ ಒಂದು ಸಾಧನ, ಅಷ್ಟೆ. ಈ ಬಗೆಯ ಕಲ್ಪನೆಯನ್ನು ಉಂಟುಮಾಡಿಕೊಡುವ ಪ್ರಕೃತಿ ವರ್ಣನೆ ಸಾರ್ಥಕವಾದುದು. ಕವಿಯೂ ಧನ್ಯ ; ನಾವೂ ಧನ್ಯರು.

೮. ಸೌಂದರ್ಯ ದರ್ಶನ

"ಬೇಲೂರಿನ ವಿಗ್ರಹಗಳು ಕೀಟ್ಸ್ (Keats) ಕವಿಯ Ode on a Grecian Urn ಎಂಬ ಕಾವ್ಯದಲ್ಲಿಯ ಸೌಂದರ್ಯ ಪ್ರಶಂಸೆಯನ್ನು ಜ್ಞಾಪಕಕ್ಕೆ ತಂದವು. ಇಲ್ಲಿಯ ಒಂದೆರಡು ಪಂಕ್ತಿಗಳು ಆ ಮಹಾಕವಿಯ ಪ್ರಸಾದವಾಗಿವೆ" ಎಂದು ಕವಿ ಡಿ.ವಿ.ಜಿ.ಯವರು 'ನಿವೇದನ'ದ ಮೊದಲ ಮುದ್ರಣದಲ್ಲಿ ವಿನಯದಿಂದ ಒಪ್ಪಿ ಕೊಂಡಿದ್ದಾರೆ. ಕೀಟ್ಸ್ ಕವಿಯ ಸೌಂದರ್ಯಪ್ರಶಂಸೆಯಲ್ಲಿ ಸೌಂದರ್ಯ ಮೀಮಾಂಸೆಯೇ ಅಡಕವಾಗಿದೆಯೆನ್ನಬಹುದು. ಕೀಟ್ಸ್ ಕವಿಯ ಚಿರಸ್ಮರಣೀಯ ವಾದ ಆ ಪಂಕ್ತಿಗಳು : (Heard melodies are sweet, but those unheard are sweeter. 'Beauty is truth, truth beauty'—that is all ye know on earth, and all ye need to know ಈ ಪಂಕ್ತಿಗಳ ಜೊತೆಗೆ, ಆತನ Endymion ಕಾವ್ಯದ 'A thing of beauty is a joy for ever' ಎಂಬ ಇನ್ನೊಂದು ಪಂಕ್ತಿಯನ್ನೂ ಗಮನಿಸಬಹುದು) ಸೌಂದರ್ಯೋ-

ಪಾಸನೆಯ ಬೀಜಮಂತ್ರಗಳಂತಿವೆ. ಇವು ಕೇವಲ ಸೌಂದರ್ಯಮೀಮಾಂಸೆಯನ್ನಷ್ಟೇ (aesthetics) ಕುರಿತಿವೆ. 'ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ, ತಿಳಿಯಬೇಕಾದ್ದು ಇಷ್ಟೇ', 'ತಿಳಿಯಬೇಕಾದ್ದು ಇಷ್ಟೇ ಅಲ್ಲ, ಇನ್ನೂ ಕೊಂಚ ಇದೆ' ಎಂಬದು ಡಿ.ವಿ.ಜಿ.ಯವರ ಕವಿತೆಯನ್ನೋದಿದರೆ ತಿಳಿಯುತ್ತದೆ. ಅದು ಏನೆಂದರೆ ; ಸತ್ಯ ಸೌಂದರ್ಯ ಮಾತ್ರವಲ್ಲ, ದೇವರೂ ಹೌದು—ಇದು ಭಾರತದ ದೃಷ್ಟಿ, ದರ್ಶನ. ('ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು—'ರಾಘವಾಂಕ.) ನಾವು ಭಗವಂತನನ್ನು 'ಸಚ್ಚಿದಾನಂದಸ್ವರೂಪ', 'ಸತ್ಯಂ–ಶಿವಂ–ಸುಂದರಂ' ಎಂದು ನಿರ್ದೇಶಿಸುತ್ತೇವೆ. ಇಷ್ಟು ಮಾತ್ರವಲ್ಲ: ಭಗವಂತನು ಪ್ರೇಮಮೂರ್ತಿಯೂ ಹೌದು. ಸೌಂದರ್ಯೋಪಾಸನೆ ಭಗವದಾರಾಧನೆಯೂ ಆದೀತು. (Art is worship ಎಂಬುದು John Ruskinನ ಮತ.) ಪ್ರೇಮವಿಲ್ಲದ ಭಕ್ತಿ ಎಲ್ಲಿ ಬಂತು ? ಪ್ರೇಮವೂ ಸತ್ಯದ ಒಂದು ಮುಖ. ಸೌಂದರ್ಯ ವಿಚಾರದಲ್ಲಿ ಈ 'ಸಮ್ಯಕ್–ದರ್ಶನ'ವನ್ನು ಡಿ.ವಿ.ಜಿ.ಯವರು ತಮ್ಮ ಕವನದ ಸಾರಸರ್ವಸ್ವವನ್ನಾಗಿಟ್ಟುಕೊಂಡು ಕೀಟ್ಸ್ ಕವಿಯ 'ಮೀಮಾಂಸೆ'ಯನ್ನು 'ದರ್ಶನ'ದ (Philosophy) ಮಟ್ಟಕ್ಕೆ ಏರಿಸಿದ್ದಾರೆ. ಒಂದೆರಡು ಉತ್ತಮೋತ್ತಮ ಚರಣಗಳ ವಿಚಾರದಲ್ಲಿ ಕನ್ನಡ ಕವಿ ಆಂಗ್ಲಕವಿ ಕೃತಿಗೆ ಋಣಿಯಾಗಿದ್ದರೂ ಇಡಿಯ ಕವಿತೆ ಅನುಕೃತಿಯಾಗಿರದೆ ಸ್ವಂತ ಕೃತಿಯಾಗಿದೆ. ಗ್ರೀಕಿನ ಕುಂಭದ ಮೇಲಿನ ಚಿತ್ರಕಲೆ ಕೀಟ್ಸ್ ಕವಿಗೆ ಕವಿತಾ ಸ್ಫೂರ್ತಿಯನ್ನು ನೀಡಿರುವಂತೆ, ಬೇಲೂರಿನ ಶಿಲ್ಪಕಲೆ ಡಿ.ವಿ.ಜಿ.ಯವರಿಗೆ ಸ್ಫೂರ್ತಿ ಕೇಂದ್ರವಾಗಿದೆ. ಹೀಗಿರುವುದರಿಂದ ಕಾವ್ಯವಸ್ತುವಿನ ವಿಚಾರದಲ್ಲಿ ಸ್ವೀಕಾರದ ಪ್ರಶ್ನೆಯೇ ಏಳುವುದಿಲ್ಲ.

೯. ಶಿಲಾಬಾಲಿಕೆಯರ ಸೌಂದರ್ಯ ವರ್ಣನೆ

ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದ ಮಹನೀಯ ಹೊಯ್ಸಳೇಶ್ವರನಾದ ವಿಷ್ಣುವರ್ಧನ. ಅದನ್ನು ಕಟ್ಟಿದವನು ಶಿಲ್ಪಿವರೇಣ್ಯನಾದ ಜಕ್ಕಣ. ರಾಮನ ಪಾದಸ್ಪರ್ಶದಿಂದ ಶಿಲೆ ಹೆಣ್ಣಾಯಿತೋ ಇಲ್ಲವೋ, ಶಿಲ್ಪಿಯೋರ್ವನ ಭಕ್ತಿ ಭಾವಸ್ಪರ್ಶದಿಂದ ಬೇಲೂರಿನಲ್ಲಂತೂ ಶಿಲೆ ಹೆಣ್ಣಾಗಿದೆ ; ಮೇಲಾಗಿ ಕಲೆಯಾಗಿದೆ. ಕಲಾವಿದಗ್ಧರ ನೆಲೆಯಾಗಿದೆ. ಕಲೆಯ ನೆಲೆ ಬೆಲೆಗಳಿಗೆ ಆಕರವೆನಿಸಿದ ಶಿಲಾಬಾಲಿಕೆಯರ ಲಾಸ ವಿಲಾಸಗಳ ವೈಭವವನ್ನೂ ಅಂತರಂಗವನ್ನೂ ಡಿ.ವಿ.ಜಿ.ಯವರು ತಮ್ಮ ಅಮೋಘವಾದ ಈ ಕವಿತೆಯಲ್ಲಿ ಸೆರೆಹಿಡಿದು ತೆರೆದು ತೋರಿಸಿದ್ದಾರೆ. ಕನ್ನಡ ನಾಡಿನ ಕೆಲವು ಪ್ರಕೃತಿ ದೃಶ್ಯಗಳ ಸೊಬಗನ್ನು ಪರಿಚಯ ಮಾಡಿಕೊಟ್ಟ ಕವಿಯೇ ಈ ಕವನದಲ್ಲಿ ಕನ್ನಡ ನಾಡಿನ ಕಲಾವೈಭವವನ್ನು ಮನಗಾಣಿಸಿದ್ದಾರೆ. ಡಿ.ವಿ.ಜಿ.ಯವರ ಕವನಭವನದಲ್ಲಿ ಶಿಲಾಬಾಲಿಕೆಯರು ರೂಪಾಂತರ ಹೊಂದಿ ಭಾವಬಾಲಿಕೆಯರಾಗಿ ನಮ್ಮ ಕಣ್ಣೆದುರು ನಾಟ್ಯಾಭಿನಯ ಮಾಡುವಂತೆ ಭಾಸವಾಗುತ್ತದೆ.

ಶಿಲಾಬಾಲಿಕೆಯರನ್ನು ಕಂಡೊಡನೆಯೇ "ಮಾಯಾಂಗಾತಿಯರು ಇವರಾರು ?" ಎಂದು ಕವಿ ವಿಸ್ಮಯಪಡುತ್ತಾರೆ. ಅವರು ಬೀಸುವ ಮಾಯೆಯಾದರೂ ಏನು ? "ಕಿವಿಯಿಂದ ಕೇಳಲಾಗದ ಶಬ್ದಸುಖವನ್ನೂ ನಾಲಗೆಗೆ ಒದಗದ ಅಮೃತರಸವನ್ನೂ ಬಿಟ್ಟ ಕಣ್ಣುಗಳಿಂದ ನೀವು ಸವಿಯಿರಿ' ಎನ್ನುತ್ತಾರಂತೆ ಅವರು. ಶ್ರವಣೇಂದ್ರಿಯ ರಸನೇಂದ್ರಿಯಗಳ ಕಾರ್ಯವನ್ನು ನೇತ್ರೇಂದ್ರಿಯ ಮಾಡಬೇಕಂತೆ. ಈ ಕಾರ್ಯ ವಾಸ್ತವ ಪ್ರಪಂಚದಲ್ಲಿ ಸಾಧ್ಯವಿಲ್ಲದೆಹೋದರೂ ಕಲಾಪ್ರಪಂಚದಲ್ಲಿ ಸಾಧ್ಯ. ಇಂತು ಆ ಬಾಲಿಕೆಯರು ಕಲೆಯ ಮಹಿಮೆಯನ್ನು ಸಾರಿದ್ದಾರೆ. ಅವರು ಬೀಸಿದ ಮಾಯೆ ಎಂದರೆ ಕಲೆ ಬೀಸಿದ ಮಾಯೆ. ಮಾಯಾಸೃಷ್ಟಿಯಲ್ಲಿಯೇ ಇರುವುದು ಕಲೆಯ ಗುಟ್ಟು : ಅದರ ಸೌಂದರ್ಯ, ಸತ್ತ್ವ. ಕಲೆಯ ಮಾಯಾಸೃಷ್ಟಿ ಬ್ರಹ್ಮನ ಮಾಯಾ ಸೃಷ್ಟಿಯ ಅನುಕರಣ ಮಾತ್ರ. (**Art is imitation** ಎಂಬುದು **Aristotle**ನ ಮತ.) ಕಲಾಸೃಷ್ಟಿ ಬ್ರಹ್ಮನ ಸೃಷ್ಟಿಗೆ ಕಡಮೆಯೇನಲ್ಲ.

ಕವಿ ಮೊದಲು ನಮಗೆ ಶಿಲಾಬಾಲಿಕೆಯರ ರೂಪವೈವಿಧ್ಯವನ್ನೂ ವಿವಿಧ ಭಾವ ಭಂಗಿಗಳನ್ನೂ ಪರಿಚಯಮಾಡಿಕೊಡುತ್ತಾರೆ. ಒಬ್ಬಳು ಶೃಂಗಾರವಲ್ಲರಿ : ಬಳ್ಳಿಯೊಡನೆ ಬಳುಕಿ ತನ್ನ ನೃತ್ಯಲಾಸ್ಯದಿಂದ ಯಾರನ್ನೋ ಒಲಿಸಿಕೊಳ್ಳುವಂತೆ ತೋರುತ್ತಾಳೆ. ಇನ್ನೊಬ್ಬಳು ಮಾಧುರ್ಯಮಂಜೂಷೆ, ಸೊಬಗಿನ ಸಂಪುಟ : ಅವಳ ಮೌನ ಇನ್ನೂ ಮಧುರತರ ! ಯಾರದೋ ಚರಿತೆಯನ್ನು ತನ್ನ ಮುಂಗೈ ಮೇಲಣ ಹೂಗಿಳಿಗೆ ಹೇಳುತ್ತಿರುವಂತಿದೆ. (ಇನ್ನಾರ ಚರಿತೆ ? ತನ್ನ ಪ್ರಿಯನ ಚರಿತೆಯೇ ಇರಬೇಕು !) ಮತ್ತೊಬ್ಬಳು ಮುಗ್ಧವಾದ ಆಕರ್ಷಕ ಮುಖವುಳ್ಳವಳು : ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದಾಳೆ ; ಯಾರನ್ನೋ ನೆನೆದು ನಸುನಗುತ್ತಿದ್ದಾಳೆ. ಮಗುದೊಬ್ಬಳು ಪ್ರಣಯ ಪ್ರರೋಹೆ : ಪ್ರೇಮಭಾವ ಅವಳಲ್ಲಿ ಅದೇತಾನೇ ಮೊಗ್ಗೊಡೆಯುತ್ತಿದೆ. ಇಂಥವಳ ಆಕೃತಿ ಯಾರಿಗಾದರೂ ಪ್ರಿಯತರವಾಗದಿದ್ದೀತೆ ? ಆದರೂ, ಅವಳು ಯಾರ ಮೇಲೋ ಮುನಿಸನ್ನು ನಟಿಸುತ್ತಿದ್ದಾಳೆ. (ಪ್ರಿಯ ಪ್ರಿಯೆಯರದು ಯಾವಾಗಲೂ ಹುಸಿಕೋಪ : ನಿಜವಾಗಿ ಕೋಪಿಸಿಕೊಂಡರೆ ನಡೆದೀತೆ !) ಇವರೆಲ್ಲ ಶಿಲ್ಪಿಬ್ರಹ್ಮನ ಕುಮಾರಿಯರು : ಚೆಲುವನ್ನು ಎರಕಹೊಯ್ದು ಮಾಡಿದಂತಿರುವವರು. ಇವರನ್ನು ನೋಡಿ ನೋಡಿ, 'ದೇವರ ದರ್ಶನಕ್ಕೆಂದು ಬರುವ ಭಕ್ತವೃಂದವನ್ನು ನಿಮ್ಮ ಶೃಂಗಾರ ಚೇಷ್ಟೆಗಳಿಂದ ಏಕೆ ಚಂಚಲಮನಸ್ಕರನ್ನಾಗಿ ಮಾಡುತ್ತ ನಿಂತಿರುವಿರಿ ?' ಎಂದು ಕವಿ ಅವರನ್ನು ಪ್ರಶ್ನಿಸುತ್ತಾರೆ. ಈ ಹಂತದಲ್ಲಿ, ಶೃಂಗಾರಭಾವಕ್ಕೂ ಭಕ್ತಿಭಾವಕ್ಕೂ ವಿರೋಧ ವಲ್ಲವೆ ?—ಎಂಬ ಸಂದೇಹ ಸಹಜವಾಗಿಯೇ ಕವಿಯ ಮನಸ್ಸಿನಲ್ಲಿ ಮೂಡುತ್ತದೆ.

ಅದು ಹೇಗಿದ್ದರೂ, ಈ ಪ್ರೇಮದ ಪುತ್ಥಲಿಗಳು ತಮ್ಮ ಪ್ರಿಯರಿಗಾಗಿ ಕಾದಿರುವರೆಂಬುದು ಸ್ಪಷ್ಟ. ಕಾಯುವುದಾದರೂ ಎಲ್ಲಿಯವರೆಗೆ ? ಇದುವರೆಗೂ ಬಾರದ ತಮ್ಮ ಮನಃಪ್ರಿಯನು ಇನ್ನು ಬರುವನೆಂದು ಅವರು ನಂಬುವುದಾದರೂ ಹೇಗೆ ? ದೇವಾಲಯಕ್ಕೆ ಬರುವ ಅಸಂಖ್ಯಾತರಾದ ಪ್ರೇಕ್ಷಕರಲ್ಲಿ ಆ ಪ್ರೇಮ

ಇದ್ದಿದ್ದರೆ ಆವನು ಬಾರದೆ ಇರುತ್ತಿದ್ದನೆ ? ಅಲ್ಲಿ ಇಲ್ಲದ ಆ ಪ್ರೇಮಿ ಅವರಿಗೆ ದೊರಕುವುದಾದರೂ ಹೇಗೆ ? ಒಂದು ವೇಳೆ ಇದ್ದರೆ ತಮ್ಮ ಮುಖಕಾಂತಿಗೆ ಸೋತು ನಿಲ್ಲದವನನ್ನು ರಸಿಕನೆಂದು ಅವರು ಪುರಸ್ಕರಿಸುವುದು ಸಾಧ್ಯವೆ ? ತಮ್ಮ ಕಾಲ್ಗೆಜ್ಜೆಯ ಸದ್ದಿಗೆ ಬೆರಗಾಗಿ ನಿಲ್ಲದವನನ್ನು ಭಾವುಕನೆಂದು ಬಗೆಯುವುದಾದರೂ ಹೇಗೆ ? ಪ್ರೇಕ್ಷಕರ ನಡುವೆ ಅಂಥ ಪ್ರೇಮಿಯಿದ್ದು ಆವನು ರಸಿಕನೂ ಆಗಿರುವ ಪಕ್ಷಕ್ಕೆ ಅವನು ರೂಪವಿಲ್ಲದವನಾಗಿರಬೇಕೆಂದು ಕವಿ ಊಹಿಸುತ್ತಾರೆ. ತನ್ನ ರೂಪವನ್ನು ಮೆರೆದು ಆತ ಕಾಣಿಸಿಕೊಂಡರೆ, ತನ್ನ ಕಡೆಗೆ ಅವರ ಗಮನ ಸುಳಿದು ಎಲ್ಲಿ ಅವರ ನೃತ್ಯ ನಿಂತುಹೋಗಿ ಅದರ ಸೊಬಗು ಇಲ್ಲವಾಗುವುದೋ ಎಂದು ಶಂಕಿಸಿ, ಮರೆಯಲ್ಲಿ ನಿಂತು ಅವರ ಕುಣಿತದ ಒನಪು ಒಯ್ಯಾರಗಳಿಂದ ಸಂತೋಷಪಡುತ್ತಿರಬಹುದು ಎಂಬುದಾಗಿ ಭಾವಿಸುತ್ತಾರೆ ಕವಿ. ಅದೃಶ್ಯನಾಗಿರುವ ಆ ಪ್ರೇಕ್ಷಕ ಪ್ರೇಮಿ ರಸಿಕ ರಾಜನೇ ಸರಿ.

ಯಾವನೋ ಒಬ್ಬ ಪ್ರೇಮಿಯನ್ನು ಯಾವುದೋ ಒಂದು ಸಮಯದಲ್ಲಿ ಒಲಿಸಿಕೊಳ್ಳುವುದಷ್ಟೇ ಶಿಲಾಬಾಲಿಕೆಯರ ಹಾವ ಭಾವ ವಿಲಾಸಗಳ ಗುರಿಯಾಗಿದ್ದರೆ ಅದಕ್ಕೆ ಏನೂ ಮಹತ್ವವಿಲ್ಲ. ಅವರ ಸೌಂದರ್ಯವೂ ಕಲಾವಿಲಾಸವೂ ಕಾಲದೇಶಗಳ ಕಟ್ಟುಗಳನ್ನು ಮೀರಿದವು. ಏಕೆಂದರೆ, 'ಶ್ರುತಗಾನಂ ಅಭಿರಾಮಂ. ಅಶ್ರುತ ಗಾನಂ ಅಭಿರಾಮತರಂ' ಎಂಬುದು ರಸಿಕರ ವಾಕ್ಯ. ಕಿವಿಯಿಂದ ಕೇಳಲಾಗುವ ಗಾನ ಇಂಪಾದದ್ದು ದಿಟ; ಆದರೆ, ಹಾಡಿಕೆ ನಿಂತರೆ ಇಂಪೂ ಕೊನೆಗೊಳ್ಳುತ್ತದೆ. (ಶಿಲ್ಪದ ಇಲ್ಲವೆ ಚಿತ್ರದ) ಕಲೆಯ ಬಲೆಯಲ್ಲಿ ಸೆರೆಗೈದ 'ಅಶ್ರುತಗಾನವಾದರೋ' ನಿರಂತರ ಮಾಧುರ್ಯವುಳ್ಳದ್ದು ; ಅದಕ್ಕೆ ನಿಲುಗಡೆಯೇ ಇಲ್ಲ ; ಭಾವುಕನ ಸಂಸ್ಕಾರಕ್ಕನುಗುಣವಾಗಿ ಅದರ ಮಾಧುರ್ಯವು ಹೆಚ್ಚುತ್ತಲೇ ಹೋಗುತ್ತದೆ. ಹೀಗಿರುವುದರಿಂದ ಶಿಲಾಬಾಲಿಕೆಯರನ್ನು ಕುರಿತು ಕವಿ "ನಿಮ್ಮ ಹೃದಯದ ಭಾಷೆ ಸೌಂದರ್ಯ ಪ್ರಪಂಚಕ್ಕೆ ಸೇರಿದ್ದು. ಅದು ಕಿವಿಯನ್ನು ಮುಟ್ಟಲು ಸಾಧ್ಯವಿಲ್ಲದಿದ್ದರೂ ನಮ್ಮ ಹೃದಯವನ್ನು ಸೇರಬಲ್ಲುದು. ಆ ಕಾರಣದಿಂದಲೇ ಬಲ್ಲವರು ಹಲವರು ನಿಮ್ಮ ಇಂಗಿತಗಳನ್ನರಿತು ನಿಮ್ಮನ್ನು ಕೊಂಡಾಡುವರು. ನೂರಾರು ವರ್ಷಗಳಿಂದ ಕುಂದದ ಲಾವಣ್ಯದ ಅಂತರಂಗ, ರಹಸ್ಯ, ಇಂತಿರಬೇಕೆಂದು ತೋರುತ್ತದೆ. ಅದು ಏನೆಂದರೆ ಪರತತ್ತ್ವದ ಮಾಧುರ್ಯವನ್ನೇ ನೀವು ಪ್ರಕಟಪಡಿಸುತ್ತಿರುವಿರಿ" ಎಂದು ಹೇಳುತ್ತಾರೆ. ಆ ಪರತತ್ತ್ವ ಮಾಧುರ್ಯವು, ಬ್ರಹ್ಮನ ಕರಕೌಶಲದಲ್ಲಿ (ಎಂದರೆ ಆತನ ಸೃಷ್ಟಿಯಲ್ಲಿ) ಸುಳಿದು ಮಾಯವಾಗುತ್ತದೆ ; ಮನುಷ್ಯನ ಮನಸ್ಸಿನಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಚಲಿಸಿ ಮೆರೆಯುತ್ತದೆ ; ಪ್ರಪಂಚದ ಜೀವನಸಸ್ಯಕ್ಕೆ ಅಮೃತದ ಬಿಂದುಗಳನ್ನು ಎರೆದು, ಅದು ಬಾಡದಂತೆ ಕಾಪಾಡುತ್ತದೆ. ಇಂತು ನಿತ್ಯತೆಯೇ ಈ ಬಾಲಿಕೆಯರ ಲಾವಣ್ಯದ ರಹಸ್ಯ.

"ದೇವಾಲಯದಲ್ಲಿ ಈ ಶಿಲಾಬಾಲಿಕೆಯರು ತಮ್ಮ ಹಾವ ಭಾವ ವಿಲಾಸಗಳಿಂದ ಭಕ್ತರ ಮನಸ್ಸನ್ನು ಚಂಚಲಗೊಳಿಸುವರು. ಅವರಿಗೆ ಇಲ್ಲಿ ಎಡೆಯಿಲ್ಲ—

ಎಂದು ವೈರಾಗ್ಯಶಿಖಾಮಣಿಗಳು, ರಸಕಲಾವಿಮುಖರು, ವಿಕೃತಮತಿಗಳು ಆಕ್ಷೇಪದ ಉದ್ಗಾರ ತೆಗೆಯಬಹುದು. ಅಂಥವರಿಗೆ ಕವಿ ನೀಡುವ ಸಮಾಧಾನ ಇದು: ಆ ಪರಮಾತ್ಮನನ್ನು ಆನಂದನಿಧಿ ಎನ್ನುತ್ತೇವೆ. ಆನಂದವನ್ನೇ ಕೊಡುವ ಈ ಬಾಲಿಕೆಯರನ್ನು ತಿರಸ್ಕರಿಸಬಹುದೆ? ಆ ಪರದೈವವನ್ನು ಪ್ರೇಮಮೂರ್ತಿ ಎನ್ನುತ್ತೇವೆ. ಈ ಪ್ರೇಮದ ಮೊಗ್ಗುಗಳನ್ನು—ನವತಾರುಣ್ಯದ ಬಾಲಿಕೆಯರನ್ನು—ಮುರಿಯಬಹುದೆ? ಆತನನ್ನು ಸೌಂದರ್ಯನಿಧಿ ಎನ್ನುತ್ತೇವೆ. ಹೀಗಿರುವಲ್ಲಿ, ಸೌಂದರ್ಯದ ಕಿರಣಗಳಂತಿರುವ ಸುಂದರಿಯರ ವಿಚಾರದಲ್ಲಿ ಕೋಪವನ್ನು ತಳೆಯಬಹುದೆ? ಪರಮಾತ್ಮನು ಸಕಲ ಜೀವನಕ್ಕೂ ಆಧಾರ ಸ್ವರೂಪನಾಗಿರುವಾಗ ಜೀವನವನ್ನು ಬೆಳಗುವ ಇವರನ್ನು ಹಳಿಯಬಹುದೆ? ಹಾಗೆ ವಿಚಾರ ಮಾಡ ಹೊರಟರೆ, ಈ ಶಿಲಾಬಾಲಿಕೆಯರು ದೇವದೇವನ ಸೇವೆಯಲ್ಲೇ ನಿರತರಾಗಿದ್ದಾರೆ. ಏಕೆಂದರೆ ಜೀವನಯಾತ್ರೆಯಲ್ಲಿ ಬಳಲಿ ಬೇಸತ್ತ ಜನಕ್ಕೆ ಸ್ವಲ್ಪವಾದರೂ ಸುಖವನ್ನುಂಟುಮಾಡಿ ಅವರ ಸಂಸಾರಮಾರ್ಗವು ಸುಗಮವಾಗುವಂತೆ ಮಾಡುತ್ತಾರೆ. ಇತರರಿಗೆ ಸಂತೋಷವನ್ನು ಕೊಡುವುದೂ ದೇವರ ಸೇವೆಯೇ. ('ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಂ'.)

ಶಿಲಾಬಾಲಿಕೆಯರ ಈ ಸೇವಾಕಾರ್ಯದ ಮಹಿಮೆಯನ್ನು ಕೊಂಡಾಡಿ, ಅದು ನಿರಂತರವೂ ನಡೆಯುತ್ತಿರಲಿ, ಎಂದು ಕವಿ ಹಾರೈಸುತ್ತಾರೆ. ಅವರ ಆನಂದದಾಯಕ ಶಕ್ತಿ ಸಾಮಾನ್ಯವಾದುದಲ್ಲ. ವಿಶ್ವರಚನೆಯ ರಹಸ್ಯವನ್ನು ತಿಳಿಯಹೇಳುತ್ತಿರುವ ಅವರ ಉತ್ಸಾಹವು ವಿಶ್ವಶಿಲ್ಪಿಯೆನಿಸಿದ ಬ್ರಹ್ಮನ ಸಭೆಯಲ್ಲಿ ಮೆರೆಯಲು ಯೋಗ್ಯವಾದದ್ದು. ಒಳ್ಳೆಯ ಮನಸ್ಸಿಲ್ಲದವರೂ ಲೋಕಸಾಮಾನ್ಯ ವಿರುದ್ಧವಾದ ವರ್ತನೆಯುಳ್ಳವರೂ ಶಿಲಾಬಾಲಿಕೆಯರ ವಿಚಾರದಲ್ಲಿ ಉದಾಸೀನತೆಯನ್ನು ತಳೆದರೆ ಅದರಿಂದ ಅವರಿಗೇನೂ ನಷ್ಟವಿಲ್ಲ. ವಾದ್ಯಗಳು ಎಂದಿನಂತೆ ಮೊಳಗುತ್ತಿರಲಿ. ಅವರ ನಿಲುಗಡೆಯಿಲ್ಲದ ನೃತ್ಯ ಎಂದಿನಂತೆ ಸಾಗುತ್ತಿರಲಿ, ಬಳ್ಳಿಗಳು ಎಂದೆಂದಿಗೂ ಅವರಿಗೆ ನೆರಳೀಯುತ್ತಿರಲಿ, ಎಂದು ಕವಿಯಂತೆ ಯಾರಿಗಾದರೂ ಎನ್ನಿಸೀತು. ಅವರು ಎಂದೆಂದೂ ಹಾವ ಭಾವ ವಿಲಾಸಗಳಿಂದ ನಲಿಯುತ್ತ ಮೆರೆಯುತ್ತ, ಕಾಲಪುರುಷನ ಕ್ರೂರವಾದ ದಾಳಿಗೆ ಬಲಿಯೆನಿಸದೆ, ಕಠಿಣರೆನಿಸದೆ, ನೀರಸವಾದ ಹೃದಯವುಳ್ಳವರಿಗೂ ಸ್ನೇಹಪರರಾಗಿರಲಿ ಎಂದು ಕವಿ ತುಂಬು ಹೃದಯದಿಂದ ಹಾರೈಸಿದ್ದಾರೆ.

ಶಿಲಾಬಾಲಿಕೆಯರನ್ನು ಕುರಿತ ಕವಿಯ ಹಾರ್ದಿಕವಾದ ಹಾರೈಕೆ ಇಷ್ಟಕ್ಕೇ ಮುಗಿಯುವುದಿಲ್ಲ. ಲೋಕೋಪಕಾರಿಗಳಾದ ಶಿಲಾಬಾಲಿಕೆಯರು ನೂರುಕಾಲ ಸಾವಿರಕಾಲ ನಿಲ್ಲಲಿ ಎಂದು ಕವಿ ಬಯಸುತ್ತಾರೆ. ಚಿರಕಾಲ ನಿಲ್ಲಬೇಕು ಹೇಗೆ? —ಅವ್ಯಕ್ತ ನಿನದದಿಂದ, ಅಕಲಂಕಿತಾಂಗದಿಂದ, ಅನ್ಯೂನ ತಾರುಣ್ಯದಿಂದ, ಅಪಾರ ಯಶದಿಂದ; ಸಂತಪ್ತವಾದ ಲೋಕಕ್ಕೆ ಸಂತೋಷದ ತೃಪ್ತಿಯನ್ನು ನೀಡುತ್ತ.

'ಸೌಂದರ್ಯವೇ ವಿಶ್ವತತ್ತ್ವಮಾ ಪರತತ್ತ್ವಭಾಸಮೇ ಸೌಂದರ್ಯಂ' ಎಂದು ಸಾರುತ್ತ; ತಮ್ಮನ್ನು ಕಡೆದು ನಿಲ್ಲಿಸಿದ, ತಮಗೆ ಜನ್ಮವಿತ್ತ, ಶಿಲ್ಪಿಶ್ರೇಷ್ಠರ ಚಿತ್ತದ 'ಏಕಾಗ್ರ ಭಕ್ತಿದೀಪಿಕೆ'ಯನ್ನು ಬೆಳಗುತ್ತ ಕವಿ ತಮ್ಮ ಕಡೆಹರಕೆಯಲ್ಲಿ ಶಿಲಾ ಬಾಲಿಕೆಯರಿಗೆ ಅತ್ಯುಚ್ಚ ಪದವಿಯನ್ನು ಕೊಟ್ಟಿದ್ದಾರೆ: ಸರಸಜೀವನ ಎಂತೆಂಬುದನ್ನು ಬೋಧಿಸುವ ಗುರುಗಳು ಅವರು, ಮಧುರ ಭಾವವನ್ನು ಹಳಿಯುವ ವಿಕಾರ ಮನಸ್ಕರನ್ನು ಹಳಿಯುವ ಕರ್ತವ್ಯ ಅವರದ್ದು; ರಸಕಲೆಗಳ ಬಗೆಗೆ ಜನರ ಉದಾಸೀನ ವೃತ್ತಿಯನ್ನು ಹೋಗಲಾಡಿಸುವ ದೀಕ್ಷೆ ಅವರದ್ದು; ಪ್ರೇಮಧರ್ಮವನ್ನು ಉದ್ಧಾರ ಮಾಡುವ ಪರಮಭಾಗ್ಯ ಅವರದ್ದು.

೧೦. ಕಲಾಮಹಿಮೆ

ಮೇಲಿನ ಶಿಲಾಬಾಲಿಕೆಯರ ವರ್ಣನೆಯಲ್ಲಿ ಸೌಂದರ್ಯ ಮಹಿಮಾ ಪ್ರಶಂಸೆಯೂ ಸೌಂದರ್ಯ ಮೀಮಾಂಸೆಯೂ ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿವೆ. ಚಿತ್ರ, ಶಿಲ್ಪ, ಸಂಗೀತ, ಕಾವ್ಯ ಮೊದಲಾದ ಎಲ್ಲ ಕಲೆಗಳ ಕಾರ್ಯವೂ ಒಂದೇ: ಸೌಂದರ್ಯ ಪ್ರತಿಪಾದನೆ; ಅವೆಲ್ಲವುಗಳ ಗುರಿಯೂ ಒಂದೆ: ಆನಂದ ವನ್ನು ನೀಡುವುದು. ಬ್ರಹ್ಮ ಸೃಷ್ಟಿಯ ಸೌಂದರ್ಯವು ಉಪಾದೇಯವಾಗಿರುವ ಪಕ್ಷಕ್ಕೆ ಅದರ ಅನುಕೃತಿಯಾದ ಕಲೆ ಪ್ರತಿಪಾದಿಸುವ ಸೌಂದರ್ಯವೂ ಉಪಾದೇಯ ವೆನಿಸಬೇಕು. ರಸಾನಂದವು ಬ್ರಹ್ಮಾನಂದಕ್ಕೆ ಸಮಾನ. ಸತ್ಯ, ಶಿವ, ಸುಂದರ, ಆನಂದ, ಪ್ರೇಮ—ಇವೆಲ್ಲ ಪರವಸ್ತುವಿನ ಬೇರೆ ಬೇರೆ ಮುಖಗಳು. ಈ ದೈವಾಂಶ ಗಳನ್ನು ಸಾಧಿಸುವ ಬೋಧಿಸುವ ಕಲೆ ನಿಂದ್ಯವಲ್ಲ. ಕಲೆಯ ಈ ದೈವಿಕ ಮಹಿಮೆ ಯನ್ನು ಸಾರಿ ತೋರುವ ಶಿಲಾಬಾಲಿಕೆಯರು ಹೇಗೆ ನಿಂದ್ಯರಾದಾರು? ಇದನ್ನು ಅರ್ಥಮಾಡಿಕೊಂಡರೆ, ದೇವಪೂಜಾ ಮಂದಿರದಲ್ಲಿ ಈ ನೃತ್ಯ ವಿಲಾಸಿನಿಯರಿಗೆ, ಎಡೆಗೊಟ್ಟಿರುವ ಶಿಲ್ಪಿಶ್ರೇಷ್ಠರ ಔಚಿತ್ಯಜನ್ಯ ಜ್ಞಾನವು ಅರಿವಾಗುವುದು.

ಬ್ರಹ್ಮ ಸೃಷ್ಟಿ ಮಾಯೆ, ಕ್ಷಣಿಕ; ಕಂಡು ಕಣ್ಮರೆಯಾಗುವ ಕಾಮನಬಿಲ್ಲಿನಂತೆ. ಬ್ರಹ್ಮ ಸೃಷ್ಟಿಯ ಸಮಷ್ಟಿಯಲ್ಲಿ—ಒಟ್ಟಿನಲ್ಲಿ—ನಿತ್ಯತೆ ಚಿರ ನೂತನತೆ ಇವೆಯೇ ಹೊರತು ವ್ಯಷ್ಟಿಯಲ್ಲಿ—ಬಿಡಿಯಲ್ಲಿ—ಇಲ್ಲ. ವಾಲ್ಮೀಕಿಯ ಕಾಲದಿಂದ ಇಂದಿನವರೆಗೂ ಕೋಗಿಲೆಯ ಜಾತಿ ನಿತ್ಯವಾಗಿ ಉಳಿದುಬಂದಿದೆ: ಆದರೆ, ಕಾಲಪ್ರವಾಹದಲ್ಲಿ ಕೋಟ್ಯಂತರ ಕೋಗಿಲೆಗಳು ಕೊಚ್ಚಿಹೋಗಿವೆ. ಕಲೆ ತನ್ನ ಪವಿತ್ರ ತೀರ್ಥವನ್ನು ಚಿಮುಕಿಸಿತೆಂದರೆ ಮರ್ತ್ಯಜೀವಿ ಅಮರ್ತ್ಯವಾಗುತ್ತದೆ, ಜಡ ಸಚೇತನವಾಗುತ್ತದೆ. ಕಾಲಪುರುಷನು ಕಲಾಪ್ರಪಂಚಕ್ಕೆ ದಾಳಿಯಿಡಲಾರ; ಅಲ್ಲಿನ ಪ್ರಜೆಗಳು, 'ಕಾಲ ದೌಷ್ಟ್ಯದಿಂ ಕುಂದು'ವಡೆಯರು; ಅಲ್ಲಿನ ತರುಣಿಯರದ್ದು 'ಅಕಲಂಕಿತಾಂಗ, ಅನ್ಯೂನ ತಾರುಣ್ಯ'; ಅವರಿಗೆ ಮುಪ್ಪಿಲ್ಲ. ಬ್ರಹ್ಮ ಸೃಷ್ಟಿಗೆ ಮಿಗಿಲಲ್ಲವಾದರೂ ಅದಕ್ಕೆ ಹೊಯಿಕೈಯಾಗಬಲ್ಲದು ಕಲಾಸೃಷ್ಟಿ.

ಕಲೆ ಎಸಗುವ ಪವಾಡ ಇನ್ನೂ ಒಂದಿದೆ. 'ಶ್ರುತಗಾನಂ ಅಭಿರಾಮಂ ಅಶ್ರುತಗಾನಮಭಿರಾಮತರಂ' ಎಂಬ ಸೂತ್ರವಾಕ್ಯದಲ್ಲಿ ಅದು ಅರ್ಥವಾಗುತ್ತದೆ. ಚಿತ್ರಿತವಾದ ಪಿಳ್ಳಂಗೋವಿಗಳನ್ನು ನೋಡಿ ಕೀಟ್ಸ್ ಹೇಳುತ್ತಾನೆ: "...therefore, ye soft pipes, play on ; not to the sensual ear, but more endear'd, pipe to the spirit deities of no tone," ಇದರ ಮಧುರ ಪ್ರತಿಧ್ವನಿಯನ್ನು ಡಿ.ವಿ.ಜಿ.ಯವರ ಈ ಪಂಕ್ತಿಯಲ್ಲಿ ಕೇಳಬಹುದು : "ರಾಮಣೀಯಕ ಕುಲಮೆ ನಿಮ್ಮೆದೆಯ ನುಡಿ, ಕಿವಿಯನಾನದೊಡಂ ಎಮ್ಮೆದೆಯ ಸೇರಲರಿಗುಂ." ಪಂಚೇಂದ್ರಿಯಗಳು ಅನುಭವದ್ವಾರಗಳೇ ಹೊರತು ಅನುಭವದ ಗಮ್ಯಸ್ಥಾನ ಹೃದಯ, ಕಿವಿಯಿಂದ ಕೇಳಲಾಗದ ಗಾನವನ್ನು ಹೃದಯಕ್ಕೆ ಮುಟ್ಟಿಸಬಲ್ಲದು ಕಲೆ. ಸರಸ್ವತಿಯೇ ನಮ್ಮ ಮುಂದೆ ಕುಳಿತಿರುವಂದು. ಆ ದೇವಿ ವೀಣೆ ಬಾರಿಸುವುದನ್ನು ಅಭಿನಯಿಸಿದರೆ ಅದನ್ನು ನಾವು ಸಹಿಸೆವು. ಆದರೆ, ಉತ್ತಮವಾದ ಸರಸ್ವತೀ ಚಿತ್ರದಲ್ಲಿ ಅದನ್ನು ಮೆಚ್ಚಿಕೊಳ್ಳುತ್ತೇವೆ : ವೀಣಾಝಂಕೃತಿಯ ಭ್ರಾಂತಿಯನ್ನು ಕಲ್ಪಿಸಬಲ್ಲದು ಕಲೆ.

ಶಿಲಾಬಾಲಿಕಾ ವರ್ಣನಾವ್ಯಾಜದಿಂದ ಸೌಂದರ್ಯ ತತ್ತ್ವವನ್ನೂ ಕಲಾ ಮಹಿಮೆಯನ್ನೂ ಅತ್ಯುತ್ಕೃಷ್ಟ ರೀತಿಯಲ್ಲಿ ಕಲಾತ್ಮಕವಾಗಿ ಪ್ರತಿಪಾದಿಸಿರುವ ಕವಿ ಡಿ.ವಿ.ಜಿ.ಯವರು ಅಭಿನಂದನೀಯರು : ನಮ್ಮ ಕೃತಜ್ಞತೆಗೆ ಪಾತ್ರರು.

೧೧. ದಾನೋದ್ದಾಮಾಗ್ರಣಿ ಬಲಿಚಕ್ರವರ್ತಿ

'ದೈವಕೃತಿಯ ಸೊಬಗು' ಕವಿ ಡಿ.ವಿ.ಜಿ.ಯವರ ಮನಸ್ಸನ್ನು ಹೇಗೆ ಸೆಳೆದಿದೆಯೋ ಹಾಗೆಯೇ 'ಸುಜನ ಜೀವಕಥೆಯ ಸೊಬಗೂ' ಅವರ ಮನಸ್ಸನ್ನು ಸೆರೆಹಿಡಿದಿದೆ. 'ಸುಜನ'ರಲ್ಲಿ ತ್ಯಾಗಗುಣೋಪೇತರಾದ ಇಬ್ಬರು ಪುರಾಣಪುರುಷರ ವ್ಯಕ್ತಿತ್ವ ಮಹಿಮೆಯನ್ನು 'ಬಲಿಚಕ್ರವರ್ತಿ' ಮತ್ತು 'ಗೋಮಟೇಶ್ವರ' ಎಂಬ ಎರಡು ಪದ್ಯಗುಚ್ಛಗಳಲ್ಲಿ ಪ್ರಶಂಸೆ ಮಾಡಿದ್ದಾರೆ—

[ಭಾಗವತೋತ್ತಮನಾದ ಪ್ರಹ್ಲಾದನ ಮೊಮ್ಮಗ ಬಲಿ. ಅವನು ವಿಶ್ವಜಿತ್ತೆಂಬ ಯಾಗವನ್ನು ಮಾಡಿ, ಇಂದ್ರನನ್ನು ಗೆದ್ದು, ಸ್ವರ್ಗವನ್ನು ವಶಪಡಿಸಿಕೊಂಡು, ಅನಂತರ ಅಶ್ವಮೇಧಯಾಗವನ್ನು ಪ್ರಾರಂಭಮಾಡಿದನು. ಆಗ, ಬಲಿಯ ಪ್ರಾಬಲ್ಯದಿಂದ ಭೀತರಾದ ದೇವತೆಗಳು ವಿಷ್ಣುವಿನಲ್ಲಿ ಮೊರೆಯಿಟ್ಟರು. ವಿಷ್ಣು ಅದಿತಿ ದೇವಿಯಲ್ಲಿ ವಾಮನರೂಪದಿಂದ ಅವತಾರಮಾಡಿದನು. ಉಪನಯನವಾದ ಮೇಲೆ ವಟುವೇಷಧಾರಿಯಾದ ವಾಮನನು ಬಲಿಯ ಬಳಿಗೆ ಹೋಗಿ ಭಿಕ್ಷೆಯನ್ನು ಬೇಡಿದನು. ಬಲಿ ಅವನನ್ನು ಸತ್ಕರಿಸಿ ಏನು ಬೇಕೆಂದು ಕೇಳಿದನು. ವಾಮನನು ಬಲಿಯಿಂದ ಮೂರಡಿ ಭೂಮಿಯನ್ನು ಬೇಡಿದನು. ಭೂಸ್ವರ್ಗ ಸಾಮ್ರಾಜ್ಯಗಳಿಗೆ ಒಡೆಯನಾದ ಬಲಿಚಕ್ರವರ್ತಿಗೆ ಮೂರಡಿ ನೆಲ ಎಷ್ಟರದ್ದು ? ಅದನ್ನು ಕೊಡ

ತೊಟ್ಟಿದನು. ಮುಂದಾಗುವುದನ್ನು ಅರಿತ ಶುಕ್ರಾಚಾರ್ಯ ಕೊಡಬೇಡವೆಂದು ತಡೆದರೂ, ಬಲಿ ವಚನಭ್ರಷ್ಟನಾಗಲು ಇಚ್ಛಿಸದೆ, ಮೂರಡಿ ಭೂಮಿಯನ್ನು ದಾನವಾಗಿ ಕೊಟ್ಟುಬಿಟ್ಟನು. ದಾನವನ್ನು ಪರಿಗ್ರಹಿಸಿದ ವಾಮನನು ತನ್ನ ಎರಡು ಅಡಿಗಳಿಂದ ಭೂಮಿಯನ್ನೂ, ಅಂತರಿಕ್ಷವನ್ನೂ ಅಳೆದು ಆಕ್ರಮಿಸಿಕೊಂಡು ಮೂರನೆಯ ಅಡಿಯ ನೆಲ ಎಲ್ಲಿ ಎಂದು ಕೇಳಿದನು. ಆಗ ಬಲಿಯು ತನ್ನ ತಲೆಯನ್ನು ತೋರಲು ವಾಮನನು ತ್ರಿವಿಕ್ರಮಾವತಾರವನ್ನು ಮೆರೆದು ತನ್ನ ಮೂರನೇ ಪಾದವನ್ನು ಬಲಿಯ ತಲೆಯಮೇಲಿಟ್ಟು, ಆತನನ್ನು ಪಾತಾಳಕ್ಕೆ ತುಳಿದು ಕಳಿಸಿದನು. ಅಲ್ಲಿ ವಿಷ್ಣುವಿನ ಅನುಗ್ರಹದಿಂದ ಬಲಿಗೆ ಸಕಲ ಭೋಗಗಳೂ ಪ್ರಾಪ್ತವಾದುವು.

ಬಲಿಚಕ್ರವರ್ತಿಯ ಕಥೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರತಕ್ಕದ್ದೆ. (ಅದನ್ನು ತಿಳಿಯದವರಿಗಾಗಿ ಕಥೆಯನ್ನು ತೀರ ಸಂಗ್ರಹವಾಗಿ ಮೇಲೆ ಕೊಟ್ಟಿದೆ.) ಆದರೆ ಅವನ ವ್ಯಕ್ತಿತ್ವದ ಹಿರಿಮೆಯನ್ನು ಅರಿಯಲು ಮಾತ್ರ ಎಲ್ಲರಿಂದಲೂ ಸಾಧ್ಯವಿಲ್ಲ. ಅದನ್ನು ಡಿ.ವಿ.ಜಿ.ಯವರು ಬಹುಮನೋಜ್ಞವಾಗಿ ನಮ್ಮ ಮುಂದಿಟ್ಟಿದ್ದಾರೆ. ಎಲ್ಲರೂ ಕಾಣಲಾಗದ್ದನ್ನು ಕಾಣಿಸಿರುವುದು ಕವಿಯ ಹಿರಿಮೆ.

ಬಲಿಚಕ್ರವರ್ತಿಯಲ್ಲಿ ಭುಜಬಲವಿಲ್ಲ ವೆನ್ನಲಾದೀತೆ ? ಭೂಸ್ವರ್ಗಗಳನ್ನು ಗೆದ್ದವನು ಅವನು. ಆದರೆ, ಕವಿಯ ದೃಷ್ಟಿಯಲ್ಲಿ, ಅವನ ಭುಜಬಲ ಬಲವಲ್ಲ ; ಗೆದ್ದುದೆಲ್ಲವನ್ನೂ ವಟುವಿಗೆ ಬಲಿ ದಾನಮಾಡಿ ತೋರಿದ ಬಲವೇ ನಿಜವಾದ ಬಲ. ವಿಷ್ಣುವು ಛಲವನ್ನು ತೋರಿ ಮೂರಡಿ ಭೂಮಿಯನ್ನು ಬಲಿಯಿಂದ ಬಯಸಿದ್ದುಂಟು. ಭೂಮಿಯಲ್ಲಾಗಲಿ, ಸ್ವರ್ಗದಲ್ಲಾಗಲಿ ಬಲಿಯಂಥ ತ್ಯಾಗಿಯಿಲ್ಲವೆಂಬ ಸತ್ಯಾಂಶ ವಿಷ್ಣುವಿಗೆ ಕಂಡಾಗ, ಅವನಿಗೆ ಎಷ್ಟು ಹರ್ಷವಾಗಿರಬೇಡ ? ಆದ್ದರಿಂದಲೆ, ವಿಷ್ಣು ಬಲಿಯ ತಲೆಯನ್ನು ಮೆಟ್ಟಿ ಅವನನ್ನು ಪಾತಾಳಕ್ಕೆ ತುಳಿದನು ಎಂಬ ರೂಕ್ಷವರ್ಣನೆಯನ್ನು ಕವಿ ಮೆಚ್ಚಿಕೊಳ್ಳಲಾರರು ; ಆ ತ್ರಿವಿಕ್ರಮನು 'ಇನ್ನಾರ್ಗಮಲಭ್ಯಮಾದ ಚರಣಶ್ರೀರಾಶಿಯುಂ ನಿನ್ನಯಾ ತಲೆಯೊಳ್ ಸೂಸಿದಂ' ಎಂದೆನ್ನುತ್ತಾರೆ. ಈ ಮಹೋನ್ನತ ಭಾಗ್ಯವನ್ನು ಪಡೆದ ಬಲಿ ನಿಜವಾಗಿ ಧನ್ಯನು. ಇಷ್ಟೇ ಅಲ್ಲ, ಬಲಿಯ ದೆಸೆಯಿಂದ ಹರಿಯ ಪಾದವು ದೊಡ್ಡದಾಗಿ ಬೆಳೆದದ್ದು ಸೋಜಿಗವಲ್ಲ ; ಆ ಪಾದದ ಭಾರವನ್ನು ಅರಿತೂ ಕೂಡ ಬಲಿ ಅದನ್ನು ತಲೆಯಮೇಲೆ ಹೊತ್ತುದೀಗ ಲೋಕದಲ್ಲಿ ಆಶ್ಚರ್ಯಕರವಾದುದು. ಹಿಂದೆ ರಾಕ್ಷಸರನ್ನು ಸಂಹಾರಮಾಡಲು ವಿಷ್ಣುವು ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ ಮೊದಲಾದ ಅವತಾರಗಳನ್ನೆತ್ತಿ ಭಯಂಕರಾಕೃತಿಗಳನ್ನು ಧರಿಸಿದನು. ಈಗಲಾದರೋ ವಿಷ್ಣು ದೀನವೂ ಅಲ್ಪವೂ ಆದ ವಾಮನಾವತಾರವನ್ನೆತ್ತಿ ಬಲಿಯ ಬಳಿಗೆ ಬಂದು ಬಹು ನಯದಿಂದ ಮೂರಡಿ ಭೂಮಿಯನ್ನು ಬೇಡಿಕೊಂಡನು. ಮಹಾಮಹಿಮನಾದ ಹರಿಯನ್ನೂ ಕಿರಿಯನನ್ನಾಗಿ ಮಾಡಿದ ಮಹಿಮೆ ಬಲೀಂದ್ರನದು.

ಬಲೀಂದ್ರನ ದಾನಗುಣವನ್ನು ಮೆಚ್ಚಿಕೊಂಡು ವಿಷ್ಣು ಅವನಿಗೆ ರಸಾತಲಾಧಿಪತ್ಯದೊಂದಿಗೆ ಕಲ್ಪಾಂತ ಆಯುಷ್ಯವನ್ನೂ ಕರುಣಿಸಿದನೆಂದು ಪುರಾಣಕಥೆಯಲ್ಲಿ ಹೇಳಿಕೆ. ಅವನು ರಸಾತಲದಲ್ಲಿ ಇಂದು ಇದ್ದಾನೋ ಇಲ್ಲವೋ, ಯಶಶ್ಶರೀರಿಯಾಗಿ ಇಂದಿಗೂ ಬದುಕಿರುವನು. ದೀಪಾವಳಿಯ ಶುಭಸಂದರ್ಭದಲ್ಲಿ ಬಲಿಚಕ್ರವರ್ತಿಯ ಯಶೋ-ದೀಪವೂ ಪ್ರತಿವರ್ಷ ಬೆಳಗುತ್ತದೆ.

ಬಲಿಚಕ್ರವರ್ತಿಯ ವ್ಯಕ್ತಿತ್ವ ಮಹಿಮೆ ಎಂದೆಂದಿಗೂ ಎಲ್ಲರಿಗೂ ಆದರ್ಶಪ್ರಾಯವಾದುದು. ಸಂಪತ್ತನ್ನು ಗಳಿಸುವ ಕಾರ್ಯದಲ್ಲಿ ಶ್ರದ್ಧೆಯನ್ನು ತೋರಬೇಕು : ಗಳಿಸಿದ್ದನ್ನು ದಾನಮಾಡುವುದರಲ್ಲಿ ಅಷ್ಟೇ ಸಿದ್ಧತೆಯನ್ನೂ ಮೆರೆಯಬೇಕು. ಜಿಪುಣಾಗ್ರೇಸರನಾಗದೆ, ಬಲಿಯಂತೆ ದಾನೋದ್ಧಾಮಾಗ್ರಣಿಯಾಗಿ ಮೆರೆಯಬೇಕು : ದಾನದಿಂದಲೇ ಜೀವಿತ ಸಾರ್ಥಕ್ಯ. ತ್ಯಾಗದಿಂದಲೇ ಆತ್ಮ ಪರಿಶುದ್ಧವೆನಿಸುವುದು ಬಲಿಯ ಶುದ್ಧಾತ್ಮತೆಯನ್ನು ಬೆಳಗುತ್ತಿದೆ ಆವನ ಕೀರ್ತಿಪ್ರದೀಪ.

೧೨. ಯೋಗಿಶ್ರೇಷ್ಠ ಶ್ರೀ ಗೋಮಟೇಶ್ವರ

[ಗೋಮಟೇಶ್ವರನು ಜೈನ ಪುರಾಣದಲ್ಲಿ ಪ್ರಸಿದ್ಧನಾದ ವ್ಯಕ್ತಿ. ಆದಿ ತೀರ್ಥಂಕರನಾದ ವೃಷಭದೇವನ ಮಕ್ಕಳು. ಭರತ ಮತ್ತು ಬಾಹುಬಲಿ. ವೃಷಭನು ತೀರ್ಥಂಕರನಾಗಿ ಮುಕ್ತನಾದಮೇಲೆ ಭರತನೇ ಚಕ್ರವರ್ತಿಯಾದನು. ಆಗ ಬಾಹುಬಲಿ ಯುವರಾಜನಾಗಿದ್ದನು. ಭರತನು ದಿಗ್ವಿಜಯಕ್ಕೆ ಹೊರಟು ಷಟ್ಖಂಡಗಳನ್ನೂ ವಶಪಡಿಸಿಕೊಂಡನು. ರಾಜಾಧಿರಾಜರೆಲ್ಲ ಅವನ ಚಕ್ರರತ್ನಕ್ಕೆ ತಲೆಬಾಗಿ ಶರಣಾಗುತ್ತಿದ್ದರು. ಲೋಕವೆಲ್ಲಾ ತನಗೆ ಶರಣಾಗಿದ್ದರೂ, ತನ್ನ ತಮ್ಮಂದಿರೇ ತನಗೆ ಶರಣಾಗಿಲ್ಲವಲ್ಲಾ ಎಂದು ವಿಜಯೋನ್ಮತ್ತನಾದ ಭರತನ ಅಭಿಮಾನ ಕೆರಳಿ. ದಿಗ್ವಿಜಯ ಪರಿಪೂರ್ಣತೆಗಾಗಿ ಅವರ ಮೇಲೂ ಯುದ್ಧವನ್ನು ಘೋಷಿಸಿದನು. ಅಣ್ಣನೊಡನೆ ಹೋರಲೊಲ್ಲದೆ ತಮ್ಮಂದಿರು ತಪಸ್ಸಿನಲ್ಲಿದ್ದ ತಂದೆಯ ಬಳಿಸಾರಿ ತಪೋದೀಕ್ಷೆಯನ್ನು ಕೈಕೊಂಡರು. ಯುವರಾಜನಾದ ಬಾಹುಬಲಿ ಮಾತ್ರ ಅಣ್ಣನನ್ನು ಪ್ರತಿಭಟಿಸಿ ಯುದ್ಧಕ್ಕೆ ನಿಂತನು. ಸೇನಾಯುದ್ಧವಾಗದೆ ಇಬ್ಬರ ದ್ವಂದ್ವಯುದ್ಧವಾಯಿತು. ಯುದ್ಧದಲ್ಲಿ ಅಣ್ಣನು ತಮ್ಮನಿಗೆ ಸೋತು ಭರತನ ಅಭಿಮಾನ ಭಂಗವಾಯಿತು. ಬಾಹುಬಲಿಗೆ ತುಂಬ ಪಶ್ಚಾತ್ತಾಪವಾಯಿತು. 'ಸೋದರರರೊಳ್ ಸೋದರರಂ ಕಾದಿಸುವ' ರಾಜ್ಯ ಬೇಡವೆಂದು ವೈರಾಗ್ಯಪರನಾಗಿ. ಪಿತೃದತ್ತ ರಾಜ್ಯವನ್ನು ಅಣ್ಣನಿಗೇ ಒಪ್ಪಿಸಿ. ತಂದೆಯ ಬಳಿಯಲ್ಲಿ ದೀಕ್ಷೆ ಹೊಂದಿ. ಘೋರತಪದಲ್ಲಿ ನಿಂತನು

ತಪೋಮೂರ್ತಿಯಾದ ಬಾಹುಬಲಿಯ ಪ್ರತಿಮೆಯೇ ಗೊಮ್ಮಟ ವಿಗ್ರಹ. ಶ್ರವಣಬೆಳುಗೊಳದಲ್ಲಿರುವ ಲೋಕಪ್ರಸಿದ್ಧವಾದ ಈ ಭವ್ಯ ಸುಂದರ ವಿಗ್ರಹವನ್ನು ಮಾಡಿಸಿದಾತ ಗಂಗರಸರ ದಂಡನಾಯಕನಾದ ಚಾಮುಂಡರಾಯ. ಈ ವಿಗ್ರಹ ದರ್ಶನವೇ ಡಿ.ವಿ.ಜಿ. ಯವರಿಗೆ ಕವಿತಾಸ್ಫೂರ್ತಿಯನ್ನು ನೀಡಿರುವುದು.

ಬಾಹುಬಲಿಯು ಆ ಕಾಲದ ಮನ್ಮಥನೆಂದು ಪುರಾಣೋಕ್ತಿ. ಆದ್ದರಿಂದ, ಅವನು ಅತ್ಯಂತ ಸುಂದರನು. ಎಲ್ಲ ಕಲೆಗಳಲ್ಲೂ ಪಾರಂಗತನಾಗಿದ್ದನು. ಗೊಮ್ಮಟ ಎಂಬ ಶಬ್ದರೂಪ ಮನ್ಮಥ ಎಂಬುದರ ರೂಪಾಂತರವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಈ ಹಿನ್ನೆಲೆಯ ಕಥೆಯನ್ನು ತಿಳಿದಿದ್ದರೆ, ಡಿ.ವಿ.ಜಿ. ಯವರ ಗೊಮ್ಮಟ ಗುಣ ಗಣಪ್ರಶಂಸೆಯ ವೈಶಿಷ್ಟ್ಯ ವಿಶದವಾಗಿ ಅರ್ಥವಾಗುತ್ತದೆ. ಕವಿಯ ಪದಪುಂಜ ಗಳನ್ನು ಉದ್ಧಾರಮಾಡಿದಲ್ಲದೆ ಅವುಗಳ ಭಾವಪುಷ್ಟಿಯ ಸೊಬಗನ್ನು ಸರಳ ಗದ್ಯ ದಲ್ಲಿ ತೋರುವುದು ಕಷ್ಟಸಾಧ್ಯ.]

ಸಾಮಾನ್ಯ ಮಾನವನಾಗಲಿ, ರಾಜನಾಗಲಿ, ಆಶಾಪಾಶವನ್ನು ಕತ್ತರಿಸಿ ಕರ್ಮದ ಸುಳಿಯಿಂದ ತಪ್ಪಿಸಿಕೊಂಡು, ಇತರ ಜೀವಿಗಳಿಗೆಲ್ಲಾ ಶಾಂತಿಯ ದೀಕ್ಷೆ ಯನ್ನು ಕರುಣಿಸುವ ಸಾಮರ್ಥ್ಯವೇ ನಿಜವಾದ ಆತ್ಮದ ಔನ್ನತ್ಯ. ಈ ಔನ್ನತ್ಯ ದಿಂದ ಶೋಭಿಸುವ ಸಂಯಮ ಗುಣವುಳ್ಳವನೇ ಕೃತಾರ್ಥ. ಗೋಮಟೇಶ್ವರನು ಇಂಥ ಧನ್ಯ ಪುರುಷ.

ಜಗತ್ತಿನಲ್ಲಿ ಜೀವಿಸಬೇಕೆನ್ನುವುದು ತಪ್ಪಲ್ಲ ; ಹಾಗೆ ಜೀವಿಸಬೇಕೆನ್ನುವ ಕಾರ್ಯ ಪ್ರಯತ್ನದಲ್ಲಿ ಸುಖವನ್ನು ಸಾಧಿಸಬೇಕೆನ್ನುವುದೂ ಉಚಿತವೇ ; ಸುಖಸಾಧನೆಯ ಉದ್ಯೋಗದಲ್ಲಿ ತನ್ನನ್ನು ಎದುರಿಸುವ ಹಗೆಯನ್ನು ಗೆಲ್ಲಬೇಕೆಂಬುದೂ ಯೋಗ್ಯವೇ. ಇವೆಲ್ಲ ನ್ಯಾಯ. ಆದರೆ, ಇವೆಲ್ಲಕ್ಕಿಂತ ವಾಂಛೆಯನ್ನು ಗೆಲ್ಲುವುದೇ ನಿಜವಾದ ಸುಖ. ಗೋಮಟನು ಮಾನವಸಹಜವಾದ ಕಾಮವನ್ನು ಗೆದ್ದು ಸುಖಿಯಾದವನು.

ಗೋಮಟನು ಸಕಲ ಭೋಗಗಳ ಅಪೇಕ್ಷೆಯನ್ನೂ ತೊರೆದವನು ; ಆದರೂ ಸಂತುಷ್ಟವಾದ, ಬೆಳಗುವ ಮನಸ್ಸುಳ್ಳವನು. ರಾಗದ್ವೇಷಗಳನ್ನು ಬಿಟ್ಟು ನಿರ್ಲೇಪ ನಾಗಿದ್ದರೂ ಸುಸ್ನೇಹಭಾವವುಳ್ಳವನು. ತ್ಯಾಗದಲ್ಲಿ ನೆಲೆಗೊಂಡವನಾದರೂ ಜನತೆ ಯನ್ನು ಸಂತೈಸುತ್ತಿರುವ ಕರುಣಿ. ಇಂಥ ಯೋಗಿಶ್ರೇಷ್ಠನೇ ಧನ್ಯ.

ಕಲೆಗಳಲ್ಲಿ ಪಾರಂಗತನಾದರೂ, ಕಲಿಯೆನಿಸಿಕೊಂಡವನೂ ಹೌದು. ತನ್ನ ಮೌನವ್ರತದಿಂದ ಹೆಸರಾದವನು. ಬಾಹುಬಲಿ ಎಂಬ ಹೆಸರು ಗೋಮಟನ ವಿಷಯ ದಲ್ಲಿ ಅನ್ವರ್ಥವಾದುದು. ಅಪಾರ ಬಾಹುಬಲವಿದ್ದರೂ ಸೌಮ್ಯವಾದ ಆಕಾರವುಳ್ಳವನ್ನು. (ಮನ್ಮಥನಾದ್ದರಿಂದ) ಅತ್ಯಂತ ಸುಂದರನು. ಸೌಂದರ್ಯವನ್ನು ಹೊಂದಿದ್ದರೂ ತೃಷೆಯನ್ನು ದೂರವಿಟ್ಟವನು. ಸಮಸ್ತ ಲೋಕಗಳೂ ಗೋಮಟನ ಈ ಗುಣ ಗಳನ್ನು ಕೊಂಡಾಡುತ್ತಿವೆ.

ಪ್ರಾಣಿಕೋಟಿಯನ್ನೆಲ್ಲಾ ಆಳುವ ಪ್ರಕೃತಿದೇವಿ ಪ್ರಾಣಿಪ್ರಪಂಚದಲ್ಲಿ ಮನುಷ್ಯ ನಿಗೆ ಅಗ್ರಪದವಿಯನ್ನು ಕೊಟ್ಟಿರುವುದು ನಿಜ. ಆ ಪ್ರಕೃತಿಮಾತೆ ತನ್ನ ಮಕ್ಕಳಾದ

ಮಾನವರ ಸತ್ತ್ವಪರೀಕ್ಷೆ ಮಾಡುವುದಕ್ಕಾಗಿ ಅವರ ಮುಂದೆ ಮೋಹಜಾಲವನ್ನು ಒಡ್ಡಿದ್ದಾಳೆ. ಅವಳ ಈ ಪರೀಕ್ಷೆಯಲ್ಲಿ ಗೆಲ್ಲುವವರು ವಿರಳ. ಆ ಮಹಾಮಾಯೆ ಒಡ್ಡಿದ ಮೋಹವನ್ನು ಒಪ್ಪಿಕೊಂಡು ಗೆದ್ದವನು ಗೋಮಟೇಶ್ವರ. ಮಗನಿಂದ ಸೋತರೂ ತಾಯಿ ಸಂತೋಷಪಡುತ್ತಾಳೆ. ಮಾಯಾತಿರಸ್ಕಾರದಿಂದ ಲೋಕ ಮಾತೆಯನ್ನು ತೃಪ್ತಿಪಡಿಸಿದ ಅವಳ ನಚ್ಚಿನ ಪುತ್ರ ಗೋಮಟೇಶ್ವರ.

ಗೋಮಟ ವಿಗ್ರಹದ ಎತ್ತರ ಅವನ ವ್ಯಕ್ತಿತ್ವದ ಔನ್ನತ್ಯದ ಪ್ರತೀಕ. ಆತ್ಮೋನ್ನತಿಯನ್ನು ಸೂಚಿಸಲು ಗೋಮಟನ ಉನ್ನತಾಕೃತಿ ಸಹಾಯಕವಾಗಿದೆ. ಈ ಉನ್ನತ ಆಕೃತಿ, ಗೋಮಟನು "ಉನ್ನತಿಗೆಲ್ದ ತೆರನಂ" ತೋರಿಸುತ್ತಿದೆ. ಈ ನಿಜವಾದ ಉನ್ನತಿ, ಸಾಧನೆಯಿಂದ,—ಪುರುಷಪ್ರಯತ್ನದಿಂದ—ಲಭ್ಯವಾಗತಕ್ಕದ್ದು. ಗೋಮಟೇಶ್ವರನು ತನ್ನ "ಪೌರುಷ್ಯ ಪಾರಮ್ಯಮಂ ಪರಮೋತ್ತುಂಗತೆಯಿಂದೆ" ಲೋಕಕ್ಕೆ ಅರುಹುತ್ತಿದ್ದಾನೆ. ಗೋಮಟೇಶ್ವರನು "ಮಾನವ ಮಾನದಂ", ಮಾನವನು ಎಷ್ಟು ಎತ್ತರಕ್ಕೆ ಏರಬಹುದು ಎಂಬುದನ್ನು ತೋರಿಸಿಕೊಟ್ಟವನು— ಎಂಬ ಮಹೋನ್ನತಾದರ್ಶನವನ್ನು ಗೋಮಟ ವಿಗ್ರಹ ನಿರ್ಮಾಣದ ಮೂಲಕ ಲೋಕಕ್ಕೆ ಚಿರಸ್ಥಾಯಿಯಾಗಿಸಿದ ಕೀರ್ತಿ ಚಾಮುಂಡರಾಯನದು.

ಪರಸ್ಪರ ವಿರುದ್ಧಗಳಾಗಿ ಕಾಣುವ ಸದ್ಗುಣಗಳು ಗೋಮಟೇಶ್ವರನಲ್ಲಿ ಹೇಗೆ ಸನ್ಮೈತ್ರಿಯಿಂದ ಸೇರಿವೆಯೆಂಬ ಸೋಜಿಗವನ್ನು ಕವಿ ಚೆನ್ನಾಗಿ ಮನಗಾಣಿಸಿದ್ದಾರೆ.

೧೩. ಪುರುಷಕಾರ ಮಹಿಮಾನುಭವ

"ಕೃಷ್ಣರಾಜಸಾಗರ", "ಚಾಮುಂಡಿಯ ದೀಪಗಳು", "ಶಿವನ ಸಮುದ್ರ" ಮೊದಲಾದ ಕೆಲವು ಕೃತಿಗಳಲ್ಲಿ "ನಿವೇದನ"ದ ಕವಿ "ಪುರುಷಕಾರ (ಪುರುಷ ಪ್ರಯತ್ನ) ಮಹಿಮಾನುಭವ"ವನ್ನು ನಮಗಾಗಿಸಿದ್ದಾರೆ. ಮನುಷ್ಯ ನಿರ್ಮಿತ ಗಳಾದ ದೃಶ್ಯ ವಿಶೇಷಗಳ ಸೊಬಗಿನ ವರ್ಣನೆಯೂ ಈ ಕವನಗಳಲ್ಲಿ ಮೈಗೂಡಿ ಅವು ಅಲ್ಲಲ್ಲಿ ಕಳೆಗೂಡಿವೆ.

ಪ್ರಕೃತಿಮಾತೆ ತನ್ನ ಸಂಪತ್ತೆಲ್ಲವನ್ನೂ ತನ್ನ ಮಕ್ಕಳಾದ ಮಾನವರಿಗಾಗಿ ಸೂರೆಗೊಟ್ಟಿದ್ದಾಳೆ. 'ಸಂಪತ್ತನ್ನು ಕೊಟ್ಟಿದ್ದೇನೆ, ಅದನ್ನು ಜಾಣ್ಮೆಯಿಂದ ಉಪಯೋಗಿಸಿಕೊಳ್ಳುವುದು ನಿಮಗೆ ಸೇರಿದ್ದು' ಎಂದು ಸಂಕೇತ ಸೂಚನೆಗಳಿಂದ ತನ್ನ ಮಕ್ಕಳನ್ನು ಬೇಡುತ್ತಿದ್ದಾಳೆ, ಕಾಡುತ್ತಿದ್ದಾಳೆ. ಹಾಗೆ ಉಪಯೋಗಿಸಿ ಕೊಂಡವರಿಗೆ ಅವಳ ಬಹುಮಾನ ಸಿದ್ಧವಾಗಿದೆ. ಪ್ರಕೃತಿ ಸಂಪತ್ತನ್ನು ಮಾನವನ ಮೇಲ್ಮೆಗಾಗಿ ಉಪಯೋಗಿಸುವ ಯೋಜನೆಯನ್ನು ಹಾಕಿಕೊಟ್ಟವರು ನಿಜವಾಗಿ ಲೋಕಮಾನ್ಯರು. ಶಿವನಸಮುದ್ರದ ಬಳಿಯ ವಿದ್ಯುದ್ಯೋಜನೆಯೂ, ಕೃಷ್ಣರಾಜ ಸಾಗರವೂ ಪುರುಷಕಾರ ಸಿದ್ಧಿಗೆ ನಿದರ್ಶನಗಳು.

'ಪುರುಷಬಲವ ಬೆಳಗಿ' ಎಂದು ಕಾವೇರಿ ಸಾರುತ್ತಿದ್ದಾಳೆ. 'ಗೋಮಟೇಶ್ವರನಂತೂ 'ಪೌರುಷ್ಯ ಪಾರಮ್ಯ'ಕ್ಕೆ ಉತ್ತುಂಗ ನಿದರ್ಶನ.

'ನಿವೇದನ'ದಲ್ಲಿ ಮನುಷ್ಯ ನಿರ್ಮಿತ ದೃಶ್ಯ ವಿಶೇಷಗಳನ್ನು ವರ್ಣಿಸುವ ಸಂದರ್ಭಗಳಲ್ಲೆಲ್ಲಾ ಪುರುಷಕಾರ ಮಹಿಮೆಯ ಪ್ರಶಂಸೆ ಬಂದಿದೆ.

೧೪. ಹಾಡು-ಹೂಗಳು

'ನಿವೇದನ'ದಲ್ಲಿ ಉಳಿದೆಲ್ಲ ಕವನಗಳೂ ಒಂದು ಗುಂಪಾದರೆ, ಕಡೆಯ 'ಹಾಡುಗಳು' ಒಂದು ಗುಂಪು. ಇವು ಪಲ್ಲವಿ, ಅನುಪಲ್ಲವಿ, ಮತ್ತು ಕೆಲವು ಚರಣಗಳನ್ನುಳ್ಳ ಪರಿಪೂರ್ಣಸ್ವರೂಪದ ಸಂಗೀತ ಕೃತಿಗಳು. ಕರ್ಣಾಟಕ ಸಂಗೀತ ಪ್ರಪಂಚದಲ್ಲಿ ವಾಗ್ಗೇಯಕಾರರೆಂದು ಪ್ರಸಿದ್ಧರಾದ ಪುರಂದರದಾಸರು, ತ್ಯಾಗರಾಜರು ಮೊದಲಾದ ಮಹನೀಯರ ಸಂಪ್ರದಾಯವನ್ನು ಅನುಸರಿಸಿ ರಚಿಸಿದ ಕೃತಿಗಳು ಇವು. ("ದಾರಿಗರ ಹಾಡು" ಎಂಬುದು ಮಾತ್ರ ಹಾಡಿಕೆಗೆ ತುಂಬ ದೀರ್ಘವೆನಿಸುವ ರಚನೆ.) ಹಾಡಲೆಂದೇ ಬರೆದಿದ್ದರೂ, ಕಾವ್ಯಗುಣವೇ ಇವುಗಳಲ್ಲಿ ಮೇಲುಗೈಯಾಗಿದೆಯೆಂದು ಹೇಳಬಹುದು: ಎಂದರೆ, ಇವುಗಳಲ್ಲಿ ಸಂಗೀತ ಗುಣ ಇಲ್ಲವೆಂದು ಈ ಮಾತಿನ ಅರ್ಥವಲ್ಲ; ಸಾಧಾರಣವಾಗಿ ಸಂಗೀತ ಕೃತಿಗಳಲ್ಲಿ ಕಾಣಬರದ ಒಂದು ಭಾವಪುಷ್ಟಿ ಇವುಗಳಲ್ಲಿ ಶೋಭಿಸುತ್ತ, ಓದಿ ಮನನಮಾಡಲೂ ಇವು ಯೋಗ್ಯವಾಗಿವೆಯೆಂಬುದಷ್ಟೆ ಆಶಯ. ಈ ದೃಷ್ಟಿಯಿಂದ ಇವೂ ಭಾವಗೀತೆಗಳೇ.

ಈ ಹಾಡು-ಹೂಗಳನ್ನೆಲ್ಲ ಒಟ್ಟುಗೂಡಿಸಿ ಕಟ್ಟಿರುವ ಒಂದು ಭಾವದ ಎಳೆ ಸೂಕ್ಷ್ಮ ಪರಿಶೀಲನೆಗೆ ಗೋಚರವಾಗದೆ ಇರದು. ಅದು ಏನೆಂದರೆ, ಭಗವಂತನಲ್ಲಿ ಕವಿಯ ಅರ್ಪಣ-ಬುದ್ಧಿ, ಆತ್ಮ ನಿವೇದನ. ಈ ಅಂಶವನ್ನೂ ಗಮನಿಸಿದರೆ, 'ನಿವೇದನ'ಕ್ಕೆ ಆ ಹೆಸರು ಎಷ್ಟು ಚೆನ್ನಾಗಿ ಒಪ್ಪುತ್ತದೆಯೆಂಬುದನ್ನು ಮನಗಾಣಬಹುದು.

ಈ ಎಲ್ಲ ಹಾಡುಗಳಲ್ಲೂ,—ಭಗವಂತನೆದುರು ಕವಿಯ ವಿನಯ, ನಿರಹಂಕಾರ ಭಾವ, ಭಗವಂತನ ಪರಿಪೂರ್ಣತೆಯ ಅರಿವು—ಇವೇ ಮುಂತಾದ ಆತ್ಮಸಂಸ್ಕಾರಕಗಳಾದ ಪವಿತ್ರಭಾವನೆಗಳು ಪರಿಮಳಿಸುತ್ತಿವೆ.

೧೫. ದೈವವಿಲಾಸ

"ನಿನ್ನ ವಿಲಾಸ" ಎಂಬ ಹಾಡಿನಲ್ಲಿ ಕವಿ ಭಗವಂತನ ಲೀಲಾವಿಲಾಸವನ್ನು ಕೊಂಡಾಡಿದ್ದಾರೆ. ಜಗತ್ತಿನ ಸಕಲ ಸಚರಾಚರಗಳನ್ನೂ ಸೃಷ್ಟಿಸುವವನೂ ಅವನೆ. ನಾಶ ಮಾಡುವವನೂ ಅವನೆ; ಕಾಪಾಡುವವನೂ ಅವನೆ; ಒಮ್ಮೆ 'ದಯೆಯ ಬೀರುವಾ ದೊರೆ'; ಇನ್ನೊಮ್ಮೆ 'ಭಯವ ತೋರುವ ಶತ್ರು'; ಎಲ್ಲ ವೇಳೆಯಲ್ಲೂ

ಬಗೆ ಬಗೆಯ ಇಂಗಿತಗಳಿಂದ ನೀತಿಯನ್ನು ಕಲಿಸುವ ಗುರು. ಇಂಥವನ ಅರ್ಥವಾಗದ ಲೀಲೆಯನ್ನು, ಮುದ್ದಿಸಿದ ಬೊಂಬೆಯನ್ನು ಮರುಗಳಿಗೆಯಲ್ಲೇ ಬಿಸುಡುವ ಶಿಶುವಿನ ಲೀಲೆಗೆ ಹೋಲಿಸಿರುವುದು ಬಹು ಚೆನ್ನಾಗಿದೆ. ಭಗವಂತನ ಲೀಲೆ ನಾಟ್ಯರಂಗದಲ್ಲಿ 'ಅಳಿಸುವಾ ನಗಿಸುವಾ ನಟನ ರೀತಿ'ಯನ್ನು ಹೋಲುತ್ತದೆ.

೧೬. ವನಕುಸುಮ ಸೌರಭ

ಭಾವ ಸೌಂದರ್ಯ ಭಾಷಾ ಸುಭಗತೆ—ಈ ಎರಡೂ ಗುಣಗಳು ಏಕತ್ರ ಸಂಮಿಲನಗೊಂಡರೆ ಪರಿಣಾಮ ರಮಣೀಯತೆ ಎಷ್ಟು ಮೋಹಕವಾಗುತ್ತದೆ ಎನ್ನುವುದಕ್ಕೆ 'ವನಸುಮ' ಎಂಬ ಗೀತೆ ಅತ್ಯುತ್ತಮ ನಿದರ್ಶನ. ಜನಪ್ರಿಯವಾದ ಕವಿತೆಗಳನ್ನೆಲ್ಲ ಶ್ರೇಷ್ಠವರ್ಗದವೆಂದು ಭಾವಿಸುವುದು ತಪ್ಪಾದೀತು. ಈ ಹೇಳಿಕೆಗೆ ಹೊರತಾದ ಜನಪ್ರಿಯ ಕೃತಿಗಳಲ್ಲಿ 'ವನಸುಮ' ಒಂದು. ಈ ಗೀತದಲ್ಲಿ, ಕಾಡಿನ ಅಭುಕ್ತ ಮೂಲೆಯಲ್ಲಿದ್ದುಕೊಂಡು ದೀನವಾದ ನಿರಹಂಕಾರವಾದ ಆಡಂಬರವಿಲ್ಲದ ಬದುಕನ್ನು ಬದುಕುತ್ತ, ಆದರೂ ನರುಗಂಪು ಬೀರುತ್ತ, ತನ್ನ ಬಾಳಿನ ಸಾರ್ಥಕತೆಯನ್ನೂ ಪಡೆಯುವ ಕಾಡುಮಲ್ಲಿಗೆಯ ಬದುಕನ್ನು ತನಗೆ ನೀಡುವಂತೆ ಕವಿ ದೇವನಲ್ಲಿ ಮೊರೆಯಿಡುತ್ತಾರೆ. ಕವಿಯ ಇನ್ನೊಂದು ಜೀವನಾದರ್ಶವೆಂದರೆ, 'ಸುಫಲ ಸುಮಭರಿತ ಪಾದಪ'. ಹಣ್ಣು ಹೂಗಳಿಂದ ತುಂಬಿದ ಮರವು ತಾನು ಇತರರಿಗೋಸ್ಕರ ಹಣ್ಣು ಬಿಡುವ, ನೆರಳೀವ, ಉಪಕಾರಿ ಎಂಬ ಅಹಂಕೃತಿಯನ್ನು ಹೊಂದಿರುವುದಿಲ್ಲ. ಕೋರಿದವರಿಗೆಲ್ಲ ವಿಪುಲಾಶ್ರಯವನ್ನೀಯುವುದು ಅದರ ಧರ್ಮ, 'ನೈಜ ಮಾದೊಳ್ಪು'. ಇಂಥ 'ನೈಜಮಾದೊಳ್ಪಿನಿಂ ಬಾಳ್ವವೊಲು' ಅನುಗ್ರಹಿಸು ಎಂದು ಕವಿ ದೇವನಲ್ಲಿ ಮೊರೆಯಿಡುತ್ತಾರೆ. ನಿಷ್ಕಾಮ ಕರ್ಮಯೋಗದ ಸಾರವೆಲ್ಲ ಈ 'ವನಸುಮ'ದಲ್ಲಿ ಸೌರಭವಾಗಿ ಸೂಸುತ್ತಿದೆ.

೧೭. ಸೌಭಾಗ್ಯ ಸ್ವಾಮ್ಯ

ಈ ಜಗತ್ತಿನ ಸಕಲ ಸೌಭಾಗ್ಯಗಳೆಲ್ಲ ಪರಮಾತ್ಮನ ಒಡವೆ. ಹೀಗಿರುವಾಗ, ಇದು ನನ್ನದು, ಅದು ಅವನದ್ದು ಎಂದು ಬೇರ್ಪಡಿಸಹೋಗುವುದು ಎಂಥ ಅವಿವೇಕ ಎಂಬ ಸತ್ಯಾಂಶ 'ಎನ್ನದು ಯಾವುದು ?' ಎಂಬ ಗೀತದ ಹುರುಳು. ಕಡಲಿನಲ್ಲಿ ಬೇರೆ ಬೇರೆ ನದಿಗಳ ನೀರನ್ನು ಬೇರ್ಪಡಿಸುವುದು ಹೇಗೆ ? ಕಾಡಿನ ಗಾಳಿಯಲ್ಲಿ ಬೇರೆ ಬೇರೆ ಹೂಗಳ ಕಂಪನ್ನು ಪರಿಕಿಸಿ ಹೇಳುವವರು ಯಾರು ? ಅಂತೆಯೇ ಜಗತ್ತಿನ ಸೌಭಾಗ್ಯಗಳ ಸ್ವಾಮ್ಯ ವಿಚಾರ. ಇಂತಿರುವಾಗ, ಭಿನ್ನಭಾವವನ್ನು ಬಿಟ್ಟು ಭಗವಂತನ ಪೂರ್ಣತೆಯನ್ನು ಎಲ್ಲೆಲ್ಲೂ ಕಾಣುವ ದೃಷ್ಟಿ ಮಾತ್ರ ತಮ್ಮದಾಗಿರಲೆಂದು ಕವಿ ದೇವನನ್ನು ಬೇಡುತ್ತಾರೆ.

೧೮. ಭುವನ-ಭವರಂಗಗಳ ನಟರು

'ಭುವನರಂಗ'ದಲ್ಲಿ ಭಗವಂತನ ನಾಟಕ ; 'ಭವರಂಗ'ದಲ್ಲಿ ಮಾನವನ ನಾಟಕ. 'ಅವನ' ನಾಟಕದೊಳಗಿನ ಉಪನಾಟಕ ಇವನದು. ಅವನಂತೆಯೇ ಇವನೂ ವಿವಿಧ ವೇಷಧಾರಿ. ಭಗವಂತನು ಮೃಗಪಕ್ಷಿಗಳ ರೂಪದಲ್ಲಿ ನಟಿಸಿದರೆ, ಮಾನವನು ಆ ಮೃಗಪಕ್ಷಿಗಳ ಬಗೆ ಬಗೆಯ ಗುಣಗಳನ್ನು ಮೆರೆಯುತ್ತಾನೆ. ಹುಲಿಯ ಭೀಕರತೆ, ಜಿಂಕೆಯ ಭೀರುತೆ, ಸರ್ಪನ ಸೇಡು, ಎಲ್ಲ ಮಾನವಸ್ವಭಾವದಲ್ಲಿಯೇ ಬೆರೆತಿವೆ. ವಿಶಾಲ ವಿಶ್ವದಲ್ಲಿ ಭಗವಂತನು ಮೆರೆಯುವ ಗುಣವೈವಿಧ್ಯವನ್ನೆಲ್ಲಾ ಮಾನವನು ಅನುಸರಿಸುತ್ತಿರುವನಷ್ಟೆ. ಭಗವಂತನಂತೆಯೇ ಮಾನವನೂ ಜಗತ್ತನ್ನು ಕಟ್ಟುತ್ತಾನೆ. ಕೆಡವುತ್ತಾನೆ ; ಅದೇ ಕ್ರೌರ್ಯ, ಅದೇ ಕರುಣೆ. ಹೀಗೆ, ಮಾನವ ತನ್ನ ದಿನ ದಿನದ ಬದುಕಿನಲ್ಲಿ ದೇವನ ಲೀಲಾವಿಲಾಸವನ್ನು ಅನುಕರಿಸುತ್ತಿದ್ದಾನೆ. ಭಗವಂತನ ನಾಟಕದಲ್ಲಿ ಅವನೇ ನಟ, ಅವನೇ ಸೂತ್ರಧಾರ ; ಮಾನವನ ನಾಟಕಕ್ಕೆ ಮಾತ್ರ ಭಗವಂತನೇ ಸೂತ್ರಧಾರ. ಅವನು ಆಡಿಸಿದ ಹಾಗೆ ಇವನು ಆಡಬೇಕು. ಅವನ ಕೈಯ ಕೈದು ಇವನು. ಅವನ ಅಮಿತ ಶಕ್ತಿಯಿಂದ ಇವನ ಬಲ. ಆದ್ದರಿಂದಲೇ. 'ಅಭಯವನೀವುದು ಅನುಚರನಿಗೆ ದೇವ' ಎಂದು ಕಡೆಯಲ್ಲಿ ಬೇಡಿಕೊಳ್ಳುತ್ತಾರೆ. ಇದಿಷ್ಟು 'ನಿನ್ನ ನಾಟಕ' ಎಂಬ ಹಾಡಿನ ಭಾವವಿನ್ಯಾಸ.

೧೯. ಸ್ವಾತಂತ್ರ್ಯವೇಕೆ ?

"ಸ್ವಾತಂತ್ರ್ಯವೇಕೆ ?" ಎಂಬ ಅಡಕವಾದ ಹಾಡಿನಲ್ಲಿ, ದೇವನು ಮನುಷ್ಯನಿಗೆ ಕೊಟ್ಟಿರುವ ಸ್ವಾತಂತ್ರ್ಯದ ನಿರರ್ಥಕತೆಯನ್ನು ಕಾಣಿಸಿದ್ದಾರೆ. ಈ ಸ್ವಾತಂತ್ರ್ಯವು "ನೀತಿಯಿಂದೆನ್ನ ಬೀಳಿಪ ಯುಕುತಿಯೇನೈ ?" ಎಂದು ಕವಿಯ ಸಂದೇಹ. ಗಿಳಿ ಕೋಗಿಲೆಗಳು ತಮ್ಮ ಹಾಡಿನಲ್ಲಿ ದೈವನಿಂದೆ ಮಾಡವು ; ಇತರರನ್ನು ಮನ ನೋಯಿಸವು ; ದೈವರಚನೆಯ ಸೊಬಗನ್ನು ತೋರುವುದಷ್ಟೆ ಅವುಗಳ ಬಾಳ ಪರಿ, ಗುರಿ. ತರುಲತೆಗಳಿಗೆ ಮನುಷ್ಯನ ಬುದ್ಧಿಶಕ್ತಿ ಎಲ್ಲಿ ಬರಬೇಕು ? ಅವು ದೈವಸಂಕಲ್ಪಕ್ಕೆ ಅನುಗುಣವಾಗಿ ಫಲಪುಷ್ಪಗಳನ್ನು ತಳೆದು ಪರೋಪಕಾರದಲ್ಲಿ ಮಾತ್ರ ನಿರತವಾಗಿರುತ್ತವೆ. ಮನುಷ್ಯ ಹೊರತಾಗಿ ಉಳಿದೆಲ್ಲ ಚರಾಚರ ಜಗತ್ತು ದೈವಸಂಕಲ್ಪಬದ್ಧ. ಇಚ್ಛಾಸ್ವಾತಂತ್ರ್ಯ, ಕಾರ್ಯಸ್ವಾತಂತ್ರ್ಯಗಳುಳ್ಳ ಮಾನವ ಮಾಡುವುದೇನು ? ದೈವನಿಂದೆ. ಪರದೂಷಣೆ. ಪರಪೀಡನೆ,—ಸ್ವಾತಂತ್ರ್ಯದ ಫಲ ಇದಾದರೆ, ತಪ್ಪು ಯಾರದ್ದು ? ಸ್ವಾತಂತ್ರ್ಯ ಹೊಂದಿರುವವನದೋ ? ಅದನ್ನು ಕೊಟ್ಟಾತನದೋ ? ಮಾನವನಿಗೆ ಈ ಸ್ವಾತಂತ್ರ್ಯದಾನದಲ್ಲಿ ದೈವಸಂಕಲ್ಪವಾದರೂ ಏನು ? ಈ ತಾತ್ತ್ವಿಕ ಸಂದೇಹದ ಸುಳಿಯಲ್ಲಿ ಸಿಕ್ಕಿದ ಕವಿ "ಸ್ವಾತಂತ್ರ್ಯವನು ದೇವ ಏತಕೆನಗಿತ್ತೆ ?" ಎಂದು ಆರ್ತಧ್ವನಿಯೆತ್ತುತ್ತಾರೆ.

೨೦. ದಾರಿಗರ ಹಾಡು

"ದಾರಿಗರ ಹಾಡು" ಒಂದು ದಾರ್ಶನಿಕ ಗೀತ. ಸಾಹಿತ್ಯ ವಿಮರ್ಶೆಯಲ್ಲಿ "ಪ್ರತಿಮಾ ವಿಧಾನ" ಎಂಬ ಮಾತು ಈಚೆಗೆ ಬಳಕೆಗೆ ಬರುತ್ತಿದೆ. ಈ ಮಾತು ಹೊಸದಷ್ಟೆ; ವಿಧಾನ ಕಾವ್ಯದಷ್ಟೆ ಪ್ರಾಚೀನ. ಆ ವಿಧಾನದಲ್ಲಿ ಜೀವನಸ್ವರೂಪದ ವಿವರಪೂರ್ಣವಾದ ಒಂದು ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ ಕವಿ; ಹೇಗೆ ಬದುಕಿದರೆ ಬದುಕಿನ ಹೊರೆ ಹಗುರ, ದಾರಿ ಸುಗಮ ಎಂಬ ದರ್ಶನವನ್ನು ನಮಗೆ ನೀಡಿದ್ದಾರೆ.

ಈ ಜೀವನ ಎನ್ನುವುದು ಒಂದು ಪ್ರಯಾಣ; ಒಂದು ಜನ್ಮಕ್ಕೆ ಮುಗಿಯುತಕ್ಕದ್ದಲ್ಲ. ಜನ್ಮಜನ್ಮಾಂತರಕ್ಕೆ ಸಾಗುತ್ತದೆ. ಈ ಭವದಿಂದ ಬಿಡುಗಡೆ ಹೊಂದಿದಾಗ ಪ್ರಯಾಣ ಮುಗಿದಂತೆ. ಹಾಗೆ ಬಿಡುಗಡೆ ಹೊಂದುವ ಉಪಾಯ ಯಾವುದು ಎಂಬುದನ್ನು ಅನುಭವಿಯಾದ ಪಯಣಿಗನ ನೆಲೆಯಲ್ಲಿ ನಿಂತ ಕವಿ ನಮಗೆ ತೋರಿ ಕೊಟ್ಟಿದ್ದಾರೆ.

ಜೀವನ ಪ್ರಯಾಣದಲ್ಲಿ ನಾವೆಲ್ಲರೂ ದಾರಿಹೋಕರೆ. ಕೆಲವರಿಗೆ ಜನ್ಮಕ್ಕೆ ಜೋತುಬಿದ್ದಿರಬೇಕೆಂದೇ ಬಯಕೆ. ಇಂಥವರನ್ನು ಕುರಿತು 'ಊರತೊಡಕಿಗೆ ನಮ್ಮ ಸೇರಿಸದೆ ಬಿಡಿರಿ ಸಖರೇ' ಎಂದು ಕೇಳಿಕೊಳ್ಳುತ್ತಾರೆ. ಊರ ತೊಡಕನ್ನು ಹೇಗಾದರೂ ಬಿಡಿಸಿಕೊಳ್ಳಬಹುದೇನೋ. ಪಯಣವಂತೂ ತಪ್ಪುವ ಹಾಗಿಲ್ಲ. ಪ್ರಯಾಣಕಾಲದ 'ಕೊರತೆ ಕನಲಿಕೆಗಳನ್ನು ಮರೆಯಿಪ ಬಗೆ'ಯನ್ನು ತನ್ನಂತಹ ದಾರಿಗರೆಲ್ಲರ ಪರವಾಗಿ ಕವಿ ವಿವರಿಸುತ್ತಾರೆ.

ಜೀವಮಾನದ ಪ್ರಾರಂಭ (ಬಾಲ್ಯ, ಯೌವನ), ಮಧ್ಯಕಾಲ (ಮಧ್ಯವಯಸ್ಸು), ಕಡೆಗಾಲ (ಮುಪ್ಪು) ಇವುಗಳನ್ನು ಒಂದು ದಿನದ ಪಯಣದ ಪ್ರಾತಃಕಾಲ, ಮಧ್ಯಾಹ್ನ, ಸಂಜೆ ಎಂಬ ರೂಪಕ ವಿನ್ಯಾಸದಲ್ಲಿ ಸಮಾವೇಶಮಾಡಿರುವುದು ಉಚಿತವೂ ಸುಂದರವೂ ಆಗಿದೆ. ಪಯಣದ ವಿವರಗಳ ಉಲ್ಲೇಖನವೂ ಈ ವಿಭಜನೆಗೆ ಅನುಗುಣವಾಗಿದೆ.

ಮುಂಬೆಳಗಿನ ಪಯಣದಲ್ಲಿ 'ತರಣಿಯೊಲುಮೆ' ದಾರಿಗರಿಗಿದೆ: ತಮ್ಮ ಪಾಲಿಗೆ ಬಂದ ಬುತ್ತಿಯ ತಂಗುಳೂಟ ಉಣ್ಣುತ್ತಾರೆ; ಹತ್ತಿರದ ಮರದ ಹಣ್ಣು ದೊರೆಯುತ್ತವೆ; ಹಕ್ಕಿಗಳ ಸಂಗೀತ ಹಿತಕರವಾಗಿದೆ; ನೆರಳಿನಲ್ಲಿ ಹಾಯಾಗಿ ವಿಶ್ರಮಿಸಿದ ಮೇಲೆ, ಎಚ್ಚತ್ತು, ಪಯಣ ಮುಂದಕ್ಕೆ ಸಾಗುತ್ತದೆ. ಬಡವರಾಗಲಿ, ಬಲ್ಲಿದರಾಗಲಿ, ಬಾಲ್ಯ ಯೌವನಗಳ ಕಾಲವೇ ಸುಖ. ಅದರ ಚಿತ್ರ ಇಲ್ಲಿದೆ.

ಎಲ್ಲರ ಜೀವನದಲ್ಲೂ ಮಧ್ಯವಯಸ್ಸು—ಪಯಣದ ಮಧ್ಯಾಹ್ನಕಾಲ—ಕಷ್ಟದ ಕಾಲ, ಹಿಂದೆ ಇಲ್ಲದ ತಾಪತ್ರಯ ಈಗ. ಕಷ್ಟ ಕಾರ್ಪಣ್ಯಗಳ ಮುತ್ತಿಗೆಗೆ ಮುಗಿ-

ತಾಯವೇ ಇದ್ದಂತೆ ಕಾಣದು. "ಮುನ್ನ ಕರುಣಿಸಿದ ದಿನಪತಿಯ ಕಿರಣಗಳು ಕನಲಿ" ಬೇಯಿಸುತ್ತವೆ. ಮರದ ನೆರಳು, ಮೋಡದ ನೆರಳು ಬೇಕೆನಿಸುತ್ತದೆ, ಮುಗಿಲ ತುಣುಕು ಒಂದು ಕಾಣಿಸುತ್ತದೆ, ತಂಗಾಳಿಯುನ್ನೂ ಸೂಸುತ್ತದೆ. ಆದರೇನು ? ಮರುಗಳಿಗೆಯೇ ಮಿಂಚು, ಸಿಡಿಲು, ಮಳೆಗಳ ಹೊಡೆತ. (ಬಾಳಿನಲ್ಲೂ ಅಷ್ಟೇ ತಾನೆ ? ಹೂವು ಹಾವಾಗುತ್ತದೆ ; ಹಾವು ಹೂವಾಗುತ್ತದೆ.) ಮಳೆಯಲ್ಲಿ ನೆನೆಯಲೇಬೇಕು. ನೆನೆದು ನಡೆಯುತ್ತ ಹೋದರೆ, ಯಾವುದೋ ಒಂದು ಗುಡಿಯು ಸತ್ರ ಸಿಕ್ಕೇ ಸಿಕ್ಕುತ್ತದೆ. ಅಲ್ಲಿ ತಂಗಿ, ತಮ್ಮಂತಯೇ ತಂಗಿದ್ದ ಇತರ ಬಡ ದಾರಿಗರೊಂದಿಗೆ ಸತ್ಕಾಲಕ್ಷೇಪದಲ್ಲಿ ಇರುಳು ಕಳೆದು, ಆಯಾಸ ಪರಿಹಾರ ಮಾಡಿಕೊಳ್ಳುತ್ತಾರೆ ದಾರಿಗರು. ಹೀಗೆ, ಒಂದು ಜನ್ಮ ಮುಗಿದ ಮೇಲೆ ಇನ್ನೊಂದು ; ಮತ್ತೆ ಬೆಳಗು ನಡುಹಗಲು, ಬೈಗು. ಮತ್ತೆ ಅದೇ ಕಥೆ; ಅದೇ ಪಯಣ.

ಸಾಗುತ್ತದೆ ದಾರಿಗರ (ನಮ್ಮೆಲ್ಲರ) ನಿಚ್ಚ ಪಯಣ. ಇಂಥಾ ಅನುಭವಸ್ಥರಾದ ಪಯಣಗರಿಗೆ ಯಾರ ಯಾವ ಭಯವೂ ಇಲ್ಲ; ಅವರು ಯಾವ ಸಾಹಸಕ್ಕೂ ಕೈಯಿಕ್ಕರು. ಊರಿನವರ ಔದಾರ್ಯವನ್ನು ಸವಿದಿದ್ದರೂ ಊರು ಸಾಕೆನಿಸಿದೆ.

ಈ ದಾರಿಗರ ಅನುಭವಭಂಡಾರ ಹಿರಿದು : ದುಃಖಿಗಳನ್ನು ಕಂಡಿದ್ದಾರೆ, ನಲಿಯುವವರನ್ನು ಕಂಡಿದ್ದಾರೆ. ಹೆದರುವವರನ್ನು ಕಂಡಿದ್ದಾರೆ, ಹೆದರಿಸುವವರನ್ನು ಕಂಡಿದ್ದಾರೆ, ದುಷ್ಟರನ್ನು ಕಂಡಿದ್ದಾರೆ, ದಡ್ಡರನ್ನು ಕಂಡಿದ್ದಾರೆ. ಸಾಕಿಷ್ಟು. ಇನ್ನು ಅವರಿಗೆ ಗೂಡು ಸೇರುವ ಬಯಕೆ.

ಇಷ್ಟು ಅನುಭವ ಸಂಸ್ಕಾರವುಳ್ಳ ದಾರಿಗರಿಗೆ ಪರೋಪಕಾರ ಬುದ್ಧಿ, ಸೌಜನ್ಯ, ತಾತ್ತ್ವಿಕ ಔದಾಸೀನ್ಯ—ಇವು ಸ್ವಾಭಾವಿಕ. ತಮ್ಮ ದಾರಿನಡಿಗೆಯಲ್ಲಿ ಅಡ್ಡಿಪಡಿಸಿದ ಹಳ್ಳಗಳನ್ನು ಮುಚ್ಚುತ್ತಾರೆ. ಮುಳ್ಳುಗಳನ್ನು ತೆಗೆದು ದೂರ ಹಾಕುತ್ತಾರೆ. ತಾವು ದುರ್ಗಮವೆಂದು ಕಂಡುಕೊಂಡ ಪಥ ಇತರರಿಗೆ ಸುಗಮವಾಗಲಿ ಎಂದು ಅವರ ಪ್ರಯತ್ನ. ಇಂಥವರು ವಿಧಿಯ ಮುಳಿಸಿಗೆ ಹೆದರುವವರಲ್ಲ ; ಇವರಿಗೆ ದೊರೆತಷ್ಟರಲ್ಲಿ ತೃಪ್ತಿ. ಇವರು ದುರಾಶಾಪೀಡಿತರಲ್ಲ ; ನಿತ್ಯ ಸುಖಿಗಳು. ಕಾರಣ, ಇವರ ಹೃದಯದಲ್ಲಿ ಅಕ್ಷಯ ಅಮೃತ ಬಿಂದುವಿದೆ : ಅದು. ಆತ್ಮವಿಶ್ವಾಸ ಮತ್ತು ಗುರುಭಕ್ತಿ (ಪರಮಾತ್ಮನಲ್ಲಿ ಭಕ್ತಿ).

'ನಿವೇದನ'ದ ಗೋಮಟೇಶ್ವರ

ಶ್ರೀಮತಿ ಕಮಲಾ ಹಂಪನಾ

ಪ್ರಾಚೀನ ಕವಿಗಳಾದ ಆದಿಕವಿ ಪಂಪ, ರನ್ನ, ಬೊಪ್ಪಣ ಪಂಡಿತ, ಮಧುರ, ರತ್ನಾಕರವರ್ಣಿ, ಪಂಚಬಾಣ ಮುಂತಾದವರು ಮತ್ತು ಆಧುನಿಕ ಕವಿಗಳಲ್ಲಿ ಮುಖ್ಯವಾಗಿ ಗೋವಿಂದ ಪೈ ಮತ್ತು ಕುವೆಂಪು ಇವರುಗಳು 'ಗೋಮಟೇಶ್ವರ' ಎಂದು ಆಮೇಲಿನ ದಿನಗಳಲ್ಲಿ ಪ್ರಸಿದ್ಧನಾದ ಬಾಹುಬಲಿಯನ್ನು ಕುರಿತು ರಚಿಸಿರುವ ಕವಿತೆಗಳನ್ನು ಶ್ರೀಮತಿ ಕಮಲಾ ಹಂಪನಾ ಪರಿಚಯ ಮಾಡಿಕೊಟ್ಟಿದ್ದಾರೆ. ಬಾಹುಬಲಿಯ ವ್ಯಕ್ತಿತ್ವ ಮಹಿಮೆಯನ್ನು ಅರಿಯಬೇಕಾದರೆ ಜಿನಸೇನಾಚಾರ್ಯರ ಪೂರ್ವಪುರಾಣವನ್ನು ಅನುಸರಿಸಿಯೂ ಸ್ವೋಪಜ್ಞವಾಗಿ ಪಂಪನು ಚಿತ್ರಿಸಿರುವ ಭರತ-ಬಾಹುಬಲಿಗಳ ಪ್ರಕರಣವನ್ನು ತಿಳಿದಿರಬೇಕಾದದ್ದು ಅಗತ್ಯ. ಈ ಕಾರಣದಿಂದ ಶ್ರೀಮತಿಯವರು ಪಂಪನ ಆದಿಪುರಾಣದಲ್ಲಿ ಚಿತ್ರಿತವಾಗಿರುವಂತೆ ಬಾಹುಬಲಿಯ ವೃತ್ತಾಂತವನ್ನು ಸ್ವಲ್ಪ ವಿವರಣಪೂರ್ಣವಾಗಿಯೇ ನಿರೂಪಿಸಿದ್ದಾರೆ. ಈ ಎಲ್ಲ ಕವಿತೆಗಳ ಸುದೀರ್ಘ ಪರಿಚಯದ ಹಿನ್ನೆಲೆಯಲ್ಲಿ ಡಿ.ವಿ.ಜಿ. ಅವರ ಪದ್ಯಗಳ ಪರಿಚಯ ತೀರ ಸಂಕ್ಷೇಪವಾಯಿತೇನೋ ಎನ್ನಿಸುತ್ತದೆ. ಈ ಸಂಕ್ಷಿಪ್ತ ಪರಿಚಯದಲ್ಲಿ ಡಿ.ವಿ.ಜಿ. ಅವರ ಗೋಮಟೇಶ್ವರ ಕಾಣ್ಕೆಯನ್ನು ವಿಶದಪಡಿಸಿದ್ದಾರೆ. ಶ್ರೀಮತಿ ಕಮಲಾ ಹಂಪನಾ.

ಭಾರತೀಯ ಇತಿಹಾಸದ ಅಂಶಗಳಾದ ಸಾಹಿತ್ಯ, ಸಂಸ್ಕೃತಿ, ಧರ್ಮ, ಶಿಲ್ಪ ಹಾಗೂ ಕಲೆಗಳಲ್ಲಿ ತನ್ನದೇ ಆದ ವಿಶಿಷ್ಟ ಮೌಲ್ಯಗಳಿಂದ ದಾಖಲಾಗಿರುವ ವ್ಯಕ್ತಿತ್ವ ಗೋಮಟೇಶ್ವರನದು. ಈತನನ್ನು ಕುರಿತ ಸಾಹಿತ್ಯ ಹಾಗೂ ಶಿಲ್ಪಗಳು ಅವಿಭಾಜ್ಯ ಅಂಗಗಳಾಗಿವೆ. ಮಾನವೀಯ ಮೌಲ್ಯಗಳ ಚಿರಂತನ ಸತ್ಯವನ್ನು ತನ್ನ ಮೃದು-ಮಧುರ ಭಾವದಿಂದ, ಮಂದಸ್ಮಿತ ವದನದಿಂದ, ಅಂದಿನಿಂದ ಇಂದಿನವರೆಗೂ ಜಗತ್ತಿಗೆ ಸಾರುತ್ತಾ ನಿಂತಿರುವ ಶ್ರವಣಬೆಳಗೊಳದ ಬಾಹುಬಲಿ ಗಾತ್ರದಿಂದಲೂ ದೊಡ್ಡವನು. ತನ್ನ ಚಾರಿತ್ರ್ಯದಿಂದ ಇನ್ನೂ ದೊಡ್ಡವನು.

ಉನ್ನತ ಬದುಕನ್ನು ಬಯಸುವ ಎಲ್ಲ ಜೀವಿಗಳನ್ನೂ, ತನ್ನ ಉದಾತ್ತ ಚಾರಿತ್ರ್ಯದಿಂದ, ಧೀಮಂತ ನಡೆಯಿಂದ ಆಕರ್ಷಿಸಿದ ವ್ಯಕ್ತಿತ್ವ ಗೊಮ್ಮಟನದು. ಸಂಸ್ಕೃತ–ಪ್ರಾಕೃತ ಭಾಷಾ ಸಾಹಿತ್ಯದಲ್ಲಿ ಈತನ ಯಶೋಗೀತೆ ಹಾಸುಹೊಕ್ಕಾಗಿ ಹರಿದಿದೆ. ಭಾರತೀಯ ಸಾಹಿತ್ಯದಲ್ಲಿ ವಿಶೇಷವಾಗಿ ಜೈನ ಸಾಹಿತ್ಯದ ಶ್ವೇತಾಂಬರ–ದಿಗಂಬರ ಸಂಪ್ರದಾಯಗಳಲ್ಲಿ ನಿರೂಪಣೆಗೊಂಡಿರುವ ಗೊಮ್ಮಟನ ಕಥಾನಕ ಇತರ ಪ್ರಾದೇಶಿಕ ಭಾಷೆಗಳ ಸಾಹಿತಿಗಳನ್ನೂ ತನ್ನತ್ತ ವಿಶೇಷವಾಗಿ ಸೆಳೆದುಕೊಂಡಿದೆ.

ಆದಿತೀರ್ಥಂಕರ ಋಷಭದೇವನ ಮಗನಾಗಿ, ಪ್ರಥಮ ಚಕ್ರವರ್ತಿ ಭರತೇಶನ ತಮ್ಮನಾಗಿ, ಪ್ರಥಮ ಮನ್ಮಥನಾಗಿ ಗೊಮ್ಮಟ ಪ್ರಖ್ಯಾತನಾದವನು. ವೈರಾಗ್ಯದ ಪಾಠವನ್ನು ಜಗತ್ತಿಗೆ ಮೊದಲು ತೋರಿದ ಮಹಾನುಭಾವನೀತ. ಹಿಂದೆ ಅಲ್ಲಿ ಇಲ್ಲಿ ಉಲ್ಲೇಖಗೊಂಡ, ಸುವರ್ಣರೇಖೆಯಂತೆ ಗೋಚರಿಸಿದ ಬಾಹುಬಲಿ ಕಥಾನಕ ಜಿನಸೇನಾಚಾರ್ಯರ ಸಂಸ್ಕೃತ ಪೂರ್ವಪುರಾಣದಲ್ಲಿ ಒಂದು ವ್ಯವಸ್ಥಿತ ರೂಪ ಪಡೆದಿದೆ; ಆ ಕಾವ್ಯಭಾಗ ಒಂದು ರಸಘಟ್ಟದ ತಾಣವೂ ಆಗಿದೆ.

ಆಸ್ತಿಗಾಗಿ ಅಣ್ಣ–ತಮ್ಮಂದಿರು ಕಾದಾಡಿ, ಇಬ್ಬರೂ ಹಾಳಾಗುವ ಅಥವಾ ಹೆಚ್ಚೆಂದರೆ ಒಬ್ಬ ಹಾಳಾಗಿ ಇನ್ನೊಬ್ಬ ಏಳಿಗೆ ಪಡೆಯುವ ಕಥೆ ಜಗತ್ತಿನ ಇತಿಹಾಸ ದುದ್ದಕ್ಕೂ ತಿಳಿದದ್ದೆ ಆಗಿದೆ. ಆದರೆ ಹೀಗೆ ಹೋರಾಡಿದ ಸೋದರರಿಬ್ಬರೂ ಕಡೆಗೆ ಉನ್ನತಿಯ ಹಾದಿ ಹಿಡಿದ ರೀತಿ ಭರತ–ಬಾಹುಬಲಿ ಪ್ರಸಂಗದಲ್ಲಿ ಮಾತ್ರ ಕಾಣ ಬಹುದೇನೋ !

ಜಿನಸೇನಾಚಾರ್ಯರಿಂದ ಮೊದಲುಗೊಂಡ, 'ಗೊಮ್ಮಟ ಸಾಹಿತ್ಯ' ಪಂಪನೇ ಮೊದಲಾಗಿ ಕನ್ನಡನಾಡಿನ ಅನೇಕ ಸಾಹಿತಿಗಳ ಮೇಲೆ ವಿಶೇಷವಾಗಿ ಕವಿಗಳ ಮೇಲೆ ಮಹತ್ವದ ಪ್ರಭಾವ ಬೀರಿದೆ. ಆಸ್ತಿಕನಾಗಲಿ–ನಾಸ್ತಿಕನಾಗಲಿ, ಪುರಾಣ ಕಲ್ಪನೆಗೆ ಮನಸೋಲಲಿ, ಬಿಡಲಿ, ಶ್ರವಣಬೆಳಗೊಳದ ಬೃಹನ್ಮೂರ್ತಿ ಐವತ್ತೆಂಟು ಅಡಿಯ ಎತ್ತರದ ಗೊಮ್ಮಟನ ಮುಂದೆ ನಿಂತವನು ಆ ಮೂರ್ತಿಯ ಭವ್ಯರೂಪಕ್ಕೆ ಮನಸೋತು ಮೂಕನಾಗಿ ನಿಲ್ಲುತ್ತಾನೆ. ಸಾಹಿತ್ಯದಿಂದ ಗೊಮ್ಮಟನ ಬದುಕನ್ನು ಸವಿದವರು ಆ ಭವ್ಯಮೂರ್ತಿಯನ್ನು ಕಾಣುವ, ಆ ಭವ್ಯಶಿಲ್ಪವನ್ನು ಕಂಡವರು, ಆತನ ಸಾಹಿತ್ಯವನ್ನು ಓದುವ, ಕೇಳುವ ತವಕಕ್ಕೆ ಈಡಾಗುತ್ತಾರೆ. ಒಟ್ಟಿನಲ್ಲಿ ಸಂವಹನದ ಎಲ್ಲ ಮಾಧ್ಯಮಗಳೂ ಗೊಮ್ಮಟನ ಸುತ್ತ ಮುಗಿಬೀಳುತ್ತವೆ. ಅದರಲ್ಲಿ ವಿಶೇಷವಾಗಿ ಕವಿಗಳು ಸ್ಪಂದಿಸಿದ ರೀತಿ ಚೇತೋಹಾರಿಯಾದುದು. 'ಗೋಮಟೇಶ್ವರ ಜಿನ ಶ್ರೀರೂಪಮಾತ್ಮೋಪಮಂ' ಎಂದು ಹಾಡಿದ ಬೊಪ್ಪಣ ಪಂಡಿತನ ನುಡಿಶಾಸನ ಎಷ್ಟು ಔಚಿತ್ಯಪೂರ್ಣ !

ಕನ್ನಡ ಸಾಹಿತ್ಯದ ಮಕುಟಮಣಿಯಾದ ಪಂಪ, ಭರತ–ಬಾಹುಬಲಿಗಳ ಪ್ರಸಂಗದಲ್ಲಿ ಬಹುಮಟ್ಟಿಗೆ ಜಿನಸೇನಾಚಾರ್ಯರನ್ನೇ ಅನುಸರಿಸಿದ್ದಾನೆ.

ಜಿನಸೇನಾಚಾರ್ಯರ ಪೂರ್ವಪುರಾಣದ ಪ್ರಕಾರ ಋಷಭನಾಥ ತನ್ನ ನೂರು ಮಕ್ಕಳಿಗೆ ರಾಜ್ಯವನ್ನು ಹಂಚಿಕೊಟ್ಟು ಧ್ಯಾನಕ್ಕೆ ಹೋದನಂತರ, ಹಲವು ವರುಷಗಳು ಕಳೆದ ಮೇಲೆ ಚಕ್ರವರ್ತಿ ಭರತನಿಗೆ ಏಕಕಾಲದಲ್ಲಿ ಮೂರು ಮಹತ್ವ ಪೂರ್ಣ ಸಂಗತಿಗಳು ತಿಳಿಯುತ್ತವೆ. ಒಂದನೆಯದು, ಆತನಿಗೆ ಗಂಡು ಮಗು ವಾದದ್ದು ; ಎರಡನೆಯದು, ಶಸ್ತ್ರಾಗಾರದಲ್ಲಿ ಚಕ್ರರತ್ನ ಉದ್ಭವಿಸಿದ್ದು ; ಮೂರನೆ ಯದು, ಋಷಭದೇವನಿಗೆ ಕೇವಲಜ್ಞಾನ ಪ್ರಾಪ್ತಿಯಾದದ್ದು. ಇಷ್ಟೆಲ್ಲಾ ವೈಭವ ಗಳು ಏಕಕಾಲದಲ್ಲಿ ಉದಯಿಸಿದ್ದು ಚಕ್ರವರ್ತಿ ಭರತನಿಗೆ ಗರ್ವವನ್ನು ತಂದಿತು. ಚಕ್ರರತ್ನದ ಸಹಾಯದಿಂದ ಆರು ಖಂಡಗಳನ್ನು ಜಯಿಸಿ, ಅಯೋಧ್ಯೆಗೆ ಹಿಂತಿರುಗಿದ. ಆದರೆ ಚಕ್ರರತ್ನ ಪುರಪ್ರವೇಶ ಮಾಡದೆ ನಿಂತಿತು. ಹೊರಗಿನ ಶತ್ರುಗಳು ಭರತ ನಿಗೆ ಮಣಿದಿದ್ದಾರೆ. ಆದರೆ ಒಳಗಿನ ತನ್ನ ತಮ್ಮಂದಿರು ಮಣಿಯಲಿಲ್ಲ. ತಮ್ಮಂದಿರು ತನಗೆ ಎರಗದೆ ತಾನು ಪರಿಪೂರ್ಣ ಚಕ್ರವರ್ತಿಯಾಗಲು ಸಾಧ್ಯವಿಲ್ಲ ಎನ್ನುವುದನ್ನು ಭರತ ಅರಿತಿದ್ದಾನೆ. ಆದ್ದರಿಂದ ತಮ್ಮಂದಿರು ಬಂದು ತನಗೆ ಎರಗಬೇಕೆಂದು ಹೇಳಿ ಕಳುಹಿಸುತ್ತಾನೆ. ಆದರೆ ಹಾಗಾಗುವುದಿಲ್ಲ. ಬಾಹುಬಲಿ ಹೊರತು ಇತರ ಸಹೋದರರೆಲ್ಲಾ ಋಷಭನಾಥನಲ್ಲಿಗೆ ತೆರಳಿ ದೀಕ್ಷೆ ಪಡೆಯುತ್ತಾರೆ. ಬಾಹುಬಲಿ ಮಾತ್ರ ಮಾರ್ವಲೆತು ಯುದ್ಧಕ್ಕೆ ನಿಲ್ಲುತ್ತಾನೆ. ಕಡೆಗೆ ಯುದ್ಧ ಅನಿವಾರ್ಯವಾಗು ತ್ತದೆ. ಮೂರು ಧರ್ಮಯುದ್ಧಗಳಲ್ಲಿಯೂ ಬಾಹುಬಲಿ ಗೆಲ್ಲುತ್ತಾನೆ. ಚಕ್ರ ರತ್ನವೂ ಬಾಹುಬಲಿಯ ಬಳಿ ಅಪ್ಪಣೆ ಬೇಡುತ್ತದೆ. ರಾಜ್ಯಲೋಭ, ಅಧಿಕಾರ ಮೋಹ, ಮನುಷ್ಯನನ್ನು ಎಂಥ ಕೀಳುಮಟ್ಟಕ್ಕೆ ಇಳಿಸುತ್ತವೆ ಎಂದು ಭಾವಿಸಿದ ಬಾಹುಬಲಿ, ಆಗಲೇ ವಿರಕ್ತನಾಗಿ ತಾನು ಗೆದ್ದ ಸಕಲವನ್ನೂ, ಅಣ್ಣ ಭರತನಿಗೆ ಒಪ್ಪಿಸಿ ತಪಸ್ಸಿಗೆ ನಿಲ್ಲುತ್ತಾನೆ. ಆದರೆ ತಾನು ಅಣ್ಣ ಭರತನ ನೆಲದಲ್ಲಿ ನಿಂತಿರುವೆ ಎನ್ನುವ ಮನಃಕಷಾಯ ಬಾಧಿಸುತ್ತಿದ್ದು, ಬಾಹುಬಲಿಗೆ ಕೇವಲಜ್ಞಾನ ಪ್ರಾಪ್ತಿಯಾಗುವುದಿಲ್ಲ. ಋಷಭ ದೇವನಿಂದ ಪರಿಹಾರ ಪಡೆದ ಭರತನ ತಿಳಿವಳಿಕೆಯಿಂದ ಮನಃಕಷಾಯ ಕಳೆದು ತಟ್ಟನೆ ಕೇವಲಜ್ಞಾನ ಪ್ರಾಪ್ತಿಯಾಗುತ್ತದೆ.

ಇದಿಷ್ಟೂ ಬಾಹುಬಲಿಯನ್ನು ಕುರಿತ ದಿಗಂಬರ ಸಂಪ್ರದಾಯದ ಕಥೆಯ ಹಂದರ. ಇದನ್ನೇ ಬಹುಮಟ್ಟಿಗೆ ಕನ್ನಡದ ಕವಿಗಳೆಲ್ಲರೂ ಅನುಸರಿಸಿದ್ದಾರೆ. ರತ್ನಾಕರ ಒಬ್ಬ ಮಾತ್ರ ಶ್ವೇತಾಂಬರ ಸಂಪ್ರದಾಯವನ್ನು ಅನುಸರಿಸಿ ಕಥೆಗೆ ಸ್ವಲ್ಪ ಮಟ್ಟಿಗೆ ಬೇರೆಯ ತಿರುವು ಕೊಟ್ಟಿದ್ದಾನೆ. ಕಥೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಇದ್ದರೂ ಬಾಹುಬಲಿಯ ಪಾತ್ರಚಿತ್ರಣದಲ್ಲಿ ಹೆಚ್ಚಿನ ಬದಲಾವಣೆಯೇನೂ ಕಂಡುಬರುವುದಿಲ್ಲ.

ಮಹಾಕವಿ ಪಂಪ ತನ್ನ ಆದಿಪುರಾಣದಲ್ಲಿ ಜಿನಸೇನಾಚಾರ್ಯರ ಮೂಲಕಥೆಯನ್ನು ಹೆಚ್ಚಾಗಿ ಅನುಸರಿಸಿದ್ದರೂ. ಕಾವ್ಯದುದ್ದಕ್ಕೂ ಅಲ್ಲಲ್ಲಿ ಆತನ ಕವಿತಾ ಪ್ರೌಢಿಮೆ, ಕಾವ್ಯಪ್ರತಿಭೆಗಳನ್ನು ಗುರುತಿಸಬಹುದಾಗಿರುವಂತೆ, ಭರತ–ಬಾಹುಬಲಿಗಳ ಪ್ರಸಂಗದ ನಿರೂಪಣೆಯಲ್ಲೂ ವಿಶೇಷವಾಗಿ ಗುರುತಿಸಬಹುದು. ಭರತನ ಕಡೆಯಿಂದ

ಬಂದ ಸಂಧಿವಿಗ್ರಹಿ ಭರತನ ಹಿರಿಮೆಯನ್ನು ಹೊಗಳಿ, ಆತನಿಗೆ ನೀವು ನಮಿಸಿ ವಿನಯವನ್ನು ತೋರಿ ಎಂದು ಬಾಹುಬಲಿ ಮೊದಲಾದ ತೊಂಬತ್ತೊಂಬತ್ತು ಜನ ಸಹೋದರರಿಗೆ ತಿಳಿಸಿದಾಗ, ಅವರೆಲ್ಲಾ ಕೂಡಿ ಹೀಗೆ ಯೋಚಿಸುತ್ತಾರೆ:

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ-
ಳರಸೆಂಬೊಂದು ವಿಭೇದಮಾದೊಡೆಱಕಂ ಚಿಃ ಕಷ್ಟಮಲ್ತೇ ವಸುಂ-
ಧರೆಗಮ್ಮಂ ದಯೆಗೆಯ್ಯೆ ಮುಂಪಡೆದುದರ್ಕಿಂತೀತನೊಳ್ ತೊಟ್ಟ ಕಿಂ-
ಕರಭಾವಂ ನಮಗಕ್ಕಗೊಟ್ಟು ಮಡಗೊಂಡುಣ್ಬಂದಮಂ ಪೋಲದೇ.

ಪಿರಿಯಣ್ಣ. ತಂದೆ, ಗುರು ಎಂದು ತಿಳಿದು ಮೊದಲು ನಮಸ್ಕರಿಸುವುದು ಯುಕ್ತ. ಆದರೆ ಆಳು–ಅರಸು ಎಂಬ ಭೇದಭಾವವುಂಟಾದರೆ ಸ್ನೇಹವನ್ನು ತೋರುವುದು ಕಷ್ಟವಲ್ಲವೇ? ತಂದೆ ರಾಜ್ಯವನ್ನು ಕೊಟ್ಟ ಕಾರಣ ನಾವು ಅದನ್ನು ಪಡೆದೆವು. ಆದರೆ ಈಗ ನಾವು ಭರತನಲ್ಲಿ ಕಿಂಕರಭಾವವನ್ನು ತೋರಿದ್ದೇ ಆದರೆ ಅಕ್ಕಿಯನ್ನು ಕೊಟ್ಟುತಂಗಳನ್ನವನ್ನು ತಿಂದಂತಾಗುವುದಿಲ್ಲವೇ? —ಈ ಹೋಲಿಕೆ ಪಂಪನ ಕಲ್ಪನೆ, ಇದು ಮೂಲ ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿಲ್ಲ. ಅಕ್ಕಿಯನ್ನು ಕೊಟ್ಟು ತಂಗಳನ್ನವನ್ನು ಬೇಡಿ ಉಣ್ಣುವುದು ಇದು ಯಾವ ನ್ಯಾಯ? ಯಾವ ಧರ್ಮ? ಹೀಗೆಂದು ಯೋಚಿಸಿ ಎಲ್ಲವನ್ನೂ ತ್ಯಜಿಸಿ ಅವರೆಲ್ಲರೂ ವೃಷಭನಾಥನ ಪಾದ ಮೂಲದಲ್ಲಿ ಆಶ್ರಯ ಪಡೆದರು.

ಇನ್ನು ಬಾಹುಬಲಿ ಸಂಧಿವಿಗ್ರಹಿಗೆ ಕೊಡುವ ಉತ್ತರ ಅವನ ಘನತೆ ವ್ಯಕ್ತಿತ್ವಕ್ಕೆ ಸರಿತೂಗುವಂಥದು. ಆತ್ಮಾಭಿಮಾನಿ ಬಾಹುಬಲಿ ನುಡಿಯುತ್ತಾನೆ:

ದೊರೆಯಲ್ಲದಂಗೆ ನುಡಿದು
ಪುರುಳಿಲ್ಲದ ಮಾತನೆಮ್ಮೊಳಂ ನುಡಿವುದೆ ಪೇಳ್
ಎರಲೆಗೆ ಪಾಡುವ ಗೋರಿಯ-
ನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ.

"ಎಲೈ ದೂತನೆ, ಸಮರ್ಥನಲ್ಲದವನೊಡನೆ ಅರ್ಥವಿಲ್ಲದ ಮಾತನ್ನು ನಿನ್ನ ಭರತ ಆಡಲಿ. ಆದರೆ ನಮ್ಮೊಡನೆಯೂ ಹಾಗೆ ಮಾತಾಡಲು ಸಾಧ್ಯವೇ? ಜಿಂಕೆಯನ್ನು ಹಿಡಿಯುವುದಕ್ಕಾಗಿ ನುಡಿಸುವ ವಾದ್ಯವನ್ನು ಸಿಂಹದ ಎದುರಿಗೆ ನುಡಿಸಬಹುದೆ?" ಇಲ್ಲೆಲ್ಲಾ ಪಂಪನ ಪ್ರತಿಭೆ ಗರಿಗೆದರುವುದನ್ನು ಗುರುತಿಸ ಬಹುದು. "ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ। ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವುತ್ತಮಬಾ।ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ಮಂ।ಶಜರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ"॥

ಮೂರು ಧರ್ಮಯುದ್ಧಗಳೂ ಮುಕ್ತಾಯಗೊಂಡಾಗ, ಪಶ್ಚಾತ್ತಾಪಧಗ್ಧಪರಿಶುದ್ಧರಾಗಿ ನಿಂತ ಅಣ್ಣ–ತಮ್ಮಂದಿರ ಸೋದರವಾತ್ಸಲ್ಯ ಪಂಪನಂಥ ಔಚಿತ್ಯ ಪ್ರಜ್ಞಾವಂತ ಕವಿಗೆ ಮಾತ್ರ ಗೋಚರವಾಗತಕ್ಕದ್ದು. ತಪ್ಪನ್ನು ಕ್ಷಮಿಸೆಂದು ಬೇಡುವ ಭರತನ ಕಣ್ಣೀರು ಬಾಹುಬಲಿಯ ಪಾದಗಳನ್ನು ತೊಳೆಯುತ್ತಿದ್ದರೆ, ವಂಶಪಾರಂಪರ್ಯವಾಗಿ ಬಂದ, ರಾಜ್ಯಾಭಿಷೇಕೋತ್ಸವವನ್ನು ನೆರವೇರಿಸುತ್ತಿರುವನೋ ಎನ್ನುವಂತೆ ಭರತನ ಶಿರಸ್ಸಿನ ಮೇಲೆ ಸುರಿಯುತ್ತಿರುವ ಬಾಹುಬಲಿಯ ಅವಿಶ್ರಾಂತ ಕಣ್ಣೀರು ! ಇಲ್ಲೆಲ್ಲಾ, ಮಾನವನ ಅತ್ಯಂತ ಸೂಕ್ಷ್ಮ ಸಂವೇದನೆಯ ಸ್ಪಷ್ಟ ಚಿತ್ರಗಳನ್ನು ಪಂಪ ಹಿಡಿದಿದ್ದಾನೆ, 'ಪೂರ್ವಪುರಾಣ'ದ ಬಾಹುಬಲಿ, ಪಂಪನ ಬಾಹುಬಲಿ, ನಿರುತ್ತರವಾ ತಮ್ಮ ಆತ್ಮಾಭಿಮಾನವನ್ನು ಮೆರೆಸಿ ಆತ್ಮೋನ್ನತಿಯನ್ನು ಪಡೆದ ದಿವ್ಯ ಚೇತನಗಳಾಗಿದ್ದಾರೆ.

ಅನಂತರ, ಬೆಳ್ಗೊಳದ ಬೃಹನ್ಮೂರ್ತಿ ಬಾಹುಬಲಿಯನ್ನು ಕಡೆಸಿದ ಚಾವುಂಡರಾಯ ಸ್ವತಃ ಸಾಹಿತಿಯೂ ಆಗಿದ್ದ. ಆತ ತನ್ನ 'ತ್ರಿಷಷ್ಟಿ ಲಕ್ಷಣ ಮಹಾಪುರಾಣಂ' (ಕ್ರಿ.ಶ. ೯೭೭) ಕೃತಿಯಲ್ಲಿ ಬಾಹುಬಲಿಯ ಚರಿತೆಯನ್ನು ವಿಸ್ತಾರವಾಗಿ ನಿರೂಪಿಸಿದ್ದಾನೆ.

ಈ ಪ್ರಬಂಧದ ಚೌಕಟ್ಟಿನಲ್ಲಿ ಕೇವಲ ಕಾವ್ಯದ ಹಿನ್ನೆಲೆಯಲ್ಲಿ ಗೋಮಟನ ವಿವೇಚನೆ ಬರುವುದರಿಂದ ಗದ್ಯಕೃತಿಗಳಾದ 'ತ್ರಿಷಷ್ಟಿ ಲಕ್ಷಣ ಮಹಾಪುರಾಣಂ' ಹಸ್ತಿಮಲ್ಲಷೇಣನ 'ಪೂರ್ವಪುರಾಣ' (ಕ್ರಿ.ಶ. ೧೩೦೦–?), ದೇವಚಂದ್ರನ 'ರಾಜಾವಳೀ ಕಥೆ' ಶ್ರವಣಬೆಳಗೊಳದ ಸ್ಥಳ ಪುರಾಣಗಳು, ಸೂರಿ ಪಂಡಿತನ 'ಗೋಮಟಾಧ್ಯಾಯ', ಬ್ರಹ್ಮಸೂರಿ ಶಾಸ್ತ್ರಿಗಳ 'ಗೋಮ-ಟೇಶ್ವರ ಚರಿತೆ', ಡಾ॥ ಜಿ. ಪಿ. ರಾಜರತ್ನಂ ಅವರ 'ಬಾಹುಬಲಿ ವಿಜಯ', 'ಶ್ರೀ ಗೊಮ್ಮಟಶಿಲ್ಪ', 'ಮದನನ ವರಭಂಗ'. ಡಾ॥ ಕೆ. ಎಂ. ಕೃಷ್ಣರಾವ್ ಅವರ 'ಗೊಮ್ಮಟದರ್ಶನ', ಡಾ॥ ಹಂಪನಾ ಅವರ 'ಸವ್ಯಸಾಚಿ.' ಇವುಗಳನ್ನು ಕೈ ಬಿಡಲಾಗಿದೆ. ಕೇವಲ ಕಾವ್ಯ, ಕವಿತೆಗಳ ಹಿನ್ನೆಲೆಯಲ್ಲಿ ಬಾಹುಬಲಿಯ ಚರಿತೆಯನ್ನು ವಿವೇಚಿಸಲಾಗಿದೆ

ಪಂಪನ ಅನಂತರದ ಕವಿ ರನ್ನ. ಈತ ಪ್ರಾಸಂಗಿಕವಾಗಿ ತನ್ನ ಕಾವ್ಯ 'ಅಜಿತ ಪುರಾಣ'ದಲ್ಲಿ ಬಾಹುಬಲಿಯನ್ನು 'ಕುಕ್ಕುಟೇಶ್ವರ' ಎಂದು ಕರೆದಿದ್ದಾನೆ. ಅತ್ತಿಮಬ್ಬೆ ಕುಕ್ಕುಟೇಶ್ವರನ ದರ್ಶನಕ್ಕೆ ಬಂದು ಬೆಟ್ಟ ಹತ್ತಿದಾಗ ಅಕಾಲದಲ್ಲಿ ಮಳೆ ಬಂದುದನ್ನು ರನ್ನ ಹೇಳಿದ್ದಾನೆ.

ಉಕ್ಷಿತ ಕುಕ್ಕುಟೇಶ್ವರಜಿನೇಶ್ವರನಂ ಜಿನಭಕ್ತೆ ಪೋಗಿ ಕಾ-
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿವೇಱೆ ತಜ್ಜನಾ-
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಾಱಲಕಾಲವೃಷ್ಟಿಯಾ-
ಯ್ತೆನ್ನದೊ ದೇವಭಕ್ತೆಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್ ॥

ಕ್ರಿ.ಶ. ೧೧೮೦ರಲ್ಲಿ ಬರುವ ಬೊಪ್ಪಣ ಕವಿ ಬಾಹುಬಲಿಯ ಗಂಭೀರ ವ್ಯಕ್ತಿತ್ವವನ್ನು ತುಂಬಾ ಸ್ವಾರಸ್ಯವಾಗಿ, ಕಾವ್ಯಮಯವಾಗಿ ಮುವ್ವತ್ತೆರಡು ಪದ್ಯಗಳಲ್ಲಿ ನಿರೂಪಿಸಿದ್ದಾನೆ.

ಇದು ಶ್ರವಣಬೆಳಗೊಳದ ೨೩೪ನೇ ಶಾಸನವೆಂದು ಪ್ರಸಿದ್ಧಿ ಪಡೆದಿದೆ. ಈ ಶಾಸನವನ್ನು ಕಡೆಸಿದವನು ದೇವಣ ; ಪ್ರತಿಷ್ಠೆ ಮಾಡಿಸಿದವನು ಬಾಗಡೆಯ ರುದ್ರ ; ಕವಿ ಬೊಪ್ಪಣಪಂಡಿತ, ಈ ಶಾಸನ ಸಾಹಿತ್ಯಕ ಮೌಲ್ಯದಿಂದ ಮುಖ್ಯವಾದುದು ; ಇದೊಂದು ಸುಂದರ ಭಾವಗೀತಾತ್ಮಕ ಶಾಸನ.

ಅತಿ ಎತ್ತರದಲ್ಲಿ ನಿಂತು ಬಾಹುದಲಿ ಜಗತ್ತಿನ ಜನತೆಗೆ ಸಾರಿದ ಸಂದೇಶವನ್ನು ಕವಿ ವರ್ಣಿಸಿರುವ ವೃತ್ತಗಳಲ್ಲಿ ಒಂದನ್ನು ಇಲ್ಲಿ ನೋಡಬಹುದು :

ಸಮ್ಮದವಾಗಲಾಗ ಕೊಲೆಯುಂ ಪುಸಿಯುಂ ಕಳವುಂ ಪರಾಂಗನಾ
ಸಮ್ಮತಿಯುಂ ಪರಿಗ್ರಹದ ಕಾಂಕ್ಷೆಯುಮೆಂಬಿವಱಿಂದಮಾದೊಡೆಂ
ದುಂ ಮನುಜಂಗಿಹತ್ರೆಯ ಪರತ್ರೆಯ ಕೇಡೆನುತಂ ಮಹೋಚ್ಚದೊಳ್
ಗೊಮ್ಮಟದೇವನಿರ್ದು ಸಲೆ ಸಾರುವವೋಲೆಸೆದಿರ್ದನೀಕ್ಷಿಸೈ ॥

"ಮದದಿಂದ ಮೈ ಮರೆಯಲಾಗದು, ಕೊಲೆಯೂ ಹುಸಿಯೂ, ಕಳವೂ ಪರಾಂಗನಾ ಸಮ್ಮತಿ, ಪರಿಗ್ರಹಾಕಾಂಕ್ಷೆಯೂ ಆಗದು. ಇವುಗಳನ್ನು ಒಪ್ಪಿದರೆ ಮನುಷ್ಯನಿಗೆ ಇಹದಲ್ಲಿಯೂ, ಪರದಲ್ಲಿಯೂ ಕೇಡು ಎಂದು ಮಹಾ ಎತ್ತರದಲ್ಲಿ ಗೊಮ್ಮಟದೇವ ನಿಂತು ಸಾರುತ್ತಿರುವನೋ ಎಂಬಂತೆ ಕಂಗೊಳಿಸುತ್ತಿದ್ದಾನೆ ನೋಡು"—ಕವಿಯ ಈ ಉದ್ಗಾರ ಅತಿಶಯವೇನಲ್ಲ. ಬಾಹುಬಲಿಯ ಶಿಲ್ಪಕ್ಕೆ ಅಥವಾ ವ್ಯಕ್ತಿತ್ವಕ್ಕೆ ಈ ಬೊಪ್ಪಣ ಕವಿಯೇ ಬಾಹುಬಲಿಯನ್ನು ಮೊತ್ತಮೊದಲಿಗೆ ಗೊಮ್ಮಟನೆಂದೂ, ಚಾವುಂಡರಾಯನನ್ನೂ ಗೊಮ್ಮಟನೆಂದೂ ಕರೆದು ಮುಂದೆ ಅದೇ ಹೆಸರು ಹೆಚ್ಚು ಜನರೂಢಿಯಾಗಲು ಕಾರಣಕರ್ತನಾಗಿದ್ದಾನೆ. ಈ ಗೊಮ್ಮಟ ಎನ್ನುವ ಹೆಸರಿನ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಚಾವುಂಡರಾಯನಿಗೆ 'ಗೊಮ್ಮಟ' ಎನ್ನುವ ಮತ್ತೊಂದು ಹೆಸರೋ ಬಿರುದೋ ಇದ್ದು ಆತ ಕಡೆಸಿದ ವಿಗ್ರಹಕ್ಕೆ 'ಗೊಮ್ಮಟೇಶ್ವರ' ಎನ್ನುವ ಹೆಸರು ಬಂದಿರಬಹುದೆಂದು ಹೇಳುವುದೂ ಒಂದು ಅಭಿಪ್ರಾಯ.

ಮಧುರಕವಿ (ಕ್ರಿ.ಶ. ೧೩೮೫) ಬಾಹುಬಲಿಯನ್ನು ಕಂಡಾಗ ಆದ ಆನಂದ, ಭಕ್ತಿಭಾವಗಳು ಎಂಟು ಪದ್ಯಗಳಲ್ಲಿ ವರ್ಣನೆಗೊಂಡಿದ್ದು. ಅವು 'ಗೊಮ್ಮಟಾಷ್ಟಕ ವೆಂದು ಪ್ರಸಿದ್ಧಿ ಹೊಂದಿವೆ. ಕವಿಗಾದ ಆನಂದಾನುಭವದ ಸ್ವಾರಸ್ಯವನ್ನು ಅವನ ಪದ್ಯಗಳ ಸಾರಾಂಶದಲ್ಲಿ ಕಾಣಬಹುದು :

"ಮೂರ್ತಿಯನ್ನು ಮೊದಲಬಾರಿಗೆ ದರ್ಶನ ಮಾಡಿದಾಗ ಇವನ ಎರಡು ಕಣ್ಣುಗಳು ಎರಡು ಆವಳಿ ದುಂಬಿಗಳಂತೆ ಮುನ್ನುಗ್ಗಿ ಸ್ವಾಮಿಯ ಎರಡು ಪಾದ ಪದ್ಮಗಳಿಗೆ ಎರಗಿದುವಂತೆ. ಅನಂತರ ಎರಡು ಕಣ್ಣುಗಳೂ ಎರಡು ಚಕೋರ

ಪಕ್ಷಿಗಳಾಗಿ ಸ್ವಾಮಿಯ ಸುಖವೆಂಬ ಚಂದ್ರಬಿಂಬದ ಸುತ್ತ ಹಾರಾಡಿದುವಂತೆ. ಆ ಲಾವಣ್ಯದ ತಪನಿಧಿಯನ್ನು ಇನ್ನೂ ಮತ್ತೂ ನೋಡಿದನಂತೆ, ನೋಡಿದನಂತೆ! ಮಳೆಗೆ ಉಡುಗದೆ, ಉರಿ ಬಿಸಿಲಿಗೆ ಸೆಡೆಯದೆ, ತೀವ್ರವಾದ ಹಿಮಕ್ಕೆ ನಡುಗದೆ, ಸಮ್ಯಕ್ ತಪಸ್ಸಿನಲ್ಲಿ ಸ್ಥಿರವಾಗಿ ನಿಂತವನಿಗೆ ಅಕ್ಷಯಶ್ರೀ ಅಮಿತವಾಗಿ ಆಗುತ್ತದೆ ಎಂಬುದನ್ನು ತೋರಿಸುವುದಕ್ಕಾಗಿ ನಿಂತಿರುವ ನಿಶ್ಚಲಮೂರ್ತಿಯ ಸಾಮರ್ಥ್ಯ ವನ್ನು ಇಲ್ಲಿ ತಿಳಿದು ಕೊಂಡಾಡುತ್ತಾನೆ.

ಮುಂದೆ ಕನ್ನಡದ ಖ್ಯಾತ ಕವಿಯಾದ ರತ್ನಾಕರವರ್ಣಿ (ಕ್ರಿ.ಶ. 1557) ತನ್ನ 'ಭರತೇಶ ವೈಭವ'ದಲ್ಲಿ ಭರತ ಬಾಹುಬಲಿಗಳ ಪ್ರಸಂಗವನ್ನು ಅನ್ಯಾದೃಶ ರಮ್ಯತೆಯಿಂದ ಚಿತ್ರಿಸಿದ್ದಾನೆ. ಯಾವ ಸಂಪ್ರದಾಯಗಳಿಗೂ ತಾನು ಸಿಲುಕದೆ ತನ್ನದೇ ಆದ ಕಲ್ಪನೆಯಲ್ಲಿ ತನ್ನ ಕಾವ್ಯವನ್ನು ರಚಿಸಿದ್ದಾನೆ. ಕಥಾನಾಯಕ ಭರತ-ಪಾತ್ರದ ಉಜ್ವಲತೆಯನ್ನು ಚಿತ್ರಿಸುವಾಗ ರತ್ನಾಕರವರ್ಣಿ ಬಾಹುಬಲಿಯ ಪಾತ್ರ ವನ್ನು ಜಿನಸೇನಾಚಾರ್ಯ ಹಾಗೂ ಪಂಪರಂತೆ ಮಹಾವ್ಯಕ್ತಿಯನ್ನಾಗಿ ಮಾಡಿಲ್ಲ. ಇಲ್ಲಿ ಬಾಹುಬಲಿಯ ಸುತ್ತ ಕಾಮ, ಶೃಂಗಾರ, ವಿಲಾಸಗಳ ವಾತಾವರಣವನ್ನೇ ನೇಯುತ್ತಾನೆ. ದಿಗ್ವಿಜಯಕ್ಕೆ ಹೊರಟ ಭರತೇಶ ತನ್ನ ಸಹೋದರರನ್ನೆಲ್ಲಾ ಕಂಡು ಹೋಗಲು ಕಾಯುತ್ತಾನೆ. ಆದರೆ ಅವರ್‍ಯಾರೂ ಬರದೆ ಅವರು ಕಳುಹಿಸಿದ ಮಂತ್ರಿ ಬಂದು ಭರತನನ್ನು ಬೀಳ್ಕೊಡುತ್ತಾನೆ. ಭರತೇಶ ಸಹೋದರರ ವರ್ತನೆ ಯಿಂದ ಪರಿತಪಿಸುತ್ತಾನೆ.

ಮತ್ತೆ ಷಟ್ಖಂಡಗಳನ್ನು ಜಯಿಸಿ ಹಿಂತಿರುಗಿ ಬಂದಾಗ ಚಕ್ರ ಪುರಪ್ರವೇಶ ಮಾಡದೆ, ಬಾಗಿಲಲ್ಲಿ ಬಂದು ನಿಲ್ಲುತ್ತದೆ. ಆಗ ಬಾಹುಬಲಿಯ ಪ್ರಸ್ತಾಪ ಮತ್ತೆ ಬರುತ್ತದೆ. ಮಂತ್ರಿಗಳ ಹೇಳಿಕೆಯಂತೆ ಸೋದರರಿಗೆ ನಿರೂಪ ಹೋಗುತ್ತದೆ. ಇಲ್ಲಿಯವರೆಗೂ ಕವಿ ರತ್ನಾಕರವರ್ಣಿ ಬಹುಮಟ್ಟಿಗೆ ಹಿಂದಿನ ಕವಿಗಳ ಸಂಪ್ರದಾಯ ವನ್ನೇ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಬಾಹುಬಲಿಯ ವಿಷಯದಲ್ಲಿ ಅನುಸರಿಸಿ ದ್ದಾನೆ. ಆದರೆ ಮುಂದೆ? ಭರತನ ಕಡೆಯಿಂದ ಬಂದ ದಕ್ಷಿಣಾಂಕ ಎನ್ನುವ ಸಂಧಿ ವಿಗ್ರಹಿಯನ್ನು ಬಾಹುಬಲಿ, 'ಎತ್ತಣಿಂ ಬಂದ್ಯೆ, ನಿನ್ನೊಡೆಯನನೆಲ್ಲೆಲ್ಲಿ ಸ್ತುತಿಸಿ ತಂದ್ಯೆ?' ಎಂದು ವ್ಯಂಗ್ಯವಾಗಿ ಪ್ರಶ್ನಿಸುವನು. ದಕ್ಷಿಣಾಂಕನ ಪ್ರಕಾರ ಭರತೇಶನ ದಿಗ್ವಿಜಯ ಲೋಕ ಹಿತಾರ್ಥಕ್ಕಾಗಿ, ಸ್ವಪ್ರತಿಷ್ಠೆಗಲ್ಲ. ತಾಯಿ ಸುನಂದಾದೇವಿ ಬಂದು ಬಾಹುಬಲಿಗೆ ಹಿತೋಕ್ತಿಗಳನ್ನಾಡುವಳು. ಹೆಂಡಂದಿರೆಲ್ಲಾ ಬುದ್ಧಿ ಹೇಳು ವರು. ಆದರೂ ಯಾರ ಮಾತನ್ನೂ ಕೇಳದೆ ಎಲ್ಲರ ಸಹಾನುಭೂತಿಯಿಂದ ದೂರ ನಿಲ್ಲುತ್ತಾನೆ. ಬಾಹುಬಲಿಗೆ ಯುದ್ಧ ಬೇಕು, ಅದು ಪ್ರಾರಂಭವಾಗಬೇಕು. ಅದಕ್ಕಾಗಿ ಬಾಹುಬಲಿ ಕಾದಿದ್ದಾನೆ. ಆದರೆ ಅಣ್ಣ ಬಂದು 'ಬದಗರುಂದದಿ ಹೋರ ಲೇತಕೆ, ಗೆಲವು ನಿನ್ನದು ಸೋಲವೆನಗೆ' ಹೋಗೆಂದ. ಇದನ್ನು ಕೇಳಿ ಬಾಹುಬಲಿಯ ಮನಸ್ಸು ಆಶ್ಚರ್ಯ, ಶಂಕೆ, ಅಸಮಾಧಾನಗಳಿಂದ ಕಲಕಿಹೋಗುತ್ತದೆ. ಭರತ ಸಾಂತ್ವನದ ನುಡಿಯಿಂದ ಬಾಹುಬಲಿಯನ್ನು ಮತ್ತೂ ಸಮಾಧಾನಗೊಳಿಸುತ್ತಾನೆ.

ಕೀಳಣ್ಣ ಚಕ್ರವ ಬಯುಸಿತಿಲ್ಲಾಸು ಶ-
ಸ್ತ್ರಾಲಯದೊಳು ತಾನೆ ಹುಟ್ಟಿ
ಏಳಿಸಿ ನಾಡ ಸ್ತುತಿಸಿತು ನಿಮ್ಮೆಲ್ಲರ
ಆಲಿಗೆ ನೋವಾಗುವಂತೆ

ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀ-
ನನುಜನೆಂಬಕ್ಕರುಂಟಪ್ಪಾ
ನನೆವಿಲ್ಲ ನಿನ್ನ ಭಾಗ್ಯವ ಕಣ್ಣತುಂಬ ನೋ-
ಳ್ಪೆನು ರಾಜಪದವಿಗಿಂತೊಪ್ಪು

ಎಂದು ಅಖಂಡ ಐಶ್ವರ್ಯ, ವಿಜಯ, ಸಿಂಹಾಸನ, ಚಕ್ರರತ್ನಗಳನ್ನು ಬಾಹುಬಲಿಗೆ ಅರ್ಪಿಸುತ್ತಾನೆ. ಈಗ ಬಾಹುಬಲಿಯ ಮದದ ತೆರೆ ಸರಿಯುತ್ತದೆ. ಪಶ್ಚಾತ್ತಾಪ ದಿಂದ ಬೇಯುತ್ತಾನೆ. ಅಣ್ಣ–ತಮ್ಮಂದಿರ ಮಧುರ ಮಿಲನವಾಗುತ್ತದೆ. ಇಲ್ಲಿ ಯುದ್ಧದ ಪ್ರಸ್ತಾಪವೇ ಇಲ್ಲ. ಎಲ್ಲವನ್ನೂ ಪ್ರೀತಿಯಿಂದ ಅರ್ಪಿಸುವ ಅಣ್ಣ ಭರತನ ಹೃದಯವೈಶಾಲ್ಯದ ಮುಂದೆ ಬಾಹುಬಲಿಯ ವ್ಯಕ್ತಿತ್ವ ಕಿರಿದಾಗಿ ಕಾಣುತ್ತದೆ. ಆದರೆ ಅಣ್ಣನಷ್ಟೇ ದೊಡ್ಡತನದಿಂದ ಬಾಹುಬಲಿ ಏನನ್ನೂ ಒಪ್ಪದೆ ತಪಸ್ಸಿಗೆ ನಡೆಯುವುದು 'ಅಣ್ಣ ಲೇಸು, ತಮ್ಮ ಲೇಸು ಲೇಸು' ಎನ್ನುವಂತೆ ಆಗಿದೆ.

ಮುಂದೆ ಪಂಚಬಾಣ ಕವಿಯ 'ಬಾಹುಬಲಿಚರಿತೆ' (ಕ್ರಿ.ಶ. ೧೬೧೪)ಯನ್ನು ಗಮನಿಸಬಹುದು. ಈ ಕಾವ್ಯವೂ ಸಾಂಗತ್ಯದಲ್ಲಿದೆ. ಈತ ಪೂರ್ವಪುರಾಣ ಹಾಗೂ ಆದಿಪುರಾಣವನ್ನು ಅನುಸರಿಸಿದ್ದಾನೆ. ಈತನ ಸಮೀಪದ ಕವಿಯಾದ ರತ್ನಾಕರ ವರ್ಣಿಯನ್ನು ಪಂಚಬಾಣ ಕೈಬಿಟ್ಟಿದ್ದಾನೆ. ಬಹುಶಃ ಜಿನಸೇನಾಚಾರ್ಯರ ಹಾಗೂ ಪಂಪನ ಬಾಹುಬಲಿಯನ್ನು ನೋಡಿದ ಮೇಲೆ ಸುಲಭದಲ್ಲಿ ಆತನ ಪಾತ್ರವನ್ನು ರತ್ನಾಕರನಂಥವನನ್ನು ಬಿಟ್ಟರೆ ಇನ್ಯಾರೂ ವ್ಯತ್ಯಾಸ ಮಾಡಿಕೊಳ್ಳಲು ಒಪ್ಪಲಾರರು. ಪಂಪನ ಎರಕದ ಅಚ್ಚು ಮುಂದಿನ ಕವಿಗಳಿಗೆ ಒಂದು ಒಳ್ಳೆಯ ಮಾದರಿ.

ಪಂಚಬಾಣ ಕಥೆಯನ್ನು ಸರಳವಾಗಿ ನಿರೂಪಿಸಿರುವುದಲ್ಲದೆ, ಶಾಂತವರ್ಣಿ ಎನ್ನುವವನು ಶ್ರವಣಬೆಳುಗೊಳದ ಬಾಹುಬಲಿಗೆ ಮಹಾಮಸ್ತಕಾಭಿಷೇಕವನ್ನು ನಡೆಸಿದ ಸಂಗತಿಯನ್ನೂ ಅಭಿಷೇಕದ ವರ್ಣನೆಯನ್ನೂ ವೈಭವೀಕರಿಸಿದ್ದಾನೆ.

ತುಳುನಾಡಿನ ಚದುರಚಂದ್ರಮ ಕವಿ, ಕ್ರಿ.ಶ. ೧೬೩೩ರಲ್ಲಿ ಪಾಂಡ್ಯರಾಜನು ಕಾರ್ಕಳದ ಗೊಮ್ಮಟನನ್ನು ಪ್ರತಿಷ್ಠಾಪಿಸಿದ ವಿಷಯ ಮತ್ತು ಕ್ರಿ.ಶ. ೧೬೪೬ರಲ್ಲಿ ಪಾಂಡ್ಯರಾಜನ ವಂಶಜರಾದ ಎರಡನೆಯ ಭೈರವರಾಯನು ಗೊಮ್ಮಟನಿಗೆ ಮಹಾ ಮಸ್ತಕಾಭಿಷೇಕವನ್ನು ಮಾಡಿಸಿದ ವರ್ಣನೆಯನ್ನು ತನ್ನ ಕಾವ್ಯವಾದ 'ಕಾರ್ಕಳದ ಗೊಮ್ಮಟೇಶ್ವರ ಚರಿತೆ'ಯಲ್ಲಿ ನಿರೂಪಿಸಿದ್ದಾನೆ. ಮೇಲಿನ ಐತಿಹಾಸಿಕ ಸಂಗತಿ ಗಳಲ್ಲದೆ ಪುರಾಣಪ್ರಸಿದ್ಧವಾದ ಬಾಹುಬಲಿ ಕತೆಯನ್ನು ಬಿತ್ತರಿಸಿದ್ದಾನೆ. ಕಾವ್ಯ

ಚಿಕ್ಕದೇ ಆದರೂ ಸಾಂಪ್ರದಾಯಿಕ ಅಷ್ಟಾದಶ ವರ್ಣನೆಯನ್ನು ತಂದು ಕವಿ ತನ್ನ ಕೃತಿಯನ್ನು ಮಹಾಕಾವ್ಯವನ್ನಾಗಿಸಲು ಪ್ರಯತ್ನಿಸಿದ್ದಾನೆ. ಯೋಗ ಧ್ಯಾನನಿರತನಾದ ಬಾಹುಬಲಿಯನ್ನು ಕವಿ ಕಂಡ ರೀತಿ ಹೀಗಿದೆ :

ಸುತ್ತಲು ಪುತ್ತುಗಳಾವರಿಸಿದವವ-
ರೊತ್ತಿನೊಡನೆ ಲತೆ ಪರ್ವಿ
ಪತ್ತಿದುದಂಗವ ಪಲವು ಸರ್ಪಂಗಳ
ಮೊತ್ತವಾಶ್ರಯಿಸಿಕೊಂಡಿಹುದು.

ಕಿಡಿಗಳನುಗುಳುತ ಕುಕ್ಕುಟ ಸರ್ಪಂಗ
ಳೆಡೆಯೂಡುತಿಹವು ದೋರ್ಬಲಿಯ
ಎಡಬಲದೊಳಗೆನಲಾತನ ಧೈರ್ಯದ
ಬೆಡಗನೇನೆಂದು ಪೇಳುವೆನು.

ಅನಂತರ ಅನಂತ ಕವಿ ಬೆಳ್ಗೊಳದ ಗೊಮ್ಮಟನನ್ನು ಕುರಿತು 'ಗೊಮ್ಮಟೇಶ್ವರ ಚರಿತೆ' ಎಂಬ ಸಾಂಗತ್ಯ ಕಾವ್ಯವನ್ನು ಬರೆದಿದ್ದಾನೆ (ಕ್ರಿ.ಶ. ೧೭೮೦). ಬಾಹುಬಲಿಯ ಕಥೆಯಲ್ಲಿ ಹೆಚ್ಚಿನ ಪ್ರಭಾವ ಪಂಪನದೇ ಆದರೆ ಚಾವುಂಡರಾಯ ಬಾಹುಬಲಿಯನ್ನು ಪ್ರತಿಷ್ಠಾಪಿಸಿದ ಸಂಗತಿಯನ್ನು ವಿಶದವಾಗಿ ತಿಳಿಸಿದ್ದಾನೆ. ಅಲ್ಲದೆ, ಚಿಕ್ಕದೇವರಾಜನ ಮಂತ್ರಿಯಾದ ವಿಶಾಲಾಕ್ಷ ಪಂಡಿತನು ಕ್ರಿ.ಶ. ೧೬೭೭ರಲ್ಲಿ ಗೊಮ್ಮಟೇಶ್ವರನಿಗೆ ಮಾಡಿಸಿದ ಮಹಾಮಸ್ತಕಾಭಿಷೇಕವನ್ನೂ, ಕ್ರಿ.ಶ. ೧೭೭೭ರಲ್ಲಿ ನಡೆದ ಒಂದು ಮಹಾಪೂಜೆಯ ವೈಭವವನ್ನೂ ಕವಿ ವರ್ಣಿಸಿದ್ದಾನೆ.

ಅನಂತರ ಬಾಹುಬಲಿಯನ್ನು ಕುರಿತಾದ ಕಾವ್ಯ ಚಿಕ್ಕಣ ಪಂಡಿತನ ಷಟ್ಪದಿ ಕಾವ್ಯ, 'ಬಾಹುಬಲಿ ಚರಿತೆ', ಇದು ಕ್ರಿ. ಶ. ೧೯೬೩ರಲ್ಲಿ ಮೊದಲಸಲ ಪ್ರಕಟಗೊಂಡ ಕಾವ್ಯ. ರತ್ನಾಕರನಿಂದ ಪ್ರಭಾವಗೊಂಡ ಸಾಂಗತ್ಯ ಕಾವ್ಯಧಾರೆ ಇಲ್ಲಿ ಷಟ್ಪದೀರೂಪ ತಳೆದಿರುವುದನ್ನು ಗಮನಿಸಬಹುದು. ಕವಿಯ ಸ್ಥಳ ಕಾಲಗಳ ಬಗ್ಗೆ ಏನೂ ತಿಳಿಯದು. ಕವಿಚರಿತೆಕಾರರ ಪಟ್ಟಿಯಲ್ಲೂ ಈತನ ಹೆಸರು ದಾಖಲಾಗಿಲ್ಲ. ಬೆಳುಗೊಳದ ಹತ್ತಿರದ ಊರಿನವನು ಎಂದು ಊಹಿಸಲು ಅವಕಾಶವಿದೆ.

ಇವಲ್ಲದೆ, ವೃತ್ತಬಂಧನದಲ್ಲಿರುವ 'ಗುಮ್ಮಟಸ್ತುತಿ'. ಕಂದರೂಪದಲ್ಲಿರುವ 'ಭುಜಬಲಿ ಪೂಜೆ'—ಈ ಕಾವ್ಯಗಳಲ್ಲಿಯೂ ಬಾಹುಬಲಿ ವಿಷಯ ದೊರೆಯುತ್ತದೆ. —ಇವೆಲ್ಲ ಹಳಗನ್ನಡ, ನಡುಗನ್ನಡ ಕವಿಗಳ ಕಾವ್ಯಗಳಾಯಿತು.

ಇನ್ನು ಇಪ್ಪತ್ತನೆಯ ಶತಮಾನದ ಆಧುನಿಕ ಕವಿಗಳಲ್ಲಿ ಮುಖ್ಯವಾಗಿ ಮೂವರ ಕವನಗಳನ್ನು ವಿವೇಚನೆಗೆ ತೆಗೆದುಕೊಳ್ಳಲಾಗಿದೆ. ಡಿ.ವಿ.ಜಿ., ಗೋವಿಂದ ಪೈ, ಕುವೆಂಪು—ಇವರುಗಳು ಈ ಭವ್ಯಮೂರ್ತಿಯ ಬಗೆಗೆ, ಆತನ ಚೇತೋಹಾರಿಯಾದ ವ್ಯಕ್ತಿತ್ವಕ್ಕೆ ಮಾರುಹೋಗಿ ಸ್ತುತಿಸಿದ್ದಾರೆ. ಅವರಲ್ಲಿ ದಿವಂಗತ ಡಿ. ವಿ.

ಗುಂಡಪ್ಪನವರು ಎಂಟು ವೃತ್ತಪದ್ಯಗಳಲ್ಲಿ ಬಾಹುಬಲಿಯ ಔನ್ನತ್ಯವನ್ನೂ ಹಿರಿಮೆಯನ್ನೂ ಹೃದಯತುಂಬಿ ಹಾಡಿದ್ದಾರೆ.

ಈ ಎಂಟು ವೃತ್ತಪದ್ಯಗಳೂ 'ಶ್ರೀಗೊಮ್ಮಟಾಧೀಶ್ವರಾ'—ಎಂದು ಮುಕ್ತಾಯಗೊಳ್ಳುತ್ತವೆ. ಈ ವೃತ್ತಗಳ ಹೃದಯಸ್ಪರ್ಶಿ ವಿವರಣೆಗೆ ತೊಡಗುವ ಮೊದಲು ಇದೇ ಶತಮಾನದ ರಾಷ್ಟ್ರಕವಿಗಳಾದ ದಿವಂಗತ ಎಂ. ಗೋವಿಂದ ಪೈಗಳ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಕವನಗಳನ್ನು ಮೊದಲು ಪರಿಭಾವಿಸೋಣ.

ದಿವಂಗತ ಎಂ. ಗೋವಿಂದ ಪೈ ಅವರು ಸುಮಾರು ಮುವ್ವತ್ತೈದು ವೃತ್ತಗಳಲ್ಲಿ ಈ ಮೂರ್ತಿಯ ಬಗ್ಗೆ ತಮ್ಮ ಭವ್ಯ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ವೃತ್ತಗಳು ಸಾಹಿತ್ಯಕ ವಶೌಲ್ಯದಿಂದ ಗಮನ ಸೆಳೆಯುತ್ತವೆ. ಬಾಹುಬಲಿಯ ಚರಿತೆ, ಬೃಹನ್‌ಮೂರ್ತಿ, ಆ ಮೂರ್ತಿ ಸಾರುವ ಸಂದೇಶ, ಒಂದೇ ಎರಡೇ ? ಕವಿಯ ಕಲ್ಪನೆಗೆ ಇಲ್ಲಿ ಗರಿ ಮೂಡಿದೆ ; ಕವಿಯ ಭಾವನೆಗಳು ಕೋಮಲ್ಲವಾಗಿ ಮೂಡಿವೆ :

ಬಿಸಿಲಿಗೆ ಬಾಡದಮ್ಮುಲಿಗೆ ಕೋಡದ ಸೋರ್ಮಳೆಯಿಂದ ಸೋರದೀ
ನಿನಗುಡು ಸೇಸೆಯಿಕ್ಕಿ ಹೆರೆನೇಸರ ಬಾಸಿಗವಿಟ್ಟು ದಿಕ್ಸುವಾ-
ಸಿನಿಯುರು ಮೇಘಮಂಡಳಿಗೆ ಮಿಂಚುಗಳಾರತಿಯೆತ್ತಿ ನಿತ್ಯತಾ।
ವಧುವಿದೋ ನಿನ್ನ ಹೊಂಚುವಳು ಕಣ್ಣೆರೆದೇತಕೆ ನೋಡೆ ಗೊಮ್ಮಟಾ॥ *

ಇನ್ನು ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ ಬಾಹುಬಲಿಯ ಕುರಿತಾದ ಮೂರು ಕವನಗಳೂ ಆಧುನಿಕ ಕನ್ನಡ ಸಾಹಿತ್ಯದ ಅಪೂರ್ವ ಕೊಡುಗೆಗಳು. ಈ ಕವನಗಳು ಸುಮಾರು ಇಪ್ಪತ್ತು ವರುಷಗಳ ಅಂತರದಲ್ಲಿ ರಚಿತವಾದುವು. ಹಂತ ಹಂತವಾಗಿ ಕವಿಯ ಮನೋಭೂಮಿಕೆಯಲ್ಲಿ ಬಾಹುಬಲಿ ಸಾಮ್ರಾಜ್ಯಮಾಡಿರುವುದನ್ನು ಗಮನಿಸಬಹುದು.

ಮೊದಲ ಕವನ 'ಗೊಮ್ಮಟೇಶ್ವರ' 1930ರಲ್ಲಿ ರಚಿತವಾದುದು. ಆಗ ಭಾರತ ಇನ್ನೂ ದಾಸ್ಯದಲ್ಲಿತ್ತು. ಸ್ವಾತಂತ್ರ್ಯ ಹೋರಾಟದ ಎಲ್ಲ ತಾಕಲಾಟಗಳ ನಡುವೆ ಗೊಮ್ಮಟ ಹೇಗೆ ನಿಂತಿದ್ದಾನೆ ಎನ್ನುವುದನ್ನು ಕವಿ ನಿರೂಪಿಸಿದ್ದಾರೆ : ಸಾವಿರ ವರುಷಗಳಿಂದ ಅನಿಮಿಷನೇತ್ರನಾಗಿ ನಿಂತ ಬಾಹುಬಲಿ, ಅಂದಿನಿಂದ ಇಂದಿನವರೆಗೂ ಈ ದೇಶದಲ್ಲಿ ಏನೇನು ನಡೆಯಿತು ಎನ್ನುವುದಕ್ಕೆಲ್ಲಾ ಸಾಕ್ಷಿಯಾಗಿ ನಿಂತಿದ್ದಾನೆ. ಆದರೆ ಇದ್ಯಾವ ಜಂಜಡಕ್ಕೂ ಸಿಕ್ಕದೆ ತಾನು ಕೇವಲ ದೂರ ಸಾಕ್ಷಿ, ಮಂದಹಾಸ, ಮನಸ್ಸಾಕ್ಷಿ—ಈ ಹಾಹಾಕಾರದ ನಡುವೆಯೂ ಆತ ಶಾಂತ ! ಶಾಂತ !

---

* : ಯತಿವಿಲಂಘನದಿಂದಂದಲ್ತೆ ಕನ್ನಡಂ' ಎಂದು ಕೇಶಿರಾಜ ಹೇಳಿರುವುದು ಪ್ರಾಚೀನ ಕವಿಗಳು ವರ್ಣವೃತ್ತ ರಚನೆಯಲ್ಲಿ ಯತಿಯನ್ನು ಮೀರಿರುವುದನ್ನು ಕುರಿತು-ಅಂತೆಯೇ, ಗೋವಿಂದ ಪೈ ತಮ್ಮ ವರ್ಣವೃತ್ತ ರಚನೆಯಲ್ಲಿ ಯತಿಯನ್ನು ಮೀರಿರುವುದರ ಜೊತೆಗೆ ಆದಿಪ್ರಾಸವನ್ನೂ ತೊರೆದಿದ್ದಾರೆ. 'ಪ್ರಾಸರಹಿತವಾಗಿ ಬರೆಯುವೆ' ಎಂಬ ಅವರ ಘೋಷಣೆ ವರ್ಣವೃತ್ತ ರಚನೆಗೆ ಸಂಬಂಧಪಟ್ಟಂತೆ ಮಾತ್ರ.—ಸಂ.

ಅಷ್ಟು ಕನ್ನಡನಾಡಿನ ಭವ್ಯಮೂರ್ತಿ, ಧರ್ಮಮೂರ್ತಿ ಗೊಮ್ಮಟನನ್ನು ಕಡೆದ ಶಿಲ್ಪಿವರ್ಯನಿಗೆ ಕವಿ ಮೆಚ್ಚುಗೆ ಕಾಣಿಕೆ ಇತ್ತಿದ್ದಾರೆ.

"ಬ್ರಹ್ಮಸೃಷ್ಟಿಯ ಕೌತುಕವ ಕಿರಿದು ಮಾಡೆ ನೀಂ
ಸೃಷ್ಟಿಸಿದ ಮೂರ್ತಿಯಿದೊ, ಶಿಲ್ಪಿವರ್ಯ ?
ವಿಶ್ವಭಾವವನೊಂದೆ ವಿಗ್ರಹದಿ ಗೆಲಲೆಂದು
ಸ್ಪರ್ಧೆಯಿಂ ಕೆತ್ತಿದುದೊ, ಶಿಲ್ಪಿತಿಲಕ."

ಬ್ರಹ್ಮಸೃಷ್ಟಿಯ ಕೌತುಕಕ್ಕಿಂತ ಹಿರಿದಾಗಿದೆ ಈ ಮೂರ್ತಿಯ ಸೃಷ್ಟಿ !

ಕ್ರಿ.ಶ. ೧೯೫೧ರಲ್ಲಿ 'ಶ್ರೀಗೊಮ್ಮಟ ಮಹಾಮಸ್ತಕಾಭಿಷೇಕ ಪ್ರಗಾಥ' ಇದೇ ಕವಿಗಳಿಂದ ರಚನೆಯಾಗಿದೆ. ಮೈಸೂರಿನ ಹತ್ತಿರ ಸುಮಾರು ಇಪ್ಪತ್ತು ಅಡಿ ಎತ್ತರವಿರುವ ಬಾಹುಬಲಿ; ಅದರ ಜೀರ್ಣೋದ್ಧಾರದ ಕೆಲಸ ಆಗಿ ೧೯೫೧ರಲ್ಲಿ ಮೊದಲ ಮಸ್ತಕಾಭಿಷೇಕವಾಯಿತು. ಅದನ್ನು ಕಂಡು ಕವಿ ಕುವೆಂಪು ನಕ್ಕರು. ಆವರ ಕವಿತೆ ಹಾಡಿತು :

"ನಿನ್ನ ಜೀರ್ಣೋದ್ಧಾರವಲ್ತು,
ಹಾಳಾದುವೆಮ್ಮ ಬಾಳಿಂದು ತಾಂ ಮರಳಿ
ಪಡೆಯುತಿದೆ ತನ್ನುದ್ಧಾರವಂ."

ಕವಿಯು ಮಹಾಚೇತನ, ಪಂಪ–ಚಾವುಂಡರಾಯನನ್ನು ಸ್ಮರಿಸಿ, ಬಾಹುಬಲಿಯನ್ನು ಬೇಡಿದೆ : "ನಿನ್ನ ಭಾರತಭೂಮಿ ನಿನ್ನುನ್ನತಿಗೆ ಬೆಳೆದು ನಿಲ್ಗೆ" ಎಂದು.

ಇದೇ ಕವಿಗಳ ಮೂರನೆಯ ಕವನ ಶ್ರವಣಬೆಳ್ಗೊಳದ ಗೊಮ್ಮಟೇಶ್ವರ ಸಾನ್ನಿಧ್ಯದಲ್ಲಿ ಮೂಡಿದ ಭಾವನೆಗಳಿಗೆ ಪುಷ್ಟಿಕೊಟ್ಟಿದೆ. "ಶ್ರವಣಬೆಳುಗೊಳದ ಗೊಮ್ಮಟೇಶ್ವರನ ಸಾನ್ನಿಧ್ಯದಲ್ಲಿ" ಎನ್ನುವ ಕವಿತೆ ಕವಿಗೆ ತಂದ ಭಾವವನ್ನು ವಿವರಿಸಿದೆ. ಬಾಹುಬಲಿಯ ಪಾದಮೂಲದಲ್ಲಿ ನಿಂತ ಕವಿಗೆ,—

"ಆರೋ ತೆಕ್ಕನೆ ತುಡುಕಿ ಬಾಯ್‌ಮುಚ್ಚಿ ಹಿಡಿದಂತೆ
ಮನ ಭಾರದಿ ಮಾತು ಮೂರ್ಛೆ ಹೋಗಿಹುದಿಲಿ ಶ್ರೀ ಗೊಮ್ಮ
ಟೇಶ್ವರನ ಭವ್ಯ ಸನ್ನಿಧಿಯಲ್ಲಿ."

ಶಬ್ದಭಂಡಾರದ ಒಡೆಯರಾದ ಕವಿ ಕುವೆಂಪುಗೆ ಇಲ್ಲಿ ಮಾತು ಮೂರ್ಛೆ ಹೋಗಿದೆ. ಬಾಯಿ ಮುಚ್ಚಿ ಹೋಗಿದೆ. ಆ ಭವ್ಯಮೂರ್ತಿಯನ್ನು ನೋಡುತ್ತಾ ನಿಂತ ಕವಿಗೆ ಕಂಡಿದ್ದೇನು ? 'ಶಶಿ ಮುಖದ ಮುಗ್ಧತೆ, ಸಮಾಧಿಸ್ಥನಾನಂದ ಗಾಂಭೀರ್ಯ, ವಜ್ರದ ಕಠೋರತೆ, ಕುಸುಮ ಕೋಮಲತೆ, ಮೋಕ್ಷಸತ್ಯದ ರಹಸ್ಯ, ಬ್ರಹ್ಮದ ಅನಿರ್ವಚನೀಯತೆ__ಎಲ್ಲ ಮೈವೆತ್ತಿರುವುದೀ ದಿಗಂಬರ ಮಹಾನಿರ್ವಾಣ ಮೂರ್ತಿಯಲ್ಲಿ;

ನಗ್ನತೆಯ ದಿವ್ಯದರ್ಶನವನ್ನು ಕವಿ ಕಂಡಿದ್ದಾರೆ, ಮೆಚ್ಚಿದ್ದಾರೆ; ಅವರ ಕಳಕಳಿಯ ಅನಿಸಿಕೆ ಹೀಗಿದೆ :

ಎನಿಬರೆಮ್ಮೊಳಗಿಹರು
ಬತ್ತಲಾಗಿಯುಮಿಳೆಯು ಗೌರವಂಬಡೆದವರು ?
ಕಾವಿಯಿಂ ಗುರುವಾಗಿ, ಹೊನ್ನಿನಿಂ ದೊರೆಯಾಗಿ,
ರಣದುಡುಗೆ ದೆಸೆಯಿಂದ ರಣಧೀರನೆಂದಾಗಿ
ಜನಿವಾರದಿಂದ ಬ್ರಾಹ್ಮಣನಾಗಿ, ಬೂದಿಯಿಂ
ಶಿವಭಕ್ತನಾಗಿ, ವೈಷ್ಣವನಾಗಿ ನಾಮದಿಂ
ಮೆರೆದುರಿವರೆಲ್ಲರೂ ಬಂದು ಕಲಿಯಲಿ ಇಲ್ಲಿ,
ನಗ್ನತೆಯ ಮಹಿಮೆಯಿಂ ನಿನ್ನ ಸಾನ್ನಿಧ್ಯದಲ್ಲಿ.

ದಿವಂಗತ ಡಿ.ವಿ.ಜಿ.ಯವರ 'ಗೊಮ್ಮಟೇಶ್ವರ' ಎನ್ನುವ ಕವಿತೆಯಲ್ಲಿ ಎಂಟು ವೃತ್ತಗಳಿವೆ.* ಕನ್ನಡ ಛಂದಸ್ಸಿನಲ್ಲಿ ವೃತ್ತಗಳಿಗೆ ತನ್ನದೇ ಆದ ಪ್ರತಿಷ್ಠಿತ ಸ್ಥಾನ ಗೌರವ ಇದೆ. ಕಾವ್ಯ ಅಥವಾ ಕವಿತೆ ಒಳಗೊಳ್ಳುವ ವಿಷಯದ ಗಂಭೀರತೆಗೆ ತಕ್ಕ ಛಂದಸ್ಸಿನ ಆಯ್ಕೆ, ಕವಿಯ ಔಚಿತ್ಯಪ್ರಜ್ಞೆಯನ್ನು ಎತ್ತಿತೋರುತ್ತದೆ. ಇಲ್ಲಿ ಡಿ.ವಿ.ಜಿ. ಅವರು ಬಾಹುಬಲಿಯ ಭವ್ಯವ್ಯಕ್ತಿತ್ವದ ನಿರೂಪಣೆಗೆ ವೃತ್ತ ಛಂದಸ್ಸನ್ನೇ ಆಯ್ಕೆ ಮಾಡಿಕೊಂಡಿರುವುದು ಅವರ ಔಚಿತ್ಯಪ್ರಜ್ಞೆಗೆ ಹಿಡಿದ ಕನ್ನಡಿಯಾಗಿದೆ.

ಬಾಹುಬಲಿ ತನ್ನ ಬದುಕಿನ ಮೂಲಕ ಮಾನವ ಜಗತ್ತಿಗೆ ಶ್ರುತಪಡಿಸಿದ ಕೆಲವು ವಿಶಿಷ್ಟಗುಣಗಳು ಕವಿ ಡಿ.ವಿ.ಜಿ.ಯವರಿಗೆ ಮಹತ್ವದ್ದಾಗಿ ಕಂಡಿದೆ. ಬಾಹುಬಲಿಯ ಸಂಯಮ ಎಂಥವರನ್ನೂ ಅಚ್ಚರಿಗೊಳಿಸುತ್ತದೆ. ನರನೇ ಆಗಿರಲಿ, ನರಾಧಿಪತಿಯೇ ಆಗಿರಲಿ, ಈ ಲೋಕದ ಆಶಾಪಾಶವನ್ನು ಹರಿದೊಗೆದು ಕರ್ಮದ ರಾಟಾಳದಿಂದ ಬಿಡುಗಡೆ ಹೊಂದಿ ಜಗತ್ತಿನ ಜೀವಿಗಳಿಗೆ ಶಮದೀಕ್ಷೆಯನ್ನು ಕರುಣಿಸುವ ಔನ್ನತ್ಯದಿಂದ ಮೆರೆವ ಸಂಯಮಿ ಆ ಬಾಹುಬಲಿಯೊಬ್ಬನೇ !

ಬಾಹುಬಲಿ ವಾಂಛೆಯನ್ನು ಗೆದ್ದು, ಸುಖವನ್ನು ಪಡೆದ ರೀತಿ, ತನ್ನ ವಿಶಿಷ್ಟ ನಡವಳಿಕೆಯಿಂದ ಯೋಗಿಶ್ರೇಷ್ಠನಾಗಿ ಮೆರೆದ ಪರಿ—ಡಿ.ವಿ.ಜಿ.ಯವರ ವೃತ್ತಗಳಲ್ಲಿ ಸೊಗಸಾಗಿ ಮೂಡಿದೆ.

ತಾಯಿ ಒಂದು ರೀತಿಯಲ್ಲಿ ಮಾಯೆ ! ಮಕ್ಕಳನ್ನು ಆ ಮೋಹಜಾಲದಲ್ಲಿ ಬೀಳಿಸುತ್ತಾಳೆ. ಅದರಿಂದ ಬಹುಮಂದಿ ಬಿಡಿಸಿಕೊಳ್ಳಲು ಅಸಮರ್ಥರಾಗಿ ಸೋಲುವುದೇ ಹೆಚ್ಚು. ಆದರೆ ಆಕೆ ಒಡ್ಡಿದ ಮೋಹಜಾಲವನ್ನು ಭೇದಿಸಿ ಗೆದ್ದು ನಿಂತ ಗೊಮ್ಮಟನ ನಿಲುವು ಡಿ.ವಿ.ಜಿ.ಯವರಿಗೆ ಅದ್ಭುತ ಸಾಧನೆಯಾಗಿ ಕಂಡಿದೆ.

---

* ಕನ್ನಡದಲ್ಲಿ 'ಅಷ್ಟಕ' ಪದ್ಯಕಾವ್ಯ ವಿಪುಲವಾಗಿದೆ. ಡಿ.ವಿ.ಜಿ.ಯ 'ಗೊಮ್ಮಟೇಶ್ವರ' ವೂ ಒಂದು ಅಷ್ಟಕ.—ಸಂ.

'ವಿಶ್ವವಿಧಾತ್ರಿ' ಒಡ್ಡಿದ ಸ್ಪರ್ಧೆಯಲ್ಲಿ ಗೆದ್ದು, ಆಕೆಗೆ ಆನಂದ ತಂದುಕೊಟ್ಟ, ತೃಪ್ತಳನ್ನಾಗಿಸಿದ ಹಿರಿಮೆ ಗೊಮ್ಮಟನಿಗಲ್ಲದೆ ಇನ್ನಾರಿಗೆ ಸಾಧ್ಯ—ಎಂದು ಅಚ್ಚರಿಪಡುತ್ತಾರೆ, ಡಿ.ವಿ.ಜಿ.

ಕಲಿಯಿತಾತಂ ಕಲಿತಿರ್ದೊಡಂ ಕಲೆಗಳಂ, ಮೌನವ್ರತಖ್ಯಾತ ದೋ-
ರ್ಬಲಿಯಿತಾತಂ ಬಲಮುಳ್ಳೊಡಂ, ಪ್ರಥಿತ ಸೌಮ್ಯಾಕಾರನೀತಂ ಮಹೋ-
ಜ್ವಲ ರೂಪೋನ್ನತನೀತನೀ ಸೊಬಗನಾಂತಿರ್ದುಂ ತೃಷಾತೀತನೆಂ-
ದುಲಿಯುತ್ತಿರ್ಪುವು ನಿನ್ನನೀ ಭುವನಗಳ್ ಶ್ರೀ ಗೋಮಟಾಧೀಶ್ವರಾ

"ಕಲೆಗಳನ್ನು ಕಲಿತೂ ಕಲಿಯೀತ, ತೋಳ್ಬಲವುಳ್ಳವನಾಗಿಯೂ ಮೌನವ್ರತಖ್ಯಾತ, ಬಲವಿದ್ದೂ ಸೌಮ್ಯಕಾರವುಳ್ಳವನು, ಜೊತೆಯಲ್ಲಿಯೆ ಉಜ್ವಲ ರೂಪನೀತ, ಸೊಬಗುಳ್ಳವನಾದರೂ ತೃಷಾತೀತನೀತ" ಎಂದು ಮೂರು ಲೋಕವೂ ಗೊಮ್ಮಟನನ್ನು ಹೊಗಳುತ್ತಿವೆಯಂತೆ. ಯಾವುದಕ್ಕೂ ಸೋಲದ, ಅನ್ಯಾಯಕ್ಕೆ ಕುಸಿಯದ, ಸೆಡ್ಡು ಹೊಡೆದು ಮೇಲೇಳುವ ತನ್ನನ್ನು ಆವರಿಸಿ, ತನ್ನ ವ್ಯಕ್ತಿತ್ವವನ್ನು ಕರಿದು ಗೊಳಿಸಲು ಪ್ರಯತ್ನಿಸುವ ಅಭ್ಯಂತರಗಳನ್ನು ಛೇದಿಸಿ ನಿಲ್ಲುವ ಪುರುಷಶಕ್ತಿಯ ಪರಮೋತ್ತುಂಗತೆಯ ಪ್ರತೀಕವಾಗಿದ್ದಾನೆ ಆ ಬಾಹುಬಲಿ.

ಧರೆಯೊಳ್ ಪುಟ್ಟಿದೊಡಂ ಧರಾಧರವರಂ, ಮೇಲೆಳ್ದು ಕಾರ್ಮೋಡಮಾ
ವರಿಸುತ್ತೆಚ್ಚೊಡಮೆರ್ದೆಯೊಳ್ ನಿಲದೆ ಮೇಲೇಳುತ್ತೆ ಸೂರ್ಯಾಪ್ತಿಯಿಂ
ಮೆರೆವಂತುನ್ನತಿಗೆಳ್ದ ನಿನ್ನ ತೆರನಂ ಪೌರುಷ್ಯಪಾರಮ್ಯಮಂ
ಪರಮೋತ್ತುಂಗತೆಯಿಂದೆ ನೀನರಿಯಿಪಯ್ ಶ್ರೀ ಗೋಮಟಾಧೀಶ್ವರಾ

ಇಂಥ ಗೊಮ್ಮಟಮೂರ್ತಿಯನ್ನು ಕನ್ನಡ ನಾಡಿಗೆ ಕೊಟ್ಟ ಚಾವುಂಡರಾಯ ಧನ್ಯ. ಸಾಹಿತ್ಯದ ಮೂಲಕ ಆತನನ್ನು ಕೊಂಡಾಡಿ ಮೆಚ್ಚಿದ ಪಂಪನಿಂದ—ಕುವೆಂಪುವರೆಗಿನ ಸಾಹಿತಿಗಳು ಮತ್ತೂ ಧನ್ಯರು.

ಇವರೆಲ್ಲರೂ ಬಾಹುಬಲಿಯ ಚರಿತೆಯನ್ನು ನಿರೂಪಿಸಲು ಹೋಗಿಲ್ಲ. ಆದರೆ ಹಿಂದಿನ ಕವಿಗಳು ವರ್ಣಿಸಿರುವ ಬಾಹುಬಲಿಯ ಗುಣವಿಶೇಷಗಳನ್ನು ತಮ್ಮದೇ ಆದ ದೃಷ್ಟಿಕೋನಗಳಿಂದ ಪರಿಭಾವಿಸಿ ದಾಖಲಿಸಿದ್ದಾರೆ. ಈ ವಿನೂತನ ದಾಖಲೆಗಳು ಆಯಾ ಕವಿಗಳ ಅನುಭವ ನಿರೂಪಣೆಗಳಿಂದ ಪ್ರತ್ಯೇಕವಾಗಿಯೇ ನಿಲ್ಲುತ್ತವೆ.

ಒಟ್ಟಿನಲ್ಲಿ ಹಳಗನ್ನಡ ಸಾಹಿತ್ಯದ ಪಂಪ, ಬೊಪ್ಪಣ, ಮಧ್ಯಕಾಲೀನ ಕನ್ನಡದ ರತ್ನಾಕರವರ್ಣಿ, ಆಧುನಿಕ ಕನ್ನಡ ಕಾವ್ಯದ ದಿವಂಗತ ಡಿ.ವಿ.ಜಿ., ರಾಷ್ಟ್ರಕವಿಗಳಾದ ದಿವಂಗತ ಎಂ. ಗೋವಿಂದ ಪೈ, ಕುವೆಂಪು—ಬಾಹುಬಲಿ ಸಾಹಿತ್ಯಕ್ಕೆ ವಿಶಿಷ್ಟ ಕಾಣಿಕೆ ಕೊಡುವುದರ ಮೂಲಕ ಶ್ರೇಷ್ಠ ಕವಿಗಳೆನಿಸಿದ್ದಾರೆ.

ಆಧಾರ ಗ್ರಂಥಗಳು

1. ಮಹಾಪುರಾಣ (ಸಂ.)—ಜಿನಸೇನಾಚಾರ್ಯ, ಕ್ರಿ.ಶ. ೮೩೮.
2. ಆದಿಪುರಾಣ—ಪಂಪ—ಕ್ರಿ.ಶ. ೯೪೧–೪೨.
3. ಅಜಿತಪುರಾಣ—ರನ್ನ—ಕ್ರಿ.ಶ. ೯೯೩.
4. ಶ್ರವಣಬೆಳುಗೊಳದ ಶಾಸನ—೨೩೪—ಬೊಪ್ಪಣ ಕ್ರಿ.ಶ. ೧೧೮೦.
5. ಗೊಮ್ಮಟಾಷ್ಟಕ—ಮಧುರಕವಿ—ಕ್ರಿ.ಶ. ೧೩೮೫.
6. ಭರತೇಶ ವೈಭವ—ರತ್ನಾಕರ—ಕ್ರಿ.ಶ. ೧೫೫೭.
7. ಭುಜಬಲಿ ಚರಿತೆ—ಪಂಚಬಾಣ—ಕ್ರಿ.ಶ. ೧೬೧೪.
8. ಕಾರ್ಕಳದ ಗೊಮ್ಮಟೇಶ್ವರ ಚರತೆ—ಚದುರಚಂದ್ರಮ—೧೬೪೬.
9. ಬೆಳ್ಗೊಳದ ಗೊಮ್ಮಟೇಶ್ವರ ಚರಿತೆ—ಅನಂತಕವಿ—ಕ್ರಿ.ಶ. ೧೭೮೦.
10. ಬಾಹುಬಲಿ ಚರಿತೆ—ಚಿಕ್ಕಣ ಪಂಡಿತ.
11. ಶ್ರೀ ಗೊಮ್ಮಟಜಿನಸ್ತುತಿ—ಎಂ. ಗೋವಿಂದ ಪೈ.
12. (೧) ಗೊಮ್ಮಟೇಶ್ವರ—ಕುವೆಂಪು
    (೨) ಶ್ರೀ ಗೊಮ್ಮಟ ಮಹಾಮಸ್ತಕಾಭಿಷೇಕ ಪ್ರಗಾಥ—ಕುವೆಂಪು
    (೩) ಶ್ರವಣಬೆಳುಗೊಳದ ಗೊಮ್ಮಟೇಶ್ವರನ ಸಾನ್ನಿಧ್ಯದಲ್ಲಿ—ಕುವೆಂಪು
13. ಕನ್ನಡ ಸಾಹಿತ್ಯದಲ್ಲಿ ಬಾಹುಬಲಿ ಕಲ್ಪನೆ—ಲೇಖನ: ಕಮಲಾ ಹಂಪನಾ.

ಉಮರನ ಒಸಗೆ: ಒಂದು ಪುನರವಲೋಕನ

ಡಾ॥ ಸಿದ್ಧಯ್ಯ ಪುರಾಣಿಕ

ಧರ್ಮವಿರುದ್ಧವಾದ ರೀತಿಯಲ್ಲಿ ಐಹಿಕ ಸುಖವನ್ನು ಅನುಭೋಗಿಸುವುದನ್ನು ಭಾರತದ ಧರ್ಮಶಾಸ್ತ್ರಗ್ರಂಥಗಳು ಅನುಮೋದಿಸುತ್ತವೆ. ಚತುರ್ವಿಧ ಪುರುಷಾರ್ಥಗಳ ಪರಿಕಲ್ಪನೆಯಲ್ಲಿ ಈ ಜೀವನೋದ್ದೇಶ ಅಡಕವಾಗಿದೆ. ಉಮರನ ಒಸಗೆಯ ಸಂದೇಶವಾದರೂ ಜೀವನೋತ್ಸಾಹ ಜೀವನೋಲ್ಲಾಸಗಳ ಸಹಜ ಮೇಲ್ಮೆಯನ್ನು ಸಾರುವುದೇ ಆಗಿದೆ. ಪ್ರಾಣಿಮಾತ್ರಕ್ಕೆ ಭೋಗಾಪೇಕ್ಷೆ ಸಹಜವಾದದ್ದು. ಡಿ.ವಿ.ಜಿ. ಯವರ ಮನೋಧರ್ಮ ಒಪ್ಪಿದ ಜೀವನತತ್ತ್ವ ಉಮರನ ಒಸಗೆಯದು. ಆದ್ದರಿಂದಲೇ ಅವರು ಅವನ್ನು ಅನುವಾದಿಸಿದ್ದು ಎಂದು ತೋರುತ್ತದೆ. ಫಿಟ್ಸ್‌ಜೆರಾಲ್ಡ್‌ನ ಇಂಗ್ಲಿಷ್ ಅನುವಾದದ ಪದ್ಯಗಳಲ್ಲಿ 86 ನ್ನು ಆಯ್ದು ಸ್ವತಂತ್ರ ರಚನೆ ಎನ್ನುವ ಮಟ್ಟಿಗೆ ತಮ್ಮ ಛಾಯಾನುವಾದವನ್ನು 1931 ರಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದರು. ಸಹೃದಯರೆಲ್ಲರೂ ಡಿ.ವಿ.ಜಿ.ಯವರ ಈ ಅನುವಾದಿತ ಕೃತಿಯನ್ನು ಮೆಚ್ಚಿಕೊಂಡರು. ಸುಮಾರು 1944 ರಲ್ಲಿ ಉರ್ದು ಮತ್ತು ಪಾರಸಿ ಭಾಷೆಗಳಲ್ಲಿ ನಿಷ್ಣಾತರಾಗಿದ್ದ ದಿ॥ ಎಂ. ವಾಸುದೇವಮೂರ್ತಿಯವರ ನೆರವು ಪಡೆದು ಇನ್ನೂ 86 ಪದ್ಯಗಳನ್ನು ಅನುವಾದಿಸಿ, ಒಟ್ಟು 172 ಪದ್ಯಗಳ ಸಂಕಲನವನ್ನು ಪ್ರಕಟಿಸಿದರು. ಸಹಜವಾಗಿಯೆ ಈ ಎರಡನೆಯ ಕಂತಿನ 86 ಪದ್ಯಗಳು ಮೂಲಕ್ಕೆ ಹೆಚ್ಚು ಹತ್ತಿರವಾಗಿವೆ.

ಸ್ವತಃ ಕವಿಯೂ ಸಹೃದಯರೂ, ಉರ್ದು ಮತ್ತು ಪರ್ಷಿಯನ್ ಭಾಷಾ ಸಾಹಿತ್ಯಗಳನ್ನು ವ್ಯಾಸಂಗ ಮಾಡಿರುವವರೂ ಆದ ಡಾ॥ ಸಿದ್ದಯ್ಯ ಪುರಾಣಿಕರು ಮೊದಲ ಸಲದ 86 ಪದ್ಯಗಳನ್ನೂ ಹಾಗೂ ಎರಡನೆಯ ಸಲದ ಅನುವಾದ ಪದ್ಯಗಳನ್ನೂ ಗಮನಿಸಿ, ಅನುವಾದಕಾರ್ಯದಲ್ಲಿ ಡಿ.ವಿ.ಜಿ. ಅವರ ಸಿದ್ಧಿಯನ್ನೂ ಅಂತೆಯೇ ಅನುವಾದ ಕಾರ್ಯದಲ್ಲಿ ಅನಿವಾರ್ಯವಾಗಿ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವ ಸೋಲನ್ನೂ ಸರಿಯಾಗಿಯೇ ಗುರುತಿಸಿದ್ದಾರೆ. ಉಮರನ ಜೀವನಾದರ್ಶವನ್ನು ಸಂಕ್ಷೇಪವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

ಉಮರನ ಒಸಗೆಯಲ್ಲಿ ಉಮರನ ಜೀವನದರ್ಶನದ ಸಿದ್ಧಾಂತ ಭಾರತೀಯ ವೇದಾಂತಶಾಸ್ತ್ರಗಳು ಎತ್ತಿಹಿಡಿಯುವ ಜೀವನಧರ್ಮಕ್ಕೆ ವಿರೋಧವಾಗಿಲ್ಲವೆಂಬ ಬಗೆಗೆ ತಮ್ಮ ವಿಸ್ತಾರವಾದ ಪ್ರಸ್ತಾವನೆಯಲ್ಲಿ ಡಿ.ವಿ.ಜಿ.ಯವರು ದೀರ್ಘವಾಗಿ ಚರ್ಚಿಸಿರುವುದನ್ನು ನಾವು ಗಮನಿಸಬಹುದಾಗಿದೆ. ಎಂ. ಗೋವಿಂದ ಪೈ ಅವರು ತಮ್ಮದೇ ಆದ ಪ್ರೌಢಶೈಲಿಯಲ್ಲಿ ಉಮರನ ಒಸಗೆ ಪದ್ಯಗಳನ್ನು ಭಾಷಾಂತರಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಪರಿಪೂರ್ಣ ಪ್ರತಿಭೆಯೆಂಬುದು ಸಾಧ್ಯವಿದೆಯೆಂದಾದರೆ ಉಮರ ಖಯ್ಯಾಮನು ಖಂಡಿತವಾಗಿ ಅದನ್ನು ಸಮೀಪಿಸುತ್ತಾನೆ. ರವೀಸ್-ಉಲ್-ಹುಕ್ಮಾ ಅಬು ಹಮೀದ್ ನಾಸಿರುದ್ದೀನ್ ಮಹಮ್ಮದ್ ಬಿನ್ ಮನ್ಸೂರರ ಶಿಷ್ಯನಾಗಿ ತನ್ನ ಹದಿನೇಳನೆಯ ವರ್ಷದಲ್ಲಿಯೇ ಹಲವು ಶಾಸ್ತ್ರಗಳಲ್ಲಿ ಪ್ರಾವೀಣ್ಯವನ್ನು ಪಡೆದು, ತನ್ನ 26ನೆಯ ವರ್ಷದಲ್ಲಿ ಇಸ್ಪಹಾನಿನ ನಕ್ಷತ್ರ ಸಮೀಕ್ಷಾಮಂದಿರದ ಮುಖ್ಯಸ್ಥನಾದ ಅವನು ವಿಜ್ಞಾನದಲ್ಲಿ ಅವಿಸೆನ್ನಾನಿಗೆ ಎರಡನೆಯವನೆಂದೂ, ವಿಶ್ವಕವಿಗಳಲ್ಲಿ ಒಬ್ಬನೆಂದೂ, ಸುಲ್ತಾನ್ ಮಲಿಕ್‌ಷಾಹನ ನದೀಮನೆಂದೂ ಹೆಸರಾಗಿ, ಬೀಜಗಣಿತ, ಯುಕ್ಲಿಡ್‌ನ ಜ್ಯಾಮಿತಿ, ಭೌತಶಾಸ್ತ್ರ, ಮಳೆಗಾಳಿಯ* ಮುನ್ನೋಟ, ಸೃಷ್ಟಿಶಾಸ್ತ್ರ, ಅಸ್ತಿತ್ವ, ತತ್ತ್ವಜ್ಞಾನೇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಹದಿನೇಳು ಉದ್ಗ್ರ ಕೃತಿಗಳನ್ನು ರಚಿಸಿ ನಿಜವಾಗಿಯೂ ಪ್ರಚಂಡ ಪ್ರತಿಭಾಶಾಲಿಯೆನಿಸಿದ್ದಾನೆ. ಆದರೆ ಜಗತ್ತಿನ ಜನರು ಅವನನ್ನು ಗುರುತಿಸುವುದು 'ರುಬಾಯಿಯಾತ್'ದ ಉಮರ ಖಯ್ಯಾಮನೆಂದು.

ಕಾರಣ ಸ್ಪಷ್ಟ. 'ರುಬಾಯಿಯಾತ್'ದಲ್ಲಿ ತತ್ಪೂರ್ವದಲ್ಲಿ ಗೋಚರಿಸದಿದ್ದ ವಿಶೇಷತೆಗಳಿವೆ. ಅತಿಯಾದ ಆದರ್ಶಮಯತೆ ರೂಪಿಸುವ ಭ್ರಮಾಲೋಕವಾಗಲಿ, ಅತಿಯಾದ ವಾಸ್ತವಿಕತೆ ಮೂಡಿಸುವ ಮರಳುಗಾಡಾಗಲಿ ಇದರಲ್ಲಿಲ್ಲ. ಒಂದು ಯಥಾರ್ಥವಾದ ಲೋಕದರ್ಶನ, ಒಂದು ಸಮಂಜಸವಾದ ಜೀವನದೃಷ್ಟಿ. ಒಂದು ಅನನುಕರಣೀಯವಾದ ನಿರೂಪಣಾ ರೀತಿ, ಈ ಕೃತಿಯ ಮೇಲೆ ಅನನ್ಯತೆಯ ಮುದ್ರೆಯೊತ್ತಿವೆ. ಸಕೃದ್ದರ್ಶನಕ್ಕೆ ಬಿಡಿ ಬಿಡಿ ಮುಕ್ತಕಗಳಂತೆ ತೋರಿದರೂ ಎಲ್ಲ ರುಬಾಯಿಗಳಲ್ಲಿ ಕಂಡೂ ಕಾಣದಂತೆ ಓತಪ್ರೋತವಾಗಿ ವ್ಯಾಪಿಸಿರುವ ಏಕಸೂತ್ರತೆ, 'ರುಬಾಯಿ'ಗೆ ವಿಶಿಷ್ಟವಾದ ಛಂದಸ್ಸಿನ ಹೃದ್ಯತೆ, ಭಾಷೆಯ ಲಾಸ್ಯಮಯತೆ, ವಿನೂತನ ಉಪಮೆ ರೂಪಕಾದಿಗಳು, ಇವೆಲ್ಲವುಗಳಿಗಿಂತ ಹೆಚ್ಚಾಗಿ ಒಂದು ಹೊಸಧ್ವನಿ ಈ ಕೃತಿಗೆ ಎಲ್ಲ ದೇಶಗಳ ಎಲ್ಲ ಸಹೃದಯರ ಮನಗಳನ್ನು ಸೂರೆಗೊಳ್ಳುವ ಶಕ್ತಿಯನ್ನು ನೀಡಿವೆ. ಬೇರೆಲ್ಲಿಯೂ ಕೇಳದ ಧ್ವನಿ ಇಲ್ಲಿ ಕೇಳ

---

* ಆ ಕಾಲದಲ್ಲಿ 'ನದೀಮ'ನಾಗುವುದು ಸುಲಭವಿರಲಿಲ್ಲ. ನದೀಮನಲ್ಲಿರಬೇಕಾದ ಗುಣಗಳನ್ನು ನಿಜಾಮ್-ಉಲ್-ಮುಲ್ಕ್ ತನ್ನ 'ಸಿಯಾಸತ್ ನಾಮಾ'ದಲ್ಲಿ ಹೀಗೆ ವಿವರಿಸಿದ್ದಾನೆ: "ಅವನು ಗೌರವಸ್ಥನಿರಬೇಕು, ವಿದ್ವಾಂಸನಿರಬೇಕು, ರಹಸ್ಯ ವಿಷಯಗಳಲ್ಲಿ ವಿಶ್ವಾಸಾರ್ಹನಿರಬೇಕು, ಇತಿಹಾಸ ಮತ್ತು ಕಥನಕಲೆಯಲ್ಲಿ ನಿಷ್ಣಾತನಾಗಿರಬೇಕು, ಚದುರಂಗದಲ್ಲಿ, ಕ್ರೀಡೆಗಳಲ್ಲಿ ವಿಶೇಷಜ್ಞನಾಗಿರಬೇಕು. ಸಂಗೀತ ಮತ್ತು ಕಲೆಗಳ ಅಭಿಜ್ಞನಾಗಿರಬೇಕು." ಉಮರನಲ್ಲಿ ಇವೆಲ್ಲ ಇದ್ದುವು.

ಬರುತ್ತದೆ. ಇದು ವಿಷಾದದ ಧ್ವನಿಯಲ್ಲ ; ಹರ್ಷದ ಧ್ವನಿಯೂ ಅಲ್ಲ ; ಹರ್ಷ ಮಿಶ್ರಿತ ವಿಷಾದದ, ವಿಷಾದ ಮಿಶ್ರಿತ ಹರ್ಷದ ಧ್ವನಿ—'ಒ ವಕ್ತ್ ನಾ ಖುಷೀ ಖುಷೀ ಬಾಷಿ' ಎಂಬ ಅವನ ಸೂತ್ರಕ್ಕೆ ಅನುಗುಣವಾದ ಧ್ವನಿ ; ಸೃಷ್ಟಿಕರ್ತನೊಡನೆಯೇ ಸಲಿಗೆಯ ಸಲ್ಲಾಪ ನಡೆಸುವ ಧ್ವನಿ ; ಪ್ರಿಯತಮೆಯೊಡನೆ ಚಕ್ಕಂದವಾಡುವ ಧ್ವನಿ ; ಜಗದ ಜೀವಿಗಳ ನೋವು ನಲವಿಗನುಗುಣವಾಗಿ ಆಲಾಪಿಸುವ, ವಿಲಾಪಿಸುವ ಧ್ವನಿ.

ಇಂಥ ಲೋಕೋತ್ತರವಾದ ಕೃತಿಯೂ 'ನೇ ದೀನ್ ವನ ದುನಿಯಾ ನ ಉಮ್ಮೀದೆ ಬೆಹಷ್ತ್' (ಮತವಿಲ್ಲ, ಲೌಕಿಕತೆಯಿಲ್ಲ, ಸ್ವರ್ಗದಾಶೆಯೂ ಇಲ್ಲ) ಮತ್ತು 'ರಹರೂ ತೂಯಿವ ರಾಹ ತೂನ ಮಂಜಿಲ್ ತೂ' (ನೀನೆ ದಾರಿಕಾರ, ನೀನೆ ದಾರಿ, ನೀನೆ ಗುರಿ), ಮತ್ತು, 'ದಾನಿ ಜಬ ಅಜ್ ನಂಗೆ ಮುಸಲ್ಮಾನಿ ಖುವೇಷ್' (ಅರಿಯಿರೆಲ್ಲರು, ನನ್ನ ಮತವ ತಿರಸ್ಕರಿಸಿಹೆ ನಾನು ಎಂಬಂತಹ ವಾಕ್ಯಗಳಿಂದ ಸಂಪ್ರದಾಯಸ್ಥ ಮಹಮ್ಮದೀಯರಿಗೆ ರುಚಿಸಲಿಲ್ಲ. ಇಷ್ಟೇ ಅಲ್ಲ, ಫಿಟ್ಸ್ ಜೆರಲ್ಡ್ ೧೮೫೯ರಲ್ಲಿ ಇದರ ಇಂಗ್ಲಿಷ್ ಅನುವಾದವನ್ನು ಪ್ರಕಟಿಸುವವರೆಗೆ ಜಗತ್ತಿನ ಗಮನವನ್ನೂ ಈ ಕೃತಿ ಸೆಳೆದಿರಲಿಲ್ಲ. ಇದು ಎಷ್ಟು ಆಶ್ಚರ್ಯಕರವೋ ಅಷ್ಟೇ ಆಶ್ಚರ್ಯಕರ ಆಚಾರ್ಯ ಡಿ.ವಿ.ಜಿ. ಅವರು ೧೯೩೦ರಲ್ಲಿಯೇ ಇದರ ಅನುವಾದ 'ಉಮರನ ಒಸಗೆ'ಯನ್ನು ಪ್ರಕಟಿಸಿದುದು, ಎಂದರೆ ಎಪ್ಪತ್ತು ವರ್ಷಗಳೊಳಗಾಗಿ ಕನ್ನಡವು ಇದನ್ನು ಕಂಡುದು ಡಿ.ವಿ.ಜಿ. ಅವರ ಸಾರಗ್ರಾಹಿ ದೂರದೃಷ್ಟಿಗೆ ನಿದರ್ಶನ ವೆಂದು ಹೇಳಬಹುದು.

ಆಚಾರ್ಯ ಬಿ.ಎಂ.ಶ್ರೀ ಅವರು ಗ್ರೀಕ್ ಭಾಷೆಯ ಎರಡು ಮಹಾ ಕೃತಿಗಳನ್ನು ಕನ್ನಡಕ್ಕೆ ತಂದಂತೆ ಆಚಾರ್ಯ ಡಿ.ವಿ.ಜಿ. ಅವರೂ ಪರ್ಷಿಯನ್ ಭಾಷೆಯ ಈ ಉತ್ಕೃಷ್ಟ ಕೃತಿಯನ್ನು ಕನ್ನಡಿಸಿ ತಮ್ಮ ಕನ್ನಡ ವಿಷಯಕವಾದ ಕರ್ತವ್ಯದ ಈ ಅಂಗದಲ್ಲಿಯೂ ಕೃತಕೃತ್ಯರಾಗಿದ್ದಾರೆ. ಇಷ್ಟೇ ಅಲ್ಲ. ಫಿಟ್ಸ್‌ಜೆರಲ್ಡ್‌ನ ಛಾಯೆಯಿಂದ ತೆಗೆದ 86 ರುಬಾಯಿಗಳನ್ನಲ್ಲದೆ ಅವನು ಬಿಟ್ಟಿದ್ದ ಪದ್ಯಗಳ ಪೈಕಿ 86ನ್ನು ತೆಗೆದು ಪರಿಶಿಷ್ಟ ಭಾಗವಾಗಿ ಸೇರಿಸಿ ಒಟ್ಟು 172 ರುಬಾಯಿಗಳು ಕನ್ನಡ ಚೌಪದಿಗಳಾಗಿ ಕನ್ನಡಿಗರಿಗೆ ದೊರಕುವಂತೆ ಮಾಡಿದ್ದಾರೆ. ಉಮರ ವಿರಚಿತ ರುಬಾಯಿಗಳು 1093 ಎಂದು ತಿಳಿದುಬಂದಿದೆ.* ಇವುಗಳಲ್ಲಿ ರತ್ನಪ್ರಾಯವಾದ 172 ರುಬಾಯಿಗಳು ಡಿ.ವಿ.ಜಿ.ಯವರ ಪ್ರತಿಭೆ–ಪರಿಶ್ರಮಗಳ ಫಲವಾಗಿ ನಮಗೆ ದೊರೆತಿರುವುದು ನಮ್ಮ ಭಾಗ್ಯ.

---

* ಪರಮಾತ್ಮನನ್ನು ಕುರಿತು ೪೯, ಕಾಲಚಕ್ರವನ್ನು ಕುರಿತು ೬೨. ಯೌವನವನ್ನು ಕುರಿತು ೬೬, ಸಾವನ್ನು ಕುರಿತು ೬೦. ಮಣ್ಣು–ಮಡಕೆಗಳನ್ನು ಕುರಿತು ೩೭. ದೈವವನ್ನು ಕುರಿತು ೨೨, ಅನುಶಾಸನವನ್ನು ಕುರಿತು ೧೯೩, ಖರಾಬಾತ್ (ಬಹಿರಂಗ ಸೂಫೀ ಸಭೆ) ಅನ್ನು ಕುರಿತು ೧೩೫, ಮೈಖಾನ (ಅಂತರಂಗದ ಸಭೆ) ಕುರಿತು ೧೦೬, ವೈಯಕ್ತಿಕ ೧೬೭. ಪ್ರಾರ್ಥನೆಗಳು ೪೯. ಸಂಕೀರ್ಣ ೪೭—ಒಟ್ಟು ೧೦೯೩.

ಉಮರನ ಜೀವನ ಚರಿತ್ರೆಯನ್ನು. ಫಿಟ್ಸ್‌ಜೆರಲ್ಡ್‌ನ ಜೀವನ ಚರಿತ್ರೆಯನ್ನು ಪಲವು ಆಕರಗಳಿಂದ ಸಂಗ್ರಹಿಸಿ ಕ್ರೋಢೀಕರಿಸಿರುವುದೂ, ಉಮರನ ಉಪದೇಶವನ್ನು ಅಪೂರ್ವವಾಗಿ. ವಿಸ್ತಾರವಾಗಿ ಪ್ರತಿಪಾದಿಸಿರುವುದೂ. ಉಮರನ ಬಗ್ಗೆ ರಸ್ಕಿನ್. ಟೆನ್ನಿಸನ್, ಆಸ್ಕಿತ್‌ರ ಉಕ್ತಿಗಳನ್ನು ಸೇರ್ಪಡಿಸಿರುವುದೂ 'ಉಮರನ ಒಸಗೆ'ಯನ್ನು ಸರ್ವಾಂಗ ಸುಂದರವಾದ ಕೃತಿಯನ್ನಾಗಿ ಪರಿವರ್ತಿಸಿವೆ. 'ಉಮರನ ಉಪದೇಶ'ವೆಂಬ ಭಾಗವಂತೂ ತುಂಬ ಮನೋಜ್ಞ. ಮನನೀಯ. ಲ್ಯೂಕ್ರೀಷಿಯಸ್. ಉಮರ. ರಾಬರ್ಟ್ ಬ್ರೌನಿಂಗರ ವಿಚಾರಧಾರೆಗಳ ತುಲನಾತ್ಮಕ ವಿವೇಚನೆಯಂತೂ ಬಹಳ ಮಾರ್ಮಿಕವಾಗಿ ಬಂದಿದೆ. ಭಗವದ್ಗೀತೆಯ, ರಾಮಾಯಣದ, ಭರ್ತೃಹರಿಯ. ವಿದ್ಯಾರಣ್ಯರ ಉಕ್ತಿಗಳನ್ನು ಉದಾಹರಿಸಿ, ವಿಷಯ ಮಂಥನ ಮಾಡಿ ಉಮರನ ವಾದಸರಣಿಯನ್ನು ಕೊನೆಯಲ್ಲಿ ಸಂಗ್ರಹಿಸಿರುವುದು ಡಿ.ವಿ.ಜಿ.ಯವರ ದರ್ಶನೋದ್ದೀಪಿತ ಲೇಖನ ಸರಣಿಗೆ ಅನುಗುಣವಾಗಿಯೇ ಇದೆ.

ಫಿಟ್ಸ್‌ಜೆರಲ್ಡನ ಛಾಯೆಗಳನ್ನು ಅನುಸರಿಸಿ ಅನುವಾದಿಸಿರುವ ಪದ್ಯಗಳ ಬಗ್ಗೆ ಒಂದು ಮಾತು. ಅವನದು ಸ್ವೇಚ್ಛಾನುವಾದ. ಉಮರನ, ಕೆಲವು ಸಲ ಹಾಫಿಜ್‌ನ ಪದ್ಯಗಳಿಂದ ವಾಕ್ಯಗಳನ್ನೋ, ವಾಕ್ಯ ಖಂಡಗಳನ್ನೋ ಎತ್ತಿಕೊಂಡು ಅವುಗಳನ್ನು ತನ್ನ ಅಭಿರುಚಿಯಂತೆ ವಿಸ್ತರಿಸಿ ಪದ್ಯಗಳನ್ನು ಹೊಸೆದಿದ್ದಾನೆ. ಈ ಬಗ್ಗೆ Haron Allen ಹೇಳಿರುವುದು ಹೀಗೆ ಇದೆ :

"Out of Fitzgerald's (101) quartrains forty-nine are faithful and beautiful paraphrases of single quartrains to be found in the Ousley or Calcutta MSS or both. Forty-four are traceable to more than one quartrain, and may be termed composite quartrains. Two are inspired by quartrains found by Fitzgerald only in Nicolas' Text. Two are reflecting the whole spirit of the original poem. Two are traceable exclusively to the influence of Mantiq ut Tair of Farid ud Din 'Attar'. Two quartrains primarily inspired by Omar, were influenced by the odes of Hafiz,"

ವಸ್ತುಸ್ಥಿತಿ ಹೀಗಿರುವುದರಿಂದ ಫಿಟ್ಸ್‌ಜೆರಲ್ಡನ ಅನುವಾದಗಳನ್ನಷ್ಟೆ ಆಶ್ರಯಿಸಿ ಉಮರನ ಅಂತರಂಗವನ್ನು ಅರಿಯಲು ಹೋಗುವುದು ಹೆಡ್ಡತನವಾಗುತ್ತದೆ. ಇದನ್ನರಿತೇ ಡಿ.ವಿ.ಜಿ. ಅವರು ಅನ್ಯ ಮೂಲಗಳಿಂದ 86 ರುಬಾಯಿಗಳನ್ನು ಕನ್ನಡೀಕರಿಸಿರುವುದು ಉಮರನ ವಿದ್ಯಾರ್ಥಿಗಳಿಗೆ ಎಸಗಿದ ಉಪಕಾರವಾಗಿದೆ.

ಉದಾಹರಣೆಗೆಂದು ಉಮರನ ಅತ್ಯಂತ ಜನಪ್ರಿಯವಾದ 'ರುಬಾಯಿ' ಯೊಂದನ್ನು ಪರೀಕ್ಷಿಸೋಣ. ಇದು ಮೂಲದಲ್ಲಿರುವುದು ಹೀಗೆ :

"If one could find a loaf of grinded wheat,
And with a gourd of wine and chop of meat
Retires to ruined haunts with Beloved one,
What King can hope to find such joyous treat ?

(ಸ್ವಾಮಿ ಗೋವಿಂದತೀರ್ಥರ ಅನುವಾದ)

ಇದನ್ನು ಫಿಟ್ಸ್‌ಜೆರಲ್ಡ್ ಅನುವಾದಿಸಿರುವುದು ಹೀಗೆ :

Here with a loaf of Bread beneath the Bough.
A Flask of wine, a Book of verse—and Thou
Beside me singing in the wilderness—
And wilderness is Paradise enow !

ಇದನ್ನು ಡಿ.ವಿ.ಜಿ. ಕನ್ನಡಿಸಿರುವುದು ಹೀಗೆ :

ಅಲ್ಲಿ ಮರದಡಿಯಲ್ಲಿ ನಲ್ಗಾವ್ಯವೊಂದಿರಲು
ರೊಟ್ಟಿಯೊಂದಿನಿಸೊಂದು ಕುಡಿಕೆಯಲಿ ಮಧುವು
ಮೇಣ್ ಮುಗುದೆ ನೀನೆನ್ನ ಬಳಿ ಕುಳಿತು ಪಾಡಲಹ
ಕಾಡಾದೊಡೇನದುವೆ ಸಗ್ಗ ಸುಖವೆನಗೆ !

ಇಲ್ಲಿ ಎದ್ದು ಕಾಣುವ ಅಂಶಗಳು ಮೂರು : ಉಮರನ ರುಬಾಯಿಯಲ್ಲಿ 'a book of verse' ಇಲ್ಲ ; ಫಿಟ್ಸ್‌ಜೆರಲ್ಡ್ ತನ್ನ ಅಭಿರುಚಿಗನುಗುಣವಾಗಿ ಅದನ್ನು ಸೇರಿಸಿದ್ದಾನೆ ; 'chop of meat' ಉಮರನಲ್ಲಿದೆ, ಫಿಟ್ಸ್‌ಜೆರಲ್ಡ್‌ನಲ್ಲಿಲ್ಲ ; 'beloved one' ಉಮರನಲ್ಲಿಯೂ ಇದೆ, ಫಿಟ್ಸ್‌ಜೆರಲ್ಡ್‌ನಲ್ಲಿಯೂ ಇದೆ ; ಆದರೆ ಫಿಟ್ಸ್‌ಜೆರಲ್ಡ್‌ನಲ್ಲಿ ಅವಳು 'ಬಳಿ ಕುಳಿತು ಹಾಡುವ ಮುಗುದೆ'ಯಾಗುತ್ತಾಳೆ. ಉಮರನ ಕೊನೆಯ ಸಾಲಂತೂ ಪ್ರಶ್ನಾರ್ಥಕತೆಯನ್ನು ಕಳೆದುಕೊಂಡು ಉದ್ಗಾರ ಯುಕ್ತ ಇತ್ಯಾತ್ಮಕ ವಾಕ್ಯವಾಗಿ ಕಾವ್ಯಾತ್ಮಕತೆಯನ್ನು ಹೆಚ್ಚಿಸಿಕೊಂಡಿದೆಯೋ, ಕಡಮೆ ಮಾಡಿಕೊಂಡಿದೆಯೋ ಹೇಳುವುದು ಕಷ್ಟ. ಇಷ್ಟು ಮಾತ್ರ ನಿಜ : ಡಿ.ವಿ.ಜಿ. ಅವರ ಅನುವಾದ ಫಿಟ್ಸ್‌ಜೆರಲ್ಡ್‌ನ ಇಂಗ್ಲಿಷ್ ಅನುವಾದಕ್ಕಿಂತಲೂ ಆಹ್ಲಾದಕರ ವಾಗಿದೆ.

ಇನ್ನೊಂದೇ ಉದಾಹರಣೆ ಸಾಕು—ಮೂಲದ. ಅನುವಾದದ ಸಾಮ್ಯ ವೈಷಮ್ಯ ಗಳನ್ನು ಗುರುತಿಸಲು. ಉಮರನ ಇನ್ನೊಂದು ಪ್ರಸಿದ್ಧ ರುಬಾಯಿ ಇಂತಿದೆ :

Had I but on the skies divine control,
I'd kick this bluish ball beyond the goal ;
And forth with furnish better worlds and times
Where love will cling to every freeman's soul.

(ಸ್ವಾಮಿ ಗೋವಿಂದತೀರ್ಥರ ಅನುವಾದ)

ಇದನ್ನು ಫಿಟ್ಸ್‌ಜೆರಲ್ಡ್ ಅನುವಾದಿಸಿರುವುದು ಹೀಗೆ :

Ah, Love ! could thou and I with Fate conspire
To grasp this sorry Scheme of things entire
Would not we shatter it to bits—and then
Re-mould it nearer to the Heart's Desire !

ಡಿ.ವಿ.ಜಿ. ಇದನ್ನು ಹೀಗೆ ಕನ್ನಡಿಸಿದ್ದಾರೆ :

ಹಾ ಪ್ರಿಯಳೆ, ನಾಮಿರ್ವರುಂ ವಿಧಿಯು ಸಂಚಿನಲಿ
    ಒಡವೆರೆಯುತೀ ಜಗದ ಕೃಪಣ ಯೋಜನೆಯು
ಪಿಡಿಯುವಂತಾದೊಡಾಗಳಿದೆಲ್ಲವನುಮೊಡೆದು
    ಮನಕೊಪ್ಪುವವೊಲಿದನು ಮರಳಿ ನಿರವಿಸೆವೆ ?

ಮೂಲದ ಭಾವಾಲೋಚನೆಗಳನ್ನು ಫಿಟ್ಸ್‌ಜೆರಲ್ಡ್ ಹೇಗೆ ತನ್ನಿಷ್ಟದಂತೆ ತಿದ್ದಿಕೊಳ್ಳುತ್ತಿದ್ದನೆಂಬುದಕ್ಕೆ ಇದೊಂದು ಉತ್ತಮವಾದ ಉದಾಹರಣೆ. ಮೂಲದಲ್ಲಿ ಉಮರನೊಬ್ಬನೆ ಹೊಸಜಗದ, ಹೊಸಯುಗದ ಸೃಷ್ಟಾರನಾಗುವ ಹಂಬಲವನ್ನು ಹೊಂದಿರುತ್ತಾನೆ; ಅನುವಾದದಲ್ಲಿ 'Ah love! could thou and I' ಎಂದಾಗುತ್ತದೆ; ಮೂಲದಲ್ಲಿರುವ 'I'd kick this bluish ball beyond the goal' ಎಂಬ ರೋಮಾಂಚನಕಾರಕ ಕ್ರೀಡಾಕ್ರಿಯೆ ಮಾಯವಾಗಿ 'to grasp this sorry scheme' ಎಂಬ ಪೇಲವಕ್ರಿಯೆ ಬರುತ್ತದೆ : 'Furnish better worlds and times ಹೋಗಿ would not we shatter it (the sorry scheme of things) to its and then, Remould it nearer to the heart's desire' ಎಂಬ ದೂರಾನ್ವಯದ ಅನುವಾದ ಬರುತ್ತದೆ ; 'where love will cling to every free man's soul' ಎಂಬ ವಾಕ್ಯಮಾಣಿಕ್ಯವೇ ಬಿಟ್ಟುಹೋಗುತ್ತದೆ. ಇದನ್ನು ಕನ್ನಡಿಸುವಲ್ಲಿ ಡಿ.ವಿ.ಜಿ.ಯವರೂ ಸೋತಿದ್ದಾರೆ. ಮೂರನೆಯ ಸಾಲಂತೂ ಸಂಧಿಗಳ ಸಂಧಿವಾತದಿಂದ ನರಳುತ್ತಿದೆ.

ಇದೊಂದು ಅಪರೂಪದ ಸೋಲು. ಉದ್ದಕ್ಕೂ ಡಿ.ವಿ.ಜಿ.ಯವರು ಗೆದ್ದಿದ್ದಾರೆ. ದಿವಂಗತ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಸರಿಯಾಗಿಯೇ ಹೇಳಿರುವಂತೆ 'ಉಮರನ ಒಸಗೆ' ಉಮರನ ಪ್ರೇಯಸಿಯಷ್ಟೇ ಮಧುರ ಮತ್ತು ಸುಂದರ.'

ಡಿ.ವಿ.ಜಿ. ಅವರ ಕಾವ್ಯಶೈಲಿ

ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ

ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ತಮ್ಮ ವಿಶ್ಲೇಷಣಾತ್ಮಕ ಲೇಖನದಲ್ಲಿ, ಈ ಶತಕದ ಆರಂಭದ ದಶಕಗಳಲ್ಲಿ ಬಿ.ಎಂ.ಶ್ರೀ. ಮುಂತಾದ ಕವಿಗಳಂತೆ ಡಿ.ವಿ.ಜಿ. “ಪ್ರಾಚೀನ ಪೂರ್ವ ಮತ್ತು ಆಧುನಿಕ ಪಶ್ಚಿಮಗಳ ನಡುವಣ ಸಂಘರ್ಷ”ದ ಸಮಸ್ಯೆಯನ್ನು ಎದುರಿಸಬೇಕಾಗಿದ್ದಿತೆಂದು ಹೇಳಿ, ಅವರಂತೆಯೇ ಇವರು ‘ಸಮನ್ವಯ ಮಾರ್ಗ’ವನ್ನು ಆರಿಸಿಕೊಳ್ಳಬಯಸಿದರು, ಎಂದಿರುವುದು ಸರಿಯೆ. ಚಿಂತನೆಯಲ್ಲಿ ಡಿ.ವಿ.ಜಿ. ಈ ಸಮನ್ವಯ ಮಾರ್ಗವನ್ನು ಅನುಸರಿಸಿದರೂ ಬರವಣಿಗೆಯ ಕ್ರಮದಲ್ಲಿ ಅವರು ಆರಿಸಿಕೊಂಡದ್ದು ಪ್ರಾಚೀನ ರೂಪವನ್ನೇ. ಡಿ.ವಿ.ಜಿ. ಅವರು ತಮ್ಮ ಪ್ರತಿಭೆಯನ್ನು ಸಾಮಾಜಿಕ ಆಸಕ್ತಿಗಳಲ್ಲಿ ಹರಿಯಬಿಟ್ಟು, ಸಾಹಿತ್ಯ ಜೀವನಸೌಂದರ್ಯವನ್ನು ಕಾಪಾಡಬೇಕೆಂಬ ಉದ್ದೇಶವನ್ನು ಹೊಂದಿದ್ದುದರಿಂದ ಅವರಿಗೆ ಕಾವ್ಯದಲ್ಲಿ “ವಿಷಯ ನವೀನತೆ ಮುಖ್ಯವೆನ್ನಿಸಿತೇ ಹೊರತು ಪ್ರಕಾರನವೀನತೆ ಮುಖ್ಯವೆನಿಸಲಿಲ್ಲ” ಎಂದು ಅಭಿಪ್ರಾಯಪಟ್ಟಿದ್ದಾರೆ. “ಹೇಗೆ ಹೇಳಬೇಕು ಎಂಬುದಕ್ಕಿಂತ ಏನು ಹೇಳಬೇಕೆಂಬುದೇ ಅವರಿಗೆ ಮಹತ್ವವಾಗಿದ್ದಂತೆ ತೋರುತ್ತದೆ” ಎಂಬ ಲೇಖಕರ ಅಭಿಪ್ರಾಯ ಪ್ರಶ್ನಾರ್ಹ. ಹೇಗೆ ಹೇಳಬೇಕು ಎನ್ನುವುದರ ಬಗೆಗೆ ಡಿ.ವಿ.ಜಿ. ಮತಭೇದವನ್ನು ಹೊಂದಿದ್ದರೇ ಹೊರತು ಅದು ಮಹತ್ವದ್ದಲ್ಲ ಎಂದು ಭಾವಿಸಿರಲಿಲ್ಲ. ಹೇಗೆ ಹೇಳಬೇಕು ಎಂಬ ಬಗೆಗೆ ತಮ್ಮ ನಿಶ್ಚಿತವನ್ನು ಅನೇಕ ಲೇಖನಗಳಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ. ಮುಂದುವರಿಯುತ್ತಾ, ಡಿ.ವಿ.ಜಿ. ಅವರ ಕಾವ್ಯಶೈಲಿಯನ್ನು ನಿರ್ಧರಿಸಿರುವ ಅಂಶಗಳನ್ನು (ನಿಶಿತವಾದ ವಿಚಾರಶಕ್ತಿ, ಸಾಮಾಜಿಕ ಆಸಕ್ತಿ, ಅನುಭವಕ್ಕಿಂತ ಅನುಭವದ ಫಲಿತಕ್ಕೆ ಅವರು ಕೊಡುವ ಪ್ರಾಮುಖ್ಯ, ಬೌದ್ಧಿಕ ಪ್ರಖರತೆ, ಪತ್ರಿಕೋದ್ಯಮದ ಬರವಣಿಗೆ) ತಿಳಿಸಿ, ‘ತಿಳಿಸಿಕೊಡುವ ಉದ್ದೇಶ’ಕ್ಕೆ ಅವರು ಒಲಿದದ್ದರಿಂದ “ಕವಿಯಾಗುವುದಕ್ಕಿಂತ ‘ಸಂತ’ನಾಗುವುದು ಅವರಿಗೆ ಪ್ರಿಯವಾಯಿತು” ಎಂದಿದ್ದಾರೆ. (ವನಸುಮದಂತೆ ಇರಬೇಕೆಂದು ಬಯಸಿದವರು ‘ಸಂತ’ನಾಗ ಬಯಸಿದರೆನ್ನುವುದು ಸತ್ಯಕ್ಕೆ ದೂರವಾದ ಮಾತು.) ಅನುಭವಕ್ಕಿಂತ ಅನುಭವದ ಫಲಿತವನ್ನು ತಿಳಿಸಿಕೊಡಬೇಕೆಂಬ ಉದ್ದೇಶ,

ವೇಮನ ಸರ್ವಜ್ಞರ ಅಭಿವ್ಯಕ್ತಿ ಪ್ರಕಾರದ ಹಿನ್ನೆಲೆ, ಸಂಸ್ಕೃತ ಭಾಷಾಪ್ರಭುತ್ವ ಇವೆಲ್ಲವೂ ಹದವಾಗಿ ಕೂಡಿಕೊಂಡು 'ಮಂಕುತಿಮ್ಮನ ಕಗ್ಗ'ದ ಶೈಲಿ ರೂಪಗೊಂಡಿತು ಎನ್ನುತ್ತಾರೆ ಲೇಖಕರು ; ಮತ್ತು 'ಉಮರನ ಒಸಗೆ' ಯಲ್ಲಿಯೇ ಈ ಕಾವ್ಯಶೈಲಿಯ ಪ್ರಯೋಗವನ್ನು ಡಿ.ವಿ.ಜಿ.ಯಲ್ಲಿ ಗುರುತಿಸಿದ್ದಾರೆ. ಅನಂತರ, ಡಿ.ವಿ.ಜಿ. ಅವರ 'ಕೇತಕೀವನ'ದ ಕಡೆಗೆ ಗಮನ ಹರಿಸಿ, ಅದು ಡಿ.ವಿ.ಜಿ. ಅವರ ಕವನಸಂಕಲನಗಳಲ್ಲಿ ವಿಶಿಷ್ಟವಾದುದೆಂದು ಹೇಳಿ, ಈ ಸಂಕಲನದಲ್ಲಿ ಮೊದಲ ಬಾರಿಗೆ 'ವೈಯಕ್ತಿಕ ಧ್ವನಿ' [ಇಲ್ಲಿ ಧ್ವನಿ ಎಂದರೆ (Voice), ಕಾವ್ಯಮೀಮಾಂಸೆಯ 'ಧ್ವನಿ' ಅಲ್ಲ] ಕೇಳಿಬರುವುದೆಂದೂ 'ಕಗ್ಗ'ವೂ ಸೇರಿದಂತೆ ಉಳಿದ ಕವನ ಸಂಕಲನಗಳದ್ದು 'ಸಾರ್ವಜನಿಕ ಧ್ವನಿ' ಯೆಂದೂ ಅಭಿಪ್ರಾಯಪಟ್ಟಿದ್ದಾರೆ. 'ಸಾರ್ವಜನಿಕ ಧ್ವನಿ' ಎಂದರೆ ಸಾರ್ವಜನಿಕರನ್ನು ಉದ್ದೇಶಿಸಿ ಹೇಳಿದ್ದು ಎನ್ನುವುದು ಲೇಖಕರ ಆಶಯ. 'ಸಾರ್ವಜನಿಕ ಧ್ವನಿ' ಇರುವಲ್ಲಿ ಕಾವ್ಯ ಗುಣ ಇರುವುದಿಲ್ಲ ಎಂದೇನಿಲ್ಲ. ಡಿ.ವಿ.ಜಿ. ಅವರೇ ಹೇಳುವ 'ಲೋಕ ಸಹಾನುಭೂತಿ ಪ್ರೇರಿತ' ಕವಿಗಳ ವರ್ಗಕ್ಕೆ ಡಿ.ವಿ.ಜಿ. ಅವರನ್ನು ಸೇರಿಸುತ್ತಾರೆ ಲೇಖಕರು.

ಡಿ. ವಿ. ಗುಂಡಪ್ಪನವರ ಮೊದಲ ಕವಿತಾಸಂಕಲನ 'ವಸಂತ ಕುಸುಮಾಂಜಲಿ' ಪ್ರಕಟವಾದದ್ದು 1922ರಲ್ಲಿ. 'ಮರುಳ ಮುನಿಯನ ಕಗ್ಗ'—ಅವರ ಕಡೆಯ ಸಂಕಲನ—ಅವರು ದಿವಂಗತರಾದನಂತರ 1984ರಲ್ಲಿ ಪ್ರಕಟವಾಯಿತು. ಈ ನಡುವೆ ಸುಮಾರು ಐದು ದಶಕಗಳ ದೀರ್ಘ ಅವಧಿಯಲ್ಲಿ ಡಿ.ವಿ.ಜಿ.ಯವರ ಈ ಎರಡೂ ಕೃತಿಗಳೂ ಸೇರಿದಂತೆ ಒಟ್ಟು ಹನ್ನೊಂದು ಕವಿತಾ ಸಂಕಲನಗಳು ಪ್ರಕಟವಾಗಿವೆ. ನಿವೇದನ (1924), ಉಮರನ ಒಸಗೆ (1930). ಮಂಕುತಿಮ್ಮನ ಕಗ್ಗ (1943), ಶ್ರೀರಾಮ ಪರೀಕ್ಷಣಂ (1945), ಅಂತಃಪುರ ಗೀತೆ (1950), ಗೀತ ಶಾಕುಂತಲ (1960), ಶೃಂಗಾರ ಮಂಗಳಂ (1970), ಶ್ರೀಕೃಷ್ಣ ಪರೀಕ್ಷಣಂ (1971) ಹಾಗೂ ಕೇತಕೀವನ (1973)—ಇವು ಡಿ.ವಿ.ಜಿ. ಅವರ ಪ್ರಕಟಿತ ಕವಿತಾ ಸಂಕಲನಗಳು 'ಕಾವ್ಯ ಕುಸುಮಾಂಜಲಿ'—ಎಂಬ ಅವರ ಆಯ್ದ ಕವಿತಾ ಸಂಕಲನ ಇತ್ತೀಚೆಗೆ ಪ್ರಕಟವಾಗಿದೆ.

ಡಿ.ವಿ.ಜಿ.ಯವರ ಮೊದಲ ಸಂಕಲನ 'ವಸಂತ ಕುಸುಮಾಂಜಲಿ' ಪ್ರಕಟವಾಗುವ ಸರಿಸುಮಾರು ವೇಳೆಗೇ ಬಿ.ಎಂ.ಶ್ರೀ. ಅವರ 'ಇಂಗ್ಲಿಷ್ ಗೀತಗಳು' (1921) ಸಹ ಪ್ರಕಟವಾಯಿತು ಎಂಬುದು ಐತಿಹಾಸಿಕವಾಗಿ ಗಮನಿಸಬೇಕಾದ ಸಂಗತಿ. ಬೇಂದ್ರೆಯವರ 'ಕೃಷ್ಣಾಕುಮಾರಿ' (1922). ಮಾಸ್ತಿಯವರ 'ಬಿನ್ನಹ' (1922)—ಸಹ ಇದೇ ಕಾಲಕ್ಕೆ ಪ್ರಕಟವಾದಂಥವು.

ಡಿ.ವಿ.ಜಿ.ಯವರು ತಮ್ಮ ಕಾವ್ಯರಚನೆಯನ್ನು ಆರಂಭಿಸಿದುದು—ಕನ್ನಡ ಸಾಹಿತ್ಯದ ಒಂದು ಸಂಧಿಕಾಲದಲ್ಲಿ. 'ಶ್ರೀ'ಯವರ 'ಇಂಗ್ಲಿಷ್ ಗೀತಗಳು'—ಕನ್ನಡ ಕಾವ್ಯ ಹಿಡಿಯಬೇಕಾದ ದಿಕ್ಕನ್ನು ಸೂಚಿಸಿದ ಸಂದರ್ಭದಲ್ಲಿಯೇ ಮಾಸ್ತಿ, ಬೇಂದ್ರೆ—ಮೊದಲಾದವರ ಸಮಕಾಲೀನರಾಗಿ ಡಿ.ವಿ.ಜಿ.ಯವರು ಕಾವ್ಯರಚನೆ ಆರಂಭಿಸಿ

ದರು. ಡಿ.ವಿ.ಜಿ. 'ಉಮರನ ಒಸಗೆ'ಯನ್ನು ಪ್ರಕಟಿಸುವ ವೇಳೆಗೆ ಪುಟ್ಟಪ್ಪನವರೂ, ಪು. ತಿ. ನರಸಿಂಹಾಚಾರ್ ಅವರೂ ತಮ್ಮ ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದರು. ಕನ್ನಡ ಕಾವ್ಯ ಆ ವೇಳೆಗಾಗಲೇ ಒಂದು ಸ್ಪಷ್ಟರೂಪ ಪಡೆದುಕೊಳ್ಳುವ ಹವಣಿಕೆಯಲ್ಲಿತ್ತು.

ಆ ಕಾಲದ ಲೇಖಕರ ಸಮಸ್ಯೆ—ಮುಖ್ಯವಾಗಿ ಪ್ರಾಚೀನ ಪೂರ್ವ ಮತ್ತು ಆಧುನಿಕ ಪಶ್ಚಿಮಗಳ ನಡುವಿನ ಸಂಘರ್ಷವಾಗಿದ್ದಿತು. ಡಿ.ವಿ.ಜಿ. ಅವರೂ ಸಹ ತಮ್ಮ ಕಾವ್ಯರಚನೆಯ ಆರಂಭದಲ್ಲಿ ಈ ಸಮಸ್ಯೆಯನ್ನು ಎದುರಿಸಬೇಕಾಯಿತು. ಬಿ.ಎಂ.ಶ್ರೀ., ಮಾಸ್ತಿ—ಅವರಂತೆ ಡಿ.ವಿ.ಜಿ.ಯವರು ಇದರಲ್ಲಿ ಆರಿಸಿಕೊಳ್ಳಲು ಬಯಸಿದ್ದು 'ಸಮನ್ವಯ ಮಾರ್ಗ': ಇವೆರಡರ ಅರ್ಥಪೂರ್ಣ ಹೊಂದಾಣಿಕೆ.

ಹೊಸಚಿಗುರು ಹಳೆಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ।
ಜಸವು ಜನಜೀವನಕೆ—ಮಂಕುತಿಮ್ಮ ॥

ಇದು ಡಿ.ವಿ.ಜಿ.ಯವರು ರೂಢಿಸಿಕೊಂಡ ಧೋರಣೆ. ಪ್ರಾಚೀನ ಪೂರ್ವ ಹಾಗೂ ಆಧುನಿಕ ಪಶ್ಚಿಮಗಳೆರಡನ್ನೂ ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಲು ಡಿ.ವಿ.ಜಿ. ಶ್ರಮಿಸಿದರು. ಚಿಂತನೆಯಲ್ಲಿ ಡಿ.ವಿ.ಜಿ. ಈ 'ಸಮನ್ವಯ ಮಾರ್ಗ'ವನ್ನು ಅನುಸರಿಸಿದರೂ ಬರವಣಿಗೆಯ ಕ್ರಮದಲ್ಲಿ ಅವರು ಆರಿಸಿಕೊಂಡದ್ದು—ಪ್ರಾಚೀನ ರೂಪವನ್ನೇ. ಅದಕ್ಕೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಈ ಲೇಖನದ ವ್ಯಾಪ್ತಿಯಲ್ಲಿ ನಡೆಸಲು ಪ್ರಯತ್ನಿಸಿದ್ದೇನೆ.

ಬಿ.ಎಂ.ಶ್ರೀ., ಮಾಸ್ತಿ, ಕುವೆಂಪು—ಮೊದಲಾದವರಂತೆ ಡಿ.ವಿ.ಜಿ. ಅವರಿಗೆ ಕ್ರಮಬದ್ಧ ಕಾಲೇಜು ವಿದ್ಯಾಭ್ಯಾಸ ದೊರಕಲಿಲ್ಲ. ಇವರ ವಿದ್ಯೆಯೆಲ್ಲ ಸ್ವಯಾರ್ಜಿತವಾದುದು. ಕನ್ನಡದಲ್ಲಿ ಕಾರಂತರನ್ನು ಮಾತ್ರ ಡಿ.ವಿ.ಜಿ. ಅವರಿಗೆ ಹೋಲಿಸಬಹುದು. ಬಹುಮುಖ ಆಸಕ್ತಿಯ ಈ ಇಬ್ಬರೂ ತಮ್ಮ ಪ್ರತಿಭೆಯನ್ನು ಹತ್ತು ಹಲವು ರೂಪಗಳಲ್ಲಿ—ಮುಖ್ಯವಾಗಿ—ಸಾಮಾಜಿಕ ಆಸಕ್ತಿಗಳಲ್ಲಿ ತೊಡಗಿಸಿದಂಥವರು.

ಡಿ.ವಿ.ಜಿ. ಅವರು ಕ್ರಮಬದ್ಧವಾಗಿ ಕಲಿತ ವಿದ್ಯೆಯೆಂದರೆ–ಬ್ರಹ್ಮಶ್ರೀ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳಿಂದ ವೇದಾಂತ ಅಧ್ಯಯನ. ಡಿ.ವಿ.ಜಿ. ಅವರಿಗಿದ್ದ ಆಳವಾದ ಸಂಸ್ಕೃತಜ್ಞಾನಕ್ಕೆ ಈ ಹಿನ್ನೆಲೆಯಿದೆ.

ಡಿ.ವಿ.ಜಿ.ಯವರು ತಮ್ಮ ವೃತ್ತಿಯನ್ನಾರಂಭಿಸಿದ್ದು ಪತ್ರಿಕೋದ್ಯಮಿಯಾಗಿ. ಪತ್ರಿಕಾಕ್ಷೇತ್ರದಲ್ಲಿ ಅವರ ಸೇವೆ ಸ್ಮರಣೀಯವಾದುದು. ರಾಜಕೀಯ. ಸಾಮಾಜಿಕ, ಆರ್ಥಿಕ ವಿಷಯಗಳ ಮೇಲೆ ಅವರು ಅತ್ಯಂತ ಪರಿಣಾಮಕಾರಿಯಾಗಿ ಲೇಖನ

ಬರೆಯಬಲ್ಲ ಪ್ರತಿಭಾವಂತರೆನ್ನಿಸಿದ್ದರು. ಪ್ರಾಂತೀಯ, ರಾಷ್ಟ್ರೀಯ ರಾಜಕೀಯದ ಬಗ್ಗೆ ಅವರ ವಿಮರ್ಶೆ—ಆಡಳಿತಗಾರರಿಗೆ ಮಾರ್ಗದರ್ಶಿ ಬರಹಗಳಾಗಿದ್ದುವು. ಒಂದು ರೀತಿಯಲ್ಲಿ ಪತ್ರಿಕೋದ್ಯಮ ಅವರನ್ನು—ಸಾರ್ವಜನಿಕ ಕ್ಷೇತ್ರದಲ್ಲಿ ಅತ್ಯಂತ ಕ್ರಿಯಾ ಶೀಲರನ್ನಾಗಿಸಿತು.

ಡಿ.ವಿ.ಜಿ. ಅವರ ಕಾರ್ಯಕ್ಷೇತ್ರ—ಮುಖ್ಯವಾಗಿ ಸಾರ್ವಜನಿಕ ಕ್ಷೇತ್ರ. ಅವರ ಎಲ್ಲ ಬರಹಗಳೂ—ಅದು ವೈಚಾರಿಕ ಲೇಖನವೇ ಆಗಿರಲಿ, ತಾತ್ತ್ವಿಕ ಚರ್ಚೆಯೇ ಆಗಿರಲಿ, ಕಾವ್ಯರಚನೆಯೇ ಆಗಿರಲಿ—ಸಾರ್ವಜನಿಕ ಬದುಕನ್ನು ಹಸನುಗೊಳಿಸುವ ಉದ್ದೇಶ ಪಡೆದಿತ್ತು. ಅವರ ಒಂದು ಮುಖ್ಯ ಕೃತಿಯ ಹೆಸರು 'ಜೀವನಸೌಂದರ ಮತ್ತು ಸಾಹಿತ್ಯ'. 'ಜೀವನ ಸೌಂದರ್ಯ'—ವಿ.ಸೀ. ಅವರು ಸರಿಯಾಗಿಯೇ ಗುರ್ತಿಸಿರು ವಂತೆ ಡಿ.ವಿ.ಜಿ. ಅವರ ಸಾಹಿತ್ಯದ ಕೇಂದ್ರ ಆಶಯವೆನ್ನಬಹುದು. ಸಾಹಿತ್ಯವೇ ಆಗಲೀ, ಸಂಗೀತವೇ ಆಗಲೀ. ನೃತ್ಯವೇ ಆಗಲೀ, ಚಿತ್ರಕಲೆಯೇ ಆಗಲೀ, ವಿಜ್ಞಾನವೇ ಆಗಲೀ—ಅದರ ಉದ್ದೇಶ ಜೀವನಸೌಂದರ್ಯವನ್ನು ಕಾಪಾಡುವಂಥವಾಗಿರಬೇಕೆಂಬುದು ಡಿ.ವಿ.ಜಿ. ಅವರ ಖಚಿತವಾದ ನಿಲವಾಗಿತ್ತು. "ಕಾವ್ಯವು ಬರಿಯ ವಿನೋದ ಕ್ಕೋಸ್ಕರವಲ್ಲ, ಮನಃಪರಿಪಾಕಕ್ಕೋಸ್ಕರ...ಸಾಹಿತ್ಯವೆಂಬುದು ಜನಜೀವನವನ್ನು ಉನ್ನತಿಗೆತ್ತುವುದಕ್ಕೆ ಅವಶ್ಯವಾಗಿರುವ ಆಯುಧ. ದೇಶದಲ್ಲಿಯ ಎಲ್ಲ ಮತಗಳ, ಎಲ್ಲ ವರ್ಗಗಳ ಮತ್ತು ಎಲ್ಲ ಕಸುಬುಗಳ ಜನರಲ್ಲಿಯೂ ಜ್ಞಾನವನ್ನೂ ವಿವೇಕವನ್ನೂ ಬೆಳೆಸಿ, ಅವರ ಧ್ಯೇಯಗಳನ್ನು ಉನ್ನತಗೊಳಿಸಿ, ಅವರ ಲೌಕಿಕ ಯೋಗ್ಯತೆಯನ್ನು ಅಭಿವೃದ್ಧಿ ಪಡಿಸುವುದು ಸಾಹಿತ್ಯದ ಕೆಲಸ" (ಜೀವ ಸಾರ್ಥಕ್ಯ ದೀಪಿಕೆ : ಪುಟ 121), 'ತನ್ನ ಜನಕ್ಕೆ ಯಾವುದನ್ನು ತಿಳಿಸಿದರೆ ಅವರ ಜೀವನ ಉತ್ತಮವಾದೀತು, ಅವರಿಗೆ ಯಾವುದನ್ನು ತಿಳಿಯಪಡಿಸುವುದು ಆವಶ್ಯಕವೋ ಅದನ್ನು ಪ್ರಿಯವಾಗುವ ರೀತಿ ಯಲ್ಲಿ ತಿಳಿಸುವುದು ಕವಿಯ ಕರ್ತವ್ಯ' (ಶ್ರೀಕೃಷ್ಣ ಪರೀಕ್ಷಣಂ).

ಆದ್ದರಿಂದಲೇ ಡಿ.ವಿ.ಜಿ. ಅವರು ಹೀಗೆ ಹೇಳುತ್ತಾರೆ: '**ಸಾಹಿತ್ಯದಲ್ಲಿ ಪ್ರಕಾರ ನವೀನತೆಗಿಂತ ಮುಖ್ಯವಾದದ್ದು ವಿಷಯನವೀನತೆ**. ವಿಷಯನವೀನತೆ ಉಂಟಾಗಬೇಕಾದರೆ ಲೇಖಕರ ಮತ್ತು ಬೋಧಕರ ಅಂತಃಕರಣ ಕೋಶದಲ್ಲಿ ಪರಿ ಪರಿಯ ನೂತನ ಜ್ಞಾನಗಳೂ ನೂತನ ಭಾವಗಳೂ ತುಂಬಿರಬೇಕು...ಒಂದು ಹೊಸ ಸ್ವತಂತ್ರ ಬುದ್ಧಿಸಂಚಾರ. ಒಂದು ಹೊಸ ದೃಷ್ಟಿವಿಶಾಲತೆ. ಒಂದು ಹೊಸ ಜೀವನ ಕರ್ತವ್ಯ ಯೋಗ್ಯತೆ, ಒಂದು ಹೊಸ ಪ್ರಪಂಚ ಸಹಾನುಭೂತಿ—ಇವು ನಾವು ಬಯಸುವ ನವೀನತೆಯ ಲಕ್ಷಣಗಳು' (ಸಾಹಿತ್ಯಶಕ್ತಿ).

ಡಿ.ವಿ.ಜಿ. ಅವರಿಗೆ **ವಿಷಯನವೀನತೆ** ಮುಖ್ಯವೆನ್ನಿಸಿತೇ ಹೊರತು 'ಪ್ರಕಾರ ನವೀನತೆ' ಮುಖ್ಯವೆನ್ನಿಸಲಿಲ್ಲ. ಆದ್ದರಿಂದಲೇ ಅವರು ನಮಗೆ ಒಬ್ಬ ಜ್ಞಾನ ಪಿಪಾಸುವಿನಂತೆ ಕಾಣಿಸುತ್ತಾರೆಯೇ ಹೊರತು ಪ್ರಯೋಗಶೀಲ ಸಾಹಿತಿಯಂತೆ ಕಾಣಿಸುವುದಿಲ್ಲ. ನವೋದಯದ ಉಳಿದ ಕವಿಗಳಿಗಿಂತ ಡಿ.ವಿ.ಜಿ. ಅವರು ಭಿನ್ನ

ವಾಗುವುದು ಇಲ್ಲಿಯೇ. ಹೇಗೆ ಹೇಳಬೇಕೆಂಬುದಕ್ಕಿಂತ ಏನು ಹೇಳಬೇಕೆಂಬುದೇ ಅವರಿಗೆ ಮಹತ್ವವಾಗಿದ್ದಂತೆ ತೋರುತ್ತದೆ. "ಸಾಹಿತ್ಯದಲ್ಲಿ ಇದು ಹೊಸದು, ಇದು ಹಳೆಯದು ಎಂಬ ವಿವೇಚನೆ ಚರಿತ್ರಕಾರನಿಗೆ ತಕ್ಕದ್ದೇ ಹೊರತು ರಸಾಭಿಮಾನಿಗೆ ಬೇಕಾದ್ದಲ್ಲ. ಹಾಗೆಯೇ ಕವಿಯ **ವಾಕ್ಯವಿಧಾನ**ದ ಪ್ರಶ್ನೆಯೂ ಅಪ್ರಕೃತ. ಕವಿಯು ಮಾತನ್ನು ಹೇಗೆ ಜೋಡಿಸಿದ್ದರೆ ಏನು? ಅದರಿಂದ ಭಾವಸ್ಫೂರ್ತಿಯಾಯಿತೇ ರಸಾನುಭವವಾಯಿತೇ ?–ಎಂಬುದಷ್ಟೇ ಪ್ರಶ್ನೆ."

(ಬಾಹುಬಲಿ ವಿಜಯದ ಮುನ್ನುಡಿ)

ಇದು ಡಿ.ವಿ.ಜಿ. ಅವರಿಗೆ ಅಭಿವ್ಯಕ್ತಿ ಸಾಧ್ಯತೆಗಳ ಬಗ್ಗೆ, ರೀತಿಯ ಬಗ್ಗೆ— ಅಷ್ಟಾಗಿ ಆಸಕ್ತಿಯಿರಲಿಲ್ಲವೆಂಬುದನ್ನು ಸೂಚಿಸುತ್ತದೆ. 'ಪದಗಳಿಗಾಗಿ ಹುಡು ಕಾಡುವುದಕ್ಕೆ ಮೊದಲು ಅಭಿಪ್ರಾಯಗಳಿಗಾಗಿ ಚಿಂತಿಸಬೇಕು. ಗ್ರಂಥದಲ್ಲಿ ಗ್ರಂಥಿ ಇರಬೇಕು ಎಂದರೆ ಬುದ್ಧಿಗೆ ಕೆಲಸವಿರಬೇಕು. ಅದು ಒಂದು ಹೊಸ ಜ್ಞಾನವನ್ನು ನೀಡಬೇಕು' (ಜೀವನ ಸೌಂದರ್ಯ ಮತ್ತು ಸಾಹಿತ್ಯ).

—ಮೇಲಿನ ಡಿ.ವಿ.ಜಿ. ಅವರ ಆಲೋಚನೆಗಳನ್ನು ಗಮನಿಸಿದಾಗ ಅವರು ವಿಷಯ ಪ್ರತಿಪಾದನೆಗೆ ಕೊಟ್ಟ ಮಹತ್ವವನ್ನು. ಅದನ್ನು ಹೇಳುವ ರೀತಿಗೆ ಕೊಡಲಿಲ್ಲ ವೆಂಬುದನ್ನು ನಾವು ಕಾಣಬಹುದು. 'ಹೇಳುವ ವಿಷಯವು ಹೇಳುವ ರೀತಿಯನ್ನೂ ಒತ್ತಾಯಿಸುತ್ತದೆ'—ಎಂಬ ಬಗ್ಗೆ ಅವರು ಚಿಂತಿಸಲಿಲ್ಲವೆಂದಲ್ಲ. ಆದರೆ ಅದಕ್ಕೆ ಅವರು ನೀಡಬೇಕಾದ ಗಮನವನ್ನು ನೀಡಲಿಲ್ಲ.

ಹೀಗಾಗಿ ಡಿ.ವಿ.ಜಿ. ಅವರಿಗೆ ಭಾಷೆ—ಒಂದು ಪಾರದರ್ಶಕ ವಸ್ತು ಅಷ್ಟೆ. ವಿಚಾರಗಳನ್ನು ಸಂವಹನಪಡಿಸಲು ಇರುವ ಒಂದು ಸಾಧನ. ಇಲ್ಲಿಯೂ ಒಂದು ಮುಖ್ಯವಾದ ಸಂಗತಿಯನ್ನು ನಾವು ಗಮನಿಸಬೇಕು : ನವೋದಯ ಕಾವ್ಯ ಸಂದರ್ಭದ ಬಹುಜನ ಲೇಖಕರಲ್ಲಿ 'ಭಾಷೆ ಒಂದು ಪಾರದರ್ಶಕ' ಎಂಬ ಅಭಿಪ್ರಾಯವೇ ಇದ್ದಿತು. ಆದರೆ ಅನುಭವದ ಸಂವಹನೆಗೆ ಅದು ವಾಹಕವೆಂಬ ರೀತಿಯಲ್ಲಿ ಅವರಲ್ಲಿ ಅದು ಬಳಕೆಯಾಗಿದೆ. ಡಿ.ವಿ.ಜಿ. ಅವರಲ್ಲಿ ಭಾಷೆ ಅನುಭವದ ವಾಹಕವೂ ಅಲ್ಲ— ಅದು ವಿಚಾರವಾಹಕ. ಅನುಭವದ ಭಟ್ಟಿಯಿಳಿಸಿದ ಸಾರವನ್ನು ಹೇಳುವ ಒಂದು ಸಾಧನ.

ಡಿ.ವಿ.ಜಿ.ಯವರಲ್ಲಿ ಭಾವನೆಗಿಂತ ಬುದ್ಧಿ, ಸಂವೇದನೆಗಿಂತ ಕುಶಾಗ್ರಮತಿ— ಪ್ರಧಾನವಾಗಿ ಕಾಣಿಸುತ್ತದೆ. 'ಕಾವ್ಯವನ್ನು ಬರಿಯ ಕಣ್ಣೀರು ಕೇಕೆ ಜೊಲ್ಲುಗಳ ಕೆಸರು ತೊಪ್ಪೆಯಾಗಿಸದೆ, ಅದಕ್ಕೆ ಆಕಾರಸ್ಪಷ್ಟತೆಯನ್ನೂ ಅವಯವ ದೃಢತೆಯನ್ನೂ ಕೊಡುವ ಗಟ್ಟಿಯೆಲುಬು ಬುದ್ಧಿ' ಎಂದು ಅವರು ಹೇಳುವಾಗ ಕಾವ್ಯ ಬೌದ್ಧಿ- ಕಾಂಶವನ್ನು ಪಡೆದುಕೊಳ್ಳಬೇಕೆಂಬುದು ಒಪ್ಪತಕ್ಕುದಾದರೂ, ಕಾವ್ಯವಲ್ಲಿನ ಭಾವ- ನಾಂಶವನ್ನು ಅವರು ಲೇವಡಿ ಮಾಡುವ ಕ್ರಮ ಆ ಬಗೆಗೆ ಅವರಿಗಿರುವ ಮನೋ

ಭಾವವನ್ನು ಸೂಚಿಸುತ್ತದೆ. ಆದ್ದರಿಂದಲೇ ಡಿ.ವಿ.ಜಿ. ಅವರಿಗೆ **ಅನುಭವಕ್ಕಿಂತ** ಅನುಭವದಿಂದ ಕಲಿತ ಪಾಠ, **ಅದರ ಸಾರ** ಮುಖ್ಯವಾಯಿತು. 'ಮಂಕುತಿಮ್ಮನ ಕಗ್ಗ'—ಹುಟ್ಟಿಕೊಂಡದ್ದು ಈ ಹಿನ್ನೆಲೆಯಲ್ಲಿ. ನಾನು ಇಲ್ಲಿ ಡಿ.ವಿ.ಜಿ.ಯವರ ಕಾವ್ಯದ ಗುಣದೋಷಗಳನ್ನು ಕುರಿತು ಚರ್ಚಿಸುವುದಕ್ಕಿಂತ ಅವರ ಬರವಣಿಗೆಯ ಕ್ರಮದ ಬಗ್ಗೆ ನನ್ನ ಆಸಕ್ತಿಯಿದೆ,

ಕಾವ್ಯರಚನೆಯಲ್ಲಿ ಅನುಭವದ ಶೋಧ, ಉತ್ಕಟತೆ—ಡಿ.ವಿ.ಜಿ. ಅವರ ಕಾಳಜಿ ಅಲ್ಲವೇ ಅಲ್ಲ. ಅವರ ಸಾರವಷ್ಟೇ ಅವರಿಗೆ ಮುಖ್ಯ. ಆದ್ದರಿಂದಲೇ ಡಿ.ವಿ.ಜಿ. ಅವರಲ್ಲಿ ಉತ್ಕಟವಾದ ಭಾವತೀವ್ರತೆಯಾಗಲೀ. ಅದರ ಸಂದಿಗ್ಧತೆ, ಸಂಕೀರ್ಣತೆಗಳಾಗಲೀ ಕಾಣಿಸುವುದಿಲ್ಲ.

ಇದರಿಂದಾಗಿ ಡಿ.ವಿ.ಜಿ. ಅವರ ಕಾವ್ಯಶೈಲಿಯನ್ನು ಈ ಕೆಳಗಿನ ಅಂಶಗಳು ನಿರ್ಧರಿಸಿರುವಂತೆ ನನಗೆ ತೋರುತ್ತದೆ.

1. ಡಿ.ವಿ.ಜಿ. ಅವರ ನಿಶಿತವಾದ ವಿಚಾರಶಕ್ತಿ
2. ಅವರ ಸಾಮಾಜಿಕ ಆಸಕ್ತಿ
3. ಅನುಭವಗಳಿಗಿಂತ ಅದರ ಫಲಿತಗಳಿಗೆ ಅವರು ಕೊಡುವ ಪ್ರಾಮುಖ್ಯತೆ
4. ಅವರ ಬೌದ್ಧಿಕ ಪ್ರಖರತೆ
5. ಪತ್ರಿಕೋದ್ಯಮದ ಬರವಣಿಗೆ

ಈ ಜೀವನದ ಸೌಂದರ್ಯವನ್ನು ಕಾಪಾಡಿಕೊಳ್ಳುವುದೇ ಬಹಳ ಮುಖ್ಯವಾದುದು—ಎಂಬ ನಂಬಿಕೆಯಿಂದ ತಮ್ಮ ಎಲ್ಲ ಶಕ್ತಿಗಳನ್ನೂ ಅದನ್ನು '**ತಿಳಿಸಿಕೊಡುವ**' ಉದ್ದೇಶಕ್ಕೆ ಡಿ.ವಿ.ಜಿ. ಅವರು ಬಳಸಿಕೊಂಡುದರಿಂದ ಸಹಜವಾಗಿಯೇ ಅವರ ಕಾವ್ಯಶೈಲಿ 'ಮಂಕುತಿಮ್ಮನ ಕಗ್ಗ'ದ ಧಾಟಿಯನ್ನು ಹಿಡಿಯಿತು. ಕವಿಯಾಗುವುದಕ್ಕಿಂತ 'ಸಂತ'ನಾಗುವುದು ಅವರಿಗೆ ಪ್ರಿಯವಾಯಿತು.

ಈ ಸಂದರ್ಭದಲ್ಲಿ ಡಿ.ವಿ.ಜಿ. ಅವರೇ ಉಲ್ಲೇಖಿಸುವ ಮ್ಯಾಥ್ಯು ಆರ್ನಲ್ಡ್ ಕವಿಯ ಉಪಾಖ್ಯಾನವೊಂದನ್ನು ಸ್ಮರಿಸಿಕೊಳ್ಳಬಹುದು : 'ಇಟಲಿ ದೇಶದ ಕವಿಯೊಬ್ಬನು ಒಂದು ಹಬ್ಬದ ದಿವಸ ಜನರ ವಿನೋದ ಕೂಟವನ್ನು ನೋಡುವುದಕ್ಕೆಂದು ತನ್ನ ಹೆಂಡತಿಯೊಡನೆ ಊರ ಚೌಕಕ್ಕೆ ಬಂದನು. ಆಕೆ ಪ್ರಾಯದವಳು. ಸುಂದರಿ. ಉಡಿಗೆ ತೊಡಿಗೆಗಳೊಡನೆ ಸಿಂಗಾರವಾಗಿ ಬಂದಿದ್ದಳು. ಅವರು ಅಲ್ಲಿದ್ದ ಒಂದು ಮರದ ಹಲಗೆಯ ಜಗುಲಿಯ ಮೇಲೆ ಕುಳಿತುಕೊಂಡರು. ಆದರೆ ಅಕಸ್ಮಾತ್ತಾಗಿ ಆ ಜಗುಲಿಯ ಕೆಳಗಂಬವೊಂದು ಮುರಿಯಲು ಆ ಹಲಗೆಗಳು ಕುಸಿದು, ಅವುಗಳ ಮೇಲಿದ್ದ ಆ ಸುಂದರಿಯು ಉರುಳಿಬಿದ್ದು ಸತ್ತಳು. ಆಗ ಅಲ್ಲಿ ನೆರೆದ ಜನರು ಶವವನ್ನು ಪರೀಕ್ಷಿಸಿ ನೋಡುತ್ತಾರೆ—ಅದೇನು ವಿಚಿತ್ರ ! ಆಕೆಯ

ಸೊಗಸಾದ ಉಡುಪುಗಳ ಒಳಗಡೆ ಚರ್ಮಕ್ಕಂಟಿಕೊಂಡಿದ್ದುದು ವಿರಕ್ತಿಸೂಚಕವಾದ ನಾರುಮಡಿ ಅಥವಾ ಕಾವಿ. ಹೀಗಿರತಕ್ಕವಳು **ಕಾವ್ಯದೇವಿ.** ಮೇಲೆ ಅಲಂಕಾರ ಒನಪು ಒಯ್ಯಾರ ; ಒಳಗೆ ಚಿಂತೆ. ಪ್ರಜ್ಞೆ. ಶಮೆ.

ಇದು ಡಿ.ವಿ.ಜಿ. ಅವರ ಶೈಲಿಯನ್ನು ಸೊಗಸಾಗಿ ಪ್ರತಿಮಿಸುತ್ತದೆ. ಕಾವ್ಯ ಪರಿಕರಗಳನ್ನು ಡಿ.ವಿ.ಜಿ. ಚೆನ್ನಾಗಿ ಬಲ್ಲರು ; ಅವುಗಳನ್ನು ಅವಕಾಶವಿದ್ದಾಗ ಬಳಸಿಕೊಂಡೂ ಇದ್ದಾರೆ. ಆದರೆ ಅವೆಲ್ಲ—ಅನುಭವದ ಶೋಧಕ್ಕಲ್ಲ ; ಜೀವನಾನುಭವದ ಸಾರವನ್ನು ತಿಳಿಯಹೇಳುವುದಕ್ಕಾಗಿ ಮಾತ್ರ. ನಾನು ಮೊದಲೇ ಹೇಳಿದಂತೆ ಅನುಭವ ಡಿ.ವಿ.ಜಿ. ಅವರಿಗೆ ಮುಖ್ಯವಲ್ಲ ; ಅದರ ಫಲಿತದ ಬಗ್ಗೆ ಮಾತ್ರ ಅವರ ಆಸಕ್ತಿ. ಆದರೆ ನಿಜವಾದ ಕಾವ್ಯ ಅನುಭವದ ಗುದ್ದಾಟದೊಡನೆ ಮಾತ್ರ ಹುಟ್ಟುತ್ತದೆ.

ಡಿ.ವಿ.ಜಿ. ಅವರ ಈ ಮನೋಭಾವ ಹಾಗೂ ಶೈಲಿಗೆ ಸಂಸ್ಕೃತದ ಅವರ ಆಳವಾದ ತಿಳಿವಳಿಕೆಯೂ ನೆರವಿಗೆ ಬಂದಿತು. ಸುಭಾಷಿತ, ನೀತಿಶತಕ, ಅನ್ಯೋಕ್ತಿ—ಈ ಮಾದರಿಗಳನ್ನು ಅವರು ಔಚಿತ್ಯಪೂರ್ಣವಾಗಿ ಬಳಸಿಕೊಂಡರು. ತೆಲುಗಿನ ವೇಮನ, ಕನ್ನಡದ ಸರ್ವಜ್ಞ—ಹಿನ್ನೆಲೆಗಿದ್ದರು. ಈ ಎಲ್ಲವೂ ಹದವಾಗಿ ಕೂಡಿ ಬಂದು—ಮಂಕುತಿಮ್ಮನ ಶೈಲಿಯೊಂದು ರೂಪುಗೊಂಡಿತು.

ಇಲ್ಲಿ ಇನ್ನೂ ಒಂದು ಅಂಶವನ್ನು ಗಮನಿಸಬೇಕು : ಡಿ.ವಿ.ಜಿ.ಯವರ ಆಸಕ್ತಿ ಸಾಮಾನ್ಯ ಮನುಷ್ಯನ ಬದುಕನ್ನು ಉತ್ತಮಪಡಿಸುವ ಆಶಯವಿದ್ದಂಥದು. ಪಂಡಿತ ಮಂಡಳಿಯಾಗಲೀ, ವಿಮರ್ಶಕವೃಂದವಾಗಲೀ ಅವರ ಗಮನದಲ್ಲಿರಲಿಲ್ಲ. 'ಮಂಕುತಿಮ್ಮನ ಕಗ್ಗ'ದ ಮುನ್ನುಡಿಯಲ್ಲಿ ಅವರು ಹೀಗೆ ಹೇಳುತ್ತಾರೆ : "ಇದು ಪಂಡಿತರನ್ನೂ. ಪ್ರಸಿದ್ಧರನ್ನೂ. ಪುಷ್ಟರನ್ನೂ ಉದ್ದೇಶಿಸಿದ್ದಲ್ಲ ; ಬಹು ಸಾಮಾನ್ಯರಾದವರ ಮನೆಯ ಬೆಳಕಿಗೆ ಒಂದು ತೊಟ್ಟಿನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ." ಈ ಉದ್ದೇಶವೂ ಸಹ ಭಟ್ಟಿಯಿಳಿಸಿದ ಜೀವನಾನುಭವದ ಸಾರವನ್ನು ಸೂಕ್ತಿ ರೂಪದಲ್ಲಿ ಸಂಗ್ರಹವಾಗಿ. ಸರಳವಾಗಿ. ನೇರವಾಗಿ ಹೇಳುವ ವಿಧಾನಕ್ಕೆ ಅನುವು ಮಾಡಿಕೊಟ್ಟಿದೆಯೆನ್ನಿಸುತ್ತದೆ.

'ಮಂಕುತಿಮ್ಮನ ಕಗ್ಗ'—ಡಿ.ವಿ.ಜಿ. ಅವರ ಜನಪ್ರಿಯ. ಪ್ರಾತಿನಿಧಿಕ ಕೃತಿ. ಹೀಗಾಗಿ ಅಲ್ಲಿ ಅವರು ರೂಢಿಸಿಕೊಂಡಿರುವ ಶೈಲಿಯ ಬಗ್ಗೆ ನಾನು ಈವರೆಗೆ ವಿವರವಾಗಿ ಪ್ರಸ್ತಾಪಿಸಿದ್ದೇನೆ. 'ಉಮರನ ಒಸಗೆ'ಯಲ್ಲಿಯೇ ಡಿ.ವಿ.ಜಿ.ಯವರು ಈ ರೀತಿಯ ಪ್ರಯೋಗ ಮಾಡಿದರು. ಅದು 'ಮಂಕುತಿಮ್ಮನ ಕಗ್ಗ'ದಲ್ಲಿ ಅತ್ಯಂತ ಸಮರ್ಥವಾಗಿ ಬಳಕೆಯಾಗಿದೆ. ಉಳಿದ ಅವರ ಕಾವ್ಯವೆಲ್ಲವೂ ಬಹುಪಾಲು ಹಳಗನ್ನಡ, ನಡುಗನ್ನಡ ಛಂದೋರೂಪಗಳಲ್ಲಿಯೇ ರಚಿತವಾಗಿದೆ. ವೃತ್ತ. ಕಂದ, ಸೀಸಪದ್ಯ, ರಗಳೆ. ಷಟ್ಪದಿ—ಈ ಎಲ್ಲ ರೂಪಗಳನ್ನೂ ಡಿ.ವಿ.ಜಿ.ಯವರು ಲೀಲಾಜಾಲ

ವಾಗಿ, ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಡಿ.ವಿ.ಜಿ. ಅವರ ಭಾಷೆ—ಹಳಗನ್ನಡದಿಂದ ಆಧುನಿಕ ಕನ್ನಡದವರೆಗೆ ಓಡಾಡುತ್ತದೆ. 'ರೂಪ'ದ ಬಗ್ಗೆ ಅವರು ಅಷ್ಟು ಪ್ರಾಮುಖ್ಯ ಕೊಟ್ಟಿರಲಿಲ್ಲವೆನ್ನುವುದೇ ಇದಕ್ಕೆ ಕಾರಣವಾಗಿದೆ. 'ವನಸುಮ'—ಆಡುಮಾತಿಗೆ ತೀರ ಹತ್ತಿರವಾಗಿದ್ದು ಆಪ್ತವಾಗಿದ್ದರೆ, 'ಶಿವನ ಸಮುದ್ರ'ವೆಂಬ ಕವಿತೆ ವೃತ್ತ, ಕಂದ ರಗಳೆಗಳಲ್ಲಿ ರಚಿತವಾಗಿದೆ. ಎರಡೂ ರೀತಿಯ ಮಾದರಿಗಳನ್ನೂ ನಾವಿಲ್ಲಿ ಗಮನಿಸಬಹುದು :

ಮಾದರಿ 1 **ವನಸುಮ**

ವನಸುಮದೊಲೆನ್ನ ಜೀ-
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ ಹೇ ದೇವ!
ಜನಕೆ ಸಂತಸವೀವ
ಘನನು ತಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ

ಕಾನನದಿ ಮಲ್ಲಿಗೆಯು
ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ
ತಾನೆಲೆಯ ಮರೆಯಿರ್ದು
ದೀನತೆಯ ತೋರಿ ಅಭಿ-
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ

ಉಪಕಾರಿ ನಾನು ಎ-
ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು
ವಿಪುಲಾಶ್ರಯವನೀವ
ಸುಫಲ ಸುಮಭರಿತ ಪಾ
ದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು ॥

ಮಾದರಿ 2

ಗತಿಯಿಂದದ್ಭುತಮಂ । ಜನೋಪಕೃತಿಯಿಂದೌದಾರ್ಯಮಂ । ನಿತ್ಯಶು-
ದ್ಧತೆಯಿಂ ಶಾಂತಿಯನು । ಗೃಭಾಮವ ಶಿಲಾಸಿರ್ಘೇದದಿಂ । ಪರ್ವತ
ಚ್ಯುತಿಯಿಂ ರೌದ್ರವ । ತಣ್ಪಿನಿಂ ಪ್ರಿಯತೆಯಂ । ಗಾಂಭೀರ್ಯಮಂ ಘೋಷದಿಂ ।
ಸತತಂ ಬೋಧಿಸುತಿರ್ಪೆ ದೇವಿ ಸರಸೇ ಕಾವೇರಿ ಕಾವ್ಯಾಶ್ರಯೇ ॥

ಗಿರಿಯು ಕೆಲದಿ ಬನದ ನಡುವೆ। ಝರಿಯು ತೆರದಿ ಸುಳಿದು ಬರುತೆ
ತಲದ ಶಿಲೆಯುಸರಿದು ಕೊರೆದು। ಕೆಲದ ನೆಲವನರೆದು ಮುರಿದು।
ವಿಮಲ ಜಲದ ವಿಪುಲಧಾರೆ। ಯಮೃತ ಲಹರಿಯಂತೆ ತೋರೆ।
ದಣಿವ ಕಳೆಯುವೆಲರ ಬೀರಿ। ಮೃದುಲ ರವದಿ ಮುಂದೆ ಸಾರಿ।
ಅತ್ತಲಿತ್ತ ಸುಳಿದು ಸುತ್ತಿ। ಇತ್ತಲಿತ್ತ ಮೆಲ್ಲನೊತ್ತಿ।
ಅಲ್ಲಿ ಬಳುಕುತಿಲ್ಲಿ ಬಾಗಿ। ಅಲ್ಲಿ ಬಳಸುತಿಲ್ಲಿ ಸಾಗಿ।
ನೊರೆಯು ಸೇಸೆಗಳನು ಸೂಸಿ। ತೆರೆಯು ಚಮರಗಳನು ಬೀಸಿ।
ಬಾಲೆಯಂತೆ ನಲಿದು ಕುಣಿದು। ಕಾಳಿಯಂತೆ ಕನಲಿ ಮೊರೆದು।
....

ಕನ್ನಡ ನಾಡಿನ ಕುತುಕಂ
ಕನ್ನಡಿಗರ ಸಾಹಸಕ್ಕೆ ಕನ್ನಡಿ ಮೇಣೀ
ಕನ್ನಡಿಗರ ಭಾಗ್ಯದ ನಿಧಿ
ಯುನ್ನತಿಯಂ ಪಡೆದು ಬಾಳ್ಗೆ ಶಿವನ ಸಮುದ್ರಂ।

ಕೇತಕೀವನ' ಡಿ.ವಿ.ಜಿ. ಅವರ ಕವನಸಂಕಲನಗಳಲ್ಲಿಯೇ ವಿಶಿಷ್ಟವಾದುದು. ಇಲ್ಲಿಯೂ ಅವರು ಹಳಗನ್ನಡ ಹಾಗೂ ನಡುಗನ್ನಡ ಛಂದೋರೂಪಗಳನ್ನೇ ಬಳಸಿದ್ದಾರೆ. ಆದರೆ ಅವರ ಆಸಕ್ತಿ—ವೈಯಕ್ತಿಕವಾದುದು, ಆಧುನಿಕವಾದುದು. ಉಳಿದ ಸಂಕಲನಗಳಲ್ಲಿ 'ಸಾರ್ವಜನಿಕ ಧ್ವನಿ' ಕಂಡರೆ, ಇಲ್ಲಿನ ಪದ್ಯಗಳಲ್ಲಿ ಮೊದಲ ಬಾರಿಗೆಂಬಂತೆ 'ವೈಯಕ್ತಿಕ ಧ್ವನಿ' ಕೇಳಿಸುತ್ತದೆ. ಸಹಜವಾಗಿಯೇ ಕಾವ್ಯ ಭಾವ ಗೀತೆಯ ಧಾಟಿ ಪಡೆದಿದೆ. ಹರಿಕಾರನ ರೀತಿಗೆ ಬದಲಾಗಿ ಇಲ್ಲಿ ಮಾನವೀಯ ಸಂಬಂಧಗಳ, ಒಳತೋಟಿಗಳ ಚಿತ್ರಣ ಕಾಣಿಸುತ್ತದೆ.

ಎದೆಯ ಗೂಡಿನೊಳೇನೊ
　　ಗಲಭೆಯಾಗಿಹುದು
ವಿಧ ವಿಧದ ಹಕ್ಕಿಗಳು
　　ಚಿಲಿಗುಟ್ಟುತಿಹವು
ಹೊರಗೆ ಬಿಡಬೇಕಂತೆ
　　ಒಳಗೆ ಸೆಕೆಯಂತೆ
ಗರಿ ಬೀಸಬೇಕಂತೆ
　　ಕುಳಿರೆ ಜೋಮಂತೆ। (ಮೊದಲ ಮಾತು)

ಅಂತರಂಗದ ಒಳಗಿನ ದನಿಗಳು ಹೊರಹೊಮ್ಮುವ ತುಡಿತ ಇಲ್ಲಿ ಕಾಣಿಸುತ್ತದೆ. 'ನನಗೆ ಓದಲಿಕ್ಕೂ, ಯೋಚಿಸಲಿಕ್ಕೂ ಕೊಂಚ ಕೊಂಚವಾಗಿಯಾದರೂ ಬಿಡುವು ದೊರೆಯುತ್ತಿದ್ದ ಕಾಲವೊಂದಿತ್ತು. ಆ ಕಾಲದಲ್ಲಿ ಆಗಾಗ ಮನಸ್ಸಿಗೆ **ಭಾವನೆಗಳು** ಬರುತ್ತಿದ್ದದ್ದೂ ಉಂಟು. ಅವು ಬಂದಾಗ ಅವು ಹಾರಿಹೋಗುವುದಕ್ಕೆ ಮುನ್ನ ಅವುಗಳನ್ನು ಆಗ ತೋಚಿದ ಮಾತುಗಳಲ್ಲಿ, ಆಗ ಕೈಗೆ ಸಿಕ್ಕಿದ ಚೀಟಿಗಳಲ್ಲಿ, ಗುರುತು ಹಾಕುತ್ತಿದ್ದುದುಂಟು. ಅಂಥ ಚೀಟಿಗಳು ಈ ಪುಸ್ತಕವಾಗಿವೆ.' (ಮುನ್ನುಡಿ) ಎಂದು

ಡಿ.ವಿ.ಜಿ. ಅವರು ಹೇಳಿಕೊಂಡಿದ್ದಾರೆ. ಅವರ ಸಾರ್ವಜನಿಕ ಕ್ಷೇತ್ರದ ಆಸಕ್ತಿಯ ನಡುವೆ 'ಬಿಡುವು' ದೊರೆತಾಗ ಈ ಕವಿತೆಗಳು ರೂಪ ತಾಳಿವೆ. ಈ 'ಬಿಡುವು'— ಅವರ ಸ್ವಂತದ್ದು, ಖಾಸಗಿಯಾದುದು. ಆದ್ದರಿಂದಲೇ ಇಲ್ಲಿ ಕವಿತೆ ವೈಯಕ್ತಿಕ ಧ್ವನಿಯಾಗಿ ಕಾಣಿಸಿಕೊಂಡಿದೆ.

ಸದೆದು ರಾಗಂಗಳನು
ಕವಿತೆಯನು ಸುಟ್ಟು
ಎದೆಯ ಮಸಣವ ಮಾಡಿ
ತವಸಿಯೆನಿಸಿರಲೆ ?

ಕೆರಳಿ ರಾಗದ ಗಾಳಿ
ಬೀಸಿ ಹೃದಯದೊಳು
ಮುರಿಯೆ ಬಾಳಿನ ಬೇರ
ಗಾಸಿವಡುತಿರಲೆ? (ಪ್ರಶ್ನೆ)

ಮೊದಲ ಬಾರಿಗೆ ಡಿ.ವಿ.ಜಿ. ಅವರಿಗೆ ಇಂಥ ಸಮಸ್ಯೆ—ವೈಯಕ್ತಿಕ ಸಮಸ್ಯೆ ಕಾಡಿದೆ. ಇಂಥ ಕಡೆ ನಾವು ಕಾಣುವ ತೀವ್ರತೆಗೂ, ಇಲ್ಲಿ ಅವರು ಕೇಳುವ ಪ್ರಶ್ನೆಗೂ, 'ಮಂಕು ತಿಮ್ಮನ ಕಗ್ಗ'ದಲ್ಲಿ ಬರುವ ಪ್ರಶ್ನೆಗಳ ಸರಮಾಲೆಗೂ ಇರುವ ವ್ಯತ್ಯಾಸವೇ ಇಲ್ಲಿಯ ಹಾಗೂ ಅಲ್ಲಿಯ ಅವರ ಕಾವ್ಯಶೈಲಿಯ ವ್ಯತ್ಯಾಸವೂ ಆಗಿದೆ.

'ಸದಾ ಸಂಜೆ'—ಕವಿತೆಯಲ್ಲಿ ಕಾಣುವ ವಿಷಾದ ಡಿ.ವಿ.ಜಿ. ಅವರ ಒಟ್ಟು ಕಾವ್ಯವನ್ನೋದಿದಾಗ ವಿಶಿಷ್ಟವೆನ್ನಿಸುತ್ತದೆ.

ನೇಸರಿದ್ದೊಡದೇನು ?
ಪಗಲುಮೆನಗಲ್ಲ ;
ಮಬ್ಬು ಕವಿದೊಡದೇನು ?
ಇರುಳುಮೆನಗಲ್ಲ ;
ಎಲ್ಲ ವೇಳೆಗಳೆನಗೆ
ಸಂಜೆಯಾಗಿಹವು.

ಜಿ. ಎಸ್. ಆಮೂರರು ಇದನ್ನು Miltonic overtone ಎಂದು ಗುರ್ತಿಸುತ್ತಾರೆ. 'ಒಟ್ಟಿನಲ್ಲಿ ಈ ಪುಸ್ತಕ ಇಂಗ್ಲೀಷಿನ ಪ್ರಭಾವ ಹೆಚ್ಚಾಗಿರುವದರ ಪ್ರಯತ್ನ. ಮಹಾಜನರು ದಯತೋರಬೇಕು' (ಮುನ್ನುಡಿ. ಕೇತಕೀವನ) ಎಂದು ಡಿ.ವಿ.ಜಿ. ಕ್ಷಮಾಧಾಟಿಯಲ್ಲಿ* ಹೇಳಿರುವುದನ್ನು ಗಮನಿಸಿದರೆ ಆಧುನಿಕ ಶೈಲಿಗಿಂತ, ಪ್ರಾಚೀನ ರೂಪಗಳ ಬಗ್ಗೆಯೇ ಅವರ ಒಲವು ಗಾಢವಾಗಿದ್ದಿತು ಎಂದು ನಾವು ಅಭಿಪ್ರಾಯಪಡಬಹುದಾಗಿದೆ. ಆಧುನಿಕ ಪ್ರಕಾರಗಳ ಬಗ್ಗೆಯೇ ಅವರಿಗೆ ಒಂದು ರೀತಿಯ ಸಂಕೋಚ

---

* ಆ ಕಾಲದ ಎಲ್ಲ ಬರಹಗಾರರಂತೆ ಡಿ.ವಿ.ಜಿ.ಯವರ ಈ ನುಡಿಗಳು ವಿನಯ ಸೂಚಕ ಎಂದು ಭಾವಿಸ ಬೇಕೇ ಹೊರತು 'ಕ್ಷಮಾಧಾಟಿ' ಎಂಬಂತೆ ಗುರುತಿಸಬೇಕಿಲ್ಲವೇನೊ ! [ಸಂ.]

ಏದ್ದಂತೆ ಕಾಣಿಸುತ್ತದೆ. ಅಂಥ ಪ್ರಯತ್ನ ಮಾಡಿದಾಗಲೂ ಅವರು ಅರೆಮನಸ್ಸಿನಿಂದಲೇ ಪ್ರಯತ್ನಿಸಿದ್ದಿರಬೇಕು.

ಡಿ.ವಿ.ಜಿ.ಯವರು ಕವಿಸಹಜ ಮನೋಭಾವವುಳ್ಳವರು ಎಂಬುದಕ್ಕೆ ಅವರ ಕಾವ್ಯದಲ್ಲಿ ನಮಗೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಆದರೆ ಅವರು ಅದನ್ನು ಬೇಕೆಂದೇ ಮೀರಿನಿಂತು ಸಮಾಜಸುಧಾರಕನ ಪಾತ್ರವನ್ನು, ಸಂತನ ಧಾಟಿಯನ್ನು ತಮ್ಮ ವ್ಯಕ್ತಿತ್ವದ ಪ್ರಧಾನ ಅಂಶವನ್ನಾಗಿ ಮಾಡಿಕೊಂಡದ್ದು ಅವರ ಕಾವ್ಯಶೈಲಿಯನ್ನೂ ರೂಪಿಸಿದಂತೆ ತೋರುತ್ತದೆ. ಆದ್ದರಿಂದಲೇ 'ಮಂಕುತಿಮ್ಮನ ಕಗ್ಗ' ಅವರ ಪ್ರಾತಿನಿಧಿಕ ಸಂಕಲನವಾಗಿ, ಉಳಿದವು ಕಾವ್ಯ ದಾಖಲೆಗಳಾಗಿ ಮಾತ್ರ ಉಳಿದದ್ದು ಅನ್ನಿಸುತ್ತದೆ.

ಡಿ.ವಿ.ಜಿ. ಅವರ ಶೈಲಿಯ ಬಗ್ಗೆ ಮಾತನಾಡುವಾಗ ಗಮನಿಸಲೇಬೇಕಾದ ಮತ್ತೊಂದು ಸಂಗತಿ : ಅವರ ಸಂಗೀತ ಜ್ಞಾನ. ಇದನ್ನು ಪ್ರತ್ಯೇಕವಾಗಿಯೇ ಚರ್ಚಿಸಬಹುದಾದಷ್ಟು ವಿಸ್ತಾರವಾಗಿ ಅವರ ಕಾವ್ಯದಲ್ಲಿ ಇದು ಪ್ರಾಮುಖ್ಯತೆ ಪಡೆದುಕೊಂಡಿದೆ. ಆದರೆ ಇಲ್ಲಿಯೂ ಅವರು 'ಸಾಮಾನ್ಯ'ರನ್ನು ಗಮನದಲ್ಲಿರಿಸಿಕೊಂಡಿದ್ದೇನೆ ಎಂಬ ಬಗ್ಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. 'ಈ ಪುಸ್ತಕದಲ್ಲಿಯ ಹಾಡುಗಳು ಸಾಮಾನ್ಯವಾಗಿ ಎಲ್ಲರೂ ಹಾಡಿಕೊಳ್ಳಬಹುದಾದಂಥವು. ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯದವರೂ ಇವನ್ನು ಅಭ್ಯಾಸ ಮಾಡಿ ಸಾಧಿಸಿಕೊಳ್ಳಬಹುದು' (ಮುನ್ನುಡಿ, ಅಂತಃಪುರಗೀತೆ). ಆದರೆ ಇಲ್ಲಿ ಡಿ.ವಿ.ಜಿ.ಯವರು ಬಳಸಿಕೊಂಡಿರುವ ಭಾಷೆ, ಶೈಲಿ—ಸಾಮಾನ್ಯರಿಗೆ ಸುಲಭವಾಗಿ ಎಟುಕುವಂಥದಲ್ಲ ಎಂಬುದನ್ನು ಮಾತ್ರ ಇಲ್ಲಿ ಸೂಚಿಸಬಯಸುತ್ತೇನೆ.

'ಜೀವನಸೌಂದರ್ಯ ಮತ್ತು ಸಾಹಿತ್ಯ'—ಕೃತಿಯಲ್ಲಿ ಡಿ.ವಿ.ಜಿ.ಯವರು ಕವಿಗಳನ್ನು ಎರಡು ಗುಂಪು ಮಾಡುತ್ತಾರೆ :

"ಕಾವ್ಯವಿಷಯದ ದೃಷ್ಟಿಯಿಂದ ನೋಡಿದರೆ ಕವಿಗಳಲ್ಲಿ (1) ಸ್ವಾನುಭೂತಿ ಪ್ರೇರಿತರೆಂದೂ, (2) ಲೋಕಸಹಾನುಭೂತಿ ಪ್ರೇರಿತರೆಂದೂ ಎರಡು ಜಾತಿಗಳು ಏರ್ಪಡುತ್ತದೆ. ಮುಖ್ಯವಾಗಿ ತಮ್ಮ ಅಂತರಂಗದ ಭಾವಗಳನ್ನು, ಬಾಹ್ಯ ಪ್ರಪಂಚವನ್ನು ಗಣನೆಗೆ ತೆಗೆದುಕೊಳ್ಳದೆ—ಹೊರಪಡಿಸುವವರು ಮೊದಲನೆಯ ಜಾತಿಯವರು. ತಮ್ಮೊಳಗಿನ ಭಕ್ತಿಯನ್ನು, ಅಥವಾ ಅನುರಾಗವನ್ನು ಅಥವಾ ಉಲ್ಲಾಸವನ್ನು ಅಥವಾ ಯಾವುದೋ ಒಂದು ಜೀವಿತ ಸಮಸ್ಯೆಯನ್ನು—ಮುಖ್ಯವಾಗಿ ತಮ್ಮ ಆತ್ಮಸಂತುಷ್ಟಿಗಾಗಿ, ತಮ್ಮೆದೆಯ ಹೊರೆಯನ್ನಿಳಿಸಿಕೊಳ್ಳುವುದಕ್ಕಾಗಿ—ಹಾಡಿಕೊಳ್ಳುವವರು ಇವರು. ತಮ್ಮ ಆಂತರಿಕಾನುಭವಗಳೇನೆಂಬುದರ ಸೆಲೆಯನ್ನು ಅಷ್ಟಾಗಿ ತೋರದೆ ಸಕಲ ಮಾನವರ ಅನುಭವಕ್ಕೂ ದೊರೆಯಬಹುದಾದ ಜೀವಿತ ಚಿತ್ರಗಳನ್ನು ಚಿತ್ರಿಸುವವರು ಎರಡನೆಯ ಜಾತಿಯವರು."

ಡಿ.ವಿ.ಜಿ.ಯವರು ಎರಡನೆಯ ಗುಂಪಿಗೆ ಸೇರುವಂಥವರು.

ಡಿ.ವಿ.ಜಿ. ಅವರ ಶೃಂಗಾರ ಮೀಮಾಂಸೆ

('ಶೃಂಗಾರ ಮಂಗಳಂ' ಮತ್ತು 'ಕೇತಕೀವನ' ಕುರಿತಂತೆ)

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

"ಡಿ.ವಿ.ಜಿ.ಯವರ ಪದ್ಯಕೃತಿಗಳನ್ನು ಅನುಭವ ಸಂವೇದನೆಗಳ ಕಲಾತ್ಮಕ ಪುನಸ್ಸೃಷ್ಟಿ ಎನ್ನುವುದಕ್ಕಿಂತ ವಿಚಾರ ಚಿಂತನೆಗಳ ಕಾವ್ಯಾತ್ಮಕ ಅಭಿವ್ಯಕ್ತಿ ಎನ್ನುವುದು ಹೆಚ್ಚು ಉಚಿತ ಎನಿಸುತ್ತದೆ.

"'ಶೃಂಗಾರ ಮಂಗಳಂ' ಈ ಸಾಲಿಗೆ ಸೇರುವ ಒಂದು ವಿಶಿಷ್ಟ ಕೃತಿ. ಸತ್ಯ ಸೌಂದರ್ಯಗಳ ಸಂಬಂಧವನ್ನು, ಬದುಕಿನಲ್ಲಿ ಅವು ಪ್ರಕಟಗೊಳ್ಳುವ ರೀತಿಯನ್ನು, ಸೃಷ್ಟಿಯಲ್ಲಿ ಶೃಂಗಾರದ ಘನತೆ ಅನಿವಾರ್ಯತೆಗಳನ್ನು ಕುರಿತು ಇಲ್ಲಿ ನಡೆದಿರುವಷ್ಟು ಸೂಕ್ಷ್ಮವಾದ ಮತ್ತು ಮೇಲುಮಟ್ಟದ ಚಿಂತನೆ. ಅದರ ತರ್ಕಬದ್ಧ ಪ್ರತಿಪಾದನೆ ಕನ್ನಡದಲ್ಲಿ ಬೇರೆಲ್ಲಿಯೂ ನಡೆದಂತಿಲ್ಲ."

"'ಕೇತಕೀವನ'ದಲ್ಲಿ ಶೃಂಗಾರಸಂಬಂಧವಾದ ಕವಿತೆಗಳು ವಿಶೇಷವಾಗಿವೆ. ಜೀವ–ಸಾವು, ಹೂ, ಜಯಭಾರತಿ, ರಂಗಸೆಟ್ಟಿಯಂಥ ಪದ್ಯಗಳಿದ್ದೂ ವಿಶೇಷವಾಗಿ ಕಣ್ಣು ಸೆಳೆಯುವುವು ಶೃಂಗಾರಗೀತಗಳೇ. ಇವುಗಳ ಜೊತೆಗೆ ಕೀಟ್ಸ್, ಟೆನಿಸನ್, ಬ್ರೌನಿಂಗ್ ರಂಥ ಇಂಗ್ಲಿಷ್ ಕವಿಗಳ ಪದ್ಯಗಳ ಅನುವಾದಗಳೂ ಕೆಲವು ಇವೆ."

"ಡಿ.ವಿ.ಜಿ. ಭಗವದ್ಗೀತೆಗೆ 'ಜೀವನಧರ್ಮ ಯೋಗ' ಎಂಬ ವ್ಯಾಖ್ಯಾನ ಮಾಡಿದವರು. ಬದುಕನ್ನು ಬಾಳುವ ಬಗೆಯನ್ನು ಜೀವನ ಪರವಾದ ನಿಲುವನ್ನು ವೇದಾಂತ ಗ್ರಂಥಗಳಲ್ಲಿಯೂ ಪ್ರದರ್ಶಿಸಿದವರು. ಲೋಕವನ್ನು ಹಳಿಯದೆ ಅದು ದೈವದ ಆನಂದಾಭಿವ್ಯಕ್ತಿ ಎಂದು ಪ್ರತಿಪಾದಿಸುವ ಡಿ.ವಿ.ಜಿ. ತಾವು ಬರೆದ ಪದ್ಯ ಸಂಗ್ರಹಗಳಲ್ಲಿ ಹೆಚ್ಚಿನ ಕಾವ್ಯಪರಿಣತಿಯನ್ನು ಸಾಧಿಸಿರುವುದು, ಗವುನಾರ್ಹವೆನ್ನಿಸುವ ಭಾವಕಾವ್ಯವನ್ನು ಸೃಷ್ಟಿಸಿರುವುದು, ಬಾಳನ್ನು ಬಿಗಿಯಾಗಿ ಅಪ್ಪಿಕೊಂಡಂತೆ ತೋರುವ ಈ 'ಕೇತಕೀವನ' ಕವನ ಸಂಗ್ರಹದಲ್ಲಿಯೆ ಎನಿಸುತ್ತದೆ."

ಡಿ.ವಿ.ಜಿ.ಯವರು ರಚಿಸಿರುವ ಸಾಹಿತ್ಯ ಸಂಬಂಧವಾದ ಬರಹಗಳಲ್ಲೆಲ್ಲ ಪ್ರಾಣ ಪ್ರಾಯವಾದ ಅಂಶವೆಂದರೆ ಚಿಂತನೆ ಜಿಜ್ಞಾಸೆಗಳಿಗೆ ಸಂಬಂಧಿಸುವ ಅಂಶ. ಅವರ ಕಾವ್ಯ ಎಷ್ಟು ಭಾವನಾತ್ಮಕವಾದದ್ದೋ ಅದಕ್ಕಿಂತ ಹೆಚ್ಚು ವಿಚಾರಾತ್ಮಕವಾದದ್ದು. ಬೇಂದ್ರೆಯಂಥವರಲ್ಲಿ ಚಿಂತನೆ ಸಹ ಸಂವೇದನೆಯಾಗಿ ಪ್ರೈ ಪಡೆದರೆ ಡಿ.ವಿ.ಜಿ.ಯವರಲ್ಲಿ ಸಂವೇದನೆಯೂ ಚಿಂತನೆಯ ಕಿರೀಟ ತೊಟ್ಟು ಬರುತ್ತದೆ. ತಮ್ಮ ಚಿಂತನೆಗಳನ್ನು ಗದ್ಯಕ್ಕಿಂತ ಹೆಚ್ಚು ಬಿಕ್ಕಟ್ಟಾದ, ಭಾಷೆಯ ಬಗೆ ಬಗೆಯ ತಿರುವು ಮುರುವುಗಳಿಗೆ ಎಡೆ ಕೊಡುವ, ಸಂಕೀರ್ಣ ವಿನ್ಯಾಸದ ಪದ್ಯಮಾಧ್ಯಮದಲ್ಲಿ ಮಂಡಿಸುವ ಯತ್ನ ಡಿ.ವಿ.ಜಿ.ಯವರ ಕಾವ್ಯದ ಸ್ವರೂಪವನ್ನು ನಿರ್ಧರಿಸುವಲ್ಲಿ ಪ್ರಧಾನಾಂಶವಾಗುತ್ತದೆ ಎನ್ನಬಹುದು. ಅವರ ಮೊದಲ ಕಾವ್ಯ ಕೃತಿಯಾದ ನಿವೇದನವ ಆರಂಭದ ಪದ್ಯವೇ

"ಮೇಲೆ ನೋಡೆ ಕಣ್ಣ ತಣಿಪ
ನೀಲಪಟದಿ ವಿವಿಧರೂಪ
ಜಾಲಗಳನು ಬಣ್ಣಿಸಿರ್ಪ ಚಿತ್ರ ಚತುರನಾರ್
ಲೀಲೆಯಿಂದೆ ಮಾಸದಾ ವಿಚಿತ್ರವೆಸಪನಾರ್"

ಎಂಬ ಪ್ರಶ್ನಮೂಲವಾದ ಜಿಜ್ಞಾಸೆಯಿಂದ ಆರಂಭವಾಗುತ್ತದೆ. 'ಶ್ರೀರಾಮ ಪರೀಕ್ಷಣಂ', 'ಶ್ರೀಕೃಷ್ಣ ಪರೀಕ್ಷಣಂ' ಕೃತಿಗಳು ಪದ್ಯಕೃತಿಗಳಾದರೂ ರಾಮಾಯಣ ಭಾಗವತಗಳಲ್ಲಿ ಕಾಣಿಸಿಕೊಂಡ ಕೆಲವು ವಿವಾದಾತ್ಮಕ ಅಂಶಗಳನ್ನು ತರ್ಕಬದ್ಧವಾಗಿ ಚರ್ಚಿಸುತ್ತವೆ. ಅವರ ಪದ್ಯಕೃತಿಗಳಲ್ಲಿ ಅತ್ಯಂತ ಶ್ರೇಷ್ಠವೂ ಮತ್ತು ಜನಪ್ರಿಯವೂ ಆದ ಮಂಕುತಿಮ್ಮನ ಕಗ್ಗ ಕೂಡ ಅರ್ಥಗರ್ಭಿತವಾದ ಚಿಂತನೆಗಳನ್ನು ಪದ್ಯಮಾಧ್ಯಮದಲ್ಲಿ ನೀಡುವ ಕೃತಿಯಾಗಿದೆ. ಇಲ್ಲೆಲ್ಲ ಚರ್ಚೆ, ಜಿಜ್ಞಾಸೆ, ನೀತಿ ಬೋಧೆಗಳೇ ಪ್ರಧಾನವಾಗಿವೆ. ಅವು ಕಾವ್ಯಮಾಧ್ಯಮದ ಹಲವು ವಿಶಿಷ್ಟಾಂಶಗಳನ್ನು ತಮ್ಮ ಉದ್ದೇಶಕ್ಕೆ ಪೂರಕವಾಗಿ ಉಪಯೋಗಿಸಿಕೊಳ್ಳುತ್ತವೆ. ಲಯ, ಪ್ರಾಸ, ಅನುಪ್ರಾಸ, ಉಪಮೆ, ದೃಷ್ಟಾಂತ, ಮಾತಿನ ನಾಟಕೀಯ ನಡೆ ಇವುಗಳನ್ನು ಬಳಸುತ್ತ, ಕಾವ್ಯಸ್ವರೂಪವನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಷ್ಟೇ ದಕ್ಕಿಸಿಕೊಳ್ಳುತ್ತ ಸಾಗುವ ಈ ಕೃತಿಗಳಲ್ಲಿ ಒಂದರಿಂದೊಂದಕ್ಕೆ ಕೊಂಚ ತಾರತಮ್ಯವಿದ್ದರೂ ಎಲ್ಲವೂ ಒಟ್ಟಿನಲ್ಲಿ ಚಿಂತನಾತ್ಮಕ ಪದ್ಯ–ಬರೆಹಗಳೇ ಆಗಿವೆ. (ಡಿ.ವಿ.ಜಿ.ಯವರು ಭಗವದ್ಗೀತೆಗೆ ಹೊಸ ನೋಟದಿಂದ ಕೂಡಿದ ಒಂದು ಶ್ರೇಷ್ಠ ವ್ಯಾಖ್ಯಾನವನ್ನು ನೀಡಿದ್ದಾರೆ—ಎನ್ನುವುದೇ, ಅವರ ವ್ಯಕ್ತಿತ್ವ ಉಳಿದೆಲ್ಲಕ್ಕಿಂತ ಹೆಚ್ಚು ಚಿಂತನಶೀಲವಾದದ್ದು ಎನ್ನುವುದನ್ನು ತೋರಿಸುವಂತಿದೆ.) ಈ ಕಾರಣದಿಂದಾಗಿ ಡಿ.ವಿ.ಜಿ.ಯವರ ಪದ್ಯ ಕೃತಿಗಳನ್ನು ಅನುಭವ ಸಂವೇದನೆಗಳ ಕಲಾತ್ಮಕ ಪುನಸ್ಸೃಷ್ಟಿ ಎನ್ನುವುದಕ್ಕಿಂತ ವಿಚಾರ ಚಿಂತನೆಗಳ ಕಾವ್ಯಾತ್ಮಕ ಅಭಿವ್ಯಕ್ತಿ ಎನ್ನುವುದು ಹೆಚ್ಚು ಉಚಿತ ಎನ್ನಿಸುತ್ತದೆ.

'ಶೃಂಗಾರ ಮಂಗಳಂ' ಈ ಸಾಲಿಗೆ ಸೇರುವ ಒಂದು ವಿಶಿಷ್ಟಕೃತಿ. ಸತ್ಯ–ಸೌಂದರ್ಯಗಳ ಸಂಬಂಧವನ್ನು, ಬದುಕಿನಲ್ಲಿ ಅವು ಪ್ರಕಟಗೊಳ್ಳುವ ರೀತಿಯನ್ನು

ಸೃಷ್ಟಿಯಲ್ಲಿ ಶೃಂಗಾರದ ಘನತೆ ಅನಿವಾರ್ಯತೆಗಳನ್ನು ಕುರಿತು ಇಲ್ಲಿ ನಡೆದಿರುವಷ್ಟು ಸೂಕ್ಷ್ಮವಾದ ಮತ್ತು ಮೇಲುಮಟ್ಟದ ಚಿಂತನೆ, ಅದರ ತರ್ಕಬದ್ಧ ಪ್ರತಿಪಾದನೆ ಕನ್ನಡವಲ್ಲಿ ಬೇರೆಲ್ಲಿಯೂ ನಡೆದಂತಿಲ್ಲ. ಇವರಲ್ಲಿ ಆರು ಭಾಗಗಳಿದ್ದು ಅವುಗಳನ್ನು 1. ಪೀಠಿಕೆ, 2. ಜಗತ್ಸೃಷ್ಟಿ–ಮಹರ್ಷಿಸಾಕ್ಷ್ಯ. 3. ಜಗದ್ವಿಕಾಸ–ಮಹರ್ಷಿಸಾಕ್ಷ್ಯ. 4. ಸತ್ಯಸುಂದರ ತತ್ವ–ಕೀಟ್ಸನ ಸಾಕ್ಷ್ಯ, 5. ಪ್ರೇಮಾದ್ವೈತ–ಷೇಕ್ಸ್ಪಿಯರನ ಸಾಕ್ಷ್ಯ. 6. ವಿರಹಿಯ ಅನುಭವ–ಅನಾಮಧೇಯ ಸಾಕ್ಷ್ಯ ಎಂದು ಹೆಸರಿಸಲಾಗಿದೆ. ಇವೆಲ್ಲವೂ ಪದ್ಯರೂಪದಲ್ಲಿರುತ್ತ ಕೊನೆಯಲ್ಲಿ ಹತ್ತೊಂಬತ್ತು ಪುಟಗಳಷ್ಟು ಗದ್ಯ ಬರೆಹವಿದ್ದು ಅದನ್ನು ಎರಡು ಅನುಬಂಧಗಳಲ್ಲಿ ಕೊಡಲಾಗಿದೆ.

'ಜಗತ್ಸೃಷ್ಟಿ' ಭಾಗದಲ್ಲಿ ಸೃಷ್ಟಿಯ ಮೂಲ ಮತ್ತು ಸ್ವರೂಪವನ್ನು ಕುರಿತ ವಿವರವಿದೆ. ಈ ಭಾಗದಲ್ಲಿ ಕಾಣುವ ವಿಚಾರಗಳು ಉಪನಿಷತ್ ಋಷಿಗಳ ಮಾತಿನ ಆಧಾರ ಹಿಡಿದು ಬೆಳೆದವು. ಒಂದೇ ಆಗಿರುವ ಪರವಸ್ತು ಹೊರಳಿ ಎರಡಾದದ್ದು. ದೇಹದಲ್ಲಿ ಬೇರೆಯಾದರೂ ಎರಡೂ ಕೂಡಿದಾಗ ಮಾತ್ರ ನಿಜವಾಗಿ ಒಂದು ಎನಿಸುವಂತೆ ಅವುಗಳು ಮೈ ಪಡೆದದ್ದು, ರಾಗ ಭೋಗಗಳ ಅಪೇಕ್ಷೆ ಅವುಗಳನ್ನು ಸದಾ ಪರಸ್ಪರ ಸೆಳೆಯುವಂತಾದದ್ದು, ಈ ಶೃಂಗಾರ ಕಾಮವೇ ಸೃಷ್ಟಿಯ ನಿರಂತರತೆಗೆ ಕಾರಣವಾಗಿರುವುದು. ಇಂಥ ದರ್ಶನಾಂಶಗಳನ್ನು 'ಜಗತ್ಸೃಷ್ಟಿ–ಮಹರ್ಷಿಸಾಕ್ಷ್ಯ' ಭಾಗದಲ್ಲಿ ವಿಸ್ತರಿಸಲಾಗಿದೆ. ನಿರೂಪಣೆ ಅತ್ಯಂತ ತರ್ಕಬದ್ಧವಾಗಿದ್ದು ಖಚಿತೋಕ್ತಿಗೆ ಸೊಗಸಾದ ನಿದರ್ಶನ ಎನ್ನುವಂತಿದೆ. ಸೃಷ್ಟಿ ಮೈ ಪಡೆದ ರೀತಿಯನ್ನು ನಿರೂಪಿಸುವಲ್ಲಿ ಬರೆಹ ಉಳಿದೆಡೆಗಿಂತ ಹೆಚ್ಚು ಕಾವ್ಯಾತ್ಮಕವಾಗುತ್ತದೆ. ಅನೇಕ ಸಾಲುಗಳು ಸೂತ್ರವಾಕ್ಯಗಳೆಂದು ಕರೆಯಬಹುದಾದಷ್ಟು ವಿಚಾರಪೂರ್ಣವೂ, ಅರ್ಥಗಾಢವೂ, ಬಿಗಿಹೆಣಿಗೆಯುಳ್ಳ ಲಯಬದ್ಧ ಉಕ್ತಿಗಳೂ ಆಗಿವೆ; ನೆನಪಿಟ್ಟುಕೊಳ್ಳಬೇಕೆಂಬ ಅಪೇಕ್ಷೆ ಉಂಟಾಗುವಷ್ಟು ಆಕರ್ಷಕವಾಗಿವೆ.

ಜಗದ್ವಿಕಾಸ ಎಂಬ ಭಾಗವೂ ಪ್ರಾಚೀನ ಮಹರ್ಷಿಗಳ ದರ್ಶನವನ್ನೇ ಆಧರಿಸಿ ರೂಪುಗೊಂಡದ್ದು. ಆದರೆ ಮೂಲದ ಮಾತುಗಳನ್ನು ವ್ಯಾಖ್ಯಾನಿಸಿ ವಿಶದೀಕರಿಸುವಲ್ಲಿ ಡಿ.ವಿ.ಜಿ.ಯವರ ಚಿಂತನಶಕ್ತಿ, ಭಾರತೀಯ ದರ್ಶನಶಾಸ್ತ್ರದ ಸಂಬಂಧದಲ್ಲಿ ಅವರಿಗಿರುವ ಆಳವಾದ ಗ್ರಹಿಕೆ ಎರಡೂ ಕೂಡಿ ಕೆಲಸಮಾಡಿದೆ. ದರ್ಶನ ಶಾಸ್ತ್ರದ ಪ್ರೌಢ ಓದುಗರೂ ಸಹ ಮೂಲದ ಮಾತುಗಳಿಂದ ಇಷ್ಟೊಂದು ವಿವರವಾದ. ತರ್ಕಬದ್ಧವಾದ ಅರ್ಥವನ್ನು ಗ್ರಹಿಸುವುದು ಕಷ್ಟ. ಹಿಂದಿನ ಭಾಗದಲ್ಲಿ ಬಂದ ಹಲವು ಸಂಗತಿಗಳು ಇಲ್ಲಿ ಬೇರೆ ಮಾತುಗಳಲ್ಲಿ ಕೊಂಚ ಪುನರಾವೃತ್ತವಾದರೂ ಅಲ್ಲಿ ಕೇವಲ ಸ್ಪರ್ಶಿಸಿ ಬಿಟ್ಟಿದ್ದ ಹಲವು ಸಂಗತಿಗಳು ಇಲ್ಲಿ ಹೆಚ್ಚು ವಿವರವಾಗಿ ಬಂದಿವೆ; ಹೊಸ ಅಂಶಗಳೂ ಸೇರಿವೆ. ಪ್ರಾಸನಿರ್ಬಂಧವಿಲ್ಲದಿರುವ ಹದಿನೈದು ಸೀಸಪದ್ಯಗಳಲ್ಲಿ ಈ ಭಾಗದ ನಿರೂಪಣೆಯಿದೆ. ಕಂದಪದ್ಯಗಳನ್ನು ಮತ್ತು ಈ ಬಗೆಯ ಸೀಸಪದ್ಯಗಳನ್ನು ಡಿ.ವಿ.ಜಿ.ಯವರು ಬಹಳ ಬಿಕ್ಕಟ್ಟಾದ ಶೈಲಿಯಲ್ಲಿಯೂ

ಅರ್ಥಸ್ಪಷ್ಟತೆಗೆ ಎರವಾಗದಂತೆ ಬರೆಯುಬಲ್ಲರು. ಸಮುಚಿತವಾದ ಉಪಮೆಗಳು ಬಂದಿರುವ ಕಡೆ ಅವುಗಳ ಅರ್ಥವ್ಯಕ್ತಿ ಇನ್ನಷ್ಟು ಹೆಚ್ಚುತ್ತದೆ. ನಿದರ್ಶನಕ್ಕೆ ಈ ಕೆಳಗೆ ಕೊಟ್ಟಿರುವ ಒಂದೆರಡು ಸೀಸಪದ್ಯಗಳ ಮತ್ತು ಕಂದಪದ್ಯಗಳ ಕೆಲವು ಸಾಲುಗಳನ್ನು ನೋಡಬಹುದು :

ಸೌಂದರ್ಯ ಶೃಂಗಾರ ಸಿಂಧುಕಲ್ಲೋಲದಲಿ
ಸಿಲುಕಿ ಹೊರಳಾಡುತಿದೆ ಜೀವಕೋಟಿ
ಅವನಿವಳನಿವಳವನ ಹಿಂದಟ್ಟಿ. ಪರಿದಾಡಿ
ಘಳಿಗೆ ಘಳಿಗೆಗೆ ಗತಿಯು ಬೇರೆ ಮಾಡಿ
ಕಿಲ ಕಿಲ ನಗುತ್ತೊಮ್ಮೆ ಗಳಗಳ ಅಳುತ್ತೊಮ್ಮೆ
ಸುಳಿಗೊರ್ವಳೊರ್ವನನು ಸೆಳೆದು ನೂಕಿ
ಓಲಾಡಿ ತೇಲಾಡಿ ಮುಳುಗುತ್ತೆ ಮುಕ್ಕುತ್ತೆ
ಈಸಾಡಿ ಗಾಸಿಪಟ್ಟಿಲೆದು ದಣಿವರ್.

(ಜೀವಸಂಕ್ಷೋಭಣಂ)

ಸುಂದರಂ ಕುಹಕಮೇಂ, ಕಾಮನಂ ಕೊಲುವಮೇಂ.
ಯಮನ ಶರಣೆನುವಮೇಂ ನ್ಯಾಯಮೆಂತು ?

(ಕಾಮುಯುಮರುಪಕಾರ)

ಮಾರನಿಲ್ಲದ ಲೋಕ ನೀರಿಲ್ಲದ ಮೃಲ್ಲೋಕ
ಬರಿಯ ಬಿಡಿಬಿಡಿ ಮರಳ ಕಣಗಳೊಡ್ಡು.

(ಸಂಸಾರ ಮೂಲಂ)

ಕಡಲು ಪಿರಿದಾದೊಡೇಂ ? ಕಿರಿಮೀನೆ ಮಿಗಿಲಲ್ತೆ ?
ಮೀನಿಗಿರ್ಪೊಳ ಬೆಳಕು ಕಡಲಿಗಿಹುದೇಂ ?

(ಕಡಲಾಟದಲಸು)

ಪಿರಿಯರ್ ಕಟ್ಟಿದ ಮನೆಯಂ
ಮುರಿಯದೆ ವಿಸ್ತರಿಪರಲ್ತೆ ತತ್ಕುಲಜಾತರ್ ?
ಗುರುವಾಕ್ಯಾರ್ಥವ ನಾಮಾ-
ಪರಿ ಯೋಜಿಸಿಕೊಳುವುದಲ್ತೆ ನಮಗಿಹ-ಕಜ್ಜಂ ?

(ಕರಣೀಯಂ ಲೋಕಂ)

ಪಾಪದ ಮೂಲಂ ಚಿತ್ತ-
ವ್ಯಾಪಾರದೊಳಿಹುದು ದೇಹ ಕಾರ್ಯದೊಳಲ್ಲಂ.

(ತುಚ್ಛಂ ಜೀವನಮಲ್ಲಂ)

ತುಚ್ಛಂ ಜೀವನಮಲ್ಲಂ
ತುಚ್ಛಂ ಭೋಗೇಚ್ಛೆಯಲ್ತು ಮನಮುಚ್ಚಮಿರಲ್.

(ತುಚ್ಛಂ ಜೀವನಮಲ್ಲಂ)

ಜಗಮೇಂ ಬ್ರಹ್ಮದೆ ಭಿನ್ನಮೆ ?
ಚಿಗುರೆಲೆ ಹೂ ಬೇರೆಯೆಂಬೆಯೇಂ ಮರದಡಿಯಿಂ ?

(ಜೀವಸ್ನೇಹಾಭ್ಯಾಸಂ)

ಸತ್ಯ–ಸುಂದರ ತತ್ವ ಮತ್ತು ಪ್ರೇಮಾದ್ವೈತ ಎಂಬ ಮುಂದಿನ ಎರಡು ಭಾಗಗಳಿಗೆ ಡಿ.ವಿ.ಜಿ.ಯವರು ಕ್ರಮವಾಗಿ ಕೀಟ್ಸ್ ಮತ್ತು ಷೇಕ್ಸ್ಪಿಯರರ ಬರೆಹಗಳ ಸಾಕ್ಷ್ಯವನ್ನು ಬಳಸುತ್ತಾರೆ. ಕೀಟ್ಸ್ ಗ್ರೀಸ್ ದೇಶದ ಒಂದು ಚಿತಿಭಸ್ಮ ಕರಂಡವನ್ನು ಕುರಿತು ಬರೆದ **Ode on a Grecian Urn** ಎಂಬ ಕವಿತೆ ತುಂಬ ಪ್ರಸಿದ್ಧವಾಗಿದೆ. ಕರಂಡದ ಒಳಗಿರುವ ಭಸ್ಮ ಪ್ರತಿನಿಧಿಸುವ ಮೃತ್ಯುವಿನ ಅನಿವಾರ್ಯತೆ ಮತ್ತು ಕರಂಡದ ಹೊರಭಾಗದಲ್ಲಿರುವ ಸುಂದರ ಚಿತ್ರಗಳು ಪ್ರತಿ ನಿಧಿಸುವ ಜೀವನ ಸೌಂದರ್ಯ —ಈ ಎರಡು ಅಂಶಗಳೂ ಕಲೆತು ಕೀಟ್ಸ್‌ನ ಮನಸ್ಸಿನಲ್ಲಿ ಸೃಷ್ಟಿಸಿದ ಸಂವೇದನೆ ಅವನ ಕವನದಲ್ಲಿ ಸುಂದರವಾಗಿ ಧ್ವನಿತವಾಗಿದೆ. ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ, ಎಲ್ಲರೂ ತಿಳಿಯಬೇಕಾದ ತತ್ವ ಇದೊಂದೇ ಎಂದು ಕೀಟ್ಸ್ ಆ ಕವನದ ಮೂಲಕ ಸಾರಿದ್ದಾನೆ.

ಕೀಟ್ಸ್‌ನ ಸತ್ಯ ಸುಂದರ ತತ್ವವನ್ನು ಡಿ.ವಿ.ಜಿ. ಸಮರ್ಥವಾಗಿ ವ್ಯಾಖ್ಯಾನಿ ಸುತ್ತಾರೆ. ಸೌಂದರ್ಯ ತುಚ್ಛವಲ್ಲ, ಅದು ಸತ್ಯದ ಕಾಂತಿಕಿರಣ. ಮೃತ್ಯು ಬದುಕಿನ ಮೇಲೆ ಎಷ್ಟೇ ಬಗೆಯಲ್ಲಿ ದಾಳಿ ನಡೆಸಿದರೂ, ಅದನ್ನು ಅಳಿಸಲು ಯತ್ನಿಸಿದರೂ ಅದು ಜೀವನವನ್ನು ಹತ್ತಿಕ್ಕಲಾರದು. ಜೀವನ ಸೌಂದರ್ಯ ಅಭಿವ್ಯಕ್ತಗೊಳ್ಳುವ ವಸ್ತು ಬಿಂಬ ಪಾತ್ರಗಳನ್ನು (ಒಂದು ಕಾಲಾವಧಿಯ ನಂತರ) ಅದು ನಾಶ ಮಾಡ ಬಹುದಾದರೂ ಆ ಸೌಂದರ್ಯ ಬೇರೆ ವಸ್ತು ಬಿಂಬ ಪಾತ್ರಗಳ ಮೂಲಕ ಮತ್ತೆ ಮತ್ತೆ ಪ್ರಕಟಗೊಳ್ಳುತ್ತಲೇ ಹೋಗುತ್ತದೆ. ಈಶ್ವರ ಕಾಮನನ್ನು ಸುಟ್ಟ. ಆದರೆ ಗಿರಿಜೆಗೆ ಸೋಲುವುದರ ಮೂಲಕ ತಾನೇ ಕಾಮನಿಗೆ ಸೋತ. ಆದ್ದರಿಂದ ಸೌಂದರ್ಯ ಅದಮ್ಯವಾದದ್ದು. ಮೃತ್ಯು ಅದರೆದುರಿನಲ್ಲಿ ನಿಸ್ಸಹಾಯಕ.

ಈ ಸೌಂದರ್ಯ ತತ್ವಕ್ಕೆ ಹೊರತಾದ, ಒಂದು ರೀತಿಯಲ್ಲಿ ಅದಕ್ಕೆ ವಿರೋಧ ವಾದ ಇನ್ನೊಂದು ಸಿದ್ಧಾಂತಕ್ಕೂ ಭಸ್ಮಕರಂಡವೇ ಆಧಾರವಾಗಬಲ್ಲದು ಎಂದೂ ಡಿ.ವಿ.ಜಿ. ಸೂಚಿಸುತ್ತಾರೆ. ಅದು ವಿರಾಗಿಯೊಬ್ಬನ ದೃಷ್ಟಿಕೋನ. ಸೌಂದರ್ಯ ಶೃಂಗಾರಗಳು ಎಂದಾದರೂ ಮೃತ್ಯುವಿನ ತುತ್ತು. ಅವುಗಳ ಮಿತಿಯನ್ನು ತೋರಿಸು ವುದರ ಮೂಲಕ ಅವುಗಳಿಗೆ ಮರುಳಾಗಬೇಡಿ ಎಂಬ ಸಂದೇಶವೂ ಅದರಿಂದ ಹೊರಡಬಲ್ಲದು.

ಡಿ.ವಿ.ಜಿ.ಯವರು ಕಡೆಯಲ್ಲಿ ಎತ್ತಿ ಹಿಡಿಯುವ ತತ್ವ ಇವೆರಡಕ್ಕೂ ಭಿನ್ನ ವಾದದ್ದು. ಅದು ಎರಡರ ನಡುವಿನ ಸಮನ್ವಯ ತತ್ವ. ಯಮನೂ ಕಾಮನೂ ಸ್ಪರ್ಧಿಗಳಲ್ಲ, ಪರಸ್ಪರರ ಶಕ್ತಿಗಳನ್ನು ನಿಯಂತ್ರಿಸುವವರು. ಹಾಗೆಯೇ ಒಬ್ಬರು ಮತ್ತೊಬ್ಬರನ್ನು ಪೋಷಿಸುವವರು. ಯಮನಿಗೆ ಆಹಾರ ಒದಗಿಸುವವನು ಕಾಮ, ಕಾಮನಿಗೆ ಮತ್ತೆ ಲೋಕದಲ್ಲಿ ಎಡೆಮಾಡಿಕೊಡುವವನು ಯಮ. ಕಾಮೋತ್ತೇಜನ ಯಮಭೀತಿಯ ಅತಿರೇಕವನ್ನು ಮರೆಯಿಸುತ್ತದೆ ; ಮೃತ್ಯುಭಯದ ತೀವ್ರತೆಯನ್ನು ಕಡಿಮೆ ಮಾಡುತ್ತದೆ. ಹಾಗೆಯೇ ಕಾಮನ ಅತಿರೇಕವನ್ನು ಯಮಭಯ ತಡೆಯು

ತ್ತದೆ. "ಯಮನನ್ನು ಮರೆಯದ ಭೋಗ, ಕಾಮವನ್ನು ಜರೆಯದ ತ್ಯಾಗ—ಇದೇ ವಿವೇಕದ ದಾರಿ" ಎಂದು ಡಿ.ವಿ.ಜಿ. ಪ್ರತಿಪಾದಿಸುತ್ತಾರೆ.

'ಪ್ರೇಮಾದ್ವೈತ' ಭಾಗ ಹದಿನಾರು ತ್ರಿಪದಿ–ಚೌಪದಿ ಪದ್ಯಗಳ ಚಿಕ್ಕ ಭಾಗವಾಗಿದ್ದು ಅದು ಒಡಲೆರಡು, ಪ್ರೀತಿಯೊಂದು ಎನ್ನುವಂತೆ ನಡೆಯುವ ಬಾಳನ್ನು ಕುರಿತದ್ದು. ಷೇಕ್‌ಸ್ಪಿಯರ್ "ದಿ ಫೀನಿಕ್ಸ್ ಅಂಡ್ ದಿ ಟರ್ಟ್ಲ್" (The Phoenix and the Turtle) ಎಂಬ ಕವಿತೆಯಲ್ಲಿ ಫೀನಿಕ್ಸ್ ಪಕ್ಷಿಯನ್ನು ದಾಂಪತ್ಯ ಪ್ರೇಮದ ಆದರ್ಶವನ್ನಾಗಿ ಮಾಡಿ ತೋರಿಸಿದ್ದಾನಷ್ಟೆ. ಅದನ್ನು ಅನುಸರಿಸಿ ಗಂಡನ್ನು ಪಾರಿವಾಳವೆಂದೂ ಹೆಣ್ಣನ್ನು ಕ್ರೌಂಚಿಯೆಂದೂ ಸಂಕೇತ ಮಾಡಿಕೊಂಡು ಈ ಪದ್ಯಭಾಗವನ್ನು ಬರೆಯಲಾಗಿದೆ. ಷೇಕ್‌ಸ್ಪಿಯರ್‌ನ ಸಾನೆಟ್ಟುಗಳಲ್ಲಿ ಬರುವ ಪ್ರೇಮದ ಘನತೆಯನ್ನು ಸಾರುವ Let me not to the marriage of True mind admit impediments ಎಂಬ ಕವಿತೆಯನ್ನು ಡಿ.ವಿ.ಜಿ. ಇಲ್ಲಿ ನೆನಪಿಸಿಕೊಳ್ಳದಿರುವುದು ಮಾತ್ರ ಆಶ್ಚರ್ಯ.

'ವಿರಹಿಯ ಅನುಭವ' ಎಂಬ ಕಡೆಯ ಪದ್ಯಭಾಗ ಅನಾಮಧೇಯನೊಬ್ಬನ ಸಾಕ್ಷ್ಯದಿಂದ ಪುಷ್ಟಿಗೊಂಡದ್ದು. ಇದು ಮನ್ಮಥನ ಜಯಗೀತೆ ಎಂದೇ ಹೇಳಬಹುದು. ಈ ಪುಸ್ತಕದಲ್ಲಿ ಹೆಚ್ಚು ಕಾವ್ಯಾತ್ಮಕವಾದ ಸಾಲುಗಳಿರುವುದು ಈ ಭಾಗದಲ್ಲೇ. ಸೃಷ್ಟಿಯಲ್ಲಿ ಅಭಿವ್ಯಕ್ತಗೊಂಡು ಜೀವನನ್ನು ಸೆಳೆಯುವ ಸೌಂದರ್ಯಾಂಶವೆಲ್ಲದರಲ್ಲಿ ಮದನ ಹುದುಗಿರುವನೆಂದು ಹೇಳುವ ಈ ಭಾಗ ಅದಕ್ಕೆ ಒಂದು ಉದಾಹರಣೆ :

ಆಗಸದ ನೀಲದಲಿ ತಾರೆ ರವಿ ಶಶಿಗಳಲಿ
ಮೇಘದಲಿ ಮಿಂಚಿನಲಿ ಮಳೆಯ ತಣ್ಪಿನಲಿ
ಚಿಗುರಿನಲಿ ಮೊಗ್ಗಿನಲಿ ಹೂವಿನಲಿ ಹಣ್ಣಿನಲಿ
ಖಗದ ಮೈ ಬಾಗಿನಲಿ ಮೃಗದ ನೋಟದಲಿ
ಬಗೆಬಗೆಯ ದನಿಗಳಲಿ ಬಣ್ಣದಲಿ ಹೊಳಪಿನಲಿ
ನಗುವಿನಲಿ ನಲುಮೆಯಲಿ ಕನಿಕರಂಗಳಲಿ
ಸೊಗಸಿನಲಿ ಸಿಗ್ಗಿನಲಿ ಮುಳಿಸಿನಲಿ ಮುರುಕದಲಿ
ಜಗದಿ ಜೀವಕೆ ಜೀವದೆಲ್ಲ ಸೆಳೆತದಲಿ
ಸೊದೆಯಾಗಿ ಸವಿಯಾಗಿ ತಿರುಳಾಗಿ ಪುರುಳಾಗಿ
ಹುದುಗಿರುವೆ ರುಚಿಮೂಲ ಮದನ ಮಧುಶೀಲ

ಮದನನ ಅಗ್ಗಳಿಕೆಯನ್ನು ಹೀಗೆ ಕೊಂಡಾಡುವ ಈ ಭಾಗ—

ಜಯ ಜಯ ವಿಭೋಕಾಮ ಜಯ ಮೂರ್ತಿಮತ್ ಪ್ರೇಮ
ಜಯ ಚೇತನೋದ್ದಾಮ ಜಯ ಜೀವಧಾಮ

ಎಂಬ ಮದನ ಜಯಗೀತೆಯಾಗಿ ಮುಗಿಯುತ್ತದೆ.

ಸೌಂದರ್ಯವೆನ್ನುವುದು ಕೇವಲ ದೈಹಿಕವಾದದ್ದಲ್ಲ. ಭಾವನೆ ಕಲ್ಪನೆಗಳಿಂದ ಸಾಧಿತವಾಗುವ ಸೌಂದರ್ಯವೂ ಇದೆ. ಇದು ಸಾಹಿತ್ಯ ಮತ್ತು ಕಲೆಗಳ ಬಲದಿಂದ ಮನಸ್ಸು ಪಡೆಯಬಹುದಾದ ಆನಂದಕ್ಕೆ ಕಾರಣವಾದದ್ದು. ಹಾಗೆಯೇ ತತ್ತ್ವದ ಸೌಂದರ್ಯವೆನ್ನುವುದೂ ಇದೆ. ಇದರಿಂದ ದೊರಕುವ ಆನಂದ ಶಾಸ್ತ್ರಾನುಸಂಧಾನ ಸಂಶೋಧನೆಗಳ ಮೂಲಕ ಬರುವಂಥದು. ಇನ್ನು ವೇದಾಂತದ ಮತದಲ್ಲಿಯಂತೂ ಸತ್ಯ ಸೌಂದರ್ಯಗಳು ಪ್ರತ್ಯೇಕವೇ ಅಲ್ಲ. "ವಿಶ್ವಕರ್ತನ ಒಳಮೈ ಸತ್ಯ. ಹೊರಮೈ ಸೌಂದರ್ಯ. ಇದು ಜೀವನಧರ್ಮಕ್ಕೆ ಮೂಲಾಧಾರ. ಸತ್ಯವನ್ನು ಮರೆಯದೆ ಸೌಂದರ್ಯವನ್ನು ಭಜಿಸುವಾತನು ಸುಕೃತಜೀವಿ"—ಇದು ಶೃಂಗಾರ ಮಂಗಳ ಪ್ರತಿಪಾದಿಸುವ ವಿಚಾರ.

ಕೇತಕೀವನ 95 ಕವನಗಳಿಂದ ಕೂಡಿದ ಒಂದು ಸಂಗ್ರಹ. ಇದು ಪ್ರಕಟವಾದದ್ದು 1973ರಲ್ಲಿ. ಇದಕ್ಕಿಂತ ಮುಂಚೆ ಪ್ರಕಟವಾದ ತಮ್ಮ ಅನೇಕ ಪದ್ಯಕೃತಿಗಳಲ್ಲಿ ಕಂದಪದ್ಯಗಳಂಥ ಹಿಂದಿನ ಲಯವಿನ್ಯಾಸಗಳನ್ನು. ಹಳಗನ್ನಡ ಮತ್ತು ಸಂಸ್ಕೃತಗಳ ಹೆಚ್ಚಳವಿರುವ, ಸಮಾಸ ನಿಬಿಡವಾದ ಪಂಡಿತರಂಜಕ ಭಾಷಾಶೈಲಿಯನ್ನು ಬಳಸಿದ ಡಿ.ವಿ.ಜಿ. ಇಲ್ಲಿ ಹೆಚ್ಚು ಸರಳವಾಗಿ, ಹೊಸಗನ್ನಡ ಕವಿತೆ ಬಳಸಿದ ಮಟ್ಟುಗಳಲ್ಲಿ ಪದ್ಯರಚನೆ ಮಾಡಿದ್ದಾರೆ. ಅವರ ಹಿಂದಿನ ಪದ್ಯಕೃತಿಗಳಲ್ಲಿ 'ನಿವೇದನ'ವೊಂದರಲ್ಲಿ ಮಾತ್ರ ಕೆಲವು ಕಡೆ ಇಷ್ಟು ಸರಳವಾದ ಭಾಷೆಯ ಬಳಕೆ ಕಾಣುತ್ತದೆ. ಹೀಗಿದ್ದರೂ ಈ ಕೃತಿ ಹೊರಬರುವ ಸುಮಾರು ಇಪ್ಪತ್ತು ವರ್ಷಗಳಷ್ಟು ಹಿಂದೆಯೇ ಆರಂಭಗೊಂಡು ಕನ್ನಡದಲ್ಲಿ ದೃಢವಾಗಿ ಬೇರೂರಿದ್ದ ನವ್ಯಕಾವ್ಯಮಾರ್ಗದ ಹೊಸ ಅಭಿವ್ಯಕ್ತಿ ವಿಧಾನದ ಪರಿಚಯವೇ ಇಲ್ಲದಂತೆ ಡಿ.ವಿ.ಜಿ. ಬರೆಯುತ್ತಾರೆ. ಹೊಸ ರೀತಿಯನ್ನು ಅವರು ಬಳಸಬೇಕಿತ್ತೆಂದು ಈ ಮಾತಿನ ಅರ್ಥ ಅಲ್ಲ. ನವೋದಯ ಮಾರ್ಗದಲ್ಲಿಯೇ ರಚಿತವಾಗುವ ಬರೆಹವೂ ಸಹ ನವ್ಯಮಾರ್ಗದ ಪರಿಚಯವಿದ್ದಲ್ಲಿ ತನ್ನ ರೀತಿಯಲ್ಲಿಯೇ ಕೊಂಚ ವ್ಯತ್ಯಾಸಕ್ಕೆ ಒಳಪಡುವುದು ಅನಿವಾರ್ಯವಾಗುತ್ತದೆ. ಭಾಷೆ ಬೆಳೆದಂತೆ ಕವಿತೆಯ ಭಾಷಾಸ್ವರೂಪವೂ ಬದಲಾಗಬೇಕಾಗುತ್ತದೆ ಎಂದು ಡಿ.ವಿ.ಜಿ.ಯವರೇ ಹೇಳುತ್ತಾರೆ. "ಕನ್ನಡವು ಬೆಳೆಯುತ್ತಿರುವ ಭಾಷೆ, ಜನದ ಬಳಕೆಯ ಭಾಷೆ. ...ಇಂದಿನ ಜನರ ಬಳಕೆಯನ್ನು ಕೊಂಚ ಅಂಗೀಕರಿಸಿದಲ್ಲದೆ ವಾಕ್ಯಗಳು ಅರ್ಥವಾಗುವುದು ಕಷ್ಟ. ಕನ್ನಡದಲ್ಲಿ ಜನರಿಗೆ ಪದ್ಯದಲ್ಲಿ ಉತ್ಸಾಹ ಕಡಮೆಯಾಗಿರುವುದಕ್ಕೆ ಭಾಷೆಯ ಕಷ್ಟ ಒಂದು ಕಾರಣವಿರಬಹುದು"—ಇತ್ಯಾದಿ ಮಾತುಗಳನ್ನು ಡಿ.ವಿ.ಜಿ. ಮುನ್ನುಡಿಯಲ್ಲಿ ಬರೆದಿದ್ದಾರೆ. ಇದು ಅವರು ತಮ್ಮ ಪದ್ಯಶೈಲಿಯನ್ನು ಸರಳವಾಗಿಸಿಕೊಂಡದ್ದರ ಹಿನ್ನೆಲೆಯನ್ನು ಸೂಚಿಸುತ್ತದೆ. "ಅರ್ಥವಾಗದ ಭಾಷೆ ಅಗಿಯಲಾಗದ ಭೋಜ್ಯ" ಎಂಬ ಮಾತೂ 'ಧರ್ಮಶ್ರವಣ' ಎಂಬ ಇಲ್ಲಿಯ ಪದ್ಯವೊಂದರಲ್ಲಿ ಬರುತ್ತದೆ. ಹೀಗಿದ್ದೂ 'ಇಂದ್ರಿಯಜಯ' 'ಮಾರುತಿ'ಯಂಥ ಒಂದೆರಡು ಪದ್ಯಗಳಲ್ಲಿ ಡಿ.ವಿ.ಜಿ. ತಮ್ಮ ಹಳೆಯ ಶೈಲಿಗೇ ಮರಳಿದ್ದಾರೆ. ಕಂದವೃತ್ತಗಳನ್ನು ಅವರು ಬಿಟ್ಟುಕೊಟ್ಟಿದ್ದರೂ ಅವು ಇಲ್ಲಿ ಇಲ್ಲವೇ ಇಲ್ಲ ಎನ್ನುವಂತಿಲ್ಲ.

ಇಲ್ಲಿಯ ಹೆಚ್ಚಿನ ಪದ್ಯಗಳು ಇಂಗ್ಲಿಷ್ ಗೀತಗಳ ಭಾಷಾಶೈಲಿಗೆ ಸಮೀಪವಾಗಿವೆ ಎನ್ನಬಹುದು.

ಕೇತಕೀವನದಲ್ಲಿ ಶೃಂಗಾರ ಸಂಬಂಧವಾದ ಕವಿತೆಗಳು ವಿಶೇಷವಾಗಿವೆ. ಜೀವ-ಸಾವು, ಹೂ, ಜಯಭಾರತಿ, ರಂಗಸೆಟ್ಟಿಯಂಥ ಪದ್ಯಗಳಿದ್ದೂ ವಿಶೇಷವಾಗಿ ಕಣ್ಣು ಸೆಳೆಯುವುವು ಶೃಂಗಾರಗೀತಗಳೇ. ಇವುಗಳ ಜೊತೆಗೆ ಕೀಟ್ಸ್, ಟೆನಿಸನ್, ಬ್ರೌನಿಂಗ್‌ನಂಥ ಇಂಗ್ಲಿಷ್ ಕವಿಗಳ ಪದ್ಯಗಳ ಅನುವಾದಗಳೂ ಕೆಲವು ಇವೆ.

ಶೃಂಗಾರಗೀತಗಳೇ ಅಲ್ಲದೆ ಇತರ ಪದ್ಯಗಳೂ ಸೇರಿ ಈ ಕೃತಿ ಡಿ.ವಿ.ಜಿ.ಯವರ ಜೀವನಪರವಾದ, ಲೋಕಭೋಗಪರವಾದ ನಿಲುವನ್ನು ಮಂಡಿಸುತ್ತವೆ; 'ತುಚ್ಛಂ ಜೀವನಮಲ್ಲಂ ತುಚ್ಛಂ ಭೋಗೇಚ್ಛೆಯಲ್ತು' ಎಂದು ಅವರು 'ಶೃಂಗಾರ ಮಂಗಳ'ದಲ್ಲಿ ಹೇಳುವ ಮಾತನ್ನು ಎತ್ತಿಹಿಡಿಯುತ್ತವೆ. ಮೋಹ ಯಕ್ಷಿಣಿಗೆ. ಒಂದು ಕಾಗದ, ಮೋಹ ವಿಲಾಸ, ಇದನು ನೀನೊಲ್ಲದಿಹೆಯಾ, ಚೆಲುವಿದ್ದರೇನು, ಬೆಂಕಿಯಾಟ ಮೊದಲಾದ ಕವಿತೆಗಳಲ್ಲಿ ಸ್ತ್ರೀ ಸೌಂದರ್ಯದ ಪ್ರಶಂಸೆ, ಅನುರಾಗಗಳು ತೀವ್ರ ರೀತಿಯಲ್ಲಿ ವ್ಯಕ್ತವಾಗಿವೆ. ಆದಕ್ಕನುಗುಣವಾಗಿ ಕವಿತೆಯ ಭಾಷೆ ಲಯಗಳೂ ಸರಳವಾಗುತ್ತವೆ, ಸಹಜವಾಗುತ್ತವೆ ಮತ್ತು ಇತರ ಪದ್ಯಗಳಿಗಿಂತ ಅಭಿವ್ಯಕ್ತಿ ಹೆಚ್ಚು ಹರಿತವಾಗುತ್ತದೆ.

ದೇವಿಯೆಂದೆ
    ನಿನ್ನನೆನ್ನ
ಜೀವವೆಂದೆ
    ಹಿಗ್ಗಿದೆ
ರಾಣಿಯೆಂದೆ
    ನಿನ್ನನೆನ್ನ
ಪ್ರಾಣವೆಂದೆ
    ಉಬ್ಬಿದೆ

ಎಂಬ ಭಾಗವಾಗಲೀ—

ದಯೆಯ ಯಾಚಿಸಿದವಗೆ
    ನಯ ತೋರೆಯೇಕೆ ?
ಮನ್ನಣೆಯು ಸಲುವ ಕಡೆ
    ಕಣ್ಣು ಕಿಡಿಯೇಕೆ ?
ನಗುನುಡಿಯ ನುಡಿವ ಕಡೆ
    ಮೊಗ ಖಡ್ಗವೇಕೆ ?
ಇಬ್ಬರೊಂದಾದ ಕಡೆ
    ಹುಬ್ಬುಗಂಟೇಕೆ ?

ಎಂಬ ಸಾಲುಗಳಾಗಲೀ ಡಿ.ವಿ.ಜಿ.ಯವರ ಹಿಂದಿನ ಪದ್ಯಶೈಲಿಗಿಂತ ಇಲ್ಲಿಯ ಶೈಲಿ ಎಷ್ಟು ಭಿನ್ನವಾಗಿದೆ ಎನ್ನುವುದನ್ನು ಸೂಚಿಸುತ್ತವೆ. ಇಲ್ಲಿಯ ಒಂದೆರಡು ಶೃಂಗಾರ ರಸದ ಕವಿತೆಗಳು ಪ್ರಾಮಾಣಿಕವಾದ ತುಡಿತಗಳಿಂದ ಹರಿತವಾದ ಅಭಿವ್ಯಕ್ತಿಯಿಂದ ಕೂಡಿದ್ದು ನವೋದಯ ಕಾವ್ಯಶೈಲಿಯ ಗಣನೀಯ ಕವಿತೆಗಳ ವರ್ಗಕ್ಕೆ ಸೇರುವಂಥ ವೆನಿಸುತ್ತವೆ. ಕೋಟೆಗಲ್ಲಿನ ರಾಣಿ, ಶ್ಯಾಮಸುಂದರಿ ಎಂಬ ಎರಡು ಸ್ಮೃತಿಚಿತ್ರ ಗಳನ್ನು ಈ ಮಾತಿಗೆ ನಿದರ್ಶನವಾಗಿ ನೋಡಬೇಕು.

ಯಾರಮನೆ ಹೆಣ್ಣವಳಃ ? ಯಾರುಣುವ ಹಣ್ಣು
ಏನು ನಗುವಗಲ ಮೊಗವೇನರಳುಗಣ್ಣು
ಬಿಳುಪಲ್ಲ ಮೈಬಣ್ಣ ಕೆಂಪಲ್ಲ ಮಸಕು
ತೆಳುಹೊಗೆಯ ನಸುಮಸಕು, ಇವಳಿಗದೆ ಸೊಬಗು

ಹೀಗೆ ಸೊಗಸಾಗಿ ಹರಿಯತೊಡಗುವ ಕವಿತೆಯಲ್ಲಿ ಕುರಿಚು, ಪೆರ್ಚು, ಪಾರು, ಪಸಿರೆಲೆಗಳಂಥ ಹಳೆಯ ರೂಪಗಳ ಬದಲು ಹೊಸ ಶಬ್ದರೂಪಗಳೇ ಇದ್ದಿದ್ದಲ್ಲಿ ಅದರ ಸೊಗಸು ಇನ್ನೂ ಹೆಚ್ಚುತ್ತಿತ್ತು ಎನಿಸುತ್ತದೆ. ಭಾವತೀವ್ರವಾದ ಕವಿತೆಗಳ ಜೊತೆಗೇ ಈ ಸಂಕಲನದಲ್ಲಿ ಮನುಷ್ಯ–ನದಿ, ಸಂದೇಹಸೂಕ್ತಗಳಂಥ ಚಿಂತನ ಪ್ರಧಾನವಾದ ರಚನೆಗಳೂ ಇವೆ.

ಡಿ.ವಿ.ಜಿ. ಭಗವದ್ಗೀತೆಗೆ ಜೀವನಧರ್ಮಯೋಗ ಎಂಬ ವ್ಯಾಖ್ಯಾನ ಮಾಡಿದವರು. ಬದುಕನ್ನು ಬಾಳುವ ಬಗೆಯನ್ನು, ಜೀವನಪರವಾದ ನಿಲುವನ್ನು ವೇದಾಂತ ಗ್ರಂಥದಲ್ಲಿಯೂ ದರ್ಶಿಸಿದವರು. ಲೋಕವನ್ನು ಹಳಿಯದೆ ಅದು ದೈವದ ಆನಂದಾಭಿವ್ಯಕ್ತಿ ಎಂದು ಪ್ರತಿಪಾದಿಸುವ ಡಿ.ವಿ.ಜಿ. ತಾವು ಬರೆದ ಪದ್ಯಸಂಗ್ರಹ ಗಳಲ್ಲಿ ಹೆಚ್ಚಿನ ಕಾವ್ಯಪರಿಣತಿಯನ್ನು ಸಾಧಿಸಿರುವುದು, ಗಮನಾರ್ಹವೆನ್ನಿಸುವ ಭಾವ ಕಾವ್ಯವನ್ನು ಸೃಷ್ಟಿಸಿರುವುದು ಬಾಳನ್ನು ಬಿಗಿಯಾಗಿ ಅಪ್ಪಿಕೊಂಡಂತೆ ತೋರುವ ಈ 'ಕೇತಕೀವನ' ಕವನ ಸಂಗ್ರಹದಲ್ಲಿಯೇ ಎನಿಸುತ್ತದೆ.

ಗೀತ ಶಾಕುನ್ತಲ

ವರದರಾಜರಾವ್

ಡಿ.ವಿ.ಜಿ. ಅವರ 'ಗೀತ ಶಾಕುನ್ತಲ' ವನ್ನು ಕುರಿತ ಡಾ॥ ಜಿ. ವರದರಾಜ ರಾವ್ ಅವರ ಲೇಖನ ಕೇವಲ ಪರಿಚಯಾತ್ಮಕ ಇಲ್ಲವೆ ಸಮೀಕ್ಷಾ ಲೇಖನವಾಗಿರದೆ ವಿಮರ್ಶಾತ್ಮಕವೂ ತೌಲನಿಕವೂ ಆದ ಪಾಂಡಿತ್ಯಪೂರ್ಣ ಲೇಖನವಾಗಿದೆ. ಲೇಖಕರು 'ಶಾಕುಂತಲ'ವನ್ನು ಕುರಿತಂತೆ ಗಯಟೆ ಕವಿಯ ಪ್ರಸಿದ್ಧವಾದ ಉಕ್ತಿಯಿಂದ ತೊಡಗಿ. ಬಸವಪ್ಪಶಾಸ್ತ್ರಿಗಳ ಶಾಕುಂತಲಾನುವಾದ, ಎ. ಆರ್. ಕೃ. ಎಸ್. ವಿ. ರಂಗಣ್ಣ, ವಿ.ಸೀ. ಇವರುಗಳ ವಿಮರ್ಶೆಯ ಬೆಳಕಿನಲ್ಲಿ ಡಿ.ವಿ.ಜಿ. ಅವರ 'ಗೀತ' ಗಳನ್ನು ಕಾಳಿದಾಸನ ಶ್ಲೋಕಪಂಕ್ತಿಗಳ ಜೊತೆಗಿಟ್ಟು ಪರೀಕ್ಷಿಸಿ ಅವುಗಳ ಧ್ವನಿರಮ್ಯತೆಯನ್ನು ಮನಗಾಣಿಸಿದ್ದಾರೆ. 'ಶಾಕುಂತಲ ನಾಟಕದ ಪರಿಚಯವಿಲ್ಲದೆ ವ್ಯಾಖ್ಯಾನರೂಪದ ತಮ್ಮ ಗೀತಗಳ ಆಶಯೇಂಗಿತಗಳನ್ನು ಗ್ರಹಿಸುವುದು ಕಷ್ಟಸಾಧ್ಯ. ಆದ್ದರಿಂದ ಓದುಗರು ಬಸವಪ್ಪಶಾಸ್ತ್ರಿಗಳ ಅನುವಾದವನ್ನಾದರೂ ಓದಿಕೊಂಡಿದ್ದರೆ ಮೇಲು' ಎಂಬ ಡಿ.ವಿ.ಜಿ. ಅವರ ಕೋರಿಕೆಯನ್ನು ಗಮನಿಸಿ. ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದ ಕಲಾಕರ್ಮದ ಮಹೋನ್ನತಿಯನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಅವನಿಗೆ ಕಥಾವಸ್ತುವನ್ನು ಒದಗಿಸಿದ ವ್ಯಾಸಭಾರತದ ಶಾಕುನ್ತಲೋಪಾಖ್ಯಾನದ ಕಥಾಸಂಗ್ರಹವನ್ನು ತಿಳಿಸಿ, ಕಾಳಿದಾಸನ ನಾಟಕಕಥಾಸಾರ ಸಂಗ್ರಹವನ್ನು ಅಂಕ ಅಂಕಾನುಸಾರವಾಗಿ ಪರಿಚಯಿಸಿಕೊಟ್ಟು, ಲೇಖಕರು ಡಿ.ವಿ.ಜಿ. ಅವರ ಗೀತಗಳನ್ನು ವಿಮರ್ಶಿಸಿದ್ದಾರೆ; ಅಲ್ಲಲ್ಲಿ ಅವರ ರಚನೆಗಳ ಸೊಗಸನ್ನು ಸವಿಗಾಣಿಸುವುದರ ಜೊತೆಗೆ ಅವುಗಳ ಇತಿಮಿತಿಯನ್ನೂ ಕೊರತೆಯನ್ನೂ ಅನೌಚಿತ್ಯಗಳನ್ನೂ ಕೂಡ ಸೂಚಿಸಿದ್ದಾರೆ. ಪ್ರಾಮಾಣಿಕ ವಿಮರ್ಶೆಗೆ ಮಾದರಿಯಾಗಿದೆ ಈ ಲೇಖನ.

Wouldst thou the young years blossoms
And the fruits of its decline
And all by which the soul is charmed
Enraptured, feasted and fed,
Woulds't thou the Earth and Heaven itself
in one sole name combine ?
I name thee, oh, Shakuntala and all at once is said.

—Goethe

೧

ಮಹಾಕವಿ ಕಾಳಿದಾಸನು ಅಮೋಘವಾದ ಕಾವ್ಯಗಳನ್ನಲ್ಲದೆ, ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ ಮತ್ತು ಅಭಿಜ್ಞಾನ ಶಾಕುಂತಲ ಎಂಬ ರಸೋತ್ಕರ್ಷವಾದ ನಾಟಕಗಳನ್ನೂ ಬರೆದಿರುತ್ತಾನೆ. ಇವುಗಳಲ್ಲಿ ಆತನ 'ಅಭಿಜ್ಞಾನ ಶಾಕುಂತಲ'ಕ್ಕೆ ದೊರೆತಿರುವ ಲೋಕಪ್ರಸಿದ್ಧಿಯನ್ನು ಕಂಡರೆ ಯಾರಿಗಾದರೂ ಹೆಮ್ಮೆಯಾಗದಿರದು. ಈ ನಾಟಕ ಭಾರತೀಯ ದೇಶಭಾಷೆಗಳಲ್ಲಿ ಮೇಲಿಂದ ಮೇಲೆ ಅನುವಾದಗಳಾಗಿರುವುದು ಹಾಗಿರಲಿ; ಬಹಳ ಹಿಂದೆಯೇ ಪ್ರಮುಖ ಪಾಶ್ಚಾತ್ಯ ಭಾಷೆಗಳಲ್ಲಿಯೂ ಅನುವಾದವಾಗಿರುವುದು ಅತಿಶಯವೇ ಸರಿ ! ಜರ್ಮನ್ ಭಾಷೆಯಲ್ಲಿ ಸುಪ್ರಸಿದ್ಧ ಕವಿ ಗಯಟೆ ಈ ನಾಟಕವನ್ನು ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯ ಬಹುಮಟ್ಟಿಗೆ ಎಲ್ಲರಿಂದಲೂ ಮಾನ್ಯವಾಗಿದೆ.

ಗಯಟೆ ಹೇಳಿರುವಂತೆ, ಈ ನಾಟಕ "ತರುಣ ವತ್ಸರದ ಪುಷ್ಪ, ಪರಿಣತ ವತ್ಸರದ ಫಲ; ಆತ್ಮವನ್ನು ಆಕರ್ಷಿಸಿ, ಆನಂದಗೊಳಿಸಿ ಸಂತೃಪ್ತಿಪಡಿಸುವ ಸರ್ವ ಸಂಪತ್ತು; ಸ್ವರ್ಗ ಮರ್ತ್ಯಗಳ ಸಮಾಗಮ" ಎಂಬ ಪ್ರಶಂಸೆ ಒಪ್ಪತಕ್ಕುದು. ಕಣ್ವಾಶ್ರಮದಲ್ಲಿ ಅನಾಘ್ರಾತ ಪುಷ್ಪದಂತಿದ್ದ ಶಕುಂತಲೆ ದುಷ್ಯಂತನನ್ನು ವರಿಸಿ, ಅನೇಕ ಎಡರು ತೊಡರುಗಳಿಂದ ಪಾರಾಗಿ, ಮಾರೀಚ ಮಹರ್ಷಿಗಳ ಆಶ್ರಮದಲ್ಲಿ ಪುನಃ ಸಮಾಗಮದಿಂದ ಕೃತಕೃತ್ಯಳಾಗುತ್ತಾಳೆ. ಮಾರೀಚ ಮಹರ್ಷಿ ಮತ್ತು ದಾಕ್ಷಾಯಿಣಿಯರ ಆಶೀರ್ವಾದಕ್ಕೆ ಪಾತ್ರರಾಗಿ, ದಂಪತಿಗಳು ಪುತ್ರ ಸಮೇತರಾಗಿ ಭೂಲೋಕಕ್ಕೆ ಹಿಂತಿರುಗುತ್ತಾರೆ. ಗಯಟೆ ಕವಿಯ ಮಾತಿನಂತ ಇದು ಸ್ವರ್ಗ ಮತ್ತು ಮರ್ತ್ಯಲೋಕಗಳ ಸಮಾಗಮವೇ ಸರಿ; ಶಕುಂತಲ ಎಂಬ ಹೆಸರಿನಲ್ಲಿಯೇ ಸಮಸ್ತವೂ ಸಮಾವೇಶವಾಗಿದೆ.

ಇಂಥ ಅನರ್ಘ್ಯ ಕೃತಿಯನ್ನು ನಿರ್ಮಿಸಿದ ಕಾಳಿದಾಸನಿಗೆ ಆಕರ ಯಾವುದಿರಬಹುದು ಎಂಬ ಕುತೂಹಲ ಉಂಟಾಗುವುದು ಸಹಜ. ಶ್ರೀ ವ್ಯಾಸ ಮಹರ್ಷಿಗಳು ತಮ್ಮ ಮಹಾಭಾರತದ ಆದಿಪರ್ವದಲ್ಲಿಯೇ ಭರತವಂಶದ ಮೂಲವನ್ನು ತಿಳಿಸುವಲ್ಲಿ

ಈ ವಿಷಯವನ್ನು ಒಂದು ಆಖ್ಯಾನ ರೂಪದಲ್ಲಿ ಪ್ರಸ್ತಾಪಿಸಿದ್ದಾರೆ. (ಆದಿ ಪರ್ವದ ಸಂಭವಪರ್ವ. ಅಧ್ಯಾಯ ೮೮–೧೦೦: ಶ್ಲೋಕಗಳು ಒಟ್ಟು ೬೦೭) ಮೊದಲು ಈ ಕಥಾವಿನ್ಯಾಸವನ್ನು ಸಂಕ್ಷಿಪ್ತವಾಗಿ ಸಮಾಲೋಚಿಸಬಹುದು :

ರಾಜ ಕರ್ತವ್ಯದಂತೆ ದುಷ್ಯಂತನು ಬೇಟೆಯಾಡುತ್ತ ಒಂದು ಜಿಂಕೆಯನ್ನು ಬೆನ್ನಟ್ಟಿಕೊಂಡು ಕಣ್ವರ ಆಶ್ರಮಕ್ಕೆ ಬಂದನು. ಅಲ್ಲಿ ಕಣ್ವರು ಇರಲಿಲ್ಲ. ಆಗ ಆಶ್ರಮದಲ್ಲಿದ್ದ ಶಕುಂತಲೆಯೇ ರಾಜನನ್ನು ಯಥೋಚಿತವಾಗಿ ಸತ್ಕರಿಸಿದಳು. ಶಕುಂತಲೆಯ ಸೌಂದರ್ಯಕ್ಕೆ ರಾಜನು ಮಾರುಹೋದನು. ರಾಜನು ಆತ್ಮವೃತ್ತಾಂತವನ್ನೆಲ್ಲ ತಿಳಿಸಿ ಆಕೆ ಯಾರೆಂದು ಕೇಳಿ ತಿಳಿದನು. ಆಕೆಯೂ ಕ್ಷತ್ರಿಯೋತ್ಪನ್ನಳಾದುದರಿಂದ ತಾನು ಕೈಹಿಡಿಯಲು ತಕ್ಕವಳೆಂದು ನಿರ್ಧರಿಸಿ, ತನ್ನ ಇಂಗಿತವನ್ನು ಪ್ರಕಟಿಸಿದನು. ಶಕುಂತಲೆಯಾದರೋ ತಾನು ಕಣ್ವರ ಸಾಕು ಮಗಳಾದ್ದರಿಂದ ಅವರ ಅನುಮತಿ ಅಗತ್ಯವೆಂದು ಸ್ಪಷ್ಟಪಡಿಸಿದಳು. ರಾಜನು ಕ್ಷತ್ರಿಯರಾದವರು ಗಾಂಧರ್ವವಿಧಿಯಿಂದ ಮದುವೆಯಾಗಬಹುದೆಂದೂ ಕಣ್ವರೂ ಸಹ ಸಮ್ಮತಿಸುವರೆಂದೂ ಹೇಳಿ ಶಕುಂತಲೆಯನ್ನು ಒಡಂಬಡಿಸಿದನು. ಶಕುಂತಲೆ "ನನ್ನ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ಪಟ್ಟ ಕಟ್ಟುವುದಾಗಿ ಒಪ್ಪಿಗೆಯಿತ್ತಲ್ಲಿ ಮಾತ್ರವೇ ನಾನು ಒಡಂಬಡುವೆನು" ಎಂದು ಒಪ್ಪಂದವನ್ನು ಮುಂದಿಟ್ಟಳು. ಆ ಕಟ್ಟಳೆಗೆ ರಾಜನು ಸಮ್ಮತಿಸಿದನು. ದುಷ್ಯಂತನ ಇಷ್ಟಾರ್ಥ ನೆರವೇರಿತು. ಅನಂತರ ರಾಜಯೋಗ್ಯವಾದ [illegible] ಅನುಚರರ ಮೂಲಕ ಕಳುಹಿಸಿ, ಆಕೆಯನ್ನು ಕರೆಸಿಕೊಳ್ಳುವುದಾಗಿ ಹೇಳಿ, ಬಳಿಕ ಊರಿಗೆ ಹಿಂತಿರುಗಿದನು.

ಕಣ್ವರು ಆಶ್ರಮಕ್ಕೆ ಹಿಂತಿರುಗಿದ ಬಳಿಕ, ಎಲ್ಲ ಸಮಾಚಾರಗಳನ್ನೂ ಕೇಳಿ, ತಮ್ಮ ಸಮ್ಮತಿಯನ್ನೂ ವ್ಯಕ್ತಪಡಿಸಿದರು. ರಾಜನ ಕಡೆಯಿಂದ ಯಾವ ಆಣತಿಯೂ ಬರಲಿಲ್ಲ. ಇತ್ತ, ಶಕುಂತಲೆಯಾದರೋ ಗರ್ಭವತಿಯಾಗಿ ಒಂದು ಗಂಡುಮಗುವನ್ನು ಹೆತ್ತಳು. ಆ ಮಗುವಿಗೆ ಜಾತಕರ್ಮ, ನಾಮಕರಣ ಮೊದಲಾದ ಕಾರ್ಯಗಳೆಲ್ಲ ಆಶ್ರಮದಲ್ಲಿಯೇ ನಡೆದುವು. ಹುಡುಗನಿಗೆ ಹನ್ನೆರಡು ವರ್ಷಗಳಾದುವು. ಕಣ್ವರಿಗೆ ಆದ ಕಳವಳ ಅಷ್ಟಿಷ್ಟಲ್ಲ. ದುಷ್ಯಂತನಾದರೋ ರಾಜಧಾನಿಗೆ ಹಿಂತಿರುಗಿದ ಬಳಿಕ, ತನ್ನ ವರ್ತನೆಗಾಗಿ ಕಣ್ವ ಮಹರ್ಷಿಗಳು ಏನು ಆಕ್ಷೇಪಿಸುವರೋ ಎಂದು ಕೆಲಕಾಲ ಅಳುಕಿ, ಅನಂತರ ಆ ವಿಷಯವನ್ನೇ ಕೈಬಿಟ್ಟನು. 'ಸರ್ವದಮನ' ನೆಂಬ ಹೆಸರುಳ್ಳ ಬಾಲಕ ಪ್ರಾಪ್ತವಯಸ್ಕನಾದನು. ಶಕುಂತಲೆ ಮತ್ತು ಆಕೆಯ ಮಗನನ್ನು ರಾಜನಲ್ಲಿಗೆ ಕಳುಹಿಸುವುದು ತಮ್ಮ ಕರ್ತವ್ಯವೆಂದು ಕಣ್ವರು ನಿರ್ಧರಿಸಿದರು. ಆ ಮೇರೆಗೆ ತಮ್ಮ ಶಿಷ್ಯರೊಂದಿಗೆ ಶಕುಂತಲೆ ಮತ್ತು ಬಾಲಕನನ್ನು ಪ್ರತಿಷ್ಠಾನ ನಗರಕ್ಕೆ ಕಳುಹಿಸಿಕೊಟ್ಟರು.

ಶಕುಂತಲೆಯೊಂದಿಗೆ ಬಂದಿದ್ದ ಆಶ್ರಮ ಶಿಷ್ಯರ ನಡೆನುಡಿ, ಉಡುಗೆಗಳನ್ನು ಕಂಡು ಪಟ್ಟಣದ ಜನರು ತಮ್ಮ ತಮ್ಮಲ್ಲಿಯೇ ಮಾತಾಡಿಕೊಂಡು ನಗಲು ಆರಂಭಿಸಿದರು. ಇದನ್ನು ಸಹಿಸಲಾರದೆ ಆ ಶಿಷ್ಯರು ಶಕುಂತಲೆಯನ್ನು ನಡುದಾರಿಯಲ್ಲಿಯೇ ಬಿಟ್ಟು ಹಿಂತಿರುಗಿದರು. ಕಂಗೆಟ್ಟ ಶಕುಂತಲೆ ಧೈರ್ಯ ತಂದುಕೊಂಡು ಮಗನೊಂದಿಗೆ ಅರಮನೆಗೆ ಬಂದು ಸಿಂಹಾಸನಾರೂಢನಾಗಿದ್ದ ದುಷ್ಯಂತನನ್ನು ಕಂಡು ತನ್ನ ವೃತ್ತಾಂತವನ್ನೆಲ್ಲ ವಿಜ್ಞಾಪಿಸಿಕೊಂಡಳು. ಮಹಾರಾಜನಾದರೋ, ಶಕುಂತಲೆಯನ್ನು ಗುರುತಿಸಿದನು. ಲೋಕಾಪವಾದಕ್ಕೆ ಹೆದರಿ, ಆಕೆಯನ್ನು ನಿರಾಕರಿಸಿದನು. ಶಕುಂತಲೆಗೆ ಈ ಅಪಮಾನವನ್ನು ತಡೆಯಲಾಗಲಿಲ್ಲ. ಅವಳ ಕೋಪ ಕಾವೇರಿತು: ಮಾತು ಹರಿತವಾಯಿತು. ಹತಾಶಳಾದ ಆ ಅಬಲೆ ತನ್ನ ಮಗನನ್ನಾದರೂ ಸ್ವೀಕರಿಸುವಂತೆ ಕೋರಿದಳು. ರಾಜನು ಅದಕ್ಕೂ ಸಮ್ಮತಿಸಲಿಲ್ಲ. ಶಕುಂತಲೆ, ಕಟ್ಟಕಡೆಗೆ ಕಣ್ಣೀರು ಸುರಿಸುತ್ತ, ಮಗನೊಂದಿಗೆ ಹಿಂತಿರುಗಲು ಅನುವಾದಳು.

ಇಡೀ ವಾತಾವರಣವೇ ಪ್ರಸನ್ನವಾಗಿರಲು ಆಗ ಆಕಾಶದ ಕಡೆಯಿಂದ ಅಶರೀರವಾಣಿ ಹೀಗೆಂದು ಕೇಳಿಬಂದಿತು: "ಶಕುಂತಲೆಯ ಮಾತುಗಳೆಲ್ಲ ಸತ್ಯ" ಎಂದು ಘೋಷಿಸಿತು. ಅಷ್ಟೇ ಅಲ್ಲದೆ, ಪುಷ್ಪವೃಷ್ಟಿಯೂ ಆಯಿತು. ಆಗ ದುಷ್ಯಂತನು ಸಿಂಹಾಸನದಿಂದ ಇಳಿದು ಬಂದು "ಈ ಎಲ್ಲ ಸಂಗತಿಗಳನ್ನು ನಾನು ಬಲ್ಲೆ. ಆದರೆ, ಈಕೆಯನ್ನು ಹಾಗೆಯೇ ಸ್ವೀಕರಿಸಿದರೆ ಎಲ್ಲಿ ಲೋಕಾಪವಾದ ಬರುವುದೆಯೋ ಎಂದು ಹೆದರಿ ನಿರಾಕರಿಸಿದೆ" ಎಂದು ತನ್ನ ವರ್ತನೆಗೆ ಸಮಾಧಾನ ಹೇಳಿ, ಶಕುಂತಲೆ ಮತ್ತು ಪುತ್ರನನ್ನು ಸ್ವೀಕರಿಸಿದನು. ಆ ರಾಜಕುಮಾರನೇ ಮುಂದೆ ಭರತನೆಂದು ಪ್ರಖ್ಯಾತನಾಗಿ ವಂಶೋದ್ಧಾರಕನೆನ್ನಿಸಿದನು.

ಮಹಾಭಾರತದಲ್ಲಿ ಉಕ್ತವಾಗಿರುವ ಉಪಾಖ್ಯಾನದ ಈ ಸ್ಥೂಲ ಸಂಗ್ರಹವನ್ನು ನೋಡಿದರೆ, ಇದರಲ್ಲಿ ದುಷ್ಯಂತನ ವರ್ತನೆಯ ಬಗ್ಗೆ ಎಷ್ಟು ಸಂದೇಹಗಳು ಉದ್ಭವಿಸುತ್ತವೆ ಎನ್ನುವುದು ವ್ಯಕ್ತವಾಗುತ್ತದೆ. ಆದರೆ ಅಲ್ಲಿನ ಮೂಲ ಉದ್ದೇಶ ಭರತನ ಪೂರ್ವವೃತ್ತಾಂತವನ್ನು ಹೇಳುವುದು ಮಾತ್ರ. ಈ ಕಥಾನಕವನ್ನು ಕಾಳಿದಾಸನ ನಾಟಕದೊಂದಿಗೆ ಹೋಲಿಸಿ ನೋಡುವುದಕ್ಕೆ ಮೊದಲು ಡಾ|| ಎಸ್. ವಿ. ರಂಗಣ್ಣನವರ ವಿಮರ್ಶೆಯ ಧ್ವನಿಯನ್ನು ಇಲ್ಲಿ ಉದಾಹರಿಸುವುದು ಸೂಕ್ತ: "ಅಲ್ಲಿನ (ಮಹಾಭಾರತದಲ್ಲಿನ) ಮೂರು ಕೋಣೆಯ ಸಣ್ಣ ಕಾವ್ಯಗೃಹ ಇಲ್ಲಿ ಏಳು ಮಹಡಿಗಳ ದೊಡ್ಡ ನಾಟಕ ಮಂದಿರವಾಗಿದೆ. ಎಲ್ಲಕ್ಕಿಂತಲೂ ಹೆಚ್ಚಿನ ಬದಲಾವಣೆ ದುಷ್ಯಂತ, ಶಕುಂತಳೆಯರ ನಿರ್ಮಾಣದಲ್ಲಿ ಗೋಚರವಾಗುವ ಹೊಸ ವ್ಯಕ್ತಿಶಿಲ್ಪ : ವ್ಯಾಸನ 'ಶಕುಂತಲೋಪಾಖ್ಯಾನ' ಒಂದು ಪರಿಯಲ್ಲಿ ಶಕುಂತಳೆಯ ಚರಿತ್ರೆಯಾದರೂ ವಂಶೋದ್ಧಾರಕ ಭರತನ ಚರಿತ್ರೆಗೆ ಉಪೋದ್ಘಾತ : 'ಶಾಕುಂತಲ' ವಾದರೋ ಬೆಡಗಿನ ಪ್ರೇಮನಾಟಕ. ಅವೆರಡರ ಮುಖವರ್ಚಸ್ಸಿನ ಕಳೆ ಸಕಾರಣವಾಗಿಯೇ ಬೇರೆ ಬೇರೆ." (ಶಾಕುಂತಲ ನಾಟಕದ ವಿಮರ್ಶೆ. ೧೯೫೭. ಪುಟ ೧೨). ಮಹಾಭಾರತದ ವಿಸ್ತಾರವಾದ ಭೂಮಿಕೆಯಲ್ಲಿ 'ಶಕುಂತಲೋಪಾಖ್ಯಾನ' ಒಂದು ಬಿಂದು ಮಾತ್ರ. ಅದು ಭರತನ ಚರಿತ್ರೆಗೆ ಒಂದು ಪೀಠಿಕೆ ಎನ್ನುವ ಮಾತು ನಿಜ. ಆದರೆ ಕಾಳಿದಾಸನ ನಾಟಕವನ್ನು 'ಬೆಡಗಿನ ಪ್ರೇಮನಾಟಕ' ಎಂಬ ಎಸ್. ವಿ. ರಂಗಣ್ಣನವರ ಆಕ್ಷೇಪಣೆ ಸರ್ವಮಾನ್ಯವಾಗಲಾರದು. ಎರಡರ ಮಾಧ್ಯಮ ಬೇರೆ ಬೇರೆಯಾದರೂ ಅಲ್ಲಿನ ಪ್ರಧಾನ ವ್ಯಕ್ತಿಗಳು ಒಬ್ಬರೇ ಆಗಿರುತ್ತಾರೆ. ಅವರ ನಡೆನುಡಿಗಳಲ್ಲಿ ಕಾಳಿದಾಸನು ಮಾಡಿರುವ ಪರಿವರ್ತನೆ ಪ್ರಶಂಸನೀಯವೆನ್ನುವುದನ್ನು ಕಡೆಗಣಿಸುವಂತಿಲ್ಲ. ಕಾಳಿದಾಸನ ನಾಟಕದ ಕಥಾಸಂವಿಧಾನವನ್ನು ಸಂಗ್ರಹಿಸುವುದು ಕಷ್ಟವೇ ಸರಿ. ಅಲ್ಲಿನ ಎಷ್ಟೋ ಸೂಕ್ಷ್ಮಾಂಶಗಳು ಸಂಗ್ರಹದಲ್ಲಿ ಕೈಬಿಟ್ಟು ಹೋಗುವುದು ಸಹಜ. ಆದರೂ ಪ್ರಸ್ತುತ ಲೇಖನಕ್ಕೆ ಅನ್ವಯವಾಗಿ ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಕಾಳಿದಾಸನು ತನ್ನ ನಾಟಕವನ್ನು 'ಅಭಿಜ್ಞಾನ ಶಾಕುಂತಲ' ಎಂದು ಕರೆದಿರುವುದರಿಂದ ಆ ಉದ್ದೇಶಕ್ಕೆ ಭಂಗ ಬಾರದಂತೆ ಇಡೀ ನಾಟಕವನ್ನು ಅವಲೋಕನ ಮಾಡಿ ನೋಡುವುದೇ ಸೂಕ್ತ.

ಮೊದಲ ನಾಲ್ಕು ಅಂಕಗಳ ಕಥೆಯನ್ನು ಒಂದು ಘಟ್ಟವೆಂದು ಪರಿಗಣಿಸಬಹುದು. ಪ್ರಥಮಾಂಕದಲ್ಲಿಯೇ ಶಕುಂತಲೆಗೂ ದುಷ್ಯಂತನಿಗೂ ಪ್ರಪ್ರಥಮ ಸಂದರ್ಶನವಾಗುತ್ತದೆ. ಇಬ್ಬರಲ್ಲಿಯೂ ಅನುರಾಗ ಅಂಕುರಿಸುತ್ತದೆ. ದ್ವಿತೀಯಾಂಕದಲ್ಲಿ ಶಕುಂತಲೆಯ ಹೃದಯತಾಪ ಒಂದೇ ಸಮನೆ ಜ್ವಲಿಸುತ್ತದೆ. ಆಕೆಯ ಮನೋವೇದನೆಯನ್ನು ಗಿಡಗಳ ಮರೆಯಲ್ಲಿದ್ದ ದುಷ್ಯಂತನು ಕೇಳಿ ತನ್ನ ಇಷ್ಟಾರ್ಥ ನೆರವೇರಲಿರುವುದೆಂದು ಪುಳಕಿತನಾಗುತ್ತಾನೆ. ಈ ಮಧ್ಯೆ ಊರಿನಿಂದ ಮಾತೃವಿನ ಆಣತಿ ಬರಲು, ತನ್ನ ಬದಲಾಗಿ ಆಪ್ತನಾದ ವಿದೂಷಕನನ್ನು ಕಳುಹಿಸುತ್ತಾನೆ. ಮೂರನೆಯ ಅಂಕದಲ್ಲಿ ಇಬ್ಬರು ಪ್ರಣಯಿಗಳೂ ಪುನಃ ಸಂಧಿಸುವರು. ಶಕುಂತಲೆಯ ಸಖಿಯರು ಅವರಿಬ್ಬರ ಏಕಾಂತಕ್ಕೆ ಸಮಯಾವಕಾಶವನ್ನು ಕಲ್ಪಿಸುವರು. ದುಷ್ಯಂತನು ಶಕುಂತಲೆಯನ್ನು ಗಾಂಧರ್ವವಿಧಿಯಿಂದ ವರಿಸುವನು. ಅಭಿಜ್ಞಾನಾರ್ಥವಾಗಿ ರಾಜನು ತನ್ನ ಉಂಗುರವನ್ನು ತೊಡಿಸಿದನೆಂಬ ಸಂಗತಿ ಅನಸೂಯೆಯ ಮಾತಿನಲ್ಲಿ ವ್ಯಕ್ತವಾಗುವುದು. (ಚತುರ್ಥಾಂಕದ ಪ್ರಾರಂಭದಲ್ಲಿಯೇ ದುರ್ವಾಸರ ಶಾಪದ ಸಂಘಟನೆ ಸಂಭವಿಸುವುದು. ಇದು ಅನಸೂಯೆ, ಪ್ರಿಯಂವದೆಯರಿಗೆ ಮಾತ್ರ ವೇದ್ಯವಾಗಿ, ಅವರು ಮುನಿಗಳನ್ನು ಕಂಡು, ಅಭಿಜ್ಞಾನಾಭರಣ ದರ್ಶನದಿಂದ ಆತನ ಶಾಪವಿಮೋಚನೆಯಾಗುವುದೆಂದು ತಿಳಿದು ಸಮಾಧಾನಗೊಳ್ಳುವರು. ಇದು ಅವರವರಲ್ಲಿಯೇ ಗೋಪ್ಯವಾಗಿ ಉಳಿಯುವುದು.) ಚತುರ್ಥಾಂಕ ಶಕುಂತಲೆಯ ಜೀವನದ ಪೂರ್ವಾರ್ಧಕ್ಕೆ ಒಂದು ಕಡೆ ಮುಕ್ತಾಯವೆನ್ನಿಸಿದರೆ, ಇನ್ನೊಂದು ಕಡೆ ಆಕೆಯ ಭವಿಷ್ಯ ಜೀವನದ ಆಕಸ್ಮಿಕಗಳಿಗೆ ಆದಿಯೆಂದರೂ ಸಲ್ಲುತ್ತದೆ. ಆಶ್ರಮಕ್ಕೆ ಹಿಂತಿರುಗಿ ಬಂದ ಕಣ್ವ ಋಷಿಗಳು ತಮ್ಮ ಸಾಕುಮಗಳ ಸಂಗತಿಯನ್ನೆಲ್ಲ ಕೇಳಿ ತಿಳಿದು ಹರ್ಷಿತರಾಗುವರು. ಆಕೆ ಗರ್ಭಿಣಿಯಾದ ಅನತಿ ಕಾಲದಲ್ಲಿಯೇ ಆಕೆಯನ್ನು ದುಷ್ಯಂತನಲ್ಲಿಗೆ ಕಳುಹಿಸಲು ಸಕಲ ಸಿದ್ಧತೆಗಳನ್ನೂ ಏರ್ಪಡಿಸುವರು. ಸಾಕುಮಗಳ ಅಗಲಿಕೆಯ ಸಂಕಟವೊಂದು ಕಡೆ ಬಾಧಿಸಿದರೆ, ಮತ್ತೊಂದೆಡೆ ತಮ್ಮಲ್ಲಿ ಆವರೆಗೆ ನ್ಯಾಸವಾಗಿದ್ದ ಒಡವೆಯನ್ನು ಕುಲೀನನ ಕೈಗೆ ಒಪ್ಪಿಸುವ ಅವಕಾಶ ಒದಗಿದುದಕ್ಕಾಗಿ ಸಮಾಧಾನ. ಕಣ್ವರ ಆಶ್ರಮದ ಚರಾಚರ ವಸ್ತುಗಳೆಲ್ಲ ಶಕುಂತಲೆಗೆ ಶುಭ ಕೋರಿ ಆಕೆಯನ್ನು ಬೀಳ್ಕೊಡುವ ದೃಶ್ಯ ಸುಪ್ರಸಿದ್ಧವಾದುದು. ಆಕೆಯ ಆಪ್ತ ಸಖಿಯರು ಅವಳನ್ನು ಆಲಿಂಗಿಸಿ ಬೀಳ್ಕೊಡುವಲ್ಲಿ "ಎಲೆ ಸಖಿ, ಆ ರಾಜನು ನಿನ್ನನ್ನು ಮರೆತಿದ್ದೇ ಆದರೆ ಆಗ ಆತನಿಗೆ ಅವನ ನಾಮಾಂಕಿತವಾದ ಉಂಗುರವನ್ನು ತಪ್ಪದೆ ತೋರಿಸು" ಎಂದು ಗುಟ್ಟಾಗಿ ಹೇಳುವರು ಶಕುಂತಲೆ ಆ ಮಾತುಗಳನ್ನು ಕೇಳಿದೊಡನೆಯೇ ಕಂಪಿಸುವಳು. ಸಖಿಯರು "ಅಂಜಬೇಡ, ಅತಿ ಸ್ನೇಹವು ಪಾಪಶಂಕೆಯಾದದ್ದು" ಎಂದು ತೇಲಿಸಿ ಹೇಳುವರು.

ಐದನೆಯ ಅಂಕದಿಂದ ಏಳನೆಯ ಅಂಕಗಳು ಪೂರ್ತಿಯಾಗಿ ನಾಟಕದ ಆವರಣ ಆತಂಕಗ್ರಸ್ತವಾಗಿ ಸಾಗುತ್ತವೆ. ಶಾರ್ಙ್ಗರವ, ಶಾರದ್ವತ ಮತ್ತು ವೃದ್ಧೆ ಗೌತಮಿಯರೊಂದಿಗೆ ಬಂದ ಶಕುಂತಲೆಯನ್ನು ದುಷ್ಯಂತನು ಗುರುತಿಸುವುದಿಲ್ಲ. ಆಕೆ ಎಷ್ಟೆಷ್ಟು ಪ್ರಯತ್ನ ಮಾಡಿದರೂ ಉಪಯೋಗವಾಗಲಿಲ್ಲ. ಒಡನೆಯೇ ರಾಜನು ಕೊಟ್ಟಿದ್ದ ಮುದ್ರಿಕೆಯುಂಗುರವನ್ನು ತೋರಿಸಬೇಕೆಂದು ಕೈಬೆರಳ ಕಡೆ ನೋಡಿದಳು. ಅದು ಆಕೆಯ ಅರಿವಿಲ್ಲದಂತೆಯೇ ಕಳಚಿ ಬಿದ್ದಿತ್ತು. ಶಕುಂತಲೆ ಇದೀಗ ಅಸಹಾಯಕಳಾಗುವಳು. ಜೊತೆಗೂಡಿ ಬಂದಿದ್ದವರು ಅವಳನ್ನು ಅಲ್ಲಿಯೇ ಬಿಟ್ಟು ತೆರಳುವರು. ದಿಕ್ಕು ತೋಚದ ಆ ಗರ್ಭಿಣಿ ಭೂದೇವಿಯನ್ನು ಮರೆಹೊಗುವಳು. ಮೇನಕೆಯ ಮಾತಿನ ಮೇರೆಗೆ ದಿವ್ಯಪ್ರಭೆಯಿಂದ ಉದಿಸಿ ಬಂದ ಹೆಣ್ಣೊಬ್ಬಳು ಅವಳನ್ನು ಆಕಾಶದತ್ತ ಕರೆದೊಯ್ಯುವಳು. ಅವಳ ಮುಂದಿನ ಜೀವನ ಮಾರೀಚ ಮಹರ್ಷಿಗಳ ಆಶ್ರಮದಲ್ಲಿ ಸಾಗುವುದು. ಆರನೆಯ ಅಂಕವನ್ನು ಪ್ರವೇಶಿಸುತ್ತಿರುವಂತೆಯೇ ಕವಿದಿದ್ದ ಕಗ್ಗತ್ತಲೆ ಕ್ರಮ ಕ್ರಮವಾಗಿ ಕರಗಲಾರಂಭಿಸುತ್ತದೆ. ಶಕುಂತಲೆ

ತಳೆದುಕೊಂಡಿದ್ದ ರಾಜನ ಮುದ್ರಿಕೆಯುಂಗುರ ಬೆಸ್ತರವನೊಬ್ಬನಿಗೆ ಲಭಿಸಿ, ಅದು ರಾಜನ ಕೈಗೆ ಬರುತ್ತದೆ. ಅದನ್ನು ಕಂಡ ಕೂಡಲೇ ದುಷ್ಯಂತನಿಗೆ ಕಣ್ವಾಶ್ರಮದ ಘಟನೆಗಳೆಲ್ಲ ನೆನಪಾಗಿ, ಅರಮನೆಯ ಬಾಗಿಲಿಗೆ ಬಂದಿದ್ದ ಶಕುಂತಲೆಯನ್ನು ಹಿಂದಟ್ಟಿದ್ದಕ್ಕಾಗಿ ಒಂದೇ ಸಮನೆ ಕೊರಗಲಾರಂಭಿಸುವನು. ಅವನನ್ನು ಯಾರೂ ಸಮಾಧಾನಪಡಿಸುವಂತಿರಲಿಲ್ಲ. ರಾಜನ ಈ ದುಃಖವನ್ನೆಲ್ಲ ಶಕುಂತಲೆಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದ ಅಪ್ಸರಸ್ತ್ರೀ ಸಾನುಮತಿ ಅಗೋಚರಳಾಗಿ ನಿಂತು ನೋಡಿ, ಒಡತಿಯ ಪುನಃಸಮಾಗಮವಾಗುವುದರಲ್ಲಿ ಸಂದೇಹವಿಲ್ಲವೆಂದು ಸಮಾಧಾನಪಡುವಳು. ಸಂತಪ್ತಚಿತ್ತನಾದ ದುಷ್ಯಂತನನ್ನು ಇಂದ್ರನ ಸಾರಥಿಯಾದ ಮಾತಲಿ ಕಂಡು, ಒಡೆಯನ ಆಣತಿಯನ್ನು ತಿಳಿಸಿದೊಡನೆಯೇ ಅವನ ಗಮನ ಬದಲಾಯಿಸುವುದು. ಮಾತಲಿ ತಂದಿದ್ದ ಇಂದ್ರನ ರಥವೇರಿ, ಯುದ್ಧಸನ್ನದ್ಧನಾಗಿ ದೈತ್ಯ ಸಂಹಾರಕ್ಕಾಗಿ ತೆರಳುವನು. ಏಳನೆಯ ಅಂಕ ದುಷ್ಯಂತನ ಶುಭೋದಯದಿಂದಲೇ ಮೊದಲಾಗುವುದು. ದೇವತೆಗಳ ರಿಪುಸಂಹಾರ ಮಾಡಿದ್ದಕ್ಕಾಗಿ ಇಂದ್ರನಿಂದಲೇ ಸತ್ಕೃತನಾಗಿ, ದುಷ್ಯಂತನು ಮಾತಲಿಯ ಮಾರ್ಗದರ್ಶನದಲ್ಲಿ ಊರಿಗೆ ಹಿಂತಿರುಗುವನು. ಮಾರ್ಗಮಧ್ಯದಲ್ಲಿ ಮಾರೀಚ ಮಹರ್ಷಿಗಳ ತಪೋವನಕ್ಕೆ ಬರಲು, ಅವನಿಗೆ ಆ ಮಹಾತಪಸ್ವಿಗಳ ಸಂದರ್ಶನ ಮಾಡಬೇಕೆನ್ನಿಸುವುದು. ಮಾತಲಿ ಮಹರ್ಷಿಗಳ ಸಮಯವನ್ನು ತಿಳಿದುಬರುವೆನೆಂದು ಹೇಳಿ, ರಾಜನೊಬ್ಬನನ್ನೇ ಅಲ್ಲಿ ಬಿಟ್ಟು ಹೊರಡುವನು. ಇತ್ತ ಆಶ್ಚರ್ಯದ ಮೇಲೆ ಆಶ್ಚರ್ಯಗಳು ನಡೆಯುವವು. ದುಷ್ಯಂತನು ಮೊದಲು ಸರ್ವದಮನನನ್ನು ಕಾಣುವನು. ಆನಂತರ ಶಕುಂತಲೆಯನ್ನು ಕಂಡು ಬೆರಗಾಗುವನು. ಕೂಡಲೇ ತಾನು ಮಾಡಿದ ಅಪರಾಧಕ್ಕಾಗಿ ಕ್ಷಮಾಮೂರ್ತಿಯಾಗಿ ನಿಲ್ಲುವನು. ಮುದ್ರಿಕೆಯುಂಗುರವನ್ನು ತೋರಿಸಲು ಎಲ್ಲ ಎಡರು ತೊಡರುಗಳಿಗೂ ಅದು ಕಾರಣವೆಂದು ಶಕುಂತಲೆಗೆ ವೇದ್ಯವಾಗುವುದು. ಮಹರ್ಷಿಗಳ ಕಡೆಯಿಂದ ಹಿಂತಿರುಗಿ ಬಂದ ಮಾತಲಿಗೆ ಈ ಶುಭಪರಂಪರೆಗಳನ್ನು ಕಂಡು ಉಲ್ಲಾಸವಾಗುವುದು. ರಾಜದಂಪತಿಗಳು ಮಹರ್ಷಿಗಳನ್ನು ಕಂಡು ನಮಸ್ಕರಿಸಲು, ತ್ರಿಕಾಲಜ್ಞಾನಿಗಳಾದ ಅವರು ಅಂದಿಗೆ ಅವರು ದುರ್ವಾಸರ ಶಾಪದಿಂದ ವಿಮುಕ್ತರಾದರೆಂದು ತಿಳಿಸಿ ಹೃತ್ಪೂರ್ವಕವಾಗಿ ಹರಸಿ ಬೀಳ್ಕೊಡುವರು. ಈ ಶುಭ ಸಂಗತಿ ಕಣ್ವರ ಕಿವಿಗೂ ಮುಟ್ಟಿತು. ಪುರೂರವ ವಂಶದ ಕೀರ್ತಿ ಪ್ರವರ್ಧಿಸಿತು.

ಮಹಾಭಾರತದ 'ಶಕುಂತಲೋಪಾಖ್ಯಾನ'ಕ್ಕೂ, ಕಾಳಿದಾಸನ ಅಭಿಜ್ಞಾನ ಶಾಕುಂತಲಕ್ಕೂ ಇರುವ ದೃಷ್ಟಿಭೇದವನ್ನು ಈ ಸಂಕ್ಷಿಪ್ತ ಕಥಾ ಸಂಗ್ರಹದಿಂದಲೇ ಗ್ರಹಿಸಬಹುದು. ಈ ಬಗ್ಗೆ, ಡಾ॥ ಎ. ಆರ್. ಕೃಷ್ಣಶಾಸ್ತ್ರಿಗಳು ಬಹಳ ಅರ್ಥವತ್ತಾಗಿ ಹೇಳಿರುವುದನ್ನು ಇಲ್ಲಿ ಉದಾಹರಿಸಬಹುದು.

"ಪೌರಾಣಿಕ ಕಥೆ ಒಂದು ಬಂಗಾರದ ಅದುರು; ಅದರಲ್ಲಿ ಬಂಗಾರವು ಕಣ ಕಣವಾಗಿ ಎಳೆಯೆಳೆಯಾಗಿ ಇದೆ; ಆದರೆ ಕಗ್ಗಲ್ಲಿನ ಮಧ್ಯೆ ಸೇರಿಕೊಂಡಿದೆ, ಬಹುಭಾಗವಿರುವ ಆ ಕಲ್ಲನ್ನು ಬೇರೆ ಮಾಡಿ ತೆಗೆದು ಬಂಗಾರವನ್ನು ಒಟ್ಟುಗೂಡಿಸಿ ಗಟ್ಟಿಮಾಡಿ ಅದರಿಂದ ಸುಂದರವಾದ ವಿಗ್ರಹವನ್ನು ಎರಕ ಹೊಯ್ದು ಮೆರುಗು ಕೊಟ್ಟು ಪೀಠದ ಮೇಲೆ ನಿಲ್ಲಿಸಿದ ಕಲಾಮೂರ್ತಿ—ನಾಟಕ."

"......ದುರ್ವಾಸರ ಶಾಪಸೃಷ್ಟಿಯಿಂದ, ದುಷ್ಯಂತ ಶಕುಂತಲೆಯರ ಬಣ್ಣವನ್ನು ಬದಲಾಯಿಸಿ, ಕೊನೆಯಲ್ಲಿ ಮಾರೀಚಾಶ್ರಮವನ್ನು ಸೇರಿಸಿ, ಭಾರತದಲ್ಲಿ ಮೋಟಕಾಗಿ ನಿಲ್ಲುವ ಕಥೆ ರಮಣೀಯವಾಗಿ ಮುಗಿಯುವಂತೆ ಮಾಡಿದ್ದಾನೆ" (ಸಂಸ್ಕೃತ ನಾಟಕ, ೧೯೩೭, ಪುಟ ೧೩೭).

೨

ಡಿ.ವಿ.ಜಿ. ಅವರ 'ಗೀತ ಶಾಕುಂತಲ'ಕ್ಕೆ ಕಾಳಿದಾಸನ ನಾಟಕವೇ ಆಧಾರ ಮತ್ತು ಅವಲಂಬನ. ಆದ್ದರಿಂದ, ಅವರು ಕಾಳಿದಾಸನಿಗೆ ಮೊದಲು ತಮ್ಮ ಕೃತಜ್ಞತೆಯನ್ನು ಸಲ್ಲಿಸುವ ನೆವದಲ್ಲಿ 'ಕಾಲಿದಾಸೇಂಗಿತ' ಎಂಬ ಅರ್ಥಪೂರ್ಣವಾದ ಗೀತವನ್ನು ರಚಿಸಿರುವರು. ಈ ಗೀತವನ್ನು ಪರಿಭಾವಿಸಿದಂತೆಲ್ಲ ಅವರಿಗೆ ನಾಟಕದಲ್ಲಿ ವ್ಯಕ್ತವಾಗುವ ನವ್ಯದರ್ಶನದ ಅರಿವೂ ಮನವರಿಕೆಯಾಗುತ್ತದೆ. ಈ ಇಡೀ ನಾಟಕವನ್ನು ಕುರಿತು ಅವರು "ಕಣ್ವರ್ಷಿಯಾ ಚರಿತ—ಹೃದ್ಯವ್ರತ" ಎಂದು ಹೇಳಿರುವ ಮಾತೇ ಇದಕ್ಕೆ ಒಂದು ನಿದರ್ಶನ. ಚತುರ್ಥಾಂಕ ಹೊರತು ಬೇರೆಲ್ಲಿಯೂ ಕಣ್ವಮಹಷಿಗಳು ಕಣ್ಣಿಗೆ ಕಾಣದಿದ್ದರೂ. ಶಕುಂತಲೆಯ ಜೀವನದಲ್ಲಿ ಅವರು ಹೇಗೆ ಹಾಸುಹೊಕ್ಕಾಗಿ ಆವರಿಸಿರುವರೆನ್ನುವುದನ್ನು ಮನಗಂಡರೆ ಡಿ.ವಿ.ಜಿ. ಅವರ ಕಾಣ್ಕೆಯ ಸತ್ಯಾಂಶ ವೇದ್ಯವಾಗುತ್ತದೆ. ಕಣ್ವರ್ಷಿಗಳನ್ನು ಕುರಿತ ಡಿ.ವಿ.ಜಿ. ಅವರ ಪ್ರಶಂಸೆಯನ್ನು ಇಲ್ಲಿ ಉದಾಹರಿಸಬಹುದು.

> ವಾಲ್ಮೀಕಿ ಕ್ಷಿತಿಜಗೆ ತಂದೆವೊಲಾದಂತೆ
> ಕಣ್ವಂ ಶಕುಂತಲೆಗವ್ಯಾಜ ಬಂಧು
> ಆತ್ಮೀಯವೆನುವೊಲ್ ಪರಾರ್ಥವ ಕಾಯ್ದಿತ್ತ
> ನಿರ್ಮಮವಾತ್ಸಲ್ಯದರ್ಶರಾ ಬುಧರು (ಗೀತ ೧)

ಇಬ್ಬರು ಮಹರ್ಷಿಗಳ ಸಮಾನ ಮನೋಧರ್ಮದೆಡೆಗೆ ನಮ್ಮ ಗಮನವನ್ನು ಸೆಳೆದಿರುವ ಡಿ.ವಿ.ಜಿ. ಅವರ ಚಿಂತನಶಕ್ತಿ ಮೆಚ್ಚುವಂತಹುದು. ಈ ಗೀತ 'ಕಾಳಿದಾಸನು ಕವಿಯೊ ಗುರುವೋ' ಎಂದು ಮುಕ್ತಾಯವಾಗುವುದನ್ನು ಕಂಡೊಡನೆಯೇ 'ಕವಿಕುಲಗುರುಃ ಕಾಳಿದಾಸೋ ವಿಲಾಸಃ' ಎಂಬ ಸುಪ್ರಸಿದ್ಧ ಸಂಸ್ಕೃತದ ಹೇಳಿಕೆ ನೆನಪಾಗದಿರದು. ಡಿ.ವಿ.ಜಿ. ಅವರ ಉದ್ಗಾರದಲ್ಲಿ ಕಾಳಿದಾಸನ ಕಾವ್ಯಪ್ರಜ್ಞೆ ಹಾಗೂ ದರ್ಶನದೃಷ್ಟಿಗಳೆರಡನ್ನು ಪರಿಗಣಿಸಲಾಗಿದೆ.

ಡಿ.ವಿ.ಜಿ. ಅವರು ತಮ್ಮ ಗೀತನಾಟಕಕ್ಕೆ ಶಕುಂತಲಾ–ದುಷ್ಯಂತರ ಪ್ರಣಯ ಪ್ರಸಂಗವನ್ನು ಮಾತ್ರ ಅಳವಡಿಸಿರುವುದರಿಂದ. ಅದಕ್ಕೆ ಹೊರತಾದ ಎಷ್ಟೋ ಘಟನೆಗಳನ್ನು ಕೈಬಿಟ್ಟಿರುವರು. ನಾಟಕದ ಪ್ರಾರಂಭದಲ್ಲಿಯೇ ದುಷ್ಯಂತನು ಜಿಂಕೆಯನ್ನು ಬೆನ್ನಟ್ಟಿಕೊಂಡು ಬರುವ ಸಂದರ್ಭ. ಎಷ್ಟೋ ಚಿತ್ತಾಕರ್ಷಕವಾಗಿದ್ದರೂ ಅದನ್ನು ಬಿಟ್ಟಿರುವುದೇ ಇದಕ್ಕೆ ಒಂದು ನಿದರ್ಶನ. ಇದು ವಿದ್ವಾಂಸರ ದೃಷ್ಟಿಯಿಂದ ಚರ್ಚಾಸ್ಪದವೆನ್ನಿಸಬಹುದು. ಆದರೆ, ಡಿ.ವಿ.ಜಿ. ಅವರು ತಮ್ಮ ಪರಿಮಿತಿ ಹಾಗೂ ಮುಖ್ಯ ಧ್ಯೇಯಗಳ ದೃಷ್ಟಿಯಿಂದ ಅಗತ್ಯವಿಲ್ಲವೆಂದು ಬಿಟ್ಟಿರಬಹುದು.

ದುಷ್ಯಂತನಿಗೆ ಕಣ್ವರ ಆಶ್ರಮದಲ್ಲಿರುವ ಶಕುಂತಲೆಯನ್ನು ಕಂಡೊಡನೆಯೇ ಆಕೆಯ ಸ್ಫುರದ್ರೂಪ ಆಕರ್ಷಕವೆನ್ನಿಸಿತು. ಆದರೆ, ಡಿ.ವಿ.ಜಿ. ಅವರ ಎಣಿಕೆಯಂತೆ

ಅವನು ಧರ್ಮಭೀರುವೂ ಆಗಿದ್ದರಿಂದ ದುಡುಕುವಂತಿರಲಿಲ್ಲ. ಆಕೆಯ ಪೂರ್ವಾಪರ ಗಳ ಬಗ್ಗೆ ವ್ಯಾಕುಲಿತನಾದನು. ಈ ಹೊತ್ತಿಗೆ ಭೃಂಗವೊಂದು ಆ ಯುವತಿಯೊಂದಿಗೆ ಸಲಿಗೆ ವಹಿಸಿ ಮುದ್ದಿಡಲು ಆರಂಭಿಸಿತು. ಅದನ್ನು ಕಂಡು ದುಷ್ಯಂತನಲ್ಲಿ ಅಸೂಯಾ ಭಾವ ಮಿಡಿಯಿತು. ಈ ರಸವತ್ತಾದ ಸನ್ನಿವೇಶವನ್ನು ಕುರಿತು ಶೃಂಗಾರಪರಿಣತ ನಾದ ಕಾಳಿದಾಸ ಮನೋಹರವಾದ ವೃತ್ತವೊಂದನ್ನು ರಚಿಸಿರುವನು. ಈ ಪದ್ಯದ ಸೊಬಗನ್ನೆಲ್ಲ ಡಿ.ವಿ.ಜಿ. ಅವರು ತಮ್ಮ ಗೀತದಲ್ಲಿ ಹುದುಗಿಟ್ಟಿರುವರು.

ಧನ್ಯ ನೀನೆಲೊ ಭೃಂಗಾ—ರಸೋತ್ತುಂಗ
ಖಿನ್ನರು ನಾವು ತತ್ತ್ವಾನ್ವೇಷನಿರತರು ॥ ಪ ॥

ಬಳುಕುವ ಮೈ ಚೆಲುವೆಯನ್—ಅಲೆವ ಕಣ್ಮೊನೆಯುಳ್
ಬಲುಸೋಕಿ ಕಿವಿಯೊಳ್ ಗುಟ್ಟುಲಿದಂತೆ ಸೊನಿಪೆ
ತಡೆಯಲ್ಕೆಂದಾಕೆ ಕೈಕೊಡಹೆ ಮೊಗವನೇರಿ
ಕುಡಿವೆ ನೀನವಳಧರದ ರತಿಸಾರವ (ಗೀತ ೫)

ದುಂಬಿಯ ಕೃತಕೃತ್ಯತೆಯನ್ನೂ, ಮನುಷ್ಯನ ವ್ಯರ್ಥತರ್ಕವನ್ನೂ ಮೂಲ ವೃತ್ತದಲ್ಲಿ ಎಷ್ಟು ಹೃದಯಸ್ಪರ್ಶಿಯಾಗಿ ಹೇಳಲಾಗಿದೆಯೊ ಈ ಗೀತದಲ್ಲಿಯೂ ಅಷ್ಟೇ ಪುಷ್ಟಿಯುತವಾಗಿ ನಿವೇದಿಸಿದೆ. ಮೂಲದಲ್ಲಿ ಕಡೆಯ ಪಂಕ್ತಿಯಲ್ಲಿ ಹೇಳಿರು ವುದೇ ಇಲ್ಲಿ ಪಲ್ಲವಿಯಾಗಿ ಬಂದಿರುವುದು ಮತ್ತಷ್ಟು ಮಿಗಿಲಾಗಿದೆ. ಆ ದುಂಬಿಯ ದಾಂಧಲೆ ಅಷ್ಟಕ್ಕೇ ನಿಲ್ಲುವುದಿಲ್ಲ. ಕಾಳಿದಾಸನು ಅದಕ್ಕಾಗಿ ಇನ್ನೂ ಎರಡು ಪದ್ಯ ಗಳನ್ನು ಮೀಸಲಿರಿಸಿದ್ದಾನೆ. ಅವುಗಳಲ್ಲಿ ಒಂದು (೧–೨೦) ಎಲ್ಲ ಪ್ರತಿಗಳಲ್ಲಿಯೂ ಕಾಣುವುದಿಲ್ಲ. ಅದರ ಅರ್ಥಸೌಂದರ್ಯವನ್ನು ಗ್ರಹಿಸಿದ ಡಿ.ವಿ.ಜಿ. ಅವರು ಅದನ್ನು ಗೀತರೂಪದಲ್ಲಿ ಎರಕಹೊಯ್ದಿರುವರು. ಆ ತರುಣಿ ದುಂಬಿಗೆ ಹೆದರಿ ಅತ್ತಿತ್ತ ಓಡಲೆಳಸುವುದು ಒಂದು ನರ್ತನದಂತಿದ್ದಿತೆಂದು ಕವಿಯ ವರ್ಣನೆ. ಈ ಅಪರೂಪ ಪದ್ಯದ ಸ್ವಾರಸ್ಯವನ್ನು ಡಿ.ವಿ.ಜಿ. ಅವರ ಗೀತದ ಮೂಲಕವೇ ಗ್ರಹಿಸ ಬಹುದು.

ಲೀಲೆಯಿದೇಂ ಚೆಂದವೋ—ಬಾಲೆಯ ನೃತ್ಯ ॥ ಪ. ॥
ಕೂಳಭೃಂಗನು ಮೂಳ್ಪ—ಧಾಳಿಗೆ ಬೆದರುತ
ಲೋಲಾಂಗಿ ಕುಣಿವಳು—ತಾಳಮೇಳವಿಸದೆ ॥ ಅ.ಪ. ॥
ಆನನ ಕುಸುಮಿತ—ಕಾನನವೆಂದೆಳಿ
ಪಾನಾತುರದೆ ತಾ—ನಿರ್ಮಲೆಯ ಕಾಡೆ ॥ ೧ ॥

ಅತ್ತಿತ್ತ ಪಾರ್ಶ್ವಕ್ಷಿಯೋ—ವಕ್ಷದ—ವರ್ತುಲದುಬ್ಬಿಳ್ಕೆಯೋ
ಹುಬ್ಬೇನು ಕುಡಿಬಳ್ಳಿಯೋ—ನೈಸಡು—ಮಡಿವೇನುಮುಡಿಪಂಕಿಯೋ
ಕೈಚಿಗುರೊದರುತ—ಬಾಯಿಂ ಚೀತ್ಕರಿಸುತ
ನಾಣ್ಣನು ಮರೆತಿವಳಾಡುವ ನರ್ತನ (ಗೀತ ೬)

ಕಾಳಿದಾಸನ 'ವಾದ್ಯೈರ್ವಿನಾ ನರ್ತಕೀ' ಎಂಬ ಮಾತಿನ ಸವಿಯನ್ನು ಡಿ.ವಿ.ಜಿ. ಅವರು 'ಲೋಲಾಂಗಿ ಕುಣಿವಳು—ತಾಳವೇಳವಿಸದೆ' ಎಂದು ಮತ್ತಷ್ಟು ವಿಸ್ತರಿಸಿರುವರು. ಅನುವಾದದ ಕಡೆಯ ನುಡಿಯಂತೂ ಶಕುಂತಲೆಯ ಹಾವಭಾವಗಳನ್ನೆಲ್ಲ ಕಣ್ತೆರೆದು ತೋರುವಂತಿದೆ. ಈ ಮೊದಲು ದುಷ್ಯಂತನಿಗೆ ದುಂಬಿಯನ್ನು ಕಂಡು ಅಸೂಯೆಯಾದರೆ, ಈಗ ಶಕುಂತಲೆಯ ಬೆದರಿಕೆಯನ್ನು ಕಂಡು "ಲೀಲೆಯಿಂದೇಂ ಚೆಂದವೋ—ಬಾಲೆಯ ನೃತ್ಯ" ಎನ್ನಿಸುತ್ತದೆ. ಮಧುಕರನ ಆ ಉಪಟಳ ಆ ರಸಿಕನಿಗೆ ಮದನನುದ್ಯೋಗವೆಂದು ಭಾಸವಾಗುತ್ತದೆ.

ನಾಟಕದ ಇತರ ಸಂಗತಿಗಳಾವುವನ್ನೂ ಹೇಳಿ ಬೆಳಸದೆ. ಲೇಖಕರು ಶಕುಂತಲೆ ಮತ್ತು ದುಷ್ಯಂತರ ಸಂದರ್ಶನವಾದ ಬಳಿಕ ಅವರಿಬ್ಬರ ವರ್ತನೆಯ ಕಡೆ ಗಮನ ಹರಿಸುತ್ತಾರೆ. ರಾಜನ ನುಡಿಯನ್ನು ಕೇಳಿಯೂ ಕೇಳದಂತೆ, ಅವನನ್ನು ನೋಡಿಯೂ ನೋಡದಂತೆ ನಟಿಸುವ ಶಕುಂತಲೆಯ ಇಂಗಿತವನ್ನು ತಿಳಿಯಲೆಳಸುವ ರಾಜನ ಮನಸ್ಸನ್ನು ಕಾಳಿದಾಸನು ಒಂದು ವೃತ್ತದಲ್ಲಿ ಹಿಡಿದಿಟ್ಟರೆ (ಬವಸಪ್ಪ ಶಾಸ್ತ್ರಿಗಳು ಇಲ್ಲಿ ಕಂದವನ್ನು ಬಳಸಿದ್ದಾರೆ.) ಡಿ.ವಿ.ಜಿ. ಅವರು ಒಂದು ಗೀತದಲ್ಲಿ ಸ್ವಲ್ಪ ವಿಸ್ತರಿಸಿರುವರು.

ಮನದೊಳ್ ಆಂದೋಳನ—ಮಾನಿನೀಮಣಿಗೇನೋ
ನಾನೆಂತು ಕಾಣುವೆನೋ—ಆ ಮರುಮವ ‖ ಪ. ‖

ಸಾನುರಾಗಿಯೋ ಅವಳೇನುದಾಸೀನೆಯೋ
ಅನುಮಾನಿಸುವುದು ಸಾಹಸ—ಅದೇಂ ಕ್ಲೇಶ ‖ ಅ.ಪ. ‖

ಸಲ್ಲಾಪದಲಿ ಸೇರಳ್—ಆದರುಮಳ್ಳಿಯಿಂ
ಸಲ್ಲಿಪಳ್ ಕಿವಿಯನ್—ಎನ್ನಯ ಸೊಲ್ಲ ಕೇಳಿ
ಕುಳ್ಳಿರಳೆನ್ನೆದುರೊಳ್ ತನ್ನ ಮುಖವೆತ್ತಿ
ಚೆಲ್ಲಳು ನೋಟವನಿತ್ತತ್ತ ಸುಳಿಸಿ
ಇವಳಾ ಭಾವವದೇನೋ—ತವಕವಡಿಪುದೆನ್ನ
ಭವಿತವ್ಯವೆಂತಿಹುದೋ—ಪೇಳುವರಾರೋ (ಗೀತ ೮)

ಇಂಥ ಕೆಲವೆಡೆಗಳಲ್ಲಿ ಕಾಣುವ ಭಾವವಿವರಣೆ ಡಿ.ವಿ.ಜಿ. ಅವರು ಉದ್ದೇಶಪೂರ್ವಕವಾಗಿಯೇ ಮಾಡಿರುವಂತೆ ತೋರುತ್ತದೆ. ಏಕೆಂದರೆ. ಅವರು ತಮ್ಮ 'ಭೂಮಿಕೆ'ಯಲ್ಲಿ ಹೀಗೆ ವಿಶದಪಡಿಸಿದ್ದಾರೆ : "ಇದನ್ನು ಕಾಳಿದಾಸನ ಹೃದಯದ ಪ್ರತಿಬಿಂಬವೆಂದು ಹೇಳುವುದಕ್ಕಿಂತ. ಅನುವಾದಕನ ಹೃದಯದರ್ಪಣದಲ್ಲಿ ಪ್ರತಿಫಲಿಸಿದ ಕಾಳಿದಾಸೀಯ ಪ್ರತಿಬಿಂಬದ ಪ್ರತಿಬಿಂಬವೆಂದು ಹೇಳುವುದು ಸರಿಯಾದೀತು" (ಪು. ೧೦). ಆದ್ದರಿಂದ, ಈ ಗೀತಗಳಲ್ಲಿ ಒಮ್ಮೊಮ್ಮೆ ಕಂಡುಬರುವ ಅಧಿಕಾಂಶಗಳನ್ನು ಪರಿಶೀಲಿಸುವಲ್ಲಿ ನಾವು ಸ್ವಲ್ಪ ಎಚ್ಚರಿಕೆ ವಹಿಸಬೇಕಾಗುತ್ತದೆ. ಅಗತ್ಯವಿದ್ದಲ್ಲಿ ಅದರ ಉಚಿತಾನುಚಿತಗಳನ್ನು ಸೂಚಿಸಬಹುದು.

ಎರಡನೆಯ ಅಂಕದಿಂದ ಡಿ.ವಿ.ಜಿ. ಅವರು ಒಂದೇ ಒಂದು ಪದ್ಯವನ್ನು ಆರಿಸಿಕೊಂಡಿರುತ್ತಾರೆ. ಆದಾದರೋ ಕಾಳಿದಾಸನ ಕಿರೀಟಮಣಿ ! ತುಂಬು ಹರೆಯದ ಶಕುಂತಲೆಯ ಚೆಲುವನ್ನು ರಾಜನು ವಿದೂಷಕನೊಂದಿಗೆ ಹೇಳಿಕೊಳುತ್ತಾನೆ.

ಆರ ಭಾಗ್ಯವೋ—ಆರ ಭೋಜ್ಯವೋ—ಚಾರುರೂಪಿದು—ಆಹಾ
ಆರ ಬಾಳಿಗಿವಳ ಸೊಬಗು—ಸಾರವಪ್ಪುದೋ ಕಾಣೆ ॥ ಪ. ॥

ಇನ್ನುಮಾರುಂ ಮೂಸದಲರು
ಬೆರಲು ಸೋಕದ ತಳಿರಿದು
ಸಾಣೆ ತೀಯದ ಮಣಿಯಿದು—ತುಟಿ
ಯಾನದಿರುವ ಜೇನು
ಅಧಿಕ ಪುಣ್ಯದ ಪಕ್ವ ಫಲದ
ಮಧುರ ಸಾರ ಘನವಿದು
ವಿಧಿ ಆದಾರಿಗಿದನು ಭುಜಿಪ
ಮುದವ ಸಲಿಪನೋ ಕಾಣೆ. (ಗೀತ ೯)

ಈ ಗೀತಾನುವಾದದ ಪಲ್ಲವಿ ಈ ಸನ್ನಿವೇಶಕ್ಕೆ ತಕ್ಕಂತೆ ಕುತೂಹಲ ಮಿಶ್ರಿತವಾಗಿ ಮೊದಲಾಗುತ್ತದೆ. ಕಾಳಿದಾಸನ ವೃತ್ತದ ಸರಳಾನುವಾದವಾದ ಈ ಗೀತದಲ್ಲಿ ಮೂಲದ ಆಶಯವೂ ಇದೆ. ಆದರೂ ಡಿ.ವಿ.ಜಿ. ಅವರು ಅದೇ ಅಭಿಪ್ರಾಯವನ್ನು ಬೇರೊಂದು ಎರಕದಲ್ಲಿ ಹೊಯ್ದು ಪಲ್ಲವಿಯನ್ನು ಓದುತ್ತಿದ್ದಂತೆಯೇ ಇಡೀ ವಾತಾವರಣದ ಕಲ್ಪನೆಯಾಗುತ್ತದೆ. ಸಂಸ್ಕೃತದ "ಅನಾಘ್ರಾತಂ ಪುಷ್ಪಂ" ಎಂಬ ಸುಪ್ರಸಿದ್ಧವಾದ ಉಕ್ತಿ ಬಸವಪ್ಪ ಶಾಸ್ತ್ರಿಗಳ ಅನುವಾದದಲ್ಲಿ 'ಮಧುವಾಸಿಸದಿರ್ದ ಪೂವು' ಎಂದು ಕಂಡುಬಂದರೆ, ಡಿ.ವಿ.ಜಿ. ಅವರ ಗೀತದಲ್ಲಿ 'ಇನ್ನುಮಾರುಂ ಮೂಸದಲರು' ಎಂದು ತುಸು ಭಿನ್ನವಾಗಿದೆ: ವಿರಹತಪ್ತನಾದ ದುಷ್ಯಂತನು ಆಕೆ ಯಾರ ಭಾಗ್ಯವೋ ಎಂಬ ಗುಂಗಿನಲ್ಲೇ ಇರುವುದರಿಂದ ಅದೇ ದೃಷ್ಟಿಯಿಂದ ಈ ಹೇಳಿಕೆಯನ್ನು ಮನುಷ್ಯನ ಪರವಾಗಿ ಅನುವಾದಿಸಿರುವಂತಿದೆ.

ಮೂರನೆಯ ಅಂಕದಲ್ಲಿ ಶಕುಂತಲೆಯ ವಿರಹತಪ್ತದ ಚಿತ್ರಣದ ಭಾಗವೇ ಹೆಚ್ಚು. ಗಿಡಗಳ ಮರೆಯಲ್ಲಿ ಅವಿತಿದ್ದ ದುಷ್ಯಂತನಿಗೆ ಅವಳ ಮನೋಭಿಲಾಷೆಯನ್ನು ಖಚಿತವಾಗಿ ತಿಳಿಯುವ ಕುತೂಹಲ. ಪ್ರಣಯಿಗಳಿಬ್ಬರ ಈ ಒಳಗುದಿಯನ್ನು ತಿಳಿಸುವ ಸಲುವಾಗಿ ಇಲ್ಲಿ ಐದು ಪದ್ಯಗಳನ್ನು ಆರಿಸಿಕೊಂಡಿರುತ್ತಾರೆ. ಇದರಲ್ಲಿ ಎರಡನ್ನು ಮಾತ್ರ ಇಲ್ಲಿ ಪರಿಶೀಲಿಸಿದರೆ ಸಾಕಾಗಬಹುದು.

ಪ್ರಣಯಿಗಳಿಬ್ಬರೂ ಏಕಾಂತದಲ್ಲಿರುವರು. ಇಬ್ಬರೂ ಪರಸ್ಪರ ಕಾತರವಿದ್ದವರು. ಒಟ್ಟಿಗೆ ಸೇರಿದಾಗ ಯಾವುದೋ ನಾಚಿಕೆ ಅಡ್ಡವಾಗುತ್ತದೆ. ಈ ಸೂಕ್ಷ್ಮ ಸನ್ನಿವೇಶವನ್ನು ಕಾಳಿದಾಸನು ಹೃದಯ ಮಿಡಿಯುವಂತೆ ಚಿತ್ರಿಸಿರುತ್ತಾನೆ. ಪ್ರಣಯಿಗಳಿಬ್ಬರ ಈ ಸಂಯಮ, ಲಜ್ಜೆಗಳು ಭೂಷಣಪ್ರಾಯವಾದುವು. ದುಷ್ಯಂತನ ಧರ್ಮಸಂಕಟವನ್ನು ಕಂಡರೆ ಶಕುಂತಲೆಯ ಸ್ಥಿತಿ ಸ್ವವಿದಿತವಾಗುತ್ತದೆ.

ಸಂತವಿಡುವೆನೆಂತೋ— ಈ ಕಾಂತೆಯು ॥ ಪ. ॥

ಸಂತಪ್ತಳೀತನ್ವಿ ಚಿಂತಾಗ್ನಿಯುರುಬಿಂದೆ
ಮಂದಸ್ಮಿತವನೀಕೆಯೊಳ್ ಕಾಣುವೆನೆಂದು ॥ ಅ.ಪ. ॥

ಅಲಸಿಕೆ ಕಳೆಯುವೆ—ಕುಳಿರಲರನು ತೊಯ್ದು
ನಳಿನೀಪತ್ರದೆ ಬೀಸಲೇಂ—ರಂಭೋರುವೆ
ನೆಲನೆ ನೀನ್ನೆನ್ನಂಕದೊಳ್—ತಾವರೆಗೆಂಪು
ಚೆಲುವಡಿಗಳನ್ ಒತ್ತಲೇಂ ॥
ನೋವು ಬೇವಸಗಳನೀಗಿ—ಕ್ಷೇಂ ಸುಖಮಿರ
ಲಾವುದು ಬೇಳ್ಪುದೋ—ಪೇಳುಪಚರಿಸುವೆ. (ಗೀತ ೧೨)

ಈ ಗೀತದ ಕಡೆಯ ಎರಡು ಪಂಕ್ತಿಗಳು ಡಿ.ವಿ.ಜಿ. ಅವರ ಒಕ್ಕಣೆ. ರಾಜನಾದವನು ಪ್ರಣಯಿಯನ್ನು ಉಪಚರಿಸಲು ಆಶಿಸುವ ಈ ದೃಶ್ಯ ಮನೋಜ್ಞವೇ ಸರಿ ! ಆಸೆ ಸಲ್ಲುವ ಹೊತ್ತಿನಲ್ಲಿ ವೃದ್ಧ ಗೌತಮಿಯ ಕರೆಯನ್ನು ಕೇಳಿ, ಶಕುಂತಲೆ ರಾಜನನ್ನು ಬಿಟ್ಟು ಹೋಗುವಳು. ದುಷ್ಯಂತನ ದುಃಖ ಹೇಳತೀರದು. ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಆಯಿತಲ್ಲಾ ಎಂದು ಆತನ ನೋವು ನೂರ್ಮಡಿಯಾಗುತ್ತದೆ. ಮೂಲದ ಪದ್ಯ ಎಷ್ಟು ಸೊಗಸೋ, ಡಿ.ವಿ.ಜಿ. ಅವರ ಗೀತವೂ ಸಹ ಅಷ್ಟೇ ಸವಿ ಮತ್ತು ಸಂಕ್ಷಿಪ್ತ.

ಮರುಳಾಯಿತೇ ಮತಿ—ಕೊರಗೆನಗಿನ್ನು ಗತಿ
ಕರಗತವರವ ಬೀ–ಸಾಡಿದನೇಕಹಾ ಪ.
ಅಡಿಗಡಿಗವಳ್ ಬೆರಳ್—ತುಟಿಗೆ ಮುಚ್ಚುತ್ತಿರೆ
ಬಿಡುಬಿಡೆಂಬರೆಯುರೆ—ತಡೆನುಡಿಯಿಂಬಿರೆ
ನಿಡಿದೆವೆಗಣ್ಣಿನಾ—ಮೊಗವೋರೆಗೈದವಳ
ಪಿಡಿದೆತ್ತಿದೆಂ ಗಲ್ಲವಾ—ಚುಂಬಿಸದಾದೆ (ಗೀತ ೧೩)

ಬಸವಪ್ಪ ಶಾಸ್ತ್ರಿಗಳು ಯಾವುದನ್ನು ಒಂದು ವೃತ್ತದಲ್ಲಿ ಅಳವಡಿಸಿರುವರೋ ಅವೆಲ್ಲವನ್ನೂ ಡಿ.ವಿ.ಜಿ. ಅವರು ಕಿರಿದರಲ್ಲಿಯೇ ಹುದುಗಿಟ್ಟಿರುವರು. ಈ ಗೀತವನ್ನು ಪುನಃ ಪುನಃ ಓದಿದರೆ ಪ್ರಣಯಪ್ರಪಂಚದಲ್ಲಿ ನಿರಾಕರಣೆಯೂ ಆದರಣೇಯ ಭಾವಸೂಚಕವೆನ್ನಿಸುತ್ತದೆ. (when lovers say 'NO' means 'YES'.) ಶಕುಂತಲೆ ಅತ್ತ ಸರಿದರೂ ಆವರೆಗೆ ಅವಳಿದ್ದ ಬಳ್ಳಿಮನೆಯನ್ನು ಬಿಟ್ಟು ಬರಲು ದುಷ್ಯಂತನಿಗೆ ಮನಸ್ಸಿಲ್ಲ. 'ನಿರ್ಗಂತುಂ ಸಹಸಾ ನ ವೇತಸಗೃಹಾತ್ ಶಕ್ನೋಮಿ ಶೂನ್ಯಾದಪಿ" ಎಂಬ ಮೂಲದ ಭಾವವನ್ನು ಬಸವಪ್ಪ ಶಾಸ್ತ್ರಿಗಳು "ಶೂನ್ಯಮೆನಿಪ್ಪೊಡಂ ಪೊರಮಡಲ್ಕಾನಾರೆನೀ ತಾಣದಿಂ" ಎಂದು ಅನುವಾದಿಸಿದ್ದರೆ ಡಿ.ವಿ.ಜಿ. ಅವರು "ಶೂನ್ಯ ಮಿಕ್ಕರಿಗೇನೋ—ಪೂರ್ಣವೆನ್ನೆದೆಗಿದು" ಎಂದು ಅಮಿತಾರ್ಥವನ್ನು ಮಿತಪ್ರಮಾಣದಲ್ಲಿಯೇ ಹೇಳಿರುವರು.

ನಾಟಕದ ನಾಲ್ಕನೆಯ ಅಂಕವಾದರೋ ಆದಿ ಅಂತ್ಯವಿಲ್ಲದಷ್ಟು ಅನಂತವಿಕಾರಗಳನ್ನು ಒಳಗೊಂಡಿರುತ್ತದೆ. ಇಲ್ಲಿಯೂ ಡಿ.ವಿ.ಜಿ. ನಾಲ್ಕೇ ನಾಲ್ಕು ಸನ್ನಿವೇಶಗಳನ್ನು ಆರಿಸಿಕೊಂಡಿರುವರು. ಅವರ ಗಮನವೆಲ್ಲ ಶಕುಂತಲೆ ಮತ್ತು ದುಷ್ಯಂತರ ಹೃದಯದ ಬೇಗುದಿಯ ಕಡೆಗೆ. ಅವರಿಗೆ ಅತಿಪ್ರಿಯವಾದ ಮತ್ತೊಂದು ಪಾತ್ರವೆಂದರೆ ಕಣ್ವರ್ಷಿಗಳು. ಈ ಅಂಕದಲ್ಲಿ ಅವರು ಪ್ರಧಾನ. ಸಾಕುಮಗಳು ಶಕುಂತಲೆಯನ್ನು ಅಗಲಬೇಕಾದ ಯಾತನೆ ಒಂದು ಕಡೆ ಅವರನ್ನು ಬಾಧಿಸುತ್ತದೆ ; ಮತ್ತೊಂದು ಕಡೆ ಎಂದಿದ್ದರೂ ಅವಳು ತಮ್ಮಲ್ಲಿ ನ್ಯಾಸವಾಗಿದ್ದವಳೆಂಬ ಧರ್ಮದೃಷ್ಟಿ. ಡಿ.ವಿ.ಜಿ. ಅವರ ಗೀತವಾದರೋ ಕಾಳಿದಾಸನ ಹೃದಯಸ್ಪರ್ಶಿಯಾದ ಕಣ್ವರಾಡುವ ಮಾತುಗಳಿಗೆ ವ್ಯಾಖ್ಯಾನ ಬರೆದಂತಿದೆ.

ತೆರಳುವಳಿಂದೆಮ್ಮ ಬಾಲೆ ಶಕುಂತಲೆ ।
ಉರದೊಳ್ ಅದೇನೋ ಸೆಲೆ—ವ್ಯಾಕುಲದಲೆ ॥ ಪ.

ಕೊರಲನೊತ್ತುವುದದು—ದೊರೆಯದು ಮಾತಿಂಗೆ
ಸುರಿವಶ್ರುಧಾರೆಯಿಂ—ಕಣ್ಣ ಕಟ್ಟುವುದದು ಅ.ಪ.

ಜನನೀ ಜನಕರೆತ್ತಲೋ—ಈ ಅಣುಗಿಗೆ
ವನದೇವೀ ಶಿಶುವಿವಳೋ—ಎಂತಾದೊಡಂ
ಅನುಪಾಲ್ಯಳಿವಳೆಂದು ನಾಂ—ಚಿಂತಿಸಲದು
ಋಣ ಪಾಶವೆನಗಾಯಿತೇ ॥

ವನದಿ ನೆಲಸಿದ ಮುನಿಯ ಪಾಡಿದು
ಮನೆಯೊಳಿರ್ಪರ ಮನದ ಗತಿಯೇಂ
ಮನುಜ ಹೃದಯದ ನೇಹದೆಳತವೆ
ಜನುಮ ಪಾವನ ತೀರ್ಥವಾಗದೆ (ಗೀತ ೧೫)

ಇಲ್ಲಿ ಡಿ.ವಿ.ಜಿ. ಅವರಿಗೆ ಕಾಳಿದಾಸನ ಪದ್ಯ ನಿಮಿತ್ತಮಾತ್ರವಾಗಿದೆ. ಅಲ್ಲಿನ ಯಾವ ಭಾವವನ್ನೂ ಬಿಟ್ಟಿಲ್ಲ ; ಆದರೆ ಅವರ ಚಿಂತನೆ ಅಷ್ಟಕ್ಕೇ ವಿರಮಿಸುವುದಿಲ್ಲ

ಮೂಲಕ್ಕೆ ಧಕ್ಕೆ ಬಾರದೆಂಬ ಕಟ್ಟುನಿಟ್ಟಿನ ದೃಷ್ಟಿಯನ್ನು ಬಸವಪ್ಪ ಶಾಸ್ತ್ರಿಗಳ ವೃತ್ತದಲ್ಲಿ ಕಾಣಬಹುದು. ಅವರು ರಚಿಸಿರುವ ರಂಗಗೀತವಾದರೂ ಇನ್ನೂ ಸರಳ ; ಸುಸ್ಪಷ್ಟ :

ಎಂತು ಕಳುಹುವೇ ಸುತೆಯ । ನೆಂತು ಕಳುಹುವೇ ।
ಚಿಂತೆ ಚಿತ್ತಕೆ । ಪಿರಿದು ಕಾಂತಾಸದ್ಮಕೆ ॥೧॥

ತಡೆದ ದುಃಖದೆ ನುಡಿಯುಂ । ತಡಬಡಿಸುತಿದೆ ।
ಇಡಿದ ಬಾಷ್ಪ ಕಣ್ಗಡೆಯ ತುಂಬಿದೆ ॥ ॥೨॥

ಅಹಹ ಮುನಿಗಳಾದ ಮಗು । ದುಃಖವಿಂತಿರೆ
ಗೃಹಿಗಳಣುಗಿಯ ಕಳುಹಿ । ಸಹಿಸಬಲ್ಲರೆ ॥೩॥

ಕಣ್ವರು ತಾವು ಮಾತ್ರವಲ್ಲದೆ, ಶಕುಂತಲೆಗೆ ಪ್ರಿಯವಾಗಿದ್ದ ವನ, ಲತೆಗಳನ್ನೂ ಇತರರನ್ನೂ ಆಕೆಗೆ ಶುಭ ಕೋರುವಂತೆ ಕೇಳಿಕೊಳ್ಳುವರು. ಇಲ್ಲಿಯೂ ಡಿ.ವಿ.ಜಿ. ಅವರು ತಮಗೆ ಸಹಜವಾದ ಸಹಾನುಭೂತಿಯ ಸಾಲುಗಳನ್ನು ಕಡೆಯ ನುಡಿಯಲ್ಲಿ ಸೇರಿಸಿರುತ್ತಾರೆ :

ಮಮತೆಯುಳ್ಳೊಡನಾಡಿ ತನ್ನಯ
ರಮಣಸದನವ ಸೇರಿ ಜೀವ
ದ್ರುಮವ ಸಫಲಂಗೈವಳಿವಳನು
ವಿಮಲಮಂಗಲಗೀತದಿಂ ನೀಂ (ಗೀತ ೧೬)

ತುಲನೆ ಮಾಡಿ ಮೂಲಾಂಶಗಳನ್ನು ಆರಿಸಿಕೊಂಡಿರುವರೋ ಎಂಬಂತೆ ಐದನೆಯ ಪ್ರಕ್ಷುಬ್ಧಾಂಕದಲ್ಲಿ ಐದು ಸನ್ನಿವೇಶಗಳನ್ನೂ ಆರನೆಯ ಪಶ್ಚಾತ್ತಾಪಾಂಕದಲ್ಲಿ ಆರು ಸನ್ನಿವೇಶಗಳನ್ನೂ ಸಮಾಲೋಚಿಸಿರುವರು.

ಐದನೆಯ ಅಂಕದ ಪ್ರಾರಂಭದಲ್ಲಿ ಬರುವ ಹಂಸಪದಿಕೆಯ ಹಾಡನ್ನು ಕುರಿತು ವಿದ್ವಾಂಸರು ಏನೇ ಹೇಳಲಿ, ಅದು ಪುರುಷನ ಚಂಚಲತೆಯನ್ನೂ ಅಬಲೆಯ ಅಸಹಾಯಕತೆಯನ್ನೂ ಧ್ವನಿಸುತ್ತದೆ. ಡಿ.ವಿ.ಜಿ. ಅವರು ಮೂಲ ಪದ್ಯವನ್ನು ತಮ್ಮ ಗೀತದ ಮೊದಲನೆಯ ನುಡಿಯಲ್ಲಿ ಯಥಾವತ್ತಾಗಿ ಅನುಸರಿಸಿದರೆ, ಎರಡನೆಯ ನುಡಿಯಲ್ಲಿ ಸ್ವಾಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಅದರ ಸ್ವಾರಸ್ಯವನ್ನು ನೋಡಬಹುದು.

ಕೆಳೆನಂಟಿನ ಪಾಡಿಸಿತೇನೆ ?
ಸುಳಿದೆಲರವೊಲದು ಶುಚಿಯೆದೆಯ
ಕುಲುಕಿಸಿ ಸರಿವುದೆ ನಲವಿಡದೆ ?
ಬಳಲಿಸದೇನದು ಜೀವವನು ? (ಗೀತ ೧೯)

ಮೊದಲಿನ ನುಡಿಯಲ್ಲಿ ಮಧುಕರನ ಚಂಚಲತೆ ಕಂಡುಬಂದರೆ, ಎರಡನೆಯದರಲ್ಲಿ ಗಾಳಿಯ ಅಸ್ಥಿರತೆ ತೋರಿಬರುತ್ತದೆ. ಈ ಎರಡು ನುಡಿಗಳೂ ಪರಸ್ಪರ ಪೂರಕವಾಗಿದೆ.

ಹಂಸಪದಿಕೆಯ ಹಾಡನ್ನು ಕೇಳಿದ ದುಷ್ಯಂತನು ವಿದೂಷಕನ ಮಾತನ್ನು ಅಲಕ್ಷಿಸಿ, ಉದಾಸೀನದಿಂದ ಅವನನ್ನು ಅತ್ತ ಕಳುಹಿಸಿಕೊಟ್ಟರೂ ಆ ಹಾಡಿನ ಪ್ರಭಾವ ಅವನ ಮನಸ್ಸಿನಲ್ಲಿ ಏನೋ ಅನಿರ್ವಚನೀಯ ವಿಹ್ವಲತೆಯನ್ನು ಉಂಟು ಮಾಡಿದೆ. ಡಿ.ವಿ.ಜಿ. ಅವರ ಗೀತದ ಅನುಪಲ್ಲವಿಯಲ್ಲಿ ರಾಜನ ಚಿತ್ತವ್ಯಾಕುಲತೆ ಚೆನ್ನಾಗಿ ವೇದ್ಯವಾಗುತ್ತದೆ. "ಜೀವಕೆಂದೋ ಸುದ–ಸ್ನೇಹಂಗಳದರ ಸ್ವಭಾವದೊಳ್ ಸ್ಥಿರಮಿರುತಾಗಾಗ ಮೊಳೆವುವು." ನಾವು ತಿಳಿದಂತೆ ಅವನು ದುರ್ವಾಸರ ಶಾಪದಿಂದ ವಿಸ್ಮೃತಿಯ ಪಾತಾಳದಲ್ಲಿ ಕೆಡವಿ ಬಿದ್ದಿದ್ದಾನೆ. ಬರಲಿರುವ ನಾಟಕದ

ಸನ್ನಿವೇಶಗಳಲ್ಲಿ ಅದರ ನಿಷ್ಠುರ ಪ್ರಭಾವ ಅಲ್ಲೋಲ ಕಲ್ಲೋಲವನ್ನುಂಟುಮಾಡಲಿದೆ. ಈ ಎಲ್ಲಕ್ಕೂ ಪೂರ್ವ ಪೀಠಿಕೆಯೋ ಎಂಬಂತೆ ಏಕಾಂತ ಮನಸ್ಕನಾಗಿದ್ದ ರಾಜನಲ್ಲಿ ಈ ಅಸ್ವಾಸ್ಥ್ಯ ಕಂಡುಬರುತ್ತಿದೆ. ಡಿ.ವಿ.ಜಿ. ಅವರ ಗೀತದ ಅನುಪಲ್ಲವಿಗೆ ಇಲ್ಲಿನ ಎರಡು ನುಡಿಗಳೂ ಪುಷ್ಟಿ ಕೊಡುತ್ತವೆ. ಅವುಗಳಲ್ಲಿ ಒಂದಕ್ಕೆ ಅವರು ಕಾಳಿದಾಸನಿಗೆ ಋಣಿಯಾದರೆ, ಇನ್ನೊಂದು ಅವರ ಸ್ವಂತ ಸೃಷ್ಟಿ. ಅದರಲ್ಲಿ ಪ್ರಕೃತ ಸನ್ನಿವೇಶದ ಪ್ರತಿಬಿಂಬ ಸ್ಫುಟವಾಗಿದೆ :

ನೆನಸಿನೊಳಗಣಗಿಹುದು ಪಿಂತಣ
ಖಣದ ಬೇರದು ಕಾಲಮನುವಿರೆ
ಕೊನರುವುದು ಕೆಳೆನಂಟನರಸುತ
ಮನದ ನಂಟೇಂ ವಿಧಿಯಗಂಟೋ (ಗೀತ ೨೦)

ಇಲ್ಲಿ ಕೇಳಿಬರುವ 'ಮನದ ನಂಟೇಂ ವಿಧಿಯಗಂಟೋ' ಎಂಬ ಸಾಮಾನ್ಯೋಕ್ತಿ ಯಂತೂ ಅರ್ಥವತ್ತಾಗಿದೆ.

ರಾಜನ ಈ ಡೋಲಾಯಮಾನ ಚಿತ್ತಾವಸ್ಥೆಯ ಹಿನ್ನೆಲೆಯಲ್ಲಿ ರಾಜನ ಮುಂದಿನ ವರ್ತನೆಯನ್ನು ವಿಶ್ಲೇಷಿಸಬೇಕಾಗುತ್ತದೆ. ಆಸ್ಥಾನಕ್ಕೆ ಆಗಮಿಸಿದ್ದ ಶಕುಂತಲೆಯನ್ನು ರಾಜನು ಏನೇನು ಮಾಡಿದರೂ ಗುರುತಿಸಲಾರನು. ವೃದ್ಧ ಗೌತಮಿಯ ಬೀಳ್ಕೊಡಿರಿ ಎಂಬ ಮಾತುಗಳು ನಾಟಕಕ್ಕೆ ಸಹಜವಾದ ದ್ವಂದ್ವಾರ್ಥ ಗಳನ್ನು ಒಳಗೊಂಡಿದೆ. ಕಣ್ವರ ಹಾರೈಕೆಯಲ್ಲಿ ಶಕುಂತಲೆಗೆ ತುಂಬು ಬದುಕಿನ ಭಾಗ್ಯವೆಲ್ಲ ದೊರೆಯಲೆಂಬ ಆಸೆ, ಆದರೆ ಆಕೆಗಾಗಿ ವಿಧಿ ಕಟ್ಟಿಟ್ಟಿರುವ ಬುತ್ತಿಯೇ ಬೇರೆ !

ಶಕುಂತಲೆಗೆ ಸಂಭವಿಸಲಿರುವ ಅಶುಭ ಸೂಚಕವೋ ಎಂಬಂತೆ ಅಲ್ಲೇ ಇದ್ದ ಚಕ್ರವಾಕ ದಂಪತಿಗಳು, ಒಂದು ತಾವರೆಯ ಎಲೆ ಅಡ್ಡಬಂದ ಮಾತ್ರಕ್ಕೆ ತಮಗೆ ಅಗಲಿಕೆ ಬಂದಿತೆಂದು ಕೊರಗುವುದು ಕೇಳಿಬರುತ್ತದೆ. ಶಕುಂತಲೆ ಅದರ ಕೃತಕ ವಿರಹದತ್ತ ತನ್ನ ಸಖಿಯರ ಗಮನ ಸೆಳೆಯುವಳು. ಅವರೆಗೆ ತಾನಂ ಪ್ರಿಯನಿದ್ದ ಅಗಲಿಕೆಯ ಯಾತನೆಯೂ ಆಕೆಯ ಎದೆಯನ್ನು ಮೀಟುವುದು. ಆಕೆ "ದುಷ್ಕರ ಮಹಂ ಕರೋಮೀತಿ" (ನಾನಲ್ಲವೆ ಅತಿ ದುಷ್ಕರವಾದುದನ್ನು ಮಾಡುವಳು !) ಎನ್ನುವಳು. ಕಾಳಿದಾಸನ ಈ ಗದ್ಯ ಒಳ್ಳೆಯ ಪದ್ಯದ ಧ್ವನಿಯನ್ನು ಒಳಗೊಂಡು, ಅದಕ್ಕೂ ಒಂದು ಕೈ ಮಿಗಿಲಾಗಿದೆ.

ಈ ಗದ್ಯಭಾಗವನ್ನು ಹಿಂಜಿ ಹಿಂಜಿ ಡಿ.ವಿ.ಜಿ. ಅವರು ಇಲ್ಲಿ ಆ ಚಕ್ರವಾಕ ಮಿಥುನಗಳು ಮತ್ತು ತಾವರೆಯೆಲೆಯನ್ನು ಸೇರಿಸಿಕೊಂಡು ನಿಡಿದಾದ ಒಂದು ಸಂವಾದ ಗೀತವನ್ನೇ ಸೃಷ್ಟಿಸಿರುತ್ತಾರೆ. ಈ ಪ್ರಸಂಗವೇಕೋ ಇಲ್ಲಿ ರಸೋತ್ಕರ್ಷ ವೆನ್ನಿಸುವುದಿಲ್ಲ. ಇದರ ಇತ್ಯರ್ಥವನ್ನು ರಸಿಕರಿಗೆ ಬಿಡುತ್ತೇನೆ.

ಈ ಅಂಕದ ಕಥೆಯನ್ನು ಮುಗಿಸುವಲ್ಲಿ ಕಣ್ವರು ತಮಗೆ ತಾವೇ ತೃಪ್ತಿಪಟ್ಟು ಕೊಳ್ಳುವ ಮೂಲಪದ್ಯವೇ ಸಂದೇಶಸದೃಶವಾಗಿದೆ :

ಅರ್ಥೋ ಹಿ ಕನ್ಯಾ ಪರಕೀಯ ಏವ
ತಾಮದ್ಯಸಂಪ್ರೇಷ್ಯ ಪರಿಗ್ರಹೀತುಃ
ಜಾತೋ ಮಮಾಯಂ ವಿಶದಃ ಪ್ರಕಾಮಂ
ಪ್ರತ್ಯರ್ಪಿತನ್ಯಾಸ ಇವಾನ್ತರಾತ್ಮಾ

ಬಸವಪ್ಪ ಶಾಸ್ತ್ರಿಗಳ ಕಂದಪದ್ಯವಾದರೋ ಇಷ್ಟೇ ಉತ್ಕೃಷ್ಟವಾಗಿದೆ :

ಕನ್ನೆ ಪೆರನೊಡವೆಗಡ ಪತಿ
ಸನ್ನಿಧಿಗಿಂದವಳ ಕಳುಹಿ ನಿರ್ಮಲವಾದ
ತ್ತೆನ್ನಯ ಮಾನಸಮಾದಂ
ತನ್ನಯ ಬಳಿಯಿಟ್ಟೊಡವೆಯ ಮಗುಳಿತ್ತನವೊಲ್

ವ್ಯಾಕುಲಚಿತ್ತರಾದ ಕಣ್ವರ ಬಾಯಲ್ಲಿ ಹಿತಮಿತ ನುಡಿಗಳು ಬರುವುದು ಅಂಕದ ಮುಕ್ತಾಯಕ್ಕೆ ತಕ್ಕಂತಿದೆ. ಹೀಗಿರಬೇಕಾದರೆ ಡಿ.ವಿ.ಜಿ. ಅವರ "ನತಿ ಕೋಟಿ ನಿನಗೀಶ್ವರಾ" ಎಂಬ ನಿಡಿದಾದ ಗೀತ ಈ ಸನ್ನಿವೇಶಕ್ಕೆ ಎಷ್ಟರಮಟ್ಟಿಗೆ ಸಮುಚಿತ ವೆಂಬ ಪ್ರಶ್ನೆ ನಮ್ಮನ್ನು ಬಾಧಿಸದೆ ಇರದು. ಆದರೆ ಕಣ್ವರ ಹೃದಯದ ಸೆಲೆಯನ್ನು ಅವರಂತೆ ಗ್ರಹಿಸಿದವರು ವಿರಳ. ಮೂಲದ ಭಾವವನ್ನು ಕೈಬಿಡದೆ, ಅವರು ಹೆಚ್ಚಾಗಿ ಸೇರಿಸಿರುವ ವಿಭಾಗದಲ್ಲಿ "ಸ್ವತೆಯನೆಲ್ಲವನೀಶಾ-ರ್ಪಿತಗೈದು ಬದುಕೆಂಬ ಶ್ರುತಿಮತವಾಗಿಸಿದಯ್—ಪರಾತ್ಪರ" ಎಂಬ ಉಕ್ತಿಗಳು ಆ ಋಷಿಗಳ ಮನಸ್ಸಮಾಧಾನವನ್ನೂ, ನಿರ್ಲಿಪ್ತ ಸ್ವಭಾವವನ್ನೂ ವಿಶದಪಡಿಸುತ್ತದೆ. ಅವರ ಕಣ್ವದರ್ಶನ ಇಲ್ಲಿ ಸಾರ್ಥಕವೆನ್ನಿಸುತ್ತದೆ.

ಕಾಳಿದಾಸನ ನಾಟಕದ ಐದನೆಯ ಅಂಕ ದುರ್ವಾಸ ಶಾಪದ ಕರಾಳಛಾಯೆಯ ಒಂದು ಮುಖವಾದರೆ ಆರನೆಯ ಅಂಕ ಆ ಶಾಪವಿಮೋಚನೆಯ ಅರುಣೋದಯದ ಅಂಕುರಾರ್ಪಣೆ. ಡಿ.ವಿ.ಜಿ. ಅವರು ಈ ಎರಡು ಅಂಕಗಳನ್ನೂ ಪರಸ್ಪರ ಬೇರೇನೂ ಉಪಾಯ ಕಾಣದೆ ಆಕೆಯ ಅವಕುಂಠನವನ್ನು ಸ್ವಲ್ಪ ಸರಿಸಬೇಕೆಂದು ಕೇಳಿಕೊಳ್ಳುವಳು. ಕಾಳಿದಾಸನು ಇಲ್ಲಿ ಗದ್ಯವನ್ನು ಬಳಸಿದ್ದರೆ ಅದೇ ಅಭಿಪ್ರಾಯವನ್ನೇ ಡಿ.ವಿ.ಜಿ. ಅವರು ಗೀತಕ್ಕೆ ಅನುವಾದಿಸಿದ್ದಾರೆ. ಮೂಲಕ್ಕಿಂತಲೂ ಗೀತ ತುಸು ಬೆಳೆದಿದೆ ಎನ್ನಿಸದಿರಲಾರದು. ಆದರೂ ಮೊದಲೆರಡು ಬರುವ ಪಲ್ಲವಿ. ಅನುಪಲ್ಲವಿಗಳು ಗೌತಮಿಯ ಇಂಗಿತವನ್ನು ಸಮರ್ಥವಾಗಿ ವ್ಯಕ್ತಪಡಿಸುತ್ತವೆ. 'ನೆನಪನಾಗಿಪೆನೀ ತಂಗೆ—ಶಕುಂತಲೆ, ಕ್ಷಣ ನಾಣ್ಬನಂದು ನೀ—ನಿರಿಸು—ಓ ಸುಮಶೀಲೆ' 'ಇನಿಸು ಮುಮ್ಮುದುಕೋರೆ-ಗೈಯಲುನೋಳ್ಪನು ತನಗಂದು ಸುಧೆಯ ಸೂಸಿದ ಶಶಿ ಮುಖವನು'. ಗೀತದ ಮುಂದಿನ ಭಾಗದಲ್ಲಿ ಗೌತಮಿಯ ಬಾಯಲ್ಲಿ ಬರುವ ಮಾತುಗಳೆಲ್ಲ ಆಕೆಯ ಕಾರ್ಯಮಿತಿಗೆ ಪೂರಕವಾದದ್ದು ಎನ್ನಿಸುತ್ತದೆ. ಆಕೆಗೆ ದುಷ್ಯಂತ ನಲ್ಲಿ ಇರುವ ತುಂಬುನಂಬಿಕೆಯನ್ನು ವ್ಯಕ್ತಪಡಿಸುವುದೇನೋ ನಿಜ. ಡಿ.ವಿ.ಜಿ ಅವರು ವ್ಯಕ್ತಪಡಿಸಿರುವಂತೆ ಇದು ಪ್ರಜ್ಞಾಪೂರ್ವಕವಾಗಿ ಅವರು ನೀಡಿರುವ. ವ್ಯಾಖ್ಯಾನ. ಗೌತಮಿಯ ಕೋರಿಕೆಯಂತೆ ಅವಕುಂಠನವನ್ನು ಸರಿಸಿದ ಶಕುಂತಲೆಯ

ಸೌಂದರ್ಯವನ್ನು ಕಂಡು ರಾಜನು ಬೆರಗಾಗುವನೇ ವಿನಾ ಮರುಳಾಗಿ ಮುಂದು ವರಿಯುವುದಿಲ್ಲ. ಇದು ರಾಜಧರ್ಮಕ್ಕೆ ಭೂಷಣ ; ಆದರೆ ಶಕುಂತಲೆಯ ಪಾಲಿಗೆ ಪಾಷಾಣವೇ ಸರಿ ! ರಾಜನ ಹೃದಯದ ಹೊಯ್ದಾಟವನ್ನು ಕಾಳಿದಾಸನು ಎಷ್ಟು ಕಲಾಪೂರ್ಣವಾಗಿ ನಿರೂಪಿಸಿರುವನೋ ಅಷ್ಟೇ ಹಿತಮಿತವಾಗಿ ಡಿ.ವಿ.ಜಿ. ಅವರು ಗೀತವನ್ನು ರಚಿಸಿರುವರು.

ಭುಂಜಿಸಲಾರೆನು ನಾನು—ತ್ಯಜಿಸಲುಮ್ ಆರೆನು
ಋಜುಮಾರ್ಗವೆನಗಾವುದೋ—ಇಬ್ಬಗೆಯಲಿ ।। ಪ. ।।
ಪದಪಿಂದೆ ತಾನಾಗಿ ಬಂದಿರ್ಪ ಕಾಂತೆಯ
ಮೊದಲೇಂ ನಾ ಗ್ರಹಿಸಿರ್ದೆನೋ—ಅಂತಲ್ಲವೋ ।। ಅ.ಪ. ।।
ಮುಂಜಾವದಲಿ ಮಲ್ಲೀಬನಕೆ ಬಂಡುಣಿ ಬಂದು
ಮಂಜು ಮೊಗ್ಗನು ಸುತ್ತ ಮುಸುಕಿರೆ ಕಂಡು
ಹಿಂಜರಿಯುತೆ ಮತ್ತಮತ್ತಲೆ ಸುಳಿವಂತೆ
ಸಂದೇಹಿಯಾಂದೋಳನವೆನ್ನ ಮನಕೀಗ (ಗೀತ 22)

ದುಷ್ಯಂತನ ಈ ವರ್ತನೆಗೆಲ್ಲ ಅವನಿಗರಿವಿಲ್ಲದೆ ಆವರಿಸಿಕೊಂಡಿರುವ ದುರ್ವಾಸರ ಶಾಪವೇ ಕಾರಣವೆಂದು ಬಲ್ಲವರಿಗೆ ಅವನು ಅಪರಾಧಿಯೆನ್ನಿಸುವುದಿಲ್ಲ. ಅವನ ಸಂದೇಹಗ್ರಸ್ತವಾದ ಸಂಕಟವನ್ನು ಕಂಡು ಯಾರಿಗಾದರೂ ಪಶ್ಚಾತ್ತಾಪವಾಗದೆ ಇರದು. ಅಸಹಾಯಕಳಾದ ಶಕುಂತಲೆ ರಾಜನ ಸ್ಮೃತಿಯನ್ನು ಜಾಗೃತಗೊಳಿಸು ವಂತೆ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗುವುವು. ಈ ಅಂಕದ ಪ್ರಮುಖ ಘಟನೆ ಯಾದ ಉಂಗುರದ ಪ್ರಸಂಗವನ್ನು ಏಕೆ ಕೈಬಿಟ್ಟಿರುವರೋ ಕಾಣೆ ! ಇಲ್ಲಿನ ಉಳಿದ ಘಟನೆಗಳೆಲ್ಲ ಅಧ್ಯಾಹಾರ.

ಡಿ.ವಿ.ಜಿ. ಅವರ ಆರನೆಯ ಅಂಕದ ಕಥಾಸನ್ನಿವೇಶ ಉಂಗುರದಿಂದ ಪ್ರಾರಂಭ ವಾಗುವುದು ದುರ್ವಾಸಶಾಪವಿಮೋಚನೆಯ ಶುಭ ಸೂಚಕ. ಆರನೆಯ ಅಂಕ ಪೂರ್ತಿಯಾಗಿ ದುಷ್ಯಂತನ ಪಶ್ಚಾತ್ತಾಪಕ್ಕೆ ಮೀಸಲು. ಅಷ್ಟೇ ಅಲ್ಲದೆ ಅವನ ನಡತೆಗೆ ಅಂಟಿಕೊಂಡಿದ್ದ ಕಳಂಕ ನಿವಾರಣೆಗೂ ಮುಡಿಪಾಗಿದೆ. ಡಿ.ವಿ.ಜಿ. ಅವರು ಈ ಭಾಗದಲ್ಲಿ ದುಷ್ಯಂತನ ನಡೆ-ನುಡಿಗಳನ್ನು ಮಾತ್ರವೇ ಆಯ್ಕೆ ಮಾಡಿಕೊಂಡಿರು ವುದು ಉಚಿತವಾಗಿದೆ. ಹಾಗೆ ನೋಡಿದಲ್ಲಿ, ಇದು ಒಂದು ರೀತಿಯಲ್ಲಿ ಅವನ ಸ್ವಗತವೆನ್ನಬಹುದು. ಈ ಮುದ್ರಿಕೆಯುಂಗುರವನ್ನು ಕಂಡೊಡನೆಯೇ ಅವನ ಸ್ಮೃತಿ ಅಲೆ ಅಲೆಯಾಗಿ ಅರಳಲು ಆರಂಭಿಸುತ್ತದೆ. ಮನೆಯ ಬಾಗಿಲಿಗೆ ಬಂದ ಇನಿಯಳನ್ನು ಗುರುತಿಸದೆ ಹೋದುದಕ್ಕಾಗಿ ಹೃದಯ ತಲ್ಲಣಿಸುತ್ತದೆ. ಡಿ.ವಿ.ಜಿ. ಅವರ ಗೀತದ ಸ್ವಾರಸ್ಯವಾದ ಪಂಕ್ತಿಗಳು ಹೀಗಿವೆ :

ವಿಧಿಯುಪಹಸಿತಕೆ ಬಲಿಯೆನ್ನ ಜೀವಿತ
ರುದಿತವಾಯಿತು ಜನ್ಮ—ಇದೇಂ ಕರ್ಮ ।। ಪ. ।।
ಆ ಶಂಕೆಪೋಯ್ತೆನಲ್ ಈ ಸಂಕಟದ ಪಾಡು
ನಿಶ್ಚಿಂತೆಯೆನಗಾಗದೇನ್ ಈ ಬಾಳೊಳು ।।ಅ.ಪ. ।।
(ಗೀತ ೨೪)

ಈ ಸಾಲುಗಳು ಅವನ ಎದೆಗುದಿಯ ಮಾರ್ದನಿಗಳೇ ಸರಿ. ಈ ಗೀತದ ಮೊದಲನೆಯ ನುಡಿ ಕಾಳಿದಾಸನ ಪದ್ಯದ ಪ್ರತಿಬಿಂಬ. ಪ್ರಕೃತ ಸನ್ನಿವೇಶದಿಂದ ಸ್ಫೂರ್ತಿಗೊಂಡ ಡಿ.ವಿ.ಜಿ. ಅವರು ಈ ಗೀತವನ್ನು "ನೆನಪಿನಿಂದಂ ಮರೆವೆ ಮೇಲೇಂ ಪ್ರಣಯ ವಿಷಮಸ್ಥಿತನ ಜೀವಕೆ ?" ಎಂಬ ಪಂಕ್ತಿಗಳಿಂದ ಮುಕ್ತಾಯ ಮಾಡುವುದಂತೂ ಮನಃಸ್ಪರ್ಶಿಯಾಗಿದೆ.

ಹಿಂದಿನ ಅಂಕದಲ್ಲಿ ಕುಪಿತಳಾದ ಶಕುಂತಲೆ ರಾಜನನ್ನು ಅನಾರ್ಯನೆಂದು ಧಿಕ್ಕರಿಸಿ ದೃಷ್ಟಿ ಬೀರಿದ ಸಂದರ್ಭವನ್ನು ಸ್ಮರಿಸಿದಂತೆಲ್ಲ ದುಷ್ಯಂತನ ಸಂಕಟ ಬಹು ಮಡಿಯಾಗುತ್ತದೆ. ಆ ಕಟ್ಟಕಡೆಯ ಬಿರುನೋಟದ ಚಿತ್ರಣ ಮೂಲಕ್ಕೆ ಅನು ಗುಣವಾಗಿ ಅನುವಾದದಲ್ಲಿಯೂ ಮೂಡಿ ಬಂದಿದೆ.

ಕಣ್ಣ ನೋಟದ ಚುಚ್ಚು—ಎನ್ನೀ ಜೀವಕೆ ಕಿಚ್ಚು
ಅನ್ಯಾಯವೇನಾಯಿತೋ—ಆ ಪೆಣ್ಣಿಗೆ ॥ ಪ. ॥

ತನ್ನೆಲ್ಲ ದುಗುಡಕೆ ಕಾರಣ ನಾನೆಂಬ
ಮನ್ಯುವಾಕೆಯ ಕಡೆಗಣ್ಣಿಂದ ಸಿಡಿಯಿತೇ ॥ ಅ.ಪ. ॥

ನೀನಾರೋ ಪೋಗೆಂದು—ನಾನೆನ್ನುತಿರಲಾಕೆ
ತಾನಾತ್ಮೀಯರ ನೋಡಿ—ಪಿನ್ ಬರ್ಪೆನೆನಲು
ಸಿಲ್ಲಿಲ್ಲಿ ನಿಲ್ಲೆಂದಾ ಪಿರಿಯರ್ ಗಜರಿದರಾಗ
ಕಲ್ಲೆದೆಯೆನಗೆ ಕಂಬನಿ ನೋಟವೆಸೆದಳು

ಬಾಷ್ಪವೀಕ್ಷೆಯಾ ಕೂರ್ಮೆನೆಯಾ ಧಗೆ
ವಿಷಶಲಾಕೆವೊಲಿರಿಯುತೆದೆಯನು
ಬಡಿದು ಚಿಂತೆಗಳುರಿಯನೇಳಿಸಿ
ಸುಡುವುದಸುವನು ಸಿಡಿಲ ಕಿಡಿವೊಲು (ಗೀತ ೨೫)

ಕಾಳಿದಾಸನು ಆಕೆಯ ಕೋಪೋದ್ರಿಕ್ತವಾದ ನೋಟವನ್ನು ವಿಷದ ಮುಳ್ಳಿಗೆ ಮಾತ್ರವೇ ಹೋಲಿಸಿದ್ದರೆ, ಡಿ.ವಿ.ಜಿ. ಅವರು ಅದನ್ನು ಸಿಡಿಲ ಕಿಡಿಗೂ ಹೋಲಿಸಿ ದ್ದಾರೆ. ಈ ನುಡಿಯಲ್ಲಿ ಅವಳ ಧಿಕ್ಕಾರವೂ ಕೂಡಿಬರುತ್ತದೆ.

ಕೈಯಲ್ಲಿದ್ದ ಉಂಗುರವನ್ನು ನೋಡುತ್ತಿದ್ದ ದುಷ್ಯಂತನಿಗೆ ತನ್ನಂತೆಯೇ ಅದೂ ಹತಭಾಗ್ಯವೆಂಬ ಭಾವನೆ ಮಿಡಿಯುವುದು ಸಹಜ. ಡಿ.ವಿ.ಜಿ. ಅವರ ಗೀತದ ಪಲ್ಲವಿ 'ನನ್ನಂತೆಯೆ ನೀನು—ಪುಣ್ಯವಿಹೀನನು. ನನ್ನ ಭಾಗ್ಯವು ಭಂಗುರ—ಓ ಉಂಗುರ' ಎನ್ನುವುದು ಒಪ್ಪುವಂತಿದೆ. ಈ ಗೀತದಲ್ಲಿನ ಕಡೆಯ ಪಂಕ್ತಿ "ಮರಳಿ ನೀನಾ ಪದವಿಯ ಬೇಡವೆಂಬೆಯ ?" ಎನ್ನುವುದು ಕಾಳಿದಾಸನ ಮೂಲಕ್ಕೆ ಮೀರಿದು ದಾದರೂ, ಏಳನೆಯ ಅಂಕದಲ್ಲಿ ರಾಜನು ಅದನ್ನು ಶಕುಂತಲೆಗೆ ಕೊಡಲು ಹೋದಾಗ ಅವಳು ನಿರಾಕರಿಸುವ ಸನ್ನಿವೇಶದ ಧ್ವನಿ ಸೂಚನೆಯಿರುವುದರಿಂದ ಗ್ರಾಹ್ಯವಾದುದು. ಸ್ಮೃತಿಸಂಕಟದಿಂದ ಬೇಯುತ್ತಿದ್ದ ವಿರಹಿಗೆ ತನ್ನ ಇನಿಯಳ ಚಿತ್ರದಿಂದ ಮಾತ್ರವೇ ಅಲ್ಪಸ್ವಲ್ಪ ಸಮಾಧಾನ. ರಾಜನು ತಾನು ಕೈಹಿಡಿದ ಹೆಣ್ಣನ್ನು ಕಾರಣವಿಲ್ಲದೆ

ಮರೆತಿಲ್ಲವೆಂಬುದಕ್ಕೆ ಇಲ್ಲಿ ಎರಡು ಸೂಚನೆಗಳಿವೆ. ಒಂದು ಗದ್ಯದಲ್ಲಿದ್ದರೆ ಇನ್ನೊಂದು ಪದ್ಯದಲ್ಲಿದೆ. ಗದ್ಯಭಾಗ ವಿದೂಷಕನದು. ಅವನ ಮೆಚ್ಚುಗೆಯಲ್ಲಿ ಒಂದು ಪಾಲು ಶಕುಂತಲೆಯ ಚೆಲುವನ್ನು ಕುರಿತುದುದಾದರೆ. ಇನ್ನೊಂದು ಪಾಲು ಅಂಥ ಚೆಲುವೆಯ ಚಿತ್ರವನ್ನು ಬರೆದ ರಾಜನ ಕಲೆಗಾರಿಕೆಯನ್ನು ಕುರಿತದ್ದು. ಗೀತದ ಈ ಉತ್ತರಾರ್ಧ ಡಿ.ವಿ.ಜಿ. ಅವರ ಸೃಷ್ಟಿ.

ಏನು ಚಿತ್ರವ ಬರೆದೆಯೋ ದೊರೆ
ಮಾನಿನೀ ಕುಲಕಿವಳು ಶುಭಕರೆ
ಇನ್ನು ಲೇಖ್ಯವದೇನಿಹುದು ಸಂ
ಪೂರ್ಣವೆನಗೀ ವರ್ಣನಿರ್ಮಿತಿ. (ಗೀತ ೨೩)

ಶಕುಂತಲೆಯ ಚಿತ್ರವನ್ನು ನೋಡಿದಂತೆಲ್ಲ ದುಷ್ಯಂತನ ಸೂಕ್ಷ್ಮ ದೃಷ್ಟಿ ಕುದುರುತ್ತದೆ; ಎದೆ ಮಿಡಿಯುತ್ತದೆ. ಆಶ್ರಮವಾಸಿಯಾಗಿದ್ದ ಶಕುಂತಲೆಯ ಪ್ರಕೃತಿಪ್ರೇಮ, ಪ್ರಾಣಿ ವಾತ್ಸಲ್ಯಗಳನ್ನು ಪ್ರತಿನಿಧಿಸುವಂತೆ ಆ ಚಿತ್ರದಲ್ಲಿ 'ಬೆಳ್ಳಂಚೆಯ ಜೋಡಿ', ಹರಿಣಿಗಳ ಅನುರಾಗಗಳನ್ನು ಚಿತ್ರಿಸಬಯಸುವನು. ಇವೆಲ್ಲವೂ ದುಷ್ಯಂತನಿಗೆ ತಾತ್ಕಾಲಿಕ ಉಪಶಮನವನ್ನು ನೀಡಬಲ್ಲವೇ ಹೊರತು ಕುದಿಯುವ ದುಃಖ ಶಾಂತವಾಗದು. ಈ ವೇದನೆಯನ್ನು ಕಾಳಿದಾಸನು "ಪ್ರಜಾಗರಾತ್ಖಿಲೀ ಭೂತಃ ತಸ್ಯಾಃ ಸ್ವಪ್ನೇ ಸಮಾಗಮಃ, ಬಾಷ್ಪಸ್ತು ನ ದದಾತ್ಯೇನಾಂ ದ್ರಷ್ಟುಂ ಚಿತ್ರಗತಾಮಪಿ" (VI,೨೨) ಎಂಬ ಪದ್ಯದಲ್ಲಿ ಬಹಳ ಪರಿಣಾಮಕಾರಿಯಾಗಿ ನಿರೂಪಿಸಿರುತ್ತಾನೆ. ಪ್ರಿಯೆಯನ್ನು ಕನಸಿನಲ್ಲಿ ಕಾಣೋಣವೆಂದರೆ ನಿದ್ರೆ ಬಾರದು; ಚಿತ್ರವನ್ನಾದರೂ ಚೆನ್ನಾಗಿ ನೋಡೋಣವೆಂದರೆ ಕಣ್ಣೀರು ತುಂಬಿಕೊಂಡಿರುವ ಕಣ್ಣೇ ಮಸಕು, ಮಸಕು. ಕಡೆಗೆ ಅಳುವುದೊಂದೇ ಉಳಿದಿರುವುದು. ಡಿ.ವಿ.ಜಿ. ಅವರ ಗೀತ ಈ ಭಾವನೆಯಿಂದಲೇ ಮೊದಲಾಗುತ್ತದೆ.

ನೆನೆನೆನೆದಳುವುದೇ—ಪ್ರಣಯಕೆ ಪ್ರತಿಫಲ
ಇನಿಯಳ ಬಗೆ ಕಾಣದೇ—ನಾಂ ಕಣ್ಣಾರ ॥ ಪ. ॥

ಮೂಲಕ್ಕೆ ಸಂವಾದಿಯಾದ ಒಂದು ನುಡಿಯಲ್ಲಿ, ಈ ಎರಡರ ವ್ಯಥೆಗಳ ಮಧ್ಯೆ ಮತ್ತೊಂದು ಭಾವ ಇಣಿಕಿಹಾಕುತ್ತದೆ.

ಕನಸಿನೋಳ್ ಕಾಣ್ಬನೆ—ಎವೆ ನಿದ್ದೆಯೊಲ್ಲದು
ತನು ಪೊಲೆಯುರಿಸುವ—ಸಪುದೆಯಾಗಿಹುದು
ಅನುರೂಪ ಚಿತ್ರದೋಳ್—ಕಾಣ್ಬೆನಾಕೆಯನೆನೆ
ಹನಿ ನೆರೆದಕ್ಷಿಗೆ ತಡೆಗಟ್ಟುತಿರ್ಪುದು (ಗೀತ ೨೮)

ಕಾಳಿದಾಸನ ಮೂಲರಚನೆ ಸಹಜ ಸುಂದರವಾಗಿದೆ. ಬಸವಪ್ಪ ಶಾಸ್ತ್ರಿಗಳವರ ಕಂದಪದ್ಯವೂ ಅಂದವಾಗಿದೆ. ಡಿ.ವಿ.ಜಿ. ಅವರ ಗೀತದಲ್ಲಿ ಹೊಸ ಉಪಮಾನವೊಂದರ ಹೊರತು ಉಳಿದ ಭಾಗ ಬಂಧುರವಾಗಿದೆ.

ಏಳನೆಯ ಅಂಕದ ವೈಭವವೇ ವೈಭವ ! ಅದು ಪೂರ್ತಿಯಾಗಿ ದೇವಲೋಕದಲ್ಲಿ ನಡೆಯುವುದು. ದುಷ್ಯಂತನ ಬಾಹುಪರಾಕ್ರಮದ ವಿಜಯೋತ್ಸಾಹದಿಂದಲೇ ಪ್ರಾರಂಭ. ಮಾತಲೀ ಸಮೇತನಾಗಿ ಮರೀಚಿ ಮಹರ್ಷಿಗಳ ಆಶ್ರಮಕ್ಕೆ ಬರುವನು. ತಪೋರೂಢರಾಗಿದ್ದ ಅವರನ್ನು ಕಂಡು ರಾಜನಿಗೆ ಪರಮಾಶ್ಚರ್ಯವಾಗುವುದು. ಕಾಳಿದಾಸನು ತಪಸ್ವಿ ಮರೀಚಿ ಮಹರ್ಷಿಗಳನ್ನು ಮಾತ್ರ ವರ್ಣಿಸಿದ್ದರೆ ಡಿ.ವಿ.ಜಿ. ಅವರ ಅಂಥ ಮಹಾತಪಸ್ವಿಯನ್ನು ಕಂಡ ದುಷ್ಯಂತ ಮಹಾರಾಜನ ಮನೋಧರ್ಮದತ್ತಲೂ ನಮ್ಮ ಮನಸ್ಸನ್ನು ಸೆಳೆದಿರುವರು. ನಾಟಕದಲ್ಲಿ ರಾಜನು ನಮಸ್ಕರಿಸುವುದನ್ನು ಮಾತ್ರವೇ ಕಾಣುತ್ತೇವೆ.

ಮೌನಿವರೇಣ್ಯ ನಮೋ—ನಮೋ ಶಿವ
ಧ್ಯಾನ ತಲ್ಲೀನ ನಮೋ—ನಮೋ ಮಹಾ ।। ಪ. ।

ಮಾನಸದಲಿ ಸರ್ವ ಕರಣಂಗಳಿಂದೇಕ
ತಾನದಿ ಪರತತ್ತ್ವ ಸ್ಥಿರಯೋಗ ಸಂಧಾನಿ ಅ.ಪ. ।।

ಹುತ್ತದೊಳರೆ ಹುದು—ಗಿಹುದು ಮೈ, ಎದೆಸುತ್ತ
ಸುತ್ತಿಹುದಹಿ ಪೊರೆ—ಮುದಿಬಳ್ಳಿ ಹೊದರು
ಕತ್ತನೊತ್ತುವುದಾ ಹೆಗಲು ಹಕ್ಕಿಗಳ ಗೂಡು
ನೆತ್ತಿ ಹೊತ್ತಿಪ್ಪುದು ಜಡೆಗಟ್ಟು ಸುರುಳು

ಚಿತ್ರಭಾನುವಿಗಿದಿರು ನಿಂತು ಸ
ಮಸ್ತ ಲೋಕವ ಮರೆಯುತಾತ್ಮವ
ತೆತ್ತಿಹನು ತತ್ತ್ವಾರ್ಥ ಕೀತನು
ನಿಶ್ಚಲನು ತರುಮುಂಡವೆನುವೊಲು (ಗೀತ ೩೧)

ಈ ಇಡೀ ಗೀತ ತನ್ನ ಸರಳತೆಯಿಂದ, ಸಹನತೆಯಿಂದ, ದುಷ್ಯಂತನ ಪೂಜ್ಯ ಭಾವನೆಯಿಂದ ಅತ್ಯಂತ ಉನ್ನತವಾಗಿದೆ. ಸ್ಥಾಣುವಿನಂತೆ ಅಚಲನಾಗಿದ್ದ ಆ ತಪಸ್ವಿ "ಆತ್ಮವ ತೆತ್ತಿಹನು ತತ್ತ್ವಾರ್ಥಕೀತನು" ಎಂಬ ಡಿ.ವಿ.ಜಿ. ಅವರ ಸ್ವಕಲ್ಪಿತ ಪಂಕ್ತಿ ಸಮುಚಿತವಾಗಿದೆ. ಅಚಲತ್ವವನ್ನು ಒತ್ತಿ ಹೇಳುವಲ್ಲಿ ಡಿ.ವಿ.ಜಿ. ಅವರ "ತರುಮುಂಡವೆನುವೊಲು" ಎಂಬ ಉಪಮಾನ ಸರ್ವಸಮ್ಮತವಾಗಲಾರದು. ಮರೀಚಿಮಹರ್ಷಿಗಳು ಅಚಲರಾದರೂ ಜಡರಲ್ಲ ! ಮರೀಚಿಮಹರ್ಷಿಗಳ ನಿಷ್ಕಾಮ ಮನೋಧರ್ಮವನ್ನು ಗ್ರಹಿಸಿ ರಾಜನು 'ತಪಸಿದು ಜಗಕದ್ಭುತಾ' ಎಂದು ಬೆರಗಾಗುವುದು ಸಹಜವೇ ಸರಿ. ಈ ಅಂಕದಲ್ಲಿ ಪ್ರತಿಯೊಂದು ಘಟನೆಯೂ ಅದ್ಭುತ ಮತ್ತು ಅಪೂರ್ವವಾದುದು. ಆದರೂ ಡಿ.ವಿ.ಜಿ. ಅವರು ತುಂಬ ಸಂಯಮ ವಹಿಸಿ ಅನೇಕ ಸಂಗತಿಗಳನ್ನು ಕೈಬಿಟ್ಟು. ದುಷ್ಯಂತ, ಶಕುಂತಲೆಯರು ತಮ್ಮ ಮಗನೊಂದಿಗೆ ಮರೀಚಿ ಮಹರ್ಷಿಗಳನ್ನು ಕಂಡು, ನಮಸ್ಕರಿಸಿ, ಅವರಿಂದ ಆಶೀರ್ವಾದ ಪಡೆಯುವುದನ್ನು ಪ್ರಸ್ತಾವಿಸುತ್ತಾರೆ. ಮಹರ್ಷಿಗಳ ಆಶೀರ್ವಾದ ವಚನಗಳಿವು :

ನವಜನ್ಮ ನಿಮಗಾಯಿತು—ರಾಹುವು ಬಿಟ್ಟ
ರವಿಯಂತೆ ನೀವಾದಿರಿ—ನಿರ್ಮೋಹರು
ಅನುತಾಪಪೂತರು—ನೀವಶ್ರುಧೌತರು
ಪ್ರಣಯ ಸಂಸ್ಕೃತಸತ್ವರು—ನೀವಿನ್ನರ್ವರು

* * * * *

ಹಿತಸಂಕಲ್ಪದ ರೂಪಿವಳ್—ಭೂಪತಿ ನೀನು
ಶ್ರುತಿ ಶಾಸ್ತ್ರವಿಧಿರೂಪನು
ಸುತನು ಸಾಧನ, ಭಾಗ್ಯ—ತ್ರಿತಯವಿಂತೊಡದಿರೆ
ಕ್ರತು ಲೋಕ ಮಾಂಗಲ್ಯಕೋ—ಸಾಫಲ್ಯವೊ (ಗೀತ ೩೩)

ಮೂಲ ಸಂಸ್ಕೃತ ವೃತ್ತದ ಯಾವ ಅಂಶವನ್ನೂ ಡಿ.ವಿ.ಜಿ. ಅವರು ಕೈಬಿಡದಿದ್ದರೂ) ಅಲ್ಲಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡು, ತಮ್ಮ ವ್ಯಾಖ್ಯಾನ ಭಾಗವನ್ನೂ ಸೇರಿಸಿರುವರು. ಆ ರಾಜದಂಪತಿಗಳಿಗೆ ದುರ್ವಾಸರ ಶಾಪದಿಂದ ಈ ಅಗಲಿಕೆಯುಂಟಾಯಿತು ಮತ್ತು ಇಂದು ಅದು ಬಿಡುಗಡೆಯಾಯಿತೆಂದು ಮೊತ್ತಮೊದಲು, ಋಷಿಗಳ ಬಾಯಿಂದ ಕೇಳುವರು. ಕಿಲುಬು ಹತ್ತಿದ ಕನ್ನಡಿ ಆ ಮಾಲಿನ್ಯವನ್ನು ಕಳೆದುಕೊಂಡ ಬಳಿಕ ಆ ಕನ್ನಡಿಯಲ್ಲಿ ಎಂದಿನಂತೆ ಪ್ರತಿಬಿಂಬ ಕಾಣುವುದೆಂಬ ಹೋಲಿಕೆಯಿದೆ. ಡಿ.ವಿ.ಜಿ. ಅವರ ಗೀತದಲ್ಲಿ ಈ ಅಂಶಗಳು ಉಕ್ತವಾಗಿಲ್ಲದಿದ್ದರೂ ಅವುಗಳ ಶುಭಪರಿಣಾಮದ ಕಡೆಗೇ ಅವರ ಗಮನ ವಿಶೇಷವಾಗಿ ಹರಿದಿದೆ. "ನವಜನ್ಮ ನಿಮಗಾಯಿತು–ರಾಹುವು ಬಿಟ್ಟ ರವಿಯಂತೆ ನೀವಾದಿರಿ" ಎಂಬುದರಲ್ಲಿ ಈ ಎಲ್ಲವೂ ಅಡಕವಾಗಿವೆ. ಇಂಥ ಸಂದರ್ಭಗಳಲ್ಲಿ ನಾವು ಡಿ.ವಿ.ಜಿ. ಅವರ ಪೂರ್ವ ಸೂಚನೆಯನ್ನು ನೆನೆಯಬೇಕಾಗುತ್ತದೆ. "ಶಾಕುಂತಲದ ಕಥೆಯನ್ನು ತಿಳಿದು ಕೊಂಡಿರುವುದು ಈ ಸಂಗೀತ ವ್ಯಾಖ್ಯಾನದ ವಾಚಕರು ಮಾಡಿಕೊಂಡಿರಬೇಕಾದ ಮೊದಲನೆಯ ಸಿದ್ಧತೆ. ಕಥಾಸಂದರ್ಭವನ್ನರಿಯದವರಿಗೆ ಈ ಹಾಡುಗಳ ಭಾವ ದೊರೆಯುವುದು ಅಷ್ಟು ಸುಲಭವಲ್ಲ, ಸಂಸ್ಕೃತ ಮೂಲವನ್ನೋದದವರು ಕೈ॥ ಬಸವಪ್ಪ ಶಾಸ್ತ್ರಿಗಳವರ ಕರ್ಣಾಟಕ ಶಾಕುಂತಲವನ್ನಾದರೂ ಓದಿರುವುದಾವಶ್ಯಕ. ಬಸವಪ್ಪಶಾಸ್ತ್ರಿಗಳವರ ಅನುವಾದವು ಪ್ರಮಾಣಮಾತ್ರಾಗಿರುವುದು (ಭೂಮಿಕೆ,1969, ಪುಟ 11).

ಮರೀಚಿ ಮಹರ್ಷಿಗಳ ಉಪದೇಶವಂತೂ ತುಂಬ ಉದಾತ್ತವಾಗಿದೆ. ಅಂಥ ತಪಸ್ವಿಗಳಿಗೆ ಭೂಲೋಕ ದೇವಲೋಕಗಳು ಬೇರೆಬೇರೆಯಲ್ಲ. ನರರೂ ಸುರರೂ ಪರಸ್ಪರ ನೆರವಾಗಿ ಬಾಳಬೇಕೆಂಬುದೇ ಅವರ ಮುಖ್ಯ ಅಭಿಲಾಷೆ. ಈ ಪ್ರಧಾನ ಸಂದೇಶವನ್ನು ಸಾರಿ ಹೇಳುವುದರೊಂದಿಗೇ, ಡಿ.ವಿ.ಜಿ. ಅವರ ಗೀತ ಮೊದಲಾಗುತ್ತದೆ. "ಸುರಲೋಕ ನರಲೋಕ ಸೇತು ಸಂರಕ್ಷಕ ಚಿರಜೀವ ದುಷ್ಯಂತ—ಶುದ್ಧ ಸ್ವಾಸ್ತ" ಎಂಬ ಪಲ್ಲವಿಯನ್ನು ಓದುತ್ತಿದ್ದಂತೆಯೇ ನಮಗೆ ಗಯಟೆಯ ಶ್ಲಾಘನೆಯ ಮಾತುಗಳು ನೆನಪಾಗುತ್ತವೆ. (Wouds't thou the Earth and Heaven itself in one sole name Combine ?)

ಉಭಯಲೋಕಗಳೇಕ ರಾಜ್ಯಂ
ಪ್ರಭುವಖಿಲಹಿತನೆಂದು ಬಾಳ್ವರಿ
ಗಭಯುವೆಲ್ಲೆಡೆಯಾವಗಂ ಸ
ದ್ವಿಭವಮುವರಿಗೆ ಶಾಂತಿ ಸಂಸ್ಥಿತಿ (ಗೀತ ೩೪)

ಎಂಬ ಡಿ.ವಿ.ಜಿ. ಅವರ ಒಕ್ಕಣೆ ಭಾರತೀಯ ದರ್ಶನದ ಔದಾರ್ಯವನ್ನು ಘೋಷಿಸು ವಂತಿದೆ.

ಮೂಲದಲ್ಲಿ ರಾಜನ ಬಾಯಲ್ಲಿ ಬರುವ ಭರತವಾಕ್ಯ ಸಮಸ್ತ ಶುಭಾಶಯ ಗಳನ್ನೂ ಒಳಗೊಂಡು ಸಂಕ್ಷಿಪ್ತವಾಗಿದ್ದರೆ, ಡಿ.ವಿ.ಜಿ. ಅವರು ಅಷ್ಟಕ್ಕೇ ಸೀಮಿತ ಗೊಳಿಸದೆ ಅವನ ಬಾಯಲ್ಲಿ ಒಂದು ನಿಡಿದಾದ ಗೀತವನ್ನೇ ಹಾಡಿಸಿರುತ್ತಾರೆ. ಮರೀಚಿ ಮಹರ್ಷಿಗಳಿಂದ ಅನುಗ್ರಹೀತನಾದ ರಾಜನು ಅವರಲ್ಲಿ ಮಾಡಿಕೊಳ್ಳುವ ಈ ನಿವೇದನೆ ಪರಮಾರ್ಥ, ಪುರುಷಾರ್ಥ ಮತ್ತು ಶಿವಪ್ರಸಾದಗಳನ್ನು ಕುರಿತು ದಾಗಿದೆ. ನಿದರ್ಶನಾರ್ಥವಾಗಿ ಒಂದೆರಡು ವಿಶೇಷಾಂಶಗಳನ್ನು ಮಾತ್ರ ಸಮಾಲೋಚಿಸ ಬಹುದು. 'ಪರಮಾರ್ಥದೀಪವಧರೆಯ ಯಾತ್ರಿಕರಿಂಗೆ ಕರುಣಿಸು ಪರಮರ್ಷಿಯೇ— ಗುರುವರ್ಯ' ಎಂಬ ಅರ್ಥಪೂರ್ಣವಾದ ಪಲ್ಲವಿಯಲ್ಲಿ ರಾಜನಾದವನು ತನ್ನ ಪ್ರಜೆಗಳ ಕ್ಷೇಮಲಾಭವನ್ನು ಕೋರುವ ಧಾರ್ಮಿಕ ಚಿಂತನೆಯಿದೆ.

ಜನತಾಶ್ರೇಯೋ ನ್ಯಾಯ ವ್ರತರಕ್ಕೆ ಪ್ರಭುಗಳು
ಜನರಕ್ಕೆ ಶ್ರುತ ಪರಿಷ್ಕೃತ ಬುದ್ಧಿಮಹರು
ಜನಿಮೃತಿ ಜೀವಿತ ಭಾರವರ್ಜಿತ ಸಾಮ್ಯ
ಮನವನೀಗೆನಗೀಶಂ—ಸರ್ವಾವಾಸಂ

ಇದು ಮೂಲದ ಒಂದು ಛಾಯೆ ಮಾತ್ರ ! ಈ ಗೀತದ ಕಡೆಯ ನುಡಿ ರಾಜನು ಎಲ್ಲ ಕಾಲದಲ್ಲಿಯೂ ಹಾರೈಸುವ ಹೊನ್ನುಡಿಯೇ ಸರಿ !

ಭುವನ ಶಿವನುದ್ಯಾನವದರೊಳು
ಭವವೆ ತರುವದ ಬೆಳಸಿ ತನ್ನನು
ಸವೆಯಿಪುದೆ ಜೀವಿತದ ಮಂಗಲ
ಭವವು ಹೊರೆಯೇಂ ಶಿವ ಹಸಾದಿಗೆ (ಗೀತ ೩೫)

ಡಿ.ವಿ.ಜಿ. ಅವರ ಕೈಯಲ್ಲಿ ದುಷ್ಯಂತರಾಜನು ಆದರ್ಶನೀತಿಮೂರ್ತಿಯಾಗಿದ್ದಾನೆ !

ಸಂಸ್ಕೃತ ಭರತವಾಕ್ಯದ ಸ್ವರೂಪ ಬಹಳ ಬದಲಾಯಿಸಿರುವುದನ್ನು ಕಂಡು ಖಿನ್ನ ಮನಸ್ಕರಾದವರಿಗೆ ಡಿ.ವಿ.ಜಿ. ಅವರು ರಚಿಸಿರುವ ಪ್ರತ್ಯೇಕವಾದ ಮಂಗಲ ಗೀತವನ್ನು ಓದಿದರೆ ಆನಂದವಾಗುವುದರಲ್ಲಿ ಸಂದೇಹವಿಲ್ಲ. ಅದು 'ಶಾಕುಂತಲ' ನಾಟಕದ ಬಗ್ಗೆ ಅವರಿಗಿರುವ ಪೂಜ್ಯಭಾವದ ಪವಿತ್ರ ಸಂದೇಶದಂತಿದೆ.

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ. ॥
ಜಯ ಕಾಳಿದಾಸಂಗೆ ಕಣ್ವ ಸಂದೇಶಂಗೆ
ಜಯ ಶಕುಂತಲೆಗೆ ಹೃದ್ವ್ರತ ಚರಿತೆಗೆ
ಜಯ ವಿಧಿ ಪರೀಕ್ಷಿತ ಖುತಂಗೆ ದುಷ್ಯಂತಂಗೆ
ಜಯ ಜೀವಪಾವನ ಪ್ರೇಮ ವಿಲಸಿತಕೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ (ಗೀತ ೩೬)

ಈ ಮಂಗಲ ಗೀತದಲ್ಲಿ ಕಣ್ವರ ಸಂದೇಶವನ್ನು ಸಾರಿ ಹೇಳಿದ ಶಾಕುಂತಲ ನಾಟಕದ ಕರ್ತೃ ಕಾಳಿದಾಸ, ಹೃದಯಸಂಪನ್ನಳಾದ ಶಕುಂತಲೆ, ವಿಧಿಯ ಕೈವಾಡದಿಂದ ಕಲುಷಿತವನ್ನೆಲ್ಲ ಕಳೆದುಕೊಂಡು ಪುನೀತನಾದ ದುಷ್ಯಂತ, ಈ ಸಮಗ್ರನಾಟಕಕ್ಕೆ ಮೂಲಭೂತ ಕ್ರತುಶಕ್ತಿಯಾದ ಪ್ರೇಮದೇವತೆ ಈ ಎಲ್ಲವೂ ಅರ್ಥಪೂರ್ಣವಾಗಿ ಉಕ್ತವಾಗಿವೆ.

ಡಿ.ವಿ.ಜಿ. ಅವರ "ಗೀತ ಶಾಕುನ್ತಲ"ವನ್ನು ಕೇವಲ 'ಗೀತನಾಟಕ'ವೆಂದರೆ ಅವರ ಸಂಪೂರ್ಣ ಸ್ವರೂಪವನ್ನು ಹೇಳಿದಂತಾಗುವುದಿಲ್ಲ. ಇದನ್ನು ಅವಲೋಕಿಸುತ್ತ ವಿ. ಸೀತಾರಾಮಯ್ಯನವರು ಇಲ್ಲಿನ ಗೀತಗಳನ್ನು ಡಿ.ವಿ.ಜಿ. ಅವರ ಅಂತಃಪುರ ಗೀತಗಳೊಂದಿಗೆ ಹೋಲಿಸಿ ಹೊಗಳಿರುತ್ತಾರೆ. * ಆದ್ದರಿಂದ ಇದೊಂದು ಸಂಗೀತರೂಪಕ.

ಕಾಳಿದಾಸ ವಿರಚಿತ ನಾಟಕದಲ್ಲಿ 197 ಪದ್ಯಗಳಿದ್ದರೆ, ಡಿ.ವಿ.ಜಿ. ಅವರು ಅವುಗಳಲ್ಲಿ ಸುಮಾರು 33 ರಚನೆಗಳನ್ನು ಮಾತ್ರ ಆರಿಸಿಕೊಂಡಿರುವರು. ಈಗಾಗಲೇ ಪ್ರಸ್ತಾವಿಸಿರುವಂತೆ ಡಿ.ವಿ.ಜಿ. ಅವರ ಗೀತಗಳು ಯಥಾವತ್ತಾದ ಅನುವಾದಗಳಲ್ಲ. ಕೆಲವು ಅವುಗಳ ವ್ಯಾಖ್ಯಾನವೂ ಹೌದು ಎಂದು ಅವರೇ 'ಭೂಮಿಕೆ'ಯಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿರುತ್ತಾರೆ. ಕಾಳಿದಾಸನ ನಾಟಕ ಅವರಿಗೆ ನಿತ್ಯ ನೂತನವಾದ ಒಂದು ದರ್ಶನಕೃತಿ. ಶಕುಂತಲೆ, ದುಷ್ಯಂತ ಮತ್ತು ಕಣ್ವಮಹರ್ಷಿಗಳು ಅವರ ಮನಸ್ಸನ್ನು ಅಪೂರ್ವವಾಗಿ ಆಕರ್ಷಿಸಿದ್ದಾರೆ. ಶಕುಂತಲೆ ಪ್ರಣಯದ ಪುತ್ಥಳಿಯಾದರೆ, ದುಷ್ಯಂತನು ಧೀರ ಮತ್ತು ಉದಾತ್ತನು ಮಾತ್ರವೇ ಅಲ್ಲ ; ಧರ್ಮಭೀರುವೂ ಹೌದು. ಕಣ್ವರ್ಷಿಗಳಾದರೋ ಸಾಕುಮಗಳಾದ ಶಕುಂತಲೆಯ ಅವ್ಯಾಜಪಾಲಕರು. ಸಮಗ್ರ ನಾಟಕದ ಆಗುಹೋಗುಗಳಿಗೆ ದೈವನಿಯಮವೊಂದೇ ಕಾರಣ. ಡಿ.ವಿ.ಜಿ. ಅವರ ಮಾತುಗಳನ್ನೇ ಉದಾಹರಿಸುವುದಾದರೆ "(ಶಕುಂತಲೆ-ದುಷ್ಯಂತರ) ಪ್ರಣಯಕ್ಕೆ ಪ್ರಾರಂಭ ದೈವಿಕದಿಂದ ; ಅದಕ್ಕೆ ವಿಘ್ನವೂ ದೈವಿಕದಿಂದ" ಆ ವಿಘ್ನದ ಪರಿಹಾರವೂ ದೈವಿಕದಿಂದ" (ಕಾಳಿದಾಸ ಹೃದಯ, ಪುಟ 19).

ಶಕುಂತಲೆ ಮತ್ತು ದುಷ್ಯಂತರ ಪ್ರಣಯದ ಪರಿಮಿತಿಯಲ್ಲಿಯೇ ಚಿತ್ರಿತವಾಗಿರುವ ಈ ನಾಟಕ, ಕಾಳಿದಾಸನ ಸಂಸ್ಕೃತ ನಾಟಕದ ಸಂಗ್ರಹವೆನ್ನುವುದಕ್ಕಿಂತ, ಡಿ.ವಿ.ಜಿ. ಅವರ ಚಿಂತನ, ಮಂಥನಗಳಿಂದ ಉದ್ಭವಿಸಿ ಬಂದ ಮೂಲಕೃತಿಯ ಒಂದು ಉತ್ಸವ ಮೂರ್ತಿ ಎನ್ನಬಹುದು. ಇದೊಂದು ರಸಾರ್ದ್ರ ಸೃಷ್ಟಿ ; ಅಭಿನವ ಕಲಾಕೃತಿ. **

---

* The songs both here and in Gita Sakuntala are Variations of the same pattern. The latter are married to a dramatic and to a more secular musical purpose. They express the modes of a human drama developing as Kalidasa conceives it —D. V. Gundappa, 1972, P.27

** ಪೂಜ್ಯ ಬಸವಪ್ಪ ಶಾಸ್ತ್ರಿಗಳ 'ಕರ್ನಾಟಕ ಶಾಕುಂತಲ ನಾಟಕ'ದಲ್ಲಿ ಪ್ರತ್ಯೇಕವಾಗಿ ಅಚ್ಚಾಗಿರುವ ರಂಗಗೀತಗಳನ್ನು ಅವರೇ ಬರೆದಿರಬಹುದೆಂದು ಭಾವಿಸಿ, ಈ ಪ್ರಬಂಧದಲ್ಲಿ ಪ್ರಾಸಂಗಿಕವಾಗಿ ಉದಾಹರಿಸಿರುತ್ತೇನೆ. ನನ್ನ ಈ ಎಣಿಕೆ ತಪ್ಪಿದ್ದಲ್ಲಿ ನಿಜ ವೃತ್ತಾಂತವನ್ನು ತಿಳಿಸಿದವರಿಗೆ ನಾನು ಕೃತಜ್ಞನಾಗಿರುತ್ತೇನೆ.

ಡಿ.ವಿ.ಜಿ. ಅವರ ಕೃತಿಗಳಲ್ಲಿ ಸಮನ್ವಯದೃಷ್ಟಿ

ಆರ್. ಜಿ. ಕುಲಕರ್ಣಿ

'ಶ್ರೀಮದ್ಭಗವದ್ಗೀತಾ ತಾತ್ಪರ್ಯ', 'ಜೀವನ ಸೌಂದರ್ಯ ಮತ್ತು ಸಾಹಿತ್ಯ', 'ಮಂಕುತಿಮ್ಮನ ಕಗ್ಗ', 'ಸಂಸ್ಕೃತಿ' ಹಾಗೂ 'ಬಾಳಿಗೊಂದು ನಂಬಿಕೆ. ಈ ಕೃತಿಗಳನ್ನು ಆಧರಿಸಿ ಅವುಗಳಲ್ಲಿ ಸಮನ್ವಯ ದೃಷ್ಟಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ಸ್ವತಃ ತಾತ್ತ್ವಿಕ ಸಮನ್ವಯ ದೃಷ್ಟಿಯುಳ್ಳ ಪ್ರೊ॥ ಆರ್. ಜಿ. ಕುಲಕರ್ಣಿ ಅವರು ಅನ್ಯಾದೃಶವಾಗಿ ವಿವರಿಸಿದ್ದಾರೆ. "ಡಿ.ವಿ.ಜಿ. ಅವರ ಶಾಸ್ತ್ರೀಯ ಗ್ರಂಥಗಳಲ್ಲಿ ಪ್ರಧಾನವಾದದ್ದು ಬ್ರಹ್ಮಸೂತ್ರಗಳ ಸಮನ್ವಯದೃಷ್ಟಿ ಮತ್ತು ಅದನ್ನು ಆಧುನಿಕ ಜೀವನದ ಸಮಸ್ತ ಸಮಸ್ಯೆಗಳಿಗೆ ಅನ್ವಯ ಮಾಡಿದ್ದು ನಮ್ಮ ವಿಮರ್ಶಕರು ಗಮನಿಸಬೇಕಾದ ಮುಖ್ಯಾಂಶವಾಗಿದೆ" ಎಂದು ಅಭಿಪ್ರಾಯಪಟ್ಟು, "ಡಿ.ವಿ.ಜಿ. ಅವರ ಈ ಸಮನ್ವಯದರ್ಶನದ ಸಾರವೇ 'ಸಂಸ್ಕೃತಿ'ಯಾಗಿ, 'ಮಂಕುತಿಮ್ಮನ ಕಗ್ಗ'ದಲ್ಲಿ ತತ್ತ್ವಪದಗಳಾಗಿ ಮೈತಾಳಿದೆ. "ಆದರೆ ಡಿ.ವಿ.ಜಿ. ಸಮನ್ವಯದರ್ಶನ ಮಂಕುತಿಮ್ಮನ ಕಗ್ಗಕ್ಕೆ, ಮಂಕುತಿಮ್ಮನ ಸಂಸ್ಕೃತಿಗೆ ಪರಿಮಿತವಾಗಿಲ್ಲವೆಂಬುದನ್ನು ಮಾತ್ರ ಮರೆಯಲಾಗದು" ಎಂದು ಎಚ್ಚರಿಸಿದ್ದಾರೆ. "ಮಂಕುತಿಮ್ಮನ ಕಗ್ಗದಲ್ಲಿ ಸರಳವಾಗಿ, ಸಹಜವಾಗಿ ಹರಿದು ಬಂದ ಜೀವನದ ತಿಳಿವಳಿಕೆ, ಸಮನ್ವಯ ಸಂಸ್ಕಾರದ ಹಿಂದೆ ಬಹು ಗಾಢವಾದ ತಾತ್ತ್ವಿಕ ಪ್ರಜ್ಞೆ ಅಡಗಿದೆ" ಎಂದು ಸರಿಯಾಗಿಯೆ ಗುರುತಿಸಿದ್ದಾರೆ.

॥ ಓಂ ತತ್ತು ಸಮನ್ವಯಾತ್ ಓಂ ॥

ಬ್ರಹ್ಮಸೂತ್ರಗಳು-I-I-4

ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು
ಅಸಮಂಜಸದಿ ಸಮನ್ವಯಸೂತ್ರನಯವ
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ
ರಸಿಕತೆಯೆ ಯೋಗವೊ—ಮಂಕುತಿಮ್ಮ

-ಮಂಕುತಿಮ್ಮನ ಕಗ್ಗ—241

"ಸಮನ್ವಯ ಎಂದರೆ ಅನುಗೂಡಿರುವುದು. ನಮ್ಮ ವಿಚಾರಕ್ಕೆ ವಿಷಯವಾದ ಪ್ರತಿಯೊಂದು ಪ್ರಶ್ನೆಯಲ್ಲಿಯೂ ಭಿನ್ನಾಭಿಪ್ರಾಯಗಳು ಕಾಣಬರುವುದು ಎಲ್ಲರ ಅನುಭವ. ಹಾಗೆ ಅಭಿಪ್ರಾಯ ಭೇದಗಳು

ತಲೆದೋರಿದಾಗ ಅವುಗಳ ಕಾರಣದಿಂದ **ನಮ್ಮ ಅನ್ಯೋನ್ಯ ಸ್ನೇಹಕ್ಕೂ ಸಮಾಜದ ಐಕಮತ್ಯಕ್ಕೂ ಹಾನಿ ಬಾರದಿರಬೇಕು.** ಅದಕ್ಕಾಗಿ ನಾವು ಆ ನಾನಾ ಅಭಿಪ್ರಾಯಗಳನ್ನು **ಪರೀಕ್ಷಿಸಿ ನೋಡಿ,** ಅವುಗಳ **ಸತ್ಯಾಂಶ** ಗಳನ್ನು **ಶೇಖರ ಮಾಡಿ ಒಂದು ಹದದಲ್ಲಿ ಅವುಗಳನ್ನು ಹೊಂದಿಸ ಬೇಕು. ಅಂಥಾ ಹದದ ಹೊಂದಿಕೆಯೇ ಸಮನ್ವಯ.** ಇದು ಪರತತ್ವ ವಿಚಾರದಲ್ಲಿ ಅವಶ್ಯವೆಂಬುದನ್ನು ಭಗವಾನ್ ವೇದವ್ಯಾಸರು ಅಪ್ಪಣೆಕೊಡಿಸಿದ್ದಾರೆ. ಆ ಸಮನ್ವಯ ನೀತಿ ರಾಜಕೀಯಕ್ಕೂ ಸಂಪದ್ವಿಷಯಕ್ಕೂ ನ್ಯಾಯಾಸ್ಥಾನದ ವ್ಯವಹಾರಕ್ಕೂ ಎಲ್ಲ ಮನುಷ್ಯರ ವ್ಯಾಪಾರಗಳಿಗೂ ಅನ್ವಯಿಸಲರ್ಹವಾದದ್ದು.

—ಡಿ. ವಿ. ಜಿ. ಸಂಸ್ಕೃತಿ ಪು. 85-86

ಕನ್ನಡ ಸಾಹಿತ್ಯ ವಿಮರ್ಶೆಯ ಬೆಳವಣಿಗೆಯಲ್ಲಿ ನವ್ಯವಿಮರ್ಶಾದೃಷ್ಟಿ ಪ್ರಬಲವಾದಾಗ 'ಸಮನ್ವಯ' ಪದವು ಟೀಕೆ, ವ್ಯಂಗ್ಯಗಳಿಗೆ ಗುರಿಯಾಯಿತು. ಸಮಸ್ಯೆಗಳನ್ನು ಎದುರಿಸಲಾಗದೆ, ರಾಮಾಯಸ್ವಸ್ತಿ, ರಾವಣಾಯಸ್ವಸ್ತಿ ಎಂಬವರ ಸಾಧನ ಈ 'ಸಮನ್ವಯ'ವೆಂಬ ಧ್ವನಿ ಗಟ್ಟಿಯಾಗಿ, ಸಮನ್ವಯ ಕುರಿತು ಚಿಂತನೆ ಮಾಡುವವರನ್ನು 'ಸಮನ್ವಯವಾದಿ'ಗಳೆಂದು ಹಣೆಪಟ್ಟಿ ಹಚ್ಚಿ ಕೂಡಿಸುವ ಅಬ್ಬರದ ಮಾತುಗಳು ಕೇಳಿಬಂದವು.

ಆದರೆ ಸಮನ್ವಯವೆಂದರೆ "ಸಮ್ಯಕ್ ಅನ್ವಯ"ವೆಂದೂ "ಸಮ್ಯಕ್" ಎಂದರೆ "**ಪ್ರವಿಚಾರಣ**"ವೆಂದೂ ಜಯತೀರ್ಥರು (ಮಧ್ವಭಾಷ್ಯಗಳಿಗೆ ಟೀಕೆ ಬರೆದ ಪ್ರಖ್ಯಾತ ವಿದ್ವಾಂಸರು) ಹೇಳುತ್ತಾರೆ. ಈ ವ್ಯಾಖ್ಯಾನ ಪರಂಪರೆಯಲ್ಲಿ 'ಅನ್ವಯ, ವೆಂದರೆ, 1. ಉಪಕ್ರಮ, 2. ಉಪಸಂಹಾರ, 3. ಅಭ್ಯಾಸ, 4. ಅಪೂರ್ವತಾ, 5. ಫಲನಿರೂಪಣೆ, 6. ಅರ್ಥವಾದ, 7. ಉಪಪತ್ತಿ—ಗಳೆಂಬ ತಾತ್ಪರ್ಯದ್ಯೋತಕ ಅಂಗಗಳ–ಲಕ್ಷಣಗಳ ಸಮುದಾಯ. ಈ ಏಳು ಬಗೆಯಿಂದ ತಾತ್ಪರ್ಯ ತಿಳಿದು ಅವುಗಳ ಅಖಂಡತೆಯನ್ನು ಗುರುತಿಸುವ ಪ್ರವಿಚಾರಣ ಪೂರ್ವಕವಾದ ವಿಮರ್ಶೆಯೇ ಸಮನ್ವಯವಾಗುತ್ತದೆ.

ಅಂದರೆ ಸಮನ್ವಯವು "ಧೀರರ" ಸಾಧನೆ. ಆಧುನಿಕ ಕನ್ನಡ ಸಾಹಿತ್ಯ ರಂಗದಲ್ಲಿ ಬ್ರಹ್ಮಸೂತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿ ಚಿಂತನೆಮಾಡಿ ಪಕ್ವ ಮತಿಗಳಾದವರಲ್ಲಿ ಡಿ.ವಿ.ಜಿ. ಅವರನ್ನು ಬಿಟ್ಟರೆ ಇನ್ನೊಂದು ಹೆಸರು ಬಹುಶಃ ದ. ರಾ. ಬೇಂದ್ರೆಯವರದು. ಆದರೆ ದ. ರಾ. ಬೇಂದ್ರೆಯವರ ಸಮನ್ವಯ ದರ್ಶನದಲ್ಲಿ ಶ್ರೀ ಅರವಿಂದರ ಸಮನ್ವಯದ ಪ್ರಭೆ ಪ್ರಖರವಾಗಿ ಕಾವ್ಯದ ಮೋಡಿಯಲ್ಲಿ ಅದಕ್ಕೇ ಹೆಚ್ಚಿನ ಸಾನ ದೊರಕಿದಂತೆ ಕಂಡು ಬ್ರಹ್ಮಸೂತ್ರಗಳ "ಸಮನ್ವಯ ಪ್ರಜ್ಞೆ" ಅಷ್ಟಾಗಿ ಎದ್ದು ಕಾಣುತ್ತಿಲ್ಲ.

ಡಿ.ವಿ.ಜಿ. ಅವರ ಶಾಸ್ತ್ರೀಯಗ್ರಂಥಗಳಲ್ಲಿ ಪ್ರಧಾನವಾದದ್ದು ಬ್ರಹ್ಮಸೂತ್ರಗಳ ಸಮನ್ವಯದೃಷ್ಟಿ ಮತ್ತು ಅದನ್ನು ಆಧುನಿಕ ಜೀವನದ ಸಮಸ್ತ ಸಮಸ್ಯೆಗಳಿಗೆ ಅನ್ವಯ ಮಾಡಿದ್ದು—ನಮ್ಮ ವಿಮರ್ಶಕರು ಗಮನಿಸಬೇಕಾದ ಮುಖ್ಯಾಂಶವಾಗಿದೆ.

ಸಮನ್ವಯದ ಹಿಂದೆ ಇರುವ ಮುಖ್ಯತತ್ತ್ವವೆಂದರೆ "ಜ್ಞಾನದ ಅಖಂಡತ್ವ". ಜ್ಞಾನವು ಅಖಂಡವಾಗಿರುವುದರಿಂದಲೇ ಸಮನ್ವಯ ಅನಿವಾರ್ಯ.

ಜೀವನ ಯೋಗವೇ ಸಮನ್ವಯದ ಕೇಂದ್ರ

ಜ್ಞಾನವು ಅಖಂಡವಾಗಿದ್ದರೆ ಜ್ಞಾನದ ಅನಂತ ಪ್ರಕಾರಗಳೂ ಸಮನ್ವಿತವಾಗಿರಲೇಬೇಕು. ವೇದವೆಂದರೆ ಜ್ಞಾನ. ಆದ್ದರಿಂದ ಎಲ್ಲ ವೇದಗಳ ಧ್ವನಿಯೂ ಒಂದೇ. ಅದು ಬ್ರಹ್ಮವೆಂದೇ ಹೇಳುತ್ತಾರೆ. ಅನಂತವಾಗಿ ನಿರಂತರವಾಗಿ ತನ್ನನ್ನು ತಾನು ಸೃಷ್ಟಿಸಿಕೊಳ್ಳುತ್ತ—ಬೇಸರವಿಲ್ಲದೆ ಸ್ವಚ್ಛಂದವಾಗಿಯಾದರೂ ನಿಯಮಬದ್ಧವಾಗಿ, ಧರ್ಮ-ಋತನಾಮಕವಾಗಿ ಬೃಹತ್ತಾಗಿ ಬೆಳೆಯುತ್ತ ಬಾಳುತ್ತಿರುವ ತತ್ವಪರಬ್ರಹ್ಮ! ಡಿ.ವಿ.ಜಿ. ಅವರು ತಮ್ಮ ಭಗವದ್ಗೀತಾ ರಾಮಕಥಾ ಸಮನ್ವಯ ಶ್ಲೋಕದಲ್ಲಿ ಈ ಬ್ರಹ್ಮ ಹಾಗೂ 'ಧರ್ಮಗಳ ಸಮನ್ವಯವನ್ನು ವಿದ್ಯಾರಣ್ಯ ಗುರುಗಳಿಂದ ತಿಳಿದೆವೆಂದು "ಧರ್ಮಬ್ರಹ್ಮಾರ್ಥ್ವನ್ಸ್ಥೆ ಗುರುಂ" ಎಂಬ ಮಾತಿನಲಿ ಸೂಚಿಸಿದ್ದಾರೆ. ಬ್ರಹ್ಮ ಹಾಗೂ ಧರ್ಮಗಳ ಸಮನ್ವಯದಲ್ಲಿಯೇ ಡಿ.ವಿ.ಜಿ. ಅವರ "ಜೀವನ ಧರ್ಮಯೋಗ"ದ ರಹಸ್ಯ ಅಡಗಿದೆ. ಅಥವಾ ಡಿ.ವಿ.ಜಿ. ಅವರ ಅಪಾರವಾದ ಜೀವನ ಪ್ರಿತಿಯೇ—ಭೋಗಲಾಲಸೆಯಾಗದೆ ಶುದ್ಧ ಬದುಕಿನ ಪ್ರೀತಿಯಾಗಿ, ಪರತತ್ತ್ವದ ಸಾಧನರಂಗವೆಂದು ಜೀವನವನ್ನು ಪ್ರೀತಿಸುವ ಗೀತಾಯೋಗವಾಗಿರುವುದೇ ಅವರ ಎಲ್ಲ ಸಮನ್ವಯ ವಿಚಾರಗಳಿಗೆ ತಳಪಾಯವಾಗಿದೆ. ಈ ಜೀವನ ಪ್ರೀತಿ, ವಿಲಕ್ಷಣವಾದ ಹೊಸ ಮಾತುಗಳನ್ನು ಪೌರುಷಯುಕ್ತವಾದ ದರ್ಶನವನ್ನು ಅವರಿಂದ ಹೊರಹೊಮ್ಮುವಂತೆ ಮಾಡುತ್ತದೆ.

"ಜೀವನ–ಧರ್ಮ–ಯೋಗ" ಎಂಬ ಮೂರು ಪದಗಳಲ್ಲಿ 1. ಬದುಕಿನ ಸಮಸ್ತ ರೂಪಗಳ ಸ್ವೀಕಾರ, 2. ಆ ಬದುಕಿನ ಮರ್ಮ ತಿಳಿದು ಬದುಕುವ ಪೌರುಷಯುಕ್ತ ಜ್ಞಾನಯುಕ್ತಕರ್ಮ, 3. ಇಂಥ ಬದುಕು ವಿಶ್ವದ ಮೂಲಾಧಾರವಾದ ಪರತತ್ತ್ವದೊಡನೆ ಭಕ್ತಿಪೂರ್ಣ ಸಂಯೋಗ ಹೊಂದುವದು—ಎಂಬ ಮೂರು ಜೀವನದೃಷ್ಟಿಗಳು ಅಖಂಡವಾಗಿ ಒಂದಾಗಿರುವದು ಸ್ಪಷ್ಟವಾಗಿದೆ. ಅಂದರೆ ಕರ್ಮ, ಜ್ಞಾನ, ಭಕ್ತಿ, ಧ್ಯಾನ (ರಾಜ) ಯೋಗಗಳ ಸಮನ್ವಯವದು. ಗೀತೆಯಲ್ಲಿ ಜೀವನ–ಧರ್ಮ–ಯೋಗವು ಡಿ.ವಿ.ಜಿ.ಯವರಿಗೆ ಕಂಡಿದ್ದರೆ ಆಶ್ಚರ್ಯವಲ್ಲ; ಅದು ಅವರ ಸಮನ್ವಯದ ಕೇಂದ್ರದರ್ಶನ.

ನಿಜವಾಗಿ ಜೀವನಧರ್ಮಯೋಗದ ಮಹಾಪ್ರತಿಮೆ ಎಂದರೆ ಆಂಜನೇಯ. ವೀರವೈರಾಗ್ಯ, ಪರಮ ಪೌರುಷಶೀಲಕರ್ಮ ಸಾಧನೆ–ಪಾಂಡಿತ್ಯ ಪ್ರಖರತೆ ಹಾಗೂ

ಭಗವದ್ಭಕ್ತಿಗಳ ಸಾಕಾರಮೂರ್ತಿಯಾಗಿ "ಬಾಳಿಗೊಂದು ನಂಬಿಕೆ" ನೀಡುವ ನಮ್ಮೆಲ್ಲರ ಜೀವಜಾತಿಗಳ ನಾಯಕನಾಗಿ ಆಂಜನೇಯನಿದ್ದಾನೆ. ಇದನ್ನು ಡಿ.ವಿ.ಜಿ. ಅವರು ಗುರುತಿಸಿ ಪ್ರತಿಪಾದಿಸಿರುವದು ನಿಜವಾಗಿ ದ್ವೈತಾದ್ವೈತ ಸಮನ್ವಯದ ದಾರಿಯಲ್ಲಿಯ ಪ್ರಮುಖ ಹೆಜ್ಜೆಯಾಗಿದೆ. ಪಂಡಿತವರ್ಗವು ದ್ವೈತಾದ್ವೈತಗಳ ಸಮನ್ವಯವನ್ನು ಸುಲಭವಾಗಿ ಒಪ್ಪಲಾರರು. ದ್ವೈತವು ಮೊದಲನೆಯ ಸೋಪಾನ, ಅದ್ವೈತವು ಕೊನೆಯ ಸೋಪಾನವೆಂಬ ಮಾತು ದ್ವೈತಿಗಳಿಗೆ ಒಪ್ಪಿಗೆಯಾಗಲಾರದು.

ಆದರೆ ಮಾಧ್ವರ ಮುಖ್ಯ ಪ್ರಾಣ ತತ್ವವು ಶುದ್ಧಜೀವನದ ಮಹಾಪ್ರತಿಮೆಯಾಗಿದೆ. ಶುದ್ಧಜೀವನದ ಸ್ವೀಕಾರ, ಜ್ಞಾನ ಭಕ್ತಿ ಕರ್ಮ ಧ್ಯಾನಗಳ ಸಮನ್ವಯ—ಮಾಧ್ವರ ದ್ವೈತ ಸಿದ್ಧಾಂತದ ಮೂಲತಳಹದಿ. ಈ ತತ್ವದ ತಿಳಿವಳಿಕೆಯಾದಷ್ಟು ದ್ವೈತಾದ್ವೈತ ಸಮನ್ವಯ ಸಾಧ್ಯವಾಗುತ್ತದೆ. ಡಿ.ವಿ.ಜಿ. ಅವರಲ್ಲಿ ಈ ಶುದ್ಧ ಜೀವನತಳಹದಿ ಪ್ರಧಾನ ಅಂಶವಾಗಿದೆ.

ಎದೆ ತುಂಬಿರಲಿ ರಾಮನ್—ಇಳೆಯುವನ ರಾಜ್ಯ
ಬದುಕವನೊಳುತ್ಸಾಹ—ಬಾಳ್ ಅವನ ಭೋಜ್ಯ
ಒಂದು ಪೌರುಷದ ಕೈ—ಒಂದು ಧರ್ಮದ ಕೈ
ಒಂದು ಪದ ವಿಜ್ಞಾನ—ಒಂದು ಸೌಜನ್ಯ

ಇದು ಆಂಜನೇಯಸ್ವಾಮಿಯಲ್ಲಿ ಡಿ.ವಿ.ಜಿ. ಕಂಡ ಪೂರ್ಣಜೀವನದ ಸಮನ್ವಿತ ಜೀವನದ ಒಂದು ಪ್ರತಿಮೆ. ಮತಮತಗಳ ವಾದವಿವಾದಗಳಿಂದ ಮೇಲೆದ್ದು, ವೇದದ ಅಖಂಡ ಜ್ಞಾನವನ್ನು ಗುರುತಿಸಿ ಆಧುನಿಕ ಜೀವನದ ವೈಜ್ಞಾನಿಕ ಪೌರುಷ ವಾದದ ಇತಿಮಿತಿಗಳನ್ನು ಅರಿತು ಭಾರತೀಯ ಆಧ್ಯಾತ್ಮದಿಂದ ಅದನ್ನು ತಮ್ಮ ಜೀವನ ಧರ್ಮ ಯೋಗದೊಂದಿಗೆ ಸಮನ್ವಿತಗೊಳಿಸಿದ್ದು ಡಿ.ವಿ.ಜಿ. ಅವರ ವಿಶೇಷ ಕಾಣಿಕೆ. ಇದರಲ್ಲಿ ಸಾಹಿತ್ಯದ ರಸಾನುಭೂತಿ, ರಾಜ್ಯಶಾಸ್ತ್ರದ ವೀರಜೀವನ, ಸಾರ್ವಜನಿಕ ಸೇವಾಭಾವದ ಪೌರಪ್ರಜ್ಞೆ—ಇವುಗಳನ್ನು ತಮ್ಮ ಸಾಹಿತ್ಯ ಕೃತಿಗಳ ಅಂಗ ಮಾಡಿದ್ದು ನಾಡಿನ ಶಿಕ್ಷಣರಂಗಕ್ಕೊಂದು ಅನನ್ಯ ಸಂಸ್ಕಾರ ನೀಡುವಂಥ ಕಾರ್ಯವಾಗಿದೆ.

ಡಿ.ವಿ.ಜಿ.ಯವರ ಹೊಸ ಮಾತು

'ಪೌರುಷ'–ಎಂಬ ವೈದಿಕ ಶಬ್ದವು ಸ್ತ್ರೀ ಹಾಗೂ ಪುರುಷತ್ವಗಳೆರಡನ್ನೂ ಒಳಗೊಂಡ ಪದ ; ಇದು ರಾಜ್ಯಭಾರ, ಶತ್ರುಮರ್ದನ ಮಾಡಬಲ್ಲ 'ಪೌರುಷ'ವೂ ಹೌದು. ಈ ಎರಡು ಅಂಶಗಳೇ ಬ್ರಹ್ಮ ಹಾಗೂ ಧರ್ಮ ಶಬ್ದಗಳಿಂದ ವರ್ಣಿತವಾದ ಗುಣಗಳಿಂದ ಕೂಡಿದ 'ಪೌರುಷ'ಪದದಲ್ಲಿವೆ. ಡಿ.ವಿ.ಜಿ. ಅವರು ಪುನಃ ಪುನಃ ಪ್ರತಿಪಾದಿಸುವ ಪೌರುಷ ಈ ಜಾತಿಯದು. ನಮ್ಮ ವೇದದ 'ಇಂದ್ರ' ನಲ್ಲಿರುವ 'ಪೌರುಷ' ಇಂಥದು. ಆದರೆ ಈ 'ಪೌರುಷ' ಜಾಗ್ರತಿಗೆ 'ಆನಂದ'

ಬೇಕಾಗುತ್ತದೆ. ವೇದದಲ್ಲಿ ಸೋಮರಸದಿಂದ ಇಂದ್ರನಿಗೆ ಮಹಾಬಲ ಪ್ರಾಪ್ತಿಯಾಗುತ್ತದೆಂದು ಹೇಳಲಾಗಿದೆ. ಡಿ.ವಿ.ಜಿ. ಸಾಹಿತ್ಯ ಮತ್ತು ಜೀವನಸೌಂದರ್ಯವೆಂಬ ಗ್ರಂಥದಲ್ಲಿ ಈ ಅಂಶವನ್ನು ಗುರುತಿಸುತ್ತ ತೀರ ಹೊಸ ಮಾತು ಹೇಳಿದ್ದಾರೆ:-

> "ಸೋಮರಸದಂತೆ ಕಾವ್ಯರಸವು ಮಹಾನಂದವನ್ನಲ್ಲದೆ **ಮಹಾಬಲವನ್ನೂ** ಕೊಟ್ಟು ಆತ್ಮಕ್ಕೊಂದು ದಿವ್ಯಸಂಸ್ಕಾರವನ್ನು ಕೊಡುವದು."
>
> (ಪುಟ 95)

ಇಲ್ಲಿ ಕಾವ್ಯರಸವು "ಮಹಾಬಲವನ್ನೂ" ನೀಡುವದೆಂಬ ಅಂಶವನ್ನು ನಮ್ಮ ಸಾಹಿತ್ಯ ವಿಮರ್ಶಾತಜ್ಞರು ಇನ್ನೂ ಅರಿಯಬೇಕಾಗಿದೆ. ರಸಾನುಭವವೆಂದ ತಕ್ಷಣ ಅದೊಂದು ಚಿತ್ತವಿಶ್ರಾಂತಿ ಎಂದೂ, ಸಂಸ್ಕಾರ ಮಾತ್ರವೆಂದೂ ಹೇಳುವುದುಂಟು. ಆದರೆ ಜೀವನವನ್ನಾಳುವ, ನಿರಂತರ ಸೃಜನಶೀಲವಾದ ಮಹಾಪೌರುಷ— ಮಹಾಬಲವು— ಸಾಹಿತ್ಯ ಪ್ರಯೋಜನಗಳಲ್ಲಿ ಮುಖ್ಯವಾಗಿದೆ. ಇದನ್ನರಿತರೆ ಪಾಶ್ಚಿಮಾತ್ಯ ನವ್ಯ ವಿಮರ್ಶೆಯಲ್ಲಿಯ ವೈಚಾರಿಕತೆ, ಬಂಡಾಯ ಸಾಹಿತ್ಯದ 'ಕ್ರಾಂತಿಪೌರುಷ' ಹಾಗೂ ಭಾರತೀಯ ಆನಂದ ಪರವಶತೆಗಳ ಸಮನ್ವಯಕ್ಕೆ ಸೂತ್ರವೊಂದು ದೊರಕುತ್ತದೆ. ನಿಜವಾಗಿ ಈ ಸೂತ್ರದ ಹಿಂದೆ ಸಮಸ್ತ ವೈದಿಕ ವಿಚಾರಸಾರವೇ ನಿಂತಿದೆ. ವೇದದ ಸಪ್ತವ್ಯಾಹೃತಗಳಾದ ಭೂಃ, ಭುವಃ, ಸುವಃ, ಮಹಃ, ಜನಃ, ತಪಃ. ಸತ್ಯಂ— ಗಳಲ್ಲಿ ಜನಃ ಎಂಬುದು ಆನಂದಲೋಕ, ಅದೇ ಕಡೆಯದಲ್ಲ; ಅದರಾಚೆಗೆ ತಪ ಹಾಗೂ ಸತ್ಯ ಲೋಕಗಳುಂಟು. ತಪಃ ಎಂಬುದು ಜ್ಞಾನ, ಕ್ರಿಯಾಶಕ್ತಿಗಳಿಂದ ಕೂಡಿದ್ದು 'ಸತ್-ಚಿತ್-ಆನಂದ'ದಲ್ಲಿಯ 'ಚಿತ್' ಆಗಿದೆ. ಸತ್ಯವೆಂಬುದೇ ಅಂತಿಮ ಉಪಾಸ್ಯ ದೇವತೆ. ಛಾಂದೋಗ್ಯ ಉಪನಿಷತ್ತಿನಲ್ಲಿಯೂ ಸತ್ಯವೇ ನಾರದರಿಗೆ ತಿಳಿದ ಪರಮ ಸತ್ಯ. ಈ ಸತ್ಯದೊಡನೆ ಭೂಮಾನಂದ ಕೂಡಿ ಒಂದಾದರೆ—(ಇದಕ್ಕೆ ಭಕ್ತಿ ಎನ್ನುತ್ತಾರೆ) ಅದೇ ಪರಮ ಸಾಕ್ಷಾತ್ಕಾರ.

ಇಂಥ ಸತ್ಯವು ಸಾಹಿತ್ಯದ ಪ್ರಯೋಜನವಾಗಬೇಕು. ಆದರೆ ಈ ಸತ್ಯವು ಚಿತ್ ಹಾಗೂ ಆನಂದಗಳಿಂದ ಅಭಿನ್ನವಾದ ಅಖಂಡವಾದ ಪರಮಸತ್ಯವಾಗಿದೆ ಎಂಬುದನ್ನು ಮಾತ್ರ ಮರೆಯಬಾರದು.

ಬಹುಶಃ ಪಾಶ್ಚಿಮಾತ್ಯ ಪೌರ್ವಾತ್ಯ ಹಾಗೂ ರಷ್ಯದ ಸಮಾಜವಾದೀಯ ಸಾಹಿತ್ಯದೃಷ್ಟಿ ಹಾಗೂ ಜೀವನದೃಷ್ಟಿಗಳ ಸಮನ್ವಯವು ಈ ಸಚ್ಚಿದಾನಂದಾತ್ಮಕವಾದ ಭೂಮದೃಷ್ಟಿಯಿಂದಲೇ ಸಾಧ್ಯವಾಗುತ್ತದೆ.

ಭಾರತೀಯ ವೇದಾಂತ ಶಾಸ್ತ್ರವು + ಸತ್ + ಚಿತ್ + ಆನಂದ + ಆತ್ಮಾ ಭೂಮಗಳೆಂಬ ಈ ಐದು ಮೌಲ್ಯಗಳನ್ನು ಗುರುತಿಸಿ ಅವುಗಳನ್ನೂ ಸಮನ್ವಯಗೊಳಿಸಿದೆ. ಡಿ.ವಿ.ಜಿ. ಅವರು "ಜೀವನಸೌಂದರ್ಯ ಮತ್ತು ಸಾಹಿತ್ಯ" ವೆಂಬ ಗ್ರಂಥದಲ್ಲಿ, ಕಾವ್ಯದಲ್ಲಿ ದೊರೆಯುವ ಆನಂದದ ಸ್ವರೂಪವನ್ನು ವಿವರಿಸುತ್ತ ಅದಕ್ಕೆ

ಪರ್ಯಾಯ ಪದಗಳನ್ನಾಗಿ 'ಸಮಾಧಿ', 'ತಾದಾತ್ಮ್ಯ', 'ಪರವಶತೆ'–ಎಂಬವುಗಳನ್ನು ಬಳಸುತ್ತಾರಲ್ಲದೆ ಈ ಎಲ್ಲ ಪದಗಳನ್ನು ಪ್ರತಿನಿಧಿಸುವ "ಭೂಮಾನಂದ"ವೆಂಬ ಛಾಂದೋಗ್ಯ ಉಪನಿಷತ್ತಿನ ಶಬ್ದವನ್ನು ಉದಹರಿಸುತ್ತಾರೆ. ('ಜೀವನಸೌಂದರ್ಯ ಮತ್ತು ಸಾಹಿತ್ಯ' ಅಡಿಟಿಪ್ಪಣಿ; ಪುಟ. 190.) ಆತ್ಮ ಎಂದರೆ ಅಂತರ್ಯಾಮಿ; ಹೃದ್ದೇಶದಲ್ಲಿದ್ದ ಈಶ್ವರ.

ಭೂಮಾನಂದಕ್ಕೆ ಇನ್ನೊಂದು ಹೆಸರು ಭಕ್ತಿ. ಜೀವಿಗಳಲ್ಲಿ ಅನಾದಿಸಿದ್ಧವಾದ ಭಕ್ತಿ ಎಂಬ ಸ್ಥಾಯಿಭಾವವೇ ಮುಕ್ತಾವಸ್ಥೆಯಲ್ಲಿ ಸ್ವರೂಪಾನಂದವಾಗಿ ನಿಲ್ಲುತ್ತದೆಂದು 'ಸತ್ತತ್ತ್ವರತ್ನಮಾಲಾ' ಎಂಬ ಗ್ರಂಥ ಹೇಳುತ್ತದೆ.

> ಅನಾದಿಸಿದ್ಧಾಭಕ್ತಿರ್ಹಿ ವೃದ್ಧಿಂ ಗತ್ವೈವ ಸಾ
> ಅಪರೋಕ್ಷ ದೃಶೇರ್ಹೇತುರ್ಮುಕ್ತಿ ಹೇತುಶ್ಚ ಸಾ ಪುನ:
>
> —ಸ.ರ.ಮಾ. 398
>
> ಸೈವಾನಂದಸ್ವರೂಪೇಣ ನಿತ್ಯಮುಕ್ತೇಷು ತಿಷ್ಠತಿ
> ಭಕ್ತ್ಯೈತಾದೃಶಯೋಪಾಸ್ಯೋ ಭಗವಾನಿಂದಿರಾಪತಿಃ ॥
>
> —ಸ.ರ.ಮಾ. 399

ಅಂದರೆ "ಭಕ್ತಿಯು ಅನಾದಿಸಿದ್ಧವಾಗಿ ಜೀವನ ಸ್ವರೂಪದಲ್ಲಿದ್ದು ಸಾಧನೆಯಿಂದ ಕ್ರಮವಾಗಿ ವೃದ್ಧಿ ಹೊಂದಿ ಅಪರೋಕ್ಷ ಜ್ಞಾನಕ್ಕೂ ಮುಕ್ತಿಗೂ ಕಾರಣವಾಗುತ್ತದೆ. ಅದೇ ಭಕ್ತಿಯು ಮುಕ್ತರಲ್ಲಿ ಸ್ವರೂಪಾನಂದವಾಗಿ ನಿತ್ಯವೂ ನೆಲೆಗೊಳ್ಳುತ್ತದೆ. ಭಗವಾನ್ ಇಂದಿರಾಪತಿಯು ಇಂಥ ಭಕ್ತಿಯಿಂದ ಉಪಾಸ್ಯ"ನೆಂದು 'ಸತ್ತತ್ತ್ವ ರತ್ನಮಾಲಾ' ಗ್ರಂಥವು ವಿವರಿಸುತ್ತದೆ.

ಶ್ರೀ ದ. ರಾ. ಬೇಂದ್ರೆಯವರೂ ಈ ಭಕ್ತಿರಸದ ವಿವೇಚನೆ ಮಾಡಿದ್ದಾರೆ. ಆದರೆ ನವ್ಯ ವಿಮರ್ಶೆಯ ಬಿರುಗಾಳಿಯಲ್ಲಿ ಭಾರತೀಯ ರಸಮೀಮಾಂಸೆ ಪೂರ್ಣವಾಗಿ ಸ್ಥಗಿತಗೊಂಡಿದೆ. ಡಿ.ವಿ.ಜಿ.ಯವರ ಜನ್ಮಶತಮಾನೋತ್ಸವ ನಿಮಿತ್ತ ಮತ್ತೊಮ್ಮೆ ಈ ಅಂಶಗಳ ಕಡೆಗೆ ವಿಮರ್ಶಕರ ದೃಷ್ಟಿ ತಿರುಗಿದರೆ ಕನ್ನಡ ಸಾಹಿತ್ಯ ವಿಮರ್ಶನರಂಗಕ್ಕೇ ಹೊಸ ಚೈತನ್ಯ ಬಂದೀತು.

ಭಕ್ತಿಯು ಬಹು ದೊಡ್ಡ ಸಮನ್ವಯ ಶಕ್ತಿ. ಡಿ.ವಿ.ಜಿ. ಅವರ ಪಾಲಿಗಂತೂ "ಭಕ್ತಿ ಎಂಬುದು ಬರಿಯ ಮನಸ್ಸಿನ ತಳಮಳವಲ್ಲ; ಪುರುಷಶಕ್ತಿಯ ಪ್ರಯೋಗವೂ ಹೌದು...ಭಕ್ತಿಯೆಂಬುದು ತಲೆಯಿಂದ ಕೈಗಳ ದ್ವಾರಾ ಹರಿದು ಬರುವ ಒಂದು ಆತ್ಮಶಕ್ತಿ ಎಂಬುದು ನಮ್ಮ ಭಾವನೆ; ಭಕ್ತಿಗೆ ಹೃದಯವೊಂದೇ ಪೀಠವೆಂದು ಪೂರ್ವಭಾವನೆ; ಭಕ್ತಿಯ ಒಂದು ಪಾದ ಹೃದಯದಲ್ಲಿ. ಇನ್ನೊಂದು ಪಾದ ಬುದ್ಧಿಯಲ್ಲಿ ನಿಂತಿರುತ್ತದೆಂದು ನಮ್ಮ ಭಾವನೆ. ಭಕ್ತಿ ದೇವರಿಗೆ ತಲುಪತಕ್ಕದ್ದೆಂದು ಪೂರ್ವಭಾವನೆ; ಅದು ದೇವರು ಸೃಷ್ಟಿ ಮಾಡಿರುವ—ದೇವರ ಪ್ರತ್ಯಕ್ಷ

ಕಾರ್ಯವಾದ ಜೀವಲೋಕಕ್ಕೆ ತಲುಪಬೇಕಾದದ್ದೆಂದು ನಮ್ಮ ಭಾವನೆ...ನಮ್ಮ ಭಕ್ತಿಯಲ್ಲಿ ಪೌರುಷ ಮುಖ್ಯಾಂಶ."

—ಬಾಳಿಗೊಂದು ನಂಬಿಕೆ—ಪು. 34-25

ಜೀವಲೋಕದತ್ತ ಹರಿವ ಭಕ್ತಿ, ಪೌರುಷಾಂಶ ಮುಖ್ಯವಾದ ಭಕ್ತಿಯ ಬಗೆಗೆ ಡಿ.ವಿ.ಜಿ.ಯವರಂತೆ ಹೇಳಿದ ಬೇರೆ ಕನ್ನಡ ಲೇಖಕರನ್ನು ಹುಡುಕಬೇಕಾಗಿದೆ. ಡಿ.ವಿ.ಜಿ. ಅವರು ಭಕ್ತಿಯಲ್ಲಿ ಪೌರುಷಾಂಶ ಗುರುತಿಸಿದಂತೆ ರಸಾನುಭವದಲ್ಲಿಯೂ ಪೌರುಷಾಂಶವನ್ನು ಗುರುತಿಸಿದರೆ ನಮ್ಮ ವಿಮರ್ಶಾದೃಷ್ಟಿಗೇ ಹೊಸ ತಿರುವು ಬಂದು, ಧರ್ಮ, ನೀತಿ, ರಸಾನುಭವಗಳ ಸಮನ್ವಯಕ್ಕೆ ಪೀಠಿಕೆ ಹಾಕಿದಂತಾಗುವದು ಅಥವಾ ಸಮನ್ವಯದ ನವ ಮಹಾದ್ವಾರವೇ ತೆರೆಯುವದು.

ಸಂಸ್ಕೃತಿಯ ಜೀವಾಳ ಸಮನ್ವಯ

ಡಿ.ವಿ.ಜಿ. ಅವರ ಶಾಸ್ತ್ರೀಯ ಹಾಗೂ ಸಾಹಿತ್ಯಕೃತಿಗಳ ಸ್ಥೂಲ ಅವಲೊಕನದಿಂದಲೂ ಅವರ ಪ್ರಜ್ಞೆಯ ಆಳ ವಿಸ್ತಾರ ಹಾಗೂ ಗಹನತೆಗಳಲ್ಲದೆ ಸಮನ್ವಯ ದೃಷ್ಟಿಯಲ್ಲಿಯ "ಪ್ರವಿಚಾರಣ" ಪ್ರಭೆ ಎದ್ದು ಕಾಣುತ್ತದೆ. ಈ ಸಮನ್ವಯವು ಒಂದು ದೃಷ್ಟಿಕೋನ ಮಾತ್ರವಲ್ಲ; ಮಾನವನ ಬದುಕು ಸುಸಂಸ್ಕೃತವಾಗಿ ಅರಳಬೇಕಾದರೆ ಸಮನ್ವಯ ಪ್ರಜ್ಞೆ ಇಲ್ಲದೆ ಸಾಧ್ಯವಿಲ್ಲ. "ನಾನಾ ಗುಣಸಮನ್ವಯದ ವರ್ತನೆಯನ್ನು—ಆತ್ಮಸಂಯಮವನ್ನು—ಅಂಥ ಲೋಕಸ್ನೇಹ ಪ್ರಧಾನವಾದ ಸ್ವಧರ್ಮ ಪ್ರಕಾಶವನ್ನು ಸಂಸ್ಕೃತಿ ಎನ್ನುತ್ತೇವೆ."

—ಸಂಸ್ಕೃತಿ, ಪು. 91

ಸಮಾಜದ ರಕ್ಷಣೆಯ ಕೋಟೆಯಲ್ಲಿ ಕುಳಿತು ಮನಸ್ಸಿಗೆ ಬಂದಂತೆ ಯೋಚನೆ ಮಾಡುವ, ಖಂಡನೆ ಮಂಡನೆಯಲ್ಲಿ ತೊಡಗುವ ಪಾಂಡಿತ್ಯ–ತರ್ಕಗಳಿಂದ ಸಾಮಾಜಿಕ ವಿಕಾಸವೂ ಇಲ್ಲ, ಆತ್ಮಜ್ಞಾನವೂ ಇಲ್ಲ, ಮಾನವ ಜೀವನದ ಸಂಗ್ರಹಣ–ಧಾರಣ ಪೋಷಣವೂ ಇಲ್ಲ. ಆದರೆ ಸಮಾಜವು ತರ್ಕದ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿ–ಈ ಮಂಥನದಲ್ಲಿ ನೈಜ ಜ್ಞಾನದ ಕಿಡಿ ಸಿಡಿಯಬಹುದೆಂದು ನಂಬಿಕೊಂಡಿರುತ್ತದೆ. ಆದರೂ ತನ್ನ ರಕ್ಷಣೆಯ ಭಾರವನ್ನು ತರ್ಕವಾದಿಗಳ ಕೈಗೆ ಕೊಡುವುದಿಲ್ಲ. ಪರಮತ ಸಹಿಷ್ಣು, ಆತ್ಮಸಂಯಮ ಶೀಲ, ಸರ್ವಜನಮೈತ್ರಿಸಿದ್ಧವಾದ ಸಮನ್ವಯದರ್ಶನವುಳ್ಳ ದಾರ್ಶನಿಕ ರಾಜನ ಕೈಗೆ—ಜನಕ–ಅರ್ಜುನ–ಶ್ರೀಕೃಷ್ಣ–ಶ್ರೀರಾಮನಂಥವರ ಕೈಗೆ, ಒಪ್ಪಿಸುತ್ತದೆ. ಇಂಥ ಜನರ ಕೈಯಲ್ಲಿ ಸಮನ್ವಯವು "ನ್ಯಾಯ—ತಾರತಮ್ಯ ವಿವೇಕ, ಸಮತೂಕಗಳಿಗೆ ಪರ್ಯಾಯ ಪದವಾಗಿರುತ್ತದೆ. ಅಂತೆಯೇ ಡಿ.ವಿ.ಜಿ. ಈ ಸಮನ್ವಯ ಸೂತ್ರವು—ನೀತಿಯು "ರಾಜಕೀಯಕ್ಕೂ, ಸಂಪದ್ವಿಷಯಕ್ಕೂ ನ್ಯಾಯಾಸ್ಥಾನದ ವ್ಯವಹಾರಕ್ಕೂ, ಎಲ್ಲ ಮನುಷ್ಯ ವ್ಯಾಪಾರಗಳಿಗೂ ಅನ್ವಯಿಸಲರ್ಹವಾದದ್ದು" (ಸಂಸ್ಕೃತಿ, 85-86) ಎಂದು ಹೇಳಿದ್ದಾರೆ. "ಮನುಷ್ಯತ್ವವು ಅದಕ್ಕೆ ಸಾಧ್ಯವಿರುವಷ್ಟು ಮೇಲ್ಮಟ್ಟಕ್ಕೇರಲು ಇಂಥಾ ಸಮನ್ವಯೋಪಾಯವೊಂದೇ

ಇರುವ ಮಾರ್ಗ"ವೆಂಬ ಅವರ ನುಡಿ (ಸಂಸ್ಕೃತಿ, ಪು. 86) ಸಮನ್ವಯದ ಅನನ್ಯ ಅನಿವಾರ್ಯತೆಯನ್ನು ಸ್ಪಷ್ಟಗೊಳಿಸುತ್ತದೆ.

ಸಮನ್ವಯ ಸಾಧ್ಯವಿಲ್ಲದಲ್ಲಿ ಪರಮತ ಸಹಿಷ್ಣುತೆ, ಸ್ವಮತದ ಅನುಷ್ಠಾನ, ಲೋಕಕಲ್ಯಾಣ ಕಾರ್ಯ ನಿಮಗ್ನತೆಗಳನ್ನು ಡಿ.ವಿ.ಜಿ. ಅವರು ತಮ್ಮ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ'ದಲ್ಲಿ ಪ್ರತಿಪಾದಿಸಿದ್ದಾರೆ. ಈ ಪ್ರತಿಪಾದನೆಯ ಹಿಂದಿರುವ ದರ್ಶನವೆಂದರೆ---ಸಮನ್ವಯವು ನಿರಂತರ, ಹೊಸ ಹೊಸತಾಗಿ ಆವಿಷ್ಕಾರ ಹೊಂದುವದು. ಯಾವುದೋ ಒಂದು ಕಾಲದಲ್ಲಿ, ಯಾರೊ ಒಬ್ಬ ದಾರ್ಶನಿಕನಿಂದ ಸಮನ್ವಯ ಸಾಧಿಸಿ ಮುಕ್ತಾಯ ಹಾಡುವದು ಸಾಧ್ಯವಿಲ್ಲ. ಹೊಸ ಕಾಲಕ್ಕೆ ಹೊಸ ಸಮಸ್ಯೆ; ಹೊಸ ಸಮನ್ವಯ ಸೂತ್ರ. ಆದ್ದರಿಂದಲೇ ವೇದ, ಉಪನಿಷತ್ತು, ಬ್ರಹ್ಮಸೂತ್ರ ಗೀತೆಗಳಿಗೆ ನಿರಂತರ ವ್ಯಾಖ್ಯಾನಗಳು ಬರುತ್ತಲೇ ಇರುತ್ತವೆ. ಈ ವ್ಯಾಖ್ಯಾನಗಳು ಕೇವಲ ತಮ್ಮ ಮತಾಚಾರ್ಯರ ಅಭಿಪ್ರಾಯ ಸಮರ್ಥನೆ, ಪರಮತ ಟೀಕೆಗಳಂತೆ ಕಂಡರೂ ಅಂತರಂಗದಲ್ಲಿ ಅವು ಹೊಸ ಸಮಸ್ಯೆಗಳ ಪರಿಹಾರಕ್ಕೆ ಕಂಡುಹಿಡಿದ ಹೊಸ ಸಮನ್ವಯ ಸೂತ್ರಗಳ ದರ್ಶನಗಳಾಗಿರುತ್ತವೆ. ಈ ಅಂಶವನ್ನು ಡಿ.ವಿ.ಜಿ. ಗುರುತಿಸಿದಂತೆ ಬೇರೆ ವಿದ್ವಾಂಸರು ಗುರುತಿಸಿಲ್ಲ. ಆದ್ದರಿಂದಲೆ ಟೀಕಾ, ವ್ಯಾಖ್ಯಾನ, ಭಾಷ್ಯಗಳೆಂದರೆ ಮೂಗು ಮುರಿಯುವ ಫ್ಯಾಷನ್ ಆಧುನಿಕ ವಿದ್ವಾಂಸರಲ್ಲಿ ಬಂದಿದೆ.

> "ವಾದ ಸಮರ್ಥನಾವಸರದಲ್ಲಿ ಶಿಷ್ಯನು ಸ್ವಮತಾನುಕೂಲವಾದ **ಹೊಸ ಅಭಿಪ್ರಾಯಗಳನ್ನೂ ಹೊಸ ಯುಕ್ತಿಗಳನ್ನೂ** ಜೋಡಿಸಿರುತ್ತಾನೆ. ಹೀಗೆ ತತ್ತ್ವಚಿಂತನ ಸಾಹಿತ್ಯ ಬೆಳೆದಿರುತ್ತದೆ."
>
> —ಶ್ರೀಮದ್ಭಗವದ್ಗೀತಾ ತಾತ್ಪರ್ಯ, ಪು. 649

ಇಲ್ಲಿ ಬರಿ ವಾದ ಯಾವುದು ? ತಿರುಳಿನ ವಿವೇಕ ಯಾವುದು—ಎಂದು ಗುರುತಿಸಲು ಏಕೈಕ ದಾರಿ ಎಂದರೆ ಬದುಕಿನ ಸಮಕಾಲೀನ ಜೀವನದ ಯಾವ ಮಹತ್ವದ ಸಮಸ್ಯೆ ಇಲ್ಲಿ ತಲೆ ಎತ್ತಿದೆ, ಪರಿಹಾರ ಪಡೆದಿದೆ, ಎಂದು ಕಂಡುಹಿಡಿಯುವದೇ ಆಗಿದೆ. ಉದಾಹರಣೆಗೆ, ಡಿ.ವಿ.ಜಿ. ಅವರ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ' ವನ್ನೇ ತೆಗೆದುಕೊಂಡರೆ—

ವೈಯಕ್ತಿಕ ವ್ರತಾಚಾರಗಳಿಗೆ ಮತ್ತು ಮುಕ್ತಿಸಾಧನೆಗೆ ಪರಿಮಿತಿಗೊಂಡ 'ಧರ್ಮ'ವನ್ನು ಸಮಾಜ, ರಾಷ್ಟ್ರ ಹಾಗೂ ಲೋಕಕಲ್ಯಾಣ ರಂಗಗಳಿಗೆ ವಿಸ್ತರಿಸುವ ಅಗತ್ಯವನ್ನು ಡಿ.ವಿ.ಜಿ. ಕಂಡುಕೊಂಡರು. ಇದರಿಂದ ಮೋಕ್ಷದ ಕಲ್ಪನೆಯಲ್ಲಿ ಸಹ ಸೂಕ್ಷ್ಮ ಬದಲಾವಣೆ ಕಂಡಿದೆ. ವ್ರತಾಚರಣೆಗಳ ಪರಿಮಿತಿ ನಿರ್ದಿಷ್ಟವಾಗಿದೆ. ಜೀವನದ ಪ್ರೀತಿ, ಜೀವಿತದ ಸದಭ್ಯುದಯದಲ್ಲಿ ಸಂಪೂರ್ಣ ಶ್ರದ್ಧೆ ಇರುವುದೇ ಈ ಸಮನ್ವಯ, ಸಹಿಷ್ಣುತೆ, ಜ್ಞಾನಪಿಪಾಸೆ-ಜಿಜ್ಞಾಸೆಗಳಿಗೆ ಕಾರಣವಾಗಿದೆಯಲ್ಲದೆ ಒಂದು ಹೊಸ "ಸಮನ್ವಯ ಮತ" ಪ್ರತಿಪಾದನೆಗಾಗಿ ಈ ವಿಚಾರಸರಣಿ ಹೊರಟಿಲ್ಲ.

ಯಾವುದೇ ವಿಚಾರಸರಣಿಯಿದ್ದರೂ ಜೀವನಧರ್ಮಯೋಗವನ್ನು ಕೇಂದ್ರವಾಗಿಸಿದರೆ ಗ್ರಾಹ್ಯ ; ಅದಿಲ್ಲವಾದರೆ ಜೀವನವೇ ಅದನ್ನು ಅಗ್ರಾಹ್ಯವೆಂದು ತಿರಸ್ಕರಿಸುತ್ತದೆ.

ಡಿ.ವಿ.ಜಿ. ಅವರ ಈ ಸಮನ್ವಯ ದರ್ಶನದ ಸಾರವೇ ಸಂಸ್ಕೃತಿಯಾಗಿ. ಮಂಕುತಿಮ್ಮನ ಕಗ್ಗದಲ್ಲಿ, ತತ್ತ್ವಪದಗಳಾಗಿ ಮೈದಾಳಿದೆ. ಆದರೆ ಡಿ.ವಿ.ಜಿ. ಸಮನ್ವಯದರ್ಶನ ಮಂಕುತಿಮ್ಮನ ಕಗ್ಗಕ್ಕೆ, ಮಂಕುತಿಮ್ಮನ ಸಂಸ್ಕೃತಿಗೆ ಪರಿಮಿತ ವಾಗಿಲ್ಲವೆಂಬುದನ್ನು ಮಾತ್ರ ಮರೆಯಲಾಗದು.

ಸಂದೇಹವೀಕ್ಷತಿಯೊಳಿನ್ನಿಲ್ಲವೆಂದಲ್ಲ
ಇಂದು ನಂಬಿಹುದೆ ಮುಂದೆಂದುಮೆಂದಲ್ಲ
ಕುಂದು ತೋರ್ದಂದದನು ತಿದ್ದಿಕೊಳೆ ಮನಸುಂಟು
ಇಂದಿಗೀಮತವುಚಿತ—ಮಂಕುತಿಮ್ಮ.

ಮಂಕುತಿಮ್ಮನ ಕಗ್ಗದಲ್ಲಿ ಸರಳವಾಗಿ, ಸಹಜವಾಗಿ ಹರಿದುಬಂದ ಜೀವನ ತಿಳಿವಳಿಕೆ, ಸಮನ್ವಯ ಸಂಸ್ಕಾರದ ಹಿಂದೆ ಬಹು ಗಾಢವಾದ ತಾತ್ವಿಕ ಪ್ರಜ್ಞೆ ಅಡಗಿದೆ. ಬಹುಶಃ ಡಿ.ವಿ.ಜಿ. ಅವರು ಗೀತಾ ತಾತ್ಪರ್ಯ ಚಿಂತನೆ ಮಾಡಿ ಉದ್ಗ್ರಂಥ ರಚಿಸಿ ದಂತೆ ಬ್ರಹ್ಮಸೂತ್ರಗಳನ್ನೂ ಕುರಿತ ತಮ್ಮ ಚಿಂತನೆಯನ್ನು ಗ್ರಂಥಸ್ಥಗೊಳಿಸಿದ್ದರೆ ಸಮನ್ವಯದ ಇನ್ನೂ ಸಂಕೀರ್ಣ ಸ್ವರೂಪ ಪ್ರಕಟವಾಗುತ್ತಿತ್ತು. ಅವರ ಗೀತಾ ತಾತ್ಪರ್ಯ ಕುರಿತ ಗ್ರಂಥದಲ್ಲಿ "ಅನಾಮಿಕ" ರಾಗಿ ಸುಳಿದ ಕೆಲವು ಸೂಕ್ತಿಗಳು—ತಿರುಳ್ನುಡಿಗಳು ತಮ್ಮ ಸ್ವರೂಪದರ್ಶನ ಮಾಡಿಸಲು ಸಮರ್ಥವಾಗುತ್ತಿದ್ದವು. ಈ ಕಾರ್ಯಕ್ಕಾಗಿ ವ್ಯಾಖ್ಯಾನಗಳೇ ಬೇಕಾಗಬಹುದೇನೊ ! ಆದರೆ ಅದು ಪಾಂಡಿತ್ಯ ಪ್ರದರ್ಶನಕ್ಕಾಗಿಯಲ್ಲ. ಜೀವನಧರ್ಮಯೋಗದ ಅನುಭೂತಿಯ ಫಲಶ್ರುತಿಯಾಗಿ ಬರಬೇಕಾಗುತ್ತದೆ.

ಡಿ.ವಿ.ಜಿ. ಅವರ 'ಸಂಸ್ಕೃತಿ'ಯಲ್ಲಿ ಸಮನ್ವಯ ದೃಷ್ಟಿ

ಪ್ರೊ॥ ಎಸ್. ರಾಮಸ್ವಾಮಿ

ಸಂಸ್ಕೃತಿ ಎಂಬ ಪರಿಕಲ್ಪನೆಯ ವ್ಯಾಪ್ತಿ ಎಷ್ಟು ವಿಶಾಲವಾದದ್ದೋ, ಅಷ್ಟೇ ಸಂಕೀರ್ಣವಾದದ್ದು. ಒಬ್ಬ ವ್ಯಕ್ತಿ ಸುಸಂಸ್ಕೃತನಾಗಬೇಕಾದರೆ ಸಮಾಜಜೀವಿಯಾಗಿ ಮಾತ್ರ ಸಾಧ್ಯ; ಒಂದು ಸಮಾಜ ಸಂಸ್ಕೃತಿಸಂಪನ್ನವಾಗಬೇಕಾದರೆ ವ್ಯಕ್ತಿಗಳ ಆತ್ಮಸಾಕ್ಷಿ ಒಪ್ಪುವಂಥ ಮನಸ್ಸು, ಬುದ್ಧಿ, ಹೃದಯವ್ಯಾಪಾರಗಳ ಸಮರಸವೂ ಪರಿಪೂರ್ಣವೂ ಆದ ಹೊಂದಾಣಿಕೆ ಅಥವಾ ಸಮನ್ವಯ ಅಗತ್ಯ. ಪಾಶ್ಚಾತ್ಯ ಚಿಂತಕರಾದ ಮ್ಯಾಥ್ಯೂ ಆರ್ನಲ್ಡ್, ಕಾರ್ಡಿನಲ್ ನ್ಯೂಮನ್, ಷೇಕ್ಸ್‌ಪಿಯರ್, ಎಮರ್ಸನ್—ಈ ನಾಲ್ವರ ಅಭಿಪ್ರಾಯಗಳನ್ನು ವಾಲ್ಮೀಕಿ, ಮನು, ಭಾಸ, ಭರ್ತೃಹರಿ ಇವರ ಚಿಂತನೆಗಳ ಜೊತೆಗಿಟ್ಟು, ಜೊತೆಗೆ ರಾಮ. ಭರತ. ಅರ್ಜುನ, ಆಂಜನೇಯ ಇವರ ಪಾತ್ರ ವಿಶ್ಲೇಷಣೆ ಮಾಡಿ ಶ್ರುತಿ ಸ್ಮೃತಿಗಳಿಂದ ಉದಾಹರಿಸಿ ಡಿ.ವಿ.ಜಿ. ಅವರು ತಮ್ಮ ಸಮೀಕ್ಷೆಯ ಮೂಲಕ ಸಮಗ್ರ ಸಮನ್ವಯ ದೃಷ್ಟಿಯನ್ನು 'ಸಂಸ್ಕೃತಿ'ಯಲ್ಲಿ ಹೇಗೆ ಎಳೆಎಳೆಯಾಗಿ ಬಿಡಿಸಿ, ವ್ಯಷ್ಟಿ–ಸಮಷ್ಟಿ ನೆಲೆಗಳಲ್ಲಿ ನಿರೂಪಿಸಿದ್ದಾರೆ ಎಂಬುದನ್ನು ಲೇಖಕರು ವಿಶ್ಲೇಷಣಾತ್ಮಕವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಡಿ.ವಿ.ಜಿ. ಅವರ ದೃಷ್ಟಿಯಲ್ಲಿ "ಆತ್ಮದ ಅನ್ವೇಷಣೆಯೇ ಜೀವನದ ಗುರಿ". ಅದೇ ಸಂಸ್ಕೃತಿಯ ಪರಿಪೂರ್ಣತ್ವ ಎನ್ನುವುದು ಹೇಗೆ ಸಂಸ್ಕೃತಿಯ ಬಗೆಗೆ ಡಿ.ವಿ.ಜಿ. ಅವರ ಪರಮಾದರ್ಶ ವಾಗಿದೆ ಎಂಬುದನ್ನು ಲೇಖಕರು ಚೆನ್ನಾಗಿ ಸ್ಪಷ್ಟಪಡಿಸಿದ್ದಾರೆ.

೧

'ಸಂಸ್ಕೃತಿ' ಎಂಬುದು ಒಂದು ಬಗೆಯ ಆತ್ಮಶಿಕ್ಷಣ. ಅದು ಬರಿಯ ಮನಸ್ಸಿನ ವ್ಯಾಪಾರವಲ್ಲ; ಅಥವಾ ಬರಿಯ ಬುದ್ಧಿಯ ವ್ಯಾಪಾರವಲ್ಲ; ಅಥವಾ ಬರಿಯ

ಸ್ಮೃತಿಶಕ್ತಿಯ ವ್ಯಾಪಾರವೂ ಅಲ್ಲ. ಅದು ಮನಸ್ಸು, ಬುದ್ಧಿ, ಸ್ಮೃತಿ—ಇವೆಲ್ಲಕ್ಕೂ ಸ್ವಾಮಿಯಂತಿರುವ ಜೀವಾತ್ಮಕ್ಕೆ ಸೇರಿದ್ದು." [1]

"ಸಂಸ್ಕೃತಿಯೆಂದರೆ ಸುಗುಣಸಾಮರಸ್ಯ. ಸಮರಸ ಸಂಪೂರ್ಣತೆಯಲ್ಲಿ ಎರಡು ಅತ್ಯುತ್ಕೃಷ್ಟ ಗುಣಗಳು ಸಮ್ಮಿಳಿತವಾಗಿರುತ್ತವೆ. ಅವು ಮಾಧುರ್ಯ ಮತ್ತು ಕಾಂತಿ (Sweetness and Light)." [2]

"ಸಮೀಕ್ಷೆಯಿಂದ ಸಮನ್ವಯ." [3]

ಡಿ.ವಿ.ಜಿ.ಯವರ "ಸಮರಸ ಸಂಪೂರ್ಣತೆ"ಯನ್ನೂ "ಸಮನ್ವಯ" ದೃಷ್ಟಿಯನ್ನೂ ಅವರ ಈ ಮೂರು ಉಲ್ಲೇಖಗಳಿಂದ ತಿಳಿಯಲು ಸಾಧ್ಯವಾಗುತ್ತದೆ. ಡಿ.ವಿ.ಜಿ.ಯವರ ಪರಿಪೂರ್ಣತೆಯನ್ನು ಅರ್ಥಮಾಡಿಕೊಳ್ಳಲು ಒಂದು ಕಡೆ ಅವರ ಅಪಾರವಾದ ಸಂಸ್ಕೃತ ಪಾಂಡಿತ್ಯ, ಇನ್ನೊಂದು ಕಡೆ ಅವರ ಆಂಗ್ಲಭಾಷೆಯ ಸಮಗ್ರ ಪರಿಚಯ—ಇವೆರಡನ್ನೂ ಮನಸ್ಸಿನಲ್ಲಿಟ್ಟುಕೊಂಡು ತುಲನಮಾಡುವುದು ಅಗತ್ಯವೆನಿಸುತ್ತದೆ. ಈ ಎರಡು ಎಳೆಗಳನ್ನೂ ಹಾಸುಹೊಕ್ಕಾಗಿ ನೇಯ್ದು ಚಿತ್ರಿಸಿರುವುದನ್ನೇ ಪ್ರಸ್ತುತದಲ್ಲಿ "ಸಮನ್ವಯ ದೃಷ್ಟಿ" ಎಂದು ಕರೆಯಲಾಗಿದೆ. ಡಿ.ವಿ.ಜಿ.ಯವರ ಪ್ರಕಾರ "ಸಮನ್ವಯ ದೃಷ್ಟಿ"ಯು ಸುಸಂಸ್ಕೃತನ ಐದು ಮೂಲ ಲಕ್ಷಣಗಳಲ್ಲೊಂದು.[4] ಮಿಕ್ಕ ನಾಲ್ಕು—ಸ್ವಸ್ಥಾನ ಪರಿಜ್ಞಾನ, ಪರೇಂಗಿತ ಪರಿಗ್ರಹಣ, ಸ್ವಾರ್ಥನಿಯಮನ ಮತ್ತು ಸರಸತೆ. ಡಿ.ವಿ.ಜಿ.ಯವರ "ಸಂಸ್ಕೃತಿ"ಯು 114 ಪುಟಗಳ ಕಿರುಹೊತ್ತಿಗೆ. ಆದರೆ ಅವರು ಇಲ್ಲಿ ಒಂದು ವಿಶ್ವಕೋಶ (Encyclopaedia) ದಲ್ಲಿ ಹೇಳಬಹುದಾದ ವಿಷಯವನ್ನು ಅತ್ಯಂತ ಸಂಕ್ಷೇಪ ರೂಪದಲ್ಲಿ ನಿರೂಪಿಸಿದ್ದಾರೆ. ಆದ್ದರಿಂದಲೇ ಈ ಕಿರುಪ್ರಬಂಧದಲ್ಲಿ ಅವರ ಬಹುಮುಖ ಪ್ರತಿಭೆಯಲ್ಲಿ ಒಂದು ಅಂಶವನ್ನು ಮಾತ್ರ ಪರಿಗಣಿಸಲು ಪ್ರಯತ್ನಿಸಿದೆ.

ಮೇಲೆ ಉದಾಹರಿಸಿರುವ ಮೊದಲನೆಯ ವಾಕ್ಯದಲ್ಲಿ "ಮನಸ್ಸು, ಬುದ್ಧಿ, ಸ್ಮೃತಿ, ಜೀವಾತ್ಮ"—ಈ ಪದಗಳು ಸಂಸ್ಕೃತ ಪರಂಪರೆಯಲ್ಲಿ ಅನುಸ್ಯೂತವಾಗಿ ಬಂದಿರುವ ಪಾರಿಭಾಷಿಕ ಶಬ್ದಗಳು. ಎರಡನೆಯ ವಾಕ್ಯವು ಮ್ಯಾಥ್ಯೂ ಆರ್ನಲ್ಡ್ (Mathew Arnold)ನ "ಸಂಸ್ಕೃತಿ ಮತ್ತು ಅನಾಯಕತೆ" (Culture and Anarchy) ಎಂಬ ಪುಸ್ತಕದಲ್ಲಿನ ವಾದಸರಣಿ. ಆ ವಾಕ್ಯವನ್ನು ಉಲ್ಲೇಖಿಸಿ ಡಿ.ವಿ.ಜಿ.ಯವರೇ "ಇದನ್ನು ಒಂದು ಪ್ರಮಾಣವಾಕ್ಯವೆಂದು ನಾವು ಅಂಗೀಕರಿಸಬಹುದು"[5] ಎಂದು ಹೇಳುತ್ತಾರೆ. "ಪ್ರಮಾಣವಾಕ್ಯ"ಕ್ಕೆ ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ ಎಂತಹ ಉನ್ನತವಾದ ಸ್ಥಾನವಿದೆಯೆಂಬುದು ಸರ್ವವಿದಿತ. "ಪ್ರಮಾಕರಣಂ ಪ್ರಮಾಣಂ" ಎಂಬ ವ್ಯುತ್ಪತ್ತಿಯನ್ನು ಮನಸ್ಸಿಗೆ ತಂದುಕೊಂಡರೆ ಮ್ಯಾಥ್ಯೂ ಆರ್ನಲ್ಡನಿಗೆ ಡಿ.ವಿ.ಜಿ.ಯವರು ಎಂತಹ ಸ್ಥಾನವನ್ನು ಕೊಟ್ಟಿದ್ದಾರೆಂಬುದು ಸ್ಪಷ್ಟ. ಹೀಗೆಯೇ ಅವರು ಕಾರ್ಡಿನಲ್ ನ್ಯೂಮನ್ (Cardinal Newman)

ಎಂಬ ದ್ವೈವಮತಾಚಾರ್ಯನ ನಿಲುವನ್ನೂ ಸಮರ್ಥಿಸಿದ್ದಾರೆ. ಜೊತೆಗೆ ಷೇಕ್ಸ್‌ಪಿಯರ್ (Shakespeare) ನ ಮ್ಯಾಕ್‌ಬೆತ್ (Macbeth) "ರುದ್ರನಾಟಕ" ದಿಂದಲೂ ಉದಾಹರಿಸಿದ್ದಾರೆ. ಅಮೆರಿಕದ ಎಮರ್ಸನ್ (Emerson) ನಿಂದಲೂ ಸಂಸ್ಕೃತಿಯ ಬಗ್ಗೆ ಆತನು ತಾಳಿರುವ ಮನೋಭಾವವನ್ನು ಉಲ್ಲೇಖಿಸಿದ್ದಾರೆ. ಡಿ.ವಿ.ಜಿ. ಈ ನಾಲ್ಕು ಪಾಶ್ಚಾತ್ಯರ ಅಭಿಪ್ರಾಯಗಳನ್ನು ನಮ್ಮ ಪರಂಪರಾಗತವಾಗಿ ಪ್ರಸಿದ್ಧ ಪುರುಷರಾದ ವಾಲ್ಮೀಕಿ, ಮನು, ಭಾಸ, ಭರ್ತೃಹರಿ ಇವರ ಪರಿಸರದಲ್ಲಿ ಪ್ರಸ್ತಾಪಿಸಿರುವುದರ ಜೊತೆಗೆ ರಾಮ, ಭರತ, ಅರ್ಜುನ ಮುಂತಾದವರ ಪಾತ್ರವಿಶ್ಲೇಷಣೆಯನ್ನೂ ಮಾಡಿ, ಶ್ರುತಿ ಸ್ಮೃತಿಗಳಿಂದ ಉದಾಹರಿಸಿ ತಮ್ಮ ಸಮೀಕ್ಷೆಯ ಮೂಲಕ ಸಮಗ್ರ ಸಮನ್ವಯ ದೃಷ್ಟಿಯನ್ನು "ಸಂಸ್ಕೃತಿ"ಯಲ್ಲಿ ಮಂಡಿಸಿದ್ದಾರೆ. ಈ ಸ್ವಾರಸ್ಯಮಯವಾದ ಸಮನ್ವಯ ದೃಷ್ಟಿಯ ಸಾಮರಸ್ಯಚಿಂತನೆಯನ್ನು ಪರಿಚಯ ಮಾಡಿಕೊಳ್ಳುವ ಪ್ರಯತ್ನವೇ ಈ ಕಿರುಲೇಖನದ ಉದ್ದೇಶ.

೨

ಡಿ.ವಿ.ಜಿ.ಯವರೇ "ಸಮನ್ವಯ"ವನ್ನು ಈ ರೀತಿ ವಿವರಿಸಿದ್ದಾರೆ—

> "ಸಮನ್ವಯವೆಂದರೆ ಅನುಗೂಡಿರುವುದು. ನಮ್ಮ ವಿಚಾರಕ್ಕೆ ಬರುವ ಪ್ರತಿಯೊಂದು ಪ್ರಶ್ನೆಯಲ್ಲಿಯೂ ಭಿನ್ನಾಭಿಪ್ರಾಯಗಳು ಕಾಣಬರುವುದು ಎಲ್ಲರ ಅನುಭವ. ಹಾಗೆ ಅಭಿಪ್ರಾಯಭೇದಗಳು ತಲೆದೋರಿದಾಗ ಅವುಗಳ ಕಾರಣದಿಂದ ನಮ್ಮ ಅನ್ಯೋನ್ಯ ಸ್ನೇಹಕ್ಕೂ ಸಮಾಜದ ಐಕಮತ್ಯಕ್ಕೂ ಹಾನಿ ಬಾರದಿರಬೇಕಾದರೆ, ಆ ನಾನಾ ಅಭಿಪ್ರಾಯಗಳನ್ನು ಪರೀಕ್ಷಿಸಿ ನೋಡಿ, ಅವುಗಳ ಸತ್ಯಾಂಶಗಳನ್ನು ಶೇಖರಮಾಡಿ, ಒಂದು ಹದದಲ್ಲಿ ಅವುಗಳನ್ನು ಹೊಂದಿಸಬೇಕು. ಅಂಥಾ ಹದದ ಹೊಂದಿಕೆಯೇ ಸಮನ್ವಯ."[6]

ಈಗ ಡಿ.ವಿ.ಜಿ.ಯವರ "ಸಂಸ್ಕೃತಿ"ಯಲ್ಲಿ ಈ "ಹದದ ಹೊಂದಿಕೆ" ಹೇಗೆ ಮೂಡಿಬಂದಿದೆ ಎಂಬುದನ್ನು ಸಂಕ್ಷೇಪವಾಗಿ ಪರಿಶೀಲಿಸೋಣ.

ಸತ್ಯನಿರೂಪಣೆಯಲ್ಲಿ ನಯವಿಶೇಷವು ಸಂಸ್ಕೃತಿಯ ಒಂದು ಅಂಗ. ಇದನ್ನು ಭಾಸನು ತನ್ನ "ಪ್ರತಿಮಾ" ನಾಟಕದಲ್ಲಿ ಯಾವ ರೀತಿ ನಿರೂಪಿಸಿದ್ದಾನೆಂಬುದನ್ನು ಡಿ.ವಿ.ಜಿ.ಯವರು ಮನೋಜ್ಞವಾಗಿ ಉದಾಹರಿಸಿದ್ದಾರೆ. ಭರತನಿಗೆ ತನ್ನ ತಂದೆ ಮೃತನಾದನೆಂದು ಹಠಾತ್ತನೆ ಒಮ್ಮೆಲೆ ಸಿಡಿಲುಬಡಿದಂತೆ ಹೇಳದೆ, ಮೃದುವಾಗಿ, ನಯವಾಗಿ, ಅವನನ್ನು ಈ ವಿಷಾದ ಸುದ್ದಿಯನ್ನು ಸಹಿಸಲು ನೆರವಾಗುವ ರೀತಿಯಲ್ಲಿ ಸಿದ್ಧಪಡಿಸಿ, ಆದರ ಹೊಡೆತದ ವೇಗವನ್ನು ತಕ್ಕಮಟ್ಟಿಗೆ ಕುಗ್ಗಿಸಿ ತರುವಾಯ "ಸತ್ಯ"ವನ್ನು ಕಾಣುವಂತೆ ಮಾಡಿರುವುದು ವಸಿಷ್ಠರ "ಸಂಸ್ಕೃತಿ", ಭಾಸನ "ನಯಕೌಶಲ"ದ ಜಾಣ್ಮೆ. ಈ "ನಯಕೌಶಲ"ವನ್ನು ಇಂಗ್ಲಿಷಿನಲ್ಲಿ ಟ್ಯಾಕ್ಟ್

(tact) ಎಂದು ಹೇಳುತ್ತಾರೆಂದು ಡಿ.ವಿ.ಜಿ.ಯವರು ಸ್ಪಷ್ಟೀಕರಿಸಿ ಇಂಗ್ಲಿಷ್ ಸಾಹಿತ್ಯದ ಅತ್ಯುನ್ನತ ನಾಟಕಕಾರನಾದ ಷೇಕ್ಸ್‌ಪಿಯರ್ ಬರೆದ "ಮ್ಯಾಕ್‌ಬೆತ್" ನಾಟಕದಿಂದ ಸಂಸ್ಕೃತಿಯ ಈ ಅಂಗವನ್ನು ಉಲ್ಲೇಖಿಸಿದ್ದಾರೆ—ಮ್ಯಾಕ್‌ಬೆತ್‌ನು ತನ್ನ ಹೆಂಡತಿಯ ಮನೋವಿಕಲ್ಪವನ್ನು "ಹುಚ್ಚು", "ಉನ್ಮಾದ" ಮುಂತಾದ ಕಠಿನ ಶಬ್ದಗಳನ್ನು ಉಪಯೋಗಿಸದೆ ಹೇಗೆ ನುಣುಪಾದ ಮಾತಿನಲ್ಲಿ ವೈದ್ಯನಿಗೆ ತಿಳಿಸುತ್ತಾನೆಂಬುದನ್ನು ನಮ್ಮ ಗಮನಕ್ಕೆ ತರುತ್ತಾರೆ ಡಿ.ವಿ.ಜಿ.—

Canst thou not minister to a mind diseas'd,
Pluck from the memory a rooted sorrow,
Raze out the written troubles of the brain,
And with some sweet oblivious antidote
Cleanse the stuff'd bosom of that perilous stuff
Which weighs upon the heart ?[7]

ಇಲ್ಲಿ ಗಮನಿಸಬಹುದಾದ ಒಂದು ಅಂಶವೆಂದರೆ ಡಿ.ವಿ.ಜಿ.ಯವರೇ ಈ ಸಾಲುಗಳ ಭಾಷಾಂತರವನ್ನು ಮಾಡಿರುವುದು—

ಬೇರಿಟ್ಟ ದುಃಖಮಂ ನೆನಪಿನಿಂ ಕೀಳ್ತಿತ್ತಿ
ಮಿದುಳಿನೊಳ್ ಬರೆದಿರ್ಪ ಕಷ್ಟಗಳ ತೊಳೆದಳಿಸಿ
ಹೃದಯವನು ಕುಗ್ಗಿಸಿಹ ಭಯದ ವಿಷಗರ್ಭವನು.
ಇನಿದಾದ ಮರೆವನಾಗಿಪ ಮದ್ದಿನಿಂ ತೊಳೆದು
ಅಸ್ವಸ್ಥಮನಕೆ ನೀನುಪಚರಿಸಲಾರೆಯೇಂ ?

ಇದು ಮೂಲದ ಸೊಗಸಾದ ಅನುವಾದವೆಂದು ಹೇಳುವುದು ಇಲ್ಲಿಯ ಉದ್ದೇಶವಲ್ಲ. ಆದರೆ ಡಿ.ವಿ.ಜಿ.ಯವರ ಸಮನ್ವಯದೃಷ್ಟಿ ಎಷ್ಟು ವಿಶಾಲವಾದದ್ದು ಮತ್ತು ಮೊನಚಾದುದು ಎಂದು ತೋರಿಸುವ ಪ್ರಯತ್ನವಷ್ಟೆ. ಈ ಸಂದರ್ಭದಲ್ಲಿ, ಪ್ರಾಜ್ಞನಾದ ಲಾರ್ಡ್ ಮಾರ್ಲೆ (Lord Morley). ನಯಾಭಿಜ್ಞತೆಯೇ ಸಾಹಿತ್ಯ ವ್ಯಾಸಂಗದಿಂದ ನಮಗೆ ದೊರೆಯಬಹುದಾದ ಪರಮಲಾಭವೆಂದು ಹೇಳಿರುವುದನ್ನು ಅವರು ಗಮನಿಸುತ್ತಾರೆ,

ಡಿ.ವಿ.ಜಿ.ಯವರ ಸಂಸ್ಕೃತಿನಿರೂಪಣೆಯ ಗಂಭೀರಪ್ರವೃತ್ತಿ ಅವರನ್ನು ಆದಿಕವಿ ವಾಲ್ಮೀಕಿ ಮತ್ತು ಭರ್ತೃಹರಿ. ಭವಭೂತಿಗಳೆಡೆಗೆ ಒಯ್ಯುತ್ತದೆ. ಇಲ್ಲಿ ಅವರ ಸಮನ್ವಯ ದೃಷ್ಟಿ ಸಂಸ್ಕೃತಸಾಹಿತ್ಯದ ಸೊಗಸನ್ನು ಒಳಗೊಳ್ಳುತ್ತದೆ. ಸುಸಂಸ್ಕೃತನಾದವನ ಮಾತುಕತೆಯನ್ನು ವಿವರಿಸಲು ವಾಲ್ಮೀಕಿ ರಾಮಾಯಣದಿಂದ ಶ್ರೀರಾಮನು ಆಂಜನೇಯನ ಭಾಷಣದ ಬಗ್ಗೆ ಹೇಳುವ ಅಭಿಪ್ರಾಯವನ್ನು ಉಲ್ಲೇಖಿಸುತ್ತಾರೆ ಡಿ.ವಿ.ಜಿ.—

ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾಶ್ರುತಂ ।
ಬಹು ವ್ಯಾಹರತಾನೇನ ನ ಕಾಚಿದಪಶಬ್ದಿತಂ ॥
ಅವಿಸ್ತರಮ್ ಅಸಂದಿಗ್ಧಮ್ ಅವಿಲಂಬಿತಂ ಅದ್ರುತಂ ।
ಉರಃಸ್ಥಂ ಕಂಠಗಂ ವಾಕ್ಯಂ ವರ್ತತೇ ಮಧ್ಯಮೇ ಸ್ವರೇ ॥
ಸಂಸ್ಕಾರ ಕ್ರಮಸಂಪನ್ನಾಮ್ ಅದ್ರುತಾಮ್ ಅವಿಲಂಬಿತಾಂ ।
ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಂ ॥ [9]

ಇದರ ಅರ್ಥವನ್ನು ಡಿ.ವಿ.ಜಿ.ಯವರೇ ಹೀಗೆ ಕೊಡುತ್ತಾರೆ—

[ಈತನು ವ್ಯಾಕರಣವೆಲ್ಲವನ್ನೂ ಚೆನ್ನಾಗಿ ಸಾಧಿಸಿದ್ದಾನೆ. ಇಷ್ಟು ಮಾತ ನಾಡಿದ್ದರೂ ಅದರಲ್ಲಿ ಅಪಶಬ್ದ ಒಂದೂ ಇಲ್ಲ. ಮಾತು ಬಹಳ ಉದ್ದವಿಲ್ಲ, ಅದರಲ್ಲಿ ಸಂದೇಹಕ್ಕವಕಾಶವಿಲ್ಲ. ಅತಿ ಸಾವಕಾಶವಿಲ್ಲ, ಅತಿ ವೇಗವಿಲ್ಲ ; ಧ್ವನಿ ಅತಿ ಗಟ್ಟಿಯಲ್ಲ, ಅತಿ ಮೆಲ್ಲನೆ ಅಲ್ಲ, ಮಧ್ಯಮ ಅಂತಸ್ತಿನದು. ವಿಷಯ ನಿರೂಪಣೆಯ ರೀತಿಯಲ್ಲಿ ಒಂದು ಪೂರ್ವಾಲೋಚನೆಯಿಂದ ಗೊತ್ತಾದ ಅನುಕ್ರಮ ತೋರುತ್ತದೆ. ಅವಸರವೂ ಮಂದವೂ ಎರಡೂ ಅಲ್ಲದ ಈ ಮಂಗಳಕರವಾದ ಮಾತು ಹೃದಯ ವನ್ನು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ.] [10]

ಈ ಸಂದರ್ಭದಲ್ಲಿ ಸುಸಂಸ್ಕೃತನಾದವನ ("Gentleman") ಸಂಭಾಷಣ ಕ್ರಮ. ಮಾತುಕಥೆ ಹೇಗಿರುತ್ತದೆಂಬುದರ ಬಗ್ಗೆ ನ್ಯೂಮನ್ (John Henry Cardinal Newman) ಹೇಳುವ ಮಾತುಗಳನ್ನು ಗಮನಿಸಬಹುದು. ಡಿ.ವಿ.ಜಿ. ಯವರು '**ಜೆಂಟ್ಲ್‌ಮನ್' ಎಂಥವನು** ಎಂಬ ಶೀರ್ಷಿಕೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಾರೆ. ನ್ಯೂಮನ್‌ನ ವಿವರಣೆ ಹೀಗಿದೆ—

He can recollect to whom he is speaking; he guards against unseasonable allusions, or topics which may irritate ; he is seldom prominent in conversation, and never wearisome. He makes light of favours while he does them and seems to be receiving when he is conferring. He never speaks of himself except when compelled, never defends himself by a mere retort, he has no ears for slander or gossip, is scrupulous in imputing motives to those who never interfere with him and interprets everything for the best. [11]

ಈ ವಾಕ್ಯಗಳ ಅನುವಾದವನ್ನು ನಾವು ಡಿ.ವಿ.ಜಿ.ಯವರಿಂದಲೇ ಕೇಳಬಹುದು—

"ಆತನು ಸಂಭಾಷಣೆಯಲ್ಲಿ ಅಕಾರಣಪ್ರಸ್ತಾವಗಳೂ ಉದ್ರೇಕಕರಗಳಾದ ಸಂಗತಿಗಳೂ ಬಾರದಂತೆ ನೋಡಿಕೊಳ್ಳುತ್ತಾನೆ. ಮಾತುಕಥೆಯಲ್ಲಿ ತಾನು ಪ್ರಮುಖ ನಾಗಿ ಮುಂದೆ ಬರುವುದೂ, ಬೇಸರಪಡಿಸುವಂತೆ ಮಾತನಾಡುವುದೂ ಎಂದಿಗೂ ಇಲ್ಲ. ತಾನು ಇತರರಿಗೆ ಉಪಕಾರ ಮಾಡಿದಾಗ ಅದು ಸ್ವಲ್ಪವೆನಿಸುವಂತೆ ನಡೆದು

ಕೊಳ್ಳುತ್ತಾನೆ. ಕೊಡುವವನು ತಾನಾಗಿದ್ದರೂ ಸ್ವೀಕರಿಸುವವನು ತಾನೆಂಬಂತೆ ನಡೆಯುತ್ತಾನೆ. ಒತ್ತಾಯವಿದ್ದ ಹೊರತು ತನ್ನ ವಿಷಯವನ್ನು ತಾನು ಹೇಳಿಕೊಳ್ಳುವುದಿಲ್ಲ. ವಾದದಲ್ಲಿ ಆತನು ಎಂದಿಗೂ ಪ್ರತ್ಯಾಕ್ಷೇಪಣೆಯಿಂದ ಸಮರ್ಥನೆ ಮಾಡಿಕೊಳ್ಳಲಾರ. ಚಾಡಿಮಾತಿಗೂ ಗೊಡ್ಡುಹರಟೆಗೂ ಆತನು ಕಿವಿಕೊಡಲಾರ. ತನ್ನ ದಾರಿಗೆ ಅಡ್ಡಬಂದವರ ವಿಷಯದಲ್ಲಿ ದುರುದ್ದೇಶವನ್ನಾರೋಪಿಸತಕ್ಕದ್ದಲ್ಲವೆಂದು ಆತನು ನಿಯಮವನ್ನಿಟ್ಟುಕೊಂಡಿರುತ್ತಾನೆ. ಪ್ರತಿಯೊಂದು ಸಂದರ್ಭಕ್ಕೂ ಉತ್ತಮವಾದ ಅರ್ಥವನ್ನೇ ಹೇಳುತ್ತಾನೆ."[12]

ಈ ಹಿಂದೆ ಷೇಕ್ಸ್‌ಪಿಯರ್‌ನ "ಮ್ಯಾಕ್‌ಬೆತ್" ನಾಟಕದ ಸಾಲುಗಳ ಅನುವಾದದ ಬಗ್ಗೆ ಹೇಳಿದಂತೆಯೇ ಇಲ್ಲಿಯೂ ಇಂಗ್ಲಿಷ್ ಮೂಲವನ್ನು ಕೊಟ್ಟಿರುವುದು ಡಿ.ವಿ.ಜಿ. ಯವರ ಭಾಷಾಂತರದ ಚಾತುರ್ಯವನ್ನು ಉದಾಹರಿಸುವುದಕ್ಕಲ್ಲ, ಇವರ ಸಮನ್ವಯ ದೃಷ್ಟಿಯನ್ನು ಸಮರ್ಥಿಸಲು.

ಷೇಕ್ಸ್‌ಪಿಯರ್ (**Shakespeare**) ಮತ್ತು ನ್ಯೂಮನ್ (**Newman**)ರನ್ನು ಪ್ರಸ್ತಾಪಿಸಿರುವಂತೆಯೇ ಡಿ.ವಿ.ಜಿ.ಯವರು ಎಮರ್ಸನ್ (**Emerson**) ಮತ್ತು ಮ್ಯಾಥ್ಯೂ ಆರ್ನಲ್ಡ್ (**Mathew Arnold**) ಇವರನ್ನೂ ಅರ್ಥಪೂರ್ಣವಾಗಿ ಪ್ರಸ್ತಾಪಿಸಿದ್ದಾರೆ. ಈ ಇಬ್ಬರು ಪಾಶ್ಚಾತ್ಯರೂ "ಸಂಸ್ಕೃತಿ"ಯ ಬಗ್ಗೆ ನೇರವಾಗಿಯೇ ಬರೆದಿರುವುದರಿಂದ ಇವರ ಬರಹಗಳಿಂದ ಡಿ.ವಿ.ಜಿ.ಯವರು ಭಾಷಾಂತರಿಸಿ ಉಲ್ಲೇಖ ಮಾಡಿರುವುದು ಗಮನಾರ್ಹ. ಇವರಿಬ್ಬರನ್ನೂ ಪ್ರಸ್ತುತದಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸುವುದು ಅನಿವಾರ್ಯ.

ಅಮೆರಿಕದ ಎಮರ್ಸನ್ (**Emerson**) ಭಾರತದ ಬಗ್ಗೆ ತೀವ್ರ ಆಸಕ್ತಿಯುಳ್ಳವನು ಮಾತ್ರವಲ್ಲದೆ ಸಂಸ್ಕೃತಗ್ರಂಥಗಳ ಬಗ್ಗೆ ಮತ್ತು ಸನಾತನಧರ್ಮದ ಬಗ್ಗೆ ನಿಜವಾದ ಅಭಿಮಾನವುಳ್ಳವನೆಂದು ಹೇಳಲು ಈತನ "ಬ್ರಹ್ಮ" (**Brahma**) ಮತ್ತು "ಹಮಾತ್ರೇಯ" (**Hamatreya**) ಮುಂತಾದ ಪದ್ಯಗಳೇ ಸಾಕು. ಈತನ "ಕಲ್ಚರ್" (**Culture**), "ಸೆಲ್ಫ್-ರಿಲಯನ್ಸ್" (**Self-reliance**) ಮತ್ತು ಓವರ್‌ಸೋಲ್ (**Oversoul**) ಮುಂತಾದ ಪ್ರಬಂಧಗಳು ಈತನ ಮೇಲೆ ಭಾರತೀಯ ಸಂಸ್ಕೃತಿಯು ಮಾಡಿರುವ ಪ್ರಭಾವಕ್ಕೆ ಸಾಕ್ಷಿಗಳು. "ಎಮರ್ಸನ್ನನ ಮಾತು" ಎನ್ನುವ ಶೀರ್ಷಿಕೆಯಲ್ಲಿ ಡಿ.ವಿ.ಜಿ.ಯವರು ಒಂದು ಪುಟಕ್ಕೂ ಹೆಚ್ಚು (ಎಮರ್ಸನ್ನನ ಪದ್ಯದಿಂದಲೂ ಸಹ) ಭಾಷಾಂತರವನ್ನು ಕೊಟ್ಟಿದ್ದಾರೆ. ಇದರಿಂದ ಇಲ್ಲಿ ಕೆಲವೇ ಸಾಲುಗಳನ್ನು ಉಲ್ಲೇಖಿಸಿದೆ—

"ಅಹಂಕಾರ ಕ್ಷಯಿಸಿದಂತೆ ನಮ್ಮೊಳಗೆ ಅಸಮಾಧಾನ ಕ್ಷಯಿಸುತ್ತದೆ; ಮತ್ತು ಲೋಕಕ್ಕೆ ನಮ್ಮಿಂದಾಗುವ ಭಾರ ಕಡಿಮೆಯಾಗುತ್ತದೆ. ಜೀವನದ ಭಾರವನ್ನು ಹಗುರಮಾಡುವ ಯೋಗವೇ ಸಂಸ್ಕೃತಿ. ಅದೇ ಆತ್ಮಸಂಸ್ಕಾರ. ('ಕಲ್ಚರ್' ಎಂಬ) ಇಂಗ್ಲಿಷ್ ಮಾತಿನ ಭಾವದಂತೆ. ಅದೇ ಅಂತರಂಗಕೃಷಿ—ಅಂತರಾತ್ಮ ವ್ಯವಸಾಯ."[13]

ಎಮರ್ಸನ್ (Emerson) ತನ್ನ 'ಕಲ್ಚರ್' (Culture) ಎಂಬ ಪ್ರಬಂಧದಲ್ಲಿ ಬರೆದಿರುವ ಕೆಲವೇ ಸಾಲುಗಳನ್ನು ಇಲ್ಲಿ ಗಮನಿಸಬಹುದು—

> Egotism has its root in the cardinal necessity by which each individual persists to be what he is ...The pest of society is egotists. There are dull and bright, sacred and profane, coarse and fine egotists. It is a disease that like influenza falls on all constitutions···Culture redresses his balance.[14]

ಎಮರ್ಸನ್ನನ ಮಾತುಗಳನ್ನು ಎಷ್ಟು ಅರ್ಥಪೂರ್ಣವಾಗಿ ಡಿ.ವಿ.ಜಿ.ಯವರು ಬಳಸಿದ್ದಾರೆಂಬುದು ಈ ಉದಾಹರಣೆಯಿಂದ ವ್ಯಕ್ತ. ಹೀಗೆಯೇ ಮಾಥ್ಯೂ ಆರ್ನಲ್ಡ್ ನಿಂದಲೂ ಸಹ. ಒಂದು ಪುಟ್ಟ ಉದಾಹರಣೆ—

"ಮನುಷ್ಯಸ್ವಭಾವಕ್ಕೆ ಸೌಂದರ್ಯವನ್ನೂ ಬೆಲೆಯನ್ನೂ ಕೊಡುವ ಎಲ್ಲ ಶಕ್ತಿಗಳ ಸುಸಂಗತ ವಿಕಾಸವೇ ಸಂಸ್ಕೃತಿ. ಸಂಸ್ಕೃತಿಯು ಸಮಾಜಜೀವನದ ಒಂದು ಉಪ ಸೃಷ್ಟಿ. ಅದರ ಸಾರವಾದ ಔಚಿತ್ಯಪೂರ್ಣತೆಯು ಏಕಾಕಿಯಾಗಿ ಬಾಳುವ ಮನುಷ್ಯ ನಿಗೆ ಸಾಧ್ಯವಿಲ್ಲ. ಮನುಷ್ಯವ್ಯಕ್ತಿ ತಾನು ಆ ಪೂರ್ಣತೆಯ ಕಡೆಗೆ ಪ್ರಯಾಣ ಮಾಡುವಲ್ಲಿ ಇತರರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂಬುದು ವಿಧಿ...ಮೇಲೆ ನಾವು ಗುಣಪೂರ್ಣತೆ, ಔಚಿತ್ಯಸಂಪೂರ್ಣತೆ ಎಂಬ ಮಾತುಗಳನ್ನು ಉಪಯೋಗಿಸಿದ್ದೇವಷ್ಟೆ? ಪೂರ್ಣತೆ ಎಂದರೆ, ಯಾವುದೋ ಒಂದು ಆದರ್ಶ ದಂತೆ ಆಗುವುದು; ಯಾವುದೋ ಒಂದನ್ನು ಗಳಿಸಿಕೊಳ್ಳುವುದಲ್ಲ. ಅದು ಒಂದು ಅಂತರಂಗಸ್ಥಿತಿ, ಒಂದು ಆಂತರಿಕ ಮನೋಭಾವ..."[15]

ಈ ಉಲ್ಲೇಖದಲ್ಲಿ ಈ ಬರಹಗಾರನ ಪ್ರಕಾರ ಅತಿ ಮುಖ್ಯವಾದ ಅಂಶವೆಂದರೆ ಪೂರ್ಣತೆಯ ಕಲ್ಪನೆ. "ಔಚಿತ್ಯಪೂರ್ಣತೆ" ಯಾಗಲಿ, "ಗುಣಪೂರ್ಣತೆ" ಯಾಗಲಿ "ಪೂರ್ಣತೆಯ ಕಡೆಗೆ ಪ್ರಯಾಣ ಮಾಡುವುದೇ" ಸಂಸ್ಕೃತಿಯ ಲಕ್ಷಣವೆಂಬುದು ಸ್ಪಷ್ಟ. ಈ ಪೂರ್ಣತೆಯ ಕಲ್ಪನೆಯನ್ನು ಆರ್ನಲ್ಡ್‌ನ ಮಾತಿನಲ್ಲಿ Study of Perfection ಎಂದು ಹೇಳಬಹುದು. ಆತನ ಮಾತುಗಳಲ್ಲೇ ಹೇಳಬೇಕಾದರೆ—

> "A harmonicus perfection, a perfection in which the characters of beauty and intelligence are both present which unites 'the two noblest things' sweetness and light"[16]; "a human nature, complete on all its sides, remains the true ideal of perfection;"[17]; "Culture, however, shows its singleminded love of perfection, its desire simply to make and the will of God prevail"[18]; "the idea which culture sets before us of perfection—an increased spiritual activity."[19]

ಈ ರೀತಿಯ "ಪೂರ್ಣತೆಯ ಅನ್ವೇಷಣೆ"ಯೇ ಸಂಸ್ಕೃತಿಯ ಲಕ್ಷಣ ಎನ್ನುವ ವಾದವನ್ನು ಮಂಡಿಸುವ ಅನೇಕ ಉದಾಹರಣೆಗಳು ಆರ್ನಲ್ಡ್ (Arnold) ನಲ್ಲಿ ಸಿಕ್ಕುತ್ತವೆ. ಆದರೆ ಪ್ರಸ್ತುತದಲ್ಲಿ ನಮ್ಮ ಸಂಸ್ಕೃತಿಯ ಪೂರ್ಣತೆಯ ಕಲ್ಪನೆಯನ್ನೂ ಆರ್ನಲ್ಡ್ (Arnold)ನ Perfectionನ ಕಲ್ಪನೆಯನ್ನೂ ಸಮನ್ವಯ ದೃಷ್ಟಿಯಿಂದ ನೋಡುವುದೇ ಡಿ.ವಿ.ಜಿ.ಯವರ ಉದ್ದೇಶವೆಂಬುದು ಇಲ್ಲಿಯ ವಾದ.

೩

ಒಟ್ಟಿನಲ್ಲಿ "ಸಂಸ್ಕೃತಿ"ಯ ಬಗ್ಗೆ ಡಿ.ವಿ.ಜಿ.ಯವರ ಆಳವಾದ ಮತ್ತು ತೀಕ್ಷ್ಣವಾದ ವಿಶ್ಲೇಷಣೆಯನ್ನು ಅಧ್ಯಯನ ಮಾಡಬೇಕಾದರೆ ಅವರ ಅದ್ಭುತವಾದ ಪಾಂಡಿತ್ಯವನ್ನೂ ವಿಸ್ತಾರವಾದ ಮನೋಭಾವವನ್ನೂ ಪರಿಗಣಿಸಬೇಕು. "ಸಂಸ್ಕೃತಿ"ಯ ಕಲ್ಪನೆಯನ್ನು ಡಿ.ವಿ.ಜಿ.ಯವರು ಯಾವುದು ಸಂಸ್ಕೃತಿಯಲ್ಲ ಎಂಬ "ನೇತಿ ನೇತಿ" ಪ್ರಕಾರದಿಂದಲೂ, ಯಾವುದು ನಿಜವಾದ ಸಂಸ್ಕೃತಿ ಎಂಬ ಖಚಿತವಾದ ನೇರವಾದ ಸ್ವರೂಪಲಕ್ಷಣದಿಂದಲೂ ವಿಶ್ಲೇಷಿಸಿದ್ದಾರೆ. ಉದಾಹರಣೆಗೆ. "ಸಂಸ್ಕೃತಿ ಎಂಬುದು ಬರಿಯ ವಿದ್ಯೆಯಲ್ಲ",[20] "ಸಂಸ್ಕೃತಿ ಎಂಬುದು ಪಾಂಡಿತ್ಯ ಮಾತ್ರವಲ್ಲ",[21] "ಬರಿಯ ಜಾಣತನವೂ ಯುಕ್ತಿಯೂ ಸಂಸ್ಕೃತಿಯಲ್ಲ",[22] "ಸಂಗೀತ ಮೊದಲಾದ ಲಲಿತ ಕಲಾಭಿರುಚಿಯೂ ಸಂಸ್ಕೃತಿಯಲ್ಲ".[23]—ಈ ರೀತಿಯಾದ "ನೇತಿ ನೇತಿ" ಪ್ರಕಾರದೊಂದಿಗೆ, "ಸಂಸ್ಕಾರದಿಂದ ಸಂಸ್ಕೃತಿ". 'ಸಂಸ್ಕಾರ' ಅಥವಾ 'ಸಂಸ್ಕರಣ' ಎಂದರೆ ಸಮ್ಯಕ್ ಕರಣ—ಸಮ್ಯಕ್ ಕೃತಿ, ಸಂಸ್ಕೃತಿ. ಹಾಗೆಂದರೆ ಚೆನ್ನಾಗುವಂತೆ ಮಾಡುವುದು, ಒಳ್ಳೆಯದನ್ನಾಗಿಸುವುದು, ಶುದ್ಧಮಾಡಿ ಉತ್ತಮಪಡಿಸುವುದು ಎಂದರ್ಥ."[24] "ನಡೆನುಡಿಗಳ ಸೊಗಸೇ ಸಂಸ್ಕೃತಿ".[25] "ನಾನಾ ವಿಜ್ಞಾನ ನಾನಾ ವಿವೇಕಗಳ ಸಮಾವೇಶದ ಫಲ ಸಂಸ್ಕೃತಿ"[26]—ಈ ರೀತಿಯಾದ ಖಚಿತವಾಗಿ ಸಂಸ್ಕೃತಿಯ ಲಕ್ಷಣಗಳನ್ನು ಗುರುತಿಸುವ ರೀತಿಯನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಪ್ರಸ್ತುತದಲ್ಲಿ ಡಿ.ವಿ.ಜಿ.ಯವರ ಸಮನ್ವಯ ದೃಷ್ಟಿಯ ಪರಿಧಿಯಲ್ಲಿ ಅವರು ನಮ್ಮ ಮತ್ತು ಪ್ರಪಂಚದ ಅತ್ಯಂತ ಪ್ರಾಚೀನ ಸಾಹಿತ್ಯವಾದ ವೈದಿಕವಾಙ್ಮಯದಿಂದ "ಸಂಸ್ಕೃತಿ"ಯ ಬಗ್ಗೆ ಕೊಟ್ಟಿರುವ ಉಲ್ಲೇಖಗಳನ್ನೂ ಅವರು ಆಧುನಿಕ ಪಾಶ್ಚಾತ್ಯ ಲೇಖಕರ ಅಭಿಪ್ರಾಯಗಳನ್ನೂ ತುಲನ ಮಾಡಿರುವುದು ಅವರ "**ಸಂಸ್ಕೃತಿ**" ಗ್ರಂಥದ ವಿಶೇಷ. ಆರ್ನಲ್ಡ್ (Arnold) "Sweetness and Light" ವಿಮರ್ಶೆಯಾಗಲಿ, ಎಮರ್ಸನ್ನನ (Emerson) ವ್ಯಕ್ತಿಯ ದುರಭಿಮಾನದ ವಿಮರ್ಶೆಯಾಗಲಿ, ನ್ಯೂಮನ್ನನ (Newman) "Portrait of a Gentleman" ಆಗಲಿ —ಇವೆಲ್ಲವನ್ನೂ "ಪೂರ್ಣತೆ"ಯನ್ನು ಸಾಧಿಸುವ ಅಂಶಗಳೆಂದು ಗುರುತಿಸಿ, ಆತ್ಮದ ಅನ್ವೇಷಣೆಯೇ ಜೀವನದ ಗುರಿಯೆಂದೂ, ಆತ್ಮವೊಂದೇ ಪರಿಪೂರ್ಣ ವಸ್ತುವೆಂದೂ ತಿಳಿಸುವ "ಆತ್ಮಾ ವಾ ಅರೇ ದ್ರಷ್ಟವ್ಯಃ" (ಬೃಹದಾರಣ್ಯಕ)[27] ಮುಂತಾದ ಉಪನಿಷತ್ ವಾಕ್ಯಗಳನ್ನು ಉಲ್ಲೇಖಿಸುವ ಮೂಲಕ ಸಮನ್ವಯಿಸಿ ಸಂಸ್ಕೃತಿಯ

ಲಕ್ಷಣವನ್ನು ಸ್ಪಷ್ಟೀಕರಿಸಿರುವುದೇ ಡಿ.ವಿ.ಜಿ.ಯವರ "**ಸಂಸ್ಕೃತಿ**"ಯ ಸಾಧನೆ ಎಂಬುದು ಮುಖ್ಯವಾದ ಅಂಶ. ಡಿ.ವಿ.ಜಿ.ಯವರ ಸಮನ್ವಯದೃಷ್ಟಿಯನ್ನು ಸಮರ್ಥಿಸಲು ಅವರು "ಮ್ಯಾಥ್ಯೂ ಆರ್ನಲ್ಡನ ಮಾತು" ಎಂಬ ಉಪಶೀರ್ಷಿಕೆಯಲ್ಲಿ ಬರೆದಿರುವ ಕೊನೆಯ ವಾಕ್ಯಗಳು ಸಾಕು—

"ಶ್ರೀಮದ್ರಾಮಾಯಣದ ಕಥಾನಾಯಕನೂ ಭಾರತದಲ್ಲಿಯ ಯುಧಿಷ್ಠಿರನೂ ಸಂಸ್ಕೃತಿಗೆ ಆದರ್ಶಪುರುಷರು. ಇಂಗ್ಲಿಷ್ ಜನರು ಯಾರ ನಡೆನುಡಿಗಳನ್ನಾದರೂ ಮನಸಾರ ಮೆಚ್ಚಿದಾಗ ಆತನನ್ನು 'ಜೆಂಟ್ಲ್‌ಮನ್' (Gentleman) ಎನ್ನುತ್ತಾರೆ. ಆ ಮಾತಿನಲ್ಲಿ (Honourable) ಗೌರವಾರ್ಹ, (Generous) ಉದಾರ, (Noble) ಘನತೆವೆತ್ತ, ಉದಾತ್ತ, (Courteous) ವಿನಯಶೀಲ—ಈ ಎಲ್ಲ ಭಾವನೆಗಳೂ ಸೇರಿಕೊಂಡಿವೆ. ಆದರಂತೆಯೇ ನಮ್ಮ ಬಳಕೆಯ ಮೆಚ್ಚಿನ ಮಾತುಗಳುಸು—ಸಂಸ್ಕೃತ, ಸುಶಿಕ್ಷಿತ, ಸಭ್ಯ, ಸಜ್ಜನ, ಸದ್ಗೃಹಸ್ಥ, ಮಾನಿಷ್ಠ, ಮರ್ಯಾದೆವಂತ, ಸಂಭಾವಿತ, ದೊಡ್ಡಮನುಷ್ಯ ಮೊದಲಾದವು—ಸಂಸ್ಕೃತಿಯ ಸ್ವಭಾವವನ್ನು ಸೂಚಿಸುತ್ತವೆ. ರಾಮ ಧರ್ಮರಾಯರುಗಳು ಹುಟ್ಟಿನಿಂದ ದೊಡ್ಡಮನುಷ್ಯರು." ("ಬಾರ್ನ್ ಜೆಂಟ್ಲ್‌ಮನ್")[20].

ಟಿಪ್ಪಣಿ

1. ಡಿ.ವಿ.ಜಿ.: **ಸಂಸ್ಕೃತಿ** ಕಾವ್ಯಾಲಯ, ಪ್ರಕಾಶಕರು. ಮೈಸೂರು. 1953. p. 20.
2. *Ibid.*, p. 16.
3. *Ibid.*, p. 108.
4. *Ibid.*, p. 77.
5. *Ibid.* –,,–
6. *Ibid.*, pp. 87–88.
7. Shakespeare: *Macbeth*, Act V, Sc. 3, (Quoted in **ಸಂಸ್ಕೃತಿ** *op. cit.*, pp. 38–39).
8. ಡಿ.ವಿ.ಜಿ : **ಸಂಸ್ಕೃತಿ** *op. cit.*, p. 39.
9. *Ibid.*, p. 19.
10. *Ibid.* –,,–
11. Newman: PORTRAIT OF A GENTLEMAN in *Literary Selections from Newman.* With an Introduction and Notes by "A Sister of Notre Dame". Longmans Green and Co., London, Newyork. Toronto. 1940. p. 58.
12. ಡಿ.ವಿ.ಜಿ. : **ಸಂಸ್ಕೃತಿ** *op. cit.*, pp. 17–18.
13. *Ibid.*, p. 110.
14. Emerson : CULTURE in *Emerson.* Edited by Edward C. Lindeman. A Mentor Book. The New American Library, 1949. pp. 10, 12.

15. ಡಿ.ವಿ.ಜಿ.: ಸಂಸ್ಕೃತಿ *op. cit.*, p. 15.
16. Mathew Arnold: *Culture and Anarchy*. Edited with an Introduction by J. Dover Wilson. Cambridge University Press. 1978. pp. 53–54.
17. *Ibid.*, p. 57.
18. *Ibid.*, p. 60.
19. *Ibid.*, p. 65.
20. ಡಿ.ವಿ.ಜಿ.: ಸಂಸ್ಕೃತಿ *op. cit.*, p. 10.
21. *Ibid.*
22. *Ibid.*, p. 11.
23. *Ibid.* –,,–
24. *Ibid.* –,,–
25. *Ibid.*, p. 12.
26. *Ibid.*, p. 13.
27. *Ibid.*, p. 25.
28. *Ibid.*, pp. 16–17.

ಡಿ.ವಿ.ಜಿ. ಅವರ ಛಂದಃಪ್ರಯೋಗಗಳು

ಆರ್. ಗಣೇಶ್

ಸಾಂಪ್ರದಾಯಿಕ ಛಂದಶ್ಶಾಸ್ತ್ರ ಗ್ರಂಥಗಳನ್ನು ವ್ಯಾಸಂಗ ಮಾಡಿ, ಲಕ್ಷಣಬದ್ಧವಾಗಿ ವಿಪುಲ ಸಂಖ್ಯೆಯಲ್ಲಿ ಪದ್ಯರಚನೆ ಮಾಡಿರುವ ಡಿ.ವಿ.ಜಿ. ಅವರು ಅದರ ಪರವಾಗಿ ವಾದಿಸುವುದು ಸಹಜವಾಗಿಯೇ ಇದೆ. ಅವರು ವಿಷಾದದ ಧ್ವನಿಯಲ್ಲಿ ಹೇಳುತ್ತಾರೆ: "ಪದ್ಯದ ರೂಪಸಂಸ್ಕಾರಕ್ಕೆ ತಕ್ಕ ನಿಯಮಗಳು ದುಸ್ಸಹವೆಂದು ತೋರಿದಾಗ ಸ್ವಚ್ಛಂದದ ಪದ್ಯಾಭಾಸಗಳನ್ನು ಹೊಸೆಯುವುದಕ್ಕಿಂತ ಸುಲಕ್ಷಣವಾದ ಗದ್ಯದಿಂದಲೇ ಕಾವ್ಯರಚನೆ ಮಾಡಬಹುದಲ್ಲವೇ ?"...ವೃತ್ತ–ಕಂದ ಮೊದಲಾದ ಪ್ರಾಚೀನ ಬಂಧಗಳ "ರೀತಿಯ ಪದ್ಯರಚನೆ ನಿಂತುಹೋದಂತಿದೆಯಲ್ಲಾ ಎಂಬುದು ನನಗಿರುವ ಕಳವಳ...ಹಳೆಯ ಜಾತಿಯ ಪದ್ಯಗಳನ್ನು ಬರೆಯುವುದು ಪ್ರಯೋಗವಿರಬಹುದು, ಆದರೆ ಅದರಲ್ಲಿ ಒಂದು ಹಿಡಿತ. ಒಂದು ಗುಂಫನ, ಒಂದು ಆಕ್ರಮಣಶಕ್ತಿ ಇರುತ್ತದೆ." ಇಷ್ಟು ಹೇಳಿದ ಡಿ.ವಿ.ಜಿ. ಅವರಿಗೆ ಕನ್ನಡ ಕಾವ್ಯದಲ್ಲಿ ನಡೆದ, ನಡೆಯುತ್ತಿರುವ ಛಂದಃಪ್ರಯೋಗಶೀಲ ಗತಿಯನ್ನು ತಡೆದು ನಿಲ್ಲಿಸುವುದು ಅಸಾಧ್ಯವೆಂಬ ಅರಿವೂ ಇದ್ದದ್ದರಿಂದ, "ಅಭ್ಯಾಸಕ್ಕಾದರೂ ಆಗಾಗ ವಿದ್ಯಾರ್ಥಿಗಳು ಕಂದ ವೃತ್ತ ರಚನೆಗೆ ಪ್ರಯತ್ನಪಟ್ಟರೆ ಅವರಿಗೆ ಪ್ರಯೋಜನವುಂಟು" ಎಂಬ ರಾಜಿ ಮಾತನ್ನೂ ಸೇರಿಸಿದರು. ಅವರ ಪದ್ಯರಚನೆಯಲ್ಲಿ ಗಮನಾರ್ಹವಾದ ಇನ್ನೊಂದು ಮಾತೆಂದರೆ, ನವೋದಯ ಯುಗದ ಮುಂಚಿನ ದಿನಗಳಲ್ಲಿ ಪಂಜೆ, ಗೋವಿಂದ ಪೈ ಮುಂತಾದವರು ಮಾತ್ರ ಛಂದಸ್ಸಿನ ಲಯಗಳಲ್ಲಿ ಪದ್ಯರಚನೆ ಮಾಡಿದಂತೆ ಡಿ.ವಿ.ಜಿ. ಅವರೂ ಪದ್ಯರಚನೆ ಮಾಡಿದರು. 'ಉಮರನ ಒಸಗೆ', 'ಮಂಕುತಿಮ್ಮನ ಕಗ್ಗ', 'ಮರುಳ ಮುನಿಯ'— ಈ ಕೃತಿಗಳಲ್ಲಿ ಪಂಚಮಾತ್ರಾಗಣಗಳ ಚೌಪದಿಗಳ ಆಧುನಿಕ ಪ್ರಕಾರದಲ್ಲೂ ಸಹ ಡಿ.ವಿ.ಜಿ. ಕಟ್ಟುನಿಟ್ಟಾಗಿ ನಿಯಮಪಾಲನೆ ಮಾಡಿರುವುದು ಕಂಡುಬರುತ್ತದೆ.

ಶ್ರೀ ಆರ್. ಗಣೇಶ್ ಅವರು ತಮ್ಮ ಪಾಂಡಿತ್ಯಪೂರ್ಣ ಲೇಖನದಲ್ಲಿ ಛಂದಸ್ಸಿನ ನಿಯಮಪಾಲನೆಯಲ್ಲಿ ಡಿ.ವಿ.ಜಿ. ಅವರಿಗಿದ್ದ ನಿಷ್ಠೆಯನ್ನು ವಿವರಿಸಿ, ಅವರ ಛಂದಃ ಪ್ರಯೋಗವೈವಿಧ್ಯವನ್ನು ಲಕ್ಷ್ಯಲಕ್ಷಣಸಹಿತ ವಿಶದಪಡಿಸಿದ್ದಾರೆ.

೧

ನವೋದಯ ಕನ್ನಡ ಸಾಹಿತ್ಯದಲ್ಲಿ ತಮ್ಮ ಬಹುಮುಖ ಪ್ರತಿಭೆ-ಅಪಾರ ವಿದ್ವತ್ತು, ಚಿಂತನಶೀಲವಾದರೂ ಜೀವನವಿಮುಖವಲ್ಲದ ಸಂಯಮಪೂರ್ಣ ವಿಶಾಲ ದರ್ಶನದಿಂದ ಚಿರಸ್ಥಾಯಿಯಾದ ಇತಿಹಾಸವನ್ನುಂಟುಮಾಡಿದ ಡಿ.ವಿ.ಜಿ.ಯವರ ಬಗ್ಗೆ ವ್ಯಾಪಕವಾಗಿ ಚಿಂತನೆ ಸರ್ವಕ್ಷೇತ್ರಗಳಲ್ಲಿಯೂ ನಡೆಯಬೇಕಾಗಿದೆ. ಅವರ ಅನರ್ಘ್ಯ ಕೃತಿಗಳ ಸತ್ತ್ವವನ್ನೆಷ್ಟು ವಿಪುಲೀಕರಿಸಿದರೂ ಸಾಲದು. ಅಂತೆಯೇ ಅವರ ಕಾವ್ಯಕೃತಿಗಳ ಬಗ್ಗೆಯೂ ಅತಿಸ್ವಲ್ಪಮಟ್ಟಿಗೆ ಜಿಜ್ಞಾಸೆ ನಡೆದು ಇನ್ನೂ ಅನೇಕ ಮಹತ್ವಪೂರ್ಣ ಮಾಹಿತಿಗಳು ನಿರೂಪಿತವಾಗದಿರುವುದು ವಿಷಾದಕರ. ವಿಶೇಷತಃ ಕಾವ್ಯಬಂಧ—ಶೈಲಿ, ರಸಮೀಮಾಂಸೆ, ಅಲಂಕಾರಾದಿಗಳ ದೃಷ್ಟಿಕೋನದಿಂದ ಅವರ ಕೃತಿಗಳು ಅತಿವಿರಳವಾಗಿ ವಿಮರ್ಶಿತವಾಗಿವೆ. ಪ್ರಸ್ತುತ, ಅವರ ಹದಿನೆಂಟಕ್ಕೂ ಮಿಕ್ಕ ಕಾವ್ಯ-ನಾಟಕಗಳಲ್ಲಿ ಮೂಡಿರುವ ಛಂದೋವೈವಿಧ್ಯದ ಬಗ್ಗೆ ಅಲ್ಪ ಚಿಂತನೆಯನ್ನು ನಡೆಸಲಾಗಿದೆ. ಈ ದಿಶೆಯಲ್ಲಿ ಅತ್ಯಲ್ಪ ಮಾತ್ರ ಚರ್ಚೆಯು ನಡೆದಿರುವುದರಿಂದ ಪ್ರಸ್ತುತ ಪ್ರಬಂಧದಲ್ಲಿ ಮಂಡಿತ ವಿಚಾರಗಳು ಮತ್ತಷ್ಟು ವಿಶದವಾಗಿರಬೇಕೆನ್ನಿಸಿದರೂ ಪ್ರಬಂಧದ ಸ್ಥಳಪರಿಮಿತಿಯು ವಿಷಯಸಂಕೋಚಕ್ಕೆಡೆಗೊಟ್ಟಿದೆ. ಆದರೂ ಒಟ್ಟಾರೆ ಡಿ.ವಿ.ಜಿ.ಯವರ ಛಂದಃಪ್ರಯೋಗದ ಪರ್ಯವೇಕ್ಷಣೆಯೊಂದನ್ನು ಇಲ್ಲಿ ಮಾಡಲಾಗಿದೆ.

೨

ಛಂದಸ್ಸಿಗೆ ಅನೇಕ ವಿಧವಾಗಿ ಪಿಂಗಳ, ಜಯಕೀರ್ತಿ, ಕೇದಾರಭಟ್ಟ, ಗಂಗಾದಾಸ ಮೊದಲಾದ ಪ್ರಾಚೀನರೂ ವೇಲಣಕರ್, ಬಿ.ಎಂ.ಶ್ರೀ, ವಿ.ಸೀ. ಮೊದಲಾದ ನವೀನರೂ ನಿರ್ವಚನ ನಡೆಸಿ ವ್ಯಾಪಕವಾಗಿ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಒಟ್ಟಾರೆ ಛಂದಸ್ಸಿನ ಲಕ್ಷಣವನ್ನು ಪ್ರಕೃತ ಲೇಖಕನ 'ಛಂದೋದರ್ಶನ' ಎಂಬ ಕೃತಿಯಲ್ಲಿ ಹೀಗೆ ರೂಪಿಸಲಾಗಿದೆ.

> "ಆಕಾಶವ್ಯಾಪ್ತ ಶಬ್ದತನ್ಮಾತ್ರಕಾರೂಪಸ್ಪಂದಿತ ತರಂಗ ಸಮೂಹಾ ಹಿ ಧ್ವನಯಃ। ಸ್ಫೋಟವಾದಾನುಸಾರಮೇವ ಪದ ನಿಷ್ಪತ್ತಿರುತ್ಪತ್ತಿಶ್ಚ। ಸದರ್ಥದಾಯಕೈಃ ಪದ ಪುಂಜೈರ್ವಾಕ್ಯಂ। ನಿಯುತ ಮಾತ್ರಾಽಕ್ಷರಲಯ-ಗತಿಯತ್ಯಾದಿನಾದೈಕ ಮೂಲಮಾಪಕತ್ವಾತ್, ಶ್ರಾವ್ಯತ್ವಾತ್, ಕಾವ್ಯೋಚಿತ-ರಸಭಾವನೈರಂತರ್ಯಸಂವಹನ ಪ್ರಥಮಾವಲಂಬನ ಜೈವಿಕತ್ವಾಚ್ಚ ಲೋಕಾತಿಕ್ರಾಂತನವನವೋನ್ಮೇಷಕನಿರರ್ಗಲವಾಕ್ಸುಧಾಲಹರೀವಹನ-ಕಲ್ಯಾಣಕುಲ್ಯಾಯಿತದರ್ಶನತ್ವಾಚ್ಚ ಛಂದಶ್ಶಬ್ದಃ ಪ್ರತೀತಃ"[1]

ಇದಲ್ಲದೆ ಛಂದಃಪ್ರಭೇದಗಳು, ಯತಿಲಕ್ಷಣ, ಮಾತ್ರಾಗಣವಿನ್ಯಾಸ ಇತ್ಯಾದಿ ಕೂಲಂಕಷ ವಿಚಾರ ಚರ್ಚೆಗಳಿಗಿದು ವೇದಿಕೆಯಲ್ಲ. ಆದ್ದರಿಂದ ವರ್ಣವೃತ್ತ,

ಮಾತ್ರಾವೃತ್ತ. ಸಮ-ವಿಷಮ-ಅರ್ಧಸಮೇತ್ಯಾದಿ ವಿಭಾಗಗಳ ಲಕ್ಷಣ ಗೃಹೀತವೇ ಆಗಿದೆ.

ಡಿ.ವಿ.ಜಿ.ಯವರೇ ತಮ್ಮ ಹಲವು ಕೃತಿಗಳಲ್ಲಿ ಕಾವ್ಯದಲ್ಲಿ ಛಂದಸ್ಸಿನ ಪಾತ್ರ ವೇನೆಂಬುದನ್ನು ನಿರೂಪಿಸಿದ್ದಾರೆ.

"...ಅಂತರಂಗಪ್ರಪಂಚದ ವ್ಯಾಪಾರಗಳಿಗೆ ಪದ್ಯವು ಅನುಕೂಲಿಸುವುದು.... ...ಸಂಗೀತವು ಮನಸ್ಸಿನ ಆಂತರ್ಯದ ಭಾಷೆ. ಛಂದಸ್ಸೆಂಬುದು ಸಂಗೀತದ ಒಂದು ಪ್ರಕಾರವೇ..."[2]

"...ಭಾಷೆಯ ನೈಜವಾದ ನ್ಯೂನತೆ, ದುರ್ಬಲತೆಗಳನ್ನು ಪರಿಹರಿಸುವ ಸಾಧನ ಗಳಲ್ಲಿ—ಭಾಷೆಯ-ಕೃತಕಶಕ್ತಿಮೂಲಗಳಲ್ಲಿ—ಇನ್ನೆರಡು ಅಲಂಕಾರ ಛಂದಸ್ಸುಗಳು..."[3]

"...ಛಂದಸ್ಸು ಭಾಷೆಯನ್ನು ಸಂಗೀತದ ಕಡೆಗೊಯ್ದು ಆ ನರ್ತನ ಗತಿಯಿಂದ ಭಾಷೆಗೆ ಒಂದು ಶಕ್ತಿಯನ್ನು ಉತ್ಪತ್ತಿಮಾಡಿಕೊಡುತ್ತದೆ..."[4]

"...ನಾದದಿಂದ ಪದಕ್ಕೆ ಬಲ. ಪದದಿಂದ ನಾದಕ್ಕೆ ಬಲ..."[5]

"...ಶ್ರವಣಾಕರ್ಷಣೆಯೇ ಪದ್ಯದಲ್ಲಿ ಅಪೇಕ್ಷಣೀಯವಾದ ಮೊದಲನೆಯ ಗುಣ..."[6]

ಹೀಗೆ ಡಿ.ವಿ.ಜಿ.ಯವರ ದೃಷ್ಟಿ ಪ್ರಸರಿಸಿರುವುದನ್ನರಿತಾಗ ಸಹಜವಾಗಿಯೇ ಅವರು ಮಾರ್ಗ ಎಂದರೆ ಸಾಂಪ್ರದಾಯಿಕ ಶೈಲಿಯಲ್ಲಿ ಒಲವುಳ್ಳವರೆಂಬುದು ಸುವ್ಯಕ್ತ. ಅಂತೆಯೇ ಅವರ ಬಹುತೇಕ ಕೃತಿಗಳೂ ಸಹ. ವಸ್ತುವಿಗೆ ತಕ್ಕಂತೆ ಭಾಷೆ. ಭಾಷೆಗೆ ಉಚಿತವಾದ ಛಂದಸ್ಸು ಅವರೆಲ್ಲ ಕೃತಿಗಳಲ್ಲಿಯೂ ಹಾಸುಹೊಕ್ಕಾಗಿದೆ. ಉದಾರಗಂಭೀರವಾದ ಅವರ ಕಾವ್ಯಗಳಲ್ಲಿ ಈ ಕಾರಣದಿಂದಲೇ ಹಳಗನ್ನಡ, ನಡುಗನ್ನಡಗಳು ಸಂಸ್ಕೃತದೊಡನೆ ಮೇಳವಿಸಿ ಗೌಡೀ ಶೈಲಿಯಲ್ಲಿ ಮೂಡಿ ಬಂದು ಸಹಜವಾಗಿಯೇ ವೃತ್ತ–ಕಂದ–ಸೀಸ–ಚೌಪದಿಗಳು ವೈತಾಳಿವೆ. ಅಲ್ಲದೆ ಡಿ.ವಿ.ಜಿ. ಯವರೇ ಸ್ವತಃ ತಮ್ಮ ಕಂದ–ವೃತ್ತ ಪ್ರೇಮವನ್ನು ಹೇಳಿದ್ದಾರೆ.

"...ಭಾವಜೀವಾಳವನ್ನು ದೃಢವಾದ ಶಬ್ದಕಾಯದಲ್ಲಿ ಸೇರಿಸಿದ ಹೊರತು ಅದಕ್ಕೆ ಸ್ಥಿರವಾಗಿ ನಿಲ್ಲುವುದು ಸಾಧ್ಯವಾಗದು. ಆದಕಾರಣ ಕಾವ್ಯದ ಹೊರಮೈಯ ವಿಚಾರದಲ್ಲಿಯೂ ಎಚ್ಚರಿಕೆ—ಅದರಲ್ಲಿ ಒಂದು ಬಿಗಿ, ಒಂದು ಕಟ್ಟುಪಾಡು—ಇರಬೇಕು ...ಪದ್ಯದ ರೂಪಸಂಸ್ಕಾರಕ್ಕೆ ತಕ್ಕ ನಿಯಮಗಳು ದುಸ್ಸಹವೆಂದು ತೋರಿದಾಗ ಸ್ವಚ್ಛಂದದ ಪದ್ಯಾಭಾಸಗಳನ್ನು ಹೊಸೆಯುವುದಕ್ಕಿಂತ ಸುಲಕ್ಷಣವಾದ 'ಗದ್ಯ ದಿಂದಲೇ ಕಾವ್ಯರಚನೆ ಮಾಡಬಹುದಲ್ಲವೇ?"[7]

"...ಆ ರೀತಿಯ* ಪದ್ಯರಚನೆ ನಿಂತುಹೋದಂತಿದೆಯಲ್ಲಾ ಎಂಬುದು ನನಗಿರುವ ಕಳವಳ...ಹಳೆಯ ಜಾತಿಯ ಪದ್ಯಗಳನ್ನು ಬರೆಯುವುದು ಪ್ರಯಾಸವಿರಬಹುದು ; ಆದರೆ ಅದರಲ್ಲಿ ಒಂದು ಹಿಡಿತ. ಒಂದು ಗುಂಫನ, ಒಂದು ಆಕ್ರಮಣಶಕ್ತಿ ಇರುತ್ತದೆ...ಅಭ್ಯಾಸಕ್ಕಾದರೂ ಆಗಾಗ ವಿದ್ಯಾರ್ಥಿಗಳು ಕಂದ–ವೃತ್ತ ರಚನೆಗೆ ಪ್ರಯತ್ನಪಟ್ಟರೆ ಅವರಿಗೆ ಪ್ರಯೋಜನವುಂಟು...ಓಜಸ್ವಿತೆಯಲ್ಲಿ ಅಭಿಮಾನ ನನಗೆ ಹೆಚ್ಚು. ಅತಿ ಸ್ವಾತಂತ್ರ್ಯವು ಶೈಥಿಲ್ಯಕ್ಕೂ ರಸಾಭಾಸಕ್ಕೂ ಪ್ರೋತ್ಸಾಹ ಕೊಟ್ಟೀತು...[8]" ಶಬ್ದಶಕ್ತಿಯನ್ನೂ ಛಂದಸ್ಸನ್ನೂ ಪ್ರಾಸವನ್ನೂ ಕುರಿತು ಎಷ್ಟು ಹೇಳಿದರೂ ಕವಿಕರ್ಮವಿಧಾನಗಳನ್ನು ಪೂರ್ತಿ ವರ್ಣಿಸಿದಂತಾಗುವುದಿಲ್ಲ. ಒಟ್ಟಿನ ಮೇಲೆ, ಅದೊಂದು ಮಾತಿನ ಮಾಟ. ಅದೊಂದು ರಸಕ್ರೀಡೆ..."[9]

ವಿ.ಸೀ.ಯವರೆನ್ನುವಂತೆ ಡಿ.ವಿ.ಜಿ. ಅವರ "...ಪದ್ಯಗಳು ಬಹುಮಟ್ಟಿಗೆ ಸಂಸ್ಕೃತವೃತ್ತ, ಕನ್ನಡ ಕಂದಗಳು...ಈ ಪದ್ಯರೂಪಗಳನ್ನು ಬಳಸುತ್ತಿರುವುದು ಬಹುಮಟ್ಟಿಗೆ ಇಂದು ಇವರೊಬ್ಬರೇ..."[10]

ಎಂ.ಆರ್.ಶ್ರೀ. ಅವರಿಗೆ ಡಿ.ವಿ.ಜಿ.ಯವರ"...ಕಂದಗಳನ್ನೂ ವೃತ್ತಗಳನ್ನೂ ಓದುವಾಗ ಪಂಪ ರನ್ನರನ್ನು ಓದುತ್ತಿರುವಂತೆ ಭಾಸವಾಗುತ್ತದೆ...ದ್ವಿಪದಿಗಳೂ ಸೀಸಪದ್ಯಗಳೂ ಆಧುನಿಕ ಸಾಹಿತ್ಯದ ಮೇಲ್ಮಟ್ಟವನ್ನು ಮುಟ್ಟಿರುತ್ತವೆ..."[11]

ಒಟ್ಟಾರೆ ಹೇಳುವುದಾದರೆ, ಡಿ.ವಿ.ಜಿ. ಅವರ 'ಕೇತಕೀವನ' ಕವಿತಾ ಸಂಕಲನವನ್ನುಳಿದು ಅನ್ಯತ್ರ ಕಂದ–ವೃತ್ತ–ಸೀಸ–ಚೌಪದಿಗಳು ;—ಅವೂ ಪ್ರಾಸಸಮೇತವಾಗಿಯೇ—ಸರ್ವಾಂಗಸುಂದರವಾಗಿ ವಿಪುಲವಾಗಿ ರೂಪಿತವಾಗಿವೆ.

೩

ಮೊದಲಿಗೆ ಡಿ.ವಿ.ಜಿ. ಅವರ ಛಂದೋವೈವಿಧ್ಯ ಇಬ್ಬಗೆಯದಾಗಿದೆ—ಒಂದನೆಯದು, ಅಕ್ಷರವೃತ್ತ ಅಥವಾ ವರ್ಣವೃತ್ತಗಳದು ; ಇಲ್ಲಿ ನಾಲ್ಕಕ್ಷರದ ದೇವರಮ್ಯ ವೃತ್ತದಿಂದ ಇಪ್ಪತ್ತೆರಡಕ್ಷರದ ಮಹಾಸ್ರಗ್ಧರಾ, ಅಶ್ವಧಾಟಿ ಮೊದಲಾದ ಅನೇಕ ವೃತ್ತಗಳವರೆಗೆ ವ್ಯಾಪಕವಾದ ಹರಹಿದೆ. ಎರಡನೆಯದು, ಮಾತ್ರಾವೃತ್ತ ಅಥವಾ ಜಾತಿ ; ಇಲ್ಲಿ ಬಹುಮುಖ್ಯವಾಗಿ ಕಂದ, ಚೌಪದಿ— ಇಲ್ಲಿ ಬಗೆಬಗೆಯ ವಿನ್ಯಾಸಗಳಿವೆ—ಸೀಸ, ಷಟ್ಪದಿ, ಅನೇಕಪದಿ, ದ್ವಿಪದಿ, ರಗಳೆ ಮೊದಲಾದ ವೈವಿಧ್ಯಗಳಿವೆ. ಮೂಲತಃ ಅಂಶ ಛಂದಸ್ಸಿನವೆಂದೆನಿಸಿದ್ದರೂ ಸೀಸಪದ್ಯ ಡಿ.ವಿ.ಜಿ.ಯವರಲ್ಲಿ ಪೂರ್ಣವಾಗಿ ಮಾತ್ರಾಛಂದಸ್ಸಾಗಿದೆ. ಕುವೆಂಪು, ಬೇಂದ್ರೆ ಇತ್ಯಾದಿ ಕವಿಗಳಲ್ಲೂ ಇದೇ ಹಾದಿ ಕಾಣಬಹುದಾಗಿದೆ. ಆದರೆ ಅಪವಾದವೆಂಬಂತೆ "ಗೀತಾತಾತ್ಪರ್ಯ ಅಥವಾ ಜೀವನ ಧರ್ಮಯೋಗ"ದಲ್ಲಿ ಒಂದೆರಡು ಅಂಶ ಛಂದಸ್ಸಿನ ಸಾಂಗತ್ಯಗಳು

* ವೃತ್ತ–ಕಂದ ಮೊದಲಾದ ಪ್ರಾಚೀನ ಬಂಧಗಳ ರಚನೆ.

ಕಂಡುಬಂದಿವೆ. ಕನ್ನಡದಲ್ಲಿ ಅವತರಿಸಿದ ಅಷ್ಟಷಟ್ಪದಿ(ಸಾನೆಟ್)ಗೆ ಸಂವಾದಿಯೆಂಬಂತೆ ಸೀಸಪದ್ಯವನ್ನೇ ಡಿ.ವಿ.ಜಿ.ಯವರು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ.

ಇನ್ನು ಪ್ರಾಸ : ಇದು ಬಹುತೇಕ ಆದಿಪ್ರಾಸವೇ ಆಗಿದೆ. ಆದಾಗ್ಯೂ ಅಂತ್ಯಪ್ರಾಸ, ಅನುಪ್ರಾಸಗಳಿಗೆ ಕೊರತೆ ಇಲ್ಲ. ವಡಿ, ಯಮಕ ಮೊದಲಾದ ಶಬ್ದಾಲಂಕಾರಗಳೂ ಹದವರಿತು ಮೂಡಿವೆ. ಕಂದ–ವೃತ್ತಗಳಲ್ಲಂತೂ ಪ್ರಾಸ ಅನುಲ್ಲಂಘನೀಯವೆಂಬಂತೆ ಮೂಡಿಬಂದಿದೆ. ಆದರೆ ಅನುವಾದಿತ ಕೃತಿಯಾದ 'ಉಮರನ ಒಸಗೆ'ಯ ಚೌಪದಿಗಳಲ್ಲಿಯೂ, 'ಮ್ಯಾಕ್ಬೆತ್', 'ಜಾಕ್‌ಕೇಡ್' ನಾಟಕಾನುವಾದಗಳ ಸರಳರಗಳೆಯಲ್ಲಿಯೂ ಆದಿಪ್ರಾಸವಾಗಲೀ ಅಂತ್ಯಪ್ರಾಸವಾಗಲೀ ಬಂದಿಲ್ಲ. (ಇದಕ್ಕೆ ಮ್ಯಾಕ್ಬೆತ್ತಿನ ಮಾಟಗಾತಿಯರ ಕೆಲವು ಮಾತುಗಳ ರಗಳೆ ಅಪವಾದವಾಗಿದೆ.) ವಿಶೇಷತಃ ವರ್ಣವೃತ್ತಗಳಲ್ಲಿರುವ ಕೆಲವೊಂದು ಛಂದಸ್ಸುಗಳು ಮಾತ್ರಾವೃತ್ತಗಳ ಗತಿಯನ್ನು ಹೊಂದಿರುವುದನ್ನು ಗಮನಿಸಿ ಡಿ.ವಿ.ಜಿ.ಯವರು ಅವುಗಳನ್ನು ಸಮರ್ಥವಾಗಿ ದುಡಿಸಿಕೊಂಡದ್ದೇ ಅಲ್ಲದೆ ಕೇವಲ ಮಾತ್ರಾಮರ್ಯಾದೆಗೆ ಮಾತ್ರ ಬದ್ಧವಾಗಿ ಅಕ್ಷರಸಂಖ್ಯಾಮೈತ್ರಿಯ ಕಟ್ಟಲೆಯನ್ನು ಮೀರಿದಿರುವುದೂ ಗಮನಾರ್ಹ. ಮಲ್ಲಿಕಾಮಾಲೆಯ ಭಾಮಿನೀ ಗತಿ, ಪಂಚಚಾಮರ–ಚಾರುಚಾಮರಗಳ ಉತ್ಸಾಹಗತಿ, ದೋಧಕ, ತೋಟಕ, ಹಂಸಗತಿ ಮೊದಲಾದುವುಗಳ ಮಂದಾನಿಲಗತಿಯೇ ಅಲ್ಲದೆ ಇಂದುನಂದನವೇ ಮೊದಲಾದ ವೃತ್ತಗಳ ಷಣ್ಮಾತ್ರಾಗತಿಯೂ (ಅಂದರೆ ೨+೪ ಮಾತ್ರೆಗಳ ಗಣಗಳು) ಸಹ ಇವರ ಕೃತಿಗಳಲ್ಲಿ ಶ್ರವ್ಯವಾಗಿ ಬಂದಿವೆ.

೪

ಮೊದಲಿಗೆ ವರ್ಣವೃತ್ತಗಳನ್ನು ಗಮನಿಸುವುದಾದರೆ, ಲಕ್ಷಣಗ್ರಂಥಗಳನ್ನುಳಿದು ಅನ್ಯತ್ರ ಕಂಡುಬಾರದ ಹತ್ತುಹಲವು ಅಪೂರ್ವ ವೃತ್ತಗಳ ದಕ್ಷ ನಿರ್ವಹಣೆಯನ್ನು 'ಅಂತಃಪುರಗೀತೆ'ಗಳಲ್ಲಿ ಮೊತ್ತಮೊದಲು ಕಾಣಬಹುದು. ನಾಲ್ಕಕ್ಷರಗಳ ಈ ಭಾವರಮ್ಯ ವೃತ್ತ ಇಡಿಯ ಒಂದು ಭಾವಗೀತೆಯಷ್ಟು ರಸಸಾಂದ್ರ ಪರಿಣಾಮವನ್ನುಂಟುಮಾಡಿದೆ.

ಶಾರಿಯುಗ್ಮಂ
ಮಾರತಿಗ್ಮಂ ।
ವೀರೆಯಸ್ತ್ರಂ
ಚಾರುಗಾತ್ರಂ ॥ [12]

ಐದಕ್ಷರಗಳ ತಿಲಕವೃತ್ತವೂ ಇದಕ್ಕೆ ಹೊರತಲ್ಲ.

ನಾರೀತನುವೋ
ವೀರಾಂಗಣವೋ ।
ಸ್ಮೇರಾನನವೋ
ಮಾರೇಂಗನವೋ ॥ [13]

ಇದರಂತೆಯೇ ನಗ್ನಸುಂದರಿ ನೀಲಾಂಬರಿಯನ್ನು ವರ್ಣಿಸುವ ವೃತ್ತ ತನ್ನ ಅಂತ್ಯ ಪ್ರಾಸ ಆದಿಪ್ರಾಸಗಳ ಬಿಕ್ಕಟ್ಟಿನ ಬೆಡಗಿನಿಂದ, ಕ್ಲಿಷ್ಟಪ್ರಾಸಸ್ಥಾನದ ಚಮತ್ಕೃತಿಯಿಂದ ಅನನ್ಯವಾಗಿದೆ. ಇದು ಸೊಗಸಾದ ನಂದಕವೃತ್ತ.

ದೃಷ್ಟ ವೃಶ್ಚಿಕಾ
ನಷ್ಟವೇಷ್ಟಿಕಾ ।
ಸ್ಪಷ್ಟಕನ್ಯಕಾ
ಹೃಷ್ಟ ಲೌಕಿಕಾ ॥ 14

ಎಂಟಕ್ಷರಗಳ ಅನುಷ್ಟುಪ್ ಕುಟುಂಬದಲ್ಲಿ ಶ್ಲೋಕವೇ ಪ್ರಖ್ಯಾತ. ಅಂತೆಯೇ ಅನೇಕ ಶ್ಲೋಕಗಳನ್ನು ಸಂಸ್ಕೃತ–ಕನ್ನಡದಲ್ಲಿ ರಚಿಸಿ ಶ್ಲೋಕ ಕನ್ನಡಕ್ಕೆ ಒಗ್ಗದೆಂಬುದಕ್ಕೆ ಪ್ರಾಯೋಗಿಕ ಉತ್ತರವನ್ನು ಇತ್ತಿರುವರಾದರೂ, ಆ ಯಶಸ್ಸಿಗೆ ಸಂಸ್ಕೃತ ವೈಪುಲ್ಯವೇ ಹೇತುವೆಂಬುದನ್ನು ಮರೆಯಲಾಗದು. ಆದ್ದರಿಂದಲೇ ಸಮುದ್ಗಯಮಕ ಎಂಬ ಚಿತ್ರಕಾವ್ಯ ವಿಶೇಷಕ್ಕೆ ಈ ಶ್ಲೋಕ ಉದಾಹರಣೆಯಾಗಿದೆ. ಇಲ್ಲಿ ಪಾದಾದಿಯಮಕ ಮತ್ತೊಂದು ಅಂಶ.

ಕೇಶವೇಶ ಲಸದ್ರೂಪಂ ಕೇಶವೇಶಪ್ರಿಯಾಶಯಂ ।
ಕೇಶವೇಶಲಸದ್ರೂಪಂ ಕೇಶವೇಶಪ್ರಿಯಾಶಯಂ ॥ 15

ಗೀತಾತಾತ್ಪರ್ಯ'ದಲ್ಲೂ ಲಲಿತವಾದ ಶ್ಲೋಕಗಳನ್ನು ಕಾಣಬಹುದಾಗಿದೆ. ಕಬರೀವೃತ್ತದ ಎಂಟಕ್ಷರ ಗಳ 'ಈ ಕೆಳಗಿನ ಪದ್ಯ ಒಂದು ವಿರಳತನವಾದ ಅನುಷ್ಟುಪ್.

ಕೀರೋಕ್ತಿಯೊಳಾವುದನೋ
ಸ್ವಾರಸ್ಯವ ಕಾಣುತಲೀ ।
ಚಾರುಪ್ರಭೆ ವಲ್ಲಭನಂ
ಸಾರಿರ್ಪಳ್ ಮಾನಸದೊಳ್ ॥ 16

ಈ ವೃತ್ತದ ಸೂಕ್ಷ್ಮ ಪರಿಶೀಲನದಿಂದ ಇದು ಅಖಂಡಷಣ್ಮಾತ್ರಾವೃತ್ತವೆಂಬ ಹೊಳಹು ತಿಳಿಯದಿರದು.

ಇದೇ ಕುಟುಂಬದ್ದೂ ಪಂಚಚಾಮರವೃತ್ತದ ಮೂಲವೂ ಆದ ಖ್ಯಾತ ಪ್ರಮಾಣಿಕಾವೃತ್ತ ಎರಡು ಬಾರಿ ಅಂತಃಪುರಗೀತೆಯಲ್ಲಿ ರಸೋಚಿತವಾಗಿ ಪ್ರಯುಕ್ತವಾಗಿದೆ. ತ್ರಿಮಾತ್ರಕವೂ ಉತ್ಸಾಹಗತಿಯುಳ್ಳದ್ದೂ ಆದ ಈ ವೃತ್ತ ಲೀಲಾವಿನೋದಗಳ ಸಮರ್ಥ ಭಾವಸೂಚಕ.

ಶುಭಾಂಗಿ ಲೋಲ ಲೋಚನೇ
ತ್ರಿ ಭಂಗಿ ಬಂಧುರಾನನೇ ।
ಸ್ವಭಾವ ಕೋಮಲೇಂಗನೇ
ಅಭೀಷ್ಟನಾರಿ ಲಾಸನೇ ॥ 17

ಇದರಲ್ಲಿಯು ಅಕ್ಷರಮೈತ್ರಿ, ಪ್ರಾಸವಿನ್ಯಾಸ ಶ್ರುತಿಸುಖಕರ, ಸಾಂದ್ರ.

ಒಂಭತ್ತಕ್ಷರದ ವಿನುತವೃತ್ತ ಆರು ಆರಂಭಿಕ ಲಘುಗಳಿಂದ ಕರಿನಗತಿಯನ್ನುಳ್ಳದ್ದಾದರೂ ಸಮರ್ಥವಾಗಿಯೇ ಪ್ರಯುಕ್ತವಾಗಿದೆ.

ಇನಿಯನ ನೆನೆವಾರಿವಳ್
ಮಣಿಮುಕುರದಿ ನೋಡುವಳ್ ।
ಪಣೆಯಲಕವ ತಿದ್ದುವಳ್
ಮನವನೆ ಸೆರೆಗೊಳ್ಳುವಳ್ ॥ 18

ಏಕಾದಶಾಕ್ಷರಗಳ ಗ್ರಂಥಾನುಕ್ತ ಜಗನ್ಮೋಹಿನೀವೃತ್ತ (ನಾಮಕರಣ ಪ್ರಕೃತ ಲೇಖಕನದು) ಡಿ.ವಿ.ಜಿ.ಯವರದೇ ಸೃಷ್ಟಿಯೇನೋ. ಆದರೆ ಇದರಲ್ಲಿಯ ಸ್ಪಷ್ಟ ಮಂದಾನಿಲ ಮಾತ್ರಾಗತಿ ಯಾಂತ್ರಿಕ.

ದೈತೇಯರ ಮೋಹಿನಿ ಕಣ್ಪಿಡಿದಾ
ಮಾತೇನವರಲ್ಪಕೆ ಮೈಮರೆವರ್ ।
ಭೂತೇಶನ ನಿಃಸ್ಪೃಹೆಯಂ ಮುರಿದಾ
ಚೈತನ್ಯವಿಲಾಸಿನಿಯಾಟವಿದೈ ॥ 19

ಇದರಂತೆಯೇ ದಶಾಕ್ಷರ ನಿಬದ್ಧವಾದರೂ ನಾಲ್ಕು ಮಾತ್ರೆಗಳ ನಾಲ್ಕು ಗಣಗಳ ನಾಲ್ಕು ಪಾದವುಳ್ಳ ಮತ್ತೊಂದು ವೃತ್ತವೂ ಮಂದಾನಿಲಗತಿಯುಳ್ಳದ್ದೇ ಆಗಿದೆ. 'ತಯಭಗ' ಗಣ ವಿನ್ಯಾಸವುಳ್ಳ ಈ ಉಕ್ತವು ಲಕ್ಷಣಗ್ರಂಥಸ್ಥವಾಗಿಲ್ಲ.

ಸಂಸ್ಕೃತದಲ್ಲಿ ಅಪಾರ ಪ್ರಾಚುರ್ಯಹೊಂದಿದ ಇಂದ್ರವಜ್ರಾ-ಉಪೇಂದ್ರವಜ್ರಾ-ಉಪಜಾತಿವೃತ್ತಗಳನ್ನು ಡಿ.ವಿ.ಜಿ. ಅವರು ಬಳಸದಿರುವುದು ಆಶ್ಚರ್ಯಕರ. ಆದಕ್ಕೆ ಕಾರಣ ಬಹುಶಃ ಅವುಗಳ ಗುರುದ್ವಯದೀರ್ಘಿತವಾದ ಮುಕ್ತಾಯವೇ ಆಗಿರಬಹುದು. ಆದರೂ ಇದೇ ವೃತ್ತಗಳ ವೃದ್ಧಿರೂಪವಾದ ವಂಶಸ್ಥಾ-ಇಂದ್ರವಂಶಗಳನ್ನು—ವಿಶೇಷತಃ ಇಂದ್ರವಂಶವನ್ನು ಹೆಚ್ಚಾಗಿ ಬಳಸಿದ್ದಾರೆ. ಇದಕ್ಕೆ ಕಾರಣ ಜಗಣದ ಆದಿಯುಳ್ಳದ್ದಾಗಿ, ಕನ್ನಡದ ಜಾಯಮಾನಕೊಗ್ಗದ ವಂಶಸ್ಥದ ನಡೆಯೇ ಇರಬಹುದು.

ವಂಶಸ್ಥಾ ॥ ಸರಾಂಗನಾ ಭಾವ ಸುಖ ಸ್ವರೂಪೆಯರ್
ವಿರಾಡ್ರಸಾವೇಶಿತ ಸತ್ತ್ವಶೀಲೆಯರ್ ।
ಸರಾಗ ಗೀತಾಂಗಿಕ ಚೇಷ್ಟಿತಂಗಳಿಂ
ತರಂಗ ಸೌಂದರ್ಯವನಿಲ್ಲಿ ತೋರುವರ್ ॥ 20

ಇಂದ್ರವಂಶ ॥ ಅಂಗಾಂಗ ತಾರಂಗಮೆ ರಂಗ ನರ್ತನಂ
ಸಂಗೀತಕಂ ನಾದ ತರಂಗ ನರ್ತನಂ ।
ಭಂಗಾಯಿತ ಸ್ವಾಂತಮೆ ಕಾವ್ಯ ನರ್ತನಂ
ಶೃಂಗಾವಟಭ್ರಾಮಮೆ ಜೀವನರ್ತನಂ ॥ 21

ಈ ಮೇಲಿನ ನಿದರ್ಶನಪದ್ಯಗಳು ವೃತ್ತನಿರ್ವಹಣೆಯ ಕಲೆಗಾರಿಕೆಗೂ ಲಲಿತ ಮಂಜುಲ ಶಬ್ದಗುಂಫನ ವೈದುಷ್ಯಕ್ಕೂ ಸಮಾನ ಮಾನಗಳಾಗಿವೆ.

ಇದೇ ಜಗತೀ ಕುಟುಂಬದ ಏಕಗಣಾವರ್ತಕಗಳಾದ ತೋಟಕ, ಸ್ರಗ್ವಿಣೀ, ಭುಜಂಗಪ್ರಯಾತಗಳು ಕ್ರಮವಾಗಿ ತಮ್ಮ ಯಾಂತ್ರಿಕವಾದ ಚತುರ್ಮಾತ್ರಾ ಮತ್ತು ಪಂಚಮಾತ್ರಾಗತಿಗಳಿಂದ ಸುಪರಿಚಿತವಾಗಿವೆ. ಬಹುಶಃ ಈ ಏಕತಾನತೆ ಯನ್ನರಿತೋ ಏನೋ ವಿರಳವಾಗಿಯೇ ಇಲ್ಲಿ ಬಳಸಲ್ಪಟ್ಟಿವೆ.

ತೋಟಕ॥ ಕೊರವಂಜಿಯು ವೇಷದಿ ಬಂದೊಡದೇಂ
ಶರದೈಂದವ ಹಾಸವ ಮುಚ್ಚಿಹೆಯೇಂ।
ಕರದೊಳ್ ಡಮರೇಂ ಚಿಟಿತಾಳಗಳೇಂ
ಸ್ಮರಕೀರ್ತನೆಗೀ ಕರಣಂ ಸರಿಯೇಂ॥ 22

ಸ್ರಗ್ವಿಣೀ॥ ಝಲ್ಲರೀ ಝಂಕೃತಾಮೋದ ಮುಗ್ಧಾನನಂ
ಮಲ್ಲಿಕಾಮಾಲಿಕಾಲಂಕೃತೋರಃ ಸ್ಥಲಂ।
ವಲ್ಲರಾಗಾರದೊಳ್ ಚೇಟಿಕಾ ನರ್ತನಂ
ವಲ್ಲಭ ಸ್ವಾಗತಾನಂದ ಸಂವೀಕ್ಷಣಂ॥ 23

ಭುಜಂಗಪ್ರಯಾತ॥ ಮನುಷ್ಯ ಸ್ವಭಾವ ಪ್ರಕಾರಾನಭಿಜ್ಞಂ
ಮನಃಶಿಕ್ಷಣೋಪಾಯ ನೀತಿಜ್ಞನಾಗನ್।
ನರಸ್ವಾಂತ ಕಂಪಾನುಕಂಪಾರ್ದ್ರ ಚಿತ್ತಂ
ಗುರುಪ್ರಷ್ಠನಪ್ಪಂ ಹೃಷೀಕೇಶನೆಂದುಂ॥ 24

ಆದರೂ ಮೇಲಿನ ಪದ್ಯಗಳಲ್ಲಿ ತ್ರಿಕಗಳ ಯಾಂತ್ರಿಕ ನಡೆಯನ್ನೊಡೆದು ವೈವಿಧ್ಯ ತಂದಿರುವುದನ್ನು ಗಮನಿಸಬಹುದಾಗಿದೆ.

ಚತುರ್ದಶಾಕ್ಷರಗಳ ವರ್ಣವೃತ್ತಗಳಲ್ಲಿ ವಸಂತತಿಲಕಾ ಸುಪ್ರಸಿದ್ಧ. ಸಂಸ್ಕೃತ ಕಾವ್ಯ-ನಾಟಕಾದಿಗಳಲ್ಲಿ ವಿಜೃಂಭಿಸಿದ ಸರ್ವಾಂಗಸುಂದರ ಧೀರವೃತ್ತ. ಆದರೆ ಇದನ್ನು ಡಿ.ವಿ.ಜಿ.ಯವರು ಅತ್ಯಂತ ವಿರಳವಾಗಿ (ಪ್ರಕೃತ ಲೇಖಕನ ಅಭಿಪ್ರಾಯ ದಲ್ಲಿ ಒಂದೇ ಬಾರಿ) ಬಳಸಿರುವುದು ಆಶ್ಚರ್ಯಕರ. ವಿಶೇಷತಃ ಗೌಡೀ–ಪಾಂಚಾಲೀ-ವೈದರ್ಭೀ ಶೈಲಿಗಳೆಲ್ಲವುಗಳನ್ನೂ ಸಮಾನವಾಗಿ ವ್ಯಂಜಿಸಬಲ್ಲ ಉದಾತ್ತ ಗಂಭೀರ ವಾದ ಈ ವೃತ್ತ ಡಿ.ವಿ.ಜಿ.ಯವರಿಂದ ಪ್ರತಿಪಾದಿತ ತತ್ತ್ವಗಳಿಗೆ ಸೂಕ್ತ ವಾಹಕ ವಾಗುತ್ತಿತ್ತು. ಅಲ್ಲದೆ ಇದರ ಗೇಯತ್ವವೂ ಉತ್ಕೃಷ್ಟ. ಆದರೂ ಈ ಒಂದು ಉದಾಹರಣೆ ಅವರು ವಸಂತತಿಲಕಾ ವೃತ್ತದ ಒಳಹೊರಗುಗಳನ್ನರಿತುದಕ್ಕೆ ಸಾಕ್ಷಿ ಯಾಗಿದೆ.

ಮಂದಸ್ಮಿತ ಪ್ರಹಿತ ಚಾಂದ್ರಮುವಕ್ತ್ರರಾಗಂ
ಸೌಂದರ್ಯ ಕಲ್ಪತರುವೇಲ್ಲಿತ ಬಂಧುರಾಂಗಂ।
ಕಂದರ್ಪದರ್ಪ ಪರಿಜೃಂಭಕ ದರ್ಪಣಾಸ್ತ್ರಂ
ಸಂದಿರ್ಪಮೋಹಿನಿಯುದೇಂ ಸ್ವಕೃತಾತ್ಮಮೋಹಂ॥ 25

ಮಾಲಿನೀವೃತ್ತ ಸಂಸ್ಕೃತ ಛಂದಃಪ್ರಪಂಚದ ಮನೋಜ್ಞ ವೃತ್ತಗಳಲ್ಲೊಂದು. ಇದನ್ನು ಡಿ.ವಿ.ಜಿ.ಯವರು ಹತ್ತಾರು ಕಡೆಗಳಲ್ಲಿ ಬಳಸಿದ್ದಾರೆ. ಲೀಲಾಶುಕಾದಿಗಳ

ಸ್ತೋತ್ರಸಾಹಿತ್ಯದ ಮಾಲಿನಿಯಂತೆ ಇವರಲ್ಲೂ ಯತಿಸ್ಥಾನಗಳಲ್ಲಿ ಸುಂದರ ಪ್ರಾಸಗಳಿವೆ. 'ಗೀತಾತಾತ್ಪರ್ಯ'ದ ಒಂಭತ್ತು ಮಾಲಿನೀವೃತ್ತಗಳೂ ಇದಕ್ಕೆ ಸಾಕ್ಷಿ: ಈ ವೃತ್ತದ ಮೃದು ಲಯ, ತುಂಬುನಡೆ, ಶ್ರಾವ್ಯಗುಣ ಅಸಮಾನವಾದುವು.

ನಿಖಿಲ ಜಗದಸಂಗಂ ಜೀವಲೀಲಾಪ್ರಸಂಗಂ
ವಿಷಯನಿಗಳ ಭಂಗಂ ಜ್ಞಾತ ಭೂತಾಂತರಂಗಂ।
ಪ್ರಣಯರಸತರಂಗಂ ಪಾಪತೂಲಸು ಲಿಂಗಂ
ಮನುಜ ಹೃದಯ ಲಿಂಗಂ ಕೇಶವಂ ಮಂಗಲಾಂಗಂ॥ [26]

ಇಲ್ಲಿ ಲುಪ್ತವಾಗಿರುವ ಆದಿಪ್ರಾಸ ಚಿಂತನೀಯ.

ಸಂಸ್ಕೃತ ಸಾಹಿತ್ಯದಲ್ಲಿ ಸುಪ್ರಸಿದ್ಧವಾದ, ತನ್ನ ಅಲಸಗುರುಗತಿಗಳಿಂದಲೂ ಚಟುಲ ಲಘು ವಿನ್ಯಾಸದಿಂದಲೂ ಕರುಣ-ವಿಪ್ರಲಂಭಗಳಿಗೆ ಹೆಸರಾಂತ ಮಂದಾಕ್ರಾಂತಾ ವೃತ್ತ ಒಂದೆರೆಡೆಡೆಗಳಲ್ಲಿ ಮಾತ್ರ ಪ್ರಯುಕ್ತವಾಗಿವೆ.

ಮಾನುಷ್ಯಾಂತಃಕರಣ ಬಲದೌರ್ಬಲ್ಯ ಚಾಪಲ್ಯ ನಿಮ್ನೋ-
ತ್ತಾನೋತ್ತಾಲಂಗಳನರಿತು ಜೀವಾರ್ಹ ಸಾಹ್ಯಂಗಳಂ ಸಂ-।
ಧಾನಿಪ್ಪಾತ್ತಂ ಪರಮ ಪುರುಷಂ ಧರ್ಮ ರಕ್ಷೈಕ ದೀಕ್ಷಂ
ಸ್ವಾನಂದಾಸೇಚನ ಚಣ ಘನಶ್ಯಾಮಲಂ ಕೋಮಲಾತ್ಮಂ॥ [27]

ಡಿ.ವಿ.ಜಿ.ಯವರು ತಮ್ಮ 'ಪರಶುರಾಮ' ನಾಟಕದಲ್ಲೊಂದೆಡೆ ನರ್ಕುಟಕ ವೃತ್ತದ ಅಂತಿಮ 'ಲಗ'ವನ್ನು ಕಿತ್ತು 'ರಗಣ' ಸೇರಿಸಿ ಹೊಸ ವೃತ್ತವನ್ನು ಬಳಸಿದ್ದಾರೆ. ಗ್ರಂಥಾನುಕ್ತವಾದ ಈ ವೃತ್ತ ಶ್ರಾವ್ಯವಾಗಿದೆ.

ಚರಿಸು ಧರಾಪ್ರದಕ್ಷಿಣೆಯನೀಕ್ಷಿಸು ಸೃಷ್ಟಿ ಶಿಲ್ಪಮಂ
ಗಿರಿಶಿಖರಾಗ್ರ ದುರ್ಗ ದರ ಕಂದರ ಗಹ್ವರಂಗಳಂ।
ಸರಿತು ಸರೋವರ ಹ್ರದ ಸಮುದ್ರ ನಿಖಾತಕಂಗಳಂ
ಮರೆ ನರನಲ್ಪಮಂ ನೆನೆಯ ಸೃಷ್ಟಿಯುದಾರ ನೀತಿಯಂ॥ [28]

ನರ್ಕುಟಕವೃತ್ತದ ಸಾಂತವೆನಿಸದ ಮುಕ್ತಾಯದಂತೀ ವೃತ್ತ ಕಸಿವಿಸಿಯನ್ನುಂಟು ಮಾಡದೆ ಬಹು ಸೊಗಸಾಗಿ ಮುಗಿದು ಶ್ರುತಿಕಟುವಲ್ಲದ ಸಮಗತಿಯನ್ನು ರೂಪಿಸುವುದು ಡಿ.ವಿ.ಜಿ.ಯವರ ಪರಿಣತ ಪ್ರಯೋಗಕುಶಲತೆಗೆ ಸಾಕ್ಷಿ.

ಇಪ್ಪತ್ತೆರಡಕ್ಷರದ ಅಶ್ವಧಾಟಿ ಮಾತ್ರಾಗತಿಯನ್ನುಳ್ಳ ವರ್ಣವೃತ್ತ. ಇದು [೫ + ೪ + ೫ + ೪ + ೫ + ೪ + ೨(ಗು)] ಪಂಚಮಾತ್ರಾ ಚತುರ್ಮಾತ್ರಾ ಸಮ್ಮಿಶ್ರಣದ್ದಾಗಿ ಚತುರ್ಮಾತ್ರಾ–ಷಣ್ಮಾತ್ರಾಗತಿಯನ್ನೂ ವ್ಯಂಜಿಸಬಲ್ಲ ಅಪೂರ್ವ ವೃತ್ತ. ಯಾಂತ್ರಿಕವಾದರೂ ಮೋಹಕ ನಡಿಗೆಯ ಈ ಛಂದಸ್ಸಿನ ನಿರ್ವಹಣ

ಹನ್ನೆರಡು ಪ್ರಾಸಸ್ಥಾನಗಳಿಂದಾಗಿ ಕಠಿನವಾಗಿದೆ. ಇದರ ಒಂದು ಲಲಿತ ಪ್ರಯೋಗವನ್ನು 'ಕನಕಾಲುಕಾ' ರೂಪಕದಲ್ಲಿ ಕಾಣಬಹುದು.

ಅಂಬಾ ಸುಧಾಕಿರಣ ಬಿಂಬಾನನೇ ಕಲಭ ಕುಂಭಸ್ತನೇ ಸುರದನೇ
ಅಂಭೋರುಹೇಕ್ಷಣೆ ಕದಂಬಾಲಯೇ ಸದಯೆ ಶಂಭುಪ್ರಿಯೇ ಭಗವತೀ ।
ಕುಂಭೋದ್ಭವಾರ್ಚಿತ ಪದಾಂಭೋರುಹೇ ಶ್ರುತಿ ಕದಂಬಸ್ತುತೇ ಗಿರಿಸುತೇ
ಅಂಭೋಜಗರ್ಭಹರಿ ಜಂಭಾರಿ ಮುಖ್ಯ ಸುರ ಸಂಭಾವಿತೇ ಜಯಜಯs ॥ [29]

ಇಷ್ಟೇ ಅಲ್ಲದೆ ಮಲ್ಲಿಕಾಮಾಲಾ ವೃತ್ತ[ರಸಜಜಭರ ೩ + ೪ + ೩ + ೪ + ೩ + ೪ + ೩+೨ (ಗು)], ಪಂಚಚಾಮರ = [ಜರಜರಜಗ = ೩ + ೩ + ೩ + ೩ + ೩ + ೩ + ೩ + ೩ ಅಥವಾ ಜಗಣವಿರುವ ಚತುರ್ಮಾತ್ರಾಗಣಾರಂಭದಿಂದ ಈ (∪–∪ + ೩ + ೫ + ∪—∪ + ೩ + ೫) ವಿನ್ಯಾಸವನ್ನು ಹೊಂದಿರುವುದು], ಹರಿಣೀವೃತ (ಇದು ಡಿ.ವಿ.ಜಿ.ಯವರಿತ್ತ ಹೆಸರು. ಆದರೆ ಲಕ್ಷಣಗ್ರಂಥಗಳಲ್ಲಿದು ಕರಿಣೀ ಎಂದಾಗಿದೆ) (ಸನಜನಭಸ = ೨ + ೪ + ೩ + ೪ + ೨ + ೪ + ೪), = ಅಕ್ಕರಿಕಂ ವೃತ್ತ (ಇದೂ ಗ್ರಂಥೋಕ್ತವಲ್ಲ) (ನನಭನಜನಭಗ = ನಾಲ್ಕು ಮಾತ್ರೆಗಳ ಮಂದಾನಿಲ ನಡೆಯ ಅಂತಿಮಗುರ್ವಂತ್ಯ) ಮೊದಲಾದುವುಗಳನ್ನು ಸಮರ್ಥವಾಗಿ ಪ್ರಯೋಗಿಸಲಾಗಿದೆ. ಇವುಗಳ ವರ್ಣ–ಮಾತ್ರಾ ರೂಪಗಳೆರಡನ್ನೂ ಹದವರಿತು ಬಳಸಿರುವುದು ಸಾಮಾನ್ಯವಾಗಿದೆ. ಉದಾಹರಣೆಗಾಗಿ ಒಂದೊಂದು ಪಾದಗಳನ್ನು ಮಾತ್ರ ಕೊಡಲಾಗಿದೆ.

ಮಲ್ಲಿಕಾಮಾಲಾ ॥ ಜೀವಮಾತೃಕೆ ವಿಶ್ವಕೃತ್ಪ್ರತಿಭಾಪ್ರತೀಕೆ ಕಲಾತ್ಮಿಕೆ । [30]
ಪಂಚಚಾಮರ ॥ ಮಹೀಸುತಾ ಸಮನ್ವಿತಂ ಸಹೋದರಪ್ರಪೂಜಿತಂ । [31]
ಹರಿಣೀ ॥ ಅಜಶಾಶ್ವತ ಸುಜನಾನತ ನಿಗಮಾಗಮ ವಿನುತಾ । [32]
ಅಕ್ಕರಿಕಂ ॥ ಜಯಜಯ ಲಲಿತೇ ಪುರಹರದಯಿತೇ ಸುರನರ ಭೋಗಿನುತೇ । [33]

ಡಿ.ವಿ.ಜಿ. ಅವರು ಯಾವುದೇ ಅರ್ಧಸಮ ಅಥವಾ ವಿಷಮ ವರ್ಣವೃತ್ತಗಳನ್ನು ಬಳಸದಿರುವುದು ವಿಸ್ಮಯಕರ. ವಿಶೇಷತಃ ಸಂಸ್ಕೃತದಲ್ಲಿ ವಿಪುಲಪ್ರಚುರಿತ ವಿಯೋಗಿನೀ, ಪುಷ್ಪಿತಾಗ್ರಾ, ಉದ್ಗತಾ ಮೊದಲಾದುವುಗಳು ಅವರ ಪ್ರಯೋಗಗಳಲ್ಲಿಲ್ಲ. ಅಲ್ಲದೆ ಸಪ್ತದಶಾಕ್ಷರ ಸಮವೃತ್ತಗಳಲ್ಲಿ ಅತ್ಯಂತ ವಿಖ್ಯಾತ ಹರಿಣೀ, ಶಿಖರಿಣೀ ವೃತ್ತಗಳೂ ಪಂಪನಿಂದ ಷಡಕ್ಷರಿಯವರೆಗೆ ಪ್ರಚುರಿತವಾದ ಪೃಥ್ವೀ ವೃತ್ತವೂ ಡಿ.ವಿ.ಜಿ. ಅವರನ್ನು ಆಕರ್ಷಿಸದಿರುವುದು ಬೆರಗಿನ ವಿಚಾರವೇ. ಇನ್ನುಳಿದುವು ಖ್ಯಾತ ಕರ್ಣಾಟಕಗಳೆಂದು ವಿಶ್ರುತವಾದ ಶಾರ್ದೂಲ ಮತ್ತೇಭ ವಿಕ್ರೀಡಿತಗಳೂ, ಚಂಪಕೋತ್ಪಲ ಮಾಲೆಗಳೂ, ಸ್ರಗ್ಧರಾ ಮಹಾಸ್ರಗ್ಧರೆಗಳೂ ಡಿ.ವಿ.ಜಿ ಅವರ ವರ್ಣವೃತ್ತಗಳಲ್ಲಿ ಸಿಂಹಪಾಲನ್ನು ಹೊಂದಿವೆ. ಆದರೆ ಈ ಆರರಲ್ಲಿ ವಿಕ್ರೀಡಿತಗಳೆರಡೇ ಹೆಚ್ಚಾಗಿವೆ. ಕನ್ನಡದ ದೇಸಿಗೆ ಚಂಪಕೋತ್ಪಲ ಮತ್ತೇಭಗಳೇ ಹೆಚ್ಚು ಅನುವಾದುವುಗಳಾದರೂ ಡಿ.ವಿ.ಜಿ. ಅವರ ಓಜೋಪೂರ್ಣ ಗೌಡೀರೀತಿಗೆ ವಿಕ್ರೀಡಿತ

ಗಳೇ ಪ್ರಿಯವಾಗಿವೆ. ಅಲ್ಲದೆ ಸುಸ್ಪಷ್ಟವಾದ ಪಾದಮಧ್ಯದೊಂದೇ ಯತಿ ; ಸ್ರಗ್ಧರೆ–ಮಹಾಸ್ರಗ್ಧರೆಗಳ ಯತಿದ್ವಯ ಕ್ಲೇಶವನ್ನೂ. ಗುರು ಲಘುಗಳ ಒತ್ತಾದ ಅಸಮತೋಲನವನ್ನೂ ನೀಗಿಕೊಂಡ ವರ್ಣವಿನ್ಯಾಸ ಶಾರ್ದೂಲವಿಕ್ರೀಡಿತ ಮತ್ತು ಮತ್ತೇಭವಿಕ್ರೀಡಿತಗಳನ್ನೇ ಹೆಚ್ಚು ಬಳಸುವಂತೆ ಮಾಡಿದೆ. ಮೇಲಾಗಿ ಸಂಸ್ಕೃತ ಭೂಯಿಷ್ಠತೆ ವಿಪುಲವಾಗಿರುವ ಶೈಲಿಗೆ ಛಂದಸ್ಸುಗಳೆರಡೂ ಸಮುಚಿತವೂ ಹೌದು. ಎಲ್ಲಕ್ಕೂ ಮಿಗಿಲಾದ ಉದಾತ್ತಗಂಭೀರ ವಸ್ತುನಿರ್ವಹಣಕ್ಕೆ ಇವೆರಡೂ ಹೇಳಿ ಮಾಡಿಸಿದವುಗಳು. ಈ ವೃತ್ತಗಳ ಪ್ರಯೋಗದಲ್ಲಿ ಡಿ.ವಿ.ಜಿ. ಅವರ ಸಿದ್ಧಹಸ್ತವನ್ನು ಅಕ್ಷರಕ್ಷರಗಳಲ್ಲೂ ಗುರುತಿಸಬಹುದು. ಇವುಗಳು ಕನ್ನಡ ಸಾಹಿತ್ಯದ ವೃತ್ತರಚನಾ ಕೌಶಲಕ್ಕೆ ಸಾಕ್ಷಿಯಾಗಬಲ್ಲವು. ಇಲ್ಲಿ ಆಯ್ದಂತೆ ಆರು ವೃತ್ತಗಳಿಗೆ ಒಂದೊಂದು ನಿದರ್ಶನಗಳನ್ನೊದಗಿಸಲಾಗಿದೆ. ಇವುಗಳ ನಿರ್ವಹಣ ಚಾತುರ್ಯ, ಅಕ್ಷರಮೈತ್ರಿ, ಪದಶಯ್ಯೆ, ನಾದಸಾತತ್ಯ, ರಂಜಕತೆ, ಸೌಂದರ್ಯಗಳು ಸ್ವಯಂವೇದ್ಯ.

ಶಾ.ವಿ. ಸೌಂದರ್ಯಂ ಪರವಸ್ತುಸಾಗರ ಚಿದಾನಂದೋರ್ಮಿಮಾಲಾಪೃಷ-
ದ್ಬಿಂದೂತ್ಸೇಕಮಕಾಂಡ ಪುಣ್ಯಪವನಾವಾತಂ ನರಂಗುರ್ವಿಯೊಳ್ ।
ಅಂಧೀಕಾರಕಮಾಪೃಷನ್ಮಯಪಟಂ ಭೋಗಾಶಯಂಗಾದೊಡಂ
ಸಂಧ್ಯಾತಾತ್ಮವಿಚಾರಿಗಾ ರಸಭರಂ ತಾಂ ಬ್ರಹ್ಮ ಸಂಜ್ಞಾಪಕಂ ॥ 34

ಮ.ವಿ. ಅರುಣಂ ಪಲ್ಲವದೊಳ್ ಸುವರ್ಣವಿಭವಂ ಚಾಂಪೇಯದೊಳ್ ಚಂದ್ರಿಕಾ-
ಸ್ಫುರಣಂ ಕುಂದವನಂಗಳೊಳ್ ತರುಣತಾರಳ್ಯಂ ಲತಾಲೀಲೆಯೊಳ್ ।
ಸರಸಾಕ್ಷಿದ್ಯುತಿಯೇಣದೊಳ್ ನೆಲಸಿ ತಾಂ ಮಾನುಷ್ಯರೊಳ್ ಸೇರದಂ-
ತಿರಲಾ ಕಾಂತಿಗಳಿಂಬನೀಂಟುವ ಸೊಗಂ ಕೈಪಿಲ್ಲದಂತೊಪ್ಪುಗುಂ ॥ 35

ಉ.ಮಾ. ಭಾರತಮೆಂಬುದೇಂ ಬರಿಯ ಮೃತ್ಸ್ನೆಯೆ ಭೌತಮೆ ಭಾವಸೃಷ್ಟಿಯೇ-
ನಾರಯಲೊಂದು ತೇಜಮದು ಪೂಜ್ಯಹಿಮಾಚಲ ರಾಮಸೇತು ವಿ- ।
ಸ್ತಾರನಿಕೇತವಾಸಿ ಜನತಾಪಯುಪ್ರೋಲ್ಲಸದಾತ್ಮ ತತ್ತ್ವಮಾ
ಕಾರಣದಿಂದಲೀ ನೆಲದ ಧೂಳಿಯುಮೆಮ್ಮ ಶಿರಕ್ಕೆ ಸೇಸೆಯೈ ॥

ಚಂ.ಮಾ. ಭುವನ ಕುಲಾಲನೀ ಗಿರಿಯು ನಾಭಿಯುನಾಗಿಸಿ ತನ್ನ ಚಕ್ರಮಂ
ಜವದಿ ಪರಿಭ್ರಮಂ ಗೊಳಿಸೆ ಪುಟ್ಟಿದ ವರ್ತುಲಜಾಲಮೇನೆನಿ- ।
ಪ್ಪವೊಲೆಸೆಯುತ್ತುಮಿರ್ಪುದಿದರೆಣ್ದೆಸೆಯೊಳ್ವನಶೋಭಿಪರ್ವತ
ಪ್ರವಲಯ ಪಂಕ್ತಿಯುಚ್ಚ್ರಿಯ ಬೀರುತೆ ಲೋಚನಮೋಡುವನ್ನೆಗಂ ॥ 37

ಸ್ರ. ಸಾಂದ್ರಾಮೋದ ಪ್ರಭಾಕರ್ಷಣೆಗಳಿನೆಳೆದಿಟ್ಟಿಂದ್ರಿಯ ಗ್ರಾಮಮಂ ತತ್-
ಕೇಂದ್ರಾಧಿಷ್ಠಾನದೊಳ್ ಜೀವವ ಸುಖರಸತಲ್ಲೀನಮಂಗೆಯ್ದು ವಾಂಛಾ ।
ಬಂಧಂ ವಾಂಛಾಕರಂ ವಾಂಛಕನಿವು ಕರಗಲ್ ಮೂರುಮೈಕ್ಯಂಗೊಳಿಪ್ಪಾ
ಸೌಂದರ್ಯಾದ್ವೈತಯೋಗಂ ಜಯಿಸುಗೆ ಜಗದೊಳ್ ಕೇಶವಾಮ್ನಾಯರಾಗಂ ॥ 38

ಮ.ಸ್ರ. ಪರಮಬ್ರಹ್ಮಪ್ರದತ್ತಂ ತ್ರಿಭುವನವಿಭವಂ ಲೋಕಸಂಸೃಷ್ಟಿ ಭೋಗ್ಯಂ
ನರನಾ ಭಾಗ್ಯಾಸವೋನ್ಮಾದದಿ ಮರೆತು ನಿಜಸ್ವಾಮಿಯಿಂ ದೂರನಪ್ಪಂ ।
ನಿರಹಂತಾಭ್ಯಾಸದೊಳ್ತನ್ನಹಮಿಕೆಯನದಾರ್ ಸಾರ್ಥಕಂಗೆಯ್ವುದೈ ಪ್ರೋ-
ತ್ತರರೂಪಂ ಜೀವಮೆಂದರ್ಚಿಪನೊ ಕೃತಿಯುಮಂ ಭುಂಜಿಸಲ್ ಬಲ್ಲನಾತಂ ॥ 39

ಮಾತ್ರಾವೃತ್ತಗಳಲ್ಲಿ ಡಿ.ವಿ.ಜಿ. ಅವರ ಮೊದಲ ಒಲವು ಕಂದ-ಚೌಪದಿಗಳಲ್ಲೇ. ಕಂದವನ್ನಂತೂ * ಅತ್ಯಂತ ಹದವಾಗಿ ಬಳಸಿದ ಏಕೈಕ ನವೋದಯ ಸಾಹಿತಿ ಎಂದರೂ ಆ ಮಾತು ಅವರಿಗೆ ಸಲ್ಲುತ್ತದೆ. ಪ್ರಾಸಸ್ಥಾನಗಳನ್ನೇ ಆಗಲಿ, ಯತಿಯನ್ನೇ ಆಗಲಿ, ಗಣ ವಿಭಜನೆಯನ್ನೇ ಆಗಲಿ, ಸಮರ್ಪಕವಾಗಿ ಸಾಧಿಸುವ ಅವರ ಕಂದಗಳು ವಿಸ್ಮಯಾವಹ. ಕಠಿನ ಛಂದಸ್ಸಾದ ಕಂದ ; ಮಾಕಂದ, ಮರಂದ, ಅಮೃತ ಲತಿಕಾಕಂದಗಳೇ ಆಗಿವೆ— ಇವರಲ್ಲಿ. ಕೇವಲ ಒಂದೇ ನಿದರ್ಶನವನ್ನು ನೀಡಿ ಅವರ ಕಂದಗಳ ಲಲಿತ ಜಗಣ ವಿನ್ಯಾಸವನ್ನೂ ದುಷ್ಕರ ಪ್ರಾಸಗಳನ್ನೂ ಸೂಚಿಸಲಾಗಿದೆ.

ಪ್ರಕೃತಿಯ ನರ್ತನರಂಗಂ ।
ಸುಕೃತಾತ್ಮರಿಗಿದುವೆ ಲೋಚನೋತ್ಸವರಂಗಂ ॥
ಅಕೃತಕ ಕವಿತಾರಂಗಂ ।
ವಿಕೃತಮನಸ್ಕರಿಗಿದೊಂದು ಶಾಂತಿಯರಂಗಂ ॥

ಡಿ.ವಿ.ಜಿ. ಅವರ ಚೌಪದಿಗಳು ಬಗೆಬಗೆಯಾಗಿವೆ. ಎಲ್ಲಕ್ಕೂ ನಿದರ್ಶನವನ್ನು ನೀಡಲು ಸ್ಥಳಾಭಾವ. ಆದ್ದರಿಂದ ಅವರ ವಿವಿಧ ಚೌಪದಿಗಳ ಲಕ್ಷಣವನ್ನು ಕೊಡಲಾಗಿದೆ.

ಮೂಲತಃ ಪಂಚಮಾತ್ರಾಗಣದ ಚೌಪದಿಗಳೇ ಹೆಚ್ಚು. ಗಂಭೀರಭಾವಕ್ಕೆ, ಗಹನತೆಗಿವು ಅನುವಾಗಿವೆ. ಇಲ್ಲೂ (೫+೫+೫+೫), (೫+೫+೫+೪) ವಿನ್ಯಾಸದ ಸಮವೃತ್ತಗಳಲ್ಲದೆ (೫+೫+೫+೫/೫+೫+೫+೪) ವಿನ್ಯಾಸದ ಅರ್ಧಸಮ ವೃತ್ತಗಳೂ ('ಉಮರನ ಒಸಗೆ' ಪೂರ್ಣವಾಗಿ ಈ ರೀತಿಯ ಚೌಪದಿಗಳದು.), (೫+೫×೫+೫+೨) ವಿನ್ಯಾಸದ ಸಮವೃತ್ತ ಚೌಪದಿಗಳೂ (ಅತಿ ವಿರಳ ; ಬಹುತೇಕ ಸೀಸಪದ್ಯದ ಅಂತ್ಯದಲ್ಲಿನ ಗೀತಪದ್ಯಗಳಾಗಿ ಬರುವುದೇ ಹೆಚ್ಚು), (೫+೫+೫+೫/೫+೫+೫+೪/೫+೫+೫+೫/೫+೫+೫+೨) ವಿನ್ಯಾಸದ ವಿಷಮ ಚೌಪದಿಗಳೂ (ಇದು ಪ್ರಸಿದ್ಧವಾದ 'ಮಂಕುತಿಮ್ಮನ ಕಗ್ಗ', 'ಮರುಳ ಮುನಿಯನ ಕಗ್ಗ'ಗಳಲ್ಲಿ ಬಳಕೆಯಾಗಿದೆ) ಹದವರಿತು ಬಂದಿವೆ. ಕಗ್ಗದ ಛಂದಸ್ಸಿಗೊಂದು ನಿದರ್ಶನ ಇಲ್ಲಿದೆ.

ಶ್ರೀವಿಷ್ಣು ವಿಶ್ವಾದಿ ಮೂಲ ಮಾಯಾಲೋಲ ।
ದೇವಸರ್ವೇಶ ಪರಬೊಮ್ಮನೆಂದು ಜಗಂ ॥ †
ಆವುದನು ಕಾಣದೊಳಮಳ್ತಿಯಿಂ ನಂಬಿಹುದೊ ।
ಆವಿಚಿತ್ರಕೆ ನಮಿಸೊ ಮಂಕುತಿಮ್ಮ ॥ †

---

* ಕಂದದ ಪೂರ್ವರೂಪವಾದ ಆರ್ಯಾ ಮತ್ತು ಆರ್ಯಾಗೀತಿಗಳನ್ನು 'ವಸಂತ ಕುಸುಮಾಂಜಲಿ 'ಯ (1922 ಪ್ರಥಮಾವೃತ್ತಿ) 'ವಂದೇ ಮಾತರಂ' (ಪು. 23) ಎಂಬ ಸಂಸ್ಕೃತ ಕವಿತೆಯಲ್ಲಿ ಕ್ರಮವಾಗಿ ಎರಡು ಮತ್ತು ಮೂರು ವೃತ್ತಗಳಲ್ಲಿ ಬಳಸಿದ್ದಾರೆ. ಇವುಗಳ ಶಾಸ್ತ್ರಶುದ್ಧಿ—ಲಕ್ಷಣ ಪರಿಷ್ಕಾರ, ನಡೆ, ಭಾವಗಳು ಸ್ತುತ್ಯ.

† 2 ಮತ್ತು 4ನೆಯ ಸಾಲುಗಳ ಅಂತ್ಯಗಣಗಳ ಮಾತ್ರಾಸಂಖ್ಯೆ 4 ಮತ್ತು 2 ಆದರೂ ಅವುಗಳ ಬೆಲೆ ಮಾತ್ರ 5 ಮಾತ್ರೆಗಳೆ. ಮಾತ್ರೆಗಳ ಕೊರತೆಯನ್ನು ಕರ್ಷಣದಿಂದ ಇಲ್ಲವೆ ಮೌನದಿಂದ ತುಂಬಿಕೊಳ್ಳಬೇಕು. (ಸಂ.)

ಪಂಚಮಾತ್ರಾಗಣದ ಲಲಿತ ಧಾಟಿಯ ಚೌಪದಿಗಳಲ್ಲದೆ ಚತುರ್ಮಾತ್ರಾಗಣದ ಮಂದಾನಿಲಗತಿಯವೂ, ತ್ರಿಮಾತ್ರಾಗಣದ ಉತ್ಸಾಹ ಗತಿಯವೂ, ಮಿಶ್ರಗಣದ (೩+೪), (೫+೩), (೨+೪) ಮಾತ್ರಾಗತಿಯವುಗಳೂ ವಿಪುಲವಾಗಿ ದೊರಕುತ್ತವೆ. ಹಿಂದೆಯೇ ತಿಳಿಸಿದಂತೆ ಅಕ್ಷರ ವೃತ್ತಗಳ ಮಾತ್ರಾರೂಪಾಂತರಗಳೂ ಯಥೇಚ್ಛವಾಗಿವೆ. ಇದೇ ರೀತಿಯ ಪಾದಬಂಧಗಳನ್ನು ಚೌಪದಿಗಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಸಾಲ್ಗಳಿಗೂ ಹಲವೆಡೆ ವಿಸ್ತರಿಸಿದ್ದಾರೆ. ಈಶೋಪನಿಷತ್ತು, ಪುರುಷಸೂಕ್ತಗಳಲ್ಲೂ ಚೌಪದಿ-ದ್ವಿಪದಿಗಳಿವೆ.

ಸೀಸ ಅಥವಾ ಶೀರ್ಷಕದತ್ತ ನೋಡುವುದಾದರೆ ಇದು ಮೂಲತಃ ತೆಲುಗಿನ ಪದ್ಯಬಂಧ. ಮುಳಬಾಗಲಿನ ತೆಲುಗಿನ ವಾತಾವರಣದಲ್ಲಿ ಬೆಳೆದು ಮನುಚರಿತ್ರೆ, ಆಂಧ್ರಭಾಗವತಾದಿಗಳಿಂದ ಸಂಸ್ಕಾರಗೊಂಡ ಡಿ.ವಿ.ಜಿ. ಅವರಿಗೆ ಸೀಸದ ಗಂಭೀರ ನಡೆ, ಉತ್ತರಾರ್ಧದಲ್ಲಿ ಸಾನೆಟ್ಟಿನಂತೆಯೇ ಹೊಸ ತಿರುವು ಬಂದು ಪರಿಣಾಮ ರಮಣೀಯವಾಗಿ ಸಿದ್ಧಿಸುವ ಮುಗಿತಾಯ ಆಕರ್ಷಕವಾಗಿ ಕಂಡಿರಬೇಕು. ಅಂತೆಯೇ ಕನ್ನಡದ ಮೊದಮೊದಲ ಪ್ರಗಾಥಗಳಲ್ಲೊಂದಾದ 'ಬೇಲೂರಿನ ಶಿಲಾಬಾಲಿಕೆಯರು', 'ಶೃಂಗಾರ ಮಂಗಳಂ', 'ಶ್ರೀರಾಮ ಪರೀಕ್ಷಣಂ' ಕೃತಿಗಳಲ್ಲಿ ಉತ್ಕಟ ಭಾವ ನಿರ್ಭರವಾಗಿ ಅವರಿಂದ ಸೀಸಪದ್ಯಗಳೆಂತು ಮೂಡಿವೆಯೊ ಅಂತೆಯೇ 'ವಸಂತ ಕುಸುಮಾಂಜಲಿ'ಯ 'ಜೀವಗೀತೆ', 'ಆತ್ಮಗೀತೆ'ಗಳಲ್ಲೂ ಪರಮಹಂಸ, ವಿವೇಕಾನಂದ, ತಿಲಕ್ ಮೊದಲಾದವರ ಮೇಲಣ ಸ್ತುತಿಗಳಲ್ಲೂ ಗಂಭೀರ ಚಿಂತನವನ್ನು ಗರ್ಭೀಕರಿಸಿಕೊಂಡು ಸಾನೆಟ್ಟಿನ ಉದಾತ್ತತೆಯನ್ನು ಮೀರುವಂತೆ ಮಾತ್ರಾಸೀಸ ಪದ್ಯಗಳು ರಚಿತವಾಗಿವೆ. ಇದಕ್ಕೆ 'ನಿವೇದನ'ದೊಂದು ಪದ್ಯವನ್ನು ನಿದರ್ಶನವಾಗಿ ಕೊಡಲಾಗಿದೆ. ಈ ಪದ್ಯ ತೆಲುಗಿನ ರಾಮರಾಜ ಭೂಷಣನ ಶೈಲಿಯನ್ನು ನೆನಪಿಸುತ್ತದೆ.

> ವಿಶ್ವಶಿಲ್ಪಿಯ ಚಿತ್ರಚಾತುರಿಯಬಗೆಗೊಳಿಪ ವಿವಿಧವರ್ಣಾಕಾರ ಪಟಲದಿಂದಂ
> ಸ್ವಾತಂತ್ರ್ಯಸಾಮ್ರಾಜ್ಯಗರ್ವಚೇಷ್ಟಿತಮೆನಿಪ ಶಾಖೋಪಶಾಖಾಪ್ರತಾನದಿಂದಂ।
> ಮಂದಪರಿಮಳಿತಶೀತಲವಾತ ಸಂಚಲಿತ ಕುಸುಮಕಿಸಲಯ ಫಲಪ್ರಕರದಿಂದಂ
> ಶಬ್ದಸರ್ವಸ್ವಾವತಾರಮೆಂದೆನಿಪಮೃಗ ವಿಹಗಕೀಟಕ ಕೋಟಿನಾದದಿಂದಂ।
>
> ಸೊಗಯಿಪಾ ತರುಗುಲ್ಮಲತೆಗಳಿಂ ನಿಬಿಡಮಾಗಿ
> ರವಿಯನವಗಡಿಸಿ ಯೋಜನಶತವನಿಂಬುಗೊಳಿಸಿ।
> ಸೃಷ್ಟಿಮಾಹಾತ್ಮ್ಯ ಸಂಸ್ಫೂರ್ತಿ ಪ್ರಕೀರ್ತಿಯೆನಿಸಿ
> ಮಾತಮೂದಲಿಸುತಿಹುದೀ ಮಹಾರಣ್ಯಸರಣಿ॥[42]

ಷಟ್ಪದಿಗಳು ನವೋದಯ ಕವಿಗಳನೇಕರನ್ನು ಮರುಳುಗೊಳಿಸಿದ್ದವಾದರೂ ಡಿ.ವಿ.ಜಿ.ಯವರಿಗೇಕೋ ಆ ಹಾಡುಗಬ್ಬಗಳ ಮೇಲೆ ಹೆಚ್ಚು ಮನಸ್ಸಾದಂತಿಲ್ಲ.

ಅದರಲ್ಲೂ ಭಾಮಿನೀ ಷಟ್ಪದಿಯಂತೂ ಬಹು ದೂರವೇ ಆಗಿದೆ.* ಆರು ಷಟ್ಪದಿಗಳಲ್ಲಿ ಕುಸುಮ ಷಟ್ಪದಿ 'ಕೇತಕೀವನ'ದಲ್ಲಿ ಮತ್ತು 'ವಸಂತ ಕುಸುಮಾಂಜಲಿ'ಯಲ್ಲಿ ಒಮ್ಮೆ ಇಣುಕಿದ್ದರೂ, ಅದು ಸರ್ವಾಂಗಸುಂದರವಾಗಿದ್ದರೂ ಆ ಲಲಿತಗತಿ, ೫ + ೫ + ೫ + ೫ / ೫ + ೫ + ೫ + ೪ ಮಾತ್ರಾ ವಿನ್ಯಾಸದ ಚೌಪದಿಯಂತೆಯೇ ಧ್ವನಿಸುತ್ತದೆ. ಇದು ವಿದಿತವೂ ಹೌದು. ಇದನ್ನುಳಿದರೆ 'ಕನಕಾಲುಕಾ' ನಾಟಕದಲ್ಲಿ ಶಾಸ್ತ್ರಶುದ್ಧವಾದ ವಾರ್ಧಕ ಷಟ್ಪದಿಗಳೆರಡು ಕಾಣುತ್ತವೆ. ವಿರಳವಾಗಿ ಬಳಸಿದ ಪ್ರಕಾರಗಳೆಂದು ಅಲ್ಲಿಂದ ಒಂದನ್ನಿಲ್ಲಿ ಉದಾಹರಿಸಿದೆ.

ಚಂಡಕೋಪದಿ ಭೀಕರಾಕೃತಿಗಳಿಂದೆ ಬ್ರ-
ಹ್ಮಾಂಡಭಾಂಡಗಳ ಚಂಡಾಡಿ ನಾಶಂಗೆಯ್ವ್ದ.
ರುಂಡಮಾಲೆಯ ಧರಿಪಶಕ್ತಿ ನೀಂ, ನೀನಿರ್ಘೋಷಘುಡುಘುಡಿಪ
ಸಿಡಿಲಿನೊಳು ಮೇಣ್ ।
ಚಂಡಮಾರುತನೊಳಂ ವೈದ್ಯುತಾನಲನೊಳಂ
ದಂಡಧರನುಗ್ರದಂಡದೊಳಂ ಮಹಾಮಾಯೆ
ಚಂಡಿ, ಚಾಮುಂಡಿ. ನೀಂ ಮಾಳ್ಪುದೆನ್ನೀ ವಿವಾಹದೊಳಿಷ್ಟ
ಸಂಸಿದ್ಧಿಯಂ ॥ 43

ನಾಟಕದ ವಿಷಮ-ವಿಕಟ ಸಂದರ್ಭಾನುಸಾರವಾಗಿ ಪರುಷಾಕ್ಷರಾಶ್ಲಿಷ್ಟವಾದ ಈ ಪದ್ಯ ತುಂಬು ರೌದ್ರ-ಗಾಂಭೀರ್ಯನಿಧಿಯಾಗಿದೆ. ಇದರ ಪಂಚಮಾತ್ರಾಗತಿಯು ಅನುಸ್ವಾರಸ್ವರಾಧಿಕತೆಯೂ ಧ್ವನಿಪೂರ್ಣವಾಗಿದೆ.

ದ್ವಿಪದಿಗಳೂ ಡಿ.ವಿ.ಜಿ.ಯವರಿಂದ ಸಾಕಷ್ಟು ಪ್ರಮಾಣದಲ್ಲೇ ರಚಿತವಾಗಿವೆ. 'ಶ್ರೀರಾಮ ಪರೀಕ್ಷಣ'ದ ಚತುರ್ಗಣಾತ್ಮಕ ಲಲಿತಗತಿ ದ್ವಿಪದಿಯೂ, 'ನಿವೇದನ'ದ ಶಿವನಸಮುದ್ರದ ವರ್ಣನೆಯ ಸಪ್ತಗಣ ಅಂತ್ಯಗುರ್ವಾತ್ಮಕ ಉತ್ಸಾಹಗತಿಯ ದ್ವಿಪದಿಯೂ ಸ್ಮರಣೀಯ. ಆದ್ಯಂತ ಪ್ರಾಸಗಳಿರುವ ಇವುಗಳು ಹರಿಹರನ ರಗಳೆಗಳನ್ನೇ ಹೋಲುತ್ತವೆ.

---

* ಆದರೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ 1950ರಲ್ಲಿ ಪ್ರಕಟವಾದ ಡಿ.ವಿ.ಜಿ.ಯವರ 'ಕುಮಾರವ್ಯಾಸ ದರ್ಶನ' ಮೊಬ ಹದಿನಾಲ್ಕು ಭಾಮಿನೀ ಷಟ್ಪದಿಗಳ ಲಘು ಕೃತಿ ಇಲ್ಲಿ ಪರಿಗಣಿತವಾಗಿಲ್ಲ. ಈ ಎಲ್ಲ ಪದ್ಯಗಳೂ ಶಾಸ್ತ್ರೀಯವಾಗಿ ಸೊಗಸಿನಿಂದ ಕೂಡಿವೆ. ಅವುಗಳು ಗೋವಿಂದ ಪೈಗಳ 'ಗಿಳಿವಿಂಡಿ'ನ 'ಕುಮಾರವ್ಯಾಸ ಪ್ರಶಸ್ತಿ' ಕವಿತೆಯಷ್ಟೇ ಸತ್ತ್ವಭರಿತ. ಇದನ್ನುಳಿದರೆ ಅವರ ಮೊದಲನೆಯ ಕವಿತಾ ಸಂಕಲನವಾದ 'ವಸಂತ ಕುಸುಮಾಂಜಲಿ'ಯ (1951 ದ್ವಿತೀಯಾವೃತ್ತಿ) ರವೀಂದ್ರನಾಥ ಠಾಕೂರ್ ಕವಿತೆಯ ನಾಲ್ಕನೆಯ ಪದ್ಯವಾಗಿ ಭಾಮಿನಿ ಬಳುಕಿದ್ದಾಳೆ. ಆ ನಡೆ ಶಾಸ್ತ್ರೀಯವಾಗಿದೆ.

ಜೀವಲೋಕದೊಳಳ್ತಿಯಿಂ ಸಮ । ಭಾವದಿಂದಲಿ ವರ್ತಿಸುತ ಪರ-
ದೇವ ಲೀಲೆಯ ಲೌಕಿಕವ್ಯಾಪಾರವೆಂದೆಣಿಸಿ ।
ಸಾವಧಾನದಿ ವರ್ಣಿಸುತಲದ । ತೀವಿದಾನಂದದಲಿ ತನ್ನೊಳು ।
ಭಾವಿಪಂ ತಾನಲ್ತೆ ಕವಿ ಬೇರೊಂದು ಲೋಕವನು ॥ (ಪು. 39)

ಇಲ್ಲಿಯೇ ಡಿ.ವಿ.ಜಿ.ಯವರ ರಗಳೆಗಳ ಪ್ರಯೋಗದ ಬಗ್ಗೆಯೂ ಒಂದೆರಡು ಮಾತುಗಳನ್ನಾಡಬಹುದಾಗಿದೆ. ಇವರ ರಗಳೆಗಳು ಆದಿ ಪ್ರಾಸವುಳ್ಳ ದ್ವಿಪದಿಗಳೇ ಎನ್ನಬಹುದು. ಇದರ ಉತ್ತಮ ಫಲಿತವನ್ನು ಹಲವಾರು ಕೃತಿಗಳಲ್ಲಿ ಕಾಣಬಹುದಾಗಿದೆ. ಉತ್ಸಾಹಗತಿಯ ರಗಳೆ ಮಂಕುತಿಮ್ಮನ ಕಗ್ಗದ 'ಕಗ್ಗದ ಕಥೆ'ಯಲ್ಲಿಯೂ, ಪ್ರಾಸರಹಿತವಾದ ಮಂದಾನಿಲ ರಗಳೆ 'ಮ್ಯಾಕ್ಬೆತ್' ನಾಟಕದ ಚತುರ್ಥಾಂಕದ ಆದಿಯಲ್ಲೂ, ಪ್ರಾಸಸಹಿತವಾದ ಲಲಿತರಗಳೆ ಅವರ 'ಶೃಂಗಾರ ಮಂಗಳಂ', 'ಕೇತಕೀವನ' ಮೊದಲಾದವಲ್ಲಿ ಅನೇಕ ಕಡೆಗಳಲ್ಲೂ, ಪ್ರಾಸರಹಿತವಾದ ಲಲಿತ ಗತಿಯ—ಸರಳರಗಳೆ ಎಂದು ಈಗ ಪ್ರಸಿದ್ಧವಾದ—ರಗಳೆಯು ಮ್ಯಾಕ್ಬೆತ್ ನಾಟಕದಮುಖ್ಯ ಛಂದಸ್ಸಾಗಿ, ಬ್ಲಾಂಕ್ ವರ್ಸಿಗೆ ಸಂವಾದಿಯೆನ್ನಿಸುವಂತೆ ಡಿ.ವಿ.ಜಿ. ಯವರಿಂದ ಬಳಸಲ್ಪಟ್ಟಿವೆ. ಈ ಕೆಳಗಿನ ಮ್ಯಾಕ್ಬೆತ್ ನಾಟಕದ ತುಣುಕು ಡಿ.ವಿ.ಜಿ. ಯವರ ಸಂಕೀರ್ಣಗತಿಯ ಸರಳರಗಳೆಯಂಥಾ, ಮೇಲ್ನೋಟಕ್ಕೆ ಸುಲಭವಾದರೂ ಅಪೂರ್ವಾಂತರಿಕ ಲಯ-ಗತಿ ವಿನ್ಯಾಸಗಳ ಕ್ಲಿಷ್ಟ ಶರೀರ ಬಂಧದ ಸರಾಗವಾದರೂ ಓಜೋಪರಿಪ್ಲಾವಿತ ಛಂದೋನಿರ್ವಹಣೆಗೆ ಸಾಕ್ಷಿಯಾಗಿದೆ.

ಓ ! ಮೃತ್ಯುಮಯ ದರ್ಶನವೆ, ಕಣ್ಣಿಗೆಂತಂತೆ
ಕೈಗೆ ನೀಂ ಸಿಲುಕಲಾರೆಯ ? ಇಲ್ಲದೊಡೆ ಬರಿಯ
ಮನಸಿನ ಕಠಾರಿಯೇಂ ? ತಾಪದೊತ್ತಡದೊಳಿಹ
ಮೆದುಳಿನಿಂದೊಗೆದ ಪುಸಿ ಮಾಟವೇನ್ ? ಈಗ ನಾಂ
ಸೆಳೆಯುಲಿರ್ಪಿದನು ಪೋಲುವ ಗಟ್ಟಿರೂಪದಲಿ
....
....
ಕಣ್ಣಿಗಾರಕ್ತದುಜ್ಜುಗವಂತು ತಿಳಿಪುತಿದೆ.
ಈಗ ಜಗದರ್ಧದಲಿ ಸೃಷ್ಟಿಸತ್ತ್ವವೊಲಿಹಳು.
ತೆರೆಯೊಳಗೆ ನ್ದಿಯನು ಹೊಲೆಗನಸು ಕೆಡಿಸುತಿದೆ.
....
ಭೂಮಿಯೇ ! ಎನ್ನಡಿಯ ಸದ್ದ ನೀಂ ಕೇಳದಿರು[44]
....

ಯಾಂತ್ರಿಕನಡೆಯನ್ನು ನಾಟಕೋಚಿತ ಹಾಸು-ಬೀಸುಗಳಿಂದ ಮರೆಸುವ ಈ ಕುಶಲ ಗಣವಿನ್ಯಾಸ, ತಿಳಿಯಾದ ಶಯ್ಯೆ ಸರಳರಗಳೆಯನ್ನು ರಗಳೆಯಾಗಿಸದೆ ಸರಳವಾಗಿಯೇ ಉಳಿಸಿದೆ !

ಇನ್ನು ಅಂಶಗಣದಲ್ಲಿ ಅತ್ಯಂತ ಜನಪ್ರಿಯವಾದ ಸಾಂಗತ್ಯ—ಈಗಂತೂ ಎಸ್. ವಿ. ಪರಮೇಶ್ವರಭಟ್ಟರನ್ನುಳಿದು ಮತ್ತಾರೂ ಬಳಸದೆ ಲುಪ್ತಪ್ರಾಯವಾಗುತ್ತಿರುವುದನ್ನು, ಡಿ.ವಿ.ಜಿ.ಯವರು ಬಳಸಿರುವ ಬಗೆಯನ್ನು ನೋಡೋಣ.

'ಭಗವದ್ಗೀತಾತಾತ್ಪರ್ಯ'ದಲ್ಲಿ ಒಂದೆರಡು ಕಡೆ ವಿರಳವಾಗಿ ಉಪಯೋಗಿಸಲ್ಪಟ್ಟ ಈ ಕೃತಿ ಶಾಸ್ತ್ರೀಯವಾಗಿದ್ದು ಗೇಯತ್ವದಿಂದ ಕೂಡಿದೆ.

ದೈವಾಸುರಂಗಳ ರಣರಂಗವೊ ನರ। ಜೀವಿತ ಭೂಮಿ ತಾನೆಂದುಂ॥
ಜೀವಮೂಲವ ನೆನೆದಾಕಡೆ ಮತಿಯನು। ಧಾವಿಪ್ಪ ನೀತಿಯೆ ಚೆಂದಂ॥ 45

ಇಂಥ ಮೃದುಮಧುರ ರಚನೆಗಳನ್ನು ಕನ್ನಡ ಸಾಹಿತ್ಯ ಡಿ.ವಿ.ಜಿ. ಅವರಿಂದ ಇನ್ನೂ ಹೆಚ್ಚಾಗಿ ಬಯಸುತ್ತದೆ. ಆದರದು ನೆರವೇರದಿದ್ದದ್ದು ವಿಧಿವೈಕಟ್ಯ. ಆದಾಗ್ಯೂ ವೃತ್ತ–ಕಂದಗಳನ್ನು ನಡಸಿ ನಡಸಿ ಪಳಗಿದ ಕೈ ಸಲೀಲವಾಗಿಯೇ ಅತ್ಯಂತ ದೇಶ್ಯವಾದ ಸಾಂಗತ್ಯವನ್ನು ನಿರ್ವಹಿಸಿದ್ದು ಆಶ್ಚರ್ಯ.

೬

ಪ್ರಾಚೀನ ಮಾತ್ರಾಬಂಧಗಳ ಹಂದರದ ಮೇಲೆ ಸ್ವತಃ ನವೋದಯ ಕವಿಗಳು ರೂಪಿಸಿಕೊಂಡ ಬಂಧಗಳು ಅನೇಕ. ಇದಕ್ಕೆ ಡಿ.ವಿ.ಜಿ. ಅವರೂ ಹೊರತಲ್ಲ. ಇದನ್ನು 'ನಿವೇದನ'ದಲ್ಲಿಯೇ ಕಾಣಬಹುದು.

ಮನಕೆ ತೋರ್ಪ ಸೊಬಗನೆಲ್ಲ	೩+೩+೩+೩
ತನಗೆ ತುಷ್ಟಿಯಪ್ಪ ತೆರದಿ	೩+೩+೩+೩
ಜನಕೆ ನುಡಿಯಲರಿತ ಸುಕವಿ	೩+೩+೩+೩
ತಿಲಕನಾತನು।	೩+೩+ಗು
ಅನುವಿನಿಂದ ಬರೆವ ಕಲೆಯು	೩+೩+೩+೩
ಕಲಿತನಾತನು॥ 46	೩+೩+ಗು

ಎಂಬ ಪದ್ಯದ ಛಂದಸ್ಸನ್ನು ಕೆಲವರು ಖಂಡ ಭೋಗಷಟ್ಪದಿ ಎಂದಿದ್ದಾರೆ. ಇದಾದರೂ ಅರ್ಧಭೋಗಷಟ್ಪದಿಗೆ ಕೊನೆಯಲ್ಲಿ ತೃತೀಯ ಪಾದದಂತೆಯೇ ಮತ್ತೊಂದನ್ನು ಸೇರಿಸಿದ್ದೇ ಆಗಿದೆ. ಇದೇ ಪ್ರಯೋಗವನ್ನು ಸರಿಸುಮಾರು ಅದೇ ತರುಣದಲ್ಲಿ ಬಂದ 'ಶ್ರೀ' ಅವರ 'ಇಂಗ್ಲಿಷ್ ಗೀತ'ಗಳ 'ಕಾಣಿಕೆ' ಪದ್ಯದಲ್ಲಿ ಕಾಣಬಹುದು.

ಸಾಮಾನ್ಯವಾಗಿ ಹೀಗೆ ತಾವೇ ರೂಪಿಸಿಕೊಂಡ ಮಟ್ಟುಗಳಲ್ಲೂ ಆದಿಪ್ರಾಸಾನುಪ್ರಾಸಾದಿಗಳನ್ನು ಕಟ್ಟುನಿಟ್ಟಾಗಿ ಡಿ.ವಿ.ಜಿ. ಅವರನುಸರಿಸುತ್ತಿದ್ದರು. ಈ ಎಲ್ಲ ಬಂಧಗಳೂ ೩, ೪, ೫, ೨+೪, ೩+೪, ೩+೫ ಮಾತ್ರೆಗಳ ಹಾದಿಯದೇ ಆಗಿದ್ದರೂ ಪಾದಗಳ ಸಂಖ್ಯೆಯಲ್ಲಿ, ಗಣಗಳ ಜೋಡಣೆಯಲ್ಲಿ, ಸಾಲ್ಗಳ ಉದ್ದ, ಯತಿಸ್ಥಾನ, ಪದ್ಯಗಣ, ಮುಡಿ ಮೊದಲಾದ ತಾಂತ್ರಿಕ ಕಲೆಗಾರಿಕೆಯಲ್ಲಿ ವೈವಿಧ್ಯವನ್ನು ತಂದು ರಂಜಿಸಿ ಹೊಸ ಗತಿ-ಲಯಗಳನ್ನು ಮಿಡಿಯಬಹುದಾಗಿದೆ. ಇದರ ಸಿದ್ಧಿಯಲ್ಲಿ

ಡಿ.ವಿ.ಜಿ. ಯಶಸ್ವಿ ಆದರೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ನಿದರ್ಶನವಾಗಿ 'ಕೇತಕೀವನ' ಕವಿತಾಸಂಕಲನದಿಂದ ಕೆಲವು ರಮ್ಯ ಪ್ರಯೋಗಗಳನ್ನೀಯಲಾಗಿದೆ.

ಬೆಟ್ಟಗಳ ಕಟ್ಟಿದನು	೫+೫
ಕಡಲುಗಳನೆರಚಿದನು	೫+೫
ಮೆಚ್ಚಲಿಲ್ಲ—ತುಟಿಯ ಬಿಚ್ಚಲಿಲ್ಲ [47]	೫+ಗು—೩s+೫+ಗು

ಇದು ಅತ್ಯಂತ ಸೊಗಸಾಗಿದೆ. ಇದರ ಸೊಬಗೆಲ್ಲ ತೃತೀಯ ಪಾದದ ಬಹುಕುಶಲತೆಯಿಂದ ಹೊಂದಿಸಿದ ಗಣವಿನ್ಯಾಸ, ಗುರುಲಘುಗಳ ಸಾಮರಸ್ಯದಲ್ಲಿದೆ. ಅಲ್ಲದೆ ಯತಿಯಂತೂ ರಮಣೀಯ.

ಪುಣ್ಯದೇಶವ ತೊರೆದು ಧನ್ಯಚರಿತೆಯ ಮರೆತು	೫+೫+೫+೫
ದೂರ ಬಂದೆ	೫+ಗು
ವೇದಬಾಹಿರನಾಗಿ ಸಾಧುವರ್ಜಿತನಾಗಿ	೫+೫+೫+೫
ಜಾರಿನಿಂದೆ [48]	೫+ಗು

ಇಲ್ಲಿನ ಆಂತರಿಕ ಪ್ರಾಸ, ಪದ್ಮಗಣವಿನ್ಯಾಸಾದಿಗಳು ಗಮನಾರ್ಹ. ಅಲ್ಲದೆ ಪಾದಗಳ ಪ್ರಮಾಣ ವ್ಯತ್ಯಾಸಗಳುಂಟುಮಾಡುವ ಪರಿಣಾಮ ಧ್ವನಿಪೂರ್ಣ. ಇದೇ ರೀತಿಯ, ಇನ್ನೂ ಸ್ವಲ್ಪ ದೀರ್ಘ ಸಮಪಾದ ಪ್ರಯೋಗವನ್ನು 'ಮುಂದೆ ನೋಡು' ಕವಿತೆಯಲ್ಲಿ ಕಾಣಬಹುದು. 'ಕಟ್ಟೆದಾಟು' ಕವಿತೆಯೂ ಇದಕ್ಕೆ ಹೊರತಲ್ಲ.

ಕೇವಲ ಮಾತ್ರಾ ಸಂಖ್ಯಾವ್ಯತ್ಯಾಸದಿಂದ ಈ ಕೆಳಗಿನ ಪದ್ಯದಲ್ಲುಂಟಾದ ವೈವಿಧ್ಯ ಮನನೀಯ.

ಹೊಂಬಿಸಿಲು ತಂಬೆಲರು	೫+೫
ಸಂಭ್ರಮದ ಬೆಳಗು	೫+೪
ಒಂಭತ್ತು ತಾಸೇನೊ	೫+೫
ತುಂಬು ಸಭೆ ಬೆಡಗು	೫+೪
ಫುಲ್ಲಮುಖಿ ನೀನು	೫+೪
ಅಲ್ಲಿದ್ದುದೇನು ? [49]	೫+೪

ನವ್ಯವಾದ ಗಣವಿನ್ಯಾಸ, ಮುಡಿ–ಪದ್ಮಗಣಾದಿಗಳ ನ್ಯಾಸ ವ್ಯಂಜಕವಾಗುವ ಸೊಗಸಾದ ಉದಾಹರಣೆ ಹೀಗಿದೆ.

ನೂರಾರು ಹೆಣ್ಣುಗಳ	೫+೫
ನೂರು ಬಗೆ ಚೆನ್ನುಗಳ	೫+೫
ಸಾರವರಿತೀ ಕಣ್ಗೆ—ಓ ಸುಶೀಲೆ ;	೫+೫—೫+ಗು
ರುಚಿ ನಿನ್ನ	೫
ಶುಚಿಕಾಂತಿ—ಸುಮಕೋಮಲೆ. [50]	೫—೫+ಗು

ಇಲ್ಲಿಯ ಅಕ್ಷರ ವಿನ್ಯಾಸ, ವರ್ಣಮೈತ್ರಿ, ಪ್ರಾಸಾದಿಗಳು ಸಹ ಗಮನಾರ್ಹ ಅಂತೆಯೇ ತ್ರಿಮಾತ್ರಾಗಣದ ಉತ್ಸಾಹಗತಿಯು 'ಸಂದೇಹ ಸೂಕ್ತ'ದ ಮಟ್ಟಿಗೆ ವಿವೇಚನೀಯ. ವಿಶೇಷತಃ ಅಂತಿಮ ಪಾದದ್ವಯಗಳ ಮುಗಿತಾಯ ಮುಂಡಿ ಯಿಂದಾಗಿರುವುದು ಇಡೀ ಬಂಧಕ್ಕೇ ಹೊಸ ತಿರುವನ್ನು ತಂದಿದೆ.

ಇನ್ನುಳಿದ ವೈವಿಧ್ಯಗಳತ್ತ ಸಾಗದೆ ಡಿ.ವಿ.ಜಿ.ಯವರ ಸಂಗೀತಕೃತಿಗಳ ಬಂಧದತ್ತ ಗಮನ ಹರಿಸಿದರೆ ಪುನಃ ಮೇಲಿನ ೩, ೪, ೫, ೨+೪. ೩+೪, ೩+೫, ಮಾತ್ರಾಗಣಗಳೇ ಆವರ್ತಿಸುವುವಾದರೂ ಸಂಗೀತದ ತಾಳಗಳ ಹೊಂದಿಕೆಗನು ಸಾರವಾಗಿ ಪ್ಲುತ, ಮುಂಡಿ, ಪದ್ಮಗಣ, ಗಣಲೋಪಾದಿಗಳು ಆಗಮಿಸಿ ನವ್ಯ ತಿರುವುಗಳನ್ನಿತ್ತು ಶ್ರಾವ್ಯವಾಗಿಸುತ್ತವೆ. ಇಲ್ಲಿ ಬರಿಯ ಛಂದಶ್ಶಾಸ್ತ್ರದ ಲಯ ವಿನ್ಯಾಸವನ್ನಲ್ಲದೆ ಸಂಗೀತಶಾಸ್ತ್ರದ ಝಂಪೆ, ಆದಿ, ರೂಪಕ, ಮಿಶ್ರಛಾಪು, ಏಕ, ತ್ರಿಶ್ರ ಮೊದಲಾದ ತಾಳಜ್ಞಾನವನ್ನೂ ಕೂಡಿಸಿ ವಿವೇಚಿಸಬೇಕು. ಇದು ವ್ಯಾಪಕ ವಾಗಿ ನಡೆಯಬೇಕಾದ ಕಾರ್ಯ. ಆದರೂ ಅನೇಕ ವಿಭಿನ್ನ ನವೀನ ಗತಿಗಳಿಗೆ ಆಕರ ಗಳಾದ ಈ ಸಂಗೀತ ಕೃತಿಗಳ ಮಹತ್ವವನ್ನು ಮರೆಯಬಾರದು. ಅಂಶ–ಮಾತ್ರಾ–ಜಗಣ–ಪ್ಲುತಾದಿಗಳ ಕ್ಲಿಷ್ಟ ಮಿಶ್ರಣವನ್ನೂ ಇಲ್ಲಿ ಕಾಣಬಹುದು.

೭

ಅಪಾರ ವೈವಿಧ್ಯವೂ ಅನನ್ಯ ಸಾಧಾರಣ ಸ್ವಂತಿಕೆಯೂ, ರಸೋಚಿತ ಗತಿ ವ್ಯಾಪ್ತಿಯೂ, ಶ್ರವಣಾಭಿರಾಮ ನಾದಸೌಂದ್ಯರವೂ, ರಸಾವಹಪ್ರಾಸ ಪಾಟವವೂ ಪ್ರಾಚೀನ–ನವೀನ ಸಂಗಮದ ಸಫಲತೆಯೂ, ದಕ್ಷ ನಿರ್ವಹಣೆಯೊಡನೆ ನಾಟ್ಯ ಲಾಲಿತ್ಯವೂ ವಿಪುಲವಾಗಿ ಕಾಣಬರುವ ಡಿ.ವಿ.ಜಿ. ಅವರ ಛಂದಃಪ್ರಯೋಗದ ಬಗ್ಗೆ ಇದೊಂದು ಕೇವಲ ದಿಙ್ಮಾತ್ರದರ್ಶಕ ಅಪೂರ್ಣಪ್ರಯತ್ನ. ಪಿಎಚ್.ಡಿ. ಸಂಶೋಧನಾಪ್ರಬಂಧಕ್ಕೆ ವಸ್ತುವಾಗಬಲ್ಲ ವ್ಯಾಪ್ತಿ–ಘನತೆಗಳನ್ನು ಹೊಂದಿದ ಈ ವಿಚಾರದ ಬಗ್ಗೆ ಕವಿ–ವಿದ್ವಾಂಸ–ವಿಮರ್ಶಕ–ಸಂಶೋಧಕರು ಗಂಭೀರವಾದ ಅಧ್ಯಯನ ಗಳನ್ನು ಕೈಗೊಂಡು ಹೆಚ್ಚಿನ ವಿಶೇಷಗಳನ್ನು ಗಮನಿಸಿ ಕನ್ನಡ ಸಾರಸ್ವತ ಸಂಪತ್ತನ್ನು ವರ್ಧಿಸುವುದೇ ಸೂಕ್ತಮಾರ್ಗ.

ಆಕರ ಸೂಚೀ ಟಿಪ್ಪಣಿಗಳು :

1. ಗಣೇಶ್, ಆರ್.—"ಛಂದೋದರ್ಶನಂ" (ಸಂಸ್ಕೃತ) [ಅಪ್ರಕಟಿತ].
2. ಡಿ.ವಿ.ಜಿ. 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಕಾವ್ಯಾಲಯ, ಮೈಸೂರು, 1950. ಪು. 164.
3. ಡಿ.ವಿ.ಜಿ.—'ಸಾಹಿತ್ಯಶಕ್ತಿ'. ಕಾವ್ಯಾಲಯ, ಮೈಸೂರು, 1966, ಪು. 193.
4. ಅದೇ—ಪು. 195.

5. ಅದೇ—ಪು. 195.
6. ಅದೇ—ಪು. 195–6.
7. ಡಿ.ವಿ.ಜಿ.—'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಪು. 38.
8. ಅದೇ—ಪು. 36–7.
9. ಅದೇ—ಪು. 38.
10. ಸೀತಾರಾಮಯ್ಯ. ವಿ.—'ಕವಿ ಕಾವ್ಯದೃಷ್ಟಿ', ಗೀತಾ ಬುಕ್ ಹೌಸ್, ಮೈಸೂರು, 1970, ಪು. 130.
11. ಎಂ. ಆರ್. ಶ್ರೀ—['ಶ್ರೀರಾಮ ಪರೀಕ್ಷಣಂ'ನ ಮುನ್ನುಡಿಯಲ್ಲಿ]. ಕಾವ್ಯಾಲಯ, 1966, ಪು. 12–3.
12. ಡಿ.ವಿ.ಜಿ.—'ಅಂತಃಪುರಗೀತೆ', ಕಾವ್ಯಾಲಯ, 1967, ಪು. 50.
13. ಅದೇ—ಪು. 72.
14. ಅದೇ—ಪು. 96.
15. ಅದೇ—ಪು. 52.
16. ಅದೇ—ಪು. 46.
17. ಅದೇ—ಪು. 132.
18. ಅದೇ—ಪು. 68.
19. ಅದೇ—ಪು. 64.
20. ಅದೇ—ಪು. 35.
21. ಅದೇ—ಪು. 34.
22. ಅದೇ—ಪು. 110.
23. ಅದೇ—ಪು. 86.
24. ಡಿ.ವಿ.ಜಿ.—'ಭಗವದ್ಗೀತಾತಾತ್ಪರ್ಯ', ಕಾವ್ಯಾಲಯ, ಮೈಸೂರು, 1971. ಪು. 186.
25. 'ಅಂತಃಪುರಗೀತೆ', ಪು. 40.
26. 'ಭಗವದ್ಗೀತಾತಾತ್ಪರ್ಯ', ಪು. 151.
27. ಅದೇ—ಪು. 594.
28. ಡಿ.ವಿ.ಜಿ.—'ಪರಶುರಾಮ', ಕಾವ್ಯಾಲಯ, ಮೈಸೂರು, ಪ್ರಥಮ ಮುದ್ರಣ, 1974, ಪು. 18.
29. ಡಿ.ವಿ.ಜಿ.—'ತಿಲೋತ್ತಮಾ'–'ಕನಕಾಲುಕಾ', ಕಾವ್ಯಾಲಯ, 1977, ಪು. 89.
30. 'ಅಂತಃಪುರಗೀತೆ'—ಪು. 126.
31. ಡಿ.ವಿ.ಜಿ.—'ಕೇತಕೀವನ', ಕಾವ್ಯಾಲಯ, 1973, ಪು. 5.
32. 'ತಿಲೋತ್ತಮಾ'–ಕನಕಾಲುಕಾ ಪು. 25.
33. ಅದೇ—ಪು. 67.
34. 'ಅಂತಃಪುರಗೀತೆ'—ಪು. 32.
35. ಡಿ.ವಿ.ಜಿ.—'ಪರಶುರಾಮ', ಪು. 24.
36. ಡಿ.ವಿ.ಜಿ.—'ಭಾರತಭೂವಂದನಂ', 'ಗೋಖಲೆ ಸಂಸ್ಥೆ', 1978, ಪು. 10, ಪದ್ಯ 3.
37. ಡಿ.ವಿ.ಜಿ.—'ನಿವೇದನ', ಕರ್ಣಾಟಕ ಪ್ರಕಟನಾಲಯ. ಬೆಂಗಳೂರು, 1956, ಪು. 19.
38. 'ಅಂತಃಪುರಗೀತೆ'—ಪು. 149.
39. ಡಿ.ವಿ.ಜಿ.—'ಶ್ರೀರಾಮಪರೀಕ್ಷಣಂ', ಕಾವ್ಯಾಲಯ, 1966, ಪು. 75.
40. 'ನಿವೇದನ'—ಪು. 20.

41. ಡಿ.ವಿ.ಜಿ.—'ಮಂಕುತಿಮ್ಮನ ಕಗ್ಗ', ಕಾವ್ಯಾಲಯ, 1973, ಪು. 17.
42. 'ನಿವೇದನ'—ಪು. 20.
43. 'ತಿಲೋತ್ತಮಾ' 'ಕನಕಾಲುಕಾ', ಪು. 106–7.
44. ಡಿ.ವಿ.ಜಿ.—'ಕನ್ನಡ ಮ್ಯಾಕ್ಬೆತ್' (ಅನು.), ಕಾವ್ಯಾಲಯ, 1974, ಪು. 63.
45. 'ಭಗವದ್ಗೀತಾತಾತ್ಪರ್ಯ'—ಪು. 483.
46. 'ನಿವೇದನ'—ಪು. 15.
47. 'ಕೀತಕೀವನ'—ಪು. 43.
48. ಅದೇ—ಪು. 51.
49. ಅದೇ—ಪು. 145.
50. ಅದೇ—ಪು. 150.

ಡಿ.ವಿ.ಜಿ. ಅವರ ಕಾವ್ಯದಲ್ಲಿ ಕಂಡುಬರುವ ನಾಡೊಲವು

ಪು. ತಿ. ನರಸಿಂಹಾಚಾರ್

ಭಾರತ ನಿವಾಸಿಗಳಾದ ಭಾರತೀಯರ ಆತ್ಮತತ್ತ್ವ; ನಾಲ್ಕು ಆತ್ಮನಿಯಮಗಳಿಂದ ಅವರಿಗೆ ದೊರೆಯುವ ಸಕಲಜನಹಿತವೂ ಶಾಶ್ವತವೂ ಆದ ಸ್ವಾತಂತ್ರ್ಯ; ಈ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಮಹಾತ್ಮ ಗಾಂಧಿಯ ಅಭಯದಾನ; ಆ ಸ್ವಾತಂತ್ರ್ಯದ ಮಹಿಮಾ ಪ್ರಭಾವ ಸ್ವರೂಪ; ಈ ಸ್ವಾತಂತ್ರ್ಯಪೂರ್ವದಲ್ಲಿ ಸಾವಿರ ವರ್ಷಕಾಲ ಅದು ನಷ್ಟವಾಗಿದ್ದುದೇಕೆ? ಆ ಕಾಲ ಆತ್ಮವಿಸ್ಮೃತಿಯ ಕಾಲ, "ತನಯರ್ ಸಂಸ್ಕೃತರಾಗಲೆಂದು ಬಹುಕಾಲಂ ದಾಸ್ಯ"ವನ್ನು ಅನುಭವಿಸಿದ ಕಾಲ; ನಮ್ಮ ಸ್ಮೃತಿ ನಮಗೆ ಮರಳುವ ಹಾಗೆ ಮಾಡಿದ ರಾಮಕೃಷ್ಣ ಪರಮಹಂಸರು, ರಾಜಾರಾಮ ಮೋಹನರಾಯ್, ಸ್ವಾಮಿ ವಿವೇಕಾನಂದ ಮುಂತಾದ ಮಹಾತ್ಮರ ಪವಿತ್ರ ಸ್ಮರಣೆ; ಆತ್ಮನಿಯಮನರಾಹಿತ್ಯದಿಂದ ಸ್ವಾತಂತ್ರ್ಯ ಮಸುಳಬಹುದಾದ ಆಶಂಕೆಯಿಂದಾಗಿ ಅಭೂತಪೂರ್ವ ಸುಕೃತದಿಂದಾಗಿ ಲಭಿಸಿರುವ ಜನತಾ ರಾಜ್ಯ ನಿಲ್ಲುವ ಹಾಗೆ ಕರುಣಿಸಲೆಂದು ಭಾರತಾಂಬೆಗೆ ಡಿ.ವಿ.ಜಿ.ಯವರ ಆರ್ತತೆಯ ಪ್ರಾರ್ಥನೆ— ಈ ನಾಡೊಲವಿನ ಭಾವನೆಗಳ ರೇಶಿಮೆಯ ಎಳೆಗಳನ್ನು ಡಿ.ವಿ.ಜಿ.ಯವರ ರಾಷ್ಟ್ರಪ್ರೇಮದ್ಯೋತಕವಾದ ಕೃತಿಸಮುಚ್ಚಯದಿಂದ ಪು.ತಿ.ನ. ಅವರು ಸಹೃದಯತೆಯ ಮೆಚ್ಚುಗೆಯಿಂದ ಬಿಡಿಸಿ ಕಾಣಗೊಟ್ಟಿದ್ದಾರೆ.

ಪ್ರಾತಃಸ್ಮರಣೀಯರೂ ಪೂಜ್ಯರೂ ಆದ ಡಿ.ವಿ.ಜಿ. ಅವರ ಸಾಹಿತ್ಯಕ ಪ್ರಕ್ರಿಯೆಗಳ ಮೇಲೆ ಒಂದು ಬೀಸುನೋಟವನ್ನು ಹರಿಸಿದರೆ ಸ್ಥೂಲವಾಗಿ ಎರಡು ವಿಷಯಗಳು ಕಂಡುಬರುತ್ತವೆ: ಒಂದು, ಹೃದಯವನ್ನು ಬೆಚ್ಚಗಿರಿಸಿಕೊಂಡು ಯಾರ

ಭಾವವೂ ನಷ್ಟವಾಗದಂತೆ ನುಡಿಯಲ್ಲಿ ರೂಪಗೊಳಿಸುವುದು ; ಎರಡನೆಯದಾಗಿ, ತಣ್ಣಮನಸ್ಸಿನಲ್ಲಿ ವಿಷಯಗಳನ್ನು ಸಾಧ್ಯವಾದಷ್ಟು ಎಲ್ಲ ಕೋನಗಳಿಂದಲೂ ಪರಿಭಾವಿಸಿ ತೀಕ್ಷ್ಣಬುದ್ಧಿಯನ್ನು ಆಲೋಚನಾ ಮಾರ್ಗದಲ್ಲಿ ಪರ್ಯಟನಗೊಳಿಸುವುದು. ಇವೆರಡು ದಾರಿಗಳಲ್ಲೂ ನಮ್ಮ ದೇಶದ ಸ್ಥಿತಿಗಳು ಅವರ ವಾಕ್‌ಸಾಮ್ರಾಜ್ಯದಲ್ಲಿ ಪ್ರಕಾಶಗೊಂಡಿವೆ. ನಾನು ಮೊದಲನೆಯ ದಾರಿಯಲ್ಲಿ ಸ್ವಲ್ಪ ದೂರ ನಡೆಯಬೇಕೆಂದು ಮಾನ್ಯ ಸಂಪಾದಕರು ಅಪೇಕ್ಷೆಪಟ್ಟಿದ್ದಾರೆ. ನನ್ನ ಓದಿಗೆ ಈಗ ಮೂರು ಗ್ರಂಥಗಳು ಸಿಕ್ಕಿವೆ : 1. 'ವಸಂತ ಕುಸುಮಾಂಜಲಿ', 2. ಜಿ. ಪಿ. ರಾಜರತ್ನಂ ಅವರಿಂದ ಸಂಪಾದಿತವಾಗಿ ಪ್ರಖ್ಯಾತವಾದ 'ಭಾರತ ಭೂಮಂಡನಂ', 3. ಮಹಾತ್ಮ ಗಾಂಧಿ (ಜ್ಞಾಪಕ ಪದ್ಯಸಂಗ್ರಹ). ಈ ಕೃತಿಗಳಲ್ಲಿ ಭಾವಗಳು ಕಂದ, ವೃತ್ತ, ಸೀಸಪದ್ಯ, ದ್ವಿಪದಿ, ಚತುಷ್ಪದಿಗಳಲ್ಲಿ ಬಂಧುರವಾಗಿ ಹರಳುಗಟ್ಟಿವೆ. ಒಂದು ಸಾತ್ತ್ವಿಕ ಚಿತ್‌ಪ್ರಭೆ ಇವುಗಳನ್ನು ಆವರಿಸಿರುವ ಬಗ್ಗೆ ಓದುಗನ ಮನಸ್ಸನ್ನು ತಟ್ಟುತ್ತದೆ.

ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ಭಾರತ ಎಂಬುದು ಬರಿಯೊಂದು ಭೂಭಾಗವಲ್ಲ, ನೆಲವಲ್ಲ, ಮಣ್ಣಲ್ಲ, ಮತ್ತೇನು ?

> "ಭಾರತಮೆಂಬುದೇಂ ಬರಿಯ ಮೃತ್ಸ್ನೆಯೆ ಭೌತಮೆ ಭಾವಸೃಷ್ಟಿಯೇ-
> ನಾರಯಲೊಂದು ತೇಜಮದು ಪೂಜ್ಯ ಹಿಮಾಚಲ ರಾಮಸೇತು ವಿ-
> ಸ್ತಾರನಿಕೇತವಾಸಿ ಜನತಾವಯವೋಲ್ಲಸದಾತ್ಮತತ್ತ್ವಮಾ
> ಕಾರಣದಿಂದಲೀ ನೆಲದ ಧೂಳಿಯುಮೆಮ್ಮ ಶಿರಕ್ಕೆ ಸೇಸೆಯೈ ॥ ೩ ॥

ಭಾರತ ಎಂಬುದು ಭಾರತನಿವಾಸಿಗಳ ಆತ್ಮತತ್ತ್ವ. ಆ ಜನದ ತನುಮನಗಳಿಂದ ಉದಿಸುವ ತೇಜಸ್ಸು. ಇದು ನಮ್ಮ ಭಾವನೆಗೂ ಪೂಜೆಗೂ ಅರ್ಹವಾದದ್ದು. ಅದರ ಧೂಳು ಶಿರಸಾಧಾರ್ಯವಾದದ್ದು—ಇದು ಈ ಪದ್ಯದ ತಿರುಳು.

ಈ ತೇಜಸ್ಸಿನ ಈ ಆತ್ಮತತ್ತ್ವದ ಗುಣವಿಶೇಷಗಳೇನು ?

---

1. ಭಾರತ ಭೂಮಂಡನಂ—ಶ್ರೀ ಯು. ನರಸಿಂಹ ಮಲ್ಯ ಸ್ಮಾರಕ ಪುಸ್ತಕಮಾಲೆ-೨
2. ಮಹಾತ್ಮಗಾಂಧಿ—ಜಿ. ಪಿ. ರಾಜರತ್ನಂ ಅವರ ಅರ್ಥವಿವರಣೆಯೊಂದಿಗೆ 1978 ಜ್ಞಾಪಕ ಪದ್ಯ ಸಂಗ್ರಹ. ಗೋ.ಸ.ನಂ. 1945
3. ವಸಂತ ಕುಸುಮಾಂಜಲಿ—ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ

ಭಾರತೀಯ ರಾಷ್ಟ್ರಿಕ ತನಗೆ ತಾನೇ ವಿಧಿಸಿಕೊಂಡು ನಡೆಗೊಳಿಸುವ ನಾಲ್ಕು ನಿಯಮಗಳಿಂದ ಈ ಆತ್ಮಗುಣ ಪ್ರಕಾಶಕ್ಕೆ ಬರುತ್ತದೆ. ಅವು ಯಾವುವೆಂದರೆ : 1. ಸೂಕ್ಷ್ಮವಿಚಾರ, 2. ಜಾಗರತೆ, 3. ನೀತಿ, 4. ಶ್ರದ್ಧೆ. ಈ ಪ್ರಕಾಶನದ ಫಲ ಸಕಲ ಜನಹಿತವೂ ಶಾಶ್ವತವೂ ಆದ ಸ್ವಾತಂತ್ರ್ಯ.

ಸತತಂ ಸಾರ್ವಜನೀನ ದೃಷ್ಟಿನಯದಿಂದೋರೋರ್ವನುಂ ವರ್ತಿಸಲ್
ವಿತತಂ ರಾಷ್ಟ್ರಕರೊಳ್ ಸಮಂತಿರೆ ಕುಟುಂಬೌಪಮ್ಯದೈಕ್ಯಾದರಂ
ಮತಿಯೊಳ್ ಸೂಕ್ಷ್ಮವಿಚಾರ ಜಾಗರತೆ ನೀತಿಶ್ರದ್ಧೆಗಳ ಕೂಡಿರಲ್
ಹಿತಮುಂ ಶಾಶ್ವತಮುಂ ಸ್ವತಂತ್ರಫಲಮೀ ನಾಲ್ಕಾತ್ಮನೇಮಂಗಳಿಂ
॥ ೨೧ ॥

ಆದರೆ ಪರಾಧೀನವಾಗಿರುವ ರಾಷ್ಟ್ರಕ್ಕೆ ಆತ್ಮಮೌಢ್ಯವೇ ಹೊರತು ಆತ್ಮ ಪ್ರಕಾಶಕ್ಕೆಡೆಯಿಲ್ಲ.

ಪರತಂತ್ರಂ ಪೊಗೆಯೊಡ್ಡಿನಂತೆ ವದನದ್ವಾರಂಗಳಂ ಮುತ್ತಿರಲ್
ಶಿರವೆತ್ತಲ್ಕೆಡೆಯಾಗದಂತೆ ಪರದರ್ಪಾಕ್ರಾಂತಿಯೊತ್ತುತ್ತಿರಲ್
ಮರೆಯೊಳ್ ಕುಗ್ಗದೆ ದೇಶದಾತ್ಮಗುಣಮ್ ? ಉಚ್ಛ್ವಾಯಂ ಜನಕ್ಕಿರ್ಕುಮೇ
ಪರಿಪೂರ್ಣಾಂಗತೆಯೆಂತು ಜೀವನಕೆ ? ನೋಡಿಂದಸ್ತಮಾರ್ಯಾಭಯಂ
॥ ೧೩ ॥

ನಮ್ಮ ಬದುಕು ಪೂರ್ಣಾಂಗತೆಯನ್ನು ಪಡೆದು ಆತ್ಮಶಾಲಿಯಾಗಿ ಬಾಳಲು ಈಗ ನಮಗೆ ಲಭಿಸಿರುವ ಸ್ವಾತಂತ್ರ್ಯ ಸದವಕಾಶವನ್ನು ಕಲ್ಪಿಸಿದೆ. ಇದಕ್ಕಿಂತ ಮಂಗಳಕರ ವಾದುದು ಮತ್ತಾವುದು ? ಈ ಮಂಗಳವನ್ನು ನಮಗೆ ತಂದವನು ಮಹಾತ್ಮ ಗಾಂಧಿ ಮತ್ತು ಆತನ ಹಿಂದಿನ ಅಂದಿನ ಮಹಾನುಭಾವರು.

ಧನ್ಯಂ ಗಾಂಧಿ ಮಹಾತ್ಮನಾತನವರಾಂ ಧನ್ಯರ್ ಮಹಾಸತ್ತ್ವರಾ
ಪುಣ್ಯೌಘದುಃಪೊಳಿಂದು ಭಾರತಿ ಫಲಾರಂಭಂ ಸ್ವರಾಜ್ಯೇಶ್ವರೀ
ಇನ್ನೀ ನಿನ್ನ ಕುಟುಂಬದ ಪ್ರಜೆಯೊಳನ್ಯೋನ್ಯಾಂಗಿತಾ ಭಾವದಿಂ
ಭಿನ್ನಂ ಪಾರುಗೆ ಮಾತೃಪಾದಭಜನೈಕಾವಿಷ್ಟರಕ್ಕೆಲ್ಲರುಂ ॥ ೧೪ ॥

ಸ್ವಾತಂತ್ರ್ಯದಿಂದ ಸಾಮಾನ್ಯರಾದ ನಾವು ಬಯಸುವುದೇನನ್ನು ? ಬದುಕಿಗೊಂದು ನೆಲ, ಪ್ರಗತಿ ಹೊಂದಲು ಒಂದು ಮಾರ್ಗ, ಪರಸ್ಪರ ಹೊಂದಿಕೊಂಡಿರಲು ಬೇಕಾದ ಮೈತ್ರೀಭಾವ. ಇವನ್ನು ಹೇರಾಸೆಯುಳ್ಳ ಸೋಮಾರಿಗಳಾದ ನಾವು ಎಲ್ಲಿಂದ ಪಡೆಯಬೇಕು. ಪಡೆಯಬಲ್ಲೆವು ? ಭಾರತದ ಆರ್ಷೇಯ ಸಂಸ್ಕೃತಿಯಿಂದಲೇ ಹೊರತು ಬೇರೆಡೆಯಿಂದಲ್ಲ. ಈ ಸಂಸ್ಕೃತಿಯ ರೂಪರೇಖೆಯೇನು ?

ಧರಣೀಧೂಳಿಯಿನೇಳದಿರ್ದು ತರಣಿಸ್ಯಂದಕ್ಕೆ ಕೈಚಾಚುವಾ
ಪುರುಷಂಗಾವುದು ಧರ್ಮಮೌದರಮೊ ತಾನಧ್ಯಾತ್ಮವೋ ಬಾಳ್ವೆಯೊಳ್ ?
ಪರಮುಂ ಲೌಕಿಕಮುಂ ಸಮನ್ವಯಿಪ ಜೀವೋದ್ಧಾರ ಸಂಧಾನದಾ
ಗುರು ನೀಂ ಮಾನವಸಂಸ್ಥಿತಿ ಪ್ರಗತಿ ಸೂತ್ರಾಯೋಜನಾದೇಶಿನೀ
॥ ೬ ॥

ಮನುಷ್ಯ ಆದಷ್ಟು ಚೆನ್ನಾಗಿ ಬಾಳಬೇಕು, ಅದನ್ನು ಮುಂಚಿ ಹರಿಯುವ ಆಧ್ಯಾತ್ಮ ಚೈತನ್ಯವನ್ನೂ ಸಂಪಾದಿಸಿಕೊಳ್ಳಬೇಕು. ಅಲ್ಲೇ ಸುತ್ತಿ ಸುತ್ತಿ ಬೇಸರ ಬಾರದು: ಭಾರತೀಯ ಸಾಂಸ್ಕೃತಿಕ ವೇದೇತಿಹಾಸದಲ್ಲಿ ಈ ಪ್ರಕ್ರಿಯೆಗಳು ನಿಚ್ಚಳವಾಗಿ ಶೋಭಿಸುತ್ತಿವೆ. ಸಹಸ್ರ ವರ್ಷಗಳ ಮ್ಲಾನತೆ ಕಳೆದು ಈಗ ಪುನಃ ಸುಪ್ರಭಾತ ವಾಗಿದೆ.

ಆದ್ಯಳ್ ಭಾರತಿ ಭೂದಿವಂಗಳುಭಯಸ್ನೇಹಾನುಸಂಧಾನದೊಳ್
ವಿದ್ಯಾವೈಭವಸಿದ್ಧಿಯೊಳ್ ವಿವಿಧ ವಿಜ್ಞಾನಪ್ರಯತ್ನಂಗಳೊಳ್
ಖಿದ್ಯತ್ಸ್ವಪ್ನತವಿಸ್ರಮಂ ಪಲಯುಗಂ ಸೈಸಿರ್ದು ದುರ್ದೈವಮಂ
ಖದ್ಯೋತಪ್ರಭೆವೊಲ್ ಸ್ವರಾಜ್ಯಮುದಿಸಲ್ ಮತ್ತೀಗಳಾರಾಜಿಪಳ್
॥೬॥

ಈ ನಿದ್ದೆ ಕಳೆದು ಇಂದು ಹೀಗೆ ಎಚ್ಚರಗೊಂಡುದು ಯಾವ ಕಾರಣಗಳಿಂದ ? ನಮ್ಮ ನಾಡಿನ ಉದಾತ್ತ ಹಾಗು ಜಾಗೃತ ಜೀವಗಳಲ್ಲಿ ಮೂಡಿಕೊಂಡ ಯಾವ ಗುಣ ಗಳಿಂದ ? ನಾವು ಪಡೆದುಕೊಂಡ ಸ್ವಾತಂತ್ರ್ಯದಿಂದ ಲೋಕಕ್ಕೇನಾದರೂ ಲಾಭ ವುಂಟೇ ? ಇವುಗಳಿಗೆ ಉತ್ತರ ಕೆಳಗಣದ ಪದ್ಯದಲ್ಲಿದೆ :

ಸ್ವಾತಂತ್ರ್ಯಂ ಜನತಾತ್ಮಶಿಕ್ಷೆ ಗಣಧರ್ಮಾವೇಕ್ಷೆ ರಾಷ್ಟ್ರಪ್ರಜಾ
ನೀತಿಪ್ರೀತಿಪರೀಕ್ಷೆ ಜೀವಮುಕುಲೋನ್ಮೀಲಾರ್ಕಸಂವೀಕ್ಷೆ ತಾನ್
ಐತಂದಂಬಿಕೆ ನಿನ್ನಾದಿಕಥೆಯೊಳ್ ನೂತ್ನಾಹವಂ ತಂದಿರಲ್
ಪ್ರಾತರ್ಗೀತದಿನಿಂದು ಸಂತವಿಡು ನೀಂ ಪ್ರಕ್ಷುಬ್ಧ ಭೂಲೋಕಮಂ
॥೭॥

ಭೋ ಭಾರತವೇ, ಒಂದು ತೊಟ್ಟು ರಕ್ತವನ್ನೂ ಚೆಲ್ಲದಂತೆ ನಿನ್ನ ಆತ್ಮಶಕ್ತಿಯಿಂದಲೇ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವ ನೀನು ಪ್ರಕ್ಷುಬ್ಧವಾಗಿರುವ ಭೂಲೋಕ ವನ್ನು ಸಂತೈಸುವಲ್ಲಿ ನಿರಾಶಳಾದರೆ ಈ ಜಗಕ್ಕೆ ಪುಣ್ಯೋದಯವೆಲ್ಲಿ ?

ಆರಾ ಪಾಪಮೊ ಆರ ಶಾಪಮೊ ಮಹಾ ಮಾನುಷ್ಯ ಯತ್ನಂಗಳಂ
ನೈರರ್ಥಕ್ಯಕ್ಕಡೆಯಾಗಿಸಿರ್ಪ್ಪದಿಳೆಯೊಳ್ ನೋಡಕ್ಕಟೆತ್ತೆತ್ತಲುಂ
ದೂರಂ ಪೋಗದೆ ನಿನ್ನಿನಾನುಮದರಾ ದುರ್ಯೋಗಮಾರ್ಯಾಂಬಿಕೇ
ನೈರಾಶ್ಯಂ ನಿನಗಾಗೆ ಭಾರತಿ ಜಗಕ್ಕಿನ್ನೆತ್ತ ಪುಣ್ಯೋದಯಂ ?
॥೮॥

ಡಿ.ವಿ.ಜಿ. ಅವರು ಸ್ವತಂತ್ರ ಭಾರತದಿಂದ ಲೋಕಕ್ಕೆ ಕಲ್ಯಾಣವಾಗುತ್ತದೆ ಎಂದು ದೃಢವಾಗಿ ನಂಬಿದ್ದರು. ಈ ದೃಢತೆ ಆಗಾಗ ಅಲುಗಾಡತೊಡಗಿತ್ತು, ಭಾರತದ ಸ್ವಾತಂತ್ರ್ಯೋತ್ತರ ದಶಕಗಳನ್ನು ಸಮೀಕ್ಷಿಸಿದಾಗ, ಸಾವಿರ ವರ್ಷಗಳ ಕಾಲ ನಾವು ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದೇವೇಕೆ ? ಇದು ದೈವದ ಕೈವಾಡವೇ ? ಯಾವ ಭವಿಷ್ಯ ಮಂಗಳವನ್ನು ಹಾರೈಸಿ ಈ ತಾತ್ಕಾಲಿಕ ಕೇಡನ್ನು ಅದು ನಮಗೆ ತಂದಿತು ?

ಮಾನು ಮಾಂಧಾತ ಭಗೀರಥಾದಿ ನೃಪರಿಂ ಸಂಸೇವ್ಯಳಾದಂಬೆ ನೀಂ
ತನಯರ್ ಸಂಸ್ಕೃತರಾಗಲೆಂದು ಬಹುಕಾಲಂ ದಾಸ್ಯಮಂ ಪೊತ್ತೆಯೇಂ
॥೨॥

ಈ ಸಾಲುಗಳು ಗಾಢವಾದ ಆಲೋಚನೆಗಳನ್ನೆಬ್ಬಿಸುತ್ತವೆ. ನಮ್ಮ ದೇಶ ಪರಹಸ್ತ ಗತವಾಗಬೇಕಾದರೆ ನಾವು ಎಲ್ಲ ವಿಧದಲ್ಲೂ ದುರ್ಬಲರಾಗಿದ್ದಿರಬೇಕು, ಪೂರ್ವ

ಸಂಸ್ಕೃತಿಯನ್ನು ಕಳೆದುಕೊಂಡು ಅನಯವಂತರಾಗಿದ್ದಿರಬೇಕು. ಅದು ವಿಸ್ಮೃತಿಕೆಯ ಕಾಲ, ದಾಸ್ಯ ತಂದ ತಾಪ, ಸಾಂಸ್ಕಾರಿಕ ತಾಪ. ಈ ತಾಪದಿಂದ ನೊಂದ ಜನ ತಮ್ಮ ಕಿಮುಟವನ್ನು ಕಳೆದುಕೊಂಡು ಪುಟಕ್ಕಿಟ್ಟ ಬಂಗಾರದಂತಾದ ಜನ. ಈ ತಾಪದಿಂದ ನಮಗೆ ಒದಗಿಬಂದ ಗುಣ ಯಾವುದು ? ಚೈತನ್ಯನೈರ್ಮಲ್ಯ. ಈ ಚೈತನ್ಯನೈರ್ಮಲ್ಯ ಯಾರ ಯಾರ ಮಹಾಸತ್ತ್ವರಲ್ಲಿ ತನ್ನ ಉಚ್ಛ್ರಾಯವನ್ನು ಪಡೆದು ನಮ್ಮ ಸ್ಮೃತಿ ನಮಗೆ ಮರಳುವ ಹಾಗೆ ಮಾಡಿ ನಾಡಿಗೆ ಪರದಾಸ್ಯವನ್ನು ತಪ್ಪಿಸಿತು. ಡಿ.ವಿ.ಜಿ. ಅವರ 'ವಸಂತ ಕುಸುಮಾಂಜಲಿ'ಯಲ್ಲಿ ಮತ್ತು ಮಹಾತ್ಮ ಗಾಂಧಿಯವರನ್ನು ಕುರಿತ ಜ್ಞಾಪಕ ಪದ್ಯಸಂಗ್ರಹದಲ್ಲಿ ಇಂಥ ಕೆಲವರು ಮಹಾತ್ಮರನ್ನು ಕುರಿತ ಬಹುಮನೋಜ್ಞವಾದ ಪದ್ಯಗಳಿವೆ. ಅವರಾರೆಂದರೆ ? ರಾಮಕೃಷ್ಣ ಪರಮಹಂಸರು, ರಾಜಾ ರಾಮ್ ಮೋಹನ್‌ರಾಯ್, ವಿವೇಕಾನಂದ ಸ್ವಾಮಿಗಳು, ದಾದಾಭಾಯ್ ನವರೋಜಿ ಅವರು, ಬಾಲ ಗಂಗಾಧರ ತಿಲಕರು, ಗೋಪಾಲಕೃಷ್ಣ ಗೋಖಲೆ ಅವರು, ರವೀಂದ್ರನಾಥ ಠಾಕೂರ್ ಅವರು, ಸರ್ ಜಗದೀಶ ಚಂದ್ರಬೋಸ್ ಅವರು, ಸರ್. ಎಂ. ವಿಶ್ವೇಶ್ವರಯ್ಯನವರು, ಮೋಹನದಾಸ್ ಗಾಂಧಿಯವರು. ಇವರ ಜತೆಗೆ ಡಾ॥ ಕೃಷ್ಣರಾಜೇಂದ್ರ ಒಡೆಯರವರೂ ಇದ್ದಾರೆ—ಜನಹಿತೋನ್ಮುಖ ಪ್ರಭುಶಕ್ತಿಯ ಪ್ರತೀಕವಾಗಿ ಅವರ 'ಜ್ಞಾಪಕ ಚಿತ್ರಶಾಲೆ'ಯ ಸಂಪುಟಗಳಲ್ಲೂ ಈ ಸಾಂಸ್ಕಾರಿಕ ತೇಜಸ್ಸಿನ ಹೊಳವುಳ್ಳ ಮಹನೀಯರು ಮೆರೆದಿದ್ದಾರೆ. ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯದಿಂದ ನಮಗೊದಗಬಹುದಾದ ಮುಖ್ಯ ಫಲ ಯಾವುದೆಂದರೆ, ಮೇಲೆ ನಿರೂಪಿಸಿದ ನಾಲ್ಕು ಆತ್ಮನೇಮಂಗಳಿಂದ ಪ್ರಾಪ್ತವಾಗುವ ಚೈತನ್ಯನೈರ್ಮಲ್ಯ. ನಿರಂತರವಾಗಿ ನಾವು ಎಚ್ಚರಿಕೆಯಿಂದ ಇರದೇ ಹೋದರೆ ಸ್ವಾತಂತ್ರ್ಯ ಮಸುಳುತ್ತದೆ. ಅದಕ್ಕಾಗಿ ಭಾರತಾಂಬೆಗೆ ಡಿ.ವಿ.ಜಿ.ಯವರ ಈ ಪ್ರಾರ್ಥನೆ :

> ಜನತಾರಾಜ್ಯಮಭೂತಪೂರ್ವಸುಕೃತಂ ತಾನಿಂದು ಸಂದಿರ್ಪುದೌ
> ಜನನೀ ನೀನದು ನಿಲ್ವವೊಲ್ ಕರುಣಿಸೌ ಚೈತನ್ಯನೈರ್ಮಲ್ಯಮಂ
> ॥ ೨ ॥

ಆದರೆ ಭಾರತಾಂಬೆ ನಮ್ಮನ್ನು ಇನ್ನೂ ಪರೀಕ್ಷಿಸುವಂತಿದೆ. ನಮ್ಮ ಮೋಹ ನಷ್ಟವಾಗಿ ಸ್ಮೃತಿ ಇನ್ನೂ ಲಭಿಸಿದಂತೆ ಕಾಣುತ್ತಿಲ್ಲ. ಈ 'ಭಾರತ ಭೂವಂದನಂ' ೧೫ ಆಗಸ್ಟ್ ೧೯೪೭ ರ ಶುಭದಿನದಂದು ಪ್ರಕಟವಾದದ್ದು. ಉತ್ಸಾಹೋಲ್ಲಾಸಗಳ ಜತೆಗೆ ಎಚ್ಚರಿಕೆಯ ಮಾತುಗಳೂ ಇಲ್ಲುಂಟು. ಭಾರತೀಯರು ತಮ್ಮ ನೂರಾರು ಬಯಕೆಗಳನ್ನು ಕೈಗೂಡಿಸಿಕೊಳ್ಳುವ ಆತುರದಲ್ಲಿದ್ದಾರೆ. ಆಸೆಗಳಿದ್ದಿವೆ ; ಅಲ್ಲದೆ ಅವು ತಾವು ಕೈಗೂಡುವ ಹಲವಾರು ದಾರಿಗಳನ್ನೂ ತೋರಿಸುತ್ತಿವೆ. ಈಗ ವಿವೇಕ ಆವಶ್ಯಕ. ಅದು ನಮ್ಮ ಧೀರ ಮಹರ್ಷಿಗಳು ತೋರಿಕೊಟ್ಟಿರುವ ನಯದಿಂದ ಲಭಿಸಬೇಕು. ಇವರನ್ನು ಮರೆತರೆ ಕೇಡು ತಪ್ಪಿದ್ದಲ್ಲ. 'ಪ್ರಹಸನತ್ರಯೀ' ಎಂಬ ಮೂರು ರೂಪಕಗಳ ಕೃತಿಯಲ್ಲಿ ಡಾ॥ ಡಿ.ವಿ.ಜಿ. ಅವರು ಬಹು ಸುಂದರವಾಗಿ ವಿವೇಕರಹಿತರಾದ ಆಸೆಬುರುಕರ ರಾಜ್ಯಭಾರಾಕಾಂಕ್ಷೆಯನ್ನು ವಿಡಂಬಿಸಿದ್ದಾರೆ :

ಹೃದಯಂ ಬೇಡಿರೆ ನೂರುವಸ್ತುವನದಿನ್ನೂರ್ ದಾರಿಯಂ ತೋರಿರಲ್
ಸದಸಲ್ಲಕ್ಷಣ ತಾರತಮ್ಯವಿರದಂ ಕಣ್ಮುಚ್ಚಿ ಧಾವಿಪ್ಪವಂ
ಮೊದಲೊಳ್ ನಿನ್ನ ಮಹರ್ಷಿಧೀರರದರಿಂದಧ್ಯಾತ್ಮದಾಧಾರದಿಂ
ಬದುಕಂ ಕಟ್ಟಿದರಾವಿಧಾನಮೆ ಜಗಕ್ಕೀ ಕಳ್ತಲೊಳ್ ದೀಪಕಂ
॥ ೧೧ ॥

ಆದರೆ ಈ ಧೀರಾಧ್ಯವಸಾಯುವನ್ನು ಭಾರತದ ಇಂದಿನ ನಾಯಕರು ಕೈಬಿಟ್ಟಂತಿದೆ. ಡಿ.ವಿ.ಜಿ. ಅವರು ನಿಟ್ಟುಸಿರು ಬಿಡುತ್ತಾರೆ :

ರಾಮಕಾರ್ಮುಕ ಕೃಷ್ಣಯುಕ್ತಿ ಗೌತಮ ಕರುಣೆ
ಭೂಮಿಭಾರವನಿಳುಹೆ ಸಾಲದಾಗಿರಲು
ಸಾಮಾನ್ಯರೆನಿತು ತಾಂ ಪೆಣಗಿದೊಡಮೇನಹುದು
ಕ್ಷೇಮಮೆಂದುಂ ವ್ಯಂಗ್ಯ—ಮಂಕುತಿಮ್ಮ

ಜಗತ್ತಿಗೆ ನೆಮ್ಮದಿಯ ಯೋಗ ದುರ್ಲಭವೇ ಸರಿ.

ಹೀಗೆ ವಿಷಾದಾವಿಷ್ಟರಾಗಿ ನಾವು ಕರ್ತವ್ಯವನ್ನು ಕೈಬಿಟ್ಟು ಸುಮ್ಮನೆ ಕೂರುವುದೇ ? ಕೂಡದು, ಯತ್ನಶಾಲಿಗಳಾಗಬೇಕು. ಆದರೆ ಈ ಪ್ರಯತ್ನ ಪಾರಮಾರ್ಥಿಕವಾಗಿರಬೇಕು. ಡಿ.ವಿ.ಜಿ. ಅವರ ಪ್ರಖ್ಯಾತವಾದ 'ವನಸುಮ' ಎಂಬ ಗೀತವಲ್ಲಿ ಇದು ಬಹು ಸುಂದರವಾಗಿ ವ್ಯಕ್ತವಾಗಿದೆ :

ಉಪಕಾರಿ ನಾನು ಎ-
ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು,
ವಿಪುಲಾಶ್ರಯುವನೀವ
ಸುಫಲಸುಮಭರಿತ ಪಾ-
ದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು
ವನಸುಮದೊಲೆನ್ನ ಜೀ-
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ—ಹೇ ದೇವ.

ರಾಷ್ಟ್ರಕ ತನಗೆ ತಾನೇ ವಿಧಿಸಿಕೊಳ್ಳುವ ಕರ್ತವ್ಯಭಾರ ಯಾವುದು ? ಸತ್ಯ ನ್ಯಾಯ ಮಾನವಸೌಭ್ರಾತ್ರ—ಈ ಮೌಲ್ಯಗಳನ್ನು ಸ್ವೀಕರಿಸಿ ಇವು ಆದಷ್ಟು ವ್ಯಾಪಕವಾಗುವಂತೆ ಮಾಡುವುದು ಎಲ್ಲರ ಆತ್ಮಧರ್ಮ.

ಸತ್ಯಂ ನ್ಯಾಯಂ ಮಾನವ ಸೌಭ್ರಾತ್ರಂ
ಈ ತ್ರೈಧರ್ಮಂ ರಾಷ್ಟ್ರದ ನಿಶ್ವಸಿತಂ
ಸ್ವಸ್ತಿಕೈದಿನಿತಾಗದ ರಾಜ್ಯವಿಕಾರಂ।
ವ್ಯರ್ಥಂ ಜನಪದಭುಜಕದು ಶವಭಾರಂ.

ಡಿ.ವಿ.ಜಿ. ಅವರ ಭಗವದ್ಗೀತೆಯ ಉಪನ್ಯಾಸಗಳಲ್ಲಿ ಈ ತ್ರೈಧರ್ಮವು ಬಹು ಮನೋಜ್ಞವಾಗಿ ವ್ಯಾಖ್ಯಾತವಾಗಿದೆ. ಅವರಿಗೆ ಶ್ರೀರಾಮನ ತಮ್ಮ ಭರತ ಆದರ್ಶ ಪುರುಷನಾಗಿದ್ದಾನೆ. ಈ ದೇಶವನ್ನು ಆಳುವ ಜನರು ಆತನನ್ನು ಆದರ್ಶವಾಗಿಟ್ಟು ಕೊಂಡರೆ ನಮಗೆಲ್ಲರಿಗೂ ನೆಮ್ಮದಿ ದೊರೆಯುತ್ತದೆ ಎಂಬುದು ಅವರ ಆಶಯ. ಮಂಕುತಿಮ್ಮನ ಕಗ್ಗದಲ್ಲಿ ಬರುವ ಭರತೋದಾಹರಣೆ ಎಲ್ಲ ರಾಜಕೀಯಸ್ಥರಿಗೂ ಮನನ ಯೋಗ್ಯವಾಗಿದೆ :

ಪ್ರತ್ಯಕ್ಷವಿಲ್ಲದಾ ಸ್ವಾಮಿಯಂ ನೆನೆನೆನೆದು
ಸತ್ಯಭಕ್ತಿಯ ಸೇವೆಗೈದವಂ ಭರತಂ
ನಿತ್ಯಜೀವನದಿ ನೀನಾ ನಯವನನುಸರಿಸೊ
ಸ್ವತ್ವದಾಶಯ ನೀಗಿ—ಮಂಕುತಿಮ್ಮ.

ಒಡರಿಸುವನೆಲ್ಲವನ್; ಅದಾವುದುಂ ತನದಲ್ಲ
ಬಿಡನೊಂದನುಂ ರಾಜ್ಯತನದಲ್ಲವೆಂದು
ನಡೆವಂ ಸ್ವತಂತ್ರದಲಿ ಸಲಿಸುತೆ ವಿಧೇಯತೆಯ
ಕಡುಯೋಗಿ ಭರತನಲ—ಮಂಕುತಿಮ್ಮ ?

ರಾಜ್ಯದಲ್ಲಿನ ಪದಸ್ಥರೆಲ್ಲರೂ ತಮ್ಮ ಪದವಿ ಶಾಶ್ವತವಲ್ಲವೆಂದು ಸ್ವಾರ್ಥಿಗಳಾಗ ಬಾರದು, ಕರ್ತವ್ಯಚ್ಯುತರಾಗಬಾರದು ಎಂಬ ಎಚ್ಚರಿಕೆ ಈ ಮನನೀಯ ಪದ್ಯ ದಲ್ಲಿದೆ. ಅಲ್ಲದೆ—

ದೊರೆತನದ ಜಟಿಲಗಳ ಕುಟಿಲಗಳ ಕಠಿನಗಳ
ಭರತನುಳಿಸಿದನೆ ರಾಜನ ತೀರ್ಪಿಗೆಂದು
ಅರಿವಿಗಿಹ ಕರ್ತವ್ಯಭಾರವನು ತಾನರಿತು
ಧುರವ ಧರಿಸಿದನವನು—ಮಂಕುತಿಮ್ಮ.

ಅಮೋಘವಾದ ಪದ್ಯ. ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲು, ಅಥವಾ ಬೇರೊಬ್ಬ ರಿಗೆ ರವಾನಿಸಲು ಸಂತತವಾಗಿ ಹೆಣಗುತ್ತಿರುವ ಇಂದಿನ ಅಧಿಕಾರ ಶ್ರೇಣಿ ಇದನ್ನು ಅವಶ್ಯ ಗಣಿಸಬೇಕಾಗಿದೆ. ಏಕೆಂದರೆ ತಮ್ಮ ತಮ್ಮ ಹೊಣೆಯನ್ನು ಅರಿತು ನಡೆಯುವ ಅರಿವುಳ್ಳವರಿಂದಲೇ ಈ ದೇಶ ಸುಭದ್ರ. ದೇಶಾಭಿಮಾನದ ಕುರುಹೂ ಸಹ ಈ ಕರ್ತವ್ಯಪಾಲನನಿಷ್ಠೆ, ಹೊಣೆಗಾರಿಕೆಯ ಧೃತಿ.

ಡಿ.ವಿ.ಜಿ. ಅವರಿಗೆ ನೆಹರು ಯುಗದ ಆಡಳಿತದ ವೈಖರಿ ಅಷ್ಟು ಹಿಡಿಸಿರುವ ಹಾಗೆ ಕಾಣುವುದಿಲ್ಲ. ತಮ್ಮ 'ಸಾರ್ವಜನಿಕದಲ್ಲಿ ಸಾತ್ತ್ವಿಕ' ಎಂಬ ಉಪನ್ಯಾಸದಲ್ಲಿ 1947–70ರ ಈ ಅವಧಿಯನ್ನು ನೆಹ್ರುಯುಗವೆಂದು ಕರೆದು ಹೀಗೆ ವರ್ಣಿಸಿದ್ದಾರೆ : "ಉಲ್ಲೋಲ ಕಲ್ಲೋಲದ್ದು, ಇದನ್ನುರುಳಿಸು, ಅದನ್ನು ಹೊರಳಿಸು, ಇದನ್ನು ಕಿತ್ತುಹಾಕು, ಅದನ್ನು ದಬ್ಬು" (ಪು 57). ಇದಕ್ಕೆ ಪೂರಕವಾಗಿ ಈ ಮಾತುಗಳನ್ನು ಉದ್ಧರಿಸಬಹುದು :

"ನಮ್ಮ ದೇಶಕ್ಕೆ ಅನ್ಯಾನುಕರಣವ್ಯಾಧಿ ಬಲವಾಗಿ ಬಂದಿದೆ. ದೇಶ ಸ್ವತಂತ್ರವಾದಮೇಲೆ ಅದು ಸ್ವತಂತ್ರ ವಿವೇಕದಿಂದ ಬಾಳಿ ಬೆಳೆಯಬೇಕು. ನಮಗೆ ಏನು ಕಷ್ಟ ಬಂದರೂ 'ರಷ್ಯದಲ್ಲಿ ಹಾಗೆ ಮಾಡುತ್ತಾರಲ್ಲ, ನಾವು ಹಾಗೆ ಏಕೆ ಮಾಡಬಾರದು?' 'ಅಮೆರಿಕಾದಲ್ಲಿ ಮಾಡುವ ಹಾಗೆ ನಾವು ಏಕೆ ಮಾಡಬಾರದು?' 'ಜರ್ಮನಿಯಲ್ಲಿ ಮಾಡಿದ ಹಾಗೆ ನಾವು ಏಕೆ ಮಾಡಬಾರದು?' 'ಫ್ರಾನ್ಸನ್ನು ನೋಡಿ, ಅಲ್ಲಿಯ ಹಾಗೆ ನಾವು ಏಕೆ ಮಾಡಬಾರದು?'—ಹೀಗೆ ಹೊರಡುತ್ತಿದೆ ನಮ್ಮ ಮುಖಂಡರ ಬುದ್ಧಿ. ನಮ್ಮ ಕಷ್ಟಗಳಿಗೂ ನಮ್ಮ ಇಕ್ಕಟ್ಟುಗಳಿಗೂ ಹೊಂದಿಕೊಳ್ಳುವ ಉಪಾಯವನ್ನು ನಾವೇ ಕಂಡುಕೊಳ್ಳಬೇಕೆಂದು ನಮ್ಮ ದೇಶನಾಯಕರ ಮನಸ್ಸು ಹೊರಡುತ್ತಿಲ್ಲ." (ಪು. 20–21.)

ನಾವೇಕೆ ಹೀಗೆ 'ಪರಪ್ರತ್ಯಯನೇಯಬುದ್ಧಿ'ಗಳಾದೆವು? ನಮ್ಮ ವಿದ್ಯಾಭ್ಯಾಸ ಪದ್ಧತಿ ಹಾಗಿದೆ. ಅದು ನಮ್ಮ ಸ್ವಪ್ರತ್ಯಯವನ್ನು ಹಿಗ್ಗಿಸುವಂಥದಲ್ಲ. ಮಹಾತ್ಮ ಗಾಂಧಿಯವರೊಬ್ಬರು ಈ ರಹಸ್ಯವನ್ನು ಕಂಡುಕೊಂಡಿದ್ದರು. ಆತ ನಿಜವಾಗಿ ಒಬ್ಬ ಧಾರ್ಮಿಕ ಪುರುಷ (Truly religious man). ಅವರ ಆಧ್ಯಾತ್ಮಿಕ ಜೀವನದ ಬೇರು ನಮ್ಮ ಆರ್ಷೇಯ ಸಂಸ್ಕೃತಿಯಲ್ಲಿ ಆಳವಾಗಿ ಇಳಿದಿತ್ತು. ರವೀಂದ್ರರು ತಮ್ಮ ಅನುಪಮವಾದ ಸೃಜನಶಕ್ತಿಯನ್ನು ಆ ಮೂಲದಿಂದಲೇ ಪಡೆದು ಧನ್ಯರಾದರು. ಇವರಂತೆಯೇ ಪೂಜ್ಯ ಡಿ.ವಿ.ಜಿ.ಯವರು ಕೂಡ. ರವೀಂದ್ರರ ಈ ಕೆಳಗಣ ಮಾತು ಡಿ.ವಿ.ಜಿ.ಯವರ 'ಭಾರತ ಭೂವಂದನಂ'ದಲ್ಲಿ ಕಂಡುಬರುವ ಅಭಿಪ್ರಾಯವನ್ನೇ ಸಂವಾದಿಸುವಂತಿದೆ. ಠಾಕೂರರು ಹೇಳುತ್ತಾರೆ:

"I love India, not because I cultivate the idolatry of Geography, not because I have had the chance to be born in her soil, but because she had saved through funambulous ages the living words that have issued from the illuminated Consciosness of her great sons."

ಹೀಗೆ ನಮ್ಮ ಹಿಂದಿನವರು ಬಹಳ ಕಷ್ಟಕಾರ್ಪಣ್ಯದಿಂದ ಕಾಪಾಡಿಕೊಂಡು ಬಂದು ನಮಗಿತ್ತಿರುವ ಆಧ್ಯಾತ್ಮಿಕ ಸಂಪತ್ತನ್ನು ನಾವು ಕಡೆಗಣಿಸಿದರೆ ನಮಗೆ ವಿಪತ್ತು ತಪ್ಪದು. ಏಕೆಂದರೆ ಗಾಂಧೀಜಿಯವರಲ್ಲಿ ಮೂರ್ತೀಕರಿಸಿದ ಈ ಸಾಂಸ್ಕೃತಿಕ ಸಂಪತ್ತಿನಿಂದಲೇ ನಾವು ನಮ್ಮ ಭೌಗೋಳಿಕ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡದ್ದು. ಈಗ religion ಎಂಬ ಪದ ಅನಪೇಕ್ಷಣೀಯ ಶಬ್ದಗಳ ಗುಂಪಿಗೆ ಸೇರಿದೆ. ಆದರೆ ಈ ತಿರಸ್ಕಾರದಿಂದ ನಮಗೆ ಪ್ರಾಪ್ತವಾಗುವುದು ಬೌದ್ಧಿಕ ಹಾಗೂ ಹೃದಯ ಸಂಬಂಧವಾದ ಬಂಜೆತನ. ಜರ್ಮನ್ ಮಹಾಕವಿ ಗಯಟೆಯ ಈ ಮಾತು ಇಲ್ಲಿ ಪ್ರಕೃತ: ಆತ ಹೇಳುತ್ತಾರೆ:

"Man is only creative when he is truly religious; without religion he merely becomes repetitive and imitative."

ಧರ್ಮನಿರಪೇಕ್ಷವಾದ ನಮ್ಮ ದೇಶದಲ್ಲಿ ಆಗಿರುವುದೂ ಆಗುತ್ತಿರುವುದೋ ಇದೇ. ನಮ್ಮ ಕಾಮ, ಕ್ರೋಧ, ಲೋಭ, ಮೋಹಾದಿ ದೌರ್ಬಲ್ಯದಿಂದ ನಾವು ಸಾಂಸ್ಕೃತಿಕ ದಾಸ್ಯಕ್ಕೆ ಈಡಾಗುತ್ತಿದ್ದೇವೆ. ಡಿ.ವಿ.ಜಿ. ಅವರ "ತನಯರ್ ಸಂಸ್ಕೃತರಾಗಲೆಂದು ಬಹುಕಾಲಂ ದಾಸ್ಯಮಂ ಪೊತ್ತೆಯೇಂ ?" ಎಂಬ ಮಾತಿನಲ್ಲಿ ಮೋಹವನ್ನು ನೀಗಿ ಸ್ಮೃತಿಯನ್ನು ಪುನಃ ಪಡೆಯುವುದೇ ಪರಾಕ್ರಮಣಕ್ಕೆ ಈಡಾದ ಹಾಗೂ ಅದನ್ನು ನೀಗುವ ಸಂಘರ್ಷಯತ್ನದ ಫಲ ಎಂಬ ಧ್ವನಿ ಇದೆಯೇ ಹೊರತು, ಪರಾಭಿಭೂತಿಯ ಮಾತಿಲ್ಲ. ಡಿ.ವಿ.ಜಿ.ಯವರು ದೈವಭಕ್ತರು. ಅವರದು ಜಿಜ್ಞಾಸುವಿನ ಹಾಗೂ ಜ್ಞಾನಿಯ ಭಕ್ತಿ. ಆ ಮೂಲದಿಂದ ಹೊರಡುತ್ತದೆ ಅವರ ಬೌದ್ಧಿಕ ಹಾಗೂ ಹಾಡಾದ ಸೃಜನ ಕ್ರಿಯಾಶಕ್ತಿ. ಸೋಮಾರಿಯಾಗಿಯೋ, ರೋಗಿಷ್ಠನಾಗಿಯೋ, ಅಥವಾ ತುಂಬ ದಣಿದು ನಿತ್ರಾಣಿಯಾಗಿಯೋ ಮಲಗಿರುವವನನ್ನು ಚೇತರಿಸಿಕೊಂಡು ಏಳುವಂತೆ ಮಾಡುವುದು ಒಂದು ಉಪಕಾರವೇ ಸರಿ. ಡಿ.ವಿ.ಜಿ.ಯವರ ಮೇಲಿನ ಮಾತು ದೈವ ನಮಗೆ ಮಾಡಿದ ಈ ಉಪಕಾರವನ್ನು ಕುರಿತದ್ದು. ಗಾಂಧೀಜಿ ಅವರನ್ನು ಸ್ಮರಿಸುವ ಪದ್ಯಮಾಲಿಕೆಯಲ್ಲಿ ಈ ಸ್ಮೃತಿ, ಲಾಭದ ವರ್ಣನೆ ಇದೆ :

> "ಜನಪದ ಪಾತಕ ಭಾರವ-
> ನನುಕಂಪಾಭರದಿ ತನ್ನದೆನುವೊಲ್ ತಳೆಯು-
> ತ್ತನುಭವಿಸಿದ ಸ್ವಶಿಕ್ಷೆಯಿ-
> ನನುನಯಿಸಿದನೆಮ್ಮನಾತ್ಮ ಪರಿಶೋಧನೆಯೊಳ್ ॥ ೧೪ ॥
>
> ಮನುಜಾತ್ಮಜ್ಯೋತಿಯುಮಂ
> ಮುನಿ ಋಷಿ ತಪಸಿ ಪ್ರಸಾದಿತ ಸ್ಫೂರ್ತಿಯುಮಂ
> ಜನಹೃದ್ರಸಮೂರ್ತಿಯುಮಂ
> ಅನವಧಿ ಜಗದಂತರಾತ್ಮವಿಭು ಸಾಕ್ಷಿಯುಮಂ ॥ ೨೨ ॥

ಆದರೆ ಗಾಂಧೀಜಿ ಈಗ ಬರಿ ಹೆಸರು ; ಬರಿ ಪೂಜಿತವಿಗ್ರಹ. ಸ್ವಪ್ರತ್ಯಯ ವನ್ನು ಪಡೆದು ಆತ್ಮಶಾಲಿಗಳಾಗಿ ಭಾರತವನ್ನು ಭಗವನ್ನಿಯೋಜಿತ ಕಾರ್ಯದಲ್ಲಿ ನಡಸುವ ಭಾಗ್ಯ ನಮಗಿನ್ನೂ ಬಹು ದೂರದಲ್ಲಿರುವ ಹಾಗೆ ಕಾಣುತ್ತದೆ. ಆ ದೈವನಿರ್ದಿಷ್ಟ ಧ್ಯೇಯವಾವುದು ? ಅದು 1978ರಲ್ಲಿ ಡಿ.ವಿ.ಜಿ.ಯವರು ರಾಜರತ್ನಂ ಅವರು ವ್ಯಾಖ್ಯಾನಿಸಿ ಪ್ರಕಟಿಸಿದ 'ಭಾರತ ಭೂವಂದನಂ' ಎಂಬ ಪದ್ಯ ಮಾಲಿಕೆಗೆ ಸೇರಿಸುವಂತೆ ಬರೆದು ಕಳಿಸಿದ ಈ ಕೆಳಗಣದ ಪದ್ಯದಲ್ಲಿ ಅಡಕವಾಗಿದೆ :

> ಭರತಂ ಭಾರತಮೆಂಬುದೇಂ ಬರಿಯ ಮಾತೋ ಮಣ್ಣೋ ಚೈತನ್ಯಮೋ
> ಪುರುಷೌತ್ಕೃಷ್ಟ್ಯ ಕಿರೀಟಮೋ ಪರಕಿಹಂ ಕಟ್ಟಿರ್ಪ ಸೋಪಾನಮೋ
> ಧರಣೀಜಾಪ್ರಿಯಕೀರ್ತಿಮಂಡನಲಸತ್‌ಸೌಭ್ರಾತ್ರಮಾಣಿಕ್ಯಮೋ
> ಪರಮೇಶಾವಸಥಪ್ರದಕ್ಷಿಣಪಥಪ್ರಸ್ಥಾನಮೋ ರಾಷ್ಟ್ರಕಾ

ಇದು ಡಿ.ವಿ.ಜಿ.ಯವರಿಗೆ ಬಹು ಇಷ್ಟವಾದ ಪದ್ಯ. 'ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ' ಎಂಬ ಧ್ಯೇಯವನ್ನು ಇದು ಪ್ರತಿಪಾದಿಸುತ್ತದೆ. ಶಂಕರ

ಭಗವತ್‌ಪಾದರ "ಸ್ವದೇಶೇ ಭುವನ ತ್ರಯಂ" ಎಂಬ ಮಾತನ್ನೂ ನೆನಪಿಗೆ ತರುತ್ತದೆ. ರಾಜರತ್ನಂ ಅವರು ಡಿ.ವಿ.ಜಿ.ಯವರ ಈ ಕುರಿತ ಮಾತನ್ನು ಈ ಕೆಳ ಕಂಡಂತೆ ತಾವು ಸಂಪಾದಿಸಿ ವ್ಯಾಖ್ಯಾನಿಸಿರುವ ಪುಸ್ತಕದ ಸ್ಪಷ್ಟ ಪುಟದಲ್ಲಿ ಹೀಗೆ ಉದ್ಧರಿಸಿದ್ದಾರೆ :

"I am particular about including this poem for the reason that it indicates what I consider the supreme mission of India in the world : the oneness of world, ನರಸೌಭ್ರಾತ್ರ, the brotherhood of all mankind : ಭೇದಾತೀತಸೌದಾರ್ಯ, the largeness of heart that transcends all distinctions of race, religion, culture, region etc."

ಇದು ಬರಿಯ ಧ್ಯೇಯವಾಕ್ಯವೋ ಅಥವಾ ಆಚರಿಸಲು ತಕ್ಕುದಾದುದೋ ?

ಶೈಲಾರೋಹಿಯು ದೃಷ್ಟಿ ಬಿತ್ತರಿಸುಗುಂ ಸೋಪಾನದೌನ್ನತ್ಯದಿಂ
ಬಾಲಾರ್ಕಾಂಚಿತ ಕೋರಕಂ ವಿಕಸಿಕುಂ ಪತ್ರಕ್ರಮೋನ್ನಿದ್ರೆಯಿಂ
ಸ್ಥೂಲಾಹಂಮತಿ ಶೀರ್ಣಿಕುಂ ಗೃಹಕುಲಗ್ರಾಮಸ್ವದೇಶಾದಿ ವ್ಯ
ಶಾಲ್ಯಾಯೋಗದೆ ಜೀವಿತಪ್ರಸರಣಂ ಸರ್ವಾತ್ಮತಾಭ್ಯಾಸಕಂ

॥ 12 ॥

ಅಭ್ಯಾಸಯೋಗದಿಂದ ಅಹಂಕಾರವನ್ನು ಕ್ರಮಕ್ರಮವಾಗಿ ಕಳೆದುಕೊಂಡು ವಿನಯ ಶಾಲಿಗಳಾಗಬೇಕು, ಪ್ರೀತಿವಂತರಾಗಬೇಕು. ಆತ್ಮಶಾಲಿಗಳಾಗಬೇಕು. ಧರ್ಮದ ಮೂರು ಪ್ರಕಾರಗಳಾದ ಸೈಜ, ನ್ಯಾಯ, ಮೈತ್ರಿಗಳನ್ನು ತಮ್ಮ ಬದುಕಿನ ದೈನಂದಿನ ನಡವಳಿಕೆಗಳಲ್ಲಿ ಅಳವಡಿಸಿಕೊಳ್ಳಬೇಕು. ಆಗ ನಾವು ಭಾರತೀಯರು ತ್ರಿಭುವನದ ಪುರುಷನಾದ ಪರಮೇಶ್ವರನನ್ನು ಪ್ರದಕ್ಷಿಣೆ ಮಾಡುವ ಯಾತ್ರಿಕರಲ್ಲಿ ಮೊದಲಿಗರಾಗ ಬಲ್ಲೆವು ; ಈ ಬಲ ಬರುವ ಸಮಾರಂಭಕ್ಕೆ ನಮ್ಮ ಭಾರತಭೂಮಿ ಮೊದಲ ಘಟ್ಟ ವಾಗುತ್ತದೆ. ಭಾರತದ ರಾಜಕೀಯ ಧುರೀಣರು ಜ್ಞಾನಿಗಳಾಗಬೇಕು. ಈ ಜ್ಞಾನ ಅನ್ಯದೇಶಗಳಲ್ಲಿರದಷ್ಟು ಗಾಢವಾಗಿಯೂ ಅನುಸಂಧೇಯವಾಗಿಯೂ ಭಾರತದ ಆರ್ಷೇಯ ಸಂಸ್ಕೃತಿಯಲ್ಲಿದೆ. "ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಕ್ ರಾಜ್ಯಾದಿ ಲೌಕಿಕಂ" ಎಂಬ ಧ್ಯೇಯವಾಕ್ಯ ಡಿ.ವಿ.ಜಿ.ಯವರ ಗೋಖಲೆ ಸಾರ್ವಜನಿಕ ಸಂಸ್ಥೆಯ ಕೇತನದಲ್ಲಿದೆ. ಈಗ ನೆಹ್ರುಯುಗ ಕಳೆದು 2 ದಶಕವಾಯಿತು. ಮುಂದಿನ ಯುಗ. "ವಿಚಾರಪೂರ್ವಕ ಪ್ರಗತಿ ಯುಗ" ವಾಗಬೇಕೆಂಬುದು ಈ ಮಹಿಮರ ಆಶಯ. ಹಾಗಾದಾಗ ಭಾರತ ಭೂಮಿಯು ಈ ಮಂಗಳ ನಮ್ಮ ಕೈಗೂಡ ಬಹುದು :

ಧನಧಾನ್ಯಂ ನೆರೆದಿರ್ಕೆ ನಾಡೊಳವರೊಳ್ ಪಾಲೆಲ್ಲರಿಂಗೀವ ಶಾ
ಸನದಿಂದಾರ ಕರುಂಬುಮುಬ್ಬರಿಸದಂತಿರ್ಕೊರ್ವನಿನ್ನೊರ್ವನೊಳ್
ಗುಣಮಂ ಕಾಣ್ಬವನಕ್ಕೆ ಸಾತ್ತ್ವಿಕ ಬಲಂ ನ್ಯಾಯಂಗಳಂ ಕಾಯುಲೀ
ಜನರಾಜ್ಯಂ ಪೃಥಮಿರ್ಕೆ ದೇಶವಿಭವಂ ಸರ್ವೋತ್ಸವಂ ಮಂಗಳಂ

॥ 22 ॥

ವಿದೇಶೀಯ ವ್ಯವಹಾರಗಳಲ್ಲೂ ಕಲಹವಲ್ಲ ಶಾಂತಿಯೇ ನಮ್ಮ ರಾಜತಂತ್ರವಾಗಲಿ:

ಪರಮಾರ್ಥಂ ಸ್ಮೃತಿಯಿಂದಲುಂಗದವೊಲೆಂದುಂ ಭಾರತಾಶಾಸನಂ
ಸ್ಥಿರದಿಂ ದೇಶವಿದೇಶಸಂಧಿನಯದೊಳ್ ತಾನಕ್ಕೆ ಶಾಂತಿಪ್ರದಂ
ಭರತಂಬೊಲ್ ಪ್ರಜೆಯಾಳ್ಗೆ ರಾಷ್ಟ್ರವನದೀಶನ್ಯಸ್ತವೆಂಬೆಳ್ಚರಿಂ
ಚಿರಕಲ್ಯಾಣಿ ನಮೋಸ್ತು ಭಾರತಿ ಶಿವಂ ಸರ್ವೋತ್ಸವಂ ಮಂಗಳಂ
॥ 23 ॥

ಪೂಜ್ಯ ಡಿ.ವಿ.ಜಿ.ಯವರು ಮಹಾಮೇಧಾವಿಗಳು, ಹೃದಯಸಂಪನ್ನರು, ಧ್ಯೇಯೋನ್ನತರು. ಡಾ॥ ಜಿ. ಪಿ. ರಾಜರತ್ನಂ ಅವರಿಂದ ವ್ಯಾಖ್ಯಾತವಾದ ಅವರ 'ಭಾರತ ಭೂವಂದನಂ' ಎಂಬ ಕೃತಿ ಎಲ್ಲ ರಾಷ್ಟ್ರಕನೂ ಮನನ ಮಾಡಬೇಕಾದ ಗ್ರಂಥ. ಇದರಿಂದ ತನಗೂ ರಾಷ್ಟ್ರಕ್ಕೂ ಮಂಗಳವಾಗುವುದರಲ್ಲಿ ಸಂದೇಹವೆಳ್ಳನಿತಿಲ್ಲ. ಪೂಜ್ಯರ ಸ್ಮೃತಿ ಪಾವನವಾದುದು.

ಬಾಳಿಗೊಂದು ನಂಬಿಕೆ

ಕೆ. ಎಸ್. ನಾರಾಯಣಸ್ವಾಮಿ

"ಆರ್ಷೇಯ ಋಷಿವರ್ಯರಿಂದ ಹಿಡಿದು ಆಧುನಿಕ ಚಿಂತಕರವರೆಗೆ ಪದರ ಪದರವಾಗಿ ಸಾಕ್ಷಾತ್ಕಾರಗೊಳ್ಳುತ್ತಿರುವ ಜ್ಞಾನದೀವಿಗೆಯ ಬೆಳಕಿನಲ್ಲಿ ಮಾನವ ಕ್ರಮೇಣ ಪಶುಸ್ಥಿತಿಯನ್ನು ಬಿಟ್ಟು ಮಾನವನಾಗುತ್ತಿದ್ದಾನೆ. ಈ ಪಥದಲ್ಲಿ ನಮ್ಮ ಸಮಕಾಲೀನರಾದ ಡಿ.ವಿ.ಜಿ. ಹಚ್ಚಿಟ್ಟ ದೇದೀಪ್ಯಮಾನವಾದ ದಾರಿದೀಪ ಅವರ ಚಿಕ್ಕ ಗ್ರಂಥ 'ಬಾಳಿಗೊಂದು ನಂಬಿಕೆ'" ಎಂಬ ಪರಿಚಯ ವಾಕ್ಯದಿಂದ ತಮ್ಮ ಲೇಖನ ವನ್ನು ಪ್ರಾರಂಭಿಸಿ, ಈ ಗ್ರಂಥರಚನೆಯಲ್ಲಿ ಡಿ.ವಿ.ಜಿ. ಇಟ್ಟುಕೊಂಡಿರುವ ಉದ್ದೇಶವನ್ನು ತಿಳಿಸಿ ("......ವಿಜ್ಞಾನ ವಿಕ್ಷಿಪ್ತವಾದ ವಾತಾವರಣದಲ್ಲಿ ನಾವು ನಮ್ಮ ಜೀವನ ಸಮಸ್ಯೆಗಳನ್ನು ಪುನರ್ವಿಮರ್ಶೆ ಮಾಡಬೇಕಾಗಿದೆ...ಇದು ಪಂಡಿತರಿಗಾಗಿ ಬರೆದ ಗ್ರಂಥವಲ್ಲ. ದೇಶದಲ್ಲಿ ಬಹುಮಂದಿಯಾದ ಅತಿಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದ ಬರವಣಿಗೆ ಇದು"). ಅವರಿದ್ದ ಸಂಕ್ರಾಂತಿಸಮಯದ ಮಹಾತತ್ತ್ವಜ್ಞಾನಿ ಡಾ॥ ರಾಧಾಕೃಷ್ಣನ್ ಅವರ 'ಪುನರುತ್ಥಾನ' ('Recovery of Faith') ಎಂಬ ಚಿಕ್ಕ ಗ್ರಂಥದ ಸಮಾನೋದ್ದೇಶವನ್ನು ಪರಿಚಯಿಸಿ, ಇಂಥದೇ ಉದಾತ್ತ ಉದ್ದೇಶದಿಂದ ರಚಿತವಾದ ಟಾಲ್ಸ್‌ಟಾಯ್. ರಸ್ಕಿನ್. ಎಮರ್ಸನ್. ಥೋರೋ. ರೋಮೇನ್‌ರೋಲಾ, ಮಹಾತ್ಮ ಗಾಂಧಿ, ರವೀಂದ್ರನಾಥ ಠಾಕೂರ್ ಮೊದಲಾದವರ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ. ಲೇಖಕರಾದ ಶ್ರೀ ಕೆ. ಎಸ್. ನಾರಾಯಣಸ್ವಾಮಿ ಅವರು. ಡಿ.ವಿ.ಜಿ. ಅವರ ಈ ಗ್ರಂಥದ ಬೆಲೆಕಟ್ಟುವ ಲೇಖಕರ ಇನ್ನು ಕೆಲವು ವಾಕ್ಯಗಳು: "ಶ್ರೀಸಾಮಾನ್ಯನ ಅಂತಃಪ್ರಜ್ಞೆಯನ್ನು ಎಚ್ಚರಿಸಿ ಅವನಿಗೆ ಒಂದು ಬಾಳ ಬಟ್ಟೆಯ ಅನ್ವೇಷಣೆಯ ಆಕಾಂಕ್ಷೆಯನ್ನು ತುಂಬುವ ಉದ್ದೇಶ ಈ ಪ್ರಬಂಧದ್ದು". ..."ಈ ದೇಶದ ಸಮೃದ್ಧ ಪ್ರಕೃತಿದತ್ತ ಶಕ್ತಿವಿಶೇಷಗಳನ್ನು ಸರ್ವತ್ರ ಸುಖಜೀವನಕ್ಕೆ ಬಳಸಿಕೊಳ್ಳುವ ರಚನಾತ್ಮಕ ಚೈತನ್ಯ ತುಂಬಿಕೊಂಡಾಗ ನಮ್ಮ ನಂಬಿಕೆ ಸತ್ತ್ವಪೂರ್ಣ" ಎಂದು ವಿವರಿಸಿದ್ದಾರೆ ಡಿ.ವಿ.ಜಿ. ..."ಬದುಕುವವರಿಗೆ, ಬಾಳನ್ನು ಹಸನಾಗಿ ಬಾಳುವೆನೆಂಬ ಹಂಬಲವನ್ನು ತುಂಬಿಕೊಂಡವರಿಗೆ, ಸತ್ಯಾನ್ವೇಷಣೆಯ ಮಹಾಯಾತ್ರೆ ಯಲ್ಲಿ ಧೃತಿಗೆಡದೆ ನಡೆಯಬಯಸುವವರಿಗೆ ಪದೇ ಪದೇ ಓದಿ ಮನನ ಮಾಡಬೇಕಾದ ಈ ಕೃತಿ ಡಿ.ವಿ.ಜಿ. ಸಾಹಿತ್ಯಕ್ಕೆ ಒಂದು ಅಮರ ಕೊಡುಗೆ."

ಋಜುಮಾರ್ಗದಲ್ಲಿ ನಡೆಯಬಯಸುವವರು ಈ ಕೃತಿಯನ್ನು ಅರಗಿಸಿಕೊಂಡು, ಹಾಗೆ ನಡೆದು ಮೇಲ್ಪಂಕ್ತಿಯಾಗಿ, ಇತರರೂ ಅಪರಂತಾದಾಗ ಕೃತಿಕಾರರ ಉದ್ದೇಶ ಸಫಲ. ಆ ಸಾಫಲ್ಯಪ್ರಾಪ್ತಿಗೆ ಹಾರೈಸಬೇಕಾದ್ದು ನಮ್ಮ ಕರ್ತವ್ಯ.

೧

ನಾವು ದಿನನಿತ್ಯದ ಆವಶ್ಯಕತೆಗಳನ್ನು ಪೂರೈಸಿಕೊಂಡು ಬದುಕುತ್ತಿದ್ದೇವೆ, ನಿಜ ; ಆದರೆ ಸಾರ್ಥಕತೆಯ ಬಾಳನ್ನು ಬಾಳುತ್ತಿದ್ದೇವೆಯೇ ? ಈ ಪ್ರಶ್ನೆ ನಮ್ಮ ಅಂತಃಪ್ರಜ್ಞೆಯನ್ನು ಆಗಾಗ ಕುಕ್ಕುತ್ತದೆ. ಏಕೆ ಬದುಕುತ್ತಿದ್ದೇವೆ ? ಎನ್ನುವುದನ್ನು ನಮಗೆ ನಾವೇ ಉತ್ತರಿಸಿಕೊಳ್ಳುವುದು ಸುಲಭವಲ್ಲ. ನಮ್ಮ ಸುತ್ತಲಿನ ಜೀವಂತ ಪ್ರಾಣಿ ಮತ್ತು ಸಸ್ಯ ವರ್ಗಗಳಿಂದ ನಾವು ಹೇಗೆ ಭಿನ್ನ ? ನಮ್ಮೊಳಗಿನ ಯಾವುದೋ ಅವ್ಯಕ್ತ ಚೇತನ ಮಾನವನ ಬಾಳಿಗೆ ಹೇಗೆ ಒಂದು ವಿಶಿಷ್ಟ ಸ್ವರೂಪವನ್ನು ಮುದ್ರಿಸಿದೆ ? ನಮ್ಮ ಆಸೆ ಆಕಾಂಕ್ಷೆಗಳು ಕೇವಲ ಭೋಗವಸ್ತು ಸಂಚಯನದಿಂದ ತೃಪ್ತವಾಗಬಲ್ಲುವೇ ? ಅಥವಾ ನಮಗೆ ಬೇರೆ ಒಂದು ಗುರಿಸಾಧನೆಯ ಕರ್ತವ್ಯವುಂಟೇ ? ಆ ಗುರಿ ಇಹಜೀವನಕ್ಕೆ ಹೇಗೆ ಬೆಸೆದುಕೊಂಡಿದೆ ? ಈ ಬಾಳಿಗೆ ಆಗಸದ ಅಗಲವನ್ನೂ ಸಾಗರದ ಆಳವನ್ನೂ ಅಂತರ್ಗತವಾಗಿ ರೂಢಿಸಿಕೊಡುವ ಗುರಿ ಯಾವುದು ? ಅದು ಲೌಕಿಕವೋ ಅಲೌಕಿಕವೋ ? ದೈವ ಪ್ರೇರಿತವೋ ಮಾನವ ಸಂಕಲ್ಪಬದ್ಧವೋ ? —ಹೀಗೆ ನೂರಾರು ವೈಚಾರಿಕ ಜಿಜ್ಞಾಸೆಗಳ ನಿಗಿನಿಗಿಯಲ್ಲಿ ಕುಂಡ ಮಾನವನ ಮನಸ್ಸು ಮತ್ತು ಹೃದಯ. ವಿಚಾರ ಮತ್ತು ಭಾವುಕತೆ, ಆತ್ಮವಿಮರ್ಶೆ ಮತ್ತು ಅನುಭವ, ಸಾರಗ್ರಹಣೆ, ಶಾಶ್ವತ ಮತ್ತು ನಶ್ವರ ಭೇದವಿವೇಕ, ತಿಳಿವಳಿಕೆ–ನಡವಳಿಕೆಗಳ ಸಾಮ್ಯ, ಇವು ಪ್ರಜ್ಞಾವಂತ ಮಾನವ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸಿದಾಗ ಬಾಳು ಅರ್ಥಪೂರ್ಣವಾಗುತ್ತದೆ. ಯಾವ ಪುರುಷಾರ್ಥಗಳಿಗಾಗಿ ದಿನದಿನವೂ ಶ್ರಮಿಸಬೇಕು ಎಂಬ ನಿಚ್ಚಳ ಬಟ್ಟೆಯನ್ನು ಅನಾವರಣ ಮಾಡುತ್ತದೆ. ಮನುಷ್ಯನಿಗೆ ಮಾತ್ರ ಸಾಧ್ಯವಾದ ಆತ್ಮಪ್ರಜ್ಞೆ, ದೈವಭಾವ, ಆನಂದಾನುಭೂತಿ, ಜೀವನೋತ್ಸಾಹಗಳು ಮೈಗೂಡಿಗೊಳ್ಳುತ್ತವೆ. ಈ ಇಹದ ಬಾಳಿನಲ್ಲಿ ಗಾಢವಾದ ಅಭೇದ್ಯವಾದ ಅಚಲವಾದ ನಂಬಿಕೆಯೊಂದು ಸುಭದ್ರವಾದ ಅಡಿಗಲ್ಲಾದರೆ ಮಾತ್ರವೇ ಮನುಷ್ಯನ ಮನುಷ್ಯತ್ವ ಹೀಗೆ ಉಳಿದು ಬೆಳೆದು ಊರ್ಧ್ವಮುಖವಾದೀತು. ಲಕ್ಷಾಂತರ ವರ್ಷಗಳಿಂದ ಮಾನವನ ಅಂತರಾಳದ ಅನ್ವೇಷಣೆ ಈ ನಿಟ್ಟಿನಲ್ಲಿ ಸಾಗುತ್ತಲೇ ಇದೆ. ಆರ್ಷೇಯ ಋಷಿವರ್ಯರಿಂದ ಹಿಡಿದು ಆಧುನಿಕ ಚಿಂತಕರವರೆಗೆ ಪದರ ಪದರವಾಗಿ ಸಾಕ್ಷಾತ್ಕಾರಗೊಳ್ಳುತ್ತಿರುವ ಜ್ಞಾನದೀವಿಗೆಯ ಬೆಳಕಿನಲ್ಲಿ ಮಾನವ ಕ್ರಮೇಣ ಪಶುಸ್ಥಿತಿಯನ್ನು ಬಿಟ್ಟು ಮಾನವನಾಗುತ್ತಿದ್ದಾನೆ. ಈ ಪಥದಲ್ಲಿ ನಮ್ಮ ಸಮಕಾಲೀನರಾದ ಶ್ರೀ ಡಿ.ವಿ.ಜಿ. ಹಚ್ಚಿಟ್ಟ ದೇದೀಪ್ಯಮಾನ ದಾರಿದೀಪ ಅವರ ಚಿಕ್ಕಗ್ರಂಥ 'ಬಾಳಿಗೊಂದು ನಂಬಿಕೆ'. ಅದೊಂದು ಋಷಿಸದೃಶ ಜೀವನದ ಮಥಿತದರ್ಶನ. ಮನಸ ಮಾಡಿದಷ್ಟೂ ಹೊಸ ಹೊಸ ದಿಗಂತಗಳೆಡೆಗೆ ಕರೆದೊಯ್ಯುವ ದಿವ್ಯಪ್ರಬಂಧ.

ಡಿ.ವಿ.ಜಿ. ಅವರ ಲಕ್ಷ್ಯವೆಲ್ಲ ನಮ್ಮ ಇಹಜೀವನದ ಉದ್ಧಾರದ ಕಡೆಗೆ. ಅತಿ ಸಣ್ಣ ವಿವರದಲ್ಲೂ ನಮ್ಮ ಬಾಳು ಬದುಕು ಹೇಗೆ ಒಂದು ಶಾಶ್ವತ ಮೌಲ್ಯದ ಬೆಳಕಿನಲ್ಲಿ ಸಾಗಬೇಕು ಎಂಬ ಹಂಬಲ ಅವರದು. ಅವರ ದೀರ್ಘಜೀವನದಲ್ಲಿ ಹರಡಿ ನಿಂತ ವೈಚಾರಿಕತೆ ಈ ದೇಹ, ಈ ಮನಸ್ಸು, ಈ ಆತ್ಮ ಎಲ್ಲವೂ ಸಮಗ್ರ ವಾದ ಸಮೀಚೀನ ಬದುಕಿಗೆ ಬೇಕಾದ ಸಮನ್ವಯ ಸಾಧಿಸುವ ಸೂತ್ರಗಳ ಅನ್ವೇಷಣೆಯೇ ಆಗಿತ್ತು. ಅತಿ ಸಾಮಾನ್ಯ ಜೀವವೂ ಹೇಗೆ ಅತ್ಯುನ್ನತ ಫಲದಾಯಕ ಬಾಳನ್ನು ಬಾಳಬಹುದು ಎನ್ನುವ 'ಜೀವನಧರ್ಮ ಶಾಸ್ತ್ರದ' ಸರಳ ಕೈಪಿಡಿಯಂತೆ ಈ ಚಿಕ್ಕ ಪುಸ್ತಕ 'ಬಾಳಿಗೊಂದು ನಂಬಿಕೆ' ಸಿದ್ಧವಾಯಿತು. ಅವರ ಉದ್ದೇಶವನ್ನು ಅವರು ಹೀಗೆ ವಿವರಿಸಿದ್ದಾರೆ :

> "ನಮ್ಮ ಬದುಕು ಚೆನ್ನಾಗಿ ಸಾಗಿ, ಸಾರ್ಥಕವಾಗಬೇಕಾದರೆ ನಮಗೆ ಒಳ್ಳೆಯ ಗುರಿಯ ತಿಳಿವಳಿಕೆಯೂ, ಆ ಗುರಿಯನ್ನು ಮುಟ್ಟಿಸಬಲ್ಲ ದಾರಿಯ ತಿಳಿವಳಿಕೆಯೂ ಇರಬೇಕು. ಅಂಥ ಜೀವನಯಾತ್ರೆಯ ನಕಾಶೆಯೊಂದನ್ನು ಗುರುತು ಮಾಡಲು ಈ ಲೇಖನದಲ್ಲಿ ಯತ್ನಿಸಿದೆ. ಇದು ಸುಲಭಸಾಧ್ಯವಾದ ಯೋಚನೆಯಲ್ಲ...
>
> "ಈ ಹೊತ್ತು ಲೋಕ ಹೇಗಿದೆ?...ಹಳೆಯ ನಿಶ್ಚಯಗಳನ್ನು ಹೋಗಲಾಡಿಸಿ ಹೊಸ ಸಂದೇಹ ಸಂಕ್ಷೋಭೆಗಳನ್ನು ಹರಡಿದೆ. ಈ ಹೊಸ ವಿಜ್ಞಾನವಿಕ್ಷಿಪ್ತವಾದ ವಾತಾವರಣದಲ್ಲಿ ನಾವು ನಮ್ಮ ಜೀವನ ಸಮಸ್ಯೆಗಳನ್ನು ಪುನರ್ವಿಚಾರದಿಂದ ವಿಮರ್ಶೆ ಮಾಡಬೇಕಾಗಿದೆ....ಇದು ಪಂಡಿತರಿಗಾಗಿ ಬರೆದ ಗ್ರಂಥವಲ್ಲ. ದೇಶದಲ್ಲಿ ಬಹುಮಂದಿಯಾದ ಅತಿಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿ ಕೊಂಡು ಬರೆದ ಬರವಣಿಗೆ ಇದು" (ಬಾಳಿಗೊಂದು ನಂಬಿಕೆ. ಪು. ೧೩).

ನಮ್ಮ ಈ ಇಪ್ಪತ್ತನೆಯ ಶತಮಾನ ಭಾರತದ ಇತಿಹಾಸದಲ್ಲಿ ಒಂದು ಅತ್ಯಂತ ಮಹತ್ವದ ಪರಿವರ್ತನೆಯನ್ನು ಕಂಡಿತು. ಆರ್ಷೇಯ ಮಹರ್ಷಿಗಳ ಅತಿ ಪ್ರಾಚೀನ ಮಹಾದರ್ಶನಗಳು ಮಾಸಿಹೋಗಿ, ನಮ್ಮ ಸಂಸ್ಕೃತಿ ಸಾಧಿಸಿದ್ದ ಅತ್ಯುತ್ಕೃಷ್ಟ ಬಾಳ ನಕ್ಷೆಗಳು ನಶಿಸಿ, ಪರದಾಸ್ಯದ ಅತಿಘೋರ ಅವನತಿಗೆ ತುತ್ತಾಗಿದ್ದ ಸಮಾಜ ವೊಂದರಲ್ಲಿ ಈ ಶತಮಾನದ ಪೂರ್ವಾರ್ಧದಲ್ಲಿ ಹುಟ್ಟಿಬಂದ ಮಹೋನ್ನತ ವ್ಯಕ್ತಿ ಗಳು ಒಂದು ಪ್ರಚಂಡ ವಿಚಾರಮಂಥನದ ಅಲೆಯೆಬ್ಬಿಸಿದರು. ಒಂದು ಹೊಸ ಚೈತನ್ಯ ನಾಡಿನ ಉದ್ದಗಲದಲ್ಲೂ ಚಿಮ್ಮಿ ನಿಂತು ಸಾಮಾನ್ಯ ಮಾನವನ ಅಂತರಂಗ ದಲ್ಲೂ ಆತ್ಮನಿಷ್ಠೆಯ ಅಭಿಕ್ರಮ ತುಂಬಿ ನಿಲ್ಲಲು ಪ್ರೇರೇಪಿಸಿತು. ಸಂಶಯ ಮತ್ತು ಶ್ರದ್ಧೆಗಳ ಮಧ್ಯದ ತುಮುಲದಲ್ಲಿ ದಾರಿಗಾಣದಿದ್ದ ಜನಸ್ತೋಮಕ್ಕೆ ನಿಜ ವಾದ ಮಾನವಧರ್ಮವೊಂದರಲ್ಲಿ ಗಾಢಶ್ರದ್ಧೆಯಿಟ್ಟು ನಿಶ್ಚಿತ ನೆಲೆಗಳನ್ನು ಕಂಡು ಕೊಳ್ಳಲು ಶಕ್ತಿದಾಯಕ ವಿಚಾರಕ್ರಾಂತಿಗೆ ಅನೇಕರು ನಾಂದಿ ಹಾಡಿದರು. ಅಂಥ ಒಂದು ಗುರುಪೀಠದಲ್ಲಿ ನಿಂತು, ಕನ್ನಡ ಜನವನ್ನು ಎಚ್ಚರಿಸಿ, ಕೈಹಿಡಿದು ನಡೆಸಿ ಜ್ಞಾನದೀವಿಗೆಯಾಗಿ ಬೆಳಗಿದ ಚೇತನಗಳಲ್ಲಿ ಡಿ.ವಿ.ಜಿ. ಅಗ್ರಪಂಕ್ತಿಯಲ್ಲಿದ್ದವರು. ಅವರ ಕಿರುನೋಟ ಈ ಸಣ್ಣ ಪುಸ್ತಕದ ತಿರುಳು.

ಇದೇ ಸಂಕ್ರಾಂತಿ ಸಮಯದ ಮಹಾತತ್ತ್ವಜ್ಞಾನಿ ಡಾ॥ ರಾಧಾಕೃಷ್ಣನ್ ಮತ್ತೊಂದು ಚಿಕ್ಕ ಗ್ರಂಥ "ರಿಕವರಿ ಆಫ್ ಫೈತ್" (ಶ್ರದ್ಧೆಯ ಪುನರುತ್ಥಾನ) ದಲ್ಲಿ ಇದೇ ಚಿಂತನಸರಣಿಯನ್ನು ಪ್ರತಿಬಿಂಬಿಸಿದ್ದಾರೆ.

> "ನಮಗೊಂದು ದರ್ಶನ ಬೇಕು, ದಿಕ್ಕುದೆಸೆಯೊಂದು ಬೇಕು, ಬದುಕಿನಲ್ಲಿ ಭರವಸೆ ಬೇಕು. ಇಲ್ಲವಾದರೆ ನಮ್ಮ ಇಂದಿನ ಅನಿಶ್ಚಿತಸ್ಥಿತಿ ನಮ್ಮನ್ನು ಶೂನ್ಯದ ಕಡೆಗೆ ಒಯ್ಯದಿರುವುದಿಲ್ಲ. ನಮ್ಮ ಮನಸ್ಸುಗಳು ಕಲಕಿವೆ. ಹೊಸ ಬೆಳಕನ್ನು ಎದಿರುನೋಡುತ್ತಿದ್ದೇವೆ...ಯಾವುದೋ ನಿಶ್ಚಿತ ಧಾರ್ಮಿಕ ಶ್ರದ್ಧೆಗಾಗಿ ಹಂಬಲಿಸುತ್ತಿದ್ದೇವೆ. ಯಾವುದು ಸರ್ವತ್ರ ಅಂಗೀಕಾರ ಯೋಗ್ಯವೋ, ಪ್ರಮಾಣಪೂರ್ವಕವೋ, ಸತ್ಯದ ನವಪ್ರಜ್ಞೆ ನೀಡಬಲ್ಲುದೋ, ಜಾಗೃತವಾದ ಸಾಮಾಜಿಕ ಹಿತದ ಅರಿವನ್ನುಂಟುಮಾಡುವುದೋ ಅಂತಹ ಸಂದೇಶ ನಮಗೆ ಬೇಕು. ಅಂತಹ ನಂಬಿಕೆಯೊಂದು ದೃಢವಾಗಬೇಕು. ಅದು ಅನಿವಾರ್ಯವೆನ್ನುವುದು ನಿಸ್ಸಂದೇಹ...ಆದರೆ ಅಂಥ ಶ್ರದ್ಧೆ ವಿಚಾರದ ಮೂಸೆಯಿಂದ ಹುಟ್ಟಬೇಕು. ಮಾನವನ ಇಚ್ಛಾ ಸ್ವಾತಂತ್ರ್ಯಕ್ಕೆ ಬೆಲೆ ಕೊಡುವಂತಹುದಾಗಬೇಕು. ಕೇವಲ ಅನಿಶ್ಚಿತ ನಕಾರಾತ್ಮಕ ನಂಬಿಕೆಯಾಗಬಾರದು. ಸೈದ್ಧಾಂತಿಕ ವಿಚಿತ್ರ ಪಂಥಗಳನೇಕವು ನಮ್ಮನ್ನು ಮುತ್ತುತ್ತಿವೆ. ಅವುಗಳೊಡನೆ ಹೋರಾಡುವ ಸಮರ್ಥ ದರ್ಶನ ನಮ್ಮ ನಂಬಿಕೆಯ ಪುನರುತ್ಥಾನದಿಂದ ಮೂಡಿಬರಬೇಕು. ಭ್ರಾಂತಿಗಳು ತೊಲಗಿ ಚೈತನ್ಯಮಯ ಬಾಳ ಗುರಿಗಳು ಉದಯಿಸಬೇಕು." ('ಮತಧರ್ಮದ ಪುನರುಜ್ಜೀವನ', ಪು. ೩೮.)

ಜಗತ್ತಿನ ಮಹಾಕ್ರಾಂತದರ್ಶಿಗಳಾದ ಅನೇಕ ವಿಚಾರವೇತ್ತರು ಆಧುನಿಕ ಮಾನವನಿಗೆ ಆತ್ಮದರ್ಶನದ ಇಂಥದೇ ಪಥವನ್ನು ಅನಾವರಣ ಮಾಡಿಕೊಡುವ ಪ್ರಸಿದ್ಧ ಗ್ರಂಥಗಳನ್ನು ರಚಿಸಿಕೊಟ್ಟಿದ್ದಾರೆ. ಅವು ಅವರ ಬಾಳಿನ ಅಮೃತಮಂಥನದ ಸಾರವಾದ ಕಿರುಗ್ರಂಥಗಳೆಂದು ಪ್ರಸಿದ್ಧವಾಗಿವೆ. ಮಹರ್ಷಿ ಟಾಲ್‌ಸ್ಟಾಯರ 'ದೇವರ ರಾಜ್ಯ ನಿನ್ನೊಳಗೇ ಇದೆ, ರಸ್ಕಿನ್ ಮಹಾಶಯನ 'ಕಟ್ಟಕಡೆಯವನಿಗೆ ನ್ಯಾಯ' (ಅನ್‌ಟು ದಿ ಲ್ಯಾಸ್ಟ್) ಅಮೆರಿಕದ ಎಮರ್‌ಸನ್ ಮತ್ತು ಥೂರೋ ಅವರ ಪ್ರಬಂಧಗಳು, ಫ್ರಾನ್ಸಿನ ರೊಮೇನ್‌ರೋಲಾ ಅವರ ದರ್ಶನಗ್ರಂಥಗಳು, ಮಹಾತ್ಮ ಗಾಂಧಿ ಅವರ 'ಹಿಂದ್ ಸ್ವರಾಜ್ಯ'. ರವೀಂದ್ರರ 'ಸಾಧನ'. ಕುವೆಂಪು ಅವರ 'ನಿರಂಕುಶಮತಿಗಳಾಗಿ', ಶಿವರಾಮಕಾರಂತರ 'ಬಾಳ್ವೆಯೇ ಬೆಳಕು'— ಇವುಗಳನ್ನು ಉದಾಹರಿಸಬಹುದು. ಈ ಅಮರ ಕಿರುಗ್ರಂಥಗಳ ಸಾಲಿನಲ್ಲಿ ಡಿ.ವಿ.ಜಿ. ಅವರ ಈ ಗ್ರಂಥ 'ಬಾಳಿಗೊಂದು ನಂಬಿಕೆ' ಒಂದು ಮಹತ್ವದ ಕಾಣಿಕೆ.

ಮನುಷ್ಯ ತನ್ನ ಬಾಳ್ವೆಯ ವ್ಯಾಪ್ತಿಯನ್ನು ತಾನೇ ಅರಿತುಕೊಳ್ಳಬೇಕು. ತನ್ನ ತಿಳಿವಿನ ಸಾಧ್ಯತೆಗಳನ್ನು ಎಲ್ಲ ಕ್ಷೇತ್ರಗಳಿಗೂ ವಿಸ್ತರಿಸಿಕೊಳ್ಳಬೇಕು. ಅದಕ್ಕೆ

ತಕ್ಕಂತೆ ಬಾಳನ್ನು ತಿದ್ದಿಕೊಳ್ಳಬೇಕು. ತನ್ನ ವ್ಯಕ್ತಿತ್ವದಿಂದ ಸಮಾಜದ ಸಮರಸ ಜೀವನಕ್ಕೆ ಇಂಬುಗೊಟ್ಟು ಸಾರ್ಥಕತೆಯ ತೃಪ್ತಿಯನ್ನು ಕಂಡುಕೊಳ್ಳಬೇಕು. ಡಿ.ವಿ.ಜಿ. ಅವರ ಸರಳ ಸುಂದರ ತರ್ಕಶೈಲಿ ಈ ದಿಸೆಯಲ್ಲಿ ನಮ್ಮನ್ನು ಕೈಹಿಡಿದು ನಡೆಸುತ್ತದೆ.

೨

ಶ್ರೀಸಾಮಾನ್ಯನ ಅಂತಃಪ್ರಜ್ಞೆಯನ್ನು ಎಚ್ಚರಿಸಿ ಅವನಿಗೆ ಒಂದು ಬಾಳ ಬಟ್ಟೆಯ ಅನ್ವೇಷಣೆಯ ಆಕಾಂಕ್ಷೆಯನ್ನು ತುಂಬುವ ಉದ್ದೇಶ ಈ ಪ್ರಬಂಧದ್ದು, ಇಂದಿನ ನಮ್ಮ ಮನಃಸ್ಥಿತಿಯ ವಿಶ್ಲೇಷಣೆ ಮಾಡಿದ್ದಾರೆ ಡಿ.ವಿ.ಜಿ. ಯಾವುದೋ ಲೋಕರೂಢಿಯನ್ನು ಗಾಣದ ಎತ್ತಿನಂತೆ ಅನುಸರಿಸಿ ನಡೆದುಬಿಟ್ಟರೆ ಸಾಕು ಎಂಬ ಒಂದು ಜಡಪ್ರವೃತ್ತಿಯನ್ನೂ, ಅದನ್ನು ಮೀರಿ ತನ್ನ ಬುದ್ಧಿ ಹೃದಯ ಗಳಿಗೆ ಚಾಲನೆಕೊಟ್ಟು "ಹೊಟ್ಟೆಬಟ್ಟೆಗಳ ಚಿಂತೆಗಿಂತ ಬೇರೆಯಾದರೂ ಆ ಚಿಂತೆಗೆ ಒಡಗೂಡಿ ಇರಬೇಕಾದ ದೈವ, ಆತ್ಮ, ಭಕ್ತಿ, ಆನಂದ—ಇವುಗಳ ಸಾಕ್ಷಾತ್ಕಾರದ ಹಂಬಲ ಬಳಸಿಕೊಂಡ ಚೈತನ್ಯಮಯ ಪ್ರವೃತ್ತಿಯನ್ನೂ ಸ್ಪಷ್ಟವಾಗಿ ಗುರುತಿಸಿ ಕೊಡುತ್ತಾರೆ. 'ಅವನವನ ಗುರಿ ಅವನವನಿಗೆ' ಎಂದು ಹೇಳುತ್ತ 'ಕನಕದಾಸನಿಗೆ ಬಂದಿದ್ದ ನಂಬಿಕೆ ಕಬ್ಬಿಣದ ದಾಸನಿಗೆ ಬಾರದೇ ಹೋಗಬಹುದು...ತನ್ನ ಕಣ್ಣಿನಂತೆ ತನ್ನ ಗುರಿ, ತನ್ನ ಕಾಲಿನಂತೆ ತನ್ನ ದಾರಿ' ಎಂದಿದ್ದಾರೆ.

ತನಗೆ ತಕ್ಕುದಾದ ನಿಶ್ಚಿತ ನಂಬಿಕೆಯನ್ನು ಅರಸುವುದು ಹೇಗೆ? ಲೋಕದ ರೂಢಿ, ಗುರು, ಗ್ರಂಥ ಎಲ್ಲವೂ ನಮಗೆ ಸಹಾಯಕ. ಅದೊಂದು ಅಂಗಡಿಯ ಹಾಗೆ. ನಮಗೆ ಬೇಕಾದುದಷ್ಟನ್ನು ನಮ್ಮ ಸ್ವಭಾವ, ಸಂದರ್ಭ ಸಾಮರ್ಥ್ಯಗಳಿಗನು ಗುಣವಾಗಿ ನಾವು ಆರಿಸಿಕೊಳ್ಳಬೇಕು. ಇದಕ್ಕೆ ಮನಸ್ಸಿನ ಪರಿಪಾಕವೊಂದು ಬೇಕು. ಲೋಕಶಿಕ್ಷಣ—ಅನುಭವಜನ್ಯಜ್ಞಾನ ಮತ್ತು ಆರ್ಷೇಯ ಚಿಂತನ ಪರಂಪರೆಗಳಿಂದ ಲಭ್ಯವಾಗುವ ಬೆಳಕು ಇವು ನಮಗೆ ಅತ್ಯಂತ ಶ್ರೇಷ್ಠ. ಗುರಿ ಎಂಬುದು ಹೆಜ್ಜೆ ಹೆಜ್ಜೆಯಾಗಿ ಅನಾವರಣವಾಗುತ್ತದೆ. ಮೊದಲ ಮೆಟ್ಟಿಲನ್ನು ಗುರುತಿಸಿಕೊಂಡು ನಮ್ಮ ದಿಕ್ಕನ್ನು ಖಚಿತಪಡಿಸಿಕೊಂಡರೆ ಮಿಕ್ಕೆಲ್ಲ ಸುಲಭ. ಒಳ್ಳೆಯದು–ಕೆಟ್ಟದು, ಚಿರಂತನವಾದದ್ದು–ಕ್ಷಣಿಕವಾದದ್ದು, ಆತ್ಮೋನ್ನತಿಗೆ ಸಾಧಕವಾದದ್ದು–ಬಾಧಕವಾದದ್ದು, ಸಮಾಜದ ಆರೋಗ್ಯಕ್ಕೆ ಪೋಷಕವಾದದ್ದು–ಮಾರಕವಾದದ್ದು—ಇವುಗಳ ಆಯ್ಕೆಯ ವಿವೇಕ ಗಳಿಸಬೇಕು. ಈ ದಿಸೆಯಲ್ಲಿ ಪುರುಷಾರ್ಥ ಚತುಷ್ಟಯ ನಮಗೆ ಒಳ್ಳೆಯ ಮಾರ್ಗದರ್ಶಿ. ಧರ್ಮ–ಅರ್ಥ–ಕಾಮ–ಮೋಕ್ಷಗಳ ಸರಳ ವಿವರಣೆ ಕೊಡುತ್ತ ಡಿ.ವಿ.ಜಿ.—

"ನಮ್ಮ ಜೀವನವು ಒಂದು ಹದದಲ್ಲಿ ಸಾಗಿ ತೃಪ್ತಿಕರವೆನಿಸಲು ಬಹು ವಿಶೇಷದ ಗ್ರಂಥಪಾಂಡಿತ್ಯವೇನೂ ಬೇಕಾಗಿಲ್ಲ. ಒಂದೆರಡು ಸರಳ ಸೂತ್ರಗಳನ್ನು ಚೆನ್ನಾಗಿ ಮನಸ್ಸಿಗೆ ಅರ್ಥಮಾಡಿಕೊಂಡು ಗಟ್ಟಿಯಾಗಿ ಹಿಡಿದು

ಅನುಸರಿಸಿದರೆ ಸಾಕು. ಇದಕ್ಕೆ ಮಹಾತ್ಮ ಗಾಂಧಿಯವರ ಜೀವನವೇ ದೊಡ್ಡ ನಿದರ್ಶನ ; ಅವರೇನೂ ಮಹಾಪಂಡಿತರಲ್ಲ ; ನೂರಾರು ಗ್ರಂಥಗಳನ್ನು ಶೋಧಿಸಿದವರಲ್ಲ. ನಾಲ್ಕೈದು ತತ್ತ್ವಗಳಲ್ಲಿ ನಂಬಿಕೆಯಿಟ್ಟು ಶ್ರದ್ಧೆಯಿಂದ ಆ ವ್ರತ ನಡೆಸಿ ಜೀವನವನ್ನು ಸಾರ್ಥಕಮಾಡಿಕೊಂಡರು" —ಎಂದಿದ್ದಾರೆ.

ಮನಸ್ಸೇ ಎಲ್ಲಕ್ಕೂ ಮೂಲ. ನಮ್ಮ ಜನತೆಯ ಸ್ಥಿತಿ ಉತ್ತಮಗೊಳ್ಳಲು ಅವರ ಭಾವನೆಗಳು ಬದಲಾಗಬೇಕು. ಆಧುನಿಕ ಜ್ಞಾನಸಾಮ್ರಾಜ್ಯದ ಬೆಳಕಿನಲ್ಲಿ ಬೆಳೆಯಬೇಕು.

ಒಂದು ನಿರ್ಜೀವಿ ಯಂತ್ರದಂತೆ ಬದುಕನ್ನು ಸಾಗಿಸುವ ಆಧುನಿಕತೆ ನಮಗೆ ಯಾವ ಜೀವನೋತ್ಸಾಹವನ್ನು ತಂದೀತು ? ಜೀವನ ಸೌಂದರ್ಯವಾಗಲಿ ಜೀವನ ಧರ್ಮ ಸಾಧನೆಯಾಗಲಿ ಹೇಗೆ ಅರಿವಾದೀತು ? ಈಗ ಹಳಸಿರುವ ಬದುಕಿಗೆ ಹೊಸ ಚಿಗುರೂ ಹೊಸ ಮೊಗ್ಗೂ ಅಂಕುರಿಸಲು 'ಯಂತ್ರದ' ಬದುಕಿನಿಂದ ನಾವು ಗಿಡದ ಬದುಕಿಗೆ ಬದಲಿಸಬೇಕು, ಆ ಕಲೆಯನ್ನು ಕೇವಲ ಮಾತಿನ ಆಡಂಬರದಿಂದ ಗಳಿಸುವುದು ಸಾಧ್ಯವೇ ? ಬಾಳು ಹಸನಾಗಬೇಕು. ನಮ್ಮ ಅಳುಬುರುಕ ವೇದಾಂತ, ವಿವೇಕಶೂನ್ಯ ವೈರಾಗ್ಯ. ನಿರ್ವೀರ್ಯತೆ. ನಮ್ಮಲ್ಲಿ ನಮಗೇ ನಂಬಿಕೆಯಿಲ್ಲದ ಮನೋವೃತ್ತಿ ಹೋಗಬೇಕು. ಈ ದೇಶದ ಸಮೃದ್ಧ ಪ್ರಕೃತಿದತ್ತ ಶಕ್ತಿವಿಶೇಷಗಳನ್ನು ಸರ್ವತ್ರ ಸುಖಜೀವನಕ್ಕೆ ಬಳಸಿಕೊಳ್ಳುವ ರಚನಾತ್ಮಕ ಚೈತನ್ಯ ತುಂಬಿಕೊಂಡಾಗ ನಮ್ಮ ನಂಬಿಕೆ ಸತ್ವಪೂರ್ಣ—ಎಂದು ವಿವರಿಸಿದ್ದಾರೆ ಡಿ.ವಿ.ಜಿ.

ಸೋಲುಮನಸ್ಸಿನ ಪ್ರತಿಯಾಗಿ ಗೆಲುಮನಸ್ಸಿನ ಧ್ವನಿ ಹೇಗೆ ಅತಿ ಪ್ರಾಚೀನ ಭಾರತೀಯರಲ್ಲಿ ತುಂಬಿ ಹರಿಯಿತು ಎಂದು ವಿವರಿಸಿ, ಮಧ್ಯೆ ಚಾರಿತ್ರಿಕ ಕಾರಣಗಳಿಂದ 'ಧೈರ್ಯನಷ್ಟದ ಯುಗ' ಪ್ರಾಪ್ತವಾಯಿತು ಎಂದು ತಿಳಿಸಿದ್ದಾರೆ. ವೇದಾಂತದ ಆಭಾಸ ತಲೆದೋರಿದ್ದು ನಮ್ಮ ಆಚಾರನಿಷ್ಠೆ ಮಾಯವಾಗಿ ಶುಷ್ಕ ಪಾಂಡಿತ್ಯಕ್ಕೆ ನಮ್ಮ ಹಿರಿಯರು ಮನಸೋತಾಗ

"ಜೀವನಾಕಾಂಕ್ಷೆಯಲ್ಲಿಯೂ ದಿಗ್ವಿಜಯ ನಿರೀಕ್ಷೆಯಲ್ಲಿಯೂ ಆರಂಭವಾದ ವೇದಭೇದನೆಯ ಹೊಳೆ ಕ್ರಮೇಣ ದೊಡ್ಡದಾಗಿ ಪರತತ್ತ್ವವಿಚಾರದ ಮಹಾನದಿಯಾಗಿ ಎರಡು ಶಾಖೆಗಳಾಗಿ ಒಡೆಯಿತು. ಒಂದು ಶಾಖೆ ತರ್ಕದ ಘಟಪಟಾದಿ ಮರುಭೂಮಿಗೆ ಹರಿದು ಮರಳಿನಲ್ಲಿ ಇಂಗಿಹೋಯಿತು. ಇನ್ನೊಂದು ಅಳುಗೂಳಿತನದ ಜವುಗು ನೆಲದ ಹೂಳಿನೊಳಕ್ಕೆ ಹರಿದು ಬುರುಡೆ ರೊಚ್ಚಾಗಿದೆ. ಹಿಂದೆ ಇದ್ದ ಪವಿತ್ರನದಿಯ ಅಮೃತಧಾರೆಯನ್ನು ನಮ್ಮ ಜೀವನಕ್ಷೇತ್ರದೊಳಕ್ಕೆ ಹರಿಯಿಸುವುದು ಈಗ ನಮ್ಮ ಕರ್ತವ್ಯ." ಇದು ಡಿ.ವಿ.ಜಿ. ಅವರ ನಂಬಿಕೆ. ಅವರ ಜೀವನ ಸಂದೇಶದ ಹರಹು. ಉಪನಿಷತ್ತು. ಗೀತೆ ಮತ್ತು ಸುಭಾಷಿತಗಳನ್ನಾಧರಿಸಿ ಅವರು ಬಾಳಿಗೊಂದು ನಂಬಿಕೆಯ ಹೊಸ ನಕ್ಷೆಯನ್ನು ರೂಪಿಸಿಕೊಟ್ಟಿದ್ದಾರೆ.

"ಮಾನವ ಜನ್ಮ ದೊಡ್ಡದು, ಇದನು ಹಾಳು ಮಾಡಲಿಬೇಡಿ ಹುಚ್ಚಪ್ಪಗಳಿರಾ" ಎಂದು ಎಚ್ಚರಿಸಿದ ದಾಸಪಂಥ ಜೀವನ ವಿಷಯದಲ್ಲಿ ನಿರುತ್ಸಾಹ, ಖಿನ್ನಭಾವ ಸಲ್ಲದು, ಶ್ರದ್ಧೆ ಗೌರವ ಮತ್ತು ದೈವಭಕ್ತಿ ಬೆಳಸಿಕೊಂಡು ಆನಂದದಿಂದ ಬಾಳಿ ಎಂದಿತು. ಅಂತೆಯೇ ಡಿ.ವಿ.ಜಿ. ಖಚಿತವಾಗಿ ಧ್ವನಿಯೆತ್ತಿ ಹೇಳಿದ್ದಾರೆ :

> "ಹಣೆಯುಬರಹದ ಗೊಣಗಾಟ ನಮ್ಮಿಂದ ತೊಲಗಬೇಕು ; ಗಂಡು ತೇಜಸ್ಸು ಬರಬೇಕು. ಅಳುಮೋರೆ ಹೋಗಬೇಕು : ನಗುಮುಖ ಬರಬೇಕು. ಖಿನ್ನವಿರಕ್ತಿ ಹೋಗಬೇಕು : ಧೀರ ಪ್ರಯತ್ನ ಬರಬೇಕು... ಭಕ್ತಿ ದೇವರಿಗೆ ತಲುಪಬೇಕೆಂದು ಪೂರ್ವಭಾವನೆ : ಅದು ದೇವರೇ ಸೃಷ್ಟಿಸಿರುವ ಜೀವಲೋಕಕ್ಕೆ ತಲುಪಬೇಕಾದ್ದೆಂದು ನಮ್ಮ ಭಾವನೆ...ಲೋಕದ ಜೀವನಕ್ಕೆ ಉಪಯೋಗವಾಗಬೇಕು. ಇದು ನಮ್ಮ ಮತ. ನಮ್ಮ ಭಕ್ತಿಯಲ್ಲಿ ಪೌರುಷ ಮುಖ್ಯಾಂಶ."

೩

ಈಗ್ಗೆ ಕೇವಲ ಎರಡು ಮೂರು ಶತಮಾನಗಳಿಂದೀಚೆಗೆ ಮಾನವನ ಮನಸ್ಸನ್ನು ಸೆರೆಹಿಡಿದು ಅವನ ಸಮಸ್ತ ಸಾಮರ್ಥ್ಯಗಳನ್ನೂ ಉಜ್ವಲಗೊಳಿಸಿ ಅತ್ಯದ್ಭುತ ಸಾಧನೆಗಳನ್ನು ಸಾಧಿಸಿ ನಿಂತ ವ್ಯಾಪಕಕ್ಷೇತ್ರ ವೈಜ್ಞಾನಿಕ ಸಂಶೋಧನೆಗಳದು. "ಈ ಪ್ರಪಂಚವನ್ನು ಕುರಿತ ಪ್ರಶ್ನೆ, ಪರೀಕ್ಷೆ, ಶೋಧನೆ—ಇದು ಏಕೆ ? ಅದು ಹೇಗೆ ? ಎಂಬ ಹುಡುಕಾಟ". ಸ್ವತಂತ್ರ ವಿಚಾರ ವಿಮರ್ಶೆಯ ನೂತನ ಸಾಹಸಪೂರ್ಣ ಸೀಮೋಲ್ಲಂಘನೆಗೆ ವೈಜ್ಞಾನಿಕ ವಸ್ತುನಿಷ್ಠ ಅಧ್ಯಯನ ಇಂಬುಗೊಟ್ಟು ಹಿಂದೆಂದೂ ಕಂಡರಿಯದ ಪ್ರಚಂಡ ಶಕ್ತಿವಿಶೇಷಗಳನ್ನು ಮಾನವನ ಕೈಗಿತ್ತಿತು. ನಮ್ಮ ನಂಬಿಕೆಗಳನ್ನೆಲ್ಲ ಈ ವಿಚಿಕಿತ್ಸಕ ಬುದ್ಧಿ ತರ್ಕದ ಒರೆಗಲ್ಲಿಗೆ ಹಚ್ಚಿತು. ಪರಂಪರಾನುಗತವಾದ ಜಡಕರ್ಮಗಳನ್ನೆಲ್ಲ ಜರಡಿಯಾಡಿ ಜೊಳ್ಳನ್ನು ತೂರಿಹಾಕಿತು. ಡಿ.ವಿ.ಜಿ. ಈ ವಿಜ್ಞಾನಕ್ಷೇತ್ರ ಹೇಗೆ ಹಬ್ಬಿ ನಿಂತಿದೆ, ಅದು ಹೇಗೆ ಈಗ ನಮ್ಮ ಮನೋವಿಕಾಸದ ಅವಿಭಾಜ್ಯ ಅಂಶ ಎಂದು ಸಮಗ್ರವಾಗಿ ವಿಶ್ಲೇಷಿಸಿದ್ದಾರೆ :

> "ಪದಾರ್ಥ ಸ್ವರೂಪ ವಿವೇಕ, ಪದಾರ್ಥ ಜಾತಿವಿಭಾಗ ಮತ್ತು ಪದಾರ್ಥ ಪರಸ್ಪರ ಸಂಬಂಧ ನಿಶ್ಚಯ ಇವು ಮೂರು ವಿಜ್ಞಾನ ವಿದ್ಯಾರ್ಥಿಯ ಕ್ರಿಯೆಗಳು...ಬಹುವಿಸ್ತಾರವಾದದ್ದು ಈ ವಿಜ್ಞಾನಶಾಸ್ತ್ರ : ಮತ್ತು ಅದು ಇನ್ನೂ ಬೆಳೆದು ವಿಸ್ತಾರವಾಗುತ್ತಲೇ ಇರತಕ್ಕದ್ದು. ಅದರ ಮುಖ್ಯ ಗುಣ ಸ್ವತಂತ್ರ ವಿಷಯಪರೀಕ್ಷೆ. ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ ಸತ್ಯಾನ್ವೇಷಣೆಯೇ ವಿಜ್ಞಾನ" ಎಂದಿದ್ದಾರೆ.

ಅಂದಮೇಲೆ ವಿಜ್ಞಾನಕ್ಷೇತ್ರ ನಮ್ಮ ಆತ್ಮಪೋಷಕ ಜೀವನಧರ್ಮಕ್ಕೆ ವಿರೋಧವಾಗಬೇಕಾಗಿಲ್ಲ. ಬದಲಾಗಿ ಆಳವಾಗಿ ಈ ಭೌತಪ್ರಪಂಚವನ್ನು ಅನ್ವೇಷಿಸಿದಷ್ಟೂ ಅತಿಗಹನ ಸತ್ಯಾಂಶಗಳ ಬೆಳಕನ್ನು ವಿಸ್ತರಿಸುತ್ತಾ ಈ ಸೃಷ್ಟಿಯ ಬೃಹತ್ತನ್ನೂ

ಮಹತ್ತನ್ನೂ ನಮ್ಮ ಪ್ರಜ್ಞೆಯ ಕಕ್ಷೆಯೊಳಕ್ಕೆ ತಂದುಕೊಡುತ್ತದೆ. ಆದರಿಂದ ನಮ್ಮ ಆತ್ಮವಿಶ್ವಾಸವೂ ಬಾಳಿನ ಸಾಧ್ಯತೆಗಳಲ್ಲಿ ಗಾಢವಾದ ನಂಬಿಕೆಯೂ ಪಸರಿಸಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ಪ್ರಕೃತಿವಿಜ್ಞಾನ ಹಾಗೂ ಸಮಾಜವಿಜ್ಞಾನ ಹೇಗೆ ಪರಸ್ಪರ ಪೂರಕ ಎಂಬುದನ್ನು ಡಿ.ವಿ.ಜಿ. ಪದರ ಪದರವಾಗಿ ವಿವರಿಸಿದ್ದಾರೆ; " ಇಂಥ ವಿಜ್ಞಾನವನ್ನು ನಾವು ಬಿಡಲಾಗದು. ಅದನ್ನು ನಮ್ಮ ಜೀವನಕ್ರಮದೊಳಕ್ಕೆ ಹದಪರಿತು ತಂದುಕೊಳ್ಳಬೇಕು " ಎಂದಿದ್ದಾರೆ.

ವಿಜ್ಞಾನ ಎಷ್ಟೋ ವಿಕ್ರಮಗಳನ್ನು ಸಾಧಿಸಿದರೂ ಅದಕ್ಕೆ ಅತೀತವಾಗಿ ನಿಲ್ಲುವ ಜೀವತತ್ತ್ವ ಮತ್ತು ಮನಸ್ತತ್ತ್ವಗಳ ಮರ್ಮವನ್ನು ಅದು ತರ್ಕದಿಂದ ಸಿದ್ಧ ಮಾಡಲಾರದು. ಇಂದ್ರಿಯಾನುಭವ ಲೋಕಕ್ಕೆ ನಿಲುಕದಿದ್ದರೂ ಅಂತರಾತ್ಮನಿಗೆ ಸತತವೂ ವೇದ್ಯವಾಗುವ ಗಾಢವಾದ ಪ್ರಭಾವವೊಂದು ಉಂಟು, ಅದೇ ಮಾನವನ ಮಾನವೀಯತೆಯ ಮೌಲ್ಯಗಳಿಗೆ ಜೀವಂತ ಆಧಾರ ಎಂದು ವಿಜ್ಞಾನವೂ ಒಪ್ಪ ಬೇಕಾಗುತ್ತದೆ. ಡಿ.ವಿ.ಜಿ. ಯಾವುದನ್ನು 'ಧರ್ಮೇಂದ್ರಿಯ' ಎಂದು ಕರೆದಿದ್ದಾರೋ ಅದು ನಮ್ಮ ನಂಬಿಕೆಯನ್ನು ದೃಢಪಡಿಸಿ ಬಾಳಿನ ಮುಖ್ಯ ಕರ್ತವ್ಯಗಳನ್ನು ಸ್ಪಷ್ಟ ಮಾಡುತ್ತದೆ. ಆದರೆ ನಮ್ಮ ಸದಸದ್ವಿವೇಕ ಎಂದೂ ಅವೈಜ್ಞಾನಿಕ ಎನಿಸಲಾರದು. ಮನುಷ್ಯಪ್ರಯತ್ನಕ್ಕೆ ಅವನ ವಿವೇಕ ಪ್ರಚೋದನೆಗೆ ವಿಜ್ಞಾನದ ಬೆಂಬಲ ಅತ್ಯಮೂಲ್ಯ ವಾದುದು. ಅದರ ಸಹಸ್ರಾರು ಆವಿಷ್ಕಾರಗಳು ಬಾಳಿನಲ್ಲಿ ಹಾಸುಹೊಕ್ಕಾಗಿ ನಿಂತು ಪ್ರತಿಯೊಂದು ವ್ಯವಹಾರದಲ್ಲೂ ತಾರ್ಕಿಕ ಸಮಂಜಸತೆ ಅತ್ಯಗತ್ಯ ಎಂದು ತೋರಿಸಿಕೊಡುತ್ತದೆ. ಆದರಿಂದ ಹುಟ್ಟಿಬಂದಿರುವ ತಂತ್ರಜ್ಞಾನ ಯಂತ್ರಜ್ಞಾನಗಳು ಅನೇಕ ವೇಳೆ ನಮ್ಮ ಬಾಳನ್ನು ಅನಾವಶ್ಯಕ ಕಷ್ಟಸಂಕಟಗಳಿಗೀಡುಮಾಡಿ ವಿಜ್ಞಾನಿ ಯಾವಾಗಲೂ ಲೋಕಕಂಟಕ ಶಕ್ತಿಗಳಿಗೆ ಬೆನ್ನೆಲುಬಾಗಿ ನಿಲ್ಲುವ ರಾಕ್ಷಸ ಎಂಬ ಭಾವನೆ ಹುಟ್ಟಿಬಂದಿರುವುದೂ ನಿಜ. ಈ ಹಿಂದೆ ಮತಧರ್ಮವನ್ನೂ ಹೀಗೆ ಹಲವು ಸ್ವಾರ್ಥಿಗಳು ದುರುಪಯೋಗಪಡಿಸಿಕೊಳ್ಳಲಿಲ್ಲವೇ ? ಧರ್ಮದ ಹೆಸರಿನಲ್ಲೇ ಕೊಲೆ, ಯುದ್ಧ, ಶೋಷಣೆ, ರಾಕ್ಷಸತನಗಳು ನಡೆಯಲಿಲ್ಲವೇ ? ಎಂದು ಪ್ರಶ್ನಿಸುತ್ತಾರೆ ಡಿ.ವಿ.ಜಿ. ವಿಜ್ಞಾನವನ್ನು ವಿವೇಕದಿಂದ ಬಳಸಿಕೊಳ್ಳಬೇಕು. ಅದು ಲೋಕ ಕಲ್ಯಾಣಕಾರಿಯಾಗಲೂ ಬಲ್ಲದು. ಇವನ್ನು ಯಾರು ಅಲ್ಲಗಳೆಯಲಾದೀತು ? ಆಚಾರ್ಯ ವಿನೋಬ ಭಾವೆ ಈ ಬಗ್ಗೆ ಗಾಢವಾದ ಚಿಂತನೆ ನಡೆಸುತ್ತಾ ಒಂದೆಡೆ ಹೀಗೆ ಹೇಳಿದ್ದಾರೆ :

> " ಇಂದು ವಿಜ್ಞಾನವೇ ಅಧ್ಯಾತ್ಮಚಿಂತನೆ ಮಾಡುವಂತೆ ಒತ್ತಾಯಿಸು ತ್ತಿದೆ. ಹಿಂದಿನ ಋಷಿಗಳು ವ್ಯಕ್ತಿಗತವಾಗಿ ಸಾಧನೆ ಮಾಡುತ್ತಿದ್ದುದನ್ನೇ ಈಗ ನೀವು ಸಾಮೂಹಿಕವಾಗಿ ಮಾಡಿ ಎನ್ನುತ್ತಿದೆ. ಆಗಲೇ ನಿಮಗೆ ವಿಜ್ಞಾನ ಕಲ್ಯಾಣಕಾರಿಯಾದೀತು. ಇಲ್ಲವಾದರೆ ಎಲ್ಲವನ್ನೂ ನಾಶಮಾಡೀತು. ವಿಜ್ಞಾನದ ಭೂಮಿಕೆಗೆ ಏರಿದ ಋಷಿ ಏನು ಮಾಡುತ್ತಿದ್ದ ? 'ನಾನು' ಮತ್ತು 'ನನ್ನ' ಎಂಬುದನ್ನು ಬಿಟ್ಟುಬಿಡುತ್ತಿದ್ದ. ವಿಜ್ಞಾನ ಯುಗದಲ್ಲಿ

ಸಮಗಿದು ಅನಿವಾರ್ಯ. ಇರುವುದು ಎರಡೇ ಮಾರ್ಗ. ಸಾಮೂಹಿಕ ಸಾಧನೆ ಅಥವಾ ಸರ್ವನಾಶ" (ಆತ್ಮಜ್ಞಾನ—ವಿಜ್ಞಾನ ಗ್ರಂಥದಿಂದ).

"ವಿಜ್ಞಾನಕ್ಷೇತ್ರದ ಒಳಗಡೆಯೆಲ್ಲ ರಹಸ್ಯ ಬೀಜಗಳು ಹುದುಗಿಕೊಂಡಿವೆ. ಇದು ವೇದಾಂತಕ್ಷೇತ್ರಕ್ಕೆ ಹೊಸದಲ್ಲ" ಎನ್ನುತ್ತಾರೆ ಡಿ.ವಿ.ಜಿ. "ವೇದಾಂತ ಮತ್ತು ವಿಜ್ಞಾನ ಇವುಗಳ ಸಮನ್ವಯ ಸೂತ್ರಗಳೇ ನಮ್ಮ ನಂಬಿಕೆಗಳಿಗೆ ಆಧಾರವಾಗಬೇಕು. ಇದು ಹೊಸ ಯುಗದಲ್ಲಿ ಬಾಳುವ ಕಲೆ. ವಿಜ್ಞಾನ ಪ್ರಯತ್ನವೂ ಅದೃಷ್ಟಸಹನೆಯೂ ವಿವೇಕಿಯ ಮತದಲ್ಲಿ ಮಿಳಿತವಾಗಿರುತ್ತವೆ. ಪೌರುಷವೂ ವೈರಾಗ್ಯವೂ ಬೆರೆತಿರುತ್ತದೆ. ಅವನ ನಂಬಿಕೆಗೆ ಆತ್ಮವಿಶ್ವಾಸ ಒಂದು ಕಣ್ಣು: ದೈವಭಕ್ತಿ ಇನ್ನೊಂದು ಕಣ್ಣು" ಎಂದು ಡಿ.ವಿ.ಜಿ. ಸೂತ್ರಿಸಿದ್ದಾರೆ. ಧರ್ಮವಿವೇಕವೂ ವಿಜ್ಞಾನ ದೃಷ್ಟಿಯೂ ಹೊಂದಿಕೊಂಡಷ್ಟೂ ನಮ್ಮ ಜೀವನಕ್ಕೆ ಕಳೆಯೇರುತ್ತದೆ ಎಂದಿದ್ದಾರೆ.

ವಿಜ್ಞಾನ ವೈಪರೀತ್ಯದಿಂದ ಅಥವಾ ಧಾರ್ಮಿಕ ಅಂಧಶ್ರದ್ಧೆಯಿಂದ ಪ್ರಪಂಚದ ಸಮಾಜಗಳು ನೀತಿಗೆಟ್ಟು ನಡೆಯುತ್ತಿವೆ. ಮತ್ತೆ ನೀತಿವಿವೇಕ ಮೂಡಿಬರಲು ಮಾನವಧರ್ಮನಿಷ್ಠೆ ಅಗತ್ಯ. ಬಾಳಿಗೊಂದು ಆಧಾರಭೂತ ನಂಬಿಕೆ ಬೇಕು. ಕೇವಲ ಐಹಿಕಭೋಗನಿಷ್ಠೆಯಾಗಲೀ, ನಕಾರಾತ್ಮಕ ನಾಸ್ತಿಕತೆಯಾಗಲೀ, ಬೌದ್ಧಿಕ ಬೆಳವಣಿಗೆಯ ಅಥವಾ ವಿವೇಕೋದಯದ ಚಿಹ್ನೆಗಳಲ್ಲ. ಇದನ್ನು ವೇದಾಂತ ಮತ್ತು ವಿಜ್ಞಾನಗಳೆರಡೂ ಒಪ್ಪುತ್ತವೆ. ಆದರೆ ಭಾರತೀಯರಾದ ನಾವು ಪಾಶ್ಚಾತ್ಯ ದೇಶಗಳಿಂದ ಬಂದ ನವನಾಗರಿಕತೆಯ ಹೆಸರಿನಲ್ಲಿ "ಭೋಗಪದ್ಧತಿ ಧನವ್ಯಾಮೋಹಪದ್ಧತಿ"ಗಳನ್ನು ಮಾತ್ರ ಅಭ್ಯಾಸಮಾಡಿಕೊಳ್ಳುತ್ತಿದ್ದೇವೆ. ಡಿ.ವಿ.ಜಿ. ಅವರು ಹೇಳುವಂತೆ, "ಪರಂಗಿಯವರ ಆತ್ಮಶಿಕ್ಷಣವನ್ನು ನಾವು ದೂರವಿಟ್ಟು ಅವರ ಮೇಲ್ಮೇಲಿನ ಷೋಕು 'ಫ್ಯಾಷನ್ನು'ಗಳಿಗೆ ಮನಸೋತಿದ್ದೇವೆ. ಇಂಥ ಕಾಲದಲ್ಲಿ ನಮ್ಮ ನೀತಿ ವಿವೇಕವೂ ಸ್ವಲ್ಪ ತಲೆಕೆಳಗಾದರೆ ಆಶ್ಚರ್ಯವೇನು?" ಈ ಅವನತಿ ಮೊದಲು ಪಟ್ಟಣಿಗರನ್ನು ಆವರಿಸಿ ಕ್ರಮೇಣ ಹಳ್ಳಿಗರ ನೀತಿನಿಷ್ಠೆ ಸತ್ಯನಿಷ್ಠೆಗಳನ್ನೂ ಧ್ವಂಸ ಮಾಡುತ್ತದೆ. "ಸತ್ಯ. ಪ್ರಾಮಾಣಿಕತೆ. ಮನಸ್ಸಾಕ್ಷಿಯ ಭೀತಿ. ಧರ್ಮೇಂದ್ರಿಯದ ಶುಶ್ರೂಷೆ—ಈ ಗುಣಗಳು ಎಲ್ಲ ಅಭಿವೃದ್ಧಿಗಳಿಗೂ ಮೂಲಾಧಾರ. ಈ ನೀತಿ ಮೂಲಗಳನ್ನು ಕೃಷಿಮಾಡಿ ಬೆಳೆಸಿಕೊಳ್ಳದಿರುವ ಜನಾಂಗಕ್ಕೆ ಎಂದಿಗೂ ನಿಜವಾದ ಏಳಿಗೆ ಬರಲಾರದು" ಎಂದು ಎಚ್ಚರಿಸಿದ್ದಾರೆ ಡಿ.ವಿ.ಜಿ.

೪

ಹೀಗೆ ಹಂತ ಹಂತವಾಗಿ 'ನಂಬಿಕೆ'ಯ ಬೇರುಗಳನ್ನು ದೃಢಪಡಿಸಿ ಬಾಳಿಗೊಂದು ನೀತಿನಿಷ್ಠೆಯ ನೀಲನಕ್ಷೆಯನ್ನು ರಚಿಸಿಕೊಳ್ಳುವುದು ಅಗತ್ಯ. ಜೀವನದ ವಿವಿಧ ಚಟುವಟಿಕೆಗಳ ವಲಯಗಳ ಸಮನ್ವಯವನ್ನು ಅದರಿಂದ ಸಾಧಿಸಬಹುದು. ತಾರತಮ್ಯ ವಿವೇಕ ಸಮಾಜದ ಪ್ರತಿ ವ್ಯಕ್ತಿಯಲ್ಲೂ ಉದಯವಾಗುವುದಾದರೆ ಅದು

ಆದರ್ಶ ಮಾನವಸಮಾಜ ಎನಿಸೀತು. 'ಬಾಳಿಗೊಂದು ನಂಬಿಕೆ' ನಮಗ ಈ ಮಾರ್ಗದ ಶಿಕ್ಷಣಕ್ಕೆ ಅತ್ಯಮೂಲ್ಯ ಕೈಪಿಡಿ. ಪುಸ್ತಕದ ಕೊನೆಯಲ್ಲಿ ಶ್ರೀ ಡಿ.ವಿ.ಜಿ. ನಮ್ಮ ಯುಗಧರ್ಮದ ಮತ್ತೊಂದು ಬಹು ಮುಖ್ಯ ಅಂಶವನ್ನು ಎತ್ತಿ ತೋರಿಸಿದ್ದಾರೆ. ಸಾರ್ವಜನಿಕ ಸೇವೆಯೇ ಪ್ರತಿ ವ್ಯಕ್ತಿಗೂ ಶಕ್ಯವಾಗುವ ಆತ್ಮೋನ್ನತಿಯ ಸಾಧನ. ಲೋಕ ಕಷ್ಟದಲ್ಲಿ ಸಹಾನುಭೂತಿ ತುಂಬಿಕೊಂಡಾಗ ಹೃದಯ ವಿಶಾಲವಾಗುತ್ತದೆ; ಆದರ 'ರಸರಾಗದ ಬೆಳಕು' ಪ್ರಜ್ವಲಿತವಾಗುತ್ತದೆ. ಬುದ್ಧಿಯ ವಿಚಾರದ ಬೆಳಕೂ ಸೇರಿದರೆ ಅಂತರ್ದೃಷ್ಟಿ ನಿಚ್ಚಳವಾಗುತ್ತದೆ. ಲೋಕಸಂಪರ್ಕ, ಲೋಕಸೇವೆ, ಲೋಕಸೌಹಾರ್ದಗಳೇ ಆತ್ಮಸಂಸ್ಕಾರಕ್ಕೆ ಸಾಧನಗಳು. ಡಿ.ವಿ.ಜಿ. ಮಾನವನ ಬದುಕಿಗೆ ಸಾರ್ಥಕತೆ ನೀಡುವ ನಂಬಿಕೆಗಳಾವುವು ಎನ್ನುವುದನ್ನು ಖಚಿತಪಡಿಸುತ್ತಾರೆ. "ಸ್ವಾರ್ಥಲಾಭದ ಆಶೆಗೆ ಅವಕಾಶ ಕೊಡದಿರುವ ಯಾವುದಾದರೊಂದು ಸಾರ್ವಜನಿಕ ಕಾರ್ಯವನ್ನು ನಾವಾಗಿಯೇ ಸ್ವಯಂ ಪ್ರೇರಣೆಯಿಂದ ಅಂಗೀಕರಿಸಬೇಕು. ಈ ಸೇವೆಯೇ ಆತ್ಮೋನ್ನತಿಗೆ ಮೆಟ್ಟಲು." ನಮ್ಮ ಧರ್ಮಬುದ್ಧಿ ನಮಗೆ ದೇಶಋಣದ ಪ್ರಜ್ಞೆ ತಂದುಕೊಡಬೇಕು. ಆಗ ತತ್ತ್ವನಿಷ್ಠ ನಿಃಸ್ವಾರ್ಥ ಸೇವೆ ಸುಲಭವೆನಿಸುತ್ತದೆ, ಆನಂದದಾಯಕವೂ ಆದೀತು.

ಮುಖ್ಯವಾಗಿ ನಾಲ್ಕು ಆಧಾರಸ್ತಂಭಗಳ ಮೇಲೆ ನಮ್ಮ ಬಾಳಿನ ಕರ್ತವ್ಯಗಳು. ಅವರ ಸಾರ್ಥಕತೆಯ ಗುರಿಗಳು. ಉತ್ಸಾಹ ತುಂಬುವ ರಚನಾತ್ಮಕ ನಂಬಿಕೆಗಳು ನಿಲ್ಲಬೇಕು. (೧) ಕ್ರಿಯಾತ್ಮಕ ವೇದಾಂತ ಜ್ಞಾನ; (೨) ವಿವೇಕಪೂರ್ಣ ವೈಜ್ಞಾನಿಕ; ವಿಚಾರ; (೩) ಸ್ವಾರ್ಥರಹಿತ ಸೇವಾ ಪರಾಯಣತೆ; (೪) ಆತ್ಮೋನ್ನತಿಯ ಪ್ರಾಮಾಣಿಕ ಪ್ರಯತ್ನ. ಈ ಜಗತ್ತಿನ ಜೀವನದಲ್ಲಿ ಜಗುಪ್ಸೆಗೊಂಡು ಓಡುವ ಮನಸ್ಸಿಗೆ ನಿಜವಾದ ಉದ್ಧಾರ ಸಾಧ್ಯವಾಗದು. ವೇದಾಂತತತ್ತ್ವಕ್ಕೂ ಲೌಕಿಕ ವ್ಯವಹಾರಕ್ಕೂ ವಿರೋಧವಿಲ್ಲ ಎಂದು ಪ್ರತಿಪಾದಿಸುತ್ತಾ ಡಿ.ವಿ.ಜಿ. ವೇದವೇದಾಂತ ಧರ್ಮಗಳನ್ನೂ ಲೋಕಜೀವನವನ್ನೂ ಏಕಕಾಲದಲ್ಲಿ ಪರಿಪಾಲಿಸುತ್ತಿದ್ದ ಮಹಾನುಭಾವರಾದ ವಿದ್ಯಾರಣ್ಯರನ್ನು ಉದಾಹರಿಸಿದ್ದಾರೆ. ಆದಿಕವಿ ವಾಲ್ಮೀಕಿ ಚಿತ್ರಿಸಿರುವ ಆಂಜನೇಯಾವತಾರ ನಮಗೆ ಆದರ್ಶಮೂರ್ತಿ ಎನ್ನುತ್ತಾರೆ. ಹನುಮಂತರಾಯನ ಗುಡಿ ಇಲ್ಲದ ಊರಾಗಲೀ ಹಳ್ಳಿಯಾಗಲೀ ಭಾರತದಲ್ಲಿಲ್ಲ. ಅವನ ವೀರಭಂಗಿ ಒಂದು ಕೈಯನ್ನೆತ್ತಿ ನಿಂತಿರುತ್ತದೆ. "ಒಂದು ಪೌರುಷದ ಕೈ, ಒಂದು ಧರ್ಮದ ಕೈ, ಒಂದು ಪದವಿಜ್ಞಾನ, ಒಂದು ಸೌಜನ್ಯ"—ಹೀಗೆ ವಿವರಿಸಿರುವ ಆಂಜನೇಯನ ಚಿತ್ರ 'ಬಾಳಿಗೊಂದು ನಂಬಿಕೆ' ಪುಸ್ತಕದ ಮುಖಚಿತ್ರ. ಈ ಸ್ಫೂರ್ತಿದಾಯಕ ಮಹೋನ್ನತ ಆದರ್ಶ ಚಿಂತಿಸಿದಷ್ಟೂ ನಮ್ಮ ಅಲಿವಿನಾಳಕ್ಕೆ ಇಳಿದು ಅಳುಕಿನ ಮನಸ್ಸುಗಳಿಗೆ ಧೈರ್ಯ ತುಂಬುತ್ತದೆ.

ಬದುಕುವವರಿಗೆ, ಬಾಳನ್ನು ಹಸನಾಗಿ ಬಾಳುವೆವೆಂಬ ಹಂಬಲವನ್ನು ತುಂಬಿಕೊಂಡವರಿಗೆ, ಸತ್ಯಾನ್ವೇಷಣೆಯ ಮಹಾಯಾತ್ರೆಯಲ್ಲಿ ಧೃತಿಗೆಡದೆ ನಡೆಯಬಯಸು

ವವರಿಗೆ ಪದೇ ಪದೇ ಓದಿ ಮನನಮಾಡಬೇಕಾದ ಈ ಕೃತಿ ಡಿ.ವಿ.ಜಿ. ಸಾಹಿತ್ಯಕ್ಕೆ ಒಂದು ಅಮರ ಕೊಡುಗೆ. ಬಾಳಿನಲ್ಲಿ ಉತ್ಸಾಹ ಮೂಡಿಸಿ, ಆಧ್ಯಾತ್ಮಿಕತೆಗೆ ನವ ಸಂಸ್ಕಾರದ ಬಟ್ಟೆದೋರಿ, ವಿಚಾರಪೂರ್ವಕ ಕರ್ಮಾನುಷ್ಠಾನಕ್ಕೆ ಪ್ರೋತ್ಸಾಹಿಸಿ, ಆತ್ಮದರ್ಶನ ಮಾಡಿಸುವ ಜೀವಂತ ಸ್ಪಂದನಗಳನ್ನು ಚಿಮ್ಮಿಸುತ್ತದೆ. ನಮ್ಮನ್ನು ಉದ್ಧಾರದೆಡೆಗೆ ಕೊಂಡೊಯ್ಯುತ್ತದೆ.

ಜ್ಞಾಪಕ ಚಿತ್ರಶಾಲೆ: ಡಿ.ವಿ.ಜಿ. ಅವರ ಆರಿಕೆಗಳು

ಡಿ. ವಿ. ಜಿ.

ಡಿ.ವಿ.ಜಿ. ಅವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯನ್ನು 8 ಸಂಪುಟಗಳಾಗಿ ಹೊರತಂದಿದ್ದಾರೆ. ಅವುಗಳ ವಿವರಗಳು ಹೀಗಿವೆ:

1. ಸಾಹಿತಿ, ಸಜ್ಜನ, ಸಾರ್ವಜನಿಕರು (1969),
2. ಕಲೋಪಾಸಕರು (1970),
3. ಸಾಹಿತ್ಯೋಪಾಸಕರು (1970),
4. ಮೈಸೂರಿನ ದಿವಾನರುಗಳು (1971),
5. ವೈಧಿಕಧರ್ಮ ಸಂಪ್ರದಾಯಸ್ಥರು (1972),
6. ಹಲವರು ಸಾರ್ವಜನಿಕರು (1973),
7. ಹೃದಯ ಸಂಪನ್ನರು (1974),
8. ಸಂಕೀರ್ಣ ಸ್ಮೃತಿಸಂಪುಟ (1977).

ಈ ಕೃತಿಮಾಲೆಯಲ್ಲಿ ಎಲ್ಲ ಸಂಪುಟಗಳ ಬಗೆಗೂ ಪರಿಚಯಾತ್ಮಕ ಮೆಚ್ಚುಗೆಯ ಲೇಖನಗಳನ್ನು ಸಹೃದಯರಿಂದ ಬರೆಯಿಸಿ ತರಿಸಿ ಪ್ರಕಟಿಸಲು ಪ್ರಯತ್ನವನ್ನೇನೋ ಪಟ್ಟೆವು. ಡಿ.ವಿ.ಜಿ. ಅವರ ನೆನಪಿನ ನಂದನದಲ್ಲಿ ಸುಳಿದಾಡುವ ಅವರ ಪರಿಚಯಸ್ಥರು, ಹಿರಿಯರು, ಕಿರಿಯರು, ಬಂಧುಬಳಗ, ಸಮಕಾಲೀನ ಸಮಾಜದ ವಿವಿಧ ಸ್ತರಗಳ ಕಸಬುಗಳ ಶೀಲಸ್ವಭಾವಗಳ ಜನಸ್ತೋಮ—ಇವರೆಲ್ಲರನ್ನೂ ಕುರಿತ ಅವರ ಬರಹಗಳ ತಿರುಳಿನ ಸ್ವಾರಸ್ಯವನ್ನು ತಿಳಿಸಿಕೊಡಬೇಕೆಂಬುದಷ್ಟೇ ನಮ್ಮ ಉದ್ದೇಶವಾಗಿತ್ತು, ಅಷ್ಟೆ: ಇಲ್ಲಿ ವಿಮರ್ಶೆಗೆ, ಮೌಲ್ಯಮಾಪನಕ್ಕೆ, ಅವಕಾಶವೇ ಇಲ್ಲ. ಈ ಜಾತಿಯ ಬರಹದ ಸ್ವರೂಪವೇ ಹಾಗೆ.

ಆದರೆ, ನಮ್ಮ ಉದ್ದೇಶ ನೆರವೇರಲಿಲ್ಲ. ಲೇಖಕರಿಗೆ ನಾವು ನೀಡಿದ ಕಾಲಾವಕಾಶ ಸಾಲದಾಯಿತೆಂದು ಕಾಣುತ್ತದೆ. ಲೇಖಕರಿಗೆ ಗ್ರಂಥಪ್ರತಿಗಳು ದೊರಕದೆ ಇದ್ದಿರ ಬಹುದು. ಕಾರಣ ಯಾವುದಾದರೂ ಇರಲಿ, 'ಮಂಕುತಿಮ್ಮನ ಕಗ್ಗ' ಬಿಟ್ಟರೆ ಡಿ.ವಿ.ಜಿ. ಕೃತಿಗಳಲ್ಲಿ ಅತ್ಯಂತ ಜನಪ್ರಿಯವಾದವು ಜ್ಞಾಪಕ ಚಿತ್ರಶಾಲೆಯ ಸಂಪುಟಗಳು. ಒಂದೊಂದೂ ಒಂದು ದ್ರಾಕ್ಷಿಯ ಗೊಂಚಲು. ಎರಡು ಮೂರು ಹಣ್ಣಿನ ಸವಿ ದೋರಿದ್ದರೂ ಸಾಲುತ್ತಿತ್ತು. ನಿರೀಕ್ಷಿಸಿದ ಲೇಖನಗಳು ಲಭ್ಯವಾಗದಿದ್ದ ಪ್ರಯುಕ್ತ, ಎಲ್ಲ ಸಂಪುಟಗಳನ್ನೂ ಗಮನದಲ್ಲಿಟ್ಟುಕೊಂಡು ಒಟ್ಟಾರೆ ಅಜಮಾಯಿಷಿ ಮಾಡಿ ಲೇಖನ ಬರೆದುಕೊಡಲು ಪ್ರೊ॥ ಎಲ್. ಎಸ್. ಶೇಷಗಿರಿರಾಯರನ್ನು ಕೇಳಿ ಕೊಳ್ಳಲಾಯಿತು. ಅವರು ದಯವಿಟ್ಟು ಬರೆದುಕೊಟ್ಟ ಅಮೂಲ್ಯ ಲೇಖನವನ್ನು ಮುಂದೆ ಕೊಟ್ಟಿದೆ. ಎಲ್ಲ ಗೊಂಚಲುಗಳಿಂದಲೂ ಹಣ್ಣು ಬಿಡಿಸಿ ಸವಿನೋಡಲು ಮುಂದಿಟ್ಟಿದ್ದಾರೆ. ಪ್ರೊ॥ ವೆಂಕಟಸುಬ್ಬಯ್ಯನವರೂ ಎರಡು ಹಣ್ಣು ಬಿಡಿಸಿ ಕೊಟ್ಟಿರುವರು:

ಬಾಯಾರಿರುವ ರಸಿಕರಿಗೆ ಇಷ್ಟು ಸಾಕೆ?
ಸಾಲದು. ಖಂಡಿತ ಸಾಲದು.

ಡಿ.ವಿ.ಜಿ. ಅವರನ್ನೆ ಮುಖಾಬಿಲೆ ಮಾಡಿಸಿಕೊಟ್ಟುಬಿಟ್ಟರೆ ಹೇಗೆ? ಅದೇ ಸರಿಯಾದ ಕ್ರಮ, ಅರಕೆ ತುಂಬಲು.

ಈ ಮುಂದೆ, 'ಸಾಹಿತಿ. ಸಜ್ಜನ. ಸಾರ್ವಜನಿಕರು' ಎಂಬ ಶೀರ್ಷಿಕೆಯುಳ್ಳ 'ಜ್ಞಾಪಕ ಚಿತ್ರಶಾಲೆ'ಯ ಮೊದಲ ಸಂಪುಟಕ್ಕೆ ಡಿ.ವಿ.ಜಿ. ಬರೆದಿರುವ 'ಉಪೋದ್ಘಾತ'ವನ್ನು ಉದ್ಧರಿಸಲಾಗಿದೆ. 'ಜ್ಞಾಪಕ ಚಿತ್ರಶಾಲೆ'ಯಲ್ಲಿ 'ವ್ಯಕ್ತಿಚರಿತ್ರೆ'ಗಳು (ಅಥವಾ ವ್ಯಕ್ತಿಚಿತ್ರಗಳು) ಜೀವಂತವಾಗಿ ಮೂಡಿವೆ. ಡಿ.ವಿ.ಜಿ. ಜೀವನಚರಿತ್ರೆಗಳನ್ನು ಬರೆದ ತರುವಾಯ ಎಷ್ಟೋ ವರ್ಷ ಸಂದ ಮೇಲೆ ಬರೆದವು. ಈ ಎರಡೂ ಸಾಹಿತ್ಯ ಪ್ರಕಾರಗಳ ಬಗೆಗೆ ಡಿ.ವಿ.ಜಿ. ಅಭಿಪ್ರಾಯಗಳು 'ಉಪೋದ್ಘಾತ'ದಲ್ಲಿ ವ್ಯಕ್ತಪಟ್ಟಿವೆ.

ಇನ್ನುಳಿದ ಸಂಪುಟಗಳಲ್ಲಿ ಅವರು ಬರೆದಿರುವ 'ಅರಿಕೆ'ಗಳಲ್ಲಿ ಆಯಾ ಸಂಪುಟದ ಸ್ವರೂಪದ ಬಗೆಗೆ ಮಾತುಗಳಿವೆ. ಆ 'ಅರಿಕೆ'ಗಳಿಂದ ಪ್ರಸ್ತುತವಾದ 'ಅವತರಣಿಕೆ'ಗಳನ್ನು ಮುಂದೆ ಕೊಟ್ಟಿದೆ. ಕಡೆಯಲ್ಲಿ. ಸಂಪುಟಗಳ ಸಾರಸಂಗ್ರಹವನ್ನು ಕೊಟ್ಟಿದೆ.

ಉಪೋದ್ಘಾತ

ದೇಶಚರಿತ್ರೆ (History). ವ್ಯಕ್ತಿಚರಿತ್ರೆ (Biography)—ಈ ಎರಡು ಗ್ರಂಥಜಾತಿಗಳೂ ನಮ್ಮ ದೇಶಕ್ಕೆ ತೀರಾ ಹೊಸವು. ಅವು ಯಾವ ದೇಶಕ್ಕೂ ತುಂಬ ಹಳೆಯುವಲ್ಲ.

ಈ ಲೇಖನದಲ್ಲಿ 'ಚರಿತ್ರೆ' ಎಂದರೆ ದೇಶದ ಚರಿತ್ರೆ, ಹಿಸ್ಟರಿ (History) ಯಾವುದಾದರೊಂದು ಭೂಭಾಗದ ಅಥವಾ ಪ್ರದೇಶದ ಚರಿತ್ರೆ ಎಂದೂ. 'ವ್ಯಕ್ತಿ

ಚರಿತ್ರೆ' ಎಂದರೆ ಒಬ್ಬಾನೊಬ್ಬ ಪ್ರಸಿದ್ಧ ಮನುಷ್ಯನ ಅಥವಾ ಮಹಿಳೆಯ ಜೀವಿತ ಚರಿತ್ರೆ, ಬಯೋಗ್ರಫಿ (Biography) ಎಂದೂ ಸಂಕೇತ. ವಿವರಗಳನ್ನು ಮುಂದೆ ನೋಡಲಾಗುತ್ತದೆ.

ಈ ಸಾಹಿತ್ಯ ಎಲ್ಲೆಲ್ಲಿಯೂ ಈಚಿನದು

ಯೂರೋಪು ದೇಶಗಳ ಸಾಹಿತ್ಯ ಸಂಸ್ಕೃತಿಗಳಿಗೆ ಗ್ರೀಸ್ ದೇಶವು ಮಾತೃ ಸ್ಥಾನವೆಂದು ಎಲ್ಲರೂ ಅಂಗೀಕರಿಸಿದ್ದಾರೆ. ಅದು ಅಲ್ಲಿಗೆ ಬಹು ಪುರಾತನವಾದ ದೇಶ. ಆ ದೇಶದ ಪ್ರಥಮ ಚರಿತ್ರಕಾರನು ಹೆರೊಡೋಟಸ್ (Herodotus). ಇವನ ಕಾಲ ಸುಮಾರು ಕ್ರಿಸ್ತಪೂರ್ವ 484 ರಿಂದ 425. ಇವನು ಬರೆದಿಟ್ಟದ್ದು ತನ್ನ ಕಾಲದ ಕಿಂವದಂತಿಗಳನ್ನ–ಪುರಾಣ ಕಥೆಗಳನ್ನ. ಆ ಪ್ರಬಂಧಗಳನ್ನು ಔಪಚಾರಿಕವಾಗಿ "ಚರಿತ್ರೆ" ಎಂದಿಟ್ಟುಕೊಳ್ಳಬಹುದು. ಅವನಾದ ಮೇಲೆ ಬಂದವನು ಸುಮಾರು ಅದೇ ಕಾಲದ ತುಚಿದಿದೀಸ್ (Thucydides). ಇವನ ಕಾಲ ಕ್ರಿ.ಪೂ. ಸುಮಾರು 464 ರಿಂದ ಸುಮಾರು 402. ಇವನ ಪ್ರಬಂಧವೂ ಬಹುಮಟ್ಟಿಗೆ ಸ್ವಕಪೋಲಕಲ್ಪಿತವೇ. ಅವನ ಕಥಾನಾಯಕರ ಭಾಷಣಗಳನ್ನು ಅವನು ಸ್ವತಃ ಕಿವಿಯಿಂದ ಕೇಳಿದ್ದಿದ್ದರೆ ಹೇಗೋ ಹಾಗೆ 'ಸಾಕ್ಷಾತ್ ಪ್ರಕಾರ' (Direct reporting)ದಲ್ಲಿ, ಈಗಿನ ವರ್ತಮಾನಪತ್ರಿಕೆಗಳ ರೀತಿಯಲ್ಲಿ ಬರೆದಿದ್ದಾನೆ. ಆ ಭಾಷಣಗಳನ್ನು ಅವನು ಸ್ವಯಂ ಕೇಳಿದ್ದವನಲ್ಲ. ಬೇರೆ ಯಾರೋ ಕೇಳಿ ಅವನಿಗೆ ಹೇಳಿರಬಹುದೆಂಬುದಾದರೆ ಆ ವರದಿಗಾರನ ಜ್ಞಾಪಕಶಕ್ತಿ ಅದ್ಭುತವಾದದ್ದಾಗಿರಬೇಕು. ಆ ಕಾಲದಲ್ಲಿ ಶೀಘ್ರಲಿಪಿ ಕಲೆ (Shorthand, Stenography) ಹುಟ್ಟಿರಲಿಲ್ಲ. ತುಚಿದಿದೀಸನು ತನ್ನ ಕಥಾಪಾತ್ರಗಳ ಭಾಷಣ ಘೋಷಣೆಗಳನ್ನು ತಾನೇ ರಚಿಸಿ ಕಥಾಪಾತ್ರಗಳಿಗೆ ಆರೋಪ ಮಾಡಿರಬೇಕು.

ಇಂಗ್ಲೆಂಡಿನ ಆದಿ ಚರಿತ್ರಕಾರ ಬೀಡ್ (Bede). ಈತನು ಕ್ರಿ.ಶ. ಸುಮಾರು 673 ರಿಂದ 735ರವರೆಗೆ ಇದ್ದವನು. ಇವನ ಕೃತಿ ವಿಶೇಷವಾಗಿ ಕ್ರಿಸ್ತ ಮಠಗಳ ಚರಿತ್ರೆ. ಇವನ ತರುವಾಯದ ಮಹಾಪ್ರಸಿದ್ಧ ಚರಿತ್ರಕಾರನು ಎಡ್ವರ್ಡ್ ಗಿಬ್ಬನ್ (Edward Gibbon). ಗಿಬ್ಬನ್ನನ ಕಾಲ ಕ್ರಿ.ಶ. 1737–94. ಇವನು ಚರಿತ್ರೆಯಲ್ಲಿ ಅದು ಉತ್ತಮ ಸಾಹಿತ್ಯವೆನ್ನಿಸುವಂತೆ ಕಾವ್ಯದ ಸೊಗಸಿಟ್ಟು ಬರೆದವನು. ಇವನ ಕೃತಿಯು ವಿಷಯ ರೋಮನ್ ಚಕ್ರಾಧಿಪತ್ಯದ ಅವನತಿ ಮತ್ತು ಪತನ. ಇವನ ಅನಂತರ ಬಂದ ಚರಿತ್ರಕಾರರಲ್ಲಿ ಮಕಾಲೆ (Macaulay), ಫ್ರೂಡ್ (Froude), ಫ್ರೀಮನ್ (Freeman), ಗಾರ್ಡಿನರ್ (Gardiner) — ಇವರು ಪ್ರಸಿದ್ಧರು.

ಇಂಗ್ಲೆಂಡಿನಲ್ಲಿ ಚರಿತ್ರೆಯ ರೂಪದ ಸಾಹಿತ್ಯ ಹೆಚ್ಚಾಗಿ ಬೆಳೆದು ಪ್ರಬಲಿಸಿದ್ದು ಮುಖ್ಯವಾಗಿ 19ನೆಯ ಶತಮಾನದಲ್ಲಿ. ಫ್ರಾನ್ಸ್, ಜರ್ಮನಿಗಳಲ್ಲಿಯೂ ಹಾಗೆಯೇ.

ಹೀಗಿರಲಾಗಿ ಹಿಂದೂ ಜನಕ್ಕೆ ಚಾರಿತ್ರಿಕ ಬುದ್ಧಿ (Sense of History) ಇಲ್ಲ ವೆಂಬ ಅಪವಾದ ಹೇರಿಸುವವರು ವಿಚಾರ ತಿಳಿಯದವರು.

ನಮ್ಮ ಪುರಾಣೇತಿಹಾಸಗಳಲ್ಲಿ ಚಾರಿತ್ರಿಕ ಸಾಮಗ್ರಿ ಅಡಗಿದೆ. ಅದನ್ನು ಗ್ರೀಸಿನ ಹೆರೊಡೋಟಸ್ಸಿನ ಪ್ರಬಂಧದ ಜಾತಿಗೆ ಸೇರಿಸಬಹುದು. ಈಗ ಚರಿತ್ರೆ ಯೆಂದರೆ ಕಥೆಯಲ್ಲ, ಪುರಾಣವಲ್ಲ, ಇತಿಹಾಸ ಕೂಡ ಅಲ್ಲ. ನಮ್ಮಲ್ಲಿ ಇತಿಹಾಸ ವೆಂದು ಕರೆಯುವ ಸಾಹಿತ್ಯಜಾತಿಯು ಕೂಡ ಇಂಗ್ಲಿಷಿನ ಹಿಸ್ಟರಿಯಿಂದ ಕೊಂಚ ಬೇರೆಯಾದದ್ದು. ಇತಿ + ಹ + ಆಸ—" ಹೀಗೆ ಆಯಿತಲ್ಲವೆ "—ಎಂಬುದು ಶಬ್ದಾರ್ಥ. ಇದೂ ಕಿಂವದಂತಿಯೇ. ಇದನ್ನು ಪುರಾವೃತ್ತವೆಂದು ಕರೆದಿದ್ದಾರೆ. ಇದು ಹಿಸ್ಟರಿಗೆ ಹತ್ತಿರ ಹತ್ತಿರ ಬರುತ್ತದೆ. ಚರಿತ್ರೆಯಲ್ಲಿ ಹೇಳುವ ಪ್ರತಿಯೊಂದು ಸಂಗತಿಯೂ ದಾಖಲೆಯಿಂದಲೂ ಸಾಕ್ಷ್ಯದಿಂದಲೂ ರುಜುವಾತದ್ದಾಗಿರಬೇಕು. ಕೋರ್ಟು ಗಳಲ್ಲಿ ಹೇಳಿದ ಸಂಗತಿಗಳು ಹೇಗೆ ದಸ್ತಾವೇಜುಗಳಿಂದಲೂ ಸಾಕ್ಷ್ಯಗಳ ವಾಙ್ಮೂಲ ಗಳಿಂದಲೂ ಪ್ರಮಾಣಪೂರ್ವಕವಾಗಿ ದೃಢಪಟ್ಟಿರಬೇಕೋ, ಚರಿತ್ರೆಯ ಅಂಶಗಳೂ ಹಾಗೆ ಪ್ರಮಾಣಗಳಿಂದ ಸ್ಥಿರಪಟ್ಟಿರಬೇಕು. ಇದೇ ಪ್ರಕೃತಕಾಲದ ಚರಿತ್ರೆಯೆಂಬ ಸಾಹಿತ್ಯದ ಮುಖ್ಯ ಲಕ್ಷಣ. ಅದು ರುಜುವಾತಾದ ಸಂಗತಿಗಳ ಅರ್ಥಕಲ್ಪನೆ (Interpretation).

ಚರಿತ್ರೆಯ ಮುಖ್ಯ ವಿಷಯ

ಹೀಗೆ ದೇಶಚರಿತ್ರೆಯೆಂಬ ಸಾಹಿತ್ಯಪ್ರಭೇದದಲ್ಲಿ ಮುಖ್ಯವಾಗಿ ಎರಡಂಶಗಳು ಅಂತರ್ಗತವಾಗಿರುತ್ತವೆ :

(1) ಹೊರಗಣ ರುಜುವಾತಿಗೆ ಸಿಕ್ಕುವ ತಾರೀಖು. ಸ್ಥಳ. ಮಾನುಷ ಘಟನೆ, ಸಾಕ್ಷಿ—ಇಂಥ ಬಹಿರಂಗ ಸಂಗತಿಗಳು.

(2) ಹೊರಗಣ ರುಜುವಾತಿಗೆ ಸಿಕ್ಕದೆ ಊಹೆಗೆ ಮಾತ್ರ ತೋರುವ ಜನದ ಮನೋಗತಗಳು, ಜನನಾಯಕರ ಅಂತರಂಗದ ಆಶಯಗಳು, ರಾಜರ ಸ್ವಾರ್ಥ ತಾತ್ಪರ್ಯಗಳು, ದಂಡನಾಯಕರ ಒಳಸಂಚುಗಳು, ಮಂತ್ರಿಗಳ ಹುನ್ನರುಗಳು— ಇವೇ ಮೊದಲಾದವು.

ಒಂದು ಉದಾಹರಣೆ : ಒಂದಾನೊಂದು ಆಕಾಶ ವಿಮಾನವು ಬೆಂಗಳೂರಿನ ಮೇಲೆ ಹಾರಿಹೋಯಿತೆಂದು ಭಾವಿಸೋಣ. ಅದು ಯಾವ ತಾರೀಖಿನಲ್ಲಿ, ಎಷ್ಟು ಹೊತ್ತಿನಲ್ಲಿ, ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ—ಇಂಥ ವಿವರಗಳು ರುಜುವಾತಿಗೆ ಸಿಕ್ಕತಕ್ಕವು. ಆ ವಿಮಾನದಲ್ಲಿದ್ದದ್ದು ಯುದ್ಧ ಸಾಮಗ್ರಿಯೇ, ಔಷಧಗಳೇ, ವೈದ್ಯರೇ, ಆಹಾರ ಸಾಮಗ್ರಿಯೇ, ಅದನ್ನು ವಿತರಣೆ ಮಾಡುವ ದಾದಿಯರೇ ? ಆ ವಿಮಾನ

ಬರ್ಮಾ ಕಡೆಗೆ ಹೋಯಿತೇ, ಚೀಣಕ್ಕೆ ಹೋಯಿತೆ ? ಚೀಣಕ್ಕೆ ಹೋದುದರ ಉದ್ದೇಶವೇನಿರಬಹುದು ?—ಇವು ಊಹಾಪೋಹಗಳ ವಿಷಯ.

ಚರಿತ್ರೆಯಲ್ಲಿ ಹೀಗೆ ವಾಸ್ತವದ ಸಂಗತಿಗಳೂ, ಊಹಾಪೋಹದ ತರ್ಕಗಳೂ ಬೆರೆತುಕೊಂಡಿರುತ್ತವೆ. ಅವುಗಳನ್ನು ಬಿಡಿಸಿ ವಿಮರ್ಶೆ ಮಾಡುವುದು ಪ್ರಯಾಸದ ಕೆಲಸ. ಚರಿತ್ರಕಾರರಲ್ಲಿ ಭೇದವುಂಟಾಗುವುದು ಈ ಕಾರಣದಿಂದ.

ಚರಿತ್ರೆಯು ಸಾಹಿತ್ಯದ ಒಂದು ಪ್ರಭೇದವೆನಿಸುವುದು ಸ್ವಾಭಾವಿಕ. ಸಾಹಿತ್ಯವೆಂಬುದೇನು ? ಒಟ್ಟಿನಲ್ಲಿ ಸಾಹಿತ್ಯವೆಂಬುದು ಮನುಷ್ಯಸನ್ನಿವೇಶಗಳ, ಮನುಷ್ಯವರ್ತನೆ ಪ್ರತಿವರ್ತನೆಗಳ ಮತ್ತು ಅವುಗಳಿಂದ ತೋರುವ ಆಶಯ ಉದ್ದೇಶಗಳ ನಿರೂಪಣೆ. ಇಂಥ ನಿರೂಪಣೆಯ ಸಂಗತಿಗಳು ಬಹುಶಃ ಕಲ್ಪಿತಗಳಾಗಿದ್ದರೆ ಅದು ಕಾವ್ಯವೋ ನಾಟಕವೋ ಕಾದಂಬರಿಯೋ ಆಗುತ್ತದೆ. ಆ ಸಂಗತಿಗಳು ವಾಸ್ತವಿಕ ಪ್ರಪಂಚದವಾಗಿದ್ದಾಗ ಅದು ಚರಿತ್ರೆಯೆನಿಸುತ್ತದೆ. ಚರಿತ್ರೆ ಸಾಹಿತ್ಯಗಳೆರಡಕ್ಕೂ ಮೂಲವಸ್ತು ಒಂದೇ. ಅದು ಮನುಷ್ಯಸ್ವಭಾವ. ಮನುಷ್ಯಸ್ವಭಾವದ ಊಹಾಪೋಹ ಕಲ್ಪನೆಯ ವರ್ಣನೆಯೇ ಶುದ್ಧ ಸಾಹಿತ್ಯ. ಅದರ ಯಥಾವತ್ತಾದ ವರದಿಯೇ ಚರಿತ್ರೆ. ವಾಗ್ಗುಂಫನದ ಸೊಗಸಿಗೂ, ವರ್ಣನೆಯ ಬೆಡಗಿಗೂ, ಕಥನ ಧೋರಣೆಗೂ ಎರಡರಲ್ಲೂ ಅವಕಾಶವುಂಟು. ಇಂಗ್ಲಿಷ್ ಚರಿತ್ರಕಾರರಲ್ಲಿ ಗಿಬ್ಬನ್, ಮಕಾಲೆ, ಫ್ರೌಡ್, ಟ್ರೆವೆಲ್ಯನ್—ಇವರ ಲೇಖನ ಶೈಲಿಯೂ ವರ್ಣನಾ ವೈಖರಿಯೂ, ಕಥನ ಚಮತ್ಕಾರವೂ ಇವರನ್ನು ಪ್ರಸಿದ್ಧರನ್ನಾಗಿಸಿ ಸಾಹಿತ್ಯಕಾರರ ಪಂಕ್ತಿಗೆ ಸೇರಿಸಿವೆ.

ವಾಸ್ತವಿಕ ಸಂಗತಿಗಳನ್ನು ವರದಿ ಮಾಡುವುದರಲ್ಲಿ ಲೇಖಕನು ತನ್ನ ಊಹಾಪೋಹಗಳನ್ನು ನಡಸುವಾಗ ವಾಸ್ತವ ಸತ್ಯಕ್ಕೆ ಅಷ್ಟಿಷ್ಟು ಧಕ್ಕೆ ತಗಲಬಹುದಲ್ಲ—ಎಂಬ ಆಕ್ಷೇಪಣೆ ಇಂಗ್ಲೆಂಡಿನಲ್ಲಿ ಇದ್ದದ್ದುಂಟು. ಈ ತರ್ಕದಲ್ಲಿ ಹೆಸರಾದವರು ಒಂದು ಕಡೆಯ ಫ್ರೌಡ್, ಇನ್ನೊಂದು ಕಡೆಯ ಫ್ರೀಮನ್. ಈ ತರ್ಕವು ತಾರ್ಕಿಕರ ಮನಸ್ಸಿನ ಧೋರಣೆಯನ್ನವಲಂಬಿಸಿಕೊಂಡಿರುತ್ತದೆ. ಸರ್ವಸಮ್ಮತವಾಗುವ ಉತ್ತರ ಅದಕ್ಕೆ ದುರ್ಲಭ. ಒಂದೇ ಕಾವ್ಯಕ್ಕೆ ಅರ್ಥ ಮಾಡುವುದರಲ್ಲಿ ಬೇರೆ ಬೇರೆ ವ್ಯಾಖ್ಯಾನಕಾರರು ಹೇಗೆ ಭಿನ್ನಾಭಿಪ್ರಾಯಗಳುಳ್ಳವರಾಗಿರುತ್ತಾರೋ ಹಾಗೆ ಒಂದಾನೊಂದು ವಾಸ್ತವಿಕ ಸಂಗತಿಯ ಅರ್ಥವ್ಯಾಪ್ತಿಯನ್ನು ಊಹಿಸುವುದರಲ್ಲಿ ಚರಿತ್ರಲೇಖಕರು ಭಿನ್ನಾಭಿಪ್ರಾಯವುಳ್ಳವರಾಗಿರುವುದು ಸಹಜ. ಇಂಥ ಸಂದರ್ಭವಲ್ಲಿ ವಾಚಕನ ಪಾಡೇನೆಂದು ಕೇಳಿದರೆ, ವಾಚಕನು ತನ್ನ ಸ್ವಂತ ವಿವೇಕವನ್ನು ಉಪಯೋಗಿಸಿ ಅದರಂತೆ ನಿರ್ಧರಿಸಿಕೊಳ್ಳಲು ಸ್ವತಂತ್ರನಾಗಿರುತ್ತಾನೆನ್ನಬೇಕಾಗುತ್ತದೆ. ಇಂಥ ವಿವೇಚನೆ ವಾಚಕನಿಗಿರುವ ಸ್ವಾತಂತ್ರ್ಯ ಮಾತ್ರವೇ ಅಲ್ಲ ; ಅದು ಅವನ ಕರ್ತವ್ಯವೂ ಹೌದು. ಸೀಲಿ (Seeley) ಎಂಬ ಪ್ರಸಿದ್ಧ ಚರಿತ್ರಕಾರನು ಹೀಗೆ ಹೇಳಿದ್ದಾನೆ.

ಈ ಹೊತ್ತು ನಾವು ಯಾವುದನ್ನು ಚರಿತ್ರೆ ಎನ್ನುತ್ತೇವೆಯೊ ಅದರ ಸಂಗತಿ ನಿನ್ನೆಯ ರಾಜಕೀಯ. ನಮ್ಮ ಈ ಹೊತ್ತಿನ ರಾಜಕೀಯ ನಾಳೆಯ ಚರಿತ್ರೆಗೆ ವಸ್ತುವಾಗುತ್ತದೆ.

ಚರಿತ್ರೆಯ ಆವಶ್ಯಕತೆ

ಹೀಗೆಂದರೆ ಅರ್ಥವೇನು ? ಚರಿತ್ರೆ ನಮ್ಮನ್ನು ಎಂದೂ ಬಿಟ್ಟದ್ದಲ್ಲ ಎಂದು. ನಾವು ಮಾಡುವುದು, ಮಾಡದೆ ಬಿಡುವುದು, ನಾವು ಪಡುವುದು, ಪಡದೆ ತಪ್ಪಿಸಿ ಕೊಳ್ಳುವುದು, ಇಂಥ ಎಲ್ಲ ನಮ್ಮ ಪಾಡೂ ಚರಿತ್ರೆಯೇ ಆದದ್ದರಿಂದ ನಾವು ಮಾಡುವುದರಲ್ಲಿಯೂ, ಪಡುವುದರಲ್ಲಿಯೂ, ವಿವೇಕದಿಂದ ನಡೆದುಕೊಂಡರೆ ಅಪಾಯ ಗಳು ತಪ್ಪುತ್ತವೆ, ಇಷ್ಟಾರ್ಥಗಳು ಕೊಂಚಮಟ್ಟಿಗಾದರೂ ಕೈಗೂಡುತ್ತವೆ ಎಂಬುದು. ಇಂಥ ವಿವೇಕವನ್ನು ನಾವು ಸಂಪಾದಿಸಿಕೊಳ್ಳಬೇಕೆಂದರೆ ಚರಿತ್ರೆಯ ವ್ಯಾಸಂಗವೇ ನಮಗಿರುವ ದಾರಿ.

ನಮ್ಮ ದೇಶದಲ್ಲಿ ಚರಿತ್ರೆಯ—ನಾನಾ ದೇಶಗಳ ಚರಿತ್ರೆಯ—ವ್ಯಾಸಂಗ ಈಗ ತೀರ ಕಡಮೆಯಾಗಿದೆ. ವಿಜ್ಞಾನ ಈಗೀಗ ಬಹುಮುಖ್ಯ ಎಂದು ಹೇಳುತ್ತ ಆ ನೆವದಲ್ಲಿ ಚರಿತ್ರೆಯ ಪ್ರಶಸ್ತಿಯನ್ನು ತಗ್ಗಿಸಿದ್ದೇವೆ. ಇದರ ಫಲಿತಾಂಶ ಈಗ ನಮ್ಮ ಈ ಅನುಭವಕ್ಕೆ ಚೆನ್ನಾಗಿ ಬರುತ್ತಿದೆ. ಹಿಂದು ಮುಂದು ತಿಳಿಯದೆ, ಹಿಂದೇನು ಮುಂದೇನೆಂದು ವಿಚಾರಿಸದೆ ರಾಜ್ಯನಿರ್ಮಾಪ ಮಾಡುತ್ತೇವೆಂಬ ಕಾರ್ಯವಂತಿಕೆಯೇ ಆ ಫಲಿತಾಂಶ.

ದೇಶಚರಿತ್ರೆಯು ಆ ದೇಶದ ಜನಸಮಷ್ಟಿಯ ಚರಿತ್ರೆ ; ಆ ಜನತೆಯ ಒಟ್ಟು ಜೀವನವನ್ನು ಕುರಿತ ಚರಿತ್ರೆ ಮತ್ತು ಜನಜೀವನದ ಎಲ್ಲ ಕ್ಷೇತ್ರಗಳಿಗೂ ಸೇರಿದ ಚರಿತ್ರೆ. ಹಾಗಿದ್ದರೂ ಮೊದಮೊದಲು ಆದ ಚರಿತ್ರೆಯ ಪುಸ್ತಕಗಳಲ್ಲಿ ರಾಜರೇ ಕಥಾನಾಯಕರಾಗಿದ್ದಾರೆ. ಜನಸಾಮಾನ್ಯರ ವಿಷಯ ಆ ಪುಸ್ತಕಗಳಲ್ಲಿ ಹೆಚ್ಚಾಗಿ ಕಾಣಬರುವುದಿಲ್ಲ. ರಾಜ, ಅವನ ದಂಡಯಾತ್ರೆಗಳು, ಅವನ ಸೇನಾ ನಾಯಕರು, ಅವನ ಪರಿವಾರ, ಅವನ ವೈಭವ, ಅವನ ಪ್ರತಾಪ—ಇವೇ ಪೂರ್ವ ಕಾಲದಲ್ಲಿ ಬರೆದ ಚರಿತ್ರೆಗಳಲ್ಲಿ ಎದ್ದು ಕಾಣುವ ಸಂಗತಿಗಳು. ಜನ ಹೇಗೆ ಬದುಕಿತ್ತು, ಅದಕ್ಕೆ ಏನು ಕಷ್ಟವಿತ್ತು, ಆ ಕಷ್ಟ ಹೇಗೆ ಪರಿಹಾರವಾಯಿತು—ಇಂಥ ವಿಚಾರಗಳು ಎಲ್ಲೋ ಒಂದೆರಡು ಪಂಕ್ತಿಯಷ್ಟು ಕೊಂಚವಾಗಿ ಕಾಣಬರುತ್ತವೆ.

ಇದಕ್ಕೆ ಕಾರಣವನ್ನು ಊಹಿಸುವುದು ಕಷ್ಟವಲ್ಲ. ಪೂರ್ವಕಾಲದಲ್ಲಿ ಜನರ ಆಗುಹೋಗುಗಳೆಲ್ಲ ರಾಜನ ಕೈಯಲ್ಲಿದ್ದವು. ಅವನು ಸೂತ್ರ ತಿರುಗಿಸಿದಂತೆ ದೇಶ ಕಾರ್ಯಗಳು ನಡೆಯುತ್ತಿದ್ದವು. ಜನರು ರಾಜನನ್ನು ತಮ್ಮ ಏಕೈಕ ಪ್ರತಿನಿಧಿಯನ್ನಾಗಿ ಅಂಗೀಕರಿಸಿದ್ದರು. ಜನದ ಜೀವನ ಸರ್ವಸ್ವವೂ ರಾಜನ ಅಧೀನದಲ್ಲಿತ್ತು. ಆದದ್ದ ರಿಂದ ರಾಜಚರಿತ್ರೆಯೇ ದೇಶಚರಿತ್ರೆಯಾಯಿತು.

ರಾಜವಂಶ, ರಾಜ್ಯಭಾರಿಗಳ ಬರೋಣ-ಹೋಗೋಣಗಳು, ದಂಡನಾಯಕರ ಪರಾಕ್ರಮ, ಯುದ್ಧರಂಗ. ಯುದ್ಧದಲ್ಲಿ ಸೇರಿದ್ದ ಚತುರಂಗ ಬಲದ ಸಂಖ್ಯೆ ಸಜ್ಜುಗಳು, ಪಕ್ಷ-ಪ್ರತಿಪಕ್ಷಗಳ ಜಯಾಪಜಯಗಳು, ಪಲಾಯನಗಳು, ಕೌಲು-ಕರಾರಗಳು —ಇವೇ ಮೊದಮೊದಲಿನ ಚರಿತ್ರೆಯ ಮುಖ್ಯ ವಿಷಯಗಳಾಗಿದ್ದವು. ಹೀಗೆ ರಾಜಕೀಯವೇ ಚರಿತ್ರೆಯ ಮುಖ್ಯ ವಸ್ತುವೆಂಬ ಭಾವನೆ ಪ್ರಬಲಿಸಿತು.

ಚರಿತ್ರೆಯಲ್ಲಿ ಹೊಸ ರೀತಿ

ಕಾಲಕ್ರಮದಲ್ಲಿ ಈ ಭಾವನೆ ಬದಲಾಯಿಸಿತು. ಪಾಶ್ಚಾತ್ಯ ದೇಶಗಳಲ್ಲಿ ಪ್ರಜಾಭಿಪ್ರಾಯ ಬಲಪಟ್ಟು, ರಾಜ್ಯನಿರ್ವಾಹದಲ್ಲಿ ಪ್ರಜೆಯೆಂಬ ಭಾಗಕ್ಕೆ ಪ್ರಾಬಲ್ಯ ಬಂದಂತೆಲ್ಲಾ ಪ್ರಜೆಯೆಂಬ ರಾಜ್ಯಾಂಗದ ಮಹತ್ತ್ವವು ಚರಿತ್ರ ಲೇಖಕರಿಗೆ ಸ್ಪಷ್ಟವಾಗುತ್ತ ಬಂತು. ಅಲ್ಲಿಂದೀಚಿನ ಚರಿತ್ರೆಗಳಲ್ಲಿ—ರಾಜಕೀಯವು ಎಷ್ಟು ಮುಖ್ಯವೋ ಜನಜೀವನದ ಇತರ ಕ್ಷೇತ್ರಗಳೂ ಅಷ್ಟು ಮುಖ್ಯವೆಂದು ಅಂಗೀಕೃತವಾಯಿತು. ದೇಶದ ಸಂಪತ್ತಿನ ಸ್ಥಿತಿ, ವ್ಯಾಪಾರ, ಜನದಲ್ಲಿ ವಿದ್ಯಾಪ್ರಚಾರ, ಕಲಾಕುಶಲತೆ, ವಿಜ್ಞಾನಾಭಿವೃದ್ಧಿ, ಅವರ ಮತಾಚಾರಗಳು, ಧರ್ಮ ಸಮಯಗಳು —ಇವೆಲ್ಲ ಚರಿತ್ರೆಗೆ ತಕ್ಕ ವಿಷಯಗಳೆಂದು ಸಾಮಾನ್ಯನಾಗಿ ಅಂಗೀಕೃತವಾಯಿತು. ಹೀಗೆ, ಈಚೀಚಿನ ಚರಿತ್ರಕಾರರು ಸಮಾಜಜೀವನವನ್ನೂ, ಜನದ ಸಂಖ್ಯೆ-ಸಂಪ್ರದಾಯಗಳನ್ನೂ ಚಿತ್ರಿಸುವುದಕ್ಕೆ ಪ್ರಾರಂಭಿಸಿದರು. ಇನ್ನೂ ಈಚಿನ ಚರಿತ್ರಕಾರರು ದೇಶದಲ್ಲಾಗುವ ವಿಜ್ಞಾನ ಸಂಶೋಧನೆ, ವಿವಿಧ ಸಾಹಸಗಳು, ಯಂತ್ರ ಪರಿಶ್ರಮ, ಸಂಸ್ಕೃತಿ ಪ್ರಚಾರ, ತತ್ತ್ವಶೋಧನೆ ಇವೆಲ್ಲವೂ ಜನಜೀವನದ ಮುಖ್ಯ ಲಕ್ಷಣಗಳಾದದ್ದರಿಂದ ಆ ಎಲ್ಲ ವಿಷಯಗಳೂ ಚರಿತ್ರೆಯ ಗ್ರಂಥಕ್ಕೆ ಅವಶ್ಯವಾದ ಸಾಮಗ್ರಿಯೆಂದು ಪರಿಗಣಿಸಿರುತ್ತಾರೆ. ಈಚೀಚಿನ ಪ್ರಸಿದ್ಧ ಚರಿತ್ರಕಾರರಾದ ಟ್ರೆವೆಲ್ಯನ್ (Trevelyan), ನ್ಯಾಮಿಯರ್ (Namier), ಬ್ಯೂರಿ (Bury), ಗೂಚ್ (Gooch) ಮೊದಲಾದವರ ಲೇಖನಗಳಲ್ಲಿ ಚರಿತ್ರೆಯ ವಿಷಯ ವಿಸ್ತಾರವನ್ನು ಚೆನ್ನಾಗಿ ಕಾಣಲಾಗುತ್ತದೆ.

ವ್ಯಕ್ತಿ ಚರಿತ್ರೆ

ದೇಶಚರಿತ್ರೆಯು ಹೀಗೆ ಸಮಗ್ರ ಜನಜೀವನದ ಪ್ರತಿಬಿಂಬವಾದರೆ ವ್ಯಕ್ತಿ ಚರಿತ್ರೆಯು ಜನಜೀವನದ ಮೂಲಾಂಕುರಪ್ರಾಯಗಳಾದ ಮಹಾಪುರುಷರ ಪ್ರತಿಬಿಂಬ. ಸಮಾಜದಲ್ಲಿ ಆಗಿಂದಾಗ್ಗೆ ಹೊರಡುವ ಹೊಸಹೊಸ ಅಭಿಪ್ರಾಯಗಳು, ಹೊಸಹೊಸ ಸಮಾರಂಭಗಳು, ಹೊಸಹೊಸ ಸಂಸ್ಥೆಗಳು—ಇವಕ್ಕೆ ಪ್ರಥಮ ಕಾರಣರಾದವರು ಜನಜೀವಿತದ ಮೂಲಪುರುಷರು. ಅವರ ಬೋಧನೆಯಂತೆ, ಅವರು ಮಾಡಿದ ವಾದಪ್ರಚಾರದಂತೆ, ಅವರು ಅನುಸರಿಸಿದ ಸಂಪ್ರದಾಯದಂತೆ, ಅವರು ನಡೆದ ನಡವಳಿಕೆಯಂತೆ, ಜನಸಾಮಾನ್ಯ ನಡೆಯುತ್ತದೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥
—ಗೀತಾ, 3–21

ಹೀಗೆ, ಜನಜೀವನಕ್ಕೆ ಕೊಂಚವಾಗಿಯೋ ಹೆಚ್ಚಾಗಿಯೋ ಅಂಕುರಪ್ರಾಯ ರಾಗಿದ್ದವರು ಗಣ್ಯಪುರುಷರು. ಅಂಥವರ ಚರಿತ್ರೆ ಜೀವನಚರಿತ್ರೆ (Biography). ಹೀಗೆ ಜೀವನಚರಿತ್ರೆ ಎಂಬ ಸಾಹಿತ್ಯಜಾತಿಯು ದೇಶಚರಿತ್ರೆ ಎಂಬ ಸಾಹಿತ್ಯಕ್ಕೆ ಅಂಗಭೂತವಾದದ್ದು. ಜೀವನಚರಿತ್ರೆಯನ್ನು ದೇಶಚರಿತ್ರೆಯ ಅಂತರಂಗವೆಂದು ಭಾವಿಸುವುದು ಯುಕ್ತವಾಗುತ್ತದೆ.

ದೇಶಚರಿತ್ರೆಯ ರೂಪದ ಗ್ರಂಥರಚನೆಯು ಸಾಹಿತ್ಯದ ಚರಿತ್ರೆಯಲ್ಲಿ ಈಚೀಚಿನದೆಂದು ಮೇಲೆ ಹೇಳಿದೆ. ದೇಶಚರಿತ್ರೆಗಿಂತ ಅಧುನಿಕವಾದದ್ದು ವ್ಯಕ್ತಿ ಚರಿತ್ರೆ. ನಮ್ಮ ದೇಶದಲ್ಲಿ ಜೀವನಚರಿತ್ರೆಯ ಸಾಹಿತ್ಯವು ಗಾತ್ರವಲ್ಲಿ ಸಣ ದಾಗಿದೆ ಯೆಂಬ ಕಾರಣದಿಂದ ನಾವು ಸಂಕೋಚಪಟ್ಟುಕೊಳ್ಳಬೇಕಾದ ಕಾರಣವಿಲ್ಲ. ಎಲ್ಲ ದೇಶಗಳಲ್ಲಿಯೂ ಅದು ಈಚೀಚಿನ ಸಾಹಿತ್ಯರಚನೆಯೇ.

ನಮ್ಮಲ್ಲಿ ಎಲ್ಲ ದೇಶಗಳಲ್ಲಿಯೂ ಇರುವಂತೆ ಜೀವನಚರಿತ್ರೆಯ ಸಾಹಿತ್ಯ ಕಾಲಕ್ರಮದಲ್ಲಿ ವೃದ್ಧಿಯಾಗುತ್ತದೆಂಬುವರಲ್ಲಿ ಸಂದೇಹವಿಲ್ಲ. ಅಷ್ಟೇ ಅಲ್ಲ. ಅದು ಅತಿಯಾಗಿ ವೃದ್ಧಿಯಾದೀತೆಂದು ಶಂಕೆಪಡುವುದು ಅಕಾರಣವಲ್ಲ. ರಾಜಾಧಿ ರಾಜರುಗಳ ಕಾಲದಲ್ಲಿ, ಪಾಳೆಯಗಾರರ ಕಾಲದಲ್ಲಿ, ಲೇಖನ ಶಕ್ತಿಯಿದ್ದ ವಿದ್ವಾಂಸ ರಿಗೆ ಆಶ್ರಯಕೊಟ್ಟು, ಅವರಿಂದ ಸ್ವಪ್ರಶಂಸಾ ಕಾವ್ಯವನ್ನು ಬರೆಯಿಸಿಕೊಂಡದ್ದೂ ಅಪರೂಪವಲ್ಲ. ನಮ್ಮ ಮತಾಚಾರ್ಯರುಗಳನ್ನೂ, ಅವರ ಶಿಷ್ಯರುಗಳನ್ನೂ ಕುರಿತು ದಿಗ್ವಿಜಯ ಗ್ರಂಥಗಳು ಹೇರಳವಾಗಿವೆ. ಇನ್ನು ಮುಂದೆ ರಾಜಕೀಯ ದಲ್ಲಿಯೂ ವ್ಯಾಪಾರದಲ್ಲಿಯೂ ಪ್ರಸಿದ್ಧರಾದವರೂ ಮತ್ತು ಪ್ರಸಿದ್ಧಿಯನ್ನು ಅಪೇಕ್ಷಿಸುವವರೂ ತಮ್ಮ ತಮ್ಮ ಜೀವನಚರಿತ್ರೆಯನ್ನು ಬರೆಯಿಸಿ ಪ್ರಕಟಿಸ ಬಹುದು. ಇಂಗ್ಲಿಷ್ ಭಾಷೆಯಲ್ಲಿ ಇಂಥಾದ್ದು ನಡೆದಿದೆ. ಗ್ರಾಮಾಂತರಗಳ ಪಾದರಿಗಳ ಜೀವನಚರಿತ್ರೆಗಳನ್ನೂ, ಅವರ ಭಾಷಣಗಳ ಸಂಗ್ರಹವನ್ನೂ ಅವರ ಮಕ್ಕಳೋ, ಇತರ ಅಭಿಮಾನಿಗಳೋ ಪ್ರಕಟಿಸಿರುತ್ತಾರೆ. ಹತ್ತಿಪ್ಪತ್ತು ವರ್ಷಗಳ ಅನಂತರ ಆ ಪ್ರಬಂಧಗಳು ಅವರ ಹತ್ತಿರದ ಜನರ ನೆನಪಿನಿಂದಲೂ ಅಳಿಸಿಹೋಗಿರು ತ್ತವೆ. ಇಂಥ ಹುಲ್ಲುಸಾಹಿತ್ಯದ ರಚನೆಯನ್ನು ತಪ್ಪಿಸುವುದು ಸಾಧ್ಯವಾಗಲಾರದು. ಆದರೂ ಸಾಹಿತ್ಯಾಭಿಮಾನಿಗಳು ಇಂಥ ಅಪಾಯ ಉಂಟೆಂಬುವನ್ನು ಜ್ಞಾಪಕ ದಲ್ಲಿರಿಸಿಕೊಳ್ಳುವುದು ಅವರ ಕರ್ತವ್ಯವಾಗುತ್ತದೆ.

ಎರಡು ಪಕ್ಕಗಳು

ಜೀವನಚರಿತ್ರೆಯ ಮುಖ್ಯಾಂಶಗಳನ್ನು ಎರಡು ಜಾತಿಯಾಗಿ ವಿಂಗಡಿಸ ಬಹುದು :—1. ಬಾಹ್ಯಸಂಗತಿಗಳು, 2, ಅಂತಃಸ್ವಭಾವ.

ಬಾಹ್ಯಸಂಗತಿಗಳು ಎಂದರೆ, ಚರಿತ್ರನಾಯಕ ಹುಟ್ಟಿದ ತಾರೀಖು, ಸ್ಥಳ, ಕುಲ, ವಂಶಾನುಪೂರ್ವಿ, ವಿದ್ಯಾಭ್ಯಾಸದ ಸ್ಥಳ, ಅವನು ತೇರ್ಗಡೆ ಹೊಂದಿದ ಪರೀಕ್ಷೆಗಳು, ಅವನು ಸಂಪಾದಿಸಿದ ಹುದ್ದೆಗಳು, ಅವನ ವರಮಾನ, ಅವನ ಪ್ರಯಾಣಗಳು, ಅವನು ಮಾಡಿದ ಭಾಷಣಗಳು, ಅವನ ಲೇಖನಗಳು, ಅವನಿಗೆ ಬಂದ ಜಯಪತ್ರಗಳು, ಪ್ರಶಸ್ತಿಗಳು—ಇವು ಹೊರಗಣ ಸಂಗತಿಗಳು. ಈ ಸಂಗತಿಗಳು ಒಬ್ಬಾನೊಬ್ಬ ಮನುಷ್ಯನ ಛಾಯಾಚಿತ್ರಗಳಂತೆ (Photograph) ಅವನ ಆಕಾರ-ವಿಕಾರಗಳನ್ನು ಕೊಂಚಮಟ್ಟಿಗೆ ಗುರುತು ಮಾಡಿಕೊಡುತ್ತವೆ.

ಇದಕ್ಕಿಂತ ಮುಖ್ಯವಾದದ್ದು ಅವನ ಅಂತರಂಗದ ನಿರೂಪಣೆ. ಆತನು ತುಂಬ ಪ್ರೀತಿಯಿಂದ ನೋಡುತ್ತಿದ್ದುದು ಎಂಥವರನ್ನ, ಅವನ ಆಪ್ತಮಿತ್ರರು ಯಾರ್‍ಯಾರು, ಅವನ ಸಂಭಾಷಣ ವಿಷಯಗಳೇನು, ಅವನಿಗೆ ಅತ್ಯಂತ ಪ್ರಿಯ ವಾದ ಕಾಲಕ್ಷೇಪದ ಮಾರ್ಗ ಯಾವುದು—ಸಂಗೀತವೇ, ಸಾಹಿತ್ಯವೇ, ತತ್ತ್ವ ವಿಚಾರ ಗಳೇ, ಗಣಿತ ವಿಜ್ಞಾನಾದಿ ಶಾಸ್ತ್ರಗಳೇ, ಕಾಡು ಹರಟೆಯೋ ? ಅವನಿಗೆ ಅತ್ಯಂತ ಪ್ರಿಯವಾಗಿದ್ದ ಗ್ರಂಥ ಯಾವುದು ? ಆಚಾರ ಸಂಪ್ರದಾಯಗಳಲ್ಲಿ ಅವನು ತನ್ನ ನಿತ್ಯಜೀವನದಲ್ಲಿ ಅನುಸರಿಸುತ್ತಿದ್ದ ಮಾರ್ಗ ಯಾವುದು, ಸಾರ್ವಜನಿಕ ವಿಷಯ ಗಳಲ್ಲಿ ಅವನ ಪಂಥ ಯಾವುದು, ಅವನು ಬಹಿರಂಗವಾಗಿ ಸಾರುತ್ತಿದ್ದ ಅಭಿಪ್ರಾಯ ಗಳಿಗೂ, ಅಂತರಂಗವಾಗಿ ನಡೆಯುತ್ತಿದ್ದ ನಡವಳಿಕೆಗಳಿಗೂ ಹೊಂದಿಕೆ ಎಷ್ಟು ಮಾತ್ರ ಇತ್ತು—ಜೀವನಚರಿತ್ರೆಯಿಂದ ನಮಗೆ ತಿಳಿದುಬರಬೇಕಾದ ಅಂಶಗಳು ಈ ಅಂತರಂಗದ ಜಾತಿಯವು.

ದೇಶಜೀವನದ ಮುಖ್ಯ ಲಕ್ಷಣಗಳಿಗೂ, ಮುಖ್ಯ ಸಮಾರಂಭಗಳಿಗೂ ಮೂಲ ಕಾರಣರಾದವರು ಜೀವನಚರಿತ್ರೆಗೆ ಅರ್ಹರಾದ ಗಣ್ಯ ಪುರುಷರೆಂದು ಮೇಲೆ ವಿಜ್ಞಾಪಿಸಿದೆ. ಯಾರು ತಮ್ಮ ಆಲೋಚನೆ-ಅಭಿಪ್ರಾಯಗಳ ಪ್ರಭಾವದಿಂದಾಗಲೀ ತಮ್ಮ ಸೌಶೀಲ್ಯ-ಸೌಜನ್ಯಗಳ ಪ್ರಭಾವದಿಂದಾಗಲೀ ಜನತೆಯ ಮೇಲೆ ಅಷ್ಟಿಷ್ಟು ಪರಿಣಾಮವನ್ನು ಉಂಟುಮಾಡಿರುತ್ತಾರೋ ಅಂಥವರು ಜೀವನಚರಿತ್ರೆಗೆ ತಕ್ಕ ವಿಷಯವಾಗುತ್ತಾರೆ—ಎಂದು ಹೇಳಿದ ಮೇಲೆ ಅಂಥ ಜನರ ಅಂತರಂಗಸಂಪತ್ತು ದೇಶದ ಅಭ್ಯುದಯ-ಅಭಿವೃದ್ಧಿಗಳಿಗೆ ಕಾರಣವಾಯಿತು ಎಂದು ಸ್ಪಷ್ಟವಾಯಿತು. ಹೀಗೆ, ಒಬ್ಬ ಜನನಾಯಕನ, ಒಬ್ಬ ರಾಜ್ಯಕುಶಲನ ಅಥವಾ ಒಬ್ಬ ನವಸಂಪ್ರದಾಯ ಸ್ಥಾಪಕನ ವೃತ್ತಾಂತವು ದೇಶಚರಿತ್ರೆಯ ಒಳಭಾಗವಾಗಿರುತ್ತದೆ. ಈ ಮಹಾ ನಾಯಕರ ಅಂತರಂಗವನ್ನು ನಾವು ಕಂಡುಕೊಂಡದ್ದಾದರೆ ಜನಜೀವನದ ಬಹಿರಂಗದ ಅನೇಕ ಸಂದರ್ಭಗಳ ಒಳಮರ್ಮಗಳು ನಮಗೆ ತಿಳಿದುಬರುತ್ತವೆ.

ಹೀಗೆ ದೇಶದ ಬಾಹ್ಯಸಂದರ್ಭಗಳ ಒಳಮರ್ಮಗಳು ನಮಗೆ ತಿಳಿದುಬಂದ ಮೇಲೆ ಜನತೆಯ ಸದ್ಯದ ಪರಿಸ್ಥಿತಿಯಲ್ಲಿ ಇರುವ ಗುಣಾವಗುಣಗಳನ್ನೂ ಬಲಾ—ಬಲಗಳನ್ನೂ ಕಂಡುಕೊಳ್ಳಲು ನಾವು ಸಮರ್ಥರಾಗುತ್ತೇವೆ. ಆ ತಿಳಿವಳಿಕೆ

ಯಿಂದ ನಮಗೆ ಆಗಬೇಕಾಗಿರುವ ಪರಿಷ್ಕಾರದ ಸ್ವರೂಪವು ನಿಶ್ಚಿತವಾಗುತ್ತದೆ. ಹೀಗೆ, ಜೀವನಚರಿತ್ರೆಯು ದೇಶಚರಿತ್ರೆಯ ಒಂದು ಅಂಗ. ಆದರಿಂದ ಜನತೆಯ ಜೀವನದ ಸುಧಾರಣೆಗೆ ಮೊದಲು ಆಗಬೇಕಾದ ಮನಸ್ಸಿದ್ಧತೆ.

ಚರಿತ್ರೆ ಎಂದರೆ ಹಿಂದಿನ ಅನುಭವದ ವೃತ್ತಾಂತ. ದೇಶಚರಿತ್ರೆ ಎಂದರೆ ದೇಶದ ಜನದ ಒಟ್ಟಿಗೆ ಆದ ಅನುಭವಗಳು. ಜೀವನ ಚರಿತ್ರೆಯೆಂದರೆ ಒಬ್ಬಾನೊಬ್ಬ ವ್ಯಕ್ತಿಮನುಷ್ಯನಿಗೆ ಆದ ಅನುಭವ.

ಚರಿತ್ರೆ, ಚರಿತೆ, ಚಾರಿತ್ರ್ಯ, ಚರ್ಯೆ, ಆಚರಣೆ, ಆಚಾರ—ಇವೆಲ್ಲ ಒಂದೇ ಬುಡಕಟ್ಟಿನಿಂದ ಬಂದಿರುವ ಪದಗಳು. ಅವುಗಳ ಸಾಮಾನ್ಯವಾದ ಅರ್ಥ "ನಡವಳಿಕೆ" ಎಂದು.

ಒಂದಾನೊಂದು ನಡವಳಿಕೆಯು ಕೆಲವು ಕಾರಣಗಳಿಂದ ಉಂಟಾಗುತ್ತದೆ ಮತ್ತು ಅದು ಕೆಲವು ಫಲಿತಾಂಶಗಳನ್ನು ಸಂಪಾದಿಸುತ್ತದೆ. ಆ ಕಾರಣಗಳೂ, ಆ ನಡವಳಿಕೆಗಳೂ ಆ ಫಲ ಪರಿಣಾಮಗಳೂ ಎಲ್ಲವೂ ಒಟ್ಟಿಗೆ ಅನುಭವ ಎಂಬ ಮಾತಿನಲ್ಲಿ ಅಡಕವಾಗಿರುತ್ತದೆ. ಇಂಥ ಅನುಭವಗಳ ನಿರೂಪಣೆಯೇ ಪಾರಿಭಾಷಿಕವಾಗಿ (Technically) ಚರಿತ್ರೆ.

ಚರಿತ್ರೆಯು ಅನುಭವಪರೀಕ್ಷೆ

ಚರಿತ್ರೆಯ ವ್ಯಾಸಂಗವು ಲೋಕನಿರ್ವಾಹಕ್ಕೆ ಅವಶ್ಯವಾದ ಒಂದು ಜ್ಞಾನಸಿದ್ಧತೆ. ಈ ವಿಷಯದಲ್ಲಿ ನಮ್ಮ ಜನದ ತಿಳಿವಳಿಕೆ ವಿಷದಪಟ್ಟು ಸ್ಥಿರಪಡಬೇಕಾಗಿದೆ. ಏಕೆಂದರೆ, ಚರಿತ್ರೆಯೆಂದರೆ ಏನೋ ಪುರಾಣ, ಏನೋ ಆಕಾಶರಗಳೆ, ಏನೋ ಕಟ್ಟುಕಥೆ, ಯಾವುದೋ "ರಾಯ ಕೇಳೆಂದ", ಯಾವುದೋ "ಭೂಪ ಕೇಳೆಂದ", ಏನೋ ಬ್ರಹ್ಮಾಂಡ ಪುರಾಣ—ಎಂದು ಭಾವನೆ ಇಟ್ಟುಕೊಂಡಿರುವ ಜನ ನಮ್ಮಲ್ಲಿ ಬಹು ಮಂದಿ ಇದ್ದಾರೆ. ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೂ ಕೂಡ ಇಂಥ ಅಸಂಗತವಾದ ಅಭಿಪ್ರಾಯ ಸಾಮಾನ್ಯವಾಗಿದೆ. ಚರಿತ್ರೆಯ ಓದು ಎಂದರೆ ಕೆಲವು ತಾರೀಖುಗಳನ್ನು ಉರು ಹೊಡೆಯುವುದು, ಕೆಲವು ಹೆಸರು ಪಟ್ಟಿಗಳನ್ನು ಬಾಯಿಪಾಠ ಮಾಡುವುದು—ಇದಿಷ್ಟೇ ಎಂದು ಅವರ ತಿಳಿವಳಿಕೆ. ಚರಿತ್ರೆಯ ಪಾಠದಲ್ಲಿ ಸ್ವತಂತ್ರವಾದ ಬುದ್ಧಿಕಾರ್ಯವೇನೂ ಇಲ್ಲ, ಅದು ನಡೆದುಹೋದವರ ಕಂತೆ ಎಂದು ಅವರ ತಿಳಿವಳಿಕೆ.

ಈ ಅಭಿಪ್ರಾಯ ಎಷ್ಟು ಮಾತ್ರವೂ ಸಾಧುವಲ್ಲ. ತಾರೀಖುಗಳೂ, ಹೆಸರುಗಳೂ ಚರಿತ್ರೆಯಲ್ಲ. ಬಾಗಿಲಿಗೆ ಹಾಕಿದ ಕೈಪಿಡಿಕೆ ಬಾಗಿಲಲ್ಲ. ಕೈಪಿಡಿಕೆ ಬಾಗಿಲನ್ನು ಉಪಯೋಗಿಸಲು ಒಂದು ಸಣ್ಣ ಸೌಕರ್ಯ. ಹಾಗೆಯೇ ತಾರಿಖು, ಹೆಸರು, ಒಂದು

ಮಹಾಸಂಗತಿಯನ್ನು ಜ್ಞಾಪಕಕ್ಕೆ ತರುವ ಹೆಗ್ಗುರುತು. ಹೆಗ್ಗುರುತೇ ವಸ್ತುವಲ್ಲ. ವಸ್ತು ಗುರುತಿಗಿಂತ ಬಹು ದೊಡ್ಡದು.

ನಮ್ಮ ದೇಶದಲ್ಲಿ ಸಾರ್ವಜನಿಕ ವಿಚಾರಗಳಲ್ಲಿ ನಡೆಯುತ್ತಿರುವ ಪ್ರಮಾದಗಳಿಗೆ ಚರಿತ್ರೆಯ ಅಪರಿಚಯವೇ ಮುಖ್ಯ ಕಾರಣವೆಂದು ಹೇಳಬಹುದು. ಚರಿತ್ರೆಯೆಂದರೆ ಒಂದು ಪ್ರಶ್ನೆಯ ಹಿನ್ನೆಲೆ. ಆ ಪ್ರಶ್ನೆ ಹೇಗೆ ಹುಟ್ಟಿತು, ಹಿಂದಿನವರು ಆ ಪ್ರಶ್ನೆಯನ್ನು ಹೇಗೆ ಎದುರಿಸಿದರು. ಅವರ ನಡವಳಿಕೆಯಲ್ಲಿ ಇದ್ದ ಮನೋಗತವೇನು. ಆ ನಡವಳಿಕೆ ವ್ಯರ್ಥವಾದದ್ದಕ್ಕೆ ಕಾರಣಗಳೇನು—ಇಂಥ ಅನುಭವ ಪರೀಕ್ಷೆಯೇ ಚರಿತ್ರೆ. ಚರಿತ್ರೆಯನ್ನು ಒಳಹೊಕ್ಕು ವಿಮರ್ಶಿಸಿದರೆ ಹಿಂದೆ ಮಾಡಿದ ತಪ್ಪೇನು ಎಂದು ನಮಗೆ ಎಚ್ಚರಿಕೆ ದೊರೆಯುತ್ತದೆ. ಈಗ ನಾವು ಅಂಥ ತಪ್ಪನ್ನು ಮಾಡದಿರಲು ಯಾವ ಎಚ್ಚರಿಕೆ ಅವಶ್ಯ ? ನಾವು ಯಾವ ಹೊಸ ನೀತಿಯನ್ನು ಅವಲಂಬಿಸಿದರೆ ಹಳೆಯ ಅಪಾಯ ನಮಗೆ ತಪ್ಪೀತು ?—ಈ ವಿಧವಾದ ಜಾಗ್ರತೆ ಮತ್ತು ಬೋಧನೆ ನಮಗೆ ಚರಿತ್ರೆಯ ವಿಮರ್ಶನೆಯಿಂದ ಆಗಬಹುದಾದ ಉಪಕಾರ.

ಉದಾಹರಣೆಗಳು : ಈಗ್ಗೆ ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಗ್ರೀಸ್ ದೇಶವು ವಿದ್ಯೆ ವೈದುಷ್ಯಗಳಲ್ಲಿ ಯುರೋಪಿನ ಜನಾಂಗಗಳಿಗೆ ಆದರ್ಶವಾಗಿತ್ತು. ಯುರೋಪಿನ ಸಾಹಿತ್ಯ ಕಲೆ ಸಂಸ್ಕೃತಿಗಳಿಗೆ ಗ್ರೀಸ್‌ದೇಶವು ಮಾತೃಸ್ಥಾನವೆಂದು ಎಲ್ಲರೂ ಅಂಗೀಕರಿಸಿದ್ದಾರೆ. ಅದು ಪಟ್ಟಣ–ರಾಜ್ಯಗಳಿದ್ದ (City-States) ದೇಶ. ಅಲ್ಲಿಯ ಅಥೆನ್ಸ್ (Athens) ಪಟ್ಟಣ-ರಾಜ್ಯವು ಪ್ರಜಾಪ್ರಭುತ್ವಕ್ಕೆ (Democracy) ಉದಾಹರಣೆಯಾಗಿತ್ತು. ಅಲ್ಲಿಯ ಸ್ಪಾರ್ಟಾ (Sparta) ಪಟ್ಟಣ-ರಾಜ್ಯವು ಶಿಸ್ತಿಗೂ ನಿಯಮಪಾಲನೆಗೂ (Discipline) ಹೆಸರಾಗಿತ್ತು. ಈ ಪಟ್ಟಣ-ರಾಜ್ಯಗಳು ಅಷ್ಟು ನ್ನತಿಗೆ ಏರಿದ್ದು ಹೇಗೆ, ಕಾಲಕ್ರಮದಲ್ಲಿ ಅವನತಿಗೆ ಇಳಿದದ್ದು ಹೇಗೆ, ಗ್ರೀಸಿನ ಆ-ಪಟ್ಟಣ-ರಾಜ್ಯಗಳಲ್ಲಿ ಪರಸ್ಪರ ಸ್ಪರ್ಧೆ ಅತಿಯಾದಾಗ, ಪರ್ಷಿಯ ಮೊದಲಾದ ಇತರ ರಾಜ್ಯಗಳಿಂದ ಭಯ ಬಂದಾಗ, ಅದನ್ನು ನಿವಾರಿಸಿಕೊಳ್ಳಲು ಆ ಪಟ್ಟಣ-ರಾಜ್ಯಗಳು ಒಂದು ಸಂಯುಕ್ತ ವ್ಯವಸ್ಥೆಯ (Federation) ಒಡಂಬಡಿಕೆಯನ್ನು ಮಾಡಿಕೊಂಡದ್ದು ಹೇಗೆ, ಅದು ಕುಸಿದುಹೋದದ್ದು ಹೇಗೆ—ಈ ಪ್ರಶ್ನೆಗಳು ಪುರಾತನಕ್ಕೆ ಮಾತ್ರ ಸೇರಿದವಲ್ಲ. ಈಗ ಮುಗಿದುಹೋದವೂ ಅಲ್ಲ. ಅವು ನಮ್ಮ ಕಾಲದಲ್ಲೂ ರೂಪ ರೂಪಾಂತರಗಳಲ್ಲಿ ಅವತಾರ ಮಾಡುತ್ತಿರುವ ಪ್ರಶ್ನೆಗಳು.

ಗ್ರೀಸ್ ಆದಮೇಲೆ ರೋಮ್ ಚಕ್ರಾಧಿಪತ್ಯ ಬೆಳೆದು ಪ್ರಖ್ಯಾತವಾಯಿತು. ಅದು ಯುರೋಪ್ ಖಂಡದ ಬಹುಭಾಗಗಳಲ್ಲಿ ತನ್ನ ದರ್ಪವನ್ನು ಹರಡಿತ್ತು. ಯುರೋಪಿನ ಬಹು ಜನಾಂಗಗಳ ವ್ಯವಹಾರ ನ್ಯಾಯಪದ್ಧತಿಗಳು (Jurisprudence) ರೋಮ್ ಚಕ್ರಾಧಿಪತ್ಯದಿಂದ ಪ್ರಚಾರಗೊಂಡವೆಂದು ಹೇಳುತ್ತಾರೆ. ಅಷ್ಟು ಬಲಿಷ್ಠವಾಗಿ ಪುಷ್ಟವಾಗಿದ್ದ ಚಕ್ರಾಧಿಪತ್ಯ ಏಕೆ ಸಡಿಲಿತು ? ಅದಕ್ಕೆ ಕಾರಣರು

ಯಾರು ? ಪ್ರಜೆಗಳೇ ? ಪ್ರಭುಗಳೇ ? ಪ್ರಜೆಯಲ್ಲಿ ದುರ್ಬಲತೆ ಉಂಟಾಯಿತೆಂಬುದಾದರೆ ಆ ದುರ್ಬಲತೆಗೆ ಕಾರಣಗಳೇನೇನು ?

ಇಂಥ ಪ್ರಶ್ನೆಗಳಿಗೆ ಜರ್ಮನಿ ದೇಶದ ಚರಿತ್ರೆಯಲ್ಲಿಯೂ ಅವಕಾಶವಿದೆ. ಅದು ಇನ್ನೂರು ವರ್ಷಗಳ ಹಿಂದೆ ಒಂದು ಸಾಮಾನ್ಯವಾದ ಸಣ್ಣ ರಾಜ್ಯವಾಗಿತ್ತು. ಅಲ್ಲಿಂದ ಅದು ಪ್ರಬಲಿಸಿ ನಾಲ್ಕನೆಯ ಕೈಸರನ ಕಾಲದಲ್ಲಿ ಮಹಾರಾಜ್ಯವಾಯಿತು. ಅದು ಹೇಗೆ ? ಮಹಾ ಪ್ರಸಿದ್ಧಿಗೆ ಬಂದು ಕೆಲವು ಕಾಲ ಕಾರುಬಾರು ನಡೆಸಿ, ಆಮೇಲೆ ದುರ್ಬಲವಾಯಿತು. ಈಚೆಗೆ ಕ್ಷೀಣಿಸಿ ಇಬ್ಭಾಗವಾಗಿ ಈಗ ಮತ್ತೆ ತಲೆಯೆತ್ತಲು ಏನೇನು ಸಾಹಸ ಮಾಡಿದರೂ ಮುಂದಕ್ಕೆ ಸಾಗಲಾರದೆ ಇದೆ. ಜರ್ಮನಿಗೆ ವಿಜ್ಞಾನಶಾಸ್ತ್ರದಲ್ಲಿ ಅಗ್ರಸ್ಥಾನವೆಂದು ಕೆಲವು ಕಾಲ ಪ್ರಸಿದ್ಧಿಯಿತ್ತು. ಅವರು ಮೇಧಾವಿಗಳು, ಮಹಾ ಪ್ರಯತ್ನಶೀಲರು. ಹಾಗಿದ್ದರೂ ಅವರನ್ನು ದುರದೃಷ್ಟ ಹೇಗೆ ಹಿಂಬಾಲಿಸುತ್ತಿದೆ ?

ಇಂಗ್ಲೆಂಡನ್ನೇ ನೋಡೋಣ. ನಾನೂರು ವರ್ಷಗಳ ಹಿಂದೆ ಅದು ಒಂದು ಸಾಮಾನ್ಯವಾದ ಸಣ್ಣ ದ್ವೀಪ. ಅದು ಕ್ರಮೇಣ ಜಗದ್ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿತು. 'ಸೂರ್ಯಾಸ್ತಮಾನವಿಲ್ಲದ ಚಕ್ರಾಧಿಪತ್ಯ' ಎಂದು ಹೆಸರಾಯಿತು. ಹತ್ತಾರುವರ್ಷ ಹಾಗೆ ಅಭ್ಯುದಯದಲ್ಲಿದ್ದು ಈಗ ಮತ್ತೆ ಸಾಮಾನ್ಯದಶೆಗೆ ಹಿಂದಿರುಗುತ್ತಿದೆ. ಇದರ ಗುಟ್ಟೇನು ?

ಹೀಗೆ ಜನತೆಯ ಹಾನಿವೃದ್ಧಿಗಳೂ, ಬಲಾಬಲಗಳೂ, ಉನ್ನತಿ ಅವನತಿಗಳೂ, ಅವರ ಸೌಜನ್ಯ, ಪಾರಿಶುದ್ಧ್ಯ, ಉದಾತ್ತತೆ, ನೀಚದೃಷ್ಟಿ, ಭೋಗಾಸಕ್ತಿ, ಅಹಂಕಾರ, ದರ್ಪ, ಮದ ಮಾತ್ಸರ್ಯಗಳು—ಇಂಥ ದೇಹಗುಣ ಮನೋಗುಣ ಬುದ್ಧಿಗುಣಗಳು ಅವರ ಏಳಿಗೆಗೂ ಬೀಳಿಗೂ ಹೇಗೆ ಹೇಗೆ ಕಾರಣವಾದವೆಂಬುದರ ವಿವೇಕವೇ ಚರಿತ್ರೆಯ ವ್ಯಾಸಂಗದಿಂದ ನಮಗೆ ಉಂಟಾಗುವ ಲಾಭ. ಅನುಭವ ಪರೀಕ್ಷೆಯ ಮೂಲಕ ಉತ್ಪನ್ನವಾದ ಯುಕ್ತಾಯುಕ್ತ ವಿವೇಕವು ನಮ್ಮ ಮುಂದಿನ ಪ್ರಯಾಣಕ್ಕೆ ಕೈದೀವಿಗೆಯಂತಾಗುತ್ತದೆ.

ವ್ಯಕ್ತಿಚರಿತ್ರೆಗೆ ಅರ್ಹರಾದವರು

ದೇಶಚರಿತ್ರೆ (History) ಜನತೆಯ ಬಹಿರಂಗ ವ್ಯಾಪಾರವಾದರೆ ಜೀವನ ಚರಿತ್ರೆಯು (Biography) ಅವರ ಅಂತರಂಗ ಚಲಿತ.

ಜನದ ಮನಸ್ಸನ್ನು ಕೆರಳಿಸುವವರೂ, ಅವರ ಬುದ್ಧಿಯನ್ನು ಕೆಣಕುವವರೂ, ಅವರ ಆಶೆ ಅಭಿಲಾಷೆಗಳಿಗೆ ರೂಪಕೊಡುವವರೂ, ಅವರಲ್ಲಿ ಭಾವೋದ್ರೇಕ ಮಾಡಿಸುವವರೂ, ಹೊಸ ಹೊಸ ಅಭಿಪ್ರಾಯಗಳನ್ನು ಉತ್ಪಾದನೆ ಮಾಡಿಸುವವರೂ, ಚಳವಳಿಯೆಬ್ಬಿಸಿ ಆಂದೋಳನ ಮಾಡಿಸುವವರೂ, ಅವರ ಶೀಲಸ್ವಭಾವ

ಗಳನ್ನು ತಿದ್ದಿ ಮಾರ್ಪಡಿಸುವವರೂ ದೇಶದ ನಾಯಕರು ತಾನೆ? ಈ ಪ್ರಸಿದ್ಧ ಪುರುಷರೇ ಜನದ ಅಂತರಂಗಕ್ಕೆ ಅಧಿಕಾರಿಗಳು. ನಾಯಕರಂತೆ ಜನತೆ. ದೇಶದ ಸಮಾರಂಭಗಳ ಮರ್ಮವನ್ನೂ ಸಂದರ್ಭಸನ್ನಿವೇಶಗಳ ಒಳರೂಪವನ್ನೂ ನಾವು ತಿಳಿದುಕೊಳ್ಳಬೇಕೆಂದರೆ ಆ ನಾಯಕರ ಅಂತರಂಗವನ್ನು ಕಂಡುಕೊಳ್ಳಬೇಕು. ಹೀಗೆ ಬರುತ್ತದೆ ಬೆಲೆ ಜೀವನಚರಿತ್ರೆಯೆಂಬ ಸಾಹಿತ್ಯಜಾತಿಗೆ.

ದೇಶಚರಿತ್ರೆಯಲ್ಲಿರುವಂತೆ ವ್ಯಕ್ತಿಚರಿತ್ರೆಯಲ್ಲಿಯೂ ಮುಖ್ಯ ಭಾಗಗಳು ಎರಡು :– (1) ಬಹಿರಂಗದ್ದು, (2) ಅಂತರಂಗದ್ದು. ಒಬ್ಬ ಮನುಷ್ಯನ ಶೀಲ ಸ್ವಭಾವ ಲಕ್ಷಣಗಳು ಅವನನ್ನು ಹತ್ತಿರದಿಂದ ನೋಡಿರುವವರಿಗೆ ಚೆನ್ನಾಗಿ ತಿಳಿದಿರುತ್ತದೆ. ವ್ಯಕ್ತಿಚರಿತ್ರೆಯು ಯಾರನ್ನು ಕುರಿತದ್ದಾಗಿರುತ್ತದೆಯೋ ಆತನಿಗೂ ಯಾರು ಬರೆಯುತ್ತಾನೋ ಆತನಿಗೂ ಪರಸ್ಪರ ಆಪ್ತತೆಯೂ ಸ್ನೇಹವೂ ಎಷ್ಟು ಹೆಚ್ಚಾಗಿದ್ದರೆ ಆ ವ್ಯಕ್ತಿಚರಿತ್ರೆ ಅಷ್ಟು ಪ್ರಾಮಾಣಿಕವಾಗಿ ಅಷ್ಟು ಸ್ವಾರಸ್ಯಕರವಾಗಿರುತ್ತದೆ. ಇಂಗ್ಲಿಷಿನಲ್ಲಿ ಬಾಸ್‌ವೆಲ್ (Boswell) ಬರೆದ ಜಾನ್‌ಸನ್ ಪಂಡಿತನ (Dr. Johnson) ಜೀವನಚರಿತ್ರೆ, ಕಾರ್‌ಲೈಲ್ (Carlyle) ಬರೆದ ಕ್ರಾಮ್‌ವೆಲ್ (Cromwell), ಫ್ರೆಡರಿಕ್ (Fredeirck the Great) ಮೊದಲಾದವರ ಜೀವನಚರಿತ್ರೆಗಳು, ಲಾಕ್‌ಹಾರ್ಟ್ (Lockhart) ಎಂಬವನು ಬರೆದ ಸ್ಕಾಟ್ (Scott) ಕವಿತಾ ಕಾದಂಬರಿಕಾರನ ಚರಿತ್ರೆ, ಮಾರ್ಲೇ (Lord Morley) ಬರೆದ ಗ್ಲಾಡ್‌ಸ್ಟನ್ (Gladstone) ರಾಜ್ಯನಿಪುಣನ ಜೀವನಚರಿತ್ರೆ—ಇವು ವ್ಯಕ್ತಿಚರಿತ್ರೆಗಳಲ್ಲಿ ಬಹು ಪ್ರಸಿದ್ಧವಾದವು.

ನಾನು 1910ರಲ್ಲಿ ದಿವಾನ್ ರಂಗಾಚಾರ್ಲು ಅವರನ್ನು ಕುರಿತ ವ್ಯಕ್ತಿಚರಿತ್ರೆಯನ್ನು ನನಗೆ ಸಾಧ್ಯವಿದ್ದಷ್ಟು ಮಟ್ಟಿಗಾದರೂ ಸಮಗ್ರ ಮಾಡಬೇಕೆಂದು ಆಗಿನ ದಿವಾನರಾಗಿದ್ದ ಪ್ರಧಾನ ಶಿರೋಮಣಿ ಟಿ. ಆನಂದರಾಯರವರನ್ನು ಕಂಡೆ. ಅವರು ರಂಗಾಚಾರ್ಲು ಅವರನ್ನು ಬಲ್ಲವರೆಂದೂ, ಆನಂದರಾಯರ ತಂದೆ ರಾಜಾ ಸರ್ ಟಿ. ಮಾಧವರಾಯರೂ ರಂಗಾಚಾರ್ಲು ಅವರೂ ಗಾಢ ಸ್ನೇಹಿತರಾಗಿದ್ದರೆಂದೂ ಕೇಳಿದ್ದೆ. ಆ ಕಾರಣದಿಂದ ಆನಂದರಾಯರಿಂದ ನನಗೆ ಹೆಚ್ಚು ವಿಷಯ ತಿಳಿದೀತೆಂದು ನಿರೀಕ್ಷಿಸಿಕೊಂಡಿದ್ದೆ.

ಆನಂದರಾಯರು ನನ್ನ ಉದ್ದೇಶವನ್ನು ನಾನು ತಿಳಿಸಿದ ಕೂಡಲೆ—"ನೀವು ರಂಗಾಚಾರ್ಯರನ್ನು ನೋಡಿದ್ದೀರೋ?" ಎಂದರು.

"ಇಲ್ಲ ; ನಾನು ಹುಟ್ಟುವಾಗ್ಗೆ ಅವರು ಸತ್ತು 6–7 ವರ್ಷವಾಗಿತ್ತು."

"ಹಾಗಾದರೆ ರಂಗಾಚಾರ್ಯರ ಮಾತುಕಥೆ ಮರ್ಯಾದೆ ಕಾರ್ಯಧೋರಣೆ—ಇಂಥಾ ವ್ಯಕ್ತಿವಿಶೇಷ ಕಥೆಗಳನ್ನು (Anecdotes, Table-talk) ಹೇಳಿಲ್ಲವೆ?"

"ಅದನ್ನು ಕುರಿತು ಹೆಚ್ಚಾಗಿ ಹೇಳಿ. ನಾನು ಕೇಳಿರುವಷ್ಟು ಮಾತ್ರ ಹೇಳಿದ್ದೇನೆ."

"ಒಳ್ಳೆಯದು ; ನೀವು ಮೈಸೂರಿಗೆ ಹೋಗಿ ಅಲ್ಲಿ ಅಂಬಿಲ್ ನರಸಿಂಹ ಯ್ಯಂಗಾರ್ಯರು, ವೆಂಕಟಕೃಷ್ಣಯ್ಯನವರು, ಇನಾಂದಾರ್ ರಾಘವಾಚಾರ್ಯರು—ಇವರನ್ನು ಕಂಡು ಪ್ರಶ್ನೆ ಮಾಡಿ ಅವರು ಹೇಳುವುದನ್ನು ಗುರುತು ಮಾಡಿಕೊಂಡು ಬಂದು ಅದನ್ನು ನಿಮ್ಮ ಪುಸ್ತಕಕ್ಕೆ ಅನುಬಂಧವಾಗಿ ಸೇರಿಸಿರಿ. ಆಗ ಈ ಪುಸ್ತಕ ಇನ್ನೂ ಸ್ವಾರಸ್ಯಪಡಬಹುದು."

ಹೀಗೆ ಶ್ರೀ ಆನಂದರಾಯರ ಸಲಹೆ. ನಾನು ಅದನ್ನಂಗೀಕರಿಸಿ ಅದನ್ನು ನಡಸಲು ಪ್ರಯತ್ನ ಮಾಡಿದೆ. ಅದಕ್ಕಾಗಿ ಮೈಸೂರಿನಲ್ಲಿ ೨೦–೨೫ ದಿನವಿದ್ದೆ. ಆದರೆ ನಿರೀಕ್ಷೆ ಮಾಡಿದಷ್ಟು ಲಾಭ ದೊರೆಯಲಿಲ್ಲ. ಶ್ರೀ ಅಂಬಿಲ್ ನರಸಿಂಹ ಯ್ಯಂಗಾರ್ಯರು ಕಾಯಿಲೆಯಲ್ಲಿದ್ದದ್ದರಿಂದ ನಾಲ್ಕು ವಾಕ್ಯಗಳನ್ನು ಪೀಠಿಕೆಯಾಗಿ ಕೊಟ್ಟಿದ್ದಾರೆ. ವೆಂಕಟಕೃಷ್ಣಯ್ಯನವರು ಅವರು ಬರೆದ ಪೀಠಿಕೆಯಲ್ಲಿ ವೈಯಕ್ತಿಕ ಸಂಗತಿಗಳನ್ನು ಏನನ್ನೂ ಹೇಳಿಲ್ಲ.

ನಮ್ಮ ಜನ ವ್ಯಕ್ತಿಚರಿತ್ರೆಗೆ ಉಪಯುಕ್ತವಾಗುವ ಅಂಶಗಳೇನೆಂಬುವನ್ನು ಗಮನವಿರಿಸಿ ತಿಳಿದುಕೊಳ್ಳಬೇಕು. ಆತ "ಮಹಾ ದೊಡ್ಡ ಮನುಷ್ಯ". "ಆಜಾನುಬಾಹು", "ಉದಾತ್ತಸಂಕಲ್ಪ". "ಪ್ರತಿಭಾವಂತ", "ನಿರಂತರೋದ್ಯೋಗಿ"—ಇಂಥ ಸಾಮಾನ್ಯವಾದ ವರ್ಣನೆಯ ಪದಗಳಿಂದ ಉದ್ದಿಷ್ಟವ್ಯಕ್ತಿಯ ಸ್ವರೂಪವು ನಮ್ಮ ಮನಃಫಲಕದ ಮೇಲೆ ಆಳವಾಗಿ ಮುದ್ರಿತವಾಗುವುದಿಲ್ಲ.

ಕೆಲವರು, ರಂಗಾಚಾರ್ಯರ ವಿಷಯ ಹೇಳಿ ಎಂದು ಕೇಳಿದರೆ ಅದನ್ನು ನೆವ ಮಾಡಿಕೊಂಡು ತಮ್ಮ ವಿಷಯವನ್ನೇ ಹೇಳಿಕೊಳ್ಳುತ್ತಾರೆ. ರಂಗಾಚಾರ್ಯರಿಗೆ ಬಂದ ಯಾವುದೋ ಒಂದು ಕಷ್ಟ. ಆ ಸಂದರ್ಭದಲ್ಲಿ ಅವರು ಈ ತಿಮ್ಮಣ್ಣಯ್ಯನನ್ನು ಕೇಳಿಕೊಂಡ ರೀತಿ. ಈ ತಿಮ್ಮಣ್ಣಯ್ಯನು ಮಾಡಿದ ಸಾಹಸ. ಈ ತಿಮ್ಮಣ್ಣಯ್ಯನ ಬುದ್ಧಿವಂತಿಕೆಯಿಂದ ಆ ಕಷ್ಟ ನಿವಾರಣೆಯಾದದ್ದು. ಈ ತಿಮ್ಮಣ್ಣಯ್ಯನ ವಿಷಯದಲ್ಲಿ ರಂಗಾಚಾರ್ಯರು ಇಟ್ಟುಕೊಂಡಿದ್ದ ಕೃತಜ್ಞತೆ ಗೌರವಗಳು. ಈ ತಿಮ್ಮಣ್ಣಯ್ಯನ ಪ್ರತಾಪ ಮಹಿಮೆಗಳು—ಇಂಥವೇ ಆ ಪುಣ್ಯಾತ್ಮನ ಬಾಯಿಂದ ಹರಿದು ಬಂದು ರಂಗಾಚಾರ್ಯರನ್ನು ಅಮುಖ್ಯರನ್ನಾಗಿ ಮಾಡುತ್ತವೆ.

ಶೀಲ ನಿದರ್ಶನ

ವ್ಯಕ್ತಿಚರಿತ್ರೆಗೆ ಬೇಕಾದದ್ದು ಶೀಲನಿದರ್ಶಕವಾದ ಘಟನೆಗಳು (Character-revealing incidents).

ಒಂದು ಉದಾಹರಣೆ : ದಿವಾನ್ ರಂಗಾಚಾರ್ಲು ಅವರ ವ್ಯಕ್ತಿಚರಿತ್ರೆಯನ್ನು ಕುರಿತು ನಾನು ದಿವಾನ್ ಟಿ. ಆನಂದರಾಯರನ್ನು ಕಾಣಲು ಹೋಗಿದ್ದ ಸಂಗತಿಯನ್ನು ಮೇಲೆ ಪ್ರಸ್ತಾಪಿಸಿದೆಯಷ್ಟೆ. ಆಗ ನಾನು ಸುಮಾರು ಇಪ್ಪತ್ತರಲ್ಲಿದ್ದವನು ; ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮಣ್ಣು ತಿಂದಿದ್ದೆ. ಆನಂದ ರಾಯರವರಾದರೋ ಅರುವತ್ತರ ಹತ್ತಿರಕ್ಕೆ ಬಂದಿದ್ದವರು. ನಡೆನುಡಿಗಳೆರಡರಲ್ಲೂ ಕರಾರುವಾಕ್ ಮನುಷ್ಯರೆಂದು ಹೆಸರಾಗಿದ್ದವರು. ಅವರು ಇಂಗ್ಲಿಷ್ ಸಾಹಿತ್ಯದಲ್ಲಿ ಪರಿಣತರಾಗಿದ್ದವರು. ಇಂಥಾ ದೊಡ್ಡ ಮನುಷ್ಯರಲ್ಲಿ ನನ್ನಂಥವನು ಹೇಗೆ ನಡೆದುಕೊಳ್ಳುವುದು ಯುಕ್ತವೆಂದು ನಾನು ಚಿಂತೆ ಮಾಡಿದ್ದೆ. ಅವರು ಗೊತ್ತುಮಾಡಿದ್ದ ದಿವಸ, ಗೊತ್ತುಮಾಡಿದ್ದ ವೇಳೆಗೆ, ಗೊತ್ತುಮಾಡಿದ್ದ ಸ್ಥಳಕ್ಕೆ ಹೋದೆ. ಸ್ಥಳ ಅವರ ಮನೆ. ಹೊತ್ತು ಮಧ್ಯಾಹ್ನ ಮೂರು ಗಂಟೆ.

ನಾನು ಮನೆಯ ಆವರಣವನ್ನು ಪ್ರವೇಶಿಸಿ, ಮೊಗಸಾಲೆಯ ಮೆಟ್ಟಿಲನ್ನು ಹತ್ತುತ್ತಿದ್ದಂತೆ ಒಬ್ಬ ಕಾರಕೂನರು ಒಳಗಿನಿಂದ ಬಂದು ನನ್ನ ಹೆಸರು ಹೇಳಿ ಇಂಗ್ಲಿಷಿನಲ್ಲಿ "ನೀವು ಇಂಥವರೇ ?" ಎಂದು, ಕೇಳಿದರು. ನಾನು "ಹೌದು" ಎನ್ನುತ್ತಲೇ ಅವರು "ಒಳಕ್ಕೆ ಹೋಗಿ" ಎಂದರು. ಅದರಂತೆ ನಾನು ಅವರು ತೋರಿಸಿದ ಕೊಠಡಿಯೊಳಕ್ಕೆ ಕಾಲಿಟ್ಟೆ. ಆನಂದರಾಯರವರು ಅಲ್ಲಿ ನಿಂತಿದ್ದರು. ನಾನು "ನಮಸ್ಕಾರ" ಎಂದು ಹೇಳಿ ಕೈಮುಗಿದೆ. ಅವರು ಪ್ರತಿ ನಮಸ್ಕಾರ ಮಾಡಿ ಕೈಕುಲುಕಿ(ಷೇಕ್‌ಹ್ಯಾಂಡ್)ಗಾಗಿ ತಮ್ಮ ಕೈಯನ್ನು ಚಾಚಿದರು. ಅದಾದ ಮೇಲೆ ಒಂದು ಕುರ್ಚಿಯನ್ನು ತೋರಿಸಿ (ಇಂಗ್ಲಿಷಿನಲ್ಲಿ) "ದಯವಿಟ್ಟು ಕೂಡಿ" ಎಂದರು. ನಾನು ಕುಳಿತುಕೊಳ್ಳದೆ ನನ್ನ ಪ್ರವರವನ್ನು ಹೇಗೆ ಮೊದಲು ಮಾಡಬೇಕೆಂದು ಯೋಚಿಸುತ್ತಿದ್ದೆ. ಅವರು ಎರಡನೆಯ ಸಾರಿ, "ದಯವಿಟ್ಟು ಕೂಡಿರಿ" ಎಂದರು. ನಾನು "ಪರವಾಗಿಲ್ಲ" ಎಂದು ಹೇಳಿ ಮುಂಬರಿಯುವ ಪ್ರಯತ್ನದಲ್ಲಿದ್ದೆ. ಆನಂದರಾಯರು ಮೂರನೆಯ ಸಾರಿ "ದಯವಿಟ್ಟು ಕೂಡಿರಿ. ನೀವು ಕೂತುಕೊಳ್ಳುವುದಕ್ಕೆ ಮುಂಚೆ ನಾನು ಕೂಡುವುದಿಲ್ಲ. ಇಬ್ಬರೂ ಕೂಡದಿದ್ದರೆ ಮಾತುಕಥೆಯಿಲ್ಲ" ಎಂದು ಖಂಡಿತವಾದ ಧ್ವನಿಯಿಂದ ಹೇಳಿದರು, ಬಳಿಕ ನಾನು ಕುಳಿತು ಮಾತುಕಥೆಯಾಡಿದೆ. ಎಲ್ಲ ಸುಮುಖವಾಯಿತು. ಆನಂದರಾಯರವರು ಎಂಥ ವಿನಯ ಮರ್ಯಾದೆಗಳುಳ್ಳವರು ಎಂಬುದಕ್ಕೆ ಇದು ನಿದರ್ಶನ.

ಆನಂದರಾಯರು ಸೆನ್ಸಸ್ ಕಮಿಷನರಾಗಿದ್ದರು. ಆಗ ಅವರ ಕಛೇರಿಯ ಮ್ಯಾನೇಜರಾಗಿದ್ದವರು ರಾಮಯ್ಯ ಎಂಬವರು. ಆನಂದರಾಯರು ಕಛೇರಿಗೆ ಹನ್ನೊಂದು ಘಂಟೆಗೆ ಸರಿಯಾಗಿ ಬರುವರು. ಒಂದು ನಿಮಿಷ ಮುಂದೆ ಅಲ್ಲ ; ಒಂದು ನಿಮಿಷ ಹಿಂದೆ ಅಲ್ಲ. ಗಡಿಯಾರ ಟಣ್ ಟಣ್ ಎನ್ನಲು ಮೊದಲಾದಾಗ ಅವರು ಹೊಸಲಿನಿಂದ ಒಳಗೆ ಹೆಜ್ಜೆಯಿಡುವರು. ಹಾಗೆ ಬಂದು ತಮ್ಮ ಕುರ್ಚಿಯ ಮೇಲೆ ಕುಳಿತ ಮರುಕ್ಷಣದಲ್ಲಿಯೇ "ರಾಮಯ್ಯ, ಎಲ್ಲರೂ ಬಂದಿದ್ದಾರೆಯೇ ?" ಎಂದು ಕೇಳುವರು. ಆನಂದರಾಯರಿಗೆ ದೃಷ್ಟಿಪಾಟವ ಕೊಂಚ ಕಡಮೆ. ಅವರಿಗೆ

ತುಂಬ ಸಮೀಪವಾಗಿದ್ದ ವಸ್ತುವನ್ನು ಮಾತ್ರ ಗುರುತಿಸಲಾಗುತ್ತಿತ್ತು. ಓದುವುದೂ ಬರೆಯುವುದೂ ಅವರಿಗೆ ಪ್ರಯಾಸವಾಗಿತ್ತು. ರಾಮಯ್ಯನವರು "ಎಲ್ಲರೂ ಬಂದಿದ್ದಾರೆ" ಎಂದು ಹೇಳಿದ ಕೂಡಲೆ "ಸಿಬ್ಬಂದಿಯೆಲ್ಲ ಬಂದಿದೆಯೆ ?" ಎಂದು ಕೇಳುವರು. "ಎಲ್ಲ ಬಂದಿದೆ ಸರ್" ಎಂದು ಜವಾಬು ದೊರೆತ ಕೂಡಲೆ "ಹಾಗಾದರೆ ಎಲ್ಲರಿಗೂ ಕಾಫಿ ಬಡಿಸಿದ್ದಾಗಲಿ" ಎನ್ನುವರು. ಹೀಗೆಯೇ ಮಧ್ಯಾಹ್ನ ಎರಡು ಘಂಟೆಯ ಸುಮಾರಿನಲ್ಲಿಯೂ ಆಗುವುದು. ದೊಡ್ಡ ಲೋಟದಲ್ಲಿ ಕಾಫಿ, ದೊಡ್ಡ ತಟ್ಟೆಯಲ್ಲಿ ಉಪಾಹಾರ. ಈ ಕಾಫಿ ಉಪಾಹಾರಗಳು ಆನಂದರಾಯರು ಸ್ವಂತವಾಗಿ ಸಹೋದ್ಯೋಗಿಗಳಿಗೆ ದಿನದಿನವೂ ಮಾಡಿಸುತ್ತಿದ್ದ ಔತಣ.

ಆನಂದರಾಯರು ಆಗರ್ಭ ಶ್ರೀಮಂತರು. ಆ ಶ್ರೀಮಂತಿಕೆಯ ಜೊತೆಗೆ ಔದಾರ್ಯವೂ ವಿನಯವೂ ಸ್ವಾಭಾವಿಕವಾಗಿ ಬಂದಿದ್ದ ಗುಣಗಳೆಂಬುದನ್ನು ನೆನೆಸಿ ಕೊಂಡರೆ ಹರ್ಷ ಉಂಟಾಗುತ್ತದೆ. ಇದು ವ್ಯಕ್ತಿವಿಶೇಷಕ್ಕೆ ನಿದರ್ಶನ.

ಮೇಲಣ ಎರಡು ಸಂಗತಿಗಳಿಂದ ಆನಂದರಾಯರ ಸ್ವರೂಪವನ್ನು ಸಂಪೂರ್ಣ ವಾಗಿ ಚಿತ್ರಿಸಿದಂತಾಯಿತೆಂದು ಯಾರೂ ಭಾವಿಸಲಾರರು. ಆ ಸಂಗತಿಗಳು ಅವರ ಅಧಿಕಾರ ನಿರ್ವಾಹ ದಕ್ಷತೆಯನ್ನು ತೋರಿಸುತ್ತವೆಯೆಂದೂ ಯಾರೂ ತಿಳಿಯರು. ಅವರ ಅಧಿಕಾರನಿರ್ವಾಹದ ರೀತಿನೀತಿಗಳ ವಿಚಾರದಲ್ಲಿ ಅಭಿಪ್ರಾಯ ಭೇದವಿರುವುದು ಸ್ವಾಭಾವಿಕ. ರಾಜಕೀಯವಾದರೋ ಸಾರ್ವಜನಿಕ ವಿಚಾರ. ಮರ್ಯಾದೆ ಸ್ನೇಹಗಳಾದರೋ ಅವರ ವೈಯಕ್ತಿಕ ವಿಶೇಷ.

ವ್ಯಕ್ತಿಯ ಸ್ವಭಾವಕ್ಕೂ ಸಾರ್ವಜನಿಕ ವರ್ತನೆಗೂ ಸಂಬಂಧವುಂಟೇ ಉಂಟು. ಆ ಸಂಬಂಧ ಆನಂದರಾಯರಲ್ಲಿ ಎಂಥಾದ್ದಾಗಿತ್ತು, ಎಷ್ಟು ಮಾತ್ರವಿತ್ತು ಎಂಬುವನ್ನು ಚರಿತ್ರಕಾರನು ಪರಾಮರ್ಶಿಸಿಯಾನು. ಆದರೆ ಅವನಿಗೆ ಬೇಕಾದ ಸಾಮಗ್ರಿ ಮೇಲಿನಂಥ ಸಂಗತಿಗಳಲ್ಲಿ ಅಡಗಿರುತ್ತದೆ.

ಚಾರಿತ್ರಿಕ ಸಾಮಗ್ರಿ

ನಮ್ಮ ಜನ ನಮ್ಮ ಪ್ರಸಿದ್ಧ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಅವರ ಸಂಭಾಷಣ ರೀತಿ, ಮಿತ್ರ ಬಂಧು ಜನ ಪ್ರತಿವರ್ತನೆಗಳು, ಅವರ ಸಂಗೀತ ಸಾಹಿತ್ಯಾದಿ ಕಲಾಭಿ ರುಚಿ, ಅವರ ವೈಯಕ್ತಿಕ ಧ್ಯೇಯಗಳು, ಅವರ ಆಚಾರ ವ್ಯವಹಾರಗಳ ರೀತಿ, ಉಡುಗೆ ತೊಡುಗೆಗಳಲ್ಲಿ ಅವರ ಅಭ್ಯಾಸ, ಅವರ ಶ್ರಮಸಹಿಷ್ಣುತೆ, ಇತ್ಯಾದಿ ವೈಯಕ್ತಿಕ ಗುಣವಿಶೇಷಗಳನ್ನು ತೋರ್ಪಡಿಸುವಂಥ ಸಂದರ್ಭಗಳನ್ನು ಗುರುತಿಸಿ ಬರೆದಿಟ್ಟರೆ ಅದು ಚರಿತ್ರಕಾರನಿಗೆ ಅಮೂಲ್ಯವಾದ ಸಾಮಗ್ರಿಯಾಗುತ್ತದೆ.

ನಮ್ಮಲ್ಲಿ ಚಾರಿತ್ರಿಕ ಸಾಮಗ್ರಿಯನ್ನು ಕಾಪಾಡಿಡುವ ಪದ್ಧತಿ ವಿರಳವಾಗಿದೆ. ಬಹು ಪ್ರಖ್ಯಾತರಾಗಿ ಲೋಕಮಾನ್ಯರಾಗಿರುವ ಅನೇಕ ಮಂದಿ ಮಹನೀಯರ

ಜೀವನಕ್ಕೆ ಸಂಬಂಧಪಟ್ಟ ಜ್ಞಾಪಕಗಳನ್ನೂ ದಾಖಲೆಗಳನ್ನೂ ಆ ಮಹನೀಯರು ಸಂಗ್ರಹಿಸಿಡುವ ಗೋಜಿಗೆ ಹೋಗುವುದಿಲ್ಲ. ಒಬ್ಬ ಮಹನೀಯನ ಬಳಿಗೆ ಹೋಗಿ—ನಿಮ್ಮ ತಂದೆ ಮಹಾನುಭಾವರು. ಅವರನ್ನು ಕುರಿತು ನಾನು ಬರೆಯಬೇಕೆಂದಿದ್ದೇನೆ. ಅವಕ್ಕೆ ಬೇಕಾದ ಕಾಗದ ಪತ್ರಗಳು ಟೀಕು ಟಿಪ್ಪಣಿಗಳು ಏನಾದರೂ ಇದ್ದರೆ ದಯ ಮಾಡಿ ಕೊಡಬೇಕು—ಎಂದು ಬೇಡಿದರೆ ಹಾಗೆ ಬೇಡಲ್ಪಟ್ಟವರು ಬರಿಗೈ ತೋರಿಸು ವುದು, ತಮ್ಮಲ್ಲಿ ಯಾವ ಸಾಮಗ್ರಿಯೂ ಇಲ್ಲವೆನ್ನುವುದು ನನಗೆ ಅನುಭವಕ್ಕೆ ಬಂದಿರುವ ಸಂಗತಿ. ನಾಲ್ಕಾರು ಕಡೆ ನಾನು ಹೀಗೆ ನಿರಾಶನಾಗಿದ್ದೇನೆ. ಮಹಾ ಪ್ರಸಿದ್ಧರಾದ ಸರ್ ಟಿ. ಮುತ್ತುಸ್ವಾಮಿ ಐಯ್ಯರ್, ಅಥವಾ ಸರ್ ಕೆ. ಶೇಷಾದ್ರಿ ಐಯ್ಯರ್ ಇಂಥವರನ್ನು ಕುರಿತೇ ನಮಗೆ ಯಾವ ಗ್ರಂಥಸಾಮಗ್ರಿಯೂ ಸಿಕ್ಕುತ್ತಿಲ್ಲ. ಅವರು ಸಂಪಾದಿಸಿದ ಸ್ವತ್ತನ್ನು ಅನುಭವಿಸುತ್ತಿರುವ ಅವರ ವಂಶಸ್ಥರೇ ಅವರ ವಿಷಯದಲ್ಲಿ ಹೆಮ್ಮೆ ಇಲ್ಲದವರಾಗಿರುತ್ತಾರೆ. ತಮ್ಮ ಪೂರ್ವಿಕರ ಖ್ಯಾತಿಯನ್ನು ಕಾಪಾಡಬೇಕೆಂಬ ಪಿತೃಭಕ್ತಿ ಸಹ ನಮ್ಮವರಲ್ಲಿ ಅಪರೂಪವಾಗಿದೆ.

ಈ ಪುಸ್ತಕದಲ್ಲಿರುವ ಪ್ರಕರಣಗಳು ನನ್ನ ಜ್ಞಾಪಕದಲ್ಲಿದ್ದು ರೂಪಗೊಂಡವು. ಅವಕ್ಕೆ ರುಜುವಾತು ದಾಖಲೆ ವೊದಲಾದ ಲಿಖಿತಪ್ರಮಾಣಗಳನ್ನು ಕೊಟ್ಟಿಲ್ಲ. ಆ ಕೆಲಸ ನನಗೆ ಈಗ ಸಾಧ್ಯವಿಲ್ಲ.

ಲ್ಯಾಟಿನ್ ಭಾಷೆಯಲ್ಲಿ Ex pede Herculem "ಹರ್ಕ್ಯುಲೀಸನ ಪಾದವನ್ನು ನೋಡಿ ಮಿಕ್ಕದ್ದನ್ನು ತಿಳಿದುಕೊ"—ಎಂಬ ನಾಡ ನುಡಿಯುಂಟತೆ. ಹರ್ಕ್ಯುಲೀಸನು (ನಮ್ಮ ಭೀಮಸೇನ ದೇವರಂತೆ) ದೈವಾಂಶ ಸಂಭೂತನಾದ ಮಹಾವೀರ. ಆ ವೀರನ ಸಾಹಸಕಾರ್ಯಗಳು ಪುರಾಣಪ್ರಸಿದ್ಧವಾಗಿವೆ. ಅವನ ವಿಗ್ರಹವನ್ನು ಕುರಿತದ್ದು ಮೇಲಿನ ನಾಡನುಡಿ. ಹರ್ಕ್ಯುಲೀಸನ ಆಕಾರ ಮಹಿಮೆ ಯನ್ನು ತಿಳಿದುಕೊಳ್ಳಬೇಕೆಂದರೆ ಅವನ ದೇಹವನ್ನು ತಲೆಯಿಂದ ಅಡಿಯವರೆಗೂ ನೋಡಬೇಕಾದದ್ದಿಲ್ಲ. ಅವನ ಹೆಬ್ಬೆಟ್ಟೊಂದನ್ನು ನೋಡಿದರೆ ಸಾಕು, ಮಿಕ್ಕ ಅಂಗಗಳೆಲ್ಲ ಅದರ ಪ್ರಮಾಣಕ್ಕೆ ಸರಿಯಾಗುವಂತೆ ಇರುತ್ತವೆ—ಎಂದು ತಾತ್ಪರ್ಯ.

ಈ ಪ್ರಬಂಧಗಳು ಚರಿತ್ರೆಯಲ್ಲ. ಇವು ಆಯಾ ಮಹನೀಯರ ಮುಖಗಳ ಪಾರ್ಶ್ವರೇಖೆಗಳು. ಇವು ಜೀವನಚರಿತ್ರಕಾರನಿಗೂ, ದೇಶಚರಿತ್ರಕಾರನಿಗೂ ಅಷ್ಟಿಷ್ಟು ಉಪಯುಕ್ತವಾಗಬಹುದಾದ ಕಚ್ಚಾ ಸಾಮಗ್ರಿ.

ನನ್ನ ಬುದ್ಧಿಗೆ ಅರ್ಹರೆಂದು ತೋರಿದ ಕೆಲಮಂದಿ ಮಹನೀಯರ ವಿಷಯ ದಲ್ಲಿ ನನ್ನ ಕಣ್ಣು ಕಂಡಷ್ಟನ್ನು, ನನ್ನ ಮನಸ್ಸು ಪಟ್ಟಷ್ಟನ್ನು, ನನ್ನ ನೆನಪು ಉಸಿರಿ ದಷ್ಟನ್ನು ಒಬ್ಬರಿಬ್ಬರು ಚಿರಂಜೀವಿ ಮಿತ್ರರಿಗೆ ಹೇಳಿ ಅವರ ಕೈಯಿಂದ ಬರೆಯಿಸಿ ದ್ದೇನೆ. ಇವು ಸಂಪೂರ್ಣಗಳಲ್ಲ. ನಾನು ಹೇಳಿರುವ ಅಭಿಪ್ರಾಯಗಳು ಸರ್ವ ಸಮ್ಮತವಾದವೆಂದೂ ನನ್ನ ಮನಸ್ಸಿನಲ್ಲಿಲ್ಲ. ನಾನು ಹೇಳಿರುವ ಎಷ್ಟೋ ಅಭಿಪ್ರಾಯ

ಗಳಿಂದ ಬೇರೆಯಾದ ಭಾವನೆಗಳು ಇತರರ ಮನಸ್ಸಿನಲ್ಲಿರಬಹುದು. ನನ್ನ ನೆನಪಿನಲ್ಲಿಯೂ ಲೋಪಗಳಿರಬಹುದು. ಅಭಿಪ್ರಾಯ ವಿಷಯದಲ್ಲಿ ಭೇದವಿರುವುದು ಅಷ್ಟು ಮುಖ್ಯವಲ್ಲ ; ವಸ್ತು ಸಂಗತಿಗಳಲ್ಲಿ ಭೇದವಿದ್ದರೆ ಅದನ್ನು ದಾಖಲೆ ನೋಡಿ ತಿದ್ದಿಕೊಳ್ಳಬೇಕಾಗುತ್ತದೆ. ನಾನು ಹೇಳಿರುವ ವಸ್ತು ಸಂಗತಿಗಳಲ್ಲಿ ಏನಾದರೂ ಹೆಚ್ಚು ಕಡಮೆ ವಾಚಕರಿಗೆ ಕಂಡುಬಂದಲ್ಲಿ ಅವರು ದಯಮಾಡಿ ನನಗೆ ತಿಳಿಸಿಕೊಡಬೇಕೆಂದು ಬೇಡುತ್ತೇನೆ.

ಸಂತಃ ಸದಾಭಿಗಂತವ್ಯಾ
ಯದಿ ನೋಪದಿಶಂತ್ಯಪಿ ।
ಯಾಸ್ತು ಸ್ವೈರಕಥಾಸ್ತೇಷಾಂ
ಉಪದೇಶಾ ಭವಂತಿ ತಾಂ ॥

[ಸತ್ಪುರುಷರಲ್ಲಿಗೆ ಯಾವಾಗಲೂ ಹೋಗುತ್ತಿರಬೇಕಾದದ್ದು. ಅವರು (ಉಪದೇಶವೆಂದು ಹೇಳಿ) ಉಪದೇಶ ಮಾಡದೆ ಇದ್ದರೂ ಪರವೆಯಿಲ್ಲ. ಅವರು ತಮ್ಮ ಮನಸ್ಸು ಬಂದಂತೆ ಏನು ಮಾತುಕಥೆ ನಡಸಿದರೂ ಅದೇ ನಮಗೆ ಉಪದೇಶವಾಗುತ್ತದೆ.]

ಸಾಹಿತ್ಯೋಪಾಸಕರು

ಭಾಷೆಗೂ ಸಾಹಿತ್ಯಕ್ಕೂ ಸೇವೆ ಸಲ್ಲಿಸುವ ವಿಧಾನಗಳು ಎಷ್ಟೋ ಇರುತ್ತವೆ. ಅವುಗಳಲ್ಲಿ ಮುಖ್ಯವೆಂದು ನನಗೆ ತೋರಿರುವವು ಇವು :

(೧) ಕಾವ್ಯನಿರ್ಮಾಣ

(೨) ಕಾವ್ಯವ್ಯಾಸಂಗ

(೩) ಕಾವ್ಯಗುಣವಿಮರ್ಶನೆ

(೪) ವ್ಯಾಕರಣಾದಿಶಾಸ್ತ್ರಪಾಂಡಿತ್ಯ

(೫) ಉತ್ಸಾಹಪ್ರಚಾರ

ಇದರಲ್ಲಿ ನನಗಿರಬಹುದಾದ ಜಾಗ ಐದನೆಯ ಕ್ಷೇತ್ರದಲ್ಲಿ ಎಂದು ತಿಳಿದುಕೊಂಡಿದ್ದೇನೆ.

ನಾನು ಸಾಹಿತ್ಯಭಕ್ತ. ಮನುಷ್ಯನ ಜೀವನದಲ್ಲಿ ಉಲ್ಲಾಸವನ್ನು ತುಂಬಿ ಸತ್ತ್ವವನ್ನು ಅಭಿವೃದ್ಧಿಪಡಿಸುವ ಶಕ್ತಿ ಸಾಹಿತ್ಯಕ್ಕೆ ಉಂಟೆಂಬುದು ನನ್ನ ನಂಬಿಕೆ.

ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ನಮ್ಮ ಕಾಲದ ಪರಿಸ್ಥಿತಿಯನ್ನು ಆಲೋಚಿಸಿದಾಗ ನನ್ನಲ್ಲುಂಟಾದ ಭಾವನೆಗಳು ಈ ಲೇಖನಮಾಲೆಯಲ್ಲಿ ತುಂಬಿ

ಕೊಂಡಿವೆ. ಸಾಹಿತ್ಯ ಪರಿಷತ್ತಿನ ವೃಕ್ಷವನ್ನವಲಂಬಿಸಿಕೊಂಡು ಆದರ ಸುತ್ತ ಮುತ್ತ, ಹೆಚ್ಚಾಗಿಯೋ ಕೊಂಚವಾಗಿಯೋ, ಅವರವರ ಶಕ್ತಿ ಸಾಮರ್ಥ್ಯಗಳಿಗೆ ಸಾಧ್ಯವಾದಂತೆ ದುಡಿದ ಸಾಹಿತ್ಯಸೇವಕರನ್ನು ಇಲ್ಲಿ ಸ್ಮರಿಸಿದ್ದಾಗಿದೆ.

ಈ ಚಿತ್ರಗಳು ಬರಿಯ ಜ್ಞಾಪಕದಿಂದ ಚಿತ್ರಿತವಾದವು. ಮನುಷ್ಯನ ಜ್ಞಾಪಕಶಕ್ತಿ ದೃಢವಾದ ಬಲವುಳ್ಳದ್ದಲ್ಲ. ನನ್ನಲ್ಲಂತೂ ಜ್ಞಾಪಕಶಕ್ತಿ ಬಹು ಸಾಮಾನ್ಯವಾದದ್ದು. ಅದು ಪದೇಪದೇ ಕುಗ್ಗಿರುತ್ತದೆ, ತೆಳುವಾಗಿರುತ್ತದೆ. ಅದರ ಸಾಕ್ಷ್ಯ ಸಾಲದೆ ಇರುತ್ತವೆ. ಆದದ್ದರಿಂದ ಇಲ್ಲಿ ನಾನು ಹೇಳಿರುವುದನ್ನು ವಾಚಕರು ಕೆಲವೆಡೆ ಬೇರೆ ದಾಖಲೆಗಳ ಆಧಾರದಿಂದ ತಿದ್ದಿ ಸರಿಪಡಿಸಿಕೊಳ್ಳಬೇಕಾಗಬಹುದು.

ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳ ಶಕ್ತಿಯ ಪರಿಮಿತಿಗಳನ್ನು ಕುರಿತು ಇಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಕಾಲದಲ್ಲಿ ಸಂಸ್ಥೆ ಎಂಬ ಒಂದು ಕಾರ್ಯಸಾಧನವು ಹೆಚ್ಚುಹೆಚ್ಚಾಗಿ ರೂಢಿಗೆ ಬರುತ್ತಿದೆ. ನಮಗೆ ಯಾವ ವಿಷಯದಲ್ಲಿ ಯಾವ ಕೊರತೆ ತೋರಿದರೂ, ಅದನ್ನು ಸರಿಪಡಿಸುವುದಕ್ಕಾಗಿ ನಮಗೆ ತೋರುವ ಉಪಾಯ ಒಂದು ಕಮಿಟಿ ಅಥವಾ ಸಮಿತಿ. ಹಲ್ಲು ಮುರಿಯಿತು ; ಕಮಿಟಿ ಮಾಡು. ಕೂದಲು ನರೆಯಿತು ; ಸಮಿತಿ ಮಾಡು. ಊಟ ಸರಿಯಾಗಿಲ್ಲ ; ಒಂದು ಸಭೆ ಸೇರಿಸು. ಕೆಮ್ಮಲು ಬಂತು ; ಒಂದು ಸಮ್ಮೇಳನ ಮಾಡು. ಹೀಗೆ ಹೊರಡುತ್ತಿವೆ ನಮ್ಮ ಉಪಾಯಗಳ ಪ್ರವಾಹ. ಸಮಿತಿ, ಸಭೆ, ಸಂಸತ್ತು, ಸಮ್ಮೇಳನ— ಈ ಬಗೆಯ ವಾದ್ಯಯಂತ್ರಗಳನ್ನು ಜೋಡಿಸಿ ಆ ಕಟ್ಟಡದ ಸಂದಿಗೊಂದಿಗಳಲ್ಲಿ ನಾವು ಸಿಕ್ಕಿಕೊಳ್ಳುತ್ತಿದ್ದೇವೆ. ಕಷ್ಟಕಾಲದಲ್ಲಿ ಸಮಿತಿಗೆ ಮೊರೆಯಿಡುತ್ತೇವೆ.

ನನ್ನ ಸ್ನೇಹಿತ ವೆಂಕಣ್ಣಯ್ಯ ಒಂದು ಕಥೆ ಹೇಳುತ್ತಿದ್ದದ್ದುಂಟು. ಆಂಧ್ರರು ಒಂದು ಪ್ರಮಾಣವತ್ತಾದ ನಿಘಂಟು ಆವಶ್ಯಕವೆಂದು ಹಂಬಲಿಸಿ ಸರಕಾರವನ್ನು ಬಹು ವಿಧವಾಗಿ ಬೇಡಿಕೊಂಡರು. ಯಾರೋ ಪ್ರಭಾವಶಾಲಿಗಳು ಈ ವೇಚಾಟವನ್ನು ತಮ್ಮದು ಮಾಡಿಕೊಂಡು, ಸರಕಾರದಿಂದ ಹಣ ಮಂಜೂರು ಮಾಡಿಸಿದರು. ಒಂದು ಸಮಿತಿ ನೇಮಕವಾಯಿತು. ಹಣ ಖರ್ಚಾಗುತ್ತ ಹೋಯಿತು. ನಿಘಂಟು ಹುಟ್ಟಲಿಲ್ಲ. ಆರೇಳು ವರ್ಷವಾಯಿತು. ಸರಕಾರದ ಸಹಾಯದ್ರವ್ಯ ಮುಗಿದು ಹೋಯಿತು. ಸಮಿತಿಯ ಯಜಮಾನರು ಹೆಸರಾಂತ ದೊಡ್ಡಮನುಷ್ಯರು. ಅವರನ್ನು ಯಾರೂ ಆಕ್ಷೇಪಣೆ ಮಾಡುವಂತಿರಲಿಲ್ಲ. ಆಗ ಏನು ಉಪಾಯ ?

ಆ ಸಂಸ್ಥೆಯ ವಾರ್ಷಿಕ ಸಮ್ಮೇಳನ ನಡೆಯಿತು. ಆಗ ನಿಘಂಟುವಿನ ಭಕ್ತರಲ್ಲೊಬ್ಬರು ಒಂದು ಪದ್ಯ ಹಾಡಿದರು:

ಓ ನಿಘಂಟುವ ನೀವದೆಪುಡು ವತ್ತುವೊ ಜೂಡ-
ಕಾಂಚಿಕಾಂಚುಚು ಕನುಲು ತೆಲ್ಲನಾಯೆ ।

ಈ ಪದ್ಯವನ್ನು ಹಾಡಿದಾತನು ಕರುಣಾಜನಕಗಳಾದ ಬಗೆಬಗೆಯ ರಾಗಗಳನ್ನು ಅಳವಡಿಸಿ ಹಾಡಿ ಸಭಿಕರ ಮನ ಕರಗಿಸಿ 'ಉಸ್ಸ್' ಎನ್ನಿಸಿದ. ಅಲ್ಲಿಗೆ ಮುಗಿಯಿತು ಪ್ರಸಂಗ.

ಇದಕ್ಕೆ ಪ್ರತಿಯಾದದ್ದು ಸಾಮ್ಯುಯಲ್ ಜಾನ್‌ಸನ್ನನು (Samuel Johnson) ಇಂಗ್ಲಿಷ್ ಜನಕ್ಕೆ ನಿಘಂಟುವನ್ನು ತಯಾರುಮಾಡಿಕೊಟ್ಟ ಪ್ರಕರಣ. ತನ್ನ ಜನಕ್ಕೆ ಅಂಥ ಗ್ರಂಥ ಅವಶ್ಯವೆಂಬುದನ್ನು ಜಾನ್‌ಸನ್ನನು ಕಂಡುಕೊಂಡ. ಹಾಗೆ ತಾನು ಕಂಡ ಕೊರತೆಯನ್ನು ನೀಗುವ ಶಕ್ತಿ ತನಗುಂಟೆಂಬುದನ್ನೂ ಕಂಡುಕೊಂಡ. ಇದನ್ನೂ ಕಂಡುಕೊಂಡಮೇಲೆ ಆ ಕೊರತೆಯನ್ನು ನೀಗುವುದಕ್ಕಾಗಿ ಸಾಹಸಪಡುವುದು ತನಗೆ ಕರ್ತವ್ಯವೆಂಬುದನ್ನೂ ಕಂಡುಕೊಂಡ. ಇಷ್ಟಾದಮೇಲೆ ಅದಕ್ಕಾಗಿ ಹಟ ತೊಟ್ಟು ನಿಂತ. ಬಹುವರ್ಷ ದಾರಿದ್ರ್ಯದಲ್ಲಿದ್ದ. ಆದರೂ ದಿಟ್ಟತನವನ್ನು ಬಿಡದೆ ನಿಂತ. ದೈನ್ಯಕ್ಕೆ ಬೀಳದೆ ಧೀರನಾಗಿ ನಿಂತು ದುಡಿದ. ನಿಘಂಟು ತಯಾರಾಯಿತು. ಹೇಗೆ ಹೇಗೋ ಪಾಡುಬಿದ್ದು ಉದ್ದಿಷ್ಟಾರ್ಥವನ್ನು ನೆರವೇರಿಸಿಕೊಂಡ. ಜನಕ್ಕೆ ಬಹು ಉಪಕಾರವಾಯಿತು. ಇದು ವ್ಯಕ್ತಿಸತ್ತ್ವದ ಸಿದ್ಧಿ. ಇಲ್ಲಿ ಸಮಿತಿ ಸಂಘಗಳು ಕೆಲಸಕ್ಕೆ ಬಾರವು.

ಸಾಹಿತ್ಯಕ್ಷೇತ್ರದಲ್ಲಿ—ಬಹುಶಃ ಎಲ್ಲ ಜೀವನಕ್ಷೇತ್ರಗಳಲ್ಲಿಯೂ—ಮಹಾರ್ಘವಾದದ್ದನ್ನು ಒದಗಿಸತಕ್ಕದ್ದು ವೈಯಕ್ತಿಕ ಸತ್ತ್ವ: ಒಬ್ಬಾನೊಬ್ಬ ಸತ್ತ್ವವರ ಪ್ರಸಾದಿಯ (Gifted individual) ಜನಾನುಗ್ರಹಬುದ್ಧಿ. ಅವನಿಗೆ ವರಪ್ರಸಾದವಾಗಿ ಬಂದಿರುತ್ತದೆ. ಇತರರಿಗೆ ಬಾರದ ಒಂದು ಪ್ರೇರಣೆ; ಇತರರಿಗೆ ಬಾರದ ಸ್ಫೂರ್ತಿ. ಈ ವ್ಯಕ್ತಿವರ ಎಲ್ಲ ಮಹಾಕಾರ್ಯಕ್ಕೂ ಬೀಜಪ್ರಾಯವಾದದ್ದು. ಅದರಿಂದ ನಮಗೆ ಬರಬಹುದಾದದ್ದು ಮಹಾಸಾಹಿತ್ಯ, ಮಹಾತತ್ತ್ವಬೋಧೆ, ಮಹಾಕಲೆ, ಮಹಾರಾಜಕೀಯ. ಈ 'ಮಹಾ' ಎಂಬುದರ ಮೂಲವು ವರಪ್ರಸಾದಿತಪುರುಷನ ಅಂತರಂಗದಲ್ಲಿರತಕ್ಕದ್ದು. ನಾವು ಮೊದಲು ಎಣಿಸಬೇಕಾದದ್ದು ಇದನ್ನ. ವ್ಯಕ್ತಿಸತ್ತ್ವದಿಂದ ಸರ್ವಸಿದ್ಧಿ.

ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ । ನೋಪಕರಣೇ ।

ಹಾಗಾದರೆ ಸಮಿತಿ ಸಂಸ್ಥೆಗಳು ಅಪ್ರಯೋಜಕಗಳೋ? ಅಲ್ಲ. ಅವುಗಳಿಗೆ ಬೆಲೆಯುಂಟೇ ಉಂಟು. ಆದರೆ ಆ ಬೆಲೆ ಉತ್ಪಾದಿತವಾದದ್ದು (Derived)- ಸ್ವತಸ್ಸಿದ್ಧವಾದದ್ದಲ್ಲ. ಅದು ಗೌಣ; ಮುಖ್ಯಬೆಲೆಯಲ್ಲ. ನಮ್ಮ ಕಣ್ಣಿಗೆ ಸುಲೋಚನ (ಕನ್ನಡಕ) ಸಹಾಯಕಾರಿ. ಅದು ಯಾವಾಗ? ಕಣ್ಣುಗುಡ್ಡೆಯಲ್ಲಿ ಸತ್ತ್ವವಿರುವಾಗ. ಕಣ್ಣುಗುಡ್ಡೆಯಲ್ಲಿ ದೃಷ್ಟಿಶಕ್ತಿ ಇಲ್ಲದೆಹೋದಾಗ ಕನ್ನಡಕ ಏನು ಮಾಡಬಲ್ಲದು? ಅದು ಬರಿಯ ಒಣಹೊರೆ. ನಾಲಿಗೆಯಲ್ಲಿ ರಸನಶಕ್ತಿಯಿರುವಾಗ ಪಾಕಚಾತುರ್ಯಕ್ಕೆ ಸಾರ್ಥಕತೆ. ನಾಲಿಗೆಯಲ್ಲಿ ರಸ ಒಣಗಿಹೋಗಿದ್ದರೆ ಪಾಯಸವೇನು ಮಾಡೀತು?

ಸಂಸ್ಥೆಗಳೂ ಸಭೆಗಳೂ ನಮ್ಮಿಂದ ಹೊರಗಿರುವ ಉಪಕರಣಗಳು. ಸತ್ತ್ವ ನಮ್ಮೊಳಗಡೆ ಇರುವ ವಸ್ತು. ಅದನ್ನೇ ನಾವು ಮೊದಲು ಗಣನೆಗೆ ತೆಗೆದುಕೊಳ್ಳಬೇಕಾದದ್ದು. ನಮ್ಮ ಸಾಹಿತ್ಯಕರ್ತರಲ್ಲಿ ಅವರ ಒಳಗಡೆ ಸತ್ತ್ವವಿದ್ದಾಗ ಸಭೆ ಸಂಸ್ಥೆಗಳಿಲ್ಲದಿದ್ದರೂ ಆ ಸತ್ತ್ವ ಕೆಲಸಮಾಡುತ್ತದೆ.

ವಾಲ್ಮೀಕಿಗೂ ವ್ಯಾಸರಿಗೂ ಕಾಲಿದಾಸನಿಗೂ ಪ್ರೇರಣೆ ಕೊಡಲು ಯಾವ ಪರಿಷತ್ತು ಇತ್ತು ? ಷೇಕ್ಸ್ಪಿಯರನಾಗಲಿ ಜಾನ್ಸನ್ನನಾಗಲಿ ಯಾವ ಅಕಾಡೆಮಿಯ, ಯಾವ ಪರಿಷತ್ತಿನ ಪ್ರೋತ್ಸಾಹಕ್ಕಾಗಿ ಕಾದಿದ್ದರು ? ತೋಟದಲ್ಲಿ ಅರಳುವ ಹೂವು ತನ್ನನ್ನು ಯಾರು ಕೊಂಡುಕೊಂಡಾರೆಂದು ಯೋಚಿಸಿ ಗಿರಾಕಿ ಬಂದಮೇಲೆ ಅರಳುತ್ತದೆಯೆ ? ಬೆಳೆಯುವುದೂ ಅರಳುವುದೂ ಅವರ ಸ್ವಭಾವ. ಅದರ ವಾಸನೆಯನ್ನು ಜನ ಮೆಚ್ಚಿ ಅವಕ್ಕೆ ಬೆಲೆ ಕೊಡುವೆವೆಂದು ಮುಂದೆ ಬಂದರೆ ಅದರ ಬೆಳವಣಿಗೆಗೆ ಸಹಾಯವಾಗುತ್ತದೆ. ಒಂದು ಬಳ್ಳಿ ಇರುವ ತೋಟವಲ್ಲಿ ನೂರು ಬಳ್ಳಿಯಾಗುತ್ತದೆ. ಆರಡಿ ಎತ್ತರ ಬೆಳೆದ ಬಳ್ಳಿ ಹನ್ನೆರಡಡಿಯಾದೀತು. ಕಾಲಂಗುಲ ದಪ್ಪವಿದ್ದ ಬಳ್ಳಿ ಒಂದಂಗುಲವಾದೀತು. ಬೆಳವಣಿಗೆಯ ಪ್ರಮಾಣ ಹೆಚ್ಚೀತು. ಆದರೆ ಬೆಳವಣಿಗೆಗೆ ಮುಖ್ಯವಾದ ರಸವೂ ರಸಕಾರ್ಯವೂ ಹಣದಿಂದ ಉಂಟಾದದ್ದಲ್ಲ. ಪಂಪನನ್ನೂ ಷಡಕ್ಷರಿಯನ್ನೂ ಬೆಳಕಿಗೆ ತರಲು ಯಾವ ಅಕಾಡೆಮಿಯೂ ಇರಲಿಲ್ಲ. ಆದರೆ ಅವರ ಕೃತಿಗಳನ್ನು ಹೆಚ್ಚು ಹೆಚ್ಚು ಮಂದಿಗೆ ಒದಗಿಸಿಕೊಡಲು ಅಕಾಡೆಮಿಯು ಕೆಲಸ ಮಾಡಲಾಗುತ್ತದೆ.

ಈ ಟೀಕೆಯ ತಾತ್ಪರ್ಯವೇನು ? ಪರಿಷತ್ತು ಮಾಡಬಹುದಾದಂಥ ಸಾಹಿತ್ಯ ಸೇವೆಗೂ ಭಾಷಾಸೇವೆಗೂ ಕೆಲವು ಪರಿಮಿತಿಗಳುಂಟು. ಆ ಮಿತಿಗಳನ್ನು ಮರೆತು ಅದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತಾರಪಡಿಸಿಕೊಂಡರೆ ಅದು ಅಕಾರ್ಯವೇ ಆದೀತು. ತನ್ನ ಮಿತಿಯೊಳಗಿನ ಕಾರ್ಯಗಳನ್ನು ಅದು ಮಾಡದೆ ಬಿಟ್ಟರೂ ಅಕಾರ್ಯವಾದೀತು.

ಇಂಗ್ಲೆಂಡ್ ದೇಶದಲ್ಲಿ ಅಕಾಡೆಮಿ ಇರಲಿಲ್ಲ. ಫ್ರಾನ್ಸ್ ದೇಶದಲ್ಲಿ ಅಕಾಡೆಮಿ ಇತ್ತು : ಕಾರ್ಡಿನಲ್ ರಿಚ್ಲು (Cardinal Richelieu) ಮೊದಲಾದ ಸಾಹಿತ್ಯೋತ್ಸಾಹಿಗಳ ಪರಿಶ್ರಮದ ಫಲವಾಗಿ ಹದಿನೇಳನೆಯ ಶತಮಾನದ ಆದಿ ಭಾಗದಲ್ಲಿ ಫ್ರಾನ್ಸಿನಲ್ಲಿ ಪ್ರಾರಂಭವಾದ ಆ ಸಂಸ್ಥೆ ನೂರಾರು ವರ್ಷಕಾಲ ಯಶಸ್ವಿಯಾಗಿ ಕೆಲಸಮಾಡಿತ್ತು. ಫ್ರೆಂಚ್ ಅಕಾಡೆಮಿಯ ಉದ್ದೇಶ ಹೀಗಿತ್ತಂತೆ :

"To be a jury, the most choice and authoritative, that could be found on all important literary matters in question before the public ; to be...a sovereign organ of opinion. The duty of the academy is...to keep the fine quality of the French spirit unimpaired ; it represents...the authority of a recognized

master in matters of tone and taste. All ages...have had their inferior literature ; but the great danger of our time is that this inferior literature tends more and more to get the upper place. No one has the same advantage as the academy for fighting against this mischief."

ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ, ಫ್ರೆಂಚರಂತೆ ತಾವೂ ಒಂದು ಅಕಾಡೆಮಿ ಮಾಡಿಕೊಳ್ಳಬೇಕೆಂದು ಕೆಲಮಂದಿ ಇಂಗ್ಲಿಷ್ ಸಾಹಿತಿಗಳು ಯೋಚಿಸತೊಡಗಿದರು ಆಗ ಮ್ಯಾತ್ಯು ಆರ್ನಾಲ್ಡ್ (Mathew Arnold ಎಂಬ ವಿದ್ವತ್ಕವಿ ಈ ವಿಷಯವನ್ನು ಕುರಿತು ಒಂದು ಪ್ರಬಂಧ ಬರೆದು. ಇಂಗ್ಲಿಷ್ ಜನರು ಅನುಕರಣಮಾತ್ರದಿಂದ ದೊಡ್ಡವರಾಗಲಾರರೆಂದೂ. ಫ್ರೆಂಚ್ ಜನಕ್ಕೆ ಉಪಯೋಗಕರವೆಂದು ಅನುಭವಕ್ಕೆ ಬಂದ ಒಂದು ಸಂಸ್ಥೆ ಬ್ರಿಟಿಷ್ ಜನಕ್ಕೆ ಹಾಗೆ ಉಪಯೋಗಕರವಾದೀತೆಂಬ ಭರವಸೆ ಕೊಂಚಮಾತ್ರವೂ ಇಲ್ಲವೆಂದೂ. ಒಂದೊಂದು ಜನವೂ ತನ್ನ ತನ್ನ ಸ್ವಭಾವವನ್ನು ಚೆನ್ನಾಗಿ ಕಂಡುಕೊಂಡು ಅದರಂತೆ ವರ್ತಿಸು ವುದು ಆ ಜನಕ್ಕೆ ಕ್ಷೇಮಕರವೆಂದೂ ಪ್ರತಿಪಾದಿಸಿದ.

"Nations have their own modes of acting, and these modes are not easily changed ; they are even consecrated, when great things have been done in them. When a literature has produced Shakespeare and Milton, when it has even produced Barrow and Burke, it cannot well abandon its traditions; it can hardly begin, at this late time of day, with an institution liek the French acadeym..."

ಅಲ್ಲಿಂದಾಚೆಗೆ ಆ ರೀತಿಯ ಅಕಾಡೆಮಿಯ ಮಾತು ಇಂಗ್ಲೆಂಡಿನಲ್ಲಿ ತಲೆ ಯೆತ್ತಲಿಲ್ಲ.

ಇಂಡಿಯದಲ್ಲಿ ಎಷ್ಟೋ ಪ್ರಾದೇಶಿಕ ಭಾಷೆಗಳಿಗೆ ಪರಿಷತ್ತು ಹುಟ್ಟಿ ಕೊಂಡಿಲ್ಲ. ಬಂಗಾಳದಲ್ಲಿ ವಂಗ ಸಾಹಿತ್ಯ ಪರಿಷತ್ತು ಒಂದುಂಟು. ಅದು ಈಚೆಗೆ ರಣರಂಗವಾಗಿದೆಯೆಂದು ಕೇಳಿದ್ದೇನೆ. ಬಂಕಿಮಚಂದ್ರರ 'ವಂದೇಮಾತರಂ' ಹಾಡು ರಾಷ್ಟ್ರಗೀತೆಯಾಗತಕ್ಕದ್ದೆ. ಅಥವಾ ರವೀಂದ್ರನಾಥ ಠಾಕೂರರ 'ಜನಗಣಮನ' ಆ ಗೌರವ ಪಡೆಯತಕ್ಕದ್ದೆ ? ಈ ಪ್ರಶ್ನೆಯ ಮೇಲೆ ಕಕ್ಷಿಗಳು ಹುಟ್ಟಿ ಬಡಿದಾಟ ನಡೆಯುತ್ತಿದೆಯಂತೆ. ಮಹಾರಾಷ್ಟ್ರದಲ್ಲಿ ಒಂದು ಪರಿಷತ್ತು ಇತ್ತು. ಅದಕ್ಕೆ [ಉ?] ಪಾಧ್ಯೆ ಎಂಬವರು ಮುಖ್ಯಸ್ಥರಾಗಿದ್ದರು. ನಾನು ಬೊಂಬಾಯಲ್ಲಿ ಅವರನ್ನು ಕಂಡು ಮಾತನಾಡಿದ್ದೆ. ಅಲ್ಲಿಯೂ ಸಂಸ್ಥೆ ಹೆಚ್ಚು ಯಶಸ್ವಿಯಾದಂತೆ ತೋರಲಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ಆಂಧ್ರದಲ್ಲಿಯೂ ತಮಿಳುನಾಡಿನಲ್ಲಿಯೂ ಪರಿಷತ್ತು ಎಂಬುದು ಪ್ರಬಲಿಸಿರುವಂತೆ ತೋರುವುದಿಲ್ಲ ಆದರೆ ಪರಿಷತ್ತು ಪ್ರಬಲಿಸಿಲ್ಲ

ಎಂಬ ಕಾರಣದಿಂದ ಆ ನಾನಾ ಜನದ ಭಾಷೆಗಳೂ ಸಾಹಿತ್ಯಗಳೂ ಹಿಂದೆ ಬಿದ್ದಿವೆಯೆಂದು ಅರ್ಥವಾಗದು. ವಾಸ್ತವವಾಗಿ ಆ ನಾನಾ ಪ್ರಾದೇಶಿಕ ಭಾಷೆಗಳು ಕನ್ನಡದಂತೆ ಪ್ರಬಲಿಸುತ್ತಿವೆ. ಅವುಗಳ ಅಭಿವೃದ್ಧಿಗೆ ಮೂಲಕಾರಣ ಆಯಾ ಜನದಲ್ಲಿರುವ ಅಂತಸ್ಸತ್ತ್ವ.

ಹಾಗಾದರೆ ಕನ್ನಡ ಜನಕ್ಕೆ ಪರಿಷತ್ತು ಅನಾವಶ್ಯಕವೋ ? ಈ ಪ್ರಶ್ನೆಗೆ ಉತ್ತರವನ್ನು ಈ ಮುಂದಣ ಪುಟಗಳಲ್ಲಿ ಅಷ್ಟಿಷ್ಟು ಕಾಣಬಹುದು. ಪರಿಷತ್ತು ನಮಗೆ ತುಂಬ ಅವಶ್ಯವಾದ ಸಂಸ್ಥೆ. ಸಾಹಿತ್ಯಸೃಷ್ಟಿ ಅದರ ಕಾರ್ಯವಲ್ಲ. ಅರ್ಥ ಪರಪ್ರಸಾದಪಾತ್ರರಾದವರ ಕಾರ್ಯ. ಆದರೆ ಪ್ರಸಾದಪಾತ್ರರು ಮಾಡಿದ ಕಾರ್ಯ ಜನದ ಉಪಯೋಗಕ್ಕೆ ದೊರೆಯಬೇಕೆಂದರೆ ಅಲ್ಲಿ ಬರುತ್ತದೆ ಪರಿಷತ್ತಿನ ಅವಶ್ಯಕತೆ. ಮುಖ್ಯವಾಗಿ ಅಂಥ ಸಂಸ್ಥೆ ಮಾಡಬೇಕಾದ ಕಾರ್ಯಗಳು ಮೂರು ನಿರ್ವಿವಾದವಾಗಿರುತ್ತವೆ :

(1) ಪಾಂಡಿತ್ಯಪೋಷಣೆ ;

(2) ಜನಸಾಮಾನ್ಯರಲ್ಲಿ ಸಾಹಿತ್ಯೋತ್ಸಾಹದ ಪ್ರಚಾರ ;

(3) ಅವರಿಗಾಗಿ ಆದರ್ಶ (Standard) ನಿಷ್ಕರ್ಷೆ.

ಪಾಂಡಿತ್ಯವು ಉಳಿಯಬೇಕು, ಬೆಳೆಯಬೇಕು—ಎಂಬುದು ಸ್ಪಷ್ಟವಾಗಿದೆ.

ಪ್ರೋತ್ಸಾಹ ಪ್ರಚಾರಕಾರ್ಯವು ಈಗ ಕನ್ನಡ ಸಾಹಿತ್ಯ ಪರಿಷತ್ತಿನಿಂದ ತಕ್ಕಷ್ಟು ನಡೆದಿದೆ. ದೇಶದ ಹಳ್ಳಿಹಳ್ಳಿಯಲ್ಲಿಯೂ ಕರ್ಣಾಟಕ ಸಂಘಗಳು ಹುಟ್ಟಿಕೊಂಡೂ ಹುಟ್ಟಿಕೊಳ್ಳುತ್ತಲೂ ಇರುವುದು ಅದಕ್ಕೆ ದೃಷ್ಟಾಂತ. ಕನ್ನಡ ಜನರು ಕನ್ನಡ ತಮ್ಮದೆಂದು ಈಗ ಎಚ್ಚೆತ್ತುಕೊಂಡಿದ್ದಾರೆ. ದೇಶದಲ್ಲಿ ಪ್ರಜಾರಾಜಕೀಯ ಹೆಚ್ಚಿದಂತೆಲ್ಲ ಕನ್ನಡದ ಬಳಕೆ ಹೆಚ್ಚುತ್ತದೆ.

ಪರಿಷತ್ತಿನ ಇನ್ನೊಂದು ಕೆಲಸ ಕಷ್ಟವಾದದ್ದು,—ವಿದ್ವತ್ಸಾಧ್ಯವಾದದ್ದು. ಅದನ್ನು ಕುರಿತು ಹೇಳಬೇಕಾದದ್ದು ಒಂದು ಮಾತಿದೆ. ಪರಿಷತ್ತು ಎರಡು ಮುಖಗಳುಳ್ಳದ್ದು: ಒಂದು ಜನಸಾಮಾನ್ಯದ ಕಡೆಗೆ ತಿರುಗಿದ್ದು : ಇನ್ನೊಂದು ವಿದ್ವಜ್ಜನದ ಕಡೆಗೆ ತಿರುಗಿರಬೇಕಾದದ್ದು. ಈ ವಿದ್ವತ್ಕಾರ್ಯ ಎರಡು ತೆರನಾದದ್ದು : (1) ಭಾಷಾ ಪ್ರಯೋಗಗಳ ಪರಿಷ್ಕರಣ : (2) ಸಾಹಿತ್ಯ ಯೋಗ್ಯತಾ ನಿರ್ಣಯ. ಈ ಕೆಲಸವನ್ನು ಪರಿಷತ್ತು ಕೈಕೊಂಡು ವಿದ್ವಾಂಸರ ಮೂಲಕ ನಡಸುವುದು ತುಂಬ ಅವಶ್ಯವಾಗಿದೆ. ಪರಿಷತ್ತು ಹಾಗೆ ಮಾಡಿದ ನಿರ್ಣಯಗಳನ್ನೂ ಸಲಹೆಗಳನ್ನೂ ಸಮಸ್ತರೂ ಅಂಗೀಕರಿಸುವರೆಂದು ಯಾರೂ ಹೇಳಲಾರರು. ಅದು ಅವಶ್ಯವೂ ಅಲ್ಲ. ಎಷ್ಟೋ ಜನ ಲೇಖಕರೂ ಭಾಷಣಕಾರರೂ ಪರಿಷತ್ತಿನ ಶಿಫಾರಸುಗಳನ್ನು ಪುರಸ್ಕರಿಸದೆ ಬಿಡಬಹುದು. ಅವರು ಸ್ವತಂತ್ರ ಮಾರ್ಗದಲ್ಲಿ ನಡೆಯಬಹುದು. ಪರಿಷತ್ತಿನ

ಉದ್ದೇಶದಲ್ಲಿರಬೇಕಾದವರು ಇಂಥವರಲ್ಲ; ಅವರು ಸಾಮಾನ್ಯಜನ. ಭಾಷಾ ಪ್ರಯೋಗಗಳ ವಿಷಯದಲ್ಲಿ ತಿಳಿವಳಿಕೆ ಬೇಕಾದದ್ದು ಇವರಿಗೆ. ಹಾಗೆಯೇ ಗ್ರಂಥಗಳ ಗುಣ ತಾರತಮ್ಯ ವಿಷಯದಲ್ಲಿಯೂ ಸಹಾಯ ಬೇಕಾಗಿರುವುದು ಸಾಮಾನ್ಯ ಜನಕ್ಕೆ.

ರಾನಡೆಯವರು ದೊಡ್ಡ ಜಡ್ಜಿಯಾಗಿದ್ದಾಗ ಸಹ ಮಾಡುತ್ತಿದ್ದ ಒಂದು ಸಾಹಿತ್ಯಸೇವೆಯನ್ನು ಇಲ್ಲಿ ಉದಾಹರಿಸಬಹುದು. ರಾನಡೆಯವರು ಆಗ ಮೂರು ತಿಂಗಳಿಗೊಮ್ಮೆ ಪ್ರಕಟವಾಗುತ್ತಿದ್ದ ಸರಕಾರದ ಗೆಜೆಟ್ಟಿನಲ್ಲಿ (Quarterly List of Publications) ಮರಾಠಿ ಗ್ರಂಥಗಳನ್ನು ಕ್ರಮವಾಗಿ ವಿಮರ್ಶಿಸಿ ಅವುಗಳ ವಿಷಯವನ್ನೂ ಶೈಲಿಯನ್ನೂ ಜನದ ಗಮನಕ್ಕೆ ತರುತ್ತಿದ್ದರು. ಆಯಾ ಕಾಲಾವಧಿಯಲ್ಲಿ ಪ್ರಕಟವಾದ ಮರಾಠಿ ಗ್ರಂಥಗಳೆಷ್ಟು, ಅವುಗಳಲ್ಲಿ ಮತಗ್ರಂಥಗಳೆಷ್ಟು, ಕಥೆ ಕಾದಂಬರಿಗಳೆಷ್ಟು, ನಾಟಕ ಪದ್ಯಗಳೆಷ್ಟು, ದೇಶವಿದೇಶ ಚರಿತ್ರೆಯೆಷ್ಟು, ವಿಜ್ಞಾನಶಾಸ್ತ್ರಗಳದೆಷ್ಟು, ರಾಜಕೀಯದ್ದೆಷ್ಟು, ಅರ್ಥಶಾಸ್ತ್ರದ್ದೆಷ್ಟು—ಹೀಗೆ ನಾನಾ ಜಾತಿಗಳನ್ನು ವಿಂಗಡಿಸಿ ಒಂದೊಂದು ಜಾತಿಯಲ್ಲಿಯೂ ಹೊಸ ಗ್ರಂಥ ಎಷ್ಟು ಬಂದಿವೆ, ಆ ಗ್ರಂಥಗಳ ಶೈಲಿ ಯಾವ ಮಟ್ಟದ್ದು, ಅವುಗಳ ಗುಣಾಂಶ ಯಾವ ಮಟ್ಟದ್ದು—ಈ ನಾನಾ ವಿವರಗಳನ್ನು ವಿಮರ್ಶೆಮಾಡಿ ಟೀಕಿಸುತ್ತಿದ್ದರು. ಆ ಟೀಕೆಗಳಿಂದ ಜನಕ್ಕೆ ತಿಳಿವಳಿಕೆ ಬರುತ್ತಿತ್ತು. ಮತಗ್ರಂಥ ಹೆಚ್ಚಾಗಿದೆ. ವಿಜ್ಞಾನ ಕಡಮೆಯಾಗಿದೆ, ಕಥೆ ಕಾದಂಬರಿ ಹೆಚ್ಚಾಗಿದೆ, ದೇಶವಿದೇಶ ಚರಿತ್ರೆ ಕಡಮೆಯಾಗಿದೆ —ಈ ರೀತಿ ನ್ಯೂನಾಧಿಕ್ಯಗಳನ್ನು ತೋರಿಸುತ್ತಿದ್ದದ್ದರಿಂದ ನೂತನ ಲೇಖಕರಿಗೆ ಮಾರ್ಗದರ್ಶನ ದೊರೆಯುತ್ತಿತ್ತು.

ಈ ಗ್ರಂಥವಿಮರ್ಶನ ಕಾರ್ಯದ ಜೊತೆಗೆ ಒಂದು ಅಧಿಕಾರಸಂಸ್ಥೆ ಮಾಡಬೇಕಾದ ಇನ್ನೊಂದು ಉಪಕಾರ ಒಂದು ಆದರ್ಶನಿರ್ದೇಶ: ಒಂದು ಆದರ್ಶಪ್ರಾಯವಾದ ಭಾಷಾಪ್ರಯೋಗವನ್ನು ಅಥವಾ ನಿರೂಪಣ ಪ್ರಕಾರವನ್ನು ರೂಢಿಗೆ ತರುವುದು, ಪ್ರಪಂಚಕಾರ್ಯದ ಒತ್ತಡದಲ್ಲಿ ಹೊಸ ಹೊಸ ಪದಗಳು, ಹೊಸ ಹೊಸ ಪ್ರಯೋಗಗಳು ರೂಢಿಗೆ ಬರುವುದು ಅನಿವಾರ್ಯವಾಗಿದೆ. ಹಾಗೆ ರೂಢಿಗೆ ಬರುತ್ತಿರುವ ಭಾಷಾಪ್ರಯೋಗಗಳ ಸಾಧುತ್ವ ಅಸಾಧುತ್ವಗಳನ್ನು ವಿಚಾರಪೂರ್ವಕವಾಗಿ ತಿಳಿಸಿಕೊಡುವ ಕಾರ್ಯ ಒಂದು ವಿದ್ವತ್ಸಂಸ್ಥೆಯಿಂದಲೇ ಆಗಬಹುದಾದದ್ದು. ಈ ಕಾರಣದಿಂದಲೂ ಪರಿಷತ್ತು ನಮಗೆ ಅವಶ್ಯವಾಗಿ ಇರಬೇಕಾದದ್ದು.

ಒಟ್ಟಿನಲ್ಲಿ ಕನ್ನಡವು ಅಭಿವೃದ್ಧಿ ಸ್ಥಿತಿಯಲ್ಲಿದೆಯೆಂದೂ ಅದರ ಭವಿಷ್ಯವು ತೇಜಸ್ಸುಳ್ಳದ್ದಾಗಿದೆಯೆಂದೂ ನಾನು ನಂಬಿಕೊಂಡಿದ್ದೇನೆ.

ಈಗ ಸಾಹಿತ್ಯೋತ್ಸಾಹಿಗಳು ಕನ್ನಡ ದೇಶದ ನಾನಾ ಭಾಗಗಳಲ್ಲಿಯೂ ಇದ್ದಾರೆ. ಕನ್ನಡ ಸಂಘಗಳು ಹುಟ್ಟಿ ಬೆಳೆಯುತ್ತಿವೆ. ಅವರಲ್ಲಿ ನಾನು ಮಾಡ

ಬೇಕಾದ ವಿಶೇಷ ಪ್ರಾರ್ಥನೆ ಒಂದಿದೆ. ಈ ಉತ್ಸಾಹಿಗಳು ತಮ್ಮ ತಮ್ಮ ಸುತ್ತ ಮುತ್ತಣ ಸ್ಥಳಗಳಲ್ಲಿರುವ ವಿದ್ವಾಂಸರನ್ನೂ ಸಾಹಿತಿಗಳನ್ನೂ ಕುರಿತ ಸಂಗತಿಗಳನ್ನು ಸಂಗ್ರಹಿಸಿ ಕಾಪಾಡಬೇಕೆಂಬುದು ನನ್ನ ಪ್ರಾರ್ಥನೆ. ಈಗ್ಗೆ ನಲವತ್ತು–ಐವತ್ತು ವರ್ಷಗಳ ಹಿಂದೆ ಒಳ್ಳೆಯ ವಿದ್ವಾಂಸರೂ ಕಲಾವಂತರೂ ಅಲ್ಲಲ್ಲಿರುತ್ತಿದ್ದರು. ಪ್ರಸಿದ್ಧಿಯ ಬೆಳಕು ಅವರ ಮೇಲೆ ಬಿದ್ದಿರಲಿಲ್ಲ. ಅದಕ್ಕೆ ಕಾರಣವೆಂತಾದರೂ ಇರಲಿ. ಆ ಜನರು ಅವರವರಿಗೆ ತೋರಿದಂತೆ, ಅವರವರಿಗೆ ಅವಕಾಶ ದೊರೆತಂತೆ ವಿದ್ಯೆ ಸಾಹಿತ್ಯಗಳ ಪ್ರಚಾರದಲ್ಲಿ ತೊಡಗಿದ್ದರೆಂಬುದಂತೂ ನಿಜ. ಅವರು ಸ್ವಪ್ರಯೋಜನಾಪೇಕ್ಷೆಯಿಲ್ಲದೆ ಪರಹಿತಬುದ್ಧಿಯಿಂದ ದುಡಿದವರು. ಅವರು ಮಾಡಿದ ಕೆಲಸದ ಮೌಲ್ಯ ತಾರತಮ್ಯವನ್ನು ನಿರ್ಣಯಿಸುವ ಮಾತು ಬೇರೆ. ಆದರೆ ಅಂಥ ಜನ ನಮ್ಮ ದೇಶದಲ್ಲಿದ್ದರು. ಅವರು ಸಾರಸ್ವತ ಕಾರ್ಯವನ್ನು ಅವರ ಹಿಂದಿನಿಂದ ಅವರ ಮುಂದಿನ ಕಾಲದವರೆಗೆ ಮುಂಬರಿಸಿ ಸಾರಸ್ವತಧಾರೆ ಸಂತತವಾಗಿರುವಂತೆ ಮಾಡಿದವರು. ಅಂಥವರನ್ನು ನಾವು ಮರೆಯಬಾರದು. ಈ ಉದ್ದೇಶದಿಂದ ನಾನು ಈಗ ಮಾಡುತ್ತಿರುವ ಪ್ರಾರ್ಥನೆ.

ಅಂಥ ವಿದ್ವಜ್ಜನರಲ್ಲಿ ಕೆಲವರ ಹೆಸರುಗಳನ್ನು ನನ್ನ ನೆನಪಿಗೆ ತೋರಿದಂತೆ ಉದಾಹರಿಸುತ್ತೇನೆ: ಪಂಡಿತ ಜಯರಾಯಾಚಾರ್ಯರು, ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಹೊಸಕೋಟೆಯ ಭಾರತಿ ಸಂಪಂಗಿರಾಮಯ್ಯನವರು, ಕೊಮಾಂಡೂರು ರಾಮಸ್ವಾಮಯ್ಯಂಗಾರ್ಯರು, ಲಿಂಗರಾಜ ಅರಸು, ಹೊನ್ನಡಿಕೆ ವೆಂಕಟರಾಯ ಕವಿ, ಚೆನ್ನಕೃಷ್ಣಯ್ಯನವರು. ಮೈಸೂರು (ಸಹಸ್ರನಾಮ) ಸೀತಾರಾಮಶಾಸ್ತ್ರಿಗಳು, ಹಲಗೂರು ಶಾನುಭೋಗ ವೆಂಕಟರಮಣಯ್ಯನವರು, ('ನರಸಿಂಹಶತಕ' ಕರ್ತೃ) ನರಸಿಂಹಶಾಸ್ತ್ರಿಗಳು, ('ಸುಭಾಷಿತ ಮಂಜರಿ' ಕರ್ತೃ) ಗಂಜಾಂ ಕೃಷ್ಣಪ್ಪನವರು, ಗುಡಿಬಂಡೆ ಕೇಶವಯ್ಯನವರು, ತಿರುವಳ್ಳೂರು ಶ್ರೀನಿವಾಸ ರಾಘವಾಚಾರ್ಯರು, ಸೋಸಲೆ ಅಯ್ಯಾಶಾಸ್ತ್ರಿಗಳು, ಕಾನಕಾನಹಳ್ಳಿ ವರದಾಚಾರ್ಯರು, ಭುಜಬಲಿ ಪಂಡಿತರು—ಇಂಥ ಮಹನೀಯರು ಬಹುಮಂದಿ ಇದ್ದರು. ಇವರಲ್ಲಿ ಕೆಲವರನ್ನು ನಾನು ಹೆಚ್ಚಾಗಲ್ಲದಿದ್ದರೂ ಹತ್ತಿರದಿಂದ ಬಲ್ಲೆ. ಉಳಿದವರ ಬರವಣಿಗೆಯನ್ನು ಅಷ್ಟಿಷ್ಟು ನೋಡಿದ್ದೇನೆ.

ನಮ್ಮ ದೇಶದಲ್ಲಿ ಈಚೆಗೆ ಹುಟ್ಟಿಕೊಂಡಿರುವ ಭಾಷಾ ವೈಷಮ್ಯಗಳನ್ನು ಕುರಿತು ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಮನುಷ್ಯನು ಸಂಪಾದಿಸಿಕೊಳ್ಳಬೇಕಾದ ಜ್ಞಾನವು ಯಾವ ಒಂದು ಭಾಷೆಯಲ್ಲಿರುವುದಕ್ಕಿಂತಲೂ ಹೆಚ್ಚಾದದ್ದು. ಸಂಸ್ಕೃತ ಸಹ ಆಧ್ಯಾತ್ಮಿಕ ಜ್ಞಾನವನ್ನು ಒದಗಿಸಬಲ್ಲಷ್ಟು ಪಟುವಾಗಿ ಇಹಲೋಕ ಜೀವನವನ್ನು ಕುರಿತ ಜ್ಞಾನವನ್ನು ತಿಳಿಸಲಾರದು. ನಮಗೆ ಅವಶ್ಯವಿರುವ ಜ್ಞಾನ ಯಾವ ಒಂದು ಭಾಷೆಯಲ್ಲಿಯೂ ಇರುವಷ್ಟು ಮಾತ್ರ ಸಾಲದು. ಹೀಗೆ ಜ್ಞಾನದ ದೃಷ್ಟಿಯಿಂದ ನೋಡಿದರೆ ನಾನಾ ಭಾಷೆಗಳು ಅನ್ಯೋನ್ಯ ಸಹಾಯಕಗಳಾಗಿರು

ತ್ತವೆ. ಹೀಗೆ ಕೇವಲಪ್ರಯೋಜನ ದೃಷ್ಟಿಯಿಂದಲೇ ಪ್ರತಿಯೊಬ್ಬನೂ ಆದಷ್ಟು ಹೆಚ್ಚು ಭಾಷೆಗಳನ್ನು ಕಲಿಯುವುದು ಶ್ರೇಯಸ್ಕರ. ಭಾಷಾವೈಷಮ್ಯವೂ ಮಾತ್ಸರ್ಯವೂ ಅಯುಕ್ತವೆಂದು ನನ್ನ ನಂಬಿಕೆ. ಕನ್ನಡ ವೈಯಾಕರಣ ಶಿರೋಮಣಿಯಾದ ಭಟ್ಟಾಕಳಂಕನು ನಮಗೆ ಮಾರ್ಗದರ್ಶಿಯಾಗಿದ್ದಾನೆ.

ನಮಶ್ಶ್ರೀವರ್ಧಮಾನಾಯ ವಿಶ್ವವಿದ್ಯಾಽವಭಾಸಿನೇ ।
ಸರ್ವಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್ ॥
ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಮ್ ।
ತಿರ್ಯಂಚೋಽಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಮ್ ॥

ವೇದವೂ ಇದನ್ನೇ ಕಲಿಸುತ್ತದೆ.

ಗೌರೀ ಮಿಮಾಯ ಸಲಿಲಾನಿ ತಕ್ಷತೀ । ಏಕಪದೀ ದ್ವಿಪದೀ ಸಾ ಚತುಷ್ಪದೀ ।
ಅಷ್ಟಾಪದೀ ನವಪದೀ ಬಭೂವುಷೀ । ಸಹಸ್ರಾಕ್ಷರಾ ಪರಮೇ ವ್ಯೋಮನ್ ॥ *

* ಜೀವನ ಸೌಂದರ್ಯ ಮತ್ತು ಸಾಹಿತ್ಯ, ಪು. ೧೩. ೧೫೩–೧೫೮.

ಮೈಸೂರಿನ ದಿವಾನರುಗಳು

ಅರಿಕೆ

ನನ್ನ ಜ್ಞಾಪಕ ಚಿತ್ರಶಾಲೆಯ ಸಂಪುಟಗಳಲ್ಲಿ ಇದು, ಇಂದಿನ ದೇಶಪರಿಸ್ಥಿತಿಯಲ್ಲಿ, ಮಿಕ್ಕ ಸಂಪುಟಗಳಿಗಿಂತ ಕೊಂಚ ಹೆಚ್ಚು ತುರ್ತಿನದೆಂದು ನನಗನ್ನಿಸಿದೆ. ಏಕೆಂದರೆ ಇದರ ವಿಷಯವು ರಾಜಕೀಯ. ನಮ್ಮ ರಾಜಕೀಯವು ಹದಕ್ಕೆ ಬಂದಲ್ಲದೆ ನಮ್ಮ ದೇಶಜೀವನದ ಯಾವ ಅಂಶವೂ ಹದಕ್ಕೆ ಬರಲಾರದೆಂದು ನನ್ನ ನಂಬಿಕೆ. ನಮಗೆ ತಕ್ಕ ರಾಜ್ಯಕ್ರಮವೆಂಥಾದ್ದೆಂಬುದನ್ನು ನಾವು ಇನ್ನೂ ಕಂಡುಕೊಳ್ಳಬೇಕಾಗಿದೆ. ಆ ಪ್ರಶ್ನೆಯನ್ನು ವಿಚಾರಮಾಡಲಿಚ್ಛಿಸುವವರಿಗೆ ಉಪಯುಕ್ತವಾಗಬಹುದಾದ ಸಾಮಗ್ರಿ ಈ ಪುಸ್ತಕದಲ್ಲಿ ಒಂದಷ್ಟು ಇದ್ದೀತು.

ಈ ಗ್ರಂಥದಲ್ಲಿ ಪ್ರಸ್ತಾವಿಸಿರುವ ಹತ್ತು ಹನ್ನೊಂದು ಮಂದಿ ದಿವಾನರುಗಳು ಆಡಳಿತ ನಡಸಿದ ಅರವತ್ತು ವರ್ಷಗಳಲ್ಲಿ ಆದಾಯವ್ಯಯಗಳು ವರ್ಷದಿಂದ ವರ್ಷಕ್ಕೆ ಎಷ್ಟು ಮಾತ್ರ ಬೆಳೆದವು, ಯಾವ ಯಾವ ಬಾಬುಗಳಲ್ಲಿ ಹೇಗೆ ಹೇಗೆ ಬೆಳೆದವು, ಆಡಳಿತವಲ್ಲಿಯೂ ದೇಶಪರಿಸ್ಥಿತಿಯಲ್ಲಿಯೂ ಏನೇನು ಬದಲಾವಣೆಗಳಾದವು—ಇಂಥ ವಿವರಗಳನ್ನು ಸೇರಿಸಿದ್ದಿದ್ದರೆ ಪುಸ್ತಕ ಇನ್ನೂ ಬಹು ದೊಡ್ಡದಾಗುತ್ತಿತ್ತು. ಆ ವಿವರಗಳನ್ನು ತಿಳಿದುಕೊಳ್ಳಬಯಸುವವರಿಗೆ ಸರಕಾರದ

ವಾರ್ಷಿಕ ವರದಿಗಳೂ ಆಗ ಇದ್ದ ಪ್ರಜಾಪ್ರತಿನಿಧಿಸಭೆ ಶಾಸನಸಭೆಗಳಿಗೆ ದಿವಾನರುಗಳು ಒಪ್ಪಿಸಿದ ಭಾಷಣಗಳೂ ಆಕರ ಗ್ರಂಥಗಳಾಗಿವೆ. ಇತರ ಪ್ರಕಟನೆಗಳಲ್ಲಿ ಸಾಮಾನ್ಯವಾಗಿ ದೊರೆಯುಬಹುದಾದ ವಿಷಯಗಳನ್ನು ಇಲ್ಲಿ ಸೇರಿಸಿಲ್ಲ. ಇಲ್ಲಿರುವುದು ಮುಖ್ಯವಾಗಿ ಲೇಖಕನ ವೈಯಕ್ತಿಕ ಮನೋಮುದ್ರಿಕೆ.

ಈ ಗ್ರಂಥವು ದೇಶಚರಿತ್ರೆಯಲ್ಲ. ಚರಿತ್ರೆಯಲ್ಲಿ ಗಣ್ಯರಾಗಬೇಕಾದ ಕೆಲ ಮಂದಿಯ ವೈಯಕ್ತಿಕ ಶೀಲಸ್ವಭಾವಗಳನ್ನು ನಿದರ್ಶನಗಳ ಮೂಲಕ ಎತ್ತಿ ತೋರಿಸುವುದು ಈ ಗ್ರಂಥದ ಉದ್ದೇಶ. ಈ ಮಿತವಾದ ಉದ್ದೇಶಕ್ಕೆ ತಾರೀಖು, ಸ್ಥಳ ಮೊದಲಾದ ವಿವರಗಳ ನಿಷ್ಕರ್ಷೆ ಅಪೇಕ್ಷಣೀಯವಾದರೂ ಅಷ್ಟೇನೂ ಅನಿವಾರ್ಯವಲ್ಲವೆಂಬುದು ನನ್ನ ತಿಳಿವಳಿಕೆ.

ಈ ಲೇಖನಗಳಲ್ಲಿ ಪ್ರಾಸಂಗಿಕವಾಗಿ ಕೊಟ್ಟಿರುವ ತಾರೀಖುಗಳು, ಸ್ಥಳಗಳು ಮೊದಾದ ತಪಶೀಲುಗಳು ನನ್ನ ನೆನಪಿನಲ್ಲಿರುವಂಥವು ; ದಾಖಲೆ ನೋಡಿ ಕೊಟ್ಟವಲ್ಲ. ನನ್ನ ನೆನಪಿನಲ್ಲಿ ಎಷ್ಟೋ ಲೋಪಗಳೂ ಸ್ಖಾಲಿತ್ಯಗಳೂ ಇರುವುದು ಅಸಂಭವವಲ್ಲ. ತಾರೀಖು, ಅಂಕಿ, ಹೆಸರು, ಅಡ್ಡಹೆಸರು ಮೊದಲಾದ ತಪಶೀಲುಗಳಲ್ಲಿ ಪ್ರಮಾದಗಳೇನಾದರೂ ಕಂಡುಬಂದರೆ ವಾಚಕರು ಅಂಥಾದ್ದನ್ನು ತಾವು ತಿದ್ದಿಕೊಳ್ಳುವುದಲ್ಲದೆ ನನಗೂ ತಿಳಿಸಬೇಕೆಂದು ಬೇಡುತ್ತೇನೆ.

ಸರಕಾರದ ಮುಖ್ಯ ನಾಯಕರಾದ ದಿವಾನರುಗಳನ್ನು ಕುರಿತ ಗ್ರಂಥವು ಅವರಿಗೆ ಪ್ರತ್ಯರ್ಥಿಗಳಾಗಿ ನಿಂತ ಪ್ರಜಾನಾಯಕರನ್ನೂ ಚಿತ್ರಿಸಿದ್ದಿದ್ದರೆ ಗ್ರಂಥಕ್ಕೆ ಒಂದು ದೃಷ್ಟಿಯಿಂದ ಪೂರ್ಣತೆ ಬರುತ್ತಿತ್ತು. ಆದರೆ ಗ್ರಂಥ ಅತಿಯಾಗಿ ಬೆಳೆದು ಅದಕ್ಕೆ ದೊರೆಯಬಹುದಾದ ವಾಚಕರ ಸಂಖ್ಯೆ ಮತ್ತೂ ಇಳಿದುಹೋಗುತ್ತಿತ್ತೆಂದೂ ನನಗೆ ಭಯವಿದೆ. ಕುತೂಹಲವುಳ್ಳವರು ಬೇರೆ ಗ್ರಂಥಗಳಲ್ಲಿಯೂ ಲೇಖನಮಾಲೆಗಳಲ್ಲಿಯೂ ನಾನು ಎಂ. ವೆಂಕಟಕೃಷ್ಣಯ್ಯನವರು, ಡಿ. ವೆಂಕಟರಾಮಯ್ಯನವರು, ಕೆ. ಶಂಕರನಾರಾಯಣರಾಯರು, ಎಸ್. ಆರ್. ಬಾಲಕೃಷ್ಣರಾಯರು ಮೊದಲಾದ ಪ್ರಜಾಪ್ರಮುಖರನ್ನು ಕುರಿತು ಬರೆದಿರುವ ಪ್ರಬಂಧಗಳನ್ನು ನೋಡಬಹುದು.

ಸ್ವಾತಂತ್ರ್ಯಪೂರ್ವದ ರಾಜ್ಯವ್ಯವಸ್ಥೆ

ಹಿಂದೂ ಜನದ ಕಾಲಮಾನದಲ್ಲಿ ಅರವತ್ತು ವರ್ಷಗಳ ಕಾಲವಿಸ್ತಾರವು ಒಂದು ಪರ್ಯಾಯವೆಂದು ಗಣನೆ. ಪ್ರಭವ ಸಂವತ್ಸರದ ಮೊದಲಿನಿಂದ ಅಕ್ಷಯ ಸಂವತ್ಸರದ ಕಡೆಯವರೆಗೆ ಅರವತ್ತು ವರ್ಷಗಳ ಒಂದು ಕಾಲಮಾನ. ಈ ಅರವತ್ತು ವರ್ಷಗ ಕಾಲಪುರುಷನ ರಥಚಕ್ರದಲ್ಲಿರುವ ಅರವತ್ತು ಆರಗಳೆಂದು ಭಾವಿಸ

ಬಹುದು. ಪ್ರಭವದಿಂದ ಮತ್ತೆ ಪ್ರಭವದವರೆಗೆ ಆ ಚಕ್ರದ ಒಂದು ಆವರ್ತ ಅಥವಾ ವಿಭವದಿಂದ ವಿಭವಕ್ಕೆ, ಶುಕ್ಲದಿಂದ ಶುಕ್ಲಕ್ಕೆ. ಹೀಗೆ. ಅರವತ್ತು ಸಂವತ್ಸರಗಳ ಆವರ್ತವೇ ಷಷ್ಟ್ಯಬ್ದಿ. ಪುರುಷಾಯುಷ್ಯದಲ್ಲಿ ಇಂಥ ಒಂದು ಆವರ್ತದ ಗಣನೆ ಅರ್ಥವತ್ತಾದದ್ದೆಂದು ಭಾವಿಸಿ ನಮ್ಮ ಜನ ಷಷ್ಟ್ಯಬ್ದಪೂರ್ತಿಯನ್ನು ಒಂದು ಉತ್ಸವ ಮಾಡುವುದು ವಾಡಿಕೆ.

ಮೈಸೂರಿನ ಸುವರ್ಣಯುಗ

ಮೈಸೂರಿನ ಚರಿತ್ರೆಯಲ್ಲಿ ಅಂಥ ಷಷ್ಟ್ಯಬ್ದಪರ್ಯಾಯವೊಂದು ಮುಗಿದು ಇಂದಿಗೆ ಮೂವತ್ತು ವರ್ಷವಾಗುತ್ತ ಬಂದಿದೆ. ನನ್ನ ತಿಳಿವಳಿಕೆಯಲ್ಲಿ ಆ ಅರವತ್ತು ವರ್ಷಗಳನ್ನು—೧೮೮೦ ವಿಕ್ರಮ ಸಂವತ್ಸರದಿಂದ ೧೯೪೦ ವಿಕ್ರಮ ಸಂವತ್ಸರದ ವರೆಗೆ—ಒಂದು ಸುವರ್ಣಯುಗವೆಂದು ಉಲ್ಲೇಖಿಸುವುದು ಉತ್ಪ್ರೇಕ್ಷೆಯಾಗಲಾರದು.

ಇಂಡಿಯಾ ದೇಶದ ಕಥೆಯನ್ನು ಸ್ಥೂಲವಾಗಿ ಎರಡು ಯುಗಗಳೆಂದು ವಿಭಾಗಿಸಬಹುದು: (೧) ಪೌರಾಣಿಕ ಯುಗ. (೨) ಚಾರಿತ್ರಿಕ ಯುಗ. ಪುರಾಣವೆಂದರೆ ಪೂರ್ವಕಾಲದ ದಂತಕಥೆ. ಇತಿಹಾಸ. ಊಹಾಪೋಹ ಕಲ್ಪನೆ—ಇವು. ಅದು ಬಾಹ್ಯಪ್ರಮಾಣದ ಆಧಾರವಿಲ್ಲದ್ದು. ಚರಿತ್ರೆಯೆಂದರೆ ತಾರೀಖು. ಸ್ಥಳ. ಮನುಷ್ಯ ಸಂದರ್ಭ ಮೊದಲಾದ ವಿಷಯಗಳಲ್ಲಿ ಬಾಹ್ಯಪ್ರಮಾಣದ ಅಪೇಕ್ಷೆಯುಳ್ಳದ್ದು. ಪೌರಾಣಿಕ ಯುಗವನ್ನು ಪ್ರಾಚೀನ ಯುಗವೆಂದೂ. ಚಾರಿತ್ರಿಕ ಯುಗವನ್ನು ವರ್ತಮಾನ ಯುಗವೆಂದೂ ಸಂಕೇತ ಮಾಡಿಕೊಳ್ಳಬಹುದು. ವರ್ತಮಾನ ಯುಗವನ್ನು ದೃಷ್ಟಿಯಲ್ಲಿರಿಸಿಕೊಂಡು ನೋಡುವುದಾದರೆ ಮೈಸೂರಿನ ಅರವತ್ತು ವರ್ಷಗಳ (೧೮೮೧–೧೯೪೦) ಚರಿತ್ರೆಯು ಉತ್ತಮ ಮಟ್ಟದ ರಾಜ್ಯಪ್ರಗತಿಯ ಚರಿತ್ರೆಯೆಂದು ಧಾರಾಳವಾಗಿ ಹೇಳಬಹುದು. ರಾಜ್ಯದ ಸಂಕಲ್ಪ. ರಾಜ್ಯದ ಪ್ರಯತ್ನ. ರಾಜ್ಯದ ಸಾಧನೆ—ಈ ಮೂರು ದೃಷ್ಟಿಗಳಿಂದಲೂ ಆಧುನಿಕ ಮೈಸೂರಿನ ವೃತ್ತಾಂತವು ಉಲ್ಲೇಖಾರ್ಹವಾದದ್ದು.

ಐದು ಘಟ್ಟಗಳು

ಮೈಸೂರು ರಾಜ್ಯದ ಕಳೆದ ಐದು ನೂರು ವರ್ಷಗಳ ಚರಿತ್ರೆಯಲ್ಲಿ ಮುಖ್ಯ ಘಟ್ಟಗಳು ಐದೆಂದು ಹೇಳಬಹುದು:

(೧) ಯದುರಾಯರ ರಾಜ್ಯಸ್ಥಾಪನೆಯ ದಿನದಿಂದ ನವಾಬ್ ಹೈದರಾಲಿಯ ಆಕ್ರಮಣದ (ಸುಮಾರು ೧೭೬೦) ವರೆಗೆ.

(೨) ೧೭೬೦ರಿಂದ ಟಿಪ್ಪುಸುಲ್ತಾನನ ಅಂತ್ಯದವರೆಗೆ (೧೭೯೯).

(೩) ಮುಮ್ಮಡಿ ಕೃಷ್ಣರಾಜ ಒಡೆಯರವರ ಸಿಂಹಾಸನಾರೋಹಣದಿಂದ (೩೦-೬-೧೭೯೯) ಬ್ರಿಟಿಷ್ ಸರ್ಕಾರದವರು ಅಧಿಕಾರವನ್ನು ವಹಿಸಿಕೊಂಡಾಗಿನ ವರೆಗೆ (೧೮೩೧).

(೪) ಬ್ರಿಟಿಷರ ಆಳ್ವಿಕೆಯ ಐವತ್ತು ವರ್ಷಗಳು (೧೮೩೧–೧೮೮೧).

(೫) ರಾಜ್ಯದ ಆಳ್ವಿಕೆ ಪುನಃ ರಾಜಮನೆತನಕ್ಕೆ ಬಂದಾಗಿನಿಂದ (೨೫-೩-೧೮೮೧) ನಾಲ್ವಡಿ ಕೃಷ್ಣರಾಜ ಒಡೆಯರವರ ಅವಸಾನದವರೆಗೆ (೩-೮-೧೯೪೦).

ಈ ಐದನೆಯ ಘಟ್ಟದ ಅರವತ್ತು ವರ್ಷಗಳ ಕಥೆಯನ್ನು ಆ ಕಾಲದ ದಿವಾನರುಗಳ ಮೂಲಕ ಈ ಲೇಖನಮಾಲೆಯಲ್ಲಿ ಸ್ಮರಿಸಿಕೊಳ್ಳುವುದಾಗುತ್ತದೆ.

* * *

ಮೈಸೂರು ರಾಜ್ಯವು ಮೂರನೆಯ ಸಾರಿ ಪುನಃಪ್ರತಿಷ್ಠಿತವಾದದ್ದು ೧೮೮೧ ರಲ್ಲಿ. ಅಂದಿನಿಂದ ೧೯೪೧ ರ ವರೆಗಿನ ದಿವಾನರುಗಳು ಅಥವಾ ಮುಖ್ಯ ಮಂತ್ರಿಗಳು ಈ ಹನ್ನೊಂದು ಮಂದಿ:

(೧) ಸಿ. ರಂಗಾಚಾರ್ಲುರವರು (೨೫-೩-೧೮೮೧—೨೦-೧-೧೮೮೩).

(೨) ಸರ್ ಕೆ. ಶೇಷಾದ್ರಿ ಅಯ್ಯರ್ ಅವರು (೧೨-೨-೧೮೮೩—೧೦-೮-೧೯೦೧).

(೩) ಟಿ. ಆರ್. ಎ. ತಂಬುಚೆಟ್ಟಿಯವರು (೧೧-೮-೧೯೦೧—೧೭-೩-೧೯೦೧).

(೪) ಸರ್ ಪಿ. ಎನ್. ಕೃಷ್ಣಮೂರ್ತಿಯವರು (೧೮-೩-೧೯೦೧—೨೯-೬-೧೯೦೬).

(೫) ವಿ. ಪಿ. ಮಾಧವರಾಯರು (೩೦-೬-೧೯೦೬—೩೧-೩-೧೯೦೯).

(೬) ಟಿ. ಆನಂದರಾಯರು (೧-೪-೧೯೦೯—೯-೧೧-೧೯೧೨).

(೭) ಸರ್ ಎಂ. ವಿಶ್ವೇಶ್ವರಯ್ಯನವರು (೧೦-೧೧-೧೯೧೨—೯-೧೨-೧೯೧೮).

(೮) ಸರ್ದಾರ್ ಎಂ. ಕಾಂತರಾಜ ಅರಸರು (೧೦-೧೨-೧೯೧೮—೫-೩-೧೯೨೨).

(೯) ಸರ್ ಎ. ಆರ್. ಬ್ಯಾನರ್ಜಿಯವರು (೬-೩-೧೯೨೨—೩೦-೪-೧೯೨೬).

(೧೦) ಸರ್ ಮಿರ್ಜಾ ಎಂ. ಇಸ್ಮೆಯಿಲ್ ಸಾಹೇಬರು (೧-೫-೧೯೨೬—೩೧-೫-೧೯೪೧); ಸರ್ ಎಂ. ಎನ್. ಕೃಷ್ಣರಾಯರು (೨೦-೪-೧೯೩೩—೩೧-೮-೧೯೩೩). [ಬದಲಿ.]

ಈ ಹನ್ನೊಂದು ಮಂದಿಯಲ್ಲಿ ಐದನೆಯವರಾದ ವಿ. ಪಿ. ಮಾಧವರಾಯರಿಂದ ಎಂ. ಎನ್. ಕೃಷ್ಣರಾಯರವರೆಗೂ ಪ್ರತಿಯೊಬ್ಬರನ್ನೂ ನಾನು ವ್ಯಕ್ತಿಶಃ ದೂರದಿಂದಲೋ ಹತ್ತಿರದಿಂದಲೋ ಕಂಡವನು. ಅವರ ನೆನಪು ಮುಂದಿನ ಚರಿತ್ರಕಾರನಿಗೆ ಉಪಯೋಗವಾದೀತು.

ಸ್ಥಳಾಧಿಕಾರಿಯ ಪ್ರಾಧಾನ್ಯ

ವ್ಯಕ್ತಿಚರಿತ್ರೆಗೆ ಹೋಗುವುದಕ್ಕೆ ಮುಂಚೆ ಆ ಕಾಲದ ಸರಕಾರದ ಒಂದು ಮುಖ್ಯಲಕ್ಷಣವನ್ನು ನಿರೂಪಿಸಬಹುದು. ಆ ಲಕ್ಷಣ ಎಲ್ಲ ದಿವಾನರುಗಳ ಕಾಲಕ್ಕೂ ಸಮಾನವಾದದ್ದು, ಮತ್ತು ಅಲ್ಲಿಂದೀಚಿನ ಪ್ರಜಾರಾಜ್ಯದ ಯುಗದಿಂದ ಬೇರೆಯಾದದ್ದು ; ವ್ಯತಿರಿಕ್ತವಾದದ್ದು ಎಂದೇ ಹೇಳಬಹುದು. ಈ ಒಂದು ಲಕ್ಷಣವನ್ನು ಗ್ರಹಿಸಿದರೆ ದಿವಾನರುಗಳಿಗಿದ್ದ ಕಾರ್ಯಭಾರವೆಂಥಾದ್ದೆಂಬುದು ಕೊಂಚ ಮಟ್ಟಿಗೆ ಊಹ್ಯವಾಗುತ್ತದೆ.

ಆ ಸರಕಾರದ ಲಕ್ಷಣವನ್ನು ಸ್ಥಳಾಧಿಕಾರಿಯ ಪ್ರಾಧಾನ್ಯ ಎಂಬ ಮಾತಿನಿಂದ ಸೂಚಿಸಬಹುದು. ೧೮೩೧ ರಿಂದ ೧೮೮೧ ರವರೆಗೆ ಐವತ್ತು ವರ್ಷ ಕಾಲ— ಬ್ರಿಟಿಷ್ ಸರಕಾರವು ಮೈಸೂರು ರಾಜ್ಯವನ್ನು ಆಳಿತಷ್ಟೆ ? ಆ ಐವತ್ತು ವರ್ಷಗಳ ಕಾಲದಲ್ಲಿ ಒಂದು ವ್ಯವಸ್ಥೆ ದೃಢಪಟ್ಟಿತ್ತು. ಯಾವ ಯಾವ ಕಾರ್ಯವನ್ನು ಯಾವ ಯಾವ ಅಧಿಕಾರಿ ನಡಸತಕ್ಕದ್ದು, ಯಾವ ಯಾವ ಪ್ರಶ್ನೆಯನ್ನು ಯಾವ ಯಾವ ಅಂತಸ್ತಿನ ಅಧಿಕಾರಿ ತೀರ್ಮಾನಿಸತಕ್ಕದ್ದು ಎಂದು ನಿಶ್ಚಿತವಾಗಿತ್ತು. ಶೇಕ್‌ದಾರರು. ಅಮಲ್ದಾರರು, ಸಬ್‌ಡಿವಿಜನ್ ಆಫೀಸರು. ಡೆಪ್ಯುಟಿ ಕಮಿಷನರು—ಇದು ಅಧಿಕಾರಿ ಸೋಪಾನ. ಶೇಕ್‌ದಾರರಿಗೆ ಗೊತ್ತಾಗಿದ್ದ ಕೆಲಸವನ್ನು ಅವರೇ ಮಾಡಬೇಕು : ಮತ್ತು ಮಾಡಿಯೇ ತೀರಬೇಕು. ಅಮಲಾರರು ಶೇಕ್‌ದಾರರ ಕೆಲಸಕ್ಕೆ ಕೈಹಾಕಬಾರದು—ವಿಶೇಷ ಕಾರಣವಿದ್ದ ಹೊರತು. ಅಮಲ್ದಾರರಿಗೆ ತಾಲೂಕಿನ ಆಡಳಿತದ ಜವಾಬ್ದಾರಿ ಸಂಪೂರ್ಣವಾಗಿತ್ತು. ಮತ್ತು ತಾಲೂಕಿನ ಪ್ರಜೆಯೆಲ್ಲ ಆತನನ್ನು ತಮ್ಮ ಮುಖಂಡನೆಂದು ಅಂಗೀಕರಿಸಿತ್ತು. ಜನಕ್ಕೆ ಆಗಬೇಕಾದ ಕೆಲಸ ಯಾವುದೇ ಇರಲಿ—ದೇವಸ್ಥಾನದ ದುರಸ್ತಿ. ಕೆರೆ ಕುಂಟೆಗಳ ರಿಪೇರಿ. ಊರಿನ ಪಾಕೀಜ. ಸಾಂಕ್ರಾಮಿಕ ನಿವಾರಣೆ. ಅನ್ನಸತ್ರಗಳ ಏರ್ಪಾಟು. ಪೇಟೆಯಲ್ಲಿ ಮೆರವಣಿಗೆಯ

ಬಂದೋಬಸ್ತು—ಅದು ಅಮಲ್ದಾರನನ್ನೇ ಅವಲಂಬಿಸಿಕೊಂಡಿತ್ತು. ಅಮಲ್ದಾರನ ಗೌರವವನ್ನು ಸಬ್‌ಡಿವಿಷನ್ ಆಫೀಸರೂ ಡಪ್ಯುಟಿ ಕಮಿಷನರೂ ನಡಸಿಕೊಂಡು ಬರುತ್ತಿದ್ದರು. ಬಹಿರಂಗವಾಗಿ ಅಮಲ್ದಾರನ ಗೌರವಕ್ಕೆ ಯಾರೂ ಭಂಗ ತರುತ್ತಿರಲಿಲ್ಲ. ಡೆಪ್ಯುಟಿ ಕಮಿಷನರವರಲ್ಲಿ ಯಾರಾದರೂ ಅಹವಾಲು ಹೇಳಿಕೊಂಡರೆ "ಅಮಲ್ದಾರರನ್ನು ಕಂಡು ಹೇಳಿಕೊಳ್ಳಿ"—ಎಂದೇ ಜವಾಬು ಕೊಡುತ್ತಿದ್ದರು. ತಾವು ತೀರ್ಮಾನ ಕೊಡುವುದಕ್ಕೆ ಮುಂಚೆ ಅಮಲ್ದಾರನನ್ನು ಕೇಳಿಯೇ ನಡೆಸುಕೊಳ್ಳುತ್ತಿದ್ದರು. ಅಮಲ್ದಾರನ ಅಭಿಪ್ರಾಯಕ್ಕೆ ಹೆಚ್ಚು ಬೆಲೆಯಿತ್ತು.

ಅಧಿಕಾರಗೌರವ

ಅಮಲ್ದಾರನಿಗೆ ಹೀಗೆ ಪ್ರಾಶಸ್ತ್ಯವಿದ್ದ ಕಾರಣದಿಂದ ಆತನಿಗೆ ಜನಕ್ಕೆ ಕಾರ್ಯತಃ ಸಹಾಯ ಮಾಡಬಲ್ಲ ಸಾಮರ್ಥ್ಯವಿತ್ತು. ತನ್ನ ಸ್ಥಾನಗೌರವದ ಕಾರಣದಿಂದ ಆತನಲ್ಲಿ ಜವಾಬ್ದಾರಿ ಬುದ್ಧಿ ತುಂಬಿರುತ್ತಿತ್ತು. ಆ ಜವಾಬ್ದಾರಿಗೆ ತಕ್ಕ ಅಧಿಕಾರಶಕ್ತಿಯೂ ಇತ್ತು. ಹೀಗೆ ಸಮಸ್ತ ಪ್ರಜಾಭ್ಯುದಯ ಕಾರ್ಯಗಳಿಗೂ ಅಮಲ್ದಾರನೇ ಸೂತ್ರಧಾರನಾಗಿದ್ದವನು.

ಡೆಪ್ಯುಟಿ ಕಮಿಷನರ ವಿಚಾರವೂ ಅಷ್ಟೆ. ಸಾಮಾನ್ಯವಾಗಿ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿಯೂ ಡೆಪ್ಯುಟಿ ಕಮಿಷನರ ಮಾತೇ ಕಡೆಯ ಮಾತು. ಸರಕಾರವು ಡೆಪ್ಯುಟಿ ಕಮಿಷನರಿಗೆ ವಿರೋಧವಾಗುವಂಥ ಯಾವ ಹುಕುಮನ್ನೂ ಹೊರಡಿಸುತ್ತಿರಲಿಲ್ಲ. ಸಾಮಾನ್ಯ ಪ್ರಜೆಗೆ ಸರಕಾರವೆಂದರೆ ಡೆಪ್ಯುಟಿ ಕಮಿಷನರು. ಡೆಪ್ಯುಟಿ ಕಮಿಷನರಿಗೆ ನಿಗ್ರಹಾನುಗ್ರಹ ಶಕ್ತಿ ದೃಢವಾಗಿದ್ದದ್ದರಿಂದ ಯಾವ ಒಂದು ಒಳ್ಳೆಯ ಕೆಲಸವನ್ನಾಗಲಿ ಮಾಡುವುದು ಆತನಿಗೆ ಸಾಧ್ಯವಾಗಿತ್ತು.

ಧರ್ಮೋ ರಕ್ಷತಿ ರಕ್ಷಿತಃ ॥

—ಎಂಬಂತೆ ಒಬ್ಬ ಅಧಿಕಾರಿಯ ಗೌರವವನ್ನು ಜನ ಕಾಪಾಡಿದರೆ ಆ ಜನವನ್ನು ಆ ಅಧಿಕಾರಿಯು ಕಾಪಾಡುವವನಾಗುತ್ತಾನೆ; ಆ ಗೌರವವು ಆ ಅಧಿಕಾರಿಗೆ ಪ್ರಜೋಪಕಾರಕ ಶಕ್ತಿಯನ್ನು ಕೊಡುತ್ತದೆ. ಹೀಗೆ ಸ್ಥಳೀಯ ಅಧಿಕಾರಿಯ ಗೌರವ ಸಾಮರ್ಥ್ಯಗಳನ್ನು ಹಿಂದಿನ ಜನ—ಆಗಿನ ಸರಕಾರವೂ ಆಗಿನ ಪ್ರಜೆಯೂ—ನಡಸಿಕೊಂಡು ಬಂದರು.

ಶೈಥಿಲ್ಯದ ಪ್ರಾರಂಭ

ಈ ತತ್ತ್ವಕ್ಕೆ ಈಗ ಊನ ಬಂದಿದೆ. ಸ್ಥಳೀಯ ಅಧಿಕಾರಿಯ ದರ್ಪಕ್ಕೆ ಹಾನಿತಟ್ಟಿದ್ದು ಸರ್ ಮಿರ್ಜಾ ಸಾಹೇಬರ ಕಾಲದಲ್ಲಿಯೇ ಎಂದು ಕೆಲವರು ಹೇಳಿಯಾರು. ಅದು ಪೂರ್ತಿ ನಿರಾಧಾರವಾದ ಆಕ್ಷೇಪಣೆಯೆಂದು ನಾನು ಹೇ

ಲಾರೆ. ಪ್ರಜಾಪ್ರಮುಖರೆನ್ನಿಸಿಕೊಂಡವರು, ಮಿಸುಕಿದರೆ ದಿವಾನರಲ್ಲಿ ಹೋಗು ವುದು, ಸ್ಥಳೀಯ ಅಧಿಕಾರಿಗಳ ಮೇಲೆ ಚಾಡಿ ಹೇಳುವುದು, ಒಂದೊಂದು ಸಂದರ್ಭ ದಲ್ಲಿ ಸ್ಥಳೀಯ ಅಧಿಕಾರಿಗಳ ಅಭಿಪ್ರಾಯವನ್ನು ವಿಚಾರಿಸದೆಯೇ ಸರಕಾರ ಹುಕುಂ ಹೊರಡಿಸುವುದು—ಇದು ಆಗ ಕೊಂಚ ಮೊದಲಾಯಿತು. ಒಬ್ಬರಿಬ್ಬರು ಕೌನ್ಸಿಲರು ಗಳು ಅಮಲ್ದಾರರನ್ನು—ಡೆಪ್ಯುಟಿ ಕಮಿಷನರನ್ನೂ ಸಹ—ಹತ್ತು ಜನರೆದುರಿಗೆ ಅವ ಹೇಳನ ಮಾಡಿದ್ದುಂಟು. ಹೀಗೆ ಅಮಲ್ದಾರರ ಕೈ ದುರ್ಬಲವಾಯಿತು. ಡೆಪ್ಯುಟಿ ಕಮಿಷನರೂ ದುರ್ಬಲರಾದರು.

1948ರಲ್ಲಿ ಸಂಪೂರ್ಣ ಸ್ವರಾಜ್ಯ ಬಂದು 'ಜವಾಬ್ದಾರಿ' ಸರಕಾರ ಪ್ರಾರಂಭ ವಾದ ಮೇಲೆ ಆಡಳಿತದ ಬಿಗಿಯೂ ಶಿಸ್ತೂ ಯಾವ ಮಟ್ಟಕ್ಕೆ ಬಂದಿವೆ ಎಂಬುದನ್ನು ನಾನು ಕೇಳಿ ಬಲ್ಲೆ. ರುಜುವಾತು ಕೊಡಲಾರೆ. ವಾಚಕರು ಕೇಳಿರುವ ವರದಿಗಳು ನಾನು ಕೇಳಿರುವುದಕ್ಕೆ ವಿರೋಧವಾಗಿರುವ ಪಕ್ಷದಲ್ಲಿ ಅವರು ರುಜುವಾತು ಕೊಟ್ಟಾಗ ನನ್ನ ಅಭಿಪ್ರಾಯವನ್ನು ತಿದ್ದಿಕೊಳ್ಳಲು ನಾನು ಸಿದ್ಧನಾಗಿರುತ್ತೇನೆ.

* * *

ಸ್ವಾತಂತ್ರ್ಯದ ಪೂರ್ವದ ದಿನಗಳಲ್ಲಿ ರಾಜ್ಯದ ಅಧಿಕಾರ ಸ್ಥಾನಗಳು ಮೈಸೂರಿನಲ್ಲಿ ಮೂರೆಂದು ಹೇಳಬಹುದು : (೧) ಮಹಾರಾಜರು, (೨) ಬ್ರಿಟಿಷ್ ರೆಸಿಡೆಂಟರು. (೩) ರಾಜ್ಯಸೇವಕವರ್ಗ—ಸಿವಿಲ್ ಸರ್ವಿಸ್ ಮೊದಲಾದ ವೇತನ ಗ್ರಾಹಿಗಳ ವ್ಯೂಹ (Public Services). ಇವುಗಳಲ್ಲಿ ಮೂರನೆಯ ವರ್ಗ ಇಂದಿನವರಿಗೂ ಪರಿಚಿತವಾದದ್ದು. ಮಹಾರಾಜರ ಮತ್ತು ಬ್ರಿಟಿಷ್ ರೆಸಿಡೆಂಟರ ಕಾರ್ಯವಿಭಾಗಗಳನ್ನು ಕುರಿತ ಕೆಲವು ಸಂಗತಿಗಳನ್ನು ಇಲ್ಲಿ ಸ್ಮರಿಸಬಹುದು.

ಮಹಾರಾಜರು

ಮಹಾರಾಜರ ಅಧಿಕಾರ ನಾಮಮಾತ್ರದ್ದು. ಮುದ್ರಿಕೆ ಒತ್ತುವ ಮಾತ್ರದ್ದು (ರಬ್ಬರ್ ಸ್ಟ್ಯಾಂಪ್), ವಾಸ್ತವಿಕವಾದದ್ದಲ್ಲ, ಕಾರ್ಯಪರಿಣಾಮವುಳ್ಳದ್ದಲ್ಲ— ಈ ರೀತಿ ಅಭಿಪ್ರಾಯವಿಟ್ಟುಕೊಳ್ಳುವುದು ತಪ್ಪು. ಅದು ಬರಿಯ ಆಗ್ರಹಪ್ರಧಾನ ವಾದ, ಅಸಂಗತವಾದ ಅಭಿಪ್ರಾಯ. ವಸ್ತುಸ್ಥಿತಿಯನ್ನು ನೋಡುವುದಾದರೆ ಮೈಸೂರಿನಲ್ಲಿ ಸಿಂಹಾಸನಾಧಿಕಾರಿಗಳಾಗಿದ್ದವರೆಲ್ಲ ರಾಜ್ಯಾಡಳಿತದಲ್ಲಿ ವಾಸ್ತವಿಕ ಪ್ರಭಾವವಿದ್ದವರು. ಅವರಲ್ಲಿ ಚಾಮರಾಜ ಒಡೆಯರವರು ಪಟ್ಟಕ್ಕೆ ಬಂದ ಹೊಸತಿನಲ್ಲಿ ಬಾಲ್ಯದಲ್ಲಿದ್ದರು. ಮತ್ತು ರಂಗಾಚಾರ್ಯರು ಅವರಿಗೆ ಗುರುಸ್ಥಾನ ದಲ್ಲಿದ್ದರು : ಮೂರನೆಯದಾಗಿ ಬ್ರಿಟಿಷ್ ರೆಸಿಡೆಂಟರು ಪಕ್ಕದಲ್ಲಿಯೇ ಇದ್ದರು. ಈ ಕಾರಣಗಳಿಂದ ಚಾಮರಾಜ ಒಡೆಯರವರ ಆಳ್ವಿಕೆಯ ಮೊದಮೊದಲಿನ ವರ್ಷ ಗಳಲ್ಲಿ ಅವರ ಕೈವಾಡ ಹೆಚ್ಚಾಗಿ ಕಾಣಿಸಿಕೊಳ್ಳದೆ ಇರಬಹುದು.

ಅನಂತರ ಶೇಷಾದ್ರಿ ಅಯ್ಯರ್ ಅವರ ಕಾರ್ಯರೀತಿಗಳ ಮೇಲೆ ಚಾಮರಾಜ ಒಡೆಯರವರ ಉಸ್ತುವಾರಿ ಜಾಗರೂಕವಾಗಿತ್ತು.

ಆಮೇಲೆ ವಾಣೀವಿಲಾಸ ಸನ್ನಿಧಾನದವರು ಮಹಾರಾಣಿ (Regent) ಆಗಿದ್ದ ಕಾಲದಲ್ಲಿ ಆಕೆಯ ಪ್ರಭಾವ ಹೆಚ್ಚಾಗಿಯೇ ಇತ್ತೆಂದು ನಾನು ಕೇಳಿದ್ದೇನೆ. ಸರ್ ಕೆ. ಶೇಷಾದ್ರಿ ಅಯ್ಯರ್ ಅವರು ಮಹಾರಾಣಿಯವರ ಉಸ್ತುವಾರಿ ಕೊಂಚ ಜೋರಾಯಿತೆಂದು ಅಸಮಾಧಾನಪಟ್ಟಿದ್ದರೆಂದೂ ಕೇಳಿದ್ದೇನೆ. ಅದು ನಿಜವೋ ಅಲ್ಲವೋ, ಸರ್ ಕೆ. ಶೇಷಾದ್ರಿ ಅಯ್ಯರ್ ಅವರು ಮಹಾರಣಿಯವರ ಮಾತಿಲ್ಲದೆ ಯಾವ ದೊಡ್ಡ ಕೆಲಸವನ್ನೂ ಕೈಕೊಂಡವರಲ್ಲ. ಅವರ ವಿಷಯದಲ್ಲಿ ಆಕೆಯ ಗೌರವ ಬರಬರುತ್ತ ಹೆಚ್ಚಾಯಿತೆಂದು ಆಗಿನ ಜನ ಹೇಳುತ್ತಿದ್ದರು.

ಆಕೆಯ ತರುವಾಯ ಬಂದ ಮಹಾರಾಜರು ನಾಲ್ವಡಿ ಕೃಷ್ಣರಾಜ ಒಡೆಯರವರಂತೂ ಸಾಂಕುಶ ರಾಜಪದ್ಧತಿಯ (Constitutional Monarchy) ಆದರ್ಶ ಪ್ರಭುವಾಗಿದ್ದರು. ಅವರು ಪ್ರತಿಯೊಂದು ಮುಖ್ಯವಾದ ವಿಷಯದಲ್ಲಿಯೂ ಸ್ವತಃ ಪರಾಮರ್ಶೆ ನಡಸುತ್ತಿದ್ದರು. ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಶಾಸನಸಭೆಯಲ್ಲಿಯೂ ಆಗುತ್ತಿದ್ದ ಟೀಕೆಗಳನ್ನೂ ಚರ್ಚೆಗಳನ್ನೂ ಕುತೂಹಲದಿಂದ ನೋಡಿ ಪ್ರಜಾಭಿಪ್ರಾಯದ ದೃಷ್ಟಿ ಯಾವ ದಿಕ್ಕಿಗೆ ಸಾಗುತ್ತಿದೆ ಎಂಬುದನ್ನು ಕಂಡುಕೊಳ್ಳುತ್ತಿದ್ದರು. ದೇಶಸಂಚಾರ ಮಾಡಿ ಸ್ಥಳಪ್ರಮುಖರೊಡನೆ ಮಾತುಕಥೆ ನಡಸಿ ಸಾರ್ವಜನಿಕ ಅಭಿಮಾನಗಳನ್ನು ತಿಳಿದುಕೊಳ್ಳುತ್ತಿದ್ದರು.*

ಹೀಗೆ ಮಹಾರಾಜರಿಗೆ ಪ್ರಜೆಯ ಮನಸ್ಸನ್ನು ತಿಳಿದುಕೊಳ್ಳಲು ಅನೇಕ ಮಾರ್ಗಗಳಿದ್ದವು. ಆ ಮಾರ್ಗಗಳಲ್ಲಿ ಅವರು ತಿಳಿವಳಿಕೆಯನ್ನು ಸಂಪಾದಿಸಿಕೊಂಡು ತಮ್ಮ ಮಂತ್ರಿಮಂಡಲ ಮಾಡಿದ ಸಲಹೆಗಳಿಗೂ ಸೂಚನೆಗಳಿಗೂ ಬೆಲೆ ಕಟ್ಟಲು ಸಮರ್ಥರಾಗಿದ್ದರು. ತಮ್ಮ ಸರಕಾರ ಸಂಕಲ್ಪಿಸಿದ್ದ ಕಾರ್ಯ ತಮ್ಮ ಜನಕ್ಕೆ ಎಷ್ಟು

---

* ಮಹಾರಾಜರು ಬಹುಶಃ ಚಿತ್ರದುರ್ಗದ ಬಳಿಯೋ ಬಾಬಾಬುಡನ್‌ಗಿರಿಯ ಬಳಿಯೋ ಪ್ರವಾಸಮಾಡುತ್ತಿದ್ದಾಗ ಒಂದು ಬೆಟ್ಟದ ಮೇಲಿನ ಒಂದು ದೇವಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿ ಹಿಂತಿರುಗುವಾಗ ಎದುರಿಗಿದ್ದ ಗುಡ್ಡದ ಬಂಡೆಯ ಮೇಲೆ ದಪ್ಪದಪ್ಪ ಅಕ್ಷರಗಳಲ್ಲಿ ಕರಿಯ ಬಣ್ಣದಲ್ಲಿ ಬರೆದಿದ್ದ ಈ ಪಂಕ್ತಿಗಳನ್ನು ಕಂಡರಂತೆ;

ರಾಜ ಬಾಲನಾಯಕ
ಮಂತ್ರಿ ಊಟನಾಯಕ
ಸಚಿವ ಸರದಾರನಾಯಕ

ರಾಜ್ಯ ಅನಾಯಕ
ನೀನೇ ನೋಡೋ ವಿನಾಯಕ.

ಇಂಗ್ಲೆಂಡಿನ ಚರಿತ್ರೆಯಲ್ಲಿ ಜೂನಿಯಸ್ (Junius) ಎಂಬ ಕೃತಕ ಅಂಕಿತದಿಂದ ಒಬ್ಬಾತ ಲೇಖನಗಳನ್ನು ಬರೆದು ಪ್ರಸಿದ್ಧಪಡಿಸುತ್ತಿದ್ದನಂತೆ. ಆತನು ಯಾರೆಂಬುದು ಈ ಹೊತ್ತಿನವರೆಗೂ ತಿಳಿದುಬಂದಿಲ್ಲ. ಅದೇ ರಾಷ್ಟ್ರಕ ಮನೋವೃತ್ತಿ (Public Spirit).

ದೂರ ಸಮ್ಮತವಾಗಬಲ್ಲದು, ಎಷ್ಟು ದೂರ ಹಿತಕರವಾಗಬಹುದು—ಎಂಬುದನ್ನು ತಮ್ಮ ಮನಸ್ಸಿನಲ್ಲಿ ನಿರ್ಣಯಿಸಿಕೊಂಡು ಮಂತ್ರಿಗಳಿಗೆ ಆಗಾಗ ಸೂಚನೆ ಮಾಡುತ್ತಿದ್ದರು. ಮತ್ತು ಸರಕಾರ ಮಾಡಿದ ಶಿಫಾರಸುಗಳಿಗೆ ಅಷ್ಟಿಷ್ಟು ತಡೆ ಹಾಕುತ್ತಿದ್ದರು. ಈ ತಡೆಯ ಭಯ ಮಂತ್ರಿಮಂಡಲಕ್ಕಿದ್ದದ್ದರಿಂದ ಅದು ಬಹು ಜಾಗರೂಕವಾಗಿರುತ್ತಿತ್ತು. ಯಾವ ಸಭೆಯಲ್ಲಿ ಆದ ಟೀಕೆ, ಯಾವ ಪತ್ರಿಕೆಯಲ್ಲಿ ಆದ ವ್ಯಾಖ್ಯಾನ ಮಹಾರಾಜರ ಗಮನಕ್ಕೆ ಬಂದು ಅವರು ಅದರಿಂದ ಅಸಮಾಧಾನ ಪಟ್ಟಾರೋ ಎಂಬ ಭೀತಿ ಮಂತ್ರಿಸಂಪುಟಕ್ಕೆ ಸರ್ವದಾ ಇರುತ್ತಿತ್ತು.

ಕೃಷ್ಣರಾಜ ಒಡೆಯರವರು ಬರಿಯ ಹೆಸರಿನ ದೊರೆ ಎಂದು ಹೇಳಲಾಗದು. ಅವರು ಗೊತ್ತಾದ ವ್ಯವಸ್ಥೆಗೊಳಪಟ್ಟವರಾದರೂ, ತಮ್ಮ ಮಂತ್ರಿಗಳನ್ನು ಉಲ್ಲಂಘಿಸಿದವರಲ್ಲವಾದರೂ ಪ್ರಭಾವಶಾಲಿಗಳಾದ ಪ್ರಭುವಾಗಿದ್ದರು. ಅದೇ Constitutional Monarchy. ಎಲ್ಲ ಸರಕಾರಿ ಆಡಳಿತಗಳಿಗೂ ಜವಾಬ್ದಾರಿ ಹೊತ್ತವನು ಮಂತ್ರಿ. ಆದರೆ ಆ ಮಂತ್ರಿಯನ್ನು ಎಚ್ಚರಿಸಿ ಹದ್ದಿನಲ್ಲಿರಿಸುವವನು ಸಿಂಹಾಸನಸ್ಥನಾದ ಪ್ರಭು. ಮೈಸೂರಿನಲ್ಲಿ ೧೮೮೧ರಿಂದ ೧೯೪೮ರವರೆಗೂ ಇದ್ದ ವ್ಯವಸ್ಥೆ ಅಂಥಾದ್ದು.

ರೆಸಿಡೆಂಟ್

ರೆಸಿಡೆಂಟ್ ಎಂಬ ಅಧಿಕಾರಿ ಬ್ರಿಟಿಷ್ ಸರಕಾರದ ಪ್ರತಿನಿಧಿ. ಇಂಥ ಅಧಿಕಾರಿ ೧೮೮೧ಕ್ಕೆ ಹಿಂದೆ ಮೈಸೂರಿನಲ್ಲಿರಲಿಲ್ಲ. ಇತರ ದೇಶೀಯ ಸಂಸ್ಥಾನಗಳಲ್ಲಿ ಒಂದು ದೊಡ್ಡ ಸಂಸ್ಥಾನಕ್ಕಾಗಲಿ ಅಥವಾ ಕೆಲವು ಸಣ್ಣ ಸಣ್ಣ ಸಂಸ್ಥಾನಗಳ ಗುಂಪಿಗಾಗಲಿ ಒಬ್ಬ ಇರುತ್ತಿದ್ದ. ಆತನನ್ನು 'ಪೊಲಿಟಿಕಲ್ ಏಜೆಂಟ್' (Political Agent) ಎಂದೂ ಕೆಲವು ಕಡೆ ಕರೆಯುತ್ತಿದ್ದರು.

ರೆಸಿಡೆಂಟನಿಗಿದ್ದ ಕರ್ತವ್ಯಗಳು ಮುಖ್ಯವಾಗಿ ಮೂರು ಜಾತಿಯವು :

(೧) ದೇಶೀಯ ರಾಜರು ಮಾಡಿಕೊಂಡಿದ್ದ ಕೌಲು ಕರಾರುಗಳ ನಿಯಮಗಳನ್ನು ಅವರು ವಿಹಿತಕ್ರಮದಲ್ಲಿ ನಡಸುತ್ತಿದ್ದಾರೆಯೆ?—ಎಂದು ನೋಡುವುದು.

(೨) ರಾಜರ ದರ್ಬಾರು ಪ್ರಜೆಗಳಿಗೆ ಸಮ್ಮತವಾಗಿದೆಯೆ? ರಾಜರು ದೇಶಾಭ್ಯುದಯ ಕಾರ್ಯಗಳನ್ನು ನಡಸುತ್ತಿದ್ದಾರೆಯೆ?—ಇದರ ಉಸ್ತುವಾರಿ ನೋಡುವುದು.

(೩) ಬ್ರಿಟಿಷರಿಗೆ ನಷ್ಟವನ್ನಾಗಲಿ ಅಪಾಯವನ್ನಾಗಲಿ ಉಂಟುಮಾಡುವ ಪ್ರಯತ್ನವೇನಾದರೂ ಸಂಸ್ಥಾನದಲ್ಲಿ ಇದೆಯೆ?—ಎಂದು ನೋಡುವುದು.

ಈ ಮೂರು ಪ್ರಶ್ನೆಗಳಿಗೆ ಸಂಬಂಧಪಟ್ಟ ಸಂಗತಿಗಳನ್ನು ತಿಳಿದು ವೈಸರಾಯ್ (ಗವರ್ನರ್ ಜನರಲ್) ಪ್ರಭುವಿಗೆ ಆಗಿಂದಾಗ್ಗೆ ವರದಿ ಸಲ್ಲಿಸುವುದು ರೆಸಿಡೆಂಟನ ಕರ್ತವ್ಯವಾಗಿತ್ತು. ಆ ಅಧಿಕಾರಿ ಈ ಕರ್ತವ್ಯವನ್ನು ನೆರವೇರಿಸುವ ನೆವದಿಂದ ಮಹಾರಾಜರ ಸರಕಾರಕ್ಕೆ ಮನಸ್ವಿಯಾಗಿ ಪ್ರಶ್ನೆ ಹಾಕುವುದೂ ಅಧಿಕಪ್ರಸಂಗಿತನ ತೋರಿಸುವುದೂ ಸಾರ್ವಭೌಮಸರಕಾರಕ್ಕೆ ಚಾಡಿ ಬರೆಯುವುದೂ ಅಪರೂಪ ವಾಗಿರಲಿಲ್ಲ. ಮಹಾರಾಜರಿಗೂ ಅವರ ಅಧಿಕಾರಿಗಳಿಗೂ ಸ್ನೇಹ ಸಹಾಯಗಳನ್ನು ನೀಡುತ್ತಿದ್ದ ರೆಸಿಡೆಂಟರುಗಳೂ ಆಗಾಗ ಇರುತ್ತಿದ್ದರು. ಆದರೂ ಆಕ್ಷೇಪಣೆ ಮಾಡುವವರೂ ಹೆದರಿಸುವವರೂ ಸಾಮಾನ್ಯವೆಂದು ಹೇಳಲೇಬೇಕು.

ಇಂಥ ಬ್ರಿಟಿಷ್ ಅಧಿಕಾರಿಗಳಲ್ಲಿ ಉಪಸರ್ಪಣೆಮಾಡಿಕೊಂಡು ಕ್ಷುದ್ರವಿಚಾರ ಹೇಳಿ ತಮ್ಮ ಕಾರ್ಯಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದ ದೇಶೀಯ ಜನರೂ ಅಪರೂಪ ವಾಗಿರಲಿಲ್ಲ. ವಾರಕ್ಕೊಂದು ಸಲ ತಪ್ಪದೆ ರೆಸಿಡೆಂಟನಿಗಾಗಲಿ ಆತನ ಆಪ್ತರಿಗಾಗಲಿ ಭೇಟಿ ಕೊಡುವ ಚಾಡಿಕೋರರು ಬೆಂಗಳೂರಿನಲ್ಲಿಯೂ ಇದ್ದರು. ಇಂಥ ಕ್ಷುಲ್ಲಕರನ್ನು ನಿರ್ವಹಿಸುವುದು ಮೈಸೂರಿನ ದಿವಾನರಿಗಿದ್ದ ಒಂದು ಹೇಳಲಾಗದ ಮುಜಗರ.

ವಿಶ್ವೇಶ್ವರಯ್ಯನವರ ಧೀರವರ್ತನೆ

ಈ ಕಷ್ಟ ಕೊನೆಗೊಂಡು ದಿವಾನರು ಧಾರಾಳವಾಗಿ ಉಸಿರಾಡುವಂತಾದದ್ದು ವಿಶ್ವೇಶ್ವರಯ್ಯನವರ ಕಾಲದಲ್ಲಿ. ಕ್ಷುಲ್ಲಕ ಜನರಿಗೆ ಆಗ ಅವಕಾಶ ಸಿಕ್ಕಲಿಲ್ಲ ಮತ್ತು ವಿಶ್ವೇಶ್ವರಯ್ಯನವರಿಗೆ ಎಲ್ಲ ಕಡೆಯೂ ಸಲ್ಲುತ್ತಿದ್ದ ಮನ್ನಣೆ (Prestige) ಯಶಸ್ಸುಗಳು ಅವರಿಗೆ ವಜ್ರಕವಚವಾಯಿತು. ಯಾವ ರೆಸಿಡೆಂಟನೂ ಯಾವ ಬ್ರಿಟಿಷ್ ಅಧಿಕಾರಿಯೂ ಅವರ ವಿಷಯದಲ್ಲಿ ಸಲಿಗೆ ತೆಗೆದುಕೊಳ್ಳುತ್ತಿರಲಿಲ್ಲ. ಎಲ್ಲರೂ ಅವರಿಗೆ ಹೆದರಿ ನಡೆಯುತ್ತಿದ್ದರು.

ಮೈಸೂರು ಅರಮನೆಯಲ್ಲಿ ವರ್ಷವರ್ಧಂತಿಯ ದರ್ಬಾರಿನಲ್ಲಿಯೂ, ದಸರಾ ದರ್ಬಾರಿನಲ್ಲಿಯೂ ಒಂದು ವಿಶೇಷ ನಡೆಯುತ್ತಿತ್ತು. ಎಲ್ಲ ದೇಶೀಯ ಜನರೂ ಸಭಾಮಂಟಪದಲ್ಲಿ ಪದ್ಮಾಸನ ಹಾಕಿ ಮಂಡಿಸುತ್ತಿದ್ದರು. ಯುರೋಪಿಯನ್ ಜನಗಳು ಮಾತ್ರ ಕುರ್ಚಿಯನ್ನಲಂಕರಿಸುತ್ತಿದ್ದರು. ಹೀಗೆ ನಡೆಯುವುದಾದರೆ ತಾವು ದರ್ಬಾರಿಗೆ ಬರತಕ್ಕವರಲ್ಲವೆಂದು ವಿಶ್ವೇಶ್ವರಯ್ಯನವರು ಸ್ಪಷ್ಟವಾಗಿ ತಿಳಿಸಿಬಿಟ್ಟರು. ಅದರ ಮೇಲೆ ಪರಂಗಿಜನ ಹೇಳಿದರು : "ನಾವು ಷರಾಯಿ ತೊಟ್ಟು ಬರುವವರು. ನಮಗೆ ಪಂಚೆಧೋತ್ರಗಳ ಅಭ್ಯಾಸವಿಲ್ಲ. ಉತ್ತರೀಯ ನಮ್ಮ ಸಂಪ್ರದಾಯವಲ್ಲ. ನಮ್ಮ ಉಡುಪಿಗೆ ತಕ್ಕ ಪೀಠ ಕುರ್ಚಿ."

ಇದನ್ನು ಆಲೋಚಿಸಿ ವಿಶ್ವೇಶ್ವರಯ್ಯನವರು ಹೇಳಿದರು : "ಯುರೋಪಿಯನ್ ಜನರಿಗೋಸ್ಕರ ಬೇರೆ ದರ್ಬಾರು ನಡೆಯಲಿ. ಆ ಹೊತ್ತು ದೇಶೀಯ ಮಹಾಜನರೂ

ಕುರ್ಚಿಯ ಮೇಲೆಯೇ ಕೂಡುವರು. ವಿದೇಶೀಯರಿಗೂ ಸ್ವದೇಶೀಯರಿಗೂ ಮಾನ ಮರ್ಯಾದೆಗಳು ಸಮಾನವಾಗಿರಬೇಕು. ಸ್ವದೇಶೀ ಜನ ಮಾತ್ರ ಇರುವ ಸಭೆಯಲ್ಲಿ ನಾವು ನಮ್ಮ ಸಂಪ್ರದಾಯವನ್ನು ಅನುಸರಿಸಬೇಕು."

ಮಹಾರಾಜರು ಇದನ್ನು ಮನಸಾರ ಒಪ್ಪಿದರು. ಹೀಗೆ ಇನ್ನೂ ಎಷ್ಟೋ ವಿಷಯದಲ್ಲಿ ವಿಶ್ವೇಶ್ವರಯ್ಯನವರು ಪರಂಗಿಜನದ ಠೇಂಕಾರವನ್ನು ತಪ್ಪಿಸಿದರು. ಅವರ ಕಾಲದಲ್ಲಿ ಬಂದ ರೆಸಿಡೆಂಟರು ಈ ಮಹನೀಯನ ಮನೋಗತವನ್ನು ಕಂಡು ಕೊಂಡು ನಮ್ರರಾದರು. ಬ್ರಿಟಿಷ್ ರೆಸಿಡೆಂಟರ ಪಿಶುನ ವೃತ್ತಿ ಅಲ್ಲಿಗೆ ಮುಗಿಯಿತು.

ಅಲ್ಲಿಯವರೆಗೂ ರಾಜ್ಯದ ಉನ್ನತಿ ಅವನತಿಗಳು ಕೊಂಚಮಟ್ಟಿಗಾದರೂ ಬ್ರಿಟಿಷ್ ರೆಸಿಡೆಂಟನ ಪ್ರಭಾವಕ್ಕೆ ಒಳಪಟ್ಟಿದ್ದವು. ಸತ್ತ್ವಹೀನರಾದ ದಿವಾನರು ರೆಸಿಡೆಂಟನಿಗೆ ಅಂಜಿ ನಡೆಯುತ್ತಿದ್ದರು. ಸ್ವಪ್ರಯೋಜನವನ್ನು ಇಂಗಿತದಲ್ಲಿರಿಸಿ ಕೊಂಡಿದ್ದ ದಿವಾನರುಗಳು ರೆಸಿಡೆಂಟನಿಗೆ ಮುಖೋಲ್ಲಾಸ ಮಾಡಲು ಸಿದ್ಧರಾಗಿದ್ದರು.

ದಿವಾನ ಪದವಿ ಹೀಗೆ ಸುಖದ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ.

ವೈದಿಕಧರ್ಮ ಸಂಪ್ರದಾಯಸ್ಥರು

ನಮ್ಮ ಸಮಾಜದ ಒಂದು ಅಳಿದುಹೋಗುತ್ತಿರುವ ಭಾಗವು ಹೇಗೆ ಬದುಕಿ ಬಾಳಿತು ಎಂಬುದನ್ನು ಗುರುತುಮಾಡಿಕೊಡುವ ಪ್ರಯತ್ನ ಈ ಮುಂದಣ ಪುಟಗಳದು.

ಬಡತನದಲ್ಲಿ ಭಾಗ್ಯವಂತಿಕೆಯನ್ನು ಅನುಭವಿಸುತ್ತಿದ್ದದ್ದು ಆ ಸಮಾಜ ಭಾಗದ ಮುಖ್ಯ ಲಕ್ಷಣ. ಆ ಭಾಗ್ಯ ಬ್ಯಾಂಕುಗಳ ಲೆಕ್ಕಕ್ಕೆ ಸಿಕ್ಕುವುದಲ್ಲ. ಧನಕನಕಗಳನ್ನು ಎಣಿಸಲಾಗಲ್ಲದ್ದು ಆ ಶ್ರೀಮಂತಿಕೆ. ಅದು ಅಂತರಾತ್ಮದ ಶ್ರೀಮಂತಿಕೆ. ಒಳ ಸಂಪತ್ತಿನ ನೆಮ್ಮದಿಯಲ್ಲಿ ಹೊರಸಂಪತ್ತಿನ ಕೊರತೆಯನ್ನು ಮರೆತಿದ್ದವರು ಆ ಜನ.

ನಮ್ಮ ದೇಶಕ್ಕೆ ಬಂದ ಪರದೇಶದ ಕ್ರಿಶ್ಚಿಯನ್ ಪಾದರಿಗಳು ನಮ್ಮವರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಬೇಕೆಂಬ ಉದ್ದೇಶವುಳ್ಳವರಾಗಿ, ನಮ್ಮ ಮತ ಸಂಪ್ರದಾಯಗಳನ್ನು 'ಪುರೋಹಿತರ ಕೈವಾಡ' (Priestcraft), 'ಮೂಢ ವಿಶ್ವಾಸ' (Superstition) ಎಂದು ಮೊದಲಾಗಿ ಹಳಿದು ಹಾಸ್ಯಮಾಡಿದ್ದು ಸ್ವಾಭಾವಿಕವಾಯಿತಷ್ಟೆ. ಅವರನ್ನು ಅನುಕರಿಸಿಕೊಂಡು ನಮ್ಮವರೇ ಆದ ಹಲವರು ವಿದ್ಯೋನ್ನತರು ವೈದಿಕರನ್ನು ಅಸಡ್ಡೆಯಿಂದ ಕಂಡರು. ವೈದಿಕಜನದ ವಿಷಯದಲ್ಲಿ ಇನ್ನೊಂದು ದೃಷ್ಟಿ ಸಾಧ್ಯವಿದೆ. ಅವರಿಂದಲೂ ಸಮಾಜಕ್ಕೆ ಉಪಯೋಗವಾಗಿದೆ— ಎಂಬುದು ಇಲ್ಲಿಯ ತಾತ್ಪರ್ಯ.

ವೈದಿಕರ ಜೀವನರೀತಿ

ನಮ್ಮ ಲೋಕದಲ್ಲಿ ಭಾರತೀಯ ಸಂಸ್ಕೃತಿಯೆಂಬ ಒಂದು ವಿಶೇಷವಾದ ಜೀವನಮಾರ್ಗ ಉಂಟಷ್ಟೆ? ಆ ಸಂಸ್ಕೃತಿಯ ಸ್ವರೂಪ ಲಕ್ಷಣಗಳನ್ನು ಅಷ್ಟಿಷ್ಟು ಕಾಣಬೇಕೆನ್ನುವವರಿಗೆ ಈ ಮುಂದಿನ ನನ್ನ ಜ್ಞಾಪಕಚಿತ್ರಗಳು ಇಷ್ಟವಾಗಬಹುದು.

ಸಂಸ್ಕೃತಿಯೆಂಬುವನ್ನು ಇಂಗ್ಲಿಷಿನಲ್ಲಿ Way of Life, Way of Living ಎಂದು ಹೇಳುವುದುಂಟು. ಜೀವನದ ಮುಖ್ಯಧ್ಯೇಯವೇನು, ಆ ಧ್ಯೇಯಕ್ಕಾಗಿ ಮನುಷ್ಯನು ಅಳವಡಿಸಿಕೊಳ್ಳುವ ಸಾಧನಗಳು ಏನೇನು, ಆ ಸಾಧನಗಳಿಂದ ಸಂಸ್ಕಾರ ಪಡೆದವನ ಬದುಕಿನಲ್ಲಿ ವಿಶೇಷವೇನು—ಇವು ಜೀವನಮಾರ್ಗವೆಂಬುದರ ಮುಖ್ಯಾಂಶಗಳು. ಮಾರ್ಗವೆಂದರೆ ದಾರಿಯಷ್ಟೆ? ಅದಕ್ಕೆ ಒಂದು ಗುರಿಯುಂಟಷ್ಟೆ? ಆ ಗುರಿಯನ್ನು ಮುಟ್ಟುವುದರಲ್ಲಿ ಕೆಲವು ನಿರೀಕ್ಷೆಗಳುಂಟಷ್ಟೆ? ಇವೆಲ್ಲ "ಜೀವನ ಮಾರ್ಗ", "ಸಂಸ್ಕೃತಿ" ಎಂಬ ಪದಗಳಲ್ಲಿ ಅಡಕವಾಗಿವೆ.

ಪ್ರಪಂಚದಲ್ಲಿ ಜನ ಜನಾಂಗಗಳು ಹತ್ತಾರಿವೆ. ಆ ಹತ್ತಾರೂ ಕೆಲಕೆಲವು ವಿಷಯಗಳಲ್ಲಿ ಬೇರೆಬೇರೆಯಾಗಿವೆ. ಅನ್ನವಸ್ತ್ರಾದಿ ದೈಹಿಕ ವ್ಯಾಪಾರಗಳು ಎಲ್ಲ ಮನುಷ್ಯಜಾತಿಗೂ ಸಾಮಾನ್ಯ. ಆದರೆ ಬುದ್ಧಿವ್ಯಾಪಾರಗಳೂ ಮನಸ್ಸಿನ ಪ್ರವೃತ್ತಿಗಳೂ ಒಂದೊಂದು ದೇಶದ ಜನಕ್ಕೆ ಒಂದೊಂದು ಬಗೆಯಾಗಿರುತ್ತವೆ. ಈ ನಾನಾ ಪ್ರವೃತ್ತಿಗಳು ಎಲ್ಲ ಅಂಶಗಳಲ್ಲೂ ಬೇರೆಬೇರೆಯಲ್ಲ. ಹಾಗೆ ಸಂಪೂರ್ಣವಾಗಿ ಬೇರೆಯಾಗಿದ್ದಿದ್ದರೆ ಜನ ಜನಾಂಗಗಳ ಸಂಪರ್ಕವಾಗುತ್ತಿರಲಿಲ್ಲ. ಕೆಲವು ಅಂಶಗಳಲ್ಲಿ ಸರ್ವಸಾಮಾನ್ಯವಾಗಿ, ಕೆಲವು ಅಂಶಗಳಲ್ಲಿ ಪ್ರತ್ಯೇಕವಾಗಿ ಇರುವುದರಿಂದ ಒಂದು ದೇಶದ ಜನ ಇನ್ನೊಂದು ದೇಶದ ಜನರೊಡನೆ ವ್ಯವಹಾರ ಬೆಳಸುವುದು ಸಾಧ್ಯವಾಗಿದೆ; ಜನ ಜನಾಂಗಗಳ ಸಂಪರ್ಕಕ್ಕೆ ಪ್ರೇರಣೆಯೂ ಆ ವಿಶೇಷತೆಗಳಲ್ಲಿರುತ್ತದೆ.

ಜೀವನರೀತಿಯ ವೈಶಿಷ್ಟ್ಯ

ಇಂಥ ಜನ ಜನಾಂಗಗಳ ಪರಸ್ಪರ ಸಂಪರ್ಕದಲ್ಲಿ ಮುಖ್ಯವಾಗಿ ಗಣ್ಯವಾಗಬೇಕಾದದ್ದು ಆ ಒಂದೊಂದು ಜನಾಂಗಕ್ಕೂ ಇರುವ ಜೀವನರೀತಿಯ ವೈಶಿಷ್ಟ್ಯ. ಒಂದು ಜನಾಂಗ ಆಹಾರ ಪಾಕಗಳಲ್ಲಿ ಇತರ ಕೆಲವು ಜನಾಂಗಗಳಿಗಿಂತ ಮೇಲೆನಿಸಿಕೊಂಡಿರುತ್ತದೆ. ಇನ್ನೊಂದು ಜನಾಂಗ ಬಟ್ಟೆಯ ತಯಾರಿಯಲ್ಲಿ ಮೇಲಾಗಿರುತ್ತದೆ. ಮತ್ತೊಂದು ಜನಾಂಗ ವಾಸ್ತುಶಿಲ್ಪದಲ್ಲಿ, ಮಗದೊಂದು ಯಂತ್ರಶಿಲ್ಪದಲ್ಲಿ, ಬೇರೊಂದು ವಿಜ್ಞಾನಶಾಸ್ತ್ರದಲ್ಲಿ, ಇನ್ನೊಂದು ಲಲಿತಕಲೆಗಳಲ್ಲಿ. ಹೀಗೆ ಒಂದೊಂದು ಜನಾಂಗ ಒಂದೊಂದು ಬಗೆಯ ಮಾನುಷ ಸಂಪತ್ತಿನಲ್ಲಿಯೂ ಒಂದೊಂದು ಬಗೆಯ ಮಾನುಷ ಸಾಧನೆಯಲ್ಲಿಯೂ ಮೇಲ್ಮೆಯಾಗಿರುತ್ತದೆ. ಇಂಥ ಗುಣವಿಶೇಷಶಕ್ತಿ ವಿಶೇಷಗಳು ಭಾರತೀಯ ಜನಕ್ಕೂ ಉಂಟು. ಮಿಕ್ಕ ಜನಾಂಗಗಳಿಂದ ಪ್ರತ್ಯೇಕವಾದ

ಒಂದು ಸಂಸ್ಕೃತಿವಿಶೇಷ ಇಂಡಿಯದ ಜನಾಂಗಕ್ಕುಂಟು. ಈ ಸಂಸ್ಕೃತಿ ವಿಶೇಷವೇ ಭಾರತೀಯ ಜನತೆಯ ಜೀವಾಳ. ಆ ಜೀವಾಳ ನಷ್ಟವಾದರೆ ಭಾರತೀಯರ ಭಾರತೀಯತೆ ನಷ್ಟವಾಗುತ್ತದೆ.

ಈ ಭಾರತೀಯ ಸಂಸ್ಕೃತಿ ಎಂಬುದರ ಮುಖ್ಯ ಲಕ್ಷಣಗಳೇನು ? ದೇಹ ಜೀವನದಲ್ಲಿ ಭಾರತೀಯರು ಮಿಕ್ಕವರಂತೆಯೇ ಇದ್ದರು. ಅವರಿಗೂ ಹಸಿವಿತ್ತು, ಬಾಯಾರಿಕೆಯಿತ್ತು. ಚಿವುಟಿದರೆ ಅವರಿಗೂ ನೋವಾಗುತ್ತಿತ್ತು. ಮುಳ್ಳು ಚುಚ್ಚಿದರೆ ಅವರಿಗೂ ರಕ್ತ ಬರುತ್ತಿತ್ತು. ಅವರಿಗೂ ಸುಖದುಃಖಗಳಿದ್ದವು. ಸಂತೋಷವಾದಾಗ ನಗುತ್ತಿದ್ದರು ; ನೋವಾದಾಗ ಅಳುತ್ತಿದ್ದರು. ಅನ್ನ ಬಟ್ಟೆಗಳ ಚಿಂತೆಯೂ ಪ್ರೀತಿ ವಿಯೋಗಗಳ ಚಿಂತೆಯೂ ಅವರಿಗೂ ಇದ್ದವು. ಆದರೆ ಒಂದು ವಿಶೇಷ : ಎಲ್ಲ ಲೌಕಿಕ ವ್ಯಾಪಾರಗಳ ನಡುವೆಯೂ ಒಂದು ಪಾರಮಾರ್ಥಿಕತೆ, ಎಲ್ಲ ಐಹಿಕ ಪ್ರವೃತ್ತಿಗಳಲ್ಲಿಯೂ ಒಂದು ಮನಶ್ಶಾಂತಿಯ ಬಯಕೆ, ಎಲ್ಲ ಸಂಸಾರ ಸಂಬಂಧಗಳಲ್ಲಿಯೂ ಒಂದು ಪರಿಶುದ್ಧಿ—ಇವು ಭಾರತೀಯ ಸಂಸ್ಕೃತಿಯ ಮುಖ್ಯ ಲಕ್ಷಣಗಳು. ಅಂತರಾತ್ಮ ಹಿತದೃಷ್ಟಿ, ನಿರುಪಾಧಿಕತೆ, ಶುಚಿತೆ—ಈ ಮೂರನ್ನೂ ಜೀವನದ ಉತ್ಕೃಷ್ಟಧ್ಯೇಯಗಳನ್ನಾಗಿ ಅಂಗೀಕರಿಸುವುದು ಭಾರತೀಯರಿಗೆ ಪೂರ್ವ ಕಾಲದಿಂದ ಬಂದಿರುವ ಪ್ರವೃತ್ತಿ. ಬಡತನವಲ್ಲಿ ಸಿರಿತನವನ್ನು ಅನುಭವಿಸುವುದು, ಗದ್ದಲದ ನಡುವೆ ನೆಮ್ಮದಿಯನ್ನರಸುವುದು, ಕೊಳಕಿನ ನಡುವೆ ಚೊಕ್ಕಟಕ್ಕಾಗಿ ಶ್ರಮಿಸುವುದು—ಇದು ಭಾರತೀಯತೆ.

ಸರಳತೆ–ಸಂತೃಪ್ತಿ

ಈ ಮುಂದಣ ಚಿತ್ರಗಳಲ್ಲಿ ಅದ್ಭುತವೂ ವೀರವೂ ಆದದ್ದು ಕಾಣಲಾರದು. ಅಟ್ಟಹಾಸವೂ ವಿಜೃಂಭಣೆಯೂ ಕಾಣಲಾರವು. ಲೋಕದ ಕಣ್ಣನ್ನೂ ಕಿವಿಯನ್ನೂ ಆಕರ್ಷಣೆ ಮಾಡಿಕೊಳ್ಳಬಲ್ಲ ಸಂಗತಿಗಳು ಇಲ್ಲಿಲ್ಲ. ನಾನು ವರ್ಣಿಸುವ ವ್ಯಕ್ತಿಗಳು ಒಂದು ದೃಷ್ಟಿಯಿಂದ ಬಡವರು. ಅವರು ಸರಳಜೀವಿಗಳು. ಸಂಪತ್ಸಮೃದ್ಧರಾದವರಲ್ಲ ; ಆಡಂಬರ ಆಟೋಪಗಳಿದ್ದವರೂ ಅಲ್ಲ. ಆದರೆ ತಮ್ಮಷ್ಟಕ್ಕೆ ತಾವು ಸಂತೃಪ್ತರಾಗಿದ್ದ ಜೀವಿಗಳು. ಸರಳತೆಯಲ್ಲಿಯೂ ಸಂತೃಪ್ತಿಯಲ್ಲಿಯೂ ಶಾಂತಿಯಲ್ಲಿಯೂ ಜೀವನಸೌಂದರ್ಯವುಂಟೆಂದು ಭಾವಿಸಿರುವವರಿಗೆ ಈ ಚಿತ್ರಮಾಲೆ ಕುತೂಹಲವನ್ನುಂಟುಮಾಡೀತು.

ವೈದಿಕರು, ಶಾಸ್ತ್ರಪಾಠಕರು, ಪುರಾಣಿಕರು, ಹರಿದಾಸರು—ಇಂಥವರ ಜೀವನದಲ್ಲಿ ಅತಿಶಯವೇನಿದ್ದೀತು ? ಅದು ಸಣ್ಣ ಸಣ್ಣ ಗ್ರಾಮಗಳ ಜೀವನ. ಅದು ಸಣ್ಣ ಹೊಳೆಯ ಹರಿವು ; ಉಬ್ಬರವಿಲ್ಲ, ಇಳಿತವಿಲ್ಲ. ಮೊನ್ನೆಯಿದ್ದಂತೆ ನಿನ್ನೆ : ಈ ಹೊತ್ತಿನಂತೆ ನಾಳೆ. ಎಲ್ಲ ಸಮ, ಎಲ್ಲ ಸೌಮ್ಯ. ಇಂಥಾದ್ದು ಆ ಜನದ ಅನುದಿನದ ಜೀವನ. ಆಹ್ನಿಕ, ಪಾಠ, ಪೂಜೆ, ಪುರಾಣ. ಮತ್ತೆ ಆಹ್ನಿಕ, ಪಾಠ, ಪೂಜೆ, ಪುರಾಣ. ಸಾಹಸದ

ಸುಳಿವಿಲ್ಲ. ಚೋದ್ಯದ ಸೆಲೆಯಿಲ್ಲ. ಉದ್ರೇಕಾವಕಾಶ ಎಲ್ಲಿಯೂ ಕಾಣಸಿಗದು ಅವರನ್ನು ನಾವು ಅನಾಗರಿಕರೆಂದೇ ಹೇಳಬಹುದು. ಬಹು ಮಂದಿ ರೈಲುಗಾಡಿಯನ್ನು ಕಂಡವರೇ ಅಲ್ಲ; ಕಂಡವರೂ ದೂರದಿಂದ ಕಂಡಿದ್ದವರೇ ಹೊರತು ಗಾಡಿಯೊಳಗೆ ಎಂದೂ ಕುಳಿತಿದ್ದವರಲ್ಲ. ಆದರೂ ಅವರೆಲ್ಲ ಜೀವನದಲ್ಲಿ ಸ್ವಾರಸ್ಯ ಕಂಡಿದ್ದವರು, ಮತ್ತು ನೆರೆಹೊರೆಯವರಿಗೆ ಜೀವನದಲ್ಲಿ ಸ್ವಾರಸ್ಯಕಾರಕರಾದವರು. ಅಂಥವರ ಕಥೆಯಲ್ಲಿ ರುಚಿ ಕಾಣಬಲ್ಲವರು ಈ ನಾಗರಿಕ ಯುಗದಲ್ಲಿಯೂ ಇದ್ದಾರೆಂದರೆ ಅವರಿಗಾಗಿ ಈ ವ್ಯಕ್ತಿಚಿತ್ರಸರಣಿ.

ಸರಳ ಕೋಮಲ ಜೀವನದ ಕಡೆಗೆ ನಮ್ಮ ಜನದ ಮನಸ್ಸನ್ನು ಸಾಧ್ಯವಿರುವಷ್ಟು ತಿರುಗಿಸಬೇಕೆಂಬ ಉದ್ದೇಶವೂ ನನ್ನ ಮನಸ್ಸಿನಲ್ಲುಂಟು.

ಹಲವರು ಸಾರ್ವಜನಿಕರು : ಇದರಲ್ಲಿ ಪ್ರಸ್ತುತರಾಗಿರುವ ಮಹನೀಯರು ನನಗೆ ಗುರುಸ್ಥಾನದಲ್ಲಿರತಕ್ಕವರು. ಭಗವತ್ಕೃಪೆಯಿಂದ ನನಗೆ ಈ ಮಹನೀಯರ ಪರಿಚಯ ಲಭಿಸಿತು. ನಾನು ಈಗ ಧೈರ್ಯವಾಗಿ ಒಂದು ಮಾತನ್ನು ಹೇಳುತ್ತೇನೆ : ಶ್ರೀ ಶಿವಸ್ವಾಮಿ ಅಯ್ಯರ್‌ರವರಂಥ ಪ್ರಾಮಾಣಿಕರು. ನಮ್ಮ ವೆಂಕಟಕೃಷ್ಣಯ್ಯನವರಂಥ ಉದಾರಿಗಳು ಈ ಹೊತ್ತು ಇಂಡಿಯದಲ್ಲಿ ದುರ್ಲಭರಾಗಿದ್ದಾರೆ. ಅವರ ಕಾಲದಲ್ಲಿಯೇ ಅವರು ಅಸಮಾನರಾಗಿದ್ದರು. ಶ್ರೀ ಶಿವಸ್ವಾಮಿ ಅಯ್ಯರ್‌ರವರ ಜ್ಞಾನಾಸಕ್ತಿಯನ್ನೂ ಪಾಂಡಿತ್ಯವನ್ನೂ ವೆಂಕಟಕೃಷ್ಣಯ್ಯನವರ ಹೃದಯವೈಶಾಲ್ಯವನ್ನೂ ಕುರಿತು ನಮ್ಮ ಜನ ಧ್ಯಾನ ಮಾಡಿದಷ್ಟೂ ಅವರಿಗೆ ಶ್ರೇಯಸ್ಸು ಹೆಚ್ಚುವುದೆಂದು ನಾನು ನಂಬಿಕೊಂಡಿದ್ದೇನೆ.

ಹೃದಯಸಂಪನ್ನರು : ಇದೊಂದು ಸಂಕೀರ್ಣ ಸಂಪುಟ. ಇದರಲ್ಲಿಯ ವಿಷಯಗಳಲ್ಲಿ ಪರಸ್ಪರ ಸಂಬಂಧ ಸಮೀಪದ್ದಲ್ಲ. ಆದರೆ ಎಲ್ಲ ವಿಷಯವ್ಯಕ್ತಿಗಳೂ ಗೌರವವುಳ್ಳವರು. ನಮ್ಮ ದೇಶದ ಚರಿತ್ರೆಯಲ್ಲಿ ಒಂದು ಯುಗದ ಜನ ಹೇಗೆ ಬದುಕಿದರು. ಯಾವ ಉದ್ದೇಶಗಳನ್ನು ನಂಬಿದ್ದರು—ಎಂಬುದನ್ನು ತೋರಿಸುವುದು ಈ ನನ್ನ ಪ್ರಯತ್ನ. ಭಗವದ್ಗೀತೆಯಲ್ಲಿ ಈಶ್ವರವಚನ ಪ್ರಸಿದ್ಧವಾಗಿದೆಯಲ್ಲವೆ ?

> ಯದ್ಯದಾಚರತಿ ಶ್ರೇಷ್ಠಃ
> ತತ್ತದೇವ ಇತರೋ ಜನಃ ॥

ಸಮಾಜದ ಗಣ್ಯ ಪುರುಷರನ್ನು ನೋಡಿ ಅವರಂತೆ ಇತರರೂ ಅಷ್ಟಿಷ್ಟು ಇದ್ದಾರು—ಎಂದು ನಾವು ತಿಳಿಯುತ್ತೇವೆ. ಹೀಗೆ ಪ್ರಮುಖ ಜನರಿಂದ ಸಮಾಜದ ಸ್ಥಿತಿಗಳನ್ನು ಊಹೆಮಾಡಲಾಗುತ್ತದೆ. ಇದು ದೇಶದ ಚರಿತ್ರೆಯ ಅಧ್ಯಯನದಲ್ಲಿ ಒಂದು ಪ್ರಮಾಣವಾದ ಪದ್ಧತಿ.

ಈ ಪುಸ್ತಕಕ್ಕೆ 'ಹೃದಯ ಸಂಪನ್ನರು' ಎಂದು ಹೆಸರು ಕೊಟ್ಟಿದೆ. 'ಸಹೃದಯರು' ಎಂದರೂ ಅದೇ ಅರ್ಥ. ಆದರೆ 'ಸಹೃದಯರು' ಎಂಬ ಪದವನ್ನು ಪಾರಿಭಾಷಿಕವಾಗಿ ಕಾವ್ಯಮೀಮಾಂಸಕರು ಉಪಯೋಗಿಸುತ್ತಾರೆ. ಇಲ್ಲಿ

ಪ್ರಸಕ್ತವಾಗಿರುವ ಮಹನೀಯರು ಎಲ್ಲರೂ ಕಾವ್ಯ ಓದಿದವರಲ್ಲ. ಹೃದಯ ವಾದರೋ ಅಂಥವರಿಗೂ ಇರುತ್ತದೆ. ಮುಖ್ಯವಾಗಿ ಸಹಾನುಭೂತಿ ದೊಡ್ಡದು. ಅನುಭೂತಿ ಇದ್ದರಲ್ಲವೆ ಸಹ–ಅನುಭೂತಿ? ಮಾನವ ಸುಖದುಃಖಗಳನ್ನೂ ಕಷ್ಟ ಕಾರ್ಪಣ್ಯಗಳನ್ನೂ ಅನುಭವಿಸುವ ಅಂಗ ಹೃದಯ. ಅದೇ ಔದಾರ್ಯದ ಜನ್ಮ ಸ್ಥಾನ. ಈ ಔದಾರ್ಯ ಯಾರಲ್ಲಿ ಹೆಚ್ಚಾಗಿ ಉಂಟೋ ಅವರು ಹೃದಯಸಂಪನ್ನರು. ಸಹೃದಯ ಎಂಬುದರಲ್ಲಿ ಅಡಗಿರುವ ತತ್ತ್ವವನ್ನು ಹೃದಯಸಂಪನ್ನ ಎಂಬ ಮಾತು ವಿಶದಪಡಿಸುತ್ತದೆ.

ಸಂಕೀರ್ಣ ಸ್ಮೃತಿ ಸಂಪುಟ: ಇದು 'ಜ್ಞಾಪಕ ಚಿತ್ರಶಾಲೆ'ಯ ಎಂಟನೆಯ ಸಂಪುಟ. ಇದಕ್ಕೆ ವಿಷಯವಾಗಿರುವವರು ಐಶ್ವರ್ಯದಲ್ಲಾಗಲಿ ಪಾಂಡಿತ್ಯದಲ್ಲಾಗಲಿ ಉನ್ನತರಾದವರಲ್ಲ. ಬಹುಶಃ ಎಲ್ಲರೂ ಸಾಮಾನ್ಯ ವರ್ಗಕ್ಕೆ ಸೇರಿದವರು; ಆದರೆ ಸಮಾಜದಲ್ಲಿ ನೆಮ್ಮದಿಯನ್ನೂ ಒಳ್ಳೆಯತನವನ್ನೂ ಹರಡುತ್ತಿದ್ದವರು.

ನಮ್ಮಲ್ಲಿ ಒಳ್ಳೆಯವರೆಂಬವರು—ಸಾಧು ಸತ್ಪುರುಷರು—ಸಾಮಾನ್ಯವಾಗಿ ಆಡಂಬರದ ಜನವಲ್ಲ. ಎಲ್ಲರಂತೆಯೇ ಇರುತ್ತಾರೆ. ನೆಲದಲ್ಲಿ ಆಳವಾಗಿ ಊಟೆಗಳೂ ಚಿಲುಮೆಗಳೂ ಹರಿಯುತ್ತಿರುತ್ತವಷ್ಟೆ. ಸಾಧು ಸಜ್ಜನರು ಈ ಅಂತರಾಳದ ನಾಳಗಳಂತೆ. ಅವು ಕಣ್ಣಿಗೆ ಕಾಣಿಸುವುದಿಲ್ಲ; ಅವುಗಳ ಹರಿವಿನಲ್ಲಿ ಒಂದು ರಭಸ ವಿರುವುದಿಲ್ಲ. ಎಲ್ಲವೂ ಮಂದವಾಗಿ ಶಾಂತವಾಗಿರುತ್ತದೆ. ನೀರು ತೊಟ್ಟು ತೊಟ್ಟಾಗಿ, ಕೊಂಚಕೊಂಚವಾಗಿ ಸ್ರವಿಸುತ್ತದೆ. ನೆಮ್ಮದಿ, ಒಳ್ಳೆಯತನ—ಇವೂ ಹಾಗೆ.

ಒಂದು ಮನೆಯಲ್ಲಿ ಮಾಡಿದ ಅಡಿಗೆ ಸಾಲದೆಹೋದಾಗ ಪಕ್ಕದ ಮನೆ ಯಿಂದ ಅನ್ನವೋ ಸಾರೋ ಪಲ್ಯವೋ ಹುಳಿಯೋ ಸಹಾಯವಾಗಿ ಬರುತ್ತದೆ. ಮನೆಯವರಿಗೆ ಕಷ್ಟ ಕಾಯಿಲೆ ಬಂದಾಗ ಪಕ್ಕದ ಮನೆಯವರು ಬಂದು ಸೇವೆ ಮಾಡುತ್ತಾರೆ. ಇದನ್ನು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸುವುದಿಲ್ಲ. ಇಂಥ ಪರಸ್ಪರ ಆನುಕೂಲ್ಯದ ಸಂದರ್ಭದಲ್ಲಿ ಹೆಚ್ಚುಗಟ್ಟಲೆಯೇನೂ ಇಲ್ಲದೆ ಜನ ನಡೆದುಕೊಳ್ಳು ತ್ತಾರೆ. ದೇಹಸಹಾಯವು ಆಶ್ಚರ್ಯಕರವಲ್ಲ. ಅದು ಒಂದು ಸ್ವಾಭಾವಿಕ ಸಂಘಟನೆ. ಗಾಳಿಗೆ ಬೀಸುತ್ತಿರುವುದು, ನೀರಿಗೆ ಹರಿಯುತ್ತಿರುವುದು, ಬಿಸಿಯನ್ನಾರಿಸುವುದು, ಸಹಜವಾಗಿರುವಂತೆ ಪರಸ್ಪರ ಸಹಾಯವೂ ಮನುಷ್ಯರಿಗೆ ನೈಜಾವಾಗಿರುವ ಒಂದು ಸಂಗತಿಯಾಗಿ ನಡೆಯುತ್ತದೆ. ಈ ಸಾಮಾನ್ಯ ಜನವರ್ಗ ಅಂಥದು. ನೆಲದ ಕೆಳಗಡೆಯ ಊಟೆ-ಚಿಲುಮೆಗಳು ಬತ್ತಿಹೋದಾಗ ಕೆರೆ ಬಾವಿಗಳು ಬರಿದಾಗು ತ್ತವೆ. ಜೀವನವು ಕಷ್ಟವಾಗಿ ದುಸ್ತರವಾಗುತ್ತದೆ. ನೆಲದ ಅಂತರಾಳದ ಊಟೆ–ಚಿಲುಮೆಗಳು ಹೇಗೋ ಮನುಷ್ಯಸಮಾಜದಲ್ಲೂ ಸಾಮಾನ್ಯ ಜನವರ್ಗದವರ ಒಳ್ಳೆಯ ತನ, ಸ್ನೇಹ, ಸೌಹಾರ್ದಗಳು ಸಮಾಜಕ್ಕೆ ಹಾಗೆ. ಹೀಗೆ ಬಾಳಿದ ಕೆಲವರನ್ನು ಕುರಿತು ನೆನಪುಗಳನ್ನು ಈ ಮುಂದಿನ ಪುಟಗಳಲ್ಲಿ ಚಿತ್ರಿಸಿದೆ.

ಜ್ಞಾಪಕ ಚಿತ್ರಶಾಲೆ

(ಸಮಗ್ರ ಸಮೀಕ್ಷೆ)

ಎಲ್. ಎಸ್. ಶೇಷಗಿರಿರಾವ್

"ಜ್ಞಾಪಕ ಚಿತ್ರಶಾಲೆ'ಯ ಎಂಟು ಸಂಪುಟಗಳಲ್ಲಿ ಸುಮಾರು 19ನೆಯ ಶತಮಾನದ ಮಧ್ಯದಿಂದ ಒಂದು ನೂರು ವರ್ಷಗಳ ಕಾಲದ ಹಿಂದಿನ ಮೈಸೂರು ರಾಜ್ಯದ, ಮುಖ್ಯವಾಗಿ ಬೆಂಗಳೂರಿನ, ಚರಿತ್ರೆ ಲಭ್ಯವಾಗುತ್ತದೆ. ಇದು ಸಾಮಾನ್ಯವಾಗಿ ನಾವು ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಓದುವಂತಹ ಚರಿತ್ರೆಯಲ್ಲ. ರಾಜಕೀಯ ಆಗುಹೋಗುಗಳ ಕಥೆಯಲ್ಲ. ಇದು ಈ ಭಾಗದ ಜನತೆಯ ಕಥೆ. ರಾಜಕೀಯವಾಗಿ ಪ್ರಮುಖರಾದವರ ಏಳುಬೀಳುಗಳ ಕಥೆಯಲ್ಲ. ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ ಈ ಜನತೆಯ ಚಿಂತನೆಯನ್ನೂ ಜೀವನ ರೀತಿಯನ್ನೂ ನಡೆಸಿದ ಸತ್ಯದ ದರ್ಶನ. ಮೌಲ್ಯಗಳ ದರ್ಶನ......ಒಬ್ಬ ಷೇಕ್ಸ್‌ಪಿಯರ್, ಒಬ್ಬ ಬನ್ಯನ್ ಇಂತಹವರ ಪ್ರತಿಭೆಗೆ ನೀರೆರೆದು ಬೆಳಗಬಲ್ಲಂತಹ ಸಂಸ್ಕೃತಿ ಜನರಲ್ಲಿರುವುದು. ಇಂತಹ ಒಂದು ಗುಪ್ತ ಜೀವನದಿ ಈ ಎಂಟು ಸಂಪುಟಗಳಲ್ಲಿ ಪ್ರಕಟವಾಗುತ್ತದೆ" ಎಂದಿರುವ ಮಾನ್ಯ ಲೇಖಕರು, ಸುಮಾರು 2000 ಪುಟಗಳ ಬರಹದಿಂದ ಡಿ.ವಿ.ಜಿ. ರೇಖಿಸಿರುವ ವ್ಯಕ್ತಿಚಿತ್ರಮಾಲೆಯಿಂದ ಹಲಕೆಲವನ್ನು ಆಯ್ದು ಅವುಗಳ ವರ್ಣಮಯತೆಯನ್ನು ಮನೋಜ್ಞವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

"ಯಾವ ತಿಳಿವಳಿಕೆ ನಮ್ಮ ಜನಕ್ಕಿದ್ದರೆ ಒಳ್ಳೆಯದಾದೀತೆಂದು ನನಗೆನಿಸಿತೋ ಅಂಥ ತಿಳಿವಳಿಕೆಯನ್ನು ನಾನು ಸಂಪಾದಿಸಿಕೊಂಡು ಇತರರಿಗೆ ತಿಳಿಯಪಡಿಸಬೇಕೆಂಬುದೂ, ಯಾವ ಒಂದು ಸೊಗಸನ್ನು ನಾನು ಅನುಭವಿಸಿದಾಗ ಅದನ್ನು ಇತರರೂ ಅನುಭವಿಸಿಯಾರೆಂದು ನನಗನ್ನಿಸಿತೋ ಅಂಥ ಸೊಗಸನ್ನು ತೋರಿಸುವುದೂ ನನ್ನ ಎಲ್ಲ ಬರವಣಿಗೆಯಲ್ಲಿಯೂ ಮಾತಿನಲ್ಲಿಯೂ ಇರುವ ತಾತ್ಪರ್ಯ."

ಡಿ.ವಿ.ಜಿ. ಅವರೇ ಹೇಳಿದ ಈ ಉದ್ದೇಶಗಳು 'ಜ್ಞಾಪಕ ಚಿತ್ರಶಾಲೆ'ಯ ಎಂಟು ಸಂಪುಟಗಳಲ್ಲಿ ಸಾರ್ಥಕವಾಗಿವೆ. ಈ ಮಾಲೆಯ ಮೊದಲನೆಯ ಸಂಪುಟವು 1969ರಲ್ಲಿ ಪ್ರಕಟವಾದರೂ 1953ರಲ್ಲಿ ಈ ಸಂಪುಟದ ಬಹುಭಾಗ 'ಜನಪ್ರಗತಿ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಕಡೆಯ ಸಂಪುಟ. 'ಸಂಕೀರ್ಣ ಸ್ಮೃತಿ ಸಂಪುಟ' 1977ರಲ್ಲಿ ಡಿ.ವಿ.ಜಿ. ಅವರ ನಿಧನಾನಂತರ ಹೊರಬಂದಿತು.

ಈ ಸುಮಾರು ಎರಡು ಸಾವಿರ ಪುಟಗಳ ಬರಹ, ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆ; ಮಾತ್ರವಲ್ಲ, ಇತಿಹಾಸದ ವಿದ್ಯಾರ್ಥಿಗಳು, ಸಮಾಜಶಾಸ್ತ್ರದ ವಿದ್ಯಾರ್ಥಿಗಳು ಇವರಿಗೂ ಅತ್ಯಂತ ಉಪಯುಕ್ತ ಕೊಡುಗೆ. ಮೊದಲನೆಯ ಸಂಪುಟಕ್ಕೆ ಬರೆದ ಉಪೋದ್ಘಾತದಲ್ಲಿ ಡಿ.ವಿ.ಜಿ.ಯವರು, "ನಮ್ಮಲ್ಲಿ ಚಾರಿತ್ರಿಕ ಸಾಮಗ್ರಿಯನ್ನು ಕಾಪಾಡಿಡುವ ಪದ್ಧತಿ ವಿರಳವಾಗಿದೆ. ಬಹು ಪ್ರಖ್ಯಾತರಾಗಿ ಲೋಕಮಾನ್ಯರಾಗಿರುವ ಅನೇಕ ಮಂದಿ ಮಹನೀಯರ ಜೀವನಕ್ಕೆ ಸಂಬಂಧಪಟ್ಟ ಜ್ಞಾಪಕಗಳನ್ನೂ ದಾಖಲೆಗಳನ್ನೂ ಆ ಮಹನೀಯರು ಸಂಗ್ರಹಿಸಿಡುವ ಗೋಜಿಗೆ ಹೋಗುವುದಿಲ್ಲ" ಎಂದು ವಿಷಾದಿಸಿ, "ಈ ಪ್ರಬಂಧಗಳು ಚರಿತ್ರೆಯಲ್ಲ, ಇವು ಆಯಾ ಮಹನೀಯರ ಮುಖಗಳ ಪಾರ್ಶ್ವರೇಖೆಗಳು. ಇವು ಜೀವನಚರಿತ್ರಕಾರನಿಗೂ ದೇಶಚರಿತ್ರಕಾರನಿಗೂ ಅಷ್ಟಿಷ್ಟು ಉಪಯುಕ್ತವಾಗಬಹುದಾದ ಕಚ್ಚಾಸಾಮಗ್ರಿ" ಎಂದಿದ್ದಾರೆ. ಡಿ.ವಿ.ಜಿ.ಯವರು ಈ ಬರಹಗಳನ್ನು ಕಚ್ಚಾಸಾಮಗ್ರಿ ಎಂದು ಕರೆದಿದ್ದರೂ ಇವು ನಮ್ಮ ಗದ್ಯಸಾಹಿತ್ಯದಲ್ಲಿ ಬಹು ಎತ್ತರದ ಸ್ಥಾನವನ್ನ ಪಡೆಯುತ್ತದೆ. ಕಾರಣ ಈ ಸಾಮಗ್ರಿಯನ್ನು ನಮ್ಮ ಮುಂದಿಡುವ ವ್ಯಕ್ತಿತ್ವ, ಮನಸ್ಸು, ಇಂಗ್ಲಿಷಿನಲ್ಲಿ ಒಂದು ಮಾತಿದೆ, ಸಾಹಿತ್ಯ ಎಂದರೆ Life seen through a temperament. ಈ temperament, ಸ್ವಭಾವ, ಮನಸ್ಸು ಸೂಕ್ಷ್ಮವಾಗಿರಬೇಕು. ಪಕ್ವವಾಗಿರಬೇಕು, ಚಿಂತನಶೀಲವಾಗಿರಬೇಕು, ಭಾಷೆಯ ಹದವನ್ನು ತಿಳಿದು ಬಳಸುವಂತಿರಬೇಕು. ಡಿ.ವಿ.ಜಿ. ಅವರ ಅರವತ್ತಾರನೆಯ ವಯಸ್ಸಿನಲ್ಲಿ ಪ್ರಾರಂಭವಾದ ಈ ಬರಹ ಸಾಹಿತ್ಯವಾಗದೆ ಇರಲು ಹೇಗೆ ಸಾಧ್ಯ?

'ಜ್ಞಾಪಕ ಚಿತ್ರಶಾಲೆ'ಯ ಈ ಎಂಟು ಸಂಪುಟಗಳಲ್ಲಿ ಸುಮಾರು ಹತ್ತೊಂಬತ್ತನೆಯ ಶತಮಾನದ ಮಧ್ಯದಿಂದ ಒಂದು ನೂರು ವರ್ಷಗಳ ಕಾಲದ ಹಿಂದಿನ ಮೈಸೂರು ರಾಜ್ಯದ, ಮುಖ್ಯವಾಗಿ ಬೆಂಗಳೂರಿನ, ಚರಿತ್ರೆ ಲಭ್ಯವಾಗುತ್ತದೆ. ಇದು ಸಾಮಾನ್ಯವಾಗಿ ನಾವು ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಓದುವಂತಹ ಚರಿತ್ರೆಯಲ್ಲ. ರಾಜಕೀಯ ಆಗುಹೋಗುಗಳ ಕಥೆಯಲ್ಲ. ರಾಜಕೀಯವಾಗಿ ಪ್ರಮುಖರಾದವರ ಏಳುಬೀಳುಗಳ ಕಥೆಯಲ್ಲ. ಇದು ಈ ಭಾಗದ ಜನತೆಯ ಕಥೆ. ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ ಈ ಜನತೆಯ ಚಿಂತನೆಯನ್ನೂ ಜೀವನ ರೀತಿಯನ್ನೂ ನಡೆಸಿದ ಸತ್ವದ ದರ್ಶನ, ಮೌಲ್ಯಗಳ ದರ್ಶನ. ಈ ಸಂಪುಟಗಳನ್ನು

ಓದುವಾಗ ನನಗೆ, ಎಫ್. ಆರ್. ಲೀವಿಸ್ ಎನ್ನುವ ಪ್ರಸಿದ್ಧ ವಿಮರ್ಶಕ ಹೇಳುವ ಒಂದು ಮಾತು ನೆನಪಾಗುತ್ತದೆ. ಆ ಮಾತು ಇದು :

"We must beware of idealizing, but the fact is plain. There would have been no Shakespeare and no Bunyan if in their time, with all its disadvantages by present standards, there had not been in the daily life of the people, a positive culture which has now disappeared and for which modern revolutionaries, social reformers and utopias do not project any serious cultural equivalent."

ಒಬ್ಬ ಷೇಕ್ಸ್‌ಪಿಯರ್, ಒಬ್ಬ ಬನ್ಯನ್ ಇಂತಹವರ ಪ್ರತಿಭೆಗೆ ನೀರೆರೆದು ಬೆಳೆಸ ಬಲ್ಲಂತಹ ಸಂಸ್ಕೃತಿ ಜನರಲ್ಲಿರುವುದು ಸಾಧ್ಯ. ಇಂತಹ ಒಂದು ಗುಪ್ತ ಜೀವನದಿ ಈ ಎಂಟು ಸಂಪುಟಗಳಲ್ಲಿ ಪ್ರಕಟವಾಗುತ್ತದೆ. ಇದಕ್ಕೆ ಒಂದೆರಡು ಉದಾಹರಣೆ ಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯ ಸಂಪುಟದಲ್ಲಿ ಶಿವಪಿಚ್ಚೈ ಮೊದಲಿ ಯಾರ್ ಎಂಬಾತನ ಚಿತ್ರವಿದೆ. ಇವರು ಗಾರೆಯ ಕೆಲಸ ಮಾಡುವವರು. ಅವರ ಕಾರ್ಯವೈಜ್ಞತೆ, ಸರ್ವಾರ್ಪಣಬುದ್ಧಿ ಮೊದಲಾದುವನ್ನು ಡಿ.ವಿ.ಜಿ. ಸ್ಫುಟ ವಾಗಿ ಚಿತ್ರಿಸುತ್ತಾರೆ. ಕಣ್ಣಳತೆಯಿಂದಲೇ ಕೆಲಸ ಎಲ್ಲಿ ಸರಿಯಾಗಿ ನಡೆದಿದೆ, ಎಲ್ಲಿ ಮುಕ್ಕಾಗಿದೆ ಎಂದು ತಿಳಿಯಬಲ್ಲ ಮನುಷ್ಯ. "ಪಿಚ್ಚೈ ಮೊದಲಿಯಾರರ ಬಂಧು ಗಳಲ್ಲಿ ಕೆಲವರು ದೊಡ್ಡ ದೊಡ್ಡ ಸರಕಾರೀ ಹುದ್ದೆಗಳಲ್ಲಿದ್ದರು ; ಕೆಲವರು ವ್ಯಾಪಾರ ದಲ್ಲಿ ಹಣ ಮಾಡಿ ಹೆಸರುವಾಸಿಯಾಗಿದ್ದರು. ಆದರೆ ಪಿಚ್ಚೈ ಮೊದಲಿಯಾರರು ಆ ಜನದಲ್ಲಿ ಬಳಕೆ ಮಾಡಿಕೊಂಡಿರಲಿಲ್ಲ. ಅವರ ಹೆಸರನ್ನೆತ್ತುತ್ತಲೇ ಇರಲಿಲ್ಲ." ಒಂದು ಕಾಲದಲ್ಲಿ ನೆಮ್ಮದಿಯಾಗಿದ್ದು ಸಂಸಾರಸ್ಥರಾಗಿದ್ದ ಈತ, ಹೆಂಡತಿ ಮಕ್ಕಳು ಹೋದಮೇಲೆ, ದೇಶಸಂಚಾರ ಹೊರಟರು. ಇವರ ಆತ್ಮಗೌರವ, ಕರ್ತವ್ಯನಿಷ್ಠೆ ವಿಶಿಷ್ಟವಾದುವು. ಎಲ್ಲಿ ಹೋದರೂ ಕೆಲಸ ಹುಡುಕುವರು, ಎರಡು ಮೂರು ದಿನ ಕೆಲಸ ಮಾಡಿ ಮೂರು ನಾಲ್ಕು ರೂಪಾಯಿ ಮಿಗಿಸಿಕೊಂಡು ಮುಂದಕ್ಕೆ ಹೊರಡುವರು. ಡಿ.ವಿ.ಜಿ. ಹೇಳುತ್ತಾರೆ, "ಕೆಲಸಕ್ಕೆ ಬರುವ ವೇಳೆ, ಕೆಲಸ ಮುಗಿಸುವ ವೇಳೆ, ಕೆಲಸ ನಡೆಸುವ ವೇಳೆ—ಈ ಮೂರು ಬಾಬುಗಳಲ್ಲಿಯೂ ಅವರು ತುಂಬಾ ಕಟ್ಟುನಿಟ್ಟಿನವರು. ಊರಿನಲ್ಲಿ ಗಡಿಯಾರವೊಂದೂ ಇಲ್ಲದೆ ಇದ್ದರೆ ಪಿಚ್ಚೈ ಮೊದಲಿಯಾರರು ಕೆಲಸ ಹಿಡಿಯುವ ಅಥವಾ ಕೆಲಸ ಬಿಡುವ ಘಳಿಗೆಯಿಂದ ವೇಳೆ ಎಷ್ಟೆಂಬುದನ್ನು ತಿಳಿಯಬಹುದಾಗಿತ್ತು. ಅವರ ಜನ್ಮದೊಳಗಾಗಿ ಅವರನ್ನು 'ಯಾಕೆ ಇಷ್ಟು ಹೊತ್ತಾಗಿ ಬಂದೆ ?' ಎಂದಾಗಲಿ 'ಏನು ಇಷ್ಟವಸರ ?' ಎಂದಾಗಲಿ ಯಾರೂ, ಎಂದೂ ಕೇಳಿದ್ದಿಲ್ಲ." ಪಡೆಯುವ ಪ್ರತಿ ಕಾಸಿಗೆ ತಕ್ಕಷ್ಟು ಕೆಲಸ ಮಾಡುವ ಕ್ರಿಯಾಶೀಲ ಆತ್ಮಗೌರವ ಇಲ್ಲಿ ಕಾಣುತ್ತದೆ.

ಮೊದಲಿಯಾರರು ಊಟಕ್ಕೆ ಸೋಮೇಶ್ವರಸ್ವಾಮಿಯ ಗುಡಿಗೆ ಹೋಗು ವರು. ಒಂದು ಬಾರಿ ಅವರಿಗೆ ಡಿ.ವಿ.ಜಿ., ಅಷ್ಟುದೂರ ಏಕೆ ಹೋಗಬೇಕು ?

ಬೇಕಾದರೆ ಅಲ್ಲೆ ಒಂದು ಕೋಣೆಯನ್ನು ಬಿಡುವು ಮಾಡಿಸಬಹುದು. ಎಂದರು. ಮೊದಲಿಯಾರರು, "ಅದು ಬೇಡ ಸ್ವಾಮಿ. ನಾನು ಸ್ವಾಮಿಯ ಗುಡಿಯ ಹತ್ತಿರ ಹೋಗುತ್ತೇನೆ. ಅದೇನು ದೂರವಲ್ಲ, ಅಲ್ಲಿ ಕೊಳದಲ್ಲಿ ನೀರಿದೆ; ಸುತ್ತಮುತ್ತ ದೊಡ್ಡ ದೊಡ್ಡ ಮರಗಳಿವೆ; ಹೂಗಿಡಗಳಿವೆ. ಅಲ್ಲಿ ನೆರಳಿನಲ್ಲಿ ತಂಪಾಗಿ ಕುಳಿತು. ಒಂದು ಕ್ಷಣ ಶಿವಭಿಕ್ಷೆಯನ್ನು ಊಟಮಾಡುತ್ತೇನೆ. ಕೊಂಚ ಹೊತ್ತು ಶಾಂತವಾಗಿ ಕುಳಿತಿದ್ದು ಇಲ್ಲಿಗೆ ಬರಬಹುದು" ಎಂದರು. ಇದನ್ನು ಹೇಳಿ, ಡಿ.ವಿ.ಜಿ. ಎನ್ನುತ್ತಾರೆ, "ಇದು ಅವರ ಅಂತರಂಗ. ಅವರಿಗೆ ಬೇಕಾಗಿದ್ದದ್ದು ಮನಶ್ಶಾಂತಿ. ಕೆಲಸ, ಕೂಲಿ, ಊಟ, ತೋಟ—ಇವೆಲ್ಲ ಈ ಮನಶ್ಶಾಂತಿಗೋಸ್ಕರ."

ಭಗವಂತನಿಗೆ ಸಮರ್ಪಿಸಿದ ಬಾಳನ್ನು ಬಾಳಿ ಮನಶ್ಶಾಂತಿ ಕಂಡವರು ಶಿವ ಪಿಚ್ಚೈ ಮೊದಲಿಯಾರರು. 'ವೈದಿಕ ಧರ್ಮ ಸಂಪ್ರದಾಯಸ್ಥರು'ವಿನಲ್ಲಿ ಮೊದಲ ಮಾತಿನಲ್ಲಿ ಡಿ.ವಿ.ಜಿ. ಹೇಳುತ್ತಾರೆ: "ಬಡತನದಲ್ಲಿ ಭಾಗ್ಯವಂತಿಕೆಯನ್ನು ಅನುಭವಿಸುತ್ತಿದ್ದುದು ಆ ಸಮಾಜಭಾಗದ ಮುಖ್ಯ ಲಕ್ಷಣ. ಆ ಭಾಗ್ಯ ಬ್ಯಾಂಕುಗಳ ಲೆಖ್ಖಕ್ಕೆ ಸಿಕ್ಕುವುದಲ್ಲ. ಧನಕನಕಗಳನ್ನು ಎಣಿಸಲೊಲ್ಲದ್ದು ಆ ಶ್ರೀಮಂತಿಕೆ. ಅದು ಅಂತರಾತ್ಮದ ಶ್ರೀಮಂತಿಕೆ. ಒಳಸಂಪತ್ತಿನ ನೆಮ್ಮದಿಯಲ್ಲಿ ಹೊರಸಂಪತ್ತಿನ ಕೊರತೆಯನ್ನು ಮರೆತಿದ್ದರು ಆ ಜನ." ಈ ಸಂಪುಟದಲ್ಲಿ ನಾವು ಕಾಣುವ ಹಿರಿಯರಲ್ಲಿ ಇಬ್ಬರು: ವೆಂಕಟರಾಮಶಾಸ್ತ್ರಿಗಳು. ಕೃಷ್ಣಪ್ಪ. ಇವರಲ್ಲಿ ಪ್ರತಿಯೊಬ್ಬರಿಗೆ ವರ್ಷದ ವರಮಾನ ಹತ್ತು-ಹನ್ನೆರಡು ರೂಪಾಯಿ. ಇದೂ ಖಚಿತವಲ್ಲ. ಸಂಜೆ ಇಬ್ಬರೂ ಜಗುಲಿಯ ಮೇಲೆ ಕುಳಿತು ರಾಮನಾಮ ಜಪ ಮಾಡುವರು. ಮಧ್ಯೆ ರಸ್ತೆಯಲ್ಲಿ ಹೋಗುವವರನ್ನೆಲ್ಲ ಮಾತನಾಡಿಸುವರು. "ಕುಂಬಾರ ಗುಣಗಾ. ಚೆನ್ನಾಗಿದ್ದೀಯ? ಅಗಸರ ಸುಬ್ಬಾ. ನಿನ್ನ ಕತ್ತೆಗೆ ಕಾಲು ವಾಸಿಯಾಯಿತೇ? ಸುಣ್ಣಕಲ್ಲು ಮಾದ. ಕೈ ಸುಟ್ಟುಕೊಂಡೆಯಂತಲ್ಲಪ್ಪ?" ಈ ಒಡ ಬ್ರಾಹ್ಮಣರು ಯಾರಿಗಾದರೂ ಮಾಡಬಹುದಾದ ಪ್ರಾಪಂಚಿಕ ಸಹಾಯ ಬಹು ಸ್ವಲ್ಪ. ಆದರೆ ಅವರ ಪ್ರೀತಿಯ ಕುಶಲಪ್ರಶ್ನೆಯೇ ಒಂದು ಸೇವೆ. ರಾಮಧ್ಯಾನ–ಲೋಕ ವಾತ್ಸಲ್ಯಗಳಿಂದ ಮನಶ್ಶಾಂತಿಯನ್ನು ಪಡೆದವರು ಅವರು. ಪತ್ರಿಕಾ ಜಗತ್ತಿನ ಭೀಷ್ಮ ವೆಂಕಟಕೃಷ್ಣಯ್ಯನವರು ಬದುಕಿದ ರೀತಿಯನ್ನು ವಿವರಿಸುತ್ತ ಡಿ.ವಿ.ಜಿ., "ಅಯಂ ನಿಜಃ ಪರೋವೇತ್ತಿ। ಗಣನಾ ಲಘುಚೇತಸಾಮ್॥ ಉದಾರಚರಿತಾನಾಂ ತು। ವಸುಧೈವ ಕುಟುಂಬಕಮ್॥" ಎನ್ನುವ ಮಾತುಗಳನ್ನು ಸ್ಮರಿಸಿ. 'ವೆಂಕಟಕೃಷ್ಣಯ್ಯನವರದು ಸಮಸ್ತ ಲೋಕವೂ ಸ್ವಂತ ಕುಟುಂಬವೆಂಬಂತೆಯೇ ಎಣಿಕೆ' ಎನ್ನುತ್ತಾರೆ. ಈ ಭಾಗದ ಕಡೆಯ ಮಾತುಗಳು. "ವೆಂಕಟಕೃಷ್ಣಯ್ಯನವರ ಅವಸಾನಕಾಲದಲ್ಲಿ ಅವರ ದರ್ಶನಕ್ಕಾಗಿ ನಾನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೋಗಿದ್ದೆ. ಅವರು ಎಂದಿನಂತೆ ಪ್ರಸನ್ನಚಿತ್ತರಾಗಿದ್ದರು. ಚಿಂತೆಯ ಚಿಹ್ನೆಯೇನೂ ಕಾಣಲಿಲ್ಲ. ಆಗ ಸುತ್ತಮುತ್ತ ಇದ್ದ ಶುಶ್ರೂಷಾಕರ್ತರು ಅವರ ಶಿಷ್ಯರು—ಬಹುವರ್ಷಗಳಿಂದ ವೆಂಕಟಕೃಷ್ಣಯ್ಯನವರು ಮನಸ್ಸನ್ನು ತಯಾರು ಮಾಡಿಕೊಂಡಿದ್ದರು." ಪುಣ್ಯಚರಿತ್ರರಾದ ಸರ್

ಎಂ. ವಿಶ್ವೇಶ್ವರಯ್ಯನವರು ಒಂದು ಸಂದರ್ಭದಲ್ಲಿ ಹೇಳಿದ ಮಾತನ್ನು ಡಿ.ವಿ.ಜಿ. ಸ್ಮರಿಸಿಕೊಂಡಿದ್ದಾರೆ :

"ಮನುಷ್ಯನು ತನ್ನ ಕಾಲಮೇಲೆ ತಾನು ನಿಂತುಕೊಳ್ಳಬೇಕು. ಆಗುಂತಕವಾಗಿ ಬಂದ ಈ ಪ್ರಖ್ಯಾತಿಗಳಿಂದ ತಾನು ದೊಡ್ಡವನಾಗಿರುವೆನೆಂದುಕೊಳ್ಳಬಾರದು. ನಾನು ಎಷ್ಟು ಎತ್ತರವಿದ್ದೇನೋ ಅಷ್ಟೇ ಇದ್ದೇನೆ. ಅದಕ್ಕಿಂತ ಒಂದಂಗುಲ ಹೆಚ್ಚಿನವನೆಂಬಂತೆ ನಡೆಯಬಾರದು."

ಶಿವಪಿಚ್ಚೈ ಮೊದಲಿಯಾರರಿಂದ ಹಿಡಿದು ಸರ್ ಎಂ.ವಿ.ವರೆಗೆ ಈ ಎಲ್ಲ ಶುದ್ಧಚೇತನರಿಗೆ ಶಕ್ತಿ ಕೊಟ್ಟ ಸಂಸ್ಕೃತಿ ಒಂದೇ. ಇದು ಜನತೆಯ ಸಂಸ್ಕೃತಿ

2

ಆಧುನಿಕಪೂರ್ವ ಸಾಹಿತ್ಯಕ್ಕೂ ಆಧುನಿಕ ಸಾಹಿತ್ಯಕ್ಕೂ ಇರುವ ಒಂದು ಮುಖ್ಯ ವ್ಯತ್ಯಾಸ ಎಂದರೆ. ಆಧುನಿಕರಿಗೆ ಮನುಷ್ಯಸ್ವಭಾವದಲ್ಲಿರುವ ಆಸಕ್ತಿ. ಒಳ್ಳೆಯವರು ಕೆಟ್ಟವರು ಎನ್ನುವ ತೀರ್ಮಾನಕ್ಕೆ ಹೋಗದೆ, ತೀರ್ಪು ಕೊಡುವ ಪ್ರವೃತ್ತಿಯನ್ನು ಬದಿಗಿಟ್ಟು ಮನುಷ್ಯಸ್ವಭಾವದ ವೈವಿಧ್ಯವೈಚಿತ್ರ್ಯಗಳಲ್ಲಿ ಖುಷಿಪಡುವ ಇಂಗ್ಲಿಷ್ ಬರಹಗಾರರು ಎಷ್ಟೋ ಮಂದಿ—ಛಾಸರ್, ಷೇಕ್ಸ್‌ಪಿಯರ್, ಅಡಿಸನ್. ಗೋಲ್ಡ್‌ಸ್ಮಿತ್, ಜೇನ್ ಆಸ್ಟಿನ್, ಚಾರ್ಲ್ಸ್ ಡಿಕನ್ಸ್, ಬರ್ನಾರ್ಡ್ ಷಾ ಎಲ್ಲ ಈ ಮನೋಧರ್ಮದ ನಿರೂಪಣಕಾರರೇ. (ಹೀಗೆಂದರೆ, ಅವರು ಒಳಿತು-ಕೆಡಕುಗಳ ವ್ಯತ್ಯಾಸವನ್ನು ಕಡೆಗಣಿಸುತ್ತಾರೆ ಎಂದಲ್ಲ.) ನಮ್ಮಲ್ಲಿ ಕುಮಾರವ್ಯಾಸನಲ್ಲಿ ಈ ಮನೋಧರ್ಮ ಕಾಣುತ್ತದೆ. ನವೋದಯ ಸಾಹಿತ್ಯದಲ್ಲಿ ಈ ಮನೋಧರ್ಮ ಕಾಣುತ್ತದೆ.

ಇದರ ಸೊಗಸಾದ ಅಭಿವ್ಯಕ್ತಿ 'ಜ್ಞಾಪಕ ಚಿತ್ರಶಾಲೆ'. ಡಿ.ವಿ.ಜಿ. ಒಂದು ಜಗತ್ತನ್ನೇ ಸೃಷ್ಟಿಸಿಬಿಟ್ಟಿದ್ದಾರೆ. ಅವರ ಈ ಮಾಲೆಯ ಕೇಂದ್ರ ಉದ್ದೇಶ ಹಿರಿಮೆಯ ದರ್ಶನ, ಸಂಸ್ಕೃತಿಯ ದರ್ಶನ, ಪರಿಪಕ್ವ ಮನಸ್ಸಿನವರು ಹೇಗೆ ನಡೆದುಕೊಳ್ಳುತ್ತಾರೆ ಎಂದು ಚಿತ್ರಿಸುವುದು. ಆದರೆ ಕೃತಿ ಇದಿಷ್ಟನ್ನೆ ಸಾಧಿಸಿದ್ದರೆ ಇಲ್ಲಿನ ವ್ಯಕ್ತಿಗಳು ಉದಾಹರಣೆಗಳಷ್ಟೇ ಆಗುತ್ತಿದ್ದರಲ್ಲದೆ ಜೀವಂತ ಮನುಷ್ಯರಾಗುತ್ತಿರಲಿಲ್ಲ. ಡಿ.ವಿ.ಜಿ.ಯ ಹಾಸ್ಯಪ್ರಜ್ಞೆ ನವಿರಾದುದು. ಅವರ ನಗೆ ನಿರ್ಮಲ ಮನಸ್ಸಿನಿಂದ ಬರುವುದು. ಇತರರನ್ನು ಕಂಡು ನಗುವಂತೆಯೇ ತಮ್ಮನ್ನು ಕಂಡೂ ನಗಬಲ್ಲರು. ಯಾವ ವ್ಯಕ್ತಿಯ ಅಥವಾ ಸನ್ನಿವೇಶದ ವಿನೋದದ ಮುಖವನ್ನು ಗುರುತಿಸಬಲ್ಲರು. ಸಂಸ್ಕೃತಿಯ ದರ್ಶನವಾದ ಈ ಮಾಲೆ ಅತಿಗಂಭೀರವಾಗಿ ಮಂಕಾಗದಿರುವುದಕ್ಕೆ ಇದೂ ಒಂದು ಕಾರಣ. ಮಾನವ ಸ್ವಭಾವದಲ್ಲಿ ಡಿ.ವಿ.ಜಿ. ಅವರಿಗಿರುವ ಆಸಕ್ತಿಯಿಂದಾಗಿ ಅವರು ಚಿತ್ರಿಸುವ ವ್ಯಕ್ತಿಗಳು ಜೀವಂತರಾಗುತ್ತಾರೆ. ಎಂ. ಜಿ. ವರದಾಚಾರ್ಯರು ವಕೀಲರು ; ಆದರೆ ತುರ್ತಾಗಿ ಮೊಕದ್ದಮೆಗೆ ಸಿದ್ಧಮಾಡಿ

ಕೊಳ್ಳುವುದನ್ನು ಬಿಟ್ಟು ಕಾವ್ಯವ್ಯಾಸಂಗದಲ್ಲಿ ರಾತ್ರಿ ಕಳೆಯುವರು. ಎಚ್. ವಿ. ನಂಜುಂಡಯ್ಯನವರು ಸಾತ್ತ್ವಿಕರು. ಕರುಣಾಳುಗಳು. ಒಂದು ಬಾರಿ ಅವರಿಗೆ ದೆಹಲಿಗೆ ಪ್ರಯಾಣ ಮಾಡುವಾಗ ಗೋದಾವರಿ ಸ್ನಾನ ಮಾಡಬೇಕೆಂದು ತೋರಿತು, ಬೆಳಗ್ಗೆ ಐದು ಗಂಟೆಗೆ ರೈಲು ನಾಸಿಕದ ಬಳಿ ಬಂದಾಗ ಅವರ ಕಾರ್ಯದರ್ಶಿ ಎಚ್ಚರಿಕೆ ಕೊಟ್ಟ. ಅವರು, "ಏನಯ್ಯ ಇಷ್ಟು ಚಳಿ? ಈಗ ರೈಲಿನಿಂದ ಇಳಿದರೆ ದೇವರಿಗೆ ಆಗುವುದು ಶಾಪ ಅಷ್ಟೆ. ದೆಹಲಿಯಲ್ಲಿ ಮಾಡೋ ಪಾಪಗಳನ್ನ ಮಾಡಿ ವಾಪಸ್ ಬರುವಾಗ ಸ್ನಾನ ಮಾಡೋಣ" ಎಂದರು. ವಾಪಸ್ ಬರುವಾಗ ನಾಸಿಕದ ಬಳಿ ಎಬ್ಬಿಸಿದಾಗ, "ಅಂಥ ಪಾಪವನ್ನೇನೂ ಮಾಡಲಿಲ್ಲವಲ್ಲ! ಈ ರಾತ್ರಿ ಇಲ್ಲೇಕೆ ಕೊರಗುವುದು!" ಎಂದುಬಿಟ್ಟರು. ಸಿ. ರಂಗಾಚಾರ್ಯರು ಪ್ರತಿಭಾವಂತ ದಿವಾನರು. 'ಇಂಡಿಯ ದೇಶದಲ್ಲೆಲ್ಲ ಮೊಟ್ಟಮೊದಲನೆಯ ಪ್ರಜಾರಾಜ್ಯವಾದಿ' ಎನ್ನುತ್ತಾರೆ ಡಿ.ವಿ.ಜಿ. ಆದರೆ, "ಅವರಿಗೆ ಯಾವಾಗಲೂ ಅವಸರ. ಕೋಟನ್ನು ದಗಲೆ ದಗಲೆಯಾಗಿ ಹಾಕುವರು. ಕೋಟಿನ ಗುಂಡಿಯನ್ನು ಹೆಚ್ಚುಕಡಮೆ ಹಾಕಿ ಬಿಡುವುದು ಅಪರೂಪವಲ್ಲ. ರುಮಾಲನ್ನಂತೂ ಕೈಗೆ ಬಂದಂತೆ ಸುತ್ತುವರು." ಶೇಷಾದ್ರಿ ಅಯ್ಯರ್ ಅತ್ಯಂತ ಪ್ರತಿಭಾವಂತರು, ಕಾರ್ಯಸಮರ್ಥರು. ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸಭಿಕರ ಬಾಯಿ ಮುಚ್ಚಿಸಿದ ರೀತಿಯನ್ನು ಕಂಡು ಬ್ರಿಟಿಷ್ ರೆಸಿಡೆಂಟ್ ಲೀ-ವಾರ್ನರ್ ಅವರನ್ನು ಅಭಿನಂದಿಸಿ, "ನೀವು ಸಭೆಯನ್ನು ನಡೆಸಿದ್ದು ಬಹಳ ಚೆನ್ನಾಗಿದೆ. ತಲೆಹರಟೆ ಹರಟುವ ಸಭಿಕರನ್ನು ಹಾಗೆ ಬಾಯಿ ಮುಚ್ಚಿಸಿ ಅದುಮಬೇಕು" ಎಂದು ಬರೆದ. ಶೇಷಾದ್ರಿ ಅಯ್ಯರ್ ಸಂಭ್ರಮದಿಂದ ತಮ್ಮ ಸಹೋದ್ಯೋಗಿ ಚಂಚಲರಾಯರಿಗೆ ಕಾಗದವನ್ನು ತೋರಿಸಿದರು. ಅವರು, "ಈ ಕಾಗದದಿಂದ ನೀವು ನಾಚಿಕೆಪಟ್ಟುಕೊಳ್ಳಬೇಕು," ಎಂದು ಹೇಳಿ. ಬ್ರಿಟಿಷ್ ಅಧಿಕಾರ ಸ್ಥಾಪನೆಯಾಗಬೇಕೆಂಬ ಹಂಬಲದ ಆತ ಹಾಗೆ ಬರೆದ, ಆದರೆ ಶೇಷಾದ್ರಿ ಅಯ್ಯರ್ ನಡೆದುಕೊಂಡ ರೀತಿ ತಪ್ಪು ಎಂದರು. ಆಗ ಶೇಷಾದ್ರಿ ಅಯ್ಯರಿಗೆ ತಮ್ಮ ಧೋರಣೆಯ ಅಸಂಗತತೆ ಅರ್ಥವಾಯಿತು. ಚಂಚಲರಾಯರ ಹಿತವಚನದಂತೆ, ಮರುದಿನ ಸಭೆಯ ಕ್ಷಮೆ ಬೇಡಿದರು. ಪಿ. ಎಸ್. ಶಿವಸ್ವಾಮಿ ಅಯ್ಯರ್ "ಯಾರನ್ನಾದರೂ ತಮ್ಮ ಮನೆಗೆ ಅತಿಥಿಯಾಗಬೇಕೆಂದು ಕರೆದರೆ, ಆ ಅತಿಥಿ ರೈಲಿನಿಂದ ಇಳಿದ ಘಳಿಗೆಯಿಂದ ಮತ್ತೆ ರೈಲು ಹತ್ತುವವರೆಗೆ ಆತನ ಎಲ್ಲ ಉಪಚಾರ ವ್ಯವಸ್ಥೆಗಳೂ ಶಿವಸ್ವಾಮಿ ಅಯ್ಯರ್ ಅವರ ಜವಾಬ್ದಾರಿ. ಅತಿಥಿ ಕೂಡುವ ಕೋಣೆಯಲ್ಲಿ ಆತನ ಉಪಯೋಗಕ್ಕಾಗಿ ಸ್ಟಾಂಪ್ ಅಂಟಿಸಿದ ಕವರುಗಳೂ ಕಾರ್ಡುಗಳೂ ಇರುತ್ತಿದ್ದವು. ಟವಲು, ಸೋಪು ಎಲ್ಲವೂ ಸಿದ್ಧವಾಗಿರುತ್ತಿದ್ದವು. ಆ ಅತಿಥಿ ಯಾವುದಕ್ಕೂ ಒದ್ದಾಡಬಾರದು. ಒಂದು ಕಾರು ಆತನ ಉಪಯೋಗಕ್ಕಾಗಿ ಇರುತ್ತಿತ್ತು...ಅತಿಥಿಯು ಏನನ್ನಾದರೂ ಕೊಂಡರೆ ಗುಮಾಸ್ತನು ಅದನ್ನು ಗುರುತು ಮಾಡಿಕೊಂಡು ಮನೆಗೆ ಹೋದ ಬಳಿಕ ಯಜಮಾನರಿಗೆ ತಿಳಿಸಬೇಕು. ಆ ಬಿಲ್ಲುಗಳನ್ನು ಶಿವಸ್ವಾಮಿ ಅಯ್ಯರ್ ಕೊಡುತ್ತಿದ್ದರು." ಅವರು ತಮ್ಮ ಪುಸ್ತಕವನ್ನು ಯಾರಿಗಾದರೂ ಎರವಲು ಕೊಡುವಾಗ ಷರತ್ತುಗಳು: (1) ನೀನು ಪುಸ್ತಕವನ್ನು

ಬೇರೆ ಯಾರಿಗೂ ಎರವಲು ಕೊಡಕೂಡದು ; ನನಗೇ ವಾಪಸ್ ಕೊಡಬೇಕು. (2) ಪುಸ್ತಕವನ್ನು ತುಂಬ ಅಗಲವಾಗಿ ತೆರೆಯಕೂಡದು. (3) ತೆರೆದಮೇಲೆ ಮುಚ್ಚುವುದಕ್ಕೆ ಮುಂಚೆ ಹಾಳೆಗಳ ಮೇಲೆ ಕುಳಿತಿರುವ ಧೂಳನ್ನು ಬಟ್ಟೆಯಿಂದ ಒರೆಸಬೇಕು. (4) ಪುಸ್ತಕದ ಮಾರ್ಜಿನುಗಳಲ್ಲಾಗಲಿ ಬೇರೆ ಭಾಗದಲ್ಲಾಗಲಿ ಗುರುತುಗಳನ್ನು ಮಾಡಕೂಡದು.

ಹೀಗೆ ಡಿ.ವಿ.ಜಿ. ತಾವು ಮೆಚ್ಚಿಕೊಂಡ ಜನರ ಒಳ್ಳೆಯ ಗುಣಗಳನ್ನು ಪಟ್ಟಿ ಮಾಡಿ ಉದಾಹರಣೆ ಕೊಡುವಷ್ಟರಲ್ಲಿ ಆಸಕ್ತರಾದವರಲ್ಲ, ಸಮಗ್ರ ವ್ಯಕ್ತಿತ್ವದಲ್ಲಿ ಅವರ ಆಸಕ್ತಿ. ತಾವು ಚಿತ್ರಿಸುವ ವ್ಯಕ್ತಿಯ ದೌರ್ಬಲ್ಯಗಳನ್ನೂ ವೈಚಿತ್ರ್ಯಗಳನ್ನೂ ಸ್ಪಷ್ಟವಾಗಿ ಗುರುತಿಸುತ್ತಾರೆ. ತಮ್ಮ ಮೆಚ್ಚಿನ ಡಾಕ್ಟರ್ ಅಚ್ಯುತರಾಯರಾಗಲಿ ಬೇರೆಯವರಾಗಲಿ ಆಡುವ ಅಶ್ಲೀಲ ಎನ್ನಿಸಬಹುದಾದ ಮಾತುಗಳನ್ನೂ ಸೂಚಿಸುತ್ತಾರೆ. ಸಮಗ್ರ ವ್ಯಕ್ತಿತ್ವ ಇತರರಿಗೆ ಹೇಗೆ ಕಾಣುತ್ತಿತ್ತು, ಅವರ ಮೇಲೆ ಯಾವ ಪ್ರಭಾವವನ್ನು ಬೀರುತ್ತಿತ್ತು ಎನ್ನುವುದನ್ನು ನಮ್ಮ ಅನುಭವಕ್ಕೆ ತಂದು ಕೊಡುತ್ತಾರೆ.

ಡಿ.ವಿ.ಜಿ. ಅವರ 'ಜ್ಞಾಪಕ ಚಿತ್ರಶಾಲೆ' ಒಳ್ಳೆಯ ಗುಣಗಳು–ಕೆಟ್ಟಗುಣಗಳನ್ನು ಬೆಟ್ಟಿಟ್ಟು ತೋರಿಸುವ ಕೃತಿಯಲ್ಲ, ಜೀವನವನ್ನು ಗಂಭೀರವಾಗಿ ತೆಗೆದುಕೊಂಡು ಎತ್ತರಕ್ಕೆ ಬೆಳೆದ ಚೇತನಗಳ ತವರು. ಶಿಪಪಿಚ್ಚೈ ಮೊದಲಿಯಾರರಿಂದ ಸರ್ ಎಂ. ವಿಶ್ವೇಶ್ವರಯ್ಯನವರವರೆಗೆ ಸಾಮಾನ್ಯವಾಗಿ ಇವರೆಲ್ಲ ತಮ್ಮ ಕೆಲಸವನ್ನು (ಅದು ಲೋಕದ ಕಣ್ಣಿನಲ್ಲಿ ಅಮುಖ್ಯವಾಗಿರಲಿ, ಮುಖ್ಯವಾಗಿರಲಿ) ನಿಷ್ಠೆಯಿಂದ ಮಾಡಿದವರು, ಆತ್ಮಗೌರವ–ಅಹಂಕಾರ ಇವುಗಳ ನಡುವಣ ಗೆರೆಯನ್ನು ಗುರುತಿಸಿ ಆ ಗೆರೆಯ ಮೇಲೆಯೇ ನಡೆದವರು. ಇವರು ಯಾವುದೇ ಕ್ಷೇತ್ರದವರಾಗಿರಬಹುದು, ಸಾಮಾಜಿಕ ಸ್ತರದವರಾಗಿರಬಹುದು, ತಮ್ಮ ಕಾರ್ಯದಲ್ಲಿ ಗೌರವವನ್ನಿಟ್ಟುಕೊಂಡು ನಿಷ್ಠೆಯಿಂದ ಬಾಳಿದವರು. ಹೃದಯವಂತಿಕೆಯವರು, ಸರ್ ಎಂ. ವಿ., ಎಂ. ವೆಂಕಟಕೃಷ್ಣಯ್ಯನವರು, ಕೆ. ಸಿ. ಪುಟ್ಟಣ್ಣಶೆಟ್ಟರು ಮೊದಲಾದವರ ಹಿರಿಮೆಯನ್ನು ಕನ್ನಡಿಗರೆಲ್ಲ ಬಲ್ಲರು. ಅಷ್ಟು ಪ್ರಸಿದ್ಧರಲ್ಲದವರ ಹಿರಿಮೆಯೂ ಕಡಮೆಯಲ್ಲ. ಇಲ್ಲಿ ಪಾಠ ಹೇಳುವ ಒಬ್ಬ ವಿದ್ವಾಂಸ ಶ್ರೇಷ್ಠರಾಗಿದ್ದ ವಿರೂಪಾಕ್ಷ ಶಾಸ್ತ್ರಿಗಳಿಗೆ ಅಚ್ಚಿನ ಪುಸ್ತಕಗಳಲ್ಲಿ ಗೌರವ ಕಡಮೆ. ಆದರೆ ಒಂದು ಪ್ರಸಂಗ ಸ್ಮರಣಾರ್ಹ. ಡಿ.ವಿ.ಜಿ. ಅವರೂ ಇತರ ಹಲವರೂ ಅವರ ಬಳಿಗೆ ಪಾಠಕ್ಕೆ ಹೋಗುತ್ತಿದ್ದರು. ಒಂದು ದಿನ ಡಿ.ವಿ.ಜಿ. ಕೈಯಲ್ಲಿದ್ದ ಪುಸ್ತಕವನ್ನು ನೆಲದ ಮೇಲಿಟ್ಟರು. ವಿದ್ವಾಂಸರು ಹೇಳುತ್ತಿದ್ದ ವಾಕ್ಯ ಅರ್ಧಕ್ಕೇ ನಿಂತಿತು. ಅವರು ಹೇಳಿದರು, "ಪುಸ್ತಕವನ್ನು ಕೈಯಲ್ಲಿ ತೆಗೆದುಕೊಳ್ಳೋಣವಾಗಲಿ. ನಾಳೆಯಿಂದ ವ್ಯಾಸಪೀಠ ಇಡೋಣವಾಗುತ್ತದೆ, ಪುಸ್ತಕವನ್ನು ಅದರ ಮೇಲೆ ಇಡಬಹುದು. ಪುಸ್ತಕವನ್ನು ನೆಲದ ಮೇಲೆ ಇಟ್ಟರೆ ಪಾಠ ನಿಂತುಹೋಗುತ್ತದೆ." ಇಲ್ಲಿನ ಒಬ್ಬ ಮಂಡಿ ಹರಿಯಣ್ಣ, ಒಬ್ಬ ಆರ್ಮುಗಂ ಮೊದಲಿಯಾರ್ ಯಾವ ಸಮಾಜಕ್ಕೂ ಭೂಷಣರು. ಒಬ್ಬ ಮಂಡಿ

ಹರಿಯಣ್ಣನವರ ಮಾತನ್ನು ಇಡೀ ಪೇಟೆಯ ವರ್ತಕರು ಗೌರವದಿಂದ ಕೇಳುತ್ತಿದ್ದುದು ಅವರಿಗೆ ಅಧಿಕಾರವಿತ್ತೆಂದಲ್ಲ, ಅವರ ಔದಾರ್ಯದಿಂದ. ಅವರ ನೈತಿಕ ಹಿರಿಮೆಯಿಂದ. ಅವರ ಆದರ್ಶ—ಬಾಯಿಮಾತಿನ ಆದರ್ಶವಲ್ಲ, ಕಾರ್ಯಗತವಾದ ಆದರ್ಶ—ಯುದ್ಧಕಾಲದಲ್ಲಿ ಅನುಚಿತವಾದ ರೀತಿಯಲ್ಲಿ ಲಾಭಮಾಡುವುದಿಲ್ಲ ಎಂಬ ನಿರ್ಧಾರದಲ್ಲಿ ಪ್ರಕಟವಾಯಿತು. ಹಾಗೆಂದು ಇತರರಿಗಿಂತ ತಾವು ಶ್ರೇಷ್ಠ ಎಂಬ ಭಾವನೆ ಅವರದಲ್ಲ. ಅವರ ಮಾತು ಇದು : "ನನಗೆ ದೇವರು ಕೊಟ್ಟಿರುವುದು ಸಾಕು, ಸ್ವಾಮಿ. ನಮ್ಮ ಹಿರಿಯರು ಹಾಕಿದ ನಿಯಮಗಳನ್ನು ನಾವು ಬಿಡುವುದಕ್ಕಾಗುವುದಿಲ್ಲ. ಅಷ್ಟರಲ್ಲಿ ಎಷ್ಟು ಲಾಭ ಬಂದರೆ ಅಷ್ಟು ಸಾಕು. ಬೇರೆಯ ಜನ ಅವರ ದಾರಿಯಲ್ಲಿ ವ್ಯಾಪಾರಮಾಡಿಕೊಂಡು ಸಂಪಾದಿಸಿಕೊಳ್ಳಲಿ. ಅವರವರ ಧರ್ಮ ಅವರದು." ಇಲ್ಲಿನ ಹಿರಿಯರು ಬಯಸಿದ್ದು ಪ್ರಾಪಂಚಿಕ ಸಂಪತ್ತಲ್ಲ, (ಹಾಗೆಂದು ಅವರೆಲ್ಲ ವಿರಕ್ತರು ಎಂದಲ್ಲ) ನೈತಿಕ ಸಂಪತ್ತನ್ನು, ಸಂತೋಷದ ಸಂಪತ್ತನ್ನು. ಹೆಚ್ಚು ಜನ ಹೆಸರು ಕೇಳಿರದ ಒಬ್ಬ ವ್ಯಕ್ತಿ ಇದರಲ್ಲಿ ಬಹುಮಂದಿಯ ದೃಷ್ಟಿಯನ್ನು ಪ್ರತಿನಿಧಿಸುತ್ತಾರೆ. ನರಸಿಂಹಮೂರ್ತಿ ಎಂಬ ವಿದ್ವಾಂಸರು, ಸಜ್ಜನರು, ಬೆಂಗಳೂರಿನಲ್ಲಿದ್ದವರು. ಪ್ರತಿ ಸಂಜೆಯನ್ನೂ ವರದಾಚಾರ್ಯರು, ಭೀಮರಾಯರು, ಡಿ.ವಿ.ಜಿ. ಮೊದಲಾದ ವಿವೇಚನೆಯುಳ್ಳ, ವಿದ್ವತ್ತುಳ್ಳ ಸ್ನೇಹಿತರೊಡನೆ ಕಳೆಯುವರು. ಅವರ ಕೆಲವರು ಸ್ನೇಹಿತರು ಅವರಿಗೆ ದೊಡ್ಡ ಕೆಲಸ ಕೊಡಿಸಲು ಪ್ರಯತ್ನಿಸಿದರು. ಅವರು ಈ ಕೆಲಸವಾದರೆ ಮಡಿಕೇರಿಗೋ ಬಳ್ಳಾರಿಗೋ ಹೋಗಬೇಕಾಗುತ್ತಿತ್ತು. ಅವರು ಕೆಲಸ ಬೇಡ ಎಂದರು. ಇದೇನು ಹುಚ್ಚು ಎಂದು ಸ್ನೇಹಿತರು ಪ್ರಶ್ನಿಸಿದರೆ ಅವರ ಉತ್ತರ. "ಬಳ್ಳಾರಿಯಲ್ಲಿ ಮಡಿಕೇರಿಯಲ್ಲಿ ವರದಾಚಾರ್ಯರು ಸಿಕ್ಕುತ್ತಾರೆಯೆ ? ಗುಂಡಪ್ಪ ? ಭೀಮರಾಯರು ? ಇವರ ಸ್ನೇಹ, ಇವರ ವಾಗ್ವಾದ ಇವೇ ನನಗೆ ಸಂತೋಷ". ಬಾಳಿನಲ್ಲಿ ಯಾವಯಾವುದಕ್ಕೆ ಎಷ್ಟೆಷ್ಟು ಬೆಲೆ ಎಂದು ತಿಳಿದ ವಿವೇಕಯುತ ಮನಸ್ಸು ಇದು.

ಡಿ.ವಿ.ಜಿ. ಈ ಹಿರಿಮೆಯ ವೃಕ್ಷಗಳಿಗೆ ನೆಲನೀರು ಒದಗಿಸಿದ ಸಮಾಜವನ್ನೆ ಸೃಷ್ಟಿಮಾಡಿಬಿಡುತ್ತಾರೆ. ಬೆಂಗಳೂರಿನಲ್ಲಿ ಮತ್ತು ಹಿಂದಿನ ಮೈಸೂರಿನಲ್ಲಿ ಕೆಲಸ ಮಾಡಿದ ಸಂಸ್ಥೆಗಳು, ಈ ಸಂಸ್ಥೆಗಳನ್ನು ನಡೆಸಿದ ಸೇವಾನಿಷ್ಠರು, ಹೋಟೆಲನ್ನು ಸ್ಥಾಪಿಸಿದ ಆವನಿ ನರಸಿಂಗರಾಯರು ಮತ್ತು ವೆಂಕಣ್ಣನವರಂತೆ ಹೊಸ ಹಾದಿ ತುಳಿದವರು ಇವರೆಲ್ಲರ ಮೂಲಕ ಮತ್ತು ನೇರವಾದ ವಿವರಣೆಯಿಂದ ಈ ಸಮಾಜವನ್ನು ಸೃಷ್ಟಿಸುತ್ತಾರೆ. ಹೀಗಾಗಿ ಈ ಮಾಲೆಯ ಜೀವಂತ ವ್ಯಕ್ತಿಗಳು ಜೀವಂತ ಸಾಮಾಜಿಕ ಸಂದರ್ಭದಲ್ಲಿ ನಿಲ್ಲುತ್ತಾರೆ, ಕೆಲಸ ಮಾಡುತ್ತಾರೆ. ಇಂತಹ ಬರಹ ಬಹು ಸುಲಭವಾಗಿ 'ಸೆಂಟಿಮೆಂಟಲ್' ಅಥವಾ ಅತಿಭಾವುಕ ಆಗಬಹುದು. ಆದರೆ ಡಿ.ವಿ.ಜಿ. ಧೀಮಂತರು. ಅವರ ಚಿಂತನಶೀಲತೆ ಅತಿಭಾವುಕತೆಗೆ ಅವಕಾಶ ನೀಡದು. ಹೃದಯ-ಮಿದುಳಿರಡರ ಮಹತ್ವವನ್ನೂ ಅರಿತ ಮನಸ್ಸಿನ ಸೃಷ್ಟಿ ಇದು. ಪ್ರಜಾಯುಗ, ಸ್ವರಾಜ್ಯ, ಅವಿಭಕ್ತ ಕುಟುಂಬ ಮೊದಲಾದ ವಿಷಯಗಳನ್ನು ಕುರಿತ

ಭಾಗದಲ್ಲಿ ಅವರ ಚಿಂತನೆಯ ಸಮತೋಲನೆ ಎದ್ದುಕಾಣುತ್ತದೆ. ತಮಗೆ ಸರಿ ತೋರದ್ದನ್ನು ಹೇಳುವಾಗಲೂ ಅದನ್ನು ಸೂಚಿಸಿ, ಆ ವ್ಯಕ್ತಿಯ ಪರವಾಗಿ ಏನು ಹೇಳಬಹುದೋ ಅದನ್ನು ಹೇಳತ್ತಾರೆ. ವೈಯಕ್ತಿಕವಾಗಿ ತಮಗೆ ತೊಂದರೆಯಾಗಿದ್ದರೆ, ತಮ್ಮ ವಿಷಯ ಸಲ್ಲದ ಮಾತನ್ನಾಡಿದ್ದರೆ, "ಅದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾಗಿಲ್ಲ" ಮುಂತಾಗಿ ತೇಲಿಸುತ್ತಾರೆ. ಇದೊಂದು ಶ್ರೀಮಂತವಾದ ಅಪೂರ್ವ ವ್ಯಕ್ತಿತ್ವ. ಡಾ॥ ಅಚ್ಯುತರಾಯರು ಎನ್ನುವವರನ್ನು ಕುರಿತು ಡಿ.ವಿ.ಜಿ. ಹೇಳುತ್ತಾರೆ: "ಜ್ಞಾನಿಯಾದವನು ಲೋಕವಿಷಯದಲ್ಲಿ ಬೇಸರಪಡಲಾರನೆಂದು (ತತೋ ನ ವಿಜುಗುಪ್ಸತೇ) ಉಪನಿಷತ್ತು ಹೇಳುತ್ತದೆ. ಅಚ್ಯುತರಾಯರು ವೇದಾಂತ ಗ್ರಂಥಗಳನ್ನೋದಿರಲಿಲ್ಲ. ಆದರೂ ಅವರು ಲೋಕವಿಷಯದಲ್ಲಿ ಜುಗುಪ್ಸೆ ಮಾಡಿಕೊಂಡಿರಲಿಲ್ಲ. ತಾವು ನಗುಮುಖದಿಂದಿದ್ದು ಲೋಕದಲ್ಲಿ ನಗು ಮುಖ ಕಾಣಬೇಕೆಂದು ಆಶಿಸಿದ್ದವರು ಅವರು. ಹೂವನ್ನು ಕಂಡಾಗ ಅವರ ಕಣ್ಣು ಅರಳುತ್ತಿತ್ತು. ಅದು ಕೈಗೆ ಎಟಕಿದಾಗ ಅವರ ತುಟಿ ಬಿರಿಯುತ್ತಿತ್ತು. ಹೀಗೆ ಎರಡು ಕೈಗಳಿಂದಲೂ ಜೀವನದ ಮಧುವನ್ನು ಸವಿದವರು ಅವರು. ಲೋಕದ ಸ್ವಾರಸ್ಯಗಳನ್ನು ಹೀರುವುದರಲ್ಲಿ ಅವರು ಹುಸಿನಾಚಿಕೆ ಪಟ್ಟವರಲ್ಲ, ಈಶ್ವರನು ಒಂದು ಕಡೆ ನಾಲಗೆಯನ್ನೂ ಇನ್ನೊಂದು ಕಡೆ ಜೇನನ್ನೂ ಸೃಷ್ಟಿಮಾಡಿರುವುದು ಮನುಷ್ಯನು ಅವೆರಡನ್ನೂ ಜೊತೆಗೂಡಿಸಿಕೊಳ್ಳಬೇಕೆಂದೇ ಎಂದು ಅವರು ನಂಬಿದ್ದರು. ವಿರಕ್ತಿಯ ನಟನೆಯಲ್ಲಿ ಅವರಿಗೆ ಸಹನೆಯಿರಲಿಲ್ಲ—" ಇದೆಲ್ಲ ಡಿ.ವಿ.ಜಿ. ಅವರಿಗೇ ಅನ್ವಯವಾಗುವ ಮಾತುಗಳು. ಪಾಪಲೇಪವಿಲ್ಲದ ಯಾವ ನಿರ್ಮಲ ಸಂತೋಷವನ್ನೂ ದೂರವಿಟ್ಟವರಲ್ಲ ಅವರು. ಮನುಷ್ಯರು ಆನಂದಪುತ್ರರು, ಬಾಳು ಆನಂದಮಯವಾಗಿರಬೇಕು ಎಂದೇ ನಂಬಿದವರು. ಪ್ರೀತಿ, ಸ್ನೇಹ, ಸಂಗೀತ, ಮಾತು ಎಲ್ಲದರ ಸಂತೋಷವನ್ನೇ ಬಯಸಿದವರು. ಅಚ್ಯುತರಾಯರನ್ನು ಕುರಿತ ವಿಭಾಗದಲ್ಲಿ ಮತ್ತೊಂದು ಸಂಗತಿ ಬರುತ್ತದೆ. ಅಚ್ಯುತರಾಯರ ರಸಿಕತೆ ಎಲ್ಲೆ ಮೀರುತ್ತದೆ ಎಂಬ ಮಾತನ್ನು ಜನ ಆಡಿಕೊಳ್ಳುತ್ತಿದ್ದರೆಂದು ಕಾಣುತ್ತದೆ, ಆ ಮಾತು ಅವರ ಕಿವಿಗೂ ಬಿದ್ದಿತ್ತು. ಮತ್ತೊಬ್ಬರು ಅದೇ ಬಗೆಯವರನ್ನು ಜನ ಗೌರವಿಸುತ್ತಿದ್ದರು. ಒಮ್ಮೆ ಅಚ್ಯುತರಾಯರು ಡಿ.ವಿ.ಜಿ.ಗೆ 'ಅವರ ಮನೆಗೆ ಹೋಗಿ ನೋಡಿಕೊಂಡು ಬನ್ನಿ, ಏನು ನಡೆಯುತ್ತಿದೆಯೋ' ಎಂದರಂತೆ. ಡಿ.ವಿ.ಜಿ. ಕೊಟ್ಟ ಉತ್ತರ ಅವರ ಸ್ವಭಾವಕ್ಕೆ ಕನ್ನಡಿ: "ನನಗೆ ಅಂಥಾ ರುಜುವಾತೇನೂ ಬೇಕಾಗಿಲ್ಲ. ಪುಣ್ಯಪಾಪ ವಿಮರ್ಶೆಗೆ ನಾನು ಹೋಗತಕ್ಕವನೇ ಅಲ್ಲ. ಯಾವ ಯಾವ ಜೀವಕ್ಕೆ ಎಲ್ಲೆಲ್ಲಿ ನೆಮ್ಮದಿಯೋ ಯಾರು ಕಂಡವರು? ದೇವರು ಮಾಡಬೇಕಾದ ಕೆಲಸಕ್ಕೆ ನಾನು ಹೇಗೆ ಕೈ ಹಾಕಲಿ?"

ಲೇಖನದ ಪ್ರಾರಂಭದಲ್ಲಿ ಸಾಹಿತ್ಯವು Life seen through a temperament ಎಂಬ ಮಾತನ್ನು ಉಲ್ಲೇಖಿಸಿದ್ದೆ. 'ಜ್ಞಾಪಕ ಚಿತ್ರಶಾಲೆ' ಇಂತಹ ಉದಾರ, ಶ್ರೀಮಂತ, ನಿರ್ಮಲ ಸಂತೋಷ ಪಕ್ಷಪಾತಿ temperament ಕಂಡ ಬಾಳು.

'ಜ್ಞಾಪಕ ಚಿತ್ರಶಾಲೆ'ಯಲ್ಲಿ ಒಂದೆರಡು ಮಿತಿಗಳು ಕಾಣಬಹುದು. ಇಲ್ಲಿನ ಸಾಮಾಜಿಕ ಆವರಣ ಮೂರ್ತವಾಗುತ್ತದೆ ಎನ್ನುವ ಮಾತನ್ನು ಆಗಲೇ ಹೇಳಿದೆ. ಆದರೆ ಈ ಸಮಾಜದ ವಿಶ್ಲೇಷಣೆ, ಸಾಮಾಜಿಕ ಬದಲಾವಣೆಗಳಿಗೆ ವಿಧಾನಗಳ ವಿಶ್ಲೇಷಣೆ ಇವು ಹೆಚ್ಚಾಗಿ ದೊರೆಯುವುದಿಲ್ಲ. ಸಾಮಾಜಿಕ ಬದಲಾವಣೆಗಳಿಗೆ ಚಾಲನೆ ಕೊಡುವ ಶಕ್ತಿಗಳು ಯಾವುವು ? ಇವನ್ನು ಚುರುಕುಗೊಳಿಸುವುದು ಹೇಗೆ ? ಇಂತಹ ಪ್ರಶ್ನೆಗಳು ಇಲ್ಲಿ ಪ್ರವೇಶಿಸುವುದಿಲ್ಲ. ಇಲ್ಲಿ ಗಮನವೆಲ್ಲ ವ್ಯಕ್ತಿಯ ವಿಕಸನ, ಪರಿಪಕ್ವತೆ ಇವುಗಳ ಮೇಲೆ. ಎರಡನೆಯದಾಗಿ, ವ್ಯಕ್ತಿಯ ಜೀವನದಲ್ಲೂ ದುಷ್ಟತನದ ಸಮಸ್ಯೆ ಇಲ್ಲಿ ಹೆಚ್ಚಾಗಿ ಸುಳಿಯುವುದಿಲ್ಲ. ದುಷ್ಟತನದಿಂದ ದೂರವಿರಬೇಕೆಂದರೂ ದುಷ್ಟತನ ದೂರ ನಿಲ್ಲುವುದಿಲ್ಲ. ಪರ್ಣಕುಟಿಯಲ್ಲಿರುವ ಸೀತೆಯನ್ನು ಅರಸಿಕೊಂಡು ಬರುತ್ತಾನೆ ರಾವಣ, ಗೋಕುಲದಲ್ಲಿರುವ ಕೃಷ್ಣನಿಗೆ ಕಂಸ ಬರ ಹೇಳುತ್ತಾನೆ. ಬಾಳಿನಲ್ಲಿ ದುಷ್ಟತನದೊಂದಿಗೆ ವ್ಯವಹರಿಸುವುದು ಹೇಗೆ ? ಈ ಸಮಸ್ಯೆಯಾದರೂ 'ಜ್ಞಾಪಕ ಚಿತ್ರಶಾಲೆ'ಯ ಜಗತ್ತಿನಲ್ಲಿ ಮುಖ್ಯವಾಗುವುದಿಲ್ಲ.

ಆದರೆ ಪ್ರತಿಕೃತಿಯಲ್ಲಿ ಎಲ್ಲವನ್ನೂ ನಿರೀಕ್ಷಿಸಲಾಗುವುದಿಲ್ಲ. 'ಜ್ಞಾಪಕ ಚಿತ್ರಶಾಲೆ' ಒಂದು ಅಪೂರ್ವ, ಶ್ರೀಮಂತ ಸೃಷ್ಟಿ.

ಸಾಹಿತ್ಯೋಪಾಸಕರು

ಕೆ. ನರಸಿಂಹಮೂರ್ತಿ

‘ಸಾಹಿತ್ಯೋಪಾಸಕರು’ ಡಿ.ವಿ.ಜಿ. ಅವರ ‘ಜ್ಞಾಪಕ ಚಿತ್ರಶಾಲೆ’ ಎಂಬ ಎಂಟು ಸಂಪುಟಗಳಲ್ಲಿ ಮೂರನೆಯದು. ಇದರಲ್ಲಿ ಡಿ.ವಿ.ಜಿ. ಸುಮಾರು ಮೂವತ್ತು ಮಂದಿ ಸಾಹಿತ್ಯ ಸೇವಕರ ಜೀವಿತದೊಂದಿಗೆ ಹಾಸುಹೊಕ್ಕಾಗಿ ಬೆರೆತಿದ್ದ ನಿಃಸ್ವಾರ್ಥ ಸಾಹಿತ್ಯ ಸೇವೆಯನ್ನು ಸ್ಮರಿಸಿದ್ದಾರೆ. ಇವರಲ್ಲಿ ಹಲವರು “ಸಾಹಿತ್ಯ ಪರಿಷತ್ತಿನ ವೃಕ್ಷವನ್ನವಲಂಬಿಸಿಕೊಂಡು ಅದರ ಸುತ್ತಮುತ್ತ, ಹೆಚ್ಚಾಗಿಯೋ ಕೊಂಚವಾಗಿಯೋ ಅವರವರ ಶಕ್ತಿಸಾಮರ್ಥ್ಯಗಳಿಗೆ ಸಾಧ್ಯವಾದಂತೆ ದುಡಿದ ಸಾಹಿತ್ಯಸೇವಕರು”. ಇಂಥವರಲ್ಲಿ, ಡಿ.ವಿ.ಜಿ. ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ, ಅವಕ್ಕೂ ಮುಂಚೆ, ಪರಿಷತ್ತಿನ ಉಪಾಧ್ಯಕ್ಷರಾಗಿಯೋ ಕಾರ್ಯದರ್ಶಿಗಳಾಗಿಯೋ , ಕೋಶಾಧಿಕಾರಿಗಳಾಗಿಯೋ, ಕಾರ್ಯಸಮಿತಿಯ ಸದಸ್ಯರಾಗಿಯೋ, ಸಮ್ಮೇಳನಾಧ್ಯಕ್ಷರಾಗಿಯೋ, ಸಾಹಿತ್ಯವೆ, ಸಾಹಿತ್ಯ ಪರಿಷತ್ತಿನ ಅಭ್ಯುದಯಕ್ಕಾಗಿ ದುಡಿದವರು. ಇವರ ಪೈಕಿ, ಲೇಖಕರು ಗುರುತಿಸಿರುವಂತೆ, “ವಿಸ್ತಾರವಾಗಿ, ವಿವರವಾಗಿ ನಿರೂಪಿತವಾಗಿರುವ ವ್ಯಕ್ತಿಚಿತ್ರ ಬೆಳ್ಳಾವೆ ವೆಂಕಟನಾರಣಪ್ಪನವರದು. ಮುನ್ನೂರು ಪುಟಗಳ ಈ ಪುಸ್ತಕದ ಎಂಬತ್ತು ಪುಟಗಳು ಅವರ ಸ್ವಭಾವಚಿತ್ರಣಕ್ಕೆ ಮೀಸಲು. ಹಾಗೆಯೇ ಅತ್ಯಂತ ಆತ್ಮೀಯವಾಗಿರುವ ವ್ಯಕ್ತಿಚಿತ್ರ ಟಿ. ಎಸ್. ವೆಂಕಣ್ಣಯ್ಯನವರದು.” ಇವರ ಬಗೆಗೆ, ಮತ್ತು ಬಸವಪ್ಪ ಶಾಸ್ತ್ರಿಗಳು, ಎಂ. ಎ. ರಾಮಾನುಜಯ್ಯಂಗಾರ್, ಬಿ.ಎಂ.ಶ್ರೀ., ಎ.ಆರ್.ಕೃ., ಪಂಜೆ ಮಂಗೇಶರಾವ್, ಡಿ.ಸಿ. ಸುಬ್ಬರಾಯಪ್ಪ, ಇವರುಗಳ ಅಂತರಂಗಶುದ್ಧಿ ಬಹಿರಂಗ ಘನತೆಗಳನ್ನು ಎತ್ತಿಕಾಣಿಸುವ ಘಟನೆಗಳ ಮೇಲೆ ಬೆಳಕು ಚೆಲ್ಲುವ ಗ್ರಂಥಭಾಗಗಳನ್ನು ಲೇಖಕರು ಪರಿಚಯ ಮಾಡಿಕೊಟ್ಟಿದ್ದಾರೆ. ಚಿತ್ರಿತರಾಗಿರುವವರ ಗುಣ ಶೀಲಸ್ವಭಾವಗಳ ವೈಶಿಷ್ಟ್ಯಗಳೇನು ಎಂಬುದನ್ನು ಸೂಚಿಸಿದ್ದಾರೆ.

‘ಜ್ಞಾಪಕ ಚಿತ್ರಶಾಲೆ’ ಕನ್ನಡದ ಅಪೂರ್ವ ಗ್ರಂಥಗಳಲ್ಲೊಂದು. ಈ ಶತಕದ ಮೊದಲ ನಾಲ್ಕೈದು ದಶಕಗಳ ಸುಸಂಸ್ಕೃತ ಜನಜೀವನಕ್ಕೆ ಡಿ.ವಿ.ಜಿ.

ಒಡಿದ ಚೆಲುವಾದ ಕನ್ನಡಿ. ನಾಡು ನುಡಿಗಳ ಇತಿಹಾಸದ ಈ ಪರ್ವಕಾಲದ ವಿವಿಧ ಕಾರ್ಯಕ್ಷೇತ್ರಗಳ ಪ್ರತಿಭಾಸಂಪನ್ನ ಕನ್ನಡಿಗರು ಹಲವರ ವ್ಯಕ್ತಿಚಿತ್ರಗಳು ಇಲ್ಲಿ ಸೇರಿವೆ. ಸೃಜನಶೀಲತೆಯಲ್ಲಿಯೂ ಪಾಂಡಿತ್ಯದಲ್ಲಿಯೂ ಸ್ವಭಾವ ಸರಸತೆ ಘನತೆ ಪಾರಿಶುದ್ಧ್ಯಗಳಲ್ಲಿಯೂ ಅವರು ಯಾರಿಗೂ ಕಡಿಮೆಯಲ್ಲದ ಡಿ.ವಿ.ಜಿ. ತಮ್ಮ ಸ್ನೇಹ ವಿಶ್ವಾಸ ಗೌರವಗಳನ್ನು ಸಂಪಾದಿಸಿದ್ದ ಮತ್ತು ನಾಡು ನುಡಿಗಳಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಹಿರಿಯರನ್ನೂ ಸಮಸ್ಕಂಧರನ್ನೂ ಅವರ ನೆನಪು ಸದಾ ಹಸಿರಾಗಿರುವಂತೆ ಇಲ್ಲಿ ಪರಿಚಯಿಸಿದ್ದಾರೆ. ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ಯಾವ ಸಂಸ್ಥೆ ನಿಲ್ಲುವುದಕ್ಕೂ ಅದರ ಉದ್ದಿಷ್ಟ ಕಾರ್ಯಗಳನ್ನು ಸಾಧಿಸುವುದಕ್ಕೂ ಮುಖ್ಯವಾಗಿ ಬೇಕಾದುದು ವ್ಯಕ್ತಿಸತ್ತ್ವ. ನಾಯಕಶ್ರೇಷ್ಠರ ಜೀವನಚರಿತ್ರೆಗಳೇ ಇತಿಹಾಸ ಎನ್ನುವ ಕಾರ್ಲೈಲ್‌ನ ಅಭಿಪ್ರಾಯವೇ ಡಿ.ವಿ.ಜಿ. ಅವರದ್ದೂ. ಇಂಥ ನಿಸ್ಪೃಹ ದಕ್ಷ ವ್ಯಕ್ತಿಗಳ ಹಲವಾರು ಮಾದರಿಗಳನ್ನು ಡಿ.ವಿ.ಜಿ. ತಮ್ಮ ನೆನಪಿನ ನಿಧಿಯಿಂದ ಒದಗಿಸಿದ್ದಾರೆ. ಬಾಹ್ಯಘಟನೆಗಳನ್ನು ಆವಶ್ಯಕವಾದಾಗಲೆಲ್ಲಾ ನಮ್ಮ ಗಮನಕ್ಕೆ ತಂದರೂ ಡಿ.ವಿ.ಜಿ. ಮುಖ್ಯವಾಗಿ ನಿರೂಪಿಸುವುದು ಅವರ ಅಂತರಂಗವನ್ನು. ಖಾಲಿ ಗುಣವಾಚಕಗಳನ್ನು ಬಳಸುವುದರ ನಿರರ್ಥಕತೆಯನ್ನು ಬಲ್ಲ ಡಿ.ವಿ.ಜಿ: ಶೀಲ ನಿದರ್ಶಕಗಳಾದ ಘಟನೆಗಳಿಂದ ತಮ್ಮ ವ್ಯಕ್ತಿಚಿತ್ರಗಳನ್ನು ಜೀವಂತಗೊಳಿಸುತ್ತಾರೆ, ಆ ವ್ಯಕ್ತಿಗಳ ಮಹತ್ತ್ವವನ್ನು ಮನವರಿಕೆ ಮಾಡಿಕೊಡುತ್ತಾರೆ. ತಮ್ಮ 'ಮಂಕುತಿಮ್ಮನ ಕಗ್ಗ', ಭಗವದ್ಗೀತೆಯ ಜೀವನ ಧರ್ಮಯೋಗವ್ಯಾಖ್ಯೆ ಮತ್ತು 'ಸಂಸ್ಕೃತಿ' ಮುಂತಾದ ಇತರ ಕೃತಿಗಳಲ್ಲಿ ಯಾವ ಮೌಲ್ಯಗಳನ್ನು ನಿರೂಪಿಸಿದ್ದಾರೋ ಆ ಮೌಲ್ಯಗಳಿಗೆ ದೃಷ್ಟಾಂತಪ್ರಾಯವಾಗಿ ಡಿ.ವಿ.ಜಿ. ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಆ ಮೌಲ್ಯಗಳ ಬೆಳಕಿನಲ್ಲಿ ಬಾಳಿದ ಮಹನೀಯರೊಡನೆ ತಮಗಾದ ಅನುಭವಗಳನ್ನು ತುಂಬಾ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಈ ಗ್ರಂಥದ ಪುಟಗಳಲ್ಲಿ ಕಳೆದುಹೋದ ಕಾಲ ಮರಳುತ್ತದೆ, ಅಳಿದ ಹಿರಿಯರು ಕಲ್ಪನೆಯ ಕಣ್ಣ ಮುಂದೆ ಸುಳಿಯುತ್ತಾರೆ, ಉಳಿಯುತ್ತಾರೆ.

'ಸಾಹಿತ್ಯೋಪಾಸಕರು' 'ಜ್ಞಾಪಕ ಚಿತ್ರಶಾಲೆ'ಯ ಮೂರನೆಯ ಸಂಪುಟ. ಕನ್ನಡದ ಪುನರುಜ್ಜೀವನ ಕಾಲದ ಸರಸ ಸುಂದರ ಚಿತ್ರಗಳು ಇಲ್ಲಿ ನಮ್ಮ ಕಣ್ಣ ಮುಂದೆ ಹಾಯುತ್ತವೆ. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಸಂಬಂಧಿಸಿದ ಮತ್ತು ಅದರ ಆರಂಭದ ದಶಕಗಳಲ್ಲಿ ಅದನ್ನು ನಡೆಸಿದ ಹೆಚ್. ವಿ. ನಂಜುಂಡಯ್ಯನವರು, ಬೆಳ್ಳಾವೆ ವೆಂಕಟನಾರಣಪ್ಪನವರು ಮತ್ತು ಬಿ. ಎಂ. ಶ್ರೀಕಂಠಯ್ಯನವರು ಮುಂತಾದವರ ಸುತ್ತ 'ಸಾಹಿತ್ಯೋಪಾಸಕರು' ಬೆಳೆದಿದೆ. ಕನ್ನಡದ ಪುನರುತ್ಥಾನದ ಸಮಯದಲ್ಲಿ ಅದಕ್ಕಾಗಿ ತಮ್ಮ ಜೀವನವನ್ನೇ ಮುಡುಪಿಟ್ಟ ರಾ. ನರಸಿಂಹಾಚಾರ್ಯರು, ಎಂ. ಎ. ರಾಮಾನುಜಯ್ಯಂಗಾರ್ಯರು. ಬಸವಪ್ಪ ಶಾಸ್ತ್ರಿಗಳು. ಚೆ. ವಾಸುದೇವಯ್ಯನವರು, ಆಲೂರು ವೆಂಕಟರಾಯರು ಮತ್ತು ಎಂ. ಎಸ್. ಪುಟ್ಟಣ್ಣನವರು ಮುಂತಾದವರ ಮತ್ತು ಕಿಟ್ಟೆಲ್ ಮತ್ತು ರೈಸ್‌ರಂತಹ ಕನ್ನಡಕ್ಕೆ

ಅವ್ರೋಘ ಸೇವೆ ಸಲ್ಲಿಸಿದ ಐರೋಪ್ಯರ ಚಿತ್ರಗಳೂ ಇಲ್ಲಿ ಸೇರಿವೆ. ಪ್ರಸ್ತಾವನೆಯಲ್ಲಿ ಡಿ.ವಿ.ಜಿ. ಹೇಳುತ್ತಾರೆ : 'ಅವರು ಸಾರಸ್ವತ ಕಾರ್ಯವನ್ನು ಅವರ ಹಿಂದಿನಿಂದ ಅವರ ಮುಂದಿನ ಕಾಲದವರೆಗೆ ಮುಂಬರಿಸಿ ಸಾರಸ್ವತಧಾರೆ ಸಂತತವಾಗಿರುವಂತೆ ಮಾಡಿದವರು. ಅಂಥವರನ್ನು ನಾವು ಮರೆಯಬಾರದು'

ಸುಮಾರು ಮೂವತ್ತು ವ್ಯಕ್ತಿಚಿತ್ರಗಳಿರುವ ಈ ಸಂಪುಟದಲ್ಲಿ ವಿಸ್ತಾರವಾಗಿ ವಿವರವಾಗಿ ನಿರೂಪಿತವಾಗಿರುವ ವ್ಯಕ್ತಿಚರಿತ್ರೆ ಬೆಳ್ಳಾವೆ ವೆಂಕಟನಾರಣಪ್ಪನವರದು., ಮುನ್ನೂರು ಪುಟಗಳ ಈ ಪುಸ್ತಕದ ಎಂಬತ್ತು ಪುಟಗಳು ಅವರ ಸ್ವಭಾವಚಿತ್ರಣಕ್ಕೆ ಮೀಸಲು. ಹಾಗೆಯೇ ಅತ್ಯಂತ ಆತ್ಮೀಯವಾಗಿರುವ ವ್ಯಕ್ತಿಚಿತ್ರ ಟಿ. ಎಸ್. ವೆಂಕಣ್ಣಯ್ಯನವರದು.

ಬಸವಪ್ಪ ಶಾಸ್ತ್ರಿಗಳು ಎಷ್ಟು ಲೀಲಾಜಾಲವಾಗಿ, ಲಲಿತವಾಗಿ ಕಾವ್ಯರಚನೆ ಮಾಡಬಲ್ಲವರಾಗಿದ್ದರು ಎಂಬುದನ್ನು ಈ ಘಟನೆಯಿಂದ ಅರಿಯಬಹುದಾಗಿದೆ : 'ಹಿತಬೋಧಿನಿ' ಮಾಸಪತ್ರಿಕೆಯ ಮುಖಪತ್ರಕ್ಕೆ ಬೇಕಾಗಿದ್ದ ಕವನಕ್ಕಾಗಿ ಕೆಲವು ವಿದ್ವಾಂಸರಿಂದ ತರಿಸಿಕೊಂಡಿದ್ದ ಕವನಗಳು ತೃಪ್ತಿಕರವಾಗದೆ ಸಭೆಗೆ ಆಗತಾನೇ ಆಗಮಿಸಿದ್ದ ಬಸವಪ್ಪ ಶಾಸ್ತ್ರಿಗಳಲ್ಲಿ ಪ್ರಸ್ತಾಪಿಸಿದಾಗ ಅವರು "ನಾನು ಹೇಳುವುದನ್ನು ಬರೆದುಕೊಳ್ಳಿ. ಹೇಗಿರುತ್ತದೋ ನೋಡೋಣ" ಎಂದು ಈ ಕಂದ ಪದ್ಯವನ್ನು ಹೇಳಿದರು :

"ಆವಳ ಕೈವಿಡಿದಾ ರಾ-
ಜೀವಭವಂ ನಿಖಿಲಲೋಕನಿರ್ಮಾಣಕಲಾ- ।
ಕೋವಿದನಾದನೊ ಆ ವಾ-
ಗ್ದೇವತೆ ಮೆಚ್ಚಿತ್ತು ಮೆರೆಗೆ ಹಿತಬೋಧಿನಿಯೊಳ್ ॥"

ಕೇಳಿದವರೆಲ್ಲ "ಕವಿತೆಯೆಂದರೆ ಇಂಥದಲ್ಲವೆ ಕವಿತೆ" ಎಂದರು.

ಎಂ. ಎ. ರಾಮಾನುಜಯ್ಯಂಗಾರ್ಯರು ತಾಳೆಯೋಲೆಯ ಗ್ರಂಥಗಳನ್ನು ಸಂಪಾದಿಸಿ ಅವುಗಳನ್ನು ಅಚ್ಚಿಗೆ ಸಿದ್ಧಪಡಿಸುತ್ತಿದ್ದರು. ಇದು ಎಂಥ ರೇಜಿಗೆಯ ಕೆಲಸ ಎನ್ನುವುದನ್ನು ಡಿ.ವಿ.ಜಿ. ವಿವರಿಸುತ್ತಾರೆ. ಇಷ್ಟು ಪ್ರಯಾಸಪಟ್ಟು ರಾಮಾನುಜಯ್ಯಂಗಾರ್ಯರು ಪ್ರಕಟಿಸಿದ ಗ್ರಂಥಗಳಲ್ಲಿ ರನ್ನನ 'ಗದಾಯುದ್ಧ', ಹರಿಹರನ 'ಗಿರಿಜಾ ಕಲ್ಯಾಣ', ಜನ್ನನ 'ಯಶೋಧರ ಚರಿತೆ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಮತ್ತು ಕನಕದಾಸರ 'ನಳಚರಿತ್ರೆ' ಇವುಗಳನ್ನು ನೆನೆಯಬಹುದಾಗಿದೆ, ಎನ್ನುತ್ತಾರೆ.

ಬಿ.ಎಂ.ಶ್ರೀ. ಅವರ ಬಗ್ಗೆ ಡಿ.ವಿ.ಜಿ. ಹೇಳುತ್ತಾರೆ : "ನಾನು ಅವರಿಗಾಗಿ ಸಂಸ್ಕೃತ ಮಹಾಭಾರತದ ದ್ರೋಣಪರ್ವ. ಶಲ್ಯಪರ್ವ, ಕರ್ಣಪರ್ವ, ಸೌಪ್ತಿಕ

ಪರ್ವ—ಇವುಗಳ ಭಾಗಗಳನ್ನು ಓದುತ್ತಿದ್ದೆ. ಅವರು ನಡುನಡುವೆ ಟಿಪ್ಪಣಿ ಮಾಡುವರು, ಗುರುತುಮಾಡಿಟ್ಟುಕೊಳ್ಳುವರು, ಇದು ಅವರ ಪ್ರಸಿದ್ಧ ಕೃತಿಯಾದ 'ಅಶ್ವತ್ಥಾಮನ್' ನಾಟಕದ ರಚನೆಗೆ ಅವರು ಮಾಡಿಕೊಂಡ ಸಿದ್ಧತೆ."

ಎ. ಆರ್. ಕೃಷ್ಣಶಾಸ್ತ್ರಿಗಳ ಬಗ್ಗೆ : ಒಂದು ಸಂಜೆ ಕೃಷ್ಣಶಾಸ್ತ್ರಿಗಳು ಗೋಖಲೆ ಸಂಸ್ಥೆಗೆ ಬಂದಿದ್ದರು. ಅವರು ಅಲ್ಲಿಂದ ಹೊರಡುವ ವೇಳೆಗೆ ಸರಿಯಾಗಿ ಇನ್ನೊಬ್ಬ ಸ್ನೇಹಿತರು ಅಲ್ಲಿಗೆ ಬಂದರು. ಅವರು ಕೃಷ್ಣಶಾಸ್ತ್ರಿಗಳನ್ನು ಕುರಿತು ಹೇಳಿದರು :

"ಸಾರ್, ಕನ್ನಡ ಲೋಕಕ್ಕೆ ನಿಮ್ಮ 'ವಚನಭಾರತ'ದಿಂದ ಬಹು ದೊಡ್ಡ ಉಪಕಾರವಾಗಿದೆ. ನೀವು ಹಾಗೆಯೇ ವಚನ ರಾಮಾಯಣವನ್ನೂ ಬರೆಯಬೇಕು ಸಾರ್."

"ಅದು ನನ್ನಿಂದಾಗುವ ಕೆಲಸವಲ್ಲಪ್ಪಾ."

"ಅದೇಕೆ ಸಾರ್ ಹಾಗೆ ಹೇಳುತ್ತೀರಿ ?"

"ಭಾರತ ಪುರಾಣವಪ್ಪ ; ರಾಮಾಯಣ ಕಾವ್ಯ. ಅದರ ಸೊಗಸನ್ನು ಸಂಗ್ರಹ ಮಾಡುವುದಕ್ಕಾಗುವುದಿಲ್ಲ. ಭಾರತದಲ್ಲಿ ಕಾವ್ಯಕ್ಕಿಂತ ಕಥೆ ಮುಖ್ಯ, ಅದನ್ನು ಸುಲಭವಾಗಿ ಹೇಳಬಹುದು. ರಾಮಾಯಣದಲ್ಲಿ ಕಥೆಗಿಂತ ಕಾವ್ಯ ಮುಖ್ಯ. ಆ ಸೊಗಸನ್ನು ವಚನದಲ್ಲಿ ಹೇಗೆ ತರುವುದು ? 'ಚಂಚಚ್ಚಂದ್ರ ಕರಸ್ಪರ್ಶ ಹರ್ಷೋನ್ಮೀಲಿತ ತಾರಕಾ'—ಸಂಗ್ರಹದಲ್ಲಿ ಇಂಥದನ್ನು ಹೇಗೆ ಹೇಳುವುದು ? ಇದನ್ನು ಹೇಳದೆ ಬಿಟ್ಟರೆ ಕಾವ್ಯದ ಸ್ವಾರಸ್ಯವನ್ನು ಬಿಟ್ಟಂತಾಗುತ್ತದೆ !"

ಡಿ.ವಿ.ಜಿ. ಪ್ರೊಫೆಸರ್ ವೆಂಕಣ್ಣಯ್ಯನವರ ಮನೆಗೆ ಹೋದಾಗ ಈ ದೃಶ್ಯವನ್ನು ಕಂಡರು : 'ಅಲ್ಲಿ ತೀ. ನಂ. ಶ್ರೀಕಂಠಯ್ಯನವರು, ಡಿ.ಎಲ್. ನರಸಿಂಹಾಚಾರ್ಯ ಮೊದಲಾದ ಶಿಷ್ಯರು ನಾಲ್ಕೈದು ಮಂದಿ ಇದ್ದರು. ಮೂವರು ನಾಲ್ವರ ಮುಂದೆ ಬರೆಯುವ ಇಳಿಜಾರು ಮೇಜುಗಳಿದ್ದವು. ಅವರೆಲ್ಲ ಸೇರಿ 'ಹರಿಹರನ ರಗಳೆ' ಯನ್ನೋ ಬೇರೆ ಯಾವುದೋ ಪ್ರಾಚೀನ ಗ್ರಂಥವನ್ನೋ ಪರಿಷ್ಕಾರಪಡಿಸುವ ಕಾರ್ಯದಲ್ಲಿದ್ದರು. ತಾಳೆಯೋಲೆಯ ಪ್ರತಿಯನ್ನೋದುವುದು, ಪಾಠಾಂತರಗಳನ್ನು ಗುರುತು ಮಾಡಿಕೊಳ್ಳುವುದು, ನಾನಾ ಪಾಠಗಳ ತಾರತಮ್ಯಗಳನ್ನು ಚರ್ಚಿಸುವುದು—ಇದು ಆಗ ಅವರು ಮಾಡುತ್ತಿದ್ದ ಕೆಲಸ...ಅದು ಒಬ್ಬ ಪ್ರಾಮಾಣಿಕನಾದ ಸಾಹಿತ್ಯ ವಿದ್ವಾಂಸನ ವ್ಯಕ್ತಿಸನ್ನಿವೇಶದ ಚಿತ್ರ. ಅದನ್ನು ನಾನು ಪದೇ ಪದೇ ನೆನೆಸಿಕೊಳ್ಳುತ್ತೇನೆ. ಆ ನೆನಪಿನಿಂದ ಆಗುವ ಸಂತೋಷ ಈ ಬಡಬಾಳಿನಲ್ಲಿ ಒಂದು ದೊಡ್ಡ ಯೋಗ.'

ಪಂಜೆ ಮಂಗೇಶರಾಯರು 'ಗೋವಿನ ಕಥೆ'ಯನ್ನು ಕುರಿತು ಪರಿಷತ್ತಿನಲ್ಲಿ ಮಾಡಿದ ಭಾಷಣದ ವೈಖರಿ ಹೀಗಿತ್ತು: "ಚದುರ ಶಿಖೆಯನು ಹಾಕಿದ"—ಈ ವಾಕ್ಯವನ್ನು ಹೇಳಿ ತಾವೇ ಕೈಯಿಂದ ತಲೆಯ ಮೇಲೆ ಶಿಖೆ ಗಂಟುಕಟ್ಟಿ ಅದನ್ನು ಸಭಿಕರಿಗೆ ತೋರಿಸುತ್ತ ಆ ಪದದಿಂದಲೂ ಆ ಅಂಗಭಾವದಿಂದಲೂ ತೋರಿಬರುವ ಗೊಲ್ಲನ ಮನೋದಾರ್ಢ್ಯ, ಅವನ ನಿರ್ಧಾರಬುದ್ಧಿ—ಇವುಗಳನ್ನು ಉತ್ಸಾಹದಿಂದ ವಿವರಿಸಿದರು. ಆ ಉಪನ್ಯಾಸವನ್ನು ಭಾಷಣವೆನ್ನುವದಕ್ಕಿಂತ ಕುಣಿದಾಟವೆಂದೂ ಅಭಿನಯ ವ್ಯಾಖ್ಯಾನವೆಂದೂ ಹೇಳಿದರೆ ತಪ್ಪಾಗದು."

ಸುಬ್ಬರಾಯಪ್ಪನವರ ಬರವಣಿಗೆಯ ಅಂದವನ್ನು ಡಿ.ವಿ.ಜಿ. ಮೆಚ್ಚಿದ್ದಾರೆ. ಅವರ "ಅಕ್ಷರ ಜಕಣಾಚಾರಿಯ ಶಿಲ್ಪದಂತೆ ನಯನಮೋಹಕವಾದದ್ದು. ಅಕ್ಷರಗಳು ಬಿಡಿಬಿಡಿಯಾಗಿ ದುಂಡುದುಂಡಾಗಿ ಮುತ್ತಿನ ಸರದಂತಿರುತ್ತವೆ!" ವೆಂಕಣ್ಣಯ್ಯನವರ ಕಾವ್ಯವಾಚನ ಶೈಲಿಯ ಸೊಗಸನ್ನು ಡಿ.ವಿ.ಜಿ. ಹೀಗೆ ವರ್ಣಿಸುತ್ತಾರೆ: "ಆ ಮಾತು ಈ ಮಾತು ಆಡುತ್ತ ಅರ್ಜುನನ ತೀರ್ಥಯಾತ್ರೆಯ ಪ್ರಸ್ತಾಪ ಬಂದಿತು. ವೆಂಕಣ್ಣಯ್ಯ ಪಂಪಭಾರತವನ್ನು ತೆಗೆದುಕೊಂಡು ಆ ಭಾಗವನ್ನು ಓದಿದರು. ಆ ಆನಂದ ನನ್ನ ನೆನಪಿನಲ್ಲಿ ಒಂದು ಭಾಗ್ಯನಿಧಿಯಾಗಿ ಉಳಿದುಕೊಂಡಿದೆ!"

ಸಭೆ ಸಮಿತಿಗಳಲ್ಲಿ ಹೆಚ್ಚು ಕೆಲಸ ನಡೆಯದು ಎನ್ನುವುದು ಡಿ.ವಿ.ಜಿ. ಅವರ ಅಭಿಪ್ರಾಯ. ಪರಿಷತ್ತಿನ ಕಾರ್ಯಸಮಿತಿಯ ಒಂದು ಅಧಿವೇಶನದ ಸಂಗತಿಯನ್ನು ಈ ಸಂದರ್ಭದಲ್ಲಿ ಉದಾಹರಿಸುತ್ತಾರೆ:

"ಮೊದಲನೆಯ ಕಾರ್ಯಾಂಶ ಯಾರೋ ಸತ್ತದ್ದಕ್ಕಾಗಿ ಸಂತಾಪಸೂಚನೆ. ಅದರ ಮೊದಲ ಕರಡುಬರಹ ಹೀಗಿತ್ತು: "ಉಜ್ವಲ ದೇಶಾಭಿಮಾನಿಗಳಾದ ಮಹಾಪಂಡಿತರೂ ವರಕವಿಗಳೂ ದಾನಶೌಂಡರೂ ಆದ ಕಖಗಘರು ಅವರು ಮೃತಪಟ್ಟಿದ್ದಕ್ಕಾಗಿ ಈ ಸಮಿತಿ ಸಂತಾಪ ಪಟ್ಟಿದೆ." ಇದರ ಮೇಲೆ ತಿದ್ದುಪಡಿಗಳಾದುವು, ಹೀಗೆ: (೧) 'ಮೃತಪಟ್ಟುದಕ್ಕಾಗಿ' ಎಂಬುವುದಕ್ಕೆ ಬದಲಾಗಿ 'ನಿಧನರಾದುದಕ್ಕಾಗಿ', (೨) 'ಮರಣಹೊಂದಿದುದಕ್ಕಾಗಿ', (೩) 'ಕಾಲಾಧೀನರಾದುದಕ್ಕಾಗಿ', (೪) 'ದೈವಾಧೀನರಾದುದಕ್ಕಾಗಿ', (೫) 'ಪಂಚತ್ವವನ್ನೈದಿದ್ದಕ್ಕಾಗಿ', (೬) ಸ್ವರ್ಗಸ್ಥರಾದುದಕ್ಕಾಗಿ'. ಮಧ್ಯೇ ಮಧ್ಯೇ ಚರ್ಚೆಗಳು. ದೈವಾಧೀನವೆಂದರೇನು? ಪಂಚತ್ವ ಹೇಗಾದೀತು? ಶೂನ್ಯತ್ವ ಎನ್ನಬೇಕಲ್ಲವೆ? ಸ್ವರ್ಗಸ್ಥರಾದರೆ ಸಂತಾಪವೇಕೆ? ಸಂತೋಷಪಡಬೇಕಾದದ್ದಲ್ಲವೆ? ಹೀಗೆ ಪುಂಖಾನುಪುಂಖವಾಗಿ ವಾದ ಬೆಳೆದು ಘಂಟೆ ಅರೂವರೆಯಾಯಿತು. ಆಮೇಲೆ ಇನ್ನೊಂದು ತಿದ್ದುಪಡಿಗಳ ಮಾಲೆ: 'ಈ ಸಮಿತಿ ಸಂತಾಪಪಟ್ಟಿದೆ' ಎನ್ನುವುದಕ್ಕೆ ಬದಲಾಗಿ (೧) 'ಲೋಕವೆಲ್ಲವೂ ಪರಿತಪಿಸುತ್ತಿದೆ.' (೨) 'ದೇಶಕ್ಕೆ ನಷ್ಟವಾಗಿದೆಯಲ್ಲವೆ?' (೩) ಅಪಾರ ನಷ್ಟವಾಗಿರುವುದು ಸರಿಯಷ್ಟೆ?' (೪) 'ನಷ್ಟವಾಗಿರುವುದು ಸರಿ'. (೫) 'ನಷ್ಟ

ಮಾದದ್ದು ಸರಿ' ಎಂದು ನಾವು ಒಪ್ಪೋಣವೆ ?' ಹೀಗೆ ನಡೆಯಿತು ವಾದವೃದ್ಧಿ. ಏಳು ಘಂಟೆ ಬಡಿದಾಗ ಇನ್ನೂ ತೀರ್ಮಾನವಾಗಿರಲಿಲ್ಲ.

"ನಮ್ಮ ದೇಶದಲ್ಲಿ ಸಭೆ ಸಮಾರಂಭಗಳು ಏಕೆ ಕಾರ್ಯಪರಿಣಾಮ ಪಡೆಯುತ್ತಿಲ್ಲವೆಂಬುದನ್ನು ಮಹಾಜನರು ಇದರಿಂದ ಕೊಂಚ ಊಹಿಸಬಹುದು."

ಈ ಪುಸ್ತಕದ ಉದ್ದಕ್ಕೂ ಹಾಸ್ಯದ ಹೊಳೆ ಹರಿಯುತ್ತದೆ. ಹಲವು ಉದಾಹರಣೆಗಳಲ್ಲಿ ಒಂದು ಹೀಗಿದೆ: "ಮುದವೀಡಕರ್ ಕೃಷ್ಣರಾಯರು ಬೆಂಗಳೂರಿನಲ್ಲಿ ಕೊಟ್ಟ ಒಂದು ಉಪನ್ಯಾಸದಲ್ಲಿ ಹೇಳಿದರು: 'ನಮ್ಮಲ್ಲಿ ಎಂಥೆಂಥ ಮಹಾಕವಿಗಳಿದ್ದರು ! ಎಂಥೆಂಥ ಪ್ರತಿಭಾವಂತರಿದ್ದರು ! ಎಂಥೆಂಥ ಕಾವ್ಯಕರ್ತರಿದ್ದರು ! ನಮ್ಮ ರನ್ನನೇನು ! ಪೊನ್ನನೇನು ! ಜನ್ನನೇನು !...'" ಕೇಳಿದವರಿಗೆ ಪರಮಾನಂದ. ಡಿ.ವಿ.ಜಿ. ಅವರು ಉಪನ್ಯಾಸದನಂತರ ಅವರೊಡನೆ ಪೊನ್ನ ಜನ್ನರ ಬಗ್ಗೆ ಪ್ರಸ್ತಾಪಿಸಿದಾಗ ಅವರು ಹೇಳಿದರು: 'ನಾ ಏನು ಬಲ್ಲೆನಪ್ಪಾ ! ನೀವೆಲ್ಲಾ ಹೇಳತೀರಲ್ಲೋ ? ನೀವು ಸುಳ್ಳು ಹೇಳುವವರಲ್ಲವಲ್ಲ'—ನಿಮ್ಮ ಮಾತೇ ನಮಗೆ ಪ್ರಮಾಣ." ಎಲ್ಲರೂ ನಗುವಿನ ಲಹರಿಯಲ್ಲಿ ತೇಲಿದರು.

ಡಿ.ವಿ.ಜಿ. ಅವರು ಚಿತ್ರಿಸಿರುವ ಸಾಹಿತ್ಯೋಪಾಸಕರ ಅಂತರಂಗಶುದ್ಧಿ, ದೈವಭಕ್ತಿ, ಸದಾಚಾರ, ಕ್ಲುಪ್ತಕಾಲಕ್ಕೆ ಕೆಲಸಮಾಡುವ ಅವರ ಕಟ್ಟುನಿಟ್ಟು, ಕರ್ತವ್ಯತತ್ಪರತೆ, ಜವಾಬ್ದಾರಿ, ಪರರ ಕಷ್ಟಕ್ಕಾಗುವ ಅಂತಃಕರಣ, ಗುಟ್ಟಾಗಿ ಅವರು ತೋರಿಸುತ್ತಿದ್ದ ದಾನಶೀಲತೆ, ಜೀವನೋಲ್ಲಾಸ, ಸರಸತೆ, ತಿಂಡಿತೀರ್ಥಗಳ ವಿಷಯದಲ್ಲಿ ಅವರ ಸಂತೋಷ ಇವುಗಳೆಲ್ಲಾ ಹೃದಯಂಗಮವಾಗಿ ನಿರೂಪಿತವಾಗಿವೆ. ವೆಂಕಣ್ಣಯ್ಯನವರ ಕಡೆಯ ಘಳಿಗೆಗಳ ಬಗ್ಗೆ ಬರೆಯುತ್ತಾ ಡಿ.ವಿ.ಜಿ. ಹೇಳುತ್ತಾರೆ: 'ಅವಸಾನಕಾಲದಲ್ಲಿ ಆತ ಭಗವದ್‌ಧ್ಯಾನದಲ್ಲಿ ಎಲ್ಲವನ್ನೂ ಮರೆತಿದ್ದ. ದೇವತಾರಾಧನೆಯಲ್ಲಿ ಪುಷ್ಪಾರ್ಚನೆ ಮಾಡುವ ಕೈಯಂತೆ ಆತನ ಹಸ್ತಮುದ್ರೆಯಿತ್ತಂತೆ !'

ಈ ಪುಸ್ತಕದ ಉಪಸಂಹಾರದ ಕಡೆಯಲ್ಲಿ ಡಿ.ವಿ.ಜಿ. ಹೇಳಿರುವ ಮಾತುಗಳು ಅವರು ಚಿತ್ರಿಸಿರುವ ಸಾಹಿತ್ಯೋಪಾಸಕರಿಂದ ನಾವು ಕಲಿಯಬಹುದಾದ ಮೌಲ್ಯಗಳನ್ನು ಸಂಕ್ಷೇಪವಾಗಿ ಆದರೆ ಸ್ಪಷ್ಟವಾಗಿ ತಿಳಿಸುತ್ತವೆ:

"ಸಾಹಿತ್ಯವೆಂಬುದು ದೊಡ್ಡ ವಸ್ತು; ಅದು ಗೌರವವುಳ್ಳ ಕಾರ್ಯ. ಅದಕ್ಕೆ ಒಂದು ಪೂರ್ವಸಿದ್ಧತೆ ಅವಶ್ಯ—ಹೀಗೆ ತಿಳಿಯುವುದು ಭಯವಿನಯಗಳ ಲಕ್ಷಣ... ಸಾಹಿತ್ಯಕ್ಕೆ ಕೈಯಿಕ್ಕುವವರು ಹಾಗೆ "ಈಗ ನಾನು ದೊಡ್ಡ ಕೆಲಸಕ್ಕೆ ಹೊರಟಿದ್ದೇನೆ. ಎಲ್ಲಿ ತಪ್ಪಿಯೇನೋ ! ಎಲ್ಲಿ ಮೈಲಿಗೆಯಾದೀತೋ ! ಎಲ್ಲಿ ಏನು ಪ್ರಮಾದ ನಡೆದೀತೋ ?" ಎಂದು ಯೋಚಿಸಬೇಕಾದದ್ದು ಯುಕ್ತ. ಅಂಥ ಭಯವಿರುತ್ತಿತ್ತು ಹಿಂದಿನ ಜನಕ್ಕೆ.

"ಎರಡನೆಯದಾಗಿ, ಅವರು ಬಿರುದು ಪ್ರಶಸ್ತಿಗಳಿಗಾಗಿ ಬಾಯಿ ಬಿಟ್ಟವರಲ್ಲ. ತಮ್ಮ ಅಂತರಂಗದಲ್ಲಿ ಅವರು ದೊಡ್ಡದಾಗಿಯೋ ಚಿಕ್ಕದಾಗಿಯೋ ಒಂದು ಬೆಳಕನ್ನು ಕಂಡರು. ಅದರ ಪ್ರಯೋಜನ ಎಲ್ಲರಿಗೂ ಆಗಲಿ ಎಂಬುದಷ್ಟೇ ಅವರ ತಾತ್ಪರ್ಯ." ಇದೇ ಪಾರಮಾರ್ಥಿಕತೆ.

"ಅವರಲ್ಲಿ ಲೇಖನವೃತ್ತಿ ದ್ರವ್ಯಸಂಪಾದನೆಗೆ ದಾರಿ ಎಂದು ಹೊರಟವರಾರನ್ನೂ ನಾನು ಕಾಣೆ. ಯಾವುದೋ ಬೇರೆ ಉದ್ಯೋಗದಿಂದ ಕಸುಬಿನಿಂದ ಜೀವಿಕೆ ಸಂಪಾದಿಸಿಕೊಂಡು ಬಂದಷ್ಟರಿಂದ ಸಂತೃಪ್ತರಾಗಿದ್ದವರು ಆ ಜನ. ಎಲ್ಲಕ್ಕಿಂತ ಮೇಲಾಗಿ ಸರಳವೂ ಶುದ್ಧವೂ ಆದ ಜೀವನವು ಸಾಹಿತ್ಯಕಾರ್ಯಕ್ಕೆ ಒಂದು ಕಾಂತಿಯನ್ನು ತಂದೀತೆಂದು ಅವರು ನಂಬಿದ್ದರು.

"ನಾಲ್ಕನೆಯದಾಗಿ, ಅವರು ಪ್ರಯಾಸಪಡಲು ಸಿದ್ಧರಾಗಿದ್ದವರು. ಒಂದು ಸಂಗತಿಯೋ ಒಂದು ಪದವೋ ಸಂಶಯದಲ್ಲಿದ್ದರೆ, ಅದನ್ನು ನಿಶ್ಚಯಪಡಿಸಿಕೊಳ್ಳಲು ಅವರು ನಾಲ್ಕಾರು ಗ್ರಂಥಗಳಲ್ಲಿ ಹುಡುಕುತ್ತಿದ್ದರು ; ಬಲ್ಲವರೊಡನೆ ಚರ್ಚಿಸುತ್ತಿದ್ದರು. ಒಂದು ಮುಖ್ಯ ಗ್ರಂಥದ ಬೇರೊಂದು ಪ್ರತಿ ದೊರೆಯದಿದ್ದಾಗ, ಇದ್ದ ಪ್ರತಿಯನ್ನು ತಾವೇ ನಕಲು ಮಾಡಿರಿಸಿಕೊಳ್ಳುತ್ತಿದ್ದರು. ವ್ಯಾಕರಣ ಸೂತ್ರಗಳನ್ನು ಬಾಯಿಪಾಠ ಮಾಡುತ್ತಿದ್ದರು. ಬರೆದದ್ದನ್ನು ನಾಲ್ಕಾರು ಸಾರಿ ಶೋಧಿಸಿ ತಿದ್ದುತ್ತಿದ್ದರು.

"ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಸಾಹಿತ್ಯಸೇವೆ ಅವರ ಪಾಲಿಗೆ ಒಂದು ಬಗೆಯ ತಪಸ್ಸು. ತಪಸ್ವಿಯು ನಿಯಮ ನಿಷ್ಠೆಗಳನ್ನೂ ಶುದ್ಧಿಸದಾಚಾರಗಳನ್ನೂ ಕಾಪಾಡಿಕೊಳ್ಳುವಂತೆ ಸಾಹಿತ್ಯಸೇವಕನು ಆತ್ಮಸಂಯಮ ಮಾಡಿಕೊಳ್ಳುತ್ತಾನೆ.

"ಇನ್ನೊಂದು ಮಾತು. ನಾನು ಪ್ರಸ್ತಾಪಿಸಿರುವ ಎಲ್ಲ ಸಾಹಿತ್ಯಕರ್ತರಿಗೂ (Standard) ಮಟ್ಟ—ಇಯತ್ತೆ—ಒಂದಿತ್ತು. ವಿಷಯ ಗಾಂಭೀರ್ಯದಲ್ಲಿಯೂ ಪ್ರತಿಪಾದನೆಯ ಔಚಿತ್ಯದಲ್ಲಿಯೂ ಲೇಖನ ಶೈಲಿಯ ಓಜಸ್ಸಿನಲ್ಲಿಯೂ ಯಾವುದೊ ಒಂದು ಆದರ್ಶವನ್ನು ಅವರು ದೃಷ್ಟಿಯಲ್ಲಿರಿಸಿಕೊಂಡು ಆ ಆದರ್ಶವನ್ನು ಮುಟ್ಟಲು ಬಹುವಾಗಿ ಪ್ರಯತ್ನಿಸುತ್ತಿದ್ದರು. ಆ ಆದರ್ಶದ ಮಟ್ಟಕ್ಕೆ ಬಾರದ ಲೇಖನವನ್ನು ಅವರು ಕಸವೆಂದು ತಳ್ಳಿಹಾಕುತ್ತಿದ್ದರು...ಆ ಕಾಲದಲ್ಲಿ ಸ್ಟ್ಯಾಂಡರ್ಡ್ ಎಂಬುದೊಂದಿತ್ತು ; ಒಂದು ಆದರ್ಶವಿತ್ತು. ಇನ್ನು ಮುಂದಕ್ಕೂ ನಮ್ಮ ದೇಶದ ನಾನಾ ಜೀವನ ಕ್ಷೇತ್ರಗಳ ಕಾರ್ಯಕರ್ತರುಗಳು ತಮ್ಮ ತಮ್ಮ ಕಾರ್ಯಸಾಧನೆಯಲ್ಲಿ ಒಂದು ದೊಡ್ಡ ಆದರ್ಶವನ್ನು ಲಕ್ಷ್ಯದಲ್ಲಿರಿಸಿಕೊಂಡು ನಡೆಯುವಂತಾಗಲಿ."

ಸ್ಟ್ಯಾಂಡರ್ಡ್‌ಗಳು ಕುಸಿಯುತ್ತಿರುವ ಈ ಕಾಲದಲ್ಲಿ ಇಂಥ ಸಾಹಿತ್ಯೋ-ಪಾಸಕರ ಮೇಲ್ಪಂಕ್ತಿಯ ಅಗತ್ಯ ಅಷ್ಟಿಷ್ಟಲ್ಲ. ಡಿ.ವಿ.ಜಿ. ಅವರ 'ಸಾಹಿತ್ಯೋ-

ಪಾಸಕರು' ಸೊಗಸಾದ, ತುಂಬಾ ಸಂತೋಷ ಕೊಡುವ ಪುಸ್ತಕ. ಜೀವನ ಧರ್ಮ ಯೋಗವನ್ನು ತಿಳಿಸುವ ಪುಸ್ತಕ. ಒಂದು ಕಾಲಮಾನವನ್ನೇ ಒಂದು ಸಂಸ್ಕೃತಿಯನ್ನೇ ಪುನರುಜ್ಜೀವಿಸಗೊಳಿಸುವ ಚಾರಿತ್ರಿಕ ಮಹತ್ತ್ವದ ಪುಸ್ತಕ, ಎಲ್ಲ ಸಾಹಿತ್ಯ ಕರ್ತರೂ ಸಾಹಿತ್ಯ ಸೇವಕರೂ ಅವಶ್ಯವಾಗಿ ಕೈಯಲ್ಲಿರಿಸಿಕೊಂಡು ಪದೇ ಪದೇ ಓದಿ ಮನನ ಮಾಡಬೇಕಾದ ಪುಸ್ತಕ. ಇದು ಸಾಹಿತ್ಯ ಸೇವೆಯ ಶಿಸ್ತಿನ ಕೈಪಿಡಿ.

ಹೃದಯಸಂಪನ್ನರು

ಜಿ. ವೆಂಕಟಸುಬ್ಬಯ್ಯ

ಡಿ.ವಿ.ಜಿ. ಅವರ 'ಜ್ಞಾಪಕ ಚಿತ್ರಶಾಲೆ'ಯ ಸಂಪುಟಗಳ ಪೈಕಿ ಏಳನೆಯದಾದ 'ಹೃದಯಸಂಪನ್ನರು' ಸಂಪುಟದಲ್ಲಿ ಸೇರ್ಪಡೆಯಾಗಿರುವ 21 ಬರಹಗಳಲ್ಲಿ ಹಲ ಕೆಲವು ಮಾತ್ರ ವ್ಯಕ್ತಿಚಿತ್ರಗಳು: ಪ್ರೊ॥ ಎಂ. ಹಿರಿಯಣ್ಣ, ಎಸ್. ನರಸಿಂಹಮೂರ್ತಿಗಳು, ಪೋಲೇಪಲ್ಲಿ ಚಿನ್ನಸ್ವಾಮಿ ಶೆಟ್ಟರು, ಮಂಡಿ ಹರಿಯಣ್ಣನವರು, ಧರ್ಮಪ್ರಕಾಶ ಸಜ್ಜನರಾಯರು, ಟಿ. ವಿ. ಆರ್ಮುಗಂ ಮೊದಲಿಯಾರರು, ತಿರುವೇಂಗಡಂ ಮೊದಲಿಯಾರರು, ಇಬ್ಬರು ಅವಧೂತರು, ಕೆ. ಟಿ. ಅಪ್ಪಣ್ಣನವರು, ಇಬ್ಬರು ಮುಸಲ್ಮಾನ್ ಬಂಧುಗಳು, ಬಂಡಿ ರಸೂಲ್‌ಖಾನ್, ಪಾಳಂಪಲ್ಲಿ ಆದೆಪ್ಪನವರು, ಒಬ್ಬ ಶಿವಶರಣರು. ಒಂದು ಕಿರುಲೇಖನದಲ್ಲಿ ಈ ಎಲ್ಲರ ಪರಿಚಯ ಮಾಡಿಕೊಡುವುದು ಆಗದ ಮಾತು. ಮಾನ್ಯ ಲೇಖಕರು—ಎಂ. ಹಿರಿಯಣ್ಣನವರು, ಎನ್. ನರಸಿಂಹಮೂರ್ತಿಗಳು—ಇವರಿಬ್ಬರನ್ನು ಆಯ್ದುಕೊಂಡು, ಇವರ ವ್ಯಕ್ತಿಚಿತ್ರಣದಲ್ಲಿ ಡಿ.ವಿ.ಜಿ. ಅವರ ದೃಷ್ಟಿಕೋನವನ್ನು ಮನಗಾಣಿಸಿದ್ದಾರೆ. 'ಬಳ್ಳಾರಿಯ ನಾಟಕದ ಕಂಪನಿಗಳು', 'ನಮ್ಮ ಊರಿನ ಗ್ರಾಮದೇವತೆಗಳು', 'ನನ್ನ ಮಹಸೂಲಿ ಉದ್ಯೋಗ', 'ಅಪ್ರಸಿದ್ಧ ಕವಿತ್ವ'—ಇವುಗಳಲ್ಲಿ ಡಿ.ವಿ.ಜಿ. ಸಮಕಾಲೀನ ಜೀವನ ಸಂಸ್ಕೃತಿಯ ಹೊಳಹುಗಳು ಹೂಹಗುರ ಶೈಲಿಯಲ್ಲಿ ನಿರೂಪಿತವಾಗಿವೆ. ಇವಲ್ಲಿಯೂ, ಹಾದುಹೋಗುವ ವ್ಯಕ್ತಿಗಳ ಹೃದಯಸಂಪನ್ನತೆ ಗೋಚರವಾಗುತ್ತದೆ. ಕೊನೆಯ ಬರಹ, 'ಹಕ್ಕಿಯ ಪಯಣ' ಡಿ.ವಿ.ಜಿ. ತಮ್ಮ ಸ್ವಭಾವದ ಒಂದು ಸೆಳಕನ್ನು—ತೊಂಡುತನ ಮತ್ತು ಅಂಜುಬುರುಕುತನ; ಎಂಬ ಪರಸ್ಪರ ಪ್ರತಿಕೂಲ ಪ್ರವೃತ್ತಿಗಳ ಸಂಗಮವನ್ನು—ಆತ್ಮವೃತ್ತಾಂತ ರೂಪದಲ್ಲಿ ನಿರೂಪಿಸಿದ್ದಾರೆ. ಇವುಗಳ ಸವಿಗಾಗಿ, ಗ್ರಂಥವನ್ನೇ ಆಶ್ರಯಿಸಬೇಕು.

ಡಿ.ವಿ.ಜಿ. ಅವರ ಪರಿಚಯ ಇದ್ದವರಿಗೆ ಅವರ ಅದ್ಭುತವಾದ ಸ್ಮರಣಶಕ್ತಿಯನ್ನು ಕಂಡು ಆಶ್ಚರ್ಯವಾಗುತ್ತಿತ್ತು. ತುಂಬ ಎಳೆತನದಲ್ಲಿ ನಡೆದ ಘಟನೆಗಳೂ

ವ್ಯಕ್ತಿಗಳ ಸಂಭಾಷಣೆಗಳೂ ಅವರೊಡನೆ ಮಾತನಾಡುವಾಗ ಉದಾಹೃತವಾಗುತ್ತಿದ್ದುವು, ಎಷ್ಟೋ ವೇಳೆ ಮಾತಿನ ನಡುವೆ ಒಬ್ಬ ವ್ಯಕ್ತಿಯು ನೆನಪು ಬಂದರೆ ಸುತ್ತಣ ಸ್ನೇಹಿತರಿಗೆ ಕಿರಿಯರಿಗೆ ಆ ವ್ಯಕ್ತಿಯು ಪರಿಚಯವನ್ನು ಮತ್ತಷ್ಟು ಗಾಢವಾಗಿ ಮಾಡಿಕೊಡುವ ಉದ್ದೇಶದಿಂದ ಆ ವ್ಯಕ್ತಿಯ ತಂದೆ. ತಾಯಿ, ಅಣ್ಣ ತಮ್ಮಂದಿರು, ಬೀಗರು, ಮಕ್ಕಳು ಮೊಮ್ಮಕ್ಕಳ ವಿಚಾರವನ್ನು ಹೇಳಿ ಈಗ ಯಾರು ಯಾರು ಎಲ್ಲೆಲ್ಲಿದ್ದಾರೆಂಬುದನ್ನು ಕೂಡ ಹೇಳಿಬಿಡುತ್ತಿದ್ದರು. ಸಂಬಂಧದ ಸೂತ್ರ ಕಡಿದು ಹೋಗುವವರೆಗೆ ಅದು ಮುಂದುವರಿಯುತ್ತಿತ್ತು. ಒಮ್ಮೆ ದಿ॥ ಎಂ. ವಿ. ಕೃಷ್ಣ ಮೂರ್ತಿಗಳ (ಬೆಂಗಳೂರಿನ ಕಮಿಷನ್ ಅಂಡ್ ಜನರಲ್ ಏಜೆನ್ಸೀಸ್—ಅದರ ಮಾಲೀಕರು) ಬಗ್ಗೆ ಮಾತನಾಡುತ್ತ ಅವರ ತಂದೆಯ ಕಾಲದಲ್ಲಿ ಅವರ ಮನೆಯಲ್ಲಿ ಮಾಡಿದ ಊಟದ ವಿವರಣೆ ಮಾಡುತ್ತ ಅಂದು ತಿಂದಂಥ ಹೆಸರುಬೇಳೆಯ ಆಂಬೊಡೆಯನ್ನು ಈಚೆಗೆ ತಿಂದಿಲ್ಲ ಎಂದು ಹೇಳಿದರು. ಹೀಗೆ ಪ್ರತಿಯೊಂದು ವಿವರವನ್ನು ನೆನಪಿಡುವ ಆ ದಿವ್ಯಶಕ್ತಿಗೆ ನಮ್ಮ ನಮನ ಸಲ್ಲಬೇಕು.

ಇಂಥ ಶಕ್ತಿಯ ಪರಿಣಾಮವಾಗಿಯೇ 'ಜ್ಞಾಪಕ ಚಿತ್ರಶಾಲೆ'ಯ ಅನೇಕ ಸಂಪುಟಗಳು ಹೊರಬಂದಿವೆ. ಈ ಸಂಪುಟಗಳಲ್ಲಿ ಒಂದೊಂದರಲ್ಲಿ ಒಂದೊಂದು ಬಗೆಯ ವ್ಯಕ್ತಿಗಳ ಸತ್ವ. ಸಂಸ್ಕೃತಿ, ದಯೆ. ದಾನ, ತಿಳಿವು, ಬರಹ ಮುಂತಾದ ವಿವರಗಳು ಬಂದಿವೆ. ಕನ್ನಡದಲ್ಲಿ ಇಷ್ಟು ವ್ಯಾಪಕವಾಗಿ ಇಂಥ ಚಿತ್ರಗಳನ್ನು ರಚಿಸಿದವರು ಬೇರೆ ಯಾರೂ ಇಲ್ಲ. ಈ ಶತಮಾನದ ಆದಿಭಾಗದಿಂದ ಐವತ್ತು ವರ್ಷಗಳ ಅಂತರದಲ್ಲಿ ಬದುಕಿದ್ದ ಈ ವ್ಯಕ್ತಿಗಳ ಮತ್ತು ಅವರ ವ್ಯವಹಾರ ವ್ಯಾಪಾರಗಳ ಚಿತ್ರಣ ನಮ್ಮನ್ನು ಆ ಕಾಲದಲ್ಲಿಯೇ ಬದುಕಿದ್ದಂತೆ, ಆ ಜೀವನವನ್ನು ಕಾಣುತ್ತಿರುವಂತೆ ಮಾಡುತ್ತದೆ. ಇಲ್ಲಿಯ ಬರಹದ ಸೊಗಸನ್ನು ಓದಿ ಸವಿಯಬೇಕು.

ಈ ಬರಹದ ಶೈಲಿ ವ್ಯಕ್ತಿತ್ವಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಆದುದರಿಂದ ಓದುಗನಿಗೆ ಮತ್ತಷ್ಟು ಕುತೂಹಲ ಉಂಟಾಗುತ್ತದೆ. ಘಟನೆಗಳನ್ನು ಕಣ್ಣೆದುರಿಗೆ ಕಂಡಂತೆ ಚಿತ್ರಿಸುವುದರಿಂದ ಆಯಾ ವ್ಯಕ್ತಿಗಳ ಬಗ್ಗೆ ಸ್ಪಷ್ಟವಾದ ಚಿತ್ರ ಮೂಡುತ್ತದೆ. ಈ ಬರಹವನ್ನು ಜೀವನಚರಿತ್ರೆಯ ಬೇರೊಂದು ಬಗೆಯೆಂದು ಹೇಳಬಹುದು.* 'ದಿವಾನ್ ರಂಗಾಚಾರ್ಲು' 'ಗೋಪಾಲಕೃಷ್ಣ ಗೋಖಲೆ' ಮುಂತಾದ ಜೀವನಚರಿತ್ರೆಗಳನ್ನೂ, 'ವಿದ್ಯಾರಣ್ಯರ ಸಮಕಾಲೀನರು' ಎಂಬಂಥ ಸಂಶೋಧನ ಕೃತಿಗಳನ್ನೂ ರಚಿಸಿದ ಡಿ.ವಿ.ಜಿ. ಇಲ್ಲಿ ರಚಿಸಿರುವ ಚಿತ್ರಗಳನ್ನು ಬೇರೆ ದೃಷ್ಟಿ

---

* ಡಿ.ವಿ.ಜಿ. ಅವರು ದೇಶಚರಿತ್ರೆ, ಜೀವನಚರಿತ್ರೆ, ವ್ಯಕ್ತಿಚರಿತ್ರೆ ಇವುಗಳ ಸ್ವರೂಪದ ಬಗೆಗೆ 'ಜ್ಞಾಪಕ ಚಿತ್ರಶಾಲೆ'ಯ ಮೊದಲ ಸಂಪುಟಕ್ಕೆ ಅವರು ಬರೆದಿರುವ ಮುನ್ನುಡಿಯಲ್ಲಿ ವಿವರಿಸಿದ್ದಾರೆ.—ಸಂ.

ಯಿಂದಲೇ ಕಂಡಿದ್ದಾರೆ. ಈ ಗ್ರಂಥಗಳು ಒಂದೊಂದೂ ಒಂದೊಂದು ಬಗೆಯ ಪ್ರತಿಮಾಗೃಹ.†

'ಹೃದಯ ಸಂಪನ್ನರು' ಎಂಬುದು ಈ ಜ್ಞಾಪಕ ಚಿತ್ರಶಾಲೆಯಲ್ಲಿ ಏಳನೆಯ ಸಂಪುಟ. ಇದರಲ್ಲಿ ಇಪ್ಪತ್ತೊಂದು ಅಧ್ಯಾಯಗಳಿವೆ. ಆದರೆ ನೂರಾರು ವ್ಯಕ್ತಿಗಳು ಹಾದುಹೋಗುತ್ತಾರೆ. ಮುಖ್ಯ ವ್ಯಕ್ತಿಗಳ ವಿಚಾರವಾಗಿ ಹೇಳುತ್ತ ಅವರೊಡನೆ ಸಂಬಂಧ ಹೊಂದಿದ್ದ ಅನೇಕರ ಹೆಸರು ನಡವಳಿಕೆ ಮಾತುಕತೆ ಇತ್ಯಾದಿ ಎಷ್ಟೋ ಪೋಷಕ ವಿಷಯಗಳು ಸೇರಿ ಚಿತ್ರವನ್ನು ಹೆಚ್ಚು ಸಂಕೀರ್ಣವನ್ನಾಗಿ ಮಾಡುತ್ತವೆ.

ಈ ಎಲ್ಲ ಚಿತ್ರಗಳ ಪುನರ್ನಿರೂಪಣೆಗೆ ಪ್ರಯತ್ನಪಡುವುದರಿಂದ ಮೂಲದ ಸ್ವಾರಸ್ಯ ತಪ್ಪುತ್ತದೆ. ಆದುದರಿಂದ ಈ ಸಂಪುಟದ ಕೆಲವು ಚಿತ್ರಗಳ ಬಗ್ಗೆ ವಿವರಣೆ ನೀಡಿ ಗ್ರಂಥವನ್ನು ಓದುವುದು ಒಂದೇ ಅದರ ಸೊಗಸನ್ನು ತಿಳಿಯುವ ಮಾರ್ಗ ಎಂಬುದನ್ನು ಮತ್ತೆ ಒತ್ತಿ ಹೇಳುತ್ತೇನೆ.

ಪ್ರೊಫೆಸರ್ ಎಂ. ಹಿರಿಯಣ್ಣನವರು ಮೈಸೂರಿನ ಮಹಾರಾಜಾರ ಕಾಲೇಜಿನ ಕೀರ್ತಿಯನ್ನು ಪ್ರಕಾಶಪಡಿಸಿದ ಮಹಾಮೇಧಾವಿಗಳಲ್ಲಿ ಮುಖ್ಯರಾದವರು. ಅವರು ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದು, ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ ರಾಗಿ ಆ ಬಳಿಕ ಮಹಾರಾಜಾ ಕಾಲೇಜಿನಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾದರು. ಅವರು ಅತ್ಯುತ್ತಮ ಉಪಾಧ್ಯಾಯರೆಂತಲೂ, ವಿದ್ಯಾರ್ಥಿಗಳಿಗೆ ತಾವು ಬೋಧಿಸಿದ ವಿಷಯ ಗಳಲ್ಲಿ ಆಸಕ್ತಿ ಹೆಚ್ಚುವಂತೆ ಮಾಡುತ್ತಿದ್ದರೆಂದೂ, ಎಲ್ಲ ವಿದ್ಯಾರ್ಥಿಗಳ ಏಕಮುಖ ವಾದ ಮರ್ಯಾದೆಗೂ, ಮೆಚ್ಚಿಕೆಗೂ ಪಾತ್ರರಾಗಿದ್ದರೆಂಬುದು ಮೈಸೂರಿನಲ್ಲಿ ಮನೆ ಮಾತಾಗಿತ್ತು. ಇಂಥ ವ್ಯಕ್ತಿಯ ಪರಿಚಯವನ್ನು ಡಿ.ವಿ.ಜಿ. ಮಾಡಿಕೊಡುವ ರೀತಿಯೇ ಬೇರೆ. 'ನೀಲಲೋಹಿತ' ಎಂಬ ಶಬ್ದದ ವಿಚಾರವಾಗಿ ಡಿ.ವಿ.ಜಿ. ಮತ್ತು ಹಿರಿಯಣ್ಣ—ಇವರ ನಡುವೆ ನಡೆದ ವಿದ್ವದ್ವಿಷಯಕವಾದ ಚರ್ಚೆ ಒಂದೂವರೆ ಪುಟ ವಲ್ಲಿ ಬಂದಿದೆ. ಆದರೆ ಅದು ಒಂದು ಪ್ರಪಂಚವನ್ನೇ ತೆರೆದು ತೋರುತ್ತದೆ. ಇಲ್ಲಿ ಹಿರಿಯಣ್ಣನವರ ಪ್ರಾಮಾಣಿಕತೆ ಮತ್ತು ಶಾಂತಮನಸ್ಕತೆ ಇವುಗಳ ಪರಿಚಯ ವಾಗುವುದರ ಜೊತೆಗೆ ಡಿ.ವಿ.ಜಿ.ಯವರ ಆಳವಾದ ಅಭ್ಯಾಸಕ್ರಮವೂ ತಿಳಿಯ ಬರುತ್ತದೆ.

ಹಿರಿಯಣ್ಣನವರ ಬರವಣಿಗೆಯ ಬಗ್ಗೆ ಬರೆಯುತ್ತ ಮಲ್ಲಿನಾಥನೆಂಬ ವ್ಯಾಖ್ಯಾನ ಕಾರನ ನಿಲುವನ್ನು ನೆನಪಿಗೆ ತರುತ್ತಾರೆ. "ನಾಮೂಲಂ ಲಿಖ್ಯತೇ ಕಿಂಚಿತ್, ನಾನ-ಪೇಕ್ಷಿತಮುಚ್ಯತೇ"— ಈ ಸೂತ್ರ ಸಾರ್ವತ್ರಿಕವಾಗಿ ಅನ್ವಯಗೊಂಡರೆ ಈಗ ಪ್ರಕಟವಾಗುವ ಗ್ರಂಥರಾಶಿಯಲ್ಲಿ ಬಹುಭಾಗ ನಿಂತುಹೋಗಬೇಕಾಗುತ್ತದೆ.

---

†ನನ್ನ ವ್ಯಕ್ತಿ ಚಿತ್ರಗಳ ಒಂದು ಸಂಕಲನಕ್ಕೆ 'ಪ್ರತಿಮಾ ಗೃಹ' ಎಂದು ಹೆಸರಿಡಬೇಕೆಂದಿರುವು ದನ್ನು ಶ್ರೀ ವೆಂಕಟಸುಬ್ಬಯ್ಯನವರಿಗೆ ತಿಳಿಸಿದ್ದೆ. ಡಿ.ವಿ.ಜಿ. ಅವರ 'ಜ್ಞಾಪಕ ಚಿತ್ರಶಾಲೆ'ಗೂ ಈ ಹೆಸರು ಒಪ್ಪುತ್ತದೆ ಎಂದು ನನಗೆ ತಿಳಿಸಿ ಬಳಸಿಕೊಂಡಿದ್ದಾರೆ.—ಸಂ.

ಹೊರಬರಬೇಕಾದ ಹೊಸ ವಿಷಯಗಳು ಮಾತ್ರ ಪ್ರಕಟವಾಗುತ್ತವೆ. ಆದರೆ ತಾವು ಬರೆದ ಗ್ರಂಥಗಳ ಸಂಖ್ಯಾಬಾಹುಳ್ಯವನ್ನು ಎತ್ತಿ ಹಿಡಿಯುವ ಅನೇಕರಿಗೆ ತೊಂದರೆಯಾಗುತ್ತದೆ ; ಓದುಗರ ಪ್ರಪಂಚಕ್ಕೆ ಒಳ್ಳೆಯದಾಗುತ್ತದೆ.

ಹೀಗೆಯೇ ವೇದಾಂತ ವಿಷಯದಲ್ಲಿ ಹಿರಿಯಣ್ಣನವರಿಗೆ ಇದ್ದ ಪಾಂಡಿತ್ಯ ಅವರ ಸರಳ ಗಂಭೀರ ವ್ಯಕ್ತಿತ್ವ, ಉಡುಪಿನಲ್ಲಿದ್ದ ಶುಭ್ರ ಸೊಗಸು, ಮನೆಯಲ್ಲಿ ಅಭ್ಯಾಸದ ಕೊಠಡಿಯಲ್ಲಿದ್ದ ಅಚ್ಚುಕಟ್ಟು ಗ್ರಂಥಭಂಡಾರ ಇವನ್ನೆಲ್ಲ ವಿವರಿಸುತ್ತಾರೆ ಡಿ.ವಿ.ಜಿ. ಹಿರಿಯಣ್ಣನವರ ಕಾಲನಿಯಮದ ಬಗ್ಗೆಯೂ ಬೇರೆಯಾಗಿ ಬರೆಯುತ್ತಾರೆ. ವಿದ್ಯಾರ್ಥಿಗಳಿಗೆ ದಾನಮಾಡಿದರೂ ಯಾರಿಗೂ ಗೊತ್ತಾಗದಂತೆ ಮಾಡುತ್ತಿದ್ದ ಬಗೆ ದೇವರ ಪೂಜೆ, ಸಂಪ್ರದಾಯ ಪಾಲನೆ, ವಾತ್ಸಲ್ಯ—ಈ ಎಲ್ಲ ಗುಣಗಳು ಒಂದಾದ ಮೇಲೊಂದು ನಮಗೆ ಪರಿಚಯವಾಗಿ ಆ ಮಹಾವ್ಯಕ್ತಿಯ ಪರ್ವತೋಪಮ ಸ್ವರೂಪ ಚಿತ್ತಭಿತ್ತಿಯಲ್ಲಿ ಚಿತ್ರಗೊಳ್ಳುತ್ತದೆ.

ಒಂದು ಪ್ರಸಂಗವನ್ನು ಡಿ.ವಿ.ಜಿ. ಅವರ ಮಾತಿನಲ್ಲಿಯೇ ಹೇಳಿದರೆ ಈ ಗ್ರಂಥದ ಬರಹದ ಸ್ವರೂಪ ತಿಳಿಯಬರುತ್ತದೆ :

" ಒಂದು ದಿನ ಧಾರವಾಡ—ಬೆಳಗಾಂ ಕಡೆಯ ವಿದ್ವಾಂಸರೊಬ್ಬರು ಹಿರಿಯಣ್ಣನವರನ್ನು ಕಾಣಬೇಕೆಂದು ಬಂದರು. ಹಿರಿಯಣ್ಣನವರು ಮಾಮೂಲಿನಂತೆ ಅವರಿಗೆ ಕುರ್ಚಿ ತೋರಿಸಿದರು. ಕುರ್ಚಿಯಲ್ಲಿ ಕೂಡುತ್ತಿದ್ದ ಹಾಗೆಯೇ ಆ ವಿದ್ವಾಂಸರು ತಾವು ಬರೆದಿದ್ದ ಒಂದು ಪುಸ್ತಕವನ್ನು ಹಿರಿಯಣ್ಣನವರ ಕೈಗೆ ಕೊಟ್ಟು ಅದರ ವಿಷಯವನ್ನು ಹೇಳಲಾರಂಭಿಸಿದರು. ತಮ್ಮ ಪಾಂಡಿತ್ಯ, ಆ ಗ್ರಂಥವನ್ನು ಬರೆಯುವುದಕ್ಕಾಗಿ ತಾವು ಪಟ್ಟ ಶ್ರಮ, ತಾವು ನೋಡಿದ ಗ್ರಂಥಗಳು, ಅಲ್ಲಿಯ ವಾದ-ಪ್ರತಿವಾದಗಳು, ತಾವು ಅದರ ಮೇಲೆ ಮಾಡಿರುವ ಖಂಡನೆಗಳು, ತಾವು ಉದಾಹರಿಸಿದ ವಾಕ್ಯಗಳು, ಆ ವಾಕ್ಯಗಳ ಪ್ರಾಮಾಣಿಕತೆ—ಇದನ್ನೆಲ್ಲ ಕುರಿತು ಅರ್ಧಘಂಟೆ ಎಡೆಬಿಡದೆ ಉಪನ್ಯಾಸ ಮಾಡಿದರು. ತಮ್ಮ ಮಾತು ಮುಗಿದ ಮೇಲೆ ಒಂದೆರಡು ಕ್ಷಣ ಸುಮ್ಮನಿದ್ದರು. ಹಿರಿಯಣ್ಣನವರೂ ಸುಮ್ಮನಿದ್ದರು. ಬಂದಿದ್ದ ವಿದ್ವಾಂಸರು ಆಗ ಎದ್ದು ನಿಂತರು. ಹಿರಿಯಣ್ಣನವರು ಅವರು ಕೊಟ್ಟಿದ್ದ ಪುಸ್ತಕವನ್ನು ಅವರಿಗೆ ಹಿಂತಿರುಗಿಸಿದರು. ವಿದ್ವಾಂಸರು ಅದನ್ನು ತೆಗೆದುಕೊಂಡರು. ಹಿರಿಯಣ್ಣನವರು ಮುಗುಳ್ನಗೆ ನಗುತ್ತ ನಮಸ್ಕಾರ ಹೇಳಿದರು.

" ಇದು ಅವರ ಸ್ವಭಾವದ ಯಥಾವತ್ತಾದ ಪ್ರತಿಬಿಂಬ. ಅತಿ ಮಾತಾದರೆ ಅವರಿಗೆ ಮೆಚ್ಚಿಕೆಯಾಗುತ್ತಿರಲಿಲ್ಲ."

ಈ ಬರಹದ ಸಂಕ್ಷಿಪ್ತತೆ ಮತ್ತು ಪರಿಣಾಮದ ಕಡೆಗೆ ಗಮನ ಸೆಳೆಯುವುದು ನನ್ನ ಉದ್ದೇಶ. 'ಸ್ವಬೋಧ ಪರಿಶುದ್ಧಿ'ಗಾಗಿ ಬರೆಯುವ ದಾರಿ ಸರ್ವಶ್ರೇಷ್ಠವಾದುದೆಂಬುದರ ಪರಿಚಯ ನಮಗೆ ಇಲ್ಲಿ ಆಗುತ್ತದೆ.

ವ್ಯಕ್ತಿವಿಷಯದಿಂದ ತತ್ತ್ವವಿಷಯಕ್ಕೆ ಹಾಯುವ, ಅಲ್ಲಿ ವಿರಮಿಸುವ, ನಮ್ಮ ದೃಷ್ಟಿಯನ್ನು ಆ ಕಡೆಗೆ ತಿರುಗಿಸುವ ಇಂಥ ಬರವಣಿಗೆ ನಿಜವಾಗಿಯೂ ಅಪೂರ್ವವಾದುದು.

ಶ್ರೀ ಎನ್. ನರಸಿಂಹಮೂರ್ತಿಗಳನ್ನು ಡಿ.ವಿ.ಜಿ. ಆತ್ಮಗುರುಗಳು ಎಂದು ಕರೆಯುತ್ತಾರೆ. ಶ್ರೀ ಎನ್. ನರಸಿಂಹಮೂರ್ತಿಗಳು ಮೈಸೂರಿನ ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದಲ್ಲಿ ಲೈಬ್ರೇರಿಯನ್ ಆಗಿದ್ದರು. ಡಾ|| ಎ. ಎನ್. ನರಸಿಂಹಯ್ಯನವರು ಬರುವತನಕ ನರಸಿಂಹಮೂರ್ತಿಗಳು ಅಲ್ಲಿ ಅಧಿಕಾರಿಗಳಾಗಿದ್ದರು. ಇಂಥವರಿಂದ ಡಿ.ವಿ.ಜಿ. ತುಂಬ ತಿಳಿದುಕೊಂಡೆ ಎಂದು ಹೇಳಿದ್ದಾರೆ. ಆದರೂ ಅವರಿಬ್ಬರಿಗೂ ತುಂಬ ಆತ್ಮೀಯವಾದ ಸ್ನೇಹವಿತ್ತು. ಈ ಆತ್ಮೀಯತೆಗೆ ಡಿ.ವಿ.ಜಿ.ಯವರ ಮಾತುಗಳನ್ನೇ ಸಾಕ್ಷಿಯಾಗಿ ಇಡುತ್ತೇನೆ :

"ಚಾಮರಾಜಪೇಟೆಯಲ್ಲಿ ನರಸಿಂಹಮೂರ್ತಿಗಳ ಮನೆಯ ಎದುರುಗಡೆ ಹತ್ತಿರದ ಮನೆಯಲ್ಲಿ ನಾನು ವಾಸವಾಗಿದ್ದೆ. ಆಗ ದಿನಾಗಲೂ, ಮಿಸುಕಿದರೆ ಅವರ ಮನೆಗೆ ಹೋಗುವುದು ವಾಡಿಕೆಯಾಯಿತು. ಹಾಗೆ ಹೋದಾಗ ಅವರ ಅಜ್ಜಿ ಗಿರಿಯಮ್ಮನವರು ಮನೆಯಲ್ಲಿಲ್ಲದಿದ್ದಾಗ ನಾನು ಸಮಯ ನೋಡಿ ಉಗ್ರಾಣಕ್ಕೂ ಅಡಿಗೆಮನೆಗೂ ಹೋಗಿ ಅಲ್ಲಿ ಪಾತ್ರೆಗಳಲ್ಲಿರುತ್ತಿದ್ದ ಒಣಕೊಬರಿ, ಬೆಲ್ಲ, ಹಸಿಕೊಬರಿ, ಸಕ್ಕರೆ, ಅವಲಕ್ಕಿ, ಅರಳು ವಗೈರೆ ಪದಾರ್ಥಗಳನ್ನು ಸಮಯೋಚಿತವಾಗಿ ಸೇವಿಸುತ್ತಿದ್ದುದುಂಟು. ಒಂದು ಸಾರಿ ನಾನು ಉಗ್ರಾಣದ ಮೇಲೆ ದಾಳಿಮಾಡುತ್ತಿದ್ದಾಗ ಗಿರಿಯಮ್ಮನವರು ಪುರಾಣಕ್ಕೆ ಹೋಗಿದ್ದವರು ಮನೆಗೆ ವಾಪಸ್ ಬಂದರು. ಮೂರ್ತಿಗಳು,

"ಗಿರಿ, ಇವರು ನೋಡು, ನೀನು ಮನೆಯಲ್ಲಿಲ್ಲದಿದ್ದಾಗ ಅಡಿಗೆಮನೆಗೆ ಹೋಗಿ ಕಲ್ಲುಮರಗಿಗಳನ್ನೆಲ್ಲ ಮುಟ್ಟುತ್ತಾರೆ" ಎಂದು ದೂರು ಹೇಳಿದರು. ಆಕೆ, "ಹೋಗಲೇಳು ಹುಡುಗ. ಅಲ್ಲೇನಿದೆ, ಕೊಬರಿ, ಬೆಲ್ಲ, ಅವಲಕ್ಕಿ. ಮುಸುರೆ ಪದಾರ್ಥ ಏನೂ ಇಲ್ಲ" ಎಂದರು. ಮೂರ್ತಿಗಳು "ನಾನು ಬಂದರೆ ಬೇಡವೆನ್ನುತ್ತೀ" ಎಂದರು.

ಗಿರಿಯಮ್ಮ : "ನೀನು ಆಚಾರ ಕಡಿಮೆ. ಅವರನ್ನ ನೋಡು. ವಿಭೂತಿ ಇಟ್ಟುಕೊಳ್ಳುತ್ತಾರೆ, ಮಂತ್ರ ಹೇಳುತ್ತಾರೆ, ಅವರಿಗೆ ಆಚಾರ ಇದೆ ; ನಿನಗೆ ಅದಿಲ್ಲ."

"ನಾವಿಬ್ಬರೂ ಹೊಟ್ಟೆಬಿರಿಯ ಸಕ್ಕೆವು."

ಇಂಥ ಚಿತ್ರಗಳಿಂದ ಅವರ ಸ್ನೇಹದ ವ್ಯಾಪ್ತಿ ಗೊತ್ತಾಗುತ್ತದೆ. ಈ ಮಹಾ ವ್ಯಕ್ತಿಯ ಒಟ್ಟು ವ್ಯಕ್ತಿತ್ವವನ್ನು ಡಿ.ವಿ.ಜಿ. ನೋಡುವ ರೀತಿಯೇ ಸೊಗಸಾದುದು. ಈ ಭಾಗ ಓದಿ :—

"ನರಸಿಂಹಮೂರ್ತಿಗಳು ನನ್ನ ಬಡಜೀವನದಲ್ಲಿ ಬೆಳಕು ತೋರಿಸಿದ ಮಹಾತ್ಮರು. ಇಂಗ್ಲಿಷ್ ಸಾಹಿತ್ಯದಲ್ಲಿ, ಚರಿತ್ರೆಯಲ್ಲಿ, ಅರ್ಥಶಾಸ್ತ್ರದಲ್ಲಿ, ರಾಜ್ಯ-ಶಾಸ್ತ್ರದಲ್ಲಿ, ಲಾವಿಜ್ಞಾನದಲ್ಲಿ, ತತ್ವಶಾಸ್ತ್ರದಲ್ಲಿ ಅವರು ನೋಡದೆ ಇದ್ದ ಪ್ರಮಾಣ ಗ್ರಂಥವಿಲ್ಲ, ಸ್ವಾಧೀನಪಡಿಸಿಕೊಳ್ಳದೆ ಅವರು ಓದಿದ್ದೇ ಇಲ್ಲ. ಅಷ್ಟು ಪಾರಂಗತ ರಾದರೂ ತಾವು ಆ ವಿಷಯಕ್ಕೆ ಅಧಿಕಾರಿ ಎಂದು ತಿಳಿದುಕೊಂಡಿರಲಿಲ್ಲ. ಯಾವ ವಿಷಯ ಪ್ರಸಕ್ತಿಯಾದರೂ ಇದನ್ನು ನೋಡಬೇಕು. ಹಿಂದೆ ಮುಂದೆ ತೂಗಿ ನೋಡಬೇಕು, ಕಕ್ಷಿ ಪ್ರತಿಕಕ್ಷಿಗಳನ್ನು ತೂಕ ಮಾಡಬೇಕು, ವಾದ ಪ್ರತಿವಾದಗಳನ್ನು ತೋಲನ ಮಾಡಬೇಕು ; ನಿರ್ಣಯವೋ ಎಂದರೆ, 'ಅದು ನಿಮ್ಮ ಅಂತರಂಗ ಸಾಕ್ಷಿಯಂತೆ, ಅದನ್ನು ಇತರರು ಹೇಳತಕ್ಕದ್ದಲ್ಲ. ನಿಮ್ಮ ನಿರ್ಣಯ ನಿಮ್ಮ ಸ್ವಂತ ಅಧಿಕಾರದ್ದು."

"ಈ ರೀತಿ ನನ್ನ ಬುದ್ಧಿವೃತ್ತಿಯನ್ನು ನನ್ನ ಯೋಗ್ಯತೆಯ ಪರಿಮಿತಿಗೆ ಒಳಪಟ್ಟು ತಿದ್ದಿ ಪರಿಷ್ಕಾರಪಡಿಸಿದವರು ನರಸಿಂಹಮೂರ್ತಿಗಳು."

ಇಂಥ ಚಿತ್ರಗಳಿಂದ ಈ ಸಂಪುಟ ತುಂಬ ಗ್ರಾಹ್ಯವಾಗಿದೆ. ದಾನಿಗಳು. ವರ್ತಕರು, ಡಾಕ್ಟರು. ಹಾಸ್ಯಸ್ವಭಾವದವರು, ಅವಧೂತರು. ಹೋಟೇಲ್ ಉದ್ಯಮ. ಬಳ್ಳಾರಿಯ ನಾಟಕ ಕಂಪೆನಿಗಳು. ನಮ್ಮ ಊರಿನ ಗ್ರಾಮದೇವತೆಗಳು. ಇಬ್ಬರು ಮುಸಲ್ಮಾನ ಬಂಧುಗಳು ಮುಂತಾಗಿ ಒಂದು ಬಗೆಯ ಚೌಚೌ ಇಲ್ಲಿದೆ. ಹಾಸ್ಯವೇ ಪ್ರಧಾನವಾಗಿರುವ ಒಂದೆರಡು ಚಿತ್ರಗಳಿವೆ.

'ಒಬ್ಬ ಶಿವಶರಣರು' ಎಂಬ ಭಾಗ ಡಿ.ವಿ.ಜಿ. ಅವರ 'Practical joke' ಗೆ ಒಳ್ಳೆಯ ಉದಾಹರಣೆ. ಅದನ್ನು ಓದಿದಾಗ ಪ್ರಾಚೀನ ಕಾವ್ಯಮಾರ್ಗ. ವೇದಾಂತ, ರಾಜ್ಯಶಾಸ್ತ್ರ, ಕಾನೂನು, ಪೌರಾಡಳಿತ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಮಹಾಸಾಧನೆ ಮಾಡಿರುವ ಡಿ.ವಿ.ಜಿ.ಗೂ ಈ ಹೊಸ ಡಿ.ವಿ.ಜಿ.ಗೂ ಇರುವ ಅಂತರವನ್ನು ಕಂಡು ನಮಗೆ ಆಶ್ಚರ್ಯವಾಗುತ್ತದೆ. ಒಬ್ಬ ವ್ಯಕ್ತಿಯ ಎರಡು ಬೇರೆ ಬೇರೆ ಮುಖಗಳ ಪರಿಚಯವೂ ಆಗುತ್ತದೆ.

ಡಿ.ವಿ.ಜಿ. ಅವರನ್ನು ಹತ್ತಿರದಿಂದ ಬಲ್ಲವರಿಗೆ ಇವೆರಡೂ ಚಿರಪರಿಚಿತ ವಾದುವು. ಆ ಒಂದು ಸ್ವಾರಸ್ಯ ಈ ಲೇಖನಗಳಲ್ಲಿ ಕಾಣಬರುತ್ತದೆ.

———

ಜೀವನಚರಿತ್ರಕಾರರಾಗಿ ಡಿ.ವಿ.ಜಿ.

ಎಂ. ಎಚ್. ಕೃಷ್ಣಯ್ಯ

ಜೀವನಚರಿತ್ರಕಾರರಾಗಿ ಡಿ.ವಿ.ಜಿ.ಯವರ ಸಾಧನೆಯನ್ನು ಗುರುತಿಸುವುದಕ್ಕೆ ಹಿನ್ನೆಲೆಯಾಗಿ, ನಾವು ಜೀವನಚರಿತ್ರೆಯನ್ನು ಓದುವುದೇಕೆ ಎಂಬ ಪ್ರಶ್ನೆಯನ್ನು ಮುಂದಿಟ್ಟು, ಚರಿತ್ರೆ (ಎಂದರೆ, ಇತಿಹಾಸ), ಜೀವನಚರಿತ್ರೆ, ವ್ಯಕ್ತಿಚರಿತ್ರೆ—ಈ ಮೂರು ಸಾಹಿತ್ಯ ಪ್ರಭೇದಗಳಲ್ಲಿ ಕಂಡುಬರುವ ಮುಖ್ಯ ವ್ಯತ್ಯಾಸಗಳನ್ನು ಕುರಿತು ಶ್ರೀ ಎಂ. ಎಚ್. ಕೃಷ್ಣಯ್ಯನವರು ವಿವೇಚಿಸಿದ್ದಾರೆ. ಈ ಬಗೆಗೆ ಡಿ.ವಿ.ಜಿ. ಅವರು ಕೂಡ ವಿಚಾರ ಮಾಡಿರುವುದನ್ನು ಗಮನಿಸಿ, ಗಮನಾರ್ಹವಾದ ಅವರ ವಾಕ್ಯಗಳನ್ನು ಉದ್ಧರಿಸಿ ಕೊಟ್ಟಿದ್ದಾರೆ. ಅನಂತರ, ಡಿ.ವಿ.ಜಿ. ಅವರ ಮೂರು ಜೀವನಚರಿತ್ರೆಗಳನ್ನು—'ದಾದಾಭಾಯಿ ನವರೋಜಿ', 'ದಿವಾನ್ ರಂಗಾಚಾರ್ಲು', 'ಗೋಪಾಲಕೃಷ್ಣ ಗೋಖಲೆ'—ವಿಮರ್ಶಾತ್ಮಕವಾಗಿ ಪರಿಚಯಮಾಡಿಕೊಟ್ಟಿದ್ದಾರೆ; ಹಾಗೂ ಪೀಠಿಕಾ ರೂಪವಾಗಿ ತಾವು ವಿವರಿಸಿರುವ ಮತ್ತು ಡಿ.ವಿ.ಜಿ.ಯವರು ತಿಳಿಸಿರುವ ಈ ಸಾಹಿತ್ಯ ಪ್ರಕಾರದ ತಾತ್ವಿಕ ನೆಲೆಯಲ್ಲಿ ಒರೆಹಚ್ಚಿನೋಡಿದ್ದಾರೆ.

'ದಾದಾಭಾಯಿ ನವರೋಜಿ' ಯನ್ನು 'ಸಂಕ್ಷಿಪ್ತ ಜೀವನಚರಿತ್ರೆ' ಎಂದು ಡಿ.ವಿ.ಜಿ. ಕರೆದಿದ್ದರೂ ಅದು 'ಜೀವನ ಪರಿಚಯ' ವಷ್ಟೆ ಎಂಬುದು ಕೃಷ್ಣಯ್ಯನವರ ಅಭಿಪ್ರಾಯ. ಸಂಕ್ಷಿಪ್ತ ಜೀವನಚರಿತ್ರೆ ಕೇವಲ ಪರಿಚಯವಾಗಿ ಪರಿಣಮಿಸುವುದು ಅನಿವಾರ್ಯವೇ ಸರಿ. ದಾದಾಭಾಯಿ ನವರೋಜಿಯವರನ್ನು ಕುರಿತು ಡಿ.ವಿ.ಜಿ. ಯವರೇ 1957 ರಲ್ಲಿ ಮಾಡಿರುವ ರೇಡಿಯೋ ಭಾಷಣವನ್ನು ಈ ಸಂಪುಟದ ಮೊದಲ ಭಾಗದಲ್ಲಿ ಸೇರಿಸಿದೆ. ಅದೇ ಭಾಗದಲ್ಲಿ, ಗೋಪಾಲಕೃಷ್ಣ ಗೋಖಲೆ, ವಿ. ಎಸ್. ಶ್ರೀನಿವಾಸಶಾಸ್ತ್ರಿ, ಜಾನ್ ಸ್ಟೂವರ್ಟ್ ಮಿಲ್, ಶೃಂಗೇರಿ ಜಗದ್ಗುರುಗಳು—ಈ ವ್ಯಕ್ತಿಗಳ ಕುರಿತಾದ ಲೇಖನಗಳೂ ಇವೆ. ಇಂತಹ ಬರಪಗಳಲ್ಲಿ 'ವ್ಯಕ್ತಿಚಿತ್ರ' ಗಳಲ್ಲಿ ಕಂಡುಬರುವ ಆತ್ಮೀಯತೆಯಾಗಲಿ ಜೀವನಚರಿತ್ರೆಯ ಸಮಗ್ರತೆಯನ್ನಾಗಲಿ ನಿರೀಕ್ಷಿಸಲಾಗದು.

'ದಿವಾನ್ ರಂಗಾಚಾರ್ಲು' ತಕ್ಕಮಟ್ಟಿಗೆ ವಿಸ್ತಾರವಾಗಿ ನಿರೂಪಿತವಾಗಿರುವ ಜೀವನಚರಿತ್ರೆ. ಈ ಚರಿತೆಯಲ್ಲಿ ಬಂದಿರುವ ಮುಖ್ಯಸಂಗತಿಗಳನ್ನೆಲ್ಲ ಸಂಗ್ರಹಿಸಿ ತಿಳಿಸಿ, ತಮ್ಮ ಒಟ್ಟಾರೆ ಅಭಿಪ್ರಾಯವನ್ನು ಲೇಖಕರು ಹೀಗೆ ತಿಳಿಸಿದ್ದಾರೆ: "...ಒಬ್ಬ ವ್ಯಕ್ತಿಯ ಜೀವನ ಸಾಕಷ್ಟಲ್ಲದಿದ್ದರೂ ಒಟ್ಟಂದವಾಗಿ ಇಲ್ಲಿ ಮೂಡುತ್ತದೆ."

"ಜೀವನಚರಿತ್ರೆಯ ಬಂಧ ಮತ್ತು ರೂಪಾಂಶ ದೃಷ್ಟಿಯಿಂದ 'ಗೋಪಾಲಕೃಷ್ಣ ಗೋಖಲೆ' ಮೇಲಿನ ಎರಡು ಕೃತಿಗಳಿಗಿಂತ ಹೆಚ್ಚು ಸಂಯೋಜಿತವಾಗಿದೆ... ಆರಾಧನಾಭಾವದಿಂದ ಕೂಡಿರದೆ ವಾಸ್ತವಿಕ ಘಟನೆಗಳ ವಿಶ್ಲೇಷಣೆ ಹಾಗೂ ವಿಚಾರಗಳ ಸರಳ ನಿರೂಪಣೆಯಿಂದ ಕೂಡಿರುವುದು ಇದರ ವೈಶಿಷ್ಟ್ಯ...ಕಾರ್ಯಸಾಧನೆಗಳ ಜೊತೆಗೆ ಕಾರ್ಯವಿಧಾನ, ನಡೆನುಡಿಯ ಬಗೆಗೂ ಸ್ವಭಾವಗಳ ಬಗೆಗೂ ತಿಳಿಸುತ್ತ ಗೋಖಲೆಯವರ ವ್ಯಕ್ತಿತ್ವದ ಬಗ್ಗೆ ಗೌರವ ಭಾವನೆ ಮೂಡುವಂತೆ ಮಾಡುವ ನಿರೂಪಣಾರೀತಿ ಸೊಗಸಾಗಿದೆ"—'ಗೋಪಾಲಕೃಷ್ಣ ಗೋಖಲೆ'ಯ ಬಗೆಗೆ ಹೀಗೆ ಅಭಿಪ್ರಾಯಪಟ್ಟು, ಡಿ.ವಿ.ಜಿ. ಅವರ ತರುವಾಯ ಈವರೆಗೆ ರಚಿತವಾಗಿರುವ ಅನೇಕ ಜೀವನಚರಿತ್ರೆಗಳ ಸಾಮಾನ್ಯ ಮಟ್ಟದ ಹಿನ್ನೆಲೆಯಲ್ಲಿ "ಡಿ.ವಿ.ಜಿ.ಯವರ ರಚನೆಗಳು, ರಚನೆಯ ಕಾಲವನ್ನು ಗಮನಿಸಿದಾಗ, ಇತಿಮಿತಿಗಳಿಂದ ಕೂಡಿಯೂ ಮಾದರಿಯಾಗಿ ನಿಲ್ಲುತ್ತವೆ. ಜೀವನಚರಿತ್ರೆಯ ಬಗ್ಗೆ ಅವರೇ ಹೇಳಿದ ಶೀಲನಿದರ್ಶಕ ಘಟನಾವಳಿಗಳು ಮಾತ್ರ ಈ ಮೂರೂ ಕೃತಿಗಳಲ್ಲಿ ಕಡಿಮೆ ಎನ್ನಬಹುದು" ಎಂದು ತಮ್ಮ ನಿರ್ಣಯವನ್ನು ತಿಳಿಸಿದ್ದಾರೆ. (ಜೀವನಚರಿತ್ರೆಯ ಬಗ್ಗೆ ಡಿ.ವಿ.ಜಿ. ಅವರ ಅಭಿಪ್ರಾಯಗಳನ್ನು ಬೇರೆಯ ಕಡೆ—ಈ ಮೊದಲೇ—ಉದ್ಧರಿಸಿ ಕೊಟ್ಟಿದೆ.)

ಜೀವನಚರಿತ್ರೆಯನ್ನು ಒಂದು ಸಾಹಿತ್ಯಪ್ರಕಾರವಾಗಿ ಪರಿಗಣಿಸಲಾಗಿದೆ. ಇತರ ಸಾಹಿತ್ಯಪ್ರಕಾರಗಳಂತೆ ಅದರ ಅರ್ಥವ್ಯಾಪ್ತಿಯೂ ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. ಆ ಬದಲಾವಣೆಗಳನ್ನು, ದೃಷ್ಟಿಭೇದಗಳನ್ನು ಗುರುತಿಸುವ ಮೊದಲು ಒಂದು ಪ್ರಶ್ನೆಗೆ ಉತ್ತರವನ್ನು ಕಾಣಬೇಕಿದೆ. ಜೀವನಚರಿತ್ರೆಯನ್ನು ನಾವು ಏಕೆ ಓದುತ್ತೇವೆ ? ಕಥೆ, ಕಾದಂಬರಿ, ಕಾವ್ಯ, ನಾಟಕಗಳಂತೆ ಜೀವನಚರಿತ್ರೆಯೂ ವೈಯಕ್ತಿಕ ಆಸಕ್ತಿಯನ್ನು ಕೆರಳಿಸುವುದು ಅದಕ್ಕೆ ಮುಖ್ಯ ಕಾರಣ. ಐತಿಹಾಸಿಕ ವಾಸ್ತವಿಕ ಅಂಶಗಳನ್ನೂ ಮೀರಿದ ಗುಣ ಅದರಲ್ಲಿದೆ. ಸಾಮಾನ್ಯವಾಗಿ ನಾವು ಭಾವಿಸುವಂತೆ ಜೀವನಚರಿತ್ರೆ ಇತಿಹಾಸಪ್ರಸಿದ್ಧ ವ್ಯಕ್ತಿಗಳ ಬದುಕನ್ನು ಕುರಿತದ್ದೇ ಆಗಬೇಕಿಲ್ಲ. ಕುಪ್ರಸಿದ್ಧ ವ್ಯಕ್ತಿಗಳ ಬದುಕೂ ಸ್ವಾರಸ್ಯಪೂರ್ಣವಾಗಿರಬಹುದು. ಜೀವನಚರಿತ್ರೆಯ ಮುಖ್ಯ ಆಕರ್ಷಣೆ ಅದರಲ್ಲಿರುವ ಮನುಷ್ಯಸ್ವಭಾವ ಚಿತ್ರಣ ಎನ್ನಬಹುದು. ಆ ಕಾರಣ ಜೀವನಚರಿತ್ರೆಯಲ್ಲಿ ಮನುಷ್ಯನ ರಾಗ ಭಾವಗಳನ್ನು, ಅವನ ವರ್ತನೆಯ, ಅವನ ಕಾರ್ಯಗಳ ಹಿಂದಿನ ಪ್ರೇರಣೆ ಉದ್ದೇಶಗಳನ್ನು ಒಳಹೊಕ್ಕು ವಿಶ್ಲೇಷಿಸಿ ಚಿತ್ರಿಸುವಲ್ಲಿ ಸಾಧ್ಯವಾಗುವುದಾದರೆ ಆ ವ್ಯಕ್ತಿ ದೀನನೂ ಆಗಿರಬಹುದು, ಸಾಮಾನ್ಯನೂ ಆಗಿರಬಹುದು, ಸಮಾಜದಿಂದ ತಿರಸ್ಕೃತನಾದವನೂ ಆಗಿರಬಹುದು. ಮನುಷ್ಯ ಸ್ವಭಾವದ ಬಗೆಗಿನ ಆಸಕ್ತಿಯೇ ಇತ್ತೀಚಿನದು, ಆಧುನಿಕವಾದುದು.

ಚರಿತ್ರೆಯೆಂಬುದು ವಾಸ್ತವಿಕವಾಗಿ ನಡೆದ ಘಟನಾವಳಿಗಳ ನಿರೂಪಣೆ ಅಥವಾ ದಾಖಲೆ ಎಂಬುದು ನಿಜ. ಒಂದು ದೇಶ ಅಥವಾ ಪ್ರದೇಶದ ಜನಜೀವನ ಸಮಷ್ಟಿಯ ದಾಖಲೆ. ಆದರೆ ಜೀವನಚರಿತ್ರೆ ಪ್ರಜ್ಞಾಪೂರ್ವಕವಾಗಿ ಮತ್ತು ಕಲಾತ್ಮಕವಾಗಿ ಒಬ್ಬ ವ್ಯಕ್ತಿಯ ಬದುಕನ್ನು, ಅವನ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. ‘ಚರಿತ್ರೆ’ ಎಂದರೆ ‘ಇತಿಹಾಸ’; ಆದದ್ದು, ನಡೆದದ್ದು ಎಂದಷ್ಟೇ ಅರ್ಥವಲ್ಲ, ಗುಣಶೀಲಗಳು, ವ್ಯಕ್ತಿತ್ವ ಎಂದೂ ಆಗುತ್ತದೆ. ಆದ್ದರಿಂದಲೇ ಜೀವನಚರಿತ್ರೆಯನ್ನು ಇತಿಹಾಸ ಮತ್ತು ಕಾದಂಬರಿ ಎರಡರ ಗುಣಗಳನ್ನು ಒಳಗೊಂಡದ್ದು ಎಂದು ಹೇಳುವುದು. ಇತಿಹಾಸದಂತೆ ನಿರ್ಲಿಪ್ತ, ಕೆಲವೊಮ್ಮೆ ಶುಷ್ಕ ದಾಖಲೆಯೂ ಅಲ್ಲ; ಕಾದಂಬರಿಯಂತೆ ಕಾಲ್ಪನಿಕ ವಸ್ತುವೂ ಅಲ್ಲ. ಇತಿಹಾಸ ಒಂದು ಸಮಾಜದ, ದೇಶದ ಬದುಕನ್ನು ನಿರೂಪಿಸಿದರೆ ಜೀವನಚರಿತ್ರೆ ಒಬ್ಬ ವ್ಯಕ್ತಿಯ ಬದುಕನ್ನು ಪುನಃ ಸೃಷ್ಟಿಸಿ, ಅದಕ್ಕೊಂದು ಬಂಧ-ರೂಪವನ್ನು ಕೊಟ್ಟು ಚಿತ್ರಿಸುತ್ತದೆ. ಕಾದಂಬರಿಯದು, ಜನಜೀವನಾನುಭವದ ಆಧಾರ ಹೊಂದಿದ್ದರೂ, ಕಲ್ಪಿತವಾದರೆ ಇಲ್ಲಿ ಒಬ್ಬ ವ್ಯಕ್ತಿ ವಾಸ್ತವಿಕವಾಗಿ ಬದುಕಿದ ಬದುಕನ್ನು, ಅವನ ಜೀವನದಲ್ಲಿ ಘಟಿಸಿದ ವಾಸ್ತವ ಸಂಗತಿಗಳನ್ನು ಕಾಣುತ್ತೇವೆ. ಹೀಗಾಗಿ ಜೀವನಚರಿತ್ರಕಾರನಿಗೆ ವಸ್ತುಸ್ಥಿತಿಯ ಬಗ್ಗೆ ಪ್ರಾಮಾಣಿಕತೆಯೂ ಇರಬೇಕಾಗುತ್ತದೆ, ದೊರೆತ ಸಾಮಗ್ರಿಯನ್ನು ಬಳಸಿ ಕಲಾತ್ಮಕ ಕೃತಿಯನ್ನು ರಚಿಸುವ ಪ್ರತಿಭೆಯೂ ಇರಬೇಕಾಗುತ್ತದೆ. ಜಗತ್ತಿನ ಪ್ರಖ್ಯಾತ ಜೀವನಚರಿತ್ರೆಗಳು ಆಯಾ ವ್ಯಕ್ತಿಗಳ ಬದುಕಿನ ನಿರೂಪಣೆಗಷ್ಟೇ ಸೀಮಿತವಾಗದೆ, ವಾಸ್ತವಿಕ ಸಂಗತಿಗಳ ಸಂಗ್ರಹ, ದಾಖಲೆಗಳಿಗೆ ಮಾತ್ರ ಮಿತಿಗೊಳ್ಳದೆ ಒಬ್ಬ ವ್ಯಕ್ತಿಯ ಒಂದು ಬದುಕಿನ ಜೀವಂತ ಚಿತ್ರವನ್ನು ಪುನಃ ಸೃಷ್ಟಿಸಿ ನೀಡುತ್ತವೆ. ವ್ಯಕ್ತಿಯ ಬದುಕಿನೊಂದಿಗೆ ಆತನ ಕಾಲ, ಸಮಾಜಗಳೂ ತೆರೆದುಕೊಳ್ಳುತ್ತವೆ.

ಸ್ಥೂಲವಾಗಿ ‘ಜೀವನಚರಿತ್ರೆ’ಯ ಸ್ವರೂಪದ ಬಗ್ಗೆ ಹೀಗೆ ಹೇಳಬಹುದಾದರೂ ಜೀವನಚರಿತ್ರಕಾರರ ಉದ್ದೇಶ, ವ್ಯಕ್ತಿ ವೈಶಿಷ್ಟ್ಯ, ಒಲವು-ನಿಲುವುಗಳ ಕಾರಣವಾಗಿ ಅಭಿಪ್ರಾಯ ಭೇದಗಳು ಕಾಲಕಾಲಕ್ಕೆ ಕಾಣಿಸಿಕೊಂಡವು. ಭಾರತದಲ್ಲಿ ಐತಿಹಾಸಿಕ ಪ್ರಜ್ಞೆ ಎಷ್ಟರಮಟ್ಟಿಗೆ ಶತಮಾನಗಳಿಂದಲೂ ಇತ್ತು ಎಂಬುದೆ ಸಂಶಯಾಸ್ಪದ. ಹೀಗಾಗಿ ರಾಜರುಗಳೋ ಪ್ರಧಾನಿಗಳೋ ಅಥವಾ ಅವರ ವಂಶಸ್ಥರೋ ಹೇಳಿ ಬರೆಯಿಸುತ್ತಿದ್ದ ‘ಚರಿತ್ರೆ’ಗಳು—ಜೀವನಚರಿತ್ರೆ, ಅಂದರೆ ವ್ಯಕ್ತಿಚರಿತ್ರೆಯೂ ಸೇರಿದಂತೆ—ಆಯಾ ವ್ಯಕ್ತಿಗಳ ವೈಭವಗಳ ನಿರೂಪಣೆಯೋ, ಗುಣಗಾನವೇ ಆಗಿರುತ್ತಿದ್ದುವು. ರಾಜರು ವಿಷ್ಣುವಿನ ಅಂಶಜನ್ಯರಾದ ಕಾರಣ ದಿವ್ಯಾವತಾರಗಳೇ ಆಗುತ್ತಿದ್ದರು. ವಾಸ್ತವಿಕ ಸಂಗತಿಗಳನ್ನು, ನಿಜವಾದ ವ್ಯಕ್ತಿತ್ವವನ್ನು ಹೆಕ್ಕಿತೆಗೆದು ಕಲ್ಪಿಸಿಕೊಳ್ಳಬೇಕಷ್ಟೆ ! ಇಂತಹ ಸ್ಥಿತಿ, ಜೀವನಚರಿತ್ರೆಯ ಸಾಹಿತ್ಯಪ್ರಕಾರ ರೂಪತಳೆದ ಪಾಶ್ಚಾತ್ಯರಲ್ಲೂ ಹಿಂದೆ ಇದ್ದದ್ದೇ ಆಗಿದೆ. ಕ್ರಿ.ಶ. ಒಂದನೆಯ ಶತಮಾನದಿಂದಲೂ ಬಗೆಬಗೆಯ ಜೀವನಚಿತ್ರಗಳು ಬಂದಿವೆ. ವ್ಯಕ್ತಿಯ ಬದುಕಿನ ಘಟನೆಗಳು ಆತನ

ವ್ಯಕ್ತಿತ್ವದ ಸಂಕೇತವಾಗಿ ಪ್ರಾಮುಖ್ಯ ಪಡೆಯುವುದರ ಬದಲು ಪ್ಲುಟಾರ್ಕ್‌ನ ದೃಷ್ಟಿಯಲ್ಲಿ ಯುದ್ಧಗಳು ಮುಖ್ಯವಾದುವು. ಆದರೂ ಆವನ ಜೀವನಚಿತ್ರಗಳು ಓದಿಸಿಕೊಳ್ಳುತ್ತವೆ, ಪ್ರಸಿದ್ಧವಾಗಿವೆ. ಇದಕ್ಕೆ ಕಾರಣ ಆತ ಉದ್ದೇಶಪೂರ್ವಕವಾಗಿ, ಪ್ರಜ್ಞಾಪೂರ್ವಕವಾಗಿ ಅಲ್ಲದಿದ್ದರೂ ಸಣ್ಣಪುಟ್ಟ ಸಂಗತಿ, ಘಟನೆ, ವಿಷಯಗಳನ್ನು ನಿರೂಪಿಸಿರುವುದಾಗಿದೆ. ಅಲ್ಲಲ್ಲಿ ಬರುವ ಹಾಸ್ಯ ಪ್ರಸಂಗಗಳೂ, ವಿಚಿತ್ರ ವರ್ತನೆಗಳೂ ವ್ಯಕ್ತಿಯ ಸ್ವಭಾವಕ್ಕೆ ಇಣುಕುನೋಟವನ್ನು ಒದಗಿಸುತ್ತವೆ. ಈ 'ಸಣ್ಣಪುಟ್ಟ ಸಂಗತಿಗಳ ಮೇಲಿನ ಒತ್ತು' ಆತ ಇಂದಿಗೂ ಪ್ರಸಿದ್ಧ ಜೀವನಚರಿತ್ರಕಾರ ಎಂಬುದಕ್ಕೆ ಕಾರಣವಾಗಿದೆ.

ಜೀವನಚರಿತ್ರಕಾರನ ಈ ಒಂದು ದೃಷ್ಟಿಯನ್ನು ಅದ್ಭುತವಾಗಿ ತೋರಿದವನು ಬಾಸ್ವೆಲ್. ಕ್ಷುಲ್ಲಕ, ವಿಚಿತ್ರ ಎನ್ನಬಹುದಾದ ಸಂಗತಿಗಳನ್ನೂ ಬಳಸಿಕೊಂಡು ಸಂಭಾಷಣೆಗಳು, ಪತ್ರವ್ಯವಹಾರಗಳನ್ನು ಆಧರಿಸಿ ರಚಿಸಿರುವ ಜಾನ್ಸನ್‌ನ ಜೀವನ ಚರಿತ್ರೆ ವಸ್ತುನಿಷ್ಠ ಚಿತ್ರ ನೀಡುವುದಷ್ಟೇ ಅಲ್ಲದೆ ದೋಷದೌರ್ಬಲ್ಯ, ಆರೆಕೊರೆಗಳಿಂದ ಕೂಡಿದ ಜಾನ್ಸನ್‌ನ ಶಿಲ್ಪವನ್ನು ಚೈತನ್ಯಪೂರ್ಣವಾಗಿ ಕಡೆದು ನಿಲ್ಲಿಸುತ್ತದೆ. ಜೀವನಚರಿತ್ರೆಯ ಸ್ವರೂಪದ ಒಂದು ಉತ್ಕೃಷ್ಟ ಮಾದರಿ ಇದು. ಆದರೆ ಎಲ್ಲರಿಗೂ ಆ ಅನುಕೂಲ-ಸೌಲಭ್ಯ, ಆ ಅವಕಾಶ, ಆ ದೃಷ್ಟಿ ಇರುವುದಿಲ್ಲ ಎಂಬುದನ್ನು ಮರೆಯುವಂತಿಲ್ಲ. ಕೆಲವು ಜೀವನಚರಿತ್ರಕಾರರ ಮುನ್ನುಡಿ ಅಥವಾ ಪೀಠಿಕೆಗಳನ್ನು —ಡಿ.ವಿ.ಜಿ.ಯವರೂ ಇದಕ್ಕೆ ಹೊರತಲ್ಲ—ಓದಿದಾಗ ಸಾಮಗ್ರಿ ಸಂಗ್ರಹದ ಸಂಕಷ್ಟಗಳ ಅರಿವಾಗುತ್ತದೆ.

ವಿಕ್ಟೋರಿಯನ್ ಯುಗದ ಜೀವನಚರಿತ್ರೆಗಳ ಬಗೆ ಬೇರೆಯಾಯಿತು. ಸಾಮ್ರಾಜ್ಯದ ಹೊಗರೇರಿದ ಜೀವನದೃಷ್ಟಿಗೆ ನೈತಿಕವೌಲ್ಯ, ಆಚಾರನಿಷ್ಠೆ, ವೈಭವಾಲಂಕಾರಗಳು ಅಗತ್ಯವಾಗಿ ಕಂಡು ವಾಸ್ತವಘಟನೆಗಳ ವ್ಯಕ್ತಿತ್ವಗಳ ನಿರೂಪಣೆಯಲ್ಲೂ ಆ ರಂಗು ಲೇಪಿತವಾಯಿತು. ಆದರೆ ಒಳ್ಳೆಯದನ್ನು, ಶ್ರೇಷ್ಠವಾದದ್ದನ್ನು ಮಾತ್ರ ನೀಡಬೇಕು ಎಂಬ ತತ್ತ್ವ ಶ್ಲಾಘನೀಯವಾದರೂ ಇತಿಹಾಸಕ್ಕೆ ಅಪಚಾರವಾಗುವ ಸಂಭವವೇ ಹೆಚ್ಚು. ಅಂತಹ ಜೀವನಚರಿತ್ರೆಯ ಕೇಂದ್ರವ್ಯಕ್ತಿ ಆಪ್ತೀಯವಾಗುವುದಕ್ಕಿಂತ ದೂರ ಉಳಿಯುವ, ಅನನುಕರಣೀಯ ಆದರ್ಶವಾಗುವ ಸಂಭವ ಹೆಚ್ಚು ಎನ್ನಬಹುದು. ಸಹಜವಾಗಿ ಈ ಬಗೆಯ ಜೀವನಚರಿತ್ರ ವಿಧಾನಕ್ಕೆ ಮುಂದಿನ ಶತಮಾನದಲ್ಲಿ ವಿಪರೀತ ಪ್ರತಿಕ್ರಿಯೆಯುಂಟಾಯಿತು. ಕಾಲ ಮತ್ತು ಜೀವನ ಸಂಬಂಧಕ್ಕೆ ಪ್ರಾಧಾನ್ಯ ನೀಡುವ ಸಾಂಪ್ರದಾಯಿಕ ದೃಷ್ಟಿ ಹಾಗೂ ಅತಿಯಾದ ಹೊಗಳಿಕೆಯಿಂದ ಕೂಡಿದ ಆರಾಧನಾ ಭಾವನೆಯಿಂದ ಜೀವನಚರಿತ್ರೆಯ ಉದ್ದೇಶಕ್ಕೆ ಭಂಗ ಬರುತ್ತದೆಂಬ ಭಾವನೆ ಬೆಳೆಯಿತು; ವಸ್ತುನಿಷ್ಠ, ನಿರ್ಲಿಪ್ತ ನಿರೂಪಣಾ ವಿಧಾನಕ್ಕೆ ಪುರಸ್ಕಾರ ಸಂದಿತು.

ಈ ಸಂದರ್ಭದಲ್ಲಿ ಫ್ರಾಯ್ಡನ ವಿಚಾರಧಾರೆ ಸಾಹಿತ್ಯಕ್ಷೇತ್ರದಲ್ಲಿ ಪ್ರಬಲ ವಾದ ಪ್ರಭಾವ ಬೀರಿತು. ಇತಿಹಾಸದ ಘಟನೆಗಳ ವಿಶ್ಲೇಷಣೆಯಾಗಲಿ, ಕಾದಂಬರಿಯ ಪಾತ್ರಗಳ ಸೃಷ್ಟಿಯಾಗಲಿ ಮನೋವಿಜ್ಞಾನದ ಹೊಸ ನೋಟಗಳಿಂದ ಪ್ರೇರಿತ ವಾದುವು. ಜಿ. ಬ್ರಾಡ್‌ಫರ್ಡ್ ಹೊಸ ಬಗೆಯ ಜೀವನಚರಿತ್ರೆಯ ವಿಧಾನವನ್ನು ಬಳಸಿದ. ತನ್ನ ರಚನೆಗಳನ್ನು 'ಸೈಕೋ-ಬಯೋಗ್ರಫಿ' ಎಂದು ಕರೆದ. ವ್ಯಕ್ತಿಯ ಬದುಕಿನ ಘಟನೆಗಳನ್ನು ಎಚ್ಚರಿಕೆಯಿಂದ ಆರಿಸಿ, ಅವುಗಳ ಮೂಲಕ ಮಾನಸಿಕ ಪ್ರವೃತ್ತಿಯ ಎಳೆಗಳನ್ನು ಗುರುತಿಸಿದ. ಇದು ವ್ಯಕ್ತಿಯ 'ಅಂತರಂಗ ವ್ಯಕ್ತಿತ್ವ'ದ ಚಿತ್ರಣ ಎಂದನು. ಅಮೆರಿಕೆಯಲ್ಲಿ ಈ ಬಗೆಯ ರಚನೆಗಳು ಜನಪ್ರಿಯವಾದುವು. ಮಾರ್ಕ್ ಟ್ವೈನ್, ಹೆನ್ರಿ ಜೇಮ್ಸ್ ಮುಂತಾದವರನ್ನು ಕುರಿತ ಜೀವನಚಿತ್ರಣಗಳಲ್ಲಿ ಈ ವಿಧಾನವನ್ನು ಕಾಣಬಹುದು.

ಆಧಾರ ಸಾಮಗ್ರಿ ಹೇರಳವಾಗಿ ದೊರೆಯುವಾಗ, ಎಲ್ಲವನ್ನೂ ಬಳಸಿಕೊಂಡ ಒಂದೆರಡು ಅಪವಾದ ಬಿಟ್ಟರೆ, ಉಳಿದಂತೆ 'ಆಯ್ಕೆ ಮತ್ತು ವಿಶ್ಲೇಷಣೆ'ಯ ತಂತ್ರವಿಧಾನಕ್ಕೆ ಜೀವನಚರಿತ್ರಕಾರ ರಾಜಿಯಾಗಲೇಬೇಕಾಗುತ್ತದೆ- ಇದು ಹಿಂದೆಯೂ ಇತ್ತು, ವಿಕ್ಟೋರಿಯನ್ ಕಾಲದಲ್ಲೂ ಇತ್ತು, ಈಗಲೂ ಇದೆ. ಹಿಂದಿ ನಂತೆ ದಾಖಲೆಗಳು, ಪತ್ರವ್ಯವಹಾರಗಳನ್ನು ಹೆಚ್ಚು ಆಧರಿಸಿ, ಉದ್ಧರಿಸುತ್ತ ಜೀವನ ಚಿತ್ರಣ ನಿರೂಪಣೆಗೆ ತೊಡಗುವ ಬದಲು ಆಧುನಿಕ ಕಾಲದಲ್ಲಿ ಒಟ್ಟು ಬಂಧ, ಆಲೋಚನೆ, ವಿಚಾರ, ತತ್ವ, ವ್ಯಕ್ತಿತ್ವಗಳ ಏಕಸೂತ್ರತೆಯ ದೃಷ್ಟಿಯಿಂದ ರೂಪಾಂಶಕ್ಕೆ ಸಂಕೀರ್ಣತೆಗಿಂತ ಸಂಕ್ಷಿಪ್ತತೆಯ ಒಟ್ಟು ಪರಿಣಾಮಕ್ಕೆ ಹೆಚ್ಚು ಗಮನ ನೀಡಲಾಗು ತ್ತಿದೆ. ಜೀವನಚರಿತ್ರಕಾರ ಒಂದು ಉದ್ದೇಶ, ಒಂದು ಗುರಿ, ಒಂದು ಸಿದ್ಧಾಂತವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದಕ್ಕೆ ಹೊಂದದ ಹಾಗೂ ಅನಾವಶ್ಯಕವಾದುವುಗಳನ್ನು ಕೈಬಿಟ್ಟು, ಮುಖ್ಯ ಹಾಗೂ ವ್ಯಕ್ತಿತ್ವ ಪ್ರಸ್ಫುಟನೆಗೆ ಅಗತ್ಯವಾದುವನ್ನು ಮಾತ್ರ ಬಳಸಿಕೊಂಡು ಜೀವನಚರಿತ್ರೆ ರಚಿಸುವ ವಿಧಾನ ರೂಢಿಯಾಗಿದೆ. ಈ ಬಗೆಯ ಜೀವನಚರಿತ್ರೆ ಸಂದೇಶ, ವ್ಯಾಖ್ಯಾನಗಳ ದೃಷ್ಟಿಯಿಂದ ಪುರಸ್ಕರಣೀಯ ಎನಿಸಿದರೂ ಅಪೂರ್ಣವಾಗಿ ಉಳಿಯುವ ಸಂಭವವೇ ಹೆಚ್ಚು. ಅಲ್ಲದೆ ಜೀವನಚರಿತ್ರಕಾರ ತನ್ನ ರಾಜಕೀಯ ದೃಷ್ಟಿ, ಜೀವನಧೋರಣೆಗಳಿಗೆ ಹೊಂದುವ ವ್ಯಕ್ತಿಯನ್ನು ಆರಿಸಿ ಕೊಂಡು, ಎಷ್ಟೋ ವೇಳೆ ವಸ್ತುನಿಷ್ಠ ವಿಶ್ಲೇಷಣೆ ಹಾಗೂ ವ್ಯಾಖ್ಯಾನಕ್ಕಿಂತ ವೈಯಕ್ತಿಕ, ಸ್ವಕೀಯ ವಿಚಾರಗಳನ್ನು ಆರೋಪಿಸುವ ಸಂಭವವುಂಟು. ಚರ್ಚಿಲ್, ಡಿಗಾಲೆ, ಇಂದಿರಾ ಗಾಂಧಿಯವರ ಜೀವನಚರಿತ್ರೆಗಳನ್ನು ಯಾರು, ಯಾವ ದೇಶ ದವರು, ಯಾವ ರಾಜಕೀಯ ಸಿದ್ಧಾಂತಗಳಿಗೆ ಒಲವಿರುವವರು ಬರೆದಿದ್ದಾರೆ ಎಂಬುದರ ಮೇಲೆ ವ್ಯಕ್ತಿತ್ವದ ಕಲ್ಪನೆ ಬಗೆ ಬಗೆಯಾಗಿ ಮೂಡುತ್ತದೆ. ಜಿನ್ನಾರನ್ನು ಕುರಿತ ಜೀವನಚಿತ್ರಗಳು ಭಾರತ ವಿಭಜನೆಯ ಪೂರ್ವ ಸಂಕೀರ್ಣ ಘಟನಾವಳಿಗಳ ಹಿನ್ನೆಲೆಯಲ್ಲಿ ಅವರ ಬಗ್ಗೆ ಬೇರೆ ಬೇರೆ ಭಾವನೆ ಮೂಡಿಸುತ್ತವೆ.

ಅಲ್ಲದೆ, ಎಷ್ಟೇ ವಸ್ತುನಿಷ್ಠವಾಗಿದ್ದರೂ ಆಯ್ಕೆಯ ವಿಧಾನದಿಂದ ವ್ಯಕ್ತಿತ್ವದ ಒಂದೆರಡು ಮುಖಗಳ ಪರಿಚಯ ಪ್ರಾಧಾನ್ಯದಿಂದ, ಬಹುಮುಖಿ ವ್ಯಕ್ತಿತ್ವವುಳ್ಳ, ವಿಚಾರ ಸತ್ವವುಳ್ಳ ವ್ಯಕ್ತಿಯ ಬದುಕು ಅಪೂರ್ಣವಾಗಿಯೇ ಉಳಿಯುತ್ತದೆ. ಶ್ರಮ ವಹಿಸಿ ಇತಿಹಾಸಗ್ರಂಥವನ್ನು ರಚಿಸಬಹುದು, ಪ್ರತಿಭೆಯಿಂದ ಕಾದಂಬರಿಯನ್ನೂ ರಚಿಸಬಹುದು. ಆದರೆ ಜೀವನಚರಿತ್ರೆಯ ರಚನೆಯು ಕಷ್ಟಸಾಧ್ಯ ಎಂಬುದು ನಿಜ. "ವ್ಯಕ್ತಿ ಇದ್ದಂತೆ" ಪೂರ್ಣರೂಪದ ಜೀವನಚರಿತ್ರೆಯ ರಚನೆಗೆ, ಸಾಮಗ್ರಿಯನ್ನು ಬಳಸಿಕೊಳ್ಳುವ ಬಗೆ, ಹಾಗೂ ಪೂರ್ಣ ಪ್ರಾಮಾಣಿಕತೆಯ ಜೊತೆಗೆ ಆ ವ್ಯಕ್ತಿಯ ಬಗ್ಗೆ ಪೂರ್ವಭಾವನೆಗಳಿಂದ ಮುಕ್ತವಾದ ಸಹಾನುಭೂತಿ ಇರಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ, ಡಿ.ವಿ.ಜಿ.ಯವರು ಬರೆದಿರುವ ಮೂರು ಜೀವನಚರಿತ್ರೆಗಳನ್ನು ಪರಿಶೀಲಿಸುವಾಗ ಅವು ರಚಿತವಾದ ಕಾಲ ಹಾಗೂ ಅವರಿಗಿದ್ದ ಇತಿಮಿತಿಗಳನ್ನು ಮರೆಯುವಂತಿಲ್ಲ. ಈ ಶತಮಾನದ ಮೊದಲ ದಶಕಗಳಲ್ಲಿ ಈ ಮೂರೂ ಕೃತಿಗಳು—ದಾದಾಭಾಯಿ ನವರೋಜಿ, ದಿವಾನ್ ರಂಗಾಚಾರ್ಲು, ಗೋಪಾಲಕೃಷ್ಣ ಗೋಖಲೆ—ರಚಿತವಾಗಿವೆ. ಆಗಿನ್ನೂ ಕನ್ನಡ ಸಾಹಿತ್ಯದ ನವೋದಯ ಕಾಲದ ಪ್ರಾರಂಭದ ಪ್ರಯೋಗಗಳು ಆಗುತ್ತಿದ್ದುವು. ಹಲವಾರು ದಶಕಗಳ ಅನಂತರ ಬಂದ ಕೃತಿಗಳೊಡನೆ ಹೋಲಿಸಿ ಈ ಕೃತಿಗಳ ವಿಮರ್ಶೆ ಮಾಡಬೇಕಾಗಿಲ್ಲ ಎಂಬುದು ಮುಖ್ಯ. ಅನಂತರದಲ್ಲಿ ಡಿ.ವಿ.ಜಿ.ಯವರೇ ವಿಸ್ತಾರವಾದ ಜೀವನಚರಿತ್ರೆಗಳನ್ನು ರಚಿಸದಿದ್ದರೂ ಜ್ಞಾಪಕ ಚಿತ್ರಶಾಲೆಯ ಮೂಲಕ ಒಂದು ಪ್ರದೇಶದ ವಿಭಿನ್ನ ಕ್ಷೇತ್ರಗಳ ಮಹನೀಯರ ವ್ಯಕ್ತಿಚಿತ್ರಗಳನ್ನು ನೀಡಿದ್ದಾರೆ. ಆ ಚಿತ್ರಗಳ ಮಾಲೆಗೆ. ಗ್ಯಾಲರಿ ಅರ್ಥದಲ್ಲಿ 'ಚಿತ್ರಶಾಲೆ' ಶಬ್ದ ಬಳಸಿದ್ದಾರೆ. ಉಪೋದ್ಘಾತ ರೂಪದಲ್ಲಿ ಜೀವನಚರಿತ್ರ ಸಾಹಿತ್ಯರೂಪಕ್ಕೆ ಸಂಬಂಧಿಸಿ ತಮ್ಮ ದೃಷ್ಟಿ ಏನು ಎಂಬುದನ್ನು ತಿಳಿಸಿದ್ದಾರೆ. ಅದನ್ನು ಗಮನಿಸಿ ಮೇಲಿನ ಮೂರೂ ಕೃತಿಗಳನ್ನು ಪರಿಶೀಲಿಸಬಹುದು.

ಡಿ.ವಿ.ಜಿ.ಯವರ ದೃಷ್ಟಿಯಲ್ಲಿ "'ಚರಿತ್ರೆ'ಯೆಂದರೆ ದೇಶದ ಚರಿತ್ರೆ. ಹಿಸ್ಟರಿ (History) ಎಂದೂ. ಯಾವುದಾದರೊಂದು ಭೂಭಾಗದ ಅಥವಾ ಪ್ರದೇಶದ ಚರಿತ್ರೆ ಎಂದೂ, 'ವ್ಯಕ್ತಿಚರಿತ್ರೆ' ಎಂದರೆ ಒಬ್ಬಾನೊಬ್ಬ ಪ್ರಸಿದ್ಧ ಮನುಷ್ಯನ ಅಥವಾ ಮಹಿಳೆಯ ಜೀವನಚರಿತ್ರೆ, ಬಯೋಗ್ರಫಿ (Biography) ಎಂದೂ ಸಂಕೇತ" ಎಂಬುದಾಗಿದೆ. ಮುಂದೆ ಒಂದೆಡೆ "ದೇಶಚರಿತ್ರೆ ಜನತೆಯ ಬಹಿರಂಗ ವ್ಯಾಪಾರವಾದರೆ ಜೀವನಚರಿತ್ರೆಯು ಅವರ ಅಂತರಂಗ ಚಲಿತ" ಎಂದಿದ್ದಾರೆ. ಇವೆರಡಕ್ಕೂ ಇರುವ ಸಂಬಂಧವನ್ನು ಹಿಂದಿನಿಂದಲೇ ದೀರ್ಘವಾಗಿ ಆಲೋಚಿಸಿದ್ದಾರೆ ಎಂಬುದು ಸ್ಪಷ್ಟ. "ಈ ಹೊತ್ತು ನಾವು ಯಾವುದನ್ನು ಚರಿತ್ರೆ ಎನ್ನುತ್ತೇವೆಯೋ ಅದರ ಸಂಗತಿ ನಿನ್ನೆಯ ರಾಜಕೀಯ. ನಮ್ಮ ಈ ಹೊತ್ತಿನ ರಾಜಕೀಯ ನಾಳೆಯ ಚರಿತ್ರೆಗೆ ವಸ್ತುವಾಗುತ್ತದೆ" ಎಂಬ ಹೇಳಿಕೆಯನ್ನು ಉದ್ಧರಿಸಿ, ಚರಿತ್ರೆಯ ವಿಷಯದಲ್ಲಿ ತಮಗಿರುವ ದೇಶದ ರಾಜಕೀಯ ಹಾಗೂ ಸಾರ್ವಜನಿಕ ಕ್ಷೇತ್ರದ

ಒಲವನ್ನೂ ಸೂಚಿಸಿದ್ದಾರೆ. ಆದರೆ ರಾಜಕೀಯ ಜೀವನದಚರಿತ್ರೆಯೇ ಚರಿತ್ರೆಯೆಂದೇನೂ ಅವರು ಭಾವಿಸಿಲ್ಲ. ಅವರ ದೃಷ್ಟಿಯಲ್ಲಿ ಚರಿತ್ರೆ ವಿಶಾಲವಾದ ಅರ್ಥವನ್ನು ಪಡೆಯುತ್ತದೆ: "ಚರಿತ್ರೆ ನಮ್ಮನ್ನು ಎಂದೂ ಬಿಟ್ಟಿದ್ದಲ್ಲ ಎಂದು. ನಾವು ಮಾಡುವುದು, ಮಾಡದೆ ಬಿಡುವುದು, ನಾವು ಪಡುವುದು, ಪಡದೆ ತಪ್ಪಿಸಿಕೊಳ್ಳುವುದು, ಇಂಥ ಎಲ್ಲ ಪಾಡೂ ಚರಿತ್ರೆಯೇ ಆದದ್ದರಿಂದ ನಾವು ಮಾಡುವುದರಲ್ಲಿಯೂ ಪಡುವುದರಲ್ಲಿಯೂ ವಿವೇಕದಿಂದ ನಡೆದುಕೊಂಡರೆ ಆಪಾಯಗಳು ತಪ್ಪುತ್ತವೆ, ಇಷ್ಟಾರ್ಥಗಳು ಕೊಂಚ ಮಟ್ಟಿಗಾದರೂ ಕೈಗೂಡುತ್ತವೆ ಎಂಬುದು. ಇಂಥ ವಿವೇಕವನ್ನು ನಾವು ಸಂಪಾದಿಸಿಕೊಳ್ಳಬೇಕೆಂದರೆ ಚರಿತ್ರೆಯ ವ್ಯಾಸಂಗವೇ ನಮಗಿರುವ ದಾರಿ." ಚರಿತ್ರೆಯ ಒಂದು ಅಂಗವೇ ಜೀವನಚರಿತ್ರೆ ಎಂದು ಅವರ ದೃಷ್ಟಿ. "ದೇಶಚರಿತ್ರೆಯು ಹೀಗೆ ಸಮಗ್ರ ಜನಜೀವನದ ಪ್ರತಿಬಿಂಬವಾದರೆ ವ್ಯಕ್ತಿಚರಿತ್ರೆಯು ಜನಜೀವನದ ಮೂಲಾಂಕುರಪ್ರಾಯಗಳಾದ ಮಹಾಪುರುಷರ ಪ್ರತಿಬಿಂಬ...ಜನಜೀವನಕ್ಕೆ ಕೊಂಚವಾಗಿಯೋ ಹೆಚ್ಚಾಗಿಯೋ ಅಂಕುರಪ್ರಾಯರಾಗಿದ್ದವರು ಗಣ್ಯಪುರುಷರು. ಅಂಥವರ ಚರಿತ್ರೆ ಜೀವನಚರಿತ್ರೆ (Biography). ಹೀಗೆ ಜೀವನಚರಿತ್ರೆ ಎಂಬ ಸಾಹಿತ್ಯ ಜಾತಿಯು ದೇಶಚರಿತ್ರೆ ಎಂಬ ಸಾಹಿತ್ಯಕ್ಕೆ ಅಂಗಭೂತವಾದದ್ದು. ಜೀವನಚರಿತ್ರೆಯನ್ನು ದೇಶಚರಿತ್ರೆಯ ಅಂತರಂಗವೆಂದು ಭಾವಿಸುವುದು ಯುಕ್ತವಾಗುತ್ತದೆ." ಅಲ್ಲದೆ "ವ್ಯಕ್ತಿಚರಿತ್ರೆಗೆ ಬೇಕಾದದ್ದು ಶೀಲ ನಿದರ್ಶಕವಾದ ಘಟನೆಗಳು" ಎಂದಿದ್ದಾರೆ.

ಆದ್ದರಿಂದ ಅವರ ದೃಷ್ಟಿಯಲ್ಲಿ ಜೀವನಚರಿತ್ರೆಯ ವಸ್ತು ಅಥವಾ ಕೇಂದ್ರ ವ್ಯಕ್ತಿ ಗಣ್ಯವ್ಯಕ್ತಿಯಾಗಿರಬೇಕು, ಇತಿಹಾಸದ ಚಾಲನೆಯಲ್ಲಿ ಗಣನೀಯ ಪಾತ್ರ ವಹಿಸಿದವರಾಗಿರಬೇಕು ಎಂಬ ಭಾವನೆ ಮೂಡುತ್ತದೆ. ಆದರೆ ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆಯ ವ್ಯಕ್ತಿಚಿತ್ರಗಳ ವೈವಿಧ್ಯವನ್ನು—ವ್ಯಕ್ತಿತ್ವ ಮಾತ್ರವಲ್ಲ, ಕ್ಷೇತ್ರಸಾಧನೆ ಅಭಿರುಚಿಗಳ ದೃಷ್ಟಿಯಿಂದಲೂ—ಗಮನಿಸಿದರೆ ಬೆರಗಾಗುತ್ತದೆ. ಬಹುಶಃ ದೇಶದ ಸಾಂಸ್ಕೃತಿಕ ಚರಿತ್ರೆಯನ್ನೂ ಇತಿಹಾಸದ ಭಾಗವೆಂದು ಪರಿಗಣಿಸಿದಾಗ ಆ ವ್ಯಕ್ತಿಚಿತ್ರಗಳ ಔಚಿತ್ಯದ ಅರಿವಾಗಬಹುದು. "ಚರಿತ್ರೆ ಸಾಹಿತ್ಯಗಳೆರಡಕ್ಕೂ ಮೂಲದ್ರವ್ಯ ಒಂದೇ. ಅದು ಮನುಷ್ಯ ಸ್ವಭಾವ" ಎಂಬುದು ಅವರಿಗೆ ತಿಳಿದಿದೆ. ಶುದ್ಧ ಸಾಹಿತ್ಯದಲ್ಲೂ ಅವರ ಮನೋಧರ್ಮ ಚಿಂತನಪರವಾದದ್ದು ಎಂಬುದನ್ನು ಗಮನಿಸಿದಾಗ ಜೀವನಚರಿತ್ರೆಯಲ್ಲಿ ಅವರ ಒಲವು ಅವರ ಮಾತನ್ನೇ ಬಳಸುವುದಾದರೆ 'ರಾಜಕಾರ್ಯ' ಹಾಗೂ 'ಸಾರ್ವಜನಿಕ' ಕ್ಷೇತ್ರಗಳ ಕಡೆ ಎಂಬುದು ಸ್ಪಷ್ಟ.

ಗೋಪಾಲಕೃಷ್ಣ ಗೋಖಲೆ ಕೃತಿಯ ಮೊದಲ ಮುದ್ರಣ 1915. ಅದನ್ನು ಕುರಿತು ದಾದಾಭಾಯಿ ನವರೋಜಿಯಲ್ಲಿ ಪ್ರಸ್ತಾಪವಿದೆ. ದಿವಾನ್ ರಂಗಾಚಾರ್ಲು ಮೊದಲು ಪ್ರಕಟವಾದದ್ದು 1911ರಲ್ಲಿ. ದಾದಾಭಾಯಿ ನವರೋಜಿಯ ಮುದ್ರಣ

ಕಾಲವನ್ನು ಸೂಚಿಸಿಲ್ಲ. ಇದೊಂದು ಸಂಕ್ಷಿಪ್ತ ಜೀವನಚರಿತ್ರೆ ಎಂದು ಹೇಳಲಾಗಿದೆ. ಆದರೆ ವಾಸ್ತವವಾಗಿ ಇದರ ಉದ್ದೇಶ, ವ್ಯಾಪ್ತಿ ತುಂಬ ಸೀಮಿತವಾದದ್ದು. ಹದಿನಾಲ್ಕು ಪುಟಗಳ ಗದ್ಯ, ಕೊನೆಯ ಎರಡು ಪುಟಗಳ ಗುಣವರ್ಣನೆ ವಿವಿಧ ಛಂದಸ್ಸಿನ ಪದ್ಯಗಳಲ್ಲಿದ್ದು ಒಟ್ಟು ಹದಿನಾರು ಪುಟಗಳ ಪುಟ್ಟ ಕೃತಿಯನ್ನು ಜೀವನ ಚರಿತ್ರೆಯ ಸಾಹಿತ್ಯಪ್ರಕಾರಕ್ಕೆ ಸೇರಿಸುವುದಕ್ಕಿಂತ ಜೀವನ ಪರಿಚಯದ ಲೇಖನ ಎನ್ನಬಹುದು. ಇಂದು ಪತ್ರಿಕೆಗಳಲ್ಲಿ ಇದಕ್ಕೂ ದೀರ್ಘವಾದ ಜೀವನಚಿತ್ರಗಳು ಪ್ರಕಟವಾಗುತ್ತವೆ. ಡಿ.ವಿ.ಜಿ.ಯವರೆ ಸ್ವತಃ ಜ್ಞಾಪಕಚಿತ್ರಶಾಲೆಯ ಮೈಸೂರು ದಿವಾನರುಗಳು ಸಂಪುಟದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ನೂರು ಪುಟಗಳ ವೈಯಕ್ತಿಕ ಸಂಪರ್ಕಾನುಭವಗಳ, ಸಾಧನೆಗಳ, ಆಚಾರ ವಿಚಾರಗಳ, ಸ್ವಭಾವ ವೈಶಿಷ್ಟ್ಯಗಳನ್ನು ಚಿತ್ರಿಸಿದ್ದಾರೆ. ಅವರಲ್ಲಿ ಅವರ ಜನನ, ವಿದ್ಯಾಭ್ಯಾಸ ಮುಂತಾದ ಜೀವನದ ಇತರ ವಿವರಗಳಿಲ್ಲದಿದ್ದರೂ ವ್ಯಕ್ತಿಯ ವ್ಯಕ್ತಿತ್ವವನ್ನು, ಜೀವನ ಸಾಧನೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅಲ್ಲಿ ದೊರೆಯುವ ಅಂತರಂಗದ ಇಣುಕುನೋಟಗಳು ಆತ್ಮೀಯ ಭಾವನೆಯನ್ನು ತರುತ್ತವೆ. ಇಲ್ಲಿ ದಾದಾಭಾಯಿ ನವರೋಜಿಯವರ ಸಂಕ್ಷಿಪ್ತ ಚರಿತ್ರೆಯೆಂದಿದ್ದರೂ ಆ 'ರೂಪ' ಇದಕ್ಕಿಲ್ಲ ಎನಿಸುತ್ತದೆ. 1925ರ ಸೆಪ್ಟಂಬರ್‌ನಲ್ಲಿ ಪಾರಶೀ ಜನಾಂಗದಲ್ಲಿ ಹುಟ್ಟಿ, 92 ವರ್ಷಕಾಲ ಸಾರ್ಥಕ ಬದುಕನ್ನು ನಡೆಸಿ, 1917ರಲ್ಲಿ ಗತಿಸಿದ ನವರೋಜಿಯವರ ಜೀವನ ಪರಿಚಯ ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿತವಾಗಿದೆ. ಕೊನೆಯ ಎರಡು ಪುಟಗಳಲ್ಲಿ ಅವರ ಜೀವನಚರಿತ್ರೆಯಿಂದ ನಾವು ಕಲಿಯಬೇಕಾದ ನೀತಿಗಳಲ್ಲಿ ಮುಖ್ಯವಾದ ನಾಲ್ಕು ವಿಚಾರಗಳನ್ನು ಪಟ್ಟಿಮಾಡಿದೆ. ಒಂದು, ವಿದ್ಯೆ ವ್ಯಾಪಾರ ವ್ಯವಸಾಯ ಮುಂತಾದ ಸಕಲ ವಿಷಯಗಳಿಗೂ ರಾಜಕೀಯ ವ್ಯವಸ್ಥೆಯೇ ಮುಖ್ಯವಾದ ಆಧಾರ ಎಂಬ ನವರೋಜಿಯವರ ವಿಚಾರ ದೃಷ್ಟಿ. ಎರಡು, 'ಸ್ವರಾಜ್ಯ'ವೇ ಸರ್ವೋತ್ತಮವಾದ ರಾಜ್ಯಭಾರ ಕ್ರಮ—ಸ್ವರಾಜ್ಯವೆಂದರೆ ಪರದೇಶೀಯ ಅಧಿಕಾರಿಗಳನ್ನು ವರ್ಜಿಸುವುದು ಮಾತ್ರವಲ್ಲ; 'ಸ್ವ' ಎಂದರೆ ದೇಶೀಯರೆಲ್ಲರಿಂದಲೂ ಆಗುವ ಅಥವಾ ದೇಶಕ್ಕೆ ಮೂಲಭೂತರಾದ ಪ್ರಜೆಗಳೆಲ್ಲರೂ ಸ್ವಂತ ಏರ್ಪಾಟಿನಿಂದ ನಡೆಯಿಸುವ 'ರಾಜ್ಯ' ಎಂದರೆ ಸರ್ಕಾರ, ಎಂಬ ವಿಚಾರಧಾರೆಯ ಮಹತ್ವ. ಮೂರು, ಜಾತಿ ಮತ ವೈಷಮ್ಯಗಳನ್ನು ಬಿಟ್ಟು ಜನಪದ ಭಾವವನ್ನು ವೃದ್ಧಿಗೊಳಿಸಬೇಕು ಎಂಬುದಕ್ಕೆ ನವರೋಜಿಯವರೇ ಶ್ರೇಷ್ಠ ನಿದರ್ಶನವಾಗಿ. ಆದರ್ಶವಾದ ವಿಷಯ. ನಾಲ್ಕು, ಯಾವ ವಿಚಾರವನ್ನಾಗಲಿ ಸಿದ್ಧಾಂತವನ್ನಾಗಲಿ ಆಳವಾದ ಅಧ್ಯಯನ, ಚಿಂತನವಿಲ್ಲದೆ ಮಂಡಿಸುತ್ತಿರಲಿಲ್ಲ ಎಂಬ ವಿಷಯ. ಈ ನಾಲ್ಕು ಅಂಶಗಳತ್ತ ಗಮನ ಸೆಳೆಯುವ ನಿರೂಪಣೆ ಈ ಕೃತಿಯ ವಸ್ತು ಎನ್ನಬಹುದು. ಇಂಗ್ಲೆಂಡಿಗೆ ಹೋದನಂತರ ಅವರ ರಾಜಕೀಯ ವ್ಯಾಸಂಗ ಬೆಳೆದ ಬಗೆ. ಈಸ್ಟ್ ಇಂಡಿಯಾ ಅಸೋಸಿಯೇಷನ್ ಸ್ಥಾಪನೆ. 1866ರಲ್ಲಿ ಮೈಸೂರಿನ ರಾಜರ ಪಕ್ಷ ವಹಿಸಿ ಸಂಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರಮಿಸಿದುದು, 1874ರಲ್ಲಿ ಬರೋಡಾದ ದಿವಾನ್ ಪದವಿಯನ್ನು ಒಪ್ಪಿ ಆಡಳಿತ ಸುಧಾರಣೆ ಮಾಡಿದ್ದು, ಇಂಡಿಯನ್

ನ್ಯಾಷನಲ್ ಕಾಂಗ್ರೆಸ್ ಅನ್ನು ಇತರರೊಡನೆ ಸೇರಿ ಸ್ಥಾಪಿಸಿದ್ದು, ಇಂಗ್ಲೆಂಡಿಗೆ ಹಿಂದಿರುಗಿ ಇಂಡಿಯಾದ ಕಾರ್ಯವನ್ನು ಕೈಗೊಂಡುದು, 1892ರಲ್ಲಿ ಸೆಂಟ್ರಲ್ ಫಿನ್ಸ್‌ಬರಿ ಜಿಲ್ಲೆ ಯಿಂದ ಚುನಾಯಿತರಾಗಿ ಪಾರ್ಲಿಮೆಂಟ್ ಪ್ರವೇಶಿಸಿದ ಪ್ರಥಮ ಭಾರತೀಯ ರಾದುದು, ಒಡೆದುಹೋಗಲಿದ್ದ ಕಾಂಗ್ರೆಸ್ ಅನ್ನು ಉಭಯಕುಲಪಿತಾಮಹರಾಗಿ ವೈಮನಸ್ಯ ಪರಿಹಾರಕ್ಕಾಗಿ ಶ್ರಮಿಸಿ ಸುಧಾರಿಸಿದುದು. ಸ್ವರಾಜ್ಯ ಘೋಷಣೆ ಮುಂತಾದ ಭಾರತೀಯ ಸ್ವಾತಂತ್ರ್ಯ ಹೋರಾಟಕಾಲದ, ಅದರ ಹಿನ್ನೆಲೆಯ ಪ್ರಮುಖ ಘಟನೆಗಳ ಸಂದರ್ಭಗಳನ್ನು ವಿವರವಾಗಿ ಹೇಳದೆ ಸೂಚಿಸುತ್ತಾ ಹೋಗು ವುದು ಮಾತ್ರ ಇಲ್ಲಿ ಸಾಧ್ಯವಾಗಿದೆ. ಆದ್ದರಿಂದ, ಅವರ ಕಾರ್ಯಮಹತ್ವದ ಅರಿವಾಗು ತ್ತದೆಯೇ ಹೊರತು ಪೂರ್ಣಚಿತ್ರ ಮೂಡುವುದಿಲ್ಲ. ಆಯಾ ನಿಲುವನ್ನು ತಳೆಯ ಬೇಕಾದ ಸಂದರ್ಭಗಳ ಹಿನ್ನೆಲೆಯೂ ಸ್ಫುಟವಾಗುವುದಿಲ್ಲ. ಆ ಕಾರಣ ಇತರ ಎರಡು ಕೃತಿಗಳೊಡನೆಯಾಗಲೀ, ಜೀವನಚರಿತ್ರೆಗಳ ಇತರ ವೈವಿಧ್ಯಪೂರ್ಣ ರೂಪ ಗಳೊಡನೆಯಾಗಲೀ ಇದನ್ನು ಹೋಲಿಸುವಂತಿಲ್ಲ. ಆ ಕಾಲಕ್ಕೆ ಸಾಮಾನ್ಯರಿಗೆ ಆಗಬೇಕಿದ್ದ ಪರಿಚಯದ ಅಗತ್ಯವನ್ನು ಅದು ಪೂರೈಸಿತು ಎನ್ನಬಹುದಷ್ಟೆ.

ದಿವಾನ್ ರಂಗಾಚಾರ್ಲು ಸುಮಾರು ನೂರನಲವತ್ತು ಪುಟಗಳ ಜೀವನ ಚರಿತ್ರೆ. ಹಿಂದೆಯೇ ತಿಳಿಸಿದಂತೆ ಅದು 1911ರಲ್ಲಿ ಮೊದಲ ಬಾರಿ ಮುದ್ರಿತ ವಾಯಿತು. ಆಗ ಬಹುಶಃ ಇಷ್ಟು ವಿಸ್ತಾರವಾಗಿದ್ದಿರಲಾರದು. ಅನಂತರದ ಮುದ್ರಣ ಗಳಲ್ಲಿ, ದೊರೆತ ಹೊಸ ಸಾಮಗ್ರಿಯನ್ನು ಉಚಿತ ತೋರಿದ ಕಡೆ ಸೇರಿಸಲಾಗಿದೆ ಎಂದು ತಿಳಿಸಿದೆ. ಇವರ ಬಗ್ಗೆ ಡಿ.ವಿ.ಜಿ.ಯವರು ಇಂಗ್ಲಿಷ್‌ನಲ್ಲೂ ಒಂದು ಕೃತಿ ರಚಿಸಿದ್ದಾರೆ. ಜ್ಞಾಪಕ ಚಿತ್ರಶಾಲೆಯಲ್ಲೂ ಒಂದೆರಡು ಸ್ವಾರಸ್ಯಕರ ಸಂಗತಿಗಳನ್ನು ಕೊಟ್ಟಿದ್ದಾರೆ, ಅಲ್ಲದೆ ಮೊಮ್ಮಗ ಬರೆದ ಪತ್ರವನ್ನು ಪೂರ್ಣವಾಗಿ ಸೇರಿಸಿದ್ದಾರೆ. ವಿಷಯ ಸಂಗ್ರಹಣೆಗಾದ ತೊಂದರೆ ಸಂಕಷ್ಟಗಳನ್ನು ಬೇರೊಂದು ಸಂದರ್ಭದಲ್ಲಿ ಹೇಳಿಕೊಂಡಿದ್ದಾರೆ. ಹಾಗೇ ರಂಗಾಚಾರ್ಲು ಅವರ ಆಲೋಚನೆಗಳ ಮೇಲೆ ಪ್ರಭಾವ ಬೀರಿದ ಅರಿಸ್ಟಾಟಲ್, ಜಾನ್ ಸ್ಟೂವರ್ಟ್ ಮಿಲ್ ಅವರ ಗ್ರಂಥಗಳಲ್ಲಿ ಮಾಡಿ ಕೊಂಡಿರುವ ಟಿಪ್ಪಣಿಗಳನ್ನು ಮೋಡಿ ಅಕ್ಷರಗಳ ಕಾರಣ ಓದಲಾಗಲಿಲ್ಲ ಎಂದೂ ನಿಸ್ಸಹಾಯಕತೆ ವ್ಯಕ್ತಪಡಿಸಿದ್ದಾರೆ. ಅವರೊಡನೆ ವ್ಯವಹರಿಸಿದ್ದ, ಅವರನ್ನು ಬಲ್ಲ ವ್ಯಕ್ತಿಗಳೊಡನೆ ಮಾತುಕತೆ ನಡೆಸಿದ್ದಾರೆ, ಪತ್ರ ವ್ಯವಹಾರವನ್ನು ಓದಿದ್ದಾರೆ. ಒಂದು ಮೌಲಿಕ ಕೃತಿರಚನೆಗೆ ಮಾಡಬೇಕಾದ ಸಿದ್ಧತೆಗಳ ಬಗ್ಗೆ ಅವರ ಆಸಕ್ತಿ ಉದ್ದಕ್ಕೂ ವ್ಯಕ್ತವಾಗುತ್ತದೆ. ಮೂಲಗ್ರಂಥದ ಜೊತೆಗೆ ಎಂ. ವೆಂಕಟಕೃಷ್ಣಯ್ಯ, ಅಂಬಿಲ್ ನರಸಿಂಹಯ್ಯಂಗಾರ್. ಬ್ರಿಟಿಷ್ ಅಧಿಕಾರಿಗಳಲ್ಲಿ ಅವರ ಮಿತ್ರರಾಗಿದ್ದ ಜಿ. ಎನ್. ಟೇಲರ್, ಹಾಗೂ ಇತರರು ರಂಗಾಚಾರ್ಲು ನಿಧನರಾದ ಸಂದರ್ಭದಲ್ಲಿ ಬರೆದ ಪತ್ರಗಳ, ನೀಡಿದ ಹೇಳಿಕೆಗಳ ಭಾಗಗಳನ್ನು ಉದ್ಧರಿಸಿದ್ದಾರೆ. ಹೀಗೆ ಮೈಸೂರು ಸಂಸ್ಥಾನದ ಆಡಳಿತ ಮತ್ತೆ ಹಿಂದಕ್ಕೆ ರಾಜರಿಗೆ ಹಸ್ತಗತವಾದ ಸಂದರ್ಭದಲ್ಲಿ ಮತ್ತು ಅನಂತರದ ಕೆಲಕಾಲ ಮೈಸೂರಿನ ಆಡಳಿತಕ್ಕೆ ಗಟ್ಟಿಯಾದ ನೆಲಗಟ್ಟನ್ನು

ಹಾಕಿ ಆ ಪರಂಪರೆ ಮುಂದುವರಿಯಲು ಕಾರಣಕರ್ತರಾದ, ಮತ್ತು 'ಮೈಸೂರ್' ಆಗಿದ್ದ ಚಾಮರಾಜ ಒಡೆಯರ್ ಅವರ ಜನಪರವಾದ ವ್ಯಕ್ತಿತ್ವರೂಪಣಕ್ಕೆ ಸೂಕ್ತ ಶಿಕ್ಷಣದ ಜವಾಬ್ದಾರಿ ಹೊತ್ತ ಒಬ್ಬ ವ್ಯಕ್ತಿಯ ಜೀವನ ಸಾಕಷ್ಟಿಲ್ಲದಿದ್ದರೂ ಒಟ್ಟಂದವಾಗಿ ಇಲ್ಲಿ ಮೂಡುತ್ತದೆ.

"ಉತ್ತಮ ರಾಜ್ಯ ವ್ಯವಸ್ಥೆಯ ಲಕ್ಷಣಗಳು, ರಾಜ್ಯ ಸೇವೆಯ ವಿಧಾನಗಳು. ಪ್ರಜಾಜೀವನದ ಉತ್ಕೃಷ್ಟ ಗತಿ—ಇವೇ ಮೊದಲಾದ ಪ್ರಜಾಧರ್ಮದ ಮುಖ್ಯಾಂಶಗಳನ್ನು ನಿದರ್ಶನಪೂರ್ವಕವಾಗಿ ನಮ್ಮ ಜನರಿಗೆ ತೋರಿಸಿಕೊಡಲು ದಿವಾನ್ ರಂಗಾಚಾರ್ಲುರವರ ಜೀವನ ಕಥೆಯು ಇತರ ಎಲ್ಲ ವಸ್ತುವಿವರಣೆಗಳಿಗಿಂತ ಹೆಚ್ಚು ಉಪಯುಕ್ತವಾದ ಸಾಧನವೆಂದು" ಡಿ.ವಿ.ಜಿ. ಈ ಕಾರ್ಯ ಕೈಗೊಂಡರು. 1831ರಲ್ಲಿ ಜನಿಸಿ 1883ರಲ್ಲಿ ಕೇವಲ ಐವತ್ತೆರಡು ವರ್ಷ ವಯಸ್ಸಿನಲ್ಲಿ ನಿಧನರಾದ ರಂಗಾಚಾರ್ಲು ಅವರು ಎರಡು ವರ್ಷಗಳ ಕಾಲ ದಿವಾನ್‌ರಾಗಿದ್ದರೂ ಅದಕ್ಕೆ ಮುನ್ನ ಅರಮನೆ ಕಂಟ್ರೋಲರ್ ಮುಂತಾದ ಕಾರ್ಯ ನಿರ್ವಹಿಸಿದ್ದರಾದ ಕಾರಣ ಸಂಸ್ಥಾನದ ಆಗುಹೋಗುಗಳ ಪೂರ್ಣ ಪರಿಚಯ ಹೊಂದಿದ್ದವರು. ಸಂಸ್ಥಾನದ ಉತ್ಕರ್ಷದ ಬಗ್ಗೆ ತೀವ್ರವಾಗಿ ಆಲೋಚಿಸಿದವರು. ತಮ್ಮ ಆಲೋಚನೆಗಳನ್ನು ಸಂದರ್ಭ ಒದಗಿದಾಗ ಕಾರ್ಯರೂಪಕ್ಕೆ ತಂದವರು. "ಅವರ ಕಾಲದಲ್ಲಿ ಚರ್ಚೆಯಲ್ಲಿದ್ದ ಅಂಶಗಳು ಇನ್ನೂ ಚರ್ಚಾಸ್ಪದವಾಗಿಯೇ ಇರುವುವು. ಅವರು ಪ್ರಾರಂಭಿಸಿದ ಕಾರ್ಯಗಳಲ್ಲಿ ಕೆಲವು ಭಾಗ ಇನ್ನೂ ಫಲಕ್ಕೆ ಬಂದಿಲ್ಲ! ಮತ್ತೆ ಕೆಲವು ಭಾಗವನ್ನು ಈಚಿನವರು ಯಥೋಚಿತವಾಗಿ ನಡೆಯಿಸಿಲ್ಲ. ಹೀಗಿರಲಾಗಿ ಕೆಲವು ವಿಷಯಗಳಲ್ಲಿ ಅವರ ಯೋಗ್ಯತೆಯು ಇಷ್ಟೇ ಸರಿ ಎಂದು ನಿರ್ಧರಿಸುವುದು ಸಾಧ್ಯವಲ್ಲ; ಇನ್ನು ಕೆಲವು ವಿಷಯಗಳಲ್ಲಿ ಅವರ ಯೋಗ್ಯತೆಯನ್ನು ನಿಷ್ಕರ್ಷೆ ಮಾಡಹೊರಟರೆ ಅದರಿಂದ ಅವರಲ್ಲಿ ಮಮತೆಯುಳ್ಳವರಿಗೋ ಅಥವಾ ಮಾತ್ಸರ್ಯವುಳ್ಳವರಿಗೋ ಅಸಮಾಧಾನವಾಗದೆ ಇರದು." ನಮ್ಮಲ್ಲಿ ತೀರ ಸಮೀಪಕಾಲದ ಅಥವಾ ಸಮಕಾಲೀನರ ಜೀವನಚರಿತ್ರೆ ಬರೆಯುವಾಗಿನ ಬಹುಮುಖ್ಯವಾದ ತೊಡಕು ತೊಂದರೆಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಆದರೂ 'ಲೈಫ್ ಅಂಡ್ ಟೈಮ್ಸ್' ವರ್ಗದ ಜೀವನಚರಿತ್ರೆಗೆ ಹೊಂದುವಂತಹ ಸ್ಫುಟವಾದ ಚಿತ್ರವನ್ನು ಭಾಷಣ. ಪತ್ರಗಳ ಆಧಾರದ ಮೇಲೆ ನೀಡಿದ್ದಾರೆ: ಆ ಮಟ್ಟಿಗೆ ವಸ್ತುನಿಷ್ಠತೆ ಕೃತಿಯಲ್ಲಿ ಕಂಡುಬರುತ್ತದೆ.

ಡಿ.ವಿ.ಜಿ.ಯವರು ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ, ರಾಜಕಾರ್ಯ ಚಿಂತನೆಯಲ್ಲಿ ಆಸಕ್ತರಾಗಿದ್ದವರು. ಪ್ರಜಾತಂತ್ರದಲ್ಲಿ ನಂಬಿಕೆಯಿದ್ದವರು. ಆ ಕಾರಣ ಅಂಥ ಕಾರ್ಯಗಳ ಮೂಲದ ಎಳೆಗಳನ್ನು ಹಿಡಿದು ಕೊನೆಮುಟ್ಟ ವಿವರಿಸಬಲ್ಲರು. ಹೀಗಾಗಿ ದಿವಾನ್ ರಂಗಾಚಾರ್ಲು ಅವರ ವೈಯಕ್ತಿಕ ಜೀವನ, ವಿದ್ಯಾಭ್ಯಾಸ ಮಿತ್ರರೊಡನೆ ಹೊಂದಿದ್ದ ಸಂಬಂಧಗಳು ಮುಂತಾದುವನ್ನು ಸ್ಥೂಲ ಹಿನ್ನೆಲೆಯಾಗಿ

ಮಾತ್ರ ಚಿತ್ರಿಸುತ್ತ ಅವರ ಕಾರ್ಯಸಾಧನೆಗಳನ್ನು, ಆ ಬಗೆಗಿನ ಪೂರ್ವಾಪರ ವಿಚಾರಗಳನ್ನು ವಿಸ್ತಾರವಾಗಿ ನಿರೂಪಿಸಿದ್ದಾರೆ. ಜೀವನಚರಿತ್ರಕಾರನ ವಿಚಾರ ಧೋರಣೆಗಳಿಗೂ ಕೇಂದ್ರವ್ಯಕ್ತಿಯ ವಿಚಾರಗಳಿಗೂ ಕಾರ್ಯಗಳಿಗೂ ಸಾಮ್ಯವಿದ್ದಾಗ ಸೂಕ್ಷ್ಮಚಿಂತನೆಯ ವಿವರಗಳೂ ಸ್ಫುಟವಾಗಿ ಮೂಡಿ ಬರುತ್ತವೆ. ರಂಗಾಚಾರ್ಲು ಅವರು ಬ್ರಿಟಿಷರ ಬಿಗಿಮುಷ್ಟಿಯ ಆಡಳಿತದ ಆ ಕಾಲದಲ್ಲೂ ಮಾಡಿದ ಮಹತ್ಸಾಧನೆ ಎಂದರೆ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆ. ಇದು ಸ್ವಯಂಪೂರ್ಣ ಪ್ರಜಾತಂತ್ರವಲ್ಲದಿದ್ದರೂ ಬ್ರಿಟಿಷರ ನೇರ ಆಡಳಿತವಿದ್ದ ಪ್ರಾಂತ್ಯಗಳಲ್ಲಿ ಇಲ್ಲದಿದ್ದ ಸಂಪ್ರದಾಯ. ಇನ್ನು ರಾಜರುಗಳ ದುರಾಡಳಿತ ಸಂಸ್ಥಾನಗಳಲ್ಲಿ ಕನಸಿನಲ್ಲಿಯೂ ಸುಳಿಯಲು ಸಾಧ್ಯವಿರದಿದ್ದ ವಿಚಾರ. ಒಮ್ಮೆ ಈ ಸೂಚನೆ ಸುಧಾರಣಾ ರೂಪದಲ್ಲಿ ಸೂಚಿಸಿದ್ದು ತಿರಸ್ಕೃತವಾದರೂ ಉಪಾಯವಾಗಿ ದಸರಾ ದರ್ಬಾರಿನ ನೆಪದಲ್ಲಿ ಅದನ್ನು ಸಾಧಿಸಿ ಪರಂಪರೆಯಾಗಿ ಉಳಿಯುವಂತೆ ಮಾಡಿದ್ದು ಒಮ್ಮೆಗೇ ಆದ ಸಾಧನೆಯಲ್ಲ. ರಾಜರ ಮನಸ್ಸನ್ನು ತಿದ್ದಿ ರೂಪಿಸುವ ಅವಕಾಶವಿದ್ದ ಕಾರಣ ಸಂದರ್ಭಗಳು ಅನುಕೂಲವಾಗಿ ಬಂದವು ಎನ್ನಬಹುದು. ಈ ನಿಟ್ಟಿನತ್ತ ಘಟನೆಗಳನ್ನು ಬಿಡಿಸಿ ನಿರೂಪಿಸುತ್ತಾ ಹೋಗುತ್ತಾರೆ. ಆಡಳಿತದಲ್ಲಿ ಲಂಚವನ್ನು ತೊಡೆಯಲು ಅವರು ನಡೆಸಿದ ಪ್ರಯತ್ನಗಳು, ಮಿತ್ರರನ್ನೂ ವಿರೋಧಿಗಳನ್ನಾಗಿ ಮಾಡಿಕೊಂಡ ಬಗೆಯೂ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಸಂಸ್ಥಾನದ ಅಭಿವೃದ್ಧಿಗಾಗಿ ಸಂಪರ್ಕದ ಅಗತ್ಯವರಿತು ರೈಲ್ವೆಮಾರ್ಗ ಹಾಕಿಸಲು ಯೋಜಿಸಿದ್ದು. ಅರಮನೆಯ ದುಂದುವೆಚ್ಚಗಳಿಗೆ ಹಾಕಿದ ಕಡಿವಾಣ, ಸಂಸ್ಥಾನದ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಕೈಗೊಂಡ ಕ್ರಮಗಳು ಇಂದಿಗೂ ಕಣ್ಣು ತೆರೆಯಿಸುವಂತಿವೆ. ಅವರು ಸಂಸ್ಥಾನದ ಕೈಗಾರಿಕೀಕರಣಕ್ಕಾಗಿ ಕಂಡ ಕನಸುಗಳು ಅವರ ಕಾಲದಲ್ಲಿಯೇ ನೆರವೇರದಿದ್ದರೂ ಮುಂದೆ ಸರ್ ಎಂ. ವಿ. ಯವರ ಕಾಲಕ್ಕೆ ನನಸಾದುವು. ರಂಗಾಚಾರ್ಲು ಅವರ ಮನೆಮಾತು ತಮಿಳು, ಬಹುಕಾಲ ತೆಲುಗು ಮಾತನಾಡುವ ಮದ್ರಾಸ್ ಪ್ರಾಂತ್ಯದ ಪ್ರದೇಶಗಳಲ್ಲಿ ಆಡಳಿತದ ವಿವಿಧ ಕಾರ್ಯ ನಿರ್ವಹಿಸಿದ್ದರಿಂದ ಆ ಭಾಷೆಯ ಬಗ್ಗೆ ಒಲವು, ಪರಿಣತಿ ಉಂಟಾಯಿತು. ಮೈಸೂರಿಗೆ ಬಂದನಂತರ ಕನ್ನಡ ಭಾಷೆ ಹಾಗೂ ಲಲಿತಕಲೆಗಳ ಬಗೆಗೂ ಆಸಕ್ತಿ ವಹಿಸಿದರು. ಸ್ತ್ರೀ ವಿದ್ಯಾಭ್ಯಾಸ, ಸಂಗೀತ ನಾಟಕಗಳ ಬಗೆಗೆ ನೀಡಿದ ಪ್ರೋತ್ಸಾಹ, ಶಾಕುಂತಲ ನಾಟಕ ಸಭಾಸ್ಥಾಪನೆ, ಸಂಸ್ಕೃತ ಇಂಗ್ಲಿಷ್ ನಾಟಕಗಳನ್ನು ಅನುವಾದಿಸುವಲ್ಲಿ ತೋರಿದ ಆಸಕ್ತಿ, ಅವರ ಸ್ವಭಾವ ವೈಚಿತ್ರ್ಯವಾದ ಶೀಘ್ರಕೋಪ, ಅದರಿಂದಾಗಿ ಬಂದ ಆರೋಪಣೆಗಳು ಮುಂತಾದವು—ವ್ಯಕ್ತಿಯನ್ನು ಸಮೀಪಕ್ಕೆ ತರುವ ವಿವರಗಳು—ರೇಖಾರೂಪದ ಸೂಚನೆಗಳಾಗಿ ಮಾತ್ರವೇ ಉಳಿದಿರುವುದು ಕೃತಿಯ ಕೊರತೆಯಾಗುತ್ತದೆ. "ಅವರ ಕಾಲ, ಸಮಕಾಲೀನರ ಅಭಿಪ್ರಾಯಗಳು" ಎಂಬ ಅಧ್ಯಾ[illegible]ಪ್ರತ್ಯೇಕವಾಗಿ ಮೌಲ ಪರಿಶೀಲನೆ ದೃಷ್ಟಿಯಿಂದ ಉಚಿತವಾಗಿದ್ದರೂ ಗ್ರಂಥದ ಒಳ ಅಂಗರಚನೆಯಾಗಿ ಘಟನಾವಿವರ ಸಮೇತ ನಿರೂಪಿತವಾಗಿದ್ದರೆ ಇನ್ನೂ ಸ್ವಾರಸ್ಯಪೂರ್ಣವಾಗುತ್ತಿತ್ತು ಎನಿಸುತ್ತದೆ.

ಜೀವನಚರಿತ್ರೆಯು ಬಂಧ ಮತ್ತು ರೂಪಾಂಶ ದೃಷ್ಟಿಯಿಂದ 1915ರಲ್ಲಿ ಪ್ರಕಟವಾದ 'ಗೋಪಾಲಕೃಷ್ಣ ಗೋಖಲೆ—ಜೀವನಚರಿತ್ರೆ ಉಪನ್ಯಾಸಗಳು' ಮೇಲಿನ ಎರಡು ಕೃತಿಗಳಿಗಿಂತ ಹೆಚ್ಚು ಸಂಯೋಜಿತವಾಗಿದೆ. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿ, ಗೋಖಲೆಯವರ ವಿಚಾರಧಾರೆಯನ್ನು ಮಾತ್ರವಲ್ಲದೆ ಎಲ್ಲ ಕಾಲಕ್ಕೂ ಅನ್ವಯವಾಗುವ ಸಾರ್ವಜನಿಕ ಜೀವನೋತ್ಕರ್ಷಕ್ಕೆ ಸಂಬಂಧಿಸಿದ ವಿಚಾರಮಂಥನಕ್ಕೂ ಒಂದು ವೇದಿಕೆಯ ಆಗತ್ಯವನ್ನು ಪೂರೈಸಿದ ಡಿ.ವಿ.ಜಿ.ಯವರು ಗೋಖಲೆಯವರ ಬಗ್ಗೆ ರಚಿಸಿರುವ ಜೀವನಚರಿತ್ರೆ ಆರಾಧನಾ ಭಾವದಿಂದ ಕೂಡಿರದೆ ವಾಸ್ತವಿಕ ಘಟನೆಗಳ ವಿಶ್ಲೇಷಣೆ ಹಾಗೂ ವಿಚಾರಗಳ ಸರಳ ನಿರೂಪಣೆಯಿಂದ ಕೂಡಿರುವುದು ಇದರ ವೈಶಿಷ್ಟ್ಯ. ಗೋಖಲೆಯವರ ಬಗ್ಗೆ ಸಾಕಷ್ಟು ಗ್ರಂಥಗಳು ಬಂದಿವೆ ; ಹಲವು ಭಾಷೆಗಳಲ್ಲಿ, ಹಲವು ದೃಷ್ಟಿಕೋನಗಳಿಂದ ರಚಿತವಾಗಿವೆ. ಸಾಮಗ್ರಿಗೆ ಕೊರತೆಯಿಲ್ಲ. 175 ಪುಟಗಳ ಹರಹಿನಲ್ಲಿ ಗೋಖಲೆಯವರ 49 ವರ್ಷಗಳ ಬದುಕನ,—ನಿರಂತರ ಹೋರಾಟದಿಂದ ಕೂಡಿದ 18 ವರ್ಷಗಳ ಬಡತನ, ವಿದ್ಯಾಭ್ಯಾಸ; 30 ವರ್ಷಗಳ ದೇಶಾಟನೆ—ಸ್ವದೇಶಿ ಚಳುವಳಿ-ಅಲ್ಪ ಆಯುಸ್ಸಿನಲ್ಲೇ ಭಾರತ ಸ್ವಾತಂತ್ರ್ಯ ಹೋರಾಟ, ಈ ವಿವರಗಳಿಂದ ಕೂಡಿದ—ಇತಿಹಾಸದ ಭಾಗವಾಗಿಹೋದ ವ್ಯಕ್ತಿಯ ಜೀವನವನ್ನು ವಿಚಾರಗಳನ್ನು ಆಶಯಗಳನ್ನು ಡಿ.ವಿ.ಜಿ. ನಿರೂಪಿಸಿದ್ದಾರೆ. ಅವತರಣಿಕೆ, ಜನ್ಮ-ಜೀವನವೃತ್ತಿ-ರಂಗಪ್ರವೇಶ, ಹೋರಾಟದ ಬಿರುಬು, ದೇಶನಾಯಕತ್ವ, ಯುಕ್ತಿಸಂಧಾನ-ಆಕ್ಷೇಪ ಸಮಾಧಾನ. ಕಡೆಯ ದಿನಗಳು. ಗುಣಾತಿಶಯಗಳು, ನಿತ್ಯಕರ್ತವ್ಯಗಳು—ಈ ಹತ್ತು ಪ್ರಕರಣಗಳಲ್ಲದೆ ಅವರ ಚಿಂತನೆಯನ್ನು ಬಿಂಬಿಸುವ ರಾಜಕೀಯ ಸ್ಥಿತಿಗತಿ, ಸ್ವದೇಶಿ, ವಿದ್ಯಾರ್ಥಿ ಕರ್ತವ್ಯ, ಅಂತ್ಯಜಾತಿಗಳವರ ಉದ್ಧಾರ, ಸ್ಥಳೀಯ ಸ್ವರಾಜ್ಯ (ಸಂಸ್ಥೆ) ಮುಂತಾದ ವಿಷಯಗಳ ಬಗ್ಗೆ ಅವರು ಮಾಡಿದ ಉಪನ್ಯಾಸಗಳನ್ನೂ ಸಂಗ್ರಹಿಸಿಕೊಡಲಾಗಿದೆ. ಇಷ್ಟಿದ್ದೂ ಗ್ರಂಥದ ಗಾತ್ರವನ್ನು ಹೆಚ್ಚಿಸದೆ, ಬಹುಶಃ ವಿದ್ಯಾರ್ಥಿಗಳನ್ನೂ ಸಾಮಾನ್ಯರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸಂಗ್ರಹವಾಗಿ ಬರೆದಿರುವುದು ಇದರ ವೈಶಿಷ್ಟ್ಯವೆನ್ನಬಹುದು.

ಕಾರ್ಯಸಾಧನೆಗಳ ಜೊತೆಗೆ ಕಾರ್ಯವಿಧಾನ, ನಡೆ-ನುಡಿಯ ಬಗೆಗೂ ಸ್ವಭಾವಗಳ ಬಗೆಗೂ ತಿಳಿಸುತ್ತ ಗೋಖಲೆಯವರ ವ್ಯಕ್ತಿತ್ವದ ಬಗ್ಗೆ ಗೌರವಭಾವನೆ ಮೂಡುವಂತೆ ಮಾಡುವ ನಿರೂಪಣಾರೀತಿ ಸೊಗಸಾಗಿದೆ. "ಸಾರ್ವಜನಿಕ ಕಾರ್ಯಗಳಿಗೆ ಕೈಹಾಕುವವರು ರಾಗದ್ವೇಷಗಳಿಗೆ ಎಡೆಕೊಡಬಾರದೆಂಬ ನೀತಿಯು ಸರ್ವದಾ ಅವರ ನೆನಪಿನಲ್ಲಿದ್ದದ್ದರಿಂದ, ಅವರು ಸ್ವಪಕ್ಷದ ಲೋಪಗಳನ್ನು ಮರೆಮಾಚುತ್ತಿರಲಿಲ್ಲ : ಪರಪಕ್ಷದ ಯೋಗ್ಯತೆಯನ್ನು ಅಲ್ಲಗಳೆಯುತ್ತಿರಲಿಲ್ಲ ; ತಮ್ಮ ವಾಕ್ಯವೇ ವೇದವಾಕ್ಯವೆಂದು ಭಾವಿಸುತ್ತಿರಲಿಲ್ಲ ; ಅನ್ಯರ ಮಾತಿನಲ್ಲಿರಬಹುದಾದ ಯುಕ್ತಿಯನ್ನು ಅಲಕ್ಷ್ಯ ಮಾಡುತ್ತಿರಲಿಲ್ಲ. ಇದರಿಂದ ಅವರಿಗೆ ಮುಷ್ಕರಮಾರ್ಗದವರ ವಿಶ್ವಾಸವು ದುರ್ಲಭವಾಯಿತು. ಅವರು ಹಟವಾದಿಗಳಲ್ಲ, ಕಾರ್ಯಸಾಧಕರು, ದೇಶಕಾರ್ಯ

ಸಾಧನೆಯಲ್ಲಿ ವೈಯಕ್ತಿಕವಾದ (ಎಂದರೆ ಸಮುಸವಾಗೆ ಸ್ವಂತವಾದ) ಹಟಗಳಿಗೆ ಸ್ಥಳವಿರಬಾರದೆಂಬುದನ್ನು ಗೋಖಲೆಯುವರು ಚೆನ್ನಾಗಿ ತೋರಿಸಿದ್ದಾರೆ." ಇಂದು ಸಾರ್ವಜನಿಕ ಕ್ಷೇತ್ರದಲ್ಲಿ ನಾವು ಬಹುದೂರ ಬಂದಿದ್ದೇವೆ. ಗೋಖಲೆಯಂತಹವರ ಬದುಕು ದೂರದ ನಕ್ಷತ್ರದಂತೆ ಕಲುಷಿತ ವಾತಾವರಣದ ಮಬ್ಬಿನಲ್ಲಿ ಮರೆಯಾಗುತ್ತಿದೆ ಎಂಬ ಅರಿವು ಮೂಡುತ್ತದೆ. ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಡುವ ವ್ಯಕ್ತಿಗೆ ಇಂದಿಗೂ ಪ್ರಸ್ತುತವೆನಿಸುವ ವಿಚಾರಗಳು ಉದ್ದಕ್ಕೂ ಕಂಡುಬರುವುದರಿಂದ ವಿಚಾರಗಳ ಸಮಸ್ಯೆಗಳ ವಿವರಣೆಯನ್ನು ಡಿ.ವಿ.ಜಿ. ಹೇಳುವ ರೀತಿಯಲ್ಲಿ ಇದು ಎಂದೋ ಇದ್ದ ವ್ಯಕ್ತಿಯ ಅಂತರಂಗ ಚಿಂತನೆ, ಬಹಿರಂಗ ಸಾಧನೆಗಳಾಗದೆ ಈಗ 'ಇರುವ' ಸ್ಥಿತಿಯಾಗಿ 'ಎದುರಿಸ'ಬೇಕಾದ ಸಮಸ್ಯೆಯಾಗಿ ಪರಿಣಮಿಸುತ್ತದೆ. ಪ್ರಸ್ತುತ ಸ್ಥಿತಿಗತಿಗಳ ಅನುಭವದ ಪರಿಣಾಮವಾಗಿ, ಗ್ರಂಥ ಮುಗಿಸಿದನಂತರ, ಸಾಲಗೆಯಲ್ಲಿ ಆ ಕಾಲದ ಬಗ್ಗೆ ಅಸೂಯೆಯ ಕಹಿ ಉಳಿಯುತ್ತದೆ. ಆ ಕಾಲದ ಒಟ್ಟು ಪರಿಣಾಮವನ್ನು ಡಿ.ವಿ.ಜಿ. ಉಂಟುಮಾಡುತ್ತಾರೆ. ಉದ್ದಕ್ಕೂ ಅಗತ್ಯವೆನಿಸುವಲ್ಲಿ ಪ್ರಾಚೀನ ಅರ್ವಾಚೀನ ಅನುಭವ ಸೂಕ್ತಿಗಳನ್ನು, ಉದ್ಧರಣೆಗಳನ್ನು ಕೊಡುತ್ತ ವಿವೇಚಿಸಿರುವ ರೀತಿಯೂ ಈ ಪರಿಣಾಮಕ್ಕೆ ಪೋಷಣೆ ನೀಡುತ್ತದೆ.

ಡಿ.ವಿ.ಜಿ.ಯವರು ಈ ಕೃತಿಗಳನ್ನು ರಚಿಸಿದ ನಂತರ ಇದುವರೆಗೆ ಕನ್ನಡದಲ್ಲಿ ಅನೇಕ ಜೀವನಚರಿತ್ರೆಗಳು ಬಂದಿವೆ. ಮಾಸ್ತಿ, ಕುವೆಂಪು, ಕಾರಂತ, ತಿ. ತಾ. ಶರ್ಮ ಮೊದಲಾದವರು ರಚಿಸಿರುವ ರವೀಂದ್ರನಾಥ ಠಾಕೂರ್, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರನ್ನು ಕುರಿತ ಜೀವನ ಚರಿತ್ರೆಗಳು ಹಲವು ಬಗೆಯ ಮಾದರಿಗಳಾಗಿವೆ. ಕುವೆಂಪು ಅವರ ಕೃತಿಗಳು ವೈಭವೀಕೃತ, ಆರಾಧನಾ ಭಾವಪೂರ್ಣ ಎಂದು ಮೇಲುನೋಟಕ್ಕೆ, ವಿಮರ್ಶಕರು ಹೇಳಿರುವಂತೆ, ತೋರಿದರೂ ಭಾವನಾತ್ಮಕವಾಗಿ ವ್ಯಕ್ತಿಯೊಡನೆ ಸಮೀಕರಣ ಹೊಂದಿ ಅನುಭವ ವಿಶೇಷವನ್ನು ಉಂಟುಮಾಡುವ ಮಾದರಿಗೆ ಅವು ಶ್ರೇಷ್ಠ ಉದಾಹರಣೆಗಳಾಗಿವೆ. ವಸ್ತುನಿಷ್ಠತೆ, ತಟಸ್ಥ ನಿರೂಪಣೆಗೆ ಮಾಸ್ತಿ, ಕಾರಂತರ ಕೃತಿಗಳು ಮಾದರಿಯಾಗಿವೆ. ಇಂತಹ ಕೃತಿಗಳು ಸೃಜನಶೀಲ ಸಾಹಿತ್ಯವರ್ಗಕ್ಕೆ ಸೇರುವಂತಹವು. ಅನುವಾದ ಕೃತಿಗಳೂ ಬಂದಿವೆ. ಈ ಸಂದರ್ಭದಲ್ಲಿ ಸೂಚಿಸಬಹುದಾದ ಇನ್ನೊಂದು ಬಗೆಯ ರಚನೆಗಳೆಂದರೆ ಪಠ್ಯಪುಸ್ತಕಕ್ಕಾಗಿಯೇ ಮಹಾಪುರುಷರ, ರಾಷ್ಟ್ರಪುರುಷರ, ವಿವಿಧ ಕ್ಷೇತ್ರಗಳ ಗಣ್ಯವ್ಯಕ್ತಿಗಳನ್ನು ಕುರಿತ ಜೀವನಚರಿತ್ರೆಗಳು. ಇವು ಜೀವನ ಚರಿತ್ರಕಾರನಿಗಿರಬೇಕಾದ ಸಹಾನುಭೂತಿಯುತವಾದ ಅಂತರಂಗ ನೋಟಕ್ಕಿಂತ ಬೇರೆ ಬೇರೆ ಜೀವನಚರಿತ್ರೆಗಳಿಂದ ವಿಷಯ ಸಂಗ್ರಹ ಮಾಡಿ ಬರೆದ ಗ್ರಂಥಗಳಾಗಿವೆ. ವಿಷಯಜ್ಞಾನ ದೃಷ್ಟಿಯಿಂದ ಸ್ವಾಗತಾರ್ಹವಾದರೂ ಕಲಾಕೃತಿಯ ಮಟ್ಟಕ್ಕೇರಲಾರದೆ ಕುಸಿಯುತ್ತವೆ. ಹಾಗೇ ಮತ್ತೆ ಕೆಲವು ಜೀವನಚರಿತ್ರೆಗಳು ವ್ಯವಧಾನದ ಅಭಾವದಿಂದ ಪರಿಪೂರ್ಣ ವ್ಯಕ್ತಿತ್ವದ ಬಿಂಬವಾಗದೆ ಕೊರತೆಗಳಿಂದ ಕೂಡಿ ರಚಿತವಾಗುತ್ತಿವೆ. ಅಲ್ಲದೆ ಬಹುವಾಗಿ ಜೀವನಚರಿತ್ರಕಾರನ ಆಲೋಚನೆಗಳು ವ್ಯಕ್ತಿಗಳಿಗೆ

ಆರೋಪಿತವಾಗಿ ವಸ್ತುನಿಷ್ಠ ಪ್ರಾಮಾಣಿಕತೆಯ ದೌರ್ಬಲ್ಯವನ್ನು ತೋರುತ್ತವೆ. ವ್ಯಕ್ತಿಜೀವನದ ಕೆಲವು ಮುಖಪರಿಚಯವೇ ಗುರಿಯಾದ ಈ ಕೃತಿಗಳೂ ಅಪೂರ್ಣ ಎಂಬ ಭಾವನೆಯನ್ನುಂಟುಮಾಡುತ್ತವೆ. ಈ ಹಿನ್ನೆಲೆಯಲ್ಲಿ, ಡಿ.ವಿ.ಜಿ.ಯವರ ರಚನೆಗಳು, ರಚನೆಯ ಕಾಲವನ್ನು ಗಮನಿಸಿದಾಗ ಇತಿಮಿತಿಗಳಿಂದ ಕೂಡಿಯೂ ಮಾದರಿಯಾಗಿ ನಿಲ್ಲುತ್ತವೆ. ಜೀವನಚರಿತ್ರೆಯ ಬಗ್ಗೆ ಅವರೇ ಹೇಳಿದ ಶೀಲ ನಿದರ್ಶಕ ಘಟನಾವಳಿಗಳು ಮಾತ್ರ ಈ ಮೂರೂ ಕೃತಿಗಳಲ್ಲಿ ಕಡಮೆ. ಎನ್ನಬಹುದು.

ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ವಿದ್ಯಾರಣ್ಯರು

ಜಿ. ಎಸ್. ದೀಕ್ಷಿತ್

ಭಾರತ ಇತಿಹಾಸದ, ವಿಶೇಷವಾಗಿ ಕರ್ನಾಟಕದ ಇತಿಹಾಸದ, ತಜ್ಞರಾದ ಡಾ॥ ಜಿ. ಎಸ್. ದೀಕ್ಷಿತರು ಈ ಲೇಖನದಲ್ಲಿ, —ಡಿ.ವಿ.ಜಿ. ಅವರು ಬರೆದು ಪ್ರಕಟಿಸಿದ 'ವಿದ್ಯಾರಣ್ಯರು ಮತ್ತು ಅವರ ಕಾಲ' (೧೯೨೦), 'ವಿದ್ಯಾರಣ್ಯರ ಸಮಕಾಲೀನರು' (೧೯೩೩), ಎಂಬೆರಡು ಗ್ರಂಥಗಳಲ್ಲಿ ವಿದ್ಯಾರಣ್ಯರು ಹೇಗೆ ವಿಜಯನಗರ ಸ್ಥಾಪನೆಗೆ ಕಾರಣರಾದರು, ಧಾರ್ಮಿಕವಾಗಿ ರಾಜಕೀಯವಾಗಿ, ಅವರ ವ್ಯಕ್ತಿತ್ವದ ಸ್ವರೂಪವೇನು ಎಂಬ ಬಗೆಗೆ ಡಿ.ವಿ.ಜಿ. ಅವರು ಪ್ರತಿಪಾದಿಸಿರುವ ಸಂಶೋಧನಾತ್ಮಕವೂ ನಿರ್ಣಾಯಕವೂ ಆದ ವಿಚಾರಗಳ ಸಾರವನ್ನು ಬಹು ವಿಶದವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಮತ್ತು ಈಚಿನ ಕೆಲವು ವಿದ್ವಾಂಸರ ತೀರ್ಮಾನಗಳಿಂದ ಡಿ.ವಿ.ಜಿ. ಅವರ ಶೋಧನೆಗಳಿಗೆ ಹೇಗೆ ಸಮರ್ಥನೆ ದೊರೆತಿದೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ.

ವಿದ್ಯಾರಣ್ಯರ ವೃತ್ತಾಂತವನ್ನು ಡಿ.ವಿ.ಜಿ.ಯವರು ಮೂರು ಭಾಗಗಳಲ್ಲಿ ಪ್ರಕಟಿಸಬೇಕೆಂದು ಆಶಿಸಿದ್ದರು. ಇವುಗಳಲ್ಲಿ ಮೊದಲನೆಯದಾದ 'ವಿದ್ಯಾರಣ್ಯರು ಮತ್ತು ಅವರ ಕಾಲ' ೧೯೨೦ರಲ್ಲಿ ಪ್ರಕಟವಾಯಿತು. ಎರಡನೆಯದಾದ "ವಿದ್ಯಾರಣ್ಯರ ಸಮಕಾಲೀನರು' ೧೯೩೩ರಲ್ಲಿ ಪ್ರಸಿದ್ಧವಾಯಿತು. ಅದರ ಪೀಠಿಕೆಯಲ್ಲಿ ಮೂರನೆಯ ಸಂಪುಟದ ಬಗೆಗೆ ಹೀಗೆ ಬರೆದಿದ್ದಾರೆ : "ಕ್ರಿಯಾಶಕ್ತ್ಯಾಚಾರ್ಯ, ಆಂಗಿರಸ ಮಾಧವ, ಇರುಗಪ ದಂಡೇಶ ಮೊದಲಾದ ಪ್ರಮುಖ ಪುರುಷರು ಇನ್ನೂ ಕೆಲವು ಮಂದಿ ವಿದ್ಯಾರಣ್ಯರ ಸಮಕಾಲೀನರಲ್ಲಿ ಗಣ್ಯರಾಗತಕ್ಕವರಿದ್ದಾರೆ. ಅವರ ವೃತ್ತಾಂತಗಳನ್ನೂ. ಪ್ರಾಸಂಗಿಕವಾದ ಇತರ ವಿಷಯಗಳನ್ನೂ ಸೇರಿಸಿ ಒಂದು ಸಂಪುಟವನ್ನು ಮೂರನೆಯ ಭಾಗವಾಗಿ ಪ್ರಕಟಪಡಿಸಬೇಕೆಂದು ಸಂಕಲ್ಪವಿದೆ." ದುರದೃಷ್ಟವಶಾತ್ ಈ ಸಂಕಲ್ಪ ನೆರವೇರಲೆ ಇಲ್ಲ.

ಡಿ.ವಿ.ಜಿ.ಯವರು 'ವಿದ್ಯಾರಣ್ಯ ವಿಜಯ ಅಥವಾ ವಿಜಯನಗರ ರಾಜ್ಯ ಸ್ಥಾಪನೆ'ಯೆನ್ನುವ ನಾಟಕವನ್ನು ಬರೆದಿದ್ದಾರೆ. ಆ ನಾಟಕ ಬರೆಯುವ ಉದ್ದೇಶ ವನ್ನು ಅವರು ಹೀಗೆ ಹೇಳಿದ್ದಾರೆ: "ಉಪನ್ಯಾಸದ ರೀತಿಯಲ್ಲಿ ಸಮರ್ಪಕವಾಗಿ ಬಣ್ಣಿಸಲಾಗದ ಐತಿಹಾಸಿಕ ತತ್ವಗಳು ಕೆಲವುಂಟು. ಅವುಗಳನ್ನು ಕಾವ್ಯದ ರೀತಿಯಲ್ಲಿ ಜನರ ಊಹಾಶಕ್ತಿಗೆ ಗೋಚರಪಡಿಸಬಹುದು. ಈ ನಂಬಿಕೆಯಿಂದ ವಿದ್ಯಾರಣ್ಯರ ಕಾರ್ಯರೀತಿಯನ್ನು ತೋರಿಸಲು ಒಂದು 'ನಾಟಕ'ವನ್ನು ಬರೆದಿರುವೆನು. ಈ ಉಪನ್ಯಾಸವನ್ನು ಓದುವ ಮಹಾಶಯರು ಇದರ ಪರಿಶಿಷ್ಟ ಭಾಗವಾದ ಆ 'ನಾಟಕ'ವನ್ನು ನೋಡಬೇಕೆಂದು ಬೇಡುತ್ತೇನೆ." ಈ ನಾಟಕವನ್ನು ಬಿಟ್ಟು ಮೇಲೆ ಹೇಳಿದ ಎರಡು ಪುಸ್ತಕಗಳ ಮುಖ್ಯಾಂಶಗಳು ಹೀಗಿವೆ.

ಮಾಧವಾಚಾರ್ಯರು—ಬಾಲ್ಯದಿಂದ ರಾಜ್ಯಸ್ಥಾಪನೆಯವರೆಗೆ

ಪರಕೀಯರ ದಾಳಿಯಾದಾಗ ಒಂದು ದೇಶದವರ ಐಕಮತ್ಯ ಮತ್ತು ಧೈರ್ಯ ಸಾಹಸಗಳು ಸಹಜವಾಗಿ ಹೊರಹೊಮ್ಮುತ್ತವೆ. ಇಂತಹ ಅವಕಾಶವು ಕರ್ನಾಟಕದ ಜನರಿಗೆ ೧೪ನೆಯ ಶತಮಾನದಲ್ಲಿ ದೊರಕಿತು. ಆ ಅವಕಾಶವನ್ನುಪಯೋಗಿಸಿ ಕೊಳ್ಳುವುದರಲ್ಲಿ ಮಾರ್ಗದರ್ಶಕರಾಗಿದ್ದವರೇ ವಿದ್ಯಾರಣ್ಯರು. ಪೂರ್ವಾಶ್ರಮದಲ್ಲಿ ಮಾಧವಾಚಾರ್ಯರೆಂದೂ ಸಂನ್ಯಾಸಾಶ್ರಮದಲ್ಲಿ ವಿದ್ಯಾರಣ್ಯರೆಂದೂ ಪ್ರಖ್ಯಾತರಾದ ರೆನ್ನುವುದು 'ಮಣಿಮಂಜರೀ ಭೇದಿನಿ' ಎಂಬ ಗ್ರಂಥದಿಂದ ಸ್ಪಷ್ಟವಾಗುವುದು. ಅವರ ತಾಯಿತಂದೆಗಳು ಶ್ರೀಮತೀ ಮಾಯಣರು. ಅವರ ಸಹೋದರರು ಸಾಯಣ ಭೋಗನಾಥರು, ಅವರ ಗೋತ್ರ ಭಾರದ್ವಾಜ, ಸೂತ್ರ ಬೋಧಾಯನ, ಯಜು ಶ್ಯಾಖಾನುವರ್ತಿಗಳು. ಈ ವಿಷಯಗಳೆಲ್ಲಾ ಪರಾಶರ ಮಾಧವೀಯದಲ್ಲಿ ಮತ್ತು ಕಂಚಿಯ ವರದರಾಜ (ಅರುಳಾಳ ಪೆರುಮಾಳ್) ದೇವಾಲಯದ ಗೋಡೆಯ ಮೇಲಿರುವ ಒಂದು ಶಿಲಾಶಾಸನದಿಂದ[1] ಸ್ಪಷ್ಟವಾಗಿವೆ. ಚಿಕ್ಕವಯಸ್ಸಿನಲ್ಲಿ ಮಾಧವಾಚಾರ್ಯರು ತಮ್ಮಂದಿರೊಡನೆ ಕಾಂಚೀಪುರಕ್ಕೆ ತೆರಳಿ. ವಿದ್ಯಾತೀರ್ಥರ ಶಿಷ್ಯರಾದರು. ಅಲ್ಲಿ ವೇದಾಂತದೇಶಿಕರು ಅವರ ಸಹಾಧ್ಯಾಯಿಗಳೆಂದು ಐತಿಹ್ಯ ವುಂಟು. ಆಗ ಕಂಚಿಯಲ್ಲಿದ್ದ ವಿದ್ಯಾತೀರ್ಥರು ಮಾಧವಾಚಾರ್ಯರ ಮತ್ತು

---

1. ಈ ಶಾಸನದ ಕನ್ನಡ ಅನುವಾದವನ್ನು ಡಿ.ವಿ.ಜಿ.ಯವರು ಹೀಗೆ ಮಾಡಿದ್ದಾರೆ:— "ಎಲೈ ಸಾಯಣಾರ್ಯ. ನಿನ್ನ ತಾಯಿ ಶ್ರೀಮತೀ. ನಿನ್ನ ತಂದೆ ಬೋಧಾಯನ ಸೂತ್ರದ ಮಾಯಣಮುನಿ: **ನಿನ್ನ** ಅಣ್ಣ ಮಾಧವಭಟ್ಟನು; ನಿನ್ನ ತಮ್ಮ ಭೋಗನಾಥ ಕವಿ: ನಿನ್ನ ಸ್ವಾಮಿ ಸಂಗಮ**ರಾಜ**; ನಿನ್ನ ಗುರು ಶ್ರೀಕಂಠನಾಥನು; ನಿನ್ನ ಕುಲ ಭಾರದ್ವಾಜ ಋಷಿಯರದು. ಹೀಗಿರಲಾಗಿ ನಿನಗಿಂತ ದೊಡ್ಡವರಾರು." ಈ ಶಾಸನದ ಸ್ವಲ್ಪ ಭಾಗ ನಷ್ಟವಾಗಿದೆ. ಡಿ.ವಿ.ಜಿ.ಗಿಂತ ಮುಂಚೆ ಈ ಶಾಸನವನ್ನು ಓದಿದವರು ನಷ್ಟವಾದ ಭಾಗವನ್ನು ಸರಿಯಾಗಿ ಓದಿ ಅರ್ಥಮಾಡಿಕೊಂಡಿರಲಿಲ್ಲ. ಆ ಭಾಗವನ್ನು ಡಿ.ವಿ.ಜಿ.ಯವರು ಮೇಲೆ ಕಂಡಂತೆ ಸರಿಯಾಗಿ ಅರ್ಥವಾಗುವಂತೆ ಓದಿದ್ದಾರೆ "ವಿದ್ಯಾರಣ್ಯರ ಸಮಕಾಲೀನರು", ಪುಟ (೮೦–೮೧).

ಅವರ ಸಹೋದರರ ಮೊದಲನೆಯ ಗುರು. ಅಲ್ಲಿಯೆ ಇದ್ದ ಭಾರತೀಕೃಷ್ಣತೀರ್ಥರು ಇವರ ಎರಡನೆಯ ಗುರು. ಕಂಚಿಯ ವಾಸಿಗಳಾದ ಶ್ರೀಕಂಠನಾಥರು ಇವರ ಮೂರನೆಯ ಗುರು.

ವಿದ್ಯಾರ್ಥಿಜೀವನ ಮುಗಿದಮೇಲೆ ಮಾಧವಾಚಾರ್ಯರು ಹಂಪೆಗೆ ಬಂದು ವಿರೂಪಾಕ್ಷ ಕ್ಷೇತ್ರದಲ್ಲಿ ಭುವನೇಶ್ವರಿ ಸಾನ್ನಿಧ್ಯದಲ್ಲಿ ತಪಸ್ಸು ಮಾಡಿದರಂತೆ. ಮುಂದೆ ಸಂನ್ಯಾಸವನ್ನು ಸ್ವೀಕರಿಸಬೇಕೆಂದು ಶೃಂಗೇರಿಗೆ ಪ್ರಯಾಣ ಮಾಡಿ, ಅಲ್ಲಿ ಭಾರತೀ ಕೃಷ್ಣತೀರ್ಥರಿಂದ ಸಂನ್ಯಾಸವನ್ನು ಸ್ವೀಕರಿಸಿ ವಿದ್ಯಾರಣ್ಯರೆಂಬ ಹೆಸರನ್ನು ಪಡೆದ ರೆಂದು 'ಮಣಿಮಂಜರೀ ಭೇದಿನಿ' ತಿಳಿಸುತ್ತದೆ. ಶೃಂಗೇರಿ ಮಠದ ಪಟ್ಟಿಕೆ ಯಿಂದ ಮಾಧವಾಚಾರ್ಯರು ಸಂನ್ಯಾಸವನ್ನು ಸ್ವೀಕರಿಸಿದ್ದು ೧೩೩೧ರಲ್ಲಿ ಅಂದರೆ ಅವರ 63–64ನೆಯ ವಯಸ್ಸಿನಲ್ಲಿ. ಇವರು ಶೃಂಗೇರಿ ಮಠಾಧಿಪತಿಗಳ ಪರಂಪರೆ ಯಲ್ಲಿ ಸೇರಿದ್ದರೂ, ಶೃಂಗೇರಿಯಲ್ಲಿ ಬಹುಕಾಲ ನಿಲ್ಲಲಿಲ್ಲ. ಹಂಪೆಯಲ್ಲಿಯೆ ರಾಜ್ಯ ಭಾರಕಾರ್ಯದಲ್ಲಿ ನಿಂತಂತೆ ಕಾಣುತ್ತದೆ.

ವಿದ್ಯಾರಣ್ಯರ ಕಾಲದಲ್ಲಿ ಆಂಧ್ರ ದ್ರಾವಿಡ ಕರ್ಣಾಟಕಗಳಲ್ಲಿ ಅಲ್ಲಿಯ ರಾಜರು ಗಳಲ್ಲದೆ, ಪಂಡಿತರು, ಮಠಾಧಿಪತಿಗಳು, ವಿದೇಶಿಯರ ಪ್ರಾಬಲ್ಯದಿಂದ ವ್ಯಾಕುಲಿತ ರಾಗಿದ್ದರೆಂದು ವೇದಾಂತ ದೇಶಿಕರ 'ಅಭೀತಿಸ್ತವ'ದಿಂದ ತಿಳಿದುಕೊಳ್ಳಬಹುದು ದೇಶಾಭಿಮಾನ ಮತ್ತು ಮತಾಭಿಮಾನಗಳು ಎಲ್ಲೆಲ್ಲಿಯೂ ಸಹಜವಾಗಿರತಕ್ಕ ಗುಣಗಳು ಆದರೆ ದೇಶ ಮತಗಳಿಗೆ ಉಪದ್ರವವಾದಾಗ ಈ ಗುಣಗಳು ಪ್ರಜ್ವಲಿಸಿ ಜನರಲ್ಲಿ ನವಚೈತನ್ಯವನ್ನುಂಟುಮಾಡುತ್ತವೆ. ಆಗಿನ ಕಾಲದ ರಾಜರುಗಳಿಗೆ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿರಲಿಲ್ಲ. ಈ ಮಾತ್ಸರ್ಯದ ಲಾಭವನ್ನು ವಿದೇಶಿಯರು ಪಡೆದು ಎಲ್ಲರನ್ನು ಹತ್ತಿಕ್ಕಿದ್ದರು. ಇಂತಹ ರಾಜರಲ್ಲಿ ಧೈರ್ಯ ಶೌರ್ಯ ದೇಶಾಭಿ ಮಾನಗಳನ್ನು ಹುಟ್ಟಿಸುವುದು ಅತ್ಯಗತ್ಯವಾಗಿತ್ತು. ಹೀಗೆ ಮಾಡತಕ್ಕಂಥ ಸಾಹಸಿ ಯಾದ ಒಬ್ಬ ರಾಜನು ಅವಶ್ಯನಾಗಿದ್ದ. ಇಂತಹ ಶಿಷ್ಯನು ವಿದ್ಯಾರಣ್ಯರಿಗೆ ೧೩೩೪–೩೫ ರಲ್ಲಿ ದೊರಕಿದ ಹಾಗೆ ಕಾಣುತ್ತದೆ. ಈತನೇ ಸಂಗಮ ವಂಶದ ಹರಿಹರನು. ಈತನು ಓರುಗಲ್ಲಿನ ಪ್ರತಾಪರುದ್ರನ ಸೇವಕನೆಂದೂ, ಹೊಯ್ಸಳರ ಮಹಾಮಂಡಳೇಶ್ವರ ನೆಂದೂ ಅಥವಾ ಆನೆಗೊಂದಿಯ ಸಂಸ್ಥಾನದ ಪ್ರಜೆಯಾಗಿ ಅಲ್ಲಿಯೆ ಪ್ರಬಲನಾದ ನೆಂದೂ ಹೇಳುತ್ತಾರೆ. ಈ ವಿಷಯ ಏನಾದರೂ ಇರಲಿ, ಹರಿಹರನೂ ಆತನ ಸಹೋದರರೂ ಕನ್ನಡಿಗರೆನ್ನುವುದು ಅವರ ಹೆಸರುಗಳಿಂದ ಮತ್ತು ಅವರು ಸಾಹಸಿ ಗಳೆಂಬುದು ಅವರ ಕೃತಿಗಳಿಂದ ತಿಳಿದುಬರುತ್ತದೆ.

ವಿದ್ಯಾರಣ್ಯ—ಹರಿಹರರ ಸಂಬಂಧ

ಗುರುಶಿಷ್ಯರು ಮತ್ತು ಅವರ ಸಂಬಂಧ ಕುಲಕ್ರಮವಾಗಿತ್ತೆಂದು 'ಪರಾಶರ ಮಾಧವೀಯ' ಹೇಳುತ್ತದೆ. ಅದೇ ಆಧಾರದಿಂದ ಮಾಧವಾಚಾರ್ಯರ ತಂದೆ

ಮಾಯಣರು ಹರಿಹರನ ತಂದೆ ಸಂಗಮನ ಪುರೋಹಿತರೆಂದು ಊಹಿಸಬಹುದು. ಮಹಮದ್ ತೊಗ್ಲಕನ ರಾಜ್ಯಾಕಾಂಕ್ಷೆ ಮಿತಿಮೀರಿದ್ದರಿಂದ ಅವನು ಗೆದ್ದ ರಾಜ್ಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಅಸಮರ್ಥನಾದನು. ಒಂದಾದ ಮೇಲೆ ಒಂದರಂತೆ ಅವನು ಗೆದ್ದ ಭಾಗಗಳು ಸ್ವತಂತ್ರವಾಗತೊಡಗಿದವು. ಆನೆಗೊಂದಿಯಲ್ಲಿಯೂ ಅವನ ಪ್ರತಿನಿಧಿಯನ್ನು ಜನರು ದಂಗೆಯೆದ್ದು ಕಿತ್ತುಹಾಕಿದರು. ಹರಿಹರನು ಈ ರಾಜ್ಯದ ಸ್ವತಂತ್ರ ರಾಜನಾದನು. ಆಗ ವಿದ್ಯಾರಣ್ಯರ ಸಂಕಲ್ಪವು ಕೈಗೂಡಲು ಅನುಕೂಲವಾದ ವಾತಾವರಣವು ಉಂಟಾಯಿತು. ಹರಿಹರನ ರಾಜ್ಯಾಭಿಷೇಕವೂ ವಿಜಯನಗರ ಜೀರ್ಣೋದ್ಧಾರವೂ ಕ್ರಿ.ಶ.೧೩೩೬ರಲ್ಲಿ ವಿದ್ಯಾರಣ್ಯರ ಪ್ರಯತ್ನದಿಂದ ಆದವೆನ್ನುವುದಕ್ಕೆ 'ವಿದ್ಯಾರಣ್ಯಾಷ್ಟೋತ್ತರ ಶತನಾಮ'ವೆಂಬ ಗ್ರಂಥವೇ ಆಧಾರವು. ಕ್ರಿಶ. ೧೩೪೪ರ ಮುಳಬಾಗಲ ೧೫೮ನೆಯ ಶಾಸನವು ವಿದ್ಯಾರಣ್ಯರು ವಿದ್ಯಾನಗರವನ್ನೂ ವಿಜಯನಗರ ರಾಜ್ಯವನ್ನೂ ಸ್ಥಾಪಿಸಿದರೆಂದು ಹೇಳುತ್ತದೆ. ಇದಾದ ಮೇಲೆ ಕರ್ನಾಟಕದ ಬಹುಭಾಗವು ಕ್ರಮೇಣ ಹರಿಹರನ ವಶಕ್ಕೆ ಸೇರಿತು. ಕ್ರಿ.ಶ. ೧೩೪೬ನೆ ಇಸ್ವಿಯ ಶೃಂಗೇರಿಯ ಒಂದನೆಯ ಶಾಸನದಿಂದ ಹರಿಹರನ ದಿಗ್ವಿಜಯವು ಅತ್ಯಂತ ಯಶಸ್ವಿಯಾಯಿತೆಂದು ತಿಳಿಸುತ್ತದೆ. ಶಾಸನದ ಪೀಠಿಕೆಯಲ್ಲಿ ಈ ಯಶಸ್ಸಿಗೆ ಕಾರಣರಾದ ಮತ್ತು ಭಾರತೀತೀರ್ಥರಿಗೆ ಮತ್ತು ವಿದ್ಯಾರಣ್ಯರಿಗೆ ಮುಖ್ಯ ಗುರುಗಳಾಗಿದ್ದ ವಿದ್ಯಾತೀರ್ಥರ ಉಪಕಾರಸ್ಮರಣೆಯಿದೆ. ಅನಂತರ ಈ ಶಾಸನವು ಭಾರತೀತೀರ್ಥರಿಗೆ ಹರಿಹರನು ತನ್ನ ಬಂಧು ಬಳಗದವರೊಂದಿಗೆ ದಾನಮಾಡಿದನೆಂದು ಹೇಳುತ್ತದೆ. ಈ ಶಾಸನದಲ್ಲಿ ವಿದ್ಯಾರಣ್ಯರ ಹೆಸರು ಇಲ್ಲದೆ ಇರುವುದರಿಂದ ಆ ಶಾಸನದ ಕಾಲದಲ್ಲಿ ಅಂದರೆ ಕ್ರಿ.ಶ. ೧೩೪೬ರಲ್ಲಿ ಅವರು ಶೃಂಗೇರಿಯಲ್ಲಿರಲಿಲ್ಲವೆನ್ನಬಹುದು. ಅವರು ಕಾಶಿಗೆ ಹೋಗಿ ಅಲ್ಲಿಯೇ ಅನೇಕ ವರ್ಷಗಳಿದ್ದರೆಂದು ಕಾಣುತ್ತದೆ. ಹರಿಹರನ ಕಾಲ ಕ್ರಿ.ಶ. ೧೩೫೬ರಲ್ಲಿ ಮುಗಿಯಿತು.

ಬುಕ್ಕರಾಯನ ಆಡಳಿತ

ಆತನ ತಮ್ಮ ಬುಕ್ಕರಾಯನು ಕ್ರಿ.ಶ. ೧೩೫೬ರಿಂದ ೧೩೭೭ರವರೆಗೂ ಆಳಿದನು. ಅವನು ರಾಜನಾದ ಕೂಡಲೆ ಕಾಶಿಯಲ್ಲಿದ್ದ ವಿದ್ಯಾರಣ್ಯರಿಗೆ ಒಂದು ಪತ್ರವನ್ನು ಬರೆದು ವಿಜಯನಗರಕ್ಕೆ ಹಿಂತಿರುಗಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ತಾನೇ ಬರೆದರೆ ಅವರು ಬರುತ್ತಾರೊ ಇಲ್ಲವೊ ಎಂದು ಶಂಕಿಸಿ ತನ್ನ ಪತ್ರದ ಜತೆಗೆ ಅದೇ ಆಶಯದ ವಿದ್ಯಾತೀರ್ಥರ ನಿರೂಪವನ್ನು ಕಳಿಸುತ್ತಾನೆಂದು ಶೃಂಗೇರಿಯ ಮಠದಲ್ಲಿರುವ ಕಡತಗಳಿಂದ ತಿಳಿಯಬರುತ್ತದೆ. ವಿದ್ಯಾರಣ್ಯರು ಹಿಂತಿರುಗಿ ವಿಜಯನಗರದಲ್ಲಿ ಬುಕ್ಕನಿಗೆ ರಾಜ್ಯಭಾರದಲ್ಲಿ ನೆರವಾದರು. ಅವರ ಗುರುಗಳಾದ ಭಾರತೀಕೃಷ್ಣತೀರ್ಥರು ಕ್ರಿ.ಶ. ೧೩೮೦ರವರೆಗೂ ಮೊದಲು ವಿದ್ಯಾತೀರ್ಥರಿಗೆ ಕಿರಿಯ ಸ್ವಾಮಿಗಳಾಗಿದ್ದರು. ನಂತರ ಅವರು ಹಿರಿಯ ಸ್ವಾಮಿಗಳಾದ ಮೇಲೆ ವಿದ್ಯಾರಣ್ಯರು

ಅವರ ಕಿರಿಯ ಸ್ವಾಮಿಗಳಾದರು. ಆದರೂ ವಿದ್ಯಾರಣ್ಯರು ಶೃಂಗೇರಿಯಲ್ಲಿ ಭಾರತೀ ಕೃಷ್ಣತೀರ್ಥರು ಅಲ್ಲಿರುವವರೆಗೂ ಇರಲಿಲ್ಲ. ರಾಜ್ಯಭಾರನಿಮಿತ್ತ ಅವರು ವಿಜಯ ನಗರದಲ್ಲಿಯೆ ಇರಬೇಕಾಗಿತ್ತು. ಬುಕ್ಕರಾಯನು ಆಗಾಗ ಶೃಂಗೇರಿಗೆ ಭೇಟಿಕೊಟ್ಟು ವಿದ್ಯಾತೀರ್ಥರ ಮತ್ತು ಭಾರತೀಕೃಷ್ಣತೀರ್ಥರ ಸೇವೆಯನ್ನು ಮಾಡಿ ಅಲ್ಲಿಯ ಮಠಕ್ಕೆ ಭೂದಾನ ಸುವರ್ಣದಾನಗಳನ್ನು ಮಾಡಿ ಬರುತ್ತಿದ್ದನು. ಬುಕ್ಕರಾಯನ ನಿಧನದ ವೇಳೆಗೆ (೧೩೭೭) ವಿದ್ಯಾರಣ್ಯರಿಗೆ ೧೦೮ ವರ್ಷಗಳಾಗಿದ್ದವು. ಆಮೇಲೆ ಅವರು ಇನ್ನೂ ೧೦ ವರ್ಷಗಳ ಕಾಲ ದೇಹಧಾರಣ ಮಾಡಿದ್ದರೆಂದು ಶಾಸನದಿಂದ ತಿಳಿದುಕೊಳ್ಳಬಹುದು. ಆಗ ಬುಕ್ಕನ ಹಿರಿಯ ಮಗ ಇಮ್ಮಡಿ ಹರಿಹರರಾಯನು ಆಳುತ್ತಿದ್ದನು. ಈತನ ಆಳ್ವಿಕೆಯ ೧೧ನೇ ವರ್ಷದಲ್ಲಿ ಅಂದರೆ ೧೩೮೭ ರಲ್ಲಿ ಹಂಪೆಯಲ್ಲಿ ವಿದ್ಯಾರಣ್ಯರು ದೈವಾಧೀನರಾದರು. ಹಂಪೆಯ ಶ್ರೀ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿ ಅವರ ಸಮಾಧಿಯನ್ನು ಈಗಲೂ ನೋಡಬಹುದು. ಅವರ ಜ್ಞಾಪಕಾರ್ಥವಾಗಿ ಇಮ್ಮಡಿ ಹರಿಹರನು ವಿದ್ಯಾರಣ್ಯಪುರವೆಂಬ ಅಗ್ರಹಾರವನ್ನು ಶೃಂಗೇರಿಯ ಹತ್ತಿರ ಕಟ್ಟಿಸಿದನು.

ವಿದ್ಯಾತೀರ್ಥರು

ವಿದ್ಯಾತೀರ್ಥರ ಚರಿತ್ರೆಯು ವಿದ್ಯಾರಣ್ಯರ ಚರಿತ್ರೆಯ ಒಂದು ಅಂಗ.

ವಿದ್ಯಾತೀರ್ಥರು ವಿದ್ಯಾರಣ್ಯರ ಮುಖ್ಯ ಗುರುಗಳು. ಕಂಚಿಯಲ್ಲಿ ಆಶ್ರಮ ಸ್ವೀಕಾರ ಮಾಡಿ ಸ್ವಲ್ಪ ಕಾಲದನಂತರ ಇವರು ಶೃಂಗೇರಿಯಲ್ಲಿ ಅಧಿಕಾರ ವಹಿಸಿ ಕೊಂಡರೆಂಬುದು 'ಪುಣ್ಯಶ್ಲೋಕ ಮಂಜರಿ'ಯಿಂದ ಸ್ಪಷ್ಟವಾಗುತ್ತದೆ. ಹೀಗೆ ಮಾಡುವುದಕ್ಕೆ ವಿದ್ಯಾರಣ್ಯರ ಒತ್ತಾಯವು ಮತ್ತು ಅವರು ಕನ್ನಡಿಗರಾಗಿದ್ದುದು ಕಾರಣಗಳಾಗಿರಬೇಕು. ಅವರು ಕನ್ನಡಿಗರೆನ್ನುವುದಕ್ಕೆ ಕಂಚಿಯ ಮಠಾಧೀಶ್ವರರು ಅದ್ಯಾಪಿ ಕರ್ನಾಟಕರಾಗಿರುವುದು ಕನ್ನಡಿಗರಾದ ಮಾಧವ ಸಾಯಣರು ಅವರನ್ನು ಹುಡುಕಿಕೊಂಡು ದೂರದ ಕಂಚಿಗೆ ಹೋಗಿ ಅವರ ಶಿಷ್ಯರಾದದ್ದು ಕಾರಣಗಳಾಗಿರ ಬೇಕು. ವಿದ್ಯಾತೀರ್ಥರು ಕೇವಲ ಯೋಗಾಸಕ್ತರು. ಲೌಕಿಕ ಕಾರ್ಯಾಸಕ್ತರಲ್ಲ. ವಿದ್ಯಾರಣ್ಯರಾದರೊ ಸದಾ ಕಾರ್ಯನಿರತರು. ಅವರು ಯಾವಾಗಲೂ ತಮ್ಮ ಜತೆಗೆ ಪಂಡಿತರನ್ನೂ ಸಂನ್ಯಾಸಿಗಳನ್ನೂ ಕೂಡಿಕೊಂಡು ಧರ್ಮರಕ್ಷಣೆಗೆ ಶ್ರಮಿಸು ತ್ತಿದ್ದರು. ಇಂತಹ ಸಮುದಾಯಕ್ಕೆ ಮಹಾತಪಸ್ವಿಗಳೂ. ಅಸಾಧಾರಣ ವಿದ್ವಾಂಸರೂ ಆದ ವಿದ್ಯಾತೀರ್ಥರು ಸ್ಫೂರ್ತಿದಾಯಕರಾಗಿದ್ದರು. ದೇಶೋನ್ನತಿಗೂ ಧರ್ಮೋ-ನ್ನತಿಗೂ ಬೇಕಾದ ಮಹಾಸಮಾರಂಭಕ್ಕೆ ಮಹಾಪುರುಷರಾದವರ ಆಶ್ರಯವು ಅವಶ್ಯ ವೆನ್ನುವುದನ್ನು ವಿದ್ಯಾರಣ್ಯರು ಮನಗಂಡಿದ್ದರು. ಆದ್ದರಿಂದ ಅವರು ಎಲ್ಲಾ ಸಮಾ ರಂಭಗಳಿಗೂ ವಿದ್ಯಾತೀರ್ಥರನ್ನು ಮುಂದಿಟ್ಟುಕೊಂಡು ಅವರ ಆಸರೆಯಲ್ಲಿ ತಮ್ಮ ದೇಶ ಧರ್ಮೋದ್ಧಾರ ಕಾರ್ಯಗಳನ್ನು ನಡೆಯಿಸುತ್ತಿದ್ದರು.

ಇಂತಹ ಕಾರ್ಯಗಳಲ್ಲಿ ಮುಖ್ಯವಾದ ಒಂದು ಕಾರ್ಯ ಶೃಂಗೇರಿಯ ಜೀರ್ಣೋದ್ಧಾರ. ವಿದ್ಯಾತೀರ್ಥರು ಶೃಂಗೇರಿಗೆ ಬರುವ ಮುಂಚೆ ಅದು ಒಂದು ಆಶ್ರಮವಾಗಿತ್ತು. ಶೃಂಗೇರಿ ಮಠಕ್ಕೆ ವಿದ್ಯಾತೀರ್ಥರು ಅಧಿಪತಿಗಳಾಗಿ ಕಡೆಗೆ ಅಲ್ಲಿಯೇ ಸಮಾಧಿ ಹೊಂದಿದರು. ಅವರ ಸಮಾಧಿರೂಪವಾದ ವಿದ್ಯಾಶಂಕರ ದೇವಾಲಯವನ್ನು ವಿದ್ಯಾರಣ್ಯರು ಶೃಂಗೇರಿಯಲ್ಲಿ ಕಟ್ಟಿಸಿ ತಮ್ಮ ಗುರುಗಳ ಖ್ಯಾತಿಯನ್ನು ಶಾಶ್ವತಗೊಳಿಸಿದರು. ಈ ದೇವಸ್ಥಾನವನ್ನಲ್ಲದೆ, ಶಾರದಾದೇವಿಯ ಲೋಹಪ್ರತಿಮೆಯನ್ನು ಇವರೇ ಮಾಡಿಸಿಟ್ಟರು. ಶೃಂಗೇರಿಯ ಮಠಕ್ಕೆ ರಾಜ ಸನ್ಮಾನಗಳನ್ನು ಸಂಪಾದಿಸಿಕೊಟ್ಟರು. ಹೀಗೆ ಆಶ್ರಮವಾಗಿದ್ದ ಶೃಂಗೇರಿಯನ್ನು ಪ್ರಸಿದ್ಧ ಕ್ಷೇತ್ರವಾಗಿ, ವಿದ್ಯಾಕೇಂದ್ರವಾಗಿ, ಆಚಾರ ವ್ಯವಹಾರ ವಿಚಾರಗಳಿಗೆ ನಿರ್ಣಯಸ್ಥಾನವಾಗಿ ವಿದ್ಯಾತೀರ್ಥರೂ ವಿದ್ಯಾರಣ್ಯರೂ ಬೆಳೆಸಿದರು.

ಭಾರತೀಕೃಷ್ಣತೀರ್ಥರು

ಇವರು ವಿದ್ಯಾರಣ್ಯರ ಎರಡನೆಯ ಗುರುಗಳು. ಇವರೂ ವಿದ್ಯಾತೀರ್ಥರ ಹಾಗೆ ಕಂಚಿಯನ್ನು ಬಿಟ್ಟು ಶೃಂಗೇರಿಯಲ್ಲಿ ನೆಲಸಿದ್ದರ ಕಾರಣವು ಇವರು ಕನ್ನಡಿಗ ರಾಗಿದ್ದು, ಕರ್ಣಾಟಕವೇ ತಮ್ಮ ಕಾರ್ಯಕ್ಷೇತ್ರಕ್ಕೆ ಯೋಗ್ಯವೆನ್ನುವ ಅವರ ನಿರೀಕ್ಷಣೆ ಇರಬಹುದು. ವಿದ್ಯಾರಣ್ಯರಿಗೆ ಇವರೇ ಸಂನ್ಯಾಸಾಶ್ರಮವನ್ನು ಕೊಟ್ಟವರು. ಕ್ರಿ.ಶ. ೧೩೪೬ರಹೊತ್ತಿಗೆ ಇವರು ಶೃಂಗೇರಿಗೆ ಬಂದು ಅಲ್ಲಿ ಕಿರಿಯಸ್ವಾಮಿಗಳಾಗಿದ್ದರು. ವಿದ್ಯಾರಣ್ಯರು ವಿಜಯನಗರದಲ್ಲಿ ರಾಜಕೀಯ ಮತ್ತು ಲೌಕಿಕ ಕಾರ್ಯಗಳಲ್ಲಿ ನಿರತ ರಾಗಿದ್ದುದರಿಂದ ಶೃಂಗೇರಿಯ ಮಠದ ದಿನಚರ್ಯೆಯನ್ನು ಭಾರತೀಕೃಷ್ಣತೀರ್ಥರು ನಿರ್ವಹಿಸುತ್ತಿದ್ದರು. ವಿದ್ಯಾತೀರ್ಥರಿಗೂ ವಿದ್ಯಾರಣ್ಯರಿಗೂ ಹೇಗೆ ಪರಸ್ಪರ ಅಭೇದ ಬುದ್ಧಿಯಿದ್ದಿತೊ ವಿದ್ಯಾರಣ್ಯ ಭಾರತೀತೀರ್ಥರಿಗೂ ಹಾಗೆಯೆ. ಇದಕ್ಕೆ 'ಪಂಚದಶೀ' ಗ್ರಂಥ ಒಂದು ಒಳ್ಳೆಯ ಉದಾಹರಣೆ. ಪಂಚದಶೀ ಗ್ರಂಥಲೇಖನವನ್ನು ಭಾರತೀ ತೀರ್ಥರೆ ಪ್ರಾರಂಭಿಸಿ ಯಾವದೊ ಕಾರಣದಿಂದ ಅದನ್ನು ಮುಗಿಸಲಿಕ್ಕೆ ಆಗಲಿಲ್ಲ ವೆಂದು ಕಾಣುತ್ತದೆ. ವಿದ್ಯಾರಣ್ಯರು ಉಳಿದ ಎರಡು ಪಂಚಕಗಳನ್ನು ಬರೆದು ಆ ಗ್ರಂಥಲೇಖನವನ್ನೂ ಮುಗಿಸಿರಬೇಕು. ಈ ತರಹ ಸಹಕಾರ ಆ ಕಾಲದ ಇತರ ಗ್ರಂಥಗಳಿಗೂ ಅನ್ವಯಿಸುತ್ತದೆ.

ಆ ಕಾಲದ ಸಾರಸ್ವತ ಸಹಕಾರ

ಆ ಕಾಲದ ಸಾರಸ್ವತ ಪ್ರಪಂಚಕ್ಕೆ ಮಾಧವ ಸಾಯಣರು ಸೂರ್ಯಚಂದ್ರ ರಾಗಿದ್ದರು. ಅವರ ಸುತ್ತಮುತ್ತ ಅವರನ್ನವಲಂಬಿಸಿಕೊಂಡು ಅನೇಕ ಗ್ರಹಗಳೂ ನಕ್ಷತ್ರಗಳೂ ಸಂಚರಿಸುತ್ತಿದ್ದವು. ಮಾಧವ ಸಾಯಣರ ಹೆಸರಿನಲ್ಲಿ ನಮಗೆ ಲಭ್ಯ ವಿರುವ ಗ್ರಂಥಗಳಲ್ಲಿ ಪ್ರತಿಯೊಂದನ್ನೂ ಅವರೇ ಬರೆದಿರಲಿಲ್ಲ. ವಿದ್ಯಾರಣ್ಯರು

ಆ ಕಾಲವಲ್ಲಿ ಬಹಳ ಪ್ರಸಿದ್ಧರಾಗಿದ್ದುದರಿಂದ ಅವರ ಹೆಸರಿನಲ್ಲಿ ಅವರ ಶಿಷ್ಯಮಂಡಲಿಯವರು ಬರೆದಿರಬೇಕು. ಅಥವಾ ಕೆಲವು ಪಂಡಿತರು ತಾವು ಬರೆದ ಗ್ರಂಥಗಳನ್ನು ಇವರಿಗೆ ಅಂಕಿತ ಮಾಡಿರಬಹುದು. ಅಥವಾ ಮಾಧವ–ಸಾಯಣರು ಕೆಲವು ಪಂಡಿತರ ಯೋಗ್ಯತೆಯನ್ನು ಗುರುತಿಸಿ ಅವರಿಗೆ ಕೆಲವು ಗ್ರಂಥಗಳನ್ನು ಬರೆಯಲು ನಿಯಮಿಸಿರಬಹುದು. ಅಥವಾ ಕೆಲವು ಗ್ರಂಥಗಳನ್ನು ಮಾಧವ–ಸಾಯಣರಿಬ್ಬರಲ್ಲಿ ಯಾರಾದರೂ ಒಬ್ಬರು ಬರೆಯಲಾರಂಭಿಸಿ ಇತರ ಪಂಡಿತರಿಗೆ ಮುಗಿಸುವಂತೆ ಹೇಳಿರಬಹುದು. ಅಥವಾ ಇತರ ಪಂಡಿತರು ಬರೆದು ತಂದ ಪ್ರಬಂಧಗಳನ್ನು ರಾಜಾಸ್ಥಾನವಲ್ಲಿ ಪ್ರಕಾಶಪಡಿಸಿರಬಹುದು. ಹೀಗೆ ಹಿರಿಯರು ಕಿರಿಯರು ಕೂಡಿಕೊಂಡು ಈಗಿನ ಕಾಲದ ವಿಶ್ವವಿದ್ಯಾನಿಲಯಗಳು ಅಥವಾ ಅಕಾಡೆಮಿಗಳು ಮಾಡುವ ಕೆಲಸವನ್ನು ಮಾಡಿದರು. ಈ ಸಮುದಾಯದ ಮುಖ್ಯ ಉದ್ದೇಶ ಜನಬೋಧೆ. ಇವರಲ್ಲಿ ಯಾರೂ ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಬೇಕೆಂಬ ದುರಾಸೆಯನ್ನು ಇಟ್ಟುಕೊಂಡಿರಲಿಲ್ಲ. ಹಿರಿಯರು ಕಿರಿಯರನ್ನು ಮುಂದೆ ತರಬೇಕೆಂದೂ ಕಿರಿಯರು ತಮ್ಮ ಸೇವೆಯನ್ನು ಹಿರಿಯರು ಅಂಗೀಕರಿಸಬೇಕೆಂದೂ ಹಾತೊರೆಯುತ್ತಿದ್ದರು.

ಈ ಪಂಡಿತ ಸಮುದಾಯಕ್ಕೆ ಬುಕ್ಕರಾಯ ಬೆನ್ನೆಲುಬು. ಆತನ ಆಶ್ರಯ ವಿಲ್ಲದಿದ್ದಲ್ಲಿ ಈ ಮಹಾಕಾರ್ಯಕ್ಕೆ ಅಗತ್ಯವಿದ್ದ ಪಂಡಿತ ಮಂಡಲಿಯು ಸೇರುತ್ತಿರಲಿಲ್ಲ. ಆ ಮಹಾರಾಯನು ಈ ಕಾರ್ಯಕ್ಕೆ ಪ್ರೋತ್ಸಾಹದಾಯಕನೂ, ಪೋಷಕನೂ ಆಗಿದ್ದನಲ್ಲದೆ ಮೂಲ ಪ್ರೇರಕನೂ ಆಗಿದ್ದನೆಂದು ಸಾಯಣ ವೇದಭಾಷ್ಯದ ಉಪೋದ್ಘಾತದಿಂದ ತಿಳಿಯಬಹುದು.

“ವಿದ್ಯಾತೀರ್ಥರ ಕಟಾಕ್ಷ ಬಲದಿಂದ (ರಾಜ) ರೂಪವನ್ನು ತಾಳಿದ ಬುಕ್ಕ ಮಹೀಪತಿಯು ಮಾಧವಾಚಾರ್ಯರನ್ನು ಕುರಿತು ವೇದಗಳ ಅರ್ಥವನ್ನು ಪ್ರಕಾಶಪಡಿಸಬೇಕೆಂದು ಅಜ್ಞಾಪಿಸಿದನು. ಅವರು ಆ ನರಪತಿಯನ್ನು ಕುರಿತು—ರಾಜನೇ, ನನ್ನ ತಮ್ಮ ಸಾಯಣಾರ್ಯನು ಎಲ್ಲವನ್ನು ತಿಳಿದವನು ; ಆತನನ್ನು ಆ ವ್ಯಾಖ್ಯಾನ ಕಾರ್ಯಕ್ಕೆ ನಿಯಮಿಸೋಣವಾಗಲಿ” ಎಂದು ಹೇಳಿದರು. ಆ ಮಾತನ್ನು ಕೇಳಿ ವೀರ ಬುಕ್ಕ ಭೂಪತಿಯು ವೇದಾರ್ಥ ಪ್ರಕಾಶದ ಕಾರ್ಯವನ್ನು ಕುರಿತು ಸಾಯಣಾಚಾರ್ಯರಿಗೆ ಅಪ್ಪಣೆ ಕೊಟ್ಟನು.” [2]

ಹೀಗೆ ಬುಕ್ಕರಾಯನ ಪ್ರೇರಣೆ–ಪ್ರೋತ್ಸಾಹಗಳಿಂದ ವಿದ್ಯಾರಣ್ಯ–ಸಾಯಣರು ತಜ್ಞರ ಸಹಾಯದಿಂದ ಅದುವರೆಗೂ ಜ್ಞಾನದ ಬೇರೆ ಬೇರೆ ಭಾಗಗಳಲ್ಲಿ ಭಾರತೀಯರು ಸಾಧಿಸಿದ ಪ್ರಗತಿಯನ್ನು ಗ್ರಂಥಗಳ ಮೂಲಕ ತಮ್ಮ ಕಾಲದವರಿಗೂ, ಮುಂದಿನ ಪೀಳಿಗೆಯವರಿಗೂ ತಿಳಿಯಪಡಿಸಿದರು. ವಿದ್ಯಾರಣ್ಯ–ಸಾಯಣರು ಈ ಜನಬೋಧೆಯ ಕೆಲಸದಲ್ಲಿ ಜನಜೀವನಕ್ಕೆ ಅವಶ್ಯವಾದ ಕಾರ್ಯಗಳನ್ನು ಮರೆಯಲಿಲ್ಲ. ಅವರ

2. “ವಿದ್ಯಾರಣ್ಯರ ಸಮಕಾಲೀನರು”, ಪುಟ ೧೪೩.

ಸಹೋದರಿ ಸಿಂಗಲೆಯ ಮಗ ಲಕ್ಷ್ಮೀಧರ ಮೊದಲನೆಯ ದೇವರಾಯನ ಮುಖ್ಯ ಮಂತ್ರಿಯಾಗಿದ್ದನು. ತನ್ನ ಸೋದರಮಾವಂದಿರಾದ ಮಾಧವ–ಸಾಯಣರು ಜನ ಸೇವೆಗಾಗಿ ಏನೇನು ಮಾಡಿದರೆನ್ನುವುದನ್ನು ತನ್ನ ಒಂದು ಶಾಸನದಲ್ಲಿ ಈ ರೀತಿ ಬಣ್ಣಿಸಿದ್ದಾನೆ :

ತೋಡಸದ ಭಾವಿಯಿಲ್ಲ ಮರ ಕಟ್ಟಿಪ ಪೇರ್ಗೆರೆಯಿಲ್ಲ ಲೀಲೆಯಿಂ।
ಮಾಡ ದ ದೇ ಶಭವನಮಿಲ್ಲೊಲವಿಂ ಬಿಡದಗ್ರಹಾರವಿ॥
ಲ್ಲಾಡಲದೇನೋ ಭೂಭೃ ನ ಭುಂಭುಕಮಾದುದು ಕೀರ್ತಿ ಭಾಪು ನಾ।
ಡಾಡಿಯು ಸಯ್ಯು ಮಾದರಸ ಸಾಯಣರೆಂಬ ಮಹಾಪ್ರಧಾನರಾ॥

ವಿದ್ಯಾರಣ್ಯರ ಬಗೆಗೆ ಡಿ. ವಿ. ಜಿ.ಯವರ ಮತ್ತು ಇತರರ ಶೋಧನೆಗಳು

ತಮಗೆ ವಿದ್ಯಾರಣ್ಯರ ಬಗೆಗೆ ಬರೆಯುವುದಕ್ಕೆ ಯಾವ ವಿದ್ವಾಂಸರ ಸಹಾಯ ವಿಶೇಷವಾಯಿತೆನ್ನುವುದನ್ನು ಡಿ.ವಿ.ಜಿ.ಯವರು ಈ ರೀತಿಯಾಗಿ ಹೇಳಿದ್ದಾರೆ : “ಕರ್ನಾಟಕ ಇತಿಹಾಸ ಸಾಮಗ್ರಿಯನ್ನು ಸಂಪಾದಿಸಿ ಶೋಧಿಸಿರುವವರಲ್ಲಿ ಇಬ್ಬರಿಗೆ ಈ ಲೇಖಕನು ವಿಶೇಷ ಋಣಿಯಾಗಿದ್ದಾನೆ. ಅವರಲ್ಲಿ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಶ್ರೀಮಾನ್ ಆರ್. ನರಸಿಂಹಾಚಾರ್ಯರವರು ಮೊದಲನೆಯವರು. ಅವರ ಲೇಖನಗಳು ಇವನಿಗೆ ಅನೇಕ ವಿಷಯಗಳಲ್ಲಿ ಮಾರ್ಗದರ್ಶಕಗಳಾದುವು. ದಿವಂಗತರಾದ ರಾವ್ ಬಹದ್ದೂರ್ ಹೆಚ್. ಕೃಷ್ಣಶಾಸ್ತ್ರಿಗಳವರು ಇನ್ನೊಬ್ಬರು.”

ಹಿಂದಿನ ಲೇಖಕರಿಂದ ಸ್ಫೂರ್ತಿಪಡೆದು. ಡಿ.ವಿ.ಜಿ.ಯವರು ಅನೇಕ ಹೊಸ ವಿಷಯಗಳನ್ನು ಕಂಡುಹಿಡಿದಿದ್ದಾರೆ. ವಿದ್ಯಾತೀರ್ಥರು. ಭಾರತೀತೀರ್ಥರು ಮತ್ತು ವಿದ್ಯಾರಣ್ಯರು ಕನ್ನಡಿಗರು. ಆದ್ದರಿಂದಲೇ ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರೆನ್ನುವುದು ಇವರ ಶೋಧನೆಗಳಲ್ಲಿ ಮೊದಲನೆಯದು. ಎರಡನೆಯದಾಗಿ. ವಿದ್ಯಾತೀರ್ಥರ ಮತ್ತು ವಿದ್ಯಾರಣ್ಯರ ಸ್ವಭಾವವನ್ನು ಇವರು ಸರಿಯಾಗಿ ತಿಳಿದುಕೊಂಡಿದ್ದಾರೆ. ಇವರ ಸ್ವಭಾವದಲ್ಲಿರುವ ವ್ಯತ್ಯಾಸವನ್ನು ತಿಳಿದುಕೊಳ್ಳದೆ ಇರುವ ಕೆಲವು ವಿದ್ವಾಂಸರು ವಿಜಯನಗರ ಸ್ಥಾಪನೆಯು ವಿದ್ಯಾತೀರ್ಥರ ಮುಂದಾಳುತನದಲ್ಲಿ ಆಯಿತು. ಇದರಲ್ಲಿ ವಿದ್ಯಾರಣ್ಯರ ಪಾತ್ರವೇ ಇಲ್ಲ ಎಂದು ಹೇಳಿದ್ದಾರೆ. ಡಿ.ವಿ.ಜಿ.ಯವರು ವಿದ್ಯಾತೀರ್ಥರು ಯೋಗಾಸಕ್ತರು. ತಪಸ್ವಿಗಳು. ಲೌಕಿಕದಲ್ಲಿ ಇವರಿಗೆ ಆಸಕ್ತಿ ಇರಲಿಲ್ಲ : ಅವರಲ್ಲಿ ಆಸಕ್ತಿ ಇದ್ದಂತಹ ವಿದ್ಯಾರಣ್ಯರೇ ಈ ರಾಜ್ಯಸ್ಥಾಪನೆಗೆ ಕಾರಣರು ಎನ್ನುವುದನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಕೊನೆಯದಾಗಿ. ಮಾಧವ–ಸಾಯಣರು ಹಂಪೆಯಲ್ಲಿ ಮತ್ತು

ಶೃಂಗೇರಿಯಲ್ಲಿ ವಿಶ್ವವಿದ್ಯಾನಿಲಯಗಳಂತಹ ಸಂಸ್ಥೆಗಳನ್ನು ಕಟ್ಟಿ ಅವುಗಳ ಮೂಲಕ ಭಾರತೀಯ ಸಂಸ್ಕೃತಿಯ ವಿವಿಧ ಅಂಶಗಳ ಪುನರುಜ್ಜೀವನ ಮಾಡಿದ ರೀತಿಯನ್ನು ಡಿ.ವಿ.ಜಿ.ಯವರು ಸಮರ್ಪಕವಾಗಿ ತೋರಿಸಿಕೊಟ್ಟಿದ್ದಾರೆ.

ಇನ್ನೊಂದೆರಡು ವಿಷಯಗಳಲ್ಲಿ ಡಿ.ವಿ.ಜಿ.ಯವರ ಶೋಧನೆಗಳು ಆ ವಿಷಯಗಳಲ್ಲಿಯ ತಜ್ಞರನ್ನು ಬೆರಗುಗೊಳಿಸುವಂಥವು. ಅರುಳಾಳ ಪೆರುಮಾಳ ಶಾಸನದಲ್ಲಿ ಸರಿಯಾಗಿ ಕಾಣದೆ ಇರುವ ಭಾಗಗಳನ್ನು ಓದುವಲ್ಲಿ ಡಿ.ವಿ.ಜಿ.ಯವರು ಓದಿದ ರೀತಿ ಸರ್ವಮಾನ್ಯವಾಗಿದೆ. ಶಾಸನತಜ್ಞರು ಕೂಡ ಈ ಭಾಗಗಳನ್ನು ಸಮರ್ಪಕವಾಗಿ ಓದಿರಲಿಲ್ಲ. ಕೊನೆಯದಾಗಿ, ಪಂಚದಶೀ ಗ್ರಂಥದಲ್ಲಿ ಭಾರತೀತೀರ್ಥರು ಯಾವ ಭಾಗವನ್ನು ಬರೆದರು, ವಿದ್ಯಾರಣ್ಯರು ಯಾವ ಭಾಗವನ್ನು ಬರೆದರು ಎಂದು ನಿರ್ಧರಿಸುವಲ್ಲಿ ಡಿ.ವಿ.ಜಿ.ಯವರ ನಿರ್ಣಯವು ಎಲ್ಲಾ ಸಂಸ್ಕೃತ ವಿದ್ವಾಂಸರುಗಳೂ ಒಪ್ಪುವಂತಹುದು.

ಡಿ.ವಿ.ಜಿ.ಯವರು ಬರೆದ ನಂತರ ವಿದ್ಯಾರಣ್ಯರ ಬಗೆಗೆ ನಡೆದ ಕೆಲವು ಚರ್ಚೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಸಮೀಕ್ಷಿಸಬಹುದು. ಇಂತಹ ಸಮೀಕ್ಷೆಯಿಂದ ಡಿ.ವಿ.ಜಿ. ಯವರ ನಿರ್ಣಯಗಳ ಮೌಲ್ಯಮಾಪನ ಮಾಡಲು ಸುಲಭವಾಗುತ್ತದೆ. ಮೂರು ವಿಷಯಗಳಲ್ಲಿ ಇಂತಹ ಚರ್ಚೆಗಳ ಉದಾಹರಣೆಗಳನ್ನು ನಾವು ನೋಡಬಹುದು. ಅವು ಯಾವುವೆಂದರೆ :–

೧. ವಿಜಯನಗರ ರಾಜ್ಯ ಮತ್ತು ಅದರ ರಾಜಧಾನಿಗಳ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಮತ್ತು ಶೃಂಗೇರಿ ಮಠದ ಪಾತ್ರ.
೨. ಮಾಧವ–ವಿದ್ಯಾರಣ್ಯರು ಒಬ್ಬರೆ ಅಥವಾ ಬೇರೆ ಬೇರೆಯವರೆ ?
೩. ಕ್ರಿಯಾಶಕ್ತಿ–ವಿದ್ಯಾರಣ್ಯರು ಒಬ್ಬರೆ ಅಥವಾ ಬೇರೆ ಬೇರೆಯವರೆ ?

೧. ಪ್ರಸಿದ್ಧ ಇತಿಹಾಸಕಾರರಾದ ಫಾದರ್ ಹೆರಾಸ್ ಅವರು ವಿಜಯನಗರ ರಾಜ್ಯಸ್ಥಾಪನೆಯಲ್ಲಿ ಮತ್ತು ರಾಜಧಾನಿಯ ಸ್ಥಾಪನೆಯಲ್ಲಿ ಶೃಂಗೇರಿ ಮಠದ ಪಾತ್ರವಿರಲಿಲ್ಲ, ಸಂಬಂಧವಿದೆಯೆಂದು ತೋರಿಸುವ ದಾಖಲೆಗಳು ಕೃತಕವಾದುವು, ಅವನ್ನು ಶೃಂಗೇರಿ ಮಠದವರು 16ನೇ ಶತಮಾನದಲ್ಲಿ ಮಠಕ್ಕೆ ಅವುಗಳಿಂದ ಲಾಭವಾಗಲಿ ಎಂದು ತಯಾರಿಸಿದರೆಂದು ವಾದಿಸಿದ್ದಾರೆ.

ಈ ವಾದವನ್ನು ಖಂಡಿಸಿ, ಸಕಲೇಶಪುರದ ಶ್ರೀಕಂಠಯ್ಯನವರು ಶೃಂಗೇರಿ ಮಠದವರಿಗೆ 16ನೆಯ ಶತಮಾನದಲ್ಲಿ ವಿಜಯನಗರದ ಅರಸರಿಂದ ಯಾವ ಲಾಭವೂ ಬರಲಿಲ್ಲ. ಆದ್ದರಿಂದ ಅವರು ಕೃತಕ ದಾಖಲೆಗಳನ್ನು ನಿರ್ಮಿಸಿದರೆನ್ನುವ ಆಪಾದನೆ

ಯಲ್ಲಿ ಹುರುಳಿಲ್ಲವೆನ್ನುವುದನ್ನು ತೋರಿಸಿ, ವಿದ್ಯಾರಣ್ಯರ ವಿಜಯನಗರ ರಾಜ್ಯ ಮತ್ತು ರಾಜಧಾನಿಗಳ ಸ್ಥಾಪನೆಯಲ್ಲಿ ಹರಿಹರನಿಗೆ ಮಾರ್ಗದರ್ಶನ ಮಾಡಿದರೆಂದು ವಾದಿಸಿದ್ದಾರೆ.

೨. ವಿದ್ಯಾರಣ್ಯ ಮತ್ತು ಮಾಧವರು ಬೇರೆ ಬೇರೆ ಎಂದು ವಾದಿಸಿರುವವರಲ್ಲಿ ಶಾಸನತಜ್ಞ ಆರ್. ರಾಮರಾಯರು ಪ್ರಮುಖರು. ಎಲ್ಲಿಯೂ ಅವರಿಬ್ಬರೂ ಒಬ್ಬರೇ ಎಂದು ಹೇಳಿಲ್ಲವೆನ್ನುವುದು ಅವರ ಮುಖ್ಯ ವಾದ. ಅವರಿಬ್ಬರೂ ಒಬ್ಬರೇ ಎಂದು ಅವರ ಗ್ರಂಥಗಳಿಂದ ಸಿದ್ಧಮಾಡಿರುವವರು, ಎಸ್, ಕೃಷ್ಣಸ್ವಾಮಿ ಅಯ್ಯಂಗಾರರು, ಆರ್. ನರಸಿಂಹಾಚಾರ್ಯರು ಮತ್ತು ಕೆ. ಕೃಷ್ಣಮೂರ್ತಿಯವರು.

೩. ಕೊನೆಯದಾಗಿ, ಎ. ವೆಂಕಟಸುಬ್ಬಯ್ಯನವರು ಮತ್ತು ಟಿ. ಎನ್. ಮಲ್ಲಪ್ಪನವರು ವಿದ್ಯಾರಣ್ಯ ಮತ್ತು ಕ್ರಿಯಾಶಕ್ತಿ ಒಬ್ಬರೇ ಎಂದು ವಾದಿಸಿದ್ದಾರೆ. ಸಕಲೇಶಪುರದ ಶ್ರೀಕಂಠಯ್ಯನವರು ಮತ್ತು ಆರ್. ಚಕ್ರವರ್ತಿಯವರು ಅವರಿಬ್ಬರೂ ಬೇರೆ ಬೇರೆ ಎಂದು ಸಿದ್ಧಮಾಡಿ ತೋರಿಸಿದ್ದಾರೆ.

ಹೀಗೆ ಡಿ.ವಿ.ಜಿ.ಯವರು ಬರೆದನಂತರ ನಡೆದ ವಾದ ವಿವಾದದಿಂದ ಅವರ ಬರವಣಿಗೆ ಬಹುಕಾಲ ನಿಲ್ಲತಕ್ಕದ್ದೆಂದು ಸಿದ್ಧವಾಯಿತೆಂದು ಹೇಳಬಹುದು. ಅವರು ಯಾರ ಬಗೆಗೆ ಬರೆದರೊ ಅವರ ಚರಿತ್ರೆಯು ಇವತ್ತಿಗೂ ನಮಗೆ ದಾರಿದೀಪವಾಗಬಲ್ಲದೆಂದು ಈ ಕೆಳಗೆ ಕಂಡಂತೆ ಹೇಳಿ ತಮ್ಮ ಲೇಖನವನ್ನು ಮುಗಿಸಿದ್ದಾರೆ : "ಪ್ರಕೃತ, ಆರುನೂರು ವರ್ಷಗಳ ಹಿಂದೆ ಯಾವ ಮಹಾನುಭಾವರ ಬ್ರಾಹ್ಮಣ್ಯವು ದೀನವೃತ್ತಿಯಾಗಿರದೆ, ಧೀರವೃತ್ತಿಯಾಗಿ ವೇದಾ ಶಾಸ್ತ್ರಾಭ್ಯುದಯ ಹೇತುವಾಯಿತೋ, ಯಾರ ವೈರಾಗ್ಯವು ತಾಟಸ್ಥ್ಯದಲ್ಲಿ ಪರ್ಯವಸಾನವಾಗದೆ ಪೌರುಷ ಪ್ರಕಾಶದಲ್ಲಿ ಫಲಿಸಿತೋ, ಆ ವಿದ್ಯಾರಣ್ಯರ ಚರಿತ್ರೆಯು ಈ ವಿಷಮ ಕಾಲದಲ್ಲಿ ನಮಗೆ ಕಗ್ಗತ್ತಲೆಯಲ್ಲಿ ಕಾಣಬಂದ ಪಂಜಿನಂತೆಯೂ ಮರುಭೂಮಿಯಲ್ಲಿ ಸಿಕ್ಕಿದ ಸರೋವರದಂತೆಯೂ ಇದೆ. ಆ ಸರಸ್ಸಿನಲ್ಲಿ ನಮ್ಮ ಅಂತಃಕರಣವನ್ನು ತೊಳೆಯೋಣ, ಆ ದೀವಿಗೆಯ ಬೆಳಕಿನಲ್ಲಿ ನಮ್ಮ ಜೀವನಯಾತ್ರೆಯನ್ನು ನಡಸೋಣ."

ಶ್ರೀ ವಿದ್ಯಾರಣ್ಯ ವಿಜಯ

ಟಿ. ವಿ. ವೆಂಕಟಾಚಲಶಾಸ್ತ್ರಿ

ಈ ಶತಕದ ಮೊದಲ ದಶಕಗಳಲ್ಲಿ ವಿದ್ಯಾರಣ್ಯಸಾಹಿತ್ಯ ತಕ್ಕಮಟ್ಟಿಗೆ ರಚಿತವಾದುದಕ್ಕೆ, "ಚರಿತ್ರಪುರುಷರಾದ ವಿದ್ಯಾರಣ್ಯರ ಜೀವನ ಕಾರ್ಯಗಳು ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಿದ್ದುದೇ ಕಾರಣ ಎಂದು ಹೇಳಿ, ಆ ಕಾಲದಲ್ಲಿ ರಚಿತವಾದ ವಿದ್ಯಾರಣ್ಯ ವಿಷಯಕ ಕೃತಿಗಳ ಸಾಲಿಗೇ ಡಿ.ವಿ.ಜಿ. ಅವರ 'ವಿದ್ಯಾರಣ್ಯ ವಿಜಯ'ವು ಸೇರುತ್ತದೆ ಎಂದು ಲೇಖನದ ಪ್ರಾರಂಭದಲ್ಲಿ ತಿಳಿಸಿದ ಡಾ॥ ವೆಂಕಟಾಚಲಶಾಸ್ತ್ರಿಗಳು ಕೃತಿಸ್ವರೂಪವನ್ನು ಅಚ್ಚುಕಟ್ಟಾಗಿ ಸಂಕ್ಷೇಪಿಸಿ ತಿಳಿಸಿದ್ದಾರೆ: "ಈ ನಾಟಕದ ವಸ್ತು ವಿದ್ಯಾರಣ್ಯರ ವ್ಯಕ್ತಿತ್ವದ ಹಾಗೂ ಕಾಲದ ತಿಳಿವಳಿಕೆಯನ್ನು ಪರಸ್ಪರವಾಗಿ ಪೂರೈಸಿ ಕೊಡುವ ಉದ್ದೇಶದಿಂದ ವಿನ್ಯಾಸಗೊಂಡುದಾಗಿದೆ. ಈ ವಸ್ತುವಿನ ನಿರ್ವಹಣೆಯಲ್ಲಿ ಡಿ.ವಿ.ಜಿ. ಅವರ ಪಾಂಡಿತ್ಯಪರಿಶ್ರಮಗಳು ಎದ್ದುತೋರುತ್ತವೆ. ಅವರ ಸನಾತನ ಧರ್ಮಶ್ರದ್ಧೆ, ಸಮಯಾಚಾರ ನಿಷ್ಠೆ, ಜೀವನ ವಿವೇಕಗಳು ಇಲ್ಲಿ ಮುಪ್ಪುರಿಗೊಂಡಿವೆ. ಚರಿತ್ರಕಾರನ ಸತ್ಯಾನ್ವೇಷಣೆಯ ಛಲದೊಂದಿಗೆ ಸೃಜನಶೀಲ ಸಾಹಿತಿಯ ಅಂತರ್ ದೃಷ್ಟಿಯೂ ಇಲ್ಲಿ ಹೃದಯಂಗಮವಾಗಿ ಬೆರೆತಿವೆ. "ಒಟ್ಟಿನಲ್ಲಿ ಶ್ರೀಯುತರ ನಾಟಕದ ವಿಮರ್ಶೆ ಮತ್ತು ಮೌಲ್ಯಮಾಪನ ಸಹೃದಯತೆಯಿಂದ ಕೂಡಿವೆ. ವಿದ್ಯಾರಣ್ಯ ವಿಜಯ ಅಥವಾ ವಿಜಯನಗರ ರಾಜ್ಯಸ್ಥಾಪನೆ ಎಂಬ ನಾಟಕದ ಹೆಸರೇ ತಿಳಿಸುವಂತೆ, ವಿದ್ಯಾರಣ್ಯರ ಪಾತ್ರ ಈ ನಾಟಕದಲ್ಲಿ ಎಷ್ಟು ಮಹತ್ವದ್ದೋ ರಾಜ್ಯಸ್ಥಾಪನೆಗೆ ವಿದ್ಯಾವಂತರನ್ನೂ ಜನಸಾಮಾನ್ಯರನ್ನೂ ಒಟ್ಟಿಗೆ ಒಲಿಸಿಕೊಂಡು, "ಸಮಾನೋದ್ದೇಶದಿಂದ ಎಲ್ಲರೂ ಶ್ರಮಿಸುವಂತೆ ಮಾಡಿದರು. "ಡಿ.ವಿ.ಜಿ. ಅವರ ಈ ಕೃತಿಗೆ ವಸ್ತುಮಹತ್ವದ ದೃಷ್ಟಿಯಿಂದ ಬೆಲೆಯಿದೆ ಎನ್ನುವುದು ನಿರ್ವಿವಾದವಾದದ್ದು. ಒಂದು ಕಲಾಕೃತಿಯಾಗಿ ಇದರ ಬೆಲೆ ಏನು? ಶ್ರೀಯುತರು ಮೌಲ್ಯಪ್ರಜ್ಞೆಯುಳ್ಳ ಎ. ಆರ್. ಕೃ. ಅವರ ವಿಮರ್ಶೆಯ ವಾಕ್ಯಗಳನ್ನು ಉದ್ಧರಿಸಿ, ಅವರ 'ಉಪಚಾರೋಕ್ತಿ'ಯಲ್ಲಿ "ನಾಟಕದ ಸಾಹಿತ್ಯಸತ್ವವನ್ನೂ ಸಾಹಿತ್ಯಕೃತಿಯಾಗಿ ಅದರ ಯಶಸ್ಸನ್ನು ಅವಗಣಿಸುವ ಧೋರಣೆ ಇರುವುದನ್ನು" ಗುರುತಿಸುತ್ತಾರೆ. ಎ. ಆರ್. ಕೃ. ಅವರ ವಿಮರ್ಶೆಯಲ್ಲಿ ಅವರ ವಿಮರ್ಶನ ಶೈಲಿಯ ಹೆಗ್ಗುರುತಾದ ವ್ಯಂಗ್ಯ ಇರಬಹುದು; ಆದರೆ ಅವರ ವಿಮರ್ಶನ ಪ್ರಜ್ಞೆಯ ವಸ್ತುನಿಷ್ಠೆ ಮತ್ತು ನಿಷ್ಠುರ ಯಾಥಾರ್ಥ್ಯ ಪ್ರೀತಿಯನ್ನು ಅಲ್ಲಗಳೆಯಲಾಗದು.

ಈ ಶತಕದ ಮೊದಲ ದಶಕಗಳಲ್ಲಿ ಕನ್ನಡ ಭಾಷೆ ಸಾಹಿತ್ಯಗಳ, ಕರ್ಣಾಟಕ ಇತಿಹಾಸ ಸಂಸ್ಕೃತಿಗಳ ಅಧ್ಯಯನ ನಾಡಿನ ನವೋದಯದ ಭಾಗವಾಗಿ ಹುರಿಗೊಂಡುದು ವಿದಿತವೇ ಇದೆ. ಈ ಅವಧಿಯಲ್ಲಿ ವಿದ್ಯಾರಣ್ಯ ಸಾಹಿತ್ಯವೂ ತಕ್ಕ ಮಟ್ಟಿಗೆ ರಚಿತವಾದುದು ಕನ್ನಡ ಸಾಹಿತ್ಯೇತಿಹಾಸದಲ್ಲಿ ಗಮನಿಸತಕ್ಕ ಸಂಗತಿಯಾಗಿದೆ. ಹೊಸಕೆರೆ ಚಿದಂಬರಯ್ಯನವರ 'ವಿದ್ಯಾರಣ್ಯ ಕಾವ್ಯಂ', ಶಾಂತಕವಿಗಳ 'ಶ್ರೀ ವಿದ್ಯಾರಣ್ಯ ವಿಜಯು', ಆಲೂರ ವೆಂಕಟರಾಯರ 'ವಿದ್ಯಾರಣ್ಯಚರಿತ್ರೆ', ಸಿ. ವೆಂಕಟರಮಣಯ್ಯನವರ 'ಶ್ರೀ ವಿದ್ಯಾರಣ್ಯ ಚರಿತ್ರ ಸಂಗ್ರಹ', ಸಿ. ಹನುಮಂತಗೌಡರ 'ಶ್ರೀ ವಿದ್ಯಾರಣ್ಯ ನಾಟಕವು', ಭೀಮಾಜಿ ಜೀವಾಜಿ ಹುಲಿಕವಿಗಳ 'ಶ್ರೀ ವಿದ್ಯಾರಣ್ಯ ಸ್ವಾಮಿಗಳು', ನರಸಿಂಗ ಲಕ್ಷ್ಮಣ ಹೆಗ್ಗಡೆಯವರ 'ಕರ್ಣಾಟಕ ಸಿಂಹಾಸನ ನಾಟಕವು' ಈ ಮೊದಲಾದ ಚರಿತ್ರಗ್ರಂಥಗಳಿಂದಲೂ ಕಾವ್ಯ ನಾಟಕಗಳಿಂದಲೂ ವಿದಿತವಾಗುವ ಮುಖ್ಯಾಂಶವೆಂದರೆ ಚರಿತ್ರಪುರುಷರಾದ ವಿದ್ಯಾರಣ್ಯರ ಜೀವನ ಕಾರ್ಯಗಳು ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಿವೆ ಎನ್ನುವುದೇ ಆಗಿದೆ. ಈ ಸಾಲ್ಲಿನಲ್ಲಿಯೇ ಸೇರತಕ್ಕವು ಡಿ.ವಿ.ಜಿ. ಅವರ 'ವಿದ್ಯಾರಣ್ಯರು ಮತ್ತು ಅವರ ಕಾಲ'. 'ವಿದ್ಯಾರಣ್ಯರ ಸಮಕಾಲೀನರು', 'ಶ್ರೀ ವಿದ್ಯಾರಣ್ಯ ವಿಜಯ ಅಥವಾ ವಿಜಯನಗರ ರಾಜ್ಯಸ್ಥಾಪನೆ' ಮತ್ತು 'ಶ್ರೀ ವಿದ್ಯಾರಣ್ಯ ಸ್ಮೃತಿ' ಎಂಬ ನಾಲ್ಕು ರಚನೆಗಳು. ಈ ನಾಲ್ಕರ ವಸ್ತು ವಿದ್ಯಾರಣ್ಯರ ವ್ಯಕ್ತಿತ್ವದ ಹಾಗೂ ಕಾಲದ ತಿಳಿವಳಿಕೆಯನ್ನು ಪರಸ್ಪರವಾಗಿ ಪೂರೈಸಿಕೊಡುವ ಉದ್ದೇಶದಿಂದ ವಿನ್ಯಾಸಗೊಂಡುದಾಗಿದೆ. ಈ ವಸ್ತುವಿನ ನಿರ್ವಹಣೆಯಲ್ಲಿ ಡಿ.ವಿ.ಜಿ. ಅವರ ಪಾಂಡಿತ್ಯ ಪರಿಶ್ರಮಗಳು ಎದ್ದು ತೋರುತ್ತವೆ. ಅವರ ಸನಾತನ ಧರ್ಮಶ್ರದ್ಧೆ. ಸಮಯಾಚಾರ ನಿಷ್ಠೆ, ಜೀವನ ವಿವೇಕಗಳು ಇಲ್ಲಿ ಮುಪ್ಪುರಿಗೊಂಡಿವೆ. ಚರಿತ್ರಕಾರನ ಸತ್ಯಾನ್ವೇಷಣೆಯ ಛಲದೊಂದಿಗೆ ಸೃಜನಶೀಲ ಸಾಹಿತಿಯ ಅಂತರ್ದೃಷ್ಟಿಯು ಇಲ್ಲಿ ಹೃದಯಂಗಮವಾಗಿ ಬೆರೆತಿದೆ.

ಇತ್ತೀಚೆಯ ವರ್ಷಗಳಲ್ಲಿ ವಿದ್ಯಾರಣ್ಯರ ವ್ಯಕ್ತಿಚರಿತ್ರೆ ಸ್ಫೂರ್ತಿಪ್ರದ ಸಂಗತಿಯಾಗಿ ಕನ್ನಡಿಗರ ಗಮನವನ್ನು ಅಷ್ಟಾಗಿ ಸೆಳೆಯುತ್ತಿಲ್ಲ. ವಿಜಯನಗರ ರಾಜ್ಯದ ಸ್ಥಾಪನೆಯಲ್ಲಿ ಅವರು ವಹಿಸಿದ ಪಾತ್ರ ವಿವಾದಗ್ರಸ್ತವಾದ ಒಂದು ವಿಷಯವಾಗಿ ಇತಿಹಾಸಜ್ಞರ ಕುತೂಹಲವನ್ನು ಕೆರಳಿಸಿದೆ. ಸನಾತನಧರ್ಮದ ಪೋಷಣೆಯಲ್ಲಿ ವಿದ್ಯಾರಣ್ಯರು ಕೈಕೊಂಡ ಕಾರ್ಯಗಳು, ಗ್ರಂಥರಚನೆ ಮೊದಲಾದವು ವಿಚಾರಯೋಗ್ಯವಾಗಿದ್ದೂ ತೆರೆಮರೆಗೆ ಸಂದಿರುವ ಹಾಗೆ ಉಪೇಕ್ಷೆಗೆ ಗುರಿಯಾಗಿರುವುದು ಶೋಚನೀಯ ವಿಷಯವಾಗಿದೆ. ಈ ದೃಷ್ಟಿಯಿಂದ ಡಿ.ವಿ.ಜಿ.ಯವರು ಶ್ರಮವಹಿಸಿ ಸಿದ್ಧಪಡಿಸಿದ ವಿದ್ಯಾರಣ್ಯಸಾಹಿತ್ಯ ಹಿನ್ನೆಲೆಗೆ ಸಂದುಹೋಗಿರುವಂತೆ ತೋರುತ್ತದೆ. ಅವರ ರಚನೆಗಳಲ್ಲಿ ಈಗಿನ ಸಂಶೋಧಕರಿಗೆ ಸಹಜವಾಗಿಯೇ ಕೆಲವು ವಿವಾದಾಸ್ಪದ ಸಂಗತಿಗಳು ತೋರಬಹುದು. ಆದರೆ ಕನ್ನಡಿಗರ ಹೃದಯಶ್ರೀಮಂತಿಕೆಯನ್ನು ಹೆಚ್ಚಿಸುವ, ಐತಿಹಾಸಿಕ ಪ್ರಜ್ಞೆಯನ್ನು ವಿಸ್ತರಿಸುವ ಅತ್ಯುಪಯುಕ್ತ ಸಂಗತಿಗಳೂ ಇಲ್ಲಿ ಇವೆ

ಎಂಬುದನ್ನು ಮರೆಯಲಾಗದು. ವಿಜಯನಗರ ರಾಜ್ಯ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವನ್ನು ಅತಿರಂಜಿತಗೊಳಿಸದೆ, ಲಘುವಣಿಸದೆ ನೋಡಿದರೆ ಕೆಲವು ಮಹತ್ತ್ವದ ಸಂಗತಿಗಳು ಗೋಚರಿಸದಿರಲಾರವು. ಅಂದಿನ ರಾಜಕೀಯ ಸಂದರ್ಭದಲ್ಲಿ ಹಿಂದೂ ಧರ್ಮವೂ ವಿದ್ಯಾರಣ್ಯರಂತಹ ವಿಭೂತಿಪುರುಷರೂ ಗಮನಾರ್ಹವಾದ ಪ್ರಭಾವವನ್ನು ಬಿಂಬಿಸಿ ಜನಜಾಗೃತಿಯುಂಟುಮಾಡಿರುವುದು ಅತ್ಯಂತ ಸಂಭಾವ್ಯವಾದ ಘಟನೆಯೇ ಆಗಿರುವುದೆನ್ನಬೇಕು.

ಇಲ್ಲಿಗೆ ಪ್ರಸ್ತುತವಾದ್ದು 'ಶ್ರೀ ವಿದ್ಯಾರಣ್ಯ ವಿಜಯ' ಒಂದು ನಾಟಕ ಕೃತಿಯಾಗಿ ಏನನ್ನು ಉದ್ದೇಶಿಸಿದೆ, ಸಾಧಿಸಿದೆ ಎನ್ನುವುದರ ಪರಿಶೀಲನೆಯಾದ್ದರಿಂದ ಈಗ ಆ ಬಗ್ಗೆ ನೋಡೋಣ.

ಈ ನಾಟಕದ ವಿಜ್ಞಾಪನೆಯಲ್ಲಿ, ರಚನೆಗೆ ಪ್ರೇರಕವಾದ ಸಂದರ್ಭವನ್ನು ಡಿ.ವಿ.ಜಿ. ಅವರು ಹೀಗೆ ವಿಜ್ಞಾಪಿಸಿದ್ದಾರೆ: "ವಿಜಯನಗರ ಪ್ರತಿಷ್ಠಾಪನೆಯ ಸಂದರ್ಭವು ಕನ್ನಡಿಗರಿಗೆ ಅತ್ಯಂತ ಪ್ರಿಯವಾದ ವಿಷಯವೆಂಬುದನ್ನೂ ಅದರ ಅಂತಃಸ್ವರೂಪದ ಜ್ಞಾನವು ಅವರ ಜನಪದ ಶ್ರೇಯಸ್ಸಿಗೆ ಅತ್ಯಂತಾವಶ್ಯವಾದ ಸಾಧನವೆಂಬುದನ್ನೂ ಬಹುಮಾತುಗಳಿಂದ ಹೇಳಬೇಕಾಗಿಲ್ಲ. ಹೀಗಿರುವಲ್ಲಿ, ಅಂಥ ಮಹತ್ತ್ವವುಳ್ಳ ಕಥೆಯನ್ನು ಕಾವ್ಯಸಾಮ್ರಾಜ್ಯದೊಳಕ್ಕೂ ತಂದು ಅದರ ಆಂತರ ವಿವರಗಳನ್ನು ಎಷ್ಟು ಸ್ವಲ್ಪವಾಗಿಯಾದರೂ ಅಭಿವ್ಯಂಜನಗೊಳಿಸುವ ಪ್ರಯತ್ನವು ಅನುಚಿತವೆನಿಸಲಾರದು." ಈ ಪ್ರಯತ್ನದಲ್ಲಿ ಅವರು "ಐತಿಹಾಸಿಕ ಪ್ರಮಾಣಗಳಿಂದ ನಿರ್ಣೀತವಾಗಿ ತಿಳಿದುಬರುವ ಸಂಗತಿಗಳೂ ಕಾವ್ಯಲೇಖಕನು ತನ್ನ ಪ್ರತಿಭೆಯಿಂದ ಕಲ್ಪನೆ ಮಾಡಿಕೊಳ್ಳುವ ಸಂಗತಿಗಳೂ ಪರಸ್ಪರ ಅಸಮಂಜಸಗಳಾಗದಂತೆಯೂ, ಪಾತ್ರನಿರ್ವಾಹ ಕ್ರಮವೂ ರಸಪರಿಪಾಕ ಕ್ರಮವೂ ಒಂದಕ್ಕೊಂದು ಭಂಗತಾರದೆ ಹೊಂದಿಕೊಳ್ಳುವಂತೆಯೂ" ಇರತಕ್ಕುದೆಂಬ ಮುನ್ನೆಚ್ಚರಿಕೆಯನ್ನು ಉಳ್ಳವರಾಗಿದ್ದಾರೆ.

ತಾವು ರಚಿಸಿದ ನಾಟಕಕ್ಕೆ ಒಬ್ಬ ವ್ಯಕ್ತಿಯ ಕಥೆ ಆಧಾರವಾಗಿಲ್ಲ. ಬಹುಸಂಖ್ಯಾತವಾದ ವ್ಯಕ್ತಿಗಳನ್ನೊಳಗೊಂಡ ಒಂದು ಜನಸಮುದಾಯದ ಹಾನಿವೃದ್ಧಿಗಳ ಕಥೆ ಆಧಾರವಾಗಿದೆಯೆಂದು ಅವರು ತಿಳಿಸಿದ್ದಾರೆ. ಇದು ಒಂದು ರಾಜ್ಯದ ಕಥೆಯೆಂದೂ ಇದರ ಮುಖ್ಯಪಾತ್ರಗಳು ಹಲವರೆಂದೂ ಅವರು ತಿಳಿದಿದ್ದರೂ, ಈ ನಾಟಕದ ಮುಖ್ಯ ಸಂದರ್ಭ ವಿಜಯನಗರ ಸ್ಥಾಪನೆಯನ್ನು ಕುರಿತೆಂದೂ ನಾಯಕ ವ್ಯಕ್ತಿ ವಿದ್ಯಾರಣ್ಯರೆಂದೂ ತಿಳಿಯುವುದರಲ್ಲಿ ಅಸಂಗತವಾದುದೇನೂ ಇಲ್ಲ.

ವಿಜಯನಗರದ ಸ್ಥಾಪನೆ ಉತ್ಕರ್ಷಗಳ ಇತಿಹಾಸದಲ್ಲಿ ಹಿಂದೂ–ಮುಸ್ಲಿಂ ಸಂಬಂಧ ಮತ್ತು ಸಂಘರ್ಷಗಳ ಪ್ರಸ್ತಾವ ಸಹಜವೇ. ಈ ನಾಟಕದಲ್ಲಿಯೂ ಅದರ ಪ್ರಸ್ತಾವವುಂಟು. ಈ ವಿಷಯ ಸೂಕ್ಷ್ಮವಾದುದು. ಓದುಗರ ಭಾವೋದ್ವೇಗಗಳನ್ನು ಕಲಕಬಲ್ಲುದು ಎಂಬ ಅರಿವು ನಾಟಕಕಾರರಿಗಿರುವುದರಿಂದ ಚಾರಿತ್ರಿಕ ಸತ

ವನ್ನು ಒಪ್ಪಿಕೊಳ್ಳುವ ಸಲುವಾಗಿಯೂ ವರ್ತಮಾನಕಾಲದ ಬದುಕಿನ ಗತಿಯನ್ನು ತಿದ್ದಿಕೊಳ್ಳುವ ಸಲುವಾಗಿಯೂ ಚಿತ್ರಣವನ್ನು ನಿಸ್ಸಂಪರ್ಕಭಾವದಿಂದ ಗ್ರಹಿಸ ಬೇಕೆಂದು ಅವರು ಆರಂಭದಲ್ಲಿಯೇ ಅರಿಕೆ ಮಾಡಿದ್ದಾರೆ. ಈ ಭಾಗ ತನಗೆ ತಾನೇ ಸಾರವತ್ತಾದ ವಿವೇಚನೆಯ ಭಾಗವಾಗಿದ್ದು, ಈಗಲೂ ಮನನೀಯವಾಗಿದೆ.

'ಶ್ರೀ ವಿದ್ಯಾರಣ್ಯ ವಿಜಯ' ನಾಟಕದಲ್ಲಿ ಪ್ರೇರಣೆ, ಸಂಧಾನ, ಅಂಕುರ ಮತ್ತು ಫಲ ಎಂಬ ನಾಲ್ಕು ಭಾಗಗಳಿವೆ. ಇವುಗಳಲ್ಲಿ ಕ್ರಮವಾಗಿ ೫, ೫, ೬ ಮತ್ತು ೫ ದೃಶ್ಯಗಳಿವೆ. ೪ ಭಾಗಗಳನ್ನು ಅಂಕಗಳೆಂದೇ ತಿಳಿಯಬಹುದು. ಈ ನಾಟಕದಲ್ಲಿ ಸಂದರ್ಭೈಕ್ಯ ತಕ್ಕಂತೆ ಇಲ್ಲವೆಂಬ ಕಾರಣದಿಂದ ಅಂಕ ನಿರ್ದೇಶನ ಮಾಡಿಲ್ಲವೇನೋ ? ಆದರೆ ಘನವಾದ ವಸ್ತುವ್ಯಾಪ್ತಿಯ ಮಹಾನಾಟಕಗಳಲ್ಲಿ ಸಂದರ್ಭೈಕ್ಯವಿಲ್ಲದಿರುವುದೂ ಉಂಟು. ವಸ್ತು, ಕ್ರಿಯೆ ಮತ್ತು ರಸ ಈ ಐಕ್ಯತ್ರಯ ವನ್ನು ಎಲ್ಲ ನಾಟಕಗಳೂ ಪಾಲಿಸುವುವು ಎನ್ನುವಂತಿಲ್ಲ. ಇದು ಹೇಗೇ ಇರಲಿ. ಮೊದಲ ಭಾಗದಲ್ಲಿ ವಿದ್ಯಾರಣ್ಯರು ಮ್ಲೇಚ್ಛಕಿರಾತರ ಪೀಡೆಗೊಳಗಾದ ದೇಶ ಲಕ್ಷ್ಮಿಯನ್ನು ಆ ಪೀಡೆಯಿಂದ ಬಿಡಿಸಿ, ಧರ್ಮಸಂಸ್ಥಾಪನೆಯನ್ನೂ ಆರ್ಯ ಲೋಕೋದ್ಧಾರವನ್ನೂ ಕೈಕೊಳ್ಳಲು ಆ ದೇವಿಯ ಅನುಗ್ರಹದಿಂದ 'ಪ್ರೇರಣೆ' ಪಡೆಯುವುದು ಮುಖ್ಯಾಂಶವಾಗಿ ಬಂದಿದೆ. "ನಮ್ಮ ದೇಶದಲ್ಲಿ ಖಿಲವಾಗುತ್ತಿರುವ ವೈದಿಕಧರ್ಮವನ್ನು ಊರ್ಜಿತಪಡಿಸಲು ಶಕ್ತಿಯಿದ್ದಂತೆ ಶ್ರಮಪಡಬೇಕೆಂಬುದೇ" ಅವರಿಗೆ ವಿದ್ಯಾತೀರ್ಥ ಗುರುಗಳಿಂದ ದತ್ತವಾದ ದೀಕ್ಷೆಯಾಗಿತ್ತು. ಇದೂ ಪ್ರೇರಣೆಯ ಭಾಗವೇ. ಈ ಧ್ಯೇಯದ ಸೂಚನೆ ಈ ಭಾಗದ ಕೊನೆಯಲ್ಲಿ ಬರುವ ವಿದ್ಯಾರಣ್ಯ–ಬ್ರಾಹ್ಮಣ ಸಂವಾದದಲ್ಲಿದೆ. ಎರಡನೆಯದು 'ಸಂಧಾನ' ಭಾಗ, ಸಂಗಮವಂಶದ ರಾಜಪುತ್ರರಾಗಿಯೂ ಕೆಲಕಾಲ ದೀನಸ್ಥಿತಿಯಲ್ಲಿದ್ದ ಹರಿಹರ ಬುಕ್ಕರಲ್ಲಿ ನಾಯಕತ್ವದ ಲಕ್ಷಣಗಳನ್ನು ಮನಗಂಡು, ಅವರಲ್ಲಿ ದೊಂಬಿಯೊಂದನ್ನು ಅಡಗಿಸು ವುದೇ ನಿಮಿತ್ತವಾಗಿ, ಆತ್ಮವಿಶ್ವಾಸ ಕಾರ್ಯೋನ್ಮುಖತೆಗಳನ್ನು ತುಂಬಿ ವಿದ್ಯಾರಣ್ಯರು ಹೇಗೆ ರಾಜನೈತಿಕ ಕೌಶಲವನ್ನು ಮೆರೆಯುವರೆಂಬುದು ಇಲ್ಲಿ ತಿಳಿಯುವ ಸಂಗತಿ. ದೇವತಾದೇಶವೂ ಗುರುವಚನವೂ ಹೇಗೆ ಹರಿಹರ ಬುಕ್ಕರನ್ನು ದೇಶಕಾರ್ಯಕ್ಕೆ ತೊಡಗಿಸು ವಲ್ಲಿ, ಬಿಲ್ಲಿಗೆ ಬಾಣದ ಸಂಧಾನವಾಗುವಂತೆ ವಿದ್ಯಾರಣ್ಯರನ್ನು ಪ್ರೇರಿಸಿ ಸಂಧಾನಿಸಿತು ಎಂದು ಈ ಭಾಗದಲ್ಲಿ ತಿಳಿಯಬಹುದಾಗಿದೆ. ಮೂರನೆಯ ಭಾಗವನ್ನು 'ಅಂಕುರ' ಎಂದಿದೆ. ಹರಿಹರನು ಮೆರೆದ ಒಂದಾನೊಂದು ಸಾಹಸವು ರಾಜ್ಯಸ್ಥಾಪನೆಗೆ ಅಂಕುರಾರ್ಪಣೆ ಮಾಡಿತು ; ಖಿನ್ನರಾದ ಹಿಂದುಗಳ ಉನ್ನತಿಗೆ. ಖಿಲವಾಗುತ್ತಿದ್ದ ವೇದಧರ್ಮದ ಉದ್ಧಾರಕ್ಕೆ ದಾರಿತೆಗೆಯಿತು. ವಿದ್ಯಾರಣ್ಯರು ಹರಿಹರನನ್ನು ತಿದ್ದಿ ರೂಪಿಸಿದ ಪ್ರಭಾವಶಾಲಿ ಹಿತೋಪದೇಶ ಇಲ್ಲಿ ಬಂದಿದೆ ; ಆತನ ರಾಜನೀತಿ ಕಾರ್ಯ ಶೀಲತೆಗಳ ಅರಿವು ಇಲ್ಲಿ ಆಗುತ್ತದೆ. 'ಫಲ'ವೆಂಬ ನಾಲ್ಕನೆಯ ಭಾಗವಲ್ಲಿ, ಸಂಪನ್ನವಾದ ವಿಜಯನಗರ ಸಾಮ್ರಾಜ್ಯ ರಾಜಕೀಯ ನೈಪುಣ್ಯದಿಂದ ಬಲಿಷ್ಠವಾಗುವ, ಧರ್ಮಸಹಿಷ್ಣುವಾದ ಆಡಳಿತವನು ನಿರ್ವಹಿಸುವ, ಹಿಂದೂಧರ್ಮಕ್ಕೆ ಅಭ್ಯುದಯ

ಕರವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವ ಪ್ರಯತ್ನಗಳ ಮೂಲಕ ಹೇಗೆ ಕೃತಕೃತ್ಯವಾಯಿತೆಂಬುದನ್ನು ತೋರಿಸಿದೆ.

ಧರ್ಮಸಾಮ್ರಾಜ್ಯವಾದ ವಿಜಯನಗರದ ಸ್ಥಾಪನೆಗೆ ದೇವತಾನುಗ್ರಹದಿಂದ ವಿದ್ಯಾರಣ್ಯರಿಗೆ ದೊರೆತ ಪ್ರೇರಣೆ ಹೇಗೆ ಮಹಾಸಾಮ್ರಾಜ್ಯದ ಉದಯದೊಂದಿಗೆ ಫಲಾವಾಪ್ತಿಯನ್ನು ಕಂಡಿತು ಎಂಬುದನ್ನು ಡಿ.ವಿ.ಜಿ. ಅವರು ತಮ್ಮ ನಾಟಕದಲ್ಲಿ ಸಮರ್ಥವಾಗಿ ದೃಶ್ಯಗೊಳಿಸಿದ್ದಾರೆ. ಮಹಮದೀಯರ ಕೋಟಲೆಯಿಂದ ನಿಸ್ತೇಜವೂ ನಿಷ್ಕ್ರಿಯವೂ ಆಗಿದ್ದ ಹಿಂದೂರಾಜ್ಯಗಳ ಅವಹೇಳನಕರ ಪರಿಸ್ಥಿತಿಗೆ ಹೃದಯದಲ್ಲಿ ಅಪಾರವಾಗಿ ನೊಂದು ವಿದ್ಯಾರಣ್ಯರು "ಕ್ಷತ್ರಿಯಧರ್ಮೋಜ್ಜೀವನವು ಬ್ರಾಹ್ಮಣ ಧರ್ಮದ ಕರ್ತವ್ಯಾಂಶವೇ" ಎಂಬ ತಿಳಿವಳಿಕೆಯಿಂದ ಹಿಂದೂರಾಜ್ಯಗಳ ಪುನ-ರುತ್ಥಾನಕ್ಕೆ ಶ್ರಮಿಸಿದರೆನ್ನುವುದೇ ನಾಟಕದ ವಸ್ತುವಾಗಿದೆ. ಈ ಪುನರುತ್ಥಾನ ಕಾರ್ಯದಲ್ಲಿ ತಮಗೆ ವಿಧೇಯರೂ ಸಜ್ಜನರೂ ಆದ ಹರಿಹರ ಬುಕ್ಕರನ್ನು ಕರಣಗಳಾಗಿ ಬಳಸಿಕೊಂಡು ಅವರು ಯಶಸ್ವಿಗಳಾದುದುರ ಕಥನ ಇಲ್ಲಿ ಬಂದಿದೆ. ಗುರುಗಳೂ ಗೆಳೆಯರೂ ಶಿಷ್ಯರೂ ಅಭಿಮಾನಿಗಳೂ ಅವರ ಪ್ರಯತ್ನದಲ್ಲಿ ಅವರಿಗೆ ನೆರವು ನೀಡಿ, ಅವರು ಜಯಶಾಲಿಗಳಾಗುವಂತೆ ಮಾಡಿದರು. ಈ ಪ್ರಯತ್ನದಲ್ಲಿ ಸನಾತನ ಧರ್ಮದ ಅನುಯಾಯಿಗಳು ತಮ್ಮ ಪೂಜೆ ಪುರಸ್ಕಾರಗಳು, ಆಚಾರ ವ್ಯವಹಾರಗಳು, ಅಧ್ಯಯನ ಅಧ್ಯಾಪನಗಳು ಮೊದಲಾದವುಗಳ ಮೂಲಕ, ಮಠಮಾನ್ಯಗಳನ್ನು ಉಜ್ಜೀವನಗೊಳಿಸುವ ಮೂಲಕ ಆರ್ಷಸಂಸ್ಕೃತಿಯನ್ನು ಬೆಳಗುವಂತಾಗಬೇಕು ಎನ್ನುವುದಷ್ಟೇ ಅಲ್ಲದೆ ಸ್ವಧರ್ಮಿಗಳೆಲ್ಲ ನಿರ್ಭೀತಿಯಿಂದ ಏಕಾಧಿಪತ್ಯದ ರಕ್ಷಣೆಯಲ್ಲಿ ಇರುವಂತಾಗಬೇಕು ಎನ್ನುವ ಸಾತ್ತ್ವಿಕವಾದ ಅಪೇಕ್ಷೆಯೇ ರಾಜ್ಯನಿರ್ಮಾಪಕರ ಉದ್ದೇಶವಾಗಿದ್ದಿತು. ಅಂತಹ ರಾಜ್ಯನಿರ್ಮಾಪಕರಾಗಿ ವಿದ್ಯಾರಣ್ಯರನ್ನು ಇಲ್ಲಿ ಗುರುತಿಸಲಾಗಿದೆ. ಸ್ಮಾರ್ತೋಚ್ಛ್ರಾಯ ಧುರಂಧರನೆನಿಸಿದ ಪ್ರಭು ರಾಜ್ಯಪಾಲನೆಯಲ್ಲಿ ಅನುಸರಿಸಬೇಕಾದ ಜನೋಪಯೋಗಿಯೂ ನ್ಯಾಯಪರವೂ ಆದ ಕಾರ್ಯಗಳೇನೆಂಬುದನ್ನು ವಿದ್ಯಾರಣ್ಯರು ನಡೆದು, ನುಡಿದು ತಿಳಿಸುವಾಗ ಅಧ್ಯಾತ್ಮವು ಸಮರಸಗೊಂಡ ರಾಜಕೀಯವೇ ಪ್ರಭುವಿನ, ರಾಜ್ಯದ ಪರಮಾದರ್ಶವೆಂಬ ತತ್ತ್ವ ನಮಗೆ ಬೋಧೆಯಾಗುತ್ತದೆ. ವಿಜಯನಗರದ ಉತ್ಕರ್ಷದ ಕಥೆಯಲ್ಲಿ ಈ ದೃಷ್ಟಿ ನಿಚ್ಚಟವಾಗಿ ಕಂಡುಬರುವುದರಿಂದ, ಹಾಗೆ ಕಂಡುಬರುವುದನ್ನು ನಾಟಕ ಎತ್ತಿ ತೋರುವುದರಿಂದ ಇದು 'ಶ್ರೀ ವಿದ್ಯಾರಣ್ಯ ವಿಜಯ'ವೆಂಬುದು ಸರಿ.

ವಿದ್ಯಾರಣ್ಯರು ರಾಜ್ಯಸ್ಥಾಪನೆಗೆ ವಿದ್ಯಾವಂತರನ್ನೂ ಜನಸಾಮಾನ್ಯರನ್ನೂ ಒಟ್ಟಿಗೆ ಒಲಿಸಿಕೊಂಡರು. ಸಮಾನೋದ್ದೇಶದಿಂದ ಎಲ್ಲರೂ ಶ್ರಮಿಸುವಂತೆ ಮಾಡಿದರು. ನಾಟಕದ ಹಂದರದಲ್ಲಿ ವಿದ್ಯಾವಂತ ಪಾತ್ರಗಳ ಕಾರ್ಯನಿರ್ವಹಣೆ ಮಿಗಿಲಾಗಿ ತೋರುತ್ತಿದ್ದರೂ, ಹಿನ್ನೆಲೆಯಲ್ಲಿ ಸಾಮಾನ್ಯ ಜನಶಕ್ತಿ ಇರುವುದನ್ನು ಗುರುತಿಸಬಹುದಾಗಿದೆ. ರಾಜ್ಯಲಕ್ಷ್ಮಿಯ ಪ್ರತಿರೂಪವಾದ ವೃದ್ಧ ಸ್ತ್ರೀದರ್ಶನ ಸಾಮಾನ್ಯ ಜನಶಕ್ತಿಯ ಪ್ರತೀಕವಾದ ಕನ್ನಡ ತಾಯ ನೋಟವೆಂದೇ ತಿಳಿಯಬಹುದು.

ಹರಿಹರನ ಪುತ್ರವಿಯೋಗಸಂದರ್ಭದಲ್ಲಿ ವಿದ್ಯಾರಣ್ಯರು ನುಡಿದ ಸಮಾಧಾನೋಕ್ತಿಗಳಲ್ಲಿ ಅದ್ವೈತ ಸಿದ್ಧಾಂತದ ಪರಿಚಯ ಸೇರಿದೆ. ಬುಕ್ಕನ ಓಲಗದಲ್ಲಿ ಜೈನ–ವೈಷ್ಣವ ವಿರಸವು ಕರಣದ ನ್ಯಾಯತೀರ್ಮಾನದ ಹೃದಯಸ್ಪರ್ಶಿಯಾದ ಪ್ರಸಂಗ ಐತಿಹಾಸಿಕ ಶಾಸನೋಲ್ಲೇಖವನ್ನು ಕುಶಲ ರೀತಿಯಿಂದ ಬಳಸಿಕೊಂಡು ಕಂಡರಿಸಿದ ದೃಶ್ಯವಾಗಿದೆ. ಒಟ್ಟಿನಲ್ಲಿ ಪ್ರತಿ ಸನ್ನಿವೇಶವೂ ಧರ್ಮವೆಂಬ ಅಮೃತೋಪಮಶಕ್ತಿಯಿಂದ ಪ್ಲಾವಿತವಾಗಿದೆ. ನಾಟಕದಲ್ಲಿ ಮಾನಸಿಕ ಸಂಘರ್ಷದ ಚಿತ್ರಗಳು ಅಷ್ಟಾಗಿ ಇಲ್ಲ ಎನ್ನುವುದು ನಿಜ. ಆದರೆ ಜನಸಮುದಾಯದ ಹೋರಾಟದ ಭಾಗವಾಗಿ ಅದರ ಕಿಡಿಗಳನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಹಾಸ್ಯದ ಸ್ಪರ್ಶವೂ ಇಲ್ಲದೆ ಇಲ್ಲ.

'ಶ್ರೀ ವಿದ್ಯಾರಣ್ಯ ವಿಜಯ'ವನ್ನು ನಾಟಕವಾಗಿ ವಿಶ್ಲೇಷಿಸುತ್ತ, "ಚರಿತ್ರೆ ಉಪನ್ಯಾಸ ಜೀವನಚರಿತ್ರೆ ಕಾದಂಬರಿ(?) ಇವುಗಳು ನಾಟಕರೂಪದಲ್ಲಿ ಸಮ್ಮಿಳಿತವಾಗಿರುವ ಒಂದು ಕಾವ್ಯವಾಗಿದೆ. ವಸ್ತು ಸ್ವರೂಪವೇ ಇದಕ್ಕೆ ಕಾರಣ" ಎಂದಿದ್ದಾರೆ ಎ.ಆರ್.ಕೃ. ಅವರು. "ಇದರಲ್ಲಿ ನಾಟಕಕ್ಕೆ ಉಚಿತವಾದ ಅನೇಕ ಸನ್ನಿವೇಶಗಳಿವೆ. ಪಾತ್ರ ಪ್ರತಿಪಾದನ ಕ್ರಮದಲ್ಲಿ ಕಣ್ಣಿಗೆ ಬೀಳುವಂಥ ವಿಶೇಷಾಂಶವೇನೂ ಇಲ್ಲ. ಈ ಗ್ರಂಥದಲ್ಲಿ ವ್ಯಕ್ತಿಪ್ರಾಶಸ್ತ್ಯವಿದ್ದರೆ ಈ ಅಂಶಕ್ಕೆ ಇನ್ನೂ ಹೆಚ್ಚಾಗಿ ಗಮನ ಕೊಡುತ್ತಿದ್ದರೆಂದು ತೋರುತ್ತದೆ. ಆದರೆ ಇದು ವ್ಯಕ್ತಿಯ ಅಥವಾ ವ್ಯಕ್ತಿಗಳ ಕಥೆಯಲ್ಲ-'ರಾಜ್ಯದ ಕಥೆ'"ಎಂಬುದಾಗಿ ಅವರು ಅಭಿಪ್ರಾಯಪಟ್ಟಿದ್ದಾರೆ. ರಾಜ್ಯದ ಕಥೆಯಾಗಿ ವಿಜಯನಗರ ಸ್ಥಾಪನೆಯ ಹಿನ್ನೆಲೆಯ ಹಾಗೂ ಅಭ್ಯುದಯದ ಒಂದು ಒಟ್ಟು ನೋಟವೇನೋ ಇಲ್ಲಿ ಸಿಕ್ಕುತ್ತದೆ. ವಸ್ತುವಿನ ಕ್ರಮವಾದ ಬೆಳವಣಿಗೆಯಿಲ್ಲದಿದ್ದರೂ ಬಿಡಿಯಾದ ಭಾಗಗಳಲ್ಲಿಯೇ ಆ ಉದ್ದೇಶ ನಮ್ಮ ಗಮನಕ್ಕೆ ಬರುವಂತಿದೆ. ಇನ್ನು ವ್ಯಕ್ತಿ ಪ್ರಾಶಸ್ತ್ಯದ ಮಾತು. ವ್ಯಕ್ತಿಯಾಗಿ ವಿದ್ಯಾರಣ್ಯರ ಪಾತ್ರದ ಮಹತ್ತ್ವವನ್ನು ನಾಟಕದಲ್ಲಿ ಗುರುತಿಸುವುದು ಕಷ್ಟವೇನಿಲ್ಲ.

ನಾಟಕದಲ್ಲಿ ಪದ್ಯಭಾಗ ಬಲುಮಟ್ಟಿಗೆ ಹಳಗನ್ನಡ ವೃತ್ತಕಂದಗಳಲ್ಲಿರುವುದು ಒಂದು ಕಾಲದ ಅಭಿರುಚಿಯ ಫಲ ಎನ್ನುವುದರ ದ್ಯೋತಕ. ಇದರಿಂದ ನಾಟಕದ ಗಾಂಭೀರ್ಯ ಹೆಚ್ಚಿರುವುದನ್ನೂ ಒಪ್ಪಬೇಕು. ಪ್ರಾಚೀನ ಕಾವ್ಯಪದ್ಧತಿಯ ರಚನೆಯ ಶಕ್ತಿ ಡಿ.ವಿ.ಜಿ. ಅವರಿಗೆ ಎಷ್ಟುಮಟ್ಟಿಗೆ ಇದ್ದಿತೆಂದು ತಿಳಿಯಲು ಇಲ್ಲಿ ಒಳ್ಳೆಯ ನಿದರ್ಶನಗಳು ದೊರೆಯುತ್ತವೆ. ದೇಶ್ಯಲಯದ ಪದ್ಯಭಾಗಗಳೂ ಹಿತವಾಗಿಯೇ ಇವೆ. ಅಲ್ಲಲ್ಲಿಯ ಗೀತಭಾಗಗಳು ಕೊಂಚ ದೀರ್ಘವೇ ಆಗಿದ್ದರೂ ಅವುಗಳ ಬಂಧ ಹಾಗೂ ಅರ್ಥದ ಆಕರ್ಷಣೆಗೆ ಕೊರತೆಯೇನಿಲ್ಲ.

"ವಿದ್ಯಾರಣ್ಯರು ನಮ್ಮವರು ; ಕರ್ಣಾಟಕ ರಾಜ್ಯ ಸ್ಥಾಪಕರು : ಕರ್ಣಾಟ ದೇಶೋದ್ಧಾರಕರು. ಆದ್ದರಿಂದ ಅವರ ಚರಿತ್ರೆಯನ್ನು ಓದುವುದು ಕನ್ನಡಿಗರೆಲ್ಲರಿಗೂ ಶ್ರೇಯಸ್ಸು. ಈ ಭಕ್ತಿಭಾವವಿಲ್ಲದೆ ಪ್ರಕೃತಗ್ರಂಥವನ್ನು ಓದಿದರೆ ಮತಾಭಿಮಾನ

ವಿಲ್ಲದೆ ಮಣಿಮಂಜರಿಯನ್ನು ಓದಿದಂತೆ ಆಗುತ್ತದೆ" ಎಂಬುದು ಎ.ಆರ್.ಕೃ. ಅವರ 'ಫಲಶ್ರುತಿ' ವಾಕ್ಯ. ಈ ಉಪಚಾರೋಕ್ತಿಯಲ್ಲಿ ನಾಟಕದ ಸಾಹಿತ್ಯ ಸತ್ತ್ವವನ್ನೂ ಸಾಹಿತ್ಯಕೃತಿಯಾಗಿ ಅದರ ಯಶಸ್ಸನ್ನೂ ಅವಗಣಿಸುವ ಧೋರಣೆ ಯಿರುವುದೂ ಮೆಲ್ಲಗೆ ವ್ಯಂಗ್ಯವೋ ಅದರ ನೆರಳೋ ಕುಟುಕುತ್ತಿರುವುದೂ ಅಡಗಿ ಕೊಂಡೇ ಇಣುಕುತ್ತಿರುವುದನ್ನು ಗಮನಿಸಬಹುದು. ಐತಿಹಾಸಿಕ ನಾಟಕಗಳಲ್ಲಿ ಇತಿಹಾಸದೊಂದಿಗೆ ಅಷ್ಟಿಷ್ಟು ಕಲ್ಪನೆ ಅತಿರಂಜನೆಗಳು ಇರುವುದನ್ನು ಅಲ್ಲಗಳೆಯ ಲಾಗದು. ನಾಟಕಕಾರ ತನ್ನ ಕಣ್ಣೆದುರಿನಲ್ಲಿ ಇರಿಸಿಕೊಂಡ ಉದ್ದೇಶ ಸಂಭಾವ್ಯತೆಯ ಎಲ್ಲೆಕಟ್ಟಿನೊಳಗೆ ಎಷ್ಟರಮಟ್ಟಿಗೆ ಸಾಧಿತವಾಗಿದೆ ಎಂಬುದನ್ನು ಲಕ್ಷಿಸಿ ಹೇಳ ಬಹುದಾದರೆ 'ಶ್ರೀ ವಿದ್ಯಾರಣ್ಯ ವಿಜಯ' ಒಂದು ಹೃದ್ಯವಾದ ನಾಟಕವೆಂದು ತಿಳಿಯಲು ಅಡ್ಡಿಯೇನಿಲ್ಲ. ಇಲ್ಲಿ ಕಲಾತ್ಮಕ ದೃಷ್ಟಿ, ರಸಾವೇಶಗಳು ಹೊಮ್ಮಿ ತೋರದಿರಬಹುದಾದರೂ ವೈಚಾರಿಕ ದೃಷ್ಟಿ, ಸ್ಫೂರ್ತಿಪ್ರದ ಆದರ್ಶಾನುಸಂಧಾನ ಇವು ಸ್ಫುಟವಾಗಿಯೇ ಮೂಡಿವೆಯೆನ್ನಬೇಕು.

ಪರಶುರಾಮ*

ಪು. ತಿ. ನರಸಿಂಹಾಚಾರ್

ರಾಮಾಯಣದ ಭಾರ್ಗವರಾಮನ ವೃತ್ತಾಂತವನ್ನು ವಸ್ತುವಾಗಿಟ್ಟುಕೊಂಡು ಡಿ.ವಿ.ಜಿ. ಅವರು ರಚಿಸಿರುವ 'ಪರಶುರಾಮ' ಎಂಬ ನಾಲ್ಕು ಅಂಕಗಳ ಈ ಕಿರು ನಾಟಕವನ್ನು ಕವಿವರ್ಯ ಪು.ತಿ.ನ. ಅವರು ಕವಿಸಹಜವಾದ ಆರ್ಜವ ಸಹೃದಯತೆಯಿಂದ, ಅದರ ಸಾರವತ್ತಾದ ಭಾಗಗಳನ್ನು ಕವಿಯ ಮಾತಿನಲ್ಲೆ ಪರಿಚಯಿಸಿಕೊಡುತ್ತ ಅವಲೋಕನ ಮಾಡಿದ್ದಾರೆ. ನಾಟಕದ ವಿಶಿಷ್ಟ ಗುಣಾಂಶಗಳನ್ನು ಪು.ತಿ.ನ. ತಮ್ಮ ಮಾತಿನಲ್ಲಿ ಹೀಗೆ ಸೆರೆಹಿಡಿದಿದ್ದಾರೆ: "ದೃಶ್ಯಗಳ ತುಂಬ ವಿಷಮ ಸಂದರ್ಭಗಳು; ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯಗಳ ವಿಜೃಂಭಣೆಯೊಂದು ಕಡೆ, ಮತ್ತೊಂದು ಕಡೆ ಶಮೆ, ದಮೆ, ಕ್ಷಮೆ, ಶುಚಿತೆ, ದುಷ್ಟದಮನ, ವಿಚಕ್ಷಣ, ವೀರ್ಯ, ಶೌರ್ಯ, ಧೈರ್ಯ; ಕುಟುಂಬವನ್ನು ಕಾಯ್ದಿಡುವ ಮಮತೆ ಮರುಕ ವಾತ್ಸಲ್ಯಾದಿಗಳ ಜತೆಗೆ ಆತ್ಮೋದ್ಧಾರಕವಾದ ಶುಚಿತಾಕಾಠಿನ್ಯ; ಒಳ್ಳೆ ಹರಿತವಾದ ಬುದ್ಧಿವಿಲಾಸವನ್ನು ತೋರುವ ಚತುರ ಸಂಭಾಷಣೆ, ಹೃದಯಸ್ಪರ್ಶಿಯಾದ ಕಂದವೃತ್ತಗಳು...'ಪರಶುರಾಮ' ತುಂಬ ಸ್ವಾರಸ್ಯವಾದ ನಾಟಕ; ಮನಸ್ಸು ನವಯುಗದ್ದು, ನಮ್ಮ ಸನಾತನ ಮೌಲ್ಯಗಳಿಗೊಲಿದದ್ದು."

'ಪರಶುರಾಮ' ಪೂಜ್ಯ ಡಿ.ವಿ.ಜಿ.ಯವರ ಒಂದು ಕಿರು ನಾಟಕ, ನಾಲ್ಕು ಅಂಕಗಳದು. ಇದರಲ್ಲಿ ಹದಿನಾಲ್ಕು ದೃಶ್ಯಗಳಿವೆ. ಪಾತ್ರಗಳ ಸಂಭಾಷಣೆಯೂ ಮನೋಗತಗಳೂ ಗಂಭೀರವಾದ ಗದ್ಯ, ಕಂದ, ವೃತ್ತಗಳಲ್ಲಿ ಜರಗುತ್ತವೆ.

ಅದರ ಕಥಾವಸ್ತು ಭಾರ್ಗವರಾಮನ ಜೀವಿತದ ಮುಖ್ಯ ಪ್ರಸಂಗಗಳನ್ನು ಕುರಿತದ್ದು. ಗಾಧಿರಾಜ, ಆತನ ಮಗಳು ಸತ್ಯವತಿ, ಆಕೆಯ ಮಗ ಜಮದಗ್ನಿ ಋಷಿ, ಆತನ ಮಗ ಪರಶುರಾಮ ಮತ್ತು ನಾಲ್ವರು ಅಣ್ಣಂದಿರು, ರೇಣುಕೆ ತಾಯಿ.

* 'ಕುಸುಮಾರ್ಪಣೆ' (ಗೋ. ಸಾ. ವಿ. ಸಂಸ್ಥೆಯ ಪ್ರಕಟನೆ, 1977) ಯಲ್ಲಿ ಈ ಮೊದಲು ಪ್ರಕಟವಾಗಿದೆ.

ಜಮದಗ್ನಿ ಈಕೆಯನ್ನು ಪ್ರಸೇನಜಿತ್ ಎಂಬ ರಾಜನನ್ನು ಬೇಡಿ ತಂದು ಲಗ್ನ ವಾಗಿದ್ದರು. ಜಮದಗ್ನಿ ಪರಮಶಾಂತನೂ ಪರಮಶುಚಿಯೂ ಆದ ತಪಸ್ವಿ. ಪರಶುರಾಮನಲ್ಲಿ ಕ್ಷಾತ್ರ ಮೇಲುಗೈಯಾಗಿತ್ತು. ಈತ ಪರಮೇಶ್ವರನನ್ನು ಮೆಚ್ಚಿಸಿ ಶಸ್ತ್ರಾಸ್ತ್ರಗಳನ್ನು ಪಡೆಯಲು ತಪಸ್ಸಿಗೆ ಹೋಗಿದ್ದ ಸಮಯದಲ್ಲಿ, ಕಾರ್ತವೀರ್ಯಾರ್ಜುನ ಜಮದಗ್ನಿಯ ಆಶ್ರಮವನ್ನು ಪ್ರವೇಶಿಸಿ ಆತ ತನ್ನ ನಂದಿನಿ ಎಂಬ ಧೇನುವಿನ ಮೂಲಕ ಸಿದ್ಧಗೊಳಿಸಿದ ಔತಣವನ್ನುಂಡು ತಣಿದು, ಸಕಲ ಕಾಮದುಘೆಯಾದ ಆ ಹಸುವನ್ನು ಅಪೇಕ್ಷಿಸುತ್ತಾನೆ. ಋಷಿ ಒಪ್ಪನು, ಅರಸು ಬಿಡನು. ಹಸುವನ್ನು ಬಲಾತ್ಕಾರದಿಂದ ತನ್ನ ರಾಜಧಾನಿಗೆ ಎಳೆದುಕೊಂಡು ಹೋಗುತ್ತಾನೆ ರಾಜ. ಋಷಿ ಇದು ನಿಮಗೆ ಶ್ರೇಯಸ್ಕರವಲ್ಲ ಎಂದಷ್ಟು ಮಾತ್ರ ಹೇಳಿ ಸುಮ್ಮನಿದ್ದು ಬಿಡುತ್ತಾನೆ. ದಿವ್ಯಾಸ್ತ್ರಗಳನ್ನೂ ದುರ್ಜೇಯ ಪರಶುವನ್ನೂ ಪರಮೇಶ್ವರನಿಂದ ಪಡೆದ ಭಾರ್ಗವರಾಮ ಆಶ್ರಮಕ್ಕೆ ಹಿಂದಿರುಗುವಾಗ ಆತನ ತಂದೆ ಮತ್ತು ಅಣ್ಣಂದಿರು ಜಾಬಾಲಿ ಋಷಿಗಳ ಆಶ್ರಮಕ್ಕೆ ಹೋಗಿದ್ದು ತಾಯಿಯೊಬ್ಬಳೇ ಅಲ್ಲಿದ್ದಾಳೆ. ಆಕೆಯಿಂದ ಅಲ್ಲಿ ನಡೆದ ರಾಜನ ದುರ್ವರ್ತನೆಯ ವೃತ್ತಾಂತವನ್ನು ತಿಳಿದು ಪರಶುರಾಮ ಕೆರಳಿ ಕಾರ್ತವೀರ್ಯಾರ್ಜುನನತ್ತ ತೆರಳಿ ಆತನನ್ನು ಕೊಂದು ಧೇನುವನ್ನು ಜತೆಯಲ್ಲಿ ಕರೆತಂದು ಆ ವೇಳೆಗೆ ಹಿಂದಿರುಗಿದ್ದ ತನ್ನ ತಂದೆಯ ಮುಂದೆ ನಿಲ್ಲಿಸುತ್ತಾನೆ. ಋಷಿಗೆ ಸಂತೋಷವಾಗುತ್ತದೆ. ಸುತ ಶಸ್ತ್ರವ್ಯಸನಿಯಾಗುತ್ತಾನೋ ಏನೋ ಎಂಬ ಆತಂಕವೂ ಆತನನ್ನು ಬಾಧಿಸುತ್ತದೆ. ತಕ್ಕ ಎಚ್ಚರಿಕೆಯನ್ನಿತ್ತು ರಾಜನನ್ನು ಕೊಂದ ಪಾತಕದ ಪರಿಹಾರಕ್ಕಾಗಿ ತೀರ್ಥಯಾತ್ರೆಯನ್ನು ಕೈಗೊಳ್ಳು ವಂತೆ ಮಗನನ್ನು ಪ್ರೇರಿಸುತ್ತಾನೆ.

ತೀರ್ಥಯಾತ್ರೆಯನ್ನು ಮುಗಿಸಿಬರುವ ಹೊತ್ತಿಗೆ ಆಶ್ರಮ ಕೇಡಿಗೀಡಾಗಿರು ತ್ತದೆ. ನೀರು ತರಲು ಸರಸ್ಸಿಗೆ ಹೋದ ರೇಣುಕೆ ಅಲ್ಲಿ ಗಂಧರ್ವರಾಜನಾದ ಚಿತ್ರರಥ ತನ್ನ ರಾಣಿಯರೊಂದಿಗೆ ಜಲಕ್ರೀಡೆಯಾಡುತ್ತಿರುವ ಶೃಂಗಾರಲೀಲಾವೈಭವವನ್ನು ನೋಡಿ, ಆತನತ್ತ ತನ್ನ ಮನಸ್ಸನ್ನು ಕ್ಷಣಕಾಲ ಜಾರಿಸುತ್ತಾಳೆ. ತಾನು ಕಳಂಕಿತೆ ಯೆಂಬ ಅಂಶ ಆಕೆಗೂ ಗೊತ್ತು; ಪರಮಶುದ್ಧನಾದ ಜಮದಗ್ನಿಗೆ ಗೊತ್ತಾಗದೆ ಹೋಗುತ್ತದೆಯೇ? ತನ್ನ ನಾಲ್ವರು ಮಕ್ಕಳಿಗೂ ಆಕೆಯ ತಲೆಯನ್ನು ಕಡಿದು ಹಾಕಲು ಅಪ್ಪಣೆ ಮಾಡುತ್ತಾನೆ. ಕೋಮಲಹೃದಯರಾದ ಅವರು ಇದಕ್ಕೆ ಒಪ್ಪರು. ಋಷಿಯ ಶಾಪ ಅವರನ್ನು ಹುಲ್ಲೆ, ಹಂದಿ, ಗಿಳಿ, ಪಾರಿವಾಳಗಳನ್ನಾಗಿ ಮಾಡಿಬಿಡುತ್ತದೆ. ಈ ಸುದ್ದಿಯೆಲ್ಲ ದಾರಿಯಲ್ಲಿ ನಾರದರಿಂದ ಪರಶುರಾಮನಿಗೆ ತಿಳಿದುಬರುತ್ತದೆ. ತಂದೆ ತನಗೂ ಈ ಆಜ್ಞೆಯನ್ನು ವಿಧಿಸಿದರೆ ಏನು ಗತಿ ಎಂಬ ಆತಂಕ ಮೂಡುತ್ತದೆ. ತಂದೆಯೊಡನೆ ಸಂಭಾಷಿಸಿ ತಾಯಿಯನ್ನು ಕಡಿಯಲು ಒಪ್ಪುತ್ತಾನೆ, ತನ್ನ ಕೊಡಲಿಯ ಬಾಯಿಗೆ ತಲೆಯನ್ನೊಡ್ಡಿ ಪಾಪಮುಕ್ತಳಾಗು ವಂತೆ ತಾಯಿಯನ್ನು ಒಡಂಬಡಿಸಿ ತಲೆ ಹೊಯ್ಯುತ್ತಾನೆ. ಪ್ರೀತನಾದ ತಂದೆಯಿಂದ ವರಗಳನ್ನು ಪಡೆದು ಆಕೆಯನ್ನೂ ಅಣ್ಣಂದಿರನ್ನೂ ಮರಳಿ ಪಡೆಯುತ್ತಾನೆ. ಆದರೆ

ಜನನಿಯುನ್ನು ಕಡಿದುಹಾಕಿದ ಕಲ್ಮಷ ಮನಸ್ಸನ್ನು ಬಿಡಲೊಲ್ಲದು. ಅದಕ್ಕೆ ಪರಿಹಾರ ತಂದೆ ವಿಧಿಸಿದಂತೆ, ಪುನಃ ತೀರ್ಥಯಾತ್ರೆ.

ಯಾತ್ರೆಯುನ್ನು ಪೂರೈಸಿ ಮರಳಿ ಆಶ್ರಮಕ್ಕೆ ಬಂದಾಗ ಮತ್ತೊಂದು ದಾರುಣ ವಾದ ಪ್ರಸಂಗ ಅಲ್ಲಿ ಜರುಗಿಹೋಗಿದೆ. ಕಾರ್ತವೀರ್ಯಾರ್ಜುನನ ಮಕ್ಕಳೂ ಮೊಮ್ಮಕ್ಕಳೂ ಆಶ್ರಮಕ್ಕೆ ನುಗ್ಗಿ ಮೊದಲು ರೇಣುಕೆಯುನ್ನೂ ಆ ಬಳಿಕ ಧ್ಯಾನಾಸಕ್ತ ನಾದ ಜಮದಗ್ನಿಯನ್ನೂ ತರಿದುಹಾಕಿ ಹೋಗಿದ್ದಾರೆ. ಈ ಸಮಾಚಾರ ಅಣ್ಣಂದಿ ರಿಂದ ಪರಶುರಾಮನಿಗೆ ತಿಳಿದುಬರುತ್ತದೆ. ಪ್ರಳಯಕ್ರೋಧ ಆತನನ್ನು ಆಕ್ರಮಿಸು ತ್ತದೆ. ದುಷ್ಟ ಕ್ಷತ್ರಿಯರನ್ನೆಲ್ಲ ನಿರ್ಮೂಲಗೊಳಿಸಲು ಹಟ ತೊಟ್ಟು, ಪರಶು ಹಿಡಿದು ಇಪ್ಪತ್ತೊಂದು ಸಲ ಭೂಮಿಯನ್ನು ಸುತ್ತಿ ಬಂದು, ಮೂಲೆ ಮೂಲೆ ಹುಡುಕಿ ಕಂಡ ಕಂಡ ಕ್ಷತ್ರಿಯರನ್ನೆಲ್ಲ ತರಿದುಹಾಕಿ, ಮಾತಾಪಿತೃಗಳನ್ನು ಅವರ ರಕ್ತತರ್ಪಣದಿಂದ ತೃಪ್ತಿಗೊಳಿಸುತ್ತಾನೆ. ದಶರಥ ಮಾತ್ರ ಸೀರೆಯುಟ್ಟು ತನ್ನ ತಲೆಯುನ್ನು ಅಂತಃಪುರದಲ್ಲಿ ಕಾಯ್ದುಕೊಂಡು ವಂಶಕರನಾಗುತ್ತಾನೆ, ದೈವಾನುಗ್ರಹ ದಿಂದ. ಪರಶುರಾಮನು ಹೀಗೆ ತಾನು ಭೂಮಿಗಿಳಿದು ಬಂದ ದುಷ್ಟದಮನ ಕಾರ್ಯ ವನ್ನು ಮುಗಿಸಿ, ತಾನು ಕ್ಷತ್ರಿಯರಿಂದ ಗೆದ್ದುಕೊಂಡ ಭೂಮಿಯನ್ನೆಲ್ಲ ಬ್ರಾಹ್ಮಣರಿಗೆ ದಾನಮಾಡಿ, ತಾನಿರುವುದಕ್ಕೆಂದು ಸಾಗರದಿಂದ ಒಂದಿಷ್ಟು ನೆಲವನ್ನು ಪಡೆದು ಆ ನೆಲೆಗೆ ಹಿಂದಿರುಗುತ್ತಿರುವಾಗ ದಾರಿಯಲ್ಲಿ ದಶರಥನೂ ಆತನ ಮಕ್ಕಳೂ ಈತನ ಕಣ್ಣಿಗೆ ಬೀಳುತ್ತಾರೆ. ಈ ಇಬ್ಬರು ರಾಮರು ಮುಖಾಮುಖಿಯಾಗಿ ನಿಲ್ಲುವ ಪ್ರಸಂಗ ಬಹು ಮನೋಹರವಾಗಿ ನಿರೂಪಿತವಾಗಿದೆ. ಒಬ್ಬರಿಂದ ಒಬ್ಬರಿಗೆ ಅವಮಾನವಾಗುವುದಿಲ್ಲ, ಅವರ ಕಳೆಯೂ ಕುಂದುವುದಿಲ್ಲ. ದಿನಾಂತದಲ್ಲಿ ಸೂರ್ಯ ಅಗ್ನಿಯಲ್ಲಿ ತನ್ನ ತೇಜಸ್ಸನ್ನಿರಿಸಿ ಹೋಗುವ ಹಾಗೆ ಪರಶುರಾಮ ತನ್ನ ದಿವ್ಯ ಕ್ಷಾತ್ರತೇಜಸ್ಸನ್ನು ಶ್ರೀರಾಮನಲ್ಲಿರಿಸಿ ತೆರಳುತ್ತಾನೆ.

ದೃಶ್ಯಗಳ ತುಂಬ ವಿಷಮಸಂದರ್ಭಗಳು ; ಕಾಮ ಕ್ರೋಧ ಲೋಭ ಮದ ಮಾತ್ಸರ್ಯಗಳ ವಿಜೃಂಭಣೆಯೊಂದು ಕಡೆ, ಮತ್ತೊಂದು ಕಡೆ ಶಮ ದಮ ಕ್ಷಮೆ ಶುಚಿತೆ ದುಷ್ಟದಮನ ವಿಚಕ್ಷಣ ವೀರ್ಯ ಶೌರ್ಯ ಧೈರ್ಯ. ಕುಟುಂಬವನ್ನು ಕಾಯ್ದಿಡುವ ಮಮತೆ ಮರುಕ ವಾತ್ಸಲ್ಯಾದಿಗಳ ಜತೆಗೆ ಆತ್ಮೋದ್ಧಾರಕವಾದ ಶುಚಿತಾಕಾಠಿನ್ಯ, ಒಳ್ಳೆ ಹರಿತವಾದ ಬುದ್ಧಿವಿಲಾಸವನ್ನು ತೋರಿಸುವ ಚತುರ ಸಂಭಾಷಣೆ, ಹೃದಯಸ್ಪರ್ಶಿಯಾದ ಕಂದ ವೃತ್ತಗಳು. ಹೃದಯಸಂಪನ್ನರೂ ಪ್ರತಿಭಾಶಾಲಿಗಳೂ ಸಂಯಮಶೀಲರೂ ಆರ್ಷೇಯ ಜೀವನ್ಮೌಲ್ಯಗಳಲ್ಲಿ ವಿಶ್ವಾಸ ವುಳ್ಳವರೂ ಆದ ಮೇಧಾವಿಗಳಿಂದ ಹೊರತು ಇಂಥ ಮಾತುಗಳು ಹೊರಡಲಾರವು. ಸಂದಾರ್ಭಾನುಸಾರವಾಗಿ ವಿವಿಧ ಸ್ವಭಾವಗಳಲ್ಲಿ ಉತ್ಪನ್ನವಾಗುವ ಉದ್ರೇಕಗಳು ಕೃತಿಕಾರರ ಧ್ಯಾನದಲ್ಲಿ ಹದಗೊಂಡು ಪ್ರಕಟವಾಗುವ ರೀತಿಯನ್ನು ನಾಟಕದುದ್ದಕ್ಕೂ ಕಾಣಬಹುದು. ಇದಿರೆದ್ದ ಪ್ರಶ್ನೆಗಳನ್ನು ಎದುರಿಸಿಯೇ ಪರಿಹರಿಸುವ ಜಾಣ್ಮೆಯಿದೆ. ಪಕ್ಕಕ್ಕೆ ಬಿಟ್ಟುಹೋಗುವ ಅಸಂಭವತೆಯನ್ನು ಕಾಣೆವು. ಅನೇಕ ಉದಾಹರಣೆ ಗಳನ್ನು ಎತ್ತಿಕೊಡುತ್ತ ಹೋಗಬಹುದು :

ಜಮದಗ್ನಿ : ಈ ಆಶ್ರಮವೇನು ಅಂಗಡಿಯೋ ಕಾರ್ತವೀರ್ಯ ? ಕ್ರಯ ತೆಗೆದು ಕೊಂಡು ಮಾರುವುದಕ್ಕಾಗಿಯೇ ನಾವು ಈ ಹಸುವನ್ನಿಟ್ಟುಕೊಂಡಿರುವುದು ? ಬೇಡ ನೀನಿದಕ್ಕೆ ಆಶೆಪಡಬೇಡ.

* * * *

ಕಾರ್ತವೀರ್ಯ : ನಾನು ಆಶೆಪಡಬಾರದಾದರೆ ನೀವು ಲೋಭ ಮಾಡಬಹುದೊ ?

ಜಮದಗ್ನಿ : ...ಈಕೆಯೇ ನಮಗೆ ಪ್ರತ್ಯಕ್ಷ ಲಕ್ಷ್ಮಿ. ಈಕೆಯಿಲ್ಲದೆ ನಮ್ಮ ಧರ್ಮ ಗಳು ಸಾಂಗವಾಗಿ ನಡೆಯಲಾರವು. ನಮ್ಮ ಧರ್ಮಾಚರಣೆಯು ನಿಮಗೆ ಶ್ರೇಯಸ್ಕರ. ಅದನ್ನೇಕೆ ಮರೆಯುವೆ ?

ಕಾರ್ತವೀರ್ಯ : ...ನಿಮ್ಮ ಹರಕೆಗಳಿಗಿಂತ ನಿಮ್ಮ ಹಸು ನನಗೆ ಪ್ರಿಯವಾಗಿದೆ.

ಜಮದಗ್ನಿ : ರಾಜ, ಅದರ ಸ್ಥಲದಲ್ಲಿ ಅದು ಇದೆ. ಅದನ್ನಲ್ಲಿಂದ ತಪ್ಪಿಸುವ ಅಧಿಕಾರ ನನಗಿಲ್ಲ.

ಎಂಥ ತರ್ಕಕ್ಕೂ ಲೋಭ ಮಣಿಯುವುದಿಲ್ಲ. ದೊರೆ ಬಲಾತ್ಕಾರದಿಂದ ಧೇನುವನ್ನು ಎಳೆದುಕೊಂಡು ಹೋಗುತ್ತಾನೆ. ಶಮ ಪ್ರಧಾನರಾದ ಋಷಿ ಪ್ರತಿ ಭಟಿಸದೆ ಸುಮ್ಮನಿರುತ್ತಾರೆ. " ಹಸದ್ಭಿಃ ಕುರುತೇ ಕರ್ಮ ರುದದ್ಭಿರನುಭೂಯತೇ."

ತಾಯಿ ರೇಣುಕೆ ಸೌಂದರ್ಯಪ್ರಿಯೆ. ಪ್ರಕೃತಿಯ ಅನೇಕ ವಸ್ತುಗಳಲ್ಲಿನ ಬಣ್ಣ ಬೆಡಗುಗಳನ್ನು ಕಂಡು ಸಂತೋಷಪಡುವಂಥವಳು. ಅವು ಅಷ್ಟೂ ಮಾನುಷ್ಯ ದಲ್ಲಿ ಕೇಂದ್ರೀಕೃತವಾದರೆ ಮತ್ತೂ ಸೊಗಸು, ಕಹಿಯೇನೂ ಇಲ್ಲದಷ್ಟು ಆಪ್ಯಾಯ ಮಾನ ಎನ್ನುವಂಥವಳು. " ಆದರೆ ಪತಿಸ್ವಾಮಿಗೆ ಯಾರಲ್ಲಿಯೂ ಮಮತೆಯಿಲ್ಲ ; ಯಾವುದರಲ್ಲಿಯೂ ಆಶೆಯಿಲ್ಲ." ಪರಶುರಾಮನ " ಅಣ್ಣಂದಿರಿಗೆ ಅವರವರ ಶುಶ್ರೂಷೆ ಅಧ್ಯಯನಗಳೇ ಸಾಕಾಗಿವೆ. ನನ್ನನ್ನು ಕೇಳುವವರಾರು ? ರಾಮ ನೊಬ್ಬನೇ ನನ್ನಲ್ಲಿ ಮಮತೆಯಿಟ್ಟುಕೊಂಡಿದ್ದವನು...ಪರಶಿವನು ಅವನಿಗೆ ಇನ್ನೂ ಏಕೆ ಒಲಿಯಲಿಲ್ಲವೊ..." ಈ ರೀತಿ ಮನಸ್ಸಿನಲ್ಲಿ ಆಕೆ ಎಂದುಕೊಳ್ಳುತ್ತಿರವಾಗ ವರವನ್ನು ಪಡೆದು ಪರಶುವನ್ನು ಧರಿಸಿ ರಾಮನು ಪ್ರವೇಶಿಸುತ್ತಾನೆ. ಆತನು ಆಕೆಯ ಪ್ರಭಾವಕ್ಕೆ ಅತ್ಯಂತ ಸಮೀಪವರ್ತಿ. ಅವರ ಮನೋಜ್ಞವಾದ ಸಂಭಾಷಣೆ ಯಿಂದ ಈ ಮಾತುಗಳನ್ನು ಪ್ರಕೃತಕ್ಕೆ ಎತ್ತಿಕೊಡಬಹುದು:

ರೇಣುಕೆ : ನಿಮ್ಮ ತಂದೆ ಶಮಪ್ರಧಾನರು. ನೀನೂ ಅವರಂತೆಯೇ ಸೌಮ್ಯಗುಣ ವನ್ನು ಅಭ್ಯಾಸಮಾಡಬೇಕು. ರೋಷ–ಪ್ರತಾಪಗಳು ಕ್ಷತ್ರಿಯರಿಗೆ.

ಪರಶುರಾಮ : ಅಹುದು ತಾಯಿ. ಆದರೆ ಕ್ಷತ್ರಿಯರಲ್ಲಿ ದುಷ್ಟರು ಹುಟ್ಟುವುದೇ ಇಲ್ಲವೆ ? ರಾಜನು ಧರ್ಮದಿಂದ ತಪ್ಪಿದರೆ ಅವನನ್ನು ದಂಡಿಸಬಲ್ಲವರು ಯಾರೂ ಇರಬೇಡವೆ ?

ರೇಣುಕೆ : ಇದೇನು ಹೀಗೆ ಮಾತನಾಡುವೆ ? ನಿನ್ನ ತಂದೆಯು ಇದನ್ನೊಪ್ಪುವರೆ ?

ಪರಶುರಾಮ : ಏನು ? ದುಷ್ಕೃತ್ಯಮಾಡಿದವನು ರಾಜನಾದರೆ ತಕ್ಕ ಪ್ರತೀಕಾರ ನಡೆಯಕೂಡದೆ ?

ರೇಣುಕೆ : ಹಾಗೆ ತಿಳಿಯಬೇಡ. ನಿಮ್ಮ ತಂದೆ ಹಾಗೆ ಹೇಳಲಾರರು.

ಪರಶುರಾಮ : ಅದೇಕೆ ?

ಈಗ ರೇಣುಕೆ ಧೇನು ಅಪಹೃತವಾದ ಕತೆಯನ್ನು ಮಗನಿಗೆ ಹೇಳುತ್ತಾಳೆ. ಪರಶುರಾಮ ಶಾಂತಮೂರ್ತಿಯಲ್ಲ. ಆತನ ಅವತಾರವೇ ದುಷ್ಟದಮನಕ್ಕೆ. ಅವನಾಡುವ ಈ ಕಂದ ಆ ಮನೋಗತವನ್ನು ಚೆನ್ನಾಗಿ ತಿಳಿಸುತ್ತದೆ.

ಮೃಗಬಲದತಿಯಂ ತಿರ್ದಲ್ ।
ಮೃಗಬಲಮೇ ಯುಕ್ತಮಾತ್ಮ ಸತ್ತ್ವಂ ತಗದೈ ॥
ತೆಗೆವುದು ಮುಳ್ಳಂ ಮುಳ್ಳೇ ।
ಜಗದೊಳ್ ಬಲಕೊಂದು ತಾಣಮಿರ್ಪುದು ಸತ್ಯಂ ॥

ಶ್ರೀಮದ್ಭಾಗವತಕಾರರು ಶ್ರೀಕೃಷ್ಣನ ಅವತಾರದ ವಿಷಯದಲ್ಲೂ ಈ ಮಾತನ್ನೇ ಹೇಳುತ್ತಾರೆ. ಜಗದೀಶ್ವರ ಕೃಷ್ಣದೇಹವೆಂಬ ಮುಳ್ಳಿನಿಂದ ಭೂಮಿಗೆ ಹತ್ತಿಕೊಂಡಿದ್ದ ದುಷ್ಟ ಭೂಭಾರದ ಮುಳ್ಳುಗಳನ್ನು ತೆಗೆದು ಎರಡನ್ನೂ ಬಿಸುಟ —ಎಂಬರ್ಥ ಬರುವ ಪದ್ಯದಲ್ಲಿ.

ಪರಶುರಾಮ ಜಾಬಾಲಿ ಆಶ್ರಮಕ್ಕೆ ಹೋಗಿದ್ದ ತಂದೆ ಮತ್ತು ಅಣ್ಣಂದಿರು ಮರಳುವ ಹೊತ್ತಿಗೆ ಕಾರ್ತವೀರ್ಯನನ್ನು ಕೊಂದು ಹಸುವನ್ನು ಹಿಡಿದುಕೊಂಡು ಬಂದು ತಂದೆಯ ಮುಂದೆ ನಿಲ್ಲಿಸುತ್ತಾನೆ. ಋಷಿಗೆ ಸಂತೋಷವಾಗುತ್ತದೆ. ಆದರೂ :

ಜಮದಗ್ನಿ : ...ಕಾರ್ತವೀರ್ಯನು ಬಲೋನ್ಮತ್ತತೆಗೆ ತಕ್ಕ ಗತಿಯನ್ನು ಪಡೆದ ನೆಂಬುದೂ ನ್ಯಾಯವೇ. ಆದರೆ ನಿರ್ಮಲವಾಗಿದ್ದ ನಿನ್ನ ಕೊಡಲಿಗೆ ರಕ್ತದ ಕೊಳೆ ಅಂಟಿಕೊಂಡಿರುವುದಲ್ಲಾ. ಅದಕ್ಕೇನುಮಾಡುವೆ ?

ಪರಶುರಾಮ : ತಂದೆಯೆ, ಸಾಧುಗಳ ರಕ್ತವು ಅದಕ್ಕೆ ತಗುಲಿದ್ದರೆ ನಾನು ಅಂಜ ಬೇಕು ; ದುಷ್ಟರ ರಕ್ತವು ಈ ಆಯುಧಕ್ಕೆ ತಿಲಕವಂತೆಯೇ ಅಲ್ಲವೆ ?

ಜಮದಗ್ನಿ : ...ನಿನ್ನ ಕುಠಾರದ ದಾಹವು ನಿನ್ನ ವಿವೇಕಕ್ಕಿಂತ ಪ್ರಬಲವಾದೀತೇನೋ ಎಂಬುದು ನನಗಿರುವ ಭಯ. ಕಾರ್ತವೀರ್ಯಾರ್ಜುನನೂ ಒಂದಾನೊಂದು ಕಾಲದಲ್ಲಿ ಧರ್ಮಿಷ್ಠನಾಗಿಯೇ ಇದ್ದನು, ಆದರೆ ಒಂದು ಘಳಿಗೆಯಲ್ಲಿ ಅವನ ಸಹಸ್ರಬಾಹುಬಲವು ಅವನ ವಿವೇಚನೆಯನ್ನು ನುಂಗಿಬಿಟ್ಟಿತು. ಕ್ಷತ್ರಿಯನಿಗೇ

ಬಲದ ಮತ್ತಿನಿಂದ ಸ್ಮೃತಿ ತಪ್ಪಿರುವಾಗ ಬ್ರಾಹ್ಮಣನಾಗಿ ಆಯುಧದ ಬಳಕೆಯಿಲ್ಲದಿರುವ ನೀನು ವೈಮರೆಯಲಾರೆಯೆಂದು ಹೇಗೆ ನಂಬಲಿ?

ಪರಶುರಾಮ : ತಂದೆ ; ಈ ಆಯುಧಕ್ಕೆ ನಾನು ಅಧೀನನೆನಿಸದೆ ನನಗೇ ಅದ ಅಧೀನವಾಗಿರುವಂತೆ ತಾವು ಆಶೀರ್ವದಿಸಬೇಕು. ಅದಕ್ಕಾಗಿ ಯಾವ ವ್ರತ ವನ್ನು ತಾವು ಉಪದೇಶಿಸುವಿರೋ ಅದನ್ನು ಕೈಗೊಳ್ಳುವೆನು.

ಜಮದಗ್ನಿ : ಮಗೂ, ನಿನಗೆ ನಾನಾವ ವ್ರತವನ್ನು ಉಪದೇಶಿಸಲಿ? ನಿನ್ನಂತೆ ರೋಷದ ಸ್ವಭಾವವುಳ್ಳವನು ತೀರ್ಥಯಾತ್ರೆಯಿಂದಲೂ ಸಾಧು ಸಹವಾಸ ದಿಂದಲೂ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಬೇಕು.

ಜಮದಗ್ನಿ ಉಪದೇಶಿಸಿದ ತೀರ್ಥಯಾತ್ರಾ ಕ್ರಮ ಹೃದಯಂಗಮವಾಗಿದೆ. ಇವೆರಡು ವೃತ್ತಗಳೂ ಮನನಯೋಗ್ಯ.

ಚರಿಸು ಧರಾಪ್ರದಕ್ಷಿಣೆಯನೀಕ್ಷಿಸು ಸೃಷ್ಟಿಶಿಲ್ಪಮಂ ।
ಗಿರಿ ಶಿಖರಾಗ್ರ ದುರ್ಗ ದರ ಕಂದರ ಗಹ್ವರಂಗಳಂ ॥
ಸರಿತು ಸರೋವರ ಹ್ರದ ಸಮುದ್ರ ನಿಖಾತಕಂಗಳಂ ।
ಮರೆ ನರನಲ್ಪತೆಯ ನೀಂ ನೆನೆ ಸೃಷ್ಟಿಯುದಾರ ನೀತಿಯಂ ॥

*   *   *   *

ಗಿರಿ ಶೃಂಗಂಗಳನೇರು ಪುಣ್ಯತಟನೀ ತೀರ್ಥಂಗಳಂ ಸಾರು ಸಾ- ।
ದರಮತ್ತಲ್ ಬಗೆಗೊಂಡ ಮೌನಿ ಜನದಾವಾಸಂಗಳಂ ಸೇರು ಕಂ- ॥
ದರ ರಮ್ಯಾಂಗಣ ಶಾಂತಿಯಂ ಪುಗು ಮಹಾಕಾಂತಾರ ಸಂಸರ್ಗದಿಂ ।
ತೊರೆ ನಿರ್ವೇದವ ವಿಶ್ವ ಚಿತ್ರಚಕಿತಾಂತರ್ವೃತ್ತಿಯಿಂ ಭಾರ್ಗವಾ ॥

ಉದಾರವಾದ ಮಾತು, ಮಹರ್ಷಿಗೆ ಯೋಗ್ಯವಾದದ್ದು.

ರೇಣುಕೆಯ ವೃತ್ತಾಂತ ಎರಡನೆಯ ಅಂಕದ ಐದು ದೃಶ್ಯಗಳಲ್ಲಿ ಹರಡಿದೆ. ಮನೋವೇಧಕವಾದ ದೃಶ್ಯಗಳು, ಸಂಭಾಷಣೆಗಳು. ಕಾರ್ತವೀರ್ಯಾರ್ಜುನನಿಗೆ ಕೋಪಿಸಿದ ಋಷಿ ತನ್ನ ಹೆಂಡತಿಯ ಕ್ಷಣಮನೋವೈಕಲ್ಯಕ್ಕೆ ಏಕೆ ಇಷ್ಟು ಉಗ್ರನಾಗಿ ಮರಣದಂಡನೆಯನ್ನು ವಿಧಿಸಿ ಅದನ್ನು ನೆರವೇರಿಸಲು ತನ್ನ ಮಕ್ಕಳನ್ನೇ ಏಕೆ ಕೋರಿದ ?—ಅದನ್ನು ನಡೆಸಲು ಹಿಂಜರಿದ ಆ ಸುತರಿಗೆ ಏಕೆ ಶಾಪ ಕೊಟ್ಟ ? ಇದು ಪ್ರಶ್ನೆ. ತನ್ನ ಅರ್ಧಾಂಗಿಯೂ ಸಹಧರ್ಮಚಾರಿಣಿಯೂ ಆದವಳ ಅಶುಚಿತೆ ಕ್ಷಮಾರ್ಹವಲ್ಲ. ಇನ್ನು ಆಕೆಯೊಂದಿಗೆ ಇರುವುದೂ ಋಷಿಗೆ ಕಷ್ಟವೆನಿಸಿರಬೇಕು. ಮಕ್ಕಳ ಪಿತೃನಿಷ್ಠೆಯೂ ಪರೀಕ್ಷಿಸತಕ್ಕದ್ದು. ಅಲ್ಲದೆ, ಮೃತರನ್ನು ಬದುಕಿಸುವ ಸಾಮರ್ಥ್ಯ ತನ್ನಲ್ಲುಂಟು, ತನ್ನ ಶಕ್ತಿಯಲ್ಲಿ ಮಕ್ಕಳಿಗೆಷ್ಟು ವಿಶ್ವಾಸವಿದೆ, ಅದನ್ನೂ ಪರೀಕ್ಷಿಸುವ ಸಮಯ ಇದು. ಆಕೆಗೆ ಪಾಪವಿಮೋಚನೆ ಮೃತ್ಯುವಿನಿಂದ ಮಾತ್ರ ಸಾಧ್ಯ. ಪರಶುರಾಮನಿಗೋ ತಾಯಿಯನ್ನು ಕಂಡರೆ ಮರುಕ. ಆತನ ಮಾತನ್ನು ಕೇಳಿರಿ :

"ಪರಶುರಾಮ : ಅದೆಂತಹ ಶಮೆ ? ಎಂತಹ ಕ್ಷಮೆ ? ಆ ದಿನ ಕಾರ್ತವೀರ್ಯನ ದುಷ್ಟತನವನ್ನು ಸಹಿಸಿದ್ದವರಿಗೆ ಈ ಹೆಂಗಸಿನ ಒಂದು ಕ್ಷಣಮಾತ್ರದ ಸಣ್ಣ ಮನಶ್ಚಾಂಚಲ್ಯ ಸಹಿಸಕೂಡದಂತಹ ಅಪರಾಧವಾಯಿತೊ ? ತಾವು ಲೋಕವನ್ನು ಮರೆತು ತಪಸ್ವಿಗಳಾಗಿರುವಂತೆ ಎಲ್ಲರೂ ಲೋಕವನ್ನು ಮರೆತು ತಪಸ್ಸು ಮಾಡಲಾಗುವುದೋ ? ಭೋಗ್ಯ ವಸ್ತುವನ್ನು ಕಂಡರೆ ಅದು ಬೇಕೆನ್ನುವುದೇ ಮನಸ್ಸಿನ ಸ್ವಭಾವ :

> ಸೌಂದರ್ಯಂ ಸುಧೆಯಲ್ತು ನೇತ್ರಕರಣಂ ಕಾರುಣ್ಯಮೇನಲ್ತು ತ- ।
> ತ್ಸಂಧಾನಂ ಫಣಿಮಂತನಂಬೊಲುಣಿಸಲ್ ಜೀವಕ್ಕೆ ತಾಂ ಕ್ಷ್ವೇಲಮಂ ॥
> ಸಂದುದ್ವೇಗವ ಸೈಪುದೆಂತೊ ಬಿದಿಯಿಟ್ಟಾ ಜೇನನಂಜೂಟದಿಂ ।
> ಬಂದುನ್ಮಾದವ ಚೇಷ್ಟಿತಂಗಳನದಾರ್ ಬೈತಿಟ್ಟು ಸೈಸಿರ್ಪರೋ ॥

...ಆಕೆಯೇನೂ ವಿರಕ್ತಳಾಗಿ ಹುಟ್ಟಿದವಳಲ್ಲ. ಈತನ ವಿರಕ್ತಿಗಾಗಿ ಈತನನ್ನು ಮೋಹಿಸಿದವಳಲ್ಲ. ಈತನು ತಾನಾಗಿ ಹೋಗಿ ಆಕೆಯ ತಂದೆಯನ್ನು ಬೇಡಿ ಆಕೆಯನ್ನು ಪಡೆದುಕೊಂಡು ಬಂದನು. ಅಂಥವಳಿಗೆ ಇಚ್ಛೆಪಡುವುದಕ್ಕೆ ಕೂಡ ಸ್ವಾತಂತ್ರ್ಯ ವಿಲ್ಲವೆ ?"

ಅಹುದು, ಪ್ರಬಲವಾದ ಆಕ್ಷೇಪಣೆ, ಮನಮುಟ್ಟುವಂಥ ಆಕ್ಷೇಪಣೆ. ವಾಲಿಯ ವಧೆಯಲ್ಲಿ ತಾರೆಯೆತ್ತಿದ ಆಕ್ಷೇಪಣೆಗೆ ಇದು ಏನೂ ಕಡಮೆಯದಲ್ಲ. ಇಲ್ಲಿ ಒಂದು ಅಮೋಘವಾದ ವೃತ್ತವೂ ಬರುತ್ತದೆ:

> ಅರುಣಂ ಪಲ್ಲವದೊಳ್ ಸುವರ್ಣವಿಭವಂ ಚಾಂಪೇಯದೊಳ್ ಚಂದ್ರಿಕಾ- ।
> ಸ್ಫುರಣಂ ಕುಂದವನಂಗಳೊಳ್ ತರುಣ ತಾರಳ್ಯಂ ಲತಾಲೀಲೆಯೊಳ್ ॥
> ಸರಸಾಕ್ಷಿ ದ್ಯುತಿ ಯೇಣದೊಳ್ ನೆಲಸಿ ತಾಂ ಮಾನುಷ್ಯರೊಳ್ ಸೇರವಂ- ।
> ತಿರಲಾ ಕಾಂತಿಗಳಿಂಬನೀಂಟುವ ಸೊಗಂ ಕೈಪಿಲ್ಲದಂತೊಪ್ಪುಗುಂ ॥

ಇಷ್ಟು ಮಾಧುರ್ಯಗಳೂ ಮನುಷ್ಯನಲ್ಲಿ ಸೇರಿದರೆ ಅದನ್ನು ಭೋಗಿಸುವ ಮನಸ್ಸಿಗೆ ಕಹಿ ಕಾದಿದೆ. ರೇಣುಕೆಗೆ ಅಂಥ ಕಹಿ ತಟ್ಟಿದೆ.

"ಅಷ್ಟು ಸಣ್ಣ ದೋಷಕ್ಕೆ ಇಷ್ಟು ಉಗ್ರವಾದ ಶಿಕ್ಷೆಯೇ ? ಇದನ್ನು ತಂದೆಯು ಅವಿಚಾರದಿಂದ ನಿರ್ಣಯಿಸಿದನೆಂದು ತಿಳಿಯಲೆ ? ಆತನು ಹಾಗೆ ಮಾಡತಕ್ಕವನೆ ?...ಇಷ್ಟಕ್ಕೂ ಆತನ ನಿರ್ಣಯದ ಧರ್ಮಾಧರ್ಮಗಳನ್ನು ನಾನೇಕೆ ಪರೀಕ್ಷಿಸಬೇಕು ?"

ಹಾಲಾಹಲವನ್ನುಂಡ ಪರಮೇಶ್ವರನ ಭಕ್ತನಲ್ಲವೆ ಭಾರ್ಗವರಾಮ ? ಅವನ ಮೇಲೆ ಭಾರ ಹಾಕಿ ತಾಯಿಯನ್ನು ತುಂಡರಿಸುವ ನಿರ್ಣಯಕ್ಕೆ ಬರುತ್ತಾನೆ.

ಮೂರನೆಯ ದೃಶ್ಯದಲ್ಲಿ ಬರುವ ತಾಯಿ–ಮಗನ ಸಂಭಾಷಣೆ ಮನಕರಗಿಸು ವಂತಿದೆ. " ಪರಶುರಾಮ :

*   *   *   *   *

ನಿನ್ನೆದೆಯ ಪಾಲನೆಳಸುತ- ।
ಲೆನ್ನೀ ಬಾಯಿಂದು ಬೇಡಿ ಕಾಡಿದ ತೆರದಿಂ ॥
ನಿನ್ನ ತಲೆ ರಕುತವೀಂಟ- ।
ಲ್ಕೆನ್ನೀ ದುರ್ಭರ ಕುಠಾರವೆಳಸುವುದೀಗಳ್ ॥

ರೇಣುಕೆ : ರಾಮ, ನಿನ್ನ ಆಯುಧಕ್ಕೆ ಅರ್ಹರಾದವರು ನಿನ್ನ ಶತ್ರುವರ್ಗಕ್ಕೆ ಸೇರಿ ದವರಲ್ಲವೆ ? ನಿನಗೆ ನಾನು ಶತ್ರುವಾದೆನೆ ?

ಪರಶುರಾಮ : ತಾಯಿ, ಇದು ನನ್ನ ಆಯುಧವಲ್ಲ ; ನಿನ್ನ ಪೂರ್ವಕರ್ಮದ ಒಂದು ಅವತಾರ. ಇದನ್ನೀಗ ನೀನು ತಪ್ಪಿಸಿಕೊಂಡರೆ ಬೇರೊಂದು ರೂಪದಲ್ಲಿ ಅದು ಬಂದು ನಿನ್ನನ್ನು ಹಿಡಿಯಲಾರದೆ ? ತಾಯಿ, ಮನಸ್ಸನ್ನು ಭದ್ರ ಪಡಿಸಿಕೊ.

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಆಗಲೇಬೇಕು. ಇದು ವಿಧಿ ನಿಯಮ. ಶುಚಿತೆಯ ನಿಯಮ.

ತಾಯಿಯೊಪ್ಪುತ್ತಾಳೆ. ಮಗ ತಲೆ ಕಡಿಯುತ್ತಾನೆ. ಕಡಿದ ಬಳಿಕ ರೋದಿಸು ತ್ತಾನೆ. ಜಮದಗ್ನಿ ಸುತನನ್ನು ಸಂತೈಸುತ್ತಾನೆ. " ರಾಮ. ದುಃಖಿಸಬೇಡ. ನನ್ನಾಜ್ಞೆ ಯನ್ನು ಪಾಲಿಸಿ ಮಹಾಪುರುಷಗುಣವನ್ನು ತೋರಿರುವೆ...ಹೃದಯದಲ್ಲಿ ಕಳಂಕ ವಿರುವವನು ಅಂಥ ಕಾರ್ಯವನ್ನು ಮಾಡಲಾರನು. ಈಗ ಶೋಕಪರವಶತೆಯಿಂದ ಆ ಗುಣವನ್ನು ಕಳೆದುಕೊಳ್ಳಬೇಡ. ಏನು ಬೇಕಾದರೂ ಬಯಸು, ಸಂತೋಷದಿಂದ ಕೊಡುವೆನು " ಎನ್ನುತ್ತಾನೆ ಜಮದಗ್ನಿ. ರಾಮ ತಾಯನ್ನು ಬದುಕಿಸಿಕೊಂಡು, ಅಣ್ಣಂದಿರನ್ನು ಶಾಪವಿಮುಕ್ತರನ್ನಾಗಿ ಮಾಡಿ, ತಂದೆಯ ಅಪ್ಪಣೆಯಂತೆ. ಮಾತೃ ಹತ್ಯಾದೋಷಪರಿಹಾರಕ್ಕಾಗಿ ಪುನಃ ತೀರ್ಥಯಾತ್ರೆಯನ್ನು ಕೈಗೊಳ್ಳುತ್ತಾನೆ. ಡಿ.ವಿ.ಜಿ.ಯವರಿಗೆ ಲೋಕಪರ್ಯಟನದಲ್ಲಿ ತುಂಬ ಮಮತೆಯಿರುವಂತೆ ತೋರು ತ್ತದೆ.

ನವದೇಶಂ ನವಸನ್ನಿವೇಶಮವರೊಳ್ ನಾನಾ ಜನೋತ್ಸಾಹನಂ ।
ನವಶಾಸ್ತ್ರಂ ನವಭಾಷೆ ನೂತನ ಸಮಾಜಾಚಾರಶೀಲಂಗಳುಂ ॥
ನವಚಾರಿತ್ರ ನವಾನುಭೂತ ಸುಖದುಃಖಂಗಳ್ ನವಾಭ್ಯಾಸಗಳ್ ।
ನವ ಸಂಪರ್ಕಗಳಿಂತು ಸೇರೆ ನರನುಂ ನಾವೀನ್ಯಮಂ ತಾಳನೇ ॥

ಸುಂದರವಾದ ಪದ್ಯ. ಮನನಕ್ಕೆ ತಕ್ಕುದು. ತಂದೆಯ ಉಪದೇಶದಂತೆ ಪರಶುರಾಮ ಲೋಕಸಂಚಾರಕ್ಕೆ ಹೊರಟು ನವೀಕೃತನಾಗಿ ಮರಳಿ ಆಶ್ರಮಕ್ಕೆ

ಬರುತ್ತಾನೆ. ಆದರೆ ತಂದೆಯನ್ನೂ ತಾಯಿಯನ್ನೂ ಕಾರ್ತವೀರ್ಯನ ಮಕ್ಕಳೂ ಮೊಮ್ಮಕ್ಕಳೂ ಕೊಂದುಹಾಕಿದ್ದಾರೆ. ರಾಮನಿಗೆ ಶೋಕ ಉಮ್ಮಳಿಸುತ್ತದೆ. ಕಷ್ಟ ಕಾಲದಲ್ಲಿ ತಾನು ಅವರೆಡೆ ಇರದಿದ್ದುದಕ್ಕೆ ಕೊರಗಿ ಕಣ್ಣೀರುಹಾಕುತ್ತಾನೆ. ಮತ್ತೊಂದು ಮನೋಜ್ಞ ವೃತ್ತ ಡಿ.ವಿ.ಜಿ.ಯವರಿಂದ ಅವತರಿಸುತ್ತದೆ :

> ಬಳಿಯೊಳ್ ನಾಂ ನಿಲಲಿಲ್ಲ ನಿಮ್ಮ ಪದಮಂ ಕಣ್ಗೊತ್ತಲಿಲ್ಲಳ್ತಿಯಿಂ-।
> ದೊಳಿತಾದೊಂದನು ನೀಡಲಿಲ್ಲ ಹಿತಮಂ ನಾಂ ಕೇಳಲಿಲ್ಲಕ್ಕರಿಂ ॥
> ಇಳಿಯೊಳ್ ಮೂರ್ಖತೆಯಿಂದೆ ನಾನಲೆಯೆ ನೀಂ ಹಾ ತಾತ ಹಾ ಮಾತೆಯೇ ।
> ಕಳೆದೆನ್ನಂ ಪರಲೋಕಕೈದಿದಿರಹಾ ಇನ್ನೆನ್ನ ಸಂತೈಪರಾರ್ ॥

ನೆರೆಯಿಲ್ಲದೆ ಜೀವನೋಪಾಯಕ್ಕಾಗಿ ಅಲೆದಾಡುವ ಎಲ್ಲ ಪಿತೃವತ್ಸಲರೂ ಹೀಗಲ್ಲವೇ ಹಲುಬುವುದು ?

ಈ ಶೋಕ ಸಹಜವಾಗಿಯೇ ಕ್ರೋಧಕ್ಕೆ ತಿರುಗುತ್ತದೆ. ಪರಶುರಾಮನಿಗೆ ಈಗ ಅವನನ್ನು ತಡೆಯುವವರಾರೂ ಇಲ್ಲ. ತನಗೆ ಬುದ್ಧಿ ಹೇಳಬಹುದಾದ ತಂದೆ ತಾಯಂದಿರನ್ನು ಕೊಂದು ಆ ಕ್ಷತ್ರಿಯಾಧಮರು ತಮ್ಮ ಕ್ಷೇಮವನ್ನು ಕಳೆದು ಕೊಂಡಿದ್ದಾರೆ. ಇನ್ನು ಅವರನ್ನು ಹಾಗೆಯೇ ಬಿಡುವಹಾಗಿಲ್ಲ. ಯಾತ್ರೆಮಾಡು ತ್ತಿದ್ದಾಗ ಈ ಕ್ಷತ್ರಿಯರ ದೌರಾತ್ಮ್ಯಗಳೂ ಅವನ ಕಿವಿಗೆ ಬಿದ್ದಿವೆ. ಈಗ ಕೊಡಲಿಯೆತ್ತಿ ಹೊರಟಿದ್ದಾನೆ. ಅವರೆಲ್ಲರನ್ನೂ ಹುಡುಕಿ ಹುಡುಕಿ ಕೊಂದು ರಕ್ತತರ್ಪಣವನ್ನು ಪಿತೃಗಳಿಗೆ ಕೊಡುತ್ತಾನೆ. ಇದು ಮೂರನೆಯ ಅಂಕದ ವಸ್ತುವಾಗಿದೆ.

ನಾಲ್ಕನೆಯ ಅಂಕದಲ್ಲಿ ರಾಮ–ರಾಮರ ಮಿಳನ ಮನೋಹರವಾಗಿ ಮೂಡಿದೆ. ನಾವೂ ದಶರಥನ ಕಣ್ಣಿಂದ ಪರಶುರಾಮನನ್ನು ದರ್ಶನಮಾಡೋಣ :

> ತಟಿದಾನೀಕಮೊ ಪುರಹರ-।
> ನಿಟಿಲಾಕ್ಷಜ್ವಾಲೆಯೋ ಮಹಾಸಂಗರ ಸಂ-॥
> ಘಟನೆಯ ಶಕುನಮೋ ಆರೀ।
> ಜಟಿಯಿವನಂ ನೋಳ್ಪುದಾರ್ಗಮಸದಳಮಲ್ತೇ ॥

ವಸಿಷ್ಠ ದಾಶರಥಿಯನ್ನು ಪರಶುರಾಮನ ಹತ್ತಿರಕ್ಕೆ ಕರೆದುಕೊಂಡು ಬರುವಾಗ ಅವನನ್ನು ನೋಡಿ ಭಾರ್ಗವರಾಮನಿಗೆ ಹೀಗೆನ್ನಿಸುತ್ತದೆ :

"ಆಹಾ, ಇವನ ಮುಗವೀಗ ವೀರಲಕ್ಷಣ ಲಕ್ಷಿತವಾಗಿದೆ.

> ರಾಜಾಧಿರಾಜ ಮಸ್ತಕ।
> ರಾಜಿಯುನಾಂ ಲೀಲೆಯಿಂದಲೀಡಾಡಿದೊಡಂ ॥
> ಸೋಜಿಗವಹುದೀ ಬಾಲನ।
> ತೇಜದಿನೆನಗಮುಮ ನಾಂ ಪರೀಕ್ಷಿಪೆನಿವನಂ ॥

ಜಾಮದಗ್ನ್ಯನಿಗೆ ವಸಿಷ್ಠ ಋಷಿ ಮೊದಲು ಪ್ರಣಮಿಸುತ್ತಾನೆ. ಆಮೇಲೆ ದಶರಥನನ್ನೂ ರಾಮನನ್ನೂ ಹತ್ತಿರ ಕರೆದು ಆಶೀರ್ವಾದ ಪಡೆಯಲು ಪ್ರೇರಿಸುತ್ತಾನೆ. ದಾಶರಥಿಯ ವಿನಯಪೂರ್ವಕ ಪ್ರಣಾಮ ಭಾರ್ಗವರಾಮನನ್ನು ತುಷ್ಟಿಗೊಳಿಸುತ್ತದೆ. ದಾಶರಥಿಯ ಮಾತಿದು :

ಪುರಹರನನೊಲಿಸಿ ತಪದಿಂ ।
ಧರಣಿಯ ಸಂಗಳಿಸಿ ಶೌರ್ಯದಿಂದದನವನೀ-॥
ಸುರನಿವಹಕಿತ್ತ ಭಾರ್ಗವ- ।
ಪರತೇಜೋಂಶ ಪ್ರಭಾವ ನಿನಗಾಂ ಮಣಿವೆಂ॥

ಪರಶುರಾಮ : (ಸ್ವಗತ) ಇದೇನು ಇವನ ನಯವು ನನ್ನ ಹಠವನ್ನು ಮುರಿಯುವಂತಿದೆ. (ಪ್ರಕಾಶ) ಎಲೈ ರಘುಕುಲ ಬಾಲನೆ, ನೀನೇ ತಾನೆ ಶಿವಕಾರ್ಮುಕವನ್ನು ಮುರಿದವನು ?

ರಘುರಾಮ : ಪೂಜ್ಯರೆ, ಅದು ಮುರಿದುದು ನನ್ನ ಕೈಯಿಂದಲೇ. ಆದರೆ ಆ ಕಾರ್ಯವು ನಿಮ್ಮ ತಾತಪಾದರ ಮಾತುಲನಾದ ವಿಶ್ವಾಮಿತ್ರ ಮಹರ್ಷಿಯು ಅನುಗ್ರಹಿಸಿದ ಉಪದೇಶದ ಮಹಿಮೆ.

ಪರಶುರಾಮ ಈ ಸಾಂತ್ವ ವಚನಕ್ಕೆ ಮರುಳಾಗನು. ಆತ ಮಾಡಬೇಕಾದದ್ದು ಈ ಹುಡುಗನ ಸತ್ತ್ವ ಪರೀಕ್ಷೆ. ಹರಧನುಸ್ಸನ್ನು ಮುರಿದ ಕೈ ವಿಷ್ಣುಧನುಸ್ಸನ್ನು ಹೆದೆಯೇರಿಸಿ ಮುರಿಯಬಲ್ಲುದೇ ? ಆದರೆ ರಘುರಾಮ ಅದರ ಹೆದೆಯೇರಿಸುತ್ತಾನೆ, ಧನುಸ್ಸು ಮುರಿಯದೇ ಉಳಿದಿದೆ. ಶಿವಧನುಸ್ಸನ್ನು ತಾನು ಬೇಕೆಂದು ಮುರಿಯಲಿಲ್ಲವೆಂದೂ, ವಿಷ್ಣುಧನುಸ್ಸು ಮುರಿಯದೆ ಇರುವುದನ್ನು ನೋಡಿದರೆ ಇದರಿಂದ ಮುಂದೆ ಏನೋ ಮಹತ್ಕಾರ್ಯ ಜರುಗುವುದಿದೆಯೆಂದೂ ರಾಮ ಹೇಳುತ್ತಾನೆ.

ಪರಶುರಾಮ : ಅದೇನು ಭವಿಷ್ಯಜ್ಞನಂತೆ ಮಾತನಾಡುವೆ ?

ರಘುರಾಮ : ಅಹುದು, ಪೂಜ್ಯರೆ, ಲಯಕಾರಕನಾದ ರುದ್ರಮೂರ್ತಿಯು ಜಗತ್ತಿನಲ್ಲಿ ಮಾಡಿಸಬೇಕಾಗಿದ್ದ ಕೆಲಸವು ಈಗ ಮುಗಿದಿದೆ. ಈಗ ಲೋಕವು ಸ್ಥಿತಿಕಾರಕನಾದ ಮಹಾವಿಷ್ಣುವಿನ ಕಟಾಕ್ಷವನ್ನಪೇಕ್ಷಿಸುತ್ತಿದೆ.

ತಾವಿಬ್ಬರೂ ಯುದ್ಧಮಾಡಬೇಕೇ ಬೇಡವೆ ಎಂಬುದರ ನಿರ್ಧಾರವನ್ನು ರಘುರಾಮನಿಗೇ ಭಾರ್ಗವರಾಮ ಬಿಡಲು, ದಾಶರಥಿ ಎನ್ನುತ್ತಾನೆ :

ಬಿಸಿ ಬೆಳಕುಗಳಿನನೊಳ್ ಸಮ- ।
ನಿಸಿದಂತಾ ಬ್ರಹ್ಮಧರ್ಮಮುಂ ಕ್ಷಾತ್ರಮುಮಿ-॥
ರ್ದೆಸೆದುವು ನಿನ್ನೊಳಗಿನ್ನಾ ।
ಸಸಿವೊಲ್ ನೀಂ ಬಿಸಿಯ ಬಿಸುಟು ತಣ್ಪನೊಳೆಸೆಯೈ॥

ಜಮದಗ್ನಿ ಕೂಡ ಅಂತರಿಕ್ಷದಲ್ಲಿ ಪ್ರತ್ಯಕ್ಷನಾಗಿ, ದಾಶರಥಿಯಲ್ಲಿ ತನ್ನ ಕ್ಷಾತ್ರ ತೇಜಸ್ಸನ್ನಿರಿಸಿ ತಾನು ಪ್ರಶಾಂತನಾಗುವಂತೆ ಮಗನಿಗೆ ಉಪದೇಶಿಸುತ್ತಾನೆ. ಪರಶುರಾಮ ಅದನ್ನು ಸ್ವೀಕರಿಸಿ ಹಾಗೆಯೇ ಮಾಡಿ :

"ಜಗತ್ಕಲ್ಯಾಣಕ್ಕಾಗಿ ಆಗಬೇಕಾದ ಹೋರಾಟಗಳೆಲ್ಲಾ ಇನ್ನುಮುಂದೆ ನಿನಗೆ ಸೇರಿದವು. ನನ್ನ ಹೆಸರನ್ನು ನೀನು ತಾಳಿರುವಂತೆ ನಾನು ಸೇವಿಸಿದ ಧರ್ಮವೂ ನಿನ್ನಿಂದ ಸಂವರ್ಧಿಸಲಿ. ನಿನಗೆ ಮಂಗಳವಾಗಲಿ"

ಎಂದು ಹರಸಿ ಹೊರಡುತ್ತಾನೆ. ನಾಟಕ ಇಲ್ಲಿಗೆ ಮುಗಿಯುತ್ತದೆ. ಅವರ ಮಂಗಳಶ್ಲೋಕ ಇದು :

ಭೃಗುರಾಮಂ ರಘುರಾಮಂ ।
ಯುಗಳದ ಸತ್ತ್ವೈಕ್ಯಮೀಗ ಜನಕಭಿರಾಮಂ ॥
ಜಗಕಿನ್ನಪ್ಪುದು ಸೇಮಂ ।
ಭಗವಂತನ ಮರೆಯುದಿರ್ಕೆ ನೆಲದಿ ಬಲ್ಯಾರ್ಥ್ಯರ್ ॥

'ಪರಶುರಾಮ' ತುಂಬ ಸ್ವಾರಸ್ಯವಾದ ನಾಟಕ ; ಮನಸ್ಸು ನವಯುಗದ್ದು, ನಮ್ಮ ಸನಾತನ ಮೌಲ್ಯಗಳಿಗೊಲಿದದ್ದು. ಮೆಲಕುಹಾಕುವಂಥ ಕಂದವೃತ್ತಗಳು, ಗಾಢಾಲೋಚನೆಯಿಂದ ಮೂಡಿದವು, ಧ್ಯಾನದಲ್ಲಿ ಕೆಡವುವಂಥ ವಿಚಾರಲಹರಿ, ಹೃದಯಸ್ಪರ್ಶಿಯಾದ ಮನೋಗತಗಳು, ತೀಕ್ಷ್ಣಮತಿಯ ಹರಿತವಾದ ಬುದ್ಧಿಯ ಪಟಗಳನ್ನು ನಡೆಯಿಸುವ ಗದ್ಯಸಂವಾದಗಳು, ಸಮಸ್ಯೆಗಳನ್ನು ಹೊರಳುಮಾತುಗಳಿಂದ ಹಾರಿಸದೆ ನಿಟ್ಟಿಸಿ ನೋಡುವ ದಿಟ್ಟತನ, ಗಂಭೀರವಾದ ಶೈಲಿ. ಇವನ್ನು ಪ್ರಕಟಿಸಿದ ಮಿತ್ರರು ಸಹೃದಯರಿಗೆ ತುಂಬ ಉಪಕಾರಮಾಡಿದ್ದಾರೆ. ಇವನ್ನೋದಿದ ಬಳಿಕ ಡಿ.ವಿ.ಜಿ.ಯವರ ಮೇಲೆ ನಮ್ಮ ಪ್ರೀತಿಯೂ ವಿಶ್ವಾಸದಿಂದ ಕೂಡಿದ ಆರ್ದ್ರಮನಸ್ಸಿನಲ್ಲಿ ಅವರ ಮೇಲಣ ಗೌರವಬುದ್ಧಿಯೂ ಹೆಚ್ಚುತ್ತವೆ.

ಶ್ರೀಮದ್ಬ್ರಹ್ಮಪಥಾನುಗ ಪ್ರಿಯತಮಂ ಸತ್ಕ್ಷತ್ರ ಶೌರ್ಯೋಜ್ಜ್ವಲಂ ।
ಪ್ರೇಮಾಪಾಂಗ ತರಂಗ ಲಾಲಿತ ಮಹೀಚಕ್ರಂ ಮಹಾ ಪೂರುಷಂ ॥
ರಾಮಂ ಭಾರ್ಗವನಾಮನೂರ್ಜಿತ ಗುಣೋದ್ದಾಮಂ ಪ್ರಶಸ್ತೋನ್ನಮಂ ।
ಕ್ಷೇಮಾವಾಪ್ತಿಯ ಗೆಯ್ಸುತೆಮ್ಮನನಿಶಂ ಪ್ರೇರಿಕ್ಕೆ ಪುಣ್ಯಂಗಳೊಳ್ ॥

—"ಪರಶುರಾಮ"ದ ನಾಂದೀ ಶ್ಲೋಕ

ಡಿ.ವಿ.ಜಿ. ಅವರ ಕನ್ನಡ ಮ್ಯಾಕ್‌ಬೆತ್: ಕೆಲವು ಸಮಸ್ಯೆಗಳು

ಜಿ. ಎಸ್. ಆಮೂರ

ಪ್ರೊ॥ ಜಿ. ಎಸ್. ಆಮೂರ ಅವರು ಡಿ.ವಿ.ಜಿ. ಅವರ ಮ್ಯಾಕ್‌ಬೆತ್ ನಾಟಕದ ಅನುವಾದವನ್ನು ಕುರಿತು ಸವಿಮರ್ಶವಾಗಿ ಬರೆಯುತ್ತ, "19 ನೆಯ ಶತಮಾನದ ಏಳನೇ ದಶಕದಿಂದಲೇ ಷೇಕ್ಸ್‌ಪಿಯರನ ನಾಟಕಗಳ ಭಾಷಾಂತರಗಳು ಬರತೊಡಗಿದರೂ ಭಾಷಾಂತರದ ಸಮಸ್ಯೆಗಳ ಬಗ್ಗೆ ತಾತ್ವಿಕ ಚರ್ಚೆಯನ್ನು ಮೊದಲು ಪ್ರಾರಂಭಿಸಿದವರು ಎಂ. ಎಲ್. ಶ್ರೀಕಂಠೇಶಗೌಡರು" ಎಂದು ಹೇಳಿ, ಅವರು ತಮ್ಮ 'ಪ್ರತಾಪರುದ್ರ ದೇವ'ಕ್ಕೆ ಬರೆದ ಪೀಠಿಕೆಯಲ್ಲಿ ಭಾಷಾಂತರದ ಬಗೆಗೆ ವ್ಯಕ್ತಪಡಿಸಿರುವ ಅಭಿಪ್ರಾಯ ವನ್ನು ವಿಶ್ಲೇಷಿಸಿ,—"ಪಾಶ್ಚಾತ್ಯ ಕಾವ್ಯದ ಸಾಮರ್ಥ್ಯದ ಸಂಪೂರ್ಣ ಅರಿವಿದ್ದ ಗೌಡರಿಗೆ ಕನ್ನಡ ತನ್ನತನವನ್ನು ಕಾಯ್ದುಕೊಂಡು ಪಾಶ್ಚಾತ್ಯ ಪ್ರಭಾವಗಳನ್ನು ಹೇಗೆ ಅರಗಿಸಿ ಕೊಳ್ಳಬಲ್ಲುದು ಎನ್ನುವುದೇ ಮೂಲಸಮಸ್ಯೆಯಾಗಿತ್ತು" ಎಂದಿದ್ದಾರೆ. ಶ್ರೀಕಂಠೇಶ ಗೌಡರು 'ಶ್ರೀಕಂಠೇಶ್ವರ ಕರ್ನಾಟಕ ನಾಟಕ ಸಭೆ'ಯ ಸ್ಥಾಪಕರಲ್ಲೊಬ್ಬರಾಗಿದ್ದು, ವೃತ್ತಿರಂಗಭೂಮಿಯ ಅಗತ್ಯಗಳನ್ನೂ ಸಮಕಾಲೀನ ಪ್ರೇಕ್ಷಕರ ಅಭಿರುಚಿಯನ್ನೂ ಅರಿತವರಾಗಿದ್ದುದರಿಂದ, ಅವರ ಅಭಿಪ್ರಾಯಗಳಿಗೆ ಐತಿಹಾಸಿಕ ಮಹತ್ವವಿದೆ. ಅವರ ಅನುವಾದಗಳನ್ನು ರಂಗವೃತ್ತಿಗಳೆಂದು ಕರೆಯಬಹುದು' ಎಂದು ಹೇಳಿ, ಎಂ. ಎಸ್. ಪುಟ್ಟಣ್ಣನವರಿಂದ ಆದ **King Lear** ನಾಟಕದ ಅನುವಾದವನ್ನು ('ಹೇಮಚಂದ್ರ ರಾಜವಿಲಾಸ', 1899) 'ಸರಿಯಾದ ದಾರಿಯಲ್ಲಿ ಮೊದಲ ಹೆಜ್ಜೆ' ಎಂದು ಗುರುತಿಸಿದ್ದಾರೆ. ಇನ್ನು ಡಿ.ವಿ. ಗುಂಡಪ್ಪನವರ 'ಮ್ಯಾಕ್‌ಬೆತ್' ನಾಟಕದ ಭಾಷಾಂತರದ ಸ್ವರೂಪದ ಧೋರಣೆಯನ್ನು ಅವರ ಮಾತುಗಳಲ್ಲಿಯೇ ತಿಳಿಸಿ ಕೊಟ್ಟಿದ್ದಾರೆ: "ಷೇಕ್ಸ್‌ಪಿಯರನ ಜಗತ್ತನ್ನು ಕೂಡಿದಮಟ್ಟಿಗೂ ಯಥಾವತ್ತಾಗಿ—ಇರುವುದು ಇರುವಂತೆಯೇ—ತೋರಿಸಬೇಕೆಂಬುದು ನನ್ನ ಸಂಕಲ್ಪ. ಬರಿಯ ಕಥೆ ಯನ್ನು ಹೇಳಬೇಕೆಂಬಷ್ಟು ಮಾತ್ರವೇ ಅಲ್ಲ...ಆತನ ಲೋಕದ ಪ್ರತಿಬಿಂಬವನ್ನು ಸಾಧ್ಯವಿರುವ ಮಟ್ಟಿಗೂ ಇಲ್ಲಿ ಇಳಿಸಬೇಕೆಂಬುದು ನನ್ನ ಪ್ರಯತ್ನ". "ಮೊದಲಿಗರ ಅನುವಾದ ಪ್ರಯತ್ನಗಳಿಗಿಂತ ಇವರದ್ದು ಮೂಲದ ವೈಶಿಷ್ಟ್ಯವನ್ನು ಎಲ್ಲ ಜಗೆಯಲ್ಲೂ ಉಳಿಸಿಕೊಳ್ಳುವುದರ ಕಡೆಗಿತ್ತು" ಎಂದು ಹೇಳಿ, ಡಿ.ವಿ.ಜಿ. ಅವರ ಅನಂತರ ಬಂದ

ಷೇಕ್ಸ್‌ಪಿಯರ್ ಅನುವಾದಕರು ಅವರ ಭಾಷಾಂತರ ವಿಧಾನವನ್ನು ಅನುಸರಿಸಿರುವುದನ್ನು ನೋಡಿದರೆ "ಡಿ.ವಿ.ಜಿ. ಅವರ ನಿರ್ಣಯ ಜಾಣತನದ್ದಾಗಿತ್ತು" ಎಂದಿದ್ದಾರೆ ಲೇಖಕರು. ಈ ಅಭಿಪ್ರಾಯವನ್ನು ಸ್ಪಷ್ಟಪಡಿಸುವ ಸಲುವಾಗಿ ಮಾಸ್ತಿ, ಎ. ಎನ್. ಮೂರ್ತಿರಾವ್, ರಾಮಚಂದ್ರದೇವ, ಇವರುಗಳ ಅನುವಾದಗಳ ಬಗೆಗೆ ಪ್ರಸ್ತಾವಿಸಿದ್ದಾರೆ. ಕೊನೆಯದಾಗಿ, ಈ ಎಲ್ಲ ಅನುವಾದಗಳ ಹಿನ್ನೆಲೆಯಲ್ಲಿ ಸೃಜನಶೀಲಕೃತಿಗಳ ಭಾಷಾಂತರದ ಸಂಬಂಧದಲ್ಲಿ ಕೆಲವು ಸಾಮಾನ್ಯ ನಿರ್ಣಯಗಳನ್ನು ರೂಪಿಸಿದ್ದಾರೆ.

ಭಾಷಾಂತರ ವಿಧಾನದ ತೌಲನಿಕ ವಿವೇಚನೆಯನ್ನು ಮಾಡಿ, ಶ್ರೀ ಅಮೂರರು ಮ್ಯಾಕ್‌ಬೆತ್ ನಾಟಕವನ್ನು ಅನುವಾದ ಮಾಡಿರುವ ಎಲ್ಲ ಲೇಖಕರ ಸಾಧನೆಗಳ ಜೊತೆಗೆ ಡಿ.ವಿ.ಜಿ.ಯವರ ಸಾಧನೆಯನ್ನು ಜೊತೆಗಿಟ್ಟು, ಸ್ಥಾಲೀಪುಲಾಕನ್ಯಾಯೇನ ಪರಿಶೀಲಿಸಿ, "ಡಿ.ವಿ.ಜಿ.ಯವರ ಕನ್ನಡ ಮ್ಯಾಕ್‌ಬೆತ್‌ದ ಮಿತಿಗಳೇನೇ ಇದ್ದರೂ ಮೂಲಕ್ಕೆ ಅಪಚಾರವಿಲ್ಲದಂತೆ ಅದು ಪಾಶ್ಚಾತ್ಯ ಅಭಿಜಾತಕೃತಿಯೊಂದನ್ನು ಕನ್ನಡಕ್ಕೆ ನೀಡಿದೆ" ಎಂಬ ಒಪ್ಪತಕ್ಕ ಮಾತನ್ನು ಆಡಿದ್ದಾರೆ.

ಹತ್ತೊಂಬತ್ತನೆಯ ಶತಮಾನದ ಏಳನೇ ದಶಕದಿಂದಲೇ ಷೇಕ್ಸ್‌ಪಿಯರನ ನಾಟಕಗಳ ಭಾಷಾಂತರಗಳು ಬರತೊಡಗಿದವಾದರೂ ಭಾಷಾಂತರದ ಸಮಸ್ಯೆಗಳ ಬಗ್ಗೆ ತಾತ್ವಿಕ ಚರ್ಚೆಯನ್ನು ಮೊದಲು ಪ್ರಾರಂಭಿಸಿದವರು ಎಂ. ಎಲ್. ಶ್ರೀಕಂಠೇಶಗೌಡರು. *'ಪ್ರತಾಪರುದ್ರದೇವ' ಕ್ಕೆಅವರು ಬರೆದ 'ಪೀಠಿಕೆ'ಗೆಈ ದೃಷ್ಟಿಯಿಂದ ವಿಶೇಷ ವಾದ ಮಹತ್ತ್ವವಿದೆ. ಸಂಸ್ಕೃತ, ಉಳಿದ ಭಾರತೀಯ ಭಾಷೆಗಳು ಮತ್ತು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಹುಟ್ಟಿಕೊಳ್ಳುವ ಸಮಸ್ಯೆಗಳನ್ನು ಗೌಡರು ಚೆನ್ನಾಗಿ ಅರಿತಿದ್ದರು. ಶಬ್ದವ್ಯತ್ಯಾಸದ ಪ್ರತಿಬಂಧಕವೊಂದನ್ನು ಬಿಟ್ಟರೆ ಸಂಸ್ಕೃತ ಮತ್ತು ಭಾರತೀಯ ಭಾಷೆಗಳ ಗ್ರಂಥಗಳನ್ನು ಕನ್ನಡಿಸುವಲ್ಲಿ ಉಳಿದ ಯಾವ ಕಠಿಣ ಸಮಸ್ಯೆಯೂ ಇರಲಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಭೌಗೋಲಿಕ ಅಂಶಗಳು, ಪುರಾಣ ಇತಿಹಾಸ ಮೊದಲಾದ ಸಾಂಸ್ಕೃತಿಕ ಸಾಮಗ್ರಿ, ಕಾವ್ಯವಸ್ತು ಅಲಂಕಾರ ಲಕ್ಷಣಗ್ರಂಥಗಳು, ಛಂದಸ್ಸು ಇತ್ಯಾದಿ ಮುಖ್ಯ ವಿಷಯಗಳಲ್ಲಿ ಸಾಮರಸ್ಯವಿರುವುದರಿಂದ ಕವಿತಾಶಕ್ತಿಯನ್ನು ಹೊಂದಿದ್ದರೆ ಅನುವಾದಕ ಮೂಲದ ಸ್ವಾರಸ್ಯವನ್ನು ಕನ್ನಡಕ್ಕೆ ಇಳಿಸುವಲ್ಲಿ ಯಶಸ್ವಿಯಾಗಬಲ್ಲ ಎಂದು ಅವರು ನಂಬಿದ್ದರು. ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡುವಾಗ ಮಾತ್ರ ಸಂಸ್ಕೃತ–ಕನ್ನಡ ಮಾದರಿ ಪ್ರಯೋಜಕವಾಗುವಂತಿರಲಿಲ್ಲ. ಶಬ್ದವ್ಯತ್ಯಾಸದ ಸಮಸ್ಯೆಗಳನ್ನಲ್ಲದೆ ಛಂದೋ-ವ್ಯತ್ಯಾಸದ ಸಮಸ್ಯೆಗಳನ್ನೂ ಆತ ಎದುರಿಸಬೇಕಾಗುತ್ತಿತ್ತು. ಇಂಥ ಸಮಸ್ಯೆಗಳನ್ನು ಸೋದಾಹರಣವಾಗಿ ಗೌಡರು ತಮ್ಮ 'ಪೀಠಿಕೆ'ಯಲ್ಲಿ ಚರ್ಚಿಸಿದ್ದಾರೆ. ಪಾಶ್ಚಾತ್ಯ ಕಾವ್ಯದ ಸಾಮರ್ಥ್ಯದ ಸಂಪೂರ್ಣ ಅರಿವಿದ್ದ ಗೌಡರಿಗೆ ಕನ್ನಡ ತನ್ನತನವನ್ನು ಕಾಯ್ದು ಕೊಂಡು ಪಾಶ್ಚಾತ್ಯ ಪ್ರಭಾವಗಳನ್ನು ಹೇಗೆ ಅರಗಿಸಿಕೊಳ್ಳಬಲ್ಲುದು ಎನ್ನುವುದೇ ಮೂಲ ಸಮಸ್ಯೆಯಾಗಿತ್ತು. "ಅದನ್ನು (ಪಶ್ಚಿಮ ಸಮುದ್ರವನ್ನು) ನಮ್ಮ ದೊಡ್ಡ ಕೆರೆಗೆ ತಿರುಗಿಸಿದರೆ ನಮ್ಮ ಈಗಿನ ಕೆರೆಯು ಅದರ ಪ್ರವಾಹವನ್ನು ಹಿಡಿಯುವುದು

* ಇದು Macbeth ನಾಟಕದ ರೂಪಾಂತರ (1895).—ಸಂ.

ಎಲ್ಲಾದರೂ ಹೋಗಲಿ ; ಕೆರೆಯೇ ಉಳಿಯುವುದೋ, ಕೊಚ್ಚಿಹೋಗುವುದೋ" ಎಂಬ ಸವಾಲನ್ನು ಅವರು ತಮ್ಮ ಸಮಕಾಲೀನ ಕವಿಗಳೆದುರಿಗಿಟ್ಟರು. ತಮ್ಮ ಸ್ವಂತದ ಅನುವಾದಗಳಲ್ಲಿ ಸ್ಥಳ, ನಾಮ, ಭಾಷೆಗಳಲ್ಲಿ ಮಹತ್ತ್ವದ ಬದಲಾವಣೆಗಳನ್ನು ಮಾಡಿಕೊಂಡರಲ್ಲದೆ ಛಂದಸ್ಸಿನ ಸಮಸ್ಯೆಗಳಿಗೂ ಉತ್ತರ ಹುಡುಕುಲು ಪ್ರಯತ್ನಿಸಿದರು. ಗದ್ಯ, ಸಮಾತಮಪಾದ ವೃತ್ತಗಳು ಮತ್ತು ರಗಳೆಗಳನ್ನು ಬಳಸಿಕೊಂಡರಲ್ಲದೆ ಸ್ವಗತ ಭಾಷಣಗಳನ್ನು ಕಂದಪದ್ಯಗಳಿಗೆ ಅಳವಡಿಸಿಕೊಂಡರು. ಅವರ ಅನುವಾದಗಳನ್ನು ರಂಗವೃತ್ತಿ*ಗಳೆಂದು ಕರೆಯಬಹುದು (ಮರಾಠಿಯಲ್ಲಿ ದೇವಲ ಮೊದಲಾದವರ ಪ್ರಯತ್ನಗಳೂ ಇದೇ ಮಾದರಿಯವು). ಒಟ್ಟಿನಲ್ಲಿ ತಮ್ಮ ಕಾಲದಲ್ಲಿ ರೂಢವಾಗಿದ್ದ ರಂಗನಾಟಕಗಳ ಸ್ವರೂಪವನ್ನು ಬದಲಿಸದೆ ಹೊಸ ಆಶಯವನ್ನು ಹಿಡಿಯುವ ಪ್ರಯತ್ನ ಗೌಡರದಾಗಿತ್ತು.[1]

ಸಾಮಾನ್ಯವಾಗಿ ಶ್ರೀಕಂಠೇಶಗೌಡರು ಹೊಂದಿದ್ದ ಉದ್ದೇಶಗಳನ್ನೇ ಎಂ. ಎಸ್. ಪುಟ್ಟಣ್ಣನವರೂ ಹೊಂದಿದ್ದರು.[2] ಆದರೆ ಅವರ 'ಹೇಮಚಂದ್ರರಾಜ ವಿಲಾಸ' ಮೂಲದ King Lear ನ್ನು ಬಹುಮಟ್ಟಿಗೆ ಅನುಸರಿಸುತ್ತದೆ ಮತ್ತು ವ್ಯತ್ಯಾಸಗಳು ತರ್ಕಬದ್ಧವಾಗಿವೆ. ಅವರ ಮಾತುಗಳಲ್ಲಿಯೇ ಹೇಳುವುದಾದರೆ, "ಗ್ರಂಥವು ವಾಚಕರಿಗೆ ಕನ್ನಡ ಸ್ವರೂಪ ಉಳ್ಳದ್ದಾಗಿಯೇ ಕಾಣಲೆಂದು ಪಾತ್ರಗಳಿಗೆ ಯೋಗ್ಯತಾನುಸಾರವಾದ ನಮ್ಮ ದೇಶದ ಹೆಸರುಗಳನ್ನೇ ಇಟ್ಟಿದೆ. ಮೂಲಕ್ಕೂ ಈ ತರ್ಜುಮೆಗೂ ಎರಡು ಸಂದರ್ಭಗಳಲ್ಲಿ ಮಾತ್ರ ವ್ಯತ್ಯಾಸವಿದೆ. ಕನ್ನಡ ಜನರ ಮತ್ತು ಕನ್ನಡ ಭಾಷೆಯ ತಿಳುವಳಿಕೆ ಮತ್ತು ರೀತಿಗೆ ಅನುಗುಣವಾಗುವಂತೆ, ಇಂಗ್ಲಿಷ್ ದೇಶದಲ್ಲಿ ರೂಢವಾಗಿರತಕ್ಕ ಕೆಲವು ಪದಾರ್ಥಗಳಿಗೆ ಮತ್ತು ಪದ್ಧತಿಗಳಿಗೆ ಈ ದೇಶವಲ್ಲಿ ಅನುರೂಪವಾಗಿರತಕ್ಕವುಗಳನ್ನು ಬರೆದು ಕಂಡಹಾಗೆ ಮಾಡಿರತಕ್ಕ ವ್ಯತ್ಯಾಸ ಒಂದು, ಮೂಲಕ್ಕೆ ನಾನು ಅಚಾತುರ್ಯದಿಂದ ಅಪಾರ್ಥವನ್ನು ಕಲ್ಪಿಸಿಕೊಂಡು ನಾನು ಕಾಣದ ಹಾಗೆ ಮಾಡಿರುವ ವ್ಯತ್ಯಾಸ ಒಂದು." ಪುಟ್ಟಣ್ಣನವರ ಉದ್ದೇಶ "ಈ ನಾಟಕದಲ್ಲಿ ತೋರಿಸಿರುವ ಜಗದ್ವಿಲಕ್ಷಣವಾದ ಬುದ್ಧಿಯನ್ನೂ ಕೌಶಲ್ಯವನ್ನೂ ನಮ್ಮ ಕನ್ನಡಿಗರು ತಿಳಿದುಕೊಳ್ಳಲು ಸ್ವಲ್ಪಮಟ್ಟಿಗಾದರೂ ಅನುಕೂಲಪಡಿಸಿಕೊಡಬೇಕೆನ್ನುವು"ದಾದ್ದರಿಂದ ಅವರು ಅದರ ಕಾವ್ಯಗುಣಗಳನ್ನು ಹಿಡಿಯಲು ಪ್ರಯತ್ನಿಸದೆ ಗದ್ಯದಲ್ಲಿಯೇ ಕನ್ನಡಿಸಿದರು. ವಿದೂಷಕನ ಹಾಡುಗಳು ಮಾತ್ರ ಪದ್ಯರೂಪದಲ್ಲಿ ಬಂದವು. ಶ್ರೀಕಂಠೇಶಗೌಡರು ರಂಗಭೂಮಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಷೇಕ್ಸ್‌ಪಿಯರನ ನಾಟಕಗಳನ್ನು ಅನುವಾದಿಸಿದರೆ ಪುಟ್ಟಣ್ಣನವರ ಅನುವಾದ ಪ್ರೇಕ್ಷಕರಿಗಿಂತ ಓದುಗರನ್ನೇ ಉದ್ದೇಶಿಸಿದಂತಿದೆ. ಅದರ ಎದ್ದು ಕಾಣುವ ಗುಣಗಳೆಂದರೆ ಮೂಲದ ಬಗ್ಗೆ ನಿಷ್ಠೆ ಮತ್ತು ಭಾಷೆಯ ಆಧುನಿಕತೆ. ಆದರೆ ಷೇಕ್ಸ್‌ಪಿಯರನ ನಾಟಕಗಳ ಸ್ವರೂಪವೇ ಕಾವ್ಯನಾಟಕದ (poetic drama) ಸ್ವರೂಪವಾದ್ದರಿಂದ ಪುಟ್ಟಣ್ಣನವರಿಗೆ ಅವುಗಳ ಒಂದು ಆಯಾಮವನ್ನು ಮಾತ್ರ ಹಿಡಿದಿಡಲು ಸಾಧ್ಯವಾಯಿತು. ಆದರೆ

* ರಂಗಾವೃತ್ತಿ (?) (ರಂಗ+ಆವೃತ್ತಿ).—ಸಂ.

ಸರಿಯಾದ ದಾರಿಯಲ್ಲಿ ಮೊದಲ ಹೆಜ್ಜೆಯೆಂದು ಅವರ ಅನುವಾದಗಳಿಗೆ ಮಹತ್ತ್ವವಿದೆಯೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ.*

ಡಿ. ವಿ. ಗುಂಡಪ್ಪನವರ ಮನೋಧರ್ಮ ಶ್ರೀಕಂಠೇಶಗೌಡ ಪುಟ್ಟಣ್ಣರ ಮನೋಧರ್ಮಕ್ಕಿಂತ ಬೇರೆಯಾದದ್ದಾದ್ದರಿಂದ ಭಾಷಾಂತರದ ಬಗ್ಗೆ ಅವರು ಹೊಂದಿದ ಧೋರಣೆಯೂ ಭಿನ್ನವಾಗಿತ್ತು. 1936 ರಲ್ಲಿ ಪ್ರಕಟವಾದ ಮ್ಯಾಕ್‌ಬೆತ್‌ದ[3] ಪೀಠಿಕೆಯಲ್ಲಿ ಈ ಧೋರಣೆಯ ಸ್ಪಷ್ಟವಾದ ಉಲ್ಲೇಖವಿದೆ : "ಷೇಕ್ಸ್‌ಪಿಯರನ ಜಗತ್ತನ್ನು ಕೂಡಿದಮಟ್ಟಿಗೂ ಯಥಾವತ್ತಾಗಿ—ಇರುವುದು ಇರುವಂತೆಯೇ—ತೋರಿಸಬೇಕೆಂಬುದು ನನ್ನ ಸಂಕಲ್ಪ. ಬರಿಯ ಕಥೆಯನ್ನು ಹೇಳಬೇಕೆಂಬಷ್ಟು ಮಾತ್ರವೇ ಅಲ್ಲ. ಆತನು ಉಪಯೋಗಿಸಿರುವ ಹೆಸರುಗಳು, ಆತನು ನಿರ್ಮಿಸಿರುವ ವಾತಾವರಣ, ಆತನ ವರ್ಣನೆ, ವಾಕ್ಯಾಲಂಕಾರಗಳು, ಆತನ ಪೂರ್ವೋದಾಹರಣೆಗಳು—ಇವೆಲ್ಲವನ್ನೂ ಒಟ್ಟಿನ ಮೇಲೆ ಆತನ ಲೋಕದ ಪ್ರತಿಬಿಂಬವನ್ನೂ. ಸಾಧ್ಯವಿರುವ ಮಟ್ಟಿಗೂ ಇಲ್ಲಿ ಇಳಿಸಬೇಕೆಂಬುದು ನನ್ನ ಪ್ರಯತ್ನ." ವಿಶ್ವೋದಾರ ದೃಷ್ಟಿ ವಿಶ್ವಜೀವನದ ಸಂಪರ್ಕ ಆಧುನಿಕ ಜೀವನ ಸಂದರ್ಭಕ್ಕೆ, ನಾವೀನ್ಯದ ಪ್ರಾದುರ್ಭಾವಕ್ಕೆ ಅವಶ್ಯವಾದವುಗಳು ಎಂದು ಡಿ.ವಿ.ಜಿ. ನಂಬಿದ್ದರು. ಈ ಕಾರಣದಿಂದಾಗಿ, ಭಾಷಾಂತರದ ಅವರ ವಿಧಾನಗಳೂ ಬೇರೆಯಾದವು. ಶ್ರೀಕಂಠೇಶಗೌಡ ಮತ್ತು ಪುಟ್ಟಣ್ಣನವರಂತೆ ಸ್ಥಳ, ಕಾಲ ಆವರಣಗಳಲ್ಲಿ ಡಿ.ವಿ.ಜಿ. ಬದಲಾವಣೆಗಳನ್ನು ಮಾಡಲಿಲ್ಲ. ಯಾಕೆಂದರೆ, ಈ ವಿಧಾನ ಅವರ ಮೂಲೋದ್ದೇಶಕ್ಕೆ ವ್ಯತಿರಿಕ್ತವಾಗಿತ್ತು. ಮೂಲ ಕವಿಯ ಲೋಕವನ್ನು ಅದು ಇರುವಂತೆಯೇ ತೋರಿಸುವುದನ್ನೇ ಅವರು ಭಾಷಾಂತರದ ಗುರಿಯನ್ನಾಗಿಟ್ಟುಕೊಂಡಿದ್ದರು. ಈ ಕಾರ್ಯ ಅಷ್ಟೊಂದು ಸುಲಭಸಾಧ್ಯವಲ್ಲ ಎಂಬ ಅರಿವು ಅವರಿಗಿತ್ತು. ಅನುವಾದಕ ಮೂಲಕ್ಕೆ ಎಷ್ಟೇ ನಿಷ್ಠನಾಗಿದ್ದರೂ, ಅದರ 'ಶ್ರವಣ ಸೌಂದರ್ಯ' ಮತ್ತು 'ಭಾವ ವೈಭವ'ಗಳನ್ನು ಬೇರೊಂದು ಭಾಷೆಯಲ್ಲಿ ತರುವುದರಲ್ಲಿ ಆತ ಸಂಪೂರ್ಣವಾಗಿ ಯಶಸ್ವಿಯಾಗಲಾರ ; ಇನ್ನು ಸ್ವತಂತ್ರ ಅನುವಾದವನ್ನು ಅವಲಂಬಿಸಬೇಕೆಂದರೆ ಅದು ಮೂಲದ ಯಥಾವತ್ತನ್ನು ಕಾಯ್ದುಕೊಂಡು ಬರಲಾರದು—ಹೀಗಾಗಿ ಅನುವಾದಕನ ಸಮಸ್ಯೆಗೆ ಸಂಪೂರ್ಣವಾದ ಪರಿಹಾರವೆನ್ನುವುದು ಇಲ್ಲವೇ ಇಲ್ಲ ಎಂಬುದು ಡಿ.ವಿ.ಜಿ.ಯವರ ಅಭಿಪ್ರಾಯವಾಗಿತ್ತು. 'ಒಟ್ಟಿನ ಮೇಲೆ, ಕನ್ನಡಿಗರ ಕಿವಿಗೆ ಕಷ್ಟ ಕೊಡುವಷ್ಟು ದೂರ ಅವರನ್ನು ಬಿಟ್ಟುಹೋಗದೆ, ಷೇಕ್ಸ್‌ಪಿಯರನ ಛಾಯೆಯೆನಿಸಿಕೊಳ್ಳಲು ಎಷ್ಟುಮಟ್ಟಿಗೆ ಸಾಧ್ಯವಾಗಬಹುದೋ ಅಷ್ಟು ಅವನಿಗೆ ಸಮೀಪವಾಗಿ ನಡೆಯಬೇಕೆಂಬುದು ಈ ಭಾಷಾಂತರದ ಆಶಯ'—ಇದು ಡಿ.ವಿ.ಜಿ. ಆರಿಸಿಕೊಂಡ ಸುವರ್ಣ ಮಾಧ್ಯಮದ ಹಾದಿ. ಈ ಹಾದಿಯನ್ನು ತುಳಿಯುವುದರಲ್ಲಿ ಶ್ರೀಕಂಠೇಶಗೌಡ ಪುಟ್ಟಣ್ಣನವರಿಗಿಂತ ಗ್ರೀಕ್ ನಾಟಕಗಳ ಭಾಷಾಂತರ, ರೂಪಾಂತರಗಳನ್ನು ಕನ್ನಡಕ್ಕೆ ತಂದ ಬಿ. ಎಂ.

* ಷೇಕ್ಸ್‌ಪಿಯರನ Cymbeline ನಾಟಕವನ್ನು ಕೂಡ 'ಜಯಸಿಂಹರಾಜನ ಚರಿತ್ರೆ' ಎಂಬ ಹೆಸರಿನಲ್ಲಿ ರೂಪಾಂತರಿಸಿದ್ದಾರೆ.—ಸಂ

ಶ್ರೀಕಂಠಯ್ಯನವರು ಹೆಚ್ಚು ಪ್ರಯೋಜಕರಾದ ಮಾರ್ಗದರ್ಶಿಯೆನಿಸಿದರು. ಬಹುಶಃ ಈ ಕಾರಣದಿಂದಾಗಿಯೇ ಅವರು ಹಳೆಗನ್ನಡವನ್ನೂ, ಸರಳರಗಳೆಯ ಛಂದಸ್ಸನ್ನೂ ಆಯ್ದುಕೊಂಡಿರಬೇಕು. ಆದರೆ, ಡಿ.ವಿ.ಜಿ. ಹಳೆಗನ್ನಡಕ್ಕೂ ಕಟ್ಟುನಿಟ್ಟಾಗಿ ಅಂಟಿ ಕೊಳ್ಳುವುದಿಲ್ಲ. ತಾವು ಉಪಯೋಗಿಸಿದ ಭಾಷೆ ಬೆರಕೆಯ ಕನ್ನಡ ಎಂದು ಅವರೇ ಒಪ್ಪಿಕೊಂಡಿದ್ದಾರೆ. ತಮ್ಮ ಉದ್ದೇಶವನ್ನು ಸಾಧಿಸುವಲ್ಲಿ ಅವರು ಶೈಲಿ ವ್ಯಾಕರಣಗಳ ನಿಯಮಗಳನ್ನು ಮುರಿಯಲೂ ಹಿಂಜರಿಯಲಿಲ್ಲ. ಅಭಿರುಚಿ, ಔಚಿತ್ಯ, ಓದುಗರ ಸೌಲಭ್ಯಗಳು ಇವೇ ಅವರಿಗೆ ಮುಖ್ಯವಾಗಿದ್ದವು. ಮೂಲದ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವ ಡಿ.ವಿ.ಜಿ.ಯವರ ನಿರ್ಣಯ ಜಾಣತನದ್ದಾಗಿತ್ತು ಎನ್ನುವುದಕ್ಕೆ ಅವರ ನಂತರ ಬಂದ ಅನುವಾದಕರು ಈ ವಿಷಯದಲ್ಲಿ ಅವರನ್ನು ಅನುಕರಿಸಿದುದು ಪುರಾವೆಯಾಗಿದೆ. ಆದರೆ ಡಿ.ವಿ.ಜಿ. ಭಾಷೆಯ ಸಮಸ್ಯೆಯನ್ನು ಬಗೆಹರಿಸಲು ಶಕ್ತರಾಗಲಿಲ್ಲ. ಬಹುಶಃ ಪುಟ್ಟಣ್ಣನವರ ಮಾರ್ಗದರ್ಶನವನ್ನು ಒಪ್ಪಿಕೊಂಡಿದ್ದರೆ ಸಮಕಾಲೀನ ಭಾಷೆಯ ಮಾಧ್ಯಮವನ್ನು ಅವರು ಆಯ್ದುಕೊಳ್ಳಬಹುದಾಗಿತ್ತು. ಭಾಷೆಯ ಸಂಬಂಧದಲ್ಲಿ ಡಿ.ವಿ.ಜಿ.ಯವರ ಅನಿಶ್ಚಿತತೆ ಅವರ ಸಾಹಿತ್ಯದುದ್ದಕ್ಕೂ ಕಂಡುಬರುವ ಒಂದು ಕೊರತೆ.

ಡಿ.ವಿ.ಜಿ.ಯವರ ನಂತರ ಬಂದ ಷೇಕ್ಸ್‌ಪಿಯರ್ ನಾಟಕಗಳ ಅನುವಾದಗಳಲ್ಲಿ ಶ್ರೀನಿವಾಸರ 'ಲಿಯರ್ ಮಹಾರಾಜ'[4] ಮತ್ತು 'ಹ್ಯಾಮ್ಲೆಟ್'[5] ಮಹತ್ತ್ವದ ಪ್ರಯೋಗಗಳು. "...ನಮ್ಮ ಜನಕ್ಕೆ ಷೇಕ್ಸ್‌ಪಿಯರ್ ಕವಿಯ ಮಹಾಮನಸ್ಸಿನ ಪರಿಚಯ ಎಷ್ಟುಮಟ್ಟಿಗಾದರೂ ಆಗಲಿ ಎಂಬ ಹಂಬಲ" ಈ ಅನುವಾದಗಳ ಹಿಂದಿನ ಪ್ರೇರಕ ಶಕ್ತಿಯಾದರೂ ಮೂಲದ ಕಾವ್ಯಗುಣಗಳನ್ನು ಕಾಯ್ದುಕೊಳ್ಳುವಲ್ಲಿ ಶ್ರೀನಿವಾಸರು ವಿಶೇಷವಾಗಿ ಶ್ರಮಿಸಿದ್ದಾರೆ. ಅನುವಾದದಲ್ಲಿ ಆದ್ಯತೆ ಯಾವುದಕ್ಕೆ ಎನ್ನುವ ವಿಷಯದಲ್ಲಿ ಅವರ ಅಭಿಪ್ರಾಯ ಹೀಗಿದೆ: "...ಹಲವು ವೇಳೆ ಅರ್ಥಕ್ಕಿಂತ ಮುಖ್ಯವಾಗಿ ಭಾವವನ್ನು, ಕೆಲವು ವೇಳೆ ಭಾವಕ್ಕಿಂತ ಮುಖ್ಯವಾಗಿ ಮನೋಧರ್ಮ ವನ್ನು ಪ್ರತಿಮಾಡುವುದು ಕರ್ತವ್ಯವಾಗುತ್ತದೆ." ಶ್ರೀನಿವಾಸರ ಅನುವಾದಗಳಲ್ಲಿ ಆಡುಮಾತಿನ ಜೀವಂತಿಕೆಯೊಂದಿಗೆ ಸರಳ ರಗಳೆಯ ಲಯಗಾರಿಕೆಯೂ ಕೂಡಿರು ವುದರಿಂದ ಭಾಷೆ ಮತ್ತು ಛಂದಸ್ಸುಗಳೆರಡರಲ್ಲೂ ಗಣನೀಯವಾದ ಪ್ರಗತಿಯನ್ನು ಸಾಧಿಸಲು ಅವರು ಶಕ್ತರಾದರು. ಐದು ಮಾತ್ರೆಯ ನಾಲ್ಕು ಖಂಡಗಳುಳ್ಳ ಸಾಲನ್ನು ಗಂಭೀರ ಶೈಲಿಗಾಗಿ ಮತ್ತು ಮೂರು ಮಾತ್ರೆಗಳ ನಾಲ್ಕು ಖಂಡಗಳುಳ್ಳ ಸಾಲನ್ನು ಪದ್ಯಗಳಿಗಾಗಿ ಉಪಯೋಗಿಸಿಕೊಳ್ಳುವ ಅವರ ಛಂದೋವಿಧಾನ ಸಾಕಷ್ಟು ಯಶಸ್ವಿಯಾಗಿದೆ ಎಂದೇ ಹೇಳಬೇಕು. ಆದರೆ ಷೇಕ್ಸ್‌ಪಿಯರ್ ನಾಟಕಗಳ ರಸ ಸ್ಥಾನಗಳ ಉತ್ಕಟತೆಯನ್ನು ಹಿಡಿಯಲು ಅವರಿಂದಲೂ ಸಾಧ್ಯವಾಗಿಲ್ಲ. ಉದಾಹರಣೆಗೆ King Lear ದ ಪ್ರಸಿದ್ಧ ಕಾವ್ಯಭಾಗಗಳಲ್ಲೊಂದಾದ—

No, no, no life !
Why should a dog, a horse, a rat have life,
And thou no breath at all ? Thou'lt come no moer
Never, never, never, never !

Act V·sc 3

ಈ ಸಾಲುಗಳ ಅನುವಾದವನ್ನು ನೋಡಬಹುದು :

ಇಲ್ಲ, ಇಲ್ಲ; ಉಸಿರಿನಿಸಿಲ್ಲ.
ಒಂದು ನಾಯಿಗೆ, ಒಂದು ಕುದುರೆಗೆ, ಹೆಗ್ಗಣಕೆ
ಉಸಿರು ಇರಬಹುದಂತೆ; ನಿನಗೆ ಇರಲಾರದೇ ?
ನೀ ಇನ್ನು ಬಹುದಿಲ್ಲ; ಇಲ್ಲ, ಇಲ್ಲ, ಇಲ್ಲ.
ಇನ್ನಿಲ್ಲ, ಇನ್ನಿಲ್ಲ, ಇನ್ನಿಲ್ಲ, ಇನ್ನಿಲ್ಲ.

ಇತ್ತೀಚಿನ ವರ್ಷಗಳಲ್ಲಿ ಎ. ಎನ್. ಮೂರ್ತಿರಾಯರು The Tempest ನಾಟಕವನ್ನೂ ರಾಮಚಂದ್ರದೇವ ಅವರು Hamlet[6] ಮತ್ತು Macbeth[7] ನಾಟಕಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಮೂರ್ತಿರಾಯರ **ಚಂಡಮಾರುತ**[8] ಸರಳ ರಗಳೆಯ ಛಂದಸ್ಸನ್ನು ಉಪಯೋಗಿಸುವಲ್ಲಿ ಶ್ರೀನಿವಾಸರು ಹಿಡಿದ ಹಾದಿಯನ್ನೇ ಹಿಡಿದಿರುವರಾದರೂ ಭಾಷೆಯ ವಿಷಯದಲ್ಲಿ ಅವರು ಬಿ.ಎಂ.ಶ್ರೀ ಮತ್ತು ಡಿ.ವಿ.ಜಿ.ಯವರಿಗೆ ಸಮೀಪದವರಾಗಿದ್ದಾರೆ. ಕಾವ್ಯಭಾಗಗಳ ಭಾಷಾಂತರದಲ್ಲಿ ಶ್ರೀಯವರ ಪ್ರಭಾವ ನಿಚ್ಚಳವಾಗಿ ಕಾಣುತ್ತದೆ. ರಾಮಚಂದ್ರದೇವ ಅವರಿಗೆ ಅನುವಾದ ಮೂಲದ ಪ್ರತಿಕೃತಿಯಾಗಬಲ್ಲುದೇ ಎನ್ನುವ ವಿಷಯದಲ್ಲಿ ಸಂದೇಹವಿದೆ. ತಮ್ಮ ಅನುವಾದಗಳು "ಒಂದು ಅರ್ಥದಲ್ಲಿ ವಿಮರ್ಶೆ ಅಥವಾ ನಾಟಕದ ವಿವರಣೆ ಮಾತ್ರ" ಎಂದು ಅವರು ಹೇಳುತ್ತಾರೆ. "ಅನುವಾದವನ್ನು ಮೂಲದೊಂದಿಗೆ ಶಬ್ದಶಃ ಹೋಲಿಸುವುದು ಷೇಕ್ಸ್‌ಪಿಯರಿಗೆ ಅನ್ಯಾಯ ಮಾಡಿದ ಹಾಗಾಗಬಹುದು" ಎಂಬ ಅವರ ಅಭಿಪ್ರಾಯ ಒಂದು ಅರ್ಥದಲ್ಲಿ ನಿಜವಾದರೂ ಮೂಲದ ಕಾವ್ಯ ಗುಣಗಳನ್ನು ಕನ್ನಡಕ್ಕೆ ತರುವಲ್ಲಿ ಅವರು ಉದಾಸೀನತೆಯನ್ನೇನೂ ತೋರಿಸಿಲ್ಲ. ಮುಕ್ತಛಂದಸ್ಸಿನ ಪ್ರಯೋಗ ದೇವರ ಅನುವಾದಗಳ ವೈಶಿಷ್ಟ್ಯ. ಇದರಿಂದಾಗಿ ಹೆಚ್ಚಿನ ಲಯಗಾರಿಕೆ ಅವರಿಗೆ ಸಾಧ್ಯವಾಗಿದೆ. ಭಾಷೆಯ ವಿಷಯದಲ್ಲೂ ಅವರು ತಮ್ಮ ಸ್ವಂತಿಕೆಯನ್ನು ತೋರಿದ್ದಾರೆ. ದೇವ ಅವರು ಉಪಯೋಗಿಸುವ ಭಾಷೆ ಆಡುಮಾತಿಗೆ ತೀರ ಹತ್ತಿರದ್ದು.

ಷೇಕ್ಸ್‌ಪಿಯರನ ನಾಟಕಗಳ ಈ ಎಲ್ಲ ಅನುವಾದಗಳ ಹಿನ್ನೆಲೆಯಲ್ಲಿ ಕೆಲವೊಂದು ಸಾಮಾನ್ಯ ನಿರ್ಣಯಗಳಿಗೆ ಬರಬಹುದಾಗಿ ತೋರುತ್ತದೆ :

1. ಭಾಷಾಂತರಗಳಲ್ಲಿ ಕೊನೆಯದು ಅಥವಾ ಪರಿಪೂರ್ಣ ಎನ್ನುವುದು ಇಲ್ಲವೇ ಇಲ್ಲ. ಅನುವಾದಕನ ಉದ್ದೇಶ ಭಾಷೆಯಲ್ಲಿ ಸತತವಾಗಿ ನಡೆಯುವ ಬದಲಾವಣೆ, ಅನುವಾದಕನ ಪ್ರಯೋಗಶೀಲತೆ—ಇಂಥ ಅನೇಕ ಕಾರಣಗಳಿಂದಾಗಿ ಹೊಸ ಭಾಷಾಂತರಗಳು ಹುಟ್ಟಿಕೊಳ್ಳುತ್ತವೆ. ಈ ಎಲ್ಲ ಭಾಷಾಂತರಗಳಿಗೂ ತಮ್ಮವೇ ಆದ ವೈಶಿಷ್ಟ್ಯಗಳಿರುವಂತೆ ಮಿತಿಗಳೂ ಇರುತ್ತವೆ.

2. ಭಾಷಾಂತರದ ಕಾರ್ಯಕ್ಕೆ ಕೈಹಾಕುವವ ಮೂಲದೊಡನೆ ತಾನು ಬಯಸುವ ಸಂಬಂಧದ ಬಗ್ಗೆ ನಿಶ್ಚಿತವಾದ ಧೋರಣೆಯನ್ನು ತಳೆಯಬೇಕಾಗುತ್ತದೆ.

ಎಂದರೆ, ತನ್ನ ಉದ್ದೇಶ ಮೂಲವನ್ನು ಪ್ರತಿಕೃತಿಸುವುದಾಗಿದೆಯೇ ಅಥವಾ ಪ್ರತಿಸೃಷ್ಟಿಸುವುದಾಗಿದೆಯೇ ಎನ್ನುವುದರ ತಿಳುವಳಿಕೆ ಅವನಿಗೆ ಅವಶ್ಯ. ಉದಾಹರಣೆಗೆ, ಪುಟ್ಟಣ್ಣ, ಡಿ.ವಿ.ಜಿ., ದೇವ ಮೊದಲಾದವರು ಮೂಲವನ್ನು ಯಥಾಶಕ್ತಿ ನಿಷ್ಠೆಯಿಂದ ಅನುಸರಿಸಿದವರಾದರೆ ಕನ್ನಡದಲ್ಲಿ ಕುವೆಂಪು ಅಥವಾ ಮರಾಠಿಯಲ್ಲಿ ವಿ. ವಾ. ಬಿರವಾಡಕರ ಮೂಲದಿಂದ ಸ್ಫೂರ್ತಿ ಪಡೆದು ಸ್ವತಂತ್ರ ಸೃಷ್ಟಿಗೆ ಕೈಹಾಕಿದವರು. ಈ ಎರಡೂ ಪ್ರಕಾರಗಳನ್ನು ಅಳೆಯುವ ಮಾನದಂಡಗಳು ಬೇರೆಬೇರೆಯಾಗಿರುತ್ತವೆ.

3. ತತ್ವತಃ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕೃತಿಯೊಂದನ್ನು (ಇದು ಸೃಜನಶೀಲ ಕೃತಿಯಾದರೂ) ಮೂಲದ ಸತ್ತ್ವವನ್ನುಳಿಸಿಕೊಂಡು ತರುವುದು ಅಸಾಧ್ಯವಾದ ಕಾರ್ಯವಲ್ಲ. ಆದರೆ, ಅನುವಾದಕ ಇದಕ್ಕೆ ಅನುಗುಣವಾದ ಶಕ್ತಿಗಳಲ್ಲದೆ ಸಮರ್ಥ ವಿಧಾನಗಳನ್ನು ಅರಿತು ಉಪಯೋಗಿಸಬಲ್ಲವನಾಗಿರಬೇಕು. ಕಾವ್ಯವನ್ನು ಅನುವಾದಿಸುವವನಲ್ಲಿ ಕಾವ್ಯಶಕ್ತಿ ಅವಶ್ಯವಾಗಿ ಇರಬೇಕಾಗಿರುತ್ತದೆ. ಇಂಥ ಯಶಸ್ಸು ಷೇಕ್ಸ್‌ಪಿಯರನ ಅನುವಾದಗಳ ವಿಷಯದಲ್ಲಿಯೂ ಶಕ್ಯವೆನ್ನುವುದಕ್ಕೆ ಬೇಂದ್ರೆಯವರ ಭಾಷಾಂತರದ ಒಂದು ಮಾದರಿಯನ್ನು ಕೊಡಬಹುದು. (ಬೇಂದ್ರೆಯವರು ಕಾಳಿದಾಸನನ್ನು ಅನುವಾದಿಸಿದ ಪ್ರಮಾಣದಲ್ಲಿ ಷೇಕ್ಸ್‌ಪಿಯರನನ್ನು ಅನುವಾದಿಸಿಲ್ಲ ಎನ್ನುವುದನ್ನು ಲಕ್ಷಿಸಿಯೂ) :

ಮೂಲ: 'As you like it', Act II, sc 2, ll 138-166.

All the world's a stage
And all the men and women merely players.
They have their exits and their entrances,
And one man in his time plays many parts.
(These acts being seven ages......)
....
Last scene of all,
That ends this strange eventful history,
Is second childishness and mere oblivion,
Sans teeth, sans eyes, sans taste, sans everything.

ಭಾಷಾಂತರ : ನೆಲವೆಲ್ಲ ಆಟದ ಅಟ್ಟ
ಮತ್ತೆ ಎಲ್ಲಾ ಗಂಡು ಹೆಣ್ಣು ಬರಿ ಆಟ ನಟಿಸುವರು.
ಅಟ್ಟವನು ಏರುವುದು, ಬಿಟ್ಟು ಹೊರಡುವುದು
ಅವರವರಿಗುಂಟು. ಒಬ್ಬನೇ ಆಡುವನು ಹಲವು ಪಾತ್ರ.
ಏಳಂಕ, ಏಳು ಮೆಟ್ಟು..................
....
ಎಲ್ಲಕ್ಕೂ ಕೊನೆ ಮೆಟ್ಟು
ಚಿತ್ರ ಘಟನಾವಳಿಯ ಕಥೆಯ ಕೊನೆಗೊನೆ, ಮತ್ತೆ
ಮರಳಿತ್ತು ಕೂಸುತನ—, ಸರುವವೂ ಅರೆ ಮರೆವು;
ಹಲ್ಲಿಲ್ಲ, ಕಣ್ಣಿಲ್ಲ, ರುಚಿ ಇಲ್ಲ, ಎಲ್ಲ ಬರಿ ಇಲ್ಲಾ.

ಮೂಲದ ಲಯವನ್ನು ಬಿಟ್ಟುಕೊಡದೆ, ಅರ್ಥವಿಸ್ತಾರಕ್ಕೆ ಮೊರೆಹೋಗದೆ, ಜೀವಂತ ಭಾಷೆಯಲ್ಲಿನ ಈ ಪ್ರತಿಕೃತಿ ಷೇಕ್ಸ್‌ಪಿಯರನ ಅನುವಾದಕರಿಗೆ ಮಾದರಿಯಾಗಬಲ್ಲದು.

ಕಾವ್ಯನಾಟಕದಲ್ಲಿಯೂ ಕೂಡ ಪದ್ಯ ಯಾವಾಗಲೂ ಕಾವ್ಯದ ಮಟ್ಟದ್ದಿರುವುದಿಲ್ಲ; ಆದರೆ ಆ ಮಟ್ಟಕ್ಕೇರುವ ಶಕ್ತಿಯನ್ನು ಹೊಂದಿರುತ್ತದೆ. ಒಂದು ಅನುವಾದದ ಯಶಸ್ಸು ಅದು ರಸಸ್ಥಾನಗಳನ್ನು ಎಷ್ಟು ಸಮರ್ಥವಾಗಿ ಪ್ರತಿಕೃತಿಸುತ್ತದೆ ಎನ್ನುವುದರ ಮೇಲೆಯೂ ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದಲೂ ಡಿ.ವಿ.ಜಿ. ಯವರ ಅನುವಾದವನ್ನು ನೋಡಬೇಕು.

2

ಷೇಕ್ಸ್‌ಪಿಯರನ ನಾಟಕಗಳಲ್ಲಿ ಅತಿ ಹೆಚ್ಚು ಸಲ ಅನುವಾದಿತವಾದ ಕೃತಿಗಳೆಂದರೆ Merchant of Venice ಮತ್ತು Hamlet. Macbeth ಈ ಕೃತಿಗಳಷ್ಟು ಜನಪ್ರಿಯತೆಯನ್ನು ಗಳಿಸಿಲ್ಲವಾದರೂ ಅದರ ನಾಲ್ಕು ಅನುವಾದಗಳು ಬಂದಿವೆ. ಮೊಟ್ಟಮೊದಲ ಸಲ Mecbethನ್ನು ಕನ್ನಡಿಸಿದ ಕೀರ್ತಿ ಧಾರವಾಡ ಚೆನ್ನಬಸಪ್ಪನವರದು. 1870 ರ ಸುಮಾರಿಗೆ ಪ್ರಕಟವಾಗಿರಬಹುದಾದ ಕೃತಿ ಸದ್ಯಕ್ಕೆ ಲಭ್ಯವಿಲ್ಲ. 1895 ರಲ್ಲಿ ಎಂ. ಎಲ್. ಶ್ರೀಕಂಠೇಶಗೌಡರು 'ಪ್ರತಾಪರುದ್ರದೇವ' ಎಂಬ ಹೆಸರಿನಲ್ಲಿ ತಮ್ಮ ಅನುವಾದವನ್ನು ಪ್ರಕಟಿಸಿದರು. ಇದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟನೆ **ಶ್ರೀಕಂಠೇಶಗೌಡರ ಕೃತಿಗಳು** ಎಂಬ ಹೊತ್ತಿಗೆಯಲ್ಲಿ ಪುನರ್ಮುದ್ರಿತವಾಗಿದೆ. ಈ ಎರಡೂ ಅನುವಾದಗಳನ್ನು ನೋಡಿರದ ಡಿ. ವಿ. ಗುಂಡಪ್ಪನವರ ಭಾಷಾಂತರ **ಕನ್ನಡ ಮ್ಯಾಕ್‌ಬೆತ್** 1936 ರಲ್ಲಿ ಹೊರಬಂದಿತು. ಮುಂದೆ ನಲ್ವತ್ತು ವರ್ಷಗಳ ನಂತರ, ಅಂದರೆ 1976 ರಲ್ಲಿ, ರಾಮಚಂದ್ರದೇವ ಅವರು Macbeth ನ್ನು ಹೊಸದಾಗಿ ಅನುವಾದಿಸಿದರು. ಇದೇ ಈ ನಾಟಕದ ತೀರ ಇತ್ತೀಚಿನ ಅನುವಾದ.

ಚೆನ್ನಬಸಪ್ಪನವರ ಅನುವಾದ ಲಭ್ಯವಿರದಿದ್ದರಿಂದ ಅದರ ಗುಣದೋಷಗಳ ಬಗ್ಗೆ ಏನನ್ನೂ ಹೇಳಲು ಸಾಧ್ಯವಿಲ್ಲ. ಶ್ರೀಕಂಠೇಶಗೌಡರ 'ಪ್ರತಾಪರುದ್ರದೇವ'ವನ್ನು ಮುಕ್ತ (free) ಅನುವಾದ ಅಥವಾ ರೂಪಾಂತರವೆಂದು ಕರೆಯಬಹುದು. ಮೂಲದ ನಾಟಕವನ್ನು ಯಥಾವತ್ತಾಗಿ ಕನ್ನಡದಲ್ಲಿ ತರಲು ಪ್ರಯತ್ನಿಸಿದವರಲ್ಲಿ ಡಿ.ವಿ.ಜಿ.ಯವರೇ ಮೊದಲಿಗರು. Macbethನ್ನು ಅವರು ಸಾಕಷ್ಟು ಶಾಸ್ತ್ರೀಯವಾಗಿ ಅಭ್ಯಸಿಸಿದ್ದರೆನ್ನುವುದಕ್ಕೆ ತಮ್ಮ ಅನುವಾದಕ್ಕೆ ಬರೆದ ದೀರ್ಘವಾದ 'ಪೀಠಿಕೆ', 'ವಿವರಣೆಗಳು' ಸಾಕ್ಷಿಯಾಗಿವೆ. ಟ್ರಾಜೆಡಿಯ ಸ್ವರೂಪ, ಮ್ಯಾಕ್‌ಬೆತ್‌ದ ಮುಖ್ಯ ವಸ್ತು, ಮ್ಯಾಕ್‌ಬೆತ್-ಪಾತ್ರದ ಸಾರ್ವತ್ರಿಕ ಸಾಂಕೇತಿಕತೆ, ನಾಟಕದ ಅಮಾನುಷ ಆಯಾಮ, ಷೇಕ್ಸ್‌ಪಿಯರನ ನಾಟ್ಯಪ್ರಕೃತಿ—ಇಂಥ ಮಹತ್ತ್ವದ ವಿಷಯಗಳ ಬಗ್ಗೆ ಮೌಲಿಕವಾದ ಮಾತುಗಳನ್ನು ಡಿ.ವಿ.ಜಿ. 'ಪೀಠಿಕೆ'ಯಲ್ಲಿ ಹೇಳಿದ್ದಾರೆ. ನಾಟಕವನ್ನು

ಅರ್ಥಮಾಡಿಕೊಳ್ಳಲು ಅವಶ್ಯವಾದ ಐತಿಹಾಸಿಕ ಹಿನ್ನೆಲೆ, ಕಥಾಸಂದರ್ಭ ಮತ್ತು ವಿಶಿಷ್ಟ ಪದಗಳ ವಿವರಣೆಯೂ ಇಲ್ಲಿದೆ.

ಈ ಶತಮಾನದ ಪ್ರಾರಂಭದಲ್ಲಿಯೇ A. C. Bradley ಗುರುತಿಸಿದಂತೆ ಷೇಕ್ಸ್‌ಪಿಯರನ ದುರಂತ ನಾಟಕಗಳಲ್ಲೆಲ್ಲ Macbeth ಉತ್ಕಟತೆಯಲ್ಲಿ, ಏಕಾಗ್ರತೆಯಲ್ಲಿ, ಪರಿಣಾಮದಲ್ಲಿ ಶ್ರೇಷ್ಠವಾದುದು. ಅನುವಾದಕರಿಗಂತೂ ಅದೊಂದು ಪ್ರಚಂಡವಾದ ಆಹ್ವಾನ. ಈ ನಾಟಕವನ್ನು ಯಥಾವತ್ತಾಗಿ ಕನ್ನಡಕ್ಕಿಳಿಸಬೇಕೆಂದು ಪಣತೊಟ್ಟ ಡಿ.ವಿ.ಜಿ.ಯವರಂಥವರ ಕೆಲಸ ಇನ್ನೂ ಕಠಿಣ. ಇಂಥ ಕೆಲಸಕ್ಕೆ ಕೈಹಾಕುವುದೇ ಒಂದು ಸಾಹಸ. ಇಲ್ಲಿ ಅವರು ದೊರಕಿಸಿದ ಯಶಸ್ಸು ಯಾವ ಪ್ರಮಾಣದಲ್ಲಿದ್ದರೂ ಅವನ್ನು ಮೆಚ್ಚಲೇಬೇಕು.

ಷೇಕ್ಸ್‌ಪಿಯರನ ನಾಟಕಗಳ ಸ್ವರೂಪ ಕಾವ್ಯನಾಟಕದ್ದು (Poetic drama). ಪದ್ಯ(Verse) ಮಾಧ್ಯಮವಾಗಿರುವುದಷ್ಟೇ ಅವುಗಳ ವೈಶಿಷ್ಟ್ಯವಲ್ಲ ; ಇಡಿಯ ರಚನೆಯೇ ಕಾವ್ಯಸ್ವರೂಪದ್ದಾಗಿರುತ್ತದೆ. ಇಂಥ ಅರಿವಿಲ್ಲದೆ ಯಾವ ಅನುವಾದವೂ ಯಶಸ್ವಿಯಾಗಲಾರದು. ಉದಾಹರಣೆಯಾಗಿ, Macbeth ದ ಮೊದಲ ದೃಶ್ಯದ ಕೊನೆಗೆ ಮೂವರೂ witches ಒಟ್ಟುಗೂಡಿ ಹೇಳುವ ಸಾಲುಗಳನ್ನುನೋಡಬಹುದು :

> Fair is foul and foul is fair
> Hover through the fog and filthy air
>
> (Act I, sc. 1 ll 11–12)

Spencerನ Faierie Queene ಕಾವ್ಯದ 'Then faire grew foule and foule grew faire in sight' ಎಂಬ ಸಾಲಿನಿಂದ ಸ್ಫೂರ್ತಿಗೊಂಡ 'fair is foul and foul is fair' ಎಂಬ ವಾಕ್ಯ ತನ್ನ ವಾಚ್ಯಾರ್ಥವನ್ನು ಮೀರಿ ನಾಟಕದ ಮುಖ್ಯ ವಸ್ತುವಿನ ಆಯಾಮಗಳಲ್ಲೊಂದಾದ 'ಮೌಲ್ಯ ವಿಪರ್ಯಾಸ'ವನ್ನು ಸೂಚಿಸಹೊರಡುತ್ತದೆ. ಮುಂದೆ ಇದೇ ಅಂಕದ ಮೂರನೆಯ ದೃಶ್ಯದಲ್ಲಿ ಮ್ಯಾಕ್‌ಬೆತ್‌ನನ್ನು ನಾವು ಮೊದಲ ಸಲ ಕಂಡಾಗ ಅವನಾಡುವ ಮಾತು, 'So fair and foul a day I have not seen' ಅವನಿಗೂ witches ಗೂ ಸಂಬಂಧವನ್ನು ನಿರಾಯಾಸವಾಗಿ ಸ್ಥಾಪಿಸಿಬಿಡುತ್ತದೆ. ನಾಟಕದ ವಸ್ತುವಿನ ಇನ್ನೊಂದು ಆಯಾಮವಾದ ಹೊರಳುಮಾತಿ [equivocation]ನ ಧ್ವನಿಯೂ ಈ ವಾಕ್ಯದಲ್ಲಿದೆ. ಆದರೆ ಇದು ನಾಟಕದಲ್ಲಿ ಎಷ್ಟು ಸಹಜವಾಗಿ ಬಂದಿದೆಯೆನ್ನುವುದನ್ನು ನೋಡಬೇಕು. ಸಂದಿಗ್ಧತೆಯನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳುವ witchesಗೆ ಈ ಭಾಷೆ ಸ್ವಭಾವಜನ್ಯವಾದುದು.

ಇನ್ನು ಈ ನಾಟಕವನ್ನು ಅನುವಾದಿಸಿದವರು ಈ ಸಾಲುಗಳ ಅರ್ಥವನ್ನು ಹೇಗೆ ಗ್ರಹಿಸಿದ್ದಾರೆ ಎನ್ನುವುದನ್ನು ನೋಡಬಹುದು. ಶ್ರೀಕಂಠೇಶಗೌಡರು ಅವು

ಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿದ್ದಾರೆ. 'So fair and foul a day I have not seen' ಎಂಬುದನ್ನು "ಇಷ್ಟು ಉತ್ಕೃಷ್ಟವಾದ ದುರ್ದಿನವ ನಾನೆಂದೂ ಕಂಡಿದ್ದಿಲ್ಲ" ಎಂದು ತಪ್ಪಾಗಿ ಅನುವಾದಿಸಲಾಗಿದೆ. ಡಿ.ವಿ.ಜಿ.ಯವರ ಭಾಷಾಂತರದಲ್ಲಿ ಈ ಸಾಲುಗಳು ಕಾಣಿಸಿಕೊಳ್ಳುವುದು ಹೀಗೆ :

ಸೊಗಸೇ ಹೊಲಸು. ಹೊಲಸೇ ಸೊಗಸು:
ಸುಳಿವಂ ಮಂಜೊಳು ಕೊಳೆಗಾಳಿಯೊಳು.

ಮ್ಯಾಕ್‌ಬೆತ್‌ನ 'So fair and foul a day I have not seen' ಎಂಬ ಸಾಲು 'ಇನಿತು ಹೊಲಸುಂ ಸೊಗಸುಮಿಹ ದಿನವ ನಾನರಿಯೆನ್' ಎಂದು ಅನುವಾದಿತವಾಗಿದೆ. 'ಹೊಲಸು', 'ಸೊಗಸು'ಗಳ ವಿರೋಧ 'fair' ಮತ್ತು 'foul' ಗಳಷ್ಟು ತೀಕ್ಷ್ಣವಲ್ಲವಾದರೂ ಈ ಶಬ್ದಗಳನ್ನು ಎರಡೂ ಸಂದರ್ಭಗಳಲ್ಲಿಯೂ ಹಾಗೆಯೆ ಉಳಿಸಿಕೊಂಡಿರುವುದು ಡಿ.ವಿ.ಜಿ. ಅವುಗಳ ಮಹತ್ತ್ವವನ್ನು ಅರಿತಿದ್ದರೆಂಬುದನ್ನು ಸೂಚಿಸುತ್ತದೆ. ಆದರೆ 'fair' ಮತ್ತು 'foul' ಗಳ ಧ್ವನಿಪೂರ್ಣತೆ ಡಿ.ವಿ.ಜಿ. ಉಪಯೋಗಿಸುವ ಪದಗಳಿಗಿಲ್ಲ. ಇದನ್ನು ಸಾಧಿಸುವ ಪ್ರಯತ್ನದಲ್ಲಿ Macbethದ ಇನ್ನೊಬ್ಬ ಅನುವಾದಕ ರಾಮಚಂದ್ರದೇವ ಅರ್ಥ ವಿಸ್ತರಣೆ(Paraphrase)ಗಿಳಿದುಬಿಡುತ್ತಾರೆ. ಅವರ ಅನುವಾದ ಹೀಗಿದೆ :

ಪಾಪs ಪುಣ್ಯ ಪುಣ್ಯs ಪಾಪ
ಒಳಿತುs ಕೆಡುಕು ಕೆಡುಕುs ಒಳಿತು
ಕೊಳಕುs ಚೆಂದ ಚೆಂದs ಕೊಳಕು
ತಪ್ಪುs ಶಿಕ್ಷೆ ಶಿಕ್ಷೆs ತಪ್ಪು
ಪಾಪs ಪುಣ್ಯ ಪುಣ್ಯs ಪಾಪ
ಹಳತುs ಗಾಳಿ ಹೊಲಸುs ಹವೆಯು
ಪಾಪವೆ ಪುಣ್ಯ ಪುಣ್ಯವೆ ಪಾಪ.

ಭಾಷಾಂತರದಲ್ಲಿ ಅರ್ಥಲೋಪಕ್ಕಿಂತ ಅರ್ಥವಿಸ್ತರಣೆ ಒಳ್ಳೆಯದಾದರೂ ಸಮರ್ಥ ಭಾಷಾಂತರಕಾರ ನಡುವಿನ ಹಾದಿಯನ್ನು ಹುಡುಕಲೇಬೇಕು. ಡಿ.ವಿ.ಜಿ.ಯವರ ಭಾಷಾಂತರ ಈ ದೃಷ್ಟಿಯಿಂದ ಯೋಗ್ಯವಾಗಿದೆಯೆಂದೇ ಹೇಳಬೇಕು.

Macbeth ನಾಟಕದ ಆಕರ್ಷಣೆ ಸಾರ್ವತ್ರಿಕವೆನ್ನುವುದು ನಿಜವಾದರೂ ಅದರ ಕ್ರಿಶ್ಚಿಯನ್ ಆಶಯಗಳು ಎದ್ದುಕಾಣುವಂಥವು. ಅನುವಾದಕನು ಈ ಅಂಶವನ್ನು ಗಮನಿಸದೇ ಹೋದರೆ ಅವನ ಅನುವಾದ ಬಡವಾಗುತ್ತದೆ. ಉದಾಹರಣೆಗಾಗಿ ಮೊದಲನೆಯ ಅಂಕದ ಐದನೆಯ ದೃಶ್ಯದಲ್ಲಿ ಲೇಡೀ ಮ್ಯಾಕ್‌ಬೆತ್ ತನ್ನ ಪತಿಯ ಮಹತ್ವಾಕಾಂಕ್ಷೆಯ ಸಾಧನೆಗಾಗಿ ತನ್ನಲ್ಲಿ ಆಸುರೀ ಶಕ್ತಿಗಳ ಆವಾಹನೆ ಮಾಡುವ ಸಂದರ್ಭವನ್ನು ಲಕ್ಷಿಸಬಹುದು. ಇದು ನಾಟಕದ ರಸಸ್ಥಾನಗಳಲ್ಲೊಂದು. ಮೂಲದ ಸಾಲುಗಳು ಹೀಗಿವೆ :

Come, you spirits
That tend on mortal thoughts, unsex me here.
And fill me from the crown to the toe, top-full
Of direst cru lty ! Make this my blood,
Stop up th'access and passage to remorse,
That no compunctious visits of nature
Shake my fell purpose, nor keep peace between
Th'effect and it ! Come to my woman's breasts
And take my milk for gall......

Act I, sc 5, ll 40–48

ಈ ವಾಕ್ಯಸಮೂಹದ ತೀರ ದುರ್ಬಲ ಅನುವಾದ ಶ್ರೀಕಂಠೇಶಗೌಡರದು—ಅದರಲ್ಲಿ ಮೂಲವನ್ನು ಗುರುತಿಸುವುದೇ ಕಠಿಣವಾಗುತ್ತದೆ. ನೋಡಿರಿ :

ಪಾಡಿ ಬೇಡಿ ಕಯ್ಯ ನೀಡಿ ಬೇಡಿಕೊಂಬೆ ಧರ್ಮರಾಜ।
ನೋಡು ಶಮನ ನನ್ನನೀಗ ನೀಡಿ ದಯೆಯ ನಾಶಕತನ।
ಜಡಿದು ಕರುಣವನ್ನು ಯಮನೆ ತಡೆದು ಮರುಕವನ್ನು ಶಮನ ।
ಕೇಡ ನಾನು ಮಾಡುವಂತೆ ಮಾಡು ನನಗೆ ಮನವ ಯಮನೆ।

ಮೂಲದ ಲಯ–ಧಾಟಿಗಳಾಗಲಿ, ಅರ್ಥ ಸಮೃದ್ಧಿಯಾಗಲಿ ಇಲ್ಲಿ ಕಂಡುಬರುವುದಿಲ್ಲ. ಡಿ.ವಿ.ಜಿ.ಯವರ ಭಾಷಾಂತರದಲ್ಲಿ ದೋಷಗಳಿದ್ದರೂ ಅದು ಇದಕ್ಕಿಂತ ಎಷ್ಟೋ ಮಟ್ಟಿಗೆ ತೃಪ್ತಿಕರವಾಗಿದೆ :

ಬನ್ನಿರಿ, ಭೂತಗಳಿರ ! ನೀಂ
ಮರ್ತ್ಯಸಂಕಲ್ಪಗಳಿಗನುವಾಗುವವರು, ಬನ್ನಿಮ್;
ಎನ್ನ ಪೆಣ್ತನವ ನೀಮೀಗ ನೀಗಿರಿ; ಎನ್ನ
ಕಾಲ್ಬೆರಲಿನಿಂ ತಲೆಯವರೆಗಮ್ ಅತಿ ಭೀಕರ
ಕ್ರೌರ್ಯವನ್ ತುಂಬಿರಿಸಿರಿ; ಎನ್ನ ರಕ್ತವ ಗಟ್ಟಿ-
ಯಾಗಿಸಿರಿ; ಮರುಕವೇರುವ ದಾರಿದೋರಗಳ
ತಡೆಯಿರ್, ಸ್ವಭಾವದಿಂ ಬರ್ಪ ಪಶ್ಚಾತ್ತಾಪ
ಭರಮೆನ್ನ ಘೋರ ನಿಶ್ಚಿತವ ಕದಲಿಸದಿರಲಿ;
ಅದಕಮ್ ಅದರ ಅರ್ಥವ್ಯಾಪ್ತಿಗಂ ನಡುವೆ ಶಾಂತಿಯಂ
ನೆಲೆಗೊಳಿಸದಿರಲಿ.........................
ಬಂದೆನ್ನ ಪೆಣ್ಮೊಲೆಯ ಪಾಲ ವಿಷವಾಗಿಸಿರಿ.

ಡಿ.ವಿ.ಜಿ.ಯವರು ಮೂಲದ ವಾಚ್ಯಾರ್ಥವನ್ನು ಗ್ರಹಿಸುವ ರೀತಿ ಒಟ್ಟಿನಲ್ಲಿ ತೃಪ್ತಿಕರವಾಗಿದ್ದರೂ ಅದರಲ್ಲಿ ಕೆಲ ದೋಷಗಳು ಸೇರಿಕೊಂಡಿವೆ. 'Spirits' ಎಂಬ ಶಬ್ದವನ್ನು 'ಭೂತಗಳಿರ' ಎಂದು ಅನುವಾದಿಸುವುದು ಸರಿಯಲ್ಲ. ರಾಮಚಂದ್ರ ದೇವರ 'ಶಕ್ತಿಗಳೇ' ಹೆಚ್ಚು ಸ್ವೀಕಾರಾರ್ಹವಾಗಿದೆ. ಯಾಕೆಂದರೆ, ಇವು Furies ದಂಥ ಆಸುರೀ ಶಕ್ತಿಗಳು. ಹಾಗೆಯೆ, 'Mortal Thoughts' ನ್ನು 'ಮರ್ತ್ಯಸಂಕಲ್ಪ' ಗಳೆಂದು ಕನ್ನಡಿಸುವುದು ಯೋಗ್ಯವಾಗಲಾರದು. 'ಕ್ರೂರ ಯೋಚನೆ' ಎಂಬ

ದೇವ ಅವರ ಪರ್ಯಾಯವೂ ದುರ್ಬಲವಾಗಿದೆ. ಡಾ॥ ಜಾನ್ಸನ್ ವಿವರಿಸಿರುವಂತೆ 'Mortal Thoughts' ಎಂದರೆ 'Murderous, deadly, or destructive designs'. ಆದರೆ ಇದಕ್ಕೂ ಹೆಚ್ಚಿನ ಹಾನಿ 'Come' ಶಬ್ದದ ಮೇಲಿನ ಘಾತ ; ಅದರ ಭಯಾನಕ ಪುನರಾವೃತ್ತಿ, ಕ್ರಿಯಾಪದಗಳ ಆದ್ಯತೆಯಿಂದ ಹುಟ್ಟುವ ಭಾವಾವೇಶ, ಲಯದ ವಿಲಕ್ಷಣ ನಿಯಂತ್ರಣದಿಂದಾಗುವ ಮಾನಸಿಕ ಪರಿಣಾಮಗಳು ಇವುಗಳಿಗೆ ಮೂಲದಲ್ಲಿದ್ದ ಶಕ್ತಿ ಭಾಷಾಂತರದಲ್ಲಿ ಇಳಿದುಬಂದಿಲ್ಲ. ಇಲ್ಲಿಯ ಲಯ ವಿಶ್ರಾಂತಿಯದು, ಆವೇಶದ್ದಲ್ಲ. ಹೀಗಾಗಿ ಭಾಷೆಗೂ ಭಾವನೆಗೂ ನಡುವೆ ಕಂದರ ಉಂಟಾಗಿದೆ.

ನನ್ನ ಕೊನೆಯ ಉದಾಹರಣೆ Macbethದ ಅತ್ಯಂತ ಪ್ರಸಿದ್ಧ ಕಾವ್ಯ ಭಾಗಗಳಲ್ಲೊಂದಾದ ಮ್ಯಾಕ್‌ಬೆತ್‌ನ ಕೊನೆಯ ಮಹತ್ತ್ವದ ಸ್ವಗತ. ಇದು ಐದನೆಯ ಅಂಕದ ಐದನೆಯ ದೃಶ್ಯದಲ್ಲಿ ಬರುತ್ತದೆ :

> Tomorrow, and tomorrow, and tomorrow,
> Creeps in this petty pace from day to day
> To the last syllable of recorded time.
> And all over yesterdays have lighted
> The way to dusty death. Out, out. brief candle !
> Life's but a walking shadow: a poor player
> That struts and frets his hour upon the stage,
> And then is heard no more ; it is a tale
> Told by an idiot, full of sound and fury
> Signifying nothing.

Act V, sc 5, ll 19–28

ಪ್ರತಿಮಾಪ್ರಧಾನವಾದ ಈ ಸ್ವಗತದಲ್ಲಿ ನಾಟಕದ ವಸ್ತುವಿನ ಎಲ್ಲ ಮುಖಗಳೂ ಕಾಣಿಸಿಕೊಳ್ಳುತ್ತವೆ. ಕಾಲದ ಗತಿ, ಸಾವಿನ ಅನಿವಾರ್ಯತೆ, ಜೀವನದ ನಶ್ವರತೆ, ಅದರ ನಿರರ್ಥಕತೆ—ಇವೆಲ್ಲವೂ ಪ್ರತಿಮೆಗಳಲ್ಲಿ ಸಾಕಾರವಾಗಿ ಮ್ಯಾಕ್‌ಬೆತ್‌ನ ಅನುಭವದ ಫಲವಾಗಿ ನಮ್ಮನ್ನು ಮುಟ್ಟುತ್ತವೆ. 'ಮಂಕುತಿಮ್ಮ'ನ ಕವಿಗೆ ಈ ಸಾಲುಗಳನ್ನು ಅರ್ಥವಿಸುವುದರಲ್ಲಿ ಅಷ್ಟೇನೂ ಕಷ್ಟವಾದಂತಿಲ್ಲ, ಅವರ ಭಾಷಾಂತರ ಹೀಗಿದೆ :

> ನಾಳೆ, ಮರುನಾಳೆ, ಮತ್ತುಂ ನಾಳೆ ಜರುಗುವುದು,
> ದಿನದಿಂದ ದಿನಕೆ, ಮೆಲು ಮೆಲನೆ, ಕಿರುಹೆಜ್ಜೆಯಿಂ,
> ಕಾಲಚರಿತೆಯ ಲಿಪಿಯ ಕಡೆಯಕ್ಷರದವರೆಗೆ,
> ನಮ್ಮ ನಿನ್ನೆಗಳೆಲ್ಲಮುಂ ಮರುಳರಿಗೆ ಮಣ್ಣಾ
> ಕವಿಪ ಮೃತ್ಯುವಿನೆಡೆಗೆ ದಾರಿಯ ಬೆಳಗಿಹವು.
> ನಂದು, ನಂದೆಲೆ ತಣ್ಣ ಮಯಣ ಬತ್ತಿಯ ಸೊಡರೆ,
> ಬಾಳ್ ಒಂದು ನಡೆವ ನೆಳಲ್, ಅನಿತೆ ಅದು ರಂಗದಲಿ

ಶೀವಿಯಿಂದಾಟೋಪದಿಂದೊಂದು ತಾ ಪಾಡಿ
ಬಳಿಕಮ್ ಏನೂ ಕೇಳಬಾರದಿಹ ನಟನು,
ಅದು ಬಾಲಿಶಂ ಪೇಳ್ದ, ಸದ್ದು ಗದ್ದಲ ತುಂಬಿ
ಅರ್ಥವೇನಿರದ ಕಥೆ.

ಭಾಷಾಂತರದಲ್ಲಿ ಇದು ಡಿ.ವಿ.ಜಿ.ಯವರ ಉತ್ತಮ ಸಾಧನೆಯೆಂದು ಹೇಳಬಹುದು. ಇಲ್ಲಿ ಮೂಲದ ಅರ್ಥದೊಡನೆ ಲಯವನ್ನು ಹಿಡಿಯಲು ಅವರು ತಕ್ಕ ಮಟ್ಟಿಗೆ ಶಕ್ತರಾಗಿದ್ದಾರೆ. ಆದರೆ ಕಾವ್ಯಶಕ್ತಿ ಅನುವಾದಕನಲ್ಲಿ ಇದಕ್ಕೂ ಹೆಚ್ಚಿನ ಮಟ್ಟದಲ್ಲಿದ್ದಾಗ ಆತ ಎಂಥ ಯಶಸ್ಸನ್ನು ಪಡೆಯಬಲ್ಲ ಎನ್ನುವುದಕ್ಕೆ ಅಡಿಗರ ಪ್ರಯತ್ನವನ್ನು ಉದಾಹರಿಸಬಹುದು. ಅದು ಹೀಗಿದೆ:

ನಾಳೆ, ಮತ್ತೂ ನಾಳೆ, ಮತ್ತೂ ನಾಳೆ
ತೆವಳುವದು ಈ ಕ್ಷುದ್ರಗತಿಯಿಂದ ದಿನದಿನ ಹೀಗೆ
ಕಾಲಕಡತದ ಕೊಟ್ಟಕೊನೆಯ ಮಾತ್ರೆಯವರೆಗೆ
ನಮ್ಮೆಲ್ಲ ನಿನ್ನೆ ಬೆಳಗಿದ್ದಾವೆ ಮೂರ್ಖರ ದಾರಿ
ಸಾವು ಧೂಳಿನ ಕಣಕೆ. ಆರು, ಆರು, ಸಂಕ್ಷಿಪ್ತ ಮೋಂಬತ್ತಿಯೇ ?
ಬದುಕು ಕೇವಲ ನಡೆವ ನೆಳಲು, ರಂಗದ ಮೇಲೆ
ತನ್ನೊಂದು ಗಳಿಗೆ ಸೆಟೆನಡೆವ, ಸಿಡಿವ ಬಡನಟ,
ಅನಂತರ ಅವನ ಸೊಲ್ಲಿಲ್ಲ. ಮಂಕನಾವನೊ ಹೇಳಿ-
ದಂಥ ಕಥೆ, ಬರಿ ಗುಲ್ಲು, ಉದ್ರೇಕ, ವ್ಯಂಜಿಸುವಂಥ
ಅರ್ಥ ಕೇವಲ ಶೂನ್ಯ.[10]

ಸ್ವಲ್ಪ ಅತೃಪ್ತಿ ಹುಟ್ಟಿಸುವ "ಆರು, ಆರು, ಸಂಕ್ಷಿಪ್ತ ಮೋಂಬತ್ತಿಯೇ" ಭಾಗವನ್ನು ಬಿಟ್ಟರೆ (ಶ್ರೀನಿವಾಸರ ನಂದು, ನಂದು, ಅಲ್ಪಾಯುಷ್ಯ ದೀಪವೇ". ರಾಮಚಂದ್ರದೇವರ "ನಂದು, ಕುಡಿ ಕಮರುತ್ತಿರುವ ದೀಪವೇ" ಅಥವಾ ಶ್ರೀಕಂಠೇಶಗೌಡರ "ಅಡಗಡಗು, ಜೀವದೀಪವೇ" ಕೂಡ ತೃಪ್ತಿಕರವಾಗಿಲ್ಲ). ಅಡಿಗರ ಅನುವಾದದಲ್ಲಿ ಅರ್ಥದ ಅಭಿನಯ ಮೂಲದಲ್ಲಿದ್ದಷ್ಟೇ ಸಮರ್ಥವಾಗಿದೆಯೆಂದೆನಿಸುತ್ತದೆ.

ಡಿ.ವಿ.ಜಿ.ಯವರ ಕನ್ನಡ ಮ್ಯಾಕ್‌ಬೆತ್‌ದ ಮಿತಿಗಳೇನೇ ಇದ್ದರೂ, ಮೂಲಕ್ಕೆ ಅಪಚಾರವಿಲ್ಲದಂತೆ ಅದು ಪಾಶ್ಚಾತ್ಯ ಅಭಿಜಾತಕೃತಿಯೊಂದನ್ನು ಕನ್ನಡಕ್ಕೆ ನೀಡಿದೆ. ಕ್ರಿಶ್ಚಿಯನ್ ಸಂಸ್ಕೃತಿಯಲ್ಲಿ Macbeth ಎಷ್ಟು ಆಳವಾದ ಬೇರುಗಳನ್ನು ಬಿಟ್ಟಿದೆ ಎಂಬುದನ್ನು ನೆನೆದಾಗ (ಮೇಲೆ ಉದ್ಧರಿಸಿದ ಸಾಲುಗಳಲ್ಲಿ ಬೈಬಲ್ಲಿನ ದಟ್ಟ ಛಾಯೆಯನ್ನು ವಿದ್ವಾಂಸರು ಗಮನಿಸಿದ್ದಾರೆ) ಇದು ಸಣ್ಣ ಸಾಧನೆಯೇನೂ ಅಲ್ಲ. ಅನುವಾದದಲ್ಲಿ ಸಾಮಾನ್ಯವಾಗಿ ಗಳಿಕೆಗಿಂತ ಹಾನಿ ಹೆಚ್ಚು. ಅದರಲ್ಲೂ ಸಾರ್ವತ್ರಿಕ ಅಂಶಗಳನ್ನು ತಂದಂತೆ, ಒಂದು ಸಂಸ್ಕೃತಿಗೆ, ಭಾಷೆಗೆ ವಿಶಿಷ್ಟವಾದ ಅಂಶಗಳನ್ನು ತರುವುದು ಸುಲಭವಾಗಿ ಸಾಧ್ಯವಾಗುವುದಿಲ್ಲ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿದ ಡಿ.ವಿ.ಜಿ.ಯವರ ಸಾಹಸಕ್ಕಾಗಿ ಕನ್ನಡಿಗರು ಅವರಿಗೆ ಕೃತಜ್ಞರು.

ಟಿಪ್ಪಣಿಗಳು

1. **ಶ್ರೀಕಂಠೇಶಗೌಡರ ಕೃತಿಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1974.
2. ಎಂ. ಎಸ್. ಪುಟ್ಟಣ್ಣ, **ಹೇಮಚಂದ್ರ ವಿಲಾಸ,** ಬೆಂಗಳೂರು, 1899.
3. ಡಿ.ವಿ.ಜಿ., **ಮ್ಯಾಕ್‌ಬೆತ್,** ಕಾವ್ಯಾಲಯ, ಮೈಸೂರು, ದ್ವಿ. ಮು., 1974.
4. ಶ್ರೀನಿವಾಸ, **ಲಿಯರ್ ಮಹಾರಾಜ,** ಜೀವನ ಕಾರ್ಯಾಲಯ. ಬೆಂಗಳೂರು. 1959.
5. ಶ್ರೀನಿವಾಸ, **ಹ್ಯಾಮ್‌ಲೆಟ್,** ಜೀವನ ಕಾರ್ಯಾಲಯ, ಬೆಂಗಳೂರು. 1958.
6. ರಾಮಚಂದ್ರದೇವ, **ಹ್ಯಾಮ್ಲೆಟ್**
7. ರಾಮಚಂದ್ರದೇವ, **ಮ್ಯಾಕ್‌ಬೆತ್,** ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ, 1976.
8. ಎ. ಎನ್. ಮೂರ್ತಿರಾವ್, **ಚಂಡಮಾರುತ,** ಅಪರ್ಣಾ ಪ್ರಕಾಶನ, ಮೈಸೂರು, 1981.
9. ಶಾ. ಬಾಲೂರಾವ್ (ಸಂ.), **ಷೇಕ್ಸ್‌ಪಿಯರಿಗೆ ನಮಸ್ಕಾರ,** ಕನ್ನಡ ಭಾರತೀ, ಹೊಸ ದಿಲ್ಲಿ, 1966, ಪು. 220.
10. ಅದೇ, ಪು. 224.

ಡಿ.ವಿ.ಜಿ. ಅವರ ಭಾಷಾಂತರ ಗ್ರಂಥಗಳು*

ಟಿ. ಎಸ್. ಶ್ಯಾಮರಾವ್

೧೯೧೧ ರಲ್ಲಿ ಒಂದು ನಾಟಕಾನುವಾದದಿಂದ ತೊಡಗಿ, "ಡಿ.ವಿ.ಜಿ. ಅವರ ಜೀವನದುದ್ದಕ್ಕೂ ಸಾಗಿಬಂದ ಈ ಭಾಷಾಂತರ ಕಾರ್ಯ ಅರವತ್ತು ವರ್ಷಗಳ ತರುವಾಯ 'ಶೃಂಗಾರ ಮಂಗಳಂ' ಕೃತಿಯಲ್ಲಿ ಮುಕ್ತಾಯ ಪಡೆದಿದೆ," ಎಂದು ತಿಳಿಸಿ, ಆಂಗ್ಲಕವಿ ಆಲ್‌ಫ್ರೆಡ್ ಟೆನಿಸನ್ ಅವರ The Cup ಎಂಬ ನಾಟಕವನ್ನು 'ಕನಕಾಲುಕಾ' ಎಂಬ ಹೆಸರಿನಿಂದ ಪರಿವರ್ತನೆ ಮಾಡುವಲ್ಲಿ ಡಿ.ವಿ.ಜಿ. ಅವರಿಗಿದ್ದ ಉದ್ದೇಶ ಏನು ಎಂಬುದರ ಕಡೆಗೆ ಲೇಖಕರು ನಮ್ಮ ಗಮನ ಸೆಳೆದಿದ್ದಾರೆ; "ಜನರಿಗೆ ಮನೋರಂಜನೆ ಮಾಡಿ ಆ ಮೂಲಕ ನೀತಿಗಳನ್ನು ಕಲಿಸುವುದೇ ಕವಿಕರ್ತವ್ಯ." ಬಲುಮಟ್ಟಿಗೆ ಡಿ.ವಿ.ಜಿ. ಅವರು ಈ ದ್ವಿಮುಖ ಕಾವ್ಯೋದ್ದೇಶವನ್ನು ತಮ್ಮ ಎಲ್ಲ ಅನುವಾದಿತ ಕೃತಿಗಳಿಗೆ ಮಾತ್ರವಲ್ಲದೆ ಸ್ವತಂತ್ರ ಕೃತಿ ರಚನೆಗೂ ಮುಖ್ಯ ಪ್ರೇರಣೆಯಾಗಿ ಸ್ವೀಕರಿಸಿದ್ದರು. ೧೯೧೨ ರಲ್ಲಿ ವ್ಹಿಟಿಯರ್ ಮತ್ತು ವ್ಹಿಟಮನ್ ಅವರ ಎರಡು ಕವಿತೆಗಳಲ್ಲಿಯ ತಾತ್ತ್ವಿಕ ಚಿಂತನೆಗೂ ಭಗವದ್ಗೀತೆ ಮುಂತಾದ ಭಾರತೀಯ ತಾತ್ತ್ವಿಕ ಗ್ರಂಥಗಳಲ್ಲಿಯ ಚಿಂತನೆಗೂ ಇರುವ ಸಾಮ್ಯವನ್ನು ಗುರುತಿಸಿ, "ಪ್ರಪಂಚದ ಎಲ್ಲ ಭಾಗಗಳಲ್ಲಿರುವ ಮಹನೀಯರಿಗೆ ಭಗವಂತನು ತನ್ನ ಮಹಿಮೆಯನ್ನು ತೋರಿ ಕೊಂಡಿರುವನು" ಎಂಬ ಸತ್ಯಾಂಶ ಭಾರತೀಯ ತತ್ತ್ವಶಾಸ್ತ್ರಗಳನ್ನು ಓದಿಕೊಂಡಿದ್ದ ಡಿ.ವಿ.ಜಿ. ಅವರಿಗೆ ಮನವರಿಕೆಯಾಯಿತು. ಆ ಎರಡು ಕವಿತೆಗಳನ್ನು ಭಾಷಾಂತರಿಸಲು ಅವರಿಗೆ ಮುಖ್ಯ ಪ್ರೇರಣೆಯಾಯಿತು. ಡಿ.ವಿ.ಜಿ. ಅವರ 'ಉಮರನ ಒಸಗೆ' ಉಮರನ ರುಬಾಯತ್ ಪದ್ಯಮಾಲೆಯಿಂದ ಆಯ್ದು ಫಿಟ್ಸ್‌ಜೆರಲ್ಡ್ ಇಂಗ್ಲಿಷಿಗೆ ತರ್ಜುಮೆ ಮಾಡಿದ ಪದ್ಯಗಳ ಭಾಷಾಂತರ. "ಇದು ಭಾಷಾಂತರವಾದುದರಿಂದ ಇಲ್ಲಿ ಪ್ರಸ್ತಾಪಿಸುವ ಅವಶ್ಯವಿಲ್ಲ" ಎಂದು ಹೇಳಿ, 'ಒಸಗೆ'ಯ ವಿದ್ವತ್ಪೂರ್ಣ ಮುನ್ನುಡಿಯಲ್ಲಿ ಭಾಷಾಂತರ ಕಲೆಗೆ ಸಂಬಂಧಪಟ್ಟಂತೆ ಡಿ.ವಿ.ಜಿ. ಹೇಳಿರುವ 'ಮನನ

* ಗೋ.ಸಾ.ವಿ. ಸಂಸ್ಥೆಯ ಪ್ರಕಟನೆ 'ಕುಸುಮಾರ್ಪಣೆ'. ಪುಟ 117.

ಯೋಗ್ಯ' ಮಾತುಗಳ ಕಡೆಗೆ ಗಮನ ಸೆಳೆದಿದ್ದಾರೆ. ಅನಂತರ ಲೇಖಕರು 'ಶೃಂಗಾರ ಮಂಗಳಂ' ಕೃತಿಯ ಬಗೆಗೆ ಪ್ರಸ್ತಾವಿಸಿ—"ಜಗತ್ ಸೃಷ್ಟಿ—ವಿಕಾಸಗಳ ವಿಷಯಕ್ಕೆ ಮಹರ್ಷಿಗಳ ಸಾಕ್ಷ್ಯವನ್ನೂ, ಸತ್ಯಸುಂದರ—ತತ್ತ್ವಕ್ಕೆ ಕೀಟ್ಸ್‌ಕವಿಯ ಸಾಕ್ಷ್ಯವನ್ನೂ ಪ್ರೇಮಾದ್ವೈತಭಾವಕ್ಕೆ ಷೇಕ್ಸ್‌ಪಿಯರ್ ಕವಿಯ ಸಾಕ್ಷ್ಯವನ್ನೂ, ವಿರಹಿಯ ಅನುಭವಕ್ಕೆ ಅನಾಮಧೇಯನ ಸಾಕ್ಷ್ಯವನ್ನೂ ಒದಗಿಸಿದ್ದಾರೆ" ಎಂದು ಕೃತಿಯ ಒಳಪಿಡಿಯನ್ನು ಪರಿಚಯಿಸಿದ್ದಾರೆ. ಕಡೆಯದಾಗಿ, ಷೇಕ್ಸ್‌ಪಿಯರ್ ನಾಟಕವನ್ನು ಯಥಾವತ್ತಾಗಿ ಭಾಷಾಂತರಿಸಬೇಕೆಂಬ ತಮ್ಮ ಧ್ಯೇಯಸಾಧನೆಗಾಗಿ ಡಿ.ವಿ.ಜಿ. ಅನುಸರಿಸಿರುವ ವಿಧಾನವನ್ನು ಅವರ ಮಾತುಗಳಲ್ಲೇ ತಿಳಿಸಿದ್ದಾರೆ.

ಶ್ರೀ ಶ್ಯಾಮರಾಯರ ಲೇಖನದಿಂದ ಡಿ.ವಿ.ಜಿ. ಭಾಷಾಂತರಕಾರ್ಯಕ್ಕೆ ಕೊಟ್ಟಿದ್ದ ಮಹತ್ವದ ಪರಿಚಯ ನಮಗೆ ಆಗುತ್ತದೆ.

ಕನ್ನಡದಲ್ಲಿ ನಾಟಕಗಳೇ ಇಲ್ಲದ ಕಾಲದಲ್ಲಿ ಭಾಷಾಂತರಗಳ ಮೂಲಕ ಆ ಅರಕೆಯನ್ನು ತುಂಬಿಕೊಳ್ಳುವಂತೆ ಅರಮನೆಯ ವಿದ್ವಾಂಸರನ್ನು ಪ್ರಚೋದಿಸಿ, ನಾಟಕಾಭಿವೃದ್ಧಿಗೆ ಉತ್ತೇಜಕವಾಗಿ ಒಂದು ನಾಟಕ–ಮಂಡಲಿಯನ್ನು ಕಟ್ಟಿ, ಅದಕ್ಕೆ ರಾಜಾಶ್ರಯವನ್ನು ದೊರಕಿಸಿಕೊಟ್ಟು ಸಾಹಿತ್ಯಕಲಾ ಸೇವೆಯನ್ನೂ ಜನಾನುರಾಗವನ್ನೂ ಏಕಕಾಲದಲ್ಲಿ ಸಾಧಿಸಿದ ಕೀರ್ತಿ ಸಿ. ರಂಗಾಚಾರ್ಲು ಅವರಿಗೆ ಸಲ್ಲುತ್ತದೆ. ರಂಗಾಚಾರ್ಲು ಅವರಲ್ಲಿ ಅಪಾರ ಗೌರವ ತಳೆದಿದ್ದ ಡಿ.ವಿ.ಜಿ. ತಮ್ಮ ಕನ್ನಡ ಕೈಂಕರ್ಯವನ್ನು ೧೯೧೧ರಲ್ಲಿ ಒಂದು ನಾಟಕಾನುವಾದದಿಂದ—ಹಾಗೂ ಆ ಮಹನೀಯರ ಜೀವನಚರಿತ್ರೆಯಿಂದ ಮೊದಲುಮಾಡಿದುದು ಒಂದು ಸೋಜಿಗದ ಸಂಯೋಗವೇ ಸರಿ. ಅವರ ಜೀವನದ ಉದ್ದಕ್ಕೂ ಸಾಗಿಬಂದ ಈ ಭಾಷಾಂತರಕರ್ಮ ಅರುವತ್ತು ವರ್ಷಗಳ ತರುವಾಯ "ಶೃಂಗಾರ ಮಂಗಳಂ" ಕೃತಿಯಲ್ಲಿ ಮುಕ್ತಾಯ ಪಡೆದಿದೆ.

1

ಡಿ.ವಿ.ಜಿ. ಅವರ ಸಾಹಿತ್ಯದೃಷ್ಟಿ—ಸ್ವತಂತ್ರವಾಗಲಿ, ಭಾಷಾಂತರವಾಗಲಿ—ಎಂದೂ ಕೇವಲ ವಿನೋದಕ್ಕಾಗಿ ವಿಲಾಸಕ್ಕಾಗಿ ಆದುದಲ್ಲ. ಜೀವನದಿಂದ ಸಾಹಿತ್ಯ, ಜೀವನಕ್ಕಾಗಿ ಸಾಹಿತ್ಯ; ಒಂದನ್ನೊಂದು ಹದಗೊಳಿಸಬೇಕು, ಹಸನಾಗಿಸಬೇಕು. 'ಕನಕಾಲುಕಾ' ನಾಟಕ ಅವರ ಇಪ್ಪತ್ತೆರಡರ ಎಳೆಹರೆಯದಲ್ಲಿ ಬರೆದುದಾದರೂ ಈ ದೃಷ್ಟಿ–ಧೋರಣೆಗಳು ಆಗಲೇ ಸ್ಪಷ್ಟವಾಗಿವೆ: "ಜನರಿಗೆ ಮನೋರಂಜನೆ ಮಾಡಿ ಆ ಮೂಲಕ ನೀತಿಗಳನ್ನು ಕಲಿಸುವುದೇ ಕವಿಕರ್ತವ್ಯ"ವೆಂದು ಅವರ ವಿಶ್ವಾಸ. "ಜನರಲ್ಲಿ ನಿಜವಾದ ನಾಗರಿಕತೆಯೂ ವಿದ್ಯಾಭ್ಯಾಸವೂ ಹೆಚ್ಚಿದ ಹಾಗೆಲ್ಲಾ ನೀತಿಯೂ ಸದಾಚಾರವೂ ಹೆಚ್ಚುವುದೆಂದು ನಂಬುವುದೇನೋ ನ್ಯಾಯವೇ ಸರಿ. ಆದರೆ ಈಗ ನಮ್ಮ ಜನರಿಗೆ ನೀತಿಯನ್ನು—ತತ್ರಾಪಿ ಸ್ತ್ರೀ–ಪುರುಷರು ಪರಸ್ಪರ ಅನುಸರಿಸಬೇಕಾದ ನೀತಿಯನ್ನು—ಬೋಧಿಸಬೇಕಾದ ಅವಶ್ಯಕತೆಯಿಲ್ಲವೆಂದು ಯಾರೂ ಹೇಳಲಾರರು. ವ್ಯಭಿಚಾರ ದೋಷವನ್ನು ದೂಷಿಸಿ, ಆ ನೀತಿಯನು ಸೂಚಿಸುವುದೇ ಈ ಸಣ್ಣ ಪುಸ್ತಕದ ಉದ್ದೇಶವು."

ಮಾರನೆಯ ವರ್ಷ (೧೯೧೨) ಪ್ರಕಟಪಡಿಸಿದ ನಾಲ್ಕು ಪದ್ಯಗಳಲ್ಲಿ ಅವರ ಈ ಮನೋಭಾವದ ಇನ್ನೊಂದು ಮುಖ ಕಂಡುಬರುತ್ತದೆ. ಆ ನಾಟಕದಲ್ಲಿ ಸಾಮಾಜಿಕ ಸದಾಚಾರ ವಿಚಾರ, ಇವುಗಳಲ್ಲಿ ಆತ್ಮವಿಕಾಸ ವಿಚಾರ. ಎರಡೂ ಅಗತ್ಯ, ಒಂದಕ್ಕೊಂದು ಪೂರಕ. 'ದೇವರೆಲ್ಲಿ ?' ಮತ್ತು 'ಸರ್ವಮತ ಸಿದ್ಧಾಂತ' ಅವರವೇ ರಚನೆಗಳು ; 'ಜೀವಗೀತೆ' ಮತ್ತು 'ಆತ್ಮಗೀತೆ' ಅನುವಾದಗಳು. ಈ ಅನುವಾದಗಳನ್ನು ಕುರಿತು ಅವರು ಆಡುವ ಮಾತುಗಳಿವು : "ಅಮೆರಿಕದ ವ್ಹಿಟ್ಟಿಯರನು ಪ್ರತಿಪಾದನೆ ಮಾಡಿರುವ ತತ್ತ್ವಗಳು ಭರತಖಂಡದ ಜನರಿಗೆ ಅಪೂರ್ವವಾದುವಲ್ಲ. ಆತನ ವಾಕ್ಯಗಳಿಗೆ ಸಮಾನವಾದ ವಾಕ್ಯಗಳನ್ನು ಭಗವದ್ಗೀತೆಯಲ್ಲಿಯೂ ಪುರಾಣಗಳಲ್ಲಿಯೂ ನಮ್ಮ ಮತಾಚಾರ್ಯರುಗಳ ಉಪದೇಶಗಳಲ್ಲಿಯೂ ದಾಸರ ಕೀರ್ತನೆಗಳಲ್ಲಿಯೂ ಯಥೇಷ್ಟವಾಗಿ ಕಾಣಬಹುದು. ಹೀಗೆ ಪಾಶ್ಚಾತ್ಯ ಮಹಾಕವಿಗಳೂ ಪೌರ್ವಾತ್ಯ ಮಹಾಕವಿಗಳೂ ಮಾನವ ಜೀವನದ ಮುಖ್ಯ ವಿಷಯಗಳಲ್ಲಿ ಏಕವಾಕ್ಯರಾಗಿರುವುದನ್ನು ನೋಡಿದರೆ, 'ಭಗವಂತನು ತನ್ನ ಮಹಿಮೆಯನ್ನು ಎಲ್ಲ ಜನರಿಗೆ ತೋರಿಕೊಂಡಿರುವನು. ಮಹನೀಯರು ಎಲ್ಲೆಲ್ಲಿಯೂ ಇರುವರು. ಅವರು ಒಮ್ಮುಖದಿಂದ ಹೇಳುವ ತತ್ತ್ವಗಳು ಎಲ್ಲ ಕಾಲ ಎಲ್ಲ ದೇಶಗಳಲ್ಲಿಯೂ ಎಲ್ಲರಿಂದಲೂ ಮನ್ನಣೆ ಪಡೆಯಲು ಅರ್ಹವಾದುವು'—ಎಂದು ಯಾರ ಮನಸ್ಸಿಗೂ ಹೊಳೆಯದೆ ಇರದು." ವ್ಹಿಟಮನ್ ಕವಿಯ "ಆತ್ಮಗೀತೆಯ ವಚನಗಳಿಗೆ ಸಮಾನಗಳಾದ ವಚನಗಳನ್ನು ಈಶಾವಾಸ್ಯಾದ್ಯುಪನಿಷತ್ತುಗಳಲ್ಲಿಯೂ ಭಗವದ್ಗೀತಾದಿ ಶಾಸ್ತ್ರಗಳಲ್ಲಿಯೂ ಹೇರಳವಾಗಿ ಕಾಣಬಹುದು." ಹೀಗೆ ಡಿ.ವಿ.ಜಿ. ಅವರ ಧಾರ್ಮಿಕ ದೃಷ್ಟಿ ಹೊರಗಿನವರ ಹೇಳಿಕೆಯಿಂದ ಸಮರ್ಥನೆ ಪಡೆದು ದೃಢಗೊಂಡಿದೆ.

2

"**ಕನಕಾಲಂಕಾ ಅಥವಾ ಕಮಲಿನೀ ಚರಿತಂ**" ನಾಟಕದ ಮೂಲ Tennyson ಕವಿಯ The Cup : A Tragedy. ತಮ್ಮ ಅನುವಾದ ಕ್ರಮವನ್ನು ಕುರಿತು ಡಿ.ವಿ.ಜಿ. ಹೀಗೆ ಹೇಳಿದ್ದಾರೆ : "ಕಥಾ ಸಂವಿಧಾನವು ಈ ಕನ್ನಡರೂಪದಲ್ಲಿ ವ್ಯತ್ಯಸ್ತವಾಗಿಲ್ಲ. ಆದರೆ ಇತರ ವಿಷಯಗಳಲ್ಲಿ ಕೆಲವು ತಿದ್ದುಪಾಟುಗಳಾಗಿವೆ. ಮೂಲಗ್ರಂಥದಲ್ಲಿನ ಹೆಸರುಗಳು ಸಂಸ್ಕೃತ ರೂಪಕ್ಕೆ ತಿರುಗಿಸಲ್ಪಟ್ಟಿವೆ. ಅದರಲ್ಲಿನ ಸಂದರ್ಭಗಳು ನಮ್ಮ ದೇಶದ ಆಚರಣೆಗೂ ವಾಡಿಕೆಗೂ ತಕ್ಕಂತೆ ಪರಿವರ್ತಿಸಲ್ಪಟ್ಟಿವೆ. ರೋಂ ಮತ್ತು ಗೆಲೇಷಿಯಾ ದೇಶಗಳ ಇತಿಹಾಸಗಳಿಂದ ಮೂಲಗ್ರಂಥದಲ್ಲಿ ಉದಾಹರಿಸಲ್ಪಟ್ಟಿರುವ ವ್ಯಕ್ತಿಗಳಿಗೂ ಸಂಗತಿಗಳಿಗೂ ಪ್ರತಿಯಾಗಿ ನಮ್ಮ ದೇಶದ ಪುರಾಣೇತಿಹಾಸಗಳ ವ್ಯಕ್ತಿಗಳೂ ಸಂಗತಿಗಳೂ ಇಲ್ಲಿ ಉದಾಹರಿಸಲ್ಪಟ್ಟಿವೆ. ಮೂಲ ಕವಿಯು ತೋರಿಸಿರುವ ಮನೋಭಾವಗಳೂ ಅಭಿಪ್ರಾಯಗಳೂ ಕೆಲವು ಕಡೆಗಳಲ್ಲಿ ನಮ್ಮವರಿಗೆ ತಕ್ಕಂತೆ ವಿಸ್ತರಿಸಲ್ಪಟ್ಟಿವೆ. ನಾಟಕದ ಪಾತ್ರಗಳ ಮಾತುಕತೆಗಳೂ ಇಲ್ಲಿಗೆ ತಕ್ಕಂತೆ ವ್ಯತ್ಯಾಸ ಹೊಂದಿವೆ. ಅಲ್ಲದೆ ಎರಡು ರಂಗ ('ಸೀನ್')ಗಳು

ಹೊಸದಾಗಿ ಸೇರಿಸಲ್ಪಟ್ಟಿವೆ. ಇವುಗಳಲ್ಲಿ ಮೊದಲನೆಯದು (೧–೧), ರೋಮಕ ಜನರಲ್ಲಿ ನಮ್ಮಲ್ಲಿರುವಂತೆ ಏಕನಾಯಕ ಪ್ರಭುತ್ವವಿರಲಿಲ್ಲವೆಂದೂ, 'ಸೆನೆಟ್' ಎಂಬ ಪ್ರಜಾಪ್ರತಿನಿಧಿ ಸಭೆಯು ಪ್ರಭುತ್ವ ಮಾಡುತ್ತಲಿತ್ತೆಂದೂ ತಿಳಿಸುವುದು...... ವಿತಂತು ವಿವಾಹವು ನಮ್ಮ ಜನದ ಸಂಪ್ರದಾಯಕ್ಕೆ ವಿರುದ್ಧವಾದ ಕಾರಣ ಕಮಲಿನಿಯ ದ್ವಿತೀಯ ವಿವಾಹ ವಿಷಯದಲ್ಲಿ ಆಗ ಜನರಿಗಿದ್ದ ಅಭಿಪ್ರಾಯವನ್ನು ಎರಡನೆಯ ಹೊಸರಂಗವು (೨–೧) ಸೂಚಿಸುವುದು. ಇವೆರಡು ನೂತನ 'ರಂಗ'ಗಳಲ್ಲದೆ ಪ್ರಸ್ತಾವನಾ ರೂಪವಾದ ಪೂರ್ವರಂಗವೂ, ತಾತ್ಪರ್ಯ ಸೂಚಕವಾದ ಉತ್ತರ ರಂಗವೂ ಸೇರಿಸಲ್ಪಟ್ಟಿವೆ. ಇಷ್ಟಾದರೂ ಟೆನಿಸನ್ನನ ಮುಖ್ಯಾಭಿಪ್ರಾಯಗಳಾವುವೂ ಇದರಲ್ಲಿ ಲುಪ್ತವಾಗಿಲ್ಲ. ಆತನ ಆಶಯಕ್ಕೆ ವಿರುದ್ಧವಾದುದೇನೂ ಇದರಲ್ಲಿ ಹೇಳಲ್ಪಟ್ಟಿಲ್ಲ. ಈ ಗ್ರಂಥದ ಪ್ರತಿಯೊಂದು ಭಾಗವೂ ಮೂಲಗ್ರಂಥವನ್ನೇ ಅನುಸರಿಸಿದೆ."

The Cup ಎರಡು ಅಂಕದ blank verse (ಸರಳರಗಳೆ) ನಾಟಕ. ಆದರೆ ಡಿ.ವಿ.ಜಿ. ಅವರ ಅನುವಾದ ಪದ್ಯಪ್ರೋಕ್ಷಿತ ಗದ್ಯದಲ್ಲಿದೆ. ಇದು ಸಾಂಪ್ರದಾಯಿಕ ಪದ್ಧತಿ. ಆ ನಿರ್ಬಂಧದಲ್ಲಿಯೇ "ಕೂಡಿದ ಮಟ್ಟಿಗೂ ತಿಳಿಗನ್ನಡದ ಮಾತುಗಳಿಂದಲೇ ಸುಲಭ ಶೈಲಿಯಲ್ಲಿ ಬರೆಯ"ಬೇಕೆಂಬ ಹಂಬಲ ಅವರಿಗೆ. ಇಲ್ಲಿ ಉಪಯೋಗಿಸಿರುವ ಪದ್ಯಗಳು "ಸಾಮಾನ್ಯವಾಗಿ ರೂಢಿಯಲ್ಲಿಲ್ಲದ ಕೆಲವು ಜಾತಿಯ ವೃತ್ತಗಳು": ಶಾರ್ದೂಲ ವಿಕ್ರೀಡಿತ ವೃತ್ತದೊಂದಿಗೆ ಬಂದಿವೆ. ಇಂದ್ರವಂಶ, ಉತ್ಸಾಹ (೨), ಅಕ್ಕರಿಕೆ, ನೀತಿಕಾ (೪), ಮಲ್ಲಿಕಾ ಮಾಲ, ಅಶ್ವಧಾಟಿ ಮತ್ತು ತೋಟಕ. ಇವಲ್ಲದೆ ಕಂದ (೬), ಸೀಸಪದ್ಯ, ವಾರ್ಧಕ ಷಟ್ಪದಿ (೨) ಮತ್ತು ಚೌಪದಿ (೧೬) ಸೇರಿವೆ. ಷೇಕ್ಸ್‌ಪಿಯರ್ ನಾಟಕಗಳ Epilogue ಮಾದರಿಯನ್ನು ಅನುಸರಿಸಿ ಬರೆದ "ಉತ್ತರರಂಗ"ಕ್ಕೆ ಚೌಪದಿಯನ್ನು ಮೀಸಲು ಮಾಡಿದ್ದಾರೆ. ಇಲ್ಲಿ, 'ಚೌಪದಿ'ಯ ವಿಚಿತ್ರ ಲಕ್ಷಣವೆಂದರೆ ಎರಡೆರಡು ಸಾಲಿಗೆ ಪ್ರಾಸ. ಎಂಟನೆಯ ಸಾಲಿಗೆ ಅರ್ಥಪೂರ್ಣವಾಗಿ ವಿರಾಮಗೊಳ್ಳದೆ ಅದು ಮುಂದಿನ ಸಾಲಿಗೆ ಓಡುತ್ತದೆ. ಈ ಅನುವಾದದ ಛಾಂದಸ ಕೊಡುಗೆ ಸೀಸಪದ್ಯ. ಈ ಜನಪ್ರಿಯ ತೆಲುಗು ಪದ್ಯ ರೂಪವನ್ನು* ಕನ್ನಡ ನಾಟಕಕ್ಕೆ ಮೊದಲ ತಡವೆಗೆ ತಂದು ಅದರ ಗಂಭೀರ ನಡೆಯನ್ನೂ ಭಾವಭರಣಶಕ್ತಿಯನ್ನೂ ಮುಂದೆ ಪರಿಚಯ ಮಾಡಿಸಿ ಕನ್ನಡದಲ್ಲಿ ಅದಕ್ಕೆ ಮನ್ನಣೆ ಕೊಡಿಸಿದ್ದಾರೆ ಡಿ.ವಿ.ಜಿ. ಇಡಿಯ "ಜೀವಗೀತೆ" ಹತ್ತು ಸೀಸ ಪದ್ಯಗಳಲ್ಲಿವೆ. 'ವಸಂತ ಕುಸುಮಾಂಜಲಿ'ಯಲ್ಲಿ ವ್ಯಕ್ತಿಚಿತ್ರಣಕ್ಕೂ, 'ನಿವೇದನ'

---

* ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಕವಿ ತಮ್ಮಯ್ಯನ "ರಾಜವಂಶರತ್ನಪ್ರಭೆ" ಎಂಬ ಚಂಪೂಕಾವ್ಯದಲ್ಲಿ ಸೀಸಪದ್ಯಗಳಿವೆ. ಮತ್ತು ಯಾವವ ಕವಿಯ "ಕಲಾವತೀ ಪರಿಣಯ"ವು ಆದ್ಯಂತ ಪ್ರಾಸರಹಿತ ಲಲಿತ ರಗಳೆಯಲ್ಲಿದೆ. ಇದು ಆಧುನಿಕ "ಸರಳ ರಗಳೆ"ಯ ಪೂರ್ವರೂಪವೆನ್ನಬಹುದು.

ವಲ್ಲಿ ನಿಸರ್ಗವರ್ಣನೆಗೂ ಭಾವವಿನ್ಯಾಸಕ್ಕೂ ಅದನ್ನು ಯಶಸ್ವಿಯಾಗಿ ಬಳಸಿದ್ದಾರೆ ; ಕನ್ನಡದಲ್ಲಿ Sonnet ನಷ್ಟೇ ಸಮರ್ಥವಾಗಬಲ್ಲುದೆಂದು ಸಿದ್ಧಪಡಿಸಿದ್ದಾರೆ.

ಡಿ.ವಿ.ಜಿ. ಅವರ ಮುಂದಿನ ಅನುವಾದಿತ ಕೃತಿ 'ಉಮರನ ಒಸಗೆ' (೧೯೩೦). ಇದು ಭಾಷಾಂತರದ ಭಾಷಾಂತರವಾದುದರಿಂದ ಇಲ್ಲಿ ಪ್ರಸ್ತಾಪಿಸುವ ಅವಶ್ಯವಿಲ್ಲ. ಆದರೆ ಅವರು ಅದಕ್ಕೆ ಬರೆದಿರುವ ವಿಸ್ತಾರವೂ ವಿದ್ವತ್ಪೂರ್ಣವೂ ಆದ ಮುನ್ನುಡಿಯಲ್ಲಿ ಭಾಷಾಂತರ ಕಲೆಗೆ ಸಂಬಂಧಪಟ್ಟಂತೆ ಕೆಲವು ಮನನಯೋಗ್ಯ ಮಾತುಗಳಿವೆ. "ಆತನ ಕಾವ್ಯಾನುವಾದಗಳು ತರ್ಜುಮೆಗಳಲ್ಲ—ಪ್ರತಿಪದ ಭಾಷಾಂತರಗಳಲ್ಲ. ಮಹಾಕವಿಗಳ ಕಾವ್ಯ–ನಾಟಕಗಳ ವ್ಯಾಸಂಗದಿಂದ ಆತನ ಮನಸ್ಸಿನಲ್ಲಿ ಎಂತೆಂತಹ ಭಾವನಾ ವಿಶೇಷಗಳು ಪ್ರತಿಫಲಿಸಿದುವೋ ಅವುಗಳ ಮೂರ್ತಸ್ವರೂಪವೇ ಫಿಟ್ಸ್ ಜೆರಲ್ಡನ ಅನುವಾದಗಳು. ಎಂದರೆ, ಆತನ ಕೃತಿಗಳಲ್ಲಿ ಮೂಲ ಕವಿಗಳ ಸಾಮಗ್ರಿಯ ಜೊತೆಗೆ, ಆತನ ಸ್ವಂತ ಪ್ರತಿಭಾಸಂಪತ್ತಿನ ಅಂಶವೂ ಸೇರಿದೆ. ಆತನು ಸುಮ್ಮನೆ 'ಫೋಟೋ' ಎತ್ತಿದವನಲ್ಲ ; ತಾನು ಆರಿಸಿದ ಕಾವ್ಯವಸ್ತುವಿಗೆ ಸ್ವಹಸ್ತದಿಂದಲೂ ಸ್ವಲ್ಪ ಬಣ್ಣ ಕಟ್ಟಿ ರೇಖೆ ತಿದ್ದಿ, ಹಾಗೆ ಸ್ವತಂತ್ರ ಪರಿಷ್ಕೃತವಾದ ಪ್ರತಿಬಿಂಬವನ್ನು ನಮ್ಮ ಮುಂದೆ ತಂದಿರಿಸಿದ್ದಾನೆ. ಹೀಗೆ ವ್ಯಕ್ತಿಶಃ ಆತ ಮಾಡಿದ ಹೆಚ್ಚು ಕೆಲಸದಿಂದ ಆ ಅನುವಾದಗಳು—ಮೂಲ ಗ್ರಂಥಗಳ ವಿಕಾರಗಳಾಗುವುದಕ್ಕೆ ಪ್ರತಿಯಾಗಿ—ಅವುಗಳ ಪ್ರತಿಬಿಂಬ ಮಾತ್ರವೇ ಆಗಿರುವುದಕ್ಕೆ ಬದಲಾಗಿ—ಮೂಲಗಳಲ್ಲಿ ಕಾಣಬಾರದ ಒಂದು ನವೀನ ಸೌಂದರ್ಯದಿಂದ ಶೋಭಿಸುತ್ತವೆ." ಫಿಟ್ಸ್‌ಜೆರಲ್ಡ್ "ವಿದ್ವತ್ಕವಿ" ; ಅವನ ಭಾಷಾಂತರಗಳು "ಭಾವಾನುವಾದಗಳು".

"**ಶೃಂಗಾರ ಮಂಗಳಂ**" (೧೯೭೦) ಡಿ.ವಿ.ಜಿ. ಯವರ ಮಾತಿನಂತೆ, ಒಂದು "ಸಾಕ್ಷ್ಯಪಂಚಕ". ಹಲವು ವರ್ಷಗಳಿಂದ ತಮ್ಮನ್ನು ಕಾಡುತ್ತಿದ್ದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು ತಮ್ಮ ಗಾಢಚಿಂತನ ಕಾರ್ಯದಲ್ಲಿ ಮಾರ್ಗದರ್ಶನ ಮಾಡಿಸಿದ ಮಹರ್ಷಿಗಳನ್ನೂ ಕವಿಗಳನ್ನೂ ಕೃತಜ್ಞತೆಯಿಂದ ಸ್ಮರಿಸಿ, ಅವರ ವಾಕ್ಯಗಳನ್ನು ಉಲ್ಲೇಖಿಸಿ, ಭಾವಗಳನ್ನು ವಿಸ್ತರಿಸಿ, ಅರ್ಥವನ್ನು ವಿವರಿಸಿ ತಮ್ಮ ತೃಪ್ತಿಗಾಗಿ—ಇತರರ ಪ್ರಯೋಜನಕ್ಕಾಗಿ—ಕೆಲವು ಮೂಲ ನಂಬಿಕೆಗಳನ್ನು ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. ಜಗತ್ಸೃಷ್ಟಿ–ವಿಕಾಸಗಳ ವಿಷಯಕ್ಕೆ ಮಹರ್ಷಿಗಳ ಸಾಕ್ಷ್ಯವನ್ನೂ, ಸತ್ಯ–ಸುಂದರ ತತ್ತ್ವಕ್ಕೆ ಕೀಟ್ಸ್ ಕವಿಯ ಸಾಕ್ಷ್ಯವನ್ನೂ, ಪ್ರೇಮಾದ್ವೈತ ಭಾವಕ್ಕೆ ಷೇಕ್ಸ್‌ಪಿಯರ್ ಕವಿಯ ಸಾಕ್ಷ್ಯವನ್ನೂ, ವಿರಹಿಯ ಅನುಭವಕ್ಕೆ ಅನಾಮಧೇಯನ ಸಾಕ್ಷ್ಯವನ್ನೂ ಒದಗಿಸಿದ್ದಾರೆ. ಅವರ ವಿದ್ವತ್ತು, ವಿಚಾರಶೀಲತೆ, ಜೀವನಾನುಭವ ಒಟ್ಟುಗೂಡಿ ಕೀಟ್ಸ್ ಕವಿಯ ಅಭಿಪ್ರಾಯವನ್ನು ಒಂದು ತತ್ತ್ವದ ಮಟ್ಟಕ್ಕೆ ಮುಟ್ಟಿಸಿವೆ. ಆದ್ದರಿಂದ "ಶೃಂಗಾರ ಮಂಗಳಂ"ನಲ್ಲಿರುವುದು ಕೀಟ್ಸ್ ಕವನದ ಅನುವಾದವಲ್ಲ, Ode on a Grecian Urn ಕೃತಿಯ ವಿಸ್ತೃತ ವ್ಯಾಖ್ಯಾನ. ಆದರೆ ಷೇಕ್ಸ್‌ಪಿಯರ್ ಕವಿಯ The Phoenix and the Turtle ಬಗ್ಗೆ ಹಾಗೆ ಹೇಳ ಕಾರಣವಿಲ್ಲ. ಏಕೆಂದರೆ ಇಲ್ಲಿ ಅದು ಕ್ರಮಬದ್ಧ ಕನ್ನಡರೂಪ

ಹೊಂದಿದೆ. ಮೂಲ ಕವನ ಕೊಟ್ಟ ವಿಷಯದ ಮೇಲೆ ಕಟ್ಟಿದ ಸಾಮಾನ್ಯ ಪದ್ಯವಾದರೂ ಡಿ.ವಿ.ಜಿ. ಅವರ ದಾರ್ಶನಿಕ ದೃಷ್ಟಿ ತಾತ್ತ್ವಿಕ ಶೀರ್ಷಿಕೆಯ ಮೂಲಕ ಅದನ್ನು ಕೈಲಾಸಕ್ಕೇರಿಸಿದೆ.

೧೯೭೩ ರಲ್ಲಿ ಹೊರಬಂದ ತೊಂಬತ್ತೈದು ಕವನಗಳ 'ಕೇತಕೀವನ' ಐವತ್ತು ವರ್ಷಗಳ ಬೆಳಸು. ಇದರಲ್ಲಿರುವ ನಾಲ್ಕು ಭಾಷಾಂತರಗಳು (Shelley, Keats, Tennyson, Browning) ಮೂಲವನ್ನು ಪ್ರತಿಬಿಂಬಿಸಲು ಡಿ.ವಿ.ಜಿ. ಪಟ್ಟ ಪ್ರಯತ್ನ.

೩

"ಈಸ್ಟ್ ಇಂಡಿಯಾ ಕಂಪನಿಯ ವರ್ತಕರು ತಮ್ಮ ರಾಣಿ ಎಲಿಜಬೆತಳಿಂದ ಪರವಾನೆ ಪಡೆದು ಇಂಡಿಯಾ ದೇಶಕ್ಕೆ ಬಂದದ್ದು ವ್ಯಾಪಾರಮಾಡಿ ಹಣ ಗಳಿಸುವುದಕ್ಕೇ ಹೊರತು ಷೇಕ್ಸ್‌ಪಿಯರ್ ಕವಿಯ ದೃಶ್ಯಕಾವ್ಯಗಳ ಸೊಗಸನ್ನು ಸಾರುವುದಕ್ಕಲ್ಲ." ಈ ಕುಚೋದ್ಯದ ಹಿಂದೆ ಒಂದು ಚಾರಿತ್ರಿಕ ಸತ್ಯವಿದೆ. ಆ ವರ್ತಕರು ಬ್ರಿಟಿಷ್ ತೀರವನ್ನು ಬಿಟ್ಟು ಬರುವ ಕಾಲಕ್ಕೆ ವಿಲಿಯಂ ಷೇಕ್ಸ್‌ಪಿಯರ್‌ಗೆ (೧೫೬೪–೧೬೧೬) ಮೂವತ್ತಾರು ವರ್ಷ ವಯಸ್ಸಾಗಿತ್ತು. ಆಗಲೇ ಇಪ್ಪತ್ತಾರು ನಾಟಕಗಳನ್ನು ಬರೆದು ಪ್ರಸಿದ್ಧನಾಗಿದ್ದ. ಅವು ರಂಗಮಂಚಿಕೆಯ ಮೇಲೆ ಪ್ರದರ್ಶಿಸಲ್ಪಟ್ಟು ಜನಪ್ರಿಯ ವಾಗಿದ್ದುವು.

ಇಂಡಿಯಾ ದೇಶದಲ್ಲಿ ಇಂಗ್ಲಿಷರ ಕಾರುಬಾರು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿತ್ತು, ಪ್ರಭಾವ ಬೆಳೆಯುತ್ತಿತ್ತು. ಆದರೆ ಅತ್ಯಂತ ಶ್ರೇಷ್ಠ ನಾಟಕಕಾರನ ಪರಿಚಯಕ್ಕೆ ದೇಶ ಎರಡು ಶತಮಾನ ಕಾಯಬೇಕಾಯಿತು. ಕಲ್ಕತ್ತದಲ್ಲಿ ನೆಲಸಿದ್ದ ಇಂಗ್ಲಿಷರು ೧೭೫೭ರ ಹೊತ್ತಿಗೇ ತಮ್ಮದೊಂದು ರಂಗಮಂಟಪವನ್ನು ಮಾಡಿ ಕೊಂಡಿದ್ದರು. ಆದರೂ ಅವರ ದೃಷ್ಟಿ ಷೇಕ್ಸ್‌ಪಿಯರ್ ನಾಟಕಗಳತ್ತ ಹರಿಯಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಬ್ರಿಟಿಷ್ ಸರ್ಕಾರದ ವಶಕ್ಕೆ ಹೋದ ಮೇಲೆ. ವಾರೆನ್ ಹೇಸ್ಟಿಂಗ್ಸ್‌ನ ಅಧಿಕಾರಾವಧಿಯ (೧೭೭೩–೧೭೮೫) ಆದಿಯಲ್ಲಿ. ಕಲ್ಕತ್ತದ ಇಂಗ್ಲಿಷ್ ನಿವಾಸಿಗಳು ಚಂದಾ ಕೂಡಿಸಿ ಇನ್ನೊಂದು ಹೊಸ ನಾಟಕ ಶಾಲೆಯನ್ನು ಕಟ್ಟಿಸಿದರು—ಪ್ರಾರ್ಥನಾ ಮಂದಿರವನ್ನು ಕಟ್ಟಿಸುವುದಕ್ಕೂ ಮುಂಚಿತ ವಾಗಿ. ಆದರೂ ಷೇಕ್ಸ್‌ಪಿಯರ್ ನಾಟಕ ಬಹಳ ವರ್ಷಗಳವರೆಗೆ ಆ ರಂಗಮಂಚಿಕೆಯ ಮೇಲೆ ಕಾಣಿಸಿಕೊಳ್ಳಲಿಲ್ಲ. ಮುಂದೆ, ೧೮೦೦ ರಲ್ಲಿ, ಬ್ರಿಟಿಷ್ ಅಧಿಕಾರಿಗಳ ತರಬೇತಿಗಾಗಿ ಫೋರ್ಟ್ ವಿಲಿಯಂ ಕಾಲೇಜ್ ಸ್ಥಾಪಿತವಾಯಿತು. ಅದರೊಡನೆ ಸಂಪರ್ಕ ಹೊಂದಿದ್ದ ಹಲವು ಬಂಗಾಳಿ ದುಬಾಷಿಗಳಿಗೆ ಇಂಗ್ಲಿಷ್ ಸಾಹಿತ್ಯದ ಪರಿಚಯವಾಯಿತು. ೧೮೧೭ ರಲ್ಲಿ ಹಿಂದೂ ಕಾಲೇಜ್‌ನ ಸ್ಥಾಪನೆಯಾಗಲು ಹೆಚ್ಚು ಮಂದಿಗೆ ಇಂಗ್ಲಿಷ್ ಸಾಹಿತ್ಯದ ಸವಿ ಸಿಕ್ಕಿತು. ಇಂಡಿಯಾ ದೇಶದಲ್ಲಿ ಇಂಗ್ಲಿಷ್

ವಿದ್ಯಾಭ್ಯಾಸದ ಅಗತ್ಯ ಕುರಿತು ಮೆಕಾಲೆ ಸಲ್ಲಿಸಿದ್ದ ಸೂಚನಾಪತ್ರಕ್ಕೆ ಬೆಂಟಿಂಕ್‌ನ ಸ್ವೀಕಾರಸಹಿ ಬಿದ್ದುದೇ ೧೮೩೫ ತಡ, ದೇಶವಲ್ಲಿ ಒಂದು ಅದ್ಭುತ ಪರಿವರ್ತನೆ ಪ್ರಾರಂಭವಾಯಿತು. ಕಲ್ಕತ್ತ, ಬಾಂಬೆ, ಮದ್ರಾಸ್ ನಗರಗಳಲ್ಲಿ ವಿಶ್ವವಿದ್ಯಾನಿಲಯುಗಳು ಸ್ಥಾಪನೆಯಾದವು. ಇಂಗ್ಲಿಷ್ ವಿದ್ಯೆ ದೇಶಕ್ಕೆಲ್ಲ ಹರಡಿತು. ಅಲ್ಲಿಂದ ಶುರುವಾಯಿತು ಷೇಕ್ಸ್‌ಪಿಯರ್ 'ದಾಳಿ', ಎಫ್.ಎ., ಬಿ.ಎ. ತರಗತಿಗಳಿಗೆ ಷೇಕ್ಸ್‌ಪಿಯರ್ ನಾಟಕಗಳು ಅನಿವಾರ್ಯ ವ್ಯಾಸಂಗವಿಷಯುಗಳಾದುವು. ಇಂಗ್ಲಿಷ್ ವಿದ್ಯೆ ಬೇರು ಬಿಟ್ಟಂತೆ ಷೇಕ್ಸ್‌ಪಿಯರ್ "ಆಕ್ರಮಣ" ಹಸ್ತ ಹೈಸ್ಕೂಲಿಗೂ ಚಾಚಿತು. ಅವನ ನಾಟಕದ ಕತೆಯನ್ನೋ ಅಥವಾ ನಾಟಕದಿಂದಲೇ ಒಂದು ರಸಪ್ರಸಂಗದ ತುಣುಕನ್ನೋ ಪಠ್ಯಪುಸ್ತಕದಲ್ಲಿ ಸೇರಿಸುವುದು ಸಂಪ್ರದಾಯುವಾಯಿತು. ಮುಂದಿನ ಹೆಜ್ಜೆ ಅವುಗಳ ರಂಗಪ್ರವರ್ಶನ. ಶಾಲಾ–ಕಾಲೇಜುಗಳ ವಾರ್ಷಿಕ ದಿನಾಚರಣೆಯಲ್ಲಿ ವಿಶೇಷ ಸಭೆ–ಸಮಾರಂಭಗಳಲ್ಲಿ, ಷೇಕ್ಸ್‌ಪಿಯುರ್ ನಾಟಕ ಪ್ರದರ್ಶನ ಕಾರ್ಯಕ್ರಮದ ಒಂದು ಅವಶ್ಯ ಅಂಗವಾಯಿತು. ಈ ರಂಗಪ್ರಯೋಗದಲ್ಲಿ ವಿದ್ಯಾಸಂಸ್ಥೆಗಳಂತೆ ನಾಗರಿಕರ ನಾಟ್ಯವಿಲಾಸಿ ಸಂಘಗಳೂ ಷೇಕ್ಸ್‌ಪಿಯರ್–ಶ್ರದ್ಧೆಯನ್ನು ವ್ಯಕ್ತಪಡಿಸಿದವು. ಅನೇಕ ನಗರಗಳಿಗೆ ಹೊಸ ಚೈತನ್ಯ ಬಂತು.

ಷೇಕ್ಸ್‌ಪಿಯರ್ ನಾಟಕಗಳ ವ್ಯಾಸಂಗ ಎಲ್ಲರನ್ನೂ ಆಹ್ಲಾದಗೊಳಿಸಿತು—ಅವರವರ ವಯುಸ್ಸು ವಿದ್ಯೆ ಅನುಭವಗಳಿಗೆ ತಕ್ಕಂತೆ. ಅವನ ನಾಟಕಬಾಹುಳ್ಯ, ವಸ್ತುವೈವಿಧ್ಯ, ಸಂವಿಧಾನ ಕೌಶಲ, ಪಾತ್ರ ವಿಶ್ಲೇಷಣೆ, ಭಾವತೀವ್ರತೆ, ಭಾಷಾ ಗಾಂಭೀರ್ಯ—ಇವುಗಳಿಂದ ದೇಶೀಯು ವಿದ್ವಾಂಸರು ಮುಗ್ಧರಾದರು. ಕಾಲ ಕ್ರಮೇಣ ತಮ್ಮ ನೂತನ ಸಂತೋಷಸಂಪತ್ತನ್ನು ಇತರರಿಗೆ ಹಂಚಿಕೊಡುವ ಆಸೆಯಾಯಿತು. ಆ ಪರಕೀಯು ಸಮಾಜದ ಸಂಪ್ರದಾಯುಗಳು ಸನ್ನಿವೇಶಗಳು ಜನಸಾಮಾನ್ಯಕ್ಕೆ ಅರ್ಥವಾಗುವುದಿಲ್ಲ. ಈ ಅಡಚಣೆಯಿಂದ ಪಾರಾಗಲು ಇರುವುದೊಂದೇ ಮಾರ್ಗ : ಭಾಷೆಯಂತೆ ಹೆಸರುಗಳನ್ನೂ ಸನ್ನಿವೇಶಗಳನ್ನೂ ನಮ್ಮ ಸಮಾಜಪದ್ಧತಿಗಳಿಗೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು. ಹೀಗೆ ಹೊಂದಿಸಿಕೊಂಡು ಬರೆದ ಮೊದಲ ಷೇಕ್ಸ್‌ಪಿಯರ್ ನಾಟಕವೆಂದರೆ The Merchant of Venice—ಬಂಗಾಳಿಯು "ಭಾನುಮತಿ ಚಿತ್ತಬಿಲಾಸ್" ಆಗಿ– ೧೮೫೫ ರಲ್ಲಿ ಪ್ರಕಟವಾಯಿತು. ಕನ್ನಡದಲ್ಲಿ ಷೇಕ್ಸ್‌ಪಿಯುರ್ ನಾಟಕದ ಪ್ರಥಮ ರೂಪಾಂತರವನ್ನು ಯಾವಾಗ ಯಾರು ರಚಿಸಿದರೆಂದು ನಿಷ್ಕೃಷ್ಟವಾಗಿ ಹೇಳಲು ಇನ್ನೂ ಸಾಧ್ಯವಾಗಿಲ್ಲ. ಆದರೆ ಈ ಬಗೆಯು ಭಾಷಾಂತರಗಳು ಹದಿನಾರು ನಾಟಕಗಳಿಗೆ ಸಿಗುತ್ತವೆಂದು ಶ್ರೀ ಎ. ಎನ್. ಮೂರ್ತಿ ರಾಯುರು ತಿಳಿಸುತ್ತಾರೆ (Indian Lierature, Shakespeare Number). ಒಂದೇ ನಾಟಕಕ್ಕೆ ಹಲವು ಭಾಷಾಂತರಗಳೂ ಉಂಟು. The Merchant of Venice ಗೆ ಐದು ; Hamlet, Romeo and Juliet ಮತ್ತು The Taming of the Shrew— ಇವುಗಳಿಗೆ ನಾಲ್ಕು ನಾಲ್ಕು ; Macbeth ಗೆ ಮೂರು ; Cymbeline, King Lear, Othello, The Tempest— ಇವುಗಳಿಗೆ ಎರಡೆರಡು

ಭಾಷಾಂತರಗಳಿವೆಯೆಂದು ಅವರ ಪಟ್ಟಿಯಿಂದ ಗೊತ್ತಾಗುತ್ತದೆ. ಅವರ ಗಮನಕ್ಕೆ ಬಾರದ ಬೇರೆ ಭಾಷಾಂತರಗಳಿದ್ದರೆ ಆಶ್ಚರ್ಯವಲ್ಲ.

'ಕನ್ನಡ ಮ್ಯಾಕ್‌ಬೆತ್' ನಾಟಕಕ್ಕೆ ಬರೆದಿರುವ ೩೭ ಪುಟಗಳಷ್ಟು ದೀರ್ಘವಾದ ವಿದ್ವತ್ಪೂರ್ಣ ಪೀಠಿಕೆಯಲ್ಲಿ ಡಿ.ವಿ.ಜಿ. ತಮಗೆ "ಹಿಂದೆ ಷೇಕ್ಸ್‌ಪಿಯರನ್ನು ಕನ್ನಡಿಸಲು ಯತ್ನಿಸಿದ ಶ್ರೀ ಆನಂದರಾಯರವರು, ಶ್ರೀ ಸಿ. ಸುಬ್ಬರಾಯರವರು, ಶ್ರೀ ಬಸವಪ್ಪ ಶಾಸ್ತ್ರಿಗಳವರು, ಶ್ರೀ ಎಂ. ಎಲ್. ಶ್ರೀಕಂಠೇಶಗೌಡರವರು ಮೊದಲಾದ ಭಾಷಾ ಸೇವಕರನ್ನು ಕೃತಜ್ಞತೆಯಿಂದ ಸ್ಮರಿಸುವುದು ನನಗೆ ಕರ್ತವ್ಯವಾಗಿದೆ" ಎಂದು ಹೇಳಿ, ತಮ್ಮ 'ದಾರಿ' ಬೇರೆಯಾದರೂ 'ಗುರಿ' ಅವರದರಿಂದ "ದೂರವಾದುದಲ್ಲ" ಎನ್ನುತ್ತಾರೆ. ಶ್ರೀಕಂಠೇಶಗೌಡರ Macbeth ಅನುವಾದ—'ಪ್ರತಾಪರುದ್ರದೇವ'—೧೮೯೫ರಲ್ಲಿ ಪ್ರಕಟವಾಗಿತ್ತು. ಅದು ತಮಗೆ ಓದಲು ದೊರೆಯಲಿಲ್ಲವೆಂದು ತಿಳಿಸುತ್ತಾರೆ. ಡಿ.ವಿ.ಜಿ. ಮುಂದುವರಿದು ಹೀಗೆ ಬರೆಯುತ್ತಾರೆ: "'ರಾಮವರ್ಮ ಲೀಲಾವತಿ', 'ಶೂರಸೇನ ಚರಿತ್ರೆ', 'ಜಯಸಿಂಹರಾಜ ಚರಿತ್ರೆ', 'ಚಂಡೀಮದಮರ್ದನ' ಮೊದಲಾದ ಕನ್ನಡ ನಾಟಕಗಳು ಷೇಕ್ಸ್‌ಪಿಯರನ ಕೃತಿಗಳ ಹಿಂದೂ ಅವತಾರಗಳು. ಆ ಪರಿಯ ಕೆಲಸದಿಂದ ಉಪಯೋಗವಿಲ್ಲವೆಂದು ನಾನು ಹೇಳತಕ್ಕವನಲ್ಲ. ನಾನೂ ಅಂಥ ಕೆಲಸವನ್ನು ಸ್ವಲ್ಪ ಮಾಡಿದ್ದೇನೆ. ಆದರೆ ಹಾಗೆ ವೇಷಾಂತರ ಆಗುವುದು ಅಷ್ಟು ಪ್ರಯೋಜನಕರವಾಗಲಾರದು." "ಷೇಕ್ಸ್‌ಪಿಯರನ ಜಗತ್ತನ್ನು ಕೂಡಿದಮಟ್ಟಿಗೂ ಯಥಾವತ್ತಾಗಿ—ಇರುವುದು ಇರುವಂತೆಯೇ—ತೋರಿಸಬೇಕೆಂಬುದು ನನ್ನ ಸಂಕಲ್ಪ...ಆತನ ಲೋಕದ ಪ್ರತಿಬಿಂಬವನ್ನು, ಸಾಧ್ಯವಿರುವ ಮಟ್ಟಿಗೂ ಇಲ್ಲಿ ಇಳಿಸಬೇಕೆಂಬುದು ನನ್ನ ಪ್ರಯತ್ನ." ಅದುವರೆಗೆ (೧೯೩೬) ಮತ್ತೆ ಯಾರೂ ಈ ಗುರಿ ಇಟ್ಟುಕೊಂಡು ಷೇಕ್ಸ್‌ಪಿಯರನ್ನು ಕನ್ನಡಿಸಲು ಪ್ರಯತ್ನಿಸಿದಂತೆ ಕಾಣುವುದಿಲ್ಲ.

"ವಿಲಿಯಂ ಷೇಕ್ಸ್‌ಪಿಯರ್ ಮಹಾಕವಿಯ ಮುಖ್ಯ ನಾಟಕಗಳಲ್ಲಿ ಕೆಲವನ್ನಾದರೂ ಕನ್ನಡಕ್ಕೆ ಪರಿವರ್ತಿಸಬೇಕೆಂಬ ಆಸೆ ಬಹುಕಾಲದಿಂದ ನನ್ನ ಮನಸ್ಸಿನಲ್ಲಿತ್ತು. ಹೊರಗಣ ಕೆಲಸಗಳನ್ನು ನಾನು ಬದಿಗಿರಿಸಿ ಮನೆಯಲ್ಲಿ ಕೂಡಬೇಕಾಗಿ ಬಂದ ಒಂದು ಸಂದರ್ಭದಲ್ಲಿ ಆ ಉದ್ದೇಶಕ್ಕೆ ಸ್ವಲ್ಪ ಅವಕಾಶ ದೊರೆಯಿತು." ಡಿ.ವಿ.ಜಿ. ಅವರು ಭಾಷಾಂತರಕ್ಕೆ ಈ ನಾಟಕವನ್ನು ಆರಿಸಿಕೊಳ್ಳಲು ಕಾರಣ "ಷೇಕ್ಸ್‌ಪಿಯರನ ಅತ್ಯಂತ ಪ್ರಸಿದ್ಧ ಕೃತಿಗಳಲ್ಲೊಂದಾಗಿರುವುದು ಮಾತ್ರವಲ್ಲದೆ ಗಾತ್ರದಲ್ಲಿ ಬಹು ಚಿಕ್ಕದು" ಎಂದಿದ್ದರೂ ಅವರ "ಧರ್ಮವಿಚಾರದ ದೃಷ್ಟಿ" ಬಹಳಷ್ಟು ಪಾತ್ರ ವಹಿಸಿದೆ ಈ ನಾಟಕದ ಆಯ್ಕೆಯಲ್ಲಿ. ಇದಕ್ಕೆ ಸಾಕ್ಷಿಯಾಗಿ 'ಪೀಠಿಕೆ'ಯ ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು, ಹದಿನೈದು, ಹದಿನಾರು—ಇಷ್ಟು ಭಾಗಗಳು ಎದ್ದುನಿಲ್ಲುತ್ತವೆ.

ತಮ್ಮ ಬರವಣಿಗೆಯಲ್ಲಿ "ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಗ್ರಂಥದ ಕನ್ನಡ. ಬೀದಿಯ ಕನ್ನಡ—ಇವೆಲ್ಲವನ್ನೂ ಬೆರಸಿ...ಸಂಧಿ ಸೇರಿಸಬಹುದಾದ ಕಡೆ ವಿಸಂಧಿ ಮಾಡಿ...ಸಮಾಸವಾಗುವ ಕಡೆ ವಿಗ್ರಹ ಬಿಡಿಸಿ...ಚಿತ್ರ–ವಿಚಿತ್ರ ಪದಗಳನ್ನೂ ಪ್ರಯೋಗಗಳನ್ನೂ ಜೋಡಿಸಿ..."ದ್ದರ 'ತಪ್ಪು' "ಉದ್ದೇಶಪೂರ್ವಕವಾಗಿ ಹೊಸ ದಾರಿ ಹಿಡಿದಿರುವವನ...ಯಾವುದೋ ಒಂದು ಔಚಿತ್ಯದ ಚಿಂತೆ, ಯಾವುದೋ ಒಂದು ಅಭಿರುಚಿಯ ಮೇಲಣ ಗಮನ, ಯಾವುದೋ ಒಂದು ವಾಚಕ ವರ್ಗದ ಸೌಲಭ್ಯದ ಯೋಚನೆ—ಇವುಗಳ ಬಲಾತ್ಕಾರಕ್ಕೆ ಒಳಗಾಗಿ ನಡೆದವನ ತಪ್ಪು"—ಎಂದು ಹೇಳಿ ವಿಮರ್ಶಕನ ಬಾಯಿ ಕಟ್ಟಿದ್ದಾರೆ.

ಮೂಲಕೃತಿಯ blank verse ಗೆ ಹೋಲುವ ಸರಳರಗಳೆಯನ್ನು ಬಳಸಿ, ನಾಟಕವನ್ನು ಛಂದೋಬದ್ಧವಾಗಿ ಮಾಡಿದ್ದಾರೆ. ಹೀಗೆ ಎಲ್ಲ ಬಗೆಯಿಂದಲೂ ಮೂಲ ನಾಟಕದ ಪ್ರತಿಕೃತಿಯನ್ನಾಗಿಸಿ ಕನ್ನಡಕ್ಕೆ ಕೊಡಲು ಅವರು ಮಾಡಿರುವ ಪ್ರಯತ್ನ ಸ್ತುತ್ಯ. ಶ್ರೀ ಮೂರ್ತಿರಾಯರು ಅಂದಿರುವಂತೆ "Dr. D. V. Gundappa's Macbeth is scholarly and dignified".

ಡಿ.ವಿ.ಜಿ. ಅವರ 'ವೃತ್ತಪತ್ರಿಕೆ'

ಜಿ. ಆರ್. ಶಂಕರರಾವ್

"ವೃತ್ತಪತ್ರಿಕೆಯ ಪ್ರಪಂಚ ದಿನೇ ದಿನೇ ಬೆಳೆದುಕೊಂಡು ಹೋಗತಕ್ಕದ್ದು. ಅವರಲ್ಲಿಯ ಸಂದರ್ಭಗಳು ಪದೇ ಪದೇ ಬದಲಾಯಿಸತಕ್ಕವು" ಎಂದು 'ವೃತ್ತ ಪತ್ರಿಕೆ' ಎಂಬ ತಮ್ಮ ವಿಚಾರಪರಿಪ್ಲುತ ಪುಸ್ತಕಕ್ಕೆ ಬರೆದಿರುವ ಮುನ್ನುಡಿಯಲ್ಲಿ ಡಿ.ವಿ.ಜಿ. ಅವರು ಹೇಳಿರುವ ಮಾತು ಅದೆಷ್ಟು ಸತ್ಯ ! 1928 ನೆಯ ಸಂವತ್ಸರದಲ್ಲಿ ಅವರು ಕೊಟ್ಟ ಬಾಯಿಮಾತಿನ ಉಪನ್ಯಾಸ, ಅದೇ ವರ್ಷ ಪ್ರಕಟವಾಯಿತು. 1954 ರಲ್ಲಿ ವಿಸ್ತಾರಗೊಂಡು ಪ್ರಕಟವಾಗಿ 1967 ರಲ್ಲಿ ಇನ್ನೂ ವಿಸ್ತೃತರೂಪವನ್ನು ಪಡೆಯಿತು. ಈ ಹಂತಹಂತದ ಪುಸ್ತಕದ ಬೆಳವಣಿಗೆಗೆ ಕಾರಣ, ವೃತ್ತಪತ್ರಿಕೆಯ ಸ್ವರೂಪದಲ್ಲಿ ಕಾಲಕಾಲಕ್ಕೆ ಆದ ಬೆಳವಣಿಗೆ. ಈ ಬೆಳವಣಿಗೆಯನ್ನು ಅನುಸರಿಸಿ ಪುಸ್ತಕಕ್ಕೆ ಹೊಸ ಹೊಸ ಅಂಶಗಳನ್ನು ಸೇರಿಸುತ್ತ ಹೋಗಿದ್ದಾರೆ ಡಿ.ವಿ.ಜಿ. 1968 ರಲ್ಲಿ ಈ ಪುಸ್ತಕ ಪ್ರಕಟವಾದ ಮೇಲೂ ಇಂದಿನ ತನಕ ವೃತ್ತಪತ್ರಿಕೆಯಲ್ಲಿ ಎಷ್ಟೋ ವ್ಯತ್ಯಾಸಗಳಾಗಿವೆ; 1967 ರವರೆಗೆ ತಾವು ಗಮನಿಸಿದ ವೃತ್ತಪತ್ರಿಕಾ ಪ್ರಪಂಚದ ಸಂಕ್ಷಿಪ್ತವಾದರೂ ಒಂದು ಸಮಗ್ರ ನೋಟವನ್ನು ಡಿ.ವಿ.ಜಿ. ಅವರು ತಮ್ಮ ಪುಸ್ತಕದಲ್ಲಿ ಕಾಣಗೊಟ್ಟಿದ್ದಾರೆ. ಪುಸ್ತಕದ ತಿರುಳನ್ನು ಪರಿಚಯ ಮಾಡಿಕೊಡುವ ಒಂದು ವಿನಮ್ರ ಪ್ರಯತ್ನ ಶ್ರೀ ಜಿ. ಆರ್. ಶಂಕರರಾವ್ ಅವರದ್ದು.

ಪೂಜ್ಯ ಡಿ.ವಿ.ಜಿ.ಯವರ "ವೃತ್ತಪತ್ರಿಕೆ" ಎಂಬ ಶಿರೋನಾಮೆಯ ಪುಸ್ತಕದಲ್ಲಿ ವ್ಯಾಪಕವಾಗಿ ಹಬ್ಬಿರುವ ವಿಚಾರೋದ್ಯಾನದಲ್ಲಿ ನಿಬಿಡವಾದ ವೃತ್ತಪತ್ರಿಕೆಯ ಸ್ವರೂಪ, ಅದರ ಕರ್ತವ್ಯ, ಅದಕ್ಕಿರಬೇಕಾದ ಸ್ವಾತಂತ್ರ್ಯ, ಅದು ಪಾಲಿಸಬೇಕಾದ ಧರ್ಮ ಮುಂತಾದ ಗಹನ ವಿಚಾರಗಳು ಉದ್ಬೋಧಕವಾಗಿವೆ.

ಜನಜೀವನದಲ್ಲಿ ವೃತ್ತಪತ್ರಿಕೆಯು ಪ್ರಚಾರ ಮಾಧ್ಯಮವಾಗಿ ಜ್ಞಾನದೀವಿಗೆ ಯಂತೆ ಕರ್ತವ್ಯ ಪಾಲಿಸಬೇಕು. ಅದು ಕೇವಲ ದೇಶೀಯ ಮತ್ತು ವಿದೇಶೀಯ ಸುದ್ದಿಗಳನ್ನು ಮಾತ್ರ ಪ್ರಕಟಿಸುವುದೊಂದೇ ಆದ್ಯ ಕರ್ತವ್ಯವೆಂದು ಬಗೆಯದೆ, ಸರ್ವತೋಮುಖವಾದ ಜನಜಾಗೃತಿಗೆ ಸಹಕಾರಿಯಾಗುವಂಥ ಸಾಹಿತ್ಯ, ಸಂಸ್ಕೃತಿ, ರಂಜನೆ, ಕಲೆ, ವಿಮರ್ಶೆ ಮುಂತಾದ ಸದಭಿರುಚಿ ನೀಡುವಂಥ ಲೇಖನಗಳಿಂದ ಒಳ ಗೊಂಡಿರಬೇಕು. ಸುಪ್ತಚೇತನಗಳನ್ನು ಬಡಿದೆಬ್ಬಿಸಿ ಲೋಕವ್ಯವಹಾರದಲ್ಲಿ ಕಾರ್ಯ ಪಟುತ್ವ ವಹಿಸುವಂಥ ಪ್ರಚೋದಕ ಜೀವನಾಡಿಗಳಂತೆ ಸ್ಪಂದಿಸುತ್ತಿರಬೇಕು.

ವೃತ್ತಪತ್ರಿಕೆಯ ಪ್ರಧಾನ ಕರ್ತವ್ಯ ದೇಶ ವಿದೇಶಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸಂಗ್ರಹಿಸಿ ವಾಚಕರಿಗೆ ಕಾಲಕಾಲಕ್ಕೆ ಒದಗಿಸುವುದು. ಜೀವ ಧಾರಣೆಗೆ ಆಹಾರ ಎಷ್ಟು ಮುಖ್ಯವೊ, ಲೋಕವ್ಯವಹಾರಕ್ಕೆ ಸುದ್ದಿಸಂಗ್ರಹವೂ ಅಷ್ಟೇ ಅವಿಭಾಜ್ಯ ಲೋಕನೀತಿಯಾಗಿದೆ. ಈ ಚಟ ಕೇವಲ ಪ್ರಸಕ್ತ ಜನಾಂಗಕ್ಕೆ ಮೀಸಲಾದುದಲ್ಲ ; ಪುರಾಣ ಕಾಲದಿಂದಲೂ ಈ ಪ್ರಸಕ್ತಿ ಎಡೆಬಿಡದೆ ನಡೆಯುತ್ತಲೇ ಬಂದಿದೆ. ಈ ದಿಶೆಯಲ್ಲಿ ತ್ರಿಲೋಕ ಸಂಚಾರಿಯಾದ ನಾರದನ ಪಾತ್ರ ಎಲ್ಲರ ಆಗುಹೋಗುಗಳಿಗೆ ಕಾರಣವಾಯಿತು. ದುಷ್ಟಶಿಕ್ಷಣ ಶಿಷ್ಟಪರಿಪಾಲನ ಕಾರ್ಯ ಗಳಿಗೆ ನಾರದನು ಬಾತ್ಮೀದಾರನಾಗಿ ಲೋಕಕಲ್ಯಾಣವನ್ನು ಸಾಧಿಸಿದ ಧವಳಕೀರ್ತಿ ಆತನಿಗೇ ಸಲ್ಲತಕ್ಕದ್ದು. ಈ ಸಂದೇಶವಾಹಕನು "ಕಲಹಪ್ರಿಯ" ಎಂಬ ಲಘು ಟೀಕೆಗೆ ಗುರಿಯಾಗಬೇಕಾಯಿತು. ಹಿಂದಿನ ಕಾಲದಲ್ಲಿ ರಾಜರು ತಮ್ಮ ಸುಗಮ ಆಡಳಿತಕ್ಕೆ ತಕ್ಕ ಸುದ್ದಿಸಾರವನ್ನು ಸಂಗ್ರಹಿಸಲು ಬೇಹುಗಾರರನ್ನು ಮತ್ತು ಆಡಳಿತ ಕಾರ್ಯವಿಧಾನಗಳನ್ನು ಪ್ರಜೆಗಳಿಗೆ ತಲುಪಿಸಲು 'ಡಂಗುರಿ'ಯನ್ನು ತಮ್ಮ ಕಾರ್ಯಾಚರಣೆಗೆ ಬಳಸುತ್ತಿದ್ದರು.

ಈಗ ವೈಜ್ಞಾನಿಕ ಮತ್ತು ತಾಂತ್ರಿಕ ನೆರವಿನಿಂದ ಮುದ್ರಣಯಂತ್ರಗಳು ಯಥೇಚ್ಛವಾಗಿ ಲಭ್ಯವಾಗಿವೆ. ಮೊದಲನೆಯ ಮುದ್ರಣಯಂತ್ರವು 1840ರಲ್ಲಿ ಗ್ಯಾರೆಟ್ ಎಂಬ ಕ್ರೈಸ್ತ ಬೋಧಕನಿಂದ ಮೈಸೂರಿನಲ್ಲಿ ಆರಂಭವಾಯಿತು. ಮೈಸೂರು ರಾಜ್ಯಪತ್ರ (ಗೆಜೆಟ್) 1866ರಲ್ಲಿ ಅಸ್ತಿತ್ವಕ್ಕೆ ಬಂದಿತು. ಭಾರತದಲ್ಲಿ ವೃತ್ತ ಪತ್ರಿಕೆಗಳ ಸರಣಿ ಹೀಗೆ ಆರಂಭವಾಯತು. "ಹಿಕ್ಕಿಸ್ ಗೆಜೆಟ್" 1781ರಲ್ಲಿ, ಕಲ್ಕತ್ತೆಯ "ಇಂಗ್ಲಿಷ್ ಮ್ಯಾನ್" 1821ರಲ್ಲಿ, ಭಾರತದಲ್ಲಿ 1832ರ ವೇಳೆಗೆ ಆರು ಐರೋಪ್ಯ ಪತ್ರಿಕೆಗಳು, ಐದು ದೇಶೀಯ ಪತ್ರಿಕೆಗಳು ಹುಟ್ಟಿಕೊಂಡವು. "ಇಂಡಿಯನ್ ಮಿರರ್" ಎಂಬ ಪತ್ರಿಕೆಯು ಜನ್ಮತಾಳಿದ್ದು 1863ರಲ್ಲಿ. ಕರ್ನಾಟಕ ದಲ್ಲಿ "ಹಿತೇಚ್ಛು" ಎಂಬ ಪತ್ರಿಕೆ 1870ರಲ್ಲಿ ಕಲ್ಗಾಡಿಯಿಂದ, ಮೂರು ಕನ್ನಡ ಪತ್ರಿಕೆಗಳು 1880ರಲ್ಲಿ ಧಾರವಾಡದಿಂದ, ಇನ್ನೂ ಮೂರು ಪತ್ರಿಕೆಗಳು ಬೆಳಗಾವಿ ಯಿಂದ ಪ್ರಚುರವಾದುವು. "ಡೆಯಿಲಿ ಪೋಸ್ಟ್", "ಈವಿನಿಂಗ್ ಮೈಲ್", "ಕರ್ನಾಟಕ ಪ್ರಕಾಶಿಕೆ" 1865ರಲ್ಲಿ ಪ್ರಚಾರಕ್ಕೆ ಬಂದಿದ್ದವು. ಕ್ರಮೇಣ ಇನ್ನೂ ಎಷ್ಟೋ

ಪತ್ರಿಕೆಗಳು, ಅಂದರೆ "ತಾಯಿನಾಡು", "ದೇಶಬಂಧು", "ವಿಶ್ವಕರ್ನಾಟಕ" ಎಂಬ ಪತ್ರಿಕೆಗಳು ಕೆಲವು ದಶಕಗಳು ವಿಜೃಂಭಿಸಿ ಕಾರಣಾಂತರಗಳಿಂದ ಮರೆಯಾದವು. ಈಗ ಪ್ರಕಟವಾಗುತ್ತಿರುವ ಪತ್ರಿಕೆಗಳ ಪರಿಚಯ ಎಲ್ಲರಿಗೂ ವೇದ್ಯವಾಗಿರುವುದರಿಂದ ಅವುಗಳ ಅಭಿವಾದನಪ್ರಸಂಗ ಇಲ್ಲಿ ಕೈಬಿಡಲಾಗಿದೆ.

ಪ್ರಜಾಪ್ರಭುತ್ವದಲ್ಲಿ ಪತ್ರಿಕೆಯ ಬಹುಮುಖ ಪಾತ್ರವೇನೆಂಬುದನ್ನು ಅರಿತುಕೊಳ್ಳಲು ಪ್ರತಿಯೊಬ್ಬ ನಾಗರಿಕನು ಮೂಲಭೂತ ಧ್ಯೇಯನಿಷ್ಠೆಯಿಂದಿರಬೇಕು. ಪತ್ರಿಕೆಯು ಯಾವ ಬಣಕ್ಕೂ ಸೇರದ ಒಂದು ಸ್ವತಂತ್ರ ಪ್ರವೃತ್ತಿಯುಳ್ಳದ್ದಾಗಿದ್ದು, ಬಿಚ್ಚುನುಡಿಗಳ ಮಥಿತಾರ್ಥಗಳನ್ನು ಜನತೆಗೆ ಮುಟ್ಟಿಸುವ ಸಂದೇಶವಾಹಕವಾಗಿ ಶ್ರಮಿಸಬೇಕು. ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ. ಕಾರ್ಯಾಂಗ ಮತ್ತು ನ್ಯಾಯಾಂಗಗಳು 'ಸಂವಿಧಾನ'ದ ನಿರೂಪದಾಶ್ರಯದಲ್ಲಿ ಹೇಗೆ ತಮ್ಮ ಚಟುವಟಿಕೆಗಳನ್ನು ಕಾರ್ಯಗತಗೊಳಿಸಬೇಕೆಂಬುದನ್ನು ರಾಜ್ಯಾಂಗದಲ್ಲಿ ಬಹಳ ವ್ಯಾಪಕವಾಗಿ ವಿಶದೀಕರಿಸಲಾಗಿದೆ. ಶಾಸನ ರಚಿಸುವ ಹೊಣೆ ಶಾಸಕಾಂಗಕ್ಕೂ, ಅದನ್ನು ಕೃತಿಗಿಳಿಸುವ ಜವಾಬ್ದಾರಿ ಕಾರ್ಯಾಂಗಕ್ಕೂ, ಇವೆರಡು ಕಾರ್ಯವಿಧಾನಗಳ ಸಂದಿಗ್ಧತೆ ಮತ್ತು ಜಟಿಲತೆಗಳನ್ನು ನಿವಾರಿಸಲು ನ್ಯಾಯಾಂಗಕ್ಕೂ ವಹಿಸಲ್ಪಟ್ಟ ತ್ರಿವಿಧ ಕಾರ್ಯವ್ಯಾಪ್ತಿಗಳು. ಸ್ವಾತಂತ್ರ್ಯ ಬರುವ ಮುನ್ನ ಕಾರ್ಯಾಂಗವೇ ಪರಮೋಚ್ಚ ಸ್ಥಾನದಲ್ಲಿತ್ತು. ಅದರ ಆಡಳಿತ ವೈಖರಿಗೆ ಪ್ರಜೆಗಳೆಲ್ಲರೂ 'ಜೋ ಹುಕುಂ' ಎಂಬ ಅವಿರೋಧ ವಿಧೇಯತೆಗೆ ಬದ್ಧರಾಗಿರುತ್ತಿದ್ದರು. ಸರ್ಕಾರದ ಜನ ವಿರೋಧ ಕಾರ್ಯವನ್ನು ಯಾವ ಪತ್ರಿಕೆಯಾದರೂ ಪ್ರಶ್ನಿಸಿ ಟೀಕೆ ಮಾಡುವಂತಿದ್ದಿದ್ದರೆ. ಸರ್ಕಾರ ಆ ಪತ್ರಿಕೆಗೆ 'ಮುಟ್ಟುಗೋಲು' ಮುದ್ರೆ ಒತ್ತುತ್ತಿತ್ತು. ಆಗ ಪತ್ರಿಕೆಗಳು ತಮ್ಮ ಸ್ವಂತಿಕೆಯನ್ನೇ ಕಳೆದುಕೊಂಡಿದ್ದುವು. ಸ್ವಾತಂತ್ರ್ಯಾನಂತರ ವೃತ್ತಪತ್ರಿಕೆಗಳೂ ಗರಿಗೆದರಿ ಆಡಳಿತದ ನ್ಯೂನತೆಗಳನ್ನು ಕುರಿತು ಧ್ವನಿಯೇರಿಸಲು ಒಂದು ಅವಕಾಶ ದೊರಕಿಸಿಕೊಂಡಿವೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಗೆ ಪತ್ರಿಕಾರಂಗವೂ ನಾಲ್ಕನೆಯ ಅಂಗವಾಗಿ ಸೇರಿದ ಮೇಲೆ ಆಡಳಿತವು ಚತುರಂಗಕ್ಕೆ ನಿಷ್ಠೆಯಿಂದಿರಬೇಕು.

ಪ್ರಜಾಪ್ರಭುತ್ವದಲ್ಲಿ ತಮ್ಮ ಪ್ರತಿನಿಧಿಗಳನ್ನು ಪ್ರಭುಗಳಾದ ಪ್ರಜೆಗಳೇ ಚುನಾಯಿಸುವುದರಿಂದ ಚುನಾಯಿತ ಪ್ರತಿನಿಧಿಗಳ ಬಹುಮತಗಳಿಂದ ಆಯ್ಕೆಯಾದ ನಾಯಕನಿಂದ ರಚಿಸಲ ಟ್ಟ ಸಚಿವ ಸಂಪುಟವು ಜನಹಿತ ಕಾರ್ಯಗಳಿಗೆ ಮಾನ್ಯತೆ ಮತ್ತು ಆದ್ಯತೆ ನೀಡಿ ಆಡಳಿತ ಪಕ್ಷವಾಗಿ ಕಾರ್ಯ ನಿರ್ವಹಿಸಬೇಕು. ಈ ದಿಶೆಯಲ್ಲಿ ನ್ಯೂನಾತಿರೇಕಗಳು ಕಂಡುಬಂದಲ್ಲಿ ವಿರೋಧ ಪಕ್ಷಗಳು ತಮ್ಮ ಧ್ವನಿಮತಗಳ ಮೂಲಕ ತಮ್ಮ ಅಸ್ತಿತ್ವವನ್ನು ಪ್ರದರ್ಶಿಸಿ ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕು. ಅಂತೆಯೇ ಪತ್ರಿಕೆಗಳೂ ಸಹ ಚತುರಂಗವ್ಯೂಹದಲ್ಲಿ ತಮ್ಮದಾದ ನಾಲ್ಕನೆಯ ಸ್ಥಾನವನ್ನು ಗುರುತಿಸಿಕೊಂಡು ತಮ್ಮ ಪ್ರತಿಕ್ರಿಯೆಗಳನ್ನು ವಸ್ತುನಿಷ್ಠವಾಗಿ ಅಂಕಿ

ಅಂಶಗಳ ಆಧಾರದಿಂದ ಅಗ್ರಲೇಖನಗಳಲ್ಲಿ ಮುಗ್ಧರ ಸುಪ್ತಚೇತನಗಳನ್ನು ಬಡಿದೆಬ್ಬಿಸುವ ಪರಿ ವಿಚಾರಮಂಥನ ನಡಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಮದವೇರಿದ ಆನೆಯನ್ನು ಮಾವುಟಿಗನು ತನ್ನ ಅಂಕೆಗೆ ತೆಗೆದುಕೊಳ್ಳಲು ಅಂಕುಶ ಪ್ರಯೋಗ ಮಾಡುವಂತೆ, ವಿರೋಧ ಪಕ್ಷಗಳು ಮತ್ತು ವೃತ್ತ ಪತ್ರಿಕೆಗಳು ಆಗಾಗ ಹಳಿ ತಪ್ಪಿ ಸಾಗುವ ಆಡಳಿತ ಪಕ್ಷವನ್ನು ಹದಕ್ಕೆ ತರಲು, ಆಯಾಯ ಸಮಯವರಿತು ಮಾವುಟಿಗನ ಅಂಕುಶದಂತೆ ಮಾಗ್ಬಾಣಗಳನ್ನು ಪ್ರಯೋಗಿಸುತ್ತಲೇ ಇರಬೇಕು. ಈ ಒಂದು ಕ್ರಮದಿಂದ ಆಡಳಿತ ಪಕ್ಷವು ಎಚ್ಚರವಹಿಸುವುದಕ್ಕೆ ಸಾಧನವಾಗುತ್ತದೆ ; ಆಡಳಿತ ಯಂತ್ರದ ಅಂತರಂಗವನ್ನು ಕಲಕುವಂಥ ಪರಿಣಾಮಕಾರಿ ಟೀಕೆಗಳಿಂದ ಆಡಳಿತದ ಅತಿರೇಕಗಳನ್ನು ಬಹಿರಂಗಗೊಳಿಸಿ ಚತುರಂಗದ ಸೇನಾನಿಯಂತೆ ವೃತ್ತ ಪತ್ರಿಕೆಗಳು ವಿಜೃಂಭಿಸಬೇಕು. ಆಗಲೇ ನಿಜವಾದ ಪ್ರಜಾಸತ್ತೆಯ ಸ್ವರೂಪವೆಂತಹುದು—ಎಂಬುದು ಜನಸಾಮಾನ್ಯರಿಗೆ ಅರಿವಾಗುವುದು.

ಪತ್ರಿಕೋದ್ಯೋಗಿಯು ತಾನು ಕೈಗೊಳ್ಳಬೇಕಾದ ಪ್ರತಿಜ್ಞಾವಿಧಿಯ ಪಾಠವನ್ನು ಅಮೆರಿಕದ ಮಿಸೌರಿ ಪಟ್ಟಣವಲ್ಲಿಯ ಪತ್ರಿಕೋದ್ಯೋಗ ಕಲಾಶಾಲೆಯ ಸ್ಥಾಪಕನಾದ ವಾಲ್ಟರ್ ವಿಲಿಯಮ್ಸ್ ಎಂಬ ಮಹಾಶಯನು ರಚಿಸಿದನು. ಅದನ್ನು ಮಿಸೌರಿ ವಿಶ್ವವಿದ್ಯಾನಿಲಯದ ಜೆ. ಎಚ್. ನೆಫ್ ಸ್ಮಾರಕ ಸಭಾ ಮಂದಿರದ ಒಂದು ಗೋಡೆಯಲ್ಲಿ ಕಂಚಿನ ಹಲಗೆಯ ಮೇಲೆ ಕೆತ್ತಿದೆ. ಇದರ ಪುನರುಚ್ಚಾರಣೆಯನ್ನು ಬೆಂಗಳೂರು ಗೋಖಲೆ ಸಂಸ್ಥೆಯ "ಸಾರ್ವಜನಿಕ" ಪತ್ರಿಕೆಯ (ಜೂನ್ 1949) ಪುನರ್ವಿಲಿಖಿತ ಇದರಲ್ಲಿ ಕಾಣಬಹುದಾಗಿದೆ,

ಪ್ರತಿಜ್ಞಾವಿಧಿಯ ಪೂರ್ಣಪಾಠ ಸಾರ್ವಕಾಲಿಕ ಅನುಷ್ಠಾನತತ್ಪರತೆಗೆ ಸಾಧಕವಾದುದರಿಂದ ಅದರ ವಿವರ ಈ ರೀತಿ ಇದೆ :—

1. ಪತ್ರಿಕೋದ್ಯೋಗವು ಯೋಗ್ಯ ವೃತ್ತಿ ಎಂದು ;

2. ಸಾರ್ವಜನಿಕ ಪತ್ರಿಕೆಯು ಮಹಾಜನದ ಮುಡುಪುನ್ಯಾಸದ ಸ್ವತ್ತು ಎಂದು ; ಅವಕ್ಕೆ ಸಂಬಂಧಪಟ್ಟವರೆಲ್ಲ, ತಮತಮಗೆ ಸೇರಿರುವ ಜವಾಬ್ದಾರಿಯಷ್ಟು ವಿಸ್ತಾರವಾಗಿ, ಮಹಾಜನ ಪರರಾದ ನ್ಯಾಸಪಾಲಕರೆಂದು,
   ಸಾರ್ವಜನಿಕ ಸೇವೆಗಿಂತ ಕೀಳ್ಮಟ್ಟದ ಸೇವೆಯನ್ನು ಮಾಡಲೊಪ್ಪುವುದು ಸಾರ್ವಜನಿಕ ನ್ಯಾಸ ವಿಷಯದಲ್ಲಿ ದ್ರೋಹವೆಂದು,

3. ಸರಳವಾದ ವಿಚಾರಸರಣಿ. ವಿಶದವಾದ ನಿರೂಪಣೆ–ನಿಷ್ಕರ್ಷೆ–ನ್ಯಾಯ ನಿಷ್ಠೆ—ಇವು ಒಳ್ಳೆಯ ಪತ್ರಿಕೋದ್ಯೋಗಿಯ ಮೂಲ ಲಕ್ಷಣಗಳೆಂದು ;

4. ಪತ್ರಿಕೋದ್ಯೋಗಿಯು ತನ್ನ ಹೃದಯದಲ್ಲಿ ತಾನು ನಿಜವೆಂದು ದೃಢಪಡಿಸಿಕೊಂಡದ್ದನ್ನೇ ಬರೆಯಬೇಕೆಂದು ;

5. ಸಮಾಜ ಕ್ಷೇಮ ಒಂದರ ಹೊರತು ಮತ್ತಾವ ಕಾರಣಕ್ಕಾಗಿಯೂ ಪತ್ರಿಕಾ ಕರ್ತನು ಯಾವ ವರ್ತಮಾನವನ್ನು ಮುಚ್ಚಿಡುವುದು ಯುಕ್ತವಲ್ಲವೆಂದು ;

6. ದೊಡ್ಡ ಮನುಷ್ಯನಾದವನು ನುಡಿಯಬಾರದಂಥ ಮಾತನ್ನು ಪತ್ರಿಕೋದ್ಯೋಗಿಯು ಬರೆಯಬಾರದೆಂದು,
ಅವನು ಇತರರ ಜೇಬಿನಿಂದ ಹೇಗೋ ತನ್ನ ಜೇಬಿನಿಂದಲೂ ಹಾಗೆ ಲಂಚವನ್ನು ವರ್ಜಿಸತಕ್ಕದ್ದೆಂದು,
ಅವನು ಇನ್ನೊಬ್ಬರ ಪ್ರೇರಣೆಯಿಂದ ಅಥವಾ ಇನ್ನೊಬ್ಬರ ಲಾಭಕ್ಕೋಸ್ಕರ ತಾನು ನಡೆದುಕೊಂಡನೆಂದು ಹೇಳಿ, ತನ್ನ ಸ್ವಂತ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲಾಗದೆಂದು ;

7. ವ್ಯಾಪಾರದ ಪ್ರಕಟನೆಯಾಗಲಿ, ವರ್ತಮಾನವಾಗಲಿ, ಸಂಪಾದಕೀಯ ಲೇಖನವಾಗಲಿ, ಅದು ವಾಚಕರ ಪರಮೋತ್ತಮ ಹಿತಕ್ಕೆ ಸಾಧಕವಾಗಿರಬೇಕೆಂದು,
ಸತ್ಯದ ಮತ್ತು ನಿರ್ಮಲತೆಯ ಏಕರೀತಿಯ ಪ್ರಮಾಣವು ಎಲ್ಲರ ವಿಷಯದಲ್ಲೂ ಅನ್ವಯಿಸಬೇಕೆಂದು,
ಒಳ್ಳೆಯ ಪತ್ರಿಕೋದ್ಯೋಗದ ಯೋಗ್ಯತಾ ಪರೀಕ್ಷೆಯು ಅದು ಮಾಡುತ್ತಿರುವ ಮಹಾಜನಸೇವೆಯ ಮಟ್ಟದಿಂದ ನಿರ್ಣಯವಾಗುತ್ತದೆಯೆಂದು ;

8. ಯಾವ ಬಗೆಯ ಪತ್ರಿಕೋದ್ಯೋಗವು ಅತ್ಯಂತ ಜಯಶಾಲಿಯಾಗಿದೆಯೋ— ಮತ್ತು ಎಂಥಾದ್ದಕ್ಕೆ ಜಯವು ಅತ್ಯಂತ ಯುಕ್ತವಾಗುತ್ತದೆಯೋ—ಅಂಥ ಪತ್ರಿಕೋದ್ಯೋಗವು ದೇವರಲ್ಲಿ ಭಯವೂ, ಮನುಷ್ಯನಲ್ಲಿ ಗೌರವವೂ ಉಳ್ಳದ್ದೆಂದು, ಅದು ದೃಢವೂ ಸ್ವತಂತ್ರವೂ ಅದದ್ದೆಂದು, ಅದು ಅಭಿಪ್ರಾಯದ ಗರ್ವದಿಂದಾಗಲಿ ಅಧಿಕಾರದ ಆಶೆಯಿಂದಾಗಲಿ ಅಲುಗಾಡದೆಂದು,
ಅದು ಹಿತಸಾಧಕವಾದದ್ದೂ ಸಹನೆಯುಳ್ಳದ್ದೂ ಆಗಿರುವುದೆಂದು,
ಆದರೂ ಅದು ಎಂದಿಗೂ ಅಜಾಗ್ರತೆಯಿಂದ ನಡೆಯುವುದಿಲ್ಲವೆಂದು,
ಅದು ಆತ್ಮಸಂಯಮವುಳ್ಳದ್ದೂ, ತಾಳ್ಮೆಯುಳ್ಳದ್ದೂ. ವಾಚಕರಲ್ಲಿ ಗೌರವವುಳ್ಳದ್ದೂ, ಹಾಗೆಯೇ ಅಂಜಿಕೆಯಿಲ್ಲದ್ದೂ ಆಗಿರುವುದೆಂದು,
ಅನ್ಯಾಯವನ್ನು ಕಂಡೊಡನೆ ಅದು ಕೆರಳುವುದೆಂದು, ಅದು ಪ್ರತಿಷ್ಠಾವಂತರ ಪ್ರೇರಣೆಯಿಂದಾಗಲಿ ದೊಂಬಿಕೂಟದ ಕೂಗುಗಳಿಂದಾಗಲಿ ದಾರಿತಪ್ಪಲಾರದೆಂದು,
ಅದು ಪ್ರತಿಯೊಬ್ಬ ವ್ಯಕ್ತಿಗೂ ಒಂದು ಉತ್ತಮಾವಕಾಶವನ್ನು ಕೊಡಿಸುವುದೆಂದು, ಮತ್ತು ಆ ಅವಕಾಶವನ್ನು ಅದು ಶಾಸನ(ಕಾನೂನು)ಗಳಿಂದಲೂ ಪ್ರಾಮಾಣಿಕ ಮಟ್ಟದ ಸಂಬಳದಿಂದಲೂ ಮತ್ತು ಮಾನವ ಸೋದರತ್ವದ ಅಂಗೀಕಾರದಿಂದಲೂ ಎಷ್ಟುಮಟ್ಟಿಗೆ ಸಾಧ್ಯವಾಗಿಸಬಹುದೋ ಅಷ್ಟುರಮಟ್ಟಿಗೆ ಸರ್ವಸಮಾನವಾಗಿ ದೊರಕಿಸಲು ಯತ್ನಿಸುವುದೆಂದು,
ಅದು ಆಳವಾದ ಸ್ವದೇಶ ಪ್ರೇಮವುಳ್ಳದ್ದೆಂದು.

ಹಾಗೆಯೇ ಅದು ದೇಶವಿದೇಶ ಸೌಹಾರ್ದವನ್ನೂ ಸಕಲಲೋಕ ಸಹಭಾಗಿತೆಯನ್ನೂ ಅಭಿವೃದ್ಧಿಪಡಿಸುವುದೆಂದು,—
ಅಂಥಾದ್ದು ಇಂದಿನ ಪ್ರಪಂಚಕ್ಕಾಗಿ, ಇಂದಿನ ಪ್ರಪಂಚದ್ದಾಗಿ, ನಡೆಯುವ ಮಾನವ ಸಮಷ್ಟಿಯ ಪತ್ರಿಕೋದ್ಯೋಗವೆಂದು —

ನಾನು ನಂಬಿದ್ದೇನೆ

ಎಂಬ ಅಷ್ಟಸೂತ್ರಗಳನ್ನು ಯಾವ ಪತ್ರಕರ್ತನು ಅನುದಿನವೂ ಮನನ ಮಾಡುತ್ತಾ ತನ್ನ ಉದ್ಯಮವನ್ನು ನಿರ್ವಹಿಸುವನೋ ಅವನು ಯಶಸ್ವಿ ಪತ್ರಕರ್ತನಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಈ ಮೇಲ್ಕಂಡ ಸೂತ್ರಗಳನ್ನು ಆಧರಿಸಿ "ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯ ಸಂಪಾದಕನೂ ಪತ್ರಿಕಾಪ್ರಪಂಚದಲ್ಲಿ ಮಹರ್ಷಿಸದೃಶನೂ ಆಗಿದ್ದ ಸಿ. ಪಿ. ಸ್ಕಾಟ್ ಎಂಬಾತನ "ಇದಮಿತ್ಥಂ" ಎಂದು ಸಾರಿ ಹೇಳಿರುವ ವಾಕ್ಯಾರ್ಥಗಳ ನೀತಿ ಸಾರ ಹೀಗಿದೆ :

"ವಸ್ತುಸಂಗತಿಯು ಪವಿತ್ರ. ಟೀಕು ಸ್ವತಂತ್ರ."

ಈ ವಸ್ತುನಿಷ್ಠೆ ಪತ್ರಕರ್ತರಿಗೂ ಮತ್ತು ವಾಚಕವೃಂದಕ್ಕೂ ಸಮಾನವಾಗಿ ಅನ್ವಯಿಸುತ್ತದೆ.

ಸುದ್ದಿಗಳನ್ನು ಸಂಗ್ರಹಿಸಿ ಪತ್ರಿಕೆಗಳಿಗೆ ಸಕಾಲಕ್ಕೆ ಒದಗಿಸಲು ಅನೇಕ ದೇಶೀಯ ಮತ್ತು ವಿದೇಶೀಯ ವಾರ್ತಾಸಂಸ್ಥೆಗಳು ಅಸ್ತಿತ್ವದಲ್ಲಿರುತ್ತವೆ. ಅವುಗಳಲ್ಲಿ ಪಿ.ಟಿ.ಐ., ಯು.ಎನ್.ಐ.. ಎ.ಪಿ., ಎ.ಎಫ್.ಪಿ., (ಎ.ಐ.ಯಂ-ಪೂಲ್) ರಾಯಿಟರ್, ಮುಂತಾದುವು ಪ್ರಮುಖ ಸಂಸ್ಥೆಗಳು. ಇವಲ್ಲದೆ, ಪ್ರತಿಯೊಂದು ಪತ್ರಿಕೆಯೂ ಸ್ಥಳೀಯವಾಗಿ ತನ್ನ ಸ್ವಂತ ವರದಿಗಾರರು ಮತ್ತು ಸುದ್ದಿಗಾರರನ್ನು ನೇಮಕ ಮಾಡಿಕೊಂಡಿರುತ್ತದೆ. ಇವರೆಲ್ಲರ ಸಹಾಯದಿಂದ ದೊರೆತ ಮಾಹಿತಿ ಮತ್ತು ಬಾತ್ಮಿಯ ಆಧಾರದ ಮೇರೆಗೆ ಸುದ್ದಿಸಮಾಚಾರಗಳನ್ನು ಕ್ರೋಢೀಕರಿಸಿ ಪತ್ರಕರ್ತರು ಅವುಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಈ ನಿಟ್ಟಿನಲ್ಲಿ ಪತ್ರಕರ್ತರು ತಮ್ಮ ಮಹತ್ವದ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬೇಕು.

ಸುದ್ದಿಗೆ ಗುದ್ದುಕೊಟ್ಟು ಸದ್ದೆಬ್ಬಿಸಿ ಗೊಂದಲಕ್ಕೆ ಅವಕಾಶ ಮಾಡಿಕೊಡುವುದನ್ನು ಸುದ್ದಿಗಾರನು ಸರ್ವಥಾ ವರ್ಜಿಸಬೇಕು.

ಒಂದು ಪತ್ರಿಕೆಯನ್ನು ನಡೆಸಬೇಕಾದರೆ ಅದಕ್ಕೊಂದು ಕಾರ್ಯಾಲಯ ಮತ್ತು ಕಾರ್ಖಾನೆ ಅವಶ್ಯ. ಈ ಪಹಿವಾಟನ್ನು ನಡೆಸಬೇಕಾದರೆ ತಕ್ಕಷ್ಟು ಸಿಬ್ಬಂದಿ ಮತ್ತು ಆರ್ಥಿಕ ವರಮಾನ ಇರಲೇಬೇಕು. ಚಂದಾದಾರರಿಂದ ಬರುವ ಆದಾಯದ ಜೊತೆಗೆ

ಉದ್ದಿಮೆದಾರರಿಂದ ಬರುವ ಜಾಹಿರಾತುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ತಮ್ಮ ವರಮಾನವನ್ನು ವೃದ್ಧಿಪಡಿಸಿಕೊಂಡ ಹೊರತು ಪತ್ರಿಕೋದ್ಯಮ ಹೆಚ್ಚುಕಾಲ ಮುಂದುವರಿಯಲು ಸಾಧ್ಯವಾಗದು. ಜೀವನಮಟ್ಟಕ್ಕೆ ತಕ್ಕ ಸಂಬಳ ಸಿಬ್ಬಂದಿಗೆ ಕೊಡುವ ವ್ಯವಸ್ಥೆ, ಮುದ್ರಣ ಯಂತ್ರ, ಕಟ್ಟಡ, ಕಾಗದ, ಪೀಠೋಪಕರಣಗಳ ಸಜ್ಜಿಕೆ, ಪರಿಕರಗಳ ಖರ್ಚುಗಳು—ಮುಂತಾದ ಆಯವ್ಯಯಗಳ ಬೇಡಿಕೆಯನ್ನು ಸರಿದೂಗಿಸಲು ಒಂದು ಕ್ರಮಬದ್ಧ ಆರ್ಥಿಕ ವ್ಯವಸ್ಥೆ ಇರಲೇಬೇಕು. ಉದ್ಯಮನೀತಿಯೊಂದಿಗೆ ಸುಭದ್ರ ಆರ್ಥಿಕ ನೀತಿಯು ನೆರವೂ ಒಡಗೂಡಿ ಬಂದರೆ ಮಾತ್ರ ಆ ಪತ್ರಿಕಾಸಂಸ್ಥೆ ಹೆಚ್ಚುಕಾಲ ಬೆಳಗಲು ಸಾಧ್ಯ.

ಪತ್ರಿಕೆಯ ಸ್ವರೂಪದ ಬಗ್ಗೆ ಒಂದೆರಡು ಮಾತುಗಳು ತೀರಾ ಅಗತ್ಯ. ಬಾಹ್ಯ ಸೌಂದರ್ಯ ಆಕರ್ಷಣೀಯವಾಗಿರಬೇಕು. ಅಕ್ಷರಗಳು ಸ್ಫುಟವಾಗಿರಬೇಕು. ಮುದ್ರಣ ಚೊಕ್ಕವಾಗಿರಬೇಕು. ಶೈಲಿ ಸುಲಭವೂ ರಂಜನೀಯವೂ ಆಗಿರಬೇಕು. ಅವಶ್ಯವಿದ್ದೆಡೆ ಭಾವಚಿತ್ರವಿರಬೇಕು. ವಿಷಯಕ್ಕೆ ಮಥಿತಾರ್ಥ ನೀಡುವ ಶಬ್ದಸೌಷ್ಟವವಿರಬೇಕು. ಲೌಕಿಕ ಜ್ಞಾನ, ವ್ಯವಹಾರ ಜ್ಞಾನ, ಆಡಳಿತ ಕಾರ್ಯವೈಖರಿ, ದೇಶೀಯ ಮತ್ತು ಅಂತರ್ರಾಷ್ಟ್ರೀಯ ವಿದ್ಯಮಾನಗಳು, ಕಲೆ ಮತ್ತು ಸಾಹಿತ್ಯ ವಿಮರ್ಶೆ, ವಾಚಕರ ಅಭಿಪ್ರಾಯ ಮಂಡನೆ, ಕ್ರೀಡೆ, ವಾಣಿಜ್ಯಲೋಕ ಮುಂತಾದ ಬಹುಮುಖ ವಿಚಾರ ವಿಶ್ಲೇಷಣೆಯ ಆಲೋಡನಗೈಯಲು ಕೇವಲ ದ್ರಾಕ್ಷಾ ಪಾಕದಂತಿರದೆ ನಾರಿಕೇಳ ಪಾಕದಂತೆ ಶೈಲಿಯು ಗಂಭೀರವಾಗಿಯೂ ಇದ್ದರೆ ಮಾತ್ರ ಪತ್ರಿಕೆಯು ವಾಚಕರ ಚೇತೋಹಾರಿಯಾಗಿ ಕಂಗೊಳಿಸಲು ಸಾಧ್ಯ. ವೃತ್ತಿಬಾಂಧವರು ಈ ವಿವಿಧ ರಸಾವಳಿಗೆ ಗಮನ ಹರಿಸಿದಲ್ಲಿ ಅವರ ಉದ್ಯಮ ಬಹುಕಾಲ ಜನಪ್ರಿಯವಾಗಿ ಮುಂದುವರಿಯಲು ಸಾಧ್ಯವಾದೀತು.

ವೃತ್ತಪತ್ರಿಕೆಯು ವಾಚಕರಿಗೆ ಮನರಂಜನೆ ನೀಡುವ ಒಂದು ಮಾಧ್ಯಮವೂ ಹೌದು. ಜೀವನ ಜಂಜಾಟದಲ್ಲಿ ಪ್ರಸಂಗಾವಧಾನದಿಂದ ಮಾನವನು ತನ್ನ ಸಹಜ ಸ್ಥಾಯಿಯಿಂದ ಮಾನಸಿಕ ಸಮತೋಲನವನ್ನು ಕಳೆದುಕೊಂಡು ಅಸಂಗತವಾಗಿ ವರ್ತಿಸುವುದು ಅಸಂಭವವೇನೂ ಅಲ್ಲ. ಮಾನಸಿಕ ಆಂದೋಳನಕ್ಕೆ ಸಿಕ್ಕಿದ ಯಾವ ವ್ಯಕ್ತಿಯೇ ಆಗಲಿ ತನ್ನ ಅಸ್ತಿತ್ವವನ್ನೇ ಮರೆತು ಚಿಂತೆಯ ಸುಳಿಯಲ್ಲಿ ಸಿಕ್ಕಿ ಅನಾಸಕ್ತ ಭಾವದಿಂದ ಮೈಮರೆತು ಯಾವ ಚಟುವಟಿಕೆಯೂ ಇಲ್ಲದೆ ವ್ಯಗ್ರನಾಗಿ ಕೂತಿರುತ್ತಾನೆ. ಆಗ ಮುಗ್ಧಭಾವದಿಂದ ಕೈಕಾಲುಗಳನ್ನು ಝಳಪಿಸುತ್ತಾ, ಕೇಕೆಗಳನ್ನು ಹಾಕುತ್ತಾ ತೊಟ್ಟಿಲಲ್ಲಿ ಲಲ್ಲೆಗೈಯುತ್ತಿರುವ ಶಿಶು ಹೇಗೆ ತನ್ನ ನೊಂದ ಮಾತೆಯ ಅಂತಃಕರಣವನ್ನು ಕಲಕುವುದೋ, ಅಂತೆಯೇ, ಗಾಳಿಯ ಸುಖಸ್ಪರ್ಶ ಸಂಪರ್ಕದಿಂದ ಹಾರಾಡುತ್ತಿರುವ ವೃತ್ತಪತ್ರಿಕೆ ವ್ಯಗ್ರಗೊಂಡಿದ್ದ ಈ ಹತಭಾಗ್ಯದ ಚಿತ್ತವನ್ನು ಅಪಹರಿಸುವುದು ಪತ್ರಿಕೆಯ ವಿವಿಧ ಒಕ್ಕಣೆಯು ರಸಮಂಜರಿಯಾಗಿದ್ದರೆ ವಿಕಸಿತ ಕುಸುಮದಂತೆ ನೊಂದ ವ್ಯಕ್ತಿಯ ಮನಸ್ಸು ಪುನಶ್ಚೇತನಗೊಂಡು ಸ್ವಸ್ವರೂಪಕ್ಕೆ ಮರಳುತ್ತದೆ. ವ್ಯಕ್ತಿಯು ಮಾಮೂಲು ಸಭ್ಯತೆಗೆ ಹಿಂತಿರುಗುತ್ತಾನೆ. ವ್ಯಕ್ತಿಯ ಪರಿವರ್ತನೆಗೆ ಇದು ಒಂದು ಆಯಾಮ ಎಂದು ಪರಿಗಣಿಸಿದರೆ ತಪ್ಪಾಗದು.

ಪೂಜ್ಯ ಡಿ.ವಿ.ಜಿ.ಯವರು ವೃತ್ತಿಯಲ್ಲಿ ಮೂಲತಃ ಪತ್ರಿಕೋದ್ಯೋಗಿಗಳು. ಅಲ್ಲಿಂದ ಮುಂದೆ ಅವರ ಅಭಿರುಚಿಗಳು ನಾನಾ ಕ್ಷೇತ್ರಗಳಿಗೆ ಹಬ್ಬಿದವು. ಸಮರ್ಥ ಪತ್ರಿಕೋದ್ಯೋಗಿಯಾಗಿ ಹೆಸರುಗಳಿಸಬೇಕಾದರೆ, ಬಹುಮುಖ ಕ್ಷೇತ್ರಗಳಲ್ಲಿ ಸಾಕಷ್ಟು ಜ್ಞಾನಾರ್ಜನೆ ಪಡೆದಿರಬೇಕು. ರಾಜಕೀಯ, ಸಾಮಾಜಿಕ, ಆರ್ಥಿಕ, ಮನರಂಜನೆ ನೀಡುವ ಸಂಗೀತ, ಕಲೆ, ಸಾಹಿತ್ಯ, ಜನಜಾಗೃತಿಗೆ ಪೂರಕವಾದ ಲೋಕಜ್ಞಾನ ಮುಂತಾದ ಪ್ರಮುಖ ವಿಷಯಗಳ ಬಗ್ಗೆ ಪರಿಣತಿ ಪಡೆದಿರಬೇಕು. ಈ ಜ್ಞಾನ ಪಿಪಾಸು, ಈ ಎಲ್ಲ ವಿಷಯಗಳ ಬಗ್ಗೆ ಸಮರ್ಥನೆ ನೀಡುವಷ್ಟು ಚೈತನ್ಯ ಸಂಪಾದಿಸ ಬೇಕಾದರೆ ಜ್ಞಾನವೃದ್ಧರ ಆಶ್ರಯದಲ್ಲಿ ಛಾತ್ರನಾಗಿ, ಪುಸ್ತಕ ಭಂಡಾರಗಳಿಗೆ ಯಾತ್ರಿಕ ನಾಗಿ ಶ್ರಮಿಸಿದರೆ ಮಾತ್ರ ಪತ್ರಕರ್ತನಾಗಿ ಯಶಸ್ಸು ಗಳಿಸಲು ಸಾಧ್ಯ.

ಡಿ.ವಿ.ಜಿ.ಯವರೇ ತಮ್ಮ ಪ್ರಸ್ತುತ ಪುಸ್ತಕದಲ್ಲಿ ನಿವೇದಿಸಿಕೊಂಡಿರುವಂತೆ, ಡಿ.ವಿ.ಜಿ.ಯವರು, ಆಗ್ಗೆ ಅಭಿನವ ಬಿ.ಎ. ಪದವೀಧರರಾಗಿ ತಮ್ಮ ಊರಿಗೆ ಸಬ್ ರಿಜಿಸ್ಟ್ರಾರ್ ಆಗಿ ಬಂದಿದ್ದ ರಾಮದಾಸಪ್ಪನವರ ಸಹಚರ್ಯೆಯಲ್ಲಿ "ಮದ್ರಾಸ್ ಮೈಲ್" ಎಂಬ ಇಂಗ್ಲಿಷ್ ಪತ್ರಿಕೆಯನ್ನು ಓದುವ ಮತ್ತು ಲೋಕಶಿಕ್ಷಣ ಪಡೆಯುವ ಮಾಹಿತಿ ಪಡೆದರು. ಎಂ. ಶ್ರೀನಿವಾಸ ಐಯ್ಯಂಗಾರ್ಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ "ಸ್ಟ್ಯಾಂಡರ್ಡ್" ಎಂಬ ಪತ್ರಿಕೆಗೆ ಸಣ್ಣ ಸಣ್ಣ ಲೇಖನವನ್ನು ಡಿ.ವಿ.ಜಿ.ಯವರು ಬರೆದು ಆ ಸಂಪಾದಕರಿಂದಲೂ ಸಾಕಷ್ಟು ಮಾರ್ಗದರ್ಶನ ಪಡೆದರು.

ಆಗ್ಗೆ ಮೈಸೂರಿನ ಸಾರ್ವಜನಿಕರು ತುಂಬ ಒಲವಿನಿಂದ ಪ್ರಸಾದಿಸಿದ "ಮೈಸೂರಿನ ವೃದ್ಧ ಪಿತಾಮಹ", "ದಯಾಸಾಗರ" ಎಂಬ ಹೆಗ್ಗಳಿಕೆಯ ಬಿರುದಾಂಕಿತ ರಾಗಿದ್ದ ಎಂ. ವೆಂಕಟಕೃಷ್ಣಯ್ಯನವರು (1844-1933) "ವೈಸೂರು ಹೆರಾಲ್ಡ್" (ಇಂಗ್ಲಿಷ್ ವಾರಪತ್ರಿಕೆ), "ವೃತ್ತಾಂತ ಚಿಂತಾಮಣಿ" (ವಾರ), "ಸಾಧ್ವಿ" (ವಾರ), "ಸಂಪದಭ್ಯುದಯ" (ದಿನ) ಮುಂತಾದ ಹಲವು ಪತ್ರಿಕೆಗಳನ್ನು ನಡೆಸಿದವರು. ಇಡೀ ಜೀವನವನ್ನು ಜನತೆಯ ಒಳಿತಿಗಾಗಿ ಮುಡುಪಾಗಿ ಇಟ್ಟಿದ್ದ ಲೋಕಮಾನ್ಯರು. ಇವರ ನೆರಳಿನಲ್ಲಿ ಲೋಕಾನುಭವವನ್ನು ಪಡೆದು, ಅದನ್ನು ಜನಹಿತ ಕಾರ್ಯಕ್ಕೇ ವಿನಿಯೋಗಿಸಿದರು ಶ್ರೀ ಡಿ.ವಿ.ಜಿ.ಯವರು, ಮುಂದಿನ 'ಪೀಳಿಗೆಗೆ ಅವರ ಚೇತನ ನಿರಂತರ ಸ್ಫೂರ್ತಿಯನ್ನು ನೀಡಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

ಯಾವ ಕಾರ್ಯಕ್ಷೇತ್ರದಲ್ಲಿಯೇ ಆಗಲಿ ಗುಣದೋಷ ವಿಮರ್ಶೆ ಅತ್ಯಗತ್ಯ. ಈ ಕ್ರಮದಲ್ಲಿ ಚರ್ಚೆಯ ಮೂಲಕ ವಾದ-ವಿವಾದ ಅನಿವಾರ್ಯ. ಈ ದಿಶೆಯಲ್ಲಿ ವೈಯಕ್ತಿಕ ದ್ವೇಷ ಅಸೂಯೆ ಸಲ್ಲದು.

"ವಾದೇ ವಾದೇ ಜಾಯತೇ ತತ್ತ್ವಬೋಧಃ"

ಎಂಬ ಪೂರ್ವಿಕರ ವಾಣಿಯಂತೆ, ವಾದ ವಿವಾದದಿಂದ ಪರಸ್ಪರ ಅರಿವು ಮೂಡಿ ಅಲ್ಲಿ ಆವರಿಸಿದ್ದ ಮೌಢ್ಯ ನಿವಾರಣೆಯಾಗುತ್ತದೆ. ಬರೀ ನೂಲಿದ್ದರೆ ಅದು ವಿತರ್ಕ್ಯಾ

ಪ್ರಯೋಜನಕ್ಕೆ ಬಾರದು. ಅದನ್ನು ಸಿಕ್ಕು ಇಲ್ಲದಂತೆ ಎಳೆ ಎಳೆಯಾಗಿ ಬಿಡಿಸಿ, ಅದನ್ನು ಮಗ್ಗಕ್ಕೆ ಸಂಧಾನಸೇತುವಾಗಿ ಅಳವಡಿಸಿ ನೇಕಾರನು ವೃತ್ತಿ ಕೌಶಲದಿಂದ ಹಾಸು-ಹೊಕ್ಕಾಗಿ ನೇಯ್ದರೆ ಮಾತ್ರ ಅದರ ಫಲಶ್ರುತಿಯಾಗಿ ನಮ್ಮ ಮಾನ ಮುಚ್ಚಲು ಬಟ್ಟೆಯಾಗುತ್ತದೆ. ಈ ಹಾಸು-ಹೊಕ್ಕೆ ವಾದ–ವಿವಾದ. ಈ ಸಂಧಾನ ಕ್ರಿಯೆಯಿಂದ ನೂಲು ಹೇಗೆ ಬಟ್ಟೆಯ ರೂಪವನ್ನು ತಳೆದು ಮಾನವನ ಮಾನ ಮುಚ್ಚಲು ಹೇಗೆ ಸಾಧನವಾಯಿತೋ, ಅಂತೆಯೇ ಪರಸ್ಪರ ವಾದ–ವಿವಾದ ಚರ್ಚೆಯ ಮಂಥನದಿಂದ ನಿಶ್ಚಲತತ್ತ್ವದ ಫಲಶ್ರುತಿಯು ಹೊರಬಿದ್ದು ಮಂಡಿತ ಸಮಸ್ಯೆಗೆ ಪರಿಹಾರ ದೊರೆಯುತ್ತದೆ. ಈ ವಿಧಾನವೇ ಯಶಸ್ವೀ ಪ್ರಜಾಪ್ರಭುತ್ವಕ್ಕೆ ಸುಗಮ ಹಾದಿ.

ಪತ್ರಿಕೋದ್ಯೋಗಿಗಳು ಸಹಜವಾಗಿ ತಿಳಿದಿರಬೇಕಾದ ವೃತ್ತಿಗೆ ಸಂಬಂಧಪಟ್ಟ ಕಾನೂನುಗಳ ಪಟ್ಟಿಯನ್ನು ಈ ಪುಸ್ತಕದ ಅನುಬಂಧದಲ್ಲಿ ವಿಶದೀಕರಿಸಲಾಗಿದೆ. ಈ ಪಟ್ಟಿಯ ಪುಸ್ತಕಗಳ ನೆರವಿನಿಂದ ವೃತ್ತಿಧರ್ಮದ ನೀತಿಯನ್ನು ಪತ್ರಕರ್ತರು ಅನುಸರಿಸಬಹುದು.

ವಿಷಯ ಬಾಹುಳ್ಯದಿಂದ ಕೂಡಿದ ಈ ಗ್ರಂಥವನ್ನು ರಚಿಸಿದ ಸಾರಸ್ವತ ಲೋಕದ ದಿಗ್ಗಜ ಶ್ರೀ ಡಿ.ವಿ.ಜಿ.ಯವರ ಬಹುಮುಖ ಪ್ರತಿಭೆ ಎಷ್ಟು ವಿಶಾಲವಾದುದು ಎಂಬುದು ಸರ್ವವಿದಿತ. ನಮ್ಮಂಥವರು, ಈ ಶತಮಾನದ ಇಂಥ ಪ್ರತಿಭಾ ಸಂಪನ್ನರ ಕೃತಿಯನ್ನು ಕುರಿತು ಒಂದು ಲೇಖನವನ್ನು ಬರೆಯುವಷ್ಟು ಪರಿಣತೆ, ಸಾಮರ್ಥ್ಯ ಮತ್ತು ಯೋಗ್ಯತೆ ನಮ್ಮ ಈ ಲೇಖನಿಗೆ ಇದೆಯೇ ?— ಎಂಬ ಸಂದೇಹ ಸಹಜವಾಗಿ ಕಾಡಿಸುತ್ತದೆ.

ಡಿ.ವಿ.ಜಿ. ಮತ್ತು ಕನ್ನಡ

ಎ. ವಿ. ನಾವಡ

ಡಿ.ವಿ.ಜಿ. ಅವರು ತಮ್ಮ ಸಮಸಾಮಯಿಕ ಸಾಹಿತ್ಯದ ದಿಗ್ಗಜಗಳಂತೆ ನಾನಾ ವಿಧಗಳಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಬೆಳವಣಿಗೆಯಲ್ಲಿ ಪಾಲುಗೊಂಡದ್ದಲ್ಲದೆ. ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನದ ಬಗೆಗೆ ತಮ್ಮ ಅಧ್ಯಯನಪೂರ್ಣವಾದ ಚಿಂತನವನ್ನು ನಡೆಸಿದ್ದರು. ಈ ಬಗೆಗೆ ತಮ್ಮ ಅನೇಕ ಲೇಖನಗಳು, ಭಾಷಣಗಳು ಮತ್ತು ಗ್ರಂಥಗಳಲ್ಲಿ ತಮ್ಮ ಸ್ಪಷ್ಟವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅವರ ಬರಹಗಳಿಂದ ಉದ್ಧೃತಿಗಳನ್ನು ಅಳವಡಿಸಿ, ಆ ಅಭಿಪ್ರಾಯಗಳನ್ನು ಶ್ರೀ ನಾವಡ ಅವರು ತಮ್ಮ ಲೇಖನದಲ್ಲಿ ಕ್ರೋಢೀಕರಿಸಿದ್ದಾರೆ. ಕನ್ನಡದ ಬಗೆಗೆ ಡಿ.ವಿ.ಜಿ. ಅವರ ಚಿಂತನೆಗಳು, ಲೇಖಕರು ಹೇಳಿರುವಂತೆ, "ಸಮಕಾಲದ ಕೊರತೆಯನ್ನು ತುಂಬಲು ತಕ್ಕವಾದವು" ಮಾತ್ರವಲ್ಲದೆ, ಇನ್ನೂ ಬಹುಕಾಲ ಕನ್ನಡಿಗರಿಗೆ ಮಾರ್ಗದರ್ಶಕವಾಗಬಲ್ಲವು.

ನವೋದಯ ಕಾಲದ ಕನ್ನಡಿಗರಲ್ಲಿ ಕನ್ನಡ ತಲೆಯೆತ್ತುವ ಬಗೆಯನ್ನು ಕುರಿತು ಚಿಂತಿಸಿದ ಆಲೂರ, ಮಾಸ್ತಿ, ಬಿ.ಎಂ.ಶ್ರೀ, ಎ.ಆರ್.ಕೃ., ಕುವೆಂಪು ಇವರ ಸಾಲಿಗೆ ಸೇರಬೇಕಾದ ಇನ್ನೊಂದು ಹೆಸರು ಡಿ.ವಿ.ಜಿ.ಯವರದು. ಆರ್ಷೇಯ ಭಾರತೀಯ ಸಂಸ್ಕೃತಿಯ ಅಚ್ಚಿನಲ್ಲಿ ಮಿಡಿದು, ರೂಪುಗೊಂಡ ಅವರ ಸೃಜನಶೀಲ ಪ್ರತಿಭೆ ಕನ್ನಡಭಾಷೆಯ ಮೇಲ್ಮೆ, ಕರ್ನಾಟಕದ ಏಕೀಕರಣ, ಕನ್ನಡ ಮಾಧ್ಯಮದ ಬಳಕೆ, ಭಾಷೆಯ ಆಧುನೀಕರಣ—ಒಟ್ಟಿನಲ್ಲಿ ಕರ್ನಾಟಕತ್ವದ ವಿಕಾಸದ ಹಲವು ಮಾರ್ಗಗಳನ್ನು ಕುರಿತು ಗಂಭೀರವಾಗಿ ಚಿಂತಿಸಿದೆ. ಕನ್ನಡದ ಏಳಿಗೆಯನ್ನು ಕುರಿತ ಅವರ ಚಿಂತನೆಗಳು ಈ ಶತಮಾನದ ಆರಂಭದ ದಶಕಗಳ ಸಾಂಸ್ಕೃತಿಕ ಬರಡುತನದ ಹಿನ್ನೆಲೆಯಲ್ಲಿ ಮೂಡಿಬಂದು ಸಮಕಾಲದ ಕೊರತೆಯನ್ನು ತುಂಬಲು ತಕ್ಕವಾದವು.

ಡಿ.ವಿ.ಜಿ.ಯವರು ಕನ್ನಡ—ಕರ್ನಾಟಕತ್ವಗಳನ್ನು ಕುರಿತಂತೆ ಮಾಡಿದ ಚಿಂತನಗಳನ್ನು ಹೀಗೆ ಅಡಕಗೊಳಿಸಬಹುದು :

೧ ಕನ್ನಡದ ಅಭಿಮಾನವನ್ನು ಉಕ್ಕಿಸುವ ವಿಚಾರಗಳು ;

೨ ಶಿಕ್ಷಣದಲ್ಲಿ ಕನ್ನಡದ ಸ್ಥಾನವನ್ನು ಕುರಿತು ವಿವೇಚನೆ ;

೩ ಕನ್ನಡದ ಪುನರುಜ್ಜೀವನದ ಕುರಿತು ಡಿ.ವಿ.ಜಿ.ಯವರ ಯೋಜನೆ–ಯೋಚನೆಗಳು.

ಅಭ್ಯಾಸದ ಅನುಕೂಲಕ್ಕಾಗಿ ಹೀಗೆ ವಿಭಾಗಿಸಿಕೊಂಡರೂ ಒಂದರೊಳಗೊಂದು ವಿಚಾರದ ಮೇಲ್‌ಸೇರುವೆ ಉಂಟೇ ಉಂಟು. ಪಂಡಿತ ಪರಂಪರೆಯಲ್ಲಿ ಉಸಿರಾಡಿದ್ದರೂ ಆಧುನಿಕ ಅಕಾಡೆಮಿಕ್ ಶಿಕ್ಷಣವನ್ನು ಪಡೆಯದೆ ಹೋದರೂ ಭಾಷೆ ಮತ್ತು ಸಂಸ್ಕೃತಿಗಳನ್ನು ಕುರಿತ ಅವರ ವಿಚಾರಧಾರೆ ಅತ್ಯಂತ ವೈಜ್ಞಾನಿಕವಾಗಿರುವುದು ಮಹತ್ವದ ಸಂಗತಿ.

ಕನ್ನಡದ ಬಗೆಗೆ ಡಿ.ವಿ.ಜಿ.ಯವರ ಚಿಂತನಗಳನ್ನು ಪ್ರಧಾನವಾಗಿ 'ಸಾಹಿತ್ಯ ಶಕ್ತಿ'[1] ಹಾಗೂ 'ಜೀವನ ಸೌಂದರ್ಯ ಮತ್ತು ಸಾಹಿತ್ಯ'[2] ಈ ಎರಡು ಪುಸ್ತಕಗಳಲ್ಲಿ ಕಾಣಬಹುದು. ಇಲ್ಲಿನ ಬಹುತೇಕ ಲೇಖನಗಳು ೧೯೨೦ ರಿಂದ ೧೯೩೫ರ ಮಧ್ಯಾವಧಿಯಲ್ಲಿ ರೂಪುಗೊಂಡವುಗಳು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಮೈಸೂರು ವಿಶ್ವವಿದ್ಯಾನಿಲಯ, ಧಾರವಾಡದ ವಿದ್ಯಾವರ್ಧಕ ಸಂಘ ಇವುಗಳು ಹಮ್ಮಿಕೊಂಡ ವಿವಿಧ ಕನ್ನಡದ ಚಟುವಟಿಕೆಗಳು ಕರ್ನಾಟಕದಲ್ಲಿ ಕನ್ನಡದ ಒಂದು 'ಪುನರುಜ್ಜೀವನ'ವನ್ನು ಪ್ರೇರೇಪಿಸಿತ್ತು. ರಾಷ್ಟ್ರಾಭಿಮಾನ ಸ್ವಾತಂತ್ರ್ಯ ಹೋರಾಟದ ಜತೆಜತೆಗೆ ಸಮ್ಮಾವರಲ್ಲಿ 'ಉಪರಾಷ್ಟ್ರೀಯತೆ'ಯ ಭಾವನೆ ತೀವ್ರಗೊಂಡು ದೇಶಭಾಷೆಗಳ ಮೇಲ್ಮೆಯ ಬಗ್ಗೆ ತೀವ್ರ ಕಾಳಜಿ ವ್ಯಕ್ತಗೊಂಡಿತು. ಕನ್ನಡ ಸಾಹಿತ್ಯವಂತೂ ಸಂಸ್ಕೃತದಿಂದಲೇ ತನ್ನ ಉಸಿರನ್ನು ಪಡೆದುಕೊಂಡಿತು ಎಂದು ನಂಬಿ ಮುಂದೆಯೂ ಕನ್ನಡಕ್ಕೆ ಸಂಸ್ಕೃತವೊಂದೇ ಏಕೈಕ ಮಾರ್ಗವೆಂದು ನಚ್ಚಿ ಬರೆಯುತ್ತಿದ್ದ ಪಂಡಿತವರ್ಗ ಒಂದೆಡೆ. ಅಂತರ್‌ರಾಷ್ಟ್ರೀಯ ಭಾಷೆ ಇಂಗ್ಲಿಷ್‌ನ ಎದುರು ಕನ್ನಡ ಏತರದು ಎಂಬ ಕುತ್ಸಿತ ತಾತ್ಸಾರ ಭಾವ ತಳೆದ ಇಂಗ್ಲಿಷ್ ಮಾನಸಪುತ್ರರು ಒಂದೆಡೆ—ಈ ಇಕ್ಕಟ್ಟಿನ ಪ್ರಸಂಗದಲ್ಲಿ ಕನ್ನಡದ ಪುನರುಜ್ಜೀವನದ ಬಗ್ಗೆ ಡಿ.ವಿ.ಜಿ. ಯವರು ನೀಡಿದ ವಿವಿಧ ಉಪನ್ಯಾಸಗಳಿಗೆ ಐತಿಹಾಸಿಕ ಮಹತ್ವವಿದೆ.

---

1. ಡಿ.ವಿ.ಜಿ., 'ಸಾಹಿತ್ಯ ಶಕ್ತಿ', ಕಾವ್ಯಾಲಯ, ಮೈಸೂರು.
2. ಡಿ.ವಿ.ಜಿ., 'ಜೀವನ ಸೌಂದರ್ಯ ಮತ್ತು ಸಾಹಿತ್ಯ', ಕಾವ್ಯಾಲಯ, ಮೈಸೂರು.

ಕನ್ನಡದ ಉತ್ಕಟ ಅಭಿಮಾನದಿಂದ ಭಾವುಕರಾಗಿ ಕಾವ್ಯಮಯ ಭಾಷೆಯಲ್ಲಿ ಅವರ ವಿಚಾರಗಳು ವ್ಯಕ್ತವಾಗಿಲ್ಲ,, (ಶ್ರೀಯುವರ ಮತ್ತು ಕುವೆಂಪುರವರ ಬರವಣಿಗೆಗೆ ಹೋಲಿಸಿದಾಗ) ಡಿ.ವಿ.ಜಿ. ಯವರದು, ನನಗೆ ಅನ್ನಿಸಿದಂತೆ, ಭಾವುಕ ಕವಿಹೃದಯಕ್ಕಿಂತ ವಿಜ್ಞಾನಕಾರನ ವಿಚಿಕಿತ್ಸಕ ಬುದ್ಧಿ ಪ್ರಧಾನವಾದದ್ದು. ಹೀಗಾಗಿ ಅವರ ಬರವಣಿಗೆ ವಸ್ತುನಿಷ್ಠ, ಗುರಿ ನೇರ ವಿಚಾರದೆಡೆಗೆ, ಅದರೂ ಅಪೂರ್ವವೆಂಬಂತೆ ನವೋದಯ ಕಾಲದ ಉತ್ಸಾಹಕ್ಕೆ ತಕ್ಕಂತೆ ಕನ್ನಡದ ಅಭಿಮಾನಕ್ಕೆ ಸಂಬಂಧಪಟ್ಟ ಮಾತುಗಳು ಸಿಗುತ್ತವೆ.

> "ನೂರಾರು ಲಕ್ಷ ಸಂಖ್ಯೆಯ ಜನದ ಉದ್ಧಾರಕ್ಕೆ ಕನ್ನಡದ ಹೊರತು ಬೇರೆ ಸಾಧಕವಾವುದೂ ಇಲ್ಲ. ಕನ್ನಡ ಭಾಷೆಯ ಶ್ರೇಯಸ್ಸು ಎಂದರೆ ಕನ್ನಡ ಜನತೆಯ ಶ್ರೇಯಸ್ಸು ; ಕನ್ನಡ ಜನದಶ್ರೇಯಸ್ಸಿಗಾಗಿ ಕನ್ನಡ ಭಾಷೆಯ ಶ್ರೇಯಸ್ಸು".

ಮೇಲಿನ ಮಾತುಗಳು ಇಂದಿನ ಕಾಲಕ್ಕೆ ತೀರಾ ಭಾವುಕವಾಗಿ ಕಂಡರೂ ವಸಾಹತುವಾದಿ ಸಂಸ್ಕೃತಿಯಲ್ಲಿ ಸುರುಗಿಹೋದ ಜನಮನವನ್ನು ಎಚ್ಚರಿಸಲು ಇಂತಹ ಮಾತುಗಳು ಬೇಕಾದವು.

ಕನ್ನಡದ ಬೆಳವಣಿಗೆಯನ್ನು ಕುರಿತು ಡಿ.ವಿ.ಜಿ.ಯವರು ನೀಡಿದ ರಚನಾತ್ಮಕ ಸಲಹೆಗಳಲ್ಲಿ ಈ ಕೆಳಗಿನವು ಕೆಲವು :

೧. ವಿದ್ಯಾ ಜೀವನದಲ್ಲಿ ಕನ್ನಡಕ್ಕೆ ಅಗ್ರಸ್ಥಾನ:

೨. ಭಾಷೆಯನ್ನು ಹೊಸ ಅಭಿವ್ಯಕ್ತಿಗೆ ಅಣಿಗೊಳಿಸುವುದು:

೩. ಕರ್ನಾಟಕ ಸಂಘಗಳ ಮೂಲಕ ಕನ್ನಡ ಪ್ರಚಾರ:

೪. ಬೆಳೆದು ಬದಲಾಗುತ್ತಾ ಹೋಗುತ್ತಿರುವ ಕನ್ನಡಕ್ಕೆ ತಕ್ಕುದಾದ ಒಂದು ವ್ಯಾಕರಣ ರಚನೆ ;

೫. ಸಾಧ್ಯವಾದರೆ ಹೊಂದುವ ಸಂಸ್ಕೃತ ಪಾರಿಭಾಷಿಕ ಪದಗಳನ್ನು ಟಂಕಿಸುವುದು, ಇಲ್ಲವಾದರೆ ಆಯಾ ಭಾಷೆಯ ಪದಗಳನ್ನೇ ಬಳಸಿ ಕೊಳ್ಳುವುದು;

೬, ಜೀವನಾವಶ್ಯಕ ಶಾಸ್ತ್ರ ಗ್ರಂಥಗಳ ರಚನೆ;

೭. ಪ್ರಾಚೀನ ಗ್ರಂಥಗಳ ಸಂಗ್ರಹರೂಪಗಳ ಹಾಗೂ ಅನುವಾದಗಳ ಪ್ರಕಟನೆ;

3. ಸಾಹಿತ್ಯ ಶಕ್ತಿ : ಕನ್ನಡ ಜನತೆಗೋಸ್ಕರ ಕನ್ನಡ, ಪು. 149.

೮. ಶಾಲೆ ಕಾಲೇಜ್‌ಗಳಲ್ಲಿ ಕನ್ನಡ ಚರ್ಚಾ ಕೂಟಗಳನ್ನು ಸಂಘಟಿಸುವುದು ;

೯. ಸರಕಾರಿ ಕಛೇರಿಗಳಲ್ಲಿ ಆಡಳಿತ ವ್ಯವಹಾರವನ್ನು ಕನ್ನಡದಲ್ಲಿ ನಡೆಸುವುದು ;

೧೦. ವಿಸ್ತೃತ ರೂಪದ ಇಂಗ್ಲಿಷ್–ಕನ್ನಡ ನಿಘಂಟು ರಚನೆ.

ಶಿಕ್ಷಣದಲ್ಲಿ ಕನ್ನಡ

ಶಿಕ್ಷಣದಲ್ಲಿ ಕನ್ನಡಕ್ಕೆ ಅಗ್ರಮನ್ನಣೆ ಸಂದಾಗಲೇ ಕನ್ನಡಿಗನ ಪೂರ್ಣವಿಕಾಸ ಸಾಧ್ಯ ಎಂಬ ನಂಬಿಕೆ ಡಿ.ವಿ.ಜಿ.ಯವರದು :

"ನಮ್ಮ ದೇಶದಲ್ಲಿ ಈಗ ರೂಢಿಯಲ್ಲಿರುವ ವಿದ್ಯಾಭ್ಯಾಸ ಕ್ರಮದಲ್ಲಿ ಇಂಗ್ಲಿಷ್ ಭಾಷೆಗಿರುವ ಪ್ರಾಧಾನ್ಯದ ಕಾರಣದಿಂದ ವಿದ್ಯಾರ್ಥಿಗಳಿಗೆ ಆಯುಸ್ಸಿನ ವ್ಯರ್ಥವ್ಯಯವೂ, ಶಕ್ತಿಯ ವ್ಯರ್ಥವ್ಯಯವೂ ಅತಿಯಾಗಿ ಆಗುತ್ತಿವೆ. ನಮ್ಮ ವಿದ್ಯಾರ್ಥಿಗಳಿಗೆ ಈಗ ಇರುವ ಕಷ್ಟವು ಎರಡು ಬಗೆಯದು—ಒಂದು ವಿಷಯ ನವೀನತೆಯಿಂದ ಆಗಿರುವುದು, ಇನ್ನೊಂದು ಭಾಷಾ ನವೀನತೆಯಿಂದ ಆಗಿರುವುದು. ಅವರು ಹೊಸ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಹೊಸ ಭಾಷೆಯನ್ನು ಕಲಿತುಕೊಳ್ಳಬೇಕಾಗಿದೆ. ಆದರೆ ಈ ಹೊಸ ಭಾಷೆಯನ್ನು ಕಲಿತುಕೊಳ್ಳುವುದಕ್ಕೆ ಬೇಕಾಗಿರುವ ಕಾಲವ್ಯಯ ಶಕ್ತಿವ್ಯಯಗಳಲ್ಲಿ 'ವಿಷಯ' ವನ್ನು ತಿಳಿದುಕೊಳ್ಳುವುದಕ್ಕೆ ಬೇಕಾದ ಕಾಲವೂ ಶಕ್ತಿಯೂ ಅವರಿಗೆ ಉಳಿಯದಂತಾಗಿದೆ. ಜ್ಞಾನಕ್ಕೆ ಕೊಡಬೇಕಾದ ಗಮನವನ್ನು ಈಗ ಅವರು ಜ್ಞಾನದ ಹೊದಿಕೆಗೆ ಕೊಡಬೇಕಾಗಿ ಬಂದಿದೆ : ಕೊಬರಿಗೆ ಸಲ್ಲಬೇಕಾದ ಗಮನವನ್ನು ಕರಟಕ್ಕೆ ಸಲ್ಲಿಸಬೇಕಾಗಿದೆ. ಇದುವರೆಗೂ ನಮ್ಮ ದೇಶದಲ್ಲಿ ಈ ಕಷ್ಟವು ಅನಿವಾರ್ಯವಾಗಿತ್ತು. ಈಗಲಾದರೋ ಇಂಗ್ಲಿಷ್ ಭಾಷೆಯೊಳಗಿನ ತಿರುಳು ನಮ್ಮ ಭಾಷೆಯಲ್ಲಿಯೇ ದೊರೆಯುವಂತಾಗಿದೆ. ಐರೋಪ್ಯ ಭಾಷೆಗಳಲ್ಲಿಯ ಸಾರಭೂತವಾದ ವಿಷಯಗಳನ್ನೂ ಶ್ರೇಷ್ಠ ಗ್ರಂಥಗಳನ್ನೂ ಕನ್ನಡದಲ್ಲಿ ರೂಪಾಂತರಗೊಳಿಸಿಕೊಡಲು ವಿದ್ವಾಂಸರು ಈಗ ಸಿದ್ಧರಾಗುತ್ತಲಿದ್ದಾರೆ. ಆಧುನಿಕ ವಿಜ್ಞಾನ ಶಾಸ್ತ್ರಗಳನ್ನೂ, ಸಮಾಜ ಶಾಸ್ತ್ರಗಳನ್ನೂ ಕನ್ನಡದಲ್ಲಿ ಪ್ರತಿಪಾದಿಸಿ ಹೇಳುವುದು ಈಗ ಸಾಧ್ಯವೆಂದು ಸಾಕ್ಷಾತ್ತಾಗಿ ತೋರುತ್ತಿದೆ. ನಮ್ಮ ವಿದ್ಯಾರ್ಥಿಗಳ ಮೇಲಿರುವ ಇಂಗ್ಲಿಷಿನ ಹೊರೆಯನ್ನು ಇಳಿಸಲು ಈಗ ಸಕಾಲವಾಗಿದೆ. ಇಂಗ್ಲಿಷೆಲ್ಲವನ್ನೂ ಒಂದೇ ಬಾರಿಗೆ ಸ್ಥಾನಭ್ರಷ್ಟಮಾಡಿ ತೊಲಗಿಸಬೇಕೆಂದು ನಾನು ಸೂಚಿಸತಕ್ಕವನಲ್ಲ. ಇಂಗ್ಲಿಷಿನಿಂದ ನಮಗೆ ಇನ್ನೂ ಆಗಬೇಕಾಗಿರುವ ಉಪಕಾರಗಳು ಅಪರಿಮಿತವಾಗಿವೆ. ಇಂಗ್ಲಿಷನ್ನು ನಮ್ಮ ವಿದ್ಯಾರ್ಥಿಗಳು ಓದುವುದೂ – ಚನ್ನಾಗಿ ಓದುವುದೂ, ಹೆಚ್ಚು ಹೆಚ್ಚು ಮಂದಿ ಓದುವುದೂ—ನಮ್ಮ ದೇಶದ ಏಳಿಗೆಗೂ ಯಶಸ್ಸಿಗೂ

ಅವಶ್ಯವಾಗಿದೆ. ಹೀಗಿದ್ದರೂ ನಮ್ಮ ವಿದ್ಯಾಜೀವನದಲ್ಲಿ ಅಗ್ರಸ್ಥಾನವನ್ನು ಪಡೆಯಬೇಕಾದ್ದು ಕನ್ನಡವೇ ಹೊರತು ಮತ್ತೊಂದು ಭಾಷೆಯಲ್ಲ. ಎಷ್ಟೆಷ್ಟು ವಿಷಯಗಳನ್ನು ನಾವು ಕನ್ನಡದಲ್ಲಿ ಬೋಧಿಸುತ್ತಾ ಹೋಗುವೆವೋ ಅಷ್ಟಷ್ಟು ವಿಧಗಳಲ್ಲಿ ನಮ್ಮ ಭಾಷೆಯು ಬೆಳೆಯುವುದು......"[4]

ಈ ಬಗೆಯ ಬದಲಾವಣೆಯಿಂದ ಅಂತರ್ರಾಷ್ಟ್ರೀಯ ಭಾಷೆಯಾದ ಇಂಗ್ಲಿಷ್‌ನ ಪಾಂಡಿತ್ಯಕ್ಕೆ ಚ್ಯುತಿ ಬರುತ್ತದೆ ಎಂಬ ಭೀತಿ ಇಂದಿನಂತೆಯೇ ಅಂದೂ ಇದ್ದಿರಬೇಕು. ಇಂಗ್ಲಿಷ್ ಕಲಿಯುವುದು ಹಾಗೂ ಇಂಗ್ಲಿಷ್‌ನ ಮೂಲಕ ಕಲಿಯುವುದು—ಈ ವಿಷಯದಲ್ಲಿ ಇರುವ ಗೊಂದಲ ಆ ಕಾಲದಲ್ಲೂ ಇದ್ದಿರಬೇಕು. ಅದಕ್ಕೆ ಡಿ.ವಿ.ಜಿ.ಯವರು ಖಚಿತವಾಗಿ ಉತ್ತರ ನೀಡಿದ್ದಾರೆ. ವಿಚಾರದಲ್ಲಿ ಪ್ರೌಢಿಮೆ ಗಳಿಸುವುದೇ ಮುಖ್ಯ ಹೊರತು ಯಾವುದರ ಮೂಲಕ ಎನ್ನುವುದು ಮುಖ್ಯವಲ್ಲ ಎನ್ನುತ್ತಾರೆ;

"...ಅಂತರಂಗ ಶಕ್ತಿಯನ್ನು ಶಿಕ್ಷಿಸಿ ಪೋಷಿಸಿದರೆ ಅದು ಯಾವ ಭಾಷೆಗೆ ಬೇಕಾದರೂ ಒದಗಿ ಬರುವುದು. ಆದರೆ ಅದರ ಶಿಕ್ಷಣ—ಪೋಷಣೆಗಳು ಮಾತ್ರ ದೇಶಭಾಷೆಯಲ್ಲಿ ನಡೆಯುವಷ್ಟು ಚೆನ್ನಾಗಿ ಮತ್ತಾವ ಭಾಷೆಯಲ್ಲೂ ನಡೆಯಲಾರವು...... ಹೀಗಿರುವುದರಿಂದ ನಮ್ಮ ವಿದ್ಯಾರ್ಥಿಗಳು ಇಂಗ್ಲಿಷನ್ನು ಇತರ ಅನ್ಯಭಾಷೆಗಳನ್ನು ಚೆನ್ನಾಗಿ ಕಲಿಯಬೇಕಾದರೆ, ಅವರ ಭಾಷಾಗ್ರಹಣ ಶಕ್ತಿಯನ್ನು ಕನ್ನಡದಲ್ಲಿ ಚೆನ್ನಾಗಿ ಬಲಪಡಿಸಿರಬೇಕು. ಕನ್ನಡ ಚೆನ್ನಾಗಿ ಬಂದವನಿಗೆ ಇಂಗ್ಲಿಷ್ ಚೆನ್ನಾಗಿ ಬರುವುದು ಸುಲಭ"[5]

ಹೀಗೆ ಒಂದು ಜನಾಂಗ ತನ್ನೆಲ್ಲ ಸಾಮರ್ಥ್ಯವನ್ನೂ ಸುಪ್ತ ಪ್ರತಿಭೆಯನ್ನೂ ಮಾತೃಭಾಷೆಯಲ್ಲಿ ವ್ಯಕ್ತಪಡಿಸಿದಷ್ಟು ಸಶಕ್ತವಾಗಿ ಇನ್ನೊಂದು ಭಾಷೆಯಿಂದ ಸಾಧ್ಯವಿಲ್ಲ ಎಂಬ ಕಟುಸತ್ಯವನ್ನು ಡಿ.ವಿ.ಜಿ.ಯವರು ಇಲ್ಲಿ ಕಂಡುಕೊಂಡಂತಿದೆ.

ಕನ್ನಡ–ಸಂಸ್ಕೃತ ಸಂಬಂಧ

ಸಂಪ್ರದಾಯಶೀಲ ಮನೆತನದಲ್ಲಿ ಬೆಳೆದುಬಂದು ಸಂಸ್ಕೃತವನ್ನು ಚೆನ್ನಾಗಿ ಅರಗಿಸಿಕೊಂಡಿದ್ದ ಡಿ.ವಿ.ಜಿ.ಯವರ ಸಂಸ್ಕೃತದ ಬಗೆಗಿನ ನಿಲುವು ತುಂಬ ಕುತೂಹಲ ಕಾರಿಯಾದುದು.

ಕನ್ನಡ ಸಂಸ್ಕೃತಕ್ಕೆ ಪ್ರತಿಸ್ಪರ್ಧಿ ಅಲ್ಲ ಎನ್ನುವ ಅವರು—

"ಕನ್ನಡದ ಮುಖಾಂತರದಿಂದಲ್ಲದೆ ಸಂಸ್ಕೃತ ವಾಙ್ಮಯ ಅಂತಸ್ಸಾರವು ಜನಸಾಮಾನ್ಯದ ಕೈಗೆ ದೊರಕಲಾರದು. ಹಾಗೆಯೇ ಸಂಸ್ಕೃತದ ಬೆಂಬಲ

4. ಸಾಹಿತ್ಯ ಶಕ್ತಿ, ಪುಟ 44–46.
5. ಸಾಹಿತ್ಯ ಶಕ್ತಿ, ಪುಟ 65–66.

> ವಿದ್ದಲ್ಲದೆ ಕನ್ನಡ ಪರಿಪುಷ್ಟವಾಗಿ ಬೆಳೆಯಲಾರದು. ಸಂಸ್ಕೃತವು ಮಳೆಯ ಮೋಡ; ಕನ್ನಡವು ಅದನ್ನು ಹನಿಯಾಗಿಸಿ ನೆಲಕ್ಕೆ ಬರಮಾಡುವ ತಂಗಾಳಿ. ಹೀಗೆ ಅವೆರಡೂ ಅವಿನಾಭಾವದಿಂದ ಬಾಳಿ ಮುಂದಕ್ಕೆ ಸಾಗಬೇಕಾಗಿದೆ." [6]
> ......"ಕನ್ನಡ ಪಂಡಿತನಿಗೆ ಸಂಸ್ಕೃತದ ಬಲವಿದ್ದಷ್ಟೂ ಅವನ ಕನ್ನಡ ಪಾಠವು ವೀರ್ಯವತ್ತಾಗುವುದು ಸಿದ್ಧವಾಗಿದೆ...... ನಮ್ಮ ಸಂಸ್ಕೃತ ಪಂಡಿತರಿಗೆ ಕನ್ನಡಸಾಹಿತ್ಯದ ವಿಷಯದಲ್ಲಿ ಅದೇ ತೆರನಾದ ಮಮತೆ ಇನ್ನೂ ಬೆಳೆಯಬೇಕಾಗಿದೆ. ಸಂಸ್ಕೃತ ಪಾಂಡಿತ್ಯವಿರುವ ಮಾತ್ರದಿಂದಲೇ ಕನ್ನಡ ಪಾಂಡಿತ್ಯ ವಿದ್ದಂತಾಯಿತು ಎನ್ನುವುದು ಕೇವಲ ಭ್ರಾಂತಿಯ ಮಾತು" [7]

ಹೀಗೆ ನಮ್ಮ ಅನುಕೂಲಕ್ಕಾಗಿ ಕನ್ನಡದ ಪ್ರಾಚೀನ ಪರಂಪರೆಯನ್ನು ಅರ್ಥೈಸಿ ಕೊಳ್ಳುವ ಹಿನ್ನೆಲೆಯಲ್ಲಿ ಸಂಸ್ಕೃತ ನೆಂಜಿಕೊಳ್ಳುವ ವ್ಯಂಜನದಂತೆ ಇರಬೇಕು ಎಂಬ ಅವರ ಅಭಿಪ್ರಾಯ ಸಾಧುವಾದುದು.

ಸಂಸ್ಕೃತವನ್ನು ಪ್ರತ್ಯೇಕ ಭಾಷೆಯಾಗಿ ಕಲಿಸದೆ ಕನ್ನಡ ಪಾಠದ ಅಂತರ್ಭಾಗವೆಂದೇ ಎಣಿಸಿ ಕಲಿಸಬಹುದು ಎಂಬ ಸಲಹೆ ಗಮನಿಸತಕ್ಕುದು. ಸಂಸ್ಕೃತ ಏನಿದ್ದರೂ ಕನ್ನಡ ಸಾಹಿತ್ಯ-ವ್ಯಾಕರಣ ಅಭ್ಯಾಸದೊಂದಿಗೇ ಬಂದರೆ ಸಾಕೆಂಬ ಅಭಿಪ್ರಾಯ ಉಪಾದೇಯವಾದುದು.

ಸಂಸ್ಕೃತ-ಕನ್ನಡ ಸಂಬಂಧವನ್ನು ಕುರಿತು ಡಿ.ವಿ.ಜಿ.ಯವರು ಮಡಿಕೇರಿಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಭಾಷಣದಲ್ಲಿ (೧೯೩೨) ಕೆಲವೊಂದು ಮನನೀಯ ವಿಚಾರಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಸಂಸ್ಕೃತವು ಪ್ರಾಚೀನವೂ ಪೂಜ್ಯತಮವೂ ಆದ ಭಾಷೆಯೆಂದು ಒಪ್ಪಿಕೊಂಡು, ಮುಂದೆ ಆ ಭಾಷೆಯ ಬೆಲೆಗೂ ಒಂದು ಮಿತಿಯುಂಟು ಎನ್ನುತ್ತಾರೆ:

> "ಮಾಡಬೇಕಾದುದನ್ನು ಮಾಡಿಯಾಯಿತು, ಪಡೆಯಬೇಕಾದದನ್ನು ಪಡೆದದ್ದಾಯಿತು. ಇನ್ನೇನುಳಿದಿದೆ ? ಎಂಬುದು ಅದರ ಸ್ಥಿತಿ. ಅದು ತಿಳಿಸಬೇಕಾದ್ದನ್ನು ತಿಳಿಸಿಯಾಗಿದೆ. ಇನ್ನುಮೇಲೆ ಹೊಸದಾಗಿ ಏನನ್ನೂ ತಿಳಿಸುವಂತಿಲ್ಲ. ಅದು ಪುನಃ ಸಾಮಾನ್ಯ ಜನದ ದಿನಚರಿಯ ಭಾಷೆಯಾಗಿ ಹೊಸ ಹೊಸ ಶಾಸ್ತ್ರಗಳು ಅದರಲ್ಲಿ ಹುಟ್ಟುವ ಕಾಲವು ಮತ್ತೊಮ್ಮೆ ಬರುವುದಾದರೆ ಅದನ್ನು ಯಾರೂ ಬೇಡವೆನ್ನುವುದಿಲ್ಲ" [8]

---

6. ಸಾಹಿತ್ಯ ಶಕ್ತಿ, ಪುಟ 112.
7. ಸಾಹಿತ್ಯ ಶಕ್ತಿ, ಪುಟ 113.
8. ಜೀವನ ಸೌಂದರ್ಯ ಮತ್ತು ಸಾಹಿತ್ಯ, ಪುಟ 12.

—ಎನ್ನುವ ಮೂಲಕ ಭೂತಕಾಲದಲ್ಲಿ ಸಂಸ್ಕೃತ ನೀಡಿದ ದೇಣಿಗೆಯನ್ನು ಕೃತಜ್ಞತೆಯಿಂದ ಸ್ಮರಿಸಿ ಭವಿಷ್ಯತ್ ಕಾಲದ ನಮ್ಮ ಅವಶ್ಯಕತೆಯನ್ನು ಗುರುತಿಸಬೇಕಾದ ಹೊಣೆಗಾರಿಕೆಯನ್ನು ಸೂಚಿಸಿದ್ದಾರೆ. ಅಂದರೆ ಸಂಸ್ಕೃತದ ಹಿರಿಮೆಯನ್ನು ಅಲ್ಲಗಳೆಯುವುದು ಅವರ ಉದ್ದೇಶವಲ್ಲ. ಸಂಸ್ಕೃತದ ಇನ್ನುಮೇಲಣ ಜೀವನವು ಕನ್ನಡದ ಮೂಲಕ ನಡೆಯಬೇಕಾಗಿದೆ, ಎಂದರೆ ಸಂಸ್ಕೃತದ ಪ್ರಯೋಜನ ಜನಸಾಮಾನ್ಯಕ್ಕೆ ಕನ್ನಡದ ಮೂಲಕ ದೊರೆಯಬೇಕಾಗಿದೆ ಎನ್ನುತ್ತಾರೆ.

"ಸಂಸ್ಕೃತದದಲ್ಲಿರುವ ಸಾರಸರ್ವಸ್ವವು ದೇಶಭಾಷೆಯಲ್ಲಿ ದೊರೆಯುವಂತಾದರೆ ಸಂಸ್ಕೃತವು ಸಾರ್ಥಕವಾಗುತ್ತದೆ. ಕನ್ನಡ ಶ್ರೀಮಂತವಾಗುತ್ತದೆ"

—ಎನ್ನುವ ಈ ಮಾತನ್ನು ಸಮಕಾಲದ ಸಂಸ್ಕೃತ ಪ್ರಚಾರಕರು ಅವಶ್ಯ ಗಮನಿಸಬೇಕು.

> "ಲೋಕೋಪಕಾರದ ವಿಸ್ತೀರ್ಣವನ್ನು ಅಳೆದುನೋಡಿದರೆ ಬಸವಣ್ಣ ಅಲ್ಲಮರುಗಳಿಂದಲೂ, ಪುರಂದರ ಕನಕರುಗಳಿಂದಲೂ ಆಗಿರುವಷ್ಟು ವೇದಾಂತ ತತ್ವಪ್ರಚಾರವು ಅನೇಕ ಉಪನಿಷದ್ವ್ಯಾಖ್ಯಾತರುಗಳಿಂದ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕುಮಾರವ್ಯಾಸ, ಕುಮಾರವಾಲ್ಮೀಕಿಗಳಿಂದ ಆಗಿರುವಷ್ಟು ಭಾರತ ರಾಮಾಯಣ ಕಥಾಪ್ರಸಾರವು ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ ನೀಲಕಂಠ, ಗೋವಿಂದರಾಜರುಗಳಿಂದ ಆಗಿಲ್ಲವೆಂದು ಹೇಳಬಹುದು. ಹೀಗೆ ಸಂಸ್ಕೃತದ ಸಂತತಿ. ಖ್ಯಾತಿಗಳು ಕನ್ನಡದ ಮೂಲಕ ಅಭಿವೃದ್ಧಿಯಾಗುತ್ತಿವೆ. ಹೀಗಿರುವಾಗ ಕನ್ನಡವು ಸಂಸ್ಕೃತಕ್ಕೆ ವೈರಿಯೆಂದು ಹೇಳಬಹುದೆ? **ಹಿಂದೆ ಸಂಸ್ಕೃತದಿಂದ ಕನ್ನಡ ಬದುಕಿತು. ಮುಂದಕ್ಕೆ ಕನ್ನಡದಲ್ಲಿ ಸಂಸ್ಕೃತ ಬದುಕಬೇಕು**"[9]

ಈ ಮಾತು ದೇಶದ ಎಲ್ಲ ದೇಶಭಾಷೆಗಳಿಗೆ ಅನ್ವಯಿಸಬೇಕೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ, ಹೀಗೆ ಸಂಸ್ಕೃತ ಕನ್ನಡಗಳೆರಡರ ನಡುವೆ ಅನಾರೋಗ್ಯಕರ ಸ್ಪರ್ಧೆ ಇರಬಾರದು ಹಾಗೂ ಅವುಗಳು ಒಂದಕ್ಕೊಂದು ಪೂರಕವಾಗಿ ನಿಂತು ಭಾಷಾ ಬೆಳವಣಿಗೆಗೆ ನೆರವಾಗಬೇಕೆನ್ನುವ ಮಾತು ಇಂದಿನ ಕಾಲಕ್ಕೂ ಸಂಗತ.

ಸ್ವೀಕರಣದ ಭಾಷೆಯಾಗಿ ಕನ್ನಡ

ಕನ್ನಡ ಸಂಮಿಶ್ರಿತ ಭಾಷೆ. ಸ್ವೀಕರಣದಿಂದಲೇ ಶ್ರೀಮಂತವಾದ. ಶ್ರೀಮಂತವಾಗಬೇಕಾದ ಭಾಷೆ. ನಿನ್ನೆ–ಮೊನ್ನೆಗಳಲ್ಲಿ ಸಂಸ್ಕೃತದ ಋಣಭಾರದಿಂದ ಸಂಪನ್ನವಾದ ನಮ್ಮ ಭಾಷೆ ಇಂದು–ನಾಳೆಗಳಲ್ಲಿ ಇಂಗ್ಲಿಷ್‌ನಿಂದ ತನ್ನ ಮೇಲ್ಮೆಯನ್ನು ಸಾಧಿಸಿಕೊಳ್ಳಬೇಕೆನ್ನುವುದು ಡಿ.ವಿ.ಜಿ.ಯವರ ನಿಲವು.

---

9. ಜೀವನ ಸೌಂದರ್ಯ ಮತ್ತು ಸಾಹಿತ್ಯ, ಪುಟ 15.

ಭಾಷೆಯ ಬೆಳವಣಿಗೆ, ಆಧುನೀಕರಣದ ಮೂಲಬಂಡವಾಳ ಸ್ವೀಕರಣ (assimilation). ಈ ಪ್ರಕ್ರಿಯೆಯ ಅನಿವಾರ್ಯತೆಯನ್ನು ಡಿ.ವಿ.ಜಿ.ಯವರು ಅಂದೇ ಅರಿತಿದ್ದರು, ಭಾಷೆಯನ್ನು ಹೊಸ ಅಭಿವ್ಯಕ್ತಿಗಾಗಿ ಅಣಿಗೊಳಿಸುವ ಬಗ್ಗೆ ಅವರು ವಿಚಾರಮಾಡುತ್ತಾರೆ :

> " ನಮ್ಮ ಹಳೆಯ ಭಾಷೆಯನ್ನು ಈ ಹೊಸ ಹೊಸ ವಿಷಯಗಳಿಗೆ ಪಳಗಿಸಿ ಕೊಡತಕ್ಕವರು ಅವರ ಉಪಯೋಗದ ಮೂಲಕ ಭಾಷೆ ಬೆಳೆದು, ಹೊಸ ಶಬ್ದ ಸಂಪತ್ತನ್ನು ಗಳಿಸಿ ಬಲಿಷ್ಠವಾಗುವುದು. ಜಟಿಲವೂ ಸೂಕ್ಷ್ಮವೂ ಆದ ವಿಷಯಗಳ ಸೇವಾವಕಾಶವನ್ನು ಭಾಷೆಗೆ ತಪ್ಪಿಸಿದರೆ ಅದು ವ್ಯಾಯಾಮ ಹೀನನಾದ ಮನುಷ್ಯನಂತೆ ದುರ್ಬಲವಾಗಿ ಕ್ಷಯಿಸುವುದು. ಕನ್ನಡದ ಮಾತುಗಳನ್ನು ಬಗೆಬಗೆಯ ಪ್ರಸಂಗಗಳಿಗೆ ಹಚ್ಚಿ ತೀಡಬೇಕು. ವಾದ ವಿವಾದಗಳಲ್ಲಿ ನಾದ ಬೇಕು. ಅನ್ಯಭಾಷಾ ಪದಗಳ ಸಂಪರ್ಕ ಸಂಘರ್ಷಗಳಿಗೆ ಅವನ್ನು ಸಿಕ್ಕಿಸಬೇಕು. ಪಾರಿಭಾಷಿಕ ಶಬ್ದಗಳ ಹೊರೆಯನ್ನು ಅವುಗಳ ಮೇಲೆ ಹೊರಿಸಬೇಕು. ಹೀಗೆ ನಮ್ಮ ಭಾಷೆಯ ಶರೀರಕ್ಕೆ ಸಾಮು ಮಾಡಿಸಿದ್ದಲ್ಲದೆ ಅದಕ್ಕೆ ಶಕ್ತಿಯು ಅಂಗಲಾಘವವೂ ಉಂಟಾಗದು "[10]

ಪಾರಿಭಾಷಿಕ ಪದಗಳನ್ನು ಆಯಾ ಭಾಷೆ ಸ್ವಂತವಾಗಿ ಟಂಕಿಸಿ ಕೊಳುವ ಬಗ್ಗೆ ಡಿ.ವಿ.ಜಿ.ಯವರಿಗೆ ಸಹಮತವಿಲ್ಲ. ಪಾರಿಭಾಷಿಕ ಪದಗಳು ಇತರ ಭಾಷೆಗಳಿಗೆ ಅಂಕಿತನಾಮಗಳಂತೆ ಗ್ರಾಹ್ಯ (ಲಂಡನ್, ಜಾರ್ಜ್, ಮೇರಿ, ಇತ್ಯಾದಿ) ಆಗಬೇಕಾದವು. ಯುರೋಪಿಯನ್ ಭಾಷೆಗಳು ಶ್ರೀಮಂತಗೊಂಡುದು ಈ ತತ್ತ್ವಾನು-ಸರಣೆಯಿಂದಲೇ. ನಮ್ಮ ಪದಗಳಿಂದಲೇ ನಮಗೆ ಮುಕ್ತಿ ಎನ್ನುವ ಸಂಪ್ರದಾಯಶೀಲ ಮಡಿಭಾವನೆಯನ್ನು ಕೈಬಿಟ್ಟು ಇಂಗ್ಲಿಷ್‌ನ ಆಕ್ಸಿಜನ್, ಹೈಡ್ರೊಜನ್, ಪ್ಲಾಟಿನಂ ಹೀಗೆ ನೇರವಾಗಿ ಅನ್ಯದೇಶೀಯ ಪದಗಳನ್ನು ನಮ್ಮೊಳಗೆ ತರಬೇಕು ಎನ್ನುತ್ತಾರೆ ಡಿ.ವಿ.ಜಿ.ಯವರು. ಇಂಡಿಯಾ ದೇಶದ ಏಕತೆಯ ದೃಷ್ಟಿಯಿಂದಲೂ ಇದು ತಕ್ಕು ದಾದುದು ಎಂಬ ಅಭಿಪ್ರಾಯ ಅವರದು. ಇದರಿಂದ ಕನ್ನಡದ ಪರಿಶುದ್ಧತೆಗಾಗಲೀ ಗೌರವಕ್ಕಾಗಲೀ ಕುಂದಾಗದು ಎಂದು ಒಂದೆಡೆ ಬರೆಯುತ್ತಾರೆ. ಭಾಷೆ ಸಿದ್ಧವಾಗಿಲ್ಲ ವೆಂದು ಕೈಚೆಲ್ಲಿ ಅಳುಮೋರೆ ಹಾಕಿಕೊಂಡು ಕುಳಿತಿರದೆ ವಿಷಯವನ್ನು ಇನ್ನೊಬ್ಬರಿಗೆ ತಿಳಿಯಪಡಿಸಿದರೆ ಸಾಕು ಎನ್ನುವ ಅವರು ಮನಸ್ಸಿನಲ್ಲಿ ವಿಷಯ ತುಂಬಿರುವವನ ನಾಲಗೆಗೆ ಪದಗಳು ಒಂದರ ಮೇಲೊಂದರಂತೆ ನುಗ್ಗಿಕೊಂಡು ಬರುತ್ತವೆ ಎಂಬ ವಾಸ್ತವ ಸತ್ಯವನ್ನು ಪ್ರಕಟಿಸಿದ್ದಾರೆ.

ಭಾಷೆ ಭಾವೋಪಯೋಗಿಯಷ್ಟೇ ಆದರೆ ಸಾಲದು. ಶಾಸ್ತ್ರೋಪಯೋಗಿಯೂ ಆಗಿ ಬೆಳೆಯಬೇಕು. ಕನ್ನಡದಲ್ಲಿ ಸಮಾಜ ವಿಜ್ಞಾನ, ಪ್ರಕೃತಿ ವಿಜ್ಞಾನಗಳಿಗೂ ಸ್ಥಾನ

10. ಸಾಹಿತ್ಯ ಶಕ್ತಿ, ಪುಟ 63.

ಕಲ್ಪಿಸುವ ಮೂಲಕ ಭಾಷೆಗೆ ಆ ಮೂಲಕ ಅದರ ಆಡುಗರಿಗೆ 'ಬಾಯಿ' ತಂದು ಕೊಡಬೇಕೆನ್ನುವುದು ಅವರ ಮತ.

> "ಭಸ್ಮ ರುದ್ರಾಕ್ಷಿಗಳ ಮಾಹಾತ್ಮ್ಯವನ್ನೂ, ಗೋಪಿಚಂದನ ತುಳಸೀಮಣಿಗಳ ಮಾಹಾತ್ಮ್ಯವನ್ನೂ ತೋರಿಸಿಕೊಡುವ ಗ್ರಂಥಗಳಿಗಿಂತ ಶಾಸ್ತ್ರೀಯವಾಗಿ ಕಲ್ಲೊಡೆಯುವ ರೀತಿಯನ್ನೂ. ಶಾಸ್ತ್ರೀಯವಾಗಿ ಗಾರೆ ಅರೆಯುವ ರೀತಿಯನ್ನೂ, ಅಡುಗೆಮಾಡುವ ರೀತಿಯನ್ನೂ. ಗಡಿಯಾರ ರಿಪೇರಿ ಮಾಡುವ ರೀ ಯನ್ನೂ ಹೇಳಿಕೊಡುವ ಪುಸ್ತಕಗಳು ನಮಗೆ ಹೆಚ್ಚು ಅವಶ್ಯವೆಂದು ನಾನು ತಿಳಿದು ಕೊಂಡಿದ್ದೇನೆ "[11]

ಭಾಷೆಯ ಆಧುನೀಕರಣವನ್ನು ಕುರಿತಂತೆ ಮೇಲಿನ ಮಾತು ತೀರ ವೈಜ್ಞಾನಿಕ ವಾದುದು.

ಭಾಷೆಗೆ ಶ್ರೀಮಂತಿಕೆ ಆಡುಮಾತಿನಿಂದ

ಒಂದು ಭಾಷೆಯ ಸಾಧ್ಯತೆಯು ವ್ಯಕ್ತಗೊಳ್ಳುವುದು ಅದರ ಆಡುಮಾತಿನಲ್ಲಿ, ಗ್ರಾಮ್ಯರೂಪದಲ್ಲಿ. ಕನ್ನಡ ಸಾಹಿತ್ಯದ ಇತಿಹಾಸವನ್ನು ನೋಡಿದರೆ ನಮ್ಮ ಪಂಡಿತ ಪರಂಪರೆಯ ಜನಕ್ಕೆ ಸಾಹಿತ್ಯದಲ್ಲಿ ಆಡುಮಾತಿನ ಬಗ್ಗೆ ವಿಶೇಷ ಆಸಕ್ತಿ ಕಂಡು ಬರುತ್ತಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಡಿ.ವಿ.ಜಿ.ಯವರು ತಮ್ಮ 'ಭಾಷೆಯ ವ್ಯವಹಾರ ರೂಪಗಳು' ('ಜೀವನ ಸೌಂದರ್ಯ ಮತ್ತು ಸಾಹಿತ್ಯ') ಎಂಬ ಲೇಖನದಲ್ಲಿ ಆಡುಮಾತಿನ ಸೊಗಸನ್ನೂ ಅಂದಚಂದವನ್ನೂ ಬರಹದ ಮಾತಿನಲ್ಲಿ ಕಾಣಲು ಸಾಧ್ಯ ವಿಲ್ಲ ಎಂಬ ವಾಸ್ತವಿಕ ಸತ್ಯವನ್ನು ಒಪ್ಪಿಕೊಂಡಿದ್ದಾರೆ. ಡಿ.ವಿ.ಜಿ.ಯವರ ಬರವಣಿಗೆ ಶಿಷ್ಟಭಾಷೆಯಲ್ಲಿ ರಚಿತವಾಗಿದ್ದರೂ ಸಾಮಾನ್ಯಜನರ ಆಡುಮಾತಿನ ಸಕಲ ಸಲ್ಲಕ್ಷಣಗಳನ್ನು ಕಾವ್ಯ-ಸಾಹಿತ್ಯಗಳು ಸ್ವೀಕರಿಸುವುದು ಅವರಿಗೆ ಸಮ್ಮತವೇ ಆಗಿದೆ.

ಕನ್ನಡದ ಕೆಲಸಗಳು

ಸ್ವಾತಂತ್ರ್ಯ ಪೂರ್ವಕಾಲದ ಕರ್ನಾಟಕದಲ್ಲಿ ಕನ್ನಡದ ಒಟ್ಟು ಬೆಳವಣಿಗೆಯನ್ನು ಕುರಿತಂತೆ ಕನಸು ಕಂಡು ಅದನ್ನು ಕೃತಿಗಿಳಿಸುವುದರಲ್ಲಿ ಯತ್ನಿಸಿದ ಮಹನೀಯರಲ್ಲಿ ಡಿ.ವಿ.ಜಿ.ಯವರೂ ಒಬ್ಬರು. ಅವರು ಅಂದು ಹೇಳಿದ ಎಷ್ಟೋ ಆಲೋಚನೆಗಳು ಇಂದು ಸಾಕಾರಗೊಂಡಿವೆ. ಹೀಗಾಗಿ ಅವರ ಆಲೋಚನೆಗಳಿಗೆ ಐತಿಹಾಸಿಕ ಮಹತ್ವ ವನ್ನು ನಾವು ನೀಡಬೇಕಾಗಿದೆ.

ಆಧುನಿಕ ಕಾಲದ ಕನ್ನಡಕ್ಕೆ ತಕ್ಕುದಾದ ಒಂದು ಸರಳ ವ್ಯಾಕರಣಗ್ರಂಥ, ವಿಜ್ಞಾನಮೇ ಮೊದಲಾದ ಶಾಸ್ತ್ರಗ್ರಂಥಗಳನ್ನು ಕನ್ನಡದಲ್ಲಿ ರೂಪಿಸುವ ಹಿನ್ನೆಲೆಯಲ್ಲಿ

---

11 ಸಾಹಿತ್ಯ ಶಕ್ತಿ, ಪುಟ 76.

ಕನ್ನಡಕ್ಕೊಂದು ಸಮಗ್ರ ಇಂಗ್ಲಿಷ್–ಕನ್ನಡ ನಿಘಂಟು, ಹಳಗನ್ನಡ ಕಾವ್ಯಗಳ ಸಂಗ್ರಹ ಹಾಗೂ ಹೊಸಗನ್ನಡಕ್ಕೆ ಅನುವಾದ, ಸರಕಾರಿ ಕಛೇರಿಗಳ 'ಲೆಕ್ಕಪತ್ರಗಳನ್ನು ಕೊಡಿದವಟ್ಟಿಗೆ ಕನ್ನಡವಲ್ಲೇ ಬರೆಯಿಸಿಡಬೇಕೆಂಬ' ವಿಚಾರ, ಶಾಲೆ ಕಾಲೇಜುಗಳಲ್ಲಿ ಕನ್ನಡ ಚರ್ಚಾಕೂಟಗಳ ಏರ್ಪಾಟು. ಕರ್ನಾಟಕದ ಏಕೀಕರಣದ ಅನಿವಾರ್ಯತೆ, ಕರ್ನಾಟಕ ಸಂಘಗಳ ಮೂಲಕ ಕನ್ನಡ ಪ್ರಚಾರ ಇವು—ಡಿ.ವಿ.ಜಿ. ಸೂಚಿಸಿರುವ ಕೆಲವೊಂದು ಆಲೋಚನೆಗಳು.

"ಸಾಹಿತ್ಯವನ್ನು ಪಂಡಿತಗೋಷ್ಠಿಯಿಂದ ಪೇಟೆಯ ಚೌಕಕ್ಕೆ ತರಬೇಕಾದದ್ದು ನಮ್ಮ ಈಗಿನ ಕರ್ತವ್ಯವಾಗಿದೆ" (ಸಾಹಿತ್ಯ ಶಕ್ತಿ, ಪುಟ ೮೫)—ಇದು ಡಿ.ವಿ.ಜಿ.ಯವರ ಸಾಹಿತ್ಯ ಹಾಗೂ ಕನ್ನಡದ ಬಗೆಗಿನ ನಿಲವನ್ನು ಸ್ಪಷ್ಟವಾಗಿಸುವ ಮಾತು. ಕನ್ನಡವನ್ನು ಆಧುನಿಕ ಕಾಲಕ್ಕೆ ಸಜ್ಜುಗೊಳಿಸುವ ಬಗೆಗೆ ಅವರು ನೀಡಿದ ಚಿಂತನೆಗಳು ಬರಿಯ ಐತಿಹಾಸಿಕ ದಾಖಲೆಗಳಷ್ಟೇ ಆಗಿರದೆ ಎಲ್ಲ ಕಾಲಕ್ಕೂ ತಕ್ಕುದಾದವುಗಳು ಎನ್ನುವುದು ಮಹತ್ವದ ಅಂಶ. "ನಮ್ಮ ಕನ್ನಡದ ಉತ್ಸಾಹ ಕೇವಲ sentiment ಎಂದರೆ ಭಾವಾತಿರೇಕದ ಉದ್ಗಾರವಲ್ಲ" ಎನ್ನುವ ಡಿ.ವಿ.ಜಿ.ಯವರು ಅದು "ವಿಚಾರಪೂರ್ವಕವಾದ ತತ್ತ್ವಸಿದ್ಧಾಂತ ಮತ್ತು ಸದ್ಯಃ ಪ್ರಯೋಜನ ದೃಷ್ಟಿಯ ನೀತಿನಿರ್ಣಯ" ಎಂಬುದು ಡಿ.ವಿ.ಜಿ.ಯವರ ಕನ್ನಡ ಪ್ರೇಮದ ವಿಶಿಷ್ಟತೆ.

'ರಾಜ್ಯಶಾಸ್ತ್ರ': ಒಂದು ವಿವೇಚನೆ

ಎಚ್. ಆರ್. ದಾಸೇಗೌಡ

ಪ್ರೊ॥ ಎಚ್. ಆರ್. ದಾಸೇಗೌಡರು ತಮ್ಮ ಲೇಖನದಲ್ಲಿ ಡಿ.ವಿ.ಜಿ. ಅವರ ವೈಯಕ್ತಿಕ ಸಾಂಸಾರಿಕ ಹಾಗೂ ಪತ್ರಿಕೋದ್ಯಮ ವೃತ್ತಿಯ ಹಿನ್ನೆಲೆಯಲ್ಲಿ ಡಿ.ವಿ.ಜಿ. ಅವರ 'ರಾಜ್ಯಶಾಸ್ತ್ರ' ಗ್ರಂಥವನ್ನು ವಿಶ್ಲೇಷಣೆ ಮಾಡಿದ್ದಾರೆ. "ಅವರ ರಾಜ್ಯಶಾಸ್ತ್ರ ಗ್ರಂಥ ಬೇರೆ ಭಾಷೆಯ ನಕಲು ಆಗದೆ, ಕನ್ನಡದ ಸ್ವತಂತ್ರ ಚಿಂತನಗಳಿಗೆ ಸಾಕ್ಷ್ಯ ಒದಗಿಸಿದೆ...ಈ ಗ್ರಂಥದಲ್ಲಿ ಪ್ರತಿಪಾದಿತವಾಗಿರುವ ತತ್ತ್ವಗಳೂ ಅಭಿಪ್ರಾಯಗಳೂ ಭಾವನೆಗಳೂ ಬಹುಭಾಗ ಇಂಗ್ಲಿಷ್ ಗ್ರಂಥಗಳಿಂದ ಡಾ॥ ಡಿ.ವಿ.ಜಿ.ಯವರು ಪಡೆದುಕೊಂಡಿದ್ದಾರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರು ಓದಿರುವ ಇಂಗ್ಲಿಷ್ ಗ್ರಂಥಗಳು ನೂರಾರು. ಅತಿ ಮುಖ್ಯವಾಗಿ ಅವರು ಆಧಾರವಾಗಿರಿಸಿಕೊಂಡ ಪಾಶ್ಚಾತ್ಯ ಬರಹಗಾರರು ಪ್ಲೇಟೋ, ಅರಿಸ್ಟಾಟಲ್. ಬರ್ಕ್, ಮಿಲ್. ಮಾರ್ಲೆ. ಬ್ರೈಸಿ, ಲ್ಯಾಸ್ಕಿ ಮೊದಲಾದವರು ಅಂದಾಗ ಅವರ ಬರಹದಲ್ಲಿ ಕಾಣುವ ಕ್ಲಿಷ್ಟತೆಯ ಅರಿವು ನಮಗಾಗುತ್ತದೆ... ಕೌಟಿಲ್ಯನ 'ಅರ್ಥಶಾಸ್ತ್ರ'. ಪ್ಲೇಟೋವಿನ 'ರಿಪಬ್ಲಿಕ್'. ಈ ಗ್ರಂಥಗಳೆರಡನ್ನೂ ಅರಗಿಸಿಕೊಂಡ ಡಿ.ವಿ.ಜಿ. ಅವೆರಡಕ್ಕಿಂತ ಪ್ರತ್ಯೇಕವೆನಿಸುವ ವಿಚಾರಗಳನ್ನು ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ...ಈ ಗ್ರಂಥದ ಕೊನೆಯ ಅಧ್ಯಾಯ. 'ರಾಮರಾಜ್ಯ', ಸಾಹಿತ್ಯ ಹಾಗೂ ಶಾಸ್ತ್ರಗಳೆರಡರ ದೃಷ್ಟಿಯಿಂದ ಮಾನ್ಯ ಮಾಡಬೇಕಾದ ಅಧ್ಯಾಯವಾಗಿದೆ."

ಲೇಖಕರು ರಾಜ್ಯಶಾಸ್ತ್ರದಲ್ಲಿ ತೋರಿಬರುವ ಡಿ.ವಿ.ಜಿ. ಅವರ ಸಮನ್ವಯ ದೃಷ್ಟಿ. ಬದುಕು ಸಾಹಿತ್ಯ ಶಾಸ್ತ್ರಜ್ಞಾನಗಳ ಅಪೂರ್ವ ಸಂಮಿಲನ. ವಿಚಾರ ಪರಿಣತಿ, ಸಮತೋಲನ ದೃಷ್ಟಿ, ಸೈದ್ಧಾಂತಿಕ ಹಾಗೂ ಸ್ವಾರಸ್ಯಕರ ನಿರೂಪಣೆ ಮುಂತಾದ ಗುಣಲಕ್ಷಣಗಳನ್ನು ಎತ್ತಿಕಾಣಿಸುವುದರ ಜೊತೆಗೆ ಗ್ರಂಥಮಿತಿಗಳನ್ನೂ ಗುರುತಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯ ನಿರ್ಮಾಪಕರಾದ ದಿಗ್ಗಜಗಳಲ್ಲಿ ಡಾ॥ ಡಿ.ವಿ. ಗುಂಡಪ್ಪ ಅವರೂ ಒಬ್ಬರು. ಸುಮಾರು ಒಂದು ಶತಮಾನದ ಹಿಂದೆ ಹಳೆಯ ಮೈಸೂರು ಪ್ರಾಂತದ ಕೋಲಾರ ಜಿಲ್ಲೆಯಲ್ಲಿ ಜನಿಸಿದ ಹಿರಿಯ ಸಾಹಿತಿ, ಪತ್ರಕರ್ತ-ದಿವಂಗತ ಡಿ.ವಿ.ಜಿ, ಯವರು ತಮ್ಮ ಕಾಲದ ವೈಶಿಷ್ಟ್ಯಗಳನ್ನೆಲ್ಲಾ ರೂಢಿಸಿಕೊಂಡ ವ್ಯಕ್ತಿತ್ವವುಳ್ಳ ಧೀಮಂತ ರಾಷ್ಟ್ರಕ. ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಬದುಕಿನ ಅನುಭವದ ಓದುಗಳೇ ಪ್ರಮುಖವೆಂದು ಭಾವಿಸಿ ಅದನ್ನು ಗಳಿಸಿಕೊಂಡ ಕೀರ್ತಿ ಡಾ॥ ಡಿ.ವಿ.ಜಿ. ಯವರಿಗೆ ಸೇರುತ್ತದೆ. ಸಮಾಜಸೇವೆ, ರಾಜಕಾರಣ, ಪತ್ರಿಕೋದ್ಯಮ, ಮಠಮಾನ್ಯಗಳ ಒಡನಾಟ, ಮಹಾರಾಜರ ದಿವಾನರುಗಳ ಸಹವಾಸ, ಪ್ರಚಲಿತ ರಾಜಕಾರಣಗಳ ಪರಿಚಯ, ಶ್ರೀಸಾಮಾನ್ಯನ ಕಷ್ಟ–ಸುಖಗಳ ಅರಿವು, ಸಂಗೀತ, ಸಾಹಿತ್ಯ–ಸಂಸ್ಕೃತಿ-ಚಿಂತನ–ಮಂಥನ, ಶಿಕ್ಷಣ–ದೇಶದ ಉನ್ನತಿ ಕುರಿತಾದ ಆಲೋಚನೆ. ಹೀಗೆ ಡಿ.ವಿ.ಜಿ. ಅವರು ಯಾವುದರಲ್ಲಿ ಓಡಾಡಿಲ್ಲವೆಂದು ಯೋಚಿಸಬೇಕಾಗಿದೆ. ತಮ್ಮ ಸುತ್ತ ಮುತ್ತಲಿನ ಸಮಾಜವನ್ನು ನೋಡುತ್ತಾ ಅದರ ಒಳಿತು–ಕೆಡುಕುಗಳಿಗೆ ಸ್ಪಂದಿಸುತ್ತಾ ತಮ್ಮ ಜೀವನಯಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದ ಡಿ.ವಿ.ಜಿ. ಅವರು 20ನೆಯ ಶತಮಾನದ ಕರ್ನಾಟಕದ ಇತಿಹಾಸ ಗುರುತಿಸಬೇಕಾದ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು.

1945ರ ಸುಮಯ, ಎರಡನೇ ಮಹಾಯುದ್ಧದ ಕೊನೆಯ ಅಂಗವಾದ ನಾಗಸಾಕಿ-ಹಿರೋಷಿಮಾಗಳ ಮೇಲೆ ಮಿತ್ರರಾಷ್ಟ್ರಗಳು ಬಾಂಬು ಹಾಕಿದವು. ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯ್ತು. ಆಗ ಡಿ.ವಿ.ಜಿ. ಈ ಅಸಾಮಾನ್ಯ ಘಟನೆಯನ್ನು ಕುರಿತು ಅಂದಿನ ಶ್ರೇಷ್ಠ ರಾಜಕೀಯ ಮುತ್ಸದ್ದಿ ರಾಜಾಜಿ ಅವರಿಗೆ ಪತ್ರ ಬರೆದು, ಇಂದಿನ ಸಂದಿಗ್ಧ ಜಗತ್ತಿನಲ್ಲಿ ವಿಶ್ವಶಾಂತಿಗೆ ನಾವೇನಾದರೂ ಮಾಡಬೇಡವೇ, ಮುಂದಿನ ನಮ್ಮ ಹೆಜ್ಜೆ ಯಾವುದು ತೋರಿಸಿ. ಎಂದು ಕೇಳಿದ್ದರು. ಅಂದಿಗಾಗಲೇ ತಮ್ಮ ಸೇವಾಬುದ್ಧಿಯಿಂದ ಸಾಮಾಜಿಕ ಸೇವಕ ರಾಗಿದ್ದ ಡಿ.ವಿ.ಜಿ.ಯವರ ವಿಶ್ವಪ್ರೇಮವನ್ನು ರಾಜಾಜಿ ಅವರು ಶ್ಲಾಘಿಸಿದರು. ಅಂದಿನ ಕಾಲದಲ್ಲಿ ಡಿ.ವಿ ಜಿ. ಅವರು ವಿಶ್ವಶಾಂತಿಗಾಗಿ ತಾಳಿದ್ದ ಕಾತುರತೆ ಹಾಗೂ ವಿಶ್ವದ ಪ್ರಮುಖ ಘಟನಾವಳಿ ಬಗ್ಗೆ ಅವರಿಗಿದ್ದ ಪರಿಜ್ಞಾನ ಭಾರತದ ರಾಜ ಕಾರಣಗಳಿಗೆ ಮಾರ್ಗಸೂಚಿಯಾಗಬಲ್ಲವೆಂದು ರಾಜಾಜಿ ಹೇಳಿದರು.

ಭಾರತದ ರಾಜಕೀಯ ಇತಿಹಾಸದಲ್ಲಿ ಗೋಪಾಲಕೃಷ್ಣ ಗೋಖಲೆ ಅವರಿಗೆ ಇರುವ ಸ್ಥಾನ ಉನ್ನತವಾದದ್ದು. ಗಣಿತಶಾಸ್ತ್ರದ ಸೂತ್ರಗಳಿದ್ದಂತೆ ಗೋಖಲೆಯವರ ವಿಚಾರಧಾರೆ, ಅವರ ಸಾಮಾಜಿಕ ಕಟ್ಟುಪಾಡುಗಳು, ರಾಜಕೀಯ ಗೊತ್ತುಗುರಿಗಳು ಜನಸಾಮಾನ್ಯರನ್ನು ತಲುಪಲು ಜ್ಞಾನಿಗಳಾದವರು ಅವನ್ನು ವಿಶದಪಡಿಸ ಬೇಕಾಗುತ್ತಿತ್ತು. ಅಂತಹ ಕಾರ್ಯವನ್ನು ಗಾಂಧೀಜಿ ಕೈಗೊಂಡರು. ಭಾರತದ ಅಂದಿನ ಪರಿಸ್ಥಿತಿಯಲ್ಲಿ ಗೋಖಲೆಯವರು ಪ್ರತಿಪಾದಿಸುತ್ತಿದ್ದದ್ದು ಕೇವಲ ರಾಜಕೀಯ

ಸ್ವಾತಂತ್ರ್ಯವನ್ನಲ್ಲ, ಭಾರತದ ಸರ್ವತೋಮುಖ ಪ್ರಗತಿಗೆ ಸೂಕ್ತವಾಗಬಹುದಾದ ಸಂಪೂರ್ಣ ಬದಲಾವಣೆಯನ್ನ. ಈ ವಿಚಾರಧಾರೆಗೆ ಚಾಲನೆ ಕೊಟ್ಟು ಸತ್ಯ, ಅಹಿಂಸೆ, ಸಾಮಾಜಿಕ ಆಂದೋಲನಗಳ ಮೂಲಕ ಗಾಂಧೀಜಿಯವರು ತಮ್ಮ ರಾಜಕೀಯ ಗುರು ಗೋಖಲೆಯವರಿಗೆ ಶಾಶ್ವತವಾದ ಹೆಸರನ್ನು ಗಳಿಸಿಕೊಟ್ಟರು. ಇಂತಹ ಗೋಖಲೆಯವರ ಪ್ರಭಾವ ಡಿ.ವಿ.ಜಿ.ಯವರ ಮೇಲೆ ಬಹಳ ಹಿಂದೆಯೇ ಆಗಿತ್ತು. 1915 ರಲ್ಲಿ ಗೋಖಲೆಯವರ ಹೆಸರಿನಲ್ಲಿ ಸಂಸ್ಥೆಯೊಂದನ್ನು ಬೆಂಗಳೂರಿನಲ್ಲಿ ಕಟ್ಟಲು ಡಿ.ವಿ.ಜಿ. ಪ್ರಯತ್ನಿಸಿದರು. ಅಂದರೆ ಮೂವತ್ತು ವರ್ಷಗಳ ನಂತರ ಡಿ.ವಿ.ಜಿ.ಯವರ ಅವಿಶ್ರಾಂತ ದುಡಿಮೆಯ ಫಲವಾಗಿ 1945ರಲ್ಲಿ 'ಗೋಖಲೆ ಸಾರ್ವಜನಿಕ ಸಂಸ್ಥೆ' ಅಧಿಕೃತವಾಗಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂತು. ಇಂದು ಬೆಂಗಳೂರಿನ ನಾಗರಿಕ ಜೀವನದಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಯ ಪ್ರಾಮುಖ್ಯತೆಯನ್ನು ಕುರಿತು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೀಗೆ ಡಿ.ವಿ.ಜಿ. ರಾಷ್ಟ್ರಪಿತನ ಗುರುವಿನ ಚಿಂತನಗಳಿಗೆ ಮಾರುಹೋಗಿ ಅವರ ಹೆಸರಿನಲ್ಲಿ ಸಾರ್ವಜನಿಕ ಸಂಸ್ಥೆಯೊಂದನ್ನು ಕಟ್ಟಲು ಹೋರಾಡಿದ ಧೀಮಂತ ವ್ಯಕ್ತಿ.

1905ರಲ್ಲಿ 'ಸೂರ್ಯೋದಯ ಪ್ರಕಾಶಿಕಾ' ಪತ್ರಿಕೆಗೆ ಸೇರಿಕೊಂಡ ಡಿ.ವಿ.ಜಿ.ಯವರು ಅನಂತರ ಈವನಿಂಗ್ ಮೈಲ್, ಭಾರತಿ, ಮೈಸೂರ್ ಸ್ಟಾಂಡರ್ಡ್, ನುಡಿಗನ್ನಡಿ, ವೀರಕೇಸರಿ, ಹಿಂದೂ, ಇಂಡಿಯನ್ ಪೇಟ್ರಿಯಟ್, ಇಂಡಿಯನ್ ರೆವ್ಯೂ, ಮೈಸೂರು ಟೈಮ್ಸ್ ಮೊದಲಾದ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುವುದರ ಮೂಲಕ ಉನ್ನತ ಮಟ್ಟದ ಪತ್ರಕರ್ತರಾದುದಲ್ಲದೆ ಜನಜೀವನದ ಪ್ರಚಲಿತ ವಿಷಯಗಳ ಸಂಪೂರ್ಣ ಅರಿವನ್ನು ಪಡೆದವರಾಗಿದ್ದರು. 1910 ರಲ್ಲಿ 'ಕರ್ನಾಟಕ' ಎಂಬ ಸ್ವತಂತ್ರ ಪತ್ರಿಕೆಯೊಂದನ್ನು ಪ್ರಾರಂಭಿಸಿದರು. ಹೀಗೆ ಆಧುನಿಕ ರಾಜಕೀಯ ರಂಗದ ಪರಿಚಯಕ್ಕೆ ಅಗತ್ಯ ಮಜಲುಗಳಲ್ಲಿ ಒಂದಾದ ಪತ್ರಿಕೋದ್ಯಮದ ಅನುಭವ ಡಾ॥ ಡಿ.ವಿ.ಜಿ. ಅವರಲ್ಲಿ ಬಹಳವಾಗಿತ್ತು.

ತುಂಬಾ ಸುಸಂಸ್ಕೃತ ಕುಟುಂಬದಲ್ಲಿ ಬೆಳೆದ ಡಾ॥ ಡಿ.ವಿ.ಜಿ. ಅವರಿಗೆ 1903–04 ರಲ್ಲಿ ಅಂದರೆ 16–17ನೇ ವಯಸ್ಸಿನಲ್ಲಿ ಮದುವೆಯಾಯಿತು. ದುರ್ದೈವ, ಡಿ.ವಿ.ಜಿ.ಯವರು ತಮ್ಮ 35–36ನೇ ವರ್ಷಕ್ಕೆ ಅಂದರೆ ತುಂಬುಪ್ರಾಯದವರಾಗಿದ್ದಾಗಲೇ ಮಡದಿಯನ್ನು ಕಳೆದುಕೊಂಡರು. ಅನಂತರದಲ್ಲಿ ಅವರು ಇಡೀ ಬದುಕನ್ನು ಸಮಾಜಸೇವೆ, ಪತ್ರಿಕೋದ್ಯಮ, ಸಾಹಿತ್ಯ ಹಾಗೂ ಸಂಸ್ಕೃತಿ ಪ್ರಸಾರಗಳಿಗೆ ಮೀಸಲಾಗಿಟ್ಟರು. ಸಾಕಷ್ಟು ಚಿಂತನಪರರಾದರು. ಈ ಒಂದು ವೈಯಕ್ತಿಕ, ಸಾಂಸಾರಿಕ ಹಾಗೂ ವೃತ್ತಿಪರ ಹಿನ್ನೆಲೆಯಲ್ಲಿ ಅವರ 'ರಾಜ್ಯಶಾಸ್ತ್ರ' ಗ್ರಂಥವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ದಿವಂಗತ ಡಿ.ವಿ.ಜಿ.ಯವರು ಸಾಂಪ್ರದಾಯಿಕ ಶಾಲಾ ಕಾಲೇಜುಗಳಲ್ಲಿ ಹೆಚ್ಚಿನ ವ್ಯಾಸಂಗ ಮಾಡಿದವರಲ್ಲ ಮತ್ತು ಪದವಿಗಳನ್ನು ಗಳಿಸಿಕೊಂಡವರೂ ಅಲ್ಲ. ಅವರು ಉದ್ಯೋಗದ ನೆಪದಲ್ಲಿ ಗಳಿಸಿಕೊಂಡ ಅಪಾರ ಅನುಭವ, ಸಾಹಿತ್ಯ ಸಂಸ್ಕೃತಿ ರಾಜಕಾರಣಗಳ ಅಧ್ಯವಸಾಯದಿಂದ ಆದ ಬಹುಜನರ ಪರಿಚಯ ಲಾಭ, ಸಾರ್ವಜನಿಕ ಬದುಕಿನ ಕಾಳಜಿ, ಬೇಗ ಬದುಕಿನಲ್ಲಿ ದೊರಕಿದ ನಿರ್ಲಿಪ್ತತೆ, ವೈರಾಗ್ಯ ಇವುಗಳ ಫಲವಾಗಿ ಮೂಡಿದ ಹೊಸ ಚಿಂತನೆಯ ಎಳೆಯನ್ನು ಡಿ.ವಿ.ಜಿ. ಅವರ ಬರಹಗಳಲ್ಲಿ ಗುರುತಿಸಬಹುದಾಗಿದೆ. ಅವರ ರಾಜ್ಯಶಾಸ್ತ್ರ ಗ್ರಂಥ ಬೇರೆ ಭಾಷೆಯ ನಕಲು ಆಗದೆ ಕನ್ನಡದ ಸ್ವತಂತ್ರ ಚಿಂತನಗಳಿಗೆ ಸಾಕ್ಷ್ಯ ಒದಗಿಸಿದೆ. 'ರಾಜ್ಯಶಾಸ್ತ್ರ' ಗ್ರಂಥ ಅದರ ರಚನಾ ಕಾಲದ ದೃಷ್ಟಿಯಿಂದ ಗಮನಿಸಿದಾಗ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ. 1950ರ ದಶಕದಲ್ಲಿ ಭಾರತೀಯ ಭಾಷೆಗಳಲ್ಲಿ ರಾಜ್ಯಶಾಸ್ತ್ರ ದಂತಹ ಶಾಸ್ತ್ರ ವಿಚಾರದಲ್ಲಿ ಹೊಸತು-ಹಳತುಗಳ ಆಲೋಚನಾ ಸಂಗಮ ನಡೆದಿತ್ತೋ ಇಲ್ಲವೋ ತಿಳಿಯದು. ಕೌಟಿಲ್ಯನ ಅರ್ಥಶಾಸ್ತ್ರ, ಪ್ಲೇಟೋವಿನ ರಿಪಬ್ಲಿಕ್ ಗ್ರಂಥಗಳೆರಡನ್ನೂ ಅರಗಿಸಿಕೊಂಡ ಡಿ.ವಿ.ಜಿ ಅವರೆಡಕ್ಕಿಂತ ಪ್ರತ್ಯೇಕವೆನಿಸುವ ವಿಚಾರಗಳನ್ನು ತಮ್ಮ ಗ್ರಂಥವಲ್ಲಿ ಹೇಳಿದ್ದಾರೆ. ತಮ್ಮ ಸಾಂಪ್ರದಾಯಿಕ ಆಲೋಚನಾ ಸರಣಿಗೆ ಪಾಶ್ಚಾತ್ಯ ವಿದ್ವತ್ ಗಣಿಯಿಂದ ಸೂಕ್ತವಾದ ರತ್ನಗಳನ್ನು ಹೆಕ್ಕಿ ಜೋಡಿಸಿ ಹೊಸ ನಮೂನೆಯ ಹಾರವನ್ನು ತಯಾರಿಸಿದ್ದಾರೆ. ಅವರ ಗ್ರಂಥ ಯಾರನ್ನೋ ದೃಷ್ಟಿಯಲ್ಲಿಟ್ಟುಕೊಂಡು ಅವಸರಕ್ಕೆ ನೇದ ಕಗ್ಗವಾಗಿಲ್ಲ. ಜನಸಾಮಾನ್ಯರ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ವರ ಪ್ರಗತಿಗೆ ಪೂರಕವಾಗುವಂತಹ ಆಡಳಿತ ನೀಡಲು ಅನುಸರಿಸಬಹುದಾದಂತಹ ನಿಯಮಗಳನ್ನು ವಿವೇಚಿಸಿ ಆಲೋಚಿಸಿ ಬರೆದ ಗ್ರಂಥ. ದೇಶೀಯ ಭಾಷೆಗಳಲ್ಲಿ ಶಾಸ್ತ್ರಗ್ರಂಥಗಳ ಬೆಳವಣಿಗೆಯ ನಾಂದಿಯನ್ನು ಈ ಗ್ರಂಥದಲ್ಲಿ ಕಾಣಬಹುದು. ಅಲ್ಲದೆ ಅವರ ಬರಹದಲ್ಲಿ ಎದ್ದು ಕಾಣುವ ಭಾಷಾ ಪ್ರಕ್ರಿಯೆಯ ಜೊತೆಗೆ ವಿಚಾರವನ್ನು ಧೀಮಂತಿಕೆಯಿಂದ ತಿಳಿಸುವ ಸೌಜನ್ಯ ದಾಖಲಿ ಗೊಳಿಸುವಂತಹುದು. ಇದು ಬಹು ಸಾಮಾನ್ಯ ಜನರಿಗಾಗಿ ಬರೆದ ಗ್ರಂಥ. ಇದು ಪಂಡಿತರಿಗಾಗಿ ಬರೆದದ್ದಲ್ಲ; ವಿಷಯದ ನೇರ ಹಾಗೂ ಪ್ರಥಮ ಪರಿಚಯವನ್ನು ಮಾಡಿಕೊಡುವುದು ಇದರ ಉದ್ದೇಶ. ತಳಮುಟ್ಟ ಶೋಧಿಸುವುದಲ್ಲ. ಗ್ರಂಥದ ಸಂಕಲ್ಪ ಹೀಗೆ ಮಿತವಾದದ್ದಾಗಿರುವುದರಿಂದ "ಶಾಸ್ತ್ರಪ್ರವೀಣರ ಕಣ್ಣಿಗೆ ಇದರಲ್ಲಿ ಅನೇಕ ಅಸಮಗ್ರತೆಗಳು" ಕಾಣಿಸಿಯಾವು ಎಂದು ಅವರೇ ಈ ಕೃತಿಯಲ್ಲಿ ಒಂದೆಡೆ ಹೇಳಿ ಕೊಂಡಿದ್ದಾರೆ.

ಈ ಗ್ರಂಥವಲ್ಲಿ ಪ್ರತಿಪಾದಿತವಾಗಿರುವ ತತ್ವಗಳೂ ಅಭಿಪ್ರಾಯಗಳೂ ಭಾವನೆಗಳೂ ಬಹು ಭಾಗ ಇಂಗ್ಲಿಷ್ ಗ್ರಂಥಗಳಿಂದ ಡಾ॥ ಡಿ.ವಿ.ಜಿ.ಯುವರು ಪಡೆದುಕೊಂಡಿದ್ದಾರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರು ಓದಿರುವ ಇಂಗ್ಲಿಷ್ ಗ್ರಂಥಗಳು ನೂರಾರು. ಅತಿ ಮುಖ್ಯವಾಗಿ ಅವರು ಆಧಾರವಾಗಿರಿಸಿಕೊಂಡ ಪಾಶ್ಚಾತ್ಯ ಬರಹಗಾರರು ಪ್ಲೇಟೋ, ಅರಿಸ್ಟಾಟಲ್, ಬರ್ಕ್, ಮಿಲ್, ಮಾರ್ಲೆ,

ಡೈಸಿ, ಲ್ಯಾಸ್ಕಿ ಮೊದಲಾದವರು ಅಂದಾಗ ಅವರ ಬರಹದಲ್ಲಿ ಕಾಣುವ ಕ್ಲಿಷ್ಟತೆಯ ಅರಿವು ನಮಗಾಗುತ್ತದೆ.

ಮೈಸೂರಿನ ಸಾರ್ವಜನಿಕ ಜೀವನದಲ್ಲಿ ದೊಡ್ಡ ಹೆಸರು ಮಾಡಿರುವ 'ಸಾಧ್ವಿ' ಪತ್ರಿಕೆಯ ಪ್ರವರ್ತಕರಾದ, ಮೈಸೂರಿನ ತಾತಯ್ಯನೆಂದು ಪ್ರಖ್ಯಾತಿಹೊಂದಿರುವ ಶ್ರೀ ಎಂ. ವೆಂಕಟಕೃಷ್ಣಯ್ಯನವರಿಗೆ ಈ ಗ್ರಂಥ ಅಂಕಿತವಾಗಿದೆಯೆಂಬುದು ಗಮನಿಸ ಬೇಕಾದ ವಿಚಾರ. ಕ್ರೌನ್ 1/8 ಆಕಾರದ ಈ ಗ್ರಂಥದಲ್ಲಿ ಸುಮಾರು 381 ಪುಟಗಳಿವೆ ಮತ್ತು ಸುಮಾರು 22 ಅಧ್ಯಾಯಗಳಿವೆ. ಮೊದಲನೆಯ ಪೂರ್ವಚರಿತ್ರೆಯ ರೂಪದ ಪೀಠಿಕೆ ಹಾಗೂ ಕೊನೆಯ ರಾಮರಾಜ್ಯ ಈ ಎರಡು ಅಧ್ಯಾಯಗಳು ತಮ್ಮವೇ ಆದ ದೃಷ್ಟಿಯಿಂದ ಪ್ರಮುಖವೆನಿಸಿವೆ.

ದೇಶವೆಂಬುದೂ ರಾಜ್ಯವೆಂಬುದೂ ಒಂದೇ ಅಲ್ಲ. ದೇಶವೆಂಬುದು ಮುಖ್ಯವಾಗಿ ಭೂಮಿಯ ವಿಭಾಗ, ರಾಜ್ಯವೆಂಬುದು ಜನತೆಯ ವಿಭಾಗ ಎಂದು ಪೂರ್ವ ಚರಿತ್ರೆಯ ರೂಪದ ಪೀಠಿಕೆಯ ಪ್ರಕರಣದಲ್ಲಿ ಪ್ರಸ್ತಾಪಿಸುತ್ತಾ ರಾಜ್ಯಶಾಸ್ತ್ರದ ಬಗ್ಗೆ ಓದುಗರಲ್ಲಿ ಅನನ್ಯತೆಯನ್ನು ಪ್ರೇರೇಪಿಸುತ್ತಾ, ಭರತಖಂಡದ ಪ್ರಾಸಂಗಿಕ ಇತಿಹಾಸದ ಪ್ರಸ್ತಾಪದೊಡನೆ, ಪಾಶ್ಚಾತ್ಯರ ವಿಚಾರಧಾರೆಗಳ ಪ್ರಭಾವವನ್ನು ಡಿ.ವಿ.ಜಿ. ಸಮರ್ಪಕ ವಾಗಿ ಗುರುತಿಸುತ್ತಾರೆ. ಯೂರೋಪಿನ ಇತಿಹಾಸದಲ್ಲಿ ಬರುವ ಫ್ರಾನ್ಸ್‌ದೇಶದ ಕ್ರಾಂತಿ, ಉಗ್ರ ರಾಷ್ಟ್ರೀಯತೆಗಳ ತೀವ್ರ ಪ್ರಭಾವವನ್ನು ಓದುಗರಲ್ಲಿ ಬೇರೂರಿಸುತ್ತಾ ಇಡೀ ಮನುಕುಲ ಇಂದು ಪರಂಪರಾನುಗತ ವಿಚಾರಗಳಿಂದ ಪ್ರತ್ಯೇಕವಾಗಿ ನಿರ್ದಿಷ್ಟ ಹಾಗೂ ಮಾರ್ಗದರ್ಶಕ ಶಾಸ್ತ್ರಗಳತ್ತ ವಾಲಿತ್ತೆಂಬುದನ್ನು ಡಿ.ವಿ.ಜಿ. ಇಲ್ಲಿ ವಿಶ್ಲೇಷಿಸು ತ್ತಾರೆ. ಇದರಲ್ಲಿ ಬರುವ 'ಬ್ರಿಟಿಷರಿಂದಾಗಿರುವ ಉಪಕಾರ', 'ಪ್ರಜಾಜಾಗೃತಿ', 'ಕಾಂಗ್ರೆಸಿನ ಕಾಲ'. 'ಆಡಳಿತಗಳ ಸುಧಾರಣೆಯದು', 'ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ್ದು'. 'ಸಂಪೂರ್ಣ ಸ್ವಾತಂತ್ರ್ಯದ್ದು', 'ಹೊಸ ರಾಜ್ಯನಿಬಂಧನೆ, 'ಪುರಾತನ–ನೂತನ'— ಈ ಉಪಶೀರ್ಷಿಕೆಗಳು ಮುಂದೆ ಲೇಖಕರಿಂದ ನಿರೂಪಿಸಲ್ಪಡುವ ವಿಚಾರ ಗಳಿಗೆ ಪ್ರಾಸಂಗಿಕ ಮಾತುಗಳಾಗುವುದರ ಜೊತೆಗೆ ರಾಜ್ಯಶಾಸ್ತ್ರದ ತಿಳಿವಳಿಕೆಗೆ ಹೊಸ ಆಸಕ್ತಿ ಹುಟ್ಟಿಸುತ್ತವೆ.

ಈ ಗ್ರಂಥದ ಕೊನೆಯ ಅಧ್ಯಾಯ, 'ರಾಮರಾಜ್ಯ', ಸಾಹಿತ್ಯ ಹಾಗೂ ಶಾಸ್ತ್ರ ಗಳೆರಡರ ದೃಷ್ಟಿಯಿಂದ ಮಾನ್ಯವಾದಬೇಕಾದ ಅಧ್ಯಾಯವಾಗಿದೆ. ಪ್ಲೇಟೋವಿನ 'ರಿಪಬ್ಲಿಕ್' ಮತ್ತು ವಾಲ್ಮೀಕಿಯ 'ರಾಮರಾಜ್ಯ' ಪರಿಕಲ್ಪನೆಗಳೆರಡೂ ಒಂದೇಬುದನ್ನು ಸಾಧಾರಪೂರ್ವಕವಾಗಿ ಈ ಅಧ್ಯಾಯದಲ್ಲಿ ಡಿ.ವಿ.ಜಿ.ಯವರು ತೋರಿಸಿಕೊಟ್ಟಿದ್ದಾರೆ. "ರಾಮರಾಜ್ಯವೆಂಬುದು ಮಹಾಕವಿಯ 'ಮನಃಕಲ್ಪನೆ', ಅದು ಮಾನವಗುಣೋ ತ್ಕೃಷ್ಟತೆಯ ಪರಿಪೂರ್ಣ ದಶೆ. ಎಲ್ಲಿ ಅಧಿಕಾರಿಯೂ ಮತ್ತು ಪ್ರಜೆಯೂ ಅನ್ಯೋನ್ಯ

ನಿರ್ಬಂಧವೇನೂ ಇಲ್ಲದ ಸ್ವತ ಏಪ ಸ್ವಕರ್ತವ್ಯಗಳನ್ನರಿತುಕೊಂಡು ಸಾಂಗವಾಗಿ ನೆರವೇರಿಸುವರೋ, ಎಲ್ಲಿ ಸಾಮಾಜಿಕ ಧರ್ಮವು ಅನ್ಯರಿಂದ ಪರಿಪಾಲನೆಯನ್ನು ಯಾಚಿಸಬೇಕಾದದ್ದಾಗದೆ ಎಲ್ಲರಿಂದಲೂ ಶ್ವಾಸೋಚ್ಛ್ವಾಸಗಳಂತೆ ಅಪ್ರಯತ್ನವಾಗಿ ಸಾಗುತ್ತಿರುತ್ತದೋ, ಎಲ್ಲಿ ಒಬ್ಬನು ಇನ್ನೊಬ್ಬನ ಉಚ್ಛ್ರಾಯವನ್ನು ನೋಡಿ ಆ ಉಚ್ಛ್ರಾಯವು ತನ್ನದೇ ಎಂಬಂತೆ ಸಂತೋಷಿಸುತ್ತಾನೋ ಅಲ್ಲಿರುತ್ತದೆ" ಎನ್ನುತ್ತಾರೆ ಡಿ.ವಿ.ಜಿ.ಯವರು.

"ಅಕ್ಷರ ವಿದ್ಯೆಯು ಜನಕ್ಕೆ ಹೊಸ ಹೊಸ ಸಂಗತಿಗಳನ್ನು ತಿಳಿಸಿಕೊಟ್ಟೀತು, ಉಪಾಯ ಚಮತ್ಕಾರಗಳನ್ನು ಹೆಚ್ಚಿಸೀತು. ಅದು ನೀತಿಮೂಲಗಳನ್ನು ದೃಢಪಡಿಸ ಬಲ್ಲದೆಂಬ ಭರವಸೆಗೆ ಕಾರಣ ತೋರುತ್ತಿಲ್ಲ" ಎನ್ನುವ ಡಿ.ವಿ.ಜಿ.ಯವರು ರಾಮರಾಜ್ಯದ ಯಶಸ್ಸಿಗೆ ಸಾಧನವಾಗಬಲ್ಲ ಪರಿಕರಗಳು " ಜನರಲ್ಲಿನ ನೀತಿವಿವೇಕ ಅವರ ಸ್ವಾರ್ಥ ಪರೀಕ್ಷಣೆ, ಅವರ ಸ್ವಾಭಿಪ್ರಾಯ ಪರಿಶೋಧನೆ—ಅವರ ನ್ಯಾಯ ಶ್ರದ್ಧೆ " ಎಂದು ವಿವರಿಸುತ್ತಾರೆ.

ಈ ರಾಮರಾಜ್ಯ ಅಧ್ಯಾಯದಲ್ಲಿ ಡಾ॥ ಡಿ.ವಿ.ಜಿ.ಯವರು ವಾಲ್ಮೀಕಿ ಹಾಗೂ ಕಾಳಿದಾಸರ ಕಾವ್ಯಗಳಿಂದ ತಮ್ಮ ವಿಷಯ ಪ್ರತಿಪಾದನೆಗೆ ಅನೇಕ ಮಾತುಗಳನ್ನು ಉದ್ಧರಿಸುವ ಮೂಲಕ ಬದುಕಿನ ತಮ್ಮ ಗಾಢ ಅನುಭವವನ್ನು ಇಲ್ಲಿ ಸಮುಪಯೋಗ ಪಡಿಸಿಕೊಂಡಿದ್ದಾರೆ. ಹೀಗಾಗಿ ಸಾಹಿತ್ಯ, ಬದುಕು ಹಾಗೂ ಶಾಸ್ತ್ರಜ್ಞಾನಗಳ ಅಪೂರ್ವ ಸಮ್ಮಿಲನವನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ.

" ಪೊರೆವನೆ ದೈವಂ ಜಗದೊಳ-
ಗರಸಿಂಗಂ ಪ್ರಜೆಯೆ ದೈವವೆಲೆ ಗುಣರತ್ನಾ "

ಈ ಅಧ್ಯಾಯದ ಮೊದಲ ಮಾತು ರಾಜರು ಮತ್ತು ಪ್ರಜೆಗಳು ಇಬ್ಬರೂ ಪರಸ್ಪರ ಅವಲಂಬಿತರಷ್ಟೇ ಅಲ್ಲದೆ ಪೂಜಾರ್ಹರು ಕೂಡ ಎಂಬ ತತ್ವದಿಂದ ಮಾತ್ರ ಕೊನೆಗೊಳ್ಳದೆ ಲೇಖಕರಲ್ಲಿನ ಸಮನ್ವಯ ದೃಷ್ಟಿಗೆ ಸೂಕ್ತ ವಾಣಿಯಾಗಿದೆ.

ರಾಜ್ಯಶಾಸ್ತ್ರದ ಪರಮ ಗುರಿ ಸಂಘಜೀವಿಯಾದ ಮನುಷ್ಯನ ಸಮಗ್ರ ಅಧ್ಯಯನವೇ ಹೊರತು ತಾತ್ಕಾಲಿಕ ವಿಚಾರ ಮಂಡನೆಯಲ್ಲ. ವ್ಯಕ್ತಿಯ ಜೀವನ ವ್ಯವಸ್ಥೆ ಮತ್ತು ಸಮಾಜವು ಕೈಗೊಳ್ಳುವ ಕೆಲಸ ಕಾರ್ಯಗಳು ಸಾಕಷ್ಟು ಯೋಜನಾ ಪರವಾದವು. ಅಲ್ಲಿ ಬಹುಜನಹಿತದ ಗುರಿಯೇ ಹೊರತು ವ್ಯಕ್ತಿಯೋರ್ವನ ಪ್ರಾಮುಖ್ಯತೆಯನ್ನು ಕಾಣಲಾಗುವುದಿಲ್ಲ. ಅಲ್ಲಿ ಯಶಸ್ಸು ಗಳಿಸಿದವನು ಜ್ಞಾನಿಮಾತ್ರನಲ್ಲ, ಮನುಕುಲದ ಪರಮಾಪ್ತ. ಹೀಗೆ ಡಿ.ವಿ.ಜಿ. ತಮ್ಮ ಗ್ರಂಥದ

ಕೊನೆಯನ್ನು ಶಾಸ್ತ್ರದ ವ್ಯಾಪ್ತಿ ಹಾಗೂ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುವುದರ ಜೊತೆಗೆ ಅದರ ಅಗಾಧತೆಯನ್ನೂ ಮಾನವಜನಾಂಗದ ಜವಾಬ್ದಾರಿಯನ್ನೂ ಸ್ಪಷ್ಟಪಡಿಸಿದ್ದಾರೆ. ಒಂದು ಸ್ವತಂತ್ರ ಶಾಸ್ತ್ರಗ್ರಂಥಕರ್ತರಿಗೆ ಇರಬೇಕಾದ ವಿಚಾರಪರಿಣತಿ, ತುಲನೆ, ಸಮತೋಲನ, ಸೈದ್ಧಾಂತಿಕ ಹಾಗೂ ಸ್ವಾರಸ್ಯಕರ ನಿರೂಪಣೆ ಡಿ.ವಿ.ಜಿ.ಯವರಲ್ಲಿದೆ. ಇದಕ್ಕೆ ಮೊದಲ ಹಾಗೂ ಕೊನೆಯ ಅಧ್ಯಾಯಗಳು ಉದಾಹರಣೆಯಾಗಿವೆ.

ಡಿ.ವಿ.ಜಿ.ಯವರ ಭಾಷಾಪ್ರೌಢಿಮೆ ಹಾಗೂ ವಿಷಯಸಂಗ್ರಹಣ ಶಕ್ತಿಯ ಪರಿಶೀಲನೆಗಾಗಿ ಈ ಗ್ರಂಥದ ಮತ್ತೆರಡು ಅಧ್ಯಾಯಗಳನ್ನು ಗಮನಿಸಬಹುದು.

"ರಾಜ್ಯ ರಚನೆ" ಪ್ರಕರಣ (3) ರಲ್ಲಿ ಡಿ.ವಿ.ಜಿ.ಯವರ ಶಾಸ್ತ್ರಜ್ಞಾನ ಹಾಗೂ ಸ್ವತಂತ್ರ ಭಾಷಾಬಳಕೆಯನ್ನು ಕಾಣಬಹುದು. ರಾಜ್ಯದ ಉಗಮ ಕುರಿತಂತೆ ಅವರ ವ್ಯಾಖ್ಯಾನ ಹೀಗಿದೆ: "ಎಂದು ಇಬ್ಬರು ಮನುಷ್ಯಜೀವಿಗಳು ಒಂದು ಕಡೆ ಸೇರಿ ಒಟ್ಟಿಗೆ ಬಾಳಬೇಕೆಂದು ನಿಶ್ಚಯಿಸಿಕೊಂಡರೋ ಅಂದು ರಾಜ್ಯದ ಅಂಕುರಾರ್ಪಣೆಯಾಯಿತು. ಎಲ್ಲಿ ಸಂಸಾರ ಹುಟ್ಟಿತೋ ಅಲ್ಲಿ ರಾಜ್ಯ ಹುಟ್ಟಿತು."

"ರಾಮನು ತನ್ನಲ್ಲಿ ಕಾಣಲಾಗದ ಗುಣವನ್ನು ಶಾಮನಲ್ಲಿಯೂ, ಶಾಮನು ತನ್ನಲ್ಲಿ ಕಾಣಬಾರದ ಶಕ್ತಿಯನ್ನು ರಾಮನಲ್ಲಿಯೂ ಕಂಡಾಗ ಅವರಿಬ್ಬರೂ ಜೀವನದಲ್ಲಿ ಸಹಭಾಗಿಗಳಾಗುತ್ತಾರೆ. ಆಗ ತಾನೇ ಇವನ ಅವಶ್ಯಕತೆ ಅವನಿಗೂ, ಅವನ ಅವಶ್ಯಕತೆ ಇವನಿಗೂ ಗೋಚರವಾಗುತ್ತದೆ" ಅಂದಾಗ ಡಿ.ವಿ.ಜಿ.ಯವರು ವ್ಯಕ್ತಿ ವ್ಯಕ್ತಿಗಳ ಮಧ್ಯೆ ಇರುವ ಭಿನ್ನತೆ ಹಾಗೂ ಅವಲಂಬನಾಶಕ್ತಿಗಳನ್ನು ಗುರುತಿಸುವುದರ ಮೂಲಕ ರಾಜ್ಯದ ಉಗಮಕ್ಕೆ ಮೂಲಕಾರಣವನ್ನು ಪ್ರತಿಪಾದಿಸುತ್ತಾರೆ. "ಒಬ್ಬನಿಂದೊಬ್ಬನಿಗೆ ತೊಂದರೆಯಾಗಬಹುದು, ಜಗಳ ಹುಟ್ಟಬಹುದು, ಯುದ್ಧವಾಗಿ ಅನ್ಯೋನ್ಯ ವಿನಾಶವಾಗಬಹುದು. ಇವನ್ನು ತಪ್ಪಿಸುವುದಕ್ಕಾಗಿ ಹುಟ್ಟಿದ ಏರ್ಪಾಡೇ ರಾಜ್ಯ."

ರಾಜ್ಯದ ಮೂಲಸಾಮಗ್ರಿಯಾದ ಪ್ರಜೆ ಕಾಲದಿಂದ ಕಾಲಕ್ಕೆ ಮಾರ್ಪಾಡು ಹೊಂದುತ್ತಾನೆ. ಕಾಲ ಸರಿದಂತೆ ಅವನ ಸ್ಥಾನದಲ್ಲೂ ಕೂಡ ಅಗಾಧ ಬದಲಾವಣೆ ಗೋಚರವಾಗುತ್ತದೆ. ಇತಿಹಾಸದ ಪ್ರಾರಂಭದ ಕಾಲಕ್ಕೂ ಆಧುನಿಕ ಕಾಲಕ್ಕೂ ಪ್ರಜೆಯ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಅದು ಡಿ.ವಿ.ಜಿ.ಯವರ ಮಾತಿನಲ್ಲಿ ಕೇಳಿದರೆ ಅದರ ಸ್ವಾರಸ್ಯ ಹೆಚ್ಚು : "ಪೂರ್ವಕಾಲದ ರಾಜ್ಯದಲ್ಲಿ ಪ್ರಜೆ ಅಧಿಕಾರಿಯಲ್ಲ. ಕೇವಲ ಅಧೀನನು. ಈಗಿನ ರಾಜ್ಯದಲ್ಲಿ ಅವನು ಅಧೀನನೂ ಹೌದು, ಅಧಿಕಾರಿಯೂ ಹೌದು."

ಕೆಲವೊಮ್ಮೆ ಡಿ.ವಿ.ಜಿ.ಯವರ ಮಾತುಗಾರಿಕೆ ಓದುಗರಿಗೆ ಗೊಂದಲವುಂಟು ಮಾಡುವಂಥದೂ ಆಗಿದೆ. ನೇರವಾಗಿ ತಿಳಿಸುವ ವಿಚಾರಕ್ಕೆ ಅವರು ಬಳಸುವ ಮಾತುಗಳು ಹೆಚ್ಚು ಎಂಬುವುದಕ್ಕೆ ಇಂಗ್ಲೆಂಡಿನ ರಾಜ್ಯವ್ಯವಸ್ಥೆಯ ಆಧಾರಗಳನ್ನು ಕುರಿತಂತೆ ಅವರು ನೀಡುವ ವ್ಯಾಖ್ಯಾನಗಳನ್ನು ಗಮನಿಸಬಹುದು : "ಇಂಗ್ಲೆಂಡಿನಲ್ಲಿ ರಾಜ್ಯಾಧಿಕಾರವು ಯಾವ ಯಾವ ಸೂತ್ರಗಳನ್ನು ಅನುಸರಿಸಿ ನಡೆಯುತ್ತಿದೆ ಎಂದು ಯಾರಾದರೂ ಕೇಳಿದರೆ, ಅದಕ್ಕೆ ಉತ್ತರವಾಗಿ ನಾವು ತೋರಿಸಬಹುದಾದಂಥ ಮೂಲಶಾಸನದ ಪುಸ್ತಕ ಯಾವುದೂ ಇಲ್ಲ. ಅನೇಕ ಶತವರ್ಷಗಳಿಂದ ಆ ದೇಶದಲ್ಲಿ ನಡೆದುಕೊಂಡು ಬಂದಿರುವ ಮಾಮೂಲುಗಳನ್ನೂ, ಆ ಮಾಮೂಲುಗಳ ಕಾರಣಗಳನ್ನೂ ತಾತ್ಪರ್ಯಗಳನ್ನೂ ವಿವರಿಸುವ ಚರಿತ್ರೆಯ ಗ್ರಂಥಗಳೂ ಬಳಸಿರುವ ವ್ಯಾಖ್ಯಾನ ಗ್ರಂಥಗಳೂ ಹತ್ತಾರಿವೆ."

ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯಲ್ಲಿ ಲಿಖಿತಗೊಂಡಿರುವ ಕಾನೂನುಗಳಿಗಿಂತ ರೂಢಿ ಸಂಪ್ರದಾಯಗಳೇ ಹೆಚ್ಚಿನ ಪ್ರಾಮುಖ್ಯ ಗಳಿಸಿವೆ ಎಂದು, ಅದೊಂದು ಅಲಿಖಿತ ರಾಜ್ಯ ರಚನಾ ಪದ್ಧತಿಯೆಂದು ಹೇಳಬೇಕಾದ ಸಂದರ್ಭದಲ್ಲಿ ಡಿ.ವಿ.ಜಿ.ಯವರು ಬಳಸಿರುವ ಸುತ್ತುನುಡಿಗಳಿಗೆ ಇದೊಂದು ದೃಷ್ಟಾಂತ.

ರಾಜ್ಯದ ಕಲ್ಪನೆಯನ್ನು ವಿವರಿಸುತ್ತಾ ಡಿ.ವಿ.ಜಿ.ಯವರು ಮನುಸ್ಮೃತಿಯ ಹಾಗೂ ಮಹಾಭಾರತದ ಶ್ಲೋಕಗಳನ್ನು ಬಳಸಿಕೊಳ್ಳುತ್ತಾರೆ. ಅರಿಸ್ಟಾಟಲ್. ಪ್ಲೇಟೋ ಮೊದಲಾದ ಪಾಶ್ಚಾತ್ಯ ರಾಜಕೀಯ ಚಿಂತಕರ ಅಭಿಪ್ರಾಯಗಳಿಗೆ ಭಾರತೀಯ ಕಾವ್ಯ ಅಥವಾ ಪುರಾಣಗಳ ಮಾತುಗಳನ್ನು ತಾಳೆ ಹಾಕುವುದು ಎಷ್ಟೋ ಸಂದರ್ಭಗಳಲ್ಲಿ ಆಭಾಸಕ್ಕೆ ಎಡೆ ಮಾಡಿಕೊಡುವುದುಂಟು. ಉದಾಹರಣೆಗೆ ಹೇಳುವುದಾದರೆ. ಮಹಾಭಾರತದಲ್ಲಿನ ವಿದುರನ ರಾಜನೀತಿ, ಶುಕ್ರನ ನೀತಿಸಾರ, ಮನುಸ್ಮೃತಿಗಳು ಎಂಬ ನಾಮಾಂಕಿತ ಗ್ರಂಥಗಳು ಕಾಲದೊಡನೆ ಬೆಳೆದ ಗ್ರಂಥಗಳಾಗಿವೆ. ಅದೆ ಪ್ಲೇಟೋವಿನ ರಿಪಬ್ಲಿಕ್ ಗ್ರಂಥ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ನಿರ್ದಿಷ್ಟ ತತ್ವಕ್ಕೆ ಬದ್ಧವಾದ ಕೃತಿ. ಹೀಗಾಗಿ ಇಂತಹ ಗ್ರಂಥಗಳ ಪರಸ್ಪರ ಹೋಲಿಕೆ ಓದುಗರನ್ನು ತಪ್ಪು ದಾರಿಗೆ ಎಳೆಯುವ ಸಾಧ್ಯತೆ ಉಂಟು.

ಸುಮಾರು ಮೂವತ್ತು ಪುಟಗಳ ಈ ಅಧ್ಯಾಯದಲ್ಲಿ ನೇಕ ಸಾರಿ ಡಿ.ವಿ.ಜಿ.ಯವರು ಹೇಳಿದ ವಿಚಾರಗಳನ್ನೇ ಮತ್ತೆ ಪ್ರಸ್ತಾಪಿಸುತ್ತಾರೆ. ಅಷ್ಟೇ ಅಲ್ಲ. ಸರಳವಾಗಿ ಅರ್ಥವಾಗಬಹುದಾದ ವಿಚಾರಗಳನ್ನು ವ್ಯಾಖ್ಯಾನದ ಮೂಲಕ ಕ್ಲಿಷ್ಟತೆಗೆ ಎಡೆಮಾಡಿಕೊಡುತ್ತಾರೆ.

ಈ ಗ್ರಂಥದ ಹದಿನೇಳನೆಯ ಪ್ರಕರಣ 'ಮೂಲಭೂತ ಹಕ್ಕುಗಳು'. ಸುಮಾರು ಆರು ಪುಟಗಳ ಈ ಅಧ್ಯಾಯದಲ್ಲಿ ಮತ್ತೊಮ್ಮೆ ರಾಜ್ಯಗಳ ಉಗಮ, ರಾಜ್ಯಶಾಸನ ಹಾಗೂ ಸ್ವಾತಂತ್ರ್ಯದ ಉಪಯೋಗವನ್ನು ವಿವರಿಸಲಾಗಿದೆ. ಆದರೆ ಆಗತಾನೆ ಭಾರತ ದಲ್ಲಿ ಜಾರಿಗೆ ಬರುತ್ತಿದ್ದ ಮೂಲಭೂತ ಹಕ್ಕುಗಳ ಪ್ರಸ್ತಾಪವಾಗಲಿ, ಇಂಗ್ಲೆಂಡಿನ ಅಥವಾ ಅಮೇರಿಕಾ ಸಂವಿಧಾನದಲ್ಲಿ ನೀಡಲಾದ ಮೂಲಭೂತ ಹಕ್ಕುಗಳ ಪ್ರಸ್ತಾಪ ವಾಗಲಿ ಇಲ್ಲಿ ಬರುವುದಿಲ್ಲ. ವ್ಯಕ್ತಿಯ ಬದುಕಿಗೆ ಮೂಲಭೂತ ಹಕ್ಕುಗಳ ಆವಶ್ಯಕತೆ ಯನ್ನು ಡಿ.ವಿ.ಜಿ.ಯವರು ಗುರುತಿಸಿರುವರಾದರೂ ನಮ್ಮ ಸ್ವಾತಂತ್ರ್ಯಹೋರಾಟದ ಹಿನ್ನೆಲೆಯಲ್ಲಿ ಈ ಮೂಲಭೂತ ಹಕ್ಕುಗಳ ಪ್ರಾಮುಖ್ಯವನ್ನೂ ಮತ್ತು ಅದಕ್ಕೆ ಕೊಡಬೇಕಾದ ಮಹತ್ವವನ್ನೂ ವಿವರಿಸಿ ಹೇಳಬಹುದಾಗಿತ್ತು.

ಈ ಗ್ರಂಥದ ಹನ್ನೊಂದನೆಯ ಪ್ರಕರಣ 'ಶಾಸ್ತ್ರವೋ ಕಲೆಯೋ ?' ಎಂಬುದು ಸಹಜವಾಗಿ ಗ್ರಂಥದ ಮೊದಲ ಅಧ್ಯಾಯದಲ್ಲಿ ಉಪಶೀರ್ಷಿಕೆಯಾಗಿ ಬರಬೇಕಾಗಿತ್ತು. ಆದರೆ ಡಿ.ವಿ.ಜಿ.ಯವರ ಪಾಂಡಿತ್ಯ ಹಾಗೂ ರಾಜ್ಯಶಾಸ್ತ್ರದ ಅಪಾರ ತಿಳಿವಳಿಕೆಗೆ ಸೊಗಸಾದ ಅವಕಾಶ ಇಲ್ಲಿ ದೊರಕಿದೆ. ಸುಮಾರು ಹದಿನೈದು ಪುಟಗಳ ಈ ಪ್ರಬಂಧ ಒಂದೇ ನಿಟ್ಟಿಗೆ ಕುಳಿತು ಓದಿ ಮುಗಿಸಬಹುದಾಗಿದೆ. ಶಾಸ್ತ್ರ ಹಾಗೂ ಕಲೆಗಳ ಪರಿಮಿತಿಗಳನ್ನು ಅವರು ಗುರುತು ಹಾಕುವ ಪರಿ ಹೀಗಿದೆ:" ಶಾಸ್ತ್ರದ ಸ್ಫುಟತೆ, ನಿಯತತೆಗಳು ಕಲೆಗಿಲ್ಲ."

"ಶಾಸ್ತ್ರ ಬೆಟ್ಟದಂತೆ, ಕಲೆ ಮೋಡದಂತೆ."

ರಾಜ್ಯಶಾಸ್ತ್ರವು ಕಲೆಯನ್ನಾಶ್ರಯಿಸಿಯೇ ಬದುಕಬೇಕೆಂಬುದಕ್ಕೆ ಅವರ ವಾದ ಹೀಗಿದೆ: 'ಕಲೆಯನ್ನರಿಯದ ರಾಜ್ಯಶಾಸ್ತ್ರ' (ಡಿ.ವಿ.ಜಿ. ಕಲೆಯನ್ನು ಸ್ತ್ರೀ ಎಂದೂ, ರಾಜ್ಯಶಾಸ್ತ್ರವನ್ನು ಪುರುಷನೆಂದೂ ಭಾವಿಸಿದ್ದರೇನೋ ; ಆದರೆ ಇಲ್ಲಿ 'ರಾಜ್ಯಶಾಸ್ತ್ರ' ಎಂಬ ಪದಪ್ರಯೋಗದಿಂದ ಅದನ್ನು ಸ್ತ್ರೀಸೂಚಕವಾಗಿ ಕಾಣುತ್ತಾರೆ) ಒಲವಿಲ್ಲದ ಗರತಿ, ಬೀಜಗಣಿತದ ಪುಸ್ತಕ. "

ಡಿ.ವಿ.ಜಿ.ಯವರು ರಾಜ್ಯಶಾಸ್ತ್ರ ಕೇವಲ ಕಲೆಯಾಗಬಾರದು ಎಂಬುದಕ್ಕೆ ಕೊಡುವ ಎಚ್ಚರಿಕೆ ಹೀಗಿದೆ : "ಶಾಸ್ತ್ರವನ್ನರಿಯದ ರಾಜ್ಯ ಕಲೆಗನುಶೀಲವಿಲ್ಲದ ಚೆಲುವೆ, ಗಿಲ್ಟುರಟ್ಟಿನ ಖಾಲೀ ಪುಸ್ತಕ. "

ವಿಶಾಖದತ್ತ, ಪ್ಲೇಟೋ, ಗೋಪಾಲಕೃಷ್ಣ ಗೋಖಲೆ. ಮೊದಲಾದವರ ಮಾತು ಗಳನ್ನು ಉದ್ಧರಿಸುತ್ತಾ ಇಡೀ ಪ್ರಬಂಧವನ್ನು ಒಂದು ಚೌಕಟ್ಟಿನಲ್ಲಿ ಬೆಳೆಸುವ ಜಾಣ್ಮೆ ಡಿ.ವಿ.ಜಿ.ಯವರದು. ಈ ಅಧ್ಯಾಯದ ಅವರ ಕೊನೆಯ ಮಾತುಗಳು ಸದಾ ಕಾಲ

ಚಿಂತಿಸುತ್ತಾ ರಾಜ್ಯಶಾಸ್ತ್ರ ಒಂದಕ್ಕಲ್ಲದೆ ಮನುಷ್ಯನ ಬದುಕಿಗೆ ಹೇಳಬೇಕಾದ ಮುನ್ನುಡಿಯಾಗಿದೆ.

'ಅಂಥಾ ಸಭ್ಯತೆ ಕಲೆ, ಆ ಸಹವಾಸಾರ್ಹತೆ ಒಂದು ಕಲೆ, ಆ ಮೈತ್ರಿ ಸಂಪಾದನೆ ಕಲೆ, ನಲ್ಮೆಯ ನೆರೆಹೊರೆತನ ಕಲೆ, ರಾಷ್ಟ್ರಕ್ಕೆ ಜೀವನ ಕಲೆ,—ಅದು ಜೀವಸಂಸ್ಕಾರ ಕಲೆ. ಜೀವನ ಸಂವರ್ಧನ ಕಲೆ.'

ಡಿ.ವಿ.ಜಿ.ಯವರು ಈ ಪುಸ್ತಕದ ಪ್ರಾರಂಭದಲ್ಲಿ ತಮ್ಮ ಭಾಷಾ ಬಳಕೆಯ ಬಗ್ಗೆ ಹೇಳುವ ಮಾತೊಂದನ್ನು ಈಗ ನೆನಪಿಸಿಕೊಳ್ಳುವ ಅಗತ್ಯವಿದೆ: "ಭಾಷಾ ಶುದ್ಧತೆಯ ಪ್ರತಿಜ್ಞೆ ಎಷ್ಟೇ ಪವಿತ್ರವಾದದ್ದಾದರೂ ರಾಜಕೀಯದಲ್ಲಿ ಸದ್ಯಕ್ಕೆ ಅದಕ್ಕಿಂತ ಮುಖ್ಯವಾದದ್ದು ಬೋಧನೆಯ ಸೌಲಭ್ಯ. ಮೊದಲು ಜನಕ್ಕೆ ವಿಷಯ ತಿಳಿಯಬೇಕು." ಹೀಗೆ ನಿರ್ಧಾರ ಮಾಡಿದ ಡಿ.ವಿ.ಜಿ. ಸಾಕಷ್ಟು ಸರಳತೆಯಿಂದ ವಿಷಯವನ್ನು ತಿಳಿಸಿರುವರಾದರೂ ಕೆಲವೊಮ್ಮೆ ಅವರು ಬಳಸುವ ಪದಗಳು ವಿಷಯದ ತಿಳಿವಳಿಕೆಗೆ ಸಾಕಷ್ಟು ತೊಡಕುಂಟುಮಾಡುತ್ತವೆ. ಆ ಕಾಲದಲ್ಲಿ ಇನ್ನೂ ದೇಶೀಯ ಭಾಷೆಗಳಲ್ಲಿ ಗ್ರಂಥ ರಚಿಸಬೇಕಾದ ವಾತಾವರಣ ಉಂಟಾಗಿರಲಿಲ್ಲವೆಂದು ಸಮಜಾಯಿಷಿಯನ್ನು ನೀಡಿದರಾದರೂ ಡಿ.ವಿ.ಜಿ.ಯವರ ಸಂಸ್ಕೃತ ಪದಗಳ ಬಳಕೆ ಕೆಲವೊಮ್ಮೆ ಗೊಂದಲಕ್ಕೆ ಎಡೆಮಾಡುತ್ತದೆ. ನ್ಯಾಷನಲಿಸಂ (nationalism) ಎಂಬುದಕ್ಕೆ ಅವರು ಬಳಸಿದ 'ಜನಪದಾಭಿಮಾನ'; ಕಾನ್ಸ್ಟಿಟ್ಯುಎಂಟ್ ಅಸೆಂಬ್ಲಿ (constituent assembly) ಎಂಬುದಕ್ಕೆ ಅವರು ಬಳಸಿದ 'ರಾಜ್ಯಸಂಯೋಜನ'; ರಿಪಬ್ಲಿಕ್ (republic) ಎಂಬುದಕ್ಕೆ "ಜನತಾ ಸ್ವರಾಷ್ಟ್ರ"; ಓಟು (vote) ಎಂಬುದಕ್ಕೆ ಅವರ 'ವರಣ'; ಸಿಟಿಜನ್ (citizen) ಎಂಬುದಕ್ಕೆ "ಪುರನಿವಾಸಿ"; ಎಲೆಕ್ಷನ್ ಮ್ಯಾನಿಫೆಸ್ಟೋ (election manifesto) ಎಂಬುದಕ್ಕೆ "ಪ್ರತಿಜ್ಞಾ ಪತ್ರಿಕೆ"; ಕ್ಯಾಂಡಿಡೇಟ್ (candidate) ಎಂಬುದಕ್ಕೆ "ಸ್ಥಾನಾರ್ಥಿಗಳು", ವೋಟರ್ಸ್ (voters) ಎಂಬುದಕ್ಕೆ "ಇಷ್ಟವರಣಕರ್ತರು" ಎಂಬ ಪ್ರಯೋಗಗಳನ್ನು ಕಂಡಾಗ ಈ ಗ್ರಂಥದ ಪರಿಮಿತಿಯನ್ನು ಅರಿಯಬಹುದು. ಮೇಲಿನ ಇಂಗ್ಲಿಷ್ ಶಬ್ದಗಳಿಗೆ ರಾಷ್ಟ್ರೀಯತೆ, ಸಂವಿಧಾನಬದ್ಧ ಸರ್ಕಾರ, ಗಣರಾಜ್ಯ, ಮತ, ನಾಗರಿಕ, ಚುನಾವಣೆ, ಘೋಷಣ ಪತ್ರ, ಅಭ್ಯರ್ಥಿ, ಮತದಾರರು ಮುಂತಾದ ಸರಳ ಪದಗಳನ್ನು ಅಂದು ಕೂಡ ಡಿ.ವಿ.ಜಿ. ಬಳಸಬಹುದಾಗಿತ್ತು.

ಡಿ.ವಿ.ಜಿ. ಯವರ ಈ ರಾಜ್ಯಶಾಸ್ತ್ರ ಗ್ರಂಥವು ಒಂದೇ ಸಾರಿ ಬರೆದದ್ದಲ್ಲ. ಅವರು ಪತ್ರಕರ್ತರಾಗಿ ಆ ಕಾಲದ ಅಗತ್ಯಕ್ಕೆ ತಕ್ಕಂತೆ ರಾಜ್ಯಶಾಸ್ತ್ರ ಲೇಖನಗಳನ್ನು ಬರೆದಾಗ ಮುಂದೊಂದು ದಿನ ಇದು ಪುಸ್ತಕರೂಪದಲ್ಲಿ ಬರುತ್ತದೆಂಬುದು ಅವರಿಗೆ ನಿಶ್ಚಿತವಾಗಿರಲಿಲ್ಲ. ಹೀಗಾಗಿ ಈ ಗ್ರಂಥದಲ್ಲಿ ಪುನರುಕ್ತಿ, ವಿಷಯಗಳ ಅದಲು ಬದಲು,

ಅಧ್ಯಾಯಗಳಲ್ಲಿ ಕಾಣಸಿಗದಿರುವ ಹೊಂದಾಣಿಕೆಯು ಅನಿವಾರ್ಯವಾದ ಅಂಶವೇನೋ. ಇಷ್ಟರಮೇಲೆ ಡಿ.ವಿ.ಜಿ. ಯಾವುದೇ ತರಗತಿಗೆ ರಾಜ್ಯಶಾಸ್ತ್ರವನ್ನು ಬೋಧಿಸಿದವರಲ್ಲ. ವಿದ್ಯಾರ್ಥಿಗಳ ಅಥವಾ ಸಾಮಾನ್ಯ ಜನರ ಗ್ರಹಿಕೆಯನ್ನು ಅಂದಾಜು ಮಾಡಿದವರಲ್ಲ. ಹೀಗಾಗಿ ಈ ಗ್ರಂಥ ಮೇಲುಸ್ತರದಲ್ಲೇ ಸಾಗಿದೆ. ಆದರೂ ಕನ್ನಡ ಭಾಷೆಯಲ್ಲಿ ಈ ಶತಮಾನದ ಮಧ್ಯದಲ್ಲೇ ಇಂತಹ ಅಪೂರ್ವ ಗ್ರಂಥ ರಚನೆಯಾಗಿರುವುದು ಸ್ವಾಗತಾರ್ಹ ವಿಚಾರ, ಅಷ್ಟೇ ಅಲ್ಲ. ಕಾಲೇಜು ಮೆಟ್ಟಲು ಹತ್ತದ ವ್ಯಕ್ತಿಯೊಬ್ಬರು ಅತ್ಯಂತ ಪ್ರಮುಖ ಶಾಸ್ತ್ರವೊಂದರ ಸಮರ್ಥ ಲೇಖಕ ಹಾಗೂ ವ್ಯಾಖ್ಯಾನಕಾರರಾಗಿದ್ದುದು ಸೋಜಿಗವೂ ಹೌದು. ನಮ್ಮ ಶಿಕ್ಷಣ, ಸಂಸ್ಕೃತಿ, ಶ್ರದ್ಧೆ ಹಾಗೂ ಸತ್ಫಲಗಳನ್ನು ರೂಢಿಸಿಕೊಂಡ ಡಿ.ವಿ.ಜಿ.ಯಂತಹ ಮಹನೀಯರು ಮಾತ್ರ ಆ ಕಾಲದಲ್ಲಿ ಇಂತಹ ಗ್ರಂಥಗಳನ್ನು ರಚಿಸಬಲ್ಲವರಾಗಿದ್ದರು ಎಂದಷ್ಟೇ ಹೇಳಬಹುದು.

ಶಾಸನಸಭೆಯಲ್ಲಿ ಡಿ.ವಿ.ಜಿ.

ತೆ. ಹನುಮಂತಪ್ಪ

ಈಚಿನ ದಿನಗಳಲ್ಲಿ ವಿಶೇಷವಾಗಿ. ಹಿಂದಿನ ದಿನಗಳಲ್ಲಿ ಸಾಮಾನ್ಯತಃ. ಡಿ.ವಿ.ಜಿ. ಒಬ್ಬರು ಶ್ರೇಷ್ಠ ಸಾಹಿತಿ ಎಂದಷ್ಟೇ ಪ್ರಸಿದ್ಧರಾಗಿದ್ದರು. ಅವರ ಪ್ರಸಿದ್ಧ ಸಾಹಿತ್ಯ ಕೃತಿಗಳ ಜೊತೆಗೆ ಅವರು ಮಡಕೇರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದುದು ಮಾತ್ರವಲ್ಲದೆ, (1932), ಮರುವರ್ಷವೇ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಬಲುಮಟ್ಟಿಗೆ ಪಂಡಿತರ ಸಂಸ್ಥೆಯಾಗಿದ್ದ ಅದನ್ನು ಎಲ್ಲ ಸಾಹಿತ್ಯಾಭಿಮಾನಿಗಳ ಸಾರ್ವಜನಿಕ ಸಂಸ್ಥೆಯನ್ನಾಗಿ ಮಾಡಿದ್ದು ಮುಖ್ಯ ಕಾರಣ. ಅವರ ರಾಜ್ಯಶಾಸ್ತ್ರ ಪಾಂಡಿತ್ಯ ಮತ್ತು ಬಹುಕಾಲದ ಪತ್ರಿಕೋದ್ಯಮದ ಅನುಭವ. ಇವುಗಳಿಂದಾಗಿ ಹಳೆಯ ಮೈಸೂರು ರಾಜ್ಯದ ಲೆಜಿಸ್ಲೆಟಿವ್ ಕೌನ್ಸಿಲ್‌ನ ಸದಸ್ಯರಾಗಿ ಕೆಲಸ ಮಾಡಿದ್ದು ಇಂದಿನ ಪೀಳಿಗೆ ಯುವರಿಗೆ ಏನೇನೂ ತಿಳಿದಿರಲಿಕ್ಕಿಲ್ಲ. ಸ್ವತಃ ವಿಧಾನಸಭೆಯ (ರಾಜ್ಯದ ಶಾಸಕಾಂಗದ) ನಿಕಟವರ್ತಿಗಳಾದ ಶ್ರೀ ತೆ. ಹನುಮಂತಪ್ಪನವರು ತಮ್ಮ ಲೇಖನದಲ್ಲಿ ಡಿ.ವಿ.ಜಿ. ಶಾಸಕಾಂಗದಲ್ಲಿ ಮೈಸೂರು ರಾಜ್ಯದ ಸಂವಿಧಾನದಲ್ಲಿ ಸೂಕ್ತ ಮಾರ್ಪಾಟುಗಳನ್ನು ಸೂಚಿಸಲು ನೇಮಕಗೊಂಡಿದ್ದ ಸಮಿತಿಯ ಸದಸ್ಯರಾಗಿದ್ದುಕೊಂಡು ಹೇಗೆ ಅದರಲ್ಲಿ ಕ್ರಿಯಾತ್ಮಕವಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡಿದರು ಹಾಗೂ ಜೊತೆ ಸದಸ್ಯರ ಗೌರವಕ್ಕೆ ಹೇಗೆ ಪಾತ್ರರಾಗಿದ್ದರು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ; ಕಾಲದ ಮಬ್ಬುಗತ್ತಲಲ್ಲಿ ಮರೆಯಾಗಿದ್ದ ಅವರ ವ್ಯಕ್ತಿತ್ವದ ಒಂದು ಮುಖದ ಮೇಲೆ ಬೆಳಕು ಚೆಲ್ಲಿದ್ದಾರೆ.

ಶ್ರೀ ಡಿ.ವಿ. ಗುಂಡಪ್ಪನವರು ಸಾಹಿತ್ಯ ಪ್ರಪಂಚದ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಪ್ರೌಢಿಮೆಯನ್ನು ಪ್ರತಿಪಾದಿಸಿರುವಂತೆಯೇ ಸಾರ್ವಜನಿಕ ಕ್ಷೇತ್ರದಲ್ಲಿ ಅದರಲ್ಲೂ ಮುಖ್ಯವಾಗಿ ಶಾಸಕಾಂಗದಲ್ಲಿಯೂ ತಮ್ಮ ವಿದ್ವತ್ಪೂರ್ಣ ಪ್ರೌಢಿಮೆಯನ್ನು ಪ್ರತಿಪಾದಿಸಿ 1932ರಿಂದ 1943ರವರೆಗೆ ವಿಧಾನಪರಿಷತ್ತಿನ

ಸದಸ್ಯರಾಗಿ ಮಹತ್ವಪೂರ್ಣ ಕಾರ್ಯ ನಿರ್ವಹಿಸಿದ್ದಾರೆ. ವಿಧಾನಪರಿಷತ್ ಸದಸ್ಯರಾಗಿ ಜನತೆಯ, ರಾಜ್ಯದ ಹಲವಾರು ಸಮಸ್ಯೆಗಳಿಗೆ ಹಾಗೂ ಸಂವಿಧಾನಕ್ಕೆ ಸೂಕ್ತವಾದ ಮಾರ್ಪಾಡು ಮಾಡಲು ಸೂಕ್ತ ಸಲಹೆ ನೀಡುವಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದರು. ಶ್ರೀ ಡಿ.ವಿ.ಜಿ.ಯವರು ಮೈಸೂರು ರಾಜ್ಯದ ಸಂವಿಧಾನ ಸುಧಾರಣೆ ಮಾಡಲು ನೇಮಿಸಿದ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ ಬಗ್ಗೆ ಹಾಗೂ ಸಮಿತಿಯ ಸದಸ್ಯರಾಗಿ ಅವರು ಅತ್ಯಮೂಲ್ಯ ಕಾಣಿಕೆಯ ಬಗ್ಗೆ ಕೆಲವು ವಿವರಣೆ ನೀಡುವುದೇ ಈ ಲೇಖನದ ಉದ್ದೇಶವಾಗಿದೆ.

1938ನೇ ಏಪ್ರಿಲ್ ಒಂದನೇ ತಾರೀಖಿನಂದು ಅಂದಿನ ಸರ್ಕಾರ ಮೈಸೂರು ಕಾರ್ಯನಿರ್ವಾಹಕ ಸಮಿತಿಯ ನಿವೃತ್ತ ಸದಸ್ಯರಾದ ಶ್ರೀ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯದ ಸಂವಿಧಾನಕ್ಕೆ ಸೂಕ್ತ ಮಾರ್ಪಾಟುಗಳನ್ನು ಜಾರಿಗೆ ತರುವ ಪ್ರಶ್ನೆಯನ್ನು ಪರಿಶೀಲಿಸಲು 17 ಅಧಿಕಾರೇತರ ಸದಸ್ಯರ ಮತ್ತು ಇಬ್ಬರು ಅಧಿಕಾರಿಗಳಿಂದ ಕೂಡಿದ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಶ್ರೀ ಡಿ.ವಿ. ಗುಂಡಪ್ಪನವರು ಓರ್ವ ಸದಸ್ಯರಾಗಿದ್ದು, ದಿನಾಂಕ 31ನೇ ಆಗಸ್ಟ್ 1939ರಂದು ಸಮಿತಿಯು ತನ್ನ ವರದಿಯನ್ನು ಅಂದಿನ ದಿವಾನರಿಗೆ ಒಪ್ಪಿಸಿತು. ಅದೇ ಸಮಿತಿಗೆ ರಾಜ್ಯದ ಸಾರ್ವಜನಿಕ ಆಡಳಿತ ಮತ್ತು ರಾಜ್ಯದ ಜನತೆಯ ಜೀವನದ ಬಗ್ಗೆ ಹಾಗೂ ಪ್ರತಿನಿಧಿಗಳ ಸಂಸ್ಥೆಯ ಕಾರ್ಯ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ರಾಜ್ಯದ ಶಿಕ್ಷಣ ಮತ್ತು ಸಾರ್ವಜನಿಕರ ಆಸಕ್ತಿ ಹಾಗೂ ಜನತೆಯಲ್ಲಿ ಬೆಳೆಯುತ್ತಿರುವ ರಾಜಕೀಯ ಉತ್ಸಾಹಗಳ ಬಗೆಗೆ ಪರಿಶೀಲಿಸುವ ಕಾರ್ಯವನ್ನು ಒಪ್ಪಿಸಲಾಯಿತು.

ಶ್ರೀ ಡಿ.ವಿ. ಗುಂಡಪ್ಪನವರು ಸಮಿತಿಯ ಸದಸ್ಯರಾಗಿ ಅತ್ಯಮೂಲ್ಯ ಕಾಣಿಕೆಯನ್ನು ಸಮಿತಿಯ ಕಾರ್ಯ ನಿರ್ವಹಣೆಯ ಕಾಲದಲ್ಲಿ ನೀಡಿದ್ದಾರೆ. ಅವರ ನಿರ್ಭೀತ ಹಾಗೂ ಪೂರ್ವಾಲೋಚಿತ ಅಭಿಪ್ರಾಯಗಳ ವಿವರಣೆಗಳು ಸಮಿತಿಯ ಅಧ್ಯಕ್ಷರ ಮತ್ತು ಸದಸ್ಯರ ಮೇಲೆ ಹೆಚ್ಚಿನ ಪರಿಣಾಮ ಬೀರಿತ್ತು. ಕೆಲವು ಸಂದರ್ಭಗಳಲ್ಲಿ ಸಮಿತಿಯ ಹಲವಾರು ಅಭಿಪ್ರಾಯಗಳಿಗೆ ತನ್ನ ವಿರೋಧ ವ್ಯಕ್ತಪಡಿಸಿ ತಮ್ಮದೇ ಅಭಿಪ್ರಾಯಗಳನ್ನು ತಿಳಿಸಿ ಅದು ಸಮಿತಿಯ ವರದಿಗಳಲ್ಲಿ ದಾಖಲಾಗುವಂತೆ ಮಾಡುತ್ತಿದ್ದರು.

ಸಮಿತಿಯು ಪರಿಶೀಲಿಸಲು ತೆಗೆದುಕೊಂಡ ಪ್ರಥಮ ಪ್ರಕರಣವೆಂದರೆ ನೂತನ ಸಂವಿಧಾನವು ಜವಾಬ್ದಾರಿ ಸರ್ಕಾರದ ಒಂದು ಸ್ಪಷ್ಟವಾದ ಗುರಿಯನ್ನು ನಿರ್ಧರಿಸುವುದು. ಶ್ರೀ ಡಿ.ವಿ.ಜಿ.ಯವರು 12 ಸದಸ್ಯರಲ್ಲಿ ಒಬ್ಬರಾಗಿ ಈ ವಿಷಯದ ಪರವಾಗಿ ಮತ ಚಲಾಯಿಸಿದ್ದರು. 5 ಸದಸ್ಯರು ವಿಷಯದ ವಿರುದ್ಧವಾಗಿ ಮತ ಚಲಾಯಿಸಿದ್ದರು.

ಸಮಿತಿ ಅಂತಿಮವಾಗಿ ಪ್ರಕಟಣೆಯನ್ನು ಹೊರಡಿಸುವಾಗ ಅನುಕೂಲತೆಯನ್ನು ಸಮತೋಲನ ಮಾಡುವಂತೆ ನಿರ್ಣಯಿಸಿತು.

ಇದಾದ ನಂತರ ಸಮಿತಿ ಶಾಸನಸಭಾ ಸದಸ್ಯರ ಮತ್ತು ಸಂಪುಟ ಸಚಿವರ ಸಂಬಂಧ ಹಾಗೂ ಆಳುವವರ ಹಿತವನ್ನು ಪರಿಶೀಲಿಸುವ ವಿಷಯವನ್ನು ಪರಿಶೀಲನೆಗೆ ತೆಗೆದುಕೊಂಡಿತು. ಈ ವಿಷಯ ಅತ್ಯಂತ ಸೂಕ್ಷ್ಮವಾದ ವಿಷಯವಾಗಿದ್ದು. ಸಮಿತಿಯಲ್ಲಿ ಬಹಳಷ್ಟು ವಿರೋಧಾಭಿಪ್ರಾಯಗಳು ವ್ಯಕ್ತವಾದುವು. ಶ್ರೀ ಡಿ.ವಿ.ಜಿ.. ಶ್ರೀ ಬಿ. ಎಸ್. ಪುಟ್ಟಸ್ವಾಮಿ ಮತ್ತು ಶ್ರೀ ಸಿ. ಹಯವದನರಾವ್ ಮತ್ತು ಶ್ರೀ ತೋಮಾಲಿನ್‌ಸನ್ ಅವರು ಸಮಿತಿಯ ಅಭಿಲಾಷೆಗೆ ಬದಲಾದ ಸೂತ್ರವನ್ನು ನೀಡಿದರು. ಶ್ರೀ ಪುಟ್ಟಸ್ವಾಮಿಯವರು ಸಂವಿಧಾನ ಸುಧಾರಣೆ ಜವಾಬ್ದಾರಿ ಸರ್ಕಾರವು ರಾಜರ ಅಧಿಕಾರ ಮತ್ತು ರಕ್ಷಣೆಗೆ ಅನುಗುಣವಾಗಿ, ಪ್ರಗತಿಪರವಾಗಿರಬೇಕೆಂದು ಸಲಹೆ ಮಾಡಿದರು. ಶ್ರೀ ಡಿ.ವಿ.ಜಿ.ಯವರ ಸಲಹೆ ಪುಟ್ಟಸ್ವಾಮಿಯವರ ಸಲಹೆಯನ್ನು ಅನುಸರಿಸಿತ್ತಾದರೂ ಆಡಳಿತವು ಸಚಿವರ ಸಂಪುಟದಿಂದ ನಡೆಯಬೇಕೆಂದು ಸೂಚಿಸಿ ಆ ಸಚಿವ ಸಂಪುಟವು ಮಹಾರಾಜರ ಮತ್ತು ಶಾಸನಸಭಾ ಸದಸ್ಯರ ಬೆಂಬಲವನ್ನು ಹೊಂದಿರಬೇಕೆಂಬ ಸೂತ್ರವನ್ನು ಸಲಹೆಮಾಡಿದರು. ಈ ಸೂತ್ರದಿಂದ ಮಹಾರಾಜರ ಸೂಸುತ್ರ ಆಡಳಿತ ನಿರ್ವಹಣೆಗೆ, ಶಾಂತಿಪಾಲನೆಗಾಗಿ ಹೆಚ್ಚಿನ ಅಧಿಕಾರ ಪಡೆಯಲು ಅವಕಾಶವಿತ್ತು.

ಮೂರನೇ ಸೂತ್ರವು ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ ಮಹಾರಾಜರ ಅಧಿಕಾರ ಮತ್ತು ರಕ್ಷಣೆಗೆ ಧಕ್ಕೆಬಾರದ ರೀತಿಯಲ್ಲಿ ಜವಾಬ್ದಾರಿ ಸರ್ಕಾರದ ಸಾಧನೆ ಇರಬೇಕೆಂಬುದಾಗಿತ್ತು. ಸಮಿತಿಯು ಈ ಮೂರೂ ಸೂತ್ರಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಶ್ರೀ ಗುಂಡಪ್ಪನವರ ಸೂತ್ರವನ್ನು ಒಪ್ಪಿತ್ತು. ಇದಕ್ಕೆ ಒಂಬತ್ತು ಸದಸ್ಯರು ಅನುಮೋದಿಸಿದರೆ ಆರು ಸದಸ್ಯರು ವಿರೋಧಿಸಿದರು. ಶ್ರೀ ಗುಂಡಪ್ಪ ನವರ ಕಾರ್ಯತತ್ಪರತೆ. ದೃಢ ಪ್ರಯತ್ನ ಮತ್ತು ಸೂಕ್ಷ್ಮತೆ, ಮತ್ತು ಸಮಿತಿಯನ್ನು ಒಪ್ಪಿಸುವ ವಾದದಿಂದಾಗಿ ಸಮಿತಿ ಅವರ ಸೂತ್ರವನ್ನು ಒಪ್ಪುವಂತೆ ಆಯಿತು.

ಮಸೂದೆ ರಚನೆಯ ವಿಷಯದಲ್ಲಿ ವಿಧಾನಸಭೆಯ ಅಧಿಕಾರವನ್ನು ಸಮಿತಿ ಪರಿಶೀಲಿಸಬೇಕಾಯಿತು. ಮಾರ್ಪಾಡಿಗೆ ಮೊದಲು ವಿಧಾನಸಭೆ ಒಂದು ಮಸೂದೆಯ ಮೂಲಭೂತತತ್ವವನ್ನು ಮತ್ತು ಕೆಲವು ಅವಕಾಶಗಳನ್ನು ಮಾತ್ರ ಪರಿಗಣಿಸಲು ಅವಕಾಶವಿತ್ತೇ ಹೊರತು ಮಸೂದೆಯ ಪೂರ್ಣ ವಿವರವನ್ನು ಮತ್ತು ಖಂಡ ಖಂಡವಾಗಿ ಮಸೂದೆಯನ್ನು ಪರಿಗಣಿಸಲು ಅವಕಾಶವಿರಲಿಲ್ಲ. ಶ್ರೀ ಡಿ.ವಿ.ಜಿ. ಮತ್ತು ಸಮಿತಿಯ ಇತರ ಏಳು ಸದಸ್ಯರು ವಿಧಾನಸಭೆಯು ಪ್ರತಿ ಖಂಡವನ್ನೂ ಪರಿಗಣಿಸುವ ಹಕ್ಕನ್ನು ಹೊಂದಿರಬೇಕೆಂಬ ತಿದ್ದುಪಡಿಯನ್ನು ಸಲಹೆ ಮಾಡಿದರು. ಮಸೂದೆಯ ಮೂಲತತ್ವ ಮತ್ತು ಅವಕಾಶಗಳ ಮಧ್ಯೆ ಇರುವ ವ್ಯತ್ಯಾಸಗಳು ಕೇವಲ ಕೃತಕ ವಾದದ್ದು ಎಂದು ಶ್ರೀ ಡಿ.ವಿ.ಜಿ.ಯವರು ವಾದ ಮಾಡಿದರು. ಆದರೆ ಸಮಿತಿಯ ಇತರ ಏಳು ಸದಸ್ಯರು ಇದನ್ನು ವಿರೋಧಿಸಿದರು. ಆದರೂ ಸಮಿತಿ ಈ ಪ್ರಶ್ನೆಯನ್ನು ಬಹುಮತದಿಂದ ಚರ್ಚಿಸಿ ದೃಢವಾದ ಮತ್ತು ಸ್ಪಷ್ಟವಾದ ಶಿಫಾರಸ್ಸುಗಳನ್ನು ಮಾಡಿತು.

ಒಂದು ಮಸೂದೆಯನ್ನು ವಿಧಾನಸಭೆಯು ಒಟ್ಟು ಸಂಖ್ಯೆಯಲ್ಲಿ ಮುಕ್ಕಾಲು ಸಂಖ್ಯೆ ತಿರಸ್ಕರಿಸಿದರೆ ಅಂತಹ ಮಸೂದೆಯನ್ನು ವಿಧಾನಪರಿಷತ್ತಿನ ಮುಂದೆ ಮಂಡಿಸುವ ಅಗತ್ಯವಿಲ್ಲ ಎಂದು ಶ್ರೀ ಡಿ.ವಿ.ಜಿ.ಯವರು ಸಮಿತಿಯ ಮುಂದೆ ಸಲಹೆ ಮಾಡಿದರು. ಯಾವುದೇ ತಿದ್ದುಪಡಿಯನ್ನು ಮಂಡಿಸುವಾಗ ಸಭೆಯಲ್ಲಿ ಮೂರನೇ ಎರಡರಷ್ಟು ಹಾಜರಿದ್ದ ಸದಸ್ಯರ ಬೆಂಬಲ ಇದ್ದರೆ ಅಂತಹ ತಿದ್ದುಪಡಿಯನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸುವ ಮೊದಲೇ ತಿದ್ದುಪಡಿಯನ್ನು ಸೇರ್ಪಡೆಮಾಡಿರಬೇಕು ಎಂಬ ಸಲಹೆಯನ್ನು ಮುಂದಿಟ್ಟರು. ಆದರೆ ಅವರ ಸಲಹೆಗೆ ಸಮಿತಿಯ ಹೆಚ್ಚಿನ ಸದಸ್ಯರು ಒಪ್ಪಲಿಲ್ಲ. ಸರ್ಕಾರವು ವಿಧಾನಸಭೆಯ ಮೇಲೆ ಯಾವುದೇ ರೀತಿಯ ಪ್ರಭಾವ ಬೀರುವ ಹಕ್ಕು ಇಲ್ಲವೆಂದು ಸಮಿತಿಯು ಅಭಿಪ್ರಾಯಪಟ್ಟಿತು.

ತಾಂತ್ರಿಕ ಪ್ರಾವೀಣ್ಯತೆ ಪಡೆದ ಸಾರ್ವಜನಿಕ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ವಹಿಸಿದ ವ್ಯಕ್ತಿಗಳ ಸೇವೆಯನ್ನು ಪಡೆಯಲು ಅನುಕೂಲವಾಗಲೆಂದು ಶಾಸನಸಭೆ (ಪ್ರತಿನಿಧಿಸಭೆ)ಯಲ್ಲಿ ಹತ್ತು ಸದಸ್ಯರನ್ನು ನಾಮಕರಣ ಮಾಡಬೇಕೆಂಬ ಸಲಹೆಯನ್ನು ಶ್ರೀ ಡಿ.ವಿ.ಜಿ. ಮತ್ತು ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರು ಸಮಿತಿಯಲ್ಲಿ ಸಲಹೆ ಮಾಡಿದರು. ಆದರೆ ಸಮಿತಿಯ ಬಹುಸದಸ್ಯರು ಈ ಸಲಹೆಯನ್ನು ಒಪ್ಪಲಿಲ್ಲ.

ಮುಸಲ್ಮಾನ್ ಜನಾಂಗಕ್ಕೆ ಪ್ರತ್ಯೇಕ ಮತದಾನದ ಹಕ್ಕನ್ನು ನೀಡಬೇಕೆಂಬ ಜಟಿಲ ಸಮಸ್ಯೆಯನ್ನು ಸಮಿತಿ ಪರಿಶೀಲಿಸಬೇಕಾಗಿ ಬಂತು. ಸಮಿತಿಯ ಮುಸಲ್ಮಾನ್ ಸದಸ್ಯರು ಈ ಸಲಹೆಯನ್ನು ಒಮ್ಮತದಿಂದ ಬೆಂಬಲಿಸಿದರು. ಕೆಲವು (ಒಬ್ಬಿಬ್ಬರು) ಮುಸಲ್ಮಾನೇತರ ಸದಸ್ಯರು ಈ ಪ್ರಸ್ತಾಪಕ್ಕೆ ಬೆಂಬಲ ನೀಡಿದರು. ಶ್ರೀ ಡಿ.ವಿ.ಜಿ. ಮತ್ತು ಬಹುಮತದ ಸದಸ್ಯರು ಇಂತಹ ಪ್ರತ್ಯೇಕತೆಯ ಅವಕಾಶದಿಂದ ಜನತೆಯಲ್ಲಿ ಏಕತೆಯ ಮನೋಭಾವನೆ ಬೆಳೆಯಲು ಸಾಧ್ಯವಾಗದೆಂದು ಈ ಸಲಹೆಯನ್ನು ತಿರಸ್ಕರಿಸಿದರು. ಮೈಸೂರು ರಾಜ್ಯ ಬಹಳ ವರ್ಷಗಳಿಂದ ಸಮಾನತೆಯ ಮತದಾರರನ್ನು ಹೊಂದಿದ್ದು. ಪ್ರತ್ಯೇಕ ಮತದಾನದ ಹಕ್ಕು ನೀಡುವುದರಿಂದ ಜನತೆಯಲ್ಲಿ ಜಾತೀಯತೆ ಬೆಳೆಯಲು ಅವಕಾಶ ನೀಡಿದಂತಾಗುತ್ತದೆ ಎಂದು ಶ್ರೀ ಡಿ.ವಿ.ಜಿ. ಯವರು ಪ್ರತಿಪಾದಿಸಿದರು. ಕ್ರಿಶ್ಚಿಯನ್ ಜನಾಂಗದವರಿಗೂ ಪ್ರತ್ಯೇಕ ಮತದಾನದ ಹಕ್ಕನ್ನು ನೀಡುವ ಪ್ರಶ್ನೆ ಬಂದಾಗಲೂ ಶ್ರೀ ಡಿ.ವಿ.ಜಿ.ಯವರು ಈ ಸಲಹೆಯನ್ನು ವಿರೋಧಿಸಿದರು.

ವಿಶೇಷ ಆಸಕ್ತಿಗಾಗಿ ಮೀಸಲಿದ್ದ ಸದಸ್ಯತ್ವಸ್ಥಾನದ ಸಂಖ್ಯೆಯನ್ನು 20 ರಿಂದ 28ಕ್ಕೆ ಏರಿಸುವ ವಿಷಯ ಸಮಿತಿಯ ಪರಿಶೀಲನೆಗೆ ಬಂದಾಗ. ಮತ್ತು ಅದರೊಂದಿಗೆ ಒಂದು ಸ್ಥಾನವನ್ನು ವಿಶ್ವವಿದ್ಯಾನಿಲಯಕ್ಕಾಗಿ ಮೀಸಲಿಡುವ ಸಲಹೆಯನ್ನು ಪರಿಶೀಲನೆಗೆ ತೆಗೆದುಕೊಂಡಾಗ ಶ್ರೀ ಡಿ.ವಿ.ಜಿ.ಯವರು ವಿಶ್ವವಿದ್ಯಾನಿಲಯಕ್ಕಾಗಿ

ಒಂದು ಸ್ಥಾನದ ಬದಲು ಎರಡು ಸ್ಥಾನ ಮೀಸಲಿಡಬೇಕೆಂಬ ಸಲಹೆ ಮಾಡಿದರು. ಆದರೆ ಇವರ ಸಲಹೆಗೆ ಸಮಿತಿಯ ಬಹುಮತ ದೊರೆಯಲಿಲ್ಲ.

ದಿವಾನ್ ಅವರನ್ನು ವಿಧಾನಸಭೆಯ ಅಧ್ಯಕ್ಷರಾಗಿ ಮತ್ತು ವಿಧಾನಪರಿಷತ್ ಸದಸ್ಯರು ಉಪಾಧ್ಯಕ್ಷರಾಗಿದ್ದ ಪದ್ಧತಿಯನ್ನು ರದ್ದುಮಾಡಬೇಕೆಂದು ಶ್ರೀ ಡಿ.ವಿ.ಜಿ. ಮತ್ತು ಅವರ ಜೊತೆ ಇಬ್ಬರು ಸದಸ್ಯರು ಸಲಹೆ ಮಾಡಿ ಈಗ ಇದ್ದ ಸಂಪ್ರದಾಯ ವನ್ನು ವಿರೋಧಿಸಿ ವಿಧಾನಸ ಭೆಯಸದಸ್ಯರೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡ ಬೇಕೆಂಬ ಸಲಹೆ ಮಾಡಿದರು. ಅಧಿಕಾರೇತರ ಅಧ್ಯಕ್ಷರು ಸಭೆಯ ಪೂರ್ವ ಸದಸ್ಯರಾಗಿದ್ದು ಅವರು ಅಧಿಕಾರಿಯಾಗಿಲ್ಲದ್ದರಿಂದ, ಆಡಳಿತ ವಿಷಯವಲ್ಲಿ ಯಾವ ಸಂಬಂಧವನ್ನೂ ಹೊಂದಿಲ್ಲದಿರುವುದರಿಂದ, ಸದಸ್ಯರ ಮನವಿಗಳನ್ನು ಪರಿಶೀಲಿಸುವ ಯಾವುದೇ ಅನು ಕೂಲ ಪರಿಸ್ಥಿತಿ ಇಲ್ಲದಿರುವುದರಿಂದ ಅಧಿಕಾರೇತರ ಸದಸ್ಯರನ್ನು ಸಭೆಯ ಅಧ್ಯಕ್ಷರನ್ನಾಗಿ ನಾಮಕರಣಮಾಡುವ ಬದಲು ಈಗ ಇರುವ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಸಮಿತಿ ಅಭಿಪ್ರಾಯಪಟ್ಟಿತು.

ಕಾರ್ಯಾಂಗವು ಶಾಸಕಾಂಗಕ್ಕೆ ಎಷ್ಟರಮಟ್ಟಿಗೆ ಉತ್ತರಿಸಬೇಕು ಎಂಬ ವಿಷಯವನ್ನು ಪರಿಶೀಲಿಸಬೇಕಾಗಿ ಬಂತು. ಒಂದು ನಿರ್ದಿಷ್ಟ ವಿಷಯವೆಂದರೆ ವಿಧಾನಸಭೆಯಲ್ಲಿ ಸಚಿವ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸ ಬಹುದೇ, ಹಾಗಿದ್ದರೆ ಅದರ ಫಲಿತಾಂಶವೇನು ಎಂಬುದು ಕೆಲವು ಸದಸ್ಯರು ವಿಧಾನಸಭೆ ಸಚಿವರನ್ನು ತೆಗೆಯುವ ಅಧಿಕಾರವನ್ನು ಹೊಂದಿದೆ ಎಂದು ವಾದಿಸಿದರು. ಶ್ರೀ ಡಿ.ವಿ.ಜಿ.ಯವರು ಈ ಎರಡೂ ಸಲಹೆಗಳಿಗೂ ಸಮತೋಲನವಾಗುವಂತೆ ವಿಧಾನ ಸಭೆಯು ಯಾವುದೇ ವಿಷಯ ಅಥವಾ ನೀತಿ ತಪ್ಪುದಾರಿಗೆ ಹೋಗುತ್ತದೆ ಎಂದು ಭಾವಿಸಿದರೆ ಮತ್ತು ಒಂದು ನೀತಿಯಲ್ಲಿ ಬದಲಾವಣೆ ಬೇಕು ಎಂದು ಅಪೇಕ್ಷಿಸಿದರೆ ವಿಧಾನಸಭೆಯು ಯಾವುದೇ ಅವಿಶ್ವಾಸ ನಿರ್ಣಯವನ್ನು ಮಂಡಿಸದೆ ಮಹಾರಾಜರಿಗೆ ನೇರವಾಗಿ ಮನವಿಪತ್ರ ಸಲ್ಲಿಸಿ ಸರ್ಕಾರದ ನೀತಿಯನ್ನು ಮಾರ್ಪಾಟು ಮಾಡಲು ಸಚಿವ ಸಂಪುಟಕ್ಕೆ ಆದೇಶ ನೀಡಬಹುದು ಎಂದು ಸಲಹೆ ಮಾಡಿದರು. ಸಭೆಯಲ್ಲಿ ಬಹುಮತ ಸದಸ್ಯರು ಒಂದು ನಿರ್ದಿಷ್ಟ ವಿಷಯದ ಮೇಲೆ ನಿರ್ಣಯ ಅಂಗೀಕರಿಸಿದರೆ ಅದು ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯ ಎಂದು ತಿಳಿದು ಮಹಾರಾಜರು ಇಡೀ ಸಚಿವ ಸಂಪುಟವನ್ನು ಅಥವಾ ಸಚಿವ ಸಂಪುಟದ ಕೆಲವರನ್ನು ಬದಲಾಯಿಸ ಬೇಕು ಎಂದೂ ಶ್ರೀ ಡಿ.ವಿ.ಜಿ. ಯವರು ಸಲಹೆ ಮಾಡಿದರು. ಈ ಸಲಹೆಯನ್ನು ಒಪ್ಪಿದರೆ ಮಹಾರಾಜರು ಯಾವುದಾದರೊಂದು ನಿರ್ಣಯ ತೆಗೆದುಕೊಳ್ಳಲೇಬೇಕೆಂಬ ನಿಯಮ ಹಾಕಿದಂತಾಗುತ್ತದೆ ಎಂದು ಸಮಿತಿಯ ಹೆಚ್ಚಿನ ಸದಸ್ಯರು ಅಭಿಪ್ರಾಯ ಪಟ್ಟು ಶ್ರೀ ಡಿ.ವಿ.ಜಿ.ಯವರ ಸಲಹೆಯನ್ನು ಒಪ್ಪಲಿಲ್ಲ. ವಿಧಾನಸಭೆಯಲ್ಲಿ ಸದಸ್ಯರು ತಮ್ಮ ಅಭಿಪ್ರಾಯಗಳನ್ನು, ಅಸಮಾಧಾನವನ್ನು, ವಿರೋಧವನ್ನು ವ್ಯಕ್ತಪಡಿಸಲು

ಹಲವಾರು ಅವಕಾಶಗಳಿವೆ ಮತ್ತು ಸಚಿವ ಸಂಪುಟದ ನೀತಿರೀತಿಗಳ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿದಾಗ ಅಂತಹವುಗಳನ್ನು ಮಹಾರಾಜರ ಗಮನಕ್ಕೆ ತಂದು ತಮಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲು ಮಹಾರಾಜರಿಗೇ ಬಿಡುವುದು ಸೂಕ್ತ ಎಂದು ಸಮಿತಿ ಅಭಿಪ್ರಾಯಪಟ್ಟಿತು.

ಮತ ನೀಡುವುವಕ್ಕೆ ಯಾರು ಅನರ್ಹರೆಂದು ನಿರ್ಣಯಿಸುವ ವಿಷಯವನ್ನು ಸಮಿತಿ ಪರಿಗಣನೆಗೆ ತೆಗೆದುಕೊಂಡಾಗ ಯಾರು ಮತದಾರರ ಪಟ್ಟಿ ತಯಾರಿಸಿದ ಆರು ತಿಂಗಳು ಮೊದಲಿನಿಂದಲೂ ಆ ಸ್ಥಳದಲ್ಲಿಯೇ ವಾಸಮಾಡುತ್ತಿರುತ್ತಾರೊ ಅಂತಹ ವರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬಹುದೆಂದು ಸಮಿತಿ ತೀರ್ಮಾನಿಸಿತು. ಅಗತ್ಯ ಆಸ್ತಿ ಅರ್ಹತೆ ವಿನಾಯಿತಿ ಇರುವವರನ್ನು ಬಿಟ್ಟು ಉಳಿದವರಲ್ಲಿ 21 ವರ್ಷಕ್ಕೆ ಕೆಳಪಟ್ಟವರು, ಮಾನಸಿಕ ಅಸ್ವಸ್ಥರು, ಶಿಕ್ಷೆಗೆ ಗುರಿಯಾದ ಅಪರಾಧಿಗಳು ಮತ ಚಲಾಯಿಸಲು ಅನರ್ಹರು ಎಂದು ಸಮಿತಿ ತೀರ್ಮಾನಿಸಿತು. ಈ ಸಂದರ್ಭದಲ್ಲಿ ಬ್ರಿಟಿಷ್ ಪೌರತ್ವದ ಮಾದರಿಯಲ್ಲಿ ಮೈಸೂರು ಪೌರತ್ವವನ್ನು ನಿರ್ಣಯಿಸುವ ಕಾನೂನನ್ನು ಜಾರಿಗೆ ತರಬೇಕೆಂದು ಶ್ರೀ ಡಿ.ವಿ.ಜಿ.ಯವರು ಸಲಹೆಮಾಡಿದರು. ಸಮಿತಿ ಈ ಸಲಹೆಯನ್ನು ಒಪ್ಪುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ನಿಲ್ಲುವ ಅಭ್ಯರ್ಥಿಯು ಸರ್ಕಾರದ ನೀತಿ ನಿಯಮಗಳನ್ನು ಅರ್ಥಮಾಡಿಕೊಳ್ಳಲು ಅವಕಾಶವಾಗುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿತು. ಶ್ರೀ ಡಿ.ವಿ.ಜಿ.ಯವರು ಇದರಿಂದ ಸಮಿತಿಯು ಒಂದು ಮುಖ್ಯ ಅಂಶವನ್ನು ಗಳಿಸಿದರು.

ಹೀಗೆ ಶ್ರೀ ಡಿ.ವಿ.ಜಿ.ಯವರು ಸಮಿತಿಯ ಸದಸ್ಯರಾಗಿ ಬಹು ಗಮನಾರ್ಹ ಸಾಧನೆಯನ್ನು ಸಾಧಿಸಿದ್ದು, ಇದರಿಂದ ಮೈಸೂರು ರಾಜ್ಯಕ್ಕೂ, ಜನತೆಗೂ ಉಪಯುಕ್ತ ಸೇವೆಯನ್ನು ಸಲ್ಲಿಸಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಅವಧಿಯಲ್ಲಿ ಎಲ್ಲಾ ಸದಸ್ಯರ ಮೆಚ್ಚಿಗೆಗೂ ಮಹಾರಾಜರ ವಿಶ್ವಾಸಕ್ಕೂ ಪಾತ್ರರಾಗಿದ್ದರಲ್ಲದೆ ಜನತೆಯ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡಿದ್ದರು.

ಅನುಬಂಧಗಳು

ಸಂಗ್ರಹ

ಡಿ. ವಿ. ಪರಮಶಿವಮೂರ್ತಿ

ನಾ. ಗೀತಾಚಾರ್ಯ

ಪರಿವಿಡಿ

1. ಡಿ.ವಿ.ಜಿ. ಜೀವನ, ಕೃತಿ, ಲೇಖನಸೂಚಿ — ಪುಟ

I. ಜೀವನ ಮತ್ತು ವ್ಯಕ್ತಿತ್ವ — 723–728

II. ಕೃತಿಗಳು

1. ಮಂಕುತಿಮ್ಮನ ಕಗ್ಗ — 728–729
2. ಕಾವ್ಯಗಳು — 729–731
3. ಗದ್ಯ ಕೃತಿಗಳು — 731–733

III. ಇತರ — 733–734

2. ಡಿ.ವಿ.ಜಿ. ಅವರ ಕೃತಿಗಳು — 735–737

ಜೀವನ ಚರಿತ್ರೆ. ನೆನಪುಗಳು. ಮಕ್ಕಳ ಸಾಹಿತ್ಯ, ನಿಬಂಧ, ನಾಟಕ. ಧಾರ್ಮಿಕ. ಕವಿತೆ. ರಾಜಕೀಯ.

3. ಡಿ.ವಿ.ಜಿ. ಅವರನ್ನು ಕುರಿತ ಪುಸ್ತಕಗಳು — 738
4. ಡಿ.ವಿ.ಜಿ. ಜೀವನ ವಿವರ — 739–740
5. ಡಿ.ವಿ.ಜಿ. ಜನ್ಮಶತಮಾನೋತ್ಸವ ಸ್ಮೃತಿ ಪ್ರಕಟನಮಾಲೆ — 741
6. ಧೀಮಂತ ಲೇಖಕರ ಬಳಗ — 742–745

1. ಡಿ.ವಿ.ಜಿ. ಅವರ ಜೀವನ, ಕೃತಿ, ಲೇಖನಸೂಚಿ

[ಟಿಪ್ಪಣಿ : ನಮ್ಮ ಗಮನಕ್ಕೆ ಬಂದಿರುವಷ್ಟರಮಟ್ಟಿಗೆ ಆದಷ್ಟು ಸಮಗ್ರವಾಗಿ ಸೂಚಿಯನ್ನು ಸಿದ್ಧಪಡಿಸಲು ಪ್ರಯತ್ನಿಸಿದ್ದೇವೆ. ಗೋ.ಸಾ.ವಿ.ಸಂ.—ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ : ಎ.ಜಿ.ಓ.ಆರ್.ಸಿ.—ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್.
—ಸಂ.]

I. ಜೀವನ ಮತ್ತು ವ್ಯಕ್ತಿತ್ವ

1. ಅಗಲಿಹೋದ ಕನ್ನಡದ ಮೇರುಪುರುಷ—ಸಂಪಾದಕೀಯ
ಪ್ರಜಾಮತ, 19-10-1975
2. ಅಪರೂಪದ ವ್ಯಕ್ತಿತ್ವ : ಡಿ.ವಿ.ಜಿ.—ವಿ. ಎಸ್. ಕೃಷ್ಣಯ್ಯರ್
ವನಸುಮ, ಗೋ.ಸಾ.ವಿ.ಸಂ., ಬೆಂಗಳೂರು, 1987, ಪುಟ 10
3. ಅಭಿಜಾತ ಪತ್ರಿಕೋದ್ಯಮಿ ಶ್ರೀ ಗುಂಡಪ್ಪನವರು—ಹ. ರಾ. ಪುರೋಹಿತ
ಕರ್ಮವೀರ, 8-2-1970, ಪುಟ 40
4. ಆತ್ಮೀಯ ಸಂಬಂಧ—ಪು. ತಿ. ನರಸಿಂಹಾಚಾರ್
ವನಸುಮ, ಗೋ.ಸಾ.ವಿ.ಸಂ., ಬೆಂಗಳೂರು, 1987, ಪುಟ 6
5. ಆದರ್ಶಜೀವಿ—ಶಿವರಾಮ ಕಾರಂತ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., ಬೆಂಗಳೂರು, 1988, ಪುಟ 29
6. ಉದಾರ ದಾರ್ಶನಿಕ ಡಿ.ವಿ.ಜಿ.—ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ಸುಧಾ, 26-10-1975, ಪುಟ 29
7. ಉಲ್ಲಾಸ ಹರಡಿದ ಉದಾತ್ತಜೀವಿ ಡಿ.ವಿ.ಜಿ.—ಎಸ್. ಆರ್. ರಾಮಸ್ವಾಮಿ
ಸುಧಾ, 17-10-1976, ಪುಟ 15
8. ಒಪಿನಿಯನ್ಸ್ ಅಂಡ್ ಅನೆಕ್‌ಡೋಟ್ಸ್ (ಇಂಗ್ಲಿಷ್)
—ಎಸ್. ಆರ್ ರಾಮಸ್ವಾಮಿ
ಡೆಕ್ಕನ್ ಹೆರಾಲ್ಡ್, 17-5-1987
9. ಕನ್ನಡ ಗುರುಕುಲ ಮಾರ್ತಾಂಡ—ಬಿ. ಎಚ್. ಶ್ರೀಧರ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., ಬೆಂಗಳೂರು, 1988, ಪುಟ 61
10. ಕನ್ನಡದ ಭೀಷ್ಮರು ಇನ್ನಿಲ್ಲ—ಸಂಪಾದಕೀಯ
ಸುಧಾ, 26-10-1975
11. ಕರ್ಮಯೋಗಿ ಡಿ.ವಿ.ಜಿ.—ಪು. ತಿ. ನರಸಿಂಹಾಚಾರ್
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., ಬೆಂಗಳೂರು, 1988, ಪುಟ 27

12. ಕಾವ್ಯಜೀವಿ ಡಿ.ವಿ.ಜಿ.—ಎಸ್. ಆರ್. ರಾಮಸ್ವಾಮಿ
ಸುಧಾ, 19–10–1975, ಪುಟ 15

13. ಕೋಲಾರ ಜಿಲ್ಲೆಯ ಸಿರಿ : ಡಿ.ವಿ.ಜಿ.—ಕೆ. ಪಟ್ಟಾಭಿರಾಮನ್
ಚಿಗುರು, ಡಿ.ವಿ.ಜಿ. ಶತಮಾನೋತ್ಸವ ಸಮಿತಿ. ಮುಳಬಾಗಿಲು.
1987

14. ಗುಂಡಪ್ಪ ಡಿ. ವಿ.—ವೆಂಕಟೇಶ ಸಾಂಗಲಿ
ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ. ಪುಟ 42

15. ಚಿರಸ್ಮರಣೀಯ ಡಿ.ವಿ.ಜಿ.—ಆರ್. ಆರ್. ದಿವಾಕರ್
ಡಿ.ವಿ.ಜಿ.. ಎ.ಜಿ.ಓ.ಆರ್.ಸಿ.. ಬೆಂಗಳೂರು. 1988. ಪುಟ 41

16. ಡಾ॥ ಡಿ. ವಿ. ಗುಂಡಪ್ಪ (ಇಂಗ್ಲಿಷ್)—ಎಚ್. ಎಸ್. ಶ್ರೀನಾಥ್
ಡಿ.ವಿ.ಜಿ.. ಎ.ಜಿ.ಓ.ಆರ್.ಸಿ.. ಬೆಂಗಳೂರು. 1988. ಪುಟ 1

17. ಡಾ॥ ಡಿ. ವಿ. ಗುಂಡಪ್ಪನವರು—ಜಿ. ವೆಂಕಟಸುಬ್ಬಯ್ಯ
ಅಶ್ವತ್ಥ. ಗಾಂಧಿ ಮೆಮೋರಿಯಲ್ ಕಾಲೇಜು. ಉಡುಪಿ. 1987.
ಪುಟ 1

18. ಡಾ॥ ಡಿ.ವಿ.ಜಿ. ಅವರ ವ್ಯಕ್ತಿತ್ವ—ಜಿ. ವೆಂಕಟಸುಬ್ಬಯ್ಯ
ಸುಧಾ, 11–1–1970, ಪುಟ 61

19. ಡಿ. ವಿ. ಗುಂಡಪ್ಪನವರು—ಡಿ. ಲಿಂಗಯ್ಯ
ಅಧ್ಯಕ್ಷರ ಭಾಷಣಗಳು. ಪುಟ 346

20. ಡಿ. ವಿ. ಗುಂಡಪ್ಪನವರು—ಡಿ. ಕೆ. ಭಾರದ್ವಾಜ
ಕನ್ನಡ ನುಡಿ. 7–8. ಪುಟ 31

21. ಡಿ. ವಿ. ಗುಂಡಪ್ಪನವರು—ವಿ. ಸೀತಾರಾಮಯ್ಯ
ಮಹನೀಯರು, ಪುಟ 49

22. ಡಿ. ವಿ. ಗುಂಡಪ್ಪ—ಸೇಜ್ ಅಂಡ್ ಸ್ಕಾಲರ್ (ಇಂಗ್ಲಿಷ್)
—ಜಿ. ಎಸ್. ಆಮೂರ್
ಡೆಕ್ಕನ್ ಹೆರಾಲ್ಡ್, 17–5–1987

23. ಡಿ. ವಿ. ಗುಂಡಪ್ಪನವರ ಪೂರ್ಣ ವ್ಯಕ್ತಿತ್ವ
—ಎಂ. ವಿ. ಸೀತಾರಾಮಯ್ಯ
ಚಿಗುರು. ಡಿ.ವಿ.ಜಿ. ಶತಮಾನೋತ್ಸವ ಸಮಿತಿ.ಮುಳಬಾಗಿಲು, 1987

24. ಡಿ.ವಿ.ಜಿ.—ಎಚ್ಚೆಸ್ಕೆ
ಸುಧಾ, 11–1–1970

25. ಡಿ.ವಿ.ಜಿ. ಅವರು ಮತ್ತು ಅವರ ಕೃತಿಗಳು—ದೇ. ಜವರೇಗೌಡ
ಸಾಹಿತಿಗಳ ಸಂಗವಲ್ಲಿ, ಪುಟ 59

26. ಡಿ.ವಿ.ಜಿ. ಅವರು ಮತ್ತು ಅವರ ಕೃತಿಗಳು
ಪುಸ್ತಕ ಪ್ರಪಂಚ, 3–2, ಪುಟ 27

27. ಡಿ.ವಿ.ಜಿ. ಅವರ ಅನೇಕಮುಖ ಸೇವೆ—ಎನ್. ರಘುನಾಥ್
ಕನ್ನಡಪ್ರಭ, 8–1–1970

28. ಡಿ.ವಿ.ಜಿ. : ಎ ಟ್ರಿಬ್ಯೂಟ್ (ಇಂಗ್ಲಿಷ್)—ಕೆ. ವೇದಮೂರ್ತಿ
ವನಸುಮ, ಗೋ.ಸಾ.ವಿ.ಸಂ., 1987, ಪುಟ 18

29. ಡಿ.ವಿ.ಜಿ. : ಒಂದು ಕಿರು ಪರಿಚಯ—ನಾ. ಗೀತಾಚಾರ್ಯ
ಮಂಕುತಿಮ್ಮನ ಕಗ್ಗ—ಆಯ್ದ ಪದ್ಯಗಳು, ಗೋ.ಸಾ.ವಿ.ಸಂ., 1987

30. ಡಿ.ವಿ.ಜಿ. : ಒಂದು ಭೇಟಿಯ ನೆನಪು—ಸೇವ ನಮಿರಾಜಮಲ್ಲ
ಕರ್ಮವೀರ, 8–2–1970, ಪುಟ 28

31. ಡಿ.ವಿ.ಜಿ. : ಒಂದು ಶಕೆಯ ಅಂತ್ಯ—ಎಸ್. ಆರ್. ಕೃಷ್ಣಮೂರ್ತಿ
ಪ್ರಜಾಮತ, 19–10–1975

32. ಡಿ.ವಿ.ಜಿ. : ಕೆಲವು ಅನಿಸಿಕೆಗಳು, ಅನುಮಾನಗಳು
—ಶಾಂತಿನಾಥ ದೇಸಾಯಿ
ಸಂಕ್ರಮಣ, 185, 23–1, ಜನವರಿ 1988

33. ಡಿ.ವಿ.ಜಿ. : ಕೆಲವು ನೆನಪುಗಳು—ಎ. ಎನ್. ಮೂರ್ತಿರಾವ್
ವನಸುಮ, ಗೋ.ಸಾ.ವಿ.ಸಂ., 1987, ಪುಟ 1

34. ಡಿ.ವಿ.ಜಿ. ಖಾಜಿ ಸಾಹೇಬರಾದದ್ದು—ಪ್ರಕಾಶ್ ಖಾಡೆ
ಕನ್ನಡಪ್ರಭ, 25–10–1987, ಪುಟ 5

35. ಡಿ.ವಿ.ಜಿ. : ದಿ ಸೆಲ್ಫ್-ಕಲ್ಚರ್ಡ್ ಎಲ್ಡರ್ ಸ್ಟೇಟ್ಸ್‌ಮನ್ ಆಫ್ ಮೈಸೂರ್ (ಇಂಗ್ಲಿಷ್)—ಎಸ್. ರಘುನಾಥನ್
ಡೆಕ್ಕನ್ ಹೆರಾಲ್ಡ್, 11–1–1970

36. ಡಿ.ವಿ.ಜಿ. ನಡೆದು ಬಂದ ದಾರಿ—ಕೆ. ಡಿ. ಕುರ್ತಕೋಟಿ

37. ಡಿ.ವಿ.ಜಿ. ನೆನಪುಗಳು—ಗುಂಡ್ಮಿ ಚಂದ್ರಶೇಖರ ಐತಾಳ
ವನಸುಮ, ಗೋ.ಸಾ.ವಿ.ಸಂ., 1987, ಪುಟ 15

38. ಡಿ.ವಿ.ಜಿ.'ಸ್ ಪೋರ್ಟ್ರೇಟ್ ಗ್ಯಾಲರಿ –ಎಲ್. ಎಸ್. ಶೇಷಗಿರಿರಾವ್
ಡಿ.ವಿ.ಜಿ., ಎ.ಜಿ..ಆರ್‌ಟಿ.ಸಿ., ಬೆಂಗಳೂರು. 1988. ಪುಟ 15

39. ಡಿ.ವಿ.ಜಿ. ಮತ್ತು ಮಾಸ್ತಿ—ಬಿ. ಎನ್. ಶ್ರೀನಿವಾಸನ್
ಚಿಗುರು. ಡಿ.ವಿ.ಜಿ.ಶತಮಾನೋತ್ಸವಸಮಿತಿ. ಮುಳಬಾಗಿಲು. 1987

40. ಡಿ.ವಿ.ಜಿ.ಯವರ ಜೀವನ ಮತ್ತು ವ್ಯಕ್ತಿತ್ವ—ನೀಲತ್ತಹಳ್ಳಿ ಕಸ್ತೂರಿ
ವನಸುಮ, ಗೋ.ಸಾ.ವಿ.ಸಂ., 1987, ಪುಟ 23

41. ಡಿ.ವಿ.ಜಿ.ಯವರ ನೆನಪುಗಳು—ಎನ್. ರಂಗನಾಥ ಶರ್ಮ
ವನಸುಮ, ಗೋ.ಸಾ.ವಿ.ಸಂ., 1987, ಪುಟ 12

42. ಡಿ.ವಿ.ಜಿ. ವಾಣಿ—ಕೆ. ಬಿ. ರಾಜೇಂದ್ರ
ಚಿಗುರು, ಡಿ.ವಿ.ಜಿ.ಶತಮಾನೋತ್ಸವ ಸಮಿತಿ, ಮುಳಬಾಗಿಲು, 1987

43. ಡಿ.ವಿ.ಜಿ. : ವ್ಯಕ್ತಿವಿಚಾರ—ದೇಸಾಯಿ ದತ್ತಮೂರ್ತಿ
ಕಸ್ತೂರಿ, ಮೇ 1967, ಪುಟ 11

44. ಡಿ.ವಿ.ಜಿ. : ಶ್ರೀಮಂತ ವ್ಯಕ್ತಿತ್ವ—ಎಲ್. ಎಸ್. ಶೇಷಗಿರಿರಾವ್
ಕರ್ಮವೀರ, 8–2–1970, ಪುಟ 19

45. ಡಿ.ವಿ.ಜಿ. : ಸಾಧನೆಯ ಬದುಕು—ಮಾಸ್ತಿ ವೆಂಕಟೇಶ ಅಯ್ಯಂಗಾರ್
ಚಿಗುರು, ಡಿ.ವಿ.ಜಿ.ಶತಮಾನೋತ್ಸವ ಸಮಿತಿ, ಮುಳಬಾಗಿಲು, 1987

46. ಡಿ.ವಿ.ಜಿ. ಸ್ಮರಣೆ—ನಾಗರಾಜ್
ಡಿ.ವಿ.ಜಿ. ಸಂಸ್ಮರಣೆ, ಐ.ಟಿ.ಐ. ಬರಹಗಾರರ ವೇದಿಕೆ. ಪುಟ 15

47. ಡಿ.ವಿ.ಜಿ. : ಸರ್ ಎಂ. ವಿ.—ಶ್ರೀಮತಿ ವಾಣಿ ಪ್ರಹ್ಲಾದ್‌ರಾವ್
ಚಿಗುರು. ಡಿ.ವಿ.ಜಿ. ಶತಮಾನೋತ್ಸವ ಸಮಿತಿ. ಮುಳಬಾಗಿಲು, 1987

48. ಡಿ.ವಿ.ಜಿ. ಸ್ಮೃತಿ—ಸಿ.ಪಿ.ಕೆ.
ತರಳಬಾಳು, 13–3, ಏಪ್ರಿಲ್ 1988

49. ತೀರ್ಥರೂಪ ಡಿ.ವಿ.ಜಿ.—ಎಸ್. ವೈ. ಪಾರ್ವತಿ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 64

50. ದಿವಿಜ ಡಿ.ವಿ.ಜಿ.—ನಾ. ಗೀತಾಚಾರ್ಯ
ಸ್ಪಂದನ –11, ಶೇಷಾದ್ರಿಪುರಂ ಕಾಲೇಜು. ಬೆಂಗಳೂರು, 1987

51. ಧೀಮಂತ ಡಿ.ವಿ.ಜಿ.—ಹಂ. ಪ. ನಾಗರಾಜಯ್ಯ
ಡಿ.ವಿ.ಜಿ.. ಎ.ಜಿ.ಓ.ಆರ್.ಸಿ., 1988, ಪುಟ 44

52. ನನ್ನನ್ನು ಕಡೆದ ರೂಪಾರಿ ಡಿ.ವಿ.ಜಿ.—ಎಂ. ವಿ. ಸೀತಾರಾಮಯ್ಯ
ಕರ್ಮವೀರ, 8–2–1970, ಪುಟ 23

53. ನೆನಪಿನ ಬತ್ತಳಿಕೆಯಲ್ಲಿನ ಒಂದು ಬಾಣ—ವಂ. ಮು. ಜೋಶಿ
ಕರ್ಮವೀರ, 8–2–1970, ಪುಟ 26

54. ಪರಿಪಕ್ವತೆ ಬರಹವಾದಾಗ—ಎಲ್. ಎಸ್. ಶೇಷಗಿರಿರಾವ್
ತರಂಗ, 22–3–1987

55. ಪ್ರತಿಷ್ಠಿತ. ಪ್ರತಿಭಾನ್ವಿತ ಗುರು ಡಿ.ವಿ.ಜಿ.—ಗುಂ. ನಾ. ಜೋಶಿ
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977, ಪುಟ 146

56. ಪ್ರತಿಭೆ ಪಾಂಡಿತ್ಯಗಳ ಮೇಳ ಡಿ.ವಿ.ಜಿ.—ವತ್ಸಕ
ಪ್ರಜಾವಾಣಿ, 18–1–1970

57. ಬಿಲೀವ್ಡ್ : ಡಿ.ವಿ.ಜಿ. (ಇಂಗ್ಲಿಷ್)—ಕೆ. ಎಸ್. ರಾಮಸ್ವಾಮಿ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 9

58. ಬೆಲೆ ಕಟ್ಟಲಾಗದ ಸೇವೆ
ತರಂಗ, 22–3–1987, ಪುಟ 35

59. ಮಾನವ ಮಾನದ—ಭ್ರಮರ
ಸುಧಾ, 11–1–1970, ಪುಟ 4

60. ಮೈಸೂರಿನ 'ರಾಜಾಜಿ'—ಕೋದಂಡರಾವ್, ಪಿ.
ಕನ್ನಡಪ್ರಭ, 11–1–1970

61. ಯಜಮಾನರು—ಎಸ್ಸಾರ್ಕೆ
ಕನ್ನಡಪ್ರಭ, 11–1–1970

62. ಯೋಗಿ ಡಿ.ವಿ.ಜಿ.—ಎಸ್. ವೆಂಕಟಾಚಲಪತಿ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 32

63. ರಸಋಷಿ : ಡಿ.ವಿ.ಜಿ.—ನಿರಂಜನ
ಕರ್ಮವೀರ, 8–2–1970 ಪುಟ 50

64. ರಾಜಕಾರಣಿಯಾಗಿ, ಕವಿಯಾಗಿ ಹೆಸರು ಪಡೆದ ಡಿ.ವಿ.ಜಿ.
—ಬಿ. ಸಿ. ರಾಮಚಂದ್ರಶರ್ಮ
ಪ್ರತಿಭಾ ಸಂದರ್ಶನ, ಪುಟ 74

65. ರಾಜನೀತಿಜ್ಞ—ನೀಲತ್ತಹಳ್ಳಿ ಕಸ್ತೂರಿ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 49

66. ವಿಚಾರಶೀಲ ಡಿ.ವಿ.ಜಿ.—ಹಾ. ಮಾ. ನಾಯಕ
ಕನ್ನಡಪ್ರಭ, 19–1–1970

67. ಶಿಲ್ಪ ವಿಜ್ಞಾನಿ—ಎಸ್. ಜಿ. ರಾಮಚಂದ್ರ
ಪ್ರಬುದ್ಧ ಕರ್ಣಾಟಕ, ಚಿನ್ನದ ಸಂಚಿಕೆ

68. ಸಾರಸ್ವತ ಶಿಲ್ಪಿ ಡಿ.ವಿ.ಜಿ.—ಶ್ರೀಮುಖ
ಸುಧಾ, 11–1–1970, ಪುಟ 14

69. ಸಾಹಿತ್ಯ ತಪೋಧನ, ಡಿ.ವಿ.ಜಿ.ಯ ದಿವ್ಯಸನ್ನಿಧಾನದಲ್ಲಿ
—ಕೃಷ್ಣಮೂರ್ತಿ ಪುರಾಣಿಕ
ಕರ್ಮವೀರ, 8–2–1970, ಪುಟ 25

70. ಸಾಹಿತ್ಯಭೀಷ್ಮ, ರಸಜೀವಿ, ಡಿ.ವಿ.ಜಿ.
—ಗೊರೂರು ರಾಮಸ್ವಾಮಿ ಅಯ್ಯಂಗಾರ್
ಕನ್ನಡಪ್ರಭ, 17–1–1970

71. ಸೀಮಾಪುರುಷ— ವಿದ್ವಾನ್ ಬ. ನ. ಗುಂಡೂರಾವ್
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 56

72. ಹಳೆ ಬೇರು ಹೊಸ ಚಿಗುರು—ಗುಂಡ್ಮಿ ಚಂದ್ರಶೇಖರ ಐತಾಳ
ಅಶ್ವತ್ಥ. ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ. 1987
ಪುಟ 54

II. ಕೃತಿಗಳು

1. ಮಂಕುತಿಮ್ಮನ ಕಗ್ಗ

73. ಇಂಗ್ಲಿಷಿನಲ್ಲಿ 'ಮಂಕುತಿಮ್ಮನ ಕಗ್ಗ'—ಜಿ. ಕೆ. ಜಿ. ರಾವ್
ಪ್ರಜಾವಾಣಿ, 25–3–1975

74. ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗ—ಚಿ. ನ. ಮಂಗಳ
ಕರ್ಮವೀರ. 8–2–1970, ಪುಟ 32

75. ಡಿ.ವಿ.ಜಿ. ಮಂಕುತಿಮ್ಮನ ಕಗ್ಗ— ಸಿದ್ಧಯ್ಯ ಪುರಾಣಿಕ
ಸ್ವಸ್ತಿ, ಪುಟ 168

76. ಮಂಕುತಿಮ್ಮನ ಉಪದೇಶ— ವಿ. ಶ್ರೀಕಂಠಯ್ಯ
ಕುಸುಮಾರ್ಪಣೆ, ಗೋ.ಸಾ.ವಿ.ಸಂ.. 1975. ಪುಟ 143

77. ಮಂಕುತಿಮ್ಮನ ಕಗ್ಗ—ಪ್ರೊ॥ ಎಲ್. ಎಸ್. ಶೇಷಗಿರಿರಾವ್
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 65

78. ಮಂಕುತಿಮ್ಮನ ಕಗ್ಗ—ಜಿ. ಎಸ್. ಸಿದ್ಧಲಿಂಗಯ್ಯ
ವನಸುಮ. ಗೋ.ಸಾ.ವಿ.ಸಂ., 1987, ಪುಟ 45

79. ಮಂಕುತಿಮ್ಮನ ಕಗ್ಗ—ಖಯಾಂ ಅಬ್ದುಲ್
ಸಿ.ಗಂ., 7–2, ಪುಟ 71

80. ಮಂಕುತಿಮ್ಮನ ಕಗ್ಗ (ಇಂಗ್ಲಿಷ್)— ಟಿ. ಎನ್. ಪದ್ಮನಾಭನ್
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 21

81. ಮಂಕುತಿಮ್ಮನ ಕಗ್ಗ : ಎ ವೆರಿಟಬಲ್ ಥೆಸಾರಸ್ (ಇಂಗ್ಲಿಷ್)
—ಡಿ. ಶೇಷಗಿರಿರಾವ್
ಡೆಕ್ಕನ್ ಹೆರಾಲ್ಡ್, 23–5–1971

82. ಮಂಕುತಿಮ್ಮನ ಕಗ್ಗ : ಒಂದು ವಿಮರ್ಶೆ—ಡಿ. ಲಿಂಗಯ್ಯ
ಯುವಶಕ್ತಿ. ವಿ.ವಿ.ಪುರಂ ಕಾಲೇಜು. 1987, ಪುಟ 40

83. ಮಂಕುತಿಮ್ಮನ ಕಗ್ಗ : ಒಂದು ಸಮೀಕ್ಷೆ— ವಿದ್ಯಾಶಂಕರ್
ಸಂಕೀರ್ಣ, ಏಪ್ರಿಲ್ 1971, ಪುಟ 41

84. ಮಂಕುತಿಮ್ಮನ ಕಗ್ಗದಲ್ಲಿ ಜೀವನದರ್ಶನ—ಬಿ. ವಿ. ನಾಯಕ್
ನ.ಭಾ., 8-8-1971, ಪುಟ 5

85. ಮಂಕುತಿಮ್ಮನಿಗಿನ್ನೊಂದು ಜನ್ಮ— ಚಿರಂಜೀವಿ
ತರಂಗ, 22-3-1987, ಪುಟ 34

86. ಮಂಕುತಿಮ್ಮನ ಕಗ್ಗದಲ್ಲಿ ದ್ವಂದ್ವಗಳು— ವಿ. ಕೃಷ್ಣಶೆಟ್ಟಿ
ರಸಧಿ, ಪುಟ 41

87. ಮಂಕುತಿಮ್ಮನ ಜೀವನದರ್ಶನ— ಬಾಲಕೃಷ್ಣರಾವ್, ಪಿ.
ನವನೀತ, 1971, ಪುಟ 26

88. ಮಂಕುತಿಮ್ಮನ ಜೀವನಧರ್ಮ—ಚಿ. ನ. ಕೃಷ್ಣಮೂರ್ತಿ
ಸಪ್ತಗಿರಿ, ಡಿಸೆಂಬರ್ 1981, ಪುಟ 13

89. ಮಂಕುತಿಮ್ಮನ ತತ್ವ ಮಥನ—ಜಿ. ಎಸ್. ಚಕ್ರವರ್ತಿ
ಮಾನವಿಕ ಕರ್ನಾಟಕ, 4-7

90. ಮಂಕುತಿಮ್ಮನ ಮಾರ್ಗ— ಜಿ. ಪಿ. ರಾಜರತ್ನಂ
ಕಿರಣಾನುಭವ, ಪುಟ 173

91. ಮಂಕುತಿಮ್ಮನ ಕಗ್ಗ ಮತ್ತು ಅಂದನಾ ತಿಂಮ— ಒಂದು ಸಮೀಕ್ಷೆ
—ಇಟಗಿ ಕೃಷ್ಣ, ಹ.
ತಿಂಮಾಯಣ, ಪುಟ 88

2. ಕಾವ್ಯಗಳು

92. ಅಂತಃಪುರಗೀತೆ—ಡಿ. ಆರ್. ವೆಂಕಟರಮಣನ್
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 111

93. ಅನ್ತಃಪುರಗೀತೆ— ಕೆ. ಎಸ್. ನರಸಿಂಹಸ್ವಾಮಿ
ಉಪವನ, ಪುಟ 70

94. ಕೇತಕೀವನ—ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ
ಸಾಹಿತ್ಯ ವಾರ್ಷಿಕ, 1973, ಪುಟ 3

95. ಗೋಪುಟೇಶ್ವರ : ಒಂದು ವಿವೇಚನೆ—ಕಮಲಾ ಹಂಪನಾ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 95

96. ಡಿ.ವಿ.ಜಿ. ಅವರ ಒಂದು ಪದ್ಯಾರ್ಥ—ಎಂ. ರಾಮಚಂದ್ರ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ.. 1988. ಪುಟ 84

97. ಡಿ.ವಿ.ಜಿ. ಅವರ ಎರಡು ಪರೀಕ್ಷಣಗಳು—ಜಿ. ವೆಂಕಟಸುಬ್ಬಯ್ಯ
ಡಿ.ವಿ.ಜಿ.. ಎ.ಜಿ.ಓ.ಆರ್.ಸಿ.. 1988. ಪುಟ 98

98. ಡಿ.ವಿ.ಜಿ. ಅವರ ಕವಿತೆಗಳು—ಸಾ. ಶಿ. ಮರುಳಯ್ಯ
ವನಸುಮ, ಗೋ.ಸಾ.ವಿ.ಸಂ., 1987, ಪುಟ 70,

99. ಡಿ.ವಿ.ಜಿ. ಅವರ ಕೆಲವು ಕವಿತೆಗಳು—ಶಾರದಾ ರಾಮಣ್ಣ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ. 1988, ಪುಟ 106

100. ಡಿ.ವಿ.ಜಿ. ಅವರ ಕೃತಿಗಳಲ್ಲಿ ಗೇಯಗುಣ—ಬಿ. ವಿ. ಕೆ. ಶಾಸ್ತ್ರಿ
ವನಸುಮ, ಗೋ.ಸಾ.ವಿ.ಸಂ., 1987, ಪುಟ 98

101. ಡಿ.ವಿ.ಜಿ ಅವರ ನಾಟಕಗಳು—ಸೀ. ಕೃ. ರಾಮಶೇಷನ್
ವನಸುಮ, ಗೋ.ಸಾ.ವಿ.ಸಂ., 1987, ಪುಟ 69

102. ಡಿ.ವಿ.ಜಿ. ಅವರ ನಿವೇದನ—ಎಂ. ವಿ. ಸೀತಾರಾಮಯ್ಯ
ಕುಸುಮಾರ್ಪಣೆ, ಗೋ.ಸಾ.ವಿ.ಸಂ., 1877. ಪುಟ 1

103. ಡಿ.ವಿ.ಜಿ. ಅವರ ಶೃಂಗಾರ ಮಂಗಳಂ—ವಿ. ಎಂ. ಇನಾಂದಾರ್
ಕನ್ನಡಪ್ರಭ, 27–3–1972

104. ಡಿ.ವಿ.ಜಿ. ಅವರ ಶೃಂಗಾರ ಸಂಹಿತೆ—ಜಿ. ವರದರಾಜರಾವ್
ಸಾಧನೆ, 1–1, ಪುಟ 11

105. ಡಿ.ವಿ.ಜಿ. ಅವರ ಶ್ರೀಕೃಷ್ಣ ಪರೀಕ್ಷಣಂ
—ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ
ಪ್ರಜಾವಾಣಿ, 2–7–1972

106. ಡಿ.ವಿ.ಜಿ. ಅವರ ಶ್ರೀಮದ್ಭಗವದ್ಗೀತಾ ತಾತ್ಪರ್ಯ
—ಕೆ. ಟಿ. ಪಾಂಡುರಂಗಿ
ಕರ್ಮವೀರ, 8–2-1970, ಪುಟ 37

107. ಡಿ.ವಿ.ಜಿ. ಕಾವ್ಯ—ಶ್ರೀ ದೇವದತ್ತ
ಕರ್ಮವೀರ, 8–2–1970, ಪುಟ 30

108. ಡಿ.ವಿ.ಜಿ.ಯವರ ಸಂಗೀತ ಕೃತಿಗಳು—ಎಲ್. ರಾಜಾರಾವ್
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977 ಪುಟ 125

109. ನಿವೇದನ—ಮುಳಿಯ ತಿಮ್ಮಪ್ಪಯ್ಯ
ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, 9–2

110. ವಸಂತ ಕುಸುಮಾಂಜಲಿ—ಎ.ಆರ್.ಕೃ.
ಪ್ರಬುದ್ಧ ಕರ್ಣಾಟಕ, 4–2

111. ವಸಂತ ಕುಸುಮಾಂಜಲಿ—ಮ.ಪ್ರ.ಪೂ.
ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ. 7–2

112. ವಸಂತ ಕುಸುಮಾಂಜಲಿ : ಒಂದು ಸಮೀಕ್ಷೆ—ಜಿ. ಎಸ್. ಶಾಮಣ್ಣ
ಕುಸುಮಾರ್ಪಣೆ, ಗೋ.ಸಾ.ವಿ.ಸಂ., 1977

113. ಶೃಂಗಾರ ಮಂಗಳಂ— ಟಿ. ಎನ್. ಪದ್ಮನಾಭನ್
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 85

114. ಶ್ರೀಕೃಷ್ಣ ಪರೀಕ್ಷಣಂ— ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ
ಸಾಹಿತ್ಯ ವಾರ್ಷಿಕ, 1971, ಪುಟ 5

115. ಶ್ರೀಕೃಷ್ಣ ಪರೀಕ್ಷಣಂ : ಒಂದು ಪರಿಚಯ
— ಎನ್. ರಂಗನಾಥ ಶರ್ಮ
ಕುಸುಮಾರ್ಪಣೆ, ಗೋ.ಸಾ.ವಿ.ಸಂ, 1977, ಪುಟ 46

116. ಶ್ರೀ ಚೆನ್ನಕೇಶವ ಅಂತಃಪುರಗೀತೆ— ವಿ. ಸೀತಾರಾಮಯ್ಯ
ಕವಿ ಕಾವ್ಯದೃಷ್ಟಿ. ಪುಟ 123

117. ಶ್ರೀರಾಮ ಪರೀಕ್ಷಣಂ— ಎಂ. ಆರ್. ಶ್ರೀನಿವಾಸಮೂರ್ತಿ
ಸಾಹಿತ್ಯ ಲೋಕ. ಪುಟ 512

118. ಶ್ರೀರಾಮ ಪರೀಕ್ಷಣಂ ಅಪಲ್ಯೆಯ ಪ್ರಶ್ನೆ— ಜಿ. ವೆಂಕಟಸುಬ್ಬಯ್ಯ
ಕುಸುಮಾರ್ಪಣೆ, ಗೋ.ಸಾ.ವಿ.ಸಂ., 1977 ಪುಟ 61

119. ಶ್ರೀರಾಮ ಪರೀಕ್ಷಣಂ–ಒಂದು ಸಮೀಕ್ಷೆ
— ಎನ್. ರಂಗನಾಥ ಶರ್ಮ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 72

120. ಶ್ರೀಮಾನ್ ಡಿ.ವಿ.ಜಿ. ಅವರ "ಭರತನ್ ಅಸ್ಪೃಷ್ಟ ಚರಿತನ್"
— ಜಿ. ಪಿ. ರಾಜರತ್ನಂ
ಕುಸುಮಾರ್ಪಣೆ, ಗೋ.ಸಾ.ವಿ.ಸಂ.. 1977, ಪುಟ 180

121. ಸ್ವತಂತ್ರ ಭಾರತ ಅಭಿನಂದನಸ್ತವ— ಸ. ವೆಂಕಟಾಚಲಪತಿ
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 72

3. ಗದ್ಯ ಕೃತಿಗಳು

122. ಕರ್ನಾಟಕ ಜನಜೀವನ ಮತ್ತು ಅರ್ಥ— ಮೂಳಿಯ ತಿಮ್ಮಪ್ಪಯ್ಯ
ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ. 7–4

123. ಗೋಪಾಲಕೃಷ್ಣ ಗೋಖಲೆ— ಮೂಳಿಯ ತಿಮ್ಮಪ್ಪಯ್ಯ
ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ. 9–3

124. ಜೀವನ ಧರ್ಮಯೋಗ— ಕಟ್ಟೆ ಕೃಷ್ಣರಾವ್
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 89

125. ಜೀವನ ಸೌಂದರ್ಯ ಮತ್ತು ಸಾಹಿತ್ಯ— ಟಿ. ಕೇಶವಭಟ್ಟ
ಕುಸುಮಾರ್ಪಣೆ. ಗೋ.ಸಾ.ವಿ.ಸಂ., 1977. ಪುಟ 92

126. ದಿವಾನ್ ಸಿ. ರಂಗಾಚಾರ್ಲು—ಮುಳಿಯ ತಿಮ್ಮಪ್ಪಯ್ಯ
ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, 5–2

127. ಟಾಲ್‌ಸ್ಟಾಯ್‌ಯವರ ಕಥೆಗಳು—ಎ.ಕೆ.ಪು.
ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, 20–3

128. ಡಿ.ವಿ.ಜಿ. ಅವರ ಶೃಂಗಾರ ಮೀಮಾಂಸೆ—ಎಂ. ಎಚ್. ಕೃಷ್ಣಯ್ಯ
ಲೋಚನ, ಜೂನ್ 1988

129. ಡಿ.ವಿ.ಜಿ. ಬರೆದ ಜೀವನಚಿತ್ರ ಮತ್ತು ವ್ಯಕ್ತಿಚಿತ್ರಣಗಳು
—ಹೊಸಬೆಟ್ಟು ಸೀತಾರಾಮಾಚಾರ್ಯ
ಅಶ್ವತ್ಥ. ಗಾಂಧಿ ಮೆಮೋರಿಯಲ್ ಕಾಲೇಜ್. ಉಡುಪಿ.
1987, ಪುಟ 31

130. ಡಿ.ವಿ.ಜಿ.ಯವರ ಅನುವಾದಿತ ಕೃತಿಗಳು—ಅಮೃತ ಸೋಮೇಶ್ವರ
ಅಶ್ವತ್ಥ. ಗಾಂಧಿ ಮೆಮೋರಿಯಲ್ ಕಾಲೇಜು. ಉಡುಪಿ,
1987, ಪುಟ 5

131. ಡಿ.ವಿ.ಜಿ.ಯವರ ಭಗವದ್ಗೀತಾ ದರ್ಶನ—ಸಿ. ಶ್ರೀಶ ಬಲ್ಲಾಳ
ಅಶ್ವತ್ಥ. ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ.
1987, ಪುಟ 20

132. ಡಿ.ವಿ.ಜಿ.ಯವರ ಭಾಷಾಂತರ ಗ್ರಂಥಗಳು—ಟಿ. ಎಸ್. ಶ್ಯಾಮರಾವ್
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 117

133. ಪರಶುರಾಮ—ಪು. ತಿ. ನರಸಿಂಹಾಚಾರ್
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 35

134. ಬಾಳಿಗೊಂದು ನಂಬಿಕೆ—ಎಂ. ರಾಮಚಂದ್ರ
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 57

135. ಬಾಳಿಗೊಂದು ನಂಬಿಕೆ—ಡಿ. ಆರ್. ವೆಂಕಟರಮಣನ್
ತರಂಗ, 22–3–1987, ಪುಟ 36

136. ರಾಜ್ಯಾಂಗ ತತ್ವಗಳು— ಎಲ್. ಶ್ರೀಕಂಠಯ್ಯ
ಪ್ರಬುದ್ಧ ಕರ್ಣಾಟಕ. 37–1

137. ವಿದ್ಯಾರಣ್ಯ ವಿಜಯ— ಎ.ಆರ್.ಕೃ.
ಪ್ರಬುದ್ಧ ಕರ್ಣಾಟಕ, 49–3

138. 'ಸಂಸ್ಕೃತಿ'—ಎಂ. ಚಿದಾನಂದಮೂರ್ತಿ
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 53

139. 'ಸಂಸ್ಕೃತಿ' : ಒಂದು ವಿವೇಚನೆ—ಬಿ. ಸಿ. ರಾಮಚಂದ್ರಶರ್ಮ
ಮನಸುಮ, ಗೋ.ಸಾ.ವಿ.ಸಂ.. 1987. ಪುಟ 92

140. 'ಸಂಸ್ಕೃತಿ'—ಟಿ. ಕೇಶವಭಟ್ಟ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., ಪುಟ 101

141. ಸಾರ್ವಜನಿಕದಲ್ಲಿ ಸಾತ್ವಿಕ—ಆರ್. ಎಸ್. ರಾಮರಾವ್
ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, 56–2

142. ಸಾಹಿತ್ಯ ಶಕ್ತಿ—ಜಿ. ವರದರಾಜರಾವ್
ಕನ್ನಡ ನುಡಿ, 16–5, ಪುಟ 140

III. ಇತರ

143. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಡಿ.ವಿ.ಜಿ. ಅವರ ಸ್ಥಾನ
—ಶಶಿಕಲಾ ಮೋಳ್ದಿ.
ವನಸುಮ, ಗೋ.ಸಾ.ವಿ.ಸಂ., 1987, ಪುಟ 84

144. ಕನ್ನಡ ಸಾಹಿತ್ಯಕ್ಕೆ ಡಿ.ವಿ.ಜಿ. ಕೊಡುಗೆ—ಟಿ. ವಿ. ವೆಂಕಟಾಚಲ ಶಾಸ್ತ್ರಿ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 67

145. ಕನ್ನಡದ ಶಕ್ತಿ (ಕವನ)—ಎಂ. ಗೋವಿಂದ
ಕರ್ಮವೀರ, 8–2–1970, ಪುಟ–41

146. 'ಕಗ್ಗ'ದ ಮಂಕುತಿಮ್ಮನಿಗೆ—ರಾಘವ
ಕುಸುಮಾರ್ಪಣೆ, ಗೋ.ಸಾ.ವಿ.ಸಂ., 1977, ಪುಟ 179

147. ಗೋಖಲೆ ಸಂಸ್ಥೆ ಮತ್ತು ಡಿ.ವಿ.ಜಿ.—ಕೈವಾರ ರಾಜಾರಾವ್
ವನಸುಮ, ಗೋ.ಸಾ.ವಿ.ಸಂ., 1987, ಪುಟ 40

148. ತ್ಯಾಗರಾಜರು ಮತ್ತು ಡಿ.ವಿ.ಜಿ.—ಎಸ್. ಆರ್. ರಾಮಸ್ವಾಮಿ
ವನಸುಮ, ಗೋ.ಸಾ.ವಿ.ಸಂ., 1987, ಪುಟ 105

149. ಡಿ. ವಿ. ಗುಂಡಪ್ಪ ಕೃತಿ ಪರಿಚಯ ಸೂಚಿ
ಚಿಗುರು, ಡಿ.ವಿ.ಜಿ. ಶತಮಾನೋತ್ಸವ ಸಮಿತಿ.
ಮುಳಬಾಗಿಲು, 1987

150. ಡಿ.ವಿ.ಜಿ. (ಕವನ)—ದೊಡ್ಡರಂಗೇಗೌಡ
ವನಸುಮ, ಗೋ.ಸಾ.ವಿ.ಸಂ., 1987, ಪುಟ 38

151. ಡಿ.ವಿ.ಜಿ. (ಕವನ)—ಮಲ್ಲಿಕಾರ್ಜುನ ಉಪ್ಪಾರ್‌ಳ್
ಕರ್ಮವೀರ, 8–2–1970, ಪುಟ 31

152. ಡಿ.ವಿ.ಜಿ. (ಅಪೂರ್ವ ಫೋಟೋ ಸಂಕಲನ)
—ತರಂಗ, 22–3–1978, ಪುಟ 37

153. ಡಿ.ವಿ.ಜಿ. ಅವರ ಕಾವ್ಯ ಮೀಮಾಂಸೆ—ಓ. ಎಲ್. ನಾಗಭೂಷಣಸ್ವಾಮಿ
ವನಸುಮ, ಗೋ.ಸಾ.ವಿ.ಸಂ., 1987, ಪುಟ 76

154. ಡಿ.ವಿ.ಜಿ. ಅವರ ದೃಷ್ಟಿಯಲ್ಲಿ ಸಾಮಾಜಿಕ ಬದುಕು
—ಪಿ. ನಿರಂಜನಕುಮಾರ್
ಡಿ.ವಿ.ಜಿ. ಸಂಸ್ಮರಣೆ. ಐ.ಬಿ.ಐ. ಬರಹಗಾರರ ವೇದಿಕೆ, ಪುಟ 12

155. ಡಿ.ವಿ.ಜಿ. ಅವರ ರಾಜಕೀಯ ಚಿಂತನ—ಸಿ. ವಿ. ರಾಜಗೋಪಾಲ
ವನಸುಮ, ಗೋ.ಸಾ.ವಿ.ಸಂ., 1987, ಪುಟ 108

156. ಡಿ.ವಿ.ಜಿ.ದ ಜರ್ನಲಿಸ್ಟ್ (ಇಂಗ್ಲಿಷ್)—ಪಿ. ಎಮ್. ವಿಜೇಂದ್ರರಾವ್
ಡಿ.ವಿ.ಜಿ.. ಎ.ಜಿ.ಓ.ಆರ್.ಸಿ.. 1988. ಪುಟ 12

157. ಡಿ.ವಿ.ಜಿ.ಯವರ ರಸವಾದ—ಎಂ ರಾಮಚಂದ್ರ
ಕುಸುಮಾರ್ಪಣೆ, ಗೋ.ಸಾ.ವಿ.ಸಂ.. 1977, ಪುಟ 102

158. ಡಿ.ವಿ.ಜಿ.ಯವರ ಸಾಹಿತ್ಯ ಮೀಮಾಂಸೆ—ಎಂ. ರಾಮಚಂದ್ರ
ಅಶ್ವತ್ಥ, ಗಾಂಧಿ ಮೆಮೋರಿಯಲ್ ಕಾಲೇಜು. ಉಡುಪಿ. 1987.
ಪುಟ 40

159. ನಮನ (ಕವನ)—ಎಚ್. ಎಂ. ನಾಗೇಂದ್ರ
ಡಿ.ವಿ.ಜಿ., ಎ.ಜಿ.ಓ.ಆರ್.ಸಿ., 1988, ಪುಟ 116

160. ಪತ್ರಿಕೋದ್ಯಮ—ಸಾರ್ವಜನಿಕ ಜೀವನ—ಎಸ್. ಆರ್. ರಾಮಸ್ವಾಮಿ
ಚಿಗುರು. ಡಿ.ವಿ.ಜಿ. ಶತಮಾನೋತ್ಸವ ಸಮಿತಿ.
ಮುಳಬಾಗಿಲು. 1987

161. ಮಂಕುತಿಮ್ಮನಿಗೆ ನಮನ—ಜ. ಹೋ. ನಾರಾಯಣಸ್ವಾಮಿ
ಕುಸುಮಾರ್ಪಣೆ. ಗೋ.ಸಾ.ವಿ.ಸಂ.. 1977. ಪುಟ 178

162. ರಾಜ್ಯ ಯಜ್ಞದ ಋತ್ವಿಜರು—ಡಿ. ಆರ್. ವೆಂಕಟರಮಣನ್
ಕುಸುಮಾರ್ಪಣೆ, ಗೋ.ಸಾ.ವಿ.ಸಂ., 1977, ಪುಟ 165

ಡಿ.ವಿ.ಜಿ. ಅವರ ಕೃತಿಗಳು

ಜೀವನ ಚರಿತ್ರೆ

ದಿವಾನ್ ರಂಗಾಚಾರ್ಲು (1911, 1920, 1928, 1928, 1937)

ಗೋಪಾಲ ಕೃಷ್ಣ ಗೋಖಲೆ (1915, 1924, 1930, 1933)

ವಿದ್ಯಾರಣ್ಯ ವೃತ್ತಾಂತ

ವಿದ್ಯಾರಣ್ಯರ ಸಮಕಾಲೀನರು (1933)

ದಾದಾಭಾಯಿ ನವರೋಜಿ (1950)

ನೆನಪುಗಳು : ಜ್ಞಾಪಕಚಿತ್ರಶಾಲೆ

ಸಾಹಿತಿ ಸಜ್ಜನ ಸಾರ್ವಜನಿಕರು (1969, 1982)

ಕಲೋಪಾಸಕರು (1970)

ಸಾಹಿತ್ಯೋಪಾಸಕರು (1970)

ಮೈಸೂರಿನ ದಿವಾನರುಗಳು (1971)

ವೈದಿಕಧರ್ಮ ಸಂಪ್ರದಾಯಸ್ಥರು (1972)

ಹಲವರು ಸಾರ್ವಜನಿಕರು (1973)

ಹೃದಯ ಸಂಪನ್ನರು (1974)

ಸಂಕೀರ್ಣ ಸ್ಮೃತಿ ಸಂಪುಟ (1977)

ಮಕ್ಕಳ ಸಾಹಿತ್ಯ :

ಬೆಕ್ಕೋಜಿ (1911, 1951, 1959, 1969)

ಇಂದ್ರವಜ್ರ (1912, 1951, 1951, 1969)

ನಿಬಂಧ :

ಜೀವನ ಸೌಂದರ್ಯ ಮತ್ತು ಸಾಹಿತ್ಯ (1932, 1947, 1962, 1967, 1987)

ಸಾಹಿತ್ಯ ಶಕ್ತಿ (1950, 1954, 1966, 1973, 1987)
ಸಂಸ್ಕೃತಿ (1953, 1956 1969, 1987)
ಕಾವ್ಯಸ್ವಾರಸ್ಯ (1975)

ನಾಟಕ :

ಕನಕಾಲುಕಾ (1911)
ತಿಲೋತ್ತಮ (1921)
ಕನ್ನಡ ಮ್ಯಾಕ್‌ಬೆತ್ (1936, 1974)
ವಿದ್ಯಾರಣ್ಯ ವಿಜಯ (1941)
ಜಾಕ್‌ಕೇಡ್ (1959)
ಪ್ರಹಸನತ್ರಯೀ (1974)
ಪರಶುರಾಮ (1974)

ಧಾರ್ಮಿಕ :

ಬಾಳಿಗೊಂದು ನಂಬಿಕೆ (1950, 1960, 1967, 1987)
ಪುರುಷಸೂಕ್ತ (1953, 1971)
ಈಶೋಪನಿಷತ್ತು (1953, 1970)
ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ (1966, 1971)
ದೇವರು (1973)
ಋತ, ಸತ್ಯ, ಧರ್ಮ (1975)

ಕವಿತೆ :

ವಸಂತ ಕುಸುಮಾಂಜಲಿ (1922, 1951)
ನಿವೇದನ (1924, 1933, 1956)
ವಿದ್ಯಾರಣ್ಯ ಸ್ಮೃತಿ (1924)
ಉಮರನ ಒಸಗೆ (1930. 1944. 1952. 1962)
ಮಂಕುತಿಮ್ಮನ ಕಗ್ಗ (1943. 1950. 1958. 1964. 1969. 1987)
ಮರುಳ ಮುನಿಯನ ಕಗ್ಗ (1984)

ಶ್ರೀರಾಮ ಪರೀಕ್ಷಣಂ (1945, 1957, 1966)
ಸ್ವತಂತ್ರ ಭಾರತ (1947)
ಮಹಾತ್ಮ ಗಾಂಧಿ (1948)
ಅಂತಃಪುರಗೀತೆ (1950, 1953)
ಮಹಾಚುನಾವಣೆ (1951)
ವಾಲ್ಮೀಕಿ ವ್ಯಾಸ ವಂದನಂ (1951)
ಗೀತಶಾಕುನ್ತಲಮ್ (1960, 1969)
ಶೃಂಗಾರ ಮಂಗಳಂ (1970)
ಶ್ರೀಕೃಷ್ಣ ಪರೀಕ್ಷಣಂ (1973)

ರಾಜಕೀಯ :

ಮೈಸೂರಿನ ಕೈಗನ್ನಡಿ ಎಂಬ ವಾರ್ಷಿಕ ಪುಸ್ತಕ (1915)
ವೃತ್ತಪತ್ರಿಕೆ (1928, 1968)
'ಸ್ವರಾಜ್ಯ' ಎಂದರೇನು ? (1944)
ರಾಜ್ಯಶಾಸ್ತ್ರ (1957, 1973)
ರಾಜ್ಯಾಂಗ ತತ್ತ್ವಗಳು (1954)
ರಾಜಕೀಯ ಪ್ರಸಂಗಗಳು—1 (1958)
ರಾಜಕೀಯ ಪ್ರಸಂಗಗಳು—2 (1960)
ಇಂಡಿಯದ ಭಾಷಾ ಪ್ರಶ್ನೆ, ಇಂಗ್ಲಿಷಿನ ಸ್ಥಾನ (1958)
ಸಾರ್ವಜನಿಕದಲ್ಲಿ ಸಾತ್ತ್ವಿಕ (1971, 1987)
ರಾಜ್ಯಕುಟುಂಬ (1973)

ಟಿಪ್ಪಣಿ : ಸಾಹಿತಿ ಸಜ್ಜನ ಸಾರ್ವಜನಿಕರು ಮತ್ತು ಮರುಳ ಮುನಿಯನ ಕಗ್ಗ (ಐ.ಬಿ.ಎಚ್. ಪ್ರಕಾಶನ, ಬೆಂಗಳೂರು) ಗಳನ್ನು ಬಿಟ್ಟು ಬಹುಮಟ್ಟಿಗೆ ಉಳಿದೆಲ್ಲ ಕೃತಿಗಳ ಈಚಿನ ಮುದ್ರಣಗಳ ಪ್ರಕಾಶಕರು ; ಕಾವ್ಯಾಲಯ, ಮೈಸೂರು ; 1987ರ ಮುದ್ರಣಗಳು ಗೋಖಲೆ ಸಂಸ್ಥೆಯ ಪ್ರಕಟನೆಗಳು. ಈ ಎಲ್ಲ ಕೃತಿಗಳ ಹಕ್ಕು ಗೋಖಲೆ ಸಂಸ್ಥೆಗೆ ಸೇರಿದೆ.

ಅನುಬಂಧ—3

ಡಿ.ವಿ.ಜಿ. ಅವರನ್ನು ಕುರಿತ ಪುಸ್ತಕಗಳು

1. **ಪದ್ಮಭೂಷಣ ಡಾ॥ ಡಿ. ವಿ. ಗುಂಡಪ್ಪ**— ಡಿ. ವಿ. ಶೇಷಗಿರಿರಾವ್, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
2. **ಡಿ. ವಿ. ಗುಂಡಪ್ಪ**— ಎಸ್.ಆರ್. ರಾಮಸ್ವಾಮಿ, ಐ.ಬಿ.ಎಚ್., ಬೆಂಗಳೂರು.
3. **ಡಿ. ವಿ. ಗುಂಡಪ್ಪ** (ಇಂಗ್ಲಿಷ್)— ವಿ.ಸೀ., ಐ.ಬಿ.ಎಚ್., ಬೆಂಗಳೂರು.
4. **ಡಿ. ವಿ. ಗುಂಡಪ್ಪ**— ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ರಾಷ್ಟ್ರೋತ್ಥಾನ, ಬೆಂಗಳೂರು.
5. **ಡಾ॥ ಡಿ. ವಿ. ಗುಂಡಪ್ಪ** : ಜೀವನ ಸಾಧನೆ—ನೀಲತ್ತಹಳ್ಳಿ ಕಸ್ತೂರಿ ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ.
6. **ಕುಸುಮಾರ್ಪಣೆ**—ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.
7. **ವನಸುಮ**—ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.
8. **ಧೀಮಂತ**—ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.
9. **ಸಾರ್ವಜನಿಕ** (ಪಬ್ಲಿಕ್ ಅಫೇರ್ಸ್)—ವಿಶೇಷ ಸಂಚಿಕೆ, ಅಕ್ಟೋಬರ್ 1975 ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.
10. **ಭವನ್ಸ್ ಜರ್ನಲ್** (ಇಂಗ್ಲಿಷ್)— ವಿಶೇಷ ಸಂಚಿಕೆ, 34–5, ಅಕ್ಟೋಬರ್ 1, 1987, ಭಾರತೀಯ ವಿದ್ಯಾಭವನ, ಬೆಂಗಳೂರು.
11. **ಡಿ.ವಿ.ಜಿ.**—ಗುಂಡ್ಮಿ ಚಂದ್ರಶೇಖರ ಐತಾಳ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
12. **ಡಿ.ವಿ.ಜಿ. 100**—ತರಂಗ ವಿಶೇಷ ಸಂಚಿಕೆ, ಮಾರ್ಚ್ 22, 1987.
13. **ಡಿ.ವಿ.ಜಿ. ಸಂಸ್ಮರಣೆ**— ಐ.ಟಿ.ಐ. ಬರಹಗಾರರ ವೇದಿಕೆ, ಬೆಂಗಳೂರು.
14. **ಚಿಗುರು**— ಡಿ.ವಿ.ಜಿ. ಶತಮಾನೋತ್ಸವ ಸಮಿತಿ, ಕೋಲಾರ.
15. **ಅಶ್ವತ್ಥ**— ಎಂ.ಜಿ.ಎಂ. ಕಾಲೇಜು, ಉಡುಪಿ.
16. **ಡಿ.ವಿ.ಜಿ.**—ಎ.ಜಿ.ಓ.ಆರ್.ಸಿ., ಬೆಂಗಳೂರು.
17. **ವಿರಕ್ತ ರಾಷ್ಟ್ರಕ ಡಿ.ವಿ.ಜಿ.**— ಡಿ. ಆರ್. ವೆಂಕಟರಮಣನ್ (ಅಚ್ಚಿನಲ್ಲಿ), ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.

ಡಿ.ವಿ.ಜಿ. ಜೀವನ ವಿವರ

17-3-1887 : ಜನನ : ಕೋಲಾರ ಜಿಲ್ಲೆ ಮುಳಬಾಗಿಲಿನಲ್ಲಿ. ವಿದ್ಯಾಭ್ಯಾಸ : ಮುಳಬಾಗಿಲು. ಕೋಲಾರ, ಮೈಸೂರು (ಹೈಸ್ಕೂಲುವರೆಗೆ ಮಾತ್ರ.)

1908 : ಪ್ರಪ್ರಥಮ ಕನ್ನಡ ದಿನಪತ್ರಿಕೆ 'ಭಾರತಿ'ಗೆ ಸಹಸಂಪಾದಕ ಮತ್ತು ಹಲವಾರು ಲೇಖನ, ವರದಿಗಳನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದು ರಾಜಕೀಯದ ಮೇಲೆ ಪ್ರಭಾವ.

1912 : ಬೆಂಗಳೂರು ನಗರಸಭೆಗೆ ಸದಸ್ಯರಾಗಿ ನಾಮಕರಣ.

1913 : ಸ್ವಂತ ಪ್ರಕಟನೆ ಮತ್ತು ಸಂಪಾದನೆ : ಪಾಕ್ಷಿಕ ಪತ್ರಿಕೆ 'ದಿ ಕರ್ನಾಟಕ' (ಇಂಗ್ಲಿಷ್)

1915 : ಗಾಂಧೀಜಿಯವರನ್ನು ಬೆಂಗಳೂರಿಗೆ ಬರಮಾಡಿಕೊಂಡಿದ್ದ 'ಸೋಷಿಯಲ್ ಸರ್ವೀಸ್ ಲೀಗ್'ನ ಸಕ್ರಿಯ ಸದಸ್ಯರು.

1915 : ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಸಕ್ರಿಯ ಪಾತ್ರ ; 'ಗೋಖಲೆ ಲೀಗ್' ಸ್ಥಾಪನೆ.

1921-26 : 'ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್'ನ ಪ್ರಕಟನೆ.

1923 : ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆಗೆ ಬೆಂಬಲ.

1926-40 : ಮೈಸೂರು ನ್ಯಾಯ ವಿಧಾಯಕ ಸಭೆಯ ಸದಸ್ಯರು.

1928 : ಕರ್ನಾಟಕ ವೃತ್ತಪತ್ರಿಕಾಕರ್ತರ ಪ್ರಥಮ ಪರಿಷತ್ತಿನ ಅಧ್ಯಕ್ಷ.

1929 : ದಕ್ಷಿಣ ಭಾರತ ಪ್ರಜಾ ಸಮ್ಮೇಳನದಲ್ಲಿ ಭಾಗವಹಿಸಿದ್ದು.

1932 : ಮಡಿಕೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

1932 : ಮೈಸೂರು ರಾಜ್ಯ ಪತ್ರಕರ್ತರ ಸಂಘ ಸ್ಥಾಪನೆ. ಶೀಘ್ರಲಿಪಿಕಾರರ ಸಂಘ ಸ್ಥಾಪನೆ.

1934-37 : ಉಪಾಧ್ಯಕ್ಷ. ಕನ್ನಡ ಸಾಹಿತ್ಯ ಪರಿಷತ್ತು.

1940 : ಸ್ವಯಂರಕ್ಷಣಾದಳ ಸ್ಥಾಪನೆ.

1943 : ಮಂಕುತಿಮ್ಮನ ಕಗ್ಗ (ಪ್ರಸಿದ್ಧ ತತ್ವ, ಜೀವನ ವಿವೇಕ, ನೀತಿ ಪದ್ಯ ಸಂಕಲನ) ಪ್ರಕಟನೆ.

1945 : ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸ್ಥಾಪನೆ.

1949 : 'ಪಬ್ಲಿಕ್ ಅಫೇರ್ಸ್' ಪತ್ರಿಕೆ ಪ್ರಾರಂಭ.

1950 : ಅಂತಃಪುರಗೀತೆ ಪ್ರಕಟನೆ (ಕನ್ನಡ ಸಾಹಿತ್ಯದಲ್ಲೇ ಅಪೂರ್ವವಾದ ಶಿಲ್ಪ ಕಲಾವಸ್ತು ಕುರಿತ ಕವನಸಂಕಲನ.)

1961 : ಮೈಸೂರು ವಿಶ್ವವಿದ್ಯಾನಿಲಯದ ಗೌರವ 'ಡಿ.ಲಿಟ್.' ಪದವಿ.

1966 : ಭಗವದ್ಗೀತಾ ತಾತ್ಪರ್ಯ (ಜೀವನ ಧರ್ಮಯೋಗ) ಪ್ರಕಟನೆ.

1967 : ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

1969-74 : ಜ್ಞಾಪಕಚಿತ್ರಶಾಲೆ 8 ಸಂಪುಟಗಳ (ವ್ಯಕ್ತಿ ಚಿತ್ರಗಳು. ವಿಶಿಷ್ಟ ನೆನಪುಗಳು) ಪ್ರಕಟನೆ.

1970 : ಡಿ.ವಿ.ಜಿ. ಸನ್ಮಾನ ಸಮಿತಿಯಿಂದ ಒಂದು ಲಕ್ಷ ರೂ. ಗೌರವ ಧನ ನೀಡಿಕೆ, ಅಷ್ಟನ್ನೂ ಗೋಖಲೆ ಸಂಸ್ಥೆಗೆ ಡಿ.ವಿ.ಜಿ.ಯಿಂದ ದಾನ.

1974 : ಭಾರತ ಸರ್ಕಾರದಿಂದ 'ಪದ್ಮಭೂಷಣ' ಪ್ರಶಸ್ತಿ ನೀಡಿಕೆ.

7-10-1975 : ಮರಣ : 'ಕುಸುಮಾರ್ಪಣೆ' ಅಭಿಮಾನಿಗಳಿಂದ ಗೌರವ ಬರಹಗಳ ಗ್ರಂಥ ಸಮರ್ಪಣೆ.

1984 : ಮರುಳ ಮುನಿಯನ ಕಗ್ಗ
(ಮಂಕುತಿಮ್ಮನ ಕಗ್ಗದ ಮುಂದುವರಿದ ಭಾಗ) ಪ್ರಕಟನೆ.

17-3-1987 ರಿಂದ 17-3-1988ರ ವರೆಗೆ : ಡಿ.ವಿ.ಜಿ.ಯವರ ಜನ್ಮ ಶತಮಾನೋತ್ಸವ : ನಾಡಿನಾದ್ಯಂತ ಆಚರಣೆ.

50ಕ್ಕೂ ಹೆಚ್ಚು ಗ್ರಂಥಗಳು ಮತ್ತು ರಾಜಕೀಯ. ಸಮಾಜ ಜೀವನ, ಆರ್ಥಿಕ ವಿಚಾರ. ಪತ್ರಿಕಾ ಕ್ಷೇತ್ರ. ಸಾಹಿತ್ಯ. ಕಲೆ ಇತ್ಯಾದಿ ವಿಷಯಗಳನ್ನು ಕುರಿತು ನೂರಾರು ಬಿಡಿಲೇಖನಗಳನ್ನು ಬರೆದಿದ್ದಾರೆ ; ಉಪನ್ಯಾಸಗಳನ್ನೂ ಮಾಡಿದ್ದಾರೆ.

ಅನುಬಂಧ—5

ಡಿ.ವಿ.ಜಿ. ಜನ್ಮಶತಮಾನೋತ್ಸವ ಸ್ಮೃತಿ ಪ್ರಕಟನಮಾಲೆ

		ಬೆಲೆ ರೂ.
1.	ಮಂಕುತಿಮ್ಮನ ಕಗ್ಗ	6–00
2.	ಬಾಳಿಗೊಂದು ನಂಬಿಕೆ*	5–00
3.	ಸಂಸ್ಕೃತಿ*	6–00
4.	ಕೆಲವು ಮಹನೀಯರು (ಜ್ಞಾಪಕಚಿತ್ರಶಾಲೆ ಸಂಗ್ರಹ)*	5–00
5.	ಕಾವ್ಯ ಕುಸುಮಾಂಜಲಿ (ಕವನಸಂಕಲನ)*	4–00
6.	ಸಾರ್ವಜನಿಕದಲ್ಲಿ ಸಾತ್ತ್ವಿಕ*	2–00
7.	ಜೀವ ಸಾರ್ಥಕ್ಯ ದೀಪಿಕೆ (ಸೂಕ್ತಿಸಂಕಲನ)	15–00
8.	ಮಂಕುತಿಮ್ಮನ ಕಗ್ಗ—ಆಯ್ದ ಪದ್ಯಗಳು*	1–00
9.	ವನಸುಮ (ಸಂಸ್ಮರಣ ಸಂಚಿಕೆ)	10–00
10.	ಜೀವನ ಸೌಂದರ್ಯ ಮತ್ತು ಸಾಹಿತ್ಯ	10–00
11.	ಡಿ.ವಿ.ಜಿ. ಅವರ ಬಿಡಿಬರಹಗಳು	10–00
12.	ವನಸುಮ (ಸ್ಮರಣ ಸಂಚಿಕೆ)	10–00
13.	ಧೀಮಂತ (ಸಂಸ್ಮರಣ ಸಂಪುಟ)	75–00
14.	ವಿರಕ್ತ ರಾಷ್ಟ್ರಕ ಡಿ.ವಿ.ಜಿ. (ಡಿ.ವಿ.ಜಿ. ಜೀವನ ಚರಿತ್ರೆ)	

(ಅಚ್ಚಿನಲ್ಲಿ)

15.	ಮುನ್ನುಡಿಗಳು : ಭಾಗ—1 (ಇತರರ ಗ್ರಂಥಗಳಿಗೆ ಬರೆದ ಮುನ್ನುಡಿಗಳು)	10–00
16.	ಮುನ್ನುಡಿಗಳು : ಭಾಗ—2 (ರಾಮಾಯಣ ಸಂಪುಟಗಳಿಗೆ ಬರೆದ ಮುನ್ನುಡಿಗಳು)	10–00
17.	ಡಿ.ವಿ.ಜಿ. ಅವರ ಮುನ್ನುಡಿಗಳು	10–00

* ಪ್ರತಿಗಳು ಮುಗಿದಿವೆ.

ಧೀಮಂತ ಲೇಖಕರ ಬಳಗ

[ಸೂಚನೆ: ದಿವಂಗತರ ಮತ್ತು ನಮ್ಮ ತಿಳಿವಳಿಕೆಗೆ ಬಾರದವರುಗಳ ವಿಳಾಸಗಳನ್ನು ಇಲ್ಲಿ ಕೊಟ್ಟಿಲ್ಲ.]

1. ಪ್ರೊ॥ ಎಂ. ವಿ. ಸೀತಾರಾಮಯ್ಯ
54, ಅರವಿಂದ, 3ನೇ ಅಡ್ಡರಸ್ತೆ,
ಗವಿಪುರಂ ವಿಸ್ತರಣ,
ಬೆಂಗಳೂರು–560 019.

2. ಡಾ॥ ಶಿವರಾಮ ಕಾರಂತ
ಸಾಲಿಗ್ರಾಮ ಅಂಚೆ.
ದಕ್ಷಿಣ ಕನ್ನಡ–576 225.

3. ಡಾ॥ ಬಿ. ಪಿ. ರಾಧಾಕೃಷ್ಣ
183, 5ನೇ ಮುಖ್ಯರಸ್ತೆ,
ಚಾಮರಾಜಪೇಟೆ.
ಬೆಂಗಳೂರು–560 018.

4. ಡಾ॥ ಶಂ. ಬಾ. ಜೋಶಿ
ಸಾಧನಕೇರಿ,
ಧಾರವಾಡ–580 008.

5. ಶ್ರೀ ಪಿ. ವಿ. ಜೋಶಿ
663, 5ನೇ ಕ್ರಾಸ್.
ಬನಶಂಕರಿ 1ನೇ ಹಂತ.
ಬೆಂಗಳೂರು–560 050.

6. ಪ್ರೊ॥ ಕೆ. ವೆಂಕಟರಾಮಪ್ಪ
29, ಬಾಲಕೃಷ್ಣರಾವ್ ರಸ್ತೆ,
ಚಾಮರಾಜಪುರಂ,
ಮೈಸೂರು–570 004.

7. ಪ್ರೊ॥ ಎಚ್. ಎಂ. ಶಂಕರ ನಾರಾಯಣರಾವ್
'ಶಾರದಾ ಮಂದಿರ',
ರಾಮಯ್ಯರ್ ರಸ್ತೆ,
ಕೃಷ್ಣಮೂರ್ತಿಪುರಂ,
ಮೈಸೂರು–570 004.

8. ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟ
ನಿವೃತ್ತ ಕನ್ನಡ ಪ್ರಾಧ್ಯಾಪಕರು,
'ಕಲ್ಪನ', ರಾಮಯ್ಯರ್ ರಸ್ತೆ,
ಕೃಷ್ಣಮೂರ್ತಿಪುರಂ,
ಮೈಸೂರು–570 004.

9. ನಿರಂಜನ
'ಕಥೆ', 515, 7ನೇ ಮೇಯ್ನ್,
5ನೇ ಬ್ಲಾಕ್, ಜಯನಗರ.
ಬೆಂಗಳೂರು–560 041.

10. ಪ್ರೊ॥ ಎಲ್. ಎಸ್. ಶೇಷಗಿರಿ ರಾವ್
ಜ್ಯೋತಿ, 267, 9ನೇ 'ಎ'
ಮುಖ್ಯರಸ್ತೆ, 3ನೇ ಬ್ಲಾಕ್
ಜಯನಗರ.
ಬೆಂಗಳೂರು–560 011.

11. ಪ್ರೊ॥ ಚೆನ್ನವೀರ ಕಣವಿ. ಚೆಂಬೆಳಕು
ಕಲ್ಯಾಣ ನಗರ,
ಧಾರವಾಡ–580 007.

12. ಶ್ರೀ. ವೆಂ. ಮು. ಜೋಶಿ
377, 9 ನೇ ಮುಖ್ಯರಸ್ತೆ,
ಹನುಮಂತನಗರ,
ಬೆಂಗಳೂರು–500 019.

13. ಪ್ರೊ॥ ವಸಂತ ಕುಷ್ಟಗಿ
ಪ್ರಾಂಶುಪಾಲರು,
ಎಸ್.ಎಸ್.ಎಂ. ಕಾಲೇಜು,
ತಹಬಾದ–585 228,
ಗುಲಬರ್ಗ ಜಿಲ್ಲೆ.

14. ಡಾ॥ ಶಂಕರ ಮೊಕಾಶಿ ಪುಣೇಕರ
ಇಂಗ್ಲೀಷ್ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ.
ಮಾನಸಗಂಗೋತ್ರಿ,
ಮೈಸೂರು–570 006.

15. ಪ್ರೊ॥ ಕೆ. ಟಿ. ಪಾಂಡುರಂಗಿ
132/4, 3ನೇ ಬ್ಲಾಕ್, ಜಯನಗರ,
ಬೆಂಗಳೂರು–560 011.

16. ಶ್ರೀ ಎಂ. ವಿ. ವೆಂಕಟೇಶಮೂರ್ತಿ
(ಸುಮನಾ),
ಆಶ್ರಯ, 903ಬಿ (ಹೊಸ ನಂ. 50),
7ನೇ ಕ್ರಾಸ್, ಅಶೋಕನಗರ,
ಬೆಂಗಳೂರು–560 050.

17. ಶ್ರೀ ಎನ್. ಲಕ್ಷ್ಮಣರಾವ್
37, ಮ್ಯೂಸಿಯಂ ರಸ್ತೆ,
ಬೆಂಗಳೂರು–560 001.

18. ಶ್ರೀ ಆರ್. ಗಣೇಶ್
ಮೆಕ್ಯಾನಿಕಲ್ ಇಂಜಿನಿಯರಿಂಗ್
ವಿಭಾಗ,
ಆರ್.ವಿ. ತಾಂತ್ರಿಕ ಮಹಾ
ವಿದ್ಯಾಲಯ,
ಮೈಸೂರು ರಸ್ತೆ,
ಬೆಂಗಳೂರು–560 026.

19. ಬಿ. ವೆಂಕಟರಾವು ಭಟ್ಟ
C/o ಬಿ. ವಿ. ನಟರಾಜ್,
ಪ್ಲಾಟ್ ನಂ. 14 (ಮಹಡಿ)
ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್
ಕ್ವಾರ್ಟರ್ಸ್, 1ನೇ ಮೇಯ್ನ್,
ವೈಯಾಳಿಕಾವಲ್,
ಬೆಂಗಳೂರು–560 003.

20. ಶ್ರೀ ಸ. ಮುನಿಸ್ವಾಮಿ
ನಂ. 622, 3ನೇ ಮುಖ್ಯಬೀದಿ,
ಕೆಂಗೇರಿ ಉಪನಗರ,
ಬೆಂಗಳೂರು–560 060.

21. ಶ್ರೀ ಸ. ವೆಂಕಟಾಚಲಪತಿ
43, 10ನೇ ಕ್ರಾಸ್, 4ನೇ ಬ್ಲಾಕ್,
ತ್ಯಾಗರಾಜನಗರ,
ಬೆಂಗಳೂರು–560 028.

22. ಪ್ರೊ॥ ಎ. ಎನ್. ಮೂರ್ತಿರಾವ್
185, ಹೆಚ್.ಎ.ಎಲ್. ಲೇಔಟ್,
1ನೇ ಹಂತ, ಸಂಜಯನಗರ,
ಬೆಂಗಳೂರು–560 024.

23. ಡಾ॥ ಆರ್. ಎಸ್. ಶಿವಗಣೇಶ
ಮೂರ್ತಿ
ಪ್ರವಾಚಕ, ಸಂಸ್ಕೃತ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು–570 006.

24. ವಿದ್ವಾನ್ ಎನ್. ರಂಗನಾಥ ಶರ್ಮ
'ಶ್ರೀಜಾನಕೀ ಕೃಪ', 831,
4ನೇ ಮೇಯ್ನ್, ವಿಜಯನಗರ,
ಬೆಂಗಳೂರು–560 040.

25. ಶ್ರೀ ಎಸ್. ಆರ್. ರಾಮಸ್ವಾಮಿ
ಸಂಪಾದಕ, ಉತ್ಥಾನ,
ರಾಷ್ಟ್ರೋತ್ಥಾನ ಸಾಹಿತ್ಯ,
ಕೇಶವಶಿಲ್ಪ, ಕೆಂಪೇಗೌಡ ನಗರ
ಬೆಂಗಳೂರು–560 019.

26. ಡಾ॥ ಗುಂಡ್ಮಿ ಚಂದ್ರಶೇಖರ ಐತಾಳ
ಕನ್ನಡ ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ, ಕೋಣಾಜೆ,
ಮಂಗಳೂರು–574 152.

27. ಪ್ರೊ॥ಎಂ. ರಾಜಗೋಪಾಲಚಾರ್ಯ
ಸಂಪಾದಕರು; ಸುಗುಣಮಾಲಾ,
ರಥಬೀದಿ,
ಉಡುಪಿ–576 101.

28. ಶ್ರೀ ಟಿ. ಎನ್. ಪದ್ಮನಾಭನ್
1167, 26ನೇ 'ಎ' ಮೇಯ್ನ್,
4ನೇ 'ಟಿ' ಬ್ಲಾಕ್, ಜಯನಗರ,
ಬೆಂಗಳೂರು–560 41.

29. ಪ್ರೊ॥ ಕಮಲಾ ಹಂಪನಾ
'ಸ್ವನಿಮಾ'. 1079,
5ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು–560 010.

30. ಡಾ॥ ಸಿದ್ಧಯ್ಯ ಪುರಾಣಿಕ
ಶ್ರೀಗಿರಿ, 4–5ಎ, ಆಲಿ ಆಸ್ಕರ್ ರಸ್ತೆ,
ಬೆಂಗಳೂರು–560 052.

31. ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ
1368, 7ನೇ ಮುಖ್ಯರಸ್ತೆ,
ಶ್ರೀರಾಮಪುರ.
ಬೆಂಗಳೂರು–560 021.

32. ಪ್ರೊ॥ ಎನ್. ಎಸ್. ಲಕ್ಷ್ಮೀ ನಾರಾಯಣ ಭಟ್ಟ
2263, 22ನೇ ಕ್ರಾಸ್,
ಬನಶಂಕರಿ 2ನೇ ಹಂತ,
ಬೆಂಗಳೂರು–560 070.

33. ಪ್ರೊ॥ ಆರ್. ಜಿ. ಕುಲಕರ್ಣಿ
39/3, ಶ್ರೀರಂಗ ನಿಲಯ-
ಟಾಟಾ ಸಿಲ್ಕ್ ಫಾರಂ,
2ನೇ ಮೇಯ್ನ್, ಕೆ. ಆರ್. ರಸ್ತೆ,
ಬೆಂಗಳೂರು–560 004.

34. ಪ್ರೊ॥ ಎಸ್. ರಾಮಸ್ವಾಮಿ
203, ವೆಸ್ಟ್ ಪಾರ್ಕ್ ರಸ್ತೆ,
ಮಲ್ಲೇಶ್ವರಂ.
ಬೆಂಗಳೂರು–560 055.

35. ಡಾ॥ ಪು. ತಿ. ನರಸಿಂಹಾಚಾರ್
578, 11ನೇ ಮುಖ್ಯರಸ್ತೆ,
5ನೇ ಬ್ಲಾಕ್, ಜಯನಗರ.
ಬೆಂಗಳೂರು–560 041.

36. ಶ್ರೀ ಕೆ. ಎಸ್. ನಾರಾಯಣಸ್ವಾಮಿ.
768/9, 8ನೇ ಕ್ರಾಸ್.
ಮಾಗಡಿ-ಕಾರ್ಡ್ ರಸ್ತೆ ಲೇಔಟ್
ವಿಜಯನಗರ.
ಬೆಂಗಳೂರು–560 040.

37. ಪ್ರೊ॥ ಕೆ. ನರಸಿಂಹಮೂರ್ತಿ.
ನಂ. 5, 27ನೇ ಕ್ರಾಸ್.
4ನೇ ಬ್ಲಾಕ್, ಜಯನಗರ.
ಬೆಂಗಳೂರು–560 011.

38. ಪ್ರೊ॥ ಜಿ. ವೆಂಕಟಸುಬ್ಬಯ್ಯ
ನಂ. : 58, 31ನೇ ಕ್ರಾಸ್,
7ನೇ ಬ್ಲಾಕ್, ಜಯನಗರ,
ಬೆಂಗಳೂರು–560 011.

39. ಶ್ರೀ ಎಂ. ಎಚ್. ಕೃಷ್ಣಯ್ಯ
182, 1ನೇ 'ಎನ್' ಬ್ಲಾಕ್,
ರಾಜಾಜಿನಗರ,
ಬೆಂಗಳೂರು–560 010.

40. ಡಾ॥ ಜಿ. ಎಸ್. ದೀಕ್ಷಿತ್
ಬಿ–1, ಕೈಲಾಸ್ ಅಪಾರ್ಟ್‌ಮೆಂಟ್ಸ್
152, 8ನೇ ಮುಖ್ಯರಸ್ತೆ,
ಮಲ್ಲೇಶ್ವರಂ,
ಬೆಂಗಳೂರು–560 003.

41. ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿ
ಕನ್ನಡ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು–570 006.

42. ಪ್ರೊ॥ ಜಿ. ಎಸ್. ಆಮೂರ್
ಜಾನಕಿ, ನವೋದಯನಗರ,
ಧಾರವಾಡ–580 003.

43. ಶ್ರೀ ಟಿ. ಎಸ್. ಶ್ಯಾಮರಾವ್
187, 137ನೆಯ ಕ್ರಾಸ್,
16ನೇ ಮೈನ್, 4ನೇ 'ಟಿ' ಬ್ಲಾಕ್,
ಜಯನಗರ,
ಬೆಂಗಳೂರು–560 041.

44. ಶ್ರೀ ಜಿ. ಆರ್. ಶಂಕರರಾವ್
ನಂ. 66, ಶ್ರೀನಿವಾಸ (ಮಹಡಿ),
11ನೇ ಮೇಯ್ನ್, 2ನೇ ಕ್ರಾಸ್
ನಾಗೇಂದ್ರ ಬ್ಲಾಕ್, ಬನಶಂಕರಿ
1ನೇ ಹಂತ,
ಬೆಂಗಳೂರು–560 050.

45. ಶ್ರೀ ಎ. ವಿ. ನಾವಡ
ಕನ್ನಡ ಪ್ರಾಧ್ಯಾಪಕರು,
ಭಂಡಾರಕರ್ಸ್ ಕಲೆ ಮತ್ತು
ವಿಜ್ಞಾನ ಕಾಲೇಜು,
ಕುಂದಾಪುರ–576 201.

46. ಶ್ರೀ ಎಚ್. ಆರ್. ದಾಸೇಗೌಡ
681, 12ನೇ ಕ್ರಾಸ್,
ಮಾಗಡಿ ಕಾರ್ಡ್ ರಸ್ತೆ, ಬಡಾವಣೆ,
ಬೆಂಗಳೂರು–560 040.

47. ಶ್ರೀ ತೆ. ಹನುಮಂತಪ್ಪ
548–ಸಿ, 80 ಅಡಿ ರಸ್ತೆ,
ಇಂದಿರಾನಗರ,
ಬೆಂಗಳೂರು–560 038.

48. ಶ್ರೀ ಡಿ. ವಿ. ಪರಮಶಿವಮೂರ್ತಿ
4230/24, 4ನೇ ಮುಖ್ಯರಸ್ತೆ,
'ಎ' ಹಂತ, ಸುಬ್ರಹ್ಮಣ್ಯನಗರ,
ಬೆಂಗಳೂರು–560 021.

49. ಶ್ರೀ ನಾ. ಗೀತಾಚಾರ್ಯ
ಕನ್ನಡ ಅಧ್ಯಾಪಕ,
ಶೇಷಾದ್ರಿಪುರಂ ಸಂಜೆ ಕಾಲೇಜು,
ಬೆಂಗಳೂರು–560 049.

ಉತ್ಸವ ಸಮಿತಿ

ಮಹಾ ಪೋಷಕರು :

ಶ್ರೀ ರಾಮಕೃಷ್ಣ ಹೆಗಡೆ
(ಕರ್ನಾಟಕದ ಮುಖ್ಯ ಮಂತ್ರಿಗಳು)

ಅಧ್ಯಕ್ಷರು :

ಶ್ರೀ ನಿಟ್ಟೂರು ಶ್ರೀನಿವಾಸರಾವ್

ಕಾರ್ಯಾಧ್ಯಕ್ಷರು :

ಶ್ರೀ ಜಿ. ನಾರಾಯಣ

ಪೋಷಕರು :

ಸರ್ವಶ್ರೀ

ನ್ಯಾಯಮೂರ್ತಿ ಡಿ. ಎಂ. ಚಂದ್ರಶೇಖರ್
ಆರ್. ಆರ್. ದಿವಾಕರ್
ಡಾ॥ ವಿ. ಕೃ. ಗೋಕಾಕ್
ಕಡಿದಾಳ್ ಮಂಜಪ್ಪ
ವಿ. ಎಸ್. ಕೃಷ್ಣ ಅಯ್ಯರ್
ಪ್ರೊ॥ ಪಿ. ಜಿ. ಮಾವಳಂಕರ್
ನ್ಯಾಯಮೂರ್ತಿ ಮೀರ್ ಇಕ್ಬಾಲ್ ಹುಸೇನ್
ಎಸ್. ನಿಜಲಿಂಗಪ್ಪ
ಟಿ. ರಮೇಶ್ ಯು. ಪೈ
ಕೆ. ಎಚ್. ರಂಗನಾಥ್
ಡಾ॥ ವಿ. ಕೆ. ಆರ್. ವಿ. ರಾವ್
ಡಾ॥ ಕೆ. ಶಿವರಾಮ ಕಾರಂತ
ಟಿ. ಸದಾಶಿವಂ
ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿ
ವೀರೇಂದ್ರ ಹೆಗ್ಗಡೆ
ನ್ಯಾಯಮೂರ್ತಿ ಇ. ಎಸ್. ವೆಂಕಟ ರಾಮಯ್ಯ

ಸದಸ್ಯರು :

ಸರ್ವಶ್ರೀ


ಎಂ. ಕೆ. ಅನಂತಸ್ವಾಮಿ
ಆರ್. ವಿ. ಪ್ರಭಾಕರರಾವ್
ಡಾ॥ ಬಿ. ಪಿ. ರಾಧಾಕೃಷ್ಣ
ಎಸ್. ಬಿ. ರಾಮಚಂದ್ರ
ಎಸ್ ಆರ್. ರಾಮಸ್ವಾಮಿ
ಜಿ. ವಿ. ಕೆ. ರಾವ್
ಎನ್. ಲಕ್ಷ್ಮಣರಾವ್
ವಿ. ಲಕ್ಷ್ಮೀಸಾಗರ್
ಎಂ. ಎಸ್. ಶಂಕರರಾವ್
ಎಸ್. ಜಿ. ಸುಂದರಸ್ವಾಮಿ
ಕೋಲಾರ ಜಿಲ್ಲಾ
ಡಿ.ವಿ.ಜಿ. ಶತಮಾನೋತ್ಸವ
ಸಮಿತಿಯ ಪ್ರತಿನಿಧಿ

ಕಾರ್ಯದರ್ಶಿಗಳು :

ಡಿ. ಆರ್. ವೆಂಕಟರಮಣನ್
ಬಿ. ಎಸ್. ಸುಬ್ಬರಾಯ
ಆರ್. ಎಚ್. ರಾಜು
ನಾ. ಗೀತಾಚಾರ್ಯ

ಕೋಶಾಧಿಕಾರಿ :

ಕೈವಾರ ರಾಜಾರಾವ್



ಧೀಮಂತ

ಡಿ.ವಿ.ಜಿ.
ಜನ್ಮಶತಮಾನೋತ್ಸವ

ಸಂಸ್ಮರಣ ಸಂಪುಟ

ಡಿ.ವಿ.ಜಿ. ತಮ್ಮ ಎಲ್ಲ ಕಾರ್ಯಚಟುವಟಿಕೆಗಳಿಗೂ—ವ್ಯಕ್ತಿಗತವಾಗಿ ಗ್ರಂಥರಚನೆ. ಸಾಂಘಿಕವಾಗಿ ಸಾರ್ವಜನಿಕ ಕಾರ್ಯ—ದೇಶದ. ಜನದ. ಯೋಗಕ್ಷೇಮ ಸಾಧನೆಯನ್ನು ಗುರಿಯಾಗಿ ಇಟ್ಟುಕೊಂಡರು. ಜನಕ್ಕೆ ಜ್ಞಾನದಾನ ಮಾಡತಕ್ಕಂಥ. ವಿಚಾರ ಶಕ್ತಿಯನ್ನು ಬೆಳಸತಕ್ಕಂಥ. ಆಲಸ್ಯವನ್ನು ತೊಡೆದು ಪೌರುಷವನ್ನು ಬೆಳಸುವಂಥ. ಧರ್ಮಶ್ರದ್ಧೆಯನ್ನು ಮೂಡಿಸುವಂಥ. ಹೃದಯಸಂಸ್ಕಾರವನ್ನೂ ಆತ್ಮಸಂಸ್ಕಾರವನ್ನೂ ಉಂಟುಮಾಡತಕ್ಕಂಥ ಸಾಹಿತ್ಯ ರಚನೆಯಾಗಬೇಕು ಎಂದು ಬೋಧಿಸಿದರು. ಅಂಥ ಗ್ರಂಥಗಳನ್ನು ತಾವೇ ರಚಿಸಿದರು. ಭಗವದ್ಗೀತೆಯ ಬೋಧೆ ಇಂದಿಗೂ ಹೇಗೆ ಪ್ರಸ್ತುತವಾಗಬಲ್ಲದು ಎಂದು ತೋರಿಸಲು ಅದನ್ನು ವ್ಯಾಖ್ಯಾನಿಸಿ " ಜೀವನ ಧರ್ಮಯೋಗ " ಎಂದು ಕರೆದರು. ಮಾದರಿಯಾದ ಗಂಭೀರ ಗದ್ಯ ಶೈಲಿಯಲ್ಲಿ ಧಾರ್ಮಿಕ–ನೈತಿಕ ಮೌಲ್ಯಗಳನ್ನು ಸರ್ವಜನಾದರಣೀಯವಾಗುವಂತೆ ನಿರೂಪಿಸುವ ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆಯಿತು. ದೈವ–ಜೀವ–ಜಗತ್ತು ಇವುಗಳ ಬಗೆಗೆ ಪೂರ್ವದಾರ್ಶನಿಕರ ದರ್ಶನಸಾರವನ್ನೂ. ಸಂಗ್ರಹಬುದ್ಧಿಯನ್ನು ತೊರೆದು ಸರಳಜೀವನವನ್ನು ನಡಸುತ್ತ ಸದಾ ಚಿಂತನಶೀಲರಾಗಿ ತಾವು ಪಡೆದ ಲೋಕಾನುಭವವನ್ನೂ ಡಿ.ವಿ.ಜಿ. 'ಮುಕ್ತಕ ಕಾವ್ಯ' ರೂಪದಲ್ಲಿ ನಿರ್ಮಿಸಿದರು— 'ಮಂಕುತಿಮ್ಮನ ಕಗ್ಗ' ಎಂಬ ನಮ್ರತಾಗುಣದ್ಯೋತಕ ಶೀರ್ಷಿಕೆಯಲ್ಲಿ. ಡಿ.ವಿ.ಜಿ. ಅವರ ಗ್ರಂಥರಾಶಿಯಲ್ಲಿ ಶ್ರೇಷ್ಠವಾದ ಒಂದು ಗ್ರಂಥವನ್ನು ಹೆಸರಿಸಿ ಎಂದು ಕೇಳಿದರೆ : " ಮಂಕುತಿಮ್ಮನ ಕಗ್ಗ " ಎಂದೇ ಹೆಸರಿಸಬೇಕಾಗುತ್ತದೆ. ಈ ಉದ, ಕೃತಿಯಲ್ಲಿ ಡಿ.ವಿ.ಜಿ.ಯವರ ಜೀವನಸಾರ–ಜೀವನ ದರ್ಶನ ಇವು ಕಾವ್ಯರೂಪದಲ್ಲಿ ಮೈತಳೆದು 'ವಿಶ್ವಮಾನ್ಯಕೃತಿ' ಎಂದು ಪರಿಗಣಿಸಲು ಯೋಗ್ಯವಾಗಿದೆ.

(ಪ್ರಸ್ತಾವನೆಯಿಂದ)